ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ಸಂಪುಟ ೪೧ ಸಂಚಿಕೆ ೩೯ | ಉಡುಪಿ 7—6—1962 ಗುರುವಾರ | Vol. 41 No. 39

ನಿಮ್ಮ ಯಾವತ್ತೂ ಮುದ್ರಣ ಕೆಲಸಗಳಿಗೆ ದಯಮಾಡಿ ವಿಚಾರಿಸಿರಿ:

ನವಯುಗ ಪ್ರೆಸ್, ಉಡುಪಿ

ವಿದ್ಯಾರ್ಥಿಗಳಿಗೆ ಮತ್ತು ವಯಸ್ಕರಿಗೆ ಅತ್ಯುಪಯೋಗೀ ಪುಸ್ತಕ

ಸುಲಭದಲ್ಲಿ ಇಂಗ್ಲಿಷ (ಆಂಗ್ಲ ಸ್ವಯಂಬೋಧಿನಿ)

ನವಭಾರತ ಪುಸ್ತಕ ಭಂಡಾರ ಉಡುಪಿ

ಭಾರತದ ವಿರುದ್ಧ

ಪಾಕ್ ಪತ್ರಿಕೆಗಳ ಭೀಕರ ಆಟೋಪ

ಸಂಯುಕ್ತರಾಷ್ಟ್ರ ಸಂಘದ ಭದ್ರತಾ ಮಂಡಳದಲ್ಲಿ ಕಾಶ್ಮೀರದ ಪ್ರಶ್ನೆಯ ಸಮಾಲೋಚನೆ ನಡೆಸಿ ಆ ಬಗ್ಗೆ ಒಂದು ನಿರ್ಣಯವನ್ನು ಸ್ವೀಕರಿಸುವಂತೆ ಪಾಕ್ ಸತ್ತಾರೂಢರು ಪ್ರಯತ್ನಿಸುತ್ತ ಬರುತ್ತಿರುವುದು ಸರ್ವ ವಿದಿತವಿದೆ. ಅಯರ್ಲೆಂಡು, ಘಾನ ಮೊದಲಾದ ಕೆಲವು ರಾಷ್ಟ್ರಗಳ ಮನಸ್ಸನ್ನು ಒಲಿಸಿಕೊಂಡು ತನಗನುಕೂಲವಾಗುವಂತೆ ಪ್ರಶ್ನೆಯನ್ನು ಮಧ್ಯಸ್ಥಿಕೆಗೆ ಒಪ್ಪಿಸಿಕೊಡಬೇಕೆನ್ನುವ ವಾದವನ್ನು ಅವರು ಮುಂದಿಡುತ್ತಿದ್ದಾರೆ. ಈ ಬಗ್ಗೆ ಯಾವುದೇ ನಿರ್ಧಾರವು ಇದುವರೆಗೆ ಆಗಿರುವುದಿಲ್ಲವಾದರೂ ಜೂನ್ ಹನ್ನೊಂದರ ನೆಯ ತಾರೀಖಿನಂದು ಭದ್ರತಾ ಸಮಿತಿಯು ಈ ವಿಚಾರವನ್ನು ಎತ್ತಿಕೊಳ್ಳುವುದೆಂದು ಸಾಧಾರಣ ನಿಶ್ಚಯವಾದಂತಿರುವುದರಿಂದ, ಆ ದಿನದೊಳಗೆ ಏನಾದರೂ ಒಡಂಬಡಿಕೆಯನ್ನು ತರಲು ಜಫರುಲ್ಲಾ ಖಾನರು ಶ್ರಮಿಸುತ್ತಿದ್ದಾರೆ.

ಅನಾಸಕ್ತಿಗೆ ಅರ್ಥವೇನು?

ಶ್ರೀ ಜಫರುಲ್ಲಾ ಖಾನರ ಬೆಂಬಲವಾಗಿ ಕೆಲವು ಪಾಶ್ಚಾತ್ಯರು ನಿಂತಿರುವರಾದರೂ ಅವರು ಪ್ರತ್ಯಕ್ಷವಾಗಿ ಪಾಕಿಸ್ತಾನವನ್ನು ಪ್ರಚೋದಿಸಲು ಮುಂದಾಗುವುದಿಲ್ಲ. ಹೀಗೆ ಮಾಡುವುದರಿಂದ ಪ್ರಸಂಚದ ಗಣ್ಯ ರಾಷ್ಟ್ರ ಭಾರತದೊಡನಿರುವ ಸಂಬಂಧವನ್ನು ಕೆಡಿಸಿಕೊಂಡಂತೆ ಎಂದು ಅವರು ತಿಳಿಯುತ್ತಾರೆ. ಮೂರನೆಯವರಿಂದಲೇ ಪಾಕಿಸ್ತಾನದ ಕೈ ಮೇಲೇರುವಂತೆ ಆಗುವುದು ಅವರಿಗೂ ಇಷ್ಟವಿದೆ. ಈ ಉತ್ಸಾಹ ತಾಳದಿರುವ ಅವರ ವರ್ತನೆಯಿಂದ ಸೀಟೋ ಮತ್ತು ಸೆಂಟೊ ಒಡಂಬಡಿಕೆಗಳು ನಾವು ಮಾತ್ರ ಅನಶೇಷವಿರುವುವು ಎಂದು ಪಾಕಿಸ್ತಾನವು ಒದರುತ್ತಿದೆ; ಪಾಕ್ ಅಧಿಕಾರಿಗಳ ಇಂಗಿತವೇನೆಂಬುದನ್ನು ಪಾಕಿಸ್ತಾನದ ಇಂಗ್ಲಿಷ್ ದೈನಿಕ ಡಾನ್ ಮತ್ತು ಉರ್ದೂ ದೈನಿಕ ಜಂಗಗಳು ಬಹಿರಂಗಪಡಿಸಿರುವುದು ಗಣನೀಯವಾಗಿದೆ.

ಪತ್ರಿಕೆಗಳ ಅಭಿಪ್ರಾಯ

ಕರಾಚಿಯಿಂದ ಹೊರಡುವ 'ಡಾನ್' ಪಾಕ್ ಸರಕಾರದ ಪಕ್ಷಪಾತಿ; ಅದರಲ್ಲಿ ಪ್ರಕಟವಾದ ಅಭಿಪ್ರಾಯಗಳು ಅಲ್ಲಿನ ಸರಕಾರದ ಆಶಯಗಳೆಂಬುದು ಸರ್ವ ಶ್ರುತವಿದೆ. ಎಂತಲೇ ಅದರಲ್ಲಿ ಬೆಳಕು ಗಂಡ ವಿಚಾರಗಳ ಬಗ್ಗೆ ಎಲ್ಲೆಲ್ಲಿಯೂ ಚರ್ಚೆ ನಡೆಯುತ್ತಿರುತ್ತದೆ. 'ನಿರ್ಣಾಯದ ಗಳಿಗೆ' ಎಂಬ ತನ್ನ ಅಗ್ರ ಲೇಖನವೊಂದರಲ್ಲಿ ಪಾಕಿಸ್ತಾನವು ಭಾರತದ ಬಗ್ಗೆ ತೀವ್ರವಾದ ಅಭಿಪ್ರಾಯಗಳನ್ನು ಹೊರಗೆಡಹಿದೆ. ಇದರಂತೆ ಭಾರತವು ಕಾಶ್ಮೀರದಲ್ಲಿ ಯುದ್ಧ ವಿರಾಮ ಒಡಂಬಡಿಕೆಯನ್ನು ಮುರಿದಿದೆ; ಮತ್ತು ಪಾಕಿಸ್ತಾನವನ್ನು ಜಗಳಕ್ಕೆ ಕರೆದಿದೆ. ಪಾಕಿಸ್ತಾನವು ನಾಲ್ಕೂ ನಿಟ್ಟುಗಳಿಂದ ಅಪಾಯವನ್ನು ಎದುರಿಸುತ್ತಿದೆ. ಹಾಗಿದ್ದರೂ ಪಾಕಿಸ್ತಾನಿಗಳು ತಮ್ಮ ರಕ್ಷಣೆಯನ್ನು ಮಾಡಿಕೊಳ್ಳಲು ಸಮರ್ಥರಿದ್ದಾರೆ: ಭಾರತವು ಯುದ್ಧವನ್ನೇ ಬಯಸುವುದಾದರೆ, ಪಾಕಿಸ್ತಾನಿಗಳು ಸಮರಾಹ್ವಾನವನ್ನು ನೀಡಲು ಹಿಂಜರಿಯುವುದಿಲ್ಲ.

ಡಾನ್‌ನ ಸಂಪಾದಕೀಯ

ಭಾರತಕ್ಕೆಂದು ಪಾಕಿಸ್ತಾನದೊಡನೆ ಸಂಗ್ರಾಮ ಬೇಕಾಗಿದೆ. ಲಾಹೋರ್, ಡಾಕಾ ಮತ್ತು ಕರಾಚಿ ನಗರಗಳನ್ನು ಧ್ವಂಸ ಮಾಡಲು ಅದು ಬಾಂಬುಗಳನ್ನು ಎಸೆದರೆ, ಬೊಂಬಾಯಿ, ಅಹಮ್ಮದಾಬಾದ, ಅಮೃತಸರ, ಮತ್ತು ಡಿಲ್ಲಿಗಳನ್ನೂ ಪಾಕಿಸ್ತಾನವು ನಾಶಗೊಳಿಸುವುದು. ಮತುಕಶಿ ಮತ್ತು ಪತ್ರವ್ಯವಹಾರಗಳು ರಾಜಕೀಯದ ಎರಡು ವಿಧಾನಗಳು. ಇವೆರಡೂ ಇಂದು ವ್ಯರ್ಥವೆನಿಸಿವೆ. ಆದುದರಿಂದ ಉಂಟಾದ ಈ ವಿಕಟ ಪರಿಸ್ಥಿತಿಯಲ್ಲಿಯೇ ಪಾಕಿಸ್ತಾನವು ತನ್ನ ನೀತಿಯನ್ನು ನಿರ್ಧರಿಸಿಕೊಳ್ಳಬೇಕು ಸಂಯುಕ್ತ ರಾಷ್ಟ್ರ ಸಂಘದ ಘೋಷಣಾ ಪತ್ರದಲ್ಲಿ ಅಂತರ್ಗತವಾಗಿರುವ ನಮ್ಮ ಮಿತ್ರರಲ್ಲಿ ತಮ್ಮ ಸ್ನೇಹಿತರ ಪರವಾಗಿ ಕರ್ತವ್ಯ ನಿರ್ವಹಿಸಲು ಆಸಕ್ತಿಯಿರುವುದಿಲ್ಲ. ಕಾಶ್ಮೀರದ ಪ್ರಶ್ನೆಯನ್ನು ಪಾಕಿಸ್ತಾನವು ಪ್ರಾಣಪಣ ವಿಟ್ಟಾದರೂ ಬಿಡಿಸಲೇ ಬೇಕು. ಭಾರತವು ಭದ್ರತಾ ಮಂಡಲಿಯ ಗೊತ್ತುವಳಿಯನ್ನು ಉಲ್ಲಂಘಿಸಿದೆ. ಯುದ್ಧವಿರಾಮದ ಸಂಗತಿಯೂ ಆ ಗೊತ್ತುವಳಿಯಲ್ಲಿದೆ. ಆಕ್ರಮಕ ವಿಧಾನದಲ್ಲಿ ತನ್ನ ಸೇನೆಯನ್ನು ಭಾರತವು ಹೆಚ್ಚಿಸಿಕೊಂಡಿದೆ. ಇದರಿಂದ, ಪಾಕಿಸ್ತಾನಿಗಳ ಕೆಲಸವು ತುಸು ಹಗುರವಾದಂತಾಯಿತು ಕಾಶ್ಮೀರವನ್ನು ಸ್ವತಂತ್ರಗೊಳಿಸಲಿದ್ದ ದುಖ್ಯಾಭೆ ಯೆಂದರೆ ಈ ಯುದ್ಧವಿರಾಮ ಸಂಧಿ. ನಮ್ಮ ನೇಲೆಯೇ ಯುದ್ಧ ಮುಂದುವರಿಸಬಾರದು ಎಂಬ ಹೊಣೆಗಾರಿಕೆಯಿತ್ತು. ಆದರೆ, ಇಂದದು ಭಗ್ನವಾಯಿತು. ನಮ್ಮ ಭೂಮಿ, ನಮ್ಮ ಹಿತ ಮತ್ತು ನಮ್ಮ ಜನತೆಯ ಮೇಲೆ ಆಪಾಯ ಹೆಚ್ಚುತ್ತ ಬರುತ್ತಿದೆ. ಆಜಾದ ಕಾಶ್ಮೀರದ ಜನತೆ ಭಾರತೀಯ ಕಾಶ್ಮೀರದ ಜನತೆಯ ಕಷ್ಟನನ್ನು ದೂರೀಕರಿಸಲು ಮುಂದಡಿಯಿಟ್ಟರೆ, ಪಾಕಿಸ್ತಾನದಲ್ಲೆಲ್ಲಾ ಯುದ್ಧ ಹರಡುವ ಭೀತಿಯಿದೆ. ಇಂತಹ ಜವಾಯದಲ್ಲೂ ನಾವು ಭಗುಭೀತರಾಗಿಲ್ಲ. ಏಕೆಂದರೆ, ಭಾರತವು ಯುದ್ಧವನ್ನೇ ಬಯಸುವುದಾದರೆ, ನಾವೂ ಯುದ್ಧ ಮಾಡುತ್ತೇವೆ. ನಮ್ಮ ಮಟ್ಟಿಗೆ ಶಾಂತಿ ಮತ್ತು ಯುದ್ಧಗಳಿಂದ ಸರಿಸವಾನ. ನಮ್ಮ ದೇಶದ ಜನತೆಯು ಭಾರತದ ಆಕ್ರಮಣವನ್ನು ಎದುರಿಸಲು ಸನ್ನದ್ಧವಿದೆ, ಶತ್ರುಗಳ ತಲೆಯು ನೇಲೆ ಬಾಂಬು ಎಸೆದಾಗ, ನಮ್ಮ ಸೀಮೆಯೊಳಗೆ ಪ್ರವೇಶ ಮಾಡಿದಾಗ, ನಮ್ಮನ್ನು ಉಳಿಸಿಕೊಳ್ಳುವೆವೆಂಬ ಯೋಚಿಸಲು ಅವಕಾಶವಿಲ್ಲ; ಯುದ್ಧ ವಿರಾಮ ಒಡಂಬಡಿಕೆಯ ಉಲ್ಲಂಘನೆಯು ಯುದ್ಧದ ಘೋಷಣೆಯಲ್ಲವಾದರೆ, ಮತ್ತಷ್ಟನ್ನು ಏನೆಂದು ಕರೆಯಬೇಕು?

ಜಂಗದ ಸಂಪಾದ್ಯಾನ

ನೇಲಿನದು ಡಾನ್ ಪತ್ರಿಕೆಯ ಸಂಪಾದಕೀಯದ ಸಾರಾಂಶ. ಇದಕ್ಕಿಂತಲೂ ಸ್ಪಷ್ಟವಾಗಿ ಉರ್ದೂ ದೈನಿಕ 'ಜಂಗ'ವು ಸಾಕ್ ವಿಚಾರಧಾರೆಯನ್ನು ಪ್ರಕಟಿಸಿದೆ. ಸೀಟೋ ಮತ್ತು ಸೆಂಟೊ ಮಿತ್ರರಾಷ್ಟ್ರಗಳು ಪಾಕಿಸ್ತಾನಕ್ಕೆ ಸಹಾಯ ಸಲ್ಲಿಸುತ್ತಿಲ್ಲ; ಈ ಮೈತ್ರಿಗಳು ದಿನೆದಿಂದ ದಿನಕ್ಕೆ ನಿರ್ಬಲವಾಗುತ್ತಿವೆ. ಆದುದರಿಂದಲೇ ಈ ವಿಪನ್ನಾವಸ್ಥೆಯಲ್ಲಿ ಪಾಕಿಸ್ತಾನವು ಕಮ್ಯುನಿಸ್ಟ ಚೀನದೊಡನೆ ಅನಾಕ್ರಮಣ ಒಪ್ಪಂದವನ್ನು ಮಾಡಿಕೊಳ್ಳಬೇಕು. ಎಂದರೆ, ಭಾರತದ ವಿರುದ್ಧ ಎದ್ದುನಿಂತಿರುವ ಚೀನಾದ ಗೆಳೆತನವನ್ನು ಸೂಡಿ, ತನ್ಮೂಲಕ ಭಾರತದೊಡನಿರುವ ತನ್ನ ಹಗೆತನವನ್ನು ಪಾಕಿಸ್ತಾನವು ತೀರಿಸಿಕೊಳ್ಳಬೇಕು, ಕಾಶ್ಮೀರವನ್ನು ತಾನೇ ಕಬಳಿಸಬೇಕು ಇದು ಅದರ ಅಭಿಪ್ರಾಯ

ಗೆತ್ತುಗಾರಿಕೆಯ ಪ್ರದರ್ಶನ.

ಇಂತಹ ಪ್ರಕೋಪಪರವೆನಿಸಿದ ಅಭಿಪ್ರಾಯಗಳು ಪಾಕಿಸ್ತಾನದ ಪತ್ರಿಕೆಗಳ ಮೂಲಕ ಮಾತ್ರವಲ್ಲ, ಅಲ್ಲಿನ ನಾಯಕಮಣಿಯವರ ಬಾಯಿಂದಲೂ ಈ ಮೊದಲೇ ಹೊರಬಿದ್ದಿದೆ. ಆದರೆ, ಭಾರತವು ಮಾತ್ರ ಯಾವುದೇ ಬಗೆಯಲ್ಲಿ ಕಾಶ್ಮೀರದ ವಿಷಯದಲ್ಲಿನ ತನ್ನ ನೀತಿಯನ್ನು ಬದಲಿಸಿಲ್ಲ. ತನ್ನ ಸೇನಾ ವೆಚ್ಚದಲ್ಲಿ ಮೊತ್ತಮೊದಲು ಹೆಚ್ಚಳ ಮಾಡಿದುದು ಪಾಕಿಸ್ತಾನ; ಅಮೆರಿಕೆಯೊಡನೆ ಶಸ್ತ್ರಾಸ್ತ್ರ ಸೂರೈಕೆಯ ಬಗ್ಗೆ ಒಡಂಬಡಿಕೆ ಮಾಡಿಕೊಂಡುದು ಪಾಕಿಸ್ತಾನ; ಚೀಹಾದ ಮೊದಲಾದ ಉದ್ರಿಕ್ತ ಕ್ರಮಗಳಿಗೆ ಆಸ್ಪದ ನೀಡಿರುವುದು ಅದುವೇ; ಒಳಗಿಂದೊಳಗೆ ಭಾರತ ವಿರೋಧಿ ನೀತಿಯನ್ನು ಹರಡಿಸುತ್ತ ತನ್ನ ಜನತೆಯನ್ನು ವಂಚಿಸುತ್ತ ಬರುತ್ತಿರುವ ಪಾಕ್ ನಾಯಕರು ಸೇನೆಯಲ್ಲಿ ಹೆಚ್ಚುನರಿ ಮಾಡಿದ ನಂತರ, ಭಾರತದ ಗಡಿಯಲ್ಲಿ ಗೊಂದಲ ಹೆಬ್ಬಿಸಿದನಂತರವೇ ನಮ್ಮ ಗಡಿಯನ್ನು ಸಂರಕ್ಷಿಸುವ ಸಲುವಾಗಿ ಯೋಚನೆ ಮಾಡಬೇಕಾಗಿ ಬಂತು. ಡಾನ್ ಪತ್ರಿಕೆಯ ಈ ಅಗ್ರ ಲೇಖ ಪಾಕಿಸ್ತಾನದ ಗತ್ತುಗಾರಿಕೆಯ ಒಂದು ಪ್ರದರ್ಶನವೆಂದು ಹೇಳಬಹುದು.

ಭಾರತದ ಸ್ಪಷ್ಟ ನೀತಿ

ಭಾರತವು ಕಾಶ್ಮೀರದ ಸಲುವಾಗಿ ಇಷ್ಟವೇ ಇನ್ನಿತರ ಕಾರಣಗಳಿಗಾಗಿ ಪಾಕಿಸ್ತಾನದೊಡನೆ ಸಮರ ಹೂಡುವುದಿಲ್ಲವೆಂಬುದನ್ನು ಎಂದೋ ಸ್ಪಷ್ಟವಾದ ನಾಲಿಗಳಿಂದ ತಿಳಿಯಪಡಿಸಿದೆ. ತನ್ನ ಸಾರ್ವ

(ಇನ್ನೇ ಪುಟ ನೋಡಿರಿ)

ಭವ್ಯ ಕಟ್ಟಡಗಳಿಗೆ ಬೇಕಾಗುವ— ಕಿಟಕಿ—ಬಾಗಿಲು, ವೆಂಟಿಲೇಟರು ರೋಲಿಂಗ್ ಶಟರು, ಗೇಟುಗಳಿಗೆ

ಶಾಸ್ತ್ರಿ & ಕೊ
ಹಂಪನಕಟ್ಟೆ,
ಮಂಗಳೂರು—1

ಆಫೀಸು—ಮನೆಗಳಿಗೆ ಬೇಕಾಗುವ— ವಿವಿಧ ಕಪಾಟುಗಳು, ಮೇಜು ಕುರ್ಚಿಗಳು, ಮಂಚ, ಸೋಫಾಗಳಿಗೆ

ಸಿಟಿ ಬಸ್ಸಿನ ಟ್ರಿಪ್ಪು

—ಶ್ರೀ ಕೂಡ್ಲು ತಿಮ್ಮಪ್ಪ ಗಟ್ಟಿ.

ಡ್ರೈವರ್ ಹಮೀದ್ ಸಡನ್ ಸ್ಪೀಡು ತೆಕ್ಕೊಂಡಿದ್ದಾನೆ. ಕಾರಣ ಎರಡು ಫರ್ಲಾಂಗು ಮುಂದೆ ರವೂ ಕಾದಿರುತ್ತಾಳೆ. ಹುಂ. ಹೌದು. ಕಂಡೆಕ್ಟರ್ ಸುಂದರನಿಗೆ ಈ ವೇಗದ ಆಘಾತವಾಗುತ್ತದೆ. ಆತ ಕಡೆಗಣ್ಣಲ್ಲಿ ಕೊನೆ ಬಾಯಲ್ಲಿ ನಗುತ್ತಾನೆ. ಆತನಿಗೆ ಹಮೀದನ 'ಲವ್ ಸ್ಟೋರಿ' ಗೊತ್ತು.

ಡಾಮರ್ ಹಾಕಿದ ಮಾರ್ಗವಾದರೂ ಮಾರ್ಗಕ್ಕೆ ಹಿಡಿದ ಒಂದು ಶೆರನ ಕುಷ್ಟದಿಂದಾಗಿ ಪ್ರಯಾಣಿಕರು ತಮ್ಮ ಎಲುಬುಗಳ ಕುರಿತು ಚಿಂತಿಸಬೇಕಾಗುತ್ತದೆ. ಅಲ್ಲಲ್ಲಿ ಜಲ್ಲಿ ಕಲ್ಲುಗಳು ರಾಶಿ ಬಿದ್ದಿವೆ. ಅವುಗಳ ಮೇಲೆ ಬಸ್ಸಿನ ಚಕ್ರಗಳು ಓಡುವಾಗ ಅವುಗಳಿಗೆಷ್ಟು ವೇದನೆಯೊಗುತ್ತವೆಯೋ ದೇವರೇ ಬಲ್ಲ.

ಓ, ಅಲ್ಲಿ ರನೂ ನಿಂತಿದ್ದಾಳೆ. ಬೆಳಿಗ್ಗಿನ ಗಾಳಿಗೆ ಅವಳ ನುಣುಂಗುರುಳು, ಸೆರಗು ಹಾರುತ್ತಿದೆ. ಬಸ್ ಬಳಿ ಬರುತ್ತಿರುವಂತೆ ಅವಳ ಪೌಡರ್ ಹಚ್ಚಿದ ಸುಂದರವಾದ ಮೂಮೂಲು ಮುಖ ಹಮೀದನಿಗೆ ಗೋಚರಿಸುತ್ತದೆ ಮೋಹಕವಾಗಿ ಆರಳಿದ ಆ ಕಣ್ಣುಗಳನ್ನು ಕಾಣುವುದೆಂದರೆ ಹಮೀದನಿಗೆ ಹಬ್ಬ. ಅವಳ ಎರಡು ಜಡೆಗಳಲ್ಲಿ ಈ ದಿನ ಎರಡು ಮಲ್ಲಿಗೆ ದಂಡೆಗಳಿವೆ. ಅವಳು ಬಸ್ಸು ಹತ್ತಿದೊಡನೆ ಡ್ರೈವರನ ಕಡೆಗೆ ಗಮ್ಮೆಂದು ಬೀಸಿದ ಸುಗಂಧವನ್ನು ಆಘ್ರಾಣಿಸುವ ಭರದಲ್ಲಿ ಆತ ಮೈಸೂರು ವ್ಯಂದಾವನದಲ್ಲಿದ್ದುದರಿಂದ ಕಂಡಕ್ಟರ್ ಇನ್ನೊಮ್ಮೆ ರೈಟ್ ಎನ್ನಬೇಕಾಯಿತು.

ಬಸ್ಸು ಮುಂದೆ ಓಡುತ್ತದೆ. ಲೇಡೀಸ್ ಸೀಟುಗಳು ಇನ್ನೂ ಭರ್ತಿಯಾಗಿಲ್ಲ. ಆದರೆ ಲೇಡೀಸ್ ಎಷ್ಟೋ ಮುಂದಿ ಮುಂದೆ ಇರುವುದು ಖಂಡಿತವಾದುದರಿಂದ ಗಂಡಸರಾರನ್ನೂ ಆತ ಲೇಡೀಸ್ ಸೀಟುಗಳಲ್ಲಿ ಕುಳಿತುಕೊಳ್ಳಲು ಬಿಡುವುದಿಲ್ಲ. ಹರಿಪುರದಿಂದಲೇ ಹತ್ತಿದ ಖಾಯಂ ಗಿರಾಕಿಗಳಾದ ಕೆಲವು ವಿದ್ಯಾರ್ಥಿಗಳು, ಇಬ್ಬರು ಕ್ಲಾರ್ಕ್‌ಗಳು, ಮತ್ತೊಬ್ಬರು ಯೂರೋ ಆಳಿಂಬೆ ಆಫೀಸರರು, ಮತ್ತೆ ಕೆಲವು ವ್ಯಾಪಾರಿಗಳು ಅವರ ಗೋಣಿ ಡಬ್ಬಿಗಳು ಬಸ್ಸನ್ನು ಆವರಿಸಿಕೊಂಡಿದ್ದರೂ ಬಸ್ಸಿನಲ್ಲಿ ಸ್ಥಳ ಇನ್ನೂ ತುಂಬಾ ಇದೆ. ಖಾಯಂ ಗಿರಾಕಿಗಳಾದ ರಾಘವ ಮಾಷ್ಟ್ರು ಮತ್ತು ರಾಮ ಮಾಷ್ಟ್ರು ಒಂದೆಡೆ ಹರಟುತ್ತಿದ್ದರು. ಯಮುನಾ ಟೀಚರ್ ಮತ್ತು ರವೂ ಹಾಗೆ ಮೆಲ್ಲನೆ ಮಾತಿಗಾರಂಭಿಸಿದ್ದರು.

ಹರಿಪುರದಿಂದ ಶ್ರೀನಗರಕ್ಕೆ ಐದು ಮೈಲಿಯ ಹಾದಿ. ಇದರ ಮಧ್ಯೆ ಒಂದೆಡೆ ಒಂದೂವರೆ ಮೈಲು ಡಾಮರು ಹಾಕದ ಮಾರ್ಗ ಇದೆ. ಇದು ಗಂಡ ಹೆಂಡಿರ ಜಗಳದಲ್ಲಿ ಬಡವಾದ ಮಗು. ಈ ಒಂದೂವರೆ ಮೈಲಿನುದ್ದದಲ್ಲಿ ಕೆಲವು ಸಿಮ್ಲಾ ಡಾರ್ಜಲಿಂಗುಗಳಿವೆ. ಮಳೆಗಾಲದಲ್ಲಿ ಕೃಷ್ಣರಾಜ ಸಾಗರವಾಗುವ ಸ್ಥಳಗಳಿವೆ. ಚರಂಡಿ ಯೂವುದು, ಮಾರ್ಗ ಯೂವುದು ಎಂದು ಅಪರಚಿತ ಪ್ರಯಾಣಿಕರು ಗಾಬರಿಯೂಗುವುದಿದೆ, Unload and Pass. Limit Five Tons ಎಂಬ ಬೋರ್ಡುಗಳನ್ನು ಧರಿಸಿದ ಘೋರಿ ಮಹಮ್ಮದನ ಕಾಲದ ಎರಡು ಸಂಕಗಳಿವೆ. ರಿಬ್ಬನಿನಷ್ಟಗಲದ ಈ ಸಂಕಗಳ ಮೇಲೆ ಬಸ್ಸು ಓಡುತ್ತಿರುವಾಗ ಪ್ರಯಾಣಿಕರಿಗೆ ಇನ್ಶೂರೆನ್ಸ್ ಪಾಲಿಸಿಯ ನೆನಪಾಗುತ್ತದೆ ರಾಮಣ್ಣಾ, ಯೂ ಆಲ್ಸಾ ಎಂಬ ಕೂಗುಗಳು ಮೆಲ್ಲನೆ ಕೇಳುವುದಿದೆ. ಮುಂಗಾರಿನ ಮುಗಿಲಿನಂತೆ ಧೂಳಿನ ಪೆಟ್ಟಿಗೆಗಳದ್ದು ದಾರಿ ಹೋಕರನ್ನು ದಿಗ್ಬಂಧನಗೈಯುತ್ತವೆ.

ಇಕ್ಕೆಡೆಯ ದೃಶ್ಯಗಳೂ ಮನೋಹರವಾಗಿವೆ. ಆದರೆ ಈ ಸಿನಿಮಾ ಬಂದ ನೇಲೆ ಉದಕ ಮಂಡಲ, ಸಿಮ್ಲಾ, ಕಾಶ್ಮೀರಗಳನ್ನು ನೂರಾರು ಬಾರಿ ನೋಡಿದ ನಮಗೆ ಇಲ್ಲಿನ ಸೃಷ್ಟಿಯ ಸೊಬಗಿನಲ್ಲಿ ಆಸಕ್ತಿಯಿಲ್ಲ. ಆ ಹಳೆಯ ಕೋಗಿಲೆಯ ಕೂಗಿನಲ್ಲಿ ನಮಗೆ ಯಾವ ರಸವೂ ಕಾಣುವಂತಿಲ್ಲ.

ಮಾರ್ಗದ ಇಕ್ಕೆಡೆಯಲ್ಲಿ ಸಣ್ಣ ಸಣ್ಣ ಹುಡುಗರು ಶಾಲೆಗೆ ಹೊರಟಿದ್ದಾರೆ ಗುಂಪುಗುಂಪಾಗಿ. ಅವರ ಚೀಲದಲ್ಲಿ ಬಿಟ್ಟಲು ಇದೆ, ಸ್ಲೇಟು ಪುಸ್ತಕದ್ದು ನಿಶ್ಚಯವಿಲ್ಲ. ಹಾಲು ಕುಡಿಯಲು ಗ್ಲಾಸು ಇದೆ. ಜೋಳದ ಪಚ್ಚಿಗೆ ತಿನ್ನಲು ಪ್ಲೇಟು ಇದೆ.

ಬಸ್ಸು ಅಲ್ಲಲ್ಲಿ ನಿಲ್ಲುತ್ತದೆ. ಜನ ಹತ್ತುತ್ತಾರೆ. ಕಂಡಕ್ಟರ್ ರವೆಯ ಬಳಿ ಬರುತ್ತಾನೆ. "ಟಿಕೆಟ್" ಎನ್ನುತ್ತಾನೆ. ಬೇಕಂದೇ ಅವಳ ಕೈ ಮುಟ್ಟಿಯೇ ಟಿಕೆಟ್ ಕೊಡುತ್ತಾನೆ. ದುಡ್ಡಿನ ವಿಷಯದಲ್ಲಿ ಕೆಲವೊಮ್ಮೆ ಅವನಿಗೆ ನಿಶ್ಚಿತ್ತಲ್ಲ. ಅವಳೇ ನೆನಪುಮಾಡಿ ಕೊಡಬೇಕಾಗುತ್ತದೆ. ಡ್ರೈವರ್ ಹಮೀದ್ ತನ್ನಿದುರಿರುವ ಕನ್ನಡಿಯಲ್ಲಿ ನೋಡುತ್ತಾನೆ ಹಿಂದಿನಿಂದ ವಾಹನಗಳು ಬರುತ್ತವೆಯೋ ಎಂದಲ್ಲ. ರವೆಯ ಮುಖದರ್ಶನಕ್ಕಾಗಿ. ಅವಳಿಗೂ ಗೊತ್ತು ಈ ಟ್ರಕ್. ಅವಳು ಗಂಭೀರಳಾಗುತ್ತಾಳೆ. ಏನೇ ಇರಲಿ ಅವಳು ಬಸ್ಸಿನಲ್ಲಿದ್ದರೆ ಬಸ್ಸಿಗೇ ಒಂದು ಶೋಭೆ ಎಂದು ಹಮೀದನ ಮತ.

ಎದುರಿನ ಸೀಟಿನಲ್ಲಿ ಕುಳಿತ ತನ್ನ ಪರಿಚಯದ 'ದೋಸ್ತಿಯೊಡನೆ ಆತ ಹರಟೆಗಾರಂಭಿಸುತ್ತಾನೆ. ಈ "ಬೆಂಕಿ ಪೆಟ್ಟಿಗೆ ಬಸ್ಸಿ"ನಲ್ಲಿ ಇದೊಂದು ಅನುಕೂಲ ನೋಡಿ. ಡ್ರೈವರ್ ತುಂಬಾ ರಸಿಕನೂ ಹೌದು. ರಸಿಕ ತನದ ಚಟಾಕಿಗಳನ್ನು ಹಾರಿಸುತ್ತಾ ಅದರ ಪ್ರತಿಕ್ರಿಯೆ ಲೇಡೀಸ್ ಸೀಟುಗಳಲ್ಲಿ ಯಾವ ರೀತಿ ಆಗುತ್ತದೆಯೆಂದು ನೋಡುತ್ತಿರುತ್ತಾನೆ. ಯಾರಾದರೂ ಇಳಿಯಲು ಬಸ್ಸು ನಿಲ್ಲಿಸಿದರೆ ಹಿಂತಿರುಗಿ ಒನ್ಮೈ ಸಿಂಹಾವಲೋಕನ ನಡೆಸಿ ಯಾರಿದ್ದಾರೆ ಯೂರಿಲ್ಲ ಎಂದು ತಿಳಿದು "ತನಗೆ ಬೇಕಾದವರನ್ನು" ನೋಡಿ ಮುಗುಳ್ನಗುತ್ತಾನೆ.

ಓ ಅಲ್ಲಿ ಕಾಲೇಜು ಹುಡುಗಿಯರ ಒಂದು ಗುಂಪು ನಿಂತಿದೆ. ಅವರು ಬಸ್ಸು ನಿಲ್ಲಿಸಲು ಕೈಯೆತ್ತುವುದಿಲ್ಲ. ಅವರಿಗೆ ಗೊತ್ತು ಡ್ರೈವರ್ ನಿಲ್ಲಿಸುತ್ತಾನೆ ಅಂತ. ಬಸ್ಸು ನಿಲ್ಲುತ್ತಿರುವಂತೆಯೇ ಅವರ ಕಿಲ ಕಿಲ ನಗು ಹರಟೆ ನಿಲ್ಲುತ್ತಾ ಬರುತ್ತದೆ. ಡ್ರೈವರ್ ಹಮೀದ್ ಒಮ್ಮೆ ಕ್ಯಾಫಿನ ಮೇಲೆ ಕೈಯಲ್ಲಾಡಿಸಿ ಮಿಸೆಯನ್ನು ಸೀಡುತ್ತಾನೆ. ಕಡೆಗಣ್ಣಿಂದ ಅತ್ತ ನೋಡಿ ತುಟಿಯಲ್ಲಿ ಮಾತ್ರ ನಗುತ್ತಾನೆ.

"ರೈಟ್" ಎಂದು ಹೇಳಿ ಟಿಕೆಟ್ ಕೊಡಲು ಕಂಡಕ್ಟರ್ ಈ ಹಕ್ಕಿಗಳ ಬಳಿ ಬರುತ್ತಾನೆ. ಈಗ ಅವನ ಸರದಿ. ತನ್ನ ಗೆಳತಿಯರೆಂಬಂತೆ ಅವನು ಒಬ್ಬೊಬ್ಬರೊಡನೆ ಒಂದೊಂದು ಮಾತು ಆಡುತ್ತಾನೆ. ಹಣ ತೆಗೆದುಕೊಳ್ಳಲು 'ಅವನಿಗೆ' ಮನಸಿಲ್ಲವಾದರೂ ಕ್ಯಾಶ್ ಭರ್ತಿಗಾಗಿ ತೆಗೆದುಕೊಳ್ಳಬೇಕಾಗಿದೆ. ಜವರಿಲ್ಲರೂ ಸುಂದರನೊಡನೆ ಒಂದೆರಡು ವಿನೋದದ ಮಾತುಗಳನ್ನು ಆಡುತ್ತಾರೆ. ಎಷ್ಟಾದರೂ ಕಾಲೇಜ್ ಬಡ್ಸ್!

ಡ್ರೈವರನಿಗೆ ಈಗ ಎಲ್ಲೆಲ್ಲದ ಸ್ಪರ್ಶ! Dangerous Turnಗಳಲ್ಲಿ ಗರ್ರೆಂದು ಒಂದೇ ಬಾರಿ ಬಸ್ಸು ತಿರುಗುವಾಗ ಪ್ರಯಾಣಿಕರ ಪ್ರಾಣಪಕ್ಷಿಗಳು ಹಾರಿ ಕೋಗಿ ಸ್ವಲ್ಪ ಹೊತ್ತು ಹತ್ತಿರದ ಮರಗಳಲ್ಲಿ ಕುಳಿತುಕೊಳ್ಳುತ್ತವೆ!

ಡ್ರೈವರ್ ಹಮೀದನಿಗೆ ತಿಳಿಯದ ವಿಷಯವಿಲ್ಲ. ಚಲಚಿತ್ರ, ರಾಜಕೀಯ, ಸರಕಾರದ ಸೊಸ ಪಾಲಿಸಿಗಳು ಎಲ್ಲವೂ ಅವನಿಗೆ ಕರತಲಾಮಲಕ. ಬಸ್ಸಿನಲ್ಲಿ ಕುಳಿತ ಲಾಯರಿಗೆ, ಆಫೀಸರಿಗೆ, ಮಾಷ್ಟ್ರಿಗೆ, ಸ್ಟೂಡೆಂಟ್ಸ್‌ಗೆ ಎಲ್ಲರಿಗೂ ಉಚಿತವಿಂದೊಂದು

(೧೧ನೇ ಪುಟ ನೋಡಿರಿ)

ಬ್ಯಾಂಕ್ ಖಾತೆಯನ್ನು ಯಾರು ತೆರೆಯಬಹುದು?

ಬ್ಯಾಂಕ್ ಖಾತೆ ತೆರೆಯಲು, ತಮಗೆ ಅಸಾಧ್ಯವೆನಿಸುವ ನಿರ್ಬಂಧಗಳಿವೆಯೆಂದು ಹಲವರು ಭಾವಿಸುತ್ತಾರೆ. ಇದೊಂದು ತಪ್ಪು ಭಾವನೆ. ದಿನಕೂಲಿ ಪಡೆವವನು ಕೂಡಾ ಬ್ಯಾಂಕಿನಲ್ಲಿ ಚಿಕ್ಕ ಉಳಿತಾಯ ಖಾತೆಯನ್ನು ತೆರೆಯಬಹುದು. ಇಂದಿನ ದಿನಗಳಲ್ಲಿ ಅದು ಅವಶ್ಯವೂ ಇದೆ. ಹೆಚ್ಚಿನ ಮಾಹಿತಿಗೆ ನಿಮಗೆ ಸವಿೂಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ಎಲ್ಲರಿಗೂ ವಿಶಿಷ್ಟಪ್ರಕಾರದ ಸೌಜನ್ಯ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕ.ನಡ.

ESTD. 1921 ಸ್ಥಾಪನೆ

NAVAYUGA
KANNADA WEEKLY,
UDIPI.

Founder:

Late Sri A. B. Shetty

Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್,
ವಿದ್ವಾನ್
ಬಿ. ಶಾಮರಾಯ ಶೆಟ್ಟಿ,
ಬಿ. ಎ., ಎಲ್.ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ರಾಷ್ಟ್ರಪತಿ ಉವಾಚ

ಪ್ರಜೆಗಳು ಪ್ರಜ್ಞಾಶೀಲರಾಗಬೇಕು

ಕಳೆದ ೩೪ ವರ್ಷಗಳ ನಡುವೆ ಸಂಭವಿಸಿದ ಒಂದು ಮಹಾ ಘಟನೆಯೆಂದರೆ, ಬಂಧನದಿಂದ ಮುಕ್ತಿ. ಬಂಧಿತ ಪ್ರಜಾ ಸಮುದಾಯದ ಕೊನೆಯ ಹಾಗೂ ಮಹತ್ತ ಜನಕೋಟಿಯ ಮೊತ್ತಮೊದಲಿನ ತಲೆಮಾರಿನವರು ನಾವು. ಪರಾಕ್ರಮ, ಧೈರ್ಯ, ತ್ಯಾಗ ಮೊದಲಾದ ಉತ್ತಮ ಗುಣಗಳನ್ನು ನಮ್ಮ ಸ್ವಾತಂತ್ರ್ಯ ಸಮರದ ವೇಳೆ ನಾವು ಪ್ರಕಟಿಸಿದ್ದೇವೆ. ರಾಷ್ಟ್ರೀಯ ಪುನರ್‌ರಚನಾ ಕಾರ್ಯದಲ್ಲಿ ಶತ್ರುರೂಪಿಯಾದ ಇಂದಿನ ದಿನಗಳಲ್ಲಿಯೂ ಇಂತಹ ಅಮೂಲ್ಯ ಗುಣಗಳ ಅವಶ್ಯಕತೆ ಬೇಕಷ್ಟಿದೆ. ನಮ್ಮ ದೇಶದ ಸಾಮಾಜಿಕ, ರಾಜಕೀಯ ಮತ್ತು ಸಾಂಸ್ಕೃತಿಕ ಸ್ಥಿತಿಗತಿಗಳನ್ನು ಬದಲಿಸಲು ಮತ್ತು ನಮ್ಮ ಕೃಷಿ, ಉದ್ಯೋಗ, ನೆಲ ಜಲ ವಾಯುಗಳ ಸಾರಿಗೆ ಸಂಪರ್ಕ ಮೊದಲಾದುವನ್ನು ಅಭಿವೃದ್ಧಿಗೊಳಿಸಲು ನಾವು ಶಕ್ತಿ ಮೀರಿ ಪ್ರಯತ್ನಿಸುತ್ತೇವೆ; ಆದರೆ, ಇನ್ನು ಮುಂದೆ ಮಾಡಬೇಕಾಗಿರುವುದಿನ್ನು? ನಾವು ಗಮನಿಸುವುದಾದರೆ, ಇದು ವರೆಗಿನ ನಮ್ಮ ಸಾಧನೆಯು ಅತ್ಯಲ್ಪ. ನಮ್ಮ ಸಾಧನೆಯಲ್ಲಿ ನಾವು ಪ್ರಸನ್ನರಾಗಿ ಸುಮ್ಮನಿರಬಾರದು. ನಮ್ಮ ಮುಂದಿರುವ ದಾರಿಯು ಅತಿ ದೀರ್ಘವಾದುದು, ಕಷ್ಟಮಯವಾದುದು, ಪ್ರಯಾಸ ತಮವಾದುದು, ಕಾಣಿಗಳಿಂದ ಕೂಡಿ ಅನಾಯಕರವೆನಿಸಿದುದು. ಸನ್ಮಾರ್ಗಗಮನ, ತಲ್ಲೀನತೆ ಮತ್ತು ತ್ಯಾಗಗಳನ್ನು ನಾವು ಸ್ವಾತಂತ್ರ್ಯ ಸಂಗ್ರಾಮಾವಧಿಯಲ್ಲಿ ತೋರಿಸಿರುವಂತೆಯೇ ಇಂದಿಗೂ ಅವುಗಳನ್ನು ಅಳವಡಿಸಿಕೊಳ್ಳಬೇಕು.

ನಮ್ಮ ತಪ್ಪುಗಳು, ಕುಂದುಕೊರತೆಗಳು, ಕಲಂಕಗಳು ಕೆಲವೊಮ್ಮೆ ತೀರ ಗಂಡಾಂತರಕಾರಿಯೆನಿಸುವುದುಂಟು ನಾವೂ ಆ ರೀತಿಯ ಕೆಟ್ಟ ಕಾರ್ಯಗಳನ್ನು ಮಾಡಿರಬಹುದು. ನಮ್ಮ ಬಗ್ಗೆ ಇತರ ಜನರು ಯಾವ ಅಭಿಪ್ರಾಯವಿಟ್ಟು ಕೊಂಡಿದ್ದಾರೆಂಬುದನ್ನು ನಾವು ಅರಿತುಕೊಳ್ಳುವ ಪ್ರಯತ್ನ ಮಾಡಬೇಕು. ಒಬ್ಬ ನಾಗರಿಕನು ನಮ್ಮ ದೇಶದಲ್ಲಿ ಪದಾರ್ಥಗಳ ಬೆಲೆಯು ಏರುತ್ತ ಬರುತ್ತಿರುವುದನ್ನೂ ನ್ಯಾಯಕ್ಕೆ ಮನ್ನಣೆ ಕಡಿಮೆಯಾಗುತ್ತಿರುವುದನ್ನೂ ಎತ್ತಿ ಚಿಂತಿಸತೊಡಗಿದನು. ಸಿಫಾರಸು ಇಲ್ಲದೆ ಪ್ರುವೇಶ ದೊರೆಯುವುದಿಲ್ಲವೆಂದು ವಿದ್ಯಾರ್ಥಿಗಳು ದೂರಿದರು. ಸೇವೆಗಳಲ್ಲಿ ದೊರೆಯುವ ಭಡ್ತಿಗಳಲ್ಲೂ ಪ್ರಭಾವದ ಪ್ರತಾಪ ಕಾಣಬರುವುದು ಎನ್ನುತ್ತಾರೆ ಬೇರೆ ಕೆಲವರು ಈ ಯೆಲ್ಲ ಆರೋಪಗಳು ಅತಿಶಯೋಕ್ತಿಯಿರಬಹುದು; ಸತ್ಯಕ್ಕೆ ದೂರವಾಗಿರಬಹುದು ನಮ್ಮಾರಿಷ್ಟ್ರದ ಮೂಸ್ಯತೆ ಮತ್ತು ಭದ್ರತೆಗಳನ್ನು ಉಳಿಸಬೇಕಾದರೆ, ನಾವು ಬಹು ಎಚ್ಚರಿಕೆಯಿಂದಲೇ ನಡೆದುಕೊಳ್ಳಬೇಕು.

ಲಂಚ ರುಷುವತ್ತುಗಳು ಕೆಟ್ಟವು. ಅವುಗಳೊಡನೆ ಸಂಬಂಧವಿರಿಸಿಕೊಳ್ಳುವುದು ಮತ್ತಷ್ಟು ಕೆಟ್ಟದು. ಆದುದರಿಂದ ಜವಾಬ್ದಾರಿಯುತ ಉನ್ನತ ಅಧಿಕಾರದಲ್ಲಿರುವವರು, ಬೆಳೆಯುತ್ತಿರುವ ಈ ಅತ್ಯಾಚಾರವನ್ನು ತಡೆದು ಸ್ಥಿರವಾದ ನಿಜವಾದ ನೀತಿಮತ್ತೆಯು ಮೇಲೆ ನಿಂತ ನಾಗರಿಕ ಸರಕಾರ ರಚನೆಯಲ್ಲಿ ಸಹಭಾಗಿಗಳಾಗಬೇಕು.

ದರ್ಶನ ಶಾಸ್ತ್ರವೆಂದರೆ, ಪ್ರಜ್ಞೆಯನ್ನು ಪ್ರೀತಿಸುವುದು. ಇಂದು ಜಗತ್ತಿಗೆ ಜ್ಞಾನಕ್ಕಿಂತ ಹೆಚ್ಚಾಗಿ ಪ್ರಜ್ಞೆ ಬೇಕಾಗಿದೆ. ಮಾನವನ ವಿನಾಶಕಾರೀ ಪ್ರವೃತ್ತಿಯು ಹಿಂದಿನ ಕಾಲದಿಂದಲೂ ನಮ್ಮ ಮುಂದಿರುವುದನ್ನು ನಾವು ಕಾಣುತ್ತೇವೆ. ಈ ಪ್ರವೃತ್ತಿಗಳೇ ಇಂದು ವಿನಾಶಕಾರಕ ಶಕ್ತಿಯ ಬೆಬಲಗಳಿಸಿ, ತಾಂಡವನಾಡುತ್ತಿವೆ.

ನಾವೆ ಮೂಢಸಿಕವಾಗಿ ಬೆಳೆಯದ ವರೆಗೆ, ಪ್ರಜ್ಞಾವಂತರಾಗದ ವರೆಗೆ, ನಮ್ಮ ಮುಂದಿರುವ ಭವಿಷ್ಯವು ತೀರ ಅಂಧಕಾರಮಯವಾಗಿರುವುದು. ದರ್ಶನ ಮತ್ತು ಧರ್ಮಗಳ ಧಾನನೆಯು ನಮ್ಮನ್ನು ಸಾಮ್ಯವೃತ್ತಿಯವರನ್ನಾಗಿ ಮಾಡಬಲ್ಲುದು; ಪ್ರೇಮಲಹರಿ, ಸಾಮಾಜಿಕ ಸೇವೆಗಳಿಗಾಗಿ ಆತ್ಮಾರ್ಪಣೆ ಮಾಡುವ ಭಾವಗಳು ನಮ್ಮಲ್ಲಿ ಹುಟ್ಟುವುದಕ್ಕೆ ಇವು ಪ್ರೇರಕನಿಸಬಲ್ಲುವು.

ಆದರೆ, ಕೆಲವೊಮ್ಮೆ ಒಂದು ಧರ್ಮ ಇನ್ನೊಂದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವುದಿಲ್ಲ. ಇನ್ನು ಕೆಲವೊಮ್ಮೆ ಗೊಂದಲಮಯ ಪರಿಸ್ಥಿತಿಯಲ್ಲಿರುತ್ತದೆ. ಇದಕ್ಕೆ ಸಂಪೂರ್ಣ ವಿವೇಕ—ಪ್ರಜ್ಞೆಗಳು ಕಾರಣವಲ್ಲ; ಮಾನವ ರಚಿತ ಆಚಾರ ಸಂಹಿತೆ—ಕೃತ್ಯಮಾಲೆಗಳೇ ಕಾರಣ. ಧರ್ಮವೆಂಬುದು ಆಚಾರ ಸಿದ್ಧಾಂತಗಳಲ್ಲಿಲ್ಲ; ಸಂಧಿ ನೀತಿಯಲ್ಲಿಲ್ಲ; ಪ್ರತಿ ಮಾನವನ ಹೃದಯದಲ್ಲಿ ಧರ್ಮವೆಂಬುದಿರುವುದು.

ಸಂಸ್ಕೃತದಲ್ಲಿ ಒಂದು ಶ್ಲೋಕವಿದೆ: "ಪರಮಾತ್ಮನನ್ನು ನಿನ್ನ ಹೃದಯದಲ್ಲಿಯೇ ನೋಡಬಹುದು. ಅವನನ್ನು ಅರೋಪಿತ ಮೂರ್ತಿಗಳಲ್ಲಿ ಕಾಣಲಾರೆವು. ಪ್ರತಿಯೊಬ್ಬರೂ ಅಣುಬಾಂಬುಗಳಂತೆ ಅವಾಯಕರವೆನಿಸಿದ ಹೊತ್ತು ಎಂದು ಆಡಗೀತು ಎಂದು ನೀರೀಕ್ಷಿಸುತಿದ್ದಾರೆ ಈ ಕಂಟಕವನ್ನು ನಾವು ಕಿತ್ತೆಸೆಯುವುದರಲ್ಲಿ ಸಮರ್ಥರಾಗಬೇಕೆಂದಿದ್ದರೆ, ಅಭಿಮಾನಪೂರ್ಣ ಮನಸ್ಸುಳ್ಳವರು ನಮಗೆ ಬೇಕು. ಈ ಅಭಿಮಾನವು ಒಬ್ಬನ ನಗರಕ್ಕೆ, ರಾಜ್ಯಕ್ಕೆ ಜಧವಾ ದೇಶಕ್ಕೆ ಸೀಮಿತವಿರಬಾರದು; ಅದು ವಿಶ್ವಾಭಿಮಾನವಾಗಿ ಸಂಘಟಿಸಲ್ಪಡಬೇಕು. ಇಂತಹ ಅಭಿಮಾನವಿದ್ದರೆ ಮಾತ್ರ ಮಾನವತೆಯೇ ನಮ್ಮ ಪ್ರ

(ಂನೇ ಪುಟ ನೋಡಿರಿ)

ವನು ತನ್ನ ಬಗ್ಗೆ ಪುಣ್ಯಶೀಲತೆ ಮತ್ತು ಪವಿತ್ರತೆಯ ಭಾವಗಳನ್ನಿಟ್ಟುಕೊಳ್ಳಬಲ್ಲನು. ಮಾನವ ಸೌಮಾಜನನ್ನು ಜಾತಿ—ಪಂಥಗಳ ಹೆಸರಿನಲ್ಲಿ ಅರ್ಥ ಮಾಡಿಕೊಳ್ಳುವುದರಲ್ಲಿಯೇ ನಾವು ಜಾರಿಬಿದ್ದಿದ್ದೇವೆ.

ನಾವು ಶ್ರೇಷ್ಠಿಯುತ ಜನಾಂಗವೆನಿಸಬೇಕು ಎಂದು ಬಯಸುತ್ತೇವೆ. ಆದರೆ, ನಮ್ಮ ಮಾನವ ವರ್ತನೆಯಲ್ಲಿ ಸ್ಫೂರ್ತಿಯನ್ನು ತೋರಿಸುವುದಿಲ್ಲ; ವಸ್ತುತಃ ನಾವು ವ್ಯವಹರಿಸುವ ಮಾನವ ಸಂಬಂಧದಲ್ಲಿ ಉತ್ಸಾಹ ಪ್ರದರ್ಶಿಸುವುದಿಲ್ಲ. ಆದುದರಿಂದಲೇ ಲೋಭ, ಕೋಪ, ಅಸೂರ ಮೊದಲಾದ ದುರ್ಗುಣಗಳನ್ನು ನಾಶಮಾಡುವ ಪೂರ್ಣವೆಂದು ಧರ್ಮವನ್ನು ಸ್ವೀಕರಿಸಬೇಕು. ನಮ್ಮಲ್ಲಿ ಹೆಚ್ಚಿನವರು ಪ್ರೇಮದ ಶಕ್ತಿಯನ್ನು ಕಳೆದುಕೊಂಡಿದ್ದೇವೆ. ಸಂಪತ್ತಿನ ಪದವೋ ರಾಷ್ಟ್ರೀಯ ಆಸಕ್ತಿಯುತ ವೆಚ್ಚವನ್ನಾದರೂ ನಮ್ಮ ಸುಖ ಭೋಗಗಳಿಗೆ ಬಳಸಿಕೊಳ್ಳುವ ಪ್ರವೃತ್ತಿಯೇ ಇದಕ್ಕೆ ಕಾರಣವಿರಬಹುದು. ಮನುಷ್ಯನು ತನ್ನನ್ನು ಪುನರುಜ್ಜೀವನಿಸಬೇಕು; ಪುನರ್ನವೀಕರಿಸಬೇಕು. ಹೀಗೆ ಮಾಡದೆ ಹೋದರೆ, ಭವಿಷ್ಯವು ಆಶಾದಾಯಕವಾಗಿರುವುದೆನ್ನುವಂತಿಲ್ಲ. ಆದುದರಿಂದ ದರ್ಶನ ಮತ್ತು ಧರ್ಮಗಳು ಹೊಸ ಮಾನವನನ್ನು, ಮಾನವತಾವಾದಿ ಸಮಾಜವನ್ನು ರೂಪಿಸಲು ಅತ್ಯವಶ್ಯಕವಾಗಿವೆ.

ನಾವಿಂದು ಮಾನವ ಇತಿಹಾಸದ ಕವಲು ದಾರಿಯಲ್ಲಿದ್ದೇವೆ. ನಮಗಿಂದು ಒಂದು ಮಹಾ ಕಾರ್ಯ ಮಾಡುವ ಹೊಣೆಗಾರಿಕೆ ಬಂದಿದೆ. ಮಾನವತೆಯನ್ನು ಉಳಿಸುವುದಕ್ಕಾಗಿ, ನಮ್ಮ ಗುಂಪಿನ ಮನೋಭಾವನೆಯನ್ನು ದೂರೀಕರಿಸಬೇಕು. ಇಂದು ಮಾನವನ ಭವಿಷ್ಯವು ತ್ರಾಸಿನ ತಟ್ಟೆಯಲ್ಲಿದೆ. ಪ್ರತಿಯೊಬ್ಬರೂ ಅಣುಬಾಂಬುಗಳಂತೆ ಅವಾಯಕರವೆನಿಸಿದ ಹೊತ್ತು ಎಂದು ಆಡಗೀತು ಎಂದು ನೀರೀಕ್ಷಿಸುತಿದ್ದಾರೆ ಈ ಕಂಟಕವನ್ನು ನಾವು ಕಿತ್ತೆಸೆಯುವುದರಲ್ಲಿ ಸಮರ್ಥರಾಗಬೇಕೆಂದಿದ್ದರೆ, ಅಭಿಮಾನಪೂರ್ಣ ಮನಸ್ಸುಳ್ಳವರು ನಮಗೆ ಬೇಕು. ಈ ಅಭಿಮಾನವು ಒಬ್ಬನ ನಗರಕ್ಕೆ, ರಾಜ್ಯಕ್ಕೆ ಜಧವಾ ದೇಶಕ್ಕೆ ಸೀಮಿತವಿರಬಾರದು; ಅದು ವಿಶ್ವಾಭಿಮಾನವಾಗಿ ಸಂಘಟಿಸಲ್ಪಡಬೇಕು. ಇಂತಹ ಅಭಿಮಾನವಿದ್ದರೆ ಮಾತ್ರ ಮಾನವತೆಯೇ ನಮ್ಮ ಪ್ರ

6

ಈ ತಿಂಗಳು ಹಾಗೂ
ಪ್ರತೀ ತಿಂಗಳು

6 ದಿನ ಬಡ್ಡಿ ಉಚಿತ

ಕೆನರಾ ಬ್ಯಾಂಕಿನಲ್ಲಿರುವ ನಿಮ್ಮ ಸೇವಿಂಗ್ಸ್ ಖಾತೆಗೆ ತಿಂಗಳ 6ನೇ ತಾರೀಖಿನೊಳಗೆ ಜಮಾಮಾಡಿದ ಹಣದ ಮೇಲೆಯೂ, 1ನೇ ತಾರೀಖಿನಿಂದಲೇ ಬಡ್ಡಿ ದೊರೆಯುವುದು.

ಅಷ್ಟಲ್ಲದೇ, ಪ್ರತಿ ತಿಂಗಳು ನಿಮ್ಮ ಖಾತೆಯಲ್ಲಿ ನಿರಂತರವಾಗಿರುವ ಅತ್ಯಧಿಕ ನೊತ್ತದ ಮೇಲೆ ಬಡ್ಡಿ ಲೆಕ್ಕಮಾಡಲಾಗುವುದು ಮತ್ತು ವರ್ಷಕ್ಕೆ ಎರಡು ಬಾರಿ -- ಅಂದರೆ ಜೂನ್ 30 ಮತ್ತು ಡಿಸೆಂಬರ್ 31ರಂದು ನಿಮ್ಮ ಖಾತೆಗೆ ಜಮಾ ಮಾಡಲಾಗುವುದು.

ನಿಮ್ಮ ಈ ಉಳಿತಾಯವು

ವರ್ಷಕ್ಕೆ ಶೇ. **3** ರಷ್ಟು

ಬಡ್ಡಿ ಸಂಪಾದಿಸುವು
ದೆಂಬುದು
ನಿಮಗೆ ತಿಳಿದಿರಲಿ.

ಕೃಪವಾಗಿ ಕೆನರಾ ಬ್ಯಾಂಕಿನಲ್ಲಿ ಉಳಿಸಿರಿ.

ಕೆನರಾ
ಬ್ಯಾಂಕ್ ಲಿಮಿಟೆಡ್
ಸ್ಥಾಪನೆ: 1906
ಸರ್ವಾಗ್ರ ಸೇವೆ—
ಸಂಪೂರ್ಣ ಭದ್ರತೆ

ಹಾರ್ಮೋನಿಯವ್ ಕಲಿಯುವವರಿಗೆ
ಅತ್ಯುತ್ತಮ ಸಂಗೀತ ಪುಸ್ತಕ—
ಶ್ರೀ ಎ. ರಾಮಪ್ಪ ಅವರ
ಹಾರ್ಮೋನಿಯೆಮ್
ಬೋಧನ ಕ್ರಮ
ಪರಿಷ್ಕರಿಸಲ್ಪಟ್ಟ ನಾಲ್ಕನೆಯ ಮುದ್ರಣ.
ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ: ರೂ. 2—0—0.
ಒಂದು ಪ್ರತಿ ಬೇಕಾದವರು ರೂ 2-50 ನ್ನು ಮನಿಯೂರ್ಡರು ಮಾಡಿ ತರಿಸಿಕೊಳ್ಳಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಸಮಾಜದೊಳಗೆ

ಶಿಸ್ತಿನ ಪರಿಪಾಲನೆ ಅತ್ಯವಶ್ಯ

[ಬಂಟರ ಯೂನೆ ನಾಡವರ ಸಂಘದ ವಾರ್ಷಿಕ ಮಹಾಸಭೆಯು ತಾ. ೧೩—೫—೬೨ರಂದು ನಡೆದಾಗ ಮೂಲ್ಕಿಯ ಶ್ರೀ ಎಂ. ರಾಮಣ್ಣ ಶೆಟ್ಟರು ಮಾಡಿದ ಅಧ್ಯಕ್ಷ ಭಾಷಣದ ಸಾರಾಂಶ]

೧೯೦೬ನೆ ಇಸವಿಯಲ್ಲಿ ಶ್ರೀ ಎ. ಬಿ. ಶೆಟ್ಟಿ ಬಂಟ ವಿದ್ಯಾರ್ಥಿಗಳ ಸಂಘವನ್ನು ರಚಿಸಿ ತಿಂಗಳಿಗೆರಡು ಚರ್ಚಾ ಕೂಟಗಳನ್ನು ಏರ್ಪಡಿಸಿದರು ಮುಂದೆ ಶ್ರೀ ರಾಮ ಕೃಷ್ಣ ವಿದ್ಯಾರ್ಥಿ ಭವನವು ೧೯೦೭ರಲ್ಲಿ ಸ್ಥಾಪನೆಯಾಯಿತು ೧೯೦೮ ರಲ್ಲಿ ಸಂಘವು ರಿಜಿಸ್ಟರ್ ಆಯಿತು. ಆ ಪ್ರಾರಂಭ ಕಾಲದಲ್ಲಿ ಬೇಡಿಕೆ, ಪ್ರಕಟಣೆ, ಪ್ರಚಾರ ಕಾರ್ಯ, ವಂತಿಗ ವಸೂಲಿ ಮೊದಲಾದುವುಗಳಲ್ಲಿ ಅನೇಕ ಸ್ವಾರ್ಥ ತ್ಯಾಗಿಗಳೂ ಸಾಹಸಿಗಳೂ ಭಾಗ ವಹಿಸಿದ್ದರು, ಇವರ ಶ್ರಮಕ್ಕೆ ಕಾರ್ಯದರ್ಶಿಯಾಗಿ ಮತ್ತು ಸೂತ್ರಧಾರಿಯಾಗಿ ಶ್ರೀ ಅತ್ತಾವರ ಸೀತಾರಾಮ ಶೆಟ್ಟಿ ಮತ್ತು ಎ ಬಿ. ಶೆಟ್ಟಿ ವಹಿಸಿದ ಪಾತ್ರವನ್ನು ಉದ್ವಿತೀಯವಾದುದು.

೧೯೧೫ ಜೂನಿನಲ್ಲಿ ನಾನು ಭವನದ ಮೇಲ್ವಿಚಾರಕನಾಗಿ ಆಯ್ಕೆಗೊಂಡೆ ಮನಃಪೂರ್ವಕವಾಗಿ ಪ್ರಾಮಾಣಿಕತೆಯಿಂದಲೂ ವಿದ್ಯಾರ್ಥಿಗಳ ಆರೈಕೆ ಲೆಕ್ಕಪತ್ರಗಳಲ್ಲಿ ಲೋಪ ಬಾರದಂತೆಯೂ ನಾಲ್ಕು ವರ್ಷಗಳ ಕಾಲ ನಾನು ಈ ಕೆಲಸ ನಿರ್ವಹಿಸಿದ್ದೆನು.

ನಮ್ಮ ಭವನದ ಬಾಹ್ಯ ಶೃಂಗಾರ ಆಕರ್ಷಣೀಯವಿದ್ದರೂ ಒಳನೋಟವು ಚೆನ್ನಾಗಿಲ್ಲವೆಂದೇ ನನ್ನ ಅಭಿಪ್ರಾಯ ಆಡಳಿತ ಸಮಿತಿಯವರು ಮತ್ತು ಮೇಲ್ವಿಚಾರಕರು ಪರಸ್ಪರ ವಿಚಾರ ವಿಮರ್ಶೆ ಮಾಡುತ್ತಿರಬೇಕು ವಿದ್ಯಾರ್ಥಿಗಳ ಪ್ರತಿ ಕೋಣೆಯನ್ನು ಸಂದರ್ಶಿಸಿ ವಿದ್ಯಾರ್ಥಿಗಳನ್ನು ಕಂಡು ವಿಚಾರಿಸುತ್ತಿರಬೇಕು. ಪೆತ್ತವರಿಗೆ ಅವರವರ ಮಕ್ಕಳ ಪ್ರಗತಿಯನ್ನು ಪ್ರತಿ ತಿಂಗಳು ತಿಳಿಸುತ್ತಿರಬೇಕು. ನಮ್ಮ ಸ್ಥಾಪಕರು ಶ್ರೀ ಎ ಬಿ. ಶೆಟ್ಟಿ ವಿಸ್ತಿನ ವಿಷಯವಾಗಿ ಯಾವಾಗಲೂ ಯೋಚಿಸುತ್ತಿದ್ದರು; ಮಾತಾಡುತ್ತಿದ್ದರು ಆದೊಂದು ಕಷ್ಟಕರವಾದ ವಿಷಯವೆಂದು ಹೇಳುತ್ತಿದ್ದರು. ಈಗಿನ ಕಾಲದಲ್ಲಿ ಇದು ಎಲ್ಲಾ ವಿಶ್ವವಿದ್ಯಾಲಯ, ಬೇರೆ ಬೇರೆ ವಿದ್ಯಾಸಂಸ್ಥೆಗಳಲ್ಲಿ ಬಿಡಿಸಲಾರದ ವಿವಾದಾತ್ಮಕ ವಿಷಯವಾಗಿದೆ. ಆದುದರಿಂದ ನಾವು ಸರ್ವ ಪ್ರಯತ್ನದಿಂದಲೂ ವಿದ್ಯಾರ್ಥಿಗಳಲ್ಲಿ ಆತ್ಮ ವಿಶ್ವಾಸ, ಸ್ವಾಭಿಮಾನ, ಸ್ವಾವಲಂಬನ, ಸ್ವಾರ್ಥ ತ್ಯಾಗ ಇವುಗಳಿಗೆ ಅವಕಾಶ ಕೊಡಲಿಕ್ಕೂ ಶಿಸ್ತನ್ನು ಬೆಳೆಸಲಿಕ್ಕೂ ಪ್ರಯತ್ನಿಸಬೇಕು ಹಲವು ಮಕ್ಕಳ ಭವಿಷ್ಯ ನಮ್ಮ ಸಂಸ್ಥೆಯನ್ನು ಹೊಂದಿರುವುದರಿಂದ ನಾವು ತಾಳ್ಮೆಯಿಂದಿದ್ದು ಶಿಸ್ತಿನಿಂದ ವರ್ತಿಸಬೇಕಾಗುತ್ತದೆ ಏಕೆಂದರೆ, ಅನೇಕ ಸಾರಿ ದಾಕ್ಷಿಣ್ಯದಿಂದ ಕೆಲಸವು ಹಾಳಾಗುವುದೂ ಇದೆ.

ವಿದ್ಯಾರ್ಥಿನಿ ಭವನದಲ್ಲಿ ವಿದ್ಯಾರ್ಥಿನಿಯರ ಸಂಖ್ಯೆಯು ಕಡಿಮೆಯಾಗುತ್ತಿರುವುದರಿಂದ ಬೇರೆ ಸಮಾಜದವರಿಗೂ ಪ್ರವೇಶ ಕೊಡಲಾಗುತ್ತಿದೆ. ನನ್ನ ತರುಣಿಯರ ಮುಂದಿನ ವ್ಯವಹಾರಕ್ಕೆ ಅನುಕೂಲವಾಗುವಂತೆ ಇದನ್ನು ಮಾರ್ಪಡಿಸುವ ಆಲೋಚನೆಯಿನ್ನೂ ನಿರ್ಧಾರಕ್ಕೆ ಬಂದಿಲ್ಲ. ಇದೊಂದು ಬಿಳಿ ಆನೆಯ ಜಾತಿರಿ ಆಗಬಾರದು.

ನಾವು ಈಗ ಮೈಸೂರಿಗೆ ಸೇರ್ಪಡೆ ಹೊಂದಿರುವುದರಿಂದ ಮದ್ರಾಸಿನ ಸಂಘವನ್ನು ನಿಲ್ಲಿಸುವ ಪ್ರಸಂಗ ಬರಬಹುದು. ಬೊಂಬಾಯಿಯ ಸಂಸ್ಥೆಯು ಈಗಿನಂತೆ ನಡೆಯುತ್ತ ಬಂದರೆ ಅದರ ಬಾಳ್ವೆಗೆ ಅಲ್ಲಿಯೇ ಆಶ್ರಯ ದೊರೆಯುತ್ತದೆ ಬೆಂಗಳೂರಿನ ಸಂಘವು ವಿದ್ಯಾರ್ಜನೆಯ ವಿಷಯದಲ್ಲಿ ಏನೂ ನಾಡಿರುವಂತೆ ತೋರುವುದಿಲ್ಲ ಮೈಸೂರಿನಲ್ಲಿ ಶ್ರೀ ಅಯ್ಯಳ ರಾಮಣ್ಣ ಶೆಟ್ಟಿ ಶ್ರೀ ಎ ಬಿ. ಶೆಟ್ಟಿ ಸ್ಮರಣೆಗಾಗಿ ಒಂದೆರಡು ವರ್ಷಗಳಿಂದ ಸಣ್ಣ ರೀತಿಯಲ್ಲಿ ವಿದ್ಯಾರ್ಥಿ ಭವನವನ್ನು ನಡೆಸಿಕೊಂಡು ಬರುತ್ತಿರುವುದು ಶ್ಲಾಘನೀಯ.

ಸೀತಾರಾಮ ಲೈಬ್ರೆರಿಯಲ್ಲಿ ಇಂದು ಒಂದೂವರೆ ಸಾವಿರಕ್ಕೂ ಮಿಕ್ಕಿದ ಪುಸ್ತಕಗಳಿದ್ದು ಭವನಕ್ಕೆ ಯೋಗ್ಯ ಭಂಡಾರವೆನಿಸಿದೆ. ೧೯೩೧ರಲ್ಲಿ ಸ್ಥಾಪಿಸಿದ ನವಯುಗ ವಾರಪತ್ರಿಕೆಯು ಈಗ ಉದ್ಘಿಪಟ್ಟಣದಲ್ಲಿ ಶ್ರೀ ಹೊನ್ನಯ್ಯ ಶೆಟ್ಟಿ ಸಂಪಾದಕತ್ವದಲ್ಲಿ ಯೋಗ್ಯ ರೀತಿಯಿಂದ ಪ್ರಕಟವಾಗುತ್ತಿದೆ. ಹಳೆ ವಿದ್ಯಾರ್ಥಿ ಸಂಘವು ಬೆಳೆದು ಬರುವಂತೆ ನಮ್ಮ ಸಮಾಜ ಪ್ರಿಯರು ಮುಂದೆ ಬರಲಿ.

ಬಡ ವಿದ್ಯಾರ್ಥಿ ಫಂಡಿನಿಂದ ಕರಾರಿನಲ್ಲಿ ಸಹಾಯ ಪಡೆದವರು ಕಳೆದ ನಾರ್ಷಾಂತ್ಯದ ವರೆಗೆ ೧೯೯೫ ಜನರು. ಒಟ್ಟು ರೂ. ೪೩,೯೯೫—೨೯ ಕರಾರಿಲ್ಲದೆ ಕೊಟ್ಟದ್ದೆಯೆಂದು ವರದಿ ಹೇಳುತ್ತದೆ. ಕರಾರು ಮರುಪಾವತಿ ಫಂಡಿನಿಂದ ಸಾಲಗಳನ್ನು ಪಡೆದವರಲ್ಲಿ ಅನೇಕರು ತಮ್ಮ ಋಣ ಸಂದಾಯ ಮಾಡಲಿಲ್ಲ. ಇವರೆಲ್ಲರೂ ಇಂಜಿನಿಯರಿಂಗ್, ಮೆಡಿಕಲ್, ಕೋ-ಓಪರೇಟಿವ್ ಇಲಾಖೆಗಳಲ್ಲಿಯೂ ಸರಕಾರಿ ಹುದ್ದೆಗಳಲ್ಲಿಯೂ ವಕೀಲ ವೃತ್ತಿಯಲ್ಲಿಯೂ ಇನ್ನು ಬೇರೆ ಬೇರೆಡೆಯಿದ್ದು ಉತ್ತಮ ತಲಬನ್ನು ಪಡೆಯುತ್ತಲಿದ್ದಾರೆ ಇಂಥವರು ಅವರವರ ಸಾಲಗಳನ್ನು ಸಂಪೂರ್ಣ ಸಲಃಯಿಸಿ ಇತರರೊಂದಿಗೆ ಸಹಕರಿಸಿ, ಸಂಘಕ್ಕೆ ತಮ್ಮ ಸಹಾಯವನ್ನು ನೀಡಬೇಕು.

ಕಳೆದ ಐವತ್ತು ವರ್ಷಗಳಲ್ಲಿ ನಾವು ತುಂಬ ಸುಧಾರಿಸಿದ್ದೇವೆ ನಮ್ಮ ಸಂಘದ ವಿದ್ಯಾರ್ಥಿ ಭವನದಿಂದಾಗಿ ವಿದ್ಯಾವಂತರು ಸರ್ವಸಾಧಾರಣ ಎಲ್ಲ ಜಾತಿಗಳಲ್ಲಿಯೂ ಇದ್ದು ದೇಶದ ಎಲ್ಲ ಕಡೆಗಳಲ್ಲಿಯೂ ಪಸರಿಸಿದ್ದು ನಮ್ಮ ಸಮಾಜದ ಹಿರಿಮೆಗೆ ಕಾರಣರಾಗಿದ್ದಾರೆ ಇದನ್ನೆಲ್ಲಾ ಆಲೋಚಿಸುವಾಗ, ನಮ್ಮ ಮೂಲ ಪುರುಷರಾದ ಶ್ರೀ ಎ ಬಿ ಶೆಟ್ಟಿ ನೆನಪಾಗದೆ ಇರಲಾರದು.

ಒಕ್ಕಲು ಮಸೂದೆಯಲ್ಲಿ ನ್ಯಾಯ ಗೇಣಿಗೆ ಯಾರ ಆಕ್ಷೇಪವೂ ಇಲ್ಲ. ಒಕ್ಕಲುಗಳಿಗೆ ಅನುಭೋಗದ ಭದ್ರತೆ ಇರಲೇಬೇಕು ನಮಗೆ ಖಾಸಗಿ ಸೊತ್ತುಗಳ ಸ್ವಾತಂತ್ರ್ಯಬೇಕು — ಕೂಲಿಕಾರನಿಗೆ ನ್ಯಾಯವಾದ ಮಜೂರಿ ಸಿಗಲೇಜೇಕು ಆದರೆ, ನಮ್ಮಿಂದ ಕಾನೂನು ಮೂಲಕ ಕಸಕೊಳ್ಳಲಿಕ್ಕಿರುವ ಭೂಮಿಗಳಿಗೆ ನ್ಯಾಯವಾದ ಪರಿಹಾರ ದ್ರವ್ಯವು ಸಿಗಬೇಕೆಂಬುದೇ ನಮ್ಮ ವಾದವಾಗಿತ್ತು. ಸಹಕಾರಿ ಬ್ಯಾಂಕಾಯವು ಯಶಸ್ವಿಯಾಗಿ ಎಲ್ಲಿಯೂ ನಡೆಯಲಿಲ್ಲವೆಂದು ಆರ್ಥ ಶಾಸ್ತ್ರಜ್ಞರು ಬರೆಯುತ್ತಾರೆ ನಾವು ನಿರಾಶಾವಾದಿಗಳಾಗದೆ ದುಡಿಯಬೇಕು. ಕಾಲಕ್ಕೆ ತಕ್ಕಂತೆ ಮುಂದುವರಿಯಬೇಕು ಅಂತರ್ಜಾತೀಯ ವಿವಾಹಕ್ಕೆ ಪ್ರೋತ್ಸಾಹ ನೀಡಿದರೆ ತಪ್ಪಾಗಲಾರದು. ರಿಜಿಸ್ಟರ್ಡ್ ವಿವಾಹಕ್ಕೆ ಆತಂಕವನ್ನೊಡ್ಡಬಾರದ ವರದಕ್ಷಿಣೆಯ ಪೀಡೆ ಕಮ್ಮಿಯಾಗಲು ಮತ್ತು ಮಿತವ್ಯಯದ ಉನ್ನತಿಗೆ ಇವು ಕಾರಣವಾಗುವುವು

ನಮ್ಮ ಸಂಘದ ಕೋಶಾಧಿಕಾರಿ ಶ್ರೀ ಎ ವಿಠಲ ಪೂಂಜ ಮತ್ತು ಆಡಿಟರ್ ಶ್ರೀ ಪಿ ಎಂ. ಹೆಗ್ಡೆಯವರನ್ನು ನಾವು ಪ್ರಶಸ್ತಿ ಪತ್ರವಿತ್ತು ಗೌರವಿಸಿಲ್ಲ. ಅವರಿಬ್ಬರನ್ನೂ ಹೇಗೆ ಗೌರವಿಸಬಹುದು ಎಂಬ ವಿಷಯದಲ್ಲಿ ಸಂಘವು ಆಲೋಚಿಸಬೇಕಾಗಿದೆ. ಸಂಘದ ಕಾರ್ಯನಿರ್ವಾಹಕ ಸಮಿತಿಯವರು ಒಂದು ವಿಶೇಷ ಸಭೆಯನ್ನು ಕರೆದು, ಶ್ರೀ ಕೆ ಟಿ. ಅಳ್ವರ ಅಭಿನಂದನಾ ಸಮಿತಿಯನ್ನು ಸ್ಥಾಪಿಸಬೇಕು ಅವರ ಸೇವೆಗಾಗಿ ಆನರರ್ನ್ನು ಹೇಗೆ ಸತ್ಕರಿಸಬೇಕು ಎಂಬುದಕ್ಕೆ ವಿಚಾರ ಮಾಡಬೇಕು. ಏಕೆಂದರೆ ಶ್ರೀ ಅಳ್ವರು ನಮ್ಮ ಸಂಘದ ಆದರ್ಶಪುರುಷರು. ಆ ಸಮಿತಿಯವರಿಗೆ ನೆರವಾಗಬೇಕಾಗಿ ನಿಮ್ಮನ್ನು ಬೇಡಿಕೊಳ್ಳುತ್ತೇನೆ.

ಎಕ್ಸ್ಪೆಡ್ಲೀರರ್‌ನಲ್ಲಿರಿಸಲು ಟೇಪು ರೆಕೋರ್ಡರನ್ನು ಸೈನಿಕ ಅಧಿಕಾರಿಗಳು ಪರೀಕ್ಷಿಸುತ್ತಿರುವುದನ್ನು ಇಲ್ಲಿ ಕಾಣಬಹುದು.

ಪರಿಪೂರ್ಣ ಬ್ಯಾಂಕಿಂಗ್ ಸೇವೆಗೆ

— ಕೊಪ್ಪೊರೇಶನ್ ಬ್ಯಾಂಕ್ —

78 ಶಾಖೆಗಳು | ದೇಶದಾದ್ಯಂತ ಏಜನ್ಸಿಗಳು

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಉಡುಪಿ)

ಆಡಳಿತ ಆಫೀಸು: ಮಂಗಳೂರು.

ಜೀವನದ ವಿವಿಧ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ

ಆತ್ಮಬಲದಿಂದ

ಕಠಿನತೆಯಲ್ಲಿ ಕೈಲಾಸ ಕಾಣಿರಿ

ಆತ್ಮಾವಲಂಬನ ಮತ್ತು ಆತ್ಮ ವಿಶ್ವಾಸಗಳಿಂದ ತುಂಬಿದ ಒಬ್ಬ ಸಜ್ಜನನನ್ನು ಭೆಟ್ಟಿಯಾಗುವ ಸುಯೋಗವೊದಗಿತು ಎಂದುಕೊಳ್ಳಿ ಆತನು ಆತ್ಮಾವಲಂಬನ ಮತ್ತು ಆತ್ಮ ವಿಶ್ವಾಸಗಳ ಪ್ರತಿಮೂರ್ತಿಯಂತೆಯೇ ಇರಬೇಕು. ಯಾವುದೇ ವಿಧದ ಕಠಿಣ ಪ್ರಸಂಗಗಳಿಂದ ಅವನು ವಿಚಲಿತನಾಗುವುದಿಲ್ಲ; ಆದರಲ್ಲಿಯೂ ಗೆದ್ದೇನು ಎಂಬ ಆಶೆ ಅವನಿಗಿರುತ್ತದೆ ನೀವು ಆಶ್ಚರ್ಯಚಕಿತರಾಗಿ ಆತನನ್ನು ಕೇಳುತ್ತೀರಿ: "ನಿಮ್ಮಲ್ಲಿ ತಾನು ಕಡಿಮೆಯೆಂಬ ಹೀನ ಭಾವವು ಎಂದೂ ಗೋಚರಿಸುವುದಿಲ್ಲ; ಇದಕ್ಕೇನು ಕಾರಣ? ಯಾರಿಗೂ ನೀವು ಅಂಜುವುದಿಲ್ಲ; ಯಾವುದೇ ವಸ್ತು—ಪರಿಸ್ಥಿತಿಗಳು ನಿಮ್ಮನ್ನು ಕಂಗೆಡುವಂತೆ ಮಾಡುವುದೂ ಇಲ್ಲ. ಇದು ಏತರಿಂದ?" ಆತನು ಉತ್ತರ ಈ ರೀತಿಯಾಗಿ ಕೊಡುತ್ತಾನೆ. "ಎಳೆತನದಿಂದಲೂ ಸ್ವಯಂ ಯೋಚಿಸುವ ಪರಿಪಾಠ ನನ್ನಲ್ಲಿದೆ. ನನ್ನ ಪಾದಗಳ ಬಲದಿಂದಲೇ ನಿಂತುಕೊಳ್ಳುವ ಶಕ್ತಿ ನನಗಿದೆ." ಆತನ ಈ ಉತ್ತರವು ನಿಮಗೆ ಕೂಡಲೆ ಅರ್ಥವಾಗಲಿಕ್ಕಿಲ್ಲ; ಆದರೆ, ನೀವೂ ವಿಚಾರಿಸುತ್ತ ಮುಂದುವರಿದರೆ, ಅದು ಅರ್ಥವಾಗುವುದು ಕಷ್ಟವೇನೂ ಅಲ್ಲ.

ಕಠಿನ ಪರಿಸ್ಥಿತಿಗಳು ಎದುರು ಬಂದಾಗ, ಅಂಜಿಕಾವುದದೂರವೋಡುವವರು ತಮ್ಮ ಅಂಜಿಕೆಯನ್ನು ಭಿಟ್ಟು ಬಿಟ್ಟರೆ ಮಾತ್ರ ಅವುಗಳಿಂದ ಪಾರಾಗಬಹುದು ನೀವು ಕಠಿನತೆಯೆಂದರೆ ಹೆದರುವವರಾದರೆ, ಅಂಜಿಕೆಯನ್ನು ದೂರವಿಟ್ಟು, ಆತ್ಮ ವಿಶ್ವಾಸವು ಹುಟ್ಟುವಂತಹ ಸಂದರ್ಭವನು ಎಂದು ತಿಳಿಯಿರಿ. ನೀವು ಈ ದೃಷ್ಟಿಕೋಣದಿಂದ ಕಠಿನತೆಯನ್ನು ನೋಡುವುದಾದರೆ, ಅದು ನಿಮಗೊಂದು ಅಪೂರ್ವ ಚೇತನವನ್ನು ಕೊಡುವುದು; ಹೊಸ ಪ್ರೇರಣೆಯನ್ನೀಯುವುದು, ನಿಮ್ಮನ್ನು ಶಕ್ತಿವಂತರನ್ನಾಗಿ ಮಾಡುವುದು; ನಿಮ್ಮ ವ್ಯಕ್ತಿತ್ವದ ವಿಕಾಸದಲ್ಲಿಯೂ ಸಹಾಯಕವೆನಿಸುವುದು. ಈ ಸತ್ಯ ಸಂಗತಿಗಳನ್ನು ನೀವು ಮನವರಿಕೆ ಮಾಡಿಕೊಂಡಿರೆಂದರೆ, ಸಂಕಷ್ಟಗಳು ಯಾವಾಗಲೂ ಬರುತ್ತಿರಲಿ ಎಂದು ನೀವು ಅವನ್ನು ಆಮಂತ್ರಿಸಲು ಸದಾ ಸಿದ್ಧರಾಗಿರುತ್ತೀರಿ.

ನಿಮ್ಮಲ್ಲಿರುವ ಕೃಜನಾತ್ಮಕ ಶಕ್ತಿಯ ಕಾರ್ಯರೂಪಕ್ಕೆ ಬಂದಿತೆಂದರೆ, ಕಠಿನತೆಯನ್ನು ಸಂತೋಷದಿಂದ ಸ್ವಾಗತಿಸಿ ಗೆಲ್ಲುವ ಭಾವನೆಯು ಜಾಗ್ರತವಾಗುವುದು. ಕಷ್ಟದ ಪರಿಸ್ಥಿತಿಗಳಲ್ಲಿ ಜಯಶಾಲಿಯಾಗುವುದರಿಂದ ನೀವು ಅಪೂರ್ವವಾದ ಆನಂದವನ್ನು ಅನುಭವಿಸುವಿರಿ, ಇಂತಹ ಅಲೌಕಿಕ ಆನಂದ ಮತ್ತೆಲ್ಲಿಯೂ ಲಭಿಸಲಾರದು ಕಷ್ಟಾನುಭವವಿಲ್ಲದ ಯಾವುದೇ ಕೆಲಸದಲ್ಲಿ ಮನೋರಂಜನೆಯಿರುವುದಿಲ್ಲ; ಅದು ನೀರಸವೆನಿಸುವುದು. ನೀವು ಮನೆಯನ್ನು ಶುದ್ಧಗೊಳಿಸುತ್ತೀರಿ, ಕೈ ತೋಟವನ್ನು ತಯಾರಿಸುವಲ್ಲಿ ನಿರತರಾಗಿರಿ, ಚಿತ್ರ ಬರೆಯುತ್ತಿರಿ, ಎಲ್ಲ ಕೆಲಸಗಳಲ್ಲಿಯೂ ಒಂದಲ್ಲ ಒಂದು ವಿಧದ ಕಠಿನತೆಯು ತೋರಿ ಬಂದರೆ ಮಾತ್ರ ಅದರ ಸಾರ್ಥಕತೆ; ಆ ಕಠಿನತೆಯನ್ನು ನೀವು ದೂರೀಕರಿಸಿ ಮುನ್ನಡೆದಿರೆಂದರೆ, ಕೃಲಾಸವೇ ಕೈಸೇರಿದಂತೆ ಜೀವನ ಶಕ್ತಿಯ ಉಪಭೋಗಕ್ಕಾಗಿ ಚೇತನಸ್ತರದ ಅನುಭೂತಿಗಾಗಿ ಈ ಜೀವನ ಶಕ್ತಿಯನ್ನು ಸಂಚಯನಗೊಳಿಸಬೇಕು ಬಂಧಿತವಾದ ಜೀವನ ಶಕ್ತಿಯು ಮುಕ್ತಗೊಂಡಾಗ ದೊರೆಯುವ ಆನಂದಾನು ಭೂತಿಯು ತೀವ್ರವೂ ಉಪಯುಕ್ತವೂ ಆಗಿರುವುದು

ಇದನ್ನೊಂದು ಉದಾಹರಣೆಯಿಂದ ಸ್ಪಷ್ಟೀಕರಿಸಬಹುದು: ಒಬ್ಬಾತ ಶ್ರೀ 'ಆ' ಎಂಬವನಿದ್ದನು ಆತನು ಸದಾ ಹೆದರಿಕೊಂಡೇ ದಿನಗಳಿಯುತಿದ್ದ ಕಾಲವೊಂದಿತ್ತು. ಯಾವಾಗಲೂ ಅವನನ್ನು ಸಂಕಷ್ಟಗಳು ಅಂಜಿಸುತ್ತ ಇದ್ದುವು. ತನ್ನ ಬಗ್ಗೆ ಇತರರು ಏನು ತಿಳಿದುಕೊಳ್ಳುವರು ಎಂಬುದರ ಬಗ್ಗೆಯೂ ಆತನಿಗೆ ತುಂಬ ಹೆದರಿಕೆಯುತ್ತು, ಸಂಕಷ್ಟಗಳ ಕುರಿತು ಇವನು ಇಟ್ಟುಕೊಂಡಿದ್ದ ಭಾವನೆಯಲ್ಲಿ ಪರಿವರ್ತನೆಯೊದನಂತರವೇ ಆತನಲ್ಲಿ ಮನೆಮಾಡಿದ್ದ ಭಯಭೀತಿಯ ಭಾವವು ದೂರವಾಯಿತು. ಇದರ ಪರಿಣಾಮವಾಗಿ ಕಠಿನತೆಯನ್ನು ಆತನು ಸ್ವಾಗತಿಸುವನ್ನು ಧೈರ್ಯಶೀಲನಾದನು. ಅನಂತರ ಅವನ ವ್ಯಕ್ತಿತ್ವದಲ್ಲಿಯೂ ಮಹತ್ವಪೂರ್ಣವಾದ ಪರಿವರ್ತನೆಯಾಯಿತು ಆತನಿಂದ ಹೆದರಿಕೆಯೆಂಬುದು ದೂರವಾಯಿತು ಮತ್ತು ತಾನು ಕಡಿಮೆಯೆಂಬ ಹೀನ ಭಾವವೂ ಓಡಿ ಹೋಯಿತು.

ಮೇಲೆ ಹೇಳಿದ ಮಹಾಶಯನಲ್ಲಿ ಹೆದರಿಕೆಯ ಬೀಜ ಬಾಲ್ಯವಸ್ಥೆಯಲ್ಲಿಯೇ ಬಿದ್ದಿತ್ತು. ಆತನು ತನ್ನ ತಾಯ್ತಂದೆಯರ ಏಕಮಾತ್ರ ಪುತ್ರನಿದ್ದನು, ನಿತ್ಯ ರೋಗಿಯೆನಿಸಿದ್ದನು ಇದರಿಂದಾಗಿ ಆತನಿಗೆ ಅವಶ್ಯಕತೆಗಿಂತ ಅಧಿಕವಾಗಿ ತನ್ನ ತಾಯಿಯ ಪ್ರೀತಿ ಮತ್ತು ಸೇವೆಗಳು ಲಭಿಸಿದ್ದುವು ಮೂತಾರೂಪದ ಕವಚದೇ ಎಳೆಯಲ್ಲಿ ಆತನ ಸಮಸ್ತ ಸಂಕಷ್ಟಗಳನ್ನೂ ದೂರ ಮಾಡುತಿದ್ದಿತು ಇದರಿಂದಾಗಿಯೇ ಜೀವನ ಸಂಗ್ರಾಮಕ್ಕೆ ನೆಗೆಯಲು ಆತನು ಸರ್ವಥಾ ಅಸಮರ್ಥನೆನಿಸಿದನು

ಸುವಿಖ್ಯಾತ ವೈಜ್ಞಾನಿಕ ಆಲ್‌ಫ್ರೆಡ್ ಎಡ್ಲರನು ತನ್ನ 'ಅಂಡರ್ ಸ್ಟಾಂಡಿಗ್ ಹ್ಯೂಮನ್ ನೇಚರ್' ಎಂಬ ಪುಸ್ತಕದಲ್ಲಿ ಹೀಗೆ ಬರೆದಿದ್ದಾನೆ. ಅಂತಹ ಮಕ್ಕಳಿಗೆ ಬಾಲ್ಯದಲ್ಲಿ ಕಠಿಣತೆಗಳನ್ನು ಎದುರಿಸಿ ಗೆಲ್ಲುವ ಸಂದರ್ಭವೇ ಇಲ್ಲದಿರುವುದರಿಂದ ಅವರು ಜೀವನ ಸಂಗ್ರಾಮ ರಂಗಕ್ಕಿಳಿಯಲು ಅನುಪಯುಕ್ತರಾಗುತ್ತಾರೆ. ತಮ್ಮ ಹೆತ್ತವರ ಪ್ರೇಮಪೂರ್ಣ ವಾತಾವರಣದಿಂದ ಹೊರ ಬಂದೊಡನೆಯೇ ಅವರು ಪರಾಜಿತರಾಗುವರೆಂಬುದು ಪೂರ್ವನಿಶ್ಚಯವೇ ಎನ್ನ ಬಹುದು.

ಇದರಿಂದಾಗಿ ಶ್ರೀ 'ಆ' ಪರಿಸ್ಥಿತಿಗಳು, ಮಾನವರು ಮತ್ತು ಜೀವನದಿಂದ ಭಯಪಡುತ್ತ ಇರುವ ಮನುಷ್ಯನಾಗಿ ಉಳಿದನು. ತನ್ನ ತಾಯಿಯು ತೀರಿಹೋದ ಅರೇ ತಿಂಗಳುಗಳಲ್ಲಿ ತನ್ನ ಪೂರ್ವ ವಾಗ್ದತ್ತ ಪತ್ನಿಯ ತನ್ನನ್ನು ಮದುವೆಯಾಗಲು ನಿರಾಕರಿಸಿದಾಗ ಬಹು ದೊಡ್ಡ ನೋವಾಯಿತು. ಈ ವೇದನೆಯಿಂದ ಅವನಲ್ಲಿ ಉಳಿದಿದ್ದ ಅಲ್ಪ ಸ್ವಲ್ಪ ಆತ್ಮ ವಿಶ್ವಾಸವೂ ನಷ್ಟವಾಯಿತು. ಇದರಿಂದವನು ಮಾನಸ ಶಾಸ್ತ್ರಜ್ಞನನ್ನು ಮರಿಹೋಗಬೇಕಾಯಿತು. ಸಂಕಷ್ಟಗಳೆಂದರೆ ಸ್ವರ್ಣಾವಸರಗಳು. ಇವುಗಳು ವ್ಯಕ್ತಿಯ ವಿಕಾಸದಲ್ಲಿ ಬಾಧಕವೆನಿಸುವುದಲು ಸಹಾಯಕವೆನಿಸುವುವು.

ಮಾನಸ ಶಾಸ್ತ್ರಿಯು ಶ್ರೀಮಾನ್ 'ಆ'ನ್ನು ಕುರಿತು, ಅವನ ಪರಾಜಯದ ಭಾವನೆಗೆ ಯಾವುದೇ ಕಾರಣವಿರಲಿಲ್ಲ. ಕಠಿನತೆಯಿಂದ ಹೆದರಬೇಕಾದ ಆವಶ್ಯಕತೆಯೇನೂ ಇರುವುದಿಲ್ಲ ಬೇರೆಯವರಿಂದ ತಾನು ಹೀನನೆಂದುತಿಳಿಯುವ ಪ್ರಮೇಯವೇನೂ ಇಲ್ಲ, ಜೀವನ ಸಂಗ್ರಾಮದಲ್ಲಿ ಇತರರಂತೆಯೇ ಅವನೂ ದಕ್ಷನೆಂದು ಅವನು ತಿಳಿಸಿ ಹೇಳಿದನು ಅಧಿಕ ಪ್ರೇಮ ಮತ್ತು ತಾಯಿಯ ಸಾಮಿಪ್ಯವು ಅವನನ್ನು ಭೀರುವನ್ನಾಗಿಸಿದೆ, ಆದುದರಿಂದ ಅವನು ತನ್ನ ಸಾಮರ್ಥ್ಯವನ್ನು ಸಿದ್ಧಮಾಡಿಕೊಡಬೇಕಾದರೆ, ಕಠಿನತೆಗಳನ್ನು ಆಮಂತ್ರಿಸಬೇಕು. ಹೀಗೆ ಮಾಡುವುದರಿಂದ ಅವನು ತೀಪ್ರವಾಗಿ ತನ್ನ ಕಳೆದುಕೊಂಡ ಆತ್ಮ ವಿಶ್ವಾಸವನ್ನು ಮರಳಿ ಪ್ರಾಪ್ತಗೊಳಿಸುವುದು ಸಾಧ್ಯವೆಂದು ವಿವರಿಸಿದನು.

ಶ್ರೀಮಾನ್ 'ಆ'ನು ಮನಶ್ಶಾಸ್ತ್ರಿಯ ಆದೇಶವನ್ನು ಒಪ್ಪಿಕೊಂಡನು ಕಠಿನತೆಗಳಿಂದ ದೂರವೋಡುವುದರ ಬದಲಿಗೆ ಅವನ್ನು ಎದುರಿಸಲು ಮುಂದಾನು. ಧೈರ್ಯದಿಂದವನು ತನ್ನ ನೀರಸ ಸೌಕರಿಯನ್ನು ಬಿಟ್ಟು ಬಿಟ್ಟನು; ಬದಲು ಸಂಕಷ್ಟಗಳು ಅಧಿಕವಿರುವ ಬೇರೆ ಕೆಲಸವನ್ನು ಮಾಡತೊಡಗಿದನು ಸಾಮಾಜಿಕ ಕಾರ್ಯಕ್ರಮಗಳಲ್ಲಿ ಮೊದಲು ನು ಭಾಗವಹಿಸುತ್ತಿರಲಿಲ್ಲವಾದರೂ ಈಗ ಉತ್ಸವ ಜಾತ್ರೆಗಳಿಗೆ ಹೋಗತೊಡಗಿದನು ತನ್ನ ಯಾತ್ರಾ ವಿಸ್ತಾರವನ್ನೂ ಹೆಚ್ಚಿಸಿಕೊಂಡನು. ಈಗ ಅವನು ಅತ್ತಿತ್ತ ತಿರುಗಾಡುವುದು ಕಾಣಬಂತು, ಹೀಗೆ ಅವನು ತಾನು ಕಳೆದುಕೊಂಡ ಆತ್ಮ ವಿಶ್ವಾಸವನ್ನು ಮಾತ್ರ ಮರಳಿ ಸಂಪಾದಿಸಿದುದಲ್ಲದೇ ಅವನ ಆತ್ಮ ವಿಶ್ವಾಸದ ಪ್ರಮಾಣವೂ ಬಲಿಯಿತು. ತನ್ನ ಮುಂದೆ ಬಂದಿರುವ ಕಠಿಣತೆಯನ್ನು ಎದುರಿಸುತ್ತ ಹೋದಂತೆ, ತಾವು ಉಳಿದವರಿಗಿಂತ ಹೆಚ್ಚಿನವರಲ್ಲವಾದರೂ ಅವರನ್ನು ಹೆಚ್ಚು ಬಿಟ್ಟಿರುವುದಿಲ್ಲವೆಂದನು. ಕ್ರಮೇಣ ತನ್ನನ್ನು ಮಂದ ಬುದ್ಧಿಯವನು ಎಂದು ಕರೆಯುತಿದ್ದವರ ಮಾತುಗಳ

(ಉಳಿದ ಸುಟ ನೋಡಿರಿ)

ಅಮೆರಿಕೆಯ ಸೇನೆಯಲ್ಲಿನ ಅತ್ಯಾಧುನಿಕ ವಿಮಾನವೊಂದು. ಇದು ಎಂತಹ ಪರಿಸ್ಥಿತಿಯಲ್ಲಿಯೂ ಎಲ್ಲಿಯೂ ಇಳಿಯಬಲ್ಲದು, ಹಾರಬಲ್ಲದು.

ವಿಶ್ವಕವಿ ಟಾಗೋರರ ಪುಣ್ಯಸ್ಮರಣೆಗಾಗಿ
ಅವರ ಶತಮಾನೋತ್ಸವದ ಸುಸಂದರ್ಭದಲ್ಲಿ
ಪ್ರಕಟವಾದ ಕಿರುಗಾಣಿಕೆಗಳು

ಚಿತ್ರಾಂಗದೆ

ಬೆಲೆ ೭೦ ನ ಪೈಸೆ

(ಶ್ರೀ ಕೆ ಕೆ. ಶೆಟ್ಟಿ, ಎಂ ಎಲ್. ಸಿ ಅವರಿಂದ ಅನುವಾದಿತ)

ರವೀಂದ್ರನಾಥರ ಕಿರುಗತೆಗಳು

ಬೆಲೆ. ೧೦ ನ. ಪೈಸೆ,

(ಶ್ರೀ ಹನುಮಂತರಾವ್ ಮಾಂಜರೇಕರ ಅವರಿಂದ ಅನುವಾದಿತ) ಕಾರವಾರ

ಪ್ರಕಾಶಕರು:

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ನವಯುಗ ಪ್ರೆಸ್, ಉಡುಪಿ.

ನವಯುಗ

ಮಾಸಿಕ	ಖಾಸಗಿ	ವಾರ
೪೦	೨೫೦	೬೯

ಜನತಾ ಪ್ರಕಾಶ ಜೈನ್

ಪ್ರಖ್ಯಾತ ಸಂಸತ ನಿಷ್ಠರಾಗಿದ್ದ ಶ್ರೀ ಕಾಮಾಖ್ಯಾದ ಜನತಾ ಪ್ರಕಾಶ ಜೈನರು ಕಳೆದ ಶುಕ್ರವಾರ ಬೆಳಿಗ್ಗೆ ಹೃದಯಾಘಾತದಿಂದ ತಮ್ಮ ರಾಜ್ಯ ಸಭಾ ಕಚೇರಿಯಲ್ಲಿ ಕುಸಿದು ಬಿದ್ದು ನಿಧನರಾದ ಸುದ್ದಿ ಕೇಳಿ ದೇಶದ ಎಲ್ಲೆಡೆಯ ಜನರಿಗೆ ತೀವ್ರ ದುಃಖವಾಗಿದೆ. ಅವರ ಸಾವು ಕೇವಲ ಒಬ್ಬ ವ್ಯಕ್ತಿಯ ಸಾವಲ್ಲ, ಅದು ಒಂದು ಸಂಸ್ಥೆಯ ಸಾವು ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಸಂಸತ್ತಿನ ಎರಡೂ ಸದನಗಳಲ್ಲಿ ಅವರು ಪ್ರತಿನಿಧಿಸಿದ್ದ ಪಕ್ಷಗಳ ಸಂಖ್ಯೆ ಎಷ್ಟೇ ಇರಲಿ, ಅವರ ಮಾತಿಗೆ ಸದನದಲ್ಲಿ ಸಿಗುತ್ತಿದ್ದ ಗೌರವ ಅಪಾರವಾಗಿತ್ತು.

ಕೆನರಾ ಬ್ಯಾಂಕ್ ಲಿಮಿಟೆಡ್

೧೯೬೧ನೆ ವರ್ಷಕ್ಕೆ ಸಂಬಂಧಿಸಿದ ಕೆನರಾ ಬ್ಯಾಂಕಿನ ಸಾಲಮೊಲಗಳು ಮತ್ತು ಆಯವ್ಯಯಗಳ ಲಿಕ್ವಿಡೇಶನ್ ಮತ್ತು ಡೈರೆಕ್ಟರರ ವರದಿಯು ನಮ್ಮ ಕೈಸೇರಿದೆ. ಕಳೆದ ೫೬ ವರ್ಷಗಳಿಂದ ಮುಖ್ಯವಾಗಿ ದಕ್ಷಿಣ ಭಾರತದಲ್ಲಿ ಉತ್ತಮ ರೀತಿಯ ದೇಶೀಯ ಮಾಗೂ ವಿದೇಶೀಯ ಬ್ಯಾಂಕಿಂಗ್ ಸೌಕರ್ಯಗಳನ್ನು ಜನತೆಗೆ ಒದಗಿಸಿ ಜನಪ್ರಿಯವಾದ ಬ್ಯಾಂಕು ಇದು ಎಂಬುದಕ್ಕೆ ಅದರ ಇಂದಿನ ಬೃಹದ್ರೂಪವೇ ಜ್ವಲಂತ ನಿದರ್ಶನ.

ವರದಿ ವರ್ಷದಲ್ಲಿ ಬ್ಯಾಂಕಿನ ತೆತ್ತ ಮತ್ತು ಸಾಮತಿಯೂ ಬಂಡವಳ ರೂ. ೫೦ ಲಕ್ಷವಿದ್ದು ಹೊಸ ಪಾಲುಗಳನ್ನು ಹಂಚುವ ವ್ಯವಸ್ಥೆಯೂ, ಉಂಡವಳವನ್ನು ಹೆಚ್ಚಿಸಲು ನಿರ್ಧರಿಸಿದೆ. ಕೇದ್ರ ಸ್ಟೇಮಿಯಂ ಸೇರಿ ರಿಜರ್ವ ನಿಧಿಯು ರೂ. ೬೫ ಲಕ್ಷದಷ್ಟಿದೆ. ಒಟ್ಟು ಠೇವಣಿಗಳು ಹಿಂದಿನ ವರ್ಷ ರೂ ೩೧ ಕೋಟಿ ಗಳಷ್ಟಿದ್ದರೆ, ವರದಿ ವರ್ಷದಲ್ಲಿ ರೂ. ೪೭ ಕೋಟಿ ಗಳಷ್ಟಾಗಿದೆ. ಬೇಂಕು ಹೊರಗೆ ನೀಡಿದ ಸಾಲವು ೬೮ ಕೋಟಿ ರೂಪಾಯಿಗಳಷ್ಟು, ಇದು ಠೇವಣಿಯ ಸೇ. ೫೫ರಷ್ಟಾಗುವುದು. ಇದು ಬೇಂಕಿನ ಭದ್ರತೆಯನ್ನು ಪ್ರತಿಫಲಿಸುವುದು. ಕನ್ನ ಒಟ್ಟು ವ್ಯವಹಾರದಲ್ಲಿ ಬೇಂಕು ರೂ. ೭೧ ಲಕ್ಷಗಳನ್ನು ಗಳಿಸಿದ್ದು, ರಿಜರ್ವ ಫಂಡು ಮೊದಲಾದವುಗಳಿಗೆ ವರ್ಗಾವಣೆ ತೆರಿದಿಟ್ಟು ನೌಕರರಿಗೆ ಬೋನಸ್ ಹಂಚಲು ಸೇ. ೪ ಲಕ್ಷವನ್ನೂ ಮೀಸಲಿಟ್ಟ ನಂತರ ಶೇರುದಾರರಿಗೆ ಕಂಪನಿ ತೆರಿಗೆಗೂ ಮೊದಲು ೨೫ ಪ್ರತಿಶತ ಲಾಭಾಂಶ ಕೊಡಲು ಸೇ. ೫.೫೦ರಂತೆ ಇಕ್ವಿಟಿ ಶೇರುದಾರರಿಗೆ ಆದಾಯ ತೆರಿಗೆ ಸಹಿತ ಸೇ. ೧೫ರಂತೆ ವಿಮಿಡೆಂಡ್ ಸಂಚುವುದು ಸಾಧ್ಯವಾಗಿದೆ.

ವರದಿ ವರ್ಷದಲ್ಲಿ ಬೇಂಕು ೮೫ನೆ ಬೇಂಕಿನ ಆವೇಶದಿಂದ ಮೂರು ಬೇಂಕುಗಳನ್ನು ತನ್ನಲ್ಲಿ ವಿಲೀನಗೊಳಿಸಿದುದರಿಂದ ೭೨ ಶಾಖೆಗಳೂ ಹೊಸತಾಗಿ ತೆರೆದುದರಿಂದ ೯ ಶಾಖೆಗಳೂ ಹೀಗೆ ಒಟ್ಟು ೧೧೫ ಶಾಖೆಗಳ ಮೂಲಕ ಸಾಖೆ ಸಲ್ಲಿಸುತ್ತಿದ್ದು ಒಟ್ಟು ೨,೭೦೬ ನೌಕರರಿಗೆ ಆಶ್ರಯ ನೀಡಿದೆ. ಯು ಬೋಮು, ಅಮೆರಿಕೆ, ಆಫ್ರಿಕಾ, ಏಷ್ಯ ಖಂಡಗಳ ವಿವಿಧ ದೇಶಗಳೊಡನೆಯೂ ಬೇಂಕಿಂಗ್ ವ್ಯವಹಾರ ನಡೆಸುವ ಪ್ರತಿನಿಧ್ಯವನ್ನು ಹೊಂದಿರುವ ಕೆನರಾ ಬೇಂಕಿನ ಮೂಲಕ ಜಗತ್ತಿನ ಯಾವುದೇ ಮೂಲೆಯೊಡನೆ ವ್ಯವಹರಿಸುವುದು ಸಾಧ್ಯ. ಬೆಂಗಳೂರಿನಲ್ಲಿ ಅಂತರ್ ರಾಜ್ಯ ರಿಜಿಸ್ಟರ್ಡ್ ಆಫೀಸು ಮಂಗಳೂರಿನಲ್ಲಿ ಮೇ ಇದೆ. ಬೊಂಬಾಯಿ, ಮದ್ರಾಸ್ ಮತ್ತು ಕಲ್ಕತ್ತಗಳಲ್ಲಿ ವಿದೇಶೀಯ ವಿಭಾಗಗಳೂ ತಿರುವನಂತಪುರ ಮತ್ತು ಪಾಂಡಿಚೇರಿಯಲ್ಲಿ ಪ್ರಾದೇಶಿಕ ಕಛೇರಿಗಳೂ ಇವೆ.

ದೀರ್ಘ ಕಾಲದ ಬೇಂಕಿಂಗ್ ಅನುಭವವಿರುವ ಶ್ರೀ ಎ ವಾಮೋದರ ಪೈ ಅವರು ಅಧ್ಯಕ್ಷತೆಯಲ್ಲಿರುವ ಸಮರ್ಥ ಡೈರೆಕ್ಟರ ಮಂಡಳಿಯು ಸೂಗಸವರ್ಧನದಲ್ಲಿ ಜಸರಲೇ ಮೆಸೆರ್ಸ್ ಶ್ರೀ ಪಿ. ಎಸ್. ನಾಯಕರ ನೇತೃತ್ವದ ಪಿ ನಾಕರ ಸಹಕಾರದಿಂದ ಕೆನರಾ ಬೇಂಕು ಸಂಬಂಧಿತ ವರ್ಷದಲ್ಲಿ ಇನ್ನೂ ಹೆಚ್ಚು ಉನ್ನತಿಯನ್ನು ಸಾಧಿಸಿ, ದೇಶದಲ್ಲಿ ಬೇಕಿಂಗ್ ಚಿತ್ತಿತಿಯನ್ನು ಹೆಚ್ಚಿಸಿ ನಾಡಿನ ಏಳಿಗೆಯಲ್ಲಿ ನಿರತ ಸಾಗಲೆಂದು ಬಯಸುತ್ತೇವೆ.

ಅಲ್ಲಲ್ಲಿಯ ಸುದ್ದಿಸಾರ

ಹೆರಿಗೆ ಆಸ್ಪತ್ರೆಯ ಉದ್ಘಾಟನೆ— ಕಲ್ಲಾಡಿಮರದ ಗೊಮಟ್ಟು ಆಸ್ಪತ್ರೆಗೆ ಸಂಬಂಧಪಟ್ಟಲ್ಲಿ ಹೊಸತಾಗಿ ಕಟ್ಟಿಸಿರುವ ಹೆರಿಗೆ ಆಸ್ಪತ್ರೆಯು ಉದ್ಘಾಟನಾ ಸಮಾರಂಭವು ಇದು ತಿಂ. 30ರಲ್ಲಿ ಜರಗಿತು. ಶ್ರೀ ಶಿವಾರಾಯ ವಿಲಿಯಂ ಮೊಂತೆರವರು ಸ್ವಾಗತ ಭಾಷಣ ಮಾಡಿದ ತರುವಾಯ ಸ್ಥಳೀಯ ಬಿಚಾಯತಿನ ಬೋರ್ಡಿನ ಅಧ್ಯಕ್ಷ ಶ್ರೀ ಟಿ. ವಿ ಶೆಟ್ಟಿಗಾರರು ಭಾಷಣ ಮಾಡಿ ಆಸ್ಪತ್ರೆಗೆ ಎಲ್ಲ ವಿಧಗಳಿಂದ ಸಹಾಯ ಸಹಕಾರ ನೀಡಬೇಕೆಂದರು. ವಿವಿಧ ಅತಿಥಿಗಳಾದ ಶ್ರೀ ಡಿಮೆಲ್ಲೋರವರು ಮತ್ತು ಮತ್ತಿತರರು ಆಸ್ಪತ್ರೆಗೆ ಸಹಾಯಹಸ್ತ ಮಹನೀಯರನ್ನು ಅಭಿನಂದಿಸಿ ಎಲ್ಲರೂ ಈ ಆಸ್ಪತ್ರೆಯಿಂದ ಸೇವೆಯನ್ನು ಪಡೆಯಬೇಕೆಂದರು.

ಅಧ್ಯಕ್ಷ ಸ್ಥಾನದಿಂದ ಡಾ|| ಟಿ ಮೂಧವ ಪೈಯವರು ಈ ಆಸ್ಪತ್ರೆಯನ್ನು ಸುಸ್ಥಿತಿಗೆ ತಾವಿ ನಡೆಸಿಕೊಂಡು ಬರಲಿರುವ ಜಯಕರ ಧರ್ಮ ಪ್ರಸಾತಕರ ರಾಜೀನಾಮೆಗೆ ಸಂಭಂಧ ಕನ್ನಾ ಸ್ತ್ರೀಯರ ಬಾಂಧವ್ಯವನ್ನು ಪ್ರಶಂಸಿಸಿ ಸಾರ್ವಜನಿಕರು ಈ ಕಾರ್ಯಕ್ಕೆ ಸಹಾಯ ನೂಡಬೇಕೆಂದರು. ಡಾ| ಕೇಸ್ಟರ್ ಕಾಸ್ಟೆಲಿಯರು ಆಸ್ಪತ್ರೆಗೆ ನೀಡಿದ ಸೇವೆಗಾಗಿ ಅಭಿನಂದನೆ ಗೊಂದು ಸುಟ್ಟ ಕಾಣಿಕೆಯು ಅಧ್ಯಕ್ಷ ಕೈಯಿಂ ವರಿಂದ ಕೊಡಲ್ಪಟ್ಟಿತು. ವಿವಿಧ ದಾನಿಗಳೇ ಜನಾ ಕಾರ್ಯಕ್ರಮಗಳ ತರುವಾಯ ಶ್ರೀ ವಿಲಿಯಂ ಪಿಂಟೊ ಶಿತ್ತಾರಿ ಇವರು ಆಸ್ಪತ್ರೆಯನ್ನು ನಡೆಸುವ ಕನ್ನಾ ಸ್ತ್ರೀಯರ ಪರವಾಗಿ ಧನ್ಯವಾದಗಳನ್ನು ಅರ್ಪಿಸಿದರು.

ಅಂಚೆ ಮತ್ತು ತಂತಿ ಕೆಲಸಗಾರರ— ಉಡುಪಿ ವಿಕ್ಟೋರಿಯೇನ್ ಕ್ಲಬ್ಬಿನ ವರ್ಧಂತ್ಯುತ್ಸವವು ಇದೇ ತಾ. 27ರಂದು ವರಿದೇಂದ್ರ ಕಾಲಾ ಮಂದಿರದಲ್ಲಿ ಮಧ್ಯಾಹ್ನ ಮತ್ತು ಫಸ್ಟ್ ಕ್ಲಾಸ್ ಮೆಜಿಸ್ಟ್ರೇಟ್ ಶ್ರೀ ಬಿ. ವಿಶ್ವನಾಥ ರೈ ಅವರ ಅಧ್ಯಕ್ಷತೆಯಲ್ಲಿ ನೆರೆ ವೇರಿತು ಶ್ರೀ ಆರೆಕ್ಸ್ ಡೇಸರು ಸ್ವಾಗತಿಸಿದ ಬಳಿಕ ಪೋಸ್ಟಲ್ ಸೂಪರಿಂಟೆಂಡೆಂಟ್ ಶ್ರೀ ಆರ್. ಡಿ. ರಂಗಾಪುರರು ಸಮಾರಂಭವನ್ನು ಉದ್ಘಾಟಿಸಿದರು. ಶ್ರೀ ವಿ ಎಸ್. ಹೊಳ್ಳರು ವರದಿಯನ್ನೊಪ್ಪಿಸಿದರು. ಶ್ರೀಮತಿ ಮಾರ್ಗರೆಟ್ ಡಿಸೋಜರವರು ಬಹುಮಾನ ವಿತರಣೆ ಮಾಡಿದರು. ಅಧ್ಯಕ್ಷ ಶ್ರೀ ರೈಯವರು ಮತನಾಡುತ್ತಾ ಅಂಚೆ, ತಂತಿ ಕೆಲಸಗಾರರು ತಮ್ಮ ಕರ್ತವ್ಯನಿರತರಾಗಿ ಇಂತಹ ಸಾಂಸ್ಕೃತಿಕ ಕಾರ್ಯಗಳಲ್ಲಿ ಆಸಕ್ತಿ ತೋರಿಸುತ್ತಿರುವುದು ಸ್ತುತ್ಯವೆಂದೂ ಕ್ಲಬ್ಬಿನ ಸಾಂಘಿಕ ಜೀವನದಿಂದ ಪರಸ್ಪರ ತಿಳುವಳಿಕೆ, ಶಿಸ್ತು, ಸಭ್ಯತೆಗಳು ಹೆಚ್ಚುವುದೆಂದೂ ಹೇಳಿ ಕ್ಲಬ್ಬಿನ ಚಟುವಟಿಕೆಗಳ ಕುರಿತು ಮೆಚ್ಚುಗೆ ಸೂಚಿಸಿದರು. ಬಳಿಕ ಮನೋರಂಜನಾ ಕಾರ್ಯಕ್ರಮಗಳಾದುವು.

ಉದಕ ಮಂಡಲ ದಾಸಪ್ರಕಾಶದಲ್ಲಿ ವಿವಿಧ ಚಟುವಟಿಕೆಗಳು— ಕಳೆದ ತಾ. 19ರಂದು ದಾಸಪ್ರಕಾಶ ಹೋಟೆಲಿನ ಗೀತಾ ಮಂದಿರದಲ್ಲಿ ಮದ್ರಾಸು ರಾಜ್ಯಪಾಲ ಶ್ರೀ ಬಿಸ್ವನಾಮ ಮೋದಿಯವರ ಅಧ್ಯಕ್ಷತೆಯಲ್ಲಿ ವಿಶೇಷವಿಸಲಾದ ಭಜನಾ ಕಾರ್ಯಕ್ರಮ ಮಂದಲ್ಲಿ ಶ್ರೀ ಎಸ್. ಎಸ್. ದವೆಯವರಿಂದ ಗೀತಾ ಪ್ರವಚನ. ಶ್ರೀ ಕೆ. ಸೀತಾರಾಮ ರಾಯರ ಪುತ್ರ ಶ್ರೀ ಕೆ ನಾರಾಯಣ ದಾಸರಿಂದ ಪಿಡ್ಡಲು ಕುರಿತು ಸಂಸ್ಕೃತ ಭಾಷಣ ಗಳಾದ ನೇರ ಅಧ್ಯಕ್ಷರು ಸಂದಭೋಚಿತ ಭಾಷಣವಿತ್ತರು.

ಮಕ್ಕಳ ಕೂಟ— ದಾಸಪ್ರಕಾಶ ಸಾಮೂಹಿಕ ಹೋಟೆಲುಗಳ ಮ್ಯಾನೆಜಿಂಗ್ ಡೈರೆಕ್ಟರ್ ಶ್ರೀ ಕೆ. ಸೀತಾರಾಮ ರಾಯರು ಉದಕಮಂಡಲ ದಾಸಪ್ರಕಾಶದ ವರಾಂಡದಲ್ಲಿ ಕಳೆದ ತಾ. 20 ಮತ್ತು 21ರಂದು ಮದ್ರಾಸು ಸಚಿವ ಶ್ರೀ ಭಕ್ತವತ್ಸಲಂ ಅವರ ಅಧ್ಯಕ್ಷತೆಯಲ್ಲಿ ಮಕ್ಕಳ ಕೂಟವನ್ನು ಜರಗಿಸಿದರು. 50 ವಿವಿಧ ಸಂಘ ಸಂಸ್ಥೆಗಳಲ್ಲಿ 200ಕ್ಕೂ ಹೆಚ್ಚು ಮಕ್ಕಳು ಭಾಗವಹಿಸಿದ್ದರು ಶ್ರೀ ಕೆ. ಸೀತಾರಾಮ ರಾಯರು ಸ್ವಾಗತ ಭಾಷಣ ಮಾಡಿ ಹದಿನಾರು ವರ್ಷದ ಪ್ರಗತಿಯನ್ನು ವಿವರಿಸಿದರು. ಶ್ರೀ ಬಿ. ಎಸ್. ನಿತ್ಯಾನಂದಯ್ಯನವರು ಶ್ರೀ ಕೆ. ಸೀತಾರಾಮ ರಾಯರ ಈ ಕಾರ್ಯಕ್ರಮವನ್ನು ಪ್ರಶಂಸಿಸಿದರು ಅಧ್ಯಕ್ಷ ಸುಂತ್ರಿ ಭಕ್ತವತ್ಸಲಂರವರು ಭಾಷಣ ಮಾಡುತ್ತಾ ಮಕ್ಕಳಿಗೆ ಇಂತಹ ಸಂಸ್ಥೆಗಳನ್ನು ಒದಗಿಸುವುದು ಸ್ತುತ್ಯವೆಂದರು ಶ್ರೀಮತಿ ಭಕ್ತವತ್ಸಲಂರವರು ಬಹುಮಾನ ವಿತರಣೆ ಮಾಡಿದರು. ಕೊನೆಗೆ ಮದ್ರಾಸಿನ ಸಚಿವ ಶ್ರೀ ಪಾಂಡ್ಯ ಪೈಗಳು ಧನ್ಯವಾದಗಳನ್ನರ್ಪಿಸಿದರು

ನೃತ್ಯ ಕಾರ್ಯಕ್ರಮ— ಕಳೆದ ತಾ 25ರಂದು ದಾಸಪ್ರಕಾಶದ ಗೀತಾ ಮಂದಿರದಲ್ಲಿ ಮದ್ರಾಸಿನ ಶ್ರೀ ಬಾಲ ಸುಬ್ರಮಣ್ಯಂರವರ ಶಿಷ್ಯರೂ ಶ್ರೀ ಕೆ. ಸೀತಾರಾಮರಾಯರ ಮಕ್ಕಳೂ ಆದ ಮಿಸ್ಟರ್ ವಿಜಯ ಬಾಸ್ ಮಿಸ್ಟರ್ ರಮಮಿರೆಲ್ಲ, ಕುಮಾರಿ ಗೀತಾ

(ಎಕ್ಸ್ ಕುಮಾರಿ)

ರು. ೬೬೦ ರೂಪಾಯಿಗಳನ್ನು ಸಂಗ್ರಹಿಸಿಕೊಟ್ಟಿದ್ದಕ್ಕೆ ಸಕ್ಷಿಕ್ಷಾರ್ಥ ಭಿಕ್ಷಾಪಾತ್ರೆಗಳ ಪ್ರತಿನಿಧಿಗಳಿಗೆ ಮತ್ತು ಸಂಗ್ರಹಣೆಯಲ್ಲಿ ಸಹಕರಿಸಿದವರಿಗೆ ಸಂಘದ ಪರವಾಗಿ ಧನ್ಯವಾದಗಳನ್ನು ಅರ್ಪಿಸಿದರು. ಕೊನೆಯಲ್ಲಿ ಕಾರ್ಯದರ್ಶಿಯವರು ಸಭೆಗೆ ಧನ್ಯವಾದಗಳನ್ನರ್ಪಿಸಿದರು.

ಉಡುಪಿಯ್ಲಾಸಾಹಿ ಪೆಕಿಷ್ಟು— ಉಡುಪಿ ಕೃಷ್ಣಾಪುರ ಸರ್ಕಲ್‌ನಲ್ಲಿರುವ ಶ್ರೀಮತಿ ಅಪ್ಪಣ್ಣಾಚಾರ್ಯರ ಸೈಕಲ್ ಅಂಗಡಿಯಲ್ಲಿ ಸೈಕಲ್ ಬಿಡಿಭಾಗಗಳನ್ನು ಕಳವು ಮಾಡಿದ ಆರೋಪದ ಮೇಲೆ ಕೃಷ್ಣಾಪುರ ಸರ್ಕಲ್ ನಿವಾಸಿ ಕೃಷ್ಣ ಎಂಬಾತನನ್ನು ಬಂಧಿಸಿ ಆತನಿಂದ ಸೈಕಲ್ ಬಿಡಿಭಾಗಗಳನ್ನು ಸ್ವಾಧೀನಪಡಿಸಿಕೊಂಡಿರುವುದಾಗಿ ಶ್ರೀ ಎಂ. ಬಿ. ಸುಬ್ರಹ್ಮಣ್ಯ ಸಬ್ ಇನ್ಸ್‌ಪೆಕ್ಟರ್ ಉಡುಪಿ ಇವರು ತಿಳಿಸಿರುತ್ತಾರೆ.

ಶ್ರೀ ಎ ಪಿ ಅಧ್ಯಾಪಕರು ಅಧ್ಯಕ್ಷರಾಗಿ ಗಿರುವ, ಶ್ರೀ ಟಿ. ಮಾಸ್ತಿರಾಯರಾಗಿರುವ ಕೆ ಗಾ ಲ ಉದ್ಘಾಟಕರಾಗಿರುವ ಕೆ ಗಾ ಲ ಉದ್ಘಾಟಕರು ಪದಾಧಿಕಾರಿಗಳ ಆಯ್ಕೆಯ ನಂತರ ಸಂಸ್ಥೆಯ ಕಾರ್ಯಚಟುವಟಿಕೆಗಳ ಕುರಿತು ಶ್ರೀ ಕೆ ಸೀತಾರಾಮರಾಯರು ಮಾತನಾಡಿದರು. ಶ್ರೀ ಕೆ ಸೀತಾರಾಮರಾಯರ ಪುತ್ರ ಶ್ರೀ ಕೆ ನಾರಾಯಣ ಮತ್ತು ಶ್ರೀ ಕೆ ಸೀತಾರಾಮರಾಯರ ಶಿಷ್ಯರಾದ ಶ್ರೀ ಎಂ ಎಸ್ ಸುಬ್ರಾಯ ಕಾರಂತ ಇವರು ಸಂಸ್ಥೆಯ ಕಾರ್ಯಚಟುವಟಿಕೆಗಳ ಕುರಿತು ಮಾತನಾಡಿದರು. ಕಾರ್ಯದರ್ಶಿ ಶ್ರೀ ಕೆ ಸೀತಾರಾಮರಾಯರು ಅತಿಥಿಗಳಿಗೆ ವಂದನಾರ್ಪಣೆ ಮಾಡಿದರು.

ಪ್ರಾಥಮಿಕ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ, ಪ್ರಥಮ ಸಂಗೀತ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಮತ್ತು ಸಂಗೀತ ಶಿಕ್ಷಕರಿಗೆ ಪ್ರಮಾಣಪತ್ರಗಳನ್ನು ಶ್ರೀಮತಿ ಅಪ್ಪಣ್ಣಾಚಾರ್ಯರು ವಿತರಿಸಿದರು. ಕೊನೆಯಲ್ಲಿ ಶ್ರೀ ಎಂ ಎಸ್ ಸುಬ್ರಾಯ ಕಾರಂತರು ವಂದನಾರ್ಪಣೆ ಮಾಡಿದರು.

ಸಂಚಿಕೆಗಳು ಬಿಡುಗಡೆ— ಕೇರಳದ ಒಕ್ಕಲಿಗ ಸಮುದಾಯದ ಸಮಸ್ಯೆಗಳನ್ನು ಪ್ರತಿಬಿಂಬಿಸುವ ಸಲುವಾಗಿ ಪ್ರಕಟವಾಗುತ್ತಿರುವ ಮಾಸಪತ್ರಿಕೆ ಒಕ್ಕಲಿಗ ಪತ್ರಿಕೆಯ ಸಂಚಿಕೆಗಳನ್ನು ಕಾಸರಗೋಡಿನಲ್ಲಿ ನಡೆದ ಸಮಾರಂಭದಲ್ಲಿ ಕೇರಳ ಮುಖ್ಯಮಂತ್ರಿ ಶ್ರೀ ಆರ್ ಶಂಕರ್ ಬಿಡುಗಡೆ ಮಾಡಿದರು. ಕೇರಳ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ ಕರುಣಾಕರನ್ ಅವರು ಪತ್ರಿಕೆಯ ಮೊದಲ ಪ್ರತಿಯನ್ನು ಸ್ವೀಕರಿಸಿದರು. ಸಮಾರಂಭದಲ್ಲಿ ಸಚಿವರಾದ ಶ್ರೀ ಪಿ ಟಿ ಚಾಕೋ, ಶ್ರೀ ಕೆ ಎ ದಾಮೋದರ ಮೆನನ್, ಶ್ರೀ ಕೆ ಪಿ ಗೋಪಾಲನ್ ಮೊದಲಾದ ಗಣ್ಯರು ಭಾಗವಹಿಸಿದ್ದರು. ಶ್ರೀ ಎಂ ಕೃಷ್ಣನ್ ನಾಯರ್ ಪತ್ರಿಕೆಯ ಸಂಪಾದಕರಾಗಿದ್ದಾರೆ. ಕಾಂಗ್ರೆಸ್ ಮುಖಂಡ ಶ್ರೀ ಎಂ ಕೃಷ್ಣನ್ ನಾಯರ್ ಅವರು ಪತ್ರಿಕೆಯ ಸಂಪಾದಕರಾಗಿದ್ದಾರೆ. ಕಾಂಗ್ರೆಸ್ ಮುಖಂಡ ಶ್ರೀ ಎಂ ಕೃಷ್ಣನ್ ನಾಯರ್ ಅವರು ಪತ್ರಿಕೆಯ ಸಂಪಾದಕರಾಗಿದ್ದಾರೆ.

ಸಂಸ್ಕೃತ ಕಾಲೇಜಿನ ಪ್ರವೇಶಾವಕಾಶ— ಉಡುಪಿ ಶ್ರೀ ಪೇಜಾವರ ಮಠದ ಸಂಸ್ಕೃತ ಕಾಲೇಜಿನಲ್ಲಿ ಪ್ರಸಕ್ತ ಸಾಲಿನಲ್ಲಿ ಪ್ರವೇಶಾವಕಾಶವಿದ್ದು ಆಸಕ್ತರು ಕಾಲೇಜಿನ ಪ್ರಾಂಶುಪಾಲರಿಗೆ ಅರ್ಜಿ ಸಲ್ಲಿಸಬಹುದೆಂದು ಕಾಲೇಜಿನ ಪ್ರಕಟಣೆ ತಿಳಿಸಿದೆ.

ಕೆಲಂಡರ್ ಸ್ವೀಕಾರ— ಮಂಗಳೂರಿನ ಸಿ. ಎಸ್. ಬಿಸಿನೆಸ್ ಕ್ಲಬ್ಸ್ ಲಿಮಿಟೆಡ್ ಇವರ ಕ್ರಿಸ್ಮಸ್‌ನೂತನ ವರ್ಷ ಕಲೆಂಡರನ್ನು ಅಚ್ಚುಮಾಡಿಸಿದ ಪ್ರೀತ್ಯರ್ಥ ಕಳೆದ ದಿನಗಳಲ್ಲಿ ಅಧ್ಯಕ್ಷರಾದ ಶ್ರೀ ಎಸ್. ಎಸ್. ದವೆಯವರಿಂದ ಸ್ವೀಕರಿಸಲಾಯಿತು.

ನಿಧನ— ಮಂಗಳೂರಿನ ಕಾಪ್ಪಿಕಾಡಿನಲ್ಲಿ ವಾಸವಾಗಿದ್ದ ಶ್ರೀ ಕಲ್ಲಾಡಿಯವರ ಪತ್ನಿಯಾದ ಶ್ರೀಮತಿ ಲೊಂಬಿನ್ ಡಿಸೋಜ ರವರು ಅಲ್ಪಕಾಲದ ಅನಾರೋಗ್ಯದಿಂದ ಇತ್ತೀಚೆಗೆ ನಿಧನರಾದರೆಂದು ತಿಳಿದುಬಂದಿದೆ. ಮೃತರಿಗೆ ಮೂವರು ಪುತ್ರರು ಮತ್ತು ಒಬ್ಬ ಪುತ್ರಿಯಿದ್ದಾರೆ. ಅವರ ಅಗಲಿಕೆಯಿಂದ ದುಃಖತಪ್ತರಾಗಿರುವ ಕುಟುಂಬಿಕರಿಗೆ ನಮ್ಮ ಸಂತಾಪಗಳು.

ಯಕ್ಷಗಾನ ಸಂಘದ ವಾರ್ಷಿಕೋತ್ಸವ— ಮೂಲ್ಕಿಯ ಶ್ರೀ ಸೋಮೇಶ್ವರ ಯಕ್ಷಗಾನ ಸಂಘದ ವಾರ್ಷಿಕೋತ್ಸವವು ಇದೇ ತಾ. 25 ಮತ್ತು 26ರಂದು ಸಂಜೆ ಗಂಟೆ 6 ರಿಂದ ಶ್ರೀ ಸೋಮೇಶ್ವರ ದೇವಸ್ಥಾನದ ಆವರಣದಲ್ಲಿ ಜರಗಲಿದೆ. ಮೊದಲ ದಿನ ಶ್ರೀ ಕೃಷ್ಣ ಲೀಲೆ ಮತ್ತು ಎರಡನೆಯ ದಿನ ಶ್ರೀ ಕೃಷ್ಣ ಸಂಧಾನ ಎಂಬ ಪ್ರಸಂಗಗಳು ಪ್ರದರ್ಶನಗೊಳ್ಳಲಿವೆ. ಸಂಘದ ಸದಸ್ಯರಿಗೆ ಮತ್ತು ಅಭಿಮಾನಿಗಳಿಗೆ ಆಹ್ವಾನ ಪತ್ರಿಕೆಗಳನ್ನು ಈಗಾಗಲೇ ಕಳುಹಿಸಲಾಗಿದೆ. ಸಂಘದ ಸದಸ್ಯರು ಮತ್ತು ಅಭಿಮಾನಿಗಳು ಕಾರ್ಯಕ್ರಮಕ್ಕೆ ಆಗಮಿಸಿ ಸಹಕರಿಸಬೇಕಾಗಿ ವಿನಂತಿಸಲಾಗಿದೆ.

— ಸಂವಾದಿ.

ಶಾಯಿಗಳಿಗೆ ಬೇಡಿಕೆಯಿದೆ
ಯಾ ಕಚ್ಚಾ ವಸ್ತುಗಳಿಗೂ
ಹಾಗೂ ಕಚ್ಚಾವಸ್ತುಗಳ ತಿಳಿಸುವಿಕೆ,
ಕಛೇರಿಯಿಂದ ಸ್ವಾಗತ ಆಹ್ವಾನ.

ವಿಜ್ಞಾನದ ಮುನ್ನಡೆ

ಮೋಟಾರು ಕಾರಿಗೆ ಅಣುಶಕ್ತಿಯ ಬಳಕೆ

ಬರಲಿರುವ ತಣುಯುಗಕ್ಕೆ ತಕ್ಕಂತ ಹ ಮೋಟಾರು ವಾಹನಗಳು ತಯಾರಾ ಗಲಿವೆಯೆಂದು ತಿಳಿದುಬಂದಿದೆ ಈ ವಾ ಹನಗಳಲ್ಲಿನ ಎಂಜಿನ್ನುಗಳು ಬಹಳ ಹಗು ರವಾಗಿರುತ್ತವೆ. ಆದರೆ, ಅದೇ ಸಮಯ ದಲ್ಲಿ ಶ್ರೇಷ್ಠವಾಗಿದ್ದೂ ಆಗಿರುತ್ತವೆ. ಹೊ ಸ ಮೊದಲಿನ ಪಿಸ್ಟನ್ ಎಂಜಿನ್ ಒಂದ ನ್ನು ಪಟ್ಟಮ ಜರ್ಮನಿಯ ಎಂಜಿನಿಯ ರ್ ಒಬ್ಬರು ತಯಾರಿಸಿದ್ದಾರೆ. ಈ ಸಾಧ ನವು ಜೋಡಿಸಲ್ಪಟ್ಟ ಮೋಟಾರು ಗಾಡಿ ಗಳಿಗೆ 'ಗೇರಿ'ನ ಅವಶ್ಯಕತೆಯಿರುವುದಿಲ್ಲ. ಇದರಿಂದಾಗಿ ಕಡಿಮೆ ಖರ್ಚಿನಲ್ಲಿ, ಕಾರು ಗಳಿಂದ ಹೆಚ್ಚಿನ ಕೆಲಸವನ್ನು ಪಡೆಯಬ ಹುದು.

ಅಣುಶಕ್ತಿಯನ್ನು ಬಳಸಿಕೊಂಡು ಹ ಡಗುಗಳನ್ನು ನಡೆಸುವಿಕೆ, ವಿಮಾನಗಳ ನ್ನು ಹಾರಿಸುವಿಕೆ ಮುಂತಾದವುಗಳನ್ನು ಸಾಧಿಸಿದ, ಹಾಗೂ ಸಾಧಿಸುತ್ತಿರುವ ಎಂ ಜಿನಿಯರುಗಳು ತಮ್ಮ ದೃಷ್ಟಿಯನ್ನು ಹೆ ಗುರವಾದ, ಆದೇ ವೇಳೆಯಲ್ಲಿ ಉತ್ತಮ ವಾದ ಕೆಲಸವನ್ನು ನೀಡುವಂತಹ ಮೋ ಟಾರುಗಳನ್ನು ತಯಾರಿಸುವುದರಲ್ಲಿ ಹರಿಸಿ ದ್ದಾರೆ

ಮ್ಯೂನಿಚ್ಚಿನ ಹೆಸರಾಂತ ಎಂಜಿನಿಯ ರ್ ಆದ ಮತ್ತು ಅಲ್ಲಿನ ವಿಶ್ವವಿದ್ಯಾನಿಲ ಯದಲ್ಲಿ ಎಂಜಿನ್ ನಕ್ಷೆಗಳ ವಿಭಾಗದ ಪ್ರೊಫೆಸರ್ ಆಗಿರುವ ಡಾ| ಇಂಗ್ ಮೂಜೆನ್ ಡಬ್ಲ್ಯು. ಹ್ಯೂಬರ್ ಎಂಬುವರು ಈಗಾಗಲೇ ಹೆಚ್ಚಿನ ಕೆಲಸ ಮಾಡುತ್ತಿರುವ ಅಣುಶಕ್ತಿಯಲ್ಲಿ ಬಳಕೆಗೆ ಬೇ ಕಾದಂತಹ ಮೋಟಾರು ಕಾರಿನ ಎಂಜಿ ನ್ನುಗಳು ಹೇಗಿರಬೇಕೆಂಬುದರ ಬಗ್ಗೆ ಅಲ್ಲಿ ನ ಒಂದು ವಿಜ್ಞಾನ ಸಂಚಿಕೆಯಲ್ಲಿ ಲೇಖ ನವನ್ನು ಒರೆದಿದ್ದಾರೆ

ಸಾಧಾರಣವಾಗಿ ಈಗಿನ ಎಂಜಿನುಗಳ ಲ್ಲಿ ಉತ್ಪತ್ತಿಯಾಗುವ ಉಷ್ಣದ ಕೆಲವಂಶ ವು ಅನ್ಯಾಯವಾಗಿ ವ್ಯರ್ಥವಾಗಿ ಹೋ ಗುವುದರಿಂದ, ಅದಕ್ಕಿಂತ ನಾವು ಹೆಚ್ಚಿ ನ ಕ್ರಿಯಾಶಾಲಿತ್ವವನ್ನು ನಿರೀಕ್ಷಿಸಲಾಗು ವುದಿಲ್ಲ. ಇನ್ನೂ ಹೆಚ್ಚಿನ ಶಕ್ತಿಯ ಅವಶ್ಯ ಕತೆಯಿದ್ದಲ್ಲಿ ದೊಡ್ಡದಾದ ಎಂಜಿನ್ನುಗಳ ನ್ನು ತಯಾರಿಸಬೇಕಾಗಿ ಬರುವುದು, ಎಂ ದು ಅವರು ಬರೆದಿದ್ದಾರೆ.

ಮೋಟಾರುಗಳಲ್ಲಿ ಎಂಜಿನ್ನುಗಳಿಗೆ ಬ ದಲು ಟರ್ಬೈನ್‌ಗಳನ್ನು ಉಪಯೋಗಿಸು ವುದರಿಂದ ಇನ್ನು ಹೆಚ್ಚಿನ ಗುಣವನ್ನು ನಿ ರೀಕ್ಷಿಸಬಹುದಾಗಿದೆ. ಟರ್ಬೈನುಗಳಲ್ಲಿ ಸ ದಾ ಕಾಲವೂ ಉರಿಯಿದ್ದೇ ಇರಬೇಕು. ಟರ್ಬೈನುಗಳಲ್ಲಿ ಗಾಳಿಯ ಒತ್ತಡವು ಬ ಹಳ ಕಮ್ಮಿಯಾಗಿರುವುದರಿಂದ, ಉರಿಯು ವ ವಸ್ತುಗಳನ್ನು ಹೆಚ್ಚು ಕಾಲ ಉಪಯೋ ಗಿಸಬೇಕಾಗಿ ಬರುವುದು ಈ ಕಾರಣದಿಂ ದ ನೋಡಿದಲ್ಲಿ ಮೋಟಾರುಗಳಲ್ಲಿ ಟರ್ಬೈ ನುಗಳನ್ನು ಉಪಯೋಗಿಸುವುದು ಮಿತವ್ಯ ಯವೆನ್ನಿಸಿಕೊಳ್ಳಲಾರದು.

೫೫೦೦ದಿಂದ ೫೦೦ ಮೈಲುಗಳ ವರೆಗಿನ ದೂರವನ್ನು ಮೋಟಾರುಗಳಲ್ಲಿ ಸಾಗಬೇ ಕೆಂದರೆ ಅದಕ್ಕೆ ಹೆಚ್ಚಿನ ಪೆಟ್ರೋಲಿನ ಅವ ಶ್ಯಕತೆಯಿರುವುದು ಮತ್ತು ಅದನ್ನು ತುಂ ಬಿಕೊಳ್ಳಲು, ಮೋಟಾರುಗಳಲ್ಲಿ ಅ ತಿ ದೊಡ್ಡದಾದ ಟ್ಯಾಂಕ್‌ಗಳಿರಬೇಕು. ಇಂ ತಹ ದೊಡ್ಡ ಆಳತೆಯ ಟ್ಯಾಂಕುಗಳನ್ನು ಹೆಡಗುಗಳಲ್ಲಿಯೂ, ವಿಮಾನಗಳಲ್ಲಿಯೂ ಜೋಡಿಸಲು ಅನುಕೂಲತೆಯಿದೆ. ಇಂತಹ ದೊಡ್ಡ ಟ್ಯಾಂಕುಗಳ ನಿರ್ಮಾಣವು ಸಾಧ್ಯ ವಿರುವುದರಿಂದ, ಮೊದಲಿಂದ ಆವುಗಳಲ್ಲಿ ಜ್ಯಾರಿಯಲ್ಲಿದ್ದ ಪಿಸ್ಟನ್ ಪದ್ಧತಿಯನ್ನು ಕೈಬಿಡಲಾಯಿತು.

ಟರ್ಬೈನ್‌ಗಳ ಹಾಗೂ ಪಿಸ್ಟನ್‌ಗಳ ಸಂಯೋಜಿತ ಶಕ್ತಿಯನ್ನು ಪಡೆಯುವು ದು ಸಾಧ್ಯವೇ ಎಂಬ ವಿಷಯವು ತಜ್ಞರ ತಲೆಯನ್ನು ಬಹುಕಾಲ ಕೊರೆಯುತ್ತಿತ್ತು. ಬವೇರಿಯಾದ ಡಾ. ವಾಂಕೆಲ್ ಎಂಬ ಪ ರಿಣಕರು ಇಂತಹ ಸಂಯೋಜಿತ ಶಕ್ತಿಯ ನ್ನು ಪಡೆಯಲು ಸಾಧ್ಯವಾಗಿ, ವಂತಹ ತಿರುಗುವ ಪಿಸ್ಟನ್‌ಒಂದನ್ನು ಕಂಡು ಹಿಡಿ ದರು ಈ ಯಂತ್ರಗಳನ್ನು ಕಾರುಗಳಲ್ಲಿ ಜೋಡಿಸುವ ಕಾರ್ಯವು ಇನ್ನೂ ಆಷ್ಟಾಗಿ ಮುಂದುವರಿದಿಲ್ಲ.

ಜರ್ಮನಿಯ ಪ್ರಸಿದ್ಧ ಮೋಟಾರು ತಯಾರಿಕಾ ಸಂಸ್ಥೆಯಾದ ಎನ್. ಎಸ್. ಯು. ಎಂಬುದು ಈ ಮೊದಲಿನ ಪಿಸ್ಟನ್‌ಗಳನ್ನು ಒದಗಿಸುವ ವಿಷಯವಾಗಿ ವಿ ಶ್ವದ ಒಂಬತ್ತು ಪ್ರಖ್ಯಾತ ಮೋಟಾರು ತಯಾರಿಕಾ ಸಂಸ್ಥೆಗಳೊಂದಿಗೆ ಒಪ್ಪಂದ ವನ್ನು ಮಾಡಿಕೊಂಡಿದೆ. ಇವುಗಳಲ್ಲಿ ಅ ಮೇರಿಕಾದ ಡೈಮ್‌ಲರ್ ಬೆನ್ಜ್ (ಮರ್ಸಿ ಡಿಸ್, ಕರ್ಟಿಸ್‌ರೈಟ್ ಕಾರ್ಪೋರೇಷನ್ ಜಪಾನಿನ ಟೋಯೋಕೋಗ್ಯೋ ಮತ್ತು ಜನ್ಯಾಮರ್ ಡೀಸೆಲ್ ಸಂಸ್ಥೆಗಳು ಮ ತ್ತು ಬ್ರಿಟನ್ನಿನ ಪರ್ಕಿನ್ಸ್ ಎಂಬುವು ಮುಖ್ಯವಾದುವು. ಒಟ್ಟಿನಲ್ಲಿ ಎನ್. ಎ ಸ್‌ಯೂ ಸಂಸ್ಥೆಯ ನೇತೃತ್ವದಲ್ಲಿ ವಾಂ ಕೆಲ್ ಎಂಜಿನ್‌ಗಳು ಅತಿ ಶೀಘ್ರದಲ್ಲಿ ಪ್ರಾಬಲ್ಯಕ್ಕೆ ಬರುವುದೆಂಬುದರಲ್ಲಿ ಸಂದೇ ಹವಿಲ್ಲವೆನ್ನ ಬಹುದಾಗಿದೆ.

ಜರ್ಮನಿಯ ಬಾನ್ ನಗರದಲ್ಲಿರುವ ಡಿಪ್ಲಾಮ್ ಎಂಜಿನಿಯರ್ ಕಾರ್ಟ್ಜ್ ಎಂ ಬ ಸಂಸ್ಥೆಯು ತಿರುಗುವ ಪಿಸ್ಟನ್ ಯಂ ತ್ರಗಳಲ್ಲಿಯೇ ವಿಸ್ತೃತನ ಬದಲಾವಣೆಗಳ ನ್ನು ಮಾಡಿ ಆ ಮೇಲೆ ತಿಳಿಸಿದ್ದಕ್ಕಿಂತ ಉತ್ತಮ ದರ್ಜಿಯಯಂತ್ರಗಳನ್ನು ತಯಾ ರಿಸಿದೆಯೆಂದು ತಿಳಿದು ಬಂದಿದೆ. ಇದು ವಾಂಕೆಲ್ ಎಂಜಿನ್ನಿಗಿಂತ ಹಗುರವಾಗಿ ರುವುದಲ್ಲದೆ, ಆಕೃತಿಯಲ್ಲಿಯೂ ಬಹಳ ಚಿಕ್ಕದು. ಕೇವಲ ಹತ್ತು ಅಂಗುಲ ಉದ್ದ ಹತ್ತು ಅಂಗುಲ ಅಗಲದಆಳತೆಯಲ್ಲಿ ಈ ಎಂಜಿನುಗಳಿವೆ. ಇದರಲ್ಲಿ ಕೇವಲ ಇಪ್ಪತ್ತೈದು ಭಾಗಗಳಿವೆ. ೫೦೦ ಕ್ಯೂಬಿಕ್ ಸೆಂಟಿಮೀಟರ್ ಮೂಡ ಲ್‌ನ ಎಂಜಿನ್ ೨೫ ಅಶ್ವ ಶಕ್ತಿಯ ವೇ ಗವನ್ನು ನೀಡಬಲ್ಲುದಾಗಿದೆ.

ಇಂತಹ ಎಂಜಿನ್ನುಗಳನ್ನು ಹೊಂದಿರು ವ ಕಾರುಗಳಿಗೆ ಗೇರುಗಳ ಅವಶ್ಯಕತೆಯು ರುವುದಿಲ್ಲ. ಗಾಡಿಯು ಹಗುರವಾಗಿದ್ದು, ಉತ್ತಮ ಕೆಲಸವನ್ನು ಕೊಡುತ್ತಿರುತ್ತದೆ. ಇನ್ನು ಕೆಲವು ಪರಿಣಕರು ಅಣುಶಕ್ತಿಯಿಂ ದಲೇ ಚಲಿಸುವ ಮೋಟಾರ್ ಕಾರುಗಳ ನ್ನು ತಯಾರಿಸುವುದರಲ್ಲಿ ತಲ್ಲೀನರಾಗಿದ್ದಾ ರೆ. ಅಮೇರಿಕಾದಲ್ಲಿ ಇಂದು ಕಾರುಗಳಿಗೆ ವಿದ್ಯುಚ್ಛಾಲಿತ ಎಂಜಿನ್ನುಗಳನ್ನು ಜೋ ಡಿಸಲಾಗುತ್ತಿದೆ. ಸದ್ಯಕ್ಕೆ ಕಂಡುಹಿಡಿಯ ಲ್ಪಟ್ಟಿರುವುಗಳಲ್ಲಿ ಎಲ್ಲಕ್ಕಿಂತ ಇದೇ ಹೆ ಚ್ಚು ಪರಿಣಾಮಕಾರಿಯಾಗಿರುವುದರಿಂದ, ಯೂರೋಪಿನ ಉಳಿದ ಮೋಟಾರು ತ ಯಾರಿಕಾ ಕಂಪೆನಿಗಳೂ ಈ ಮಾರ್ಗವ ನ್ನೇ ಅನುಸರಿಸುವ ಸಂಭವವಿದೆ.

ಮೇಲೆ ಹೇಳಿರುವುನೆಲ್ಲಾ ತತ್ಕಾಲಕ್ಕೆ ಸರಿಯೆಂದರೂ ಅಣುಯುಗಕ್ಕೆ ಉಪ ಯೋಗವಾಗುವ ಮೋಟಾರು ಕಾರುಗಳ ಲ್ಲಿ ಈವುತರ ಬದಲಾವಣೆಗಳಾಗಬೇಕಾ ಗಿದೆ. ಜರ್ಮನಿಯಲ್ಲಿ ಸದ್ಯದಲ್ಲಿ ನಡೆಯು ತ್ತಿರುವ ಈವ್ರತರ ಸಂಶೋಧನೆಗಳಿಂದ ಇಷ್ಟರಲ್ಲೇ ಅಣುಶಕ್ತಿಚಾಲಿತ ಮೋಟಾ ರುಗಾಡಿಗಳು ಸಿದ್ಧವಾದರೆ ಆಶ್ಚರ್ಯವೇ ನಿಲ್ಲ-

---

ಕರಿನತೆಯಲ್ಲಿ ಕೈಲಾಸ ಕಾಣಿರಿ

(ಸನೇ ಪುಟದಿಂದ)

ನ್ನು ಕಿವಿಗೆ ಹಾಕಿಕೊಳ್ಳುವುದನ್ನೇ ಬಿಟ್ಟು ಬಿಟ್ಟನು.

ನಿಮ್ಮ ಭಯ ಮತ್ತು ಹೀನ ಭಾವನ ಗಳಿಂದ ನೀವು ಮುಕ್ತ ಬಯಸುವುದಾದರೆ, ನೀವು ಶ್ರೀ ರಾಮರವರ ಉದಾಹರಣೆಯಂ ತೆ ನಡೆದುಕೊಳ್ಳ ಬೇಕು; ಅವರು ನಡೆದ ದಾರಿಯಲ್ಲೇ ಮುಂದುವರಿಯಿರಿ. ಪ್ರತಿ ದಿನವೂ ಕರಿನತೆಗಳನ್ನು ಸಂತೋಷದಿಂದ ಸ್ವಾಗತಿಸಲು ಕಲಿತುಕೊಳ್ಳಿರಿ.

ಆಕ್ರಮಣದ ಸರ್ವೋತ್ತಮ ಸಾಧನ ರಕ್ಷಣೆಯೆಂಬುದನ್ನು ಮರೆಯಬೇಡಿರಿ. ಆದುದರಿಂದ ಕಷ್ಟಗಳು ಬರುವ ದಾರಿ ಯನ್ನೇ ನೋಡಬೇಡಿರಿ; ನೀವಾಗಿಯೇ ಮುಂದುವರಿದು, ಸ್ವಾಗತಿಸಿರಿ. ದೊಡ್ಡ ದೊಡ್ಡ ಕಷ್ಟಗಳನ್ನು ಎದುರಿಸುತ್ತ ಬಂದಂತೆ ಆತ್ಮವಿಶ್ವಾಸವನ್ನೂ ಬೆಳೆಸಿ ಕೊಳ್ಳುವುದು ಸಾಧ್ಯ. ಇದರೊಂದಿಗೆ ಆಪರೋಕ್ಷಾನಂದವೂ ನಿಮ್ಮ ಪಾಲಿಗಿರು ವುದು.

ವಾಸ್ತವವಾಗಿ ಕರಿನತೆಗಳು ವರದಾನ ವೆಂಬಂತೆ ಬರುತ್ತವೆ. ಈ ಸತ್ಯವನ್ನು ಅ ರ್ಥ ಮಾಡಿಕೊಳ್ಳುವುದು, ಮಾತ್ರ ನಿ ಮ್ಮನ್ನೇ ಸೇರಿಕೊಂಡಿದೆ. 'ಶತ್ರುಗಳ ಉ ಪಯೋಗವೂ ಸುಖದಲ್ಲಿರುತ್ತದೆ' ಎಂದ ಆಂಗ್ಲ ಕವಿ ಶೇಕ್ಸ್‌ಪಿಯರನ ಉಕ್ತಿ ಯಧ್ಯೋಚಿತವಿದೆ.

ಉಡ್ಪಿ ಡಿ ಮು. ಕೋರ್ಟಿನಲ್ಲಿ

ಕ್ಷ ಮ ನಂಬ್ರ 411/1960

ಹಾರಾಡಿ ನುಡಾಬಲ ಶೆಟ್ಟಿ —ವಾದಿ

ಮತ್ತು

ಮುತ್ತಕ್ಕ ಶೆಟ್ತಿ ಕೂಡಾ — ಪ್ರತಿವಾದಿರು ಇವರೊಳಗೆ

೪ನೆ ಪ್ರತಿವಾದಿ ಗೋವಿಂದ ಹೆಗ್ಗಡೆ,
೨ನೆ ಪ್ರತಿವಾದಿ ಸಾರಪ್ಪ ಹೆಗ್ಗಡೆ—
ಜಗ್ಗುರೆ ಆಣ್ಣಯ ಹೆಗ್ಗಡೆರ ಮ
ಕ್ಕಳು—ಉಡ್ಪಿ ತಾಲೂಕು ಬೇಕಾ
ಡಿ ಗ್ರಾಮದ ನಡುಮನೆಯಲ್ಲಿರುವವರು

ಮೇಲ್ಕಂಡ ವ್ಯಾಜ್ಯವು ಹಿಂದೆ ಕೇಳಿ ಮಾಡಿದ್ದಾಗಿದ್ದು ಸದ್ರಿ ವ್ಯಾಜ್ಯದಲ್ಲಿ ಸದ್ರಿ ಪ್ರತಿವಾದಿರಿಗೆ ಆಗತಕ್ಕ ವ್ಯಾಜ್ಯದನೋಟೀಸು ತಾರೀಖು 16—6—62ಕ್ಕೆ ಇಟ್ಟಿರುವುದರಿಂ ದ ಆ ದಿನ ಸದ್ರಿ ಪ್ರತಿವಾದಿರು ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

P. Padmanabha Rao.
Vakil for Plaintiff.

Udipi, Dated 4—6—1962.

ವಯಸ್ಸಿಗೆ ವ್ಯಾಯಾಮ ಕಲಬೇತಿಕೊಡುತ್ತಿರುವುದನ್ನು ಈ ಚಿತ್ರದಲ್ಲಿ ಕಾಣಬಹುದು.

ಭಾವಕಥೆಗಳು–

ದಾನಕ್ಕೆ ಪ್ರತಿದಾನ

ಸುಪ್ರಭಾತದ ಸಮಯ ಅಡ್ಡಾಡಲು ಹೊರಟಿದ್ದೆ, ಎದುರಿನಲ್ಲಿ ಒಬ್ಬ ಭಿಕ್ಷುಕನು ಸಿಕ್ಕಿದನು. ಅವನು ಬಡತನ ಹಸಿವೆಗಳಿಂದ ಜರ್ಜರಿತನಾಗಿದ್ದನು ಅವನ ಎದೆಯು ಎಲುಬನ್ನು ಸುಲಭವಾಗಿ ಎಣಿಸಬಹುದು. ಕಣ್ಣಿನ ರೆಪ್ಪೆಗಳು ಬಾತು ಹೋಗಿದ್ದುವು. ಕಣ್ಣೀರಿನಿಂದ ಒದ್ದೆಯಾದ ಗಲ್ಲ, ಹರಿದು ಚಿಂದಿಯಾದ ವಸ್ತ್ರ, ಕವ್ವಾಗಿರುವ ತುಟಿಗಳು, ನಾರುವ ದೇಹ ಬಡತನದ ಮೂರ್ತಿಮಂತ ಸಾದೃಶ್ಯನ ನಮೂನೆ!

ನನ್ನನ್ನು ಶ್ರೀಮಂತನೆಂದು ತಿಳಿದು ಆ ಭಿಕ್ಷುಕನು, ನನ್ನ ಮುಂದೆ ತನ್ನ ಕೊಳಕಾದ ದುರ್ಗಂಧಪೂರ್ಣ ಕೈ ಚಾಚಿ ಕರುಣಾಪೇ ನೈವೆದ್ಯ ಬಂದಂತೆ — ''ಬಾಬೂಜೀ.....'' ಎಂದ.

ಅವನ ದಯನೀಯ ದಶೆಯನ್ನು ಕಂಡು ವಿಚಲಿತನಾದ ನಾನು ನನ್ನ ಕಿಸೆಗಳನ್ನು ತಡವಿದೆ ಜೇಂಟಿನ ಕಿಸೆ, ಅಂಗಿಯ ಕಿಸೆ. ಜಾಕೇಟಿನ ಕಿಸೆ, ಕೋಟಿನ ಕಿಸೆ ಎಲ್ಲವನ್ನು ತಡವಿದೆ, ಎಲ್ಲೂ ಏನೂ ಸಿಗಲಿಲ್ಲ. ರೂಪ್ಯಾ, ಚಿಲ್ಲರೆ ಕಾಸು, ಗಡಿಯಾರ, ರುಮಾಲು ಏನೂ ಇರಲಿಲ್ಲ. ನಿಜ ಹೇಳ ಬೇಕೆಂದರೆ, ಆ ಸಮಯ ನನ್ನಲ್ಲಿ ಒಂದು ವೈಯೂ ಇರಲಿಲ್ಲ. ನಾನೊಂದು ವಿಚಿತ್ರ ಅವಸ್ಥೆಯಲ್ಲಿದ್ದೆ, ಭಿಕ್ಷುಕನ ಎಲುಬಿನ ಹಂದರದಂತಿರುವ ಕೊಳೆತು ನಾರುವ ಕೈಗಳು ಅಚಲವಾಗಿ ನನ್ನ ಮುಂದೆ ಇನ್ನೂ ನಿಂತಿದ್ದುವು. ಅತಿ ನಿಶ್ಯಕ್ತಿಯ ಪರಿಣಾಮವಾಗಿ ಅವನ ಕೈಗಳು ಆಶ್ರಯವಿಲ್ಲದ ಲತೆಯಂತೆ ಕಂಪಿಸುತ್ತಿದ್ದುವು.

ಈ ಅವಸ್ಥೆಗಿಂತ ಮೃತ್ಯು ಲೇಸು ಎಂದಿತು. ನನ್ನ ಮನ. ನಾಚಿಕೆಯಲ್ಲಿಯೇ ನಾನು ಹುಗಿದುಹೋಗುತ್ತಿದ್ದೆ. ಅಯ್ಯೋ ಭೂಮಿಯಾದರೂ ಬಿರಿದಿದ್ದರೆ ಅದರಲ್ಲಿ ಮುಖ ಅಡಗಿಸಿ ಕೊಳ್ಳುತ್ತಿದ್ದೆ ಎಂದಿತು ಹೃದಯ ನಿಧಾನವಾಗಿ ಲಜ್ಜೆ ಹಾಗೂ ಸಂಕೋಚದಿಂದ ನಾನು ಕೈ ಹಿಡಿದು— ಮಿತ್ರಾ, ನಿನಗೆ ಕೊಡಲು ಈಗ ನನ್ನ ಹತ್ತಿರ ಒಂದು ಕವಡೆಯೂ ಇಲ್ಲ, ನನ್ನನ್ನು ಕ್ಷಮಿಸು'' ಎಂದೆ.

ಸ್ವಲ್ಪ ಸುಮ್ಮನಿದ್ದು ಆ ಭಿಕ್ಷುಕನು ತನ್ನ ನೀರ್ಕ್ಷೀಣ ಮುಖದಲ್ಲಿ ಮುಗುಳ್ನಗೆ ತುಂಬಿತ್ತಾ—''ತಮ್ಮಾ, ಅದಕ್ಕೆ ನಾಚಿಕೆ ಸಂಕೋಚಗಳೇಕೆ ಪಡಬೇಕು? ನೀನು ನನ್ನೊಡನೆ ವ್ಯವಹರಿಸಿದ ರೀತಿಯೇ ಅವಾರವಾದುದು. ನಿಜವಾಗಿ ಹೇಳ ಬೇಕೆಂದರೆ ನಾನು ನಿನ್ನ ಪ್ರೇಮಪೂರ್ಣ ಮಾತುಗಳಿಗೆ ಚಿರಋಣಿಯಾಗಿದ್ದೇನೆ ಸಹಾನುಭೂತಿಪೂರ್ಣ ಮಾತುಗಳು ಬೆಳ್ಳಿಯ ತುಂಡುಗಳಿಗಿಂತ ಎಷ್ಟೋ ಹೆಚ್ಚು ಮೂಲ್ಯಯುಕ್ತವಾಗಿದೆ. ಇದೂ ಒಂದು ರೀತಿಯ ಉಚ್ಚ ದಾನ.' ಎಂದು ನಡಿದು ಆ ವೃದ್ಧ ಭಿಕ್ಷುಕನು ಪುನಃ ಸ್ವಾರ್ಗಿಕ ಮಂದಹಾಸ ಬೀರುತ್ತಾ ಎತ್ತಲೋ ಹೊರಟು ಹೋದನು. ಮತ್ತು ನಾನ ....?

ನಾನು ನನ್ನ ಸಹೋದರನಿಂದ ಒಂದು ಅಮೂಲ್ಯ ಉಪಹಾರವನ್ನಿಂದು, ಪಡೆದೆ ದೆನೆಂದೇ ನನ್ನ ಆತ್ಮ ಭಾವಿಸುತ್ತಿದೆ

'ಹೊಸ ಸಲಹೆ'

ಒಬ್ಬ ಬಹಳ ದೊಡ್ಡ ಡಾಕ್ಟರನು ತನ್ನ ಏಕಮಾತ್ರ ಪುತ್ರನ ಉಚಿತ ಶಿಕ್ಷಣ ವ್ಯವಸ್ಥೆಗಾಗಿ, ಅವನ ಮನೋ ವಿಜ್ಞಾನವನ್ನು ಪರೀಕ್ಷಿಸಲು ಪ್ರಯತ್ನಿಸಿದನು. ಆ ವನಿಗೆ ಯಾವುದರಲ್ಲಿ ಹೆಚ್ಚು ಆಶೆಯಿದೆ ಎಂದು ಪರೀಕ್ಷಿಸಲೋಸುಗ, ಬಾಲಕನನ್ನು ಒಂದು ಕೋಣೆಯಲ್ಲಿ ಇಟ್ಟನು. ಆಲ್ಲಿ ಒಂದು ಬಾಯಿಬಲ್ ಧರ್ಮಗ್ರಂಥ, ಒಂದು ಕಾನೂನಿನ ಪುಸ್ತಕ, ಒಂದು ಡಾಕ್ಟರರ ಸ್ಟೆಥೋಸ್ಕೋಪು, ಮತ್ತು ಒಂದು ಬೆಳ್ಳಿಯ ರೂಪ್ಯಾ ಇಡಲಾಗಿತ್ತು. ಅವನು ಗೂಪುದನ್ನು ಎತ್ತಿಕೊಳ್ಳುತ್ತಾನೆಂದು ನೋಡಿ, ಧರ್ಮೋಪದೇಶಕ ವಕೀಲ, ಡಾಕ್ಟರ ಯಾ ವ್ಯಾಪಾರಿಯನ್ನಾಗಿ ಮಾಡುವುದಾಗಿ ತಂದೆಯು ನಿಶ್ಚಯಿಸಿದ್ದನು.

ಸ್ವಲ್ಪ ಸಮಯದ ನಂತರ ಬಾಲಕನ ತಂದೆ ಮತ್ತಿತರು ಬಾಗಿಲು ತೆರೆದಾಗ— ಆ ಬಾಲಕನು ಬ್ಯಾಬಲ್ ಧರ್ಮಗ್ರಂಥದ ಮೇಲೆ ಕುಳಿತಿದ್ದನು ಕಾನೂನು ಪುಸ್ತಕದ ಮೇಲೆ ತನ್ನ ಕಾಲಿರಿಸಿದ್ದನು. ಆವನ ಎಡಗೈಯಲ್ಲಿ ಡಾಕ್ಟರರ ಸ್ಟೆಥೋಸ್ಕೋಪ್ ಮತ್ತು ಬಲಗೈಯಲ್ಲಿ ಬೆಳ್ಳಿಯ ರೂಪ್ಯಾ ಇತ್ತು. ಆವನು ಪ್ರತೀ ಕ್ಷಣವೂ ರೂಪಾಯಿಯ ಎದೆಬಡಿತವನ್ನು ಪರೀಕ್ಷಿಸುವವನಂತೆ ಸ್ಟೆಥೋಸ್ಕೋಪನ್ನು ಅದಕ್ಕೆ ಮುಟ್ಟಿಸುತ್ತಿದ್ದನು.

ಆಲ್ಲಿ ಸೇರಿದ ಭಿನ್ನ ಭಿನ್ನ ಪ್ರಕೃತಿಯ ಜನರೂ ಭಿನ್ನಾಭಿಪ್ರಾಯ ವಿಲ್ಲದೆ ''ಇವನು ನಿಜವಾಗಿಯೂ ಮಂತ್ರಿಯೋಗಬೇಕು!'' ಎಂದರು.

[ರತ್ನ ದೀಪದಿಂದ]

ಶ್ರೀ ಎಸ್. ಎಂ. ಕೆಟ್ಟಿ,
ತಿನುಂಜೆಪರಾರಿ.

ರಾಷ್ಟ್ರದ ಪವಿತ್ರತೆಯನ್ನು ಉಳಿಸಿರಿ

ರಾಷ್ಟ್ರಪತಿ ಡಾ| ರಾಧಾಕೃಷ್ಣನ್

ದರ್ಶನವೆಂದರೆ, ವಿವೇಕದ ಕಡೆಗಿರುವ ಪ್ರೇಮ. ಇಂದು ವಿಶ್ವಕ್ಕೆ ಅವಶ್ಯ ಬೇಕಾಗಿರುವುದು ಜ್ಞಾನವಲ್ಲ; ವಿವೇಕ. ಮನುಷ್ಯನಲ್ಲಿ ಬಹು ದೀರ್ಘ ಕಾಲದಿಂದಲೂ ವಿನಾಶಕ ಪ್ರವೃತ್ತಿಯು ರಕ್ತಗತವಾಗಿ ಬಂದಿದೆ. ಈ ಪ್ರವೃತ್ತಿಯು ಅಪಾರ ಶಕ್ತಿವಂತವೆನಿಸಿದೆ. ಆದರೆ, ಮಾನವನು ತನ್ನ ಎಲ್ಲ ಕಾರ್ಯಗಳ ಮೇಲೆಯೂ ವಿವೇಕದ ನಿಯಂತ್ರಣವನ್ನು ಹೇರಬೇಕು; ಇಲ್ಲವಾದರೆ, ವಿಶ್ವದ ಭವಿಷ್ಯವು ಅಂಧಕಾರಮಯವಾಗಿತ್ತದೆ. ಇಂದಿನ ಪರಿಸ್ಥಿತಿಯಲ್ಲಿ ದಾರ್ಶನಿಕ ಮತ್ತು ಧಾರ್ಮಿಕ ಅನುಶಾಸನವು ಅತ್ಯಂತಾವಶ್ಯಕವಾಗಿದೆ. ಈ ಅನುಶಾಸನ ಶೀಲತೆಯಿಂದಲೇ ಪ್ರೇಮ ಮತ್ತು ಆತ್ಮತ್ಯಾಗದ ಭಾವನೆಗಳು ಹೆಚ್ಚುವುವು. ದರ್ಶನ ಹಾಗೂ ಧರ್ಮಗಳು ಎರಡು ಶಕ್ತಿಗಳು. ಇವುಗಳಿಂದ ಹೊಸ ಮಾನವನ ನಿರ್ಮಾಣವಾಗುವುದು. ಧರ್ಮವು ಮಾನವನನ್ನು ವಿಶಿದ್ಧಗೊಳಿಸಿ, ಲೋಭ, ಕ್ರೋಧ, ಸ್ವಭೋತ್ಪ್ರೇಮ, ಸಂಪತ್ತಿನ ಪ್ರೇಮ ಮತ್ತು ವಿಲಾಸದ ಭಾವನೆಗಳನ್ನು ನಷ್ಟಗೊಳಿಸುವುದು. ಈ ಗುಣಗಳಿಲ್ಲದೆ ಹೋದರೆ, ಸರ್ವನಾಶದಿಂದ ಮಾನವನು ಉಳಿಯುವುದಿಲ್ಲ.

ಭಾರತೀಯ ಸ್ವಾತಂತ್ರ್ಯ ಸಂಗ್ರಾಮದ ವೇಳೆಯಲ್ಲಿ ದೇಶದ ಜನರು ಅಪೂರ್ವ ಸಾಹಸ, ಶೌರ್ಯ, ತ್ಯಾಗ ಮತ್ತು ಬಲಿದಾನಗಳ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ. ಇವೇ ಗುಣಗಳು ನವಭಾರತ ನಿರ್ಮಾಣಕ್ಕೂ ಇಂದಿಗೂ ಅನಿವಾರ್ಯವಾಗಿ ಬೇಕಾಗಿವೆ. ನಾವು ರಾಷ್ಟ್ರ ನಿರ್ಮಾಣವನ್ನು ಮಾಡುತ್ತಿರುವಾಗ, ನಮ್ಮ ಚರಿತ್ರ ನಿರ್ಮಾಣವೂ ಆಗಬೇಕು. ನಾಗರಿಕರು ಉಸಭೋಗಿಸುವ ಸಾಮಗ್ರಿಗಳ ಬೆಲೆಯು ಹೆಚ್ಚಿತೆಂದು ದೂರಿಡುತ್ತಿರುವ ವಿದ್ಯಾರ್ಥಿಗಳಿಗೆ ಗಣ್ಯರು ಸಿಗಾರನು ಇಲ್ಲ ಹೋದರೆ, ಶಿಕ್ಷಣಾಲಯಗಳಲ್ಲಿ ಪ್ರವೇಶ ದೊರೆಯುವುದಿಲ್ಲವೆಂದು ಜಡಪಡಿಸುತ್ತಿರುವ ನೌಕರಿಗಳಲ್ಲಿ ಪದೋನ್ನತಿಯೂ ಪ್ರಭಾವ ಬೀರಲು ಕಾರಣವಾಗುತ್ತದೆ ಎಂ

ದು ಬೊಬ್ಬಿಡುತ್ತಾರೆ ನಿಜವಾಗಿಯೂ ಪಕ್ಷಪಾತ ಅಥವಾ ಭ್ರಷ್ಟಾಚಾರಗಳು ಕಟ್ಟುವು. ಈ ದುರ್ಗುಣಗಳಿಂದ ದೂರವಿರುವುದು ಅತ್ಯಗತ್ಯ. ರಾಷ್ಟ್ರದ ಸುಭದ್ರತೆ ಮತ್ತು ಪವಿತ್ರತೆಯನ್ನು ಉಳಿಸಿಕೊಳ್ಳಬೇಕಾದರೆ, ನಾವು ಅಹರ್ನಿಶಿ ಶ್ರಮಿಸಬೇಕು; ನಮ್ಮಲ್ಲಿರುವ ಸಕಲ ದುರ್ಗುಣಗಳನ್ನು ಅವಶ್ಯ ದೂರೀಕರಿಸಬೇಕು.

ಅಮೃತ ಬಿಂದು

ಬಾಯಿಯಲ್ಲಿ ಜೇನಿರುವ ಜೇನ್ನೊಣದ ಬಾಲದಲ್ಲಿ ವಿಷವಿದೆ.

ಒ ಒ ಒ ಒ

ಸತ್ತ ಚಕ್ರವರ್ತಿಗಿಂತಲೂ ಬದುಕಿರುವ ಭಿಕ್ಷುಕನಾಗಿರುವುದು ಮೇಲು.

ಒ ಒ ಒ ಒ

ಕಣ್ಣಿಗೆ ಕಂಡುದರ ಅರ್ಥ ನಂಬಬಾರದು; ಕಿವಿಗೆ ಕೇಳಿದುದರ ನಂಬಿಕೆ ನಂಬಬಾರದು.

ಒ ಒ ಒ ಒ

ಈ ಜಗತ್ತಿನಲ್ಲಿ ಸೆನೆವನೆಗೆ ಗೀತೆಯು ಕೆಟ್ಟಿಕಿಯಂತಿದೆ. ಆದರ ಮೂಲಕ ಅನಂಕವನ್ನು ನೋಡಬಹುದು.

ಒ ಒ ಒ

ತಿಳಿಗೇಡಿಗಳ ನಾಟಕಂಗಳ್ಕೆ ಬಂದ ದುಃಖಕ್ಕಾಗಿಯೇ ಅಗ ಹುಟ್ಟಿದ ಮಗು ಅಳುತ್ತದೆ.

ಒ ಒ ಒ

ಇನ್ನೊಬ್ಬನ ರಕ್ತವನ್ನು ಹೀರಿ ಬೆಳೆಯುವವನ ರಕ್ತವು ಹೀರಲ್ಪಡುವವರು ಪ್ರಕೃತಿ ಧರ್ಮ.

ಒ ಒ ಒ

ಆರೋಗ್ಯಕರ ಶರೀರ ಆತ್ಮದ ಆರಮನೆಯಾದರೆ ಅನಾರೋಗ್ಯದ ಶರೀರ ಆತ್ಮದ ಸೆರೆಮನೆ.

ಒ ಒ ಒ

ಜಗತ್ತಿನಲ್ಲಿ ಪವಿತ್ರವಾದುದಿದೆಯೆಂದರೆ ಮನುಷ್ಯನ ಶರೀರ; ಏಕೆಂದರೆ ಅದರೊಳಗೇ ಭಗವಂತನಿದ್ದಾನೆ.

ಒ ಒ ಒ

ಕೆಲವು ಪುಸ್ತಕಗಳು ರುಚಿನೋಡಲಿಕ್ಕಾಗಿ, ಇನ್ನು ಕೆಲವು ಜಗಿಯಲಿಕ್ಕಾಗಿ ಮತ್ತೆ ಕೆಲವು ಜಗಿದು ಅರಗಿಸಿಕೊಳ್ಳಲಿಕ್ಕಾಗಿ.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು.ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಪಿತಾಳ, ಎಂ.ಬಿ.ಬಿ.ಎಸ್

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳುಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ದೇವಕಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯುತ್ತಮವೆಂದು ಪರಿಗಣಿಸಿರುವರು ಪ್ರತಿಯೊಬ್ಬ ದೇವಕಾತಿಗಾರರಿಗೆ ಇಲ್ಲಿ ನೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿಹೊಂದುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ವಿಜಯ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್:— ವಿಜಯ ಬೇಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡ್,
Lstd. 1931. — ಮಂಗಳೂರು — 3
Phone No. 240.

ಕನಲು ದಾರಿ—ಕೆಂಪು ದೀಪ

ಮುಂಬಯಿಯಲ್ಲಿ ಮೂರು ದಿನಗಳು

—ಸುದಾಸ

ಮುಂಬಯಿ!

ಉಣ್ಣಲು, ಉಡಲು, ವಿಂದುಸಲು, ಬಿಡುವಿನ ವಿಶಾಲ ಮುಂಬಯಿ. ಊರಿಗೂ ಬಿಡುವಿಲ್ಲ. ಯಂತ್ರಿಕ ಜೀವನವೇ? ಅದಕ್ಕೂ ಕೇಳಾದ ಮಾನವ ಜೀವನವು ಯಂತ್ರಕ್ಕಾದರೂ ಒನ್ನೊಮ್ಮೆ ಬಿಡುವಿದೆ. ಆದರೆ ಇಲ್ಲಿಯ ಮಾನವನಿಗೆ ಬಿಡುವೇ ಇಲ್ಲ. ದುಡಿದು ದುಡಿದು ಅವನು ತಾನು ಮಾನವನೇ? ಅಲ್ಲವೆಂದೂ ತಿಳಿಯುತ್ತಾನೆ!

ಆದರೂ ಮುಂಬಯಿಗೊಂದು ಚೆಲುವಿದೆ. ಯಾವದೋ ಮೋಡಿಯಿದೆ ಇಲ್ಲಿ. ಎಂತಲೇ ದಿನ ದಿನಕ್ಕೆ ಜನವಸತಿ ಹೆಚ್ಚುತಲೇ ಇದೆ.

ಮೊನ್ನೆ ಮೊನ್ನೆ ಈ ಮುಂಬಯಿಯಲ್ಲಿ ಮೂರು ದಿನದ ರಜೆ ಹೋಟೆಲಿನ ಕೆಲಸದವರಿಗೆ! ಸಹಸ್ರಾರು ಮಂದಿ ಈ ವರೆಗೆ ರಜೆಯ ಮುಖವನ್ನೇ ಕಾಣದವರು. ರಜೆಯೇನು, ವಿಶ್ರಾಂತಿಯನ್ನೂ ಕಂಡಿಲ್ಲ. ಮುಂಜಾನೆ ನಾಲ್ಕರಿಂದ ರಾತ್ರಿಯ ವರೆಗೆ ದುಡಿದು, ತಿಂಗಳ ಸ್ನಾನ, ಊಟ, ನಿದ್ದೆ, ನಿದ್ದೆಯೇ ಅವರ ವಿರಾಮ ಸಾಧನ.

ಅಂತಹ ವ್ಯಕ್ತಿಗಳ ಪಾಲಿಗೆ ಇದೊಂದು ಸಂತೋಷದ ದಿನವಾಯಿತು. ಅದರ ಪರಿಣಾಮವಾಗಿ ಫಾಮಿಲಿಪಾತ್ರ ನಿವಾಸಿಗಳಿಗೆ, ಹಾಗೂ ಕೊಟ್ಟು ಹೋಟೆಲಿನ ಅನ್ನಕ್ಕೆ ಹೋಗುವಿದ್ದ ಉದ್ಯೋಗಿಗಳ ಪಾಲಿಗೆ ಮಾತ್ರ, ದಿನವು ಶಿವರಾತ್ರಿಯಾಯಿತು.

ಎಲ್ಲಿಯೂ ಅನ್ನವಿಲ್ಲ. ಎಲ್ಲಿಯೂ ಚಹವಿಲ್ಲ.

ನಾವು ಮುಷ್ಕರ ಹೂಡುತ್ತೇವೆ. ಇಲ್ಲವೆ ನಮ್ಮ ದುಡಿಮೆಗೆ ತಕ್ಕ ಸಂಬಳ ಕೊಡಿರಿ. ಕಾಯಂ ನೌಕರಿ ಕೊಡಿರಿ ವಾಸಕ್ಕೆ ಸ್ಥಳ, ರಜೆ, ಪ್ರವಿಡೆಂಟ್ ಫಂಡ್, ಎಲ್ಲಾ ಸಿಗಬೇಕು. ಎಲ್ಲಾ ಸೌಕರ್ಯ ಸಿಗಬೇಕುನಮಗೆ; ಎಂದರು ಕೆಲಸಗಾರರು.

ಎಲ್ಲಿಗೆ ಹೋಗುತ್ತಾರೆ ಅವರು? ಹೋಗುತ್ತಾರೆ ಎಲ್ಲಿಗೆ? ಎರಡು ದಿನ ಪಾಲಿ ಇದ್ದರೆ ಕೂಳಿಗೆ ಗತಿಯಿಲ್ಲದ ಅವರೆಲ್ಲಿಗೆ ಹೋಗುತ್ತಾರೆ? ಎಂದರು ಮೂಲಿಕರು.

ಅಂತೂ ಹದಿನಾರರಿಂದು ಮುಷ್ಕರ ಹೂಡಿದರು, ಶ್ರಮಿಕರು. ನಗರದ ಹೋಟೆಲುಗಳು ಮುಚ್ಚಲ್ಪಟ್ಟವು. ಮುಚ್ಚಿದ ಹೋಟೆಲುಗಳನ್ನು ಮುಟ್ಟಿದರು ಕೆಲವು ಮಂದಿ. ಅಂತೂ ಆ ದಿನ ಮುಂಬಯಿಯ ಜನರು ಹೋಟೆಲುಗಳು ತಮ್ಮ ಬದುಕಿನಲ್ಲಿ ಎಷ್ಟು ಪ್ರಾಮುಖ್ಯ ಸ್ಥಾನವನ್ನು ಪಡೆದಿವೆ ಎಂದು ಕಂಡುಕೊಂಡರು.

ಮೂರನೆಯ ದಿನ ಮತ್ತೆ ಮುಷ್ಕರ! ಕೆಲಸಗಾರರ ವಿರುದ್ಧವಾಗಿ! ಹೋಟೆಲ್‌ದಾರ ತಮ್ಮೊಡನೆ ಸಹಕರಿಸಲಿಲ್ಲವೆಂದು ಈ ಮುಷ್ಕರ! ಮೂಲಿಕರು ಹೂಡಿದ ಮುಷ್ಕರ!

ಮಧ್ಯಾಹ್ನ ಕೆಲಸಗಾರರು ಏಕತೆಯ ಸೂತ್ರದಲ್ಲಿ ಬಂಧಿಸಲ್ಪಟ್ಟರು. ಅವರ ಊಟದ ವ್ಯವಸ್ಥೆಯೂ ನಡೆಯಿತು.

ಮೂರು ದಿನವೂ ಅನ್ನವಿಲ್ಲ, ಚಹವಿಲ್ಲ ನೀರೂ ಇಲ್ಲ! ಯಾಗಿಗೆ? ರಿಪಬ್ಲಿಕ್ ಸಂಕಾರದ ಪಬ್ಲಿಕಿಗೆ! ಬಳಲಲೇ ಬೇಕು. ಯಾವ ಹೊತ್ತಿನಲ್ಲೂ ಒದೆತ ಜನತೆಗೆ—ದುಡಿಮೆಗಾರರಿಗೆ.

ಸಾಲಾಗಿ ನಿಲ್ಲಿರಿ! ಇಬ್ಬಿಬ್ಬರು—ಕೈ ಹಿಡಿದುಕೊಳ್ಳಿರಿ. ನಡೆಯಿರಿ ಮುಂದೆ. ನಡೆಯಿರಿ ಸಚಿವಾಲಯಕ್ಕೆ. ಬೇಡಿಕೆಗಳು ಸಿಗಲೇ ಬೇಕು ನಮ್ಮ ಬೇಡಿಕೆಗಳಿಗೆ ಮನ್ನಣೆ ದೊರಕಲೇ ಬೇಕು. ಮೂಲಿಕರುಗಳು ಹೋಟೆಲು ತೆರೆಯಲೇ ಬೇಕು. ಸಾಗಿತು ಮೆರವಣಿಗೆ, ಮಧ್ಯಾಹ್ನದ ಉರಿಬಿಸಿಲಲ್ಲಿ ಒಳಗಿಳಿದ ಕಣ್ಣುಗಳು—ನಿಸ್ತೇಜ ಮುಖಗಳು—ಒಣ ಮೈಯ ಶರೀರಗಳು (ಇನ್ನೂ ಜೀವಂತವಾಗಿವೆ ಎನ್ನುವುದಕ್ಕೆ ಚಲನೆ ಸಾಕ್ಷಿ, ಕ್ಷೀಣಕೂಗು ಸಾಕ್ಷಿ-ಸಾವಿರಂರು ಸಾಗುತ್ತಿವೆ, ಮುಂದೆ, ಮುಂದೆ ಸಾಲಾಗಿ. ಉರಿಬಿಸಿಲು. ಕಾಲಲ್ಲಿ ಮೆಟ್ಟುಗಳೂ ಇಲ್ಲ ಹಲವರಿಗೆ. ತೊಡಲು ಬಟ್ಟೆಯೂ ಸರಿಯಾಗಿಲ್ಲ ಕೆಲವರಿಗೆ. ಆದರೂ ಮುಖದಲ್ಲಿ ಗೆಲವು ತರುವ ಯತ್ನ. ಸಾಗಿತು ಮೆರವಣಿಗೆ ಸಚಿವಾಲಯದತ್ತ. ಹೋಟೆಲು ಕೆಲಸಗಾರರ ಜೀವನದಲ್ಲಿ ಇದೊಂದು ಅಪೂರ್ವದಿನ. ಭವಿಷ್ಯದ ಸುಗಮತೆಗೆ ಏಕತೆಯ ಅಗತ್ಯವಿದೆಯೆಂದು ಅರಿತುಕೊಂಡದಿನ.

ಮೂಲಿಕರುಗಳಲ್ಲಿ ಹಲವರು ಬಳಲಿದರು. ತುಟ್ಟ ಬೆಲೆಯ ಸಾಮಗ್ರಿಗಳು, ವಿಪರೀತ ಬಾಡಿಗೆ, ಕಡಿಮೆ ವ್ಯಾಪಾರ, ಇಂತಹ ಸ್ಥಿತಿಯಲ್ಲಿ ಮೂರು ದಿನ ಮೂರು ಯುಗವಾಗಿ ಕಂಡಿತು ಅವರಿಗೆ. ಹೋಟೆಲು ಅವರ ಸ್ವಂತದ್ದಲ್ಲ. ಹೆಚ್ಚಿಗೆ ಮೂಲಧನವಿಲ್ಲದ ಕಾರಣ, ಹೆಚ್ಚಿಗೆ ಬಾಡಿಗೆಯ ಒಪ್ಪಂದ ಮಾಡಿಕೊಂಡು ನಡೆಸುವವರು ಅವರು.

ಹೋಟೆಲು! ನಮ್ಮ ಕಣ್ಣ ಮುಂದಿರುವ ನರಕ. ಅಲ್ಲಿ ಸುಖಿಗಳಾರೂ ಇಲ್ಲ. ಮೂಲಿಕರೂ ಕಣ್ಣೀರಿಡುತ್ತಾರೆ ಇಲ್ಲಿ. ಕೆಲಸಗಾರರೂ ನರಳುತ್ತಾರೆ ಇಲ್ಲಿ. ಆದರೂ ಈ ಕಣ್ಣೀರಿನ ಬಿಂದು ನಮ್ಮ ಕಣ್ಣಿದಿರು ಕಾಣದು. ನಾವು ಕೊಡುವ ಹಣ ಮುಸಿಹಾಕುವ ಕಾಗದದಂತೆ ಈ ಕಣ್ಣೀರನ್ನು ಅಳಿಸಿ ಬಿಡುತ್ತದೆ!

ಎಲ್ಲ ನೌಕರರ ಅವಸ್ಥೆ ಹೀಗಿದ್ದರೂ ಎಲ್ಲ ಮೂಲಿಕರುಗಳ ಸ್ಥಿತಿ ಹೀಗಿಲ್ಲ. ಅವರಲ್ಲಿ ಕೆಲವರು ಸಹಸ್ರಗಟ್ಟಲೆ ಸಂಪಾದಿಸಿಕೊಂಡಿದ್ದಾರೆ. ಬೇಕಷ್ಟು ಆಸ್ತಿ ಮಾಡಿಕೊಂಡಿದ್ದಾರೆ. ಅಂತಹ ಮಹಾಶಯರು ನೂರುಗಟ್ಟಲೆ ರೂಪಾಯಿಗಳನ್ನು ಚೆಲ್ಲುತ್ತಾರೆ ಕ್ಷಣಮಾತ್ರದಲ್ಲಿ! ಎಲ್ಲಿ? ವೇಶ್ಯೆಯರ ಪಾದಾರವಿಂದಗಳಲ್ಲಿ; ಜೂಜುಕಟ್ಟೆಯಲ್ಲಿ. ಪುಣ್ಯ ಕ್ಷೇತ್ರಗಳಲ್ಲೂ ತಾವು ಮಾಡಿದಪಾಪ ಕಾರ್ಯದ ವಿಸರ್ಜನೆಯನ್ನು ಮಾಡಲು ಸಹಸ್ರಾರು ರೂಪಾಯಿ ಬಿಚ್ಚುವ ಮಹಾ ದಾನಿಗಳೂ ಇದ್ದಾರೆ ಇವರಲ್ಲಿ.

ಆದರೂ ಕೆಲಸಗಾರರಿಗೆ ಸಿಗುವದು ಗಂಜಿ ಊಟ, ಮಲಗಲು ಚಾವಿಗೂ ಗತಿಯಿಲ್ಲ. ಗೋಣಿ ಚೀಲವೇ ಗತಿ. ಬಿಡುವಿಲ್ಲದ ದುಡಿಮೆ. ಮತ್ತೆ ಮೂಲಿಕರ ಗರ್ಜನೆ" ದುಡಿಯಿರಿ. ದುಡಿಯದಿದ್ದರೆ ತಿನ್ನಲು ನನ್ನಪ್ಪನ ಮನೆಯಿಂದ ಬರುತ್ತದೆಯೇ?

ಏನನ್ನು ತಿನ್ನಲು? ಗಂಜಿಯನ್ನೇ? ಎಲ್ಲಿಯ ತನಕ ದುಡಿಯ ಬೇಕು ಎಲ್ಲಿಯ ತನಕ? ಕೇಳುತ್ತಾರೆ ದುಡಿಮೆಯ ಎತ್ತುಗಳು.

ದೀರ್ಘಕಾಲದ ಸರಳಾದದಿಂದ ಇದೀಗ ಎಚ್ಚತ್ತಿದ್ದಾರೆ ಕೆಲಸಗಾರರು. ನಿರ್ಣಯದ ಇರುಳಿನ ಕೂಗು ಅವರನ್ನು ಹೊಡೆದೆಬ್ಬಿಸಿದೆ. ಘರ್ಷಣೆಯ ಕೆಚ್ಚು ಉರಿಯತೊಡಗಿದೆ ಅವರ ಹೃದಯದಲ್ಲಿ.

ಮುಂಬಯಿಯ ಜನತೆಯ ಮುಂದೆಯೂ ಇದೀಗ ಒಂದು ಪ್ರಶ್ನೆ ಎದ್ದುನಿಂತಿದೆ: ಹೋಟೆಲುಗಳು ದೀರ್ಘ ಕಾಲದ ವರೆಗೆ ಮುಚ್ಚಲ್ಪಟ್ಟರೆ ಏನಾಗಬಹುದು? ಎಂಬ ಪ್ರಶ್ನೆ. ಏನಾಗಲಿಕ್ಕಿಲ್ಲ ಎಂದಲ್ಲವೇ ಅದಕ್ಕೆ ಉತ್ತರ?

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಯಲ್ ವೆಂಕಟ್ರಾವ್ ಎಲ್.ಎ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ। ಶ್ರೀ. ಕೊರಡ್ಯಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ
ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.—ಅಯಾ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ
0 =25 N P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕಕಳಿಸಲಾಗುವುದು
ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರಜೆಗಳು ಪ್ರಜ್ಞಾಶೀಲ ರಾಗಬೇಕು

(೩ನೇ ಪುಟದಿಂದ)

ಪ್ರಧಾನ ವಿಚಾರವೆಂಬುದನ್ನು ಅರಿತು ಕಾರ್ಯ ಪ್ರವೃತ್ತವಾಗುವಂತೆಸಗುವುದು ಸಾಧ್ಯವಾಗುವುದು.

ಈ ವಿಧದ ಜಾಗತಿಕಾಭಿಮಾನವು ನಮ್ಮಲ್ಲಿ ಉದಿಸಿ ಪ್ರವರ್ಧಮಾನವಾಗಬೇಕು. ಸರಿಯಾದುದನ್ನೇ ವಿವೇಚಿಸುವ ವಿವೇಕವನ್ನು ಬೆಳೆಸಿಕೊಂಡು ಬರಲು ಇದರಿಂದ ಸಹಾಯಕವಾಗುವುದು.

ಮದ್ರಾಸು ನಗರವಿಂದು ೩೦ ಲಕ್ಷ ಜನಶಕ್ತಿಯಿಂದ ಕೂಡಿದೆ. ಸಾಹಿತ್ಯಕ್ಕೆ ಸಾರ್ವಜನಿಕ ಸೇವೆಗೆ, ವಿದ್ಯಾಕ್ಷೇತ್ರಕ್ಕೆ, ಸಾಮಾಜಿಕ ಕಾರ್ಯಕ್ರಮಗಳಿಗೆ ಇಲ್ಲಿನ ಜನರು ಬಹುಮುಖವಾದ ಸೇವೆಯನ್ನು ಸಲ್ಲಿಸಿದ್ದಾರೆ. ಧರ್ಮ ಮತ್ತು ದರ್ಶನ ಶಾಸ್ತ್ರಗಳಲ್ಲಿಯೂ ಉತ್ತಮ ಕೃಷಿ ಮಾಡಿದ್ದಾರೆ; ಮುಂದಕ್ಕೂ ಈ ಸೇವೆಯು ಹೆಚ್ಚುತ್ತ ಬರಬೇಕು. ನಾವು ಸಂಖ್ಯೆಯಲ್ಲಿ ಮಾತ್ರ ಹೆಚ್ಚಾದರೆ ಸಾಲದು. ನಮ್ಮ ಜನತೆಯು ಗುಣದಲ್ಲಿಯೂ ಬಳೆಯಬೇಕು. ಈ ನಗರವು ದೇಶದ ಉತ್ತಮ ನಾಗರಿಕರನ್ನು ಒದಗಿಸಿಕೊಟ್ಟಿದೆ; ಮುಂದೆಯೂ ಒದಗಿಸಿಕೊಡಬೇಕು. ಸದ್ವಿವೇಕವನ್ನು ಹೆಚ್ಚಿಸಿಕೊಳ್ಳುವಲ್ಲಿ ಮದ್ರಾಸ ನಗರವು ಸಮರ್ಥವಾಯಿತೆಂದರೆ, ಮಾನವತೆಯನ್ನುಳಿಸುವಲ್ಲಿ ಅದು ಪಾಲುಗೊಂಡಿತು ಎಂದು ಅರ್ಥ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರ ಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಸಿಟಿ ಬಸ್ಸಿನ ಟೈಪ್ಪು

(ಏನೇ ಸುಟದಿಂದ)

'ಟೊಂಟ' ಇಡುತ್ತಾನೆ. ಇದಕ್ಕೆ ಹೊಂಗುಟ್ಟಲು ಯಾವನಾದರೊಬ್ಬ ಬನವಣ್ಣ ಎದುರು ಸೀಟಿನಲ್ಲಿ ಇದ್ದೇ ಇರುತ್ತಾನೆ. ಅವನಲ್ಲಿರುವ ರಸ ಬುಗ್ಗೆಗಳಂತೂ ಅಪಾರ, ಅವುಗಳಲ್ಲಿ ಹೆಚ್ಚಿನವು ಅಶ್ಲೀಲವಾದರೂ ಆ ಕುರಿತು ಅವನಿಗೆ ಚಿಂತೆಯಿಲ್ಲ, ಕೆಲವೊಮ್ಮೆ ಅವನೆದುರು ಕಾಳಿದಾಸನೂ ಸಪ್ಪೆ.

ಸ್ವಲ್ಪ ಮುಂದೆ ಒಂದು ಇಬ್ಬರು ಮೂವರು ಟೀಚರ್‌ಗಳ ಗುಂಪು ಬಸ್ ಹತ್ತುತ್ತದೆ. ಅವರು ತಮ್ಮ ಪರಿಚಯದ ರಮೊಳನ್ನು ನೋಡಿ ನಿತ್ಯದಂತೆ ಮುಗುಳ್ನಗುತ್ತಾರೆ. ಹವೀದ್ ಅದರಲ್ಲಿ ಭಾಗ ಕೊಳ್ಳುತ್ತಾನೆ ಅವನಾಗಿಯೇ. ಇನ್ನಿನ್ನು ಶ್ರೀನಗರ ಹತ್ತಿರ ಲಂದಂತೆ ಹೈಸ್ಕೂಲು–ಕಾಲೇಜು ವಿದ್ಯಾರ್ಥಿಗಳ ಧಾಳಿಯೇ ಆರಂಭವಾಗುತ್ತದೆ. ಕೆಲವೊಮ್ಮೆ ಬಸ್ಸೆಂದರೆ "ಬ್ಲಾಕ್ ಹೋಲ್ ಆಫ್ ಕಲ್ಕತ್ತಾ", ವಾಗುತ್ತದೆ. ಕಂಡಕ್ಟರನಿಗೆ ಟಿಕೆಟ್ ಕೊಟ್ಟದ್ದು ನೆನಪಿಲ್ಲ; ದುಡ್ಡು ಕೊಂಡದ್ದು ಲೆಕ್ಕುವಿಲ್ಲ. ಕುಳಿತವರಿಗೆ ತಾವೆಲ್ಲಿದ್ದೇವೆ, ಎಲ್ಲಿಗೆ ಮುಟ್ಟಬೇಕಾಗಿದೆ ಎಂದರಿಯದು. ನಿಂತವರಿಗೆ ತಾವು ಯಾರ ಕಾಲಿನ ಮೇಲೆ ನಿಂತಿದ್ದೇವೆ, ತಮ್ಮವೊಣಕಾಲು ಯಾವ ಹುಡುಗಿಯ ಸೊಂಟವನ್ನು ನೋಯಿಸುತ್ತದೆ ಎಂದು ತಿಳಿದಿರುವುದಿಲ್ಲ.

ರಮೂ ಬ್ಯಾಂಕಿನಲ್ಲಿ ಟೈಪಿಸ್ಟ್. ಅವಳಿಗೆ ಬೇಕಾಗಿ ಡ್ರೈವರ್ ಬ್ಯಾಂಕಿನ ಎದುರೇ ಬಸ್ಸು ನಿಲ್ಲಿಸುತ್ತಾನೆ. ಹೇಗಾದರೂ ಸಾವರಿಸಿಕೊಂಡು ಆ ಗುಂಪಿನಿಂದ ಅವಳು ಪಾರಾಗುತ್ತಾಳೆ. ಅವಳಿಗೆ ದಾರಿ ಮಾಡಿ ಕೊಡುವುದು ಡ್ರೈವರನ ನಿತ್ಯದ ಕೆಲಸ.

"ನಾನು ರಮೊಳನ್ನು ಲವ್ ಮಾಡುತ್ತೀನೆ" ಎಂದು ಆತ ಘಂಟಾಘೋಷವಾಗಿ ಹೇಳುತ್ತಿದ್ದ. ಕಂಡ ಕಂಡಲ್ಲಿ ಸಿಕ್ಕ ಸಿಕ್ಕಲ್ಲಿ ಸುಮ್ಮನೆ ಮಾತಾಡಿಸುತ್ತಿದ್ದ. ಅವಳನ್ನು ಕಂಡರೆ ಸಾಕು, ಆತನಿಗೆ ಸ್ವರ್ಗವನ್ನು ಕಂಡಷ್ಟು ಸಂತೋಷ, ರಂಭೆಯನ್ನು ಕಾಣುವಷ್ಟು ಮೋಹ. ಬಾಯಿಯ ಕೊನೆಯ ವರೆಗೂ ಹಲ್ಲು ಬಟ್ಟು ಒಂದು ಮಾತು ಆಡದಿದ್ದರೆ ಅವನಿಗೆ ತೃಪ್ತಿಯಿಲ್ಲ. ಅವಳೊಂದೆರಡು ದಿನ ರಜೆ ಮಾಡಿದರಂತೂ ಹವೀದನ ಭಜೀತಿ ಹೇಳತೀರದ., "ಅವನ ಸಂಕಟ ನಿನಗೇ ಬಲ್ಲ." ಬಸ್ಸಿನಲ್ಲಿದ್ದವರೊಂದಿಗೆಲ್ಲಾ ಜಗಳ, ಉರಿ ನೋವೆ. ಕಂಡಕ್ಟರನಿಗೆ ಬೈಗಳ., ಬೇಕಾದಲ್ಲಿ ಬಸ್ ನಿಲ್ಲಿಸಲಾರ, ಹೀಗೆಲ್ಲಾ ಅವತಾರ.

ರಮೂ ಕೂಡಾ ನಾನು ನಿನ್ನನ್ನು ಲವ್ ಮಾಡುವುದಿಲ್ಲ ಎಂದು ಹೇಳಿಲ್ಲ, "ನಿನಗೆ ಒಂದು ದಿನ ಚಪ್ಪಲಿ ಪೂಜೆ ಮಾಡಲೆ ಬೇಕಾಗುತ್ತದೆ" ಎಂದು ಹೇಳುವ ಯೋಜನೆಯಲ್ಲಿದ್ದಳು, ಅಂತಹ ಸಂದರ್ಭ ಬರದಿರಲಿ ಎಂದು ಅವಳಿಚ್ಛೆ. ಅವನ "ಅವತಾರ"ಗಳನ್ನು ನೋಡಿದರೆ ಅವಳಿಗೆ ಮೈಯೆಲ್ಲಾ ಉರಿಯುತ್ತಿದ್ದರೂ ಹೊರಗೆ ತೋರಿಸಿಕೊಳ್ಳದೆ ಅವನ ಮಾತಿಗೆ ಬೇಕಾದ ಚಟಾಕಿ ಉತ್ತರವನ್ನು ಕೊಟ್ಟು ಮುನಿಸುವಳು. ಅವಳ ನಗು ಒತ್ತಾಯದ ನಗು. ಆದರೆ ನಮ್ಮ ಹವೀದನಿಗೆ ಅಷ್ಟು ಚಳವಾಳ ಮನಶ್ಶಾಸ್ತ್ರವೆಲ್ಲಿ?

ಬೆಳಿಗ್ಗೆ ಒಂಭತ್ತು ಘಂಟೆಗೆ ಶ್ರೀನಗರ ಕ್ಕೆ ಈ ಭರ್ಜರಿ ಘಂಟಾಘಂಟಿಯ ಟೈಪ್ಪು ಆದ ಮೇಲೆ ಬಸ್ಸು ಈ ಊರುಗಳ ಮಧ್ಯೆ ಹಲವಾರು ಬಾರಿ ಓಡಾಡುತ್ತದೆ. ಆದರೆ ಆ ಸವಾರಿಗಳಿಗೆ ಅಂತಹ ಪ್ರಾಮುಖ್ಯತೆಯಿಲ್ಲ, ಕಳೆಯಿಲ್ಲ, ಡ್ರೈವರೇ ಹೇಳುವಂತೆ 'ಮಜಾ' ಇಲ್ಲ. ಈ ಮಜಾ ಟೈಪ್ಪಿನ ಪುನರಾವೃತ್ತಿಯಾಗ ಬೇಕಾದರೆ ಸಂಜೆ ಬರಬೇಕು.

ಸಂಜೆ ಐದಕ್ಕೆ ಶ್ರೀನಗರದಿಂದ ಹೊರಡುವ ಬಸ್ಸಿಗೆ ಮನಸು ಹೊಸ ಮೆರಗು, ಜೀವಕಳೆ ಬರುತ್ತದೆ ಡ್ರೈವರನಿಗೆ ಹೊಸ ಸ್ಫೂರ್ತಿ. ಓಡಾಡಿ ಕಾಲು ನೋಯುತ್ತಿದ್ದರೂ ಕಂಡಕ್ಟರನಿಗೂ ಉತ್ಸಾಹ.

ಸಂಜೆಯ ಬಸ್ಸಿನ ಮುಂದೆ ಮುನಿಸಿಪಾಲಿಟಿ ವ್ಯಾಪಾರದಾರೂ ಸುಮ್ಮನೆ ಬಸ್ಸಿನಲ್ಲಿ ವಾಯು ಸೇವನೆಕ್ಕೆ ಎಡೆಯಿರುವುದಿಲ್ಲವಾದರೂ ಕೆಲವು ವಾಯುಸುಖಪುರುಷರು ನುಸುಳಿಕೊತ್ತಾರೆ ಮಕ್ಕಾ. ಬೆವರಿನಲ್ಲಿ ವಿಮಯತ್ತಾ ಪ್ರಯಾಣಿಕರು ನಿಂತಿದ್ದರೆ ಕೆಲವೊಮ್ಮೆ ನಮ್ಮ ಬಸ್ಸು ಅಲ್ಲೇ ಪುಸ್ತರ ಹೂಡುವುದೂ ಇನೆ. ಬಸ್ಸಿನ ತುಂಬಾ, ಕೈಯೊಂದೆಡೆ, ಕಾಲೊಂದೆಡೆ, ಶರೀರ ಒಂದೆಡೆ, ಸೀರೆಯೊಂದೆಡೆ ಎಂಬ ಅವಸ್ಥೆಯಲ್ಲಿರುವ ಪ್ರಯಾಣಿಕರು. ಮನುಷ್ಯರ ಎರಡು ವಾಲು ಕಟ್ಟುಗಳು, ಡಬ್ಬಿಗಳು. ಮಿನಿನ ಸುಗಂಧದೊಂದಿಗೆ ನೊಣಗಳು ಅದರೆಡೆಯಲ್ಲೂ ಹೊಗೆ ಬತ್ತಿ ಸೇದಿ ಉಳಿದವರನ್ನೂ ಸಾಯಿಸುವ ಧೂಪ.ಶಕಟರು! ಹೀಗೆ ಗಿಜಿ ಗಿಜಿಯಿಸ್ಸುತ್ತಿರಲು ಬಸ್ಸು ಹೊರಡುತ್ತದೆ.

ಇದರಿಂದಲ್ಲಿ ಟಿಕೆಟ್ ಎಕ್ಸ್‌ಟ್ರಾ ಕಂಡಕ್ಟರ್,ಕಬ್ಬಿಣದಬಳೆಗಳಿಂದಲಂಕೃತನಾದ ಜಾರುವ ಸರ್ಕಸ್ ವಾಲಗಂತೆ ಧುಮುಕುತ್ತಾನೆ ಯಾರ್ಯಾರದೋ ಕಾಲನ್ನು ತುಳಿಯುತ್ತಾನೆ. ಯಾರ್ಯಾರದೋ ಜೇಬ್ಗನ್ನು ತಿವಿಯುತ್ತಾನೆ. ಮಗುವಿದೋ ಕಾಲಿಲ್ಲದು ಹುಡುಗನ ಇಸ್ಕಿಯನ್ನು ಹಿಡಿದೂ ಇನ್ನಾವ ಪೆಕರ ಕಾಲೇಜು ಹುಡುಗಿಯ ಜೆಡ್ಡಿಗೆ ಒರಗಿ ನಿಂತು ಸ್ಟೇಟ್‌ಸೆಂಟ್ ಬರಿದುಮಾಡುತ್ತಾನೆ, ಕಲವರಿಂದ ಹಣ ಕೆಗದುಕೊಳ್ಳುತ್ತಾನೆ, ಟಿಕೆಟ್ ಇಲ್ಲ. "ಕೆಲವರಿಗೆ ,, ಟಿಕೆಟ್ ಕೊಡುತ್ತಾನೆ, ಹಣ ತೆಕ್ಕೊಳ್ಳುವುದಿಲ್ಲ.

ಈ ಉಸಿರು ಕಟ್ಟುವ ಪಟ್ಟಿಣೇತರದಿಂದ ಮುಲ್ಲಾ ಪ್ರಯೋಜಕರು ಸುಮ್ಮನಿರುವುದಿಲ್ಲ ಭೀವಣ ಪಾಕಶಾಲೆಯಂತೆ ಹೊಗೆಯೆಬ್ಬಿಸುತ್ತಾರೆ. ವ್ಯಾಪಾರಿಗಳು ಸಾಮಾನುಗಳ ಧಾರಣೆ, ಕಂಡಿಷನ್‌ಗಳ ಕುರಿತು ಚರ್ಚಿಸುತ್ತಿರುತ್ತಾರೆ. ವಿದ್ಯಾರ್ಥಿಗಳು ಲೆಪ್ಟು ...ಇಂಗ್ಲಿಷ್....ಬಯಲಾಜಿಗಳ ಕುರಿತು, ಮೂಸ್ಟ್ರುಗಳು ಇಂಕ್ರಿಮೆಂಟು, ಗಂಜಿ ವಿತರಣೆ ಇತ್ಯಾದಿಗಳ ಕುರಿತು ಟೀಚರುಗಳು ರಜೆ, ಮಕ್ಕಳು-ಮನೆ, ಗಂಡಂದಿರ ಕುರಿತು ಹರಟುತ್ತಿರುತ್ತಾರೆ.

ಬಸ್ಸು ಭಾರವನ್ನು ಕಳಕೊಳ್ಳುತ್ತಾ ಬರುತ್ತದೆ ಹರಿಪುರಕ್ಕೆ. ರಮೂ ದಾರಿಮಧ್ಯೆ ಇಳಿದು ಹೋಗುತ್ತಾಳೆ. ಅವಳ ಮೇಗುವಾಗ ತನ್ನಹೃದಯವನೇ ಹೋದಂತೆ ಡ್ರೈವರ್ ಹವೀದ್ ಕಳವಳಿಸುತ್ತಾನೆ. ನಾಳೆ ಎಂದು ಬರುವುದು ಎಂದು ಕಾತರಿಸುತ್ತಾನೆ.

ಆದರೆ ಎಲ್ಲರಲ್ಲಿಯೂ ಅವನ ಕುರಿತು ಇಷ್ಟೇ ಇದೆ. ಆ ಬಿ.ಕಾಂ. ಕುಡುಗ ಕಲ್ಲು ಮನೆಯ ಡಾಕ್ಟರ್ ನೋಡಿಯೂ ಆತ ಮುಗುಳ್ನಗುತ್ತಾನೆ. ಮತ್ತೊಂದು ಕಲ್ಲು ದಾಟಿ ಹಳ್ಳದ ಹುಡುಗಿಯೊಡನೆಕ್ಲಿಷ್ಟಕಾರಣವಾಗುತ್ತಾನೆ. ಪ್ರತಿ ದಿನವೂ ಟೀಚರು ತಪ್ಪದೆ ಬಯ್ಯುವಾಗಲೂ ಒಂದೊಂದು ವಿನೋದದ ಮಾತು ಆತ ಆವರನ್ನು ನಗಿಸುತ್ತಾನೆ. ಇವರೆ ಕಾಲೇಜು ಹುಡುಗಿಯರೆಂದೆ ಇವನಿಗೆ ಹೆಮ್ಮೆ ತಾನು ಹೆಮ್ಮೆ ಪಡಲು ಬೇಕಾದಷ್ಟು ಏನು ಜಾಸ್ತಿ ಮಾಡುತ್ತಾನೆ? ಎಂಬ ಸಂದೇಹ ಸಂಗಡ ಕೆಲವು ಮಂದಿಯಾದರೂ ಇವನ ಮೇಲೆ ಮರುಳಾಗಿದ್ದಾರೆ ಇವನಿಗೆ.

ಅವನಿಗೆ ಕಾಲೇಜಿನ ವಿದ್ಯಾರ್ಥಿಗಳೂ ಕೆಲವೊಮ್ಮೆ ಡಾಕ್ಟರ್ ಮಾಮಾರಿಗೆ ಬಿ ಆಟೋಸ್ಕೋಪ್ ಕಾರ್ಯಾಚರಿಸಿ, ಅದನ್ನು ಪರೀಕ್ಷಿಸಿ ಬ್ಯಾಂ, ಟಿಕೆಟ್‌ಬೇಕಾ ಎಂದಾಗ ಅವನ ಕೈಗೆ ಕೊಟ್ಟು ಅತ್ಯಂತ ಕಠೋರ ಮುಖಚರ್ಯೆಯಿಂದ ಎಮ್ಮೆ ಸಿಟಿಸ್ಕ್ಯಾನ್ ಅಗತ್ಯವಾಗಿ ಕಂಡುಕೊಂಡಾಗ ಡ್ರೈವರನೊಡನೆ ಮಾತನಾಡುವ ಸಂದರ್ಭವನ್ನು ಕೊಡುತ್ತಾ ಒಂದೊಂದು ಹೊಸ ಯೋಚನೆಯಾಗ ಬೆಂದು ಮಾತ. ಆಮತ್ತಾನೆ ಬಿಡಿವಾಗಿಯೂ ಮುಂದೆ ಡ್ರೈವಾಗಿರಿ. ಮಾಡುವಾಗಿಯೂ ಮಾಡಿಸ್ಕೊಳ್ಳುವಾಗಲೂ ಪೆಟ್ರೋಲ್ ಕಳೆದಂತೆ ಡ್ರೈವಾಗ ಎಡಕ್ಕೆ ಎಷ್ಟಾಗಿದೆ ಎಂಬ ಸೂಚನೆಯನ್ನು ಕೊಡುತ್ತಾನೆ. ಇದ

NAVAYUGA, UDIPI.
REGD. NO.BG. 176

7-6-1962

LICENSE NO. 31
Licensed to Post without Prepayment

ಕೇರಳ ಸರಕಾರದ

ಉಪ ಮುಖ್ಯ ಮಂತ್ರಿ—ಆರ್. ಶಂಕರ್

"ಶಿಕ್ಷಣ ಮಂತ್ರಿಗಳೂ ಆಗಿರುವ ಮುಖ್ಯ ಮಂತ್ರಿ ಶ್ರೀ ಪಟ್ಟಂಥಾನು ಪಿಳ್ಳೆಯವರೊಡನೆ ಕೂಡಿ ಕೆಲಸ ಮಾಡುವುದು ದಿನದಿಂದ ದಿನಕ್ಕೆ ಕಠಿಣವಾಗುತ್ತಿದೆ"—ಇದು ಕೇರಳದ ಉಪ ಮುಖ್ಯ ಮಂತ್ರಿ ಶ್ರೀ ಆರ್. ಶಂಕರರ ಹೇಳಿಕೆ. ಕೇರಳದಲ್ಲಿ ಖಾಸಗಿ ಕ್ಷೇತ್ರದಲ್ಲಿ ಲೋವರ್ ಎಲಿಮೆಂಟರಿ ಶಾಲೆಗಳನ್ನು ತೆರೆಯಲು ವಿರೋಧವಿದ್ದ ಪಟ್ಟಂಥಾನು ಪಿಳ್ಳೆಯವರ ನೀತಿಯನ್ನು ಕುರಿತು ಉದ್ಗಾರಿಸಿದ ಉದ್ಗಾರವಿದು. ಮುಖ್ಯ ಮಂತ್ರಿಯವರೂ ಉಪ ಮುಖ್ಯ ಮಂತ್ರಿಯವರೂ ಈ ಶಾಲೆಯ ಪ್ರಶ್ನೆಯನ್ನು ಎತ್ತಿಕೊಂಡು ಮಂತ್ರಿ ಮಂಡಳಿಯನ್ನು ಒಡೆಯುವುದರಲ್ಲಿ ಆಸಕ್ತರೇನಿಸುವುದಿಲ್ಲ. ಆದರೆ, ಇವರಿಬ್ಬರ ನೀತಿಯೂ ವಿರುದ್ಧವಿದೆ. ಕೇರಳ ವಿಧಾನ ಸಭಾ ಕಾಂಗ್ರೆಸ್ ಪಕ್ಷವು ಖಾಸಗಿ ಕ್ಷೇತ್ರದಲ್ಲಿ ಪ್ರಾಥಮಿಕ ಶಾಲೆಗಳನ್ನು ತೆರೆಯಲು ಅನುಮತಿ ನೀಡಬೇಕೆಂದು ಗೊತ್ತುವಳಿ ಸ್ವೀಕರಿಸಿದರೆ, ಪ್ರಸ್ತಾವ ಪಕ್ಷವು ಇದಕ್ಕೆ ಪ್ರತಿಕೂಲ ಪ್ರಸ್ತಾಪವನ್ನೇ ಸಮರ್ಥಿಸಿತು. ಶ್ರೀ ಶಂಕರರು, ಬಹುಮತದ ಪಕ್ಷ ಕಾಂಗ್ರೆಸ್ ಆದುದರಿಂದ, ಅದರ ಗೊತ್ತುವಳಿಯು ಬಹುಮತದ್ದೆಂದೂ ಅದನ್ನು ಕಾರ್ಯರೂಪಕ್ಕೆ ತಂದೇ ತೀರುವೆನೆಂದೂ ಹೇಳುತ್ತಾರೆ. ಆದರೆ, ಮುಂದಿನ ಯೋಜನೆಯನ್ನು ರೂಪಿಸುವುದಕ್ಕೆ ಮೊದಲು ಸದ್ಯದಲ್ಲಿಯೇ ನವದೆಹಲಿಗೆ ತೆರಳಲಿರುವುದರಿಂದ, ಅಲ್ಲಿ ಈ ವಿಚಾರವಾಗಿ ಕಾಂಗ್ರೆಸ್ ಹೈಕಮಾಂಡಿನೊಡನೆ ಚರ್ಚಿಸುವೆನೆಂದೂ ಅನ್ನುತ್ತಾರೆ. ಹಾಗಾಗಿ ಅನಪೇಕ್ಷಿತವಾಗಿಯಾದರೂ ಈ ಪ್ರಶ್ನೆ ಉಲ್ಬಣಾವಸ್ಥೆಗೇರುವುದು ಹಾಲಿನಷ್ಟು ಬೆಳ್ಳಗಾಗಿದೆ.

ಕೇರಳದ ಹರಿಜನರ ಉಚ್ಚತಮ ಶ್ರೇಣಿಯಲ್ಲಿ ೧೯೦೯ರಲ್ಲಿ ಜನಿಸಿದ ಬಾಲಕ ಆರ್. ಶಂಕರರು ಶ್ರೀ ನಾರಾಯಣ ಗುರುಗಳ ಪ್ರಭಾವಕ್ಕೊಳಗಾಗಿ ಹರಿಜನರಿಗೆ ದೇವಾಲಯ ಪ್ರವೇಶ ಮಾಡುವ ಅಧಿಕಾರವನ್ನು ಒದಗಿಸಿಕೊಡುವ ಆಂದೋಲನದಲ್ಲಿ ಭಾಗವಹಿಸಿದರು. ಈ ಆಂದೋಲನದಿಂದಾಗಿ ಭಾರತದಲ್ಲಿಯೇ ಮೊತ್ತಮೊದಲಿಗೆ, ತಿರುಕೊಚ್ಚಿಯಲ್ಲಿ ಹರಿಜನರಿಗೆ ದೇವಾಲಯ ಪ್ರವೇಶದ ಅಧಿಕಾರವು ದೊರೆಯಿತು.

೧೯೨೮ರಲ್ಲಿ ತಿರುವಾಂಕೂರಿನ ಸಾಮಾನ್ಸ್ ಕಾಲೇಜಿನಿಂದ ಮೊದಲನೆಯ ಶ್ರೇಣಿಯಲ್ಲಿ ಬಿ. ಎಸ್‌ಸಿ. ಉತ್ತೀರ್ಣರಾದರು, ರಸಾಯನ ಶಾಸ್ತ್ರದಲ್ಲಿ ಸಂಶೋಧನೆ ನಡೆಸುವ ಅಭಿಲಾಷೆ ಅವರಲ್ಲಿದ್ದರೂ ಆವಶ್ಯಕ ಸೌಕರ್ಯಗಳ ಅಭಾವದಿಂದ ಈ ಆಸೆಯನ್ನು ಕೈಬಿಡಬೇಕಾಯಿತು. ೧೯೩೧ರಲ್ಲಿ ಡಿಲ್ಲಿಯಲ್ಲಿ ಐ. ಸಿ. ಎಸ್. ಪರೀಕ್ಷೆಯಲ್ಲಿ ಕುಳಿತು, ಎಲ್ಲಾ ವಿಷಯಗಳಲ್ಲಿಯೂ ಉತ್ತಮ ಗುಣಗಳನ್ನು ಪಡೆದರಾದರೂ ಆಯ್ಕೆಗೊಳ್ಳಲಿಲ್ಲ. ಈಗ ಪೋಸ್ಟ್ ಮಾಸ್ಟರ್ ಜನರಲ್ ಆಗಿರುವ ಶ್ರೀ ವಿ. ಶಂಕರರೂ ಇವರೊಡನೆ ಈ ಪರೀಕ್ಷೆಗೆ ಹಾಜರಾಗಿದ್ದರು. ಶ್ರೀ ವಿ. ಶಂಕರರ ಹೆಸರನ್ನು ಓದಿದ ಹಲವಾರು ಮಿತ್ರರು ಶ್ರೀ ಆರ್. ಶಂಕರರಿಗೆ ಶುಭಾಶಯಗಳನ್ನು ಕಳಿಸಿದ್ದೂ ಇತ್ತು.

ಶ್ರೀ ನಾರಾಯಣಧರ್ಮ ಪರಿಪಾಲಯಯೋಗದ ಮೂಲಕ ಶಿವಗಿರಿಯಲ್ಲಿ ನಡೆಸಲಾಗುತ್ತಿದ್ದ ಒಂದು ಇಂಗ್ಲಿಷ್ ಶಾಲೆಯಲ್ಲಿ ಕೆಲವು ಸಮಯದ ವರೆಗೆ ಮುಖ್ಯೋಪಾಧ್ಯಾಯರಾಗಿದ್ದು ಶ್ರೀ ಶಂಕರರು ಕಾನೂನನ್ನು ಕಲಿಯತೊಡಗಿದರು. ಅದನ್ನು ಮುಗಿಸಿದ ಬಳಿಕ ಕ್ವಿಲೋನ್ ಜಿಲ್ಲೆಯಲ್ಲಿ ವಕಾಲತ್ತನ್ನು ಪ್ರಾರಂಭಿಸಿದರು ಆದರೆ, ೧೯೩೯ರಲ್ಲಿ ಸ್ವಾತಂತ್ರ್ಯ ಆಂದೋಲನದಲ್ಲಿ ಭಾಗವಹಿಸತೊಡಗಿದ ನಂತರ ತಮ್ಮ ವೃತ್ತಿಯನ್ನಿವರು ಬಿಟ್ಟು ಬಿಡಬೇಕಾಗಿ ಬಂತು. ಅಂದಿನಿಂದ ೧೯೪೨ರ ವರೆಗೆ ಅನೇಕ ಬಾರಿ ಜೇಲುವಾಸವನ್ನೂ ಅನುಭವಿಸಬೇಕಾಯಿತು. ಇದೇ ಅವಸರದಲ್ಲಿ ಅವರ ವಿವಾಹವೂ ನೆರವೇರಿತು.

ಹೆಚ್ಚಿನ ಕಾಂಗ್ರೆಸಿಗರ ಮೇಲಾದಂತೆ ಶ್ರೀ ಶಂಕರರ ಮೇಲೆಯೂ ಮಹಾತ್ಮಾ ಗಾಂಧೀಜಿಯವರ ಪ್ರಭಾವ ಬಿತ್ತು. ೧೯೪೦ರಿಂದ ೪೪ರ ವರೆಗೆ ಅವರು ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಯಾಗಿದ್ದರು. ಆನಂತರ ಕೇರಳದಲ್ಲಿ ಶಿಕ್ಷಣ ಪ್ರಚಾರ ಮತ್ತು ಸಮಾಜ ಸುಧಾರಣೆಯ ಕಾರ್ಯಗಳಲ್ಲಿ ಅವರು ನಿಮಗ್ನರಾದರು.

೧೯೪೮ರಲ್ಲಿ ರಾಜ್ಯ ವಿಧಾನ ಸಭೆಯ ಸದಸ್ಯರಾಗಿ ರಾಜ್ಯದ ವತಿಯಿಂದ ಭಾರತದ ಘಟನಾ ಸಮಿತಿಯನ್ನು ಪ್ರತಿನಿಧಿಸಿದರು. ೧೯೫೨ರ ಸಾರ್ವತ್ರಿಕ ಚುನಾವಣೆ ಮತ್ತು ೧೯೫೪ರ ಉಪ ಚುನಾವಣೆಗಳಲ್ಲಿ ವಾಮ ಪಕ್ಷೀಯರಿಂದ ಪರಾಜಿತರಾದ ಆರ್. ಶಂಕರರು ಕೆಲಕಾಲ ರಾಜಕೀಯದಿಂದ ದೂರ ಸರಿದು ನಿಂತರು. ಅದರೆ, ಕೇರಳ ವಿಮೋಚನಾಂದೋಲನದ ವೇಳೆ ಇವರು ಮರಳಿ ಸಕ್ರಿಯವಾಗಿ ರಾಜಕೀಯ ಕ್ಷೇತ್ರಕ್ಕೆ ದುಮುಕಿದರು. ಈ ಆಂದೋಲನವು ಸಫಲಗೊಳ್ಳುವುದರಲ್ಲಿ ಮನವಿಟ್ಟು ದುಡಿದ ಕೆಲವರಲ್ಲಿ ಇವರೂ ಒಬ್ಬರು. ಹೊಸ ಚುನಾವಣೆಗಳು ನಡೆದ ಬಳಿಕ ವಿಧಾನ ಸಭಾ ಕಾಂಗ್ರೆಸ್ ಪಕ್ಷದ ನಾಯಕರಾಗಿ ಚುನಾಯಿತರಾದ ಇವರು ಉಪ ಮುಖ್ಯ ಮಂತ್ರಿಯೂ ಆದರು.

ಶ್ರೀ ಶಂಕರರು ರಾಜಕೀಯ ಧುರೀಣರು ಮಾತ್ರವಲ್ಲ, ಮಲೆಯಾಳಂ ಸಾಹಿತ್ಯದ ಪ್ರಕಾಂಡ ಪಂಡಿತರು, ವಿಮರ್ಶಕರು; ಪ್ರಥಮ ಶ್ರೇಣಿಯ ಪಾಠ ಶಾಸ್ತ್ರಿಗಳೂ ಹೌದು. "ನನ್ನ ಮಟ್ಟಿಗೆ ರಾಜಕೀಯದಂತೆಯೇ ಪಾಠ ಕಲೆಯೂ ಆಹ್ಲಾದಕಾರಿಯಾಗಿದೆ. ಎನ್ನುತ್ತಾರೆ, ಇವರು. ತೋಟಗಾರಿಕೆ, ಆಟ, ಯಕ್ರಾನಿಷಯಕ ಪುಸ್ತಕಗಳು, ಜೀವನ ಚರಿತ್ರೆಗಳು ಇವರ ಅವಕಾಶದ ಬಹುಭಾಗವನ್ನು ಕಬಳಿಸುತ್ತವೆ.

ಕೇರಳದಲ್ಲಿ ತಲೆದೋರಿದ ಮಂತ್ರಿಮಂಡಳದ ಬಿಕ್ಕಟ್ಟು ಬಗೆಹರಿಸುವಲ್ಲಿ ಯಾರು ತಮ್ಮ ನೀತಿಯನ್ನು ಬಿಟ್ಟುಕೊಡುವರೋ ನೋಡಬೇಕು.

ಅಮೆರಿಕೆಯ ಉಪಾಧ್ಯಕ್ಷ ಜಾನ್ಸನರನ್ನು (ಮಧ್ಯೆ) ಪಶ್ಚಿಮ ಜರ್ಮನಿಯ ಮೇಯರ್ ವಿಲ್ಲಿ ಬ್ರಾಂಡ್‌ಟ್ ಮತ್ತು ಕರ್ನಲ್ ಗ್ಲೋವನ್ ಜಾನ್ಸರವರು ಭೇಟ್ಟಿಯಾದಾಗ ತೆಗೆದ ಚಿತ್ರವಿದು.

ಪಾಕ್ ಪತ್ರಿಕೆಗಳ ಭೀಕರ ಆಟೋಪ

(೧ನೇ ಪುಟದಿಂದ)

ಭೌಮಾಧಿಕಾರಕ್ಕೆ ಚ್ಯುತಿ ತಂದೊಡ್ಡುವ ಎಂತಹ ನಿರ್ಣಯವನ್ನಾದರೂ ಅದು ವಿರೋಧಿಸುತ್ತದೆ; ಪಾಕಿಸ್ತಾನವು ತನ್ನ ಮೇಲೆ ಆಕ್ರಮಣ ಮಾಡಿದರೆ ಮಾತ್ರ ಅದು ಸುಮ್ಮನಿರಲಾರದೆಂದು ಈ ಮೊದಲೇ ಹಲವು ಬಾರಿ ವ್ಯಕ್ತಪಡಿಸಿದೆ. ಕಾಶ್ಮೀರದ ಬಗೆಗೆ ಭಾರತದ ನಿಲುಮೆಯು ಅತಿದೃಢವಾಗಿದೆ. ಇದನ್ನು ಪ್ರಶ್ನಿಸುವಂತಹ ಯಾವುದೇ ಮಾತುಕತೆಗೆ ಅದು ಎಂದೆಂದಿಗೂ ಒಪ್ಪುವುದಿಲ್ಲ. ಸಂಯಕ್ತ ರಾಷ್ಟ್ರ ಸಂಘದ ಗೊತ್ತುವಳಿಯನ್ನು ಮೀರಿ ಪಾಕಿಸ್ತಾನವೇ ಕಾಶ್ಮೀರದಲ್ಲಿ ಆಕ್ರಮಣ ನಡೆಸಿ, ಅತ್ಯಾಚಾರವೆಸಗಿದೆ. ಅಂತಹ ಪಾಕ್ ಸರಕಾರದಿಂದ ಬರಬಹುದಾದ ಎಂತಹುದೇ ಆಹ್ವಾನವನ್ನು ಸ್ವೀಕರಿಸಿ, ತನ್ನ ಸ್ವಾತಂತ್ರ್ಯವನ್ನು, ಸಾರ್ವಭೌಮತೆಯನ್ನು ರಕ್ಷಿಸಲು ಭಾರತವು ಸದಾ ಸಿದ್ಧವಿದೆ. ಪಾಕಿಸ್ತಾನವು ಅಪಪ್ರಚಾರ ನಡೆಸಿ ಸತ್ಯವನ್ನು ಅಡಗಿಸಲು ಬಯಸಿದರೆ, ಅದು ಅದರ ಮೂರ್ಖತನ ಮತ್ತು ದುರಾಚಾರಗಳನ್ನು ಪ್ರದರ್ಶಿಸುತ್ತದೆ. ಇದನ್ನು ಸೀಟೋ ಮತ್ತು ಸೆಂಟೋ ರಾಷ್ಟ್ರಗಳೂ ಮನಗಂಡಿವೆಯೆಂಬುದರಿಂದಲೇ ಅವು ಪಾಕಿಸ್ತಾನದ ಬಗ್ಗೆ ಸ್ವಪ್ನ ರೂಪದ ಸಹಾನುಭೂತಿಯನ್ನು ತೋರಿಸುವುದಿಲ್ಲ. ತನ್ನ ತಪ್ಪುಗಳನ್ನು ದೊಡ್ಡ ದೊಡ್ಡ ಮಾತುಗಳನ್ನಾಡಿ ಮುಚ್ಚಿಡಲು ಹವಣಿಸುವ ಪಾಕ್ ಹಂಚಿಕೆಯು ತಾನು ಮೊಸರು ತಿಂದು ಆಡಿನ ಮುಖಕ್ಕೆ ಸವರಿದ ಕುತಂತ್ರಿ ನರಿಯ ಯೋಚನೆಯಂತೆ. ಕೆಲವರನ್ನು ಕೆಲವು ಕಾಲ ವಂಚಿಸಬಹುದು; ಆದರೆ, ಎಲ್ಲರನ್ನೂ ಎಲ್ಲ ಕಾಲದಲ್ಲಿಯೂ ವಂಚಿಸುವುದು ಸಾಧ್ಯವಿಲ್ಲ. ಕಳೆದ ಹದಿನಾರು ವರ್ಷಗಳಿಂದ ತನ್ನ ನಾಗರಿಕ ಪ್ರಜೆಗಳನ್ನೇ ವಂಚಿಸುತ್ತ ಬಂದಿರುವ ಪಾಕ್ ಅಧಿಪತಿಗಳು ಇತರರನ್ನೂ ಮಂಕರೆಂದು ತಿಳಿದುಕೊಂಡರೆ ಅದು ಯೂರ ತಪ್ಪು? ಪಾಕಿಸ್ತಾನಕ್ಕೆ ಭಾರತದೊಡನೆ ಸಮರಸವೇ ಬೇಕಾಗಿದ್ದರೆ, ಪ್ರಧಾನಿ ನೆಹರು ಇತ್ತಿದ್ದ ಆಹ್ವಾನವನ್ನು ಸ್ವೀಕರಿಸಿ ಪರಸ್ಪರ ಸ್ನೇಹಮಯ ವಾತಾವರಣದಿಂದ ಪ್ರಶ್ನೆಯನ್ನು ಇತ್ಯರ್ಥಗೊಳಿಸಬಹುದಿತ್ತು. ಅದಕ್ಕಾಗಿ ಮಧ್ಯಸ್ಥಗಾರರು ಬೇಕೆಂದು ಹೇಳುತ್ತ ಬರಬೇಕಾಗಿಲ್ಲ. ಈಗಾಗಲೇ ಉರಿಯುತ್ತಿರುವ ಬೆಂಕಿಗೆ ಮತ್ತೂ ಮತ್ತೂ ತುಪ್ಪವೆರೆಯುವ ಪಾಕ್ ನೀತಿಯಿಂದ ಪರಿಸ್ಥಿತಿಯೆಂದಿಗೂ ತಿಳಿಯಾಗದು; ಪಾಕಿಸ್ತಾನದ ಮೊಂಡು ನೀತಿಯನ್ನು ಎದುರಿಸಲು ಭಾರತವಾದರೂ ಬಳೆ ತೊಟ್ಟು ಕೂತಿರುವುದಿಲ್ಲ. ಅದೂ ಸಂದರ್ಭವನ್ನು ಪ್ರತೀಕ್ಷಿಸುತ್ತಿದೆಯೆಂದರೆ ಅದರ ಅಪರಾಧವಲ್ಲ.

—·—

"ನಚಿಕೇತ"ರ
ಇನ್ನೊಂದು ನವೀನ ಕಾದಂಬರಿ—
ಋಣ ಯಾತ್ರೆ
ಇದೀಗ ಪ್ರಕಟವಾಗಿದೆ.
ಬೆಲೆ ರೂ. 1-50 ನ. ಪೈಸೆ.
ಮೊದಲು ಪ್ರಕಟವಾದ ಕಾದಂಬರಿ
ಭಾವಾರ್ಚನೆ
ಬೆಲೆ ರೂ. 1-25 ನ. ಪೈಸೆ.
ಪ್ರತಿಗಳು ಸಿಗುವ ಸ್ಥಳಗಳು:—
ನವಯುಗ ಪ್ರೆಸ್, ಉಡುಪಿ.
ನವಭಾರತ ಬುಕ್ ಡಿಪೊ, ಉಡುಪಿ.

Edited Printed & Published by K. H. Shetty, at the Navayuga Press, Udipi, S. India.

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ಸಂಪುಟ ೪೧ ಸಂಚಿಕೆ ೪೦ | ಉಡುಪಿ 14—6—1962 ಗುರುವಾರ | Vol. 41 No. 40

ನಿಮ್ಮ ಯಾವತ್ತೂ ಮುದ್ರಣ ಕೆಲಸಗಳಿಗೆ ದಯಮಾಡಿ ವಿಚಾರಿಸಿರಿ: ನವಯುಗ ಪ್ರೆಸ್, ಉಡುಪಿ

ವಿದ್ಯಾರ್ಥಿಗಳಿಗೆ ಮತ್ತು ವಯಸ್ಕರಿಗೆ ಅತ್ಯಪಯೋಗೀ ಪುಸ್ತಕ ಸುಲಭದಲ್ಲಿ ಇಂಗ್ಲಿಷ್ (ಆಂಗ್ಲ ಸ್ವಯಂಬೋಧಿನಿ) ನವಭಾರತ ಪುಸ್ತಕ ಭಂಡಾರ ಉಡುಪಿ

ಭಾರತ ಜನತಂತ್ರಕ್ಕೆ

ಅಮೆರಿಕೆಯ ಶರ್ತಬದ್ಧ ಸಹಾಯನೀತಿ

ಶಾಂತಿ ಮತ್ತು ಅಹಿಂಸೆಯ ತಳಹದಿಯಲ್ಲಿ ತನ್ನ ವಿದೇಶ ನೀತಿಯನ್ನು ರೂಪಿಸಿ ಅದನ್ನು ಅನುಷ್ಠಾನಕ್ಕೆ ತರಲು ಚಡಪಡಿಸುತ್ತಿರುವ ಭಾರತದ ಗಡಿಯ ಪ್ರದೇಶವು ದಿನದಿಂದ ದಿನಕ್ಕೆ ಅಪತ್ತಿಗೆ ತುತ್ತಾಗುತ್ತಿರುವುದು ತೀರ ವಿವಂಚನೆಗೆ ಕಾರಣವಿನಿಸಿದೆ. ಸೀಮಾ ಪ್ರದೇಶದ ಬಗ್ಗೆ ಚೀನೆ ಮತ್ತು ಪಾಕಿಸ್ತಾನಗಳು ನಡೆಸುತ್ತಿರುವ ಕುತಂತ್ರ ಮತ್ತು ಅನುಸರಿಸುತ್ತಿರುವ ಕುನೀತಿಗಳಿಂದಾಗಿ, ಭಾರತವು ತನ್ನ ಸಭ್ಯತನವನ್ನು ಕಳೆದುಕೊಂಡು ತನ್ನ ವಿದೇಶನೀತಿಯನ್ನು ಪರಿವರ್ತಿಸಿಕೊಳ್ಳಬೇಕಾಗಿ ಬಂದಿದೆಯೆಂದು ಕೆಲವು ವಿದೇಶೀಯರು ಬಗೆದಿದ್ದಾರೆ ಆದರೆ, ಭಾರತ ಸರಕಾರವು ತನ್ನ ಸಾರ್ವಭೌಮತೆಗೆ ಅಹ್ವಾನವೀಯುವಂತಹ ಯಾವುದೇ ಆಕ್ರಮಣವನ್ನು ಇನ್ನುವೇ ಮಧ್ಯಸ್ಥಿಕೆ ಹಾಗೂ ಒಡಂಬಡಿಕೆಯನ್ನು ಶಕ್ತಿ ಸರ್ವಸ್ವವನ್ನೂ ಕೇಂದ್ರೀಕರಿಸಿ ವಿರೋಧಿಸುವುದು; ಅವಶ್ಯಕವೆನಿಸಿದರೆ, ಅದು ಸೈನಿಕ ಕಾರ್ಯಾಚರಣೆಯನ್ನೂ ಕೈಗೊಳ್ಳುವುದು ಎಂದು ನಮ್ಮ ಪ್ರಧಾನ ಮಂತ್ರಿಗಳೂ ಸಂರಕ್ಷಣಾ ಮಂತ್ರಿಗಳೂ ಪದೇ ಪದೇ ಸ್ಪಷ್ಟವಾಗಿ ಹೇಳುತಿದ್ದಾರೆ.

ಲಡಾಖದಲ್ಲಿ ಸೈನ್ಯ ಜಮಾವಣೆ

ಲಡಾಖ ಪ್ರದೇಶದಲ್ಲಿ ಚೀನೀಯರು ಆಕ್ರಮಣ ನಡೆಸುತ್ತ ಮುಂದುವರಿದಿದ್ದನ್ನು ಮನಗಂಡ ಭಾರತ ಸರಕಾರವು ಚೀನ—ಭಾರತ ಸೀಮಾ ಪ್ರದೇಶವನ್ನು ಸಂರಕ್ಷಿಸಿಕೊಳ್ಳುವ ಉದ್ದೇಶದಿಂದ ದುಸ್ತರವೆನಿಸಿದರೂ ತನ್ನ ಸೈನಿಕ ಶಕ್ತಿಯನ್ನು ಒಗ್ಗೂಡಿಸ ತೊಡಗಿದೆ. ಸಂದರ್ಭವೊದಗಿ ಒಂದರೆ, ಚೀನ ಆಕ್ರಮಿಸಿದ ಭಾರತದ ನೆಲವನ್ನು ಮುಕ್ತಗೊಳಿಸುವುದೇ ಇದರ ಉದ್ದೇಶವಿದೆ. ಆದರೆ, ಭಾರತದ ಈ ಶಕ್ತಿ ಕೇಂದ್ರೀಕರಣದಿಂದ ಹೆದರಿದ ಚೀನವು ಅಲ್ಲಿ ತಾನು ಅಕ್ರಮವಾಗಿ ಆಕ್ರಮಿಸಿರುವ ಭೂಭಾಗದಲ್ಲಿ ತನ್ನ ಶಕ್ತಿಯನ್ನು ಹೆಚ್ಚಿಸುವುದರಲ್ಲಿ ವ್ಯಸ್ತವಾಗಿದೆ. ಅದು ಅಲ್ಲಿ ರಸ್ತೆ ನಿರ್ಮಿಸುವ ಕೆಲಸವನ್ನು ಎಂದೋ ಮುಗಿಸಿದ್ದು, ಈಗ ಸೈನ್ಯ, ಟೆಂಕ್‌ಗಳನ್ನು ಬಹಳವಾಗಿ ಜಮೆ ಮಾಡುತ್ತಿದೆ. ಇದರ ಜತೆಗೆ ಸೌಹಾರ್ದದ ಮಾತುಗಳನ್ನು ಆಡುತ್ತ, ಭಾರತವು ಚೀನೀ ಪ್ರದೇಶದಿಂದ ಸೈನ್ಯವನ್ನು ಹಿಂದೆಗೆಯಬೇಕೆಂದು ಗಂಭೀರವಾದ ಎಚ್ಚರಿಕೆ ಕೊಡುತ್ತಿದೆ. ಚೀನೀಯ ಪ್ರದೇಶದಲ್ಲಿ ಪರ್ವತ ಕಂದರಗಳು ದುರ್ಗಮವಾಗಿಲ್ಲದಿರುವುದರಿಂದ ಅದು ತನ್ನ ಸೇನಾ ರಾಶ್ಯಗಳನ್ನು ಬಲಪಡಿಸುವುದು ಆಶ್ಚರ್ಯವಲ್ಲ. ಆದರೆ, ಭಾರತದ ಪ್ರದೇಶದಲ್ಲಿನ ಪಾಟೆಗಳು ಅಸಾಮಾನ್ಯವೆನಿಸಿದರೂ ಅವಶ್ಯಕತೆ ತೋರಿಬಂದೆ, ತನ್ನ ಹೆಚ್ಚಿನ ಸೇನೆ ಮತ್ತು ಟ್ಯಾಂಕುಗಳನ್ನು ಒಯ್ಯಲು ಭಾರತವು ಸಿದ್ಧವಾಗಿಯೇ ನಿಂತಿದೆ. ಹೊರ ಭಾಗದಿಂದ ಬರುವ ಯಾವುದೇ ಆಕ್ರಮಣವನ್ನು ಎದುರಿಸುವ ಶಕ್ತಿ ನಮ್ಮ ದೇಶ ಕೈರುವುದು. ಇಂತಹ ಸೈನಿಕ ಶಕ್ತಿಯನ್ನು ಹೆಚ್ಚಿಸುವುದು ಭಾರತಕ್ಕೆ ಅಪ್ರಿಯವಾಗಿರುವುದಾದರೂ ಪರಿಸ್ಥಿತಿಗಳ ಒತ್ತಡದಿಂದ ಹಾಗೆ ಮಾಡಲೇ ಬೇಕಾಗಿ ಬಂದಿದೆ ಸೋವಿಯಟ್ ರಶ್ಯದಿಂದ ಮಿಗ್ ವಿಮಾನಗಳನ್ನು ಕೊಂಡುಕೊಳ್ಳುವ ವಿಚಾರವು ಮುಂದೆ ಬಂದುದಾದರೂ ಇದೇ ಕಾರಣದಿಂದ ಎಂದುಹೇಳಿ ಬಹುದು.

ಟಿಬೇಟಿನಲ್ಲಿ ಚುನಾವಣೆ

ಟಿಬೇಟಿನ್ನು ಸಂಪೂರ್ಣವಾಗಿ ತಮ್ಮ ವಶದಲ್ಲಿ ತಂದುಕೊಂಡಿರುವ ಚೀನೀಯ ಸಾಮ್ರಾಜ್ಯವಾದಿಗಳು ಆಲ್ಲಿ ಕಮ್ಯುನಿಸ್ಟ್ ಮೂದಲೆಯ ಚುನಾವಣೆಗಳನ್ನು ನಡೆಸುವ ಹವಣಿಕೆಯಲ್ಲಿರುವರು ಈ ಪದ್ಧತಿಯಂತೆ ಅಧಿಕೃತ ಹುರಿಯಾಳುವಿಗೆ ಪ್ರತಿ ಸ್ಪರ್ಧೆಯನ್ನು ನಿಲ್ಲಿಸುವ ಅಧಿಕಾರವಿರುವುದಿಲ್ಲ ಚೀನದ ಸಾರ್ವ ಭೌಮಾಧಿಕಾರದಲ್ಲಿರುವ ಟಿಬೇಟಿನ ಸಂಬಂಧದಲ್ಲಿ ಭಾರತನೇನೂ ಹೇಳ ಬಾರದು; ಹೇಳುವುದೂ ಇಲ್ಲ. ಆದರೆ, ಇಂತಹ ವ್ಯವಸ್ಥೆಯಿಂದಾಗಿ ಭಾರತದ ಎಲ್ಲೆಗಳ ಭದ್ರತೆಗೆ ವಿಘ್ನೆ ಬರುವುದು ಅಸಂಭವವೇನಲ್ಲ. ಪಾಕಿಸ್ತಾನದೊಡನೆ ಸೀಮೆ ಒಡಂಬಡಿಕೆಯನ್ನು ಮಾಡಿಕೊಳ್ಳುವುದನ್ನು ಚೀನವು ಸಮರ್ಥಿಸಿಕೊಂಡಿದೆ; ಈ ಬಗ್ಗೆ ಭಾರತವು ವ್ಯಕ್ತಪಡಿಸಿದ ಪ್ರತಿಭಟನೆಯನ್ನು ಸೇಕಿಂಗ್ ಸರಕಾರವು ಗಮನಕ್ಕೆ ತಂದುಕೊಂಡಿಲ್ಲ ಬದಲು ತನ್ನನ್ನೇ ಸಮರ್ಥಿಸಿಕೊಂಡಿದೆ. ವಾಸ್ತವಿಕವಾಗಿ ಪಾಕಿಸ್ತಾನಕ್ಕೂ ಚೀನಕ್ಕೂ ಯಾವ ಸೀಮೆಯೂ ಇರುವುದಿಲ್ಲ ಪಾಕ್ ಆಕ್ರಮಿತ ಕಾಶ್ಮೀರದೊಂದಿಗೆ ಮಾತ್ರ ಈ ಸೀಮೆಯಿರುವುದು ಕಾಶ್ಮೀರದ ವೇಲೆ ಪಾಕಿಸ್ತಾನಕ್ಕೆ ಯಾವ ಅಧಿಕಾರವೂ ಇಲ್ಲದಿರುವುದರಿಂದೆ, ಆ ದಿನ್ನು ಕಬಳಿಸಲು ಪಾಕ್ ನಾಯಕರು ಚೀನಾದ ಸಹಕಾರ ಯಾಚಿಸುತ್ತಿರುವಂತೆ ಭಾಸವಾಗುತ್ತದೆ

ಪಾಕ್ ಸೈನಿಕ ಶಕ್ತಿ

ಅಮೆರಿಕೆಯ ಸೈನಿಕ ಸಹಾಯದಿಂದ ಏರಾಡುತ್ತಿರುವ ಪಾಕಿಸ್ತಾನವು ಭಾರತದ ಮುಂದೆ ವಿಷ ಕಾರುತ್ತಿದೆಯೆಂಬ ದು ಸರ್ವ ವಿದಿತವಿದೆ ಕಾಶ್ಮೀರದ ಪ್ರಶ್ನೆಯನ್ನು ಕೆದು ಜಗಿ ಜಗಿದು ನಜ್ಜುಗುಜ್ಜಾಗಿದ್ದರೂ ಮತ್ತೂ ಮತ್ತೂ ಎತ್ತುತ್ತಿದೆ, ಅ ವ್ಯಕ್ತ ವೆದರಿಕೆಯನ್ನು ಹಾಕುತ್ತಿದೆ ಇತ್ತೀಚೆಗೆ ಅದು ಅಮೆರಿಕೆಯ ಸಹಾಯದಿಂದ ಸುಸಜ್ಜಿತವೆನ್ನಿಸಿದ ಸೈನಿಕ ಶಕ್ತಿಯ ದ್ಯೋತಕವಾಗಿದೆ. ಆಧುನಿಕ ಶಸ್ತ್ರಾಸ್ತ್ರಗಳ ಸಂಗ್ರಹದಿಂದ ಕೂಡಿದ ಪಾಕಿಸ್ತಾನದೊಡನೆ ಹೊಚ್ಚಹೊಸತಲ್ಲದ ಯುದ್ಧೋಪಕರಣಗಳಿಂದ ಕೂಡಿದ ಭಾರತವು ಅನಿವಾರ್ಯತೆ ಒದಗಿದಾಗ ಅಸ್ತವ್ಯಸ್ತತೆಯಲ್ಲೇ ಬೇಕಾದರೆ, ಅದು ತನ್ನ ಸೇನೆಯನ್ನೂ ಅದರ ಉಪಕರಣಗಳನ್ನೂ ಹೆಚ್ಚಿಸ ಬೇಕಾಗುತ್ತದೆ ಸಿಂಟೋ ಸೀಟೋ ಒಡಂಬಡಿಕೆಗಳಲ್ಲಿ ಸಿಕ್ಕಿಕೊಂಡ ಪಾಕಿಸ್ತಾನಕ್ಕೆ ಸಂಬಂಧಿತ ರಾಷ್ಟ್ರಗಳಿಂದ ಬೇಕೆಂಬಷ್ಟು ಸಹಾಯವು ಲಭಿಸಬಹುದಾದರೂ ಭಾರತವು ಇಂತಹ ಸಹಾಯವನ್ನು ಅಷ್ಟು ಸುಲಭದಲ್ಲಿ ಗಳಿಸುವಂತಿಲ್ಲ; ಗಳಿಸುವ ಆಸೆಯನ್ನೂ ಇಟ್ಟುಕೊಂಡಿಲ್ಲ.

ಸಹಾಯದ ಮೇಲೆ ರಾಜಕೀಯ

ಸೋವಿಯತ್ತಿನಿಂದ ಮಿಗ್ ವಿಮಾನಗಳನ್ನು ಕೊಂಡುಕೊಳ್ಳುವ ಆಲೋಚನೆ ದಿಲ್ಲಿಯಲ್ಲಿ ಬಂದೊಡನೆಯೇ ಅಮೆರಿಕೆ

(೧೨ನೇ ಪುಟದಿಂದ)



ಹವಾಮಾನವನ್ನು ಪರೀಕ್ಷಿಸುವ ಅಮೆರಿಕನ್ ವಿಮಾನದ ಯಂತ್ರವೊಂದು ಪರಿಶೀಲನೆಯ ನೆಲ್ಲಿಯಲ್ಲಿ

ಗೃಹಿಣಿಯರಿಗೆ ತಿಲಕವೆ ಭೂಷಣವಲ್ಲವೆ ?
ಫರ್ನಿಚರುಗಳಲ್ಲೆಲ್ಲ 'ಜೀರಾ' ತಿಲಕಪ್ರಾಯವೆಂಬುದನ್ನು ನೀವು ತಿಳಿದಿಲ್ಲವೆ ?
ಗೃಹಾಲಂಕಾರಕ್ಕಾಗಿ— ಆಫೀಸು, ಆಸ್ಪತ್ರೆಗಳ ಓರಣಕ್ಕಾಗಿ— ತಾಳಿಕೆ ಬಾಳಿಕೆಯಲ್ಲಿ, ರಚನೆ ವೈವಿಧ್ಯತೆಯಲ್ಲಿ ದೇಶ ವಿಖ್ಯಾತವಾದ 'ಜೀರಾ' ಉಕ್ಕಿನ ಫರ್ನಿಚರುಗಳನ್ನೆ ಉಪಯೋಗಿಸಿರಿ ವಿಚಾರಿಸಿರಿ, ಯೂ, ತೋ ರೂಮನ್ನು ಸಂದರ್ಶಿಸಿರಿ.

ಶಾಸ್ತ್ರಿ & ಕೊ
ಹಂಪನಕಟ್ಟೆ,
ಮಂಗಳೂರು—1

ಧರ್ಮದಲ್ಲಿ ಸುಖವರಸಿಕೊಂಡ

ರಾಜನರ್ತಕಿ ಚಾರುಬಾಲಾ

ಶ್ರೀ ಎಸ್. ಎಂ. ಶೆಟ್ಟಿ, ಶಿಮುಂಜೆಪೆರಾರಿ.

ಸಂಧ್ಯಾ ಸಮಯದಲ್ಲಿ ಮಗಧ ರಾಜಧಾನಿ ಪಾಟಲೀಪುತ್ರವು, ದೀಪ ಮಾಲಿಕೆಗಳಿಂದ ಸುಶೋಭಿತವಾಗಿತ್ತು. ಎಲ್ಲೆದೆಯೂ ಆನಂದ ವಾತಾವರಣ ಹರಡಿತ್ತು. ನಗರ ಮಧ್ಯದಲ್ಲಿರುವ 'ಮಯೂರ ಭವನ'ವು ವರ್ಣಾಲಂಕೃತ ದೀಪಗಳಿಂದ ಕಂಗೊಳಿಸುತ್ತಿತ್ತು, ಸೌಂದರ್ಯದಲ್ಲಿ ಅರಮನೆಯನ್ನು ಮೀರಿಸುವ ಈ ವಿಶಾಲ ಸೌಧದಲ್ಲಿ ಸೌಂದರ್ಯಾಧಿ ದೇವತೆ ರಾಜನರ್ತಕಿ ಚಾರುಬಾಲ ವಾಸಿಸುತ್ತಿದ್ದಳು. ಸಮಸ್ತ ಸಾಮಂತರೂ ಧನಿಕರೂ ಅವಳ ಸ್ನೇಹ ಕಟಾಕ್ಷಕ್ಕಾಗಿ ಪರಿತಪಿಸುತಿದ್ದರು, ನೃತ್ಯ ಗಾಯನ ಮತ್ತು ವಾದನ ಕಲೆಗಳಲ್ಲಿ ಚಾರುಬಾಲಾಳು ಅದ್ವಿತೀಯಳಾಗಿದ್ದಳು. ಪ್ರತಿ ದಿವಸವೂ ಸಾಯಂಕಾಲ ನಗರದ ಸಾಮಂತರ ಹಾಗೂ ಧನಿಕ ಶ್ರೇಷ್ಠಿಗಳ ಮುಂದೆ ಅವಳ ನೃತ್ಯ ನಡೆಯುತ್ತಿತ್ತು.

ಶರತ್ ಪೂರ್ಣಿಮೆಯ ದಿನ ಹಾಗೂ ಆಕೆಯ ಹುಟ್ಟು ಹಬ್ಬವಾದುದರಿಂದ ಮಯೂರ ಭವನವು ವಿಶೇಷ ರೀತಿಯಲ್ಲಿ ಅಲಂಕೃತವಾಗಿತ್ತು. ಸಂಧ್ಯಾ ಸಮಯದಲ್ಲಿ ಸೂರ್ಯಾಸ್ತವಾಗುವ ಮೊದಲೇ ಸಭಿಕರೆಲ್ಲರೂ ಮಯೂರ ಭವನಕ್ಕೆ ಸಾಲುಗಟ್ಟಿ ಬರತೊಡಗಿದ್ದರು. ಜನನಿಕೆಯು ಹಿಂದಿರುವ ವಿಲಕ್ಷಣ ವಸ್ತುವನ್ನು ಕಾಣಲು ಜನರು ಹಾತೊರೆಯುತ್ತಿದ್ದರು. ನಿಧಾನವಾಗಿ ಮೃದಂಗದ ಧ್ವನಿಯೊಡನೆ ಯವನಿಕೆಯು ಮೇಲೇರಿತು.

ಒಂದು ಕ್ಷಣದ ನಂತರ ಚಾರುಬಾಲಾಳು ಪ್ರವೇಶಿಸಿ ಕಂಕಮಲಗಳನ್ನು ಜೋಡಿಸಿ ಮುಂದ ಮುಗುಳ್ನಗೆಯೊಡನೆ ನೃತ್ಯವಾರಂಭಿಸಿದಳು. ಶರತ್ ಪೂರ್ಣಿಮೆಯ ಮಹಿಮೆಯನ್ನು ಹಾಡುತ್ತಾ ಅವಳು ನರ್ತಿಸಿದಳು. ಅವಳ ಗುರುಗಳು ಮೃದಂಗವನ್ನೂ ಅವಳ ಸಖಿ ಮಾಧವಿಯು ಸಿತಾರವನ್ನೂ ಬಾರಿಸುವುದರಲ್ಲಿ ಪಳ್ಳೀಸರಾಗಿದ್ದರು. ನೃತ್ಯವು ಒಂದು ಮಧುರ ಮಂದ ಲಯದಿಂದ ಆರಂಭವಾಗಿ, ಮೆಲ್ಲ ಮೆಲ್ಲನೆ ಮಧ್ಯ ಲಯದಲ್ಲಿ, ಕೊನೆಗೆ ಧೃತಲಯದಲ್ಲಾಗ ತೊಡಗಿತು. ಅವಳ ಅಂಗಾಂಗಗಳು ಕಂಪಿಸುತ್ತಿದ್ದವು. ಅವಳ ದೇಹ ವಿನ್ಯಾಸ ಮತ್ತು ಕಾಲಿನ ಗರಗಳು ಮನೋರಮವಾಗಿದ್ದವು. ವಿವಿಧ ವರ್ಣ ವಸ್ತ್ರಗಳಿಂದ ಅಲಂಕೃತಳಾದ ಆ ಕಿಶೋರಿ ನರ್ತಕಿಯು ಅಪ್ಸರೆಗೂದ ಊರ್ವಶಿಯನ್ನೂ ನಾಚಿಸುವಂತೆ ನರ್ತಿಸುತ್ತಿದ್ದಳು. ಚಾರುಬಾಲಳು ಮೂರು ಸಲ ರಂಗ ಮಂಚಕ್ಕೆ ಪರಿಕ್ರಮಣ ಮಾಡಿ, ಒಳಗೆ ಹೊರಟು ಹೋದಳು. ಕರತಲ ಧ್ವನಿಯಿಂದ ಇಡೀ ಸಭಾಭವನವೇ ಕಂಪಿಸಿತು.

ಕೆಲ ಕ್ಷಣಗಳ ನಂತರ ಚಾರುಬಾಲಳು ಪುನಃ ರಂಗಮಂಚವನ್ನು ಪ್ರವೇಶಿಸಿ ವೀಣೆ ಬಾರಿಸಲು ಕುಳಿತಳು. ಅವಳ ಕಂಠ ಮಧಾರತೆಗೆ ಎಲ್ಲರೂ ಮುಗ್ಧರಾಗಿದ್ದರು. ಕೆಲವು ಶ್ರೋತ್ರುಗಳು ಮತ್ತ ಗಜದಂತಾಗಿದ್ದರು. ಅರ್ಧ ತಾಸಿನ ನಂತರ ಸಭಾ ವಿಸರ್ಜನೆಯಾಯ್ತು. ಎಲ್ಲರೂ ಚಾರುಬಾಲಳಿಗೆ ಹುಟ್ಟುಹಬ್ಬದ ಅಭಿನಂದನ ಸಲಿಸಿ ಹೊರಟುಹೋದರು ಕೆಲವು ಶ್ರೀಮಂತರು ಅಮೂಲ್ಯ ಉಪಹಾರಗಳನ್ನು ಕೊಟ್ಟರು.

ಚಾರುಬಾಲಳು ರಂಗಮಂಚದ ಒಂದು ಬದಿಯಲ್ಲಿ ಬಂದು ಕುಳಿತಳು ಮಾಧವಿಯು ಆಕೆಯ ಕಾಲಿನಿಂದ ನೂಪುರ ತೆಗೆಯ ತೊಡಗಿದಳು. ಪ್ರತಿಹಾರಿಯು ಬಂದು ಹೊರಗೆ ಓರ್ವ ಭಿಕ್ಷು ನಿಂತಿರುವುದಾಗಿ ತಿಳಿಸಿದನು. ಚಾರುಬಾಲಳು ತನ್ನ ಕುತ್ತಿಗೆಯಿಂದ ಒಂದು ಮುತ್ತಿನ ಹಾರತೆಗೆದು ಮಾಧವಿಯೊಡನೆ.—"ನನ್ನ ಕಡೆಯಿಂದ ಭಿಕ್ಷುವಿಗೆ ನೀಗಿದನ್ನು ಕೊಟ್ಟು ಬಿಡು ಮಾಧವೀ" ಎಂದಳು.

ಮಾಧವಿ ಹೊರಗೆ ಬಂದು ಭಿಕ್ಷುವಿನೊಡನೆ—"ನನ್ನ ಒಡತಿಯಾದ ರಾಜನರ್ತಕಿ ಚಾರುಬಾಲಳ ಆಶಯಂತೆ ತಾವೀ ಹಾರವನ್ನು ಭಿಕ್ಷಾರೂಪದಲ್ಲಿ ಸ್ವೀಕರಿಸಿರಿ!" ಎಂದಳು.

ವಿಷ್ಣು ಗುಪ್ತನೆಂಬ ಆ ಬೌದ್ಧ ಭಿಕ್ಷುವು ಆಶ್ಚರ್ಯ ಹಾಗೂ ವ್ಯಂಗ್ಯದಿಂದ—"ಓಹ್....ಇದು ನರ್ತಕಿಯ ಮನೆ....? ಈ ಭವನದ ದ್ವಾರದಲ್ಲಿ ನಿಲ್ಲುವುದೂ ಪಾಪಕರ...'ನಿನ್ನ ಈ ತುಚ್ಛ ಆ ಭೂಷಣಗಳ ಆಶೆ ಭಿಕ್ಷುವಿಗಿಲ್ಲವೆಂದು ನಿನ್ನೊಡತಿಗೆ ತಿಳಿಸು. ಓರ್ವ ಅತಿಥಿಯ ಸ್ವಾಗತವನ್ನು ಮಾಡಲಾರದಷ್ಟು ನಿನ್ನ ಒಡತಿಯ ಅಭಿಮಾನಿ ಹಾಗೂ ಅಸಭ್ಯಳಾಗಿದ್ದಾಳೆ...! ಈ ದ್ವಾರದಲ್ಲಿ ಮನೆಯ ದಾಸಿಯಿಂದ ಸಿಕ್ಕಿದ ಸಮ್ಮಾನಕ್ಕಾಗಿ ನಾನವರಿಗೆ ತುಂಬಾ ಕೃತಜ್ಞನಾಗಿದ್ದೇನೆ..."

ಮಾಧವಿಯು ಈ ವ್ಯಂಗ್ಯೋಕ್ತಿಯನ್ನು ತಡೆಯಲಾರದೆ—"ಭಿಕ್ಷುಕ, ಚಾರುಬಾಲಳು ರಾಜ ನರ್ತಕಿ ಎಂದು ಪ್ರಾಯಶಃ ನಿಮಗೆ ತಿಳಿದಿಲ್ಲ, ನನ್ನೊಡತಿಗಿಂತಲೂ ತಾವು ಹೆಚ್ಚಿನ ಅಭಿಮಾನಿಗಳಾಗಿದ್ದೀರಿ." ಬಡ ಬಡಿಸುತ್ತಿದ್ದಳು ಆದರೆ ಅಲ್ಲಿ ಯಾರೂ ಶ್ರೋತ್ರುಗಳಿರಲಿಲ್ಲ.

ಭಿಕ್ಷುವು ಉಚ್ಚ ಸ್ವರದಲ್ಲಿ ಮಾಡಿದ ವ್ಯಂಗ್ಯೋಕ್ತಿಯನ್ನು ಕೇಳಿ, ಏನೋ ಗಲಾಟೆಯಾಯ್ತೆಂದು ಚಾರುಬಾಲಳು ತತ್‌ಕ್ಷಣ ತಿಳಿದು ಕೊಂಡಳು. ಕ್ರೋಧದಿಂದ ಅವಳ ಅಂಗಾಗಗಳು ಕಂಪಿಸುತ್ತಿದ್ದುವು, ಅವಳ ಮುಖ ಆರಕ್ತವಾಗಿತ್ತು. ಲಲಾಟದಮೇಲೆ ಸಾಲುಗಟ್ಟಿದ ಬೆವರ ಹನಿಗಳು ಮುಕ್ತಗಳಂತೆಸುಶೋಭಿತವಾಗಿದ್ದುವು. ಅದನ್ನು ಒರಸುತ್ತಾ ಅವಳು ದ್ವಾರದೆಡೆಗೆ ಬಂದಳು. ಭಿಕ್ಷುವಿನ ಪ್ರತಿವಾಕ್ಯಗಳೂ ಅವಳ ಹೃದಯವನ್ನು ಶೂಲದಂತೆ ಇರಿದಿದ್ದವು. ಅವಳಿಗೆ ಭಿಕ್ಷುವಿನ ಪಾದುಕೆಯ ಸ್ವರ ಕೇಳಿ ಬಂತು. ಭಿಕ್ಷುವು ಹೋಗುತ್ತಿದ್ದಾನೆಂದರಿತೂ ಅವಳೂ ಬಾಣದಂತೆ ತೀವ್ರವಾಗಿ ಹೊರಗೋಡಿ ಬಂದಳು. ಭಿಕ್ಷುಕನು ತೀವ್ರವಾಗಿ ಹೋಗುತ್ತಿದ್ದನು. ಅವನ ಮುಖಮಂಡಲದ ಮೇಲೆ ಅವಳ ದೃಷ್ಟಿ ಬಿತ್ತು. ಒಂದು ಕ್ಷಣ ಅವಳು ಸ್ತಬ್ಧಳಾದಳು. ಇಂದಿನವರೆಗೂ ಅವಳು ಇಂಥ ಸೌಂದರ್ಯ ಪರಿಪೂರ್ಣ ನವಯುವಕನನ್ನು ಕಂಡಿರಲಿಲ್ಲ. ಒಂದು ಕ್ಷಣ ಅವಳು ನಿಶ್ಚಲಳಾದಳು. ಮರುಕ್ಷಣವೇ ಅವಳ ಆತ್ಮಸಮ್ಮಾನವು ಎದ್ದು ನಿಂತಿತು.

ಅವರಿಬ್ಬರೂ ಒಳಗೆ ಬಂದರು. ಚಾರುಬಾಲ ನಿಜವಾಗಿಯೂ ಅಭಿಮಾನಿಯಾಗಿದ್ದಳು. ಪಾಟಲೀ ಪುತ್ರನೇ ಅವಳನ್ನು ಸನ್ಮಾನಿಸುತ್ತಿತ್ತು. ಅವಳು ನೃತ್ಯದಲ್ಲೂ ಮಾತ್ರವಲ್ಲ ಗಾಯನ ವೀಣಾ ವಾದನದಲ್ಲಿಯೂ ಅದ್ವಿತೀಯಳಾಗಿದ್ದಳು.....ಸಮಸ್ತ ಮಗಧ ಸಾಮ್ರಾಜ್ಯದಲ್ಲಿಯೂ ಸೌಂದರ್ಯದಲ್ಲಿ ಅವಳನ್ನು ಮೀರಿಸುವವರು ಇನ್ನೊಬ್ಬರಿಲ್ಲ. ಇಂದು ಭಿಕ್ಷುವನ್ನು ನೋಡಿ ಅವಳ ಮನಸ್ಸು ಚಂಚಲವಾಯ್ತು.

ಮಂಚ ಮಲ್ಲಿನ ಮೃದು ಶಯ್ಯೆಯು ಇಂದು ಚಾರುಬಾಲಳಿಗೆ ಮುಳ್ಳಿನ ಹಾಸಿಗೆಯಂತೆ ಭಾಸವಾಯ್ತು. ಅವಳ ಮನೋಪಟಲಧಲ್ಲಾಗುವ ವಿಚಾರ ವ್ಯಂದ್ವಗಳಿಂದ ನಿದ್ರಿಸಬೇಕೆಂದರೂ ನಿದ್ರೆಯು ಅವಳಿಗೆ ಅಲಭ್ಯವಾಯ್ತು. "ಓಹ್, ಇದು ನರ್ತಕಿಯ ಮನೆಯೇನು...? ಈ ದ್ವಾರದ ಎದುರಿನಲ್ಲಿ ನಿಲ್ಲುವುದು ಪಾಪಕರ....! ,, ಎಂಬ ಬಿಕ್ಷುವಿನ ಮಾತುಗಳು ಅವಳ ಕರ್ಣಗಳಲ್ಲಿ ಗುಂಯ್‌ಗುಡುತ್ತಿದ್ದುವು.

"ನಿನ್ನ ತುಚ್ಛ ಆ ಭೂಷಣಗಳ ಆಶೆ ಈ ಭಿಕ್ಷುಕನಿಗಿಲ್ಲವೆಂದು ನಿನ್ನೊಡತಿಗೆ ಹೇಳು!,, ಮುಂದೆ ಅವಳಿಂದ ಯೋಚಿಸಲಾಗಲಿಲ್ಲ ನಾನು ನಿಜವಾಗಿಯೂ ಅಭಿಮಾನಿಯೇ? ಎಂದು ತನಗೆ ತಾನೇ ವಿಚಾರಿಸಿದಳು ಚಾರುಬಾಲ. 'ಹಾಂ, ಹೌದು, ನೀನು ಪೂರ್ಣ ಅಭಿಮಾನಿ' ಎಂದು ಕರ್ಕಶವಾಗಿ ನುಡಿಯುತವಳ ಹೃದಯ.

ಚಾರುಬಾಲಳ ನೇತ್ರದ್ವಯಗಳಿಂದ ಅಶ್ರುಧಾರೆ ಹರಿಯತೊಡಗಿತು. ಅಶ್ರುಬಿಂದುಗಳಲ್ಲಿಯೂ ಅವಳಿಗೆ ಬೌದ್ಧಭಿಕ್ಷುವಿನವದನಾರವಿಂದವು ಗೋಚರಿಸಿತು ಒಂದು ಕ್ಷಣ ಅವಳು ತನ್ನ ಸಮಸ್ತ ದುಃಖ ಉದ್ವೇಗಗಳನ್ನೂ ಮರೆತು ಆ ಮುಖದ ಸೌಂದರ್ಯ ರಸಪಾನ ಮಾಡತೊಡಗಿದ

(೧೧ನೇ ಪುಟ ನೋಡಿರಿ)

ಅಮೃತಾಂಜನ
ಎಲ್ಲಾ ನೋವುಗಳಿಗೆ ಸಿದ್ಧಔಷಧಿ
ಎಲ್ಲಾಕಡೆ ಸಿಕ್ಕುತ್ತದೆ
ಸಿದಿತ ಮತ್ತು ನೋವುಗಳಿಗೆ
50 ವರ್ಷ ಪ್ರಾಯದ
ಪ್ರಾಣಿಕ ಔಷಧಿ

ಬ್ಯಾಂಕ್ ಖಾತೆಯನ್ನು ಯಾರು ತೆರೆಯಬಹುದು?

ಬ್ಯಾಂಕ್ ಖಾತೆ ತೆರೆಯಲು, ತಮಗೆ ಅಸಾಧ್ಯವೆನಿಸುವ ನಿಬಂಧಗಳಿವೆಯೆಂದು ಹಲವರು ಭಾವಿಸುತ್ತಾರೆ. ಇದೊಂದು ತಪ್ಪು ಭಾವನೆ. ದಿನಕೂಲಿ ಪಡೆವವನು ಕೂಡಾ ಬ್ಯಾಂಕಿನಲ್ಲಿ ಚಿಕ್ಕ ಉಳಿತಾಯ ಖಾತೆಯನ್ನು ತೆರೆಯಬಹುದು. ಇಂದಿನ ದಿನಗಳಲ್ಲಿ ಅದು ಅವಶ್ಯವೂ ಇದೆ. ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ಎಲ್ಲರಿಗೂ ಏಕಪ್ರಕಾರದ ಸೌಜನ್ಯ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕ್ಷನಡ.

ESTD. 1921 ಸ್ಥಾಪನೆ

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್.ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಕವಲುದಾರಿ—ಕೆಂಪು ದೀಪ

ಕನ್ನಡ ರಂಗ ಭೂಮಿಯ ಕುರಿತು

ಸುಬಾಸ

ಹಿರಿಯಕ್ಕನಿಗೆ ಸ್ವಲ್ಪ ಅಪಚಾರವೆಸಗಿದೆನೇನೊ ಎಂದನಿಸುತ್ತದೆ. ಕಿರಿಯಳ ಕುರಿತು ಹೇಳುವ ಮೊದಲು, ಹಿರಿಯಳ ವಿಷಯದಲ್ಲಿ ಬರೆಯಬೇಕಿತ್ತು. ತಾನು ಬಡವಿ, ಕೊನೆಯಬಿರೆಳೆಯುತ್ತಿದ್ದೇನೆ, ಎಂದ ಮಾತ್ರಕ್ಕೆ ಅನಾದರವೇ, ಎಂದನ್ನಿಸಬಹುದು, ಆಕೆಗೆ. ಯಾವ ಅಪರಾಧಕ್ಕೂ ಕ್ಷಮೆ ಎಂಬುದನ್ನು ಜೋಡಿಸಿದರೆ, ಇಂದಿನ ದಿನಗಳಲ್ಲಿ ಅದು ಕ್ಷಮ್ಯವೆನಿಸುವ ಸಂದರ್ಭಗಳೇ ಹೆಚ್ಚು. ಅಂತೆಯೇ ಕ್ಷಮೆ ಕೇಳಿ ಹಿರಿಯಕ್ಕನಿಗೊಂದು ಪತ್ರ ಬರೆದಿದ್ದೇನೆ. ಪತ್ರ ಇಲ್ಲಿದೆ. ಬೇಕಾಗಿದ್ದರೆ ನೀವೂ ಓದಿ ನೋಡಿ.

ಅಕ್ಕಯ್ಯ—

ನಿನಗೆ ಬೇಸರವಾಗಿದೆಯೆಂದು ನಾನು ಬಲ್ಲೆ. ದಿನನಿತ್ಯ ನಿನ್ನ ದುರವಸ್ಥೆಗಾಗಿ ಕಣ್ಣೀರು ಮಿಡಿಯುವದು ಇದೀಗ ನಿನ್ನ ಕೆಲಸವಾಗಿದೆ ಎಂಬುದೂ ನನಗೆ ತಿಳಿದಿದೆ. ನಿನ್ನ ಈ ಪಾಡನ್ನು ಕಂಡು ನನಗೇನೂ ಬೇಸರವಾಗುವದಿಲ್ಲ ವ್ಯಥೆಯೂ ಆಗುವದಿಲ್ಲ. ಇನ್ನೂ ನೀನು ಬದುಕಿ ಉಳಿದಿರುವಿಯಲ್ಲ, ಅದೇ ಆಶ್ಚರ್ಯದ ಸಂಗತಿ. ಸಿನೇರವೂಳ ಬಗ್ಗೆ ನಿನಗಿರುವ ಮತ್ಸರವನ್ನು ಕಂಡು ಮಾತ್ರ ನನಗೆ ಕೆಡುಕೆನಿಸುತ್ತದೆ. ಅವಳ ಕುರಿತು ಏನಾದರೂ ಅಂದಲ್ಲಿ ನೀನೇಕೆ ಸಿಟ್ಟುಗೊಳ್ಳಬೇಕು? ಅವಳ ಸ್ಥಾನದಲ್ಲಿ ನೀನಿಲ್ಲವೆಂದೇ? ಅಥವಾ ಆಕೆಯಿಂದಲೇ ನೀನಿಷ್ಟು ಅವನತಿಯ ಮಟ್ಟಕ್ಕಿಳಿದೆಯೆಂದೆ?

ನೋಡಮ್ಮ, ಆಕೆಯಿಂದಾಗಿ ನಿನ್ನ ಪ್ರಧಾನ ಕಡಿಮೆಯಾಯಿತು ಎನ್ನುವ ಮಾತು ಎಷ್ಟು ಸಹಜವೋ, ನಿನ್ನ ಕಲಾರಾಧಕರೇ ನಿನ್ನನ್ನು ಈ ನರಕದತ್ತ ತೂರಿಬಿಟ್ಟರು ಎಂಬ ಮಾತು ಕೂಡ, ಅದಕ್ಕಿಂತಲೂ ನಿಚ್ಚಳವಾಗಿ ಹೊಳೆಯುವ ಸತ್ಯ. ನಿನ್ನ ಕಲಾಭ್ಯಾಸಿಗಳೇ ಅವರು? ಅಲ್ಲವೆ ಕಲಾಭಾಸಿಗಳೇ? ಇದೇ ಈಗ ನಿರ್ದಿಷ್ಟವಾಗಿ ಹೇಳಲಾಗದ, ಉಭಯ ಸಂಕಟಕ್ಕೀಡು ಮಾಡುವ ವಿಷಯ. ಅವರ ಕುರಿತು ನೀನೇ ಏಕೆ ಅನ್ನಲೊಲ್ಲೆ? ಹತ್ತವರಿಗೆ ಹೆಗ್ಗಣ ಮುದ್ದು ಎಂದೇ? ಕೀಳು ಮನೋರಂಜನೆಯಿಲ್ಲದೆ ನಾಟಕವೇ ಇಲ್ಲ! ಸಿನೆಮಾ ಸಂಗೀತವೇ ಈ ನಾಟಕಗಳ ಸಂಗೀತದ ಬಂಡವಾಳ! ಇನ್ನು ಪ್ರೇಮ ಸಂಭಾಷಣೆಗಳಂತೂ ನಿನಗೇ ಪ್ರೀತ್ಯರ್ಥ. ಈ ನಿನ್ನ ಕಲಾತಪಸ್ವಿಗಳನ್ನು ಕೊರಳಿಗಪ್ಪಿಕೊಳ್ಳಬೇಕೆ?

ಚಲನ ಚಿತ್ರದ ಬಗ್ಗೆ ನನಗೆಷ್ಟು ಆದರವಿದೆ ಎನ್ನುವದನ್ನು ನೀನು ತಿಳಿದವಳೇ. ನಿನ್ನ ಮನೆಗೆ ಬರುವಾಗ ನನ್ನಲ್ಲಿರುವ ಭಕ್ತಿ, ಪವಿತ್ರ ಗುಣಗಳ ಬಗ್ಗೆ ಕೂಡಾ ನಿನಗೆ ಸಂಶಯ-ನಿರಲಿಕ್ಕಿಲ್ಲ. ಆದರೆ ಈಗಂತ ನನ್ನಲ್ಲಿ ಅಂತಹ ಭಾವನೆ ಉಳಿಯುತ್ತಿಲ್ಲ. ನಿನ್ನ ಮಕ್ಕಳ ಕಲ್ಯಾಣ ಗುಣಗಳನ್ನು ನೋಡುತ್ತ—ಅವರು ನಿನ್ನ ಆರಾಧನೆಯನ್ನು ಮಾಡುತ್ತಿರುವ ರೀತಿಯನ್ನು ನೋಡುತ್ತ— ನಿನ್ನತ್ತ ನೋಡುವದೂ ಮಹಾ ಪ್ರಯಾಸದ ಕೆಲಸವೆಂದು ತೋರುತ್ತಿದೆ. ಅವರ ಸಾಧನೆಯೋ! ಅವರ ತಪಶ್ಚರ್ಯೆಯೊ! ಒಂದೆರಡು ಬಾರಿ ರಂಗಭೂಮಿ ಏರಿದರೆಂದರೆ, ಅವರೇ ನಾಟಕಗಳನ್ನು ಬರೆಯುವಷ್ಟರ ನಿಪುಣರಾಗುತ್ತಾರೆ! (ಕಲಾರಾಧಕರಲ್ಲವೇ ಅವರು ಹುಟ್ಟು ಕಲಾರಾಧಕರು! ಅವರ ನರನಾಡಿಗಳಲ್ಲಿ ಸ್ಫೂರ್ತಿ ವಾಹಿನಿಯಾಗಿ ನೀನು ಹರಿಯುತ್ತಿರುವೆ. ಅಲ್ಲ?)ಬರೆಯುತ್ತಾರೆ, ಬರೆದುದನ್ನು ಆಡುವವರು ಬೇಡ ಎಂಬುದನ್ನೂ ಗಮನಿಸದೆ. (ಅವರು ಬರೆದುದು ಅವರ ಕೃತಿ. ಇಂದಲ್ಲದಿದ್ದರೆ ಅವರು ಸತ್ತ ಬಳಿಕವಾದರೂ ಪ್ರದರ್ಶಿಸಲ್ಪಡುತ್ತವೆ ಎಂಬ ಭರವಸೆ ಅವರಿಗೆ.) ಆಡಲು ಯಾರೂ ಮುಂದೆ ಬರದಿದ್ದರೆ ತಮ್ಮದೇ ಗುಂಪು-ಕಟ್ಟಿಕೊಂಡು, ನಿನ್ನನ್ನು ಮೆರೆಸಲೆತ್ನಿಸುತ್ತಾರೆ. (ಮೂದರ ಮೈಸೂರಿನ ರಾಜಕಾರಣಿಗಳು ಇವರಿಂದಲೇ ಪಾಠ ಕಲಿದಿದ್ದಾರೇನೊ?) ಯಾರದೋ ಒಂದು ಕೃತಿಯನ್ನು, ಸ್ವಲ್ಪ ಕೈಯಾಡಿಸಿ, ತಮ್ಮ ಕೃತಿಯೆಂದು ಸಾದರ ಪಡಿಸುವ ಚೌರ್ಯ ಪ್ರಿಯರನ್ನಂತೂ ಕೊಂಡಾಡಲೇ ಬೇಕು.

ಬಾರಮ್ಮ, ಸ್ವಲ್ಪ ಬಂಗಾಲಕ್ಕೆ ಹೋಗೋಣ. ಬಂಗಾಲ ದೂರವಾಯಿತೇ? ನೆರೆನಾಡಾದ (ಕಾಸರಗೋಡೆನ್ನು ಕಒಳಿಸಿದ) ಕೇರಳಕ್ಕೆ ಹೋಗೋಣ ಆ ಕಲಾರಾಧಕರ ಧೀಮಂತ ಸಾಧನೆ, ವಾಸ್ತವಿಕ ವಿಷಯಗಳನ್ನು, ಒಪ್ಪುವಂತೆ ಅಭಿನಯಿಸುವ ಅವರ ಅಭಿರುಚಿ ಮನಮೆಚ್ಚುವಂತಿಲ್ಲವೆ? ಅಚ್ಚರಿಗೊಳಿಸುವಂತಿಲ್ಲವೆ, ಅವರ ತಾಂತ್ರಿಕ ಕೌಶಲ್ಯ? ಸವಸ್ಯೆಗಳನ್ನು ಕೆದಕಿ, ಜನತೆಗೊಂದು ಹೊಸದಾಯವನ್ನು ಕಲ್ಪಿಸಿ ಕೊಡುವ ಆ ಕಲಾವಂತಿಕೆಯನ್ನು ಕೊಂಡಾಡಲು ಮನಬಾಸುತ್ತದೆ ನನಗೆ. ನಿನ್ನ ಮಕ್ಕಳತ್ತ ಸ್ವಲ್ಪ ದೃಷ್ಟಿ ಹರಿಸು. ಭಿಕ್ಷುಕನು ರಂಗಭೂಮಿಯ ಮೇಲೆ ಬರುವಾಗ ಮಡಿ ಬಟ್ಟೆಯಲ್ಲಿ ಬರುತ್ತಾನೆ! ಕೂಲಿಯವನು ಬರುವದೂ ಮಡಿ ಬಟ್ಟೆಯಲ್ಲಿ. ಮನೆಯಲ್ಲಿಕೂಳಿಗೆ ಗತಿಯಿಲ್ಲದೆ ಬಳಲುತ್ತಿರುವ ಸನ್ನಿವೇಶದಲ್ಲಿ ಕೂಡಾ, ನಾಯಕ, ನಾಯಕಿಯರು, ಶೃಂಗಾರ ಸಾಧನಗಳಿಂದ ಸುಸಜ್ಜಿತರಾಗಿಯೇ ಕಾಣಿಸಿಕೊಳ್ಳಬೇಕು. ಇಲ್ಲದಿದ್ದರೆ ಅವರು ಹೇಗಾದಾರು, ನಾಯಕ-ನಾಯಕಿಕೆ?

ಅದಕ್ಕಾಗಿಯೇ ಕನ್ನಡ ನಾಟಕಗಳನ್ನು ನೋಡುವ ಮೊದಲು ಅನಾಸಿನ್‌ಗುಳಿಗೆ ನುಂಗಿಕೊಂಡು ಹೋಗುತ್ತೇನೆ, ನಾನು. ಅಂದರೇನೇ ನಿನ್ನ ಮಕ್ಕಳ ಬುದ್ಧಿವಂತಿಕೆಯ ಕಲಾರಾಧನೆಯನ್ನು ನೋಡಲು ಸಾಧ್ಯ

ಒಲವಿನ ಅಕ್ಕಯ್ಯ, ನಿನ್ನ ಪಾಲಿಗಿಂದು ಉಳಿದುದು ಗತ ವೈಭವ ಸ್ಮರಣೆ ಮಾತ್ರ. ನಿನ್ನ ಪಾಲಿಗಷ್ಟೆ ಅಲ್ಲ, ಕನ್ನಡಿಗರೆಲ್ಲರ ಪಾಲಿಗೆ ಕೂಡ ಕನ್ನಡಮ್ಮನೂ ಗತ ವೈಭವ ಸ್ಮರಣೆಯಲ್ಲೇ ತೃಪ್ತಿ ಪಡುತ್ತಿದ್ದಾಳೆ. ಇದನ್ನು ಕೇಳಿ ನಿನ್ನ ಮುಖ ಅರಳ ತೊಡಗಿದೆ ಅಲ್ಲವೇ ಕನ್ನಡದ ಮನೆಯಲ್ಲಿ ಉಳಿದಿರುವದು ಗತ ಸ್ಮರಣೆಯೊಂದೆ. ಎಲ್ಲರೂ ಗತ ವೈಭವವನ್ನು ಸ್ಮರಿಸುವವರೆ! ವರ್ತಮಾನವೂ ಬೇಡ ನಮಗೆ, ಭವಿಷ್ಯವೂ ಬೇಡ. ಭೂತವೊಂದೇ ಸಾಕು. (ಈ ಭೂತವನ್ನು ಬಿಡಿಸುವ ಮಾಂತ್ರಿಕನೊಬ್ಬ ಬೇಕು.) ನೀನು ಕೂಡಾ ನಿನ್ನ ಕಲಾ ಪ್ರೇಮಿಗಳನ್ನು ಹಳೆಯ ನೊಗಕ್ಕೆ ಬಿಗಿದಿರುವೆ. ಅದೇ ಮೂಲ ಕಥಾವಸ್ತು. ಅದೇ ಪ್ರೇಮಾಲಾಪನೆ. ಅದೇ ಕೀಳು ಮಟ್ಟದ ಹಾಸ್ಯ. ಒಂದೇ ಮಟ್ಟದ ರಂಗ ಸಜ್ಜಿಕೆ. ತಾಂತ್ರಿಕತೆಯೋ! ಅವರಿಗೆ ತೋಚಿದ್ದೇ ತಾಂತ್ರಿಕತೆ!

ಹೇಳುತ್ತ ಹೊರಟರೆ ನಿನ್ನ ಮಾಹಾತ್ಮೆ ವಿಸ್ತಾರಗೊಳ್ಳುತ್ತ ಸಾಗುತ್ತದೆ. ಹೆಚ್ಚಿಗೇನನ್ನೂ ಹೇಳಲಾರೆನೇಕೆಗೊತ್ತೆ? ಎಲ್ಲವನ್ನೂ ಕೇಳಿದವರು ನಿನ್ನತ್ತ ನೋಡಲು ಹಿಂಜರಿದಾರು ಎಂಬುವ ಭೀತಿಯಿಂದ. ನೀನು ವರ್ಣನಾತೀತಳು ಎಂದಿಷ್ಟೇ ಹೇಳಿ ಮುಗಿಸುವೆ.

ಕ್ಷಮಿಸುವೆ ಎಂಬ ಭರವಸೆ ಸಹಿತ ವಾದನೆಗಳು.

ನಿನ್ನ

—ದಾಸ

ಅಧಿಕ

ಬಡ್ಡಿ

ಸಂಪಾದಿಸಿರಿ

ಫಿಕ್ಸೆಡ್ ಡಿಪಾಸಿಟ್

ಮೇಲೆ ವರ್ಷಕ್ಕೆ ಶೇಕಡಾ

5 1/8

ಕ್ಯಾಷ್ ಸರ್ಟಿಫಿಕೇಟ್

ಮತ್ತು

ಕ್ಯುಮುಲೆಟಿವ್ ಡಿಪಾಸಿಟ್

ಮೇಲೆ ವರ್ಷಕ್ಕೆ ಶೇಕಡಾ

4 1/4

ಸೇವಿಂಗ್ಸ್ ಬ್ಯಾಂಕ್ ಡಿಪಾಸಿಟ್

ಮೇಲೆ ವರ್ಷಕ್ಕೆ ಶೇಕಡಾ

3

ಕ್ರಮವಾಗಿ ಕೆನರಾ ಬ್ಯಾಂಕಿನಲ್ಲಿ ಉಳಿಸಿರಿ.

ಕೆನರಾ

ಬ್ಯಾಂಕ್ ಲಿಮಿಟೆಡ್

ಸ್ಥಾಪನೆ: 1906

ಸಮಗ್ರ ಸೇವೆ—

ಸಂಪೂರ್ಣ ಭದ್ರತೆ

ದೇಹ ಪೋಷಣೆಗೆ

ಪೌಷ್ಟಿಕ ಆಹಾರಾಂಶಗಳು

ಶ್ರೀ ಕೆ. ಅಚ್ಯುತ ಶ್ರೀನಿವಾಸ ಹೈ

ದೇಹ ಪೋಷಣೆಗೆ ಪೌಷ್ಟಿಕ ಆಹಾರ ಸಮತೂಕದಲ್ಲಿ ಸೇವಿಸಲೇ ಬೇಕು. ಧಾನ್ಯಗಳು, ಬೇಳೆ ಕಾಳುಗಳು, ಕಾಯಿ ಮತ್ತು ಎಣ್ಣೆ ಬೀಜಗಳು, ತರಕಾರಿ ಗೆಡ್ಡೆಗೆಣಸುಗಳು, ಹಣ್ಣುಗಳು, ಹಾಲು, ಮೊಸರು, ಮಜ್ಜಿಗೆ, ಬೆಣ್ಣೆ, ತುಪ್ಪ, ಕೊಬ್ಬು ಮತ್ತು ಜೇನು, ಸಕ್ಕರೆ, ಬೆಲ್ಲ ಮುಂತಾದ ಆಹಾರ, ಸಾಂಬಾರ ಪದಾರ್ಥಗಳನ್ನು ನಿತ್ಯ ಸೇವಿಸಲೇ ಬೇಕು. ಆಗ ಮಾತ್ರ ವ್ಯಯಿಸಿದ ಶಕ್ತಿ ಕೂಡಿಕೊಂಡು ಬರುತ್ತದೆ. ಮನುಷ್ಯನ ದೇಹ ಪೋಷಣೆಗೆ ಧಾನ್ಯ ಮತ್ತು ಕಾಳುಗಳು ಅತಿ ಅಗತ್ಯವಿವೆ.

'ಮಾಂಸಂ ಮೂಷೇನ ವರ್ಧತೆ'!

ಉದ್ದು, ಮಾಸವನ್ನು, ಸ್ನಾಯುಗಳನ್ನು ಒಲಪಡಿಸುತ್ತದೆ; ವೃದ್ಧಿಪಡಿಸುತ್ತದೆ. ರಾಗಿ ಕೂಡಾ ನಿತ್ಯ ಸೇವಿಸುವದರಿಂದ ವಿಟಮಿನ್ 'ಬಿ' ಅಂಶ ವಿಪುಲವಾಗಿ ದೇಹಕ್ಕೆ ಒದಗಿಸಲ್ಪಡುತ್ತದೆ. ಬೇಳೆ ಕಾಳು ಧಾನ್ಯಗಳಲ್ಲಿ ಶೇಕಡಾ ೬ರಿಂದ ೧೨ರ ವರೆಗೂ ಬೇರೆ ಬೇರೆ ಪ್ರಮಾಣದಲ್ಲಿದೆ. ಇವುಗಳ ಸೇವನೆಯಿಂದ ಶೇಕಡ ೭೦ರಿಂದ ೮೦ರ ವರೆಗೂ ಪೋಷಕ ವಸ್ತುಗಳು ದೇಹಕ್ಕೆ ಒದಗಿಸಲ್ಪಡುತ್ತವೆ. ಲೋಹ ಪುಷ್ಟಿಯೂ ಇವುಗಳಲ್ಲಿ ವಿಪುಲವಾಗಿವೆ. ಅತಿ ಅಗತ್ಯವಾದ 'ಕ್ಯಾಲ್ಸಿಯಮ್' ರಾಗಿಯಲ್ಲಿ ವಿಶೇಷವಾಗಿದೆ.

ಹಸಿ ಅವರೆ ಕಾಳುಗಳಲ್ಲಿ 'ಸಿ' ಪೋಷಕ ದ್ರವ್ಯ ಹೆಚ್ಚಾಗಿರುವುದರಿಂದ ಸಮತೂಕದ ಆಹಾರ ಬೇಕಿದ್ದರೆ ಅವರೆ ಕಾಳುಗಳ ಪಲ್ಯ ನಿತ್ಯ ಸೇವಿಸಲೇ ಬೇಕು.

ಎಣ್ಣೆ, ಬೀಜಗಳಲ್ಲಿ ಶೇಕಡ ೧೮ರಿಂದ ೨೦ರಷ್ಟು 'ಪ್ರೋಟೀನ್ಸ್'ಗಳು ಸಿಗುತ್ತವೆ. ಕೊಬ್ಬು ಕೂಡಾ ಇವುಗಳಲ್ಲಿವೆ

ಕಾಯಿಪಲ್ಯಗಳಲ್ಲಿ 'ಕ್ಯಾಲ್ಸಿಯಮ್' ಹೇರಳವಾಗಿದೆ. ಅತಿ ಸುಲಭ ಬೆಲೆಗೆ ಪೋಷಕ ಆಹಾರವನ್ನು ೨೦ರಿಂದ ೫೦ನ್ಸು ಪಲ್ಯಗಳ ಸೇವನೆಯಿಂದ ನಿತ್ಯ ಪಡೆಯಬಹುದು.

ಆಲೂಗಡ್ಡೆ, ಗೆಣಸು, ಮೂಲಂಗಿ ಮೊದಲಾದವುಗಳಲ್ಲಿ 'ಪಿಷ್ಟ' ಪದಾರ್ಥವೂ ವಿಟಮಿನ್ 'ಸಿ' ಕೂಡಾ ಈ ಗಡ್ಡೆಗೆಣಸುಗಳಲ್ಲಿ ನಮಗೆ ಸಿಗುವುದರಿಂದ ಒಂದಲ್ಲ ಒಂದು ಬಗೆಯಿಂದ ಇವುಗಳ ಸೇವನೆ ದೇಹಪೋಷಣೆಗೆ, ದೇಹದ ಪೌಷ್ಟಿಕತೆಗೆ ಅತೀ ಅಗತ್ಯವಾಗಿದೆ.

ಹಣ್ಣುಗಳಲ್ಲಿಯೂ 'ಸಿ' ವಿಟಮಿನ್ ಬೇಕಾದಷ್ಟು ಇವೆ. ಟೊಮೆಟೊ ಪಪ್ಪಾಯ, ಅನಾನಾಸು ಸೇವಿಸುವುದು ಅಗತ್ಯ. 'ಎಟ್ಟೆಯಲ್ಲಿರುವ ಪೌಷ್ಟಿಕತೆಗಿಂತ 'ಟೊಮೆಟೋ' ಹಣ್ಣಿನಲ್ಲಿ ಅದು ಹೆಚ್ಚಿಗಿದೆ.

(ಉನೇ ಪುಟನೋಡಿರಿ)

ಸುಪ್ಪತ್ತಿಗೆಯ ಹಿಂದಿನ ಹರಕು ಚಾಪೆಯ

ಹೈಟಿ ಜನರಿಗೆ ಮೆಲನ್ ದಂಪತಿಗಳ ಸೇವೆ

ವ್ಯಕ್ತಿತ್ವ, ಕಾರ್ಯ ಇಲ್ಲವೇ ವಿಚಾರ ಸಾಮರ್ಥ್ಯಗಳಿಂದಲೇ ಒಬ್ಬ ಮನುಷ್ಯನ ಯೋಗ್ಯತೆಯ ಅರಿವಾಗುವುದಲ್ಲ; ಪರರಲ್ಲಿ ಜೀತನಾ ಶಕ್ತಿಯನ್ನು ಜಾಗ್ರತಗೊಳಿಸುವಲ್ಲಿ ಆತನ ಶಕ್ತಿಯೆಷ್ಟು ಎಂಬುದರಿಂದ ಅದು ವಿದಿತವಾಗುತ್ತದೆ. ಆಲ್ಬರ್ಟ್ ಸ್ಚೈಯತ್ಸ್ಸರ ಕಾರ್ಯಶಕ್ತಿಯ ಪ್ರತೀಕವಾಗಿ ಆಫ್ರಿಕೆಯ ಗೇಬಿಯೂದಲ್ಲಿ ಲೆಂಬರಾನ್ ಆಸ್ಪತ್ರೆಯು ಇಂದಿಗೂ ಇದೆ; ಆದರೆ, ಪರರಿಗೆ ಪ್ರೇರಣೆ ನೀಡಿದ ಅವರ ಸಾಮರ್ಥ್ಯಕ್ಕೆ ನಿದರ್ಶನಗಳು ಅನೇಕ ದೇಶಗಳಲ್ಲಿಯೂ ಹರಡಿವೆ. ಅವರ ಗಾಢೆಯು ಆದೆಷ್ಟು ಜನರ ಜೀವನದ ದಿಸೆಯನ್ನೇ ಬದಲಾಯಿಸಿತೋ ಯಾರು ಬಲ್ಲರು? ಅಮೆರಿಕೆಯ ಒಬ್ಬ ರೈಷಿಯಂತ್ರ ನಿರ್ಮಾಕನು ತನ್ನ ಕೆಲಸವನ್ನು ನಿಲ್ಲಿಸಿಬಿಟ್ಟು, ಕೆಮರೂನಿಗೆ ತೆರಳಿ ಅಲ್ಲಿ ಚಿಕಿತ್ಸಾಲಯಗಳ ಮೂಲೆಯನ್ನೇ ಪ್ರಾರಂಭಿಸಿದನು. ಜಪಾನಿನ ಒಬ್ಬ ಸ್ತ್ರೀಫೆಸರರು ಸ್ಚೈಯತ್ಸ್ಸರರ ಹೆಸರಿನ ಬಲದಿಂದ ಹಣವನ್ನು ಕೂಡಿಸಿ ಆನಾಥಾಲಯವೊಂದನ್ನು ತೆರೆದರು. ಜರ್ಮನ್ ಡಾಕ್ಟರರೊಬ್ಬರು ದಕ್ಷಿಣ ಆಮೆರಿಕೆಗೆ ತೆರಳಿ ಅಲ್ಲಿ ಒಂದು ಆಸ್ಪತ್ರೆಯನ್ನು ತೆರೆದರು. ಒಬ್ಬಾಕೆ ಸುಂದರಿ ಕುಲೀನ ತರುಣಿಯು ವೈದ್ಯಕೀಯ ಶಿಕ್ಷಣವನ್ನು ಪಡೆದು ಡಾ. ಸ್ಚೈಯತ್ಸ್ಸರರಿಗೆ ಸಹಕಾರ ನೀಡುವುದಕ್ಕಾಗಿ ಲೆಂಬರಾನಿಗೆ ಧಾವಿಸಿದಳು.

ಲೆರಿಮರ್ ಮೆಲನ್ ಮತ್ತವರ ಪತ್ನಿಯವರೂ ಇಂತಹುದೇ ಕಥೆ. ಲೆರಿಮರರು ಒಬ್ಬ ಖಾರಕೂನನ ಮಗನಾಗಿದ್ದರು. ಖಾರಕೂನರಿಗೆ ಒಪ್ಪುವಂತಹ ಜೀವನವನ್ನು ನಡೆಸುವುದೇ ಅವರ ಉದ್ಯೋಗವಾಗಿತ್ತು. ಆದರೆ, ೩೭ನೆಯ ವಯಸ್ಸಿನಲ್ಲಿ ಅವರು ಸ್ಚೈಯತ್ಸ್ಸರರ ಜೀವನ ಚರಿತ್ರೆಯನ್ನೊಮ್ಮೆ ಓದಿದರು; ಅದರಿಂದ ಅವರ ಪ್ರಪಂಚವೇ ತಲೆ ಕೆಳಗಾಯಿತು. ತನ್ನ ಆರ್ಥದಷ್ಟು ವ್ಯಾಯದ ಮಕ್ಕಳೊಂದಿಗೆ ಕೂಡಿ ಕಲಿತು ಅವರು ಎಂಟ್ರೆನ್ಸ್ ತೇರ್ಗಡೆಯಾದರು. ಆ ಮೇಲೆ, ವೈದ್ಯಕೀಯವನ್ನು ಅಭ್ಯಸಿಸಿದರು; ನಲ್ವತ್ತನಾಲ್ಕನೆಯ ವರ್ಷದಲ್ಲಿ ಡಾಕ್ಟರರಾದರು. ಅನಂತರ ಮೇಲನ್ ದಂಪತಿಗಳು ಸ್ಚಾಯಿತ್ಸ್ಸರರ ಹೆಸರಿನಲ್ಲೊಂದು ಆಸ್ಪತ್ರೆ ತೆರೆಯುವ ನಿರ್ಧಾರಕ್ಕೆ ಬಂದರು.

ಪ್ರಪಂಚದಲ್ಲಿಯೇ ಅತಿ ಸಂಪನ್ನ ರಾಷ್ಟ್ರವೆನಿಸಿದ ಅಮೆರಿಕೆಯ ಸಮೃದ್ಧಿಯೇ ಹೈಟಿ ಎಂಬ ದೇಶವಿದೆ. ಇದು ದಟ್ಟ ದಂದ್ರರ ದೇಶ ದಾರಿದ್ರ್ಯ ಮತ್ತು ಅಸ್ವಾಸ್ಥ್ಯಗಳಲ್ಲಿ ಹಾಲು ನೀರಿನ ಗೆಳೆತನ ವಿರುವುದು ಆಶ್ಚರ್ಯವಲ್ಲ.

ನೀಗ್ರೋ ಮೂಲದ ಜನರು ಹೈಟಿಯಲ್ಲಿ ವಾಸಿಸುತ್ತಾರೆ. ಯಾವುದೋ ಒಂದು ಕಾಲದಲ್ಲಿ ಇವರ ಪೂರ್ವಜರು ಆಫ್ರಿಕೆಯಿಂದ ಇಲ್ಲಿಗೆ ಬಂದಿದ್ದರು. ಆದರೆ, ಇಂದಿವರು ತಮ್ಮ ಆಫ್ರಿಕನ್ ಸಹೋದರರಿಗಿಂತಲೂ ಹಿಂದುಳಿದಿದ್ದಾರೆ. ಗಾಡಿರಾಟಿಗಳ ಮತ್ತು ದೂರ ವುಳಿಯಲಿ, ಕೆಲವು ಹಳ್ಳಿಗಳಲ್ಲಿ ಹಳೆಯ ರೀತಿಯ ನೇಗಿಲು ಕೂಡ ಕಾಣಿಸುವುದಿಲ್ಲ. ಇಲ್ಲಿನ ನಾಗರಿಕರು ಯಾವ ಕೆಲಸಕ್ಕೂ ಬಾರದವರು ಇನ್ನು ಆಹಾರವಾದರೂ ಇವರಿಗೆ ಹೊಟ್ಟೆತುಂಬ ದೊರೆಯುವುದೆಂಬುದೇ ಇಲ್ಲಿ.

ಇಂತಹ ಬಹಳ ಹಿಂದುಳಿದ ರಾಜ್ಯವನ್ನು ತಮ್ಮ ಆಸ್ಪತ್ರೆ ತೆರೆಯಲು ಯೋಗ್ಯವಾದ ಸ್ಥಳವೆಂದು ಮೆಲನ್ ದಂಪತಿಗಳು ತಿಳಿದರು. ಆಸ್ಪತ್ರೆಗಾಗಿ ಒಂದು ಕಟ್ಟಡವನ್ನೂ ಕಟ್ಟಿಸಿದರು. ಹೊರಗಡೆ ಇದು ತೀರ ಚಿಕ್ಕದೆಂದು ತೋರಿದರೂ ಒಳಭಾಗವು ಬಹು ವಿಶಾಲವಾಗಿತ್ತು. ಆಸ್ಪತ್ರೆಯಲ್ಲಿ ಕೆಲವೊಂದು ವಿಭಾಗಗಳಿವೆ; ಇದು ಒಳಹೊಕ್ಕ ನಂತರ ಮಾತ್ರ ಗೊತ್ತಾಗುತ್ತದೆ. ಬಹು ನೈಲು ದೂರದಿಂದ ರಾತ್ರೆ ಹಗಲು ನಡೆನಡೆದೋ, ಕತ್ತೆಗಳ ಮೇಲೆ ಸವಾರಿ ಮಾಡಿಯೋ ರೋಗಿಗಳು ಇಲ್ಲಿಗೆ ಬರುತ್ತಾರೆ. ಸಾಲಾಗಿ ನಿಂತು ತಮ್ಮ ಸರದಿಯನ್ನು ಕಾಯುತ್ತಿರುತ್ತಾರೆ. ನಡುನಡುವೆ ಲೆರಿಮರ್ ಮತ್ತು ಅವರ ಪತ್ನಿ ಗ್ವೆನರು ಹೊರಬಂದು ಯಾವುದೇ ರೋಗಿಯು ಗಂಭೀರ ಪರಿಸ್ಥಿತಿಗೊಳಗಾಗಿರುವನೇ ಎಂಬುದನ್ನು ನೋಡುತ್ತಾರೆ. ಇಂತಹ ರೋಗಿಗಳು ಇರುವರೆಂದಾದರೆ, ಅವರಿಗೆ ಮೊದಲಿಗೆ ಉಪಚಾರ ದೊರೆಯುವುದು.

ಇಲ್ಲಿ ಬರುವ ರೋಗಿಗಳಲ್ಲಿ ವಾರ-ಎರಡು ವಾರದ ಮಕ್ಕಳೂ ಹೆಚ್ಚಿರುತ್ತವೆ. ಟೆಟಿನಸ್ ನಿಂದ ಇವರು ಪೀಡಿತರಾಗಿರುತ್ತಾರೆ. ಹೈಟಿಯಲ್ಲಿ ಮಕ್ಕಳಿಗೆ ಸಾವು ತರುವ ರೋಗಗಳಲ್ಲಿ ಇದುವೆ ಅಗ್ರಗಣ್ಯವಾದುದು. ತಿಳುವಳಿಕೆಯಿಲ್ಲದ ದಾಯಿಗಳು ಮಗುವಿನ ಹೊಕ್ಕಳನಾಳವನ್ನು ಕತ್ತರಿಸಿ ಅಲ್ಲಿ ಇದ್ದಲು ಇಲ್ಲವೇ ಕೆಸರನ್ನು ತುಂಬಿಸಿ ಕಟ್ಟಿಬಿಡುವುದೇ ಇದಕ್ಕೆ ಕಾರಣ.

ಹೈಟಿ ನಾಗರಿಕರ ರೋಗರುಜಿನಗಳಿಗೆ ಅವರ ಅಂಧವಿಶ್ವಾಸ ಮತ್ತು ಅಜ್ಞಾನವೇ ಕಾರಣವೆಂಬುದನ್ನು ತಿಳಿಯಲು ಲೆರಿಮರ್ ಮತ್ತು ಗ್ವೆನ್ ಮೆಲನರಿಗೆ ಅಧಿಕ ಸಮಯ ಬೇಕಾಗಲಿಲ್ಲ. ಅವರು ಔಷಧಿಯನ್ನು ಹಂಚುವುದಕ್ಕೆ ಬದಲಾಗಿ ಹೊಸ ವಿಚಾರಗಳ ಪ್ರಸಾರವನ್ನೂ ಮಾಡಿದರು. ಇದಕ್ಕಾಗಿ ಒಂದು ವಿಕಾಸ ಕೇಂದ್ರವನ್ನು ತೆರೆದುಪ್ರೌಢ ಶಿಕ್ಷಣದ ವರ್ಗವನ್ನು ಪ್ರಾರಂಭಿಸಿದರು. ಆರೋಗ್ಯ, ಆಹಾರ ಮತ್ತು ನೈರ್ಮಲ್ಯ ಮೊದಲಾದುವುಗಳ ನಿಯಮಗಳನ್ನು ಪ್ರಚಾರ ಮಾಡಲು ಈಗ ಅವರು ಚಲಚಿತ್ರಗಳನ್ನೂ ಉಪಯೋಗಿಸುತ್ತಾರೆ. ಮಕ್ಕಳ ನಾಭಿನಾಳದಲ್ಲಿ ಇದ್ದಲು ಅಥವಾ ಕೆಸರು ತುಂಬಿಸುವುದು ಅದೆಷ್ಟು ಅಪಾಯಕಾರಿಯೆಂಬುದನ್ನು ತಿಳಿಸುವ ಚಿತ್ರವೊಂದನ್ನು ತಯಾರಿಸಿದರು. ಕೇವಲ ಹೆಂಗಸರಿಗೆ ಮಾತ್ರವಲ್ಲ, ಆಸ್ಪತ್ರೆಗೆ ಬರುವ ಎಲ್ಲ ರೋಗಿಗಳಿಗೆ, ಅವರ ಸಂಬಂಧಿಕರಿಗೆ ಈ ಚಿತ್ರವನ್ನು ತೋರಿಸಿದರು.

ರೆವರೆಂಡ್ ಲ್ಯಾಡ್ ಶಿರರ್‌ರ ಅಧೀನದಲ್ಲಿ ಚಿತ್ರ ನಿರ್ಮಾಣವಿದೆ. ಒಂದು ವಿಧಾನದಿಂದ ಡಾ. ಶಿರರ್‌ರು ಇಡಿಯ ವಿಕಾಸ ಕಾರ್ಯಗಳ ಅಧ್ಯಕ್ಷರು. ಅವರು ಅಕ್ಷರತೆಯನ್ನು ಕಲಿಸುವ ವರ್ಗಗಳನ್ನು ನಡೆಸುತ್ತಾರೆ. ಹಳ್ಳಿ ಹಳ್ಳಿಗೆ ತೆರಳಿ ಚಲಚಿತ್ರಗಳನ್ನು ತೋರಿಸುತ್ತಾರೆ; ಗ್ರಾಮದ ಹೊಸ ಅಕ್ಷರಸ್ಥರಿಗಾಗಿ ಆವಶ್ಯಕ ಪುಸ್ತಕ ಪೆನ್ಸಿಲ್ ಮೊದಲಾದುವನ್ನು ಕೊಡುತ್ತಾರೆ.

ಆಸ್ಪತ್ರೆಗೆ ಹೊರತಾದ ಇಂತಹ ಕಾರ್ಯಗಳು ದಿನದಿಂದ ದಿನಕ್ಕೆ ಹೆಚ್ಚುತ್ತ ಬರುತ್ತಿವೆ; ಇದೇ ದಾವೂಶಯದಲ್ಲಿ ಖರ್ಚೂ ಕೂಡಾ ಬಹು ಸಮಯದ ವರೆಗೆ ಮೆಲನ್ ದಂಪತಿಗಳಿಗೆ ಹೊರಗಡೆಯಿಂದ ಸಹಾಯವು ಲಭಿಸಲಿಲ್ಲ. ತಮ್ಮೆಲ್ಲ ಸಂಪತ್ತನ್ನು ಇವರು ಆಸ್ಪತ್ರೆ ಮತ್ತಿತರ ಅವಶ್ಯಕತೆಗಳಿಗಾಗಿ ವೆಚ್ಚಮಾಡಿದರು. ಅನಂತರ ಕೆಲವರು ಮಿತ್ರರೂ ಧರ್ಮಾರ್ಥ ಸಂಸ್ಥೆಗಳೂ ಅವರ ಸಹಾಯಕ್ಕೆ ಬಂದುವು. ಹಾಗಿದ್ದರೂ ದೊರೆಯುತಿದ್ದ ಸಹಾಯಧನವು ಏನೇನೂ ಸಾಲದಾಗಿತ್ತು. ಅವಶ್ಯ ಸಹಾಯವು ದೊರೆಯುವುದು ಎಂಬುದರಲ್ಲಿ ಅವರು ವಿಶ್ವಾಸವಿಟ್ಟಿದ್ದರು.

ಇಂತಹ ವಿಶ್ವಾಸವಿಡಲ್ಪಟ್ಟುದಕ್ಕಾದರೂ ಡಾ. ಸ್ಚಾಯಿತ್ಸ್ಸರರ ಪ್ರೇರಣೆಯೇ ಕಾರಣ 'ನಾವು ನಮ್ಮ ಕರ್ತವ್ಯವನ್ನು ಮನೋವಾಕ್ಯಾಯಗಳಿಂದ ಮಾಡುತ್ತ ಹೋದರೆ, ಅದರಲ್ಲಿ ಭಾಗವಹಿಸುವ ಉತ್ಸಾಹಿಗಳು ಬಂದೇ ತೀರುತ್ತಾರೆ' ಎಂದವರು ಹೇಳುತ್ತಾರೆ. ಆದರೆ, ಮೆಲನ್ ದಂಪತಿಗಳು ಕೋಟ್ಯಧೀಶರೆಂದು ಹೆಚ್ಚಿನವರು ತಿಳಿದಿರುವುದೇ ದೌರ್ಭಾಗ್ಯವೆನ್ನಬೇಕು.

ಕಾರ್ಯವು ಸಾಕಷ್ಟು ವಿಸ್ತೃತವಾಗಿದೆ; ಮೆಲನ್ ದಂಪತಿಗಳಾದರೂ ತಮ್ಮ ಆಸ್ಪತ್ರೆ ಇಲ್ಲದೇ ಇತರ ಕಾರ್ಯಗಳಿಂದ ಪ್ರೇ ಹೈಟಿಯ ಎಲ್ಲ ಆವಶ್ಯಕತೆಗಳೂ ಪೂರ್ತಿಗೊಳ್ಳುವುದಿಲ್ಲವೆಂದು ಬಲ್ಲರು. ಆದರೆ, ಈ ಅವಶ್ಯಕತೆಗಳ ಪೂರ್ತಿಗಾಗಿ ಅವರು ಮಹತ್ವಪೂರ್ಣ ಸೇವೆ ಸಲ್ಲಿಸಿದ್ದಾರೆ ಎಂಬುದರಲ್ಲಿ ಸಂದೇಹವಿಲ್ಲ. ಮೆಲನ್ ದಂಪತಿಗಳು ಆಸ್ಪತ್ರೆಯನ್ನು ತೆರೆಯದಿರುತಿದ್ದರೆ ಇಂದಲ್ಲಿ ವಾರಂಪ್ರತಿ ಉಚಿತವಾಗಿ ಪಡೆಯುತ್ತಿರುವ ಸುಮಾರು ಒಂದು ಸಾವಿರಕ್ಕೂ ಮೀರಿದ ಜನರು ಅದರಿಂದ ವಂಚಿತರಾಗುತಿದ್ದರು.

ಹೈಟಿಯನ್ನು ತಮ್ಮ ಕಾರ್ಯಕ್ಷೇತ್ರವೆಂದು ಆಯ್ಕೆಮಾಡಿದಾಗ ಅಲ್ಲಿಯ ಜನರಿಂದ ತಮಗೆ ಯಾವ ರೀತಿಯ ಪ್ರತಿಕ್ರಿಯೆಯಾದೀತು ಎಂದು ಮೆಲನ್ ದಂಪತಿಗಳು ಸಂದೇಹಗೊಂಡಿದ್ದರು. "ತಮ್ಮ ಬಳಿ ಚರ್ಮವು ಆಲ್ಲಿನವರನ್ನು ಹೆದರಿಸಿಬಿಟ್ಟೀತು ಎಂದವರು ಆಂಜಿದ್ದರು. ಬಳಿಯರು ಹೈಟಿವಾಸಿಗಳನ್ನು ಗುಲಾಮರನ್ನಾಗಿ ಮಾಡಿಕೊಂಡು ಅವರೊಡನೆ ದುರ್ವರ್ತನೆಯನ್ನು ಮಾಡುತಿದ್ದರು. ಹೈಟಿಗಳು ಅನಕ್ಷರಸ್ಥರಾಗಿರುವುದು ನಿಜವಾಗಿದ್ದರೂ ಇದನ್ನೆಲ್ಲಾ ಪ್ರತ್ಯಕ್ಷವಾಗಿ ತಿಳಿದುಕೊಳ್ಳತಿದ್ದರು. ಡಾ. ಮೆಲನ್‌ರ ಈ ಅಭಿಪ್ರಾಯ ಸುಳ್ಳಾಯಿತು. ಮೆಲನರನ್ನು ಕಂಡು, ಬಳಿಯರಲ್ಲಿ ತಮಗಿದ್ದ ದುರ್ಭಾವನೆಗಳನ್ನು ಅವರು ತೊಡೆದು ಬಿಡುತ್ತಲಿದ್ದಾರೆ

ಆಸ್ಪತ್ರೆಯನ್ನು ಬೆಚಿಸುವುದೆಂದರೆ ಚಿಕ್ಕ ಪುಟ್ಟ ಕೆಲಸವಲ್ಲ. ಡಾ| ಮೆಲನರಿಗೆ ಮೊದಲು ಅದೆಷ್ಟೋ ಜನರು ತಮ್ಮ ಶ್ರೀಮಂತಿಕೆಯನ್ನೇ ಇಂತಹ ಕೆಲಸಗಳಿಗಾಗಿ ದಾನವಿತ್ತಿರುವರೋ ಏನೋ! ಆದರೆ, ಮೆಲನ್ ದಂಪತಿಗಳು ತಮ್ಮ ಹಣವನ್ನು ಮಾತ್ರವಲ್ಲ ಜೀವನವನ್ನೂ ಈ ಮಹಾ ಕಾರ್ಯಕ್ಕಾಗಿ ಅರ್ಪಿಸಿದ್ದಾರೆ.

ಜೀವನದ ವಿವಿಧ ಘಟನೆಗಳನ್ನು ಸೃದಯ ಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ

ಮಧುವೆ ಸೀರೆ

ಮಧುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪರಿಪೂರ್ಣ ಬೇಂಕಿಂಗ್ ಸೇವೆಗೆ

— ಕೊರ್ಪೊರೇಶನ್ ಬೇಂಕ್ —

78 ಶಾಖೆಗಳು | ದೇಶದಾದ್ಯಂತ ಏಜನ್ಸಿಗಳು

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಉಡುಪಿ)

ಆಡಳಿತ ಆಫೀಸು: ಮಂಗಳೂರು.

"ನವಚಿಕೇತ"ರ

ಇನ್ನೊಂದು ನವೀನ ಕಾದಂಬರಿ—

ಋಣ ಯಾತ್ರೆ

ಇದೀಗ ಪ್ರಕಟವಾಗಿದೆ.

ಬೆಲೆ ರೂ. 1-50 ನ. ಪೈಸೆ.

ಮೊದಲು ಪ್ರಕಟವಾದ ಕಾದಂಬರಿ

ಭಾವಾರ್ಚನೆ

ಬೆಲೆ ರೂ. 1-25 ನ. ಪೈಸೆ.

ಪ್ರತಿಗಳು ಸಿಗುವ ಸ್ಥಳಗಳು:—

ನವಯುಗ ಪ್ರೆಸ್, ಉಡುಪಿ.

ನವಭಾರತ ಬುಕ್ ಡಿಪೊ, ಉಡುಪಿ.

ನವಯುಗ

ವರುಷ ೪೧	ಉಡುಪಿ ೧೪-೬-'೬೨	ವಾರ ೪೦

ಆರ್ಥಿಕ ಸಮನ್ವಯ

ಶ್ರೀ ಟಿ. ಟಿ. ಕೃಷ್ಣಮಾಚಾರಿಯವರು ಕೇಂದ್ರ ಮಂತ್ರಿ ಮಂಡಳದಲ್ಲಿ ಸೇರ್ಪಡೆಗೊಂಡುದರಿಂದ ನೆಹರುರವರ ಮೂರನೆಯ ಸಚಿವ ಸಂಪುಟವು ಪೂರ್ಣಗೊಂಡಿತು ಎಂದು ಊಹಿಸಬಹುದು. ಇನ್ನೂ ಕೆಲವೊಂದು ಉಪ ಮಂತ್ರಿಗಳನ್ನೋ, ಪಾರ್ಲಿಮೆಂಟರಿ ಕಾರ್ಯದರ್ಶಿಗಳನ್ನೋ ನೇಮಿಸಬಹುದಾದರೂ ಅವು ಅಷ್ಟು ಮಹತ್ವದೆನ್ನಬರ.ವುದಿಲ್ಲ. ಟಿ. ಟಿ. ಕೆಯವರು ಮದ್ರಾಸಿದಿಂದ ಲೋಕ ಸಭೆಗೆ ಆವಿರೋಧವಾಗಿ ಆಯ್ಕೆಯಾದಾಗಲೇ ಅವರ ಪದವಿ ಸ್ಥಿರವೆಂದು ಊಹಿಸಲಾಗಿತ್ತು; ಆದರೆ, ಅದು ಸತ್ಯವೆನಿಸಬೇಕಾದರೆ ಇಷ್ಟು ಕಾಲ ಹೋಗಬೇಕಾಯ್ತು. ಪ್ರಧಾನಿ ನೆಹರುರವರಿಗೆ ಅವಶ್ಯಕರಾದ ಇವರ ನೇಮಕವು ಇಡಿಯ ಭಾರತದಲ್ಲಿ ಸ್ವಾಗತ ಸಲ್ಪಟ್ಟಿದೆ. ತಮ್ಮ ಚುರುಕಿನ ಪಾರ್ಲಿಮೆಂಟರಿ ಜೀವನ ಮತ್ತು ಮಂತ್ರಿತನಗಳಿಂದ ಹೆಸರಾದ ಇವರಿಂದು ಭಾರತ ಸರಕಾರದಲ್ಲಿ ಆರ್ಥಿಕ ಸಮನ್ವಯದ ಚಟುವಟಿಕೆಗಳಲ್ಲಿ ತೊಡಗುವರು. ಪಂಪಕ್ವ ಅನುಭವದ ಈ ಉದ್ಯಮಿಯು ಓರ್ವ ರಾಜಕಾರಣಿಗಿಂತ ಹೆಚ್ಚಾಗಿ ಆಡಳಿತೆ ಮತ್ತು ಆರ್ಥಿಕ ಸಮತೋಲವನ್ನು ಅರಿಯಬಲ್ಲನು; ತನ್ನ ಸ್ವಾನುಭವಗಳಿಂದ ಆರ್ಥಿಕ ಸ್ಥಿತಿಗತಿಗಳನ್ನು ಉನ್ನತೀಕರಿಸಬಲ್ಲನು. ವ್ಯಾಪಾರ ಮತ್ತು ಉದ್ಯಮ ಶಾಖೆಯ ಮಂತ್ರಿಯಾಗಿದ್ದ ಟಿ. ಟಿ. ಕೆ.ಯವರು ನಿರ್ಯಾತ ಮತ್ತು ಆಯಾತಗಳಿಗೆ ಲೈಸನ್ಸು ನೀಡುವಲ್ಲಿ ಆಗುತ್ತಿದ್ದ ಅನಪೇಕ್ಷಿತ ವಿಳಂಬವನ್ನು ನಿಲ್ಲಿಸಿದರು. ಆ ನಂತರ ಅರ್ಥಮಂತ್ರಿಯಾದಾಗ ಇವರ ಕರಾಕರಣೆಯ ನೀತಿಯನ್ನು ಎಲ್ಲರೂ ಟೀಕಿಸುತಿದ್ದರು. ಆದರೆ, ಆತಿ ಪ್ರಸರಣವನ್ನು ಅಂಕಿತದಲ್ಲಿರಿಸಲು ಮತ್ತು ರಾಷ್ಟ್ರದ ಆಂತರಿಕ ಉಳಿತಾಯವನ್ನು ಹೆಚ್ಚಿಸಲು ಇವರ ಈ ನೀತಿಯೇ ಕಾರಣವಾಗಿತ್ತು. ಆದರೆ ಈ ಬಾರಿ ಅವರನ್ನು ಶಾಖಾರಹಿತ ಮಂತ್ರಿಯೆಂದು ನೇಮಿಸಿಕೊಂಡಿರುವುದೊಂದು ವೈಶಿಷ್ಟ್ಯ.

ಹಿಂದೊಂದು ಖಾರಿ ಸದ್ಯ ಸಂರಕ್ಷಣಾ ಮಂತ್ರಿಯಾಗಿರುವ ಶ್ರೀ ವಿ. ಕೆ. ಕೃಷ್ಣಮೆನನ್ನರು ಶಾಖಾರಹಿತ ಮಂತ್ರಿಯಾಗಿದ್ದರು. ನಿರ್ದಿಷ್ಟ ಶಾಖೆ ಶ್ರೀ ಆಚಾರಿಯವರಿಗಿಲ್ಲವಾದರೂ ರೇಲ್ವೆ, ಸಾರಿಗೆ, ಉಕ್ಕು ಮತ್ತು ಭಾರ ಉದ್ದಿಮೆ, ಗಣಿ ಮತ್ತು ಉರುವಲು ಮಂತ್ರಿ ಶಾಖೆಗಳಲ್ಲಿ ಸಮನ್ವಯವನ್ನು ಸಾಧಿಸುವ ಗುರುತರ ಜೊಣೆಗಾರಿಕೆಯನ್ನು ಪಂಡಿತ ನೆಹರು ಇವರಿಗೆ ಒಪ್ಪಿಸಿದ್ದಾರೆಂದು ತಿಳಿಯುತ್ತದೆ. ಸರ್ವ ಸಾಮಾನ್ಯವಾಗಿ ಯಾವನೇ ಮಂತ್ರಿಯಿಂದ ಮಹತ್ತರವಾದ ಕಾರ್ಯವೇ ತನಗೆ ಇವರ ಮೇಲೆ ಬದ್ದಂತಾಗಿದೆ. ಆದರೆ, ತನ್ನ ಅತುಲನೀಯ ಬುದ್ಧಿ ಮತ್ತೆಗೆ ಹೆಸರಾದ ಟಿ.ಟಿ.ಕೆ. ಈ ಜವಾಬ್ದಾರಿಯನ್ನು ಹೊರುವಲ್ಲಿ ಹಿಂದೆ ಮುಂದೆ ನೋಡುವುದಿಲ್ಲ. ನಮ್ಮ ಪಂಚವಾರ್ಷಿಕ ಯೋಜನೆಯು ಸಫಲ ನೀಡಬೇಕಾದರೆ, ಆದರಲ್ಲಿ ಉದ್ದೇಶಿಸಲಾದ ಗುರಿಗಳನ್ನು ನಾವು ಮುಟ್ಟ ಬೇಕಾದರೆ, ಉದ್ದಿಮೆ, ವಿದ್ಯುತ್ತು, ಸಾರಿಗೆ, ಇಂಧನ ಮತ್ತು ಕೃಷಿಗಳ ವಿಭಾಗದಲ್ಲಿ ತೀವ್ರವಾದ ಪ್ರಗತಿಯನ್ನು ಸಾಧಿಸಬೇಕಾಗಿದೆ. ಸಂಗ್ರಾಮದ ವೇಳೆ ಬ್ರಿಟನ್ನಿನಲ್ಲಿದ್ದ ಆರ್ಥಿಕ ಸಮನ್ವಯ ಮಂತ್ರಿ ಶಾಖೆಯಂತೆ ನಮ್ಮ ಮಹತ್ವಾ ಕಾಂಕ್ಷೆಯ ಯೋಜನಾವಧಿಯಲ್ಲಿ ಆರ್ಥಿಕ ವಿಚಾರದಲ್ಲಿ ಪ್ರಧಾನ ಮಂತ್ರಿಯವರಿಗೆ ಆವಶ್ಯಕ ಸಲಹೆಗಳನ್ನು ನೀಡುವಂತಹ ಘನ ಕಾರ್ಯವಿಂದು ಟಿ. ಟಿ. ಕೆ. ಮಾಡಬೇಕಾಗಿದೆ. ಏಕೆಂದರೆ, ಈ ಕಾರ್ಯವನ್ನು ಯಾವ ಮಂತ್ರಿ ಶಾಖೆಯೂ ನೋಡಿಕೊಳ್ಳುವುದಿಲ್ಲ ದೇಶದ ಆರ್ಥಿಕ ಸ್ಥಿತಿಗತಿಗಳನ್ನೂ ವಿದೇಶೀ ವಿನಿಮಯದ ಜಮಾ ಖರ್ಚನ್ನೂ ಸಾಕೂತ ದೃಷ್ಟಿಯಿಂದ ಪ್ರತೀಕ್ಷಿಸಿ ಆರ್ಥಿಕ ನೀತಿಯಲ್ಲಿ ಸೂಕ್ತ ಪರಿವರ್ತನೆ, ತಿದ್ದುಪಡಿಗಳನ್ನು ಮಾಡುವುದು ಆತ್ಯವಶ್ಯವೆನಿಸುವುದು. ಈ ಕೆಲಸವು ಆರ್ಥ ಶಾಖೆಯಲ್ಲೇ ಸೀಮಿತವಿರುವುದಿಲ್ಲ. ಭರದಿಂದ ಪ್ರಗತಿ ಪಥಗಾಮಿಯಾಗುತ್ತಿರುವ ಉದ್ದಿಮೆ, ವಿದ್ಯುತ್, ಸಾರಿಗೆ ಮೊದಲಾದ ಸೌಲಭ್ಯಗಳಿಗಾಗಿ ವಿದೇಶೀ ವಿನಿಮಯವನ್ನು ಕಂಡುಕೊಳ್ಳುವುದು ಅತ್ಯವಶ್ಯ; ಇಲ್ಲವಾದರೆ, ಪ್ರಗತಿಯು ಕುಂಠಿತವಾಗುವುದು ನಿಸ್ಸಂಶಯ. ಇದರಿಂದಾಗಿ ಅರ್ಥ, ಮುಖ್ಯವಾಗಿ ವಿದೇಶೀ ವಿನಿಮಯಕ್ಕೆ ಸಂಬಂಧ ಪಡುವ ಶಾಖೆಗಳಿಗೆ ಬೇಕಾಗುವ ಆವಶ್ಯಕತೆಗಳನ್ನು ಪೂರೈಸುವಲ್ಲಿ ತುಸು ಎಚ್ಚರಿಕೆ ವಹಿಸಬೇಕಾಗುತ್ತದೆ; ಇಂತಹ ಮೇಲ್ವಿಚಾರಣೆ ನೋಡಿಕೊಂಡು ಸೂಕ್ತ ಸಲಹೆ ನೀಡುವುದೇ ಇಂದು ಟಿ. ಟಿ. ಕೆ. ಮಾಡಲಿರುವ ಕೆಲಸ.

ಅಮೆರಿಕೆಯಲ್ಲಿ ಆರ್ಥಿಕ ಸಲಹಾ ಮಂಡಳಿಯೊಂದಿದ್ದು ಅದು ಅಧ್ಯಕ್ಷರಿಗೆ ಆರ್ಥಿಕ ಆಗುಹೋಗುಗಳಲ್ಲಿ ಸಲಹೆಗಳನ್ನು ಕೊಡುತ್ತ ಬರುತ್ತಿದೆ. ಕೃಷ್ಣಮಾಚಾರಿಯವರ ಸ್ಥಾನವನ್ನು ಈ ಮಂಡಳಿಗೆ ಹೋಲಿಸಬಹುದಾದರೂ, ಅದಕ್ಕಿಂತಲೂ ಪ್ರಭಾವಿಯೆನಿಸಿದೆ, ಅವರಿಂದು ಮಾಡಬೇಕಾದ ಮೊತ್ತಮೊದಲ ಕಾರ್ಯವು ತೃತೀಯ ಯೋಜನೆಯಲ್ಲಿ ಸೇರ್ಪಡಿಸಲಾದ ಯೋಜನೆಗಳಲ್ಲಿ ಸಮಯವೂ ಅಡಾಯವೂ ನಷ್ಟವಾಗದಂತೆ ಯಾವುದಕ್ಕೆ ಆಗ್ರ ಪ್ರಾಶಸ್ತ್ಯ ನೀಡಬೇಕು ಎಂಬುದು. ವಿದ್ಯುತ್, ಇದ್ದಲು, ಉಕ್ಕು ಮತ್ತು ಸಾರಿಗೆಯ ಯೋಜನೆಗಳು ಇಂತಹ ಪ್ರಾಶಸ್ತ್ಯಕ್ಕೆ ಅರ್ಹವಾದರೂ ಉದ್ದಿಮೆಗಳಿಂದಲೇ ಬಹುತೇಕ ಕಲ್ಯಾಣ ಸಾಧ್ಯವಾದುದರಿಂದ ಅವುಗಳ ಸ್ಥಾಪನೆಗೆ ಅನುಮತಿ ನೀಡುವುದೂ ಅಷ್ಟೇ ಪ್ರಧಾನವಾಗಿದೆ. ಶ್ರೀ ಕೃಷ್ಣಮಾಚಾರಿಯವರಿಗೆ ಒಪ್ಪಿಸಲಾದ ಕೆಲಸವೇ ಇದಾದುದರಿಂದ ಅವರು ತನ್ನ ಮೇಧಾ ಶಕ್ತಿಯನ್ನು ಸಂಪೂರ್ಣವಾಗಿ ಉಪಯೋಗಿಸಿ, ಪರಿಸ್ಥಿತಿಗತಿಗಳನ್ನು ತೊಳಿ ನೋಡಿ, ಪಂಡಿತ ನೆಹರುರವರ ಕಾರ್ಯಸಾಧನೆಯಲ್ಲಿ ಮಹತ್ವದ ಪಾತ್ರ ವಹಿಸುವರು. ಇದರಿಂದಾಗಿ ನಮ್ಮ ನಿಯೋಜಕ ಪಂಚವಾರ್ಷಿಕ ಯೋಜನೆಯು ಯಶಸ್ವಿಯಾಗಿ ತನ್ಮೂಲಕ ದೇಶವು ಸಂಪನ್ನವಾಗುವುದೆಂದು ಆಶಿಸಬಹುದು.

ಜಗತ್ಪರ್ಯಟನ

ಜವಾಹರಲಾಲ

ಪಂಡಿತ ನೆಹರು ಒಳರ ಗಡಿಗೆ ಸಮೀಪಿಸಿದ್ದಾರಾದರೂ ಅವರನ್ನೂ ಅವರವರಂತೆಯೇ ಉತ್ಸಾಹ ತೋರಿಸಿ ಭಾರತದ ಪ್ರಗತಿಯ ಕಡೆಗೆ ಜೀವ ತೇಯುತಿದ್ದಾರೆ. ಇದರಿಂದಾಗಿಯೇ ಅವರು ಮಹತ್ವಾ ಕಾಂಕ್ಷೆಯಿಂದ ತುಂಬಿದ ತೃತೀಯ ಯೋಜನೆಯ ರೂಪರೇಷೆಯನ್ನು ನಿರ್ಧರಿಸಿದ್ದಾರೆ. ಆದರೆ, ನೆಹರು ಓಡುವಷ್ಟು ವೇಗವಾಗಿ ಓಡಲು ಅವರ ಸಹಕಾರಿಗಳೇ ಕೆಲವರು 'ಊಹಕ್ಲ್ಯಿಂ' ಎನ್ನುತಿದ್ದಾರೆ;ಅದರ ಮೇಲೆ ದಾರಿಯಲ್ಲಿ ಅನಿರೀಕ್ಷಿತವಾಗಿ ಸಂಭವಿಸುವ ಎಡರು ತೊಡರುಗಳಿಂದ ಓಡುವ ವೇಗವಾದರೂ ಕುಂಟುತ್ತದೆ. ಪಂಡಿತರ ನಿರುತ್ಸಾಹ ಮತ್ತು ಅನಾರೋಗ್ಯಗಳಿಗೆ ಅವರ ವಯಸ್ಸೊಂದೇ ಕಾರಣವಲ್ಲ; ಅಂತರಿಕ ವೇದನೆಯೂ ಬಹುತೇಕ ಕಾರಣವೆನಿಸಿದೆ. ಭಾವೈಕ್ಯ ಸಮ್ಮೇಳನದಲ್ಲಿ ಈ ಮೊದಲು ತಾಸುಗಟ್ಟಲೆ ಮಾತಾಡುತ್ತಿದ್ದ ಇವರಿಂದು ಭಾಷಣ ಮಾಡುವುದರಿಂದ ಪ್ರಗತಿಯೂಗಲೀ ಭಾವೈಕ್ಯವಾಗಲೀ ಸಾಧಿತವಾಗದೆಂದು ಅರಿತಿದ್ದಾರೆ.

ಮುರಾರ್ಜಿ ದೇಸಾಯಿ

ಪಟ್ಟು ಹಿಡಿದು ಆರ್ಥಶಾಖೆಯನ್ನೇ ಇಟ್ಟುಕೊಂಡ ಮುರಾರ್ಜಿ ದೇಸಾಯಿಯವರು ವಿದೇಶೀ ಸಹಾಯ ಪಡೆಯುವಲ್ಲಿ ಜಾಣಾಕ್ಷರೆಂದು ನೆಹರು ಕಂಡುಕೊಂಡಿದ್ದಾರೆ. ಆದರೂ ಆರ್ಥಿಕ ಸಮನ್ವಯದ ವಿಚಾರದಲ್ಲಿ ಇವರು ಅಷ್ಟು ಕುಶಲಿಗಳಲ್ಲ ವೆಂಬುದರಿಂದಲೇ ಟಿ. ಟಿ. ಕೆ.ಯವರು ಕ್ಯಾಬಿನೆಟ್ ಮಂತ್ರಿಯಾದರು. ಆರ್ಥ ಶಾಖೆಯ ಮಂತ್ರಿಯಾಗಿಯೇ ರಾಜನಾಮೆ ಸಲ್ಲಿಸಿದ್ದರೂ, ಅದೇ ಖಾತೆಯನ್ನು ತನಗೆ ಕೊಡಬೇಕೆಂದು ಕೇಳಿಕೊಂಡವರು ಇವರು. ಈಗ ಆರ್ಥಿಕ ಸಮನ್ವಯದ ಹೊಣೆಗಾರಿಕೆ ಹೊತ್ತುಕೊಂಡ ಇವರಿಗೂ ದೇಸಾಯಿಯವರಿಗೂ ಹೊರ್ಯೆಯಾಗುವುದೇ ಎಂಬ ಭಯಕ್ಕೆ ಅವಕಾಶವಿದೆ. ಆದರೆ, ದೇಶದ ಹಿತಬಯಸುವ ಈ ಇರ್ವರು ಮಹನೀಯರೂ ಸೌಹಾರ್ದದಿಂದ ನಡೆದುಕೊಳ್ಳುವರೆಂದು ಭಾರತೀಯ ಜನತೆ ಬಯಸುತ್ತದೆ.

ಸಂಜೀವಯ್ಯ

ಆಂಧ್ರ ಪ್ರದೇಶದ ಮುಖ್ಯ ಮಂತ್ರಿಯಾಗಿ ಸಂಜೀವ ರೆಡ್ಡಿಯವರ ಉತ್ತರಾಧಿಕಾರಿಯೆನಿಸಿದ ದಾಮೋದರಂ ಸಂಜೀವಯ್ಯ ಇಂದಿರ ವಯಸ್ಸಿನಲ್ಲಿಯೇ ಕಾಂಗ್ರೆಸ್ ಅಧ್ಯಕ್ಷ ರೆಡ್ಡಿಯವರ ಉತ್ತರಾಧಿಯಾದರು. ಈ ನಡುಹರೆಯದ ಹರಿಜನ ನನ್ನು ಉನ್ನತ ಪದವಿಗೇರಿಸಿದ ಬಗ್ಗೆ ಕೆಲವು ಹಿರಿಯರಲ್ಲಿ ಅಸಮಾಧಾನವಿದ್ದರೂ ನೆಹರು-ಇಂದಿರಾ ಗಾಂಧಿಯವರ ಬೆಂಬಲದಿಂದ ಸಂಜೀವಯ್ಯ ಅವಿರೋಧ ಆಯ್ಕೆಗೊಂಡರು. ಸುದ್ರಾಸ—ಆಂಧ್ರಗಳಲ್ಲಿ ಮಂತ್ರಿಯಾಗಿದ್ದ ಇವರು ಅಖಿಲ ಧಾತವ್ಯಕ್ತಿಯಾಗಿಲ್ಲವಾದರೂ ರೆಡ್ಡಿ ಸಂಪುಟ ಸೇರದಿರುವುದರಿಂದಲೇ ಇವರ ಹೆಸರು ಪ್ರಸಿದ್ಧವಾಯಿತು. ಪ್ರಥಮ ಹರಿಜನ ಮುಖ್ಯ ಮಂತ್ರಿಯೆಂಬ ದಾಖಲೆಯಂತೆಯೇ ಪ್ರಥಮ ಹರಿಜನ ಕಾಂಗ್ರೆಸ್ ಅಧ್ಯಕ್ಷ ಎಂಬ ದಾಖಲೆಯನ್ನೂ ಇವರು ಸ್ಥಾಪಿಸಿದರು.

ಜಯಚಾಮ ರಾಜ

ಕರ್ನಾಟಕದ ರಾಜ್ಯಪಾಲ ಜಯಚಾಮರಾಜರು ಪೂರ್ವ – ಪಶ್ಚಿಮಗಳಲ್ಲಿ ಸಾಂಸ್ಕೃತಿಕ ಬಾಂಧವ್ಯವನ್ನು ಹೆಚ್ಚಿಸುವಂತಹ ಉಪನ್ಯಾಸಗಳನ್ನು ಮಾಡಿ ತನ್ನ ಪ್ರವಾಸದ ಅರ್ಧದಲ್ಲೇ ಮರಳಿದ್ದಾರೆ. ದಕ್ಷಿಣ ಅಮೆರಿಕೆಯಲ್ಲಿ ರಾಜಕೀಯ ಪರಿಸ್ಥಿತಿಯು ನೆಟ್ಟಗಿಲ್ಲವಾದುದರಿಂದಲೇ ಅಲ್ಲಿನ ಪ್ರವಾಸವನ್ನು ನಿಲ್ಲಿಸಿದ್ದಾರೆ. ಹಾಗಿದ್ದರೂ ಜುಲೈ ೧೫ಕ್ಕೆ ಮೊದಲು ಇವರು ಅಧಿಕಾರ ಸ್ವೀಕರಿಸುವುದಿಲ್ಲವೆಂದು ಗೊತ್ತಾಗಿದೆ. ಮದ್ರಾಸಿನ ರಾಜ್ಯಪಾಲರಿಂದು ಇವರು ನೇಮಕಗೊಳ್ಳುವರೆಂಬ ಕಿರಿವದಂತಿಯೊಂದು ಹರಿದಿತ್ತಾದರೂ ಮುಖ್ಯ ಮಂತ್ರಿ ಕಂದಿಯವರ ಹೇಳಿಕೆಯನ್ನು ನೋಡುವಾಗ, ಇದು ನಿಂತಧಾರವೆಂದೂ

ಅಣ್ವಸ್ತ್ರ ವಿರೋಧ

ಅಣ್ವಸ್ತ್ರ ವಿರೋಧೀ ಪರಿಷತ್ತೊಂದು ನವದೆಹಲಿಯಲ್ಲಿ ಗಾಂಧಿ ಶಾಂತಿ ಸಂಸ್ಥೆಯ ಆಶ್ರಯದಲ್ಲಿ ಇದೇ ದಿನಾಂಕ ೧೬ರಂದು ಪ್ರಾರಂಭವಾಗುತ್ತದು. ಇದರಲ್ಲಿ ದೇಶವಿದೇಶಗಳ ಸುಮಾರು ೧೦೦ ಜನರು ಸುಪ್ರಸಿದ್ಧ ತತ್ವಜ್ಞಾನಿಗಳೂ ವಿಜ್ಞಾನಿಗಳೂ ಭಾಗವಹಿಸುವರೆಂದು ಅಂದಾಜು ಮಾಡಲಾಗಿದೆ. ಮಾನವ ಸಂಸ್ಕೃತಿಗೆ ಎದುರಾದ ಗಂಡಾಂತರದ ಬಗ್ಗೆ ಜನರ ಭಾವನೆಗಳೇನೆಂಬುದನ್ನು ವ್ಯಕ್ತ ಪಡಿಸುವುದು ಮತ್ತು ವಿನಾಶಕಾರಿ ಕೃತ್ಯಗಳಲ್ಲಿ ತೊಡಗಿರಾಗಿರುವವರನ್ನು ಯೋಗ್ಯ ಪ್ರಭಾವ ಬೀರಿ ಅವುಗಳಿಂದ ದೂರವಿರುವಂತೆ ಮಾಡಲು ಪ್ರೇರೇಪಿಸುವುದೇ ಈ ಪರಿಷತ್ತಿನ ಉದ್ದೇಶ. ಭಾರತದ ಭೂತಪೂರ್ವ ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದರು ಈ ಪರಿಷತ್ತನ್ನು ಉದ್ಘಾಟಿಸಲಿರುವರು. ಜಗತ್ತು ಇಂದು ಮೂರಕಾತ್ರಗಳ ತಯಾರಿಕೆಯಿಂದ ಗಂಡಾಂತರಗಳನ್ನು ಎದುರಿಸುತ್ತಿದೆಯೆಂದೂ ಇದು ದೂರವಾಗ ಬೇಕಾದರೆ, ಸಂಪೂರ್ಣ ನಿಶ್ಯಸ್ತ್ರೀಕರಣವಾಗಬೇಕೆಂದೂ ಎಲ್ಲರೂ ಒಪ್ಪಿದ್ದಾರೆ. ಕೇವಲ ಶಸ್ತ್ರರಹಿತರು ಮಾತ್ರವಲ್ಲ; ಅಣ್ವಸ್ತ್ರ ತಯಾರಿಸುತ್ತಿರುವ ಅಮೆರಿಕೆ–ರಷ್ಯಗಳ ನಾಯಕರೂ ಈ ಅಭಿಪ್ರಾಯವನ್ನು ಅಲ್ಲಗಳೆಯುವ ಸಾಹಸ ತೋರಿಸುತ್ತಿಲ್ಲ. ಅಣ್ವಸ್ತ್ರ ಮೂಲಿಕೆಗಳಿಂದಾಗಿ ನಾವಿಂದು ಜಗತ್ತಿನ ಭವಿಷ್ಯವನ್ನು ನಿರ್ಮಿಸುವ ಘಟ್ಟಕ್ಕೆ ಬಂದಿದ್ದೇವೆ ಎಂಬ ಅಧ್ಯಕ್ಷ ಕೆನ್ನೆಡಿಯವರ ಹೇಳಿಕೆಯನ್ನೇ ಕ್ರುಶ್ಚೇವರೂ ಬೇಕಾದರೆ ಪುನರುಚ್ಚರಿಸಾತ್ತಾರೆ. ಎತ್ತರೆತ್ತರದ ವೇದಿಕೆಗಳ ಮೇಲೆ ನಿಂತು ಅಣ್ವಸ್ತ್ರ ಪ್ರತಿಬಂಧದ ಬಗ್ಗೆ ಕಿವಿ ಕಿತ್ತುಡೆನಿಸುವಷ್ಟು ಭಾಷಣ ಬಿಗಿಯುತ್ತಾರೆ. ಸದ್ಯ ಸೇರಲಿರುವ ಅಣ್ವಸ್ತ್ರ ವಿರೋಧೀ ಪರಿಷತ್ತಿನ ಉದ್ದೇಶವನ್ನು ತಿಳಿದುಕೊಂಡೇ ೧೭ ರಾಷ್ಟ್ರಗಳ ನಿಶ್ಯಸ್ತ್ರೀಕರಣಸಭೆಯು ಕುಂಭಕೋಣಂ ನಡಿಗೆಯಿಂದ ಮುಗ್ಗರಿಸುತ್ತ ನಡೆಯುತ್ತದೆ. ಈ ಪರಿಷತ್ತಾದರೂ ಗೊತ್ತುವಳಿಗಳನ್ನು ಸ್ವೀಕರಿಸಿ ಇದಕ್ಕಿಂತ ದೊಡ್ಡ ಸಾದನೆಯನ್ನು ಮಾಡೀತೆಂದು ನಂಬುವುದು ಕಷ್ಟ.

ಅವರು ತಮ್ಮ ಈಗಿನ ಹುದ್ದೆಯಲ್ಲೇ ಮುಂದುವರಿಯುವರೆಂದೂ ಗೊತ್ತಾಗಿದೆ.

ಭಕ್ತವತ್ಸಲಂ

ಅಖಿಲ ಭಾರತೀಯ ಶೈಕ್ಷಣಿಕ ಯೋಜನೆಯಂತೆ ಮುಂದಿನ ಶಾಲಾ ವರ್ಷಾರಂಭದಲ್ಲಿ ಹನ್ನೊಂದನೆಯ ತರಗತಿಯನ್ನು ಕೆಲವು ಹೈಸ್ಕೂಲುಗಳಲ್ಲಿ ತೆರೆಯಬೇಕಾಗುವುದು. ಶಿಕ್ಷಣಕ್ಷೇತ್ರದಲ್ಲಿ ಸಾಕಷ್ಟು ಮುಂದುವರಿದ ಮದ್ರಾಸ್ ಸರಕಾರವು ಈ ಹಾಯರ್ ಸೆಕೆಂಡರಿ ಪದ್ಧತಿಯನ್ನು ಒಪ್ಪದೆ ಪ್ರತಿ ಸೂಚನೆಯನ್ನು ಕೇಂದ್ರಕ್ಕೆ ಕಳಿಸಿದೆ. ಏಳು ವರ್ಷಗಳ ಪ್ರಾಥಮಿಕ ಶಿಕ್ಷಣ, ಮೂರು ವರ್ಷಗಳ ಸೆಕೆಂಡರಿ ಶಿಕ್ಷಣ, ಎರಡು ವರ್ಷಗಳ ವಿಶ್ವವಿದ್ಯಾಲಯ ತಯೂರಿಯ ಜೂನಿಯರ್ ಡಿಪ್ಲೊಮಾ ಶಿಕ್ಷಣ ಮತ್ತು ಮುಂದೆ ಮೂರು ವರ್ಷಗಳ ಪದವೀ ಶಿಕ್ಷಣ ಹೀಗೆ ಒಟ್ಟು ೧೫ ವರ್ಷ ಶಿಕ್ಷಣದ ಒಂದು ಸಲಹೆಯನ್ನು ಮಂತ್ರಿ ಭಕ್ತವತ್ಸಲಂ ಮುಂದೆ ಇಟ್ಟಿದ್ದಾರೆ. ಹನ್ನೊಂದನೆಯ ತರಗತಿಯನ್ನು ಹೈಸ್ಕೂಲಿನಲ್ಲಿ ತೆರೆಯುವುದರಿಂದ ಆರ್ಥಿಕ, ವ್ಯಾವಹಾರಿಕ ತೊಂದರೆಗಳಲ್ಲದೆ, ಈ ಯೋಜನೆಯು ಸಂಪೂರ್ಣ ಕಾರ್ಯಗತವಾಗ ಬೇಕಾದರೆ, ೩೦ ವರ್ಷಗಳು ಬೇಕಾಗುವುದೆಂಬುದೂ ಇದಕ್ಕೆ ಕಾರಣವಾಗಿದೆ.

ಗಮಾಲ್ ನಸ್ಸೇರ್

ಸಂಯುಕ್ತ ಅರಬ ಪ್ರಜಾರಾಜ್ಯದ ಅಧ್ಯಕ್ಷ ನಸ್ಸೇರರು ನೆಹರುಗಳ ಸಮರ್ಥಕರು. ಕಾಶ್ಮೀರ ಸಂಬಂಧದಲ್ಲಿ ಒಂದು ಗೊತ್ತುವಳಿಯನ್ನು ತಯೂರಿಸಲು ಸಂ. ಅರಬ ರಾಜ್ಯದ ಪ್ರತಿನಿಧಿಯು ಅಯರ್ಲೆಂಡ ಮೊದಲಾದುವುಗಳೊಡನೆ ಸೇರಿಕೊಂಡಿರುವನೆಂಬ ಸುದ್ದಿಯಿತ್ತು. ಭಾರತವು ಕಾಶ್ಮೀರದ ಬಗ್ಗೆ ತಳೆದ ನಿಲುಮೆಯನ್ನು ನಸ್ಸೇರರು ಸಂಪೂರ್ಣವಾಗಿ ಬೆಂಬಲಿಸಿರುವರಲ್ಲದೇ ಜೂನ್ ೧೫ಕ್ಕೆ ಸೇರಲಿರುವ ಭದ್ರತಾ ಸಮಿತಿಯ ಸಭೆಯಲ್ಲೂ ಭಾರತದ ಪಕ್ಷ ವಹಿಸುವುದೆಂದೂ ಭರವಸೆಯಿತ್ತಿದ್ದಾರೆ. ಸುಯೇಜ ಕಾಲುವೆಯ ರಾಷ್ಟ್ರೀಕರಣವನ್ನು ಸಮರ್ಥಿಸಿದ ಭಾರತವನ್ನು ನಸ್ಸೇರರು ಅಷ್ಟು ಸುಲಭದಲ್ಲಿ ಮರೆತು ಬಿಡಲಾರರು.

ಜೋಕಿಂ ಆಳ್ವ

ಲೋಕ ಸಭೆಯಲ್ಲಿ ಉತ್ತರ ಕನ್ನಡ ಜಿಲ್ಲೆಯನ್ನು ಪ್ರತಿನಿಧಿಸುವ ಜೋಕಿಂ ಆಳ್ವಾರು ತನ್ನ ಕ್ಷೇತ್ರದಲ್ಲಿಯೂ ತಿರುಗಾಡುತ್ತಾರೆ; ವಿದೇಶಗಳಲ್ಲಿಯೂ ಸಂಚಾರ ಮಾಡುತ್ತಾರೆ. ಕಳೆದ ವರ್ಷ ಅವರು ಆಫ್ರಿಕೆಯನ್ನು ಸಂದರ್ಶಿಸಿದ್ದರು. ಇತ್ತೀಚೆಗೆ ಅವರು ಆಸ್ಟ್ರೇಲಿಯಾ, ಇಂಡೋನೇಶ್ಯ, ಮಲಯಾ ಮತ್ತು ಥಾಯ್‌ಲೆಂಡಗಳನ್ನು ತಿರುಗಿ ಮರಳಿಬಂದಿದ್ದಾರೆ. ಗೋವೆಯನ್ನು ವಿಮೋಚನೆಗೊಳಿಸಿದ ನಂತರ ಆಗ್ನೇಯ ಏಶ್ಯಾದಲ್ಲಿ ಭಾರತದ ಪ್ರತಿಷ್ಠೆಯು ಹೆಚ್ಚುತ್ತ ಬರುತ್ತಿದೆ ಎಂಬ ತಮ್ಮ ಅನುಭವವನ್ನು ತಿಳಿಸಿ, ಈ ಪ್ರದೇಶಗಳ ರಾಷ್ಟ್ರಗಳೊಡನೆ ಭಾರತವು ತನ್ನ ಸಂಪರ್ಕವನ್ನು ಹೆಚ್ಚಿಸಿಕೊಳ್ಳಬೇಕೆಂದು ಸಲಹೆಯಿತ್ತಿದ್ದಾರೆ. ಶ್ರೀ ಆಳ್ವಾ ಏರ್ ಇಂಡಿಯಾ ಇಂಟರ್ ನೇಶನಲ್‌ದ ವ್ಯವಹಾರ ಸಲಹಾ ಸಮಿತಿಯ ಸದಸ್ಯರಾಗಿರುವರು.

ಅಯ್ಯೂಬ ಖಾನ್

ದಂಡಿನಾಡಳಿತೆಯ ಅಧ್ಯಕ್ಷ ಅಯ್ಯೂಬ ಖಾನರು ಪಾಕಿಸ್ತಾನದ ಇಸ್ಲಾಮೀ ಪ್ರಜಾರಾಜ್ಯದ ರಾಷ್ಟ್ರಪತಿಯೆಂದು ಪ್ರತಿಜ್ಞೆ ಸ್ವೀಕರಿಸಿದರು. ಪಾಕ್ ಎಸೆಂಬ್ಲಿಯ ವ್ಯವಹಾರಗಳ ಬಗ್ಗೆ ನಿಯಮಾವಳಿಯನ್ನು ಅದು ರಚಿಸಿಕೊಳ್ಳುವ ವರೆಗೆ ಅಯೂಬಖಾನ ಸರಕಾರವೇ ತಾತ್ಕಾಲಿಕ ನಿಯಮಗಳನ್ನು ಮಾಡಿಕೊಟ್ಟಿದೆ. ಇವುಗಳಲ್ಲಿ ಅಸೆಂಬ್ಲಿಯನ್ನು ಕುರಿತು ಅಧ್ಯಕ್ಷರು ಮಾಡಿದ ಭಾಷಣದ ಮೇಲೆ ಚರ್ಚೆ ನಡೆಸುವ ಅಧಿಕಾರವು ಸದಸ್ಯರಿಗಿರುವುದಿಲ್ಲ. ನಿಲುವಳಿ ಸೂಚನೆ, ಪ್ರಶ್ನಾವಳಿ, ಖಾಸಗಿ ಗೊತ್ತುವಳಿ, ಉಪಸಮಿತಿಗಳು ಎಲ್ಲವುಗಳಿಗೂ ನಿಯಮವು ಅನುಕೂಲವಾಗಿರುವುದಾದರೂ ರಾಷ್ಟ್ರಪತಿಗಳ ಭಾಷಣವನ್ನು ವಿಮರ್ಶಿಸುವ ಅಧಿಕಾರವನ್ನು ಸದಸ್ಯರಿಂದ ಕಿತ್ತುಕೊಂಡುದು ಉದ್ದೇಶಪೂರ್ಣವೆನಿಸುತ್ತದೆ.

ಯು. ಥಾಂಟು

ಪಶ್ಚಿಮ ಈರಿಯಾನ್ ವಿಮೋಚನೆಗಾಗಿ ಚಿಂತಿಸುತ್ತಿರುವ ಅಧ್ಯಕ್ಷ ಸುಕರ್ಣರಿಗೆ ಸಂ. ರಾ. ಸಂಘದ ತಾತ್ಕಾಲಿಕ ಕಾರ್ಯದರ್ಶಿ ಯು ಥಾಂಟರೊಂದು ಸೂಚನೆಯನ್ನು ಕಳಿಸಿದ್ದಾರೆ. ನೆದರ್ಲೆಂಡು ಇಂದು ಪ. ಈರಿಯನ್‌ನಿಂದ ಕಂಬಿ ಕೀಳಲು ಸಮ್ಮತಿಸಿರುವುದರಿಂದ ಉಭಯತರರ ನಡುವೆ ಸಂಧಾನದ ಮಾತುಕತೆಗಳನ್ನು ತೊಡಗಿಸಿ ಈ ಮಾಮಲೆಯನ್ನು ಕೊನೆಗೊಳಿಸಬೇಕೆಂದು ಇವರ ಆಶಯ. ಒಮ್ಮೆ ಸಂಧಾನಾತ್ಮಕ ಮಾತುಕತೆಗಳು ಪ್ರಾರಂಭವಾದುವೆಂದರೆ, ಎರಡೂ ಪಕ್ಷಗಳ ನಡುವೆ ಇರುವ ತೀವ್ರ ಮತಭೇದಗಳು ದೂರವಾಗುವುವೆಂದು ಥಾಂಟು ತಿಳಿಯುತ್ತಾರೆ. ಪ. ಈರಿಯನ್ನನ್ನು ಸದ್ಯ ಸಂ. ರಾ. ಸಂಘದ ಅಧೀನದಲ್ಲಿ ಇತ್ತು ಮುಂದೆ ಸ್ವಯಂ ನಿರ್ಣಯಾಧಿಕಾರದ ಅವಕಾಶವನ್ನು ಆಲ್ಲಿನವರಿಗೆ ಈಯುವಂತೆ ಅದನ್ನು ಇಂಡೋನೇಶ್ಯಕ್ಕೆ ಒಪ್ಪಿಸಬೇಕೆಂಬ ತತ್ವವನ್ನು ಹೊಲ್ಲೆಂಡು ಒಪ್ಪಿಕೊಂಡಿದೆ.

ಅಲ್ಲಲ್ಲಿಯ ಸುದ್ದಿಸಾರ

ಹೋಟೆಲ್ ಕಲ್ಪನಾ ಎಂಬ ಅತ್ಯಾಧುನಿಕ ಮಾದರಿಯ ವಸತಿ, ಸೌಕರ್ಯವಿರುವ ಊಟ ಮತ್ತು ಕಾಫಿ ಹೋಟೆಲಿನ ಪ್ರಾರಂಭೋತ್ಸವವು ಇದೇ ತಾ. 7ರಂದು ಉಡುಪಿಯ ಉಪೇಂದ್ರ ಭಾಗ್ ಕಟ್ಟಡದಲ್ಲಿ ವಿಜೃಂಭಣೆಯಿಂದ ನೆರವೇರಿತು. ಈ ಬಗ್ಗೆ ಸಂಜೆ ಏರ್ಪಡಿಸಲಾದ ಉಪಾಹಾರ ಸತ್ಕಾರ ಸಮಾರಂಭದಲ್ಲಿ ಪ್ರೊಪ್ರೈಟರ್ ಶ್ರೀ ಎಸ್. ಡಿ. ಪೆಜತ್ತಾಯರು ಅತಿಥಿಗಳನ್ನು ಸ್ವಾಗತಿಸಿದರು. ಡಾ. ಟಿ. ಮಾಧವ ಪೈಯವರು ಈ ಸಂದರ್ಭದಲ್ಲಿ ಶ್ರೀ ಪೆಜತ್ತಾಯರ ನೂತನ ಸಾಹಸೋದ್ಯಮವನ್ನು ಹರಸುತ್ತಾ ಹೋಟೆಲುಗಳು ಜನರನ್ನು ಆಕರ್ಷಿಸುವಂತೆ ಶುಚಿರುಚಿಗಳನ್ನು ಕಾಯ್ದುಕೊಳ್ಳಬೇಕೆಂದೂ, ಹೋಟೆಲಿನವರು ಶೃದ್ಧೆಯಿಂದಲೂ, ಪ್ರಾಮಾಣಿಕತೆಯಿಂದಲೂ ವರ್ತಿಸಿ ಉನ್ನತ ಮಟ್ಟವನ್ನು ಇಟ್ಟುಕೊಳ್ಳಬೇಕೆಂದೂ ಹೇಳಿದರು. ಸರ್ವರೂ ಸಹಕರಿಸಿ ನವೋದ್ಯಮವು ಯಶಸ್ವಿಯಾಗುವಂತೆ ಪ್ರೋತ್ಸಾಹಿಸಬೇಕೆಂದು ಕೇಳಿಕೊಂಡು ಅಂತ್ಯದಲ್ಲಿ ಶ್ರೀ ಪೆಜತ್ತಾಯರು ವಂದನೆಗಳನ್ನರ್ಪಿಸಿದರು. ಈ ಹೋಟೆಲು ಉಡುಪಿಯ ಪ್ರಥಮ ವರ್ಗದ್ದಾಗುವುದೆಂದು ಹಾರೈಸಲಾಗಿದೆ.

ಕವಿತಾ ಬಾಲಶಿಕ್ಷಣ ಶಾಲೆ—ಎಂಬ 5 ವರ್ಷ ಪ್ರಾಯದ ಚಿಕ್ಕ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಹಿಂದಿನ ಹಿರಿಯರ ಕವಿತಾ ರಾಗ ಪದ್ಧತಿಯನ್ನು ಅನುಸರಿಸಿ ಕಲಿಸುವ ನರ್ಸರಿ ಶಾಲೆಯೊಂದು ಇದೇ ತಾ. 6ರಂದು ಅಂಬಲಪಾಡಿಯಲ್ಲಿ ಶ್ರೀ ಕೆ. ಮುಖ್ಯಪ್ರಾಣ ಉಪಾಧ್ಯಾಯರಿಂದ ತೆರೆಯಲ್ಪಟ್ಟಿದೆ ಚಿಕ್ಕ ಮಕ್ಕಳಿಗೆ ಭಾಷೆ, ಓದುಬರಹ, ದೈಹಿಕ, ನೈತಿಕ ಶಿಕ್ಷಣವನ್ನು ಹೇಗೆ ಕಲಿಸಿಕೊಡಬೇಕೆಂದು ತೋರಿಸುವುದೇ ಈ ಶಾಲೆಯ ಗುರಿಯಾಗಿದೆ. ಇದು ಐಗಳ ಮತದ ಯಕ್ಷಗಾನ ಪದ್ಧತಿಯ ತಳಹದಿಯಾಗಿದೆ.

ಬೆಂಗ್ರೆ—ಸರಕಾರೀ ಫಿಶರೀಸ್ ಹಾ.ಎ. ಶಾಲೆಯ ಉದ್ಘಾಟನಾ ಸಮಾರಂಭವು ಶ್ರೀ ಎಂ. ಮಧ್ವರಾಜ ಎಂ. ಎಲ್. ಎ.ರವರ ಅಧ್ಯಕ್ಷತೆಯಲ್ಲಿ ಶ್ರೀ ಎಸ್. ಧರ್ಮ ಸಾಮ್ರಾಜ್ಯ ಎಂ. ಎಲ್. ಎರವರಿಂದ ತಾ. 6ರಂದು ನೆರವೇರಿಸಲ್ಪಟ್ಟಿತು. ಶ್ರೀ ಎ. ಜೆ. ಅಲ್ಸೆಯವರು ಮಕ್ಕಳಿಗೆ ಬಹುಮಾನ ವಿತರಣೆ ಮಾಡಿದರು ಸಭಿಕರಲ್ಲಿ ಶ್ರೀ ಆನಂದ ಕುಂದ ಹೆಗ್ಡೆಯವರು ಭಾಷಣವಿತ್ತರು.

ಕಕ್ಕುಂಜೆ— ಇಲ್ಲಿಯ ಖಾಸಗೀ ಎಲಿಮೆಂಟರಿ ಶಾಲಾ ಮಕ್ಕಳಿಗೆ ಗಂಜಿ ಒದಗಿಸುವ ಕೇಂದ್ರದ ಉದ್ಘಾಟನಾ ಸಮಾರಂಭವು ಇತ್ತೀಚೆಗೆ ಶ್ರೀ ಎ. ಜೆ. ಆಲ್ಸೆಯವರ ಅಧ್ಯಕ್ಷತೆಯಲ್ಲಿ ಶ್ರೀ ಎಂ. ಮಧ್ವರಾಜ, ಎಂ,ಎಲ್. ಎ. ಅವರಿಂದ ಜರಗಿಸಲ್ಪಟ್ಟಿತು.

ಶ್ರೀ ಶ್ರೀನಿವಾಸ ಶೆಟ್ಟರ ಆಯ್ಕೆ—ಇದೇ 3ರಂದು ನಡೆದ ನೈಋತ್ಯ ಪದವೀಧರರ ಕ್ಷೇತ್ರ ಚುನಾವಣೆಯಲ್ಲಿ ಶ್ರೀ ವಿ. ಶ್ರೀನಿವಾಸ ಶೆಟ್ಟರು ಹತ್ತಿರದ ಕಾಂಗ್ರೆಸ್ ಪ್ರತಿಸ್ಪರ್ಧಿ ಶ್ರೀನಿವಾಸ ಮೂರ್ತಿಯವರಿಗಿಂತ 20 ಮತ ಹೆಚ್ಚು ಗಳಿಸಿ ಮೈಸೂರು ವಿಧಾನ ಪರಿಷತ್ತಿಗೆ ಚುನಾಯಿಸಲ್ಪಟ್ಟಿರುವರು.

ಎಕೇಡೆಮಿಯ ಸಂಗೀತ ಶಾಲೆಗೆ ಸರಕಾರದ ಮಾನ್ಯತೆ—ಮಣಿಪಾಲದ ಎಕೇಡೆಮಿ ಆಫ್ ಜನರಲ್ ಎಜ್ಯುಕೇಶನ್ ಮಣಿಪಾಲ ಇವರು ನಡೆಸುತ್ತಿರುವ ಸಂಗೀತ ಮತ್ತು ಲಲಿತ ಕಲಾ ಶಾಲೆಗೆ ಮೈಸೂರು ಸರಕಾರದವರು ಮಾನ್ಯತೆಯಿತ್ತಿರುವರೆಂದೂ ಅದರಂತೆ ಈ ಶಾಲೆಯ ವಿದ್ಯಾರ್ಥಿಗಳು ಮೈಸೂರು ಸರಕಾರದ ಸಂಗೀತ ಪರೀಕ್ಷೆಗೆ ಕುಳಿತು ಕೊಳ್ಳಲು ಅರ್ಹರಾಗುವರೆಂದೂ ತಿಳಿದು ಬರುತ್ತದೆ. ಈ ಶಾಲೆಯ ಮೂರು ಕೇಂದ್ರಗಳು ಉಡುಪಿಯಲ್ಲಿಯೂ ಒಂದು ಕೇಂದ್ರವು ಮಣಿಪಾಲದಲ್ಲಿಯೂ, ಇದು ಉತ್ತರಾದಿ, ದಕ್ಷಿಣಾದಿ ಸಂಗೀತ ಪಿಟೀಲು, ನೃತ್ಯ, ತಬ್ಲಾ, ಸಿತಾರ, ಮತ್ತು ಕಟ್ಟಿಂಗ್, ಟೈಲರಿಂಗ್ ವಿಷಯಗಳಲ್ಲಿ ಅತೀ ಕಡಿಮೆ ಶುಲ್ಕದಲ್ಲಿ ವ್ಯಾಸಂಗ ವನ್ನೀಯುವ ವ್ಯವಸ್ಥೆಯಿದೆ. ಸರಕಾರೀ ಪರೀಕ್ಷೆಗೆ ಕುಳಿತುಕೊಳ್ಳ ಬಯಸುವ ವಿದ್ಯಾರ್ಥಿಗಳು 1962ನೇ ಜೂನ್ ತಿಂಗಳಿಂದಲೇ ಪ್ರವೇಶ ಪಡೆದು ವ್ಯಾಸಂಗವನ್ನು ಪ್ರಾರಂಭಿಸ ಬೇಕಾಗಿದೆ. ಹೆಚ್ಚಿನ ವಿವರಗಳನ್ನು ಉಡುಪಿ ಮುಕುಂದ ನಿವಾಸದಲ್ಲಿರುವ ಕೇಂದ್ರ ಕಚೇರಿಯಿಂದ ತಿಳಿದುಕೊಳ್ಳಬಹುದಾಗಿದೆ.

ಸುರತ್ಕಲ್—ಮುಕ್ಕಮಿತ್ರಪಟ್ಟಣ ಗಂಗಯ ಸ್ಮಾರಕ ಫಂಡಿನ ಶ್ರೀ ರಾಮ ಭಜನಾ ಮಂಡಳಿಯ ವಾರ್ಷಿಕ ನಗರ ಸಂಕೀರ್ತನೆಯು ತಾ. 23-5-1962ರಿಂದ 2-6-62ರ ತನಕ ಜರಗಿತು ಈ ಫಂಡಿನ 20ನೆಯ ವರ್ಧಂತಿ ಉತ್ಸವವು ದಿನಾಂಕ 3ರಂದು ಶ್ರೀ ಕೆ. ಕೊರಗಪ್ಪ ಸುವರ್ಣರ ಅಧ್ಯಕ್ಷತೆಯಲ್ಲಿ ಮಿತ್ರಪಟ್ಟಣ ಮೊಗವೀರ ವಿದ್ಯಾರ್ಥಿ ಸಂಘ ಮುಂಬೈ ಇವರಿಂದ ಕೊಡಿಸಲಾದ ಇನಾಂ ಹಂಚೋಣ, ಶ್ರೀ ಹರಿದಾಸ ನಾರಾಯಣ ಕರ್ಣಿಕರಿಂದ ಶ್ರೀ ಕನಕ ದಾಸಚರಿತ ಹರಿಕಥಾ ಕಾಲಕ್ಷೇಪ, ವಂದನಾರ್ಪಣೆ, ಮಂಗಲ ಗೀತೆ ಮೊದಲಾದ ಕಾರ್ಯಕ್ರಮಗಳೊಂದಿಗೆ ಯಶಸ್ವಿಯಾಗಿ ಜರಗಿತು.

ಉಡುಪಿ ಡಿವಿಜನಲ್ ಆಫೀಸಿಗೆ ಮಂಗಳೂರು ಎಲ್. ಐ. ಸಿ. ಏಜಂಟರ ಭೇಟಿ— ಇದೇ ತಾ. 1ರಂದು ಮಂಗಳೂರಿನ ಕೆಲವು ಎಲ್. ಐ. ಸಿ. ಏಜಂಟರು ಉಡುಪಿಯ ಡಿವಿಜನಲ್ ಆಫೀಸಿಗೆ ಭೇಟಿ ಇತ್ತರು. ಅವರು ಸ್ಪೆಷಲ್ ಬಸ್ಸಿನಲ್ಲಿ ಉಡುಪಿಗೆ 10 ಗಂಟೆಗೆ ತಲಪಿದರು. ಬೋಂಬೆ ಲೈಫ್ ಕಟ್ಟಡದಲ್ಲಿ ಸಭೆಯೊಂದು ಏರ್ಪಟ್ಟು, ಈ ಏಜಂಟರುಗಳು ಸೀನಿಯರ್ ಡಿವಿಜನಲ್ ಮೆನೇಜರರನ್ನೂ ಡಿವಿಜನಲ್ ಆಫೀಸ್ ಮತ್ತು ಉಡುಪಿ ಶಾಖಾ ಆಫೀಸಿನ ಅಧಿಕಾರಿಗಳನ್ನೂ ಭೆಟ್ಟಿಯೂದರು. ಲಘು ಉಪಹಾರವಾದ ಬಳಿಕ ಸೀನಿಯರ್ ಡಿವಿಜನಲ್ ಮೆನೇಜರರು ಸಭೆಯನ್ನುದ್ದೇಶಿಸಿ ಮಾತನಾಡಿ ಕಾರ್ಯನಿರತವಾಗಿರುವ ಆಫೀಸಿನ ವಿವಿಧ ಭಾಗಗಳನ್ನು ಸುತ್ತಾಡಿಕೊಂಡು ಬರುವಂತೆ ಏಜಂಟರನ್ನು ಕೇಳಿಕೊಂಡರು. ವ್ಯಾಪಕವಾದ ಕಾರ್ಯಕ್ರಮದಂತೆ ಏಜಂಟರು ತಂಡ ತಂಡವಾಗಿ ವಿವಿಧ ಶಾಖೆಗಳನ್ನು ಸಂದರ್ಶಿಸಿದರು. ಕಳುಹಿಸಲ್ಪಟ್ಟ ಪ್ರಪೋಸಲ್‌ಗಳು, ಪೊಲಿಸಿಗಳು ಕೊಡುವ ವರೆಗಿನ ಕೆಲಸಗಳು ಹೇಗೆ ಜರಗುತ್ತಿವೆ ಎಂಬುದನ್ನೂ ಪ್ರಪೋಸಲ್‌ಗಳು ಅಪೂರ್ಣ ಯಾ ದೋಷಪೂರ್ಣವಾಗಿದ್ದರೆ ಕಾರ್ಯ ವಿಳಂಬವು ಹೇಗೆ ಅನಿವಾರ್ಯ ಎಂಬುದನ್ನೂ ಅವರಿಗೆ ತೋರಿಸಲಾಯಿತು ವಿಮಾದಾರರ ಸೇವಾಕಾರ್ಯದ ಬೇರೆ ಬೇರೆ ನೋಟಗಳನ್ನು ಅವರಿಗೆ ತೋರಿಸಲಾಯಿತಲ್ಲದೆ ಏಜಂಟರ ಆ ಭಾಗದ ಕೆಲಸವನ್ನೂ ವಿವರಿಸಲಾಯಿತು. ಸಂಜೆ ಉಪಾಹಾರವಾದ ಬಳಿಕ ಏಜಂಟರು ಮಲ್ಪೆಯ ಸುಂದರ ಬೀಚನ್ನೂ ಮಣಿಪಾಲದ ಕಾಲೇಜುಗಳನ್ನೂ ಸಂದರ್ಶಿಸಿ ಮಂಗಳೂರಿಗೆ ಹಿಂತೆರಳಿದರು.

ಉಡುಪಿಯಲ್ಲಿ ಅಭಿವೃದ್ಧಿ ಕಾರ್ಯ ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ಅಭಿವೃದ್ಧಿ ಕ್ಷೇತ್ರದಲ್ಲಿ 1961-62ರಲ್ಲಿ ಹೊಸದಾಗಿ 2 ಶಾಲೆಗಳನ್ನು ತೆರೆಯಲಾಯಿತಲ್ಲದೆ, 4 ಯುವಜನ ಮಂಡಲಗಳನ್ನು ರಚಿಸಲಾಯಿತು, 315 ಹಣ್ಣಿನ ಗಿಡಗಳನ್ನು ನೆಡಲಾಯಿತು. ಹಣ್ಣಿನ ಬೇಸಾಯದ ಕ್ಷೇತ್ರ 60 ಎಕರೆಗಳ ಷ್ಟಾಯಿತು.

55 ವ್ಯವಸಾಯ ಪ್ರಾತ್ಯಕ್ಷಿಕ ಕೇಂದ್ರಗಳು ಕೆಲಸ ಮಾಡುತ್ತಿದ್ದುವು. ಒಂದು ಮಹಿಳಾ ಕಲ್ಯಾಣ ಕೇಂದ್ರವು ಸಂಘಟಿತವಾಯಿತು. 4,832 ಕಿಲೋ ಉತ್ತಮ ಭತ್ತದ ಬೀಜ ಹಾಗೂ ಸುಮಾರು 36,803 ಕಿಲೊ ಕೃತಕ ಗೊಬ್ಬರವನ್ನು ಹಂಚಲಾಯಿತು.

ಸ್ಥಾನಿಕ ಅಭಿವೃದ್ಧಿ ಕಾಮಗಿರಿ ಹಾಗೂ ಗ್ರಾಮೀಣ ನೀರಿನ ಪೂರೈಕೆ, ಯೋಜನೆಗಳ ಅಂಗವಾಗಿ 22 ಬಾವಿಗಳ ರಚನೆ ದುರಸ್ತಿ ಕೆಲಸ ಕೈಗೊಳ್ಳಲಾಯಿತು ಎಂದು ಮೈಸೂರು ವಿಭಾಗದ ಪ್ರಚಾರ ಮತ್ತು ವಾರ್ತಾ ಇಲಾಖೆಯ ಅ ಡೈರೆಕ್ಟರರು ತಿಳಿಸುತ್ತಾರೆ.

ವಿಷಮ ಜ್ವರ ನಿರೋಧಕ ಕಾರ್ಯಕ್ರಮದ ಉದ್ಘಾಟನೆ— ಇದೇ ತಾ. 3ರಂದು ಉಡುಪಿಯ ವಿಕ್ಟೋರಿಯಾ ಜ್ಯುಬಿಲಿ ಯೂನಿಯನ್ ಕ್ಲಬ್ಬಿನಲ್ಲಿ ಉಡುಪಿ ರೊಟರಿ ಕ್ಲಬ್ಬಿನ ನೇತೃತ್ವದಲ್ಲಿ ವಿಷಮ ಜ್ವರ ನಿರೋಧಕ ಟಿ. ಎ. ಬಿ. ಚುಚ್ಚು ಮದ್ದು ಕಾರ್ಯಾಚರಣೆಯ ಉದ್ಘಾಟನೆಯು ಶ್ರೀ ಎಂ. ಮಧ್ವರಾಜ, ಎಂ ಎಲ್ ಎ.ರವರ ಅಧ್ಯಕ್ಷತೆಯಲ್ಲಿ ಮೈಸೂರಿನ ಡಿವಿಜನಲ್ ಕಮಿಶನರ್ ಶ್ರೀ ಬಿ ಬೀರಪ್ಪ, ಐ. ಎ. ಎಸ್, ಅವರಿಂದ ನೆರವೇರಿಸಲ್ಪಟ್ಟಿತು. ಶ್ರೀ ಟಿ. ಎ. ಪೈಯವರು ಸ್ವಾಗತ ಭಾಷಣ ಮಾಡುತ್ತಾ ಉಡುಪಿ ರೊಟರಿ ಕ್ಲಬ್ ಈ ಅವಶ್ಯಕ ಕಾರ್ಯಕ್ರಮವನ್ನು ಖಾಸಗೀ ಡಾಕ್ಟರರ ನೆರವಿನಿಂದ ನೆರವೇರಿಸಲು ಮುಂದೆ ಬಂದಿರುವುದಾಗಿ ತಿಳಿಸಿದರು. ಉದ್ಘಾಟಕರು ರೊಟರಿ ಕ್ಲಬ್ಬಿನ ಈ ಯೋಜನೆಯು ರಾಜ್ಯಕ್ಕೊಂದು ಮಾದರಿಯೆಂದರು. ಅಧ್ಯಕ್ಷರು ಗಾಮಾಂತರ ನೀರು ಪೂರೈಕೆಯ ಯೋಜನೆಯ ಅವಶ್ಯಕತೆಯನ್ನು ತಿಳಿಸಿದ ಮೇಲೆ ರೊಟರಿ ಅಧ್ಯಕ್ಷ ಟಿ. ಆರ್. ಎ. ಪೈಗಳು ವಂದನೆಗಳನ್ನರ್ಪಿಸಿದರು.

ಎಸ್. ಎಸ್. ಕೆ. ವಿದ್ಯಾವರ್ಧಕ ಸಂಘ, ಗದಗ—ಈ ಸಂಘದಿಂದ ಸಾಲರೂಪದ ವಿದ್ಯಾರ್ಥಿ ವೇತನವನ್ನು ಪಡೆಯಲಿಚ್ಛಿಸುವ ನಮ್ಮ ಸಮಾಜದ ವಿದ್ಯಾರ್ಥಿಗಳು ಗೌರವ ಕಾರ್ಯದರ್ಶಿಗಳಿಂದ ಸ್ವತಃ ಅಥವಾ ಟಪ್ಪಾಲು ಮೂಲಕ ನಿಯೋಜಿತ ಅರ್ಜಿ ಫಾರ್ಮ್‌ಗಳನ್ನು ಪಡೆದು ಅವುಗಳನ್ನು ಈ ತಿಂಗಳ ಅಂತ್ಯದೊಳಗೆ ಕಳುಹಿಸಿ ಕೊಡುವಂತೆ ಗೌರವ ಕಾರ್ಯದರ್ಶಿಗಳು ಅಪೇಕ್ಷಿಸುತ್ತಾರೆ. ಅಪೂರ್ಣ ಅರ್ಜಿಗಳನ್ನು ಪರಿಶೀಲಿಸಲಾಗುವುದಿಲ್ಲ ಎಂದೂ ತಿಳಿಸುತ್ತಾರೆ.

ಮುಷ್ಕರ ನೋಟೀಸು—ಉಡುಪಿ ಮುನ್ಸಿಪಾಲಿಟಿ ಮಜೂರರು ಮುನ್ಸಿಪಲ್ ಕಮಿಶನರ ಮುಂದಿಟ್ಟ ಕೇಳಿಕೆಯು ಇತ್ಯರ್ಥವಾಗದಿದ್ದರೆ ತಾ. 7—7—1962ರ ನಂತರ ಮುಷ್ಕರ ಹೂಡುವುದಾಗಿ ಕಮಿಶನರರಿಗೆ ನೋಟೀಸು ಕೊಟ್ಟಿರುವರೆಂದು ತಿಳಿದು ಬರುತ್ತದೆ.

ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ. —ಸಂ ನ]

ನ್ಯಾಯಸಾರ ನ್ಯಾಯ ಮುಕ್ತಾವಳಿ ಮತ್ತು ನ್ಯಾಯಕಲಾನಿಧಿ ಸಹಿತ—(ಸಂಸ್ಕೃತ) ಪ್ರಕಾಶಕರು. ಮದ್ರಾಸು ಸರಕಾರದ ಪ್ರಾಚ್ಯ ಸಂಶೋಧನಾ ವಿಭಾಗ, ಮದ್ರಾಸು. ಪುಟಗಳು. 42 + 50 + ೩೦೦ + ೧೬೮ + ೭೫ + 24 ಬೆಲೆ ರೂ. ೧೮-೦೦

'ಕಣಾದಂ ಪಾಣಿನೀಯಂ ಚ ಸರ್ವ ಶಾಸ್ತ್ರೋಪಕಾರಕಂ' ಎಂಬ ಮಾತು ಪ್ರಸಿದ್ಧವಿದೆ. ಪಾಣಿನಿಯು ವ್ಯಾಕರಣ ಸೂತ್ರಗಳನ್ನೂ ಕಣಾದನು ನ್ಯಾಯ ಶಾಸ್ತ್ರವನ್ನೂ ಬರೆದಿರುವರು. ಕಣಾದನ ವೈಶೇಷಿಕ ಸೂತ್ರವು ನ್ಯಾಯ ಇಲ್ಲವೇ ತರ್ಕ ಶಾಸ್ತ್ರದಲ್ಲಿ ಉಪಲಬ್ಧವಿರುವ ಪ್ರಪ್ರಥಮ ಗ್ರಂಥವಾಗಿದೆ (ಕಾಲ ಸುಮಾರು ಕ್ರಿ. ಪೂ ೬ನೆಯ ಶತಮಾನ) ಮುಂದೆ ಕ್ರಿ ಶ. ೧೩೦೦ ರ ಸುಮಾರಿನಲ್ಲಿ ಗೌತಮನು 'ನ್ಯಾಯ ದರ್ಶನ'ವನ್ನು ಬರೆದು ಪ್ರಮಾಣ, ಪ್ರಮೇಯ, ಸಂದೇಹವೇ ಮೊದಲಾದ ಹದಿನಾರು ನ್ಯಾಯ ಸೂತ್ರಗಳನ್ನು ನಿರೂಪಿಸಿ, ಅವುಗಳ ಆಧಾರದಿಂದ ವೈನಿಕ ಸಿದ್ಧಾಂತಗಳನ್ನು ಮಾಡಿದನು

'ನ್ಯಾಯಸಾರ'ವೆಂಬ ಗ್ರಂಥದ ಕರ್ತೃವು ಸುಮಾರು ಕ್ರಿ ಶ. ೯ನೇ ಶತಮಾನದ ಅಂತ್ಯ ಮತ್ತು ೧೦ನೆ ಶತಮಾನದ ಆದಿಯಲ್ಲಿದ್ದ ಭಾಸರ್ವಜ್ಞನು. ಇವನು ಕಾಶ್ಮೀರಕ್ಕೆ ಸೇರಿದವನಿದ್ದು ಶೈವನು. ಭಾಸರ್ವಜ್ಞನು ನ್ಯಾಯಶಾಸ್ತ್ರದ ನೈಯ್ಯಾಯಿಕೆಗಳನ್ನು ಅಲ್ಲಗಳೆದ ನ್ಯಾಯ ಸೂತ್ರಗಳ ಹೊಸ ಪರಂಪರೆಯನ್ನು ಸ್ಥಾಪಿಸಿದವನು ಗೌತಮನು ಹೇಳಿದ್ದ ಹದಿನಾರು ಸೂತ್ರಗಳಲ್ಲಿ ಪರಿಪೂರ್ಣ ಆತ್ಮ ಜ್ಞಾನವನ್ನು ಗಳಿಸಲು ಪ್ರಮಾಣಗಳ ಜ್ಞಾನ ಅಗತ್ಯವೆಂದು ಹೇಳಿ ಅವನ್ನೇ ಹೆಚ್ಚಾಗಿ ವಿವರಿಸಿದ್ದಾನೆ ಉಳಿದ ಸೂತ್ರಗಳನ್ನೂ ತನ್ನ ಪುಷ್ಟಿಗೆ ಒಳಪಡಿಸಿಕೊಂಡಿದ್ದಾನೆ. 'ಪ್ರತ್ಯಕ್ಷಾನುಮಾನೋಪಮಾನ ಶಬ್ದಾಃ ಪ್ರಮಾಣಾನಿ' ಎಂದು ಮೂರೇ ಮೂರು ಪ್ರಮಾಣಗಳನ್ನು ಅಂಗೀಕರಿಸಿದ್ದಾನೆ. ನೈಯ್ಯಾಯಿಕ ಸಂಪ್ರದಾಯಕ್ಕೆ ಭಿನ್ನವಾದ ಮೋಕ್ಷದ ವಿವರಣೆಯಿತ್ತಿದ್ದಾನೆ. 'ಮೋಕ್ಷವೆಂಬುದು ಸುಖ ದುಃಖ ವಿದೂರವಾದ ಸ್ಥಿತಿಯೆಂದಾದರೆ, ಬುದ್ಧಿವಂತರು ಅದನ್ನು ಬಯಸುವುದಿಲ್ಲ; ಅದು ಸುಖಮಯವೇ ಎಂದಾದರೆ, ಸುಖದುಃಖಗಳು ಒಡನೊಡನಿರುವುವು ಎಂಬುದು ಮರುಳುತನವೆನಿಸುವುದು, ಎನ್ನುತ್ತಾನೆ ಇವನು ಆದುದರಿಂದ ಆತ್ಮದಲ್ಲಿಯೇ ಮೋಕ್ಷವಿದೆಯೆಂದು ಹೇಳುತ್ತಾನೆ. ದ್ರವ್ಯ ಮತ್ತು ಸಮ್ಯತೋದ್ರಷ್ಟವೆಂಬ ಎರಡೇ ಅನುಮಾನಗಳನ್ನಿವನು ಒಪ್ಪಿ ಕಣಾದನ ವಾದವನ್ನೇ ಬೆಂಬಲಿಸುತ್ತಾನೆ ಕೆಲವೆಡೆ ಗೌತಮ-ಕಣಾದರನ್ನು ಬಿಟ್ಟು ತನ್ನದೇ ಅಭಿಪ್ರಾಯವನ್ನೂ ಪ್ರತಿವಾದಿಸಲು ಈತ ಹಿಂದಿರಿಯುವುದಿಲ್ಲ

ನ್ಯಾಯ ಶಾಸ್ತ್ರದಲ್ಲಿ ಅಪೂರ್ವವೂ ನೂತನ ಮೂದರಿಯದೂ ಆದ ಈ 'ನ್ಯಾಯಸಾರ'ಕ್ಕೆ ಒಟ್ಟು ಹೆತ್ತು ವ್ಯಾಖ್ಯಾನಗಳಿವೆಯೆಂದು ತಿಳಿಯಬರುತ್ತದೆ. ಇವುಗಳಲ್ಲಿ ಉಳಿದ ಶತಮಾನದಲ್ಲಿ ಕೊಂಕಣದಲ್ಲಿ ರಾಜನಾಗಿದ್ದ ಅಪರಾರ್ಕ ದೇವನ 'ನ್ಯಾಯ ಮುಕ್ತಾವಳಿ' ಮತ್ತು ವಿದ್ಯಾರಣ್ಯನಾಗಿದ್ದ ೧೩ನೆ ಶತಮಾನದ ಅನಾದಾನಂದನ 'ನ್ಯಾಯಕಲಂನಿಧಿ'ಗಳು ಈಗ ಬೆಳಕಿಗೆ ಬಂದಿವೆ ಅಪರಾರ್ಕದೇವನು ಸ್ವಯಂ ರಾಜನಾದರೂ ನ್ಯಾಯ ಶಾಸ್ತ್ರಪರಿಣತನಾಗಿರುವುದಂತೆ, ಸಮುಚಿತವಾದ ವ್ಯಾಖ್ಯಾನವನ್ನು ಬರೆದಿದ್ದಾನೆ ಇದಕ್ಕೆ 'ನ್ಯಾಯಸಾರವಿವೃತ್ತಿ' ಎಂದೂ ಹೆಸರಿದೆ. 'ನ್ಯಾಯಕಲಾನಿಧಿ'ಯು ನ್ಯಾಯಸಾರದ ಸರಳ ಟೀಕೆಯಾಗಿದ್ದು ಪ್ರಕೃತದ ಗ್ರಂಥದಲ್ಲಿ ಕೊನೆಯಲ್ಲಿ ಪರಿಶಿಷ್ಟ ರೂಪವಾಗಿ ಕೊಡಲಾಗಿದೆ ನ್ಯಾಯ ಸಾರದ ತಾಳೆ ಓಲೆಯ ಪ್ರತಿ ಮಾತ್ರವಲ್ಲದೆ ಮುದ್ರಿತ ಪ್ರತಿಗಳು ಇರುವುದಂದರೂ ನ್ಯಾಯ ಮುಕ್ತಾವಳಿ ಮತ್ತು ನ್ಯಾಯಕಲಾನಿಧಿಗಳು ಒಂದೇ ಒಂದು ತಾಳೆ ಓಲೆಯ ಪ್ರತಿಯಿಂದ ಸದ್ಯ ಮುದ್ರಣಗೊಂಡಿವೆ. ಇವೆರಡೂ ಪರಿಪೂರ್ಣವಾಗಿದ್ದು ಹಳೆಯ ನ್ಯಾಯ ಶಾಸ್ತ್ರ ಅಭ್ಯಾಸಕ್ಕೆ ಅನುಕೂಲವಾಗಿವೆ. ಮದ್ರಾಸು ವಿಶ್ವವಿದ್ಯಾಲಯದ ಸಂಸ್ಕೃತ ಮಹೋಪಾಧ್ಯಾಯ ಪಂಡಿತ ರಂಜ ಎಸ್. ಸುಬ್ರಹ್ಮಣ್ಯ ಸಾಸ್ತ್ರಿ ಮತ್ತು ಅನ್ನಾಮಲೈ ವಿಶ್ವವಿದ್ಯಾಲಯದ ಸಂಸ್ಕೃತೋಪನ್ಯಾಸಕ ಪಂಡಿತರಾದ ವಿ. ಸುಬ್ರಹ್ಮಣ್ಯ ಶಾಸ್ತ್ರಿಯವರು ಈ ಮುಖಾ ಗ್ರಂಥವನ್ನು ಸಂಪಾದಿಸಿ ವಿಮರ್ಶಾತ್ಮಕ ಪ್ರಸ್ತಾವನೆ ಬರೆದಿದ್ದಾರೆ ಮೂಲಕ್ಕೆ ಪ್ರಧಾನ ಸಂಪಾದಕ ಶ್ರೀ ಟಿ ಚಂದ್ರಶೇಖರನ್, ಪಂಡಿತದ್ವಯರು ಮತ್ತು ಮದ್ರಾಸ್ ಸರಕಾರವು ಈ ಗ್ರಂಥ ಪ್ರಕಾಶನದಲ್ಲಿ ತೋರಿದ ಉತ್ಸಾಹದಿಂದ ನ್ಯಾಯ ಶಾಸ್ತ್ರಾಭ್ಯಾಸಿಗಳಿಗೆ ಅವರ್ಣನೀಯ ಪ್ರಯೋಜನ ಲಭಿಸುವುದು.

ಲಘುಪರಿಚಯ

ದ ಕ. ಜಿಲ್ಲೆಯ ಒಳಕೆಯಲ್ಲಿನ ಲೋಕಸೇವಾ ವೃಂದವು ತನ್ನ ಸಾಮಾಜಿಕ ಮತ್ತು ಸಾಂಸ್ಕೃತಿಕ ಕಾರ್ಯಕಲಾಪಗಳಿಗೆ ಈಗಾಗಲೇ ಹೆಸರಾಗಿದೆ. ಇದೀಗ ವೃಂದದವರು 'ಸೇವಾಮೈತ್ರಿ'ಯೆಂಬ ತ್ರೈಮಾಸಿಕ ಪತ್ರಿಕೆಯೊಂದನ್ನು ತಮ್ಮ ಸ್ನೇಹಶ್ರೀಯಂ ನಾರಾಯಣ ಭಟ್ಟ ಮತ್ತು ಇತರ ಸಹಾಯಕರ ಸಂಪಾದಕತನದಲ್ಲಿ ಪ್ರಕಟಿಸಲು ಯೋಚಿಸಿದ್ದಾರೆ ನಮಗೆ ಕೈಸೇರಿದ ಮೊದಲ ಸಂಚಿಕೆಯು ವಿವಿಧಾಭಿರುಚಿಯ ಲೇಖನಗಳಿಂದ ಕೂಡಿದ್ದು ಉನ್ನತ ಮಟ್ಟದಲ್ಲಿಯೇ ಇದೆ ಪ್ರೌಢಪ್ರೌಢರವನ್ನು ಉಳಿಸಿಕೊಂಡು ಸೇವಾ ವೃಂದದ ಸೇವಾಮೈತ್ರಿ ಜನಸೇವೆ ಮಾಡುತ್ತ ಬಾಳಲಿ ಇದರ 'ಮಾನವ ಸುಖದರ್ಶನ ಮತ್ತು ಲೋಕಕಲ್ಯಾಣ'ಗಳ ಉದ್ದೇಶ ಸಫಲವಾಗಲಿ ಪತ್ರಿಕೆಯ ವಾ. ಚಂದಾ: ರೂ. ೩ ಬಿಡಿ ಸಂಚಿಕೆಗೆ ರೂ ೦—೫೫.

೦ ೦ ೦

ಬೊಂಬಾಯಿಯ ದಕ್ಷಿಣ ಕನ್ನಡ ಬ್ರಾಹ್ಮಣರ ಸಂಘವು ಸಿಯೋನ್‌ನಲ್ಲಿ ಕಟ್ಟಿಸಿದ ಶ್ರೀ ಕೃಷ್ಣ ಮಂದಿರದ ಉದ್ಘಾಟನಾ ಸಮಯ ಪ್ರಕಟಿಸಿದ 'ನೆನೆವೊತ್ತಿಗೆ'ಯನ್ನು ಆದರದಿಂದ ಸ್ವೀಕರಿಸುತ್ತೇವೆ ಇದರಲ್ಲಿ, ಬೊಂಬಾ ಧರ್ಮ ಮತ್ತು ತುಳುನಾಡಿನ ದಾರ್ಮಿಕ ನಾಯಕ ವರ್ಗದ ಚಿತ್ರಪಟಗಳು ವಿವಿಧ ಕ್ಷೇತ್ರಗಳ ಚಿತ್ರಗಳೂ ಚೆನ್ನಾಗಿವೆ. ಸಂಪಾದಕರ ಶ್ರಮ ಶ್ಲಾಘನೀಯ.

೦ ೦ ೦

A Glimpse of Kannada culture —ನವ್ಯ ಜಿಲ್ಲೆಯವಂಗಿದ್ದು ಸದ್ಯ ನವದೆಹಲಿಯಲ್ಲಿರುವ ಶ್ರೀ ಬಿ. ಕೃಷ್ಣಾನಂದ ಹೆಗ್ಡೆಯವರು ಕನ್ನಡ ನಾಡಿನ ಜನತೆಯ, ರಾಜಕೀಯ, ಇತಿಹಾಸದ, ಶಿಲ್ಪ, ಸಾಹಿತ್ಯ, ಭಾಷೆ, ಧರ್ಮ, ಸಂಗೀತ, ಜನಪದ ಕಲೆ ಮತ್ತು ಸಾಹಿತ್ಯ, ಹಾಗೂ ಪತ್ರಿಕೋದ್ಯಮಗಳ ಕ್ಷೇತ್ರಗಳನ್ನು ತಿರುಗಾಡಿ ಅವುಗಳ ಸಂಕ್ಷಿಪ್ತ ಪರಿಚಯವನ್ನು ಕನ್ನಡಿಗೇತರರಿಗೆ ಮಾಡಿಕೊಡುವ ಪ್ರಯತ್ನವನ್ನಿದರಲ್ಲಿ ಮಾಡಿದ್ದಾರೆ ದಿಲ್ಲಿಯ ಕನ್ನಡ ಎಮಿವಕ ಸಂಘವು ಇದನ್ನು ಪ್ರಕಟಿಸಿದೆ ಶ್ರೀ ಹೆಗ್ಡೆಯವರು ಇದೇ ರೀತಿಯಲ್ಲಿ ಕನ್ನಡಿಗರಂ ಮತ್ತು ಕನ್ನಡದ ಬಗ್ಗೆ ಇತರರಲ್ಲಿ ಅಭಿಮಾನದ ಭಾವವು ಬೆಳೆಯುವಂತೆ ಮಾಡುವರೆಂದು ಆಶಿಸಿ ಒಹುದು ಕನ್ನಡದ ಮೇಲೆ ಕನ್ನಡಿಗರೇ ಅಭಿಮಾನ ಶೂನ್ಯರಾಗುತ್ತಿರುವ ಈ ದಿನಗಳಲ್ಲಿ ಇಂತಹ ಪೊತ್ತಗೆಗಳು ತುರ್ತಾವಶ್ಯಕವಲ್ಲವೆ?

ಭಾರತೀಯ ಸಂಸ್ಕೃತಿ ವಿದ್ಯಾಪೀಠದ—ನಾಲ್ಕನೆಯ ವಾರ್ಷಿಕೋತ್ಸವದ ಸ್ಮಾರಕ ಸಂಚಿಕೆಯನ್ನು ಅಶ್ಯಾದರದಿಂದ ಒದಗಿಸಿತ್ತಿನೆ. ರಾಜ್ಯದ ರಾಜಧಾನಿ ಬೆಂಗಳೂರಿನ ತಮಿಳರಾಜ ಪೇಟೆಯಲ್ಲಿ ಸಂಸ್ಕೃತ, ಹಿಂದಿ ವಿಷಯವರ್ಗಗಳ, ಬಾಲವಾಡಿಕೆ, ಪ್ರಾಥಮಿಕ ಹಾಗೂ ಮಾಧ್ಯಮಿಕ ಶಾಲಾ ವಿಭಾಗಗಳು ಈ ವಿದ್ಯಾಪೀಠದ ವತಿಯಿಂದ ನಡೆಯುತ್ತಿವೆ ಸಾಂಸ್ಕೃತಿಕ, ಸಾಹಿತ್ಯಿಕ ಕಲೆಯ ವಿವಿಧ ಚಟುವಟಿಕೆಗಳಿಗೆ ಅನುಕೂಲವಿಲ್ಲದ ಈ ವಿದ್ಯಾಪೀಠವು ಈಗಾಗಲೇ ಮನನೀಯವಾಂಶ ಸಾಧನೆಯನ್ನಿಸಿದೆ ವಿದ್ಯಾಪೀಠದ ಕಾರ್ಯವರ್ತಿ ಶ್ರೀ ನಾಗೇಶ ಹತ್ವಾರರ ಕಾರ್ಯದಕ್ಷತೆಯಿಂದ ವತ್ತರ ಸಹಯೋಗಿಗಳ ಸಹಕಾರದಿಂದ ಪೀಠವು ಸಂಸ್ಕೃತ ಪೀಠವಾಗಲಿ ಸ್ಮರಣ ಸಂಚಿಕೆಯು ಐದಂದಿನ ವರ್ಷಗಳಲ್ಲಿ ಇನ್ನೂ ಆಕರ್ಷಕವಾಗಿ ಹೊರ ಬರುವಂತಾಗಲಿ.

—ಗೋರಾ

ಚಂದಾ ಹಣ ಬಾಕಿ ಇರುವವರು ಆದಷ್ಟು ಬೇಗನೆ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ

—ಮೆನೇಜರ್.



ಆಹಾರ ಧಾನ್ಯಗಳು ಕೆಡದಂತೆ ಕಟ್ಟಲಾದ ಉತ್ತರ ಪ್ರದೇಶದ ಹಾಪುರದ ಬೃಹತ್ ಉಗ್ರಾಣವನ್ನಿಲ್ಲಿ ನೋಡಬಹುದು.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ ಇವು ಖಚ್ಚಿದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು ಲೇಖನಬಂಧುಗಳು ಸಹಕರಿಸಬೇಕಾಗಿ ವಿನಂತಿ —ಸಂ.ನ.

ಚೆಕ್ ನುಡಿ ಚಿತ್ರ

ಮರೆಯಲಾರದ ಮಾರ್ಚ್ ತಿಂಗಳು

ಒಂದು ದಿನ ವಸಂತಾಗಮನ ನಮ್ಮ ಗಮನಕ್ಕೆ ಬಂದಿತು. ಜಾಕದ ಮರಗಳಲ್ಲಿ ಚಿಗುರೆಲೆಗಳನ್ನೂ ಕಾಣಿಸಲಿಲ್ಲವಾದರೂ, ತುದಿಗಳಲ್ಲಿ ಹಸುರು ಛಾಯೆ ಮೂಡಿ ಹೊಳೆಯತೊಡಗಿತು. ಬೆಚ್ಚನೆಯ ಹಿತಕರ ವಾದ ಗಾಳಿ ಬೀಸುತ್ತಿತ್ತು. ಗುಬ್ಬಿಗಳು ಚಿಲಿಪಿಲಿಗುಟ್ಟುತ್ತಿದ್ದುವು. ವೆರೋನಿಕಾ ಬೆಳ್ಳುಳ್ಳಿಪ್ಪು ಬಾವುಗದೊಂದಿಗೆ ಹೋಗುತಿದ್ದುದೂ ಕಾಣಿಸಿತು. ಅಳಿಲು ನೋಡಲು ರಿಯೆಗರ್ ಉದ್ಯಾನಕ್ಕೆ ಹೋಗುವೆ ದಾಗಿ ಹೇಳಿದ್ದೆವು. ಆದ್ದರಿಂದ ಸ್ವಲ್ಪ ನೆಲಗಡಲೆಯನ್ನೂ ತೆಗೆದು ಕೊಂಡೆವು ಅಳಿಲು ಸಿಕ್ಕದಿದ್ದರೆ, ನಾವೇ ತಿನ್ನ ಬೇಕೆಂದು ನಿರ್ಧರಿಸಿದೆವು.

ರಸ್ತೆಯ ಮೇಲೆ ಹಳ್ಳಿಗಳಲ್ಲಿ ನಿಂತಿದ್ದ ನೀರಿನಲ್ಲಿ ಮೂಡಿದ್ದ ಸೂರ್ಯ ಬಿಂಬಗಳನ್ನು ದಾಟಿಕೊಂಡು ಹೋಗುತ್ತಿದ್ದೆವು. ಮಾರ್ಚ್ ತಿಂಗಳೆಲ್ಲಿಂದು ಭಾನುವಾರ.

ಎದುರಿಗೊಬ್ಬ ಮಹಿಳೆ ಬಂದಳು— ಮಗು ಮಲಗಿದ್ದ ಕೈ ಗಾಡಿಯೊಂದನ್ನು ನೂಕಿಕೊಂಡು, ತಲೆಯ ಮೇಲೆ ಹಳದಿ ಜಾಕ ಕಟ್ಟಿಕೊಂಡಿದ್ದಳು. ಪುಪ್ಪುಳದಂಗಿ ಕೂಡ ಇನ್ನೂ ತೊಟ್ಟಿದ್ದಳು. ಆಗಾಗ್ಗೆ ತನ್ನ ಮಗುವಿನ ಮೇಲೆ ಬಾಗಿಲಲ್ಲೆ ಮೂಕನ್ನಾಡುತ್ತಿದ್ದಳು.

ನಾವು ಮುಂದೆ ಹೋದಾಗ ಆಕೆ ತಲೆಯೆತ್ತಿ ನೋಡಿದಳು, ಒಡನೆಯೇ ನಾವು ಪರಸ್ಪರರನ್ನು ಗುರುತಿಸಿದೆವು. ಖಂಡಿತವಾಗಿಯೂ, ಲೆಯ ಮಿತ್ರರು! ಎಷ್ಟು ವರ್ಷಗಳಾದ ಮೇಲೆ ಈ ಭೇಟಿ!

"ಓಹೋ! ತಿರುಗಾಡಲಿಕ್ಕೆ ಬಂದಿದ್ದಿಯಾ ಬೆಪ್ಪೀ? ಎಳೆಬಿಸಿಲಲ್ಲ!

"ಹೌದು, ನಾವಿಲ್ಲೇ ಇದ್ದೇವೆ. ರೋಮ್ ರಸ್ತೆಯಲ್ಲೆ"—ಎಂದಳಾಕೆ. ಗಾಡಿಯಲ್ಲಿ ಪುಟ್ಟ ಮಗುವಿತ್ತು. ಗುಲಾಬಿಗೆನ್ನೆ ಸಂತಸದ ಹಕ್ಕಿಮರಿ.

"ಈಗೇನು ಮಾಡುತ್ತಿದ್ದಿ ಬೆಪ್ಪೀ?"—ಎಂದು ಕೇಳಿದೆ, ನಾನು.

"ಏನೂ ಇಲ್ಲ ಮದುವೆಯಾಯಿತು. ಇವನು ಯಾರು? ಮಗನೋ?

"ಬೆಪ್ಪೀ! ಆ ಹಳದಿ ಜಾಕ ಇನ್ನೂ ಇದೆಯೇ?!"

"ಓಹೋ! ಇದು ಬೇರೆ! ಆ ಮೇಲೆ ಎಷ್ಟೋ ಜಾಕಗಳನ್ನು ಧರಿಸಿದ್ದಾಯಿತು." ಸ್ವಲ್ಪ ಹೊತ್ತು ಇಬ್ಬರೂ ಸುಮ್ಮನಿದ್ದೆವು.

"ನಿನ್ನ ಮಾತೇನು? ಗುರುತೇ ಬದಲಾಯಿಸಿಬಿಟ್ಟಿದೆ."— ಎಂದಳಾಕೆ.

ಮರದ ಕೊಂಬೆಯೊಂದರ ಮೇಲೆ ಅಳಿಲು ಕಾಣಿಸಿತು. ಪ್ರಪಂಚದಲ್ಲಿ ಬೆರಗಾಗುವಂತಹುದೇನೂ ಇಲ್ಲವೆನ್ನುವಂತೆ, ದಿಟ್ಟತನದಿಂದ ಅದು ಸುಖವಾಗಿ ಕುಳಿತಿತ್ತು.

"ಬೇಗ ಬೇಗ....ಅಪ್ಪಾ .... ಕಡಲೇಕಾಯಿ ಎಲ್ಲಿದೆ?"— ಎಂದು ಕೂಗಿದ ನನ್ನ ಮಗ, ಕಾಯಿ ತೆಗೆಯುವುದರೊಳಗಾಗಿ ಅಳಿಲು ಮಾಯವಾಯಿತು. ಅದು ಪಳಗಿದುದಲ್ಲ.

ಬೆಪ್ಪಿಯು ಹೋಗಬೇಕಾಗಿತ್ತು.

"ಹೋಗಬೇಕು. ಹೊತ್ತಾಯಿತು. ಊಟ ಕರಬೇಕು. ಮಧ್ಯಾಹ್ನ ನೀನೂ ಮನೆಗೆ ಹೋಗಬೇಕಾಗಿದೆ'

'ಒಂದು ನಿಮಿಷ ಇರು ಬೆಪ್ಪೀ. ಏನು ಅಂತಹ ಅವಸರ? ನಾವು ನದೀ ದಂಡೆಯಲ್ಲಿ ತಿರುಗಾಡುತ್ತಿದ್ದುದು ನೆನಪಿದೆಯೇ. ನೀರಿನಲ್ಲಿ ನಾವು ಒಟ್ಟಿಗೆ ನೋಡುತ್ತಿದ್ದುದು? ಆಗ ಮರಗಳು ಹೀಗೆಯೇ ಇದ್ದವು. ಎಲೆಗಳು ಮೂಡಿರಲಿಲ್ಲ..."

ಬೆಪ್ಪೀಗೆ ತಂಬ ಆಶ್ಚರ್ಯವಾಯಿತು.

"ಮರಗಳು? ಯಾವ ಮರಗಳು?"— ಎಂದಳಾಕೆ.

ಆಕೆಗೆ ಅವಸರ. ಮಡಲು ತುಂಬ ಕೆಲಸವಿತ್ತು.

ದೇಹ ಪೋಷಣೆಗೆ

(೩ನೇ ಪುಟದಿಂದ)

ಹಾಲು, ಅದರಲ್ಲಿಯೂ ದನದ ಹಾಲು ಮತ್ತು ಹಾಲಿನ ಪದಾರ್ಥ ಅತ್ಯಾವಶ್ಯಕವಾದ ಪೌಷ್ಟಿಕ ಆಹಾರವೆಂಬುದು ಸರ್ವ ವಿದಿತ. ಪರಿಪೂರ್ಣ ಆಹಾರವೆಂದರೆ 'ಹಾಲು' ಎಂದೇ ಸಕ್ಕರೆ ಬೆರೆತ ಹಾಲಿಗಿಣ್ಣಿನಲ್ಲಿ ಪೌಷ್ಟಿಕತೆ ಹೆಚ್ಚಿಗಿದೆ.

ಬೆಣ್ಣೆ, ಜೇನುತುಪ್ಪ, ಕಲ್ಲುಸಕ್ಕರೆ ನಿತ್ಯ ಸೇವಿಸುವುದರಿಂದ 'ನೊಟ್ಟೆ' ಮೂಂಸ ಗಳಷ್ಟೇ ಪೌಷ್ಟಿಕತೆ ಪಡೆಯಬಹುದು.

ನಾವೂ ಹಿಂದಾಗಕ್ಕೆ ತಿರುಗಿದೆವು. ಒಬ್ಬರನೊಬ್ಬರು ಮತ್ತೊಮ್ಮೆ ನೋಡಿಕೊಂಡೆವು. ಮತ್ತೊಮ್ಮೆ ಒಬ್ಬರನೊಬ್ಬರು ನಾವು ಪುನಃ ನೋಡುವುದೆಂದೋ, ಯಾರು ಬಲ್ಲರು?

ನಾವಿಬ್ಬರೇ ಅಲ್ಲಿ ಉಳಿದೆವು.

'ನೋಡು ನೀನು ಮಾಡಿದ ಕೆಲಸ! ನಿನ್ನ ಮಾತೇ ಮಾತು. ಮಾತನಾಡಿಕೊಂಡೇ ಇದ್ದು ಬಿಟ್ಟೆ ಆಳಲು ಹೊರಟೆ! ಹೋಯಿತು! ...ಆಕೆ ಯಾರು ಇಷ್ಟಾಗಿ

"ಆಕೆ ನನ್ನ ಮೊದಲನೆಯ ಪ್ರೇಯಸಿ" ಎಂದೆ, ನಾನು.

"ಹಾಗೆಂದರೇನು?"—ಎಂದು ಅವನ ಪ್ರಶ್ನೆ!

ಆದೆಲ್ಲವನ್ನೂ ಏಕೆ ಅವನಿಗೆ ಹೇಳಲಿಲ್ಲ ವೆಂದು ಅವನ ತಕರಾರು!

ಒರಿಯರು ಮೂಡಿಟ್ಟ, ಚಟ್ಟಿ, ತೋಪೆ, ನಾಂಬಾರಗಳು ಆಹಾರ ರುಚಿಯೂಗುವಂತೆ ಮೂಡುವ ಪದಾರ್ಥಗಳಾಗಿವೆ. ಕೊತ್ತಂಬರಿ, ಮೆಂತ್ಕೆ, ಹಿಂಗು, ಮೊದಲಾದ ವುಗಳ ಉಪಯೋಗ ಮೂಡುವುದರಿಂದ ಬಾಯಿ ಮತ್ತು ಜೀರ್ಣಾಂಗಗಳಿಂದ ಜೀರ್ಣ ರಸಗಳು ಹೊರ ಸೂಸಿ ಆಹಾರ ಜೀರ್ಣವಾಗಿ ದೇಹಕ್ಕೆ ಪೌಷ್ಟಿಕತೆಯನ್ನೂ ದೃಢತೆಯನ್ನು ಕೊಡುತ್ತದೆ.

ಬಡವರ ಕಸ್ತೂರಿಯಂತಿರುವ ಬೆಳ್ಳುಳ್ಳಿ ಜೀರ್ಣ ಶಕ್ತ್ಯಯಲ್ಲುಂಟಾದ ಅನ್ನವನ್ನೆ ಹೋಗಲಾಡಿಸುವುದಲ್ಲದೆ 'ಗಂಧಕ' ಅಂಶ ಬೆಳ್ಳುಳ್ಳಿ, ನೀರುಳ್ಳಿಗಳಲ್ಲಿರುವುದರಿಂದ ಔಷಧಯುಕ್ತವೂ ಆಗಿವೆ.

ರಾತ್ರಿಯ ಉಪಯೋಗ ನಿತ್ಯ ಮೂಡುವುದರಿಂದ 'ವಿಟಮಿನ್ ಬಿ' ಕಡಿಮೆಯಾಗಿರುವುದರಿಂದ ಬರುವ ಹಲವಾರು ರೋಗಿಲೆಗಳು ಗುಣವಾಗುತ್ತದೆ.

ಜೀರ್ಣಾಂಗಗಳಿಗೆ ವಿಶೇಷ ಶ್ರಮ ಕೊಡದೆ ಚರ್ಮ ರಂಧ್ರಗಳ ಮೂಲಕ ಆಹಾರೋಪಾದಿಯಲ್ಲಿ ದೇಹ ದಾರ್ಢ್ಯತೆಗೆ ಅತಿ ಆಗತ್ಯವಾದ 'ತೈಲಾಭ್ಯಂಗ'ಕ್ಕೆ ಒಂದು ವಿಧಿಯೂಗಿರುತ್ತದೆ. ಇಪ್ಪೆ ತೈಲ, ಧನ್ವಂತರಿ ತೈಲ, ಯೋಗೀಶ್ವರ ತೈಲ. ನಿತ್ಯ ದೇಹಕ್ಕೆ ಮರ್ದನ ಮೂಡುವುದರಿಂದ ನ್ನಾಯುಗಳು ಬಲಗೊಳ್ಳುವವು. ಎಲುಬುಗಳು ಗಟ್ಟಿಮುಟ್ಟಾಗಿ ಬೆಳೆಯುವವು. ಸಣ್ಣ ಮಕ್ಕಳ ಕೈಕಾಲುಗಳಿಗೆ ಬಲ ಬರಲಿಕ್ಕೆ ತೈಲಾಭ್ಯಂಗವು ಪೌಷ್ಟಿಕ ಆಹಾರದ ಸ್ಥೇ ಪೌಷ್ಟಿಕತೆಯನ್ನು ದೇಹಕ್ಕೆ ಒದಗಿಸುತ್ತದೆ. ಬೆಳವಣಿಗೆಗೂ ತೈಲಾಭ್ಯಂಗ ಒಂದೇ ಅತ್ಯಂತ ಉಪಯುಕ್ತವಾದ ಸಾಧನವಾಗಿರುತ್ತದೆ. ನರಗಳಿಗೆ ಬಲ ಬರಲಿಕ್ಕೂ ತೈಲಾಭ್ಯಂಗ ಪೌಷ್ಟಿಕ ಆಹಾರ ಅಂಶಗಳಿಂದ ಕೂಡಿದೆ.

ಪೌಷ್ಟಿಕ ಆಹಾರ ಸೇವಿಸಿ, ಅಂಗಾಂಗಗಳಿಗೆ ತೈಲಾಭ್ಯಂಗ ಸೂಸಿ ದೃಢಕಾಯರಾಗೋಣ.

ಹಾರ್ಮೋನಿಯಮ್ ಕಲಿಯುವವರಿಗೆ ಅತ್ಯುತ್ತಮ ಸಂಗೀತ ಪುಸ್ತಕ—

ಶ್ರೀ ಎ. ರಾಮಪ್ಪ ಅವರ

ಹಾರ್ಮೋನಿಯಮ್

ಬೋಧನ ಕ್ರಮ

ಪರಿಷ್ಕರಿಸಲ್ಪಟ್ಟ, ನಾಲ್ಕನೆಯ ಮುದ್ರಣ. ಕೆಲವೇ ಪ್ರತಿಗಳು ಉಳಿದಿವೆ.

ಬೆಲೆ: ರೂ. 2—0—0.

ಒಂದು ಪ್ರತಿ ಬೇಕಾದವರು ರೂ 2-50 ನ್ನು ಮನಿಯೊರ್ಡರು ಮೂಡಿ ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಶಾಲೆಗಳಿಗೆ ಬೇಕಾಗುವ

ಯಾವತ್ತೂ ಫಾರ್ಮುಗಳೂ ಹಾಜರಿ ರಿಜಿಸ್ಟ್ರಿಗಳೂ ಸಿಗುತ್ತವೆ.

ನವಯುಗ ಪ್ರೆಸ್ ಉಡುಪಿ.

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನಿಮ್ಮಿಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—

ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—

ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ

ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು

ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ,

ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಹೊಸ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು

ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.

ಬೆಲೆ ರೂ. 1-4-0 (1=25).

ವಿ. ಪಿ.—ಆರ್ಡರಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0 =25 N.P ಸೇರಿಸಿ ಮನಿಯೊರ್ಡರು ಮೂಡಿದರೆ ಪುಸ್ತಕಗಳಿಸಲಾಗುವುದು ನಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನನಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ರಾಜನರ್ತಕಿ ಚಾರುಬಾಲಾ

(೨ನೇ ಪುಟದಿಂದ)

ಸು—'ಎಷ್ಟು ಗಾಂಭೀರ್ಯ..? ಮುಖದ ಲ್ಲಿಂತಹ ಕಾಂತಿ...! ದೀರ್ಘ ನಾಸಿಕ.... ಗುಲಾಬಿ ತುಟಿ.... ಆ ವಿಶಾಲ ನೇತ್ರಗ ಂದ ಕಿಡಿಗಳು ದರುವಂತಿ ಸ್ತುವು. ವಿಶಾಲ ಲಲಾಟ.... ಒಂದೊಮ್ಮೆ ಆದರ ಮೇಲ್ಗಡೆ ಕೇಶಗಳ ಇತ್ತಿದ್ದರೆ...ಆಹ್....ಅವನ ಮುಂದೆ ನ್ನದೆಂತಹ ಸೌಂದರ್ಯ!? ಅದರೆ ಅವ ! ವಾಕ್ಯಗಳು....ಅದರಲ್ಲೆಷ್ಟು ಕಠೋರ ಇಯದೆ! ಎಷ್ಟು ಅಹಂಕಾರ....? ಓರ್ವ ಾಮಾನ್ಯ ಭಿಕ್ಷುವಿಗೆಷ್ಟು ಧೈರ್ಯ...? ವನ ಸುಂದರ ಮುಖದಲ್ಲಿ ವಿಷ ಜಂ ದೆ...ಅವನು ನನ್ನನ್ನು ಅಪಮಾನ ಮಾಡಿದ್ದಾನೆ. ಇರಲಿ ನಾಳೆ ಬಂದಾನು! ಯ್ಯ ತೀರಿಸಿಕೊಳ್ಳದಿದ್ದರೆ....' ಎಂ ನಿಶ್ಚಯಿಸಿದ ನಂತರವೇ ಅವಳು ನಿ ದ್ರಾವಶಳಾದುದು..

ಪ್ರಾತಃಕಾಲ ಚಾರುಬಾಲಳಿಗೆ ಎಚ್ಚ ವಾದಾಗ ಅವಳ ಶಯನ ಕಕ್ಷೆ ಸೂ ರ್ಯ ರಶ್ಮಿಯಿಂದ ಹೊಳೆಯುತ್ತಿತ್ತು. ಎ ರಿಗಿದ್ದ ಕನ್ನಡಿಯಲ್ಲಿ ತನ್ನ ಪ್ರತಿಬಿಂಬ ನ್ನು ಕಂಡು ಅವಳು ಬೆಚ್ಚಿ ಬಿದ್ದಳು ಆ ಳ ನೇತ್ರಗಳ ಬದಿಗಳು ಉಬ್ಬಿದ್ದುವು, ಣ್ಣ ರಕ್ತವರ್ಣವಾಗಿತ್ತು. ಮೃದು ಕ ಾಲಗಳ ಮೇಲೆ ಹರಿದಿದ್ದ ಕಣ್ಣೀರು ಣಗಿ ಅಲ್ಲಿಯೊಂದು ಗೆರೆಯನ್ನೇ ರಚಿಸಿ ತು. ಅವಳು ವಸ್ತ್ರಾಭೂಷಣಗಳಿಂದ ಸಜ್ಜಿತಳಾಗಿ ಭಿಕ್ಷುವಿನ ದಾರಿ ಕಾಯ ಾಡಿಗದಳು.

ಸ್ವಲ್ಪ ಸಮಯದ ನಂತರ ಭಿಕ್ಷುವು ರುವುದನ್ನು ಮಹಡಿಯಿಂದಲೇ ನಿರೀಕ್ಷಿ ದಳು. ಚಾರುಬಾಲಳ ಮುಖ ಚಂದ್ರದ ನವಾದ ಕೆಂದಾವರೆಯಂತೆ ಅರಳಿತು. ವಳು ಉತ್ಸಾಹ ಪೂರ್ಣಳಾಗಿ ದ್ವಾರದೆ ಗೆ ಧಾವಿಸಿದಳು ಒಮ್ಮಿಂದೊಮ್ಮೆಲೆ ಮಯೂರ ಭವನದ ಬ್ರಹದ್ದ್ವಾರದೆಡೆಗೆ ಪ್ತುವಿಷ್ಣು ಗುಪ್ತನ ದೃಷ್ಟಿ ಹರಿಯಿತು. ದ್ವಾರದಲ್ಲಿದ್ದ ಸೌಂದರ್ಯಾಧಿ ದೇವತೆ ಯ ಪ್ರತಿಬಿಂಬವನ್ನು ಕಂಡವನು ಬೆಚ್ಚಿ ದ್ದನು. ಮರುಕ್ಷಣದಲ್ಲಿಯೇ ಗರ್ವದಿಂ ಉನ್ನತ ಮಸ್ತಕನಾಗಿ ಮುಂದುವರಿ ನು. ಅವನ ಚರಣಗಳು ಕಂಪಿ ತ್ತಿದ್ದುವು; ಅವು ಭಿಕ್ಷುವನ್ನು ಂದಕ್ಕೆಳೆಯುವ ಪ್ರಯತ್ನ ಮಾಡುತ್ತಿ ವು. ನೇತ್ರಗಳು ಆ ಸೌಂದರ್ಯ ಪದ್ಮ ರಸಾಪಾನ ಮಾಡಲು ಕಾತರಿಸಿದುವು ಷ್ಟರಲ್ಲಿ ಹಿಂದಿನಿಂದ ಒಂದು ಕೋಮಲ ಧಾರ ಸ್ತ್ರೀ ಕಂಠವು— 'ಭಿಕ್ಷು! ಸ್ವ ನಿಲ್ಲು!!" ಎಂದಿತು.

ವಿಷ್ಣುಗುಪ್ತನು ನಿಂತು ಹಿಂತಿರುಗಿ ನೋಡಿದನು. ಸೌಂದರ್ಯರಾಶಿ ಚಾರು ಬಾಲ ಅವನನ್ನು ಕರೆಯುತ್ತಿದ್ದಳು. ಅವ ನ ಮನೋಪಟಲದಲ್ಲಿ ವಾಸನೆ ಮತ್ತು ಂಯಮಗಳ ದ್ವಂದ್ವನಡೆಯತೊಡಗಿದು ವಾಸನೆಯು ಪ್ರೇಮಪೂರ್ಣ ನಿಮಂ ತ್ರಣದೊಡನೆ ಹಿಂದಕ್ಕೆಳೆಯುತ್ತಿತ್ತು. ಆ ಷ್ಟರಲ್ಲಿ ಸಂಯಮವು ವಜ್ರಘಾತ ಮಾ ಡಿತು— 'ನಿರ್ಮೋಹೀಯೋಗೀ—ವಾಸ ನಾಜಾಲದಿಂದ ದೂರವಿರು.....ಇದೇ ನಿನ್ನ ಕರ್ತವ್ಯವೇನು? .....ಪಾಟಲಿಪು ತ್ರಕ್ಕೆ ಬಂದಾಗ ನಿನ್ನ ಉದ್ದೇಶವೇನಿತ್ತು?" ಆತ್ಮಗ್ಲಾನಿತ್ವದಿಂದವನು ಅಧೋಮುಖ ನಾದನ. ಅವನ ಬಾಯಿಂದ "ಇಲ್ಲ!" ಎಂಬೊಂದು ದೃಢ ಸ್ವರ ಮಾತ್ರಾ ಹೊರ ಬಿತ್ತು.

ಚಾರುಬಾಲಳಿಗೆ ಭಿಕ್ಷುವನ್ನು ಭಸ್ಮ ಮಾಡುವಷ್ಟು ಕ್ರೋಧ ಬಂತು. ಹೃದಯ ವೇದನೆ ಸಹನಾತೀತವಾದುದರಿಂದ ಅವ ಳು ವೀಣೆಯ ಮೇಲೆ ಕೈಯಾಡಿಸತೊಡ ಗಿದಳು; ವೀಣೆಯ ಸುಲಕಾಯಮಾನ ನಿ ನಾದವು ಅವಳ ವಿಚಾರ ವೇಧಿಕೆಯನ್ನು ತಡೆಯಲಾರದೆ ಆ ಸಫಲ ಹೊಂ ದಿದುವು. "ಅರೆ..ಇಲ್ಲಿ ಒಬ್ಬಳೇ ಕುಳಿತೇನು ಮಾಡುತ್ತಿರುವೆ?" ಆಚಾರ್ಯರು ಅಧ್ಯಯನ ಕಕ್ಷೆಯಲ್ಲಿ ನಿನ್ನನ್ನು ಕಾಯುತ್ತಿದ್ದಾರೆ.... ಇಂದು ಸಾಯಂಕಾಲ ಯಾವ ನೃತ್ಯವಾಗಬೇಕೆಂ ದಾದರೂ ಯೋಚಿಸಿರುವಿಯೋ? ,, ಮೂ ಧವಿಯ ವಾರ್ತಾಲಾಪದಿಂದ ಚಾರು ಬಾಲಳ ವಿಚಾರಧಾರೆ ಕಡಿಯಿತು. ನೂ ಪುರಗಳನ್ನು ಧರಿಸಿ ಅವಳು ಮೂಧವಿಯೊ ಡನೆ ಅಧ್ಯಯನ ಕಕ್ಷೆಯೆಡೆಗೆ ಹೊರ ಟಳು.

ದಿನನಿತ್ಯದಂತೆ ಇಂದೂ ಸಂಧ್ಯಾ ಕಾ ರ್ಯಕ್ರಮ ಪ್ರಾರಂಭವಾಯ್ತು. ಜವನಿ ಕೆಯು ಮೇಲೇರಿದ ನಂತರ ಚಾರುಬಾಲ ಳು ರಂಗಮಂಚ ಪ್ರವೇಶಿಸಿ ಕರಕಮಲಗ ಳನ್ನು ಜೋಡಿಸಿ ಮಸ್ತಕವನ್ನೆತ್ತಿ ನೋಡಿ ಬೆಚ್ಚಿಬಿದ್ದಳು ಬಹಳ ಕಡಿಮೆ ಜನರಲ್ಲಿ ನೆರೆದಿದ್ದರು. ಹಿಂದಿನ ಪೀಠಗಳೆಲ್ಲವೂ ಬ ರಿದಾಗಿದ್ದುವು. ಬರೆದಿದ್ದ ಅಲ್ಪ ಜನರಲ್ಲಿ ಯೂ ಚಾರುಬಾಲಳ ವಿಶಾಲ ನೇತ್ರ ಗಳು ಯಾರನ್ನೋ ಹುಡುಕಿ, ನಿರಾಶವಾ ಗಿ ಯಥಾಸ್ಥಾನ ಸೇರಿದುವು. ವಂದನೆಯ ನಂತರ ಚಾರುಬಾಲಳು ನೃತ್ಯವಾರಂಭಿ ಸಿದಳು. ಇವತ್ತವಳು ಸ್ವಯಂ ಗಂಭೀರ ಳಾಗಿದ್ದಳು. ನೃತ್ಯದಲ್ಲಿ ಗಾಂಭೀರ್ಯ ತರು ವುದು ಅವಳಿಗಿಂದು ಬಹು ಸುಲಭವಾ ಗಿತ್ತು. ಅದರೆ ಮುಖದಲ್ಲಿ ಮುಗುಳ್ನಗೆ ತ ರಲು ಅವಳು ಮಾಡಿದ ಎಲ್ಲಾ ಪ್ರಯತ್ನ ಗಳೂ ನಿಷ್ಫಲವಾದುವು.

ಎರಡು ನೃತ್ಯಗಳಲ್ಲಿಯೇ ಸಭಾ ವಿಸ ರ್ಜನೆಯಾಯ್ತು. ಬಂದಿದ್ದ ಪ್ರೇಕ್ಷಕರು ನೃತ್ಯ ನೋಡುವುದಕ್ಕಿಂತ ಹೆಚ್ಚಾಗಿ ಹೂ ಸದಾಗಿ ಬಂದಿದ್ದ ಬೌದ್ಧ ಭಿಕ್ಷುವಿನ ಬ ಗ್ಗೆ ಮಾತಾಡುತ್ತಿದ್ದರು. ಚಾರುಬಾಲಳಿ ಗಿದು ಅಸಹ್ಯವಾಯ್ತು, ನೃತ್ಯದ ಮಧ್ಯ ದಲ್ಲಿಯೇ ಅವಳಿಗೆ ಅವರ ವಾರ್ತಾಲಾಪ ದ ವಿಷಯ ತಿಳಿಯಿತು ದರ್ಶಕರ ಪ್ರ ಸ್ಥಾನದ ನಂತರ ಚಾರುಬಾಲಳು ಮೂಧ ವಿಯೊಡನೆ—"ಮೂಧವಿ, ಇಷ್ಟು ಕಡಿಮೆ ಜನರಿಂದು ಬರಲು ಕಾರಣವೇನು? ಸಾ ಮಂತರುಗಳಿಗೆ ನನ್ನ ನೃತ್ಯ ಬೇಡವಾ ಯ್ತೇನು? , ಎಂದಳು.

"ನಿಮಗೆ ಗೊತ್ತಿಲ್ಲ. ನಿನ್ನೆ ನಮ್ಮ ಮ ನೆಯ ದ್ವಾರಕ್ಕೆ ಬಂದಿದ್ದ ಭಿಕ್ಷು ಇಂದು ನಗರದ ಹೊರಗಿರುವ ಆಮ್ರಕುಂಜದಲ್ಲಿ ಭಾಷಣ ಮಾಡಲಿದ್ದಾನೆ. ಆದುದರಿಂದ ಇಡಿ ನಗರವೇ ಅಲ್ಲಿ ಹೋಗಿದೆ ಅವರು ಅತ್ಯಂತ ತೇಜಸ್ವಿ ಹಾಗೂ ಜ್ಞಾನಿಗಳಾಗಿ ದ್ದಾರೆಂದು ವರ್ತಮಾನವಿದೆ. ನಾನೂ ಅಲ್ಲಿಗೆ ಹೋಗಲು ಹೊರಟು ನಿಂತಿದ್ದೇನೆ. ತಾವೂ ಬರುವುದಾದರೆ ಬರಬಹುದು." ಎಂದುತ್ತರವಿತ್ತಳು ಮೂಧವಿ.

ಚಾರುಬಾಲಳಿಗೂ ಅಲ್ಲಿಗೆ ಹೋಗುವ ಮನಸ್ಸಾದರೂ ಅದನ್ನು ಹತ್ತಿಕ್ಕಿ ಕೊಂ ಡಳು. ನಿನ್ನೆ ಯಾರು ತನ್ನನ್ನು ಅಪಮಾನಿ ಸಿದ್ದನೋ, ಇಂದು ಅವನ ಭಾಷಣ ಕೇ ಳಲು ಹೋದರೆ ಮೂಧವಿ ತನ್ನನ್ನು ನೀಚ ಳೆಂದು ತಿಳಿದಾಳು ಎಂಬ ಭಯ. ಆದುದ ರಿಂದ ಅವಳು—"ಬೆಂಕಿ ಬೀಳಲಿ ನಿನ್ನ ಭಿಕ್ಷುಕನಿಗೆ ಮತ್ತವನ ಭಾಷಣಕ್ಕೆ. ನ ನ್ನ ಸೌಂದರ್ಯವನ್ನು ಅಪಮಾನಿಸಿದ ಆ ಅಭಿಮಾನಿಯಿದ್ದಲ್ಲಿಗೆ ನೀನೇ ಬೇಕಾದರೆ ಹೋಗು. ನಾನು ಮಾತ್ರ ಎಂದೂ ಬರಲಾ ರೆ' ಎಂದಳು.

ಹಾಗನ್ನ ಬೇಡ ಚಾರುಬಾಲ....ಭಿ ಕ್ಷುಗಳು ಸದಾ ನಿರ್ಮೋಹಿಗಳಾಗಿರುತ್ತಾ ರೆ. ಒಂದೊಮ್ಮೆ ಅವರು ನಿನ್ನ ಸೌಂದ ರ್ಯಕ್ಕೆ ಮೋಹಿತರಾದರೆ, ಅವರು ಭಿ ಕ್ಷುಗಳು ಹೇಗಾದಾರು? ಜಗತ್ತಿನ ಮೋ ಹಾಂಧತೆಯೂ, ವಾಸನೆಗಳೊಡನೆ ಅವರ ಸಂಪರ್ಕ ವಿರುವುದಿಲ್ಲ; ಆದುದರಿಂದ ಅ ವುಗಳು ಅವರನ್ನೇನೂ ಮಾಡಲಾರವು. ಇಂಥ ಸಣ್ಣ ಸಣ್ಣ ಮಾತುಗಳಿಗಾಗಿ ಕ್ರೋಧಿಸುವುದು ಸರಿಯಲ್ಲ. ಯಾರು ಆ ಮಹಾನ್ ಆತ್ಮವನ್ನು ಅಭಿಮಾನಿಯನ್ನು ತ್ತಾರೋ, ಅವನು ಸ್ವಯಂ ಅಭಿಮಾನಿ ಎಂಬುದನ್ನು ಮರೆಯಬೇಡ ಸಖೀ....ಇರ ...ಇರಲಿ!

ಚಾರುಬಾಲಳು ಅಲ್ಲಿಯೇ ಕುಳಿತಿದ್ದ ಳು. ಮಯೂರ ಭವನದಲ್ಲೇ ಏಕೆ, ಇದೇ ಪಾಟಲೀ ಪುತ್ರವೇ ವಿಷ್ಣು ಗುಪ್ತನ ಉಪ ದೇಶ ಕೇಳಲು ಹೋದಾಗ, ಮನೆಯಲ್ಲೇ ಉಳಿದ ಏಕಮಾತ್ರ ಅಭಾಗಿನಿ ಎಂದರೆ



ಬಿಹಾರರಾಜ್ಯದ ಬುಕಾರೊವಿನಲ್ಲಿರುವ ಕಲ್ಲಿದ್ದಲು ಶುದ್ಧೀಕರಿಸುವ ಕ್ಷೇತ್ರ

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ರೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯುತ್ತಮವೆಂದು ಪರಿಗಣಿಸಿರುವರು ಪ್ರತಿಯೊಬ್ಬರೇವಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿಹೊಂದುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ವಿಜಯ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್:— ವಿಜಯ ಬೇಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡ್,

Estd. 1931.
Phone No. 240. — ಮಂಗಳೂರು—3

Tel. 'BLUEYAGAR'. — ಚಿನ್ನ ಮತ್ತು ವಜ್ರಗಳ ಆಧುನಿಕ ತವರುಮನೆ — Phone: 374.

ಕೆ.ಆರ್.ಕೆ.ಶೇಟ್ ಡಯಮಂಡ್ ಮಾರ್ಟ್

ಸ್ಥಾಪನೆ.1919] ಚಿನ್ನ ಮತ್ತು ವಜ್ರದ ವ್ಯಾಪಾರಿಗಳು,(ಗವರ್ನ್‌ಮೆಂಟ್ ಕಾಲೇಜ್ ಎದುರುಗಡೆ)ಮಂಗಳೂರು. ಮಾಲಿಕ:ಕೆ.ಕೆ.ಆರ್.ಶೇಟ್

NAVAYUGA, UDIPI.
REGD. NO.BG. 176

14-6-1962

LICENSE NO. 31
Licensed to Post without Prepayment

ಚಾರುಬಾಲ. ಎಲ್ಲೆಡೆಗಳಲ್ಲಿಯೂ ಶಾಂತಿಯ ಸಾಮ್ರಾಜ್ಯವಾಗಿತ್ತು. ಯಾರನ್ನು ಮೊಧವಿಯೇ ನಿಡ್ನ ಅಭಿಮಾನಿಯೆಂದು ಗದರಿಸಿದ್ದಳೋ ಇಂದವನನ್ನು ಮಹಾನ್ ಎನ್ನುತ್ತಿದ್ದಾಳೆ. "ಹಾಗಾದರೆ ನಾನು ಪಾಪಿಯೇ? ಭಿಕ್ಷುವನ್ನು ಅಪಮಾನ ಮಾಡಿ ನಾನು ಬಹು ದೊಡ್ಡ ತಪ್ಪು ಮಾಡಿದೆ. ನಾನು ಅವನನ್ನು ತುಚ್ಛನೆಂದು ತಿಳಿದು ಸ್ವಯಂ ತುಚ್ಛಳಾದೆ. ಇದರ ಪ್ರಾಯಶ್ಚಿತವಾಗಲೇಬೇಕು."

ಸುಮಾರು ಅರ್ಧ ತಾಸಿನ ವರೆಗೆ ಇದೇ ಆಲೋಚನೆಯಲ್ಲಿದ್ದ ಅವಳು, ಒಮ್ಮಿಂದೊಮ್ಮೆಲೆ ಎದ್ದು ತನ್ನ ಒಂದು ಸಾದಾ ಸೀರೆಯನ್ನುಟ್ಟುಕೊಂಡಳು. ಸೆರಗಿನಿಂದ ತಲೆ ಮುಖಗಳನ್ನು ಮುಚ್ಚಿಕೊಂಡು ಯಾರಿಗೂ ತಿಳಿಯದಂತೆ, ಮಯೂರ ಭವನದಿಂದ ಹೊರಬಿದ್ದಳು.

ಅವಳು ಅಮ್ಮುಕುಂಜದತ್ತ ಹೊರಟಳು. ಹೃದಯದಲ್ಲಿ ಅಶೆ-ನಿರಾಶೆಗಳ ದ್ವಂದ್ವಯುದ್ಧ ನಡೆಯುತ್ತಿತ್ತು. ಅಲ್ಲಿ ಕಣ್ಣೆತ್ತಿ ನೋಡುವಾಗ, ಪಾಟಲೀಪುತ್ರದ ಜನಸಂಖ್ಯೆ ಸಾಗರೋಪಾದಿಯಲ್ಲಿ ನೆರೆದಿದ್ದಿತು ಮಧ್ಯದಲ್ಲಿರುವ ಒಂದು ಮರದಡಿಯಲ್ಲಿ ಕುಳಿತು ವಿಷ್ಣುಗುಪ್ತನು, ಭೌದ್ಧ ಧರ್ಮ ಸಂಬಂಧದ ಉಪದೇಶ ಕೊಡುತ್ತಿದ್ದನು. ಎಲ್ಲೆಡೆಯಲ್ಲಿಯೂ ಗಂಭೀರ ನಿಸ್ಥಬ್ಧತೆಯು ವ್ಯಾಪಿಸಿದ್ದಿತು. "ವಾಸನೆಗೆ ತಿಲಾಂಜಲಿ ಕೊಡಿ. ನಿಮ್ಮ ಜೀವನದಲ್ಲಿ ಸಂಯಮಕ್ಕೆ ಶ್ರೇಷ್ಠ ಸ್ಥಾನ ಕೊಡಿ. ಪ್ರತಿಯೊಂದು ವಸ್ತುವಿನ ಸೇವನೆಗೂ ಒಂದು ನಿಯಂತ್ರಣ ಬೇಕು. ನೃತ್ಯ, ಸಂಗೀತ, ಮಧು ಮತ್ತು ಪ್ರೇಮ ಇವು ಅತ್ಯಂತ ಮಾದಕೀಯವಾಗಿವೆ. ಧರ್ಮನಿಷ್ಠೆಯಿಂದಿರಲು ನೀವು ನಿಮ್ಮ ಆತ್ಮಗಳನ್ನು ಈ ವಸ್ತುಗಳಿಂದ ದೂರವಿಡಿರಿ."

ಚಾರುಬಾಲಳಿಂದ ಮುಂದೆ ಕೇಳಲಾಗಲಿಲ್ಲ. ಈ ಎಲ್ಲಾ ವ್ಯಂಗ್ಯೋಪದೇಶಗಳನ್ನೂ ಭಿಕ್ಷುವು ಅವಳಿಗಾಗಿಯೇ ಹೇಳುತ್ತಿರುವಂತೆ ಭಾಸವಾಯ್ತು. ಹೇಗಾದರೂ ಸರಿ ಅವನು ತನ್ನ ಮುಂದೆ ತಲೆ ತಗ್ಗಿಸುವಂತೆ ಮಾಡಬೇಕು. ಅವನ ಗರ್ವಭಂಗ ಮಾಡಬೇಕು....ಇದೇ ಒಂದು ಗಂಭೀರ ಸಮಸ್ಯೆಯಾಗಿತ್ತು.

ಚಾರುಬಾಲಳು ಪ್ರಥಮ ದಿನವೇ ಭಿಕ್ಷುವಿನ ರೂಪಕ್ಕೆ ಮೋಹಿತಳಾಗಿದ್ದಳು. ಆದುದರಿಂದವಳು ತನ್ನ ಪ್ರತ್ಯೇಕ ಹಾವಭಾವಗಳಿಂದ ಭಿಕ್ಷುವನ್ನು ಮೋಹಿತನನ್ನಾಗಿ ಮಾಡಲು ನಿಶ್ಚಯ ಮಾಡಿದಷ್ಟೇ ಭಿಕ್ಷುವು ವಾಸನೆಯಿಂದ ದೂರವಿರುವ ಪ್ರಯತ್ನ ಮಾಡುತ್ತಿದ್ದನು. ಬಹಳ ಚಿಂತಿಸಿದ ನಂತರ ಅವಳಿಗೆ ಜ್ಞಾನ ದೀವಿಗೆ ಕಂಡಿತು- ಈ ಕಾರ್ಯದಲ್ಲಿಯೂ ತಾನು ಸರಾಜಿತಗಳಾಗುವನೆಂದವಳಿಗೆ ಪ್ರತೀತಿಯಾಯ್ತು. 'ಬುದ್ಧಂ ಶರಣಂ ಗಚ್ಛಾಮಿ' ಎಂಬುದರ ಬದಲು ಬೇರಾವ ಮಾರ್ಗವೂ ತನಗಿಲ್ಲ ಎಂದವಳಿಗೆ ಭಾಸವಾಯ್ತು ಪ್ರಾತಃ ಕಾಲದಲ್ಲೆದ್ದು ಶುದ್ಧಾಂತಕರಣದಿಂದ ಭಿಕ್ಷುವಿನಲ್ಲಿಗೆ ಹೋಗಿ ತನ್ನ ಪಾಪದ ಪ್ರಾಯಶ್ಚಿತ್ತ ಮಾಡಿಕೊಂಡಳು.

(ಲೇಖಾ, ಮಾಸಿಕದಿಂದ)

ಅಮೆರಿಕೆಯ ಶರ್ತಬದ್ಧ ಸಹಾಯನೀತಿ

(೧ನೇ ಪುಟದಿಂದ)

ಯು ನೀಡಬಹುದೆಂದು ಯೋಜಿಸಿದ ಸಹಾಯ ಧನದ ಮೊತ್ತದ ಬಗ್ಗೆ ಸಂದೇಹವೆದ್ದಿತು. ತೃತೀಯ ಪಂಚವಾರ್ಷಿಕ ಯೋಜನೆಯ ಯಶಸ್ಸು ಸಾಮಾನ್ಯವಾಗಿ ವಿದೇಶೀ ಸಹಾಯದ ಹಣವನ್ನೇ ಹೊಂದಿಕೊಂಡಿರುವುದರಿಂದ, ಯೋಜನೆಯ ಪರಿಪೂರ್ಣತೆಯ ಬಗ್ಗೆಯೂ ಸಂದೇಹವನ್ನು ವ್ಯಕ್ತಪಡಿಸಲಾಗಿತ್ತು. ಮುಂದೆ ಈ ಸಂದೇಹ ದೂರವಾಯಿತಾದರೂ ಮರಳಿ ದೊಡ್ಡ ಬಾಧೆಯೊಂದು ಎದುರಾಗಿದೆ. ಅಮೆರಿಕೆಯ ಕಾಂಗ್ರೆಸ್ಸು ತನ್ನ ಸರಕಾರವು ಕೇಳಿದಷ್ಟು ಹಣವನ್ನು ವಿದೇಶೀಯ ಸಹಾಯಕ್ಕೆಂದು ಮಂಜೂರು ಮಾಡಿತಾದರೂ ಸಿನೇಟು ಈ ಸಹಾಯ ಧನ ಪಡೆಯುವ ರಾಷ್ಟ್ರಗಳಿಗೆ ಕೆಲವೊಂದು ಶರ್ತಗಳನ್ನು ಹಾಕಿದೆ. ತನ್ನ ಆಂತರಿಕ ಅಭಿವೃದ್ಧಿ ಸಾಧನೆಗಾಗಿ ಸಹಾಯ ಬಯಸುವ ರಾಷ್ಟ್ರವು ಯಾವುದೇ ರೂಪದಲ್ಲಿ ಸೋವಿಯತ್ ರಶ್ಯ ಮತ್ತು ಚೀನಾಗಳ ಸಹಕಾರ ಬಯಸ ಬಾರದೆಂಬುದೇ ನಿಯಮ. ಭಾರತದ ಮಟ್ಟಗೆ ಹೇಳುವುದಾದರೆ, ಅದರ ಎರಡು ಪಂಚವಾರ್ಷಿಕ ಯೋಜನೆಗಳ ಯಶಸ್ವಿತೆಗೆ ರಶ್ಯವು ಬಹಳಷ್ಟು ಸಹಾಯ ನೀಡಿದೆ. ಉಕ್ಕಿನ ಕಾರಖಾನೆಗಳಲ್ಲಿ ಒಂದನ್ನು ಅದರ ನೆರವಿನಿಂದ ನಿರ್ಮಾಸಿಕೊಂಡಿದೆ. ರಶ್ಯ ಭಾರತಗಳ ಸಂಬಂಧವು ರಾಜಕೀಯವಾಗಿಯೂ ಸಾಂಸ್ಕೃತಿಕವಾಗಿಯೂ ಉತ್ತಮವಿದೆ. ಆದರೆ, ಈಗ ಭಾರತವು ಅಮೆರಿಕೆಯ ಸಹಾಯ ಬಯಸುವುದಾದರೆ, ಹಾಕಿದ ಶರ್ತವನ್ನು ಮೌನವಾಗಿ ಒಪ್ಪಿಕೊಳ್ಳಬೇಕಾಗುತ್ತದೆ. ರಶ್ಯದ ಸಹಾಯವನ್ನೂ ಪಡೆಯದಿರ ಬೇಕಾಗಬಹುದು.

ತ್ರಿಶಂಕು ಸ್ವರ್ಗದಲ್ಲಿ

ಭಾರತ ಸರಕಾರವು ವಿದೇಶೀಯ ಸಹಾಯವನ್ನು ಮುಕ್ತಹಸ್ತದಿಂದ ಸ್ವೀಕರಿಸುವುದು. ಆದರೆ, ಈ ಸಹಾಯವು ನಿಶ್ಶರ್ಥವಾದುದಾಗಿರಬೇಕು ಅಮೆರಿಕೆಯು ಹೊರಿಸಿದ ಶರ್ತವು ಭಾರತದ ಸ್ವತಂತ್ರಾಭಿಪ್ರಾಯವನ್ನು ಬೆಂಬಲಿಸುವಂತೆ ತೋರುವುದಿಲ್ಲ. ಈ ಬಗ್ಗೆ ದೀರ್ಘ ವಿಮರ್ಶಾನಂತರವೇ ಭಾರತವು ನಿರ್ಧಾರಕ್ಕೆ ಬರಬೇಕಾಗಿದೆ. ಕಮ್ಯುನಿಸ್ಟ್ ರಾಷ್ಟ್ರಗಳಿಗೆ ಯಾವುದೇ ರೀತಿಯ ಸಹಾಯವನ್ನು ಮಾಡಬಾರದು ಎಂಬ ಮೊದಲಿನ ನಿರ್ಧಾರವನ್ನೀಗ ಅಮೆರಿಕೆಯು ಬದಲಿಸಿದೆ. ಇದರಿಂದ ಪೋಲೇಂಡ್ ಮತ್ತು ಯುಗೊಸ್ಲಾವಿಯಾಗಳಿಗೆ ಇದುವರೆಗೆ ಲಭಿಸುತಿದ್ದಂತೆಯೇ ಆಹಾರ ಧಾನ್ಯಗಳ ಸಹಾಯವು ದೊರೆಯುವುದು.

ಕುತಂತ್ರ ಜಾಲ

ಅಮೆರಿಕೆಯು ತನ್ನ ಸಹಾಯವನ್ನು ಅನಭಿವೃದ್ಧ ರಾಷ್ಟ್ರಗಳಿಗೆ ಹಿಂದಿನಿಂದಲೂ ಕೊಡಮಾಡುತ್ತಿದೆ. ಭಾರತಕ್ಕೆ ಅದು ಇದು ವರೆಗೂ ನಿಶ್ಶರ್ತವಾಗಿ ದಾನವನ್ನೂ ಸಹಾಯವನ್ನೂ ನೀಡಿದೆ, ಆದರೆ, ಇಂದು ಸಹಾಯ ಧನ ನೀಡುವ ಹೆಸರಿನಲ್ಲಿ ಅದು ರಾಜಕೀಯ ಶರ್ತಗಳನ್ನು ಹೇರಿದಂತೆ ಭಾಸವಾಗುತ್ತದೆ. ಸಿನೇಟಿನ ಸದಸ್ಯ ಕೀಟಿಂಗ್ ಎಂಬವರು ಸ್ಪಷ್ಟವಾಗಿ ಭಾರತದ ಆಹಾಹರಣೆಯನ್ನಿತ್ತು, "ಭಾರತಕ್ಕೆ ಅಮೆರಿಕೆಯು ನೀಡುವ ಸಹಾಯದಿಂದ ಸಂರಕ್ಷಣಾ ಮಂತ್ರಿ ಶ್ರೀ ವಿ. ಕೆ. ಕೃಷ್ಣ ಮೆನನ್ನರು ಪಾಕಿಸ್ತಾನವನ್ನು ಬೆದರಿಸಲು ರಶ್ಯದಿಂದ ಮಿಗ್ ವಿಮಾನಗಳನ್ನು ಕೊಂಡುಕೊಳ್ಳಲು ಹಣ ತೆಗೆಯುವುದಾದರೆ, ನೀಡುವ ಹಣದಲ್ಲಿ ಸೋವಿಯತ್ ಆಸ್ತ್ರಕೊಳ್ಳಲು ಬೇಕಾಗುವ ಅಂಶವನ್ನು ಕಡಿಮೆ ಮಾಡಬೇಕು" ಎಂದರು. ಇಂತಹ ರಾಜಕೀಯ ಶರ್ತಗಳು ನಮ್ಮ ಸ್ವಾತಂತ್ರ್ಯಕ್ಕೆ ದಕ್ಕೆ ತರುವುದಿಲ್ಲವೆ? ಇತ್ತ ಚೀನ-ಪಾಕಿಸ್ತಾನಗಳ ಕುಟಿಲ ತಂತ್ರ ಅತ್ತ ಅಮೆರಿಕದ ಸಹಾಯದ ಕುತಂತ್ರಗಳ ಇಡುಕುರಲ್ಲಿ ಸಿಕ್ಕಿ ಬಿದ್ದಂತಾಗಿದೆ— ಭಾರತ.

ಲಂಡನ್ನಿನ ಕುಶಲ ಚಿತ್ರಗಾರರೊಬ್ಬರು ಬಿಡಿಸಿದ ಭಾರತದ ಸಂರಕ್ಷಣಾ ಮಂತ್ರಿ ಶ್ರೀ ಕೃಷ್ಣಮೆನನ್ನರ ತೈಲಚಿತ್ರ. ಶ್ರೀ ಮೆನನ್ನರು ಲಂಡನ್ನಿನಲ್ಲಿ ಭಾರತದ ಹೈ ಕಮಿಶನರರಾಗಿದ್ದರು.

ಕಾಯಂ ಠೇವಣಾತಿಯ ಮೇಲೆ
ಅತ್ಯಧಿಕ ಬಡ್ಡಿ

5 1/4 %

ಈಗ ಸಿಗುವ ಈ ಪರಮಾವಧಿ ಬಡ್ಡಿಯ ಸವಲತ್ತು ನವಂಬರ 1962ರ ಮೊದಲು ಮಾಡುವ ಕಾಯಂ ಠೇವಣಾತಿಗಳ ಮೇಲೆ ಅನ್ವಯಿಸುವುದು.

ನಿಮ್ಮ ಉಳಿತಾಯವನ್ನು ಸಿಂಡಿಕೇಟ್ ಬ್ಯಾಂಕಿನ ಕಾಯಂ ಠೇವಣಾತಿಯಲ್ಲಿ ಇಂದೇ ಇಟ್ಟು, ಈ ಅತ್ಯಧಿಕ ಬಡ್ಡಿಯ ಸೌಲಭ್ಯವನ್ನು ಪಡೆಯಿರಿ.

• ಉತ್ತಮ ಭದ್ರತೆ • ಹೆಚ್ಚು ಬಡ್ಡಿ

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮುಕುಂದ ನಿವಾಸ, ಉಡುಪಿ.

ಸ್ಥಾಪನೆ: ೧೯೩೫.

NOTICE

In the Court of the District Munsif of Karkala

O. S. 55/1961

Cholpadi Govindraya Kamath and others — Plaintiffs.

Sundari Shedthi — Defendant.

Lingi Shedthy — III Party.

To the third party

Lingi Shedthi, daughter of Bagu Shedthi, residing at Shiddanayakabettu, Karkala Kasba.

Please take notice that the defendant has filed a petition to implead you as III party praying that in case a decree is passed against her in favour of the plaintiffs, for the suit claim, there may be a decree for reimbursement in favour of the defendant against you etc. and that the suit stands posted to 18—6—1962 for your appearance, and you are required to appear before the said court at 10 A. M. on the said date and state your objections, if any, failing which the suit will be heard and decided in your absence.

N. B. Shetty,
Advocate for plaintiff.

Karkala, Dated 8—6—62.

Edited Printed & Published by K. H. Shetty, at the Navayuga Press, Udipi, S. India.

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ನಿಮ್ಮ ಯಾವತ್ತೂ ಮುದ್ರಣ ಕೆಲಸಗಳಿಗೆ ಸ್ವಯಮಾಡಿ ವಿಚಾರಿಸಿರಿ:
ನವಯುಗ ಪ್ರೆಸ್, ಉಡುಪಿ

ವಿದ್ಯಾರ್ಥಿಗಳಿಗೆ ಮತ್ತು ನಯಸ್ಕರಿಗೆ ಅತ್ಯುಪಯೋಗೀ ಪುಸ್ತಕ
ಸುಲಭದಲ್ಲಿ ಇಂಗ್ಲಿಷ್
(ಆಂಗ್ಲ ಸ್ವಯಂಬೋಧಿನಿ)
ನವಭಾರತ ಪುಸ್ತಕ ಭಂಡಾರ
ಉಡುಪಿ

ಸಂಪುಟ ೪೧ ಸಂಚಿಕೆ ೪೧ | ಉಡುಪಿ 21—6—1962 ಗುರುವಾರ | Vol. 41 No 41

ಹಾಯರ್ ಸೆಕೆಂಡರಿ

ಶಿಕ್ಷಣ ಯೋಜನೆಯನ್ನು ಕೈಬಿಡಬೇಕು

[ಮದ್ರಾಸ ಸರಕಾರವು ಕೇಂದ್ರ ಸರಕಾರಕ್ಕೆ ಸಲ್ಲಿಸಿದ ಯೋಜನೆಯ ಸಾರಾಂಶವನ್ನು ಇಲ್ಲಿ ಸಂಗ್ರಹಿಸಿ ಕೊಡಲಾಗಿದೆ]

ಇಡಿಯ ಭಾರತದಲ್ಲಿ ಏಕರೂಪದ ಶಿಕ್ಷಣ ಪ್ರಣಾಳಿಯಿರಬೇಕೆಂದು ಕೆಲವು ವರ್ಷಗಳಿಗೆ ಮೊದಲು ಏಳು ವರ್ಷಗಳ ಪ್ರಾಥಮಿಕ ಶಿಕ್ಷಣ, ನಾಲ್ಕು ವರ್ಷಗಳ ಮಧ್ಯಮಿಕ ಶಿಕ್ಷಣ ಮತ್ತು ಮೂರು ವರ್ಷಗಳ ವಿಶ್ವವಿದ್ಯಾಲಯ ಶಿಕ್ಷಣವೆಂದು ನಿರ್ಧರಿಸಿ ಒಟ್ಟು ೧೪ ವರ್ಷಗಳ ಯೋಜನೆಯನ್ನು ರೂಪಿಸಲಾಯಿತು. ಇದರಂತೆ ಪಾಠಪಟ್ಟಿಗಳನ್ನೂ ತಿದ್ದುಪಡಿ ಮಾಡಿ, ಹೊಸ ಪಾಠ್ಯ ಕ್ರಮವನ್ನು ತಯಾರಿಸಲಾಯಿತು. ಅವನ್ನು ಹಂತ ಹಂತವಾಗಿ ವ್ಯವಹಾರಕ್ಕೆ ತಂದೂ ಆಯಿತು. ನಮ್ಮ ಕರ್ನಾಟಕ ರಾಜ್ಯದಲ್ಲಿ ಈ ವರ್ಷದಲ್ಲಿ ೧೦ನೆ ತರಗತಿಯ ವರೆಗಿನ ಶಿಕ್ಷಣವನ್ನು ಪುನರ್ಘಟಿಸಿದಂತಾಯಿತು; ಮುಂದಿನ ವೈಶಿಷ್ಟ್ಯಪೂರ್ಣ ವರ್ಷದಿಂದ ಹಾಯರ್ ಸೆಕೆಂಡರಿ ಶಾಲೆಗಳನ್ನು ತೆರೆಯಬೇಕಾಗುವುದು. ಇದಕ್ಕಾಗಿ ಕೆಲವೊಂದು ಹೈಸ್ಕೂಲುಗಳನ್ನು ಈ ಮೊದಲೇ ಆಯ್ಕೆ ಮಾಡಲಾಗಿದೆ ಮಾತ್ರವಲ್ಲ ಅವಕ್ಕೆ ಆವಶ್ಯಕ ಸಲಕರಣೆಗಳನ್ನು ಕೊಂಡ ಕೊಳ್ಳಲು ಆರ್ಥಿಕ ಸಹಾಯವನ್ನು ಸಹ ನೀಡಲಾಗಿದೆ. ಸಾಮಾನ್ಯವಾಗಿ ಭಾರತದ ಎಲ್ಲ ರಾಜ್ಯಗಳೂ ಅಂಗೀಕರಿಸಿರುವ ಈ ಹಾಯರ್ ಸೆಕೆಂಡರಿ ಶಿಕ್ಷಣಪ್ರಣಾಳಿಯ ಬಗ್ಗೆ ಮದ್ರಾಸ ಸರಕಾರವು ಆಕ್ಷೇಪವನ್ನು ಎತ್ತಿ ಕೇಂದ್ರ ಸರಕಾರಕ್ಕೆ ಅವನ್ನು ಸವಿವರವಾಗಿ ತಿಳಿಸಿದೆ.

೧೫ ವರ್ಷಗಳ ಶಿಕ್ಷಣ

ಮದ್ರಾಸು ಸೂಚಿಸಿರುವ ಹೊಸ ಶಿಕ್ಷಣ ಯೋಜನೆಯಲ್ಲಿ ಏಳು ವರ್ಷಗಳ ಪ್ರಾಥಮಿಕ, ಮೂರು ವರ್ಷಗಳ ಮಧ್ಯಮಿಕ, ಎರಡು ವರ್ಷಗಳ ಜೂನಿಯರ್ ಡಿಪ್ಲೊಮಾ ಮತ್ತು ಮೂರು ವರ್ಷಗಳ ಪದವೀ ಶಿಕ್ಷಣಗಳು ಬೇಕೆಂದು ಪ್ರತಿಪಾದಿಸುತ್ತದೆ. ಸಾಮಾನ್ಯವಾಗಿ ಪದವೀಧರನಾಗುವವನು ಕನಿಷ್ಠ ಪಕ್ಷ ೧೫ ವರ್ಷಗಳ ಶಿಕ್ಷಣವನ್ನು ಪಡೆಯಬೇಕು ಎಂಬ ತಜ್ಞರ ಅಭಿಪ್ರಾಯವನ್ನು ತನ್ನ ನಿಲುವಿಗೆ ಪೂರಕವಾಗಿ ಅದು ತೆಗೆದುಕೊಂಡಿದೆ.

ಜೂನಿಯರ್ ಡಿಪ್ಲೊಮಾ

ನೂತನ ಯೋಜನೆಯಂತೆ ಶಿಕ್ಷಣಾವಧಿಯು ೧೪ ವರ್ಷಗಳಷ್ಟಿರುವುದು. ಆದರೆ, ಹಳೆಯ ಕ್ರಮದಲ್ಲಿ ಈ ಅವಧಿಯು ಹದಿನೈದು ವರ್ಷಗಳು. ಮದ್ರಾಸಿನ ಯೋಜನೆಯಂತೆ ಈ ಅವಧಿಯು ಹದಿನೈದು ವರ್ಷಗಳಾಗಿಯೇ ಉಳಿಯುವುದು. ಹಾಯರ್ ಸೆಕೆಂಡರಿ ಪ್ರಣಾಳಿಯನ್ನು ವ್ಯವಹತಗೊಳಿಸುವಲ್ಲಿ ಉಂಟಾಗುವ ವ್ಯವಹಾರಿಕ ಪ್ರಾಯೋಗಿಕ ಮತ್ತು ಆರ್ಥಿಕ ಸಮಸ್ಯೆಗಳಿಂದಾಗಿ, ಅದನ್ನು ಕೈಬಿಡಲೇ ಬೇಕಾಗುತ್ತದೆ. ಮತ್ತು ಒಂದು ವರ್ಷದ ಈ ಹಾಯರ್ ಸೆಕೆಂಡರಿ ತರಗತಿಯನ್ನು ಎರಡು ವರ್ಷಗಳ ಜೂನಿಯರ್ ಡಿಪ್ಲೊಮಾ ತರಗತಿಯಾಗಿ ಪರಿವರ್ತಿಸುವುದರಿಂದ ಸಮಸ್ಯೆಗಳು ತಮಗೆ ತಾವಾಗಿಯೇ ದೂರಗೊಳ್ಳುತ್ತವೆ ಎಂದು ಮದ್ರಾಸ ಸರಕಾರದ ಅಂಬೋಣವಿದೆ.

ಪ್ರಾಥಮಿಕ-ಮಾಧ್ಯಮಿಕ ಶಿಕ್ಷಣ

ಎಂಟು ವರ್ಷಗಳ ಪ್ರಾಥಮಿಕ ಶಿಕ್ಷಣವನ್ನು ಏಳು ವರ್ಷಗಳಿಗೆ ಇಳಿಸುವುದರಿಂದ ಯಾವ ನಷ್ಟವೂ ಕಷ್ಟವೂ ಆಗುವುದಿಲ್ಲ ಹಳೆಯ ಪಾಠಪಟ್ಟಿಯಲ್ಲಿ ಎರಡು-ಮೂರನೆ ತರಗತಿಗಳಿಗೆ ನಿಯತವಾಗಿದ್ದ ಅಭ್ಯಾಸ ಕ್ರಮವು ಬಹು ಕಡಿಮೆ. ಹೀಗಾಗಿ ಏಳೇ ವರ್ಷಗಳಲ್ಲಿ ಪರಿಪೂರ್ಣವಾದ ಪ್ರಾಥಮಿಕ ಶಿಕ್ಷಣವನ್ನು ನೀಡುವುದು ಪ್ರಯಾಸವೆಂದು ಹೇಳುವಂತಿಲ್ಲ. ಅಂತೆಯೇ ಮಾಧ್ಯಮಿಕ ಶಿಕ್ಷಣ ಕಾಲವೂ ಮೂರು ವರ್ಷಗಳ ಅವಧಿಯು ಹಿಂದಿನಂತೆಯೇ ಇಂದೂ ಇರುವುದರಿಂದ ಇದರಲ್ಲಿ ಹೆಚ್ಚು ಪರಿಯು ಅನಗತ್ಯ.

ಕಳೆದ ಆಕ್ಟೋಬರಿನಲ್ಲಿ ದುರ್ಘಟನೆಗೀಡಾದ ಹಾರಾ ರಾಂಚಿ ರೇಲ್ವೆಯ ಡ್ರೈವರ್ ದಿ| ಎ. ವೆಂಕಟರಾಯರ ಪತ್ನಿಗೆ ಪರಿಹಾರ ರೂಪದ ಬಹುಮೊತ್ತ ಕೊಡಲಾಯಿತು

ಪದವಿ ಪೂರ್ವ ಶಿಕ್ಷಣ

ಮುಂದೆ ಬರುವ ಹಾಯರ್ ಸೆಕೆಂಡರಿ ತರಗತಿಯನ್ನು ಉತ್ತೀರ್ಣರಾದವರು ಪದವಿ ತರಗತಿಗೆ ಸೇರಬೇಕಾಗುವುದು. ಇಂದು ಮಾಧ್ಯಮಿಕ ಶಿಕ್ಷಣಾನಂತರ ಪಿಯು. ಸಿ.ಯೆಂಬ ಏಕವರ್ಷೀಯ ತರಗತಿಗೆ ಸೇರಿ ಮುಂದೆ ಪದವಿಗೆ ಅಭ್ಯಾಸ ನಡೆಸ ಬೇಕಾಗುವುದು. ಈ ಪಿ. ಯು. ಸಿ. ತರಗತಿಯಲ್ಲಿ ವಿದ್ಯಾರ್ಥಿಗಳಿಗೆ ಪರಿಣಾಮಕಾರಿಯಾದ ಶಿಕ್ಷಣವು ನೀಡುತಿಲ್ಲ; ಅಲ್ಲಿನ ಅಭ್ಯಾಸವನ್ನು ವಿದ್ಯಾರ್ಥಿಗಳು ಸುಲಭದಲ್ಲಿ ಗ್ರಹಿಸುವಂತಿಲ್ಲ; ಇದರಿಂದಾಗಿಯೇ ಇಲ್ಲಿ ಉತ್ತೀರ್ಣರಾಗುವವರ ಸಂಖ್ಯೆಯು ಅತ್ಯಧಿಕವೆನಿಸಿದೆ. ಮಾಧ್ಯಮಿಕ ಶಿಕ್ಷಣ ಮತ್ತು ಪದವೀ ಶಿಕ್ಷಣಗಳ ನಡುವಣ ಈ ಒಂದು ವರ್ಷದ ಅವಧಿಯಲ್ಲಿ ವಿದ್ಯಾರ್ಥಿಗಳು ಪದವಿ ತರಗತಿಗೆ ತಯಾರಿ ನಡೆಸುವುದು ಅಸಂಭವವೆನಿಸಿದೆ; ಆದುದರಿಂದ ಈ ಅವಧಿಯನ್ನು ವಿಸ್ತರಿಸುವುದು ಅವಶ್ಯವೆಂದೂ, ಪ್ರಾಥಮಿಕ ಹಂತದಲ್ಲಿ ಕಳೆದುಕೊಂಡ ಒಂದು ವರ್ಷವನ್ನು ಈ ಹಂತದಲ್ಲಿ ಕೊಡಿಸಿಕೊಳ್ಳಬೇಕೆಂದೂ ಮದ್ರಾಸ ಸರಕಾರವು ಹೇಳಿತ್ತದೆ.

೪೦ ವರ್ಷಗಳ ಕಾಲ

ಈ ಎರಡು ವರ್ಷದ ಶಿಕ್ಷಣವನ್ನು ನೀಡುವುದರಿಂದ ಹಲವಾರು ಸಮಸ್ಯೆಗಳು ತಾವಾಗಿಯೇ ದೂರವಾಗುವುವು. ಪದವಿ ತರಗತಿಗೆ ಪ್ರವೇಶಿಸುವ ವಿದ್ಯಾರ್ಥಿಗಳು ಈ ಅವಧಿಯಲ್ಲಿ ಸಾಕಷ್ಟು ತರಬೇತಿ ಪಡೆದಿರುತ್ತಾರೆ. ಆದುದರಿಂದ ಅವರಿಗೆ ತಮ್ಮ ಅಭ್ಯಾಸವನ್ನು ಮುಂದುವರಿಸಲು ಹೆಚ್ಚಿನ ಕಷ್ಟವಾಗಲಾರದು. ಎರಡನೆಯದಾಗಿ ಅಧ್ಯಾಪಕರ ಪ್ರಶ್ನೆ. ಹನ್ನೊಂದನೆಯ ತರಗತಿಯನ್ನು ಹೈಸ್ಕೂಲಿನಲ್ಲಿಯೇ ತೆರೆಯುವುದರಿಂದ ಆ ವರ್ಗಕ್ಕೆ ಕಲಿಸಲು ವಿಶೇಷ ಅಧ್ಯಾಪಕರ ನೇಮಕವಾಗ ಬೇಕಾಗುತ್ತದೆ; ವೈಜ್ಞಾನಿಕ ಹಾಗೂ ವ್ಯಾಪಾರಿಕ ಪ್ರಯೋಗಿಕ ಪ್ರಯೋಗಶಾಲೆಗಳೂ, ಅತ್ಯವಶ್ಯವೆನಿಸುವ ಪುಸ್ತಕ ಭಂಡಾರದ ವಿಸ್ತರಣೆಯೂ ಬೇಕಾಗುತ್ತದೆ. ಇವೆಲ್ಲವನ್ನು ಕಾರ್ಯರೂಪಕ್ಕೆ ತರಬೇಕಾದರೆ, ಹೆಚ್ಚಿನ ಆರ್ಥಿಕ ಮೂಲಗಳನ್ನು ಅರಸಿಕೊಳ್ಳಬೇಕಾಗುತ್ತದೆ ನಮ್ಮ ಆರ್ಥಿಕ ದುಸ್ಥಿತಿಯು ಇಂದಿನ ಕಾಲದಲ್ಲಿ ಎಲ್ಲ ಹೈಸ್ಕೂಲುಗಳನ್ನೂ ಮುಂದಿನ ೪೦ ವರ್ಷಗಳಲ್ಲಿ ಹಾಯರ್ ಸೆಕೆಂಡರಿ ಶಾಲೆಗಳಾಗಿ ಪರಿವರ್ತಿಸುವುದು ಸಾಧ್ಯವಿಲ್ಲವಾದುದರಿಂದ ಅಂತಹ ಯೋಜನೆಯ ಪ್ರಯೋಜನವಾದರೂ ಏನು?

(೧೨ನೇ ಪುಟ ನೋಡಿರಿ)

'ಖೀರಾ' ಉಕ್ಕಿನ ಫರ್ನಿಚರುಗಳು, ಮಂಚ-ಸೋಫಾಗಳು, ವೈವಿಧ್ಯ ಪೂರ್ಣ ಕಪಾಟುಗಳು, ಸ್ಟೈನ್‌ಲೆಸ್ ಪಾತ್ರೆ ಪರಡಿಗಳು, ಗೃಹಾಲಂಕಾರ ಸಾಹಿತ್ಯಗಳು, ಗೃಹಿಣಿಯರ ಶೃಂಗಾರ ಸಾಧನಗಳು, ಉಡುಗೊರೆ ಸಾಮಗ್ರಿಗಳು ಇತ್ಯಾದಿ ಇತ್ಯಾದಿಗಳಿಗೆ ವಿಚಾರಿಸಿರಿ —

ಶಾಸ್ತ್ರಿ & ಕೊ
ಪಂಪವನಕಟ್ಟೆ,
ಮಂಗಳೂರು—1

ಬಾಳಿನ ಸಂಜೆಯಲ್ಲಿ

ಒಳ ಪುಟಿಗಳನ್ನು ಹರವಿದಾಗ...

ಶ್ರೀ ಎಚ್. ರಾಮಕೃಷ್ಣ ಅಡಿಗ.

"ದಿನ ಹೋದ ಹಾಗೆ ಹೊಸ ಹೊಸ ವಿಷಯ ನಮ್ಮ ಕಿವಿಗೆ ಬೀಳ್ತಿದೆ. ನಮ್ಮ ಕಾಲದಲ್ಲಿ ಹೀಗೆಲ್ಲ ಇರಲಿಲ್ಲಪ್ಪ.....", ಅನುಭವದ ಆಳದಿಂದ ಬಂದ ಮಾತಿನ ದನಿ ನಡುಗುತ್ತಿತ್ತು.

"ಹೂಂ, ಅಜ್ಜ.... ಕಾಲ ಸಂದ ಹಾಗೇ ಜನರಿಗೆ ಮಾನಮರ್ಯಾದೆಗಳೂ ಮರೆತು ಹೋಗುತ್ತವೆ", ಎಳೆ ಹರೆಯದ ತರುಣ ದನಿಯೊಂದು ಅದನ್ನು ಆನುಮೋದಿಸಿತು. ನೀರವತೆಯ ಮುಸುಕು ಆವರಿಸಿದ್ದರಿಂದ, ದನಿ ಹತ್ತಾರು ಮಾರುಗಳ ತನಕವೂ ಕೇಳಿಸುವಂತಿತ್ತು.

ಹಾಸಿಗೆ ವೇಲಿ ಮಲಗಿದ ಗಂಗವ್ವ ನಿಗೂ ಈ ಮಾತು ಅಸ್ಪಷ್ಟವಾಗಿ ಕೇಳಿ ಬಂತು ಎದ್ದು ಕುಳಿತು ಆಲಸ್ಯದ ನೆಟಿಗೆಯನ್ನು ಮುರಿದು ತೆಗೆದು. ಆಕೆ ಕೇಳಿಸದ ದನಿಸುರುಳಿಯನ್ನು ಕೇಳಲೆಂದು ಅಲೈಸಿದಳು...

ಮುಂಜಾವದ ಹೊತ್ತು. ಸೂರ್ಯೋದಯದ ಸ್ವಾಗತಕ್ಕಾಗಿ ಗಗನಶ್ರೀ ಬಣ್ಣ ಬಣ್ಣದ ಆಲಂಕಾರಗಳಿಂದ ಭೂಷಿತೆಗೊಂಡಿದ್ದಳು. ಕಾಡಿನ ಸೌಂದರ್ಯಗಳನ್ನು ನಾಡಿಗೆ ಹೊತ್ತು ತರಲೆಂದು ಹಳ್ಳಿಗರ ಸಟಲಾಂ ಹೊರಟಿತ್ತು. ಜೆನ್ನಜ್ಜ ಕಿರಿಯ ಅಳಿಯನನ್ನು ಕೂಡಿಕೊಂಡು ಮುಂದೆ ಸಾಗಿದ್ದ — ಮಾತು ಕೇಳಿಸುತ್ತಿತ್ತು.

"ಅಲ್ಲ, ಹುಟ್ಟಿಗಲ್ಲದಿದ್ದರೆ ಊರಲ್ಲಿ ಕೆರೆ ಬಾವಿಗಳಾದರೂ ಇರಲಿಲ್ಲವೆ? ಹೀಗೆ ಅತ್ಯಾಚಾರ ನಡೆಸಿ ಊರಿಗೇ ಕಳಂಕ ತರಬೇಕೆ",

ಗಂಗವ್ವ ನಿಶ್ಚಲವಾಗಿ ಆಲಿಸಿದಳು. ಮುಂದಿನ ಮಾತು ಮಗುವಿನ ತೊಡಲ್ನುಡಿಯಂತೆ ಕೇಳಿಬಂದು ಕೊನೆಗೆ ಅದೂ ಮೂಯವಾಯಿತು. ಊರವರ ತಂಡ ಸೊಪ್ಪು ಸಾನೆಗಳನ್ನು ತರಲು, ಕಾಡು, ಹೊಲಗಳನ್ನು ಸೇರಿತ್ತು. ಆ ಪಂಗಡದಲ್ಲಿ ಅವಳೂ ಸೇರಿಕೊಳ್ಳಬೇಕಿತ್ತು. ಆದರೆ ಒಂದು ತಿಂಗಳಿಂದ ಅನಘೆಗೆ ಆ ಭಾಗ್ಯ ಬಂದಿರಲಿಲ್ಲ.....

ಆಳ ಒಡೆಯ ಆಗರ್ಭ ಶ್ರೀಮಂತ, ಇಡೀ ಊರಿಗೇ ಯಜಮಾನ. ಆದು ಸಂಪೂರ್ಣವಾಗಿ ಗಂಗವ್ವನಿಗೆ ತಿಳಿದು ಬಂದುದು ಆಕೆಯ ಗಂಡ ಸತ್ತಾಗ. ಆಗ ಗಂಗವ್ವನಿಗೆ ಹದಿನೆಂಟು ಇಪ್ಪತ್ತರ ಹರೆಯ, ಮದುವೆಯಾದ ಒಬ್ಬರೆದ್ದಿ ಆವಳ ಗಂಡ, ಆಕೆಯನ್ನು ತನ್ನ ಜೀವಕ್ಕಿಂತಲೂ ಮಿಗಿಲಾಗಿ ಕಾಣುತ್ತಿದ್ದ. ಒಲವಿನ ಪ್ರತೀಕವಾಗಿ ಒಂದು ಗಂಡು ಶಿಶುವನ್ನು ಆಕೆ ಆತನಿಗೊಪ್ಪಿಸಿದಳು. ಆದರೆ ಮಗನ ಬಾಲಲೀಲೆಯನ್ನು ಕಂಡು ನಲಿಯುವ ಭಾಗ್ಯ ಆತನಿಗಿರಲಿಲ್ಲ. ಒಂದು ರಾತ್ರಿ ಆತ ಒಡೆಯರ ತೋಟದ ಕೆಲಸ ಕ್ಕೆಂದು ಹೋದಾಗ ಆಡಿಕೆ ಮರದಿಂದ ಕೈತಪ್ಪಿ ಬಿದ್ದ. ಆತನ ದೇಹವನ್ನು ಮನೆಗೆ ತರುವ ಮೊದಲೇ ಜೀವ ಹಾರಿ ಹೋಗಿತ್ತು. ಲೋಕವೇ ಬರಿದಾಗಿ ಕಂಡು ಬಂದ ಗಂಗವ್ವ ಕೆರೆಯನ್ನಾದರೂ ಹಾರಿ ಸಾಯುತ್ತೇನೆಂದು ಕೂಗಿ ಅತ್ತಳು. ಆದರೆ ವಿವೇಕದ ಅರಿವನ್ನಿತ್ತು, ಮುಂದಿನ ಜೀವನವನ್ನು ಸಾಗಿಸಲು ಸಹಾಯ ಮಾಡುತ್ತೇನೆಂದು ಆಕೆಯ ಒಡೆಯ ಮುಂದೆ ಬಂದರು. ಅಲ್ಲದೆ ಮಗುವನ್ನು ಅನಾಥ ನಾಗಿರಿಸಿ ಸಾಯುವುದೂ ಮಹಾ ಪಾಪ ಕರವೆಂದರು. ಆಗ ಗಂಗವ್ವ ತನ್ನ ಗಂಡನ ಮೇಲಿನ ಒಲವನ್ನು, ಮಗನ ಮುಮತೆಯಲ್ಲಿಟ್ಟಳು. ದಿನ ಬೆಳಗ್ಗೆದ್ದು ಹೊರಟರೆ ಹೊತ್ತು ನಡು ನೆತ್ತಿಯನ್ನೇರಿದ ನಂತರ ಮನೆಯ ಮುಖ ಕಾಣುವುದು. ಮಗನಿಗೆ ಕೂಳನ್ನಿತ್ತು ಮತ್ತೆ ನಡೆದರೆ ಸೂರ್ಯ ಕಡಲ ತಡಿಯನ್ನು ಸೇರುವಾಗ, ತಾನೂ ಮಗನ ತಡಿಮನ್ನು ಸೇರುವುದು.

ಹಾಗೆಯೇ ಆಕೆ ದಿನಗಳ ಮೇಲೆ ದಿನಗಳನ್ನು ದೂಡಿದರು.

ತನ್ನ ಮುಂದಿನ ಒಳ ದೀವಿಗೆಯನ್ನು ಬೆಳಗಿಸುವ ಮಗನಿಗಾಗಿ, ಆಶಾ ಜ್ಯೋತಿಯನ್ನು ಹಿಡಿದು ತಾನು ದುಡಿದಳು. ಇವಳ ಮಗ, ಪುಟ್ಟ ಪುಟ್ಟ ಹೆಜ್ಜೆಯಿಟ್ಟು, ಕೊನೆಗೆ ದೂರದ ಒಡೆಯನ ಮನೆಯ ಕನಕ ನಾಗಿ, ಕೊನೆಗೆ ದನದ ಮೇವನ್ನು ತಂದೊದಗಿಸುವ ತನಕವೂ ಬಲಿತ. ಇನ್ನೇನು ಕೆಲದಿನಗಳಲ್ಲೇ ಆತ ಪ್ರಬುದ್ಧ ನಾಗುತ್ತಾನೆ. ತನ್ನ ಆಶಾಂಕುರ ಮೊಳೆಯಿತು ಎಂದೆನ್ನುವಾಗ ಆಕೆ ಕನಸ್ಸಿನಲ್ಲೂ ಒಗೆಯದ ಒಂದು ಘಟನೆ ನಡೆದು ಹೋಯಿತು.

ಗಂಗವ್ವ ದಿನರದ ಅಜ್ಜಿಯನ್ನು ಕಂಡು ಮೂತನಾಡಿಸಿ ಬರುತ್ತೇನೆಂದು ನಿಶ್ಚಯಿಸಿ, ಒಡೆಯರಲ್ಲಿ ಒಂದು ದಿನ ಉಸುರಿದಳು ಅವರೂ ಅದಕ್ಕೆ ಸಮ್ಮತಿಯಿತ್ತು, ಮಗನನ್ನು ತಮ್ಮ ಮನೆಯಲ್ಲಿ ಬಿಟ್ಟು ಹೋಗುವುದಕ್ಕೆ ಆಕ್ಕನ ಒಪ್ಪಿಗೆಯನ್ನು ದಯಪಾಲಿಸಿದರು. ಗಂಗವ್ವ ಮಗನನ್ನು ಒಡೆಯರ ಮನೆಯಲ್ಲಿ ಬಿಟ್ಟು, ಬೆಳಿಗ್ಗೆ ಬೇಗನೆದ್ದು "ಎರಡು ದಿನ ಬರುವುದಿಲ್ಲ ಮಗೂ" ಎಂದು ಲಲ್ಲೆಗರೆದು ಹೊರಟಳು.

"ನಾಲ್ಕಾರು ವರ್ಷಗಳಿಂದ ಬಾರದೆ ಈಗಲಾದರೂ ಬಂದೆಯಲ್ಲ ಗಂಗೂ ಒಂದು ನಾಲ್ಕು ದಿನ ಇದ್ದು ಹೋಗು. ನಿನಗೇನು ಆವಸರ? ಮಗನನ್ನಾದರೂ ಕರೆತಂದರೆ ನಾನು ಅವನನ್ನು ಕಂಡಾದರೂ ಸಾಯುತ್ತಿದ್ದೆ. ನಮ್ಮ ವಂಶದ ಕುಡಿಗಳೆಲ್ಲ ಮುರುಟಿ ಹೋದುವು. ನಿನ್ನ ಮಗ ನೊಬ್ಬ ಉದ್ಧಾರ ಮಾಡಬೇಕು ಗಂಗೂ ....", ಎಂದು ಅಜ್ಜಿ ನುಡಿದಾಗ, ಗಂಗವ್ವನಿಗಾದ ಹಿಗ್ಗು ಅಷ್ಟಿಷ್ಟಲ್ಲ.

"ಏನೇ ಆಗಲಿ, ಅಜ್ಜಿ. ಅವರು ನಮ್ಮನ್ನು ಬಿಟ್ಟು ಹೋದಾಗಲೇ ನಾನೇ ಬೇವನ್ನ ಅನುಭವಿಸಬೇಕೆಂದಿದ್ದೆ. ಆದರೆ ನಿನ್ನಾಸೆಯನ್ನು ತೀರಿಸುವ ಋಣ ವಿತ್ತೋ ಏನೋ ಎಲ್ಲರೂ ಆಡ್ಡ ಬಂದರು. ಇನ್ನೊಂದು ನಾಲ್ಕಾರು ವರ್ಷದಲ್ಲಿ ಅನಘಿಗೊಂದು ಮದುವೆಯನ್ನೇ ಮಾಡಿ ಬಿಡುತ್ತೇನೆ—ಅಷ್ಟಿಗೆ ನನ್ನ ಕೆಲಸ ಮುಗಿದಂತಾಯ್ತು. ನಮ್ಮ ಬಳಗವನ್ನು ತಿರುಗಿ ಬೆಳೆಸಿದಂತಾಯ್ತು.... ", ಹೆಪ್ಪಳವನ್ನು ಮುರಿದು ಬಾಯಿಗಿಡುತ್ತಾ ಗಂಗವ್ವ ನುಡಿದಳು.

"ಆಗಲಿ ಗಂಗೂ....ನೀನು ಹುಟ್ಟಿದಾಗ ನಾವು ಪಟ್ಟ ಕಷ್ಟ ಎಷ್ಟು ಗೊತ್ತೇ? ...ಆದರೆ ಆದನ್ನೆಲ್ಲ ಕಾಣಲು ನಿನ್ನ ತಾಯಿ ಇಂದಿಲ್ಲ... ನಾನು ಮಾತ್ರ ಉಳಿದಿದ್ದೇನೆ, ಎಲ್ಲರನ್ನೂ ಒಲಿತೆಗೆದುಕೊಂಡು.

ಹೀಗೆ ಏನೇನೋ ಮಾತುಕತೆಗಳು ಮೂರು ದಿನ ಕಳೆದು ಹೋದುದೂ ಗಂಗವ್ವನಿಗೆ ತಿಳಿಯಲಿಲ್ಲ.... ಮಾತಿನ ಮಲ್ಲಿಯೂದ ಆಕೆ ಅಜ್ಜಿಗೆ ಸ್ವರ್ಗ ಸುಖವನ್ನೇ ತಂದಿತ್ತಳು. ಬೇಕಾದ ಬೆತಣವೆಲ್ಲ ಮುಗಿಯಿತು. ಕೊನೆಗೆ ನಾಲ್ಕನೇ ದಿನ ಆಕೆ ಒಲ್ಲದ ಮನಸ್ಸಿನಿಂದ ಹೊರಡಬೇಕಾಗಿ ಬಂತು. "ಅಜ್ಜಿ, ಇನ್ನೊಂದೆರಡು ವರ್ಷದಲ್ಲಿ ಮಗನನ್ನು ಕರೆಕೊಂಡು ಬರುತ್ತೇನೆ", ಎಂದು ಅತೆಯ ನೀರನ್ನು ಮುದಿ ಮರಕ್ಕೆರೆದು ಬಂದಿದ್ದಳು.

ಆದರೆ ಊರಿಗೆ ಬರುತ್ತಲೇ, ಆವಳಿಗೆ ದುಃಖದಾಯಕ ಸುದ್ದಿಯೊಂದು ಆಕೆಯನ್ನು ಹಿಡಿದು ಹಿಂಜಿಲೆಂದು ಕಾದು ಕುಳಿತಿತ್ತು.

ಅವಳು ಬರುವ ಎರಡು ದಿನ ಮೊದಲು ಅವಳ ಮಗ, ಆಕೆಗೆಂದು ದುಃಖದ ದರಿಯನ್ನು ತೆರೆದಿಟ್ಟು, ಇಹಲೋಕ ಯಾತ್ರೆಯನ್ನು ಮುಗಿಸಿದ್ದ; ಆ ಸುದ್ದಿ ಸಿಡಿಲಿನಂತೆ ಅವಳ ಕಿವಿಗೆ ಎರಗಿತು. ಲೋಕವೇ ಕರಿದು ತಲೆ ಮೇಲೆ ಬಿದ್ದಂತಾಯಿತು. ಆಕೆ ಜಗದೊಡಲು ಬಿರಿಯಂತೆ ಕೂಗಿದಳು. ಹುಚ್ಚು ಯೆಚ್ಚಾ

(ಇನ್ನೇ ಪುಟ ನೋಡಿರಿ)

ESTD. 1921 ಸ್ಥಾಪನೆ

NAVAYUGA
KANNADA WEEKLY, UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ನಾ. ಗೋಪೀಚಂದ ರಾವ್,
ವಿದ್ವಾನ್
ಬಿ. ರಾಮರಾಯ ಶೆಟ್ಟಿ,
ಬಿ. ಎ., ಎಲ್.ಟಿ.

ಸಂಚಾಲಕ ಸಂಪಾದಕರು:
ಕೆ. ಹೊಸ್ಮಗ್ಗು ಶೆಟ್ಟಿ.

ಜಾಹೀರಾತು ದರಗಳು:
ಸಿಮಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3 50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಧನವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಬ್ಯಾಂಕ್ ಖಾತೆಯನ್ನು ಯಾರು ತೆರೆಯಬಹುದು?

ಬ್ಯಾಂಕ್ ಖಾತೆ ತೆರೆಯಲು, ತಮಗೆ ಅಸಾಧ್ಯವೆನಿಸುವ ನಿರ್ಬಂಧಗಳಿವೆಯೆಂದು ಹಲವರು ಭಾವಿಸುತ್ತಾರೆ. ಇದೊಂದು ತಪ್ಪು ಭಾವನೆ. ದಿನಕೂಲಿ ಪಡೆವವನು ಕೂಡಾ ಬ್ಯಾಂಕಿನಲ್ಲಿ ಚಿಕ್ಕ ಉಳಿತಾಯ ಖಾತೆಯನ್ನು ತೆರೆಯಬಹುದು. ಇಂದಿನ ದಿನಗಳಲ್ಲಿ ಅದು ಅವಶ್ಯವೂ ಇದೆ. ಹೆಚ್ಚಿನ ಮಾಹಿತಿಗೆ ನಿಮಗೆ ಸವಿೂಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ಎಲ್ಲರಿಗೂ ವಿಶೇಷ ಪ್ರಕಾರದ ಸೌಜನ್ಯ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.



ಆಫ್ರಿಕೆಯಲ್ಲಿರುವ

ಆದಿಯುಗದ ಬೌನೆ ಜನಾಂಗ

ಆಫ್ರಿಕೆಯಲ್ಲಿಯೇ ಹೆಚ್ಚಾಗಿರುವ ಬೌನೇ ಜಾತಿಯ ಗಂಡಸರು ೪॥ ಅಡಿ ಮತ್ತು ಹೆಂಗಸರು ೪ ಅಡಿ ಎತ್ತರವಿದ್ದಾರೆ ಎಂದರೆ ಹೆಚ್ಚಿನವರು ನಂಬಲಾರರು. ಹೆಳೆಯ ಅಜ್ಜಿ ಕಥೆಗಳಲ್ಲಿ ಬರುವ ಕಾಲ್ಪನಿಕ ವ್ಯಕ್ತಿಗಳೇ ಇವರು ಎಂದು ನೀವು ಸಂದೇಹ ಪಡಬಹುದು. ಆದರೆ, ಅದು ಹಾಗಲ್ಲ; ಇಂದಿಗೂ ಪ್ರಪಂಚದ ಬೇರೆ ಬೇರೆ ಡೆಯಲ್ಲಿ ಇವರು ಕಾಣಸಿಗುತ್ತಾರೆ. ಶಾಂತ ಸಾಗರದ ದ್ವೀಪಗಳಲ್ಲಿಯೂ ಈ ಜಾತಿಯವರಿರುವರಾದರೂ ಹೆಚ್ಚಾಗಿರುವುದು ವಿಷುವದ್ರೇಖೆಗೆ ಸಮೀಪವಿರುವ ಪಶ್ಚಿಮ ಆಫ್ರಿಕಾ ಅಥವಾ ಎಬಿಸೀನಿಯಾದ ದಕ್ಷಿಣದಲ್ಲಿನ ಪೂರ್ವ ಆಫ್ರಿಕೆಯಲ್ಲಿ ಮಾತ್ರ.

೧೯೪೭ರ ಗ್ರೀಷ್ಮ ಋತುವಿನಲ್ಲಿ ಎಂ. ನೋಎಲ್ ಬಾಲೀಪರ ನೇತೃತ್ವದಲ್ಲಿ ಒಂದು ಫ್ರೆಂಚ ಸಂಶೋಧನಾ ದಳವು ಮಧ್ಯ ಆಫ್ರಿಕೆಯಲ್ಲಿ ಬೌನೇ ಜಾತಿಯ ಒಂದು ಪರಿವಾರದೊಡನೆ ಎರಡು ತಿಂಗಳು ಕಳೆಯಿತು. ಇದಕ್ಕೆ ಮೊದಲು ಬೌನೆಯರು ಫಿರಂಗಿಗಳನ್ನು ಕಂಡಿರಲಿಲ್ಲ. ಈ ದಳದಲ್ಲಿ ಫೋಟೋಗ್ರಾಫರ್, ರೆಕಾರ್ಡಿಸ್ಟ್, ಜೂವಾಲೊಜಿಸ್ಟ್, ಪುರಾತತ್ವವೇತ್ತ, ಮಾನವ ವಿಜ್ಞಾನ ಶಾಸ್ತ್ರ ಮತ್ತು ಚಿತ್ರಗಾರ ಹೀಗೆ ಎಲ್ಲರೂ ಕೂಡಿದ್ದರು.

ಈ ಸಂಶೋಧಕ ದಳವು ವಿಮಾನದ ಮೂಲಕ ಫಾಜ್‌ವಿಲೆಯ ತನಕ ಹೋಯಿತು. ಆನಂತರ ಏಳ್ನೂರು ಮೈಲುಗಳ ಯಾತ್ರೆಯನ್ನು ಮೋಟಾರು ಗಾಡಿಯಲ್ಲಿ ಮುಗಿಸಿ, ದಳದವರು ಬೌನೇಯವರ ದೇಶಕ್ಕೆ ಬಂದರು. ಇವರೊಡನೆ ಒರ್ವ ನೀಗ್ರೋ ದುಭಾಷಿಯೂ ಇದ್ದನು. ಒಬ್ಬ ನೀಗ್ರೋ ನಾಯಕನು ಬಾಬಂಗಾ ಜಾತಿಯ ಬೌನೇಯರು ಶಿಕಾರಿ ಯಾಡುವ ಸ್ಥಳದ ವರೆಗೆ ಅವರಿಗೆ ಮಾರ್ಗದರ್ಶನ ಮಾಡಿದನು

ಬೌನೇ ಜಾತಿಯ ಜನರು ಬೇಟೆಯಾಡುವವರು. ಇವರ ಶಿಕಾರಿಯಾಡುವುದರಲ್ಲಿ ಮತ್ತು ಅದಕ್ಕೆ ಬೇಕಾದ ಉಪಕರಣಗಳನ್ನೂ ಬಲೆಗಳನ್ನೂ ತಯಾರಿಸುವಲ್ಲಿ ತಮ್ಮ ಸಂಪೂರ್ಣ ಸಮಯವನ್ನು ಕಳೆಯುವರು. ಹೆಂಗಸರಾದರೂ ಗುಡಿಸಲು ಕಟ್ಟುವುದು, ಅಡುಗೆ ಬೇಯಿಸುವುದು ಮತ್ತು ಸಾಮಾನು ಹೊರುವುದರಲ್ಲಿ ಮಗ್ನರಾಗಿರುತ್ತಾರೆ. ಬೇಡೆಯಾಡುವ ವೇಳೆ ಸುರುಷರೊಂದಿಗೆ ಸೇರಿ ಅವರಿಗೆ ಸಹಾಯ ಮಾಡುತ್ತಾರೆ.

ಬೌನೇ ಜನಾಂಗದವರು ಎಂದಿಗೂ ಕೃಷಿಯನ್ನು ಮಾಡುವುದಿಲ್ಲ. ಕೃಷಿ-ವ್ಯವಸಾಯವು ಹೀನತಮ ಉದ್ಯೋಗ ಮತ್ತು ಇದನ್ನು ಅವಲಂಬಿಸುವುದರಿಂದ ತಮ್ಮ ಗೌರವವು ನಷ್ಟವಾಗುತ್ತದೆ ಎಂದಿವರ ನಂಬಿಕೆಯಿದೆ. ತಮ್ಮ ದೇವತೆ 'ಕೊಂಬಾ'ವು ತಮ್ಮನ್ನು ಕಾಡುಗಳಲ್ಲಿ ಬೇಟೆಯಾಡುವುದಕ್ಕೆ ಕಳಿಸಿದೆ; ತಾವು ಕೃಷಿ ಮಾಡಬೇಕೆಂದು ಆ ದೇವತೆ ಬಯಸುವುದಿಲ್ಲ ಎಂದಿವರು ತಿಳಿಯುತ್ತಾರೆ.

ವರ್ಷಾಯತುವಿಗೆ ಮೊದಲು ಅಕ್ಟೋಬರ ತಿಂಗಳಲ್ಲಿ ಬೌನೇ ಜನರು ನೀಗ್ರೋಗಳೊಡನೆ ವ್ಯಾಪಾರ ಮಾಡುತ್ತಾರೆ- ಅವರಿಗೆ ಚಾಕು, ಚೂರಿ, ತಂಬಾಕು ಮತ್ತು ಗುಂಡುಗಳು ಬೇಕಾಗುತ್ತವೆ. ಇವುಗಳಿಗಾಗಿ ಅವರು ನೀಗ್ರೋಗಳಿಗೆ ಆನೆಯ ದಂತ, ಚರ್ಮ, ರಬ್ಬರು ಮತ್ತು ಮಾಂಸ ಮೊದಲಾದುವನ್ನು ಕೊಡಬೇಕಾಗುತ್ತದೆ ಈ ಸಾಮಾನುಗಳು ಗಾಡಕ್ಷು ಇಲ್ಲವೆಂದಾದಲ್ಲಿ ತಮ್ಮ ಹೆಂಗಸರನ್ನು ನೀಗ್ರೋಗಳ ಗದ್ದೆಗಳಲ್ಲಿ ಕೊಯಿಲು ಮೊದಲಾದುಗಳಿಗೆ ಕಳಿಸಿಕೊಡುತ್ತಾರೆ.

ಬೌನೇ ಜಾತಿಯ ಜನರು ವಿಚಿತ್ರ ಸಂಪ್ರದಾಯಶೀಲರು. ಒಂದೆಡೆಯಲ್ಲಿ ಒಂದೆರಡು ವಾರಗಳಿಗಿಂತ ಹೆಚ್ಚು ಸಮಯ ಅವರು ನಿಲ್ಲುವುದಿಲ್ಲ. ಯಾವುದೇ ಒಂದು ಸ್ಥಾನದಲ್ಲಿ ಮರಣ ಸಂಭವಿಸಿತೆಂದರೆ, ಆಕ್ಷಣ ಅವರು ಅಲ್ಲಿಂದ ಕಂಬಿ ಕೀಳುತ್ತಾರೆ. ಇವರು ಮಾಂಸಾಹಾರಿಗಳೆಂದು ಬೇರೆ ಹೇಳಬೇಕಾಗಿಲ್ಲ. ಮಾಂಸಕ್ಕಾಗಿ ಇವರು ಜಿಂಕೆ, ಹಂದಿ, ಗೊರಿಲ್ಲ, ಆನೆ ಮೊದಲಾದುವನ್ನು ಬೇಟೆಯಾಡುತ್ತಾರೆ. ಹೆಟ್ಟಿನ ಉಪಯೋಗ ಮಾಡುವುದೂ ಇದೆ ಇದಕ್ಕೆ ಬೇಕಾದ ಧಾನ್ಯಗಳನ್ನು ನೀಗ್ರೋಗಳಿಂದ ಕೊಂಡುಕೊಳ್ಳುತ್ತಾರೆ. ಅಲ್ಲದೆ, ಇವರು ಕಂದಮೂಲಗಳನ್ನೂ ಕಾಡಿನಲ್ಲಿ ದೊರೆಯುವ ಹಣ್ಣುಹಂಪಲುಗಳನ್ನೂ ತಿನ್ನುತ್ತಾರೆ ಹೆಂಗಸರೂ ಮಕ್ಕಳೂ ಕಿರಿ ಮೀನುಗಳನ್ನು ಹಿಡಿದು ಹುರಿದು ಸಂತೋಷದಿಂದ ತಿನ್ನುತ್ತಾರೆ

ವಾತಾವರಣವು ಅನುಕೂಲವಾದಾಗ, ಪ್ರತಿ ದಿನ ಪ್ರಾತಃಕಾಲ ಪರಿವಾರದ ಜನರನ್ನು-ಸುಮಾರು ೯೦ ಇರುತ್ತಾರೆ— ಒಂದು ನಗಾರಿ ಬಾರಿಸಿ ಎಚ್ಚರಿಸುತ್ತಾರೆ. ಮಹಿಳೆಯರೇ ನಗಾರಿ ಬಾರಿಸುವಕೆಲಸವನ್ನು ಮಾಡುತ್ತಾರೆ. ಈ ನಗಾರಿಯು ಬೇಟೆಯ ಯಾತ್ರೆಗೆ ಪೂರ್ಣ ತಯಾರಿಯಾಗಿದೆ. ಕಾಡಿನಲ್ಲಿ ಒಬ್ಬರನ್ನೊಬ್ಬರನ್ನು ಆರಸ ಬೇಕಾದರೂ ನಗಾರಿಯಲ್ಲಿ ಲಯ ಹೊರಡಿಸುವುದುಂಟು.

ಕಾಡಿಗೆ ಹೊರಟು ಪುರುಷ ಸ್ತ್ರೀಯರು ತಂತಮ್ಮ ಅಸ್ತ್ರ ಶಸ್ತ್ರಗಳನ್ನೂ ಬಲೆಗಳನ್ನೂ ತೆಗೆದುಕೊಂಡು ಒಂದು ಕ್ರಮದಿಂದ ನಿರ್ದಿಷ್ಟ ಸ್ಥಾನದಲ್ಲಿ ನಿಲ್ಲುತ್ತಾರೆ. ಹೆಂಗಸರೂ ಮಕ್ಕಳೂ ಜೋಪಾಡಿಯ ಸುತ್ತ ಕೂತಿರುತ್ತಾರೆ. ಯುವಕರೂ ನಡುಹರೆಯರೂ ಗೋಲಾಕಾರದಲ್ಲಿ ನಿಂತು ನಾಯಕನ ಸಂಕೇತವನ್ನು ಕಾಯುತ್ತಿರುತ್ತಾರೆ. ಮೂವರು ವಾದಕರು ನಾಯಕನ ಆದೇಶದಂತೆ ನೃತ್ಯ ಸಂಗೀತವನ್ನು ಆರಂಭಿಸಿ, ಧಾರ್ಮಿಕ ನೃತ್ಯಕ್ಕೆ ತೊಡಗುತ್ತಾರೆ. ಬೇಟೆಯ ದೇವತೆಯನ್ನು ಆವಾಹನೆ ಮಾಡುವ ನೃತ್ಯವಿದು.

ಸುಮಾರು ಒಂದು ತಾಸಿನ ವರೆಗೆ ಈ ನೃತ್ಯ ಸಂಗೀತವು ನಡೆಯುತ್ತದೆ. ಪ್ರೇಕ್ಷಕರು ಎರಡೂ ಕೈಗಳಿಂದ ತಾಳ ಬಡೆಯುತ್ತಾರೆ. ಆ ಮೇಲೆ ಇಡಿಯ ಜಂಗುಳಿ ಅಲ್ಲಿಂದ ಸರಿಯುತ್ತದೆ. ತೊಡೆಯ ಹಾಲು ಹೆಸುಳಿ ಕೂಡ ಗುಡಿಯಲ್ಲಿರುವಂತಿಲ್ಲ. ಆದರೂ ಕಂದಮೂಲ ಕಿರಿ ಮೀನುಗಳ ಸಂಗ್ರಹಣೆಗಾಗಿ ಕೆಲವು ಮಕ್ಕಳನ್ನು ಮಾತ್ರ ಬಿಡುತ್ತಾರೆ.

ಪರಿವಾರದ ಮುಖಂಡ ಬೇಟೆಯ ಸ್ಥಳವನ್ನು ನಿರ್ಧರಿಸಿದ ಬಳಿಕ ಎಲ್ಲರೂ ತಮ್ಮ ತಮ್ಮ ಬಲೆಗಳನ್ನು ಮರದ ಗೆಲ್ಲುಗಳಿಗೆ ಕಟ್ಟಿ ಹರಡಿಸುತ್ತಾರೆ. ಆ ಸ್ಥಳದ ಮುಕ್ಕಾಲಂಶ ಭಾಗವು ಗೋಲಾಕಾರವಾದ ಬಲೆಗಳಿಂದ ತುಂಬಿರುತ್ತದೆ. ಈ ಕೆಲಸವು ತೀರ ಮೌನವಾಗಿ ನಡೆಯುತ್ತದೆ. ಮಕ್ಕಳ ಕುಲುಬುಲು ಇಲ್ಲ, ದೊಡ್ಡವರ ಪುಸು ಪುಸಿಯಿಲ್ಲ; ಮರಗಳ ಒಣ ಎಲೆಗಳು ಕೂಡ ಆ ಸಮಯದಲ್ಲಿ ಉರುಳುವ ಸದ್ದು ಕೇಳಿಸುವುದಿಲ್ಲ.

ಅಕಸ್ಮಾತ್ತಾಗಿ ನಾಯಕನು ಗಟ್ಟಿಯಾಗಿ ಕೂಗಾಡುತ್ತಾನೆ. ಗೋಲಾಕಾರದ ಕಾಲಂಶ ಸ್ಥಳದಿಂದ ತುಸು ದೂರದಲ್ಲಿ ಓಡಿಸುವ ಕೂಗಾಟವೆಬ್ಬಿಸುತ್ತ ಡೋಲನ್ನು ಬಾರಿಸುತ್ತ ಜನರು ಮುಂದುವರಿಯುತ್ತಾರೆ. ಇದರಿಂದ ಕಾಡಿನ ಪ್ರಾಣಿಗಳನ್ನು ಹೆದರಿಸಿ, ಬಲೆಗಳಿಂದ ನೇಯ್ದು ಗೂಡಿನತ್ತ ಓಡಿಸುತ್ತಾರೆ.

ಈಗ ಬೇಟೆಗಾರಿಗೆ ತಮ್ಮ ಚಾತುರ್ಯವನ್ನು ಪ್ರಯೋಗಿಸುವ ಅವಕಾಶ ಪೊದಗುವುದು. ಅವರು ತಮ್ಮ ಬಲೆಗಳ ನಡುವೆ ನಿಂತಿರುತ್ತಾರೆ ಜಾನುವಾರುಗಳು ನಿಕಟ ಬಂದೊಡನೆಯೇ ಅವುಗಳ ಮೇಲೆ ಹಾರಿ ಬಿಡುತ್ತಾರೆ; ಓಡುವ ಪ್ರಾಣಿಗಳನ್ನು ಹಿಂಬಾಲಿಸುತ್ತಾರೆ. ಬೇಟೆಯು ಬಲೆಯಲ್ಲಿ ಸಿಕ್ಕಿ ಬಿದ್ದಿತೆಂದಾಗ, ಮಕ್ಕಳುಮರಿಗಳೂ ಧಾವಿಸಿ ಬರುತ್ತವೆ; ಅದನ್ನು ಕೊಲ್ಲುವಲ್ಲಿ ಪಂಥ ಕಟ್ಟುತ್ತವೆ. ಬೇಟೆಯನ್ನು ಮೊತ್ತ ಮೊದಲಿಗೆ ಕೊಡೆಯುವವನಿಗೆ ವಿಶೇಷ ಸಂಮಾನ ಲಭಿಸುವುದು; ಆತನ ಪ್ರತಿಷ್ಠೆ ಹೆಚ್ಚುವುದು; ಮಾತ್ರವಲ್ಲ ಎಲ್ಲರಿಗಿಂತ ಉತ್ತಮವಾದ ಮಾಂಸದ ಭಾಗವು ಆತನಿಗೆ ಉಪಹಾರವಾಗಿ ಲಭಿಸುವುದು.

ಗೊರಿಲ್ಲಾ ಮತ್ತು ಆನೆಗಳನ್ನು ಬೇಟೆಯಾಡುವ ಕ್ರಮವು ಬೇರೆ ರೀತಿಯದು. ಇತರ ವಿಧಾನಗಳೆಲ್ಲವೂ ಸಮಾನವಾಗಿದ್ದರೂ ಆನೆಯ ಬೇಟೆಗೆ ವಿಶೇಷ ನೃತ್ಯವಾಗಬೇಕು. ನೃತ್ಯ ಕೊನೆಗೊಂಡ ನಂತರ ನಾಯಕನು ಎರಡು ಮೂರು ದಕ್ಷ ಹಾಗೂ ಅನುಭವೀ ಬೇಟೆಗಾರರನ್ನು ಆರಿಸುತ್ತಾನೆ. ಅವರೊಡನೆ ಹಳೆ ಮಾದರಿಯ ಬಂದೂಕುಗಳು ಇರುತ್ತವೆ. ಇವುಗಳಿಗೆ ಗುಂಡು ಮದ್ದನ್ನು ತುಂಬಿಸಿಡುತ್ತಾರೆ; ಮಾತ್ರವಲ್ಲ, ಅದರಲ್ಲಿ ತೀಕ್ಷ್ಣವಾದ ಈಟಿಯೊಂದನ್ನು ಕೂತುಕೊಳಿಸುತ್ತಾರೆ. ಬಂದೂಕಿರುವ ಶಿಕಾರಿಯೇ ಆನೆಯನ್ನು ಹುಡುಕಿಕೊಂಡು ಕಾಡಿಗೆ ಹೋಗುತ್ತಾನೆ.

(೧೦ನೇ ಪುಟ ನೋಡಿರಿ)

ಉಳಿತಾಯ . . . .
ಒಂದು ಆವಶ್ಯಕತೆ

ಸೊಗಸಾಗಿ ಜೀವನ ನಡೆಸುವ ಈ ಆದರ್ಶ ದಂಪತಿಗಳ ಅಭಿಪ್ರಾಯದಂತೆ ಉಳಿತಾಯವು ಸದಾ 'ಅತ್ಯಾವಶ್ಯಕ ವೆಚ್ಚಗಳಲ್ಲೊಂದು'. ಕೈಗೆ ಬಂದ ಸಂಬಾದನೆಯಲ್ಲಿ ಬೇಕಾದುದೆಲ್ಲ ವೆಚ್ಚಮಾಡಿದ ನಂತರ 'ಏನಾದರೂ ಉಳಿದರೆ ನೋಡುವ' ಎಂಬ ಮನೋಭಾವನೆ ಅವರದಲ್ಲ. ಆಹಾರ, ಬಟ್ಟೆ ಇತ್ಯಾದಿಗಳಿಗೆ ಖರ್ಚು ಮಾಡುವಂತೆಯೇ ಒಂದು ನಿರ್ದಿಷ್ಟ ಮೊತ್ತವನ್ನು ಕ್ರಮವಾಗಿ ಬ್ಯಾಂಕಿನಲ್ಲಿಡುತ್ತಾ ಬರುವ ಅಗತ್ಯವನ್ನು ಅವರು ಚೆನ್ನಾಗಿ ಮನಗಂಡಿರುವರು

ಈ ದಂಪತಿಗಳು ತಮ್ಮ ಸೇವಿಂಗ್ಸ್ ಬ್ಯಾಂಕ್ ಪಾಸ್ ಪುಸ್ತಕವನ್ನು ಅವರ ಭವಿಷ್ಯ ಜೀವನದ ಭರವಸೆಯ ಚಿಹ್ನೆಯೆಂದು ಸಂಗಡಿಸುತ್ತಿರುವರು. ದಿನೇ ದಿನೇ ವೃದ್ಧಿಗೊಳ್ಳುತ್ತಿರುವ ಮೊತ್ತವನ್ನು ತರುವ ಈ ಚಿಕ್ಕ ಪುಸ್ತಕವು ಅವರ ಕಷ್ಟ ಕಾರ್ಪಣ್ಯಗಳನ್ನು ನಿವಾರಿಸಿ ಸುಖಶಾಂತಿಗಳನ್ನು ನೀಡುವ ಸಾಧನವೆಂಬ ಅವರ ಅಭಿಪ್ರಾಯವು ಎಷ್ಟು ಸಮಂಜಸವಾದುದು!

ಒಂದು ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆಯಿರಿ.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಆಹಾರ ಮತ್ತು ಜನಸಂಖ್ಯೆಯ ದೃಷ್ಟಿಯಲ್ಲಿ—

ಭಾರತ ಮತ್ತು ಜಗತ್ತು

ಶ್ರೀ ಕೆ. ರಮೇಶ ಪೈ, ಉಡುಪಿ.

ಆಹಾರ ನಮಗೆ ಅಗತ್ಯವಾಗಿದೆ ಎಂಬ ಮಾತು ಮುಖ್ಯವಲ್ಲ. ಆದರೆ ಯಾವ ರೀತಿಯ ಆಹಾರ ಅಗತ್ಯ ಎಂಬುದು ಅತಿ ಮುಖ್ಯವಾದ ವಿಷಯವಾಗಿದೆ. ಅದರಲ್ಲಿ ಕೊಬ್ಬು, ಶರ್ಕರಪಿಷ್ಟ, ಅನ್ನಾಂಗಗಳು, ಖನಿಜ ಲವಣ, ಸಸಾರಜನಕ ಇತ್ಯಾದಿಗಳು ಸಮಪ್ರಮಾಣದಲ್ಲಿ ಬೆರೆತುಕೊಂಡಿರಬೇಕೆಂದು ಹೇಳುತ್ತೇವೆ. ಭಾರತೀಯನೊಬ್ಬನ ಸಮತೂಕದ ಆಹಾರ ಕೆಳಗೆ ಕಾಣಿಸಿದ ತಖ್ತೆಯಂತೇ ಇದೆ.

ವಿಷಯ:	(ಭಾರ ಔನ್ಸಿನಲ್ಲಿ)
ದವಸ, ಧಾನ್ಯ ಇತ್ಯಾದಿ	14 ಔನ್ಸು
ದ್ವಿದಳ ಧಾನ್ಯ, ಬೇಳೆ ಇತ್ಯಾದಿ	3 ,,
ಹಸುರು ತರಕಾರಿ	4 ,,
ಗೆಡ್ಡೆ ಇತ್ಯಾದಿ	3 ,,
ಇತರ ಕಾಯಿಪಲ್ಯ	3 ,,
ಹಣ್ಣು	3 ,,
ಹಾಲು	10 ,,
ಸಕ್ಕರೆ ಮತ್ತು ಬೆಲ್ಲ	2 ,,
ತುಪ್ಪ	2 ,,
ಮೀನು, ಮಾಂಸ ಇತ್ಯಾದಿ	3 ,,
ಮೊಟ್ಟೆ	1

ಭಾರತ ಮತ್ತು ಜಗತ್ತು

ಪ್ರತಿನಿತ್ಯ ಜಗತ್ತಿನ ಬೇರೆ ಬೇರೆ ದೇಶಗಳಲ್ಲಿ ಪ್ರತಿಯೊಬ್ಬನಿಂದ ಎಷ್ಟು ಆಹಾರ ತಿನ್ನಲ್ಪಡುತ್ತದೋ. ಅದನ್ನಿಲ್ಲಿ ಕೆಲೋರಿ ಮಾನದಲ್ಲಿ ಸೂಚಿಸಲಾಗಿದೆ ಇದು ಇಸ್ವಿ 1952-53ಕ್ಕೆ ಸಂಬಂಧಿಸಿದ ತಖ್ತೆಯಾಗಿದ್ದು ಬೇರೆ ಬೇರೆ ರಾಷ್ಟ್ರದಲ್ಲಿನ ಜನತೆ, ದಿನಕ್ಕೊಮ್ಮೆ ಸರಾಸರಿ ಎಷ್ಟು ಆಹಾರವನ್ನು ತಿನ್ನುತ್ತದೆ ಎಂಬುದರ ಕುರಿತಾದ ಸೂಚನೆಯೊಯುತ್ತದೆ.

ದೇಶ: ತೆಗೆದುಕೊಳ್ಳುವ ಆಹಾರ

ಭಾರತ	1640 ಕೆಲೋರಿ.	
ನ್ಯೂಜಿಲೆಂಡ್	3340 ,,	
ಆಸ್ಟ್ರೇಲಿಯ	3280 ,,	[1951-'52]
ಕೆನಡ	3130 ,,	
ಯು.ಎಸ್.ಎ.	3117 ,,	
ಸ್ವಿಜರ್‌ಲೇಂಡ್	3110 ,,	
ಇಂಗ್ಲೆಂಡ್	3060 ,,	
ಸ್ವೀಡನ್	3000 ,,	
ನೇದರ್‌ಲೇಂಡ್ಸ್	2890 ,,	
ಫ್ರಾನ್ಸ್	2850 ,,	
ಜರ್ಮನಿ	2839 ,,	
ಅರ್ಜೆಂಟೀನಾ	2710 ,,	
ಇಟೆಲಿ	2580 ,,	
ಟರ್ಕಿ	2580 ,,	
ದ. ಆಫ್ರಿಕಾ	2550 ,,	[1951-'52]
ಗ್ರೀಸ್	2500 ,,	
ಬ್ರೇಜಿಲ್	2350 ,,	
ಈಜಿಪ್ಟ್	2340 ,,	
ಚೀನಾ	2151 ,,	[1947-'48]
ಜಪಾನ್	2150 ,,	
ಫಿಲಿಸ್ಪೈನ್ಸ್	2080 ,,	

ಜನಸಂಖ್ಯೆ, ಅದರ ಬೆಳವಣಿಗೆ:-

ದಿ ಯುನ್ಯಾಟೆಡ್ ನೇಶನ್ಸ್ ಡಿಮೋಗ್ರಾಫಿಕ್ ಯಿಯರ್ ಬುಕ್— ಜಗತ್ತಿನ ಜನಸಂಖ್ಯೆಯ ಕುರಿತು ಈ ರೀತಿಬರೆಯುತ್ತದೆ.

ವರ್ಷ	ಜನಸಂಖ್ಯೆ
ಕ್ರಿ. ಪೂ. 25,000	2
ಕ್ರಿ ಶ. 0	350 ಮಿಲಿಯ
ಮತ್ತು	
1650 ರಲ್ಲಿ ಅದು	470 ಮಿಲಿಯ
1750	694 ,,
1850	1091 ,,
1900	1608 ,,
1920	1813 ,,
1930	1987 ,,
1940	2200 ,,
1950	2455 ,,
1953	2547 ,,
1956	2700 ,,

ದಿ ಡಿಮೋಗ್ರಾಫಿಕ್ ಯಿಯರ್ ಬೂಕ್ ಇನ್ನೂ ವರದಿ ಮಾಡುತ್ತದೇನೆಂದರೆ, ಜಗತ್ತಿನಲ್ಲಿ ಪ್ರತೀ ನಿಮಿಷಕ್ಕೆ 170 ಮಕ್ಕಳು ಹುಟ್ಟುತ್ತಾವೆಂದೂ ಅದೇ ಹೊತ್ತಿಗೆ 90 ಮಂದಿ ಸಾಯುವರೆಂದೂ ತಿಳಿಸುತ್ತದೆ. ಹೀಗಾಗಿ ಜಗತ್ತಿನಲ್ಲಿ ಪ್ರತೀ ನಿಮಿಶಕ್ಕೆ 80 ಪೋಷಿಸಲ್ಪಡುವವರು ಉಳಿಯುತ್ತಾರೆ.

ಜಗತ್ತಿನ ಜನಸಂಖ್ಯೆ ಇದೇ ಗತಿಯಲ್ಲಿ ಅಭಿವೃದ್ಧಿ ಹೊಂದುವುದಾದರೆ ಈ ಶತಮಾನದ ಅಂತ್ಯದಲ್ಲಿ ಜಗತ್ತಿನ ಜನಸಂಖ್ಯೆ ಈಗಿರುವುದರ ಎರಡು ಪಾಲು ಹೆಚ್ಚಾಗುವುದೆಂದು ತಿಳಿಯಲಾಗಿದೆ.

ಬ್ರಿಟಿಷ್ ಹೌಸ್ ಆಫ್ ಲೋರ್ಡ್‌ನಲ್ಲಿ ಜರಗಿದ ಜಗತ್ತಿನ ಜನಸಂಖ್ಯೆ ಮತ್ತು ಅಸರೆಯ ಕುರಿತಾದ ಚರ್ಚೆಯಲ್ಲಿ ಲೋರ್ಡ್ ಸಾಮುವೇಲರು ಈ ರೀತಿ ಹೇಳಿದ್ದಾರೆ:—

"ನೂರು ವಷಗಳ ಹಿಂದೆ ಅಂದರೆ 1850ರಲ್ಲಿ ಜಗತ್ತಿನ ಜನಸಂಖ್ಯೆ 1000 ಮಿಲಿಯ ಅಥವಾ ಅದಕ್ಕಿಂತ ಹೆಚ್ಚಾಗಿತ್ತು. 1900ರಲ್ಲಿ ಅದು 1500 ಮಿಲಿಯ ಅಥವಾ ಅದಕ್ಕಿಂತ ಮೇಲಕ್ಕೇರಿತು. ಆದರೆ ಇಂದು ಅದು 2000 ಮಿಲಿಯಕ್ಕೂ ಮಿಕ್ಕಿದೆ." ಅವರು ಹೇತ್ತಾರೆ:—

".....And if the present trends continue, there will be added about 100,000 more mouths everyday and by the earlier part of the next century the total population will be doubled and will amount to 5000 millions"

ಮುಂದೆ ಜನಕೋಟಿ ಯಾವ ರೀತಿಯ ವಿಪತ್ತನ್ನು ಎದುರಿಸಬೇಕಾಗುವುದೋ ಎಂಬ ಪ್ರಶ್ನೆ 'ಹ್ಯೂಮನ್ ಎಫೇರ್ಸ್' ವಿದ್ಯಾರ್ಥಿಗಳಿಗೆ ಬಹು ಆತುರವನ್ನು ಈಗಾಗಲೇ ಹುಟ್ಟಿಸಿದೆ.

ಅಮೃತ ಬಿಂದು

ಒಮ್ಮೆ ಹೊಂದಿದ್ದ ವಸ್ತುವಿನ ವಾಸನೆಯನ್ನು ಪಾತ್ರೆಯು ಹೇಗೆ ಸುಲಭದಲ್ಲಿ ಕಳೆದುಕೊಳ್ಳಲಾರದೋ ಹಾಗೆಯೇ ಒಮ್ಮೆ ಇದ್ದ ಕೆಟ್ಟ ಚಟದ ಹವ್ಯಾಸ ಒಮ್ಮೆಲೇ ಮಾಸಲಾರದು.

o o o o

ಪಾಂಡಿತ್ಯವಿಲ್ಲದ ಅನುಭವವು ಅನುಭವವಿಲ್ಲದ ಪಾಂಡಿತ್ಯಕ್ಕಿಂಥಾ ನೂರು ಪಾಲು ಶ್ರೇಷ್ಠ.

o o o o

ಒಮ್ಮೆ ಅನುಭವಿಸಿ ಪುನಹ ಒದಗಿಸಿಕೊಳ್ಳಲಾಗದ ಆನಂದದ ಪುನಃ ಸ್ಮರಣೆಯು ದುಃಖವನ್ನು ತರುತ್ತದೆ.

o o o o

ಇಪ್ಪತ್ತು ಪುಸ್ತಕಗಳ ಪುಟ ಮಗುಚುವದಕ್ಕಿಂಥಾ ಒಂದನ್ನು ಚೆನ್ನಾಗಿ ಓದುವದು ಮೇಲು.

o o o o

ಸಿರಿವಂತರ ಸ್ವರ್ಗಕ್ಕೆ ಏರಲು ಬಡವರ ಯತ್ನವೇ ಏಣಿ ಒದಗಿಸುತ್ತದೆ.

o o o o

ಇನ್ನೊಬ್ಬರ ಜೀವನಕ್ಕೆ ಬೆಳಕು ಚೆಲ್ಲುವವರು ತಮ್ಮ ಜೀವನದಿಂದ ಬೆಳಕನ್ನು ಮುಚ್ಚಿಡಲಾರರು.

o o o o

ಕಣ್ಣೀರಿನಿಂದ ದುಃಖ ಶಮನವಾಗುವಂತೆ ಮಾತಿನಿಂದ ಕೆಲಸದ ಉತ್ಸಾಹ ಕಡಿಮೆಯಾಗುತ್ತದೆ.

o o o o

ವಿವೇಚಿಸದೆ ಕ್ಷಿಪ್ರವಾಗಿ ನಂಬುವವರಿಗೆ ಬರುವ ವಿಪತ್ತನ್ನು ಹೊರಲು ವಿಶಾಲವಾದ ಹೆಗಲುಗಳು ಬೇಕು.

o o o o

ಕಣ್ಣು ನೋಡಬೇಕಾದರೆ ಅದರ ಹಿನ್ನೆಲೆಯಲ್ಲಿ ಶಕ್ತಿಯೊಂದಿದೆ ಎಂಬುದನ್ನು ಅರಿಯದೆ ಕಣ್ಣೇ ಸರ್ವಸ್ವವೆನ್ನುವದೇ ಅಹಂಕಾರವೆನಿಸುತ್ತದೆ.

o o o o

ಏನನ್ನೂ ಕೊಡದೆ, ಎಲ್ಲವನ್ನೂ ಹೊಂದಿಕೊಳ್ಳುವ ಮನುಷ್ಯನು ಜೀವಂತಸಿರಬಹುದು, ಆದರೆ ಅದು ಜೀವನವಲ್ಲ.

o o o o

ದೀಪವನ್ನು ತನಗಾಗಿ ಉಪಯೋಗಿಸುವವನು ಕಡಿಮೆ ಪಕ್ಷ ದೀಪಕ್ಕೆ ಎಣ್ಣೆಯನ್ನಾದರೂ ಒದಗಿಸಬೇಕು.

o o o o

ಏನೂ ಮಾಡದೆ ಕಾಲ ಕಳೆಯುವ ಜೀವ ಕಡೆಗೆ ಕೇಡು ಮಾಡುವವನ್ನು ಕಲಿಯುತ್ತದೆ.

o o o o

ಜಗತ್ತು ಹೇಳಿದಂತೆ ಕುಣಿಯುವ ಗುಲಾಮರಂತಿದ್ದರೆ ಮಾತ್ರ ಜಗತ್ತು ನಮ್ಮ ಗೆಳೆಯನಂತಿರುತ್ತದೆ.

o o o o

ಕುತ್ತಿಗೆಯಲ್ಲಿ ಮುತ್ತಿದ್ದರೇನು? ಹೃದಯದಲ್ಲಿ ಪಿಶಾಚಿ ಇರಬಾರದು.

Navayuga Enterprise Limited.

Registered Office: Palukote, UDIPI.

NOTICE

The register of members and Share transfer books of the Company will remain closed from 10th June to 5th July, 1962 (both days inclusive.)

(By order of the Board)

Udipi: Date 26—5—1962.

K. Honnayya Shetty,
Managing Director.

ಅಧಿಕ

ಬಡ್ಡಿ

ಸಂಪಾದಿಸಿರಿ

ಫಿಕ್ಸೆಡ್ ಡಿಪಾಸಿಟ್

ಮೇಲೆ ವರ್ಷಕ್ಕೆ ಶೇಕಡಾ

5 1/8

ಕ್ಯಾಷ್ ಸರ್ಟಿಫಿಕೇಟ್

ಮೇಲೆ ವರ್ಷಕ್ಕೆ ಶೇಕಡಾ

4 1/4

ಸೇವಿಂಗ್ಸ್ ಬ್ಯಾಂಕ್ ಡಿಪಾಸಿಟ್

ಮೇಲೆ ವರ್ಷಕ್ಕೆ ಶೇಕಡಾ

3

ಚಕ್ರಬಡ್ಡಿ

ಕ್ರಮವಾಗಿ ಕೆನರಾ ಬ್ಯಾಂಕಿನಲ್ಲಿ ಉಳಿಸಿರಿ.

ಕೆನರಾ ಬ್ಯಾಂಕ್ ಲಿ.

ಸ್ಥಾಪನೆ: 1906

ಸಮಗ್ರ ಸೇವೆ—

ಸಂಪೂರ್ಣ ಭದ್ರತೆ

ಸರಳ ಉತ್ತರದ ಗಡಸು ಪ್ರಶ್ನೆ

ನೆಹರುರವರ ಉತ್ತರಾಧಿಕಾರಿ ಯಾರು?

ಪ್ರಧಾನ ಮಂತ್ರಿ ನೆಹರುರವರು ಕರೆದ ಪತ್ರಿಕಾ ಪರಿಷತ್ತೊಂದರಲ್ಲಿ ಅವರ ಉತ್ತರಾಧಿಕಾರಿ ಯಾರು ಎಂಬ ವಿಷಯದ ಕುರಿತಾಗಿ ಬಹು ರೀತಿಯ ಸವಾಲುಗಳು ನಡೆದುವು. ಈ ಪ್ರಶ್ನೆ ಇಂದು ನಿನ್ನೆಯದಲ್ಲ; ಬಹು ಹಿಂದಿನ ಸಮಯದಿಂದಲೂ ಭಾರತೀಯರ ಹೃದಯದಲ್ಲಿ ಏಳುತಿತ್ತು; ಇಂದಿಗೂ ಏಳುತ್ತದೆ. ಅದಕ್ಕಿಂತ ತಲೂ ಹೆಚ್ಚಾಗಿ ವಿದೇಶೀಯರ ಮನಸ್ಸಿನಲ್ಲಿ ಈ ಬಗ್ಗೆ ಕುತೂಹಲ ಕೆರಳಿದೆ. ಆಗಿಂದಾಗ್ಗೆ ಈ ಪ್ರಶ್ನೆಯು ಮುಂದೆ ಬರುತ್ತದೆ; ಪಂಡಿತ ನೆಹರುರವರನ್ನೇ ನೇರವಾಗಿ ಹಲವು ಬಾರಿ ಕೇಳಿದವರಿದ್ದಾರೆ. ಆದರೆ, ಅವರು ಈ ವಿಷಯದಲ್ಲಿ ಯಾವ ನಿರ್ದಿಷ್ಟ ಉತ್ತರವನ್ನೂ ಕೊಡದೆ ಸಮಯದ ಗತಿಯನ್ನೇ ನೋಡಬೇಕು ಎಂದು ಉಚ್ಚರಿಸುತ್ತ ಬಂದಿದ್ದಾರೆ.

ಪ್ರಧಾನ ಮಂತ್ರಿ ನೆಹರುರವರು ತಮ್ಮ ವೃದ್ಧಾಪ್ಯದ ದೆಸೆಯಿಂದ ಇನ್ನು ಬಹಳಷ್ಟು ತನ್ನ ಕರ್ತವ್ಯಗಳನ್ನು ನಿರ್ವಹಿಸುವುದು ಸಾಧ್ಯವಿಲ್ಲವೆಂಬುದೀಗ ಜಗಜ್ಜಾಹಿರವಾಗಿದೆ. ಶ್ರೀ ಟಿ. ಟಿ. ಕೃಷ್ಣಮಾಚಾರಿಯವರನ್ನು ಕೇಂದ್ರ ಮಂತ್ರಿಮಂಡಳಕ್ಕೆ ಎಳೆಯಲು ನಡೆದ ಬಹು ವಿಧದ ಪ್ರಯತ್ನಗಳಿಗೆ ಇದೂ ಒಂದು ಕಾರಣವಾಗಿದೆ. ಆರ್ಥಿಕ ಸಮನ್ವಯದ ಹೊಣೆಯನ್ನು ಇದು ವರೆಗೆ ಪ್ರಧಾನಿಗೇ ನೋಡಿಕೊಂಡು ದೇಶದ ಆರ್ಥಿಕ ನೀತಿಯನ್ನು ರೂಪಿಸಬೇಕಿತ್ತು. ಇನ್ನು ಟಿ.ಟಿ. ಕೆಯವರ ಸಲಹೆ ಪಡೆದು ಅದನ್ನು ವಿಚಾರಿಸಿ ಮುಂದಿನ ಹೆಜ್ಜೆಯನ್ನಿಟ್ಟರೆ ಸಾಕು. ಪ್ರಧಾನಿಯವರಿಗಿರುವ ಬಹುಮುಖದ ಜವಾಬ್ದಾರಿಯನ್ನು ಶ್ರೀಗಳಾದ ಮುಖರ್ಜಿ ದೇವಾಯಿ, ಲಾಲಬಹದೂರ್ ಶಾಸ್ತ್ರಿ, ಜಗಜ್ಜೀವನ್ ರಾಮ ಮತ್ತು ಟಿ. ಟಿ. ಕೆ. ಯವರು ಅಲ್ಪ ಸ್ವಲ್ಪವಾಗಿ ಹೊತ್ತುಕೊಂಡು ಕಡಿಮೆ ಮಾಡಬಹುದು. ಸಂರಕ್ಷಣಾ ಮಂತ್ರಿ ಶ್ರೀ ಮೆನನ್ನರ ನಕಕಾರವು ಇವರಿಗೆ ಸಿಗುವುದು. ಆಗ, ಪ್ರಧಾನಿ ನೆಹರು ತನ್ನ ಸಂಪುಟದಿಂದ ಅದನ್ನು ಸಮರ್ಪಕ ಮತ್ತು ಉಚಿತ ಮಾರ್ಗದಲ್ಲಿ ಕೊಂಡೊಯ್ಯಲು ಸಹಾಯಕವಾಗುವುದು.

ಪ್ರಧಾನ ಮಂತ್ರಿಯ ಹುದ್ದೆಯ ಮೇಲೆ ಬಹಳಷ್ಟು ನಾಯಕರು ಕಣ್ಣಿಟ್ಟುಕೊಂಡಿದ್ದಾರೆ, ಲೋಕಸಭಾ ಕಾಂಗ್ರೆಸ್ ಪಕ್ಷದ ಉಪನಾಯಕನ ಚುನಾವಣೆಯ ಬಗ್ಗೆ ಸಾಕಷ್ಟು ಪೈಪೋಟಿ ನಡೆದಿದ್ದರೆ, ಅದಕ್ಕೆ ಇದೂ ಒಂದು ಪ್ರಬಲ ಕಾರಣ. ಇಂದು ಉಪ ನಾಯಕನಾಗಿರುವವನು ಮುಂದೆ ಪ್ರಧಾನಿಯಾಗುವುದು ಸುಲಭ ಮತ್ತು ಸಾಧ್ಯವೆಂಬ ಭ್ರಮೆಯೇ ಇಂತಹ ವೈಮನಸ್ಯಗಳಿಗೆ ಪ್ರೇರಕವಾಯಿತು. ಆದರೆ, ಉಪನಾಯಕ-ಸ್ಥಾನವೆಂಬುದು 'ನಾಯಕ' ಪಟ್ಟದ ಪೂರ್ವ ದ್ವಾರವಲ್ಲ; ಮಂತ್ರಿಮಂಡಳಿಯ ಸದಸ್ಯನೇ ಉಪನಾಯಕನಾಗಬೇಕೆಂದಿಲ್ಲ. ನಾಯಕನ ಅನುಪಸ್ಥಿತಿಯಲ್ಲಿ; ಪಕ್ಷದ ಸಭೆಗಳ ಅಧ್ಯಕ್ಷತೆ ವಹಿಸುವುದಷ್ಟೇ ಇಂತಹ ಉಪ ನಾಯಕನ ಕರ್ತವ್ಯವೆಂದು ನೆಹರು ಸ್ಪಷ್ಟಪಡಿಸಿದ ಬಳಿಕ ಮಂತ್ರಿಗಳಲ್ಲಿ ಯಾರೂ ಈ ಸ್ಥಾನಕ್ಕೆ ಜೊಲ್ಲು ಸುರಿಸಲಿಲ್ಲ.

ಮಂತ್ರಿ ಮಂಡಳದ ಸಭೆಗಳಲ್ಲಿ ಇಂತಹ ಉಪನಾಯಕನಿಗೆ ಪ್ರವೇಶವಿಲ್ಲವಾದುದರಿಂದ 'ನಾಯಕ'ನ ಗೈರು ಹಾಜರಿಯಲ್ಲಿ ಮಂತ್ರಿಮಂಡಳಿಯ ಹಿರಿಯ ಸದಸ್ಯನೊಬ್ಬನು ಆ ಕೆಲಸವನ್ನು ಮಾಡುವನು ಎಂದೂ ಇದು ಮುಂದೆ ಆತನು ನಾಯಕನಾಗುವನೆಂಬ ಅಭಿಪ್ರಾಯದಿಂದಲ್ಲವೆಂದು ನೆಹರು ಪದೇ ಪದೇ ಹೇಳಿ ಬಂದಿದ್ದಾರೆ. ಪಕ್ಷದ ನಾಯಕತ್ವವು ಅನುಭವದಿಂದ ಅಥವಾ ಮಂತ್ರಿತನದಲ್ಲಿದ್ದ ಅವಧಿಯಿಂದ ಬರುವುದಲ್ಲ; ಪಕ್ಷದ ಸದಸ್ಯರಿಲ್ಲರ ವಿಶ್ವಾಸದಿಂದ ಬರುತ್ತದೆ. ಇಂತಹ ವಿಶ್ವಾಸ ಪಡೆದವನು ಹಿಂದೆ ಮಂತ್ರಿಯಾಗಿರಬೇಕೆಂಬ ನಿಯಮವಿಲ್ಲ. ಪ್ರಜಾಪ್ರಭುತ್ವದಲ್ಲಿ ವಿಶ್ವಾಸ ವ್ಯಕ್ತಮಾಡಿರುವ ಭಾರತೀಯರು ಬಹುಮತದ ಪಕ್ಷವುಯಾರನ್ನು ನಾಯಕನೆಂದು ಆರಿಸುವುದೋ ಆತನನ್ನೇ ತನ್ನ ಪ್ರಧಾನಿಯೆಂದು ಒಪ್ಪುತ್ತಾರೆ.

ಸರ್ ಅಂತೋನಿ ಈಡನ್ನರು ಬ್ರಿಟನ್ನಿನಲ್ಲಿ ತಮ್ಮ ಪದವಿಯನ್ನು ತ್ಯಜಿಸಿದಾಗ, ಅಧಿಕಾರಯುಕ್ತ ಕನ್ಸರ್ವೇಟಿವ್ ಪಕ್ಷದಲ್ಲಿ ಮ್ಯೆಕಮಿಲನ್ ಮತ್ತು ಬಟ್ಲರರ ನಡುವೆ ಸ್ಪರ್ಧೆ ನಡೆದಿತ್ತು. ಪಕ್ಷವು ಮೊದಲಿನವರನ್ನು ನಾಯಕನೆಂದು ಆಯ್ದುಕೊಂಡಿತು. ಅಲ್ಲಿ ಚಾರಿತ್ರಿಕ ಕಾರಣಗಳಿಂದಾಗಿ ಪಕ್ಷವು ಆರಿಸಿದ ನಾಯಕನನ್ನು ರಾಜ ಇಲ್ಲವೇ ರಾಣಿಯು ಮೌನವಾಗಿ ಒಪ್ಪಿಕೊಳ್ಳಬೇಕೆಂದಿಲ್ಲ. ಆದರೆ, ಚುನಾಯಿತ ಅಧ್ಯಕ್ಷನಿರುವ ಭಾರತ ಒಕ್ಕೂಟದಲ್ಲಿ ಇದು ಎಂದಿಗೂ ಸಾಧ್ಯವಿರುವುದಿಲ್ಲ. ಹಾಗಿದ್ದರೂ ನವದೆಹಲಿಯಲ್ಲಿ ನೆಹರು ಮಂತ್ರಿ ಮಂಡಳದ ಸದಸ್ಯರನ್ನು ಆರಿಸುವಾಗ ಎಲ್ಲೆಲ್ಲಿಯೂ ಕುತೂಹಲ ಕಂಡು ಬಂದಿತ್ತು. ಮಂತ್ರಿಗಳ ಹೆಸರು ಪ್ರಕಟವಾದ ಗಣನಾನುಕ್ರಮಕ್ಕೂ ಪ್ರಾಶಸ್ತ್ಯವನ್ನು ನೀಡಲಾಗಿತ್ತು. ಆದರೆ, ಇಂತಹ ಪ್ರಾಶಸ್ತ್ಯದಿಂದ ಭವಿಷ್ಯವು ರೂಪಿತವಾಗುವುದಿಲ್ಲ. ನಾಯಕನ ಆಯ್ಕೆ ನಡೆಯಬೇಕಾದಾಗ ಪಕ್ಷದಲ್ಲಿರುವ ಪರಿಸ್ಥಿತಿಗಳಿಗನುಗುಣವಾಗಿ ಎಲ್ಲವೂ ನಡೆಯುವುದು ಎಂದು ಪ್ರಧಾನಿ ವ್ಯಕ್ತಪಡಿಸಿದ್ದಾರೆ.

ನೆಹರುರವರ ವ್ಯಕ್ತಿತ್ವ ಅಸಾಮಾನ್ಯವಾದುದು. ಅವರಂತೆ ದೇಶ-ವಿದೇಶಗಳಲ್ಲಿ ಜನಮನ್ನಣೆ ಪಡೆದ ವ್ಯಕ್ತಿ ಇನ್ನೊಬ್ಬರಿಲ್ಲವೆಂಬುದು ಸತ್ಯ. ಆದರೆ, ತನ್ನ ದೇಶದ ಭವಿಷ್ಯವನ್ನು ಇವರೂ ನುಡಿಯಲಾರರು. ಡೆರಾಲ್ಡ್ ಮ್ಯೆಕಮಿಲನರು ಪ್ರಧಾನಿಯಾಗುವುದಕ್ಕೆ ಮೊದಲು ಅಜ್ಞಾತರೆಂಬಂತೆಯೇ ಇದ್ದರು. ಆದರೆ ಇಂದವರು ತಲೆಯೆತ್ತಿದ್ದಾರೆ; ಸಮರ್ಥ ಪ್ರಧಾನಿಯೆನಿಸಿದ್ದಾರೆ ಹೀಗಾಗುವುದಕ್ಕೆ ಕಾರಣವನ್ನು ಊಹಿಸಬೇಕಾಗಿಲ್ಲ. ಗಾಳಿ ಬೀಸಿದಾಗ ಎದ್ದು ತೋರುವ ಎಲೆಯ ಮರೆಯ ಕಾಯಿಗಳು ಹಲವಾರಿರಬಹುದು; ಪಂಡಿತ ನೆಹರು ಪಕ್ಷದಲ್ಲಿಯೂ ಮಂತ್ರಿಮಂಡಳದಲ್ಲಿಯೂ ಪ್ರಭಾವ ಪೂರ್ಣ ಪುರುಷರು, ಹಾಗಿದ್ದರೂ ಪ್ರಜಾಪ್ರಭುತ್ವವಾದಿಗಳು. ಇದರಿಂದಾಗಿಯೇ ಅವರು ದೇಶಕ್ಕೆ ಬಳಿತಾಗುವುದನ್ನೇ ಯೋಚಿಸುತ್ತಾರೆ. ಅವರ ಯೋಜನೆಯನ್ನು ಪಕ್ಷವೂ ಸರಕಾರವೂ ಒಪ್ಪಿಯೇ ಒಪ್ಪುತ್ತದೆ.

ನೆಹರುರವರ ಮಾತು ಇಂದು ವೇದವಾಕ್ಯವೆಂಬಂತಾಗಿದೆ ನಿಜ ಆದುದರಿಂದಲೇ ಅವರ ಬಾಯಿಂದಲೇ 'ತನ್ನೆ ಉತ್ತರಾಧಿಕಾರಿಯೆಂದು ಹೇಳಿಸಿಕೊಳ್ಳುವ ಶಕ್ತಿತಕ ಕೆಲವರಿಗೆ. ಆದರೆ, ನೆಹರು ಸರ್ವಾಧಿಕಾರಿಗಳಲ್ಲ; ಅಂತಹ ಮನೋವೃತ್ತಿಯೂ ಅವರಲ್ಲಿಲ್ಲ. ತನ್ನ ನಂತರ ನಾಯಕನನ್ನು ಆಯ್ದುಕೊಳ್ಳುವ ಜವಾಬ್ದಾರಿಯು ಪಾರ್ಲಿಮೆಂಟರಿ ಪಕ್ಷದ ನಿರ್ಧಾರವೇನಾಗಬಹುದೆಂದು ಇಂದೇ ಹೇಗೆ ಹೇಳೋಣ? ಆ ಸಮಯ ಬರುವ ವರೆಗೆ ಕಾಯಿರಿ—ಕಾಲ ಬಂಜೆಯಾಗದು ಎನ್ನುತ್ತಾರೆ ನೆಹರು.

— —

ಜ್ಯೋತಿಷ್ಯಾಸ್ತ್ರದಂತೆ

ಆರ್ದ್ರಾ ಪ್ರವೇಶದ ಸತ್‌ಫಲಗಳು

ಜೂನ್ ತಿಂಗಳಲ್ಲಿ ಅರ್ಧಾಂಶಕ್ಕಿಂತ ಹೆಚ್ಚಿನ ದಿನಗಳು ಸಂದರೂ ಮಳೆಯಾಗುವ ಲಕ್ಷಣಗಳು ಗೋಚರವಾಗದಿರುವುದರಿಂದ ಎಲ್ಲರೂ ಕಂಗೆಟ್ಟಿರುವುದು ಸಹಜ. ಆದರೆ, ಈ ಬಗ್ಗೆ ಹೆಚ್ಚಿನ ಕಾಳಜಿ ಬೇಡ; ಮಳೆಯಾಗಿಯೇ ತೀರುತ್ತದೆ. ಎನ್ನುತ್ತದೆ ಜ್ಯೋತಿಶಾಸ್ತ್ರ.

ಜ್ಯೋತಿರ್ಗಣಿತಕ್ಕನುಸಾರವಾಗಿ ಜೂನ್ ತಾ. ೨೧ನೇ ಗುರುವಾರ ರಾತ್ರೆ ಎರಡು ತಾಸು ೫೦ ನಿಮಿಷಕ್ಕೆ ಸೂರ್ಯದೇವನು ಮೃಗಶಿರಾ ನಕ್ಷತ್ರವನ್ನು ಬಿಟ್ಟು ಆರ್ದ್ರಾ ಪ್ರವೇಶ ಮಾಡುತ್ತಾನೆ. ಆರ್ದ್ರಾ ಪ್ರವೇಶ ಫಲದಿಂದ ಮಳೆಗಾಳಿ, ಸುಭಿಕ್ಷೆ ದುರ್ಭಿಕ್ಷ, ಆ ವರ್ಷದ ಬಳಿತು ಕೆಡುಕುಗಳು ಎಲ್ಲವನ್ನೂ ತಿಳಿಯ ಬಹುದೆಂಬುದರಿಂದಲೇ ಪಂಚಾಂಗಗಳಲ್ಲಿ ಇದಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡಿದ್ದಾರೆ.

ಆಷಾಢ ಕೃಷ್ಣಚತುರ್ಥಿ ಗುರುವಾರ ಶ್ರವಣಾನಕ್ಷತ್ರ, ವೈಧೃತಿಯೋಗ ಮತ್ತು ಬವನಾಮಕರಣದಿಂದಕೂಡಿದ ಸಂಜಾವಗುವ ಆದಿಸೂರ್ಯೋದಯದ ವೇಳೆಯಿರುವುದು. ಆದರೆ, ಆರ್ದ್ರಾ ಪ್ರವೇಶದ ಸಮಯದಲ್ಲಿ ತಿಥಿ ಪಂಚಮಿ, ನಕ್ಷತ್ರ ಧನಿಷ್ಠಾ ಮತ್ತು ಯೋಗವು ವಿಷ್ಕಂಭವಾಗುವುವು.

ಪಂಚಮಿ ತಿಥಿಯಲ್ಲಿ ಸೂರ್ಯನು ಆರ್ದ್ರಾ ಪ್ರವೇಶ ಮಾಡಿದರೆ, ಆ ವರ್ಷ ಸಮಸ್ತ ಪ್ರಾಣಿಗಳಿಗೆ ಎಲ್ಲ ವಿಧದಿಂದ ಸಂಪೂರ್ಣ ಸಂತೋಷವು ಲಭಿಸುವುದು ಎಂದು ಸಂವತ್ಸರ ಪ್ರದೀಪ್‌ವೆಂಬ ಫಲಿತ ಜ್ಯೋತಿಷ್ಯ ಗ್ರಂಥದಲ್ಲಿ ಹೇಳಲಾಗಿದೆ.

ಗುರುವಾರ ದಿನ ಆರ್ದ್ರಾ ಪ್ರವೇಶವಾದರೆ, ಎಲ್ಲ ಪ್ರಾಣಿಗಳೂ ದ್ರವ್ಯಗಳೂ ಸಮೃದ್ಧಿಗೊಳ್ಳುವುವು ಎಂದು ಒಬ್ಬರು ಜ್ಯೋತಿಷ್ಯಾಚಾರ್ಯರು ಬರೆದಿದ್ದಾರೆ.

ಆರ್ದ್ರಾ ಪ್ರವೇಶದ ವೇಳೆ ಧನಿಷ್ಠಾ ನಕ್ಷತ್ರವಿದೆಯಷ್ಟೆ? ಇದರ ಫಲವಾದರೂ ನಿರಾಶಾದಾಯಕವಾಗಿಲ್ಲ. 'ಧನಿಷ್ಠಾ ನಕ್ಷತ್ರದ ಪ್ರವೃತ್ತಿ ಕಾಲದಲ್ಲಿ ಭಗವಾನ್‌ಭಾಸ್ಕರನು ಆರ್ದ್ರಾವನ್ನು ಪ್ರವೇಶಿಸಿದರೆ, ಆ ವರ್ಷ ಫಲಗಳು ವೃದ್ಧಿಗೊಳ್ಳುವುವು ಮರಗಿಡಗಳೆಲ್ಲವೂ ಚಿಗುರಿಕೊಂಡೇ ಇರುವುವು. ತೋಟಗಳಲ್ಲಿ ಸದಾ ಹಸುರು ಉಳಿಯುವುದು. ನಾಲ್ಕೂ ದಿಟ್ಟುಗಳಿಂದ ಸುಗಂಧಿತ ಸುಷ್ಪಗಳ ಮಧು ಬೀಸುತ್ತಿರುವುದು' ಎಂದು ಜ್ಯೋತಿಷ್ಯಾಸ್ತ್ರ ಹೇಳುತ್ತದೆ.

ಆರ್ದ್ರಾ ಪ್ರವೇಶದ ವೇಳೆ ವಿಷ್ಕಂಭಕ ಯೋಗವಿರುವುದು. ಇದರ ಫಲ ಸ್ವರೂಪವಾಗಿ ಸರ್ವ ಪ್ರಕಾರದ ಹಣ್ಣುಹಂಪಲುಗಳು ಹೆಚ್ಚುವುವು.

ರಾತ್ರಿಯ ಹೊತ್ತು ಆರ್ದ್ರಾ ಪ್ರವೇಶವಾಗುವುದರಿಂದ ವರ್ಷದಲ್ಲಿ ಭಯಂಕರ ಮಳೆಯಾಗುವುದು; ದನಕರುಗಳಿಗೆ ಸುಖ ಸಿಗುವುದು; ಎಲ್ಲ ಗದ್ದೆಗಳೂ ಒಳ್ಳೆ ರೀತಿಯಿಂದ ಫಲಕೊಡುವುವು; ರಾಜರಾಜರಲ್ಲಿ ಮೈತ್ರಿಯು ಬೆಳೆಯುವುದು; ಮಾನವರೆಲ್ಲರೂ ತುಷ್ಟರಾಗಿ ಬಾಳುವರು.

ಆರ್ದ್ರಾ ಪ್ರವೇಶದ ಈ ಮೇಲಿನ ಉತ್ತಮೋತ್ತಮ ಫಲಗಳೊಡನೆ ರಾತ್ರಿಯಲ್ಲಿ ವರ್ಷಮತು ಪ್ರಾರಂಭವಾಗುವುದರಿಂದ ಸರ್ವತ್ರ ಮಳೆಯು ಬೀಳುವುದು

ಆರ್ದ್ರಾ ಪ್ರವೇಶದ ಚಂದ್ರವೇಧದಿಂದ ಬೇರೆ ಬೇರೆ ನಕ್ಷತ್ರಗಳಲ್ಲಿ ಮಳೆ ಬರುವ ಯೋಗಗಳನ್ನೂ ಹೇಳ ಬಹುದು. ಜೂನ್ ತಿಂಗಳ ೨೫, ೨೬, ೨೭ ಮತ್ತು ೨೮ನೆ ತಾರೀಕುಗಳಲ್ಲಿಯೂ ಜುಲೈ ತಿಂಗಳ ೨ ಮತ್ತು ೪ನೆ ತಾರೀಕುಗಳಲ್ಲಿಯೂ ಆರ್ದ್ರಾ ಮಳೆಯು ವಿಶೇಷವಾಗಿ ಬೀಳುವುದು.

ಆಗಸ್ತ ೨, ೩, ೬, ೭, ೧೦ ಮತ್ತು ೧೧ನೆ ದಿನಗಳಲ್ಲಿ ಅಶ್ಲೇಷಾ ನಕ್ಷತ್ರದ ಮಳೆ ಹೆಚ್ಚಾಗಿ ಬರುವುದು. ಹುಬ್ಬಾ (ಪೂರ್ವ) ಮಳೆಯು ಆಗಸ್ತ

(ಅನೇಕ ಹುಟ ನೋಡಿರಿ)

ಪರಿಪೂರ್ಣ ಬೇಂಕಿಂಗ್ ಸೇವೆಗೆ

— ಕೊರ್ಪೊರೇಶನ್ ಬೇಂಕ್ —

78 ಶಾಖೆಗಳು | ದೇಶದಾದ್ಯಂತ ಏಜನ್ಸಿಗಳು

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಉಡುಪಿ)

ಆಡಳಿತ ಆಫೀಸು: ಮಂಗಳೂರು.

ನವಯುಗ

ವರುಷ	ಉಡುಪಿ	ವಾರ
೪೧	೨೧-೬-೬೨	೪೧

ಅಮೆರಿಕೆಯ ಇಂಗಿತವೇನು?

"ನಾವು ಉಪಗ್ರಹಗಳನ್ನು ಆಪೇಕ್ಷಿಸುವುದಿಲ್ಲ; ವಸಾಹತುಗಳು, ರಾಜಕೀಯ ವಿಧೇಯತೆಗಳನ್ನು ಬಯಸುವುದಿಲ್ಲ; ಅಮೆರಿಕನ್ ಸಹಾಯವನ್ನು ಪಡೆಯುವ ದೇಶಗಳು ತಮ್ಮದೇ ಆದ ದಾರಿಯಲ್ಲಿ ಬೆಳೆದು ಬರಬೇಕು; ಅವು ಸ್ವತಂತ್ರ ಜಗತ್ತಿನ ಸದಸ್ಯ ರಾಷ್ಟ್ರಗಳಾಗಿ ಇವು ಪ್ರಪಂಚದೊಂದಿಗೆ ಸ್ಥಿತಿಗೆ ಬರಬೇಕು. ಅಭಿವೃದ್ಧಿಗೊಳ್ಳುವ ದೇಶಗಳ ರಕ್ಷಕರು ನಾವಾಗಬೇಕು" ಎಂದು ಅಮೆರಿಕೆಯ ವಿದೇಶಾಂಗ ಸಚಿವ ಡೀನ್ ರಸ್ಕರು ತಮ್ಮ ರಾಷ್ಟ್ರದ ವಿದೇಶ ಸಹಾಯದ ಬಗೆಗೆ ತಳೆದಿರುವ ನೀತಿಯನ್ನು ವಿವರಿಸಿದ್ದರು. ಅಮೆರಿಕೆಯ ಶಾಸಕರು ಕಳೆದ ಐದು ವರ್ಷಗಳಿಂದ ಅನುಸರಿಸಿಕೊಂಡು ಬಂದಿರುವ ವಿದೇಶ ಸಹಾಯದ ನಿಲುಮೆಯಿದು ಎಂಬುದು ನಿರ್ವಿವಾದ. ಆದರೆ, ಇಂದಿನ ಪರಿಸ್ಥಿತಿಯಲ್ಲಿ ಈ ನಿಲುಮೆಯನ್ನು ಮತ್ತೊಮ್ಮೆ ಪುನರುಚ್ಚರಿಸುವುದು ವೈಶಿಷ್ಟ್ಯಪೂರ್ಣವಾಗಿದೆ. ಅಮೆರಿಕೆಯಲ್ಲಿ ವಿದೇಶ ಸಹಾಯವನ್ನು ನೀಡುವುದಕ್ಕೆ ಅಲ್ಲಿನ ಕಾಂಗ್ರೆಸ್ಸಿನ ಮತ್ತು ಸೆನೇಟಿನ ಒಪ್ಪಿಗೆ ಬೇಕಾಗುವುದು ಈ ಹಿಂದೆಯೂ ಕಾಂಗ್ರೆಸ್ಸಿನಲ್ಲಿ ಉದಾರವಾಗಿ ಅನಭಿವೃದ್ಧ ರಾಷ್ಟ್ರಗಳಿಗೆ ಸಹಾಯ ನೀಡುವುದಕ್ಕೆ ವಿರೋಧವು ಕಂಡುಬಂದಿತ್ತಾದರೂ ಅದು ಅಗಣ್ಯವೆಂಬಂಶವಿತ್ತು. ಆದರಲ್ಲೂ ಪಶ್ಚಿಮದ ರಾಷ್ಟ್ರಗಳ ಸೈನಿಕ ಒಡಂಬಡಿಕೆಗಳಲ್ಲಿ ಸೇರಿಕೊಳ್ಳದವರಿಗೆ ಸಹಾಯ ಮಾಡುವುದಕ್ಕೆ ಬಲವಾದ ಪ್ರತಿರೋಧವು ಏಳುತಿತ್ತು. ಹಾಗಿದ್ದರೂ ಈ ವಿರೋಧವನ್ನು ಸುಟ್ಟು ಹಾಕುವಲ್ಲಿ ಪ್ರಶಾಸನ ವಿಭಾಗವು ರಕ್ತಿಯುತವಾಗಿತ್ತು. ಆದರೆ, ಈ ಬಾರಿ ಅಮೆರಿಕೆಯ ಸೆನೇಟು ತನ್ನ ವಿದೇಶ ಸಹಾಯದ ನಿಲುಮೆಯನ್ನು ರೂಪಿಸುವಲ್ಲಿ ನಹಿಸಿದ ಧೋರಣೆಯನ್ನು ಅನುಲಕ್ಷಿಸುವಾಗ, ವಿದೇಶ ಸಹಾಯ ವಿರೋಧಿಗಳ ಕೈಯೇ ಮೇಲಾಯಿತೆಂದು ತಿಳಿಯಲು ಅವಕಾಶವಿಲ್ಲ

ತಾನು ಪ್ರೀತಿಸುವ ಅಥವಾ ತಾನು ಮೆಚ್ಚುವ ರಾಷ್ಟ್ರವನ್ನು ಮೆಚ್ಚದಿರುವ ಭಾರತ ಸರಕಾರದ ನೀತಿಯನ್ನು ಕಂಡು ಕುಪಿತಗೊಂಡ ಅಮೆರಿಕನ್ ಸೆನೇಟು ಭಾರತವನ್ನು ದಂಡನೆಗೆ ಗುರಿಮಾಡುವಂತಹ ನಿರ್ಧಾರವನ್ನು ಮಾಡಿದಂತಿದೆ. ಸೆನೇಟರ್ ಕೀಟಿಂಗ್‌ರವರು ಇಂತಹ ಗದರಿಕೆಯ ಮಾತುಗಳನ್ನಾಡಿ, ಭಾರತಕ್ಕೆ ನೀಡುವ ಸಹಾಯದಲ್ಲಿ ಸುಗ್ ವಿಮಾನಗಳ ಮೌಲ್ಯವಷ್ಟರ ಕಡಿತ ಮಾಡಬೇಕೆಂದು ಉದಾಹರಣೆಯಿತ್ತರು. ಕಮ್ಯುನಿಸ್ಟ್ ಬಣಕ್ಕೆ ಸೇರಿದ ರಾಷ್ಟ್ರಗಳಿಗೆ ಸಹಾಯ ನೀಡಬಾರದು; ಕಮ್ಯುನಿಸ್ಟ್ ರಾಷ್ಟ್ರಗಳಿಂದ ಸಹಾಯ ಪಡೆಯುವವರಿಗೂ ಅಮೆರಿಕೆಯು ನೆರವು ನೀಡಬಾರದು—ಎಂಬ ನಿರ್ಧಾರವು ಮಹತ್ವಪೂರ್ಣವಾಗಿದೆ. ವಿದೇಶ ನೀತಿಯನ್ನು ರೂಪಿಸುವವರು ಅಲ್ಲಿನ ಅಧ್ಯಕ್ಷರಾದರೂ ನೆರವಿನ ಭಂಡಾರದ ಮುದ್ರೆಯಿರುವುದು ಅಲ್ಲಿನ ಕಾಂಗ್ರೆಸ್ಸಿನ ಕೈಯಲ್ಲಿಯೇ. ಆದುದರಿಂದ ಅಧ್ಯಕ್ಷ ಕೆನ್ನೆಡಿಯವರು ಅದು ಹಾಕಿ ಕೊಟ್ಟ ಗೀಟನ್ನು ದಾಟಿ ಹೋಗುವಂತಿಲ್ಲ. ಅಮೆರಿಕೆಯ ಈ ಪರ್ವತಿತ ನಿಲುಮೆಯಿಂದಲಭಿವೃದ್ಧಿ ಪಥಗಾಮಿಗಳಾದ ಕೆಲವು ರಾಷ್ಟ್ರಗಳು ಮುಖ ಮುಖ ನೋಡಿಕೊಳ್ಳುವಂತಾಯಿತು; ತಮ್ಮ ನಿಯೋಜಿತ ಯೋಜನೆಗಳ ಪರಿಪೂರ್ಣತೆಯ ಬಗ್ಗೆ ಆ ಶಂಕೆ ಪಡುವಂತಾಯ್ತು. ಉದಾಹರಣೆಗೆ ವಿದೇಶೀ ಸಹಾಯದ ಭರವಸೆಯಿಂದ ರೂಪಿತವಾಗಿರುವ ಭಾರತದ ಯೋಜನೆಯು ನಡು ನೀರಿನಲ್ಲಿ ಬಂದು ನಿಂತಂತಾಗುವುದು. ವಿದೇಶೀ ವಿನಿಮಯದ ಆಭಾವವನ್ನು ನೀಗಿಸುವಷ್ಟು ವಿದೇಶೀ ಸಹಾಯ ದೊರಕೀತೆಂದು ಅಂದಾಜಿನಿಂದಲೇ ನಮ್ಮ ಮೂರನೆಯ ಯೋಜನೆಯು ರೂಪಿಸಲ್ಪಟ್ಟಿದೆಯೆಂಬುದನ್ನು ಎಲ್ಲರೂ ಬಲ್ಲರು, ಭಾರತಕ್ಕೆ ಅಮೆರಿಕೆಯು ವಿದೇಶೀ ನೆರವು ನೀಡುವಲ್ಲಿ ಆಕ್ಷೇಪವೆಂದರೆ, ಅದು ರಕ್ಷಣೆಯಿಂದ ಸುಗ್ ವಿಮಾನಗಳನ್ನು ಕೊಳ್ಳುವ ಮತ್ತು ಭಾರತದಲ್ಲಿಯೇ ಅಂತಹ ವಿಮಾನಗಳನ್ನು ತಯಾರಿಸುವ ಕಾರ್ಖಾನೆಗಳನ್ನು ನಿರ್ಮಿಸುವ ಕುರಿತು ಸಮಾಲೋಚನೆ ನಡೆಸುತ್ತಿದೆಯೆಂಬುದು. ಕೀಟಿಂಗ್‌ರವರ ಧೋರಣೆಯಲ್ಲಿ ಹೇಳುವುದಾದರೆ, ಪಾಕಿಸ್ತಾನದ ವಿರುದ್ಧ ತನ್ನ ಸೈನಿಕ ಶಕ್ತಿಯನ್ನು ಹೆಚ್ಚಿಸುತ್ತಿದೆಯೆಂಬುದು. ಆದರೆ, ಭಾರತವು ತನ್ನ ಸೈನ್ಯವನ್ನೂ ಬಲವನ್ನೂ ಏಕೆ ಹೆಚ್ಚಿಸಬೇಕಾಗಿ ಬಂತು? ತನ್ನ ನೆರೆಯ ರಾಷ್ಟ್ರಗಳು ತಮ್ಮ ಸಂಗ್ರಾಮ ಶಕ್ತಿಯನ್ನು ಬೆಳೆಯಿಸುತ್ತ ಆಕ್ರಮಣ ಶೀಲತೆಯನ್ನು ತೋರಿಸುತ್ತಿರುವಾಗ ಭಾರತವಾದರೂ ಸುಮ್ಮನುಳಿಯುವುದು ಸಾಧ್ಯವಿಲ್ಲ. ಆದುದರಿಂದಲೇ ಬಲಾಶ್ಯಾರ್ಪೂರ್ಣವಾಗಿ ಅವುಗಳನ್ನು ಅನುಕರಿಸಲೇ ಬೇಕಾಯ್ತು. ಭಾರತ ಸಹಾಯ ವಿರೋಧಿಗಳು ಭಾರತವು ಶಸ್ತ್ರಾಸ್ತ್ರಖರೀದಿಗೆ ಈ ಸಹಾಯವನ್ನು ಉಪಯೋಗಿಸುವುದು ಎಂಬವಾದವನ್ನೆತ್ತಿದರು. ಸೆನೇಟರ್ ಹ್ಯೂಬರ್ಟ್ ಹೆಂಫ್ರೆಯವರು ಇದಕ್ಕೆ ಸಮರ್ಪಕವಾದ ಉತ್ತರವನ್ನು ನೀಡಿದ್ದಾರೆ. ಅಮೆರಿಕೆಯು ನೀಡಿರುವ ಸಹಾಯದ ಸಂಪೂರ್ಣ ಸದುಪಯೋಗ ಮಾಡಿಕೊಂಡಿರುವ ರಾಷ್ಟ್ರವೆಂದರೆ ಭಾರತವೊಂದೇ ಎಂದಿವರು ಸ್ಪಷ್ಟರೂಪದಲ್ಲಿ ಹೇಳಿದ್ದಾರೆ.

ಹಾಗಾದರೆ, ಭಾರತ ವಿರೋಧೀ ನೀತಿಗೆ ಕಾರಣವೇನು? ಮೊದಲನೆಯದಾಗಿ ಅದು ತಾನು ಪ್ರೀತಿಸುವ ಪಾಕಿಸ್ತಾನದೊಡನೆ ಅದರ ತಾಳಕ್ಕೆ ತಕ್ಕಂತೆ ಹಾಡುವುದಿಲ್ಲ; ಎಂಡನೆಯದಾಗಿ ರಕ್ಷಣ ನೆರವನ್ನು ಅಧಿಕಾಧಿಕವಾಗಿ ಪಡೆಯುತ್ತಿದೆ. ಪಾಕಿಸ್ತಾನದ ಅಸಂಬದ್ಧ ತಾಳಗತಿಗೆ ಸರಿಯಾಗಿ ಹಾಡಲು ಯಾರಿಂದಲೂ ಸಾಧ್ಯವಿಲ್ಲ. ರಕ್ಷಣೆಯೊಡನೆ ಮಿಗ್‌ವಿಮಾನ ಖರೀದಿಯಾಗಲೀ ತಯಾರಿಕೆಯ ಸಂಬಂಧದ ಮಾತುಕತೆಯಾಗಲೀ ನಿರುಪಾಯ ಸ್ಥಿತಿಯಲ್ಲಿತ್ತೆಗೆದುಕೊಂಡ ವಿಚಾರಗಳು. ಈ ವಿಮಾನಗಳನ್ನು ರೂಪಾಯಿಗಳನ್ನು ತೆತ್ತೇ ಪಡೆದುಕೊಳ್ಳುವುದು ಸಾಧ್ಯವಿದೆ. ಭಾರತೀಯ ಸೇನೆಗೂ ಈ ಬಗೆಯ ವಿಮಾನಗಳೇ ಅನುಕೂಲವಿವೆ. ಪಾಶ್ಚಾತ್ಯ ರಾಷ್ಟ್ರಗಳು ತನ್ನ ಅವಶ್ಯಕತೆಯನ್ನು ಪೂರೈಸಲು ನಿರಾಕರಿಸಿದ ನಂತರವೇ ಭಾರತವು ಈ ಯೋಜನೆಯನ್ನು ಮಾಡಿತು. ಅಲ್ಲದೇ ಬ್ರಿಟನ್‌ನ ಕಾಮನ್‌ವೆಲ್ತ್ ಮಂತ್ರಿ ಡಂಕನ್ ಸಾಂಡ್ರಿಸರ ಭಾರತ ಭೇಟ್ಟಿಯ ನಂತರ ಈ ವಿಷಯದಲ್ಲಿ ಮರಳಿ ಯೋಜನೆ ನಡೆಯುವ ಸಾಧ್ಯತೆಯಿದೆ. ಹಾಗಿರುವಾಗ, ಅಮೆರಿಕೆಯು ಭಾರತಕ್ಕೆ ಆವಶ್ಯಕವಾದ ನೆರವನ್ನು ನೀಡದೆ ಹೋದರೆ ಇಲ್ಲಿನ ಯೋಜನೆಗಳು ಅಪೂರ್ಣವಾಗಿ ಉಳಿಯುವುವು. ಇದರಿಂದ ಅಭಿವೃದ್ಧಿ ಕುಂಠಿತವಾಗಿ ದರಿದ್ರತನವನ್ನೇ ಅಪ್ಪಬೇಕಾಗುವುದು. ಅಮೆರಿಕೆಯು ಇದನ್ನೇ ಬಯಸುತ್ತಿದೆಯೆ? ಅಥವಾ ಭಾರತವು ಸ್ವತಂತ್ರ ಜಗತ್ತಿನ ಆದರ್ಶ ಸದಸ್ಯನಾಗಬೇಕೆಂದು ಆಶಿಸುತ್ತಿದೆಯೆ?

ವಿಳಂಬ ನೀತಿ

ಜೂನ್ ತಿಂಗಳು ಮುಗಿಯುತ್ತ ಬಂತು. ರಾಜ್ಯದ ಪ್ರಾಥಮಿಕ ಶಾಲೆಗಳು ಪ್ರಾರಂಭವಾಗಿ ತಿಂಗಳೊಪ್ಪತ್ತು ತಿಂಗಳಾಯಿತು. ಖಡ್ಡಾಯ ಶಿಕ್ಷಣದ ಹೆಸರಿನಲ್ಲಿ ಧರ್ಮರಿಯಿಂದ ದಾಖಲಾತಿಯನ್ನೂ ಮಾಡಿಕೊಳ್ಳಲಾಯಿತು. ಆದರೆ, ಪಠ್ಯ ಪುಸ್ತಕಗಳ ಯಾದಿ ಮಾತ್ರ ಇನ್ನೂ ಪ್ರಕಟವಾಗಿಲ್ಲ. ಹೊಸ ವಿಳನೆಯ ತರಗತಿಗೆ ಈ ವರ್ಷ ಸರಕಾರಿ ಪರೀಕ್ಷೆಯೂ ಜಿಲ್ಲಾ ಮಟ್ಟದಲ್ಲಿ ನಡೆಯುವುದೆಂದು ತಿಳಿಯುತ್ತದೆ. ಈ ತರಗತಿಯ ಪಾಠ ಪುಸ್ತಕಗಳು ಪೇಟೆಯಲ್ಲಿ ದೊರೆಯುತ್ತಿಲ್ಲ. ವಿಚಾರಿಸುವಾಗ, ಆ ಸಂಬಂಧದಲ್ಲಿ ಇನ್ನೂ ಖಚಿತ ನಿರ್ಧಾರಕ್ಕೆ ಬಂದಿಲ್ಲವೆಂದು ತಿಳಿಯುತ್ತದೆ. ಭಾಷಾ ವಿಷಯಗಳನ್ನು ಪಠ್ಯ ಪುಸ್ತಕಗಳಿಲ್ಲದೆ ಕಲಿಸುವುದು ಸಾಧ್ಯವಿಲ್ಲ; ವರ್ಷಾಂತ್ಯದೊಳಗೆ ನಿಯೋಜಿತ ಅಂಶಗಳನ್ನು ಮಾಡಿ ಮುಗಿಸುವುದೂ ಸಾಧ್ಯವಿಲ್ಲ. ಜಾಗಿರುವಾಗ, ಇನ್ನೂ ಪುಸ್ತಕಗಳನ್ನು ಪೇಟೆಗೆ ತಾರದೆ ಇದ್ದರೆ,ಅಧ್ಯಾಪಕರ—ಮಕ್ಕಳ ಗತಿಯೇನು? ಕಳೆದ ವರ್ಷ ಪ್ರಾಥಮಿಕ ಅರನೆಯ ತರಗತಿಯ ಹಿಂದೀ ಪುಸ್ತಕವು ಆರೇಳು ತಿಂಗಳುಗಳ ನಂತರ ಬಂದಿತ್ತು. ಹೀಗೆಯೇ ನಡೆದರೆ, ಮಕ್ಕಳ ಶಿಕ್ಷಣ ಮಟ್ಟವು ಉಳಿಯುವುದು ಸಾಧ್ಯವಿಲ್ಲ. ಔಷಧಿಗಳಿಲ್ಲದ ಆಸ್ಪತ್ರೆಗಳಂತೆಯೇ ಪಠ್ಯ ಪುಸ್ತಕಗಳಿಲ್ಲದ ಪಾಠ್ಯ ಕ್ರಮದಿಂದ ರೋಗ ವಾಸಿಯಾಗುತ್ತದೆಯೆ? ಈ ಹಿಂದಿನ ವರ್ಷಗಳ ಅನುಭವದಿಂದ ಪಾಠ ಕಲಿಯುವುದನ್ನು ಬಿಟ್ಟು ಸರಕಾರವೂ ಸಂಬಂಧಿಸಿದ ಇಲಾಖೆಯೂ ಮತ್ತೂ ಮತ್ತೂ ತುಳಿದ ಹೊಲಸು ದಾರಿಯನ್ನೇ ತುಳಿಯುತ್ತ ಬಂದರೇ ಯಾರ ಛೀಮತಿಗೆ ಕುಂದು?

ಜಗತ್ಪರ್ಯಟನ

ಜವಾಹರಲಾಲ

ನೆಹರು ನಂತರ ಯಾರು ಎಂಬ ಪ್ರಶ್ನೆಯನ್ನು ಬಿಡಿಸಲು ನೆಹರು ಅಧಿಕಾರವನ್ನು ಬಿಟ್ಟು ನಿವೃತ್ತರಾಗಬೇಕು ಎಂದು ಸರ್ವೋದಯ ನಾಯಕ ಜಯಪ್ರಕಾಶ ನಾರಾಯಣರು ಆಗಿಂದಾಗ್ಗೆ ಹೇಳುತಿದ್ದಾರೆ. ನೆಹರುರವರ ಮಾತಿನಂತೆ ಈ ಉದ್ಗಾರವು ಹಳೆಯದಾಗಿದೆ. ಪತ್ರಿಕಾ ಪರಿಷತ್ತಿನಲ್ಲಿ ಈ ಸಂಬಂಧದ ಪ್ರಶ್ನೆಗಳನ್ನು ಉತ್ತರಿಸುತ್ತ ನೆಹರು ಹೇಳಿದರು: 'ನೆಹರು ನಂತರ ಯಾರು ಎಂಬ ಪ್ರಶ್ನೆ ಹಳೆಯದು, ಅವರ ಸ್ಥಾನವನ್ನು ಆಪೇಕ್ಷಿಸುವವರು ನೆಹರು ತಮ್ಮ ಸ್ಥಾನ ಬಿಟ್ಟು ಕೊಡುವ ವರೆಗೆ ತಾಳಲಾರದವರಾಗಿದ್ದಾರೆ' ಎಂದು ನಗೆಗಡಲನ್ನು ಎಬ್ಬಿಸಿದರು.

ಸಂಜೀವಯ್ಯ

ಕಾಂಗ್ರೆಸಿನ ಅಧ್ಯಕ್ಷ ದಾನೋದರಂ ಸಂಜೀವಯ್ಯನವರು ತನ್ನ ಕಾರ್ಯಕಾರಿ ಸಮಿತಿಯನ್ನು ನೇಮಿಸಿದರು. ಕಾಂಗ್ರೆಸ್ ಪಕ್ಷದಲ್ಲಿರುವ ಒಳ ಗುಂಪುಗಳನ್ನು ದೂರ ಮಾಡುವುದೇ ತನ್ನ ಮುಖ್ಯ ಧ್ಯೇಯವೆಂದು ಹೇಳುವ ಇವರಿಗೆ ಮೊದಲಿನವರೂ ಅಂತಹ ಹೇಳಿಕೆಗಳನ್ನು ಇತ್ತಿದ್ದರು. ಆದರೆ ಗುಂಪುಗಾರಿಕೆಯನ್ನು ದೂರ ಮಾಡುವುದು ಅವರಿಗೆ ಸಾಧ್ಯವಾಗಲಿಲ್ಲ. ಎಳೆಯವರಾದ ಸಂಜೀವಯ್ಯನವರು ತನ್ನ ಮಂತ್ರಿಗಳೇ ತುಂಬಿರುವ ಕಾರ್ಯಕಾರಿ ಸಮಿತಿಯ ಸಹಾಯದಿಂದ ಗುಂಪುಗಾರಿಕೆಯನ್ನು ನೀಗಿಸಿದರೆಂದರೆ, ಕಾಂಗ್ರೆಸಿನ ಇತಿಹಾಸದಲ್ಲಿ ಹೊಸ ಅಧ್ಯಾಯವನ್ನು ಪ್ರಾರಂಭಿಸಿದಂತಾಗುವುದು.

ಅಯೂಬ ಖಾನ್

ಪಾಕಿಸ್ತಾನದ ಅಧ್ಯಕ್ಷ ಅಯೂಬ ಖಾನರು ಭಾರತವನ್ನು ಉದ್ದೇಕಿಸುವ ಕೃತಿಗಳಲ್ಲಿಯೇ ಮಗ್ನರಾಗಿದ್ದಾರೆ. ತ್ರಿಪುರದ ಗಡಿಯಲ್ಲಿ ರಾಜಶಾಹಿಯ ಬಳಿ ಭಾರತೀಯರ ಮೇಲೆ ಗುಂಡು ಹಾರಿಸಿ ಅವರು ಅಕ್ಷಮ್ಯ ಅಪರಾಧವೆಸಗಿದ್ದಾರೆ. ಇದರಿಂದ ನಾಲ್ಕಾರು ಮಂದಿಗೆ ಮೃತ್ಯುವೂ ಸಂಭವಿಸಿದೆಯೆನ್ನುವಾಗ ಘಟನೆಯ ಗಂಭೀರತೆ ಮತ್ತಷ್ಟು ಹೆಚ್ಚುವುದು. ಈ ಹಿಂದೆಯೂ ತ್ರಿಪುರಾ ಗಡಿಯ ಸಂತಾಲರ ಮೇಲೆ ಗೋಳಿಬಾರನ್ನು ಮಾಡಿ ಅದನ್ನು ಸಾಮಾನ್ಯ ಘಟನೆಯೆಂದು ಅವರು ಉಲ್ಲೇಖಿಸಿದುದು ಆಶ್ಚರ್ಯವಾದರೂ ಅವರ ಪ್ರವೃತ್ತಿಗೆ ಅನುಗುಣವಾಗಿದೆ, ತ್ರಿಪುರಾದ ಬಳಿ ಸೈನ್ಯವನ್ನು ಅಯೂಬರು ಜಮಾಯಿಸುತಿದ್ದಾರೆ ಎಂಬುದಕ್ಕೆ ಈ ಘಟನೆಗಳೇ ಸಾಕ್ಷಿ.

ದ. ಕ. ಜಿಲ್ಲಾ ಶಿವಳ್ಳಿ ವಿದ್ಯಾವರ್ಧಕ ಸಂಘ (ರಿ.)

(ನೊಂದಾಯಿತ ದ. ಕ. ಜಿಲ್ಲಾ ಶಿವಳ್ಳಿ ಬಂಟರ ಯಾನೆ ನಾಡವರ ವಿದ್ಯಾವರ್ಧಕ ಸಂಘ,(ರಿ.)

ಮೇಲಿನ ಸಂಘದ ವಿಶೇಷ ಮಹಾಸಭೆಯು ತಾ. 8—7—1962ನೇ ಆದಿತ್ಯವಾರ ಶಿವಳ್ಳಿ ಹಿಂದು ಹಾಯರ್ ಎಲಿಮೆಂಟರಿ ಶಾಲಾ ನಿತ್ಯಾನಂದ ಸದನದಲ್ಲಿ ಅಪರಾಹ್ನ ಗಂಟೆ 3ಕ್ಕೆ ಜರಗಲಿರುವುದರಿಂದ ಸದಸ್ಯರೆಲ್ಲರೂ ಹಾಜರಿರಬೇಕಾಗಿ ವಿನಂತಿ.

ಸಭೆಯಲ್ಲಿ ಬರಕಕ್ಕ ವಿಷಯಗಳು:—

1. ಮೇಲಿನ ಸಂಘವು ನಡೆಸುತ್ತಿರುವ ಶಾಲೆಗಳನ್ನು ಶ್ರೀ ಅದಮಾರು ಮಠಕ್ಕೆ ಕೊಡುವುದಾಗಿ ನಿರ್ಧರಿಸುವುದು.

2. ಅಧ್ಯಕ್ಷರ ಅನುಮತಿಯ ಮೇರೆಗೆ ಇತರ ವಿಷಯಗಳು.

ಶಿವಳ್ಳಿ, ದ. ಕ.)
14—6—1962

ಕೆ. ವಾಸುದೇವ ರೆಟ್ಟಿ,
ಕಾರ್ಯದರ್ಶಿ.

ನಾಗಪ್ಪ ಶೆಟ್ಟಿ,
ಅಧ್ಯಕ್ಷ.

ರಾಜೇಂದ್ರ ಪ್ರಸಾದ

ನಿವೃತ್ತ ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ದೇವರಂತಹ ವ್ಯಕ್ತಿತ್ವವುಳ್ಳವರು. ಅವರು ಎಂದಿಗೂ ಕೆಡುಕನ್ನು ಬಯಸುವುದಿಲ್ಲ. ನವದೆಹಲಿಯಲ್ಲಿ ಸೇರಿದ ಅಣ್ವಸ್ತ್ರ ವಿರೋಧಿ ಪರಿಷತ್ತಿನಲ್ಲಿ ಭಾಷಣ ಮಾಡುತ್ತ ಅವರು ಏಕಪಕ್ಷೀಯವಾಗಿ ಅಣ್ವಸ್ತ್ರ ಪ್ರಯೋಗವನ್ನು ನಿಲ್ಲಿಸಬೇಕೆಂದು ಕರೆಯಿತ್ತರು. ಈ ಕರೆಗೆ ನೆರೆದ ಪ್ರತಿನಿಧಿಗಳು ಸಮ್ಮಿಶ್ರ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸಿದರು- ಪರಿಷತ್ತು ಕೊನೆಯಲ್ಲಿ ಈ ಆಹ್ವಾನವನ್ನು ಗಂಭೀರವಾಗಿ ಅಭ್ಯಸಿಸಬೇಕೆಂದು ಸಿಫಾರಸು ಮಾಡಿ ಮುಕ್ತಾಯಗೊಂಡಿದೆ.

ಡಂಕನ್ ಸ್ಪ್ರಾಂಡಿಸ್

ಯುರೋಪಿನ ಸಾಮಾನ್ಯ ಪೇಟೆಯನ್ನು ಬ್ರಿಟನ್ನು ಸೇರುವುದರಿಂದ ಭಾರತದ ವ್ಯಾಪಾರಕ್ಕೆ ಧಕ್ಕೆಯೊದಗುವುದರಿಂದ ಕಾಮನ್‌ವೆಲ್ತ್ ಸಂಬಂಧವು ಕೆಡುವುದೆಂಬ ಸಂಶಯವು ವ್ಯಕ್ತವಾಗಿತ್ತು. ಆದರೆ, ಬ್ರಿಟಿಷ ಕಾಮನ್‌ವೆಲ್ತ್ ಮಂತ್ರಿ ಶ್ರೀ ಡಂಕನ್ ಸ್ಪ್ರಾಂಡಿಸ್‌ರವರು ಪ್ರಧಾನಿ ನೆಹರುಗಳೊಡನೆ ನಡೆಸಿದ ಮಾತುಕತೆಗಳಿಂದ ಇಂತಹ ಬಿಕ್ಕಟ್ಟು ತುಸು ಬಗೆ ಹರಿಯುವಂತೆ ತೋರುತ್ತದೆ. ಭಾರತದ ಕೆಲವು ಸರಕುಗಳು ಈ ಮೊದಲಿನಂತೆಯೇ ಕೋಟ ಲೈಸನ್ಸ್ ಇಲ್ಲದೆ ಮುಂದೆಯೂ ಯುರೋಪದ ಪೇಟೆಗೆ ಹೋಗಲು ಅನುಮತಿಯನ್ನು ನೀಡಿರುವುದು ಮುಳುಗುವವನಿಗೊಂದು ಆಧಾರ ಸಿಕ್ಕಂತಾಗಿದೆ

ನಿಜಲಿಂಗಪ್ಪ

ಇದೇ ತಾ. ೨೧ಕ್ಕೆ ಮೈಸೂರಿನ ವಿಧಾನ ಸಭಾ ಕಾಂಗ್ರೆಸ್ಸು ಪ್ರಚಲಿತ ನಾಯಕ ಕಂರಿಯವರ ರಾಜಿನಾಮೆ ಮತ್ತು ನೂತನ ನಾಯಕರ ಆಯ್ಕೆಗಳ ಕುರಿತು ಚರ್ಚಿಸಲು ಸಭೆ ಸೇರುವುದು. ನಿಜಲಿಂಗಪ್ಪನವರು ಹೊಸ ನಾಯಕರಾಗಿ ಆರಿಸಲ್ಪಡುವರೆಂದು ಸಾಮಾನ್ಯವಾಗಿ ನಂಬಲಾಗಿದೆ. ವಿಶಾಲ ತಳಹದಿಯ ಮಂತ್ರಿ ಮಂಡಳಿಯನ್ನು ರಚಿಸಿ, ತನ್ಮೂಲಕ ಗುಂಪಿನ ಮನೋವೃತ್ತಿಯನ್ನು ದೂರ ಮಾಡಬೇಕೆಂಬ ಇವರ ಆಶಯವು ಅದೆಷ್ಟು ಪೂರ್ಣವಾಗುವುದೋ ಹೇಳುವುದು ಸಾಧ್ಯವಿಲ್ಲ. ಜತ್ತಿ ಬೆಂಬಲಿಗರು ಮೆಡಿಕಲ್ ಸ್ಕೂಲುಗಳ ಪುನರುಜ್ಜೀವನದಲ್ಲಿ ಆಸ್ತೆ ತೋರಿಸುವಂತೆಯೇ ತಮ್ಮ ಗುಂಪಿಗೂ ಉಚಿತ ಪ್ರಾತಿನಿಧ್ಯ ನೀಡಬೇಕೆಂಬ ಬೇಡಿಕೆಯನ್ನು ಮುಂದಿಡಬಹುದು. ಅಂತೂ ನಿಜಲಿಂಗಪ್ಪನವರು ಕಾಲು ನೀಡಲಿರುವ ಹಾಸಿಗೆ ಹೂವಿನ ತಲ್ಪವಲ್ಲ, ಕಂಟಕೆಗಳ ಮಾಲೆ. ಅದನ್ನು ಪುಡಿಗಟ್ಟುವ ಧೈರ್ಯವು ಇವರಲ್ಲಿದೆ. ಎದೆಗಾರಿಕೆ ಇದೆಯೋ ಇಲ್ಲವೊ ಕಾದು ನೋಡಬೇಕಷ್ಟೆ.

ಪ್ರೊ। ಹಾಲ್ಡೇನ್

ಕೇಂದ್ರ ಮಂತ್ರಿ ಹುಮಾಯೂನ ಕಬೀರರ ಹೇಳಿಕೆಯೊಂದರಿಂದ ಪ್ರಸಿದ್ಧ ಬ್ರಿಟಿಷ ವೈಜ್ಞಾನಿಕರಾದ ಪ್ರೊ। ಹಾಲ್ಡೇನರು ತಮ್ಮ ಕಲಕತ್ತೆಯಲ್ಲಿನ ಕೇಂದ್ರ ಸರಕಾರದ ಹುದ್ದೆಗೆ ರಾಜಿನಾಮೆಯೀಯುವರೆಂದೂ, ಭುವನೇಶ್ವರದಲ್ಲಿ ನೆಲೆನಿಂತು ತಮ್ಮ ಸಂಶೋಧನಾ ಕಾರ್ಯದಲ್ಲಿ ನಿರತರಾಗುವರೆಂದೂ ತಿಳಿಯುತ್ತದೆ. ಹುಮಾಯೂನ ಕಬೀರರು ಲೋಕ ಸಭೆಯಲ್ಲಿ ಅಸತ್ಯ ಮಾಹಿತಿಯನ್ನು ಪೂರಯ್ಸಿದುದೇ ಇದಕ್ಕೆ ಕಾರಣವೆಂದು ಗೊತ್ತಾಗಿದೆ. ಮಂತ್ರಿಗಳು ತನಗೆ ತಪ್ಪು ವಿವರಗಳನ್ನು ಪೂರೈಕೆ ಮಾಡಿದುದರಿಂದ ಹಾಗಾಯಿತೆಂದು ವಿಶಾದ ಪಡಿಸಿದ್ದಾರೆ. ಪ್ರೊ। ಹಾಲ್ಡೇನರಂತಹ ವಿಜ್ಞಾನಿಗಳ ಈ ಸ್ರಕರಣಕ್ಕೆ ಯಾರನ್ನು ಹೊಣೆಮಾಡಬೇಕು?

ಕೃಷ್ಣ ಮೆನನ್

ಸಂರಕ್ಷಣಾ ಮಂತ್ರಿ ಕೃಷ್ಣ ಮೆನನ್ನರು ಕಾಶ್ಮೀರ ತಜ್ಞರು ಎಂತಲೇ ಅವರು ಸಂ. ರಾ. ಸಂಘದ ಭದ್ರತಾ ಸಮಿತಿಯಲ್ಲಿ ಭಾಗವಹಿಸುತಿದ್ದಾರೆ. ಅಮೇರಿಕೆಯ ಪ್ರತಿನಿಧಿ ಅಡ್ಲಾಯ್ ಸ್ಟಿವನ್ಸನರ ಭಾಷಣವನ್ನು ಕೇಳುವಾಗ, ಅವರು ಕಾಶ್ಮೀರದ ಬಗೆಗೆ ತಮ್ಮ ನಿಲುಮೆಯನ್ನು ಬದಲಿಸುವುದಿಲ್ಲವೆಂದೂ ಪಾಕ್ ಆಕ್ರಮಣ ಮಾಡಿದ ಬಗ್ಗೆ ತಮ್ಮ ಹಿಂದಿನ ಅಭಿಪ್ರಾಯವನ್ನೇ ಇರಿಸಿಕೊಂಡಿದ್ದಾರೆ ಎಂದೂ ತಿಳಿಯುತ್ತದೆ. ಆದರೆ, ಅಯರ್ಲೆಂಡ್ ಮತ್ತು ವೆನೆಜೂಲಗಳಂತಹ ಕೆಲವು ಚಿಕ್ಕ ರಾಷ್ಟ್ರಗಳು ಭಾರತಕ್ಕೆ ಅಗ್ರಾಹ್ಯವಾದ ಯಾವುದೇ ಗೊತ್ತುವಳಿಗೆ ಬೆಂಬಲ ನೀಡಲು ನಿರಾಕರಿಸುವ ಲಕ್ಷಣಗಳಿವೆ. ಹಾಗಾದಲ್ಲಿ, ಕೆನ್ನೆಡಿ ಸರಕಾರದಲ್ಲಿರುವ ಭಾರತದ ಮಿತ್ರರು ಪಾಕಿಸ್ತಾನದ ಕುಟಿಲ ನೀತಿಯನ್ನು ವಿಫಲಗೊಳಿಸಲು ನೆರವಾಗುವುವೆಂದು ಸೂಚನೆಯಿದೆ. ಕೃಷ್ಣ ಮೆನನ್ನರೀಗ ಸಾಧಿಸಬೇಕಾದ ಕಾರ್ಯವಿದು.

ಅಲ್ಲಲ್ಲಿಯ ಸುದ್ದಿಸಾರ

ದಾಖಲಾತಿ ದಿನಾಚರಣೆ — ಕಂಡ್ಲೂರು ಬೋರ್ಡ್ ಹಿಂದೂಸ್ಥಾನಿ ಎಲಿಮೆಂಟರಿ ಶಾಲೆಯಲ್ಲಿ ಮಕ್ಕಳ ದಾಖಲಾತಿ ದಿನಾಚರಣೆಯು ತಾ 10ರಂದು ಜನಾಬ್ ಖಾಜಿ ಅಲುಬಕರ್ ಸಾಹೇಬರ ಅಧ್ಯಕ್ಷತೆಯಲ್ಲಿ ಜರಗಿತು ಮುಖ್ಯೋಪಾಧ್ಯಾಯ ಶ್ರೀ ಕೆ. ಪ್ರಭಾಕರ ಹೆಗ್ಡೆ, ಜನಾಬ್ ಕರಾಣಿ ಮಹಮ್ಮದ್ ಸಾಹೇಬ್ ಮತ್ತು ಅಧ್ಯಕ್ಷರು. ಖಡ್ಡಾಯ ಶಿಕ್ಷಣದ ಮಹತ್ವ ಮತ್ತು ದಾಖಲಾತಿಯ ಕುರಿತು ಮಾತನಾಡಿದರು. ಅಧ್ಯಕ್ಷರು ಹಾಜರಿ ವೇತನವನ್ನು ಬಡ ಮಕ್ಕಳಿಗೆ ಹಂಚಿದ ಮೇಲೆ ಸಿಹಿತಿಂಡಿ ವಿತರಣೆಯಾಯ್ತು. ಅಂತ್ಯದಲ್ಲಿ ಶ್ರೀ ಕೆ. ಪ್ರಭಾಕರ ಹೆಗ್ಡೆಯವರು ವಂದನೆಗಳನ್ನರ್ಪಿಸಿದರು.

ಚಿತ್ರಕಲಾ ಪರೀಕ್ಷೆಗಳು— ಉಡುಪಿ ಹೆಮ್ಮಕ್ಕಳ ತರಬೇತಿ ಶಾಲೆಯು ಪರೀಕ್ಷಾ ಕೇಂದ್ರವಾಗಿ ಮೈಸೂರು ಸರಕಾರದ ಚಿತ್ರಕಲಾ ಪರೀಕ್ಷೆಗಳು ಇದೇ ಸಪ್ಟಂಬರ ತಿಂಗಳಲ್ಲಿ ಜರಗಲಿರುವುವು. ಪರೀಕ್ಷಾರ್ಥಿಗಳು ಇದೇ ಜೂನ್ 25ರೊಳಗೆ ತಾಲೂಕು ಟ್ರೆಜರಿಗೆ ಹಣಕಟ್ಟಿ ವಿನಂತಿ ಪತ್ರಗಳನ್ನು ಕಳುಹಿಸಬೇಕಾಗಿದೆ. ಅರ್ಜಿ ಫಾರ್ಮುಗಳನ್ನು ಸದರಿ ಶಾಲೆಯ ಮುಖ್ಯೋಪಧ್ಯಾಯಿನಿಯವರಿಂದ ಪಡಕೊಳ್ಳಬಹುದು.

ಅಭಿನಂದನಾ ಸಭೆ— ಕಡಂದಲೆ ಬೋರ್ಡು ಹಾ. ಎಲಿಮೆಂಟರಿ ಶಾಲೆಯು ಕಳೆದ 12 ವರ್ಷಗಳಿಂದ E. S. L. C. ಸರಕಾರಿ ಪರೀಕ್ಷೆಯಲ್ಲಿ ಸೇಕಡಾ ನೂರು ಫಲಿತಾಂಶ ಪಡೆದ ಸಂತೋಷಾರ್ಥವಾಗಿ ಒಂದು ಅಭಿನಂದನಾ ಸಭೆಯು ಮೂಡಬಿದ್ರಿ ಕ್ಷೇತ್ರದ ಜೇನು ವ್ಯವಸಾಯ ಅಧಿಕಾರಿಗಳಾದ ಶ್ರೀ ಸೀತಾರಾಮ ಭಟ್ರ ಅಧ್ಯಕ್ಷತೆಯಲ್ಲಿ ತಾ. 16 ರಲ್ಲು ಜರಗಿತು. ಶಾಲಾ ಮುಖ್ಯೋಪಾಧ್ಯಾಯ ಶ್ರೀ ಕೆ. ನಾರಾಯಣ ಸೆಟ್ರು ಸ್ವಾಗತ ಭಾಷಣ ಮಾಡುತ್ತಾ ಶಾಲೆಯು ಕಳೆದ 18 ವರ್ಷಗಳಿಂದ E. S. L. C. ಪರೀಕ್ಷೆಯಲ್ಲಿ ಪಡೆದ ಉತ್ತಮ ಫಲಿತಾಂಶದ ವಿವರವನ್ನಿತ್ತರಲ್ಲದೆ ಈ ವರ್ಷವೂ ಪರೀಕ್ಷೆಗೆ ನಿಂತ 15 ಮಂದಿಯೂ ಇಂಗ್ಲಿಷ್ ಪಾರ ಸಮೇತ ಪಾಸಾದಕ್ಕೆ ವಿದ್ಯಾರ್ಥಿಗಳಿಗೆ ಅಭಿನಂದನೆಯನ್ನು ಸಲ್ಲಿಸಿದರು ಶ್ರೀ ಕೆ. ಪಿ. ಜಯರಾಮ ಶೆಟ್ರು ಮತ್ತು ಸಭಾಧ್ಯಕ್ಷರು ಶಾಲೆಯು ಸಾಧಿಸಿದ ಉತ್ತಮ ಪ್ರಗತಿಯನ್ನು ಕೊಂಡಾಡಿದರು. ಶಾಲಾ ಅಧ್ಯಾಪಕ ವೃಂದವು ಮಕ್ಕಳಿಗೆ ಸಿಹಿತಿಂಡಿಯನ್ನು ಹಂಚಿದ ನಂತರ ಸಭೆಯು ಧನ್ಯವಾದ ಸಮರ್ಪಣೆಯೊಂದಿಗೆ ಕೊನೆಗೊಂಡಿತು.

ವಿಜಯಬೇಂಕ್ ಲಿಮಿಟೆಡ್‌ನ- ಚೇಯರ್‌ಮೇನರಾಗಿ ಟ್ರೈಟನ್ ಇನ್ಶೂರೆನ್ಸ್ ಕಂಪೆನಿ ಮತ್ತು ಎಟ್ಲಾಸ್ ಎಶ್ಯೂರೆನ್ಸ್ ಕಂಪೆನಿಯ ರೆಸಿಡೆಂಟ್ ಮೆನೇಜರರಾದ ಶ್ರೀ ಎಮ್. ಸುಂದರರಾಮ ಶೆಟ್ಟರು ಇತ್ತೀಚೆಗೆ ಆರಿಸಲ್ಪಟ್ಟಿರುವರೆಂದು ತಿಳಿದುಬರುತ್ತದೆ ಇವರು ಹಲವು ವರ್ಷಗಳಿಂದ ಈ ಬೇಂಕಿನ ಡೈರೆಕ್ಟರರಾಗಿ ಸೇವೆ ಸಲ್ಲಿಸಿ ಜನಾನುರಾಗ ಗಳಿಸಿಕೊಂಡವರಾಗಿರುತ್ತಾರೆ.

ವಿದಾಯ ಸತ್ಕಾರ ಸಮಾರಂಭ ಉಡುಪಿಯ ಪ್ರಧಾನ ಅಂಚೆ ಕಚೇರಿಯಲ್ಲಿ ಪೋಸ್ಟ್‌ಮಾಸ್ಟರ್ ಆಗಿದ್ದು ಈಗ ನಿವೃತ್ತರಾದ ಶ್ರೀ ಜಿ. ಲಕ್ಷ್ಮಯ್ಯ ಮತ್ತು ಉಡುಪಿ ಡಿವಿಜನ್‌ನಲ್ಲಿ ಇನ್ಸ್‌ಪೆಕ್ಟರರಾಗಿದ್ದು ಮತ್ತು ಧಾರವಾಡಕ್ಕೆ ವರ್ಗಾಯಿಸಲ್ಪಟ್ಟಿರುವ ಶ್ರೀ ಕೃಷ್ಣ ಹೊಳ್ಳ ಇವರನ್ನು ಬೀಳ್ಕೊಡುವ ಸಮಾರಂಭವೊಂದು ಇದೇ ತಾ. 5ರಂದು ಉಡುಪಿ ಪ್ರಧಾನ ಅಂಚೆ ಕಚೇರಿಯಲ್ಲಿ ಹೊಸ ಪೋಸ್ಟ್ ಮಾಸ್ಟರರಾಗಿ ಬಂದಿರುವ ಶ್ರೀ ಉದ್ಯಾವರ ಸೋಮಯ್ಯ. ಬಿ. ಎ., ಅವರ ಅಧ್ಯಕ್ಷತೆಯಲ್ಲಿ ನೆರವೇರಿತು. ಈ ಸಂದರ್ಭದಲ್ಲಿ ಶ್ರೀಗಳಾದ ಕೆ. ಮಹಾಲಿಂಗ, ಬಾಲಕೃಷ್ಣ, ಶೇಕ್ ಅಲ್ಲಿ ಸಹೇಬ್, ಮಸ್ಕರೇಂಜಸ್ ಕುಮಾರಿ ಅಜಿಮುನ್ನೀಸ್ ಶೇಕ್ ಇವರು ಅತಿಥಿಗಳ ಗುಣಗಾನ ಮಾಡಿದರು. ಅತಿಥಿಗಳು ಮತ್ತು ಅಧ್ಯಕ್ಷರ ಭಾಷಣವಾದ ಮೇಲೆ ಶ್ರೀ ಕೆ. ಮಹಾಲಿಂಗನವರು ವಂದನೆಗಳನ್ನರ್ಪಿಸಿದರು.

ಶ್ರೀ ಯಕ್ಷಗಾನ ಪರಿಷತ್ತು- ಶ್ರೀ ಯಕ್ಷಗಾನ ಪರಿಷತ್ತಿನ ಕಾರ್ಯಕಾರಿ ಸಮಿತಿಯ ಸಭೆಯು ೧೮ರಂದು ಜರಗಿತು ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಪಾ. ಲ ನಾ. ಉಪಾಧ್ಯಾಯರು ಪರಿಷತ್ತು ಸಾಧಿಸಿದ ಪ್ರಗತಿಯ ವಿವರಗಳನ್ನಿತ್ತರು.

ಯಕ್ಷಗಾನ ಕಲೆಯ ಬಡಗು ತಿಟ್ಟಿನ ಭಾಗವತಿಕೆ, ತಾಳ, ಮೃದಂಗ, ಚಂಡೆ, ನೃತ್ಯ, ಕುಣಿತ ಮತ್ತು ಅರ್ಥ ನಿರೂಪಣೆಗಳಲ್ಲಿ ಧರ್ಮಾರ್ಥ ಶಿಕ್ಷಣವನ್ನೊದಗಿಸುವ ನಿರ್ಧಾರವನ್ನು ಕೈಗೊಳ್ಳಲಾಯಿತು. ವಿವಿಧ ತರಗತಿಗಳಿಗನುಗುಣವಾದ ಶಿಕ್ಷಕವೃಂದವನ್ನೊದಗಿಸಿ ತರಬೇತು ನೀಡುವ ಮೇಲ್ವಿಚಾರಣೆಯನ್ನು ಶ್ರೀಉಡುಪಿ ಬಸವನವರಿಗೆ ಒಪ್ಪಿಸಲಾಯಿತು.

ಕಲಾಭ್ಯಾಸ ಪಡೆಯಲಪೇಕ್ಷಿಸುವ ಉಮೇದ್ವಾರಿಗಳು ಅರ್ಜಿ ಸಲ್ಲಿಸುವುದಕ್ಕೆ ಅನುಕೂಲವಾಗುವಂತೆ ಪರಿಷತ್ತಿನ ಕಾರ್ಯಾಲಯವನ್ನು ಉಡುಪಿ ತೆಂಕಪೇಟೆಯಲ್ಲಿಯೇ ಉಳಿಸುವುದು ಪ್ರಕೃತಕ್ಕೆ ಯೋಗ್ಯವೆಂಬ ತೀರ್ಮಾನಕ್ಕೆ ಬರಲಾಯಿತು.

ಮುಂಬಾಯಿ—ನ್ಯೂ ಕರ್ಣಾಟಕ ಒಪ್ಟಿಕಲ್ ಕಂಪೆನಿಯ ಶ್ರೀ ಕಡೆಕಾರು ಕೃಷ್ಣ ಸೆಟ್ರ ಅಳಿಯ ಶ್ರೀ ನಾರಾಯಣ ಬಿ ಶೆಟ್ಟಿ, ಬಿ. ಎ. (ಆನರ್ಸ್) ಇವರು ಉಚ್ಚ ಶಿಕ್ಷಣಕ್ಕಾಗಿ ವಿಮಾನದಿಂದ ಇಂಗ್ಲೆಂಡಿಗೆ ತೆರಳುವ ಸಂದರ್ಭದಲ್ಲಿ, ಇತರ ಗೌರವಾರ್ಥವಾಗಿ ಮುಂಬಯಿಯ ಬಂಟರ ಯಾನೆ ನಾಡವರ ಸಂಘವು ಕಳೆದ ತಾ 10ರಂದು ಒಂದು ಸತ್ಕಾರ ಕೂಟವನ್ನೇರ್ಪಡಿಸಿತ್ತು. ಸಂಘದ ಅಧ್ಯಕ್ಷ ಶ್ರೀ ಪಡಲ ಶೆಟ್ರು ಅಧ್ಯಕ್ಷತೆಯನ್ನು ವಹಿಸಿದ್ದರು.

ಶ್ರೀ ನಾರಾಯಣ ಬಿ ಶೆಟ್ರು ಲಂಡನ್ನಿನ ನೋರ್ವೇಮ್ಟನ್ ಕೋಲೇಜ್ ಓಫ್ ಎಡ್ವಾನ್ಸ್ಡ್ ಟೆಕ್ನೋಲಿಜ್, ಇಲ್ಲಿ "ಓಪ್ತಲ್ಮೋಜಿ" (opthalmology)ಯಲ್ಲಿ ವಿಶೇಷ ತರಬೇತಿಯನ್ನು ಪಡೆಯಲಿರುವರು.

ದೇವಲ್ಕುಂದ—ಇಲ್ಲಿಯ ಶ್ರೀ ವಿಜಯಾ ಪ್ರಾಥಮಿಕ ಶಾಲೆಯಲ್ಲಿ ತಾ. 14-6-62 ರಂದು ಶ್ರೀ ಡಿ. ವೆಂಕ್ಟಯ್ಯ ಅಳ್ವರ ಅಧ್ಯಕ್ಷತೆಯಲ್ಲಿ 6ನೇ ತರಗತಿಯನ್ನು ಶ್ರೀ ಬಿ. ಗಣಪಯ್ಯ ಸೆಟ್ಟರು ಉದ್ಘಾಟಿಸಿದರು. ಪ್ರೌಢ ಶಿಕ್ಷಣದ ಅವಶ್ಯಕತೆಯ ಕುರಿತು ಭಾಷಣಗಳಾದುವು.

ಶಿರ್ವ—ಇಷ್ಟರ ವರೆಗೆ ದ. ಕ. ಜಿಲ್ಲಾ ಶಿರ್ವ ಬಂಟರ ಯಾನೆ ನಾಡವರ ವಿದ್ಯಾವರ್ಧಕ ಸಂಘ (ರಿ) ಎಂದು ಕರೆಯಲ್ಪಡುತ್ತಿದ್ದ ಸಂಘವು ಇನ್ನು ಮುಂದೆ ದ. ಕ. ಜಿಲ್ಲಾ ಶಿರ್ವ ವಿದ್ಯಾವರ್ಧಕ ಸಂಘ (ರಿ) ಎಂದು ಪರಿವರ್ತಿಸಲ್ಪಟ್ಟಿರುವುದಾಗಿ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಕಾಪು—ಇಲ್ಲಿಯ ನಡು ಮಾರಿಗುಡಿಯಲ್ಲಿ ತಾ. 12—6—1962ರಂದು ಹುಬ್ಬಳ್ಳಿಯ ರೋಯಲ್ ಕೆಫೆಯ ಮ್ಹಾಲಕ ಶ್ರೀ ತೋನ್ಸೆ ಸಂಜೀವ ಸೆಟ್ಟರ ಮಹಾ ಪೂಜೆಯು ವಿಜೃಂಭಣೆಯಿಂದ ಜರಗಿತು.

ಕಾರ್ಕಳ—ಸ್ಥಳೀಯ ಸರಕಾರಿ ಆಸ್ಪತ್ರೆಯಲ್ಲಿ ಸುಮಾರು ಮೂರು ವರ್ಷಕಾಲ ಉತ್ತಮ ಸೇವೆಸಲ್ಲಿಸಿ ಭೆಟ್ಟಳಕ್ಕೆ ವರ್ಗಾಯಿಸಲ್ಪಟ್ಟಿರುವ ಡಾ. ವೈ. ನರಸಿಂಹ ಸೆಟ್ಟ ಮತ್ತು ಫಾರ್ಮೆಸಿಸ್ ಶ್ರೀ ಬಿ. ಆರ್. ಹೊಳ್ಳ ಇವರಿಗೆ ವಿದಾಯವನ್ನೀಯಲು ಇದೇ ತಾ. 15ರಂದು ಆಸ್ಪತ್ರೆಯ ಸಲಹಾ ಸಮಿತಿ ಮತ್ತು ಸಿಬಂದಿಯ ವತಿಯಿಂದ ಸತ್ಕಾರ ಸಮಾರಂಭವೊಂದು ಶ್ರೀ ಎನ್. ವೋಹನದಾಸ್ ಅಡ್ಯಂತಾಯರ ಅಧ್ಯಕ್ಷತೆಯಲ್ಲಿ ಜರಗಿತು. ಡಾ. ವಿರೋಬರಾವ್, ಡಾ ಕೆ ಜಿ. ಕಾಮತ್, ಡಾ। ಎಂ. ಜಿ. ಆರ್. ಸಂಪಿಗೆತ್ತಾಯ, ಶ್ರೀಗಳಾದ ಆರ್. ಪದ್ಮನಾಭ ಶೆಣೈ, ವಿಶ್ವನಾಥ ಭಟ್, ಶ್ರೀ ಕೃಷ್ಣ, ಕುಮಾರಿ ದೇವಕಿ ಮೊದಲಾದವರು ಅತಿಥಿಗಳ ದಕ್ಷ ಸೇವೆ, ಗುಣನಡತೆಗಳನ್ನು ಕೊಂಡಾಡಿದರು ಅತಿಥಿ ಡಾ। ಸೆಟ್ಟರು ತಮ್ಮ ಅಧಿಕಾರಾವಧಿಯಲ್ಲಿ ಆಸ್ಪತ್ರೆಯ ಬಹುಮುಖ ಪ್ರಗತಿಗಾಗಿ ಸಹಕಾರವಿತ್ತ ಸಲಹಾ ಸಮಿತಿಯ ಸದಸ್ಯರಿಗೂ ಸಿಬಂದಿಗೂ ಕೃತಜ್ಞತೆಗಳನ್ನರ್ಪಿಸಿದರು. ಅಧ್ಯಕ್ಷ ಶ್ರೀ ಅಡ್ಯಂತಾಯರು ಡಾ ಸೆಟ್ಟರ ಭವಿಷ್ಯವು ಉಜ್ವಲವಾಗಲೆಂದು ಹಾರೈಸಿ ಭಾಷಣವಿತ್ತರು.

ಹೆಜಮಾಡಿ—ಸ್ಥಳೀಯ ಬೋರ್ಡ್ ಹೈಸ್ಕೂಲಿನಿಂದ ಈ ಬಾರಿ ಎಸ್.ಎಸ್.ಎಲ್.ಸಿ. ಪರೀಕ್ಷೆಗೆ ಕುಳಿತ 48 ಮಂದಿ ವಿದ್ಯಾರ್ಥಿಗಳಲ್ಲಿ 40 ಮಂದಿ ಉತ್ತೀರ್ಣರಾಗಿ ಈ ಶಾಲೆಯು 83 3/4ರಷ್ಟು ಫಲಿತಾಂಶ ಪಡೆದಿರುತ್ತದೆ.

ವಿಖ್ಯಾತ ಗ್ರಂಥ ಕರ್ತರಾದ

ಶ್ರೀ ಎ. ಎಸ್. ಪಂಚಾಪ ಕೇಶ ಅಯ್ಯರ್

ಎಂ. ಎ., ಐ. ಸಿ. ಯಸ್., ಬಾರ್-ಎಟ್-ಲಾ., ಎಫ್. ಆರ್. ಎಸ್. ಎಲ್.

ಇವರು ಇಂಗ್ಲೀಷಿನಲ್ಲಿ ಬರೆದ—

TALES OF IND

ಕಥಾವಳಿಯ ಕನ್ನಡ ಅನುವಾದ

ಭಾರತೀಯ ಕಥೆಗಳು

ಚಿಕ್ಕ ಚೊಕ್ಕ ೧೫-೨ ಕಥೆಗಳು ಬೆಲೆ ರೂ 1—12—0

ಅನುವಾದಕರು: ದಿ। ಕೊರದ್ಕಲ್ ಶ್ರೀನಿವಾಸ ರಾವ್,

ಸಿಗುವ ಸ್ಥಳ:—

ನವಭಾರತ ಪುಸ್ತಕ ಭಂಡಾರ, ಉಡುಪಿ.

ಆದರ್ಶ ಮಾತೆ

ಮಗುವಿನ ಭವಿಷ್ಯ ಬರೆಯುವಳು

ಆಕೆ ಗೃಹವಿಜ್ಞಾನವನ್ನು ವಿಶೇಷ ವಿಷಯವಾಗಿ ತೆಗೆದುಕೊಂಡು ಬಿ. ಎ. ಉತ್ತೀರ್ಣಳಾದಳು. ಆಗ ತಾನು ಕಲಿತ ವಿಷಯಗಳನ್ನು ಅಧಿಕ ಕ್ರಿಯಾತ್ಮಕವಾಗಿ ಜೀವನದಲ್ಲಿ ಅಳವಡಿಸಿಕೊಂಡೇನು ಎಂಬುದರ ಬಗ್ಗೆ ಆಕೆಯಲ್ಲಿ ಎಳ್ಳಷ್ಟೂ ಭರವಸೆಯಿರಲಿಲ್ಲ.

ಇಂದು ಆಕೆಗೆ ಶಾಲೆಗೆ ಹೋಗುವ ನಾಲ್ಕು ಮಕ್ಕಳಿವೆ. ಇವು ಸರ್ವ ಸಾಮಾನ್ಯವಾಗಿ ಅಸ್ವಸ್ಥ ಬೀಳುತ್ತವೆ. ಅವುಗಳ ಶುಶ್ರೂಷೆಯಲ್ಲಿಯೇ ರಾತ್ರಿ ಹಗಲನ್ನು ಕಳೆಯಬೇಕಾಗುತ್ತದೆ. ಇಂತಹ ವಿಲಕ್ಷಣ ಕಾಲದಲ್ಲಿ ಆಕೆಯು ತನ್ನ ಶಿಕ್ಷಣಾವಧಿಯ ದಿನಗಳನ್ನು ಸ್ಮರಿಸಿಕೊಳ್ಳುತ್ತಾಳೆ ತನ್ನ ಮಕ್ಕಳ ಆರೋಗ್ಯವನ್ನು ಉಳಿಸಿಕೊಳ್ಳಬೇಕಾದರೆ ಆಕೆ ಪಟ್ಟಿರುವ ಪಾಡನ್ನು ಆಕೆ ಮಾತ್ರ ಬಲ್ಲಳು.

ಮಕ್ಕಳ ಆರೋಗ್ಯವು ಸಾಮಾನ್ಯವಾಗಿ ಅವುಗಳ ಆಹಾರಭ್ಯಾಸಗಳನ್ನು ಹೊಂದಿಕೊಂಡಿದೆ ಯೆಂಬುದನ್ನು ಸಂಪೂರ್ಣ ಅಲ್ಲಗಳೆಯುವುದು ಸಾಧ್ಯವಿಲ್ಲ ತಿಂಡಿತಿನಸುಗಳನ್ನು ಕೊಳ್ಳಲು ಅವುಗಳಿಗೆ ಹಣಕಾಸನ್ನು ಕೊಡುವುದರಿಂದ ಮಕ್ಕಳ ಅಭ್ಯಾಸವು ಕೆಟ್ಟು ಹೋಗುವುದು ಮಾತ್ರವಲ್ಲ, ಅವುಗಳ ಆರೋಗ್ಯವನ್ನೂ ಕೆಡಿಸುವುದು.

ಮಧ್ಯಮ ವರ್ಗದ ಕುಟುಂಬದ ತಾಯಿಯು ಸಮಾಧಾನ ಮತ್ತು ತತ್ಪರತೆಯಿಂದ ತಮ್ಮ ಮಕ್ಕಳಿಗೆ ಪೌಷ್ಟಿಕ ಆಹಾರವನ್ನೇ ಪೂರೈಸಬಲ್ಲಳು; ಉಚಿತ ಭೋಜನವನ್ನೇ ಒದಗಿಸಬಲ್ಲಳು ಪೂರಿ, ಕಿಚ್ಚಡಿ ಮೊದಲಾದುವುಗಳಿಂದ ಹೊಟ್ಟೆ ತುಂಬಿಸಿಕೊಳ್ಳಬಹುದು; ಅವುಗಳಿಂದ ತೃಪ್ತಿಯೂ ಒದಗಬಹುದು; ಏಕೆಂದರೆ, ನಾಲಿಗೆಗೆ ಅವು ಸ್ವಾದಿಷ್ಟವಾಗಿವೆ. ಆದರೆ, ಮಗುವಿನ ಆರೋಗ್ಯ ದೃಷ್ಟಿಯಿಂದ ಈ ತಿಂಡಿಗಳು ಎಷ್ಟರ ಮಟ್ಟಿಗೆ ಲಾಭಪ್ರದವಾಗಿವೆ?

ಹಾಲು, ಮೊಸರು ತುಪ್ಪಗಳು ಬೆರೆತ ಆಹಾರ ವಸ್ತುಗಳು ಮಗುವಿನ ಆರೋಗ್ಯಕ್ಕೆ ಉತ್ತಮವಾದುವುಗಳು. ವಾರದಲ್ಲೊಂದು ದಿನ ಹೆಸರು ತರಕಾರಿಗಳ ಸಲಾದನ್ನು ನೀಬೆ ಇತ್ಯಾದಿಗಳನ್ನು ಹಾಕಿ ಸ್ವಾದಿಷ್ಟಗೊಳಿಸಿ ಮಕ್ಕಳಿಗೆ ತಿನ್ನಿಸಬಹುದು ಮೊಳಕೆ ಬರಿಸಿದ ಹೆಸರು ಮೊದಲಾದ ಧಾನ್ಯಗಳು ಆರೋಗ್ಯಕ್ಕೆ ಹಿತಪ್ರದವಾಗಿವೆ; ಇವುಗಳ ಪದಾರ್ಥಗಳನ್ನು ಮಕ್ಕಳು ಉತ್ಸಾಹದಿಂದ ತಿನ್ನುತ್ತಾರೆ.

ಮಕ್ಕಳಿಗೆ ಕೊಡುವ ಉಪಾಹಾರದಲ್ಲಿ ಆಯಾ ಕಾಲದ ಹಣ್ಣುಗಳು ಅವಶ್ಯ ಕೂಡಿರಬೇಕು. ಆರೋಗ್ಯ ರಕ್ಷಣೆಯಲ್ಲಿ ಹಣ್ಣು ಹಂಪಲುಗಳ ಅವಶ್ಯಕತೆಯನ್ನು ಯಾರಿಂದಲೂ ಅಲ್ಲಗಳೆಯುವುದು ಸಾಧ್ಯವಿಲ್ಲ. ಅಲ್ಲದೆ ಬೇರೆ ಬೇರೆ ಕಾಲದಲ್ಲಿ ದೊರೆಯುವ ಹಣ್ಣುಗಳನ್ನು ಆಯಾ ಕಾಲದಲ್ಲಿ ತಿನ್ನುವುದರಿಂದ ಮಕ್ಕಳ ಮೇಲೆ ಒಳ್ಳೆಯ ಪರಿಣಾಮ ಬೀಳುವುದು. ಹುರಿಗಡಲೆ, ನೆಲಗಡಲೆ ಮೊದಲಾದ ಕರಿದ ವಸ್ತುಗಳೆಂದರೆ ಮಕ್ಕಳಿಗೆ ಪ್ರಾಣ. ಒಂದು ಮಿತಿಯಲ್ಲಿ ಇವನ್ನೂ ಕೊಡಬಹುದು. ಮಕ್ಕಳದನ್ನು ಕಂಡೊಡನೆಯೇ ಬಾಯಲ್ಲಿ ನೀರು ಸುರಿಸುತ್ತಾರೆ.

ತಿಂಡಿ ತಿನಸುಗಳಲ್ಲಿಯೂ ವೈವಿಧ್ಯವಿರಬೇಕೆಂದು ಮಗು ಬಯಸುತ್ತದೆ. ಆದುದರಿಂದ ಇವನ್ನು ತಯಾರಿಸುವಾಗ ಮಗುವಿನ ರುಚಿಗೆ ಯಾವುದು ಹೊಂದಿಕೊಳ್ಳುವುದೆಂದು ಮೊತ್ತಮೊದಲು ಕಂಡುಕೊಳ್ಳಬೇಕು. ಮನೆಯಲ್ಲಿಯೇ ತಾನು ಬಯಸುವ ತಿಂಡಿಗಳು ದೊರೆತುವೆಂದಾದರೆ, ಮಗುವಿಗೆ ಪೇಟೆಯ ತಿನಸುಗಳಲ್ಲಿ ಆಭಿರುಚಿಯಿರುವುದಿಲ್ಲ. ಅತ್ತ ಆಕರ್ಷಿತವಾಗುವುದೂ ಇಲ್ಲ.

ಚಳಿಗಾಲದಲ್ಲಿ ಗಜ್ಜರಿ, ತೊಂಡೆ, ಕುಂಬಳ ಮೊದಲಾದುವುಗಳ ಹಲ್ವಾವನ್ನು ಮಾಡಿ ಮಕ್ಕಳಿಗೆ ಕೊಡಬಹುದು ಸಿಹಿ ತಿಂಡಿಯನ್ನು ಮಕ್ಕಳು ಹೆಚ್ಚಾಗಿ ಬಯಸುವುದರಿಂದ ಪೌಷ್ಟಿಕತೆಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಉಚಿತ ತರಕಾರಿಗಳನ್ನು ಆಯ್ದುಕೊಳ್ಳಬೇಕು. ಮಗುವಿನ ರುಚಿಗೆ ಒಪ್ಪಿಗೆಯಾಗುವಂತಹ ಖಾರ ಇಲ್ಲವೇ ಸಿಹಿ ತಿಂಡಿಗಳನ್ನು ಮನೆಯಲ್ಲಿಯೇ ತಯಾರಿಸಬಹುದು.

ಮಗುವಿಗೆ ಕೊಡುವ ಯಾವುದೇ ತಿಂಡಿಯಿರಲಿ ಅದು ಜೀವನ ಸತ್ವಗಳಿಂದ ಕೂಡಿರುವುದು ಅತ್ಯಗತ್ಯವಿದೆ. ಗಡಸು ಸ್ವರೂಪದ ಆಹಾರ ವಸ್ತುಗಳು ಅಜೀರ್ಣವನ್ನು ಹೆಚ್ಚಿಸಿ ಆರೋಗ್ಯವನ್ನು ಕೆಡಿಸುವುದು ಆದುದರಿಂದ ಮಕ್ಕಳಿಗೆ ನೀಡುವ ಆಹಾರವು ಜೀರ್ಣಕಾರಿಯಾಗಿರಬೇಕು.

ಪೇಟೆಯ ತಿಂಡಿತಿನಸುಗಳನ್ನು ಕೊಂಡುಕೊಡುವುದು; ಇಲ್ಲವೇ ಅವಕ್ಕೆ ಹಣ ಕೊಡುವುದು ತಾಯಿಯು ಮಾಡುವ ಮಹಾಪರಾಧಗಳು ತಾಯಿ ಮಾಡುವ ಈ ಅಪರಾಧದ ಫಲವನ್ನು ಮಕ್ಕಳು ಆಜೀವ ಅನುಭೋಗಿಸ ಬೇಕಾಗುವುದು

ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ —ಸಂ. ನ]

ಮಹಾಭಾರತ ಕಥಾಸಾರ ಮಾಲಿಕೆ— (ಚೌಪದಿ ಕಾವ್ಯ) ಲೇಖಕರು: ಶ್ರೀ ಎಂ. ಬಿ ಶಂಕರ ರಾವ್, ಐ. ಎ. ಎಸ್. (ನಿವೃತ್ತ) ಪ್ರಕಾಶಕರು: ಕಲ್ಯಾಣ ಪ್ರೆಸ್, ಉಡುಪಿ ಪುಟಗಳು ೨೧೫. ಬೆಲೆ: ರೂ ೧—೫೦.

ರಾಮಾಯಣದ ಕಥೆಯನ್ನು ಸರಳ ಕನ್ನಡದ ಚೌಪದಿ ಕಾವ್ಯದಲ್ಲಿ ಈ ಮೊದಲೇ ಬರೆದಿರುವ ಶ್ರೀ ಶಂಕರ ರಾಯರು ಈಗ ಮಹಾ ಭಾರತವನ್ನೂ ಅದೇ ರೀತಿಯಲ್ಲಿ ಲಿಖಿಸಿದ್ದಾರೆ. ವೇದಗಳ ನಂತರ ಪ್ರಾಮಾಣಿತ ಗ್ರಂಥವಾದ ಮಹಾ ಭಾರತವು ಸಂಚಮ ವೇದವೆಂದು ಕೆಸರಾಗಿದೆ. ಪ್ರಪಂಚದ ಅತಿ ದೊಡ್ಡ ಕಾವ್ಯವಾಗಿದೆ ಮಹರ್ಷಿ ವ್ಯಾಸರು ಇದರಲ್ಲಿ ಲೌಕಿಕ ನೀತಿಯನ್ನು ಹುದುಗಿಸಿದ್ದಾರೆ, ರಾಜಕಾರಣದ ಸಮುದ್ರದ ಆಳವನ್ನು ಮುಟ್ಟಿದ್ದಾರೆ; ಎಂತಲೇ ಇದರ ಅದ್ವಿತೀಯತೆಯಲ್ಲಿ ಎರಡು ಮಾತಿಲ್ಲ. ಇಂತಹ ಮಹಾ ಭಾರತವನ್ನು ಕನ್ನಡದಲ್ಲಿ ಬರೆದವರ ಸಂಖ್ಯೆಯೂ ಕಡಿಮೆಯಿಲ್ಲ. ನಮ್ಮ ಸಾಹಿತ್ಯವು ಉದಯಗೊಂಡುದೇ ಪಂಪನ ಭಾರತದಿಂದ. ಇಂತಹ ಹತ್ತಾರು ಮಹಾ ಭಾರತಗಳು ಆಯಾಕಾಲದ ಜನತೆಯ ಹೃನ್ಮನಗಳನ್ನು ಆಕರ್ಷಿಸದರೆ, ಈ ಕಥಾ ಸಾರ ಮಾಲಿಕೆಯು ಇಂದಿನ ಕಾಲದ ಸರಳ ಶೈಲಿಯಲ್ಲಿ; ಛಂದಸ್ಸಿನಲ್ಲಿದ್ದು ಗ್ರಾಹ್ಯವೆನಿಸಿದೆ

ಪ್ರಸಕ್ತ ಕಥಾಸಾರ ಮಾಲಿಕೆಯು ಮಹಾ ಭಾರತದ ಸಾರ ಮಾತ್ರವಾದುದರಿಂದ ಮೂಲದ ಎಲ್ಲಾ ಆಖ್ಯಾಯಿಕೆಗಳನ್ನೂ ಕೂಡಿರುವುದು ಸಾಧ್ಯವಿಲ್ಲ. ಹರಿಯು ಪಾರ್ಥನ ಸಾರಧಿಯಾದ ಘಟನೆಯನ್ನು ಬಿಟ್ಟಿದ್ದಾರೆ; ಹರಿಯನ್ನು ಅರ್ಜುನನು ತನ್ನ ಪಕ್ಷಕ್ಕೆ ತರಿಸಿಕೊಂಡನೆಂದೂ ಮುಂದಿನ ಮಣಿಗಳಲ್ಲಿ ಹರಿಯು ಸಾರಧಿಯಾದನೆಂದೂ ಹೇಳಿರುವುದರಿಂದ ಈ ಘಟನೆಯನ್ನು ಉಲ್ಲೇಖಿಸುವುದು ಅನಗತ್ಯಸಾರ ಸಂಗ್ರಹದಲ್ಲಿ ವಿಸ್ತಾರ ಪ್ರತಿಪಾದನೆ ಸಾಧ್ಯವಿರುವುದಿಲ್ಲ. ಪರನ ಪಾರನಕ್ಕೆ ಅನುಕೂಲವಾದ ಈ ಕಾವ್ಯವು ಮನೋಜ್ಞವಾಗಿದೆ ಸರಾಗವಾಗಿ ಸಾಗುವ ಕಾವ್ಯ ಶೈಲಿಯು ಪ್ರಾಸಲಯ ಬದ್ಧವೂ ಸರಳವೂ ಆಗಿದೆ; ಗ್ರಾಹ್ಯವಾಗಿದೆ. ಕೌರವನ ಸೇನೆಯ ಈ ವರ್ಣನೆಯನ್ನು ಇದಕ್ಕೆ ಉದಾಹಂಣೆಯಾಗಿ ನೀಡಬಹುದು:

ಶಲ್ಯ, ಕುಂಭಜ ಜಯದ್ರಥನು, ದುಶ್ಶಾಸ
ಅಲ್ಲಿ ಕೌರವನಿಂಗೆ ಕೊಟ್ಟು ವಿಶ್ವಾಸ
ಸಲ್ಲಲಿತ ಸಮರ ವಾದ್ಯದ ವಿಶದ ಘೋಷ
ತಲ್ಲಣದ ಯುದ್ಧವಿದು, ಕುರುಕುಲವಿನಾಶ

ಜನಜನದಲ್ಲಿ ಮಹಾ ಭಾರತದ ಪ್ರಚಾರವಾಗಲು ಈ ಸಾರಮಾಲಿಕೆ ಉಪಯುಕ್ತವಾದ, ಉಪಾಪೇಯವಿದೆ.

೦೦೦ ೦೦೦

ಶ್ರೀ ಮಡಥಣಿ ಶ್ರೀ ಗಚ್ಚಿನ ಮಠದ ಶ್ರೀ ಮುರಿಗೇಂದ್ರ ತಿವಯೋಗಿಗಳ ನಾಮಾವಳಿಯನ್ನು ಮಹಾತನರ ಕಂದ ಮಹಾರುದ್ರಪ್ಪ ಮಹಾಲಿಂಗಪ್ಪ ರುಬ ರೆದು ಗೂ. ಮಿರ್ಜಿ ಮತ್ತು ವಿ. ಮ. ಮಿರ್ಜಿ, ದಾಜೀಬಾನಪೇಟೆ, ಹುಬ್ಬಳ್ಳಿ ಇವರಿಂದ ಪ್ರಕಾಶ ಪಡಿಸಿದ್ದಾರೆ ಶ್ರೀ ಮುರಿಗೇಂದ್ರ ಸ್ವಾಮಿಗಳ ೧೦೮ ವಿಶೇಷಣ ರೂಪದ ನಾಮಾವಳಿಗಳು ಇದರಲ್ಲಿವೆ. ಎಲ್ಲನಾಮಾವಳಿಯೂ 'ಮುರಿಗೇಂದ್ರನೇ' ಎಂದು ಅಂತ್ಯವಾಗುತ್ತದೆ. ಭಕ್ತಜನ ಪಾರನಕ್ಕೆ ಸುಯೋಗ್ಯವಿದೆ

— ಗೋರಾ

ಆರ್ದ್ರಾ ಪ್ರವೇಶದ ಸತ್‌ಫಲಗಳು
(೫ನೇ ಪುಟದಿಂದ)

೩೦೦೦ದ ಸಪ್ತಂಬರ ೮ರ ವರೆಗೂ ಉತ್ತರಾ ಮಳೆಯು ಸಪ್ತಂಬರ ೧೬ರಿಂದ ೨೫ ವರೆಗೂ ಸರಿಯಾಗಿ ಸುರಿಯುವುದು. ಹಸ್ತಾ ನಕ್ಷತ್ರದಲ್ಲಿ ಸಾಮಾನ್ಯವಾಗಿ ಮಳೆಯಾಗುವುದು ಚಿತ್ರಾದಲ್ಲಿ ವಿಪರೀತ ವೃಷ್ಟಿಯೂ ಸ್ವಾತಿಯಲ್ಲಿ ಅಕ್ಟೋಬರ ೨೩ರಿಂದ ನವಂಬರ ೨ರ ವರೆಗೆ ಉತ್ತರ ಮಳೆಯೂ ಬರುವುದರಿಂದ ಜನಸಾಧಾರಣರು ಸಂತೋಷದಲ್ಲಿರುವರು

ಆರ್ದ್ರಾ ಮಳೆ ಬಂದರೆ, ಆರೂ ನಕ್ಷತ್ರಗಳಲ್ಲಿ ಮಳೆ ಬರುವುದು ಎಂಬ ಜನರ ವಿಶ್ವಾಸವನ್ನು ಜ್ಯೋತಿಷ್ಯಾಸ್ತ್ರ ಪುಷ್ಠೀಕರಿಸುತ್ತದೆ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

New Issue
Over Subscribed·

The new rights issue of equity capital of Rs 50 lakhs by the Canara Industrial & Banking Syndicate Ltd., has been heavily over subscribed. The excess amount received for the additional shares of about Rs 15 lakhs would soon be refunded to the applicants for additional shares.

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ರೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯುತ್ತಮವೆಂದು ಪರಿಗಣಿಸಿರುವರು. ಪ್ರತಿಯೊಬ್ಬರೇವಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿಹೊಂದುವುದು

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ವಿಜಯ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್:— ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,

Estd. 1931.
Phone No. 240. — ಮಂಗಳೂರು—3

ಜೀವನದ ವಿವಿಧ ಘಟನೆಗಳನ್ನು ಹೃದಯಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1—25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾದಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸಮುದ್ರದಿಂದ ಸಂಪತ್ತು

ಸಾಗರದಡಿಯಲ್ಲಿ ಮರುಭೂಮಿ

ಸಮುದ್ರದಿಂದ ಅನೇಕ ವಸ್ತುಗಳನ್ನು, ಅದರಲ್ಲಿಯೂ ಮುಖ್ಯವಾಗಿ ಆಹಾರವಸ್ತುಗಳನ್ನು ಪಡೆಯಲು ಸಾಧ್ಯವಿದೆ. ಸಾಗರದ ವಿವಿಧ ಮಟ್ಟಗಳಲ್ಲಿರುವ ನೀರುಗಳನ್ನು ತಂದು, ಅವುಗಳಲ್ಲಿನ ಗುಣಗಳಲ್ಲಿ ತೋರಿಬರುವ ವೈವಿಧ್ಯತೆಯನ್ನು ಪರೀಕ್ಷಿಸಲಾಗುತ್ತಿದೆ. ಸಮುದ್ರ ಗರ್ಭದಲ್ಲಿಯೂ ಮರುಭೂಮಿಗಳು ಅಸ್ಥಿತ್ವದಲ್ಲಿವೆಯೆಂದು ಈ ಸಂಶೋಧನೆಗಳಿಂದ ತಿಳಿದುಬಂದಿದೆ. ಆ ಪ್ರದೇಶಗಳಲ್ಲಿ ಯಾವ ಬಗೆಯ ಸಸ್ಯವೂ ಬೆಳೆಯುವುದಿಲ್ಲ; ಯಾವ ಜೀವರಾಶಿಯೂ ವಾಸಿಸುವುದಿಲ್ಲ.

ಪಶ್ಚಿಮ ಜರ್ಮನಿಯ ಉತ್ತರ ಭಾಗದ ಮುಖ್ಯ ನಗರಗಳಲ್ಲೊಂದಾದ ಕೀಲ್ ನಗರದ ಸುಂದರ ಬಡಾವಣೆಯೊಂದರಲ್ಲಿ ಸುತ್ತಮುತ್ತಲಿನ ಎಲ್ಲಾ ಭವನಗಳ ನಡುವೆ ತನ್ನದೇ ಆದ ವಿಶಿಷ್ಟ ಸೌಂದರ್ಯದಿಂದ ಎದ್ದುಕಾಣುವ ಒಂದು ದೊಡ್ಡ ಕಟ್ಟಡದಲ್ಲಿ ಅತಿ ಮುಖ್ಯವಾದ ಸಂಶೋಧನೆಗಳು ನಡೆಯುತ್ತಿವೆಯೆಂಬ ವಿಷಯವು ಸಾಧಾರಣವಾಗಿ ಬಹಳ ಜನರಿಗೆ ತಿಳಿದಿರಲಾರದು. ಅಲ್ಲಿನ ಸಂಶೋಧಕರು ಅನವರತವೂ ಸಾಗರ ಸಂಬಂಧವಾದ ಸಂಶೋಧನೆಗಳಲ್ಲಿ ತೊಡಗಿದ್ದಾರೆ. ಈ ಸಂಶೋಧನಾಗಾರವು ಕೀಲ್ ವಿಶ್ವವಿದ್ಯಾನಿಲಯದ ಒಂದು ಅಂಗವಾಗಿ ಕೆಲಸ ಮಾಡುತ್ತಿದೆ. ವಿಶಾಲವಾದ ಈ ಸಂಶೋಧನಾಗಾರದೊಳಗೆ ಪ್ರವೇಶಿಸಿದೊಡನೆ, ಅಲ್ಲಿನ ಗೋಡೆಗಳನ್ನಲಂಕರಿಸಿರುವ ಖ್ಯಾತ ವಿಜ್ಞಾನಿಗಳ ತೈಲ ಚಿತ್ರಗಳು ದರ್ಶಕರ ಕಣ್ಮನಗಳನ್ನು ಆಕರ್ಷಿಸುತ್ತವೆ. ಇಲ್ಲಿ ಪ್ರೊಫೆಸರ್. ಡಾ| ಜೋಹಾನ್ಸ್ ಕ್ರೇ ಎಂಬವರ ನೇತೃತ್ವದಲ್ಲಿ ಹದಿನಾಲ್ಕು ಜನ ವಿಜ್ಞಾನಿಗಳು ಸಂಶೋಧನೆಗಳಲ್ಲಿ ನಿರತರಾಗಿದ್ದಾರೆ.

"ನಮ್ಮ ಸಂಶೋಧಕರ ತಂಡವನ್ನು ಅನೇಕ ಬೇರೆ ಬೇರೆ ಪಂಗಡಗಳಾಗಿ ವಿಭಾಗಿಸಿಕೊಂಡಿದ್ದೇವೆ. ಇವುಗಳಲ್ಲಿ ಒಂದೊಂದೂ ಜಗತ್ತಿನ ಒಂದೊಂದು ಮೂಲೆಗಳಲ್ಲಿ ಸಂಶೋಧನೆಗಳಲ್ಲಿ ತೊಡಗಿರುತ್ತದೆ. ಒಂದು ಪಂಗಡವು ದಕ್ಷಿಣ ಅಮೇರಿಕಾದ ವೆನಿಜೂಲ ತೀರದಲ್ಲಿದ್ದರೆ, ಮತ್ತೊಂದು ತಂಡವು ಆಸ್ಟ್ರೇಲಿಯಾಬಿ ಸುತ್ತಮುತ್ತಲ ಸಮುದ್ರದಲ್ಲಿ ಪರೀಕ್ಷೆಗಳನ್ನು ನಡೆಸುತ್ತಿದ್ದು, ಬೇರಿನ್ನೊಂದು ಗುಂಪು ವಿಶ್ವದ ಮೂಲೆಯಲ್ಲಿರುತ್ತದೆ. ಇಂತಹ ಪ್ರಯಾಣಗಳನ್ನು ಕೈಗೊಳ್ಳುವುದು ಹುಡುಗಾಟದ ಮಾತಲ್ಲ ಬಹು ಶ್ರಮಸಾಧ್ಯವಾದ ಕಾರ್ಯ. ಆದರೆ ಇವು ನಮ್ಮ ಜೀವನದಲ್ಲಿ ಹಾಸುಹೊಕ್ಕಾಗಿ ಹೋಗಿರುವುದರಿಂದ, ಇಂತಹ ಕಷ್ಟತಮವಾದ ಕಾರ್ಯದಲ್ಲಿಯೂ ಆಹ್ಲಾದವನ್ನು ಕಾಣುತ್ತೇವೆ." ಎಂದು ಡಾ| ಕ್ರೇ ತಿಳಿಸಿದ್ದಾರೆ.

ಒಂದು ವಿಶೇಷ ಸಾಧನವನ್ನು ಉಪಯೋಗಿಸಿ, ಸಮುದ್ರದ ೩೬,೦೦೦ ಅಡಿಗಳ ಆಳದ ವರೆಗೂ ವಿವಿಧ ಮಟ್ಟಗಳಲ್ಲಿನ ನೀರನ್ನು ಸಂಗ್ರಹಿಸಿ, ಹಡಗುಗಳಲ್ಲಿಯೇ ಇರುವ ಪರೀಕ್ಷಾಲಯಗಳಲ್ಲಿ ಪರೀಕ್ಷಿಸಲಾಗುವುದು. ಈ ಪರೀಕ್ಷೆಗಳ ಫಲಿತಾಂವನ್ನರಿಯಲು ಕೆಲವೊಂದು ಬಾರಿ ಕೆಲದಶಕಗಳಾದರೂ ಆದೀತು. ಸರಕಾರದಿಂದ ಸಾಕಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಸಂಶೋಧಕರು ನೇಮಿಸಲ್ಪಡದಿರುವುದೇ ಇದಕ್ಕೆ ಕಾರಣ.

ಈ ರೀತಿ ಸಂಗ್ರಹಿಸಲಾಗಿರುವ ನೀರಿನ ಒಂದು ಲೀಟರಿನಷ್ಟು ಭಾಗದಲ್ಲಿ ಲಕ್ಷಾಂತರ ಜೀವರಾಶಿಗಳನ್ನೂ ವಸ್ತು ವಿಶೇಷಗಳನ್ನೂ ಕಾಣಬಹುದು. ಈ ನೀರನ್ನು ಶೋಧಿಸಿ, ಶುದ್ಧಗೊಳಿಸಿದ ಮೇಲೆ ಉಳಿಯುವ ವಸ್ತುಗಳು ಕಣ್ಣಿಗೆ ಗೋಚರಿಸುವುದಿಲ್ಲ. ಎಲೆಕ್ಟ್ರೋ ಕೆಲರಿ ಮೀಟರ್ ಮುಂತಾದ ವಿದ್ಯುಚ್ಛಕ್ತಿಯ ಸಾಧನಗಳ ಸಹಾಯದಿಂದ ಪರೀಕ್ಷಿಸಿ, ನೀರಿನಲ್ಲಿ ಅಂತರ್ಗತವಾಗಿರುವ ಉಪ್ಪು, ಜಲಜನಕ, ರಂಜಕ ಮುಂತಾದವುಗಳು ಯಾವ ಯಾವ ಪ್ರಮಾಣದಲ್ಲಿವೆಯೆಂದು ತಿಳಿಯಲಾಗುತ್ತದೆ.

ಸಮುದ್ರದ ಬೇರೆ ಬೇರೆ ಮಟ್ಟಗಳಲ್ಲಿರುವ ನೀರುಗಳನ್ನು ಮಿಶ್ರಮಾಡಿದಾಗ ಉಂಟಾಗುವ ವ್ಯತ್ಯಾಸಗಳೇನೇನು ಎಂದು ವಿವರಿಸುವ ಸಂಖ್ಯಾ ಚಿತ್ರಗಳನ್ನೂ ಅಂಕಿ ಅಂಶಗಳನ್ನೂ ಈ ಸಂಶೋಧನಾಗಾರದಲ್ಲಿ ಶೇಖರಿಸಲಾಗುತ್ತಿದೆ. ಕಾಲಕ್ಕೆ ತಕ್ಕಂತೆ, ನೀರಿನ ಗುಣ ವಿಶೇಷದಲ್ಲಿ ಬದಲಾವಣೆಗಳು ತೋರಿ ಬರುವುದರಿಂದ, ಅಲ್ಲಿನ ಜೀವರಾಶಿಗಳ ಉತ್ಪತ್ತಿಯಲ್ಲಿಯೂ ವ್ಯತ್ಯಾಸಗಳು ಕಂಡು ಬರುತ್ತವೆ.

ಸಮುದ್ರದ ಅಂತರಾಳದಲ್ಲಿಯೂ ಕೆಲವೆಡೆಗಳಲ್ಲಿ ಮರುಭೂಮಿಗಳು ಅಸ್ಥಿತ್ವದಲ್ಲಿವೆ. ಆ ಪ್ರದೇಶಗಳಲ್ಲಿ ಯಾವುದೇ ಬಗೆಯ ಜೀವರಾಶಿಯಿರಲೂ ಸಾಧ್ಯವಿಲ್ಲ. ಯಾವ ಖನಿಜ ಸಂಪತ್ತಿಯೂ ಅಲ್ಲಿ ದೊರಕುವುದಿಲ್ಲ. ಇಂತಹವುದೊಂದು ಮರುಭೂಮಿಯು ವೆಸ್ಟ್ ಇಂಡೀಸ್ ದ್ವೀಪಗಳಿಗೂ ಅಜೋರ್ಸ್‌ಗೂ ನಡುವೆ ಇರುವ ಫರ್‌ಗಾಸ್ಸೋ ಸಮುದ್ರದಲ್ಲಿದೆ.

ಇನ್ನು ಕೆಲವು ಸಮುದ್ರಗಳಲ್ಲಿ ಮೀನುಗಳು ಸಂಜೆಯ ವೇಳೆಗಳಲ್ಲಿ ಮಾತ್ರ ನೀರಿನ ಮೇಲು ಭಾಗಕ್ಕೆ ಬಂದು, ಮತ್ತುಳಿದ ವೇಳೆಗಳಲ್ಲಿ ಆಳಕ್ಕೆ ಹೊರಟು ಹೋಗುವುವೆಂದು ತಿಳಿದು ಬಂದಿದೆ. ತೀರ ಪ್ರದೇಶಗಳಿಗಿಂತ, ಸಮುದ್ರದ ನಡು ಭಾಗಗಳಲ್ಲಿಯೇ ಮೀನುಗಳು ಹೇರಳವಾಗಿರುತ್ತವೆಯೆಂದೂ ಈ ಸಂಶೋಧನೆಗಳಿಂದ ತಿಳಿದು ಬಂದಿದೆಯೆಂದು ಡಾ. ಕ್ರೇ ತಿಳಿಸಿದರು.

ಸಾಗರ ಸಂಬಂಧವಾದ ಈ ಸಂಶೋಧನೆಗಳಿಂದ ಮೀನುಗಾರಿಕೆಗೆ ಬಹು ಹೆಚ್ಚಿನ ಸಹಾಯವಾಗಲಿದೆ. ಅದಲ್ಲದೆ, ಸಮುದ್ರದಲ್ಲಿ ದೊರಕುವ ಅನೇಕ ಪೌಷ್ಟಿಕ ವಸ್ತುಗಳಿಂದ ಆಹಾರವನ್ನು ಹೇಗೆ ತಯಾರಿಸಬಹುದೆಂಬುದರ ಬಗ್ಗೆಯೂ ಸಂಶೋಧನೆಗಳು ನಡೆಯುತ್ತಿವೆ.

ಸಾಗರದ ಉತ್ಪತ್ತಿಯಲ್ಲಿ ಸೇಕಡಾ ೦.೧ ಭಾಗವನ್ನು ಮಾತ್ರ ಮನುಷ್ಯನು ಮೀನು ಹಿಡಿಯುವುದರ ಮೂಲಕ ಉಪಯೋಗಿಸಿಕೊಳ್ಳುತ್ತಿದ್ದಾನೆ. ಉಳಿದ ಖನಿಜ ಸಂಪತ್ತಿಯು ಏನಾಗುತ್ತದೆ ಯೆಂಬುದರ ಪರಿಶೋಧನೆಯಲ್ಲಿ ಕ್ರೇ ತೊಡಗಿದ್ದಾರೆ. ಸಮುದ್ರದಲ್ಲಿ ದೊರಕುವ ವಸ್ತುಗಳಿಂದ ಮನುಷ್ಯನು ಪರಮಾವಧಿ ಸೌಕರ್ಯವನ್ನು ಹೇಗೆ ಪಡೆಯ ಬಹುದೆಂಬುದನ್ನು ಕಂಡುಹಿಡಿಯುವುದೇ ಕ್ರೇಯವರ ಹಿರಿಯ ಅಸೆಯಾಗಿದೆ.

ಅಮೆರಿಕೆಯಲ್ಲಿ ಭಾರತದ ರಾಯಭಾರಿ ಬಿ. ಕೆ. ನೆಹರು.

ಹನಿಗತೆ

ಬಹುಮತದ ರಾಜ್ಯ

(ವಿನೋಬಾ)

ಒಬ್ಬ ಕುರುಡಿಗೆ ನಾಲ್ವರು ಮತ್ತುಳಿದ್ದರು. ಅವರೆಲ್ಲರೂ ಕುರುಡರಾಗಿದ್ದರು. ಅನಂತರ ಅವಳಿಗೊಬ್ಬ ಐದನೇ ಮಗ ಹುಟ್ಟಿದ ಆದರೆ ಅವನಿಗೆ ಕಣ್ಣು ಸರಿಯಾಗಿ ಕಾಣಿಸುತ್ತಿದ್ದವು, "ಇದು ನನಗೆ ಕಾಣುತ್ತದೆ. ಅದು ನನಗೆ ಕಾಣುತ್ತದೆ" ಎಂಬಿತ್ಯಾದಿಯಾಗಿ ಅವನು ಹೇಳುತ್ತಿದ್ದ ತಾಯಿಗಾಗಲೀ ಆ ಹಿರಿಯ ಮಕ್ಕಳಿಗಾಗಲೀ ಈ ಮಾತುಗಳ ಅರ್ಥವೇ ಆಗುತ್ತಿರಲಿಲ್ಲ. 'ಕಾಣಿಸುತ್ತದೆ' ಎಂದರೆ ಏನೆಂಬುದೇ ಅವರಿಗೆ ಗೊತ್ತಿರಲಿಲ್ಲ. ಹೀಗಾಗಿ ಆ ಕೊನೆ ಮಗನಿಗೆ ಏನೋ ವಿಚಿತ್ರ ರೋಗ ಆಗಿರಬಹುದೆಂದು ಅವರ ಕಲ್ಪನೆ ಆಯಿತು ಕೊನೆಗೆ ಅವರು ಮಗನನ್ನು ಬಳಿ ಕರೆದೊಯ್ದರು ಮತ್ತು ಹೇಳಿದರು "ನಮ್ಮ ಹುಡುಗನಿಗೇನೋ ವಿಕಾರವಾಗಿದೆ. ಅದು ಕಾಣುತ್ತದೆ, ಇದು ಕಾಣುತ್ತದೆ ಎಂದು ಹಲುಬುತ್ತನೆ. ಆದ್ದರಿಂದ ಈ ರೋಗದಿಂದ ಅವನನ್ನು ಗುಣಪಡಿಸಿಕೊಡಿರಿ" ಎಂದರು. ಆ ವಾಕ್ಟರರೂ ಕುರುಡರೇ ಇದ್ದರು. ಅವರು ಆಪರೇಶನ್ ಮಾಡಿ ಆ ಹುಡುಗನ ಎರಡೂ ಕಣ್ಣುಗಳನ್ನು ಕುರುಡಾಗಿ ಮಾಡಿದರು. ಅನಂತರ ಅವನು ಅದು ಕಾಣುತ್ತದೆ, ಇದು ಕಾಣುತ್ತದೆ ಎನ್ನುವುದನ್ನು ಬಿಟ್ಟುಬಿಟ್ಟ. ಆಗ ಅವರೆಲ್ಲರೂ ಸಮಾಧಾನಪಟ್ಟುಕೊಂಡರು "ಈಗ ಇವನಿಗೆ ಗುಣವಾಗಿದೆ; ಇವನೂ ನಮ್ಮಂತೆಯೇ ಆಗಿದ್ದಾನೆ" ಎಂದು ಸಮಾಧಾನಪಟ್ಟುಕೊಂಡರು.

ಹೀಗೇಕಾಯಿತು ಗೊತ್ತೇ? ಬಹುಸಂಖ್ಯಾಕರು ಕುರುಡಿರಿದ್ದುದೇ ಇದಕ್ಕೆ ಕಾರಣ. "ನಮಗೆ ಇಷ್ಟು ಜನರಿಗೆ ಕಾಣದಿದ್ದುದು ಇವನೊಬ್ಬನಿಗೇ ಕಾಣುತ್ತದೆಂದ ಮೇಲೆ ಇವನಿಗೇನೋ ರೋಗವಿರಬೇಕೆಂದು ಅವರ ಪ್ರಾಮಾಣಿಕ ಮತವಾಯಿತು. ಅರ್ಥಾತ್ ಬಹುಮತದ ರಾಜ್ಯವೆಂಬುದು ಬರೇ ಒಂದು ಯಾಂತ್ರಿಕವಾದ ಕೆಲಸ. ಅದರಲ್ಲಿ ಸ್ವತಂತ್ರ ವಿಚಾರಕ್ಕೆ ಅವಕಾಶವಿಲ್ಲ ಭಾರತ ದೇಶದ ಕತೆಯೂ ಹೀಗೆಯೇ!

ಚಂದಾಹಣ ಬಾಕಿ ಇರುವವರು ಆದಷ್ಟು ಬೇಗನೆ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ.

—ಮೆನೇಜರ್.

ಹಾರ್ಮೋನಿಯಮ್ ಕಲಿಯುವವರಿಗೆ ಅತ್ಯುತ್ತಮ ಸಂಗೀತ ಪುಸ್ತಕ—

ಶ್ರೀ ಎ. ರಾಮಪ್ಪ ಅವರ

ಹಾರ್ಮೋನಿಯಮ್

ಬೋಧನ ಕ್ರಮ

ಪರಿಷ್ಕರಿಸಲ್ಪಟ್ಟ ನಾಲ್ಕನೆಯ ಮುದ್ರಣ.

ಕೆಲವೇ ಪ್ರತಿಗಳು ಉಳಿದಿವೆ.

ಬೆಲೆ: ರೂ. 2—0—0

ಒಂದು ಪ್ರತಿ ಬೇಕಾದವರು ರೂ 2-50 ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಮಧುರವಾದ ವಿಧದ SR ಬೀಡಿಗಳನ್ನು

ಸಾವಿರ್ಕಾರು ಜನರು ದಿನನಿತ್ಯ ಉಪಯೋಗಿಸುತ್ತಾರೆ. ಏಕೆಂದರೆ:

1. ಎಸ್.ಆರ್. ಉತ್ತಮ ತಂಬಾಕು ಎಲೆಗಳಿಂದ ಕೂಡಿದ್ದಾಗಿರುತ್ತವೆ.
2. ಎಸ್.ಆರ್. ಅನುಭವಸ್ತ್ರ ಕೆಲಸಗಾರರಿಂದ ಕಟ್ಟಲ್ಪಟ್ಟಿವೆ.
3. ಎಸ್.ಆರ್. ಪ್ರವೀಣ ಮೇಲ್ವಿಚಾರದಿಂದ ತಯಾರಿಸಿ ಪ್ಯಾಕ್‌ಮಾಡಲ್ಪಟ್ಟಿವೆ.
4. ಎಸ್.ಆರ್. ಸುರಕ್ಷಿತವಾದುದು. ಅದರಲ್ಲಿಯಾವ ಅಪಾಯಕಾರಿ ತಂಬಾಕಿನ ಮಿತ್ರಣವಿಲ್ಲ. ಆದುದರಿಂದ ಇಂದೇ ನಿಮ್ಮ ರುಚಿಗೆ ಹೊಂದಿಕೊಳ್ಳುವ 25.ರ ಪ್ಯಾಕೆಟೊಂದನ್ನು ಕೊಂದುಕೊಳ್ಳಿರಿ.

ಆಲ್ಟೇಸ್ ಮ್ಯಾಲ್ಡರ್

ಬೆಟರ್ ಟೇಸ್ಟಿಂಗ್

ಕೂಲರ್ ಸ್ಮೋಕಿಂಗ್

ಬ್ಯೂ ಸ್ಟ್ರಾಂಗ್

ಎಲ್ಲಾ ಕಡೆಗಳಲ್ಲಿಯೂ ಮಾರಲ್ಪಡುತ್ತವೆ.

S.R. BEEDI WORKS, UDIPI, S.K.

ಕಾಂಗ್ರೆಸ್ ಅಧ್ಯಕ್ಷ

ಶ್ರೀ ದಾಮೋದರಂ ಸಂಜೀವಯ್ಯ

ಹರಿಜನನೊಬ್ಬನು ಭಾರತದ ರಾಷ್ಟ್ರಪತಿಯಾಗ ಬೇಕೆಂದು ಗಾಂಧೀಜಿಯವರ ಇಚ್ಛೆ ಇತ್ತು. ಶ್ರೀ ದಾಮೋದರಂ ಸಂಜೀವಯ್ಯನವರು ಆಂಧ್ರಪ್ರದೇಶದ ಮುಖ್ಯ ಮಂತ್ರಿಯೆನಿಸಿದಾಗ ಒಬ್ಬ ಹರಿಜನನು ರಾಜಕೀಯದಲ್ಲಿ ಉನ್ನತ ಪದವಿಯನ್ನಡರ ಬೇಕೆಂಬ ಅವರ ಆಸೆಯು ಈಡೇರಿತು. ಇದೀಗ ಅದೇ ಸಂಜೀವಯ್ಯನವರು ಕಾಂಗ್ರೆಸ್ ಅಧ್ಯಕ್ಷರಾಗುವ ಸುಯೋಗವನ್ನು ಪಡೆದಿದ್ದಾರೆ. ಇವರ ಆಯ್ಕೆಯು ಶುಭ ಲಕ್ಷಣವೆಂದು ಹೇಳುತ್ತ ಪ್ರಧಾನಿ ನೆಹರು ಇವರನ್ನು ಸ್ವಾಗತಿಸಿದರು.

ಎಳೆಯ ಪ್ರಾಯದಲ್ಲೇ ಮುಖ್ಯ ಮಂತ್ರಿಯಾದವರಲ್ಲಿ ಸಂಜೀವಯ್ಯ ಪ್ರಪ್ರಥಮರು. ೧೯೬೦ರಲ್ಲಿ ಮುಖ್ಯ ಮಂತ್ರಿಯಾಗುವ ವೇಳೆ ಇವರ ವಯಸ್ಸು ಕೇವಲ ೩೮ ಇತ್ತು. ಖಾಸಗಿ ಸಂಪತ್ತಿಯು ನಾಮ ಮಾತ್ರಕ್ಕೂ ಇಲ್ಲದಿರುವವರು ಮುಖ್ಯ ಮಂತ್ರಿಯಾದುದು ಇವರೇ ಒಬ್ಬರು ಕಳೆದ ವರ್ಷ ಕಾಂಗ್ರೆಸ್ಸಿನ ಕಾರ್ಯಕಾರೀ ಸಮಿತಿಗೆ ತನ್ನ ಸಂಪತ್ತಿನ ವಿವರಗಳನ್ನು ತಿಳಿಸುತ್ತ ಅವರು ಉಲ್ಲೇಖಿಸಿದ ಹೇಳಿಕೆ ಮರೆಯುವಂತಹುದಲ್ಲ; "ನನ್ನ ಏಕಮಾತ್ರ ಸಂಪತ್ತು ಎಂದರೆ ನನ್ನ ದೇಶ" ಎಂದವರು ಬರೆದಿದ್ದರು." ಕಳೆದ ಹತ್ತು ವರ್ಷಗಳಲ್ಲಿ ಬೇರೆ ಬೇರೆ ಸರಕಾರಗಳಲ್ಲಿ ಮಂತ್ರಿಯಾಗಿದ್ದುದು ನಿಜವಾದರೂ ಕೈಗೆ ಬಂದಿರುವ ಪಗಾರವೆಲ್ಲವೂ ದೊಡ್ಡ ಕುಟುಂಬದ ವೆಚ್ಚದ ಬಾಯಿ ಕೂಡಿಸುವಲ್ಲಿ ಮುಗಿದಿದೆ" ಎಂದು ಸ್ಪಷ್ಟವಾದ ವಿವರಣೆಯನ್ನು ಅವರು ನೀಡಿದ್ದಾರೆ.

ಆಂಧ್ರ ಪ್ರದೇಶದ ಹಿಂದಿನ ರಾಜಧಾನಿಯಾಗಿರುವ ಕರ್ನೂಲಿನ ಸಮೀಪದ ಒಂದು ಹಳ್ಳಿಯಲ್ಲಿ ೧೯೨೧ನೆ ಫೆಬ್ರವರಿ ೧೪ರಂದು ಜನಿಸಿದ ಸಂಜೀವಯ್ಯನವರು ಅನಂತಪುರ ಮತ್ತು ಮದ್ರಾಸುಗಳಲ್ಲಿ ಶಿಕ್ಷಣ ಪಡೆದರು. ಎಲ್. ಎಲ್. ಬಿ. ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಅವರು ವಕಾಲತ್ತು ಮಾಡಲು ಬಯಸುತಿದ್ದರು. ಆದರೆ, ಸ್ವಾತಂತ್ರ್ಯ ಹೋರಾಟದಲ್ಲಿ ಸಮ್ಮಿಲಿತವಾದುದರಿಂದ ಅವರ ಆಶೆ ನೀರುವಾಲಾಯಿತು. ದೂರದರ್ಶಿಗಳಾದ ಶ್ರೀ ರಾಜಗೋಪಾಲಾಚಾರಿಯವರು ಇವರನ್ನು ಮೊತ್ತಮೊದಲಿಗೆ ತಮ್ಮ ಮಂತ್ರಿ ಮಂಡಳದಲ್ಲಿ ಸೇರಿಸಿಕೊಂಡರು.... ಅನಂತರ, ಆಂಧ್ರದಲ್ಲಿ ಪ್ರಕಾಶಂ, ಗೋಪಾಲ ರೆಡ್ಡಿ ಮತ್ತು ಸಂಜೀವ ರೆಡ್ಡಿಯವರ ಸಚಿವ ಸಂಪುಟಗಳಲ್ಲಿಯೂ ಇವರು ಇದ್ದರು. ಎಲ್ಲ ಮುಖ್ಯ ಮಂತ್ರಿಯವರೂ ಇವರ ಕಾರ್ಯಪಟುತ್ವವನ್ನು ಪ್ರಶಂಸಿಸುತಿದ್ದರು; ಇದರಿಂದಾಗಿಯೇ ಅವರು ಒಂದು ದಿನ ಆಂಧ್ರ ಪ್ರದೇಶದ ಮುಖ್ಯ ಮಂತ್ರಿಯಾಗಿಯೇಬಿಟ್ಟರು.

ಹೊಸತಾದ ಚುನಾವಣೆಗಳನಂತರ, ಶ್ರೀ ಸಂಜೀವಯ್ಯನವರು ತಮ್ಮ ಮುಖ್ಯ ಮಂತ್ರಿ ಪದವನ್ನು ಬಿಟ್ಟುಕೊಡಬೇಕಾಯಿತು. ಆಗ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಶ್ರೀ ಸಂಜೀವ ರೆಡ್ಡಿಯವರು ರಾಜ್ಯದ ಮುಖ್ಯ ಮಂತ್ರಿಯಾಗಲು ಬಯಸಿದುದರಿಂದ, ಸಂಜೀವಯ್ಯನವರು ಎದುರು ಮಾತಾಡದೆ ಹಿಂದೆ ಸರಿದರು. ರೆಡ್ಡಿ ಮಂತ್ರಿ ಮಂಡಳದಲ್ಲಿ ಅವರಿಗೊಂದು ಸ್ಥಾನವಿತ್ತು, ಆದರೆ, ಅದಾವುದೋ ಕಾರಣದಿಂದ ಆದನ್ನವರು ಸ್ವೀಕರಿಸಲಿಲ್ಲ. ಹಾಗೆಯೇ ಪ್ರಧಾನಿ ನೆಹರುರವರೂ ಕೇಂದ್ರ ಮಂತ್ರಿ ಮಂಡಳದಲ್ಲಿ ಕೂಡಿಕೊಳ್ಳುವಂತೆ ಕೇಳಿ ಕೊಂಡರೂ ಒಂತೆಹುದೇ ಮತ್ತೊಂದು ಕಾರಣದಿಂದದನ್ನೂ ತ್ಯಜಿಸಿದರು.

ಶ್ರೀ ಸಂಜೀವಯ್ಯ ಭಾರತೀಯ ಜನರಿಗೆ ಪರಿಚಿತರಾದ ವ್ಯಕ್ತಿಯಲ್ಲ. ಆಂಧ್ರದ ಮುಖ್ಯ ಮಂತ್ರಿಯಾಗುವುದಕ್ಕೆ ಮೊದಲು ಇವರ ಹೆಸರಾದರೂ ಅಷ್ಟು ಬೆಳಕಿಗೆ ಬಂದಿರಲಿಲ್ಲ. ಇವರು ಮಾತನಾಡುವುದು ಕಡಿಮೆ; ಕ್ರಿಯಾಪಟುತ್ವವೇ ಹೆಚ್ಚು. ಮೃದು ಭಾಷಿಯೂ ಸದ್ವೃತ್ತಿಯವರೂ ಆದ ಸಂಜೀವಯ್ಯ ಇಂದು ತನ್ನ ರಾಜ್ಯದ ಎಲ್ಲೆಗಳನ್ನು ಒಮ್ಮೆಲೇ ದಾಟಿ ಇಡಿಯ ದೇಶದಲ್ಲಿ ಪರಿಚಿತರೆನಿಸಿಕೊಂಡರು. ಇವರ ಕಾಂಗ್ರೆಸ್ ಅಧ್ಯಕ್ಷ ಪದವಿಯ ಅವಧಿಯು ಇನ್ನು ಆರು ತಿಂಗಳಲ್ಲೇ ಮುಕ್ತಾಯಗೊಳ್ಳುವುದಾದರೂ ಮುಂದಿನ ಅವಧಿಗೂ ಇವರೇ. ಆಯ್ಕೆಯಾಗ ಬಾರದೆಂದಿಲ್ಲ. ಆದೇನೇ ಇದ್ದರೂ ತಮ್ಮ ಅಧ್ಯಕ್ಷೀಯ ಅವಧಿಯಲ್ಲಿ ಕಾಂಗ್ರೆಸ್ಸನ್ನು ಉಚಿತ ನೇತೃತ್ವದೊಡನೆ ಮುಂದುವರಿಯುವಂತೆ ಮಾಡುವಲ್ಲಿ ಸಮರ್ಥರಾಗದುಳಿಯರು.

ಶ್ರೀ ಸಂಜೀವಯ್ಯನವರಿನ್ನೂ ೪೦ ಮಾತ್ರ ದಾಟಿದವರು. ಸ್ವಾತಂತ್ರ್ಯೋತ್ತರದಲ್ಲಿ ಇಷ್ಟೊಂದು ಅಲ್ಪ ಪ್ರಾಯದವರು ಕಾಂಗ್ರೆಸ್ ಅಧ್ಯಕ್ಷ ಪದ ಗಳಿಸಿಲ್ಲ. ೬೪ರ ಮುದುಕ ಪಕ್ಷದ ನಾಯಕ ಹಾಗೂ ೪೧ರ ಹೊಸ ಅಧ್ಯಕ್ಷ ಇವರ ನಡುವೆ ತುಂಬ ಹೊಂದಾಣಿಕೆಗಳಿರಬೇಕು. ಇವರಿಬ್ಬರು ಕೂಡಿ ನಡೆಯುವರೆಂದು ನಂಬಬಹುದು.

ಆದಿಯುಗದ ಬೌನೆ ಜನಾಂಗ

(೩ನೇ ಪುಟದಿಂದ)

ಸಂಶೋಧಕ ತಂಡದ ನಾಯಕ ಬಾಲೀಫರು ತಮ್ಮ ಬಂದೂಕನ್ನು ಒಬ್ಬ ನೀಗ್ರೊವಿನ ಕೈಗಳಿಗೊಪ್ಪಿಸಿ ತಾವೊಂದು ಗೊರಿಲ್ಲಾವನ್ನರಸತ್ತ ಹೋದರು ನೀಗ್ರೊವು ಗೊರಿಲ್ಲಾವೊಂದನ್ನು ಮೂರು ಬಾರಿ ಹೊಡೆದು ಗಾಯಗೊಳಿಸಿದನು. ಆ ಸಮಯದಲ್ಲಿ ಬಂದೂಕುಧಾರಿಯಾದ ಒಬ್ಬ ಬೌನೆಯು ಬೇಟೆಯನ್ನರಸುತ್ತಿದ್ದನು. ಬಂದೂಕಿನ ಶಬ್ದ ಕೇಳಿ ಇತ್ತ ಧಾವಿಸಿ ಬಂದು ನೋಡಿದನು. ಗಾಯಗೊಂಡ ಗೊರಿಲ್ಲಾ ನೀಗ್ರೊವಿನತ್ತ ನೆಗೆಯಲು ಸನ್ನದ್ಧವಾಗಿತ್ತು. ಬೌನೆ ಶಿಕಾರಿಯು ಗುರಿಯಿಟ್ಟು ಅದನ್ನು ಕೊಂದುಬಿಟ್ಟನು. ಬಂದೂಕಿನಲ್ಲಿದ್ದ ಈಟಿಯು ಗೊರಿಲ್ಲಾವನ್ನು ಸೀಳುತ್ತ ಹೊರಬಂತು. ಆ ರಾತ್ರೆ ಇಡಿಯ ಪರಿವಾರ ಉತ್ಸವವನ್ನಾಚರಿಸಿತು. ಬೌನೇ ಜನಾಂಗದವರು ಗೊರಿಲ್ಲಾನ ಮಾಂಸವೆಂದರು, ಜೀವ ಬಿಡುವವರು.

ಅನೆ ಬೇಟೆಯಾಡುವುದಿದ್ದರೆ ಬೌನೇ ಜನರು ನೀಗ್ರೊಗಳಿಗೆ ತಿಳಿಸಿ ಅವರನ್ನು ಕರೆಯುತ್ತಾರೆ. ಆ ವಶ್ಯಕತೆಗಿಂತ ಹೆಚ್ಚು ಮಾಂಸವಿರುವುದರಿಂದ ಆಗಲೇ ಧಾನ್ಯ, ಚಾಕು, ಚೂರಿ ಮೊದಲಾದುವುಗಳ ಬದಲಿಗೆ ಮಾಂಸ ಕೊಟ್ಟು ವ್ಯಾಪಾರ ಮಾಡಿ ಬಿಡುತ್ತಾರೆ. ಆನೆಯ ದಂತವನ್ನು ಕೂಡಿಸಿಟ್ಟು ಅಕ್ಟೋಬರದ ವ್ಯಾಪಾರದಲ್ಲಿ ಬಳಸಿಕೊಳ್ಳುತ್ತಾರೆ.

ಬೌನೆ ಜನಾಂಗದವರು ತಮ್ಮೊಳಗೆ ಕಚ್ಚಾಡುವುದಿಲ್ಲ ನೀಗೊಗಳೊಡನೆಯೂ ಇವರು ಹೋರಾಡುವುದಿಲ್ಲ, ನೀಗ್ರೋ ಪರಿವಾರಗಳು ಪರಸ್ಪರ ಹೊಡೆದಾಡಿಕೊಂಡಾಗ, ಇವರು ಮಧ್ಯಸ್ತಿಕೆಗೆ ಹೋಗ ಬೇಕಾಗುವುದೂ ಉಂಟು. ಬೌನೇಯರು ಸಾಮೂಹಿಕವಾಗಿಯೇ ಇರುತ್ತಾರೆ. ಏಕಪತ್ನೀವ್ರತವನ್ನು ಆಚರಿಸುತ್ತಾರೆ. ಹಲವು ವಿಷಯಗಳಲ್ಲಿ ಇವರಿನ್ನೂ ಆದಿಯುಗದಲ್ಲೇ ಇದ್ದಾರೆ. ಇವರು ಚಕ್ರವನ್ನು ಯಾವ ರೂಪದಲ್ಲಿಯೂ ಉಪಯೋಗಿಸುವುದಿಲ್ಲ. ನೂಲುವ ಚರಕವಾಗಲಿ ಗಾಡಿಯ ಚಕ್ರವಾಗಲಿ ಇವರಿಗೆ ಅಪರಿಚಿತ ಬಲೆಯನ್ನು ನೇಯುವುದಕ್ಕಾಗಿ ಬಳ್ಳಿಗಳನಾರುಗಳನ್ನು ಕೈಗಳಿಂದಲೇ ತಯಾರಿಸುತ್ತಾರೆ. ಸೊಂಟಕ್ಕೆ ಕಟ್ಟಲು ಮರಗಳ ಎಲೆಗಳನ್ನು ಉಪಯೋಗಿಸುತ್ತಾರೆ; ಕೆಲವೊಮ್ಮೆ ಸುಂದರವೂ ಗಟ್ಟಿಮುಟ್ಟೂ ಆದ ನಾರು ಬಟ್ಟೆಯನ್ನು ಬಳಸುವುದೂ ಇಲ್ಲವೆಂದಿಲ್ಲ. ಕತ್ತಲೆಯ ಆಫ್ರಿಕೆಯಲ್ಲಿರುವ ಚಿತ್ರ ವಿಚಿತ್ರಗಳಲ್ಲಿ ಬೌನೇಜಾತಿಯು ಒಂದು.

ದಿ ವಿಜಯಾ ಬೇಂಕ್ ಲಿಮಿಟೆಡ್, ಬ್ರಹ್ಮಾವರ, ದ. ಕ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ನಮ್ಮ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇರೆ ಪಡಕೊಂಡ ಸಾಲವನ್ನು ಮರುಪಾವತಿ ಮಾಡುವರೆ ರಿಜಿಸ್ತ್ರಿ ನೋಟೀಸುಗಳ ಮೂಲಕ ಕೇಳಿಕೊಂಡಾಗ್ಯೂ ಅಸ್ಲು ವ ಬಡ್ಡಿಯನ್ನು ಈ ತನಕವೂ ಬಾಕಿ ಮಾಡಿಕೊಂಡಿರುವುದರಿಂದಲೂ, ಇನ್ನು ಕೆಲವರಿಗೆ ಬಿಟ್ಟ ರಿಜಿಸ್ತ್ರಿ ನೋಟೀಸುಗಳು ಕಾರಣಾಂತರಗಳಿಂದ ವಾಪಾಸು ಬಂದುದರಿಂದಲೂ, ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ಬರುವ ಸಾರೀಕು 5—7—1962ನೇ ಗುರುವಾರ ಅಪರಾಹ್ನ ಘಂಟೆ 3-30ಕ್ಕೆ ಸರಿಯಾಗಿ ಯಾ ಬೇಂಕಿಗೆ ಯುಕ್ತ ಕಂಡ ಇತರ ಯಾವುದೇ ದಿನಗಳಲ್ಲಿ ಪುನಃ ನೋಟೀಸು ಕೊಡದೇನೇ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು ತಿಳಿದಿರಲಿ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	31-3-1962ರ ವರೆಗಿನ ಬಡ್ಡಿ ಸೇರಿ ಮೊಬಲಗು Rs nP.
265/58	ಲೋರೆನ್ಸ್ ಪಿಂಟೋ, ಮರಿಯಾನ್ ಪಿಂಟೋರ ಮಗ, 162/6, ಮಡೀ ಸ್ಟ್ರೀಟ್, ಪೋರ್ಟ್ ಮಾರ್ಕೆಟನ ಎದುರು, ಪೋರ್ಟ್ ಬೊಂಬೇ.	102-05
168/59	ನಾರಾಯಣ ಶೆಟ್ಟ, ಸೋಮಯ್ಯ ಶೆಟ್ರ ಅಳಿಯ, ಹಂದಾಡಿ ಗ್ರಾಮದ ಕೆಳಮನೆ, ಪೋಸ್ಟ್ ಬ್ರಹ್ಮಾವರ.	36-10
131/60	ಎಚ್. ಸಂಜೀವ ಶೆಟ್ಟ, ಕೃಷ್ಣಯ್ಯ ಶೆಟ್ರ ಅಳಿಯ; ಹೊಸಳ ಗ್ರಾಮದ ಅಕ್ಕಳ ಮನೆ, ಪೋಸ್ಟ್ ಬಾರ್ಕೂರು.	38-10
278/60	ಎಚ್. ಜಯರಾಮ ಶೆಟ್ಟ, ಎಚ್. ಕಲ್ಯಾಣ ಎನ್. ಶೆಟ್ಟಿಯವರ ಮಗ, ಹೇರೂರು ಗ್ರಾಮದ ದೊಡ್ಡ ಮನೆ, ಪೋಸ್ಟ್ ಬ್ರಹ್ಮಾವರ.	158-80
503/60	ನಾರಾಯಣ ಶೆಟ್ಟ, ಅಣ್ಣಪ್ಪ ಶೆಟ್ರ ಅಳಿಯ, ಕಾಡೂರು ಗ್ರಾಮದ ತಂಟ್ರಾಡಿ, ಪೋಸ್ಟ್ ಮಂದರ್ತಿ.	22-40
714/60	ಶಿವರಾಮ ಶೆಟ್ಟ, ಶೀನಪ್ಪ ಶೆಟ್ರ ಅಳಿಯ, ನೀಲಾವರ ಗ್ರಾಮದ ತಡೆಕಲ್, ಪೋಸ್ಟ್ ನೀಲಾವರ.	50 35
771/60	ನಾಗಪ್ಪ ನಾಯ್ಕ, ಶಿವ ನಾಯ್ಕರ ಮಗ, ಹಂದಾಡಿ ಗ್ರಾಮ, ಪೋಸ್ಟ್ ಬ್ರಹ್ಮಾವರ.	42-10
800/60	ಎಚ್. ಶೀನ ಭಂಡಾರಿ, ನಾಗ ಭಂಡಾರಿಯ ಮಗ, ವಾರಂಬಳ್ಳಿ ಗ್ರಾಮದ ಬಿರ್ತಿ, ಪೋಸ್ಟ್ ಸಾಲಿಕೇರಿ.	53 15
6/61	ಬೆಳಂಚೆ ಮಹಾಬಲ ಶೆಟ್ಟ, ಸಂಕಯ್ಯ ಶೆಟ್ರ ಅಳಿಯ, ಚೆರ್ಕಾಡಿ ಗ್ರಾಮ, ಪೋಸ್ಟ್ ಪೇತ್ರಿ.	57-05
165/61	ರಾಜು ಪೂಜಾರಿ, ಕೊರಗು ಪೂಜಾರಿಯ ಅಳಿಯ, ಹಂದಾಡಿ ಗ್ರಾಮ, ಪೋಸ್ಟ್ ಬ್ರಹ್ಮಾವರ.	440-95

Office of the Vijaya Bank Ltd., Brahmavar, S. K.
D/ 12—6—1962.

ಕೆ. ವಿಶ್ವನಾಥ ರೈ,
Agent.

ನವಯುಗ'ಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

ಒಳ ಪುಟಗಳನ್ನು ಹರವಿದಾಗ

(೨ನೇ ಸುಟದಿಂದ)

ಗಿ ಮೂತಾಡಿದಳು....ಕೆರೆಯನ್ನು ಹಾರುತ್ತೇನೆ, ಎಂದಳು....ಆಕೆಗೆ ಮಗನ ಸಾವಿನ ಕಾರಣ ತಿಳಿದು ಬಂತು.

ಒಂದು ರಾತ್ರಿ ಊಟ ಮಾಡಿ ಕೈ ತೊಳೆಯ ಬಂದಾಗ, ಅವನಿಗೆ ಹಾವು ಕಚ್ಚಿತಂತೆ. ವಿಷವೇರಿ ಮುಖ ಹಸುರು ಕಂಡು ಬಂದಾಗಲೇ ಇದು ಸೆಟ್ಟರಿಗೆ ತಿಳಿದು ಬಂತಂತೆ. ಗಾಯ ಕೈ ಕಟ್ಟಹಾಕಲೆಂದು ತಯಾರಾದರೆ ಕಾಲಲ್ಲಿ ಗಾಯವೇ ಕಂಡು ಬರಲಿಲ್ಲವಂತೆ....ಔಷಧಿಗೆಂದು ಹೋದ ಜನ, ಮರಳಿ ಬರುವ ಮುಂಚೆ ದೇಹ ಕೊಳ್ಳಿ ಕಟ್ಟಿತು....ಸೆಟ್ಟರೇ ಅಂತಿಮ ಕ್ರಿಯೆಗೆ ಮುಂದಾದರಂತೆ....

ಇದಿಷ್ಟು ಆಕೆಗೆ ತಿಳಿದು ಬಂದ ವಿಚಾರ ಸೆಟ್ಟರು ತುಂಬಾದಾನಿ....ಆದರೆ ಆಕೆ ಇಲ್ಲದ ವೇಳೆಯೇ ಹಾವು ಏಕೆ ಕಚ್ಚಿತವ್ವಾ, ಕರುಣೆಯಿಲ್ಲದ್ದು" ಎಂದೆಲ್ಲ ಜನ ಆಡಿ ಕೊಂಡಿತು. ಅಂತೂ ಅವಳ ಗುಡಿಸಲಿಂದು....ಬರಿದು.... ಜ್ಯೋತಿಯಿಲ್ಲದ ದೀಪ.

ಯೌವನದ ಹೊಸ್ತಿಲಲ್ಲೇ ಆದ ಮಾರ್ಮಿಕ ಘಟನೆಗಳ ಪರಿಣಾಮ ಆಕೆಗೆ ಮುಪ್ಪನ್ನು ತಂದು ಕೊಡುವುದರಲ್ಲಿದ್ದುವು.... ಎಲ್ಲವನ್ನು ತೊರೆದ ನಿರ್ಲಿಪ್ತ ಸನ್ಯಾಸಿನಿಯಂತೆ ಆಕೆ ಬದುಕ ತೊಡಗಿದಳು.. ಇನ್ನು ತನ್ನ ಬಾಳಿನ ಬಳ್ಳಿಯ ಮೇಲೆ ಬಂದೆರಗುವ ಕೊಡಲಿಯೇಟುಗಳಿಲ್ಲವಲ್ಲಾ ಎಂದು ಆಕೆ ಬಗೆದಿದ್ದಳು..

ಆದರೆ ಮುಂದಿನ ದಿನಗಳು ಮಾತ್ರ ಬೇರೆ ರೀತಿಯಲ್ಲಿ ಉರುಳಿ, ಕಾಲನ ಗರ್ಭದಲ್ಲಿ ಸೇರಿಕೊಂಡುವು.

ಸೆಟ್ಟರು ಮಡದಿಯನ್ನು ಕಳೆದುಕೊಂಡ ವ್ಯಕ್ತಿ. ತುಂಬಿದ ದಾಷ್ಟ್ಯವುಳ್ಳ ದೇಹ... ಹೆಂಗಳೆಯರನ್ನು ಕಂಡರೆ ಸ್ವಲ್ಪ ಬದಲಾಯಿಸುವ ಬುದ್ಧಿಯೆಂದು ಆಕೆಗೆ ಹಿಂದೆಯೇ ತಿಳಿದಿತ್ತು.

ಗಂಗವ್ವನ ಇನಿಯ ಅದೇ ಊರಲ್ಲಿ ಹುಟ್ಟಿ ಬೆಳೆದವ. ಸೆಟ್ಟರ ಚಿರಪರಿಚಿತ, ಬಾಲ್ಯ ಸ್ನೇಹಿತ, ಆದರೂ ಆತ ಗಂಗವ್ವನ ಕೈ ಹಿಡಿದು ಮುಂಬಂದಾಗ, ಅವರು ಅವನ ಮನೆಗೆ ಬಂದು ಗಂಗವ್ವನೊಡನೆ ಅವಳೂರ ಸರ್ಣನೆಗಳನ್ನು ಕೇಳತೊಡಗಿದ್ದರು. ಇದನ್ನು ತಿಳಿದ ಆಕೆಯ ಗಂಡ, ಒಮ್ಮೆ ಮನವಾರೆ ಅವರಿಗೆ ಎಚ್ಚರವನ್ನಿತ್ತ. ತನ್ನ ಬಲವಾದ ತೋಳನ್ನು ಎತ್ತಿ ತೋರಿಸಿದ... ಅದರ ಮೇಲೆ ಸೆಟ್ಟರು ಅತ್ತ ಬರುತ್ತಿರಲಿಲ್ಲ.

ಗಂಗವ್ವನೂ ಹಾಗೇ. ಗಂಡ ಕೆಲಸಕ್ಕೆ ಹೋದರೆ, ತಾನೂ ಹೋಗುತ್ತಿದ್ದಳು ಅವನು ಮೈ ಕೈ ನೋವೆಂದು ಕುಳಿತುಕೊಂಡರೆ ತಾನೂ ಹೋಗುತ್ತಿರಲಿಲ್ಲ..

ಅವನ ಮರಣದ ಮೇಲೂ ಸೆಟ್ಟರು ಒಮ್ಮೆ ಅವಳ ಮನೆಯತ್ತ ಕಾಲಿರಿಸಿದ್ದರು. ಆಗ ಗಂಗವ್ವ ತನ್ನಿಂದ ಸಾಧ್ಯವಾದ ಆಭಾಟಗಳೆಲ್ಲವನ್ನೂ ಮಾಡಿದ್ದಳು.

"ನೀನು ನಮ್ಮೂರಿಗೇ ಜೆಂದ ಒಬ್ಬಳೇ ಹೇಗೆ ಜೀವಿಸುತ್ತಿಯೋ ,, ಎಂದು ಮುಂದೆ ಬಂದ ಸೆಟ್ಟರಿಗೆ, ಕೈಯಲ್ಲಿದ್ದ ಕತ್ತಿಯನ್ನೆತ್ತಿ, "ನೋಡಿ, ಹೀಗೆ ಜೀವಿಸುತ್ತೇನೆ.. ಮರ್ಯಾದೆ ಇಲ್ಲದವರಿಂದ ...,, ಎಂದು ಒದರಿದ್ದಳು... ಸೆಟ್ಟರಿಗೆ ಹಿಂದೆ ಹೆಜ್ಜೆಯನ್ನಿಡದೆ ಬೇರೆ ವಿಧಿಯಿರಲಿಲ್ಲ....

ಹಾಗೆಂದು ವರುದಿನ ಅಂಜುತ್ತಂಜುತ್ತಲೇ ಕೆಲಸಕ್ಕೆ ಸಾಗಿದ ಗಂಗವ್ವನಿಗೆ, ಸೆಟ್ಟರು ಏನೂ ಹೇಳಲಿಲ್ಲ... ಗಂಗವ್ವನೂ ಹಾಗೇ ಒಬ್ಬಂಟಿಗಳಾಗಿ ತಿರುಗುತ್ತಲೇ ಇರಲಿಲ್ಲ.... ಸಿಡುಕಿನ ಮೋರೆಯಲ್ಲೇ ಇರುತ್ತಿದ್ದಳು

ಆದರೆ ಮಗನೂ ಅವಳನ್ನು ಕೈಬಿಟ್ಟಾಗ.... ಸೆಟ್ಟರು ಕೊನೆಯ ಪ್ರಯತ್ನವೆಂದು ಆಸೆ ತುಂಬಿ ಮುಂದೆ ಬಂದರು... ಸನ್ನಿವೇಶಗಳನ್ನು ಸರಿಯಾಗಿ ನಿರ್ಮಿಸಿಕೊಂಡರು. "ಈ ಬಾರಿಯೂ ನೀನು ಒಪ್ಪದಿದ್ದರೆ... ... ,,

ಆದರೆ ಗಂಗವ್ವನಿಗೆ ಒಪ್ಪಲೇಬೇಕಾದ ಪ್ರಸಂಗ ಬಂದೊದಗಿತು.... ಕೆಲಸ ಕೊಡುವುದಿಲ್ಲವೆಂದು ಬೆದರಿಕೆ ಹಾಕಿದರು. ಸಾಯುವ ಕಾಲಕ್ಕೆ ನೆರವಾಗುವ ಮಾತು... ನಿನ್ನ ನಂತರ ವಂಶವೇ ನಾಶವಾಗುತ್ತದೆಂದರು.... ಬೇರೆ ಏನೇನೇನೋ ಹೇಳಿದರು.... ಆಗಲೇ ಸೆಟ್ಟರು ಹುಟ್ಟಿಸಿದ ಅವಹೇಳನದ ಕಿರುಮಾತುಗಳು, ಊರನ್ನು ತುಂಬಿತ್ತು.... ಆಕೆ ಹೋದಲ್ಲೆಲ್ಲ ಅದೇ ಪ್ರಸಂಗ, ಮಾನ ಮಾರಿಕೊಂಡಳೆಂಬ ಪಿಸು ಮಾತು ಕೇಳಿ ಬರುತ್ತಿತ್ತು. .... ಅಂತೂ ಈ ಎಲ್ಲ ಕಿಡಿ ನುಡಿಗಳಿಂದ ಕರಗಿದ ಅವಳ ವನ, ಅದೊಂದು ಗಳಿಗೆಯಲ್ಲಿ ಸೆಟ್ಟರ ನುಡಿಗೆ ಬಾಗಲೇ ಬೇಕಾಗಿ ಬಂತು....

ಸೆಟ್ಟರ ಒಲವಿನ ನೆಳೆ ತಾನಿರುವಾಗ ಮಾತ್ರ ಹರಿದು ಬಂದು, ಇತರ ವೇಳೆಗಳಲ್ಲಿ ಅವರು ಅಪರಿಚಿತನಂತೆ ಕಾಣುತ್ತಿದ್ದರು. ಆ ಕೆಲವು ದಿನಗಳಲ್ಲಿ ಗಂಗವ್ವ ಯಾವ ಸ್ಥಿತಿಯಲ್ಲಿದ್ದಳೋ, ಅವಳಿಗೇ ಗೊತ್ತು...

ಆದರೆ ಒಂದು ದಿನ ವಿಧಿ ಆಕೆಯ ಕಣ್ಣನ್ನು ತೆರೆಯಿಸಿತು... ಆಕೆ ಒಲ್ಲದ ಬಸಿರನ್ನು ಹೊ ಬೇಕಾಗಿ ಬಂತು. ಆರೆಂಟು ತಿಂಗಳ ತನಕ ಸೆಟ್ಟರ ಮನೆಯಲ್ಲಿ ಹೇಗೆ ದೂಡಿದಳೋ ...! ಆಚೀಚೆ ಊರಿಗೆ, ಆಶಾ ಕಿರಣದಿಂದ ಹೋಗಿ ನಿಷ್ಫಲವಾಗಿ ಹಿಂದೆ ಬಂದಳು....

ಕೊನೆಗೆ ಆಕೆಯು ಮನೆಯಲ್ಲಿರಬೇಕಾಗಿ ಬಂತು. ಕಿಡಿ ನುಡಿಗಳ ತೀಕ್ಷಣತೆಯನ್ನು ತಡೆಯಲಾರದೆ ಅದೊಂದು ದಿನ ಬೆಳಗಿನ ಜಾವಕ್ಕೆ ಆಕೆ ತೊರೆಯ ತೀರವನ್ನು ಸೇರಿದ್ದಳು... ಬಂಡೆ ಕಲ್ಲಿನ ಮೇಲೆ ನಿಂತಳು... ಕೊನೆಯ ನಮಸ್ಕಾರವೆಂದು ಜಗಕೊಮ್ಮೆ ಕೈ ಜೋಡಿಸಿದಳು... ಆದರೆ ಫಕ್ಕನೆ ಆಕೆಗೊಂದು ಆಲೋಚನೆ ಹೊಳೆಯಿತು..

ಹಿಂದೊಮ್ಮೆ ಅದೇ ಸ್ಥಳದಲ್ಲಿ ಅವಳಂತೆಯೇ ಒಬ್ಬಳು, ಹೊಳೆಯನ್ನು ಹಾರಿಕೊಂಡು ಮಾನವನ್ನು ರಕ್ಷಿಸಿಕೊಂಡಿದ್ದಳು... ಆಗ ಗಂಗವ್ವ ಮಗನ ಮುಖವನ್ನು ಕಂಡ ಕಾಲ.... ಅವಳು ತುಂಬಾನೊಂದಳು... "ಯೂಕಪ್ಪಾ.... ನಮ್ಮ ಹಾಗೇ ಆಕೆನೂ ಹೆಂಗಸಲ್ವ ... ಗಂಡಸಿನ ಎದುರು ಎದೆಕೊಟ್ಟು ನಿಲ್ಲುವ ಧೈರ್ಯ ಅಬಲೆಯರಿಗಿದೆಯೇ ,, ಎಂದಿದ್ದಳು.

ಅದೇ ಮಾತನ್ನು ಸಮಾಜವೂ ಆಡಿಕೊಂಡಿತು. ಅಂತೂ ಅವಳು ಜೀವ ತೆಗೆದು ಕೊಂಡದ್ದು ತಪ್ಪೆಂದು ನಿಶ್ಚಯಿಸಿತು ಆದರೆ ಈಗ.... ಗಂಗವ್ವನ ಬಾಳಗುಡಿಗೆ ಆ ನುಡಿಕಿಡಿಗಳು ಬರುತ್ತಿವೆ ಆಕೆ ನೆರೆಹೊರೆಯನ್ನು ತಿಳಿದೇ ಬರುತ್ತೇನೆಂದು ಹಿಂದೆ ಬಂದಳು.

ಸೆಟ್ಟರ ಮನೆಯಿಂದ ಆಹಾರಕ್ಕೆ ಬೇಕಾದಷ್ಟು ಬಂದಿತ್ತು+ ಆಕೆ ಗಂಡು ಶಿಶುವನ್ನು ಹೆತ್ತಳು.... ಮನೆಯಲ್ಲೇ ಇದ್ದುದನ್ನು ಉಂಡು ವಾಸಿಸತೊಡಗಿದಳು.... ದಿನಗಳು ಉರುಳಿ, ಮಗುವಿಗೆ ಒಂದು ವರ್ಷವನ್ನು ತಂದಿತ್ತವು— ಗಂಗವ್ವನಿಗೆ ಸಮಾಜದ ಬಹಿಷ್ಕಾರ ಬಿದ್ದಿತ್ತು. ಆಕೆ ಹೂ ಮಾರಾಟ ಮೊದಲಾದ ಜೀವನ ವೃತ್ತಿಗಳಲ್ಲೇ ಕಾಲ ಕಳೆದಳು..

ಒಂದು ದಿನ ಕಳೆದು ಹೋದ ಬಾಳಪುಟಗಳನ್ನು ತಿರುವಿ ನೋಡುತ್ತಿದ್ದಳು ... ಸಂಜೆಯ ಹೊತ್ತು.... ಬಾಳಿನ ಸಂಜೆಯನ್ನು ಎದಿರು ನೋಡುತ್ತಾ, ಗಂಗವ್ವ ಕುಳಿತಿದ್ದಳು....

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂದು ಚಿಂತಿಸಬೇಡಿರಿ!

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಪುಸ್ತಕವನ್ನು ಇಂದೇ ಕೊಂಡುಕೊಳ್ಳಿರಿ!

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ.

ನೀವೂ ಪ್ರಯತ್ನಿಸಿ, ಇಂಗ್ಲಿಷ್ ಭಾಷೆ ಕಲಿಯಿರಿ! ವಿದ್ಯಾರ್ಥಿಗಳಿಗಂತೂ ಅತ್ಯುಪಯುಕ್ತ ಪುಸ್ತಕ.

ಹೊಸ ಮುದ್ರಣ—ಸಾದಾ ಪ್ರತಿ 2:00. ಉತ್ತಮ ಪ್ರತಿ 2.50

ಪುಸ್ತಕದ ಬೆಲೆಯೊಂದಿಗೆ 25 ನ. ಪೈ. ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೆದಿಂದನ್ನು ಕಳಿಸಲಾಗುವುದು ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ

ಮಂಗಳೂರಲ್ಲಿ ಸ್ಕೂಲ್ ಬುಕ್ ಕಂಪೆನಿ, ಕೊಲೆಜ್ ಬುಕ್ ಕಂಪೆನಿ, ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಇವರಲ್ಲಿ ಪ್ರತಿಗಳು ದೊರೆಯುತ್ತವೆ.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. 27/1962

(1) ಸುಗುಣ ಬಲ್ಲಾಳ್ತಿ— ತಿಮ್ಮಪ್ಪ ಹೆಗ್ಡೆರ ವಿಧವೆ—

(2) H. ಬಾಲಕೃಷ್ಣ ಹೆಗ್ಡೆ,
(3) ಮೂಲತಿ ಹೆಗ್ಗಡ್ತಿ,
(4) ಅರುಂಧತಿ—ಮೈನರ್

} ತಿಮ್ಮಪ್ಪ ಹೆಗ್ಡೆರ ಮಕ್ಕಳು— 4ನೇ ಯವಳ ಹಿತೆ ಚಿಂತಕಳು—

ತಾಯಿ— 1ನೇ ಅರ್ಜಿದಾರಳು —
ಉಡ್ಪಿ ಕಸ್ಟೆಯಲ್ಲಿರುವವರು ... ...
ಅರ್ಜಿದಾರರು

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನಂದ್ರೆ: —

ತಾರೀಕು 11—3—1961ರಲ್ಲು ಮೃತಪಟ್ಟಿರುವ H. ತಿಮ್ಮಪ್ಪ ಹೆಗ್ಡೆರ ಬಾಬು ಅರ್ಜಿಯಲ್ಲಿ ನಮೂದಿಸಿದ ಅಭ್ಯವೇಜುಗರ್ಳ ವಸೂಲು ಮಾಡುವರೆ 1ನೇ ಅರ್ಜಿದಾರಳ ಹೆಸರಲ್ಲಿ ಸ್ವತಹಾ ಮತ್ತು 2 ಮತ್ತು 3ನೇ ಅರ್ಜಿದಾರರ ಪರವಾಗಿಯೂ 4ನೇ ಅರ್ಜಿದಾರಳ ಕ್ಷೇಮಚಿಂತಕಳಾಗಿ ಸಹಾ ವಾರೀಸು ಹಕ್ಕು ಸರ್ಟಿಫಿಕೇಟು ಕೊಡಬೇಕಾಗಿ ಅರ್ಜಿದಾರರು ಮಾಡಿಕೊಂಡ ಮೇಲ್ಕಂಡ ಅರ್ಜಿಯು ತಾರೀಕು 11—7—1962ಕ್ಕೆ ಇಟ್ಟಿರುವದ್ರಿಂದ ಆಕ್ಷೇಪವುಳ್ಳವರು ಆ ದಿನಸ ಪೂರ್ವಾಹ್ನ 11 ಘಂಟೆಗೆ ಸದ್ರಿ ಕೋರ್ಟು ಮುಂದೆ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು.

K. Ramakrishna Rao,
Vakil for Petitioners.

Udipi, 13—6—62.

NAVAYUGA, UDIPI.
REGD. NO.BG. 176

21-6-1962

LICENSE NO. 31
Licensed to Post without Prepayment

ಕವಲು ದಾರಿ— ಕೆಂಪು ದೀಪ

ಮುಚ್ಚಲಿಟ್ಟಿತು ಮಹಾದ್ವಾರ

— ಸುದಾಸ.

ಜೂನ್ ಇಪ್ಪತ್ತು— ಮುಂಬಯಿಯ ಪ್ರಾಥಮಿಕ ವಿದ್ಯಾಲಯಗಳ ಮಹಾ ದ್ವಾರಗಳು ತೆರೆಯಲ್ಪಡುವ ದಿನ. ಈಗಾಗಲೇ ವಿದ್ಯಾಭ್ಯಾಸಿಗಳು ಪ್ರವೇಶಕ್ಕಾಗಿ ಓಡಾಟ ನಡೆಸಿದ್ದಾರೆ. ಹಲವರು ಸ್ಥಳ ಅರಿಸಿಕೊಂಡೂ ಆಗಿದೆ. ಆದರೆ ಉದ್ಯೋಗ ಮಾಡಿಕೊಂಡು ಕಲಿಯಲ್ಬಯಸುವ ಕರುಣಾಜನಕ ಚಕ್ರವ್ಯೂಹದಲ್ಲಿ ನಿರಾಶೆ ಕವಿದಿದೆ. ಈ ಭಾಗ್ಯ ಈ ವರುಷದಿಂದ ಇಲ್ಲ, ಅವರ ಪಾಲಿಗೆ. ಈ ಮಹಾ ದ್ವಾರದ ಬಾಗಿಲು ಮುಚ್ಚಲ್ಪಟ್ಟಿದೆ, ಅವರಿಗಾಗಿ.

ವಿದ್ಯಾರ್ಜನೆಯ ಆಸೆಯಿರಿಸಿಕೊಂಡು ಮುಂಬಯಿಗೆ ಬರುವವರು ಬಹಳ ಮಂದಿ ಉದ್ಯೋಗದ ಜೊತೆಗೆ ಶಿಕ್ಷಣ ಸೌಕರ್ಯಗಳನ್ನೊದಗಿಸಿ ಕೊಡುತ್ತಿರುವ ಮುಂಬಯಿ, ಇಂದು—ಇನ್ನು ಮುಂದೆ—ಈ ವಿದ್ಯಾಪ್ರೇಮಿಗಳಿಗೆ ಆ ಸೌಕರ್ಯವನ್ನೊದಗಿಸಿ ಕೊಡಲಾರದು.

ಮುಂಜಾನೆಯ ಕಾಲೇಜುಗಳು ಮುಚ್ಚಲ್ಪಟ್ಟವು. ಬಡವರ ಪಾಲಿಗೆ ಉಳಿದಿದ್ದ ಒಂದು ದಾರಿ— ದುಡಿದು ಕಲಿಯಬಹುದಾಗಿದ್ದ ಒಂದೇ ಒಂದು ದಾರಿ ಕಡಿದು ಬಿತ್ತು.

ಸರಕಾರ ಅನ್ನುತ್ತಿದೆ: ದೇಶದ ಪ್ರತಿಯೊಬ್ಬನಿಗೆ ಶಿಕ್ಷಣ ಸೌಕರ್ಯ ಸಿಗುವಂತಾಗಬೇಕು. ಪ್ರತಿಯೊಬ್ಬನೂ ವಿದ್ಯೆ ಪೊರಕಿಸಿಕೊಳ್ಳಬೇಕು (ಪ್ರಾಥಮಿಕ ಶಿಕ್ಷಣ, ಮಾಧ್ಯಮಿಕ ಶಿಕ್ಷಣ, ಉಚ್ಚ ಶಿಕ್ಷಣ ಎಲ್ಲರೂ ಗಳಿಸಿಕೊಳ್ಳಿರಿ ಆದಷ್ಟಾಗಿ ಉಚಿತ ಶಿಕ್ಷಣದ ಯೋಜನೆ, ಸಾಲ ಪಡೆದು ಶಿಕ್ಷಣ ಮುಂದುವರಿಸಲು ಯೋಜನೆ, ವಿದ್ಯಾರ್ಥಿ ವೇತನ ಗಳಿಸಿಕೊಂಡು ಕಲಿಯುವಂತೆ ಪ್ರೋತ್ಸಾಹನ!

"ನನ್ನ ಕಾಲ ಮೇಲೆ ನೀತು ನಾನು ಕಲಿಯುವೆ" ಎನ್ನುವ ಯೋಗ್ಯ ವಿಚಾರ ಈ ಯೋಜನೆಗಳಡಿಯಲ್ಲಿ ಸಮಾಧಿಯಾಯಿತು. ನಾಲ್ಕು ವರ್ಷಗಳಲ್ಲಿ ಕಲಿತು ಪದವೀಧರರಿಸಿಕುವಲ್ಲಿ ಅರು ದರ್ಜಗಳ ರಿಯಾಯಿತಿ, ದುಡಿದು ಕಲಿಯುವವರಿಗೆ! ಮುಂಬಯಿ ವಿಶ್ವವಿದ್ಯಾಲಯದ ಔದಾರ್ಯದದ್ಯೋತಕ ಇದು ಬೇಗ ಬಲಿತು, ಬೇಗ ಕಲಿತು ನನ್ನವರಿಗೆ ನೆರವಾಗುವೆ ಎಂದು ಬಯಸುತ್ತಿರುವ ವಿದ್ಯಾರ್ಥಿಗಳಿಗೆ ಎರಡು ವರ್ಷದ ಸಜೆ, ರಿಯಾಯಿತಿಯ ರೂಪದಲ್ಲಿ!

ದುಡಿದು ಕಲಿಯುವ ವಿದ್ಯಾರ್ಥಿಗಳು ಅಭ್ಯಾಸಕ್ಕೆ ಗಮನ ಕೊಡುವದಿಲ್ಲವಂತೆ! ಅವರಿಗೆ ಬಿಡುವಿರುವದಿಲ್ಲ ಜೀನ್ಯಾಗಿ ಅಭ್ಯಾಸ ಮಾಡಲು. ಕೇವಲ ತರಗತಿಯ ಪಾಠಗಳನ್ನಷ್ಟೆ ಕಲಿಯಬಹುದು. ಉಳಿದ ವಿಷಯಗಳನ್ನು ಓದಿ ಕಲಿತುಕೊಳ್ಳಲು ಅವರಿಗೆ ಬಿಡುವಿಲ್ಲ. ಅದಕ್ಕಾಗಿ ಈ ಯೋಜನೆ ಪರಿಣಾಮ ಫಲದಾಯಕವಾಗಿಲ್ಲವೆಂದು ಹಲವು ವಂದಿ ಪ್ರಾಧ್ಯಾಪಕರು ಹೇಳಿದ್ದಾರೆ; ಹೇಳುತ್ತಿದ್ದಾರೆ. (ಅವರ ಮಾತನ್ನು ಯಾರು ಕೇಳುತ್ತಾರೆ?)

ಈ ಕುರಿತೇ ದೀರ್ಘ ಕಾಲದ ವರೆಗೆ ಚರ್ಚೆ ನಡೆಯಿತು. ಸಭೆಗಳನ್ನು ಕರೆಯಲಾಯಿತು. ಮುಷ್ಕರದ ಬೆದರಿಕೆಯನ್ನು ಹಾಕಲಾಯಿತು (ಇದರಲ್ಲಿ ಪಕ್ಷಗಳ ಸಕ್ಷನೀತಿಯೂ ಕೂಡಿಕೊಂಡಿತು. ಕಾಂಗ್ರೆಸ್ ಸಪಕ್ಷದ ವಿರುದ್ಧವೆಸೆದ ಒಂದು ಅಸ್ತ್ರ ಪ್ರಯೋಗ) ಆದರೆ ಪ್ರಯೋಜನವೇನೂ ಆಗಲಿಲ್ಲ. ತನ್ನ ಮೂತನ್ನು ಉಳಿಸಿಕೊಂಡು ಮರ್ಯಾದೆ ಕಾಪಾಡಿಕೊಂಡಿತೇ ಮುಂಬಯಿಯ ವಿಶ್ವವಿದ್ಯಾಲಯ?

ಎಸ್. ಎಸ್. ಸಿ. ವರೆಗೆ ರಾತ್ರಿ ಶಾಲೆಗಳಲ್ಲೋ, ಹಗಲು ಶಾಲೆಗಳಲ್ಲೋ ಕಲಿತು ವಿದ್ಯಾರ್ಥಿಗಳು ಮಾಡಬೇಕೇನುಮುಂದೆ? ಕೆಲಸ ಮಾಡಬೇಕೆ? ಇಲ್ಲವೆ ಕೆಲಸವನ್ನು ಒಟ್ಟು ನಾಲ್ಕೇ ವರ್ಷದಲ್ಲಿ ಡಿಗ್ರಿ ಪಡೆಯಲು ಯತ್ನಿಸಬೇಕೇ? ಕೆಲಸವಿಲ್ಲದಿದ್ದರೆ ಹಣವಿಲ್ಲ. ಹಣವಿಲ್ಲದೆ ಕಲಿಯಲು ಸಾಧ್ಯವಿಲ್ಲ.

ಅಂಥವರು— ಭಾರತ ಸರಕಾರದ ಕರೆಗೆ ಓಗೊಡಬಾರದೇಕೆ? ಹಳ್ಳಿಗಳಿಗೆ ಹೋಗಿರಿ ಹಳ್ಳಿಗಳ ಉದ್ಧಾರದ ಕಡೆಗೆ ಗಮನ ಕೊಡಿರಿ ಎಂದು ಮಹಾತ್ಮಾ ಗಾಂಧಿಯವರ ಕಾಲದಿಂದಲೂ ಕಾಂಗ್ರೆಸ್ ಅನ್ನುತ್ತಿದೆ. ಈ ತ್ರಿಶಂಕು ಸ್ವರ್ಗದ ಅನುಭವಗಳಿಸಿಕೊಂಡಿರುವವರ ಪಾಲಿಗೆ ಉಳಿದುಂಡೋನೇ. ಹಳ್ಳಿಗಳಿಗೆ ಮರಳುವದು. (ಜನನೇನೆ ಮಾಡಿ. ದೇಶಸೇವೆ ಮಾಡಿದ ಪುಣ್ಯ ಗಳಿಸಿಕೊಳ್ಳುವದು.)

ಇನ್ನಿಲ್ಲಿ ನಮ್ಮ ಪಾಲಿಗೆ ಪ್ರಾಥಮಿಕ ಶಿಕ್ಷಣವಿಲ್ಲ ಎಂದು ನಿರಾಶೆಯ ಉಸಿರಾಡಿಸುತ್ತಿರುವ ಈ ವಿದ್ಯಾರ್ಥಿಗಳ ಕುರಿತು ಯೋಚಿಸುವಾಗ ಬಹಳ ಬೇಸರವೆನಿಸುತ್ತಿದೆ. ಮನೆಯಲ್ಲಿ ಅರ್ಥಿಕ ಸ್ಥಿತಿ ಉತ್ತಮವಿರುತ್ತಿದ್ದರೆ, ಅವರು ಈ ರೀತಿ ದುಡಿದು ಕಲಿಯುವ ಭಾಗ್ಯಕ್ಕಂಟಿಕೊಂಡಿರಬೇಕಾಗಿದ್ದಿಲ್ಲ. ಮನೆಯಲ್ಲಿ ಒಪ್ಪೊತ್ತಿನ ಊಟಕ್ಕೂ ಅನುಕೂಲವಿರದ ಮನೆಗಳಿಂದ ಬಂದ ಮಕ್ಕಳು ಇಂದು ಪದವೀಧರರಾಗಿದ್ದಾರೆ. ದೊಡ್ಡ ಕಚೇರಿಗಳಲ್ಲಿ ಉನ್ನತ ಹುದ್ದೆಗಳಿಸಿಕೊಂಡಿದ್ದಾರೆ ಎಲ್ಲರೂ ಎಲ್ಲರಂತೆಯೇ ಆಗುವರೆಂದಲ್ಲ. ವಿದ್ಯೆ ಗಳಿಸಿದೆ ಪಶ್ಚಾತ್ತಾಪ ಪಡುವದಕ್ಕಿಂತ ಪಡೆದು ಪಶ್ಚಾತ್ತಾಪ ಪಡುವದೇ ಉತ್ತಮವಲ್ಲವೆ? ಎಂಬ ತತ್ವವನ್ನು ಒಗ್ಗಿಸಿಕೊಂಡವರೂ ಇದ್ದಾರೆ.

ವಿದ್ಯೆ ಗಳಿಸುವ ಹಂಬಲ ತೊಟ್ಟು, ಹಗಲು ರಾತ್ರಿ ಆ ದಿಶೆಯಲ್ಲಿ ಹೋರಾಡಲು ಪ್ರಯತ್ನಿಸಿದವರ ದೃಷ್ಟಿಯ ಮುಂದೆ ಈಗ ಕಾಣುತ್ತಿದೆ ಮುಚ್ಚಲ್ಪಟ್ಟಿರುವ ಮಹಾದ್ವಾರ.

ಮುಚ್ಚಿತು, ವಿದ್ಯಾದೇವಿಯ ಗರ್ಭಗುಡಿಯ ಬಾಗಿಲು. ಮುಚ್ಚಿತು ಎಂದೇನು ಮುಚ್ಚಲ್ಪಟ್ಟಿತು ಎಂದೂ ಅನ್ನಬಹುದು. ಕನ್ಯಾ ಪಾಲಿನ ಪ್ರಸಾದ ಸ್ವೀಕರಿಸಲು ಕಾದು ನಿಂತಿದ್ದ ತರುಣ ಭಕ್ತರು ನಿರಾಶರಾದರು. ಅವರ ಕಣ್ಣೆದಿರೇ ಅವರ ಭವಿಷ್ಯದ ಸುಂದರ ಕಲ್ಪನೆಗೆ ತೆರೆಯಲ್ಪಟ್ಟಿತು.

ಭಾರತೀಯ ರೇಲ್ವೆ ಫುಟ್‌ಬಾಲ್ ಟೀಮಿನ ನಾಯಕ ಶ್ರೀ ಪಿ. ಕೆ. ಬೆನರ್ಜಿಯವರು ಕೇಂದ್ರ ರೇಲ್ವೆ ಮಂತ್ರಿಗಳಿಂದ ಉಪಹಾರ ಸ್ವೀಕರಿಸಿದರು.

ಶಿಕ್ಷಣ ಯೋಜನೆಯನ್ನು ಕೈಬಿಡಬೇಕು

(ನಸೇ ಪುಟದಿಂದ)

ಅವ್ಯವಹಾರ್ಯ ಯೋಜನೆ

ಈ ಜೂನಿಯರ್ ಡಿಪ್ಲೊಮಾ ತರಗತಿಯನ್ನು ಹೈಸ್ಕೂಲುಗಳಲ್ಲಿಯೂ ಪ್ರಾರಂಭಿಸಬಹುದು; ಕಾಲೇಜುಗಳಲ್ಲಿಯೇ ಈಗಿನ ಪಿ. ಯು. ಸಿ.ಯನ್ನು ಇದನ್ನಾಗಿ ಪರಿವರ್ತಿಸಿಕೊಳ್ಳಬಹುದು ಅಥವಾ ಈ ತರಗತಿಯನ್ನು ಸ್ವತಂತ್ರ ರೂಪದಲ್ಲಿ ಪ್ರತ್ಯೇಕ ಸಂಸ್ಥೆಯ ರೂಪದಲ್ಲಿಯೂ ನಡೆಸಲು ಅವಕಾಶವಿದೆ. ಎಂದರೆ, ಕಾಲೇಜುಗಳಲ್ಲಿ ಈಗಾಗಲೇ ಸಾಕಷ್ಟು ಸೌಲಭ್ಯಗಳೂ ಸಲಕರಣೆಗಳೂ ಉಪಲಬ್ಧವಿರುವುದರಿಂದ ಅಲ್ಲಿ ಇದನ್ನು ಬಹು ಸುಲಭವಾಗಿ ತೆರೆಯುವುದು ಸಾಧ್ಯ. ಮೂತ್ರವಲ್ಲದೆ ಕಾಲೇಜುಗಳಲ್ಲಿ ಕೇವಲ ಮೂರೇ ವರ್ಷದ ಪದವಿ ತರಗತಿಗಳನ್ನು ಮಾತ್ರ ಉಳಿಯ ಬಿಟ್ಟರೆ, ಅವುಗಳ ಉತ್ಪನ್ನದಲ್ಲಿ ಗಣನೀಯ ಇಳುವರಿಯಾಗುವುದು; ಮತ್ತು ಇದನ್ನು ತುಂಬಿಕೊಳ್ಳಲು ಬೇರೆ ಸಂಪನ್ಮೂಲಗಳನ್ನು ಅರಸಿಕೊಳ್ಳಬೇಕಾಗುವುದು. ಹೀಗೆ ಹಾಯರ್ ಸೆಕೆಂಡರಿ ಪದ್ಧತಿಯಿಂದ ಹೈಸ್ಕೂಲುಗಳಿಗೆ ಅಧಿಕ ವೆಚ್ಚವೂ ಕಾಲೇಜುಗಳಿಗೆ ಅಧಿಕ ನಷ್ಟವೂ ಪ್ರಸಾಳಯ ವ್ಯವಹಾರದಲ್ಲಿ ನಿಶಾನತೆಯೂ ಏಕ ಕಾಲದಲ್ಲಿ ಸಂಭವಿಸುವುದು. ಇಂತಹ ಅವ್ಯವಹಾರ್ಯವಾದ ಯೋಜನೆಯನ್ನು ಕೈಬಿಟ್ಟರೆ ಅದರಿಂದ ಬಹಳ ರೀತಿಯ ಉಪಕಾರವಾಗುವುದು.

ಕೂಲಂಕಷ ಪುನರ್ವಿಚಾರ

ಮದ್ರಾಸ ಸರಕಾರದ ಈ ಅಭಿವ್ಯಾಯವನ್ನು ಕೇಂದ್ರ ಸರಕಾರವು ಅಭ್ಯಸಿಸುತ್ತಿದೆ. ಮುಂದಿನ ವರ್ಷದಿಂದ ಹಾಯರ್ ಸೆಕೆಂಡರಿ ತರಗತಿಯನ್ನು ಈಗಿನ ಯೋಜನೆಯಂತೆ ತೆರೆಯಬೇಕಾಗಿರುವುದರಿಂದ, ಆ ಅವಧಿಯೊಳಗೆ ಸೂಕ್ತ ನಿರ್ಧಾರಕ್ಕೆ ಬರುವುದೆಂದು ನಂಬಬಹುದು. ಶೈಕ್ಷಣಿಕ ರಂಗದಲ್ಲಿ ಅದ್ವಿತೀಯ ಪ್ರಗತಿಯನ್ನು ಸಾಧಿಸಿದ ಮದ್ರಾಸು ರಾಜ್ಯದ ಈ ಸಲಹೆಯು ರಚನಾತ್ಮಕವಿದೆ, ಸಮಸ್ಯೆಯನ್ನು ಎತ್ತಿರುವುದು ಮಾತ್ರವಲ್ಲ, ಅದಕ್ಕೆ ಪರಿಹಾರವನ್ನೂ ಸೂಚಿಸಿದೆ. ಎಲ್ಲ ರೀತಿಯಿಂದ ವಿವೇಚಿಸುವುದಾದರೂ ಹಾಯರ್ ಸೆಕೆಂಡರಿ ವೆಚ್ಚ ಪ್ರದವೆಂಬುದು ಈಗಾಗಲೇ ಎಲ್ಲರ ಗಮನಕ್ಕೆ ಬಂದಿದೆ. ಕೊರತೆಯ ದಿನಗಳಲ್ಲಿ ಈ ಕೊರತೆಯನ್ನು ಮುಕ್ತೂ ಮುತ್ತೂ ಹೆಚ್ಚಿಸುತ್ತ ನಡೆಸುವುದು ಅವಿವೇಕದ ಸರವಾನಧಿಯೂ ಆದೀತು. ಆದುದರಿಂದ ಎಲ್ಲ ರಾಜ್ಯ ಸರಕಾರಗಳೂ ಮದ್ರಾಸದ ಯೋಜನೆಯನ್ನು ಕೂಲಂಕುಷವಾಗಿ ಅಭ್ಯಸಿಸಿ ಅದರ ಸಾಧಕ ಬಾಧಕಗಳೇನೆಂದು ಮೊದಲಾಗಿ ಅರಿತುಕೊಳ್ಳುವುದು ಒಳಿತು.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು,
ದೊರಯುತ್ತವೆ.
ವಿಚಾರಿಸಿರಿ—
ನವಯುಗ ಪ್ರೆಸ್, ಉಡುಪಿ

Edited Printed & Published by K. H. Shetty, at the Navayuga Press, Udipi, S, India.

ನಿಮ್ಮ ಯಾವತ್ತೂ
ಮುದ್ರಣ ಕೆಲಸಗಳಿಗೆ
ದಯಮಾಡಿ ವಿಚಾರಿಸಿರಿ:
—
ನವಯುಗ ಪ್ರೆಸ್,
ಉಡುಪಿ

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ವಿದ್ಯಾರ್ಥಿಗಳಿಗೆ
ಮತ್ತು ವಯಸ್ಕರಿಗೆ
ಅತ್ಯುಪಯೋಗೀ ಪುಸ್ತಕ
ಸುಲಭದಲ್ಲಿ ಇಂಗ್ಲಿಷ
(ಆಂಗ್ಲ ಸ್ವಯಂಬೋಧಿನಿ)
ನವಭಾರತ ಪುಸ್ತಕ ಭಂಡಾರ
ಉಡುಪಿ

ಸಂಪುಟ ೪೧ ಸಂಚಿಕೆ ೪೨ | ಉಡುಪಿ 28—6—1962 ಗುರುವಾರ | Vol 41 No. 42

ಕರ್ನಾಟಕದ ರಾಜಕಾರಣಕ್ಕೆ

ರಾಮ ಪುನರಾಗಮನ — ಭರತ ನಿರ್ಗಮನ

ಕಳೆದ ಸಾರ್ವತ್ರಿಕ ಚುನಾವಣೆಗಳ ನಂತರ ಕರ್ನಾಟಕದಲ್ಲಿ ಎದ್ದು ತೋರಿದ ಕಾಂಗ್ರೆಸ್ಸಿನ ಒಳಗಣ ಗುಂಪಿನ ಭಾವನೆಯು ಶ್ರೀ ನಿಜಲಿಂಗಪ್ಪನವರು ಒಮ್ಮತದಿಂದ ವಿಧಾನ ಸಭಾ ಕಾಂಗ್ರೆಸ್ ಪಕ್ಷದ ನಾಯಕರಾಗಿ ಆಯ್ಕೆಗೊಂಡುದರಿಂದ ಸ್ವಲ್ಪ ಮಟ್ಟಿಗೆ ದೂರವಾಯಿತು ಎಂದು ಊಹಿಸಬಹುದು. ನಿಜಲಿಂಗಪ್ಪನವರು ಮೂರನೆಯ ಬಾರಿಗೆ ಕರ್ನಾಟಕದ ಮುಖ್ಯ ಮಂತ್ರಿಯೆಂದು ಪ್ರತಿಜ್ಞೆ ಸ್ವೀಕರಿಸಿದುದರೊಡನೆ ಶ್ರೀ ಕಂರಿಯವರ ತಾತ್ಕಾಲಿಕ ಮಂತ್ರಿಮಂಡಳವು ಸ್ಥಿರತೆಯನ್ನು ಪಡೆಯಿತು. ಹಿಂದಿನ ಮಂತ್ರಿ ಮಂಡಳದ ಎಲ್ಲ ಸದಸ್ಯರೂ ಉಪ ಮಂತ್ರಿಗಳೂ ಮುಂದೆಯೂ ಅವರವರ ಶಾಖೆಗಳಲ್ಲೆ ಮುಂದುವರಿಯುವರು. ರಾಜ್ಯದ ರಾಜಕೀಯದಲ್ಲಿ ಎದ್ದಿದ್ದ ಕಾವೇರಿದ್ದೀಗ ತಿಳಿಗೊಂಡುದಾದರೆ, ಅದು ನಿಜವಾಗಿಯೂ ಸ್ವಾಗತಾರ್ಹವೇ. ಗುಂಪಿನ ಮನೋಭಾವನೆಯಿಂದ ಹದಗೆಟ್ಟ ರಾಜ್ಯ ಪರಿಸ್ಥಿತಿ ಇನ್ನಾದರೂ ಸಮಂಜಸವಾಗಿ ಮುಂದುವರಿಯಲಿ ಎಂದು ಎಲ್ಲರೂ ಬಯಸುತ್ತಾರೆ.

ಅಸ್ಥಿರ ರಾಜಕೀಯ

೧೯೫೨ರ ನಂತರದಲ್ಲಿ ಐದು ವರ್ಷಗಳ ಅವಧಿಯ ವರೆಗೆ ಯಾವುದೇ ಸರಕಾರ ಭದ್ರವಾಗಿ ನಿಲ್ಲದ ಕೀರ್ತಿ ಮೈಸೂರು ಅಥವಾ ಕರ್ನಾಟಕಕ್ಕೆ ಸೇರಬೇಕು ಹನುಮಂತಯ್ಯ, ಕಡಿದಾಳ, ಮತ್ತು ನಿಜಲಿಂಗಪ್ಪನವರು ೫೨-೫೭ರ ಅವಧಿಯಲ್ಲಿ ಮುಖ್ಯ ಮಂತ್ರಿಯಾಗದ್ದುಗೆಯೇರಿದ್ದರೆ, ೫೭-೬೨ರ ಅವಧಿಯನ್ನು ನಿಜಲಿಂಗಪ್ಪ ಮತ್ತು ಜತ್ತಿಯವರು ಹಂಚಿಕೊಂಡರು. ೬೨ರ ನಂತರದ ಐದು ವರ್ಷಗಳ ಸಾಲಿನಲ್ಲಿ ಈಗಾಗಲೇ ಇಬ್ಬರು ನಾಯಕತ್ವ ನಿರ್ವಹಿಸಿದರು. ಇದು ಇಷ್ಟರಲ್ಲೇ ಮುಗಿಯುತ್ತದೆಂದು ನಂಬಲು ವಾತಾವರಣ ಧೈರ್ಯ ಕೊಡುತ್ತದೆ.

ವಿಶಾಲ ತಳಹದಿ

ಶ್ರೀ ನಿಜಲಿಂಗಪ್ಪನವರು ಚುನಾವಣೆಯಲ್ಲಿ ಸೋಲುಂಡುದರಿಂದಾಗಿ ಮೊದಲಿಗೆ ಕಂರಿಯವರನ್ನು ಮುಂದೂಡಲಾಗಿತ್ತು; ನಿಜಲಿಂಗಪ್ಪನವರು ಮುಂದೆ ನಾಯಕತ್ವ ವಹಿಸುವುದೂ ದೃಢವಾಗಿತ್ತು ಅಂದು ಎದುರು ನಿಂತ ಜತ್ತಿ ಗುಂಪಿನವರು ಇಂದು ಒಂದಾಗಿ ಹೊಸ ನಾಯಕನ ಆಯ್ಕೆಯಲ್ಲಿ ಬೆಂಬಲವಿತ್ತುದು ಆಶಾದಾಯಕವೆನಿಸಿದೆ. ಕಳೆದ ಬಾರಿ ಕಂರಿಯವರು ವಿಶಾಲ ತಳಹದಿಯ ಮಂತ್ರಿ ಮಂಡಳಿ ರಚಿಸಲು ಪ್ರಯತ್ನಿಸಿದರೂ ಜತ್ತಿ ಗುಂಪಿನ ನಿರ್ದಿಷ್ಟ ಕೇಳಿಕೆಗಳ ಮೂಲಕ ಅದು ಅವರಿಗೆ ಸಾಧ್ಯವಾಗಲಿಲ್ಲ; ಇದಕ್ಕೆ ಅವರ ಗುಂಪಿನವರೇ ಕಾರಣರಾಗಿದ್ದರು. ಆದರೆ, ಇಂದಾದರೂ ನಿಜಲಿಂಗಪ್ಪನವರು ನಾಕಷ್ಟು ವ್ಯಾಪ್ತಿನಿಧ್ಯ ನೀಡಿದೆ ಹೋದರೆ, ಬಿಕ್ಕಟ್ಟು ತಲೆದೋರಬಾರದೆಂದಿಲ್ಲ. ತನ್ನ ಸಂಪುಟದಲ್ಲಿ ೧೪ ಜನರು ಮಂತ್ರಿಗಳೂ ೧೦ ಜನರು ಉಪಮಂತ್ರಿಗಳೂ ಇರುವರೆಂದ ಹೇಳುವ ಇವರು ತಮ್ಮ ಇತರ ಸಹಕಾರಿಗಳನ್ನು ಆಯ್ದುಕೊಳ್ಳಲು ಒಂದು ವಾರದ ಅವಧಿ ಬಯಸಿದ್ದಾರೆ. ಈ ಅವಧಿಯಲ್ಲಿ ಅವರು ಮಂತ್ರಿಗಳ ಯಾದಿ ತಯಾರಿಸಲು ಆಸಫಲರಾದರೆಂದರೆ, ಅದು ಇವರ ಭವಿಷ್ಯವಾದರೂ ನೆಟ್ಟಗಿಲ್ಲವೆಂಬುದರ ದ್ಯೋತಕವೇ.

ಅಧಿಕಾರ ಮೋಹ

ಶ್ರೀ ನಿಜಲಿಂಗಪ್ಪನವರಿಂದು ಕಾಂಗ್ರೆಸ್ಸಿಗರ ನಡುವಿರುವ ಒಳಜಗಳಗಳನ್ನು ನಿವಾರಿಸಬೇಕಾಗಿದೆ ಕಾಂಗ್ರೆಸ್ ಅಧ್ಯಕ್ಷರಾಗಿದ್ದಾಗ ಅವರು ಇವನ್ನು ಸಾಧಿಸುವಲ್ಲಿ ಯಶಸ್ವಿಗಳಾಗಿಲ್ಲ; ಮುಖ್ಯ ಮಂತ್ರಿಯಾದ ನಂತರವಾದರೂ ಸ್ವಸುಧಾರಣೆಗೆ ಅವರೇ ಕಾದು ನೋಡಬೇಕಾಗಿದೆ. ಒಳ ಜಗಳವೆಂಬುದು ಇಂದು ಕಾಂಗ್ರೆಸ್ಸಿಗೆ ಅಂಟಿಕೊಂಡ ಮಹಾ ಪೀಡೆ. ಇದಕ್ಕೆ ಅಧಿಕಾರಕ್ಕೆ ಅಂಟಿಕೊಳ್ಳುವ ಅಭಿಲಾಷೆಯು ನಾಯಕರಲ್ಲಿ ಹೆಚ್ಚಿದುದೇ ಕಾರಣ ಇಂತಹ ಪದವಿ ಹಾಗೂ ಅಧಿಕಾರಗಳಿಗೆ ಮೂರುಹೋಗಬಾರದು ಎಂದು ಉಪದೇಶಿಸುವವರಾದರೂ ಇದೋದಿಂದ ದೂರವಿರುವುದಿಲ್ಲ ಮರ್ಯಾದೆ, ಗೌರವದಹಳ್ಳಿಯು ಶ್ಯಾನೆ ಭೋಗತನವನ್ನು ಬಿಟ್ಟು ಉಪ್ಪಿನ ವಿಭಾಗದ ಚರಕಾಸಿಯೊಗಲು ಹಾತೊರೆಬವರಂತೆ ಪ್ರಾದೇಶಿಕ ಕಾಂಗ್ರೆಸ್ಸಿನ ಪದವಿಗಳಿಗೆ ತಿಲಾಂಜಲಿಯಿತ್ತು ಪ್ರಧಾನ ನದಲ್ಲಿ ತೂರಿಕೊಳ್ಳಲು ಎಲ್ಲರೂ ಆಶಿಸುತ್ತಾರೆ. ಸಂಜೀವ ರೆಡ್ಡಿಯವರೇ ಇವಕ್ಕೆ ಅಪವಾದವಾಗಿದ್ದಿರಬೇಕು.



ಅಮೆರಿಕೆಯ ಎಕ್ಸ್‌ಪ್ಲೋರರ್ ೧೭ನ್ನು ಕಂಡ್ರಕ್ಟ್ ಮಾಡಿದ ಜೋಡಾಲ್ಡ್ ಬೇಟರ್ ಮತ್ತು ಲೂಯಿಸ್ ಪಾವುಲರು ಜೋಡಿಸಿದರು

ಅವರಿಗೆ ಅವರ ಪದವಿಯೇ ಮುಖ್ಯವಾಗಿರಲಿಲ್ಲ. ಅವರ ಮುಂದಿನ ಗುರಿ ಪ್ರಧಾನಿ ಪದವಿಯಾಗಿತ್ತು. ಆದರೆ ಅವರ ಆಸೆ ಈಡೇರಲಿಲ್ಲ. ಅವರ ಸ್ಥಾನಕ್ಕೆ ಬಂದ ಶಾಸ್ತ್ರಿಯವರಿಗೆ ಪ್ರಧಾನಿ ಪದವಿಯೇ ಮುಖ್ಯವಾಗಿತ್ತು. ಅವರು ಪ್ರಧಾನಿಯಾಗಿ ಮುಂದುವರಿದರು. ಅವರ ಸಾವಿನ ನಂತರ ಇಂದಿರಾ ಗಾಂಧಿಯವರಿಗೆ ಪ್ರಧಾನಿ ಪದವಿಯೇ ಮುಖ್ಯವಾಗಿತ್ತು. ಅವರು ಪ್ರಧಾನಿಯಾಗಿ ಮುಂದುವರಿದರು. ಇಂತಹ ಪದವಿ ಮೋಹವು ಕಾಂಗ್ರೆಸ್ಸಿಗರಲ್ಲಿ ಹೆಚ್ಚಿದುದೇ ಕಾರಣ ಇಂತಹ ಪದವಿ ಹಾಗೂ ಅಧಿಕಾರಗಳಿಗೆ ಮೂರುಹೋಗಬಾರದು ಎಂದು ಉಪದೇಶಿಸುವವರಾದರೂ ಇದೋದಿಂದ ದೂರವಿರುವುದಿಲ್ಲ ಮರ್ಯಾದೆ, ಗೌರವದಹಳ್ಳಿಯು ಶ್ಯಾನೆ ಭೋಗತನವನ್ನು ಬಿಟ್ಟು ಉಪ್ಪಿನ ವಿಭಾಗದ ಚರಕಾಸಿಯೊಗಲು ಹಾತೊರೆಬವರಂತೆ ಪ್ರಾದೇಶಿಕ ಕಾಂಗ್ರೆಸ್ಸಿನ ಪದವಿಗಳಿಗೆ ತಿಲಾಂಜಲಿಯಿತ್ತು ಪ್ರಧಾನ ನದಲ್ಲಿ ತೂರಿಕೊಳ್ಳಲು ಎಲ್ಲರೂ ಆಶಿಸುತ್ತಾರೆ. ಸಂಜೀವ ರೆಡ್ಡಿಯವರೇ ಇವಕ್ಕೆ ಅಪವಾದವಾಗಿದ್ದಿರಬೇಕು.

ಭಿನ್ನತೆ ಮುಳಿವು

ಸೂಕ್ಷನವಾಗಿ ಕಾಂಗ್ರೆಸ್ ಅಧ್ಯಕ್ಷರಾದಸಂಜೀವಯ್ಯನವರು ಕಾಂಗ್ರೆಸ್ಸಿನ ಗುಂಪಿನ ಮನೋಭಾವನೆಯನ್ನು ದೂರವಾಡುವುದು ಅಗತ್ಯದ ಕೆಲಸವೆಂದು ಹೇಳಿ, ಇದನ್ನು ಸಾಧಿಸಲು ಉತ್ಸಾಹವನ್ನು ತೋರಿಸಿದ್ದಾರೆ ಉತ್ಸಾಹವೊತ್ತಿದಿಂದಲೇ ಕಾರ್ಯ ನಡೆಯುವಂತಿಲ್ಲವಾದರೂ ಉತ್ಸಾಹವಿಲ್ಲದೆ ಹೋದರೂ ಆಗುವುದಿಲ್ಲ. ದೇಶವು ಯಾವ ರಾಜ್ಯದ ರಾಜಕಾರಣವನ್ನು ಪರಿಶೀಲಿಸಿದರೂ ಅಲ್ಲಿನ ಭಿನ್ನಾಭಿಪ್ರಾಯವು ಸರಕಾರಕ್ಕೆಮುಳುವಾಗಿರುವುದು ಗೋಚರವಾಗುತ್ತದೆ. ಈ ಸಾರಿಯ ಚುನಾವಣೆಗಳ ನಂತರ ಸರ್ವತ್ರವೂ ವಿಶಾಲ ತಳಹದಿಯ ಸಚಿವ ಸಂಪುಟದ ನಿರ್ಮಾಣವಾಗುವುದಕ್ಕೆ ಈ ಭಿನ್ನಾಭಿಪ್ರಾಯಗಳೇ ಕಾರಣ. ಪ್ರತಿಯೊಂದು ಗುಂಪಿನ ಹಿತಾಸಕ್ತಿಗೂ ಪ್ರಾತಿನಿಧ್ಯ ದೊರೆಯುವಂತೆ ಸಂಯತ್ನ ನಡೆಸಿದುದರಿಂದ ವಿಸ್ತರಣೆಯು ಅತ್ಯಾವಶ್ಯಕವಾಯಿತು. ಕರ್ನಾಟಕದಲ್ಲಿಯೂದರೂ ೧೪+೧೦ ಸಂಖ್ಯೆಯ ವಿಸ್ತೃತ ಸಂಪುಟ ರಚನೆಯೂ ಪ್ರಯತ್ನವಾದರೂ ಇದರಿಂದಾಗಿಯೇ ಎನ್ನಬೇಕು.

ಜನತೆಯೇ ಜನಾರ್ದನ

ಆದರೆ, ಒಂದು ವಿಷಯ. ತಾನು ಮುಖ್ಯ ಮಂತ್ರಿಯಾದನಂತರ ಮೊತಾಡುತ್ತ ಶ್ರೀ ನಿಜಲಿಂಗಪ್ಪನವರು "ಗುಂಪುಗಳಿಗೆ ಮಂತ್ರಿ ಮಂಡಳದಲ್ಲಿ ವ್ಯಾಪ್ತಿನಿಧ್ಯ ನೀಡುತ್ತ ಹೋದರೆ, ಅದು ಮುಂದೆ ಸಂಕಟದ ಪ್ರಸಂಗವುದೀತು" ಎಂದಿದ್ದಾರೆ. ಈ ಮೊದಲೇ ನಾವು ಈ ಪುಟಗಳಲ್ಲಿ ಬರೆದಿರುವಂತೆ, ವ್ಯಾಪ್ತಿನಿಧ್ಯ ದೊರೆಯುವುದಾದರೆ, ಒಬ್ಬೊಬ್ಬನ ದೊಂದೊಂದು ಗುಂಪಾದೀತು. ಹೊಸ ತಾಗಿ ನಾಲ್ಕಾರು ಜನರಿಗೆ ಮಂತ್ರಿ ಪದವಿಯನ್ನೋ ಉಪಮಂತ್ರಿ ಪದವಿಯನ್ನೋ ಇತ್ತ ಮಾತ್ರಕ್ಕೆ ಗುಂಪಿನ ಬುದ್ಧಿ ದೂರ ಹೋಗುವಂತಿಲ್ಲ. ಬದಲಿಗೆ ಪದವಿಗಳಿಸದ ಮಹಾನುಭಾವರು ಇವರಿಗೆ ಬೆಂಬಲವಾದಾರು. ಆದರೆ ರಾಜ್ಯದ ಹಿತದೃಷ್ಟಿಯಿಂದ ಸರಕಾರದ ಪ್ರತಿಯೊಂದು ಕಾರ್ಯಕಲಾಪಗಳಲ್ಲಿಯೂ ಪ್ರಾತಿನಿಧ್ಯ ಪಕ್ಷದ ಎಲ್ಲ ಸದಸ್ಯರ ಹೃತ್ಪೂರ್ವಕ ಸಹಕಾರ ಮತ್ತು ಸಹಯೋಗಗಳು ಬೇಕು ಎಂಬುದರಿಂದ ಇಡಿಯ ಪಕ್ಷವು ಒಂದಾ

(೧೦ನೇ ಪುಟ ನೋಡಿರಿ)

ಭವ್ಯ ಕಟ್ಟಡಗಳಿಗೆ ಬೇಕಾಗುವ—
ಕಿಟಕಿ-ಬಾಗಿಲು, ವೆಂಟಿಲೇಟರು
ರೋಲಿಂಗ್ ಶಟರು, ಗೇಟುಗಳಿಗೆ

ಶಾಸ್ತ್ರಿ & ಕೊ
ಹೆಂಪನಕಟ್ಟೆ,
ಮಂಗಳೂರು—1

ಆಫೀಸು—ಮನೆಗಳಿಗೆ ಬೇಕಾಗುವ—
ವಿವಿಧ ಕಪಾಟುಗಳು, ಮೇಜು
ಕುರ್ಚಿಗಳು, ಮಂಚ, ಸೋಫಾಗಳಿಗೆ

ಕುಲೀನ ಕಂಗಾಲ ನಾರಿಯೊಬ್ಬಳ ಕರುಣ ಕಥೆ—

ಭಾಗ್ಯದ ಬಾಗಿಲು

ಶ್ರೀಮತಿ ಯಶೋದಾ ಯನ್ ಜೆನ್ನಿ.

ಅತಿ ಬಡವರಲ್ಲಿ ಹುಟ್ಟಿ ಬೆಳೆದ ಹೆಣ್ಣಿಗೆ ಲಕ್ಷ್ಮೀ ಪುತ್ರನ ಕೈಹಿಡಿಯುವ ಸಂದರ್ಭ ಒದಗಿ ಬಂದಾಗ ಆಕೆಯ ಭಾಗ್ಯದ ಬಾಗಿಲು ತೆರೆಯತೆನ್ನದೆ ಮತ್ತೇನೆನ್ನಬೇಕು?

ಸುಗುಣ ಹೆಸರಿಗೆ ತಕ್ಕಂತೆ ಒಳ್ಳೇಯ ಗುಣವತಿಯಾಗಿದ್ದಳು. ಬಡಕುಟುಂಬದಲ್ಲಿ ಹುಟ್ಟಿ ಬೆಳೆದವಳಾಗಿದ್ದರೂ ತಕ್ಕಷ್ಟು ವಿದ್ಯೆಯನ್ನು ಪಡೆದು ವಿವೇಕಿ, ವಿಚಾರವಂತೆಯಾಗಿಯೇ ಬೆಳೆದಿದ್ದಳು. ಆಕೆಯ ಅಕ್ಕಂದಿರೆಲ್ಲ ಕೇವಲ ಬಡತನದ ಕಾರಣದಿಂದಾಗಿ ಅಯೋಗ್ಯ ಮನುಷ್ಯರ ಕೈಹಿಡಿದು ಪಡುವ ಬವಣೆಯನ್ನು ನೆನೆದಾಗ ತಾನು ಅವಿವಾಹಿತೆಯಾಗಿ ಉಳಿಯುವುದು ಅಸಾಧ್ಯವೆಂಬುದು ಸ್ಪಷ್ಟವಾಗುತಿತ್ತು.

ತಾನು ಮದುವೆಯಾಗುವುದೇ ಆದರೆ ನಿಜವಾದ ಯೋಗ್ಯತೆಯುಳ್ಳವನ ಕೈಹಿಡಿಯಬೇಕು ಎಂಬ ಆಸೆಯತ್ತು ಸುಗುಣಳಿಗೆ ಅತ ವಿದ್ಯಾವಂತ, ಸದ್ಗುಣವಂತ, ವಿಚಾರವಂತ, ವಿವೇಕಿ, ಧೀರ ಯುವಕನಾಗಿರಬೇಕು. ಆದರೆ ಎಲ್ಲದಕ್ಕೂ ಮೂಲ ಹಣವೆಂಬಂತೆ ಮದುವೆಯ ವಿಚಾರದಲ್ಲೂ ಹೆಣ್ಣಿಗಿಂತ ಮುಖ್ಯ ಹಣವೇ ಎಂಬುದನ್ನರಿತಿದ್ದ ಸುಗುಣಳಿಗೆ ತಾನು ಮೆಚ್ಚುವ ಅಶಿಸುವ ಹುಡುಗನ ಕೈಹಿಡಿದೇನೆಂಬ ಆಸೆ ಬರಿ ಕನಸೆಂದು ತಿಳಿದಿತ್ತು. ಎರಡು ಮೂರು ವರ್ಷಗಳ ವರಾನ್ವೇಷಣೆಯು ವಿಫಲವಾಗಿ ಆಕೆ ಇಪ್ಪತ್ತು ವರ್ಷದವಳಾಗಿಯೂ ಅವಿವಾಹಿತೆಯಾಗಿ ಉಳಿದಾಗ ಅವಳ ಮದುವೆಯ ವಿಚಾರದಲ್ಲಿ ತಂದೆ, ತಾಯಿಯರಿಬ್ಬರೂ ನಿರಾಶೆಯನಿಟ್ಟಸಿರೆಳೆದಾಗ ಕೇವಲ ಗಂಡು ಎಂಬವನೊಬ್ಬ ಸಿಕ್ಕಿದರೆ ಸಾಕೆನ್ನುವ ಸ್ಥಿತಿಯನ್ನು ತಲಪಿದಾಗ ಅವಳ ಭವಿಷ್ಯದ ಭಾಗ್ಯದ ಬಾಗಿಲು ತೆರೆಯಿತು. ಯಾರೋ ಒಬ್ಬರು ಪರಿಚಿತರ ಪ್ರಯತ್ನದಿಂದ ಶ್ರೀಮಂತ ಯುವಕನೊಬ್ಬ ಕನ್ಯಾಪರೀಕ್ಷೆಗೆಂದು ಬಂದು ಸುಗುಣಳನ್ನು ಮೊದಲ ನೋಟಕ್ಕೆ ಒಪ್ಪಿದ್ದ. ಅತಿ ಶ್ರೀಮಂತನ ಉಡುಪಿನಲ್ಲಿದ್ದ ಅತ ಹಣದ ವಿಚಾರವನ್ನೇ ಪ್ರಶ್ನಿಸಿರಲಿಲ್ಲ ಅದರ ಅಗತ್ಯವೇ ಇಲ್ಲವೆಂದು ತಿಳಿಸಿದ್ದನಂತೆ ಅತ ಕಲಿತವ ನೆನಿಸಿಕೊಳ್ಳದಿದ್ದರೂ ಓದು, ಬರಹ ಬಲ್ಲವನಾಗಿದ್ದ. ಆ ಶ್ರೀಮಂತಿಕೆಯ ಉಡುಪಿನಲ್ಲಿದ್ದ ಸುಂದರನೆನ್ನಿಸಬಹುದಾಗಿದ್ದ ಯುವಕ ಹಣದ ಪ್ರಸ್ತಾಪವನ್ನೇ ಮಾಡದೆ ಸುಗುಣಳನ್ನು ಮದುವೆಯಾಗಲು ಒಪ್ಪಿದ್ದನ್ನು ಕೇಳಿ ಸುಗುಣಳ ತಾಯಿ ತನ್ನ ಕಿವಿಗಳನ್ನೇ ನಂಬಲಿಲ್ಲ. ಅಷ್ಟೇ ಅಲ್ಲದೆ ಹೆಣ್ಣಿನ ಮನೆಯ ಸ್ಥಿತಿಗತಿಯನ್ನರಿತಿದ್ದ ವರನ ಕಡೆಯವರು ಹೆಣ್ಣನ್ನು ತಮ್ಮೂರಿಗೇ ತಂದು ಸುಲಭ ರೀತಿಯಲ್ಲಿ ಮದುವೆ ಮುಗಿಸಲು ಒಪ್ಪಿಗೆಯನ್ನಿತ್ತಿದ್ದರು.

ಸುಗುಣಳಿಗೂ ವಿಸ್ಮಯವೇ ಹಣದ ಪ್ರಶ್ನೆಯೇ ಬಹು ಮುಖ್ಯವೆನಿಸುವ ಮದುವೆಯ ಮಾರುಕಟ್ಟೆಯಲ್ಲಿ ಶ್ರೀಮಂತ ಯುವಕ ತನ್ನ ಕೈ ಹಿಡಿಯಲು ಮುಂದಬಂದುದೆಂದರೆ? ಹಾಗಾದರೆ ಪ್ರಸಂಚವಿನ್ನೂ ಪೂರ್ಣ ಹೊಲಸಾಗಿಲ್ಲ, ತಾನೆಣಿಸಿದಷ್ಟು ಕರೋರವಾಗಿಲ್ಲ ಅತ ಕಡಿಮೆ ಓದಿದವನು. ನಿಜ ಆದರೆ ಅಂತಹ ಅನುಕೂಲವಂತ ತನ್ನಂತಹ ಬಡವರ ಹೆಣ್ಣನ್ನು ಕೈ ಹಿಡಿಯುವುದೇ ಭಾಗ್ಯವೆನ್ನ ಬೇಕಲ್ಲವೇ?

ಸುಗುಣಳ ಮದುವೆ ಮುಗಿದು ಆಕೆ ಅಂದೇ ಪತಿಗೃಹವನ್ನು ಸೇರಿದಳು ಮಗಳನ್ನು ಕಳುಹಿಸಿಕೊಡಲೆಂದ ಬಂದ ತಾಯಿ ಆ ಮನೆಯ ವೈಭವವನ್ನು ನೋಡಿಯೇ ಬೆರಗಾದಾಗ ಸುಗುಣಳೂ ವಿಸ್ಮಿತ ನೇತ್ರಗಳಿಂದಲೇ ಮನೆಯೊಳಗೆ ಪ್ರವೇಶಿಸಿದಳು.

ಮನೆಯಲ್ಲಿ ಸುಗುಣಳ ಅತ್ತೆ, ಪತಿ, ಸುಗುಣ ಮೂವರೇ ಸುಗುಣ ಬಂದ ಮೇಲೆ ಕೆಲಸದಾಕೆಯನ್ನೂ ಮನೆಗೆ ಕಳುಹಿಸಿದ್ದರು. ಸುಗುಣಳಿಗಾದರೂ ಅಳ ಅವಶ್ಯಕತೆ ಇದೆ ಎನಿಸಿರಲಿಲ್ಲ ಆಕೆ ಮನೆಯ ಒಳ ಹೊರಗಿನ ಎಲ್ಲ ಕೆಲಸಗಳನ್ನೂ ದಕ್ಷತೆಯಿಂದ ಮಾಡಲು ಸಿದ್ಧಳಾಗಿದ್ದಳು

ಆದರೂ ಸುಗುಣಳಿಗೆ ಹೆಜ್ಜೆ ಹೆಜ್ಜೆಗೂ ಭಯ. ಶ್ರೀಮಂತರ ಮನೆಯ ಆಡಂಬರದ ಜೀವನ ಆಕೆಗೆ ಸ್ವಲ್ಪವೂ ತಿಳಿದಿರಲಿಲ್ಲ ಆಕೆಯ ಅತ್ತೆಗಂತೂ ಮಾತು ಬಹಳ ಕಡಿಮೆ. ಬರಿಯ ನೋಟದಿಂದಲೇ ಅವರ ಅಭಿಪ್ರಾಯವನ್ನು ತಿಳಿದುಕೊಳ್ಳ ಬೇಕೆನುವವರು.

ಸುಗುಣ ಬಂದ ಒಂದೆರಡು ದಿನಗಳಲ್ಲೇ ಅಡುಗೆಯ ಹೆಂಗಸನ್ನು ಮನೆಗೆ ಕಳುಹಿಸಿದ ಅವಳ ಅತ್ತೆ ನುಡಿದರು.

"ಇನ್ನು ಮೇಲೆ ಅಡುಗೆ ನೀನೇ ಮಾಡು ಆದರೆ ಅವನಿಗೆ ಚೆನ್ನಾಗಿ ರುಚಿಸುವಂತಿರ್ಬೇಕು."

ಆದರೆ ಅವನ ರುಚಿ ಎಂತಹದೆಂಬುದನ್ನು ಮಾತ್ರ ಅವರ ಹೇಳಲಿಲ್ಲ. ಸುಗುಣಳಿಗೂ ಕೇಳಲು ಭಯ. ಸುಗುಣ ನಡುಗುತ್ತಲೇ ಅಡುಗೆಯ ಕೆಲಸವನ್ನು ಸೂರ್ತಿಗೊಳಿಸಿದಳು ಆಕೆ ಮನೆಯಲ್ಲೇನೋ ತಾಯಿಗೆ ಸಹಾಯಕಳಾಗಿ ಎಲ್ಲ ಕೆಲಸವನ್ನೂ ತಾನೇ ಮಾಡುತಿದ್ದಳು ಆದರೆ ಆ ಮನೆಗೂ ಇಲ್ಲಿಗೂ ಬಹಳ ಅಂತರವಿತ್ತು ಆ ಬಡ ಗುಡಿಸಲಿನಿದರು ಈ ಮಾಳಿಗೆಯ ಮನೆಯನ್ನು ಹೋಲಿಸುವಂತಿದೆಯೇ?

ಸುಗುಣ ಮಾಡಿದ ಮೊದಲ ದಿನದ ಅಡುಗೆಯನ್ನು ತಾಯಿ ಮಗ ಉಣ್ಣುವಾಗ ಕಳಿತ ಗ ಮೊದಲ ತುತ್ತನ್ನು ಬಾಯಲ್ಲಿರಿಸಿದ ಅತ್ತೆ ಮುಖ ಮುದುಡಿ ನುಡಿದರು

"ಥೂ ಇದೆಂತಾ ಸಪ್ಪ ಇದನ್ನು ಹೇಗೆ ಉಣ್ಣೋದೂ ಅಬ್ಬಬ್ಬಾ" ಎಂದವರೇ ಎಲೆಯ ಬಡಿಗೆ ಅನ್ನ ಸರಿಸಿದರು.

ಆದರೆ ಸುಗುಣಳ ಪತಿ ಮೌನವಾಗಿ ಊಟ ಮುಗಿಸಿದ್ದ ಊಟ ಮುಗಿದ ಮೇ

(೧೦ನೇ ಪುಟ ನೋಡಿರಿ)

ಬ್ಯಾಂಕ್ ಖಾತೆಯನ್ನು ಯಾರು ತೆರೆಯಬಹುದು?

ಬ್ಯಾಂಕ್ ಖಾತೆ ತೆರೆಯಲು, ತಮಗೆ ಅಸಾಧ್ಯವೆನಿಸುವ ನಿರ್ಬಂದಗಳಿವೆಯೆಂದು ಹಲವರು ಭಾವಿಸುತ್ತಾರೆ ಇದೊಂದು ತಪ್ಪು ಭಾವನೆ ದಿನಕೂಲಿ ಪಡೆವವನು ಕೂಡಾ ಬ್ಯಾಂಕಿನಲ್ಲಿ ಚಿಕ್ಕ ಉಳಿತಾಯ ಖಾತೆಯನ್ನು ತೆರೆಯಬಹುದು ಇಂದಿನ ದಿನಗಳಲ್ಲಿ ಅದು ಅವಶ್ಯವೂ ಇದೆ ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ಎಲ್ಲರಿಗೂ ಏಕಪ್ರಕಾರದ ಸೌಜನ್ಯ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ 1920. ಪ್ರಧಾನ ಕಚೇರಿ: ಉಡುಪಿ, ದ ಕನಡ.

ESTD. 1921 ಸ್ಥಾಪನೆ

NAVAYUGA
KANNADA WEEKLY, UDIPI.

Founder.

Late Sri A. B Shetty

Former Minister for Public Health, Govt of Madras & Govt. of Mysore.

ನವಯುಗ

ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು.
ಎಸ್. ಗೋಪೀಚಂದ ರಾವ್, ವಿದ್ವಾನ್
ಬಿ ಶಾಮರಾಯ ಶೆಟ್ಟಿ, ಬಿ. ಎ, ಎಲ್.ಟಿ.

ಸಂಚಾಲಕ ಸಂಪಾದಕರು.
ಕೆ. ಹೊನ್ನಯ್ಯ ಶೆಟ್ಟಿ.

○

ಜಾಹೀರಾತು ದರಗಳು
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ 3 50

ಚಂದಾ
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಹೊಲಬಗಳನ್ನಾಗಲೀ ಸಿಂಡಿಕೇಟ್ ಬೆಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು

ಭದ್ರತಾ ಮಂಡಳದಲ್ಲಿ

ಭಾರತೀಯ ನಿಲುಮೆಯ ಸಮರ್ಥನೆ

ಭದ್ರತಾ ಸಮಿತಿಯಲ್ಲಿ ಕಾಶ್ಮೀರದ ಪ್ರಶ್ನೆಯನ್ನು ಚರ್ಚಿಸಿ ಉಭಯ ರಾಷ್ಟ್ರಗಳಿಗೂ ಒಪ್ಪಿತವಾಗುವಂತಹ ಒಂದು ಗೊತ್ತುವಳಿಯನ್ನು ಮಂಡಿಸುವ ಪ್ರಯಾಸವೀಗ ವ್ಯರ್ಥವಾಗುತ್ತಿರುವಂತೆ ಗೋಚರವಾಗ ತೊಡಗಿದೆ. ಆಯರ್ಲೆಂಡು, ರುಮೇನಿಯಾ, ಘಾನ ಮತ್ತು ಸಂಯುಕ್ತ ಅರಬ ರಾಷ್ಟ್ರದ ಪ್ರತಿನಿಧಿಗಳು ಭಾರತದ ಧೋರಣೆಗೆ ಬೆಂಬಲವನ್ನು ವ್ಯಕ್ತಪಡಿಸಿದ್ದಾರೆ. ರಶ್ಯವು ಪ್ರಾರಂಭದಿಂದಲೂ ಭಾರತದ ಅಭಿಪ್ರಾಯವನ್ನು ಮನ್ನಿಸುತ್ತ ಬಂದಿದೆ.

ಭಾರತ ಮತ್ತು ಪಾಕಿಸ್ತಾನಗಳ ನಡುವಣ ಈ ವಿರಸವನ್ನು ಕೊನೆಗೊಳಿಸಲು ಕೆಲವು ಬ್ರಹತ್ ರಾಷ್ಟ್ರಗಳು ತ್ರಯಸ್ಥರ ಸಹಾಯವನ್ನು ಪಡೆಯಬೇಕೆಂಬ ಗೊತ್ತುವಳಿಯನ್ನು ಮಂಡಿಸುವ ಹವಣಿಕೆಯಲ್ಲಿವೆ. ಆದರೆ, ಈ ರೀತಿಯ ಗೊತ್ತುವಳಿಯನ್ನು ಅವು ತಾವಾಗಿಯೇ ಮುಂದೆ ತರಲು ಬಯಸುತ್ತಿಲ್ಲ; ಯಾವುದಾದರೂ ಚಿಕ್ಕ ರಾಷ್ಟ್ರಗಳು ಅದನ್ನು ಮಂಡಿಸಬೇಕೆಂದು ಅವುಗಳ ಅಭಿಮತ ಆದರೆ ಕೆಲವು ಚಿಕ್ಕ ಪ್ರಮುಖ ರಾಷ್ಟ್ರಗಳು ಭಾರತದ ನಿಲುಮೆಯನ್ನು ಅರ್ಥಮಾಡಿಕೊಂಡಿರುವುದರಿಂದ ಸಂ. ರಾ. ಸಂಸ್ಥೆಯಲ್ಲಿ ಗೊಂದಲದ ಪರಿಸ್ಥಿತಿಯು ತಲೆದೋರಿತು. ತನ್ನ ಅಪೇಕ್ಷೆಯಂತೆ ಚಿಕ್ಕ ರಾಷ್ಟ್ರಗಳು ಗೊತ್ತುವಳಿಯನ್ನು ಮಂಡಿಸಲು ಬಾರದೆ ಹೋದರೆ ಅಮೆರಿಕೆಯೇ ಮಂಡಿಸುವುದೂ ಅಸಂಭವವಲ್ಲ. ಏಕೆಂದರೆ, ಅಮೆರಿಕೆ ಪಾಕಿಸ್ತಾನಗಳ ಸರ್ವಸಂಬಂಧಗಳೂ ಅತೀವ ಹಿತಕರವೆನ್ನುವಂತಿವೆ.

ರುಮೇನಿಯಾದ ಪ್ರತಿನಿಧಿ ವ್ರೋ|ಮೈಬಿಲ್ ಹೆಸೆಗನುರವರು ಸಂ. ರಾ. ಸಂಘದ ಭದ್ರತಾ ಮಂಡಳಿಯನ್ನು ಉದ್ದೇಶಿಸಿ ಮಾಡಿದ ಭಾಷಣವು ವಸ್ತು ಸ್ಥಿತಿಯನ್ನು ಸುಸ್ಪಷ್ಟವಾಗಿ ಪ್ರತಿಬಿಂಬಿಸಿ, ಕಾಶ್ಮೀರದ ಪ್ರಶ್ನೆಯೇ ಉಳಿದಿಲ್ಲ; ಅದೆಂದೂ ಬಗೆ ಹರಿಸಲ್ಪಟ್ಟಿದೆ ಎಂಬ ಭಾರತದ ನೀತಿ-ನಿಲುಮೆಗಳನ್ನು ಸಂಪೂರ್ಣವಾಗಿ ಬೆಂಬಲಿಸುತ್ತದೆ. ವ್ರೋ॥ ಹೆಸೆಗನು ಹೀಗೆಹೇಳುತ್ತಾರೆ:

"ಕಾಶ್ಮೀರದ ಬಗ್ಗೆ ಈಗ ನಡೆದ ಚರ್ಚೆಯನ್ನೂ ಈ ಮೊದಲು ನಡೆದ ಚರ್ಚೆಯನ್ನೂ ಹೋಲಿಸಿದಾಗ, ಅದು ಮೂಲತಃ ಮೊದಲಿನಂತೆಯೇ ಇರುವುದು ತಿಳಿಯುತ್ತದೆ. ಸಮಸ್ಯೆಗಳು ಸಹ ಹಿಂದಿನವೇ ಆಗಿದ್ದು ಹಳೆಯವಾದಗಳನ್ನೇ ಪುನರುಚ್ಚರಿಸುವುದು ನಮಗೆ ಕಂಡು ಬರುತ್ತದೆ. ಆದುದರಿಂದ ಭದ್ರತಾ ಮಂಡಳವು ಈ ಪ್ರಶ್ನೆಯನ್ನು ಅವಸರದಿಂದ ಪರಿಶೀಲಿಸುವುದು ಸಮರ್ಥನೀಯವೆನಿಸುವಂತಹ ಯಾವುದೇ ಹೊಸ ಅಂಶಗಳೂ ಉದ್ಭವಿಸಿಲ್ಲವೆಂದು ನಿರ್ಣಯಿಸಬಹುದು.

"ಈ ಸಮಸ್ಯೆಗೆ ಭದ್ರತಾ ಮಂಡಳವು ಸರಿಯಾದ ಪರಿಹಾರವನ್ನು ಕಂಡು ಹಿಡಿಯಬೇಕಾದರೆ, ಈ ವರೆಗೆ ನಡೆದಿರುವ ಚರ್ಚೆಯನ್ನು ವಿಶ್ಲೇಷಿಸಬೇಕು; ಮತ್ತು ನಿಜಸ್ಥಿತಿ, ಅಂದರೆ ಈಗಿನ ಪರಿಸ್ಥಿತಿಯ ಕಡೆಗೆ ಲಕ್ಷ್ಯವೀಯಬೇಕು—ಇದು ರುಮೇನಿಯಾದ ಅಭಿಪ್ರಾಯ. ಭದ್ರತಾ ಮಂಡಳವು ಕಾಶ್ಮೀರ ಸಮಸ್ಯೆಯನ್ನು ಚರ್ಚಿಸಲು ಪ್ರಾರಂಭಿಸಿದ ಬಳಿಕ ೧೪ ವರ್ಷಗಳು ಸಂದು ಹೋಗಿರುವುದಷ್ಟೇ ಅಲ್ಲದೆ ಅನೇಕ ಬದಲಾವಣೆಗಳೂ ಆಗಿರುವುದರಿಂದ ಮಂಡಳವು ಈಗ ಅದರ ಕಡೆಗೆ ಲಕ್ಷ್ಯವೀಯಬೇಕೆಂಬುದೇ ನಮ್ಮ ಅಭಿಮತ. ಈ ಪ್ರಶ್ನೆಯನ್ನು ಕೇವಲ ನ್ಯಾಯ ದೃಷ್ಟಿಯಿಂದ ನೋಡಿದರೆ, ಜಮ್ಮು ಕಾಶ್ಮೀರ ರಾಜ್ಯದ ಸ್ಥಾನಮಾನವೇನೆಂಬ ಪ್ರಶ್ನೆಯನ್ನು ಉತ್ತರಿಸುವುದು ಕಠಿನವಲ್ಲ. ಜಮ್ಮು-ಕಾಶ್ಮೀರವನ್ನು ಭಾರತದೊಂದಿಗೆ ವಿಲೀನಗೊಳಿಸಿದ್ದರ ಕ್ರಮ ಬದ್ಧತೆಯನ್ನು ಆಹ್ವಾನಿಸುವಂತಿಲ್ಲ. ಇದನ್ನು ಆಹ್ವಾನಿಸುವುದೆಂದರೆ, ಭಾರತ-ಪಾಕಿಸ್ತಾನಗಳ ರಚನೆ ಹಾಗೂ ಅವುಗಳಿಗೆ ನೀಡಿರುವ ಸ್ವಾತಂತ್ರ್ಯವನ್ನೇ ಆಹ್ವಾನಿಸುವಂತಾಗುವುದು.

"ಕಾಶ್ಮೀರವನ್ನು ಭಾರತದೊಂದಿಗೆ ವಿಲೀನಗೊಳಿಸಿರುವುದಕ್ಕೆ ಇಂದಿಗೂ ಅಲ್ಲಿಯ ಜನರ ಬೆಂಬಲವಿಲ್ಲವೆಂದು ಪಾಕಿಸ್ತಾನ ಪ್ರತಿನಿಧಿಗಳು ಹೇಳಿದ್ದಾರೆ. ಆದರೆ, ೧೯೪೮ರಿಂದ ೧೯೬೨ರ ವರೆಗಿನ ಅವಧಿಯಲ್ಲಿ ಜಮ್ಮು-ಕಾಶ್ಮೀರ ರಾಜ್ಯವು ಯಾವ ರೀತಿ ರೂಪುಗೊಂಡಿತು ಎಂಬುದನ್ನು ನೋಡಿದಾಗ, ಅದು ಸಂಪೂರ್ಣವಾಗಿ ಭಾರತದೊಂದಿಗೆ ಐಕ್ಯವಾದುದು ವ್ಯಕ್ತವಾಗುವುದು ಕಾಶ್ಮೀರವನ್ನು ಭಾರತದೊಂದಿಗೆ ವಿಲೀನಗೊಳಿಸುವ ಪ್ರಶ್ನೆಯ ಬಗ್ಗೆ ಅಲ್ಲಿಯ ಜನಾಭಿಪ್ರಾಯ ಕೇಳಬೇಕೆಂಬ ವಿಚಾರಕ್ಕೆ ೧೯೪೮ರಲ್ಲಿ ಏನಾದರೂ ಬೆಲೆ ಇದ್ದಿರಬಹುದಾದರೂ ಇಂದು ಆ ವಿಷಯವನ್ನು ಎತ್ತುವುದೆಂದರೆ ನಿಜ ಸಂಗತಿಯನ್ನು ಕಡೆಗಡಿಸಿದಂತೆಯೇ ಸರಿ. ೧೯೫೧ ೧೯೫೭ ಮತ್ತು ೧೯೬೨ರಲ್ಲಿ ಚುನಾವಣೆಗಳಲ್ಲಿ ಕಾಶ್ಮೀರದ ಜನರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಆದುದರಿಂದ ಜಮ್ಮು ಮತ್ತು ಕಾಶ್ಮೀರ ರಾಜ್ಯದ ಒಡೆತನದ ಪ್ರಶ್ನೆಯನ್ನು ಚರ್ಚಿಸಲು ಸದ್ಯಕ್ಕೆ ಯಾವುದೇ ಕಾಯದೆ ಬದ್ಧ ಆಧಾರವಿಲ್ಲವೆಂಬುದು ಸ್ಪಷ್ಟವಿದೆ.

"ಆದುದರಿಂದ ಸಂಬಂಧಿಸಿದ ರಾಷ್ಟ್ರಗಳು ನೇರ ಮಾತುಕತೆಗಳ ಮೂಲಕ ಈ ತಂಟೆಗೆ ಪರಿಹಾರವನ್ನು ಕಂಡುಹಿಡಿಯಲು ಸಾಧ್ಯವಾಗುವಂತೆ ಅವುಗಳಿಗೆದುರಾಗಿರುವ ತೊಂದರೆಗಳನ್ನು ನಿವಾರಿಸಲು ಮಂಡಳವು ಉಪಯುಕ್ತ ನೆರವು ನೀಡಬಲ್ಲದು ಎಂದು ನನ್ನ ಅಭಿಪ್ರಾಯ. ಹೊರಗಿನವರು ಕೃತ್ರಿಮ ವಿಧಾನಗಳಿಂದ ಈ ಪ್ರಶ್ನೆಯನ್ನು ಕ್ಲಿಷ್ಟಗೊಳಿಸುವುದನ್ನು ತಪ್ಪಿಸಲು ಭದ್ರತಾ ಮಂಡಳವು ಪ್ರಯತ್ನಿಸುವುದೆಂದು ನಾವು ನಂಬಿದ್ದೇವೆ.

(೧೦ನೇ ಪುಟ ನೋಡಿರಿ)

ಭದ್ರತಾ ಮಂಡಳದಲ್ಲಿ ಭಾರತದ ಧೋರಣೆಗೆ ಬೆಂಬಲವನ್ನು ವ್ಯಕ್ತಪಡಿಸಿದ ರಾಷ್ಟ್ರದ ಪ್ರತಿನಿಧಿಗಳನ್ನು ಕಾಣಬಹುದು.



ವೈದ್ಯ ವಿಜ್ಞಾನ ಹೇಳುತ್ತದೆ

ಹೃದ್ರೋಗಕ್ಕೆ ಹೆದರಬೇಕಾಗಿಲ್ಲ

ಲೇ: ಡಾ। ವಾಲ್ಟನ್ ಲಿಲ್ಲೆಹೈ.

ಕಳೆದ ದಶಕದಲ್ಲಿ ಹೃದ್ರೋಗದ ಶಸ್ತ್ರ ಚಿಕಿತ್ಸೆಯಲ್ಲಿ ಸಂಭವಿಸಿದಷ್ಟು ಮಹತ್ವದ ಪ್ರಗತಿ ಇತರ ಯಾವ ವೈದ್ಯಕ್ಷೇತ್ರದಲ್ಲೂ ಸಂಭವಿಸಿಲ್ಲ. ಈ ಪ್ರಗತಿಯಿಂದಾಗಿ, ಸಾಮಾನ್ಯವಾಗಿ ಎಲ್ಲ ಹೃದ್ರೋಗಗಳ ಚಿಕಿತ್ಸೆಯಲ್ಲಿ ಆಶಾದಾಯಕ ಪರಿವರ್ತನೆಯಾಗಿದೆ.

ಪ್ರಪಂಚದ ಎಲ್ಲ ದೇಶಗಳಲ್ಲಿ ಸಾರ್ವತ್ರಿಕವಾಗಿರುವ ಹೃದ್ರೋಗವು ಮೂಲತಃ ಎರಡು ಬಗೆಯದು— —ಜನ್ಮತಃ ಬಂದುದು ಮತ್ತು ತದನಂತರ ವ್ಯಾಪ್ತವಾದುದು. ಜನ್ಮತಃ ಇರುವ ರೋಗಗಳಿಗೆ, ಜನನಕ್ಕೆ ಮುಂಚೆ ಹೃದಯದ ಬೆಳವಣಿಗೆ ಯಾವುದಾದರೂ ಕಾರಣದಿಂದ ಕುಂಠಿತವಾದುದೇ ಕಾರಣ ಅನಂತರ ಹೃದ್ರೋಗಿಗಳಾಗುವ ವ್ಯಕ್ತಿಗಳಲ್ಲಿ, ಜನ್ಮಕಾಲದಲ್ಲಿ ಹೃದಯವು ದೋಷರಹಿತವಾಗಿರುತ್ತದೆ. ಆದರೆ ಅನಂತರ ಅನೇಕ ಬಾರಿ ೫ರಿಂದ ೧೫ ವರ್ಷಗಳ ನಡುವಿನ ಮುಸ್ಸಿನಲ್ಲಿ—ಹೃದಯಕ್ಕೆ ಹಾನಿಯಾಗುತ್ತದೆ.

ಇತ್ತೀಚಿನ ವರೆಗೆ, ಎಂದರೆ ೧೯೫೮ರ ವರೆಗೂ, ಅ ಜನ್ಮ ರೋಗಗಳ ಹಾಗೂ ಸ್ವಾರ್ಜಿತ ರೋಗಗಳ ಶಸ್ತ್ರ ಚಿಕಿತ್ಸೆಯು ಬಲು ಮಟ್ಟಿಗೆ ಹೃದಯದ ಹೊರಗಿನ ಸರಿಸ್ಥಿತಿಗಳಿಗೆ ಸಂಪೂರ್ಣವಾಗಿ ಪರಿಮಿತವಾಗಿತ್ತು. ಹೃದಯದೊಳಗಿನ ಪರಿಸ್ಥಿತಿಗಳಿಂದಾದ ದೋಷಗಳು ಹೆಚ್ಚಿನ ದೋಷಗಳು ಇಂಥವುಗಳೇ—ಗುಣವಾಗುವ ಅಸೆಯೇ ಇರಲಿಲ್ಲ

ಇಂದು ಮಿನ್ನೆಸೋಟಾ ವಿಶ್ವವಿದ್ಯಾನಿಲಯದಲ್ಲಿ ಮತ್ತು ಅಮೆರಿಕದಾದ್ಯಂತ ಇತರ ಅನೇಕ ವೈದ್ಯ ಕೇಂದ್ರಗಳಲ್ಲಿ ಇಂಥ ಹೃದಯದ ಅಂತರಿಕ ರೋಗಗಳಿಗೆ ಶಸ್ತ್ರ ಚಿಕಿತ್ಸೆಗಳು ಸರ್ವ ಸಾಧಾರಣವಾಗಿವೆ.

ಈ ರೀತಿಯ ಆಶಾದಾಯಕ ಮುನ್ನಡೆಗಳಿಗೆ ಅನೇಕ ವಿದ್ಯಮಾನಗಳು ಕಾರಣವಾಗಿರುತ್ತವೆ. ಹೃದಯದ ಒಳಭಾಗದ ಅವರಣದ ಆತಂಕವನ್ನು ನಿವಾರಿಸಿದುದು ಬಹುಶಃ ಅತಿ ಮುಖ್ಯ ವಿದ್ಯಮಾನ. ಅನೇಕ ವರ್ಷಗಳಿಂದ ಸರ್ಜನ್‌ರನ್ನಿದಿರಿಸುತ್ತಿದ್ದ ದೈಹಿಕ ಸೀಮೆಗಳ ಕೈಕೆ ಹೃದಯದ ಹೊರಾವರಣವು ಕೊನೆಯದು. ಅದು ಪ್ರಗತಿಗೆ ದೊಡ್ಡ ಆತಂಕವಾಗಿತ್ತು.

ದೀರ್ಘ ಅವಧಿಗಳ ವರೆಗೆ ತೆರೆದ ಹಾಗೂ ಖಾಲಿಯಾಗಿರುವ ಹೃದಯದೊಳಗೆ ಕಾರ್ಯ ನಿರ್ವಹಿಸಲು ಸರ್ಜನ್‌ರಿಗೆ ಅವಕಾಶ ಕೊಡುವ ಸರಳ, ಸುರಕ್ಷಿತ ಹಾಗೂ ಪರಿಣಾಮಕಾರಿ ವಿಧಾನಗಳನ್ನು ತೀವ್ರ ಸಂಶೋಧನೆಯು ಮೂಲಕ ಕಂಡುಹಿಡಿದು ಈ ಆತಂಕವನ್ನು ನಿವಾರಿಸಲಾಯಿತು. ಇದರಿಂದ ಸರ್ಜನ್‌ರಿಗೆ ಅವಸರವಿಲ್ಲದೆ ಕರಾರು ವಾಕ್ಯಾಗಿ ಎತ್ತು ತಮ್ಮ ಸಮಕ್ಷದಲ್ಲಿ ಅವಶ್ಯನಿರುವ ತಿದ್ದುಪಡಿಯ ಕ್ರಮಗಳನ್ನು ಕೈಗೊಳ್ಳಲು ಸಾಧ್ಯವಾಗುವುದು.

ಹೀಗೆ ಹೃದ್ರೋಗ ಚಿಕಿತ್ಸೆಯಲ್ಲಿ ಒಂದು ತೀರ ನೂತನ ಯುಗ ಪ್ರಾರಂಭವಾಗಿದೆ ಇದರ ಪರಿಣಾಮವಾಗಿ ಕ್ರಮವಾಗಿ ಬಲಗುಂದಿರುವ ಅನೇಕ ರೀತಿಯ ಹೃದಯ ರೋಗಗಳನ್ನು, ಮುಂಚೆ ಗುಣವಾಗಲಸಾಧ್ಯವೆಂದು ಭಾವಿಸಲಾಗಿದ್ದ ರೋಗಗಳನ್ನು ಹೊಸ ರೀತಿಯ ತೆರೆದ ಹೃದಯದ ವಿಧಾನಗಳಿಂದ ಸಫಲವಾಗಿ ಚಿಕಿತ್ಸೆ ಮಾಡಲಾಗಿದೆ.

೧೯೫೨ನೆ ಸೆಪ್ಟೆಂಬರ್ ೨ರಂದು ಮಿನ್ನೆಸೋಟಾ ವಿಶ್ವವಿದ್ಯಾನಿಲಯದಲ್ಲಿ ಈ ವಿಷಯಕ್ಕೆ ಸಂಬಂಧಿಸಿದ ಮಹತ್ವಪೂರ್ಣ ಕ್ರಾಂತಿ ಜರಗಿತು. ಆ ದಿನ ಮೇಲಿನ ಹೃತ್‌ಕಕ್ಷಿಯ ಒಳಭಾಗದಲ್ಲಿ ಅಸ್ವಾಭಾವಿಕವಾದ ಒಂದು ತೂತಿದ್ದ, ಐದು ವರ್ಷ ಪ್ರಾಯದ ಹುಡುಗಿಯೊಬ್ಬಳಿಗೆ, ಇತಿಹಾಸದಲ್ಲಿ ಮೊದಲ ಬಾರಿಗೆ ಫಲಪ್ರದವಾಗಿ ತೆರೆದ ಹೃದಯದ ಶಸ್ತ್ರ ಚಿಕಿತ್ಸೆಯನ್ನು ಮಾಡಲಾಯಿತು. ಇದಕ್ಕೆ ಮುಂಚೆ ಪ್ರಯೋಗಾಲಯಗಳಲ್ಲಿ ಪ್ರಾಣಿಗಳ ಮೇಲೆ ಇದೇ ಬಗೆಯ ಶಸ್ತ್ರಕ್ರಿಯೆಗಳನ್ನು ಮಾಡಲಾಗುತ್ತು. ಮಾನವ ವ್ಯಕ್ತಿಯ ಮೇಲೆ ನಡೆಸಿದ ಈ ಶಸ್ತ್ರ ಚಿಕಿತ್ಸೆ ಫಲಪ್ರದವಾದ ನಂತರ, ಅಮೆರಿಕದ ಅನೇಕ ವೈದ್ಯಕೀಯ ಕೇಂದ್ರಗಳಲ್ಲಿ ಇದೇ ಬಗೆಯ ಶಸ್ತ್ರಕ್ರಿಯೆಗಳು ನಿತ್ಯಕ್ರಮವಾದವು.

ಹರ್ಟ್-ಲಂಗ್ ಮೆಷೀನ್ ಎಂಬ ಯಂತ್ರದ ಶೋಧನೆಯು ತದನಂತರದ ಮಹತ್ವಪೂರ್ಣ ಮುನ್ನಡೆ. ಈ ಯಂತ್ರವು ತಾತ್ಕಾಲಿಕವಾಗಿ ಹೃದಯದ ಮತ್ತು ಶ್ವಾಸಕೋಶಗಳ ಕಾರ್ಯಗಳನ್ನು ವಹಿಸಿಕೊಳ್ಳುತ್ತದೆ. ಇದರಿಂದಾಗಿ ಸರ್ಜನ್‌ಗೆ ಹೃದಯಕ್ಕೆ ಸಂಬಂಧಿಸಿದ ಯಾವುದೇ ಬಗೆಯ ಶಸ್ತ್ರಕ್ರಿಯೆಯನ್ನು ಮಾಡಲು ಬೇಕಾದಷ್ಟು ಕಾಲಾವಕಾಶ ಲಭಿಸುವುದು.

ಸುರಕ್ಷಿತವಾದ, ದಕ್ಷವಾದ ಹಾಗೂ ವಿಶ್ವಾಸಾರ್ಹವಾದ ಪಂಪ್-ಆಕ್ಸಿಜನೇಟರ್ ಅಥವಾ ಹರ್ಟ್‌ಲಂಗ್ ಮೆಷೀನನ್ನು ಪರಿಪೂರ್ಣಗೊಳಿಸಲು ಅನೇಕ ವೈದ್ಯ ಕೇಂದ್ರಗಳಲ್ಲಿ ಅನೇಕ ವರ್ಷಗಳ ವರೆಗೆ ಸಂಶೋಧಕರು ಪರಿಶ್ರಮಿಸಿದರು. ಕಟ್ಟಕಡೆಗೆ ಅವರ ಪ್ರಯತ್ನಗಳು ಸಫಲವಾದವು, ೧೯೫೫ರ ಪ್ರಾರಂಭದಲ್ಲಿ ಮಿನ್ನಿಯೂ ಪೊಲಿಸ್ (ಮಿನ್ನೆಸೋಟ)ನಲ್ಲಿ ಬಹು ತೃಪ್ತಿಕರವಾದ ಸರಳ ಯಂತ್ರವು ದಿನನಿತ್ಯದ ಉಪಯೋಗಕ್ಕೆ ಒಂತು. ತೆರೆದ ಹೃದಯದ ಶಸ್ತ್ರಚಿಕಿತ್ಸೆಯು ಅಪರೂಪವಾಗಿದ್ದುದು ಬಳಿಕ ಮೂಮೂಲಾಯಿತು. ಅದು ಪ್ರಾರಂಭವಷ್ಟೆ.

ಇಂದು ಆಸ್ಪತ್ರೆಯಲ್ಲಿ, ಇಂಥ ಹೃದಯದ ಶಸ್ತ್ರಕ್ರಿಯೆಗಳು ನಿತ್ಯ ಕ್ರಮಗಳಾಗಿರುವ ಆಸ್ಪತ್ರೆಗಳು ಕನಿಷ್ಟ ಪಕ್ಷ ೧೫೦ ಇವೆ. ಈ ಸಂಖ್ಯೆಯು ಕ್ರಮವಾಗಿ ಹೆಚ್ಚುತ್ತಿದೆ. ಸಂಶೋಧನೆಯನ್ನು ತೀವ್ರಗೊಳಿಸಿ, ಗಮನಾರ್ಹ ಪ್ರಯೋಜನಗಳನ್ನು ಸಾಧಿಸಲಾಗಿದೆ. ರೋಗಿಗಿರುವ ಅಪಾಯಗಳು ಕಡಿಮೆಯಾಗಿವೆ, ಕೆಲವು ರೀತಿಯ ಹೃದ್ರೋಗಗಳ ಚಿಕಿತ್ಸೆಯಲ್ಲಿ ದಿಟ್ಟತನದ ಹಾಗೂ ಕುಶಲ ರೀತಿಯ ಹೊಸ ವಿಧಾನಗಳನ್ನು ಕಂಡುಹಿಡಿಯಲಾಗಿದೆ.

ಜನ್ಮತಃ ಹೃದಯದ ಕುಂದುಗಳಿರುವ ರೋಗಿಗಳಲ್ಲಿ ಹೆಚ್ಚಿನವರಿಗೆ ಇಂದು ತೆರೆದ ಹೃದಯದ ಶಸ್ತ್ರಕ್ರಿಯೆಯು ಮೂಲಕ ಗುಣ ಪಡೆಯುವ ಅಸೆಯಿದೆ. ಜನ್ಮತಃ ಇರುವ ಈ ಕೊರತೆಗಳು, ಒಳಗಿನ ಕುಕ್ಷಿಗಳಲ್ಲಿನ ಅಸ್ವಾಭಾವಿಕ ತೂತುಗಳಿರಬಹುದು, ವಿರೂಪಗೊಂಡ ಹೃತ್ಕವಾಟಗಳಿರಬಹುದು ಅಥವಾ ಸ್ಥಾನಪಲ್ಲಟವಾಡರಚನೆಗಳಿರಬಹುದು.

ಜನನದ ನಂತರ ಪಡೆದ ಹೃದ್ರೋಗಗಳ ವಿಭಾಗಗಳಲ್ಲೂ ಮಹತ್ವಪೂರ್ಣ ಪ್ರಯೋಜನಗಳು ಲಭಿಸಿವೆ. ಮುಂಚೆ ಮೃತರಾಗುತ್ತಿದ್ದ ಅಥವಾ ತೀವ್ರವಾಗಿ ಒಲ ಹೀನರಾಗುತ್ತಿದ್ದ ರೋಗಿಗಳ ಪೈಕಿ ಹೆಚ್ಚಿನವರಿಗೆಈಗ ಸಶಸ್ತ್ರಕ್ರಿಯೂ ವಿಧಾನಗಳ ಮೂಲಕ ಗುಣ ಲಭಿಸುತ್ತಿದೆ.

ಕಳೆದ ವರ್ಷ, ರೋಗದಿಂದ ಪೂರ್ಣವಾಗಿ ನಾಶವಾದ ಹೃತ್ಕವಾಟಗಳ ಸ್ಥಳದಲ್ಲಿ ಒಂದು ವಿಶೇಷ ರೀತಿಯ ಪ್ಲಾಸ್ಟಿಕ್‌ನಿಂದ ತಯಾರಿಸಿದ ಸಿಂಥೆಟಿಕ್ ಹೃತ್ಕವಾಟಗಳನ್ನು ಇಡಲಾಗಿದೆ.

ಇಷ್ಟೇ ಅಲ್ಲದೆ, ಮುಂಚೆ ದುರ್ಭೇದ್ಯ ಸ್ಥಳಗಳಲ್ಲಿ ಸಂಭವಿಸುತ್ತಿದ್ದ ಎನ್ಸರಿ ಸಂಗಳಿಗೆ (ಹೃತ್ಕುಕ್ಷಿಯ ಅಥವಾ ಅಪಧಮನಿಯ ಉಬ್ಬುವಿಕೆ ಮತ್ತು ಕ್ಷೀಣವಾಗುವಿಕೆ) ಈಗ ಫಲಪ್ರದ ಚಿಕಿತ್ಸೆಯಿದೆ. ಕೆಲವು ರೀತಿಯ ಕೊರೊನರಿ ಹೃದ್ರೋಗಗಳ ಚಿಕಿತ್ಸೆಯಲ್ಲಿ ಈಗ ಬಹಳ ಸುಧಾರಣೆಯಾಗಿದೆ.

ತೆರೆದ ಹೃದಯದ ಶಸ್ತ್ರಕ್ರಿಯೆಯ ವಿಧಾನಗಳನ್ನು ಉಪಯೋಗಿಸಿ, ಸರ್ಜನರು ಹೃದಯವನ್ನು ತೆರೆದು, ಅದ್ದಿನ ರಕ್ತವನ್ನು ಪೂರ್ಣ ಬರಿದುಮಾಡಿ, ನಿಧಾನವಾಗಿ ಒಳಗಿನ ಕುಕ್ಷಿಗಳ ಮತ್ತು ಕವಾಟಗಳ ರಿಪೇರಿಯನ್ನು ಮಾಡಬಲ್ಲರು.

ಮಾನವ ಸೌಖ್ಯ ಮತ್ತು ಆಯುಷ್ಯವನ್ನು ಹೆಚ್ಚಿಸುವ ದಿಶೆಯಲ್ಲಿ ಅನೇಕ ಸಾಧನೆಗಳು ನಡೆದಿವೆ. ತೆರೆದ ಹೃದಯದ ಶಸ್ತ್ರಕ್ರಿಯೆಯು ವೇಗವಾಗಿ, ಉತ್ತಮ ರೀತಿಯಲ್ಲಿಅಭಿವೃದ್ಧಿಗೊಳ್ಳುವುದೆಂದು ನಿರೀಕ್ಷಿಸಬಹುದು. ಏಕೆಂದರೆ ವೈದ್ಯ ವಿಜ್ಞಾನದಲ್ಲಿ ಗುಣವಾಗದ ರೋಗಗಳೇ ಇಲ್ಲ.

"ಸೇವೆಯೇ ಮೊದಲು; ಸೇವೆಯಲ್ಲಿ ಮೊದಲು"

ಈ ಉದಾತ್ತ ಧ್ಯೇಯ ಸಾಧನೆಗಾಗಿಯೇ

— ಕೊರ್ಪೊರೇಶನ್ ಬೇಂಕ್ —

ನಿಮ್ಮ ಹಣಕ್ಕೆ

ಅತ್ಯುತ್ತಮ ಭದ್ರತೆಯೊಂದಿಗೆ ಅತ್ಯಧಿಕ ಬಡ್ಡಿ ಕೊಡುತ್ತಿದೆ.

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಉಡುಪಿ)

ಆಡಳಿತ ಆಫೀಸು: ಮಂಗಳೂರು.

ಅಮೃತ ಬಿಂದು

ನಿದ್ರಿಸುತ್ತಿರುವ ಹಕ್ಕಿಯನ್ನು ಗೂಡು ಸುರಕ್ಷಿತವಾಗಿ ಹೊತ್ತುಕೊಳ್ಳುವಂತೆ ಮೌನವು ಮನುಷ್ಯನಿಗೆ ರಕ್ಷಣೆ ನೀಡುತ್ತದೆ.

o o o

ರಾತ್ರಿ ಇಡೀ ಬಿದ್ದ ಇಬ್ಬನಿ ಹೊವನ್ನು ಅರಳಿಸಿದರೂ, ಹೂ ಇಬ್ಬನಿಯನ್ನು ಹೀರುವ ಸೂರ್ಯರಶ್ಮಿಯೊಡನೆ ನಗುತ್ತದೆ.

o o o

ಸ್ವರ್ಗಕ್ಕಿಂತಲೂ ಮಾತೃಭೂಮಿಯೇ ಹಿರಿದೆಂದು ಸ್ವರ್ಗಕ್ಕೇರಿದ ಮಳೆ ಹನಿ ಆಕಾಶದಿಂದ ಪುನಃ ಭೂಮಿಗೆ ಬರುತ್ತದೆ

o o o

ಜೇಡನ ಬಲೆಯು ಮಂಚಿನ ಹನಿಯನ್ನು ಹಿಡಿದುಕೊಳ್ಳುವಂತೆ ನಟಸಿ ನೊಣವನ್ನು ಹಿಡಿಯುತ್ತದೆ!

o o o

ದೀಪದ ದೀಪ ಹಿಡಿದು ಬಂದಾಗ ಮಾತ್ರ ಪ್ರೇಮದ ಮುಖ ಪರಿಚಯವಾಗುತ್ತದೆ.

o o o

ನಿರಂತರ ತಮಗೆ ನೀರೊದಗಿಸುವದೇ ನದಿಗಳ ಕರ್ತವ್ಯವೆಂದು ಕಾಲ ವೆತಿಳಿದುಕೊಂಡಂತೆ ಮನುಷ್ಯರೂ ಕೂಡ!

o o o

ಚಂದ್ರಕಾಂತಿ ಹೂ ತನ್ನೊಡನೆ ಬೆಳೆದ ಸೇವಂತಿಗೆಯನ್ನು ತನ್ನೊಡನಾಡಿ ಎಂದು ಗಮನಿಸದೆ ತಾನೇ ತಲೆ ಎತ್ತಿ ನಿಂತಿತು. ಸೂರ್ಯನು ಎತ್ತರ ತಗ್ಗನ್ನು ಗಣಿಸದೆ ಎರಡನ್ನೂ ಮುತ್ತಿಕ್ಕಿದನು!

o o o

ಜಗತ್ತನ್ನು ಸಮುದ್ರ ತನ್ನ ನೀರಿನಿಂದ ಆವರಿಸಿ ಹಿಡಿದಿರುವಂತೆ ಜಗತ್ತಿನ ಜನತೆಯ ಹೃದಯವನ್ನು ಹೆಂಗಸಿನ ಕಣ್ಣೀರು ಆವರಿಸಿ ಹಿಡಿದಿದೆ.

o o o

ಒಳ್ಳೆಯದನ್ನು ಮಾಡುವೆನೆಂದು ಓಡಾಡುವವನಿಗೆ ಸ್ವತಹ ತಾನು ಒಳ್ಳೆಯವನಾಗಲು ಬಿಡುವಿರದು!

o o o

ಮಳೆಗಾಲದ ಮೋಡ ತನ್ನ ಸರ್ವಸ್ವವನ್ನು ಮಳೆಯಾಗಿ ಭೂಮಿಗೆರೆಯುತ್ತದೆ. ಸರ್ವ ತ್ಯಾಗಮಾಡಿದ ಬಡ ಮೋಡ ಬೇಸಿಗೆಯಲ್ಲಿ ತನ್ನ ಕೊಡುಗೆಯಿಂದ ಬೆಳೆದ ಸಂಪದ್ಭರಿತ ಭೂಮಿಯನ್ನು ಮೇಲಿನಿಂದ ನೋಡಿ ಆನಂದಿಸುತ್ತದೆ.

o o o

ಮನುಷ್ಯನು ದ್ವೇಷ, ಅಸೂಯೆಗಳಿಂದ ಜೀವನವನ್ನು ರಣರಂಗಮಾಡಿ ಸಾಯುತ್ತಾನೆ. ದೇವರು ಆತನನ್ನು ಸೃಷ್ಟಿಸಿದ ನಾಚಿಕೆಯಿಂದ ಆತನ ನೆನಪು. ಅಳಿಯುವಂತೆ ಹಸುರು ಹುಲ್ಲಾಗಿ ಮೇಲೆ ಹರಡಿಮರೆ ಮಾಚುತ್ತಾನೆ!

ಭಾರತದ ಮೇಲೆ
ಅಮೆರಿಕೆಯ ಕುದುರೆ ಸವಾರಿ

ಪಾಕಿಸ್ತಾನದ ಬೆನ್ನು ಹತ್ತಿ ಸವಾರಿ ಮಾಡುವ ಅಮೆರಿಕೆಯು ಬ್ರಿಟನ್ ಮತ್ತು ಆಯರ್ಲೆಂಡುಗಳನ್ನು ಬಗಲಿಗೆ ಹಾಕಿಕೊಂಡು ಭಾರತದ ಪೈರಿನ ಮೇಲೆ ತನ್ನ ಕುದುರೆಯೋಡಿಸುವ ಸಾಹಸಮಾಡಿತು. ಕಾಶ್ಮೀರದ ವಿಷಯದಲ್ಲಿ ತಾನು ಬಯಸುವಂತಹ ಗೊತ್ತುವಳಿಯೊಂದನ್ನು ಆಯರ್ಲೆಂಡಿನ ಮೂಲಕ ಮಂಡಿಸಿ ಬ್ರಿಟನ್ನಿನಿಂದ ಸಮರ್ಥಿಸಿ ಕೊಂಡಿತು.

ಆಯರ್ಲೆಂಡು ಮಂಡಿಸಿದ ಗೊತ್ತುವಳಿಯಲ್ಲಿ ಐದು ಅಂಶಗಳಿವೆ.

ಭದ್ರತಾ ಮಂಡಳವು

೧ ಎರಡೂ ಪಕ್ಷಗಳಿಗೆ ೧೭-೧-೪೮ರ ಗೊತ್ತುವಳಿ ಮತ್ತು ಭಾರತ ಹಾಗೂ ಪಾಕಿಸ್ತಾನಗಳಿಗೋಸ್ಕರ ಸಂಯುಕ್ತರಾಷ್ಟ್ರ ಸಂಘದ ಕಮಿಶನ್ನಿನ ೧೩-೮-೪೮ ಮತ್ತು ೫—೧—೪೯ರ ಗೊತ್ತುವಳಿಗಳಲ್ಲಿರುವ ಸಿದ್ಧಾಂತಗಳನ್ನು ನೆನಪು ಮಾಡುತ್ತದೆ.

೨. ಅನುಚ್ಛೇದ ೩೩ ಮತ್ತು ತಾಮ್ರಪಟದ ಇತರ ಸ್ವಾವಧಾನಗಳಂತೆ ಅಂತಿಮ ಸಮಾಧಾನಕ್ಕಾಗಿ ಎರಡೂ ಪಕ್ಷಗಳು ಸಂಧಾನದ ಮಾತುಕತೆಗಳನ್ನು ಯಥಾ ಸಂಭವ ಶೀಘ್ರವಾಗಿ ಪ್ರಾರಂಭಿಸಬೇಕೆಂದು ಭಾರತ ಮತ್ತು ಪಾಕ್ ಸರಕಾರಗಳನ್ನು ವತ್ತಾಯಿಸುತ್ತದೆ.

೩. ಸಂಧಾನದ ವಾತೆಗಳಿಗೆ ಅನುಕೂಲ ಯೋಗ್ಯ ವಾತಾವರಣವನ್ನು ನಿರ್ಮಿಸಲು ಎಲ್ಲ ಸಂಭವನೀಯ ಉಪಾಯಗಳನ್ನು ಕೈಗೊಳ್ಳಬೇಕೆಂದು ಎರಡೂಸರಕಾರಗಳನ್ನು ವಿನಂತಿಸುತ್ತದೆ.

೪. ಸ್ಥಿತಿಯು ಸಂಗೀನವಾಗುವ ಯಾವುದೇ ಕೇಳಿಕೆಗಳನ್ನು ಕೊಡಬಾರದು ಮತ್ತು ಕಾರ್ಯವನ್ನು ಮಾಡಬಾರದು ಎಂದು ಭಾರತ ಮತ್ತು ಪಾಕ್ ಸರಕಾರಗಳನ್ನು ವತ್ತಾಯಿಸುತ್ತದೆ.

೫. ಈ ಗೊತ್ತುವಳಿಯ ಶರತ್ತುಗಳನ್ನು ಕಾರ್ಯಾನ್ವಿತ ಮಾಡುವಲ್ಲಿ ಎರಡೂ ಸರಕಾರಗಳು ಕೇಳಿಕೊಳ್ಳುವ ಸಹಾಯವನ್ನು ನೀಡುವಂತೆ ಪ್ರಧಾನ ಕಾರ್ಯದರ್ಶಿಯವರನ್ನು ಪ್ರಾರ್ಥಿಸುತ್ತದೆ.

ಬ್ರಿಟನ್ನು ಈ ಗೊತ್ತುವಳಿಯನ್ನು ಸಮರ್ಥಿಸಿ ಮಾತಾಡಿತು. ಭದ್ರತಾ ಸಮಿತಿಯಲ್ಲಿ ಗೊತ್ತುವಳಿಯು ಸ್ವೀಕಾರವಾಗಬೇಕಾದರೆ ಸ್ಥಾಯೀರಾಷ್ಟ್ರಗಳು ಪ್ರತಿಷೇಧಾಧಿಕಾರವನ್ನು ಉಪಯೋಗಿಸಬಾರದು; ಮತ್ತು ಒಟ್ಟು ೭ ಮತಗಳು ಪರವಾಗಿ ಬೀಳಬೇಕು. ಅಮೆರಿಕೆ, ಫ್ರಾನ್ಸ್ ಬ್ರಿಟನ್, ಚಿಲಿ, ವೆನೆಜೂಲಾ, ಕ್ವೊಮಿಟಾಂಗ ಚೀನ ಮತ್ತು ಆಯರ್ಲೆಂಡುಗಳು ಗೊತ್ತುವಳಿಗೆ ಪರವಾಗಿ ರಶ್ಯ ಮತ್ತು ರುಮೇನಿಯಗಳು ವಿರುದ್ಧವಾಗಿ ಮತವಿತ್ತುವು. ಘಾನಾ ಮತ್ತು ಸಂ. ಅರಬ ಪ್ರಜಾರಾಜ್ಯಗಳು ಮತದಾನದಲ್ಲಿ ಭಾಗವಹಿಸಲಿಲ್ಲ. ಹೀಗೆ ಒಟ್ಟು ಏಳುಮತಗಳು ಗೊತ್ತುವಳಿಗೆ ಪರವಾಗಿ ಸಿಕ್ಕಿತಾದರೂ ರಶ್ಯದ ಮತವು ನಿಷೇಧಾಧಿಕಾರವಾದುದರಿಂದ ಅದು ವ್ಯರ್ಥವಾಯಿತು

ಗೊತ್ತುವಳಿಯಲ್ಲಿ ಭಾರತವು ಒಪ್ಪದಿರುವ ಅಂಶಗಳಿರುವುದರಿಂದ ಅದು ಅದನ್ನು ವಿರೋಧಿಸಿತು. ಮೊದಲನೆಯದಾಗಿ, ಭಾರತದ ಭೂಭಾಗವನ್ನು ಆಕ್ರಮಿಸಿದ ಪಾಕಿಸ್ತಾನವನ್ನೂ ಆಕ್ರಾಂತ ರಾಷ್ಟ್ರ ಭಾರತವನ್ನೂ ಒಂದೇ ಸ್ಥಾನದಲ್ಲಿ ಉಲ್ಲೇಖಿಸಿದುದು ಗೊತ್ತುವಳಿಯಲ್ಲಿನ ದೋಷ. ಹಾಗೆಯೇ ಭಾರತವು ಪದೇ ಪದೇ ಪಾಕಿಸ್ತಾನದ ವಂಪ್ರರನ್ನು ಮಾತುಕತೆ ನಡೆಸಲು ಆಮಂತ್ರಣಮಿತ್ತಿದ್ದರೂ ಅದನ್ನವರು ಸ್ವೀಕರಿಸದೆ ಇರುವಾಗ, ತನ್ನನ್ನು ಈ ವಿಷಯದಲ್ಲಿ ದೋಷಿಯೆಂದು ಹೆಸರಿಸುವುದನ್ನು ಭಾರತವು ಒಪ್ಪುವುದಿಲ್ಲ. ಮಾತ್ರವಲ್ಲದೆ, ೪೭ರಲ್ಲಿನೇ ಇಸವಿಗಳ ಗೊತ್ತುವಳಿಯನ್ನು ನೆನಪಿಗೆ ತರುವುದರ ಮೂಲಕ ಕಳೆದ ಹದಿನಾಲ್ಕು ವರ್ಷಗಳ ಇತಿಹಾಸವನ್ನು ಕಡೆಗಣಿಸಿದಂತಾಗುವುದರಿಂದ, ಪ್ರಸ್ತುತದ ಪರಿಸ್ಥಿತಿಯನ್ನು ಗಮನಕ್ಕೆ ತಾರದಿರುವುದರಿಂದ ಗೊತ್ತುವಳಿಯು ಪಾಕಿಸ್ತಾನದ ಕಡೆಗೆ ಏಕಪಕ್ಷೀಯವಾದ ಪಕ್ಷಪಾತವನ್ನು ತೋರಿಸುತ್ತದೆ.

ಕಾಶ್ಮೀರದ ಸಂಬಂಧದಲ್ಲಿ ಕಳೆದ ೧೪ ವರ್ಷಗಳಲ್ಲಿ ಆದ ಪರಿವರ್ತನೆಗಳನ್ನೂ ಪಾಕಿಸ್ತಾನವು ಅಕ್ರಮಣಕಾರ ರಾಷ್ಟ್ರವೆಂಬುದನ್ನೂ ಅಲ್ಲಗಳೆಯುವುದು ಇತಿಹಾಸಕ್ಕೆ ಮಾಡಿದ ಅಪಮಾನ. ರಶ್ಯವು ೧೦೦ನೆಯ ಬಾರಿಗೆ ತನ್ನ ಪ್ರತಿಷೇಧಾಧಿಕಾರವನ್ನು ಉಪಯೋಗಿಸಿದುದಕ್ಕೆ ಆಕ್ಷೇಪ ಸೂಚಿಸಿದ ಅಮೆರಿಕೆಯೇ ಇತಿಹಾಸಕ್ಕೆ ಅಪಚಾರ ಮಾಡುವಲ್ಲಿ ಮುಂದಾದುದು ಪಾಕಿಸ್ತಾನಕ್ಕೆ ಪರ ಮತ್ತು ಭಾರತ ವಿರೋಧಿ ನೀತಿಯಿಂದ ಮಾತ್ರ. ಈ ಘಟನೆಯ ಪ್ರಭಾವ ಜಗತ್ತಿನ ರಾಜಕಾರಣದ ಮೇಲಾಗದುಳಿಯಿತು.

ಆಬು ಬೆಟ್ಟಗಳ ನಡುವೆ
ದೇವತೆಗಳು ತೋಡಿದ ಸರೋವರ

ಪರ್ವತರಾಜ ಹಿಮಾಲಯ ಮತ್ತು ನೀಲಗಿರಿಯ ನಡುವಿರುವ ಅರಾವಳಿ ಪರ್ವತ ಮಾಲೆಯ ನೈಋತ್ಯ ಭಾಗದಲ್ಲಿರುವ 'ಆಬೂ'ಬೆಟ್ಟಗಳನ್ನು ರಾಜಸ್ಥಾನದ ಸ್ವರ್ಗವೆಂದು ಹೇಳುತ್ತಾರೆ. ೧೨ ಮೈಲು ಉದ್ದವೂ ಎರಡು ಮೈಲು ಅಗಲವೂ ಇರುವ ಬೆಟ್ಟ ಪ್ರದೇಶವಿದು. ಸಮುದ್ರ ತಟದಿಂದ ಸುಮಾರು ನಾಲ್ಕು ಸಾವಿರ ಅಡಿಗಳಷ್ಟು ಎತ್ತರವಿರುವ ಈ ಶ್ರೇಣಿಯ ಎತ್ತರವಾದ ಗುರುಶಿಖರದ ಉನ್ನತಿಯು ೫೬೫೩ ಅಡಿಗಳು.

ಆಬೂವಿನ ಸೋಪಾನದಲ್ಲಿ ಅನೇಕ ಪ್ರಕಾರದ ಮರಗಿಡಗಳೂ, ಹೂಬಳ್ಳಿಗಳೂ ತುಂಬಿವೆ. ಸಾಮಾನ್ಯವಾಗಿ ಎಲ್ಲ ಮಾರ್ಗಿಗಳ ಪಕ್ಕಗಳಲ್ಲಿಯೂ ನೆರಳು ನೀಡುವ ಮರಗಳ ಸಾಲು ದೃಗ್ಗೋಚರವಾಗುತ್ತಿದೆ. ಇವನ್ನು ಕಂಡವನು ಆಬೂವಿನ ಪ್ರಾಕೃತಿಕ ಸೌಂದರ್ಯದ ವಿಚಿತ್ರ ದೃಶ್ಯರಳನ್ನು ಹೊಗಳದಿರಲಾರನು. ವಿಶಾಲವಾದ ಬಂಡೆ ಕಲ್ಲುಗಳು, ಕಾಡುಹೂಗಳ ಮನೋರಮಣೀಯ ದೃಶ್ಯಗಳು, ಪರ್ವತದ ಹಿಂದೆ ಕಣಿವೆ, ಕಣಿವೆಯತ್ತ ಮರಳಿ ಬೆಟ್ಟಗಳು-ಇವೆರಡರ ನಡುವೆ ಅಲ್ಲಲ್ಲಿ ಸಾವಿರಾರು ಅಡಿ ಆಳದಲ್ಲಿ ವಿಸ್ತಾರವಾದ ಮೈದಾನಗಳು ಯಾರನ್ನಾದರೂ ಮುಗ್ಧಗೊಳಿಸುತ್ತವೆ. ಇವುಗಳ ಜತೆಗೆ ಅಹ್ಲಾದಕಾರಕವೆನಿಸುವ ನೀರಜರಿಗಳೂ ಆಬುವಿನ ಸೌಂದರ್ಯರಾಶಿಗೆ ಕಲಶವಿಡುತ್ತವೆ.

ಉತ್ತರ ಭಾರತದಲ್ಲಿ ಸಿಮ್ಲಾ, ದಕ್ಷಿಣದಲ್ಲಿ ನೀಲಗಿರಿಯಂತೆಯೇ ರಾಜಸ್ಥಾನದಲ್ಲಿ ಆಬುವಿನ ಸ್ಥಾನ ಗಣನೀಯವಾಗಿದೆ. ಜತೆಗೆ ಆಬೂವೊಂದು ಪವಿತ್ರ ಸ್ಥಾನವೂ ಹೌದು. ಇಲ್ಲಿರುವ ಕಟ್ಟಡಗಳನ್ನು, ಗವಿಗಳನ್ನು, ಶಿಲ್ಪ ಕಲೆಯ ಮೂರ್ತಿಗಳನ್ನು ಧರ್ಮಸ್ಥಾನಗಳನ್ನು ನೋಡುವ ಇರಾದೆಯಿಂದ ಭಾರತದ ಲಕ್ಷಾಂತರ ಜನರು ಬರುತ್ತಾರೆ; ಶ್ರದ್ಧಾವನತರಾಗುತ್ತಾರೆ. ಪ್ರಥಮ ತೀರ್ಥಂಕರ ಆದಿನಾಥನ ಅವಾಸಸ್ಥಾನವಿದು ಎಂಬುದರಿಂದ ಜೈನರು ಆಬುವನ್ನು ಪವಿತ್ರವೆಂದು ಭಾವಿಸುತ್ತಾರೆ. ಹಾಗೆಯೇ ಅಲ್ಲಿರುವ ಅಚಲೇಶ್ವರ ದೇವಾಲಯದಿಂದ ಹಿಂದುಗಳೂ ತಮ್ಮ ಪುಣ್ಯಸ್ಥಾನವೆಂದು ಗೌರವಿಸುತ್ತಾರೆ.

ದಿಲವಾಡದಲ್ಲಿರುವ ಜೈನ ಮಂದಿರವು ಆಬುವಿನ ಪ್ರೇಕ್ಷಣೀಯ ಸ್ಥಾನಗಳಲ್ಲಿ ಅಗ್ರಗಣ್ಯವಾದುದು. ೧೦೫೧ರಲ್ಲಿ ರಾಜಭೀಮ ದೇವನ ಮಂತ್ರಿ ವಿಮಲಶಾಹನೆಂಬವನಿದನ್ನು ಕಟ್ಟಿಸಿದನು. ಆ ಸಮಯದಲ್ಲಿ ಇದರ ರಚನೆಗೆ ೧೯ ಕೋಟಿ ರೂಪಾಯಿಗಳು ವೆಚ್ಚವಾಗಿದ್ದುವಂತೆ. ವಿಮಲ ಶಾಹನು ಈ ಭೂಮಿಯ ಮೇಲೆ ಬಂಗಾರದ ನಾಣ್ಯಗಳನ್ನು ಹಾಸಿ ಅಷ್ಟನ್ನು ತೆತ್ತು ಭೂಮಿ ಕೊಂಡುಕೊಂಡನೆಂದು ಹೇಳುತ್ತಾರೆ. ಇಲ್ಲಿನ ಬಿಳಿ ಚಂದ್ರಕಾಂತ ಶಿಲೆಯಲ್ಲಿ ನಿರ್ಮಿಸಿದ ಕೆತ್ತನೆಯ ಕೆಲಸವನ್ನು ಕಂಡು, ಭಾರತೀಯ ಶಿಲ್ಪಕಲೆಯ ವೈಭವದ ಮನವರಿಕೆಯಾಗುವಾಗ ಅಚ್ಚರಿಯ ಭಾವ ತಾನೇ ತಾನಾಗಿ ಮೂಡುವುದು.

ನಕ್ಕೀ ಸರೋವರವು ಪ್ರೇಕ್ಷಕ ಗಣವನ್ನು ಮರುಳುಗೊಳಿಸುವುದು. ಈ ಪ್ರಮುಖ ಆಕರ್ಷಕವಾದ ಸರೋವರದ ಸುತ್ತ ಹಸುರು ತುಂಬಿದ ಮರಗಿಡಗಳನ್ನು ಹೊತ್ತ ಬೆಟ್ಟಗಳಿವೆ. ಈ ಸರೋವರವು ಎಷ್ಟು ಆಳವಿದೆಯೆಂಬುದು ಇನ್ನೂ ಗೊತ್ತಾಗಿಲ್ಲ. ಈ ಸರೋವರವನ್ನು ದೇವತೆಗಳು ತಮ್ಮ ಉಗುರುಗಳಿಂದ ತೋಡಿದರು; ಆದುದರಿಂದಲೇ ಇದಕ್ಕೆ ನಖೀ (ನಖ = ಉಗುರು) ಸರೋವರವೆಂಬ ಹೆಸರು ಬಂತುಎಂದು ಹೇಳುತ್ತಾರೆ. ಈ ನಖಿಯೇ ಮುಂದೆ ನಕ್ಕೀ ಎಂದು ರೂಪಾಂತರ ಹೊಂದಿತು ಈ ಸರೋವರವನ್ನು ಹಿಂದುಗಳ ಪವಿತ್ರವೆಂದು ತಿಳಿಯುತ್ತಾರೆ; ಸರೋವರದ ದಡದಲ್ಲಿ ಅನೇಕ ಸ್ನಾನಗಟ್ಟಗಳಿವೆ. ಸ್ತ್ರೀಯರ ಸ್ನಾನಕ್ಕೆ ಪ್ರತ್ಯೇಕ ಗಟ್ಟಗಳನ್ನು ನಿರ್ಮಿಸಿದ್ದಾರೆ. ಸರೋವರದ ಸುತ್ತಲೂ ಪ್ರೇಕ್ಷಕರಿಗಾಗಿ ತಿರುಗಾಡಲು ಉತ್ತಮವಾದ ರಸ್ತೆಯಿದ; ಅದರ ಮೇಲೆ ವಿದ್ಯುತ್ತಿನ ಪ್ರಕಾಶ ಬೀಳುವಾಗ ಬಹು ಆಕರ್ಷಕವೆನಿಸುತ್ತದೆ.

ಸರೋವರದ ಸುತ್ತಲಿರುವ ಪರ್ವತದಲ್ಲಿ ಹಲವಾರು ಗುಹೆಗಳಿವೆ. ಇವುಗಳಲ್ಲಿ ಸಾಧುಗಳು ಸಾಧನೆ ಮಾಡುತ್ತಿರುತ್ತಾರೆ. ಚಂಪಾಗುಹೆ (ಇದರ ಅಸುಪಾಸಿನಲ್ಲಿ ಚಂಪಕ ಹೂವಿನ ಅನೇಕ ಗಿಡಗಳಿವೆ), ಗಜಗುಹೆ, ರಾಮಕಿಂಡಿ ಇವು ಅತ್ಯಂತ ಪ್ರಸಿದ್ಧವಾಗಿವೆ. ದಡದಲ್ಲಿ ಹನುಮಂತನ ದೇವಾಲಯವಿದ್ದು ಇದು ಮನೋಹರವೂ ದರ್ಶನೀಯವೂ ಆಗಿದೆ.

ಸರೋವರದ ಒಂದು ಪಕ್ಕದಲ್ಲಿ ಇತ್ತೀಚೆಗೆ ಗಾಂಧೀ ವಾಟಿಕೆಯನ್ನು ನಿರ್ಮಿಸಿದ್ದಾರೆ. ಆಯಾಸಗೊಂಡ ಪ್ರವಾಸಿಗಳು ಸಾಯಂಕಾಲ ಇಲ್ಲಿ ಬಂದು ಮಂದಶೀತಲ ವಾಯುವಿಗೆ ಮೈಯೊಡ್ಡಿ ಪರ್ವತ ದೃಶ್ಯಗಳನ್ನು ನೋಡಿ ಮೈಮರೆಯುತ್ತಾರೆ. ಗ್ರೀಷ್ಮ ಋತುವಿನಲ್ಲಿ ಇಲ್ಲಿ ಶೋಭೆಯು ಅವರ್ಣನೀಯ. ಅವೇಳೆ ಪ್ರೇಕ್ಷಕರ ಗುಂಪುಗ

(ಅನೇಕ ಸುಟ ನೋಡಿರಿ)

ಹೊಸ ಪುಸ್ತಕ—
'ನಚಿಕೇತ'ರಿ
ನವೀನ ಕಾದಬಂರಿ—
ಹಸುರು ಹಂಸ
ಇದೀಗ ಪ್ರಕಟವಾಗಿದೆ.
ಬೆಲೆ: ರೂ. ಎರಡು.
ವಿಚಾರಿಸಿರಿ.
ನವಯುಗ ಪ್ರೆಸ್, ಉಡುಪಿ.

ವಿಖ್ಯಾತ ಗ್ರಂಥ ಕರ್ತರಾದ
ಶ್ರೀ ಎ. ಎಸ್. ಪಂಚಾಪಕೇಶ ಅಯ್ಯರ್
ಎಂ. ಎ, ಐ. ಸಿ. ಯಸ್., ಬಾರ್-ಎಟ್-ಲಾ., ಎಫ್. ಆರ್. ಎಸ್. ಎಲ್.
ಇವರು ಇಂಗ್ಲೀಷಿನಲ್ಲಿ ಬರೆದ—
TALES OF IND
ಕಥಾವಳಿಯ ಕನ್ನಡ ಅನುವಾದ
ಭಾರತೀಯ ಕಥೆಗಳು
ಚಕ್ಕ ಹೊಕ್ಕ ೧೫೨- ಕಥೆಗಳು ಬೆಲೆ ರೂ 1—12—0
ಅನುವಾದಕರು: ದಿ| ಕೊರಡ್ಕಲ್ ಶ್ರೀನಿವಾಸ ರಾವ್,
ಸಿಗುವ ಸ್ಥಳ:—
ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗ

ವರುಷ ೪೧	ಉಡುಪಿ ೨೮-೬-೧೯೬೨	ವಾರ ೪೨

ರಾಜ್ಯಗಳ ಸೀಮಾ ಪ್ರಶ್ನೆ

ಸ್ವಾತಂತ್ರ್ಯಾನಂತರ ಭಾರತವು ಎದುರಿಸಬೇಕಾದ ಪ್ರಶ್ನೆಗಳನ್ನು ಎರಡು ಪಂಗಡಗಳಲ್ಲಿ ವಿಭಾಗಿಸಬಹುದು. ಪರಿಸ್ಥಿತಿಯ ವಶದಿಂದ ಬಂದುವು ಒಂದು ಬಗೆಯವಾದರೆ, ನಾವಾಗಿಯೇ ತಂದುಕೊಂಡುವು ಇನ್ನೊಂದು ರೀತಿಯವು. ರಾಜ್ಯ ಪುನರ್ಘಟನೆಯ ನಂತರ ರಾಜ್ಯ ರಾಜ್ಯಗಳ ನಡುವೆ ಎದ್ದಿರುವ ಗಡಿ ಸಮಸ್ಯೆಗಳನ್ನು ಎರಡನೆಯ ಪಂಗಡದಲ್ಲಿ ಸೇರಿಸಿಕೊಳ್ಳಬಹುದು. ಈ ವಿವಾದಗಳನ್ನೂ ಅವುಗಳು ಮೂಡುತ್ತಿರುವ ಅವಾಂತರಗಳನ್ನೂ ಗಮನಿಸುವಾಗ ರಾಜ್ಯ ಪುನರ್ವಿಂಗಡಣೆಯಾದರೂ ಯಾಕಾಯ್ತು ಎಂಬ ವ್ಯಥೆಯು ಹುಟ್ಟುತ್ತದೆ. ರಾಜ್ಯ ವಿಂಗಡಣೆ ಮತ್ತು ಗಡಿ ಪ್ರದೇಶಗಳಿಗಿಂತಲೂ ರಾಜಕೀಯ ಧುರೀಣರೇ ಕಾರಣ ಪುರುಷರಾಗುತ್ತಿರುವುದು ಚಿಂತೆಗೆ ಕಾರಣವಾಗಿದೆ. ಈ ಪ್ರಶ್ನೆಯನ್ನು ಮತ್ತಷ್ಟು ಜಟಿಲಗೊಳಿಸಿ ವಿವಾದವನ್ನು ಮತ್ತೂ ವಿವಾದವಾಗಿಯೇ ಇರಿಸುವ ಸಂಚು ಕೂಡ ಅಲ್ಲಲ್ಲಿ ನಡೆಯುತ್ತಿರುವುದು ಕಂಡು ಬರುತ್ತದೆ.

ಐದು ಬೇರೆ ಬೇರೆ ರಾಜ್ಯಗಳಲ್ಲಿ ಹಂಚಿಹೋದ ಕರ್ನಾಟಕವನ್ನು ಒಂದು ಗೂಡಿಸುವ ಪ್ರಯತ್ನ ನಡೆಯಿತು. ಕೊನೆಗೂ ಒಂದು ರಾಜ್ಯ ನಿರ್ಮಾಣವಾಯಿತು. ಪುನರ್ಘಟನಾ ವಿಧೇಯಕವನ್ನು ರಚಿಸುವಾಗ, ಅದನ್ನು ಮಂಜೂರು ಮಾಡುವಾಗ ಕೂಲಂಕಷ ವಿಮರ್ಶೆ ನಡೆಯಿತು. ಭಾಷೆಯೊಡನೆ ಗಡಿ ಪ್ರದೇಶಗಳ ಭೌಗೋಲಿಕ, ವ್ಯಾಪಾರಿಕ ದೃಷ್ಟಿಯನ್ನೂ ಆಧಾರವಾಗಿಟ್ಟುಕೊಂಡು ಒಂದು ತೀರ್ಮಾನಕ್ಕೆ ಬರಲಾಯ್ತು; ತತ್ಪರಿಣಾಮವಾಗಿ, ಕಾಸರಗೋಡು ತಾಲೂಕು ಕೈಬಿಟ್ಟು ಹೋಯಿತು; ಬೆಳಗಾವಿ, ಕಾರವಾರ, ನಿಪ್ಪಾಣಿ ಮೊದಲಾದ ಉತ್ತರದ ಭಾಗಗಳು ಕೈಸೇರಿದುವು. ಬೆಳಗಾವಿ, ಕಾರವಾರ, ನಿಪ್ಪಾಣಿಯ ಮರಾಠರು ತಾವು ಮಹಾರಾಷ್ಟ್ರವನ್ನು ಸೇರಬೇಕೆಂದು ಆಗಾಗ ಒದರಾಡಿದರು, ಅವಾಂತರಗಳನ್ನು ಎಬ್ಬಿಸಿದರು; ಸಂಯುಕ್ತ ಮಹಾರಾಷ್ಟ್ರ ಸಮಿತಿಯು ಇವರಿಗೆ ಬೆಂಬಲವಾಗಿ ನಿಂತಿತು; ಇಂದಿಗೂ ನಿಲ್ಲುತ್ತಿದೆ. ಆ ಮಹಾರಾಷ್ಟ್ರ ಸರಕಾರವಾದರೂ ಈ ಪ್ರದೇಶಗಳನ್ನು ತನ್ನ ರಾಜ್ಯದಲ್ಲಿ ಸೇರಿಸಿಕೊಳ್ಳಲು ಉತ್ಸಾಹವನ್ನು ತೋರಿಸುತ್ತಿದೆ. ಇದರಿಂದಾಗಿ ಕರ್ನಾಟಕ ಸರಕಾರದ ಸಂಪೂರ್ಣ ಗಮನ ಅತ್ತ ಹರಿಯಿತು. ಸೀಮಾ ವಿವಾದಗಳನ್ನು ಪರಿಹರಿಸಲು ಉಭಯ ರಾಜ್ಯಗಳು ಒಮ್ಮತದ ಒಡಂಬಡಿಕೆಯನ್ನು ಮಾಡಿಕೊಂಡು ಮುಂದೆ ಬರಬೇಕು ಎಂಬ ಕೇಂದ್ರ ಸರಕಾರದ ನೀತಿಯಂತೆ ಪ್ರತಿ ರಾಜ್ಯದಿಂದಲೂ ಇಬ್ಬಿಬ್ಬರು ಪ್ರತಿನಿಧಿಗಳುಳ್ಳ ಒಂದು ಸಮಿತಿಯ ರಚನೆಯೂ ಆಯ್ತು. ಆದರೆ, ಈ ಸಮಿತಿಯ ಸದಸ್ಯರಲ್ಲಿಯೇ ಭಿನ್ನಾಭಿಪ್ರಾಯವೆದ್ದಿತು. ಮುಖ್ಯವಾಗಿ ಗಡಿ ಪ್ರದೇಶದಲ್ಲಿ ತಾಲೂಕುಗಳನ್ನು ಘಟಕವಾಗಿಟ್ಟುಕೊಳ್ಳಬೇಕು ಎಂದು ಕರ್ನಾಟಕವು ವಾದಿಸಿದರೆ, ಹಳ್ಳಿಗಳನ್ನು ಎಂದು ಮಹಾರಾಷ್ಟ್ರದ ವಾದ. ದೊಡ್ಡ ಬದಲಾವಣೆಗಳಿಗೆ ನಾವು ಒಪ್ಪಲಾರೆವೆಂಬುದು ಕನ್ನಡಿಗರ ಮರುಧ್ವನಿ. ತೋರಿಕೆಯ ಮಟ್ಟಿಗೆ ಉತ್ತರದ ಗಡಿಯಲ್ಲಿ ಆಂದೋಲನಸ್ತಗಿತವಾದಂತೆ ಕಂಡರೂ ಅದು ಒಳಗಿಂದೊಳಗೆ ನಡೆಯುತ್ತ ಬರುತ್ತಿದೆ; ಇತ್ತೀಚೆಗೆ ಮಹಾರಾಷ್ಟ್ರದ ಮುಖ್ಯ ಮಂತ್ರಿಯವರಾದ ಶ್ರೀ ವೈ. ಬಿ. ಚವನರು ನಿಪ್ಪಾಣಿಯಲ್ಲಿ ಮಹಾರಾಷ್ಟ್ರೀಯರು ನಡೆಸುತ್ತಿರುವ ಆಂದೋಲನಕ್ಕೆ ತಮ್ಮ ಬೆಂಬಲವಿತ್ತರೆಂದು ಕೇಳುತ್ತೇವೆ. ಇದು ನಿಜವೆಂದಾದರೆ, ಉರಿಯುವ ಬೆಂಕಿಗೆ ತುಪ್ಪವೆರೆಚುವ ಕಾರ್ಯವನ್ನು ಅವರು ಮಾಡಿದಂತಾಯಿತು. ಮೊದಲೇ ಸುಂಡಾಟಕೆಯಿಂದ ಅಶಾಂತಿಯೆಬ್ಬಿಸುತ್ತಿದ್ದ ಬೆಳಗಾವಿ, ನಿಪ್ಪಾಣಿಯ ಮರಾಠಿಗಳಿಗೆ ಈಗ ಹೊಸ ಕೋಡು ಬಂದಂತಾಯಿತು. ಚವನರಂತಹ ಸಮರ್ಥ ಸುಯೋಗ್ಯ ಮುಖ್ಯ ಮಂತ್ರಿಗಳು ಮಾಡಬಾರದ ಕೆಲಸವಿದು. ಸೀಮಾ ಸಮಸ್ಯೆಯ ಅಧ್ಯಯನ ಮಾಡಿ, ಪರಿಹಾರ ಸೂಚಿಸಲು ಸಮಿತಿಯ ನೇಮಕವಾಗಿರುವಾಗ, ಎರಡೂ ಕಡೆಗಳಲ್ಲಿ ಭಿನ್ನಾಭಿಪ್ರಾಯವೇ ಇರಲಿ, ಉದ್ರೇಕಗೊಳಿಸುವಂತಹ ಕೃತ್ಯಗಳನ್ನು ಯಾರೂ ಮಾಡಬಾರದು. ಹೀಗೆ ಮಾಡಿದರೆ, ಹಿಂಸೆಯ ಬೀಜ ಬಿತ್ತಿದಂತೆಯೆಂಬುದನ್ನು ಜವಾಬ್ದಾರಿ ಹೊತ್ತ ಚವನರು ಏಕೆ ಅರಿಯದಾದರೋ ನಿಲುಕದು.

ಈ ವಿಷಯದಲ್ಲಿ ಕರ್ನಾಟಕ ಸರಕಾರವು ತಾಲೂಕು ಘಟಕವಾಗ ಬೇಕೆಂಬ ವಾದವನ್ನು ಬೆಂಬಲಿಸಿದೆ. ಈ ವಾದವನ್ನೇ ಕರ್ನಾಟಕ ಕೇರಳ ಸೀಮಾ ವಿವಾದಕ್ಕೂ ಅನ್ವಯಿಸುವುದಾದರೆ, ಕಳೆದುಕೊಂಡ ಕಾಸರಗೋಡನ್ನು ಕೇಳುವ ಅಧಿಕಾರವು ಕನ್ನಡಿಗರಿಗಿರುವುದಿಲ್ಲವೆನಿಸುತ್ತದೆ. ಆದರೆ, ಉತ್ತರದ ಗಡಿಯ ವಿವಾದದ ರೀತಿಯೇ ಬೇರೆ ಅಲ್ಲಿ ಮರಾಠಿ ಮಾತಾಡುವ ಪ್ರದೇಶಗಳು ಕನ್ನಡ ಪ್ರದೇಶದ ನಡುವೆ ಇರುವುದರಿಂದ ಉಳಿದ ವ್ಯಾವಹಾರಿಕ ವಿಧಾನಗಳಿಂದ ತಾಲೂಕು ಘಟಕವೇ ಅಗತ್ಯವುಳ್ಳ ನೀತಿಯೆನಿಸುವುದು. ಆದರೆ, ಕಾಸರಗೋಡಿನ ಪರಿಸ್ಥಿತಿ ಹೀಗಿರುವುದಿಲ್ಲ. ಚಂದ್ರಗಿರಿ ಹೊಳೆಯ ಉತ್ತರ ಭಾಗವು ಸರ್ವ ದೃಷ್ಟಿಯಿಂದಲೂ ಕನ್ನಡ ರಾಜ್ಯ. ಈ ಭಿನ್ನ ಪರಿಸ್ಥಿತಿಯು ಸುಸ್ಪಷ್ಟವಾಗಿದ್ದರೂ ಅಲ್ಲಿನ ಜನತೆಯು ಬಯಸುತ್ತಿರುವುದಾದರೂ ಕರ್ನಾಟಕ ಸರಕಾರವು ಆ ಬಗ್ಗೆ ಹೆಚ್ಚಿನ ಕಳಕಳಿ ವಹಿಸಿದಂತೆ ತೋರುವುದಿಲ್ಲ. ಪ್ರಾಯಃ ಉತ್ತರದ ಸೀಮಾ ಪ್ರದೇಶದಲ್ಲಿ ಮರಾಠಿಗಳ ಸುಂಡಾಟಕೆಯ ಕಾರಣದಿಂದಲೇ ಅತ್ತ ಗಮನ ಹರಿದಿದ್ದರೂ ಇರಬಹುದು. ಈಗಾಗಲೇ ಈ ತೆರದ ವಿವಾದಗಳಿಗೆ ಆರು ವರ್ಷ ಪ್ರಾಯವಾಯಿತು. ಇನ್ನೂ ಇನ್ನೂ ಇವನ್ನು ಬೆಳೆಸುತ್ತ ಹೋಗುವುದೆಂದರೆ, ಈಗ ಇರುವ ರಾಜ್ಯದ ಗಡಿಗಳನ್ನೇ ಮೌನವಾಗಿ ಒಪ್ಪಿಕೊಂಡು ಸುಮ್ಮನಿರುವುದೆಂದೇ ಹೇಳಬೇಕು. ೧೪ ವರ್ಷಗಳ ಹಿಂದೆ ಕಾಶ್ಮೀರದ ಮೇಲೆ ಪಾಕಿಸ್ತಾನದ ಬೇಡಿಕೆಯು ಮಾನ್ಯವಾಗಿತ್ತಾದರೂ ಇಂದದು ನಿರಾಧಾರವೆನಿಸಿದೆ; ಐತಿಹಾಸಿಕ ಘಟನೆಗಳೇ ಇದಕ್ಕೆ ಸಬಲ ಕಾರಣ; ಹಾಗೆಯೇ ಸೀಮಾ ಪ್ರದೇಶಗಳ ಮೇಲೂ ಇಂತಹ ಐತಿಹಾಸಿಕ ಘಟನೆಗಳು ಪ್ರಭಾವ ಬೀರುವುದಿಲ್ಲವೆಂದು ಹೇಗೆ ನಂಬಬಹುದು? ಆದುದರಿಂದ, ಕೇಂದ್ರ ಸರಕಾರವು ತುಸು ಕಟ್ಟುನಿಟ್ಟಿನ ಧೋರಣೆಯನ್ನು ವಹಿಸಿ, ವಿವಾದ ಕೊನೆಗೊಳ್ಳುವಂತೆ ನೋಡುವುದೂ ಅಸಮಂಜಸವೆನ್ನುವಂತಿಲ್ಲ. ರಾಜ್ಯ ಸರಕಾರಗಳು ತಮ್ಮ ಶಕ್ತಿಯ ಅಪವ್ಯಯವನ್ನು ಮಾಡದೆ ಉಚಿತ ನಿರ್ಧಾರಕ್ಕೆ ಬೇಗನೇ ಬರಲಿ; ಅದಾಗದಿದ್ದರೆ, ಸುಮ್ಮನಾದರೂ ಉಳಿಯಲಿ ಎಂದು ನಿರಾಸೆಯ ನಿಟ್ಟುಸಿರೆಳೆಯಬೇಕಾಗಿ ಬಂದಿದೆ.

ಜಗತ್ಪರ್ಯಟನ

ರಾಧಾಕೃಷ್ಣನ್

ಸರ್ವಪಲ್ಲಿ ರಾಧಾಕೃಷ್ಣನ್ ಜೀವನಕ್ಕೊಂದು ಧ್ಯೇಯ ಬೇಕೆಂದು ಹೇಳುತ್ತಾರೆ. ಧ್ಯೇಯನಿಷ್ಠರಾಗಿ ಬಾಳುವಾಗ ವೈಯಕ್ತಿಕ ಹಿತಕ್ಕಿಂತ ರಾಷ್ಟ್ರದ ಹಿತಕ್ಕೆ ಹೆಚ್ಚಿನ ಪ್ರಾಶಸ್ತ್ಯ ನೀಡಬೇಕು ಎಂದು ಬಯಸುತ್ತಾರೆ. ತಾವು ಹೇಳಿದಂತೆ ಆಚರಿಸುವ ಕೆಲವೆ ವ್ಯಕ್ತಿಗಳಲ್ಲಿ ಇವರೂ ಒಬ್ಬರು ಹೌದು. ಆದರೆ, ಅವರ ಹೇಳಿಕೆಯನ್ನು ಕಾರ್ಯರೂಪಕ್ಕಿಳಿಸುವ ಪ್ರಯತ್ನ ಮಾಡುವವರು ಎಷ್ಟು ಮಂದಿ? ವ್ಯಕ್ತಿಗತ ಸ್ವಾರ್ಥಪ್ರಿಯತೆಯ ಗುಂಗಿನಲ್ಲಿ ರಾಷ್ಟ್ರವನ್ನೂ ರಾಷ್ಟ್ರೀಯತೆಯನ್ನೂ ಮ

ಫೆರ್ರೋ ಸಿಲಿಕನ್

ಭದ್ರಾವತಿಯ ಉಕ್ಕಿನ ಕಾರಖಾನೆಯನ್ನು ವಿಸ್ತರಿಸಿ, ಅಲ್ಲಿ ಹೊಸತಾಗಿ ಫೆರ್ರೋ ಸಿಲಿಕನ್ ಉತ್ಪಾದನೆಯ ವಿಭಾಗವನ್ನು ಕೇಂದ್ರದ ಘನ ಉದ್ದಿಮೆ ಮತ್ತು ಉಕ್ಕಿನ ವಿಭಾಗದ ಮಂತ್ರಿ ಶ್ರೀ ಸುಬ್ರಹ್ಮಣ್ಯಂ ರವರು ಉದ್ಘಾಟಿಸಿದರು. ವಿದೇಶ ವಿನಿಮಯದ ಕೊರತೆಯಿರುವ ಇಂದಿನ ದಿನಗಳಲ್ಲಿ ದೇಶದ ಅವಶ್ಯಕತೆಗಳಿಗಾಗಿ ವಿದೇಶಗಳಿಂದ ಉಕ್ಕಿನ ಆಯಾತ ಮಾಡುವುದರ ಬದಲು ಉಪಲಬ್ಧವಿರುವ ಸಾಧನ ಸಲಕರಣೆಗಳಿಂದ ದೇಶದಲ್ಲಿಯೇ ಅದನ್ನು ನಿರ್ಮಿಸುವುದು ಅಗತ್ಯವಿರುತ್ತದೆ. ತೃತೀಯ ಪಂಚ ವಾರ್ಷಿಕ ಯೋಜನೆಯಲ್ಲಿ ಮೂರು ಹೊಸ ಉಕ್ಕಿನ ಕಾರಖಾನೆಗಳನ್ನು ಸಾರ್ವಜನಿಕ ಕ್ಷೇತ್ರದಲ್ಲಿ ತೊಡಗಲಾಗುವುದು, ಮಾತ್ರವಲ್ಲದೆ ಬುಕಾರೋವಿನಲ್ಲಿಯೂ ಒಂದನ್ನು ಪ್ರಾರಂಭಿಸಲಾಗುವುದು. ಇವುಗಳ ಜತೆಗೆ ಜಂಶೆದ್‌ಪುರ ಮತ್ತು ದುರ್ಗಾಪುರಗಳ ಅಲ್ಪಾ ಉಕ್ಕಿನ ಕಾರಖಾನೆಗಳನ್ನು ವಿಸ್ತರಿಸುವ ಯೋಚನೆಯೂ ಇದೆ. ಹೀಗೆ ನಿಯೋಜಿತ ಕಾರ್ಯಕ್ರಮಗಳು ನಿರ್ವಿಘ್ನವಾಗಿ ನಡೆದುವೆಂದರೆ, ತೃತೀಯ ಯೋಜನಾಂತ್ಯದಲ್ಲಿ ನಮಗೆ ಬೇಕಾದ ಉಕ್ಕು ನಮ್ಮಲ್ಲಿಯೇ ದೊರೆಯಲಿರುವುದು. ಭದ್ರಾವತಿಯ ಫೆರ್ರೋ ಸಿಲಿಕನ್ ಉತ್ಪಾದನಾ ವಿಭಾಗವು ವರ್ಷಕ್ಕೆ ೨೦ ಸಾವಿರ ಟನ್‌ಗಳಷ್ಟನ್ನು ತಯಾರಿಸಿ ದೇಶದ ಒಟ್ಟು ಬೇಡಿಕೆಯನ್ನು ಪೂರೈಸಲು ಸಮರ್ಥವಾಗುವುದು. ಇದಕ್ಕಾಗಿ ನೆರವು ನಿಂತ ನಾರ್ವೆಯ 'ಇಲೆಕ್ಟ್ರೊಕೆ ಮಿಸ್ಕ್' ಸಂಸ್ಥೆಯನ್ನು ಸ್ಮರಿಸಬೇಕಾಗಿದೆ.

ಟೆತು ಬಿಟ್ಟವರು ಕೋಟಿ ಹಣ ಗಳಿಸಬಹುದು; ಆದರೆ, ಗಳಿಸಿದ ಹಣವನ್ನು ತೋರಿಸುವುದು ಯಾರಿಗೆ?

ಜವಾಹರಲಾಲ

ಪ್ರಧಾನಿ ನೆಹರೂರವರ ವಿದೇಶ ನೀತಿಯು ದಿನದಿಂದ ದಿನಕ್ಕೆ ಪರೀಕ್ಷೆಗೊಳಗಾಗುತ್ತಿದೆ. ಆದರೆ, ಹಿಡಿದ ಕಾರ್ಯವನ್ನು ಕೊನೆ ಮುಟ್ಟಿಸುವ ದೃಢ ಮನಸ್ಸಿನ ನೆಹರು ಹದಿನಾಲ್ಕು ವರ್ಷಗಳಷ್ಟು ಮುಂದುವರಿದ ಕಾಶ್ಮೀರವನ್ನು ಈಗ ಅಷ್ಟೇ ಹಿಂದೆ ತಳ್ಳಲು ಬಯಸುವುದಿಲ್ಲ. ಆದರೆ, ಇತಿಹಾಸಕಾರ ನೆಹರುರವರ ವಾದವು ಇತಿಹಾಸಜ್ಞರಲ್ಲದ ಕೆನ್ನೆಡಿ-ಮ್ಯೆಕಮಿಲನರಿಗೆ ಹೇಗೆ ಅರಿವಾಗಬೇಕು? ಕಾಶ್ಮೀರದ ವಿಷಯದಲ್ಲಿ ಭಾರತದ ವಿರುದ್ಧ ಧೋರಣೆಯನ್ನು ಅಮೆರಿಕೆ ಬ್ರಿಟನ್ನುಗಳು ವಹಿಸಿದ್ದರೆ, ಅದಕ್ಕೆ ಭಾರತದ ಮೇಲೆ ಅವಜ್ಞೆಗಿಂತಲೂ ಪಾಕಿಸ್ತಾನದ ಕಡೆಗೆ ಇರುವ ಅನುಗ್ರಹವೇ ಕಾರಣವೆಂಬುದು ಜಗಜ್ಜನಿತ.

ಕೃಷ್ಣಮೆನನ್

ಸಂರಕ್ಷಣ ಮಂತ್ರಿ ಕೃಷ್ಣಮೆನನ್ ಕಾಶ್ಮೀರದ ಪ್ರಶ್ನೆಯನ್ನು ಆಳವಾಗಿ ಅಭ್ಯಾಸ ಮಾಡಿದವರು; ನೆಹರು ನೀತಿಯನ್ನು ಅರಿತುಕೊಂಡವರು. ಕಾಶ್ಮೀರದ ಚರ್ಚೆ ಎಂದೊಡನೆ ಮೆನನ್ನರ ಸವಾರಿ ನ್ಯೂಯಾರ್ಕಿಗೆ ಧಾವಿಸುತ್ತದೆ. ಅಮೆರಿಕೆಯ ಪ್ರೋತ್ಸಾಹದಿಂದ ಆಯರ್ಲೆಂಡು ಭಾರತಕ್ಕೆ ಒಪ್ಪಿತವಾಗದ ಗೊತ್ತುವಳಿಯನ್ನು ಮುಂದೆ ತಂದುದು ಭಾರತದ ಸಭ್ಯವನೆಗೆ ಮಹಾಘಾತವೆಂದವರು ಹೇಳಿದರು. ಇದುವರೆಗೆ ಮಿತ್ರರೆಂದು ಭಾರತವು ತಿಳಿದಿದ್ದ ಕೆಲವು ರಾಷ್ಟ್ರಗಳು ಈಗ ಭಾರತ ವಿರೋಧೀ ನೀತಿಯನ್ನು ತಳೆದುದರಿಂದ ಭಾರತವು ನಿಜವಾಗಿಯೂ ತುಸು ಆಲೋಚನೆಮಾಡಬೇಕಾದ ಪ್ರಸಂಗ ಬಂದಿದೆ.

ನಿಜಲಿಂಗಪ್ಪ

ಕರ್ನಾಟಕದ ಮುಖ್ಯ ಮಂತ್ರಿ ನಿಜಲಿಂಗಪ್ಪನವರು ಸದ್ ಮನುಷ್ಯರು; ಸರಳ ಹೃದಯರು. ಇವರ ಈ ಸತ್ ಸರಳತೆಗಳಿಂದಾಗಿಯೇ ಮೊದಲೊಮ್ಮೆ ತಮ್ಮ ಪದವನ್ನು ಬಿಟ್ಟುಕೊಟ್ಟರು; ಚುನಾವಣೆಯಲ್ಲಿಯೂ ಸೋತರು. ಆದರೆ ಒಳ್ಳೆಯವರು ಅವಸರವನ್ನು ಆರಸಿಕೊಂಡು ಹೋಗಬೇಕಾಗಿಲ್ಲ; ಅವಸರವೇ ಅವರನ್ನು ಹುಡುಕಿಕೊಂಡು ಬರುತ್ತದೆ. ಜನತೆಯ ಪ್ರೀತಿ ವಿಶ್ವಾಸ ಆದರಾಭಿಮಾನಗಳಿಗೆ ಹೆಸರಾದ ನಿಜಲಿಂಗಪ್ಪನವರು ಮರಳಿ ಮುಳ್ಳಿನ ಮಣೆಯ ಮೇಲೆ ಕೂತಿದ್ದಾರೆ. ಮಹತ್ವಾಕಾಂಕ್ಷೆಯ ಮೂರನೆಯ ಯೋಜನೆಯ ಮುಗ್ಗರಿಸುತ್ತ ಸಾಗುವಾಗ, ನಿಜಲಿಂಗಪ್ಪನವರು ಕರ್ನಾಟಕದ ಯೋಜನೆಯ ಸೂತ್ರಧಾರರಾಗಬೇಕು; ಯಶಸ್ವಿಯಾಗಬೇಕು.

ಮೂವರು ದೊರೆಗಳು

ಮೂರಂಗುಲ ಅಗಲದ ಮೂರು ಆಧಿಪತ್ಯಕ್ಕೆ ಸೇರಿದ ಮೂರು ಅಣ್ಣತಮ್ಮಂದಿರ ಲಾವೋಸ್ ಹತ್ತು ವರ್ಷಗಳಿಂದಲೂ ದೊಡ್ಡ ಪಿಡುಗಾಗಿ ಪರಿಣಮಿಸಿತ್ತು. ಅದರೆ ಇಂದು ಆ ಮೂರು ದೊರೆಗಳು ಒಂದು ಒಡಂಬಡಿಕೆಯನ್ನು ಮಾಡಿಕೊಂಡರು. ಇದರಂತೆ ಇಡಿಯ ಲಾವೋಸ್ ಒಂದೇ ರಾಷ್ಟ್ರವಾಗಿ ರೂಪಿತವಾಗುವುದು. ಅ

(೭ನೇ ಪುಟಕ್ಕೆ)

ಅಲ್ಲಲ್ಲಿಯ ಸುದ್ದಿಸಾರ

ಬೊಂಬಾಯಿಯಲ್ಲಿ ಹಗಲು ಕನ್ನಡ ಶಾಲೆ— ಕನ್ನಡಿಗರು ಬೊಂಬಾಯಿಯ ಮೂಲ ನಿವಾಸಿಗಳಾಗಿದ್ದು ಇಂದಿಗೆ 6 ಲಕ್ಷಕ್ಕೂ ಮಿಕ್ಕಿ ಕನ್ನಡಿಗರು ಮುಂಬಾಯಿ ನಗರದಲ್ಲಿ ವಾಸವಾಗಿದ್ದರೂ ಬರೇ ಒಂದೇ ಒಂದು ಹಗಲು ಕನ್ನಡ ಶಾಲೆಯನ್ನು ನಡೆಸಿಕೊಂಡು ಬಂದು, ಅಲ್ಲಿ ಎಲ್ಲಾ ವಿದ್ಯಾರ್ಥಿಗಳಿಗೆ ಸೀಟು ಸಿಕ್ಕದೆ ಅದೂ ಎಷ್ಟೋ ಕಷ್ಟಪಡುವ ಸಂದರ್ಭ ಬರುವುದು ತುಂಬಾ ವಿಷಾದಕರವಿದೆ. ಇಂತಹ ಕಷ್ಟವನ್ನು ನಿವಾರಿಸುವುದಕ್ಕೋಸ್ಕರ ನಾವು ನಮ್ಮ ದಿ ಮುಂಡ್ಕೂರು ಸಂಜೀವ ರಾವ್ ಎಜುಕೇಶನ್ ಸೊಸೈಟಿಯಿಂದ ಒಂದು ಹಗಲು ಕನ್ನಡ ಶಾಲೆಯನ್ನು ಇದೇ ತಿಂಗಳು ತಾ.11ರಿಂದ ಕೋಟೆಯೊಳಗಿನ ಬೋರಿ ಬಂದರದ ಸಮೀಪ ಭಾರಡಾ ಹೈಸ್ಕೂಲಿನ ವರಾರದಲ್ಲಿ ತೆರೆದಿದ್ದೇವೆಂದು ತಿಳಿಸುವರೇ ತುಂಬಾ ಸಂತೋಷಪಡುತ್ತೇವೆ.

ಈ ಶಾಲೆಯಲ್ಲಿ Vನೇ ಕ್ಲಾಸಿನಿಂದ IXನೇ ಕ್ಲಾಸಿನ ವರೆಗೆ ಕನ್ನಡವೂ ೧ನೇ ಕ್ಲಾಸಿನಿಂದ IVನೇ ವರೆಗೆ ಇಂಗ್ಲಿಷ್ ಶಿಕ್ಷಣವೂ ಕೊಡಲ್ಪಡುವುದು, ಅಲ್ಲದೆ ಪ್ರತಿ ವರ್ಷ ಒಂದೊಂದೇ ಕ್ಲಾಸನ್ನು ಹೆಚ್ಚಿಸಲಾಗುವುದು.

ನಮ್ಮ ಈ ಹೊಸ ಕಾರ್ಯದಲ್ಲಿ ಕನ್ನಡದ ಅಭಿಮಾನಿಗಳೆಲ್ಲರೂ ಸಹಕರಿಸಬೇಕೆಂದೂ ಶಾಲೆಗೆ ಸೇರಲು ಇಚ್ಛಿಸುವ ವಿದ್ಯಾರ್ಥಿ ವಿದ್ಯಾರ್ಥಿನಿಯರೆಲ್ಲರೂ ಕೂಡಲೇ ಮುಖ್ಯ ಉಪಾಧ್ಯಾಯರನ್ನು ಕಾಣಬೇಕೆಂದೂ ಸಂಬಂಧಪಟ್ಟವರು ತಿಳಿಸುತ್ತಾರೆ.

ಶ್ರೀ ಕಾರ್ಯಪ್ಪನವರು ಸಿಲೋನಿಗೆ— ಪೇರಿಸಿನ ಅಂತಾರಾಷ್ಟ್ರೀಯ ಕ್ಷಯರೋಗ ನಿರೋಧ ಸಂಘದ ವಿನಂತಿಯಂತೆನ್ನೂ ಡಿಲ್ಲಿಯಲ್ಲಿರುವ ಭಾರತದ ಕ್ಷಯರೋಗ ಸಮಿತಿಯ ಕಾರ್ಯದರ್ಶಿ ಶ್ರೀ ಬಿ. ಎಂ ಕಾರ್ಯಪ್ಪನವರು ಸಿಲೋನಿಗೆ ಅಲ್ಲಿಯ ರಾಷ್ಟ್ರೀಯ ಕ್ಷಯರೋಗ ಸಮಿತಿಯ ಆರೋಗ್ಯ ವಿದ್ಯಾ ಚಟುವಟಿಕೆಗಳನ್ನು ಪರಿಶೀಲಿಸಲಿಕ್ಕೆ ಮತ್ತು ಆ ಕುರಿತು ವರದಿ ಒಪ್ಪಿಸಲಿಕ್ಕೆ ಎರಡು ವಾರಗಳ ಸಂಚಾರ ಕೈಗೊಂಡಿರುವರು. ಅಲ್ಲಿ ಅವರು ಸಿಲೋನಿನ ಕ್ಷಯರೋಗ ಸಮಿತಿಯ ವಾರ್ಷಿಕಾಧಿವೇಶನದಲ್ಲಿ ಭಾಷಣ ಕೂಡಾ ಮಾಡಲಿರುವರು. ಈ ಸಭೆಯಲ್ಲಿ ಭಾಷಣ ಕೊಡಲಿರುವ ಇತರ ಪ್ರಮುಖರೆಂದರೆ ಸಿಲೋನಿನ ಮುಖ್ಯ ಮಂತ್ರಿ ಮತ್ತು ಸಿಲೋನಿನಲ್ಲಿರುವ ಕೆನಡಾದ ಹೈಕಮಿಶನರರು ಶ್ರೀ ಕಾರ್ಯಪ್ಪನವರು ಇದೇ ತಾ. 26ರಂದು ಡಿಲ್ಲಿಯಿಂದ ಸಿಲೋನಿಗೆ ಪ್ರಯಾಣ ಬೆಳೆಸಿದರು.

ಡಾ| ಬಿ. ಬಿ. ಹೆಗ್ಡೆಯವರು ಇಂಗ್ಲೆಂಡಿಗೆ— ಬೆಂಗಳೂರು ಮಿಂಟೋ ಕಣ್ಣಿನ ಆಸ್ಪತ್ರೆಯಲ್ಲಿ ನೇತ್ರಚಿಕಿತ್ಸಕರಾಗಿದ್ದ, ಉಡುಪಿಯ ಡಾ| ಬಿ. ಬಾಲಕೃಷ್ಣ ಹೆಗ್ಡೆ, ಎಂ ಬಿ.ಬಿ.ಎಸ್., ಡಿ ಓ. ಎಂ ಎಸ್. ಇವರು ಡಿ. ಓ. ಮತ್ತು ಎಫ್ ಆರ್. ಸಿ. ಎಸ್. ಶಿಕ್ಷಣ ಪಡೆಯಲು ಇದೇ ತಾ. 22ರಂದು ಬೊಂಬ್ಯಾಯಿಂದ ಇಂಗ್ಲೆಂಡಿಗೆ ವಿಮಾನದಲ್ಲಿ ಪ್ರಯಾಣ ಬೆಳೆಸಿದರು. ಇವರು ಉಡುಪಿಯ ಹನುಮಾನ್ ಟ್ರಾನ್ಸ್ ಪೋರ್ಟ್‌ನ ಡೈರೆಕ್ಟರರಾಗಿದ್ದ ದಿವಂಗತ ಬಿ. ಗೋಪಾಲ ಹೆಗ್ಡೆವರ ಏಕಮಾತ್ರ ಪುತ್ರರು. ಮಂಗಳೂರಿನ ಎಡ್ವೆಕೇಟ್, ಶ್ರೀ ವಿ. ಶಂಕರ ಅಳ್ವ, ಎಂ. ಪಿ. ಅವರ ಅಳಿಯ.

ಕಾಪಿನಲ್ಲಿ ಲೋಕಲ್ ಫಂಡ್ ಆಸ್ಪತ್ರೆ— ತಾ 17—6—62ರಂದು ಉಡುಪಿ ತಾಲೂಕು ಡೆವಲಪ್‌ಮೆಂಟ್ ಬೋರ್ಡಿನ ಉಪಾಧ್ಯಕ್ಷ ಡಾ. ಕುಪ್ಪಣ್ಣಾಚಾರ್ಯರ ಅಧ್ಯಕ್ಷತೆಯಲ್ಲಿ, ಕಾಪು ಲೋಕಲ್ ಫಂಡ್ ಡಿಸ್ಪೆನ್ಸರಿಯನ್ನು ಸ್ಥಳೀಯ M L A. ಶ್ರೀ ಬಿ. ಭಾಸ್ಕರ ಸೆಟ್ರು ಉದ್ಘಾಟಿಸಿದರು. ಪ್ರಥಮತಃ ದೇವತಾ ಪ್ರಾರ್ಥನೆಯೊಂದಿಗೆ ಸಭೆಯ ಕಾರ್ಯ ಕಲಾಪಗಳು ಪ್ರಾರಂಭವಾಗಿ ಕಾಪು ಪಂಚಾಯತ್ ಬೋರ್ಡಿನ ಸಭಾಪತಿಗಳಾದ ಶ್ರೀ ಆರ್. ಡಿ. ಮೆಂಡನರು ಸ್ವಾಗತ ಭಾಷಣ ಮಾಡಿದರಲ್ಲದೆ ಡಾ. ನಳಿನಾಕ್ಷಿ ಸೆಟ್ರಿಯವರು ಈ ಸಮಾರಂಭಕ್ಕೆ ಬಂದ ಶುಭ ಸಂದೇಶಗಳನ್ನು ಓದಿದರು. ಅನಂತರ ಶ್ರೀ ಭಾಸ್ಕರ ಸೆಟ್ಟ M L A.ರವರು ಡಿಸ್ಪೆನ್ಸರಿಯ ಉದ್ಘಾಟನೆಯನ್ನು ನೆರವೇರಿಸಿದರು. ಕಳೆದ ಮುವ್ವತ್ತೊಂದು ವರ್ಷಗಳಿಂದ ರೂರಲ್ ಡಿಸ್ಪೆನ್ಸರಿಯ ಮೆಡಿಕಲ್ ಆಫೀಸರರಾಗಿ ದುಡಿದ ಕಾಪುವಿನ ಡಾ ಕೆ. ವಿರಲ ಸೆಟ್ರ ಸೇವೆಯನ್ನು ಶ್ರೀಗಳಾದ ಎಂ. ಬೋಜ ಹೆಗ್ಡೆ, ಕಾರ್ನಾಡು ಗುರುದತ್ತ ರಾವ್ ಮತ್ತು ಕಾಪು ಮಂಜುನಾಥ ಶೆಣೈರವರು ಶ್ಲಾಘಿಸಿದರು ಡಾ. ವಿರಲ ಸೆಟ್ರವರು, ಈ ದಿನ ಉದ್ಘಾಟಿಸಲ್ಪಟ್ಟ ಲೋಕಲ್ ಫಂಡ್ ಡಿಸ್ಪೆನ್ಸರಿಯು ಶೀಘ್ರದಲ್ಲಿಯೇ ಉತ್ತಮ ತರಗತಿಯ ಲೋಕಲ್ ಫಂಡ್ ಹಾಸ್ಪಿಟಲ್ ಆಗಿ ಜನತೆಗೆ ಹೆಚ್ಚಿನ ವೈದ್ಯಕೀಯ ಸೌಲಭ್ಯ ಸಿಕ್ಕುವಂತಾಗಲೆಂದು ಹರಿಸಿದ ನಂತರ ಅಧ್ಯಕ್ಷರ ಭಾಷಣವಾಗಿ ಬಘು ಉಪಹಾರ ಸ್ವೀಕರಿಸಲ್ಪಟ್ಟು ರಾಷ್ಟ್ರಗೀತೆಯೊಂದಿಗೆ ಸಭಾ ಕಾರ್ಯಕ್ರವಗಳು ಮುಕ್ತಯವಾಗಿ ಗ್ರೂಪ್ ಫೋಟೊ ಸಹಾ ತೆಗೆಯಲಾಯಿತು

ಹೈಸ್ಕೂಲಿಗೆ ಸಮ್ಮತಿ— ಕಾಪು ಗ್ರಾಮೋದ್ಧಾರ ಸಂಘದ ವತಿಯಿಂದ ಕಾಪು ಪೇಟೆಯಲ್ಲಿ ಕಾಪು ಮಹಾದೇವಿ ಹೈಸ್ಕೂಲನ್ನು ಇದೇ ಚಾಲ್ತಿ ವರ್ಷದಿಂದಲೇ ತೆರೆಯಲು ಮೈಸೂರು ಸರಕಾರದ ಸಮ್ಮತಿ ದೊರೆತಿರುವುದಾಗಿ ತಿಳಿದುಬರುತ್ತದೆ.

ಜಿಲ್ಲೆಯಲ್ಲಿ ಉಳಿತಾಯ— ಉಳಿತಾಯ ಯೋಜನೆಯ ಕಾರ್ಯಕರ್ತರ ಸಭೆಯೊಂದು ಮಂಗಳೂರಲ್ಲಿ ತಾ. 17ರಂದು ಜಿಲ್ಲಾ ಬೋರ್ಡ್ ಸಭಾ ಭವನದಲ್ಲಿ ಜರಗಿತು. ಸಭೆಯಲ್ಲಿ ರಾಜ್ಯದ ಆರ್ಥಿಕ ಮಂತ್ರಿ ಶ್ರೀ ಗಫೂರ್ ಖಾನರೂ ರಾಜ್ಯದ ಉಳಿತಾಯ ಯೋಜನಾಧಿಕಾರಿ ಶ್ರೀ ಕೆ. ಮಹಮ್ಮದ್ ಬ್ಯಾರಿಯವರೂ ಜಿಲ್ಲಾಧಿಕಾರಿ ಶ್ರೀ ಸಿ. ಜೆ. ಪದ್ಮನಾಭರೂ ಉಪಸ್ಥಿತರಿದ್ದರು

ಉಳಿತಾಯ ಯೋಜನೆಗನುಗುಣವಾಗಿ ಹಣ ಸಂಗ್ರಹಿಸಿದವರಲ್ಲಿ ಜಿಲ್ಲೆಯಲ್ಲಿ ಪ್ರಥಮ ಸ್ಥಾನವನ್ನೂ ರಾಜ್ಯದಲ್ಲಿ ದ್ವಿತೀಯ ಸ್ಥಾನವನ್ನೂ ಪಡೆದ ಶ್ರೀಮತಿ ಲೀಲಾ ಬಾಯಿ ಬಾಳಿಗರಿಗೂ ಜಿಲ್ಲೆಯಲ್ಲಿ ದ್ವಿತೀಯ ಸ್ಥಾನವನ್ನು ಪಡೆದ ಶ್ರೀಮತಿ ಇ ಎ. ರೆಬೆಲ್ಲೊರವರಿಗೂ ಮಂತ್ರಿಗಳು ಪ್ರಶಸ್ತಿಯನ್ನಿತ್ತು, ಜಿಲ್ಲೆಯ ಸಾಧಿಸಿದ ಕಾರ್ಯವನ್ನು ಪ್ರಶಂಸಿಸಿದರು ಶ್ರೀಮತಿ ಬಾಳಿಗರು ರೂ. 3. ಲಕ್ಷ 14 ಸಾವಿರವನ್ನೂ ಶ್ರೀಮತಿ ರೆಬೆಲ್ಲೊರವರು 1ಲಕ್ಷ 90 ಸಾವಿರವನ್ನೂ ಸಂಗ್ರಹಿಸಿದ್ದಾರೆ.

ಈ ಸಂದರ್ಭದಲ್ಲಿ ಶ್ರೀ ಕೆ ಮಹಮ್ಮದ್ ಬ್ಯಾರಿಯವರು ಮಾತನಾಡುತ್ತಾ ರಾಜ್ಯದಲ್ಲಿ ಹಾಗೂ ಜಿಲ್ಲೆಯಲ್ಲಾದ ಉಳಿತಾಯದ ಕೆಲಸವನ್ನು ವಿವರಿಸಿದರು ಶ್ರೀ ಸಿ. ಜೆ ಪದ್ಮನಾಭ ಅವರು ಮಾತನಾಡುತ್ತ ಜನರು ಉಳಿತಾಯದ ಮನೋವೃತ್ತಿಯನ್ನು ಬೆಳೆಯಿಸಬೇಕೆಂದರು.

ಉಳಿತಾಯ ಯೋಜನೆಯ ಕೆಲಸ ಮಾಡುವಾಗ ಒದಗುವ ತೊಂದರೆಗಳನ್ನು ಮಂತ್ರಿಗಳ ಗಮನಕ್ಕೆ ತಂದ ಬಳಿಕ ಶ್ರೀ ಕೆ. ಮಹಮ್ಮದ್ ಬ್ಯಾರಿಯವರು ಅಭಿನಂದಿಸಿದರು.

ಅಂಬಲಪಾಡಿ— ಸ್ಥಳೀಯ ಶ್ರೀ ಲಕ್ಷ್ಮೀ ಜನಾರ್ಧನ ಯಕ್ಷಗಾನ ಕಲಾ ಮಂಡಳಿಯ ನೇತೃತ್ವದಲ್ಲಿ ಪ್ರಾಚೀನ ಕಲೆಯೂದ ಬಡಗು ತಿಟ್ಟಿನ ಯಕ್ಷಗಾನ ಕಲೆಯನ್ನು ಪ್ರಸಾರಗೊಡಿಸುವ ಸದುದ್ದೇಶದಿಂದ ತಾ 23—6—62ರಂದು ತಾಳ, ಮೃದಂಗ, ಚಂಡೆ, ನರ್ತನ ಈ ವಿಷಯಗಳಲ್ಲಿ ಶಿಕ್ಷಣ ದೊರಕಿಸುವ ಯೋಗ್ಯ ಶಿಬಿರವನ್ನು ತೆರೆಯಲಾಯಿತು. ನುರಿತ ಕಲಾವಿದರಾದ ಶ್ರೀ ಎಚ್. ಗೋಪಾಲ ರಾವ್ ಇವರು ಶಿಕ್ಷಕರಾಗಿ ನೇಮಿಸಲ್ಪಟ್ಟಿರುವರು.

ಪುತ್ತೂರಲ್ಲಿ ಹೆಡ್ ಪೋಸ್ಟ್ ಆಫೀಸ್— ಕಳೆದ ತಾ. 17ರಂದು ಮಂಗಳೂರಿನ ಪೋಸ್ಟಾಫಿಸಿನಲ್ಲಿ ಅಂಚೆ ತಂತಿ ಉದ್ಯೋಗಿಗಳ ರಾಷ್ಟ್ರೀಯ ಫೆಡರೇಶನಿನ ಸಮಸ್ಥಾನೀಯ ಸಮಿತಿ ಸಭೆಯನ್ನು ಶ್ರೀ ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಉದ್ಘಾಟಿಸುತ್ತ ಪುತ್ತೂರಿನ ಸಬ್ ಪೋಸ್ಟ್ ಆಫೀಸನ್ನು ಜಿಲ್ಲೆಯ ಮೂರನೇ ಹೆಡ್ ಪೋಸ್ಟ್ ಆಫೀಸಾಗಿ ಮೂರ್ಪಡಿಸಲಾಗುವುದೆಂದು ಅಂಚೆ ಮತ್ತು ತಂತಿ ಇಲಾಖೆಯ ಡೈರೆಕ್ಟರ್ ಶ್ರೀ ಕೆ. ನಾರಾಯಣ ಶೆಟ್ಟರು ತಿಳಿಸಿ ಅಂಚೆ ತಂತಿ ಕಚೇರಿಗಳಿಗೂ ವಸತಿಗಾಗಿ ಆ ನೌಕರರಿಗೂ ಮಂಗಳೂರಲ್ಲಿ ಪಡೆದಿರುವ ಸ್ಥಳದಲ್ಲಿ ಬೇಗನೆ ನಿರ್ಮಾಣ ಕಾರ್ಯ ಆರಂಭಿಸಲಾಗುವುದೆಂದೂ ತಿಳಿಯಪಡಿಸಿದರು. ಇದೇ ಸಂದರ್ಭದಲ್ಲಿ ಈ ಫೆಡರೇಶನಿನ ಕಾರ್ಯದರ್ಶಿಗಳಾಗಿದ್ದ ದಿವಂಗತರಾದ ಶ್ರೀ ಬಿ. ಎಂ. ಘೋಷ್ ಮತ್ತು ಶ್ರೀ ಬಿ. ಎಸ್. ಭಾಸ್ಕರ ರೈಗಳವರ ಭಾವಚಿತ್ರಗಳನ್ನು ಅನಾವರಣಗೊಳಿಸಿದರು. ಶ್ರೀಗಳಾದ ಬಿ ವಿ. ಕಕ್ಕಿಲ್ಲಾಯ ಡಿ ಮೋಹನ ರಾವ್, ಬಿ. ಎನ್. ಪ್ರಕಾಶ್ ಮೊದಲಾದವರು ಮಾತನಾಡಿದರು. ಶ್ರೀ ರಾಮಲಿಂಗಂ ಡಿ ಇ ಟಿ. ಮತ್ತು ಅಂಚೆ ಕಚೇರಿ ಸುಪರಿಂಟೆಂಡೆಂಟ್ ಶ್ರೀ ಆರ್. ಡಿ ರಂಗಾಪುರ್ ಅವರು ಹಿತವಚನಗಳನ್ನಾಡಿದರು. ಶ್ರೀ ಎಚ್. ತಿಂಗಳಾಯರಿಂದ ಆದಿಯಲ್ಲಿ ಸ್ವಾಗತವೂ, ಕಾರ್ಯದರ್ಶಿ ಶ್ರೀ ಎಲ್. ಜೆ ಲೋಬೋ ಅವರಿಂದ ವರದಿ ವಾಚನವೂನಡೆದಿತ್ತು

ಹಾಸನ—ಮಂಗಳೂರು ರೈಲ್ವೆ— ಈ ರೈಲಿನ ಅಂತಿಮ ಸರ್ವೆ ನಡೆದಿದ್ದು ಈಗ ಸಂಬಂಧಪಟ್ಟ ಸ್ಥಳ ಸ್ವಾಧೀನತೆಗೆ ಅನುಕೂಲವಾಗುವಂತೆ, ಲೈನಿನ ಬಗ್ಗೆ ಜಾಹೀರು ಪ್ರಕಟಿಸಲು ಡಿಪ್ಟೀ ಕಮಿಶರನರಿಗೆ ನಿರ್ದೇಶ ಕೊಡಲಾಗಿದೆ ಎಂದು ವರದಿಯಾಗಿದೆ.

ಆದರೆ ಈ ರೈಲು ಬ್ರಾಡ್‌ಗೇಜ್ ಆಗಿರಬೇಕೆ, ಅಥವಾ ಮೀಟರ್ ಗೇಜ್ ಆಗಿರಬೇಕೆ, ಎಂಬುದು ಇನ್ನೂ ತೀರ್ಮಾನವಾದಂತೆ ತೋರುವುದಿಲ್ಲ. ಬ್ರಾಡ್ ಗೇಜ್ ಆದರೆ, ಮಂಗಲಪಾಡಿಯಿಂದಲೇ ಈ ಲೈನು ಆರಂಭವಾಗಿ ವಿಟ್ಲ, ಪುತ್ತೂರು, ಕಾಣ್ಯಾರು, ಪಂಜ, ಸುಬ್ರಹ್ಮಣ್ಯಕ್ಕಾಗಿ ಅನಂತರ ಈಶಾನ್ಯಾಭಿಮುಖವಾಗಿ ಸಕಲೇಶಪುರಕ್ಕಾಗಿ ಹಾಸನಕ್ಕೆ ಹೋಗಬೇಕಾಗಿದೆ ಮೀಟರ್ ಗೇಜ್ ಆದರೆ, ಮಂಗಳೂರಿನಿಂದಲೇ ಹೊರಟು ಬಂಟ್ವಾಳ, ಪಾಣೆ ಮಂಗಳೂರು, ವಿಟ್ಲ, ಪುತ್ತೂರು, ಕಾಣ್ಯಾರು, ಪಂಜ, ಮಬ್ರಹ್ಮಣ್ಯಕ್ಕಾಗಿ ಹಾಸನಕ್ಕೆ ಹೋಗಬೇಕಾಗಿದೆ.

ಬೀಳ್ಕೊಡುವ ಸಮಾರಂಭ— ಮೈಸೂರು ಸ್ಟೇಟ್ ಇಲೆಕ್ಟ್ರಿಸಿಟಿ ಬೋರ್ಡಿನ ಉಡುಪಿಯ ಅಸಿಸ್ಟೆಂಟ್ ಇಂಜಿನಿಯರ್ ಶ್ರೀ ಎಚ್. ಎಸ್. ನಾಯಕರನ್ನು ಬೀಳ್ಕೊಡುವ ಸಮಾರಂಭವು ತಾ. 25ರಲ್ಲು ಶ್ರೀ ಎಸ್. ಎಲ್ ನಾರಾಯಣ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿತು.

ಶ್ರೀ ಪಿ. ಗೋಪಿನಾಥ ರಾವ್‌ರವರು ಸ್ವಾಗತಿಸಿದ ನಂತರ ನೌಕರರ ಪರವಾಗಿ ಶ್ರೀಯುತರುಗಳಾದ ಯು ರುಕ್ಮಯ ಶೆಟ್ಟಿಗಾರ, ಪಿ ಎನ್ ಚಂದ್ರಶೇಖರ ರಾವ್, ಪಿ. ಎಸ್. ಮೂರ್ತಿಭಟ್, ವಿಟ್ಟಪ್ಪಹೆಗ್ಡೆಯವರೂ ಸಾರ್ವಜನಿಕರ ಪರವಾಗಿ ಶ್ರೀ ಶಿರ್ತಾಡಿ ವಿಲಿಯಂ ಪಿಂಟೋರವರೂ ಅವರ ಗುಣಗಾನ ಮಾಡಿ ಅವರಿಂದ ನಾಗರಿಕರಿಗೆ ಸಲ್ಲಲ್ಪಟ್ಟ ಸೇವೆಯನ್ನು ಸ್ಮರಿಸಿ ಶುಭ ಕೋರಿದರು.

ಶ್ರೀ ಎಚ್. ಎಸ್. ನಾಯಕರು ತನಗೆ ಕೊಟ್ಟ ಗೌರವಕ್ಕೆ ತಾನು ತಕ್ಕವನಲ್ಲವೆಂದೂ ತಾನು ಮಾಡಿದ ಸೇವೆಗೆ, ಉಡುಪಿಯ ಸಾರ್ವಜನಿಕರ ಬೆಂಬಲವೇ ಮುಖ್ಯ ಕಾರಣ ಎಂದೂ ಹೇಳಿದರು. ಲಘೂಪಹಾರದ ನಂತರ ಜೂನಿಯರ್ ಇಂಜಿನಿಯರ್, ಶ್ರೀ ಎನ್. ಪಾಂಡುರಂಗ ಅಧಿಕಾರಿಯವರು ಎಲ್ಲರಿಗೆ ಧನ್ಯವಾದಗಳನ್ನು ಅರ್ಪಿಸಿದರು.

ಉದ್ಯಾವರ ಬಿಲ್ಲವ ಮಹಾಜನ ಸಂಘ, ಬೊಂಬ್ಯಾ ಶಾಖೆ.... ಈ ಸಂಘವು ಉಡುಪಿ ತಾಲೂಕು ಉದ್ಯಾವರ ಗ್ರಾಮದ ಸ್ವಜಾತಿ ಭಾಂಧವರ ಬಡ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ಕೊಡುವರೆ ನಿಶ್ಚಯಿಸಿರುವುದು.

ವಿದ್ಯಾರ್ಥಿ ವೇತನ ಅಗತ್ಯವಿರುವ ವಿದ್ಯಾರ್ಥಿಗಳು ತಮ್ಮ ಹೆತ್ತವರ ಯೂ ರಕ್ಷಕರ ಸಂಪೂರ್ಣ ಅನುಮತಿಯೊಂದಿಗೆ, ತಮ್ಮ ಅರ್ಜಿಯನ್ನು ಶಾಖಾ ಸಂಘದ ಕಾರ್ಯದರ್ಶಿಯವರಿಗೆ ಕೆಳಗಿನ ವಿಳಾಸಕ್ಕೆ ತಾ. 30 7—62ರ ಒಳಗೆ ಸಿಗುವಂತೆ ಕಳುಹಿಸಿಕೊಡತಕ್ಕದು.

R. A. Udyavar, Hon Secretary The Udyavara Billava Mahajana Sangha 265, Frere Road. II Floor Room No. 20 Fort Bombay.



ಶ್ರೀ ನಾರಾಯಣ ಬಿ. ಶೆಟ್ಟಿ ಬಿ ಎ. (ಆನರ್ಸ್), ಇವರು 'ಓಪ್ತೆಲ್ಮೋಲಜಿ' (Opthalmology)ಯಲ್ಲಿ ವಿಶೇಷ ತರಬೇತಿ ಪಡೆಯಲಿಕ್ಕಾಗಿ ಕಳೆದ ತಾ 10ರಂದು ಮುಂಬಯಿಯಿಂದ ಲಂಡನಿಗೆ ವಿಮಾನ ಮೂಲಕ ತೆರಳಿದರು. ಇವರು ನೋರ್ದೇಮ್ಟನ್ ಕೋಲೆಜ್ ಓಫ್ ಟೆಕ್ನೋಲಜಿಯಲ್ಲಿ ಶಿಕ್ಷಣ ಪಡೆಯುವರು. ಶ್ರೀಯುತರು ಮುಂಬಯಿಯನ್ನೂ ಕರ್ಣಾಟಕ ಓಪ್ಟಿಕಲ್ ಕಂಪೆನಿಯ ಶ್ರೀ ಕಡೆಕಾರು ಕೃಷ್ಣ ಶೆಟ್ಟರ ಅಳಿಯ.

ಶ್ರೀ ಎಸ್. ಹಿರಿಯಣ್ಣ ಹೆಗ್ಡೇರ ನಿಧನ— ದೀರ್ಘ ಕಾಲದಿಂದ ಅಸ್ವಸ್ಥರಾಗಿದ್ದ ಶ್ರೀ ಸೆಟ್ಟಿಬೆಟ್ಟು ಹಿರಿಯಣ್ಣ ಹೆಗ್ಡೇರು ಇದೇ ತಾ 21ನೇ ರಾತ್ರಿ ಉಡುಪಿಯ ಸ್ವಗೃಹದಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದವಾಗುತ್ತದೆ. ದಿವಂಗತರು ಪ್ರಸಿದ್ಧ ಬಂಟ ಮನೆತನದವರಾಗಿದ್ದು, ವ್ಯಾಪಾರಿಗಳಾಗಿ ಕಂಟ್ರಾಕ್ಟದಾರರಾಗಿ ಹೆಸರುಗಳಿಸಿದ್ದರು.

(೬ನೇ ಪುಟದಿಂದ)

ಗ್ನೇಯ ಏಸ್ಯಾದಲ್ಲಿ ಸೈನಿಕ ಚಲನವಲನಗಳಿಗೆ ಕಾರಣವಾಗಿದ್ದ ಈ ಪ್ರಶ್ನೆಯು ತೀರ್ಮಾನವಾದದು ಅಂತಾರಾಷ್ಟ್ರೀಯ ಮಹತ್ವದ ಸಂಗತಿ. ಮೂವರು ರಾಜರುಗಳಿಗೆ ಇಷ್ಟು ತಡವಾಗಿಯಾದರೂ ವಿವೇಕೋದಯವಾಯಿತು.

ಗಮಾಲ್ ನಸ್ಸೇರ್

ಸಂಯುಕ್ತ ಅರಬ ಪ್ರಜಾ ರಾಜ್ಯದ ಅಧ್ಯಕ್ಷ ನಸ್ಸೇರರು ಒಂದು ದೃಢವಾದ ನಿಲುವೆಯುಳ್ಳವರು ಕಾಶ್ಮೀರದ ಮೇಲೆ ಭಾರತಕ್ಕಿರುವ ಸಾರ್ವಭೌಮಾಧಿಕಾರವನ್ನು ಪ್ರಶ್ನಿಸಲು ಯಾರಿಗೂ ಅಧಿಕಾರವಿಲ್ಲ ಎನ್ನುವವರು. ಈ ಕಾರಣದಿಂದಲೇ ಅಯರ್ಲೆಂಡು ಮುಂದೆತಂದ ಗೊತ್ತುವಳಿಯ ಮೇಲೆ ಮತದಾನ ಮಾಡಬಾರದೆಂದು ಭದ್ರತಾ ಮಂಡಳಿಯಲ್ಲಿನ ತನ್ನ ಪ್ರತಿನಿಧಿಗೆ ಆದೇಶವಿತ್ತರು. ಘಾನವಾದರೂ ಸಂ. ಆ. ಪ್ರಜಾರಾಜ್ಯವನ್ನೇ ಅನುಸರಿಸಿತು. ಭಾರತದ ನೀತಿಯನ್ನು ಅರ್ಥಪಿಸಿಕೊಂಡ ಈ ಅಪ್ರಿಕನ್ ರಾಷ್ಟ್ರಗಳ ಬಗ್ಗೆ ವಾಕಿಸ್ತಾನವು ದೂರಿಕೊಂಡರೂ ೧೫ ಕೋಟಿ ಭಾರತೀಯರ ಕೃತಜ್ಞತೆ ಹಿಂದಿನಿಂದಲೂ ಇದೆ; ಮುಂದಕ್ಕೂ ಇರುವುದು.

ಚೌ ಎನ್‌ಲಾಯ್

ನುಂಗಲಾರದ ತುತ್ತನ್ನು ಗಂಟಲಲ್ಲಿ ಉರುಳಿಸಿಕೊಂಡ ಚೌ-ಎನ್-ಲಾಯ್ ಈಗ ಅಸಹಾಯಕ ಶೂರರಂತಾಗಿದ್ದಾರೆ. ಭಾರತದ ಭೂಭಾಗವನ್ನು ಕಬಳಿಸಿ ದಕ್ಕಿಸಿಕೊಳ್ಳುವ ಹವಣಿಕೆಯಿಂದ ಮೊದಮೊದಲು ಗಂಭೀರ ನೀತಿ ತಾಳುತಿದ್ದ ಅವರು ಇಂದು ತುಸು ಸೌಮ್ಯವಾಗಿದ್ದಾರೆ; ಸಮಸ್ಯೆಯನ್ನು ಬೇಗನೆ ಶಾಂತಿ ಮಾರ್ಗದಿಂದ ಇತ್ಯರ್ಥಗೊಳಿಸಲು ಆತುರಾಗಿದ್ದಾರೆಂದು ಪ್ರಧಾನಿ ನೆಹರು ಊಹಿಸಿದ್ದಾರೆ.

ಭಟ್ಟಾಚಾರ್ಯರ ಮೇಲೆ

ಅಯೂಬ ಖಾನರು ತೋರಿದ ಉದಾರತೆ

ಪಾಕಿಸ್ತಾನದ ಅಧ್ಯಕ್ಷ ಅಯೂಬಖಾನರು ಭಾರತೀಯ ಮಿಲಿಟರಿ ಅಧಿಕಾರಿ ಕರ್ನೆಲ್ ಭಟ್ಟಾಚಾರ್ಯರ ಶಿಕ್ಷೆಯನ್ನು ಎಂಟು ವರ್ಷಗಳಿಂದ ನಾಲ್ಕು ವರ್ಷಗಳಿಗೆ ಇಳಿಸಿದ್ದಾರೆ. ಭಾರತೀಯರನ್ನೂ ಅವರ ವ್ಯವಹಾರಗಳನ್ನೂ ಸದಾ ವಕ್ರದೃಷ್ಟಿಯಿಂದ ಕಾಣುವ ಪಾಕಿಸ್ತಾನಿ ಅಧ್ಯಕ್ಷರು ತೋರಿದ ಈ ರಿಯಾಯತಿಯು ನಿಜವಾಗಿಯೂ ಆಶ್ಚರ್ಯವನ್ನೂ ಕುತೂಹಲವನ್ನು ಕೆರಳಿಸುವಂತಹದು. ಪಾಕ್ ನಾಯಕರು ಭಾರತ ಪಾಕಿಸ್ತಾನ ಗಡಿಯ ಪ್ರಶ್ನೆಯಲ್ಲಿ ಒಂದಲ್ಲ ಒಂದು ಆರೋಪವನ್ನೂ ಹೊರಿಸುತ್ತ ಗಡಿ ಪ್ರದೇಶದಲ್ಲಿ ಅಶಾಂತತೆಯನ್ನು ಹಿಂದಿನಿಂದಲೂ ಕಾಯ್ದುಕೊಂಡು ಬಂದಿದ್ದಾರೆ. ಭಾರತೀಯ ಅಧಿಕಾರಿ ಭಟ್ಟಾಚಾರ್ಯರು ಭಾರತೀಯ ಸರಹದ್ದಿನೊಳಗೆ ಗಸ್ತಿ ನಡೆಸುತ್ತಿದ್ದಾಗಲೇ ಪಾಕ್ ಪ್ರದೇಶದಲ್ಲಿ ಗುಪ್ತಚಾರತನ ನಡೆಸಿದರೆಂಬ ಮಿಥ್ಯಾರೋಪವನ್ನು ಹೊರಿಸಿ ವಿಚಾರಣೆಗೆ ಗುರಿಮಾಡಲಾಯಿತು ಎಂಬುದನ್ನು ಮರೆಯಬಾರದು.

ಪಾಕಿಸ್ತಾನವು ಭಾರತ ವಿರೋಧೀ ನೀತಿಯನ್ನು ಅನುಸರಿಸುತ್ತಿರುವುದು ತೀರ ಹಳೆಯ ಮಾತು. ತ್ರಿಪುರದ ಗಡಿಯಲ್ಲಿನ ಸಂತಾಲರ ಮೇಲೆ ಗುಂಡು ಹಾರಿಸಿದುದು ಇತ್ತೀಚೆಗೆ ಅದು ನಡೆಸಿದ ಅತ್ಯಾಚಾರ. ಪಾಕಿಸ್ತಾನದಿಂದ ನಿರಾಶ್ರಿತರಾಗಿ ಆಗಾಗ ಭಾರತಕ್ಕೆ ಓಡಿಬರುತ್ತಿರುವವರು ಕೇವಲ ಹಿಂದುಗಳು ಮಾತ್ರವಲ್ಲ; ಮುಸ್ಲಿಮರೂ ಇದ್ದಾರೆ. ಇವರೆಲ್ಲರಿಗೂ ಸೂಕ್ತ ವ್ಯವಸ್ಥೆಯನ್ನು ಭಾರತ ಸರಕಾರವು ಮಾಡಿಕೊಡುತ್ತಿದೆ. ಹಿಂದೊಮ್ಮೆ ಟಿಬೇಟಿನಿಂದ ಭಾರತವನ್ನು ಪ್ರವೇಶಿಸಿದ ನಿರಾಶ್ರಿತರಿಗೆ ಮಾಡಿಕೊಟ್ಟ ವ್ಯವಸ್ಥೆಗೆ ದಲಾಯಿಲಾಮಾರವರು ತಮ್ಮ ಸಂತೃಪ್ತಿಯನ್ನು ವ್ಯಕ್ತಪಡಿಸಿದ್ದರು. ಭಾರತದ ಉದಾರತೆಗೆ ಇದೊಂದೇ ದ್ಯೋತಕ ಸಾಕು. ಆದರೆ, ಪಾಕಿಸ್ತಾನವು ಮಾತ್ರ ಭಾರತವನ್ನೂ ಅದರ ನೀತಿಯನ್ನೂ ದೂರುವುದರಲ್ಲಿಯೇ ತೃಪ್ತಿಯನ್ನು ಪಟ್ಟುಕೊಳ್ಳುತ್ತಿದೆ ಹೀಗಾಗುವುದಕ್ಕೆ ಅಲ್ಲಿನ ಆಡಳಿತಾಧಿಕಾರಿಗಳೇ ಮೂಲಕಾರಣವೆಂಬುದು ಸ್ವಯಂಸಿದ್ಧ.

ಪಾಕಿಸ್ತಾನದಲ್ಲಿ, ಮುಖ್ಯವಾಗಿ ಪೂರ್ವಭಾಗದಲ್ಲಿ ಅಯೂಬಖಾನರು ರಾಷ್ಟ್ರಕ್ಕಾಗಿ ನಿರ್ಮಿಸಿಕೊಂಡಿರುವ ನೂತನ ಸಂವಿಧಾನಕ್ಕೆ ಪ್ರಬಲ ಪ್ರತಿರೋಧವು ವ್ಯಕ್ತವಾಗುತ್ತ ಬರುತ್ತಿದೆ. ಎಸೆಂಬ್ಲಿಗಳಿಗೆ ಚುನಾಯಿತರಾದ ಸದಸ್ಯರಾದರೂ ತಮಗೆ ಹೆಚ್ಚಿನ ರಾಜಕೀಯ ಅಧಿಕಾರ ದೊರೆಯಬೇಕು ಎಂದು ಬೊಬ್ಬಿಡುತ್ತ ಇದ್ದಾರೆ. ದೇಶದ ಆಂತರಿಕ ಅವ್ಯವಸ್ಥೆಯತ್ತ ನಾಗರಿಕರ ಗಮನ ಹರಿದಾಗ, ಅದನ್ನು ಮತ್ತೊಂದೆಡೆ ಹರಿಸುವ ಬುದ್ಧಿವಂತಿಕೆ ಪಾಕ್‌ರಾಜಕಾರಣಿಗಳಿಗೆಕರಗತವಾಗಿದೆ ಎಂತಲೇ ತಮ್ಮ ನಾಗರಿಕರನ್ನು ಇಸ್ಲಾಮಿನ ಹೆಸರಿನಲ್ಲಿ ವಂಚಿಸುವ ವ್ಯರ್ಥ ಪ್ರಯತ್ನವೂ ಅಲ್ಲಿ ನಡೆಯುತ್ತದೆ.

ಕಾಶ್ಮೀರವು ತನಗೆ ಸೇರಬೇಕೆಂಬುದಕ್ಕೆ ಕಾರಣವಾಗಿ ಸಂ. ರಾ. ಸಂಘದಲ್ಲಿ ಜಫರುಲ್ಲಾ ಖಾನರು ಹೇಳಿದರು. "ಕಾಶ್ಮೀರದಲ್ಲಿ ಮುಸ್ಲಿಮರ ಸಂಖ್ಯೆ ಅತಿ ಹೆಚ್ಚಾಗಿದೆ; ಆದುದರಿಂದ ಮುಸ್ಲಿಮರ ರಾಜ್ಯ ಪಾಕಿಸ್ತಾನಕ್ಕೆ ಸೇರಬೇಕು" ಎಂದು. ಮುಸ್ಲಿಮರು ಇರುವುದು ಜಮ್ಮು-ಕಾಶ್ಮೀರದಲ್ಲಿ ಮಾತ್ರವಲ್ಲ; ಭಾರತದಲ್ಲಿಯೂ ಬಹಳ ಸಂಖ್ಯೆಯಲ್ಲಿದ್ದಾರೆ. ಭಾರತೀಯ ಮುಸ್ಲಿಮರನ್ನು ಇಲ್ಲಿ ಯೋಗ್ಯ ರೀತಿಯಿಂದ ನೋಡಿಕೊಳ್ಳಲಾಗುತ್ತಿದೆ. ಭಾರತವು ಹಿಂದೂ ರಾಜ್ಯವಾಗಿ ರೂಪಿತವಾಗಿಲ್ಲ; ಜಾತ್ಯತೀತ ಪ್ರಜಾರಾಜ್ಯವಾಗಿ ನಿರ್ಮಾಣವಾಗಿದೆ. ಇಲ್ಲಿ ಭಾರತೀಯ ಹಿಂದುವಿಗಿರುವಷ್ಟೇ ಅಧಿಕಾರ ಭಾರತೀಯ ಮುಸ್ಲಿಮನಿಗೂ ಇದೆ ಭಾರತೀಯ ಕ್ರೈಸ್ತನಿಗೂ ಇದೆ. ಇದನ್ನು ಕಂಡೂ ಕಾಣದಂತೆ ಮಾಡಿ ಪಾಕ್ ಅಧಿನಾಯಕರು ತಮ್ಮ ಬೇಳೆ ಬೇಯಿಸಿಕೊಳ್ಳುವ ಸಂಚು ಹೂಡಿದರು. ಆದರೆ, ಅವರ ಬೇಳೆ ಮಾತ್ರ ಬೇಯಲಿಲ್ಲ

ತಮ್ಮ ನಾಗರಿಕರ ಲಕ್ಷ್ಯವನ್ನು ಅನ್ಯತ್ರಹರಿಸಿ, ಅವರು ಭಾರತದ ಮೇಲೆ ಉರಿಕಾರುವಂತೆಸಗುವ ಇನ್ನೊಂದು ಕುತಂತ್ರವನ್ನು ಅವರು ಹೂಡಿದರು. ಭಾರತೀಯ ಮುಸ್ಲಿಮರನ್ನು ಸರಿಯಾಗಿ ನೋಡಿಕೊಳ್ಳಲಾಗುತ್ತಿಲ್ಲವೆಂದು ದೂರಿದರು. ಹೀಗೆಯೇ ಮುಂದುವರಿಯಿತೆಂದರೆ, ೧೯೪೭ರಲ್ಲಿ ಅಖಂಡ ಭಾರತವು ವಿಭಜನೆಗೊಂಡಂತೆ ಉಳಿದ ಭಾರತವೂ ವಿಭಜಿತವಾಗ ಬೇಕಾದೀತು ಎಂದು ಅರ್ಭಟಿಸಿದರು. ಆದರೆ ಭಾರತೀಯ ಮುಸ್ಲಿಮರು ತಮ್ಮ ಅಸ್ತಿತ್ವವನ್ನು ಸರಿಯಾಗಿ ಬಲ್ಲರು; ಅವರಿಗೆ ಪಾಕಿಸ್ತಾನದಿಂದ ಯಾವ ಆದೇಶವೂ ಬರಬೇಕಾಗಿಲ್ಲ.

ಕರ್ನೆಲ್ ಭಟ್ಟಾಚಾರ್ಯರ ಶಿಕ್ಷೆಯ ಅವಧಿಯನ್ನು ತಗ್ಗಿಸಿದ ಸಮಯವನ್ನೂ ತುಸು ಪರ್ಯಾಲೋಚಿಸಬೇಕು. ಕಾಶ್ಮೀರದ ಪ್ರಶ್ನೆಯನ್ನು ಸಂಯುಕ್ತ ರಾಷ್ಟ್ರ ಸಂಘದ ಭದ್ರತಾ ಮಂಡಳದಲ್ಲಿ ಇತ್ಯರ್ಥವಾಗ ಬೇಕೆಂದು ಮುಂದಿಟ್ಟು ಈ ದಿಸೆಯಲ್ಲಿ ಭಾರತದ ನೀತಿಯನ್ನು ದೂರಿ, ಅದು ಸಮರವನ್ನೇ ಬಯಸುತ್ತದೆ; ದ್ವೇಷಾಸೂಯೆಗಳಿಂದ ಕೂಡಿದೆ ಎಂಬ ಘನ ಗಂಭೀರವಾದ ದೋಷವನ್ನು ಮುಂದಿಟ್ಟಿರುವಾಗಲೇ ತಾನು ಸಂಭಾವಿತನೆನಿಸುವ ಯುಕ್ತಿಯಿಂದ ಶಿಕ್ಷೆಯ ಅವಧಿಯನ್ನು ಅಯೂಬಖಾನರು ಇಳಿಸಿದರು ತಾನು ಸ್ನೇಹ ಹಸ್ತವನ್ನು ಚಾಚುತ್ತ ಇದ್ದೇನೆ; ಭಾರತವೇ ಅದನ್ನು ಅಲ್ಲಗಳೆಯುತ್ತಿದೆ ಎಂದು ಬಡಾಯಿಕೊಚ್ಚಲು ಅನುಕೂಲವಾಗುವಂತೆ ಸತ್ಯಕ್ಕೆ ಮಸಿಯೆರೆದು ಇಡಿಯ ಜಗತನ್ನು ವಂಚಿಸುವ ಹವಣಿಕೆ ಮಾಡಿದ್ದಾರೆ. ಭದ್ರತಾ ಸಮಿತಿಯಲ್ಲಿ ತನ್ನ ಬಯಕೆ ಈಡೇರದ್ದರಿಂದ ಈ ವಿಷಯದಲ್ಲಿ ತನ್ನ ತೀವ್ರತೆಯನ್ನು ವ್ಯಕ್ತಪಡಿಸಿ, ಜನತೆಯನ್ನು ಆಕರ್ಷಿಸಿಕೊಳ್ಳಲು ಎಸೆಂಬ್ಲಿ ಸಭೆಯನ್ನೂ ನಿಲ್ಲಿಸಿ, ಮುರ್ರೆಯಲ್ಲಿ ಮಂತ್ರಿ ಮಂಡಳದದ ಸಭೆಯನ್ನು ಕರೆಯುವ ಮಹಾ ಸಾಹಸವನ್ನು ಅವರು ಮಾಡಿದ್ದಾರೆ.

ಕಾಶ್ಮೀರದ ಪ್ರಶ್ನೆಯನ್ನು ಜನರಲ್ ಎಸೆಂಬ್ಲಿಗೆ ಒಯ್ಯುವ ಇಚ್ಛೆಯನ್ನು ಅಯೂಬ ಖಾನರು ಮೊದಲೇ ಮಾಡಿದ್ದಾರೆ. ಮಂತ್ರಿ ಮಂಡಳಿಯಾದರೂ ಇದನ್ನು ಅನುಮೋದಿಸದಿರದು. ಅಂತೂ ದೇಶದೊಳಗಿನ ಸಂಕಟಮಯ ಸನ್ನಿವೇಶವನ್ನು ಮರೆಯುವಂತೆ ಮಾಡಲು ಅಯೂಬ ಖಾನರಿಗೆ ಇನ್ನೊಂದು ಅವಕಾಶ ದೊರೆಯಿತೆನ್ನಬೇಕು ಆದರೆ, ಜನರಲ್ ಎಸೆಂಬ್ಲಿಯಲ್ಲಾದರೂ ಆಫ್ರೇಸ್ಯ ರಾಷ್ಟ್ರಗಳ ಪ್ರಾತಿನಿಧ್ಯವೇ ಬಹಳವಿರುವುದರಿಂದ ಅಮೆರಿಕನ್ ಬಾಲಬಡಕ ಅಯೂಬರ ಆಶಯ ಈಡೇರುವುದೆಂಬ ವಿಶ್ವಾಸ ಸ್ವಯಂ ಅವರಿಗೂ ಇರಲಾರದು. ಒಟ್ಟಿನಲ್ಲಿ ರಾಜಕೀಯ ಗತ್ತುಗಾರಿಕೆಯೇನೇ ಇರಲಿ. ಕರ್ನೆಲ್ ಭಟ್ಟಾಚಾರ್ಯರು ಅಪರಾಧಿಯೆಂದು ಸಿದ್ಧಮಾಡಿದರೂ ಶಿಕ್ಷೆಯನ್ನು ಇಳಿಸಿದುದಕ್ಕಾಗಿ ಅವರನ್ನು ಅಭಿನಂದಿಸಬೇಕಾಗಿದೆ.

ದೇವತೆಗಳು ತೋಡಿದ ಸರೋವರ

(ಅನೇ ಸುಟದಿಂದ)

ಳಿಂದ ಇದು ಕಿಕ್ಕಿರಿಯುತ್ತದೆ ತೋಟಕ್ಕೆಸಮೀಪದಲ್ಲಿಯೇ ದೋಣಿಗಟ್ಟವಿದೆ. ಇಲ್ಲಿಂದ ದೋಣಿಗಳಲ್ಲಿ ಕುಳಿತು ಸರೋವರದಲ್ಲಿ ನೌಕಾವಿಹಾರವನ್ನು ಮಾಡಿ ಸಂತೋಷಿಸುತ್ತಾರೆ.

ಅದ್ಭುತ ರೀತಿಯ ಬಂಡೆಗಳು ಆಬುವಿನಲ್ಲಿವೆ. ಸರೋವರದ ದಕ್ಷಿಣದಲ್ಲಿ ಒಂದು ಬಂಡೆಯಿದೆ. ಇದು ದೊಡ್ಡ ಕಪ್ಪೆಯ ಆಕಾರದಲ್ಲಿದೆ ಇದನ್ನು 'ಟಾಂಡ್‌ರೋಕ್' ಎನ್ನುತ್ತಾರೆ. ಮುಸುಕು ತೆರೆದ ಹೆಂಗಸಿನ ಆಕಾರದ ಬಂಡೆಯೊಂದಿದೆ. ಇದನ್ನು 'ನನ್‌ರಾಕ್' ಎಂದು ಕರೆಯುತ್ತಾರೆ. ೧೯೯೦ರಲ್ಲಿ ಇದರ ಮೇಲೆ ಗುಡುಗು ಬಡೆದಿತ್ತು. ಇದರಿಂದ ಬಂಡೆಯ ಮೂಗಿನಂತಹ ಭಾಗವು ಮುರಿದು ಹೋಯ್ತು. 'ನಂದೀರಾಕ್' 'ಬುಲ್‌ಡಗಾ್ ರಾಕ್' ಕೆಮಲ್ ರಾಕ್' ಮೊದಲಾದುವು ಸುಂದರವಿವೆ.

ಆಬುವಿನಲ್ಲಿ ಚಿಕ್ಕಪುಟ್ಟ ಅನೇಕ ಮಂದಿರಗಳಿವೆ. ಇವುಗಳಲ್ಲಿ ರಘುನಾಥ ಮಂದಿರವು ಸಾಕಷ್ಟು ಪ್ರಖ್ಯಾತವಾಗಿದೆ. ಇದು ಎತ್ತರ ಪರ್ವತಗಳ ನಡುವೆ ರಾಮಕುಂಡದ ಕೆಳಗಡೆ ನಕ್ಕೀ ಸರೋವರದ ದಡದಲ್ಲಿದೆ. ಹದಿನಾಲ್ಕನೆಯ ಶತಮಾನದಲ್ಲಿ ಹಿಂದೂಧರ್ಮದ ಮಹಾ ಸಂತ ಸ್ವಾಮೀ ರಮಾನಂದರು ಇದರ ಮೂರ್ತಿಯನ್ನು ಸ್ಥಾಪಿಸಿದರೆಂದು ಹೇಳುತ್ತಾರೆ. ಇದರ ಪಕ್ಕದಲ್ಲೇ ದುಲೇಶ್ವರ ಮಹಾದೇವರ ಪ್ರಾಚೀನವಾದ ಮತ್ತು ದರ್ಶನೀಯ ಮಂದಿರವಿದೆ.

ರಘುನಾಥ ಮಂದಿರದ ಮೇಲೆ ಜಯಪುರ ಭವನದ ಬಳಿ ಒಂದು ಗುಹೆಯಲ್ಲಿ ನೀರು ತುಂಬಿದೆ. ಇದನ್ನು ರಾಮಕುಂಡ ಎಂದು ಕರೆಯುತ್ತಾರೆ. ಮೊದ ಮೊದಲು ಈ ಕುಂಡದಲ್ಲಿ ಹನ್ನೆರಡೂ ತಿಂಗಳು ನೀರು ತುಂಬಿರುತಿತ್ತು. ಆದರೆ ಇಂದಿದು ಗ್ರೀಷ್ಮ ಕಾಲದಲ್ಲಿ ಒಣಗಿ ಹೋಗುತ್ತದೆ. ಇಲ್ಲಿ ಸಾಧುಸಂತರ ಕುಟೀರಗಳು ಮಾತ್ರ ಮೊದಲಿಗಿದ್ದುವು; ಆದರೆ, ಇಂದು ಉತ್ತಮವಾದ ರಸ್ತೆಗಳ ನಿರ್ಮಾಣವಾಗಿದ್ದು ಅವುಗಳ ಪಕ್ಕಗಳಲ್ಲಿ ದೊಡ್ಡ ದೊಡ್ಡ ಮನೆಗಳೂ ಇವೆ. ಇವುಗಳಲ್ಲಿ ಯಾತ್ರಿಕರು ಸಂತೋಷದಿಂದ ಉಳಕೊಳ್ಳಬಹುದು. ಇಲ್ಲಿಂದ ಮುಂದೆ ರಾಮಚಂದ್ರ ದೇವಾಲಯವಿದೆ. ಬೆಟ್ಟಗಳ ನಡುವಣ ಏಕಾಂತ ಸ್ಥಾನವು ಪರಮಾತ್ಮ ಸ್ತುತಿ ಮತ್ತು ಧ್ಯಾನಗಳಿಗೆ ಉಪಯುಕ್ತವೆಂದು ಹೇಳಬಹುದು.

ಹಾರ್ಮೋನಿಯಮ್ ಕಲಿಯುವವರಿಗೆ ಅತ್ಯುತ್ತಮ ಸಂಗೀತ ಪುಸ್ತಕ—

ಶ್ರೀ ಎ. ರಾಮಪ್ಪ ಅವರ

ಹಾರ್ಮೋನಿಯಮ್

ಬೋಧನ ಕ್ರಮ

ಪರಿಷ್ಕರಿಸಲ್ಪಟ್ಟ ನಾಲ್ಕನೆಯ ಮುದ್ರಣ.

ಕೆಲವೇ ಪ್ರತಿಗಳು ಉಳಿದಿವೆ.

ಬೆಲೆ: ರೂ. 2—0—0.

ಒಂದು ಪ್ರತಿ ಬೇಕಾದವರು ರೂ 2-50 ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ. ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು

ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ವಿ. ಸೂ.—ಅಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0 =25 N.P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕಕಳಿಸಲಾಗುವುದು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ಸಿಗದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪರ್ವತಾರೋಹಣಕ್ಕೆ

ಋತುಮಾನದ ಅಧ್ಯಯನ

ವಿಜ್ಞಾನವು ಅಸಾಧ್ಯದಲ್ಲಿ ಅಸಾಧ್ಯಕಾರ್ಯಗಳನ್ನು ಮಾಡಿ ತೋರಿಸಿದೆಯಾದರೂ ಋತುಮಾನಗಳ ಮೇಲೆ ತನ್ನ ಪ್ರಭುತ್ವವನ್ನು ಜಮಾಯಿಸಲು ಇದುವರೆಗೆ ಅದಕ್ಕೆ ಸಾಧ್ಯವಾಗಿಲ್ಲ. ಇತ್ತೀಚೆಗೆ ಗೌರಿಶಂಕರ ಶಿಖರವನ್ನು ಹತ್ತ ಹೋದ ಪರ್ವತಾರೋಹಿ ತಂಡವೊಂದು ಶಿಖರ ಮುಟ್ಟಿತು ಮುಟ್ಟಿತು ಎಂಬಾಗಲೇ ಹಿಂದಿರುಗ ಬೇಕಾದುದಕ್ಕೆ ಪ್ರತಿಕೂಲ ಋತುಮಾನವೇ ಕಾರಣ ಹೀಗೆಯೇ ತಮ್ಮ ಗುರಿ ಮುಟ್ಟದೆ ಅರ್ಧದಲ್ಲೇ ಮರಳುವ ತಂಡಗಳಿಗೆ ಕೊರತೆಯಿಲ್ಲ. ಹಿಂದೊಮ್ಮೆ ಗೌರೀಶಂಕರವನ್ನು ಮೆಟ್ಟಿನಿಂತ ಹಿಲೆರಿಯೊದರೂ ಇತ್ತೀಚೆಗೆ ವಿಫಲ ಮನೋರಥನಾಗಿ ಮರಳ ಬೇಕಾದುದಕ್ಕೆ ಹವಾಮಾನವೇ ಕಾರಣವೆಂಬುದು ನಿರ್ವಾದ.

ಪರ್ವತ ಪ್ರದೇಶದಲ್ಲಿ ಬೀಸುತ್ತಿರುವ ಬಿರುಗಾಳಿಗಳನ್ನೂ ಬೀಳುತ್ತಿರುವ ಹಿಮವನ್ನೂ ತಾಳಿಕೊಳ್ಳಬಲ್ಲ ವಿಶಿಷ್ಟ ಉಡುಗೆ ತೊಡುಗೆಗಳ ನಿರ್ಮಾಣವಾಗಿದೆ; ಸಾಮಾನು ಸಲಕರಣೆಗಳು ತಯಾರಾಗಿವೆ ಔಷಧಿಗಳು; ವಸ್ತ್ರ, ಆಮ್ಲಜನಕದ ಕೊಳವೆಗಳು, ಫೋನ್ ಸಂಚಾಲನೆ-ಎಲ್ಲವೂ ಇಂದ ಒದಗಿವೆ ಹಾಗಿದ್ದರೂ ಪರ್ವತಗಳಎಲ್ಲ ಶಿಖರಗಳನ್ನು ಮೆಟ್ಟ ನಿಲ್ಲುವುದು ಮಾನವನಿಗೆ ಸಾಧ್ಯವಾಗಿಲ್ಲ, ಕೆಲವೊಂದು ಶಿಖರಗಳ ಪಾದ ಮುಟ್ಟುವುದೂ ದುಸ್ಸಾಧ್ಯವಾಗಿಯೇ ಉಳಿದಿದೆ.

ಏಳೆಂಟು ಸಾವಿರ ಅಡಿ ಎತ್ತರ ಹತ್ತಿದೊಡನೆಯೇ ಹವಾಮಾನದ ಬಾಧೆಯು ಅನುಭವಕ್ಕೆ ಬರುವುದು. ೧೧ ಸಾವಿರ ಅಡಿಗಳಿಗಿಂತಲೂ ಎತ್ತರವಿರುವ ಅಮರನಾಥ ಮತ್ತು ಬದರೀನಾಥಗಳ ಯಾತ್ರೆಯನ್ನು ಭಾರತೀಯರುಮಾಡಿ ಬರುತ್ತಾರೆ. ಆದರೆ, ಹಿಮಾಲಯ ಪರ್ವತಾರೋಹಣ ಪ್ರಯತ್ನಗಳು ಹೆಚ್ಚಿನವು ಅಸಫಲವಾಗಿಯೇ ಉಳಿದುವು. ಪ್ರತಿಕೂಲ ಹವಾಮಾನವೇ ಇದಕ್ಕೆ ಪ್ರಬಲ ಕಾರಣ

ಪರ್ವತಾರೋಹಣದ ಸಫಲತೆ ಮತ್ತು ವಿಫಲತೆಯಲ್ಲಿ ಹವಾಮಾನದ ಪಾತ್ರ ಮಹತ್ವಪೂರ್ಣವಾದುದು. ಆರೋಹಣ ಯೋಜನೆ ತಯಾರಿಸುವವರೂ ಈ ಕಡೆಗೆ ಸಾಕಷ್ಟು ಗಮನ ನೀಡುತ್ತಾರೆ ವಾತಾವರಣವು ಸರ್ವಾಧಿಕ ಅನುಕೂಲವಿರುವ ಸಮಯವನ್ನೇ ಆರೋಹಣಕ್ಕಾಗಿ ಆಯ್ದುಕೊಳ್ಳುತ್ತಾರೆ. ಹಾಗಿದ್ದರೂ ನೂರಾರು ತಂದಗಳ ಪ್ರಯತ್ನಗಳು ವಿಮುಖವಾಗುತ್ತವೆ

೧೯೩೨ರಲ್ಲಿ ಗೌರಿಶಂಕರವನ್ನು ಗೆಲ್ಲಲು ಹೊರಟ ಪರ್ವತಾರೋಹಿ ತಂಡವು ಋತು ಪರ್ಯವೇಕ್ಷಣ ಶಾಲೆಯೊಡನೆ ನಿರಂತರ ರೇಡಿಯೊ ಸಂಪರ್ಕವಿರಿಸಿಕೊಂಡಿತು ಇದರಿಂದ ಹವಾಮಾನದ ಯಥಾರ್ಥ ಸ್ಥಿತಿ ಅದಕ್ಕೆ ತಿಳಿಯುತಿತ್ತು ೧೯೩೪ರಲ್ಲಿ ಜರ್ಮನ್ ಆರೋಹಿ ತಂಡವೊಂದು ನಂಗಪರ್ವತವನ್ನು ಹತ್ತಿತು. ಋತುಮಾನವನ್ನು ಅರಿತುಕೊಳ್ಳಲು ಅದು ಟ್ರಾನ್ಸ್ಮಿಟರನ್ನು ಸಂಗಡ ಒಯ್ದಿತು. ಆಧಾರ ಕೇಂಪಿನಲ್ಲಿ ವಯರ್‌ಲೆಸ್ ಸ್ಟೇಶನನ್ನು ನಿರ್ಮಿಸಿತು. ವಾತಾವರಣದ ಪರಿಸ್ಥಿತಿಯನ್ನು ಅರಿತುಕೊಳ್ಳಲು ಸಾಧ್ಯವಿರುವ ಎಲ್ಲ ಪ್ರಯತ್ನಗಳನ್ನೂ ಮಾಡಿಕೊಂಡಿತು.

ಪರ್ವತಗಳ ಋತುಮಾನಗಳಿಗೆ ಸಂಬಂಧಿಸಿದ ಹಳೆಯ ಲೇಖಗಳನ್ನೂ ಭದ್ರವಾಗಿಡುತ್ತಾರೆ ಬೇರೆ ಬೇರೆ ಪರ್ವತಾರೋಹಿಗಳಿಂದ ಬಂದಿರುವ ಹವಾಮಾನ ವರದಿಗಳನ್ನು ಜೋಪಾನವಾಗಿ ಇಡುತ್ತಾರೆ ಎವೆರೆಸ್ಟ್ ಶಿಖರಕ್ಕೆ ಸಂಬಂಧಿಸಿದ ಈ ಬಗೆಯ ಲೇಖಗಳು ಧಾರಾಳವಿವೆ. ಪರ್ವತಾರೋಹಿಗಳು ತಮ್ಮ ದಿನಚರಿಯಲ್ಲಿ ಹವಾಮಾನದ ಪರಿಸ್ಥಿತಿಯನ್ನೂ ಉಲ್ಲೇಖಿಸುವುದರಿಂದ ಅವರ ದಿನಚರಿಯು ಮುಂದಿನವರಿಗೆ ಅನುಕೂಲವಾಗುವುದು ಆಧಾರ ಕೇಂಪ್ರವನ್ನು ತಿಳೀಟು ಇಲ್ಲವೇ ನೇಪಾಲದಲ್ಲಿ ಸ್ಥಾಪಿಸುವ ಪರಿಪಾಠವಿದೆ.

೧೯೬೦ರ ಆರೋಹಣದಳದಲ್ಲಿ ಫ್ರಿಚ್ ಮುಲರ್ ಕೂಡ ಇದ್ದರು ಇವರೊಂದು ಪುಟ್ಟ ವೇದ ಶಾಲೆಯನ್ನು ಸ್ಥಾಪಿಸಿದರು ಎಪ್ರಿಲ್‌ನಿಂದ ನವಂಬರ ವರೆಗಿನ ಏಳು ತಿಂಗಳುಗಳ ಋತುಮಾನದ ಪರ್ಯವೇಕ್ಷಣೆಯನ್ನು ನಡೆಸಿ ಅದನ್ನು ದಾಖಲೆ ಮಾಡಿಕೊಂಡರು. ೧೯೩೩ರಿಂದ ವಿಮಾನಗಳ ಸಹಾಯವನ್ನು ಪರ್ವತಾರೋಹಿಗಳಿಗೆ ದೊರಕಿಸಬಹುದಾಗಿದೆ. ಸಾಮಾನುಗಳನ್ನೂ ಆರೋಹಿಗಳನ್ನೂ ಅಧಾರ ಕೇಂಪಿನ ತನಕ ಇವು ಕಾಟ್ಟಿಸುತ್ತವೆ ನಂಗಪರ್ವತಾರೋಹಣದಲ್ಲಿ ಹೆಲಿಕಾಪ್ಟರ್‌ಗಳನ್ನೂ ಉಪಯೋಗಿಸಲಾಗಿತ್ತು. ೧೯೩೭ರಲ್ಲಿ ವಿಮಾನ ಮೂಲಕವಾಗಿಯೆ ನಂಗಾ ಪರ್ವತಕ್ಕೆ ರಕ್ಷಕ ಪಡೆಯನ್ನು ಕಳಿಸಲಾಗಿತ್ತು. ೧೯೬೦ರಲ್ಲಿ ದವಳಗಿರಿ ಆರೋಹಣದಲ್ಲಿ ಸ್ವಿಸ್ ದಳವು ಒಂದ ಚಿಕ್ಕ ವಿಮಾನವನ್ನು ೧೯ ಸಾವಿರ ಅಡಿಗಳ ವರೆಗೆ ಒಯ್ದಿತ್ತು ಈ ವಾಯುಯಾನವು ೪೦ ನುತ್ತ ಹೊಡೆಯ, ೧೩ ಸಾವಿರ ಅಡಿಗಳ ವರೆಗೆ ಸಾಮಾನು ಸರಂಜಾಮುಗಳನ್ನು ಮುಟ್ಟಿಸಿತು ಹಲವು ಪರ್ವತ ಶಿಖರಗಳ ಮೇಲೆ ತಳವೂರಿತು.

ಹಿಮಾಲಯದ ಪರ್ವತ ಶಿಖರ ಯಾತ್ರೆಯು ಭಯಾನಕವಾದುದು ವಿಮಾನದ ಹಾರಾಟಕ್ಕೆ ಅವಕಾಶವಾದರೂ ಇಲ್ಲಿ ಕಡಿಮೆ ಆದುದರಿಂದ ಇಲ್ಲಿಗೆ ಚಿಕ್ಕ ಆದರೆ ಗಟ್ಟಿ ಮುಟ್ಟಾದ ವಿಮಾನಗಳೇ ಬೇಕಾಗುತ್ತವೆ. ಗ್ಲೇಶಿಯರ್ ಶಿಖರದಲ್ಲಿ ವಿಮಾನ ಇಳಿಸುವಲ್ಲಿ ಸ್ವಿಲ್ ದಳವು ೧೯೪೮ರಲ್ಲಿಯೇ ಸಫಲವಾಗಿತ್ತು. ಮುಂದಿನ ಯಾತ್ರೆಗಳಲ್ಲಿ ಆರೋಹಣ ತಂಡಗಳು ವಿಮಾನ - ಹೆಲಿಕಾಪ್ಟರುಗಳ ಉಪಯೋಗವನ್ನು ಹೆಚ್ಚು ಹೆಚ್ಚಾಗಿ ಮಾಡಿಕೊಳ್ಳುವುವೆಂದು ಹೇಳಬಹುದು

ಚಳಿಗಾಲದಲ್ಲಿ ಹಿಮಾಲಯದ ಮೇಲೆ ಹವಾಮಾನವು ಬಹಳಷ್ಟು ಪ್ರತಿಕೂಲವಾಗಿರುತ್ತದೆ ಪ್ರತಿಕೂಲತೆಯು ಸಾಮಾನ್ಯವಾಗಿ ಪಶ್ಚಿಮದಲ್ಲಿರುವುದರಿಂದ ಅದಕ್ಕೆ ಪಶ್ಚಿಮದ ಉತ್ಪಾತವೆಂದೇ ಹೇಳುತ್ತಾರೆ. ಉತ್ತರ ಭಾರತದಲ್ಲಿ ತೀವ್ರ ಬಿರುಗಾಳಿ ಬೀಸುತ್ತದೆ; ಹೀಮಾಲಯದ ಉಚ್ಚ ಶಿಖರಗಳ ಮೇಲೆ ಕಂಡು ಬರುವ ಹಿಮರಾಶಿಯಾದರೂ ಈ ಪಶ್ಚಿಮದ ಗಾಳಿಯಿಂದ ತರಲಾದುದು

ತೀವ್ರ ಪಶ್ಚಿಮದ ಗಾಳಿಯಲ್ಲದೆ ಇನ್ನೊಂದು ಒಗೆಯ ಗಾಳಿಯು ನಾಟಕೀಯವಾಗಿ ಬೀಸಿ ಆಗಾಗ ತಡೆಯನ್ನು ಒಡ್ಡುತ್ತದೆ ಮೇ ಅಂತ್ಯ ಇಲ್ಲವೇ ಜೂನ್ ಆರಂಭದಲ್ಲಿ ಈ ಗಾಳಿಯು ನಿರ್ಬಲವಾಗುವುದು. ಆದುದರಿಂದ ಹಿಮಾಲಯಾರೋಹಣಕ್ಕೆ ಈ ಸಮಯವೇ ಸರ್ವಾನುಕೂಲವಾಗಿದೆ. ಈ ಸಮಯದಲ್ಲಿ ಅಕ್ಟೋಬರದಿಂದ ಮೇಯ ವರೆಗೆ ಬೀಸುವ ತೀಕ್ಷ್ಣವಾದ ಪಶ್ಚಿಮದ ಗಾಳಿಯೂ ಶಿಥಿಲವಾಗುವುದ, ಮಂದವಾಗುವುದ; ಸಂದರ ಹವಾಮಾನವು ಪ್ರಾರಂಭವಾಗುವುದು

ಹಿಮಾಲಯ ಪರ್ವತ ಮಾಲೆಯ ವಿಭಿನ್ನ ಸ್ಥಾನಗಳಲ್ಲಿ ಮೊನ್ಸೂನು ಪ್ರಾರಂಭವಾಗುವ ಸಮಯಗಳು ಬೇರೆ ಬೇರೆಯಾಗಿವೆ. ಈ ಸಂಬಂಧದಲ್ಲಿ ಸಾಕಷ್ಟು ವಿಚಾರವೂ ನಡೆದಿದೆ ಕಾರಕೋರಂ ಪರ್ವತ ಶ್ರೇಣಿಗಳ ವರೆಗೆ ಮೊನ್ಸೂನು ಮುಟ್ಟುವುದೂ ಇಲ್ಲವೆಂದು ಒಂದು ಸಮಯದಲ್ಲಿ ತಿಳಿಯಲಾಗಿತ್ತು ೧೩೦೦೦ ಅಡಿಗಳಿಗೆತ್ತರದ್ದ ಮೊನ್ಸೂನು ಮಳೆಯೇ ಇಲ್ಲವೆಂದ ಊಹನೆಯಿದ್ದಿತ್ತು ಈ ಸಂಬಂಧದಲ್ಲಿ ಸಂಶೋಧನೆಗಳು ನಡೆದು ಇಂದ ಈ ಪರಿಮಿತಿಯು ೧೫ ಸಾವಿರ ಅಡಿಗಳಿಗೇರಿದೆ

ಮೊನ್ಸೂನುಗಳು ಪ್ರಾರಂಭವಾಗುವ ಸಮಯವು ಹಿಮಗಿರಿಯಲ್ಲಿ ಬೇರೆ ಬೇರೆಯಾಗಿರುವುದು ಸ್ವಾಭಾವಿಕ ಏಕೆಂದರೆ, ಮೊನ್ಸೂನು ಒಂದೇ ದಿನದಲ್ಲಿ ಸರ್ವತ್ರ ವ್ಯಾಪಿಸುವುದಿಲ್ಲ ಒಂದೆಡೆಯಿಂದ ಬೇರೊಂಗೆಡೆಗೆ ಅದು ಹರಡಬೇಕಾದರೆ ಸಮಯಾವಕಾಶವು ಬೇಕಾಗುತ್ತದೆ. ಈ ಕ್ರಿಯೆಯು ಬಹು ನಿಧಾನವಾಗಿ ನಡೆಯುತ್ತದೆ ಪ್ರತಿ ಪರ್ವತ ಕ್ಷೇತ್ರದಲ್ಲಿ ಈ ಕಲಸವು ಪ್ರಾರಂಭವಾಗುವ ಸಮಯವು ಬೇರೆ ಬೇರೆಯಾಗುತ್ತದೆ ಅಲ್ಲದೆ ಒಂದು ವರ್ಷದಂತೆಯೇ ಇನ್ನೊಂದು ವರ್ಷದ ಹವಾಮಾನವಿರುವುದಿಲ್ಲ. ಈ ಸಂಬಂಧದಲ್ಲಿ ಇದ ಮಿತ್ಥಂ ಎನ್ನುವಂತಿಲ್ಲ

ಅಮೆರಿಕೆಯ ರಾಕೀ ಮತ್ತು ಆಲ್ಪ್ಸ್ ಪರ್ವತಗಳ ಮೋಡಗಳನ್ನು ಅಧ್ಯಯನ ಮಾಡಿದಾಗ ಹೊಸ ದಾಖಲೆಯನ್ನು ಸ್ಥಾಪಿಸಿದೆ. ಈ ಶಿಖರಾವಳಿಯಲ್ಲಿ ಸುತ್ತಾಡುವ ಮೋಡಗಳನ್ನು ಕಂಡಾಗ, ಒಂದು 'ಪರ್ವತ ತರಂಗ'ವಿದೆ ಎಂಬುದರ ಅರಿವಾಗುವುದು. ಪ್ರತಿ ವೇಧ ಶಾಲೆಯ ಪ್ರಯೋಗಗಳೂ ಇದನ್ನು ಪುಷ್ಟೀಕರಿಸುತ್ತವೆ. ಪ್ರಭಂಜನ ವಾಯುವು ನಮ್ಮ ಶರೀರದ ಮೇಲೆ ಗಾಳಿಯು ಮಾಡುವಂತಹ ಪ್ರಭಾವವನ್ನು ಪರ್ವತಗಳ ಮೇಲೆ ಮಾಡುವುದು ಎಂದು ತಿಳಿಯಲಾಗಿತ್ತು ಆದರೆ ಇಂದು ಈ ಅಭಿಪ್ರಾಯ ತಲೆ ಕೆಳಗಾಗಿದೆ. ಬಿರುಗಾಳಿಗಳು ಪರ್ವತ ಶಿಖರಗಳನ್ನು ಹಾದು ಬಹುದೂರ ಓಡುತ್ತವೆಂದಿಂದು ಮನವರಿಕೆಯಾಗಿದೆ. ಮೊನ್ಸೂನಿನ ಸಂಗತಿಯೂದರೂ ಇದೇ. ಇವೆಲ್ಲವುಗಳು ಋತುಮಾನದ ಮೇಲೆ ಯಾವ ಪರಿಣಾಮ ಬೀರುವುದೆಂಬುದು ಮಾತ್ರ ಬಗೆಹರಿಯದ ಸಮಸ್ಯೆಯಾಗಿಯೇ ಉಳಿದಿದೆ

ಪರ್ವತಾವಳಿಗಳ ಹವಾಮಾನದ ಸಂಬಂಧದಲ್ಲಿ ಬಹಳಷ್ಟು ಅಧ್ಯಯನ ನಡೆಯಬೇಕಾಗಿದೆ ಪರ್ವತಾರೋಹಿಗಳು ತಮ್ಮೊಡನ ಒಯ್ಯುವ ಯಂತ್ರೋಪಕರಣಗಳ ಮೂಲಕ ಮಾಡಲಾಗುವ ಅಧ್ಯಯನವಲ್ಲದೆ, ಮೇಲಂತಸ್ತಿನ ಗಾಳಿಗಳು, ಉಷ್ಣತೆ, ಆಮ್ಲಜನಕ, ಚುಂಬಕೀಯ ಸ್ಥಿತಿ ಮೋಡಗಳ ಭೌತಿಕ ರಚನೆ, ಅವುಗಳ ಪ್ರವೇಶದ ದೂರ. ಸೀಮೆ ಮೊದಲಾದುವುಗಳ ಸಂಬಂಧದಲ್ಲಿ ವಿಶೇಷ ಅಧ್ಯಯನ ನಡೆಯಬೇಕಾಗಿದೆ. ಮಾನವನು ಹಿಮಾಲಯದ ಮೇಲೆ ವಿಜಯ ಸ್ಥಾಪಿಸ ಬಯಸುವುದಾದರೆ, ಮೊತ್ತ ಮೊದಲು ಆತನು ಋತುಮಾನದ ಸಂಪೂರ್ಣ ಪರಿಚಯವನ್ನು ಪಡೆಯಬೇಕ ಏಕೆಂದರೆ ಪರ್ವತಾರೋಹಣವನ್ನು ಎದುರಿಸುವ ಪ್ರಧಾನ ವೈರಿಯೊಂದರೆ ಪ್ರತಿಕೂಲ ಋತುಮಾನ. ಇದನ್ನು ಗೆದ್ದುಕೊಂಡರೆ ಮುಂದಿನ ದಾರಿ ಸುಗಮವಾಗುವುದು.

ಉಡ್ಪಿ ಡಿ. ಮು. ಕೋರ್ಟ್‌ನಲ್ಲಿ

O. S. No 65/1962.

ಕಮಲ ಪೂಜಾರ್ತಿ — ವಾದಿಳು,

ಮತ್ತು

ಕೆ. ಮನ್ಸಪ್ಪ ಮರಕಾಲ-ಪಪ್ಪು ಗುರಿಕಾರರ ಮಗ— ಉಡ್ಪಿ ತಾಲೂಕು, ಕೊಡಪೂರು ಗ್ರಾಮ— ಪ್ರತಿವಾದಿ.

ಇವರೊಳಗೆ

ಸದ್ರಿ ಪ್ರತಿವಾದಿಗೆ ತಿಳಿಸುವುದೇನೆಂದರೆ—

ಸದ್ರಿ ಪ್ರತಿವಾದಿಯು-ವಾದಿಳಿಗೆ ಬರಕೊಟ್ಟ ಡಿಮಾಂಡು ನೋಟಿನ ಅಸಲು ಬಡ್ಡಿ ವಗಯಿರೆಗೆ ವಾದಿಳು ದಾಖ್ಲ ಮಾಡಿದ ಮೇಲ್ಕಂಡ ದಾವೆಯಲ್ಲಿ ಪ್ರತಿವಾದಿಯು ಅಖೈರ್ ನೋಟೀಸು ಬಗ್ಗೆ ತಾ. 12—7—1962ಕ್ಕೆ ಯಿಟ್ಟದೆ ಪ್ರತಿವಾದಿಗೆ ಆಕ್ಷೇಪ ಹೇಳತಕ್ಕದ್ದು ಯಿದ್ದೆ, ಸದ್ರಿ ದಿನ ಮೇಲ್ಕಂಡ ಕೋರ್ಟ್ ಮುಂದೆ—ಹಾಜ್ರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು ಯೆಂಬ ಸಂಗ್ತಿ ತಿಳಿಸೋಣಾಗಿಯ.ದೆ.

V. R Kidyur,
Advocate for Plaintiff.

ಉಡ್ಪಿ, 20-6-62.

ಉಡುಪಿ ಡಿ. ಮು ಕೋರ್ಟ್‌ನಲ್ಲಿ

O. S No 444/1961

ಸಿನ್ನ ಯಾನೆ ರುದ್ರಪ್ಪ ಸೆಟ್ಟಿ — ವಾದಿ.

ಮತ್ತು

ಸಾಲ್ವದೋರ್ ಮಸ್ಕರೇಂಹಸ್ ಕೂಡಾ— ಪ್ರತಿವಾದಿರು.

ಇವರೊಳಗೆ

ಸದ್ರಿ ವ್ಯಾಜ್ಯದ ಪ್ರತಿವಾದಿಯಾದ ಉಡ್ಪಿ ತಾಲ್ಲೂಕು ದಾವಂಜೆ ಗ್ರಾಮದ ವ, 1ನೆ ಸಾಲ್ವದೋರ್ ಮಸ್ಕರೇಂಹಸ್. ಸದ್ರಿಯವನ ಮಗ 3ನೇ ಲಾಮ್ರ ಮಸ್ಕರೇಂಹಸ್ ಇವರಿಗೆ ಈ ಮೂಲಕ ತಿಳಿಯಪಡಿಸುವುದು ವಾದಿಯ ದಾವ ವರ್ಷಗಳಲ್ಲಿ ನಿಮ್ಮಿಂದ ಕೂಡಾ ಬಹಾಗೇಣಿ ಬಾಕಿ ವಸೂಲು ಕೇಳಿ ಮಾಡಿದ ಸದ್ರಿ ವ್ಯಾಜ್ಯವು ತಾ 12—7—1962ಕ್ಕೆ ತನ್ನಗೆ ಇಟ್ಟದೆ ಈ ಬಾಬ್ತಿನಲ್ಲಿ ನಿಮ್ಮ ಆಕ್ಷೇಪ ಏನಾದರೂ ಇದ್ದರೆ ನೀವು ಆ ದಿವಸ ಬೆಳಿಗ್ಗೆ 11 ಘಂಟೆಗೆ ಕೋರ್ಟ್ ಮುಂದೆ ಹಾಜರಾಗಿ ಉತ್ತರಿಸಿಕೊಳ್ಳತಕ್ಕದ್ದು ತಪ್ಪಿದರೆ ನಿಮ್ಮನ್ನು ಕೈವ್ಯಾಜ್ಯಾಗಿ ತೀರ್ಪು ಮಾಡಲಾಗುವುದು

P. N Krishnamoorthi Rao,
Advocate

Udipi, S. K., Dated 22—6—62

ಕವಲು ದಾರಿ — ಕೆಂಪು ದೀಪ

ಕುಣಿಯೋಣ ಬಾರಾ ಕುಡಿಯೋಣ ಬಾ

— ಸುದಾಸ.

ಕುಣಿಯಲು ಗೊತ್ತೇ ನಿಮಗೆ? ಇಲ್ಲ? ಕುಣಿಸಲಾದರೂ ಗೊತ್ತೇ? ಅದೂ ಇಲ್ಲ? ಆಧುನಿಕ ಜಗತ್ತಿನಲ್ಲಿ ಇರುವಿರಾದರೂ ಹೇಗೆ, ಗೊತ್ತಿಲ್ಲದಿದ್ದರೂ, ಗೊತ್ತಿದೆಯೆನ್ನುವ ಪಾರವನ್ನು ಕಲಿತಿರದ ನೀವು?

ನವನಾಗರಿಕ ಯುಗದಲ್ಲಿ ಕುಣಿಯುವದೊಂದು ಸಭ್ಯತೆಯ ಲಕ್ಷಣ. ಲಲಿತ ಕಲೆಗಳಲ್ಲಿ ಇದಕ್ಕೆ ಮಹತ್ವದ ಸ್ಥಾನವಿದ್ದರೂ, ಹಿಂದೆ ಕುಣಿಕೆಯವರೆಂದರೆ ಗೌರವಕ್ಕೆ ಯೋಗ್ಯರಾದವರೆಂದು ತಿಳಿಯಲ್ಪಟ್ಟರಲಿಲ್ಲ ಆಹಾ! ಅವನ (ಅವಳ) ಕುಣಿತವೋ ಕುಣಿತ! ಎಂದು ಮುಂದಿನಿಂದ ಪ್ರಶಂಸೆ ಮಾಡಿದರೂ, ಹಿಂದಿನಿಂದ ಎಂತಂತಹ ಕೀಳು ವಿಚಾರದ ಅವಹೇಳನೆಗಳ ಸುರಿಮಳೆ ಸುರಿಸಲ್ಪಡುತ್ತಲೋ ಇದ್ದ ಕಾಲವೂ ಬದಿಗೆ ಸರಿದಿದೆ. ಈಗ ಇದು ಪರಿಶುದ್ಧ ಕಲೆ ಇಂದು ತಮ್ಮ ಮಕ್ಕಳಿಗೆ ಕುಣಿತದ ಶಿಕ್ಷಣ ಕೊಡಿಸದೆ ಇರುವ—ಕೊಡಿಸಲು ಬಯಸದೆ ಇರುವ ಸಭ್ಯರೇ ಇರಲಿಕ್ಕಿಲ್ಲ ಅಂತೆಯೇ ನೇರವಾಗಿ ನಿಮ್ಮನ್ನು ಪ್ರಶ್ನಿಸಿದ, ಕುಣಿಯಲು ಗೊತ್ತೇ ನಿಮಗೆ?

ಧಾರಾಳವಾಗಿ ಈ ಪ್ರಶ್ನೆಯನ್ನು ಕೇಳಬಹುದು. ಯಾರೂ ಬೇಸರಿಸಲಿಕ್ಕಿಲ್ಲ, ಈ ಪ್ರಶ್ನೆ ಕೇಳಿದೆನೆಂದು. ಆದರೆ ಕುಡಿಯುವ ಪಾರವಿದೆಯೇ ನಿಮಗೆ, ಎಂದು ಕೇಳಿದಲ್ಲಿ? ಈ ಮಾತನ್ನೆತ್ತುವದೂ ಅಪರಾಧವಾದೀತು ಪಾನ ಪ್ರತಿಬಂಧ ಕಾನೂನು ಜ್ಯಾರಿ ಇರುವೆಡೆಯಲ್ಲಿ. ಕುಡಿದು ಕುಣಿ ಎನ್ನುತ್ತಾರಲ್ಲ ಹಾಗೆ—ಜೊತೆಯಾಗಿ ಹೊಂದಿಕೊಂಡು ಹೋಗುವ ಈ ಅವಳಿ ಜವಳಿಯ ಕುರಿತು ಅನ್ನುವಾಗ, ಹೇಗೆ ಸಾಧ್ಯ ಒಂದು ವಿಷಯವನ್ನೆತ್ತಿಕೊಂಡು ಇನ್ನೊಂದು ಮರೆಯಲು? ನಾನಾದರೂ ಹೇಳಹೊರಟಿಲ್ಲ, ಪಾನ ಪ್ರತಿಬಂಧ ಕಾನೂನು ಅಯಶಸ್ವಿಯಾಗಿದೆ, ಎಂದು.

ಬುದ್ಧ ದೇವ ಅಹಿಂಸಾ ತತ್ವ ಭೋಧಿಸಿದ ಜಗತ್ತು ಮುಕ್ತ ಕಂಠದಿಂದ ಆ ತತ್ವವನ್ನು ಕೊಂಡಾಡಿತು. ಅಹಿಂಸಾಚರಣೆಯಿಂದ ಶಾಂತಿ ಸುಖ-ಕೈವಲ್ಯ! ಹಿಂಸೆ ಮಾಡಬೇಡಿರಿ ಕೋಳಿ, ಕುರಿ, ಆಡುಗಳನ್ನು ಕೊಲ್ಲಬೇಡಿರಿ! ಎಲ್ಲಾ ಮೂಕ ಪ್ರಾಣಿಗಳಲ್ಲೂ ಜೀವವಿದೆ. ಅವಕ್ಕೆಲ್ಲಾ ನಮ್ಮಂತೆಯೇ ಆಗುತ್ತದೆ ವೇದನೆ ಯಾವದೇ ಜೀವಿಯನ್ನು ಹಿಂಸಿಸಬಾರದು. ಕೊಂಡಾಡತಕ್ಕ ತತ್ವವೇ.

ಮಾತ್ರ, ಜಗತ್ತು ಮಣಿಯಲೇ ಇಲ್ಲ. ಅಹಿಂಸಾಪರವೋ ಧರ್ಮದ ಇದಿರು. ಧಾರಾಳವಾಗಿ ಜೀವಹಿಂಸೆ ನಡೆಯುತ್ತಲಿದೆ ಈ ನಾಗರಿಕಯುಗದಲ್ಲೂ!

ಮಹಾತ್ಮಾ ಗಾಂಧಿಯವರು 'ಕುಡಿಯಬೇಡಿರಿ' ಎಂಬ ತತ್ವವನ್ನು ಸಾರಿದರು ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ. ಬಡವರು ತಮ್ಮ ವಿನಾಶದ ಗೋರಿಯನ್ನು, ತಮ್ಮ ಕೈಯಿಂದಲೇ ರೂಪಿಸಿಕೊಳ್ಳಬಾರದೆನ್ನುವ ಹಿರಿಯಾಸೆ ಅವರಿಗಿತ್ತು ಅಂತೆಯೇ ಅವರು ಸಾರಿದದರು: ಕುಡಿಯುವದ. ಅತ್ಯಂತ ಕೆಟ್ಟ ಚಟ. ಯಾರೆಲ್ಲ ಕುಡಿಯುತ್ತಾರೋ ಅವರೆಲ್ಲ ತಮ್ಮ ಬಾಳನ್ನು ನರಕಮಯವನ್ನಾಗಿ ಮಾಡಿಕೊಳ್ಳುತ್ತಾರೆ. (ನರಕಮಯ ಬಾಳಿನಲ್ಲೇ ಮುಳುಗೇಳುತ್ತಿರುವ ಬಡವರು?) ನಿಲ್ಲಿಸಿರಿ, ಸಾರಾಯಿ ಕುಡಿಯುವುದನ್ನು. ನೀವು ಸುಖಿಗಳಾಗುವಿರಿ.

ನಮ್ಮ ದೇಶದಲ್ಲಿ—ಅದರಲ್ಲೂ ಕಂಗೆಟ್ಟ ಕನ್ನಡ ನಾಡಿನಲ್ಲಿ, ಪಾನಪ್ರತಿಬಂಧ ಕಾನೂನು ಯಶಸ್ಸುಗಳಿಸಿದೆ, ಎಂಬ ಹೆಮ್ಮೆ ನಮಗಿದೆ. ಭಾರತದಲ್ಲಿ ಕುಡಿಯಲು ಆಸ್ಪದವೇ ಇಲ್ಲ ಎಂಬುದನ್ನು ತಿಳಿದ ವಿದೇಶೀಯರು ಯೋಗ್ಯ ವ್ಯವಸ್ಥೆಮಾಡಿಕೊಂಡೇ ಭಾರತ ದರ್ಶನಕ್ಕಾಗಿ ಬರುತ್ತಿದ್ದಾರೆ. ಆದರೆ ಭಾರತವನ್ನು ಕಂಡ ಬಳಿಕ?

ಭಾರತದಲ್ಲಿ ಕುಡಿಯುವವರೇ ಇಲ್ಲ! (ಅಥವಾ ಕುಡಿಯದಿರುವವರೇ ಇಲ್ಲ?) ಎಲ್ಲರೂ ತಿಲಾಂಜಲಿ ಅರ್ಪಿಸಿದ್ದಾರೆ, ಮದಿರಾದೇವಿಗೆ!

ಕಷ್ಟಕಾರ್ಪಣ್ಯಕ್ಕೊಳಗಾಗಿರುವ ಕೆಲವರೇ ನೋ ಕುಡಿಯುತ್ತಿರಬಹುದು. (ಪೋಲಿಸರಿಗೂ ಕೆಲವೊಮ್ಮೆ ಆಸರೆ ದೊರಕಬೇಕಲ್ಲ?) ಅದು ಮಹತ್ವದ ವಿಷಯವಲ್ಲ. ಜೀವನದಲ್ಲಿ ಬೇಸತ್ತಿರುವ ಶ್ರೀಮಂತರೂ ಕೆಲವರು ಕುಡಿಯುತ್ತಾರೆನ್ನಿ. ಆದರೆ ಈ ಎಲ್ಲಾ ಮಂದಿ (ಕುದುಕರು) ಅಲ್ಪ ಸಂಖ್ಯಾಕರೇ ಬಹು ಸಂಖ್ಯಾಕರೇ ಹೇಳುವದು ಕಷ್ಟ.....

ಆದರೂ ಇಂದು ಇದೊಂದು ಗೃಹೋದ್ಯಮವಾಗಿದೆ. ಗುಡಿಕೈಗಾರಿಕೆಯಲ್ಲಿ ಇದಕ್ಕೂ ಪ್ರಾಮುಖ್ಯ ಸ್ಥಾನ.....ಎಲ್ಲಿಯ ಮಾತು? ಪ್ರತಿಬಂಧಕಾಜ್ಞೆ. ಇರುವೆಡೆಯಲ್ಲಿ ಈ ಮಾತೇ? ವಾತಾವರಣಕ್ಕನುಸರಿಸಿ ಕೆಲವೆಡೆಗಳಲ್ಲಿ ಕುಡಿಯುವ ಸೌಕರ್ಯವಿದೆ. ಇನ್ನು ಕೆಲವೆಡೆಗಳಲ್ಲಿ ನೀರಾ ಸಿಗುತ್ತದೆ (ಒರೇ ನೀರಾ!) ಕೆಲವೆಡೆಗಳಲ್ಲಿ ಹಣದ ಜಣ ಜಣಕಾರ ತನ್ನ ಧೈರ್ಯತೋರಿಸಿ ಈ ಉದ್ಯಮಕ್ಕೆ ಬೆಂಬಲ ನೀಡಿದೆ ಬಡತನವೇ ತನ್ನ ಶಕ್ತಿಯ ಪ್ರಯೋಗ ನಡೆಸಿರುವೆಡೆಗಳಲ್ಲಿ ಸಂಪೂರ್ಣ ಸುರಾಮಯ.

ಅಂತೆಯೇ ಕುಡಿಯುವವರು ಕುಡಿಯುತ್ತಾರೆ ಕುಡಿದು ಸಿಕ್ಕಿ ಬಿದ್ದಲ್ಲಿ ಸಜೆಯನ್ನೂ ಅನುಭವಿಸುತ್ತಾರೆ. ಕುಡಿಯುವ ಅಭ್ಯಾಸವಿರದವರೂ ಕುಡಿಯಲಾರಂಭಿಸಿದ್ದಾರಲ್ಲ?

ಪಾನಪ್ರತಿಬಂಧ ಕಾನೂನಿನ ಮಹಿಮೆಯಿದು ಯಶಸ್ವಿಯಾಗಿದೆ, ಪಾನಪ್ರತಿಬಂಧ ಕಾನೂನು. ಕುಡಿಯುವವರೂ ಕುಡಿಯುತ್ತಾರೆ, ಕುಡಿಯದವರೂ ಕುಡಿಯುತ್ತಾರೆ. ಸುರಾದೇವಿಯ ಶಕ್ತಿಯ ಇದಿರು ಯಾವ ಶಕ್ತಿ ನಿಂತೀತು ಎಂದು ನನಗನಿಸುತ್ತಿದೆ ನಿಮಗೆ?

ಭಾರತೀಯ ನಿಲುಮೆಯ ಸಮರ್ಥನೆ

(೩ನೇ ಪುಟದಿಂದ)

"ಕಾಶ್ಮೀರ ಪ್ರಶ್ನೆಯ ವಿಷಯದಲ್ಲಿ ಭಾರತವು ಬಲ ಪ್ರಯೋಗ ಮಾಡುವುದಿಲ್ಲವೆಂದು ಭಾರತೀಯ ಪ್ರತಿನಿಧಿಗಳು ಈ ಸಭೆಯಲ್ಲಿ ಸ್ಪಷ್ಟ ಆಶ್ವಾಸನವಿತ್ತಿದ್ದಾರೆ ಆದರೆ, ಪಾಕಿಸ್ತಾನದ ಪ್ರತಿನಿಧಿಗಳು ಈ ರೀತಿ ಆಶ್ವಾಸನ ವೀಯುವುದನ್ನು ತಪ್ಪಿಸಿದರು ಪಾಕಿಸ್ತಾನವು ಮುಂದಾಗಿಯೇ ಬಲಪ್ರಯೋಗಕ್ಕಿಳಿಯಲು ಉದ್ದೇಶಿಸಿಲ್ಲವೆಂದೂ ಆದರ ಕೆಲವೊಂದು ಪ್ರಸಂಗಗಳಲ್ಲಿ ಅವರ ಕೈಮೀರುವಂತಹ ಘಟನೆಗಳು ನಡೆಯಬಹುದೆಂದೂ ಅವರು ಹೇಳಿದ್ದಾರೆ ೧೯೪೭ರ ಘಟನೆಗಳ ಪುನರಾವೃತ್ತಿಯಾಗುವಂತೆ ಮಾಡಲು ಪಾಕಿಸ್ತಾನವು ಉದ್ದೇಶಿಸಿದೆಯೆಂದು ನಾವು ಭಾವಿಸುವುದಿಲ್ಲ ಅದು ಸಹ ಭಾರತವು ನೀಡಿರುವಂತೆ ಆಶ್ವಾಸನೆಗಳನ್ನೇ ನೀಡುವುದೆಂದು ನಾವು ನಂಬಿದ್ದೇವೆ.

"ಭಾರತ ಹಾಗೂ ಪಾಕಿಸ್ತಾನಗಳ ಜನರಲ್ಲಿ ಅನೇಕ ವಿಷಯಗಳಲ್ಲಿ ಸಾಮ್ಯವಿದ್ದು ವಸಾಹತುವಾದಿ ಪ್ರಭುತ್ವವನ್ನು ನಿರ್ಮೂಲಗೊಳಿಸಲು ಅವರು ಒಟ್ಟಾಗಿಯೇ ಹೋರಾಡಿದ್ದಾರೆ ಶಾಂತಿ ಮಾನವಕುಲದ ಭದ್ರತೆ ಹಾಗೂ ಪ್ರಗತಿಯ ಉದ್ದೇಶಗಳು ತಮ್ಮ ಸಂಬಂಧಗಳಲ್ಲಿ ಕಂಡುಬರುವಂತೆ ನೋಡಿಕೊಳ್ಳಲು ಅವರು ಸಮರ್ಥರಾಗುವರೆಂದು ನಮಗೆ ಭರವಸಯಿದೆ"

ಪ್ರೊ| ಹಸೆನಗುರವರ ಭಾಷಣದ ಪ್ರಭಾವವು ಭದ್ರತಾ ಸಮಿತಿಯ ಕಾರ್ಯಕ್ರಮದ ಮೇಲ ಬೀರದೆ ಉಳಿಯದು.

ಗುಡ್ಡಕಾಡು ಜನಾಂಗಗಳನ್ನು ಮುಂದೆ ತರುವುದು ಭಾರತದ ಉದ್ದೇಶ. ಇದಕ್ಕಾಗಿ ಈ ಜನಾಂಗದವರ ಉನ್ನತಿಗಾಗಿ ಸಂಶೋಧನಾಲಯವೊಂದನ್ನು ಮಧ್ಯ ಪ್ರದೇಶದ ಚಿಂದ್ವಾರದಲ್ಲಿ ೧೯೫೪ರಲ್ಲಿ ತೆರೆಯಲಾಗಿತ್ತು. ಅಂದಿನಿಂದಲೂ ಈ ಆಲಯವು ಹಲವಾರು ಸಂಶೋಧನೆಗಳ ಮೂಲಕ ಜನಾಂಗದ ಹಿತವನ್ನು ಸಾಧಿಸುತ್ತಿದೆ. ಸಂಶೋಧನಾಲಯದ ಒಂದು ತಂಡವು ಸೋಸಿಯೋ-ಆರ್ಥಿಕ ವೀಕ್ಷಣೆಯ ಗದ್ದೆಯೊಂದರಲ್ಲಿ ವ್ಯಸ್ತವಾಗಿರುವುದನ್ನು ಕಾಣಬಹುದು.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
ಯು ರಾಘವೇಂದ್ರ ಆಚಾರ್ಯ, ಎಂ ಎ.)
ಸಾಮಾನ್ಯ ರೋಗಗಳು
(ಡಾ ಕೆ ಎಲ್. ಐತಾಳ, ಎಂ. ಬಿ. ಬಿ. ಎಸ್
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿಮಾರ ಜೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ
ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ
ಉಡುಪಿಯಲ್ಲಿ ಪ್ರತಿಗಳುಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ,
ಉಡುಪಿ

ನವಯುಗ'ಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

ಭಾಗ್ಯದ ಬಾಗಿಲು

(ನಿನ್ನೆ ಮುಟದಿಂದ)

ಲೆ ಸುಗುಣಳ ಪತಿ ಕೈ ತೊಳೆಯಲೆಂದು ಹೊರಗೆ ಹೋದಾಗ ತಾಯಿ ಮಗನನ್ನೇ ಹಿಂಬಾಲಿಸಿ ನಡೆದರು

"ಅಡುಗೆ ಕೂಡ ಗೊತ್ತಿಲ್ಲ, ನಾಯಿ ತಿನ್ನಲಿಕ್ಕಿಲ್ಲ, ಹಾಗೆ ಮಾಡಿದ್ದಾಳೆ".

ಪ್ರತ್ಯುತ್ತರವಾಗಿ ಅತನ ಸ್ವರವೇನೂ ಸುಗುಣಳಿಗೆ ಕೇಳಿಸಲಿಲ್ಲ. ಆದರೆ ಪತಿ ಗೃಹದ ಮೊದಲ ಕಹಿ ಗುಟುಕನ್ನು ನುಂಗುವುದು ಸುಗುಣಳಿಗೆ ಬಹಳ ಕಷ್ಟವೆನಿಸಿತು. ಆಕೆಗೆ ಅನ್ನ ರುಚಿಸಲಿಲ್ಲ. ಆ ಅತ್ತೆ ಸೊಸೆಗೆ ಸಲಹೆ, ಸೂಚನೆಗಳನ್ನೇನೂ ಕೊಡಲು ಸಿದ್ಧಳಿರಲಿಲ್ಲ.

ಮರುದಿನ ಕಾಫಿ ಮಾಡಿ.ವಾಗ ಇದಿರಲ್ಲಿ ನಿಂತ ಅತ್ತೆಯ ಕಣ್ಣುಗಳನ್ನು ನೋಡಿಯೇ ಸುಗುಣಳ ಕೈ ತಡವಿಸಿತು. ಕಾಫಿಗೆ ಹಾಕಲೆಂದು ಎತ್ತಿದ ಹಾಲಿನ ಲೋಟ ನೆಲಕ್ಕುರುಳಿತು. ಸುಗುಣ ನಿಂತಲ್ಲೇ ಭಯದಿಂದ ನಡುಗಿದಳು.

"ಧೂ ಆನಿಷ್ಟದ್ದೇ ಹೀಗೆ ಮಾಡಿದರೆ ನಾಲ್ಕೇ ದಿನಗಳಲ್ಲಿ ಮನೆ ದಿವಾಳಿ ಹೋದೀತು." ಎಂದು ಅತ್ತೆ ಗುಡುಗಿದಾಗ ಸುಗುಣ ಸ್ತಬ್ಧಳಾಗಿ ನಿಂತಳು.

ಕಾಫಿ ಕುಡಿಯಲೆಂದು ಒಳಗೆ ಕಾಲಿಟ್ಟಿದ ಮಗ ಒಂದಂತೆಯೇ ತಿರುಗಿ ಹೋದ. ಬೇರೆ ಹಾಲೂ ಇರಲಿಲ್ಲ. ಮಗನನ್ನು ಹಿಂಬಾಲಿಸಿ ತಾಯಿ ನಡೆದರು.

ಸುಗುಣಳಿಂದ ಅಪರಾಧವಾಗಿತ್ತು. ಅ ಮಳ ಹೃದಯ ಪಶ್ಚಾತ್ತಾಪದಿಂದ ಬೇಯುತಿತ್ತು. ಆದರೆ ಅದೆಂತಹ ಮಾತು! ಆದೂ ಬಂದು ನಾಲ್ಕೈದು ದಿನಗಳೊಳಗೇ!

ಅತ್ತೆ ಹೊರಗೆ ಕಾಲಿಟ್ಟಿಸಿದೊಡನೆಯೇ ಸುಗುಣಳ ಕಟ್ಟೆಕೊಂಡ ಕಂಬನಿಯ ಪ್ರವಾಹ ಹರಿಯತೊಡಗಿತು. ಆಕೆ ಬಿಕ್ಕಿ ಬಿಕ್ಕಿ ಅಳತೊಡಗಿದಳು.

ಪತಿ ಹತ್ತಿರದ ಪೇಟೆಯಲ್ಲಿನ ಅಂಗಡಿಗೆ ಹೋದ ಅತ್ತೆ ಅವಲಕ್ಕಿ ಮೊಸರನ್ನು ಹೊಟ್ಟೆತುಂಬ ತಿಂದರು. ಸುಗುಣ ಬರಿ ಹೊಟ್ಟೆಯಿಂದಲೇ ಅಡುಗೆ ಮುಗಿಸಿದಳು.

ಪತಿಗೃಹವನ್ನು ಸೇರಿದ ಸುಗುಣ ದಿನೇ ದಿನೇ ಕೃಶಳಾಗುತ್ತಾ ಬಂದಿದ್ದಳು. ದೊಡ್ಡ ಮಹಡಿಯ ಮನೆ, ಜೇಕಾದಷ್ಟು ಭತ್ತಧಾನ್ಯ ಎಲ್ಲವೂ ಅಲ್ಲಿತ್ತು. ಬಡತನದ ನೆರಳೂ ಆ ಮನೆಯನ್ನು ಸೋಂಕಿರಲಿಲ್ಲ. ತಾಯಿ ಮನೆಯಲ್ಲಿ ನಿತ್ಯ ನಲಿಯುತ್ತಿದ್ದ, ಹಕ್ಕಿಯಂತೆ ಹಾರಾಡುತ್ತಿದ್ದ ಹುಡುಗಿ ಸುಗುಣ ಈಗ ರೆಕ್ಕೆ ಕಳಚಲ್ಪಟ್ಟ ಪಕ್ಷಿಯಂತಾಗಿದ್ದಳು. ಇದೇಕೆ? ತವರೂರಿನ ಬರಿಯ ಗಂಜಿಯೂಟದ ಸವಿ ಆಕೆಗೆ ಇಲ್ಲಿ ಲಭಿಸಿರಲಿಲ್ಲ. ಎಲ್ಲಂಗೂ ಅತ್ತೆಯ ಮನೆ ಎಂದರೆ ಹೀಗೆ ಏನೋ ಎಂದು ಸ.ಗುಣ ಎಷ್ಟೋ ಬಾರಿ ಯೋಚಿಸುವಳು. ಆದರೆ ಮಡುಮನೆಯೂನೊಡನೆಯೇ ಮೈತುಂಬಿಕೊಂಡು ಗಂಡಂದಿರೊಡನೆ ಜೆಲ್ಲಾಟವಾಡುತ್ತಾ ಮೆರೆದಾಡುವ ಆಪೆಕ್ಷೋದಂಪತಿಗಳನ್ನೂ ಆಕೆ ನೋಡಿದ್ದಳು. ಆಗ ಅವಳೂ ಎಷ್ಟೆಷ್ಟೋ ಕನಸುಗಳನ್ನು ಕಟ್ಟಿದ್ದಳು. ತನ್ನ ಅಕ್ಕಂದಿರ ಭವಿಷ್ಯವೆಲ್ಲ ಕತ್ತಲಿನ ಪ್ರಪಾತದಲ್ಲಿ ಕಣ್ಣೀರಲ್ಲಿ ಮುಳುಗಿದುದರ ಕಹಿನೆನಪು ಸವಿಗನಸಿನಿದಿರಲ್ಲಿ ಮಾಯುವಾಗಿ ಬಿಡುತ್ತಿತ್ತು ಆದರೆ ಈಗ?

ಧೀರೆ ಯೂ ಗಿ, ಉತ್ಸಾಹಿಯಾಗಿ ಪ್ರಪನ್ನ ಚಿತ್ತಳಾಗಿ ನಲಿದಾಡುತ್ತಿದ್ದ ಸುಗುಣ ಮನಸ್ಸು ದಿನೇ ದಿನೇ ಬಾಡಲಾರಂಭಿಸಿತು. ಆಕೆ ಅತ್ತೆಯ ಕಟು ಮಾತುಗಳನ್ನೆಲ್ಲ ಸಹಿಸಿಕೊಳ್ಳಲು ಸಿದ್ಧಳಿದ್ದಳು. ಹೇಗೆಂದರೆ ಪತಿ ತನ್ನ ನೋಂದ ಹೃದಯುಕ್ಕೆ ಒಂದೇ ಒಂದು ಸಾಂತ್ವನೆಯ ಹಿತ ವಚನವನ್ನಾಡುವವನಾಗಿದ್ದರೆ...? ಕೊನೆಯ ಪಕ್ಷ ತಪ್ಪು ಕಣ್ಣೀರನ್ನ ಕಂಡಾಗಲಾದರೂ ಸುಸುವಾದರೂ ವ್ಯಥೆ ಸೂಚಿಸಿದ್ದರೆ....? ಸುಗುಣ ವೆಗದ ಮೊದಲು ಅದನ್ನು ನೀಕ್ಷಿಸಿದ್ದಳು ಆದರೆ ಆತ ಭಾವನಾರಹಿತ, ಬೆಳಿಗ್ಗೆ ಮನೆಯಿಂದೆದ್ದು ಹೊರಟಿಗೆ ಕತ್ತಲಾದ ಮೇಲೆಯೇ ಮನೆ ಸೇರುವವನ, ಒನ್ಮೊಮ್ಮೆ ಮಧ್ಯಾಹ್ನದೂಟಕ್ಕೂ ಬರ.ವುದಿತ್ತು. ಬಂದಾಗಲೆಲ್ಲ ತಾಯಿ ಮಡದಿಯ ಪರವಾಗಿ ದೂರುವುದನ್ನು ಶಾಂತಚಿತ್ತನಾಗಿ ಆಲಿಸಿ ಮೌನವಾಗಿ ಸಹಿಸಿಕೊಂಡು ಸುಮ್ಮನಿರುತ್ತಿದ್ದ. ಸುಗುಣ ಮೊದ ಮೊದಲು ಸಂಜೆಯಾದೊಡನೆಯೇ ಪತಿಯ ಬರವನ್ನು ನಿಕ್ಷಿಸುವ ಸಂಭ್ರಮದಿಂದ ಬಾಗಿಲ ಬಳಿ ನಿಲ್ಲುತ್ತಿದ್ದಳು. ಒಂದೆರಡು ಸಲ ಅತ್ತೆ ಇದನ್ನು ಉರಿ ಮೊಗದಿಂದಲೇ ನಿಟ್ಟಿಸಿದರು ಮತ್ತೊಮ್ಮೆ ಸುಟ್ಟು ತಡೆಯುವಾಗ ಎಂದರು.

"ಇದೆಲ್ಲಾ ಗರತಿಯರಿಗೆ ಚಂದವಲ್ಲವೆಮ್ಮ"

ಸುಗುಣ ತುಟಿ ಕಚ್ಚಿಕೊಂಡು ಅವಮಾನವನ್ನು ಸಹಿಸಿಕೊಂಡು ಒಳಗೆ ನಡೆದಳು. ಆ ಮೇಲೆ ಪ್ರತಿ ನಿತ್ಯವೂ ಮನೆ ವಾರ್ತೆಯು ವರದಿಯೊಂದಿಗೆ ಮಗನನ್ನು ಸ್ವಾಗತಿಸುವವರು ಆ ತಾಯಿಯೇ.

ಇನ್ನು ಅತನೋ, ಮಡದಿಯೊಂದಿಗೆ ಮಾತು ಬಹಳ ನಿತವಾಗಿ ಆಡುವವ. ಅದೂ ಸುಗುಣಳೇ ಪ್ರೌತ್ಸಾಹದಿಂದ ಬೇರೆಗೊಂಡು ಮಾತನಾಡಿಸಿದರೆ ಒಂದೆರಡು ಮಾತು, ಅಲ್ಲ ಶಬ್ದಗಳ ಉತ್ತರ. ಹಳ್ಳಿಯೂರಾದ ಆಪ್ತ ನೆಂಟ ನೆಗೆಗೂ ಕಡಿಮೆಯೇ. ಇದ್ದರೂ ಅಲ್ಲಿಯ ಹೆಂಗಸರು ಮನೆ ಬಾಗಿಲಿಗೆ ಬಂದಾಗಲೂ ಸುಗುಣಳಿಗೆ ಹೆಚ್ಚು ಮಾತನಾಡುವ ಅವಕಾಶವನ್ನೂ ದಯಿಸಲು ಅತ್ತೆ ಸಿದ್ಧರಿರಲಿಲ್ಲ. ತಾನೇ ಒಂದೆರಡು ಮಾತನಾಡಿ ಸುಗುಣ ಹೊರಗೆ ಬರುವ ಮೊದಲೇ ಕಳುಹಿಸಿಬಿಡುವರು. ಇಲ್ಲದೆ ಸ.ಗುಣಳಿಗೂ ಹಿತ ವಚನವನ್ನಾಡಿದ್ದರು.

"ಯೊರೊಂದಿಗೂ ಹೆಚ್ಚು ಹೆರಟೆ ಹೊಡೀಬಾರ್ದಮ್ಮ" ಅತ್ತೆಯು ಮನೆಯು ಬಾಗಿಲು ಭಾಗ್ಯದ ಬಾಗಿಲೆಂದು ನಂಬಿ ಬಂದ ಸುಗುಣಳಿಗೆ ತನ್ನ ಭವಿಷ್ಯ ಸುಖದಾಯಕವಾದೀತೆಂದು ಆಶಿಸಿದ್ದ ಸುಗುಣಳಿಗೆ ದಿನೇ ದಿನೇ ನಿರಾಸೆಯುಂಟಾಯ್ತು. ಒಮ್ಮೆ ಕ್ರೋಧದ ಭರದಲ್ಲಿ ಅತ್ತೆ ನುಡಿದರು.

"ಬಡವರ ಮನೇ ಮಕ್ಕಳಿಗೆ ಕ್ರಮ ಹೇಗೆ ಗೊತ್ತಿದ್ದೀತು? ಮಂಗಳೂರಿದೆ ಕ್ರಮ ತಿಳಿದಿದ್ರೆ ತಾನೇ!"

"ಯಾಕತ್ತೆ, ನಿಮಗೆ ಮೊದಲೇ ಬಡವರ ಗುಣ ನಡತೆ ಗೊತ್ತಿರ್ಲಿಲ್ವೇ? ಈಗ್ಯಾಕೆ ದುಮ್ಮಾರಿ?" ಸಹಿಸಲಾರದ ಸುಗುಣ ಅಳತ್ತಲೇ ನುಡಿದಾಗ ಅತ್ತೆಯ ಕೋಪದ ಉರಿಯುವ ಬೆಂಕಿಗೆ ತುಪ್ಪವೆರಚಿದಂತೆ ಉಕ್ಕೇರಿತು.

"ಏನು ಇದಿರು ವಾದಿಸ್ತಿಯಾ? ಏನಪ್ಪ, ಬಡವರಿಗೆ ಸಹಾಯ ಮಾಡಿದ್ರೆ ಪುಣ್ಯ ಬರುತ್ತೆ ಅಂತ ಯಾರೋ ಹೇಳಿದ್ದ ಕೈ ಆಗಲಿ ಅಂತ ಒಪ್ಪಿದ್ದೆ, ತಪ್ಪಾಯ್ತು. ಬಡವರ ಹುಡುಗಿ ಕೆಲಸ ಚೆನ್ನಾಗಿ ಮಾಡ್ತೀತ, ಅಂತಿದ್ರೆ ನಿನ್ಗೆ ಕಲಿತವಳೆನ್ನುವ ಜಂಬ"

ಸುಗುಣ ಪ್ರತಿಯೂಡಲಿಲ್ಲ. ಅವರಿಗೆ ಕೆಲಸ ಮಾಡಲು ಹುಡುಗಿ ಬೇಕಾಗಿತ್ತು, ಎಂದೇ ಸ.ಗುಣ ಬಂದೊಡನೆಯೇ ಒಳ ಹೊರಗಿನ ಎಲ್ಲ ಕೆಲಸಗಳನ್ನೂ ಸುಗುಣಳಿಗೆ ವಹಿಸಿಕೊಟ್ಟು ಕೆಲಸದವರಿಬ್ಬರನ್ನೂ ಮನೆಗೆ ಕಳುಹಿಸಿಬಿಟ್ಟಿದ್ದರು. ಶ್ರೀಮಂತ ಸೊಸೆ ಅಷ್ಟು ಕೆಲಸ ಮಾಡುವುದು ಸಾಧ್ಯವಿರಲಿಲ್ಲ

ಸಂಜೆ ಮಗ ಮನೆಗೆ ಬಂದೊಡನೆಯೇ ಅವನ ಹಿಂದೆಯೇ ತಿರುಗಾಡುತ್ತಾ ಸೊಸೆಯ ಅಪರಾಧದ ಬಣ್ಣನೆಯನ್ನು ಮಾಡಿದರು, ಆತ ಈವರೆಗೂ ಮೌನಿಯಾಗಿ, ಗಂಭೀರನಾಗಿ ಇರುತ್ತಿದ್ದವ ಸುಗುಣಳಿಗೆ ರಾತ್ರಿ ಹೇಳಿದ.

"ನೀನು ಅಮ್ಮನಿಗೆ ಇದಿರು ಮಾತನಾಡಬೇಡ. ಜಾಗ್ರತೆ"

ಅವನ ಸ್ವರಭಾರವಷ್ಟಿನ್ನೆ ಗತಾನುಗತನ ಕಠೋರತೆಗಳನ್ನು ನೋಡಿಯೇ ಸುಗುಣಳ ಕಣ್ಣಲ್ಲ ನೀರೂರಿತು "ಹೂಂ...ನಿನ್ನ ಕಣ್ಣೀರು ಗಿಣ್ಣೀರಿಂಗೆಲ್ಲ ಮಾತುಳಾಗಿ ತಾಯೀನ ದೂರ ಮಾಡುವವ ನಾನಲ್ಲ. ಅಷಳ ಕೈಸೆಯಿಂದಲೇ ನೀನೀ ಮನೆಲಿರುವ ಭಾಗ್ಯ ಪಡೆದದ್ದು. ನೆನಗೆ ಮಡುಮನೆಯೇ ಬೇಕಿರಲಿಲ್ಲ."

ಮಾತನಾಡಲೆಂದು ತೆರೆದ ಬಾಯಿ ಸುಗುಣಳಿಗವಿಲ್ಲದೆಯೇ ಮುಚ್ಚಿಕೊಂಡಿತು ಮುಂಜಾನೆಯ ವರೆಗೂ ಅಳತ್ತಲೇ ಇದ್ದ ಸುಗುಣಳ ವ್ಯಥೆ ಯಾರಿಗೂ ಅರ್ಥವಾಗಿರಲಿಲ್ಲ. ತಿಳಿಯಲಿಲ್ಲ.

ನೆರಮನೆಯವರಿಂದ ವಿಷಯ ತಿಳಿದುದು ಇಷ್ಟು.

ಅತನಿಗೆ ಪೇಟೆಯಲ್ಲಿ ಸ್ವಂತವಿರುವ ಸ್ಟೇಷನರಿಯರ ಸಂಪ್ರೆ ನಾಕಟ್ಟಿತ್ತು. ಎಂದೇ ಅತ ತಾಯಿ ಒತ್ತಾಯಕ್ಕಾಗಿ ಜಗ್ಗದ ಕೆಲಸದ ಹೆಣ್ಣಿಗಾಗಿ ಸುಗುಣಳ ಕೈ ಹಿಡಿದಿದ್ದ.

ನಾಲ್ಕು ತಿಂಗಳ ಹಿಂತರ ಮಗಳನ್ನು ಕರೆಯಲೆಂದು ಬಂದ ತಾಯಿ ಸ.ಗುಣಳ ಒಣಗಿದ ದೇಹವನ್ನು ನೋಡಿ ಬೆದರಿದಾದರು. ಶ್ರೀಮಂತರ ಮನೆ ಸೇರಿ ಜೀನ್ನಾಗಿ ಬೆಳೆದಿದ್ದ ಮಗಳನ್ನು ನೋಡುವ ಉತ್ಸಾಹದಿಂದ ಒಂದ ತಾಯಿಗೆ ದಿಗ್ಭ್ರಮೆಯಾಯಿತು. ಆಕೆ ತನ್ನ ಕಣ್ಣುಗಳನ್ನೇ ನಂಬಲಿಲ್ಲ. ತಾಯಿ ಮಗಳಬ್ಬರ ನಡವೆ ಅಡ್ಡವಾಗಿ ಕಳತ ಅತ್ತೆ ಸುಗುಣಳಿಗೆ ಮಾತನಾಡುವ ಅವಕಾಶವನ್ನೂ ಕೊಡದೆ ನುಡಿದರು.

"ಈಗೆಲ್ಲಿ ತನಕ ಬಂತ್ತಿಳಿ? ನನ್ನಿಂದ ಕೆಲಸ ಪೂರೈಸೋದು ಹೇಗೆ ಸಾಧ್ಯ? ಇನ್ನೊಮ್ಮೆ ನೋಡೋಣ. ಈ ಪಲ ಆಗುವುದಿಲ್ಲ." ಅವರ ಧೃಢವಾಣಿಯಿದಿರು ನೊಂದೆದೆಯ ಸುಗುಣಳ ತಾಯಿಗೆ ಪ್ರತಿಯಾಡುವ ಧೈರ್ಯ ವಿರಲಿಲ್ಲ ಆಕೆ ಮಗಳ ಮುಖವನ್ನು ನೋಡಿದರು.

"ಇನ್ನೊಮ್ಮೆ ಬರ್ತೀನಮ್ಮ." ತನ್ನ ಆಳಲನ್ನು ತೋರಿಸಿಕೊಳ್ಳಬಾರದೆಂದಿದ್ದರೂ ಆಕೆಯ ಕಂಠ ಗದ್ಗದಿತವಾಗಿ ಕಣ್ಣು ತೇವವಾಯಿತನ್ನು ತಾಯಿ ನೋಡದಿರಲಿಲ್ಲ.

ಮಗಳನ್ನು ಕರೆದೊಯ್ಯಲು ಬಂದ ಆಕೆಯನ್ನು ಒಂದು ದಿನವಾದರೂ ಉಳಿಸಿಕೊಳ್ಳಲು ಯಾರೂ ಹೇಳಲಿಲ್ಲ. ಅಂದೇ ಸಂಜೆ ಆಕೆ ಮನೆಗೆ ಹೋಗುವೆನೆಂದಾಗ ಸುಗುಣಳ ಅತ್ತೆ ಗಂಭೀರವಾಗಿ ಹೂಂಗುಟ್ಟಿದರು.

ಸುಗುಣಳಿಗಾಗಿ ತೆರೆದ ಭಾಗ್ಯದ ಬಾಗಿಲು ತೆರೆದಂತೆಯೇ ಮುಚ್ಚಿತ್ತು.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ನ.

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ರೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯುತ್ತಮವೆಂದು ಪರಿಗಣಿಸಿರುವರು

ಪ್ರತಿಯೊಬ್ಬ ರೇವಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಪಣತ್ತು ಕೂಡಾ ತೀವ್ರವಾಗಿ ವೃದ್ಧಿಹೊಂದುವುದು

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ವಿಜಯ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್:— ವಿಜಯ ಬೇಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡ್,
Estd. 1931. — ಮಂಗಳೂರು — 3
Phone No. 240.

PHONE 203 ESTD 1926

NAVAYUGA, UDIPI.
REGD. NO.BG. 176

28–6–1962

LICENSE NO. 31
Licensed to Post without Prepayment

ಲೆಫ್ಟಿನೆಂಟ್ ಗವರ್ನರ್
ತುಮಕೂರು ಶಿವಶಂಕರ್

ಪ್ರಧಾನ ಮಂತ್ರಿಯವರು ಗೋವೆಯ ಸಂಬಂಧದಲ್ಲಿ ಭಾರತ ಸರಕಾರದ ನೀತಿಯನ್ನು ಸುಸ್ಪಷ್ಟವಾಗಿ ವ್ಯಕ್ತಪಡಿಸಿದ್ದಾರೆ. ಸರಕಾರವು ಗೋವೆಯ ಸಾಂಸ್ಕೃತಿಕ ಮತ್ತು ಭೌಗೋಲಿಕ ಅಸ್ತಿತ್ವವನ್ನು ದೀರ್ಘಕಾಲದ ವರೆಗೆ ಇದ್ದಕ್ಕಿದ್ದಂತೆಯೇ ಉಳಿಸಿಕೊಳ್ಳುವ ಅಭಿಲಾಷೆಯಿಂದಿದೆ. ಇದಕ್ಕೆ ಅನುಕೂಲವಾಗಿ ಗೋವೆಯನ್ನು ಅಂತರಾಜ್ಯೀಯ ಸಂಬಂಧಗಳಿಗೆ ಸಂಪೂರ್ಣವಾಗಿ ಪ್ರತ್ಯೇಕಿಸಿಡಲಾಗಿದೆ ಎಂಬ ಶಬ್ದಗಳನ್ನು ಉಚ್ಚರಿಸಿ ಗೋವೆಯ ಲೆ| ಗವರ್ನರ್ ತುಮಕೂರು ಶಿವಶಂಕರರು ಅಲ್ಲಿನ ಹೊಸ ಆಡಳಿತೆಯು ನೀತಿಯನ್ನು ಘೋಷಿಸಿದ್ದಾರೆ.

ಶ್ರೀ ಶಿವಶಂಕರರು ಗೋವೆಯ ಸರ್ವತೋಮುಖ ವಿಕಾಸದಲ್ಲಿ ಅಧಿಕ ಉತ್ಸಾಹ ತೋರಿಸುತ್ತಾರೆ ಅವರು ಗೋವೆಯ ಬಂದರನ್ನು ಅಧುನಿಕೀಕರಿಸಿ ಅದನ್ನು ಪ್ರಪಂಚದ ಸರ್ವಶ್ರೇಷ್ಠ ಬಂದರವನ್ನಾಗಿಸಬೇಕೆಂದು ಬಯಸುತ್ತಾರೆ. ಗೋವೆಯ ಬಂದರವು ಪೌರ್ವಾತ್ಯ ಬಂದರುಗಳಲ್ಲಿ ಸರ್ವ ಶ್ರೇಷ್ಠ ವೆಂದು ಈಗಾಗಲೇ ಹೇಳಲಾಗುತ್ತಿದೆ. ಗೋವೆಯು ದೂಧ್ ಸಾಗರ ಜಲಪಾತದಿಂದ ವಿದ್ಯುಚ್ಛಕ್ತಿಯನ್ನು ಪಡೆಯುವ ಅವಕಾಶದ ಕುರಿತು ಇವರು ವಿಚಾರ ಮಾಡುತಿದ್ದಾರೆ ಈ ಕ್ರಮದಿಂದ ವಿದ್ಯುತ್ತು ತಯಾರಿಸಿದ ನಂತರ ಗೋವೆಯ ಔದ್ಯೋಗಿಕ ವಿಕಾಸ ಕಾರ್ಯವು ಸುಗಮವಾಗುವುದು ಎಂದವರು ಅಭಿಪ್ರಾಯಪಡುತ್ತಾರೆ.

ಏಳು ವರ್ಷಗಳ ವರೆಗೆ ಕೇಂದ್ರ ಸರಕಾರಿ ಮತ್ತು ವಿದ್ಯುಚ್ಛಕ್ತಿ ವಿಭಾಗದ ಕಾರ್ಯದರ್ಶಿಯಾಗಿ ಮತ್ತು ಖಾಕ್ರಾ ನಿಯಂತ್ರಣ ಮಂಡಳಿಯ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿರುವ ಶಿವಶಂಕರರಿಗೆ ವಿಕಾಸ ಯೋಜನೆಗಳಲ್ಲಿ ಪ್ರೌಢಿ ಮತ್ತು ಅಶಕ್ತಿಗಳಿರುವುದು ಸ್ವಾಭಾವಿಕ. ಲೇಗವರ್ನರರಿಂದು ನೇಮಕವಾಗುವುದಕ್ಕೆ ಮೊದಲು ಇವರು ವಸತಿ ಮತ್ತು ಪೂರೈಕೆ ಶಾಖೆಯ ಕಾರ್ಯದರ್ಶಿಯಾಗಿದ್ದರು. ನಿಂತಾವರಿ ಮತ್ತು ವಿದ್ಯುಚ್ಛಕ್ತಿ ವಿಭಾಗದಲ್ಲಿದ್ದಾಗ ಪ್ರಾಯಃ ಮೊದಲನೆಯ ಮತ್ತು ಎರಡನೆಯ ಪಂಚವಾರ್ಷಿಕ ಯೋಜನೆಗಳ ಅವಧಿಯಲ್ಲಿ ನಿರ್ಮಿತವಾದ ಪ್ರತಿಯೊಂದು ಆಣೆಕಟ್ಟಿನ ನಿರ್ಮಾಣ ಕಾರ್ಯದಲ್ಲಿ ಇವರ ಕೈವಾಡವಿತ್ತು ಎಂದು ಹೇಳಬಹುದು. ಸಿಂಧೂನದೀ ನೀರಿನ ಬಗ್ಗೆ ಭಾರತ-ಪಾಕಿಸ್ತಾನಗಳ ನಡುವಿದ್ದ ವಿವಾದವನ್ನು ಪರಿಹರಿಸುವಲ್ಲಿಯೂ ಇವರ ಸಹಕಾರ ದೊರೆತಿತ್ತು. ಗೋವೆಯಯ ವಿಕಾಸವು ಪ್ರಶಾಸನಿಕ ವಿಭಾಗದಲ್ಲಿ ಅಧಿಕ ಸಂಖ್ಯೆಯ ಗೋವಾ ನಿವಾಸಿಗಳು ಸೇರಿಕೊಳ್ಳದೆ ಪೂರ್ಣವಾಗದು ಎಂಬುದು ಇವರ ಖಚಿತಾಭಿಪ್ರಾಯ.

ತಮ್ಮ ವಿಶ್ವಾಸಪೂರ್ಣ ಮತ್ತು ನಿರ್ಭೀತ ಮೊತ್ತಕತೆಗಳಿಂದ ವಿಕಾಸಪ್ರಿಯ ಶ್ರೀ ಶಿವಶಂಕರರು ಗೋವೆಯ ಸಮಸ್ಯೆಗಳಿಗೆ ಪರಿಹಾರದ ಮಾರ್ಗವನ್ನು ಹೊರಗೆಡಹಿದರು. ಇದನ್ನು ಗಮನಿಸಿ ಗೋವೆಯ ಭವಿಷ್ಯ ನಿರ್ಧಾರದಲ್ಲಿಯೂ ಇವರ ಯೋಗದಾನ ವಿಲ್ಲದೆ ಇರದು ಎಂಬ ಶಂಕೆ ಎಲ್ಲರ ಮನಸ್ಸಿನಲ್ಲೂ ಹುಟ್ಟುವುದು ಅತಿಶಯೋಕ್ತಿಯಲ್ಲ. ವಿಕಾಸೋನ್ಮುಖ ಗೋವೆಯ ಸಮಸ್ಯೆಗಳಲ್ಲಿ ಸಿಲುಕಿಕೊಂಡಿರುವ ನೂರಾರು ಸಿಕ್ಕುಗಳನ್ನು ಅವರು ಸರಿಯಾಗಿ ಅರಿತಿದ್ದಾರೆ, ಎಂತಲೇ ಅವನ್ನು ಅವರು ಸಮರ್ಥ ರೀತಿಯಿಂದ ಬಿಡಿಸಬಲ್ಲರು.

೫೯ ವರ್ಷ ವಯಸ್ಸಿನ ಶ್ರೀ ಶಿವಶಂಕರರು ವಿದ್ಯಾರ್ಥಿಯಾಗಿದ್ದಾಗ ತಮ್ಮ ತರಗತಿಯ ಜಾಣ ಹುಡುಗರಾಗಿದ್ದರು. ೧೯೨೨ ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ ಬಿ. ಎಸ್. ಸಿ. ಪದವಿ ಪರೀಕ್ಷೆಯಲ್ಲಿ ಪ್ರಥಮ ಶ್ರೇಣಿಯಲ್ಲಿ ಉತ್ತೀರ್ಣರಾದ ಏಕ ಮಾತ್ರ ವಿದ್ಯಾರ್ಥಿಯಾಗಿದರು. ಇಲ್ಲಿ ವಿಜಯ ಭೇರಿ ಬಾರಿಸಿದ ನಂತರ ಮೆಂಚೆಸ್ಟರ್ ಕಾಲೇಜ್ ಆಫ್ ಟೆಕ್ನಾಲಜಿಯಲ್ಲಿ ಸೇರಿಕೊಂಡು. ವಸ್ತ್ರ ನಿರ್ಮಾಣ ತಂತ್ರದಲ್ಲಿ ಪ್ರಥಮ ಶ್ರೇಣಿಯನ್ನು ಗಳಿಸಿದರು. ಅಗಿನ ಮೈಸೂರು ರಾಜ್ಯದ ವಸ್ತ್ರ ನಿರ್ಮಾಣದ ಕೈಗಾರಿಕೆಯನ್ನು ವಿಕಾಸಗೊಳಿಸಬೇಕೆಂಬ ಇರಾದೆ ಅವರದಾಗಿದ್ದರೂ ಕಾರಣಾಂತರಗಳಿಂದ ಐ.ಸಿ.ಎಸ್. ಪರೀಕ್ಷೆಯಲ್ಲಿ ಕುಳಿತರು. ಇದಕ್ಕಾಗಿ ಐದು ಹೊಸ ವಿಷಯಗಳನ್ನು ಕೇವಲ ಐದೇ ತಿಂಗಳುಗಳಲ್ಲಿ ತಯಾರಿ ಮಾಡಬೇಕಾಗಿತ್ತು. ಸಮಯಾಭಾವದಿಂದ ಒಂದು ವಿಷಯವನ್ನು ಬಿಟ್ಟು ಬಿಡಬೇಕಾಗಿಬಂದರೂ ಪರೀಕ್ಷೆಯಲ್ಲಿ ಇವರು ಬುದ್ಧಿವಂತರಿಗೆ ಯೋಗ್ಯವಾದ ರೀತಿಯಲ್ಲೇ ಉತ್ತೀರ್ಣರಾದರು.

ಪ್ರತಿಯೊಂದು ಹೊಸ ಕಾರ್ಯವನ್ನೂ ತನಗೆ ಎದುರಾದ ಆಹ್ವಾನವೆಂದು ತಿಳಿಯುವ ವಿಶಿಷ್ಟ ವ್ಯಕ್ತಿ ಶ್ರೀ ಶಿವಶಂಕರರು. ತಮಗೆ ಒಗಟಿಬಂದಿರುವ ಈ ಹೊಸ ಜವಾಬ್ದಾರಿಯು ಬಹು ದೊಡ್ಡ ಆಹ್ವಾನವೆಂದವರು ಹೇಳುತ್ತಾರೆ ಆದರೂ ಕಠಿನದಲ್ಲಿ ಕಠಿನವಾದ ಎಲ್ಲ ಪರೀಕ್ಷೆಗಳಲ್ಲಿಯೂ ಸರ್ವ ಪ್ರಥಮ ಸ್ಥಾನ ಗಳಿಸಿದ ಈ ಮೇಧಾವೀ ಪ್ರಶಾಸಕರು ಈಗಿನ ಪರೀಕ್ಷೆಯಲ್ಲಿಯೂ ಸಫಲರಾಗುವರೆಂಬ ವಿಶ್ವಾಸ ಯೆಲ್ಲರಿಗಿದೆ.

ಉಡುಪಿ ಡಿ ಮುಂ. ಕೋರ್ಟಿನಲ್ಲಿ
O. S. No. 56/62.

ಪನಜ ಸೆಟ್ಟಿ ಕೂಡಾ —ವಾದಿರು.
ಮತ್ತು
ಪುಷ್ಪ ಸೆಟ್ಟಿ ಕೂಡಾ —ಪ್ರತಿವಾದಿರು.
ಇವರೊಳಗೆ

ಸದ್ರಿ ವ್ಯಾಜ್ಯದ 15ನೇ ಪ್ರತಿವಾದಿಯಾದ ಕಾರ್ಕಳ ತಾಲ್ಲೂ ಶಿವಪುರ ಗ್ರಾಮದಲ್ಲಿರುವ ಸೀತು ಸೆಟ್ಟಿ ನಂಗ ಮಹಾಬಲ ಸೆಟ್ಟಿಗೆ ತಿಳಿಯಪಡಿಸುವುದು

ವಾದಿಯು ಹಿಲೆ ವಸ್ತುವಿಗೆ ಕೇಳಿ ನಿಮ್ಮ ಮೇಲೆ ಕೂಡಾ ಮಾಡಿದ ವ್ಯಾಜ್ಯವು ತಾ. 16–7–62 ಕ್ಕೆ ತನ್ನಿಗೆ ಇಟ್ಟಿದೆ. ಈ ವಾದಿನಲ್ಲಿ ನಿನ್ನ ಪಕ್ಷಕ್ಕೆ ಸಮಾನರೂ ಇದ್ದರೆ ನೀವು ಆ ದಿವಸ ಬೆಳಿಗ್ಗೆ 11 ಘಂಟೆಗೆ ಕೋರ್ಟು ಮುಂದೆ ಹಾಜರಾಗಿ ಉತ್ತರವನ್ನು ಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮನ್ನು ಏಕಪಕ್ಷೀಯವಾಗಿ ವಿಚಾರಣೆ ಮಾಡಲಾದೀತು.

P. N. Krishnamoorthi Rao,
Advocate.
Udipi, S. K. Dated 22—6—62.

ಕಾಯಂ ಠೇವಣಾತಿಯ ಮೇಲೆ ಅತ್ಯಧಿಕ ಬಡ್ಡಿ

5 1/4 %

ಈಗ ಸಿಗುವ ಈ ಪರಮಾವಧಿ ಬಡ್ಡಿಯ ಸವಲತ್ತು ನವಂಬರ 1962 ರ ಮೊದಲು ಮಾಡುವ ಕಾಯಂ ಠೇವಣಾತಿಗಳ ಮೇಲೆ ಅನ್ವಯಿಸುವುದು.

ನಿಮ್ಮ ಉಳಿತಾಯವನ್ನು ಸಿಂಡಿಕೇಟ್ ಬ್ಯಾಂಕಿನ ಕಾಯಂ ಠೇವಣಾತಿಯಲ್ಲಿ ಇಂದೇ ಇಟ್ಟು, ಈ ಅತ್ಯಧಿಕ ಬಡ್ಡಿಯ ಸೌಲಭ್ಯವನ್ನು ಪಡೆಯಿರಿ.

• ಉತ್ತಮ ಭದ್ರತೆ • ಹೆಚ್ಚು ಬಡ್ಡಿ

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಮುಳಿಂದ ನಿವಾಸ, ಉಡುಪಿ.

ಸ್ಥಾಪನೆ: ೧೯೨೫.

ರಾಮ ಪುನರಾಗಮನ
ಭರತ ನಿರ್ಗಮನ

(ನಿನ್ನೆ ಮುಟದಿಂದ)

ಗಿ ದುಡಿಯಬೇಕು. ಯಾವದೇ ಕಲಹದಲ್ಲಿ ಈ ನ್ಯಾಯಕರು ವ್ಯಸ್ತವಾದರೆ, ಕಾಂಗ್ರೆಸ್‌ನಲ್ಲಿ ವಿಶ್ವಾಸವಿಟ್ಟು ತಮ್ಮನ್ನು ಆರಿಸಿದ ಜನತೆಗೆ ಅಪಚಾರ ಮಾಡಿದಂತೆ ಇದರ ಪರಿಣಾಮ ಮುಂದಕ್ಕೆ ನೆಟ್ಟಗಾಗದು.

ರಾನುರಾಜ್ಯವಾಗಲಿ

ನಿಜಲಿಂಗಪ್ಪನವರ ಆಯ್ಕೆ ಒಮ್ಮತದಿಂದಾಯಿತು. ಅವರ ಸರಕಾರದ ಕಾರ್ಯ ಯೋಜನೆಗಳೂ ಒಮ್ಮತದಿಂದಲೇ ನಡೆಯಬೇಕು. ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ನಾವಿಟ್ಟುಕೊಂಡಿರುವ ಮಹತ್ವಾಕಾಂಕ್ಷೆಗಳನ್ನು ಪೂರ್ತಿಯಾಗಿ ಸಾಧಿಸುವಲ್ಲಿ ಮುಂದಾಗಬೇಕು. ಕರ್ನಾಟಕದ ಸರಕಾರವು ಯಾವ ಪ್ರಾದೇಶಿಕ ಭೇದಭಾವನೆಯನ್ನೂ ತೋರಿಸದೆ ಸಮದೃಷ್ಟಿಯಿಂದ ಎಲ್ಲರನ್ನೂ ನೋಡಬೇಕು; ರಾಜ್ಯದ ಭಾಷೆಯನ್ನು ಕನ್ನಡವನ್ನಾಗಿ ಮಾಡಬೇಕು; ಪೆಸರನ್ನು ಕರ್ನಾಟಕವೆಂದಿಡಬೇಕು; ಸೀಮಾ ಪ್ರದೇಶದ ವಿವಾದಗಳನ್ನು ಸಮರಸವಾಗಿ ತೀರಿಸಬೇಕು; ಜನತೆಯಲ್ಲಿ ವಿಶ್ವಾಸವು ಮೂಡುವಂತೆ ಅವಿಶ್ವಾಸವು ಹುಟ್ಟದಂತೆ ಆಡಳಿತೆ ನಿರ್ವಹಿಸಬೇಕು. ಕಂಠಿಯವರದು ಭರತನಾಳಿಕೆಯೂಗಲಿ, ಆಗದಿರಲಿ, ನಿಜಲಿಂಗಪ್ಪನವರ ಆಡಳಿತೆ ತಮಗೆ 'ರಾಮರಾಜ್ಯ'ವಾಗಬೇಕು ಎಂದು ಕನ್ನಡದ ಜನತೆ ಬಯಸುತ್ತದೆ. ಅವರ ಬಯಕೆಯನ್ನು ಪೂರೈಸುವುದು ಕಷ್ಟವೆಂಬ ಜಟಿಲ ಮುಳ್ಳಿನ ಮೇಲೆ ನಡೆದಂತೆ. ಕಂಠಿಯು ಮೇಲೆ ಹಾರಾಡುವ ಗಾರುಡಿಗನೂ ಉರುಳಿ ಬೀಳುವ ಕರ್ನಾಟಕದ ರಾಜಕಾರಣದ ಸ್ವರೂಪವನ್ನು ನಿಜಲಿಂಗಪ್ಪ ಒದಲಿಸಿ ಸರಿದಾರಿಗೆ ತರಬೇಕು. ಇಂತಹ ಗುರುತರ ಉತ್ತರದಾಯಿತ್ವವನ್ನು ತಲೆಯ ಮೇಲೆ ಹೊತ್ತು ಅವರು ಗೆರಿಮುಟ್ಟುವಲ್ಲಿ ಸಫಲರಾಗುತ್ತಾರೆ, ಆಗಬೇಕು ಇದುವರೆಗೆ ಯಾರೂ ಗಳಿಸದ ಕುಮಾರನ ಕೀರ್ತಿಯನ್ನು ಅವರು ಪಡೆಯ ಬೇಕು.

ಕನ್ನಡ ಪುಸ್ತಕಗಳಿಗೆ—
ಮತ್ತು
ಕಥೆಕಾದಂಬರಿ ಇತ್ಯಾದಿ ಪುಸ್ತಕಗಳಿಗೆ
ನವಭಾರತ ಪುಸ್ತಕ ಭಂಡಾರ, ಉಡುಪಿ.

Edited Printed & Published by K. H. Shetty, at the Navayuga Press, Udipi, S. India.

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ನಿಮ್ಮ ಯಾವತ್ತೂ
ಮುದ್ರಣ ಕೆಲಸಗಳಿಗೆ
ದಯಮಾಡಿ ವಿಚಾರಿಸಿರಿ;
ನವಯುಗ ಪ್ರೆಸ್,
ಉಡುಪಿ

ವಿದ್ಯಾರ್ಥಿಗಳಿಗೆ
ಮತ್ತು ವಯಸ್ಕರಿಗೆ
ಅತ್ಯುಪಯೋಗೀ ಪುಸ್ತಕ
ಸುಲಭದಲ್ಲಿ ಇಂಗ್ಲಿಷ್
(ಆಂಗ್ಲ ಸ್ವಯಂಬೋಧಿನಿ)
ನವಭಾರತ ಪುಸ್ತಕ ಭಂಡಾರ
ಉಡುಪಿ

ಸಂಪುಟ ೪೧ ಸಂಚಿಕೆ ೪೩ | ಉಡುಪಿ 5—7—1962 ಗುರುವಾರ | Vol. 41 No. 43

ಸಾಮಾನ್ಯ ಮಾರುಕಟ್ಟೆಗೆ

ಬ್ರಿಟನ್ನಿನ ಪ್ರವೇಶ — ಭಾರತಕ್ಕೆ ನಷ್ಟ

ಬ್ರಿಟನ್ನಿನ ಕಾಮನ್‌ವೆಲ್ತ್ ಖಾತೆಯ ಸಚಿವ ಶ್ರೀ ಡಂಕನ್ ಸ್ಯಾಂಡಿಸ ಅವರು ಡಿಲ್ಲಿಯಲ್ಲಿ ಭಾರತ ಸರಕಾರದ ಮಂತ್ರಿಗಳೊಡನೆ ಸಮಾಲೋಚನೆ ನಡೆಸಿ ಹಿಂತಿರುಗಿದ್ದಾರೆ. ಈ ಸಮಾಲೋಚನೆಯು ಬ್ರಿಟನ್, ಯುರೋಪಿನ ವಾಣಿಜ್ಯ ಒಕ್ಕೂಟಕ್ಕೆ ಸೇರುವುದರಿಂದ ಭಾರತಕ್ಕೆ ಉಂಟಾಗುವ ನಷ್ಟಾನಿಷ್ಟಗಳನ್ನು ಕುರಿತಾಗಿತ್ತು. ಡಿಲ್ಲಿಯಲ್ಲಿ ನಡೆದ ಮಾತುಕತೆಯಿಂದ ಭಾರತಕ್ಕೆ ಯಾವ ಲಾಭವೂ ಆಗಿಲ್ಲವೆಂಬುದು ಈಗ ಸ್ಪಷ್ಟವಾಗಿದೆ. ಭಾರತಕ್ಕೆ ಪರಿಹಾರ ದೊರಕಿಸುವ ಬಗ್ಗೆ ಬ್ರಿಟನ್ ಮತ್ತು ಭಾರತದ ಸರಕಾರಗಳು ಮಾಡಿರುವ ಸೂಚನೆಗಳ ನಡುವೆ ಇನ್ನೂ ಬಹಳ ವ್ಯತ್ಯಾಸ ಉಳಿದಿದೆ.

ಶ್ರೀ ಸ್ಯಾಂಡಿಸ ಅವರು ವಾಣಿಜ್ಯ ಒಕ್ಕೂಟವನ್ನು ಸೇರುವ ಮುನ್ನ ತಮ್ಮ ಸರಕಾರವು ಭಾರತಕ್ಕಾಗುವ ನಷ್ಟವನ್ನು ಗಣನೆಗೆ ತೆಗೆದು ಕೊಳ್ಳುವುದಾಗಿ ಹೇಳಿದರೇ ಹೊರತು, ಯಾವ ಸ್ಪಷ್ಟ ಆಶ್ವಾಸನೆಯನ್ನೂ ಕೊಡಲಿಲ್ಲ.

ಅನಂತರ, ಕೇಂದ್ರ, ಹಣಕಾಸಿನ ಮಂತ್ರಿ ಮುರಾರಜಿ ದೇಸಾಯಿ ಅವರು ಲೋಕ ಸಭೆಯಲ್ಲಿ ಒಂದು ಹೇಳಿಕೆ ಕೊಟ್ಟರು. ವಾಣಿಜ್ಯ ಒಕ್ಕೂಟವು ಭಾರತ ಸಮಸ್ಯೆಗಳನ್ನು ಕಳೆದುಕೊಂಡಿದೆ ಎಂದೂ, ಭಾರತದ ರಫ್ತು ವ್ಯಾಪಾರದ ಏಳಿಗೆಗಾಗಿ ವಿಶೇಷ ಒಪ್ಪಂದಗಳನ್ನು ಮಾಡಿಕೊಳ್ಳಲು ಆಲೋಚಿಸುತ್ತಿದೆ ಎಂದೂ ಹೇಳಿದರು. ಶೀಘ್ರದಲ್ಲೇ ತಾವೂ ಯುರೋಪಿಗೆ ಹೋಗಿ ಅಲ್ಲಿಂದ ಸರಕಾರಗಳಿಗೆ ಭಾರತದ ರಫ್ತು ವ್ಯಾಪಾರದ ಅಗತ್ಯಗಳನ್ನು ಅರಿವು ಮಾಡಿ ಕೊಡುವುದಾಗಿಯೂ ತಿಳಿಸಿದರು. ಆದರೆ, ಈಗ ಯುರೋಪಿನಿಂದ ಬಂದಿರುವ ಸಮಾಚಾರ ಅಷ್ಟು ಆಶಾದಾಯಕವಾಗಿಲ್ಲ. ಈ ಸುದ್ದಿಯಿಂದ ಯುರೋಪಿನ ವಾಣಿಜ್ಯ ಒಕ್ಕೂಟವು ಭಾರತದ ಅಗತ್ಯಗಳನ್ನು ಸರಿಯಾಗಿ ಗಣನೆಗೆ ತೆಗೆದುಕೊಂಡಿಲ್ಲವೆಂದೇ ಅರ್ಥವಾಗುತ್ತದೆ. ಅಲ್ಲದೆ, ಭಾರತಕ್ಕೆ ಪರಿಹಾರ ನೀಡಲು ಬ್ರಿಟನ್ ಮಾಡಿರುವ ಸೂಚನೆಗಳೂ ತೃಪ್ತಿಕರವಾಗಿಲ್ಲವೆಂಬುದು ಸ್ಪಷ್ಟವಾಗುತ್ತದೆ.

ಭಾರತಕ್ಕೆ ನಷ್ಟ

ಯುರೋಪಿನ ವಾಣಿಜ್ಯ ಒಕ್ಕೂಟವನ್ನು ಸೇರುವುದು ಅಥವಾ ಬಿಡುವುದು ಬ್ರಿಟನ್ನಿಗೆ ಮಾತ್ರ ಸಂಬಂಧಿಸಿದ ವಿಷಯ. ಆದರೆ, ಒದರಿಂದ ಕಾಮನ್‌ವೆಲ್ತಿಗೆ ಸೇರಿದ ರಾಷ್ಟ್ರಗಳಿಗೆ ಬಹಳ ತೊಂದರೆಯಾಗುತ್ತದೆ. ಈಗ ಕಾಮನ್‌ವೆಲ್ತಿಗೆ ಸೇರಿದ ದೇಶಗಳು ಬ್ರಿಟನ್ನಿಗೆ ಸುಂಕವಿಲ್ಲದೆ ತಮ್ಮ ವಸ್ತುಗಳನ್ನು ರಫ್ತು ಮಾಡುತ್ತಿವೆ. ಆದರೆ ಮುಂದೆ ಬ್ರಿಟನ್ ಒಕ್ಕೂಟವನ್ನು ಸೇರಿದ್ದಾದರೆ, ಒಕ್ಕೂಟದ ಒಪ್ಪಂದ ಪ್ರಕಾರ ಎಲ್ಲ ವಸ್ತುಗಳ ಮೇಲೂ ಸಮನಾದ ಸುಂಕವನ್ನು ವಿಧಿಸಬೇಕಾಗುವುದು. ಈ ಸುಂಕದ ದರವಾದರೂ ಹೆಚ್ಚಾಗಿಯೇ ಇರಬಹುದು. ಇದರಿಂದ ಭಾರತದಿಂದ ರಫ್ತಾಗುವ ವಸ್ತುಗಳೆಲ್ಲ ಸುಂಕವನ್ನು ಕೊಡಬೇಕಾಗುವುದು. ಕ್ರಮೇಣ ಈ ವಸ್ತುಗಳ ಬೆಲೆಯೂ ಹೆಚ್ಚಿ ಇತರ ದೇಶಗಳವೈಪೋಟಿಯನ್ನು ಎದುರಿಸುವುದು ಕಷ್ಟವಾಗುವುದು. ಇದರಿಂದ ಭಾರತದ ರಫ್ತು ವ್ಯಾಪಾರಕ್ಕೆ ಧಕ್ಕೆ ಬರುವುದು.

ಈಗ ಭಾರತದಿಂದ ರಫ್ತಾಗುವ ವಸ್ತುಗಳಲ್ಲಿ ¼ ಪಾಲು ಬ್ರಿಟನ್ನಿಗೆ ಹೋಗುತ್ತಿದೆ. ಯುರೋಪಿನ ವಾಣಿಜ್ಯ ಒಕ್ಕೂಟಕ್ಕೆ ಸೇರಿದ ರಾಷ್ಟ್ರಗಳಲ್ಲಿ ಅತ್ಯಧಿಕ ಸುಂಕಗಳನ್ನು ತೆರಬೇಕಾದ್ದರಿಂದ, ಆ ಒಕ್ಕೂಟಕ್ಕೆ ಕೇವಲ ಶೇಕಡ ೭ರಷ್ಟು ವಸ್ತುಗಳು ಭಾರತದಿಂದ ಹೋಗುತ್ತಿವೆ. ಬ್ರಿಟನ್ ಈ ಒಕ್ಕೂಟಕ್ಕೆ ಸೇರಿದ್ದಾದರೆ, ಭಾರತದ ವಸ್ತುಗಳೂ ಸುಂಕ ತೆರಬೇಕಾಗುವುದರಿಂದ ಅವುಗಳ ಬೆಲೆ ಶೇಕಡ ೩೦ರಿಂದ ೪೦ ರಷ್ಟು ಹೆಚ್ಚಾಗುತ್ತದೆ. ಈಗ ಭಾರತದಿಂದ ರಫ್ತಾಗುತ್ತಿರುವ ಹೊಗೆಸೊಪ್ಪಿನಲ್ಲಿ ಶೇಕಡ ೭೦ ಭಾಗವೂ, ಟೀ, ಚರ್ಮದ ವಸ್ತುಗಳು, ಉಣ್ಣೆ ಜಮಖಾನೆಗಳು, ಮೊದಲಾದುವುಗಳಲ್ಲಿ ಅರ್ಧ ಭಾಗವೂ ಬ್ರಿಟನ್ನಿಗೆ ಹೋಗುತ್ತಿದೆ. ಈ ವಸ್ತುಗಳ ಮೇಲೆ ಈಗ ಸುಂಕವನ್ನು ಕೊಡುತ್ತಿಲ್ಲ. ಆದರೆ, ಯುರೋಪಿನ ವಾಣಿಜ್ಯ ಒಕ್ಕೂಟವು ಈ ವಸ್ತುಗಳ ಮೇಲೆ ಸುಂಕವನ್ನು ಕೇಳಿದೆ. ಆಲ್ಲದೆ, ಆಮದಿನ ಪ್ರಮಾಣವನ್ನೂ ನಿರ್ಧರಿಸಿದೆ. ಬ್ರಿಟನ್ ಕೂಡ, ಅಷ್ಟೇ ಸುಂಕವನ್ನು ವಿಧಿಸಬೇಕಾಗುತ್ತದೆ, ಆದರೆ, ಭಾರತದಿಂದ ಬ್ರಿಟನ್ನಿಗೆ ಮುಂದಿ ರಫ್ತಾಗುವ ವನಸ್ಪತಿ ಎಣ್ಣೆ, ಮೊದಲಾದ ಸ್ವಲ್ಪ ಮಟ್ಟಿಗೆ ಸಿದ್ಧವಾದ ವಸ್ತುಗಳಮೇಲೆ ಶೇ.೫೦ರಿಂದ ೧೫ ರಷ್ಟು ಹೆತ್ತಿ ಬಟ್ಟೆ, ಸಣಬಿನ ಪದಾರ್ಥಗಳು, ಉಣ್ಣೆ ಜಮುಖಾನೆಗಳು, ಮೊದಲಾದುವುಗಳ ಮೇಲೆ ಶೇಕಡ ೮೦ರಿಂದ ೨೦ಷ್ಟು ಹೊಗೆಸೊಪ್ಪಿನ ಮೇಲೆ ಶೇಕಡ ೫೦ರಷ್ಟು ತೆರಿಗೆಯನ್ನು ಕೊಡಬೇಕಾಗುತ್ತದೆ. ಇದರಿಂದ ಬ್ರಿಟನ್ನಿನೊಡನೆ ನಡೆಯುತ್ತಿರುವ ವ್ಯಾಪಾರದಲ್ಲಿ ಶೇಕಡ ೯೦ ರಷ್ಟಕ್ಕೆ ಅಡ್ಡಿ ಯುಂಟಾಗುತ್ತದೆ.

ಇಷ್ಟೇ ಅಲ್ಲದೆ, ಆಮದಿನ ಪ್ರಮಾಣವನ್ನೂ ನಿರ್ಬಂಧಿಸಿರುವುದರಿಂದ, ಭಾರತದಿಂದ ರಫ್ತಾಗುವ ಪ್ರಮಾಣವೂ ಕಡಿಮೆಯಾಗಬೇಕಾಗುತ್ತದೆ.

ಭಾರತದಲ್ಲಿ ಈಗಾಗಲೇ ವಿದೇಶಿ ಧನದ ಕೊರತೆಯಿಂದ ಅನೇಕ ಯೋಜನಾ ಕಾರ್ಯಗಳಿಗೆ ತೊಂದರೆಯಾಗಿ. ಮೂರನೆಯ ಯೋಜನೆಯು ಯಶಸ್ವಿಯಾಗುವ ಬಗ್ಗೆ ಸಂದೇಹ ಉಂಟಾಗಿದೆ. ಈ ಕೊರತೆಯನ್ನು ನೀಗಿಸಿಕೊಳ್ಳಲು ದೇಶದ ರಫ್ತು ವ್ಯಾಪಾರವನ್ನು ಅನೇಕ ಪಾಲು ಹೆಚ್ಚಿಸಿಕೊಳ್ಳಬೇಕಾಗಿದೆ. ಇದಲ್ಲದೆ, ಯುರೋಪಿನ ದೇಶಗಳಿಂದ ಭಾರತವು ಆಮದು ಮಾಡಿಕೊಳ್ಳುತ್ತಿರುವ ಪ್ರಮಾಣವು ವರ್ಷ ವರ್ಷ ಹೆಚ್ಚುತ್ತಿದೆ. ಸದ್ಯದಲ್ಲಿ ಭಾರತವು ಆ ದೇಶಗಳಿಗೆ ರಫ್ತು ಮಾಡುತ್ತಿರುವುದಕ್ಕಿಂತ ಆಮದು ೧೫೫ ಕೋಟಿ ರೂಪಾಯಿನಷ್ಟು ಹೆಚ್ಚಾಗಿದೆ. ಇಷ್ಟು ದೊಡ್ಡ ಕೊರತೆಯನ್ನು ತುಂಬಬೇಕಾದರೆ, ಭಾರತದ ರಫ್ತು ವ್ಯಾಪಾರವೂ ಹೆಚ್ಚುವುದೆ ಗತ್ಯಂತರವಿಲ್ಲ. ಹೀಗಿರುವಾಗ, ಈಗಿನ ರಫ್ತು ವ್ಯಾಪಾರಕ್ಕೇ ತೊಂದರೆಯುಂಟಾದರೆ ದೇಶದ ಆರ್ಥಿಕ ಸಂಸ್ಥಿತಿಯ ಮೇಲೆ ಹಾನಿಕರವಾದ ಪರಿಣಾಮ ಉಂಟಾಗುವುದೆಂಬ ವಿಷಯ ಹೇಳಬೇಕಾಗಿಲ್ಲ. ಇದಕ್ಕಾಗಿ ಭಾರತ ಸರಕಾರವು ಕೆಲವು ಪರಿಹಾರ ಮಾರ್ಗಗಳನ್ನು ಕೇಳಿಕೊಂಡಿದೆ.

ಭಾರತದ ಸೂಚನೆಗಳು

ಭಾರತದಿಂದ ಬ್ರಿಟನ್ನಿಗೆ ಸುಂಕವಿಲ್ಲದೆ ರಫ್ತಾಗುತ್ತಿರುವ ಕಚ್ಚಾ ವಸ್ತುಗಳು, ಅರ್ಧ ಸಿದ್ಧ ಪಡಿಸಿದ ಮತ್ತು ಕೆಲವು ಪೂರ್ಣವಾಗಿ ಸಿದ್ಧವಾದ ವಸ್ತುಗಳ ಮೇಲೆ ಮುಂದೆಯೂ ಸುಂಕವನ್ನು ವಿಧಿಸಬಾರದೆಂದೂ, ಅವುಗಳ ಪ್ರಮಾಣದ ಮೇಲೂ ನಿರ್ಬಂಧವಿರಬಾರದೆಂದೂ ಭಾರತವು ಕೇಳಿದೆ. ಈಗ ವಾಣಿಜ್ಯ ಒಕ್ಕೂಟಕ್ಕೆ ಸೇರಿದ ಫ್ರಾನ್ಸ್ ದೇಶಕ್ಕೆ ಹೊರತಾಗಿ, ಟ್ಯುನೀಶಿಯಾ ಮೊದಲಾದ ದೇಶಗಳಿಂದ ರಫ್ತಾಗುವ ವಸ್ತುಗಳಿಗೆ ಈ ರಿಯಾಯಿತಿಯನ್ನು ತೋರಿಸಲಾಗಿದೆ.

ಭಾರತದಲ್ಲಿ ಮಾತ್ರವೇ ತಯಾರಾಗುತ್ತಿರುವ ಕೆಲವು ವಸ್ತುಗಳ ಮೇಲಿನ ಸುಂಕವನ್ನು ಬಹಳ ಕಡಿಮೆ ಮಾಡಬೇಕೆಂದು ಭಾರತವು ಕೇಳಿಕೊಂಡಿದೆ. ಅಲ್ಲದೆ ಸುಂಕವನ್ನು ವಿಧಿಸುವ ಸಮಯವನ್ನು ಆದಷ್ಟು ಕಾಲ ಮುಂದೂಡಬೇಕೆಂದೂ, ಇದರಿಂದ ಭಾರತದ ಕೈಗಾರಿಕೆಗಳು, ಬೇರೆ ಮಾರುಕಟ್ಟೆಗಳಿಗೆ ಹೊಂದಿಕೊಳ್ಳಲು ಬಹುದೆಂದೂ ಭಾರತವು ಕೇಳಿದೆ.

ಈ ರಿಯಾಯಿತಿಗಳಲ್ಲಿ ವಿಶೇಷವಾದದ್ದು ಏನೂ ಇಲ್ಲ, ಬ್ರಿಟನ್ ಮತ್ತು ವಾಣಿಜ್ಯ ಒಕ್ಕೂಟಕ್ಕೆ ಸೇರಿದ ರಾಷ್ಟ್ರಗಳು, ಜನೀವಾದ ಸುಂಕ ಒಪ್ಪಂದಕ್ಕೆ ಸಹಿ ಹಾಕಿವೆ. ಈ ಒಪ್ಪಂದವೆ ಒಂದು ಶಕ್ತಿಶಾಲಿ ಸಂಸ್ಥೆಯಾಗಿದ್ದು, ಯಾವ ಒಕ್ಕೂಟವೇ ಆಗಲಿ, ಹಿಂದುಳಿದ ರಾಷ್ಟ್ರಗಳ ರಫ್ತಿಗೆ ಅಡ್ಡಿಯಾಗುವಂತಹ ನಿರ್ಬಂಧಗಳನ್ನು ಹೊರಿಸಬಾರದು. ಆಲ್ಲದೆ, ಯಾವ ರಾಷ್ಟ್ರವೇ ಆಗಲಿ, ಒಕ್ಕೂಟವನ್ನು ಸೇರಿದರೂ ಕೂಡ, ತಾನು ಹಿಂದೆ ವಿಧಿಸುತ್ತಿದ್ದ ಸುಂಕಗಳು ಮತ್ತು ನಿರ್ಬಂಧಗಳಿಗಿಂತ ಹೆಚ್ಚಿನದನ್ನು ವಿಧಿಸಬಾರದು. ಈ ರೀತಿಯ ಶರತ್ತುಗಳನ್ನುಳ್ಳ ಒಪ್ಪಂದಕ್ಕೆ ಸಹಿ ಹಾಕಿರುವ ರಾಷ್ಟ್ರಗಳಿಂದ ರಿಯಾಯಿತಿಗಳನ್ನು ಕೇಳುವುದು ನ್ಯಾಯವಾಗಿಯೇ ಇದೆ.

ಬ್ರಿಟನ್ನಿನ ಸೂಚನೆಗಳು

ಆದರೆ, ಯುರೋಪಿನ ವಾಣಿಜ್ಯ ಒಕ್ಕೂಟವು ಈ ರಿಯಾಯಿತಿಗಳನ್ನು ಕೊಡಲು ಸಿದ್ಧವಾಗಿಲ್ಲ ಬ್ರಿಟಿಷ್ ಸರಕಾರವು,

(ಎರಡನೇ ಪುಟ ನೋಡಿರಿ)

ಗೃಹಿಣಿಯರಿಗೆ ತಿಲಕವೆ ಭೂಷಣವಲ್ಲವೆ ?
ಫರ್ನಿಚರುಗಳೆಲ್ಲೆಲ್ಲ 'ಜೀರಾ' ತಿಲಕಪ್ರಾಯವೆಂಬುದನ್ನು ನೀವು ತಿಳಿದಿಲ್ಲವೆ ?
ಗೃಹಾಲಂಕಾರಕ್ಕಾಗಿ— ಆಫೀಸು, ಆಸ್ಪತ್ರೆಗಳ ಓರಣಕ್ಕಾಗಿ— ತಾಳಿಕೆ ಬಾಳಿಕೆಯಲ್ಲಿ, ರಚನೆ ವೈವಿಧ್ಯತೆಯಲ್ಲಿ ವೇಶ ವಿಖ್ಯಾತವಾದ 'ಜೀರಾ' ಉಕ್ಕಿನ ಫರ್ನಿಚರುಗಳನ್ನೆ ಉಪಯೋಗಿಸಿರಿ. ವಿಚಾರಿಸಿರಿ.
ಯೂ, ಕೋ ರೂಪನ್ನು ಸಂದರ್ಶಿಸಿರಿ.

ಶಾಸ್ತಿ & ಕೊ
ಹಂಪನಕಟ್ಟೆ,
ಮಂಗಳೂರು—1

ಎದೆಯೊಡತಿ ಇವಳಲ್ಲ

ಶ್ರೀ ಕೂಡ್ಲು ತಿಮ್ಮಪ್ಪ ಗಟ್ಟಿ.

ಕಣ್ಣಿಗೆ ಕಾಣದ ತೆರೆಯ ಮರೆಯಲ್ಲಿ ನಿಂತು ಮೂರದಿಂದ ಕರೆಯುತ್ತಿರುವವಳು ಇವಳಲ್ಲ. ಭಾವನೆಯ ದಾರಗಳಿಗೆ ಬಣ್ಣ ಬನ್ನು ಬೆರಸುತ್ತಿರುವ ಸರಸಿ ಇವಳಲ್ಲ. ಸ್ನೇಹದ ಜಾಡಿಗೆ ಪ್ರಣಯದ ಹಿನ್ನೆಲೆಯನ್ನು ನಡಿಸುತ್ತಿರುವ ಅನನ್ಯ ಸಂಗಾತಿ, ಅಲ್ಲ, ಇವಳಲ್ಲ!

ಆಳುಕು ಅಂಜಿಕೆ ಬೇಸರ ನಿಂದೆ ನಿಷ್ಠುರಗಳಿಗೊಳಗಾದ ಸಮಾಜದ ಭಿನ್ನ ಭಿನ್ನ ವ್ಯಕ್ತಿಗಳಲ್ಲಿ ಒಬ್ಬಳಾಗಿ ನನ್ನ ಕಣ್ಮುಂದೆ ಬೆಳೆದವಳು ಇವಳು. ದಿನದಿಂದ ದಿನಕ್ಕೆ ಬೆಳೆದು ಬೆಳೆದು ಈಗ ನನ್ನೆದುರು ನಿಂತ ಬೆಡಗಿ ಇವಳು.

ನೂರು ವರ್ಷದ ಕತ್ತಲೆಯನ್ನು ಒಂದು ಮಿಂಚು ಬೆಳಗಬಹುದು. ಆ ಮಿಂಚಿನಂತೆ, ಒಮ್ಮೆ ಮಿಂಚಿ ಮತ್ತೆ ಮಾಯವಾದವಳು ಅವಳು.!

ಪ್ರಣಯವೇನು, ವಿರಹವೇನು, ಭಾವವೇನು ಬಯಕೆಯೇನೆಂದು ಕಾಣದೆ, ಕಾಣಿಸದೆ ಕಲಿಸಿದವಳವಳು ಇವಳಲ್ಲ! ಇವಳು ಗೆಳತಿ ಕಣ್ಮುಂದೆ ಬೆಳೆದ ಬಳ್ಳಿ.

ವಿವಾಹ, ಪ್ರೇಮ ಪ್ರಣಯಗಳ ಪ್ರಶ್ನೆ ಬಾಳೆನಲ್ಲಿ ಮೂಡುವ ಮುನ್ನವೇ, ಬಹಳ ಹಿಂದಿನಿಂದಲೇ ಶ್ಯಾಮಲೆಯನ್ನು ಬಲ್ಲೆ. ಆಗ ಅವಳು ಎಲ್ಲರಂತೆಯೇ ಒಂದು ಚಿಕ್ಕ ಹುಡುಗಿ. ನಾನೊಬ್ಬ ಚಿಕ್ಕ ಹುಡುಗ.

ನಾವಿಬ್ಬರು ಕೂಡಿ ಆಡಿದ್ದೇವೆ; ಆಡಿ ನಕ್ಕಿದ್ದೇವೆ. ನಕ್ಕು ನಲಿದಿದ್ದೇವೆ. ಆದರೆ ನನಗೆ ತಿಳಿದಂತೆ ನನ್ನೊಳಗೆ ಏನೇನೂ ಬಂಧನವಿರಲಿಲ್ಲ. ಶ್ಯಾಮಲೆಯ ತಾಯಿ ತಂದೆ ನನ್ನ ಪ್ರೀತಿಯ ಅತ್ತೆಮಾವ. ಅವರು ನನ್ನನ್ನು ಆಕ್ಕರೆಯಿಂದ ಕಾಣುತ್ತಿದ್ದರು. ಅವರ ಮಗಳು ಶ್ಯಾಮಲಾ ಅವಳು ಹೇಗೇ ಇರಲಿ, ಯಾರೇ ಇರಲಿ. ಅವಳಲ್ಲಿ ನನಗೆ ಪ್ರೀತಿಯಿತ್ತು. ಇದಕ್ಕೆ ಕಾರಣ ಅವಳಲ್ಲ, ಅವರು.

ಇಂದು ಯೋಚಿಸಿದರೆ, ತಲೆ ಕೂದಲನು ಅರ್ಧಂಬರ್ಧ ಮುಖದ ನೀಲಿಯೇ ಚಿಲ್ಲಿಕೊಂಡು ಮೂಗಿನಲ್ಲಿ ಸಿಂಬಳವನ್ನು ಸುರಿಸಿಕೊಂಡು ಬಟ್ಟೆಯನ್ನು ಕೊಳೆಯಲ್ಲಿ ಅದ್ದಿಕೊಂಡು ಹಲ್ಲು ಕಿರಿಯುತ್ತಿದ್ದ ಕೊಳಕು ಹುಡುಗಿ ಶ್ಯಾಮಲಾ, ಇವಳೇ ಏನು ಎಂಬು ಆಶ್ಚರ್ಯಗೊಳ್ಳುತ್ತಿದೆ. ಅಲ್ಲಲ್ಲಿ ಹರಿದು ಮೈ ಕಾಣುವ ಆಂಗಿ ತೊಟ್ಟು ಮಣ್ಣಿನಲ್ಲಿ ಆಡುತ್ತಿದ್ದ ಚಿಕ್ಕ ಮೂಗಿನ ಆ ಹುಡುಗಿ ಇವಳೇ ಏನು?

ಬಡನಡುವನ್ನು ಬಳುಕಿ, ಮುಗುಳ್ನಗುವ, ನರ್ತಕಿಯಂತೆ ನಡೆವ ಅವಳ ಇಂದಿನ ಬೆಡಗೇನು? ಯೌವನ ಏನು ನೋಡಿವಾಡಬಲ್ಲದು! ಮೂಟವಾಗಿ ತುಂಬಿದೆದೆಯು, ದಂಡು ದೋಳುಗಳ ಅಂದವೇನು? ಕಂಡರೆ ಕಂಡೂ ಕಾಣದಂತೆ, ಯಾರನ್ನೋ ನೋಡಿ ಎಂಬಂತೆ ನಗುವ ಸೊಗಸೇನು? ಇವಳೇ ಏನು ಆ ಹುಡುಗಿ. ಅಂದಿನ ಅವಳ ಭಾವ ಚಿತ್ರವನ್ನು ಇಂದು ಇಪಳೆದುರು ಹಿಡಿದರೆ ತನ್ನನ್ನು ಗುರುತಿಸಬಲ್ಲಳೆ? ಖಂಡಿತ ನಂಬಲಾರಳು.

ಇಂದು ನನ್ನಸುತ್ತ ಹೆಣೆದ ಬಲೆ ಇವಳು ನನಗಾಗಿ ಎಂದು ಸಾರುತ್ತಿದೆ. 'ಇವಳು ನಿನ್ನ ಬಳಿಂ'ದು ಹಾಡುತ್ತಿದೆ.

ಅಲ್ಲ. ಇವಳು ನನ್ನವಳಲ್ಲ. ಇವಳು ನನ್ನಿಂದಿಗೆ ಬೆಳೆದವಳು ಹೌದು. ನನ್ನೊಡನಾಡಿಯಾಗಿ ಬಳೆದವಳೂ ಹೌದು. ಅಷ್ಟು ಮಾತ್ರಕ್ಕೆ ಇವಳು ನನಗಾಗಿಯೇ ಎಂದಾಗಬೇಕೆಂದೇನು?

"ಇಂದು ಯಾರನ್ನೋ ಕೈಹಿಡಿವ ದಿನ ಬಂದಿದೆ. ಯಾಕೆ ಶ್ಯಾಮಲೆಯನ್ನೇ ಆರಿಸಿಕೊಳ್ಳಬಾರದು?" ಎಂಬ ಪ್ರಶ್ನೆ ಕಾಡುತ್ತಿದೆ.

ಹೌದು ಯಾಕಾಗಬಾರದು? ಮದುಣದ ಗಡಿಯು ತನಕ ಮೂಡಬೇಕಾದುದು ಇದು — ಮದುವೆ — ಸಂಸಾರ — ಮಕ್ಕಳು — ಸಂಸಾರ — ಮರಣ! ಇದು ಮಾನವ ಸಾಧನೆ! ಸಫಲತೆ, ಪರಿಪೂರ್ಣತೆ! ಇದು ಮಾನವನಿಗಾಗಿ ಕಟ್ಟಿ ಇರಿಸಿದ ಬದಲಿಸಲಾಗದ 'ಸೊತ್ತು'!

ಆದರಲ್ಲಿ ಇದು ಈ ಮದುವೆ! ಹೌದು. ಯಾಕಾಗಬಾರದು?

'ಯಾಕೋ ಏನೋ ನನಗಂತೂ ಮನಸ್ಸಿಲ್ಲ'.

'ಯಾಕೆ ಮನಸ್ಸಿಲ್ಲ?....."

"ವಿವಾಹವು ಬಾಹಿರವೆ?....."

"....ಇಲ್ಲ, ಹಾಗೇನೂ ಇಲ್ಲ"

"ಮತ್ತೆಂದು?"

"ನಾಳೆ....."

"ಆ ನಾಳೆ ಎಂದು ಬರುವುದು?' ಎಂದು ಬರುವುದು? ಉತ್ತರವಿಲ್ಲ.

'ಯಾಕಾಗಿ ನಾಳೆ ಎನ್ನುವೆ?' ಯಾಕೆ? ಯಾಕಾಗಿ? ಏನೋ ಒಂದು ಬಯಕೆ, ಅಶೆ ಹೃದಯದ ಅಳದಲ್ಲಿ ಹುದುಗಿದೆ. ಆದರೆ ನಾಲಿಗೆಗೆ ಬರುವುದಿಲ್ಲ.

"ಯಾಕೆ ಶ್ಯಾಮಲೆ ನಿನ್ನವಳಾಗಬಾರದು?'

"ಅದೇ, ಅದೇ. ಮನಕ್ಕೆ ವೆಚ್ಚುಗೆಯಿಲ್ಲ'

'ಯಾಕೆ ಇಲ್ಲ, ಅವಳಿಗೆ ರೂಪವಿಲ್ಲವೆ, ವಿದ್ಯೆ ಸಾಲದೆ, ಗುಣ ಜೆನ್ನಾಗಿಲ್ಲವೆ?'

"ಎಲ್ಲಾ ಇವೆ, ಆದರೆ ನನ್ನ ಹೃದಯ ಕ್ಕೆ ಒಪ್ಪಿಗೆಯಿಲ್ಲ"

"ಏಕಿಲ್ಲ? ಮತ್ತೇನಾಗಬೇಕು. ಎಂಥ ವಳಾಗಬೇಕು? ಹೌದು. ಎಂಥವಳಾಗಬೇಕು? ಇಂಥವಳೇ ಆಗಬೇಕೆಂದಿಲ್ಲ. ಆದರೆ 'ಇವಳೇ ಇಂಥವಳೇ' ಎಂದು ನನ್ನ ಹೃದಯದಲ್ಲಿ ನುಡಿಗೆ ಸಿಗದಂತೆ ಬರಿದು ಹೋದಲಲ್ಲಾ ಅವಳು, ಅವಳಲ್ಲಿ ಮನಸ್ಸು ನೆಲೆಗೊಂಡಿದೆಯಲ್ಲಾ ಏನು ಹೇಳುವೆ!

"ಆದರೆ ನೀನು ಶ್ಯಾಮಲೆಯ ಕೈಹಿಡಿಯದಿದ್ದರೆ ಅದನ್ನೇ ಬಯಸಿದ್ದ ನಿನ್ನ ಅತ್ತೆ ಮಾವಂದಿರಿಗೆ ದುಃಖವಾಗುವುದು!?

"ಹೌದು.....ಆದರೆ ಅದಕ್ಕೆ ನಾನೇನು ಮಾಡಲಿ?"

"ಇದನ್ನೇ ಬಯಸಿದ ಬಂಧುಬಳಗದವರೂ ನೋದ.ಕೊಳ್ಳುವರು" ಛಿ! ಬಂಧು ಬಳಗದವರು! ಹುಟ್ಟಿದ ಮೇಲೆ ಮುಖ ಮುಖ ನೋಡದ ಹೆಣ್ಣು ಗಂಡುಗಳನ್ನು ಜತೆಗೂಡಿಸಿ ಮದುವೆ ಮಂಟಪದಲ್ಲಿ ಕುಳ್ಳಿರಿಸಿ ಹಣ ಹರಟೆಗಳನ್ನು ಹಾರಿಸಿ, ಹೊಟ್ಟೆತುಂಬಾ ಮೃಷ್ಟಾನ್ನ ಭೋಜನ ಮಾಡಿ ಮನೆಗೆ ಹೋಗಿ ಮರೆತು ಬಿಡುವ ಬಂಧು.ಬಾಂಧವರು! ಈ ಕೃತ್ಯ, ಅವರೆಲ್ಲಿದ ಕಾರ್ಯದ ಫಲವಾಗಿ ಈ ಹೆಣ್ಣು.ಗಂಡು ಕೊನೆಯ ತನಕ ಮೂಡಬೇಕಾದ ಕರ್ತವ್ಯವೇನು, ಹೋಂತವೇನು, ಅವರ ಜೀವನ ಹೇಗೆ ಎಂಬುದರ ಕಣವನ್ನೂ ಅರಿಯದ ತಾಳ ವ್ಯಕ್ಷಗಳು!

"ಅವರು ಅಂತರಲಿ ಬಿಡು. ಆದರೆ ಶ್ಯಾಮಲೆಯೂ ನಿನ್ನನ್ನೇ ಬಯಸಿರುವಳಲ್ಲಾ"

"ಓ, ಹೀಗೇನು?...ಆದರೆ....ಆದರೆ... ನಾನೇನು ಮಾಡಲಿ?"

'ಏನೂ ಮಾಡಬೇಡ? ಏಕೆ ಯೋಚನೆ? ಅವಳನ್ನೇ ಸ್ವೀಕರಿಸು' 'ಇಲ್ಲ. ನಾನೇನು ಮಾಡಲಿ?....ನನ್ನ ಮನಸ್ಸು. ಬೇರೆಕಡೆ ..ಹೌದು ಏಕೆ ನಾಚಲಿ?....ಬೇರೊಬ್ಬಳನ್ನು ಬಯಸಿದೆ. ಮತ್ತೆ ಅದನ್ನೆಂತು ತಿರುಗಿಸಲಿ?'

"ಓ, ಹೀಗೇನು ಗುಟ್ಟು?'

'ಆದರೆ....ಶ್ಯಾಮಲೆ ನಿನ್ನನ್ನು ಪ್ರೀತಿಸಿದಳು. ನೀನವಳನ್ನು ಪ್ರೀತಿಸಲಿಲ್ಲ. ಈಗ ನೀನು ಯಾರನ್ನೋ ಪ್ರೀತಿಸ.ತ್ತಿರುವೆನೆನ್ನುವೆ. ಅವಳು ನಿನ್ನನ್ನು ಪ್ರೀತಿಸುವಳೇ?"

ಇದೇ ಸಮಸ್ಯೆ. ನನ್ನನ್ನವಳು ಪ್ರೀತಿಸುತ್ತಿರುವಳೆ? ಒಮ್ಮೆ, ಬರೇ ಒಮ್ಮೆ ಮಿಂಚಿ ಮಾಯವಾದ 'ಅವಳು' ನನ್ನನ್ನು ಪ್ರೀತಿಸುತ್ತಿರುವಳೆ? ಅಲ್ಲಾ ಅವಳಿಗಾಗಿ ಬಯಸುವ ಈ ಬಯಕೆ ಬರಿ ಭ್ರಮೆಯೆ?

ಇಲ್ಲ, ಹಾಗಿರಲಾರದು. ಅವಳು ಖಂಡಿತವಾಗಿಯೂ ನನ್ನನ್ನು ಪ್ರೀತಿಸಿಯೇ ಪ್ರೀತಿಸುವಳು. ಪ್ರೀತಿ, ಪ್ರೇಮ, ಒಲವುಗಳ ಸಮರಸ ಸಂಗೀತವನ್ನು, ಕಲಿಸಿದ ಚಲುವೆ ಅವಳು ನನ್ನನ್ನು ಪ್ರೀತಿಸದಿರುವಳೆ? ಈ ಪ್ರೇಮ ಪ್ರಣಯಗಳೇನು, ಇದಕ್ಕೆ ಯಾಕೆ ಜೀವನದಲ್ಲಿ ಇಷ್ಟು ದೊಡ್ಡ ಭಾಗ ಕಾವ್ಯ ಕಥೆಗಳಲ್ಲಿ ಏಕೆ ಇದರ ವಿಲಾಸ ಎಂದು ನಗುತ್ತಿದ್ದ ನನಗೆ 'ಆದು ಹೀಗೆ' ಎಂದು ಹೇಳಿಕೊಟ್ಟ ಆ ನೆನಪು ಅವಳು, ಅವಳೇ ವಾಸಂತಿ. ನನ್ನನ್ನು ಪ್ರೀತಿಸಿದಿರುವಳೆ?

'ನನ್ನ ನೆನಪಿನಲ್ಲೇ ದಿನವನ್ನು ಕಳೆಯ್ ಬೇಡ. ನಾನು ನಿನ್ನೆದುರು ಬಂದು ನಿಂತಾಗ, ನೀನು ಸಾಧಿಸಿದುದೇನೆಂದು ಕೇಳಿದಾಗ ಉತ್ತರವಿಲ್ಲದಿದ್ದರೆ ನಾನು ನಿನ್ನವಳಲ್ಲ'ವೆಂದು ಅವ್ಯಕ್ತವಾಗಿ ಬೋಧಿಸಿ ನನ್ನ ಸಾಧನೆಗೆ—ಜೀವನಕ್ಕೆ ಚೇತನವಿತ್ತವಳು ನನ್ನವಳಾಗಲಾರಳೆ? ಅವಳೇಕೆ, ಅವಳ ನೆನಪೇ ನನ್ನ ಜೀವನದಲ್ಲಿ ಸ್ಫೂರ್ತಿದಾಯಿಯಾಗುತ್ತು. 'ನಡೆ ಮುಂದೆ' ಎಂಬ ನಾದವಾಗಿತ್ತು. ನನ್ನ ನೀತಿಗೆ ರಕ್ಷಯಾಗಿತ್ತು. ಅಂಥವಳು, ಅವಳು ನನ್ನನ್ನು ಮೆಚ್ಚದಿರಬಹುದೆ? ಒಲಿಯದಿರಬಹುದೆ?

ಈ ಜನನ ಮರಣಗಳ ಸೀಮಿತ ಅವಧಿಯಲ್ಲಿ ಅತಿ ಮಹತ್ತಾದುದೇನನ್ನು ಸಾಧಿಸಲು ಸಾಧ್ಯವಿಲ್ಲ. ಸಾಧಿಸಬೇಕೆಂದಿದ್ದರೆ

(೧೦ನೇ ಪುಟ ನೋಡಿ)

ಬ್ಯಾಂಕ್ ಖಾತೆಯನ್ನು ಯಾರು ತೆರೆಯಬಹುದು?

ಬ್ಯಾಂಕ್ ಖಾತೆ ತೆರೆಯಲು, ತಮಗೆ ಆಸಾಧ್ಯವೆನಿಸುವ ನಿರ್ಬಂಧಗಳಿವೆಯೆಂದು ಹಲವರು ಭಾವಿಸುತ್ತಾರೆ. ಇದೊಂದು ತಪ್ಪು ಭಾವನೆ. ದಿನಕೂಲಿ ಪಡೆವವನು ಕೂಡಾ ಬ್ಯಾಂಕಿನಲ್ಲಿ ಚಿಕ್ಕ ಉಳಿತಾಯ ಖಾತೆಯನ್ನು ತೆರೆಯಬಹುದು. ಇಂದಿನ ದಿನಗಳಲ್ಲಿ ಅದು ಅವಶ್ಯವೂ ಇದೆ. ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ಎಲ್ಲರಿಗೂ ಏಳಿಗೆಯ ಸೌಜನ್ಯ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕ್ಷನಡ.

ESTD. 1921 ಸ್ಥಾಪನೆ

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್,
ವಿದ್ವಾನ್
ಬಿ. ಶಾಮರಾಯ ಶೆಟ್ಟಿ,
ಬಿ. ಎ., ಎಲ್.ಟಿ.

ಸಂಚಾಲಕ ಸಂಪಾದಕರು:
ಕೆ. ಹೊನ್ನಯ್ಯ ಶೆಟ್ಟಿ.

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾ ಪಾವತಿಗಾಗಲೀ ಜಾಹೀರಾತಿನ ಮೊಬಲಗುಗಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ವಿಚಾರದ ಒರೆಗಲ್ಲಿನಲ್ಲಿ

ಶಿಕ್ಷಣ ಕ್ಷೇತ್ರದ ಆಗುಹೋಗುಗಳು

ಶಿಕ್ಷಣವೆಂದರೆ ಮಗುವಿನಲ್ಲಿ ಅಡಗಿರುವ ಸುಪ್ತ ಶಕ್ತಿಗಳ ವಿಕಾಸ. ಇದನ್ನು ಯಾವ ವಿಧಾನದಲ್ಲಿ ಪ್ರಯತ್ನಿಸಲ್ಪಡಬಹುದು ಎಂಬುದೇ ಸಮಸ್ಯೆ. ಪ್ರಾಚೀನ ಕಾಲದಲ್ಲಿ, ಗುರುಕುಲಗಳು ಈಗಿನ ವಿಶ್ವವಿದ್ಯಾನಿಲಯದ ಕಾರ್ಯಗಳನ್ನು ಮಾಡುತಿದ್ದವು. ತತ್ವಜ್ಞಾನಿಗಳೂ, ವಿದ್ವಾಂಸರೂ ಆದ ಋಷಿಗಳ ಆಶ್ರಮಗಳೇ ಗುರುಕುಲಗಳಾಗಿದ್ದವು. ಆಶ್ರಿ ವಿದ್ಯಾರ್ಥಿಗಳು ತಮ್ಮ ಎಂಟನೆಯ ವಯಸ್ಸಿನಿಂದ ವೇದ ಮತ್ತು ಶಾಸ್ತ್ರಗಳನ್ನು ಅಭ್ಯಸಿಸುತ್ತಾ ಗುರುಗಳನ್ನು ಆದರಿಸಿ ಸೇವಿಸಿ ತಮ್ಮ ಒಳನೆಯ ವಯಸ್ಸಿನ ವರೆಗೆ ಗುರುವಿನೊಡನೆ ಇರುತಿದ್ದರು. ವಿದ್ಯಾಭ್ಯಾಸದ ಜೊತೆಯಲ್ಲೇ ನಡತೆ ಮತ್ತು ವಿಶ್ವಾಸದ ಜೀವನವೂ ಮುಖ್ಯವಾಗಿತ್ತು. ಅಲ್ಲಿಯ ವಿದ್ಯಾಭ್ಯಾಸ ಮುಗಿದ ಮೇಲೆ ಗುರು, ಶಿಷ್ಯರಿಗೆ ಕೊಡುವ ಕೊನೆಯ ಉಪದೇಶದ ಸಾರವು ಹೀಗಿತ್ತು : "ಸತ್ಯವನ್ನು ಹೇಳು, ಧರ್ಮವನ್ನು ಆಚರಿಸು. ಇದು ವರೆಗೆ ಕಲಿತದ್ದರಲ್ಲೇ ತೃಪ್ತನಾಗದಿರು, ಹೆಚ್ಚಿಸಬೇಡ, ಗುರುವಿನಿಂದ ನೀನು ಕಲಿತಿರುವುದಕ್ಕೆ ನಿನ್ನ ಬುದ್ಧಿಶಕ್ತಿಯಿಂದಲೂ, ಅನುಭವದಿಂದಲೂ, ಶಾಸ್ತ್ರ ಅಭ್ಯಾಸದಿಂದಲೂ ಸೇರಿಸಿಕೊಂಡು ಆದರ್ಶ ಜೀವನವನ್ನು ಸಾಧಿಸು". ಯಾವ ಕಾಲಕ್ಕೂ ಒಪ್ಪುವ ಈ ಉಪದೇಶವನ್ನು ಮಕ್ಕಳ ಮನಸ್ಸಿನಲ್ಲಿ ಶಾಶ್ವತವಾಗಿ ನೆಲೆಸುವಂತೆ ಮಾಡುವುದೇ ವಿದ್ಯಾಭ್ಯಾಸದ ಗುರಿಯಾಗಿರಬೇಕು.

ಮುಂದೆ ಕ್ರಿ. ಪೂರ್ವ ಅನೆಯ ಶತಮಾನದಿಂದ ಕಾಶಿ, ತಕ್ಷಶಿಲಾ, ನಾಲಂದಾ, ಕಾಂಚಿ, ವಿಕ್ರಮಶಿಲಾ ಮುಂತಾದ ಸ್ಥಳಗಳಲ್ಲಿ ದೊಡ್ಡ ದೊಡ್ಡ ವಿದ್ಯಾಪೀಠಗಳು ಸ್ಥಾಪಿತವಾದುವು. ಅಲ್ಲಿ ಭಾಷೆ, ವ್ಯಾಕರಣ, ಆಯುರ್ವೇದ ಜ್ಯೋತಿಷ್ಯ, ಕೃಷಿ, ವ್ಯಾಪಾರ, ಮಂತ್ರ ವಿದ್ಯೆ, ಶಿಲ್ಪಿ ಮುಂತಾದ ಎಲ್ಲ ವಿದ್ಯೆಗಳನ್ನೂ ಕಲಿಸುತಿದ್ದರು. ಅರಸರ ಭೂದಾನ, ವಸತಿ ಮೊದಲಾದ ಉದಾರ ದಾನಗಳಿಂದ ಈ ವಿದ್ಯಾಪೀಠಗಳ ವೆಚ್ಚವು ಸಾಗುತಿತ್ತು. ಎಲ್ಲರಿಗೂ ವ್ಯಕ್ತಿಶಃ ಶಿಕ್ಷಣ ಕೊಡಲ್ಪಡುತಿತ್ತು. ಮನುಷ್ಯ ಸುಮಾರು ೧೫ ಸಾವಿರ ವರ್ಷಗಳ ಮೇಲೆ ಮೊಗಲರ ಆಳ್ವಿಕೆಯಲ್ಲಿ ಪಾರ್ಸಿ ರಾಜ ಭಾಷೆಯಾಯಿತು. ಆ ಕಾಲದಲ್ಲಿ ಮಕ್ತಬ್, ದೇವಾಲಯ ಮತ್ತು ಶ್ರೀಮಂತರ ಮನೆಯ ಜಗಲಿಯಲ್ಲಿ ಶಾಲೆಗಳಾಗಲು ಪ್ರಾರಂಭವಾದುವು. ಹಳ್ಳಿಗಳಲ್ಲಿ ಓಬಲಿಗಳನ್ನು ಕಲಿಸುವ ಎಗಳ ಮಕ್ತಬ್‌ಗಳಿದ್ದುವು. ಮುಸಲ್ಮಾನರು ಮಸೀದಿಗಳಲ್ಲಿಯೂ ಇತರ ಕಟ್ಟಡಗಳಲ್ಲಿಯೂ ತಮ್ಮ ಮಕ್ಕಳಿಗೆ ವಿದ್ಯೆಯನ್ನು ಕಲಿಸುತಿದ್ದರು.

ಕ್ರಿ. ಶಕ ೧೬೦೦ರ ನಂತರ ಇಂಗ್ಲೆಂಡಿನ ಈಸ್ಟ್ ಇಂಡಿಯಾ ಕಂಪೆನಿಯ ಆಡಳಿತದ ಸಮಯದಲ್ಲಿ ವಿದ್ಯಾಭ್ಯಾಸದಲ್ಲಿ ಹಲವು ಬದಲಾವಣೆಗಳಾದವು. ಆಗ ಸರಕಾರದ ವ್ಯವಹಾರವೆಲ್ಲಾ ಇಂಗ್ಲಿಷಿನಲ್ಲೇ ನಡೆಯುತಿತ್ತು. ಆದುದರಿಂದ ಕಂಪೆನಿಯ ಅಧಿಕಾರಿಯಾಗಿ ಬಂದಿದ್ದ 'ಮೆಕಾಲೆ' ಎಂಬಾತನು ಇಂಗ್ಲಿಷ್ ಭಾಷೆಯನ್ನು ಕೊಡುವುದಕ್ಕಾಗಿ ಸರಕಾರವು ಪ್ರತ್ಯೇಕ ಇಂಗ್ಲಿಷ್ ಶಾಲೆಯನ್ನು ತೆರೆಯಬೇಕೆಂಬ ವರದಿಯನ್ನೊಪ್ಪಿಸಿದನು ಅದರಂತೆ ಭಾರತದಲ್ಲಿ ಇಂಗ್ಲಿಷ್ ವಿದ್ಯಾಭ್ಯಾಸವು ಪ್ರಾರಂಭವಾಯಿತು. ಇಗಲೆ ಮನರಂಗಳ ಬದಲು ಈಗಿನ ರೀತಿಯ ಶಾಲೆಗಳು ಪ್ರಾರಂಭವಾದುವು. ವಿದ್ಯಾಭ್ಯಾಸದ ಪ್ರಚಾರ ಮತ್ತು ಹೇಲ್ವನಿಕೆಗಳಿಗೆ ವಿದ್ಯಾಖಾತೆಯು ಏರ್ಪಟ್ಟಿತು. ಇದರಿಂದಾಗಿ ನಮ್ಮ ದೇಶದಲ್ಲಿ ಪ್ರಾಥಮಿಕ, ಮಾಧ್ಯಮಿಕ, ಫ್ರೌಢ, ವೈದ್ಯ ಇಂಜಿನಿಯರಿಂಗ್ ಕೃಷಿ ಮೊದಲಾದ ತರತರದ ರೀತಿಯ ಶಾಲೆಗಳು ಸ್ಥಾಪಿಸಲ್ಪಟ್ಟವು.

ಈ ರೀತಿಯ ಶಿಕ್ಷಣದಿಂದಾಗಿ ಭಾರತದಲ್ಲಿ ಕೆಲವೇ ಜನರಿಗೆ ವಿದ್ಯಾಭ್ಯಾಸ ದೊರೆತು ಪ್ರತಿಕ್ಷಕರ್ಕರು ಹೆಚ್ಚಾಗುತ್ತಾ ಹೋದರು. ಶಿಕ್ಷಣವೆಂದರೆ ನೌಕರಿಯನ್ನು ಗಳಿಸುವ ಸಾಧನ ಎಂಬ ಮನೋಭಾವವು ಸ್ವಾಭಾವಿಕವಾಗಿ ಜನರಲ್ಲಿ ಮೂಡಿತು. ಆದಕ್ಕಾಗಿ ಸ್ವಾಮಿ ವಿವೇಕಾನಂದರು "ಈಗಿನ ಶಿಕ್ಷಣ ಸಂಸ್ಥೆಗಳು ಕಾರಕೂನರನ್ನು ತಯಾರಿಸುವ ಕಾರ್ಖಾನೆಗಳಾಗಿವೆ. ನಮ್ಮ ವಿದ್ಯಾಭ್ಯಾಸ ಪದ್ಧತಿಯನ್ನು ಬದಲಾಯಿಸದಿದ್ದರೆ ಮುಂದೆ ಭಾರತವು ದೊಡ್ಡ ಸಮಸ್ಯೆಯೊಂದನ್ನು ಎದುರಿಸಬೇಕಾಗುವುದು" ಎಂದು ಸಾರಿದ್ದರು. ಇಂಗ್ಲಿಷ್ ಶಿಕ್ಷಣದಿಂದಾಗಿ ಜನರಲ್ಲಿ ನೌಕರಿಯ ತೃಷೆಯು ಹೆಚ್ಚಾಯಿತಲ್ಲದೇ ಕೃಷಿ, ಕೈಗಾರಿಕೆಗಳ ಅಭಿವೃದ್ಧಿಯು ಕುಂಠಿತವಾಯ್ತು. ತತ್ಪರಿಣಾಮವಾಗಿ ಭಾರತದಲ್ಲಿ ನಿರುದ್ಯೋಗ ಸಮಸ್ಯೆಯು ತಾಂಡವವಾಡುತ್ತಿದೆ.

ಭಾರತವು ಸ್ವತಂತ್ರವಾದನಂತರ ವಯಸ್ಕರ ನಿರಕ್ಷರತೆಯನ್ನು ಹೋಗಲಾಡಿಸಲು ರಾತ್ರಿ ಶಾಲೆಗಳನ್ನು ಏರ್ಪಡಿಸಿತು. ಅಂಗ ವಿಹೀನರಿಗಾಗಿ ಬ್ರೈಲ್ ಶಿಕ್ಷಣವನ್ನು ಕೊಡಲು ತಕ್ಕ ವ್ಯವಸ್ಥೆಯನ್ನು ಮಾಡಿತು. ಸ್ತ್ರೀಯರು ಹೆಚ್ಚು ಹೆಚ್ಚು ವಿದ್ಯಾಭ್ಯಾಸವನ್ನು ಪಡೆಯಲು ಸರಕಾರವು ಬೇಕಾದ ಪ್ರೋತ್ಸಾಹವನ್ನು ನೀಡಿತ್ತು ಇದೆ. ಮಕ್ಕಳು ನೈಡಿಕಾಯರೂ, ಬಲಿಷ್ಠರೂ, ಹಾಗೂ ದೇಶ ಪ್ರೇಮಿಗಳೂ ಆಗುವಂತೆ ಶಾಲೆಗಳಲ್ಲಿ ಮರಿದಳ, ಬಾಲದಳ, A. C. C. ಮತ್ತು N. C. C ಗಳ ತರಬೇತಿಯನ್ನು ಕೊಡುವ ಏರ್ಪಾಡು ಮಾಡಿರುತ್ತದೆ. ಭಾರತಾದ್ಯಂತ ಪ್ರಾಥಮಿಕ ಕಡ್ಡಾಯ ಶಿಕ್ಷಣವನ್ನು ಜಾರಿಗೊಳಿಸುವ ವ್ಯವಸ್ಥೆ ಮಾಡುತ್ತಾ ಇದೆ. ಅಲ್ಲದೇ ೬ ವರ್ಷದಿಂದ ೧೪ ವರ್ಷದೊಳಗಿನ ಬಿಕ್ಕ ಮಕ್ಕಳಿಗೆ ಖಾಲೋದ್ಯಾನ ಶಾಲೆಗಳನ್ನು ಎಲ್ಲಾ ಕಡೆಗಳಲ್ಲಿ ತೆರೆಯುವ ಪ್ರಚಂಡ ಯೋಜನೆಯನ್ನು ಮಾಡುತ್ತಾ ಇದೆ.

ಆದರೆ ಭಾರತವು ಸರ್ವತೋಮುಖವಾದ ಅಭಿವೃದ್ಧಿಯನ್ನು ಹೊಂದಬೇಕಾದರೆ ಪೂಜ್ಯ ಬಾಪೂಜಿಯವರು ವಿದ್ಯಾಕ್ಷೇತ್ರದಲ್ಲಿ ಮಾಡಿದ ಹೊಸ ಪ್ರಾರಂಭನ್ನು ಅನುಸರಿಸಬೇಕು. ಅದೇ ಬುನಾದಿ ಶಿಕ್ಷಣ. ಈ ರೀತಿಯ ಶಿಕ್ಷಣದಿಂದಾಗಿ ಮಗುವಿನಲ್ಲಿ ನಿಜವಾದ ಶಕ್ತಿಯು ಪೆಟ್ಟಿತ್ತದಲ್ಲದೇ ವಿದ್ಯಾಭ್ಯಾಸವನ್ನು ಪೂರ್ತಿಸಿದ ನಂತರವೂ ಅವನು ಸ್ವತಂತ್ರನಾಗಿ ಜೀವನಕ್ಕೆ ಅಭರುಚಿಯುಳ್ಳ ವ್ಯಕ್ತಿಯಿಂದ ಜೀವನ ಸಾಗಿಸಲು ಶಕ್ತನಾಗುತ್ತಾನೆ. ತತ್ಪರಿಣಾಮವಾಗಿ ಭಾರತದಲ್ಲಿ ನಿರುದ್ಯೋಗವು ಕ್ರಮೇಣ ಮಾಯವಾಗುತ್ತಾ ಹೆಳ್ಳಹೆಳ್ಳಿಯೂ ಉತ್ಪಾದನಾ ಕೇಂದ್ರವಾಗಿ ಭಾರತವು ಕೃಷಿ, ಕೈಗಾರಿಕೆ, ವ್ಯಾಪಾರ ಮತ್ತು ಕುಶಲ ವಿದ್ಯೆಗಳ ಸಂಪತ್ಸಮೃದ್ಧ ರಾಷ್ಟ್ರವಾಗುವುದರಲ್ಲಿ ಸಂದೇಹವಿಲ್ಲ.

ಈ ರೀತಿಯ ಶಿಕ್ಷಣವನ್ನು ಕಾರ್ಯರೂಪಕ್ಕೆ ತರಲು ಕೊರತೆ ಎಂದರೆ ಪರಿಪಕ್ವ ಶಿಕ್ಷಕರ ಅಭಾವ. ಕಲಿಯುವ ವ್ಯಕ್ತಿಯು ಕಲಿಸಲ್ಪಡುವ ವಿಷಯವನ್ನು ಸಂಪೂರ್ಣವಾಗಿ ಅರಿತಿರಬೇಕು. ಅದರ ಸುಂದರವಾದ ಕಲ್ಪನೆಯೂ ಅವನಲ್ಲಿರಬೇಕು. ಅವನು ಹೆಚ್ಚಿನ ಸಮಯವನ್ನು ಜ್ಞಾನಾರ್ಜನೆಯಲ್ಲಿ ಕಳೆಯಬೇಕು. ಸರಕಾರವು ಯಾವುದೇ ಕ್ರಮವನ್ನು ಬೇಕಾದರೆ ಜಾರಿಗೆ ತರಲಿ, ಎಂದಿನ ತನಕ ಶಿಕ್ಷಕನು ಆ ಕ್ರಮವನ್ನು ಮನಸ್ಸಿನ ಮಾತಿ ಕೊಂಡು ಸ್ವಂತೋಷದಿಂದ ತನ್ನನ್ನು ಮಕ್ಕಳಿಗೆ ಕಲಿಸುವುದಿಲ್ಲವೋ ಅಲ್ಲಿಯ ತನಕ ಶಿಕ್ಷಣದಲ್ಲಿ ಯಾವ ತರದ ಪ್ರಗತಿಯೂ ಆಗದು. ಆದ್ದರಿಂದ ಶಿಕ್ಷಣವು ಪ್ರಗತಿ ಪಥದಲ್ಲಿ ಸಾಗಬೇಕಾದರೆ ಶಿಕ್ಷಕರು ಒಳ್ಳೆಯ ಮನಶ್ಶಾಸ್ತ್ರಜ್ಞರೂ, ಜ್ಞಾನಿಗಳೂ ಹಾಗೂ ಮುಖ್ಯವಾಗಿ ಉನ್ನತ ನೈತಿಕ ಮಟ್ಟದವರೂ ಆಗಿರಬೇಕು. ಅದಕ್ಕಾಗಿ ಸರಕಾರವು ತರಬೇತಿ ಶಿಕ್ಷಣವನ್ನು ಬಲವಾಯಿಸಿ ಅವರಲ್ಲಿ ಶಿಕ್ಷಕನಿಗೆ ನಿಜವಾಗಿ ಬೇಕಾದ ವಿವಿಧ ವಿಷಯಗಳನ್ನು ಕಲಿಯುವ ವ್ಯವಸ್ಥೆ ಮಾಡಬೇಕು. ಪರಸ್ಪರ ಸಂಬಂಧವನ್ನು ಅರಿಯುವುದೆಂದರೆ ವಿಷ್ಯನ್ನೇ ಅರಿತು ಕೊಂಡಂತೆ ಎಂಬ ಮಾತನ್ನು ಲಕ್ಷ್ಯದಲ್ಲಿಟ್ಟುಕೊಂಡು ಕಾರ್ಯ ಮಾಡುವ ಧೋರಣೆಯನ್ನು ಶಿಕ್ಷಕನು ಸ್ವೀಕರಿಸಿದರೆ ಶಿಕ್ಷಣದಲ್ಲಿ ಕಸ್ಮಿಂದ ತಾನೆ ಪ್ರಗತಿಯಾಗುವುದರಲ್ಲಿ ಸಂಶಯವಿಲ್ಲ.

ಇಂತಹ ಶಿಕ್ಷಕರು ತಯಾರಾಗಬೇಕಾದರೆ ಸರಕಾರವು ಶಿಕ್ಷಕರ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಬೇಕು. ಶಿಕ್ಷಕನು ತನ್ನ ಜೀವನ ಜೀವನವನ್ನೇ ಭೂತಕದ ಆದರ್ಶ ಪೌರ ಪ್ರಜೆಗಳನ್ನು ತಯಾರಿಸ್ಯ ವುದರಲ್ಲಿ ತೊಡಗುವಂತೆ ಸರಕಾರವು ಪ್ರಥಮತಃ ಶಿಕ್ಷಕರಿಗೆ ಬೇಕಾದ ಸವಲತ್ತುಗಳನ್ನು ಒದಗಿಸಿ ಕೊಡಬೇಕು. ಎಂದಿನ ತರಕ ನಿಜವಾದ ಭಾರತೀಯ ಸಂಸ್ಕೃತಿ, ಕಟ್ಟಿನೆ ಜಾಗೃತಿ ಪಡಿಪಡಿಸಿದಾಗ ಮಾತ್ರವೇ ಶಿಕ್ಷಕರಲ್ಲಿ ಭವ್ಯ ಭಾರತದ ಪ್ರಜೆಗಳನ್ನು ಬಿಡುವುದಕ್ಕೆ ಆಸಕ್ತಿ ತರತರದ ಶಿಕ್ಷಣ ಕ್ರಮಗಳನ್ನು ಅಳವಡಿಸಿಕೊಳ್ಳಲು ಸಾಧ್ಯವಾಗುತ್ತದೆ. ಆಗ ಭಾರತದಲ್ಲಿ ಶಿಕ್ಷಣದ ಪ್ರಗತಿ ಸಾಧ್ಯವಾಗಬಹುದು.

ಮಕ್ಕಳ ಶಿಕ್ಷಣದ ಮೊದಲ ಜೊಣೆ ಹೆತ್ತವರ ಮೇಲಿದೆ. ತಾಯಿಯು ತೊಡೆಯ ಮೇಲಲ್ಲದೇ ಮಗುವು ಬೆಳೆಯುವುದು ಅದ್ದರಿಂದಲೇ ಎಲ್ಲಾ ಸುಧಾರಿಸಿದ ರಾಷ್ಟ್ರಗಳಲ್ಲಿ ಶ್ರೌಢರನ್ನು ಬುದ್ಧಿವಂತರನ್ನಾಗಿ ಮಾಡುವ ಹೃಯತ್ನ ನಡೆಯುತ್ತಿದೆ. ಬರೀ ಓದು ಬರೆಯಲು ಕಲಿಸುವುದು ವಿದ್ಯಾಧಿಶಿಕ್ಷಣವಲ್ಲ. ತಂದೆ-ತಾಯಿಗಳಿಗೆ ತಮ್ಮ ಹೊಣೆಯು ಅರಿವಾಗಬೇಕು. ಪರದೇಶಗಳಲ್ಲಿ ಶಿಕ್ಷಕ-ಪಾಲಕರ ಸಹಕಾರವು ತುಂಬಾ ಇದೆ. ಆಸ್ಟ್ರೇಲಿಯೊದಂಥ ದೇಶದಲ್ಲಿ ಶಾಲೆಯ ಕಾರ್ಯಗಳನ್ನು ನಿರೀಕ್ಷಿಸಲು "ಮಾತೆಯರ ಸಂಸ್ಥೆ"ಗಳಿವೆ. ಇವು ಶಿಕ್ಷಕರ ಕಲಿಸುವಿಕೆಯನ್ನು ಪರಿಶೀಲಿಸುವುದಲ್ಲದೇ ಶಿಕ್ಷಣಕ್ಕೆ ಬೇಕಾದ ಸಾಮಾನ್ಯ ಸಾಮಗ್ರಿಗಳನ್ನು ಕೊಡಾ ಒದಗಿಸಿ ಕೊಡುತ್ತವೆ. ಇಂದು ಶಿಕ್ಷಣವು ಒಂದು ಯಂತ್ರವತೆ ಆಗಿದೆ. ಶಿಕ್ಷಕ; ಮುಖ್ಯ ಉಪಾಧ್ಯಾಯಕ, ಶಾಲಾ ಪಾಲಕ, ಸರಕಾರ, ವಿದ್ಯಾಪೀಠ, ಪಾಲಕ ಮತ್ತು ವಿದ್ಯಾರ್ಥಿ ಎಲ್ಲರೂ ಈ ಯಂತ್ರವನ್ನು ಕೆಲಸ ಮಾಡುತ್ತಾರೆ. ಶಿಕ್ಷಣವು ಪ್ರಗತಿಯಾಗಬೇಕಾದರೆ ಈ ಎಲ್ಲಾ ವ್ಯಕ್ತಿಗಳು ಪರಸ್ಪರ ಅನ್ಯೋನ್ಯತೆಯಿಂದ, ಒಬ್ಬರಿಗೊಬ್ಬರು ಗೌರವ ಕೊಟ್ಟು ಕೆಲಸ ಮಾಡಬೇಕು ವಿನಃ ಅಧಿಕಾರ ದರ್ಪವನ್ನು ಚಲಾಯಿಸಿದರೆ ಮಗುವಿನಲ್ಲೇ ಸ್ವೇಚ್ಛಾಭಾವವು ತಲೆದೋರಲು ಅವ್ಪದವಾಗುವುದು. ಆದ್ದರಿಂದ ಪಾಲಕರೂ ತಮ್ಮ ಮಕ್ಕಳ ಅಭಿವೃದ್ಧಿಯ ಕುರಿತು ಅತುರರಾಗಿದ್ದು ಶಿಕ್ಷಕರಿಗಿಂತಲೂ ಹೆಚ್ಚಿನ ಗಮನವನ್ನಿಡಬೇಕು.

ನೊವಲು ಶಿಕ್ಷಣವು ಒಬ್ಬ ಶಿಕ್ಷಕನ ಕೈಲಿರುತ್ತಿತ್ತು. ಇಂದು ಆದು ಅನೇಕರ ಕೈಸೇರಿದೆ. ಆದ್ದರಿಂದ ಶಿಕ್ಷಕನಿಗೆ ಹಿಂದಿನಷ್ಟು ಅಧಿಕಾರವಿಲ್ಲದಂತಾಗಿದೆ. ವರ್ಗ ಗಳು, ವಿನಯಗಳಂತೆ ಹೊತ್ತಗಾಗುತ್ತಿದೆ. ಆದರಿಂದಾಗಿ ಶಿಕ್ಷಕನಿಗೆ ವ್ಯಕ್ತಿಶಃ ಗಮನ ಕೊಡುವುದು ಕಷ್ಟ. ಇದರಿಂದಾಗಿ ಎಷ್ಟೋ ಮಕ್ಕಳು ಓಬಲೆಯಲ್ಲಿ ದದ್ದಾಗಿ ಬ್ಯಾಕೂ ಬೇರೆಯಾವುದೇ ವೃತ್ತಿ, ಕೈಗಾರಿಕೆ, ಚಿತ್ರ, ಸಂಗೀತ ಮೊದಲಾದ ವಿದ್ಯೆಗಳಲ್ಲಿ ಆಳರುಚಿ ಇದ್ದರೆ ಅವಂಗೆ ಸರಿಯಾದ ತರಬೇತಿಯು ಸಿಗದೆ ಅದು ಅಲ್ಲೇ ನಾಯವಾಗುವ ಸಂಭವವಿದೆ. ಆದ್ದರಿಂದ ಶಿಕ್ಷಣದಲ್ಲಿ ಅಂಥ ಮಕ್ಕಳ ಸ್ಪಗತಿಯನ್ನು ಸಾಧಿಸುವಂತಹ ವ್ಯವಸ್ಥೆ ಕೂಡಾ

"ಸೇವೆಯೇ ಮೊದಲು; ಸೇವೆಯಲ್ಲಿ ನೊವಲು"
ಈ ಉದಾತ್ತ ಧ್ಯೇಯ ಸಾಧನೆಗಾಗಿಯೇ
— ಕೊರ್ಪೊರೇಶನ್ ಬೇಂಕ್ —
ನಿಮ್ಮ ಹಣಕ್ಕೆ
ಅತ್ಯುತ್ತಮ ಭದ್ರತೆಯೊಂದಿಗೆ ಅತ್ಯಧಿಕ ಬಡ್ಡಿ ಕೊಡುತ್ತಿದೆ.
ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ರಿಜಿಸ್ಟರ್ಡ್ ಆಫೀಸು: ಉಡುಪಿ)
ಆಡಳಿತ ಆಫೀಸು: ಮಂಗಳೂರು.

ಕಾಮನ್‌ವೆಲ್ತ್ ಮಂತ್ರಿ

ಸಮರ್ಥ ಪ್ರಶಾಸಕ — ಡಂಕನ್ ಸಾಂಡೂಸ್

ಕಾಮನ್‌ವೆಲ್ತಿನ ಸಂಪರ್ಕ ಶಾಖೆಯ ಕಾರ್ಯದರ್ಶಿಯವರು ಇತ್ತೀಚೆಗೆ ಭಾರತ ಯಾತ್ರೆಯನ್ನು ಮುಗಿಸಿದರು. ಶ್ರೀ ಡಂಕನ್ ಸಾಂಡೂಸರು ಇಲ್ಲಿನ ನಾಯಕರೊಡನೆ ಮಾತನಾಡುವಾಗ, ಯುರೋಪೀಯ ಸಾಮಾನ್ಯ ಮಾರುಕಟ್ಟೆಯನ್ನು ಬ್ರಿಟನ್ನು ಸೇರುವುದರಿಂದ ಬ್ರಸೆಲ್ಸ್‌ನಲ್ಲಿ ನಡೆಯುವ ಮಾತುಕತೆಯ ವೇಳೆ, ಭಾರತೀಯ ವ್ಯಾಪಾರಿಕ ಹಿತವನ್ನು ರಕ್ಷಿಸಲು ಪ್ರಯತ್ನಿಸುವೆನೆಂದು ಆಶ್ವಾಸನವಿತ್ತಿದ್ದಾರೆ.

೧೯೪೧ನೆ ಇಸವಿಯಲ್ಲಿ ಬ್ರಿಟನ್ನಿನ ಪ್ರಧಾನ ಮಂತ್ರಿಯಾಗಿದ್ದ ವಿನ್‌ಸ್ಟನ್ ಚರ್ಚಿಲ್ಲರು ತಮ್ಮ ಅಳಿಯ ಡಂಕನ್ ಸಾಂಡೂಸರನ್ನು ಮಂತ್ರಿ ಮಂಡಳಿಯಲ್ಲಿ ಸೇರಿಸಿಕೊಂಡಿರದೆ ಹೋಗಿದ್ದರೆ, ಸಾಂಡೂಸರಿಂದು ಏನಾಗುತಿದ್ದರೆಂದು ಹೇಳುವುದು ಕಷ್ಟವಾಗುತಿತ್ತು. ೧೯೦೮ರ ಜನವರಿ ೨೪ರಂದು ಜನಿಸಿದ ಸಾಂಡೂಸ್ ಶ್ರೀಮಂತ ಮನೆತನಕ್ಕೆ ಸೇರಿದವರು. ಇವರ ಬಾಲ್ಯಾವಸ್ಥೆ ಹಾಗೂ ಯುವಾವಸ್ಥೆಗಳು ಶ್ರೀಮಂತಿಕೆಯಲ್ಲಿಯೇ ಕಳೆದುವು. ಈಟನ್ನಿನಲ್ಲಿ ಪ್ರಾರಂಭಿಕ ಶಿಕ್ಷಣವನ್ನು ಗಳಿಸಿ ಆಕ್ಸ್‌ಫರ್ಡನ್ನವರು ಪ್ರವೇಶಿಸಿದರು. ಆಗ ಇವರು ಇಂಗ್ಲೆಂಡಿನ ಶ್ರೇಷ್ಠ ಕುಲದಯೋಗ್ಯತಮ ಮತ್ತು ಆಕರ್ಷಕತಮ ಅವಿವಾಹಿತರ ಸಾಲಿನಲ್ಲಿ ಅಗ್ರಗಣ್ಯರಾಗಿದ್ದರು. ಆದುದರಿಂದ ಪುರುಷರು ಇವರನ್ನು ಕಂಡು ಈರ್ಷ್ಯೆಗೊಳ್ಳುತಿದ್ದರೆ, ಮಹಿಳೆಯರು ಸದಾ ಸುತ್ತುವರಿಯುತಿದ್ದರು. ಪ್ರಸನ್ನಚಿತ್ತರೂ ಶ್ರೀಮಂತರೂ ಆಕರ್ಷಕರೂ ಆರೋಗ್ಯವಂತರೂ ಆದ ಸಾಂಡೂಸರು ತಮ್ಮ ಸುಖಜೀವನಕ್ಕಾಗಿ ಯೋಚನೆಮಾಡಬೇಕಾಗಿರಲಿಲ್ಲ.

ತಮ್ಮ ೨೨ನೆಯ ವರ್ಷ ಪ್ರಾಯದಲ್ಲಿಯೇ ಇವರು ಬರ್ಲಿನಿನಲ್ಲಿರುವ ಬ್ರಿಟಿಷ್ ರಾಯಭಾರಿ ಕಚೇರಿಯ ಸದಸ್ಯರಾದರು. ಆಗಲೂ ಇವರು ಸುಖಜೀವನವನ್ನುಬದುಕುತಿದ್ದರು. ಆದರೆ, ಜೀವನದ ಈ ಗತಿಯಿಂದ ತನ್ನ ಹೊಸ ವ್ಯವಸಾಯಕ್ಕೆ ಅವರು ಕೂಡಲೇ ಪಾದಾರ್ಪಣ ಮಾಡಿದರು. ೧೯೩೩ರಲ್ಲಿ 'ದಿ ಬ್ರಿಟಿಷ್ ಮೂವ್‌ಮೆಂಟ್' ಎಂಬ ಒಂದು ಸ್ವತಂತ್ರ ರಾಜಕೀಯ ಪಕ್ಷವನ್ನು ಕಟ್ಟಿದರು. ಈ ಪಕ್ಷವು ಆರಂಭಶೂರವಾಗಿ ಜನಿಸಿ ಅಷ್ಟೇ ತೀವ್ರವಾಗಿ ಧನಾಭಾವದ ದೆಸೆಯಿಂದ ಸತ್ತು ಹೋಯಿತು. ಆದರೂ ಸಾಂಡೂಸರ ಉತ್ಸಾಹವು ಕೊನೆಗೊಳ್ಳಲಿಲ್ಲ. ಅವರು ನವಧರ್ಮ ಆಂದೋಲನ, ಶಾರೀರಿಕ ಸ್ವಾಸ್ಥ್ಯ ಆಂದೋಲನ, ಪರಿವಾರವರ್ಧನ ಆಂದೋಲನ ಮೊದಲಾದುವುಗಳಲ್ಲಿ ಭಾಗವಹಿಸ ತೊಡಗಿದರು.

೧೯೩೫ರಲ್ಲಿ ತನ್ನ ಜನಾನುರಾಗದಿಂದಾಗಿ ಸಾಂಡೂಸರು ಬ್ರಿಟಿಷ್ ಪಾರ್ಲಿಮೆಂಟಿನ ಸದಸ್ಯರಾದರು. ಅದೇ ವರ್ಷ ಅವರು ಚರ್ಚಿಲರ ಹಿರಿಮಗಳು ಡಾಯನಾರೊಂದಿಗೆ ವಿವಾಹವಾದರು. ಇದರಿಂದಾಗಿ ಚರ್ಚಿಲರ ರಾಜಕೀಯ ಸ್ನೇಹಿತರಿಗೆ ಇವರ ಪರಿಚಯವಾಯಿತು. ಸಾಂಡೂಸರು ತಮ್ಮ ಸಮಯವನ್ನು ಚರ್ಚಿಲರ ನೀತಿ ಮತ್ತು ಉದ್ದೇಶಗಳ ಪಾಲನೆಯಲ್ಲಿ ಕಳೆಯ ತೊಡಗಿದರು.

೧೯೩೯ರಲ್ಲಿ ಹಿಟ್ಲರನ ವಿರುದ್ಧ ಸಶಕ್ತ ಸೇನೆ ನಿರ್ಮಿಸುವ ಚರ್ಚಿಲರ ನೀತಿಯ ಸಮರ್ಥನೆಯೆಂದು 'ಫಸ್ಟ್ ಹಂಡ್ರೆಡ್ ಥೌಸಂಡ್' ಎಂಬ ಹೊಸ ರಾಜಕೀಯ ಸಂಸ್ಥೆಯನ್ನು ರಚಿಸಿದರು. ಕೆಲದಿನಾನಂತರ ಬ್ರಿಟನ್ನು ಜರ್ಮನಿಯೊಂದಿಗೆ ಯುದ್ಧ ಘೋಷಣೆ ಮಾಡಿದ ನಂತರ, ಸಾಂಡೂಸರ ಸಕ್ರಿಯ ರಾಜಕೀಯ ಜೀವನದ ಒಂದು ಅಧ್ಯಾಯ ಮುಗಿದತಾಯಿತು. ಆದರೆ ೧೯೪೧ರಲ್ಲಿ ಚರ್ಚಿಲ್ ಸಂಪುಟದಲ್ಲಿ ಸೇರಿಕೊಂಡನಂತರ ಅವರು ಆಶ್ಚರ್ಯಕರವಾಗಿ ಪ್ರಗತಿ ಹೊಂದಿದರು. ಇದರಿಂದಾಗಿಯೇ ೧೯೪೫ರಲ್ಲಿ ಗೃಹನಿರ್ಮಾಣ ವ್ಯವಸ್ಥೆಯ ಉಚ್ಚ ಪದವಿಯು ಲಭಿಸಿತು. ಸರಕಾರವು ಪತನವಾದ ಬಳಿಕ ತನ್ನ ಮೂರನೆಯ ರಾಜಕೀಯ ಸಂಸ್ಥೆ 'ಸಂಯುಕ್ತ ಯುರೋಪ್ ಆಂದೋಲನ'ವನ್ನು ಪ್ರಾರಂಭಿಸಿದರು. ಆದರೆ, ಸಮರ್ಥಕರ ಅಭಾವದಿಂದಾಗಿ ಈ ಸಂಸ್ಥೆಯದರೂ ಉಳಿದವುಗಳಂತೆಯೇ ಹೆಚ್ಚು ದಿನ ಬಾಳಲಿಲ್ಲ.

ಚುನಾವಣೆಯಲ್ಲಿ ಕನ್ಸರವೇಟಿವ್ ಪಕ್ಷವು ಮರಳಿ ಗೆದ್ದಾಗ, ಸಾಂಡೂಸರು ಪುನಃ ಮಂತ್ರಿ ಮಂಡಳದಲ್ಲಿ ಸೇರಿಕೊಂಡರು. ಆಗ ಅವರಿಗೆ ಪೂರೈಕೆಯ ವಿಭಾಗವನ್ನು ಕೊಡಲಾಗಿತ್ತು. ಕಬ್ಬಿಣ ಮತ್ತು ಉಕ್ಕಿನ ಉದ್ಯೋಗವನ್ನು ರಾಷ್ಟ್ರೀಕರಣ ಮಾಡುವಂತಹ ಮಹತ್ವಪೂರ್ಣ ಕರ್ತವ್ಯವು ಆಗ ಆ ಶಾಖೆಯದಾಗಿತ್ತು. ೧೯೫೪ರ ಅಕ್ಟೋಬರದಲ್ಲಿ ಸ್ವಾಯತ್ತ ಆಡಳಿತೆ ಮತ್ತು ಗೃಹ ನಿರ್ಮಾಣ ವಿಭಾಗಗಳ ಮಂತ್ರಿಯೆಂದು ನಿಯುಕ್ತರಾದರು. ೧೯೫೭ರ ಜನವರಿಯಲ್ಲಿ ಹೆರಾಲ್ಡ್ ಮೈಕಮಿಲನರು ಪ್ರಧಾನಿಗಳಾದ ನಂತರ ಸಾಂಡೂಸರು ರಕ್ಷಣಾ ಮಂತ್ರಿಯೆನಿಸಿದರು. ಅವರು ಈ ಮೊದಲು ನೋಡಿಕೊಂಡಿದ್ದ ಕರ್ತವ್ಯಗಳಿಗಿಂತ ಇದು ಅತೀವ ಪ್ರಯಾಸದ್ದಾಗಿತ್ತು; ಏಕೆಂದರೆ, ಆಧುನಿಕ ಶಸ್ತ್ರಾಸ್ತ್ರಗಳ ಸಂಗ್ರಹದಿಂದ ಬ್ರಿಟಿಷ್ ರಕ್ಷಣಾ ವಿಭಾಗವನ್ನು ಪುನರ್ಘಟಿಸುವ ಜವಾಬ್ದಾರಿಯವರ ಮೇಲಿತ್ತು. ಮಾತ್ರವಲ್ಲದೆ ಸಂರಕ್ಷಣಾ ವ್ಯಯವನ್ನು ಕಡಿಮೆ ಮಾಡಬೇಕಿತ್ತು. ಇದಕ್ಕಾಗಿ ಅವರೊಂದು ಯೋಜನೆಯನ್ನು ಮಾಡಿದರು. ಈ ಯೋಜನೆಯು ಕಾರ್ಯರೂಪಕ್ಕೆ ಬಂದ ನಂತರವೇ ಬ್ರಿಟನ್ನು ಅಣುಶಕ್ತಿಯುಳ್ಳ ರಾಷ್ಟ್ರಗಳ ಸಾಲಿಗೆ ಬರುವಂತಾಯಿತು.

ಕಾಮನ್‌ವೆಲ್ತ್ ಸಂಪರ್ಕ ಮಂತ್ರಿಯಾದ ಬಳಿಕ ಸಾಂಡೂಸರು ಕಳೆದ ವರ್ಷ ಪ್ರಧಾನಿ ನೆಹರುಗಳೊಡನೆ ಲಾಪೋಸ್ ಸಂಬಂಧದ ಮಾತುಕತೆ ನಡೆಸಲು ಭಾರತಕ್ಕೆ ಬಂದಿದ್ದರು. ಆಗ ಅವರು ಜಯಪುರಕ್ಕೂ ತೆರಳಿದ್ದರು. ಜಯಪುರದ ಸುಂದರ ರೂಪವು ತಪ್ಪು ವಿಜ್ಞಾಪನೆಗಳು ವ್ಯಾವಸಾಯಿಕ ಸೂಚನೆಗಳಿಂದಾಗಿ, ಕೆಟ್ಟಿರುವುದನ್ನು ಕಂಡು ಅವರು ದುಃಖಿಸಿದ್ದರು. ಬ್ರಿಟಿಷ ನಾಗರಿಕ ಮಂಡಳದ ಅಧ್ಯಕ್ಷರೂ ಆಗಿದ್ದ ಇವರು ಜಯಪುರದ ಪ್ರಮುಖ ನಾಗರಿಕರನ್ನು ಕರೆದು, ನಗರದ ಕುರೂಪತೆಯನ್ನು ದೂರಗೊಳಿಸಿ ಅದಕ್ಕೆ ಹೊಸ ರೂಪವನ್ನು ಹೇಗೆ ಕೊಡಬಹುದೆಂಬುದನ್ನೂ ತಿಳಿಸಿದ್ದರು.

ಅವರ ಮಾತುಗಳು ಜಯಪುರ ನಿವಾಸಿಗಳ ಮೇಲೆ ಸಾಕಷ್ಟು ಪರಿಣಾಮ ಗೆಯ್ದುವು. ನಾಗರಿಕರು ತಾವಾಗಿಯೇ ಹಲವಾರು ಕ್ರಾಂತಿಕಾರೀ ಸಲಹೆ ನೀಡಿದರು. ಈ ಘಟನೆಯಿಂದಾಗಿ ಸಾಂಡೂಸರು ಪ್ರಬಲ ಆಂದೋಲನಕಾರಿಯೆಂದು ಪ್ರಸಿದ್ಧರಾದರು. ತನ್ನ ಸೌಮ್ಯ ಮತ್ತು ಮಧುರ ವ್ಯವಹಾರದ ಮುದ್ರೆಯನ್ನು ಭಾರತೀಯರ ಮನಸ್ಸಿನಲ್ಲಿ ನೆಟ್ಟು ಅವರಿಗ ತೆರಳಿದ್ದಾರೆ. ಏಕೆಂದರೆ, ಬ್ರಿಟನ್ ಸಾಮಾನ್ಯ ಮಾರು ಕಟ್ಟೆಯನ್ನು ಪ್ರವೇಶಿಸುವುದರಿಂದ ಭಾರತಕ್ಕೆ ಹೆಚ್ಚಿನ ತೊಂದರೆಯಾಗದೆಂದೇ ಅವರು ಹೇಳುತ್ತಾರೆ.

'ಇಂಗ್ಲಿಷ್ ಕಲಿಯಲಿಲ್ಲವಲ್ಲಾ' ಎಂದು ಚಿಂತಿಸಬೇಡಿರಿ!

ಅನ್ಯರ ಸಹಾಯವಿಲ್ಲದೆ ತಮ್ಮಷ್ಟಕ್ಕೆ ತಾವೇ ಇಂಗ್ಲಿಷ್ ಕಲಿಯಬಹುದಾದ ಆಂಗ್ಲ ಸ್ವಯಂಬೋಧಿನಿ ಪುಸ್ತಕವನ್ನು ಇಂದೇ ಕೊಂಡುಕೊಳ್ಳಿರಿ!

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಸಾವಿರಾರು ಜನರು ಈ ಪುಸ್ತಕದಿಂದ ಸುಲಭವಾಗಿ ಇಂಗ್ಲಿಷನ್ನು ಕಲಿತುಕೊಂಡಿದ್ದಾರೆ,

ನೀವೂ ಪ್ರಯತ್ನಿಸಿ, ಇಂಗ್ಲಿಷ್ ಭಾಷೆ ಕಲಿಯಿರಿ! ವಿದ್ಯಾರ್ಥಿಗಳಿಗಂತೂ ಅತ್ಯುಪಯುಕ್ತ ಪುಸ್ತಕ.

ಹೊಸ ಮುದ್ರಣ—ಸಾದಾ ಪ್ರತಿ 2:00. ಉತ್ತಮ ಪ್ರತಿ 2:50.

ಪುಸ್ತಕದ ಬೆಲೆಯೊಂದಿಗೆ 25 ನ. ಪೈ. ಸೇರಿಸಿ ಮನಿಯಾರ್ಡರು ಮಾಡಿದರೆ ಪ್ರತಿಯೊಂದನ್ನು ಕಳಿಸಲಾಗುವುದು.

ಪ್ರತಿಗಳು ನಿಮ್ಮೂರ ಪುಸ್ತಕ ವ್ಯಾಪಾರಿಗಳಲ್ಲಿ ದೊರೆಯದಿದ್ದರೆ ನಮಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ, ದ. ಕನ್ನಡ.

ಮಂಗಳೂರಲ್ಲಿ ಸ್ಕೂಲ್ ಬುಕ್ ಕಂಪೆನಿ, ಕೋಲೆಜ್ ಬುಕ್ ಕಂಪೆನಿ, ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಇವರಲ್ಲಿ ಪ್ರತಿಗಳು ದೊರೆಯುತ್ತವೆ.

ಉಡುಪಿ ಕರ್ನಾಟಕ ಸಂಘದ ಒಂದೊಂದು ರೂಪಾಯಿ ಬೆಲೆಯ ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ, ಎಂ.ಎ)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಐತಾಳ, ಎಂ.ಬಿ.ಬಿ.ಎಸ್)

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರ ಹೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳುಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗ'ಕ್ಕೆ ಚಂದಾದಾರರಾಗಿ ಪ್ರೋತ್ಸಾಹಿಸಿರಿ

ವಿಚಾರದ ಒರೆಗಲ್ಲಿನಲ್ಲಿ

ಜೀವನದ ಮೂರನೆಯ ಹಂತ

ಮುದುಕರ ಸಮಸ್ಯೆಯಿಂದು ತಲೆ ತಿನ್ನುತ್ತಿದೆ. ಸರ್ವಸಾಮಾನ್ಯವಾಗಿ, ಪ್ರತಿಯೊಂದು ಕುಟುಂಬದಲ್ಲಿಯೂ ಇರುವ ಮದುಕರ ವ್ಯವಹಾರವು ಅದರ ಇತರ ಸದಸ್ಯರಿಗೆ ಸರಿ ಬರುವುದಿಲ್ಲ. ಈ ಸಂಬಂಧದ ಚರ್ಚೆಗಳು ಎಲ್ಲೆಲ್ಲಿಯೂ ನಡೆಯುತ್ತಿರುತ್ತವೆ.

ಅಮೆರಿಕೆಯು ಕೌಟುಂಬಿಕ ಜೀವನದ ಮೇಲೆ ದೃಷ್ಟಿ ಹರಿಸುತ್ತ ಸುಪ್ರಸಿದ್ಧ ಮನೋ ವೈಜ್ಞಾನಿಕ ಡಾ। ಸಿ. ಜಿ ಜುಂಗರು ಹೀಗೆ ಹೇಳುತ್ತಾರೆ! "ನಮ್ಮ ಯುವಜನರ ಮೇಲೆ ವೃದ್ಧರು ಸವಾರಿ ಮಾಡ ಬಯಸುತ್ತಾರೆ; ಆದರೆ ಅವರು ಸಹೋದರ ವರ್ತನೆಯನ್ನು ತೋರಿಸುವುದರಿಂದ ಪರಿಣಾಮ ರಮಣೀಯವಾಗುವುದು."

ಮಗನನ್ನು ಕಿರಿತಮ್ಮನಂತೆ, ಮಗಳನ್ನು ಕಿರಿತಂಗಿಯಂತೆ ಕಾಣಬೇಕೆಂಬುದು ವಿಲಕ್ಷಣವೆನಿಸಬಹುದು; ಕರುಣಾಮಯವಾಗಬಹುದು. ನಮ್ಮ ದೇಶದಲ್ಲಾದರೂ ಕುಟುಂಬವು ಒಡೆದುಹೋಗುತ್ತ ಬರುತ್ತಿದೆ. ಸಂಯುಕ್ತ ಕುಟುಂಬ ಪದ್ಧತಿಯು ವಿಭಕ್ತವಾಗುತ್ತದೆ. ಆರ್ಥಿಕವಾಗಿ ಕಂಗೆಟ್ಟಿರುವ ದುರ್ಬಲ ಮನಸ್ಕರೂ ನಿರ್ಬಲ ಮಸ್ತಿಷ್ಕರೂ ಆದ ಮುದುಕರು ಇದರಿಂದ ಕೊಡಲಿಯೇಟು ತಿಂದರೆ ಆಶ್ಚರ್ಯವೇನು?

ಗಂಡಸರಲ್ಲಿ ನಲ್ವತ್ತರ ಸುಮಾರಿಗೆ ಮಾನಸಿಕ ವಿಕಾರವು ಪ್ರಾರಂಭವಾಗುವುದೆಂದೂ ಹೆಂಗಸರಲ್ಲಿ ಇನ್ನೂ ಬೇಗನೆ ಇದು ತೊಡಗುವುದೆಂದೂ ಡಾ. ಜುಂಗರು ಹೇಳುತ್ತಾರೆ, ಹೇಗೆ ೩೫-೪೦ ವರ್ಷ ಪ್ರಾಯದ ನಡುವೆಯೇ ಮಾನವನು ತಮಗರಿವಿಲ್ಲದೆಯೇ ನಡೆದತ್ತ ಸರಿಯುವ ಧೋರಣೆಯನ್ನು ಸ್ವೀಕರಿಸಿ ಜೀವನದ ಮೂರನೆಯ ಹಂತದಲ್ಲಿ ಪಾದಾರ್ಪಣ ಮಾಡುತ್ತಾರೆ. ಜೀವನದ ಮೊದಲ ಹಂತದಲ್ಲಿ ಬದುಕಿದ್ದಂತೆ ಮೂರನೆಯದರಲ್ಲಿ ದಿನ ಸಾಗುವುದು ಸರ್ವಥಾ ಸಾಧ್ಯವಿಲ್ಲ. ಏಕೆಂದರೆ, ಮುಂಜಾವದಲ್ಲಿ ಅಧಿಕವಿರುವುದು ಸಂಜಾವದಲ್ಲಿ ಹ್ರಾಸಗೊಳ್ಳುವುದು; ಪ್ರಾತಃಕಾಲದಲ್ಲಿ ಸತ್ಯವೆಂದು ತಿಳಿದಿರುವುದು ಸಂಧ್ಯಾಕಾಲದಲ್ಲಿ ಮಿಥ್ಯವೆಂಬುದು ಮನವರಿಕೆಯಾಗುವುದು.

ಈ ಸಂಧ್ಯಾಕಾಲವು ಅಕಸ್ಮತ್ತಾಗಿ ಬರುವುದಲ್ಲ. ಮುಂಜಾನೆ, ಮಧ್ಯಾಹ್ನ, ಸಂಜೆ ಮತ್ತು ರಾತ್ರಿಗಳು ಒಟ್ಟು ಸೇರಿ ಒಂದು ದಿನವಾಗುತ್ತದೆ; ಹಾಗೆಯೇ ಒಂದು ಜೀವನ ಕೂಡ. ದಿನದ ಈ ಪ್ರತಿಯೊಂದು ಭಾಗಕ್ಕೂ ತನ್ನದೇ ಆದ ಬಣ್ಣವಿದೆ; ಬಾಲ್ಯ ಮತ್ತು ಯೌನಗಳಿಗೆ ಸ್ವಯಂ ಸೌಂದರ್ಯವಿದೆ. ವರ್ಷಗಳು ಸರಿದಂತೆ, ದೊರೆಯುವ ಅನುಭವಗಳಿಂದ ಅದರ ಬೆಲೆ ಹೆಚ್ಚುತ್ತದೆ. ಆದರೆ ನರೆತ ಕೂದಲ ಎಲುಬು ಹೆಂದರದ ಮುಖದಲ್ಲಿ ಮೂಡುವ ಆನಂದವೇ ನಿಜವಾದುದು; ಸತ್ಯವೆನಿಸಿದುದು. ಈ ಮುಖಪ್ರಕಾಶದಿಂದ ಇತರರ ಹೃದಯಾಂಧಕಾರವೂ ದೂರವಾಗುವುದು. ಯೌವನದ ಮೂಂಸಲ ಸೌಂದರ್ಯ ನಶ್ವರ, ಆತ್ಮ ಸೌಂದರ್ಯವೇ ಅನಂತ.

ಈ ಸಂಬಂಧದಲ್ಲಿ ಡಾ। ಜುಂಗರು ಹೇಳುತ್ತಾರೆ: "ಮಾನವನು ೭೦—೮೦ ವರ್ಷ ಬದುಕುವುದು ನಿರರ್ಥಕವಾದರೆ; ಆತನಷ್ಟು ಸಮಯ ಬದುಕುತ್ತಿರಲಿಲ್ಲ. ಜೀವನದ ತೃತೀಯ ಹಂತವೂ ತನ್ನ ಮಹತ್ವವನ್ನುಳಿಸಿಕೊಂಡಿದೆ; ಅದು ವ್ಯರ್ಥ ಭಾಗವಲ್ಲ. ವಿಕಾಸ ಶೀಲವಾಗಿದೆ, ಪ್ರಪಂಚ ಪರಿಚಯ ಮಾಡಿಸುತ್ತಿದೆ. ಹುಡುಗರ ಲಾಲನೆಪಾಲನೆಗೆಯ್ಯುತ್ತದೆ; ಆ ಮೇಲೆ ಹಣ ಸಂಪಾದಿಸುತ್ತದೆ; ಸಾಮಾಜಿಕ ಪ್ರತಿಷ್ಠೆಯನ್ನು ಗಳಿಸುತ್ತದೆ; ಕುಟುಂಬ ನಡೆಸುತ್ತದೆ; ಸಂತಾನ ವೃದ್ಧಿಮಾಡುತ್ತದೆ ಎಂಬುದರಿಂದ ಮೊದಲ ಹಂತಗಳು ಮಹತ್ವವಾಗಿವೆ. ಇದು ಮಾನವನ ಸ್ವಭಾವ. ಆದರೆ, ಸಂಸ್ಕೃತಿಯಲ್ಲ. ಮಾನವನ ಸ್ವಭಾವಗತ ಉದ್ದೇಶಗಳ ಸಾಧನಾನಂತರ ಬರುವುದೇ ಮಾನವ ಸಂಸಂಸ್ಕೃತಿ. ಆದುದರಿಂದ ಜೀವನದ ಉತ್ತರಾರ್ಧವನ್ನು ಈ ಸಂಸ್ಕೃತಿ ಪ್ರಾಪ್ತಿಗಾಗಿ ಉಪಯೋಗಗೊಳಿಸಬಾರದೆ?" ಜೀವನದ ಪರಿಪೂರ್ಣತೆಯನ್ನು ಗುರಿಯನ್ನಾಗಿಟ್ಟು ಇತರ ಉಪಲಬ್ಧಗಳ ಮೇಲೆ ವಿಜಯ ಗಳಿಸಿ, ಮಾನವನು ಆ ಗುರಿಯತ್ತ ಸರಿಯಲು ಪ್ರೇರಿತನಾದಾಗಲೇ ಈ ಉಪಯೋಗವು ಆಗುವುದು.

ಡಾ। ಜುಂಗರು ಬರೆದಿದ್ದಾರೆ: "ನಿಶ್ಚಿತ ಗುರಿಯತ್ತ ಸರಿಯುವವನ ಜೀವನ ಶ್ರೇಷ್ಠವಾಗುವುದು; ಆತನಿಗೆ ಐಶ್ವರ್ಯವೂ ಆರೋಗ್ಯವೂ ಪ್ರಾಪ್ತವಾಗುವುದು; ಮುಂದಿನದನ್ನು ಆತನು ಅರಿಯಬಲ್ಲನು. ಜೀವನದಲ್ಲಿ ವೇದನೆಯನ್ನುಂಡ ವೃದ್ಧನು ದುರ್ಬಲನೂ ಜೀವನದಿಂದ ಓಡುವ ಯುವಕನು ವೃದ್ಧನೂ ಆಗುವನೆಂದು ಮನೋ ವೈಜ್ಞಾನಿಕರ ಆಂಬೋಣ. ಮೃತ್ಯುವನ್ನು ಸ್ವಾಗತಿಸದವನ ಉತ್ತರ ಜೀವನವು ಆಸ್ವಸ್ಥವಾಗುವುದು. ದುರ್ಬಲಗೊಳ್ಳುವುದು. ಆದುದರಿಂದ ಧಾರ್ಮಿಕ ದಿಸೆಯಲ್ಲಾದರೂ 'ಜಾತಸ್ಯ ಮರಣಂ ಧ್ರುವಂ' ಎಂಬುದನ್ನು ಸ್ಮರಣೆಯಲ್ಲಿಟ್ಟು, ತಾನು ಮೃತ್ಯುವಿನತ್ತ ಸಾಗುತಿದ್ದೇನೆಂದುಕೊಂಡು ನಗುನಗುತ್ತ ಮುಂದುವರಿಯ ಬೇಕು."

ತನ್ನ 'ಮಾಡರ್ನ್ ಮೇನ್ ಇನ್ ಸರ್ಚ್ ಆಫ್ ಸೋಲ್' ಎಂಬ ಪುಸ್ತಕದಲ್ಲಿ ತನಗರಿವಿಲ್ಲದೇನೇ ಡಾ. ಜುಗರು ಭಾರತೀಯ ಹಿಂದೂ ಜೀವನ ವ್ಯವಸ್ಥೆಯತ್ತ ಸಂಕೇತವಿತ್ತಿದ್ದಾರೆ. ಬ್ರಹ್ಮಚರ್ಯ, ಗಾರ್ಹಸ್ಥ ವಾನಪ್ರಸ್ಥ ಮತ್ತು ಸಂನ್ಯಾಸಗಳತ್ತ ಇವರ ದೃಷ್ಟಿ ಹರಿದಿದೆ. ಧರ್ಮ, ಅರ್ಥ ಕಾಮ ಮತ್ತು ಮೋಕ್ಷಗಳಲ್ಲಿ ಜೀವನದ ಸಾರ್ಥಕತೆಯ ವಿಭಜನೆ ಮಾಡಿದ್ದಾರೆ. ಡಾ. ಜುಂಗರು ಈ ಹೆಸರುಗಳನ್ನು ಉಲ್ಲೇಖಿಸದೆ ಹೋದರೂ ಜೀವನದ ಮೌಲ್ಯ ವಿಭಜನೆಯಲ್ಲಿ ಇವುಗಳನ್ನು ಹೋಲುವಂತಹ ನೀತಿಯನ್ನು ಅನುಸರಿಸಿದ್ದಾರೆ. ಇವರ ಅಶಯವು ಹಲವು ಪ್ರಶ್ನೆಗಳಿಗೆ ಕಾರಣವಾಗುತ್ತದೆ. ಜೀವನದ ಪರಿಪೂರ್ಣತೆ ಯಾವುದರಲ್ಲಿದೆ? ಅದರ ಸಾರ್ಥಕತೆಯೆಂದರೇನು? ಅದರ ಉದ್ದೇಶವು ಉಚ್ಚ ಹಾಗೂ ಉನ್ನತವಾಗಲಾರವೆ? ಮೃತ್ಯುವಿಗಿಂತಲೂ ಹೆಚ್ಚಿನದೊಂದು ವಸ್ತುವಿದೆಯೆ? ಜುಂಗರಿಗಿಂತ ಪರಿಪೂರ್ಣವಾಗಿ ಹಿಂದೂ ದರ್ಶನ ಶಾಸ್ತ್ರವು ಈ ಯೆಲ್ಲ ಪ್ರಶ್ನೆಗಳನ್ನು ವಿವೇಚಿಸಿವೆ; ಈ ವಿವೇಚನೆ ವೇದಕಾಲದಿಂದಲೂ ನಡೆದುಬಂದಿದೆ;

ಜೀವನದಲ್ಲಿ ಇಂದಿಗೂ ಇವುಗಳ ಸ್ಥಾನಮಾನ ಕಡಿಮೆಯಾಗಿಲ್ಲ. ಉಪಯುಕ್ತ ರೀತಿಯಲ್ಲಿ ಅವುಗಳ ಪಾಲನೆ ಮಾಡುವುದೇ ಅವಶ್ಯವಾಗಿದೆ; ಈ ನಿಯಮಗಳ ಪಾಲನೆಯನ್ನು ಮಾನವನು ಮಾಡಿದನೆಂದರೆ, ಆತನ ಹಲವಾರು ಸಮಸ್ಯೆಗಳು ದೂರವಾಗುವುವು. ಈ ಸೂತ್ರವು ಪ್ರಬಲವಾದಂತೆ ಜೀವನವು ಸಶಕವೂ ಸುಸಂಘಟಿತವೂ ಕ್ರಿಯಾ ಶೀಲವೂ ಆಗುವುದು. ಇಂದು ಅರ್ಥ ವ್ಯವಸ್ಥೆಯಿಂದ ಒಡೆಯುತ್ತಿರುವ ಕುಟುಂಬವನ್ನು ತಡೆಯಲು ಮಾನವೀಯತೆಯ ಮನವರಿಕೆ ಮಾಡಿಸಲು ಈ ರೀತಿಯ ಜೀವನ ವ್ಯವಸ್ಥೆ ಬೇಕು.

ಮಾನವೀಯ ಚಿಂತನಧಾರೆಯ ಇತಿಹಾಸದಲ್ಲಿ ಬುದ್ಧಿವಂತಿಕೆಯಿಂದ ಕೂಡಿದ, ಉದಾತ್ತ ನಿಯಮಾವಳಿಯು ಇದಕ್ಕಿಂತ ಬೇರೆಯಿಲ್ಲ. 'ಎನ್‌ಸೈಕ್ಲೋಫೀಡಿಯಾ ಆಫ್ ರಿಲಿಜನ್ ಅಂಡ್ ಇಥಿಕ್ಸ್' ಎಂಬ ಗ್ರಂಥದಲ್ಲಿ ಆಶ್ರಮಗಳ ವರ್ಣನೆ ಮಾಡುತ್ತ ಸುಪ್ರಸಿದ್ಧ ವಿದ್ವಾಂಸ ಡ್ಯೂಸೆನ್‌ರವರು ಹೀಗೆ ಬರೆದಿದ್ದಾರೆ: "ಮನು ಇಲ್ಲವೇ ಹಿಂದೂ ಶಾಸ್ತ್ರಗಳ ಮೂಲಕ ನೀಡಲಾದ ಈ ಉಪಪತ್ತಿ ಮತ್ತು ಸಿದ್ಧಾಂತಗಳನ್ನು ಎಷ್ಟರ ಮಟ್ಟಿಗೆ ವ್ಯವಹಾರಕ್ಕೆ ತರಬಲ್ಲೆವೊ ಹೇಳುವಂತಿಲ್ಲ; ಆದರೆ, ಮಾನವ ಜಾತಿಯ ಇತಿಹಾಸದಲ್ಲಿ ಇಷ್ಟೊಂದು ಜ್ವಲಂತವೂ ಉದಾತ್ತವೂ ಆದ ಸಿದ್ಧಾಂತಗಳು ಬೇರೆ ಇಲ್ಲವೆಂದು ಮುಕ್ತಕಂಠದಿಂದ ಹೇಳಬೇಕು." ತನ್ನ 'ಫಿಲಾಸಫಿ ಆಫ್ ಉಪನಿಷತ್ಸ್' ಗ್ರಂಥದಲ್ಲಿ ಕೂಡ ಅವರು ತಮ್ಮ ಅಭಿವ್ರಾಯವನ್ನು ಪುನರುಚ್ಚರಿಸಿದ್ದಾರೆ.

ಇಂದಿನ ಪ್ರಪಂಚ ದ್ರುತಗತಿಯಿಂದ ಬದಲುತ್ತಿದೆ ಹೊಸ ಹೊಸ ವಿಚಾರಗಳೂ ಪ್ರತಿಪಾದಿತವಾಗುತ್ತಿವೆ. ಹೊಸ ಹೊಸ ಜೀವನ ದರ್ಶನಗಳೂ ನಮ್ಮ ಮುಂದೆ ಬರುತ್ತಿವೆ. ವಿಜ್ಞಾನದ ಪ್ರಭಾವದಿಂದ ಆಧುನಿಕ ಚಿಂತನೆಯ ರೂಪವಾದರೂ ಬದಲಾಗಿದೆ ಅರ್ಥಯುಗದಲ್ಲಿ ಜೀವನವನ್ನು ಬದಲಿಸಿದೆ ಜೀವನದ ಮೇಲೆ ಒತ್ತಡವನ್ನೂ ಹೇರಿದೆ. ಮಾನವನು ತನ್ನ ದಾರಿಯನ್ನು ಮರೆತಿದ್ದಾನೆ; ತಾನು ಸೋತಿದ್ದೇನೆಂದು ತಿಳಿಯುತಿದ್ದಾನೆ.

ನಾವು ರಾಷ್ಟ್ರೀಯ ಯೋಜನೆ ಮತ್ತು ಸಂತಾನ ನಿಯಂತ್ರಣಗಳನ್ನು ಸ್ವೀಕರಿಸಿ ಈ ಪ್ರಶ್ನೆಯನ್ನು ಉತ್ತರಿಸುವ ಪ್ರಯತ್ನ ಮಾಡುತ್ತೇವೆ. ಆದರೆ, ಹೊಸ ವ್ಯವಸ್ಥೆಯು ಆಶ್ರಮ ವ್ಯವಸ್ಥೆಯಿಂದ ದೂರ ಪೋಡುತ್ತ ಇದೆ. ಈ ಹೊಸ ವ್ಯವಸ್ಥೆಯು ಮಾನವತೆಯ ಸಮಸ್ಯೆಗಳನ್ನು ಬಗೆ ಹರಿಸೀತೆಂದು ನಂಬುವುದು ಸಾಧ್ಯವಿಲ್ಲ.

ಆಶ್ರಮ ವ್ಯವಸ್ಥೆಯು ಉಪಯುಕ್ತವೂ ಸಂಗತವೂ ಸಮೀಚೀನವೂ ಉದಾತ್ತವೂ ಆಗಿದೆ, ಪ್ರತಿಯೊಂದು ಆಶ್ರಮಕ್ಕೂ ತನ್ನದೇ ಆದ ಸುಂದರ ಕರ್ತವ್ಯವಿದೆ; ಒಂದು ಕುಟುಂಬವನ್ನು ಮಾತ್ರವಲ್ಲ ಇಡಿಯ ಸಮಾಜವನ್ನು ಸುಂದರವಾಗಿ ಸಾಗಿಸುವ ಶಕ್ತಿ ಅದಕ್ಕಿದೆ. ಮೋಕ್ಷವನ್ನು ಬಯಸುವವನ್ನು ಹಿಂದು ಇರಲಿ ಇನ್ನಾರೇ ಇರಲಿ, ವಿಶ್ವದತ್ತ ತನ್ನ ಕರ್ತವ್ಯಗಳನ್ನು ಮಾಡದೆ ಸುಮ್ಮನಿರುವುದು ಸಾಧ್ಯವಿಲ್ಲ. ಸೇವಾ ಭಾವನೆಯಲ್ಲಿರುವ ಋಜುತ್ವ ಎಲ್ಲರನ್ನೂ ಪ್ರಭಾವಿತಗೊಳಿಸುತ್ತದೆ. ವ್ಯಷ್ಟಿಯ ಆತ್ಮವನ್ನು ಸಮಷ್ಟಿಯ ಆತ್ಮವನ್ನಾಗಿಸುವ ಅದ್ಭುತ ಶಕ್ತಿ ಅದರಲ್ಲಿದೆ.

ವಿಖ್ಯಾತ ಗ್ರಂಥ ಕರ್ತರಾದ

ಶ್ರೀ ಎ. ಎಸ್. ಪಂಚಾಪಕೇಶ ಅಯ್ಯರ್

ಎಂ. ಎ., ಐ. ಸಿ. ಯಸ್., ಬಾರ್-ಎಟ್-ಲಾ., ಎಫ್. ಆರ್. ಎಸ್. ಎಲ್.

ಇವರು ಇಂಗ್ಲೀಷಿನಲ್ಲಿ ಬರೆದ—

TALES OF IND

ಕಥಾವಳಿಯ ಕನ್ನಡ ಅನುವಾದ

ಭಾರತೀಯ ಕಥೆಗಳು

ಚಿಕ್ಕ ಚೊಕ್ಕ ೧೫೨ ಕಥೆಗಳು ಬೆಲೆ ರೂ. 1—12—0

ಅನುವಾದಕರು: ದಿ। ಕೊರಡ್ಕಲ್ ಶ್ರೀನಿವಾಸ ರಾವ್,

ಸಿಗುವ ಸ್ಥಳ:—

ನವಭಾರತ ಪುಸ್ತಕ ಭಂಡಾರ, ಉಡುಪಿ.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. S. 295/1961

ಪ್ರಮೋದ ಕುಮಾರ್ (minor by next friend) ರತ್ನವರ್ಮರಾಜ – ವಾದಿ

ಮತ್ತು

ರಾಮಣ್ಣ ಶೆಟ್ಟಿ (Since diceased ಕೂಡಾ — ಪ್ರತಿವಾದಿರು

ಇವರೊಳಗೆ

ಉಡ್ಪಿ ತಾಲ್ಕು ಕೆಂಜೂರು ಗ್ರಾಮದಲ್ಲಿರುವ ಸದ್ರಿ ರಾಮಣ್ಣ ಶೆಟ್ರ ಮಕ್ಕಳು ಸದ್ರಿ ವ್ಯಾಜ್ಯದ 6ನೇ ಪ್ರತಿವಾದಿ ಮೂಕಮ್ಮ ಶೆಟ್ಟಿ ಮತ್ತು 8ನೇ ಪ್ರತಿವಾದಿ ಶೇಖರ ಶೆಟ್ಟಿ—ಇವರಿಗೆ ಈ ಮೂಲಕ ತಿಳಿಯಪಡಿಸುವುದು. ದಾವಾ ಮೂಲ ಗೇಣಬಾಕಿ ವಸೂಲಿ ಕೇಳಿ ನಿಮ್ಮ ಮೇಲೆ ಕೂಡಾ ವಾದಿ ಮಾಡಿದ ವ್ಯಾಜ್ಯತಾ 12—7—62ಕ್ಕೆ ಇಟ್ಟಿದೆ. ಆ ಕುರಿತು ನಿಮ್ಮ ಆಕ್ಷೇಪ ಏನಾದ್ರು ಇದ್ರೆ, ನೀವು ಸದ್ರಿ ದಿವಸ ಬೆಳಿಗ್ಗೆ 11 ಗಂಟೆಗೆ ಕೋರ್ಟು ಮುಂದೆ ಹಾಜೂರಾಗಿ ಉದಹರಿಸಿಕೊಳ್ಳತಕ್ಕದ್ದು, ತಪ್ಪಿದ್ರೆ ನಿಮ್ಮನ್ನು ಶಿವ್ಯಾ ಮಾಡಲಾದೀತು.

C. R. KALMADY
Advocate for Plaintiff.

Udipi, S. K. 2—7—62

ನವಯುಗ

ವರುಷ	ಉಡುಪಿ	ವಾರ
೪೧	೫-೭-೬೨	೪೯

ಭಾಗ್ಯದ ಬಾಗಿಲು

ಶ್ರೀ ನಿಜಲಿಂಗಪ್ಪನವರು ಕರ್ನಾಟಕದ ಧುರೀಣತ್ವವನ್ನು ಒಮ್ಮತದಿಂದ ವಹಿಸಿಕೊಳ್ಳುವಂತಾದುದು ನಮ್ಮ ಸುದೈವವೆನ್ನಬೇಕು. ಜತ್ತಿ ಗುಂಪಿನವರಾದರೂ ತಮ್ಮ ಹಿಂದಿನ ಪೂರ್ವಗ್ರಹವನ್ನೆಲ್ಲ ಬಿಟ್ಟುಕೊಟ್ಟು ನಿಜಲಿಂಗಪ್ಪನವರಿಗೆ ಬೆಂಬಲವಾಗಿ ನಿಲ್ಲಲು ನಿರ್ಧಾರ ಮಾಡಿದುದು ಸರ್ವತ್ರ ಪ್ರಶಂಸೆಗೆ ದಾರಿ ಮಾಡಿ ಕೊಟ್ಟಿದೆ. ಈ ದಿಸೆಯಲ್ಲಿ ಕೇಂದ್ರದ ವಂಚ್ಚರ ಪ್ರಭಾವವೂ ಬಿದ್ದಿರಬಹುದು. ಅದೇನೇ ಇರಲಿ, ರಾಜ್ಯದ ಹಿತವನ್ನು ಗಮನಿಸುವಾಗ ಈಗ ಅನುಸರಿಸಿದ ಮಾರ್ಗವು ನಿಜವಾಗಿಯೂ ಶ್ರೇಷ್ಠತಮವಾಗಿದೆಯೆಂದು ಯಾರಾದರೂ ಹೇಳಬಹುದು. ನಿಜಲಿಂಗಪ್ಪನವರು ಗುಂಪಿನ ಮನೋಭಾವವನ್ನು ದೂರೀಕರಿಸಿ ಎಲ್ಲ ಕಾಂಗ್ರೆಸ್ ಸದಸ್ಯರನ್ನು ಸರಿದಾರಿಯಲ್ಲಿ ಮುಂದೆ ಒಯ್ಯುವ ಜವಾಬ್ದಾರಿಯನ್ನು ಹೊತ್ತಿದ್ದಾರೆ; ಈ ದಿಸೆಯಲ್ಲಿ ಅವರು ಕಾರ್ಯವನ್ನೂ ಮಾಡಿದ್ದಾರೆ. ಜತ್ತಿ ಗುಂಪಿನವರೆಂದು ಹೇಳಲಾಗುವವರಲ್ಲಿ ಯಾರನ್ನಾದರೂ ಮಂತ್ರಿಯನ್ನಾಗಿ ಆಯ್ದುಕೊಳ್ಳುವ ವಿಷಯದಲ್ಲಿ ಅವರು ಹೇಳಿದ ಮಾತುಗಳು ಸ್ಮರಣೀಯವಿರುತ್ತವೆ: ಜತ್ತಿಯವರಿಗಾಗಲಿ ಮತ್ತಾರಿಗೇನೇ ಆಗಲಿ, ಮಂತ್ರಿ ಮಂಡಳಿಯಲ್ಲಿ ಸ್ಥಾನವೀಯುವುದಾದರೆ, ಅದು ಆ ಗುಂಪಿಗೆ ನೀಡುವ ಪ್ರಾತಿನಿಧ್ಯವಲ್ಲ; ಗುಂಪುಗಳಿಗೆ ಪ್ರಾತಿನಿಧ್ಯ ನೀಡುತ್ತ ಹೋದರೆ, ಅದು ಮುಗಿಯದ ಕಥೆಯೊದೀತು ಎಂದವರು ಸ್ಪಷ್ಟಪಡಿಸಿದ್ದಾರೆ. ಎಂದರೆ, ಕಾಂಗ್ರೆಸ್ ಎಂದಿಗೂ ಒಂದೇ ಆಗಿರಬೇಕು; ಅದರ ಶಕ್ತಿಯು ಗುಂಪುಗಾರಿಕೆಯಲ್ಲಿ ನಿರರ್ಥಕವಾಗಿಬಾರದು ಎಂಬುದು ಅವರ ಆಶಯ. ರಾಜ್ಯದ ಮುಂದೆ ನೂರಾರು ಸಮಸ್ಯೆಗಳು ತಾಂಡವವಾಡುತ್ತಿರುವಾಗ ಆಡಳಿತೆಯ ಪಕ್ಷವು ಆಂತರಿಕವಾಗಿ ಹೋರಾಡುತ್ತ ಕುಳಿತರೆ, ಮುಂದೆ ಧಕ್ಕೆ ತಟ್ಟುವುದು ಖಂಡಿತವೆಂಬುದನ್ನು ಪಕ್ಷ ಸಂಘಟನೆಯಲ್ಲಿ ನುರಿತ ನಿಜಲಿಂಗಪ್ಪನವರು ತಿಳಿದಿರುವುದು ನ್ಯಾಯ; ಮತ್ತು ಸಂಗತವೇ. ಅಂತೆಯೇ ತಮ್ಮ ಹೊಸ ಮಂತ್ರಿಮಂಡಳಿಯಲ್ಲಿ ಸಮರ್ಥ ವ್ಯಕ್ತಿಗಳಿಗೆ ಸ್ಥಾನವನ್ನು ಕಲ್ಪಿಸಿಕೊಡುವ ಪ್ರಯತ್ನ ಮಾಡಿದ್ದಾರೆ; ಅದರಲ್ಲಿ ಬಹ್ಯಂಶ ಕೃತಾರ್ಥರೂ ಆಗಿದ್ದಾರೆ.

ನಿಜಲಿಂಗಪ್ಪನವರು ಮೊದಲಿಗೆ ೧೪ ಜನ ಮಂತ್ರಿ ಮತ್ತು ೧೦ ಜನ ಉಪ ಮಂತ್ರಿಗಳು ಕೂಡಿದ ಸಚಿವ ಸಂಪುಟವನ್ನು ರಚಿಸುವುದಾಗಿ ಹೇಳಿದ್ದರು. ಆದರೆ, ಈಗ ಮಂತ್ರಿಗಳ ಸಂಖ್ಯೆಯು ೧೫ಕ್ಕೆ ಏರಿದ್ದು ಮಾತ್ರವಲ್ಲದೆ ಇಬ್ಬರು ಪಾರ್ಲಿಮೆಂಟರಿ ಕಾರ್ಯದರ್ಶಿಯವರ ನೇಮಕವೂ ಆಗಿದೆ. ಎಂದರೆ, ೨೭ ಜನರು ಮಂತ್ರಿಗಳು ಎಂದಾಯಿತು. ನಾವು ಹಿಂದಿನಿಂದಲೂ ಇಂತಹ ದೊಡ್ಡ ಸಂಖ್ಯೆಯ ಮಂತ್ರಿಗಳಿರುವ ಸಂಪುಟಗಳನ್ನು ವಿರೋಧಿಸುತ್ತ ಬಂದಿದ್ದೇವೆ; ಎ. ಜಿ. ಆರ್. ಸ [illegible]

ಆ ಸಂಖ್ಯೆಯ ಮೂರು ಪಟ್ಟು ಮಂತ್ರಿಗಳ ನೇಮಕವೀಗ ಆಗಿರುತ್ತದೆ. ಆದರೆ, ವಿಸ್ತೃತವಾದ ಸಚಿವ ಸಂಪುಟ ರಚನೆಯು ಈ ಬಾರಿಯ ಒಂದು ಸೋಂಕು ರೋಗವಾಗಿದೆ. ಒಂದೆರಡು ರಾಜ್ಯಗಳು ಇದಕ್ಕೆ ಅಪವಾದವಾಗಿ ನಿಂತವಾದರೂ ಒಟ್ಟಿನಲ್ಲಿ ವೆನ್ನ ಬೇಕು. ಈ ಪ್ರಶ್ನೆಯನ್ನು ಇನ್ನೀಗ ಕೆದಕಿ ಪ್ರಯೋಜನವಿಲ್ಲ. ನೇಮಕವಾದ ಮಂತ್ರಿಗಳಾದರೂ ಪ್ರಾಮಾಣಿಕವಾಗಿ ತಮ್ಮ ಕರ್ತವ್ಯಗಳನ್ನೆ ನಿರ್ವಹಿಸಿ, ಜನತೆಯ ಒಲವನ್ನು ಗಳಿಸಿಕೊಳ್ಳಬೇಕಾದುದಷ್ಟೇ ಅತ್ಯವಶ್ಯವಾದುದು.

ಮಂತ್ರಿಗಳ ಖಾತೆಯನ್ನು ಹಂಚುವಾಗ ಶ್ರೀ ಜತ್ತಿಯವರಿಗೆ ಹಣಕಾಸಿನಂತಹ ಮಹತ್ವದ ಶಾಖೆಯೇ ಬಂದಿರುತ್ತದೆ. ಇದನ್ನು ನಾವು ಕಡೆಗಣಿಸುವಂತಿಲ್ಲ. ಮಾಜಿ ಅರ್ಥ ಮಂತ್ರಿ ಶ್ರೀ ಮರಿಯಪ್ಪನವರು ಚಾಣಾಕ್ಷತೆಯಿಂದ ನೋಡಿಕೊಂಡು ಬಂದಿರುವ ರಾಜ್ಯದ ಬೆನ್ನೆಲುಬಿನಂತಿರುವ ಈ ಶಾಖೆಯನ್ನು ಶ್ರೀ ಜತ್ತಿಯವರಿಂದು ನಿರ್ವಹಿಸಬೇಕಾಗಿದೆ. ಸ್ವಯಂ ಬುದ್ಧಿವಂತರಾದ ಜತ್ತಿಯವರು ಈ ಕಾರ್ಯದಲ್ಲಿ ಕೃತಕೃತ್ಯರಾಗುವರೆಂದು ಆತಿಸಬಹುದಾಗಿದೆ. ನಿಜಲಿಂಗಪ್ಪನವರಾದರೂ ಜತ್ತಿಯವರಿಗೆ ಇಂತಹ ಆತ್ಯಮೂಲ್ಯ ಶಾಖೆಯನ್ನು ಕೊಡವೂಡಿದುದರಲ್ಲಿಯೂ ರಹಸ್ಯವಿದ್ದಿರಬಹುದು; ತನ್ನ ನಿರ್ಲಿಪ್ತತಾಧೋರಣೆಯ ಪ್ರಕಟಣೆಯಿದ್ದಿರಬಹುದು. ಮೊದಲನೆಯ ಸಾರ್ವತ್ರಿಕ ಚುನಾವಣಾನಂತರದಲ್ಲಿ ಕಾಣಿಸಿಕೊಂಡ ಮೈಸೂರು ರಾಜಕೀಯದ ಅಸ್ಥಿರತೆಯು ಇನ್ನಾದರೂ ದೂರವಾಗುವುದೆಂದು ನಾಗರಿಕರು ನಿರೀಕ್ಷಿಸುತ್ತಾರೆ. ನಿಜಲಿಂಗಪ್ಪನವರು ಈ ಮೂರನೆಯ ಮಂತ್ರಿ ಮಂಡಳದಲ್ಲಿ ಹೊಸ ರಕ್ತದವರಿಗೂ ಅವಕಾಶವನ್ನು ಒದಗಿಸಿಕೊಟ್ಟುದು ಇತರರಿಗೆ ಮಾರ್ಗದರ್ಶಕವೆನ್ನಬಹುದು. ಮೂರನೆಯ ಯೋಜನೆಯ ಮಹತ್ವಾಕಾಂಕ್ಷೆಯನ್ನು ಸಾಕಾರವಾಗಿ ಕಾರ್ಯಕೃತ ಮಾಡಬೇಕಾದರೆ, ಸರಕಾರದಲ್ಲಿ ಸ್ಥಿರತೆಯಿರುವುದು ಅತಿ ಅಗತ್ಯ ಅಂತಹ ಸ್ಥಿರತೆಯು ಸದ್ಯ ಕರ್ನಾಟಕದಲ್ಲಿ ಸ್ಥಾಪನೆಯಾಯಿತು ಎನ್ನಬಹುದು. ಇದು ವರೆಗೆ ಆಡಳಿತ ಪಕ್ಷದ ಆಗ್ರೇಸರರು ತಮ್ಮ ತಮ್ಮ ಬಲಗಳನ್ನು ಹೆಚ್ಚಿಸುವುದರಲ್ಲಿಯೇ ನಿರತರಾಗಿದ್ದರೆಂಬುದು ಅನುಭವ ವೇದ್ಯವಾದುದು. ಈಗ ಈ ಪಕ್ಷ ಕಟ್ಟುವುದರಲ್ಲಿ ಆಸಕ್ತರಾಗದೆ ಕರ್ನಾಟಕದ ಭಾಗ್ಯದ ಬಾಗಿಲು ತೆರೆಯುವುದರಲ್ಲಿ ಉದ್ಯುಕ್ತರಾಗಲಿ ಎಂದು ಹಾರೈಸುತ್ತೇವೆ.

ಮುರಾರ್ಜಿ ದೇಸಾಯಿ

ಈ ಮೊದಲಿನ ವರ್ಷಗಳಂತೆಯೇ ಭಾರತದ ಅರ್ಥ ಮಂತ್ರಿಯವರು ದೇಶದ ಯೋಜನೆಗಳನ್ನು ಯಶಸ್ವಿಯಾಗಿ ಪೂರೈಸಲು ವಿದೇಶೀ ಸಹಾಯವನ್ನು ಪಡೆಯುವ ಉದ್ದೇಶದಿಂದ ಹೊರ ಹೊರಟಿದ್ದಾರೆ. ಹಿಂದಿನ ವರ್ಷದಲ್ಲಿ ಮುರಾರ್ಜಿ ದೇಸಾಯಿಯವರಿಗೆ ಹೆಚ್ಚಿನೆಡೆ ಬೇಷ್ಟಗಿನ ಸ್ವಾಗತವು ಲಭಿಸಿತ್ತು; ನೆಹರುರವರ ಉತ್ತರಾಧಿಕಾರಿಯೆಂಬ ಗೌರವ ಭಾವನೆಯೂ ಅವರ ಮೇಲೆ ಉಂಟಾಗಿತ್ತು; ಅವರು [illegible]

ಕರ್ನಾಟಕದ

ಹೊಸ ಮಂತ್ರಿಗಳ ಸಂಕ್ಷಿಪ್ತ ಪರಿಚಯ

ಕರ್ನಾಟಕದ ಮುಖ್ಯಮಂತ್ರಿ ನಿಜಲಿಂಗಪ್ಪನವರು ತಮ್ಮ ಮಂತ್ರಿಮಂಡಳಿಯ ವಿಸ್ತಾರದಲ್ಲಿ ತೊಡಗಿದ್ದು ಒಂದು ಹೆಜ್ಜೆ ಮುಂದಿಟ್ಟಿದ್ದಾರೆ. ಮಾಜಿ ಮುಖ್ಯಮಂತ್ರಿ ಜತ್ತಿಯವರನ್ನೊಳಗೊಂಡ ಐವರನ್ನು ಮಂತ್ರಿಗಳೆಂದು ಆಯ್ದುಕೊಂಡಿದ್ದಾರೆ. ಇದರಿಂದ ಇಡಿಯ ಸಂಪುಟದಲ್ಲಿ ೧೫ ಮಂತ್ರಿಗಳು ಆದಂತಾಯಿತು. ೮ ಉಪ ಮಂತ್ರಿಗಳನ್ನೂ ೨ ಪಾರ್ಲಿಮೆಂಟರಿ ಕಾರ್ಯದರ್ಶಿಯವರನ್ನೂ ಇಷ್ಟರಲ್ಲಿಯೇ ಆರಿಸಿಕೊಂಡಿದ್ದಾರೆ.

ಸರ್ದಲ್ಲಿ ಪರಿಸ್ಥಿತಿಯು ಬಹಳಷ್ಟು ಬಿಗಡಾಯಿಸಿದೆ. ನಮಗೆ ಸಹಾಯ ನೀಡುತ್ತಿದ್ದ, ಮುಂದಕ್ಕೂ ನೀಡಬೇಕಾದ ಹಿರಿಯ ರಾಷ್ಟ್ರ ಅಮೆರಿಕೆಯು ಗೋವಾ ವಿಮೋಚನೆ, ಕಾಶ್ಮೀರ ಸಂಬಂಧಿ ಪ್ರಸ್ತಾಪದ ಸೋಲು ಇವೇ ಮೊದಲಾದ ಕಾರಣದಿಂದ ರೊಚ್ಚಿಗೇರಿದೆ. ಅದರ ನಡುವೆ ರಕ್ಷಣ ವೆಗ್ ವಿಮಾನಗಳ ಪ್ರಶ್ನೆಯಂತೂ ಅಮೇರಿಕನ್ ನಾಯಕರಿಗೆ ನಿದ್ರಾಭಂಗ ಮಾಡುತ್ತಿದೆ ಅಮೆರಿಕೆಯ ಆರ್ಥಿಕ ಸಹಾಯವನ್ನು ಪಡೆಯಲು ಉತ್ಸುಕವಾದರೂ ಅದರ ಮುಂದೆ ತನ್ನ ತನವನ್ನು ಕಳೆದುಕೊಂಡು ತಲೆ ತಗ್ಗಿಸಲು ಭಾರತವು ತಯಾರಿಲ್ಲವಾಗಿದೆ. ಅಮೆರಿಕೆಯನ್ನು ಹಿಂಬಾಲಿಸುವ ಬ್ರಿಟನ್ನಿನಿಂದಲೂ ಪ್ರೋತ್ಸಾಹ ಹೇಗೆ ದೊರೆಯುವುದೆಂದು ನಂಬುವುದು ಕಷ್ಟ, ಅಷ್ಟು ಮಾತ್ರವಲ್ಲದೆ ಐರೋಪ್ಯ ಸಾಮಾನ್ಯ ಮಾರುಕಟ್ಟೆಯನ್ನು ಅದು ಸೇರಿಕೊಂಡಿತೆಂದರೆ ಭಾರತಕ್ಕೆ ಅಮಿತ ನಷ್ಟ. ಇಂತಹ ಬಿಗಡಾಯ ಮೂಸ ಪರಿಸ್ಥಿತಿಯಲ್ಲಿ ಹೊರಟಿದ್ದಾರೆ, ನಮ್ಮ ಮುರಾರ್ಜಿ. ಅವರು ಭಾರತದ ನೀತಿಯನ್ನು ಸರಿಯಾಗಿ ತಿಳಿದುಕೊಂಡವರು ಎಂತಲೇ ಭಾರತವು ಪಾಶ್ಚಾತ್ಯ ಬಣಗಳಿಗೆ ವಿರೋಧಿಯಲ್ಲವೆಂಬುದನ್ನು ಪ್ರತಿಬಿಂಬಿಸಬಲ್ಲರು; ಅದರ ಜತೆಗೆ ಸ್ವತಂತ್ರ ಸತ್ತೆ ಭಾರತವು ತನ್ನ ತನವನ್ನು ಕಳೆದುಕೊಳ್ಳಲಾರದು ಎಂಬುದನ್ನು ಸ್ಪಷ್ಟಪಡಿಸಲು ಸಮರ್ಥರು. ವಿದೇಶೀಯ ಸಹಾಯವನ್ನು ಪಡೆಯಲು ಹೊರಟ ಅವರು ಹಲವಾರು ಪ್ರಶ್ನೆಗಳಿಗೆ ಉತ್ತರಕೊಡಬೇಕಾಗುವುದು, ಹಲವರನ್ನು ಮೆಚ್ಚಿಸಬೇಕಾಗುವುದು. ಯಾವ ಬಣಗಳಿಗೂ ಸೇರದೆ ತಟಸ್ಥವಾಗಿದ್ದುಕೊಂಡು ತನ್ನ ಪ್ರಗತಿಯನ್ನು ಸಾಧಿಸಲು ಹೆಣಗುತ್ತಿರುವ ಭಾರತದ ಸುನಾರಚನೆಯಲ್ಲಿ ಹೆಚ್ಚಿನ ರಾಷ್ಟ್ರಗಳಿಗೆ ಆಸಕ್ತಿಯಿದ್ದರೂ ಕೆಲವೊಮ್ಮೆ ಅವು ಮೀನ ಮೇಷನೆಣಿಸುತ್ತವೆ. ಆದುದರಿಂದ ಮುರಾರ್ಜಿಯವರು ಅಂತಹರ ಶಂಕೆಯನ್ನು ದೂರವಾಡಬೇಕು; ಭಾರತದ ನಿರ್ಲಿಪ್ತತೆಯ ನೀತಿಯನ್ನು ಮುಂದಟ್ಟುಮಾಡಬೇಕು; ಸಮಾಜವಾದ ಮಾದರಿಯ ಕಲ್ಯಾಣ ರಾಷ್ಟ್ರ ಕಟ್ಟುವ ಆರ್ಥಿಕ ನೀತಿಯನ್ನು ವಿವೇಚಿಸಬೇಕು. ದೇಸಾಯಿಯವರ ವಿದೇಶ ಯಾತ್ರೆಯು ವಿಘ್ನಭಾದೆಗಳನ್ನು ಎದುರಿಸಬೇಕಾಗಿ ಬಂದರೂ ಯಶಸ್ವಿಯಾಗುವುದೆಂದು ನಂ[illegible]

ಬಿ. ಡಿ. ಜತ್ತಿ

ನಿಜಲಿಂಗಪ್ಪನವರ ಪ್ರತಿಸ್ಪರ್ಧಿಯೆನಿಸಿದ ಮಾಜಿ ಮುಖ್ಯ ಮಂತ್ರಿ ಜತ್ತಿಯವರು ಸಂಪುಟದಲ್ಲಿ ಸೇರಿರುವುದು ಅಲ್ಲದೆ ಅವರಿಗೆ ಅರ್ಥ ಶಾಖೆಯನ್ನು ಇತ್ತುದು ಆಶಾದಾಯಕವಾಗಿದೆ. ಬಿಜಾಪುರದ ಜಮಖಂಡಿ ತಾಲೂಕಿನಲ್ಲಿ ೧೯೧೨ರಲ್ಲಿ ಹುಟ್ಟಿದ ಇವರು ೧೯೪೦ರಲ್ಲಿ ವಕೀಲಿ ವೃತ್ತಿಯಲ್ಲಿ ತೊಡಗಿದರು. ಜಮಖಂಡಿ ಸಂಸ್ಥಾನದ ಮುಖ್ಯ ಮಂತ್ರಿಯಾಗಿ ಮುಂಬಯಿಯ ಮುಖ್ಯ ಮಂತ್ರಿಯಾಗಿದ್ದ ಬಿ. ಜಿ. ಖೇರರ ಆಪ್ತ ಕಾರ್ಯದರ್ಶಿಯಾಗಿ, ಮುಂಬಯಿಯ ಉಪ ಮಂತ್ರಿಯಾಗಿ ಪ್ರಶಾಸನದಲ್ಲಿ ನುರಿತವರು. ಕಾಂಗ್ರೆಸ್ಸಿನ ವಿವಿಧ ಸಮಿತಿಗಳ ವಿಧಾನ ಸಭೆಯ ಸದಸ್ಯರೂ ಆದವರು. ಕರ್ನಾಟಕದ ಭೂಸುಧಾರಣಾ ಸಮಿತಿಯ ನೇತಾರರಾಗಿ ಸಲ್ಲಿಸಿದ ಸೇವೆಯು ಅಪೂರ್ವವಾದುದು. ೧೯೫೮ರಲ್ಲಿ ರಾಜ್ಯದ ಮುಖ್ಯ ಮಂತ್ರಿಯಾಗಿ ಮುಳ್ಳಿನ ದಾರಿಯಲ್ಲೇ ನಡೆದು ಗಡಿ ಮುಟ್ಟಿದ ಚಾಣಾಕ್ಷರಿವರು.

ಜೆ. ದೇವರಾಜ ಅರಸ್

ತೃತೀಯ ಸಾರ್ವತ್ರಿಕ ಚುನಾವಣಾನಂತರ ನಿಜಲಿಂಗಪ್ಪ—ಜತ್ತಿಯವರ ಗುಂಪುಗಳ ನಡುವೆ ಸಾಮರಸ್ಯವನ್ನುಂಟು ಮಾಡಲು ನಾಯಕತ್ವ ವಹಿಸಿದವರಲ್ಲಿ ಡಿ. ದೇವರಾಜ ಅರಸರು ಒಬ್ಬರು. ಸುಮಾರು ೫೭ ವರ್ಷವ ಅರಸರು ಬಿ. ಎಸ್‌ಸಿ. ಪದವೀಧರರು. ಮೈಸೂರಿನ ಪ್ರಜಾಪ್ರತಿನಿಧಿ ಸಭೆ, ಲೆಜಿಸ್ಲೇಟಿವ್ ಅಸೆಂಬ್ಲಿಯ ಸದಸ್ಯರಾಗಿದ್ದು ೧೯೫೭ರಿಂದ ಕರ್ನಾಟಕದ ವಿಧಾನ ಸಭೆಯ ಪ್ರಭಾವೀ ಸದಸ್ಯರಲ್ಲಿ ಒಬ್ಬರಿವರು. ಸ್ವಭಾವಸರಳರಾದ ಅರಸರು ಪ್ರಗತಿಪರ ವಿಚಾರಶೀಲರು. ವಿಧಾನಸಭಾ ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿಯಾಗಿ ಎಲ್ಲರ ಪ್ರೀತ್ಯಾದರಗಳನ್ನು ಸಂಪಾದಿಸಿಕೊಂಡ ದೇವರಾಜ ಅರಸರು ಕಂಠಿ ಸಂಪುಟದಲ್ಲಿ ಸೇರದಿದ್ದರೂ ಇಂದು ಮಂತ್ರಿಯೆನಿಸಿದರು.

ರಾಮಕೃಷ್ಣ ಹೆಗಡೆ

ಉತ್ತರ ಕನ್ನಡ ಜಿಲ್ಲೆಯಲ್ಲಿ ಕಾಂಗ್ರೆಸ್ಸು ಯಶಪಟ ಹಾರಿಸುವಲ್ಲಿ ರಾಮಕೃಷ್ಣ ಹೆಗಡೆಯವರ ಪಾತ್ರ ಮಹತ್ವಪೂರ್ಣವಾದುದು. ಸುಮಾರು ೩೫ ಗಡಿಯಲ್ಲಿರುವ ಹೆಗಡೆಯವರಲ್ಲಿ ಅಸೀಮ ಶಕ್ತಿ ಉತ್ಸಾಹಗಳಿವೆ ಐದು ವರ್ಷಗಳಿಗೆ ಮೊದಲು ನಿಜಲಿಂಗಪ್ಪನವರು ಮಂತ್ರಿಮಂಡಳ ರಚಿಸಿದಾಗ ಇವರು ಉಪಮಂತ್ರಿಯಾಗಿ ತಮ್ಮ ಕರ್ತೃತ್ವ ಶಕ್ತಿಯನ್ನು ತೋರಿಸಿದ್ದಾರೆ. ೧೯೪೨ರ ಸತ್ಯಾಗ್ರಹದಲ್ಲಿಯೂ ಭಾಗವಹಿಸಿದ್ದರು. ಉತ್ತರ ಕನ್ನಡದ ಕಾಂಗ್ರೆಸ್ ಅಧ್ಯಕ್ಷರಾಗಿ ಇವರು ಈಗ ಕರ್ನಾಟಕದ ಪ್ರಾದೇಶಿಕ ಕಾಂಗ್ರೆಸ್ಸಿನ ಕಾರ್ಯದರ್ಶಿಯಾಗಿದ್ದಾರೆ. ಹೆಗಡೆಯವರಂತಹ ಹೊಸ ರಕ್ತದ ತರುಣರಿಗೆ ಪ್ರಶಾಸನದಲ್ಲಿ ಅವಕಾಶ ಕಲ್ಪಿಸಿಕೊಟ್ಟುದನ್ನು ಎಲ್ಲರೂ ಸ್ವಾಗತಿಸುತ್ತಾರೆ.

ಜೆ. ನಾರಾಯಣ ಗೌಡ

೧೯೧೦ರಲ್ಲಿ ಕೋಲಾರ ತಾಲೂಕಿನಲ್ಲಿ

ಮೈಸೂರಿನ ರಾಜಕಾರಣದಲ್ಲಿ ಹೆಸರು ಪಡೆದವರು; ಸ್ವಾತಂತ್ರ್ಯ ಸಂಗ್ರಾಮದಲ್ಲಿಯೂ ಇವರು ಮೂಡಿದಹೋರಾಟ ಪ್ರಶಂಸಾರ್ಹವಿರುವುದು. ಮೈಸೂರಿನ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಬಹು ದೀರ್ಘ ಕಾಲದಿಂದಲೂ ಇದ್ದ ಇವರು ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದರು. ರಾಗ ಕೀಯದಂತೆಯೇ ಶಿಕ್ಷಣ ಕ್ಷೇತ್ರದಲ್ಲಿಯೂ ಇವರ ಸೇವೆ ಗಣನೀಯವಾದುದು ಮೈಸೂರು ವಿಶ್ವವಿದ್ಯಾಲಯದ ಸಿನೇಟು ಮತ್ತು ಸಿಂಡಿಕೇಟುಗಳ ಸದಸ್ಯರಾಗಿದ್ದಾರೆ. ಸಹಕಾರ, ಹರಿಜನ ಕಲ್ಯಾಣ, ಗ್ರಾಮ ಮತ್ತು ಸಮಾಜ ಉದ್ಧಾರ ಮೊದಲಾದ ಹತ್ತು ಹಲವಾರು ಕ್ಷೇತ್ರಗಳಲ್ಲಿ ನಿರಂತರ ದುಡಿಯುತ್ತಿರುವ ನಾರಾಯಣ ಗೌಡರು ಮೈಸೂರಿನ ರಾಜಕಾರಣದ ಪ್ರತಿಷ್ಠಿತ ವ್ಯಕ್ತಿಗಳಲ್ಲಿ ಒಬ್ಬರು ಕರ್ನಾಟಕದಲ್ಲಿಯೂ ಪ್ರಭಾವೀ ಪಾತ್ರ ವಹಿಸಬಲ್ಲವರು.

ಕೆ. ಪುಟ್ಟು ಸ್ವಾಮಿ

ಮೈಸೂರು ವಿಧಾನಸಭಾ ಮತದಾರ ಕ್ಷೇತ್ರದಿಂದ ಆಯ್ಕೆಗೊಂಡ ಶ್ರೀ ಕೆ. ಪುಟ್ಟು ಸ್ವಾಮಿಯವರು ನಡು ಹರೆಯದ ಉತ್ಸಾಹಿಗಳು. ನಾಡಿನ ಹಲವು ಕ್ಷೇತ್ರಗಳಲ್ಲಿ ದುಡಿದಿದ್ದರೂ ಇವರ ಸೇವೆಯು ವಿಶೇಷವಾಗಿ ಸಂದುದು ವಿಶ್ವವಿದ್ಯಾಲಯ ಕ್ಷೇತ್ರದಲ್ಲಿ. ಶಾಸನ ಸಭಾ ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿಗಳೂ ಆಗಿದ್ದರು. ಆದರೆ ಶಿಕ್ಷಣ ಮಂತ್ರಿ ಶಾಖೆಯು ಮೊತ್ರ ಮೊಜಿ ಮುಖ್ಯ ಮಂತ್ರಿ ಕಂಠಿಯವರ ಕೈಗಳಿಗೆ ಹೋಯಿತು.

ಕರ್ನಾಟಕದ

ಮಂತ್ರಿಗಳು ಮತ್ತವರ ಶಾಖೆಗಳು

ಕರ್ನಾಟಕ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ತಮ್ಮ ಮಂತ್ರಿ ಮಂಡಳಿಯ ರಚನೆಯನ್ನು ಸೂರ್ಣಗೊಂಡಿ ವಿವಿಧ ಶಾಖೆಗಳನ್ನು ಈ ರೀತಿ ಹಂಚಿದ್ದಾರೆ:

ಮಂತ್ರಿಗಳು

ಎಸ್. ನಿಜಲಿಂಗಪ್ಪ (ಮುಖ್ಯ ಮಂತ್ರಿ) —ಯೋಜನೆ, ಸಾಮಾನ್ಯ ನಾಗರಿಕ ಆಡಳಿತ, ವಿದ್ಯುಚ್ಛಕ್ತಿ, ನೀರಾವರಿ.

ಎಸ್. ಆರ್. ಕಂಠಿ— ಶಿಕ್ಷಣ.

ಬಿ. ಡಿ. ಜತ್ತಿ—ಅರ್ಥ.

ಎಂ. ವಿ. ಕೃಷ್ಣಪ್ಪ — ಕಂದಾಯ, ಪಶು ಸಂವರ್ಧನೆ, ಪಶು ವೈದ್ಯ, ಹಾಲಿನ ಪೂರೈಯ್ಕೆ.

ಪುತ್ತೂರು ಡಿ. ಮು. ಕೋರ್ಟಿನಲ್ಲಿ

S. C. 360/1961

ಕೆ. ರಾಮಕೃಷ್ಣ ರಾವ್ —ವಾದಿ.

ಲೋಕಯ್ಯ ಪೂಜಾರಿ ಕೂಡಾ —ಪ್ರತಿವಾದಿರು.

1ನೇ ಪ್ರತಿವಾದಿ ಲೋಕಯ್ಯ ಪೂಜಾರಿ, ಬೈಪಪ್ಪ ಪೂಜಾರಿಯ ಅಳಿಯ, ಬೆಳ್ತಂಗಡಿ ತಾಲೂಕು ನಡಗ್ರಾಮದ ಪುತ್ಯ ಎಂಬಲ್ಲಿರು ವವರು ಇವರಿಗೆ ತಿಳಿಸುವುದೇನೆಂದರೆ—

ದಿ. ಹೊ. ನೋಟಿನ ದಾಖ್ಲು ವಾದಿಗೆ ಬರಬೇಕಾದ ಹಣದ ವಸೂಲಿಗೆ ದಾಖಲು ಮಾಡಿದ ಈ ದಾವೆಯು ತಾ. 12—7—1962 ಕ್ಕೆ ಇರುವುದರಿಂದ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿವಸ ಉದಯಿಸಿಕೊಳ್ಳತಕ್ಕದ್ದು. ತಪ್ಪಿದರೆ ನಿಮ್ಮ ಗೈರು ಹಾಜರಿಯಲ್ಲಿ ತೀರ್ಮಾನಿಸಲಾದೀತು.

B. Chidananda Rao,
Vakil for plaintiff

ಪುತ್ತೂರು, ತಾ 1—7—1962.

ಅಲ್ಲಲ್ಲಿಯ ಸುದ್ದಿಸಾರ

ಎ. ಬಿ. ಶೆಟ್ಟಿ ಮೆಮೋರಿಯಲ್ ಹಾಸ್ಟೆಲ್— ಮೈಸೂರಿನಲ್ಲಿರುವ ಎ. ಬಿ. ಶೆಟ್ಟಿ ಮೆಮೋರಿಯಲ್ ಹಾಸ್ಟೆಲ್ ಕಮಿಟಿಯ ಸಭೆಯು 24_6_62ರಂದು ನಿಲಯದ ಆವರಣದಲ್ಲಿ ಕಮಿಟಿಯ ಅಧ್ಯಕ್ಷ ಶ್ರೀ ಕೆ. ದೇಜು ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ನಿಲಯಕ್ಕೆ ಸ್ವಂತ ಕಟ್ಟಡ ಕಟ್ಟಲು ಮೈಸೂರು ಸರಕಾರದವರು 8 ಎಕ್ರೆ ಜಾಗ ಕೊಟ್ಟರುವುದಕ್ಕಾಗಿ ಸರಕಾರವನ್ನು ವಂದಿಸುವ ನಿರ್ಣಯ ಅಂಗೀಕೃತವಾಯಿತು. ಕಟ್ಟಡದ ಕೆಲಸವನ್ನು ಬೇಗನೆ ಪ್ರಾರಂಭಿಸಬೇಕೆಂದೂ ಆದಕ್ಕಾಗಿ ಫ್ಲೋನು, ಅಂದಾಜು ತಯಾರಿಸುವುದು ಹಾಗೂ ಹಣ ವಸೂಲಿಗಾಗಿ ಶ್ರೀಗಳಾದ ಕೆ. ದೇಜು ಶೆಟ್ಟಿ, ಎಸ್. ಬಾಲಕೃಷ್ಣ ಶೆಟ್ಟಿ, ಎಸ್. ಭೈರಪ್ಪ, ಕೆ. ಪ್ರೇಮಾನಂದ ಶೆಟ್ಟಿ ಮತ್ತು ಎ. ರಾಮಣ್ಣ (ಸಂಚಾಲಕ) ಇವರನ್ನೊಳಗೊಂಡ ಸಮಿತಿಯನ್ನು ರಚಿಸಲಾಯಿತು. ಕಟ್ಟಡಕ್ಕಾಗಿ ಮಂಗಳೂರಿನ ಬಂಟರ ಯಾನೆ ನಾಡವರ ಸಂಘದವರು ಉದಾರವಾಗಿ 25,000 ರೂ. ಗಳನ್ನು ಕೊಡುವಂತೆ ಕೇಳಿಕೊಳ್ಳತಕ್ಕದ್ದೆಂದೂ ತೀರ್ಮಾನಿಸಲಾಯಿತು.

ಲೋಕಸೇವಾ ವೃಂದದ ವಿದ್ಯಾರ್ಥಿ ವೇತನಗಳು— ಆಳಿಕೆಯ ಲೋಕ ಸೇವಾ ವೃಂದದ ಆಡಳಿತ ಸಮಿತಿಯ ಸಭೆಯೊಂದು ಕಳೆದ ತಾ. 24 ರಂದು ಮಂಗಳೂರಿನ ವಿಶ್ವಭಾನದಲ್ಲಿ ಸಂಸ್ಥೆಯ ಅಧ್ಯಕ್ಷ ಶ್ರೀ ಯಮ್. ನಾರಾಯಣ ಭಟ್ಟರ ನೇತೃತ್ವದಲ್ಲಿ ನಡೆಯಿತು. ಲೋಕಸೇವಾ ಕೇಂದ್ರದ ರಚನೆಯ ಕುರಿತಾಗಿ ಕೆಲವೊಂದು ಮುಖ್ಯವಾದ ನಿರ್ಣಯಗಳನ್ನು ಕೈಗೊಂಡ ಮೇಲೆ ಬಾಲ್ಕಿ ವಸ್ಸಂದ ವಿದ್ಯಾರ್ಥಿ ವೇತನಗಳಾಗಿ ಹೈಸ್ಕೂಲಿನ ನಪ 8ನೇ ತರಗತಿಯ ವಿದ್ಯಾರ್ಥಿಯೊಬ್ಬನಿಗೆ ರೂ. 30/—ನ್ನೂ ಇನ್ನೊಬ್ಬನಿಗೆ ಪ್ರೋತ್ಸಾಹ ರೂಪವಾಗಿ ರೂ. 10/—ನ್ನೂ ಕಾಲೇಜಿನ ಪಿ. ಯು. ವಿ. ವಿದ್ಯಾರ್ಥಿಯೊಬ್ಬನಿಗೆ ರೂ. 100/—ನ್ನೂ ಇನ್ನೊಬ್ಬನಿಗೆ ಪ್ರೋತ್ಸಾಹ ರೂಪವಾಗಿ ರೂ. 16/—ನ್ನೂ ಕೊಡುವುದೆಂದೂ ಅಲ್ಲದೆ ಎಸ್. ಕೆ. ಎ. ಸಿ. ಎಂ. ಎಸ್, ಮತ್ತು ಎಸ್. ಕೆ. ಸಿ. ಎಸ್. ಎಸ್ಎಸ್. ಎಸ್. ಎಂ ಬ ಮಂಗಳೂರಿನ ಎರಡು ಸಹಕಾರೀ ಸಂಸ್ಥೆಗಳಿಂದ ದೊರೆತ ರೂ. 50/-ರ ಮೌಲ್ಯವನ್ನು ಪೊಲಿಟಿಕ್ನಿಕ್ ಡಿಪ್ಲೊಮೊ ಕೋರ್ಸಿನ ಪ್ರಾರಂಭಿಕ ತರಗತಿಯ ವಿದ್ಯಾರ್ಥಿಯೊಬ್ಬನಿಗೂ ನೀಡುವುದೆಂದು ನಿರ್ಣಯವಾಯ್ತು.

ಈ ಮೇಲಿನ ವಿದ್ಯಾರ್ಥಿ ವೇತನಗಳ ಕುರಿತು ಪತ್ರಿಕೆಗಳಲ್ಲಿ ಪ್ರಕಟಪಡಿಸಿ, ಹಿಂದಿನ ವರ್ಷದಂತೆಯೇ ಶಿಲ್ಪ, ಶೈಕ್ಷಣಿಕ ಮಟ್ಟ, ಬಡತನ ಮತ್ತು ರೋಕಾನುಭವಗಳಕುರಿತಾಗಿ ಪರೀಕ್ಷಾ ಸಂದರ್ಶನ ನೀಡಿ ಜಾತ್ಯಾತೀತ ತಳಪಡಿಯಲ್ಲಿ ಯೋಗ್ಯ ವಿದ್ಯಾರ್ಥಿಗಳನ್ನು ಆರಿಸಿಕೊಳ್ಳುವು ದೆಂದೂತೀರ್ಮಾನಿಸಲಾಯಿತು.

ಎಕೇಡೆಮಿ ಆಫ್ ಜನರಲ್ ಎಡ್ಯುಕೇಶನಿನ ವಾರ್ಷಿಕ ಜನರಲ್ ಬೋಡಿ ಸಭೆಯು ಮಣಿಪಾಲದಲ್ಲಿ 30ನೇ ಜೂನ್ 1962ರಂದು ರಿಜಿಸ್ಟ್ರಾರ್ ಡಾ| ಟಿ. ಎಂ. ಎ. ಪೈಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಡಾ| ಪೈಯವರು ವಿಕೇಡೆಮಿಯ ಅನೇಕ ಸಂಸ್ಥೆಗಳ ಉಸಯಃಕ್ಕೆ ಚಟುವಟಿಕೆಗಳ ವಿವರ ವನ್ನೀಯುತ್ತಾ ವಿವಿಧ ಕಾಲೇಜುಗಳಲ್ಲಿ ತಮ್ಮ ಮಕ್ಕಳಿಗೆ ಉಚ್ಚ ಮತ್ತು ಉದ್ಯೋಗಪರ ಶಿಕ್ಷಣ ಸೌಕರ್ಯ ದೊರಕಿಸಿ ಕೊಂಡವರೀ ಈ ಸಂಸ್ಥೆಗಳ ದೊಡ್ಡ ಪ್ರೋತ್ಸಾಹಕರೆಂದೂ ಇದೇ ರೀತಿಯ ಸಂಸ್ಥೆಗಳನ್ನು ದೇಶದ ಬೇರೆ ಬೇರೆ ಕಡೆಗಳಲ್ಲಿ ಸ್ಥಾಪಿಸುವ ಕುರಿತು ವಿವಿಧೆಡೆಗಳಿಂದ ವಿಚಾರಣೆಗಳು ಬರುತ್ತಿವೆಯೆಂದೂ ಸರಕಾರವೇ ಎಲ್ಲವನ್ನು ಮಾಡಬೇಕೆಂದು ನಿರೀಕ್ಷಿಸಿ ನಿರಾಶೆ ಸೊಂದುವುದಕ್ಕಿಂತ ಈ ವಿಧದ ಚಟುವಟಿಕೆಗಳು ಎಲ್ಲ ಕಡೆಗಳಲ್ಲಿ ಸಾಧ್ಯವಾದರೆ ದೇಶದಲ್ಲಿ ಮಹತ್ತಾಭಿವೃದ್ಧಿಯಾಗಲಬಹುದೆಂದರು. ಜನತಾ ಸಹಕಾರದಿಂದ ಪಾಸಾಗಿ ಪ್ರಯತ್ನಗಳು ಜಯಪ್ರದ ಆದೂ ಬಹು ಬೇಗನೇ ಆಗ ಬಹುದೆಂದರು. ಎಕೇಡೆಮಿಯ ಸಹಸ್ಯರಿಗೂ ಅನೇಕ ಸಂಸ್ಥೆಗಳ ಸಹಕಾರದಿಂದ ಎಕೇಡೆಮಿಗೆ ಕೀರ್ತಿ ತಂದ ವಿದ್ಯಾರ್ಥಿಗಳಿಗೆ ಪೆತ್ತವರಿಗೂ ಹಾರ್ದಿಕ ವಂದನೆಗಳು ಸಲ್ಲಬೇಕಾದುದೆಂದರು. ವಿವಿಧ ಸಂಸ್ಥೆಗಳ ಪ್ರಗತಿಪರ ವರದಿಯನ್ನಿತ್ತು ವರ್ಷಾವಧಿಯಲ್ಲಿ ನಡೆದ ಬೇರೆ ಬೇರೆ ಚಟುವಟಿಕೆಗಳನ್ನು ವಿವರಿಸಿದರು. ಗೋವಾ ವಿಶೇಷ ರಣವಾದ ಮೇಲೆ ತಾನು ಅಲ್ಲಿಗೆ ಮೂರು ಸಲ ಸಂದರ್ಶಿಸಿ ಅಲ್ಲಿಯ ಲೆ ಗವರ್ನರ್ ಮತ್ತು ಪ್ರಮುಖ ನಾಗರಿಕರೊಡನೆ ವಿಚಾರ ವಿನಿಮಯ ನಡಾಸಿರುವುದಾಗಿಯೂ ಗೋವಾ ಮತ್ತು ಕೇಂದ್ರ ಸರಕಾರದ ಸಹಕಾರದಿಂದ ಅಲ್ಲೊಂದು ಇಂಜಿನಿಯರಿಂಗ್ ಕಾರೇಜು ಸ್ಥಾಪಿಸುವ ತಯಾರಿ ನಡೆದಿದ್ದು ಆ ಬಗ್ಗೆ ಸರಕಾರಕ್ಕೆ ಬರೆದುಕೊಳ್ಳಲಾಗಿದ್ದು ಪರಿಣಾಮವನ್ನು ನೀಕ್ಷಿಸಲಾಗುತ್ತಿದೆಯೆಂದೂ ತಿಳಿಸಿದರು. ಕೊನೆಯದಾಗಿ ಮಣಿಪಾಲದಲ್ಲಿ ವಿಶ್ವವಿದ್ಯಾನಿಲಯವೊಂದನ್ನು ಸ್ಥಾಪಿಸುವ ಕುರಿತು ಕೇಂದ್ರ ಮತ್ತು ರಾಜ್ಯ ಸರಕಾರಗಳಿಗೆ ಬರೆದು ಕೊಳ್ಳಲಾಗಿದೆಯೆಂದೂ ಹೇಳಿದರು. ಅನಂತರ ಪರಿಕೋಪಿತ ರೆಕ್ಕಪತ್ರದ ಮಂಜೂರಾತಿ ನಡೆದು ತೆರವಾಗುವ ಸಮಿತಿ ಸೆಂಬರುರ ಸ್ಥಾನಕ್ಕೆ ಬೇರೆಯವರನ್ನು ಆರಿಸುವ ಅಧಿಕಾರವನ್ನು ರಿಜಿಸ್ಟ್ರಾರರಿಗೆ ಈಯಲಾಯಿತು.

ಜೂನಿನಲ್ಲಿ ಮಳೆ ಇಲ್ಲ ಸಾಮಾನ್ಯವಾಗಿ ಜೂನ್ ತಿಂಗಳ ಪ್ರಥಮ ವಾರದಲ್ಲಿ ಮುಂಗಾಲ ಸ್ಯಾರಂಭನಾಗಿ 3ಂಗಳಾಂತ್ಯದೊಳಗೆ ಸುಮಾರು 40 ಇಂಚು ಮಳೆ ಬೀಳುವ ವಾಡಿಕೆಯಾಗಿದ್ದರೂ ಈ ವರ್ಷ ಸುಮಾರು 4.5ಇಂಚು ನುಳೆ ಮಾತ್ರ ಬಂದಿದ್ದು ಕೃಷಿಕರು ಕಂಗಾಲಾಗಿರುವರು. ವ್ಯವಸಾಯವು ಹಿಂದೆ ಬಿದ್ದಿರುವುದಲ್ಲದೆ ಪ್ರಯತ್ನಪಟ್ಟು ನೆಟ್ಟ ಗಿಡಗಳು ಒಣಗಿ ಒಡೆದು ಹೋಗುವ ಗಂಡಾಂತರ ಪರಿಸ್ಥಿತಿಯು ಈ ವರ್ಷ ಬಂದಿರುತ್ತದೆ. ಜುಲ್ಯಾ ಆರಂಭದಿಂದ ಸ್ವಲ್ಪ ಹೆಚ್ಚಾಗಿ ಮಳೆ ಬರಲಾರಂಭಿಸಿದೆ.

ಬಾರ್ಕೂರು ಬ್ಲಾಕ್ ಡೆವಲಪ್‌ಮೆಂಟ್ ಕೇಂದ್ರದ ಉದ್ಘಾಟನೆಯು

ತಾ. 30ರಂದು ದ. ಕ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಎ. ಪೈಗಳಂದ ನೆರವೇರಿ ಸಲ್ಪಟ್ಟಿತು. ಸಮಾರಂಭದ ಅಧ್ಯಕ್ಷ ಸ್ಥಾನವನ್ನು ಶ್ರೀ ಎಸ್. ಎಸ್. ಕೊಳ್ಕೆಬೈಲರು ವಹಿಸಿದ್ದರು.

ಆರಂಭದಲ್ಲಿ ಶ್ರೀ ಎಸ್. ಡಿ. ಸಾವ್ರಿಸ್ಕೈ ಎಂ. ಎಲ್. ಎ.ಗಳು ಅತಿಥಿಗಳನ್ನು ಸ್ವಾಗತಿಸುತ್ತ ಕೋಟ ಫಿಶರೀಸ್ ಲಿಮಿಟೆಡ್ ಬಾರ್ಕೂರಿನಲ್ಲಿ ತೆರೆಯುವಲ್ಲಿ ತಾಲೂಕು ಬೋರ್ಡಿನ ಒಮ್ಮತದ ನಿರ್ಣಯಕ್ಕಾಗಿ ಕೃತಜ್ಞತೆಯನ್ನು ಸೂಚಿಸಿದರು.

ತಾಲೂಕು ಬೋರ್ಡು ಅಧ್ಯಕ್ಷ ಶ್ರೀ ಮಧ್ವರಾಜ, ಎಂ. ಎಲ್. ಎ. ಗಳು ಪದವಿಯನ್ನೊಪ್ಪಿಸುತ್ತಾ ಉಡುಪಿ ತಾಲೂಕಿನ ಕೊನೆಯ ಬ್ಲಾಕ್ ಇದೆಂದೂ, ಇದಕ್ಕೆ 81 ಗ್ರಾಮಗಳು ಸೇರಿದ್ದು, ಸುಮಾರು 56,000 ಜನ ಸಂಖ್ಯೆಗೆ ಇದರ ಪ್ರಯೋಜನವು ಲಭಿಸುವುದೆಂದಿತ್ಯಾದಿ ವಿವರಿಸಿದರು.

ಶ್ರೀ ಟಿ. ಎ. ಪೈಗಳು ತಮ್ಮ ಉದ್ಘಾಟನಾ ಭಾಷಣದಲ್ಲಿ ಬ್ಲಾಕ್ ಡೆವಲಪ್‌ಮೆಂಟಿನ ಯೋಜನೆಯು ಯಶಸ್ವಿಯಾಗಬೇಕಾದರೆ ಜನತೆಯ ಸಹಕಾರದ ಅಗತ್ಯತೆಯನ್ನು ವಿವರಿಸಿ, ನಮ್ಮ ದೇಶದ ನಾಯಕರು ನಿರ್ದಿಷ್ಟಗೊಳಿಸಿರುವ ಕಾರ್ಯಕ್ರಮಗಳಲ್ಲಿ ಸಮಾಜ ವಿಕಾಸ ಯೋಜನೆಯು ಅತಿ ಮುಖ್ಯವಾದುದೆಂದೂ, ಇದರಿಂದ ಗ್ರಾಮೋದ್ಧಾರ ಪ್ರದೇಶಗಳ ಅನಶ್ಯಕತೆಗಳು ಪೂರೈಸಲು ಸಾಧ್ಯವಾದುದೆಂದೂ ವಿವರಿಸಿದರು. ಸಭೆಯ ಪರವಾಗಿ ಡಾ ಸಂಜೀವನಾಥ, ಎಂ. ಎಲ್. ಎ., ಶ್ರೀ ಬಿ. ಅ ಸಂದಕುಂದ ಜೆಡ್ಡೆ ಮತ್ತು ಶ್ರೀ ಎ. ಜೆ. ಅಲ್ಮೆಯವರು ಸೂಕಾನಾದಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಬ್ಲಾಕ್ ಡೆವಲಪ್‌ಮೆಂಟ್ ಯೋಜನೆಯು ಯಶಸ್ವಿಯಾಗುವುದೆಂದು ಬಾರಕೂರಿನ ಜನತೆ ತೋರಿಸಿರುವ ಉತ್ಸಾಹದಿಂದ ಖಚಿತವಾಗುವುದೆಂದರು.

ಬಾರ್ಕೂರು ಪಂಚಾಯತ ಅಧ್ಯಕ್ಷ ಶ್ರೀ ಯಜ್ಞ ನಾರಾಯಣ ರಾಯರು ಧನ್ಯವಾದ ಸಮರ್ಪಿಸಿದರು.

ಪುತ್ತೂರು ಡಿ. ಮು. ಕೋರ್ಟಿನಲ್ಲಿ.

S. E. P. No. 44/1962 in
S. C. 174/1961.

ಪದ್ಮನಾಭ ಭಟ್ಟ —. ಅರ್ಜದಾರ-ವಾದಿ.

ಮತ್ತು

ಕೃಷ್ಣ ಉಪಾಧ್ಯಾಯ ಶ್ರೀನಿವಾಸ ಉಪಾಧ್ಯಾಯರ ಮಗ, ಬೆಳ್ಳಂಗದಿ ತಾಲ್ಯು, ಉಜ್ರೆ ಪೇಟೆಯಲ್ಲಿರುವ ಇಂದ್ರು ಭವನ ಹೋಟೆಲಿನ ಪಿ.ಒ., ಉಜ್ರೆ. S K.—ಎದ್ರಿ ಪ್ರತಿವಾದಿ.

ಕೋರ್ಟು ಹುಕುಂ ಪ್ರಕಾರ ಮೇಲ್ಕಂಡ ಎದ್ರಿಗೆ ಈ ನೂಲಕ ತಿಳಿಸುವುದೇನೆಂದರೆ:—

ವಾದಿ ಅರ್ಜದಾರನು ನಿಂಮ ಮೇಲೆ ಪಡೆದ S. C. 174/61ನೇ ದಿಕ್ಕಿನ ಮೇಲೆ ನಡ್ಸಿದ ಮೇಲಿನ ಅಮ್ಲಜ್ಞಾರಿಯಲ್ಲಿ ನಿಮಗೆ ಕೈಪಿಡಿ ವಾರಂಟು ಕೊಟ್ಟು ಶಿವಲ್ ಜೈಲಿಗೆ ಯೂಕೆ ರವಾನಿಸಬಾರದೆಂಬುದಕ್ಕೆ ಸಬಬು ಕೊಡಬೇಕಾಗಿ ವಗ್ಗೆರೆ ಮಾಡಿದ ಮೇಲಿನ ಅಮ್ಲಜ್ಞಾರಿಯು ತಾರೀಕು 12—7—1962ಕ್ಕೆ ಇತ್ಯರ್ಥವಾದುದರಿಂದ ಆದಕ್ಕೆ ನಿಂಮನೇನಾದರೂ ಆಕ್ಷೇಪಣೆಗಳಿದ್ದಲ್ಲಿ ಆ ದಿನ ಸ್ವತಃ ಪ ವಕೀಲರ ವ್ಯಾಪಾ ಹಾಜರಾಗಿ ಉದಯಿಸಿಕೊಳ್ಳತ್ತಕ್ಕದ್ದು. ತಪ್ಪಿದ್ರೆ ನಿಂನು ಗೈರುಹಾಜರಿಯಿಂದ ತೀರ್ಮಾನಿಸಲಾದೀತು. ಎಂತ ಈ ಮೂಲಕ ತಿಳಿಸಿಯಿದೆ.

Sd /- K. Rama Bhat,
Advocate for Petitioner.

ಪುತ್ತೂರು, 27—6—1962.

ಚೆಂದಾಹಣ ಬಾಕಿ ಇರುವವರು ಆದಷ್ಟು ಬೇಗನೆ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ.

—ಮೆನೇಜರ್.

ಭಾರತೀಯ ಸತ್ಪುತ್ರ

ತಂಡನ್ ಮತ್ತು ರಾಯ್ ಆಗಲಿಹೋದರು

ಜುಲೈ ಒಂದು ಭಾರತೀಯರಿಗೆ ಕರಿಯ, ಬಹು ಕರಿಯ ದಿನವಾಗಿ ಮೂರ್ತುವುದೆಂದು ಯೂರೂಊಹಿಸಿರಲಾರರು. ಬಾಬು ಸುರುಷೋತ್ತಮದಾಸ ತೆಂಡನ್ನರು ತಮ್ಮ ಧ್ಯೇಯ ನಿಷ್ಠೆಗೆಹೆಸರಾದ ಹಿರಿಯರು; ಬಿಧನಚಂದ್ರ ರಾಯ್‌ರವರು ತಮ್ಮ ಸಮರ್ಥ ಆಡಳಿತೆಯಿಂದ ಕೀರ್ತಿಗಳಿಸಿದವರು. ಇಂತಹ ಸತ್ಪುತ್ರರಿಬ್ಬರೂ ಒಂದೇ ದಿನ ನಮ್ಮನ್ನಗಲಿಹೋಗಿ ಶೋಕ ಸಾಗರದಲ್ಲಿ ಆದ್ದಿದರು. ದಿವಂಗತರ ಉನ್ನತ ಗುಣ-ಶಕ್ತಿಗಳನ್ನು ಕಂಡು, ಅವುಗಳಿಂದ ನಾವೂ ಸ್ಫೂರ್ತಿಯುತರಾಗಿ ಅವರ ಹೋದ-ದಾರಿಯಲ್ಲಿ ಮುನ್ನಡೆಯುವುದು ಅಗತ್ಯವಿದೆ. ವ್ಯತರ ಆತ್ಮಗಳಿಗೆ ಚಿರ ಶಾಂತಿಯು ದೊರೆಯಲೆಂದು ಪ್ರಾರ್ಥಿಸುವುದು ಪ್ರತ್ಯೇಕ ನಾಗರಿಕನ ಕರ್ತವ್ಯವಾಗಿದೆ.

ಪುರುಷೋತ್ತಮದಾಸ್

ಇಡಿಯ ಭಾರತದಲ್ಲಿ ಹಿಂದಿಯನ್ನು ಕೂಡಲೇ ಅಧಿಕೃತ ಭಾಷೆಯನ್ನಾಗಿ ಘೋಷಿಸುವ ವಿಷಯದಲ್ಲಿ ಪ್ರಧಾನಿ ನೆಹರುರವರೊಡನೆ ತಲೆದೋರಿದ ವಿರಸದಿಂದ ಕಾಂಗ್ರೆಸ್ ಅಧ್ಯಕ್ಷಪದವನ್ನು ತ್ಯಜಿಸಿದ ಪುರುಷೋತ್ತಮದಾಸತಂಡನ್ನರು ೧೯೫೦ ರ ನಂತರ ಬೆಳಕಿಗೆ ಬಂದುದು ಅಪರೂಪ. ಅದರೆ, ಅದಕ್ಕೆ ಮೊದಲೂ ಅನಂತರವೂ ಅವರು ತಮ್ಮ ನಿಷ್ಠೆಗೆ ಸರಿಯಾಗಿ ದೇಶ ಕ್ಕಾಗಿ ದುಡಿದ ವೀರರು; ಹಿಂದೀ ಭಾಷೆಯ ಅಭಿಮಾನಿಗಳು. ಆದುದರಿಂದಲೇ ಅವರನ್ನು ಜನತೆಯು ರಾಜರ್ಷಿಯೆಂದು ಗೌರವಿಸುತ್ತದೆ.

೧೮೮೨ರಲ್ಲಿ ಅಲಹಾಬಾದಿನಲ್ಲಿ ಜನಿಸಿ ಅಲ್ಲಿಯೇ ಶಿಕ್ಷಣವನ್ನು ಪಡೆದು ವಕೀಲಿ ವೃತ್ತಿಯಲ್ಲಿ ತೊಡಗಿದ ತಂಡನ್ನರು ವಿಚಾರವಂತರೂ ಆದರ್ಶವಾದಿಗಳೂ ಆಗಿದ್ದರು. ಉಜ್ವಲ ದೇಶಭಕ್ತಿಯಿಂದಾಗಿ ಸರ್ವ ಸಮರ್ಪಣ ಭಾವದಿಂದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿ ಮಹಾತಾಗಾಂಧಿಯವರ ನಿಕಟಾನುಯಾಯಿಯೆನಿಸಿದರು. ತನಗೆ ನ್ಯಾಯವೆಂದು ಕಂಡು ಬಂದುದನ್ನು ಸಾಧಿಸಿಬೆ ಬಡದ ಇವರು ತಮ್ಮ ಪಾಂಡಿತ್ಯ, ಆದರ್ಶ ಮತ್ತು ಸೇವೆಗಳಿಗೆ ಹೆಸರಾದವರು. ವಿಖ್ಯಾತವಾಗ್ಮಿ ತಂಡನ್ನರು ಕಾಂಗ್ರೆಸಿನ ವಿವಿಧ ಪದಗಳಲ್ಲಿ ದುಡಿದಿದ್ದರು; ಅಂದೋಲನದ ವೇಳೆ ಸೆರೆವಾಸವನ್ನೂ ಅನುಭವಿಸಿದ್ದರು; ಸ್ವಾತಂತ್ರ್ಯ ನಂತರ ಅವರು ಕೆಲವು ಕಾಲ ರಾಜ್ಯ ಸಭೆಯ ಸದಸ್ಯರಾಗಿಯೂ ಇದ್ದರು. ಭಾರತೀಯ ಸಂಸ್ಕೃತಿಯ ಪ್ರತೀಕವೆನಿಸುವಂತಹ ತಂಡನ್ನರು ಭಾರತೀಯ ಸಂವಿಧಾನ ಸಮಿತಿಯ ಸದಸ್ಯರಾಗಿದ್ದರು; ದೇಶಕಲ್ಯಾಣಕ್ಕಾಗಿ ದೀರ್ಘ ಸೇವೆಸಿದ ಅವರನ್ನು ಹಿಂದಿನ ವರ್ಷ ಸರ್ವೋಚ್ಚ 'ಭಾರತ ರತ್ನ' ಪ್ರಶಸ್ತಿಯಿತ್ತು ಭಾರತವು ಮನ್ನಿಸಿದ್ದಲ್ಲದೇ ತಂಡನ್ನರ ಅಭಿನಂದನಾಗ್ರಂಥವೊಂದನ್ನು ಸಂಪಾದಿಸಿ ಅರ್ಪಿಸಿತು.

ಅಪ್ರತಿಮ ನಿಷ್ಠೆ, ಅಸಮಾನ ಮನೋಧಾರ್ಢ್ಯ ಮತ್ತು ಅತುಲ್ಯ ತ್ಯಾಗಗಳಿಂದ ಉನ್ನತ ವ್ಯಕ್ತಿಯೆನಿಸಿದ ತಂಡನ್ನರು ಕಳೆದ ೫ ವರ್ಷಗಳಿಂದ ಹಾಸಿಗೆ ಹಿಡಿದಿದ್ದರು. ಸುಮಾರು ೪೦ ವರ್ಷಗಳಿಂದಲೂ ಮನೋವಾಕ್ಯಾಯಗಳಿಂದ ದೇಶ ಹಿತ ಸಾಧಿಸುತಿದ್ದ ಈ ನಾಯಕಮಣಿಯ ನಿಧನದಿಂದ ದೇಶಕ್ಕೆ ದೇಶವೇ ಕಂಬನಿ ಸುರಿಸಿತು.

ಬಿಧಾನಚಂದ್ರ

ಪಶ್ಚಿಮ ಬಂಗಾಳದ ಹುಲಿಯೆನಿಸಿದ ಬಿ. ಸಿ. ರಾಯರು ತಮ್ಮ ಜನ್ಮ ದಿನಾಚರಣೆಯ ದಿನದಂದೇ ಕೊನೆಯುಸಿರನ್ನು ಎಳೆದುದು ವಿಚಿತ್ರವಾಗಿ ಕಾಣುತ್ತದೆ. ಕೇಂದ್ರದಲ್ಲಿ ನೆಹರು ಇದ್ದಂತೆ ಬಂಗಾಳ ರಾಜ್ಯದಲ್ಲಿ ರಾಯ್. ದೇಶದ ವಿಕಮೂತ್ರ ಯಶಸ್ವೀ ಮುಖ್ಯಮಂತ್ರಿಯೆನಿಸಿದ ಇವರು ಕೂಡ ಜುಲೈ ಮೊದಲನೆಯ ದಿನವೇ ಇಹಲೋಕ ತ್ಯಾಗ ಮಾಡಿದರು; ಅದೂ ಅಕಸ್ಮಾತ್ತಾಗಿ! ಜನ್ಮದಿನದ ಶುಭಾಶಯ ಸಲ್ಲಿಸಿಬಂದವರು ಅಂತಿಮ ದರ್ಶನ ಪಡೆದು ಮರಳಿದರು.

೧೮೮೨ರ ಜುಲೈ ೧ರಂದು ರಾಯ್ ಅವರು ಪಾಟ್ನಾದಲ್ಲಿ ಜನಿಸಿದರು. ೧೯೦೬ರಲ್ಲಿ ಎಂ ಬಿ. ಪದವಿಯನ್ನು ಪಡೆದು ವಿಶೇಷಾಧ್ಯಯನಕ್ಕಾಗಿ ಲಂಡನ್ನಿಗೆ ತೆರಳಿದರು. ವೈದ್ಯಕೀಯದಲ್ಲಿ ಅಸಕ್ತರಾಗಿದ್ದರೂ ಅದನ್ನು ವೃತ್ತಿಸಾಧನವಾಗಿ ಮಾಡಿಕೊಳ್ಳದೆ ಅಧ್ಯಾಪಕರಾದರು. ಕಲಕತ್ತೆಯ ವಿಶ್ವವಿದ್ಯಾಲಯದ ಉಪ ಕುಲಪತಿಗಳೂ ಆಗಿದ್ದರು. ಕಾಂಗ್ರೆಸ್ಸಿನ ಹಳೆಯ ಕಾರ್ಯಕರ್ತರಲ್ಲಿ ಇವರು ಅಗ್ರಗಣ್ಯರು. ದೇಶಬಂಧು ಚಿತ್ತರಂಜನ ದಾಸರ ಬಲಗೈ ಯೆನಿಸಿ ಬಂಗಾಳದಲ್ಲಿ ಕಾಂಗ್ರೆಸ್ ರಚನಾತ್ಮಕ ಕಾರ್ಯಗಳಲ್ಲಿಯೂ ಆಡಳಿತಯಕೆಲಸಗಳಲ್ಲಿಯೂ ತಮ್ಮದೇಹ ಸವೆಸಿದ ರಾಯರು ನೇತಾಜಿ ಸುಭಾಸಚಂದ್ರರ ಗುಂಪಿಗೆ ಸೇರಿದವರಾಗಿದ್ದರು. ಕಾಯದೆ ಭಂಗ ಚಳವಳಿಯಲ್ಲಿ, ಉಪ್ಪಿನ ಸತ್ಯಾಗ್ರಹದಲ್ಲಿ ಇವರು ತೋರಿದ ಸಾಹಸ ಅಪರಿಮಿತ. ಯರವಾಡ ಜೈಲಿನಲ್ಲಿದ್ದ ಮಹಾತ್ಮಾಗಾಂಧಿಯವರ ಚಿಕಿತ್ಸೆಯನ್ನು ಇವರು ಮಾಡುತ್ತಿದ್ದರು. ಆಗಲೇ ಇವರಿಬ್ಬರಲ್ಲಿ ಮೈತ್ರಿ ಬೆಳೆಯುತ್ತ ನಡೆಯಿತು. ವೈದ್ಯಕೀಯ ಹಾಗೂ ರಾಜಕೀಯ ಕ್ಷೇತ್ರಗಳ ವಿವಿಧ ಪದವಿಗಳಲ್ಲಿ ವಿರಾಜಮಾನರಾದ ಇವರು ಸ್ವಾತಂತ್ರ್ಯೋತ್ತರದಲ್ಲಿ ಪ. ಬಂ. ಘೋಷರು ರಾಜೀನಾಮೆಯಿತ್ತ ಬಳಿಕ ಪ. ಬಂಗಾಳದಲ್ಲಿ ೧೯೪೮ರಿಂದ ನಾಲ್ಕು ಮಂತ್ರಿಮಂಡಳಗಳನ್ನು ರಚಿಸಿದರು. ಅಲ್ಲಿ ಪ್ರಬಲರಾಗಿದ್ದ ಕಮ್ಯುನಿಸ್ಟರ ಪ್ರಭಾವವನ್ನು ಇಳಿಸುವುದರಲ್ಲಿ ವರ್ಚಸ್ವೀ ಪ್ರಯೋಗ ನಡೆಸಿದ್ದರಿಂದ, ಕಮ್ಯುನಿಸ್ಟರ ಬಲವು ದಿನದಿಂದ ದಿನಕ್ಕೆ ಕುಗ್ಗುತ್ತ ಬರುತ್ತಿದೆ.

ಡಾ। ರಾಯ್ ರಾಜಕೀಯ ನೇತಾರರ ವೈದ್ಯ, ಗೋವಿಂದ ವಲ್ಲಭಪಂತ್, ರಾಜೇಂದ್ರ ಪ್ರಸಾದ ಮೊದಲಾದವರನ್ನು ಚಿಕಿತ್ಸೆ ನಡೆಸುತಿದ್ದ ಮೇಧಾವಿ. ರಾಜಕೀಯದಲ್ಲಾದರೂ ಅವರು ರಾಜ್ಯದ ಆಡಳಿತೆಯಲ್ಲಿ ನಿಸ್ಸೀಮರು. ಕೇಂದ್ರ-ರಾಜ್ಯ ಸರಕಾರದ ವ್ಯವಹಾರದಲ್ಲಿ ತುಸು ವಿರಸ ಹುಟ್ಟಿದ್ದರೂ ರಾಯರ ಸಾಮರ್ಥ್ಯ ಮತ್ತು ಯೋಗ್ಯತೆಯನ್ನು ಪ್ರಶ್ನಿಸುವ ಧೈರ್ಯ ಯಾರೊಬ್ಬರಿಗೂ ಇಲ್ಲ. ಇಂತಹ ಹುಲಿಯು ತನ್ನ ಕೊನೆಯುಸಿರೆಳೆದುದು ಬಂಗಾಳಕ್ಕೆ ಮಾತ್ರವಲ್ಲ ಭಾರತಕ್ಕೆ ಸಂಭವಿಸಿದ ನಷ್ಟ.



'ನಚಿಕೇತ'ರ ನವೀನ ಕಾದಂಬರಿ

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್‌ನ ಹೊಸ ಪ್ರಕಟಣೆ

ಬೆಲೆ: ರೂ. ಎರಡು. ರೂ. ೨—೫೦ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು.

ನವಯುಗ ಪ್ರೆಸ್, ಉಡುಪಿ

ಇದು ನಿಮಗೆ ಗೊತ್ತಿದೆಯೆ?

೧. ಬ್ರೆಜಿಲ್‌ನಲ್ಲಿ ಕಾಫಿಯ ಡಿಕೊಕ್ಕನನ್ನೇ ಸೀದಾ ಸೇವಿಸುತ್ತಾರೆ. ನಮ್ಮ ಭಾರತದಲ್ಲಿ ಅದಕ್ಕೆ ಹಾಲು ಬೆರೆಸಿ, ಡಿಕೊಕ್ಕನ್ನಿನ ಹಾಗೂ ಹಾಲಿನ ಸತ್ವವನ್ನು ನಾಶಮಾಡಿ 'ಕಾಫಿ' ಮಾಡಿ ಕುಡಿಯುತ್ತಾರೆ.

೦ ೦ ೦

೨. ಅಮೇರಿಕದ ಸಂಯುಕ್ತ ರಾಷ್ಟ್ರದಲ್ಲಿ ಕುಡಿಯುವಷ್ಟು ಕಾಫಿಯನ್ನು ಜಗತ್ತಿನ ಇತರ ಯಾವ ರಾಷ್ಟ್ರದಲ್ಲೂ ಕುಡಿಯಲಾಗುತ್ತಿಲ್ಲ. ಅಲ್ಲಿ ಒಂದು ಕಪ್ ಜಾಗೆ ಸನುವಾಗಿ ತಲಾ ಇಪ್ಪತ್ತು ಕಪ್ ಕಾಫಿಯನ್ನು ಸೇವಿಸುತ್ತಾರೆ.

೦ ೦ ೦

೩. ಕಾಫಿ ಗಿಡಕ್ಕೆ ನೇರವಾಗಿ ಸೂರ್ಯನ ಬಿಸಿಲು ಬೀಳಬಾರದು. (ಅದಕ್ಕಾಗಿ ಎಲ್ಲ ಕಡೆಗಳಲ್ಲಿ ಕಾಫಿ ಎಸ್ಟೇಟಿನಲ್ಲಿ ನೆರಳೀವ ವೃಕ್ಷಗಳನ್ನು ನೆಡುವುದುಂಟು.) ಹಾಗೆಂದು ಉಷ್ಣತೆ ಅತಿ ಕಮ್ಮಿಯೂ ಇರಕೂಡದು. ಇಂಥ ಒಂದು ಹವಾಗುಣದ ವ್ಯವಸ್ಥೆಯಾಗುವಂತೆ ಅರೇಬಿಯಾದ ಎಮೆನ್ ಎಂಬಲ್ಲಿ ನಿಸರ್ಗವೇ ನೋಡಿಕೊಳ್ಳುತ್ತದೆ. ಎಮೆನ್ ಭಗತ್ತಿನಲ್ಲೇ ಹೆಸರುವಾಸಿಯಾಗಿರುವ 'ಮೋಚಾ ಕಾಫಿ'ಯ ತವರು ಮನೆ. ಇಲ್ಲಿ ಚಳಿಗಾಲದಲ್ಲೂ ಬೇಸಗೆಯಲ್ಲೂ ದಪ್ಪನೆಯ ಮಂಜು ಪ್ರತಿ ನಿತ್ಯ ಬೆಳಗ್ಗೆ ಕರಾವಳಿಯ ತಗ್ಗಿನ ಪ್ರದೇಶದಿಂದ ಕಾಫಿ ಗಿಡ ಬೆಳೆಸಲಾಗಿರುವ ಪರ್ವತದ ಇಳಿಜಾರಿನ ತನಕ ಹಾದು ಹೋಗುತ್ತದೆ. ಸುಮಾರು ಮಧ್ಯಾಹ್ನದ ಹೊತ್ತಿಗಾಗಿ ಕಾಫಿ ಗಿಡಗಳೆಲ್ಲವೂ ಈ ಮಂಜಿನಿಂದ ಸಂಪೂರ್ಣ ಅವೃತವಾಗುತ್ತವೆ. ಇದರಿಂದಾಗಿ ಸೂರ್ಯನ ತಾಪದಿಂದ ಅವು ಸಂಪೂರ್ಣ ರಕ್ಷಿಸಲ್ಪಡುತ್ತವೆ. ವರ್ಷದ ಇಪ್ಪತ್ತು ದಿನಗಳಲ್ಲಿ ಈ ಕೆಲಸಕ್ಕೆ ಚ್ಯುತಿಬೀಳುವುದುಂಟು. ಆದರೂ ಇಂಥ ಕೆಲಸ ಪ್ರತಿನಿತ್ಯವೆಂಬಂತೆ ಆಗುತ್ತಲೇ ಇರುತ್ತದೆ. ಇಷ್ಟೇ ಅಲ್ಲದೆ ತಗ್ಗಿನ ಪ್ರದೇಶದಿಂದ ಬಿಸಿಯಾದ ಗಾಳಿ ಆಗಾಗ್ಗೆ ಮೇಲೇರಿ ಬರುವುದುಂಟು. ಈ ಬೆಚ್ಚಗಿನ ಗಾಳಿ ವಾತಾವರಣದ ಥಂಡಿಯನ್ನು ಹೋಗಲಾಡಿಸುತ್ತದೆ ಇಂತು ಅರಬೀಯದಲ್ಲಿ ಕಾಫಿ ಬೆಳವಣಿಗೆಗೆ ನೈಸರ್ಗಿಕ ವಿಶೇಷಾಡು ಇರುವುದನ್ನು ಕಾಣಬಹುದು.

೪. ಹೆತ್ತ ಗಿಡದಲ್ಲಿ ಕೀಟದಿಂದ ನೀರು ಹಿಪ್ಪುಗಟ್ಟುವ ಹವಾಗುಣ ಬಗ್ಗುವುದಿಲ್ಲ. ಆದರೆ ಬೆಳವಣಿಗೆಗೆ ಸುಮಾರು ೩೦೦ ದಿನಗಳವ್ಟು ವಾತಾವರಣದಲ್ಲಿ ಮಂಜು ಇರಕೂಡದು. ಆದರೆ ಮಂಜು ಸ್ವಲ್ಪವಾದರೂ ಬೇಕು. ಇದು ಇದ್ದರೆ ಅದಕ್ಕೆ ತಾಗುವ 'ರೋಲ್ ವೀವಿಲ್' ಎಂಬ ಹತ್ತಿ ಗಿಡದ ವ್ಯಾಧಿಯನ್ನು ಉಂಟುಮಾಡುವ ರೋಗಾಣುಗಳು ನಾಶವಾಗುತ್ತವೆ.

—ಕೆ. ರಮೇಶ ಶೈ, ಉಡುಪಿ.

ಕನ್ನಡ ಪುಸ್ತಕಗಳಿಗೆ—

ಮತ್ತು

ಕಥೆಕಾದಂಬರಿ ಇತ್ಯಾದಿಪುಸ್ತಕಗಳಿಗೆ

ನವಭಾರತ ಸಂಸ್ಕೃತಿ ಭಂಡಾರ, ಉಡುಪಿ.

ಶಿಕ್ಷಣ ಕ್ಷೇತ್ರದ ಆಗುಹೋಗುಗಳು

(೨ನೇ ಸುಟದಿಂದ)

ಇರಬೇಕು. ರಾಷ್ಟ್ರವು ಕೇವಲ ಬುದ್ಧಿ ಮತ್ತೆಯಿಂದ ದೊಡ್ಡದೆನಿಸಿಕೊಳ್ಳುವುದಿಲ್ಲ. ಅನೇಕ ಒಳ್ಳೆಯ ಗುಣಗಳಿಂದ ರಾಷ್ಟ್ರದ ಘನತೆ ಹೆಚ್ಚುವುದು ಎಂದು ಇತಿಹಾಸ ತೋರಿಸುತ್ತದೆ. ಎಲ್ಲಾ ಗುಣಗಳು ಶಾಲೆಯಲ್ಲಿ ನಿರ್ಮೂಣವಾಗುವುವು ಎಂದೇನೂ ಇಲ್ಲ. ಆದರೆ ಅವುಗಳಲ್ಲಿ ಹೆಚ್ಚಿನವು ಶಾಲೆಗಳಲ್ಲಿ ರೂಪುಗೊಳ್ಳಬೇಕೆಂದು ಸರಕಾರ ಮತ್ತು ಜನತೆ ಭಾವಿಸುತ್ತದೆ. ಚಿಕ್ಕಂಗಿನಲ್ಲಿಯೇ ಮಕ್ಕಳಲ್ಲಿ ಈ ಗುಣಗಳು ಹೇಗೆ ಬೀಜ ಬಿತ್ತಾವು ಎಂದು ಮುಂದುವರಿದ ರಾಷ್ಟ್ರಗಳ ಶಾಲೆಗಳಲ್ಲಿ ನೋಡಿಕೊಳ್ಳುವಂತೆ ನಮ್ಮಲ್ಲಿಯೂ ಆಗಬೇಕು.

ಶಾಲೆಗಳಲ್ಲಿ ಮಕ್ಕಳ ಗುಣ ವಿಕಾಸವಾಗಬೇಕಾದರೆ ನಮ್ಮ ಶಾಲೆಗಳು ಗುರುಕುಲ ಪದ್ಧತಿಯ ಅಥವಾ ವಸತಿ ಗೃಹಗಳ ಅನುಕೂಲತೆ ಇರುವ ಶಾಲೆಗಳಾಗಬೇಕು, ಶಿಕ್ಷಣದ ನಿಜವಾದ ಪ್ರಗತಿಯೂ ಆಗಬೇಕಾದರೆ ಒಬ್ಬ ಶಿಕ್ಷಕನ ಕೈಕೆಳಗೆ ಹತ್ತು ಯಾ ೧೫ಕ್ಕಿಂತ ಹೆಚ್ಚು ವಿದ್ಯಾರ್ಥಿಗಳಿರ ಕೂಡದು. ಶಿಕ್ಷಕ ಕೇವಲ ಪದವಿ ಧರನಾದರೆ ಸಾಲದು. ಆತ ಮನಶ್ಶಾಸ್ತ್ರವನ್ನು ಅಭ್ಯಾಸ ಮಾಡಿದ, ಮಕ್ಕಳೊಡನೆ ಪ್ರೇಮದಿಂದ ನಡೆಯುವ, ತನ್ನ ಮನಸ್ಸನ್ನು ನಿಯಂತ್ರಣದಲ್ಲಿಟ್ಟುಕೊಂಡಿರುವವನಾಗಿರಬೇಕು. ಮಾರ್ಗದರ್ಶನ ಮಾಡುವ ಹೊಣೆಯುಳ್ಳ ಶಿಕ್ಷಕರು ಬಹು-ಶ್ರುತನಾಗಿರಬೇಕು. ಅದಕ್ಕಾಗಿ ಅವರು ಬೇರೆ ಬೇರೆ ರಾಜ್ಯಗಳಲ್ಲಿ ನಡೆಯುವ ಶಿಕ್ಷಣ, ಉದ್ಯೋಗ ಇತ್ಯಾದಿಗಳ ಪರಿಚಯ ಮಾಡಿಕೊಳ್ಳಬೇಕು. ಅವರು ಬಹಳಷ್ಟನ್ನು ನೋಡದೇ ಅನುಭವ ಬರುವಂತಿಲ್ಲವಾದ್ದರಿಂದ ಅಂಥವರಿಗಾಗಿ ಶಾಲೆಗಳು ಒಂದಿಷ್ಟು ಹಣ ಖರ್ಚು ಮಾಡಲು ಸಿದ್ಧವಾಗಬೇಕು.

ಪ್ರತಿಯೊಂದು ರಾಷ್ಟ್ರದ ಅಭಿವೃದ್ಧಿಯು ಅದರ ವಿದ್ಯಾಭ್ಯಾಸದ ಕ್ರಮವನ್ನು ಹೊಂದಿರೊಂದಿದೆ. ಸ್ವತಂತ್ರ ಭಾರತದ ಪ್ರಜೆಗಳು ಉತ್ತಮ ಪೌರರಾಗಿ ತಮ್ಮ ಹಕ್ಕು ಬಾಧ್ಯತೆಗಳನ್ನು ತಿಳಿದು ಅವನ್ನು ಯೋಗ್ಯ ರೀತಿಯಲ್ಲಿ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕಾದರೆ ನಮ್ಮ ಪ್ರಾಚೀನ ಪರಂಪರೆಯನ್ನು ಮರೆಯದೆ ಈಗಿನ ಕಾಲಕ್ಕೆ ತಕ್ಕಂತಿರುವ ವಿದ್ಯಾಭ್ಯಾಸ ಕ್ರಮವನ್ನು ಜಾರಿಗೆ ತರಬೇಕು. ಅದಕ್ಕಾಗಿ ಇಡೀ ಶಿಕ್ಷಕ ವೃಂದವು ತಮ್ಮಲ್ಲಿರುವ ದೌರ್ಬಲ್ಯಗಳನ್ನು ಬದಿಗೊತ್ತಿ ಅದರ ಯಶಸ್ಸಿಗೆ ಕಂಕಣಬದ್ಧರಾಗಿ ದುಡಿಯಬೇಕು.

ಭಾರತದಲ್ಲಿ ಶಿಕ್ಷಣವು ಪ್ರಗತಿ ಪಥದಲ್ಲಿ ಸಾಗಬೇಕಾದರೆ ಶಿಕ್ಷಕನು ವಿದ್ವಾಂಸ ವಿದ್ಯಾರ್ಥಿಯಾಗಿರಬೇಕು. ಮಕ್ಕಳಲ್ಲಿ ದೇವರು ಯಾವ ವಿಶೇಷ ಗುಣವನ್ನು ಕರುಣಿಸಿಕಳುಹಿಸಿದ್ದಾನೆ. ಆತ ಯಾವ ಕ್ಷೇತ್ರದಲ್ಲಿ ಮುಂದೆ ಬಂದು ಕುಟುಂಬ ಮತ್ತು ಸಮಾಜ ಸೇವೆಯನ್ನು ಮಾಡಬಲ್ಲನು ಎಂಬುದನ್ನು ತಂದೆ ತಾಯಿಗಳು ಕಂಡುಕೊಳ್ಳಬೇಕು. ಮಕ್ಕಳಲ್ಲಿದ್ದಂತಹ ವಿಶೇಷ ಗುಣಗಳ ವಿಕಾಸವಾಗುವಂತೆ ಸರಕಾರವು ತಕ್ಕ ವ್ಯವಸ್ಥೆಯನ್ನು ಮಾಡಬೇಕು. ಶಾಲಾ ಚಾಲಕರು ಮತ್ತು ಪಾಲಕರು ಇದು ನಮ್ಮ ಶಾಲೆ-ನನ್ನ ಮಕ್ಕಳ ಭವಿತವ್ಯವನ್ನು ರೂಪಿಸುವ ದಿವ್ಯ ಕೇಂದ್ರವೆಂಬ ಮನೋಭಾವನನ್ನಿಟ್ಟು ಸಂಸ್ಥೆಯ ಸರ್ವತೋಮುಖದ ಏಳಿಗೆಗೆ ಬೇಕಾದ ವ್ಯವಸ್ಥೆಯನ್ನು ಮಾಡಬೇಕು ಶಿಕ್ಷಕನನ್ನು ಕಾನೊಬ್ಬ ಸೇವಕನೆಂಬ ರಾಷ್ಟ್ರದ ನಿರ್ಮಾಪಕನೆಂಬ ಭಾವವನ್ನು ತಳೆಯುವ ಆದರ್ಶ ವ್ಯಕ್ತಿಯಾಗಿ ರೂಪಿಸಿದರೆ ನಮ್ಮ ಭಾರತವು ಇಡೀ ವಿಶ್ವದಲ್ಲಿ ಆದರ್ಶ ಶೈಕ್ಷಣಿಕ ರಾಷ್ಟ್ರವಾಗುವುದು ಎಂದೆನಿಸಿದರೆ ಅತಿಶಯದ ಮಾತಾಗಲಾರದು.

ವಿಜ್ಞಾನ ವಿಸ್ಮಯ

ಸತ್ತವನೂ ಬದುಕಿ ಬರಬಲ್ಲನು!

ಜರ್ಮನಿಯ ಶಸ್ತ್ರ ಚಿಕಿತ್ಸಾ ನಿಪುಣರ ಗೋಷ್ಠಿಯೊಂದು ಈಚೆಗೆ ಶಸ್ತ್ರ ಚಿಕಿತ್ಸೆಯ ಮೂಲಕ ಮೃತನಾಗಿ ಹೋಗಿದ್ದನೆಂದೇ ನಂಬಲಾಗಿದ್ದವನೊಬ್ಬನಿಗೆ ಜೀವದಾನ ಮಾಡಿತು. ಇದು ವರೆಗೂ ಇಂತಹ ಅತಿಶಯವು ಜರ್ಮನಿಯಲ್ಲಿ ಮಾತ್ರವಲ್ಲ, ಇಡೀ ವಿಶ್ವದಲ್ಲಿಯೇ ಎಲ್ಲಿಯೂ ನಡೆದಿರಲಿಲ್ಲ. ಇದುವರೆಗೆ ಎಷ್ಟೋ ಬಾರಿ ಶ್ವಾಸೋಚ್ಛ್ವಾಸವು ನಿಂತ ಮೇಲೆಯೂ ಮತ್ತೆ ಅದು ಆರಂಭವಾಗುವಂತೆ ಮಾಡಲಾದ ನಿದರ್ಶನಗಳನ್ನು ಕೇಳಿರಬಹುದು ಆದರೆ, ಈ ರೀತಿಯಲ್ಲಿ ಸತ್ತವನ ದೇಹದಲ್ಲಿ ಬ್ಯಾಟರಿಯನ್ನು ಜೋಡಿಸಿ, ಶಸ್ತ್ರ ಚಿಕಿತ್ಸೆಯನ್ನು ಮಾಡಿ ತನ್ಮೂಲಕ ಹೃದಯವು ತನ್ನ ಕ್ರಿಯೆಯಲ್ಲಿ ತೊಡಗುವಂತೆ ಮಾಡಿರುವುದು ನಿಜಕ್ಕೂ ವಿಸ್ಮಯದ ಸಂಗತಿಯೇ!

ಹತ್ತೊಂಬತ್ತು ವರ್ಷದ ಯುವಕನೊಬ್ಬ ಪ್ರಯಾಣ ಮಾಡುತ್ತಿದ್ದಾಗ ಅಕಸ್ಮಾತ್ತಾಗಿ ಒಂದು ಅಪಘಾತಕ್ಕೊಳಗಾಗಿ, ಆಗ ವಿಷಟ್ಟ ಗಾಯಗಳಿಂದ ಅವನ ಪ್ರಜ್ಞಾಶೂನ್ಯನಾದ ಅವನನ್ನು ಆಸ್ಪತ್ರೆಗೆ ಸೇರಿಸಿ, ಒಂದು ವಾರದ ಕಾಲ ಚಿಕಿತ್ಸೆಯನ್ನು ನೀಡಿ, ಗುಣ ಹೊಂದಿದ್ದಾನೆಂದು ಮನೆಗೆ ಕಳಿಸಲಾಯಿತು. ಇವನು ಅಪಘಾತಕ್ಕೊಳಗಾದಾಗ ಇವನ ಹೃದಯದ ಕ್ರಿಯೆಗೆ ಕಾರಣವಾದ ನರಮಂಡಲದ ಮೇಲೆ ಆಘಾತವಾಗಿದೆಯೆಂಬ ವಿಷಯವು ವೈದ್ಯರ ಗಮನಕ್ಕೆ ಬರಲಿಲ್ಲ. ದೇಹಸ್ಥಿತಿ ಸರಿಯಿಲ್ಲವೆಂದು ಮತ್ತೆ ಹನ್ನೊಂದು ದಿನಗಳ ನಂತರ ಆತ ಆಸ್ಪತ್ರೆಗೆ ಸೇರಿಸಲ್ಪಟ್ಟ. ಅವನ ಹೃದಯ ಕ್ರಿಯೆಗೆ ಏನೋ ತಡೆಯಿದೆಯೆಂದು ಆಗ ವೈದ್ಯರ ತಿಳಿವಿಗೆ ಬಂದಿತು. ಅವನ ಹೃದಯ ಒಂದು ನಿಮಿಷಕ್ಕೆ ಕೇವಲ ಮೂವತ್ತೈದು ಬಾರಿ ಹೊಡೆದುಕೊಳ್ಳುತ್ತಿತ್ತು ಅಲ್ಲದೆ ಅವನ ಹೃದಯವು ನೀಲವರ್ಣಕ್ಕೆ ತಿರುಗಿ ತೊಡಗಿತ್ತು. ರೋಗಿಯ ಜೀವದ ಮೇಲಣ ಆಸೆ ಕ್ರಮೇಣ ಕಮ್ಮಿಯಾಗ ತೊಡಗಿ, ಅವನು ಸತ್ತೇ ಹೋದನೆಂದು ಭಾವಿಸಲಾಯಿತು.

ಸದರಿ ರೋಗಿಗೆ ಚಿಕಿತ್ಸೆಯನ್ನು ನೀಡುತ್ತಿದ್ದ ಡಾ! ಗ್ರಾಸ್ ಬ್ರೋಕಾಫ್ಟ್ ಮತ್ತು ಅವರ ಸಂಗಡಿಗರು ತೀವ್ರವಾದ ಸಂಶೋಧನೆಗಳನ್ನು ನಡೆಸಿ, ಹೃದಯದ ಬಡಿತವು ನಿಲ್ಲದಂತಿರಲು ಒಂದು ವಿಶೇಷ ಸಾಧನವನ್ನು ಕಂಡು ಹಿಡಿದರು.

ಮೃತನಾದವನ ಹೃದಯ ಭಾಗದಲ್ಲಿ ಶಸ್ತ್ರಚಿಕಿತ್ಸೆಯನ್ನು ಮಾಡಿ, ವಿದ್ಯುಚ್ಛಕ್ತಿಯ ಸಹಾಯದಿಂದ ಅದು ಮತ್ತೆ ಕಾರ್ಯದಲ್ಲಿ ತೊಡಗುವಂತೆ ಮಾಡಲು ಸಾಧ್ಯವೇ ಎಂದು ಪರೀಕ್ಷಿಸಲಾಯಿತು. ಮಾರು ನಿಮಿಷಗಳ ಪ್ರಯೋಗದ ನಂತರ, ಹೃದಯವು ಕ್ಷೀಣವಾಗಿ ಬಡಿದುಕೊಳ್ಳಲಾರಂಭಿಸಿತು. ಐದು ಗಂಟೆಗಳ ಸತತ ಪರಿಶ್ರಮದ ನಂತರ ಹೃದಯವು ತನ್ನ ಕ್ರಿಯೆಯನ್ನು ಆರಂಭಿಸಿತು.

ಈ ಕ್ರಿಯೆಯು ಕೇವಲ ಮೂರು ದಿನಗಳು ಮಾತ್ರ ಸಾಗಿತು. ಮತ್ತೆ, ಯಥಾ ಪ್ರಕಾರ ಹೃದಯದ ಕ್ರಿಯೆಯು ನಿಂತು ಹೋಯಿತು. ಎಲೆಕ್ಟ್ರೋಡ್‌ಗಳ ಸಹಾಯದಿಂದ, ವಿದ್ಯುತ್ತನ್ನು ಉತ್ಪತ್ತಿಮಾಡಿ ಹೃದಯವು ಮತ್ತೆ ಕ್ರಿಯೆಯಲ್ಲಿ ತೊಡಗುವಂತೆ ಮಾಡಬಹುದೇನೋ ಎಂದು ಪ್ರಯತ್ನವನ್ನು ಮಾಡಿ ನೋಡಲಾಯಿತು. ಬ್ಯಾಟರಿಯು ಕೆಲಸ ಮಾಡುವ ವರೆವಿಗೂ ಹೃದಯ ಕ್ರಿಯೆಯಿರುವುದೂ, ಮತ್ತೆ ನಿಂತುಹೋಗುವುದೂ ನಡೆಯತೊಡಗಿತು. ಕೊನೆಗೆ ಬ್ಯಾಟರಿಯನ್ನು ಶರೀರದೊಳಗೆ ಜೋಡಿಸಿದಲ್ಲಿ ಮಾತ್ರ ಆತನನ್ನು ಬದುಕಿಸಬಹುದೆಂಬ ಸಿದ್ಧಾಂತಕ್ಕೆ ವೈದ್ಯರು ಬಂದರು.

ತನ್ನ ಶರೀರದೊಳಗೆ ಬ್ಯಾಟರಿಯನ್ನು ಜೋಡಿಸಿಕೊಂಡು, ತನ್ನ ಹೃದಯ ಕ್ರಿಯೆಯನ್ನು ಮುಂದುವರಿಸುವಂತೆ ಪ್ರಯೋಗವನ್ನು ನಡೆಸಿಕೊಡ ನೋಬೆಲ್ ಪ್ರಶಸ್ತಿ ವಿಜೇತ ಡಾ! ಫಾರ್ಸ್ಮನ್‌ನ ಸಾತ್ರವನ್ನನುಸರಿಸಿ, ಈತನಿಗೆ ಜೀವದಾನ ಮಾಡಲು ಸಾಧ್ಯವೇ ಎಂದು ನೋಡಲು ಜರ್ಮನ್ ವೈದ್ಯಗೋಷ್ಠಿಯು ಯೋಚಿಸಿತು. ಅದೇ ಪ್ರಕಾರ ಮೊದಲು ರೋಗಿಯ ಹೃದಯಕ್ರಿಯೆಯು ಆರಂಭವಾಯಿತು. ಆದರೆ, ಇದು ಸದಾ ಹೆಚ್ಚು ವೇಳೆ ಫಲವನ್ನು ಕೊಡಲಿಲ್ಲ ಕೊನೆಯದಾಗಿ, ಅಮೇರಿಕಾ ವಿಜ್ಞಾನಿಯಾದ ಡಾ! ಜೋಜ್ ಕಂಡುಹಿಡಿದಿರುವ ಚಿಕಿತ್ಸೆಯನ್ನು ಕೈಗೊಳ್ಳಲಾಯಿತು. ಇದರ ಪ್ರಕಾರ ಶಸ್ತ್ರಚಿಕಿತ್ಸೆಯನ್ನು ನಡೆಸಿ, ಹೃದಯದಲ್ಲಿ ಎಲೆಕ್ಟ್ರೋಡ್‌ಗಳನ್ನು ಜೋಡಿಸಲಾಯಿತು. ಹೃದಯ ಕ್ರಿಯೆಯು ಕ್ಷೀಣವಾಗುತ್ತಾ ನಡೆದಾಗ ಎಲೆಕ್ಟ್ರೋಡ್‌ಗಳು ಜಾಗ್ರತವಾಗಿ ಕ್ರಿಯೆ ನಡೆಯಲು ಪ್ರೋತ್ಸಾಹಿಸುವುದು. ಇವುಗಳನ್ನು ಜೋಡಿಸಿದ್ದಲ್ಲಿ ಹೃದಯವು ನಿಂತುಹೋಗುವುದು.

ಡಾ! ಗ್ರಾಸ್ ಬ್ರೋಕಾಫ್ ಮತ್ತು ಅವರ ಸಂಗಡಿಗರು ಇದಕ್ಕೂ ಒಂದು ಹೆಜ್ಜೆ ಮುಂದೆ ಸಾಗಿದರು. ಹೃದಯದಲ್ಲಿ ಎಲೆಕ್ಟ್ರೋಡ್‌ಗಳನ್ನು ಜೋಡಿಸಿದ್ದಲ್ಲದೆ, ರೋಗಿಯ ಹೊಟ್ಟೆಯ ಭಾಗದಲ್ಲಿಯೂ ಅಪರೇಷನ್ನನ್ನು ನಡೆಸಿ, ಹತ್ತು ಬ್ಯಾಟರಿಗಳನ್ನು ಒಳಗಿಟ್ಟು ಹೊಲಿಯಲಾಯಿತು. ಇನ್ನು ಮುಂದೆ ಈ ಬ್ಯಾಟರಿಗಳು ರೋಗಿಯ ದೇಹದಲ್ಲಿ ನಿರಂತರವಾಗಿರುವುವು. ಈ ಬ್ಯಾಟರಿಗಳಿಗೆ ಐದು ವರ್ಷಗಳ ಕಾಲ ಜೀವವಿರುತ್ತದೆ ನಂತರ, ಮತ್ತೆ ಒಂದು ಸರಳ ಶಸ್ತ್ರಚಿಕಿತ್ಸೆಯನ್ನು ನಡೆಸಿ, ಹಳೆಯದನ್ನು ತೆಗೆದು ಹೊಸ ಬ್ಯಾಟರಿಗಳನ್ನು ಜೋಡಿಸಲಾಗುವುದು. ಸದಾ ಪ್ರಜ್ಞಾಶೂನ್ಯನಾಗಿರುತ್ತಿದ್ದ ರೋಗಿಯು ಈಗ ಮೆಲ್ಲ ಮೆಲ್ಲನೆ ನಡೆಯುತ್ತಲಿದ್ದಾನೆ. ಮುಂದೆ, ಆತ ಹೆಚ್ಚು ಶ್ರಮವಿಲ್ಲದ ಕಾರ್ಯಗಳನ್ನು ಸಹಾ ಮಾಡಬಹುದು.

ಇದೇ ವಿಧವಾದ ಶಸ್ತ್ರಚಿಕಿತ್ಸೆಯನ್ನು ನಲವತ್ತಾರು ವರ್ಷ ವಯಸ್ಸಿನ ಸ್ತ್ರೀಯೊಬ್ಬಳಿಗೆ ನಡೆಸಿ, ಡಸ್ಸೆಲ್ ಡಾರ್ಫ್ ವೈದ್ಯ ಗೋಷ್ಠಿಯು ಪ್ರಚಂಡ ಯಶವನ್ನು ಗಳಿಸಿದೆ. ಶರೀರದಲ್ಲಿ ಬ್ಯಾಟರಿಗಳನ್ನು ಜೋಡಿಸುವುದರ ಮೂಲಕ ಮೃತ್ಯುವಿನ ಮುಷ್ಟಿಯಲ್ಲಿ ಸಿಕ್ಕವರನ್ನು ಬಿಡಿಸಿಕೊಳ್ಳಬಹುದೆಂದು ಜರ್ಮನ್ ವೈದ್ಯರು ವಿಶ್ವದ ಜನತೆಗೆ ನಿರೂಪಿಸಿ ತೋರಿಸಿದ್ದಾರೆ. ಜರ್ಮನ್ ವೈದ್ಯ ಗೋಷ್ಠಿಯ ಪ್ರಯೋಗಗಳೆಲ್ಲವೂ ಯಶಸ್ವಿಯಾಗುತ್ತಾ ನಡೆದು, ಕೊನೆಗೆ ಯಾರೂ ಸಾಯುವ ಕಾಲ ಬರುತದೆಯೋ, ಏನೋ ನೋಡಬೇಕು.

ಹಾರ್ಮೋನಿಯಮ್ ಕಲಿಯುವವರಿಗೆ ಅತ್ಯುತ್ತಮ ಸಂಗೀತ ಪುಸ್ತಕ—

ಶ್ರೀ ಎ. ರಾಮಪ್ಪ ಅವರ

ಹಾರ್ಮೋನಿಯಮ್

ಬೋಧನ ಕ್ರಮ

ಪರಿಷ್ಕರಿಸಲ್ಪಟ್ಟ ನಾಲ್ಕನೆಯ ಮುದ್ರಣ. ಕೆಲವೇ ಪ್ರತಿಗಳು ಉಳಿದಿವೆ.

ಬೆಲೆ: ರೂ. 2—0—0.

ಒಂದು ಪ್ರತಿ ಬೇಕಾದವರು ರೂ 2-50 ನ್ನು ಮನಿಯೂರ್ಡರು ಮಾಡಿ ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ವಿಜಾತೀಯ ವಿವಾಹ

ಹಲವು ಸಮಸ್ಯೆಗಳಿಗೆ ಪರಿಹಾರ

ಶ್ರೀ ವಿ. ವಿ. ಶಿಟ್ಟಿ, ಪೂನ.

ಹಿಂದೂ ಸಮಾಜವು, ಬ್ರಹ್ಮ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎನ್ನುವ ನಾಲ್ಕು ವರ್ಣಗಳಾಗಿ ವಿಂಗಡಿಸಲ್ಪಟ್ಟಿದೆ. ಇವುಗಳಿಂದ ಒಂದೇ ಜಾತಿಯ ಗಂಡು ಮತ್ತು ಹೆಣ್ಣುಗಳೊಳಗೆ ಮಾತ್ರ ಮದುವೆಯಾಗಬೇಕೆನ್ನುವ ಕಟ್ಟಳೆಯು ಬಲವಾಗಿ ಬೆಳೆದು ಬಂದಿದೆ. ಇನ್ನೂ ಹೆಚ್ಚೆಂದರೆ ಒಂದೇ ಜಾತಿಯ ಜನರಲ್ಲಿ ಕೂಡಾ ಕೆಲವು ಗುಂಪುಗಳಿದ್ದು ಆಯಾಯ ಗುಂಪಿನವರಲ್ಲಿ ಮಾತ್ರ ಮದುವೆ ನಡೆಯುಬೇಕಲ್ಲದೆ ಒಂದು ಗುಂಪಿಗೆ ಸೇರಿದ ಗಂಡು ಇನ್ನೊಂದು ಗುಂಪಿಗೆ ಸೇರಿದ ಹೆಣ್ಣನ್ನು ಮದುವೆಯಾಗುವುದು ಕೂಡಾ ಅಸಾಧ್ಯವಾಗಿದೆ. ಉದಾಹರಣೆಯಾಗಿ ಬ್ರಾಹ್ಮಣರಲ್ಲಿರುವ ವೈಷ್ಣವರು ಮತ್ತು ಶೈವರೆನ್ನುವ ಬೇಧ. ಹಾಗೆಯೇ ಲಿಂಗಾಯತರಲ್ಲಿ ಬಣಜಿಗ, ಶಿಂಪಿ, ಸಂಜಾಳರೆನ್ನುವ, ಕೆಲವು ಸಂಗಡಗಳಿದ್ದು ಅವರೊಳಗೆ ಊಟೋಪಚಾರ ನಡೆಯಬಹುದಾದರೂ ವಿವಾಹಕ್ಕೆ ಅನುಮತಿಯಿಲ್ಲ. ಶತಮಾನಗಳಿಂದ ಬಂದಿರುವ ಈ ಪದ್ಧತಿಯು ಇನ್ನೂ ಬಲಿಷ್ಠವಾಗಿರುವುದು ಆಶ್ಚರ್ಯವನ್ನುಂಟು ಮಾಡುತ್ತದೆ ಸ್ವಜಾತೀಯ ವಿವಾಹ ಬರೀ ಹಳ್ಳಿಯ ಪದ್ಧತಿ ಮಾತ್ರವಲ್ಲ. ದಕ್ಷಿಣ ಹಿಂದೂದೇಶದ ದೊಡ್ಡ ಪಟ್ಟಣಗಳಾದ ಮದ್ರಾಸು ಮತ್ತು ಬೆಂಗಳೂರುಗಳಲ್ಲಿ ಕೂಡಾ ವಿದ್ಯಾವಂತ ಜನರು ತಮ್ಮ ಜಾತಿಯವರನ್ನಲ್ಲದೆ ಬೇರೆಯವರೊಡನೆ ಮದುವೆಗೆ ಮನಸ್ಸು ಮಾಡುವುದಂತಿರಲಿ ಅಪ್ಪಿತಪ್ಪಿ ಯಾರಾದರೂ ವಿಜಾತೀಯ ಹುಡುಗಿ ಅಥವಾ ಹುಡುಗನನ್ನು ಮದುವೆಯಾದರೆ ಅವರನ್ನು ಜಾತಿಯಿಂದ ಹೊರಗೆಡಹುವ ಪ್ರಯತ್ನವೂ ನಡೆಯುತ್ತದೆ. ಇಂತಹ ಪರಿಸ್ಥಿತಿಯಲ್ಲಿಮಹಾರಾಷ್ಟ್ರದ ಜನರಲ್ಲಿ ಅದರಲ್ಲೂ ಪೂನ ನಗರದ ಬ್ರಾಹ್ಮಣರಲ್ಲಿ ಒಂದು ದೊಡ್ಡ ವ್ಯತ್ಯಾಸ ಕಂಡು ಬರುತ್ತದೆ.

ಪೂನ ನಗರದ ಜನರಲ್ಲಿ ಬಹುಮಂದಿ ಬ್ರಾಹ್ಮಣರು ದೈವ ಭಕ್ತರೂ ಸುಶಿಕ್ಷಿತರೂ ಆದ ಇವರು ಮದುವೆಯ ವಿಚಾರದಲ್ಲಿ ನಮ್ಮ ದೇಶದ ಬೇರೆಲ್ಲಾ ಕಡೆಯ ಜನರಿಗಿಂತ ತುಂಬಾ ಸುಧಾರಿಸಿದವರೆನ್ನಬೇಕು. ಇವರಲ್ಲಿ ಹಲವಾರು ಜನರು ವಿಜಾತಿಯವರನ್ನು ಮದುವೆಯಾಗುತ್ತಾರೆ. ಪ್ರತಿ ವರ್ಷ ಇಂತಹ ಮದುವೆಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ಇಲ್ಲಿಯ ಜನರಿಗೆ ಅದೊಂದು ವಿಶೇಷದ ಸಂಗತಿ ಎನಿಸುವುದಿಲ್ಲ. ಇಲ್ಲಿಯ ಬ್ರಾಹ್ಮಣ ಯುವತಿಯರು ಇದೇ ಊರಿನ ಇತರ ಜಾತಿಯ ಯುವಕರನ್ನು ಮದುವೆಯಾಗುವುದು ಮಾತ್ರವಲ್ಲದೆ ಬೇರೆ ಪ್ರಾಂತಗಳ ಗಂಡಸರನ್ನು ಕೂಡಾ ವರಿಸುತ್ತಾರೆ. ಇದಕ್ಕೆ ಮನೆಯವರ ಸಮ್ಮತಿ ಮಾತ್ರವಲ್ಲದೆ ಹೆಚ್ಚಾಗಿ ಉತ್ತೇಜನವೂ ಇರುತ್ತದೆ. ನಾವಿರುವ ಕಟ್ಟಡದಲ್ಲಿರುವ ನಾಲ್ಕು ಕುಟುಂಬಗಳಲ್ಲಿ ಮೂರು ಕುಟುಂಬದವರು ವಿಜಾತಿಯ ದಂಪತಿಗಳು. ಈ ಮೂರು ಕುಟುಂಬಗಳಲ್ಲಿಯೂ ಹೆಂಗಸರು ಮಾತ್ರ ಮಹಾರಾಷ್ಟ್ರೀಯರು ಮತ್ತು ಗಂಡಸರಲ್ಲಿ ಒಬ್ಬರು ಬಿರಿಸ್ತದವರು ಇನ್ನೊಬ್ಬರು ಕನ್ನಡಿಗರು ಮತ್ತು ಮೂರನೆಯವರು ಸಿಂಹಳ ದೇಶದವರು. ಇಂತಹ ಹಲವಾರು ಉದಾಹರಣೆಗಳನ್ನು ಅಲ್ಲಲ್ಲಿ ಕಾಣಬಹುದು ದೇಶದ ಹೆಚ್ಚಿನ ಕಡೆಗಳಲ್ಲಿ ಜನರು ಇನ್ನೂ ಹಳೇ ಸಂಪ್ರದಾಯಗಳಿಗೆ ಕಟ್ಟುಬಿದ್ದಿರುವಾಗ ಮಹಾರಾಷ್ಟ್ರದಲ್ಲಿ ಮಾತ್ರ ಈ ಹೊಸ ಬದಲಾವಣೆಗೆ ಕಾರಣವೇನಿರಬಹುದು?

ಮಹಾರಾಷ್ಟ್ರೀಯರ ವಿಜಾತೀಯ ವಿವಾಹದಲ್ಲಿಯು ಒಂದು ವೈಶಿಷ್ಟ್ಯವೆಂದರೆ ಇಲ್ಲಿಯ ಹೆಂಗಸರು ಬೇರೆ ಜಾತಿಯ ಅಥವಾ ಪ್ರಾಂತದ ಗಂಡಸರನ್ನು ಮದುವೆಯೊಗುವುದು ಸಾಮಾನ್ಯವಲ್ಲದೆ ಇಲ್ಲಿಯ ಗಂಡಸರು ಪರಜಾತಿಯ ಅಥವಾ ಹೊರ ಪ್ರಾಂತದ ಹೆಂಗಸರನ್ನು ಮದುವೆಯಾಗುವುದು ಬಹು ವಿರಳ. ಮಹಾರಾಷ್ಟ್ರದ ಹೆಂಗಸರೂ ಆದರಲ್ಲೂ ಕೊಂಕಣಸ್ತ ಬ್ರಾಹ್ಮಣರು ಬಹಳ ಬೆಳ್ಳಗಿದ್ದು ರೂಪವತಿಯರಾಗಿರುತ್ತಾರಲ್ಲದೆ ಹೆಚ್ಚಿನವರು ಕಾಲೇಜು ವಿದ್ಯಾಭ್ಯಾಸವನ್ನು ಮಾಡಿರುತ್ತಾರೆ. ದೇಶದ ಇತರ ಕಡೆಗಳ ಜನರನ್ನು ಆಕರ್ಷಿಸಲು ಇದೊಂದು ಮುಖ್ಯ ಕಾರಣವೆಂದರೆ ತಪ್ಪಾಗದು. ಎರಡನೆಯದಾಗಿ, ಇಲ್ಲಿಯ ತರುಣಿಯರು ದಕ್ಷಿಣ ಹಿಂದೂ ದೇಶದ ಹೆಂಗಸರಿಗಿಂತ ತುಂಬಾ ಮುಂದುವರಿದವರು ಬಹು ಮಟ್ಟಿಗೆ ಸ್ವತಂತ್ರರು ಮತ್ತು ಸಾಮರ್ಥ್ಯವುಳ್ಳವರಿದ್ದು ತಮ್ಮ ಹೆಚ್ಚಿನ ವ್ಯವಹಾರವನ್ನು ತಾವೇ ಮೂಡಿಕೊಳ್ಳುವ ಸ್ವಭಾವದವರು. ಮನೆಯ ಆಯವ್ಯಯ, ಕೊಡುಕೊಡುವುದು ಮೊದಲಾದ ಗಂಡಸರ ಜವಾಬ್ದಾರಿಯನ್ನು ತಾವೇ ಹೊರುತ್ತಾರೆ. ಇಂತಹ ಕುಟುಂಬಗಳಲ್ಲಿ ಬೆಳೆದುಬರುವ ಯುವತಿಯರಿಗೆ ತಮ್ಮ ಜೀವನದ ಮುಖ್ಯ ವಿಷಯವಾದ ಮದುವೆಯ ವಿಚಾರದಲ್ಲಿ ಬಹುಮಟ್ಟಿನ ಸ್ವಾತಂತ್ರ್ಯವಿರುವುದು ಸಾಮಾನ್ಯ ಭಾವಿಕವೆ. ಶಾಲಾ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುವಾಗ ತಮ್ಮ ಮೆಚ್ಚುಗೆಯ ಯುವಕರೊಡನೆ ಸ್ನೇಹ ಬೆಳೆಸಲು ಅವರಿಗೆ ಅವಕಾಶವೂ ಅನುಮತಿಯೂ ಇರುತ್ತದೆ. ವಿಜಾತಿಯ ವಿವಾಹಗಳು ಬಹುಮಟ್ಟಿಗೆ ತರುಣ-ತರುಣಿಯರೊಳಗೆ ನಡೆಯುವ ಪ್ರೇಮದ ಫಲಿತಾಂಶ. ಮದುವೆಗಿಂತ ಬಹು ಸಮಯದ ಮುಂಚೆ ಪ್ರಣಯಿಗಳು ವಡನಾಡಿಕೊಂಡಿರುವುದು ಇಲ್ಲಿ ಒಂದು ಸಾಮಾನ್ಯದ ನೋಟ. ಕಳೆದ ವರ್ಷ ನಮ್ಮ ಆಫೀಸಿಗೆ ಟ್ರೈನಿಂಗಿಗೆ ಬಂದ ವಿದ್ಯಾರ್ಥಿಗಳಲ್ಲಿ ಒಬ್ಬ ಮೈಸೂರಿನ ಯುವಕನೂ ಇನ್ನೊಬ್ಬಳು ಮಹಾರಾಷ್ಟ್ರದ ಮಹಿಳೆಯೂ ಇದ್ದರು. ಇವರೊಳಗೆ ಪ್ರೇಮ ಬೆಳೆದು ವರ್ಷದ ಅಂತ್ಯದಲ್ಲಿ ಟ್ರೈನಿಂಗ್ ಮುಗಿಯುವಾಗ ಅವರೊಳಗೆ ಮದುವೆಯ ಮಾತುಕತೆಯೂ ಮುಗಿದಿತ್ತು. ವಿಜಾತೀಯ ವಿವಾಹದಿಂದ ಇನ್ನೊಂದು ಲಾಭವೆಂದರೆ ಪ್ರೇಮದ ತಳಹದಿಯ ಮೇಲೆ ಕಟ್ಟಲ್ಪಡುವ ಈ ವಿವಾಹ ಸೌಧಗಳಲ್ಲಿ ವರದಕ್ಷಿಣೆಯ ಕಿರುಕಾಳಕ್ಕೆ ಅವಕಾಶವಿರುವುದಿಲ್ಲ. ಬುದ್ಧಿವಂತರಾದ ಮಹಾರಾಷ್ಟ್ರದ ಜನರು ಇದರ ಗುಟ್ಟನ್ನು ಚೆನ್ನಾಗಿ ಅರಿತುಕೊಂಡಿರಬೇಕು.

ಕಾರಣ ಯಾವುದೇ ಇರಲಿ. ಇಂತಹ ವಿಜಾತೀಯ ಮತ್ತು ದ್ವಿಭಾಷಾ ಜನರೊಳಗೆ ನಡೆಯುವ ಮದುವೆಯು ದೇಶದ ದೃಷ್ಟಿಯಿಂದ ತುಂಬಾ ಹಿತಕರವೆನ್ನಬೇಕು. ಹಿಂದೂ ಸಮಾಜದಲ್ಲಿ ಜಾತೀಯತೆಯಿಂದ ಉಂಟಾದ ಹಾನಿ ಅಷ್ಟಿಷ್ಟಲ್ಲ. ಜಾತಿ, ಜಾತಿಗಳೊಳಗಣ ದ್ವೇಷ ಒಬ್ಬರು ಮೇಲು ಇನ್ನೊಬ್ಬರು ಕೀಳು ಎನ್ನುವ ಕರಡು ಭಾವನೆ ಮಾಯವಾಗಬೇಕಾದರೆ ವಿಜಾತೀಯ ಮದುವೆಗಿಂತ ಉತ್ತಮ ಮದ್ದು ಬೇರೊಂದಿಲ್ಲ. ಗಾಂಧಿಜೀಯವರು ಹರಿಜನೋದ್ಧಾರಕ್ಕೆ ಈ ಮದ್ದನ್ನು ಎಂದೋ ಹೇಳಿಕೊಟ್ಟಿದ್ದರು. ಅಂತೆಯೇ ಬೇರ ಬೇರೆ ಪ್ರಾಂತಗಳ ಜನರೊಳಗೆ ರಕ್ತ ಸಂಬಂಧ ಬೆಳೆಯುವಾಗ ನಾವು ಕನ್ನಡಿಗರು ಅವರು ಪಂಜಾಬಿಗಳು ಎನ್ನುವ ಬೇಧಭಾವನೆ ಇಲ್ಲದೆ ನಾವೆಲ್ಲರೂ. ಒಂದೇ ಹಿಂದೂದೇಶದ ಪ್ರಜೆಗಳನ್ನುವಜಾಕ್ಯಭಾವ ಉಂಟಾಗುತ್ತದೆ. ಇಂತಹ ಮದುವೆಗಳಲ್ಲಿ ಹುಟ್ಟುವ ಮಕ್ಕಳ ಆರೋಗ್ಯವೂ ಬಹಳ ಉತ್ತಮ ರೀತಿಯಲ್ಲಿರುತ್ತದೆಂದು ತಿಳಿದವರ ಅಭಿಪ್ರಾಯ. ಬೇರೆ ಬೇರೆ ವರ್ಗದ ಎರಡು ಮರಗಳನ್ನು ಒಂದುಗೂಡಿಸಿ 'ಕಸಿ'ಮಾಡುವಂತೆ ಎರಡು ವರ್ಗದ ಅಥವಾ ಜಾತಿಯ ಜನರು ಬೆರೆಯುವುದರಿಂದ ಹುಟ್ಟುವ ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳೆವಣಿಗೆ ಉಚ್ಚ ಮಟ್ಟಕ್ಕೇರುತ್ತದೆ.

ವಿಜಾತೀಯ ಮದ ವೆಗಳಿಂದ ಸಮಾಜಕ್ಕೆ ಮಾತ್ರ ಒಳಿತಾದರೆ ಸಾಲದು; ಅದರಲ್ಲಿ ಭಾಗಿಗಳಾದ ದಂಪತಿಗಳಿಗೂ ಸುಖ ಬೇಡವೆ? ಪೂನದಲ್ಲಿ ಕಂಡುಬರುವ ಇಂತಹ ದಂಪತಿಗಳ ಸುಖ ಸಂತೋಷಕ್ಕೆ ಯಾವ ತೊಂದರೆಯೂ ಬಂದಂತೆ ಕಾಣುವುದಿಲ್ಲ. ವಿವಾಹ ವಿಚ್ಛೇದನವಂತೂ ಇಲ್ಲವೇ ಇಲ್ಲವೆನ್ನಬಹುದು. ಈ ದಂಪತಿಗಳಲ್ಲಿ ಬಹು ಮಟ್ಟಿಗೆ ಇಬ್ಬರೂವಿದ್ಯಾವಂತರಿದ್ದು ಕೆಲವು ಕುಟುಂಬಗಳಲ್ಲಿ ಪತಿಪತ್ನಿಯರಿಬ್ಬರೂ ದುಡಿಯುತ್ತಾರೆ. ಆದುದರಿಂದ ತನ್ಮೊಳಗಿನ ಮತ ಬೇಧಗಳನ್ನು ಹೋಗಲಾಡಿಸಿಕೊಂಡು ಹೋಗಲನುವಾಗುವ ಮಾನಸಿಕ ಬೆಳೆವಣಿಗೆಯೂ, ಆರ್ಥಿಕ ಸಮಸ್ಯೆಗಳನ್ನೂ ನೀಗಿಸಿಕೊಳ್ಳಲು ಸಾಕಷ್ಟು ಉತ್ಪತ್ತಿಯೂ ಇರುತ್ತದೆ. ಇಂತಹ ಮದುವೆಗಳಲ್ಲಿಯೂ ಒಂದು ಮುಖ್ಯವಾದ ಸಮಸ್ಯೆಯೆಂದರೆ ಹುಟ್ಟುವ ಮಕ್ಕಳದ್ದು. ಸಮಾಜವು ಈ ಮಕ್ಕಳಿಗೆ ಯಾವ ಸ್ಥಾನವನ್ನು ಕೊಡುತ್ತಿದೆ. ಅವುಗಳ ಮದುವೆ ಹೇಗೆ ಮತ್ತು ಯಾರೊಡನೆ ಆಗಬೇಕು? ಕೆಲವು ವರ್ಷಗಳ ಹಿಂದೆ ಇಬ್ಬೊಂದು ದೊಡ್ಡ ಪ್ರಶ್ನೆ. ವಿಜಾತೀಯ ವಿವಾಹ ಬಹಳ ವಿರಳವಿದ್ದಾಗ ಆದರಿಂದ ಹುಟ್ಟಿದ ಮಕ್ಕಳನ್ನು ಜಾತಿ ಹೀನರೆಂದು ಹೀಯಾಳಿಸುತ್ತಿದ್ದರು. ಆದರೆ ಇತ್ತೀಚೆಗೆ ಪರಿಸ್ಥಿತಿ ಬದಲಾಗಿದೆ. ಇಂತಹ ಮದುವೆಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿರುವುದರಿಂದ ಈ ಸಮಸ್ಯೆಯೂ ದೂರವಾಗುತ್ತಿದೆ. ಇನ್ನು ಮುಂದೆ ಗಂಡು ಹೆಣ್ಣು ಒಬ್ಬರನೊಬ್ಬರಂ ಸ್ತುತಿಸಿ ಮದುವೆಯಾಗುವಾಗ ಜಾತಿಯ ಪ್ರಶ್ನೆಯನ್ನೆತ್ತಲು ಯಾರಿಗೆ ಧೈರ್ಯ.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

1962ನೇ ಇಸವಿ ನಂಬರು O. S. 70.

ಕೆ. ಕೃಷ್ಣವೇಣಿ ಅಮ್ಮ — ವಾದಿ.

ಮತ್ತು

ಕುಂಜೂರು ರಾಮಚಂದ್ರ ರಾವ್ — ಪ್ರತಿವಾದಿ

ಇವರೊಳಗೆ

ಉಪ್ಪಿ ಕಾಲೂಕು ಎಲ್ಲೂರು ಗ್ರಾಮದ ಕುಂಜೂರಿನಲ್ಲಿರುವ ಕೆ. ವ್ಯಾಸ ರಾಯರ ಮಗ ಕುಂಜೂರು ರಾಮಚಂದ್ರ ರಾಯರಿಗೆ.

ವಾದಿರು ನಿಮ್ಮ ಮೇಲೆ ಪ್ಲೆಂಟು ನಿವೃತ್ತಿ ಗೋಸ್ಕರ ಮ್ಯಾಜ್ಞ ದಾವಲು ಮಾಡಿದ್ದಾರೆ. ಆದ ಕಾರಣ ದಾವೆಗೆ ಮುದ್ದಾಗಿಯೂಗಲಿ ಪ್ಲೀಡರ್ ಮೂಲಕವಾಗಿಯೂಗಲಿ ದಾವೆಗೆ ಪ್ರತ್ಯುತ್ತರ ಹೇಳುವುದಕ್ಕಾಗಿ ನೀವು 1962ನೇ ಇಸವಿ ಜುಲ್ಯಾ ತಿಂಗಳು 21ನೇ ತಾರೀಖು ಹಗಲು 10 ಗಂಟೆಗೆ ಈ ಕೋರ್ಟಿನಲ್ಲಿ ಹಾಜರಾಗಲಿಕ್ಕೆ ಇದರಿಂದ ಆಜ್ಞಾಪಿಸಲ್ಪಟ್ಟಿದೆ.

ಮೇಲೆ ನಮೂದಿಸಿದ ದಿವಸದಲ್ಲಿ (ನುತ್ತು ಗಂಟೆಗೆ) ನೀವು ಹಾಜರಾಗದಿದ್ದರೆ ನಿಮ್ಮ ಗೈರುಹಾಜರಿಯಲ್ಲಿ ವ್ಯಾಜ್ಯವು ಕೈಗೆಲು ಮಾಡೋಣಾದೀತೆಂತ ನೀವು ತಿಳಿಯಕ್ಕದ್ದು.

By Order

N. Ramachandra Bhat,

Counsel of Plaintuff.

ವಿಜಾತೀಯ ವಿವಾಹ

ಹಲವು ಸಮಸ್ಯೆಗಳಿಗೆ ಪರಿಹಾರ

ಶ್ರೀ ವಿ. ವಿ. ಶೆಟ್ಟಿ, ಪೂನ.

ಹಿಂದೂ ಸಮಾಜವು, ಬ್ರಹ್ಮ, ಕ್ಷತ್ರಿಯ, ವೈಶ್ಯ ಮತ್ತು ಶೂದ್ರ ಎನ್ನುವ ನಾಲ್ಕು ವರ್ಣಗಳಾಗಿ ವಿಂಗಡಿಸಲ್ಪಟ್ಟಿಂದಿನಿಂದ ಒಂದೇ ಜಾತಿಯ ಗಂಡು ಮತ್ತು ಹೆಣ್ಣುಗಳೊಳಗೆ ಮಾತ್ರ ಮದುವೆಯಾಗಬೇಕೆನ್ನುವ ಕಟ್ಟಳೆಯು ಬಲವಾಗಿ ಬೆಳೆದು ಬಂದಿದೆ. ಇನ್ನೂ ಹೆಚ್ಚೆಂದರೆ ಒಂದೇ ಜಾತಿಯ ಜನರಲ್ಲಿ ಕೂಡಾ ಕೆಲವು ಗುಂಪುಗಳಿದ್ದು ಆಯಾಯ ಗುಂಪಿನವರಲ್ಲಿ ಮಾತ್ರ ಮದುವೆ ನಡೆಯಬೇಕಲ್ಲದೆ ಒಂದು ಗುಂಪಿಗೆ ಸೇರಿದ ಗಂಡು ಇನ್ನೊಂದು ಗುಂಪಿಗೆ ಸೇರಿದ ಹೆಣ್ಣನ್ನು ಮದುವೆಯಾಗುವುದು ಕೂಡಾ ಅಸಾಧ್ಯವಾಗಿದೆ. ಉದಾಹರಣೆಯಾಗಿ ಬ್ರಾಹ್ಮರಲ್ಲಿರುವ ವೈಷ್ಣವರು ಮತ್ತು ಶೈವರೆನ್ನುವ ಬೇಧ. ಹಾಗೆಯೇ ಲಿಂಗಾಯತರಲ್ಲಿ ಬಣಜಿಗ, ಶಿಂಪಿ, ಸಂಚಾಳರೆನ್ನುವ, ಕೆಲವು ಸಂಗಡಗಳಿದ್ದು ಅವರೊಳಗೆ ಊಟೋಪಚಾರ ನಡೆಯಬಹುದಾದರೂ ವಿವಾಹಕ್ಕೆ ಅನುಮತಿಯಿಲ್ಲ. ಶತಮಾನಗಳಿಂದ ಬಂದಿರುವ ಈ ಪದ್ಧತಿಯು ಇನ್ನೂ ಬಲಿಷ್ಠವಾಗಿರುವುದು ಆಶ್ಚರ್ಯವನ್ನುಂಟು ಮಾಡುತ್ತದೆ ಸ್ವಜಾತೀಯ ವಿವಾಹ ಬರೇ ಹಳ್ಳಿಯ ಪದ್ಧತಿ ಮಾತ್ರವಲ್ಲ. ದಕ್ಷಿಣ ಹಿಂದೂದೇಶದ ದೊಡ್ಡ ಪಟ್ಟಣಗಳಾದ ಮದ್ರಾಸು ಮತ್ತು ಬೆಂಗಳೂರುಗಳಲ್ಲಿ ಕೂಡಾ ವಿದ್ಯಾವಂತ ಜನರು ತಮ್ಮ ಜಾತಿಯವರನ್ನಲ್ಲದೆ ಬೇರೆಯವರೊಡನೆ ಮದುವೆಗೆ ಮನಸ್ಸು ಮಾಡುವುದಂತಿರಲಿ ಅಪ್ಪಿತಪ್ಪಿಯಾರಾದರೂ ವಿಜಾತೀಯ ಹುಡುಗಿ ಅಥವಾ ಹುಡುಗನನ್ನು ಮದುವೆಯಾದರೆ ಅವರನ್ನು ಜಾತಿಯಿಂದ ಹೊರಗೆಡಹುವ ಪ್ರಯತ್ನವೂ ನಡೆಯುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಮಹಾರಾಷ್ಟ್ರದ ಜನರಲ್ಲಿ ಅದರಲ್ಲೂ ಪೂನ ನಗರದ ಬ್ರಾಹ್ಮಣರಲ್ಲಿ ಒಂದು ದೊಡ್ಡ ವ್ಯತ್ಯಾಸ ಕಂಡು ಬರುತ್ತದೆ.

ಪೂನ ನಗರದ ಜನರಲ್ಲಿ ಬಹುಮಂದಿ ಬ್ರಾಹ್ಮಣರು ದೈವ ಭಕ್ತರೂ ಸುಶಿಕ್ಷಿತರೂ ಆದ ಇವರು ಮದುವೆಯ ವಿಚಾರದಲ್ಲಿ ನಮ್ಮ ದೇಶದ ಬೇರೆಲ್ಲಾ ಕಡೆಯ ಜನರಿಗಿಂತ ತುಂಬಾ ಸುಧಾರಿಸಿದವರೆನ್ನಬೇಕು. ಇವರಲ್ಲಿ ಹೆಲವಾರು ಜನರು ವಿಜಾತಿಯವರನ್ನು ಮದುವೆಯಾಗುತ್ತಾರೆ. ಸ್ರತಿ ವರ್ಷ ಇಂತಹ ಮದುವೆಗಳ ಸಂಖ್ಯೆ ಹೆಚ್ಚುತ್ತಿರುವುದರಿಂದ ಇಲ್ಲಿಯ ಜನರಿಗೆ ಅದೊಂದು ವಿಶೇಷದ ಸಂಗತಿ ಎನಿಸುವುದಿಲ್ಲ. ಇಲ್ಲಿಯ ಬ್ರಾಹ್ಮಣ ಯುವತಿಯರು ಇದೇ ಊರಿನ ಇತರ ಜಾತಿಯ ಯುವಕರನ್ನು ಮದುವೆಯಾಗುವುದು ಮಾತ್ರವಲ್ಲದೆ ಬೇರೆ ಪ್ರಾಂತಗಳ ಗಂಡಸರನ್ನು ಕೂಡಾ ವರಿಸುತ್ತಾರೆ. ಇದಕ್ಕೆ ಮನೆಯವರ ಸಮ್ಮತಿ ಮಾತ್ರವಲ್ಲದೆ ಹೆಚ್ಚಾಗಿ ಉತ್ತೇಜನವೂ ಇರುತ್ತದೆ. ನಾವಿರುವ ಕಟ್ಟಡದಲ್ಲಿರುವ ನಾಲ್ಕು ಕುಟುಂಬಗಳಲ್ಲಿ ಮೂರು ಕುಟುಂಬದವರು ವಿಜಾತಿಯ ದಂಪತಿಗಳು. ಈ ಮೂರು ಕುಟುಂಬಗಳಲ್ಲಿಯೂ ಹೆಂಗಸರು ಮಾತ್ರ ಮಹಾರಾಷ್ಟ್ರೀಯರು ಮತ್ತು ಗಂಡಸರಲ್ಲಿ ಒಬ್ಬರು ಒರಿಸ್ಸದವರು ಇನ್ನೊಬ್ಬರು ಕನ್ನಡಿಗರು ಮತ್ತು ಮೂರನೆಯವರು ಸಿಂಹಳ ದೇಶದವರು. ಇಂತಹ ಹಲವಾರು ಉದಾಹರಣೆಗಳನ್ನು ಅಲ್ಲಲ್ಲಿ ಕಾಣಬಹುದು ದೇಶದ ಹೆಚ್ಚಿನ ಕಡೆಗಳಲ್ಲಿ ಜನರು ಇನ್ನೂ ಹಳೇ ಸಂಪ್ರದಾಯಗಳಿಗೆ ಕಟ್ಟುಬಿದ್ದಿರುವಾಗ ಮಹಾರಾಷ್ಟ್ರದಲ್ಲಿ ಮಾತ್ರ ಈ ಹೊಸ ಬದಲಾವಣೆಗೆ ಕಾರಣವೇನಿರಬಹುದು?

ಮಹಾರಾಷ್ಟ್ರೀಯರ ವಿಜಾತೀಯ ವಿವಾಹದಲ್ಲಿಯ ಒಂದು ವೈಶಿಷ್ಟ್ಯವೆಂದರೆ ಇಲ್ಲಿಯ ಹೆಂಗಸರು ಬೇರೆ ಜಾತಿಯ ಅಥವಾ ಪ್ರಾಂತದ ಗಂಡಸರನ್ನು ಮದುವೆಯಾಗುವುದು ಸಾಮಾನ್ಯವಲ್ಲದೆ ಇಲ್ಲಿಯ ಗಂಡಸರು ಪರಜಾತಿಯ ಅಥವಾ ಹೊರ ಪ್ರಾಂತದ ಹೆಂಗಸರನ್ನು ಮದುವೆಯಾಗುವುದು ಬಹು ವಿರಳ. ಮಹಾರಾಷ್ಟ್ರದ ಹೆಂಗಸರೂ ಆದರಲ್ಲೂ ಕೊಂಕಣಸ್ತ ಬ್ರಾಹ್ಮಣರು ಬಹಳ ಬೆಳ್ಳಗಿದ್ದು ರೂಪವತಿಯರಾಗಿರುತ್ತಾರಲ್ಲದೆ ಹೆಚ್ಚಿನವರು ಕಾಲೇಜು ವಿದ್ಯಾಭ್ಯಾಸವನ್ನು ಮಾಡಿರುತ್ತಾರೆ. ದೇಶದ ಇತರ ಕಡೆಗಳ ಜನರನ್ನು ಆಕರ್ಷಿಸಲು ಇದೊಂದು ಮುಖ್ಯ ಕಾರಣವೆಂದರೆ ತಪ್ಪಾಗದು. ಎರಡನೆಯದಾಗಿ, ಇಲ್ಲಿಯ ತರುಣಿಯರು ದಕ್ಷಿಣ ಹಿಂದೂ ದೇಶದ ಹೆಂಗಸರಿಗಿಂತ ತುಂಬಾ ಮುಂದುವರಿದವರು ಬಹು ಮಟ್ಟಿಗೆ ಸ್ವತಂತ್ರರು ಮತ್ತು ಸಾಮರ್ಥ್ಯವುಳ್ಳವರಿದ್ದು ತಮ್ಮ ಹೆಚ್ಚಿನ ವ್ಯವಹಾರವನ್ನು ತಾವೇ ಮಾಡಿಕೊಳ್ಳುವ ಸ್ವಭಾವದರು. ಮನೆಯ ಆಯವ್ಯಯ, ಕೊಂಡುಕೊಡುವುದು ಮೊದಲಾದ ಗಂಡಸರ ಜವಾಬ್ದಾರಿಯನ್ನು ತಾವೇ ಹೊರುತ್ತಾರೆ. ಇಂತಹ ಕುಟುಂಬಗಳಲ್ಲಿ ಬೆಳೆದುಬರುವ ಯುವತಿಯರಿಗೆ ತಮ್ಮ ಜೀವನದ ಮುಖ್ಯ ವಿಷಯವಾದ ಮದುವೆಯ ವಿಚಾರದಲ್ಲಿ ಬಹುಮಟ್ಟಿನ ಸ್ವಾತಂತ್ರ್ಯವಿರುವುದು ಸ್ವಾಭಾವಿಕವೆ. ಶಾಲಾ ಕಾಲೇಜುಗಳಲ್ಲಿ ವಿದ್ಯಾಭ್ಯಾಸ ಮಾಡುವಾಗ ತಮ್ಮ ಮೆಚ್ಚುಗೆಯ ಯುವಕರೊಡನೆ ಸ್ನೇಹ ಬೆಳೆಸಲು ಅವರಿಗೆ ಅವಕಾಶವೂ ಅನುಮತಿಯೂ ಇರುತ್ತದೆ. ವಿಜಾತಿಯ ವಿವಾಹಗಳು ಬಹುಮಟ್ಟಿಗೆ ತರುಣ-ತರುಣಿಯರೊಳಗೆ ನಡೆಯುವ ಪ್ರೇಮದ ಫಲಿತಾಂಶ. ಮದುವೆಗಿಂತ ಬಹು ಸಮಯದ ಮುಂಚೆ ಪ್ರಣಯಿಗಳು ವಡನಾಡಿಕೊಂಡಿರುವುದು ಇಲ್ಲಿ ಒಂದು ಸಾಮಾನ್ಯದ ನೋಟ. ಕಳೆದ ವರ್ಷ ನಮ್ಮ ಆಫೀಸಿಗೆ ಟ್ರೈನಿಂಗಿಗೆ ಬಂದ ವಿದ್ಯಾರ್ಥಿಗಳಲ್ಲಿ ಒಬ್ಬ ಮೈಸೂರಿನ ಯುವಕನೂ ಇನ್ನೊಬ್ಬಳು ಮಹಾರಾಷ್ಟ್ರದ ಮಹಿಳೆಯೂ ಇದ್ದರು. ಇವರೊಳಗೆ ಪ್ರೇಮ ಬೆಳೆದು ವರ್ಷದ ಅಂತ್ಯದಲ್ಲಿ ಟ್ರೈನಿಂಗ್ ಮುಗಿಯುವಾಗ ಅವರೊಳಗೆ ಮದುವೆಯ ಮಾತುಕತೆಯೂ ಮುಗಿದಿತ್ತು. ವಿಜಾತೀಯ ವಿವಾಹದಿಂದ ಇನ್ನೊಂದು ಲಾಭವೆಂದರೆ ಪ್ರೇಮದ ತಳಹದಿಯ ಮೇಲೆ ಕಟ್ಟಲ್ಪಡುವ ಈ ವಿವಾಹ ಸೌಧಗಳಲ್ಲಿ ವರದಕ್ಷಿಣೆಯ ಕಿರುಕುಳಕ್ಕೆ ಅವಕಾಶವಿರುವುದಿಲ್ಲ. ಬುದ್ಧಿವಂತರಾದ ಮಹಾರಾಷ್ಟ್ರದ ಜನರು ಇದರ ಗುಟ್ಟನ್ನು ಚೆನ್ನಾಗಿ ಅರಿತುಕೊಂಡಿರಬೇಕು.

ಕಾರಣ ಯಾವುದೇ ಇರಲಿ, ಇಂತಹ ವಿಜಾತೀಯ ಮತ್ತು ದ್ವಿಭಾಷಾ ಜನರೊಳಗೆ ನಡೆಯುವ ಮದುವೆಯು ದೇಶದ ದೃಷ್ಟಿಯಿಂದ ತುಂಬಾ ಹಿತಕರವೆನ್ನಬೇಕು. ಹಿಂದೂ ಸಮಾಜದಲ್ಲಿ ಜಾತೀಯತೆಯಿಂದ ಉಂಟಾದ ಹಾನಿ ಅಷ್ಟಿಷ್ಟಲ್ಲ. ಜಾತಿ, ಜಾತಿಗಳೊಳಗಣ ದ್ವೇಷ ಒಬ್ಬರು ಮೇಲು ಇನ್ನೊಬ್ಬರು ಕೀಳು ಎನ್ನುವ ಕರಡು ಭಾವನೆ ಮೂಯವಾಗಬೇಕಾದರೆ ವಿಜಾತೀಯ ಮದುವೆಗಿಂತ ಉತ್ತಮ ಮದ್ದು ಬೇರೊಂದಿಲ್ಲ. ಗಾಂಧಿಜೀಯವರು ಹರಿಜನೋದ್ಧಾರಕ್ಕೆ ಈ ಮದ್ದನ್ನು ಎಂದೋ ಹೇಳಿಕೊಟ್ಟಿದ್ದರು. ಅಂತೆಯೇ ಬೇರೆ ಬೇರೆ ಪ್ರಾಂತಗಳ ಜನರೊಳಗೆ ರಕ್ತ ಸಂಬಂಧ ಬೆಳೆಯುವಾಗ ನಾವು ಕನ್ನಡಿಗರು ಅವರು ಪಂಜಾಬಿಗಳು ಎನ್ನುವ ಬೇಧಭಾವನೆ ಇಲ್ಲದೆ ನಾವೆಲ್ಲರ. ಒಂದೇ ಹಿಂದೂದೇಶದ ಪ್ರಜೆಗಳನ್ನುವ ಐಕ್ಯಭಾವ ಉಂಟಾಗುತ್ತದೆ. ಇಂತಹ ಮದುವೆಗಳಲ್ಲಿ ಹುಟ್ಟುವ ಮಕ್ಕಳ ಆರೋಗ್ಯವೂ ಬಹಳ ಉತ್ತಮ ರೀತಿಯಲ್ಲಿರುತ್ತದೆಂದು ತಿಳಿದವರ ಅಭಿಪ್ರಾಯ. ಬೇರೆ ಬೇರೆ ವರ್ಗದ ಎರಡು ಮರಗಳನ್ನು ಒಂದುಗೂಡಿಸಿ ಕಶಿ ಮಾಡುವಂತೆ ಎರಡು ವರ್ಗದ ಅಥವಾ ಜಾತಿಯ ಜನರು ಬೆರೆಯುವುದರಿಂದ ಹುಟ್ಟುವ ಮಕ್ಕಳ ದೈಹಿಕ ಮತ್ತು ಮಾನಸಿಕ ಬೆಳೆವಣಿಗೆ ಉಚ್ಛ ಮಟ್ಟಕ್ಕೇರುತ್ತದೆ.

ವಿಜಾತೀಯ ಮದುವೆಗಳಿಂದ ಸಮಾಜಕ್ಕೆ ಮಾತ್ರ ಒಳಿತಾದರೆ ಸಾಲದು; ಆದರಲ್ಲಿ ಭಾಗಿಗಳಾದ ದಂಪತಿಗಳಿಗೂ ಸುಖ ಬೇಡವೆ? ಪೂನದಲ್ಲಿ ಕಂಡುಬರುವ ಇಂತಹ ದಂಪತಿಗಳ ಸುಖ ಸಂತೋಷಕ್ಕೆ ಯಾವ ತೊಂದರೆಯೂ ಬಂದಂತೆ ಕಾಣುವುದಿಲ್ಲ. ವಿವಾಹ ವಿಚ್ಛೇದನವಂತೂ ಇಲ್ಲವೇ ಇಲ್ಲವೆನ್ನಬಹುದು. ಈ ದಂಪತಿಗಳಲ್ಲಿ ಬಹ ಮಟ್ಟಿಗೆ ಇಬ್ಬರೂವಿದ್ಯಾವಂತರಿದ್ದು ಕೆಲವು ಕುಟುಂಬಗಳಲ್ಲಿ ಪತಿಪತ್ನಿಯರಿಬ್ಬರೂ ದುಡಿಯುತ್ತಾರೆ. ಆದುದರಿಂದ ತಮ್ಮೊಳಗಿನ ಮತ ಬೇಧಗಳನ್ನು ಹೋಗಲಾಡಿಸಿಕೊಂಡು ಹೋಗಲನುವಾಗುವ ಮಾನಸಿಕ ಬೆಳವಣಿಗೆಯೂ, ಆರ್ಥಿಕ ಸಮಸ್ಯೆಗಳನ್ನೂ ನೀಗಿಸಿಕೊಳ್ಳಲು ಸಾಕಷ್ಟು ಉತ್ಪತ್ತಿಯೂ ಇರುತ್ತದೆ. ಇಂತ ಮದುವೆಗಳಲ್ಲಿಯ ಒಂದು ಮುಖ್ಯವಾದ ಸಮಸ್ಯೆಯೆಂದರೆ ಹುಟ್ಟುವ ಮಕ್ಕಳದ್ದು. ಸಮಾಜವು ಈ ಮಕ್ಕಳಿಗೆ ಯಾವ ಸ್ಥಾನವನ್ನು ಕೊಡುತ್ತಿದೆ. ಅವುಗಳ ಮದುವೆ ಹೇಗೆ ಮತ್ತು ಯಾರೊಡನೆ ಆಗಬೇಕು? ಕೆಲವು ವರ್ಷಗಳ ಹಿಂದೆ ಇದೊಂದು ದೊಡ್ಡ ಪ್ರಶ್ನೆ. ವಿಜಾತೀಯ ವಿವಾಹ ಬಹಳ ವಿರಳವಿದ್ದಾಗ ಆದರಿಂದ ಹುಟ್ಟಿದ ಮಕ್ಕಳನ್ನು ಜಾತಿ ಹೀನರೆಂದು ಹೀಯಾಳಿಸುತಿದ್ದರು. ಆದರೆ ಇತ್ತೀಚೆಗೆ ಪರಿಸ್ಥಿತಿ ಬದಲಾಗಿದೆ. ಇಂತಹ ಮದುವೆಗಳ ಸಂಖ್ಯೆ ದಿನೇ ದಿನೇ ಹೆಚ್ಚುತ್ತಿರುವುದರಿಂದ ಈ ಸಮಸ್ಯೆಯೂ ದೂರವಾಗುತ್ತಿದೆ. ಇನ್ನು ಮುಂದೆ ಗಂಡು ಹೆಣ್ಣು ಒಬ್ಬರನೊಬ್ಬರು ಪ್ರೀತಿಸಿ ಮದುವೆಯಾಗುವಾಗ ಜಾತಿಯ ಪ್ರಶ್ನೆಯನ್ನೆತ್ತಲು ಯಾರಿಗೆ ಧೈರ್ಯ.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

1962ನೇ ಇಸವಿ ನಂಬರು O S. 70.

ಕೆ. ಕೃಷ್ಣವೇಣಿ ಅಮ್ಮ — ವಾದಿ,

ಮತ್ತು

ಕುಂಜೂರು ರಾಮಚಂದ್ರ ರಾವ್ —

ಪ್ರತಿವಾದಿ.

ಇವರೊಳಗೆ

ಉಡ್ಪಿ ತಾಲೂಕು ಎಲ್ಲೂರು ಗ್ರಾಮದ ಕುಂಜೂರಿನಲ್ಲಿರುವ ಕೆ. ವ್ಯಾಸ ರಾಯರ ಮಗ ಕುಂಜೂರು ರಾಮಚಂದ್ರ ರಾಯರಿಗೆ,

ವಾದಿರು ನಿಮ್ಮ ಮೇಲೆ ಪ್ಲೆಂಟು ನಿವೃತ್ತಿ ಗೋಸ್ಕರ ವ್ಯಾಜ್ಯ ದಾಖಲು ಮಾಡಿದ್ದಾರೆ. ಆದ ಕಾರಣ ದಾವೆಗೆ ಖುದ್ದಾಗಿಯೂಗಲಿ ಪ್ಲೀಡರ್ ಮೂಲಕವಾಗಿಯೂಗಲಿ ದಾವೆಗೆ ಪ್ರತ್ಯುತ್ತರ ಹೇಳುವುದಕ್ಕಾಗಿ ನೀವು 1962ನೇ ಇಸವಿ ಜುಲ್ಯಾ ತಿಂಗಳು 21ನೇ ತಾರೀಖು ಹಗಲು 10 ಘಂಟೆಗೆ ಈ ಕೋರ್ಟಿನಲ್ಲಿ ಹಾಜರಾಗಲಿಕ್ಕೆ ಇದರಿಂದ ಆಜ್ಞಾಪಿಸಲ್ಪಟ್ಟಿದೆ.

ಮೇಲೆ ನಮೂದಿಸಿದ ದಿವಸದಲ್ಲಿ (ಮತ್ತು ಘಂಟೆಗೆ) ನೀವು ಹಾಜರಾಗದಿದ್ದರೆ ನಿಮ್ಮ ಗೈರುಹಾಜರಿಯಲ್ಲಿ ವ್ಯಾಜ್ಯವು ಫೈಸಲು ಮಾಡೋಣಾದೀತೆಂತ ನೀವು ತಿಳಿಯತಕ್ಕದ್ದು.

By Order

N. Ramachandra Bhat,

Counsel of Plaintiff.

Smoke And Enjoy
S.R. Beedies
SR
Which will give you
Entire Satisfaction
ಸೇವನೆಯ ಆನಂದಕ್ಕೆ
ಎಸ್. ಆರ್. ಬೀಡಿಗಳನ್ನು
ನೀವು ನಿಜವಾಗಿಯೂ ಮೆಚ್ಚುವಿರಿ
ಎಲ್ಲಾಕಡೆಗಳಲ್ಲಿಯೂ ಮಾರಲ್ಪಡುತ್ತವೆ.
S.R. Beedi Works UDIPI

ಎದೆಯೊಡತಿ ಇವಳಲ್ಲ

(೨ನೇ ಪುಟದಿಂದ)

ಅಷ್ಟೇ ತೀವ್ರಗಾಮಿತ್ವಬೇಕು. ಈ ತೀವ್ರಗಾಮಿತ್ವವನ್ನು ಕಲಿಸಿಕೊಟ್ಟವಳು ಅವಳು.

ಆದರೆ...ಅವಳು ಅವಳೆಂದು ಬೊಬ್ಬಿಡುತ್ತಿರುವೆನಲ್ಲಾ ಅವಳಿದೇನನ್ನು ಬಲ್ಲಳು? ಎಂಬ ಪ್ರಶ್ನೆ ನನ್ನನ್ನು ಧಿಗ್ಗನೆ ಮುತ್ತುವುದು. ಈ ಪ್ರಶ್ನೆಯೇ ನನ್ನ ನೋವಿನ ಸಾರ. ಚಿಂತೆಯ ಮೂಲ ಬಾಳಿನ ಚಿಂತೆ. ಇದೆಂದು ಬಗೆ ಹರಿದೀತು?

ಆ ಮಿಂಚು, ಬರೇ ಒಂದು ಮಿಂಚು ಅದು ಅಳಿಯಲಾರದ ಅಳಿಸಲಾರದ ಮುದ್ರೆಯನ್ನೊತ್ತಿ ಹೋಗಿದೆ. ಅದು ವಾಸಂತಿಯನ್ನು ನಾನು ಕಂಡ ಮೊದಲ ನೋಟ, ಮೊದಲ ಭೇಟಿ, ಮೊದಲ ಮಾತು. ಆ ದೃಶ್ಯವೊಂದುದಿನ, ದಿನ ಒಳಗಣ್ಣುಗಳೆದುರು ಆಡುವುದು. ಅದು ಮಿಂಚಿದಾಗಲೆಲ್ಲಾ ನೋವಿನ ಗೆರೆಯೊಂದು ಮೂಡುವುದು. 'ಅಯ್ಯೊ ಮುಗ್ಧನೇ' ಎನ್ನುವುದು. ನಿನ್ನ ಪ್ರೇಮವು ಕುರುಡು ಎಂದು ಅಣಕಿಸುವುದು. ಅಣಕಿಸುತ್ತಾ ನನ್ನ ಹೃದಯವನ್ನೇ ಅಲುಗಾಡಿಸುವುದು. ಆ ನೋವಿಗೆ ಕಾರಣ: ಅಂದು ನಾನವಳನ್ನು ಮೊದಲ ಬಾರಿ ಕಂಡಾಗ ಯಾರೋ ಏನೋ ಎಂಬಂತೆ ಕಂಡೆ. ನೂರಾರು ಭಗಿನಿಯರನ್ನು ಕಾಣುವಂತೆ ಅವರಲ್ಲೊಬ್ಬಳಾಗಿ ಕಂಡೆ. ಇವಳು ನನ್ನವಳಾಗಬೇಕೆಂಬ ಭಾವವಾಗಲೀ, ಬಯಕೆಯಾಗಲೀ, ಬೇರಿನ್ನಾವ ಒಲವಾಗಲೀ ಆಗ ಮೂಡಿರಲಿಲ್ಲ.

ಈ ಭಾವಗಳೆಲ್ಲಾ ಅವಳನ್ನು ಕಂಡು ಮರಳಿ ಬಂದ ಬಳಿಕವೇ ಮೂಡಿದುವು! ಅವಳು ನಿನ್ನವಳಾಗಬಹುದು ಎಂದು ಯಾರೋ ಒಳಗಿಂದ ಹೇಳಿದರು ಅವಳು ನನ್ನವಳೆಂದು ಹೃದಯ ವೆಲ್ಮೆಲ್ಲನೆ ಸಾರಿ ಮರೆಯದಂತೆ ಮೂಡಿತು. ಹೀಗೆ, ಅವಳು ಮರೆಯಾದ ಬಳಿಕವೇ ಅವಳನ್ನು ಅರಿಸಿದೆ. ಅವಳು ಕಣ್ಣಿಗೆ ಕಾಣದಿರುವಾಗಲೇ ಅವಳನ್ನು ಒಲವಿನ ನೋಟದಿಂದ ನೋಡಿದೆ.

ಕಣ್ಣೆದುರೇ ಕಂಡು ಅರಿಸಿ, ಪ್ರೇಮದ ಕಣ್ಣಿನಿಂದ ನೋಡಿ ಒಲವು ತುಂಬಿದೆದೆಯಿಂದ ಮಾತನಾಡಿ ನನ್ನ ಗೆಳತಿಯಾಗಲಿರುವವಳೆಂದು ಕಣ್ತುಂಬಾ ನೋಡಿ ಬರಲಿಲ್ಲವಲ್ಲಾ ಎಂಬುದೇ ನನ್ನ ಕೂರಗು.

ಮತ್ತೆ, ಕಾದು ಕುಳಿತ ನನ್ನನ್ನು ಮನಸ್ಸು ಪ್ರಶ್ನಿಸುತ್ತದೆ. 'ಇದು ವ್ಯರ್ಥವಾದರ' ಎಂದು. ಆ ಕಾಣದ ವ್ಯಕ್ತಿ ಯಾರೋ ಏನೋ, ಏನು ನಂಬುಗೆ? ನಿನ್ನ ಕಣ್ಣೆದುರೇ ಇರುವ ಸುಂದರ ಮೂರ್ತಿ ಶ್ಯಾಮಲೆಯನ್ನೇ ಸ್ವೀಕರಿಸು ಎನ್ನುತ್ತಿದೆ. ಅವಳ ಮುದ್ದು ಮೊಗದಲ್ಲಿ ಈಗ ಬಾಡಿದ ನಗುವನ್ನು ಕಂಡು ಮನಸ್ಸು ಪುಟಿಯುತ್ತದೆ.

ರೊಟ್ಟಿ ತಿಂದವನೂ ಪಾಯಸವುಂಡವನೂ, ಮೂಢನೂ ಬುದ್ಧಿವಂತನೂ, ಜಡನೂ ಸಾಧಕನೂ ಸಮಾನತೆಯನ್ನು ಹೊಂದಲೇ ಬೇಕಾದ ಒಂದು ನಿಶ್ಚಿತ ನಿವಿಷದ ತನಕ ಬಾಳುವ ಅಸ್ಥಿರ ಜೀವಿಗಳು ನಾವಾಗಿರುವಾಗ ಪ್ರೇಮವಾದರೇನು ಭಗ್ನಪ್ರೇಮವಾದರೇನು ಎಂದು ನೆನೆ ನೆನೆದು ಬಳಲಿದ ಮನ ಮಿಡುಕುತ್ತದೆ

ನಗುವ ಸಮಾಜ—ಲೋಕ, ಇದು ಎಲ್ಲಿಯ ತನಕ? ನಕ್ಕವನೂ ನಗಿಸಿಕೊಂಡವನೂ ಒಂದೇ ಎಂಬಲ್ಲಿಯ ತನಕ ನಕ್ಕು ಬಾಳಿದರೂ ಒಂದೆ. ನಗಿಸಿಕೊಂಡರೂ ಒಂದೆ ಎಲ್ಲವೂ ಒಂದೆ.

....ಶ್ಯಾಮಲೆಯನ್ನೇ ಕೈಹಿಡಿದರೇನು? ಮರಣವೆಂಬ ನಿಶ್ಚಿತ ಗಡಿಯ ತನಕ ಯಾವುದಾದರೊಂದು ರೀತಿಯಲ್ಲಿ ಬಾಳಬೇಕು. ಇದು ನಿಶ್ಚಿತ ಹಾಗಾದರೆ ಇದು ಈ ರೀತಿಯಲ್ಲಿ ಆಗಬೇಕೆಂದೇನು, ಆ ರೀತಿಯಾಗಲಿ ಎಂದು ಮನಸ್ಸು ಅತ್ತ ನೆಗೆಯುತ್ತದೆ.

ಜೀವನ—ಸಮಾಜ – ಕಾಲಗಳ ಸಾವಿರ ಮಾತುಗಳನ್ನು ಮೆಟ್ಟಿ ಆಕ್ಮದ ಒಂದು ನಾದ ವಿಜಯೋನ್ಮುಖಿಯಾಗಿದೆ.

"ಶ್ಯಾಮಲೆಗೆ ಮದುವೆ ಮಾಡಬೇಕೆಂದಿದ್ದೇನೆ ಹರಿ" ಶ್ಯಾಮಲೆಯ ತಾಯಿ ಹೇಳುವರು.

"ಮುಂದಿನ ವರ್ಷ ನಿನ್ನ ಮದುವೆ ನಡೆಯಲೇ ಬೇಕು" ತಂದೆಯ ಧ್ವನಿ ಇತ್ತ ಕಾಡುವುದು. ಆದರೆ ಎಲ್ಲದಕ್ಕು ನನ್ನ ಉತ್ತರ ನಿರುತ್ತರ!

"ಏನು ಹರಿ. ಇನ್ನೂ ಮದುವೆಯ ಯೋಚನೆಯೇ ಇಲ್ಲವೇ" ಎಂದು ತಾಯಿ ಕೇಳುವರು.

"ಇಲ್ಲಮ್ಮ ಎರಡು ವರ್ಷ ಕಳೆಯಲಿ"

"ಯಾಕೋ....ಮತ್ತೆ ಎರಡು ವರ್ಷ?"

"ಈಗ ಬೇಡಮ್ಮ"

"ಅದೇ ಯಾಕೆ ಅಂತ. ನೀನಾದರೋ ಇನ್ನೆರಡು ಮೂರು ವರ್ಷಾಂತ ಸುಮ್ಮನಿರುವೆ. ಆದರೆ ನಿನ್ನ ಮಾವ ಏನು ಮಾಡಬೇಕು? ಪ್ರಾಯಕ್ಕೆ ಬಂದ ಹುಡುಗಿಯನ್ನು ಹಾಗೆ ಇರಿಸಿಕೊಳ್ಳಲಾಗುತ್ತದೆಯೆ?"

"ಛೆ ಛೆ! ಯಾಕೆ ಅವಳನ್ನು ಇರಿಸಿಕೊಳ್ಳಬೇಕು? ಮದುವೆ ಮಾಡಬಹುದಲ್ಲಾ....."

"ಅಂದರೆ.. ನಿನ್ನ ಮಾತೇ ಅರ್ಥವಾಗದಲ್ಲಾ ಹರಿ..ಹಾಗಾದರೆ ನೀನು...."

"ಹೌದಮ್ಮ ನಾನು ಶ್ಯಾಮಲೆಯನ್ನು ಮದುವೆಯಾಗುವುದಿಲ್ಲ"

ಇದು ಎಲ್ಲರಿಗೂ ಸಿಡಿಲಾಯಿತು. ಆದರೆ ನನ್ನ ವಿಚಿತ್ರ ಪ್ರೇಮ ಕೆಧೆಯನ್ನು ಇವರಿಗೆ ವಿವರಿಸಲಾಪೆನೆ?

ಮತ್ತೊಮ್ಮೆ ತಂದೆ ಅಧಿಕಾರವಾಣಿಯಿಂದ ಕೇಳಿದರು:

"ಶ್ಯಾಮಲೆಯನ್ನು ಮದುವೆಯಾಗುತ್ತೀಯೋ ಇಲ್ಲವೊ?"

"ಇಲ್ಲಪ್ಪ. ಶ್ಯಾಮಲೆಗೆ ನಾನೊಬ್ಬನೇ ಗಂಡು ಈ ಪ್ರಪಂಚದಲ್ಲಿ ಇರುವುದೂ ಅಲ್ಲ ನಾನು ಅವಳನು ಮದುವೆಯಾಗುವುದೂ ಇಲ್ಲ ನೀವು ಹೇಳಿದಂತೆ ಕೇಳಬೇಕಂತೆ ಆದರೆ ಮದುವೆಯಾಗುವಾತ ನಾನು. ಬಾಳುವಾತ ನಾನು. ಮತ್ತೇಕೆ ಇಷ್ಟು ಒತ್ತಾಯ" ಎಂದೆ.

ಮಳೆ ಸ್ತಬ್ಧವಾಯಿತು ಮೋಡ ಮಾತ್ರ ಆಡುತ್ತಿತ್ತು.

ಆದರೆ ನಿನ್ನನ್ನು ಅಕ್ಕರೆಯಿಂದ ಲಾಲಿಸಿದ ನಿನ್ನ ಅತ್ತೆ ಮಾವಂದಿರಿಗೆ ದುಃಖವುಂಟು ಮಾಡಿದೆ ಎಂದು ನನ್ನ ಮನಸ್ಸು ಮಿಡಿಯುವುದು. ಶ್ಯಾಮಲೆಗೆ ಅಪಚಾರವೆಸಗಿದೆನಲ್ಲಾ ಎಂದು ಹೃದಯ ಕುದಿಯುವುದು.

ಆದರೆ ಏನು ಮಾಡಲಿ? ಅವ್ಯಕ್ತ ಶಕ್ತಿಯೊಂದು ನನ್ನನ್ನು ಆಕಡ ಎಳೆಯುವುದು. ಇಲ್ಲಿ ನೂರು ನೋಟ, ಸಾವಿರ ಮಾತುಗಳಲ್ಲಿ ಕಾಣದ ಶಾಂತಿ, ಆನಂದ ವಾಸಂತಿ ಎಂಬ ನೆನಪಿನಲ್ಲಿದೆಯೆಂದು ನನ್ನೊಳ ಬಗೆಗೆ ಗೊತ್ತು.

ಈಗೀಗ ನನ್ನ ಪ್ರೀತಿಯ ಅತ್ತೆಯ ಮನೆಗೆ ಹೋದರೆ ಶ್ಯಾಮಲೆ ನನ್ನ ಕಣ್ಣಿಗೆ ಬೀಳದಂತೆ ತಪ್ಪಿಸಿಕೊಳ್ಳುತ್ತಿದ್ದಳು. ಅತ್ತೆ ಮಾವಂದಿರಾದರೋ ಒಳಗೆ ನೋವಿದ್ದರೂ ಅಕ್ಕರೆಯಿಂದಲೇ ಮಾತನಾಡುವರು. ಇದು ನನ್ನ ನೋವಿಗೆ ಮತ್ತೂ ಪುಟ ಕೊಡುವುದು.

ಒಮ್ಮೆ ನಾನಲ್ಲಿಗೆ ಹೋದಾಗ, ಮಧ್ಯಾಹ್ನದ ಹೊತ್ತು ಶ್ಯಾಮಲೆಯೊಬ್ಬಳೇ ಪಡಸಾಲೆಯಲ್ಲಿ ನಿದ್ರಿಸುತ್ತಿದ್ದಳು. ಕೆಲವು ಸಮಯದಿಂದ ಅವಳನ್ನು ನಾನು ಸರಿಯಾಗಿ ಕಂಡಿರಲೇ ಇಲ್ಲ

ಅದೇ ಸುಂದರವಾದ ಮನವನ್ನು ಅಪಹರಿಸುವ ಮುಖ ನಿದ್ರೆಯಲ್ಲೂ ಮೆಲ್ನಗುವಿನ ಮುದ್ರೆ. ಮೃದು ಭಾವದ ಬಣ್ಣ ಬಳೆದ ತುಟಿ. ನೀಳವಾದ ಜಡೆ ಅವಳೆದೆಯ ಮಧ್ಯದಲ್ಲಿ ಮಲಗಿದೆ. ಯೌವನದ ಪ್ರಫುಲ್ಲ ಸೌಂದರ್ಯವು ಅಂಗಾಂಗಗಳಲ್ಲೂ ಎದ್ದು ಕಾಣುತ್ತಿದೆ. ಅವಳು ನಿದ್ರಿಸಿದ್ದರೂ ಅವಳೆದೆಯಿನ್ನೂ ನಿದ್ರಿಸಿಲ್ಲವೇನೋ ಎಂಬಂತಹ ಮೃದುಸ್ಪಂದನ.

ಯಾಕ ವ್ಯರ್ಥಕಾಲ ಹರಣಗೈಯುವೆ? ಕಣ್ಣೆದುರಿಗಿರಿಸಿಕೊಂಡು ಯಾಕ ದೂರಾಗಿಸಿಕೊಳ್ಳುವೆ? ಶ್ಯಾಮಲೆ ನೀನು ಬಯಸಿದರೆ ನಿನ್ನ ಕೈಯೊಳಗಿನ ಹಣ್ಣು ಅವಳನ್ನ ಕೈಹಿಡಿ. ಬಾಳಗೆಳತಿಯಾಗಿಸಿ ಬಾಳು ಎಂದಿತು ಮನದ ಮೂಲೆಯಿಂದ ಒಂದು ಧ್ವನಿ.

ಆದರೆ ಇದು ಕ್ಷಣಿಕ! ಕ್ಷಣಿಕ ವ್ಯಾಮೋಹ! ಆ ಬಳಿಕ ಮತ್ತೆ ಅಯ್ಯೋ ಸೋತು ಹೋದೆನಲ್ಲಾ ಎಂಬ ಚಿಂತೆಗೆ ಮೂಲ. ಇಂಥ ಚಾಂಚಲ್ಯಕ್ಕೆ ನನ್ನೆದೆಯಲ್ಲಿ ಸ್ಥಾನವಿಲ್ಲ ಎಂದು ಮನವು ಮರುಳಾಗುವ ಮೊದಲೇ ಮರಳಿದೆ.

ಆದರೆ ನನ್ನ ಮನವೆಂದೂ ಹೀಗೆ ಮರುಳಾಗದು. ಶ್ಯಾಮಲೆಯೇನೋ ನನ್ನೆದುರಿದ್ದು ನನ್ನನ್ನು ಮೋಹಿಸುತ್ತಿರುವಳು ಹೌದು ನನ್ನ ಮನಸ್ಸನ್ನು ಆಗಾಗ ಕಲಕಿಸಿಳೆಯುತ್ತಿರುವಳು ಆದರೇನು? ಅವಳು ವಾಸಂತಿ, ಮರೆಯಾಗಿದ್ದೇ ತನ್ನನ್ನು ಸೆಳೆದು ಬಂಧಿಸಿರುವಳಲ್ಲಾ?

ಶ್ಯಾಮಲೆ ನನ್ನ ಮೇಲಿರಿಸಿದ ಪ್ರೇಮ. ಅವಳ ತಂದೆತಾಯಿಗಳು ತಮ್ಮ ವಾತ್ಸಲ್ಯದೊಂದಿಗೆ, ನನಗೆಂದೇ ಇರಿಸಿರುವ ಸಂಪತ್ತು ಮತ್ತೆಲ್ಲರ ಪ್ರೀತಿ, ಆಶೀರ್ವಾದಗಳೆಲ್ಲವೂ ...ಒಂದು ಮರೆಯ ನೋಟದಲ್ಲಿ, ನೆನಪಿನ ಮಿಂಚಿನಲ್ಲಿ ಅಲ್ಪವಾಗಿ ತೋರುವುವು!

ಈ ಬಾಳು ಹಾಡಿದ ಸಂಗೀತ, ಸಾಧನೆಯ ಉಸಿರು ಅವಳು ವಾಸಂತಿ! ಅವಳನ್ನೇ ವೆಚ್ಚಿದೆ, ನೆಚ್ಚಿದೆ ಈ ಮನ! ಅವಳಿಗರಿಯದಂತೆ! ...ಅವಳೂ ಇಂತೇ ಯಾಕೆ ಬಯಸುತ್ತಿರಬಾರದು? ಇದು ಗಂಡಿನ ಪಾಲಿಗೆ ಮಾತ್ರ ಸೇರಿದ್ದೆ! ಉಹುಂ...ಅವಳೂ ಹೀಗೇ ಕಾದಿರಬಹುದು ...ಕಾದಿರುವಳು ಖಂಡಿತ!

ನನ್ನ ಸಾಧನೆಗೆ ಶಕ್ತಿಯನ್ನು ನಿಡಿದವಳು, ಅವಳು, ವಾಸಂತಿ! ಪ್ರೇಮ ರಾಜ್ಯಕ್ಕೆ ಕರೆದೊಯ್ದವಳವಳು ವಾಸಂತಿ! ಅವಳು ಕೊನೆಗೂ ಬಂದೇ ಬರುವಳು. ಅವಳು ನನ್ನವಳಾಗಿಯೇ ಆಗುವಳು

ಮುಗುಳರಳುವ ತಾವರೆಯಂತೆ ಮುಗುಳ್ನಗುತ್ತಾ ಮನದ ಮುಗಿಲ ಮರೆಯಲ್ಲಿ ನಿಂತು "ಬರುವೆ ..ಬರುವೆ ..ಕಾದಿರು" ಎಂದು ನುಡಿವಳವಳು ನನ್ನ ಪ್ರೇಮಕ್ಕೆ, ಬಾಳಿಗೆ ಒಲ್ಮೆಯಿತ್ತ ಮನೋರಾಜ್ಞಿ ಅವಳು!

ಅವಳು ಯಾರೇ ಆಗಲಿ, ಹೇಗೇ ಇರಲಿ ಅವಳು ಎಂದೆಂದೂ ನನ್ನವಳು. ಜೀವನದ ನಿರ್ಮಿತ ಪರಿಮಿತಿಯೊಳಗೆ 'ಜೀವನ' ವೆಂದು ಜೀವಿಸಲು ನಾನು ನೆಚ್ಚುವನಲ್ಲೆ ಅವಳು!

ದಿನದಿಂದ ದಿನಕ್ಕೆ ಅವಳು ಬರುವಳೆಂದೇ ಮನದಲ್ಲಿ ನಿಶ್ಚಯದ ನುಡಿ ಕೇಳಿ ಬರುತ್ತಿದೆ. ಹೌದು ಅವಳು ಬರುವ ಸೂಚನೆಯೂ ಇದೆ. "ಹೌದಂತೆ. ಅವಳು ಬರುತ್ತಿರುವಳು!" ಎಂದು ಮುನ್ನವೇ ಅವಳತ್ತಣಿಂದ ಬೀಸಿದ ಗಾಳಿ ನನಗೆ ತಿಳಿಸುತ್ತಿದೆ.

ಅವಳು ಬಂದೇ ಬರುವಳು. ಬಂದು ನನ್ನ ಹೃದಯವನ್ನು ತುಂಬುವಳು. ಆ ಆಶಯ ಅಚಲವಾಗಿರುವಾಗ ಇನ್ನಾರು ಬದಲಿಸುವರು?

ಅಮೃತಾಂಜನ
ಎಲ್ಲಾ ನೋವುಗಳಿಗೆ ಸಿದ್ಧೆಷದ
ಎಲ್ಲಾ ತರದ ಸಿದಿತ ಮತ್ತು ನೋವುಗಳಿಗೆ
50 ವರ್ಷ ಪ್ರಾಯದ
ಪಾಕೆಟ್ ಡಾಕ್ಟರ್
ಅಮೃತಾಂಜನ ಲಿ. ಭೂಂಬಾಯಿ ಸುಕಿಂತಾ

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ
ಸಾವಿರಾರು ರೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯುತ್ತಮವೆಂದು ಪರಿಗಣಿಸಿರುವರು ಪ್ರತಿಯೊಬ್ಬರೇವಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿಹೊಂದುವುದು
ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.
ವಿಜಯ ಬೇಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸ್:— ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,
Estd 1931.
Phone No 240.
— ಮಂಗಳೂರು—3

Quality Air Cushion Rubber Stamps
Crown
RUBBER STAMP CO.
PHONE 203 ESTD 1926
BALMATTA ROAD, MANGALORE.



REGD. NO. BG. 176

5-7-1962

LICENSE NO. 31
Licensed to Post without Prepayment

ಬ್ರಿಟನ್ನಿನ ಪ್ರವೇಶ– ಭಾರತಕ್ಕೆ ನಷ್ಟ

(೧೯ನೇ ಪುಟದಿಂದ)

ಭಾರತ, ಪಾಕಿಸ್ತಾನ ಮತ್ತು ಸಿಂಹಳಕ್ಕೆ ಉಂಟಾಗುವ ನಷ್ಟವನ್ನು ಸ್ವಲ್ಪ ಮಟ್ಟಿಗೆ ಪರಿಹರಿಸಲು ಒಕ್ಕೂಟಕ್ಕೆ ಕೆಲವು ಸೂಚನೆಗಳನ್ನು ಕೊಟ್ಟಿವೆ. ಟೀ ಹಾಗೂ ಈ ದೇಶಗಳಲ್ಲಿ ಮಾತ್ರವೇ ತಯಾರಾಗುವ ಕೆಲವು ಸಿದ್ಧ ವಸ್ತುಗಳ ಮೇಲೆ ಸುಂಕವನ್ನು ವಿಧಿಸಬಾರದೆಂದು ಬ್ರಿಟನ್ ಸೂಚಿಸಿದೆ. ಇತರ ಕೆಲವು ವಸ್ತುಗಳ ಮೇಲೆ ಸುಂಕವನ್ನು ವಿಧಿಸದೆಅವುಗಳ ಆಮದಿನ ಪ್ರಮಾಣವನ್ನು ಮಾತ್ರ ನಿಗದಿ ಮಾಡಬೇಕೆಂದು ಕೇಳಿದೆ. ಹೊಗೆಸೊಪ್ಪಿಗೂ ಈ ಸೂಚನೆ ಅನ್ವಯಿಸುವುದು. ಸುಂಕಗಳನ್ನು ವಿಧಿಸುವ ಸಮಯವನ್ನು ೧೯೭೦ರ ವರೆಗೆ ಮುಂದೆಹಾಕಬೇಕೆಂದೂ ಬ್ರಿಟನ್ ಸೂಚಿಸಿದೆ. ಈ ಸೂಚನೆಗಳು ನ್ಯಾಯವಾಗಿದೆ ಆದರೆ ಹತ್ತಿ ಬಟ್ಟೆಯ ವಿಷಯದಲ್ಲಿ ಬ್ರಿಟನ್ನಿನ ಸೂಚನೆಗೆ ಭಾರತದಲ್ಲಿ ಬಹಳ ವಿರೋಧವಿದೆ.

ಈಗ ಯುರೋಪಿನ ವಾಣಿಜ್ಯ ಒಕ್ಕೂಟದಲ್ಲಿ ಹತ್ತಿ ಬಟ್ಟೆಯ ಆಮದಿನ ಮೇಲೆ ಶೇಕಡ ೧೮ರಷ್ಟು ಸುಂಕವನ್ನು ವಿಧಿಸಲಾಗುತ್ತಿದೆ. ಇದರಿಂದ ಭಾರತ ಮತ್ತು ಪಾಕಿಸ್ತಾನಕ್ಕೆ ಬಹಳ ತೊಂದರೆಯಾಗುವುದೆಂಬುದನ್ನು ತಿಳಿದು ಬ್ರಿಟನ ಒಂದು ಸೂಚನೆ ಮಾಡಿದೆ. ಅದರ ಪ್ರಕಾರ, ಬ್ರಿಟನ ಒಕ್ಕೂಟವನ್ನು ಸೇರಿದ ಕೂಡಲೆ ಹತ್ತಿ ಬಟ್ಟೆಯ ಆಮದಿನ ಮೇಲೆ ಒಕ್ಕೂಟದ ಸುಂಕದ ಶೇಕಡ ೩೦ರಷ್ಟು ಅಂದರೆ ಶೇಕಡ ೫೪ರಷ್ಟು ಸುಂಕವನ್ನು ವಿಧಿಸುವುದು. ಒಂದು ವರ್ಷದ ನಂತರ ಪರಿಸ್ಥಿತಿಯನ್ನು ಗಮನಿಸಿ ಇನ್ನೂ ಶೇಕಡ ೩೦ರಷ್ಟನ್ನು ವಿಧಿಸುವುದು. ೧೯೭೦ರ ಮೇಲೆ ಒಕ್ಕೂಟದ ಪೂರ್ಣ ಸುಂಕವನ್ನು ವಿಧಿಸುವುದು. ಇದರಿಂದ ಭಾರತ ಮತ್ತು ಪಾಕಿಸ್ತಾನದ ಹತ್ತಿ ಬಟ್ಟೆ ರಫ್ತಿಗೆ ತೊಂದರೆಯುಂಟಾದರೆ ಕೆಲವು ಪರಿಹಾರ ಕಾರ್ಯಗಳನ್ನು ಕೈಕೊಳ್ಳಲಾಗುವುದು. ಅವುಗಳ ಪ್ರಕಾರ, ಪ್ರತಿ ವರ್ಷ ಈ ರಫ್ತಿನ ಬಗ್ಗೆ ಒಂದು ವರದಿಯನ್ನು ತಯಾರಿಸಲಾಗುವುದು. ಅದರಲ್ಲಿ ರಫ್ತಿನ ಪ್ರಮಾಣ ಕಡಿಮೆಯಾಗಿದ್ದು ಕಂಡರೆ, ರಫ್ತನ್ನು ಹೆಚ್ಚಿಸಲು ಒಕ್ಕೂಟದ ಮಂತ್ರಿ ಮಂಡಳಿಯು ಕೆಲವು ಮಾರ್ಗಗಳನ್ನು ಸೂಚಿಸಬೇಕು. ಈ ಮಂಡಳಿಯು ಮೂರು ತಿಂಗಳಲ್ಲಿ ಯಾವ ಕ್ರಮವನ್ನೂ ಕೈಕೊಳ್ಳದಿದ್ದರೆ, ಒಕ್ಕೂಟದ ಕಾರ್ಯನಿರ್ವಾಹಕ ಮಂಡಳಿಯು, ಸುಂಕವನ್ನು ರದ್ದು ಮಾಡುವಂತೆ ಬ್ರಿಟನ್ನಿಗೆ ಸಲಹೆ ಮಾಡುವುದು. ಹತ್ತಿಬಟ್ಟೆರಫ್ತಿಗೆ ಸಂಬಂಧಿಸಿದ ಬ್ರಿಟನ್ನಿನ ಸೂಚನೆಯನ್ನು ಒಕ್ಕೂಟದ ಅಧಿಕಾರಿಗಳು ಒಪ್ಪಿರುವರೆಂದು ಇಳಿದು ಬಂದಿದೆ.

ಈ ಸೂಚನೆಯು ಭಾರತಕ್ಕೆ ಅಷ್ಟು ಸಹಾಯಕವಾಗಿಲ್ಲ. ಭಾರತದ ಹತ್ತಿ ಬಟ್ಟೆಯು ಬ್ರಿಟನ್ನಿನಲ್ಲಿ ಸುಂಕ ಕೊಡಬೇಕಾಗುವದರಿಂದ ಅದರ ಬೆಲೆ ಹೆಚ್ಚಿ, ಮಾರಾಟವು ಕಡಿಮೆಯಾಗುತ್ತದೆ. ಈ ಸುಂಕ ವಿಧಿಸುವುದನ್ನು ಮತ್ತಷ್ಟು ಕಾಲ ಮುಂದೆ ಹಾಕಬೇಕೆಂದು ಭಾರತ ಮಾಡಿದ ಕೋರಿಕೆಯನ್ನು ಒಕ್ಕೂಟವು ತಿರಸ್ಕರಿಸಿದೆ. ಭಾರತದಿಂದ ಬ್ರಿಟನ್ನಿಗೆ ರಫ್ತಾಗುತ್ತಿರುವ ವಸ್ತುಗಳಲ್ಲಿ ಹತ್ತಿ ಬಟ್ಟೆಯು ಬಹಳ ಮುಖ್ಯವಾದದ್ದರಿಂದ ದೇಶದ ರಫ್ತು ವ್ಯಾಪಾರಕ್ಕೆ ತೊಂದರೆಯಾಗುವುದು ಖಂಡಿತ.

ಈಗ ಭಾರತ ಸರಕಾರಕ್ಕೆ ಉಳಿದಿರುವ ಒಂದೇ ಮಾರ್ಗವೆಂದರೆ, ಒಕ್ಕೂಟಕ್ಕೆ ಸೇರಿದ ಇತರ ಯುರೋಪಿನ ರಾಷ್ಟ್ರಗಳಿಗೆ ಭಾರತದ ಪರಿಸ್ಥಿತಿಯನ್ನು ವಿವರಿಸಿ, ಅವು ಭಾರತದಿಂದ ಆಮದು ಮಾಡಿಕೊಳ್ಳುತ್ತಿರುವ ಪ್ರಮಾಣವನ್ನಾದರೂ ಹೆಚ್ಚಿಸುವಂತೆ ಮನವೊಲಿಸಿಕೊಳ್ಳುವುದು. ಶ್ರೀ ಮುರಾರಜಿ ದೇಸಾಯಿಯವರು ತಡ ಮಾಡದೆ, ಯುರೋಪಿಗೆ ಹೋಗಿ ಈ ಕಾರ್ಯ ಮಾಡಬೇಕಾಗಿದೆ. ಇತರ ದೇಶಗಳು ಈಗಾಗಲೇ ಈ ಪ್ರಯತ್ನದಲ್ಲಿ ತೊಡಗಿವೆ. ಭಾರತದ ಆರ್ಥಿಕ ಸ್ಥಿತಿಯೇ ರಫ್ತನ್ನು ಅವಲಂಬಿಸಿರುವುದರಿಂದ ಈಗ ಸರ್ವ ಪ್ರಯತ್ನ ಮಾಡುವುದು ಅತ್ಯಗತ್ಯ.

(ಸಂಯುಕ್ತ ಕರ್ನಾಟಕದ ಕೃಪೆಯಿಂದ)

ಸುಲಭ ಸರಳವಾದ

ಜೇನು ವ್ಯವಸಾಯದಿಂದ ಸಂಪತ್ತು

ಜೇನು ರಾಷ್ಟ್ರೀಯ ಸಂಪತ್ತಾಗಿರುತ್ತದೆ. ಜೇನುಗೂಡುಗಳನ್ನಿಟ್ಟು, ಜೇನು ನೊಣಗಳನ್ನು ಸಾಕಿ ಸಲಹಿ ಅವುಗಳಿಂದ ಸಂಗ್ರಹಿಸಲ್ಪಟ್ಟ ಪರಿಶುದ್ಧವಾದ ಜೇನನ್ನು ಸಂಗ್ರಹಿಸಿ, ವಿಕ್ರಯಿಸಿ, ಸಾಂಪತ್ತಿಕ ಸ್ಥಿತಿಯನ್ನು ಪ್ರತಿಯೋರ್ವ ವ್ಯವಸಾಯಿಯು ಉತ್ತಮಗೊಳಿಸಬಹುದು.

ಜೇನು ನೊಣಗಳು ಹೂವಿನೊಳಗಿನ ರಸವನ್ನು ಹೀರಿ ಕೇವಲ ಪೌಷ್ಟಿಕವಾದ ವೈದ್ಯಕೀಯ ಮಹತ್ವವುಳ್ಳ, ಅತಿ ಅಮೂಲ್ಯವಾದ, ಪರಿಶುದ್ಧವಾದ ಜೇನನ್ನು ಮಾನವನಿಗೋಸ್ಕರ ಸಂಗ್ರಹಿಸಿಕೊಡುತ್ತವೆ. ಭಾರತದ ಹಲವೆಡೆಗಳಲ್ಲಿ ಕೋಟಿಗಟ್ಟಲೆ ಪೌಂಡು ಜೇನುತುಪ್ಪವನ್ನು ಪ್ರತಿ ವರ್ಷ ಸಂಗ್ರಹಿಸಲಾಗುತ್ತದೆ. ಈ ಮಹತ್ವದ ವ್ಯವಸಾಯವನ್ನು ಪ್ರತಿಯೋರ್ವ ಭಾರತೀಯನು ಬಿಡು ಸಮಯದಲ್ಲಿ ಮಾಡುವುದರಿಂದ ಸಾಂಪತ್ತಿಕ ಸ್ಥಿತಿ ಉತ್ತಮಗೊಳಿಸಬಹುದು.

ಗೂಡುಗಳನ್ನಿಟ್ಟು ಜೇನು ನೊಣಗಳನ್ನು ಸಾಕಿ ಸಲಹುವದರಿಂದ ತೋಟಗಾರಿಕೆಗೂ ಬಹಳ ಸಹಾಯವಾಗುತ್ತದೆ. ಸಂಪತ್ತಿನಿಂದ ತುಳುಕಾಡುತ್ತಿರುವ ರಾಷ್ಟ್ರ ಅಮೇರಿಕಾ, ಆಸ್ಟ್ರೇಲಿಯಾ ಇತ್ಯಾದಿ ರಾಷ್ಟ್ರಗಳಲ್ಲಿ ಒಕ್ಕಲಿಗರು ತಮ್ಮ ತೋಟಗಳಲ್ಲಿ ಹಣ್ಣು ಹಂಪಲುಗಳ ವೃದ್ಧಿಗೋಸ್ಕರವಾಗಿಯೇ ಜೇನು ನೊಣಗಳ ಪೆಟ್ಟಿಗೆಗಳನ್ನು ಇಟ್ಟುಕೊಳ್ಳುತ್ತಾರೆ. ಗಿಡಗಳಿಗೆ ಹೂ ಗೊಂಚಲುಗಳುಂಟಾಗಲು, ಜೇನುನೊಣಗಳು ಸಹಜವಾಗಿಯೇ ಜೇನು ತುಪ್ಪವನ್ನು ಸಂಗ್ರಹಿಸುವುದಕ್ಕೋಸ್ಕರ ಹೂವಿನಿಂದ ಹೂವಿಗೆ ಕುಳಿತು ಹಾರುವುದರಿಂದ ಅವುಗಳ ಕಾಲಿಗೆ ಪುಂಕೇಶರದೊಳಗಿನ ಪರಾಗವು ಹತ್ತುವುದಲ್ಲದೆ ಅದು ಸ್ತ್ರೀ ಕೇಶರದೊಳಗೆ ಅಂಟಿಕೊಂಡು ಫಲಕಾರಿಯಾಗಹತ್ತುತ್ತವೆ. ಅಮೇರಿಕಾ ಖಂಡದರೈತರು ಕೋಟ್ಯಾವಧಿ ಡಾಲರ್‌ಗಳ ಹಣ್ಣು ಹಂಪಲುಗಳ ನಿರ್ಮಾತೃಗಳಾಗಿರುತ್ತಾರಲ್ಲದೇ ಸಹಜ ಜೊತೆಯ ಉದ್ಯೋಗವೆಂದು ಜೇನು ವ್ಯವಸಾಯದಿಂದ ಸಂಪತ್ತುಗಳಿಸುತ್ತಾರೆ. ಭಾರತದ ರೈತರು ಜೇನಾಯದ ಬಳಿಕ ಉಳಿದ ಕಾಲದಲ್ಲಿ ಈ ಜೇನು ವ್ಯವಸಾಯ ಜೊತೆ ಉದ್ಯೋಗವಾಗಿ ಕೈಕೊಂಡು ಸಾಂಪತ್ತಿಕ ಸ್ಥಿತಿಯನ್ನು ಉತ್ತಮೋತ್ತಮಗೊಳಿಸ ಬಹುದು. ಜೇನು ನೊಣ ಸಾಕುವ ಗೂಡುಗಳನ್ನೂ ಶುದ್ಧ ಜೇನು ತುಪ್ಪವನ್ನೂ ಒದಗಿಸುವ ವ್ಯವಸಾಯವನ್ನೂ ಎಲ್ಲಾ ಮಾಹಿತಿಯನ್ನೂ ಸಾರ್ವಜನಿಕರಿಗೆ ಕೊಡಲಾಗುತ್ತದೆ.

ಜೇನುತುಪ್ಪ ನಿಸರ್ಗಸಿದ್ಧವಾದ ಉತ್ತೃಷ್ಟ ಪೌಷ್ಟಿಕ ಆಹಾರವೂ, ಔಷಧಿಯೂ ಆಗಿರುತ್ತದೆ ಗ್ಲುಕೋಸ್ ಫ್ರೆಕ್ಟೋಸ್ ಎಸಿಡ್, ವಿಟಾಮಿನ್ ಸಾಲ್ಟ್ ವಿಪುಲವಾಗಿ ಸೇರಿಕೊಂಡಿರುವುದರಿಂದ ದೇಹಧಾರ್ಢ್ಯತೆಗಾಗಿ ಪ್ರತಿಯೋರ್ವನು ಹಾಲಿನೊಂದಿಗೆ ಸೇವಿಸುವುದರಿಂದ ಆಯುಷಾರೋಗ್ಯದಿಂದಿರಬಹುದು. ಜೇನುತುಪ್ಪ ಹಾಲಿನೊಂದಿಗೆ ಸೇವಿಸುವುದರಿಂದ ದೇಹದ ತೂಕ ಹೆಚ್ಚುವದು, ಹೃದಯ ಸ್ನಾಯುಗಳು ಬಲಗೊಳ್ಳುವವು. ಸಣ್ಣ ಮಕ್ಕಳ ಹಲವಾರು ಕಾಹಿಲೆಗಳ ಮೇಲೆ ತುಳಸೀ ರಸದೊಂದಿಗೆ ಕೊಡುವುದರಿಂದ ತುಂಬಾ ಪರಿಣಾಮಕಾರಿಯಾಗುವುದು. ಕುಕ್ಕುಸವಿಕಾರಗಳ ಮೇಲೂ, ಕೂರಲು, ಉಬ್ಬಸಗಳ ಮೇಲೂ ಆಡಸೋಗೆ ರಸದೊಂದಿಗೆ ಜೇನು ತುಪ್ಪ ಸೇರಿಸಿ ಕೊಡುವುದರಿಂದ ಡಾಕ್ಟರ್ ಮಹಾಶಯರುಗಳಿಗೆ ಕೊಡುವ ಔಷಧ ಬಿಲ್‌ಗಳನ್ನು ಕಡಿಮೆ ಮಾಡಿಯೂ ಸಾಂಪತ್ತಿಕ ಸ್ಥಿತಿ ಸರಿಪಡಿಸಿಕೊಳ್ಳಬಹುದು.

ಕಣ್ಣಿನ ದೋಷಗಳ ಮೇಲೂ 'ತ್ರಿಫಲಾ' ಚೂರ್ಣ ಜೇನು ಸೇರಿಸಿ ನಿತ್ಯ ಸೇವಿಸುವುದರಿಂದ, 'ಪರೆ ಬರೋಣ' ದೃಷ್ಟಿ ಮಾಂದ್ಯ, ರೆಪ್ಪೆಗಳ ರೋಗ, ನೇತ್ರ ವಿಕಾರಗಳನ್ನು ತಡೆಗಟ್ಟಬಹುದು, ಗುಣಪಡಿಸಲೂ ಬಹುದು. ನಿತ್ಯ ಹಾಲಿನೊಂದಿಗೆ ಸೇವಿಸುವುದರಿಂದ, ಪ್ಲೂರೆಸಿ, ಇನ್‌ಫ್ಲೂಯೆಂಜಾ, ನಿಮೋನಿಯಾ, ಖಾಸಶ್ವಾಸ, ಉಬ್ಬಸ, ಕೆಮ್ಮು, ದಮ್ಮು, ಕ್ಷಯ ಮೊದಲಾದ ಭಯಂಕರ ಕಾಹಿಲೆಗಳನ್ನು ತಡೆಗಟ್ಟಬಹುದು. ಜೇನು ವ್ಯವಸಾಯ ಸಾಂಪತ್ತಿಕ ಸ್ಥಿತಿ ಸುಧಾರಿಸುತ್ತದೆ. ರಾಷ್ಟ್ರೀಯ ಸಂಪತ್ತಿಯನ್ನೂ ವೃದ್ಧಿಪಡಿಸುತ್ತದೆ.

ಶ್ರೀ ಗುರುರಾಜ ಭಾಗವತ,
ಕಿದಿಯೂರು.

ಆಕೆಗೆ ತಿಳಿದಿದೆ

ತನಗೊಂದು ಸೇವಿಂಗ್ಸ್ ಬ್ಯಾಂಕ್ ಖಾತೆ ಬೇಕು ಮತ್ತು ತಾನು ಕ್ರಮವಾಗಿ ಆ ಖಾತೆಯಲ್ಲಿ ಹಣವನ್ನು ಉಳಿಸುತ್ತಾ ಬರಬೇಕು ಎಂಬುದು ಆಕೆಗೆ ಚೆನ್ನಾಗಿ ತಿಳಿದಿದೆ.

ಹೂಗಿಡಗಳು ಕಾಲಕಾಲಕ್ಕೆ ಹೂಗಳನ್ನು ಬಿಡುವಂತೆ ಸಮಯಕ್ಕೆ ಸರಿಯಾಗಿ ಹಣವನ್ನು ತನ್ನ ಸೇವಿಂಗ್ಸ್ ಬ್ಯಾಂಕ್ ಖಾತೆಯಲ್ಲಿ ಸಂಗ್ರಹಿಸಿಡುವ ಅಭ್ಯಾಸವು ಆಕೆಗೆ ಸುಲಭವಾಗಿ ಕೈಗೂಡಿದೆ.

ಒಂದು ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆಯಿರಿ.

ಸಿಂಡಿಕೇಟ್ ಬೇಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸೂಚನೆ

"ನವಯುಗ"ದಲ್ಲಿ ಪ್ರಕಟಿಸೆಗಾಗಿ ಲೇಖನಗಳನ್ನು ಅಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. –ಸಂ.ನ.

Edited Printed & Published by K. H. Shetty, at the Navayuga Press, Udipi, S. India.

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನಿಮ್ಮ ಯಾವತ್ತೂ
ಮುದ್ರಣ ಕೆಲಸಗಳಿಗೆ
ದಯಮಾಡಿ ವಿಚಾರಿಸಿರಿ;
ನವಯುಗ ಪ್ರೆಸ್,
ಉಡುಪಿ

ನವಯುಗ

KANNADA — NAVAYUGA — WEEKLY

ವಿದ್ಯಾರ್ಥಿಗಳಿಗೆ
ಮತ್ತು ವಯಸ್ಕರಿಗೆ
ಅತ್ಯುಪಯೋಗೀ ಪುಸ್ತಕ
ಸುಲಭದಲ್ಲಿ ಇಂಗ್ಲಿಷ್
(ಆಂಗ್ಲ ಸ್ವಯಂಬೋಧಿನಿ)
ನವಭಾರತ ಪುಸ್ತಕ ಭಂಡಾರ
ಉಡುಪಿ

ಸಂಪುಟ ೪೧ ಸಂಚಿಕೆ ೪೪ | ಉಡುಪಿ 12—7—1962 ಗುರುವಾರ | Vol. 41 No. 44

ಅಂತಾರಾಷ್ಟ್ರೀಯ ಅರ್ಥವ್ಯವಸ್ಥೆಯಲ್ಲಿ

ಮಧ್ಯಮ ವರ್ಗದ ದೇಶಗಳ ದುಸ್ಥಿತಿ

ಸಂಯುಕ್ತ ರಾಷ್ಟ್ರ ಸಂಘವು ೧೯೬೧ನೇ ಸಾಲಿನ ವರ್ಷಕ್ಕೆ ಸಂಬಂಧಿಸಿದಂತೆ 'ಜಾಗತಿಕ ಆರ್ಥಿಕ ಸಮೀಕ್ಷೆ'ಯೊಂದನ್ನು ಮಾಡಿತು. ಈ ಸಮೀಕ್ಷೆಯನ್ವಯ ಆ ವರ್ಷದಲ್ಲಿ ಉತ್ಪಾದನೆಯು ಹೆಚ್ಚಳವನ್ನು ಸೂಚಿಸುವುದಾದರೂ ಅದು ಭವಿಷ್ಯದ ಬಗ್ಗೆ ಹೆಚ್ಚಿನ ಭರವಸೆಯನ್ನು ಕೊಡುವುದಿಲ್ಲ. ಅನಭಿವೃದ್ಧ ರಾಷ್ಟ್ರಗಳು ಉತ್ಪಾದಿಸುವ ಪ್ರಾಥಮಿಕ ವಸ್ತುಗಳಿಗೆ ಅಭಿವೃದ್ಧ ರಾಷ್ಟ್ರಗಳಲ್ಲಿ ಬೇಡಿಕೆಯಿರುವುದಿಲ್ಲ. ತಮ್ಮ ಒಟ್ಟು ಆಹಾರದಲ್ಲಿ ನೂರಕ್ಕೆ ೩೧-೪೦ರಷ್ಟು ಮೌಲ್ಯದ ಯಂತ್ರೋಪಕರಣಗಳನ್ನು ತರಿಸುವ ರಾಷ್ಟ್ರಗಳಿಗೆ ಇದರಿಂದ ದೊಡ್ಡ ಆಘಾತವು ಸಂಭವಿಸುವುದು. ಸುಮಾರು ೫೦ ರಾಷ್ಟ್ರಗಳು ತಮ್ಮ ಉತ್ಪಾದನಾ ಸಾಮರ್ಥ್ಯವನ್ನು ನೂರಕ್ಕೆ ೫ ಆಥವಾ ಹೆಚ್ಚಿನ ಪ್ರಮಾಣದಲ್ಲಿ ಹೆಚ್ಚಿಸಿರುವುವು. ಈ ಹೆಚ್ಚುವರಿಯೂದರೂ ಮುಂದುವರಿದ ರಾಷ್ಟ್ರಗಳ ಉತ್ಪಾದನೆಯ ಹೆಚ್ಚಳದ ಪ್ರಮಾಣದಷ್ಟಿಯೇ ಇದೆ. ಇಂತಹ ಹಿಂದುಳಿದ ರಾಷ್ಟ್ರಗಳು ವಿದೇಶಿ ವಿನಿಮಯ, ಅತಿಪ್ರಸರಣ, ಆಹಾರ ಪೂರೈಕೆ ಮೊದಲಾದ ಮಹತ್ವದ ಸಮಸ್ಯೆಗಳನ್ನು ಎದುರಿಸುತ್ತಿವೆ ಮಹತ್ವವಲ್ಲ ತಮ್ಮ ಉನ್ನತಿಗಾಗಿ ವಿದೇಶೀ ಸಾಲಗಳನ್ನೇ ಅವಲಂಬಿಸಿಕೊಂಡಿವೆ. ಈ ಗಂಡಾಂತರದಿಂದ ಬದುಕಬೇಕಾದರೆ, ಅವುಗಳಿಗಿರುವ ಏಕ ಮಾತ್ರ ಉಪಾಯ ವೆಂದರೆ, ತಮ್ಮ ನಿರ್ಯಾತವನ್ನು ಹೆಚ್ಚಿಸುವುದು.

ನಿರ್ಯಾತಕ್ಕೆ ಧಕ್ಕೆ

ರಫ್ತು ಗಾಡುವ ಪ್ರಮಾಣವನ್ನು ಏರಿಸುವ ಉತ್ಸಾಹ ಮತ್ತು ಅಭಿಲಾಷೆಯು ಅನಭಿವೃದ್ಧರಾಷ್ಟ್ರಗಳಲ್ಲಿ ಇದ್ದರೂ ಅವುಗಳಲ್ಲಿ ನಿರ್ಮಾಣವಾಗುವ ಚಾ, ಕಾಫಿ, ರಬ್ಬರು, ಹೊಂಸ, ಟಿನ್ನೆ ಮೊದಲಾದುವುಗಳಿಗೆ ಅಭಿವೃದ್ಧ ದೇಶಗಳಲ್ಲಿ ಬೇಡಿಕೆಯಿರುವುದಿಲ್ಲ. ಇದರಿಂದಾಗಿ ಉತ್ಪಾದನೆಯು ಹೆಚ್ಚಿ ಬೇಡಿಕೆಯು ಕಡಿಮೆಯಾಗುವುದು ಬೆಲೆಯು ಕಡಿತಕ್ಕೆತಾನಾಗಿಯೇ ಕಾರಣವಾಗುವುದು.ಹೀಗಾಗಿ ಅನಭಿವೃದ್ಧ ದೇಶಗಳಿಗೆ ಯಾವ ಲಾಭವೂ ಉಂಟಾಗುವುದು ಸಾಧ್ಯವಿಲ್ಲ. ಎಲ್ಲೆಲ್ಲಿಯೂ ಇಂದು ಬೇಡಿಕೆಯಿರುವುದೆಂದರೆ, ಕೆಮಿಕಲ್ಸ್ ಮತ್ತು ಮೆಶಿನರಿ ಒಡವೆ ವಸ್ತುಗಳಿಗೆ. ಆದರೆ, ಇವುಗಳ ಉತ್ಪಾದನೆಯು ಬಡ ರಾಷ್ಟ್ರಗಳಲ್ಲಿ ಸಾಧ್ಯವಾಗುವುದಾದರೂ ಹೇಗೆ?

ಶ್ರಮವಿಭಾಗದ ತತ್ವ

ತಮ್ಮಲ್ಲಿ ತಯಾರಾಗುವ ಮೂಲುಗಳನ್ನು ವಿನಿಮಯ ಮಾಡಿಕೊಂಡು, ಶ್ರಮ ವಿಭಾಗ ಮಾಡುವ ತತ್ವದಂತೆ ವರ್ತಿಸಿದರೆ, ರಾಷ್ಟ್ರಗಳು ಸಂಪನ್ನವಾಗುವುದು ಎಂಬ ತತ್ವವು ಈ ಹಿಂದೆ ಮುಂದೆ ಬಂದಿಶ್ತು. ಆದರೆ, ಇಂದು ಈ ತತ್ವವು ಕಷ್ಟ ವ್ಯವಹಾರ ಸಾಧ್ಯವೆಂದು ಕಂಡು ಬಂದಿದೆ. ತನ್ನಲ್ಲಿನ ಸಾಧನ ಸಂಪತ್ತುಗಳನ್ನೇ ಬಳಸಿಕೊಂಡು ಸಿದ್ಧ ವಸ್ತುಗಳನ್ನು ತಯಾರಿಸುವುದು ಅಗತ್ಯವಿರುವುದರಿಂದ ಮೂರುಕಟ್ಟೆಯಲ್ಲಿ ಬೇಡಿಕೆಯಿರುವಂತಹವುಗಳನ್ನೇ ಸಿದ್ಧಪಡಿಸುವುದು ಅಸಾಧ್ಯವೆಂಬಂತಾಗಿದೆ. ಇಂತಹ ಸಂಕಟಕ್ಕೆ ಗುರಿಯಾದ ದೇಶಗಳಲ್ಲಾದರೂ ಎರಡು ವಿಭಾಗಗಳಿವೆ. ಒಂದು ವಿಭಾಗದವು ಈಗಾಗಲೇ ಔದ್ಯಮಿಕ ಕ್ಷೇತ್ರದಲ್ಲಿ ಪಾದಾರ್ಪಣ ಮಾಡಿದ ದೇಶಗಳು; ಮತ್ತು ಎರಡನೆಯವು ತುಸು ಮುಂದುವರಿದುವುಗಳು. ಭಾರತ, ಸ್ರೇಜಿಲ್ ಮೊದಲಾದ ಕೆಲವು ರಾಷ್ಟ್ರಗಳು ಎರಡನೆಯ ವರ್ಗಕ್ಕೆ ಸೇರಿದವುಗಳು.

ಮಧ್ಯಮ ವರ್ಗದ ದೇಶಗಳು

ಮಧ್ಯಮ ವರ್ಗದವರಂತೆಯೇ ಮಧ್ಯಮವರ್ಗದ ದೇಶಗಳೂ ಭೀಕರ ಪರಿಸ್ಥಿತಿಯನ್ನು ಎದುರಿಸ ಬೇಕಾಗುತ್ತದೆ. ಅವುಗಳ ವಿದೇಶೀ ವಿನಿಮಯದ ಸಮಸ್ಯೆಯು ದಿನದಿಂದ ದಿನಕ್ಕೆ ಜಟಿಲವಾಗುತ್ತ ಬರುತ್ತಿದೆ. ತನ್ನ ಅಭಿವೃದ್ಧಿ ಯೋಜನೆಗಳಿಗಾಗಿ ಈ ರಾಷ್ಟ್ರಗಳು ದೊಡ್ಡ ದೊಡ್ಡ ಅಮೂಲ್ಯವಾದ ಯಂತ್ರೋಪಕರಣಗಳನ್ನೂ ಯಂತ್ರಗಳ ಬಿಡಿ ಭಾಗಗಳನ್ನೂ ಆಯಾತನಾಡಿಕೊಳ್ಳಬೇಕಾಗುತ್ತದೆ. ಇವುಗಳಲ್ಲದೆ ಅವುಗಳ ಸಾಧನೆಯು ಪ್ರಗತಿ ಸಾಧಿಸುವಂತಿಲ್ಲ. ಈ ಕಾರಣದಿಂದ ಅವು ನಡು ನೀರಿನಲ್ಲಿ ವಿಷನ್ನವಸ್ಥೆಯಲ್ಲಿ ಮುಗ್ಗರಿಸುವಂತಿವೆ.

ಜಾಗತಿಕ ಬೇಂಕಿನ ಸಲಹೆ

ಇಂತಹ ಅಸಹಾಯಕ ದೇಶಗಳ ನೆರವಿಗೆ ಬರುವುದು ಜಾಗತಿಕ ಬೇಂಕು ಮತ್ತು 'ಆಂತಾರಾಷ್ಟ್ರೀಯ ಆರ್ಥಿಕ ನಿಧಿ'ಗಳ ಪರಮ ಕರ್ತವ್ಯ. ಇವುಗಳು ಆ ದೇಶಗಳ ವಿದೇಶ ವಿನಿಮಯ ಪ್ರಶ್ನೆಯನ್ನು ಸಮರ್ಥಾನಕರವಾಗಿ ಉತ್ತರಿಸಬೇಕಾಗಿದೆ. ಇದಕ್ಕಾಗಿಯೇ ಜಾಗತಿಕ ಬೇಂಕು ಮುಂದುವರಿದ ದೇಶಗಳು ತಮ್ಮ ರಾಷ್ಟ್ರೀಯ ಆದಾಯದಲ್ಲಿ ಸೇಕಡಾ ೧ನ್ನು ವಿದೇಶೀ ಸಹಾಯಕ್ಕಾಗಿ ವಿನಿಸಲಾಗಿಡಬೇಕು ಎಂಬ ಸಲಹೆಯನ್ನು ಮುಂದಿಟ್ಟಿದೆ. ಈ ಸಲಹೆಯನ್ನು ಸ್ವೀಕರಿಸಿ, ವಿದೇಶೀ ಸಹಾಯದ ತತ್ವವನ್ನು ಕಟ್ಟುನಿಟ್ಟಾಗಿ ಅನುಸರಿಸುವುದಾದರೆ ಸಮಸ್ಯೆಯು ಬಹುಮಟ್ಟಿಗೆ ಗುರವಾಗುವುದು. ಈ ಬಗೆಯ ನೆರವನ್ನು ಜನಸಂಖ್ಯೆಯ ತಳಹದಿಯಲ್ಲಿ ಹಂಚುವ ಪದ್ಧತಿಯನ್ನು ಇಟ್ಟುಕೊಳ್ಳುವುದಾದರೆ, ಭಾರತದ ವಿದೇಶೀ ವಿನಿಮಯದ ಕೊರತೆ ತನಗೆ ತಾನಾಗಿಯೇ ದೂರವಾಗುವುದು. ಏಕೆಂದರೆ, ಅನಭಿವೃದ್ಧ ರಾಷ್ಟ್ರಗಳ ಒಟ್ಟು ಜನಸಂಖ್ಯೆಯಲ್ಲಿ ನೂರಕ್ಕೆ ನಲುವತ್ತು ಜನರು ಭಾರತೀಯರು! ಹಾಗಿರುವಾಗ ಸಮಸ್ಯೆ ಬರುವುದಾದರೂ ಎಲ್ಲಿಂದ? ಆದರೆ, ಜಾಗತಿಕ ಬೇಂಕಿನ ಈ ಸಲಹೆಯು ಕಾರ್ಯರೂಪಕ್ಕೆ ಬರುವುದೇ ಎಂಬುದು ಸಂಶಯಾಸ್ಪದ ವಿಷಯ.

ಸಮಾಧಾನದ ನಿಟ್ಟುಸಿರು

ಒಂದು ವೇಳೆ ಈ ಸಲಹೆಯು ಕಾರ್ಯಗತವಾಯಿತಾದರೂ ರಾಜಕೀಯದಿಂದ ಇದು ಪ್ರಭಾವಿತವಾಗದೆ ಇರಲಾರದು. ಸಣ್ಣ ಕಾಲಾವಧಿಯ ಸಾಲ ಮತ್ತು ಸ್ಥಳೀಯ ಖರ್ಚಿಗಳಲ್ಲಿ ಇವು ಪರಿಣಾಮಗೊಳ್ಳುವುದೂ ಅಸಾಧ್ಯವಲ್ಲ. ಜಾಗತಿಕ ಬೇಂಕು ನೀಡುವ ಸಾಲವಾದರೂ ಅತ್ಯಧಿಕ ಬಡ್ಡಿಯ ದರದಲ್ಲಿ ಮತ್ತು ಅದರ ಕಾಲಾವಧಿಯೂದರೂ ಅತ್ಯಲ್ಪವಿರುವುದನ್ನು ನಾವು ಮರೆಯುವಂತಿಲ್ಲ. ಇದು ದುರ್ದೈವದ ಸಂಗತಿ...ಅಂತಾರಾಷ್ಟ್ರೀಯ ಅಭಿವೃದ್ಧಿ ಸಂಘದ ಸ್ಥಾಪನೆಯಿಂದ ಈ ಪ್ರಶ್ನೆಯು ತುಸು ಹಗುರವಾದಂತಾಗಿದೆ. ಏಕೆಂದರೆ ಈ ಸಂಘವು ಅಲ್ಪ ದರದ ಬಡ್ಡಿಯಲ್ಲಿ ಉದಾರ ನೀತಿಯ ತಳಹದಿಯಲ್ಲಿ ಸಾಲವನ್ನು ಈಯುವುದು. ಈಗಾಗಲೇ ಪ್ರಾರಂಭವಾದ ಈ ಸಂಘದ ಚಟುವಟಿಕೆಗಳಿಂದಾಗಿ ಅನಭಿವೃದ್ಧ ರಾಷ್ಟ್ರಗಳು ತುಸು ಸಮಾಧಾನದ ನಿಟ್ಟುಸಿರನ್ನು ಬಿಡಬಹುದು.

ಸಮಸ್ಯೆಗೆ ಪರಿಹಾರ

ಹಿಂದುಳಿದ ದೇಶಗಳ ಔದ್ಯಮೀಕರಣವು ರಾಜ್ಯಕೀಯ ಕ್ರಾಂತಿಗೆ ದಾರಿ ಮಾಡಿಕೊಡದೆ ಇಲ್ಲವೇ ಸರ್ವನಾಶಕ್ಕೆ ಅವ್ಕಾಶ ನೀಡದೆ ಮುಂದುವರಿಯ ಬೇಕಾದರೆ, ಎಲ್ಲ ಕಡೆಯಿಂದಲೂ ಉತ್ತಮ ರೀತಿಯ ಯೋಜನೆಗಳು ರೂಪಿತವಾಗಬೇಕು. ಜಾಗತಿಕ ಬೇಂಕಿನಂತಹ ಸಂಸ್ಥೆಗಳು ಆ ದೇಶಗಳಿಗೆ ದೀರ್ಘಕಾಲದ ಸಾಲಗಳನ್ನು ಉದಾರ ನೀತಿಯಿಂದ ಕೊಡಬೇಕು; ಮಾತ್ರವಲ್ಲ ಆರ್ಥಿಕ ಮತ್ತು ತಾಂತ್ರಿಕ ಸಲಹೆಗಳನ್ನೂ ನೀಡುತ್ತಿರಬೇಕು. ಬಡ ರಾಷ್ಟ್ರಗಳು ನಿರ್ಯಾತ ಮಾಡುವ ಒಡವೆ ವಸ್ತುಗಳ ಬೆಲೆಯು ಇಳಿಮುಖವಾಗುವುದರಿಂದ ಅವುಗಳ ಆರ್ಥಿಕ ವ್ಯವಸ್ಥೆಯು ಕಟ್ಟುಹೋಗುವುದು. ಅದಕ್ಕಾಗಿ ಆ ಬೆಲೆಯನ್ನು ಸ್ಥಿಮಿತವನ್ನು ಉಳಿಸಿಕೊಳ್ಳುವ ಪ್ರಯತ್ನಗಳು ಮುಂದುವರಿದ ದೇಶಗಳಲ್ಲಿ ನಡೆಯಬೇಕು. ಹಿಂದುಳಿದ ರಾಷ್ಟ್ರಗಳಾದರೂ ತಮ್ಮ ತಮ್ಮೊಳಗೆ ಒಡಂಬಡಿಕೆಗಳನ್ನು ಮಾಡಿಕೊಂಡು ತಮ್ಮ ವಿನಿಮಯದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವ ಪ್ರಯತ್ನದಲ್ಲಿ ತೊಡಗಬೇಕು. ಏಕೆಂದರೆ, ಅವು ಇಂದಿನ ದಿನವಸಗಳಲ್ಲಿ ಸಾಕಷ್ಟು ಸಮುಂದುವರಿದ ದೇಶಗಳೊಂದಿಗೇನೇ ತಮ್ಮ ಆಯಾತ-ನಿರ್ಯಾತಗಳ ವ್ಯವಹಾರಗಳನ್ನು ಇಟ್ಟುಕೊಂಡಿವೆ. ಈ ಪರಿಸ್ಥಿತಿಯು ಸ್ವಲ್ಪ ಸ್ವಲ್ಪವಾಗಿಯಾದರೂ ದೂರವಾಯಿತೆಂದರೆ, ಅವು ಹೆಚ್ಚು ಸಮಸ್ಯೆಗಳನ್ನು ಎದುರಿಸಬೇಕಾಗುವುದಿಲ್ಲ.

ಭಾರತದ ಮುನ್ನಡೆ

ವಿದೇಶ ವಿನಿಮಯದ ತೀವ್ರ ಅಭಾವದಿಂದ ನರಳುತ್ತಿರುವ ಅನಭಿವೃದ್ಧ ದೇಶಗಳಲ್ಲಿ ಭಾರತವು ಒಂದು; ಮಾತ್ರವಲ್ಲ, ಅದು ದೊಡ್ಡ ದೇಶವೂ ಹೌದು. ಭಾರತವು ವಿಶ್ವದ ಇತರ ಹಲವಾರು ದೇಶಗಳೊಡನೆ ವ್ಯಾಪಾರದ ಒಡಂಬಡಿಕೆಗಳ

(ಬೇರೆ ಪುಟ ನೋಡಿರಿ)

'ವೀರಾ' ಉಕ್ಕಿನ ಫರ್ನಿಚರುಗಳು, ಮಂಚ-ಸೋಫಾಗಳು, ವೈವಿಧ್ಯ ಪೂರ್ಣ ಕಪಾಟುಗಳು, ಸ್ಟೈನ್‌ಲೆಸ್ ಪಾತ್ರೆ ಪರಡಿಗಳು, ಗೃಹಾಲಂಕಾರ ಸಾಹಿತ್ಯಗಳು, ಗೃಹಿಣಿಯರ ಶೃಂಗಾರ ಸಾಧನಗಳು, ಉಡುಗೊರೆ ಸಾಮಗ್ರಿಗಳು ಇತ್ಯಾದಿ ಇತ್ಯಾದಿಗಳಿಗೆ ವಿಚಾರಿಸಿರಿ —
ಶಾಸ್ತ್ರಿ & ಕೊ
ಹಂಪನಕಟ್ಟೆ,
ಮಂಗಳೂರು—1

ನಿರುಪಾಯೆ ನಾರಿಯೆ ನಿರುಪಾಯ ಕಥೆ–

ಸಮಾಜಕ್ಕೆ ಶರಣು ಬಂದರೆ...?

—ಶ್ರೀ ಎಚ್. ಆನಂದರಾಮು ಅಡಿಗ.

ಲತಾ—ಹೊರಟೇ ಹೋದಳು.

ಸುಲೋಚನೆಗೆ ನಿಸ್ಯಂಶತೆಯಿಂದ ಮೂತನಾಡಿದ್ದು ಈವಾಗ ಹೆಚ್ಚಾಯಿತೆನಿಸಿತು. ಆದರೆ ಬತ್ತಿದ ಹೃದಯ ಹಾಗೆ ನುಡಿದುದಕ್ಕೆ ತನ್ನ ಮನವನ್ನು ಕಪಿಸಲಿಲ್ಲ. ಇನ್ನೂ ಚರ್ಚೆಗೆ ಎಡೆ ಕೊಟ್ಟಿದ್ದ ಸುಲೋಚನಾ ಒಂದು ಘಟ್ಟವನ್ನು ತಲುಪಿ ಸುಖವಾದ ತಯ್ಯೆಯಲ್ಲಿ ಮಲಗಲಿಲ್ಲ. ಎತ್ತ ನೋಡಿದರತ್ತ ಕರಿಯ ಕಾರ್ಗತ್ತಲೆ, ಬರಿಯ ಧಾಟಿ!

ಹನ್ನೆಲೆಯ ಘೋರವಾದ ಭೀಕರವಾದ ಕಟು ಟೀಕೆಯನ್ನು ಹೊತ್ತಿದ್ದಳು ಆಕೆ. ಹಾಗಿದ್ದರೂ ಊರ ಪ್ರಜೆಗಳು "ಛೇ! ಪಾಪ!" ಅಷ್ಟೇ ಅನ್ನುತ್ತಿದ್ದರು.

ಲತಾ ನಿರ್ಜನವಾದ ಪ್ರದೇಶಕ್ಕೆ ಎಳೆತಂದು, ತನ್ನನ್ನು ಸಂಗಡ ಕಳ್ಳರಿಸಿ ಬೇಕಾದ ಮೂತನ್ನು ನನಗೆ ಬೋಧಿಸಿದ್ದು ಶುಚ್ಛೀಕೃತವಾಗಿ ಹೊಳೆಯಿತು. ನನ್ನ ಬಾಳ ಕಂಬಕ್ಕಾಗಿ ಅವಳು ವಿಶೇಷ ಭಾವಣ ಮೂಡಿದ್ದರೂ ಮೂಡಿರಬಹುದು. ಅವಳ ಮನೋಭಾವ ಹೊಸ ರೀತಿಯ ಪರಿಣಾಮಕ್ಕೆ ಬಂದಿದ್ದರೂ ನನ್ನ ಮೇಲೆ ಪ್ರಯೋಗಿಸುವಳಲ್ಲವೆಂದು ಕೋಪದಿಂದಲೇ ಸಿಡಿಮಿಡಿಗುಟ್ಟಿ ಗಡುಸಾಗಿ ಬರುಸಿನವಾಗಾಣ ಬಿಟ್ಟಿದ್ದೆ. ಅದು ಏನು? ಎನ್ನುವ ದೃಷ್ಟಿಯಲ್ಲಿ ನಾನಿಲ್ಲ!

'ನಾನು ಪಾಪಿ! ಘೋರಾಂಧಕಾರದ ಮಡುವನ್ನು ಹೊಕ್ಕಿದ್ದೆ. ನನ್ನನ್ನು ಜನರು ಸಮೂಜ ಎಡಗಣ್ಣಿಂದ ನೋಡುವುದು ನನಗೆ ಅಸಹ್ಯವಾಗಿ ಕಂಡಿತು. ದೂರದ ಬೆಟ್ಟಗಳು ಕಣ್ಣಿಗೆ ಸುರಮ್ಯವಾಗಿ ತೋರಿದರೂ ಅಲ್ಲಿಗೆ ಹೋಗುವುದು ಕಷ್ಟತರವಾಗಿ ತೋರಿತು.

''ನಾನೀಗ ಸಚೇತನಿ, ತಂದೆ, ತಾಯಿಗಳಿಗಂತೂಭಾರ ಹನ್ನೆರಡರ ಹರೆಯದಲ್ಲಿ ಬೇಕಾದ ಮಗಳಾಗಿದ್ದರೂ ಈಗ ಬೇಡವಾದವಳಾಗಿದ್ದೇನೆ. ನನ್ನದುಃಖಾಶ್ರು ದಿನದಿನವೂ ಎಡಬಿಡದೆನಿಸಾಗಿತ್ತು ನಾಗರಕ್ಕೆ ಜೀವನದ ಹಳ್ಳ ಬಂದಾಗಲು ಹೆಚ್ಚು ವರ್ಷಬೇಕಿಲ್ಲ! ಬರಡು ದೇಹ ಒಣಗಿದ ಕಾಷ್ಠದಂತೆ ಮುಖ! ಚಂದ್ರನಿಲ್ಲದ ನೋಡ ಎದ್ದ ಆಕಾಶದಂತೆ, ಪಟ! ನಾಗರದಲ್ಲಿ ಕಮಲದ ಹೆಸರಿಲ್ಲದಂತೆ. ಛೇ! ನನ್ನನ್ನೇ ನಾನು ವರ್ಣಿಸುವಷ್ಟು ಸರಿಯಾಗಿ ಕಂಡೆನೆ? ಇಲ್ಲ ಇಲ್ಲ"ಎಂದು ಸುಲೋಚನಾ ನಿಂತಲ್ಲಿಯೇ ಅಂದಳು.

ಂಂ ಂಂ ಂಂ

'ಆಹಹ! ಬಲ್ಲೆ' ನಾನೊಲ್ಲೆ! ಗಡುಸಾಗಿ ಹೇಳಿದಳು ಸುಲೋಚನಾ.

'ಹಾಗೆಲ್ಲ ಹೇಳದಿರು ನನ್ನ ಚಿನ್ನ' ಎಂದು ತಂದೆ ಜಲ್ಲೆಸಿದರು.

'ಬೇಡ! ನಯೋವೃದ್ಧನೊಡನೆ ನನ್ನೆಲಗ್ನ!' ಸುಲೋಚನಾ ತಂದೆಗೆ ಎದುರು ತ್ತರವೀಯದಿದ್ದವಳು ಮುಖ ಕೆಳಗೆ ತಿರುಗಿಸಿ ಅಂಬೆಳು. ದುಃಖ ಸಾಗರದಲ್ಲಿ ತೇಲಾಡಿ ಕರಿಣ ಮನಸ್ಕಳಾಗಿ ಕಟುವಾಗಿ ತಂದೆಗೆ ತನ್ನ ಹೃದಯದ ಮೂತನ್ನು ಅಂದಳು.

'ಮಗು! ನನ್ನೊಡನೆ ನಿನ್ನ ರಂಪಾಟ ಮೂಡಬೇಡ! ನಾನು ನಿನ್ನನ್ನು ಹೊತ್ತು ಸಾಕಿದ್ದಕ್ಕೆ ನನ್ನ ಮೂತನ್ನು ನೆರವೇರಿಸು, ನಾನು ಹೇಳಿದಂತೆ ಕೇಳು ನಿನ್ನ ಭಾವೀವರ ವಯೋವೃದ್ಧನಲ್ಲ! ಅಲ್ಪಸ್ವಲ್ಪ ವಯಸ್ಸಾದರೇನಂತೆ ನೀನಿನ್ನೂ ಚಿಕ್ಕವಳೇ?" ಸಮಧಾನೋಕ್ತಿಯಿಂದ ತಂದೆ ಮಗಳ ಮುಖ ನೋಡದಿಯೇ ಉಸುರಿದರು.

ಅಸಮ್ಮತಿ ದುಃಖ ಸೂಚಕವಾಗಿಯೇ ಕಣ್ಣೀರು ಕರಿದಳೇ ವಿನಾ ತಂದೆಯ ಮೂತಿಗೆ ಸೈಗುಟ್ಟಲಿಲ್ಲ.

'ಏನು? ಒಪ್ಪಿಗೆಯೇ ನೀನು ಒಪ್ಪಿದರೆ ನಾಳೇನೇ ಲಗ್ನ ನಿಶ್ಚಯಕ್ಕೆ ಬರುತ್ತಾರೆ. ನಿನ್ನ ಇಷ್ಟವೇ ನನ್ನಿಷ್ಟ"— ಎಂದರು ಮುಗುಳು ನಗುತ್ತ ತಂದೆ.

'ಅಪ್ಪಾ! ನನ್ನ ಈ ಶರೀರವನ್ನು ಹಾಳು ಬಾವಿಗೆ ನೂಕಬಾರದೆ?"—

'ಬೇಡ! ನೀನೊಲ್ಲೆಯಲ್ಲ! ನನ್ನೀ ಮನೆಯೊಳಗೆ ನಿನ್ನ ಪ್ರವೇಶವಿಲ್ಲವೆಂದು ತಿಳಿದುಕೊ"—ಕೋಪ ಎಲ್ಲೆ ಮೀರಿತು.

ಸುಲೋಚನಾ ಮುಖ ಮುಚ್ಚಿ ಅತ್ತಳು. ತಂದೆ ನಾನಾಪರಿಯಲ್ಲಿ ಹೇಳಿದರೂ ಸುಲೋಚನೆಯ ಮನ ಅಲುಗಲಿಲ್ಲ. ಹಾಗೆಯೇ 'ಮಗು!—ನಿನಗೆ ವೈತುಂಬಾ ಹೊಸ್ತು! ಕೈಕಾಲಿಗೆ ಆಳು! ನೀನೇ ಯಜಮಾನಿ ಎಲ್ಲವೂ ನಿನ್ನ ಪಾಲಿಗೆ!" ಎಂದು ಸಮಧಾನ ಪಡಿಸಿದರು.

'ಬೇಡ! ನನಗೊಂದೂ ಬೇಡ! ಮದುನೆ ಹೊನ್ನು, ವರೆ, ಕಾಲಾಳು, ಯಜಮೂನಿ ಯಾವುದೂ ಬೇಡ!" ಬಿರುಸಾಗಿ ತಂದೆಯ ಮೂತನ್ನು ನಿಲ್ಲಿಸಿದಳು. ಕಣ್ಣಲ್ಲಿ ಇಳಿಯುತ್ತಿದ್ದ ಬಾಷ್ಪ ಮೆದುವಾದ ಗಲ್ಲವನ್ನು ತುಳಿದು ಸೀರೆಯಲ್ಲಿ ಅಡಗುತಿತ್ತು. ಕಣ್ಣು ನೆತ್ತರು ಕಾರುವಂತಾಗಿ ಕೆಂಪಾಗಿ ಕನಲಿತ್ತು. ಮುಖ ಯಾವುದೋ ವಿಚಾರವನ್ನು ಬಿಡಿಸುವಂತಿತ್ತು.

ಸುಲೋಚನಾ ಯಾವ ಮೂತನ್ನು ಕೇಳದೆ ಕಂಬನಿಯಲ್ಲಿಯೇ ದೀಪ ಹಚ್ಚಲು ಒಳಗೋಡಿದಳು, ದೀಪ ಹಚ್ಚಲು ದೀಪವೇ ಸಿಕ್ಕದಾಯ್ತು! ಮುಂದಿನ ಸುಖ—ದುಃಖಮಯವಾದ ಸಂಸಾರವನ್ನು ಮನಸ್ಸಿಗೆ ಚಿತ್ರಿಸಿದಳು, ಬೇಡವೆಂದಿತು. ಮದುವೆಯಾದರೆ ಮುಂದೆ ದುಃಖ! ಉಳಿದರೆ ಸಮಾಜದ ಬಹಿಷ್ಕಾರ! ಇವೆರಡರ ಮಧ್ಯೆ ತೊಳಲಾಡಿ ಬೇಸತ್ತು ಕೊನೆಗೆ ಒಂದು ದಡವನ್ನು ಸೇರಲಾರದೆ ಕಣ್ಣೀರನ್ನು ಚೆಲ್ಲಿ ದೀಪ ಹೊತ್ತಿಸಿದಳು.

ಹೊರಗಿದ್ದ ತಂದೆ—'ಸುಲೋಚನಾ ದೀಪ ಹೊತ್ತಿಸಲು ವಿಳಂಬನೇಕೆ? ಹಚ್ಚಬಾರದೆ?" ಸ್ವರವಿಲ್ಲದವರಂತೆ ಅಂದರು.

ತನ್ನ ಒಬ್ಬಳೇ ಮಗಳಿಗೆ ಹುಡುಗನನ್ನು ತರಲಾರದ ಸೋಲು ಅವರಿಗೆ ಮುದುಕ ಶಿವರಾಯನನ್ನು ಗಂಟು ಹಾಕಿತು.

"ಅಪ್ಪ! ಊಟಕ್ಕಾಯ್ತು!" ತಂದೆಯನ್ನು ಮೆಲ್ಲನೆ ಕರೆದಳು. ಅದರಲ್ಲಿ ಯಾವುದೋ ಮಾರ್ದವತೆ ಹೊಕ್ಕಿತ್ತು, ಅದನ್ನು ತಿಳಿದ ತಂದೆ ಸಂತೋಷದಿಂದ ಒಪ್ಪಿದ್ದಳೋ ಏನೋ ಎಂಬಂತಾದರು. ....ಊಟ....ನಿದ್ರೆ... ಏಕಾಂತವಾಗಿಯೇ ನಡೆಯಿತು.

'ಸುಲೋಚನಾ! ಸ.ಲೋಚನಾ!' ಬಾಗಿಲೆದುರು ಲತಾ ತನ್ನ ಕೈಸನ್ನೆಯಿಂದಲೇ ಎಂಬಂತೆ ಕರೆದಳು. ತಂದೆ ಮಂಚದಲ್ಲಿ ಮಲಗಿ ನಿದ್ರಿಸುತ್ತಿದ್ದರು.

ಬಾಗಿಲನ್ನು ಎಳೆದು ಸ.ಲೋಚನಾ "ಏನು ಲತಾ ನನ್ನ ಪರೀಕ್ಷೆಯೆ?" ಈ ಮೂತು ಲತಾಳನ್ನು ದಂಗುಬಡಿಸಿತು.

'ಅರ್ಧವಿಲ್ಲದ ಮೂತು ಏತೆ ಸುಲೂ? ಅದೂ ನನ್ನೊಡನೆ ನಿನ್ನ ಪ್ರೇಮ ಪ್ರೀತಿಯ ಗೆಳತಿಲತೆಯೊಡನೆ? ಈ ನಿನ್ನ ಗುಹ್ಯ ಪ್ರಶ್ನೆಯೇಕೆ?'— ಲತಾ ಸಮಸ್ಯೆಯನ್ನು ಅರಿಯದವಳಾಗಿ ಕೇಳಿದಳು.

ಸುಲೋಚನಾ ಬಿಳ್ದಿಂಗಳಿಲ್ಲದ ಕಾಳರಾತ್ರಿ–ರುದ್ರರಾತ್ರಿಯನ್ನು ದಿಟ್ಟಿಸಿ ನೋಡಿ 'ಲತಾ, ನನ್ನ ಸಮಸ್ಯೆ ಅದೇ! ತೋರುತ್ತಿಲ್ಲವೇ ಅದೇ!' ಎಂದಳು.

ಬ್ಯಾಂಕ್ ಖಾತೆಯನ್ನು ಯಾರು ತೆರೆಯಬಹುದು?

ಬ್ಯಾಂಕ್ ಖಾತೆ ತೆರೆಯಲು, ತಮಗೆ ಆಸಾಧ್ಯವೆನಿಸುವ ನಿರ್ಬಂಧಗಳಿವೆಯೆಂದು ಹಲವರು ಭಾವಿಸುತ್ತಾರೆ. ಇದೊಂದು ತಪ್ಪು ಭಾವನೆ. ದಿನಕೂಲಿ ಪಡೆವವನು ಕೂಡಾ ಬ್ಯಾಂಕಿನಲ್ಲಿ ಚಿಕ್ಕ ಉಳಿತಾಯ ಖಾತೆಯನ್ನು ತೆರೆಯಬಹುದು. ಇಂದಿನ ದಿನಗಳಲ್ಲಿ ಅದು ಅವಶ್ಯವೂ ಇದೆ. ಹೆಚ್ಚಿನ ಮಾಹಿತಿಗೆ ನಿಮಗೆ ಸವಿಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ಎಲ್ಲರಿಗೂ ವಿಶಿಷ್ಟಪ್ರಕಾರದ ಸೌಜನ್ಯ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1930. ಪ್ರಧಾನ ಕಛೇರಿ: ಉಡುಪಿ, ದ. ಕನ್ನಡ.

ESTD. 1921 ಸ್ಥಾಪನೆ

NAVAYUGA
KANNADA WEEKLY, UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಗೌರವ ಸಂಪಾದಕರು:
ಎಸ್. ಗೋಪೀಚಂದ ರಾವ್, ವಿದ್ವಾನ್
ಬಿ. ಶಾಮರಾಯ ಶೆಟ್ಟಿ, ಬಿ. ಎ., ಎಲ್.ಟಿ.

ಸಂಘಾಲಕ ಸಂಪಾದಕರು:
ಕೆ. ಹೊನ್ನಗ್ಯು ಶೆಟ್ಟಿ.

ಜಾಹೀರಾತು ದರಗಳು:
ಸ್ಥಿರಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಪ್ರತಿ ರೂ. 0-13

ಚಂದಾದಾರಿಕೆಗಳಿಗಾಗಲೀ ಜಾಹೀರಾತಿನ ಸೊಬಲಗಳಿಗಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಲತಾ ಕುತ್ತಿಗೆಯನ್ನತ್ತಿತ್ತ ತಿರುಗಿಸಿ ಕತ್ತಲಲ್ಲಿ ಯೂರಿಲ್ಲದಿದ್ದುದನ್ನು ಕಂಡು 'ನನ್ನೀ ದೃಷ್ಟಿಗೆ ಗೋಚರಿಸದ ನಿನ್ನ ಸಮಸ್ಯೆ ಯಾವುದು? ನನ್ನೊಡನೆ ಮುಚ್ಚು ಮರೆಯೇಕೆ?'

'ಲತಾ! ಲತಾ!' ಸುಲೋಚನೆಯ ಮುಖ ಮಿಂಚಿತು! ಬೆಳಕಿಲ್ಲದ ರಾತ್ರಿಯಲ್ಲಿನ ಅವಳ ಮುಖ ಮಿಂಚಿದುದು ಲತೆಗೆ ಕಾಣಲಿಲ್ಲ.

'ನನ್ನ ಹೃದಯದ ದೇವತೆ ಕಾಲೇಜ್ ಪ್ರಿನ್ಸಿಪಾಲರ ಮಗ..... ಎಂದು ಭಾವಿಸಿದ್ದೆ. ಹಾಗೂ ಅವರು ಮೂತು ಕೊಟ್ಟಿದ್ದರು!" ಸ.ಲೋಚನಾ ಎಂದಳು.

'ಅದಕ್ಕಿಲ್ಲವೇ? ನಿನಗೇನು ನಂಬಿಗಸ್ಥರು ಅವರು. ನಿನ್ನನ್ನು ಎಂದಿಗೂ ಬಿಡಲಾರರು. ನಿನ್ನ ಚೆಲುವಿನ ಮುಖ ಹಿಂದೆಂದೂ ಕಂಡಿರಲಾರರು. ಅದು ಖಂಡಿತ ಸುಲೋಚನಾ'— ಸ.ಲೋಚನೆಯನ್ನು ನಗಾಡಿಸುವ ಹವ್ಯಾಸಕ್ತಳಂತೆ ಲತಾ.

ಸುಲೋಚನಾ ಒಂದರೆಗಳಿಗೆ ಸಂತೋ

(ಇನ್ನೇ ಪುಟ ನೋಡಿರಿ)

ಭಾಷಾತಳಹದಿಯಲ್ಲಿ

ಪಂಜಾಬೀ ವಿಶ್ವವಿದ್ಯಾಲಯದ ಸ್ಥಾಪನೆ

ರಾಷ್ಟ್ರಪತಿ ಡಾ| ರಾಧಾಕೃಷ್ಣನ್ನರು ಇತ್ತೀಚೆಗೆ ಪಾಟಿಯಾಲದಲ್ಲಿ ಪಂಜಾಬೀ ವಿಶ್ವವಿದ್ಯಾಲಯವನ್ನು ಉದ್ಘಾಟಿಸಿದರು. ಇದು ಭಾರತದ ೪೮ನೆಯ ಮತ್ತು ಪಂಜಾಬ ರಾಜ್ಯದ ಮೂರನೆಯ ವಿಶ್ವವಿದ್ಯಾಲಯ. ಒಂದು ರಾಜ್ಯ ಭಾಷೆಯ ಹೆಸರಿನಿಂದ ನಾಮಕರಣಗೊಂಡ ವಿಶ್ವವಿದ್ಯಾಲಯಗಳಲ್ಲಿ ಇದುವೇ ಮೊತ್ತ ಮೊದಲನೆಯದು ಎನ್ನಬಹುದು; ಮಾತ್ರವಲ್ಲದೆ ಈ ವಿಶ್ವವಿದ್ಯಾಲಯದ ಗುರಿಯೊದರೂ ಪಂಜಾಬೀ ಭಾಷೆಯ ಉನ್ನತಿ. ೧೯೫೬ರಲ್ಲಿ ಅಕಾಲಿ ದಳ ಮತ್ತು ಭಾರತ ಸರಕಾರಗಳ ನಡುವೆ ನಡೆದ ಪಂಜಾಬೀ ಭಾಷಾ ರಾಜ್ಯ ರಚನೆಯ ಸಂಬಂಧದ ಮಾತುಕತೆಯಲ್ಲಿ ಸರಕಾರವು ಇದರ ನಿರ್ಮಾಣವನ್ನು ಒಪ್ಪಿಕೊಂಡಿತ್ತು.

ಸರಕಾರವು ಒಪ್ಪಿದ್ದ ವಿಚಾರಗಳಲ್ಲಿ ಪಂಜಾಬೀ ಭಾಷಾಭಿವೃದ್ಧಿಗೆ ತಾನು ಪರಿಣಾಮಕರ ಕಾರ್ಯಕ್ರಮ ಕೈಗೊಳ್ಳುವೆನೆಂಬುದೊಂದು. ಎರಡು ವರ್ಷಗಳಿಗೆ ಮೊದಲು ರಾಜ್ಯ ಸರಕಾರವು ಪಂಜಾಬಿ ವಿಶ್ವವಿದ್ಯಾಲಯ ಮಂಡಳವನ್ನು ನಿಯುಕ್ತ ಮಾಡಿದಾಗ ನೂತನ ವಿಶ್ವವಿದ್ಯಾಲಯವನ್ನು ಪಂಜಾಬೀ ಭಾಷೆಯ ಹೆಸರಿನಿಂದಲೇ ಕರೆಯಲಾಗುವುದೆಂದು ಹೇಳಿತ್ತು. ಪಾಚಿಯಾಲದ ಮಹಾರಾಜರು ಈ ಮಂಡಳದ ನಾಯಕರಾಗಿದ್ದರು. ಪಂಜಾಬ ಮತ್ತು ಕುರುಕ್ಷೇತ್ರ ವಿಶ್ವವಿದ್ಯಾಲಯಗಳ ಉಪಕುಲಪತಿಗಳು ಇದರ ಸದಸ್ಯರಾಗಿದ್ದರು. ಈ ಮಂಡಳವು ತನ್ನ ವರದಿಯನ್ನು ಒಂದು ವರ್ಷ ಕೆಳಗೆ ಸಲ್ಲಿಸಿತ್ತು. ಅದರಲ್ಲಿ ಹೊಸ ವಿಶ್ವವಿದ್ಯಾಲಯವು ಪಾಟಿಯಾಳದಲ್ಲಿ ಸ್ಥಾಪಿತವಾಗಬೇಕೆಂದೂ ಪಾಟಿಯಾಳ ವಿಶ್ವವಿದ್ಯಾಲಯವೆಂದಿದನ್ನು ಕರೆಯಬೇಕೆಂದೂ ಸಿಫಾರಸು ಮಾಡಲಾಗಿತ್ತು. ವಿಶ್ವವಿದ್ಯಾಲಯ ವಿರಬೇಕಾದ ಸ್ಥಳ ಮತ್ತು ಅದರ ಹೆಸರುಗಳ ಸಂಬಂಧದಲ್ಲಿ ಬೇಕೆಂಬಷ್ಟು ವಾದವಿವಾದಗಳು ನಡೆಯುವು. ಈ ನಡುವೆ ಸ್ವರ್ಣಮಂದಿರದ ಅಮೃತಸರವನ್ನು ಕೇಂದ್ರವನ್ನಾಗಿಯೂ ಸಿಕ್ಖರ ಹಳೆಯ ಶಿಕ್ಷಣಾಲಯ ಕಳಸ ಕಾಲೇಜನ್ನು ವಿಶ್ವವಿದ್ಯಾಲಯದ ಮೂಲ ಕಾಲೇಜನ್ನಾಗಿಯೂ ಮಾಡಲು ಬಯಸಿತ್ತು. ಆದರೆ, ಕಾಲಕ್ರಮದಲ್ಲಿ ಬಹು ಕಾಲದಿಂದಲೂ ಪಂಜಾಬೀ ಭಾಷಾಧ್ಯಯನದ ಕೇಂದ್ರವಾದ ಪಾಟಿಯಾಳದಲ್ಲಿಯೇ ಸ್ಥಾಪಿಸಲು ಒಪ್ಪಿಕೊಂಡಿತು.

ನೂತನವಾಗಿ ರಚಿತವಾದ ಪಂಜಾಬಿ ವಿಶ್ವವಿದ್ಯಾಲಯದ ಅಧಿಕಾರ ಕಕ್ಷೆಯು ಅದರ ಸಿನೇಟ ಭವನದಿಂದ ಹತ್ತು ಮೈಲು ತ್ರಿಜ್ಯವುಳ್ಳ ವೃತ್ತ ಪ್ರದೇಶವಾಗುವುದು. ಇದರೊಳಗೆ ಈಗ ಒಟ್ಟು ಒಂಬತ್ತು ಕಾಲೇಜುಗಳು ಇವೆ. ಈ ಕಾಲೇಜುಗಳಲ್ಲಿ ವೈದ್ಯಕೀಯ ಕಾಲೇಜು, ದಂತ ವೈದ್ಯ ಕಾಲೇಜು, ವಾಣಿಜ್ಯ ಶಾಸ್ತ್ರ ಕಾಲೇಜು, ಶಿಕ್ಷಣ ಕಾಲೇಜು, ಶಾರೀರಿಕ ಶಿಕ್ಷಣ ಕಾಲೇಜುಗಳು ಒಂದೊಂದೂ ಎರಡು ಕಲೆ ಮತ್ತು ವಿಜ್ಞಾನದ ಕಾಲೇಜುಗಳೂ ಕೂಡಿವೆ. ಇವೆಲ್ಲವೂ ರಾಜ್ಯ ಸರಕಾರದಿಂದ ನಡೆಸಲ್ಪಡುತ್ತವೆ. ಇನ್ನು ಧಾಪರ್ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್ ಮತ್ತು ಟೆಕ್ನೊಲೆಜಿಯೆಂಬ ಒಂದು ವಿಶ್ವಸ್ಥ ಮಂಡಳದ ಮೂಲಕ ನಡೆಯುವ ಇಂಜಿನಿಯರಿಂಗ್ ಕಾಲೇಜೊಂದು ಇದೆ. ಹಾಯರ್ ಸೆಕೆಂಡರಿ ಶಾಲೆಗಳು ಸದ್ಯಕ್ಕೆ ಚಂಡೀಗಡದಲ್ಲಿರುವ ಪಂಜಾಬ ವಿಶ್ವವಿದ್ಯಾಲಯಕ್ಕೇನೇ ಸೇರಿಕೊಂಡು ಉಳಿಯುವುವು.

ವರ್ಗಾವಣೆ ಹೊಂದಿದ ಕಾಲೇಜುಗಳ ವಿದ್ಯಾರ್ಥಿಗಳಿಗೆ ಪಂಜಾಬ ವಿಶ್ವವಿದ್ಯಾಲಯದ ಅಭ್ಯಾಸಕ್ರಮದಲ್ಲಿಯೇ ಪರೀಕ್ಷೆಗಳನ್ನು ನಡೆಸಲು ಅಧಿಕಾರ ನೀಡುವಂತೆ ರಾಜ್ಯದ ರಾಜ್ಯಪಾಲರು ವಿಶ್ವವಿದ್ಯಾಲಯದ ಉದ್ಘಾಟನೆಯ ಮೂರು ದಿನಗಳಿಗೆ ಮೊದಲು ಒಂದು ಸುಗ್ರೀವಾಜ್ಞೆಯನ್ನು ವಿಧಿಸಿದ್ದರು. ಪಂಜಾಬಿ ವಿಶ್ವವಿದ್ಯಾಲಯವು ವಿವಿಧ ವಿಷಯಗಳಲ್ಲಿ ಶಿಕ್ಷಣ ನೀಡುವುದು; ಕಲೆ, ವಿಜ್ಞಾನ, ತಂತ್ರಶಾಸ್ತ್ರ ಮೊದಲಾದುವುಗಳಲ್ಲಿ ಸ್ನಾತಕೋತ್ತರ ಅಭ್ಯಾಸದ ವರೆಗೂ ಕೊಡುತ್ತದೆ. ಪಂಜಾಬಿಯು ಬೋಧ ಭಾಷೆಯಾಗಲು ಸಾಮರ್ಥ್ಯ ಪಡೆಯುವ ವರೆಗೆ ಇಂಗ್ಲಿಷ್ ಮಾಧ್ಯಮವಾಗಿ ಉಳಿಯುವುದು. ಪದವಿ ಮಟ್ಟದ ವರೆಗೆ ಇಂಗ್ಲಿಷ್ ಮತ್ತು ಹಿಂದಿ ಭಾಷೆಗಳ ಅಧ್ಯಯನವು ಅನಿವಾರ್ಯ. ವಿಶ್ವವಿದ್ಯಾಲಯದ ಪ್ರಮುಖ ಉದ್ದೇಶವಾದ ಪಂಜಾಬಿ ಭಾಷಾಭಿವೃದ್ಧಿಯನ್ನು ಭಾಷೆ ಮತ್ತು ಸಾಹಿತ್ಯಗಳಲ್ಲಿ ಸಂಶೋಧನೆಗಳನ್ನು ನಡೆಸಲು, ಅನುವಾದಾದಿಗಳನ್ನು ಮಾಡಲು ಅನುವೊದಗಿಸಿ ಕೊಡುವುದರ ಮೂಲಕ ಸಾಧಿಸಲಾಗುವುದು.

ಹೊಸ ವಿಶ್ವವಿದ್ಯಾಲಯದ ರಚನೆಗೆಂದು ೧೭೦.೫೨ ಲಕ್ಷ ರೂಪಾಯಿಗಳನ್ನು ರಾಜ್ಯ ಸರಕಾರವು ಒದಗಿಸಿದೆ. ಇದರಲ್ಲಿ ರೂ. ೧೫೨.೮೦ ಲಕ್ಷ ಬಂಡವಳ ರೂಪದಲ್ಲಿಯೂ ರೂ ೧೭.೭೨ ಲಕ್ಷ ಆವೃತ್ತ ರೂಪದಲ್ಲಿಯೂ ವೆಚ್ಚವಾಗುವುದು. ಅಮೃತಸರದ ಕಳಸ ಕಾಲೇಜಿನ ಮಾಜಿ ಪ್ರಿನ್ಸಿಪಲರಾದ ಭಾಯಿ ಜೋಧ ಸಿಂಗರು ಮೊದಲನೆಯ ಉಪಕುಲಪತಿಯೆಂದೂ ಪ್ರೊ| ಹರ್ಬನ್ ಸಿಂಗರು ಮೊತ್ತಮೊದಲ ರಿಜಿಸ್ತ್ರಾರರೆಂದೂ ಆಯ್ಕೆಗೊಂಡಿದ್ದಾರೆ. ಇವರಿಬ್ಬರೂ ವಿಶ್ವವಿದ್ಯಾಲಯ ಮಂಡಳದ ಸದಸ್ಯರಾಗಿದ್ದರು.

ತೃತೀಯ ಯೋಜನಾವಧಿಯಲ್ಲಿ ಇನ್ನೂ ಕೆಲವೊಂದು ವಿಶ್ವವಿದ್ಯಾಲಯಗಳ ಸ್ಥಾಪನೆಯಾಗಲಿದೆ ಇವುಗಳು ಆಕಾರದಲ್ಲಿ ತೀರ ಚಿಕ್ಕವಾಗಿ ಉಳಿಯುವುವು ಹಾಗಿರುವಾಗ ಉಡುಪಿಯಲ್ಲೊಂದು ವಿಶ್ವವಿದ್ಯಾಲಯವಾಗಬೇಕೆಂದು ಬಯಸುವುದು ಎಂದಿಗೂ ಅಸಂಗತವಾಗಲಾರದು. ಪಂಜಾಬೀ ವಿಶ್ವವಿದ್ಯಾಲಯಕ್ಕೆ ಒಂಬತ್ತು ಕಾಲೇಜುಗಳು ಮಾತ್ರ ಸೇರ್ಪಡೆ ಹೊಂದಿದರೆ, ನಮ್ಮ ಉತ್ತರ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿಯೇ ೧೪ ಕಾಲೇಜುಗಳಿವೆ.

ಫ್ರೆಂಚರ ಮುಷ್ಟಿಯಿಂದ

ಆಲ್ಜೀರಿಯಾ ಸ್ವತಂತ್ರವಾಯಿತು

೧೩೮ ವರ್ಷಗಳಿಂದ ಫ್ರೆಂಚರ ಆಡಳಿಗೆ ಒಳಗಾಗಿದ್ದ ಆಲ್ಜೀರಿಯಾದ ಜನತೆಯು ತಮ್ಮ ಸ್ವಾತಂತ್ರ್ಯದ ಬೇಡಿಕೆಗೆ ಮತದಾನ ಮಾಡಿ ಅದನ್ನು ಗಳಿಸಿಕೊಂಡಿತು. ಕಳೆದ ವಿಳೂವರೆ ವರ್ಷಗಳಿಂದ ಅಲ್ಲಿ ನಡೆಯುತಿದ್ದ ಹೋರಾಟವು ಇದರಿಂದಾಗಿ ನಿಲ್ಲುವಂತಾಯಿತು. ಸ್ವಾತಂತ್ರ್ಯದ ಪರವಾಗಿ ಮತವಿತ್ತವರ ಮುಂದೆ ವಿರೋಧ ಮತದಾನ ಮಾಡಿದವರು ಸೂರ್ಯನ ಮುಂದೆ ಮಿಣುಕುವ ದೀಪದಂತೆ ಇಲ್ಲವೇ ಇಲ್ಲವೆನ್ನಬಹುದು. ಮುಸ್ಲಿಮರೇ ಹೆಚ್ಚಾಗಿರುವ ಆಲ್ಜೀರಿಯಾದ ರಾಜಧಾನಿ ಆಲ್ಜೀರ್ಸಿನಲ್ಲಿ ಸ್ವಾತಂತ್ರ್ಯಪರ ಮತಗಳು ಧಾರಾಳವಾಗಿ ಬಿದ್ದಿರುವುದನ್ನು ತಿಳಿದುಕೊಂಡ ಅವರು ತೋರಿಸಿದ ಉತ್ಸಾಹ, ಮಾಡಿದ ಕೂಗಾಟಗಳು ಸ್ವಾತಂತ್ರ್ಯ ಪಡೆಯುವ ಲವಲವಿಕೆ ಅವರಲ್ಲಿ ಎಷ್ಟು ಇತ್ತು ಎಂಬುದನ್ನು ತೋರಿಸುವಂತಿದ್ದುವು.

ಸುಮಾರು ೬೫ ಲಕ್ಷ ರಿಜಿಸ್ಟರ್ ಮಾಡಿಸಿದ ಮತದಾರರು ಆಲ್ಜೀರಿಯಾದಲ್ಲಿದ್ದರು. ಇವರಲ್ಲಿ ೬೦ ಲಕ್ಷ ಮತದಾರರು ತಮ್ಮ ಮತವನ್ನು ಚಲಾಯಿಸಿದ್ದರು. ಇವರಲ್ಲಿ ೫೯ ಲಕ್ಷಕ್ಕೂ ಮಿಕ್ಕಿದ ಮತಗಳು ಸ್ವಾತಂತ್ರ್ಯಕ್ಕೆ ಪರವಾಗಿಯೂ ಕೇವಲ ೧೬, ೧೫೨ ಮತಗಳು ವಿರುದ್ಧವಾಗಿಯೂ ಬಿದ್ದಿದ್ದುವು. ಉಳಿದುವು ಅಸಿಂಧುವೆಂದು ಪರಿಗಣಿತವಾಗಿದ್ದುವು. ಮತಗಳ ಗಣನೆಯಿಂದ ಆಲ್ಜೀರಿಯಾ ಸ್ವಾತಂತ್ರ್ಯಕ್ಕೆ ಯಾವುದೇ ವಿರೋಧವು ಅಲ್ಲಿ ನವರಲ್ಲಿರಲಿಲ್ಲವೆಂಬುದು ಮನವರಿಕೆಯಾಗುವುದು.

೧೯೬೨ನೆಯ ಮಾರ್ಚಿ ೧೯ರಂದು ನಡೆದ ಸರಕಾರಿ ಘೋಷಣೆಯಲ್ಲಿ ನಿರೂಪಿತವಾದ ಶರ್ತಗಳ ಮೇಲೆ ಫ್ರಾಂಸದೊಂದಿಗೆ ಸಹಕರಿಸುವಂತೆ ಆಲ್ಜೀರಿಯಾವು ಸ್ವತಂತ್ರವಾಗಬೇಕೆ? ಎಂಬ ಪ್ರಶ್ನೆಯ ಮೇಲೆ ಅಲ್ಲಿ ಜನ ಮತಗಣನೆಯಾಯಿತು. ಮತಗಳ ಎಣಿಕೆಯು ಪೂರ್ತಿಯಾದ ಕೆಲವೇ ತಾಸುಗಳ ನಡುವೆ ಫ್ರೆಂಚ ಮಂತ್ರಿ ಮಂಡಳವು ಅಧ್ಯಕ್ಷ ಡಿಗಾಲೆಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಕೇವಲ ಹದಿನೈದೇ ಮಿನಿಟುಗಳಲ್ಲಿ ಆಲ್ಜೀರಿಯಾವು ಸ್ವತಂತ್ರವಾದ ಸುದ್ದಿಯನ್ನು ಘೋಷಿಸಿತು. ಆಲ್ಜೀರಿಯಾದಲ್ಲಿರುವ ಔರೋಪ್ಯರು ಕೂಡ ನಿರೀಕ್ಷಣೆಗೆ ಮೀರಿದ ಸಂಖ್ಯೆಯಲ್ಲಿ ಸ್ವಾತಂತ್ರ್ಯಕ್ಕೆ ಪರವಾಗಿ ಬೆಂಬಲವಿತ್ತಿದ್ದರು.

ಹೆಚ್ಚಿನ ಮತದಾನ ಕೇಂದ್ರಗಳು ಮುಂಜಾನೆ ೭॥ ತಾಸಿನಿಂದ ಸಂಜೆ ೬ ತಾಸಿನ ವರೆಗೆ ತೆರೆದಿದ್ದುವು. ಆದರೆ, ಓರಾನ್ ಎಂಬಲ್ಲಿ ಮತದಾನವು ಶಾಂತವಾಗಿ ನಿಧಾನವಾಗಿ ನಡೆದುದರಿಂದ ರಾತ್ರೆ ೧೦ ಗಂಟೆಗಳ ವರೆಗೂ ಮತದಾರರ ಗುಂಪು ನೆರೆದಿತ್ತು. ನಗರದ ಪ್ರಧಾನ ಬೀದಿಗಳಲ್ಲಿ ಮುಸ್ಲಿಮರನ್ನು ಹೊತ್ತ ಮೋಟಾರುಕಾರುಗಳ ಓಡಾಟವು ನಡೆಯುತಿತ್ತು.

ಮೋಂಟೆ ಬೆಲ್ಲೊ ಎಂಬ ಒಂದು ನಗರದಲ್ಲಿ ಮೂರು ಸಾವಿರ ಜನರಿದ್ದಾರೆ. ಇವರಲ್ಲಿ ೧೬೨೭ ಜನರು ಮತಪಟ್ಟಿಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿದವರು. ಇವರೆಲ್ಲರೂ ತಮ್ಮ ಮತಗಳನ್ನು ಚಲಾಯಿಸಿದುದು ಮಾತ್ರವಲ್ಲ, ಇವೆಲ್ಲವೂ ಸಿಂಧುವಾಗಿದ್ದುವು. ಇದರ ಮೇಲೆ ಆಶ್ಚರ್ಯವೆಂದರೆ ಒಂದೇ ಒಂದು ಮತವು ವಿರೋಧವಾಗಿ ಬೀಳಲಿಲ್ಲ! ಸ್ವಾತಂತ್ರ್ಯ ಪ್ರಾಪ್ತಿಗಾಗಿ ನೂರಕ್ಕೆ ನೂರರಷ್ಟು ಮತದಾನ ಮಾಡಿದ ಜನರ ಉತ್ಸಾಹವು ಎಷ್ಟರ ಬೇಡ?

'ಸೀಕ್ರೆಟ್ ಆರ್ಮಿ ಓರ್ಗನೈಸೇಜನ್', ನ ಕೋಟೆಯಂತಿರುವ ಓರನ್ ಎಂಬಲ್ಲಿನ ೨೬,೨೮೯ ಔರೋಪ್ಯ ಮತದಾರರಲ್ಲಿ ೧೭,೦೩೪ ಜನರು ಸ್ವಾತಂತ್ರ್ಯಕ್ಕೆ ಪರವಾಗಿಯೂ ೩,೫೪೦ ಜನರು ವಿರುದ್ಧವಾಗಿಯೂ ಮತ ನೀಡಿದ್ದರು. ಉಳಿದುವು ಅಸಿಂಧುವಾಗಿದ್ದುವು. ಸರ್ವಸಾಮಾನ್ಯವಾಗಿ ಒಟ್ಟು ಮತದಾರರಲ್ಲಿ ನೂರಕ್ಕೆ ೭೦ರಿಂದ ೧೦೦ರಷ್ಟು ಮತದಾನವನ್ನು ಮಾಡಿದ್ದರು. ಆಫ್ರಿಕೆಯ ಭೂಖಂಡದ ಇತಿಹಾಸದಲ್ಲಿಯೇ ಪ್ರಕಾಶೋದಯವಾದ ಚಿಹ್ನೆಯೆಂದಿದನ್ನು ಕರೆಯಬಹುದು.

ಭೂಮಧ್ಯ ಸಾಗರ ಅಥವಾ ಮೆಡಿಟರೇನಿಯನ್ ಸಮುದ್ರದಲ್ಲಿ ಹಡಗು ಸಂ

(೯ನೇ ಪುಟ ನೋಡಿರಿ)

"ಸೇವೆಯೇ ಮೊದಲು; ಸೇವೆಯಲ್ಲಿ ಮೊದಲು"

ಈ ಉದಾತ್ತ ಧ್ಯೇಯ ಸಾಧನೆಗಾಗಿಯೇ

— ಕೊರ್ಪೊರೇಶನ್ ಬೇಂಕ್ —

ನಿಮ್ಮ ಹಣಕ್ಕೆ

ಅತ್ಯುತ್ತಮ ಭದ್ರತೆಯೊಂದಿಗೆ ಅತ್ಯಧಿಕ ಬಡ್ಡಿ ಕೊಡುತ್ತಿದೆ.

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಉಡುಪಿ)

ಆಡಳಿತ ಆಫೀಸು: ಮಂಗಳೂರು.

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ಶಾಲಾ ರಿಜಿಸ್ತ್ರಿಗಳು,

ಫಾರ್ಮುಗಳು,

ದೊರೆಯುತ್ತವೆ.

ವಿಚಾರಿಸಿರಿ—

ನವಯುಗ ಪ್ರೆಸ್, ಉಡುಪಿ

ಕರ್ನಾಟಕ ಸರಕಾರದ

ಯಂತ್ರೋಪಕರಣಗಳು ಕೊಳೆಯುತ್ತಿವೆ!

ಸಾರ್ವಜನಿಕ ಹಣವು ಸರಕಾರದ ಬೊಕ್ಕಸ ಸೇರಿ ಅದು ಜೇಗೆ ನಿರರ್ಥಕವಾಗುತ್ತದೆ ಎಂಬುದಕ್ಕೆ ಕೆಲವು ಉದಾಹರಣೆಗಳು ಈಗ ಕಂಡುಬರತೊಡಗಿವೆ. ೧೯೬೧-೬೨ರ ಲೆಕ್ಕಸತ್ರ ಪರಿಶೋಧಕರ ವರದಿಯು ರಾಜ್ಯದ ಕೆಲವೊಂದು ಯಂತ್ರೋಪಕರಣಗಳು ಕೆಲಸವಿಲ್ಲದೆ ವರ್ಷಗಟ್ಟಲೆ ಉಳಿದ ಸಂಗತಿಗಳನ್ನು ಬೆಳಕಿಗೆ ತಂದಿದೆ. ಹೀಗೆ ನಿರರ್ಥಕವಾಗಿರುವ ಯಂತ್ರೋಪಕರಣಗಳ ದೆಸೆಯಿಂದ ರಾಜ್ಯ ಸರಕಾರಕ್ಕೆ ಅಪಾರ ನಷ್ಟವು ಸಂಭವಿಸಿದೆಯೆಂದು ಅದು ಹೇಳಿದೆ.

ಶಂಕಾಪದ ಯೋಜನೆಗೆಂದು ಕೊಂಡು ಕೊಳ್ಳಲಾದ ಯಂತ್ರಿಕೋಪಕರಣಗಳು ಕಳೆದ ಮೂರು ವರ್ಷಗಳಿಂದ ನೀರು ಕುಡಿದು ಸೋಮೂರಿಯಾಗಿ ಬದುಕುತ್ತಿವೆ. ಬಾಕ್ಸ್ ನಂಗಲ್ ಮತ್ತಿತರ ಯೋಜನೆಗಳಿಂದ ೧೯೫೬ರಿಂದ ೫೯ರ ಅವಧಿಯಲ್ಲಿ ಖರೀದಿ ಮಾಡಲಾದ ಹಳೆಯ ಯಂತ್ರೋಪಕರಣಗಳು ಸುಮಾರು ರೂ. ೧೬ ಲಕ್ಷ ಬೆಲೆ ಬಾಳುವಂಥವಿದ್ದು ಇವು ನಿರುಪಯೋಗಿಯೆಂಬಂತೆ ಮೂರು ವರ್ಷಗಳಿಂದ ಕೊಳೆಯುತ್ತಿವೆ. ಇವುಗಳಲ್ಲಿಯೂ ಕೆಲವು ಯಂತ್ರಗಳು ಅಪರಿಪೂರ್ಣ ಸ್ಥಿತಿಯಲ್ಲಿ ಕೈ ಸೇರಿದುವೆಂದು ತಿಳಿಯುತ್ತದೆ. ಇನ್ನು ಕೆಲವು ಗಳಿಗೆ ದೊಡ್ಡ ಮಟ್ಟದ ರಿಪೇರಿಯು ಅಗತ್ಯವಿದೆಯೆಂದೂ ಹೇಳಲಾಗುತ್ತಿದೆ. ಬೇರೆ ಕೆಲವು ಯಂತ್ರೋಪಕರಣಗಳನ್ನು ಪರೀಕ್ಷಿಸಿ ಸುವುದಕ್ಕೆ ಮೊದಲೇ ಅವುಗಳ ಬೆಲೆಯನ್ನು ತೆತ್ತಾಗಿದೆಯೆಂದು ಗೊತ್ತಾಗಿದೆ.

ಸಾಕಷ್ಟು ಪರೀಕ್ಷಿಲನೆಯನ್ನು ನಡೆಸದೆ ಯೋಜನೆಯಲ್ಲಿ ಅವುಗಳ ಉಪಯುಕ್ತತೆಯ ಪ್ರಮಾಣವನ್ನು ಕಂಡುಕೊಳ್ಳದೆ ಕೊಂಡುಕೊಂಡ ಯಂತ್ರೋಪಕರಣಗಳು —ಮುಖ್ಯವಾಗಿ ಹಳೆಯವು- ಮಿತವ್ಯಯದ ರಿಪೇರಿಯು ಮಟ್ಟವನ್ನು ಕಳೆದು ಕೊಂಡಿವೆ. ಇದರಿಂದ ಸರಕಾರಿ ಬೊಕ್ಕಸವನ್ನು ವ್ಯರ್ಥವಾಗಿ ಪೋಲು ಮಾಡಿದಂತಾಗಿದೆ ಮಾತ್ರವಲ್ಲ, ನಷ್ಟವನ್ನೂ ಉಂಟು ಮಾಡಿದೆ. ಯಂತ್ರಗಳನ್ನು ಕೂಡಲೇ ರಿಪೇರಿಮಾಡಿಸಿ ಅವುಗಳಿಂದ ಕೆಲಸವನ್ನು ಮಾಡಿಸಿಕೊಳ್ಳುವುದು ತಡೆಯಬಹುದಾದ ನಷ್ಟ. ಈ ಮೊದಲೇ ಸಂಭವಿಸಿದನಷ್ಟವನ್ನು ಯಾವ ರೀತಿಯಿಂದಲೂ ತುಂಬಿಸುವುದು ಸಾಧ್ಯವಿಲ್ಲ, ಮುಂದಿನದನ್ನಾದರೂ ತಡೆಯುವ ಪ್ರಯತ್ನ ಮಾಡಬೇಕು

ಶರಾವತಿಯಲ್ಲಿ ರಾಜ್ಯ ಸರಕಾರಕೊಂಡುಕೊಂಡ ಮೆಷಿನರಿಯು ವ್ಯರ್ಥವಾಗುತ್ತಿದ್ದರೆ, ಗಣಿಗಳ ಹೊತ್ತಿನಲ್ಲಿಯೇ ಸಂಪೂರ್ಣಗೊಂಡಿದ್ದ ತುಂಗಭದ್ರಾ ಯೋಜನೆಗೆ ತಂದಿದ್ದ ಮೆಷಿನರಿಗಳು ಇನ್ನೂ ಕೊಳೆಯುತ್ತಿವೆ! ಇಂತಹ ಯಂತ್ರೋಪಕರಣಗಳ ಮೌಲ್ಯ ರೂ. ೭೯ ಲಕ್ಷಗಳು! ಇಷ್ಟು ದೊಡ್ಡ ಮೊತ್ತದ ಬೆಲೆ ಬಾಳುವ ಯಂತ್ರಗಳಲ್ಲಿ ರೂ. ೬೩ ಲಕ್ಷ ಲಕ್ಷ ಮೌಲ್ಯದವು ಮರಳಿ ಉಪಯೋಗಕ್ಕೆ ಬೀಳಬೇಕಾದರೆ ಮತ್ತೆ ದೊಡ್ಡ ಮೊತ್ತ ರಿಪೇರಿ ಮಾಡುವುದು ಅಗತ್ಯವಿದೆ. ಇನ್ನು ೧೫ ಲಕ್ಷ ರೂಪಾಯಿಯವು ಮಂದೆ ಕೆಲಸಕ್ಕೆ ಬಾರದಂತಹ ಹೀನ ಸ್ಥಿತಿಗೆ ಬಂದುಬಿಟ್ಟಿವೆ! ಕೆಲಸವು ಮುಗಿದು ಇಷ್ಟು ವರ್ಷಗಳು ದಾಟಿದ ಮೇಲೂ ಅವನ್ನು ಇಟ್ಟುಕೊಂಡಿರುವುದರಿಂದ ಸರಕಾರಕ್ಕೆ ಲಕ್ಷಾಂತರ ರೂಪಾಯಿಗಳ ನಷ್ಟವು ಸಂಭವಿಸಿದೆ

ಇದು ಸಾಮಾನ್ಯ ಜನರು ಹೇಳುವ ಮಾತಲ್ಲ. ಲೆಕ್ಕಪತ್ರಗಳನ್ನು ಸಾಧಾರವಾಗಿ ಪರಿಶೋಧಿಸುವ ಅಧಿಕಾರಿಗಳೇ ಸರಕಾರಕ್ಕೆ ಒಪ್ಪಿಸಿದ ವರದಿಯಲ್ಲಿ ಉಲ್ಲೇಖಿತವಾಗಿರುವ ಮಾತುಗಳು. ಖಾಸಗಿ ಒಡೆತನವಿರುತ್ತಿದ್ದರೆ, ಇಂತಹ ಪ್ರಮಾದವೆಂದಿಗೂ ಆಗುತ್ತಿರಲಿಲ್ಲ. ಸರಕಾರಿ ವಲಯದಲ್ಲಿನ ಕಾರ್ಯಕ್ಷಮತೆಯ ಸಂಪೂರ್ಣ ಪರಿಚಯವನ್ನು ಈ ವರದಿ ನಮಗೆ ಮಾಡಿಕೊಡುತ್ತದೆ ದಿನದಿಂದ ದಿನಕ್ಕೆ ಜೀವನ ಯಾಪನೆಯ ಪ್ರಶ್ನೆಯೇ ಜಟಿಲವಾಗುತ್ತ ಬರುತ್ತಿರುವಾಗ, ನಾಗರಿಕರು ತಾಳಲಾರದ ಕರಭಾರವನ್ನು ಸಹಿಸುತ್ತ ವಂಡಡಿಯಿಡುತ್ತಿರುವಾಗ, ಇಂತಹ ನಿರುಪಯುಕ್ತವಾಗಿ ಸಾರ್ವಜನಿಕ ಹಣವು ನಿರರ್ಥಕವಾಗುವುದೆಂದರೆ ಅದನ್ನು ತುಳಿಕೊಳ್ಳುವಾಗ ಅಪಾರ ಕಷ್ಟವಾಗುತ್ತದೆ.

ಸರಕಾರಿ ವಲಯದಲ್ಲಿರುವ ಸೋಮೂರಿತನ, ಕೆಲಸಗಳ್ಳತನಗಳಿಂದರೇ ಇಂತಹ ಸಂದರ್ಭಗಳು ಬರುವುವೆಂದು ಬೇರೆ ಹೇಳಬೇಕಾಗಿಲ್ಲ. ಆದುದರಿಂದ ಈಗ ತಾನೆ ಮುಖ್ಯಮಂತ್ರಿಯಾಗಿ ಆಯ್ಕೆಗೊಂಡ ನಿಜಲಿಂಗಪ್ಪನವರು ಆಡಳಿತೆಯಲ್ಲಿ ದಕ್ಷತೆಯನ್ನೂ ತೀವ್ರತೆಯನ್ನೂ ತರಲು ಹೆಣಗಬೇಕು; ಕರ ವಸೂಲು ಮಾಡುವುದು ಅದನ್ನು ಯಾವುಪಾದರೂ ರೀತಿಯಲ್ಲಿ ಖರ್ಚುಮಾಡುವುದಕ್ಕೆ ಸರಕಾರವಿರುವುದಲ್ಲ ಜನತೆಗೆ ಅಧಿಕಾಧಿಕ ಸೌಲಭ್ಯಗಳನ್ನು ಒದಗಿಸಿ ಕೊಡುವುದೂ ಆದರ ಕೆಲಸ. ನೆತ್ತರ ಹನಿಯಂತೆ ಪವಿತ್ರವಾದ ಪ್ರತಿ ನಯೇ ಪೈಸೆಯೂ ಸದುಪಯೋಗವಾಗುವಂತೆಯೂ, ಸೋಮೂರಿತನ-ಉದಾಸೀನತೆಯು ಪುನರಾವರ್ತನೆಗೊಳ್ಳದಂತೆಯೂ ನೋಡಿಕೊಳ್ಳಬೇಕು.

ಆದರ್ಶ ಆಹಾರ

ಹಸುವಿನ ಹಾಲಿನಲ್ಲಿ ಅಪೂರ್ವ ಶಕ್ತಿ

ಹಸುವಿನ ಹಾಲಿಗಿಂತ ಉತ್ತಮವಾದ ಪೌಷ್ಟಿಕ ಪದಾರ್ಥವು ಬೇರೊಂದಿಲ್ಲ. ಶೈಶವಾವಸ್ಥೆಯಲ್ಲಿ ತಾಯಿಯು ಹಾಲನ್ನು ಬಿಡಿಸಿದಾಗಿನಿಂದ, ಮನುಷ್ಯನು ಹಸುವಿನ ಹಾಲಿನಲ್ಲಿಯೇ ಬೆಳೆಯುತ್ತಾನೆ. ಹಾಲು ಉತ್ತಮ ಆಹಾರ ವಸ್ತುವೆಂದು ಮಾತ್ರ ಇದು ವರೆಗೂ ತಿಳಿಯಲಾಗಿತ್ತು. ಅದು ಕೇವಲ ಆಹಾರ ಮಾತ್ರವಲ್ಲ; ರೋಗ ನಿವಾರಕಶಕ್ತಿಯುತವಾದ್ದಸಿದ್ಧೌಷಧವೂ ಹೌದು ಎಂದು ಇತ್ತೀಚಿನ ಸಂಶೋಧನೆಗಳಿಂದ ತಿಳಿದು ಬಂದಿದೆ. ಆಣುಭಸ್ಮಪಾಕದಿಂದಾಗುವ ಹಾನಿಯನ್ನು ಸದಾ ತಡೆಯಬಲ್ಲ ಶಕ್ತಿ ಅದಕ್ಕಿದೆ.

ಸ್ತ್ರೈಣ ಜೀವಿಗಳಲ್ಲದವರ ಸಂತಾನವೂ ಬೆಳ್ತಣಿಗೆಯ ಒಂದು ಸ್ಥಿತಿಯನ್ನು ವಯಸ್ಸಿನ ವರೆಗೂ ತಾಯಿಯ ಹಾಲಿನಲ್ಲಿಯೇ ಜೀವಿಸುವುದು ತಿಳಿದ ಸಂಗತಿ. ಇದಕ್ಕೆ ವ್ಯತಿರಿಕ್ತ ಕಾರಣವಿಲ್ಲದಿಲ್ಲ. ಹಾಲು ಶಕ್ತಿದಾಯಕವಾದ ಅಮೃತಸದೃಶವಾದ ಆಹಾರವೆಂದು ಪರಿಗಣಿಸಲ್ಪಟ್ಟಿದೆ. ನಾಗರಿಕತೆಯು ಹೆಚ್ಚುತ್ತಿರುವ ಈ ಕಾಲದಲ್ಲಿ ಹುಟ್ಟಿಕೊಳ್ಳುತ್ತಿರುವ ಅನೇಕ ಹೊಸ ರೋಗಗಳನ್ನು ತಡೆಯುವ ಹಾಗೂ ನಿವಾರಿಸುವ ಶಕ್ತಿ ಸಹಾ ಹಾಲಿಗಿದೆಯೆಂದು ತಿಳಿದು ಬಂದಿದೆ.

ಪೌಷ್ಟಿಕಾಂಶಯುತವಾದ ಆಹಾರದ ಬಗ್ಗೆ ಸಂಶೋಧನೆ ನಡೆಸುತ್ತಿರುವ ಆಸ್ಟ್ರಿಯಾ ದೇಶದ ಹೆಸರಾಂತ ಸಂಶೋಧಕರಾದ ಹಾಲ್ಡೇನ್ ಎಂಬವರು ಬರೆದಿರುವ ಪುಸ್ತಕದಲ್ಲಿ ಹಾಲಿನ ರೋಗ ನಿವಾರಕ ಶಕ್ತಿಯ ಬಗ್ಗೆ ವಿವರವಾಗಿ ಬರೆದಿದ್ದಾರೆ. ವೈದ್ಯಕಾರಿಕೆಗಳು ಪ್ರಬಲ ಸ್ಥಾನವನ್ನು ಪಡೆದಿರುವ ಒಂದೊಂದು ದೇಶದಲ್ಲಿಯೂ, ಅಲ್ಲಿಯ ವಾಙಾವರಣವು ಕಲುಷಿತಗೊಂಡು, ಹೊಸ ರೋಗಗಳು ಹುಟ್ಟಿಕೊಂಡಾಗ, ಅವುಗಳನ್ನು ನಿವಾರಿಸಲು ಹಾಲು ಹೇಗೆ ಸಹಕಾರಿಯಾಯಿತೆಂದು ಅದರಲ್ಲಿ ವಿವರಿಸಲಾಗಿದೆ. ಈ ಪುಸ್ತಕಕ್ಕೆ ಬವೇರಿಯಾದ ವೈದ್ಯಸಾಯ ಸಂಘವು ಹೆಚ್ಚಿನ ಪ್ರಚಾರವನ್ನು ನೀಡುತ್ತಿದೆ.

ವಾಯುಮಂಡಲವಾಗಲೀ ಮನುಷ್ಯನ ಸುತ್ತಮುತ್ತಲ ವಾತಾವರಣವಾಗಲೀ ಇಂದು ಕಲುಷಿತವಾಗಿರುವಷ್ಟು ಬೇರಾವ ಸಮಯದಲ್ಲೂ ಆಗಿರಲಿಲ್ಲ. ಇವುಗಳಲ್ಲಿ ಕಲೆತಿರುವ ರಾಸಾಯನಿಕ ವಸ್ತುಗಳ ಪರಿಣಾಮಕ್ಕೆ ಅತ್ಯಂತ ಅಪಾಯಕಾರಿಯಾದವು. ಇದರಿಂದಾಗಿ, ಜನರ ಆರೋಗ್ಯಕ್ಕೂ ಪ್ರಾಣಕ್ಕೂ ಹೆಚ್ಚಿನ ಅಪಾಯವಿದೆ ಯೆಂದು ಹಾಲ್ಡೇನರು ಎಚ್ಚರಿಸಿದ್ದಾರೆ.

ದೇಹದೊಳಗೆ ಮನೆಮಾಡಿಕೊಂಡಿರುವ ಇಂತಹ ವಿಷಮಯ ರಾಸಾಯನಿಕ ವಸ್ತುಗಳನ್ನು ಹೊರಹಾಕುವುದು ಹಾಲಿನ ಒಂದು ವಿಶೇಷ ಗುಣ. ಹಾಲಿನಿಂದಾಗಿ ಪಿತ್ತ ಕೋಶದ ವೈಪರೀತ್ಯಗಳೆಲ್ಲಾ ಸರಿಹೋಗುವು ಮುಖ್ಯವಾಗಿ ಮೊಸರು ಮತ್ತು ಬೆಣ್ಣೆಗಳಲ್ಲಿ ಈ ಗುಣ ಹೆಚ್ಚಾಗಿದೆ. ಸಲ್ಫಾನಮೈಡ್ ಔಷಧಿಗಳನ್ನೂ, ಪೆನ್ಸಿಲಿನ್ ಮತ್ತು ಸ್ಟ್ರೆಪ್ಟೋಮಿಸಿನ್ ಮುಂತಾದುವುಗಳನ್ನು ಸೇವಿಸುತ್ತಿರುವ ರೋಗಿಗಳಿಗೆ ಹಾಲು ಅತ್ಯಂತ ಮುಖ್ಯ. ಅದನ್ನು ಹೆಚ್ಚಾಗಿ ಸೇವನೆ ಮಾಡುವುದರಿಂದ ಅವರು ಶೀಘ್ರವಾಗಿ ಗುಣವನ್ನು ಹೊಂದುವರು. ಹಾಲಿನಲ್ಲಿ ಕೆಲವು ವಿಟಮಿನ್ನುಗಳೂ ಮತ್ತು ಪಿಷ್ಟವೂ ಅಧಿಕವಾಗಿರುವುದೇ ಇದಕ್ಕೆ ಕಾರಣ.

ರಾಸಾಯನಿಕ ವಸ್ತುಗಳನ್ನು ಅಧಿಕವಾಗಿ ಉಪಯೋಗಿಸುವ ಸೀಸದ ಕಾರ್ಖಾನೆ ಮುಂತಾದವು

(೧೨ನೇ ಪುಟ ನೋಡಿ)

ಮತ್ತೊಂದು ಆಕರ್ಷಣೀಯ

ಉಳಿತಾಯ ಯೋಜನೆ

ರೆಕರಿಂಗ್ ಡಿಪಾಸಿಟ್ ಸ್ಕೀಮ್

ವಿಶೇಷ ಸೌಲಭ್ಯಗಳು:

- ಮಾಹೆಯಾನ ರೂ. 5/- ರಿಂದ ರೂ 500/- ವರೆಗಿನ ಕಂತು ಕಟ್ಟುವ ರೆಕರಿಂಗ್ ಡಿಪಾಸಿಟ್ ಖಾತೆಯನ್ನು ನೀವು ತೆರೆಯಬಹುದು.
- ರೆಕರಿಂಗ್ ಡಿವಾಸಿಟ್ ಸ್ಕೀಮಿನ ಅವಧಿಗಳು— 12, 24, 36, 48 ಮತ್ತು 60 ತಿಂಗಳುಗಳು.
- ಸಾವಕಾಶವಾಗಿ ಕಟ್ಟಿದ ಕಂತುಗಳಿಗೆ ದಂಡವೇನೂ ಕೊಡಬೇಕಾಗಿಲ್ಲ
- ಚಕ್ರಬಡ್ಡಿ — ವಾರ್ಷಿಕವಾಗಿ 4%.

ಹೆಚ್ಚಿನ ವಿವರಗಳನ್ನು ನಿಮ್ಮ ಸಮೀಪದ ಶಾಖೆಯಲ್ಲಿ ಪಡೆಯಿರಿ.

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ: 1906)

ಸಮಗ್ರ ಸೇವೆ .... ಸಂಪೂರ್ಣ ಭದ್ರತೆ

ಹೊಸ ಪುಸ್ತಕ—

'ನಜಿಕೇತ'ರ

ನವೀನ ಕಾದಂಬರಿ—

ಹಸುರು ಹಂಸ

ಇದೀಗ ಪ್ರಕಟವಾಗಿದೆ.

ಬೆಲೆ: ರೂ. ಎರಡು.

ವಿಜಯಾ ಏಜೆನ್ಸಿ,

ನವಯುಗ ಪ್ರೆಸ್, ಉಡುಪಿ.

ಸ್ವಾತಂತ್ರ್ಯ ಸಂಗ್ರಾಮದಲ್ಲಿ

ಬೊಂಬಾಯಿ ಉಚ್ಚ ನ್ಯಾಯಾಲಯದ ಪಾತ್ರ

ನಮ್ಮ ರಾಷ್ಟ್ರೀಯಾಂದೋಲನದ ನೇತೃತ್ವವು ಪ್ರಾರಂಭದಿಂದ ಮುಂದೆ ಬಹು ಸಮಯದ ವರೆಗೂ ಅದು ವಕೀಲ ವರ್ಗದ ಪ್ರತಿಷ್ಠಿತರ ಕೈಗಳಲ್ಲಿತ್ತು. ಭಾರತದ ಪ್ರಪ್ರಥಮ ರಾಜಕೀಯ ಪಕ್ಷ ಕಾಂಗ್ರೆಸ್ಸು ಬೊಂಬಾಯಿಯಲ್ಲಿಯೇ ಸ್ಥಾಪಿತವಾದುದರಿಂದ ಆ ಪ್ರಾಂತದ ಶ್ರೇಷ್ಠ ನ್ಯಾಯಾಧೀಶ—ವಕೀಲರ ಮಾರ್ಗದರ್ಶನವು ಅದಕ್ಕೆ ದೊರೆತು ಅದು ಮತ್ತಷ್ಟು ಸಶಕ್ತವಾದುದು ಅಸ್ವಾಭಾವಿಕವಲ್ಲ. ಬೊಂಬಾಯಿಯ ಉಚ್ಚ ನ್ಯಾಯಾಲಯವೂ ಕಾಂಗ್ರೆಸ್ಸಿನ ಸಂಬಂಧವನ್ನು ಇಟ್ಟುಕೊಂಡಿದೆ. ಅದುದರಿಂದ ಶತಮಾನೋತ್ಸವವನ್ನು ಆಚರಿಸಿದ ನ್ಯಾಯಾಲಯ ಮತ್ತು ಕಾಂಗ್ರೆಸ್‌ಗಳ ನಡುವಣ ಸಂಬಂಧವು ಬಹು ದೃಢವಾಗಿದೆ.

ಬೊಂಬಾಯಿಯ ಉಚ್ಚ ನ್ಯಾಯಾಲಯವು ರಾಷ್ಟ್ರೀಯ ಕಾಂಗ್ರೆಸ್ಸಿಗಿಂತ ೨೩ ವರ್ಷಗಳಷ್ಟು ಹಿರಿಯದು. ಈ ಶತಮಾನದ ಮೊದಲ ದಶಕದ ವರೆಗೆ ನ್ಯಾಯಾಲಯದ ಕಾರ್ಯ ಪ್ರಣಾಳಿಯು ಆಂಗ್ಲ ರೀತಿಯದಾಗಿದ್ದರೂ ಈ ಅವಧಿಯಲ್ಲಿ ಉಚ್ಚ ತಮರೆನಿಸಿದ ನ್ಯಾಯಾಧೀಶರನ್ನೂ ವಕೀಲರನ್ನೂ ಒದಗಿಸಿಕೊಟ್ಟ ಈ ನ್ಯಾಯಾಲಯದ ಬಗ್ಗೆ ಪ್ರತಿಯೊಬ್ಬನೂ ಹೆಮ್ಮೆಪಡಬಹುದಾಗಿದೆ. ರಾನಡೆ, ತೇಲಂಗ್, ಚಂದಾವರಕರ, ಬದ್ರುದ್ದೀನ್, ತೈಯಬಜಿ, ಫಿರೋಜ ಶಹ ಮೆಹತ, ಬಹಾದುರಜಿ, ಮಹಮ್ಮದ ಅಲಿ ಜಿನ್ನ, ಚಿಮನ್‌ಲಾಲ್ ಸೆಟಲ್ವಾಡ್, ಮಂಡಲೀತ್, ಭುಲಾಭಾಯಿ ದೇಸಾಯಿ ಮೊದಲಾದ ನವರತ್ನಗಳು ಬೊಂಬಾಯಿ ಹೈಕೋರ್ಟಿನ ಕೊಡುಗೆಗಳು.

ಮುಂಬಯಿಯ ಉಚ್ಚ ನ್ಯಾಯಾಲಯ ಸ್ಥಾಪಿತವಾದ ೨೩ ವರ್ಷಗಳ ನಂತರ ೧೮೮೫ರ ದಶಂಬರ ೨೭ರಂದು ದೇಶದ ಭವಿಷ್ಯದ ಬಗ್ಗೆ ವಿಚಾರ ಮಾಡುವ ಉದ್ದೇಶದಿಂದ ನಿಷ್ಠಾವಂತರಾದ ೭೧ ವ್ಯಕ್ತಿಗಳು ಬೊಂಬಾಯಿಯಲ್ಲಿ ಒಟ್ಟು ಸೇರಿದ್ದರು. ಇವರಲ್ಲಿ ಒಬ್ಬರು ಈ ನ್ಯಾಯಾಲಯದ ನ್ಯಾಯಾಧೀಶರೂ ಇದ್ದರು. ಈ ಮಹಾ ವ್ಯಕ್ತಿಯೇ (ದಿವಂಗತ) ಕಾಶೀನಾಥ ತ್ರ್ಯಂಬಕ ತೆಲಂಗ್.

ಗ್ವಾಲಿಯಾ ಟೇಂಕದಲ್ಲಿರುವ ಗೋಕುಲದಾಸ ತೇಜಪಾಲ ಸಂಸ್ಕೃತ ಪಾಠ ಶಾಲೆಯ ಭವನದಲ್ಲಿ ಸೇರಿದ ಸಭೆಯಲ್ಲಿ ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನ ಸ್ಥಾಪನೆಯಾಯಿತು. ಶ್ರೀ ವ್ಯೋಮೇಶ ಬೆನರ್ಜಿಯವರನ್ನು ಸಭಾಧ್ಯಕ್ಷ ಸ್ಥಾನಕ್ಕೆ ಹ್ಯೂಮರು ಸೂಚಿಸಿದಾಗ ಅದನ್ನು ಕೆ. ಟಿ ತೆಲಂಗರು ಅನುಮೋದಿಸಿದ್ದರು. ಈ ಘಟನೆಯ ನಂತರ ತೆಲಂಗರ ಮೇಲೆ ಸರಕಾರದ ದೃಷ್ಟಿ ಬಿತ್ತು. ಅನಂತರವೂ ಬಹುಕಾಲ ತೆಲಂಗರು ನ್ಯಾಯಾಧೀಶ ಪದವಿಯಲ್ಲಿ ಉಳಿದಿದ್ದರು; ಆದರೆ; ಸರಕಾರವು ಗುಪ್ತಚಾರರ ಮೂಲಕ ಅವರ ಪ್ರತಿಯೊಂದು ಕೃತ್ಯದ ಮೇಲೂ ನಿಗಾ ಇಡುತಿದ್ದರು. ೧೮೯೭ರಲ್ಲಿ ಲೋಕಮಾನ್ಯ ತಿಲಕರ ಕಟ್ಲೆಯ ದೆಸೆಯಿಂದ ಶ್ರೀ ತೆಲಂಗರನ್ನು ಸರಕಾರವು ಬಹುಪರಿಯಾಗಿ ತ್ರಾಸಗೊಳಿಸಿತು. ಅವರ ಮನೆಯನ್ನು ಶೋಧಿಸಿತು; ಅವರಿಗೆ ಬರುವ ಅಂಚೆಯನ್ನೂ ಪರಿಶೀಲನೆಗೆ ಗುರಿ ಮಾಡಿತು. ಹಾಗಿದ್ದರೂ ನ್ಯಾಯಮೂರ್ತಿ ತೆಲಂಗರು ತನ್ನ ದಾರಿಯನ್ನು ಬಿಟ್ಟು ಕದಲಲಿಲ್ಲ.

ಕಾಂಗ್ರೆಸ್ಸಿನೊಂದಿಗೆ ಸಹಕರಿಸಿದ ನ್ಯಾಯ ಮೂರ್ತಿಗಳು ತೆಲಂಗರೊಬ್ಬರೇ ಅಲ್ಲ. ಬದ್ರುದ್ದೀನ್ ತೈಯ ಬಜಿ ಮತ್ತು ನಾರಾಯಣರಾವ್ ಚಂದ್ರಾವರಕರರೂ ಕಾಂಗ್ರೆಸ್ಸಿನೊಂದಿಗೆ ಶೃದ್ಧಾಶಕ್ತಿಯಿಂದ ಕೂಡಿಕೊಂಡಿದ್ದರು. ತೈಯಬಜಿಯವರು ೧೮೮೭ರ ಮದ್ರಾಸ ಅಧಿವೇಶನದಲ್ಲಿ ಕಾಂಗ್ರೆಸ್ ಅಧ್ಯಕ್ಷಾಸನ ಸ್ವೀಕರಿಸಿದ್ದರೆ, ಚಂದ್ರಾವರಕರರು ಆ ಮೇಲೆ ೧೩ ವರ್ಷಗಳ ನಂತರ ಲಾಹೋರ್ ಅಧಿವೇಶನದ ಅಧ್ಯಕ್ಷರಾದರು. ಇದಕ್ಕಿಂತಲೂ ಹೆಚ್ಚಾಗಿ ಮುಂಬಯಿ ಉಚ್ಚ ನ್ಯಾಯಾಲಯದ ಒಬ್ಬ ಬಿಳಿಯ ನ್ಯಾಯಾಧೀಶನೂ ಕಾಂಗ್ರೆಸ್ಸಿಗೆ ನೆರವು ನೀಡಿದ್ದನು. ಈ ಬಿಳಿಯನೇ ನ್ಯಾಯಮೂರ್ತಿ ಬೇಡರ್ ಬರ್ನ್ ಇವರು ೧೮೮೯ರ ಬೊಂಬಾಯಿಯ ಅಧಿವೇಶನದಲ್ಲಿ ಮತ್ತು ೧೯೧೦ರ ಅಲ್ಲಹಾಬಾದ ಅಧಿವೇಶನದಲ್ಲಿ ಅಧ್ಯಕ್ಷತೆಯನ್ನು ವಹಿಸಿದುದೇ ಅವರ ಲೋಕಪ್ರಿಯತೆಗೆ ಸಾಕ್ಷಿ.

ಸರ್ ಬೇಡರ್ ಬರ್ನ್ ಸುತನನ್ನು ನಿಷ್ಪಕ್ಷಪಾತತೆ ಮತ್ತು ಸ್ಪಷ್ಟವಾದಿತನಕ್ಕೆ ಹೆಸರಾದವರು. ಬೊಂಬಾಯಿ ಹೈಕೋರ್ಟಿನಲ್ಲಿ ಖಾಯಂ ನ್ಯಾಯಾಧೀಶರೆಂದು ನೇಮಕಗೊಂಡ ಪ್ರಪ್ರಥಮ ಭಾರತೀಯ ನಾನಾಭಾಯಿ ಹರಿದಾಸರು ಕೂಡಾ ಇದೇ ವಿಶೇಷತೆಯಿಂದ ವಿಖ್ಯಾತರಾಗಿದ್ದಾರೆ.

ಆ ಸಮಯದಲ್ಲಿ ಭಾರತೀಯ ಸರಕಾರಿ ಅಧಿಕಾರಿಗಳು ತಮ್ಮ ಬಿಳಿಯ ಅಧಿಕಾರಿಗಳಿಗೆ ಉಚಿತ ಸಮ್ಮಾನ ನೀಡುವುದು ಒಂದು ನಿಯವ ದಂತಾಗಿತ್ತು. ಒಂದೊಮ್ಮೆ ಒಬ್ಬ ಭಾರತೀಯ ಅರಣ್ಯಾಧಿಕಾರಿಯು ಬಿಳಿಯ ಅಸಿಸ್ಟೆಂಟ್ ಕಲೆಕ್ಟರನಿಗೆ ನಮಸ್ಕಾರ ಮಾಡುವುದನ್ನು ಮರೆತ- ಬಿಳಿಯ ಕಲೆಕ್ಟರನಿಗೆ ಸಿಟ್ಟು ಬಂತು. ಆತನು ಆ ಅಧಿಕಾರಿಗೆ ಲಾತು ಕೊಟ್ಟುಬಿಟ್ಟನು. ವನ ಅಧಿಕಾರಿಯು ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿದನು. ಆದರೆ, ಜಿಲ್ಲಾಧಿಕಾರಿಯು ಆರೋಪಿಗೆ ಎಚ್ಚರಿಕೆಯನ್ನಿತ್ತು ಬಿಟ್ಟುಬಿಟ್ಟನು. ಪ್ರಸಂಗವು ಹೈಕೋರ್ಟಿಗೂ ಹೋಯಿತು:- ಅಲ್ಲಿ ನ್ಯಾಯಾಧೀಶರಾಗಿದ್ದ ನಾನಾ ಭಾಯಿಯವರು ಈ ಸಂಬಂಧದ ಎಲ್ಲ ಕಾಗದ ಪತ್ರಗಳನ್ನು ತರಿಸಿ ಆರೋಪಿಗೆ ನೋಟೀಸು ಕೊಟ್ಟು ಯಾಕೆ ದಂಡನೆ ವಿಧಿಸಬಾರದೆಂದು ಕೇಳಿದರು. ನ್ಯಾಯಮೂರ್ತಿ ನಾನಾಭಾಯಿ ಮತ್ತು ಬರ್ಡ್‌ವುಡರ ಮುಂದೆ ಹಿಯರಿಂಗ್ ನಡೆಯಿತು. ಆರೋಪಿಗೆ ನೂರು ರೂಪಾಯಿಗಳ ದಂಡವನ್ನು ವಿಧಿಸಲಾಯಿತು. ನ್ಯಾಯಾಧೀಶರು ತಮ್ಮ ತೀರ್ಮಾನ ಪತ್ರದಲ್ಲಿ 'ಒಬ್ಬ ಅಧಿಕಾರಿಯ ಇಂತಹ ವರ್ತನೆಯು ಆಡಳಿತೆಗೆ ಶಲಂಕತಾರದಿರಲಾರದು" ಎಂದು ಉಲ್ಲೇಖಿಸಿದ್ದರು.

ಬದ್ರುದ್ದೀನ ತೈಯ ಬಜಿಯವರೂ ಬೊಂಬಾಯಿ ನ್ಯಾಯಾಲಯದ ತೇಜಸ್ವಿ ನ್ಯಾಯಾಧೀಶರು. ೧೮೯೭ರಲ್ಲಿ ಲೋಕಮಾನ್ಯರ ಮೇಲಿನ ಕಟ್ಲೆಯೊಂದು ತೈಯ ಬಜಿಯವರ ಮುಂದೆ ವಿಚಾರಣೆಗೆ ಬಂತು ಈ ತೇಜಸ್ವಿ ನ್ಯಾಯಾಧೀಶರು ಜಾಮೀನಿನ ಮೇಲೆ ಬಿಡುಗಡೆ ಮಾಡುವಂತೆ ತತ್‌ಕ್ಷಣ ಆದೇಶವಿತ್ತರು. ಯುರೋಪಿಯನ್ ಬೇರಿಸ್ಟರ್ ರೆಕ್ಸರು ಇದನ್ನು ವಿರೋಧಿಸಿ, ಮುಖ್ಯ ನ್ಯಾಯಾಧೀಶ ಜೆಂಕಿನ್ಸರು ಇದನ್ನೊಪ್ಪುವುದಿಲ್ಲವೆಂದಾಗ ತೈಯಬಜಿಯವರು ಗಂಭೀರವಾಗಿ ನುಡಿದಿದ್ದರು. "ಮಿ| ರೆಕ್ಸ್, ನನ್ನ ಪರವಾಗಿ ತಾವು ಮುಖ್ಯ ನ್ಯಾಯಾಧೀಶರೊಡನೆ ಈ ನ್ಯಾಯಾಲಯದ ಕಾರ್ಯ ಪ್ರಣಾಳಿಯಲ್ಲಿ ಅವರಿಗಿಂತ ನನ್ನ ಅನುಭವವು ಬಹಳಷ್ಟು ಹೆಚ್ಚಾಗಿದೆ; ಕೆಲವೊಮ್ಮೆ ಅವರು ಅನುಸರಿಸಿದ ನೀತಿಯು ಪೂರಾ ಪೂರಾ ತಪ್ಪು ಎಂದು ತಿಳಿಸಿಬಿಡಿರಿ."

ನಾಯಾಧೀಶ ತೈಯಬಜೀಯವರು ಜಾಮೀನಿನ ಮೇಲೆ ಲೋಕಮಾನ್ಯರನ್ನು ಬಿಡುಗಡೆ ಮಾಡಿ ತನ್ನ ಅಸಾಧಾರಣ ದೃಢತೆಯನ್ನು ತೋರಿಸಿದರೂ ಆ ವರ್ಷ (೧೮೯೭ರಲ್ಲಿ) ಆಮರಾವತಿಯಲ್ಲಿ ಸೇರಿದ ಅಧಿವೇಶನದಲ್ಲಿ ಕಾಂಗ್ರೆಸ್ಸು ಸರಕಾರದ ದಮನ ನೀತಿಯ ವಿರುದ್ಧಯೂವ ಗೊತ್ತುವಳಿಯನ್ನೂ ಸ್ವೀಕರಿಸಲಿಲ್ಲ. ಈ ಸಾಹಸ ಹೀನತೆಯಿಂದ ಉದ್ವಿಗ್ನರಾದ ಶಂಕರನ್ ನಾಯರ್ ಮತ್ತು ಸುರೇಂದ್ರನಾಥ ಬೆನರ್ಜಿಯವರು ತಮ್ಮ ಭಾಷಣಗಳಲ್ಲಿ ಲೋಕಮಾನ್ಯರ ವಿದ್ವತ್ತನ್ನು ಪ್ರಶಂಸಿದರು. ಸರಕಾರಿ ನೌಕರಿಯಲ್ಲಿದ್ದರೂ ತೈಯ ಬಜಿಯವರು ತಮ್ಮ ರಾಷ್ಟ್ರೀಯತೆ, ನಿರ್ಭೀತತೆ ಮತ್ತು ನಿಷ್ಪಕ್ಷತತೆಯ ಪರಿಚಯವನ್ನು ಮಾಡಿಕೊಟ್ಟರು.

ಇನ್ನೊಂದು ಸಂದರ್ಭದಲ್ಲಿಯೂ ತೈಯ ಬಜಿಯವರು ತಮ್ಮ ಸ್ಪಷ್ಟವಾದಿತನವನ್ನು ತೋರಿಸಿದರು. ಒಂದು ದಿನ ಯಾವುದೋ ಕಟ್ಲೆಯ ಹಿರಿಯರಾಗಿನ ವೇಳೆ ಒಬ್ಬ ಯುರೋಪಿಯನ್ ಬೇರಿಸ್ಟರರು ಭಾರತೀಯ ಹೆಸರುಗಳನ್ನು ಉಚ್ಚರಿಸುವಾಗ ಪದೇ ಪದೇ ತಪ್ಪುತಿದ್ದರು. ಅವರನ್ನು ಮಧ್ಯದಲ್ಲಿಯೇ ತಡೆದು ನ್ಯಾಯ ಮೂರ್ತಿ ತೈಯ ಬಜಿಯವರು ಹೇಳಿದರು. "ಭಾರತೀಯ ನ್ಯಾಯಾಲಯಗಳಲ್ಲಿ ಪ್ರೇಕ್ಟೀಸು ಮಾಡ ಬಯಸುವುದಾದರೆ, ತಾವು ಭಾರತೀಯ ಹೆಸರುಗಳನ್ನು ಸರಿಯಾಗಿ ಉಚ್ಚರಿಸಲು ಕಲಿತುಕೊಳ್ಳ ಬೇಕು

ಮತ್ತೊಂದು ಘಟನೆಯಿಂದ ಇವರ ತೇಜಸ್ವಿತೆಯ ಪರಿಚಯ ನಮಗಾಗುವುದು. ಚಾಂಬರ್ಸ್ ಎಂಬ ಒಬ್ಬರು ಆ ಕಾಲದ ಪ್ರಸಿದ್ಧ ಶಿಲ್ಪಿಯಾಗಿದ್ದರಲ್ಲದೆ ವೀಕ್ಲಿ ಚೇಂಪಿಯನ್ ಎಂಬ ಸಾಪ್ತಾಹಿಕವನ್ನೂ ಸಂಪಾದಿಸುತಿದ್ದರು; ಬಹು ದೊಡ್ಡ ಕಾಂಗ್ರೆಸ್ ಭಕ್ತರಿವರು. ಆದರೆ, ಆಂದೋಲನಗಳಿಂದ ಮಾತ್ರ ದೂರವೋಡುತಿದ್ದರು. 'ರಾಸ್ತ್‌ಗೋಪ್ತಾರ್' ಎಂಬ ಇನ್ನೊಂದು ಪತ್ರಿಕೆಯು ಕಾಂಗ್ರೆಸಿಗೆ ಅಪಮಾನ ಮಾಡುವ ಹೆಸರಿನಲ್ಲಿ ಚೆಂಬರ್ಸರನ್ನೂ ಎಳೆದು ಹೀನಾಯಿಸಿತು. ಆಗ ಚೆಂಬರ್ಸರು ಆ ಪತ್ರಿಕೆಯ ಸಂಪಾದಕನ ಮೇಲೆ ದಾವೆ ಹೂಡಿದರು.

ಅಂತಿಮ ಹಿಯರಿಂಗಿಗೆ ಈ ಕಟ್ಲೆಯು ನ್ಯಾಯಾಧೀಶ ತೈಯಬಜಿಯವರ ಮುಂದೆ ಬಂತು. ಅವರು ಕಾಂಗ್ರೆಸ್‌ನ ಮೇಲೆ ಹೇರಲಾಗಿದ್ದ ಎಲ್ಲ ಆರೋಪಗಳನೂ ಖಂಡಿಸಿ ಮುಂದೆ ನಿರ್ಣಯ ಪತ್ರದಲ್ಲಿ ಬರೆದರು: "ಇದರ ಅಧ್ಯಕ್ಷ ಸ್ಥಾನವನ್ನು ವಹಿಸುವ ಅವರಕಾವು ನನಗೂ ಒಮ್ಮೆ ಬಂದಿತ್ತು; ಇದಕ್ಕಾಗಿ ನಾನು ಅಭಿಮಾನ ಪಡುತ್ತೇನೆ; ಇದು ಅತಿ ಹಿರಿದಾದ ಸಮ್ಮಾನವಾಗಿದೆ."

ತೈಯ ಬಜಿಯವರು ೧೮೯೭ರಲ್ಲಿ ಲೋಕ ಮಾನ್ಯರನ್ನು ಜಾಮೀನಿನ ಮೇಲೆ ಬಿಡುವ ಆದೇಶವಿತ್ತಿದ್ದರೆ, ೧೯೦೮ರಲ್ಲಿ ಅಂತಹುದೇ ಇನ್ನೊಂದು ಕಟ್ಲೆಯಲ್ಲಿ ಜಾಮೀನನ್ನು ನಿರಾಕರಿಸುವ ಆದೇಶವನ್ನು ನ್ಯಾಯಾಧೀಶ ದಾವರರು ಕೊಟ್ಟರು. ಮೊದಲನೆಯ ಬಾರಿ ಜಾಮೀನು ನಿಂತವರಾದರೂ ಇದೇದಾವರರು ಎಂಬುದನ್ನು ನೆನಪಿಡಬೇಕು. ಎರಡನೆಯ

(ಅನೇ ಪುಟ ನೋಡಿರಿ)

ವಿಖ್ಯಾತ ಗ್ರಂಥ ಕರ್ತರಾದ

ಶ್ರೀ ಎ. ಎಸ್. ಪಂಚಾಪಕೇಶ ಅಯ್ಯರ್

ಎಂ. ಎ., ಐ. ಸಿ. ಯಸ್., ಬಾರ್-ಎಟ್-ಲಾ, ಎಫ್. ಆರ್. ಎಸ್. ಎಲ್.

ಇವರು ಇಂಗ್ಲೀಷಿನಲ್ಲಿ ಬರೆದ—

TALES OF IND

ಕಥಾವಳಿಯ ಕನ್ನಡ ಅನುವಾದ

ಭಾರತೀಯ ಕಥೆಗಳು

ಚಿಕ್ಕ ಬೊಕ್ಕ ೧೫೨- ಕಥೆಗಳು ಬೆಲೆ ರೂ. 1—12—0

ಅನುವಾದಕರು: ದಿ| ಕೊರಡ್ಕಲ್ ಶ್ರೀನಿವಾಸ ರಾವ್,

ಸಿಗುವ ಸ್ಥಳ:—

ನವಭಾರತ ಪುಸ್ತಕ ಭಂಡಾರ, ಉದುಪಿ

ಜೀವನದ ವಿವಿಧ ಘಟನೆಗಳನ್ನು ಹೃದಯ ಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1—25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ನವಭಾರತ ಪುಸ್ತಕ ಭಂಡಾರ, ಉದುಪಿ.

ನವಯುಗ

ವರುಷ	ಉಡುಪಿ	ವಾರ
೪೧	೧೨-೭-'೬೨	೪೪

ಉಗಾಂದಕ್ಕೆ ಸ್ವಾತಂತ್ರ್ಯ

ಬ್ರಿಟನ್ನಿನ ರಾಜಧಾನಿ ಲಂಡನ್ನಿನಲ್ಲಿ ಸೇರಿದ ಒಂದು ಸಮ್ಮೇಳನದಲ್ಲಿ ಆಫ್ರಿಕೆಯಲ್ಲಿನ ಬ್ರಿಟಿಷ ವಸಾಹತು ಉಗಾಂದಕ್ಕೆ ಇದೇ ಅಕ್ಟೋಬರ ತಿಂಗಳ ೯ನೆಯ ದಿನಾಂಕದಂದು ಸ್ವಾತಂತ್ರ್ಯವನ್ನು ನೀಡುವ ನಿರ್ಧಾರವಾಯಿತು. ವಸಾಹತು ಶಾಹಿಯ ಬಗೆಗೆ ಜಾಗತಿಕಾಭಿಪ್ರಾಯವು ದಿನದಿಂದ ದಿನಕ್ಕೆ ಪ್ರತಿಕೂಲವಾಗುತ್ತಿರುವ ಈ ಸಂದರ್ಭದಲ್ಲಿ ಬ್ರಿಟನ್ನು ಇಟ್ಟಿರುವ ಹೆಜ್ಜೆಯು ಉಳಿದ ವಸಾಹತು ವಾದಿಗಳಿಗೆ ಮಾರ್ಗದರ್ಶನವಾಗಿದೆ. ಲಂಡನ್ ಸಮ್ಮೇಳನದಲ್ಲಿ ಬುಗಾಂದದ ಕಬಕರಿಗೆ ಅವರ ರಾಜ್ಯದ ಮಟ್ಟಿಗೆ ಕೆಲವೊಂದು ವಿಶೇಷ ಸವಲತ್ತುಗಳು ದೊರೆತವಾದರೂ ಅವೇ ಸವಲತ್ತುಗಳನ್ನು ಕೇಳಿದ್ದ ಚಿಕ್ಕ ಘಟಕಗಳಾದ ಟೊರೊ, ಅಂಕೋಲೆ, ಬುನ್ಯೋರೊಗಳಿಗೆ ದೊರೆಯಲಿಲ್ಲ. ಸುಮಾರು ೬೦ ವರ್ಷಗಳಿಗೆ ಹಿಂದೆ ತನ್ನ ಭೂಭಾಗದಿಂದ ಪ್ರತ್ಯೇಕವಾಗಿ ಬುಗಾಂದಕ್ಕೆ ಸೇರಿದ್ದ ಭಾಗವನ್ನು ತನಗೆ ಮರಳಿಸಬೇಕೆಂದು ಬುನ್ಯೋರೋ ಆಗ್ರಹ ಪಡುತ್ತಿದೆ. ಆದರೆ, ಈ ಕೇಳಿಕೆಯನ್ನು ಮನ್ನಿಸಲು ಕಬಕರವರು ಕಳಕಳಿ ವಹಿಸುತ್ತಿಲ್ಲ. ಉಗಾಂದವು ಸ್ವತಂತ್ರವಾಗುವುದಕ್ಕೆ ಮೊದಲೇ ಈ ಕಳೆದುಕೊಂಡ ಭೂಭಾಗದ ಪ್ರಶ್ನೆಯು ಇತ್ಯರ್ಥವಾಗಬೇಕಾಗಿದೆ. ಸದ್ಯಕ್ಕೆ ಉಗಾಂದದ ಪ್ರಧಾನಿ ಒಬೊಟೆ ಅವರು ಉಗಾಂದ ಜನತಾ ಕಾಂಗ್ರೆಸ್ಸಿನ ನಾಯಕರಾಗಿ ಬುಗಾಂದದ ಕಬಎಕ್ಕದೊಡನೆ ಕೂಡಿ ಸರಕಾರ ಸ್ಥಾಪಿಸಿದ್ದಾರೆ. ಆದುದರಿಂದ ಉಗಾಂದ ಸ್ವಾತಂತ್ರ್ಯಕ್ಕೆ ಮೊದಲು ಅಲ್ಲಿ ಐಕ್ಯಮತ್ಯವನ್ನು ಸ್ಥಾಪಿಸುವುದು ಅದರ ಆದ್ಯ ಕರ್ತವ್ಯವಾಗಿದೆ.

ಒಂದು ರಾಷ್ಟ್ರದ ವಿವಿಧ ರಾಜ್ಯಗಳನ್ನು ಫೆಡರಲ್ ಸೂತ್ರದಡಿಯಲ್ಲಿ ಒಮ್ಮೆ ತಂದು ಬಿಟ್ಟರೆ. ಮತ್ತೆ ಅಡಳಿತೆಯು ಪ್ರಯೂಸಕರವೆನಿಸುವುದಿಲ್ಲ. ಉದಾಹರಣೆಗೆ ನೈಜೀರಿಯೂ ಒಕ್ಕೂಟದಿಂದ ಪಶ್ಚಿಮ ರಾಜ್ಯ ಸರಕಾರವು ಸಿಡಿದು ಹೋದಾಗ, ಕೇಂದ್ರವು ಅದನ್ನು ತನ್ನ ಹಿಡಿತಕ್ಕೆ ತಂದು ಕೊಂಡಿದ್ದುದನ್ನು ಮರೆಯ ಬಾರದು. ಕಾಂಗೋದಲ್ಲಿ ಸ್ವಾತಂತ್ರ್ಯ ಘೋಷಣೆಯೊಡನೆಯೇ ಪ್ರತ್ಯೇಕತಾ ಘೋಷಣೆ ನಡೆದುದರಿಂದ ಪರಿಸ್ಥಿತಿ ವಿಕೋಪಕ್ಕೆ ಮುಟ್ಟಿದುದು ಮಾತ್ರವಲ್ಲದೇ ಅದು ಇನ್ನೂ ಸ್ತಿಮಿತಕ್ಕೆ ಬಂದಿಲ್ಲವೆಂಬುದನ್ನೂ ನೆನೆಯ ಬೇಕು. ಆಫ್ರಿಕೆಯಲ್ಲಿನ ಹಳೆಯ ಪ್ರಶಾಸನಕಾರರು ಹೊಸ ನಾಯಕರ ಮುಂದೆ ಸೋಲನ್ನೊಪ್ಪುವ ಪ್ರಸಂಗ ನಡೆಯುತ್ತ ಬರುತ್ತಿದೆ. ಕಬಕರವರಾದರೂ ಸಂದರ್ಭ ಸಾಧಕತನವನ್ನು ತೋರ್ಪಡಿಸುವುದಿಲ್ಲವೆನ್ನುವುದು ಕಷ್ಟ. ಆದರೆ, ಇಂದು ಅಧಿಕಾರದ ಗದ್ದುಗೆಯಲ್ಲಿರುವ ಒಬೊಟೆ ಅವರು ಬುಗಾಂದದ ಜನತೆಯ ಗೌರವಕ್ಕೆ ಪಾತ್ರರಾಗಿದ್ದಾರೆ; ಆದುದರಿಂದ ಕಬಕರಿಗೆ ಅವಕಾಶ ಕಡಿಮೆಯೆಂದು ಹೇಳಬಹುದು. ಉಗಾಂದದ ಶಾಸನ ಸಭೆಯಲ್ಲಿ ನಿಚ್ಚಳ ಬಹುಮತವನ್ನು ಪಡೆದಿರುವ ಒಬೊಟೆ ಅವರು ಉಗಾಂದದ ಶಾಸಕರಲ್ಲಿ ಸದಭಿಪ್ರಾಯವನ್ನು ಹುಟ್ಟಿಸುವಲ್ಲಿ ಶಕ್ತರಾಗಿದ್ದಾರೆ. ತನ್ನ ಜನತೆಯ ಬೆಂಬಲವನ್ನು ಗಳಿಸಿದ್ದಾರೆ. ಸಮಾಜವಾದಿ ಮನಸ್ಕರಾದರೂ ಬ್ರಿಟನ್ನಿನೊಡನೆ ಸಮತೂಕದ ವ್ಯವಹಾರಗಳನ್ನಿಟ್ಟು ಮುಂದೆಯೂ ಪ್ರಶಾಸನ ನಡೆಸುವ ಸದಿಚ್ಛೆ ಅವರಿಗಿದೆಯೆಂದು ಗೊತ್ತಾಗುತ್ತದೆ. ಬೊನ್ಯಾರೋ ಮತ್ತು ಬುಗಾಂದಗಳ ನಡುವಿರುವ ಭೂ ವಿವಾದವನ್ನು ಇವರು ಸರಳವಾಗಿ ಬಿಡಿಸಲು ಸಶಕ್ತರಾದರೆಂದರೆ, ಅವರ ಕಿರೀಟದಲ್ಲಿ ನವಿಲುಗರಿಯೇರಿದಂತೆಯೆಂದು ಹೇಳಬಹುದು. ಸ್ವತಂತ್ರ ಉಗಾಂದದ ಯಶಸ್ಸೂ ಇಲ್ಲಿ ಅಡಗಿದೆಯೆಂದು ತಿಳಿಯಬಹುದು. ಅದು ಹೊರತು ಬೇರೂರುವಾಗಲೇ ವಿವಾದವೂ ಹುಟ್ಟಿಕೊಂಡರೆ. ಆದರಿಂದ ಯಾರಿಗೂ ಕ್ಷೇಮವಿಲ್ಲ. ಸ್ವಾತಂತ್ರ್ಯಕ್ಕೆ ಮೊದಲು ಈ ಪ್ರಶ್ನೆ ಇತ್ಯರ್ಥವಾಗಬೇಕು.

ಉಗಾಂದದಲ್ಲಿ ಆಫ್ರಿಕನರು ಮಾತ್ರವಲ್ಲದೆ ಅಲ್ಪ ಸಂಖ್ಯೆಯ ಯುರೋಪಿಯನ್ನರೂ ಇದ್ದಾರೆ; ಸುಮಾರು ೭೫ ಸಾವಿರ ಏಶಿಯನ್ನರೂ ಇದ್ದಾರೆ. ದೇಶವು ಸ್ವತಂತ್ರಗೊಂಡ ನಂತರವಾದರೂ ಯುರೋಪಿಯನ್ನರು ಯಾವ ವಿಶೇಷ ಸ್ಥಾನಮಾನಗಳನ್ನೂ ಬಯಸುವುದಿಲ್ಲವೆಂಬುದೀಗ ವ್ಯಕ್ತವಾಗಿದೆ. ಆದುದರಿಂದ, ಅವರಿಂದಾಗಿ ಯಾವ ಸಮಸ್ಯೆಯೂ ಹುಟ್ಟುವುದಿಲ್ಲವೆಂಬುದು ಖಂಡಿತ. ಇನ್ನುಳಿದಿರುವ ಏಶಿಯನ್ನರಾದರೂ ಇದು ವರೆಗೆ, ಉದ್ಯಮಗಳಿಂದ, ಉಗಾಂದದ ಆರ್ಥಿಕ ಬೆಳವಣಿಗೆಯಲ್ಲಿ ತುಂಬ ದುಡಿದವರು. ೬೫ ಲಕ್ಷ ಆಫ್ರಿಕನ್ನರ ನಡುವೆ ಜೀವಿಸುತ್ತಿರುವ ಈ ೭೫ ಸಾವಿರ ಏಶಿಯನ್ನರು ತೀರ ಅಲ್ಪ ಸಂಖ್ಯಾಕರಿರುವುದರಿಂದಲೂ ಅವರು ಈಗಾಗಲೇ ಆಫ್ರಿಕನ್ ರಾಷ್ಟ್ರೀಯತೆಯನ್ನು ಬೆಂಬಲಿಸಿರುವುದರಿಂದಲೂ ಯಾವ ತೊಂದರೆಯನ್ನು ಉಂಟುಮಾಡಲಾರರು ಎಂದು ನಂಬಬಹುದು.

ಕತ್ತಲೆಯ ಭೂಖಂಡವೆನಿಸಿದ ಆಫ್ರಿಕೆಯು ತೀರ ವಸಾಹತುಗಳ ಖಂಡವಾಗಿಯೇ ಉಳಿದಿದ್ದ ಕಾಲವೊಂದಿತ್ತು. ಆದರೆ ಇಂದು ಅಲ್ಲಿರುವ ಒಂದೊಂದೇ ರಾಷ್ಟ್ರಗಳು ಸ್ವತಂತ್ರವಾಗುತ್ತ ಬರುತ್ತಿರುವುದು ಸ್ವತಂತ್ರ ಜಗನ್ನಿರ್ಮಾಣದ ಕಾರ್ಯದಲ್ಲಿ ಇಡುತ್ತಿರುವ ಪದ ಪದ್ಧತಿಯೆನ್ನ ಬಹುದು. ಇದೇ ಮಾದರಿಯಲ್ಲಿ ಇನ್ನುಳಿದ ಕೆಲವೊಂದು ಪಾಶ್ಚಾತ್ಯರ ವಸಾಹತುಗಳೂ ಆದಷ್ಟು ತೀವ್ರವಾಗಿ ಸ್ವತಂತ್ರಗೊಳ್ಳಲಿ ಎಂದು ಬಯಸುವುದು ಪ್ರತಿಯೊಬ್ಬ ಮಾನವತಾವಾದಿಯ ಕರ್ತವ್ಯವಾಗಿದೆ. ಅಂತಹ ಸುದಿನವು ಬಹು ಬೇಗನೆ ಬರಲಿ.

ಶಿಕ್ಷಕರ ಹಿತಚಿಂತನೆ

ರಾಷ್ಟ್ರ ನಿರ್ಮಾಪಕರೆಂಬ ಹೆಸರಿಗೆ ಪಾತ್ರರಾದ ಶಿಕ್ಷಕರ ಸ್ಥಾನಮಾನಗಳ ಬಗ್ಗೆ ಯಾರಲ್ಲಿಯೂ ಯಾವ ಸಂದರ್ಭದಲ್ಲಿಯೂ ವಿವಾದವೆದ್ದಿಲ್ಲ. ಆದರೆ, ನಮ್ಮ ದೇಶದಲ್ಲಿ ಅವರ ಸ್ಥಿತಿಗತಿಗಳನ್ನು ಉನ್ನತೀಕರಿಸುವ ಕುರಿತಾಗಿ ನಡೆಯುವ ಪ್ರಯತ್ನಗಳು ಮಾತ್ರ ಹೇಳುವಷ್ಟಿರಲಿಲ್ಲ. ಮುಖ್ಯವಾಗಿ ಪ್ರಾಥಮಿಕ ಶಾಲಾ ಶಿಕ್ಷಕರ ದುಸ್ಥಿಯು ಹಿಂದೆಯೂ ಅಮಾನುಷವಾಗಿತ್ತು ಸ್ವಾತಂತ್ರ್ಯೋತ್ತರದಲ್ಲಿ ಇದನ್ನು ಹೋಗಲಾಡಿಸುವ ಹಲವಾರು ಪ್ರಯತ್ನಗಳು ನಡೆದಿದ್ದರೂ ಅದು ಭೀಮನ ಹೊಟ್ಟೆಗೆ ಕಾಸಿನ ಮಜ್ಜಿಗೆಯಂತಾಗಿದೆ. ಮೊದಲನೆಯ ಪಂಚವಾರ್ಷಿಕ ಯೋಜನೆಯ ಪ್ರಾರಂಭದಲ್ಲಿ ಸರಾಸರಿ ೫೪೪ ರೂಪಾಯಿಗಳನ್ನು ಒಬ್ಬ ಪ್ರಾಥಮಿಕ ಶಿಕ್ಷಕನು ವರ್ಷಕ್ಕೆ ಗಳಿಸುತಿದ್ದರೆ, ಮೂರನೆಯ ಯೋಜನೆಯು ಕೊನೆಗೊಂಡಾಗ ಇದು ರೂ. ೯೦೦ಕ್ಕೆ ಏರುವುದೆಂಬ ನಿರೀಕ್ಷೆಯಿದೆ ಎಂದರೆ, ಆಗ ಮಾಸಿಕ ಉತ್ಪನ್ನವು ರೂ. ೭೫ ಆಗುವುದು ! ಜೀವನದ ಇನ್ನಿತರ ರಂಗಗಳಲ್ಲಿ ದುಡಿಯುತ್ತಿರುವವರ ಆದಾಯದೊಡನೆ ತುಲನೆ ಮಾಡುವಾಗ ಅಧ್ಯಾಪಕನ ಆದಾಯವು ಕಣ್ಣಿಗೆ ಕಾಣಿಸುವುದೂ ಸಾಧ್ಯವಿಲ್ಲ. ಆದುದರಿಂದ ಈ ಕಡೆಗೆ ರಾಜ್ಯ ಹಾಗೂ ಕೇಂದ್ರ ಸರಕಾರಗಳು ವಿಶೇಷ ಗಮನವೀಯುವ ಅವಶ್ಯವಿದೆ. ಅಧ್ಯಾಪಕರ ಮಕ್ಕಳಿಗೆ ಉನ್ನತ ಶಿಕ್ಷಣಕ್ಕಾಗಿ ನೀಡುವ ಛಾತ್ರ ವೃತ್ತಿಗಳು ಇಲ್ಲವೇ ಉತ್ತಮ ಸೇವೆಗಾಗಿ ನೀಡುವ ಪ್ರಶಸ್ತಿಪತ್ರಗಳು ಜತೆಗೆ ರೂ. ೫೦೦ರ ಸಂಭಾವಣೆ – ಸಾಲದೇ ಸಾಲದು.

ಇಂತಹ ವಿಪನ್ನಾವಸ್ಥೆಯ ಅಧ್ಯಾಪಕರಿಗೆ ಹೊಸ ಉತ್ತೇಜನವನ್ನು ನೀಡುವಂತೆ ರಾಷ್ಟ್ರಪತಿ ರಾದಾಕೃಷ್ಣನ್ನರ ಜನ್ಮದಿನವನ್ನು 'ಶಿಕ್ಷಕರ ದಿನ' ವೆಂದು ಅಖಿಲ ಭಾರತ ಮಟ್ಟದಲ್ಲಿ ಆಚರಿಸಲು ಕೇಂದ್ರ ಸರಕಾರದಿಂದ ಸ್ಥಾಪಿಸಲಾದ 'ಶಿಕ್ಷಕರ ರಾಷ್ಟ್ರೀಯ ನಿಧಿ'ಯು ನಿರ್ಧರಿಸಿದೆ. ಪ್ರಧಾನಿ ನೆಹರು ಜನ್ಮ ದಿನವನ್ನು ಮಕ್ಕಳ ದಿನವೆಂದು ಆಚರಿಸುವುದಿಲ್ಲವೆ, ಹಾಗೆ ಶಿಕ್ಷಕರ ದಿನವನ್ನು ಸ್ವಯಂ ಶಿಕ್ಷಕರಾಗಿದ್ದ ರಾಧಾಕೃಷ್ಣನ್ನರ ಹುಟ್ಟು ದಿನದಂದು ಆಚರಿಸುವುದು ನ್ಯಾಯೋಚಿತವೇ ಆದರೆ, 'ಆಚರಣೆ'ಯೆಂಬುದು 'ಆಚರಣೆ'ಗಾಗಿಯೇ ಆಗಿರುವ ಇಂದಿನ ದಿನಗಳಲ್ಲಿ ಇದರಿಂದ ಶಿಕ್ಷಕರ ಹಿತಾಸಕ್ತಿಗಳ ಮೇಲೆ ಯಾವ ಪ್ರಭಾವ–ಪರಿಣಾಮಗಳು ಬಿದ್ದಾವು ಎಂಬುದು ಪ್ರಶ್ನೆಯಾಗಿಯೇ ಉಳಿಯುತ್ತದೆ. ಸಭೆ, ಮೆರವಣಿಗೆ, ಘೋಷಣೆ, ಪ್ರಶಂಸೆಗಳು ಆಕಾಶ ಗೋಪುರಗಳನ್ನಷ್ಟೇ ನಿರ್ಮಿಸಬಲ್ಲುವಲ್ಲದೆ, ನಿಲ್ಲಲು ಮನೆಯಿಲ್ಲದ ಅಧ್ಯಾಪಕನಿಗೆ ಮನೆ ಕಟ್ಟಿಸಿ ಕೊಡಲಾರವು; ಉಪವಾಸವಿರುವ ಆತನ ಕುಟುಂಬವನ್ನು ಉಣಿಸಲಾರವು. ಆದುದರಿಂದ ಈ 'ನಿಧಿ'ಯು ಕೇವಲ ಡೊಂಬರಾಟವಾಡುವುದರಲ್ಲಿಯೇ ತೃಪ್ತಿತಾಳದೆ ಅಧ್ಯಾಪಕರ ಸಂಕಷ್ಟಗಳನ್ನು ದೂರೀಕರಿಸುವ ಕಾರ್ಯ ವಿಧಾನಗಳನ್ನು ಅಳಪಡಿಸಿಕೊಳ್ಳುವ ಅಗತ್ಯವಿದೆ.

ಜಗತ್ಪರ್ಯಟನ

ರಾಧಾಕೃಷ್ಣನ್

ಹಿಂದಿನ ರಾಷ್ಟ್ರಪತಿ ಡಾ. ರಾಜೇಂದ್ರ ಪ್ರಸಾದರು ಮಳೆಗಾಲವನ್ನು ಕಳೆಯಲು ಹೈದರಾಬಾದಿಗೆ ಬಂದಿಳಿದಿದ್ದರೆ ರಾಷ್ಟ್ರಪತಿ ರಾಧಾಕೃಷ್ಣನ್ ಮೂರು ವಾರಗಳ ಸಂಚಾರದ ಮೇಲೆ ಅಲ್ಲಿ ಆಗಮಿಸಿದ್ದಾರೆ. ರಾಷ್ಟ್ರಪತಿಗಳ ದಕ್ಷಿಣದ ರಾಜಧಾನಿ ಹೈದರಬಾದಿನ 'ರಾಷ್ಟ್ರಪತಿ ನಿಲಯದಲ್ಲಿ ಅವರು ತಂಗಿದ್ದಾರೆ. ಇಬ್ಬರು ಮೇಧಾವಿಗಳು ಒಂದೇ ಕಡೆಯಲ್ಲಿ ಇಷ್ಟೊಂದು ದೀರ್ಘ ಕಾಲ ಕೂಡಿರುವುದು ವೈಶಿಷ್ಟ್ಯಪೂರ್ಣವೆಂಬಂತಿದೆ; ದೇಶದ ಉನ್ನತಿಯ ಬಗ್ಗೆ ಈ ಮುತ್ಸದ್ಧಿಗಳು ವಿಚಾರ ವಿನಿಮಯ ಮಾಡಿಯಾರೆಂಬ ಊಹನೆಗೆ ಎಡೆ ತಂದು ಕೊಟ್ಟಿದೆ.

ಜವಾಹರಲಾಲ

ವಿಶ್ರಾಂತಿಯ ಹೆಸರಿನಲ್ಲಿ ಪ್ರಧಾನಿ ನೆಹರು ಪದೇ ಪದೇ ಕಾಶ್ಮೀರವನ್ನು ಸಂದರ್ಶಿಸುತ್ತ ಇದ್ದಾರೆ. ಈ ಸಂದರ್ಶನವು ಕೇವಲ ವಿರಾಮ ಕಾಲವನ್ನು ಅರಾಮವಾಗಿ ಕಳೆಯುವ ಉಪಕ್ರಮ ಮಾತ್ರವಿರಲಾರದು. ಕಾಶ್ಮೀರದ ಪ್ರಶ್ನೆಯ ಮೇಲೆ ಜಾಗತಿಕ ಗೊಂದಲವುಂಟಾಗಿರುವ ಸಂದರ್ಭದಲ್ಲಿ ಕಾಶ್ಮೀರಿಗಳ ಅಂತರ್ಯವನ್ನು ಅರಿತುಕೊಳ್ಳಲು, ಅವರ ಮೇಲೆ ಪ್ರಭಾವ ಬೀರಲು ಈ ಸಂದರ್ಶನ ನಡೆಯುತ್ತಿದೆಯೆಂದು ಪ್ರತಿವಾದಿಗಳು ಹೇಳಬಹುದು. ಆದರೆ, ಜಾಗತಿಕ ನಾಯಕರ ಸಾಲಿನಲ್ಲಿ ಎಂದೋ ಸೇರಿದ ನೆಹರು ಕಾಶ್ಮೀರಿಗಳ ಹೃದಯವನ್ನು ಇಂದಲ್ಲ ಬಹಳ ಹಿಂದೆಯೇ ತಿಳಿದಿದ್ದಾರೆ. ಕಾಶ್ಮೀರದ ಉತ್ತಮ ಹವೆಯಿಂದ ತನ್ನ ದೇಹ ಮತ್ತು ಮನಸ್ಸಿನ ಆರೋಗ್ಯವನ್ನು ಉತ್ತಮಗೊಳಿಸುವುದೇ ಅವರ ಉದ್ದೇಶ.

ಮುರಾರ್ಜಿ ದೇಸಾಯಿ

ಅರ್ಥಮಂತ್ರಿ ಮುರಾರ್ಜಿ ದೇಸಾಯಿಗಳು ಮಹಾ ಹಠವಾದಿಗಳು; ಹಿಡಿದ ಕೆಲಸವನ್ನು ಮುಗಿಸದೆ ಕೈಕಟ್ಟುವುದನ್ನು ಅರಿಯದವರು. ತನಗೆ ಅರ್ಥಮಂತ್ರಿ ಶಾಖೆಯೇ ಬೇಕು ಎಂದು ಪಟ್ಟು ಹಿಡಿದು ಅದರಲ್ಲಿ ಯಶಸ್ವಿಯಾದರು; ಈಗ ಭಿಕ್ಷಾಪಾತ್ರೆ ಹಿಡಿದುಕೊಂದು ವಿದೇಶ ಸಂಚಾರಕ್ಕೆ ಹೊರಟಿದ್ದಾರೆ ತಮ್ಮ ಉದ್ದೇಶದಲ್ಲಿ ಬಹುಮಟ್ಟಿಗೆ ಯಶಸ್ಸನ್ನೂ ಪಡೆದಿದ್ದಾರೆ. ಬ್ರಸೆಲ್ಸ್‌ನಲ್ಲಿ ಜರಗಿದ ಯುರೋಪಿನ ಸಾಮಾನ್ಯ ಮಾರುಕಟ್ಟೆಯ ಸಂಬಂಧವಲ್ಲಿಯೂ ಮುರಾರ್ಜಿಯವರು ಭಾರತದ ಹಿತಸಂಬಂಧವನ್ನು ರಕ್ಷಿಸುವಲ್ಲಿ ಭಗೀರಥ ಪ್ರಯತ್ನ ನಡೆಸಿ ಗೆದ್ದುಕೊಂಡರು. ಅವರ ಗೇಲಿಗೆ ಬೇರೆ ಕಾರಣಗಳಿರಬಹುದು, ಆದರೆ, ಅವರು ಗೆದ್ದುದಂತೂ ನಿಜ.

ಲಾಲಬಹದೂರ

ನೆಹರುರವರ ಪ್ರೀತಿಪಾತ್ರರಾದ ಲಾಲಬಹದೂರ ಶಾಸ್ತ್ರಿಯವರು 'ಪದವಿ"ಯನ್ನೇ ಉಪನಾಮವೆಂದು ಕರೆಯಲ್ಪಡುವ ವೈಶಿಷ್ಟ್ಯವುಳ್ಳವರು. ಹಾಗೆಯೇ ಅವರ ವ್ಯಕ್ತಿತ್ವ ಕೂಡ. ಕುಳ್ಳಗಿನ ಶಾಸ್ತ್ರಿಯವರು ಪಂಡಿತಪಂತರ ನಂತರ ಗೃಹಮಂತ್ರಿಯಾದರು. ಅಸಾಮದ ಭಾಷಾಗೊಂದಲ, ಪಂಜಾಬಿ ಸುಬಾದ ಬೇಡಿಕೆಗಳ ಸಮಯದಲ್ಲಿ ಸಮರ್ಥ ರೀತಿಯಿಂದ ನಡೆದುಕೊಂಡ ಶಾಸ್ತ್ರೀ ಕೇರಳದ ಸಂಮಿಶ್ರ ಸರಕಾರವು ಪೂರ್ಣ ಕಾಲಾವಧಿಯವರೆಗೂ ಮುಂದುವರಿಯುವಂತೆ ಪ್ರಸವಾ—ಕಾಂಗ್ರೆಸ್‌ಗಳ ನಡುವಣ ಭಿನ್ನಾಭಿಪ್ರಾಯ ದೂರವಾಗುವಂತೆ ಶ್ರಮಿಸಿ ಅದರಲ್ಲಿಯೂ ಬಹುಮಟ್ಟಿಗೆ ಯಶಸ್ವಿಯಾಗಿದ್ದಾರೆ. ರಾಜ್ಯಸೀಮೆಯ ವಿಷಯದಲ್ಲಿಯೂ ಅವರು ಸೂಕ್ತ ಮಾರ್ಗದರ್ಶನ ನೀಡಲು ಮುಂದೆ ಬರುವುದು ಅಗತ್ಯವಿದೆ.

ಅಲ್ಲಲ್ಲಿಯ ಸುದ್ದಿಸಾರ

ಅ. ಭಾ. ಮಾಧ್ವ ಮಹಾಮಂಡಲ—ಈ ಮೊದಲೇ ಪ್ರಕಟ ಮಾಡಿದಂತೆ ಮಂಡಲದ ಸಕಲ ಸದಸ್ಯರ ವಿಶೇಷ ಸಭೆಯು ಜೂಲೈ 15ರಂದು ಪ್ರಾತಃಕಾಲ 8 ಘಂಟೆಗೆ ಹುಬ್ಬಳ್ಳಿಯ ದೇಶಪಾಂಡೆ ನಗರದಲ್ಲಿರುವ ಕಲ್ಯಾಣ ಮಂಟಪದಲ್ಲಿ ನಡೆಯಲಿದೆ. ಸಕಲ ಸದಸ್ಯರೂ ಸಕಾಲಕ್ಕೆ ಸಭೆಗೆ ಆಗಮಿಸಬೇಕಾಗಿಯೂ, ಘಟನೆಗೆ ಬದಲಾವಣೆಗಳನ್ನು ಸೂಚಿಸಲು ಅಪೇಕ್ಷಿಸುವವರು ತಮ್ಮ ಸಲಹೆಗಳನ್ನು ಪ್ರ. ಕಾರ್ಯದರ್ಶಿಗಳವರೆ ಕಾರ್ಯಾಲಯಕ್ಕೆ ಕಳುಹಿಸಬೇಕಾಗಿಯೂ ಪ್ರ. ಕಾರ್ಯದರ್ಶಿಗಳವರು ಕೋರುತ್ತಾರೆ.

ವಿದೇಶ ಪ್ರಯಾಣ—ಮಂಗಳೂರಿನ ಕೆನರಾ ವರ್ಕ್ ಶೋಪಿನಲ್ಲಿ ಇಂಜಿನಿಯರ್ ಆಗಿದ್ದ ಶ್ರೀಗಳಾದ ಎಮ್. ಪ್ರಭಾಕರ ಕುಡುವ, ಮತ್ತು ಎಮ್. ರಾಘವ ಇವರು ಎಲ್ಯೊಸ್ಟೀಲ್ ಉತ್ಪಾದನೆಯಲ್ಲಿ ಉನ್ನತ ಶಿಕ್ಷಣ ಪಡೆಯಲು ವರ್ಕ್ ಶೋಪಿನ ವತಿಯಿಂದ ಇದೇ ತಾ. 5ರಂದು ಇಂಗ್ಲೆಂಡಿಗೆ ತೆರಳಿದರು ಈ ಸಂಬಂಧ ತಾ. 5ನೇ ಬೆಳಿಗ್ಗೆ ವರ್ಕ್ ಶೋಪಿನ ಟೆಕ್ನಿಕಲ್ ಡೈರೆಕ್ಟರ್ ಶ್ರೀ ವಿ. ಎಸ್. ಕುಡುವರ ಅಧ್ಯಕ್ಷತೆಯಲ್ಲಿ ವರ್ಕ್ ಶೋಪಿನ ನೇತೃತ್ವದಲ್ಲಿ ಸಿ. ಪಿ. ಸಿ. ಸಭಾ ಸದನದಲ್ಲಿ ವಿದಾಯ ಸಮಾರಂಭವೊಂದು ಜರಗಿತು. ಶ್ರೀ ವಿ. ಎಸ್. ಕುಡುವರು ವಿದೇಶಗಳಲ್ಲಿ ವ್ಯಾಸಂಗ ಮಾಡುವುದರಿಂದ ಸಿಕ್ಕುವ ಪ್ರಯೋಜನಗಳನ್ನು ವಿವರಿಸಿ ಇಂಜಿನಿಯರಿಬ್ಬರಿಗೂ ಸುಖ ಪ್ರಯಾಣವನ್ನು ಹಾರೈಸಿದರು. ವರ್ಕ್ ಶೋಪಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ ಶ್ರೀನಿವಾಸ ಕುಡುವರು ಆರಂಭದಲ್ಲಿ ಸ್ವಾಗತಿಸಿದರಲ್ಲದೆ ಅಂತ್ಯದಲ್ಲಿ ಇಂಗ್ಲೆಂಡಿಗೆ ತೆರಳುವ ಇಂಜಿನಿಯರರಿಬ್ಬರೂ ತರಬೇತಿ ಪಡೆದು ಸಂಸ್ಥೆಗೂ ದೇಶಕ್ಕೂ ಕೀರ್ತಿ ತರುವಂತಾಗಲೆಂದು ಹಾರೈಸಿದರು. ಶ್ರೀ ಟಿ. ಆರ್. ಶೆಣೈಯವರು ವಿದಾಯ ಕೋರಿ ಮಾತನಾಡಿದರು.

ದವಾಖಾನಾ ಶಾಖೆಯ ಉದ್ಘಾಟನೆ—ಉಡುಪಿಯಲ್ಲಿ ಪ್ರೇಕ್ಟೀಸ್ ಮಾಡುತ್ತಿರುವ ಡಾ| ಟಿ. ಎನ್. ಕಣ್ಣನ್ ನಂಬಿಯಾರ್ ಮತ್ತು ಡಾ| ಶ್ರೀದೇವಿ ಕಣ್ಣನ್ ನಂಬಿಯಾರ್ ಇವರ ನಂಬಿಯಾರ್ಸ್ ದವಾಖಾನೆಯ ಶಾಖೆಯೊಂದು ಇದೇ ತಾ. 8ರಂದು ಉಡುಪಿಯ ಸಮೀಪದ ಉದ್ಯಾವರದಲ್ಲಿ ಜಿಲ್ಲಾ ಕಾಂಗ್ರೆಸ್ಸಿನ ಅಧ್ಯಕ್ಷ ಶ್ರೀ ಟಿ ಎ. ಪೈಯವರಿಂದ ಉದ್ಘಾಟಿಸಲ್ಪಟ್ಟಿತು. ಡಾ| ಟಿ. ಎನ್. ಕಣ್ಣನ್ ನಂಬಿಯಾರರು ಸ್ವಾಗತಿಸಿ ಸ್ಥಳೀಯರ ಸಹಕಾರ ಕೋರಿದರು. ಸಭಿಕರಲ್ಲಿ ಜನಾಬ್ ಗಫೂರ್ ಸಹೇಬರೂ ಶ್ರೀಯು. ವಾಸುದೇವ ಶೆಣೈಯವರೂ ಮಾತನಾಡಿ ಹೊಸ ದವಾಖಾನೆಗೆ ಜಯ ಕೋರಿದರು. ಶ್ರೀ ಟಿ. ಎ. ಪೈಯವರು ಸರಕಾರಿ ಆಸ್ಪತ್ರೆಗಳಲ್ಲಿ ಡಾಕ್ಟರರ ಕೊರತೆಯಿದ್ದರೂ ಖಾಸಗೀ ಡಾಕ್ಟರರು ಸಾಕಷ್ಟು ಇರುವರೆಂದೂ ಇವರ ಖಾಸಗೀ ಸೇವೆ ಅಗತ್ಯವೆಂದೂ ಡಾ| ನಂಬಿಯಾರ್ ದಂಪತಿಗಳ ಪ್ರಯತ್ನ ಸಾರ್ಥಕವಾಗಲೆಂದೂ ಉದ್ಯಾವರದಲ್ಲಿ ಬೇಗನೆ ಹೈಸ್ಕೂಲು ಪ್ರಾರಂಭವಾಗಲಿದ್ದು ಇಲ್ಲಿ ತುಂಬಾ ಪ್ರಗತಿ ಆಗಲಿದೆಯೆಂದೂ ಹೇಳಿದರು. ಅಂತ್ಯದಲ್ಲಿ ಡಾ| ಶ್ರೀದೇವಿ ಕಣ್ಣನ್ ನಂಬಿಯಾರರು ವಂದನೆಗಳನ್ನರ್ಪಿಸಿದರು.

ಉಡುಪಿ ರೋಟರಿ ಸಭೆ—1962—63ರ ನೂತನ ಪದಾಧಿಕಾರಿಗಳ ಸ್ಥಾಪನಾ ಸಮಾರಂಭವು ಮಂಗಳೂರಿನ ರಾಮಕೃಷ್ಣ ಮಿಶನ್ನಿನ ಸ್ವಾಮಿ ಆದಿ ದೇವಾನಂದಜೀಯವರಿಂದ ಇದೇ ತಾ. 3ರಂದು ಮಣಿಪಾಲದಲ್ಲಿ ನೆರವೇರಿಸಲ್ಪಟ್ಟಿತು. ಮಾಜಿ ಅಧ್ಯಕ್ಷ ಶ್ರೀ ಟಿ. ಆರ್. ಎ. ಪೈಯವರು ಹೊಸ ಅಧ್ಯಕ್ಷ ಶ್ರೀ ಟಿ. ರಮೇಶ ಯು. ಪೈಗಳಿಗೆ ಅಧಿಕಾರವನ್ನೊಪ್ಪಿಸುತ್ತಾ ತರುಣೋತ್ಸಾಹಿಗಳೂ ಕಾರ್ಯಕುಶಲರೂ ಆದ ಹೊಸ ಅಧ್ಯಕ್ಷರ ಮಾರ್ಗದರ್ಶನದಲ್ಲಿ ಉನ್ನತ ಕೆಲಸಗಳನ್ನು ನಿರೀಕ್ಷಿಸಬಹುದೆಂದು ಹೇಳಿ ತನಗೆ ಸಹಕಾರವಿತ್ತ ಸದಸ್ಯ ಮಿತ್ರರಿಗೆಲ್ಲಾ ಅಭಿನಂದನೆಯನ್ನಿತರು. ಡಾ| ಥೋಮಸರು, ಡಾ| ಟಿ. ರಾಮವಾಸ ಪೈಯವರ ಪರಿಚಯ ಮಾಡಿಕೊಟ್ಟ ಬಳಿಕ ಡಾ| ಪೈಯವರನ್ನು ಹೊಸ ಸದಸ್ಯರಾಗಿ ಸೇರಿಸಿಕೊಳ್ಳಲಾಯಿತು. ಬಳಿಕ ಹೊಸ ಅಧ್ಯಕ್ಷ ಶ್ರೀ ಟಿ. ರಮೇಶ ಪೈಗಳು ತಮ್ಮ ಅಧಿಕಾರ ವರ್ಗದ ಸದಸ್ಯರ ಪರಿಚಯ ಮಾಡಿಕೊಟ್ಟು ಇಂತಹ ಅನುಭವಶಾಲಿ ಸದಸ್ಯ ಸಂಪುಟದ ಸಹಕಾರದಿಂದ ತನ್ನ ಹೊಣೆ ಸರಿಯಾಗಿ ನೆರವೇರುವುದೆಂಬ ವಿಶ್ವಾಸವನ್ನು ವ್ಯಕ್ತಪಡಿಸಿದರು. ಸ್ವಾಮಿ ಆದಿ ದೇವಾನಂದಜೀಯವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಹೊಸ ಅಧಿಕಾರಿ ವರ್ಗವನ್ನು ಅಭಿನಂದಿಸಿ ನಿಷ್ಕಾಮ ಸೇವೆಯ ಕುರಿತಾಗಿ ಉಪನ್ಯಾಸವಿತ್ತರು. ಜ್ಞಾನ-ವಿಜ್ಞಾನ, ಸತ್ಯ-ಅಸತ್ಯ, ಸಾವು-ಬದುಕುಗಳು ಸಮ್ಮಿಳಿತವಾಗಿರುವ ಜೀವನ ಸಮತೋಲನ ದೃಷ್ಟಿ ಹಾಗೂ ನಿರ್ವಿಕಾರ ಮನಸ್ಸಿನಿಂದ ಜನ ಬದುಕಬೇಕಾದರೆ ಅವನ ಕೆಲಸವು ನಿಸ್ವಾರ್ಥವಾಗಿರಬೇಕೆಂದೂ ತಾಯಿಯು ಮಗುವಿಗೆ ಸಲ್ಲಿಸುವ ಸೇವೆಯಲ್ಲಿ ಅಪರೋಕ್ಷವಾಗಿ ತನ್ನ ವೃದ್ಧಾಪ್ಯದಲ್ಲಿ ಈ ಮಗು ನೆರವಾಗಬೇಕೆಂಬ ಆಕಾಂಕ್ಷೆ ಇದೆಯೊದರೂ ಆ ಮಗುವಿನ ಸಂರಕ್ಷಣೆಯು ತಾಯಿಯ ಕರ್ತವ್ಯ ಮತ್ತು ಹೊಣೆಯೆಂದೂ ಇದನ್ನು ತಾನು ನಿರ್ವಹಿಸಬೇಕೆಂಬ ಭಾವನೆಯು ನಿಷ್ಕಾಮ ಕರ್ಮದ ಆದರ್ಶವೆಂದೂ ಹೇಳಿದರು. ಡಾ| ಟಿ. ಮಾಧವ ಪೈಯರು ಸ್ವಾಮೀಜಿಯವರು ಹೇಳಿದ ಬೋಧನೆಗಾಗಿ ಕೃತಜ್ಞತೆಯನ್ನು ಅರ್ಪಿಸುತ್ತಾ ರೋಟರಿಯ ಉದ್ದೇಶವೂ ನಮ್ಮ ವೇದ ಪುರಾಣಗಳ ತತ್ವವೂ ಒಂದೇ ಆಗಿರುವುದೆಂದರಲ್ಲದೆ ಹೊಸ ಅಧಿಕಾರಿ ವರ್ಗದವರು ತಮ್ಮ ಅವಧಿಯಲ್ಲಿ ನಿಷ್ಠಾಪೂರ್ವಕ ದುಡಿಯುವಂತಾಗಲೆಂದರು.

ಸಿಂಡಿಕೇಟ್ ಬ್ಯಾಂಕ್—ದಿನದಿಂದ ದಿನಕ್ಕೆ ಪ್ರಗತಿಯನ್ನು ಹೊಂದುತ್ತಿರುವ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟನ್ನು 'ಎ" ವರ್ಗದ ಬ್ಯಾಂಕುಗಳ ಸಾಲಿನಲ್ಲಿ ಪರಿಗಣಿಸಲಾಗಿದೆ ಎಂದು ತಿಳಿದು ಬರುತ್ತದೆ.

ಕೊರ್ಪೊರೇಶನ್ ಬ್ಯಾಂಕ್—ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನಿನ ಉನ್ನತಿಗಾಗಿ ಕಾಲು ಶತಮಾನಕ್ಕಿಂತಲೂ ಹೆಚ್ಚಿಗೆ ಪರಿಶ್ರಮಿಸಿದ ಬ್ಯಾಂಕಿನ ಜನರಲ್ ಮೆನೇಜರ್ ಶ್ರೀ ವಿ ಆರ್. ಕಾಮತರು ಇದೇ ತಾ. 10ರಂದು ನಿವೃತ್ತರಾಗಿರುವರೆಂದೂ ಅವರ ಸ್ಥಾನದಲ್ಲಿ ಡಿಪ್ಯುಟಿ ಜನರಲ್ ಮೆನೇಜರ್ ಶ್ರೀ ಕೆ ಶಂಕರ ಶೆಣೈಯವರು ನೇಮಕ ಹೊಂದಿರುವರೆಂದೂ ತಿಳಿದು ಬರುತ್ತದೆ.

ಶ್ರೀ ವಿ. ಆರ್. ಕಾಮತರು ವಿಜಯಾ ಬ್ಯಾಂಕಿನ ಎಡ್ವೈಸರಾಗಿ ಬ್ಯಾಂಕಿನ ಉನ್ನತಿಗಾಗಿ ಸೇವೆಸಲ್ಲಿಸುವರೆಂದೂ ತಿಳಿದು ಬರುತ್ತದೆ.

ಮಣಿಪಾಲ—ಸುಮಾರು 2 ಲಕ್ಷ ರೂಪಾಯಿ ವೆಚ್ಚದಿಂದ ಕಟ್ಟಲ್ಪಡುತ್ತಿರುವ ಮಣಿಪಾಲ ಹ್ಯಾಸ್ಕೂಲಿನ ಹೊಸ ಕಟ್ಟಡದ ಉದ್ಘಾಟನಾ ಸಮಾರಂಭವು ಇದೇ ತಾ. 4ರಂದು ಶ್ರೀ ಆರೂರು ಲಕ್ಷ್ಮಿನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು. ಡಾ| ಟಿ. ಎಂ. ಎ. ಪೈಯವರು ಸ್ವಾಗತ ಭಾಷಣ ಮಾಡುತ್ತಾ ಎಲ್ಲ ಅನುಕೂಲತೆಗಳಿಂದ ಕೂಡಿರುವ ಒಂದು ಭವ್ಯ ಶಾಲಾ ಕಟ್ಟಡವನ್ನು ನಿರ್ಮಿಸುವುದು ನಮ್ಮ ಉದ್ದೇಶವೆಂದೂ ಇದೊಂದು ಮಾದರಿಯ ಹ್ಯಾಸ್ಕೂಲಾಗಿ ಇತರ ಕಡೆಯ ಮಕ್ಕಳನ್ನು ಆಕರ್ಷಿಸುವಂತಾಗಬೇಕೆಂದೂ ವಿಚಾರ ವಿನಿಮಯಕ್ಕಾಗಿ ಇಲ್ಲಿ ಆಗಾಗ್ಗೆ ಸೆಮಿನಾರ್‌ಗಳನ್ನು ಏರ್ಪಡಿಸುವ ಯೋಚನೆ ಇದೆಯೆಂದೂ ಹೇಳಿದರು. ಅಧ್ಯಕ್ಷ ಶ್ರೀ ಆರೂರರು ಭಾಷಣ ಮಾಡುತ್ತಾ ಡಾ| ಪೈಗಳು ಸಂಸ್ಥೆಗಳನ್ನು ಕಟ್ಟಿ ಬೆಳೆಸುವುದನ್ನೇ ಆಲೋಚಿಸುತ್ತಿರುವರೆಂದೂ ವಿದ್ಯಾ ಪ್ರಸಾರಕ್ಕಾಗಿ ತಮ್ಮ ವಾರ್ಧಿಕ್ಯದಲ್ಲಿಯೂ ಅವಿಶ್ರಾಂತವಾಗಿ ದುಡಿಯುತ್ತಿದ್ದಾರೆಂದೂ ಅವರ ಪ್ರಯತ್ನಗಳಿಗೆ ನಾವು ಬೆಂಬಲ ಸಹಕಾರ ಕೊಡಬೇಕೆಂದೂ ಹೇಳಿದರು. ಶ್ರೀ ಟಿ ರಮೇಶ ಪೈಗಳು ಅಂತ್ಯದಲ್ಲಿ ವಂದನೆ ಸಲ್ಲಿಸಿದರು.

ಶ್ರೀ ಕಡಂದಲೆಗುತ್ತು ದೇಜು ಸೆಟ್ಟರ ನಿಧನ—ಬಂಟರ ಸಮಾಜದ ಪ್ರತಿಷ್ಠಿತರಲ್ಲಿ ಒಬ್ಬರಾಗಿದ್ದ ಶ್ರೀ ಕಡಂದಲೆಗುತ್ತು ದೇಜು ಸೆಟ್ಟರು ಮಂಗಳೂರು ಕೊಡಿಯಾಲ ಬೈಲಿನಲ್ಲಿಯ ಸಮಾಧಾನ್ ಎಂಬ ಪ್ರಕೃತದ ವಾಸ್ತವ್ಯದ ಮನೆಯಲ್ಲಿ ತನ್ನ 78ನೆಯ ವರ್ಷದಲ್ಲಿ ಇದೇ ತಾ. 1ನೇ ರಾತ್ರಿ ನಿಧನರಾದರೆನ್ನಲು ವಿಷಾದವಾಗುತ್ತದೆ. ದಿವಂಗತರು ಅನೇಕ ವರ್ಷಗಳ ವರೆಗೆ ಮೂಡಬಿದ್ರಿ, ಕಾರ್ಕಳ ಸರ್ಕಲ್‌ಗಳಿಂದ ತಾಲೂಕು ಬೋರ್ಡ್ ಮತ್ತು ಜಿಲ್ಲಾ ಬೋರ್ಡ್‌ಗಳ ಸದಸ್ಯರಾಗಿದ್ದರು. ದಿವಂಗತರು ಉದಾರಿಗಳಾಗಿದ್ದರಲ್ಲದೆ ಭೇದಭಾವ ಇಲ್ಲದವರಾಗಿ ಎಲ್ಲರೊಡನೆಯೂ ಸೌಹಾರ್ದದಿಂದ ವರ್ತಿಸುತಿದ್ದು ಜನಪ್ರಿಯರಾಗಿದ್ದರು.

ವಿವಾಹ ಸಮಾರಂಭಗಳು

ಮಾಜಿ ಆರೋಗ್ಯ ಮಂತ್ರಿ ಡಾ| ಕೆ. ಕೆ. ಹೆಗ್ಡೆಯವರ ಪುತ್ರಿ ಕುಮಾರಿ ಅಮೃತ ಕಲಾ ಇವರ ವಿವಾಹ ಸಮಾರಂಭವು ಪುತ್ತಿಗೆಗುತ್ತು ಪಟ್ಟೆ ಮಂಗಂತಾಡಿ ಶ್ರೀ ಚಂದಯ್ಯ ಸೆಟ್ರ ಪುತ್ರ ಶ್ರೀ ಚಾಲಚಂದ್ರ ಸೆಟ್ಟರೊಂದಿಗೆ ಇದೇ ತಾ. 8ರಲ್ಲಿ ಮಂಗಳೂರು ಡಾನ್‌ಬೋಸ್ಕೊ ಹೋಲಿನಲ್ಲಿ ವೈಭವದಿಂದ ನೆರವೇರಿತು. ಮುಳೂರು ಬಿಕ್ರಿಪುತ್ತು ಬೆರ್ಮಯ್ಯ ಸೆಟ್ರ ಪುತ್ರಿ ಚಿ| ರೋಹಿಣಿಯನ್ನು ಸುರತ್ಕಲ್. ಶ್ರೀ ವಿಠಲ ಶೆಟ್ರ ಪುತ್ರ ಚಿ| ರಮಾನಾಥ M.B.,B.S. ಯವರೂ ಸುರತ್ಕಲ್ ವಿಟ್ಠಲ ಶೆಟ್ರ ಪುತ್ರಿ ಚಿ| ಚಂದ್ರಾವತಿಯನ್ನು ಅಡ್ಡೆ ತೆಲ್ಲಾರು ಮನೆ ಶ್ರೀ ದೊಡ್ಡಣ್ಣ ಶೆಟ್ರ ಪುತ್ರ ಚಿ| ಡಾಕ್ಟರ್ ರಮೇಶನೂ 22—6—62ರಲ್ಲು ಮಂಗಳೂರು ಡೋನ್ ಬೋಸ್ಕೊ ಹೋಲಿನ ವಿವಾಹವಾದರು ನೂತನ ವಧೂವರರಿಗೆ ಶುಭಾಶಯಗಳು.

ಕೆ. ಟಿ. ದೇಸಾಯಿ

ನಿವೃತ್ತ ನ್ಯಾಯಮೂರ್ತಿ ಕೆ. ಟಿ. ದೇಸಾಯಿಯವರು ತಮ್ಮ ಮುಂದಿದ್ದ ಗಡುತರ ಪ್ರಶ್ನೆಗಳನ್ನು ಆಳವಾಗಿ ವಿವೇಚಿಸಿ ಅವುಗಳಿಗೆ ಸರಿಯಾದ ಉತ್ತರಗಳನ್ನು ಕಂಡುಹಿಡಿದಿದ್ದಾರೆ. 'ಬೇಂಕ್ ಎವಾರ್ಡ್'ನ್ನು ಅವರು ವರದಿ ಒಪ್ಪಿಸಿದ ಕ್ಷಣದಲ್ಲಿಯೇ ಸರಕಾರ ಸ್ವೀಕರಿಸಿತು ಮಾತ್ರವಲ್ಲ ಬೇಂಕುಗಳೂ ಅದನ್ನು ವ್ಯವಹೃತಗೊಳಿಸಲು ಒಪ್ಪಿಗೆ ನೀಡಿದುವು. ನೌಕರ-ವಡೆಯರೆಲ್ಲರ ಹಿತವನ್ನು ಅನುಲಕ್ಷಿಸಿ ತಂದಿರುವ ಈ ಎವಾರ್ಡು ದೇಸಾಯಿಯವರ ಯೋಗ್ಯತೆಗೊಂದು ಮಾನದಂಡವಾಗಿದೆ.

ನಿಜಲಿಂಗಪ್ಪ

ಕರ್ನಾಟಕದ ಮುಖ್ಯ ಮಂತ್ರಿ ನಿಜಲಿಂಗಪ್ಪನವರು ಶೋಲಾಪುರವು ಕನ್ನಡದ ಅವಿಭಾಜ್ಯ ಅಂಗವೆಂದೂ ಅದನ್ನು ಕರ್ನಾಟಕದಲ್ಲಿ ಸೇರಿಸುವ ಪ್ರಯತ್ನವನ್ನು ಕೊನೆಯ ವರೆಗೂ ನಡೆಸುವುದಾಗಿಯೂ ಇತ್ತ ಹೇಳಿಕೆಯಿಂದ ಅಲ್ಲಿನ ಜನತೆಯಲ್ಲಿ ಹೊಸ ಆಶಾಂಕುರವು ಗೋಚರಿಸತೊಡಗಿದೆ. ಗಡಿಯ ಪ್ರದೇಶದ ಬಗ್ಗೆ ತೀವ್ರ ಆಸಕ್ತಿ ತೋರಿಸುತ್ತಿರುವ ನಿಜಲಿಂಗಪ್ಪನವರು ಆ ಪ್ರದೇಶದ ಜನ ಪ್ರೀತಿಗೆ ಪಾತ್ರರಾಗಿದ್ದಾರೆ. ಉತ್ತರದ ಗಡಿಗಳ ಬಗ್ಗೆ ಹೆಚ್ಚು ಮಾತಾಡುತ್ತಿರುವ ಅವರು ಕಳೆದುಕೊಂಡ ಕಾಸರಗೋಡಿನ ಬಗ್ಗೆ ಮಾತ್ರ ಏನೂ ಆಡಿದಂತೆ ತೋರುವುದಿಲ್ಲ.

ಶಿವಪ್ಪ ರುದ್ರಪ್ಪ

ಮಾಜಿ ಮುಖ್ಯ ಮಂತ್ರಿ, ಪ್ರಸಕ್ತ ಶಿಕ್ಷಣ ಮಂತ್ರಿ ಎಸ್. ಆರ್. ಕಂಠಿಯವರು ಶಿಕ್ಷಣದ ಬಗ್ಗೆ ಕಳಕಳಿ ತೋರಿಸುತ್ತಿರುವವರು ಎಂದು ಹೇಳಲಾಗಿದೆ. ಪ್ರಾಥಮಿಕ ಶಾಲೆಗಳ ಸಹಾಯಧನ ನೀಡುವ ನಿಯಮಗಳನ್ನು ರೂಪಿಸುವ ಹೊಣೆಗಾರಿಕೆಯೂ ಸದ್ಯ ಅವರ ಮೇಲಿದೆ. ಇದಕ್ಕಾಗಿ ಪರಿಣಾಮಕಾರಿ ಪ್ರಾಥಮಿಕ ಶಿಕ್ಷಣ ನೀಡುವ ಕ್ರಮ ನಿಬಂಧನೆಗಳ ರಚನೆ ಮಾಡುವಾಗ ಎರಡು ವಿಷಯಗಳನ್ನು ಅವರು ನೆನಪಿನಲ್ಲಿಡಬೇಕು ಮೊದಲನೆಯದಾಗಿ, ಅಧ್ಯಾಪಕ-ವಿದ್ಯಾರ್ಥಿ ದಾಮಾಶಯವು ಅತ್ಯಧಿಕವೆಂದರೆ, ೧:೨೫ ಇರಬೇಕು ಮತ್ತು ಪ್ರಾಥಮಿಕ ಶಾಲೆಗಳಿಗೆ ನೂರಕ್ಕೆ ನೂರರಷ್ಟು ಸಹಾಯಧನ ಕೊಡಬೇಕು. ಇಷ್ಟನ್ನು ಮಾಡದೆಯಿದ್ದರೆ, ಪ್ರಾಥಮಿಕ ಶಿಕ್ಷಣ ಸಂಪೂರ್ಣ ಒತ್ತಾಯದ್ದೇ ಆಗುವುದು.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ದಿ ಕರ್ನಾಟಕ ಬೇಂಕ್ ಲಿಮಿಟಿಡ್

ರಿಜಿಸ್ಟರ್ಡ್ ಆಫೀಸು: ಡೊಂಗರಕೇರಿ, ಮಂಗಳೂರು-3

ಪರಿಷ್ಕರಿಸಿದ ಮತ್ತುಹೆಚ್ಚಿಸಿದ ಠೇವಣಾತಿ ಬಡ್ಡಿ ದರಗಳು:

ಕಾಯಂ ಠೇವಣಾತಿಗಳು:		ರೂ. ನ.ಪೈಸೆ
ಒಂದರಿಂದ ಮೂರು ತಿಂಗಳು ವರೆಗೆ	ವಾರ್ಷಿಕ ಸೇಕಡಾ	4-50
ಆರರಿಂದ ಹನ್ನೆರಡು ತಿಂಗಳು ವರೆಗೆ	,, ,,	4-75
ಹದಿಮೂರರಿಂದ ಇಪ್ಪತ್ತನಾಲ್ಕು ತಿಂಗಳು ವರೆಗೆ	,, ,,	5 00
ಇಪ್ಪತ್ತಐದರಿಂದ ಮೂವತ್ತಾರು ತಿಂಗಳು ವರೆಗೆ	,, ,,	5-25
ನಾಲ್ವತ್ತೆಂಟು ತಿಂಗಳು ಮತ್ತು ಹೆಚ್ಚಿಗೆ	,, ,,	5 50
ಸೇವಿಂಗ್ಸ್ ಬೇಂಕ್ ಠೇವಣಾತಿಗಳು	,, ,,	3-25

ನಿಮ್ಮ

ದಿನನಿತ್ಯದ ಉಳಿತಾಯವನ್ನು ಹನಿ ಡಿಪೋಸಿಟುಗಳಲ್ಲಿ | ಮಾಸಿಕ ಉಳಿತಾಯವನ್ನು ಕ್ಯುಮುಲೇಟಿವ್ ಡಿಪೋಸಿಟುಗಳಲ್ಲಿ

ವಿನಿಯೋಗಿಸಿರಿ.

THE KARNATAKA BANK LIMITED

3—7—1962

ದೇಶದ ಬೆನ್ನಮೂಳೆ

ಶಿಕ್ಷಕರ ಹಿತ ಸಂರಕ್ಷಣಾ ನಿಧಿ

ಶಿಕ್ಷಕರ ಹಿತರಕ್ಷಣೆಗಾಗಿ ಏರ್ಪಟ್ಟಿರುವ ರಾಷ್ಟ್ರೀಯ ನಿಧಿಯ ಆಡಳಿತ ಮಂಡಲಿ ಇತ್ತೀಚೆಗೆ ನವದೆಹಲಿಯಲ್ಲಿ ಸಮಾವೇಶಗೊಂಡಿತ್ತು. ಈ ನಿಧಿಯಿಂದ ರಾಷ್ಟ್ರ ನಿರ್ಮಾಪಕರೆನಿಸಿದ ಶಿಕ್ಷಕರಿಗೆ ಹೊಸ ಉತ್ತೇಜನ ದೊರೆಯುವುದು. ಭಾರತಸರಕಾರದವರು ಶಿಕ್ಷಕರ ಹಿತರಕ್ಷಣಾ ನಿಧಿಗೆ ೫ಲಕ್ಷ ರೂಪಾಯಿಗಳ ವಿಶೇಷ ಧನ ಸಹಾಯ ನೀಡುವರು; ಸಾರ್ವಜನಿಕರಿಂದ ರೂ. ೫ ಕೋಟಿಗಳನ್ನು ಎತ್ತಬೇಕೆಂಬ ಗುರಿಯಿದೆ. ಕಷ್ಟ ಸರಿಸ್ಥಿತಿಯಲ್ಲಿರುವ ಶಿಕ್ಷಕರಿಗೆ ಖಾಸಗಿ ಕ್ಷೇತ್ರದ ಮೂಲಕ ಸಹಾಯ ದೊರೆಯುವಂತೆ ಮಾಡುವುದೇ ಶಿಕ್ಷಕರ ಹಿತರಕ್ಷಣಾ ನಿಧಿಯ ಆಡಳಿತ ಮಂಡಲಿಯ ಗುರಿಯಾಗಿದೆ. ನಿಧಿಯು, ಶಿಕ್ಷಕರ ಆಂತರಿಕ, ನೈತಿಕ ಹಾಗೂ ಭೌತಿಕ ಹಿತರಕ್ಷಣೆಯನ್ನೂ ಅವರ ಕುಟುಂಬಗಳ ಹಿತರಕ್ಷಣೆಯನ್ನೂ ನೋಡಿಕೊಳ್ಳುವುದು.

ಧರ್ಮದರ್ಶಿಗಳ ಮಂಡಲಿಯೊಂದು ಈ ನಿಧಿಯ ಮೇಲ್ವಿಚಾರಣೆ ನಡೆಸುವುದು ಈ ಮಂಡಲಿಗೆ ಕೇಂದ್ರ ಶಿಕ್ಷಣ ಶಾಖೆ ಮಂತ್ರಿಗಳಾದ ಡಾ| ಕೆ. ಎಲ್. ಶ್ರೀಮಾಲಿ ಅವರು ಅಧ್ಯಕ್ಷರಾಗಿದ್ದಾರೆ. ನಿಧಿಯು ಸರಳ ಸ್ವರೂಪದ ಟ್ರಸ್ಟ್ ಸ್ವಯಂಪ್ರೇರಣೆಯಿಂದ ಸಲ್ಲಿಸಲಾದ ವಂತಿಗೆಗಳೇ ನಿಧಿಯ ಆಸ್ತಿ. ಕಾಲಕ್ರಮದಲ್ಲಿ ನಿಧಿಯು ಸಂಯುಕ್ತ ಟ್ರಸ್ಟ್ ಆಗಬಹುದಾಗಿದೆ. ಹೀಗೆ ಸಂಪಾದಿಸಿದ ಬಂಡವಾಳವನ್ನು ಹಾಗೆಯೇ ಮೀಸಲಾಗಿಟ್ಟು, ಬರುವ ವರಮಾನವನ್ನು ಮಾತ್ರ ತನ್ನ ಕಾಯ್ತಕಲಾಪಗಳಿಗೆ ಉಪಯೋಗಿಸುವುದು.

ಶಿಕ್ಷಕರ ಹಿತರಕ್ಷಣಾ ನಿಧಿಯು ರಾಷ್ಟ್ರೀಯ ಸಂಸ್ಥೆಯು, ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶಗಳಲ್ಲಿಯೂ ಶಿಕ್ಷಕರ ಹಿತರಕ್ಷಣಾ ನಿಧಿಯನ್ನು ಪ್ರಾರಂಭಿಸುವುದು. ಸ್ಥಳೀಯ ಜನರ ಬೆಂಬಲವನ್ನು ಪಡೆಯಲು, ಹಣ ಸಂಗ್ರಹವಾಗುವ ಮುಖ್ಯ ಪ್ರದೇಶಗಳ ಹಿತಾಸಕ್ತಿಗಳಿಗೆ ವಿಶೇಷ ಮಹತ್ವವನ್ನು ನೀಡಲಾಗುವುದು. ಖಾಸಗಿ ವ್ಯಕ್ತಿಗಳಿಂದ ಸಂದಾಯವಾದ ಚಂದಾ ಹಣವನ್ನು ಶಿಕ್ಷಕರ ಹಿತರಕ್ಷಣೆಗಾಗಿಯೇ ಬಳಸಲಾಗುವುದೆಂದೂ ಜನರಲ್ಲಿ ವಿಶ್ವಾಸ ಹುಟ್ಟಿಸಲು ಇದೊಂದೇ ಉತ್ತಮ ಮಾರ್ಗ. ಸಂಗ್ರಹವಾದ ನಿಧಿಯಲ್ಲಿ ಸ್ವಲ್ಪಾಂಶವನ್ನು ಟ್ರಸ್ಟಿಗೆ ತಗಲುವ ವೆಚ್ಚದ ನಿರ್ವಹಣೆಗಾಗಿ ರಾಜ್ಯದಲ್ಲಿ ಕಾಯ್ದಿರಿಸಲಾಗುವುದು. ಉಳಿದ ಹಣವನ್ನು, ಮೂಲನಿಧಿಯನ್ನು ಸಮತೋಲಗೊಳಿಸುವ ಉದ್ದೇಶದಿಂದ ಅದನ್ನೂ ರಾಷ್ಟ್ರೀಯ ನಿಧಿಗೆ ಸಲ್ಲಿಸಲಾಗುವುದು. ಈ ನಿಧಿಯಿಂದ ಲಾಭ ಪಡೆಯುವ ಪ್ರಾದೇಶಿಕ ಕ್ಷೇತ್ರವನ್ನೂ ಉಳಿಸಿಕೊಂಡು ಅದನ್ನೂ ವಿಸ್ತೃತ ಪ್ರದೇಶದಲ್ಲಿ ಅಳವಡಿಸಿಕೊಳ್ಳುವ ಅಶ್ವಾಸನವೂ ಇದರಿಂದ ದೊರೆಯುವುದು. ದೇಶದ ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ನಿಧಿಯ ವರ್ಗಾವಣೆ ಮಾಡಲು ಶಿಕ್ಷಕರ ಹಿತರಕ್ಷಣಾ ರಾಷ್ಟ್ರೀಯ ನಿಧಿಗೆ ಅಧಿಕಾರ ನೀಡುವುದೂ ಅವೇಕ್ಷಣೀಯವಾಗಿದೆ.

ನಿಧಿಯು ವರ್ಷದ್ಯಂತವೂ ಚಂದಾಗಳನ್ನೂ ಸ್ವೀಕರಿಸುವುದು, 'ಶಿಕ್ಷಕರ ದಿನ' ವನ್ನಾಗಿ ಇಚರಿಸಲು ರಾಷ್ಟ್ರಪತಿ ಡಾ. ರಾಧಾಕೃಷ್ಣನ್ನರ ಜನ್ಮದಿನ ಸಪ್ಟಂಬರ ೫ನೆ ದಿನವನ್ನು ಆರಿಸಿಕೊಂಡಿದೆ. ದಿನಾಚರಣೆಯ ಸಂದರ್ಭದಲ್ಲಿಯೇ ಅದಕ್ಕೆ ಸಹಾಯಕವಾಗುವಂತೆ ವಿಶೇಷ ಆಂದೋಲನವನ್ನೂ ಆರಂಭಿಸಬಹುದಾಗಿದೆ. ಶಿಕ್ಷಕರ ಸ್ಥಿತಿಗತಿಗಳನ್ನೂ ಸುಧಾರಿಸಲು ಸರಕಾರವು ಕೈಗೊಳ್ಳುವ ಕ್ರಮಗಳಿಗೆ ಬದಲಾಗಿ ಈ ಕಾರ್ಯ ನಡೆಯುತ್ತಿಲ್ಲ. ಸಮುದಾಯವು ಶಿಕ್ಷಕರ ಬಗೆಗೆ ಇಟ್ಟುಕೊಂಡಿರುವ ಗೌರವನ್ನು ಸ್ಪುಟವಾಗಿ ವ್ಯಕ್ತಗೊಳಿಸಲು ರಾಷ್ಟ್ರೀಯ ಶಿಕ್ಷಕರ ಹಿತರಕ್ಷಣಾ ನಿಧಿಯು ಕೇವಲ ಒಂದು ಸಾಧನ ಮಾತ್ರವಾಗಿದೆ.

ಭಾರತ ಸರಕಾರವು ಕಳೆದ ೧೫ ವರ್ಷಗಳಿಂದಲೂ ಶಿಕ್ಷಕರ ಸ್ಥಿತಿಗತಿಗಳನ್ನು ಸುಧಾರಿಸಲು ಸತತವಾಗಿ ಶ್ರಮಿಸುತ್ತ ಬಂದಿದೆ. ಪ್ರಥಮ ಪಂಚವಾರ್ಷಿಕ ಯೋಜನೆಯ ಅಂತ್ಯದ ವೇಳೆಗೆ ಪ್ರಾಥಮಿಕ ಶಾಲಾ ಶಿಕ್ಷಕರ ವೇತನ ಪ್ರಮಾಣವನ್ನು ಕುರಿತು ಪರಿಶೀಲನೆ ಮಾಡಲಾಯಿತು. ಪರಿಶೀಲನೆಯ ಪರಿಣಾಮವಾಗಿ, ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಶಿಕ್ಷಕರು ಪಡೆಯುತ್ತಿರುವ ವೇತನವು ಕಡಿಮೆಯಾಗಿದೆ ಎಂದು ಕಂಡು ಬಂದಿತು. ೧೯೫೧-೫೨ರಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕ ನೊಬ್ಬನ ವಾರ್ಷಿಕ ಸರಾಸರಿ ವೇತನವು ರೂ. ೫೪೪ಗಳಷ್ಟಿತ್ತು. ಆದು ೧೯೫೫—೫೬ರಲ್ಲಿ ರೂ. ೬೫೧ಕ್ಕೆ ಏರಿದ ರೂ. ಶಿಕ್ಷಕರ ವೇತನ ಪ್ರಮಾಣ ಕಡಿಮೆಯಾಗಿದ್ದುದರಿಂದ, ದ್ವಿತೀಯ ಯೋಜನೆಯಲ್ಲಿ ವಿಶೇಷ ಕಾರ್ಯಕ್ರಮವೊಂದನ್ನು ರಚಿಸಲಾಯಿತು.

ಈ ಕಾರ್ಯಕ್ರಮದಂತೆ, ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಶಿಕ್ಷಕರ ವೇತನ ಪ್ರಮಾಣವನ್ನು ಹೆಚ್ಚಿಸಲು ರಾಜ್ಯ ಸರಕಾರಗಳಿಗೆ ಶೇಕಡ ೫೦ರಷ್ಟು ಧನ ಸಹಾಯ ನೀಡಲಾಯಿತು. ಬಹುಮಟ್ಟಿಗೆ ಎಲ್ಲಾ ರಾಜ್ಯಗಳು ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಕರ ವೇತನ ಪ್ರಮಾಣವನ್ನು ಹೆಚ್ಚಿಸಿವೆ. ದ್ವಿತೀಯ ಯೋಜನೆಯ ಅಂತ್ಯದ ವೇಳೆಗೆ, ಶಿಕ್ಷಕನ ಸರಾಸರಿ ವಾರ್ಷಿಕ ವೇತನವು ರೂ. ೮೧೫ಕ್ಕೆ ಏರಿತು.

ತೃತೀಯ ಯೋಜನೆಯಲ್ಲಿ ಶಿಕ್ಷಕರ ವೇತನ ಹೆಚ್ಚಳ, ಪ್ರಾವಿಡೆಂಟ್ ಫಂಡ್ ಕಾರ್ಯ ಯೋಜನೆಯ ವಿಸ್ತರಣೆ ಮತ್ತು ಅಗತ್ಯ ಸೌಕರ್ಯಗಳನ್ನು ಹೆಚ್ಚು ಪ್ರಮಾಣದಲ್ಲಿ ನೀಡಿಕೆಯ ವ್ಯವಸ್ಥೆಯನ್ನು ಮಾಡಲಾಗಿದೆ. ೧೯೬೫—೬೬ರಲ್ಲಿ ಶಿಕ್ಷಕರ ಸರಾಸರಿ ವಾರ್ಷಿಕ ವೇತನವು ೯೦೦ ರೂಗಳಿಗೆ ಮುಟ್ಟುವುದೆಂದು ನಿರೀಕ್ಷಿಸಲಾಗಿದೆ.

ಶಿಕ್ಷಕರಿಗೆ ಧನ ಸಹಾಯ ನೀಡುವ ಮತ್ತೊಂದದು ಮಹತ್ವಪೂರ್ಣ ಕಾರ್ಯ ಯೋಜನೆಯೊಂದನ್ನು ಕೇಂದ್ರ ಶಿಕ್ಷಣ ಮಂತ್ರಿ ಶಾಖೆಯು ಈಗ ಕಾರ್ಯಾಚರಣೆಗೆ ತರುತ್ತದೆ. ಈ ಯೋಜನೆಯಂತೆ, ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲಾ ಶಿಕ್ಷಕರ ಪ್ರತಿಭಾನ್ವಿತ ಮಕ್ಕಳಿಗೆ, ಉನ್ನತ ಶಿಕ್ಷಣಕ್ಕಾಗಿ ವ್ಯಾಸಂಗ ವೇತನಗಳನ್ನು ನೀಡಲಾಗುವುದು. ವ್ಯಾಸಂಗ ವೇತನಗಳಿಗಾಗಿ ಆರಿಸಲಾದ ಪ್ರತಿಭಾನ್ವಿತ ವಿದ್ಯಾರ್ಥಿಗಳು ಮುಂದುವರಿಸುವ ಶಿಕ್ಷಣಕ್ಕೆ ಅನುಗುಣವಾಗುವಂತೆ, ಪ್ರತಿವರ್ಷ ೫೦೦ ಹೊಸ ವ್ಯಾಸಂಗ ವೇತನಗಳನ್ನು ನೀಡಲಾಗುವುದು ವಿಶ್ವವಿದ್ಯಾನಿಲಯದಲ್ಲಿ ವಿದ್ಯಾರ್ಥಿಯು ಆರಂಭಿಸಿದ ವರ್ಗದಿಂದ ಹಿಡಿದು, ಆತನ ಕಾಲೇಜು ಅಧ್ಯಯನ ಮುಗಿಯುವ ವರೆಗೂ ಈ ವ್ಯಾಸಂಗ ವೇತನವು ಮುಂದುವರಿಯುವುದು.

ಪ್ರತಿಭಾವಂತ ವ್ಯಕ್ತಿಗಳನ್ನು ಶಿಕ್ಷಣ ವೃತ್ತಿಗೆ ಆಕರ್ಷಿಸಲು ಸಾಲದ ರೂಪದಲ್ಲಿ ವ್ಯಾಸಂಗ ವೇತನಗಳನ್ನು ನೀಡುವ ವಿಷಯವೂ ಪರಿಶೀಲನೆಯಲ್ಲಿದೆ. ಅರ್ಹ ಮತ್ತು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಾಲಧನ ದೊರೆಯುವುದು ಶಿಕ್ಷಕರಿಗೆ ಪ್ರಯಾಣದ ರಿಯಾಯಿತಿಯನ್ನು ಕಲ್ಪಿಸಬೇಕೆಂಬ ಪ್ರಶ್ನೆಯನ್ನು ಕುರಿತು ಶಿಕ್ಷಣ ಮಂತ್ರಿ ಶಾಖೆಯು ರೈಲ್ವೆ ಮಂತ್ರಿ ಶಾಖೆಯೊಂದಿಗೆ ವ್ಯವಹಾರ ನಡೆಸುತ್ತಿದೆ. ಕೆಲವು ಶಿಕ್ಷಕರು ಪ್ರಯಾಣದ ರಿಯಾಯಿತಿಗಳನ್ನು ದುರುಪಯೋಗ ಮಾಡಿಕೊಂಡಿದ್ದರಿಂದ ಈ ಕಾರ್ಯಯೋಜನೆಯನ್ನು ಸ್ಥಗಿತಗೊಳಿಸಲಾಗಿತ್ತು.

ಸಮಾಜದಲ್ಲಿ ಶಿಕ್ಷಕರ ಗೌರವವನ್ನು ಹೆಚ್ಚಿಸಲು ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಅಪ್ರತಿಮ ಸೇವೆ ಸಲ್ಲಿಸಿದ ಶಿಕ್ಷಕರಿಗೆ ಸಾರ್ವಜನಿಕ ಮನ್ನಣೆ ನೀಡಲು ಭಾರತ ಸರ್ಕಾರವು ೧೯೫೮-೫೯ರಲ್ಲಿ ಶಿಕ್ಷಕರಿಗೆ ರಾಷ್ಟ್ರೀಯ ಪ್ರಶಸ್ತಿ ನೀಡುವ ಯೋಜನೆಯೊಂದನ್ನು ಆರಂಭಿಸಿತು. ಪ್ರಶಸ್ತಿ ಪಡೆಯುವ ಶಿಕ್ಷಕರಿಗೆ ಒಂದು ಪ್ರಶಸ್ತಿಪತ್ರವನ್ನೂ ರೂ ೫೦೦ರ, ನಗದು ಹಣವನ್ನೂ ನೀಡಲಾಗುವುದು

ತೃತೀಯ ಯೋಜನೆಯ ಪ್ರಾರಂಭದ ವರ್ಷದಲ್ಲಿ ನೀಡಲಾದ ರಾಷ್ಟ್ರೀಯ ಪ್ರಶಸ್ತಿಗಳ ಸಂಖ್ಯೆಯು ಕೇವಲ ೫೨ಕ್ಕೆ ಮಾತ್ರ ಸೀಮಿತವಾಗಿತ್ತು. ಅನಂತರ ಅದನ್ನು ೮೫ಕ್ಕೆ ಹೆಚ್ಚಿಸಲಾಗಿದೆ. ರಾಷ್ಟ್ರಪತಿಗಳು ಭಾರತದ ರಾಜಧಾನಿಯಲ್ಲಿ ನಡೆಯುವ ವಿಶೇಷ ಸಮಾರಂಭವೊಂದರಲ್ಲಿ ಶಿಕ್ಷಕರಿಗೆ ಈ ಪ್ರಶಸ್ತಿಗಳನ್ನು ದಯಪಾಲಿಸುವರು.

ಬೊಂಬಾಯಿ ಉಚ್ಚ ನ್ಯಾಯಾಲಯದ ಪಾತ್ರ

(೫ನೇ ಪುಟದಿಂದ)

ಬಾರಿ ಜಾಮೀನಾಗಿ ಮಹಮ್ಮದ ಆಲಿ ಜಿನ್ನರು ನಿಲ್ಲಲು ಒಪ್ಪಿದರು.

೧೯೦೮ರಲ್ಲಿ ಲೋಕಮಾನ್ಯರ ಮೇಲೆ ಹೊರಿಸಿದ ಕಟ್ಲೆಯು ನಮ್ಮ ಸ್ವಾತಂತ್ರ್ಯ ಸಂಗ್ರಾಮ, ಪತ್ರಸಂಪಾದಕತನ ಮತ್ತು ಕಾನೂನಿನ ಇತಿಹಾಸದಲ್ಲಿ ಅಮರವಾಗಿ ಉಳಿಯುವಂತೆಯೇ ಬೊಂಬಾಯಿ ಉಚ್ಚ ನ್ಯಾಯಾಲಯದ ಇತಿಹಾಸದಲ್ಲಿಯೂ ಮಹತ್ವಪೂರ್ಣ ಅಧ್ಯಾಯವೆನಿಸಿದೆ. ಲೋಕಮಾನ್ಯರು ತಮ್ಮ ವಾದವನ್ನು ಒಟ್ಟು ೨೧|| ತಾಸುಗಳ ಕಾಲ ಮುಂದಿಟ್ಟಿದ್ದರು. ಆರು ವರ್ಷ ಕರಿನೀರಿನ ದಂಡನೆಯನ್ನು ತಿಲಕರಿಗೆ ನೀಡಿದುದರಿಂದ ಇಡಿಯ ಬೊಂಬಾಯಿಯಲ್ಲಿ ಆರು ದಿನ ಉಪದ್ರವು ನಡೆದಿತ್ತು. ಇದರಿಂದ ಲೋಕಮಾನ್ಯರ ಲೋಕ ಪ್ರಿಯತೆಯೆಷ್ಟೆಂಬುದನ್ನು ಊಹಿಸಬಹುದು. ಈ ಸಂದರ್ಭದಲ್ಲಿ ಲೋಕಮಾನ್ಯರು ಗೀತೆಯಲ್ಲಿ ವರ್ಣಿತವಾದ ಸ್ಥಿತಪ್ರಜ್ಞರಂತೆ ಸಂಪೂರ್ಣ ಅವಿಚಲಿತ ರೂಪದಲ್ಲಿ ನಾಯಾಲಯದ ನಿರ್ಣಯವನ್ನು ಸ್ವೀಕರಿಸುತ್ತ ವ್ಯಕ್ತಪಡಿಸಿದ ವಿಚಾರಗಳು ಇಂದಿಗೂ ಬೊಂಬಾಯಿಯ ನ್ಯಾಯಾಲಯದಲ್ಲಿ ಪ್ರತಿಧ್ವನಿತವಾಗುತ್ತಿವೆ.

"ಈ ನಿರ್ಣಯವೇನೇ ಇರಲಿ, ನಾನು ನಿರಪರಾಧಿಯಾಗಿದ್ದೇನೆ. ಇಡಿ ಜಗತ್ತಿನ ವ್ಯವಹಾರ ನಡೆಸಬಲ್ಲ ಕೆಲವು ಶಕ್ತಿಗಳು ವಿಶ್ವದಲ್ಲಿ ಇವೆ. ಪ್ರಾಯ: ನಾನು ಸ್ವತಂತ್ರನಾಗಿರುವುದಕ್ಕಿಂತ ಕಷ್ಟ ಸಹಿಸುವುದರಿಂದಲೇ ನನಗೆ ಪ್ರಿಯವಾದ ಕಾರ್ಯವು ಸರಳವಾಗುವುದೆಂದು ಪರಮೊತ್ಮನ ಆಶಯವಿರಬಹುದು."

ವಿಶ್ವಕವಿ ಟಾಗೋರರ ಪುಣ್ಯಸ್ಮರಣೆಗಾಗಿ
ಅವರ ಶತಮಾನೋತ್ಸವದ ಸುಸಂದರ್ಭದಲ್ಲಿ
ಪ್ರಕಟವಾದ ಕಿರುಗಾಣಿಕೆಗಳು

ಚಿತ್ರಾಂಗದೆ

ಬೆಲೆ: ೬೦ ನ. ಪೈಸೆ.
(ಶ್ರೀ ಕೆ. ಕೆ. ಶೆಟ್ಟಿ, ಎಂ. ಎಲ್. ಸಿ. ಅವರಿಂದ ಅನುವಾದಿತ)

ರವೀಂದ್ರನಾಥರ ಕಿರುಗತೆಗಳು

ಬೆಲೆ: ೯೦ ನ. ಪೈಸೆ.
(ಶ್ರೀ ಹನುಮಂತರಾವ್ ಮಾಂಜರೇಕರ ಅವರಿಂದ, ಅನುವಾದಿತ) ಕಾರವಾರ
ಪ್ರಕಾಶಕರು:
ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್, ನವಯುಗ ಪ್ರೆಸ್, ಉಡುಪಿ.

ಅಮೃತ ಬಿಂದು

ಮಕ್ಕಳಿಗೆ ಮುತ್ತು ಕೊಡುವದು, ಶ್ರೀಮಂತರಿಗೆ ಕಡಿಮೆ ಆಳೆದು ಕೊಡುವದು ಪಾಪವೆನಿಸದು.

o o o

ರೋಗಿಯು ಕಡಿಮೆ ತಿಂದರೂ, ನಿರೋಗಿಗಿಂತಾ ಹೆಚ್ಚು ಖರ್ಚು ಮಾಡುತ್ತಾನೆ.

o o o

ಲಭ ಹಾಗೂ ಗೌರವ ಎರಡೂ ಒಂದೇ ಚೀಲದಲ್ಲಿ ಎಂದೂ ಇರಲಾರವು.

o o o

ಪ್ರೇಮವು ಕೆಲವರನ್ನು ಶೂರರನ್ನಾಗಿಸುತ್ತದೆ; ಅವರ ಹೆಸರು ಲೋಕಕ್ಕೆ ತಿಳಿಯುತ್ತದೆ. ಆದರೆ ಮೂರ್ಖರನ್ನಾಂಸಿದ ಹೆಲವರ ಹೆಸರು ಯಾರಿಗೂ ತಿಳಿಯದು.

ಚಾಣಾಕ್ಷ ರಾಜಕಾರಣಿ

ಹರೇಕೃಷ್ಣ ಮೆಹತಾಬ

ಒರಿಸ್ಸಾ ರಾಜ್ಯದ ಮುಖ್ಯ ಮಂತ್ರಿ ಪದವಿಯಿಂದ ಬಿಡುಗಡೆ ಹೊಂದಿ ಸಂಪತ್ತಿಗೆ ಅವಿರೋಧವಾಗಿ ಆಯ್ಕೆಗೊಂಡ ಡಾ| ಹರೇಕೃಷ್ಣ ಮೆಹತಾಬರು ಸಂಪದೀಯ ಕಾಂಗ್ರೆಸ್ ಪಕ್ಷದ ಉಪನಾಯಕರಾಗಿಯೂ ಅವಿರೋಧವಾಗಿ ನಿಯುಕ್ತರಾದರು. ಮೆಹತಾಬರು ಕರ್ಮಠ ಕಾಂಗ್ರೆಸಿಗರು ಮಾತ್ರವಲ್ಲ, ಪ್ರಸಿದ್ಧ ಲೇಖಕರೂ ವಿಖ್ಯಾತ ಪತ್ರಿಕಾ ಸಂಪಾದಕರೂ ದೂರದೃಷ್ಟಿಯುಳ್ಳವರೂ ಆಗಿದ್ದಾರೆ. ಇವರಂತಹ ಉತ್ಸಾಹಿ ಪ್ರಖರ ಪ್ರತಿಭಾ ಸಂಪನ್ನ ನಾಯಕರು ಕಾಂಗ್ರೆಸಿನ ಸಂಘಟನೆಯು ಕಾರ್ಯದಲ್ಲಿ ದೊರೆಯುವುದು ವಿರಳ. ತಮ್ಮ ಜೀವನವನ್ನು ಹೊಸ ಹೊಸ ಅನುಭವಗಳನ್ನು ಗಳಿಸುವುದರಲ್ಲಿ, ನಿತ್ಯ ನೂತನ ಕಾರ್ಯಕ್ರಮಗಳನ್ನು ರೂಪಿಸುವಲ್ಲಿ ಮತ್ತು ನವ ನವ ಸಂಶೋಧನೆಗಳ ಅವಿಷ್ಕಾರದಲ್ಲಿ ಕಳೆದವರು ಇವರು. ಈ ಕಾರಣದಿಂದಲೇ ಅವರು ಸದಾ ಕಾಲವೂ ಗಂಭೀರರಾಗಿಯೇ ಇರುತ್ತಾರೆ.

೧೯೦೧ ನವಂಬರ ೨೧ರಂದು ಜನಿಸಿದ ಮೆಹತಾಬರು ಕಟಕಿನಲ್ಲಿಯೇ ಪ್ರಶಿಕ್ಷಣ ಗಳಿಸಿದರು. ೧೯೧೯ರಲ್ಲಿಯೇ ಇವರು ಕಾಂಗ್ರೆಸ್ ಹೂಡಿದ್ದ ಅಸಹಕಾರ ಆಂದೋಲನದಲ್ಲಿ ಸಕ್ರಿಯವಾಗಿ ಭಾಗವಹಿಸಿದರು. ಒರಿಸ್ಸಾದಲ್ಲಿ ಕಾಂಗ್ರೆಸ್ಸು ಭದ್ರವಾಗಿ ಬೇರೂರುವುದಕ್ಕೆ ಪ್ರಧಾನ ಕಾರ್ಯಕರ್ತರು ಮೆಹತಾಬರೇ ಎಂದು ಹೇಳಬೇಕು. ಮುಂದೆ ಪ್ರಜಾಂದೋಲನದಲ್ಲಿ ಭಾಗವಹಿಸಿದ ಅಪರಾಧದ ಮೇರೆಗೆ ೧೯೩೨ರಿಂದ ೩೪ರ ವರೆಗೆ ಜೇಲು ಸೇರಬೇಕಾಯಿತು. ಕಾಲಕ್ರಮದಲ್ಲಿ ಅವರು ಬಾಲಸೋರ್ ಜಿಲ್ಲೆಯ ಬೋರ್ಡಿನ ಅಧ್ಯಕ್ಷರಾದರು ಬಿಹಾರ—ಒರಿಸ್ಸಾ ಕೌನ್ಸಿಲಿನ ಸದಸ್ಯರಾದರು. ೧೯೩೦—೩೨ರಲ್ಲಿ ಭಾರತದ ಎಲ್ಲೆಡೆ ಜರಿಗಿದ ಉಪ್ಪಿನ ಸತ್ಯಾಗ್ರಹದಲ್ಲಿ ಸೇರಿಕೊಂದುದರ ಪರಿಣಾಮವಾಗಿ ಇಪ್ಪತ್ತೆರಡು ವರ್ಷ ಕಾಂಗ್ರೆಸ್ ಗೃಹವನ್ನು ಹೋಗಬೇಕಾಯಿತು. ಬಿಡುಗಡೆ ಹೊಂದಿದ ನಂತರ ಐದು ವರ್ಷಗಳಕಾಲ ಮೆಹತಾಬರು ಕಾಂಗ್ರೆಸ್ಸಿನ ರಚನಾತ್ಮಕ ಕಾರ್ಯಗಳಲ್ಲಿ ತಪ್ಪರಿಸಿದರು. ೧೯೩೭ರಲ್ಲಿ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸದಸ್ಯರಾದರು. ಒರಿಸ್ಸಾದಿಂದ ಆಯ್ಕೆಗೊಂಡ ಸಮಿತಿಯ ಸದಸ್ಯರಲ್ಲಿವರು ಪ್ರಪ್ರಥಮರು.

ಒರಿಸ್ಸಾದಲ್ಲಿದ್ದ ಆಶ್ರಿತ ಸಂಸ್ಥಾನಗಳಲ್ಲಿ ಸ್ವಾತಂತ್ರ್ಯಾಂದೋಲನವು ಪ್ರಾರಂಭವಾಗಲು ಅದರ ಸೂತ್ರಧಾರರಾದರು ಹರೇಕೃಷ್ಣರು. ಆಂದೋಲನಾ ಪರಿಶೀಲನಾ ಸಮಿತಿಯ ಅಧ್ಯಕ್ಷರೂ ಇವರಾದರು. ೧೯೪೭—೪೯ರ ಅವಧಿಯಲ್ಲಿ ಕಾಂಗ್ರೆಸ್ಸಿನ ಇನ್ನಿತರ ಅಗ್ರಗಣ್ಯ ನಾಯಕಮಣಿಯವರೊಂದಿಗೆ ಅಹಮದ ನಗರ ಕೋಟೆಯಲ್ಲಿ ಕೈದಿಗಳಾಗಿ ಉಳಿದರು.

೧೯೪೬ರಲ್ಲಿ ಹರೇಕೃಷ್ಣ ಮೆಹತಾಬರು ಒರಿಸ್ಸದ ಮುಖ್ಯ ಮಂತ್ರಿಯಾದರು. ಮುಖ್ಯ ಮಂತ್ರಿಯೆನಿಸಿದ ಇವರು ರಾಜ್ಯದ ಒಳಿತಿಗಾಗಿ ಶ್ರಮಿಸಿದರು. ಹಿರಾಕುಡ ಅಣೆಕಟ್ಟು ರಚನೆ, ಹೊಸ ರಾಜಧಾನಿ ಭುವನೇಶ್ವರ ನಗರ ನಿರ್ಮಾಣ, ಅಲ್ಲಿದ್ದ ವಿವಿಧ ಆಶ್ರಿತ ಸಂಸ್ಥಾನಗಳ ವಿಲೀನೀಕರಣ—ಇವು ಅವರ ಆಡಳಿತೆಯ ಮಹತ್ಸಾಧನೆಗಳು.

೧೯೫೦ರಿಂದ ೫೨ರ ವರೆಗೆ ಕೇಂದ್ರ ಸರಕಾರದಲ್ಲಿ ಉದ್ದಿಮೆ ಮತ್ತು ವ್ಯವಸಾಯ ಕಾಖೆಗಳ ಮಂತ್ರಿಯಾಗಿದ್ದರಲ್ಲದೇ ೧೯೫೨ರ ವರೆಗೆ ಕೇಂದ್ರ ಸಂಪದೀಯ ದಳದ ಪ್ರಧಾನ ಕಾರ್ಯದರ್ಶಿಯಾಗಿದ್ದರು. ೧೯೫೨ರ ಮಾರ್ಚಿಯಿಂದ ಅಕ್ಟೋಬರದ ವರೆಗೆ ಬೊಂಬಾಯಿಯ ರಾಜ್ಯಪಾಲರಾಗಿಯೂ ಕೆಲಕಾಲ ಸೇವೆ ಸಲ್ಲಿಸಿದರು ನಭಕೃಷ್ಣ ಚೌಧರಿಯವರ ನಂತರ ೧೯೫೬ರಲ್ಲಿ ಒರಿಸ್ಸದ ಮುಖ್ಯ ಮಂತ್ರಿಯಾದರು. ೧೯೫೮ರ ಚುನಾವಣಾ ನಂತರವೂ ಅವರು ಮರಳಿ ಮುಖ್ಯ ಮಂತ್ರಿಯೆಂದು ಮುಂದುವರಿದರು. ಕಳೆದ ವರ್ಷದ ಫೆಬ್ರವರಿಯಲ್ಲಿ ೨೨ ತಿಂಗಳು ಪ್ರಾಯದ ಕಾಂಗ್ರೆಸ್— ಗಣತಂತ್ರ ಪರಿಷತ್ತಿನ ಸಂಯುಕ್ತ ಮಂತ್ರಿ ಮಂಡಳದ ರಾಜೀನಾಮೆಯನ್ನಿತ್ತು ವಿಜಯೋತ್ಸವದಿಂದ ಪಟ್ಟಾಯಕರಿಗೆ ಮುಖ್ಯ ಮಂತ್ರಿಯಾಗುವ ಅವಕಾಶವನ್ನು ಕೊಟ್ಟರು.

ಒರಿಸ್ಸದ ರಾಜಕಾರಣದಿಂದ ಹೊರಗುಳಿದ ಮೆಹತಾಬರ ಮುಂದಿನ ಕಾರ್ಯವಿಧಿಗಳ ಬಗೆಗೆ ತರತರದ ಊಹಾಮೋಹಗಳು ನಡೆದಿದ್ದುವು; ಕೆ.ತೋಹಲವನ್ನೂ ಕೆರಳಿಸಿದ್ದುವು. ಚುನಾವಣೆಗಳ ವೇಳೆ ಕಾಂಗ್ರೆಸ್‌ನ ಅಧಿಕೃತ ಹುರಿಯಾಳುಗಳಿಗೆ ವಿರುದ್ಧ ಪ್ರಚಾರ ನಡೆಸಿದರೆಂಬ, ಸ್ವತಂತ್ರ ಪಕ್ಷದ ನೀತಿಯತ್ತ ಒಲಿದಿರುವರೆಂಬ ಸುದ್ದಿಗಳು ಬಹಿರಂಗವಾಗುತಿದ್ದುವು. ಆದರೆ, ಡಾ| ಮೆಹತಾಬರು ಇಂತಹ ಅರೋಪಗಳನ್ನು ಬಲವಾಗಿ ವಿರೋಧಿಸಿದರು. ಈಗ ಸಂಸದೀಯ ಕಾಂಗ್ರೆಸ್ ಪಕ್ಷದ ಉಪ ನಾಯಕನಾಗಿ ಆಯ್ಕೆಗೊಂಡುದರಿಂದ ಮೆಹತಾಬರ ಮೇಲೆ ಕಾಂಗ್ರೆಸ್ ಹೈ ಕಮಾಂಡು ಹಿಂದಿನಂತೆಯೇ ಸದಭಿಪ್ರಾಯವನ್ನು ಇಟ್ಟುಕೊಂಡಿದೆಯೆಂದು ವ್ಯಕ್ತವಾಗುತ್ತದೆ.

ಕನ್ನೆ ವಿಜಾರಗಳಿಗೇನೇ ಅಂಟಿಕೂರುವ ಅಭ್ಯಾಸವುಳ್ಳ ಮೆಹತಾಬರು ೧೯೫೫ರಲ್ಲಿ ಭೂದಾನಾಂದೋಲನದ ಕುರಿತು 'ಇದು ಬಡತನವನ್ನು ವಿತರಣೆ ಮಾಡಿಕೊಳ್ಳುವಷ್ಟನ್ನೊಂದು ವಿಧಾನ' ವೆಂದಾಗ, ಕಾಂಗ್ರೆಸ್ ಕ್ಷೇತ್ರದಲ್ಲಿ ದೊಡ್ಡ ಕೋಲಾಹಲವೆದ್ದಿತು

ಹದಿನೈದು ವರ್ಷಗಳಿಗೆ ಮೊದಲು ತನ್ನ ಜೇಬಿನಿಂದ ಹದಿನೈದು ಸಾವಿರ ರೂಪಾಯಿಗಳನ್ನು ಖರ್ಚುಮಾಡಿ ಒರಿಸ್ಸದ ವ್ಯಾಜನ ಕವಿಗಳ ಕಾವ್ಯ ಸಂಗ್ರಹಗಳನ್ನು ಡಾ. ಮೆಹತಾಬರು ಪ್ರಕಾಶಿಸಿದ್ದರು ಒರಿಸ್ಸದ ಆದಿವಾಸಿಗಳಲ್ಲಿ ಗಾಂಧೀ ಧರ್ಮ ಪ್ರಚಾರ ಮಾಡುವುದಕ್ಕಾಗಿಯೂ ಅವರು ಇಪ್ಪತ್ತೇ ಹಣವನ್ನುವ್ಯಯಿಸಿದ್ದರು. ಒರಿಸ್ಸದ ಏಕ ಮಾತ್ರ ಇತಿಹಾಸ ಎ ಹಿಸ್ಟರಿ ಆಫ್ ಒರಿಸ್ಸಾ ಒಂದು ನಾಟಕ ಮತ್ತು ಮೂರು ಜನಪ್ರಿಯ ಕಾದಂಬರಿಗಳನ್ನು ಇವರು ಬರೆದಿದ್ದಾರೆ ಏಳು ವರ್ಷಗಳ ವರೆಗೆ 'ಪ್ರಜಾತಂತ್ರ' ಮತ್ತು ರಚನಾ ಎಂಬ ಪತ್ರಿಕೆಗಳ ಸಂಪಾದಕರೂ ಆಗಿದ್ದರು. ಅಂಧ್ರ ಮತ್ತು ಉತ್ಕಲ ವಿಶ್ವವಿದ್ಯಾಲಯಗಳು ಅವರಿಗೆ ಗೌರವ ಡಾಕ್ಟರೇಟ್ ಡಿಗ್ರಿಗಳನ್ನು ಕೊಟ್ಟು ಮನ್ನಿಸಿವೆ.

ಸತ್ಕುಲಪ್ರಸೂತರಾದ ಮೆಹತಾಬರು ಸಂಪನ್ನ ಕುಲಕ್ಕೆ ಸೇರಿದವರು .ಇಂದಿಗೂ ಅವರ ಸ್ಥಿತಿಯು ಉತ್ತಮವಾಗಿಯೇ ಉಳಿದಿರುವುದು. ಇನ್ನೂ ಬಾಗದ ದಾಟದ ನಿಷ್ಠಾವಂತ, ಕಾರ್ಯಶೀಲ ಮೆಹತಾಬರ ಸೇವೆಯನ್ನು ಬಿಟ್ಟು ಬಿಡಲು ಕಾಂಗ್ರೆಸು ಪಕ್ಷವು ಒಪ್ಪಲಿಲ್ಲ; ಸಶಕ್ತರ ಸೇವೆಯನ್ನು ಒಂದಲ್ಲ ಒಂದು ರೀತಿಯಿಂದ ಪಡೆದುಕೊಳ್ಳುವ ಉದ್ದೇಶದಿಂದ ಅವರನ್ನು ಎಳೆದುಕೊಂಡಿತು. ಒರಿಸ್ಸದ ಬಿಕ್ಕಟ್ಟಿನ ಪರಿಸ್ಥಿತಿಯುಲ್ಲಿ ಧೈರ್ಯಗೆಡದೆ ಮೆಹತಾಬರು ರಾಜ್ಯವನ್ನು ಸರಿದಾರಿಯಲ್ಲಿ ಮುಂದುವರಿಸಿದ್ದರು. ಚಾಣಾಕ್ಷತೆಗೆ ಹೆಸರಾದ ಇವರು ಕೇಂದ್ರದಲ್ಲಿಯೂ ಬಹಳಷ್ಟು ಪ್ರಭಾವ ಬೀರುವುದು ನಿಸ್ಸಂದೇಹ. ಉಪ ನಾಯಕನ ಸ್ಥಾನವೆಲ್ಲ ಟೊಪ್ಪೊಂದು ಮಹತ್ಪದವಾಗಿಲ್ಲವಾದರೂ ಅದನ್ನು ಡಾ| ಮೆಹತಾಬರು ಅಲಂಕರಿಸಿರುವುದು ಮಾತ್ರ ಮಹತ್ವಪೂರ್ಣವಾಗಿದೆ.

ಅಲ್ಜೀರಿಯಾ ಸ್ವತಂತ್ರ ರಾಯಿತು

(೩ನೇ ಪುಟದಿಂದ)

ಚಾರಕ್ಕೆ ತೊಂದರೆಯನ್ನು ಕೊಡುತಿದ್ದ ಸನುದ್ರಗಳ್ಳರನ್ನು ನಿಯಂತ್ರಣದಲ್ಲಿರಿಸಲು ಅಲ್ಜೀರಿಯಾವನ್ನು ತನ್ನ ಕೇಂದ್ರವನ್ನಾಗಿ ಮಾಡಿಕೊಳ್ಳಲು ಫ್ರೆಂಚ್ ಸೇನೆಯು ೧೩೦ ವರ್ಷಗಳಿಗೆ ಮೊದಲು ನುಗ್ಗಿತ್ತು. ಸ್ವತಂತ್ರ ಅಲ್ಜೀರಿಯಾವನ್ನು ಈಗ ಮನ್ನಿಸಿದ ಫ್ರೆಂಚ್ ಸರಕಾರವು ಅಲ್ಲಿನ ಆಡಳಿತೆಯನ್ನು ತಾತ್ಕಾಲಿಕ ಸರಕಾರಕ್ಕೆ ಒಪ್ಪಿಸಿದೆ.

"ಅಲ್ಜೀರಿಯಾದ ನಮ್ಮ ಸ್ನೇಹಿತರು ಸ್ವಾತಂತ್ರ್ಯಕ್ಕಾಗಿ ಕಾದಾಡಿ ಅದರಲ್ಲಿ ಗೆದ್ದರು. ನನಗಿದರಿಂದ ನಮ್ಮನಿಯುಂಟಾಗಿದೆ. ಅಲ್ಜೀರಿಯಾದ ಮತ್ತು ಆಫ್ರಿಕನರ ಸ್ವಾತಂತ್ರ್ಯ ಹೋರಾಟದಲ್ಲಿ ಭಾರತವು ಹಿಂದಿನಿಂದಲೂ ಸಹಾನುಭೂತಿಯನ್ನು ತೋರಿಸುತ್ತದೆ; ಆದುದರಿಂದಲೇ ಈ ಸಾಧನೆಯಿಂದ ನಾವು ಗಾಢ ಸಂತೋಷವನ್ನು ಅನುಭವಿಸುತ್ತೇವೆ" ಎಂಬ ಸ್ಪಧಾನಿ ನೆಹರುರವರ ಉದ್ಗಾರವು ಹಿಂದೆ ೬೫ ಕೋಟಿ ಭಾರತೀಯರ ಧ್ವನಿಯಿದೆ.

ಅಮೆರಿಕೆಯ ಅಧ್ಯಕ್ಷ ಜಾನ್ ಕೆನ್ನೆಡಿಯವರು ಒಂದು ಪ್ರಕಟಣೆಯನ್ನಿತ್ತು ಅದರಲ್ಲಿ 'ಮಾನವನಿಗೆ ಸಂಪೂರ್ಣ ಆತ್ಮ ಗೌರವ ದೊರಕಿಸಿಕೊಡುವ ದಿಶೆಯಲ್ಲಿ ಇಟ್ಟ ಈ ಮಹತ್ವದ ಹೆಜ್ಜೆಗೆ ಇಡಿಯ ಜಗತ್ತಿನ ಸಹಾನುಭೂತಿಯಿದೆ. ಎಂದು ಹೇಳಿರುವರು ಬ್ರಿಟನ್ನವು ಸ್ವತಂತ್ರ ಅಲ್ಜೀರಿಯಾಕ್ಕೆ ಈಗಾಗಲೇ ಮನ್ನಣೆ ನೀಡಿದೆ.

ಅಲ್ಜೀರಿಯಾದ ತಾತ್ಕಾಲಿಕ ಸರಕಾರದ ಪ್ರಧಾನಿ ಮಂತ್ರಿ ಶ್ರೀ ಬೆನ್ ಯುಸೆಫ್ ಬೆನ್ ಖೆಡ್ಡಾ ಆವರು ಟ್ಯುನೀಸಿಯಾದಲ್ಲಿದ್ದವರು. ಅಲ್ಜೀರ್ಸ್‌ಗೆ ಬಂದಿದ್ದಾರೆ; ಅವರೊಂದಿಗೆ ಅವರೆ ತಾತ್ಕಾಲಿಕ ಸರಕಾರದ ಇತರ ಮಂತ್ರಿಗಳೂ ಆಗಮಿಸಿದ್ದಾರೆ ಸಾರ್ವಭೌಮಾಧಿಕಾರವನ್ನು ಪಡೆದಿರುವ ಅಲ್ಜೀರಿಯಾದ ಜನರು ತಾವು ಈಗ ತೋರಿಸಿರುವ ಒಕ್ಕಟ್ಟಿನ ಮನೋಭಾವನೆಯನ್ನು ಮುಂದಕ್ಕೂ ಕಾಯ್ದುಕೊಂಡು ಹೋಗುವರೆಂದು ಎಲ್ಲರೂ ಬಯಸುತ್ತಾರೆ; ಏಕೆಂದರೆ, ಒಕ್ಕಟ್ಟಿನಲ್ಲಿ ಬಲವಿದೆಯೆಂಬುದು ಮೂರ್ಖನೂ ತಿಳಿದುಕೊಳ್ಳಬಹುದಾದ ಗಾದೆಯ ಮಾತು.

ಓದಲೇ ಬೇಕಾಗಿರುವ ನವೀನ ಪುಸ್ತಕಗಳು!

ಉಡುಪಿ ಕರ್ನಾಟಕ ಸಂಘದ ಮೂರು ಪ್ರಕಟಣೆಗಳು

೧. ಚಂದ್ರಲೋಕಕ್ಕೆ ಪ್ರಯಾಣ

ಲೇಖಕರು: ಯು. ರಾಘವೇಂದ್ರ ಆಚಾರ್ಯ, ಎಂ. ಎ.

ಆಧುನಿಕ ಪ್ರಪಂಚದ ಮಹತ್ತರವಾದ ಆಂದೋಲನಗಳು, ಪ್ರಪಂಚವನ್ನೆಲ್ಲಾ ಅಲುಗಾಡಿಸುತ್ತಿರುವ ಆರ್ಥಿಕ, ರಾಜಕೀಯ ಚಳುವಳಿಗಳು, ಅವುಗಳ ಹಿಂದಿರುವ ತತ್ವಗಳು. ಅವುಗಳಿಗೆ ಮಾನವನ ಪ್ರತಿಕ್ರಿಯೆ ಇವನ್ನೆಲ್ಲಾ ಗಮನಿಸಿ ರಚಿಸಿರುವ, ನಮ್ಮಲ್ಲಿ ವಿಚಾರಶಕ್ತಿ ಬೆಳೆಯಲು ನೆರವಾಗುವ ವೈಜ್ಞಾನಿಕ ಗ್ರಂಥ.

೨. ಸಾಮಾನ್ಯ ರೋಗಗಳು

ಲೇಖಕರು: ಡಾ| ಕೆ. ಎಲ್. ಏತಾಳ, ಎಂ. ಬಿ. ಬಿ. ಎಸ್.
ಉಡುಪಿ ನಗರ ಸಭಾಧ್ಯಕ್ಷರು.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಮಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಅತ್ಯುಪಯುಕ್ತ ಪುಸ್ತಕ.

೩. ಭೌತಿಕ ದರ್ಶನ

ಲೇಖಕರು: ಬಡೆಕ್ಕಿಲ ಕೃಷ್ಣ ಭಟ್ಟ, ಎಲ್‌ಎಲ್.ಬಿ.

ಸಜ್ಜನರ, ವಿದ್ವಜ್ಜನರೆ, ವಿಜ್ಞಾನಿಗಳ ಅಭಿಮತವನ್ನು ಸಂಗ್ರಹಿಸಿ ಬರೆದ ಭೌತಿಕ ದರ್ಶನದ ಸ್ಥೂಲ ಪರಿಚಯ.

ಪ್ರತಿಯೊಂದು ಪುಸ್ತಕದ ಬೆಲೆ ಬರೇ ಒಂದು ರೂಪಾಯಿ.
ರೂ ೩=೦೦ನ್ನು ಮನಿಯಾರ್ಡರ್ ಮಾಡಿದರೆ ಮೂರೂ ಪುಸ್ತಕಗಳನ್ನು ಬುಕ್ ಪೋಸ್ಟ್‌ನಿಂದ ಕಳಿಸಬಹುದು.
ಪುಸ್ತಕ ವ್ಯಾವಾರಿಗಳಿಗೆ ವಿಶೇಷ ಸವಲತ್ತುಗಳಿವೆ
ವಿಚಾರಿಸಿರಿ:
ನವಭಾರತ ಪುಸ್ತಕ ಭಂಡಾರ, ಉಡುಪಿ

ಮಹಾ ಸಾಧಕ

ರಮಣ ಮಹರ್ಷಿಯವರ ವಿಚಾರಧಾರೆ

ಅರುಣಾಚಲಂನಲ್ಲಿರುವ ರಮಣ ಮಹರ್ಷಿಯವರ ಆಶ್ರಮವು ಬಹು ಪ್ರಸಿದ್ಧವಾದುದು. ರಮಣ ಮಹರ್ಷಿಯವರು ಸಶರೀರ ಜೀವಿತವಿದ್ದ ದಿನಗಳಲ್ಲಿ ಅನೇಕಾನೇಕ ದೇಶೀಯ ಹಾಗೂ ವಿದೇಶೀಯ ಮಹನೀಯರು ಅವರನ್ನು ಕಾಣಲು ಬರುತ್ತಿದ್ದರು. ಯಾವುದಾದರೂ ಪ್ರಶ್ನೆಯನ್ನು ಅವರಿಗೆ ಕೇಳಿ ಉತ್ತರ ಪಡೆಯುವ ಕಂಬಲವಿದ್ದವರೂ ಅವರಲ್ಲಿದ್ದರು. ಆದರೆ ಪ್ರಶ್ನೆ ಕೇಳುವ ಇಚ್ಛೆವೇ ಉತ್ತರ ಪಡೆಯುವ ಅಗತ್ಯ ದರ್ಶಕರಿಗೆ ಬೀಳುತಿದ್ದಿಲ್ಲ. ಏಕೆಂದರೆ, ಮಹರ್ಷಿಯವರ ಸಾಕ್ಷಾತ್ ದರ್ಶನ ಮಾತ್ರದಿಂದಲೇ ಅದು ದೊರೆಯುತಿತ್ತು.

ಈ ಮಾತನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ. ಸಾಮಾನ್ಯವಾಗಿ ಮಹರ್ಷಿಯವರನ್ನು ಕಾಣಲು ಬರುತಿದ್ದವರು ಆತ್ಮಜ್ಞಾನ ಜಿಜ್ಞಾಸುಗಳು. ಅಂತರ್ಜ್ಞಾನ ಪ್ರಕಾಶದ ರೇಖೆಯು ಪುನೀತ ಪಡೆದವರಲ್ಲಿ ಮಾತ್ರ ಜಿಜ್ಞಾಸೆಯು ಉದಿಸುತ್ತದೆ. ಮಹರ್ಷಿಯವರ ಒಂದೆರಡು ಮಾತುಗಳು ಆ ಪ್ರಕಾಶವನ್ನು ಉಜ್ವಲಗೊಳಿಸುತ್ತವೆ; ಮತ್ತು ಆ ಅಂತಃ ಪ್ರಕಾಶದಲ್ಲಿಯೇ ಪ್ರಶ್ನಿಸುವವನು ಸಮಾಧಾನ ತಾಳುತ್ತಾನೆ.

ಪ್ರಶ್ನಕರು ಒಂದು ಕಾಗದದಲ್ಲಿ ತಮ್ಮ ಪ್ರಶ್ನೆಯನ್ನು ಬರೆದು ಕೊಡುತಿದ್ದರು. ಮಹರ್ಷಿಯವರ ಶಿಷ್ಯನು ಇದನ್ನು ಅವರ ಬಳಿಗೆ ಒಯ್ದು ಇಡುತಿದ್ದನು. ಅವರು ಕೂಡಲೇ ಉತ್ತರವೀಯುತಿದ್ದರು; ಅದನ್ನು ಶಿಷ್ಯನು ಓದಿ ಹೇಳುತಿದ್ದನು

ಒಮ್ಮೆ ಮಹರ್ಷಿಯವರೊಡನೆ ಒಂದು ಪ್ರಶ್ನೆ ಕೇಳಲಾಯಿತು: ವಿವಾಹಿತ ವ್ಯಕ್ತಿಯು ಆತ್ಮ ಸಾಕ್ಷಾತ್ಕಾರವನ್ನು ಮಾಡಿಕೊಳ್ಳಬಲ್ಲನೆ?

"ಕರ್ಮ ಸಂನ್ಯಾಸವನ್ನು ಸ್ವೀಕರಿಸುವುದೂ ಬಂಧನ. ಸಂನ್ಯಾಸದ ಪ್ರಯತ್ನ ಮಾಡುವುದು ಬಂಧನವಾಗುವುದು. ವೈರಾಗ್ಯಕ್ಕೆ ಪ್ರತಿಯಾಗಿ ರಾಗ ಬುದ್ಧಿಯೂ ದುಃಖಕ್ಕೆ ಹೇತುವಾಗುವುದು. ವಿವಾಹಿತ ನಿರಲಿ ಅವಿವಾಹಿತನಿರಲಿ; ಶಿಕ್ಷಿತನಿರಲಿ ಅಶಿಕ್ಷಿತನಿರಲಿ ಪ್ರತಿಯೊಬ್ಬನೂ ಆತ್ಮ ಸಾಕ್ಷಾತ್ಕಾರ ಮಾಡಿಕೊಳ್ಳಬಲ್ಲನು. ಏಕೆಂದರೆ, ಆತ್ಮವು ಇಲ್ಲಿಯೂ ಇದೆ; ಈಗಲೂ ಇದೆ; ಸ್ಥಾಯಿಯಾಗಿದೆ; ಸರ್ವವ್ಯಾಪಿಯಾಗಿದೆ. ಆತ್ಮವು ಈಗುಣಗಳಿಂದ ದೂರವಿರುತಿದ್ದರೆ, ಪ್ರಯಾಸಪಟ್ಟನಂತರವೇ ಅದು ಪ್ರಾಪ್ತವಾಗುವುದಾದರೆ, ಅದರ ಶೋಧನೆಯಲ್ಲಿ ಯಾವ ವೈಶಿಷ್ಟ್ಯವೂ ಇರುವುದಿಲ್ಲ. ಸ್ವಾಭಾವಿಕವಲ್ಲದುದು ಸ್ಥಾಯಿಯಾಗಲಾರದು.' ಎಂಬ ಉತ್ತರವು ಬಂತು.

ಎರಡನೆಯ ಪ್ರಶ್ನೆಯನ್ನು ಅವನು ಕೇಳಿದನು: "ಸಾಂಸಾರಿಕ ಕರ್ಮಗಳಲ್ಲಿ ನಿಮಗ್ನನಾದ ವ್ಯಕ್ತಿಯೂ ಸಮಾಧಿ ಸುಖವನ್ನು ಅನುಭವಿಸುವುದು ಸಂಭವನೀಯವೆ?" ಇದಕ್ಕೆ ಉತ್ತರ ರೂಪದಲ್ಲಿ ಮಹರ್ಷಿಯವರು ಹೇಳಿದರು: "ಖಂಡಿತಕ್ಕೂ ಹೌದು. ನಾವು ಸಾಂಸಾರಿಕ ಕಾರ್ಯವೆಸಗುತ್ತಿದ್ದರೂ 'ನಾನು ಯಾರು' ಎಂಬುದನ್ನು ಸ್ಮರಿಸಿಕೊಂಡರೆ, ನಮಗೆ ಕಾರ್ಯ ಬಂಧನವಿರುವುದಿಲ್ಲ; ಸ್ವಯಂ ಆಗುತ್ತ ಇರುವುದು."

"ಆತ್ಮ ಜ್ಞಾನಗಳಿಸಲು ಕರ್ಮ ಸಂನ್ಯಾಸವನ್ನು ಸ್ವೀಕರಿಸುವುದು ಸಹಾಯಕವೆನಿಸುವುದೆ?" ಎಂಬ ಇನ್ನೊಂದು ಪ್ರಶ್ನೆಯನ್ನು ಅವರಿಗೆ ಕೇಳಿದರು. ಇದಕ್ಕೆ ಈ ರೀತಿಯಲ್ಲಿ ಮಹರ್ಷಿಗಳು ಉತ್ತರಿಸಿದರು: "ನಮ್ಮ ಅದೃಷ್ಟದಲ್ಲಿ ಒಂದು ಕಾರ್ಯವನ್ನು ಮಾಡಬಾರದೆಂದಿದ್ದರೆ, ಅದೆಷ್ಟು ಪ್ರಯತ್ನ ನಡೆಸಿದರೂ ಅದು ಪೂರವಾಗಲಾಂದು. ಮಾಡಬಹುದೆಂದಿದ್ದರೆ, ನಾವು ಅದರಿಂದ ಎಂದಿಗೂ ದೂರವುಳಿಯಲಾರೆವು. ಆದುದರಿಂದ ಮಾಡುವೆನು, ಮಾಡಲಾರೆನು ಎಂಬ ಪ್ರಶ್ನೆಯನ್ನು ಪರಮಾತ್ಮನ ಮೇಲೆ ಬಿಟ್ಟು ಬಿಟ್ಟು ನಾವು ಮುಂದುವರಿಯಬೇಕು. ನಾವು ನಮ್ಮ ಇಚ್ಛಾನುಸಾರ ಯಾವ ಕೆಲಸವನ್ನೂ ಸ್ವೀಕರಿಸಲಾರೆವು, ಪರಿತ್ಯಾಗ ಮಾಡಲಾರೆವು."

ಇದೇ ವಿಷಯವನ್ನು ಒಬ್ಬ ಭಕ್ತನಿಗೆ ವಿವರಿಸುತ್ತ ಮಹರ್ಷಿಗಳು ಒಮ್ಮೆ ಹೇಳಿದ್ದರು: "ನೀನು ರೇಲ್ವೆಯಲ್ಲಿ ಹೊತ್ತೆ ಮಾಡುವಾಗ ನಿನ್ನ ಒಡವೆ ವಸ್ತುಗಳನ್ನು ತಲೆಯ ಮೇಲೆ ಹೊತ್ತುಕೊಳ್ಳುವುದಿಲ್ಲ; ರೈಲ್ವೆ ಡಬ್ಬಿಯಲ್ಲಿಯೇ ಎನೆದು ನಿಶ್ಚಿಂತನಾಗಿ ಪ್ರಯಾಣಿಸುತ್ತಿ. ಹಾಗಿರುವಾಗ, ಪ್ರತಿದಿನದ ಕಾರ್ಯಭಾರಗಳ ಚಿಂತೆಯನ್ನು ಪರಮ ಶಕ್ತಿಯ ಕೈಗಳಿಗೆ ಒಪ್ಪಿಸಿ ನೀನು ನಿಶ್ಚಿಂತನಾಗಬಾರದೇಕೆ?"

ಮಹರ್ಷಿಗಳು ಬಾಯ್ದೆರೆಯಾಗಿಯೋ ಬರವಣಿಗೆಯಲ್ಲಾದರೋ ದರ್ಶಕರ ಪ್ರಶ್ನೆಗಳಿಗೆ ಉತ್ತರವೀಯುತಿದ್ದರು. ಆದರೆ ಹೆಚ್ಚಾಗಿ ಅವರು ಮೌನಿಗಳಾಗಿರುತಿದ್ದರು. ಪ್ರಸಿದ್ಧ ಲೇಖಕ ಸಮರಸೇಟ ಮೊಮಾರವೊಡನೆ ಅವರು "ಮೌನವೇ ಮಾತುಕತೆಯ ಸರ್ವ ಶ್ರೇಷ್ಠ ವಿಧಾನ" ವೆಂದಿದ್ದರು. ಅವರ ಮೌನ ಭಾಷಣವಾದರೂ ನಿಜವಾದ ಸಾಧಕರಿಗೆ ತಮ್ಮ ಸ್ವಂತ ಅನುಭವಗಳ ಸಂಶೋಧನೆ ಮತ್ತು ಸೂಕ್ಷ್ಮ ನಿರೀಕ್ಷಣೆ ಮಾಡುವಲ್ಲಿ ಹಾಗೂ ತಮ್ಮ ಸ್ವರೂಪ ಶೋಧ ಮಾಡುವಲ್ಲಿ ಸಹಾಯಕವಾಗುತಿತ್ತು.

ರಮಣ ಮಹರ್ಷಿಯವರ ಸಂದರ್ಶನ ಮಾಡಿದ ಪ್ರಪ್ರಥಮ ಆಂಗ್ಲ ಸಾಧಕನು ತನ್ನ ಅನುಭವಗಳನ್ನು ವಿವರಿಸುತ್ತ ಹೀಗೆ ಹೇಳಿದ್ದಾನೆ: "ಅವರ ಬಳಿಗೆ ಹೋದ ನಾವು ಅಲ್ಲಿ ಬಹು ಸಮಯ ಕುಳಿತುಬಿಟ್ಟೆವು. ನಾವು ಶಾಂತರಿದ್ದೆವು. ನನಗೆ ನನ್ನ ಶರೀರದಿಂದ ನಾನು ಹೊರಗಿರುವಂತೆ ಭಾಸವಾಯಿತು. ಅರ್ಧ ತಾಸು ನಾವು ಮಹರ್ಷಿಯವರ ಕಣ್ಣುಗಳನ್ನೇ ನೋಡುತ್ತ ಉಳಿದೆವು. ಆ ನಯನಗಳ ಆಳವಾದ ಧ್ವನಿಯ ಅಭಿವ್ಯಕ್ತಿಯಲ್ಲಿ ಯಾವ ಪರಿವರ್ತನೆಯೂ ಗೋಚರಿಸಲಿಲ್ಲ. 'ಶರೀರವು ಆತ್ಮದ ಪವಿತ್ರ ನಿವಾಸ ಸ್ಥಾನ'ವೆಂಬ ಆಂಗ್ಲ ಗಾದೆಯು ನೆನಪು ನನಗಾಯಿತು. ಆ ವ್ಯಕ್ತಿಯ ಶರೀರ ವ್ಯಕ್ತಿಯಲ್ಲ, ಶರೀರವು ಪರಮಾತ್ಮನನ್ನು ವ್ಯಕ್ತಗೊಳಿಸುವ ಒಂದು ಸಾಧನ ಮಾತ್ರ; ಒಂದು ನಿರ್ಜೀವ ಅಂಗಿ; ಈ ಅಂಗಿಯನ್ನು ಚೀರಿ, ಪರಮಾತ್ಮ ತೀವ್ರ ರೂಪದಲ್ಲಿ ಪ್ರಕಾಶಮಾನನಾಗುತ್ತಾನೆ ಎಂದು ನನಗೆ ತೋರಿತು, ಆ ಗಳಿಗೆಯಲ್ಲಿ ನನ್ನಲ್ಲಿ ಯಾವ ಯಾವ ಭಾವಗಳು ಉದಿಸಿದುವು ಅವನ್ನು ಬರೆಯುವುದು ಬಹಳ ಕಠಿಣವಾಗಿದೆ."

ಮಹರ್ಷಿಯವರ ಮೌನವು ಉದ್ದೇಶರಹಿತವಿರಲಿಲ್ಲ; ಅದರಲ್ಲಿ ಪ್ರತ್ಯಕ್ಷ ಆಧ್ಯಾತ್ಮಿಕ ಪ್ರಭಾವವಿತ್ತು. ಪ್ರತ್ಯೇಕ ವ್ಯಕ್ತಿಯ ಬುದ್ಧಿಯು ತನ್ನ ಶಕ್ತಿಗನುಗುಣವಾಗಿ ಇದನ್ನು ಗ್ರಹಿಸಿಕೊಳ್ಳುತ್ತಿತ್ತು. ಬೌದ್ಧಿಕರ ಅಶಾಂತ ಮೆದುಳುಗಳಲ್ಲಿಯಲ್ಲದೆ ಸರಳ ವ್ಯಕ್ತಿಗಳ ಮೇಲೆಯೂ ಅವರ ಮೌನವು ಇದೇ ಪ್ರಭಾವವನ್ನು ಬೀರುತಿತ್ತು. ಮಹರ್ಷಿಯವರ ಆಶ್ರಮದಲ್ಲಿ ಕೆಲದಿನ ತಂಗಿದ್ದ ಮಹನೀಯರೊಬ್ಬರು ತಮ್ಮ ಅನುಭವವನ್ನು ವಿವರಿಸಿದ ಕ್ರಮ ನೋಡಿರಿ.

"ಮೌನವು ಸದಾ ಕಾಲ ನಡೆಯುವ ಮಾತುಕತೆ. ವಾಣಿ ಮತ್ತು ವಿಚಾರಗಳಿಂದ ಪರವಾದುದು ಮೌನ. ಒಂದು ವಿಧದ ಮಾನಸಿಕ ಕ್ರಿಯಾಹೀನ ಧ್ಯಾನವಿದು. ಮನಸ್ಸನ್ನು ವಶದಲ್ಲಿರಿಸುವುದೇ ಧ್ಯಾನ. ಮಾತಾಡುವುದರಿಂದ ಧ್ಯಾನ ಭಂಗವಾಗುವುದು."

"ಜಗತ್ತು ಕೇವಲ ನಿಮ್ಮ ಮನಸ್ಸಿನಲ್ಲಿ ನೆಲಿಗೆದೆ. ಜಗತ್ತು ಸದಾ 'ನಾನು ಇಂಥವನು, ಎಂದು ಹೇಳುತ್ತ ಇರುವುದಿಲ್ಲ. ಹಾಗಿರುತ್ತಿದ್ದರೆ, ಅದು ಸದಾ ಕಾಲವೂ ಉಳಿಯುತಿತ್ತು. ಅದು ಸತ್ಯರಹಿತವಾಗಿರುವುದರಿಂದ ಆತ್ಮವು ಅದನ್ನು ಸುಲಭದಲ್ಲಿ ಗೆದ್ದುಕೊಳ್ಳಬಲ್ಲದು. ಆತ್ಮವೇ ನಿತ್ಯವಾದುದು."

"ಆತ್ಮಾನುಭೂತಿಯು ಹೊರಗಿನ ವಸ್ತುವಲ್ಲ ಅದು ಪ್ರಾರಂಭದಿಂದಲೂ ಇರುತ್ತದೆ. 'ನಾನಿನ್ನೂ ಆತ್ಮಾನುಭೂತಿಯನ್ನು ಗಳಿಸಿಲ್ಲ'ವೆಂಬ ಆಶಯದ ಭಾವವನ್ನು ಮನಸ್ಸಿನಿಂದ ದೂರೀಕರಿಸಬೇಕು. ನಿಶ್ಚಲತೆ ಅಥವಾ ಚರಮ ಶಾಂತಿಯೇ ಆತ್ಮಾನುಭೂತಿ. ಅನಾತ್ಮವು ನಾಶವಾದಾಗ ವಿಶುದ್ಧ ಆತ್ಮವು ಜಾಗ್ರತವಾಗುತ್ತದೆ."

"ಜ್ಞಾನಿಯು ಅವಿನಾಶಿಯಾದ ಆತ್ಮರೂಪ ವಿಷಯದಲ್ಲಿ ಯಾವಾಗಲೂ ಜಾಗ್ರತನಾಗಿರುತ್ತಾನೆ. ಆತನಿಗೆ ಜಗತ್ತು ಸ್ವಪ್ನದಂತೆ ತೋರಿ ಬರುತ್ತದೆ; ಇದರಿಂದ ವನು ನಿತ್ಯ ಸ್ವಪ್ನಾವಸ್ಥೆಯಲ್ಲಿರುತ್ತಾನೆ. ದೇಹಾದಿಗಳ ಎಚ್ಚರಿಕೆಯಿಂದಾತ ದೂರನಾಗಿರುವುದರಿಂದ ಅವನು ಸದಾ ಸುಷುಪ್ತಿಯ ಅವಸ್ಥೆಯಲ್ಲಿರುತ್ತಾನೆ."

ಮಹರ್ಷಿಯವರ ಆಶ್ರಮಕ್ಕೆ ದೇಶವಿದೇಶಗಳಿಂದ ವಿಶಿಷ್ಟ ವ್ಯಕ್ತಿಗಳು ಬರುತ್ತಿದ್ದರು; ಆದರೆ, ಯಾರೊಡನೆ ಯಾರಾದರೂ ಅವರು ವಿಶೇಷವಾಗಿ ಮಾತಾಡುತ್ತಿರಲಿಲ್ಲ. ರಮಣ ಮಹರ್ಷಿಯವರು ಇಂದು ಅಶರೀರಿಯೆನಿಸಿದರೂ ಅವರ ಲಿದಿವ್ಯ ಮೂರ್ತಿ ಯೆಲ್ಲರನ್ನು ದಂಗುಬಡಿಸುತ್ತದೆ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಎ.ಎಮ್
ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನಿಮ್ಮಿಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ। ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ, ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.—ಅಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0 =25 N P ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕಗಳಿಸಲಾಗುವುದು ನಿಮ್ಮೂರ ಪುಸ್ತಕ ವ್ಯಾಪಾರಿಗಳಿಗೆ ಸಿಗದಿದ್ದರೆ ನಮಗೆ ಬರೆಯಿರಿ.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಸಮಾಜಕ್ಕೆ ಶರಣು ಬಂದರೆ....?

(೨ನೇ ಪುಟದಿಂದ)

ಸದಿಂದ ಉಬ್ಬಿದಳು, ಪುನಃ ತಂದೆಯ ನುಡಿ ಎಚ್ಚರಿಸಿತು. "ನೋಡು ಲತಾ, ನನ್ನ ಭವಿಷ್ಯ ಮುಗಿದ ಹಾಗೆಯೇ. ನನ್ನನ್ನು ಒಬ್ಬ ಹೆಳ್ಳಿಯ ಮುದುಕ ಮುಕ್ಕ ನಿಗೇ ಕೊಡುವುದೆಂತ ನಿಶ್ಚೈಸಿ ಬಂದಿದ್ದಾರೆ. ನೀನೇ ಮುಂದೆ ಹೇಳು." ಸುಲೋಚನಾ ಉಸುರಿದಳು.

"ನಿನಗಲ್ಲ ಒಪ್ಪಿಗೆ! ಆದರೆ ನಾನೊಂದು ಮಾತನ್ನು ಹೇಳುತ್ತೇನೆ. ಅದೂ ಸಹಾ ನಾನನ್ನುವ ರೀತಿಯಲ್ಲ. ನನ್ನ ತಂದೆ ನನ್ನ ಮದುವೆಗಾಗಿ ಹಣವಿಲ್ಲದೇ ಸೋತಿದ್ದಾರೆ. ನನ್ನನ್ನು ಅವರು ಒಪ್ಪಿದರೆ ನಾನೇ ಅವರ ಸಂಸಾರವನ್ನು ಹೊರುತ್ತೇನೆ" ಯಾವುದೋ ಧೈರ್ಯ ತಂದು ಗೆಳತಿಯ ಮುಖವನ್ನು ನೋಡಿದಳು ಲತಾ.

ಸುಲೋಚನಾ ಎಲ್ಲಿಲ್ಲದ ಉತ್ತರವನ್ನು ಕೇಳಿ ದಿಙ್ಮೂಢಳಾದಳು. ಆಕಾಶದ ನಕ್ಷತ್ರ ಬೀಳುವಂತೆ ಹೃದಯ ಮಿಂಚಿತು. ಲತೆ ಗೆಳತಿಯ ಜೀವದ—ಹೃದಯದ ಭಾರ ಇಳಿಯಿತಲ್ಲಾ ಎಂದು ಹೆಚ್ಚಿತಳಾದಳು.

ಗಂಟೆ ಹತ್ತು ಮೀರಿತ್ತು. ಸುಲೋಚನಾ ಲತಾ ಬಾಗಿಲಿಕ್ಕೆ ಕೋಣೆಯಲ್ಲಿ ಮಲಗಿದರು. ಸುಲೋಚನೆಗೆ ಭೀಕರ ಭಯಂಕರ ಸ್ವಪ್ನ ಬಿದ್ದಿತು. ಅದನ್ನೆಲ್ಲಾ ತುಚ್ಛೀಕರಿಸಿ ಮುಂದಿನ ಸುಖ - ಪ್ರಿನ್ಸಿಪಾಲರ ಮಗ—ಅವರ ಸಖಮಯ ಬಾಳಿನ ಗೋಪುರ ಕಟ್ಟಿದಳು.

ಲತಾ ಮನನಲ್ಲಿಯೇ ಅವಳ ಚಲನವಲನಗಳನ್ನು ಪರೀಕ್ಷಿಸಿದಳು. ಸುಲೋಚನೆಯ ಹೃದಯ ಪರಿವರ್ತನೆಯಾಗಿದೆ ಎಂದು ತಿಳಿಯಲು ಹೆಚ್ಚು ನಿಮಿಷ ಬೇಕಾಗಲಿಲ್ಲ. ಲತಾ ತಂದೆಗೆ ವಿಚಾರ ತಿಳಿಸಲು ಹೋದಳು.

o o o

ಸುಲೋಚನಾ ಲತೆಗೆ ಕಾಣಬಾದಳು. ತಂದೆಯೊಡನೆ ವಿಚಾರಿಸಿದರೂ ಉತ್ತರ ಸೂಚಿಸಲಿಲ್ಲ.

ಲತಾ ಕಾಮನ ಹಬ್ಬಕ್ಕೆಂದು ಊರಿಗೆ ಬಂದಿದ್ದವಳು ಸುಲೋಚನೆಯ ಮುಖ ಕಾಣದೆ ಹಾಗೆಯೇ ತನ್ನೂರಿಗೆ ಮರಳಿದ್ದಳು. ತಾಯಿಯನ್ನೂ ತಂಗಿಯನ್ನೂ ಅಲ್ಲಿಗೆ ಕರೆಸಿದ್ದಳು.

ಸುಲೋಚನಾ ಬೇಡವಾದವಳಾಗಿ ಇಂದಿಗೆ ಒಂದೆರಡು ವರ್ಷವಾಗಿದ್ದರೂ ಗೆಳತಿ ದೊರೆಯಲಿಲ್ಲ

'ಅಪ್ಪ! ನನ್ನನ್ನು ಲತಾ ವಿಚಾರಿಸಿದಳೇ?' ಸುಲೋಚನಾ ಬೆರಗು ಗಣ್ಣಿಂದ ಕಿಟಕಿಯಲ್ಲಿ ಕಣ್ಣಿಟ್ಟು ರಸ್ತೆಯನ್ನು ದಿಟ್ಟಿಸಿ ನೋಡಿದಳು.

'ಹೌದು, ಬಂದಿದ್ದಳಲ್ಲ ನಿನ್ನೆ. ನಿನ್ನನ್ನು ಕೇಳಿ ಬಿರುಸಿಂದ ಹೊರಟೇ ಹೋದಳು' ಯಾವುದೋ ರೀತಿಯ ಸ್ವರದಲ್ಲಿ ನುಡಿದರು ತಂದೆ.

ದುಃಖಾಕ್ರಾಂತಳಾಗಿ ಸುಲೋಚನಾ — ಅಪ್ಪಾ! ಅವಳು ಜೀವನ್ಮರಣ ಗೆಳತಿ, ಅವಳು ನನ್ನ ಪ್ರೇಮ ಪಾಶವನ್ನು ಕೂಡಿಸಿದ ಗೆಳತಿ! ಕೇಳಲಿಕ್ಕೆ ತಂದೆ ಅಲ್ಲಿ ಇರಲಿಲ್ಲ.

ಎಷ್ಟು ಹೊತ್ತು ಕಳೆದಿದ್ದೆಲೋ ರಸ್ತೆಯತ್ತ ಮುಖ ಮಾಡಿ. ಅವಳ ಗೆಳತಿ ಬರಲಿಲ್ಲ—ಹಾಗೆಯೇ ನೋಡುತ್ತಿದ್ದಂತೆ ಲತೆಯ ತಂಗಿ ಸುಶೀಲಾ ಬಂದು ಮನೆಯ ಮುಂದೆ ನಿಂತಳು. ಪ್ರೀತ್ಯಾದರದ ನುಡಿಯಲ್ಲಿ ಕೇಳಿದಳು— ಏನು ಬಂದೆ ಸುಶೀ! ಎನ್ನುತ್ತ ರಸ್ತೆಗೆ ದಾವಿಸಿದಳು ಸುಲೋಚನಾ.

ಸುಕ್ಕುಗಟ್ಟಲು ತೊಡಗಿದ್ದ ಮುಖ. ಮುಖಕ್ಕೆ ಮಾಂಗಲ್ಯವಿಲ್ಲದ, ಡೊವು ಮುಡಿಯದ ಕೇಶರಾಶಿ. ಉಬ್ಬಿದ್ದ ಅಚ್ಚ ಕೆಂಪೊತ್ತುವ ಸೀರೆ ಬಿಳಿ ಬ್ಲೌಸು— ಸುಶೀಲನ ಎದೆಯನ್ನು ಇರಿಯಿತು.

'ನೀವು ನಮ್ಮ ಮನೆಗೆ ಬರಬೇಕಂತೆ!' ಉಸಿರಿದ ಸುಶೀಲ ನಿಲ್ಲದೇ ಓಡಿದಳು.

ಸುಲೋಚನಾ ಹೋಗಲಾರದವಳಾಗಿ ನೊಂದು, ಗೆಳತಿಯ ಮಾತನ್ನು ಅಲ್ಲಗಳೆಯಲಾರದವಳಾಗಿ ಆ ಉಡಿಗೆಯಲ್ಲಿಯೇ ಹೊರಟಳು.

ಲತಾ ಕಿಟಕಿಯಿಂದಲೇ ಸ್ವಾಗತ ಬಯಸಿದಳು. ಎಂದೂ ಹೊರ ಹೊರಡದ ಸುಲೋಚನಾ ಇಂದು ಎಲ್ಲರ ಮನಸ್ಸಿಗೂ ಬಂದಳು. ಒಳಹೊಕ್ಕು ಲತೆಯನ್ನು ನೋಡಿ ಹೆದರಿದಳು. ಲತಾ ಅವಳನ್ನು ಆಲಿಂಗಿಸಿ, "ಸುಲೋಚನಾ—ನನ್ನ ಬಾಳು ಮೊನ್ನೆ ಬರಿದಾಯ್ತು. ಯಾವುದೊ ಕಾಹಿಲೆಯಿಂದ ಅವರು ಮುಕ್ತರಾದರು. ಆಸ್ತಿಗಳನ್ನು ಯಾರೊ ಕಸಿದು ಕೊಂಡೊಯ್ದರು. ಇನ್ನು ನನ್ನೀ ಬಾಳನ್ನು ಸಾಗಿಸಲು, ತಾಯಿಯನ್ನು ಪೋಷಿಸಲು ದಾರಿ ಕಾಣಲಾರದವಳಾಗಿದ್ದೇನೆ" ಎಂದಳು.

ಸುಲೋಚನಾ ಬ್ರಹ್ಮನು ಬರೆದ ಹಣೆಬರಹವನ್ನು ನಿಂದಿಸಿದಳು. 'ಅಕ್ಕಾ, ನನ್ನ ಜೀವನವನ್ನು ಸಾಗಿಸಲು ನೀನು ಆ ರೀತಿ ಗೈದೆ. ಹಾಗಿದ್ದರೂ ನನ್ನ ಬಾಳು ಬರಿದು...!"

ಲತಾ ಕಣ್ಣೆವೆ ಮುಚ್ಚದೇ ಕುಳಿತು ಕೇಳಿದಳು ಹಾಗೂ ತನ್ನ ಕಥೆಯನ್ನೂ ತಿಳಿಸಿದಳು. ... ಮುಂದಿನ ದಾರಿ?.... ಹೊಳೆಯಲಿಲ್ಲ.

ಸುಲೋಚನಾ ಕೇಳಿದಳು, 'ಲತಾ ಮುಂದಿನ ದಾರಿ ನನಗಿಲ್ಲ ಜಗದಲ್ಲಿ! ಅದು ಸಮಾಜದ ನಿಯಮ. ಅದನ್ನು ಮೀರಿ ಮುನ್ನಡೆಯಲು ದಾರಿಯಿಲ್ಲ."

ಲತಾ ಕುರ್ಚಿಯ ಮಗ್ಗುಲಿನ ದಿಂಡಿಗೆ ಆತು ಕುಳಿತು ಯಾವುದನ್ನೋ ಆಲೋಚಿಸಿ ನುಡಿದಳು,

"ಸುಲೋಚನಾ ವಿಧವಾ ವಿವಾಹ ನಮ್ಮನ್ನು ಬಿಡದಿದ್ದರೆ...."

"ಹಾಂ! ವಿಧವಾ ವಿವಾಹ ನಮ್ಮಿಂದ ಸಾಧ್ಯವಿಲ್ಲ. ಸಾಧಿಸಿದರೂ ಜಯಿಸುವುದು ಆಗುವುದಿಲ್ಲ ಬೇಡ! ನಿನಗೆ ತಂದೆಯಿದ್ದಾರೆ, ನನಗೂ ಇದ್ದಾರೆ. ಹೇಗಾದರೂ ಭಾರವಾಗಿ ಜೀವಿಸೋಣ."

ಭಾರವಾದ ಮಾತನ್ನು ಸುಲೋಚನಾ ಅಂದಳು;

"ಸಮ್ಮನಿರು ಸುಲೂ, ನಿನಗಿಲ್ಲವೇ ಆಸೆ, ಪುತ್ರರನ್ನು ಪಡೆಯುವ ಏನೋ ವಿಧದ ಬಯಕೆ?"

"ಇದೆ. ಆದರೆ ವಿಧಿ ನಮ್ಮನ್ನು ಅಡ್ಡೆನಿಸಿ, ಅದನ್ನು ತಿಳಿದುಕೊ. ಇಲ್ಲವಾಗಿದ್ದರೆ ನನ್ನವರಿಗೆ ಏನಾಯ್ತು? ನಿನ್ನವರಿಗೆ ಆದದ್ದೇನು?"

'ಬೇಡ, ಇನ್ನೊಮ್ಮೆ ನಿನ್ನನ್ನೇ ಕರೆದುಕೊಂಡು ಚರ್ಚ್‌ಗೆಳಿಯುತ್ತೇನೆ. ಸುಶೀಲಾ ಆವರಿಗೆ ಕಾಫಿ ತೆಕೊಂಡು ಬಾ!' ಲತಾ ತಂಗಿಯನ್ನು ಕೂಗಿದಳು.

'ಬೇಡ! ಕಾಫಿಯನ್ನು ಕುಡಿಯುವುದು ನಾನು ಬಿಟ್ಟಿದ್ದೇನೆ" ಮುಂದೆ ಹೇಳುವಾಗಲೇ ಲತಾ ನಕ್ಕಳು.

"ಅಂದರೆ ನಿನಗರ್ಥವಾಯಿತೇ?"— ಸುಲೂ ಕೇಳಿದಳು.

'ಅರ್ಥವಾಗದೇ ಏನು? ಅಷ್ಟು ಹೆದರುವುದು ತರವಲ್ಲ. ನಿನ್ನ ಜೀವವನ್ನು ನಾನು ಎತ್ತಿ ಹಿಡಿದಿದ್ದವಳು. ಇಂದು ನೀನು ವ್ಯಸನ ಪಡುವುದು ಬೇಡ.' ಮುಂದಿನ ಶಬ್ದ ಕೇಳಿಸಲಿಲ್ಲ! ಸುಲೋಚನಾ ಬರುತ್ತೇನೆಂದವಳೇ ಹೊಟಿದ್ದಳು.

ದಿನವೆರಡು ದಿನ ಉರುಳಿದವು. ಲತಾ ವೈದ್ಯಾನಿನ ದಾರಿಯನ್ನು ಹಿಡಿದು ಆವಾಗಲೇ ಒಂದರಗಳಿಗೆ ಕಳೆದಿತ್ತು. ವೈದ್ಯಾನಿನ ಮುರುಕು ಮೂಲೆಯಲ್ಲಿ ಕುಳಿತು ಲತಾ ನಾನು ಕಟ್ಟಿದ ಪುನಃ ಬಾಳನ್ನು ಸುಗಮವಾಗಿ ಸಾಗಿಸಲಿಕ್ಕೆ ತೊಡಗಿದ್ದು, ಅಲ್ಲದೆ ಸುಲೋಚನೆಗೆ ಮಂದಟ್ಟು ಮಾಡಿದಳು.

'ಅದು ಸಾಧ್ಯವಿಲ್ಲ ನಿನಗೆ ಅದು ಸರಿ ಕಂಡರೂ ನನಗದು ಸರಿ ತೋರದು, ನಮ್ಮ ಊರೊಳಗೆ ಸಮಾಜದಲ್ಲಿ ನನ್ನ ತಲೆಯೆತ್ತಿ ತಿರುಗ ಬೇಡವೆ? ಅದಕ್ಕೆಲ್ಲಾ ಉತ್ತರವೆಲ್ಲಿಂದ?' ಸುಲೋಚನ ಅವಳ ಮಾತನ್ನು ಧಿಕ್ಕರಿಸಿ ನುಡಿದಳು.

ಲತಾ ಎಲ್ಲ ವಿವೇಚಿಸಿ ನುಡಿದ ಮಾತು ಸುಲೋಚನೆಗೆ ಸರಿ ಕಂಡಿರಲಿಲ್ಲ. 'ಲತಾ ನನಗದು ಇಷ್ಟವಿಲ್ಲ.'

ಸುಲೋಚನಾ ದಿಟ್ಟಿಸಿ ಸುತ್ತಲೂ ನೋಡಿದಳು. ನವದಂಪತಿಗಳು ವಾಯುವಿಹಾರಕ್ಕೆಂದು ಅಲ್ಲಲ್ಲಿ ಕಲೆತು ಮಾತನಾಡುತ್ತಿದ್ದರು. ಎಲ್ಲವೂ ವಿಚಿತ್ರವಾದ ಜಗತ್ತು!

ಲತಾ ಅಂದದ್ದು ಬೇಡವಾದ ಮಾತು. ಅದು 'ಹೂಳೆಗಾರಿಕೆ' ಎಂದು ಮತ್ತೊಮ್ಮೆ ಹೇಳಬೇಕೆ ಸುಲೋಚನಾ ನಕ್ಕಳು. ಪ್ರತಿಧ್ವನಿಸಿತು ದಂಪತಿಗಳ ಕಿಲಕಿಲ ನಗೆ. ಪುನಃ ತಿರುಗಿ ನೋಡಿದಳು.

ಸುಲೋಚನಾ ಕತ್ತಲೆಯಾದದನ್ನು ನೋಡಿ ಬೇಗನೆ ಮನೆಯ ಕಡೆ ಹೊರಟಳು.

ಕನಸು....ಸುಲೋಚನೆಯನ್ನು ಭ್ರಮೆಗೊಳಿಸಿತು. ಕೈಚಾಚಿ ಕರೆಯುತ್ತಿರುವ ಆವನೋ ಅವಳ ದೃಷ್ಟಿಯಲ್ಲಿ ಹಾಯ್ದು ಅವುದೋ ಸುಖ....ಅವಳನ್ನು ಪ್ರೇರೇಪಿಸಿತು.... ಅದಕ್ಕೆ ಮಾರುಹೋದ ಸುಲೋಚನಾ ಲತೆಯ ದಾರಿಗಾಗಿ ಕಾಯ್ದಳು.

o o o

ಪೋಸ್ಟ್‌ಮೇನ್ ತಂದಿತ್ತ ಕಾಗದ ಎಚ್ಚರಿಸಿತು. ತಂದೆ ಓದಲುದ್ಯುಕ್ತರಾದದರು: ಸುಲೋಚನಾ ಕೈಯಿಂದ ಕಸಿದು ಕೋಣೆಗೋಡಿದಳು.

ಪ್ರಿಯ ಸುಲೋಚನಾ,

ನನ್ನ ಬಾಳು ಹಗುರವಾಗಿದೆ, ನನ್ನ ಮಾತಿಗೆ ನಿನ್ನ ಉತ್ತರ ನಾನು ಕನಸಿನಲ್ಲಿಯೂ ಬಯಸದಿದ್ದುದು. ಆಗಲಿ ನಾನೀಗ ಇನ್ನೊಮ್ಮೆ ನಿನಗಾಗಿ ಕಾದು ಕುಳಿತಿರುವೆ, ಈಗ ನನ್ನ ದಾರಿಯನ್ನು ತುಳಿಯಲು ಹವಣಿಸುವೆ ಎಂದು ಬಗೆದಿದ್ದೇನೆ. ನಾನು ಜೀವದಿಂದಿರುವ ಪರ್ಯಂತ ನಿನ್ನ ಒಳಿತನ್ನೇ ಹಾರೈಸುತ್ತೇನೆ, ಬರುವಿಯಲ್ಲ. ಒಳ್ಳೆಯವರು ಅವರೂ ಸಹಾ ಮೊದಲಿನ ಹೆಂಡತಿಯ ವಿರಹ ತಾಪದಲ್ಲಿದ್ದಾರೆ, ಅವರನ್ನು ಉಳಿಸಿ, ನಿನ್ನ ಜೀವನವನ್ನು ಸಾಗಿಸಿಕೊ,

ನಿನ್ನ ಒಳಿತಿಗಾಗಿ ಬಯಸುವ,

—ಲತಾ.

ಕಾಗದ ಓದಿದಳು; ಹತ್ತಾರು ಬಾರಿ ಬೇಕಾದ ಉಡುಪನ್ನು ವಿವಾಹದಲ್ಲಿ ತಂದಿದ್ದ ಸೀರೆಯನ್ನೂ ಚಿನ್ನವನ್ನೂ ಚೀಲಕ್ಕೆ ತುರುಕಿಸಿ ತಂದೆತಾಯಿಗಳನ್ನು ಮನಸಾರೆ ವಂದಿಸಿ, ಸುಲೋಚನೆ ಹೊರಬೇ ಹೊರಟಳು.

— —

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ರೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯುತ್ತಮವೆಂದು ಪರಿಗಣಿಸಿರುವರು ಪ್ರತಿಯೊಬ್ಬ ರೇವಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿ ಹೊಂದುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ

ವಿಜಯ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್:— ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,

Estd. 1931.
Phone No. 240.

— ಮಂಗಳೂರು—3

ಹಾರ್ಮೋನಿಯಮ್ ಕಲಿಯುವವರಿಗೆ ಅತ್ಯುತ್ತಮ ಸಂಗೀತ ಪುಸ್ತಕ—

ಶ್ರೀ ಎ. ರಾಮಪ್ಪ ಅವರ

ಹಾರ್ಮೋನಿಯಮ್

ಬೋಧನ ಕ್ರಮ

ಪರಿಷ್ಕರಿಸಲ್ಪಟ್ಟ ನಾಲ್ಕನೆಯ ಮುದ್ರಣ. ಕೆಲವೇ ಪ್ರತಿಗಳು ಉಳಿದಿವೆ.

ಬೆಲೆ: ರೂ. 2—0—0.

ಒಂದು ಪ್ರತಿ ಬೇಕಾದವರು ರೂ 2-50 ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

PHONE 203 ESTD 1926

FOUNDATION STONE

Engraved MARBLE TABLETS (GOLD FILLED & LEAD FILLED)

Crown RUBBER STAMP CO.

BALMATTA ROAD, MANGALORE

NAVAYUGA, UDIPI.
REGD. NO.BG. 176
12-7-1962
LICENSE NO. 31
Licensed to Post without Prepayment

ಮಹಿಳೆಯರ

ಜೀವನದ ಆದರ್ಶ ಯಾವುದು?

— ಎಚ್. ವಸಂತಲಕ್ಷ್ಮಿ

ಆದರ್ಶವಿಲ್ಲದ ಬಾಳು ವ್ಯರ್ಥ. ತನ್ನ ಜೀವನವು ಸಾರ್ಥಕವಾಗ ಬೇಕೆಂದು ಬಯಸುವ ಪ್ರತಿಯೊಂದು ವ್ಯಕ್ತಿಗೂ ಆದರ್ಶವು ಅಗತ್ಯ. ಇದರಲ್ಲಿ ಸ್ತ್ರೀ ಪುರುಷ ರೆಂಬ ಭೇದವಿಲ್ಲ ಪುರುಷನ ಆದರ್ಶವು ಒಂದಾಗಿದ್ದರೆ ಸ್ತ್ರೀಯ ಆದರ್ಶವು ಇನ್ನೊಂದಾಗಿರಬಹುದು. ಪುರುಷರು ತಮ್ಮ ಧೈರ್ಯ ಶೌರ್ಯಪೂರಿತವಾದ ಕಾರ್ಯಗಳಿಂದ ಆದರ್ಶರೆನಿಸಿದರೆ, ಸ್ತ್ರೀಯರು ತಮ್ಮ ಸ್ತ್ರೀ ಸಹಜವಾದ ಸೌಮ್ಯತೆಯಿಂದ ಆದರ್ಶರಾಗ ಬಲ್ಲರು.

ಭಾರತವು ಪುರಾತನ ದೇಶವಾಗಿದೆ. ಇಲ್ಲಿಯ ಸಂಸ್ಕೃತಿಯು ದೇಶವಿದೇಶಗಳಲ್ಲೂ ಹೆಸರುಗೊಂಡಿದೆ. ಈ ಸಂಸ್ಕೃತಿಯ ತಾಯಿ ಬೇರು. ಹಿಂದೂ ಸ್ತ್ರೀಯರೆಂದರೆ ಅತಿಶಯೋಕ್ತಿಯೂಗಲಾರದು. ಅಹಲ್ಯಾ ಸೀತಾ, ತಾರಾ, ದ್ರೌಪದಿ ಮತ್ತು ಮಂಡೋದರಿಯರ ನಾಮಸ್ಮರಣೆಯನ್ನು ಅನುದಿನವೂ ಮಾಡುವುದೇ ಒಂದು ಪುಣ್ಯಕಾರ್ಯವೆಂದು ಬಗೆವ ನಮ್ಮ ದೇಶದಲ್ಲಿ ಸ್ತ್ರೀಯರ ಆದರ್ಶ ವೇನಾಗಿರ ಬಹುದು ಎಂದು ಊಹಿಸುವುದೂ ಕಷ್ಟವೇ? ಪ್ರತಿಯೊಬ್ಬ ಹಿಂದೂ ಸ್ತ್ರೀಯೂ ತಾನು ಪತಿವ್ರತೆಯೂಗಿದ್ದು ಪವಿತ್ರಳಾಗ ಬೇಕೆಂದಿಚ್ಛಿಸುತ್ತಾಳೆ. ಅದೇ ತನ್ನ ಜೀವನದ ಆದರ್ಶವೆಂದು ತಿಳಿಯುತ್ತಾಳೆ

ಇದೇನು ಪತಿಪರಾಯಣೆಯಾಗಿ ಉತ್ತಮ ಗೃಹಿಣಿಯದೊಡನೆ ಆಕೆ ಆದರ್ಶ ಸ್ತ್ರೀಯೆಂದೆನಿಸುವಳೇ? ತನ್ನ ಮನೆ, ಮರ, ಗಂಡ, ಮಕ್ಕಳ ಆರೈಕೆ ಪೂರೈಕೆ ನೋಡಿಕೊಂಡನೆಯೇ ಆಕೆ ಆದರ್ಶ ಸ್ತ್ರೀಯಾಗುವುದು ಸಾಧ್ಯವೇ? ಗಂಡಸಿನ ಕಾಮವನ್ನು ತೃಪ್ತಿಪಡಿಸಿ ಅತನ ಮನೆಯ ತೊತ್ತಿನಂತೆ ನಡಕೊಂಡೊಡನೆ ಆಕೆ ಆದರ್ಶಸ್ತ್ರೀಯೆ? ಇವು ಇತ್ತೀಚಿನ ನವಯುವತಿಯರು ಹಾಕುವ ಪ್ರಶ್ನೆ!

ಹಾಗಾದರೆ ನಿಮ್ಮ ಜೀವನದ ಗುರಿಯೇನು? ಎಂದು ಕೇಳಿದರೆ....ಅವರು ಕೊಡುವ ಉತ್ತರವು ವೃದ್ಧ ಮಾತೆಯರ ರಕ್ತದ ವೇಗವನ್ನು ಹೆಚ್ಚಿಸುವುದು!

ಮನೆಯಲ್ಲೇ ಕುಳಿತು ಮೂಕ ಪಶುವಿನಂತೆ ತೊತ್ತಿನಂತೆ, ಪತಿಯರ ಗಿಣಿಯಂತೆ ನಡಕೊಂಡೊಡನೆ ಆಕೆ ಆದರ್ಶ ಸ್ತ್ರೀಯೇ? ಸರೋಜಿನಿ ದೇವಿಯವರು ಮನೆಯಲ್ಲಿ ಕುಳಿತೆ ನಮ್ಮ ಸ್ತ್ರೀ ಪುರುಷರಿಗೆಲ್ಲಾ ಆದರ್ಶರೆನಿಸಿದರೇ ಅವರು ಗೈದ ದೇಶ ಸೇವೆಯೇನು ಸಾಮಾನ್ಯವೇ? ಶ್ರೀಮತಿ ಕಮಲಾದೇವಿಯವರು ಸತ್ಯಾಗ್ರಹಿಗಳಾಗಿರಲಿಲ್ಲವೇ? ಸಂಯುಕ್ತ ರಾಷ್ಟ್ರ ಸಂಘದಲ್ಲಿ ಅಧ್ಯಕ್ಷಣಿಯಾಗಿದ್ದ ವಿಜಯ ಲಕ್ಷ್ಮಿಯವರು ಸಾಮಾನ್ಯರೇ? ಅವರ ಯೋಗ್ಯತೆ ಎಲ್ಲಾ ಕುಲಸತಿಯರಿಗೆ ಬಂದೀತೇ? ಅನ್ನಿ ಬೆಸೆಂಟ್ ಸುಮ್ಮನೆಯೇ? ಪ್ರೋಫೆಸ್ಸರ್ ನೈಟಿಂಗೇಲ್ ಕಮ್ಮಿಯವಳೇ? ಇಂದಿರಾ ಗಾಂಧಿಯ ಭವಿಷ್ಯ ತಿಳಿಯಬಲ್ಲುದೇ.....?

"ಎಲಾ ಅವರ ವಿಷಯ ಬಿಡು! ನೀ ನೇನು ಮಾಡಬೇಕೂಂತ ಇದ್ದೀ!"

"ಮತ್ತೇನು ನಾನು ವಿದ್ಯಾವಂತೆಯೂಗಬೇಕು, ಒಂದು ಉದ್ಯೋಗ ದೊರಕಿಸಬೇಕು. ಆ ಮೇಲೆ ಜನಸೇವೆ ಮಾಡಬೇಕು ನಿಜವಾಗಿಯೂ ಗಂಡಸಿನ ಅಡಿಯಾಳಾಗುವುದು ನನ್ನಿಂದ ಅಸಾಧ್ಯ!"

"ಕಲಿತೂ ಕಲಿತೂ ಉದ್ದಾರವಾಯ್ತು ಸೀರೆಯುಟ್ಟು ದೊಡ್ಡಾಕೆಯೆನಿಸಿದರೂ ಶಾಲೆಗೆ ಹೋಗುವುದು! ಇಂದಿನ ಹುಡುಗಿಯರ ಮೇಲ ನೋಡಿದ್ರೆ ಸಾಕು. ಉಪ್ಪು ಹಾಕಿ ಒಲೆಗೆ ಇಡಲು ತಿಳಿಯದಿದ್ದರೂ ಇವಕ್ಕೇನೂ ಕಮ್ಮಿ ಇಲ್ಲ! ನಮ್ಮ ಕಾಲದಲ್ಲಿ ಹೀಗಿರಲಿಲ್ಲ. ಹಿರಿಯರು ಏನ್ಹೇಳಿದರೂ ಎದುರುತ್ತರವಿತ್ತೇ? ಇದೆಲ್ಲ ಏನೋಪ್ಪ ನಂಗ್ತಿಳೀದು ಕಲಿಯುಗದ ಮಹಾತ್ಮೇ....."

ಈ ಮೇಲಿನ ಸಂಭಾಷಣೆಗಳಿಂದ ಈಗಿನ ತರುಣಿಯರ ಬದಲಾವಣೆಗೊಂಡ ಮನೋಭಾವಗಳನ್ನು ತಿಳಿಯಬಹುದು.

ಪುರುಷನಿಗೆ ಸಹಧರ್ಮಿಣಿಯಾಗಿ ನಡೆದುಕೊಂಡು ತಮ್ಮ ಮಕ್ಕಳನ್ನು ಉತ್ತಮ ಪ್ರಜೆಗಳನ್ನಾಗಿ ಮಾಡುವುದೇನೂ ಕಡಿಮೆಯ ಕೆಲಸವಲ್ಲ, ಸೂಜಿಯಂತೆ ನೂಲು, ತಾಯಿಯಂತೆ ಮಗಳು ಎಂಬುದೇನೂ ಪೊಳ್ಳುಮಾತಲ್ಲ. ತಾಯಿ ತನ್ನ ಮಗುವನ್ನು ಪ್ರೀತಿಯಿಂದ ಸಾಕಿ ಆದರಲ್ಲಿ ಸ್ನೇಹ ಭಾವವನ್ನೂ ಪ್ರೀತಿಯೊಳಗೂ ಕಠಿನಳಾಗಿ ನಡಕೊಂಡು ಆದರಲ್ಲಿ ನ್ಯಾಯ ನಿಷ್ಠುರತೆಯನ್ನೂ ತಾನು ಹಿರಿಯರಲ್ಲಿ ಭಕ್ತಿಯಿಂದ ನಡೆದು ಆದರಲ್ಲಿ ಭಕ್ತಿವಿನಯವನ್ನು ತನ್ನ ಆತಿಥಿ ಸತ್ಕಾರದಿಂದ ಆದರಲ್ಲಿಯೂ ಪರರನ್ನು ಸತ್ಕರಿಸುವ ಗುಣವನ್ನೂ ತನ್ನೇ ಆದರ್ಶ ಜೀವನದಿಂದ ಅತನಲ್ಲೂ ಆದರ್ಶ ಜೀವನ ನಡೆಸ ಬೇಕೆಂಬ ಆಸೆಯನ್ನೂ ಉಂಟುಮಾಡ ಬಲ್ಲಳು. ಇದೇನು ಸಾಮಾನ್ಯ ಕಾರ್ಯವೇ? ಪ್ರತಿಯೊಬ್ಬ ಸ್ತ್ರೀಯೂ ಉತ್ತಮ ಗೃಹಿಣಿಯಾಗಿದ್ದಲ್ಲಿ, ಪ್ರತಿಯೊಬ್ಬರೂ ಉತ್ತಮ ಪ್ರಜೆಗಳಾಗಬೇಕಿತ್ತಲ್ಲವೇ? ಆದ್ದರಿಂದ ಉತ್ತಮ ಗೃಹಿಣಿಯೂಗುವುದೂ ಒಂದು ಆದರ್ಶವೇ ಆಗಿದೆ.

ಆದರೇ.... ಹೀಗೆಂದು ಹೇಳಿ ಇತ್ತೀಚಿನ ತರುಣಿಯ ಅಭಿಪ್ರಾಯಗಳನ್ನು ಮೂಲೆ ಗೆಸೆಯುವುದು ಸರಿಯಲ್ಲ ಆದರಲ್ಲೂ ಹುಡುಕಿದರೆ ತಿರುಳನ್ನು ಕಾಣಬಹುದು. ತನ್ನ ಸಂತಾನವನ್ನು ಉತ್ತಮ ಪ್ರಜೆಯೂಗಿ ಬೆಳೆಸಬಲ್ಲ ಸ್ತ್ರೀಯು ಮಾಡಬೇಕಾದ ದೇಶಕಾರ್ಯವೇನೂ ಇಲ್ಲ! ಎನ್ನುವ ಮಾತಿನಲ್ಲಿ ತಿರುಳಿಲ್ಲ

ದೇಶಕ್ಕಾಗಿ ಆಕೆ ಮಾಡಬೇಕಾದ ಕಾರ್ಯಗಳು ಬೇಕಾದಷ್ಟಿವೆ. ಆಕೆ ಶಿಕ್ಷಕಿಯೂಗಿ ಶಿಕ್ಷಣ ಕಾರ್ಯವನ್ನು ಕೆಲವೊಮ್ಮೆ ಪುರುಷರಿಗಿಂತಲೂ ಉತ್ತಮವಾಗಿ ನಡೆಸಬಲ್ಲಳು. ಶಿಸ್ತುಗೇಡಿ ವಿದ್ಯಾರ್ಥಿಗಳಲ್ಲಿ ಸೌಮ್ಯ ಭಾವವನ್ನು ಹುಟ್ಟಿಸಬಲ್ಲಳು. ದಾದಿಯೂಗಿ ರೋಗಿಗಳನ್ನು ತಾಯಿಯಂತೆ ಉಪಚರಿಸಬಲ್ಲಳು. ರಾಜಕಾರಿಣಿಯೂಗಿ, ಜನತೆಯಲ್ಲಿ ಆಗಾಗ ಕಂಡುಬರುವ ಹುಚ್ಚು ಉದ್ರೇಕವನ್ನು ಶಾಂತಗೊಳಿಸಬಲ್ಲಳು. ಕಡೆಗೆ ಆಕೆ ಉತ್ತಮ ರಾಯಭಾರಿಯೂ ಆಗ ಬಲ್ಲಳು.

ಪುರುಷರಿಗೆ ಹೇಗೆ ತಮಗೆ ಬೇಕಾದ ಆದರ್ಶವನ್ನು ಆಯ್ದುಕೊಳ್ಳಲು ಅವಕಾಶ ಕೊಡಲಾಗುವುದೋ, ಹಾಗೆಯೇ ಸ್ತ್ರೀಗೂ ಅಂತಹ ಅವಕಾಶವನ್ನು ಕೊಡಬೆಕಾದುದು ಧರ್ಮ ಹಾಗಾದಲ್ಲಿ ನಮ್ಮ ಸಮಾಜದಲ್ಲಿ ಈಗಿರುವ ಅನೇಕ ಕೊರತೆಗಳು ತುಂಬಿಬರುವುದರಲ್ಲಿ ಸಂದೇಹವಿಲ್ಲ.

ಆದರ್ಶ ಆಹಾರ

(೪ನೇ ಪುಟದಿಂದ)

ಗಳಲ್ಲಿ ಅವರ ಶ್ವಾಸೋಚ್ಛ್ವಾಸದ ಮೂಲಕ ದೇಹದಲ್ಲಿ ಸೇರಿರುವ ವಿಷವನ್ನು ಎದುರಿಸಲು ಹೆಚ್ಚಿನ ಹಾಲು ಅತ್ಯಾವಶ್ಯಕ. ದಿನವಿಡೀ ಕಾರುಗಳ, ಮೋಟಾರುಗಳ ಹೊಗೆಯನ್ನು ಕುಡಿದು ಕಂಗೆಡುವ ಮ್ಯೂನಿಚ್ಜಿನ ಪೋಲೀಸರಿಗೆ ಹೊಗೆಯ ದೆಸೆಯಿಂದಾಗಿ ಅವರಿಗೆ ಏರ್ಪಡಬಹುದಾದ ವ್ಯಾಧಿಗಳನ್ನು ತಡೆಗಟ್ಟಲು ಸರ್ಕಾರವೇ ಅವರಿಗೆ ಹಾಲನ್ನೊದಗಿಸುವುದು.

ಹಾಲಿನಲ್ಲಿ ಕ್ಯಾಲ್ಶಿಯಂ ಅಧಿಕವಾಗಿರುವುದರಿಂದ ಅಣು ಭಸ್ಮಪಾತದಿಂದ ನಮ್ಮ ದೇಹದ ಮೇಲಾಗುವ ಹಾನಿಯನ್ನು ಅದು ತಡೆಗಟ್ಟಬಲ್ಲುದೆಂದು ಇತ್ತೀಚಿನ ಸಂಶೋಧನೆಗಳಿಂದ ತಿಳಿದುಬಂದಿದೆ. ದೇಹಕ್ಕೆ ತುಂಬಾ ಅಪಾಯಕಾರಿಯಾದ ಸ್ಟ್ರಾನ್ಸಿಯಂ ೯೦ ಎಂಬುದರ ಸಿಡಿತದಿಂದೇಳುವ ಅಣುಭಸ್ಮವನ್ನು ಸದಾ ಹಾಲಿನ ಸೇವನೆಯಿಂದ ಎದುರಿಸಬಹುದೆಂದು ಹೇಳಲಾಗಿದೆ. ದೀರ್ಘಕಾಲ ಎಕ್ಸರೇ ಮುಂತಾದ ಚಿಕಿತ್ಸೆಗೊಳಪಟ್ಟವರಿಗೂ ಇನ್ನು ಮುಂದೆ ಅಧಿಕ ಪ್ರಮಾಣದಲ್ಲಿ ಹಾಲನ್ನು ಕೊಡಲಾಗುವುದು.

ಆದಿಕಾಲದಿಂದಲೂ ಜೀವಾಮೃತವೆಂದು ಭಾವಿಸಲಾಗಿರುವ ಹಾಲು ಕೇವಲ ಆಹಾರ ವಸ್ತು ಮಾತ್ರವೇ ಅಲ್ಲದೆ, ಉತ್ತಮ ರೋಗ ನಿವಾರಕ ಸಿದ್ಧೌಷಧವೂ ಆಗಿದೆ.

ಪತಿ, ಪತ್ನಿ ಮತ್ತು ಮುದ್ದು ಮಕ್ಕಳ
ಸೊಗಸಿನ ಸಂಸಾರವಿದು.

ಇಲ್ಲಿ ಪರಾಪದ ಹೊನಲು ಹರಿಯುತ್ತಿದೆ;
ತೃಪ್ತಿಯ ತಂಗಾಳಿ ಬೀಸುತ್ತಿದೆ.

ಅವರ ಸೇವಿಂಗ್ಸ್ ಬ್ಯಾಂಕ್ ಖಾತೆಯಲ್ಲಿ
ವೃದ್ಧಿಯಾಗುತ್ತಿರುವ ನೊತ್ತವು ಅವರ
ಇಂದಿನ ಹಾಗೂ ಭವಿಷ್ಯ ಜೀವನದ
ಸುಖ ಸಮೃದ್ಧಿಗಳ ಭರವಸೆಯಾಗಿದೆ.

ಒಂದು ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆಯಿರಿ.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಮಧ್ಯಮವರ್ಗದ ದೇಶಗಳ ಸ್ಥಿತಿ

(೧ನೇ ಪುಟದಿಂದ)

ನ್ನು ಮಾಡಿಕೊಂಡಿದೆ; ಮುಂದಕ್ಕೂ ಮಾಡಿಕೊಳ್ಳುತ್ತದೆ. ಆದರ ವ್ಯಾಪಾರವಾದರೂ ಉಳಿದ ಹಿಂದುಳಿದ ದೇಶಗಳಂತೆಯೇ ಸಂಪನ್ನ ರಾಷ್ಟ್ರಗಳನ್ನೇ ಹೆಚ್ಚಾಗಿ ಹೊಂದಿಕೊಂಡಿದೆ ಬ್ರಿಟನ್ನು ಐರೋಪ್ಯ ಸಾಮಾನ್ಯ ಮಾರುಕಟ್ಟೆಯನ್ನು ಸ್ವೀಕರಿಸುವುದರಿಂದಲೇ ಭಾರತವು ಕಂಗಾಲ ಪರಿಸ್ಥಿತಿಯನ್ನೆದುರಿಸಬೇಕಾಗಿ ಬಂತೆಂಬುದನ್ನು ನಾವು ಮರೆಯುವಂತಿಲ್ಲ. ಸೂಕ್ತ ಪರ್ಯಾಲೋಚನೆ ಮತ್ತು ಮುನ್ನಡೆಗಳಿಂದ ಅದು ಸಮಸ್ಯೆಗಳನ್ನು ಎದುರಿಸುವಲ್ಲಿ ಸಫಲವಾಗುವುದೆಂಬ ನಿರೀಕ್ಷೆಯಿದೆ.

ಶಾಲೆಗಳಿಗೆ ಬೇಕಾಗುವ
ಯೂನಿಫಾರ್ಮುಗಳೂ
ಹಾಜರಿ ರಿಜಿಸ್ಟ್ರಿಗಳೂ ಸಿಗುತ್ತವೆ.
ನವಯುಗ ಪ್ರೆಸ್ ಉಡುಪಿ.

Edited Printed & Published by K. H. Shetty, at the Navayuga Press Udipi, S. India

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ಸಂಪುಟ ೪೧ ಸಂಚಿಕೆ ೪೫ | ಉಡುಪಿ 19—7—1962 ಗುರುವಾರ | Vol. 41 No. 45

ನಿಮ್ಮ ಯಾವತ್ತೂ ಮುದ್ರಣ ಕೆಲಸಗಳಿಗೆ ದಯಮಾಡಿ ವಿಚಾರಿಸಿರಿ; ನವಯುಗ ಪ್ರೆಸ್, ಉಡುಪಿ

ವಿದ್ಯಾರ್ಥಿಗಳಿಗೆ ಮತ್ತು ನಯಸ್ಕರಿಗೆ ಅತ್ಯುಪಯೋಗೀ ಪುಸ್ತಕ ಸುಲಭದಲ್ಲಿ ಇಂಗ್ಲಿಷ್ (ಆಂಗ್ಲ ಸ್ವಯಂಬೋಧಿನಿ) ನವಭಾರತ ಪುಸ್ತಕ ಭಂಡಾರ ಉಡುಪಿ

ಕೇರಳ ಸರಕಾರದಲ್ಲಿ

ಸಮರಸ ಸ್ಥಾಪನೆಯ ಪ್ರಯತ್ನ

ಕೇರಳದಲ್ಲಿ ಕಾಂಗ್ರೆಸ್ ಮತ್ತು ಪ್ರಜಾ ಸಮಾಜವಾದಿ ಪಕ್ಷಗಳ ಸಮ್ಮಿಶ್ರ ಮಂತ್ರಿ ಮಂಡಳಿಯು ಅಧಿಕಾರವನ್ನು ವಹಿಸಿ ದಾಗಲೇ ಆಕ್ಷನ ಆಡಳಿತೆಯು ಸಮರ್ಪಕವಾಗಿ ನಡೆಯಲಾರದೆಂದು ಭವಿಷ್ಯ ನುಡಿದವರು ಕೆಲವರಿದ್ದರು. ಇದು ಸ್ವಲ್ಪ ಮಟ್ಟಿಗೆ ಸತ್ಯವೆಂದು ಸಿದ್ಧವಾದರೂ ಸಂಪೂರ್ಣ ಅವಧಿಯ ವರೆಗೆ ಸಂಘಟನೆಯು ಮುಂದುವರಿಯುವುದು ಅಸಂಭವವೆನ್ನುವಂತಿರಲಿಲ್ಲ; ಇಂದಿಗೂ ಅಂತಹ ಹೀನ ಪರಿಸ್ಥಿತಿಯು ಅಲ್ಲಿಲ್ಲ. ಆದರೆ, ಪಕ್ಷಗಳ ಧ್ಯೇಯ ಧೋರಣೆಗಳನ್ನು ರೂಪಿಸುವಾಗ ಅಲ್ಲಿನ ಪ್ರಸವಾ ಮತ್ತು ಕಾಂಗ್ರೆಸ್ ಪಕ್ಷಗಳು 'ಸಮ್ಮಿಶ್ರ ಮಂತ್ರಿಮಂಡಳಿ' ಇದೆಯೆಂಬುದನ್ನು ಗಣನೆಗೆ ತಂದು ಕೊಂಡಿಲ್ಲ. ಸಾಮಾನ್ಯವಾಗಿ ಈಯೆರಡು ರಾಜಕೀಯ ಪಕ್ಷಗಳ ಮೂಲಧ್ಯೇಯ ಗಳಲ್ಲಿ ಹೆಚ್ಚಿನ ಭಿನ್ನಾಭಿಪ್ರಾಯಗಳು ಕಂಡು ಬಂದುವು. ಇಂತಹ ವಿರಸದ ಪ್ರಸಂಗಗಳನ್ನು ದೂರ ಮಾಡುವುದು ಅಸಂಭವವೆನ್ನುವಂತಿಲ್ಲ. ಆದರೆ, ಅಲ್ಲಿ ಈ ನಿಟ್ಟಿನಲ್ಲಿ ಕಾರ್ಯಕ್ರಮವು ಕೈಗೊಳ್ಳಲ್ಪಡಲಿಲ್ಲವೆಂಬುದು ಶೋಚನೀಯ.

ಎತ್ತು ಏರಿಗೆ-ಹೋರಿ ನೀರಿಗೆ

ರಾಜ್ಯದ ಮುಖ್ಯ ಮಂತ್ರಿಯಾದವನು ಕೆಲವೊಂದು ಜವಾಬುದಾರಿಯನ್ನು ಹೊರಬೇಕಾಗುತ್ತದೆ. ಪ್ರಸವಾ ಪಕ್ಷದ ಸದಸ್ಯನು ಮುಖ್ಯ ಮಂತ್ರಿಯಾಗಿ ಕೇರಳದಲ್ಲಿರುವುದರಿಂದ, ಆದರ ಲಕ್ಷ್ಯಗಳನ್ನೂ ಆದೇಶಗಳನ್ನೂ ಆತನು ಕಡೆಗಣಿಸುವುದು ಅಸಾಧ್ಯವೆನಿಸುತ್ತದೆ. ಆದರೆ, ವಿಧಾನ ಸಭೆಯಲ್ಲಿ ನಿಶ್ಚಲ ಬಹುಮತವನ್ನು ಪಡೆದಿದ್ದರೂ, ಪೂರ್ವದ ಒಡಂಬಡಿಕೆಗೆ ಜೋತುಬಿದ್ದು ಕಾಂಗ್ರೆಸ್ಸು ಸಮ್ಮಿಶ್ರ ಸರಕಾರದ ರಚನೆಗೆ ಸಿದ್ಧವಾಯಿತು. ಭಾರತದ ಇತರ ಯಾವ ರಾಜ್ಯದಲ್ಲೂ ಇಲ್ಲದಿದ್ದರೂ "ಉಪ ಮುಖ್ಯಮಂತ್ರಿ" ಪದವಿಯನ್ನು ನಿರ್ಮಿಸಿ, ಅದನ್ನು ಕಾಂಗ್ರೆಸ್ಸಿನ ಸದಸ್ಯನಿಗೆ ಅಲ್ಲಿ ಕೊಡಲಾಯಿತು. ಮುಖ್ಯ ಮಂತ್ರಿ, ಉಪ ಮುಖ್ಯ ಮಂತ್ರಿ ಗಳು ತಂತಮ್ಮ ಪಕ್ಷದ ಸದಸ್ಯರ ನಾಯಕರಿಂದ ಆದ್ದನ್ನು ನಾವು ಗಮನಿಸಿದರೆ, ಉಪ ಮುಖ್ಯ ಮಂತ್ರಿಗೆ ಹೆಚ್ಚಿನ ಯಾವ ಅಧಿಕಾರವಾಗಲಿ, ಜವಾಬುದಾರಿಯಾಗಲಿ ಇರುವುದಿಲ್ಲ. ಹಾಗಿದ್ದರೂ ಬಹುಮತದ ಬೆಂಬಲವಿರುವ ಕಾಂಗ್ರೆಸ್ಸು ತನ್ನ ಹಠನಾಧನೆಗೆ ಮುಂದೆ ಬಂದರೆ, ಮುಖ್ಯ ಮಂತ್ರಿ ಪದವ್ಯವಿರುವ ಪ್ರಸವಾ ತನ್ನ ನೀತಿಯನ್ನು ಎತ್ತಿ ಹಿಡಿಯಲು ಪ್ರಯತ್ನಿಸುತ್ತದೆ.

ಜ್ವಲಂತ ನಿದರ್ಶನ

ಇತ್ತೀಚೆಗೆ ಅಲ್ಲಿ ನಡೆದ 'ವ್ಯಾಥಮಿಕ ಶಾಲೆಗಳ ಸ್ಥಾಪನೆಯ ಪ್ರಕರಣವು ಇದಕ್ಕೊಂದು ನಿದರ್ಶನ. ಕಾಂಗ್ರೆಸ್ಸು ಖಾಸಗಿ ಕ್ಷೇತ್ರದಲ್ಲಿ ಇವನ್ನು ತೆರೆಯುಲು ಅನುಮತಿ ನೀಡುವಂತೆ ಪ್ರತಿಪಾದಿಸಿತು; ಪ್ರಸವಾ ವಿರೋಧಿಸಿತು. ತತ್ಪರಿಣಾಮವಾಗಿ ಗೊಂದಲ, ಅಸಂತೋಷ, ಅಸಮಧಾನಗಳು ಉದ್ಭವವಾದುವು. ದಿಲ್ಲಿಯತ್ರೆ ನ ಡೆಯಿತು. ಈ ನಡುವೆ ಸಮ್ಮಿಶ್ರ ಸರಕಾರ ತನ್ನ ಪೂರ್ಣಾವಧಿಯ ವರೆಗೆ ಉಳಿಯಬೇಕು ಎಂಬ ಆಶಯವನ್ನು ಇಕ್ಕಡೆಯವರೂ ಬಹಿರಂಗ ಪಡಿಸಿದರು; ಇದು ಬಗೆ ಹರಿಸಲಾರದ ಪ್ರಶ್ನೆಯಲ್ಲವೆಂದರು. ಕೊನೆಗೆ ಆದುದೇನು? ಇಬ್ಬರೂ ಗೆದ್ದರು—ಇಬ್ಬರೂ ಸೋತರು ಎಂಬಂತೆ! ಈ ವರ್ಷ ಖಾಸಗಿ ಕ್ಷೇತ್ರಕ್ಕೆ ಅವಕಾಶ ದೊರೆಯಲಿಲ್ಲ—ಅಂದರೆ, ಪ್ರಸವಾ ಗೆದ್ದಿತು. ಮುಂದಿನ ವರ್ಷ ಅವರಿಗೂ ಅವಕಾಶ ದೊರೆಯುವುದು—ಅರ್ಥಾತ್ ಕಾಂಗ್ರೆಸ್ಸು ಜಯಭೇರಿ ಭಾರಿಸಿದಂತೆ! ಇದಕ್ಕೆ ಅಷ್ಟು ಗಂಭೀರ ಪರಿಸ್ಥಿತಿಯನ್ನು ನಿರ್ಮಿಸಬೇಕಿತ್ತೇ?ಹೊಡೆದಾಡುವುದು ಅವಶ್ಯವಿತ್ತೆ? ಎನ್ನುತ್ತದೆ ಜನತೆ!

ಸಮರಸದ ಅಭಾವ

ಇದನ್ನೆಲ್ಲಾ ನೋಡುವಾಗ, ಅಲ್ಲಿನ ಆ ಎರಡು ಪಕ್ಷಗಳ ನಡುವೆ ಸಮರಸತೆಯಿಲ್ಲ; ಸಾಜನ್ಯ ಮೂಯವಾಗಿದೆ ಯೆನಿಸಿದರೆ ಆಶ್ಚರ್ಯವಿಲ್ಲ. ಇಂತಹ ಪರಿಸ್ಥಿತಿಗಳು ಆಗಾಗ ಏಳುತ್ತಿರುವುದು ಪಕ್ಷಗಳಲ್ಲಿ ಮಾತ್ರವಲ್ಲ, ಆಡಳಿತೆಯು ಮೇಲೆ, ಜನತೆಯ ಮೇಲೆ, ದುಷ್ಪರಿಣಾಮಗಳನ್ನು ಬೀರುತ್ತದೆ. ಸಂಯುಕ್ತ ಸರಕಾರದ ರಚನೆಯೂ ದುರ್ದೈವದ ಮಹಾ ಪಾಪ ಕಾರ್ಯವೆನ್ನುವ ಅಸಹ್ಯ ಮನೋಭಾವನೆಯ ಉದಯಕ್ಕೆ ಹೇತುವೆನಿಸಿದೆ. ಸರಕಾರದ ಫಲಾಪೇಯಲ್ಲಿಯೇ ಅಸ್ಥಿರತೆ, ಅದರ ನಾಯಕನಡೆಗಳಲ್ಲಿಯೇ ವಿಘಿನ್ನತೆಯು ತಲೆದೋರಿದರೆ, ಸಾಮಾನ್ಯ ಜನತೆಯು ಕಂಗಾಲಾಗದೆ ಮತ್ತೇನಾಗಬೇಕು? ಅದುದರಿಂದ ಕೇವಲ ಸರಕಾರದಲ್ಲಿ ವಿಘಿನ್ನ ಪಕ್ಷಗಳು ಸೇರಿಕೊಂಡರೆ ಸಾಲದು; ಪಕ್ಷಗಳ ಸದಸ್ಯರಲ್ಲಿ, ಮುಖ್ಯವಾಗಿ ಸರಕಾರದ ಮಂತ್ರಿಗಳಲ್ಲಿ ಸಹಕಾರದ ಮನೋವೃತ್ತಿ ಬೆಳೆಯಬೇಕು; ಕೇರಳದ ಸಂಪುಟ ಸದಸ್ಯರಲ್ಲಿ ಅಭಾವವಿರುವುದಾದರೂ ಇವರದೇ ಎಂಬಂತೀಗ ಜಗಜ್ಜಾಹೀರಾಗಿದೆ.

ಶಾಸ್ತ್ರಿ ರಾಯಭಾರ

ಕೇಂದ್ರ ಗೃಹಮಂತ್ರಿ ಲಾಲಬಹದೂರ ಶಾಸ್ತ್ರಿಯವರು ಚಾಣಾಕ್ಷರು; ಎಂತಲೇ ಈ ಅಭಾವನೆಯನ್ನು ಮನವರಿಕೆ ಮಾಡಿಕೊಂಡರು. ಭಾರತದ ಇಂದಿನ ಮುಕ್ಷದ್ಧಿಗಳ ಸಾಲಿನಲ್ಲಿ ಅಗ್ರಗಣ್ಯರಾದವರು ಕೃಷ್ಣ ಸಂಧಾನಕ್ಕೆ ತೆರಳಿದರು. ತೋರಿಕೆಯ ಮಟ್ಟಿಗೆ ಅವರು ಎರಡೂ ಪಕ್ಷಗಳ ನಡುವೆ ಮೈತ್ರೀಭಾವ ಹುಟ್ಟಿಸಿದೆನೆಂದು ಉದ್ಗರಿಸಿದರು; ಆದರೆ ತನ್ನ ಕಾರ್ಯದಲ್ಲಿ ತಾನು ಸಂಪೂರ್ಣ ಯಶಸ್ವಿಯಾಗಲಿಲ್ಲವೆಂಬ ಅವರಿಗನಿಸಿರಬೇಕು; ಎಂತಲೇ ಇದನ್ನು ಸೂರಯ್ಸಲು ಬೇರೊಂದು ವಿಧಾನವನ್ನೂ ಸೂಚಿಸಿದರು. ಅಸ್ಸಾಮದಲ್ಲಿ ನಡೆದ ಅಸ್ಸಾಮಿ ಬಂಗಾಳಿ ಭಾಷೆಗಳ ನಡುವಣ ಗೊಂದಲವನ್ನು ಯುಕ್ತಯುತವಾಗಿ ಪರಿಹರಿಸಿದ ಶ್ರೇಯಸ್ಸು ಶಾಸ್ತ್ರಿಗಳಿಗೆ ಸೇರಿದೆ. ಆಕಾಲಿದಳದವರ ಪಂಜಾಬಿ ಸುಬಾದ ಬೇಡಿಕೆಯನ್ನು ಪರೋಕ್ಷವಾಗಿ ಕೆತ್ತು ಹಾಕುವಲ್ಲಿ ಇವರು ಹೂಡಿದ ತಂತ್ರವಾದರೂ ಯಶಸ್ವಿಯೆನಿಸಿದೆ. ಕರ್ನಾಟಕ ಆಂಧ್ರ ಸರಕಾರಗಳ ನಾಯಕ ಚುನಾವಣೆಯಲ್ಲಿಯೂ ಇವರ ಕೈವಾಡ ಸಫಲವೆನಿಸಿದೆ. ಹೀಗೆ ಸರ್ವತೋಮುಖವಾಗಿ ಜಯಭೇರಿ ಭಾರಿಸುತ್ತ ಬರುವ ಶಾಸ್ತ್ರಿಯವರು ಕೇರಳದ ವಿರಸವನ್ನೂ ಕೊನೆಗಾಣಿಸುವಲ್ಲಿ ಅಸಮರ್ಥರಾಗಿಲಾರರು— ಏಕೆಂದರೆ, ಅವರ ಭೇಟ್ಟಿಯಿಂದ, ಮೂಕುಕತೆಯಿಂದ ಇಕ್ಕಡೆಯವರೂ ಪ್ರಸನ್ನತೆಯನ್ನು ವ್ಯಕ್ತಪಡಿಸಿದ್ದಾರೆ.

ಪ್ರಜಾಸತ್ತೆಯ ಉಳಿವು-ಅಳಿವು

ನಮ್ಮಲ್ಲಿ ಎಲ್ಲಿಯೂ ಇಲ್ಲದಸಮ್ಮಿಶ್ರಸರಕಾರ ಕೇರಳರಾಜ್ಯದಲ್ಲಿದೆ; ಎಂತಲೇ ಅಲ್ಲಿ ಅದರ ಯಶಸ್ಸು ಅಯಶಸ್ಸಿನ ಪ್ರಶ್ನೆಯೂ ಉಳಿದಿದೆ. ಒಂಸ್ವಾದಲ್ಲಿ ಹೆರೇಕೃಷ್ಣ ಮೆಹತಾಬರು ಗಣತಂತ್ರ ಪರಿಷತ್ತಿನೊಡನೆ ಒಡಂಬಡಿಕೆ ಮಾಡಿಕೊಂಡು ಸರಕಾರ ರಚಿಸಿದ್ದರು; ಆದರೆ ಅಲ್ಲಿ ಅದು ಪತನಗೊಳ್ಳುವಂತಾಯಿತು. ಕೇರಳವು ಹಿಂದೊಮ್ಮೆ ಕಮ್ಯುನಿಸ್ಟರ ಕಪಿ ಮುಷ್ಟಿಯಲ್ಲಿ ಸಿಲುಕಿ ಬವಣೆಗೊಂಡುದರಿಂದ ಅಲ್ಲಿ ಸಮ್ಮಿಶ್ರ ಮಂತ್ರಿ ಮಂಡಳಿಯು ರೂಪಿತವಾಯತೆಂಬುದನ್ನು ನಾವು ಕಡೆಗಣಿಸುವಂತಿಲ್ಲ. ಪ್ರಜಾಸ್ವಭುತ್ವ ಪದ್ಧತಿಯು ಅಯಶಸ್ವಿಯೆಂದು ಕೇರಳವು ಸಿದ್ಧವೂಡಿ ಕೊಡಬಾರದೆಂದಿದ್ದರೆ, ಈ ಸಮ್ಮಿಶ್ರತೆಯು ಪೂರ್ಣ ಕಾಲಾವಧಿಯ ವರೆಗೆ ಮುಂದುವರಿಯಬೇಕು. ಸರಕಾರದ ಧ್ಯೇಯ-ನೀತಿಯನ್ನು ನಿರ್ಧರಿಸುವುದಕ್ಕೆ ಮೊದಲು ಎರಡೂ ಪಕ್ಷದ ನಾಯಕರು ಬಿಚ್ಚು ಮನಸ್ಸಿನ ವಿಚಾರ ವಿನಿಮಯಕ್ಕೆ ಅವಕಾಶ ಕೊಡಬೇಕು; ಇಂತಹ ಮೂತುಳತೆಯು ಭಿನ್ನಾಭಿಪ್ರಾಯದಲ್ಲಿಯೇ ಕೊನೆಗಾಣದಂತೆ ಎಚ್ಚರಿಕೆ ವಹಿಸಬೇಕು.

ಎರಡು ಸಲಹೆಗಳು

ಇದಕ್ಕಾಗಿ ಲಾಲಬಹದೂರ ಶಾಸ್ತ್ರಿಯವರು ಸಲಹೆಯನ್ನು ಕೇರಳದ ನಾಯಕರಿಗೆ ಕೊಟ್ಟಿದ್ದಾರೆ. ಮುಖ್ಯ ಮಂತ್ರಿಯವರು ಮಹತ್ವದ ಸರಕಾರಿ ನಿರ್ಧಾರವನ್ನು ಅಂತಿಮ ರೂಪಕ್ಕೆ ತರುವ ಮೊದಲು ಕಾಂಗ್ರೆಸಿನ ತನ್ನ ಸಹಮಂತ್ರಿಯವರೊಡನೆ ಪರ್ಯಾಲೋಚನೆ ಮಾಡಬೇಕು ಎಂದವರು ಸೂಚನೆ. ಸಮ್ಮಿಶ್ರ ಸಂಪುಟವನ್ನು ಮುಂದುವರಿಸಲು ಆತುರರಿರುವ ಮುಖ್ಯ ಮಂತ್ರಿ ಪಟ್ಟಂಥಾನು ಪಿಳ್ಳೈಯವರು ಇದನ್ನು ಸಂತೋಷದಿಂದ ಒ

((ಬಾನೇ ಪುಟ ನೋಡಿರಿ)

ಭವ್ಯ ಕಟ್ಟಡಗಳಿಗೆ ಬೇಕಾಗುವ— ಕಿಟಕಿ-ಬಾಗಿಲು, ವೆಂಟಿಲೇಟರು ರೋಲಿಂಗ್ ಶಟರು, ಗೇಟುಗಳಿಗೆ

ಶಾಸ್ತಿ & ಕೊ
ಹಂಪನಕಟ್ಟೆ,
ಮಂಗಳೂರು—1

ಆಫೀಸು-ಮನೆಗಳಿಗೆ ಬೇಕಾಗುವ— ವಿವಿಧ ಕಪಾಟುಗಳು, ಮೇಜು ಕುರ್ಚಿಗಳು, ಮಂಚ, ಸೋಫಾಗಳಿಗೆ

ಅನುಭವ

ಅದಲು ಬದಲಾದ ವೇಷ

ಶ್ರೀಮತಿ ಯಶೋದಾ ಯನ್. ಜೆನ್ನಿ.

ಅನೇಕ ವೇಳೆ ಬಸ್ಸ್ ಸ್ಟ್ಯಾಂಡಿನಲ್ಲಿ ಗಂಟಾಗಟ್ಟಲೆ ಕಾಯುವ ಪ್ರಸಂಗ ಬಂದಾಗ ಕೆಲವು ಸ್ವಾರಸ್ಯಕರ ಅನುಭವಗಳು ಜರುಗುತ್ತವೆ. ಆಗ ಎಷ್ಟೋ ಬಾರಿ ಬೇಡವೆಂದರೂ ನಗು ಶಾನಾಗಿ ಮೇಲಕ್ಕೆ ಹರಿಯುತ್ತದೆ.

ಒಮ್ಮೆ ನಾನು ಬಸ್ಸ್, ಕಾಯುತ್ತಾ ಕುಳಿತಿದ್ದೆ. ದುರ್ದೈವದಿಂದ ಇನ್ನೂ ಒಂದು ಗಂಟೆ ಬಸ್ಸ್ ಕಾಯುವ ಸನ್ನಿವೇಶ ಒದಗಿತ್ತು. ನಾನು ಬೇಸರದಿಂದ ಮೌನವಾಗಿ ಕುಳಿತಿದ್ದೆ. ನಮ್ಮ ಇದಿರಿನ ಜಗಲಿಯಲ್ಲಿ ನಾಲ್ವರು ಮಹಿಳೆಯರ ಒಂದು ತಂಡವಿತ್ತು. ಅವರೆಲ್ಲರೂ ಆಧುನಿಕ ವೇಷ ಭೂಷಣಗಳನ್ನು ಧರಿಸಿದ್ದರಲ್ಲದೆ ಕುಳಿತಲ್ಲೇ ಕಾಶೆಯಾಡುತ್ತಾ ಗಟ್ಟಿಯಾಗಿ ನಗುತ್ತಾ ಹರಟುತ್ತಿದ್ದರು. ಅಲ್ಲಿರುವ ಎಲ್ಲರ ಗಮನವನ್ನೂ ತಮ್ಮೆಡೆಗೆ ಸೆಳೆಯುವ ಆಸೆ, ಉತ್ಸಾಹಗಳಿದ್ದುವು ಅವರಲ್ಲಿ. ಮೂತ್ರವಲ್ಲ, ಹೊಸತಾಗಿ ಪೇಟೆ, ಪಟ್ಟಣಗಳನ್ನು ನೋಡುವ ಜನರಿಗೆ ಅವರೊಂದು ಕೌತುಕದ ಜನರಾಗಿದ್ದರು. ಅಷ್ಟರಲ್ಲಿಯೇ ಅಲ್ಲಿಗೊಬ್ಬಳು ವೃದ್ಧೆ ಬಂದಳು. ಬಹುಶಃ ಇವರೆಲ್ಲರ ಪರಿಚಿತಳೆಂದು ತೋರುತ್ತಿತ್ತು ಅವಳನ್ನು ನೋಡಿದೊಡನೆಯೇ ಇವರು ನಕ್ಕರು. ನಗು! ಹೆಳೆಯ ಹೆಳೆಯ ವೇಷದಿಂದ ಬಂದ ಆ ಬದ ಮುದುಕಿಯನ್ನು ನೋಡಿ ನಕ್ಕ ಅವರ ನಗು ಪರಿಚಯದ ಅತ್ಯೀಯ ನಗುವೇನೂ ಆಗಿರಲಿಲ್ಲ. ಅದರಲ್ಲಿ ತಿರಸ್ಕಾರ, ವ್ಯಂಗ್ಯಗಳ ಅಂಶವೇ ಹೆಚ್ಚಿನದಾಗಿತ್ತು. ಅವರ ಮಾತು ಕತೆಗಳಿಂದ, ನಡೆ. ನುಡಿಗಳಿಂದ ಅವರು ಹೆಚ್ಚಾಗಿ ಹೆಳೆಯಲ್ಲೇ, ಬೆಳೆದದ್ದೂ ಹೆಳೆಯಲ್ಲೇ ಎಂಬುದು ವ್ಯಕ್ತವಾಗುತ್ತಿದ್ದರೂ ಮೂಲ ನೆಯಾಗಿ ಮುಂಬಯಿ ಯಂತ ಪಟ್ಟಣ ಸೇರಿದವರು, ಎಂದು ತಿಳಿದು ಬರುತಿತ್ತು.

ಆಕೆ ಅವರ ಬಳಿಯೇ ಹೋಗಿ ಕುಳಿತಳು. ಆದರೆ ಆ ಹೆಂಗಸರು ಸ್ವಲ್ಪ ಸ್ವಲ್ಪ ಚಲಿಸಿ ಅವಳಿಂದ ತುಸು ದೂರ ಸರಿದರು. ಆಕೆ ತಮ್ಮ ಬಳಗಕ್ಕೆ ಸೇರಿದವಳೆಂದು ಕಾಣಿಸಿಕೊಂಡರೆ ಅವಮಾನವೆಂದೇನೋ ಆದರೆ ಆ ಮುದುಕಿಗೆ ಅದ್ಯಾವುದರ ಸರಿವೆಯೂ ಇದ್ದಂತಿರಲಿಲ್ಲ. ಆಕೆ ಕುತೂಹಲ ಮತ್ತು ಅನೆ ಕಂಗಳಿಂದ ಅವರನ್ನು ದಿಟ್ಟಿಸುತ್ತಿದ್ದಳು.

"ಹೌದಾ....ಗಿರಿಜ ಯಾವಾಗ ಬಂದದ್ದು?" ಎನ್ನುತ್ತಾ ಅಲ್ಲಿದ್ದ ಒಬ್ಬಾಕೆಯನ್ನು ದಿಟ್ಟಿಸುತ್ತ ಕೇಳಿದಳು.

"ಮೊನ್ನೆ ಬಂದದ್ದು." ಉತ್ತರಿಸಲು ಮನಸ್ಸಿಲ್ಲದ ಗಿರಿಜಳ ಪರವಾಗಿ ಮತ್ತೊಬ್ಬಾಕೆ ನುಡಿದಳು.

ಆಕೆ ಅವಳನ್ನು ಎವೆಯಿಕ್ಕದೆ ನೋಡತೊಡಗಿದಳು. ಇದ್ದಕ್ಕಿದ್ದಂತೆಯೇ ಮುದುಕಿಯ ಮುಖಭಾವ ಕರುಣೆಯಿಂದಲೋ ವ್ಯಥೆಯಿಂದಲೋ ಬಾಡಿತು. ಆಕೆ ನಿಟ್ಟುಸಿರಿಟ್ಟಳು.

"ಹೌದಾ.... ಕಮಲಾ.... ಇವಳಿಗ್ಯಾವಾಗ ಹೇಗಾಯ್ತು?" ಕಮಲ ಮತ್ತು ಉಳಿದಿಬ್ಬರು ನಕ್ಕರು. ಗಿರಿಜ ಮುಖಗಂಟಿಕ್ಕಿ ಕೊಂಡಳು.

"ಅವಳ ಗಂಡ ದೊಡ್ಡ ಆಫೀಸರನಂತೆ, ಮೂಗು ಬಟ್ಟು ಅಸಹ್ಯ ಅಂತ ತೆಗೆಯಲು ಹೇಳಿದ್ದಂತೆ" ಕಮಲ ಮನಸ್ಸಿಲ್ಲದಿದ್ದರೂ ಉತ್ತರಿಸಿದಳು.

"ಮುದಿ ಗೂಬೆ" ಬೆನ್ನ ಹಿಂದಿನೊಂದು ಧ್ವನಿ ಕೇಳಿಸಿತು. ಮುದುಕಿ ದಿಗ್ಭ್ರಾಂತಳಾಗಿ ವಿಸ್ಮಿತಳಾಗಿ ಮೂಕಿಯಂತೆ ಕುಳಿತಳು. ನಾನು ನೋಡಿದೆ, ಒಂದು ಕೈಯಲ್ಲಿ ಕೈ ಗಡಿಯಾರ, ಇನ್ನೊಂದರಲ್ಲಿ ನಾಲ್ಕಾರು ಚಿನ್ನದ ಬಳೆಗಳು, ಕುಂಕುಮವಳಿಸಿದ ಹಣೆ (ಪ್ರಯಾಣದ ಆಯಾಸದ ಬೆವರಿನಿಂದಾಗಿರ ಬಹುದು) ನತ್ತು ತೆಗೆದ ಮೂಗಿನ ತೂತು ಇನ್ನೂ ಹೊಸತಾಗಿತ್ತು, ಇತ್ತೀಚೆಗೆ ವಿಧವೆಯಾದವಳಂತೆ! ಬೇಡ ಬೇಡವೆಂದರೂ ನನಗೂ ನಗು ಬಂತು. ನಾನು ಒಳಗೊಳಗೇ ನಕ್ಕೆ.

ಸ್ವಲ್ಪ ಹೊತ್ತು ಮೌನ. ಮುದುಕಿ ಬೆರಗಾಗಿ ಕಣ್ಣರಳಿಸಿ ಮೌನ ತಾಳಿದ್ದರೆ ಆ ಮಹಿಳೆಯರು ಈ ಪೀಡೆ ಯಾವಾಗ ತೊಲಗಿತೋ ಎಂದು ಯೋಚಿಸುವವರಂತಿದ್ದರು. ಅಷ್ಟರಲ್ಲೇ ಮತ್ತೊಬ್ಬಾಕೆ ಅಲ್ಲಿಗೆ ಬಂದಳು. ಆಕೆಯನ್ನು ನೋಡಿದೊಡನೆಯೇ ಮಹಿಳಾ ವೃಂದ, ಆದರದ, ಸಂತೋಷದ ನಗುವಿನ ಸ್ವಾಗತದೊಂದಿಗೆ ಅಲ್ಲಿಯೆ ಮುದುಡಿಕೊಂಡು ಸ್ಥಳ ಮಾಡಿಕೊಟ್ಟರು. ಮುದುಕಿಯ ಮೂಢತನದಿಂದಾಗಿ ಉಂಟಾದ ಸಿಟ್ಟು, ಬೇಸರ ಒಮ್ಮಿಂದೊಮ್ಮೆಯೇ ಮಾಯವಾಗಿ ಗೆಲುವುಂಟಾಯಿತು.

ನಾನು ನೋಡಿದೆ. ಆಕೆ ನನ್ನ ಪರಿಚಿತಳು. ಆದರೆ ಹೊಸ ವಾತಾವರಣಕ್ಕೆ ಸಂಪೂರ್ಣ ಹೊಂದಿಕೊಂಡ ಆಕೆ ಹಳೆಯ ಆಚರಣೆಗಳೊಂದಿಗೆ ಹಳೆಯ ಪರಿಚಯವನ್ನೂ ಪೂರ್ತಿ ಮರೆತುಬಿಟ್ಟವಳು.

ಆಕೆ ಶಾರದಾ. ಸುಮಾರು ಮೂವತ್ತರ ಪ್ರೌಢ ಯುವತಿ. ಒಂದೆರಡು ಮಕ್ಕಳೂ ಇದ್ದವು. ವಿಧವೆಯಾದ ಮೇಲೆ ಹೊಟ್ಟೆಯ ಪಾಡಿಗೆಂದು ಅರ್ಧ ಓದನ್ನು ಪೂರ್ತಿಗೊಳಿಸಲೆಂದು ಶಾಲೆಸೇರಿ ವಿದ್ಯಾಶಾಲೆಗೆ ಹತ್ತಿದಾಗ ಜೀವನ ನಿರ್ವಾಹದ ನೆವದಿಂದ ದಾರಿ ತಪ್ಪಿ ಶೃಂಗಾರಕ್ಕಾಗಿಯೇ ದೇಹವನ್ನು ವಿಸಲಾಗಿರಿಸಿದವಳು. ಹೂ, ಕುಂಕುಮ, ಕೈ ಬಳೆಗಳಿಂದ ಸಂಪೂರ್ಣ ಮುತ್ತೈದೆಯಾಗಿ ಕಾಣಿಸುತ್ತಿದ್ದಳಲ್ಲದೆ ಅಲಂಕಾರ ನಾಮಗ್ರಿಗಳಿಂದ ಶ್ರೀಮಂತಳಂತೆಯೂ ಕಾಣಿಸುತ್ತಿದ್ದಳು. ಸಂಪ್ರದಾಯಸ್ಥ ಮನೆತನದಲ್ಲಿ ಬೆಳೆದ ಆಕೆಯ ಬದಲಾವಣೆ ಅಧುನಿಕ ಮನೋಭಾವದ ಈ ಮಹಿಳೆಯರ ಮೆಚ್ಚುಗೆಗೆ ಗಳಿಸಿದಂತಿತ್ತು. ಆಕೆಯ ಮಕ್ಕಳೋ, ತಿರುಕರಿಗಿಂತಲೂ ಕೀಳಾಗಿ ದಿನ ದೂಡುತ್ತಿದ್ದವು. ಈಕೆಗೆ ತನ್ನನ್ನು ಬದಲಿಸಿಕೊಳ್ಳುವ ಸಂಭ್ರಮದಲ್ಲಿ ಅವುಗಳ ನೆನಪೂ ಇದ್ದಂತಿರಲಿಲ್ಲ. ವಿಶೇಷ ಅಂದರೆ ಆಕೆ ಹಿರಿಯರ ಒತ್ತಾಯಕ್ಕೆ ಒಪ್ಪಿ ಅವರಿಚ್ಛೆಯಂತೆ ತಲೆಕೂದಲನ್ನೂ ತೆಗೆದು ವಿಧವಾ ವೇಷವನ್ನು ಧರಿಸಿ ಈಗ ಸ್ವೇಚ್ಛೆಯಿಂದ ಈ ವೇಷಕ್ಕೆ ಬಂದವಳು.

ಅಧುನಿಕತೆ ಎಂದರೆ ಎಲ್ಲಕ್ಕಿಂತ ಹೆಚ್ಚು ಮಹತ್ವ ಈ ವೇಷದ ಬದಲಾವಣೆ! ವಿಧವೆ ಮುತ್ತೈದೆಯಾಗಿ ಬಯಸಿದರೆ ಮುತ್ತೈದೆ ವಿಧವೆಯ ವೇಷವನ್ನೊಪ್ಪುತ್ತಾಳೆ.

ಈ ಅದಲು ಬದಲಿನಿಂದಾಗಿಯೇ ಸಂತೃಪ್ತಿಗೊಳ್ಳುವ ಮಾಢ್ಯತೆ ನೋಡಿ ನನಗೆ ನಿಜವಾಗಿಯೂ ಬೇಸರವೆನಿಸಿತು. ಮನಸ್ಸು, ಹೃದಯ ಪರಿಶುದ್ಧವಿಲ್ಲದೆ, ಮಿದುಳು ಅಜ್ಞಾನಾಂಧಕಾರದಲ್ಲಿ ಕೊಳೆಯುತ್ತಿದ್ದರೂ ಅವರು ಬಹಳ ಮುಂದುರಿದ ಮಹಿಳೆಯರಂತಿದ್ದರು.

ಅದಕ್ಕೆ ಕಾರಣ ಈ ವೇಷದ ಬದಲಾವಣೆ!

ಅದಲು ಬದಲಾದ ಈ ವೇಷ! ಇದು ಫ್ಯಾಶನ್!!

ದಿ ಕರ್ನಾಟಕ ಬೇಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ದೊಂಗರಕೇರಿ, ಮಂಗಳೂರು-3

ಪರಿಷ್ಕರಿಸಿದ ಮತ್ತು ಹೆಚ್ಚಿಸಿದ ಠೇವಣಾತಿ ಬಡ್ಡಿ ದರಗಳು:

ಕಾಯಂ ಠೇವಣಾತಿಗಳು:		ರೂ. ನ.ಪೈಸೆ
ಒಂದರಿಂದ ಮೂರು ತಿಂಗಳು ವರೆಗೆ	ವಾರ್ಷಿಕ ಸೇಕಡಾ	4-50
ಆರರಿಂದ ಹನ್ನೆರಡು ತಿಂಗಳು ವರೆಗೆ	,, ,,	4-75
ಹದಿಮೂರರಿಂದ ಇಪ್ಪತ್ತನಾಲ್ಕು ತಿಂಗಳು ವರೆಗೆ	,, ,,	5 00
ಇಪ್ಪತ್ತೈದರಿಂದ ಮೂವತ್ತಾರು ತಿಂಗಳು ವರೆಗೆ	,, ,,	5-25
ನಾಲ್ವತ್ತೆಂಟು ತಿಂಗಳು ಮತ್ತು ಹೆಚ್ಚಿಗೆ	,, ,,	5-50
ಸೇವಿಂಗ್ಸ್ ಬೇಂಕ್ ಠೇವಣಾತಿಗಳು	,, ,,	3-25

ನಿಮ್ಮ
ದೈನಿಕ್ಯದ ಉಳಿತಾಯವನ್ನು ಹನಿ ಡಿಪೋಸಿಟುಗಳಲ್ಲಿ ಮಾಸಿಕ ಉಳಿತಾಯವನ್ನು ಕ್ಯುಮುಲೇಟಿವ್ ಡಿಪೋಸಿಟುಗಳಲ್ಲಿ
ವಿನಿಯೋಗಿಸಿರಿ.

THE KARNATAKA BANK LIMITED

1-7-1962

ESTD. 1921 ಸ್ಥಾಪನೆ

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾದಾರನನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ ಸರಳ ಶೈಲಿಯ ನೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.
120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.
ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ಪ್ರಕಾಶಕರು: ನವಯುಗ ಎಂಟರ್‌ಪ್ರೈಸ್ ಲಿ., ಉಡುಪಿ.
ಮಾರಾಟಗಾರರು. ನವಭಾರತ ಬುಕ್ ಡಿಪೊ, ಉಡುಪಿ.

ವಿಶ್ವ ಬಾಂಧವ್ಯಕ್ಕೆ
ಪ್ರಬಲ ಸಾಧನ — ರೊಟರಿ ಕ್ಲಬ್

ಅಮೆರಿಕೆಯ ಚಿಕಾಗೊ ನಗರದಲ್ಲಿ ಒಬ್ಬ ವಕೀಲರಿದ್ದರು. ಅವರ ಹೆಸರು ಪೌಲ್ ಪಿ. ಹೇರಿಸ್ ಎಂದಾಗಿತ್ತು. ಅವರು ೧೯೦೫ನೆಯ ಇಸವಿಯಲ್ಲಿ 'ರೊಟರಿ'ಯ ಸ್ಥಾಪನೆಯ ಕೆಲಸ ಮತ್ತು ಉದ್ಯೋಗ ದಂಧೆಗಳಲ್ಲಿ ನಿರತರಾಗಿದ್ದ ವ್ಯಕ್ತಿಗಳನ್ನು ಒಂದುಗೂಡಿಸಿ ಒಂದು ಸಂಸ್ಥೆಯ ರೂಪವನ್ನಿತ್ತರು. ಪ್ರಪಂಚದ ಜನರು ಪರಸ್ಪರರನ್ನು ತಿಳಿದುಕೊಳ್ಳಲು ಮತ್ತು ಸದ್ಭಾವ ಹಾಗೂ ಸುಖಶಾಂತಿಯಿಂದ ಬದುಕಲು ಸಹಕಾರ ನೀಡುವಂತೆ ಈ ಸಂಸ್ಥೆಯನ್ನು ಕಟ್ಟಲು ಬಯಸುತಿದ್ದರು.

ಆ ಸಮಯದಲ್ಲಿ ಚಿಕಾಗೊ ನಗರಕ್ಕೆ ಶ್ರೀ ಹೇರಿಸರು ಅಗಂತುಕರಾಗಿದ್ದರು. ಆ ದೊಡ್ಡ ನಗರದಲ್ಲಿ ಏಕಾಂತತೆಯ ಕಷ್ಟವನ್ನು ಅನುಭವಿಸುತಿದ್ದರು. ತಮ್ಮ ಪರಿಚಯ ಸ್ವದೇಶವನ್ನು ವಿಸ್ತರಿಸಲು ಬಯಸುತಿದ್ದರು. ಇತರ ಉದ್ಯೋಗ ದಂಧೆಗಳಲ್ಲಿ ವ್ಯಸ್ತರಾಗಿದ್ದ ವ್ಯಕ್ತಿಗಳ ಬಗ್ಗೆ ವಿಶೇಷವಾಗಿ ಆರಿತುಕೊಳ್ಳಲು ಆತುರರಾಗಿದ್ದರು.

೧೯೦೫ನೆಯ ಫೆಬ್ರವರಿ ೨೩ನೆಯ ದಿನದಂದು ಶ್ರೀ ಹೇರಿಸರು ತಮ್ಮ ಮೂವರು ನೆರೆಹೊರೆಯವರನ್ನು ಕೂಡಿಕೊಂಡರು ಅವರಲ್ಲಿ ಒಬ್ಬಾತನು ಇಂಜಿನಿಯರನಿತನು; ಮತ್ತೊಬ್ಬನು ಇದ್ದಲು ಮಾರುವವನು. ಉಳಿದವನು ಹೊಲಿಗೆಯವನು. ಶ್ರೀ ಹೇರಿಸರು ತಮ್ಮ ಆಂತರಿಕಾಭಿಲಾಷೆಯನ್ನು ಹೊರಗೆಡಹಿದರು; ಆ ನಾಲ್ವರೂ ಕೂಡಲೇ ಒಂದು ಕ್ಲಬ್ಬಿನ ರಚನೆಯ ಕುರಿತು ಮಾತುಕತೆಗೆ ತೊಡಗಿದರು. ಕ್ಲಬ್ಬಿನ ಒಬ್ಬ ಸದಸ್ಯನು ಅದರ ಇತರ ಸದಸ್ಯರಿಗೆ ಉಪಯೋಗಿಯೆನಿಸುವಂ ಕಾರ್ಯಕ್ರಮಗಳನ್ನು ರೂಪಿಸುವುದೇ ಕ್ಲಬ್ಬಿನ ಮುಖ್ಯ ಉದ್ದೇಶವಾಗಿ ಸ್ವೀಕೃತವಾಯಿತು.

ಮೊದಲನೆಯ ರೊಟರಿ ಕ್ಲಬ್ ಆ ದಿನ ಸ್ಥಾಪಿತವಾಯಿತು. ಕ್ಲಬ್ಬಿನ ಸಭೆಗಳು ಸರದಿಯಂತೆ ಸದಸ್ಯರ ಕಾರ್ಯಾಲಯ ಅಥವಾ ಅವರ ಕೆಲಸದ ಸ್ಥಾನಗಳಲ್ಲಿ ನಡೆಯುತಿದ್ದವು ಈ ಪ್ರಾರಂಭಿಕ ಪದ್ಧತಿಯೇ ಕ್ಲಬ್ಬಿನ ಹೆಸರು 'ರೊಟರಿ' (ಚಕ್ರ) ಎಂದಿಡುವ ಪ್ರೇರೇಪಣೆಯನ್ನು ಇತ್ತಿತು.

ಶ್ರೀ ಹೇರಿಸರು ಹೇಳುವಂತೆ ರೊಟರಿಯ ಉದ್ದೇಶವು ಉಪಯುಕ್ತ ಅಧ್ಯಯನಾಯದ ಆಧಾರ ರೂಪದಲ್ಲಿ ಸೇವೆಯ ಆದರ್ಶವನ್ನು ಹೆಚ್ಚಿಸುವುದು. ಅದರ ಜತೆಗೆ ಈ ಕೆಳಗಿನ ಉದ್ದೇಶಗಳೂ ಸೇರಿವೆ:

೧. ಸೇವೆಗೋಸ್ಕರ ಸಂದರ್ಭವೊದಗಿದಾಗ, ಪರಿಚಯ ಹೆಚ್ಚಿಸುವಲ್ಲಿ ಸಹಾಯಮಾಡುವುದು.

೨. ಕಾರ್ಯಕ್ರಮ, ಉದ್ಯೋಗದಂಧೆಗಳಲ್ಲಿ ಉನ್ನತ ನೈತಿಕ ಸಿದ್ಧಾಂತಗಳನ್ನು ಸಮರ್ಥಿಸುವುದು ಮತ್ತು ಎಲ್ಲ ಉಪಯೋಗಿ ದಂಧೆಗಳ ಉಪಯುಕ್ತತೆಯನ್ನು ಮನ್ನಿಸುವುದು

೩. ರೊಟರಿ ಕ್ಲಬ್ಬಿನ ಪ್ರತಿಯೊಬ್ಬ ಸದಸ್ಯರು ತನ್ನ ಸ್ವಂತದ ಕಾರ್ಯಭಾರ ಹಾಗೂ ಸಾಮಾಜಿಕ ಜೀವನದಲ್ಲಿ ಸೇವೆಯ ಆದರ್ಶವನ್ನು ವ್ಯವಹೃತಗೊಳಿಸಬೇಕು ಮತ್ತು

೪. ಸೇವೆಯನ್ನು ಆದರ್ಶವೆಂದು ತಿಳಿಯುವವರು ಕಾರ್ಯಕ್ರಮ ಮತ್ತು ಉದ್ಯೋಗದಂಧೆಗಳಲ್ಲಿ ನಿರತರಾದ ವ್ಯಕ್ತಿಗಳಲ್ಲಿ ವಿಶ್ವ ಬಂಧುತ್ವ ಸ್ಥಾಪನೆ ಮಾಡಿ ವಿಶ್ವದಲ್ಲಿ ಪಾರಸ್ಪರಿಕ ಪರಿಚಯ, ಸದ್ಭಾವನೆ ಮತ್ತು ಶಾಂತಿಯನ್ನು ಹೆಚ್ಚಿಸಬೇಕು. ಹಲ್ಲುಗಳಿರುವ ಚಕ್ರವನ್ನು ರೊಟರಿಯ ಚಿಹ್ನೆಯನ್ನಾಗಿ ಆರಿಸಿದ್ದಾರೆ. ಇದರಲ್ಲಿ 'ಸೇವೆಯೇ ಪರಮ ಧರ್ಮ'ವೆಂಬ ಆದರ್ಶವಾಕ್ಯವು ಅಂಕಿತವಾಗಿದೆ. ಇಂದು ಅಮೆರಿಕೆಯಲ್ಲಿ ೫ ಸಾವಿರ, ಯುರೋಪಿನಲ್ಲಿ ೫೦೦ ದಕ್ಷಿಣ ಅಮೆರಿಕೆಯಲ್ಲಿ ೧,೩೦೦ ಬ್ರಿಟನ್ನಿನಲ್ಲಿ ೮೫೦ ಮತ್ತು ಆಸ್ಟ್ರೇಲಿಯದಲ್ಲಿ ೬೧೦ ರೊಟರಿ ಕ್ಲಬ್ಬುಗಳಿವೆ.

ರೊಟರಿ ಕ್ಲಬ್ಬಿನ ಆದರ್ಶಗಳು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ತೀವ್ರವಾಗಿ ಹರಡುತ್ತ ಹೋದಂತೆ ಅದು ಅಂತಾರಾಷ್ಟ್ರೀಯ ಸದ್ಭಾವನೆಯು ಪ್ರಸಾರವಾಗುವ ಒಂದು ಪ್ರಭಾವಶಾಲೀ ಸಾಧನವಾಗುವುದರಲ್ಲಿ ಸಂದೇಹವಿಲ್ಲ. ವಿದೇಶಗಳಲ್ಲಿ ಅಧ್ಯಯನ ನಡೆಸಲು ರೊಟರಿ ಫೌಂಡೇಶನ್ನನ್ನು ಸ್ಥಾಪಿಸಿ ಈ ದಿಸೆಯಲ್ಲಿ ಮಹತ್ವಪೂರ್ಣ ಹೆಜ್ಜೆಯನ್ನು ರೊಟರಿ ಇಟ್ಟಿದೆ.

ಬಸ್ತಿ ಸೇವೆ, ವಿಕಲಾಂಗ ಮಕ್ಕಳನ್ನು ಸುರಕ್ಷಿ ಸಮರ್ಥಗೊಳಿಸುವುದು, ವಿದ್ಯಾರ್ಥಿಗಳಿಗೆ ಪ್ರಣಶೋಷಗಳನ್ನು ಹೆಚ್ಚಿಸುವುದು ರೊಟರಿಯ ಇನ್ನಿತರ ಕಾರ್ಯಕಲಾಪಗಳು

ರೊಟರಿಯ ಸಂಸ್ಥಾಪಕ ಶ್ರೀ ಹೇರಿಸರು ೧೯೪೭ರಲ್ಲಿ ದೇಹಾಂತಗೊಂಡರು. ಅವರ ಹೆಸರು ಮಾತ್ರ ಅನಂತವಾಗಿದೆ.

ಶಾಲೆಗಳಿಗೆ ಬೇಕಾಗುವ

ಯಾವತ್ತೂ ಫಾರ್ಮುಗಳೂ ಹಾಜರಿ ರಿಜಿಸ್ಟ್ರಿಗಳೂ ಸಿಗುತ್ತವೆ.

ನವಯುಗ ಪ್ರೆಸ್ ಉಡುಪಿ.

ಪಶ್ಚಿಮ ಬಂಗಾಳದ
ಮುಖ್ಯ ಮಂತ್ರಿಯಾಗಿ ಶ್ರೀ ಪಿ. ಸಿ. ಸೇನ್

ರಾಜಾರಾಮ ಮೋಹನ ರಾಯಿಯವರ ಕಾಲದಿಂದ ಡಾ| ವಿಧಾನಚಂದ್ರ ರಾಯರ ವರೆಗೆ ಬಂಗಾಳವು ಮಹಾ ಸುರುಷರ ಪರಂಪರೆಯನ್ನು ಸ್ಥಾಪಿಸಿದೆ. ಈ ಉಜ್ವಲ ಪರಂಪರೆಯು ಖಂಡಿತವಾಗುತ್ತಿದೆ ಎಂಬುದು ನಿಶ್ಚಿತವಾಗಿ ಹೇಳಬರುವಂತಿಲ್ಲ. ಬಂಗಾಳವು ಜೀವಂತವಾಗಿರುವವರೆಗೆ ಯಾವ ವಿಚಾರದ್ವಂದ್ವವೂ ಇಲ್ಲದೆ ಅಲ್ಲಿ ಜೀವಂತ ಸುರುಷರು ಇರುತ್ತಾರೆ ಎಂದು ಮಾತ್ರ ಹೇಳಬಹುದು

ಪಶ್ಚಿಮ ಬಂಗಾಳದ ಮುಖ್ಯ ಮಂತ್ರಿ ಡಾ| ಬಿ. ಸಿ. ರಾಯ್ ಅವರ ನಿಧನದ ನಂತರ ಅವರ ಕಾರ್ಯಭಾರವನ್ನು ಶ್ರೀ ಪಿ. ಸಿ. ಸೇನರು ನಿರ್ವಹಿಸುತಿದ್ದರು. ಅಲ್ಲದೆ, ಮುಂದೆ ನಡೆದ ನಾಯಕ ಚುನಾವಣೆಯಲ್ಲಿ ಅವರು ಸರ್ವಾನುಮತದಿಂದ ಆಯ್ಕೆಗೊಂಡರು. ಪಶ್ಚಿಮ ಬಂಗಾಳದ ಪ್ರಗತಿಯು ನಿಷ್ಕಂಟಕವಾಗಿ ಮುಂದುವರಿಯುವುದು ಎಂಬುದಕ್ಕೆ ಇದೊಂದು ಜ್ವಲಂತ ನಿದರ್ಶನವೆಂದರೆ ಅತಿಶಯೋಕ್ತಿಯಲ್ಲ.

ನಾಲ್ಕು ವರ್ಷಗಳಿಗೆ ಮೊದಲು ಆಹಾರ ಮಂತ್ರಿಯಾಗಿದ್ದ ಶ್ರೀ ಸಿದ್ಧಾರ್ಥಶಂಕರ ರೇಯವರು ಮುಖ್ಯ ಮಂತ್ರಿರಾಯ್ ರೊಡನೆ ಭಿನ್ನಾಭಿಪ್ರಾಯವನ್ನು ತಳೆದು ಸಚಿವ ಸಂಪುಟದಿಂದ ಹೊರ ನಡೆದರು. ಆಗ ಈ ರಿಕ್ತಸ್ಥಾನಪೂರ್ತಿಗಾಗಿ ಪಾದಾರ್ಪಣ ಮಾಡಿದ ಸೇನರು ಪ. ಬಂಗಾಳದ ಗಂಭೀರ ಪರಿಸ್ಥಿತಿಯನ್ನು ಸುಧಾರಿಸಲು ಬದ್ಧಕಂಕಣರಾದರು ಮಾತ್ರವಲ್ಲ, ಅದರಲ್ಲಿ ಯಶಸ್ವಿಯೂ ಯೆನಿಸಿದರು. ಸಾಮಾನ್ಯವಾಗಿ ದೇಶದಲ್ಲಿ ಆಹಾರದ ಪರಿಸ್ಥಿತಿಯು ಗಂಭೀರವಾಗಿಯೇ ಇದ್ದುದರಿಂದ, ಕೇಂದ್ರದಲ್ಲಾಗಲೀ ರಾಜ್ಯದಲ್ಲಾಗಲೀ ಆಹಾರ ಮಂತ್ರಿಯೆನಿಸಿದವನು ವಿರೋಧಿ ಪಕ್ಷದ ಸದಸ್ಯರಿಂದ, ಕೆಲವೊಮ್ಮೆ ತನ್ನ ಪಕ್ಷದವರಿಂದಲೇ—ತೀಕ್ಷ್ಣವಾದ ಟೀಕೆಗಳನ್ನು ಎದುರಿಸಬೇಕಾಗಿತ್ತು. ಶ್ರೀ ಅಜಿತ ಪ್ರಸಾದ ಜೈನರು ಆಹಾರ ಮಂತ್ರಿಯೆನಿಸಿ ಕೇಂದ್ರದಲ್ಲಿ ಅಸಫಲರಾದುದರಿಂದಲೇ ಅವರು ರಾಜೀನಾಮೆಯನ್ನು ಇತ್ತು ಹೊರಬರಬೇಕಾಯಿತೆಂಬುದನ್ನು ನಾವು ಸ್ಮರಿಸಿಕೊಳ್ಳಬಹುದು ಇಂದಿಗಾದರೂ ಅಂತಹ ಗಂಭೀರ ಸ್ಥಿತಿಗತಿಯಿಲ್ಲವಾದರೂ ಆಹಾರದ ಅಭಾವವು ಇದ್ದೇ ಇದೆಯೆಂಬುದನ್ನು ಮರೆಯುವಂತಿಲ್ಲ.

ಆಹಾರ ಮಂತ್ರಿಯೆಂದು ಸಂಪುಟ ಸೇರಿದ ಶ್ರೀ ಪಿ. ಸಿ. ಸೇನರಾದರೂ ಇಂತಹ ಟೀಕೆ ಟಿಪ್ಪಣಿಗಳಿಗೆ ಅಪವಾದ ವೆನಿಸಲಿಲ್ಲ. ಎನಿಸುವುದು ಸಾಧ್ಯವೂ ಇಲ್ಲ. ಕೆಲವು ತಿಂಗಳುಗಳಿಗೆ ಮೊದಲು ಅವರು ಅಕ್ಕಿ ಮತ್ತಿತರ ಧಾನ್ಯಗಳ ಬೆಲೆಯನ್ನು ನಿಯಮಿತಗೊಳಿಸುವ ಹಾಗೂ ಆಹಾರ ಧಾನ್ಯಗಳ ದುರ್ಮಿಶ್ರೀಕರಣವನ್ನು ತಡೆಯುವ ವಿಧೇಯಕವನ್ನು ವಿಧಾನ ಸಭೆಯಲ್ಲಿ ಮಂಡಿಸುವಾಗ ವಿಶೇಷ ರೀತಿಯ ಕಟು ನಿಂದೆ-ಟೀಕೆಗಳನ್ನು ಸಹಿಸ ರೇಕಾಯಿತು. ಆದರೆ, ತಮ್ಮ ನಾಯಕ ಡಾ| ಬಿ. ಸಿ. ರಾಯ್ ಯವರ ಆಜ್ಞಮುಷ್ಟಿಯ ಆಡಳಿತೆಯಲ್ಲಿ ಅವರು ಸೂಕ್ತ ಮಾರ್ಗದರ್ಶನದ ಪರಿಣಾಮವಾಗಿ ಎಡತಾಕಿದ ಸಕಲ ಸಂಕಷ್ಟಗಳನ್ನೂ ಎದುರಿಸಿ ಮುಂದುವರಿಯುವ ಸಾಹಸವನ್ನು ತೋರಿಸಿದರು. ಈ ಸಾಹಸದ ಪರಿಣಾಮವಾಗಿಯೇ ಬಿ. ಸಿ. ರಾಯರ ನಂತರ ಕಾಂಗ್ರೆಸ್ ಭಿನ್ನ ಭಿನ್ನವಾಗುವುದೆಂದು ಹಗಲುಗನಸು ಕಾಣುತಿದ್ದ ವಿರೋಧೀ ದಳದ ಸದಸ್ಯರ ನಡುವೆ 'ಹಾಗಾಗಲಿಲ್ಲ' ಎಂದು ಪ್ರತಿಧ್ವನಿಯೆಬ್ಬಿಸಿ ಅವರ ಭ್ರಮನಿರಸನ ಮಾಡಿದ ಶ್ರೇಯಸ್ಸು ಶ್ರೀ ಪಿ. ಸಿ. ಸೇನರು ಪಡೆದರು.

ಮುಖ್ಯ ಮಂತ್ರಿಯೆನಿಸಿದ ಸೇನರು ಆಹಾರ ಮತ್ತು ಪೊರಯ್ಕೆಯ ಶಾಖೆಗಳೊಡನೆ ಕೃಷಿ, ಸಾಮಾನ್ಯ ಆಡಳಿತ, ರಾಜಕೀಯ ಲಂಚನಿರೋಧ ಮತ್ತು ಅರ್ಥ ಹಾಗೂ ಅಭಿವೃದ್ಧಿಯ ವಿಭಾಗಗಳನ್ನು ಇಟ್ಟುಕೊಂಡಿದ್ದಾರೆ ಮುಖ್ಯವಾಗಿ ಹಣ ಕಾಸು ಮತ್ತು ಆಹಾರದ ಶಾಖೆಗಳು ಇವರ ಕೈಗಳ್ಲವೆ ಮುಖ್ಯ ಮಂತ್ರಿಯ ಕರ್ತವ್ಯ ನಿರ್ವಹಿಸುವುದರೊಡನೆ ಇವರು ಈ ಗುರುತರವಾದ ಶಾಖೆಗಳ ಜವಾಬುದಾರಿಯನ್ನು ಹೊರುವುದಕ್ಕೂ ಸಿದ್ಧರಾದುದೇ ಅವರ ಕರ್ತೃತ್ವ ಶಕ್ತಿಗೊಂದು ದ್ಯೋತಕವಾಗಿದೆ. ಸೇನರು ಈ ಮೊದಲು ತೋರಿಸಿದ ಕಾರ್ಯಶೀಲತೆ ಮತ್ತು ಕರ್ತವ್ಯ ಪಾಲನೆಗಳಿಂದ ಅವರು ಬಿಧಾನ ಚಂದ್ರ ರಾಯ್ ಯವರ ನಿಜವಾದ ಉತ್ತರಾಧಿಕಾರಿಯೆ ನಿಸಲು ಅರ್ಹರೆನಿಸಿದ್ದಾರೆ.

ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷ ಶ್ರೀ ಅತುಲ್ಯ ಘೋಷರೇ ಇವರ ಹೆಸರನ್ನು ನಾಯಕಸ್ಥಾನಕ್ಕೆ ಸೂಚಿಸಿದುದರಿಂದಲವರ ಹೃತ್ಪೂರ್ವಕ ಸಹಕಾರ ಸೇನರಿಗೆದ್ದೇ ಇರುವುದು. ರಾಯರ ಆಡಳಿತವು ಕೇಂದ್ರ ರಾಜ್ಯಗಳಲ್ಲಿ ಸದಭಿಪ್ರಾಯ ಹುಟ್ಟಿಸಿದಂತೆಯೇ ಸೇನರ ಪ್ರಶಾಸನವೂ ವೈಶಿಷ್ಟ್ಯಪೂರ್ಣವಾಗುವುದೆಂದು ಆಶಿಸ ಬಹುದು.

ಬ್ಯಾಂಕ್ ಖಾತೆಯನ್ನು ಯಾರು ತೆರೆಯಬಹುದು?

ಬ್ಯಾಂಕ್ ಖಾತೆ ತೆರೆಯಲು, ತಮಗೆ ಅಸಾಧ್ಯವೆನಿಸುವ ನಿರ್ಬಂಧಗಳಿವೆಯೆಂದು ಹಲವರು ಭಾವಿಸುತ್ತಾರೆ. ಇದೊಂದು ತಪ್ಪು ಭಾವನೆ. ದಿನಕೂಲಿ ಪಡೆವವನು ಕೂಡಾ ಬ್ಯಾಂಕಿನಲ್ಲಿ ಚಿಕ್ಕ ಉಳಿತಾಯ ಖಾತೆಯನ್ನು ತೆರೆಯಬಹುದು. ಇಂದಿನ ದಿನಗಳಲ್ಲಿ ಅದು ಅವಶ್ಯವೂ ಇದೆ. ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ಎಲ್ಲರಿಗೂ ಏಕಪ್ರಕಾರದ ಸೌಜನ್ಯ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ನವಯುಗ'ಕ್ಕೆ

ಚಂದಾದಾರರಾಗಿ

ಪ್ರೋತ್ಸಾಹಿಸಿರಿ

ಸೃಷ್ಟಿ ಸ್ಥಿತಿಲಯೆ ಕಾರಣ

ವಿಶ್ವರೂಪಿ - ಪರಮಾತ್ಮ

ಶ್ರೀ ಎಂ. ಬಿ. ಶಂಕರ ರಾವ್, ಐ. ಎ. ಎಸ್. (ನಿವೃತ್ತ)

ಅತಿ ಪುರಾತನವಾದ ಗ್ರಂಥವು ಋಗ್ವೇದವು ಹೆಚ್ಚು ಕಡಿಮೆ ೪೦೦೦ ವರ್ಷಗಳ ಹಿಂದೆ ಋಗ್ವೇದದ ರಚನೆಯೆಂದು ಹಲವು ವಿದ್ವಾಂಸರು ಶೋಧಿಸಿರುವರು. ವಾಙ್ಮಯ ಶೋಧಕರು ಕೂಡ ಪ್ರಪಂಚದಲ್ಲಿ ಆದಿ ಗ್ರಂಥವು ಋಗ್ವೇದವಿರಬೇಕೆಂದು ಅಭಿಪ್ರಾಯಪಟ್ಟಿರುವರು. ಪ್ರಪಂಚವಿಡಿ ಸೃಷ್ಟಿಯಾಗುವ ಮೊದಲು ದಿಗಂತಗಳೆಲ್ಲ ತಮಸ್ಸಿನಿಂದ ಆವರಿಸಿತ್ತೆಂದು ಋಗ್ವೇದದಲ್ಲಿ ಹೇಳಿಯಾಗಿದೆ. ಆ ತಮಸ್ಸಿನ ಆಂತರದಲ್ಲಿ ಜ್ಞಾನ ಸ್ವರೂಪವಾದ ಪರಮಾತ್ಮನು ನೆಲಸಿಕೊಂಡು ತನ್ನ ಜ್ಞಾನ ಶಕ್ತಿಯ ಪ್ರಭಾವದಿಂದ ಈ ವಿಶ್ವವನ್ನು ಸೃಷ್ಟಿಸಿದನು. ಇದೇ ವಿಚಾರವನ್ನು ಮನುಸ್ಮೃತಿಯೂ ಉಲ್ಲೇಖಿಸುತ್ತದೆ. ತಮಸ್ಸಿನಿಂದ ಪ್ರಕಾಶಾತ್ಮನಾದ ಪರಮಾತ್ಮನು ತಲೆದೋರಿ ಆತನ ಸ್ವರೂಪವು ಕರಡಿಕೊಂಡಾಗ ತಮಸ್ಸು ಮಾಯವಾಗುತ್ತ ಬಂದಿತು. ಅವ್ಯಕ್ತನಾದ ಭಗವಂತನು ವ್ಯಕ್ತ ವಿಶ್ವವನ್ನು ಉಂಟು ಮಾಡಿದನು. ಭಾಗವತ ಪುರಾಣದಲ್ಲಿ ಭಗವಂತನು ಹೀಗೆ ಸಾರಿರುವನು "ಸೃಷ್ಟಿಯ ಕಾಲದಲ್ಲಿ ನಾನೊಬ್ಬನಲ್ಲದೇ ಬೇರೇನೂ ಇರಲಿಲ್ಲ. ಸೃಷ್ಟಿಯ ಲಯದ ಕಾಲದಲ್ಲೂ ಉಳಿಯುವವನು. ನಾನೊಬ್ಬನೇ". ಶಿವ ಪುರಾಣದಲ್ಲಿ ಈ ರೀತಿ ವಿವರಿಸಿಯಾದೆ. "ಏಕ ಏವ ತದಾ ರುದ್ರೋ ನದ್ವಿತೀಯೋಸ್ತಿ ಕಶ್ಚನ | ಸಂಹೃಜ್ಯಂ ವಿಶ್ವಮಖಿಲಂ ಗೋಪ್ತಾಂತೇ ಸಂಚುಕೋಚಹ ॥ —ಎಂದರೆ ಆ ಕಾಲದಲ್ಲಿ ರುದ್ರನೊಬ್ಬನೇ ಇದ್ದವನು. ವಿಶ್ವಸಂಹಾರಕನಾದ ಅವನೇ ಸೃಷ್ಟಿಯನ್ನು ಉಂಟು ಮಾಡಿದನು ಅವನ್ನು ಕೊನೆಗೆ ಲಯ ಮಾಡುವವನೂ ಅವನೇ—

ಪರಮ ಪುರುಷ ಪರಮಾತ್ಮನನ್ನು ಭಾಗವತದಲ್ಲಿ ಈ ರೀತಿ ವರ್ಣಿಸಿಯಾದೆ—ಪರಮಾತ್ಮನು ಸತ್ಯ ಪುರುಷನು, ಅನಂತ ಜ್ಯೋತಿಯುಃ ತಾನು ನಾಶರಹಿತನಾಗಿ ಸಕಲ ಸೃಷ್ಟಿಗೂ ಆದಿ ಕಾರಣನು. ಈತನು ಸದಾ ಕಾಲವೂ ಸ್ವಯಂಪೂರ್ಣನು ಮತ್ತು ಸ್ವಯಂ ಪ್ರಕಾಶನು.. ಬ್ರಹ್ಮ ವಿಷ್ಣು ಮಹೇಶ್ವರರಲ್ಲಿ ಭೇದವಿಲ್ಲ. ಸೃಷ್ಟಿಗೆ ಕರ್ತೃ ಬ್ರಹ್ಮನಾದರೆ, ರಕ್ಷಣೆನು ವಿಷ್ಣು, ನಾಶ ಮಾಡುವಾಗ ತಾನೇ ರುದ್ರನು. ಸರ್ವವ್ಯಾಪಿಯಾದ ಈ ಪರಮಾತ್ಮನ ಅಂತರಾಳವನ್ನು ತಿಳಿಯುವರೆ ಯಾರಿಗೂ ಸಾಧ್ಯವಾಗಿಲ್ಲ. ಪರಮಾತ್ಮನು ಭೌತಿಕ ಕಣ್ಣುವಿಗೆ ಗೋಚರವಾಗನು ಎಂದು ವೇದಗಳು ಕೂಡ ಸಾರಿಬ್ಬಾವೆ. ಭಗವಂತನನ್ನು ಪ್ರತ್ಯಕ್ಷ ಗೋಚರಿಸುವುದು ಅಸಾಧ್ಯವಾದರೂ, ನಮ್ಮ ಶ್ರವೃತ್ತಿಗಳನ್ನು ಶುದ್ಧಗೊಳಿಸಿ ಜ್ಞಾನಬಲದಿಂದ ನಾವು ಭಗವಂತನನ್ನು ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯವಿದೆ ಜ್ಞಾನ ಸಂಸ್ಕಾರವಾಗದೇ ಭಗವಂತನ ಅನ್ವೇಷಣೆಯು ಸಾಧ್ಯವಿಲ್ಲ. ಸೂರ್ಯ ಚಂದ್ರರೂ ಭೂಮ್ಯಾಕಾಶಗಳೂ ಪರಂಜ್ಯೋತಿ ಪರಮಾತ್ಮನಿಂದ ಸೃಷ್ಟವಾದುವೆಂದು ವೇದಗಳು ಸಾರುತ್ತವೆ—"ಸೂರ್ಯಚಂದ್ರಮಸೌಧಾತಾ ಯಥಾಪೂರ್ವಮಕಲ್ಪಯತ್ | ದಿವಂ ಚ ಪೃಥಿವೀಂ ಭಾಂತರಿಕ್ಷಮಥೋ ಸ್ವಃ ॥"

ನಮ್ಮ ದೇಹಗಳ ಯಂತ್ರ ಚೇತನತೆಯನ್ನು ಪರಿಶೀಲನೆ ಮಾಡಿದರೆ, ಈ ಶರೀರದ ಮುಖ್ಯ ಅಂಗವಾದ ಬಾಯಿಯಿಂದ ನಾವು ದಿನನಿತ್ಯ ಆಹಾರ ಸೇವನೆಯನ್ನು ಮಾಡುತ್ತೇವೆ. ದವಡೆ ಮತ್ತು ಹಲ್ಲುಗಳ ಆಧಾರದಿಂದ ಆಹಾರವನ್ನು ಜಗಿಯುತ್ತೇವೆ. ಅನ್ನನಾಳದ ಮೂಲಕ ಆಹಾರವು ಅನ್ನಕೋಶವನ್ನು ಕೂಡುತ್ತದೆ. ಅನ್ನನಾಳದ ಶ್ವಾಸಕೋಶಗಳ ಶಕ್ತಿಯಿಂದ ಶ್ವಾಸವು ನಡೆಯುತ್ತದೆ. ಉದರದ ಒಂದು ಭಾಗದಲ್ಲಿ ನಾವು ಸೇವಿಸಿದ ಆಹಾರವು ಒಟ್ಟಾಗುತ್ತದೆ—ಅಲ್ಲಿಯೇ ಪಚನಕ್ರಿಯೆಯು ನಡೆಯುವುದು. ಪಚನವಾದ ಆಹಾರವೇ ರಕ್ತವಾಗುವುದು. ಆ ರಕ್ತವು ಎದೆಯಗುಂಡಿಯಲ್ಲಿ ಗುಂಪಾಗಿ ಅಲ್ಲಿಂದ ಅನೇಕ ಧಮನಿಗಳ ಮೂಲದೇಹದ ಅನೇಕಕಾನೇಕ ಭಾಗಗಳಿಗೆ ಹರಿದು ದೇಹಕ್ಕೆ ಶಕ್ತಿಯನ್ನೂ, ಉಲ್ಲಾಸವನ್ನೂ, ಚೈತನ್ಯವನ್ನೂ ಕೊಡುತ್ತದೆ. ನಿರರ್ಥಕ ಪದಾರ್ಥಗಳು ವಿಸರ್ಜನಪದಲ್ಲಿಯೂ, ಮೂತ್ರ ರೂಪದಲ್ಲಿಯೂ ವಿಸರ್ಜಿತವಾಗುವುದು. ಅನಂತರ ನೋಡುವುದಕ್ಕೆ ಎರಡು ಕಣ್ಣುಗಳೂ, ಕೇಳುವುದಕ್ಕೆ ಎರಡು ಕಿವಿಗಳೂ, ಘ್ರಾಣಕ್ಕೆ ಎರಡು ನಾಸಿಕ ರಂಧ್ರಗಳೂ, ಇತರ ಕಾರ್ಯಗಳನ್ನು ಮಾಡಲಿಕ್ಕೆ ಎರಡು ಹಸ್ತಗಳೂ, ನಡೆಯುವುದಕ್ಕೆ ಎರಡು ಕಾಲುಗಳೂ, ಸಂತಾನ ಉತ್ಪತ್ತಿಗೆ ಜನನೇಂದ್ರಿಯವೂ ನಮ್ಮ ದೇಹದಲ್ಲಿ ಕೂಡಿ ಇವೆ. ಇವೆಲ್ಲಾ ಜೀವ ವಿಕಸನದ ಗೋಚರವಾಗುವ ವಿಚಾರಗಳು. ಆದರೆ ವಾಕ್ಯ-ಚಿತ್ತಗಳ ಮಹಾ ಶಕ್ತಿಯು ಮಾತ್ರ ದೈವಶಕ್ತಿಯ ಅದ್ಭುತ ನಿದರ್ಶನವೆಂದರೆ ಅತಿಶೋಯಕ್ತಿಯಾಗದು. ತಾರ್ಕಿಕ ಬಲ, ಕಲ್ಪನೆಯ ಶಕ್ತಿ, ಗಣನೆಯ ಗುಣ, ರಚನಾ ಶಕ್ತಿ, ಗ್ರಹಣಶಕ್ತಿ ಮೊದಲಾದ ಹಲವು ಮನೋಶಕ್ತಿಗಳು ನಮ್ಮಲ್ಲಿ ಭವ್ಯ ಮೆಯನ್ನುಂಟುಮಾಡುವವು. ಮನುಷ್ಯರ ವಾಕ್ಯಶಕ್ತಿಯನ್ನೂ, ಧ್ವನಿಯನ್ನು ಭಾವಿಸಿ ಅನೇಕ ಬಾರಿ ನಾವು ಬೆರಗಾಗುತ್ತೇವೆ. ಅಂತೂ ಈ ಸೃಷ್ಟಿಯು ರಮಣೀಯವಾಗಿದ್ದು ಇದರಲ್ಲಿ ಅನಂತಶಕ್ತಿಯ ಸಂಪನ್ನತೆಯು ತುಂಬಿಕೊಂಡು ವರ್ಣನಾತೀತ

ಗಗನಯಾತ್ರಿ ಅಮೆರಿಕೆಯ ಸ್ಕಾಟ್ ಕಾರ್ಪೆಂಟರ್.

ವಾದ ಈ ಶಕ್ತಿಯ ಪ್ರಕಾಶವು ಪರಮೇಶ್ವರ, ಪರಬ್ರಹ್ಮ, ನಾರಾಯಣ, ಭಗವಂತ, ವಿಷ್ಣು, ಶಿವ, ಇವೇ ಮೊದಲಾದ ಸಾವಿರಾರು ನಾಮಗಳಿಂದ ವ್ಯವಹೃತವಾಗುವುದು. ದೇವರು ಒಬ್ಬನೇ ಆದರೂ ಜನರು ಭೂಲೋಕದಲ್ಲಿ ಅವನನ್ನು ಅನೇಕ ವಿಧಗಳಲ್ಲಿ ಕಲ್ಪಿಸಿಕೊಂಡಿದ್ದಾರೆ.

ಪ್ರತಿಯೊಬ್ಬನೂ ಪ್ರಾತಃ ಕಾಲದಲ್ಲಿ ಲೋಕಾಧ್ಯಕ್ಷನನ್ನೂ, ಸರ್ವಲೋಕ ಮಹೇಶ್ವರನೂ ಆದ ಪರಮಾತ್ಮನನ್ನು ಸ್ತುತಿಸಬೇಕು. ಪರಮಾತ್ಮನ ತೇಜಸ್ಸು ಎಲ್ಲಾ ತೇಜಸ್ಸುಗಳಿಂದ ಬಲವತ್ತರವಾಗಿರುವುದು. ಸಕಲ ಜೀವಿಗಳಿಗೂ ಪರಮೈಶ್ವರ್ಯನಾಗಿ, ಪವಿತ್ರರಲ್ಲಿ ಅತಿ ಪವಿತ್ರನಾಗಿ ಶರಹಿತನಾದ ಪರಮ ಮಂಗಲನನ್ನು ಸದಾ ಕಾಲ ಸ್ತುತಿಸುತ್ತ ಬಾಳುವುದೇ ಮಾನವನ ಮುಖ್ಯ ಧರ್ಮವು. ವಿಷ್ಣು ಸಹಸ್ರನಾಮ ಶಿವ ಸಹಸ್ರನಾಮ ಮೊದಲಾದ ಪುಣ್ಯ ಸ್ತೋತ್ರಗಳಲ್ಲಿ ಪರಮಾತ್ಮನ ಸ್ತುತಿ ಭಾಗವು ಉದ್ಧರಿತವಾಗಿಯದೆ. ಈ ಸಹಸ್ರನಾಮಗಳನ್ನು ದಿನ ನಿತ್ಯ ಹಾಡು ರೂಪದಲ್ಲಿ ಸಚ್ಚರಿಸಿದರೆ ಆ ಕಾಲದ ಮಟ್ಟಿಗಾದರೂ ಚಿತ್ತಕ್ಕೆ ಶಾಂತಿ ಲಭಿಸುವುದು ನಿಶ್ಚಯ.

ಭಗವಂತನ. ತತ್ವತಃ ಒಬ್ಬನೇಯಾದರೂ ಸೃಷ್ಟಿಕಾಲದಲ್ಲಿ ಬ್ರಹ್ಮನೆಂದೂ, ಪಾಲನಕಾಲದಲ್ಲಿ ವಿಷ್ಣುವೆಂದೂ, ಲಯಕಾಲದಲ್ಲಿ ಶಿವನೆಂದೂ ಬೇರೆ ಬೇರೆ ಹೆಸರುಗಳನ್ನು ತಳೆಯುತ್ತಾನೆ ಎಂದು ವಿಷ್ಣು ಪುರಾಣದಲ್ಲಿ ವಿಶದವಾಗಿ ಹೇಳಿಯದೆ. ಶಿವಪುರಾಣದಲ್ಲಿ ಕೂಡ ಇದೇ ಅಭಿಪ್ರಾಯವು ತಿಳಿಸಲ್ಪಟ್ಟಿದೆ. ಅದು ಕಾರಣ ಬ್ರಹ್ಮ, ವಿಷ್ಣು, ಶಿವರನ್ನು ಪರಸ್ಪರ ಭಿನ್ನವೆಂದು ಎಣಿಸುವುದು ಕೇವಲ ತಪ್ಪು.

ಶ್ರೀ ಮದ್ಭಾಗವತವು ಪರಮಾತ್ಮನನ್ನು ಈ ರೀತಿ ವಿವರಿಸುತ್ತದೆ. "ಭಗವಂತನು ಸತ್ಯ ಸ್ವರೂಪನು; ಆದಿಯಿಂದ ಇದ್ದವನು. ಈಗಲೂ ಇದ್ದಾನೆ. ಇನ್ನೂ ಎಂದೆಂದಿಗೂ ಸದಾಕಾ ಇರತಕ್ಕವನು. ಆತನು ಪೂರ್ಣಜ್ಞಾನಿಯು ಚಿದಾನಂದ ರೂಪನು, ಅನೇಕ ನಶ್ವರ ಶರೀರಗಳ ಮೂಲಕ ಈ ವಿಶ್ವದ ಲೀಲೆಯನ್ನು ನಡಿಸುತ್ತಾ ಇದ್ದಾನೆ. ಆವನು ಆದ್ಯಂತಗಳಿಲ್ಲದವನು, ಅದ್ವಿತೀಯನು ಮತ್ತು ನಾನಾ ರೂಪಗಳಲ್ಲಿ ವ್ಯಕ್ತನಾಗಿದ್ದಾನೆ."

ಪರಮಾತ್ಮನಿಗೆ ಹುಟ್ಟು ಸಾವುಗಳಿಲ್ಲ. ಬೆಳವಣಿಗೆ, ಬಾಡುವಿಕೆಗಳೂ ಇಲ್ಲ. ಜನನ ಮರಣಗಳ ಸೋಂಕು ಇಲ್ಲ ಆದರೂ ಭೂಲೋಕದ ಸಕಲ ಪರಿವರ್ತನಗಳಲ್ಲೂ

(ಇನ್ನೇ ಪುಟ ನೋಡಿ)

"ಸೇವೆಯೇ ಮೊದಲು; ಸೇವೆಯಲ್ಲಿ ಮೊದಲು"

ಈ ಉದಾತ್ತ ಧ್ಯೇಯ ಸಾಧನೆಗಾಗಿಯೇ

— ಕೊಪ್ಪೊರೇಶನ್ ಬೇಂಕ್ —

ನಿಮ್ಮ ಹಣಕ್ಕೆ

ಅತ್ಯುತ್ತಮ ಭದ್ರತೆಯೊಂದಿಗೆ ಆಕರ್ಷಕ ಬಡ್ಡಿ ಕೊಡುತ್ತಿದೆ.

ದಿ ಕೆನರಾ ಬೇಂಕಿಂಗ್ ಕೊಪ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಉಡುಪಿ)

ಆಡಳಿತ ಆಫೀಸು: ಮಂಗಳೂರು.

ಉಡುಪಿ ಕರ್ನಾಟಕ ಸಂಘದ

ಒಂದೊಂದು ರೂಪಾಯಿ ಬೆಲೆಯ

ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ

(ಯು. ರಾಘವೇಂದ್ರ ಆಚಾರ್ಯ, ಎಂ. ಎ.)

ಸಾಮಾನ್ಯ ರೋಗಗಳು

(ಡಾ. ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್)

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ

ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.

ಉಡುಪಿಯಲ್ಲಿ ಪ್ರತಿಗಳು ಸಿಗುವ ಸ್ಥಳ—

ನವಭಾರತ ಪುಸ್ತಕ ಭಂಡಾರ,

ಉಡುಪಿ.

ಭಾರತ ದರ್ಶನ

ಮನಾಳಿಯಲ್ಲಿ ನೆಹರೂಜೀ

(ಮನಾಳಿಯಲ್ಲಿ ನೆಹರು ವಿಶ್ರಾಂತಿ ಪಡೆದಾಗ ಸಾಮಾಜಿಕ ಕಾರ್ಯಕರ್ತ ಪಂ. ರಮಾನಾಥ ಕಾಲಿಯಾರವರು ಅವರನ್ನು ಭೆಟ್ಟಿಯಾದರು. ಆ ಪ್ರಸಂಗದ ಸಂಸ್ಮರಣೆಯದು.)

೧೯೫೮ರ ಜೂನ್ ತಿಂಗಳು. ಪ್ರಧಾನ ಮಂತ್ರಿ ನೆಹರು ಮನಾಳಿಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದರು. ಜವಾಹರಲಾಲರೂ ವಿಶ್ರಾಂತಿ ತೆಗೆದು ಕೊಳ್ಳುತ್ತಾರೆಯೆಂಬ ಸುದ್ದಿ ಅಂದು ಜನತೆಯನ್ನು ವಿಸ್ಮಯಗೊಳಿಸಿತ್ತು ಮಾತ್ರವಲ್ಲ, ಅವರಿಗೆ ಅದೊಂದು ಬಗೆ ಹರಿಯದ ಸಮಸ್ಯೆಯೇ ಆಗಿತ್ತು.

ನಾನು ಮನಾಳಿಯ ಫಾರೆಸ್ಟ್ ರೆಸ್ಟ್ ಹೌಸಿನ ಚಾವಡಿಯಲ್ಲಿ ಚೆತ್ತದ ಕುರ್ಚಿಯಲ್ಲಿ ಕುಳಿತು ಪಂಡಿತಜಿಯವರನ್ನು ಪ್ರತೀಕ್ಷಿಸುತಿದ್ದೆ. ಅಷ್ಟರಲ್ಲೇ ಅವರು ಬಂದು ಕೇಳಿದರು: "ಹೇಳಿ, ಏನು ಸಮಾಚಾರ?"

"ತಮ್ಮೊಡನೆ ತುಸು ಅವಶ್ಯವಾದ ಮಾತುಕತೆ ನಡೆಸಲಿತ್ತು; ಕಾಣುವುದಕ್ಕೆ ಬಂದಿದ್ದೆ"—ಮಾತು ಮುಂದುವರಿಯ ತೊಡಗಿತು. ಹೇಳ ಬೇಕಾದ ಮಾತಿನ ಪ್ರಸಂಗವೂ ಬಂತು. ನಡುವೆ ಅವರು ತನ್ನ ಸ್ಟೆಡಿ ರೂಮಿಗೆ ಹೋಗಿ ರೈಟಿಂಗ್ ಪೇಡ್, ಪೆನ್ ಹಿಡಿದುಕೊಂಡು ಬಂದರು. ಏನನ್ನೋ ಬರೆದುಕೊಳ್ಳತೊಡಗಿದರು.

"ಸರಿ, ಸರಿ, ಉಪ್ಪಿನ ವಿಷಯ ನೀವೇನು ಹೇಳುತ್ತಿದ್ದೀರಿ?"

ನಾನು ನಮ್ರನಾಗಿ ಹೇಳಿದೆನು. ಪಂಡಿತರೆ, ಇದು ದೇವಭೂಮಿ. ಇಲ್ಲಿನ ಸರಳ ನಿವಾಸಿಗಳು, ನಗುಮೊಗದವರು. ಕೆಂಪು ಗಲ್ಲದವರು, ಸ್ವಭಾವ ಶಾಂತರೇ ನಮಗೆ ಬಂಗಾರ ಬಣ್ಣದ ಸೇಬು ಮೊದಲಾದುವನ್ನು ಬೆಳೆಸಿ ಕಳಿಸುವವರು. ಆದರೆ, ಇಲ್ಲಿ ದಿನಕ್ಕೆರಡು ಊಟ ದೊರೆಯುವ ಮಾನವರು ಮಾತ್ರ ಇಲ್ಲವೇ ಇಲ್ಲವೆಂಬುದು ಸೃಕೃತಿಯ ವಿಚಿತ್ರ ಅಟವಲ್ಲವೆ? ಹೆಚ್ಚೇನು? ರೊಟ್ಟಿ ತಿನ್ನಲು ಸಾಕಷ್ಟು ಉಪ್ಪೂ ಇಲ್ಲದವರಿಗೆ ದೊರೆಯುತ್ತಿಲ್ಲ. ಕಳೆದ ವರ್ಷದ ಇದೇ ಜೂನ್ ತಿಂಗಳು. ಲೋಕಸಭೆಯ ಚುನಾವಣೆಯ ಸಂಬಂಧದಲ್ಲಿ ನಾನು ಭಾರತ-ಟಿಬೇಟ್ ರಸ್ತೆಯ ಮೇಲಿರುವ 'ಸರಾಹನ್' ಹಳ್ಳಿಯಲ್ಲಿ ತಂಗಿದ್ದೆ. ಇಡಿ ದೇಶದಲ್ಲಿ ಮಾರ್ಚ—ಏಪ್ರಿಲ್‌ನೊಳಗೆ ಚುನಾವಣೆಗಳು ಮುಗಿದಿದ್ದುವು. ಇಲ್ಲಿ ಬೆಟ್ಟಗಳಲ್ಲಿ ಹಿಮ ಬಿದ್ದಿತ್ತು, ಆದುದರಿಂದ ಜೂನ್ ಜುಲಾಯಿಗಳಲ್ಲಿ ಮತದಾನ ನಡೆಯಿತು-ಇದು ತಮಗೆ ನೆನಪಿರಬಹುದು. ಆ ಸಮಯದಲ್ಲಿ ಒಬ್ಬಾಕೆ ಮಹಿಳೆ ನನ್ನೊಡನೆ ಹೇಳಿದಳು—ಮಗೂ ನನ್ನ ಕುಟುಂಬದಲ್ಲಿ ೧೦ ಪ್ರಾಣಿಗಳಿವೆ; ೧೫ ಹಸುಗಳಿವೆ. ನಮಗೆ ಮೂರು ತಿಂಗಳಿಗೆ ಐದು ಸೇರು ಉಪ್ಪು ದೊರೆಯುತ್ತದೆ. ಡಿಪೋಗೆ ಹೋಗಿ ಅದನ್ನು ತರಬೇಕಾದರೆ ಮೂರು ದಿನ ತಗಲುತ್ತದೆ ಒಂದು ವೇಳೆ ನಾವು ಹೋಗುವಾಗ 'ತೆಗವಾಯಿತೆಂದರೆ' ಮತ್ತೆ ಮೂರು ತಿಂಗಳು ಉಪ್ಪು ಕಾಣುವುದಕ್ಕೂ ಇಲ್ಲ."

"ಏನೆಂದು ತೀರಿಸಿದ್ದೀರಿ?" ನೆಹರು ಆವೇಶದಿಂದ ಪ್ರಶ್ನಿಸಿದರು. ಖಂಡಿತಕ್ಕೂ ನಿಜ ಪಂಡಿತರೇ" ಎಂದು ತಡೆ ತಡೆದು ನನ್ನ ಮಾತನ್ನು ಮುಂದುವರಿಸಿದೆನು.

ಆಗ ಜವಾಹರರ ಕಣ್ಣುಗಳು ತುಂಬಿ ಬಂದುವು. "ನೀವು ನನಗೆ ಮೊದಲು ಡಿಲ್ಲಿಯಲ್ಲೇ ತಿಳಿಸಬಹುದಿತ್ತು. ನಮ್ಮ ಮನೆಗೆ ನೀವು ಬರಬಹುದಿತ್ತು; ಯಾರೂ ತಡೆಯುತಿದ್ದರು?" ಅವರು ಕೇಳಿದರು.

"ಪಂಡಿತಜಿ, ನಾನು ನಿಮ್ಮಲ್ಲಿಗೆ ಬರುತಿದ್ದೆ. ಆದರೆ, ಈ ವಿಷಯವನ್ನು ಇಲ್ಲಿಯೇ ಹೇಳಬೇಕಿತ್ತು. ಈಗ ನಿಮ್ಮ ಕಣ್ಣುಗಳಿಂದ ನೋಡಿರಿ; ಕಿವಿಗಳಿಂದ ಕೇಳಿರಿ. ದೇಶದ ಈ ಭಾಗದ ಜನರಿಗೆ ಸ್ವಾತಂತ್ರ್ಯದಿಂದ ಎಷ್ಟು ಪ್ರಯೋಜನ ಸಿಕ್ಕಿತು? ಎಂಬುದನ್ನು" ದೂರದ ೧೩,೪೦೦ ಅಡಿ ಎತ್ತರದ ಹಿಮಾಚ್ಛಾದಿತ ಪರ್ವತಗಳ ಶಿಖರಗಳತ್ತ ತೋರಿಸುತ್ತ ಮುಂದುವರಿಸಿದೆ. "ಪಂಡಿತರೆ, ದಿನ ಬದಲಲು ಹೊತ್ತು ಕಳೆಯದು. ಅಂತಾರಾಷ್ಟ್ರೀಯ ಜಗತ್ತಿನಲ್ಲಿ ತುಸು ಏರು ಫೇರು ನಡೆದರೆ, ಇಂದಿನ ಮಿತ್ರ ಆಗ ಶತ್ರುವಾಗುತ್ತಾನೆ. ನಮ್ಮ ಸೇನೆ ಚೀನವನ್ನು ಪ್ರವೇಶಿಸುವುದಾದರೆ, ಕೇವಲ ನಾಲ್ಕು ದಿನದ ದಾರಿ..ನಿಮ್ಮ ಸೇನೆಗಳು ಇಲ್ಲಿ ಕೂಚು ಮಾಡುವುವು. ಆದರೆ, ಈ ಹಿಮ ಶಿಖರಗಳು ಅಚೆಗೆ ನಿಮ್ಮ ಪಂಚ ಶೀಲದ ಮಿತ್ರರು ತಮ್ಮ ಪ್ರಯೋಗ ಶಾಲೆಗಳಲ್ಲಿ ಹಿಮಧವಲವರ್ಣವನ್ನು ರಕ್ತವರ್ಣಕ್ಕೆ ಪರಿವರ್ತಿಸುವ ಪ್ರಯತ್ನ ನಡೆಸುತಿದ್ದಾರೆಂದು ನನಗನಿಸುತ್ತದೆ. ಭಗವಂತನು ಹಾಗೆ ಮಾಡದಿರಲಿ ಒಂದು ವೇಳೆ ಹಾಗೆ ಆಯಿತು ಎಂದರೆ, ಈ ಸರಳ ಮುಗ್ಧ ನಾಗರಿಕರು ಏನು ಮಾಡಲಾಪರು?"

ಪ್ರಧಾನ ಮಂತ್ರಿಗಳು ಅತ್ಯಂತ ಗಂಭೀರರಾದರು. "ಈ ಕುರೂಪಕ್ಕೆ ಯಾರು ಜವಾಬ್ದಾರರು? ನಮ್ಮ ತಪ್ಪೇನು?"

ನಾನು ಹೇಳಿದೆ—"ಸ್ವರಾಜ್ಯಕ್ಕೆ ಮೊದಲು ಗೋಮೊಯೆಂಬ ಉಪ್ಪಿನ ಗನಿಯು ಆ ಕಾಲದ 'ಮಂಡಿಸರೇಶ'ನ ಅಧಿಕಾರದಲ್ಲಿತ್ತು. ೧೯೪೮ರ ನಂತರ ದೇಶೀ ರಾಜ್ಯಗಳ ವಿಲೀನೀಕರಣವಾದ ಗಳಿಗೆಯಲ್ಲಿ ಅದು ಹಿಮಾಚಲ ಪ್ರದೇಶದಲ್ಲಿ ಸೇರಿತು. ಕೆಲ ಸಮಯ ಅಲ್ಲಿ ಮಂತ್ರಿಮಂಡಳವಿತ್ತು; ಅದು ಮುಂದೆ ನಿಮ್ಮ ಕೇಂದ್ರಶಾಸನದ ಪ್ರದೇಶವಾಯಿತು. ರಾಜರ ಆಡಳಿತೆಯಲ್ಲಿ ೪೦-೫೦ ಹರದಾರಿ ದೂರದಿಂದ ಜನರು ಬಂದು ಉಪ್ಪಿನ ಗನಿಯಲ್ಲಿ ರಾಜನ ಅನುಮತಿ ಪಡೆದು ಬಡಿಯುತಿದ್ದರು; ಆಗೆದ ಉಪ್ಪು ರಾಜ್ಯದ ಸೊತ್ತೆನಿಸುತಿತ್ತು. ಆಗೆದವರಿಗೆ ಮಜೂರಿಯೆಂದು ಅವರು ಹೊರುವಷ್ಟು ಉಪ್ಪನ್ನು ಧರ್ಮಾರ್ಥ ಕೊಡುತಿದ್ದರು, ಪರ್ವತ ಪ್ರದೇಶದ ಜನರು ಧರ್ಮ ಪರಾಯಣರು; ವ್ಯವಹಾರದಲ್ಲಿ ಮೋಸ ಮಾಡುವುದಿಲ್ಲ. ಹಾಗಾಗಿ ಮನುಷ್ಯರಿಗೂ ಪ್ರಾಣಿಗಳಿಗೂ ಬೇಕೆಂಬಷ್ಟು ಉಪ್ಪು ದೊರೆಕುತಿತ್ತು. ಪಾಕಿಸ್ತಾನ ಪ್ರತ್ಯೇಕ ವಾದನಂತರ ಪಂಜಾಬ ಹಾಗೂ ಇತರ ರಾಜ್ಯಗಳಿಗೆ ರಿಯೊಂಡಾ ಗನಿಗಳಿಂದ ಉಪ್ಪು ಬರುವುದು ನಿಂತಿತು. ಕಾಶ್ಮೀರದಲ್ಲಿಯೂ ಗೋಮೂ ಉಪ್ಪಿನ ಬೇಡಿಕೆ ಹೆಚ್ಚಿತು. ಹಿಮಾಚಲ ಪ್ರದೇಶದ ಜನಪ್ರಿಯ ಸರಕಾರವು ಮಾಡಿದ ವ್ಯವಸ್ಥೆಯ ಮಾತು ಈಗ ಬೇಡ; ಕೇಂದ್ರ ಶಾಸನಾಧೀನವಾದ ನಂತರ ಉಪ್ಪು ವಿತರಿಸುವ ವ್ಯವಸ್ಥೆಯಿಂದ ಬಡವರು ಕಂಗೆಟ್ಟಿದ್ದಾರೆ."

"ಏನೆಂದಿರಿ ನೀವು? ಕೇಂದ್ರೀಯ ಶಾಸನದಿಂದ ವ್ಯವಸ್ಥೆ ಮತ್ತಷ್ಟು ಸುಗಮವಾಗಬೇಕಿತ್ತು. ಅದು ಹೇಗೆ ಕೆಟ್ಟಿತು?"

"ಪಂಡಿತಜಿ, ಕೇಂದ್ರವು ಇಡಿಯ ದೇಶವನ್ನು ನೋಡಿಕೊಳ್ಳಬೇಕಾಗುತ್ತದೆ. ಗೋಮೂ ವತ್ತು ದುರಂ ಮೊದಲಾದೆಡೆ ತಯಾರಾಗುವ ಉಪ್ಪನ್ನು ವಿತರಿಸಲು ವಿವಿಧ ರಾಜ್ಯಗಳಂತೆಯೇ ಪಂಜಾಬಕ್ಕೂ ಒಂದು ಯುನಿಟ್ ಇದೆ. ಹಿಮಾಚಲ ಪ್ರದೇಶದವರಿಗೆ ಆಗ್ರವ್ಯಾಪ್ತ್ಯ ನೀಡಲಾಗುತ್ತದೆ, ಅದು ನ್ಯಾಯ. ಅನಂತರ ಕಾಶ್ಮೀರದ ಸ್ಥಾನ. ಕಾಶ್ಮೀರದ ಹೆಸರಿನಲ್ಲಿ ಗಾಡಿಯು ಉಪ್ಪನ್ನು ತುಂಬಿಸಿ ಪಠಾನ್‌ಕೋಟಿಗೆ ಓಡುತ್ತದೆ. ಮತ್ತೆ

"ಏಕೆ ತಡೆದಿರಿ? ಸರಿಯಾಗಿ ಹೇಳಿ. ಮತ್ತೆ ಏನಾಗುವುದು" ನೆಹರು ಪ್ರಶ್ನಿಸಿದರು.

ನಾನು ಮುಂದುವರಿಸಿದೆ— "ಕಾಳ ಮಾರುಕಟ್ಟೆ ಮಾಡುವವರ ಸಂಬಂಧ ನಿಮಗಿರಲಾರದು, ಪಂಡಿತಜಿ, ಅವರು ಬಹು ನಿಪುಣರು ಕಾಳ ಗಾಡಿಗಳ ಉಪ್ಪು ಕಾಳಮಾರುಕಟ್ಟೆಯಲ್ಲಿ ಮಾರಲ್ಪಡುತ್ತದೆ. ಗೋಮೂ ಗನಿಗಳಿಗೆ ಸಮೀಪದ ಪಂಜಾಬದ ಪ್ರದೇಶಗಳಲ್ಲಿ ಇಮ್ಮಡಿ ನಾಲ್ಮಡಿ ಬೆಲೆಗೆ ದೊರೆಯುತ್ತದೆ. ಕುಲೂ ಮನಾಳಿ ಪ್ರದೇಶವವರಿಗೆ ದೊರೆಯುವ ಉಪ್ಪು ಅತ್ಯಲ್ಪ. ದಾರಿಯಲ್ಲಿದ ಈ ಕೊಳ್ಳಕ್ಕೆ ಬರುವುದಾದರೂ ಹೇಗೆ?

ಈ ವಿಷಯವನ್ನು ನೀವು ಪಂಜಾಬಿನ ಮುಖ್ಯ ಮಂತ್ರಿಯವರಿಗೆ ತಿಳಿಸಿದ್ದೀರಾ?"

"ಇಲ್ಲ"

"ಏಕೆ?"

"ಆವಶ್ಯಕತೆ ಕಂಡುಬರಲಿಲ್ಲ."

"ನನಗಾದರೂ ಬರೆಯಬಹುದಿತ್ತಲ್ಲ?"

"ನಾನೇನೋ ತಮಗೆ ಬರೆಯುತಿದ್ದೆ

(ಉಳಿದ ಪುಟ ನೋಡಿರಿ)

ನಿಮ್ಮ ಗಮನದಲ್ಲಿರಲಿ

ಫಿಕ್ಸ್‌ಡ ಡಿಪಾಸಿಟ್ ಮೇಲೆ ವರ್ಷಕ್ಕೆ ಶೇಕಡಾ ಬಡ್ಡಿ 5 1/8

ಕ್ಯಾಷ್ ಸರ್ಟಿಫಿಕೇಟ್ ಮೇಲೆ ವರ್ಷಕ್ಕೆ ಶೇಕಡಾ ಚಕ್ರಬಡ್ಡಿ 4 1/4

ರೆಕರಿಂಗ್ ಡಿಪಾಸಿಟ್ ಮೇಲೆ ವರ್ಷಕ್ಕೆ ಶೇಕಡಾ ಚಕ್ರಬಡ್ಡಿ 4

ಸೇವಿಂಗ್ಸ್ ಬ್ಯಾಂಕ್ ಡಿಪಾಸಿಟ್ ಮೇಲೆ ವರ್ಷಕ್ಕೆ ಶೇಕಡಾ ಚಕ್ರಬಡ್ಡಿ 3

ಹೆಚ್ಚಿನ ವಿವರಗಳನ್ನು ನಿಮ್ಮ ಸಮೀಪದ ಶಾಖೆಯಲ್ಲಿ ಪಡೆಯಿರಿ.

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ: 1906)

ಸಮಗ್ರ ಸೇವೆ : : ಸಂಪೂರ್ಣ ಭದ್ರತೆ

ನವಯುಗ

ವರುಷ	ಉಡುಪಿ	ವಾರ
೪೧	೧೯-೭-೧೬೨	೪೫

ಚೀನದ ರುದ್ರ ನಾಟಕವೆ?

ಗಾಲ್ವಾನ ಕಣಿವೆಯ ಬಳಿಯಲ್ಲಿರುವ ಭಾರತದ ಸೇನಾ ರಾಣ್ಯಗಳನ್ನು ದಿನದಿಂದ ದಿನಕ್ಕೆ ಸಮೀಪಿಸುತ್ತ ಬರುತಿದ್ದ ಚೀನೀಯರು ಮೊನ್ನೆ ಮೊನ್ನೆ ಕೇವಲ ಹದಿನೈದು ಗಜಗಳಷ್ಟು ದೂರದಲ್ಲಿ ತಂಗಿದರೆಂದೂ, ಭಾರತೀಯ ಸೇನಾ ಪಡೆಯ ಅಧಿಕಾರಿಗಳು ಗಂಭೀರವಾದ ಎಚ್ಚರಿಕೆಯನ್ನು ಇತ್ತುದರ ಪರಿಣಾಮವಾಗಿ ಅವರು ಹಿಂದೆ ಸರಿಯ ತೊಡಗಿದರೆಂದೂ ವರದಿಯಾಗಿದೆ. ಮಾತ್ರವಲ್ಲದೆ, ತಾ. ೧೪ರಂದೇ ಚೀನೀಯ ಸೈನಿಕರು ೨೦೦ ಗಜ ದೂರಕ್ಕೆ ಹಿಂದೆರಳಿದ್ದಾರೆಂದೂ ವರದಿಯು ಸ್ಪಷ್ಟಪಡಿಸಿದೆ. ಇದ್ದುದರಲ್ಲಿ ಇದು ಸಂತೋಷದ ಸಮಾಚಾರವೆನ್ನುವುದು ತಪ್ಪಾಗಲಾರದಾದರೂ ಇಷ್ಟರಿಂದಲೇ ತೃಪ್ತಿಯನ್ನು ಪಟ್ಟುಕೊಳ್ಳುವುದು ಎಂದಿಗೂ ಸಾಧ್ಯವಿಲ್ಲ, ಏಕೆಂದರೆ, ಚೀನೀಯರಿಂದ ಭಾರತದ ಮೇಲಿನ ಆಪಾದನೆಯು ಹೆಚ್ಚುತ್ತ ಬರುತ್ತದೆಯೆಂಬುದನ್ನು ನಾವು ಗಮನಿಸದೆ ಬಿಡುವಂತಿಲ್ಲ.

ಇತ್ತೀಚೆಗೆ ಭಾರತ ಮತ್ತು ಚೀನ ಸರಕಾರಗಳ ನಡುವೆ ವಿನಿಮಯಗೊಂಡ ಪತ್ರ ವ್ಯವಹಾರವನ್ನು ನಾವು ಅವಲೋಕಿಸುವುದಾದರೆ, ಗಡಿ ಪ್ರದೇಶದಲ್ಲಿನ ಪರಿಸ್ಥಿತಿಯು ಎಂದಿಗೂ ಸಮಾಧಾನಕರವಾಗಿಲ್ಲವೆಂಬುದು ವ್ಯಕ್ತವಾಗಿದೆ. ಭಾರತ ಸರಕಾರವು ರಕ್ತಸಹಿತ ತಿಕ್ಕಾಟವನ್ನು ಪಾರಂಭಿಸಲು, ಚೀನದ ಭೂಭಾಗವನ್ನು ಆಕ್ರಮಿಸಲು ಬಯಸಿ, ಸೀಮೂ ಪ್ರದೇಶದಲ್ಲಿ ಯಥಾಸ್ಥಿತಿಯನ್ನು ಕದಡಿಸಲು ಪ್ರಯತ್ನಿಸುತ್ತಿದೆಯಂತೆ. ಇದರಿಂದಾಗಿ ಭಾರತವು ಮಾತುಕತೆಗಳ ಮೂಲಕ ಶಾಂತಿಯುತವಾದ ರೀತಿಯಲ್ಲಿ ಗಡಿ ವಿವಾದವನ್ನು ಕೊನೆಗಾಣಿಸಲು ಆತುರವಾಗಿಲ್ಲವಂತೆ. ಇಂತಹ ಆರೋಪಗಳು ಹುರುಳಿಲ್ಲದವುಗಳೆಂಬುದು ಈಗಾಗಲೇ ಜಗಜ್ಜಾಹೀರಾಗಿದೆ. ಭಾರತದ ಅವಿಭಾಜ್ಯ ಭೂಭಾಗವನ್ನು ಅತಿಕ್ರಮಿಸಿ, ಅಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಸೈನಿಕ ರಾಣ್ಯವನ್ನು ನಿರ್ಮಿಸುತ್ತ ಬರುತ್ತಿರುವ ಚೀನವು ತಾನು ಮಾಡುತ್ತಿರುವ ಅಕ್ಷಮ್ಯ ಅಪರಾಧವನ್ನು ಮರೆಮಾಜಲು, ತನ್ನನ್ನು ಸಂಭಾವಿತವೆಂದು ಕರೆಸಿಕೊಳ್ಳಲು ಈ ಬಗೆಯ ಸೋಗು ಹಾಕಿಕೊಂಡಿರುವುದು ಎಲ್ಲರಿಗೂ ತಿಳಿಯದುದಲ್ಲ. ಚೀನಾದಿಂದ ಬಂದಿರುವ ಪತ್ರವೊಂದಕ್ಕೆ ಉತ್ತರವನ್ನು ಒಪ್ಪಿಸಲು ಅಲ್ಲಿನ ರಾಯಭಾರಿಯನ್ನು ಕರೆಕಳಿಸಿದಾಗ ಆತನಾದರೂ ತಪ್ಪಿಸಿಕೊಳ್ಳುವ ಪ್ರಯತ್ನ ಮಾಡಿದುದನ್ನೂ ನಾವು ಕಡೆಗಣಿಸುವಂತಿಲ್ಲ. ಇಂತಹ ಮೋಸಗಾರಿಕೆಯ ಹಿಂದೆ ಏನೋ ರಹಸ್ಯ ಅಡಗಿದೆಯೆಂದು ಊಹಿಸಿದರೆ ತಪ್ಪಲ್ಲ. ಟಬೇಟಿನೊಂದಿಗಿದ್ದ ವ್ಯಾಪಾರ ಒಪ್ಪಂದವನ್ನು ಮುಂದುವರಿಸಲು ಚೀನವು ಭಾರತವನ್ನು ಕೇಳಿಕೊಂಡಾಗ, ಸೀಮೂ ಸಮಸ್ಯೆಯ ಪ್ರಶ್ನೆಯಿರುವಾಗ, ಅದಕ್ಕೆ ಮತ್ತೆ ಜೀವದಾನ ಮಾಡುವುದು ಅನುಚಿತವೆಂದು ಭಾರತವು ದೃಢನಿಲುಮೆ ತಳೆದಿದ್ದುದರಿಂದ ಟಬೇಟಿಗೂ ಚೀನಕ್ಕೂ ತುಸು ತೊಂದರೆಯಾಗಿದೆಯೆಂಬುದು ನಿಶ್ಚಯ. ಭಾರತವು ಒಂದು ಪತ್ರದಲ್ಲಿ ಚೀನವು ತನ್ನ ಮೇಲೆ ಹೊರಿಸಿದ ಆರೋಪಗಳೆಲ್ಲವನ್ನೂ ಅಲ್ಲಗಳೆದಿದೆ ಮಾತ್ರವಲ್ಲ: ಸೀಮೂ ಸ್ಥಿತಿಯ ಗಂಭೀರತೆಗೆ ಚೀನವೇ ಮೂಲ ಕಾರಣವೆಂದು ಹೇಳಿದೆ. ಚೀನವು ತನ್ನ ಆಕ್ರಮಕ ಧೋರಣೆಯನ್ನು ಬಿಟ್ಟುಕೊಟ್ಟು, ಕಾಯದೆ ಮತ್ತು ಇತಿಹಾಸಗಳ ಮೂಲಕ ಉಭಯತರರಿಂದ ಸ್ವೀಕೃತವಾಗಿದ್ದ ಮೈಕಮಹೋನ ರೇಖೆಯನ್ನೇ ಗಡಿಯೆಂದು ಗೌರವಿಸಬೇಕು; ಹೀಗೆ ಒಡಂಬಡಿಕೆಗೆ ಮನ್ನಣೆ ನೀಡಿದಾಗ ಮಾತ್ರ, ಎರಡೂ ರಾಷ್ಟ್ರಗಳ ನಡುವೆ ಸ್ನೇಹಸದ್ಭಾವನೆಗಳ ಭಾವನೆಯು ನೆಲೆಗೊಳ್ಳುವುದು; ವ್ಯಾಪಾರ – ವ್ಯವಹಾರಗಳ ಸಂಬಂಧದಲ್ಲಿ ಹೊಸ ಒಡಂಬಡಿಕೆಗಳನ್ನು ಮಾಡಿಕೊಳ್ಳುವುದು ಸಾಧ್ಯವೆನಿಸುವುದು ಎಂದು ಮುಂತಾಗಿ ಭಾರತ ಸರಕಾರವು ತನ್ನ ಹಿಂದಿನ ವಾದವನ್ನೇ ಮತ್ತೊಮ್ಮೆ ಪುನರುಚ್ಚರಿಸಿ, ಚೀನವನ್ನು ಕೇಳಿಕೊಂಡಿದೆ.

ಚೀನ ಮತ್ತು ಭಾರತಗಳು ಏಶ್ಯದ ದೊಡ್ಡ ಎರಡು ರಾಷ್ಟ್ರಗಳು, ಪ್ರಪಂಚದ ಗಣನೀಯ ದೇಶಗಳು ಅನಭಿವೃದ್ಧ ಭಾರತವು ಅಭಿವೃದ್ಧಿಯ ಪಥದಲ್ಲಿ ಸಾಕಷ್ಟು ಗಮಿಸುತಿದ್ದರೆ; ಚೀನವು ಬಹು ಕಂಗಾಲ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಮಿಲಿಟರಿಯವರಿಗೆ ದೊರೆಯುತಿದ್ದ ಆಹಾರ ಧಾನ್ಯದ ಪ್ರಮಾಣದಲ್ಲಿಯೂ ಕಡಿತವನ್ನು ಮಾಡಲಾಗಿದೆಯೆಂಬುದನ್ನು ನಾವು ಗಮನಿಸುವುದಾದರೆ, ಚೀನದಲ್ಲಿ ಬಿಕ್ಕಟ್ಟಿನ ಪರಿಸ್ಥಿತಿಯಿದೆಯೆನ್ನುವುದು ನಿರ್ವಿವಾದ. ಹಾಗಿದ್ದರೂ ತಮ್ಮ ಅನ್ಯಾಯವನ್ನು ನ್ಯಾಯವೆಂದು ಪ್ರತಿಪಾದಿಸುವ ಮೊಂಡು ನೀತಿಯನ್ನು ಬಿಟ್ಟು ಕೊಡದಿರುವುದು ಅದರ ಅಂತರ್ಯವನ್ನು ಬಿಚ್ಚಿ ಹೇಳುತ್ತದೆ. ತೋರಿಕೆಯ ಮಟ್ಟಿಗೆ ಚೀನೀಯರೀಗ ಹಿಂದೆ ಸರಿಯುವುದು ನಿಜವೇ. ಆದರೆ, ಭಾರತೀಯ ರಾಣ್ಯಗಳನ್ನು ಅತಿ ನಿಕಟದಿಂದ ನೋಡಿ ಹಿಂದೆ ಹೋದ ಚೀನೀಯರ ಹೃದಯಾಂತರಾಳದಲ್ಲಿ ಏನಿದೆಯೆಂಬುದನ್ನು ಯಾರಿಂದಲೂ ಹೇಳುವುದು ಕಷ್ಟ ಸಾಧ್ಯ. ಗಾಲ್ವಾನ ಕೊಳ್ಳದಲ್ಲಿರುವ ನಮ್ಮ ರಾಣೆಯಲ್ಲಿ ಹಿರಿಯ ಮಿಲಿಟರಿ ಅಧಿಕಾರಿಗಳು ಇಲ್ಲ; ಅಲ್ಲಿರುವ ಸೇನೆಯಾದರೂ ಚಿಕ್ಕದೇ. ಹಾಗಿದ್ದರೂ ಅದು ಸಾಹಸವನ್ನು ತೋರಿಸುತ್ತಿದೆ. ಇದು ಭಾರತೀಯ ಸೇನೆಯ ಹಿರಿಮೆ. ಅಗತ್ಯವೆಂದು ಕಂಡು ಬಂದರೆ, ಆತ್ಮ ರಕ್ಷಣೆಗಾಗಿ ಇದು ಗುಂಡು ಹಾರಿಸುವುದಕ್ಕೂ ಸಿದ್ಧವಾಗಿ ನಿಂತಿದೆ ನಿಜ. ಇತ್ತ ಭಾರತೀಯ ಸೇನೆಯು ಪರಿಸ್ಥಿತಿಯನ್ನೆದರಿಸಲು ಸಿದ್ಧಹಸ್ತವಾಗಿ ನಿಂತಿರುವಾಗ, ಅತ್ತ ಚೀನೀಯ ಸೇನೆಯು ರಾಣ್ಯದ ಸುತ್ತಲೂ ತನ್ನ ಬಲವನ್ನು ವ್ಯಾಪಿಸುತ್ತ ಮುಂದುವರಿದಿದೆಯೆಂಬ ವರದಿಯನ್ನು ಸತ್ಯವೆಂದು ನಂಬುವುದಾದರೆ, ಚೀನೀ ಸೇನೆಯ ಹಿಮ್ಮೆಟ್ಟುವಿಕೆಯು ಒಂದು ನಾಟಕದ ದೃಶ್ಯ; ಅದರ ರುದ್ರ ಭಯಾನಕ ದೃಶ್ಯಗಳು ಮುಂದೆ ಬರಲಿವೆಯೆಂಬುದರ ದ್ಯೋತಕವೆಂದರೆ, ಅತಿಶಯೋಕ್ತಿಯಲ್ಲ ಹಿಮಾಲಯದ ಧವಲ ಹಿಮಾಚ್ಛಾದಿತ ಶಿಖರ ಪ್ರದೇಶವನ್ನು ರಕ್ತರಂಜಿತವಾಗಿಸುವ ಚೀನದ ಧೋರಣೆಯಲ್ಲಿ ಯಾವ ಪರಿವರ್ತನೆಯನ್ನೂ ನಾವು ಕಾಣಲಾರೆವು. ಆದುದರಿಂದ ಸ್ವದೇಶ ರಕ್ಷಣೆಯ ಕಡೆಗೆ ಎಂದಿಗಿಂತಲೂ ಹೆಚ್ಚಾದ ಕಳಕಳಿ ವಹಿಸುವ ಸಂದರ್ಭವೀಗ ಬಂದಿದೆ. ನಮ್ಮ ಸಂರಕ್ಷಣಾ ಪಡೆಗಳು ಈ ದಿನೆಯಲ್ಲಿ ಪ್ರಶಂಸಾರ್ಹ ಸೇವೆ ಸಲ್ಲಿಸುತ್ತಿವೆ; ತಮ್ಮ ಮೇಲೆ ಬಿದ್ದಿರುವ ಗುರುತರ ಹೊಣೆಗಾರಿಕೆಯನ್ನು ನಿರ್ವಹಿಸಲು ಅವು ಸಿದ್ಧವಾಗಿವೆಯೆಂದು ನಂಬುತ್ತೇವೆ.

ಸಹಾಯಧನ ನಿಯಮಗಳು

ಕರ್ನಾಟಕ ರಾಜ್ಯ ಸರಕಾರವು ಈ ವರ್ಷದಿಂದ ಜ್ಯಾರಿಗೆ ತಂದಿರುವ ಮಾಧ್ಯಮಿಕ ಶಾಲೆಗಳ ಸಹಾಯಧನ ನಿಯಮಗಳು ಬಿಗಿಯಾಗಿವೆಯೆಂದೂ ಅವನ್ನು ಸಡಿಲುಗೊಳಿಸಬೇಕೆಂದೂ ಇತ್ತೀಚೆಗೆ ಉತ್ತರ ಕರ್ನಾಟಕದ ಮಾಧ್ಯಮಿಕ ಶಾಲಾ ವ್ಯವಸ್ಥಾಪಕರ ಸಮ್ಮೇಳನವು ಅಭಿಪ್ರಾಯ ಪಟ್ಟಿದೆ. ಅದರ ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಜಿ. ವಿ. ಹಳ್ಳಿಕೇರಿ ಅವರು ಈಗ ವಿಧಾನ ಸಭೆಯ ಅಧ್ಯಕ್ಷರೂ ಆಗಿದ್ದಾರೆ. ಆದುದರಿಂದ ಅವರ ಮಾತಿಗೆ ಇಂದುತುಂಬ ಬೆಲೆಯಿದೆ. ಶಿಕ್ಷಣದ ಮಹತ್ವವು ದಿನದಿಂದ ದಿನಕ್ಕೆ ಹೆಚ್ಚುವುದರೊಂದಿಗೆ ಪ್ರಾಥಮಿಕ ಮತ್ತು ಉಚ್ಚ ಶಿಕ್ಷಣಗಳ ನಡುವಿನ ಮಾಧ್ಯಮಿಕ ಶಿಕ್ಷಣದ ಸ್ಥಾನಮಾನಗಳೂ ಹೆಚ್ಚಿವೆಯೆನ್ನುವ ಅವರ ಮಾತು ಎಲ್ಲರೂ ಒಪ್ಪಬೇಕಾದುದು. ಹಾಗಿರುವಾಗ, ಖಾಸಗಿ ಕ್ಷೇತ್ರದ ಶಾಲೆಗಳು ಸರಿಯಾಗಿ ನಿರ್ವಂಚನೆಯಿಂದ ತಮ್ಮ ಉದ್ದೇಶವನ್ನು ಈಡೇರಿಸಬೇಕೆಂದಿದ್ದರೆ, ಸಹಾಯಧನ ನಿಯಮಗಳು ಸಾಕಷ್ಟು ಉದಾರವಾಗಿರಬೇಕು. ಸಹಾಯಧನದ ಕಲುಮು ನಿರಾಶಾದಾಯಕವಾಗಿಲ್ಲವಾದರೂ ಹೆಚ್ಚು ಹೆಚ್ಚು ಖಾಸಗಿ ಮಾಧ್ಯಮಿಕ ಶಾಲೆಗಳ ಸ್ಥಾಪನೆಯು ಆಗಬೇಕಾದರ— ಸರಕಾರವು ಈ ಕ್ಷೇತ್ರಕ್ಕೆ ಕೈ ಹಾಕುವುದು ಸದ್ಯ ಸಾಧ್ಯವಿಲ್ಲ; ಏಕೆಂದರೆ, ಒತ್ತಾಯದ ಪ್ರಾಥಮಿಕ ಶಿಕ್ಷಣದ ಹೊಣೆಯೇ ಅದಕ್ಕೆ ಸಾಕಷ್ಟಿದೆ—ಸಾಮಾನ್ಯ ನಿಯಮಗಳೂ ಸರಳಗೊಳ್ಳಬೇಕು ಎಂಬುದು ಒಪ್ಪತಕ್ಕಮಾತು. ಸದ್ಯದಲ್ಲಿಯೇ ರಾಜ್ಯ ಮಟ್ಟದಲ್ಲಿ ಖಾಸಗಿ ಮಾಧ್ಯಮಿಕ ಶಾಲಾ ವ್ಯವಸ್ಥಾಪಕರ ಸಮ್ಮೇಳನವು ನಡೆಯುವ ಸುದ್ದಿಯಿದೆ. ಈ ಸಮ್ಮೇಳನವು ತಮಗಾಗುವ ಬಾಧಕಗಳನ್ನು ಕೂಲಂಕಷವಾಗಿ ಚರ್ಚಿಸಿ, ಅವನ್ನು ಸರಕಾರದ ಗಮನಕ್ಕೆ ತರಬೇಕೆಂದೂ, ಸರಕಾರವಾದರೂ ಈ ಸಂಬಂಧದಲ್ಲಿ ಉದಾರ ನೀತಿಯನ್ನು ತಾಳಬೇಕೆಂದೂ ಸೂಚಿಸ ಬಯಸುತ್ತೇವೆ.

ಇದರ ಜತೆಗೆ ಪ್ರಾಥಮಿಕ ಶಿಕ್ಷಣವನ್ನೂ ನಾವು ಮರೆಯುವಂತಿಲ್ಲ. ನಮ್ಮ ರಾಜ್ಯದ ಕೆಲವೊಂದು ಪ್ರದೇಶಗಳಲ್ಲಿ ಸರಕಾರವು ನೀಡಬೇಕಾಗಿರುವ ಪ್ರಾಥಮಿಕ ಶಿಕ್ಷಣವನ್ನು ಖಾಸಗಿ ಕ್ಷೇತ್ರವು ನೀಡುತ್ತಿದೆ. ಇಂತಹ ಖಾಸಗಿ ಪ್ರಾಥಮಿಕ ಶಾಲೆಗಳಿಗೂ ಒಂದು ಏಕ ರೂಪದ ಸಹಾಯಧನ ನಿಯಮಗಳು ಬರುತ್ತವೆಂದು ತಿಳಿಯುತ್ತದೆ. ನಾವು ಈ ಮೊದಲೇ ಕೆಲವು ಬಾರಿ ಸೂಚಿಸಿರುವಂತೆ ಪ್ರಾಥಮಿಕ ಶಿಕ್ಷಣದ ಸಂಪೂರ್ಣ ಹೊರೆಯನ್ನು ಸರಕಾರವು ವಹಿಸುವುದು ಸಾಂವಿಧಾನಿಕ ಆವಶ್ಯತೆಯೆನಿಸುವುದರಿಂದ ಖಾಸಗಿ ಕ್ಷೇತ್ರಕ್ಕೆ ನೂರಕ್ಕೆ ನೂರರಷ್ಟು ಸಹಾಯ ಧನವೀಯುವ ಉದಾರತೆಯನ್ನು ತೋರ್ಪಡಿಸ ಬೇಕೆಂದು ಮತ್ತೊಮ್ಮೆ ಆಗ್ರಹ ಪಡಿಸುತ್ತೇವೆ. ಖಾಸಗಿ ಶಿಕ್ಷಣ ಸಂಸ್ಥೆಗಳ ವಿದ್ಯಾ ಮಟ್ಟವು ಉಳಿದ ಶಾಲೆಗಳಿಗಿಂತ ಅದೆಷ್ಟೋ ತೃಪ್ತಿಕರವಿರುವುದೆಂದು ಮಾನ್ಯ ವಿದ್ಯಾ ಮಂತ್ರಿ ಶ್ರೀ ಕಂರಿಯವರೇ ಒಪ್ಪಿಕೊಂಡಿರುವಾಗ, ಅವುಗಳ ಕಡೆಗೆ ಮುಷ್ಟಿ ಬಿಚ್ಚಿ ಸಹಕಾರ ನೀಡುವುದು ಎಂದಾದರೂ ತಪ್ಪಾದೀತೆ? ಶಿಕ್ಷಣ ತಜ್ಞರೂ ಸಹಾಯ ಧನ ನಿಯಮ ರಚಿಸುವ ಮಹನೀಯರೂ ಸರಕಾರವೂ ಇತ್ತ ಅವಶ್ಯ ಗಮನ ಹರಿಸ ಬೇಕು.

ಜಗತ್ಪರ್ಯಟನ

ಯಶವಂತರಾವ್ ಚವನ್

ವೈ. ಬಿ ಚವನರು ಮುಂಬಯಿಯ ಮುಖ್ಯ ಮಂತ್ರಿಯಾಗುವುದಕ್ಕೆ ಮೊದಲು ಸಾಮಾನ್ಯ ಮಟ್ಟಿಗೆ ಅಪರಿಚಿತರಂತೆಯೇ ಇದ್ದರು. ಮುರಾರ್ಜಿಯವರ ರಾಜಿನಾಮೆಯಿಂದಾಗಿಯೇ ಅವರಂತಹ ಯೋಗ್ಯತಾವಂತರು ಬೆಳಕಿಗೆ ಬಂದರು. ಬಂಗಾಳದ ಬಿ. ಸಿ. ರಾಯ್, ಮುಂಬಯಿಯ ಚವನ, ಮದ್ರಾಸದ ನಾಡಾರರು ಯಶಸ್ವಿ ಮುಖ್ಯ ಮಂತ್ರಿತ್ರಯರು. ರಾಯರ ನಿಧನಾನಂತರ, ಸೇನರು ಆ ಸ್ಥಾನವನ್ನು ಮಾರ್ತಿಗೊಳಿಸಬಲ್ಲರು. ಮಹಾರಾಷ್ಟ್ರದ ರಾಜಧಾನಿ ಮುಂಬಯಿ ನಗರದ ಕಾರ್ಪರೇಶನ್ ನೌಕರರು ಹೆಚ್ಚಿನ ತುಟ್ಟಿಭತ್ತೆಯನ್ನು ಬೇಡಿ ಪ್ರಾರಂಭಿಸಿದ್ದ ಸಂಪು ಕೊನೆಗೊಳ್ಳಬೇಕಾದರೆ, ಚವನರೇ ಮುಂದೆ ಬರಬೇಕಾಯಿತು. 'ಹಾವು ಸಾಯಬಾರದು ಕೋಲು ಮುರಿಯಬಾರದು' ಎಂಬ ನೀತಿಯಲ್ಲಿ ಸಂಧಾನವನ್ನು ನಡೆಸಿ ಬಂದ ಕುತ್ತವನ್ನು ಹೋಗಲಾಡಿಸಿದ ಕೀರ್ತಿ ಚವನರಿಗೆ ಸೇರಿದೆ.

ಚಾರ್ಲ್ಸ್ ಡಿಗಾಲೆ

ಭಾರತದಲ್ಲಿ ಫ್ರೆಂಚ ವಸಾಹತುಗಳಾಗಿದ್ದ ಪಾಂಡಿಚೇರಿ, ಕರೈಕಲ್ ಮಾಹೆ ಮತ್ತು ಯನಾಂಗಗಳ ಕಾಯದೆ ಬದ್ಧ ಹಸ್ತಾಂತರವು ಇನ್ನೂ ನಡೆದಿಲ್ಲ. ಫ್ರೆಂಚ ರಾಷ್ಟ್ರಪತಿ ಮೇ। ಜ। ಡಿಗಾಲೆಯವರು ರಾಷ್ಟ್ರೀಯ ಎಸೆಂಬ್ಲಿಯ ಕೆಳಮನೆಯಲ್ಲಿ ಇಂತಹ ಹಸ್ತಾಂತರಕ್ಕೆ ಒಪ್ಪಿಗೆ ಪಡೆದುಕೊಂಡರು. ಕೆಲವೇ ದಿನಗಳಲ್ಲಿ ಸೇರಲಿರುವ ಮೇಲ್ಮನೆಯು ಇದನ್ನು ಮನ್ನಿಸುವಂತೆ ಮಾಡುವುದೂ ಅವರಿಗೆ ಅಸಾಧ್ಯವಲ್ಲ. ಮಿಲಿಟರಿ ಅಧಿಕಾರಿಯಾಗಿದ್ದರೂ ಪ್ರಜಾಸತ್ತೆಗೆ ಬೆಂಬಲ ಕೊಡುವ ಡಿಗಾಲೆ ರಾಜನೀತಿ ಪ್ರಶಂಸಾರ್ಹ.

ಅಯ್ಯೂಬ ಖಾನ್

ಪಾಕಿಸ್ತಾನದ ಅಧ್ಯಕ್ಷರ ತಮ್ಮನವರು ಪಾಕ್ ಎಸೆಂಬ್ಲಿಯಲ್ಲಿ ಅಲ್ಲಿನ ರಾಜಕಾರಣದ ಮೇಲೆ ಅಮೆರಿಕೆಯು ಕಣ್ಣಿಡುತ್ತಿದೆಯೆಂದೂ ದಂಡಿನಾಡಳಿತೆಯನ್ನು ತರುವಲ್ಲಿಯೂ ಅದರ ಕೈವಾಡ ನಡೆದಿತ್ತೆಂದೂ ಆರೋಪಿಸಿದರು. ಇಂತಹ ಗಂಭೀರ ಆರೋಪಗಳನ್ನು ಅಲ್ಲಗಳೆಯಬೇಕಾದರೆ, ಅಯ್ಯೂಬ ಖಾನರೇ ಬರಬೇಕಾಯಿತು. ಅವರೊಂದು ಹೇಳಿಕೆಯಿತ್ತು ಅಂತಹ ಯಾವ ಪರಿಸ್ಥಿತಿಯೂ ಪಾಕಿಸ್ತಾನದಲ್ಲಿ ಮೊದಲು ನಡೆದಿಲ್ಲ, ಇಂದಿಗೂ ನಡೆಯುತ್ತಿಲ್ಲವೆಂದು

ಸಾರಿದರು. ಆದರೆ, ಪಾಕಿಸ್ತಾನದ ಬಗ್ಗೆ ಅಲ್ಲಿನ ಆಡಳಿತೆಯ ಬಗ್ಗೆ ಅಮೆರಿಕೆ ತೋರಿಸುತ್ತಿರುವ ಮಲತಾಯಿ ನೀತಿಯು ಭದ್ರತಾ ಮಂಡಳಿಯಲ್ಲಿ ಕಾಶ್ಮೀರದ ಸಂಬಂಧ ಬಂದ ಗೊತ್ತುವಳಿಯ ಕಾಲದಲ್ಲಿ ಸುವ್ಯಕ್ತವಾಗಿಲ್ಲವೆ?

ಡೀನ್ ರಸ್ಕ್

ಅಮೆರಿಕೆಯ ರಾಜ್ಯಾಂಗ ಕಾರ್ಯದರ್ಶಿ ಡೀನ್ ರಸ್ಕರು ಭಾರತದ ವಿದೇಶೀ ನೀತಿಯನ್ನು ಮೆಚ್ಚದವರು ಎಂದರೆ ಅತಿಶಯೋಕ್ತಿಯಲ್ಲ. ಕಾಶ್ಮೀರ ತಂಟೆಯಲ್ಲಿನ ಇವರ ವ್ಯವಹಾರದಿಂದ ಭಾರತವು ನೊಂದಿದೆಯೆಂಬುದು ಅವರಿಗೀಗ ಮನವರಿಕೆಯಾದಂತಿದೆ. ಆದುದರಿಂದಲೇ ಅವರು ಹೇಳುತ್ತಾರೆ—ಭಾರತದ ಬಗೆಗೆ ಅಮೆರಿಕೆಯಲ್ಲಿ ದುರಭಿಪ್ರಾಯವಿಲ್ಲ, ಪಾಕಿಸ್ತಾನದತ್ತ ಹೆಚ್ಚಿನ ಒಲವೂ ಇಲ್ಲ ಎಂದು ಅಮೆರಿಕೆಯು ಭಾರತಕ್ಕೆ ನೀಡುವುದೆಂದು ಗೊತ್ತಾದ ಸಾಲಗಳು ಸಂಪೂರ್ಣ ದೊರೆಯುವಂತಾಗುವುದಕ್ಕೆ ಇವರ ಈ ತೆರದ ನಿಲುಮೆಯೂ ಕಾರಣವೆಂದರೆ ತಪ್ಪಾಗಲಾರದು.

ಜಯಚಾಮರಾಜ

ಜಯಚಾಮರಾಜ ಒಡೆಯರರು ಕರ್ನಾಟಕದ ರಾಜ್ಯಪಾಲರಾಗಿ ಮುಂದವರಿಯಬಾರದು ಎಂಬ ಕೆಲವೊಂದು ಮನವಿಗಳು ನವದೆಹಲಿಗೆ ಹೋಗಿವೆಯೆಂದು ಸುದ್ದಿ. ಹಾಗಾಗಿ ಅವರನ್ನು ಮದ್ರಾಸದ ರಾಜ್ಯಪಾಲರೆಂದು ನೇಮಕ ಮಾಡಲಾಗುವುದೆಂದು ಹೇಳಲಾಗುತಿತ್ತು ಆದರೆ, ಜಯಚಾಮರಾಜರು ಈ ಕೊಡುಗೆಯ ನಿರಾಕರಿಸಿದ್ದಾರೆ ಒಂದು ವೇಳ ತನ್ನ ಸೇವೆಯು ಭಾರತ ಸರಕಾರಕ್ಕೆ ಬೇಕೇ ಬೇಕು ಎಂದಾದರೆ ಕರ್ನಾಟಕದಲ್ಲಿಯೇ ಮುಂದುವರಿಯುವ ಇಚ್ಛೆಯನ್ನವರು ತೋಡಿಕೊಂಡಿದ್ದರೆ, ಅದು ಅನ್ಯಾಯವೆನ್ನುವಂತಿಲ್ಲ.

ಉಡುಪಿ ಡಿ. ಮು. ಕೋರ್ಟನಲ್ಲಿ

O P 31/1962.

1 ಪದ್ಮಾವತಿ ಯೂನೆ ಬಿಡ್ಗು-ವಾಸು ನ್ಯಾಕರ ಮಗಳು-ಉಡುಪಿ ತಾಲೂಕು ಹಿರೆಬೆಟ್ಟು ಗ್ರಾಮದ ಬಾಳ್ಕಟ್ಟ—

2. ಶಾಂತಾ ಯೂನೆ ಲೀಲಾ ಬಾಯಿ—II. ಸಂಜೀವ ರಾಯರ ಮಗಳು—ಶಿವಮೊಗ್ಗಾದಲ್ಲಿರುವವಳು— ಅರ್ಜಿದಾರ್ರು

1ನೇ ಅರ್ಜಿದಾರಳ ಮಗ ಮತ್ತು 2ನೇ ಅರ್ಜಿದಾರಳ ಗಂಡ, H ಸೋಮಶೇಖರ ರಾಯರು ತಾರೀಕು 12.2 61ರಲ್ಲಿ ಮೃತಪಟ್ಟಿರುವದರಿಂದಾ—ಆತಗೆ ತಾವು ಮುಖ್ಯ ವಾರ್ಸಿದಾರರಾಗಿಯೂ ಸದರಿ ವೃತನ ಹಕ್ಕಿನ ಬಾಬ್ತು. ಅರ್ಜಿಯ ಶೆಡ್ಯೂಲಿನಲ್ಲಿ ಕಾಣಿಸಿದ— ಈ ಕೋರ್ಟು ಡಿಪೋಜಿಟಿನಲ್ಲಿರುವ ಹಣವನ್ನು ಪಡೆಯುವರೆ ತಾವು ಹಕ್ಕುದಾರರಾಗಿಯೂ—ಆ ಕುರಿತು ತಮ್ಮ ಕಡೆಯಿಂದಾ 1ನೇ ಅರ್ಜಿದಾರಳ ಹೆಸರಿಗೆ ವಾರೀಸು ಸರ್ಟಿಫಿಕೇಟು ಕೊಡ್ಸಬೇಕಾಗಿ ಸಹಾ ಅರ್ಜಿದಾರರು ಸದರಿ ಕೋರ್ಟಿಗೆ ಬರಕೊಂಡ ಸದರಿ ಅರ್ಜಿಯು ತಾರೀಕು 13-9-1962ಕ್ಕೆ ತನಖಿ ಬಗ್ಗೆ ಇಟ್ಟಿದೆ. ಈ ವಿಶಯದಲ್ಲಿ ಯಾರಾದ್ರೂ ಅಕ್ಷೇಪ ಹೇಳುವವರು ಇದ್ರೆ ಸದರಿ ತಾರೀಕಿಕೆ ತಮ್ಮ ಮೇಲ್ಕಂಡ ಕೋರ್ಟು ಮುಂದೆ ಹಾಜರಾಗಿ ತಮ್ಮ ಅಕ್ಷೇಪಗಳನ್ನು ಜಾಹೀರು ಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ಸಮಸ್ತರಿಗೆ ತಿಳಿಯಪಡಿಸೋಣಾಗಿಯದೆ.

M. Damoder Kamath,
Advocate for Petitioner.
ಉಡುಪಿ, 13—7—1962.

ಅಲ್ಲಲ್ಲಿಯ ಸುದ್ದಿಸಾರ

ಗ್ರಾಮಸ್ಥರಿಗೆ ಕೆನರಾ ಬ್ಯಾಂಕಿನ ವೈದ್ಯಕೀಯ ಸೇವೆ—ಕೆನರಾ ಬ್ಯಾಂಕಿನ ರಿಲೀಫ್ ಎಂಡ್ ವೆಲ್‌ಫೇರ್ ಸೊಸೈಟಿಯ ಔದಾರ್ಯ ಹಾಗೂ ಮಾನವೀಯ ಅನುಕಂಪದ ಉದ್ದೇಶದಿಂದ ಸ್ಥಾಪಿತವಾಗಿದ್ದು, ಬಡಬಗ್ಗರಿಗೆ ಧರ್ಮಾರ್ಥ ವೈದ್ಯಕೀಯ ಸಹಾಯ ಒದಗಿಸುವುದು ಮತ್ತು ಮಕ್ಕಳು ವಿದ್ಯಾರ್ಥಿಗಳು ರೋಗಿಗಳು, ಬಡವರು ವೃದ್ಧರು ಮತ್ತು ಅಂಗಹೀನರ ಕಲ್ಯಾಣಕ್ಕಾಗಿ ದುಡಿಯುವ ಶೈಕ್ಷಣಿಕ ಮತ್ತು ಇತರ ಸಂಸ್ಥೆಗಳಿಗೆ ಸಹಾಯ ಕೊಡುವುದು ಈ ಸಂಘದ ಉದ್ದೇಶಗಳಲ್ಲಿ ಸೇರಿದೆ.

ಈ ಸಂಘದ ಆಡಳಿತ ಕಮಿಟಿಯಲ್ಲಿ ಶ್ರೀಗಳಾದ ಎ ದಾಮೋದರ ಪೈ (ಅಧ್ಯಕ್ಷ) ಪಿ. ಸರ್ವೋತ್ತಮ ನಾಯಕ್, (ಕಾರ್ಯದರ್ಶಿ) ವೈ ಎಸ್. ಗೋಪಾಲ ಕೃಷ್ಣ ಸೆಟ್ಟಿ, ಎ ವೆಂಕಟ್ರಮಣ ಸೆಟ್ಟಿ ಮತ್ತು ಪಿ ಅಮರಚಂದ್ ಇವರು ಸದಸ್ಯರಾಗಿದ್ದಾರೆ

ಬೆಂಗಳೂರು ಮೆಡಿಕಲ್ ಕಾಲೇಜಿನ ಡೀನರಾದ ಡಾ| ಟಿ ಮಾಣಿಕಂ, ಮೆಡಿಕಲ್ ಕಾಲೇಜು ಪ್ರೊಫೆಸರರಾದ ಡಾ ಈಶ್ವರಯ್ಯ ಡಾ| ಎ. ಆರ್. ಸುಂದರರಾವ್, ಮತ್ತು ಮೆಡಿಕಲ್ ಕಾಲೇಜ್ ಎಸೋಸಿಯೇಶನ್‌ರವರು ಈ ಸಂಘದ ಚಟುವಟಿಕೆಗಳಿಗೆ ಅಮೂಲ್ಯ ಸಹಕಾರ ನೀಡಲು ಒಲವಿನಿಂದ ಮುಂದೆ ಬಂದಿರುವರು, ಇದೇ ತಾ. 8ರಂದು ಈ ಸಂಘದ ಉದ್ದೇಶಗಳನ್ನು ಮುಂದೊತ್ತಲು ಉಪಕ್ರಮವೊಂದು ಪ್ರಾರಂಭವಾಯಿತು. ಸಂಘದ ಸದಸ್ಯರು, ಡಾಕ್ಟರರು, ಹೌಸ್ ಸರ್ಜನರರು ಮತ್ತು ಮೆಡಿಕಲ್ ವಿದ್ಯಾರ್ಥಿಗಳು ಇವರನ್ನೊಳಗೊಂಡ ತಂಡವೊಂದು ಬೆಂಗಳೂರಿಗೆ ಎಂಟು ಮೈಲು ದೂರವಿರುವ ಹುಲಿಮಾವು ಎಂಬ ಹಳ್ಳಿಗೆ ತೆರಳಿ ಅಲ್ಲಿ ಮೂರು ಗಂಟೆಗಳ ವರೆಗೆ 90ಕ್ಕೂ ಮಿಕ್ಕಿದ ಗ್ರಾಮಸ್ಥರಿಗೆ ಧರ್ಮಾರ್ಥ ವೈದ್ಯಕೀಯ ನೆರವನ್ನಿತ್ತಿತು ಇದೇ ತೆರದ ವೈದ್ಯಕೀಯ ಸಹಾಯವು ಪ್ರತಿ ಆದಿತ್ಯವಾರ ಬೆಳಿಗ್ಗೆ ಆ ಹಳ್ಳಿಯಲ್ಲಿ ಕೊಡಲ್ಪಡುವುದು.

ವಿಧಾನ ಸೌಧಕ್ಕೆ ಗೋಕರ್ಣ ಮರ ಸ್ವಾಮಿಜಿಯವರ ಭೆಟ್ಟಿ—ಇದೇ ತಾ 9ನೇ ಸೋಮವಾರ ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಮರದ ಶ್ರೀಮದ್ ದ್ವಾರಕಾ ನಾಥ್ ತೀರ್ದ ಶ್ರೀಪಾದ ಒಡೇರ್ ಸ್ವಾಮಿಜಿಯವರು ಬೆಂಗಳೂರಿನ ವಿಧಾನ ಸೌಧಕ್ಕೆ ಸಂದರ್ಶನವಿತ್ತರು. ಅವರನ್ನು ಮೈಸೂರು ಲೆಜಿಸ್ಲೇಟಿವ್ ಎಸೆಂಬ್ಲಿಯ ಸ್ಪೀಕರ್ ಶ್ರೀ ಬಿ ವೈಕುಂಠ ಬಾಳಿಗರು ಅವರ ಚೇಂಬರಿನಲ್ಲಿ ಸ್ವಾಗತಿಸಿ ಗೌರವಿಸಿದರು ಅಂತೆಯೇ ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರೂ ಅವರ ಚೇಂಬರಿನಲ್ಲಿ ಶ್ರೀ ಸ್ವಾಮಿಜೀಯವರನ್ನು ಬರವಾಡಿಕೊಂಡು ಸ್ವಾಮಿಜೀಯವರಿಂದ ಫಲ ಮಂತ್ರಾಕ್ಷತೆಯೊಡನೆ ಆಶೀರ್ವಾದ ಪಡೆದರು ಮಂತ್ರಿಗಳು ದೆಕ್ಷಿಣ ಮತ್ತು ಉತ್ತರ ಕನ್ನಡದ ಎಂ. ಎಲ್. ಎ ಗಳೂ ಸ್ವಾಮಿಜೀಯವರ ದರ್ಶನ ಪಡೆದರು ಅನಂತರ ಸ್ವಾಮಿಜೀಯವರು ವಿಧಾನ ಮಂಡಳದ ಸಭಾ ಕಾರ್ಯಗಳನ್ನು ಅವಲೋಕಿಸಿದರು.

ದುರ್ಗಾ ಕ್ಲಿನಿಕ್ ಪ್ರಾರಂಭೋತ್ಸವ— ಮಂಗಳೂರಿನ ಡಾ. ಎಸ್ ವಿಶ್ವನಾಥ ಶೆಟ್ಟಿ ಎಂ. ಬಿ. ಬಿ. ಎಸ್. ಇವರು ಚಿಕ್ಕಮಗಳೂರಲ್ಲಿ ಹೊಸತಾಗಿ ತೆರೆದ ಶ್ರೀ ದುರ್ಗಾ ಕ್ಲಿನಿಕ್ ಮತ್ತು ಕ್ಲಿನಿಕಲ್ ಲೆಬೊರೇಟರಿಯ ಪ್ರಾರಂಭೋತ್ಸವವು ತಾ. 6 7-62 ರಂದು ಚಿಕ್ಕಮಗಳೂರಿನ ಪುರ ಸಭಾಧ್ಯಕ್ಷ ಶ್ರೀ ಸಿ ಆರ್. ಶಿವಾನಂದ ಅವರ ಅಧ್ಯಕ್ಷತೆಯಲ್ಲಿ ವಿಜೃಂಭಣೆಯಿಂದ ಜರಗಿತು. ಡಾ. ಶೆಟ್ಟರು ಸ್ವಾಗತಮಾಡಿ ಸಹಕಾರ ಕೋರಿದರು ಅಧ್ಯಕ್ಷರು ಸಂಸ್ಥೆಯನ್ನು ಉದ್ಘಾಟಿಸಿ ಶುಭಕೋರಿ ಮಾತನಾಡಿದರು. ಶ್ರೀ ಅಬ್ದುಲ್ ಬಾಸಿತ್ ಅವರು ಧನ್ಯವಾದ ಸಮರ್ಪಿಸಿದರು. ಅಂತ್ಯದಲ್ಲಿ ಅಗಂತುಕರಿಗೆ ಲಘು ಉಪಹಾರ ಸತ್ಕಾರ ನಡೆಯಿತು.

ಎ ಬಿ ಶೆಟ್ಟಿ ಮೆಮೋರಿಯಲ್ ಹೊಸ್ಟೆಲ್—ಮೈಸೂರಿನಲ್ಲಿರುವ ಎ. ಬಿ ಶೆಟ್ಟಿ ಮೆಮೋರಿಯಲ್ ಹೊಸ್ಟೆಲ್ ವಿದಾರ್ಥಿಗಳ ಸಭೆಯು ನಿಲಯದ ವಾರ್ಡನ್ ಶ್ರೀ. ಎಂ. ಎಸ್. ಶ್ರೀ ಕಂಠ ಅವರ ಅಧ್ಯಕ್ಷತೆಯಲ್ಲಿ ಸೇರಿ 1962-63ನೇ ಸಾಲಿನ ಆದಿಕಾರ ವರ್ಗವನ್ನು ಆಯ್ಕೆ ಮಾಡಿತು. ಶ್ರೀ ಎಂ. ಎಸ್. ಶ್ರೀಕಂಠ (ಅಧ್ಯಕ್ಷ) ಶ್ರೀ ಡಿ. ಕೆ ಅಬ್ದುಲ್ ಹಮೀದ್ (ಉಪಾಧ್ಯಕ್ಷ) ಶ್ರೀ ಟಿ ರವಿಚಂದ್ರ(ಕಾರ್ಯದರ್ಶಿ) ಶ್ರೀ ಕೆ ಜಗದೀಶ ಸೆಟ್ಟಿ ಜಂಟಿ ಕಾರ್ಯದರ್ಶಿ ಆಗಿ ಚುನಾಯಿತರಾಗಿದ್ದಾರೆ

ವಿವಾಹ ಸಮಾರಂಭಗಳು ಶ್ರೀ ಬಡಗಬೆಟ್ಟು ಪರೇಲ್ ಮಹಾಬಲ ಹೆಗ್ಡೆಯವರ ಪುತ್ರ ಶ್ರೀ ಮನೋಹರ ಹೆಗ್ಡೆ ಮತ್ತು ಶ್ರೀ ಮಂಜಯ್ಯ ಶೆಟ್ರ ಪುತ್ರಿ ಕುಮಾರಿ ಸುನಂದಾ ಇವರ ವಿವಾಹವು ಇದೇ ತಾ. 11ರಂದು ಉಡುಪಿ ಶ್ರೀ ವರದೇಂದ್ರ ಕಲಾ ಮಂದಿರದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಮೂಳೂರು ಬಿಕ್ರಿಗುತ್ತು ತೋಟದ ಮನೆ ಶ್ಯಾಮ ಸೆಟ್ಟರ ಪುತ್ರ ಶ್ರೀ ಗಣೇಶ ಸೆಟ್ಟಿ ಮತ್ತು ಹೆಜಮಾಡಿ ಹೊಸಮನೆ ತಿಮ್ಮಪ್ಪ ಶೆಟ್ರ ಪುತ್ರಿ ಸೌ|ಸುನಂದಾ ಹಾಗೂ ಸದ್ರಿ ತೋಟದಮನೆ ಶ್ಯಾಮ ಶೆಟ್ರ ಪುತ್ರಿ ಸೌ| ಪ್ರಫುಲ್ಲ ಮತ್ತು ಯಡ್ಡೆ ದೊಡ್ಡಮನೆ ಮಹಾಬಲ ಹೆಗ್ಡೆಯವರ ಪುತ್ರ ಸದಾಶಿವ ಹೆಗ್ಡೆ ಇವರ ವಿವಾಹ ಸಮಾರಂಭವು ಇದೇ ತಾ 11ರಂದು ಉಡುಪಿ ಶ್ರೀ ರಾಮಕೃಷ್ಣ ಧಿಯೇಟರಿನಲ್ಲಿ ವಿಜೃಂಭಣೆಯಿಂದ ನೆರವೇರಿತು.

ಶ್ರೀ ಬೈಲೂರು ವಿಟ್ಟಲ ಶೆಟ್ರ ಪುತ್ರ ಶ್ರೀ ಮಾಧವ ಹೆಗ್ಡೆ ಮತ್ತು ಪೊಮ್ಮಂಜೆ ಕೆ. ಗೋಪಾಲ ಕಡಂಬರ ಪುತ್ರಿ ಸೌ ಹೇಮಲತಾ ಇವರ ವಿವಾಹೋತ್ಸವವು ಇದೇ ತಾ. 11ರಂದು ಕಾರ್ಕಳ ಜೈ ಹಿಂದ್ ಟಾಕೀಸಿನಲ್ಲಿ ವಿಜೃಂಭಣೆಯಿಂದ ನೆರವೇರಿತು.

ಮಂಗಳೂರಿನ ಜಿಲ್ಲಾ ವೆಟರ್ನರಿ ಆಫೀಸರ್ ಶ್ರೀ ವೈ ಶಿವಪ್ಪ ರೈ ಇವರ ಪುತ್ರಿಯವರಾದ ಕುಮಾರಿ ಶಕುಂತಲಾ ಇವರ ವಿವಾಹವು ಕೆ ಮುಂಡಪ್ಪ ಶೆಟ್ಟರ ಪುತ್ರ ಶ್ರೀ ಐತಪ್ಪ ಶೆಟ್ಟರೊಡನೆಯೂ, ಕುಮಾರಿ ಜಲಜಾಕ್ಷಿ ಇವರ ವಿವಾಹವು ಇಚ್ಛಂಪಾಡಿ ರೆಮೂನಂದ ರೈಯವರ ಪುತ್ರ ಶ್ರೀ ರಾಮಪ್ರಸಾದ ರೈಯವರೊಡನೆಯೂ ಇದೇ ತಾ 11ರಂದು ಮಂಗಳೂರಿನ ಜ್ಯೋತಿ ಟಾಕೀಸಿನಲ್ಲಿ ವೈಭವದಿಂದ ಜರಗಿತು.

ಕೆಮ್ತೂರು ಪಡುಮನೆ ದಿ ಸಂಕಯ್ಯ ಶೆಟ್ರ ಪುತ್ರಿ ಸೌ| ವಸಂತಿ ಮತ್ತು ಮಲ್ಲಾರು ಗುತ್ತು ದಿ. ನಾರಾಯಣ ಶೆಟ್ರ ಪುತ್ರ ಚಿ ಸಚ್ಚಿದಾನಂದ ಶೆಟ್ಟಿ ಇವರ ವಿವಾಹವು ಇದೇ ತಾ 15ರಂದು ಉದ್ಯಾವರ ಶ್ರೀ ಗಣಪತಿ ದೇವಸ್ಥಾನದಲ್ಲಿ ಯಥಾ ಸಾಂಗವಾಗಿ ನೆರವೇರಿತು.

ಉಡುಪಿಯ ಶ್ರೀ ಯು ಶಿವರಾವ್ ಬಿ. ಎ, ಎಲ್.ಟಿ. ಇವರ ಪುತ್ರ ಶ್ರೀ ಯು. ವಾಸುದೇವ ರಾಯರ ವಿವಾಹವು ಶ್ರೀ ಅರಗೋಡಿಗೆ ಎಲ್. ಸುಬ್ಬ ಭಟ್ಟರ ಪುತ್ರಿ ಸೌ ಶಾರದಾರೊಂದಿಗೆ ಜುಲೈ 8ರಂದು ಉಡುಪಿಯ ಕುಂಜಿಬೆಟ್ಟಿನಲ್ಲಿರುವ ಕಲ್ಯಾಣ ಮಂಟಪದಲ್ಲಿ ವಿಜೃಂಭಣೆಯಿಂದ ಜರಗಿತು. ನೂತನ ವಧೂವರರೆಲ್ಲರಿಗೂ ಶುಭಾಶಯಗಳು.

ವಿಶೇಷ ಮಳೆ—ಕೆಲವು ದಿವಸಗಳಿಂದ ಬಿರುಗಾಳಿಯಿಂದ ಕೂಡಿದ ವಿಶೇಷ ಮಳೆಯು ಹವ್ಯಾಹಕವಾಗಿ ಸುರಿಯುತ್ತಿದೆ ಜಿಲ್ಲೆಯ ಹೊಳೆಗಳಲ್ಲಿ ಅಲ್ಲಲ್ಲಿ ನೆರೆಯೂ ಬಂದಿರುತ್ತದೆ. ಕೆಲವು ಗುಡಿಸಲುಗಳಿಗೆ ಖಾನಿ ಸಂಭವಿಸಿರುವುದಲ್ಲದೆ ಸಾರಿಗೆ ಸಂಪರ್ಕ ವಿಚ್ಛುಚ್ಛಕ್ತಿ, ಟೆಲಿಫೋನ್ ಸಂಪರ್ಕಗಳಿಗೆ ಧಕ್ಕೆ ಉಂಟಾದ ವರದಿಗಳಾಗಿವೆ.

ಡಾ| ರೈ ದಂಪತಿಗಳ ವಿದೇಶ ಪ್ರವಾಸ

ಡಾ| ಕೆ. ಎಮ್. ರೈ

ಶ್ರೀಮತಿ ಲಲಿತಾ, ಎಮ್. ರೈ

ಕೆನಡಾದ ಮೋಂಟ್ರಿಯಲ್‌ನಲ್ಲಿ ಇದೇ ಬರುವ ಆಗೋಸ್ತು ತಿಂಗಳಾಂತ್ಯದಲ್ಲಿ ಜರಗಲಿರುವ ಹತ್ತನೇ ಅಂತಾರಾಷ್ಟ್ರೀಯ ರೇಡಿಯೊಲೊಜಿ ಪರಿಷತ್ತಿಗೆ ಭಾರತ ನಿಯೋಗದ ಅಧ್ಯಕ್ಷರಾಗಿ ಸರ್ವಾನುಮತದಿಂದ ಆರಿಸಲ್ಪಟ್ಟಿರುವ ಹಾಗೂ ಮೋಸ್ಕೊದಲ್ಲಿ ನೆರವೇರಲಿರುವ ಎಂಟನೇ ಜಾಗತಿಕ ಕೇನ್ಸರ್ ಪರಿಷತ್ತಿಗೆ ಪ್ರತಿನಿಧಿಗಳಾಗಿ ಚುನಾಯಿತರಾಗಿರುವ ಮದ್ರಾಸಿನ ಡಾ| ಕೆ ಮಂಜುನಾಥ ರೈ, ಎಂ ಬಿ, ಎಸ್ ಆರ್ ಸಿ.ಎಸ್, ಎಸ್.ಎಸ್.ಆರ್, ಡಿ ಎಂ. ಆರ್ (ಲಂಡನ್) ಇವರು ತನ್ನ ಸಹಧರ್ಮಿಣಿ ಶ್ರೀಮತಿ ಲಲಿತಾ ಎಂ ರೈಯವರೊಂದಿಗೆ ಇದೇ ತಾ 18ರಂದು ಮದ್ರಾಸಿನಿಂದ ಡೆಲ್ಲಿಗೆ ಹೋಗಿ ಅಲ್ಲಿಂದ ತಾ 21ಕ್ಕೆ ಮೋಸ್ಕೊವಿಗೆ ತೆರಳುವರು

ಡಾ| ರೈಗಳು ಸರ್ಜನ್‌ರ ರೋಯಲ್ ಕಾಲೇಜ್ ರೇಡಿಯೊಲಜಿಸ್ಟರ ವ್ಯಾಸಂಗ ಶಾಖೆಯ ಸದಸ್ಯರಾಗಿಯೂ ಆರಿಸಲ್ಪಟ್ಟಿರುವರಲ್ಲದೆ ಪಶ್ಚಿಮ ಜರ್ಮನಿ, ಮತ್ತು ಯು. ಎಸ್ ಎ ಯ ವಿಶ್ವವಿದ್ಯಾಲಯಗಳ ಆಸ್ಪತ್ರೆಗಳಿಗೂ ಕೆಲವು ಭಾಷಣ ಕೊಡುವುದಕ್ಕಾಗಿ ಅಮಂತ್ರಿಸಲ್ಪಟ್ಟಿರುವರು ಹೀಗಾಗಿ ಅವರು ಈ ಸುದೀರ್ಘ ಪ್ರವಾಸವನ್ನು ಕೈಗೊಂಡಿರುವರು. ಡಾ| ರೈಗಳು ಮೋಸ್ಕೊದಿಂದ ಲೆನಿನ್‌ಗ್ರಾಡ್, ವಿಯನ್ನ ನುರೆಂಬರ್ಗ್, ಹಿಡಲ್‌ಬರ್ಗ್, ಫ್ರಾಂಕ್ ಫೋರ್ಟ್, ಲಂಡನ್, ಮೋಂಟ್ರಿಯಲ್, ಟೊರೆಂಟೊ, ನಯಾಗರ, ಬಫೆಲೊ, ನ್ಯೂಯೋರ್ಕ್, ವಾಶಿಂಗ್ಟನ್, ಸಿಟ್ಟ್‌ಬರ್ಗ್, ಬಿಕಾಗೊ, ಮಿನಯಪೊಲಿಸ, ಯು. ಎಸ್. ಎ ಯ ನೇಶನಲ್ ಪಾರ್ಕ್, ಲಿವೇಗಸ್, ಲೋಸ್‌ಎಂಜಲೀಸ್, ಸಾನ್ ಫ್ರಾನ್ಸಿಸ್ಕೋ, ಸಿಯಾಟ್ಲ್, ಹೊನಲೂಲು, ಜಪಾನ್, ಹೊಂಕೊಂಗ್, ಬೆಂಗಕೋಕ್, ಸಿಂಗಾಪುರ್ ಮಾದಲಾದ ಕಡೆಗಳಿಗೆ ಪ್ರವಾಸ ಮಾಡುವರು ಸಾನ್ ಫ್ರಾನ್ಸಿಸ್ಕೋವಿನ ಯುನಿವರ್ಸಿಟಿಯಲ್ಲಿ ಕೊನೆಯ ಭಾಷಣ ಮಾಡಿ ಅಲ್ಲಿಂದ ವಾಶಿಂಗ್ಟನ್‌ನಲ್ಲಿರುವ ಸಿಯಾಟ್ಲಿಗೆ ಜಾಗತಿಕ ಜಾತ್ರೆ ನೋಡಲು ತೆರಳುವರು ಇವರು ಅಕ್ಟೋಬರದಲ್ಲಿ ಸ್ವದೇಶಕ್ಕೆ ಹಿಂತಿರುಗುವರೆಂದು ತಿಳಿದು ಬರುತ್ತದೆ ಡಾ ರೈಗಳು ಇದೀಗ ನಾಲ್ಕನೆಯ ಸಲವೂ, ಶ್ರೀಮತಿ ರೈಗಳು ಎರಡನೆಯ ಸಲವೂ ವಿದೇಶ ಪ್ರವಾಸ ಮಾಡುವುದಾಗಿದೆ ಡಾ| ರೈ ದಂಪತಿಗಳ ಸುದೀರ್ಘ ಪ್ರವಾಸವು ಸುಗಮವಾಗಲೆಂದು ಹಾರೈಸುತ್ತೇವೆ.

ವಿಶ್ರಾಂತಿಯ ಹೆಸರಿನಲ್ಲಿ

ಕರ್ನಾಟಕಕ್ಕೆ ನೆಹರೂ ಭೇಟಿ

ಪ್ರಧಾನ ಮಂತ್ರಿ ನೆಹರೂರವರು ನಾಲ್ಕು ದಿನದ ವಿಶ್ರಾಂತಿಯನ್ನು ಪಡೆಯಲು ಕರ್ನಾಟಕದ ನಂದಿ ಬೆಟ್ಟಗಳಲ್ಲಿ ತಂಗಿದ್ದಾರೆ. ಹವಾಮಾನವು ಉತ್ತಮವಾಗಿದ್ದರೆ, ಅವರು ಇನ್ನೂ ಒಂದೆರಡು ದಿನಗಳ ಕಾಲ ಹೆಚ್ಚು ಉಳಿಯುವರೆಂದು ತಿಳಿಯುತ್ತದೆ. ಪ್ರಧಾನಿಯವರು ವಿಶ್ರಾಂತಿಯ ಮಹೋದ್ದೇಶದಿಂದಲೇ ಆಗಮಿಸಿರುವುದರಿಂದ ಯಾವ ಸಾರ್ವಜನಿಕ ಕಾರ್ಯಕ್ರಮಗಳನ್ನೂ ಇಟ್ಟುಕೊಂಡಿಲ್ಲ. ಆದರೂ ಈ ಮೊದಲೇ ನಡೆದು ಹೋಗಬೇಕಿದ್ದ ಬೆಂಗಳೂರಿನ ಡಾ! ವಿಶ್ವೇಶ್ವರಯ್ಯ ಸ್ಮಾರಕ ಮ್ಯೂಜಿಯಂನ ಉದ್ಘಾಟನೆಯನ್ನು ನೆರವೇರಿಸಿದರು. ಹಾಗೆಯೇ ಅಲ್ಲಿಯೇ ಪಂಚಾಯತ ಪರಿಷತ್ತನ್ನೂ ಉದ್ಘಾಟಿಸಿದರು. ಆ ಮೇಲೆ ತುಮಕೂರಿನಲ್ಲಿ ಹೊಸತಾಗಿ ಸ್ಥಾಪಿತವಾದ ಪೊಲಿಟೆಕ್ನಿಕಿನ ಪ್ರಾರಂಭೋತ್ಸವವನ್ನೂ ಅವರು ಜರಗಿಸಿದರು.

ಈ ಮೂರು ಸಂದರ್ಭಗಳಲ್ಲಿಯೂ ಪ್ರಧಾನಿಯವರು ಕೆಲವೊಂದು ಒಳ್ಳೆಯ ಅಭಿಪ್ರಾಯಗಳನ್ನು ಪ್ರಕಟಿಸಿದರು. ರಾಜನುಹಾರಾಜರು ಮಾತ್ರ ಚಾರಿತ್ರಿಕ ಪುರುಷರಲ್ಲ; ಅವರ ಇತಿಹಾಸ ಮಾತ್ರ ಚರಿತ್ರೆಯಲ್ಲವೆಂಬುದನ್ನು ಸ್ಪಷ್ಟ ವಾಕ್ಯಗಳಲ್ಲಿ ಹೇಳಿ, ದೇಶದ ಉನ್ನತಿಗಾಗಿ ಶ್ರಮಿಸುವ ಪ್ರತ್ಯೇಕ ವ್ಯಕ್ತಿಯೂ ದೇಶದ ಒಂದೊಂದು ಚರಿತ್ರವೆಂದು ಉದ್ಗರಿಸಿದರು. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ವಿಜ್ಞಾನವು ಬಹುಕಾಲಕ್ಕೆ ಮೊದಲೇ ಪ್ರಗತಿ ಪಡೆಯುತ್ತ ಬಂದಿದ್ದರೂ ಏಶ್ಯನ್ ದೇಶಗಳು ಈ ಬಗೆಗೆ ಹೆಚ್ಚಿನ ಆಸಕ್ತಿಯನ್ನು ತೋರಿಸಲಿಲ್ಲವೆಂಬುದನ್ನು ಎತ್ತಿ ಹೇಳಿದ ನೆಹರು ಮಾನವನ ಕಲ್ಯಾಣಕ್ಕೆ, ವಿಶ್ವದ ಉನ್ನತಿಗೆ ವಿಜ್ಞಾನವು ಅನಿವಾರ್ಯ; ಅದಿಲ್ಲವಾದರೆ, ಪ್ರಪಂಚವು ಪತಿತವಾದಂತೆ; ನಷ್ಟಗೊಂಡಂತೆ ಎಂದು ಸಾರಿದರು. ಹಾಗೆಯೇ ದೇಶದಲ್ಲಿ ವಿಜ್ಞಾನ ಮಾತ್ರ ಬೆಳೆದರೆ ಸಾಲದೆಂದೂ ಆಧ್ಯಾತ್ಮಿಕತೆಯೂ ಹೆಚ್ಚ ಬೇಕೆಂದೂ ಅವರು ಬಯಸಿದರು.

ದಿವಂಗತ ವಿಶ್ವೇಶ್ವರಯ್ಯನವರು ಈ ಸತ್ಯವನ್ನು ಮನಗಂಡಿದ್ದರು; ಆದರಿಂದಲೇ ಅವರು ವಿಜ್ಞಾನ ಮತ್ತು ಆಧ್ಯಾತ್ಮಿಕಗಳನ್ನು ಆಳವಾಗಿ ಅಧ್ಯಯನ ನಡೆಸಿದ ಪಂಡಿತರಾಗಿದ್ದರು. ಅವರ ಹೆಸರಿನ ವಿಜ್ಞಾನ ಪ್ರದರ್ಶನಾಲಯವು ನಿರ್ಜೀವ ವಸ್ತುಗಳ ಸಂಗ್ರಹಾಲಯವಾಗಿರದೆ ಜೀವಂತವೆನಿಸಿ, ಅವರು ದೇಶೋನ್ನತಿಯಲ್ಲಿ ಪ್ರಾರಂಭಿಸಿದ ಕಾರ್ಯಗಳನ್ನು ಮುಂದುವರಿಸುವಂತೆ ಪ್ರೇರೇಪಣೆ ನೀಡುವಂತಾಗಲೆಂದು ಹಾರೈಸಿದರು.

ನೆಹರುರ ಅನಂತರ ಯಾರು ಎಂಬ ಪ್ರಶ್ನೆಯು ಸಾಕಷ್ಟು ಕೋಲಾಹಲವನ್ನು ಎಬ್ಬಿಸತೊಡಗಿದುದನ್ನು ಪ್ರಧಾನಿಗಳು ಪಂಚಾಯತ ಸಮ್ಮೇಳನದಲ್ಲಿ ಉದಾಹರಿಸಿ, ಇಂತಹ ಕ್ಷುಲ್ಲಕ ಪ್ರಶ್ನೆಗಳು ಬರೇ ಗುಲ್ಲು ನಿದ್ದೆಗೇಡು ಎಂದರು. ನೆಹರುರವರ ಅನುಪಸ್ಥಿತಿಯಲ್ಲಿಯೂ ದೇಶವನ್ನು ಮುಂದೊಯ್ಯಲು ಬದ್ಧ ಕಟಿಯಾದ ನೂರಾರು ಭಾರತೀಯ ನಾಯಕರಿದ್ದಾರೆ ಎಂದವರು ಹೇಳಿದರು. ಪಂಚಾಯತ ರಾಜ್ಯದ ತಳಹದಿಯು ಭಾರತದ ಪ್ರಧಾನಿ ಮತ್ತು ರಾಷ್ಟ್ರಪತಿಗಳಂತಹ ಉನ್ನತ ಹುದ್ದೆಗೆ ಅರ್ಹರಾಗುವಂತೆ ನಾಗರಿಕರನ್ನು ತರಬೇತಿಗೊಳಿಸುವುದೇ ಆಗಿದೆ. ಭಾರತದ ಮಕ್ಕಳೆಲ್ಲರೂ ರಾಷ್ಟ್ರಪತಿ ಇಲ್ಲವೇ ಪ್ರಧಾನಿಯಾಗಲೇ ಬೇಕಾಗಿಲ್ಲವಾದರೂ ಅಂತಹ ಹಿರಿಯ ಪದವಿಯನ್ನು ಗಳಿಸುವ ಅವಕಾಶ ಅವರಿಗೆಲ್ಲರಿಗಿದೆಯೆಂದವರು ಪುನರುಚ್ಚರಿಸಿದರು.

ಹೆಚ್ಚಿನ ಮಕ್ಕಳು ಹೊಟ್ಟೆ ಬಟ್ಟೆಗಿಲ್ಲದೆ ನರಳುತ್ತಿರುವುದಕ್ಕೆ ತಮ್ಮ ಬೇಸರವನ್ನು ವ್ಯಕ್ತಪಡಿಸಿದ ಅವರು ಮಕ್ಕಳಿಗೆ ಆವಶ್ಯಕ ಸೌಲಭ್ಯಗಳನ್ನು ಒದಗಿಸಿ ಕೊಡುವುದರೊಡನೆ ಸ್ವಾವಲಂಬನೆ ಮತ್ತು ನಾಯಕತ್ವದ ತರಬೇತಿಗಳನ್ನು ಒದಗಿಸುವತ್ತ ಪ್ರಾಶಸ್ತ್ಯ ನೀಡಬೇಕೆಂದು ಎಂದು ಆಗ್ರಹ ಪಡಿಸಿದರು ಹೀಗೆ ಮಾಡಿದೆವಾದರೆ, ಅವಿನಾಶಿಯೆನಿಸುವ ಪ್ರಜಾರಾಜ್ಯವನ್ನು ಕಟ್ಟುವುದು ಸುಲಭವೆಂದರವರು. ‘‘ನೆಹರುಗಳು ಹುಟ್ಟಬಹುದು; ಸಾಯಬಹುದು. ಆದರೆ, ಭಾರತದ ಜನತೆಯು ಶಾಶ್ವತವಾಗಿದ್ದು ತಮ್ಮನ್ನು ಮುಂದುವರಿಸಲು ಸಾಕಷ್ಟು ಜನರನ್ನು ಅವರು ಅಣಗೊಳಿಸುವರು’’ ಎಂಬ ವಿಶ್ವಾಸವನ್ನೂ ಆಶಾವಾದವನ್ನೂ ಅವರು ತೋರ್ಪಡಿಸಿದರು.

ದೇಶ ಸೇವೆಯನ್ನು ದೊಡ್ಡ ಧರ್ಮವೆಂದು ಕರೆದ ನೆಹರು, ಈ ಧರ್ಮವನ್ನು ನಾವು ಕಲಿತುಕೊಂಡರೆ, ಇತರ ಧರ್ಮಗಳು ನಮಗೆ ನೆರವಾಗುವುವು ಎಂದು ಹೇಳಿದರು. ದೇಶದಲ್ಲಿರುವ ಹಲವಾರು ಮತಗಳ ಬಗ್ಗೆ ಮಾತಾಡಿದ ಇವರು, ಪರಸ್ಪರ ಗೌರವವನ್ನು ಈ ಮತಗಳು ತೋರಿಸಿದರೆ ಸಮಂಜಸವಾಗುವುದು—ಇಲ್ಲವಾದರೆ, ದೇಶಕ್ಕೆ ಇದುವೇ ಒಂದು ಮಾರಕಾಸ್ತ್ರವೆನಿಸುವುದು ಎಂದರು. ಭಾರತೀಯರು ಇಡಿಯ ಭಾರತವನ್ನು ತನ್ನ ಊರೆಂದು ಪರಿಗಣಿಸಬೇಕು. ಇಡಿಯ ದೇಶದ ಮೇಲ್ಮೈಗಾಗಿ ಹೋರಾಡಬೇಕು; ದುಡಿಯಬೇಕು. ಉತ್ತರ ಭಾರತದವರನ್ನು ದಕ್ಷಿಣದವರೂ ದಕ್ಷಿಣದವರನ್ನು ಉತ್ತರದವರೂ ಹೆಚ್ಚು ಹೆಚ್ಚಾಗಿ ಅರ್ಥಮಾಡಿಕೊಳ್ಳಬೇಕು ಎಂದು ಬಯಸಿದ ಪ್ರಧಾನಿಯವರು ಅಜಿತ ಪ್ರಸಾದ ಜೈನರ ಆಯ್ಕೆಯ ಬಗ್ಗೆ ಸಮಾಧಾನ ತಾಳಿದರು.

ಪ್ರಧಾನಿಗಳೊಂದಿಗೆ ಅವರ ತಂಗಿ ವಿಜಯಲಕ್ಷ್ಮಿ ಪಂಡಿತ್, ಮಗಳು ಇಂದಿರಾ ಗಾಂಧಿ ಮತ್ತಾಕೆಯ ಇಬ್ಬರು ಮಕ್ಕಳೂ ಬಂದಿದ್ದಾರೆ. ಕೇಂದ್ರದ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರೂ ಇವರ ಜತೆಯಲ್ಲಿದ್ದಾರೆ.



ಭಾರತದಲ್ಲಿ ಅಮೆರಿಕೆಯ ರಾಯಭಾರಿ ಗಾಲ್‌ಬ್ರೈಥರು ಒರಿಸ್ಸದ ರೈತನೊಂದಿಗೆ ಮಾತಾಡಲು ಕೆಸರು ಗದ್ದೆಯಲ್ಲಿ ನಡೆದರು.

ಮನಾಳಿಯಲ್ಲಿ ನೆಹರೂಜೀ

(ಜನೇ ಪುಟದಿಂದ)

ತಮ್ಮ ಪಿ. ಎ. ಅದನ್ನು ಸಂಬಂಧಿತ ಮಂತ್ರಿ ಶಾಖೆಗೆ ಕಳಿಸುತಿದ್ದ. ಮತ್ತೆ ಆ ಶಾಖೆಯೊಡನೆ ಹೊಡೆದಾಡಿಕೊಂಡರಾಯಿತು. ನನ್ನ ಪತ್ರ ನಿಮಗೆ ಸಿಗುವುದಾದರೂ ಹೇಗೆ?”

‘‘ಇಂಲಿ, ನನ್ನನ್ನು ಇಲ್ಲಿ ಕಂಡು ವಿಷಯವನ್ನಾದರೂ ತಿಳಿಸಿದಿರಲ್ಲ; ನಾನು ನಾಳೆಯೇ ದೆಹಲಿಗೆ ಹೋಗುವವನಿದ್ದೆ” ನೆಹರು ಕೆಮ್ಮಿ ಹೇಳಿದರು.

‘‘ವಿನು ಪಂಡಿತರೆ, ತುಸು ನೆಗಡಿಯೂ ಗಿದೆಯೆ?”

‘‘ಇಲ್ಲ, ಕುತ್ತಿಗೆಯಲ್ಲಿ ಸ್ವಲ್ಪ ಕಫ ಇದೆ.”

‘‘ಇಲ್ಲಿ ಮಳೆಯಾಗಿಲ್ಲ”

‘‘ಏನಾಯಿತು?”

‘‘ಮತ್ತೇನೂ ಇಲ್ಲ, ಬೆಳೆ ಒಣಗುತ್ತ ಇದೆ. ಹೆಚ್ಚಿನ ಹಳ್ಳಿಗಳಲ್ಲಿ ಪಶುಗಳಿಗೆ ಕುಡಿಯಲು ನೀರಿಲ್ಲ; ತಿನ್ನಲು ಹುಲ್ಲಿಲ್ಲ”

‘‘ಮಳೆಯೂಕೆ ಆಗಲಿಲ್ಲ?”

‘‘ಇದು ದೇವಭೂಮಿ. ರಾಜರು ಯಜ್ಞಮಾಡಿದರೆ, ಮಳೆಯಾಗುತ್ತದೆಯೆಂದು ಜನ ನಂಬುತ್ತಾರೆ’

‘‘ಈಗ ರಾಜರೇ ಇಲ್ಲವಲ್ಲ?”

‘‘ಪಂಡಿತಜಿ, ಯಾವುದೋ ವಿಲಕ್ಷಣ ಪ್ರಾಣಿ ತಮ್ಮೂರಿಗೆ ಬಂದಿದೆ; ಅದುದರಿಂದ ದೇವತೆಗಳು ಅಸಂತುಷ್ಟರಾಗಿ ಓಡಿಹೋಗಿದ್ದಾರೆ; ದೇವತೆಗಳ ಕೋಪವೇ ಮಳೆ ಬಾರದಿರಲು ಕಾರಣವೆಂದು ಜನ ತಿಳಿದುಕೊಂಡಿದ್ದಾರೆ”

ಜವಾಹರಲಾಲರು ತನ್ನ ನಗುವನ್ನು ತಡೆಯದಾದರು ‘‘ಕೆಮ್ಮಿನ ಸದ್ದು ಕೇಳಿ ಓಡಿ ಹೋಗದ ದೇವತೆಯೊದರೂ ಯಾರು?‘‘ ಅವರು ನಗೆಗಡಲಿನ ಮಧ್ಯೆ ಹೇಳಿದರು.

‘‘ಅದನ್ನೂ ನಾನು ಹೇಳಬೇಕೇ?‘‘ ನಾನೂ ನಕ್ಕು ಬಿಟ್ಟೆ. ಅಷ್ಟರಲ್ಲಿ ಒಳಗಿನಿಂದ ಇಣಿಕಿದ ಇಂದಿರಾ ಗಾಂಧಿಯವರೂ ನಮ್ಮ ನಗುವಿನಲ್ಲಿ ಕೂಡಿ ಕೊಂಡರು.

(—‘‘ನವನೀತ ದಿಂದ)

Quality Air Cushion
Rubber Stamps
Crown
RUBBER STAMP CO.
PHONE-263
ESTD.1926
BALMATTA ROAD, MANGALORE.

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ರೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ‘‘ವಿಜಯ ಬೇಂಕ್‘‘ಅತ್ಯುತ್ತಮವೆಂದು ಪರಿಗಣಿಸಿರುವರು. ಪ್ರತಿಯೊಬ್ಬರೇವಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿ ಹೊಂದುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ವಿಜಯ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್:— ವಿಜಯ ಬೇಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡ್,
Estd. 1931.
Phone No. 240. — ಮಂಗಳೂರು—3

ಕನ್ನಡ ಪುಸ್ತಕಗಳಿಗೆ—
ಮತ್ತು
ಕಥೆಕಾದಂಬರಿ ಇತ್ಯಾದಿ ಪುಸ್ತಕಗಳಿಗೆ
ನವಭಾರತ ಪುಸ್ತಕ ಭಂಡಾರ, ಉಡುಪಿ.

ನೆರೆಯ ಸಿಲೋನಿನಲ್ಲಿ

ಹಿಂದೂ ವಿಶ್ವವಿದ್ಯಾಲಯದ ಸ್ಥಾಪನೆ

ಸಿಂಹಳ ಮತ್ತು ಭಾರತಗಳ ನಡುವೆ ಇತಿಹಾಸವು ಅಜ್ಞಾತವಾಗಿರುವಾಗಲೂ ಸಂಬಂಧವು ಬೆಳೆದಿತ್ತು. ಇತಿಹಾಸಾವಧಿಯಲ್ಲಂತೂ ಈ ಬಾಂಧವ್ಯವು ಮತ್ತಷ್ಟು ಹೆಚ್ಚಿತು. ಈ ಕಾರಣದಿಂದಲೇ ಸಿಂಹಳದಲ್ಲಿ ಹಿಂದೂ ಸಂಸ್ಕೃತಿಯ ಪ್ರಭಾವವು ಅಚ್ಚಳಿಯದೆ ಕಾಣುತ್ತಿದೆ. ಸಿಂಹಳೀಯರ ಮುಖ್ಯ ಧರ್ಮವೆನಿಸಿದ ಬೌದ್ಧ ಧರ್ಮವು ಭಾರತದಲ್ಲಿಯೇ ಜನ್ಮ ತಾಳಿದ್ದು. ದಕ್ಷಿಣ ಭಾರತದ ವಿವಿಧ ಸಾಮ್ರಾಟರ ಕಾಲಾವಧಿಯಲ್ಲಿ ಸಿಂಹಳದಲ್ಲಿ ಭಾರತೀಯ ತಮಿಳರು ಬಂದು ನೆಲಸುವುದಕ್ಕೆ ಬೇಕೆಂಬಷ್ಟು ಅವಕಾಶ ಕಲ್ಪಿತವಾಗಿತ್ತು. ಈ ಕಾರಣದಿಂದಲೇ ಅಲ್ಲಿ ಇಂದಿಗೂ ಬಹಳಷ್ಟು ಸಂಖ್ಯೆಯ ತಮಿಳರು ನೆಲಸಿಕೊಂಡಿದ್ದಾರೆ. ಇವರಿಗೆ ಸಿಂಹಳೀಯ ನಾಗರಿಕ ಹಕ್ಕನ್ನು ಒದಗಿಸುವ ಬಗ್ಗೆ ಪ್ರಯತ್ನಗಳು ನಡೆಯುತ್ತಿವೆ.

ಜಹ್ನಾನಲ್ಲಿ ಹಿಂದೂ ಸಾಂಸ್ಕೃತಿಕ ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಸಿಂಹಳೀಯ ಸರಕಾರವು ನಿರ್ಧರಿಸಿರುವುದರಿಂದ ಸಮಸ್ಯೆಯು ತುಸು ಹಗುರಗೊಳ್ಳುವುದೆಂದು ಊಹಿಸ ಬಹುದು. ತಮಿಳು ಭಾಷೆ ಮತ್ತು ಹಿಂದೂ ಸಂಸ್ಕೃತಿಗಳ ಅಭಿವೃದ್ಧಿಗಾಗಿಯೇ ಈ ವಿಶ್ವವಿದ್ಯಾಲಯವು ನಿರ್ಮಿತವಾಗುವುದೆಂದು ಅಧಿಕಾರಿಕವಾಗಿ ತಿಳಿಯುತ್ತದೆ ಸಿಲೋನಿನಲ್ಲಿ ತಮಿಳ ನಾಯಕರಾಗಿದ್ದ ಮೊನ್ನಂಬಳಂ ರಾಮನಾಥನರು ತಮ್ಮ ಜೀವಿತ ಕಾಲದಲ್ಲಿ ಸಿಲೋನಿನ ಶಿಕ್ಷಣ, ಸಂಸ್ಕೃತಿ ಮತ್ತು ಸ್ವಾತಂತ್ರ್ಯದ ಕ್ಷೇತ್ರಗಳಲ್ಲಿ ಪ್ರಶಂಸಾರ್ಹ ಸೇವೆ ಸಲ್ಲಿಸಿದ್ದರು: ಅವರ ಸವಿನೆನಪಿಗಾಗಿ ಈ ವಿಶ್ವ ವಿದ್ಯಾಲಯವನ್ನು ರಾಮನಾಥನ್ ವಿಶ್ವವಿದ್ಯಾಲಯವೆಂದು ಕರೆಯಲಾಗುವುದು ಈಗ ಇರುವ ರಾಮನಾಥನ್ ಮತ್ತು ಪರಮೇಶ್ವರ ಕಾಲೇಜುಗಳನ್ನು ಒಂದುಗೂಡಿಸಿ ಈ ಹಿಂದೂ ವಿಶ್ವವಿದ್ಯಾಲಯವನ್ನು ನಿರ್ಮಿಸುವ ನಿರ್ಧಾರವಾಗಿರುತ್ತದೆ.

ಸಿಂಹಳದ ಶಿಕ್ಷಣ ಸಚಿವ ಶ್ರೀ ಬದಿಯುದ್ದೀನ್ ಮಹಮ್ಮದರು ಈ ವಿಶ್ವವಿದ್ಯಾಲಯ ರಚನೆಯ ಬಗ್ಗೆ ಸಿಫಾರಸು ಮಾಡಿದ್ದು ಅದನ್ನು ಸರಕಾರವು ಮನ್ನಿಸಿದೆ; ಮತ್ತು ಸ್ಥಾಪನೆಗೆ ಸಂಬಂಧಿಸಿದ ವಿಧೇಯಕವನ್ನು ನಿರ್ಮಿಸಲು ಆದೇಶವಿತ್ತಿದೆ. ಸಿಂಹಳದ ಹಿಂದಿನ ಅಂಚೆತಂತಿ ವಿಭಾಗದ ಮಂತ್ರಿಗಳೂ ಪ್ರಖ್ಯಾತ ಶಿಕ್ಷಣ ತಜ್ಞರೂ ಆಗಿರುವ ಶ್ರೀ ಎಸ್. ನಟೇಶನ್ನರು ವಿಶ್ವವಿದ್ಯಾಲಯದ ಮುಖ್ಯ ಸ್ಥಾಪಕರಾಗುವರು. ಹಿಂದೂ ಸಂಸ್ಕೃತಿ ಮತ್ತು ತತ್ವಜ್ಞಾನಗಳಲ್ಲಿ ಪಂಡಿತರೆನಿಸಿದ ನಟೇಶನ್ನರು ಬಹು ಸಮಯದಿಂದಲೂ ಈ ವಿಶ್ವವಿದ್ಯಾಲಯದ ಬಗ್ಗೆ ಆಗ್ರಹ ಮಾಡುತಿದ್ದಾರೆ ದಿವಂಗತ ಪ್ರಧಾನಿ ಸೊಲಮನ್ ಭಂಡಾರ ನಾಯಿಕೆಯವರು ಇದಕ್ಕೆ ತಮ್ಮ ಒಪ್ಪಿಗೆಯನ್ನೂ ನೀಡಿದ್ದರು.

ಸಿಂಹಳ ಸರಕಾರವು ಪ್ರತಿ ವರ್ಷವೂ ಈ ಹೊಸ ವಿಶ್ವವಿದ್ಯಾಲಯಕ್ಕೆ ಸುಮಾರು ರೂ. ೫ ಲಕ್ಷವನ್ನು ಸಹಾಯ ನೀಡುವುದೆಂದು ಮಂತ್ರಿ ವಟ್ಟದ ಸುದ್ದಿಯಿದೆ. ಒಬ್ಬ ಹಿಂದುವೇ ಇದರ ಉಪಕುಲಪತಿಯಾಗುವನು ಮತ್ತು ಹಿಂದೂ ಸಂಸ್ಕೃತಿ ಹಾಗೂ ತಮಿಳು ಭಾಷೆಗಳಿಗಾಗಿ ಗಮನಾರ್ಹ ಸೇವೆ ಸಲ್ಲಿಸಿದ ವ್ಯಕ್ತಿಗಳನ್ನೇ ವಿಶ್ವವಿದ್ಯಾಲಯ ಕೋರ್ಟಿನ ಸದಸ್ಯರನ್ನಾಗಿ ನೇವಿ ಸಲಾಗುವುದು.

ಸಿಂಹಳದಲ್ಲಿ ತಮಿಳ ವಿಶ್ವವಿದ್ಯಾಲಯವೊಂದು ರಚಿತವಾಗ ಬೇಕೆಂಬ ಬೇಡಿಕೆಯು ದಿನದಿಂದ ದಿನಕ್ಕೆ ಬಲವತ್ತರವಾಗಿದೆ. ತ್ರಿಂಕೊಮಲಿಯೆಂಬಲ್ಲಿ ಈ ಚಳವಳಿಯ ನೇರಾರರು ಇದಕ್ಕಾಗಿ ದೊಡ್ಡ ದೊಡ್ಡ ಕಟ್ಟಡಗಳನ್ನು ಈಗಾಗಲೇ ಕಟ್ಟಿಸುತ್ತಿದ್ದಾರೆ. ದೊಡ್ಡ ಮಟ್ಟದಲ್ಲಿ ರೂಪಿತಗೊಳ್ಳಬಯಸುತ್ತಿರುವ ತಮಿಳ ವಿಶ್ವವಿದ್ಯಾಲಯ ಮತ್ತು ಸರಕಾರವು ಈಗಾಗಲೇ ಒಪ್ಪಿಕೊಂಡಿರುವ ಹಿಂದೂ ವಿಶ್ವವಿದ್ಯಾಲಯಗಳಿಗೆ ಯಾವ ಸಂಬಂಧವೂ ಇರುವುದಿಲ್ಲ. ತಮಿಳ ವಿಶ್ವವಿದ್ಯಾಲಯದ ಚಳವಳಿಗಾರರು ಸರಕಾರದ ಮುಂದೆ ತಮ್ಮ ಬೇಡಿಕೆಯನ್ನು ಪದೇ ಪದೇ ಪುನರುಚ್ಚರಿಸುತ್ತ ಬಂದಿದ್ದರೂ ಅದಿನ್ನೂ ಒಪ್ಪಿತವಾಗಿಲ್ಲ. ಸರಕಾರವು ಮಾನ್ಯತೆ ಮಾಡಲಿ ಮಾಡದಿರಲಿ, ಸಾರ್ವಜನಿಕರ ಸಹಾಯದ ಬಲದಿಂದಲೇ ತಮಿಳ ವಿಶ್ವವಿದ್ಯಾಲಯದ ಯೋಜನೆಯು ಭರದಿಂದ ಮುಂದುವರಿಯುತ್ತ ಇದೆ.

ಹಿಂದೂ ವಿಶ್ವವಿದ್ಯಾಲಯ ರಚನೆಯಿಂದ ಭಾರತ-ಸಿಲೋನಿಗಳ ಸಂಬಂಧವು ಮತ್ತೂ ದೃಢವಾಗದುಳಿಯದು.



ಅಮೆರಿಕೆಯು ಅಲ್ಯೂಮಿನಿಯಂ ಸಬ್‌ವೇರಿನ್‌ಗಳನ್ನು ನಿರ್ಮಿಸಲು ಹವಣಿಸುತಿದ್ದು, ಅವರ ಮಾದರಿಯಿದು.

ವಿಶ್ವರೂಪಿ ಪರಮಾತ್ಮ

(ಳನೇ ಪುಟದಿಂದ)

ಅತನು ತೋರುತ್ತಲೇ ಇದ್ದಾನೆ. ಸಕಲ ದೇಶಗಳಲ್ಲೂ ಕಾಲಗಳಲ್ಲೂ ಇರತಕ್ಕವನು—ಬೇರೇ ಬೇರೆ ದೇಶಗಳಲ್ಲಿ ಬೇರೆ ಬೇರೆ ರೀತಿಗಳಲ್ಲಿ ವರ್ಣಿಸಲ್ಪಟ್ಟಿದ್ದಾನೆ. 'ಏಕಮೇವ'ನಾಗಿದ್ದರೂ ಭಿನ್ನ ಭಿನ್ನ ರೂಪಗಳನ್ನು ತಾಳಿರುವಂತೆ ತೋರುತ್ತಾನೆ—ಈತನು ಸರ್ವವ್ಯಾಪಿಯು ಪ್ರಾಣಿ, ಪಕ್ಷಿ ಸಸ್ಯವರ್ಗಗಳ ಸೃಷ್ಟಿ, ಪಾಲನ, ಲಯಕ್ಕೂ ಇವನೇ ಕಾರಣಭೂತನು ಸಕಲ ಭೂತಗಳ ಅಂತರಾತ್ಮನೂ ಅವನೇ ಅವನು ಲೋಕದ ಯಾವತ್ತೂ ಕರ್ಮಗಳನ್ನೂ ತೂಗಿ ನೋಡುವ ನ್ಯಾಯಾಧಿಪತಿಯು ನಿರ್ಗುಣನೂ, ನಿರ್ಮಲನೂ ಆದ ಮಹಾ ಶಕ್ತಿಯು.

ಭಗವಂತನೇ ಗೀತೆಯಲ್ಲಿ ಹೀಗೆ ಸಾರಿರುವನು. "ಈಶ್ವರಃ ಸರ್ವ ಭೂತಾನಾಂ ಹೃದ್ದೇಶೇರ್ಜುನ ತಿಷ್ಟತಿ"(ಅ-XVIII 61 ಶ್ಲೋಕ) ಪ್ರತಿಯೊಬ್ಬ ಮಾನವನ ಹೃದಯದಿಂದ ನೂರ ನಾಲ್ವತ್ತನಾಲ್ಕು (144) ಹಿತಾಹಿತಾ ಧಮನಿಗಳು ಕವಲೊಡೆದು ಇಡಿ ದೇಹವನ್ನು ವ್ಯಾಪಿಸುತ್ತವೆ ಎಂದು ಯಾಜ್ಞವಲ್ಕ್ಯ ಮುನಿಯು ವೇದೋಕ್ತವಾದ ಅಭಿಪ್ರಾಯವನ್ನು ಸೂಚಿಸಿದ್ದಾರೆ. ಮಹಾ ಮುನಿಯಾದ ವೇದವ್ಯಾಸರ ನುಡಿಯನ್ನು ಪರಾಂಬರಿಸಿದರೆ-ನಮ್ಮ ಹೃನ್ಮಂದಿರದಲ್ಲಿ ಭಗವಂತನ ಜ್ಯೋತಿಯು ನೆಲಸಿದೆ.—ಅದು ಪ್ರತಿ ಜೀವಿಗಳಲ್ಲೂ ಏಕ ರೀತಿ ಬೆಳಗುವುದು ನಾವು ಏಕಾಗ್ರ ಚಿತ್ತರಾದಾಗ ಮಾತ್ರ ಜ್ಞಾನಚಕ್ಷುವಿನಿಂದ ಆ ದಿವ್ಯ ಜ್ಯೋತಿಯನ್ನು ಕಣಬಲ್ಲೆವು—"ಜ್ಯೋತಿರಾತ್ಮನಿ ನಾನ್ಯತ್ರ ಸಮಂತತ್ ಸರ್ವಜಂತೇಷು, ಸ್ವಯಂ ಚ ಶಕ್ಯತೇ ದ್ರಷ್ಟುಂ ಸುಸಮಾಹಿತ ಚೇತನಾ ॥"—

ಮುಖ್ಯವಾಗಿ ಪರರು ಮಾಡಿದ ಯಾವ ಕೃತ್ಯಗಳಿಂದಾಗಿ ನಾವು ಕೋಪಗೊಳ್ಳುವೆವೊ ಅಂಥ ಕೃತ್ಯಗಳನ್ನು ನಾವು ಅನ್ಯರಿಗೆ ಎಸಗಕೂಡದು. ಇದೇ ಧರ್ಮಸ್ವಾರಸ್ಯವು. ಅಹಿಂಸೆ, ಸತ್ಯ ಮತ್ತು ಅಸ್ತೇಯ ಎಂಬ ಮೂರು ವ್ರತಗಳನ್ನು ಪ್ರತಿಯೊಬ್ಬನೂ ಆಚರಿಸುವುದು ಧರ್ಮಬದ್ಧವಾಗಿಯದೆ. ಈ ವ್ರತಿತ್ರಯವನ್ನು ಭಂಗಮಾಡುವವನಿಗೆ ಕೇಡು ಇದ್ದೇ ಇದೆ. ಪವಿತ್ರವಾದ ಈ ಲೋಕೋತ್ತರ ಧರ್ಮಸಂಸ್ಕಾರದ ವ್ರತಗಳನ್ನು ಶುದ್ಧ ಮನಸ್ಸಿನಿಂದ ಆಚರಿಸುವವರಿಗೆ ಜ್ಞಾನ ಸಂಸ್ಕಾರವಾಗಿ, ಅವರಲ್ಲಿ ದೈವೀ ಪ್ರಭೆಯು ಪ್ರಕಾಶವಾಗುವುದು ನಿಶ್ಚಯ.

ಹಸುರುಹಂಸ

'ನಚಿಕೇತ'ರ ನವೀನ ಕಾದಂಬರಿ

ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್‌ನ ಹೊಸ ಪ್ರಕಟಣೆ

ಬೆಲೆ: ರೂ. ಎರಡು. ರೂ. ೨—೨೫ ಮನಿಯಾರ್ಡರು ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಿನಿಂದ ಕಳಿಸಲಾಗುವುದು

ನವಯುಗ ಪ್ರೆಸ್, ಉಡುಪಿ

ಅಮೃತಾಂಜನ
ಎಲ್ಲಾ ನೋವುಗಳಿಗೆ ಸಿದ್ಧೌಷದ
ಎಲ್ಲಾತರದ ಸಿದಿತ ಮತ್ತು ನೋವುಗಳಿಗೆ
50 ವರ್ಷ ಪ್ರಾಯದ
ಪಾಕರ್ಟ್-ಡಾಕ್ಟರ್

ಅಲಂಕಾರ—ಔಷಧಕ್ಕಾಗಿ

ದಾಸವಾಳ ಗಿಡ

—ಸಂಗಡಿತ ಕಂಕರನಾರಾಯಣ ಭಟ್ಟ.

ದಾಸವಾಳ ಎಂಬುದು ಪೆಸರಾದ ಒಂದು ಹೂವಿನ ಗಿಡ. ವನೋಪವನಗಳಲ್ಲಿ ಅಲಂಕಾರಕ್ಕಾಗಿಯೂ ಬೇಲಿಗಾಗಿಯೂ ನೆಟ್ಟು ಬೆಳೆಸುವರು. ಔಷಧಕ್ಕಾಗಿಯೂ ಇದರ ಉಪಯೋಗವಿವೆ.

ಇದರಲ್ಲಿ ನೂರಾರು ಜಾತಿ ಭೇದಗಳನ್ನು ನಾವು ಕಾಣಬಹುದು. ವರ್ಣವಾಗುವುದು, ಗಿಡವಾಗವುದು, ಅಡರು ಬಳ್ಳಿಯಂತಿರುವುದು, ಎಲೆಗಳಲ್ಲಿಯೂ, ಹೂಗಳಲ್ಲಿಯೂ, ಬಣ್ಣಗಳಲ್ಲಿಯೂ, ಆಕಾರದಲ್ಲಿಯೂ ಸಣ್ಣ ದೊಡ್ಡ ವಿಚಿತ್ರ ವಿಚಿತ್ರಗಳಾಗಿಯೂ ವೈವಿಧ್ಯತೆಗಳುಳ್ಳ ದಾಸವಾಳಗಿಡಗಳಿವೆ.

ಕನ್ನಡದಲ್ಲಿ ದಾಸವಾಳ ದಾಸಣಿಗೆ, ದಾಸರಿ ಹೂವು, ದಾಸಾಳ ಸಂಸ್ಕೃತದಲ್ಲಿ ಜಬಾಕುಸುಮ, ರುದ್ರಪುಷ್ಪ, ಓಡ್ರಪುಷ್ಪ, ಮುಳಿಯೂಳದಲ್ಲಿ ಚೆಂಬುರುತ್ತಿ, ತುಳುವಿನಲ್ಲಿ ದಾಸನು ಪೂ, ತಮಿಳಿನಲ್ಲಿ ಶೆಂಬರತ್ತಿ, ತೆಲುಗುವಿನಲ್ಲಿ ಡಾಶನ್ ಚೆಟ್ಟು ಮಂಗಳೂರಿಯಲ್ಲಿ ಜಾಸ್ವಂದಿ, ಹಿಂದಿಯಲ್ಲಿ ಗುಡಲ್‌ಗುಡ್‌ಹರ್, ಜವಾ ಒಡಹುಲ್ ಅಟ್ಟಿನ್‌ನಲ್ಲಿ Hibiscus Rosa Sinensis ಇತ್ಯಾದಿಯಾಗಿ ಕರೆಯಲ್ಪಡುತ್ತದೆ. ಇದರ ಔಷಧಿ ಗುಣಗಳು ಹೀಗಿವೆ.

೧. ಗರ್ಭಸ್ರಾವ, ವಾತ ಆಗುವವರಿಗೆ ಬಿಳಿ ದಾಸವಾಳದ ಮೊಗ್ಗು, ಗೋಪಿಚಂದನ ಅರ್ಧ ತೊಲೆ ಸೇರಿಸಿ ದನದ ನೊರೆ ಹಾಲು ೧ ಕುಡ್ತೆಯಲ್ಲಿ ಅರೆದು ಕದಡಿ ಪ್ರಾತಃ ಸೇವನೆ ಮೂರು ಅಥವಾ ಆರು ದಿನ ಸೇವಿಸುವುದರಿಂದ ಗರ್ಭರಕ್ಷೆಯಾಗಿ ಸುಖ ಪ್ರಸವವಾದೀತು.

೨. ಗರ್ಭಧಾರಣೆ ಆದವರಿಗೆ-ಬಿಳಿದಾಸವಾಳದ ಬೇರು ೧ ತೊಲೆ ಕಾಳಿ ದನದ ನೊರೆ ಹಾಲಿನಲ್ಲಿ ಅರೆದು ಕದಡಿ ಮೂಲಬಳಿಕ ಬೀಜದ ಬೊಂಡು ಚೂರ್ಣಮಾಡಿ ಮೇಲ್ಪಡಿ ಹಾಕಿ ರುತು ಸ್ನಾನಳಾಗಿ ಬಂದು ಪ್ರಾತಃಸೇವನೆ ಮೂರು ದಿನ ಸೇವಿಸುವುದರಿಂದ ಗರ್ಭಾಶಯದ ಕ್ರಿಮಿ ನಾಶವಾಗಿ ವಂಧ್ಯತ್ವ ನಿವಾರಣೆಯಾದೀತು. ಉತ್ತಮ ಗರ್ಭಸಿದ್ಧಿಯಾದೀತು.

೩. ಪ್ರದರಕ್ಕೆ-ಬಿಳಿ ದಾಸವಾಳದ ಬೇರು ೧ ತೊಲೆ ದನದ ನೊರೆ ಹಾಲಿನಲ್ಲಿ ತೇದು ಕದಡಿ ೨ತೊಲೆ ಕಲ್ಲುಸಕ್ಕರೆ ಹಾಕಿ ಸೇವನೆ. ೧-೨ವಾರ ಚಪ್ಪೆ ಆಹಾರ ಕಡುಪತ್ಯ ಮಾಡುವುದು. ಸ್ತ್ರೀಯರ ಶ್ವೇತ ರಕ್ತ ಪದರಗಳು ಪರಿಹಾರವಾದೀತು. ಅವಶ್ಯವಾದರೆ ದಿನಾ ೨ ಸೇಳೆ ಕೊಡಬೇಕು.

೪. ಶ್ವೇತಪ್ರದರಕ್ಕೆ—ಬಿಳಿ ದಾಸವಾಳದ ಹೂವಿನ ದಳ (ರಕ್ತಪ್ರದರಕ್ಕೆ ಕೆಂಪು ದಾಸವಾಳದ ಹೂವಿನ ದಳ) ೧ ತೊಲೆ ೧ ಚಿಟಿಕೆ ಜೀರಿಗೆ ಸೇರಿಸಿ ಅರೆದು ಕಲ್ಲುಸಕ್ಕರೆ ಹಾಕಿ ಪ್ರಾತಃ ಆಕಳ ಮೊಸರಿನಲ್ಲಿ ೩ ಅಥವಾ ೬ ದಿನ ಸೇವನೆ.

೫. ಧಾತು ವಿಕಾರಗಳಿಗೆ— ಬಿಳಿ ದಾಸವಾಳದ ಮೊಗ್ಗು (ವಾ ಹೂ) ದನದ ತುಪ್ಪ ಹಾಕಿ ಅರೆದು ದನದ ನೊರೆ ಹಾಲಿನಲ್ಲಿ ಸೇವನೆ. ಮೂರು ವಾರ ಆರು ದಿನ ಸೇವಿಸಿದರೆ ಧಾತು ಸ್ರಾವ, ನಪುಂಸಕತೆ ನಿವಾರಣೆಯಾಗಿ ಧಾತು ಪುಷ್ಟಿಯಾದೀತು, ಕಾಮ ವೃದ್ಧಿಯಾದೀತು.

೬. ಮೂಲವ್ಯಾಧಿ ರಕ್ತಸ್ರಾವ ಇದ್ದರೆ, ನಂಜನೇ ಪ್ರಯೋಗ ದಿನ ಎರಡು ಹೊತ್ತು ಸೇವನೆ ಹಿತ.

೭. ಶೀತ ವೈಷಮ್ಯ-ಬಿಳಿ ದಾಸವಾಳದ ಬೇರು, ಅರುಗಳ ಬಳ್ಳಿಯ ಗಡ್ಡೆ (ತುಳುಕರಿಂತ ಕಂಡೆ) ಸಮ ಪ್ರಮಾಣದಲ್ಲಿ ಸೇರಿಸಿ ದಿನ ೧ ತೊಲೆ ದನದ ತುಪ್ಪದಲ್ಲಿ ಅರೆದು ಕಲ್ಲುಸಕ್ಕರೆ ಹಾಕಿ ಸೇವನೆ.

೮. ಬಿಳಿದು ಸ್ರಾವಕ್ಕೆ—ಬಿಳಿ ದಾಸವಾಳದ ಬೇರು, ಬಿಳಿ ಎಲಗದ ಗಡ್ಡೆ (ಶಾಲ್ಮಲಿಕಂದ) ಬಿಳಿತಾವರೆ ಗಡ್ಡೆ ಇವು ಸಮಾಂಶ ಸೇರಿಸಿ ವಸ್ತ್ರಗಾಳಿತ ಚೂರ್ಣಮಾಡಿ ಅರ್ಧ ತೊಲೆ ಚೂರ್ಣ ೧ ತೊಲೆ ಕಲ್ಲುಸಕ್ಕರೆ ಹಾಕಿ ದನದ ಹಾಲು ೧ ಕುಡತೆಯಲ್ಲಿ ಕದಡಿ ಪ್ರಾತಃ ಸೇವನೆ. ಮೂರು ವಾರ ಆರು ದಿನ ಫಲಪ್ರದ.

ಸ್ತ್ರೀಯರಿಗೆ ಮುಟ್ಟು ಸ್ರಾವ ಸರಿಯಾಗಿ ಆಗದಿದ್ದಾಗ-ನಂಜನೇ ಪ್ರಯೋಗ ಮಾಡುವುದು.

೯. ಉಪದಂಶಕ್ಕೆ (ಲಿಂಗ ವೃಡ)ದಾಸವಾಳದ ಬೇರು ಕಲಗಚ್ಚಿನಲ್ಲಿ ತೇದು ೧ ತೊಲೆ ಕದಡಿ ಪ್ರಾತಃಕಾಲ ಸೇವನೆ. ಮೂಲವ್ಯಾದಿಗೂ ಹಿತ.

೧೦. ಕೇಶವೃದ್ಧಿಗೆ— ದಾಸವಾಳದ ಹೂವಿನ ರಸ ತಲೆಗೂ ಕೂದಲಿಗೂ ಚೆನ್ನಾಗಿ ಸವರುವದು. ಕೂದಲು ಉದುರುವದು, ಅಕಾಲ ನರೆ ಪರಿಹಾರವಾಗಿ ಕೂದಲು ಸಮೃದ್ಧಿಯಾದೀತು.

೧೧. ಬೋಳು ತಲೆಯವರಿಗೆ— ದಾಸವಾಳದ ಹೂ ಯೂ ಎಲೆ ನೀರು ತಾಗಿಸದೆ ಅರೆದು ಕೂದಲು ಬಿದ್ದ ಜಾಗಕ್ಕೆ ಮೆತ್ತುವದು. ನೀರು ತಾಗಿಸಬಾರದು. ೧೫ ದಿನಗಳಲ್ಲಿ ಮತ್ತೆ ಮೊಳೆಯುವದು.

೧೨. ಕಾಮವೃದ್ಧಿಗೆ—ದಾಸವಾಳದ ಬೀಜಗಳನ್ನು ನೆರಳಲ್ಲಿ ಒಣಗಿಸಿ ವಸ್ತ್ರಗಾಳಿತ ಚೂರ್ಣಮಾಡಿ ಸಮಾಂಶ ಕಲ್ಲುಸಕ್ಕರೆ ಸೇರಿಸಿ ದಿನ ಅರ್ಧ ತೊಲೆ ಚೂರ್ಣ ಸೇವಿಸಿ ಒಂದು ಕುಡ್ತೆ ಹಾಲು ಸೇವನೆ

೧೪. ಜನನೇಂದ್ರಿಯ ವಿಕಾರಗಳಿಗೆ —ಬಿಳಿ ದಾಸವಾಳದ ಮೊಗ್ಗು ತುಪ್ಪ ಹಾಕಿ ಕುಂದು ಕಲ್ಲುಸಕ್ಕರೆ ಸೇರಿಸಿ ಸೇವನೆ. ಮೂತ್ರ ನಾಳ ಉರಿದಾಹ ಇತ್ಯಾದಿ ದಿಗಳೆಲ್ಲ ಗುಣವಾದೀತು.

೧೫ ಹೃದಯ ವಿಕಾರಕ್ಕೆ—ದಾಸವಾಳದ ಹೂವಿನ ಗುಲ್‌ಕಂದ ಯೂ ಅರ್ಕ ಸೇವನೆಹಿತ.

೧೬. ರಕ್ತ ವಿಕಾರಕ್ಕೆ—ಕೆಂಪು ದಾಸವಾಳ ಹೂವಿನ ಅರ್ಕ ತೆಗೆದು ಹಾಲಿನಲ್ಲಿ ಹಾಕಿ ಸೇವನೆ. ಸರ್ಬತ್ ತಯಾರಿಸಿ ಸೇವಿಸಿದರೂ ಶಾಂತವಾದೀತು.

೧೭. ಕುರುಗಳಾದರೆ—ಕೆಂಪು ದಾಸವಾಳದ ಎಲೆ ಬೆಲ್ಲಕ್ಕೆ ಅಕ್ಕಿ ಹಾಕಿ ಅರೆದು ರೊಟ್ಟಿ ಮಾಡಿ ಬೇಯಿಸಿ ತಿನ್ನುವುದು ರಕ್ತ ಶುದ್ಧಿಯಾದೀತು. ಕುರ, ಗಂಡೆ, ದದ್ದು ಇತ್ಯಾದಿ ರಕ್ತ ದೋಷದಿಂದಾಗುವ ರೋಗ ಪರಿಹಾರ.

೧೮. ಮೂತ್ರ ಕೃಚ್ಛ್ರತ್ಯೆ—ಕೆಂಪು ದಾಸವಾಳದ ಹೂವಿನ ಫಾಂಟ್ ತಯಾರಿಸಿ ಸೇವನೆ. ಸಲೀಸಾಗಿ ಮೂತ್ರ ಶೋಧನೆಯೂ ಆದೀತು.

೧೯. ಪಿತ್ತವಿಕಾರ ವಾಂತಳಿಗೆ—ಬಿಳಿ ದಾಸವಾಳದ ಚಿಗುರೆಲೆಯ ಸ್ವರಸ ೧ ಔನ್ಸ್ ಕಲ್ಲುಸಕ್ಕರೆ ೧ ತೊಲೆ ಹಾಕಿ ಸೇವನೆ. ೩ ಯೂ ೬ ದಿನ ಸೇವಿಸುವದು. ತಲೆತಿರುಗುವದು; ಕಣ್ಣು ಕತ್ತಲೆ ಬರುವದು ಇತ್ಯಾದಿ ಪಿತ್ತವಿಕಾರ ಪರಿಹಾರವಾದೀತು.

—ವಿ. ನಾ.

ಚಂದಾಹಣ ಬಾಕಿ ಇರುವವರು ಆದಷ್ಟು ಬೇಗನೆ ಕಳುಹಿಸಿಕೊಟ್ಟು ಸಹಕರಿಸಬೇಕಾಗಿ ವಿನಂತಿ

—ಮೆನೇಜರ್.

ಹಾರ್ಮೋನಿಯಮ್ ಕಲಿಯುವವರಿಗೆ ಅತ್ಯುತ್ತಮ ಸಂಗೀತ ಪುಸ್ತಕ—

ಶ್ರೀ ಎ. ರಾಮಪ್ಪ ಅವರ

ಹಾರ್ಮೋನಿಯಮ್ ಬೋಧನ ಕ್ರಮ

ಪರಿಷ್ಕರಿಸಲ್ಪಟ್ಟ ನಾಲ್ಕನೆಯ ಮುದ್ರಣ. ಕೆಲವೇ ಪ್ರತಿಗಳು ಉಳಿದಿವೆ.

ಬೆಲೆ: ರೂ. 2—0—0.

ಒಂದು ಪ್ರತಿ ಬೇಕಾದವರು ರೂ 2-50 ನ್ನು ಮನಿಯೊರ್ಡರು ಮಾಡಿ ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಉಡುಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

O. P. No. 34/1962.

1. ಯು ಸಾರ್ವತಿ ಅಂಮ
—ಉಡುಪಿ ವಾದಿರಾಜ ಭಟ್ಟ ವಿಧವೆ.
2. ಯು. ಸುಮತಿ
3. ಯು. ಕುಸುಮ
4. ಯು. ರಾಮವಾಣಿ
5. ಯು. ಪದ್ಮಲತ
} ಪ್ರಾಯದವರು.
—ಉಡುಪಿ ವಾದಿರಾಜ ಭಟ್ಟ ಮಕ್ಕಳು.

ಕ್ಷೇಮಪಾಲಕಳು ತಾಯಿ
—1ನೆ ಆರ್ಜಿದಾರರು

ಉಡುಪಿ ಶಿರೂರು ಭಂಡಾರಸ್ಥಾನಿ
—ಆರ್ಜಿದಾರರು

ಯಾ ಮೂಲ್ಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ—

ಮೇಲ್ಕಂಡ ಆರ್ಜಿಯು 1ನೆ ಆರ್ಜಿದಾರಳ ಗಂಡ ಪಾಕಿ ಆರ್ಜಿದಾರರ ತಂದೆ ತಾ 2-2 1960ಲ್ಲಿ ಸ್ವರ್ಗಸ್ಥರಾದ ಉಡ್ಡಿ ವಾದಿರಾಜ ಭಟ್ಟರಿಗೆ ಬರತಕ್ಕ ಆರ್ಜಿಯಂದ್ದಿ ಪ್ರಸ್ತಾಪಿಸಿದ ಯಾವ ಪೆಸರು ಪಕಾರ್ಯಾಧಿಕಾರಿಯು ಪರಿ-ಆಸನ ಸಾಕ್ಷಿದಾರರಾದ ತಾವು ಸಕ್ಷಿದಾರರೆಂತ್ತೂ ಇ ಕಾರಿ. 1ನೆ ಆರ್ಜಿದಾರಳೆ ಹೇಳಿರಿ ಸಕ್ಷಿಸರ ಸಹಿಸಿಕೊಟ್ಟಿರ್ಪ ಪ್ರಕಾರ ಸಮಸ್ತರಿಗೂ ಸಮನ್ಸು ಜಾರಿಯಾಗಿದ್ದು ಆರ್ಜಿದಾರರು ದಾಖಲು ಮಾಡಿದ ಮೇಲ್ಕಂಡ ಆರ್ಜಿ ತಾ 4-8-1962ಕ್ಕೆ ಕಚೇರಿಗೆ ಬರುವಂತೆ ಇ ಕಾರಿಯು ಆಜ್ಞೆಪಿಸಿ ಹೇಳಿ ತಕ್ಕ ಸದರಿ ಸಕ್ಷಿದಿನ-11 ಗಂಟೆಗೆ ಮೇಲ್ಕಂಡ ಕೋರ್ಟಿಗೆ ಮುಂದೆ ಜ್ಯಾಜೀರುನಾಮಾಡಿಕೊಳ್ಳತಕ್ಕದ್ದು ಯಂತ ಯಾ ಮೂಲಕ ಸಮಸ್ತ ಜನರಿಗೆ ತಿಳಿಸೋಣವಾಗಿಯದೆ.

V. R Kidiyur,
Advocate for Petitioners.

ಉಡ್ಡಿ, 9-7-62.

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್ ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನಿಮ್ಮಿಷ್ಟಕ್ಕೆ ನೀನೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ. ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು

ಬೆಲೆ: ರೂ ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.

ಬೆಲೆ ರೂ. 1-4-0 (1=25).

ವಿ. ಸೂ.—ಅಯಾಯ ಪುಸ್ತಕದ ನೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0 =25 NP ಸೇರಿಸಿ ಮನಿಯೊರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಒಂದು ಸ್ವಾರಸ್ಯಪೂರ್ಣ ಕಥೆ!

ಎಲ್ಲಕ್ಕಿಂತ ಸುಂದರ ವಸ್ತು!

ಕೆ. ರಮೇಶ ಪೈ, ಉಡುಪಿ.

ಆತನೊಬ್ಬ ಬಹುದೊಡ್ಡ ಕಲಾವಿದ ಕುಂಚದಿಂದ ಎಣಿಸಿದೆಲ್ಲವನ್ನು ನಿಮಿಷ ಮಾತ್ರದಲ್ಲಿ ಚಿತ್ರಿಸಿ ಬಿಡುವಷ್ಟು ಸಮರ್ಥನಿದ್ದ. ಒಮ್ಮೆ ಇದ್ದಕ್ಕಿದ್ದಂತೆಯೆ ಅವನಿಗೆ ಚಿಂತೆ ಹತ್ತಿತು; ತಾನು ಇದು ತನಕವೂ ಜಗತ್ತಿನಲ್ಲೇ ಅತ್ಯಂತ ಸುಂದರವಾಗಿರುವ ವಸ್ತುವನ್ನು ಬಿಡಿಸಿಲ್ಲವೆಂಬ ಅತೃಪ್ತಿ ಮನಸ್ಸಿನಲ್ಲುಂಟಾಯಿತು. ಜಗತ್ತಿನಲ್ಲಿ ಎಲ್ಲಕ್ಕಿಂತ ಸುಂದರ ವಸ್ತು ಯಾವುದು? ಬೃಹತ್ ಸಮಸ್ಯೆಯೇ ಆಯಿತು ಕಲಾವಿದನಿಗೆ! ಎಣಿಸುತ್ತಿದ್ದಂತೆಯೆ.... ಬೆಂಗದಿರನ ಹೊಂಗಿರಣಗಳ ಆಗಮನಕ್ಕೆ ಅರಳಿದ ಕಮಲದ ಆರಳು, ರಜನೀಕಾಂತನ ಶೀತಳ ಕದಿರುಗಳ ಆ ನೆಳಲಲ್ಲಿ ಬಾಯಿಬಿಟ್ಟ ನೈದಿಲೆ, ಭೋರ್ಗರೆದು ಹರಿವ ಅಬ್ಧಿ, ಇಹಲೋಕವನ್ನೇ ಮರೆತು ನಿದ್ರಿಸುತ್ತಿರುವ ಚಿಕ್ಕ ಕೂಸು, ಕಿಲಕಿಲೆಂದು ನಗುತ್ತಿರುವ ಚಿಕ್ಕ ಮುಗ್ಧಬಾಲೆ— ಇವೆಲ್ಲವೂ ಒಂದರ ಹಿಂದೆ ಮತ್ತೊಂದು ಎಂಬಂತೆ ಆತನ ಕಲ್ಪನಾ ಸಾಮ್ರಾಜ್ಯದಿಂದ ಹಾದು ಹೋದುವು. ಕಲಾಕಾರನಿಗೆ ಯಾವುದೊಂದೂ ತೃಪ್ತಿಕೊಟ್ಟಂತೆ ಕಾಣಲಿಲ್ಲ. ಭಾರವಾದ ಮನಸ್ಸಿನಿಂದ ಎದ್ದುನಿಂತ. ಕೈಯಲ್ಲಿದ್ದ ಅರೆ ಒಣಗಿದ ಕುಂಚವನ್ನು ಹಿಡಿದೇ ವಾದಕ್ರಾಣಗಳನ್ನು ಮೆಟ್ಟಿಕೊಂಡು ಈ ಸಮಸ್ಯೆಗೆ ಪರಿಹಾರ ಹುಡುಕಲೆಂದು ಆವಾಸಸ್ಥಾನ ಬಿಟ್ಟು ಹೊರ ಹೊರಟ.

ಕಾಲುಗಳು ಮಾರ್ಗದ ಮೇಲಿಂದ ಹಾದು ಹೋಗುತ್ತಿದ್ದರೂ ಮನಸ್ಸು ಮಾತ್ರ ಸಮಸ್ಯೆಯನ್ನೇ ಕುರಿತು ಚಿಂತಿಸುತ್ತಿತ್ತು!

ಕಲಾಕಾರ ಮುನ್ನಡೆದ ಮಂದ ಗತಿಯಲ್ಲಿ ಹೆಜ್ಜೆಯಿಡುತ್ತ. "ನೀವೆಲ್ಲಿಗೆ ಸವಾರಿ ಹೊರಟಿರಿ?" ಕಲಾಕಾರನ ಪರಿಚಯವಿದ್ದ ದೇವಳ ಅರ್ಚಕ ಅವನನ್ನು ತಡೆಹಿಡಿದು ಪ್ರಶ್ನಿಸಿದ.

"ಜಗತ್ತಿನಲ್ಲೇ ಎಲ್ಲಕ್ಕಿಂತ ಸುಂದರವಾದ ವಸ್ತುವನ್ನು ಚಿತ್ರಿಸುವ ಹಂಬಲವಾಗಿದೆ" ಕಲ್ಪನಾ ಸಾಮ್ರಾಜ್ಯದಿಂದ ಇಹಲೋಕಕ್ಕೆ ಇಳಿದು ಕಲಾವಿದ ನುಡಿದ, "ಏನು, ತಾವು ಈ ದೃಷ್ಟಿಯಲ್ಲಿ ನನಗೆ ಮಾರ್ಗದರ್ಶನ ಮಾಡಬಲ್ಲಿರಾ?" ಕಲಾವಿದ ಉತ್ಸುಕನಾಗಿ!

"ಓಹ್! ಅದೇನು ಮಹಾ ಮಾತು' ಅದನ್ನು ತಾವು ಯಾವುದೇ ಧರ್ಮದಲ್ಲಿ, ಯಾವುದೇ ದೇವಮಂದಿರದಲ್ಲಿ ಕಾಣಬಲ್ಲಿರಿ—ಅದೇ ಶ್ರದ್ಧೆ ಜಗತ್ತಿನಲ್ಲಿ ಎಲ್ಲಾವಸ್ತುಗಳಿಗಿಂತ ಸುಂದರ ವಸ್ತು ಶ್ರದ್ಧೆಯೇ ಆಗಿದೆ.

ಅರ್ಚಕ ತನ್ನ ದಾರಿ ಹಿಡಿದು ಸಾಗಿದ ನಗುನಗುತ್ತ! ಸಮಸ್ಯೆಗೆ ಉತ್ತರ ಕಲಾವಿದನ ದೃಷ್ಟಿಯಲ್ಲಿ ಅಸಮರ್ಪಕವಾಗಿತ್ತು, ಕಲಾವಿದ ಮುನ್ನಡೆದ ಚಿಂತಾತುಂದಿಲನಾಗಿ ಮಂದಗತಿಯಿಂದ! ಯುವತಿಯೋರ್ವಳು ಇದಿರಾದಳು.

"ಜಗತ್ತಿನಲ್ಲಿ ಎಲ್ಲಕ್ಕಿಂತ ಸುಂದರ ವಸ್ತು ಯಾವುದು?" ಇದೇ ಪ್ರಶ್ನೆ ಅವಳಲ್ಲು ಕೇಳಿದ.

ಅದಕ್ಕೆ ಅವಳು ಉತ್ತರಿಸಿದಳು:—

"ಪ್ರೇಮ! ಪ್ರೇಮದಲ್ಲಿ ದರಿದ್ರನೂ ಶ್ರೀಮಂತಿಕೆಯನ್ನು ಅನುಭವಿಸುತ್ತಾನೆ. ಕಣ್ಣೀರು ಸಿಹಿಯೂಗುತ್ತದೆ. ಗಹನವಾದ ಕಾರ್ಯವೂ ಶಿಥಿಲವಾಗಿ ತೋರುತ್ತದೆ. ಪ್ರೇಮರಹಿತವಾದ ಸೌಂದರ್ಯ ಯಾವ ಉಪಯೋಗಕ್ಕೂ ಬಾರದು. ಪ್ರೇಮವೇ ಸೌಂದರ್ಯ. ಅದೇ ಎಲ್ಲಕ್ಕಿಂತ ಸುಂದರವಾದ ವಸ್ತು ಈ ಜಗತ್ತು ಇರುವ ತನಕ...

"ಪ್ರೇಮ!" ಕಲಾಕಾರ ಹುಚ್ಚುನಗೆ ನಕ್ಕ. ಸಂತಷ್ಟನಾಗದೆ ಭಾರವಾದ ಮನಸ್ಸಿನಿಂದ ಅದೇ ದಾರಿಯಲ್ಲಿ ಮತ್ತೆ ಮುನ್ನಡೆದ. ಆ ವೇಳೆಗೆ ಸೋತುಸುಣ್ಣಾದ ಸೈನಿಕನೊಬ್ಬನು ಸಿಕ್ಕನು. ಅವನನ್ನೂ ತಡೆಹಿಡಿದು ಈ ಕಲಾವಿದ ಪುನ:—"ಜಗತ್ತಿನಲ್ಲಿ ಎಲ್ಲಕ್ಕಿಂತ ಸುಂದರವಾದ ವಸ್ತು ಯಾವುದು?" ಎಂದು ಕೇಳಿದನು.

ಸೈನಿಕ— "ಅದು ಸುಲಭ! ಶಾಂತಿಯೇ ಸುಂದರವಾದ ವಸ್ತು! ಯುದ್ಧವು ಜಗತ್ತಿನಲ್ಲಿ ಎಲ್ಲಕ್ಕಿಂತ ಕುರೂಪ ವಸ್ತು. ಯಾವುದು ಶಾಂತಿಯ ನೆಲೆಯೋ ಅದು ಸೌಂದರ್ಯದ ತಾಣವೂ ಹೌದು! ಶಾಂತಿಯೇ ಎಲ್ಲಕ್ಕಿಂತ ಸುಂದರವಾದ ವಸ್ತುವಾಗಿದೆ" ಸೈನಿಕ ತನ್ನ ದಾರಿ ಹಿಡಿದು ಸಾಗಿದ.

"ಶ್ರದ್ಧೆ!", "ಪ್ರೇಮ!", "ಶಾಂತಿ!" ಎಂದು ಅರ್ಚಕ, ಯುವತಿ ಮತ್ತು ಸೈನಿಕರು ಕ್ರಮವಾಗಿ ಉತ್ತರಿಸಿದ್ದರು. ಇವುಗಳನ್ನು ಮಿಶ್ರಿಸಿ ಹೇಗೆ ಚಿತ್ರಿಸಲಿ? ವ್ಯಾಕುಲಚಿತ್ತದಿಂದ ಪುನಃ ಯೋಚಿಸ ತೊಡಗಿದನು ಕಲಾವಿದ. ಯೋಚಿಸುತ್ತಿದ್ದಂತೆಯೆ ತಲೆ ತಿರುಗು ಬಂದಿತು. ಮನೆಯತ್ತ ಹಿಂದಿರುಗಿ ಬಂದ.

"ಆಹಾ...." ಮನೆಯ ದ್ವಾರದ ಬಳಿ ಬರುತ್ತಲೇ ತನ್ನ ಸಮಸ್ಯೆಗೆ ಪರಿಹಾರ ಕಂಡಂತವನಾಗಿ ಕಲಾವಿದ ಬಹು ಹಿಗ್ಗಿದ. ಬಹು ಹೊತ್ತಿನಿಂದ ಹುಡುಕಾಡುತ್ತಿದ್ದ ಆ ಸುಂದರ ವಸ್ತುವನ್ನು ಈಗ ಕಲಾಕಾರ ತನ್ನ ಕಣ್ಮುಂದೆ ಕಂಡ.

ಅಂಗಳದಲ್ಲಿ ಆಟವಾಡುತ್ತಿದ್ದ ತನ್ನ ಮಕ್ಕಳ ಕಣ್ಗೊಂಬೆಗಳಲ್ಲಿ 'ಶ್ರದ್ಧೆ'ಯು ನಲಿಯುತ್ತಿತ್ತು!

ಪತ್ನಿಯ ಮಂದಸ್ಮಿತ ಮುಖದಲ್ಲಿ 'ಪ್ರೇಮ'ವು ಲಾಸ್ಯವಾಡುತ್ತಿತ್ತು! ಸೈನಿಕನ ದಾಯಿಯಿಂದ ಬಂದ 'ಶಾಂತಿ' ಮನೆತುಂಬ ನೆಲಸಿತ್ತು!

ಚಿತ್ರಕಾರ (ಈಗ ಮನಸ್ಸು ಹಗುರಾದವನಂತೆ) — "ಜಗತ್ತಿನಲ್ಲಿ ಎಲ್ಲಕ್ಕಿಂತ ಸುಂದರವಿರುವ ವಸ್ತು ಸಿಕ್ಕಿತು" ಎಂದು ಹುಚ್ಚು ಹುಚ್ಚಾಗಿ ಕುಣಿದ. ಒಳ ಹೋಗಿ ಲಗುಬಗನೆ ಬಣ್ಣಗಳ ಮಿಶ್ರಣ ಮಾಡಿದ, ಕುಂಚದಿಂದ ಚಿತ್ರ ಬರೆದ ಕರ್ಣಕ್ಕೆ ಇಂಪಾಗುವ ರೀತಿಯಲ್ಲಿ ಹಾಡುತ್ತ!

ಚಿತ್ರ ಮುಗಿಯಿತು. ಇನ್ನುಳಿದಿರುವುದೊಂದೇ ಕೆಲಸ, ಚಿತ್ರದ ಮೇಲ್ಗಡೆಯಲ್ಲಿ ಕಲಾವಿದ ಎರಡು ಆಕ್ಕರೆಯ ಅಕ್ಕರಗಳನ್ನು ಬಲು ಮುದ್ದಾಗಿ ಕೆತ್ತಿಸಿದ—ಅದು ಜಗತ್ತಿನಲ್ಲೇ ಎಲ್ಲಕ್ಕಿಂತ ಸುಂದರವಾಗಿರುವ ವಸ್ತುವಾಗಿತ್ತು; ಶ್ರದ್ಧೆ, ಪ್ರೇಮ, ಮತ್ತು ಶಾಂತಿಗಳ ಸುಮಧುರ ಮಿಶ್ರಣ —ಅವನ 'ಮನೆ'ಯಾಗಿತ್ತು. 'ಮನೆ' ಅವನಿಗೆ ಜಗತ್ತಿನಲ್ಲೇ ಸುಂದರವಾದ ವಸ್ತುವಾಗಿ ಕಂಡಿತು!

—(ಡಬ್ಲ್ಯೂ ಓ. ಗುಡ್ವಿನ್‌ರ ಕಥೆಯೊಂದರ ಅನುವಾದ).

— —

ಹನಿಗತಿ

ಚಿನ್ನ ಮತ್ತು ತಾಮ್ರ

ಅಕ್ಬರ ಚಕ್ರವರ್ತಿಯು ಸಂಗೀತ ಪ್ರೇಮಿ. ಸಂಗೀತವೆಂದರೆ ಆತನಿಗೆ ಪಂಚಪ್ರಾಣ. ಆದ್ದರಿಂದಲೇ ತನ್ನ ರಾಜದರ್ಬಾರಿನಲ್ಲಿ ಮಹಾ ಸಂಗೀತಗಾರನಾದ ತಾನಸೇನನನ್ನು ಗೌರವಿಸಿ ಇಟ್ಟುಕೊಂಡಿದ್ದನು. ತಾನಸೇನನು ಬಹು ಚೆನ್ನಾಗಿ ಹಾಡುತ್ತಿದ್ದನು. ಚಕ್ರವರ್ತಿಯು ಆಗಾಗ್ಗೆ ಆತನಿಂದ ಹಾಡಿಸಿ ಆನಂದಪಡುತ್ತಿದ್ದನು ಒಮ್ಮೆ ಅಕ್ಬರನು ತಾನಸೇನನ ಅಮರ ಸಂಗೀತದಿಂದ ಪ್ರಭಾವಿತನಾಗಿ ತಾನಸೇನನನ್ನು ಕೇಳಿದನು. "ಈ ಪ್ರಪಂಚದಲ್ಲಿ ನಿನಗಿಂಥ ಚೆನ್ನಾಗಿ ಹಾಡುವವರು ಯಾರಾದರೂ ಇರಬಹುದೇ? ಸಂಗೀತ ಪಾಂಡಿತ್ಯದಲ್ಲಿ ನಿನ್ನನ್ನು ಮಿಗಿಸಿದವರು ಇದ್ದಾರೆಯೇ?"

ತಾನಸೇನನು ಉತ್ತರಿಸುತ್ತಾ "ನನಗಿಂಥಾ ಉತ್ತಮವಾಗಿ ಹಾಡಬಲ್ಲವರಿದ್ದಾರೆ. ದೈವಿಕವಾದ ಅವರ ಸಂಗೀತದಿಂದ ನಾನು ಅಲ್ಪ ಸ್ವಲ್ಪ ಕಲಿತಿದ್ದೇನೆ. ನನ್ನ ಗುರು ಅಪ್ರತಿಮ ಸಂಗೀತಗಾರರು" ಎಂದು ಹೇಳಿದನು.

ತಾನಸೇನನಿಗಿಂಥ ಚೆನ್ನಾಗಿ ಹಾಡಬಲ್ಲ ಆತನ ಗುರುವನ್ನು ನೋಡಿ ಆತನ ಹಾಡನ್ನು ಕೇಳಬೇಕೆಂಬ ಲವಲವಿಕೆ ಅಕ್ಬರ್ ಬಾದಶಹನಿಗೆ ಹೆಚ್ಚಾಯಿತು— ಗುರುವು ಇದ್ದ ಬೃಂದಾವನಕ್ಕೆ ಅಕ್ಬರನು ಒಂದು ದಿನ ತಾನಸೇನನೊಡನೆ ಬಂದನು

ತಾನಸೇನನು ಹಣ್ಣು ಮುದುಕರೊಬ್ಬರನ್ನು ತೋರಿಸುತ್ತಾ ಅವರೇ ತನ್ನ ಗುರುವೆಂದು ಅಕ್ಬರನಿಗೆ ಪರಿಚಯ ಮಾಡಿ ತನ್ನ ಗುರುವಿಗೆ ಅಕ್ಬರನ ಆಗಮನವನ್ನೂ, ಅಭಿಲಾಷೆಯನ್ನೂ ತಿಳಿಸಿದನು

ತಾನಸೇನನ ಗುರುವಾದ ಆ ವೃದ್ಧನು ಅವರೀರ್ವರನ್ನೂ ಸ್ವಾಗತಿಸಿ ಕೆಳ್ಳಿರಿಸಿ ಕೆಲವು ಹಾಡುಗಳನ್ನು ಹಾಡಿದನು. ಆ ಹಾಡಿನಿಂದ ಅಕ್ಬರನು ಮೈಮರೆತನು. ತಾನಸೇನನ ಹಾಡುಗಳಿಗಿಂಥ ಆ ವೃದ್ಧನ ಹಾಡು ಉತ್ತಮವಾಗಿದ್ದುದಲ್ಲದೆ ಆ ಹಾಡಿನಲ್ಲಿ ದೈವಿಕತೆ ತುಂಬಿ ಅವು ಉತ್ಪಾದಿಸಿದ ಕಂಠರಾಗದ ನಿನಾದ ಅಮರವಾಗಿದ್ದವು. ಅಕ್ಬರನು ವೃದ್ಧನಿಗೆ ಮಂದಿಸಿ ಹಿಂದಿರುಗಿದನು ದಾರಿಯಲ್ಲಿ ತಾನಸೇನನನ್ನು ಕುರಿತು, ಅಷ್ಟು ವಯಸ್ಸಾದ ಆ ವೃದ್ಧ ಅಷ್ಟೊಂದು ಸುಶ್ರಾವ್ಯ ಸುರಸಂಗೀತ ಹಾಡಲು ಶಕ್ತನಾದುದು ಹೇಗೆ ಎಂದು ಕೇಳಿದನು. ತಾನಸೇನನು ಕೊಟ್ಟ ಉತ್ತರವಿದು, "ಮಹಾರಾಜ, ನಾನು ಐಹಿಕ ಅರಸನಾದ, ಜರಾವ್ಯಾಧಿಗಳಿಂದ ಪೀಡಿತ ಶರೀರಧಾರಿಯಾದ ಒಬ್ಬನ ಸಂತೋಷಕ್ಕಾಗಿ ಹಾಡುವವನು. ಆ ಹಾಡಿನಲ್ಲಿ ನನ್ನ ಜೀವನದ ಸ್ವಾರ್ಥವಿದೆ. ಆದರೆ ನನ್ನ ಗುರುವು ಹಾಡುವದು ಭಗವಂತನ ತೃಪ್ತಿಗಾಗಿ. ಸರ್ವ ಚರಾಚರಾ ವಸ್ತುಗಳ ಅರಸನಿಗಾಗಿ. ಆ ಹಾಡಿನಲ್ಲಿ ಸ್ವಾರ್ಥ ಬಹುಕೆ ಇಲ್ಲ. ಅದು ಸಂಗೀತವಲ್ಲ. ಅದು ದೈವಿಕ ತಪಸ್ಸು. ಆದ್ದರಿಂದ ಅದು ಚಿನ್ನದಂತೆ. ಆದರೆ ಸ್ವಾರ್ಥತೆ ಬೆರೆಸಿರುವದರಿಂದ ನನ್ನ ಸಂಗೀತ ಚಿನ್ನದಂತೆ ತೋರಿದರೂ ಬರೇ ತಾಮ್ರ, ಭಗವಂತನಿಗರ್ಪಿತವಾದ ಕ್ರಿಯೆಯು ಘನತೆ ಹಾಗಿದೆ."

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರ ಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ತ್ರಿಗಳು,
ಫಾರ್ಮುಗಳು,
ದೊರೆಯುತ್ತವೆ.
ವಿಚಾರಿಸಿರಿ—
ನವಯುಗ ಪ್ರೆಸ್, ಉಡುಪಿ


Smoke And Enjoy
S.R. Beedies
Which will give you
Entire Satisfaction
ಸೇವನೆಯ ಆನಂದಕ್ಕೆ
ಎಸ್. ಆರ್. ಬೀಡಿಗಳನ್ನು
ನಿಮ್ಮ ನಿಜವಾಗಿಯೂ ಮೆಚ್ಚುವರಿ
ಎಲ್ಲಾಕಡೆಗಳಲ್ಲಿಯೂ ಮಾರಲ್ಪಡುತ್ತವೆ.
S.R. Beedi Works UDIPI S.K.

NAVAYUGA, UDIPI.
REGD. NO.BG. 176

19-7-1962

LICENSE NO. 31
Licensed to Post without Prepayment

ಭಾರತೀಯ ಚಿತ್ರಕಲೆಯು

ನಡೆದು ಬಂದ ದಾರಿ

ಶ್ರೀ ಯು. ನಾರಾಯಣ ಸೇರಿಗಾರ.

ಮಾನವನಲ್ಲಿ ಸುಪ್ತಾವಸ್ಥೆಯಲ್ಲಿರುವ ಕಲೆಯು ಉತ್ತಮ, ಅನುಕೂಲವಾವ ವಾತಾವರಣದಲ್ಲಿ ಮಿನ್ಗಿ ಬೆಳಗುತ್ತದೆ. ಇಂತಹ ಕಲೆಯು ಗಾನಕಲೆಯೂಗಿರಬಹುದು, ನೃತ್ಯಕಲೆಯೂಗಿರಬಹುದು, ಅಥವಾ ಚಿತ್ರಕಲೆಯೋ ಆಗಿರಬಹುದು.

ಮಾನವನ ಹುಟ್ಟಿನಿಂದಲೇ ಹುಟ್ಟಿಕೊಂಡು ಚಿತ್ರಕಲೆಯು ಬಂದಿರುತ್ತದೆ ಯೆಂಬುದನ್ನು ನಾವು ತಿಳಿಯಬಹುದು. ಚಿಕ್ಕ ಮಕ್ಕಳು ಕೈಯಲ್ಲಿ ಮಸಿಯೋ, ಸೀಮೆ ಸುಣ್ಣವೋ, ಸಿಕ್ಕಿದಾಗ ಗೋಡೆ, ಜಗಲಿಗಳಲ್ಲಿ ಮನಬಂದಂತೆ ಗೀಚಿ ಸಂತೋಷ ಪಡುತ್ತಾರೆ. ಈ ನುಗುವೇ ಮುಂದೆ ಬೆಳೆಯುತ್ತಾ ಒಬ್ಬ ಶ್ರೇಷ್ಠ ಕಲಾವಿದನಾಗಬಹುದು.

ಭಾರತ ಪ್ರಧಾನಿ ಶ್ರೀ ನೆಹರೂ ಜಿಯವರು "Art is the mirror of the life" ಎಂದು ನುಡಿದಿದ್ದಾರೆ. ಭಾರತೀಯ ಕಲೆಯ ವಿಚಾರವಾಗಿ ಸ್ವಾಮಿ ವಿವೇಕಾನಂದರು "The secret of Indian Art is to represent the ideal" ಎಂದಿದ್ದಾರೆ

ಲಲಿತಕಲೆಗಳಲ್ಲಿ ವಿಶಿಷ್ಟವಾದ ಸ್ಥಾನವನ್ನೂ ಪಡೆದುಕೊಂಡಿರುವ ಚಿತ್ರಕಲೆಯು ಭಾರತದಲ್ಲಿ ಪುರಾತನದಿಂದಲೂ ಹುಟ್ಟಿ ಬೆಳೆದು ಬದುಕಿಕೊಂಡಿದೆ. ಶಿಲಾಯುಗದಿಂದಲೂ ಭಾರತೀಯ ಚಿತ್ರಕಲಾವಾಹಿನಿಯು ಪ್ರವಹಿಸುತ್ತಾ ಬಂದಿದೆಯೆಂಬುದಕ್ಕೆ ಸಾಕಷ್ಟು ಆಧಾರಗಳೂ ಸಿಗುತ್ತವೆ.

ಭಾರತೀಯರ ಪವಿತ್ರ ಗ್ರಂಥಗಳಾದ ಮಹಾಭಾರತ, ರಾಮಾಯಣಗಳಲ್ಲಿಯೂ ತ್ರಿಪಿಟಿಕಾ, ವೇದಾದಿಗಳಲ್ಲಿಯೂ ಭಾರತೀಯ ಚಿತ್ರಕಲೆಯ ವಿಷಯವು ಉಲ್ಲೇಖಿಸಲ್ಪಟ್ಟಿದೆ.

ಕ್ರಿ. ಶ. ಮೊದಲನೆಯ ಶತಮಾನದಲ್ಲಿ ಅಜಂತಾ ಚಿತ್ರಕಲೆಯೂ, ಗುಪ್ತರ ರಾಜ್ಯಭಾರದ ಸಮಯದಲ್ಲಿ ಭಾರತೀಯ ಚಿತ್ರಕಲೆಯೂ ಅಭಿವೃದ್ಧಿಯ ಮಟ್ಟವನ್ನೇರಿತು. ಮುಂದಿನ ಶತಮಾನದಲ್ಲಿ ಜೈನ ಚಿತ್ರಗಳೂ ವರ್ಣ ಚಿತ್ರಕಲೆಗಳೂ ಹುಟ್ಟಿಕೊಂಡುವು. ಶ್ರೀ ವಿಷ್ಣು ಧರ್ಮ ಪುರಾಣ ಎಂಬ ಗ್ರಂಥದಲ್ಲಿ ಚಿತ್ರಕಲಾ ವೈವಿಧ್ಯ, ರೇಖಾ ಪ್ರಾಧಾನ್ಯ, ವರ್ಣಸಂಯೋಜನೆ ಮುಂತಾದುವುಗಳ ವರ್ಣನೆಯನ್ನು ವಿಷದ ಪಡಿಸಲಾಗಿದೆ, "ಸುವರ್ಣಯುಗ ವೆಂದು ಕರೆಯಲ್ಪಟ್ಟರುವ ಗುಪ್ತರಾಜರ ಕಾಲದಲ್ಲಿ ಭಾರತೀಯ ಚಿತ್ರಕಲೆ ಕೂಡ ತುತ್ತ ತುದಿಯನ್ನೇರಿತು.

ಮುಂದೆ ಕ್ರಿ. ಶ. ೯ನೇಯ ಶತಮಾನದಿಂದ ಮೂರುಶತಮಾನಗಳ ವರೆಗೆ ಚಿತ್ರಕಲಾ ಪ್ರಪಂಚದ ಪ್ರಗತಿಯು ನವ.ಗೆ ಕಂಡು ಬರುವುದಿಲ್ಲ. "ಮಹಾಯಾನ" ಗ್ರಂಥದಿಂದ ಆ ಕಾಲದ ಕಲಾವಿದರು ತಾವಾ ಚಿತ್ರಿಸಬೇಕೆಂದಿರುವವುಗಳನ್ನು ತಾಳೆ ಗರಿಗಳಲ್ಲಿಯೇ ಸುಂದರವಾಗಿ ಚಿತ್ರಿಸುತಿದ್ದರೆಂಬುದೂ ತಿಳಿದು ಬರುತ್ತದೆ. ೧೪ನೆಯ ಶತಮಾನದ ಮುಂಡಿ ಕಾಗದದ ಲ್ಲಿ ಸೊಗವಾಗಿ ಬರೆದ ಚಿತ್ರಗಳೂ ರಾಜನೆಯ ಶತಮಾನದಲ್ಲಿ ವಸ್ತ್ರದಲ್ಲಿ ಬರೆದ ಶೃಂಗಾರರಸದ ಒಂದು ಸುಂದರ ಚಿತ್ರವೂ ದೊರಕಿದೆ ವಿಜಾರವೂ ನಮಗೆ ತಿಳಿಯುತ್ತದೆ.

ಮುಂದಿನ ಇನ್ನೂರು ವರ್ಷಗಳ ಕಾಲಾವಧಿಯಲ್ಲಿ ಹೇರಳ ಗುಜರಾತಿ ಮತ್ತು ರಾಜಸ್ಥಾನಿ ಶೈಲಿಯ ಕಲಾಕೃತಿಗಳು ಉದಯಿಸಿದುವು. ಮುಂದೆ ರಜಪೂತ ಮೊಗಲ ಕಲಾಕೃತಿಗಳೂ ಭಾರತೀಯ ಚಿತ್ರಕಲಾ ಭೂಮಿಕೆಯಲ್ಲಿ ರಂಜಿಸ ತೊಡಗಿದುವು.

ಅಜಂತಾ ಚಿತ್ರಕಲಾ ಚೈತನ್ಯದಿಂದ ಬೆಳಕು ಪಡೆದು ಚಿತ್ರಕಲೆಯು ಬೆಳೆಯಿತು. ಮುಂದೆ ರಜಪೂತ ಚಿತ್ರಕಲೆಯೂ ಮೊಗಲ ಚಿತ್ರಕಲೆಯೂ ಮುಂಬರಿದು ನವೀನ ದಾರಿಯನ್ನು ತುಳಿದುವು. ಕಲಾ ಪ್ರೇಮಿಯಾದ ಜಕ್ಬರ ಬಾದಶಹನು ಚಿತ್ರಕಲೆಯನ್ನೂ ಪ್ರೋತ್ಸಾಹಿಸಿದನು. ಆದರೆ ಸ್ವತಾಭಿಮಾನಿಯೂ ಹಿಂದು ಮತದ್ವೇಷಿಯೂ ಆದ ಔರಂಗಜೇಬನಿಂದ ಯಾವ ಪುರಸ್ಕಾರವೂ ಸಿಕ್ಕಲಿಲ್ಲ. ಆತನ ಕಾಲದಲ್ಲಿ ಅದು ನಿಂತಿತು. ನಮ್ಮ ದೇಶ ಕ್ಕೆ ಪಾಶ್ಚಾತ್ಯರ ಆಗಮನದ ಬಳಿಕ ಭಾರತೀಯ ಮತ್ತು ಆಂಗ್ಲ ಚಿತ್ರಕಲಾ ಶೈಲಿಯಿಂದ ಹೊಸ ನೂತನವಾದ ಚಿತ್ರ ಕಲೆಯು ಮೂಡಿ ನಲಿಯಿತು.

ಭಾರತೀಯ ಚಿತ್ರಕಲೆಯು ಕ್ರಿ. ಶ. ೧೮ನೆಯ ಶತಮಾನದಲ್ಲಿ ತಿರುವಾಂಕೂರಿನ ಕೆಲಿಮಾನಾರು ಎಂಬಲ್ಲಿ ಜನಿಸಿದ ರಾಜಾರವಿವರ್ಮನಿಂದ ಪುನರ್ಜೀವಿತಗೊಳಿಸಿಕೊಂಡು ತಲೆಯೆತ್ತಿ ಬೆಳಗತೊಡಗಿತು.

ರಾಜಾರವಿವರ್ಮನ ಬಳಿಕ ಭಾರತೀಯ ಚಿತ್ರಕಲೆಯನ್ನು ವರ್ಣ ಚಿತ್ರಕಾರ ಅವನೀಂದ್ರನಾಥ ಠಾಕೂರ, ಬಂಗಾಳದಲ್ಲಿ ನಂದಲಾಲ ಬಸು ಮತ್ತು ಪ್ರಸೋದ ಕುಮಾರ ಚಟ್ಟೋಪಾಧ್ಯಾಯರಿಂದ ಊರ್ಜಿತಗೊಳಿಸಿದರು. ಲಾಹೋರಿನ ಸುಮನೇಂದ್ರ ಗುಪ್ತಾ, ಅಸಿತ ಕುಮಾರ್ ಹಲ್ದಾರ ರೂ ನವದೆಹಲಿಯ ಶಾರದಾ ಚರಣರು ಭಾರತೀಯ ಚಿತ್ರಕಲೆಗೆ ತಮ್ಮ ಸೇವೆಯನ್ನು ಸಲ್ಲಿಸಿದರು. ಮದ್ರಾಸಿನ ದೇವಿ ಪ್ರಸಾದ್ ರಾಯ್, ಮತ್ತು ಮೈಸೂರಿನ ವೆಂಕಟಪ್ಪನವರೂ, ತಮ್ಮದೇ ಆದ ನವ್ಯ ಶೈಲಿಯ ದಾರಿಯಲ್ಲಿ ಚಿತ್ರಕಲೆ ಪ್ರಪಂಚದಲ್ಲಿ ಬೆಳಕು ನೀಡಿದರು.

ಪ್ರಗತಿ ಪಥದಲ್ಲಿ ಮುನ್ನಡೆಯುತ್ತಿರುವ ಭಾರತವು ಅನ್ಯ ರಾಷ್ಟ್ರದ ಸ್ನೇಹ ಸಂಪರ್ಕದಿಂದ ಅನ್ಯಕಲೆಗಳಂತೆ ಚಿತ್ರಕಲೆಯನ್ನೂ ಬೆಳೆಯಿಸಿಕೊಂಡಿದೆ. ಪರಸ್ಪರ ಶೀಘ್ರ ಮಧುರ ಬಾಂಧವ್ಯದಿಂದಾಗಿ ಭಾರತೀಯ ಮತ್ತು ಅನ್ಯ ದೇಶೀಯ ಶೈಲಿಯ ಕಲ ಬೆರಕೆಯು ನವೀನ ಚಿತ್ರಕಲೆಯು ರೂಪುಗೊಂಡಿದೆ. ದಿನೇ ದಿನೇ ಬದಲಾಗುತ್ತ ನಿತ್ಯ ನೂತನವಾಗುತ್ತಿದೆ.

ಚಿತ್ರಕಲೆಯಲ್ಲಿ ತನ್ನದೇ ಆದ ಹೊಸ ಶೈಲಿಯಲ್ಲಿ ಹೊಂಬೆಳಗು ನೀಡುತ್ತಿರುವ ಕಲಾವಿದ ಪದ್ಮಶ್ರೀ ಕಟ್ಟಂಗೇರಿ ಕೃಷ್ಣ ಹೆಬ್ಬಾರರು ನಮ್ಮ ಜಿಲ್ಲೆಯವರೆಂದರೆ ನಮ್ಮೆಲ್ಲರಿಗೂ ಹಿರಿಮೆಯ ಸಂಗತಿ.

ಪ್ರಸ್ತುತ ಭಾರತದಲ್ಲಿ ಅನೇಕ ಹಿರಿಯ ಕಿರಿಯ ಚಿತ್ರಕಲಾವಿದರು ತಮ್ಮ ಸೇವೆಯನ್ನು ಮಾಡುತ್ತಿದ್ದಾರೆಂಬುದು ಸಂತೋಷದ ವಿಷಯವಾಗಿದೆ. ಅಂತೂ ಭಾರತೀಯ ಚಿತ್ರಕಲೆಯು ಮುನ್ನಡೆಯುತ್ತಾ ಪ್ರಗತಿ ಪಥದಲ್ಲಿ ಸುಸಂಸ್ಕೃತಿಯ ಬೆಳಕಿನಲ್ಲಿ ಮುಂಬರಿಯಲಿ.

ಉಳಿತಾಯ . . . ! ಒಂದು ಆವಶ್ಯಕತೆ

ಸೊಗಸಾಗಿ ಜೀವನ ನಡೆಸುವ ಈ ಆದರ್ಶ ದಂಪತಿಗಳ ಅಭಿಪ್ರಾಯದಂತೆ ಉಳಿತಾಯವು ಸಹಾ "ಅತ್ಯಾವಶ್ಯಕ ವಿಚ್ಛೆಗಳಲ್ಲೊಂದು." ಕೈಗೆ ಬಂದ ಸಂಬಾದನೆಯಲ್ಲಿ ಬೇಕಾದುದಕ್ಕೆಲ್ಲಾ ವೆಚ್ಚಮಾಡಿದ ನಂತರ ಏನಾದರೂ ಉಳಿದರೆ ನೋಡುವ' ಎಂಬ ಮನೋಭಾವನೆ ಅವರದಲ್ಲ. ಆಹಾರ ಬಟ್ಟೆ ಇತ್ಯಾದಿಗಳಿಗೆ ಖರ್ಚುಮಾಡುವಂತೆಯೇ ಒಂದು ನಿರ್ದಿಷ್ಟ ಮೊತ್ತವನ್ನು ಕ್ರಮವಾಗಿ ಬ್ಯಾಂಕಿನಲ್ಲಿಡುತ್ತಾ ಬರುವ ಅಗತ್ಯವನ್ನು ಅವರು ಚೆನ್ನಾಗಿ ಮನಗಂಡಿಯವರು.

ಈ ದಂಪತಿಗಳು ತಮ್ಮ ಸೇವಿಂಗ್ಸ್ ಬ್ಯಾಂಕ್ ಪಾಸ್ ಪುಸ್ತಕವನ್ನು ಅವರ ಭವಿಷ್ಯ ಜೀವನದ ಭರವಸೆಯ ಚಿಹ್ನೆಯೆಂದು ಪರಿಗಣಿಸುತ್ತಿರುವರು. ದಿನೇ ದಿನೇ ವೃದ್ಧಿಗೊಳ್ಳುತ್ತಿರುವ ಮೊತ್ತವನ್ನು ತರುವ ಈ ಚಿಕ್ಕ ಪುಸ್ತಕವು ಅವರ ಕಸ್ಟ ಕಾರ್ಪಣ್ಯಗಳನ್ನು ನಿವಾರಿಸಿ ಸುಖಶಾಂತಿಗಳನ್ನು ನೀಡುವ ಸಾಧನವೆಂಬ ಅವರ ಅಭಿಪ್ರಾಯವು ಎಷ್ಟು ಸಮಂಜಸವಾದುದು!

ಒಂದು ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆಯಿರಿ.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಸಮರಸ ಸ್ಥಾಪನೆಯ ಪ್ರಯತ್ನ

(ನಿನ್ನೆ ಮುಟದಿಂದ)

ಪ್ರಿ ಕೊಳ್ಳುವುದು ಅಸಂಭವವಲ್ಲ. ಏಕೆಂದರೆ, ಕಾಂಗ್ರೆಸ್ ಸದಸ್ಯರಿಗಿಂತ ಸಂಘಟಿ ಮುಂದುವರಿಯಬೇಕೆಂಬ ಹೇರಾಸೆ ಇವರಿಗಿದೆ. ಇದರೊಡನೆ ಇನ್ನೂ ಒಂದು ಸಲಹೆಯು ಕೇರಳದ ನಾಯಕರ ಮುಂದೆ ಬಂದಿದೆ, ಸರಕಾರದ ಪ್ರಮುಖ ಸಮಸ್ಯೆಗಳನ್ನು ಪರಿಹರಿಸಿ, ಸೂಕ್ತ ನಿರ್ಧಾರಕ್ಕೆ ಬರಲು ಸರಕಾರಕ್ಕೆ ಅನುಕೂಲವಾಗುವಂತೆ ಸಲಹೆನೀಡಲು, ರಾಜ್ಯದ ತಜ್ಞರ ಸಮಿತಿಯೊಂದನ್ನು ರಚಿಸಬೇಕು ಎಂಬುದಿದು. ಈ ಸಮಿತಿಯು ರಾಜ್ಯದ ಹಿತರಕ್ಷೆಯನ್ನೇ ತನ್ನ ಪ್ರಧಾನಗುರಿಯನ್ನಾಗಿಟ್ಟುಕೊಳ್ಳುವುದು ಅಗತ್ಯವೆನಿಸುತ್ತದೆ. ಹೀಗಾಗ ಬೇಕಾದರೆ, ಅದರ ಸದಸ್ಯರು ಯಾವ ಪಕ್ಷ ಸಂಗಡಗಳಿಗೂ ಸೇರಿದ, ರಾಜಕೀಯ ವಿಚಾರದಿಂದಪ್ರಭಾವಿತರಾಗದವರಾಗಬೇಕಾಗುತ್ತದೆ ಈವಿಧದ ಸಮಿತಿಯು ಸಲಹೆಯನ್ನು ಪಡೆದು ಸರಕಾರವು ಕಾರ್ಯಪ್ರವೃತ್ತರಾಗುವುದಾದರೆ, ಮಂತ್ರಿಗಳು ತಮ್ಮ ತಮ್ಮಲ್ಲಿ ಕಚ್ಚಾಡಿಕೊಳ್ಳುವ ಸಂದರ್ಭವಿರುವುದಿಲ್ಲ ಅವರು ತಮ್ಮೆಲ್ಲಲಕ್ಷ್ಯವನ್ನು ಸುಸೂತ್ರ ಆಡಳಿತೆಯತ್ತ ಹರಿಸುವುದು ಸಾಧ್ಯವಾಗುತ್ತದೆ.

ಪರಿಹಾರವಾಯಿತೆ?

ಈ ನಿಷ್ಪಕ್ಷಪಾತ ಸದಸ್ಯರಿರುವ ಸಲಹಾ ಸಮಿತಿಯಿಂದ ರಾಜ್ಯ ಸರಕಾರದ ಕಾರ್ಯಭಾರವು ಸುಗಮಗೊಳ್ಳುವುದೆಂಬ ಆಶೆಯನ್ನು ಲಾಲಬಹದೂರರು ಇಟ್ಟುಕೊಂಡಂತಿದೆ. ಕೇರಳದಲ್ಲಿ ಇದನ್ನು ಪ್ರಾಯೋಗಿಕವಾಗಿ ವ್ಯವಹೃತಗೊಳಿಸುವ ಅವಕಾಶವೂ ಇದೆ. ಒಂದು ವೇಳೆ ಈ ವ್ಯವಸ್ಥೆಯು ಲಾಭದಾಯಕವೆಂದು ಕಂಡುಬಂದರೆ, ಮುಂದೆ ಯಥಾ ಸಮಯದಲ್ಲಿ ದೇಶದ ಇನ್ನಿತರ ರಾಜ್ಯಗಳಲ್ಲಿಯೂ ರೂಪುಗೊಳ್ಳಬಹುದು. ಪಂಚವಾರ್ಷಿಕ ಯೋಜನೆಯನ್ನು ಭರದಿಂದ ಮುಂದುವರಿಸುವ ಅವಶ್ಯಕತೆಯಿರುವ ಈ ದಿನಗಳಲ್ಲಿ ಮಂತ್ರಿಗಳು ತೀವ್ರ ಆಸ್ಥೆಯಿಂದ ದುಡಿಯುವುದು ಅಗತ್ಯವಿದೆಯೆಂದು ಹೇಳಬಹುದು. ಕೇರಳದಲ್ಲಿ ಎದುರಿಸಬೇಕಾಗಿರುವ ಸಮಸ್ಯೆಗಳಿಗೆ ಈ ಸಮಿತಿಯ ನಿರ್ಣಾಣವು ಪರಿಹಾರ ಕಂಡು ಹಿಡಿಯುವುದು ಅಸಂಭವವಲ್ಲ. ಆದರೆ ಸಮಿತಿಯ ಸಿಫಾರಸುಗಳ ಸಂಬಂಧದಲ್ಲಿಯೇ ನಾಯಕರ ನಡುವೆ ಭಿನ್ನಾಭಿಪ್ರಾಯ ಹುಟ್ಟಲು ಅವಕಾಶವಿಲ್ಲದಂತೆ ನೋಡಿಕೊಳ್ಳುವುದು ಮತ್ತಷ್ಟು ಅಗತ್ಯವಲ್ಲವೆ?

Edited Printed & Published by K. H. Shetty, at the Navayuga Press, Udipi, S. India.

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ನಿಮ್ಮ ಯಾವತ್ತೂ ಮುದ್ರಣ ಕೆಲಸಗಳಿಗೆ ದಯಮಾಡಿ ವಿಚಾರಿಸಿರಿ:
ನವಯುಗ ಪ್ರೆಸ್,
ಉಡುಪಿ

ವಿದ್ಯಾರ್ಥಿಗಳಿಗೆ ಮತ್ತು ವಯಸ್ಕರಿಗೆ ಅತ್ಯುಪಯೋಗೀ ಪುಸ್ತಕ
ಸುಲಭದಲ್ಲಿ ಇಂಗ್ಲಿಷ್
(ಆಂಗ್ಲ ಸ್ವಯಂಬೋಧಿನಿ)
ನವಭಾರತ ಪುಸ್ತಕ ಭಂಡಾರ
ಉಡುಪಿ

ಸಂಪುಟ ೪೧ ಸಂಚಿಕೆ ೪೬ | ಉಡುಪಿ 26—7—1962 ಗುರುವಾರ | Vol. 41 No. 46

ರಾಷ್ಟ್ರಭಾಷೆಯಾಗಲು

ಹಿಂದಿ ಮತ್ತು ಹಿಂದುಸ್ತಾನಿ ವಿವಾದ

ಭಾರತದಲ್ಲಿ ಹಿಂದಿಯನ್ನು ರಾಜ ಭಾಷೆಯೆಂದು ಸ್ವೀಕರಿಸುವುದು ಈಗ ನಿರ್ಧಾರದ ರೂಪಕ್ಕೆ ಬಂದಿದೆ. ಈ ಸಂಬಂಧದಲ್ಲಿನ ವಾದ ಪ್ರತಿವಾದಗಳನ್ನು ಅನುಲಕ್ಷಿಸಿ ಹಿಂದಿಯನ್ನು ಸರಕಾರಿ ಭಾಷೆಯೆಂದು ೧೯೬೫ರಲ್ಲಿ ಪರಿಗಣಿಸಲಾಗುವುದಾದರೂ ಆದರ ಜೊತೆಗೆ ಇಂಗ್ಲಿಷ್ ಭಾಷೆಯನ್ನೂ ಮುಂದುವರಿಸಲಾಗುವುದೆಂದು ಭರವಸೆಯು ಲಭಿಸಿದೆ. ಆದರೆ, ರಾಜ ಭಾಷೆಯೆನಿಸಿದ ಹಿಂದಿಯು ಸಂಸ್ಕೃತಮಯವಾಗಿರಬೇಕೇ ಅಥವಾ ಹಿಂದುಸ್ತಾನಿಯ ರೂಪದಲ್ಲಿರಬೇಕೇ ಎಂಬುದರ ವಿಚಾರವಾಗಿಯೂ ಚರ್ಚೆಯು ನಡೆಯುತ್ತಿದೆ. ಸಂವಿಧಾನದಲ್ಲಿ ಹಿಂದಿಯು ಆಗ್ರಮನ್ನಣೆಯನ್ನು ಪಡೆದಿದ್ದು ಅದು ಇಡಿಯ ಭಾರತದಲ್ಲಿ ಸುಲಭಗ್ರಾಹ್ಯವೆನಿಸಬಲ್ಲುದೆಂದು ಅಭಿಪ್ರಾಯ ಪಡುತ್ತಾರೆ. ಆದರೆ ಇದನ್ನು ಎಲ್ಲರೂ ಒಪ್ಪುವುದಿಲ್ಲ; ಉರ್ದು ಮಿಶ್ರಿತವಾದ ಹಿಂದಿಯೇ ಉತ್ತಮವಾದುದು ಎಂಬ ಉದ್ಗಾರ ಹೊರಡುತ್ತಿದೆ.

ವಿರೋಧಕ್ಕೆ ಕಾರಣ

ಮಧ್ಯ ಪ್ರದೇಶದ ಹಿಂದೀ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾದ ಡಾ. ಬಲದೇವ ಪ್ರಸಾದ ಮಿಶ್ರರು ಈ ವಿಷಯದಲ್ಲಿ ಸ್ಪಷ್ಟವಾದ ನೂತನಗಳನ್ನು ಆಡಿದ್ದಾರೆ. ಹಿಂದಿಯನ್ನು ಕೆಲವೆಡೆ ವಿರೋಧಿಸಲಾಗುತ್ತಿದೆ; ಆದರೆ, ಹಾಗೆ ವಿರೋಧ ತೋರುವವರಲ್ಲಿ ಆದರಲ್ಲಿರುವ ಸಂಸ್ಕೃತ ಪದಾವಳಿಗಳಿಂದ ಹೆದರುವವರು ಬಹಳ ಕಡಿಮೆ. ಸಂಸ್ಕೃತದ ಕಠಿನ ಶಬ್ದಗಳು ಕೇವಲ ಶಾಸ್ತ್ರೀಯ ಮತ್ತು ಸಾಹಿತ್ಯಿಕ ಅಧ್ಯಯನಗಳಲ್ಲಿ ಮಾತ್ರ ಬಳಕೆಯಾಗುತ್ತವೆ. ಸಾಮಾನ್ಯ ವ್ಯವಹಾರಗಳಲ್ಲಿ ಸರಳ ಪದಗಳನ್ನೇ ಉಪಯೋಗಿಸಲಾಗುತ್ತಿದೆ. ಆದುದರಿಂದ ವಿರೋಧಿಗಳು ಭಾಷೆಯ ಕ್ಲಿಷ್ಟತೆಯನ್ನು ಗಮನಿಸುವುದಿಲ್ಲ. ಆವರ ವಿಮುಖ ಮನೋಭಾವಕ್ಕೆ ಬೇರೆಯೇ ಕಾರಣವಿರುವುದೆಂದು ಹೇಳಬಹುದು. ಇಂದು ಹಿಂದಿಗೆ ವಿರೋಧವು ತೋರುವುದಾದರೆ, ಅದು ಆಂಗ್ಲ ಭಾಷಾ ಪ್ರಿಯರಿಂದ ಮಾತ್ರ. ಕಾರಣಾಂತರದಿಂದ ವಿದೇಶೀ ಭಾಷೆಯಾದ ಅದನ್ನು ನಾವು ಸ್ವೀಕರಿಸಿದ್ದೇವೆ; ಅದನ್ನು ಬಿಟ್ಟುಬಿಡುವುದಕ್ಕೆ ಸಿದ್ಧರಾಗಿಲ್ಲದಿರುವುದೇ ಅವರ ಪ್ರತಿರೋಧಕ್ಕೆ ಮೂಲಕಾರಣವೆನ್ನಬಹುದು.

ಶ್ರೀ ಭಾಷಾ ಸೂತ್ರ

ಭಾರತ ಸರಕಾರದ ಯೋಜನೆಯಂತೆ ತ್ರಿಭಾಷಾ ಸೂತ್ರವನ್ನು ದೇಶದ ಎಲ್ಲ ರಾಜ್ಯಗಳೂ ಒಪ್ಪಿಕೊಂಡಿವೆ; ಅದನ್ನು ಅನುಷ್ಠಾನಕ್ಕೂ ತಂದಿವೆ. ಮಾತೃ ಭಾಷೆಯನ್ನು ಅನಿವಾರ್ಯವಾಗಿ ಕಲಿಯುವುದರೊಡನೆ ಇಂಗ್ಲಿಷ್ ಮತ್ತು ಹಿಂದೀ ಭಾಷೆಗಳನ್ನೂ ಶಾಲೆಗಳಲ್ಲಿ ಕಲಿಸುವಂತೆ ಪಾಠ ಪಟ್ಟಿಯನ್ನು ಸಿದ್ಧಪಡಿಸಿವೆ. ಹಿಂದಿಯ ಅಧ್ಯಾಪನ ಕಾರ್ಯವು ಸಾಂಗವಾಗಿ ನೆರವೇರುವಂತೆ ಹಿಂದೀ ಅಧ್ಯಾಪಕರ ನೇಮಕತ್ವ ಸಮರ್ಪಕವಾಗಿ ನಡೆದಿದ್ದರೂ ನಮ್ಮ ರಾಜ್ಯದಲ್ಲೂ ಅದು ಖಡ್ಡಾಯ ವಿಷಯಗಳಲ್ಲಿ ಒಂದು ಸ್ಥಾನವನ್ನು ಪಡೆದಿದೆ. ಸರಕಾರವು ಪ್ರತಿ ಶಾಲೆಗೂ ಹಿಂದೀ ಅಧ್ಯಾಪಕರನ್ನು ನೇಮಿಸಿದ ಹೊರತು, ಅದರ ತ್ರಿಭಾಷಾ ಸೂತ್ರವು ಯಶಸ್ವಿಯಾಗುವುದಿಲ್ಲವೆಂಬುದನ್ನು ನಾವು ನೆನಪಿಸಿಕೊಳ್ಳಬೇಕಾಗಿದೆ.

ಪ್ರಾಂತೀಯ ಭೇದಗಳು

ಹಿಂದೀ ಭಾಷೆಯು ಜೀವಂತ ಭಾಷೆ; ಬೆಳೆಯುವ ಮಗುವಿನಲ್ಲಿರುವ ಎಲ್ಲ ಗುಣಗಳೂ ಅದರಲ್ಲಿವೆ. ಇಂದು ಹಿಂದಿಯು ಕೇವಲ ಒಂದು ಪ್ರದೇಶದ ಭಾಷೆಯಾಗಿ ಉಳಿದಿಲ್ಲ; ಅದು ಎಲ್ಲ ಭಾರತೀಯರ ಭಾಷೆ. ಅದುದರಿಂದ ಹಿಂದ್ಯೇತರ ಪ್ರದೇಶದ ಜನರು ತಮ್ಮ ಭಾಷೆಯ ಸುಂದರ ಪದಗಳನ್ನೂ ವಾಕ್ಯಾಂಶಗಳನ್ನೂ ಹಿಂದಿಯಲ್ಲಿ ತುಂಬಿಸಲು ಸ್ವತಂತ್ರರಿದ್ದಾರೆ; ಅಧಿಕಾರ ಪಡೆದಿದ್ದಾರೆ. ಉಚ್ಚಾರಣ ಭೇದ ಮತ್ತು ಪ್ರಯೋಗ ಭೇದಗಳು ಹಿಂದೀ ಭಾಷೆಯ ನ್ನಾಡುವ ರಾಜ್ಯಗಳಲ್ಲಿಯೂ ದೊರವಾಗಿಲ್ಲ; ಆದುದರಿಂದ ಇದಕ್ಕಾಗಿ ಆಹಿಂದೀ ಭಾಷಾ ಪ್ರದೇಶವನ್ನು ಸಿದ್ಧಪಡಿಸಿಕೊಳ್ಳುವ ಅಗತ್ಯವಿಲ್ಲ. ಹಿಂದಿಯ ಪ್ರಾಂತೀಯ ಭೇದಗಳನ್ನು ಅವಶ್ಯ ಮನ್ನಿಸಲೇ ಬೇಕಾಗುತ್ತದೆ.

ರಾಷ್ಟ್ರ ಭಾಷೆ ಬೇಕು

ಇದು ವರೆಗೆ ಉತ್ತರ ಪ್ರದೇಶ, ಮಧ್ಯ ಪ್ರದೇಶ, ಬಿಹಾರ, ರಾಜಸ್ಥಾನ ಮತ್ತು ಪಂಜಾಬ ರಾಜ್ಯಗಳು ಹಿಂದೀ ಭಾಷೆಯನ್ನು ರೂಪಿಸುತಿದ್ದುವು. ಆದರೆ, ಇಂದು ಅದನ್ನು ನಿರ್ಮಿಸಲು, ಬಂಗಾಳ, ಒರಿಸ್ಸ, ಆಂಧ್ರ, ಕನ್ನಡ, ತಮಿಳು ಮತ್ತು ಕೇರಳದ ಜನರೂ ಅಧಿಕಾರ ಸಂಪನ್ನರಾಗಿದ್ದಾರೆ. ಈಯೆಲ್ಲಾ ಜನರು ಒಟ್ಟಾಗಿ ಯಾವ ರೂಪದಲ್ಲಿ ಹಿಂದಿಯನ್ನು ಬಳಸಿಕೊಳ್ಳುವರೋ ಅದುವೇ ಭಾರತೀಯ ರಾಷ್ಟ್ರ ಭಾಷೆಯ ಮೂಲ ರೂಪವಾಗುವುದು. ಹಿಂದಿಯನ್ನು ಮೊದಲಿನಿಂದಲೂ ರಾಷ್ಟ್ರ ಭಾಷೆಯೆಂದು ವಿಕಾಸಗೊಳಿಸಲಾಗಿದೆ. ಹಿಂದಿಯೆಂಬುದು ಯಾವುದೇ ಸ್ಥಾನ ವಿಶೇಷದ ಹೆಸರಲ್ಲ; ಪ್ರಾದೇಶಿಕ ವ್ಯವಹಾರಗಳಿಗೆ ಭಿನ್ನಭಿನ್ನ ಭಾಷೆಗಳು ಇವೆ. ಹಾಗಿದ್ದರೂ ಇಡಿಯ ದೇಶಕ್ಕೊಂದು ಭಾಷೆ ಬೇಕು ಎಂಬುದು ವಿದೇಶೀಯರ ಪ್ರಭುತ್ವಾವಧಿಯಲ್ಲಿ ನಮಗೆ ಮನವರಿಕೆಯಾಯಿತು. ಏಕೆಂದರೆ ಅವರ ಆಡಳಿತ ಯಲ್ಲಿ ದೇಶವು ಒಂದೇ ಆಗಿದ್ದರೂ ಬೇರೆ ಬೇರೆ ಪ್ರಾಂತ್ಯಗಳು ಬೇರೆ ಬೇರೆಯಾಗಿದ್ದುವು; ಅವುಗಳ ನಡುವೆ ತಿಳುವಳಿಕೆಯು ದಿನಗಳೆದಂತೆ ಕಡಿಮೆಯಾಗುತ್ತ ಬಂದಿತು.

ಹಿಂದೀ ಭಾಷೆಯ ಹುಟ್ಟು

ಈ ಹಿಂದೊಮ್ಮೆ ಸಂಸ್ಕೃತ ಭಾಷೆಯು ಭರತ ಖಂಡದ ರಾಷ್ಟ್ರ ಭಾಷೆಯೆಂಬ ಗೌರವವನ್ನು ಪಡೆದಿತ್ತು. ವಾಯವ್ಯ ದಿಕ್ಕಿನ ಮೆಗಳನ್ನು ದಾಟಿ ನಮ್ಮಲ್ಲಿಗೆ ಪಾದಾರ್ಪಣೆ ಮಾಡಿದ ಮುಸಲ್ಮಾನರು ತಮ್ಮ ಪ್ರಭುತ್ವ ಕಾಲದಲ್ಲಿ ಸಂಸ್ಕೃತವನ್ನು ರಾಷ್ಟ್ರ ಭಾಷೆಯೆಂದು ಸ್ವೀಕರಿಸಲುಸಿದ್ಧರಿರಲಿಲ್ಲ. ಏಕೆಂದರೆ, ಅರಮನೆ ಗುರುಮನೆಗಳಲ್ಲಿ ಮೆರೆದಾಡಿದ ಸಂಸ್ಕೃತ ಭಾಷೆಯು ಜನ ಸಾಮಾನ್ಯರ ಮುಖದಿಂದ ಲುಪ್ತವಾಗುಗುತಿತ್ತು. ಅವರು ಪ್ರಾದೇಶಿಕ ಭಾಷೆಗಳನ್ನೇ ನೆಚ್ಚಿಕೊಂಡಿದ್ದರು. ಆದುದರಿಂದ ಅವರು ತಮ್ಮ ಅಧಿಕಾರ ಜನಯಿಸಲು ಒಂದುಉಪಾಯಹೂಡಿದರು. ದಿಲ್ಲಿ, ಆಗ್ರಾ, ಮಿರತ್, ಲಾಹೋರ್, ಮೊದಲಾದೆಡೆಗಳಲ್ಲಿ ಬಳಕೆಯಲ್ಲಿದ್ದ ಕ್ರಿಯಾಪದ ಮತ್ತು ವ್ಯಾಕರಣಿಕ ಪ್ರಯೋಗಗಳನ್ನು ಆರಿಸಿ ಒಂದು ಅಂತಾರಾಜ್ಯೀಯ ಭಾಷೆಯ ಸೃಷ್ಟಿಗೆ ಕಾರಣರಾದರು; ಅದನ್ನು ಹಿಂದೀ ಎಂದು ಕರೆದರು. ಜನರು ಭಾಷೆಯಲ್ಲಿ ಪ್ರಚಲಿತವಿರುವ ನಾಮಪದಗಳೆಲ್ಲವನ್ನೂ ಕೆಲವೊಮ್ಮೆ ಅರಬಿ, ಪಾರ್ಸಿ ಭಾಷೆಗಳ ವನ್ನೂ ಅವರು ಸ್ವೀಕರಿಸಿದರು. ಇದರಿಂದ ಎಲ್ಲ ಪ್ರಾದೇಶಿಕ ಭಾಷೆಯನ್ನಾಡುವವರೂ ಈ ಹೊಸ ಭಾಷೆಯನ್ನು ಅರ್ಥ ಮಾಡಿಕೊಳ್ಳಲು ಸಶಕ್ತರಾದರು.

ಉರ್ದು ಮತ್ತು ಹಿಂದಿ

ಮುಸಲ್ಮಾನ ಶಾಸಕರು ಏಕಭಾಷೆಯ ಆವಶ್ಯಕತೆಯನ್ನು ಕಂಡುಕೊಂಡರು. ದೇಶದಲ್ಲಿ ತಿರುಗಾಡುತಿದ್ದ ಸಾಧುಸಂತರೂ ವ್ಯಾಪಾರಿಗಳೂ ಇದೇ ಅನುಭವವನ್ನು ಪಡೆದರು. ಇವರೆಲ್ಲರಿಂದ ಹಿಂದೀ ಭಾಷೆಯ ನಿರ್ಮಾಣವಾಯಿತು. ಕಾಲಕ್ರಮದಲ್ಲಿದು ಎರಡು ಕವಲುಗಳಲ್ಲಿ ಹರಿಯಿತು. ಇಸ್ಲಾಮೀ ಸಂಸ್ಕಾರದಲ್ಲಿ ಬೆಳೆದವರು ತಮ್ಮದೇ ರೀತಿಯಲ್ಲಿ ಅದನ್ನು ಬೆಳೆಸಿದರು; ಅದು ಉರ್ದು ಎಂಬ ಹೆಸರನ್ನು ಪಡೆಯಿತು. ಭಾರತೀಯ ಪರಂಪರೆಯಂತೆ ವಿಕಾಸಗೊಂಡಿದವರು ಅದನ್ನು ಹಿಂದೀ ಎಂದು ಕರೆದರು.

ಹಿಂದುಸ್ತಾನಿಯ ಜಾದು

ಉಚ್ಚ ವಿಚಾರ ಮತ್ತು ಉಚ್ಚ ಭಾವಗಳನ್ನು ಅಭಿವ್ಯಕ್ತಗೊಳಿಸಿದಾಗಲೇ ಭಾಷೆಯಲ್ಲಿ ಉಚ್ಚತೆಯು ಸಮೂನೇರಗೊಳ್ಳುವುದು. ಆದುದರಿಂದಲೇ ಜನ ಸಾಧಾರಣರ ಮತ್ತು ಸಾಹಿತ್ಯಿಕ ಭಾಷೆಗಳ ನಡುವೆ ಅಂತರವಿರುವುದು. ಉರ್ದು ಮತ್ತು ಹಿಂದೀ ಭಾಷೆಗಳ ವಿಕಾಸವು ಒಂದೇ ನೆಲದಲ್ಲಾಯಿತಾದರೂ ಸಾಹಿತ್ಯಿಕವಾಗಿ ಭಿನ್ನ ಭಿನ್ನವಾದುವು. ಇಂಗ್ಲಿಷರು ನಮ್ಮ ದೇಶಕ್ಕೆ ಕಾಲಿರಿಸಿದಾಗ, ಅವರಿಗೂ ಇಷ್ಟನೆ ಒಂದು ಭಾಷೆಯನ್ನು ಸ್ವೀಕರಿಸುವುದು ಅಗತ್ಯವೆಂದು ಕಂಡಿತು, ಅವರು ಉರ್ದು ಮತ್ತು ಹಿಂದಿಗಳ ಸಮೂನ ರೂಪಗಳತ್ತ ಗಮನ ಹರಿಸಿ 'ಹಿಂದುಸ್ತಾನಿ' ಭಾಷೆಯು ಜನ್ಮಕ್ಕೆ ಕಾರಣೀ ಭೂತರಾದರು ಆವರ ಕಾಲದಲ್ಲಿ ನ್ಯಾಯಾಲಯ ಮತ್ತು ಕಾರ್ಯಾಲಯಗಳಲ್ಲಿ ಉರ್ದುವಿಗೆ ವ್ಯಾಪಕ ಸ್ಥಾನ ದೊರಕಿತ್ತು; ಅವರೊಲವೂ ಆ ಕಡೆಗಿತ್ತು. ಆದು

(೧೩ನೇ ಪುಟ ನೋಡಿರಿ)

ಗೃಹಿಣಿಯರಿಗೆ ತಿಲಕವೆ ಭೂಷಣವಲ್ಲವೆ ?
ಫರ್ನಿಚರುಗಳಲ್ಲೆಲ್ಲ 'ವೀರಾ' ತಿಲಕಪ್ರಾಯವೆಂಬುದನ್ನು ನೀವು ತಿಳಿದಿಲ್ಲವೆ ?
ಗೃಹಾಲಂಕಾರಕ್ಕಾಗಿ— ಆಫೀಸು, ಆಸ್ಪತ್ರೆಗಳ ಓರಣಕ್ಕಾಗಿ— ತಾಳಕೆ ಬಾಳಕೆಯಲ್ಲಿ, ರಚನೆ ವೈವಿಧ್ಯತೆಯಲ್ಲಿ ದೇಶ ವಿಖ್ಯಾತವಾದ 'ವೀರಾ' ಉಕ್ಕಿನ ಫರ್ನಿಚರುಗಳನ್ನೇ ಉಪಯೋಗಿಸಿರಿ. ವಿಚಾರಿಸಿರಿ, ಯೂ, ಶೋ ರೂಮನ್ನು ಸಂದರ್ಶಿಸಿರಿ.

ಶಾಸ್ತಿ & ಕೊ
ಹಂಪನಕಟ್ಟೆ,
ಮಂಗಳೂರು—1

ಹೃದಯದ ಬಂಧನ

ಶ್ರೀ ಕೊಡ್ಲು ತಿಮ್ಮಪ್ಪ ಗಟ್ಟಿ.

ಒಂದು ದಿನ ಅನಂತರಾಯರು ತಮ್ಮ ನಿತ್ಯದ ಕಾಫಿ ಹೌಸನ್ನು ಪ್ರವೇಶಿಸಿದೊಡನೆ "ಏ ಅನಂತರಾಯ್ರೆ, ನೀವು ಕೇಳ್ತಿದ್ದರಲ್ಲಾ ಒಬ್ಬ ಹುಡುಗಬೇಕು ಅಂತ, ನೋಡಿ, ಇವ್ನ ಬೇಕಿದ್ರೆ ಕರ್ಕೊಂಡು ಹೋಗಿ" ಎಂದರು ಹೋಟೆಲ್ ಮೆನೇಜರ್ ಸುರೇಶ್ ಪೈಯನರು.

ಒಬ್ಬ ಹುಡುಗ ಅಲ್ಲೇ ಮ್ಲಾನವದನನಾಗಿ ಕೈಯಲ್ಲೊಂದು ಸೇದು ಒರಸುವ ಕೊಳಕು ಬಟ್ಟೆ ಹಿಡಿದು ನಿಂತಿದ್ದ. ಆತ್ಯವ್ಯಸ್ತವಾದ ಗಿಡ್ಡ ಕೂದಲು ಸುರುಳಿ ಸುರುಳಿಯಾಗಿತ್ತು. ಸುಮಾರು ಹತ್ತರ ವಯ್ಯ, ಎಣ್ಣೆಗೆಂಪು ಮೈಬಣ್ಣ, ಭುಜಗಳೆರಡೂ ಹರಿದ ಅಂಗಿ, ಕೆಳಪಟ್ಟೆ ಹರಿದು ಜೋಲುವ ಚಡ್ಡಿ.

ಆದರೆ ಅನಂತರಾಯರು ಕಂಡದ್ದು ಅವನ ಕರುಣಾಜನಕ ಮುಖ, ಬಡಕಲಾದ ದೇಹಕ್ಕೆ ಕರುಣೆಯ ಕೆಂಡಿಗಳಂತಿದ್ದ ಕಣ್ಣುಗಳನ್ನು. ಮುಖದಲ್ಲಿ ದೈನ್ಯತೆ ಮೂರ್ತಿವೆತ್ತಿತ್ತು.

ಅನಂತರಾಯರು ಆ ಪರದೇಶೀ ಹುಡುಗ ಚಂದ್ರುವನ್ನು ತಮ್ಮ ಮನೆಗೆ ಕರಕೊಂಡು ಬಂದರು. ಅವರದ್ದು ಭಾರೀ ಮನೆ, ಆದರೂ ಮನೆಯಲ್ಲಿ ಅವರು, ಅವರ ಪತ್ನಿ ಜಯಮ್ಮ ಮತ್ತು ಮಗಳು ಶಶಿ ಮೂವರೇ. ಶಶಿ ಎಂಟಾರು ವರ್ಷದ ಪುಟ್ಟ ಹುಡುಗಿ. ಪಾತ್ರೆ ತೊಳೆಯಲು, ಬಟ್ಟೆ ಒಗೆಯಲು, ದನಕರುಗಳ ಆರೈಕೆಗೆ ಬೇರೆ ಬೇರೆ ಆಳುಗಳಿದ್ದರೂ ಮನೆಯ ಇತರ ಚಿಕ್ಕ ಪುಟ್ಟ ಕೆಲಸಗಳಿಗೆ ಅತ್ತಿತ್ತ ಓಡಾಡುತ್ತಿರಲು ಒಬ್ಬ ಚಿಕ್ಕ ಹುಡುಗನ ಅವಶ್ಯಕತೆಯಿತ್ತು.

ಒಂದು ದಿನ ಆ ಹುಡುಗ ಯಾರೊಡನೆಯೂ ಮಾತನಾಡಲಿಲ್ಲ ಹತ್ತು ಪ್ರಶ್ನೆಗಳಿಗೆ ಒಂದು ಉತ್ತರ ಸಿಗುತ್ತಿತ್ತು. ರಾತ್ರಿ ಊಟವನ್ನೂ ಸರಿಯಾಗಿ ಮಾಡಲಿಲ್ಲ. ಅನಂತರಾಯರ ಪತ್ನಿ ಜಯಮ್ಮ ಬಹಳ ಕನಿಕರಗೊಂಡರು. ಆ ಹುಡುಗನ ಮೇಲೆ ಅವರಿಗೆ ಬಹಳ ವಾತ್ಸಲ್ಯ ಮೂಡಿತು. ಹುಡುಗ ಬೀದಿ ಹುಡುಗನಂತಿರಲಿಲ್ಲ. ಒಳ್ಳೆ ಮನೆತನದ ಹುಡುಗನಂತಿದ್ದ. ಅವನ ಮುಖದಲ್ಲಿ, ಕಣ್ಣಿನಲ್ಲಿ ಬಹಳ ವೇದನೆಯನ್ನುಂಡ ಕುರುಹು ಕಾಣುತ್ತಿತ್ತು.

ಚಂದ್ರುವಿಗೆ ಒಂದು ಚಿಕ್ಕ ಕೋಣೆಯನ್ನು ತೆರವು ಮಾಡಿಕೊಟ್ಟರು. ಅಗತ್ಯ ಬರುವ ಬಟ್ಟೆಬರೆಗಳನ್ನು ಕೊಟ್ಟರು.

ರಾತ್ರಿ ಅನಂತರಾಯರು ಸ್ವಿಚ್ ಆಫ್ ಮಾಡಿ ಮಲಗಲು ಹೋಗುತ್ತಿರುವಾಗ ಚಂದ್ರುವಿನ ಕೋಣೆಯಿಂದ ಬಿಕ್ಕಿ ಬಿಕ್ಕಿ ಅಳುವ ಸದ್ದು ಕೇಳಿಸಿತು. ಅವರು ಮೆಲ್ಲನೆ ಕೆವಿಕೊಟ್ಟು ಆಲಿಸಿದರು. ಚಂದ್ರು ಬಿಕ್ಕಿ ಬಿಕ್ಕಿ ಅಳುತ್ತಿದ್ದ. ಅನಂತರಾಯರಿಗೆ ಬಹಳ ವೇದನೆಯಾಯಿತು.

"ಕೂಲಿನಾಲಿ ಮಾಡಿನ ತಿರುಕ ಹುಡುಗನಂತೂ ಅಲ್ಲ. ಎಲ್ಲಿಂದರೋ ಹಳ್ಳಿಯಿಂದ ಓಡಿಬಂದ, ಒಳ್ಳೆ ಕುಟುಂಬಕ್ಕೆ ಸೇರಿದವನೇ ಆಗಿರಬೇಕು. ಯಾಕೆ ಓಡಿಬಂದ? ಬಹುಶಃ ಮನೆಯ ನೆನಪಾಗಿ ಅಳುತ್ತಿರಬೇಕು." ಎಂದು ಅವರು ಯೋಚಿಸಿದರು. ಅವನಿಗೆ ಗಾಬರಿ ಮಾಡಲಿಚ್ಛಿಸದೆ ಅವರು ಹಾಗೆಯೇ ಹೋದರು "ಇರಲಿ ನಾಳೆ ವಿಚಾರಿಸೋಣ" ಎಂದು ಕೊಂಡರು.

೦೦ ೦೦ ೦೦

ಹಿರಿಯೂರಿನಲ್ಲಿ ಶಂಕರರಾಯರು ಭಾರೀ ಶ್ರೀಮಂತರು. ಇಡೀ ಗ್ರಾಮದ ಹೆಚ್ಚಿನ ಆಸ್ತಿ ಅವರದ್ದಾಗಿತ್ತು. ಶಿವಪ್ಪ ಅವರ ಒಕ್ಕಲು. ಅವನಿಗೆ ಗಾಡಿ ಹೊಡೆಯುವ ಕೆಲಸ. ಚಿಕ್ಕ ಸಂಸಾರ, ಹೆಂಡತಿ ಪದ್ಮ, ಮಕ್ಕಳು ಚಂದ್ರು ಮತ್ತು ದೇವಕಿ. ಚಂದ್ರು ಮೂರನೇ ದರ್ಜೆಯಲ್ಲಿ ಕಲಿಯುತ್ತಿದ್ದ. ದೇವಕಿ ಇನ್ನೂ ಆರು ವರ್ಷ ತುಂಬುತ್ತಲಿರುವ ಚಿಕ್ಕ ಹುಡುಗಿ. ಪದ್ಮಳಿಗೆ ಧನಿಗಳ ಮನೆಯಲ್ಲಿ, ಕೆಲಸ. ಹೀಗೆ ಸಂಸಾರ ತಕ್ಕ ಮಟ್ಟಿಗೆ ಸಾಗುತ್ತಿತ್ತು.

ಪದ್ಮಳಿಗೆ ಮಕ್ಕಳ ಮೇಲೆ ಮಮತೆ ಕಡಿಮೆ. ಮಕ್ಕಳ ಆರೈಕೆ, ವಿದ್ಯಾಭ್ಯಾಸಗಳ ಕುರಿತು ಅವಳಿಗೆ ಆಸಕ್ತಿಯಿಲ್ಲ. ಅವಳ ಸ್ವಾಭಾವವೇ ಹಾಗೆ. ಆದರೆ ಶಿವಪ್ಪನಿಗೆ ಮಕ್ಕಳೆಂದರೆ ಬಹಳ ಪ್ರೀತಿ. ಚಂದ್ರು ಮತ್ತು ದೇವಕಿಯರಿಗೆ ಶಿವಪ್ಪನೇ ತಾಯಿ ಯಂತಿದ್ದ. ಊಟ, ಉಡಿಗೆ, ತೊಡಿಗೆಗಳ ವಿಷಯದಲ್ಲೂ ತಾಯಿಗೆ ಮಕ್ಕಳ ಮೇಲೆ ತಾಯಿ ಎಂಬ ದೆಚ್ಚಿನ ಗಮನವಿಲ್ಲ. ಕೆಲವೊಮ್ಮೆ ಅವಳು ಕೆಟ್ಟವಾತನ್ನಾಡಿ ಶಿಕ್ಷಿಸುವುದೂ ಇದೆ.

ಧನಿಗಳು ಮತ್ತು ಪದ್ಮ ಚಿಕ್ಕಂದ ಹೊಡೆಯುತ್ತಾರೆ ಎಂಬುದು ಹೆಂಗಸರು ಆಡಿಕೊಳ್ಳುವ ಮಾತಾಗಿ ಹೋಗಿತ್ತು. ಶಿವಪ್ಪ ಹೆಂಡತಿಯನ್ನು ಈ ಕುರಿತು ಎಚ್ಚರಿಸಿದ್ದ. ಪದ್ಮಳಿಗೆ ಗಂಡನ ಹೆದರಿಕೆಯಿದ್ದರೂ ಅವಳು ಗಂಡನನ್ನೇ ಅಸ್ಪೋದಿಸಿ ಹಚ್ಚಿಕೊಂಡು ಭಯಪಡುವನಲ್ಲ.

ಹೀಗೆ ಒಂದು ವರ್ಷ ಕಳೆಯುವ ಹೊತ್ತಿಗೆ ಶಿವಪ್ಪ ಟೈಫಾಯಿಡ್ ಆಗಿ ತೀರಿಕೊಂಡ. ಮನೆ ಸ್ಮಶಾನ ಸದೃಶವಾಯಿತು. ಮಕ್ಕಳು ಗೋಳೋ ಎಂದು ಅತ್ತರು. ಆದರೆ ಪದ್ಮ ಮಾತ್ರ ಸ್ವಲ್ಪ ಧೈರ್ಯದಿಂದ, ತಾಯಿಮನೆಗೆ ಹೋಗಲಿಚ್ಛಿಸದೆ, ಇಲ್ಲೇ ಉಳಿದು ಮಕ್ಕಳನ್ನು ಸಾಕುವೆನೆಂದಳು. ತಾಯಿ ಮನೆಯವರೂ ಬಂದೇ ತೀರಬೇಕೆಂದು ಹಟಹಿಡಿಯಲಿಲ್ಲ.

ಸ್ವಲ್ಪ ಕಾಲ ಕಳೆಯಿತು. ಮರಣದ ದುಃಖವು ಮರೆಯುತ್ತಾ ಬಂತು. ಶಂಕರರಾಯರು ಆಗಾಗ ಬಂದು ಸುಖ ದುಃಖ ವಿಚಾರಿಸಿ ಹೋಗುತ್ತಿದ್ದರು.

ಚಂದ್ರುವಿಗೆ ಶಂಕರರಾಯರನ್ನು ಕಂಡರಾಗುತ್ತಿರಲಿಲ್ಲ. ಅವರ ಮಗ ಶ್ರೀಧರನನ್ನು ಅವನು ಎಳ್ಳಷ್ಟೂ ಮೆಚ್ಚುತ್ತಿರಲಿಲ್ಲ ತನ್ನತಾಯಿ ಶ್ರೀಧರನನ್ನು ಆದರದಿಂದ ನೋಡುವುದನ್ನು ಕಂಡರೆ ಅವನಿಗಾಗುವ ವೇದನೆ ಹೇಳತೀರದು. ತನ್ನ ತಾಯಿ ತನ್ನನ್ನು ಪ್ರೀತಿಸದೆ ಆ ಕೆಟ್ಟ ಹುಡುಗನನ್ನು ಪ್ರೀತಿಸುವುದು ಕಂಡರೆ ಅವನ ಬಾಲಹೃದಯದ ದುಃಖದಿಂದ್ಕ ಕ್ರೋಧದಿಂದ ಕುದಿಯುತ್ತಿತ್ತು. ಶಂಕರರಾಯರು ಬಹಳ ಕೆಟ್ಟ ಮನುಷ್ಯ. ತಿಂಬಾ ಕುಡಿಯುತ್ತಿದ್ದರು ಎಂದು ಊರೆಲ್ಲೆಲ್ಲಾ ಆಡಿಕೊಳ್ಳುತ್ತಿದ್ದರು. ಆದ್ದರಿಂದ ಅವರು ಮನೆಗೆ ಬಂದರೆ ಚಂದ್ರುವಿನ ಹೃದಯಕ್ಕೆ ಕೊಳ್ಳಿಯಿರಿಸಿದಂತಾಗುತ್ತಿತ್ತು, ಅಸಹನೆಯಿಂದ ಬೇಯುತ್ತಿತ್ತು. ಅವರು ಬಳಿಗೆ ಕರೆದರೆ ಹೋಗಲಾರ. ಏನಾದರೂ ಕೆಲಸ ಹೇಳಿದರೂ ಒಪ್ಪಲಾರ. ಆದ್ದರಿಂದ ಅವರು ಮನೆಗೆ ಬಂದರೆ ಚಂದ್ರು ಏನಾದರೂ ಕೆಲಸ ಹೇಳಿಯಾರೆಂದು ಹೆದರಿ ಅಡಗಿ ಕುಳಿತುಕೊಳ್ಳುತ್ತಿದ್ದ.

ಶಂಕರರಾಯರು ಮತ್ತು ಪದ್ಮಳ ಬಾಂಧವ್ಯ ಬಲವಾಗುತ್ತಾ ಬಂತು. ಅವರು ಬಂದರೆ ಅಲ್ಲೇ ಎಷ್ಟೋ ಹೊತ್ತು ಉಳಿದುಕೊಳ್ಳುವರು.

ಮಕ್ಕಳ ಎದುರಿನಲ್ಲೇ ಧನಿಗಳು ಪದ್ಮಳನ್ನು ಎಳೆದು ಅಪ್ಪಿ ಮುತ್ತಿಡುತ್ತಿದ್ದರು. ಇತರ ಏನೆಲ್ಲಾ ಚೇಷ್ಟೆಗಳನ್ನು ನಡೆಯುತ್ತಿದ್ದರು. ಮೊದ ಮೊದಲು ನಾಚುತ್ತಿದ್ದರೂ ಪದ್ಮ ಈಗೀಗ ಅದನ್ನೇ ಬಯಸುವಳು. ಇಂಥ ಸಂದರ್ಭದಲ್ಲಿ ತನ್ನ ತಾಯಿ ಮತ್ತು ಶಂಕರರಾಯರಿಬ್ಬರೂ ಬಾವಿಗೆ ಬೀಳಲಿ ಎಂದು ಚಂದ್ರುವಿಗನಿಸುವುದು.

ಒಂದು ಬಾರಿ ಯಾವುದೋ ಕಾರಣಕ್ಕಾಗಿ ಚಂದ್ರುವಿಗೂ ಶ್ರೀಧರನಿಗೂ ಸಣ್ಣ ಜಗಳ ನಡೆಯಿತು. ಸಂಜೆ ಹೊತ್ತಿಗೆ ಪದ್ಮಳ ಮನೆಗೆ ಬಂದ ಶಂಕರರಾಯರು ಶ್ರೀಧರನಿಗೆ ಹೊಡೆದುದೇಕೆಂದು ವಿಚಾರಿಸುತ್ತಾ ಬಾರು ಕೋಲಿನಿಂದ ಚಂದ್ರುವಿನೆ ಚೆನ್ನಾಗಿ ಥಳಿದರು. ಪದ್ಮ ಕೂಡಾ ಅದರ ಮೇಲೆ ಒಂದೇಟು ಹಾಕಿ, ಅವನನ್ನೂ ಅವನ ತಂದೆಯನ್ನೂ ನಿಂದಿಸಿ ಬಯ್ದಳು.

ಅದೇ ದಿನ ಚಂದ್ರು, ನನಗೆ ಯಾರೂ ಇಲ್ಲ ಎಂದು ಅಳುತ್ತಾ ರಾತ್ರಿಗೇ ಊರು ಬಿಟ್ಟು ಹೊರಟ. ಎಲ್ಲಿಯೂದರೂ ಹೋಗಿ ಬದುಕುವೆ ಇಷ್ಟನೇ ಸಾಯುವೆ ಎಂದು ಕೊಂಡ. ಆದರೆ ಅಲ್ಲಿಂದ ಹೊರ ಬರುವಾಗ ಅವನಿಗೆ ತನ್ನ ತಂಗಿಯ ನೆನಪಾಗಿ ಮನಸ್ಸಿಗೆ ಸ್ವಲ್ಪ ನೋವಾಯಿತು.

ಹೀಗೆ ಬಂದವ ಕುರೇಶ ಪೈಗಳಲ್ಲಿಂದ, ಅನಂತ ರಾಯರ ಕೈಗೆ ಸಿಕ್ಕಿದ.

೦ ೦ ೦

ಮರುದಿದ ಅನಂತ ರಾಯರು ಚಂದ್ರುವನ್ನು ಕರೆದು ಆತ್ಮೀಯವಾಗಿ ವಿಚಾರಿಸಿದರು; ಬಹಳ ಹೊತ್ತಿನ ಮೇಲೆ ಹುಡುಗ ಬಿಕ್ಕಿ ಬಿಕ್ಕಿ ಅಳುತ್ತಾ ತನ್ನ ಕತೆಯನ್ನು ಅರ್ಧಂಬರ್ಧವಾಗಿ ಹೇಳಿದ. ಅನಂತ ರಾಯರಿಗೆ ಹುಡುಗನ ಗುಣ ಬಹಳ ಹಿಡಿಸಿತು. ಅವನ ಹೃದಯಕ್ಕೆ ನೋವಿನ ಬರೆ ಬಿದ್ದಿದೆ, ಮಾತೃವ್ಯೇಮದಿಂದ ವಂಚಿತನಾಗಿದ್ದಾನೆಂದು ವಿಷಾದಿಸಿದರು. ಚಿಕ್ಕಂದಿನಲ್ಲೇ ದುರಾಚಾರವನ್ನು ವಿರೋಧಿಸುವ ಅವನ ವಿವೇಕಶಕ್ತಿಯನ್ನು ರಾಯರು ಮನದಲ್ಲೇ ಕೊಂಡಾಡಿದರು.

(ಇನ್ನೇ ಮುಂ ಸಂಚಿಕೆಯಲ್ಲಿ)

ಬ್ಯಾಂಕ್ ಖಾತೆಯನ್ನು ಯಾರು ತೆರೆಯಬಹುದು?

ಬ್ಯಾಂಕ್ ಖಾತೆ ತೆರೆಯಲು, ತಮಗೆ ಅಸಾಧ್ಯವೆನಿಸುವ ನಿರ್ಬಂಧಗಳಿವೆಯೆಂದು ಹಲವರು ಭಾವಿಸುತ್ತಾರೆ. ಇದೊಂದು ತಪ್ಪು ಭಾವನೆ. ದಿನಕೂಲಿ ಪಡೆವವನು ಕೂಡಾ ಬ್ಯಾಂಕಿನಲ್ಲಿ ಚಿಕ್ಕ ಉಳಿತಾಯ ಖಾತೆಯನ್ನು ತೆರೆಯಬಹುದು. ಇಂದಿನ ದಿನಗಳಲ್ಲಿ ಅದು ಅವಶ್ಯವೂ ಇದೆ. ಹೆಚ್ಚಿನ ಮಾಹಿತಿಗೆ ನಿಮಗೆ ಸನಿಹವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ಎಲ್ಲರಿಗೂ ವಿಶೇಷ ಪ್ರಕಾರದ ಸೌಜನ್ಯ ಸೇವೆ.

ದಿ. ಪಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ESTD. 1921 ಸ್ಥಾಪನೆ

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆಸಮೇತ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಅಮೆರಿಕೆಯ ಹೊಸ ಸೇವೆ

ಮೆಡಿಫೋನುಗಳ ಮೂಲಕ ಚಿಕಿತ್ಸೆ

ಡಾಕ್ಟರರು ಔಷಧ ಸೂಚನಾ ಸೇವೆಯೊಂದರ ಮೂಲಕ ರೋಗಿಗಳ ಪ್ರಾಣ ರಕ್ಷಣೆಗಾಗಿ ಮಹತ್ವಪೂರ್ಣ ಸಹಾಯವನ್ನು ಸಲ್ಲಿಸುವ ವ್ಯವಸ್ಥೆಯೊಂದು ಅಮೆರಿಕೆಯಲ್ಲಿದೆ. ಇದರಿಂದ, ಚಿಕಿತ್ಸೆಗೆ ಸಂಬಂಧಿಸಿದ ಸೌಕರ್ಯಗಳನ್ನು ಸುಧಾರಿಸುವಲ್ಲಿಯೂ ನೆರವು ದೊರೆತಿದೆ. ವಾತಿಂಗಟನ್ನಿನ 'ಮೆಡಿಫೋನ್ ಇನ್‌ಕಾರ್ಪರೇಟೆಡ್' ಎಂಬ ಸರಕಾರೇತರ ಕಂಪೆನಿಯೊಂದು ಟೆಲಿಫೋನ್ ಮತ್ತು ಅಂಚೆಯ ಮೂಲಕ ಚಿಕಿತ್ಸಕರಿಗೆ ೬,೦೦೦ ಔಷಧಿಗಳ ಸೂಚನೆಯನ್ನು ಅತಿ ತೀಕ್ಷ್ಣದಲ್ಲಿ ಒದಗಿಸುತ್ತದೆ.

ಈ ಹೊಸ ಔಷಧ ಸೂಚನೆಯ ಸೇವೆಯಲ್ಲಿ ೧೯ ಜನ ವೈದ್ಯರು ಹಗಲಿರುಳು ಈ ಔಷಧಿಗಳ ಪ್ರಯೋಗಗಳ ಅಧಿಕಾರವನ್ನು ಪಡೆದ ಡಾಕ್ಟರರಿಗೆ, ಅವರು ಕೇಳಿದ ಪ್ರಶ್ನೆಗಳಿಗೆ ಉತ್ತರವನ್ನು ಕೊಡುತ್ತಿರುತ್ತಾರೆ. ಇಂತಹ ಉತ್ತರ ಪಡೆಯುವವರಲ್ಲಿ ದಂತ ಚಿಕಿತ್ಸಕರೂ, ಪಶು ವೈದ್ಯರೂ ಇರುತ್ತಾರೆ.

ಈ ವರ್ಷದ ಜನವರಿಯಲ್ಲಿ ಈ ಸೂಚನಾ ಸೇವೆಯು ಉದ್ಘಾಟನೆಯಾಗುತ್ತಿರುವ ಗಳಿಗೆಯಲ್ಲಿಯೇ 'ಮೆಡಿಫೋನ್'ನ ಮೂಲಕ ಸಲಹೆ ಪಡೆದು ಮೆಕ್ಸಿಕೊ ನಗರದಲ್ಲಿ ಮೂರು ವರ್ಷದ ಮಗುವೊಂದರ ಪ್ರಾಣರಕ್ಷಣೆ ಮಾಡಿದರು.

ಈ ಹುಡುಗನ ಹೆಸರು ಅಲೆಕ್ಸಾಂಡರ್ ರೊಮೇರ್ ಎಂದು. ಇವನ ತಂದೆಯು ಅಮೆರಿಕೆಯ ನಾಗರಿಕನಿದ್ದು ಮೆಕ್ಸಿಕೋವಿನಲ್ಲಿ ನೌಕರಿ ಮಾಡುತಿದ್ದನು. ಹುಡುಗನನ್ನು ಜೇನು ನೊಣವು ಕಚ್ಚಿತ್ತು. ಇದರಿಂದ ಆತನು ವಿಪನ್ನಾವಸ್ಥೆಗೀಡಾಗಿದ್ದನು. ಡಾಕ್ಟರರು ವಿಶೇಷ ಔಷಧ ತರುವಂತೆ ಆದೇಶವಿತ್ತರು; ಆದರೆ, ಅದು ಮೆಕ್ಸಿಕೊ ನಗರದಲ್ಲಿ ಸಿಗಲಿಲ್ಲ. ಆದುದರಿಂದ ಸ್ನೂಯೋರ್ಕಿನಲ್ಲಿರುವ ತನ್ನ ಕಾರ್ಯಾಲಯಕ್ಕೆ ಫೋನ್ ಮಾಡಿದನು. ಕಾರ್ಯಾಲಯದವರು ಹಲವಾರು ಔಷಧ ತ್ರೈಗಳಲ್ಲಿ ಆದಕ್ಕಾಗಿ ಹುಡುಕಾಡಿದರು; ಮೆಡಿಕಲ್ ಸ್ಟೋರ್‌ಗಳನ್ನು ವಿಚಾರಿಸಿದರು. ಆದರೆ,ದುರ್ದೈವವಶದಿಂದ ಆಸ್ಪತ್ರೆಯ ವಾರಿಗೂ ಆ ಔಷಧದ ಪರಿಚಯವೇ ಇರಲಿಲ್ಲ.

ಕೊನೆಗೆ ನ್ಯೂಯೋರ್ಕಿನ ವೈದ್ಯನೊಬ್ಬನು ಮೆಡಿಫೋನ್ ಕಂಪೆನಿಯವರನ್ನು ಕೇಳಿದನು. ಆ ಔಷಧವನ್ನು ನಿರ್ಮಿಸುವ ಇಬ್ಬರ ಹೆಸರುಗಳನ್ನೂ ವಿಳಾಸವನ್ನು ಆ ಕೂಡಲೇ ತಿಳಿಸಿದರು. ಟೈ ಕೊನೆಗೆ ಆ ಸುದ್ದಿ ಸಿಕ್ಕಿತು. ಅದನ್ನು ಜೆಟ್ ವಿಮಾನದ ಮೂಲ ಮೆಕ್ಸಿಕೊಗೆ ಒಯ್ದರು. ಅದರ ಒಂದು ಗುಟುಕಿನಿಂದ ಹುಡುಗನು ಜೇತರಿಸಿಕೊಂಡನು.

ಮೆಡಿಫೋನಿನ ಮೂಲಕ ಕೇಳಲಾಗುವ ಪ್ರಶ್ನೆಗಳು ಈ ಬಗೆಯ ರೋಮಾಂಚಕ ಪ್ರಸಂಗಗಳಿಗೆ ಸಂಬಂಧಪಟ್ಟವೆ. ಇಲ್ಲಿರುವ ಚಿಕಿತ್ಸಕರು ತೀವ್ರಗತಿಯಿಂದ ತಮ್ಮ ಕೆಲಸವನ್ನು ನಿರ್ವಹಿಸುವಂತೆ ತರಬೇತಿಯನ್ನು ಹೊಂದಿದ್ದಾರೆ. ಇದರ ಪರಿಣಾಮವಾಗಿ ಕೆಲವೇ ಸೆಕುಂಡುಗಳಲ್ಲಿ ಅವರು ಪ್ರಶ್ನೆಗಳಿಗೆ ಉತ್ತರವನ್ನು ಕೊಡಬಲ್ಲರು.

ಅಮೆರಿಕೆಯ ಮೆಡಿಕಲ್ ಎಸೋಸಿಯೇಷನ್ನಿನ ಅಧ್ಯಕ್ಷ ಡಾ. ಲ್ಯೋನಾರ್ಡ್ ಡಬ್ಲ್ಯು ಲಾರ್ಸನ್ನರು ಮೆಡಿಫೋನಿನ ಸೇವೆಯು ಉಪಯುಕ್ತ ಔಷಧಿಗಳು ತತ್ಕಾಲ ಸುಲಭದಲ್ಲಿ ದೊರೆಯದಿರುವ ಗ್ರಾಮೀಣ ಪ್ರದೇಶಗಳಿಗೆ ಬಹಳ ಉಪಯೋಗಿಯಾಗಿದೆ" ಎಂದು ಹೇಳುತ್ತಾರೆ.

ಮೆಡಿಫೋನು ಒಂದು ವಿಶಾಲ ಸ್ವಯಂಚಾಲಿತ ಸೂಚೀ ಪ್ರಣಾಳಿಯನ್ನು ತಯಾರಿಸಿದೆ. ಅದರಲ್ಲಿ ಅಮೆರಿಕೆಯಲ್ಲಿ ಈಗ ಮಾರಲ್ಪಡುವ ಪ್ರತ್ಯೇಕ ಔಷಧಿಯ ವಿಷಯವಿರುವ ಎಂಟೆಂಗುಲದ ಒಂದು ಚೌಕ ಕಾರ್ಡು ಇದೆ. ಇದರಲ್ಲಿ ಕಡಿಮೆಯೆಂದರೆ, ೨೪ ಸೂಚನೆಗಳನ್ನು ಅಂಕಿಸಲಾಗಿದೆ. ಈ ಸೂಚನೆಗಳಲ್ಲಿ ಮದ್ದಿನ ಹೆಸರು, ಅದರಲ್ಲಿ ಸೇರಿಕೊಂಡಿರುವ ರಾಸಾಯನಿಕ ತತ್ವಗಳು, ನಿರ್ಮಾತರ ಹೆಸರು, ಪ್ರೌಢ ಮತ್ತು ಮಕ್ಕಳಿಗೆ ಕೊಡುವ ಪ್ರಮಾಣ, ಅದರ ಉಪ ಪ್ರಧಾನ ಪ್ರತಿರೋಧಕ ಔಷಧದ ಹೆಸರು ಮತ್ತು ಉಪಯೋಗಕ್ಕೆ ಸಂಬಂಧಿಸಿದ ಸಂಕ್ಷಿಪ್ತ ವಿವರಣೆಯು ದೊರೆಯುತ್ತವೆ.

ಅಧ್ಯಕ್ಷ ಕೆನೆಡಿಯವರು ತಮ್ಮ ವಿದೇಶಾಂಗ ಸಲಹೆಗಾರರಾದ ರಾಜ್ಯಾಂಗ ಕಾರ್ಯದರ್ಶಿ ಡೀನ್ ರಸ್ಕರೊಡನೆ ಸಂಧಾಷಿಸುತಿದ್ದಾರೆ.

ಮೆಡಿಫೋನ್ ವೈದ್ಯನೊಬ್ಬನು ಒಂದು ಮದ್ದಿನ ವಿಷಯದಲ್ಲಿ ವಿವರಣೆ ಕೇಳಿದಾಗ, ಅಲ್ಲಿರುವ ಚಿಕಿತ್ಸಕನು ಒಂದು ಗುಬ್ಬಿಯೊತ್ತುತ್ತಾನೆ. ಸರಿಯಾದ ಕಾರ್ಡನ್ನು ಪಡೆಯುವುದಕ್ಕೆ ಕ್ಯೋಸ್ಕರ ತತ್ಸಂಬಂಧಿ ಸೂಚಿಯನ್ನು ಹೊಂದಿದ್ದಾನೆ. ಕೇಳುವವನಿಗೆ ಹೇಳುವ ಮಾತುಗಳೆಲ್ಲವೂ ಟೇಪ್ ರೆಕಾರ್ಡ್ ಆಗುತ್ತದೆ; ಇಪ್ಪತ್ತನಾಲ್ಕು ತಾಸುಗಳೊಗೆ ಅದರ ರಿಪೋರ್ಟನ್ನು ಅಂಚೆಯ ಮೂಲಕ ಕಳಿಸಲಾಗುತ್ತದೆ.

ನ್ಯೂಯೋರ್ಕ್ ನಗರದ ಡಾ| ಕೊಟೇಜ್ ಎನ್ನೊ ಜೂನಿಯರರು ಮೆಡಿಫೋನನ್ನು ಸ್ಥಾಪಿಸಿದರು. ಅವರು ವೈದ್ಯರಾಗಿದ್ದು ದ್ವಿತೀಯ ಜಾಗತಿಕ ಸಂಗ್ರಾಮದ ವೇಳೆ ಅಮೆರಿಕೆಯ ವಾಯು ಸೇನೆಯಲ್ಲಿ ಸರ್ಜನರಾಗಿ ದುಡಿದಿದ್ದರು. ಸಹಾಯಕ ನಿರ್ದೇಶಕರಾಗಿ ಡಾ| ಜಾನ್ಸೀ ಡಿ. ಲೀಕ್ ಇದ್ದಾರೆ. ಮೆಡಿಫೋನ್ ಒಂದು ಅವಶ್ಯಕ ಸೇವೆಯೆಂಬುದನ್ನು ಪ್ರಕಾಶಪಡಿಸಿದ ಘಟನೆಯೊಂದನ್ನವರು ಉಲ್ಲೇಖಿಸಿದ್ದಾರೆ. ಈ ಸೇವೆಯು ವ್ಯಾರಂಭವಾಗುವುದಕ್ಕೆ ಕೆಲವು ದಿನಗಳ ಪೂರ್ವದಲ್ಲಿ ಓಹಿಯೋ ವಿಶ್ವವಿದ್ಯಾಲಯದ ಒಬ್ಬ ಪ್ರಾಧ್ಯಾಪಕನು ಒಂದು ಭೋಜನದ ಸಂದರ್ಭದಲ್ಲಿ ಅಕಸ್ಮಾತ್ತಾಗಿ ಮೂರ್ಛೆತನಾದನು. ಅವನಲ್ಲಿ ಇನ್‌ಫ್ಲುಯೆಂಜಾದ ಲಕ್ಷಣಗಳು ಕಂಡು ಬಂದುವು. ಆತನ ಪತ್ನಿಯು ಒಬ್ಬ ಚಿಕಿತ್ಸಕನೊಡನೆ ಫೋನಿನಲ್ಲಿ ಪ್ರೊಫೆಸರನು ಫ್ರೈನಿನನ್ನು ಬಹಳವಾಗಿ ಉಪಯೋಗಿಸಿದ್ದನೆಂದು ತಿಳಿಸಿದಳು.

ಚಿಕಿತ್ಸಾ ಸಂಬಂಧಿ ಪತ್ರಿಕೆಗಳಲ್ಲಿ ಶರೀರದಿಂದ ಈ ಮದ್ದನ್ನು ಹೊರಗೆತ್ತೆಗೆಯುವ ಹೊಸಕ್ರಮವೊಂದು ಪ್ರಕಟವಾಗಿತ್ತು. ಆದರೆ, ಇದರ ತಿಳುವಳಿಕೆ ಹೆಚ್ಚಿನವರಿಗೆ ಇರಲಿಲ್ಲ. ಮೆಡಿಫೋನ್ ಆಗ ಇರುತಿದ್ದರೆ ಚಿಕಿತ್ಸಕನು ಅದರ ಸಂಪರ್ಕ ಬೆಳೆಸುತಿದ್ದ. ಆದರೂ ಸದೈವದಿಂದ ಆ ಪ್ರೊಫೆಸರನು ಬದುಕಿದನು!

ಉತ್ತರ ಕರೊಲೀನದಲ್ಲಿ ಗಾಯಗೊಂಡ ಹುಡುಗನೊಬ್ಬನನ್ನು ಮೆಡಿಫೋನ್ ಬದುಕಿಸಿತು. ಒಂದು ರಾತ್ರಿ ಅವನ ಕಣ್ಣುಗಳಲ್ಲಿ ಆ್ಯಂಟಿಸೈಟ್ರಿಕ್ ಬಿತ್ತು. ಆತನ ಚಿಕಿತ್ಸಕರು ರಾತ್ರೆ ೮ ತಾಸಿಗೆ ಮೆಡಿಫೋನಿನೊಂದಿಗೆ ಸಂಪರ್ಕ ಬೆಳೆಸಿದರು. ಕಣ್ಣುಗಳನ್ನು ಸರಿಯಾಗಿಸಲು ನಿರೋಧಕ ಔಷಧ ಯಾವುದು ಎಂದವರು ಕೇಳಿದರು ೮-೩೦ಕ್ಕೆ ಮೆಡಿಫೋನು ಅವರಿಗೆ ಸಲಹೆಯಿತ್ತಿತು. ತದನುಸಾರ ಹುಡುಗನನ್ನು ಉಪಚರಿಸಲಾಯಿತು; ಅವನ ನೇತ್ರಗಳು ಸರಿಯಾದುವು.

ಇನ್ನೊಂದು ರಾತ್ರಿ ವೆರ್ಜಾಡ್ಯದ ಒಬ್ಬ ವೈದ್ಯನು 'ಎಲುಬು ತಿರ್ಬುದವ ರೋಗಿಗೆ ವಿಶೇಷ ರೋಗಾಣು ನಾಶಕ ಔಷಧಿಯನ್ನು ಕೊಡಲೇಬೇಕೇ' ಎಂದು ಕೇಳಿದನು. ರೋಗಿಯ ರಕ್ತದಲ್ಲಿ ಗಾಮಾ ಗ್ಲೊಬುಲಿನ್ ಎಂಬ ಒಂದು ವಿಶೇಷ ತತ್ವವಿರುತ್ತದೆ. ಈ ತತ್ವದ ಅಂಶವನ್ನು ಕಡಿಮೆ ಮಾಡಿದರೆ ಮಾತ್ರ ರೋಗಿಯು ತುಸು ಗು

(೦೨ನೇ ಪುಟ ನೋಡಿ)

ದಿ ಕರ್ನಾಟಕ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಡೊಂಗರಕೇರಿ, ಮಂಗಳೂರು-3

ಪರಿಷ್ಕರಿಸಿದ ಮತ್ತು ಹೆಚ್ಚಿಸಿದ ತೇವಣಾತಿ ಬಡ್ಡಿ ದರಗಳು:

ಕಾಯಂ ತೇವಣಾತಿಗಳು:			ರೂ. ನ ಪೈ ಸೆ
ಒಂದರಿಂದ ಮೂರು ತಿಂಗಳು ವರೆಗೆ	ವಾರ್ಷಿಕ	ಸೇಕಡಾ	4-50
ಆರರಿಂದ ಹನ್ನೆರಡು ತಿಂಗಳು ವರೆಗೆ	,,	,,	4-75
ಹದಿಮೂರರಿಂದ ಇಪ್ಪತ್ತನಾಲ್ಕು ತಿಂಗಳು ವರೆಗೆ	,,	,,	5-00
ಇಪ್ಪತ್ತೈದರಿಂದ ಮೂವತ್ತಾರು ತಿಂಗಳು ವರೆಗೆ	,,	,,	5-25
ನಾಲ್ವತ್ತೆಂಟು ತಿಂಗಳು ಮತ್ತು ಹೆಚ್ಚಿಗೆ	,,	,,	5-50
ಸೇವಿಂಗ್ಸ್ ಬೇಂಕ್ ತೇವಣಾತಿಗಳು	,,	,,	3-25

ನಿಮ್ಮ

ದಿನನಿತ್ಯದ ಉಳಿತಾಯವನ್ನು | ಮಾಸಿಕ ಉಳಿತಾಯವನ್ನು

ಹಣ ಡಿಪೋಸಿಟುಗಳಲ್ಲಿ | ಕ್ಯುಮುಲೇಟಿವ್ ಡಿಪೋಸಿಟುಗಳಲ್ಲಿ

ವಿನಿಯೋಗಿಸಿರಿ.

THE KARNATAKA BANK LIMITED

3—7—1962



ಭಾರತೀಯ ಸಂಸ್ಕೃತಿಗೆ

ಆಂಧ್ರದ ಗಣನೀಯ ಕೊಡುಗೆ

ಶ್ರೀ ವಿ. ಆರ್. ನಾರ್ಲಾ.

ತೆಲುಗು ಭಾಷೆ ಮತ್ತು ಸಾಹಿತ್ಯವು ಭಾರತದ ವಿಚಾರಧಾರೆ ಮತ್ತು ಸಾಂಸ್ಕೃತಿಕ ಬೆಳವಣಿಗೆಗೆ ಸಲ್ಲಿಸಿದ ಕಾಣಿಕೆಯು ವಿಸುಲವೂ ವೈವಿಧ್ಯಮಯವೂ ಆಗಿದೆ. ಆದರೆ ಎಷ್ಟು ಜನರು ಅದನ್ನು ಬಲ್ಲರು? ಹೊರದೇಶಗಳಲ್ಲಿರುವವರಿಗೆ, ಕೆಲವು ಭಾರತೀಯ ಶಾಸ್ತ್ರಜ್ಞರನ್ನು ಮತ್ತು ತತ್ಸಂಬಂಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ವಿದ್ವಾಂಸರನ್ನು ಬಿಟ್ಟರೆ ಬಹುಜನರಿಗೆ ತೆಲುಗು ಭಾಷೆಯು ಅಸ್ತಿತ್ವದಲ್ಲಿರುವುದೂ ಕೂಡ ತಿಳಿದಿಲ್ಲ.

ಭಾರತವು ನೂರಾರು ವಿಲಕ್ಷಣ ಭಾಷೆಗಳನ್ನು ಮಾತನಾಡುವ ಜನರಿಂದ ಕೂಡಿದ ಒಂದು ಗಲಿಬಿಲಿಯ ಗೋಪುರ ಎಂದು ಬಹುತೇಕ ವಿದೇಶಿಯರು ಈಗಲೂ ನಂಬಿದ್ದಾರೆ. ಆದ್ದರಿಂದ ಭಾರತೀಯ ಭಾಷೆಗಳು ಹಾಗೂ ಅವುಗಳ ಪರಸ್ಪರ ಪ್ರಾಮುಖ್ಯದವಿಷಯದಲ್ಲಿ ವಿದೇಶೀಯರು ತಳೆದ ಅಜ್ಞಾನಕ್ಕೆ ಅಷ್ಟೊಂದು ಗಮನ ಕೊಡಬೇಕಾದ ಅವಶ್ಯಕತೆಯಿಲ್ಲದಿರಬಹುದು. ಆದರೆ, ನಮ್ಮ ದೇಶದಲ್ಲಿ ಇನ್ನಿತರ ಕಡೆಗಳಲ್ಲಿ ವಾಸಿಸುವಜನರು ನಿದೇಶೀಯರಿಗಿಂತ ಈ ವಿಷಯದಲ್ಲಿ ಹೆಚ್ಚು ತಿಳಿದುಕೊಂಡಿದ್ದಾರೆಯೆ ಎಂದು ಕೇಳಿದರೆ, ದುರ್ದೈವವಶಾತ್ ಇಲ್ಲವೆಂದೇ ಹೇಳಬೇಕಾಗಿದೆ. ವಿಂಧ್ಯ ಪರ್ವತದ ದಕ್ಷಿಣದಲ್ಲಿ ವಾಸಿಸುವ ಜನರೆಲ್ಲರೂ ಮದ್ರಾಸಿಗಳಲ್ಲ. ಎಲ್ಲಾ ಮದ್ರಾಸಿಗಳು, ಒಂದೇ ಭಾಷೆ ಮಾತನಾಡುತ್ತಿಲ್ಲವೆಂಬ ವಿಷಯ ಈಗ ಬಹುಮಂದಿ ಭಾರತೀಯರಿಗೆ ತಿಳಿಯತೊಡಗಿದೆ.

. ತೆಲುಗು ಭಾಷೆಯ ಉಗಮ, ಅದರ ಬೆಳವಣಿಗೆ ತೆಲುಗು ಸಾಹಿತ್ಯದ ಉದಯ ಮತ್ತು ಏಳಿಗೆ ಹಾಗೂ ಸುಪ್ರಸಿದ್ಧ ತೆಲುಗು ಸಾಹಿತಿಗಳು ರಾಷ್ಟ್ರೀಯ ವಿಚಾರಧಾರೆ, ಸಾಂಸ್ಕೃತಿಕ ಪರಂಪರೆಗೆ ಸಲ್ಲಿಸಿದ ಸೇವೆಯ ಸ್ವರೂಪ ಮತ್ತು ಮಹತ್ವವನ್ನು ಕುರಿತ ವಿಷಯಗಳು ಸಾಕಷ್ಟು ಸ್ಪಷ್ಟವಾಗಿ ತೋರುತ್ತಿಲ್ಲ. ಆದಾಗ್ಯೂ ತೆಲುಗು ಭಾಷೆಯು ಒಂದು ಕಾಲದಲ್ಲಿ ಅಂತಾರಾಷ್ಟ್ರೀಯ ಭಾಷೆಯ ಸ್ಥಾನ ಹಾಗೂ ಗೌರವವನ್ನು ಸಂಪಾದಿಸಿದ್ದಿತು. ತೆಲುಗು ಭಾಷೆ ಅಂತಾರಾಷ್ಟ್ರೀಯ ಭಾಷೆಯೂಗುವ ಗೌರವವನ್ನು ಯಾವಾಗ ಪಡೆಯಿತೆಂಬುದನ್ನು ನಿರ್ದಿಷ್ಟವಾಗಿ ಹೇಳಲು ಸಾಧ್ಯವಿಲ್ಲವಾದರೂ, ಅದು ಹೊರ ದೇಶಗಳಿಗೂ ಪಸರಿಸಿ, ಸಾಕಷ್ಟು ಪ್ರಭಾವವನ್ನು ಬೀರಿತೆಂದು ಹೇಳಬಹುದು. ವಿಖ್ಯಾತ ವಿದ್ವಾಂಸರೂ ಶಿಕ್ಷಣವೇತ್ತರೂ ಆದ ದಿ|| ಶ್ರೀ ಸಿ. ಆರ್. ರೆಡ್ಡಿ ಅವರು ತೆಲುಗು ಭಾಷೆಯ ಬೆಳವಣಿಗೆಯನ್ನು ಕುರಿತು ತಮ್ಮ ಅಭಿಪ್ರಾಯ ವ್ಯಕ್ತಪಡಿಸುತ್ತ "ತೆಲುಗು ಭಾಷೆಯು, ಬರ್ಮಾ ದೇಶದ ಪೂರ್ವ ಮತ್ತು ದಕ್ಷಿಣ ದಿಕ್ಕಿನಲ್ಲಿರುವ ದ್ವೀಪಗಳ ಮುಖಾಂತರ ಫಿಲಿಪೈನ್ಸ್‌ದ್ವೀಪದ ವರೆಗೂ ಪಸರಿಸಿತು," ಎಂದು ಹೇಳಿದ್ದಾರೆ. ಆಂಧ್ರ ಪ್ರಶದಿಂದ ಹೊರ ನಾಡುಗಳಿಗೆ ವಲಸೆ ಹೋಗುವವರಿಂದ ಈ ಭಾಷೆಯ ಪ್ರಸಾರ ಹೊರ ದೇಶಗಳಲ್ಲಿ ಆಯಿತು. ಆಂಧ್ರದ ವಲಸೆಗಾರರು ಭೋರ್ಗರೆಯುವ ಸಾಗರಗಳಲ್ಲಿಯೂ ಎದೆಗುಂದದೆ, ದೋಣಿಗಳನ್ನು ನಡೆಸುತ್ತಿದ್ದರು. ತೆಲುಗು ವಲಸೆಗಾರರ ಅದಮನೀಯ ಸಾಹಸ ಮತ್ತು ಧೈರ್ಯಗಳ ಪ್ರತೀಕವಾಗಿ ಫಿಲಿಪೈನ್‌ನಲ್ಲಿ "ತೆಗಲಾಗ್" ಎಂಬ ಸಮಾಜವೊಂದು ಈಗಲೂ ಅಸ್ತಿತ್ವದಲ್ಲಿರುವುದು ಕಂಡುಬಂದಿದೆ. ತೆಗಲಾಗ್ ಜನರು ಪಿಲಿಪೈನ್ಸ್ ದ್ವೀಪದ ಜನಸಂಖ್ಯೆಯಲ್ಲಿ ಬಹು ಭಾಗವನ್ನು ಆವರಿಸಿದ್ದಾರೆ. 'ತೆಗಲಾಗ್' ಎಂಬ ಶಬ್ದವನ್ನು ತೆಲುಗು ಅಥವಾ ತೆಲಗ ಎಂಬುದರಿಂದ ಪಡೆದಿರಬಹುದೆಂದು ಊಹಿಗೂ ಅವಕಾಶವಿದೆ. ಫಿಲಿಪೈನ್ಸ್ ಜನರ ಭಾಷೆಯಲ್ಲಿ ತೆಲುಗು ಶಬ್ದಗಳು ಹೆಚ್ಚು ಬಳಕೆಯಾಗುತ್ತಿವೆಯೆಂಬ ಸಂಗತಿಯು ಇನ್ನೂ ಹೆಚ್ಚು ಮಹತ್ವದ್ದಾಗಿದೆ.

ಕ್ರೈಸ್ತ ಧರ್ಮಗುರುಗಳೊಬ್ಬರು ಫಿಲಿಪೈನ್ಸ್ ಭಾಷೆಯಲ್ಲಿ ಬಳಕೆಯಾಗುರುವ ತೆಲುಗು ಮತ್ತು ಸಂಸ್ಕೃತ ಭಾಷೆಯ ಶಬ್ದಗಳನ್ನು ಕ್ರೋಢೀಕರಿಸಿ ಶಬ್ದಕೋಶವೊಂದನ್ನು ತಯಾರಿಸಿದ್ದರು. ತೆಲುಗು ಭಾಷೆ ಮತ್ತು ಸಾಹಿತ್ಯದ ಅಭ್ಯುದಯವನ್ನು ಕುರಿತು ನಮಗೆ ಅವಶ್ಯಕವಾದ ವಿವರಗಳನ್ನು ನೀಡಿದ ದಿ|| ಶ್ರೀ ಸಿ. ಆರ್. ರೆಡ್ಡಿಯವರ ಬಳಿ ಈ ಶಬ್ದಕೋಶವಿದ್ದಿತು. ತಮ್ಮ ಸ್ವಂತ ಪುಸ್ತಕ ಭಂಡಾರದಲ್ಲಿದ್ದ ಈ ಶಬ್ದಕೋಶವು ಕಳವಾಗಿ ಹೋಗಿದ್ದರಿಂದ ದಿ|| ಶ್ರೀ ಸಿ. ಆರ್. ರೆಡ್ಡಿಯವರು ಬಹಳ ವಿಷಾದ ವ್ಯಕ್ತಪಡಿಸಿದರು. ಈ ಶಬ್ದಕೋಶದ ಒಂದು ಪ್ರತಿಯನ್ನು ಪತ್ತೆ ಹಚ್ಚಿ, ಅದನ್ನು ಮನಃ ಮುದ್ರಣ ಮಾಡುವ ಪ್ರಯತ್ನಗಳೂ ನಡೆದಿವೆ. ಆಂಧ್ರ ಪ್ರದೇಶ ಸಾಹಿತ್ಯ ಅಕಾಡೆಮಿಯು ಈ ವಿಷಯದಲ್ಲಿ ಹೆಚ್ಚು ಆಸಕ್ತಿ ವಹಿಸಬೇಕು. ಆಂಧ್ರ ಪ್ರದೇಶ ಸರ್ಕಾರವಾದರೂ ಕೂಡ, ಫಿಲಿಪೈನ್ಸ್ ಮತ್ತು ತೆಲುಗು ಭಾಷೆಗಳ ನಡುವಿನ ನಿಕಟ ಸಂಬಂಧವನ್ನು ಕುರಿತು ಫಿಲಿಪೈನ್ಸ್ ದ್ವೀಪದಲ್ಲಿ ಸಂಶೋಧನೆ ನಡೆಸಲು ತಜ್ಞರ ತಂಡವೊಂದನ್ನು ಕಳುಹಿಸಲು ಸಾಧ್ಯವಾಗುವಂತೆ ಸಾಹಿತ್ಯ ಅಕಾಡೆಮಿಗೆ ಧನ ಸಹಾಯ ನೀಡಬೇಕೆಂದೂ ಸೂಚಿಸುತ್ತೇನೆ.

ತೆಲುಗು ಭಾಷೆಯು ಅಂತಾರಾಷ್ಟ್ರೀಯ ಮಹತ್ವ ಪಡೆದ ಭಾಷೆಯಾಗಿದೆ ಎಂಬ ವಾದವನ್ನು ಸಮರ್ಥಿಸುವ ಭರದಲ್ಲಿ ಅತಿಶಯೋಕ್ತಿಯಾಗಿರಲೂ ಬಹುದು. ತೆಲುಗು ಅಂತಾರಾಷ್ಟ್ರೀಯ ಭಾಷೆಯಾಗಿತ್ತೋ ಇಲ್ಲವೋ ಎಂಬ ಬಗೆಗೆ ವಾದ ವಿವಾದವಿದ್ದರೂ ನಮ್ಮ ಸರ್ವ ಸಾಮಾನ್ಯವಾದ ರಾಷ್ಟ್ರೀಯ ಪರಂಪರೆಗೆ ಅದು ಸಲ್ಲಿಸಿದ ಸೇವೆಯ ವ್ಯಾಪ್ತಿಯನ್ನು ನಿಷ್ಕಲ್ಮಷ ಬುದ್ಧಿಯುಳ್ಳ ಯಾವ ವ್ಯಕ್ತಿಯೂ ಕಡೆಗಣಿಸಲಾರ. ದ್ರಾವಿಡ ಭಾಷೆಗಳೆಲ್ಲವೂ ಸಂಸ್ಕೃತ ಭಾಷೆಯಿಂದ ಸಾಕಷ್ಟು ಶಬ್ದಗಳನ್ನು ಎರವಲು ಪಡೆದಿವೆ ಎಂಬುದು ಎಲ್ಲರಿಗೂ ವಿದಿತವಾದ ಸಂಗತಿಯೂಗಿದೆ. ಆದರೆ, ಇದು ಏಕ ಮುಖವಾದುದಲ್ಲವೆಂಬುದು ಅನೇಕರಿಗೆ ಗೊತ್ತಿಲ್ಲ ವಿಂಧ್ಯ ಪರ್ವತದ ಉತ್ತರದಲ್ಲಿ ಪ್ರಚಲಿತವಾಗಿದ್ದ-ಸಂಸ್ಕೃತ ಮತ್ತು ಅದರಿಂದ ಉತ್ಪತ್ತಿಯಾದ—ಆರ್ಯ ಭಾಷೆಗಳಲ್ಲಿಯೂ ದ್ರಾವಿಡ ಮೂಲದ ಅನೇಕ ಶಬ್ದಗಳು ಕಂಡುಬರುತ್ತವೆ.

ನಾನು ಭಾಷಾ ಶಾಸ್ತ್ರದ ವಿದ್ಯಾರ್ಥಿಯಲ್ಲವಾದ್ದರಿಂದ, ಸಂಸ್ಕೃತ ಭಾಷೆಯ "ಶಾರ್ದೂಲಂ" ಎಂಬ ಶಬ್ದವು ತೆಲುಗು ಭಾಷೆಯ "ಚಾರಲಾ ಮೇಕ" ಎಂಬ ಶಬ್ದದ ರೂಪವಾಗಿದೆಯೆಂದು ಅಷ್ಟೊಂದು ಖಚಿತವಾಗಿ ಹೇಳಲಾರೆ. ಆದರೂ ಈ ವಾದವನ್ನು ಪುಷ್ಟೀಕರಿಸಲು ಅಂತಾರಾಷ್ಟ್ರೀಯ ಖ್ಯಾತಭಾಷಾ ಶಾಸ್ತ್ರಜ್ಞರೂ ಸಂಸ್ಕೃತ ಅಯೋಗದ ಅಧ್ಯಕ್ಷರೂ ಆದ ಡಾ| ಸುನೀತಿಕುಮಾರ್ ಚಟರ್ಜಿ ಅವರು ನೀಡಿದ ಆಧಾರಗಳೂ ನನ್ನ ಬಳಿಯಲ್ಲಿವೆ. ಕೆಲವು ವರ್ಷಗಳ ಹಿಂದೆ ಕಲ್ಕತ್ತಾದಲ್ಲಿ ನನಗೆ ಡಾ| ಸುನೀತಿಕುಮಾರ್ ಚಟರ್ಜಿ ಅವರನ್ನು ಭೇಟಿಯಾಗುವ ಸುಯೋಗ ಒದಗಿತ್ತು. ಆಗ ಡಾ| ಚಟರ್ಜಿಯವರು ನನ್ನೊಂದಿಗೆ ನಡೆಸಿದ ದೀರ್ಘವಾದ ವಿದ್ವತ್‌ಪೂರ್ಣ ಸಂಭಾಷಣೆಯಲ್ಲಿ ಸಂಸ್ಕೃತ ಭಾಷೆಯು, ತಮಿಳು ಮತ್ತು ತೆಲುಗು ಭಾಷೆಗಳಿಂದ ತೆಗೆದುಕೊಂಡಿರುವ ಶಬ್ದಗಳ ದೊಡ್ಡ ಪಟ್ಟಿಯೊಂದನ್ನೇ ಹೊರಗೆಡವಿದರು. ಆಗ ನಾನು ಟಿಪ್ಪಣಿ ಮಾಡಿಕೊಂಡವುಗಳಲ್ಲಿ ಕೆಲವು ಕಳೆದುಹೋದುದಕ್ಕಾಗಿ, ಸಂಸ್ಕೃತವು ತೆಗೆದುಕೊಂಡ ಶಬ್ದಗಳ ಸಂಪೂರ್ಣ ಪಟ್ಟಿಯನ್ನು ಕೊಡಲು ನನಗೆ ಸಾಧ್ಯವಾಗುತ್ತಿಲ್ಲವಾದರೂ ಸಂಸ್ಕೃತದಲ್ಲಿನ "ತಂತ್ರಿಣೆ" ಎಂಬ ಶಬ್ದವು ತೆಲುಗು ಭಾಷೆಯ "ಚಿಂತಾ ಎಂಬ ಶಬ್ದದ ರೂಪವೆಂದು ಅವರು ಹೇಳುತ್ತಿದ್ದುದು ನನಗೆ ಸ್ಪಷ್ಟವಾಗಿ ನೆನಪಿದೆ.

ಅತ್ತೆ, ಅಕ್ಕಿಯ ಹಿಟ್ಟು ಮತ್ತು ಕೈಚೀಲ ಈ ಅರ್ಥ ಕೊಡುವ ತೆಲುಗು ಶಬ್ದಗಳಿಂದ ಅತ್ತ, ಪಿಂಡಿ ಮತ್ತು ಬೊಕ್ಕಣಂ ಎಂಬ ಶಬ್ದಗಳನ್ನು ಸಂಸ್ಕೃತ ಭಾಷೆಯಲ್ಲಿಯೇ ಅವುಗಳ ಮೂಲ ಸ್ವರೂಪದಲ್ಲಿ ಯಾವ ಬದಲಾವಣೆ ಮಾಡದೆಯೇ ತೆಗೆದುಕೊಳ್ಳಲಾಗಿದೆ ಎಂದು, ನನ್ನ ಸ್ನೇಹಿತರೂ ಸಹೋದ್ಯೋಗಿಗಳೂ ಆದ ಶ್ರೀ ವಿದ್ವಾನ್ ವಿಶ್ವಂ ಅವರು ಅಭಿಪ್ರಾಯಪಟ್ಟಿದ್ದಾರೆ. ಸಂಸ್ಕೃತ ಭಾಷೆಯಲ್ಲಿನ ಮಣೇ, ಪಡ್ಡೀ, ಮತ್ತು ಕುಂದಂ ಈ ಶಬ್ದಗಳು ತೆಲುಗು ಭಾಷೆಯಿಂದ ತೆಗೆದುಕೊಂಡ ಶಬ್ದಗಳಾಗಿವೆ. ಈ 'ಮನಿಕಾ', 'ಪಡ್ಡ' ಮತ್ತು 'ಕುಂದ' ಶಬ್ದಗಳು ಸಂಸ್ಕೃತವು ಪರಿಗ್ರಹಿಸಿದ ಶಬ್ದಗಳ ಮೂಲರೂಪಗಳಾಗಿವೆ ಎಂದೂ ಅವರ ವಾದವಾಗಿದೆ. ಇದರಂತೆ ಪ್ರಾಕೃತ ಭಾಷೆಯೂ ಕೂಡ ಸ್ವಲ್ಪ ಮಟ್ಟಿಗೆ ತೆಲುಗು ಶಬ್ದಗಳನ್ನು ತೆಗೆದುಕೊಂಡು ಬಳಸಿದೆ. 'ಪಡಿ' ಮತ್ತು 'ಪೆಡಟ್ಟು' ಈ ಶಬ್ದಗಳು ಪ್ರಾಕೃತ ಭಾಷೆಯಲ್ಲಿ ಮುಖ್ಯವಾಗಿ ಬಳಕೆಯಲ್ಲಿರುವ ತೆಲುಗು ಶಬ್ದಗಳಾಗಿವೆ.

ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳಿಗೆ ತೆಲುಗು ಭಾಷೆಯು ಸಲ್ಲಿಸಿದ ಕಾಣಿಕೆಯು ವ್ಯಾಪ್ತಿಯಲ್ಲಿ ಸೀಮಿತಗೊಂಡಿದ್ದರೂ ಆಂಧ್ರ ಕವಿಗಳು ಮತ್ತು ಪಂಡಿತರು, ಸಂಸ್ಕೃತ ಮತ್ತು ಪ್ರಾಕೃತ ಭಾಷೆಗಳಿಗೆ ಸಲ್ಲಿಸಿದ ಸೇವೆಯು ಅಪಾರವಾಗಿದೆ. ಪ್ರಸಿದ್ಧ ವಾಗ್ಗೇಯಕಾರರಾದ ಮಲ್ಲಿನಾಥ, ಕಟಾಯಿವೇಮ, ರಾವ್ ಸಿಂಗನ ಮತ್ತು ಜಗನ್ನಾಥ ಪಂಡಿತರು ಇವರಿಗೆ ಉಪಕೃತಂಗಾರಿದ ಸಂಸ್ಕೃತ ಸಾಹಿತ್ಯ ವಿದ್ಯಾರ್ಥಿಗಳು ಯಾರಿದ್ದಾರೆ? ವಿದ್ಯಾನಾಥನು ಬರೆದ 'ಪ್ರತಾಪ ರುದ್ರೀಯಂ' ಅಥವಾ ಗುಣಾಢ್ಯನ 'ಬೃಹತ್ ಕಥಾ' ಗ್ರಂಥಗಳನ್ನು ಓದಿ ಅರಿಂದ ಮನಸೋಲದವರಾರಿದ್ದಾರೆ? ಇನ್ನು ಪ್ರಾಕೃತ ಭಾಷೆಯ ಬಗೆಗೆ ಹೇಳುವುದಾದರೆ, ಹಾಲ ದೊರೆಯು ಒಬ್ಬ ವಿಖ್ಯಾತಲೇಖಕನಲ್ಲವೆ? ಆತನು ಬರೆದ 'ಗಥಾ ಸಪ್ತಶತಿ' ಎಂಬ ೭೦೦ ಪದ್ಯಗಳನ್ನೊಳಗೊಂಡ ಕವನ ಸಂಕಲನವು ಸರಳವೂ ಸುಂದರವೂ ಆಗಿದೆ. ಪ್ರತಿಯೊಂದು ಕವನವೂ ಹಾಸ್ಯದ ಮೊನೆ ಹಾಗೂ ಚುಚ್ಚು ಪರಿಹಾಸ್ಯಗಳನ್ನೊಳಗೊಂಡಿದ್ದು, ಅತ್ಯುತ್ತಮವೆನ್ನಿಸಿದೆ. ತೆಲುಗು ಭಾಷೆಯ ವ್ಯಾಪ್ತಿಯನ್ನು ವಿವರ

(೯ನೇ ಪುಟ ನೋಡಿರಿ)

ಹಾರ್ಮೋನಿಯಮ್ ಕಲಿಯುವವರಿಗೆ
ಅತ್ಯುತ್ತಮ ಸಂಗೀತ ಪುಸ್ತಕ—
ಶ್ರೀ ಎ. ರಾಮಪ್ಪ ಅವರ
ಹಾರ್ಮೋನಿಯಮ್
ಬೋಧನ ಕ್ರಮ
ಪರಿಷ್ಕರಿಸಲ್ಪಟ್ಟ ನಾಲ್ಕನೆಯ ಮುದ್ರಣ.
ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ: ರೂ. 2—0—0.
ಒಂದು ಪ್ರತಿ ಬೇಕಾದವರು ರೂ 2-50 ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.

"ಸೇವೆಯೇ ಮೊದಲು; ಸೇವೆಯಲ್ಲಿ ಮೊದಲು"
ಈ ಉದಾತ್ತ ಧ್ಯೇಯ ಸಾಧನೆಗಾಗಿಯೇ
— ಕೊರ್ಪೊರೇಶನ್ ಬೇಂಕ್ —
ನಿಮ್ಮ ಹಣಕ್ಕೆ
ಅತ್ಯುತ್ತಮ ಭದ್ರತೆಯೊಂದಿಗೆ ಅತ್ಯಧಿಕ ಬಡ್ಡಿ ಕೊಡುತ್ತಿದೆ.
ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ರಿಜಿಸ್ಟರ್ಡ್ ಆಫೀಸು: ಉಡುಪಿ)
ಆಡಳಿತ ಆಫೀಸು: ಮಂಗಳೂರು.

ಸುಖ ಜೀವನಕ್ಕೆ

ಚಿಂತೆಯಿಂದ ಯಾವಾಗಲೂ ದೂರವಿರಿ

ಅಶಾಂತಮಯವಾದ ಇಂದಿನ ದಿನಗಳಲ್ಲಿ ನಾಳೆ ಯೇನಾದೀತು ಎಂದು ಯಾರಾದರೂ ಕೇಳಿದರೆ, ಅದಕ್ಕೆ ಸಮರ್ಪಕವಾದ ಉತ್ತರ ದೊರೆಯದು. ಮಾತ್ರವಲ್ಲ ನಾಳೆಯ ಬಗ್ಗೆ ಹೆಚ್ಚು ಚಿಂತೆ ವಹಿಸುವುದಾದರೂ ನಿರುಪಯುಕ್ತ ಉಮರ ಖಯಾಮನು ಹೇಳಿಲ್ಲವೆ—ನಿನ್ನೆ ಸತ್ತಿದೆ: ನಾಳೆ ಹುಟ್ಟಿಲ್ಲ ಎಂದು? ಆದುದರಿಂದಲೇ ಇಂದಿನ ದಿನ ಸುದಿನ; ಇಂದಿನ ಒಗ್ಗೆ ಮಾತ್ರ, ನಾವು ವಿಶೇಷ ಎಚ್ಚರಿಕೆಯಿಂದ ಮುಂದಡಿಯಿಡಬೇಕು. ನಾವು ಜೀವಂತರಿದ್ದೇವೆ, ಆರೋಗ್ಯವಂತರಾಗಿದ್ದೇವೆ ಸಮೃದ್ಧರೂ ಆಗಿದ್ದೇವೆ ಎಂಬ ಸುಕಲ್ಪನೆಯನ್ನು ನಾವು ಸದಾ ಮೂಡಿಟ್ಟುಕೊಳ್ಳಬೇಕು. ಇದಕ್ಕಾಗಿ ಪಡಬೇಕಾದ ಯಥಾಯೋಗ್ಯ ಪರಿಶ್ರಮ ಪಟ್ಟು ಭೂತ ಭವಿಷ್ಯಗಳನ್ನು ದೂರಕ್ಕೆಸೆದು ವರ್ತಮಾನ ಕಾಲದಲ್ಲಿ ಸುಖಿಯೆ ನಿಸುವುದು ಸಾಧ್ಯವೆಂಬುದನ್ನು ಅನುಭವ ಮಾಡಿಕೊಳ್ಳಬೇಕು.

ಚಿಂತೆ! ಚಿಂತೆ!! ಚಿಂತೆ!!! ಯಾರನ್ನು ಬಿಟ್ಟಿದೆ ಚಿಂತೆ? ದಾಸವರ್ಯರು ಹಾಡಿಲ್ಲವೆ? ಇದ್ದರು ಚಿಂತೆ, ಇರದಿದ್ದರು ಚಿಂತೆ? ಮಹಾ ಮಹಾತ್ಮರನ್ನೂ ಚಿಂತೆ ಬಿಟ್ಟಿಲ್ಲವೆಂದರೆ, ನಮ್ಮಂತಹರ ಪಾಡೇನು? ಆದುದರಿಂದ, ಚಿಂತೆಯನ್ನೆಂದೂ ನಿಮ್ಮ ಪಕ್ಕದಲ್ಲಿ ಸುಳಿಯಗೊಡಬೇಡಿರಿ. ಚಿಂತೆಯನ್ನು ಎದುರಿಸುವ ಧೈರ್ಯ, ಉಪಾಯಗಳು ನಿಮ್ಮಲ್ಲಿರುವುವೆಂದಾದರೆ ಮಾತ್ರ ಅದರ ಒಗ್ಗೆ ತುಸು ಗಮನ ಹರಿಸಿರಿ ಇಲ್ಲವಾದರೆ, ಅದರ ಗೊಡವೆಯಿಂದ ಸಂಪೂರ್ಣ ದೂರವಿರಿ

ರಾತ್ರೆಯ ಹೊತ್ತು ಏನಾದರೂಂದು ಚಿಂತೆಯನ್ನು ಮನಸ್ಸಿಗೆ ಹಚ್ಚಿಕೊಂಡು ಮಲಗುವುದು ಎಲ್ಲರಿಗೂ ಅಂಟಿದ ಒಂದು ಸೋಂಕು ರೋಗ. ರಾತ್ರೆ ಇರುವುದು ಚಿಂತಿಸುವುದಕ್ಕಲ್ಲ, ವಿಶ್ರಾಂತಿಯನ್ನು ಪಡೆಯುವುದಕ್ಕೆ ಎಂಬುದನ್ನು ಮರೆಯಬಾರದು. ಯೋಚನೆ—ಚಿಂತೆಗಳಿಲ್ಲದೆ ಮಲಗುವುದೇ ಕೆಲವರಿಗೆ ದಸ್ಸಾಧ್ಯವೆನಿಸುವುದುಂಟು. ಅಂತಹರು ಚಿಂತೆಯನ್ನು ಬದಿಗಿಟ್ಟು ಏನಾದರೂ ಇತರ ವಿಚಾರಗಳ ಕುರಿತು ಯೋಚಿಸುವ ಪರಿಪಾಠವನ್ನು ಹಾಕಿಕೊಳ್ಳಬಹುದು ಹಾಸಿಗೆಯ ಬಳಿ ಹೋಗುತ್ತಿರುವಾಗಲೇ ಪ್ರಯತ್ನ ಪೂರ್ವಕವಾಗಿಯಾದರೂ ತನ ಪರಿಚಯದ ಉತ್ತಮರಲ್ಲಿ ಉತ್ತಮ, ಸುಂದರರಲ್ಲಿ ಸುಂದರ ವ್ಯಕ್ತಿಯ ನೆನಪನ್ನು ತಪ್ಪದೆ ಮಾಡಿರಿ ನಿಮ್ಮ ಆನಂದಮಯವೆನಿಸಿದ ರಜಾ ದಿನಗಳನ್ನು ಸ್ಮರಿಸಿರಿ ಅಥವಾ ಭೂತಕಾಲದ ಗರ್ಭದಿಂದ ನಿಮ್ಮ ಸುಖ ಸಂತೃಪ್ತಿಯ ಸುವರ್ಣ ದಿನಗಳನ್ನು ನನಪಿಸಿಕೊಳ್ಳಿರಿ ನಿಮ್ಮ ಜೀವನವು ಗೀಢಾಂಧಕಾರಮಯವಾಗಿದ್ದರೆ, ನಿರಾಶಾದಾಯಕವೆನಿಸಿದ್ದರೆ, ಇಂತಹ ಕಲ್ಪನೆಗಳನ್ನು ತಂದುಕೊಳ್ಳುವುದು ಸಾಧ್ಯವಾಗುವುದಿಲ್ಲ ಆದರೂ ಧೈರ್ಯ ಗೆಡಬೇಡಿ. ಪರಮಾತ್ಮನ ಪ್ರಕೃತಿಯಲ್ಲಿ ಪ್ರತಿಯೊಬ್ಬರಿಗೂ ಚಿಂತೆಯಿಂದ ದೂರಾಗುವ ಉಪಾಯವಿದೆ. ಯಾವುದರ ಸ್ಮರಣೆಯನ್ನೂ ತಂದುಕೊಳ್ಳಲಾರದವರು ಶಾಂತ ಸಾಗರದಲ್ಲಿ ಆಬ್ಬರದಿಂದ ತೇಲಾಡುವ ನೌಕೆಯೊಂದರ ಚಿತ್ರವನ್ನು ಕಲ್ಪಿಸಿಕೊಳ್ಳಬಾರದೆ? ಪ್ರತಿ ದಿನವೂ ನಮ್ಮ ಕಣ್ಣ ಮುಂದೆ ವಿಕಸಿತವಾದ ಮಕರಂದ ಭರಿತ ಸುಂದರ ಹೂವನ್ನು ಕಲ್ಪಿಸಿಕೊಳ್ಳಲಾರೆವೆ? ಸುಖ ನಿದ್ರೆಯಲ್ಲಿ ತಲ್ಲೀನವಾದ ಬೆಕ್ಕಿನ ಚಿತ್ರವನ್ನು ನೋಡಿದಂತೆ ಊಹಿಸಲಾರೆವೆ?

ರಾತ್ರೆ ಬೆಳಗಾಯಿತೆಂದರೆ ಬರುವುದು ಹೊಸ ದಿನ ನಿಮ್ಮ ಪರಿಸ್ಥಿತಿಯನ್ನು ಯೋಚಿಸಿ ನೀವು ಚಿಂತಿತರಾದರೆ, ಜೀವನದಲ್ಲಿ ಕರಿನದಲ್ಲಿ ಕರಿಣವಾದ ಪರಿಸ್ಥಿತಿಯನ್ನು ನೆನಪಿಸಿರಿ ಹೆದರುವ ಕಾರಣವಿಲ್ಲ ನಿಮಗಾವುದರ ಅಂಜಿಕೆ? ಕಾಯಲೆ ಕಾಡುತ್ತಿದೆಯೆಂದೆ? ಮನೆ ಮುರಿಯಿತೆಂದೆ? ನಷ್ಟ ಸಂಭವಿಸಿತೆಂದೆ? ಅಥವಾ ತಾನು ಸಾಯಲಿರುವೆನೆಂದೆ? ಏನೇ ಆಗಲಿ, ಎಂತಹ ಪರಿಸ್ಥಿತಿಗಳೇ ನಿಮ್ಮ ಮುಂದೆ ಬರುತ್ತಿರಲಿ, ಅವೆಲ್ಲವನ್ನೂ ಮನಸ್ಸಿನ ಹಿಂದಿನ ಓವರಿಯಲ್ಲಿ ಕೂಡ ಹಾಕಿರಿ, ಎದುರಿಸಿರಿ, ಸೆರೆಹಿಡಿಯಿರಿ ಎಂದಾದರೂ ಅವುಗಳಿಂದ ನೀವು ಭಯಭೀತರಾದಿರೆಂದರೆ ಅಲ್ಲಿಗೆ ಮುಗಿಯಿತು. ನಿಮ್ಮ ಅವಸ್ಥೆ ಆದುದರಿಂದ ಜಗ್ಗದೆ ಕುಗ್ಗದೆ ಮುಂದುವರಿಯಿರಿ.

ನಾವು ಏಕಾಂಗಿಯಾಗಿರುವಾಗ, ಪರಿಶ್ರಮಿಗಳೆನಿಸಿರುವಾಗ, ಅರ್ಧ ರಾತ್ರೆಯ ಹೊತ್ತು ಎಚ್ಚತ್ತು ಆನಂತರ ನಿದ್ರೆ ಬಾರದ ಪರಿಸ್ಥಿತಿಯಲ್ಲಿರುವಾಗ, ನಮಗೆ ಭಯವಾಗದಿರುವುದಿಲ್ಲ ನಾವು ಅಧೀರರೆನಿಸುವ ಸಂದರ್ಭವನ್ನೇ ತನ್ನ ಲಾಭಕ್ಕೆ ಬಳಸಿಕೊಂಡು ಅಂಜಿಕೆಯು ನಮ್ಮನ್ನು ಹದರಿಸಲು ಪ್ರಯತ್ನಿಸುತ್ತದ

ಆದುದರಿಂದ, ಸಜೇತ ಮನಸ್ಸಿನ ಉಜ್ವಲ ಪ್ರಕಾಶದಲ್ಲಿ ಈ ಭಯಗಳನ್ನು ಎದುರಿಸುವ ಧೈರ್ಯ ತೋರಿರಿ. ಇದಕ್ಕಾಗಿ ನೀವು ಮಾಡಬಹುದಾದ ಎಲ್ಲ ಪ್ರಯತ್ನಗಳನ್ನೂ ನಡೆಸಿರಿ. ನಿಮ್ಮ ವೈದ್ಯರನ್ನು ಕಂಡು ಲವರೊಡನೆ ಭಯವಾಗುತ್ತಿದೆಯೆಂಬುದನ್ನು ತಿಳಿಸಿರಿ, ನಿಮ್ಮ ಚಿಂತೆಗಳನ್ನು ದೂರ ಮಾಡಲು ಅನುಕೂಲವೆನಿಸುವ ಸಾತ್ವಿಕೋಪಾಯಗಳನ್ನು ಕೈಗೊಳ್ಳಿರಿ. ನೀವು ತಪ್ಪು ದಾರಿಯಲ್ಲಿ ನಡೆಯುತ್ತಿರುವಿರೆಂಬುದನ್ನು ಮನವರಿಕೆಯಾದೊಡನೆಯೇ ಸಿರಿದಾರಿಯನ್ನು ಹಿಡಿಯಿರಿ

ಇಲೆಕ್ಟ್ರೊನಿಕ್ ಶಜ್ಞನೊಬ್ಬನು ಮೆಮೊರಿ ಪ್ಲೇನ್ ಒಂದನ್ನು ನಿರ್ಮಿಸಿದನು.

ಕೆಲವೊಬ್ಬರಿಗೆ ಮೃತ್ಯುವಿನ ಹೆದರಿಕೆಯಿರುತ್ತದೆ. ಸಾಕ್ಷಾತ್, ಮರಣಕ್ಕಿಂತಲೂ ಮರಣ ಭೀತಿಯು ಹೆಚ್ಚಿನ ಅಪಾಯಕಾರಿಯಾಗಿದೆ ನಿಮ್ಮ ಮೊದಲು ಕೋಟ್ಯಂತರ ಜನರು ಮೃತ್ಯವನ್ನಪ್ಪಿ ಹೋಗಿದ್ದಾರೆ, ಅವರು ಹೋದಲ್ಲಿಗೇನೇ ನೀವೂ ಹೋಗುತ್ತಿರುವದ—ಎಂಬ ಒಂದು ಮಾತನ್ನು ನೆನಪಿನಲ್ಲಿಟ್ಟ ಕೊಳ್ಳಿರಿ ಈ ವಿಷಯದಲ್ಲಿ ನಿಮ್ಮ ಧಾರ್ಮಿಕ ಭಾವನೆಯು ಸಹಾಯಕವೆನಿಸಬಹುದು. ಹೆದರಿಕೆ, ಚಿಂತೆಗಳ ಭಾವವು ನಿಮ್ಮನ್ನು ಕಾಡತೊಡಗಿದಾಗ, ಯಾವುದಾದರೂ ಧಾರ್ಮಿಕ ವಿಷಯಕ್ಕೆ ಸಂಬಂಧಿಸಿದ ಪುಸ್ತಕಗಳನ್ನು ಓದಬಹುದು. ಶ್ರೀಮದ್ಭಗವದ್ಗೀತೆ, ಕುರಾನ್, ಬೈಬಲ್ ಮೊದಲಾದುವನ್ನು ಓದಿ, ಪರಮಾತ್ಮನ ನನಪನ್ನು ಮಾಡಿಕೊಳ್ಳಿರಿ

ಚಿಂತೆಯನ್ನು ದೂರೀಕರಿಸುವ ಪ್ರಯತ್ನವನ್ನು ಮಾಡುತ್ತಿರಿ ಇರುವ ಚಿಂತೆಗಳ ಪ್ರಮಾಣವನ್ನು ನಾವು ಉಪ್ಪಖಾರಗಳನ್ನು ಹಚ್ಚಿ ಬೆಳಿಸುತ್ತೇವೆ. ಮತ್ತು ಈ ಭೂತಾಕಾರವನ್ನು ಕಂಡು ಹೆದರಿ ಹೋಗುತ್ತೇವೆ ಹೀಗಾಗದಂತೆ ತಡೆಯಲು ಉಪಾಯವಿದೆ. ನಿಮ್ಮನ್ನು ಸಂಪೂರ್ಣವಾಗಿ ಅರಿತುಕೊಳ್ಳಬಲ್ಲ ಸ್ನೇಹಿತನೊಬ್ಬನ ಮುಂದೆ ನಿಮ್ಮ ಚಿಂತೆಯ ಹೊಳೆಯನ್ನು ಹರಿಯಬಿಡಿರಿ. ಆದರಿಂದ ತಲೆಯ ಭಾರವು ಬಹಳಷ್ಟು ಕಡಿಮೆಯಾಗುವುದು

ಬೇರೆಯವರಿಂದ ಸಹಾಯ ತೆಗೆದುಕೊಳ್ಳಬೇಕಾದರೆ ಹಿಂದೆ ಮುಂದೆ ನೋಡಬೇಡಿರಿ. ನಮ್ಮ ಶಕ್ತಿಗೆ ಮೀರಿದ ಕೆಲಸವನ್ನು ಮಾಡುವ ಪ್ರಯತ್ನವನ್ನು ಸಾಮಾನ್ಯವಾಗಿ ನಾವು ಮಾಡುತ್ತೇವೆ, ನಮ್ಮದಲ್ಲದ ಜವಾದ್ದಾರಿಯನ್ನು ಹೊರುತ್ತೇವೆ; ಅದನ್ನು ಬೇರೆಯವರಿಗೆ ಒಪ್ಪಿಸುವುದೆಂದರೆ, ಮಹಾ ಹೀನ ಕಾರ್ಯವೆಂದು ತಿಳಿಯುತ್ತೇವೆ ಒಂದು ಕೆಲಸವನ್ನು ನಾವು ಮಾಡುವಂತೆ ಚೊಕ್ಕವಾಗಿ ಮಾಡಲು ಇತರರು ಅಸಮರ್ಥರು ಎಂಬ ಭಾವನೆಯು ನಮ್ಮಲ್ಲಿರುತ್ತದೆ. ಇದು ತಪ್ಪೆನ್ನುವಂತಿಲ್ಲ ಆದರೆ, ಇಂತಹ ಮನೋಭಾವಗಳನ್ನು ನಾವಾದರೂ ಯಾಕೆ ಇಟ್ಟುಕೊಳ್ಳಬೇಕು?

ನಾವು ಹತಾಶರಾಗಿ ಏಕಿರಬೇಕು? ಅಗತ್ಯವಿರುವಾಗ ಬೇರೆಯವರಿಂದ ಸಹಾಯವನ್ನು ಯಾಚಿಸಲು ಹಿಂಜರಿಯ ಬೇಡಿರಿ, ಸಂಕೋಚಪಡಬೇಡಿ. ಪರರು ಗೆಯ್ದ ಸಹಕಾರವನ್ನು ಯಾವ ಸಂದರ್ಭದಲ್ಲಾದರೂ ಮರೆಯಬೇಡಿ. ಅವರು ನಿಮಗಾಗಿ ಮಾಡುವ ಕೆಲಸವು ನಿಮ್ಮ ಮನೋಭೀಷ್ಟೆಗೆ ಪ್ರತಿಕೂಲವಾಗಿರುವಂತೆ ಭಾಸಸವಾದರೂ ಅವರ ಸೇವೆಯನ್ನು ಕೊಂಡಾಡುವುದನ್ನು ಬಿಡಬೇಡಿ. ಹೀಗೆ ಮಾಡುವುದರಿಂದ, ಒಂದಲ್ಲ ಒಂದುದಿನ ನಿಮ್ಮ ಇಚ್ಛೆಗೆ ಅನುಕೂಲವಾದ ಕಾರ್ಯಗಳನ್ನು ಮಾಡಿಸಲು ಸಾಧ್ಯವಾಗುವುದು

ನಮ್ಮ ಚಿಂತೆಯನ್ನು ಪರಿರಿಗೆ ಹಂಚಿಕೊಳ್ಳುವುದರಿಂದ ನಮ್ಮ ಭಾರವು ಕಡಿಮೆಯೆನಿಸಿ ಕೃದಯ ಹಗುರಾಗುವುದು. ಆದುದರಿಂದ ನಿಮ್ಮ ಚಿಂತೆಯ ಕಂತೆಯನ್ನು ಬೇರೆಯವರ ಮುಂದೆ ಬಿಚ್ಚುವುದು ಅಪ

(ಒನೇ ಪುಟ ನೋಡಿರಿ)

ಹೋಟೆಲ್ ಕಲ್ಪನಾ

(ಉಪೇಂದ್ರಬಾಗ್, ಉಡುಪಿ)

ಉಡುಪಿಯ ಅತ್ಯಾಧುನಿಕ ವಸತಿ, ಭೋಜನ ಗೃಹ ಮತ್ತು ರೆಸ್ಟೋರೆಂಟ್

- ಸರ್ವ ಸೌಕರ್ಯ ಭರಿತ ಕೋಣೆಗಳು
- ಮೇಲ್ತರಗತಿಯ ಊಟ ಉಪಾಹಾರಗಳು
- ಏಯರ್ ಕಂಡೀಶನ್ಡ್ ರೂಮಿನ ವ್ಯವಸ್ಥೆ

'ಕಲ್ಪನಾ' ಎಂದೆಂದಿಗೂ ನಿಮ್ಮ ಮೆಚ್ಚಿನ ಆಯ್ಕೆ

[ಫೋನ್ 110]

ನವಯುಗ

ವರುಷ ೪೧	ಉಡುಪಿ ೨೬-೭-೬೨	ವಾರ ೪೬

ಚೀನದ ಆಟೋಪ

ಆಕ್ರಮಣಶೀಲ ಕಮ್ಯುನಿಸ್ಟ್ ಚೀನವು ಒಂದೊಮ್ಮೆ ಹಿಂಜರಿಯಿತು ಎಂಬ ಪ್ರಕಟಣೆಯು ಬಂದೊಡನೆಯೇ ತುಸು ಸಮಾಧಾನದ ನಿಟ್ಟುಸಿರು ಬಿಟ್ಟವರು ಚಿಪ್ ಚಾಪ್ ನದೀ ಕಣಿವೆಯಲ್ಲಿ ಮತ್ತು ಪಾಂಗೊಂಗ ಸರೋವರ ಪ್ರದೇಶದಲ್ಲಿದ್ದ ಭಾರತೀಯ ಸೀಮೂ ರಕ್ಷಕದಳದ ಮೇಲೆ ಗುಂಡು ಹಾರಿಸಿದರೆಂಬ ವಾರ್ತೆಯಿಂದ ಮರಳಿ ನೊಂದುಕೊಳ್ಳುವಂತಾಗಿದೆ. ಪ್ರಧಾನಿ ನೆಹರುಗಳೇ ಮೊದಲೊನ್ನೆ ಚೀನೀಯರು ಹಿಂದೆ ಸರಿಯುವ ಲಕ್ಷಣಗಳು ತೋರಿ ಬಂದಿವೆಯೆಂದಿದ್ದರೂ ಇಂದು "ಗಂಭೀರ ಪರಿಸ್ಥಿತಿ"ಯು ತಲೆದೋರಿದೆಯೆಂದು ಅಭಿಪ್ರಾಯಪಡುತ್ತಾರೆ. ಚೀನೀಯ ಪಡೆಗಳು ಹತ್ತಿರ ಹತ್ತಿರಕ್ಕೆ ಬರುತ್ತ ಭಾರತೀಯ ರಕ್ಷಣಾ ಸೇನೆಯ ಶಕ್ತಿ ಸಾಮರ್ಥ್ಯಗಳನ್ನು ಪರೀಕ್ಷಿಸಿ ತಿಳಿದುಕೊಳ್ಳುತ್ತಿದ್ದಾರೆ ಎಂದು ನಂಬುವುದಕ್ಕೆ ಇತ್ತೀಚೆಗೆ ಅಲ್ಲಿ ನಡೆದಿರುವ ವಿದ್ಯಮಾನಗಳೇ ಸಾಕ್ಷಿನಿಂತಿವೆ. ಆದುದರಿಂದ ಯಾವ ಕ್ಷಣದಲ್ಲಾದರೂ ಸಂಭವಿಸಬಹುದಾದ ವಿಲಕ್ಷಣ ಘರ್ಷಣೆಯನ್ನು ಎದುರಿಸಿ ಮಾತೃ ಭೂಮಿಯ ಸಂರಕ್ಷಣೆ ಮಾಡಿಕೊಳ್ಳುವುದು ಭಾರತೀಯ ಪ್ರಜೆಗಳ-ಸರಕಾರದ ಕರ್ತವ್ಯವೆಂದು ಎಲ್ಲರೂ ತಿಳಿದಿದ್ದಾರೆ.

ಭಾರತ—ಚೀನಾಗಳ ಸೀಮೂ ಪ್ರಶ್ನೆಯ ವಿವರಣೆಯಿಂದ ಮನೆ ಮಾತಾಗಿದೆ. ಬಾಹ್ಯವಾಗಿ ಸ್ನೇಹ ಹಸ್ತವನ್ನು ಚಾಚುತ್ತ ಬಂದು ಅಂತರಂಗದಲ್ಲಿ ಶತ್ರುತ್ವವನ್ನು ಸಾಧಿಸಿ, ಮಿತ್ರದ್ರೋಹವೆಸಗುತ್ತಿರುವ ಕೆಂಪು ಚೀನದ ಕಪಟ ವರ್ತನೆಯು ಸರ್ವಥಾ ಖಂಡನಾರ್ಹ. ೧೯೫೯ರಲ್ಲಿಯೂ ಚೀನವು ಲಡಖ ಪ್ರದೇಶದಲ್ಲಿ ಸುಮಾರು ೧೨,೦೦೦ ಚದರ ಮೈಲುಗಳಷ್ಟು ಭೂಭಾಗವನ್ನು ಆಕ್ರಮಿಸಿತ್ತು. ಗಡಿಯಲ್ಲಿದ್ದ ಮೋಲೀಸು ಪಡೆಯ ಮೇಲೆ ಗುಂಡೆಸೆದಿತ್ತು. ೧೯೬೦ರಲ್ಲಿ ಅದು ಪ್ರಕಟಿಸಿದ ನಕ್ಷೆಯಲ್ಲಿ ಮತ್ತೂ ೧೮೦೦ ಚಾರಸ ಮೈಲು ಭೂಮಿಯು ತನ್ನದು ಎಂದದು ತೋರಿಸಿದೆ. ಆದರೆ, ಈ ಸಮಯದಲ್ಲಿ ಭಾರತೀಯ ಸೇನೆಯ ಶಕ್ತಿಯನ್ನೂ ಗಡಿ ಪ್ರದೇಶದಲ್ಲಿ ಹೆಚ್ಚಿಸಿದುದರಿಂದ ಚೀನದ ಆಕ್ರಮಕ ನೀತಿಯು ಸಂಪೂರ್ಣ ಫಲಕಾರಿಯಾಗಿಲ್ಲ. ಆದರೆ, ಸ್ವಾರ್ಥದ ಕಪಟ ನೀತಿಯನ್ನು ಮುಂದುವರಿಸಲು ಚೀನವು ಬಹು ಪರಿಯೋಚಿಸಿ, ಈಗ ಭಾರತೀಯರ ತಾಳ್ಮೆಯನ್ನೂ, ನಿರ್ಧಾರ ದೃಢತೆಯನ್ನೂ ಕಡ್ಡಿ ಹಾಕಿ ಪರೀಕ್ಷಿಸುತ್ತಿದೆಯೆಂದು ತಿಳಿಯಬೇಕು. ಇಷ್ಟು ಮಾತ್ರವಲ್ಲದೆ ಭಾರತದ ಬಗ್ಗೆ ಸಾಧ್ಯವಿರುವ ಎಲ್ಲ ರೀತಿಯ ಅಪಸ್ವಾಚಾರವನ್ನೂ ನಡೆಸುತ್ತಿದೆ. ಈ ಬಗೆಯ ಪ್ರಚಾರವು ಇಂದು ನಿನ್ನೆಯಿಂದಲ್ಲ; ಹಿಂದಿನಿಂದಲೂ ಇದ್ದುದೇ ಆದುದರಿಂದ ಆ ಬಗ್ಗೆ ಹೆಚ್ಚಾಗಿ ಚಿಂತಿಸಬೇಕಾಗಿಲ್ಲ. ಅಪರಾಧಿಯ ಸ್ಥಾನದಲ್ಲಿರುವ ಪೆಕಿಂಗ್ ಸರಕಾರವು ನಿರಪರಾಧಿ ಭಾರತದ ಮೇಲೆಯೇ ತನ್ನ ಮಾಡಿದ ತಪ್ಪುಗಳ ಹೊಣೆಗಾರಿಕೆಯನ್ನು ಜಾರಿಸುವ ಸಾಹಸ ಮಾಡುತ್ತಿದೆ. ಆದರೆ, ಅವನ್ನೆಲ್ಲ ಒಪ್ಪಿಕೊಳ್ಳುವಷ್ಟು ಸರಳತೆಯು ಇಂದು ಭಾರತ ಸರಕಾರದಲ್ಲಿ ಉಳಿದಿಲ್ಲವೆಂಬುದು ಸಮಾಧಾನದ ಸಂಗತಿ. ಚೀನ ಮತ್ತು ಭಾರತಗಳ ಗಡಿ ರೇಖೆಯು ಕಳೆದ ಶತಮಾನದ ಮಧ್ಯಾವಧಿಯಲ್ಲಿಯೇ ಅಂತಿಮವಾಗಿ ನಿರ್ಧಾರವಾಗಿದೆ; ಮತ್ತು ಇದಕ್ಕೆ ಆಗಿನ ಕಾಲದ ಸರಕಾರಗಳು ತಮ್ಮ ಅಂಕಿತವನ್ನೂ ಹಾಕಿರುವ ದಾಖಲೆಗಳಿವೆ ಆದರೆ, ಚೀನದಹೇಳಿಕೆಯು ಈ ಒಡಂಬಡಿಕೆಯನ್ನು ಮನ್ನಿಸುವುದಿಲ್ಲ. ಮೈಕಮೋಹನ ರೇಖೆಗೂ ತನಗೂ ಯಾವ ತರದ ಸಂಬಂಧವೂ ಇಲ್ಲವೆಂದದು ವಾದಿಸಿ, ಉಭಯದೇಶಗಳ ಸೀಮೆಯ ಬಗ್ಗೆ ಈ ಮೊದಲೆಂದೂ ನಿರ್ಧಾರವೇ ಆಗಿಲ್ಲವೆಂಬ ಮೊಂಡುವಾದವನ್ನು ಮುಂದೆ ಮಾಡುತ್ತಿದೆ. ಅದೇನೇ ಇದ್ದರೂ, ಭಾರತೀಯರು ದೇಶದ ಸಮಗ್ರತೆಗೆ ಕುಂದನ್ನುಂಟು ಮಾಡುವ ಯಾವುದೇ ನೀತಿಯನ್ನು ಒಪ್ಪಲಾರರು. ಚೀನ ರಾಯಭಾರಿ ಕಛೇರಿಯಿರಲಿ, ಚೀನದ ಪತ್ರಿಕೆಗಳೇ ಇರಲಿ ಲಡಖವು ಚೀನಕ್ಕೆ ಸೇರಿದುದೆಂದು ವಾದಿಸಿದ ಮಾತ್ರಕ್ಕೆ ಅದು ಕಾರ್ಯರೂಪಕ್ಕೆ ಬರುವುದಿಲ್ಲ. ಗುಂಡಿನ ಮಳೆ ಸುರಿಸಿದರೆ, ಸಮಸ್ಯೆ ಬಗೆಹರಿಯುವುದಿಲ್ಲ. ದೊಣ್ಣೆಯಿರುವವನ ಪಾಲಿಗೆ ಎಮ್ಮೆ ಬರುವುದು ಸ್ವಾಭಾವಿಕ, ಅಂತೆಯೇ ಶಕ್ತಿಯಿರುವ ಪಕ್ಷವು ಗೆಲ್ಲುವುದೂ ಅಷ್ಟೇ ಸಹಜ. ಇಲ್ಲಿ ನ್ಯಾಯ ಅನ್ಯಾಯವೆಂಬ ನೈತಿಕ ವಿಚಾರಗಳಿಗೆ ಆಸ್ಪದವಿರುವುದಿಲ್ಲ.

ಆದರೆ, ಭಾರತವು ಯಾರೊಡನೆಯೂ ಯುದ್ಧವನ್ನು ಬಯಸುವುದಿಲ್ಲ; ಅದರ ವಿದೇಶ ನೀತಿಯಾದರೂ ಹಾಗೆಯೇ ರೂಪುಗೊಂಡಿದೆ; ಮುಂದಕ್ಕೂ ಇದೇ ಮಾದರಿಯಲ್ಲಿ ಮುಂದುವರಿಯುತ್ತಿದೆ. ಅಹಿಂಸಾಪ್ರಿಯ ರಾಷ್ಟ್ರವೆಂದ ಮಾತ್ರಕ್ಕೆ ಅದು ಯುದ್ಧವನ್ನೇ ಮಾಡುವುದಿಲ್ಲವೆಂದು ಯಾರೂ ಭಾವಿಸಬಾರದು ಎಂದು ಪ್ರಧಾನಿಯವರು ಎಂದೋ ಬಹಿರಂಗ ಪಡಿಸಿದರು. ಗೋವೆಯ ವಿಮೋಚನೆಯ ಸಂದರ್ಭದಲ್ಲಿ ಭಾರತೀಯ ಸೇನೆಯ ಕೈಚಳಕವು ಸರಿಯಾಗಿ ಪ್ರಕಟವಾಯಿತು. ಮಾತೃಭೂಮಿಯ ಸಂರಕ್ಷಣೆಗಾಗಿ ಹೋರಾಡುತ್ತಿರುವ ನಮ್ಮ ಸೇನಾ ಪಡೆಯು ತಾಳ್ಮೆಯಿಂದ ಪರಿಸ್ಥಿತಿಯನ್ನು ನೋಡುತ್ತಿದೆ. ಚೀನೀಯ ಪಡೆಯು ಗುಂಡು ಹಾರಿಸಿದರೂ ಅದನ್ನು ಗುಂಡಿನಿಂದಲೇ ಉತ್ತರಿಸುವುದು ತೀರ ಅನಿವಾರ್ಯವೆನಿಸಿದ್ದರಿಂದ ಚಿಪ್ ಚಾಪ ಗೊಳ್ಳದಲ್ಲಿ ಹಾಗೆ ಮಾಡಲೇಬೇಕಾಯಿತು. ಇಂತಹ ಘಟನೆಗಳು ಮತ್ತೆ ಅಲ್ಲಿ ನಡೆದಿಲ್ಲವೆಂದಾದರೂ ಚೀನೀಯ ಪಡೆಯ ಸ್ಥಾನ ಮಾನದ ಒಳಗುಟ್ಟು ಏನೆಂಬುದನ್ನೂ ಸರಿಯಾಗಿ ತಿಳಿಯುವುದು ಕಷ್ಟಸಾಧ್ಯವೇ. ಇದುವರೆಗೆ ಕಾಗದ ಪತ್ರಗಳ ಮೂಲಕ ನಡೆಯುತಿದ್ದ ಹೋರಾಟವು ಗುಂಡುಗಳಿಂದ ಮುಂದುವರಿಯುವುದೂ ಅಸಂಭವವಲ್ಲ. ಮಾನವತೆ ಮತ್ತು ನೈತಿಕತೆಗಳಿಗೆ ಎರವಾದ ಕಮ್ಯುನಿಸ್ಟ್ ಚೀನವು ಯಾವ ಗಳಿಗೆಯಲ್ಲಿ ಹೊಗೆ ಕಾರುವುದೆಂದು ಹೇಳುವುದು ಕಷ್ಟ. ಸರ್ವವು ಯಾವ ಕ್ಷಣದಲ್ಲಾದರೂ ಕಚ್ಚಿಬಿದುವ ಸಂಭವವಿದೆ. ಆದುದರಿಂದಲೇ ಸಂರಕ್ಷಣಾ ಮಂತ್ರಿ ಮೆನನ್ನರು ಜಿನೇವಕ್ಕೆ ಹೊರಡುವ ಮೊದಲು ಕೇಂದ್ರ ಮಂತ್ರಿ ಮಂಡಳಿಯು ಸೀಮೂ ಪ್ರಶ್ನೆಯನ್ನು ದೀರ್ಘಕಾಲದ ವರೆಗೆ ಪರಿಶೀಲಿಸಿತೆಂದೂ ರಶ್ಯದಿಂದ ಮಿಗ್ ವಿಮಾನಗಳನ್ನು ಕೊಂಡುಕೊಳ್ಳುವ ನಿಶ್ಚಯಮಾಡಿತೆಂದೂ ತಿಳಿಯುತ್ತದೆ. ಎಂದರೆ, ಸದಾ ಸಜ್ಜೀತವಿರುವ ಪ್ರಯತ್ನವನ್ನು ಅದು ಮಾಡಿದೆ; ಭಾರತವು ಹೇಗೆ ಯುದ್ಧವನ್ನು ಬಯಸುವುದಿಲ್ಲವೋ ಹಾಗೆಯೇ ಚೀನವೂ ಅದನ್ನು ಆಶಿಸುವುದಿಲ್ಲ. ತನ್ನ ದೇಶದೊಳಗಿನ ಹಲವಾರು ಕಂಗೆಟ್ಟ ಪರಿಸ್ಥಿತಿಗಳನ್ನು ಉತ್ತರಿಸಬೇಕಾದ ಚೀನವು ಭಾರತದೊಡನೆ ಶಾಂತಿಯಿಂದಿರಲು ಬಯಸುವುದು ನ್ಯಾಯವಾದರೂ ಅದರ ಸಾಮ್ರಾಜ್ಯ ವಿಸ್ತರಣಾ ಮನೋವೃತ್ತಿಯು ದುರ್ವರ್ತನೆಗಳಿಗೆ ಪ್ರೇರಕವಾಗಿದೆ. ಚೀನದ ಈ ತೆರದ ದುರ್ಮನೋವೃತ್ತಿಯು ದೂರವಾಗದ ಹೊರತು ಸೀಮೂ ಪ್ರಶ್ನೆಯು ಬಗೆಹರಿಯುವುದು ಸಾಧ್ಯವಿಲ್ಲ. ಆದುದರಿಂದ ರಾಜಿಯಿಂದಲೇ ಪ್ರಶ್ನೆಯು ಇತ್ಯರ್ಥವಾಗಬೇಕೆಂದು ಚೀನವು ಬಯಸುವುದಾದರೆ, ತಾನು ಆಕ್ರಮಿಸಿದ ಭಾರತೀಯ ಭೂಭಾಗದಿಂದ ಸಂಪೂರ್ಣ ಹಿಮ್ಮೆಟ್ಟಬೇಕು; ಮುಂದೆ ಉಭಯ ರಾಷ್ಟ್ರಗಳ ನಡುವೆ ಮಾತುಕತೆ ನಡೆಸುವುದು ಸಾಧ್ಯವೆನಿಸೀತು. ಒಂದು ವೇಳೆ ಚೀನವು ತನ್ನ ಶಕ್ತಿಮದದಿಂದ ಆಕ್ರಮಣವನ್ನು ಮುಂದೊತ್ತುತ್ತ ಬರುವುದಾದರೆ, ಅದನ್ನು ಎದುರಿಸಲು ಎಲ್ಲ ಭಾರತೀಯರೂ ಪಕ್ಷ ಪಂಗಡಗಳ ಭೇದ ತೊರೆದು ಒಂದಾಗುವರು ಎಂಬುದು ಈಗಿನ ಪರಿಸ್ಥಿತಿಯಿಂದಲೇ ತಿಳಿಯುವುದು; ಇದು ನಿಜಕ್ಕೂ ಆಗ ಬೇಕಾದುದೇ.

ಮುರಾರ್ಜಿ ಸಂಚಾರ

ವಿತ್ತ ಮಂತ್ರಿ ಮುರಾರ್ಜಿ ದೇಸಾಯಿಯವರು ತಮ್ಮ ಮೂರು ವಾರಗಳ ಯುರೋಪ್ ಸಂಚಾರ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಿ ಮರಳಿ ಬಂದಿದ್ದಾರೆ. ತಾನು ಸಂದರ್ಶಿಸಿದ ಇಂಗ್ಲೆಂಡ್, ಫ್ರಾನ್ಸ್ ಮೊದಲಾದ ದೇಶಗಳಲ್ಲಿ ಭಾರತವು ಇಂದು ಎದುರಿಸುತ್ತಿರುವ ಆರ್ಥಿಕ ಸಮಸ್ಯೆಗಳನ್ನು ವಿಶದವಾಗಿ ತಿಳಿಸಿ ಬಂದಿರುವುದಾಗಿಯೂ ಅವರಿಂದ ಏನನ್ನೂ ಕೇಳಿರುವುದಿಲ್ಲವೆಂಬುದಾಗಿಯೂ ಹೇಳಿದ್ದಾರೆ ಸಾಮಾನ್ಯವಾಗಿ ಅರ್ಥ ಮಂತ್ರಿಗಳು ಪ್ರತಿವರ್ಷವೂ ಆರ್ಥಿಕ ನೆರವು ನೀಡುವ ದೇಶಗಳಿಗೆ ಭೆಟ್ಟಿ ಕೊಟ್ಟು, ಆ ನೆರವು ದೊರೆಯುವುದಕ್ಕೆ ಪೂರ್ವ ತಯಾರಿಯನ್ನು ಮಾಡಿಕೊಂಡು ಬರುವುದು ಇತ್ತೀಚಿಗಿನ ಕೆಲವು ವರ್ಷಗಳಿಂದ ನಡೆದು ಬಂದ ಸಂಪ್ರದಾಯವಾಗಿದೆ. ಭಾರತದ ಮೂರನೆಯ ಪಂಚವಾರ್ಷಿಕ ಯೋಜನೆಯು ತೀವ್ರ ಮಹತ್ವಾಕಾಂಕ್ಷೆಯಿಂದ ಕೂಡಿದ್ದು, ಅದರ ಯಶಾಪಯಶಗಳನ್ನು ಭವಿಷ್ಯವು ಹೊಂದಿಕೊಂಡಿದೆ. ದೇಶವೀಗ ತೀವ್ರ ಆರ್ಥಿಕ ಬಿಕ್ಕಟ್ಟನ್ನು ಎದುರಿಸುತ್ತಿದೆ. ಆದುದರಿಂದ ಮುರಾರ್ಜಿ ರಾಯಭಾರವು ಯಶಸ್ವಿಯಾಯಿತೆಂದರೆ, ಆಂತರಿಕ ಆರ್ಥವ್ಯವಸ್ಥೆಯು ಸಮತೋಲದಲ್ಲಿ ನಿಲ್ಲುವುದು ಸುಲಭವಾಗುವುದು. ಇಲ್ಲವಾದರೆ, ಎದುರಿಸ ಬೇಕಾಗುವ ಕಠಿಣ ಪರಿಸ್ಥಿತಿಗಳನ್ನೆಲ್ಲ ಎದುರಿಸಲೇ ಬೇಕಾಗುವುದು 'ಎಯ್ಡ್ ಆಫ್ ಇಂಡಿಯಾ ಕ್ಲಬ್', ಭಾರತಕ್ಕೆ ಸಹಾಯ ಮಾಡಲು ತೋರಿಸುವ ಉತ್ಸಾಹವನ್ನೂ ಕೆಲವೊಂದು ದೇಶಗಳು ಅದರ ಸದಸ್ಯರಾಗಿ ಸೇರಲು ಮುಂದೆ ಬರುತ್ತಿರುವುದನ್ನೂ ಕಾಣುವಾಗ, ಮುರಾರ್ಜಿ ದೇಸಾಯಿಯವರ ಸಂಚಾರ ವ್ಯರ್ಥವಾಗಲಿಲ್ಲ ಎಂದು ಭಾವಿಸಬಹುದು.

ಬೆಳ್ಳಾರೆ—ಸ್ಥಳೀಯ ಡಾಕ್ಟರ್ ಯಂ. ಪಿ. ಕಲ್ಕೂರರ ಪ್ರಥಮ ಪುತ್ರ ಶ್ರೀ ರಂಗನಾಥ ಕಲ್ಕೂರರ ವಿವಾಹವು ಸುತ್ತೂರು ಯನ್ ಶೇಷಪ್ಪಯ್ಯ ಕುದ್ರೆತ್ತಾಯರ ಪ್ರಥಮ ಪುತ್ರಿ ಸೌ. ಲೀಲಾವತಿಯೊಂದಿಗೆ ತಾರೀಕು 11—7—62ರಂದು ನಂದಾವರ ದೇವಸ್ಥಾನದಲ್ಲಿ ನೆರವೇರಿತು.

To

GROW

WITH THE NATION

Advertise

in the 'Navayuga'

Illustrated Kannada Weekly

Founded: **41** years ago

The vast reading public behind 'Navayuga' makes it worthwhile to insert your advertisements regularly in the Navayuga and its special supplements issued from time to time.

One such issue of **15th August 1962** is the INDEPENDENCE DAY SUPPLEMENT supported by many reputed writers and columnists of Mysore.

For best advertisement value advertise in

NAVAYUGA

UDIPI, S. KANARA, MYSORE STATE.

ಅಲ್ಲಲ್ಲಿಯ ಸುದ್ದಿಸಾರ

ಮುಂಬೈ ಕನ್ನಡ ಸಾಹಿತ್ಯಕೂಟದ ಸಭೆ— 14ನೇ ಜುಲಾಯಿ 62ರಂದು ಮುಂಬೈಯ ಮಾಹುಂಗದಲ್ಲಿರುವ 'ಮುಂಬೈ ಕನ್ನಡ ಸಂಘ' ವಾಚನಾಲಯದಲ್ಲಿ ಕನ್ನಡ ಸಾಹಿತ್ಯ ಕೂಟದ ಸಾಮಾನ್ಯ ಸಭೆಯು ಸೇರಿತು. ಈ ಕೂಟಕ್ಕೆ ಅಕಸ್ಮಾತ್ತಾಗಿ ಆಗಮಿಸಿದ ಕರ್ನಾಟಕದ ಒಬ್ಬ ಪ್ರತಿಭಾನ್ವಿತ ಲೇಖಕ ಶ್ರೀ ಕು. ಶಿ. ಹರಿದಾಸ ಭಟ್ಟರನ್ನು ಗೌರವ ಕಾರ್ಯದರ್ಶಿ ಶ್ರೀ ಶ್ರೀನಿವಾಸ ಹಾವನೂರ್ ಅವರು ಸ್ವಾಗತಿಸಿದರು. ಶ್ರೀಯುತರು ಮುಂಬೈಯ ಉದಯೋನ್ಮುಖ ಕವಿಗಳಾದ 'ಜೀವಿ' (ಜಿ. ವಿ. ಕುಲಕರ್ಣಿ) ಅವರು ಬರೆದ 'ಧೃತರಾಷ್ಟ್ರ ಸಂತಾನ' ಎಂಬ ಕಥಾ ಸಂಗ್ರಹವನ್ನು ಉದ್ಘಾಟಿಸುತ್ತಾ—ಈಗ ಕನ್ನಡದಲ್ಲಿ ಕಾದಂಬರಿಯೊಂದನ್ನು ಬಿಟ್ಟರೆ ಉಳಿದ ಯಾವ ಸಾಹಿತ್ಯ ಪ್ರಕಾಶಕ್ಕೂ ಉಚಿತ ಮನ್ನಣೆ ದೊರೆಯುತ್ತಿಲ್ಲ ಎಂದು ವಿಷಾದ ವ್ಯಕ್ತಪಡಿಸಿದರು.

ಆ ಬಳಿಕ ಹಿಂದೀ ಮಾಧ್ಯಮದಿಂದಲೇ M. A. ಪರೀಕ್ಷೆಯನ್ನಿತ್ತ ಈಗ Phd ಮಾಮಾಡಲಿಕ್ಕಾಗಿ ಸರಕಾರದ ಸ್ಕಾಲರ್‌ಶಿಪ್ ಪಡೆದ ಶ್ರೀ ಬಾಸು ಬಿ ಪುತ್ರನರು ಹಿಂದೀ ಕನ್ನಡ ಬಾಂಧವ್ಯ ಹೇಗಾಗಲು ಸಾಧ್ಯವಿದೆ, ಹಾಗೂ ಹಿಂದಿಯಿಂದ ಕನ್ನಡಕ್ಕೆ ಪುಸ್ತಕಗಳು ಅನುವಾದವಾಗುತ್ತಿರುವಂತೆಯೇ ಕನ್ನಡದ ಹಿರಿಯ ಕೃತಿಗಳನ್ನು ಅನುವಾದ ಮಾಡಲು ಮೊದಲು ಯಾವ ಕಾರ್ಯ ಗೈಯಬೇಕು ಎಂಬ ವಿಚಾರವನ್ನು ಪ್ರಕಟಿಸಿದರು. ಕೆಲವು ಹಿರಿಯ ಸಾಹಿತಿಗಳೂ ಈ ಕುರಿತು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರಲ್ಲದೆ, ಬಾಂಧವ್ಯಕ್ಕಾಗಿ ಹೆಚ್ಚಿನ ಅನುಭವ ಅಂತೆಯೇ ಮಾಹಿತಿಗಳನ್ನೂ ಸಂಗ್ರಹಿಸುವಂತೆ ಬಾಸು ಬಿ. ಪುತ್ರನರನ್ನು ಕೇಳಿಕೊಳ್ಳಲಾಯ್ತು.

ತದನಂತರ 'ಚೆರಾ' ಎಂಬ ಕಾವ್ಯ ನಾಮದಿಂದ ಪ್ರಸಿದ್ಧರಿರುವ ಶ್ರೀ ರಾಮಚಂದ್ರ ಉಚ್ಚಿಲ್ ಅವರು—ಮೈಸೂರು ಸರಕಾರವು ಪ್ರಕಟಿಸಿದ—ಕುಮಾರ ವ್ಯಾಸನ ಭಾರತದಲ್ಲಿ ಬಿಟ್ಟ ಸಂಧಿಗಳನ್ನೂ ಪದ್ಯಗಳನ್ನೂ ಹಳೆಯ ದೇಸೀ ಶಬ್ದಗಳ ಬದಲು ಸೇರಿಸಲ್ಪಟ್ಟ ಹೊಸಗನ್ನಡ ಶಬ್ದಗಳನ್ನೂ ಸಸಿದ್ಧಾಂತವಾಗಿ ತೋರಿಸಿ ಪ್ರಜಾವಾಣಿಯಲ್ಲಿ ಬರೆದ ಲೇಖನದ ಕುರಿತು ಚರ್ಚೆಯು ನಡೆಯಿತು ಈ ಕುರಿತು ಸಾಹಿತ್ಯ ಕೂಟದ ಸದಸ್ಯರು ವಿಷಾದ ವ್ಯಕ್ತಪಡಿಸಿದರಲ್ಲದೆ ಮಾಸ್ತಿ, ಪುಟ್ಟಪ್ಪನವರಂತಹ ಅನುಭಾವೀ ಮೇಧಾವೀ ಹಿರಿಯರ ಕೈಯಲ್ಲಿಯೂ ಇಂತಹ ದೊಡ್ಡ ತಪ್ಪುಗಳು ಆಗಬಾರದಿತ್ತು ಎಂಬ ಅಭಿಪ್ರಾಯ ವ್ಯಕ್ತ ಪಡಿಸಿದರಲ್ಲದೆ ಇನ್ನು ಮುಂದಿನ ಯಾವುದೇ ಗ್ರಂಥವು ಈ ರೀತಿಯಲ್ಲಿ ಕವಿಯ ಹಾಗೂ ಕಾವ್ಯದ ಮಹತ್ವವನ್ನು ಹಾಳು ಗೈಯದಂತೆ ಶ್ರಮವಹಿಸಲಿ; ಎಚ್ಚರ ವಹಿಸಲಿ ಎಂಬ ಒಮ್ಮತದ ಸೂಚನೆಗೈದರು

ಪುತ್ತೂರು ಡಿ. ಮು. ಕೋರ್ಟ್‌ನಲ್ಲಿ

R E P 121/62 O S 467/59

ಜೆ. ಜೆ ಕುಂಞ —ಅರ್ಜಿದಾರ.

ಕುಮಾರಯ್ಯ ಶೆಟ್ಟಿ ಉಮ್ಮು ಹೆಂಗಸರವಾಗ, ಬೆಳ್ತಂಗಡಿ ಕಸಬೆಯ ಶೆಟ್ಟಿಗಳ ಪೇಟೆ —ಎದ್ರಿ

ಡಿಕ್ರಿಗೆ ಜವಾಬ್ದಾರಿ ಇರುವ ಆಸ್ತಿ ಏಲಮಿಗೆ ಅರ್ಜಿದಾರನು ದಾಕಲು ಮಾಡಿದ ಈ ಅಮಲ್ಜಾರಿ ಮತ್ತು ಏಲಮಿಗೆ ನಿಲ್ಲುವರೆ ಪರ್ಮಿಶನ್ ಕೊಡಿಸಬೇಕೆಂತ ಅರ್ಜಿದಾರನು ದಾಕಲು ಮಾಡಿದ ಅರ್ಜಿ ಕೂಡಾ ತಾರೀಕು 31—7—62ಕ್ಕೆ ಇರುವುದರಿಂದ ಏನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿವಸ ಉಡಹರಿಸಿಕೊಳ್ಳತಕ್ಕದ್ದು ಇಷ್ಟಿದರೆ ನಿಮ್ಮ ಗೈರು ಹಾಜ್ರಿಯಲ್ಲಿ ಏಲಂ ಆಸ್ತಿ ಇರಿನ ಶರ್ತಗಳನ್ನು ನಿರ್ಣಯಿಸಲಾದೀತು.

B. Chidananda Rao
Vakil for petitioner

ಪುತ್ತೂರು, ತಾ. 15—7—62.

ಬಳಿಕ ಹಿರಿಯರಾದ ಶ್ರೀ ಕೃಷ್ಣ ಕುಮಾರ ಕಲ್ಲೂರು ಅವರು ತಮ್ಮ ನವೀನ ಪ್ರಯೋಗವಾದ ಕನ್ನಡ ಲಿಪಿಯ ಸುಧಾರಣೆಯ ಅನೇಕ ನವೀನ ಪ್ರಯೋಗಗಳನ್ನು ತೋರಿಸಿದರು. ಈ ಕುರಿತು ಹೆಚ್ಚಿನ ವಿವರಣೆಯನ್ನು ಮುಂದಿನ ಸಭೆಯಲ್ಲಿ ಮಾಡುವುದೆಂದು ತೀರ್ಮಾನಿಸಲಾಯಿತು. ಕೊನೆಗೆ ಕೂಟದ ಗೌರವ ಕಾರ್ಯದರ್ಶಿ ಶ್ರೀ ಶ್ರೀನಿವಾಸ ಹಾವನೂರ್ ಅವರು ಧನ್ಯವಾದ ಸಮರ್ಪಣೆಗೈದರು.

ದ. ಕ. ಜಿಲ್ಲಾ ಪ್ರಾಥಮಿಕ ಶಿಕ್ಷಕರ ಶಿಷ್ಟ ಮಂಡಲವು—ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಎ. ಪೈಯವರ ನೇತೃತ್ವದಲ್ಲಿ ತಾ. 19ರಂದು ಬೆಂಗಳೂರಲ್ಲಿ ಮಾನ್ಯ ಶಿಕ್ಷಣ ಸಚಿವ ಶ್ರೀ ಎಸ್. ಆರ್. ಕಂಠಿಯವರನ್ನು ಭೇಟಿಯಾಗಿ ತಮ್ಮ ಕೇಳಿಕೆಗಳ ಕುರಿತು ಮನವಿನ್ನರ್ಪಿಸಿ ವಿಚಾರ ವಿನಿಮಯ ನಡೆಸಿತು. ಈ ಸಂದರ್ಭದಲ್ಲಿ ವಿಧಾನ ಸಭಾಸದಸ್ಯ ಶ್ರೀ ಎಸ್. ಡಿ. ಸಾಮ್ರಾಜ್ಯರೂ ಶಿಕ್ಷಣ ಇಲಾಖೆಯ ಡೈರೆಕ್ಟರ್ ಮತ್ತು ಕಾರ್ಯದರ್ಶಿಗಳೂ ಉಪಸ್ಥಿತರಿದ್ದರು ಮಾನ್ಯ ಸಚಿವರು (1) ಸಂಬಳ ಬಟವಾಡೆಯಲ್ಲಾಗುವ ಅನಿಶ್ಚಿತತೆಯನ್ನು ತಪ್ಪಿಸಲು ಖಾಸಗಿ ಶಾಲೆಗಳ ಗ್ರಾಂಟ್ ಬಿಲ್ಲನ್ನು ಮಂಜೂರು ಮಾಡುವ ಅಧಿಕಾರವನ್ನು ಎ. ಇ. ಓ ರವರಿಗೆ ಕೊಡುವ ಕುರಿತಾಗಿಯೂ, ಜಿಲ್ಲಾ ಬೋರ್ಡಿನ ಶಾಲೆಗಳಿಗೆ ಆಡಿಟ್ ಸರ್ಟಿಫಿಕೇಟ್ ಕಾಯದೆ ಗ್ರಾಂಟ್ ರಿಲೀಸ್ ಮಾಡಲು ವ್ಯವಸ್ಥೆ ಮಾಡುವುದಾಗಿಯೂ (2) ಎಲ್ಲಾ ಆಡಳಿತೆಗಳೊಳಗಿನ ಪ್ರಾಥಮಿಕ ಶಿಕ್ಷಕರಲ್ಲಿ 10ಕ್ಕೊಬ್ಬರಂತೆ ಭಡ್ತಿ ಕೊಟ್ಟು ಅವರನ್ನು ಮುಖ್ಯೋಪಾಧ್ಯಾಯರನ್ನಾಗಿ, ವ, ಡಿಪ್ಯುಟಿ ಇನ್ಸ್‌ಪೆಕ್ಟರನ್ನಾಗಿ ನೇಮಿಸುವ ಕುರಿತು ಸರಕಾರವು ಪರಿಶೀಲಿಸುತ್ತಿರುವುದಾಗಿಯೂ (3) ಅಧ್ಯಾಪಕ ವಿದ್ಯಾರ್ಥಿ ನಿಷ್ಪತ್ತಿ 1:40 ಎಂಬುದನ್ನು ಹಾಜರಿಯ ಬದಲು ಸಂಖ್ಯೆಯಾಗಿ ಪರಿಗಣಿಸಲು ತಮ್ಮಿಂದ ಆಕ್ಷೇಪವಿಲ್ಲವೆಂದೂ ಆದರೆ ಅಧ್ಯಾಪಕರನ್ನು ಸರಕಾರದ ಸಮ್ಮತಿಯಿಲ್ಲದೆ ನೇಮಿಸ ಕೂಡದೆಂದೂ (4) ವೃತ್ತಿಪರ ಹಾಗೂ ಲೋವರ್ ಗ್ರೇಡ್ ಅಧ್ಯಾಪಕರಿಗೆ 1961ರ ವೇತನ ಮಾನವನ್ನು ಅನ್ವಯಿಸುವ ಕುರಿತು ವಿಶೇಷ ಸಹಾನುಭೂತಿಯಿಂದ ಪರಿಶೀಲಿಸಲಾಗುವುದೆಂದೂ (5) ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಪಾಸಾಗಲು ಬೇಕಾದ ಕನಿಷ್ಟ ಮಾರ್ಕಿಗಿಂತ 5 ಕಡಿಮೆ ಬಿಕ್ಕಿದವರನ್ನು ಎಸ್. ಎಸ್. ಎಲ್. ಸಿ. ಅಧ್ಯಾಪಕರಾಗಿ ಪರಿಗಣಿಸಲಾಗುವುದೆಂದೂ (6) ಮೈಸೂರು ರಾಜ್ಯದೊಳಗೆ ಬೇರೆ ಬೇರೆ ಆಡಳಿತೆಗಳ ಅಡಿಯಲ್ಲಿ ಮಾಡಿದ ಸೇವೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದೆಂದೂ (7) ಉಪಾಧ್ಯಾಯರ ನಿವೃತ್ತಿ ಪ್ರಾಯವನ್ನು 58ಕ್ಕೇರಿಸುವ ಕುರಿತು ಪರಿಶೀಲಿಸಲಾಗುವುದೆಂದೂ ಭರವಸೆಯಿತ್ತರಲ್ಲದೆ ಪ್ರಾಥಮಿಕ ಶಾಲೆಗಳ ಆಡಳಿತೆಗಳ ಕುರಿತು ಈ ವರೆಗೆ ನಿರ್ಣಯ ಕೈಕೊಳ್ಳದಿರುವುದರಿಂದ ಅನೇಕ ಸಮಸ್ಯೆಗಳು ಉದ್ಭವಿಸಿವೆಯೆಂಬುದನ್ನು ಒಪ್ಪಿಕೊಂಡು ಅವನ್ನು ಶೀಘ್ರದಲ್ಲಿಯೇ ನಿರ್ಣಯಿಸುವುದಾಯೂ ತಿಳಿಸಿದರು. ಶಿಷ್ಟ ಮಂಡಳಿಯಲ್ಲಿ ಶ್ರೀಗಳಾದ ಬಿ. ವೆಂಕಟರಾವ್, ಕೆ. ದಾಸಪ್ಪ, ಕೆ. ಭೋಜ ಪೂಜಾರಿ, ಎಡ್. ಎಸ್. ಶ್ಯಾಮ ಭಟ್, ಜಿ ಎಮ್. ಮಹಮ್ಮದ್, ಬಿ. ಕೋಡ್ರಾಸ್ ಮತ್ತು ಮುಂಡಪ್ಪರಿದ್ದರು.

ಬೆಂಗಳೂರಲ್ಲಿ ಮಧ್ವರಾಜರಿಗೆ ಸತ್ಕಾರ—ತಾ 15-7-62ರಂದು ಬೆಂಗಳೂರು ಮೊಗವೀರರು ಶ್ರೀ ಎಮ್. ಮಧ್ವರಾಜ್ ಎಮ್ ಎಲ್. ಎ. ಇವರಿಗೆ ಬೆಂಗಳೂರು ಎನ್. ಎಮ್. ಸಿ. ಯಲ್ಲಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿ ಸತ್ಕರಿಸಿದರು. ದ. ಕ. ಜಿಲ್ಲಾ ಕಾಂಗ್ರೆಸ್ ಸಮಿತಿಯ ಅಧ್ಯಕ್ಷ ಶ್ರೀ ಟಿ. ಎ ಪೈಯವರು ಅಂದಿನ ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು.

ಶ್ರೀ ಮಧ್ವರಾಜರು ತನಗೆ ಸತ್ಕಾರವನ್ನು ಏರ್ಪಡಿಸಿದ ಮೊಗವೀರ ಬಂಧುಗಳ ಉಪಕಾರವನ್ನು ಸ್ಮರಿಸುತ್ತಾ ಸರಕಾರದವರು ಪಂಚವಾರ್ಷಿಕ ಯೋಜನೆಯಲ್ಲಿ ಮೀನುಗಾರಿಕೆಯ ಅಭಿವೃದ್ಧಿಗೋಸ್ಕರ ಕೈಕೊಳ್ಳಲಾಗುವ ಹಲವು ಯೋಜನೆಗಳನ್ನು ವಿವರಿಸಿ ಯಾಂತ್ರಿಕ ದೋಣಿಗಳ ಮೂಲಕವಾಗಿ ಉದ್ಯೋಗವನ್ನು ಮೀನುಗಾರರು ಕೈಕೊಳ್ಳಬೇಕೆಂದೂ, ಇದರಿಂದಲೇ ಅವರ ಆರ್ಥಿಕ ಸಮಸ್ಯೆಯನ್ನು ಬಿಡಿಸಲು, ಸುಲಭವಾಗುತ್ತದೆಂದೂ ಮುಂತಾಗಿ ನುಡಿದರು.

ಶ್ರೀ ಟಿ. ಎ. ಪೈಯವರು ಶ್ರೀ ಮಧ್ವರಾಜರು ಬರೇ ಮೊಗವೀರರ ಪ್ರತಿನಿಧಿಯಾಗಿ ಚುನಾಯಿಸಿ ಬರಲಿಲ್ಲ; ಅವರು ಉಡ್ಪಿಯ ಮತದಾರ ಕ್ಷೇತ್ರದ ಸರ್ವ ಜನರ ಪ್ರತಿನಿಧಿಯಾಗಿ ಆರಿಸಿ ಬಂದಿದ್ದಾರೆ; ಯೋಗ್ಯರಾದವರು ಯಾವದೇ ಜಾತಿ ಅಥವಾ ಜನಾಂಗದವರಾಗಲೀ ಅಂಥವರಿಗೆ ಮುಂದಾಳುತ್ವವನ್ನು ಕೊಟ್ಟು ಜಾತ್ಯಾತೀತ ಜನಾಂಗವನ್ನು ಕಟ್ಟಿ ನಮ್ಮ ದೇಶದ ಪ್ರಗತಿಯನ್ನು ಮಾಡಬೇಕೆಂದೂ, ಫಿಶರಿಸ್ ಹೈಸ್ಕೂಲುಗಳಲ್ಲಿ ಮೀನು ಕೈಗಾರಿಕೆಗೆ ಅನುಕೂಲವಾಗುವಂತೆ ಫಿಶರೀಸ್ ಟೆಕ್ನಾಲಜಿ ಶಿಕ್ಷಣವನ್ನು ಕೊಡುವಂತೆ ಏರ್ಪಾಡು ಮಾಡಲಾಗುತ್ತದೆಂದೂ ಮುಂತಾಗಿ ಹೇಳಿದರು.

ಶ್ರೀ ಜೆ. ಸಿ. ಅಮೀನರು ಧನ್ಯವಾದವನ್ನು ಅರ್ಪಿಸಿದರು.

ವಿದೇಶ ಪ್ರವಾಸ— ಮೈಸೂರು ಸರಕಾರದ ಫಿಶರಿಸ್ ಸುಪರಿಂಟೆಂಡೆಂಟ್‌ರಾದ ಶ್ರೀ ಬಾಡೂರು ಶಾಂತಾರಾಮ ರೈಯವರು ಮಂಗಳೂರಿನಲ್ಲಿ ಬೇಗನೆ ಸ್ಥಾಪಿಸಲ್ಪಡಲಿರುವ ಮತ್ಸ್ಯ ಜೋಪಾಸನಾ ತರಬೇತೀ ಕೇಂದ್ರದ ಸಂಬಂಧವಾಗಿ ವಿಶೇಷ ತರಬೇತಿ ಹೊಂದಲು ಇದೇ ತಾ. 12ರಂದು ಜಾಪಾನಿಗೆ ತೆರಳಿದರು.

ಡೆವಲಪ್‌ಮೆಂಟ್ ಆಫೀಸರರ ಸಭೆ— ಉಡುಪಿ ಶಾಖೆಯ ಲ್ಯಾಫ್ ಇನ್ಶೂರೆನ್ಸ್ ಕಾರ್ಪೊರೇಶನಿನ ಡೆವಲಪ್‌ಮೆಂಟ್ ಆಫೀಸರರ ಸಭೆಯೊಂದು ತಾ. 11.7.62ರಂದು ಉಡುಪಿ ಜೀವನ ಕುಟೀರ ಶಾಖಾ ಬಜೀರಿಯಲ್ಲಿ ಸೀನಿಯರ್ ಡಿವಿಜನಲ್ ಮೆನೇಜರ್ ಶ್ರೀ ಟಿ. ಆರ್. ಎ. ಪೈಯವರ ಅಧ್ಯಕ್ಷತೆ ಜರಗಿತು. ಡೆವಲಪ್‌ಮೆಂಟ್ ಆಫೀಸರರನ್ನು ಸ್ವಾಗತಿಸುತ್ತಾ ಬ್ರಾಂಚ್ ಮೆನೇಜರ್ ಶ್ರೀ ಟಿ. ಸಿ. ಎನ್ ನಂಬಿಯಾರರು ಶಾಖಾ ವಿಮಾ ವ್ಯವಹಾರದಲ್ಲಿ ಈವರೆಗಾದ ಪ್ರಗತಿ ಮೊದಲಾದುವನ್ನು ವಿವರಿಸಿದರು. ಶ್ರೀ ಟಿ ಆರ್. ಎ. ಪೈಯವರು ಸಭೆಯನ್ನು ಉದ್ಘಾಟಿಸುತ್ತಾ ಡೆವಲಪ್‌ಮೆಂಟ್ ಆಫೀಸರರು ತಮ್ಮ ವ್ಯವಹಾರದಲ್ಲಿ ಹೇಗೆ ಪ್ರಗತಿ ಸಾಧಿಸಬಹುದೆಂಬುದನ್ನು ವಿವರಿಸಿದರು. ಅಸಿಸ್ಟಾಂಟ್ ಡಿವಿಜನಲ್ ಮೆನೇಜರ್‌ಗಳಾದ ಶ್ರೀ ಜಿ ವೆಂಕಟ ಸುಬ್ಬಯ್ಯ ಮತ್ತು ಸಿ ಎಸ್. ರಾಮಚಂದ್ರನ್ ಇವರು ಉಪಯುಕ್ತ ಸಲಹೆ ಸೂಚನೆಗಳನ್ನಿತ್ತರು. ವಿವರವಾದ ಸಮಾಲೋಚನೆ ನಡೆದ ಬಳಿಕ ಅಸಿಸ್ಟಾಂಟ್ ಬ್ರಾಂಚ್ ಮೆನೇಜರ್ ಶ್ರೀ ಸಿ. ಎಸ್. ಕುತ್ತೆತ್ತೂರು ಇವರು ವಂದನೆಗಳನ್ನರ್ಪಿಸಿದರು.

ಕಾಲೇಜ್ ಯೂನಿಯನ್ ಉದ್ಘಾಟನೆ— ಕಾರ್ಕಳದ ಶ್ರೀ ಭುವನೇಂದ್ರ ಕಾಲೇಜ್ ಯೂನಿಯನಿನ ಉದ್ಘಾಟನಾ ಸಮಾರಂಭವು ಇದೇ ತಾ. 19ರಂದು ಮಣಿಪಾಲದ ಎಕೇಡಮಿ ಆಫ್ ಜನರಲ್ ಎಜ್ಯುಕೇಶನಿನ ರಿಜಿಸ್ಟ್ರಾರ್ ಡಾ. ಟಿ. ಎಂ. ಎ. ಪೈಯವರಿಂದ ಯೂನಿಯನ್ ಅಧ್ಯಕ್ಷ ಸಿ. ಶ್ರೀನಿವಾಸ ಶೆಣೈಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಪ್ರಿನ್ಸಿಪಾಲ್ ಶ್ರೀ ದಾಮೋದರ ಕಿಣಿಯವರು ಸ್ವಾಗತಿಸಿ ಅತಿಥಿಗಳ ಪರಿಚಯಗೈದರು ಡಾ. ಪೈಗಳು ಉದ್ಘಾಟಿಸುತ್ತಾ ವಿದ್ಯಾರ್ಥಿಗಳು ಯಾವಾಗಲೂ ನಿಷ್ಕಲ್ಮಶ ಮುಖಭಾವಗಳಿಂದಿರಬೇಕೆಂದರು ಆನಂತರ ಹಾಡು ವೇಣುವಾದನ ನಡೆದು ಕಾರ್ಯದರ್ಶಿ ಶ್ರೀ ಗೋಪಾಲಕೃಷ್ಣ ರಾಯರಿಂದ ವಂದನಾರ್ಪಣೆಯಾಯಿತು.

ಯಕ್ಷಗಾನ ತರಬೇತಿ ಕೇಂದ್ರ— ಇದೇ ತಾ. 15ರಂದು ಉಡುಪಿಯಲ್ಲಿ ಶ್ರೀ ಶಿವರಾಮ ಕಾರಂತರ ನೇತೃತ್ವದಲ್ಲಿ ಎರಡು ತಿಂಗಳ ಕಾಲಾವಧಿಯ ಯಕ್ಷಗಾನ ತರಬೇತಿ ಕೇಂದ್ರವೊಂದು ಆರಂಭಿಸಲ್ಪಟ್ಟಿದೆ. ಈ ಕೇಂದ್ರದಲ್ಲಿ ಹನ್ನೆರಡು ಮಂದಿ ನೃತ್ಯ ಕಲಾವಿದರೂ ಏಂಟು ಜನ ಹಿಮ್ಮೇಳದ ಕಲಾವಿದರೂ ಇರುವರು. ಯಕ್ಷಗಾನ ಬಯಲಾಟ ಪದ್ಧತಿಯಲ್ಲಿರುವ ಒಳ್ಳೇದನ್ನು ಉಳಿಸಿ ಬೆಳೆಸುವುದೇ ಕೇಂದ್ರದ ಪ್ರಾಮುಖ್ಯ ಉದ್ದೇಶವಾಗಿರುವುದೆಂದು ಶ್ರೀ ಕಾರಂತರು ಅಭ್ಯರ್ಥಿಗಳನ್ನುದ್ದೇಶಿಸಿ ಮಾತನಾಡುತ್ತ ತಿಳಿಸಿದರು. ಅಲ್ಲದೆ ನಿಜವಾದ ಯಕ್ಷಗಾನ ಕಲಾವಿದನು ಹೇಗಿರಬೇಕೆಂಬುದನ್ನು ವಿವರಿಸಿ ಈ ಕೇಂದ್ರಕ್ಕೆ ತನ್ನ ಮುಂಬಾಯಿಯ ಕೆಲ ಮಿತ್ರರು ಸಹಕಾರ ನೀಡಲು ಮುಂದಾದರೆಂದೂ, ಸರಕಾರವೇನೂ ಸಹಾಯ ಕೊಟ್ಟಿಲ್ಲವೆಂದೂ, ಇಲ್ಲಿ ಸಿದ್ಧಗೊಳಿಸಿದ ಪ್ರಯೋಗಗಳನ್ನು ಮಾತ್ರ ಮುಂಬಾಯಿಯಲ್ಲಿ ಪ್ರಯೋಗಿಸಬೇಕಾಗುವುದೆಂದೂ ತಿಳಿಸಿದರು. ಶ್ರೀ ಉಪ್ಪೂರು ನಾರಾಯಣ ಭಾಗವತರು ಪ್ರಾರಂಭದಲ್ಲಿ ಶ್ರೀ ಕಾರಂತರ ಉದ್ದೇಶ ಸಾಂಗವಾಗಲೆಂದು ಹಾರೈಸಿದರು.

ಹೈಸ್ಕೂಲ್ ಪ್ರಾರಂಭೋತ್ಸವ- ಎರ್ಮಾಳಿನಲ್ಲಿ ಹೊಸತಾಗಿ ತೆರೆಯಲಾಗಿರುವ ಗವರ್ನಮೆಂಟ್ ಫಿಶರೀಸ್ ಹೈಸ್ಕೂಲಿನ ಪ್ರಾರಂಭೋತ್ಸವವನ್ನು ಇದೇ ತಾ 20ರಂದು ಶ್ರೀ ಎಂ. ಮಧ್ವರಾಜ ಎಂ. ಎಲ್. ಎ. ಅವರು, ಶ್ರೀ ಟಿ ಎ. ಪೈಯವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು.

ಭಜನೆ ಸಪ್ತಾಹ—ಉಡುಪಿ ಶ್ರೀ ಕೃಷ್ಣ ವೆಂಕಟೇಶ ದೇವಸ್ಥಾನದಲ್ಲಿ ತಾರೀಕು 6—8—62ರಿಂದ ತಾ. 13ರ ವರೆಗೆ ವಾಡಿಕೆಯಂತೆ ಭಜನೆ ಸಪ್ತಾಹವು ನೆರವೇರಲಿರುವುದೆಂದೂ ಸರ್ವರೂ ಬಂದು ಶ್ರೀ ದೇವರ ಶ್ರೀ ಮುಡಿ ಗಂಧಪ್ರಸಾದಗಳನ್ನು ಸ್ವೀಕರಿಸ ಬೇಕೆಂದೂ ಆಡಳಿತೆ ಮೊಕ್ತೇಸರ್ ಡಾ| ಪಿ. ರಾಘವೇಂದ್ರ ನಾಯಕರು ಅಪೇಕ್ಷಿಸುತ್ತಾರೆ.

ಪುಸ್ತಕ ಮತ್ತು ಬಟ್ಟೆ ವಿತರಣಾ ಸಮಾರಂಭ— ಉಡುಪಿ ಮೋಡರ್ನ್ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ ಪ್ರತಿ ವರ್ಷವೂ ನಡೆದುಕೊಂಡು ಬರುತ್ತಿದ್ದ ಬಡ ವಿದ್ಯಾರ್ಥಿಗಳಿಗೆ ಪುಸ್ತಕ ಹಾಗೂ ಡ್ರೆಸ್ ವಿತರಣಾ ಸಮಾರಂಭವು ತಾ 28—7—62ರಂದು ಶ್ರೀ ಎ. ಜೆ. ಅಲ್ಸೆಯವರ ಅಧ್ಯಕ್ಷತೆಯಲ್ಲಿ ಜರಗಿತು. ಶಾಲಾ ಮೆನೇಜರ್ ಶ್ರೀ ಕೆ. ಜಗನ್ನಾಥ ನಾಯ್ಕರು ಸ್ವಾಗತ ಭಾಷಣ ಮಾಡಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀಮಾನ್ ಟಿ. ಎ. ಪೈಗಳವರು ಬಡ ಮಕ್ಕಳಿಗೆ ಪುಸ್ತಕ ಹಾಗೂ ಡ್ರೆಸ್ ವಿತರಣೆ ಮಾಡಿದರು. 63 ಮಂದಿ ವಿದ್ಯಾರ್ಥಿಗಳಿಗೆ ಉಡುಪು ಹಾಗೂ 45 ಮಂದಿ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನು ಹಂಚಲಾಯಿತು. ಕೊನೆಯಲ್ಲಿ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಎಚ್. ಎಲ್. ಭಟ್ಟರು ಧನ್ಯವಾದ ಸಮರ್ಪಿಸಿದರು.

ಕೆಥೋಲಿಕ್ ಯುನಿವರ್ಸಿಟಿ-ವಿದ್ಯಾರ್ಥಿ ಫೆಡರೇಶನ್— ಇದರ ಮೈಸೂರು ಪ್ರಾಂತ್ಯದ ಅಧ್ಯಕ್ಷರಾಗಿ ಶ್ರೀ ಶಿರ್ವಾಡಿ ವಿಲಿಯಂ ಪಿಂಟೊ, ಕಾರ್ಯದರ್ಶಿಯಾಗಿ ಶ್ರೀ ಎಡಿಸನ್ ಫೆರ್ನಾಂಡೊ ಇವರು ತಾ. 22ರಲ್ಲಿ ನಡೆದ ಪ್ರಾಂತೀಯ ಪ್ರತಿನಿಧಿಗಳ ಅಧಿವೇಶನದಲ್ಲಿ ಆರಿಸಿ ಬಂದಿದ್ದಾರೆ.

ಉಡುಪಿಗೆ ಈ ಫೆಡರೇಶನಿನ ಕೇಂದ್ರ ಕಚೇರಿ ಬರುತ್ತಿರುವುದು—ಈ ಅಧಿವೇಶನ ನಡೆಯುತ್ತಿರುವುದು ಪ್ರಥಮ ಬಾರಿ ಆಗಿದೆ.

NOTICE

IN THE COURT OF THE DISTRICT MUNSIF PUTTUR, S. K.

R. E P. 113/62 in O. S. 38/61

Shankaranarayana Bhat —Petitioner.

Narayana Bhat —Respondent.

To Narayana Bhat S/o. Parthaje Venkatramana Bhat, residing at Moorkaje of Vittal Padnur Village, Buntwal Tq. S Kanara-
P. O. KODAPADAU

Please take notice that the above Execution petition is posted to 7-8-62, for the service of a Pro-order against you in respect of the attachment of your immovable property described in the petition. If you fail to appear befor the above Court at 10 A M. on 7—8—62 in person or through pleader, the court will proceed in your absence to take further steps.

By order of the Court.

(Sd.) V. M. Bhat,
Advocate for Petitioner.

Puttur, 13—7—62.

ಸಮಾಜದ ನಡುವೆ

ಬುರುಕೆಯೊಳಗಿನ ಜೀವನ

—"ಸಿರಿಪತಿ"

ಮುಸಲ್ಮಾನ ಜನಾಂಗದಲ್ಲಿ ಮಹಿಳೆಯರು ವೈನೇಲೆ, ಬುರುಕೆ ಹಾಕಿಕೊಳ್ಳುವರು. ಇದರಿಂದಾಗಿ ಹೆಂಗಸರು ಪರರನ್ನು ನೋಡಬಹುದು. ಆದರೆ ಇತರರು ಅವರನ್ನು ನೋಡಲಾರರು. ಈ ಬುರುಕೆ ಧರಿಸುವ ಕ್ರಮ ಇಂದಿಗೂ ಹಲವರಲ್ಲಿ ಇದೆ.

ಕಳೆದ ಬಂಗಾರದ ಸಾಗಾಟದ ಸಮಯದಲ್ಲಿ ಮೊದಮೊದಲು ಉದರಿಂದ ಕೆಲವರಿಗೆ ಸದುಪಯೋಗವಾಯಿತು ಕೆಲ ಗಂಡಸರೂ ಸೆಂಡಲ್ಸು ಹಾಕಿ ಬುರುಕೆ ಧರಿಸಿ—ಗೋವಾ ಪಾಕಿಸ್ತಾನ ಗಡಿಯಿಂದ ವಿದೇಶಿ ಬಂಗಾರ ತಂದು ನಮ್ಮ ದೇಶದಲ್ಲಿ ಮಾರ ತೊಡಗಿದ್ದರು' ಅದು ಹೇಗೊ ಬಹಿರಂಗವಾಗಿ ಈ ಬಗ್ಗೆ ಪ್ರತ್ಯೇಕ ತಪಾಸಣೆ ವಿಭಾಗವನ್ನು ನಿಯೋಜಿಸಲಾಗಿದೆ. ಇಂದಿಗೂ ಕಲ ಶಹರಗಳಲ್ಲಿ ಈಚರದ ಬುರುಕೆ ಧರಿಸಿ ಜೇಬು ಕತ್ತರಿಸುವ ದಂಧೆಯಲ್ಲಿ ಪ್ರವೀಣರಾದ ರಹರದ 'ಅವಾಂತ' ಜನರನ್ನು ನಾವು ತಿಳಿದಿದ್ದೇವೆ.

ನಮ್ಮ ದೇಶದಲ್ಲಿ ಮನೆಬಿಟ್ಟು ಯಾ ಮನೆಯಲ್ಲಿ ಜಗಳಾಡಿ ಊರು ತ್ಯಜಿಸಿ ಓಡಿ ಹೋಗುವ ಕೆಲವರು ಮೋಲೀಸರೂ ಹಾಗೂ ಇತರ ಪರಿಚಿತರೂ ತಮ್ಮನ್ನು ಗುರುತಿಸಬಾರದೆಂದು ಈ ಬುರುಕೆಯ ಸದುಪಯೋಗ ಮಾಡಿಕೊಂಡ ಉದಾಹರಣೆಗಳಿವೆ ಕಲಿಯಲು ಮನಸ್ಸಿಲ್ಲದೆ, ಮನೆಯಲ್ಲಿ ತಂದೆ ತಾಯಿಗಳಿಂದ ಹೇಳಿಸಿಕೊಂಡು ಇರಲು ಸಾಧ್ಯವಾಗದೆ ಇತ್ತ ಶಾಲೆ ಕಾಲೇಜಿನಲ್ಲಿ ಪ್ರತಿ ವರ್ಷವೂ ವಾಸುವಾಡಲಾಗದೆ ಊರುಬಿಟ್ಟು ಓಡಿ ಹೋಗುವ ಹುಡುಗರೂ ಈ ಬುರುಖಾದೊಳಗೆ ಸೇರಿ ತಮ್ಮ ವೇಷ ಮರೆಸಿಕೊಂಡ ಉದಾಹರಣೆಯೂ ಇದೆ.

ಮುಸಲ್ಮಾನರಲ್ಲಿ ನಡೆದ ಸ್ವೇಮಸಣದ ಉದಾಹರಣೆ—ನೋಡಿ! ಅವರಲ್ಲಿ ವಧುವರರು ಲಗ್ನಪೂರ್ವ ಒಬ್ಬರಿಗೊಬ್ಬರು ನೋಡುವ ಸಂಭವವೇ ಇಲ್ಲವೆನ್ನಬೇಕು. ತಂದೆ-ಮಾವಂದಿರೋ ತಾಯಿ-ಅತ್ತೆಂದಿರೋ ಹೇಳಿದಂತೆ ಲಗ್ನವಾಗಲು ಹವಣಿಸಿದ ಒಬ್ಬ ಯುವಕ ಮೊನ್ನೆ ತನ್ನ ಭಾವಿ ಪತ್ನಿಗೆ ಲೇಖವೊಂದನ್ನು ಕಳಿಸಿದ! ಆದರಲ್ಲಿ ಅವನು ಅವಳನ್ನು ಒಮ್ಮೆ ಲಗ್ನದ ಪೂರ್ವ ನೋಡಲು ಹವಣಿಸಿದ್ದ—ಅಂತೇಯೇ ಅವಳೂ ನೋಡಲು ಹವಣಿಸಿರಲೇ ಬೇಕು ಸ್ವಭಾವಿಕ ಅಥವಾ-ಅವಳು ನೋಡಿರಲೂ ಬಹುದು"—ಯಾಕಂದರೆ ಬುರುಕೆಯ ಒಳಗಿದ್ದ ಅವಳು ಹೊರಗಿನ ವರನ್ನು ಕಾಣಬಹುದಲ್ಲವೇ?—ಯುವಕ ನಾದರೋ ಆಧುನಿಕ' ಸ್ವಭಾವದವ! ಕೇವಲ ಫೋಟೋ ದರ್ಶನದಿಂದ ಅವನು ನಂಬವಂತರಿಲ್ಲ! ದೊಡ್ಡ ಮನೆತನದ ಹುಡುಗನನ್ನು ಕಳೆದುಕೊಳ್ಳಲು ಮನಸ್ಸಿಲ್ಲದೆ ವಧುವಿನ ತಾಯಿ ಮಗಳನ್ನು ಕರಕೊಂಡು ನಾಂಕೇತಿಕ ಸ್ಥಳಕ್ಕೆ ಬಂದಳು! ಮೊದಲೇ ಯೋಚಿಸಿದಂತೆ ಸ್ನೇಮಳಕ್ಕೆ ಹೋಗುವದೆಂದೆಣಿಸಿ—ಯಾವರೂ ಬುರುಕೆ—ಧರಿಸಿ ಸ್ನೇಮಳಕ್ಕೆ ಹೋದರು"—ಸ್ನೇಮೊದ ಮಧ್ಯೆ ಮಧ್ಯೆ ಪಟ್ಟಿ ಹರಿದಾಗ ಬುರುಕೆ ಆನಾವರಣ ಮಾಡಿ ಕುಳಿತಾಗಲೇ ವಧುವರರು ಪರಸ್ಪರ ನೋಡಿಕೊಳ್ಳಲು ಅವಕಾಶ—ಕೊನಗೂ ವಧು ಪರೀಕ್ಷೆಯಲ್ಲಿ ವಧುವಿನ --ಬಾಯಿ ಕೊಳ್ಳಿಳಿ—(ಉಗ್ಗು ಬಾಯಿನ) ಎಂಬುದನ್ನರಿತವಳು—ಮದುವೆಯೂಡಲು ನಿರಾಕರಿಸಿದ್ದ

ಒಮ್ಮೆ ನಾನು ಪಂಜಾಬಿನಲ್ಲಿರುವಾಗ ನಮ್ಮ ಕಚೇರಿಯ ಪೇದೆಯೊಬ್ಬ ಲಗ್ನ ಮಾಡಿಕೊಂಡ ''ಲಗ್ನದ ದಿನವೇ ನಮಗೆ ಅವನು ತನ್ನ ಲಗ್ನವಾಯಿತೆಂದು ತಿಳಿಸಿದ್ದು"—ಕತೆ ಹೀಗಿದೆ.

ಪಂಜಾಬಿನಲ್ಲಿ ಗಂಡಸರ ಸಂಖ್ಯೆ ಹೆಚ್ಚು ಸ್ತ್ರೀಯರು ವಿರಳ ಹಿಮಾಚಲ ಪ್ರದೇಶ, ಕಾಶ್ಮೀರ ಕಡೆಯಿಂದ ಯಾ ಉತ್ತರ ಪ್ರದೇಶದಿಂದ ಹೆಣ್ಣುಗಳನ್ನು ಶರುವದು ರೂಢಿ ಕಾಶ್ಮೀರದಲ್ಲಿಯವರು ಹೆಚ್ಚಾಗಿ ಸಂಪನ್ನರು. ಉತ್ತರ ಪ್ರದೇಶದವರೂ ಹಾಗೆಯೇ, ಆ ಕಡೆಯ ಹೆಣ್ಣುಗಳು ಸಂಪತ್ತಿಗರ ಮನೆ ಸೇರುವವು—ಸಾಮಾನ್ಯ ಹಾಗೂ ಕಡಿಮೆ ದರ್ಜೆಯ ಮನೆಗಳಲ್ಲಿ ಹಿಮಾಚಲ ಅಡವಿಯ ಹೊಟ್ಟೆಯ ಪಾಡೇ ಕಠಿಣವೆನಿಸುವ ಹಳ್ಳಿಯ ಹುಡುಗಿಯರನ್ನು ತರುವರು—ಯಾ ಕೊಂಡು ತರುವರು.

ಹಿಮಾಚಲದ ಅಡವಿ ಹಾಗೂ ಹಳ್ಳಿಗಳಲ್ಲಿ ಹೆಣ್ಣು ಮಕ್ಕಳು ಅಧಿಕ. ಕೆಲವೊಮ್ಮೆ ಮನೆಯಲ್ಲಿ ಏಳೆಂಟು ಹೆಣ್ಣುಮಕ್ಕಳು ಇರುವುದೂ ಇದೆ ಇಲ್ಲಿಯು ಕಾಡಿನಲ್ಲಿರುವವರಂತೂ, ಮಳೆ ಹಾಗೂ ಛಳಿಗಾಲದಲ್ಲಿ ತಮ್ಮಲ್ಲಿಂದ ತೆರಳಿ ಶಹರ ಪಟ್ಟಣಗಳಲ್ಲಿ ಕೂಲಿ ಕೆಲಸ ಮಾಡುವರು. ತಮ್ಮ ಮಕ್ಕಳನ್ನು ಊರಲ್ಲಿಯ ಧನಿಕರಿಗೆ ಮಾರಿಬಿಡುವರು. ಇಂತಹ ಲಗ್ನದಲ್ಲಿ ಕೆಲ ಪೊಮ್ಮೆ ಹೆಣ್ಣು ಮಕ್ಕಳು ತಮ್ಮ ಜೀವನದಲ್ಲಿ ಅತ್ಯಪ್ತಿಗೊಂಡು ಅಡ್ಡ ಹಾದಿ ಹಿಡಿಯುವುದೂ ಇದೆ. ಇಲ್ಲವೆ, ಇಳಿ ವಯಸ್ಸಿನ ಪತಿಯನ್ನಗಲಿ ಮೃತಜೀವಿಗಳಾಗಿ ವಿಧವೆಯರು ಮಾಡುವುದೂ ಇದೆ.

ನಮ್ಮ ಪೇದೆಯ ಲಗ್ನ ವಿಚಿತ್ರವಾಗಿತ್ತು" ಕೇಲ್ಲೆ ನಿಲ್ದಾಣದಲ್ಲಿ ಸಂಜೆ ತಿರುಗಾಡಲು ಹೋದವನು ಬುರಕೆ ಧರಿಸಿ ಅಳುತ್ತಲಿದ್ದ ಮಹಿಳೆಯೊಬ್ಬಳನ್ನು ನೋಡಿ ಅವಳು ಯಾರು—ಎಲ್ಲಿಗೆ ಹೊರಟವಳೆಂದು ಕೇಳಿದನಂತೆ-ಅವಳಾದರೋ ಹೊಸಲಲದಲ್ಲಿ ತನ್ನವರನ್ನೆಲ್ಲ ಕಳಕೊಂಡಿರುವಳೆಂದೂ ಒಬ್ಬನೇ ಅಣ್ಣನಿರುವನೆಂದು ತನ್ನ ಗಂಡನನ್ನೂ ಕಳಕೊಂಡು ವಿಧವೆಯಾಗಿ ತವರಿಗೆ ಊರಿಗೆ ಹೊರಟಿರುವಳೆಂದೂ ತಿಳಿಸಿದಾಗ ಮಾತಿನ ಮಧ್ಯೆ ವಯ್ಯಾರದ ನಾಚಿಕೆಯಿಂದ ನಮ್ಮ ಪೇದೆ ಯೊಡನೆ ತನ್ನನ್ನು ಲಗ್ನವಾಗುವಿಯಾ ಎಂದು ಕೇಳಿದೊಡನೆ ಸಿದ್ಧನಾಗಿಯೇ ಇದ್ದ-ನಮ್ಮ ಪೇದೆ ಅವಳನ್ನು ತಮ್ಮ ಮನೆಗೆ ಕರೆದು ತಂದು ಮರುದಿನ ಬೆಳಿಗ್ಗೆ—'ಪಂಡಿತಜಿ'ಯವರ ಸಾಕ್ಷ್ಯದಲ್ಲಿ ಲಗ್ನವಾಗಿಯೇ ಬಿಟ್ಟ!" ಅಂತೂ ಅವಳನ್ನು ಪೋಲೀಸರ ಕಾಟದಿಂದ ತಪ್ಪಿಸಿದ್ದ.

ನಮ್ಮ ಪೇದೆ ವಿಧವೆಯನ್ನು ಲಗ್ನವಾದ ಮೂರು ದಿನಗಳಲ್ಲಿಯೇ ವಿಧುರನಾದ ವರ್ತಮಾನ ನಮಗೆ ತಿಳಿದದ್ದು ಅವನು ನಾಲ್ಕನೇ ದಿನ ಇಳಿ ಮೋರೆ ಹಾಕಿ ಕಚೇರಿಗೆ ಬಂದಾಗ! ಅವಳ ಸಾಧಾರಣ ಸೌಂದರ್ಯಕ್ಕೆ ಮನಸೋತು, ವಿಶ್ವಾಸದಿಂದ ತನ್ನ ಗಳಿಕೆಯನ್ನೆಲ್ಲಾ ಸೇರಿಸಿ—ಒಂದೇ ದಿನದಲ್ಲಿ ಅವಳಿಗೆ—ಮೈತುಂಬ ಆಭರಣ ಮಾಡಿಸಿದ್ದ ಆತ! ಆದರೆ ಅವಳು ಹಗಲಿನಲ್ಲಿಯೇ ಸಾಯಂಕಾಲ ಪಲ್ಲೆಕಾಯಿ ತರಲು ಪೇಟೆಗೆ ಹೋದವಳು ಮತ್ತೆ ತಿರುಗಿ ಬಂಲಿಲ್ಲ—ಮೂರುದಿನ ಒಬ್ಬ ಪತಿಯೊಡನಿದ್ದು—ಸಾವಿರ ರೂಪಾಯಿಯ ಬಂಗಾರ ದೋಚಿಕೊಂಡು ಓಡಿದ್ದಳು—ಚದುರೆ—ಇಂದು ಅವಳು ಇಷ್ಟರಲ್ಲಿ ಇನ್ನೊಬ್ಬನೊಡನಿರಬಹುದು!—

ಇಂತಿದೆ ಬುರಕೆಯೊಳಗಿನ ಜೀವನ—



ಅಣುಶಕ್ತಿಯನ್ನ ಅಮೆರಿಕೆಯಲ್ಲಿ ವಿಶೇಷವಾಗಿ ಬಳಸಲಾಗ ತ್ತಿದೆ. ಇದರಿಂದ ನಾವಿಕರು ಜೀವಕನ್ನು ಇಳಸಿಬಿಟ್ಟರು.

ಚಿಂತೆಯಿಂದ ಯಾವಾಗಲೂ ದೂರವಿರಿ

(ಜನೇ ಪುಟದಿಂದ)

ರಾಧವಲ್ಲ. ತಮ್ಮ ಚಿಂತೆಯಿಂದ ಇತರರಿಗೆ ಯಾಕೆ ದುಃಖವನ್ನುಂಟು ಮಾಡಬೇಕು ಎಂಬ ವಿಚಾರಧಾರೆ ಕೆಲವರದು. ಆದರೆ, ಹೀಗೆ ತಿಳಿದು ಸುಮ್ಮನಿರುವುದೆಂದರೆ, ಅದನ್ನ ಅಕ್ಷಮ್ಯ ಅಪರಾಧವೆಂದೇ ಕರೆಯಬೇಕಾಗುತ್ತದೆ ನಿಮ್ಮನ್ನು ಏನಾದರೂ ಚಿಂತೆ ಆವರಿಸಿದೆಯೆಂಬುದನ್ನು ತಿಳಿದುಕೊಳ್ಳುವುದು ಅವರಿಗೆ ಸುಲಭದಲ್ಲಿ ಸಾಧ್ಯವೆನಿಸುವುದಿಲ್ಲ ಎಂತಲೇ ಚಿಂತೆ—ಸಂಕಷ್ಟಗಳ ಬಗೆಗೆ ನಿಮ್ಮ ಪ್ರಾಣಮಿತ್ರರೊಡನೆ ಚರ್ಚೆ ನಡೆಸಿರಿ, ವಿಚಾರ ಮಾಡಿರಿ ಇದರಿಂದ ನಿಮಗೆ ಪ್ರೋತ್ಸಾಹ ಸಿಗುವುದು. 'ನಮ್ಮವರು' ಎಂಬವರು ನಿಮಗೆ ದೊರೆಯುವರು ಅವರೆಲ್ಲರೂ ಒಟ್ಟು ಸೇರಿ ನಿಮ್ಮ ಹತ ಹೃದಯದಲ್ಲಿ ಸಜೀವತೆಯ ಬೀಜವನ್ನು ಬಿತ್ತುವರು. ನಿಮ್ಮ ಹಲವಾರು ವಿಚಾರ ಮತ್ತು ಪ್ರಶ್ನೆಗಳನ್ನು ಅವರು ಸಮರ್ಪಕವಾಗಿ ಉತ್ತರಿಸುವರು.

ಚಿಂತೆ ಮತ್ತು ಚಿತೆಗಳ ನಡುವೆ ಯಿರುವುದು ಬಿಂದು ಮಾತ್ರ ವಿಶೇಷವಾದರೆ, ಚಿತೆಯು ಸತ್ತವರನ್ನು ಸುಟ್ಟು ತೆಗೆಯುವುದಾದರೆ, ಚಿಂತೆಯು ಸಜೀವಿಗಳನ್ನೂ ಉರಿಸುತ್ತದೆ. ಆವರ ಜೀವನವನ್ನು ವ್ಯರ್ಥಗೊಳಿಸುತ್ತದೆ. ಆದುದರಿಂದ ನಾವು ಚಿಂತಿತರಾಗಬೇಕು, ಯಾಕೆ? ''ಚಿಂತಯಾತಕೋ ಬಯಲ ಭ್ರಾಂತಿಯಾತಕೋ?" ಎಂದು ದಾಸರು ಹಾಡಿಲ್ಲವೆ?

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ —ಸಂ.ನೆ.

ಯೊಸ ಪುಸ್ತಕ—

'ನಚಿಕೇತ'ರ

ನವೀನ ಕಾದಂಬರಿ—

ಹಸುರು ಹಂಸ

ಇದೀಗ ಪ್ರಕಟನಾಗಿದೆ.

ಬೆಲೆ ರೂ. ಎರಡು.

ವಿಜಾಂಸಿರಿ,

ನವಯುಗ ಪ್ರೆಸ್, ಉಡುಪಿ.

ದಿಗಿಲುಗೊಳಿಸಿದ

ಪಾಕಿಸ್ತಾನದ ಸುಗ್ರೀವಾಜ್ಞೆ

ವಿಸ್ತೃತವಾದ ಪ್ರಪಂಚದಲ್ಲಿ ದೇಶ ದೇಶಗಳ ಸಂಬಂಧವು ದಿನ ದಿನಕ್ಕೆ ಹೆಚ್ಚುತ್ತ ಹೋಗುತ್ತಿದೆ. ವಿಶ್ವ ಮನೋಭಾವನೆಯು ಬೆಳೆಯುತ್ತಿದೆ. ಇದರ ಪರಿಣಾಮವಾಗಿಯೇ ಒಂದು ದೇಶವು ಇನ್ನೊಂದು ದೇಶದಲ್ಲಿ ಉದ್ದಿಮೆಗಳನ್ನು ಸ್ಥಾಪಿಸುವುದು ಸರಿಸಾರವಾಗಿ ಬಂದಿದೆ. ಇದರಂತೆಯೇ ವಿದೇಶಗಳಲ್ಲಿಯೂ ಒಂದು ಬೇಂಕು ವ್ಯವಹಾರಗಳನ್ನು ನಡೆಸುತ್ತ ಬರುತ್ತದೆ.

ಒಂದು ದೇಶದಲ್ಲಿ ಹೊರದೇಶದ ಬೇಂಕು ತನ್ನ ಶಾಖೆಗಳನ್ನು ತೆರೆದು ತನ್ನೊಲ ವ್ಯವಹಾರವನ್ನು ವಿಸ್ತರಿಸುತ್ತಿರುವುದು ಬೇಂಕಿಂಗ್ ಮನೋವೃತ್ತಿಯು ಬೆಳೆಯುವುದಕ್ಕೆ ಕಾರಣವಾಗಿದೆ. ಆದರೆ, ಇಂತಹ ಹೊರದೇಶದ ಬೇಂಕು ತನ್ನ ವ್ಯವಹಾರಗಳನ್ನು ನಡೆಸಬೇಕಾದರೆ, ಆ ದೇಶದ ಕೇಂದ್ರ ಬೇಂಕಿನಲ್ಲಿ ಸ್ವಲ್ಪ ಹಣವನ್ನು ರೇವಣಾತಿಯಾಗಿ ಇಡುವುದು ಇದುವರೆಗೆ ನಡೆದು ಬಂದ ಸಂಪ್ರದಾಯ. ತನ್ನ ದೇಶದ ನಾಗರಿಕರ ಹಿತರಕ್ಷಣೆಯನ್ನು ಮಾಡುವ ಉದ್ದೇಶದಿಂದ ಯಾವುದೇ ದೇಶವು ವಿದೇಶೀಯ ಬೇಂಕುಗಳ ಮೇಲೆ ಇಂತಹ ಅಲ್ಪ ರೀತಿಯ ನಿರ್ಬಂಧವನ್ನು ಹೇರುವುದು ಅನ್ಯಾಯವೆನಿಸದು. ಆದರೆ, ನಮ್ಮ ನೆರೆಯ ರಾಷ್ಟ್ರವಾದ ಪಾಕಿಸ್ತಾನವು ಒಂದು ಸುಗ್ರೀವಾಜ್ಞೆಯನ್ನು ವಿಧಿಸಿ ಈ ದಿಸೆಯಲ್ಲಿ ಬಹಳಷ್ಟು ಮುಂದುವರಿದಿದೆ, ಅಸಾಮಾನ್ಯ ದಾಖಲೆಯನ್ನು ಸ್ಥಾಪಿಸಿದ. ಇದರ ಪರಿಣಾಮವಾಗಿ, ಅಲ್ಲಿ ಶಾಖೆಗಳನ್ನು ತೆರೆದಿರುವ ವಿದೇಶೀಯ ಬೇಂಕುಗಳು ತುಂಬ ವಿಷಮ ಸನ್ನಿವೇಶವನ್ನು ಎದುರಿಸಬೇಕಾಗಿ ಬಂದಿದೆ.

ವಿದೇಶೀಯ ಬೇಂಕುಗಳು ತಲೆ ತುರಿಸಿಕೊಳ್ಳಬೇಕಾಗಿ ಬಂದಿರುವ ಪರಿಸ್ಥಿತಿಗೆ ಕಾರಣೀಭೂತವಾದ ಪಾಕ್ ಸುಗ್ರೀವಾಜ್ಞೆಯು ಎರಡಂಶಗಳಿಂದ ಕೂಡಿದೆ. ಇಂತಹ ಬೇಂಕು ರೂ.೩೦ ಲಕ್ಷವನ್ನು ಪಾಕ್ ಸ್ಟೇಟ್ ಬೇಂಕಿನಲ್ಲಿ ಇಡುಗಂಟಾಗಿರಿಸಬೇಕು ಎಂಬುದೊಂದು, ಈ ದೊಡ್ಡ ಮೊತ್ತವು ವಿದೇಶಗಳಿಂದಲೇ ಪಾಕಿಸ್ತಾನದೊಳಕ್ಕೆ ಬರಬೇಕು ಎಂಬುದು ಇನ್ನೊಂದು. ೩೦ಲಕ್ಷ ರೂಪಾಯಿಗಳ ತೇವನ್ನಿಡುವ ಪರಿಸ್ಥಿತಿಯಲ್ಲಿ ಹೆಚ್ಚಿನ ಬೇಂಕುಗಳು ಇರುವುದಿಲ್ಲ ನೆಂಬುದು ಒಂದು ಪ್ರಶ್ನೆಯಾದರೆ, ಈ ಮೊಬಲಗನ್ನು ವಿದೇಶಗಳಿಂದ ಲೇ ತರಬೇಕು ಎಂಬುದು ಕುರುವನ ಮೇಲೆ ಬೊಕ್ಕೆ ಎದ್ದಂತಾಗಿದ ನೀರಿಳಿಯದ ಗಂಟಲಿನಲ್ಲಿ ಕಡುಬನ್ನು ತುರುಕಿಸಿದಂತಾಗಿದೆ.

ಪ್ರಪಂಚದ ಯಾವ ದೇಶದಲ್ಲಿಯೂ ಇಲ್ಲದ ಈ ಬಗೆಯ ಆಜ್ಞೆಯಿಂದ ಕೆಚ್ಚೆನ ಬೇಂಕಿಂಗ್ ಕಂಪೆನಿಗಳು ಕಂಗಾಲಾಗಿದ್ದಾರೆನ್ನಲು ಬಹುದು. ಪಾಕಿಸ್ತಾನದಲ್ಲಿ ಹೆಸರಿಗೆಂದು ಒಂದೆರಡು ಶಾಖೆಗಳನ್ನು ಪಡೆಸಿಕೊಂಡು ಬರುವ ವಿದೇಶೀಯ ಬೇಂಕುಗಳೂ ಇರುತ್ತವೆ. ಭಾರತದ ಸ್ಟೇಟ್ ಬೇಂಕಿನ ಕೆಲವು ಶಾಖೆಗಳು ಅಲ್ಲಿರುತ್ತವೆ ಅಲ್ಲದೆಯೆರೆಂಟು ಶೆಡ್ಯೂಲ್ಡ್ ಬೇಂಕುಗಳೂ ಒಂದೆರಡು ಶಾಖೆಗಳನ್ನು ನಡೆಸಿಕೊಂಡು ಬರುತ್ತವೆ ಈ ಶಾಖೆಗಳಾದರೂಧಾರತದ ವಿಭಜನೆಗೆ ಪೂರ್ವದಲ್ಲಿಯೇ ತೆರೆಯಲ್ಪಟ್ಟವುಗಳೆಂಬುದನ್ನು ಮರೆಯಬಾರದು. ಆದರೆ, ಇಂದು ಅಂತಹ ಬೇಂಕುಗಳು ಅಸಹಾಯ ಪರಿಸ್ಥಿತಿಯನ್ನು ಎದುರಿಸಬೇಕಾಗಿ ಬಂದಿದೆ !

ಪಾಕಿಸ್ತಾನವು ಈಗ ಕೇಳುತ್ತಿರುವ ೩೦ ಲಕ್ಷ ರೂಪಾಯಿಗಳ ಇಡು ಗಂಟು ನಿಂದ ಅದಕ್ಕೆ ತುಂಬ ಲಾಭವಿರುವುದೆಂಬುದನ್ನು ಕಡೆಗಣಿಸಲಾಗುವುದಿಲ್ಲ. ಏಕೆಂದರೆ, ವಿದೇಶಗಳ ಬೇಂಕುಗಳೆಲ್ಲವೂ ಇಂತಹ ರೇವನ್ನಿಡಲು ಭಾಧ್ಯವಾಗಿರುವುದರಿಂದ, ಹೊರ ದೇಶಗಳಿಂದ ಇಷ್ಟು ಮೊತ್ತದ ಬಂಡವಳವು ಪಾಕಿಸ್ತಾನಕ್ಕೆ ಲಭಿಸಿದಂತಾಯಿತು. ಪ್ರತಿಯೊಂದು ವಿದೇಶೀಯ ಬೇಂಕೂ ತನ್ನ ದೇಶದಲ್ಲಿ ಬೇಂಕಿಂಗ್ ವ್ಯವಹಾರ ನಡೆಸಬೇಕಾದರೆ, ಅದು ತನ್ನ ಬಂಡವಾಳದಲ್ಲಿ ರೂ. ೨೦ ಲಕ್ಷವನ್ನು ಪಾಕಿಸ್ತಾನಕ್ಕೆ ವರ್ಗಾಯಿಸಬೇಕು ಎಂಬುದೇ ಈ ಸುಗ್ರೀವಾಜ್ಞೆಯು ಅಂತರ್ಯವಿಯತ್ತದೆ.

ಪಾಕಿಸ್ತಾನವು ಹಿಂದೊಮ್ಮೆ ಭಾರತದಲ್ಲಿಯೇ ಕೂಡಿದ್ದುದರಿಂದ, ಅಲ್ಲಿ ಭಾರತೀಯ ಬೇಂಕುಗಳ ಶಾಖೆಗಳಿರುವುದು ಅವಾಸ್ತವವಲ್ಲ. ಈಗ ಹೊರಟಿರುವ ಆಜ್ಞೆಯಿಂದ ಇವುಗಳಿಗೆಲ್ಲಾ ದಿಗಿಲು ಬಡಿದಂತಾಗಿದೆ. ಸದ್ಯ ಈ ರೇವನ್ನಿಡುವುದಕ್ಕೆ ಆರು ತಿಂಗಳ ಸಮಯಾವಕಾಶವಿರುವುದೇನೋ ನಿಜ, ಯೋಗ್ಯ ಕಾರಣಗಳಿದ್ದಲ್ಲಿ ಈ ಅವಧಿಯನ್ನು ಮತ್ತೆ ಆರು ತಿಂಗಳುಗಳುಗಳ ವರೆಗೆ ಮುಂದುವರಿಸುವುದೂ ಅಸಂಭವವಲ್ಲ. ಆದರೆ, ರೇವು ಇಡುವ ಪದ್ಧತಿ ಮತ್ತು ಪರಿಸ್ಥಿತಿಗಳು ಮಾತ್ರ ವಿಲಕ್ಷಣವಾಗಿಯೇ ತೋರುತ್ತಿವೆ. ಭಾರತೀಯ ರಿಜರ್ವ ಬೇಂಕಿನ ನಾಯಕತ್ವದಲ್ಲಿ ಭಾರತೀಯ ಬೇಂಕುಗಳು ಈ ವಿಷಯವಾಗಿ ತಮ್ಮ ಅತ್ಯಾಸ್ಥಿಯನ್ನೂ ಅಸಮಾಧಾನವನ್ನೂ ವ್ಯಕ್ತ ಪಡಿಸಿವೆ ಭಾರತ ಸರಕಾರವಾದರೂ ಇದನ್ನು ವಿರೋಧಿಸಿದೆ; ಅದೂ ತನ್ನ ಪ್ರತಿಭಟನೆಯನ್ನು ಸಲ್ಲಿಸಿದೆಯೆಂದು ತಿಳಿಯುತ್ತದೆ.

ಪ್ರತಿಭಟನೆ-ವಿರೋಧಗಳು ಏನಿದ್ದರೂ ಪಾಕಿಸ್ತಾನದ ಆಜ್ಞೆಯು ಹಿಂತೆಗೆಯಲ್ಪಡುವ ಲಕ್ಷಣಗಳು ಗೋಚರವಾಗುತ್ತಿಲ್ಲ ಪರಿಣಾಮಸ್ವರೂಪವಾಗಿ ರೇವಣಿಯಿಡಲು ಅಸಮರ್ಥವಾದ ಬೇಂಕುಗಳು ತಮ್ಮ ಶಾಖೆಗಳನ್ನೂ ಅಲ್ಲಿ ವ್ಯವಚ್ಚುವುದನ್ನು ಸಂಪೂರ್ಣ ಅಲ್ಲಗಳೆಯುವುದು ಸಾಧ್ಯವಿಲ್ಲ. ವಿದೇಶಗಳಿಗೆ ಆಜ್ಞೆವಿಧಿಸಿ, ತನ್ನ ರಾಷ್ಟ್ರದ ಆದಾಯವನ್ನು ಹೆಚ್ಚಿಸುವ ಹವಣಿಕೆಯಿಂದ ಇಟ್ಟ ಪಾಕಿಸ್ತಾನದ ನೀತಿಯು ಕುನೀತಿಯೆಂಬುದನ್ನು ಎಲ್ಲರೂ ಒಪ್ಪುತ್ತಾರೆ ಮುಂದೇನು ಎಂಬುದನ್ನು ಅವರು ಕುತೂಹಲಚಿತ್ತದಿಂದ ನಿರೀಕ್ಷಿಸುತಿದ್ದಾರೆ.



ವಿದ್ಯುಚ್ಛಕ್ತಿಯ ಬಲದಿಂದ ನೀರಿನಡಿ ಪರಿಶೀಲನೆ ನಡೆಸುವ ಅಮೆರಿಕನ್ ನೌಕೆ.

ಆಂಧ್ರದ ಗಣನೀಯ ಕೊಡುಗೆ

(ಆನೇ ಸುಟದಿಂದ)

ಸುವ ಭರದಲ್ಲಿ ಆಂಧ್ರರು ಭಾರತದ ಧಾರ್ಮಿಕ ಮತ್ತು ದಾರ್ಶನಿಕ ವಿಚಾರ ಪರಂಪರೆಗೆ ಘನವಾದ ಕಾಣಿಕೆ ಸಲ್ಲಿಸಿದ್ದಾರೆಂದು ಹೇಳಿದರೆ ಅದು ಅಕ್ಷನ್ಯವೇನೂ ಅಲ್ಲ. ನಾಗಾರ್ಜುನ, ಅರ್ಯದೇವ, ದಿಗ್ನಾಗ, ನಿಂಬಾರ್ಕ, ಮತ್ತು ವಲ್ಲಭ ಇವರೇ ಮೊದಲಾದ ಆಂಧ್ರದ ಶ್ರೇಷ್ಠ ಪಂಡಿತರ ಹೆಸರು ಇಲ್ಲಿ ಉಲ್ಲೇಖಾರ್ಹವಾಗಿವೆ. ವೀರಶೈವ ಮತಧರ್ಮ ಸಂಸ್ಥಾಪಕರೆನಿಸಿದ ಚನ್ನಬಸವಣ್ಣನವರು ಇವರೊಂದಿಗೆ ಸರಸಮವಾದ ಪಾಂಡಿತ್ಯವುಳ್ಳವರು. ಚನ್ನಬಸವಣ್ಣನವರ ನಂತರ ಅವರ ಅನುಯಾಯಿಗಳಾದ ಸೋಮನಾಥರು ಧಾರ್ಮಿಕ ಮಂಡಾಳುವಾಗಿದ್ದರಷ್ಟೇ ಅಲ್ಲದೆ, ಕವಿಗಳೂ ಆಗಿದ್ದರು. ಅವರು ಬರೆದ "ಚನ್ನಬಸವ ಪುರಾಣ" ಎಂಬ ಗ್ರಂಥವು ಸಾಹಿತ್ಯದಲ್ಲಿ ಅಮರ ಕೃತಿಯಾಗಿದೆ. ಅವರ ಜೀವನ ಹಾಗೂ ವಿಚಾರ ವೈಖರಿಗಳು ದಕ್ಷಿಣ ಭಾರತದ ಜನತೆಯ ಮೇಲೆ ಅದರಲ್ಲಿಯೂ ವಿಶೇಷವಾಗಿ ಕರ್ನಾಟಕದ ಜನತೆಯ ಮೇಲೆ ತುಂಬಾ ಪ್ರಭಾವವನ್ನು ಬೀರಿವೆ.

ಅವರ ನಂತರ ಪ್ರಖ್ಯಾತ ವಾಗ್ಗೇಯಕಾರರಾದ ಕ್ಷೇತ್ರಯ್ಯ ಮತ್ತು ತ್ಯಾಗರಾಜು ಎಂಬುವರು ಸಮಗ್ರ ದಕ್ಷಿಣ ಭಾರತದ ಮೇಲೆ ಅಚ್ಚಳಿಯದ ಪ್ರಭಾವ ಬೀರಿದರು. ಆಂಧ್ರ ಮತ್ತು ಕರ್ನಾಟಕಗಳ ನಡುವೆ ಸುಮಧುರ ಸಂಬಂಧದ ಸುವರ್ಣ ಸೇತುವೆಯನ್ನು ನಿರ್ಮಿಸಲು ಶ್ರಮಿಸಿದವರಲ್ಲಿ ಪಂಸ, ಮೊನ್ನ, ಶ್ರೀಕೃಷ್ಣ ದೇವರಾಯನ ಆಸ್ಥಾನ ಕವಿಗಳು ಪ್ರಮುಖರಾಗಿದ್ದಾರೆ.

ಭಾರತದ ವಿಚಾರಧಾರೆ ಮತ್ತು ಸಾಂಸ್ಕೃತಿಕ ಪರಂಪರೆಗೆ ತೆಲುಗು ಭಾಷೆ ಮತ್ತು ಸಾಹಿತ್ಯವು ಘನವಾದ ಹಾಗೂ ವೈವಿಧ್ಯಪೂರ್ಣವಾದ ಸೇವೆ ಸಲ್ಲಿಸಿದೆ ಎಂಬುದು ಈ ಸಂಕ್ಷಿಪ್ತ ಲೇಖನದಿಂದ ಸ್ಪಷ್ಟಪಡುವುದು.

ಬುದ್ಧಿ ಮತ್ತು ಭಾವನೆಗಳ ಮಟ್ಟದಲ್ಲಿ ರಾಷ್ಟ್ರೀಯ ಐಕ್ಯತೆಯನ್ನು ಸಾಧಿಸಬೇಕಾದರೆ, ಪ್ರಾಚೀನ, ಮಧ್ಯಕಾಲೀನ ಮತ್ತು ಆಧುನಿಕ ತೆಲುಗು ಸಾಹಿತ್ಯವನ್ನಿನ ಮುಖ್ಯವಾದ ಭಾಷಾಂತರಗಳನ್ನೂ ಪ್ರಕಟಿಸುವಂತಹ ವ್ಯಾಪಕ ಯೋಜನೆಯೊಂದನ್ನು ಕೈಗೊಳ್ಳಬೇಕು. ರಾಷ್ಟ್ರೀಯ ಸಾಹಿತ್ಯ ಅಕಾಡೆಮಿಯ ಈ ಕಾರ್ಯದಲ್ಲಿ ನಿರತವಾಗಿದೆಯಾದರೂ ಭಾಷಾಂತರ ಕಾರ್ಯಕ್ರಮ ಇತಿಮಿತಿಗಳಿಗೊಳಪಟ್ಟಿದೆ, ಅದು ಇನ್ನೂ ವ್ಯಾಪಕ ಸ್ವರೂಪದ್ದಾಗಿರುವುದು ಅಗತ್ಯವೆನಿಸಿದೆ.

(ಆಕಾಶವಾಣಿ ಸೌಜನ್ಯದಿಂದ)

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ರೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯತ್ತಮವೆಂದು ಪರಿಗಣಿಸಿರುವರು ಪ್ರತಿಯೊಬ್ಬರೇವಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿಹೊಂದುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ವಿಜಯ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್:— ವಿಜಯ ಬೇಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡ್,
Estd. 1931. Phone No. 240. — ಮಂಗಳೂರು—3

ಬಂಡೆಕಲ್ಲು ಸೀಳುವಂತೆ

ಭಯಾನಕರಾಜ — ಅಸುರವಾಣೀಪಾಲ

ಲಂಡನ್ನಿನಲ್ಲಿರುವ ಬ್ರಿಟಿಷ್ ಮ್ಯೂಸಿಯಂನಲ್ಲಿ ಪ್ರತಿವರ್ಷ ಕಲಾ ಪ್ರದರ್ಶನವು ಜರಗುತ್ತದೆ. ೧೯೬೦ರ ಪ್ರದರ್ಶನದಲ್ಲಿ 'ಎಲ್ಜಿನ್ ಮಾರ್ಬಲ್ಸ್'ನ ಕುರಿತು ತುಂಬ ಚರ್ಚೆ ನಡೆಯಿತು. ಅದರೊಡನೆ ಕಲ್ಲಿನಲ್ಲಿ ಕೆತ್ತಲಾದ ಅಸ್ಸೀರಿಯಾದ ರಾಜ ಅಸುರ ವಾಣೀಪಾಲನ ವೀರ್ಯಪ್ರದರ್ಶನ ಚಿತ್ರದ ಬಗ್ಗೆಯೂ ಸಾಕಷ್ಟು ವಿಚಾರವು ಪ್ರಕಟವಾಯಿತು. ಈ ಸಾಮ್ರಾಟನು ಕ್ರಿ. ಪೂ. ೭ನೆಯ ಶತಮಾನದಲ್ಲಿದ್ದನು. ಈ ಅಸುರವಾಣೀ ಪಾಲನು ತನ್ನ ಕಾಲದ ಸುಪ್ರಸಿದ್ಧ ಅರಸನಾಗಿದ್ದನಲ್ಲದೆ ದಕ್ಷಿಣದಲ್ಲಿ ಐಗುಪ್ತ ಮತ್ತು ಉತ್ತರದಲ್ಲಿ ಅಸ್ಯಾಧ್ವೀಪಗಳ ವರೆಗೂ ತನ್ನ ಸಾಮ್ರಾಜ್ಯವನ್ನು ವಿಸ್ತರಿಸಿದ್ದನು.

ಅಸುರಪಾಣೀಪಾಲನ ರಾಜ್ಯದಲ್ಲಿ ಕೆಲವರು ಕಲಾವಿದರಿದ್ದರು ಆದರೆ, ಇವರು ಹೆಸರುಗಳು ಮಾತ್ರ ಅಜ್ಞಾತವಿವೆ. ಇವರು ರಾಜನ ವೀರ್ಯ, ಓಜಸ್ಸು ಮತ್ತು ಸಾಹಸಗಳ ಪ್ರದರ್ಶನ ರೂಪದ ಚಿತ್ರಗಳನ್ನು ಕೆತ್ತುತ್ತಲೇ ಇದ್ದರು. ಅವರ ಕಾರ್ಯವಾದರೂ ಇದಕ್ಕಿಂತ ಬೇರೆಯಾಗಿರಲಿಲ್ಲ. ಈ ಅನಾಮಧೇಯ ಕಲಾವಿದರ ಅಭಿಪ್ರಾಯದಂತೆ ರಾಜನು ಅತೀವ ಭಯಾನಕನೂ ನಿರ್ಭೀತನೂ ಆಗಿದ್ದನು ಪ್ರತಿ ಹಿಂಸೆಯ ಭಾವನೆಯ ತವರು ಮನೆಯಂತಿದ್ದನು. ಗಾಯಗೊಂಡು ನರಳಾಡುವ ಶತ್ರುಗಳು ಸಾಯುವುದನ್ನು ಕಾಣುವುದೆಂದರೆ ಅತನಿಗೆ ಪರಮಾನಂದ. ವೈಭವ ಶಾಲಿಯಾದ ಅರಸನು ವಿಜೃಂಭಿಸಿದನೇನೋ ನಿಜ, ಆದರೆ ಏರಿದವನು ಇಳಿಯಲೇ ಬೇಕಾದುದು ಪ್ರಕೃತಿ ನಿಯಮ ತಾನೆ? ಅಸುರವಾಣೀಪಾಲನಾದರೂ ಇದರಿಂದ ನಿರ್ಲಿಪ್ತನಾಗುವುದು ಅಸಾಧ್ಯವಾಯಿತು. ಅದೆರ ವೈಭವ ಹಾಗೂ ಉತ್ಕರ್ಷಗಳು ಶೀಘ್ರದಲ್ಲಿಯೇ ಕೊನೆ ಮುಟ್ಟಿದುವು. ತನ್ನ ಕೊನೆಯ ದಿನಗಳಲ್ಲಿ ರಾಜನು ಭಯಾನಕ ರೋಗಗಳಿಗೆ ಬಲಿಯಾದನು; ಇದರಿಂದಾಗಿಯೇ ಅವನ ಕೊನೆಯು ಸಾಕಷ್ಟು ದಯನೀಯವಾಗಿ ಪರಿಣಮಿಸಿತು.

ಬಂಡೆಕಲ್ಲಿನಲ್ಲಿ ಕೆತ್ತಲಾದ ಪ್ರದರ್ಶಿತ ಚಿತ್ರವು ಅತನ ವೈಭವೋತ್ಕರ್ಷ ಕಾಲದ್ದು ಅಸ್ಸೀರಿಯನ್ ಜನತೆಯು ಬೇಟೆಯಾಡುವುದನ್ನೂ ಒಂದು ಕಲೆಯೆಂದು ಭಾವಿಸುತ್ತಾರೆ ಕ್ರೀಡಾರಂಗದದಲ್ಲಿ ರಾಜನ ಸೇವಕರು ಯಾವುದಾದರೊಂದು ಪೂರ್ವಬದ್ಧ ಸಿಂಹವನ್ನು ಬಿಡುತ್ತಿದ್ದರು; ರಾಜನು ಅದರ ಮೇಲೆ ಬಾಣಗಳ ಸುರಿ ಮಳೆಯನ್ನು ಸುರಿಸುತ್ತಿದ್ದನು. ಹೀಗೆ ಈ ಆಟವು ಪಾತವಿಕ ಕ್ರೀಡೆಯ ರೂಪ ಧರಿಸುತ್ತಿತ್ತು; ನೋವಿನಿಂದ ಕಂಗೆಟ್ಟು ಭೂತಳದಲ್ಲಿ ಒರಗಲು ಸಿಂಹವು ಚಡಪಡಿಸುತ್ತಿರುವಾಗ ರಾಜನು ಅದರ ಶರೀರದಲ್ಲಿ ತನ್ನ ಅಸ್ತ್ರವನ್ನು ಚುಚ್ಚಿಡುತಿದ್ದನು

ಕಲ್ಲಿನಲ್ಲಿ ಅಂಕಿಸಲಾದ ಈ ಕಲಾಕೃತಿಯು ಗ್ರೀಕ ಕಲೆಯಂತೆ ಉತ್ಕೃಷ್ಟ ಹಾಗೂ ಮುಗ್ಧಕಾರಿಯೆಂದು ಹೇಳುವುದು ಸಾಧ್ಯವಿಲ್ಲ. ಇದಕ್ಕೆ ಪ್ರತಿಯಾಗಿ ಈ ಕೃತಿಯು ನೀರಸ, ಅಂಧಕಾರ ಪೂರ್ಣ ಜೀವನದಂತೆ ದುರೂಹ ಮತ್ತು ಭೀಷಣವಾಗಿದೆ. ಆದರೆ, ಕಲಾವಿದರು ಕೆತ್ತಿರುವ ಸಿಂಹಗಳು ರಾಜನಿಗಿಂತ ಸಜೀವವೆಂಬಂತೆ ಭಾಸವಾಗುತ್ತವೆ ಅವು ನೆಗೆಯುತ್ತವೆ; ಮುಂದೆ ಪಾರುತ್ತವೆ; ಕೆಲವೊಮ್ಮೆ ಅವುಗಳ ಭಾವಚೇಷ್ಟೆಯಿಂದ ರಾಜನ್ನಿಗಿಂತ ಮಾನವತೆಯು ಹೆಚ್ಚಿರುವಂತೆ ಮನವರಿಕೆ ಯಾಗುತ್ತದೆ. ರಾಜನೊಡನೆ ಹೋರಾಡುವಾಗ ಪ್ರತಿಸಲವೂ ಸಿಂಹವೇ ಸಾಯುತಿತ್ತು ಎಂಬುದು ನಿಜ; ಆದರೆ, ಆದರೆ ಈ ಸೋಲಿನಲ್ಲಿಯೇ ವಿಜಯದ ಭಾವವೂ ಪ್ರಕಟಗೊಳ್ಳುತ್ತದೆ.

ಪ್ರಾಣತ್ಯಜಿಸಿದರೂ ವಿಜಯಾಭಿಮಾನ ಭರಿತ ಸಿಂಹಗಳ ಕೆತ್ತನೆಯ ಕೆಲಸವು ಅಪೂರ್ವವಾಗಿದೆ. ೭ನೆಯ ಶತಮಾನದ ಅಸ್ಸೀರಿಯನ್ ಕಲಾವಿದರ ಕಲಾ ನಿಪುಣತೆಯದ್ಯೋತಕವಿದು ಎಂದು ಹೇಳುವುದು ಎಂದಿಗೂ ಅತಿಶಯೋಕ್ತಿಯಾಗಲಾರದು. ಆದರೆ, ಇಂತಹ ಅಮರ ಕೃತಿಗಳ ರಚಕರು ತಮ್ಮ ಹೆಸರುಗಳನ್ನು ಉಲ್ಲೇಖಿಸದೆ ಇರಲು ಕಾರಣವೇನು ಎಂಬುದು ಮಾತ್ರ ಇಂದಿಗೂ ಬಗೆಹರಿಯದ ಒಗಟಾಗಿಯೇ ಉಳಿದಿದೆ. ಆದರೆ, ಅಂತಹ ಅಜ್ಞಾತ ನಿಪುಣ ಕಲಾವಿದರ ಪ್ರಶಂಸೆ ಮಾತ್ರ ದಿನದಿನವೂ ನಡೆಯುತ್ತದೆ.

PHONE 203
ESTD 1926
FOUNDATION STONE
Engraved
MARBLE TABLETS
(GOLD FILLED & LEAD FILLED)
DONE BY
Crown RUBBER STAMP CO.
BALMATTA ROAD, MANGALORE

ಮೆಡಿಫೋನುಗಳ ಮೂಲಕ ಚಿಕಿತ್ಸೆ

(೩ನೇ ಪುಟದಿಂದ)

ಣ ಮುಖನಾಗುತಿದ್ದನು. ಆದರೆ, ವೈದ್ಯನಿಗೆ ಆ ಔಷಧವನ್ನು ಕೊಡಲೇ ಬಾರದು ಎಂಬ ಎಚ್ಚರಿಕೆಯನ್ನು ಮೆಡಿಫೋನ್ ಕೊಟ್ಟಿತು. ವೈದ್ಯನು ಹೆಚ್ಚಿನ ಎವರವನ್ನು ಕೇಳಿದನು

ಮೆಡಿಫೋನ್ ರಾಷ್ಟ್ರೀಯ ಆರೋಗ್ಯ ಸಂಸ್ಥಾನದ ಒಬ್ಬ ರಕ್ತ ವಿಶೇಷಜ್ಞನನ್ನೂ ಇಬ್ಬರು ಔಷಧನಿರ್ಮಾತರನ್ನೂ ಕರೆಸಿಕೊಂಡಿತು. ಆ ತಜ್ಞನು ರೋಗಾಣುನಾಶಕ ಮದ್ದಿನಿಂದ ಗಾಮಾ ಗ್ಲೋಬುಲಿನ್‌ನ ಪ್ರಮಾಣವು ರಕ್ತದಲ್ಲಿ ಕಡಿಮೆಯಾಗುವುದು ಮಾತ್ರವಲ್ಲ, ರಕ್ತದ ಕೆಂಪು ಕಣ ಮತ್ತಿತರ ಗುಣಗಳೂ ನಷ್ಟವಾಗುತ್ತವೆ ಎಂದು ಹೇಳಿದನು. ಈ ವಾರ್ತೆಯನ್ನು ಮೆಡಿಫೋನು ಅರ್ಬುದ ಚಿಕಿತ್ಸಕನಿಗೆ ಹೇಳಿ ಕಳಿಸಿತು. ಪರಿಣಾಮವಾಗಿ, ಆತನು ಆ ಔಷಧದ ಪ್ರಯೋಗವನ್ನೇ ಬಿಟ್ಟುಬಿಟ್ಟನು.

ಮೆಡಿಫೋನಿನ ಅಧಿಕಾಂಶ ಚಿಕಿತ್ಸಕರು ಮೆಡಿಕಲ್ ಸ್ಕೂಲುಗಳ ತರುಣ ಸ್ನಾತಕರು, ನವೀನತಮ ಮದ್ದುಗಳ ವಿಸ್ತೃತ ತಿಳುವಳಿಕೆಯುಳ್ಳವರು. ಚಿಕಿತ್ಸಕರೊಡನೆ ಮಾತನಾಡುವಾಗ ಮೆಡಿಫೋನಿನ ಡಾಕ್ಟರರಿಗೆ ಔಷಧಗಳ ಉಪಯೋಗದ ವಿಷಯದಲ್ಲಿಯೂ ಹೊಸ ಹೊಸ ವಿಷಯಗಳು ಗೊತ್ತಾಗುತ್ತವೆ. ಒಂದು ಔಷಧಿಯು ಒಂದು ರೋಗವನ್ನು ದೂರೀಕರಿಸಲು ನಿರ್ಮಾಣವಾಗುತ್ತದೆ. ಅದು ಅನ್ಯ ರೋಗಗಳ ಉಪಚಾರಕ್ಕೆ ಲಾಭಪ್ರದವಾಗುವುದೂ ಇದೆ. ಮೆಡಿಫೋನ್ ಕಂಪೆನಿಯು ಈಯೆಲ್ಲ ಸೂಚನೆಗಳನ್ನು ಒಂದುಗೂಡಿಸಿ ಅವುಗಳ ವಿಷಯದಲ್ಲಿ ಆಗಾಗ ವರದಿಯನ್ನು ತಯಾರಿಸುತ್ತದೆ. ಆ ಮೇಲೆ ಈ ವರದಿಯನ್ನು ಔಷಧಿ ನಿರ್ಮಾತರಿಗೆ ಕಳಿಸಿಕೊಡುತ್ತದೆ. ಅಲ್ಲಿ ಇವುಗಳ ಅಧಾರದಿಂದ ಕೆಲಸಗಳು ನಡೆಯುತ್ತವೆ.

ಇಂತಹ ಅಮೂಲ್ಯ ಅವಸ್ಥೆಯು ಉಳಿದ ದೇಶಗಳಲ್ಲಿಯೂ ಕಾರ್ಯರೂಪಕ್ಕೆ ಬಂದರೆ, ಅದೆಷ್ಟು ಒಳ್ಳೆಯದಾದೀತು!

ಅಮೆರಿಕನ್ ಅಧ್ಯಕ್ಷರ ಐದು ವರ್ಷದ ಮಗಳು ಕಾರೆಲಿನಳು, ಪ್ರಯೋಗಸಿದ ಹೆಲಿಕಾಪ್ಟರು ತಂಗಿದೊಡನೆಯೇ ಮನೆಯತ್ತ ಓಡುತಿದ್ದಾಳೆ.

ಅಮೃತ ಬಿಂದು

ಮನುಷ್ಯನನ್ನು ಮೂರ್ಖನನ್ನಾಗಿ ಮಾಡುವ ಹೆಂಗಸರು ಇದ್ದಾರೆ. ಮೂರ್ಖನನ್ನು ಮನುಷ್ಯನಾಗಿ ಮಾಡುವ ಹೆಂಗಸರೂ ಇದ್ದಾರೆ.

o o o

ನಾವು ಜೇನಾಗಿದ್ದರೆ ನಮ್ಮನ್ನು ಜನರು ನೆಕ್ಕಿಬಿಡುತ್ತಾರೆ. ಕಹಿಯಾಗಿದ್ದರೆ ಉಗುಳಿಬಿಡುತ್ತಾರೆ.

o o o

ಇಬ್ಬರನ್ನು ಪ್ರೀತಿಸುವ ಹೆಂಗಸು ಇಬ್ಬರನ್ನೂ ಮೋಸಗೊಳಿಸುತ್ತಾಳೆ.

o o o

ನೀತಿವಂತರು ಹಾದರದ ಮನೆಯ ಹತ್ತಿರವಿದ್ದರೂ ಕೆಡುವದಿಲ್ಲ; ಅನೀತಿವಂತರೂ ದೇವಸ್ಥಾನದಲ್ಲಿದ್ದರೂ ಸುಧಾರಿಸುವದಿಲ್ಲ.

o o o

ನಮ್ಮ ದೀಪವನ್ನು ಆರಿಸಿಕೊಳ್ಳದೆಯೇ ನಾವು ಇನ್ನೊಬ್ಬರ ದೀಪ ಹಚ್ಚಬಹುದು.

o o o

ಒಳ್ಳೆಯ ಪುಸ್ತಕಗಳನ್ನು ಜನರು ಓದಬೇಕಾದರೆ ಸರಕಾರವು ಅವುಗಳನ್ನು ಓದಕೂಡದೆಂದು ನಿರ್ಬಂಧ ಹಾಕಬೇಕು.

o o o

ಕಂಡವರನ್ನೆಲ್ಲಾ ಸಾಲ ಕೇಳುವ ಮನುಷ್ಯನು ಒಬ್ಬೊಂಟಿಗನಾಗಿ ಇರಬೇಕಾಗುತ್ತದೆ.

o o o

ಸಂಪತ್ತು ಸೂಳೆಯಂತೆ ಮೋಹಕ ಮತ್ತು ಹಾನಿಕಾರಕ; ಜ್ಞಾನ ಸತಿಯಂತೆ ಸರಳ ಮತ್ತು ಶಾಂತಿದಾಯಕ.

ಓದಲೇ ಬೇಕಾಗಿರುವ ನವೀನ ಪುಸ್ತಕಗಳು!

ಉಡುಪಿ ಕರ್ನಾಟಕ ಸಂಘದ ಮೂರು ಪ್ರಟಣೆಗಳು

೧. ಚಂದ್ರಲೋಕಕ್ಕೆ ಪ್ರಯಾಣ

ಲೇಖಕರು: ಯು. ರಾಘವೇಂದ್ರ ಆಚಾರ್ಯ, ಎಂ. ಎ.

ಆಧುನಿಕ ಪ್ರಪಂಚದ ಮಹತ್ತರವಾದ ಆಂದೋಲನಗಳು, ಪ್ರಪಂಚವನ್ನೆಲ್ಲಾ ಆಲುಗಾಡಿಸುತ್ತಿರುವ ಆರ್ಥಿಕ, ರಾಜಕೀಯ ಚಳುವಳಿಗಳು, ಅವುಗಳ ಹಿಂದಿರುವ ತತ್ವಗಳು. ಅವುಗಳಿಗೆ ಮಾನವನ ಪ್ರತಿಕ್ರಿಯೆ ಇವನ್ನೆಲ್ಲಾ ಗಮನಿಸಿ ರಚಿಸಿರುವ, ನಮ್ಮಲ್ಲಿ ವಿಚಾರಶಕ್ತಿ ಬೆಳೆಯಲು ನೆರವಾಗುವ ವೈಜ್ಞಾನಿಕ ಗ್ರಂಥ.

೨. ಸಾಮಾನ್ಯ ರೋಗಗಳು

ಲೇಖಕರು: ಡಾ| ಕೆ. ಎಲ್. ಐತಾಳ, ಎಂ. ಬಿ. ಬಿ. ಎಸ್.
ಉಡುಪಿ ನಗರ ಸಭಾಧ್ಯಕ್ಷರು.

ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಅತ್ಯುಪಯುಕ್ತ ಪುಸ್ತಕ.

೩. ಭೌತಿಕ ದರ್ಶನ

ಲೇಖಕರು: ಬಡಕ್ಕಿಲ ಕೃಷ್ಣ ಭಟ್ಟ, ಎಲ್‌ಎಲ್.ಬಿ.

ಸಜ್ಜನರ, ವಿದ್ವಜ್ಜನರ, ವಿಜ್ಞಾನಿಗಳ ಅಭಿಮತವನ್ನು ಸಂಗ್ರಹಿಸಿ ಬರೆದ ಭೌತಿಕ ದರ್ಶನದ ಸ್ಥೂಲ ಪರಿಚಯ.

ಪ್ರತಿಯೊಂದು ಪುಸ್ತಕದ ಬೆಲೆ ಬರೇ ಒಂದು ರೂಪಾಯಿ.

ರೂ ೩=೫೫ನ್ನು ಮನಿಯಾರ್ಡರು ಮಾಡಿದರೆ ಮೂರೂ ಪುಸ್ತಕಗಳನ್ನು ಬುಕ್ ಪೋಸ್ಟ್‌ನಿಂದ ಕಳಿಸಬಹುದು.

ಪುಸ್ತಕ ವ್ಯಾಪಾರಿಗಳಿಗೆ ವಿಶೇಷ ಸವಲತ್ತುಗಳಿವೆ.

ವಿಚಾರಿಸಿರಿ:

ನವಭಾರತ ಪುಸ್ತಕ ಭಂಡಾರ, ಉಡುಪಿ.

ಹೃದಯದ ಬಂಧನ

(೨ನೇ ಪುಟದಿಂದ)

ಅನಂತ ರಾಯರು ಚಂದ್ರುವನ್ನು ಶಾಲೆಗೆ ಸೇರಿಸಿದರು. ಅವನಿಗೆ ಎಲ್ಲಿಲ್ಲದ ಆನಂದ. ರಾಯರ ಕೃಪೆ, ಅವನು ಅವರನ್ನು ದೇವರೆಂದು ನೆನೆವಂತೆ ಮಾಡಿತ್ತು. ತಾಯಿಯಂತೆ ಪ್ರೀತಿಸುವ ಜಯಮ್ಮ ಅವನ ತಾಯಿಯೇ ಆಗಿಬಿಟ್ಟರು

ಶಾಲೆಯಿಂದ ಮನೆಗೆ, ಮನೆಯಿಂದ ಶಾಲೆಗೆ ಶಶಿಯನ್ನು ಕರೆದುಕೊಂಡುಹೋಗುವುದು ಅವನ ಕೆಲಸಗಳಲ್ಲೊಂದು. ಆ ಪುಟ್ಟ ಮಕ್ಕಳು ಬಹಳ ಬೇಗ ಒಂದಾದರು. ಆಟದಲ್ಲಿ ಪಾಟದಲ್ಲಿ ಜತೆಯಾಗಿ ಬಾಳಿದರು.

....., ವರ್ಷ ಹನ್ನೆರಡು ಕಳೆದಿದೆ. ಈಗ ಚಂದ್ರು ಅಲ್ಲ, ಚಂದ್ರಶೇಖರ. ಬಿ. ಯಸ್‌ಸಿ. ವಿದ್ಯಾರ್ಥಿ. ಇನ್ನೆರಡೊಂದು ವರ್ಷದಲ್ಲಿ ಪದವೀಧರನಾಗುತ್ತಾನೆ. ಶಶಿ ಈ ವರ್ಷ ಬಿ. ಎ. ಗೆ ಕಾಲಿರಿಸಿದ್ದಾಳೆ.

ಅಂದಿನ ಬಾಲ್ಯ ಸ್ನೇಹದ ಬೀಜ ಇಂದು ಪ್ರೇಮದ ಬಳ್ಳಿಯಾಗಿದೆ, ಶೇಖರ ಶಶಿಯನ್ನು ತುಂಬು ಹೃದಯದಿಂದ ಪ್ರೀತಿಸುತ್ತಿದ್ದ. ಶಶಿಗೂ ಶೇಖರನೇ ಸರ್ವಸ್ವ, ಇಂದೂ ಅವರು ವ್ಯಾಸಂಗದಲ್ಲಿ ಜತೆಯೂ ಗಿರುತ್ತಿದ್ದರು. ಅನಂತ ರಾಯರು ಮತ್ತು ಜಯಮ್ಮ ಅಂದು ಚಂದ್ರುವನ್ನು ಪ್ರೀತಿಸುವಂತೆಯೇ, ಅದಕ್ಕಿಂತಲೂ ಬಲವಾಗಿ ಇಂದವನನ್ನು ಪ್ರೀತಿಸುತ್ತಿದ್ದರು. ಒಬ್ಬ ಅನಾಥ ಬಾಲಕನನ್ನು ವಿದ್ಯಾವಂತನನ್ನಾಗಿ ಮಾಡಿದ ಹೆಮ್ಮೆ ಅವರಿಗೆ. ಅವನು ಕಲಿವುದರಲ್ಲೂ ಬಹಳ ಕುಶಾಗ್ರಮತಿಯಾಗಿದ್ದ.

ಆದರೆ ಈಗ ಜೀವನದ ಗತಿ ಸ್ವಲ್ಪ ಬದಲಾಗ ತೊಡಗಿದೆ. ಶಶಿಯ ವಿವಾಹದ ಪ್ರಶ್ನೆ ಮುಂದೆ ಬಂದಿದೆ. ಒಳ್ಳೆಯ ಸಂಬಂಧವೊಂದು ಕೂಡಿ ಬಂದಿರುವಾಗ ಹುಡುಗಿಗೆ ಇನ್ನೆನ್ನೂ ಓದು ಏಕೆ ಎಂದು ಅವಳ ತಾಯಿತಂದೆಯವರ ಮತ. ಶಶಿ ಮತ್ತು ಶೇಖರರ ಪ್ರೀತಿ ಅವರಿಗೆ ಗೊತ್ತು ಅದು ಬರೇ ಪ್ರೀತಿಯಲ್ಲವೆಂಬುದು ಅವರಿಗೆ ಅರಿವಾಗ ತೊಡಗಿದೆ. ಆದರೆ ಅವರಿಬ್ಬರು ಜತೆಯಾಗಿ ಬಾಳುವುದು ಅಸಾಧ್ಯವೆಂದು ಅನಂತರಾಯರು ಬಲ್ಲರು. ಇಂದಿನ ಈ ಲೋಕದಲ್ಲಿ ಅವರಿಬ್ಬರ ಪ್ರೇಮಕ್ಕೆ ಅನುಮತಿ ನೀಡಿ ವಿವಾಹ ಸಂಬಂಧ ಕ್ಕೊಪ್ಪಿದರೆ ಬಾಳುವುದೇ ಕಷ್ಟವಾದೀತು, ಎಲ್ಲರ ಬಾಳಿಗೂ ಮಸಿ ಬಿದ್ದೀತು ಎಂದು ಅವರು ಚಿಂತಿಸಿದರು.

ತಾವಿಬ್ಬರೂ ಜತೆಯಾಗಿ ಬಾಳಬೇಕು. ತಮ್ಮ ಪ್ರೇಮ ಎಂದೆಂದೂ ಮುರಿಯಬಾರದು ಎಂದು ಶಶಿ ಮತ್ತು ಶೇಖರರ ಹಂಬಲ. ಆ ಭಾವನೆಯಲ್ಲೇ ಅವರು ಬೆಳೆದಿದ್ದಾರೆ. ಆದರೆ ಈ ಪ್ರಪಂಚದ ಓಟ ಬಾಳಿನ ಓಟಕ್ಕಿಂತ ಭಿನ್ನವಾಗಿದೆ.

ಹೀಗೆ ಎಲ್ಲರ ಹೃದಯದಲ್ಲೂ ಕಸಿವಿಸಿ ನೋವು ಬೇಗುದಿ ಆದರೆ ಕರ್ತವ್ಯವು ಅನಿವಾರ್ಯವಾದುದರಿಂದ ಒಂದು ದಿನ ಅನಂತರಾಯರು ಶೇಖರನ್ನು ಕರೆದು ಹೇಳಿದರು.

"ಶೇಖರ್, ಶಶಿಗೆ ಒಳ್ಳೆ ಸಂಬಂಧವೊಂದು ಬಂದಿದೆ. ಕೊಡುವುದು ಅಂತ ನಿಶ್ಚಯಿಸಿದ್ದೇನೆ...ನೀವಿಬ್ಬರೂ ಒಬ್ಬರನೊಬ್ಬರು ಪ್ರೀತಿಸುತ್ತೀರಿ ಅಂತ ನಾನು ಅರಿತಿದ್ದೇನೆ ಆದ್ದರಿಂದ ಈ ವಿಚಾರ ನಿನ್ನಲ್ಲಿ ಹೇಳುತಿದ್ದೇನೆ ಶೇಖರ್, ನಿಮ್ಮ ಪ್ರೀತಿ ಅಣ್ಣ ತಂಗಿಯರ ಪ್ರೀತಿಗಿಂತ ಬೇರೆ ಏನಾಗಿರಲೂ ಸಾಧ್ಯವಿಲ್ಲ. ಈ ರೀತಿಯ ನಿಮ್ಮ ಪ್ರೀತಿಗೆ ಧಕ್ಕೆಯುಂಟಾಗದಿರಲಿ. ನೀವಿಬ್ಬರೂ ಸುಖವಾಗಿ ಬಾಳಬೇಕೆಂದೇ ನಮ್ಮ ಇಚ್ಛೆ."

ಪ್ರೇಮದ ಮಹಲನ್ನು ಮುರಿಯಬೇಕು! ಅನಂತರಾಯರು ಶೇಖರನಿಗೆ ಪ್ರೀತಿಯ ತಂದೆಗಿಂತ ಮಿಗಿಲು. ಅವರ ಬಾಳನ್ನು ಹಾಳುಮಾಡ ಬಹುದೆ? ಪ್ರೇಮಕ್ಕೆ ಬಲಿಯಾಗಿ ಕೊರಗುವ ದಾರಿ ಮಾಡಿಕೊಳ್ಳಬಹುದೆ?

"ನೀವಿಬ್ಬರೂ ಬಹಳ ಪ್ರೀತಿಸುತ್ತೀರಿ ಎಂದು ಬಲ್ಲೆ ಶೇಖರ್, ಆದರೆ ಈ ದಿನ ಅದರ ಸ್ವರೂಪ ಬದಲಾಗ ಬೇಕಾಗಿದೆ. ಇಲ್ಲದಿದ್ದರೆ ಈ ಪ್ರಪಂಚದೆಡೆಯಲ್ಲಿ ನಮ್ಮೆಲ್ಲರ ಬದುಕು ನರಕವಾದೀತು. ಆದ್ದರಿಂದ ಯೋಚಿಸು, ಶಶಿಗೂ ಕರ್ತವ್ಯವನ್ನು ತಿಳಿಸಿಕೊಡು....ಶೇಖರ್ ನೀನಿಲ್ಲಿಂದ ಹೋಗಬೇಡ ನೀನು ಪದವೀಧರನಾಗಿ ಒಂದು ಒಳ್ಳೆಯ ಕೆಲಸಕ್ಕೆ ಹೋಗುವವರೆಗೆ, ನೀನು ಬಯಸುವ ವರೆಗೆ ನಾನೇ ನಿನ್ನನ್ನು ಈ ತನಕ ನೋಡುವಂತೆಯೇ ನೋಡುತ್ತೇನೆ" ಎಂದು ಹೇಳಿದರು. ಅವರ ಕಣ್ಣಂಚಿನಲ್ಲೂ ದುಃಖವು ಅಡುತ್ತಿತ್ತು. ಇಷ್ಟು ಹೇಳಿ ಅವರೆದ್ದು ಹೋದರು

ಶೇಖರನ ಹೃದಯದಲ್ಲಿ ಯುದ್ಧ! ಉಭಯ ಸಂಕಟ! ಶಶಿಯ ಹೃದಯದಲ್ಲೂ ಇದೇ ಸಮಸೆ, ಸಂಕಟ, ದುಃಖಗಳ ಸೆಳೆದಾಟ ಪ್ರೇಮಿಗಳಾಗಿರಲು ಸಾಧ್ಯವಿಲ್ಲ. ಸೋದರ-ಸೊದರಿಯಂತಾಗಲು ಸಾಧ್ಯವೆ? ಈ ಸುಂದರ ಪ್ರೇಮ ಮುರಿಯ ಬೇಕೆ?

oo oo

ಹನ್ನೆರಡು ವರ್ಷದ ಮೇಲೆ, ಶೇಖರನಿಗೆ ಕೂಟ್ಟೂರಿಗೆ ಹೋಗಿ ಬರಬೇಕೆಂಬ ಬಯಕೆಯೊಯಿತು. ಮೈ ಮನಸ್ಸುಗಲಿಗೆ ಶಾಂತಿಯಿಲ್ಲ;ಎಲ್ಲಿಗಾದರೂ ಹೋಗೋಣ ಅನ್ನುತ್ತಿತ್ತು ಅವನ ಮನಸ್ಸು. ತನ್ನ ತಂಗಿಯನ್ನು ನೆನೆಯಿತು. ತಾಯಿಯನ್ನು ನೆನೆಯಿತು. ಅವರೆಲ್ಲರಬಹುದೆಂದ ಏನಾಗಿರಬಹುದೆಂದೂ ಕುತೂಹಲ ಹುಟ್ಟಿತು. ಶೇಖರ್ ಬಸ್ ಹತ್ತಿ ಹರಿಯೂರಿಗೆಹೊರಟ.

ಹನ್ನೆರಡು ವರ್ಷದ ಹಿಂದೆ ಹರಿಯೂರು ಹೇಗಿತ್ತೋ ಇಂದೂ ಹಾಗೆಯೇ ಇತ್ತು. ಒಂದಿಷ್ಟು ಹೇಳಿಕೊಳ್ಳುವಂತಹ ಬದಲಾವಣೆಯಿಲ್ಲ. ಶಂಕರರಾಯರು ಇರುವ ತನಕ ಅದು ಅಸಂಭವವೆಂದು ತೋರುತ್ತದೆ [ಶಂಕರರಾಯರು ವಾತರೋಗದ ಉಪದ್ರವದಿಂದ ಹೆಚ್ಚಾಗಿ ಮನೆಯಲ್ಲೇ ಬಿದ್ದುಕೊಳ್ಳ ಬೇಕಾಗುತ್ತಿತ್ತು ಈಗ ಅವರ ಮಗ ಶ್ರೀಧರನೇ ಸರ್ವಾಧಿಕಾರಿ. ವಿಶಾಲವಾದ ಆಸ್ತಿಯೊಡನೆ ಎಲ್ಲಾ ಗಣಗಳನ್ನೂ ಅತ ಪಡೆದುಕೊಂಡು ತಂದೆಯನ್ನು ವಿಂಗಸಿತ್ತ.

ಶೇಖರನನ್ನು ಯಾರೊಬ್ಬರೂ ಗುರುತಿಸಲಿಲ್ಲ. ಗುರುತು ತಿಳಿಸಲೂ ಅವನಿಚ್ಛಿಸಲಿಲ್ಲ. ಆತ ತನ್ನ ಹನ್ನೆರಡು ವರ್ಷದ ಹಿಂದಿನ ಮನೆಯ ಬಾಗಿಲಲ್ಲ ಬಂದು ನಿಂತ. ಅಂಗಳದಲ್ಲಿ ಇಬ್ಬರು ಮೂವರು ಚಿಕ್ಕ ಮಕ್ಕಳು ಆಡುತ್ತಿದ್ದರು.

ಮನೆಯ ಬಾಗಿಲಿಗೆ ಬರುತ್ತಿರುವಾಗ ಪದ್ಮ ಒಳಗಿಂದ ಹೊರ ಬರುತ್ತಿದ್ದಳು. ಅವಳು ಬಾಗಿಲಲ್ಲೇ ನಿಂತು ನೋಡಿದಳು; ಯಾರೋ ಒಬ್ಬ ಸುಂದರ ಯುವಕ! ಅವಳಿಗೆ ಗುರುತು ಸಿಗಲಿಲ್ಲ. ಶೇಖರನಿಗೆ ಅಮ್ಮಾ ಎಂದು ಕರೆಯ ಬೇಕೆಂದು ತೋರಿತು. ಆದರೆ ತುಟಿ ಬಿಗಿಹಿಡಿದ. ನೋಡೋಣ ಏನು ನಡಿದೆದೆ, ಏನು ತಡೆಯುತ್ತಿದೆ" ಎಂದು ಯೋಚಿಸಿದ.

ಪದ್ಮಳ ದೇಹದ ಮೇಲೆ ವಯಸ್ಸು ಪ್ರಭಾವ ಬೀರಿತ್ತು. ಆದರೆ ಅಲಂಕಾರ ಅದನ್ನು ಮುಚ್ಚಿತ್ತು. ಚಿನ್ನದ ಸರ, ಬಣ್ಣದ ಸೀರೆ, ಹಣೆಯಲ್ಲಿ ತಿಲಕ, ಮುಡಿಯಲ್ಲಿ ಹೊವು! ಅವಳು ಯುವಕನನ್ನು ಒಂದು ನಿಮಿಷ ನೋಡಿ;

"ದೇವಕಿ, ಇಕೊ ಯಾರೊ ಬಂದಿದಾರೆ ನೋಡು" ಎಂದು, ಹೊರಗೆ ಬಂದು ಎಲ್ಲಿಗೋ ಅತ್ತ ಹೋದಳು ಒಳಗಿಂದ ಒಬ್ಬಳು ಹೆಂಡತಿ ಹೊರಗೆ ಬಂದಳು. ಬಾಗಿಲಿನಲ್ಲೇ ನಿಂತು ಅಪರಿಚಿತ ಯುವಕನೊಬ್ಬನನ್ನು ನೋಡಿ ಒಮ್ಮೆ ಸ್ವಲ್ಪ ಆಶ್ಚರ್ಯಪಟ್ಟಳು. ಮರುಕ್ಷಣವೇ ಮುಗುಳ್ನಗೆ ಸೂಸುತ್ತಾ

"ಬನ್ನಿ, ಒಳಗೆ ಬನ್ನಿ" ಎಂದು ಸ್ವಾಗತಿಸಿದಳು. ಶೇಖರ ಅತ್ಯಾಶ್ಚರ್ಯದಿಂದ, ಮಂತ್ರಮುಗ್ಧನಾದವನಂತೆ ಅವಳನ್ನು ಹಿಂಬಾಲಿಸಿದ. ದೇವಕಿ ಅವನನ್ನು ಆರಕೊಂಡು ಹೋಗಿ ಕೋಣೆಯಲ್ಲಿರುವ ಕುರ್ಚಿಯನ್ನು ತೋರಿಸಿ

"ಬನ್ನಿ, ಕುಳಿತುಕೊಳ್ಳಿ. ಈಗ ಬಂದೆ" ಎಂದು ಹೊರ ಹೋದಳು. 'ದೇವಕಿ' ಎಂದು ಕರೆಯಬೇಕೆಂದವನಿಗೆ ತೋರಿತು. ಆದರೆ ಉದ್ವೇಗವನ್ನು ಅದುಮಿ ಹಿಡಿದ.

ಸ್ವಲ್ಪ ಹೊತ್ತಿನಲ್ಲಿ ದೇವಕಿ ಹಿಂತಿರುಗಿದಳು. ಅವಳ ಒಂದು ಕೈಯಲ್ಲಿ ಒಂದು ಬಾಟ್ಲಿಯಿತ್ತು. ಇನ್ನೊಂದು ಕೈಯಲ್ಲಿ ಒಂದು ಗ್ಲಾಸಿತ್ತು. ಬಂದವಳೇ ಮೇಜಿನ ಮೇಲೆ ಗ್ಲಾಸನ್ನು ಇರಿಸಿ ಬಾಟ್ಲಿಯಲ್ಲಿರುವುದನ್ನು ಬಗ್ಗಿಸಿದಳು. ಈ ವರ್ತನೆಗಳು, ಈ ಅವಾಂತರಗಳು ಶೇಖರನಿಗೆ ಮಿಂಚು ಹೊಡೆದಂತೆ ಮಾಡಿದ್ದುವು! ಶರಾಬಿನ ವಾಸನೆ ಗಮ್ಮೆಂದು ಮೂಗಿಗೆ ಬಡಿದು ಅವನಿಗೆ ತಲೆ ತಿರುಗುವಂತಾಯಿತು. ಆತ ಗಾಬರಿಯಿಂದ

"ಬೇಡ ಬೇಡ ನನಗೆ ಅಭ್ಯಾಸವಿಲ್ಲ" ಎಂದ. ಹೃದಯವು ಕ್ರೋಧ, ದುಃಖ, ವಿಷಾದ ಕನಿಕರಗಳ ತಾಂಡವದಿಂದ ಸುಡುತ್ತಿತ್ತು.

"ಇರಲಿ. ಚೆನ್ನಾಗಿದೆ. ಕುಡಿಯಿರಿ" ಎಂದವಳು.

"ಬೇಡ ಬೇಡ ದಯವಿಟ್ಟು ಬೇಡ" ಎಂದ ಶೇಖರ. ದೇವಕಿ ಆಶ್ಚರ್ಯದಿಂದ ಒಮ್ಮೆ ನೋಡಿ ಗ್ಲಾಸನ್ನೆತ್ತಿ ತಾನೇ ಕುಡಿದು ಬಿಟ್ಟಳು.

ಶೇಖರ ಮಂತ್ರ ಮುಗ್ಧನಾಗಿ, ಭಯಭ್ರಾಂತನಾಗಿ ನೋಡಿದ! ಏನಿದು ವಿಪರ್ಯಾಸ! ಕನಸೋ ನೆನಸೋ! ಅವಳ ಕಾಮಕೂರ್ಣ ನೇತ್ರಗಳು, ಸುದೃಢವಾದ

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಎ.ಎಮ್ ಮಕ್ಕಳ, ಹೆಂಗಸರ, ಗರ್ಭಿಣಿಯರು, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ— ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ— ದಿ! ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ. ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ. ಬೆಲೆ ರೂ. 1-4-0 (1=25).

ವಿ. ಸೂ.—ಅಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0 =25 NP ಸೇರಿಸಿ ಮನಿಆರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳು— ಮಂಗಳೂರು ಶ್ರೀನಿವಾಸ್ ಬ್ರದರ್ಸ್, ಸ್ಕೂಲ್ ಬುಕ್ ಕೊ, ಕೆನರಾ ಕೊಲೆಜ್ ಬುಕ್ ಕೊ, ಇಂಡಿಯನ್ ಇಂಡಸ್ಟ್ರಿಯಲ್ಸ್ & ಪಬ್ಲಿಸರ್ಸ್ ಇವರಲ್ಲಿಯೂ, ಪುತ್ತೂರಲ್ಲಿ ಪೊಸ್ಟಲರ್ ನ್ಯೂಸ್ ಪಬ್ಲಿಸಿಯಲ್ಲಿಯೂ ದೊರೆಯುತ್ತವೆ.

ಸುಸುಷ್ಟ ಬಾಹುಗಳು, ಸೆರಗಿನ ಸರಿವೆಯಿಲ್ಲದೆ ಗಂಡು ಭೀರಿಯಂತೆ ಬಿಟ್ಟ ಎದೆ ಅವನನ್ನು ಬೆಚ್ಚಿ ಬೀಳುವಂತೆ ಮಾಡಿತು. ಅವಳು ಬಳಿ ಬಂದು ಶೇಖರನ ಹೆಗಲ ಮೇಲೆ ಕೈಯಿಡುತ್ತಾ.

"ಹಾಗಾದರೆ ಮತ್ತೆ ಏಕೆ ಪಟ್ಟಣದಿಂದ ಇಲ್ಲಿ ತನಕ ಬಂದಿರಿ? ನಿಮ್ಮನ್ನು ಈ ಮೊದಲು ನೋಡಿದ ನೆನಪೂ ಇಲ್ಲ" ಎಂದಳು. ಶೇಖರ ತಡವರಿಸುತ್ತಾ—

"ಹೀಗೇ ಬಂದೆ.." ಎಂದ. ಅವಳ ಕೈಗಳು ಅವನ ಕೆನ್ನೆಯ ಮೇಲೆ, ಕೊರಳಿನ ಸುತ್ತ ಅಲೆದಾಡಿದುವು.

"ನೀವು ಪಟ್ಟಣದಲ್ಲಿ ನಮ್ಮ ಚಿಕ್ಕ ಧನಿಗಳ ಸ್ನೇಹಿತರು ಅಂತ ಕಾಣುತ್ತೆ."

ಶೇಖರ ಒಂದು ಕ್ಷಣ ಯೋಚಿಸಿ "ಹೌದು" ಎಂದ. ಅವಳ ಕೈಗಳು ಮತ್ತೆ ಅವನ ಮೈಯ ಮೇಲೆ ಹರಿದಾಡಿದುವು. ಕ್ರಾಫನ್ನು ತೀಡಿದುವು. ಆ ಸ್ಪುರ ದ್ರೂಪವನ್ನು ನೋಡಿ ಅವಳು ಮೊದಲೇ ಮರುಳಾಗಿದ್ದಳು. ಆದರೆ ಆತ ಸುಮ್ಮನೆ ಕುಳಿತಿದ್ದ. ಶೇಖರನಿಗೆ ಈ ಸ್ಪರ್ಷದಿಂದ ಮಂಜುಗಡ್ಡೆ ಮೈಮೇಲಿಟ್ಟಂತಾಗುತ್ತಿತ್ತು. ಆತ ಕಲ್ಲಾಗಿ ಕುಳಿತು ಸಹಿಸಿಕೊಳ್ಳುತ್ತಿದ್ದ. ಅವನಿಗೆ ಕೂಡಲೇ ಎದ್ದು ಹೋಗಬೇಕೆಂದು ತೋರಿತು. ಅವನು ಒಮ್ಮೆಲೇ

ಆ ಚಿಕ್ಕ ಮಕ್ಕಳು ಯಾರು?" ಎಂದು ಕೇಳಿದ.

"ಹುಡುಗಿಯರಿಬ್ಬರೂ ನನ್ನ ತಂಗಿಯಂದಿರು. ಹುಡುಗ ರವಿ ನನ್ನ ಮಗ" ಎಂದಳು ದೇವಕಿ.

ತಂಗಿಯಂದಿರು! ಹಾಗಾದರೆ ತಾನು ಹೋದ ಮೇಲೆ ಶಂಕರರಾಯರಿಂದ ತಾಯಿಗೆ ಎರಡು ಮಕ್ಕಳಾಗಿವೆ! ಆದರೆ ದೇವಕಿಯ ಗಂಡನೆಲ್ಲಿ?

"ಹಾಗಾದರೆ ನಿನ್ನ ಗಂಡನೆಲ್ಲಿ?"

"ಅಯ್ಯೊ ಅದೇನು ಸಂಗತಿ ಬಿಡಿ, ಅವ ಮದುವೆಯಾದ ಒಂದು ತಿಂಗಳಲ್ಲೇ ನನ್ನ ಬಿಟ್ಟು ಬಿಟ್ಟ ಭಿಕಾರಿ. ಈಗ ಚಿಕ್ಕ ಧನಿಗಳು ನಮ್ಮನೆಲ್ಲಾ ನೋಡಿಕೊಳ್ಳುತ್ತಿದ್ದಾರೆ"

ಶೇಖರ ಒಂದು ಕ್ಷಣ ಕುಳಿತ. ಒಂದು ಕ್ಷಣ ಯೋಚಿಸಿದ. ದೇವಕೀಯ ದೇಹ ಹತ್ತಿರ ಹತ್ತಿರ ಬರುತ್ತಿತ್ತು. ಅವಳನ್ನು ದೂಡಿ ಕ್ರೋಧ ಜುಗುಪ್ಸೆಗಳಿಂದ ಆತ ಎದ್ದು ನಿಂತ.

"ನಾನು ಹೋಗುತ್ತೇನೆ" ಎಂದ.

ದೇವಕಿ ಗಾಬರಿಯಾದಳು. ಬೆಚ್ಚಿಬಿದ್ದಳು. ಶೇಖರ ದಡದಡನೆ ಬಾಗಿಲಿನ ತನಕ ಹೋಗಿ ಹಿಂತಿರುಗಿ ನೋಡಿದ ತನ್ನ ತಂಗಿಯನ್ನು!

ತಾಯಿ ಸೂಳೆ! ತಂಗಿ ಸೂಳೆ! ಛಿ! ನಾಯಿಯ ಬಾಳ್ವೆ! ಈ ಹೀನಾವಸ್ಥೆಯನ್ನು ನೆನೆದು ಅವನ ಕಣ್ಣಲ್ಲಿ ನೀರು ತುಂಬಿತು. ನಾನು ನಿನ್ನ ಅಣ್ಣ ಎಂದು ಹೇಳಲು ನಾಲಗೆ ಯೆತ್ತಿದ. ನಾಲಗೆಯೇ ಬರಲಿಲ್ಲ. ಬೇಡವೆಂದು ತೋರಿತು. ಹಾಗೇ ಬಿರಬಿರನೆ ಹೊರಟುಹೋದ. ಹೇಗೋ ಬಸ್ ಹತ್ತಿದ. ಅವನ ಮೈ ಜ್ವರದಿಂದ ಬಳಲಿದಂತಾಗಿತ್ತು. ಮನಸ್ಸು ಅಳೆಯಲಾರದ ವೇದನೆ, ಅಶಾಂತಿಯಿಂದ ಕುದಿಯುತಿತ್ತು. ಅವನು ಹನ್ನೆರಡು ವರ್ಷದ ಹಿಂದಿನ ಚಂದ್ರುವಾಗಿ ಯೋಚಿಸಿದ. ಅವನಿಗೆ ತಾಯಿಯಿಲ್ಲ. ತಂಗಿಯೂ ಇಲ್ಲ! ಇನ್ನು ಜಯಮ್ಮನೇ ತಾಯಿ. ಶಶಿಯೇ ತಂಗಿ. ಯಾವ ಬಾಳು ಹೇಗಾಯಿತು!

ಮನೆಗೆ ಬಂದು ಮುಟ್ಟುವಷ್ಟರ್ಲ್ಲ ಅವನು ತುಂಬಾ ಬಳಲಿಹೋಗಿದ್ದ. ಶೇಖರ ಎಲ್ಲಿ ಹೋದನೆಂಬ ಗಾಬರಿಯಿಂದ ಎಲ್ಲರೂ ಪಡಸಾಲೆಯಲ್ಲಿ ಚಿಂತಿತರಾಗಿ ಕುಳಿತಿದ್ದರು. ಶಶಿಯ ಮುಖ ದುಃಖ, ಗಾಬರಿಗಳಿಂದ ಬಾಡಿಹೋಗಿತ್ತು.

ಶೇಖರ ಒಳಬಂದೊಡನೆಯೇ ಜಯಮ್ಮ "ಶೇಖರ್!" ಎಂದು ಉದ್ಗರಿಸಿದರು. ಶೇಖರ್ "ಅಮ್ಮಾ" ಎಂದು ಹೇಳಿ ಮೆಲ್ಲನೆ ಸಾವರಿಸಿಕೊಂಡು ಹೋಗಿ ಇಸೀಚೇರಿನಲ್ಲಿ ಕುಳಿತ. ಅಷ್ಟು ಗೊತ್ತು; ಆ ಮೇಲೆ ಅವನಿಗೆ ಪ್ರಜ್ಞೆಯಿರಲಿಲ್ಲ.

ಎರಡು ದಿನ ಜ್ವರ ಎಡೆಬಿಡದೆ ಬಂತು ಡಾಕ್ಟರರ ಸತತ ಪರಿಶ್ರಮ, ಶಶಿಯ ಇರುಳು ಹಗಲೆನ್ನದ ಆರೈಕೆ. ಜಯಮ್ಮನವರ ತಾಯಿ ಹೃದಯದ ಸೇವೆಯಿಂದ ಜ್ವರ ಇಳಿಯುತ್ತಾ ಬಂತು. ಜ್ವರ ಬರಲು ಮನಸ್ಸಿಗುಂಟಾದ ಆಘಾತವೇ ಕಾರಣವೆಂದು ಡಾಕ್ಟರರು ಹೇಳಿದರು.

ಎರಡು ದಿನಗಳ ಮೇಲೆ ಶೇಖರ ಸ್ವಲ್ಪ ಚೇತರಿಕೊಂಡು ಕಣ್ತೆರೆದು ನೋಡಿದಾಗ ಬಳಿಯಲ್ಲಿ ಶಶಿ ಕುಳಿತಿದ್ದಳು. ಸ್ವಲ್ಪ ದೂರ ಅನಂತ ರಾಯರು ಮತ್ತು ಜಯಮ್ಮ ಕುಳಿತಿದ್ದರು. ಆದರೆ ಮಲಗಿಯೇ ಇದ್ದ ಶೇಖರ್ ಅವರನ್ನು ಕಾಣಲಿಲ್ಲ. ಅವನು ಮುಗುಳ್ನಗುತ್ತಾ ಶಶಿಯ ಕೈ ಹಿಡಕೊಂಡು

"ಶಶಿ ನಾನು ನನ್ನ ಊರಿಗೆ ಹೋಗಿ ಬಂದೆ ಶಶಿ. ಅಲ್ಲಿ ನನಗೆ ಯಾರೂ ಇಲ್ಲ. ತಂದೆ ಮೊದಲೇ ಇಲ್ಲ. ಈಗ ನನ್ನ ಪಾಲಿಗೆ ತಾಯಿಯೂ ಇಲ್ಲ, ತಂಗಿಯೂ ಇಲ್ಲ." ಎಂದು ದುಃಖಿಸಿದ. ಕಣ್ಣುತುಂಬಾ ನೀರು ತುಂಬಿಕೊಂಡಿತು. ಅನಂತ ರಾಯರು ಮತ್ತು ಜಯಮ್ಮ ಕಣ್ಣೊರಸಿಕೊಂಡರು.

ಆಗ ಶಶಿ. "ಹೋಗಲಿ ಬಿಡು ಶೇಖರ್, ಆದದ್ದು ಆಗಿ ಹೋಯಿತು. ನಾವೆಲ್ಲಾ ಇದ್ದೇವಲ್ಲಾ" ಎಂದಳು. ಶೇಖರ ಶಶಿಯ ಕೈಯನ್ನು ಬಿಗಿಯಾಗಿ ಹಿಡಿದು.

"ಹೌದು ಶಶಿ. ನಿನ್ನ ತಂದೆತಾಯಿಗಳೇ ನನಗೂ ತಂದೆತಾಯಿಗಳು....ನಮ್ಮ ಆತ—ಕನಸುಗಳನ್ನೆಲ್ಲಾ ಮರೆತು ಬಿಡೋಣ ಶಶಿ...ಶಶಿ, ನೀನು ಇನ್ನು ಮುಂದೆ ನನ್ನ ತಂಗಿ" ಎಂದ.

ಎಲ್ಲರ ಕಣ್ಣಲ್ಲೂ ದುಃಖ-ಹರ್ಷಗಳು ಬೆರೆತ ಕಣ್ಣೀರು ಚಿಮ್ಮಿತು.

ಹಿಂದಿ ಮತ್ತು ಹಿಂದುಸ್ತಾನಿ ವಿವಾದ

(೧ನೇ ಪುಟದಿಂದ)

ದರಿಂದಲೇ ಅವರು ಹಿಂದುಸ್ತಾನಿಯೆಂದು ಕರೆದರೂ ಆ ಭಾಷೆಯು ನಿಜವಾಗಿ ಉರ್ದುವೇ ಆಗಿತ್ತು. ಆದರೆ, ಭಾರತೀಯ ಸಂಸ್ಕಾರೋಚಿತವಾಗಿ ಬೆಳೆದವರು ಬಹುಮಂದಿಯಾದುದರಿಂದ, ಹಿಂದೀ ಆಂದೋಲನದಲ್ಲಿ ಸಾಕಷ್ಟು ಪ್ರಗತಿ ಕಂಡಿತು; ಆಂಗ್ಲರಿಂದ ರಚಿತಗೊಂಡ ಹಿಂದುಸ್ತಾನಿಯ ಜಾದು ಜನಸಾಮಾನ್ಯರ ಮೇಲೆ ನಡೆಯಲಿಲ್ಲ.

ಸಂಸ್ಕೃತ—ಹಿಂದಿ

ಮುಂದೆ ಕಾಂಗ್ರೆಸ್ಸಿನ ಶಕ್ತಿ ಬೆಳೆದಾಗ, ರಾಷ್ಟ್ರ ಭಾಷೆಯ ಪ್ರಶ್ನೆ ಮುಂದೆ ಬಂತು. ಹಿಂದಿ, ಉರ್ದು ಮತ್ತು ಹಿಂದುಸ್ತಾನಿಗಳ ಬಗ್ಗೆ ಪುನರ್ವಿಚಾರ ನಡೆಯಿತು. ರಾಷ್ಟ್ರ ಭಾಷೆಯನ್ನು ದೇವನಾಗರಿ ಮತ್ತು ಪಾರ್ಸಿ ಲಿಪಿಗಳಲ್ಲಿ ಬರೆಯಲು ಅನುಕೂಲವಾಗಬೇಕೆ? ಉಚ್ಚ ವಿಚಾರಗಳಿಗೆ ಶಬ್ದ ಭಂಡಾರವನ್ನು ಭಾರತೀಯ ಭಾಷೆಗಳಿಂದ ತರಬೇಕೇ, ವಿದೇಶೀ ಭಾಷೆಗಳಿಂದಲೇ ಎಂಬ ಬಗ್ಗೆ ವಿಚಾರ ವಿಮರ್ಶೆ ನಡೆಯಿತು. ಕೊನೆಗೊಂದು ನಿರ್ಧಾರವೂ ಆಯ್ತು. ಹಿಂದಿಯಲ್ಲಿ ಪ್ರಚಲಿತವಿರುವ ಶಬ್ದಗಳನ್ನು ಉಳಿಸಿಕೊಂಡು, ಆದರ ನೈಸರ್ಗಿಕ ಧಾರೆಯನ್ನು ತಡೆಯದೆ, ಹೊಸ ಶಬ್ದಗಳನ್ನು ಆಯ್ದುಕೊಳ್ಳುವಾಗ, ಸಂಸ್ಕೃತಕ್ಕೆ ಪ್ರಾಶಸ್ತ್ಯವನ್ನು ನೀಡಬೇಕೆಂದಾಯಿತು. ಉಚ್ಚ ವಿಚಾರ ಪ್ರಕಟಿಸಲು ಉಚ್ಚ ಶಬ್ದಾವಳಿಗಳು ಬೇಕು. ಜನತೆಯು ಉಚ್ಚ ವಿಚಾರಗಳನ್ನು ಸ್ವೀಕರಿಸುವುದಾದರೆ, ಉಚ್ಚ ಪದಗಳನ್ನೂ ಅದು ತೆಗೆದುಕೊಳ್ಳಲೇ ಬೇಕು. ಇಂಗ್ಲಿಷ್, ಅರಬಿ, ಪಾರಸಿ, ಲೆಟಿನ್, ಗ್ರೀಕ್ ಮೊದಲಾದ ವಿದೇಶೀಯ ಭಾಷೆಗಳಿಂದ ಇಂತಹ ಶಬ್ದಗಳನ್ನು ತರುವುದು ಅನಪೇಕ್ಷಿತ ಮಾತ್ರವಲ್ಲ ಪ್ರಯಾಸತಮ. ರಾಷ್ಟ್ರದ ಹಿತಕ್ಕೂ ಅದು ಘಾತಕ. ಸಂಸ್ಕೃತದ ಪರಂಪರೆ ಭಾರತದ ಮೂಲೆ ಮೂಲೆಯಲ್ಲೂ ಇದೆ. ಆದುದರಿಂದ ಸಂಸ್ಕೃತ ಮತ್ತು ಸಂಸ್ಕೃತಜನ್ಯ ಶಬ್ದಗಳಿಂದ ನಮ್ಮ ಕೆಲಸ ಮಾಡಿಕೊಳ್ಳುವುದು ಶ್ರೇಯಸ್ಕರ.

ರಾಷ್ಟ್ರ ಭಾಷೆಯಾಗಿ ಹಿಂದಿ

ಇಂತಹ ಪರಿಸ್ಥಿತಿಯಲ್ಲಿ ಹಿಂದಿಯ ಸಾಹಿತ್ಯಿಕ ರೂಪವನ್ನು ಕಂಡು ಬೆದರಬೇಕಾಗಿಲ್ಲ. ಪಾರಿಭಾಷಿಕ ಶಬ್ದಗಳಿಗಾಗಿ ಎಲ್ಲ ಭಾರತೀಯ ಭಾಷೆಗಳೂ ಸಾಮಾನ್ಯವಾಗಿ ಸಂಸ್ಕೃತಕ್ಕೇನೇ ಶರಣು ಹೋಗಬೇಕು. ಅಲ್ಪ ಸಂಖ್ಯಾಕರಾದ ವಿದೇಶೀಯರ ಸಂತೃಪ್ತಿಗಾಗಿ ಬಹುಸಂಖ್ಯಾಕ ದೇಶವಾಸಿಗಳನ್ನು ಸ್ವಾಭಾವಿಕ ವಿಕಾಸದ ಬೆವರ್ಗದಿಂದವಿಮುಖರಾಗಿಸುವುದುದೂರ ದರ್ಶಿತನವೆನಿಸದು. ಆದುದರಿಂದ ಉರ್ದು ಮಿಶ್ರಿತವಾದ ಹಿಂದುಸ್ತಾನಿರೂಪವು ರಾಷ್ಟ್ರಭಾಷೆಯ ಸ್ಥಾನವನ್ನೇರುವುದು ಅಸಾಧ್ಯ ಮತ್ತು ಅನಪೇಕ್ಷಿತ. ಎಲ್ಲ ಭಾರತೀಯರೂ ಅರ್ಧಮಾಡಿಕೊಳ್ಳಬಹುದಾದಂತಹ ಸಂಸ್ಕೃತಯುಕ್ತ ಹಿಂದಿಯೇ ಆದಕ್ಕೆ ಅತ್ಯುಪಯುಕ್ತವಾದುದು. ಈ ಕಡೆಯಲ್ಲಿ ಎಲ್ಲರ ನಿಷ್ಠೆ ಹರಿಯ ಬೇಕಾಗಿದೆಯೆಂದು ಹೇಳಬಹುದು.

ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲಿನ

ಇನ್ಸಿಡೆಂಟಲ್ ಚಾರ್ಜಸ್ ಹೋಯಿತು

ನಮ್ಮ ಸೇವಿಂಗ್ಸ್ ಬ್ಯಾಂಕ್ ಖಾತೆದಾರರಿಗೆ ಇನ್ನೊಂದು ಸೌಕರ್ಯ

ಜುಲೈ 1, 1962ರಿಂದ ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಇನ್ಸಿಡೆಂಟಲ್ ಚಾರ್ಜ್ ವಸೂಲು ಮಾಡಲಾಗುವುದಿಲ್ಲವೆಂದು ತಿಳಿಸಲು ಸಂತೋಷಪಡುತ್ತೇವೆ.

ಒಂದು ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆಯಿರಿ.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ತ್ರಿಗಳು,
ಫಾರ್ಮುಗಳು,
ದೊರೆಯುತ್ತವೆ.

Edited Printed & Published by K. H. Shetty, at the Navayuga Press, Udipi, S. India.

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ನಿಮ್ಮ ಯಾವತ್ತೂ ಮುದ್ರಣ ಕೆಲಸಗಳಿಗೆ ದಯವಿಟ್ಟು ವಿಚಾರಿಸಿರಿ: ನವಯುಗ ಪ್ರೆಸ್, ಉಡುಪಿ

ವಿದ್ಯಾರ್ಥಿಗಳಿಗೆ ಮತ್ತು ವಯಸ್ಕರಿಗೆ ಅತ್ಯುಪಯೋಗೀ ಪುಸ್ತಕ ಸುಲಭದಲ್ಲಿ ಇಂಗ್ಲಿ (ಆಂಗ್ಲ ಸ್ವಯಂಬೋಧಿನಿ ನವಭಾರತ ಪುಸ್ತಕ ಭಂಡ ಉಡುಪಿ

ಸಂಪುಟ ೪೧ ಸಂಚಿಕೆ ೪೭ | ಉಡುಪಿ 2—8—1962 ಗುರುವಾರ | Vol. 41 No. 47

ಯುವಜನರಿಂದ
ಕಾಂಗ್ರೆಸ್ ಪಕ್ಷದ ಬಲಸಂವರ್ಧನೆ

ಕಾಂಗ್ರೆಸ್ ಅಧ್ಯಕ್ಷ ಶ್ರೀ ದಾಮೋದರಂ ಸಂಜೀವಯ್ಯನವರು ನಡುಹರೆಯದಲ್ಲಿಯೇ ಉನ್ನತ ಪದವಿಯನ್ನು ಏರಿದವರು. ಇಷ್ಟೊಂದು ಚಿಕ್ಕ ವಯಸ್ಸಿದಲ್ಲಿಯೇ ಕಾಂಗ್ರೆಸಿನ ಅಧ್ಯಕ್ಷರಾಗಿ ಸ್ವಾತಂತ್ರ್ಯಾನಂತರ ಆಯ್ಕೆಗೊಂಡ ಕೆಲವೇ ಜನರಲ್ಲಿ ಇವರೂ ಒಬ್ಬರು. ಕಾಂಗ್ರೆಸ್ ಪಕ್ಷದಲ್ಲಿ ಹೊಸ ರಕ್ತದ ಯುವಕರಿಗೆ ಪ್ರವೇಶವು ಹೆಚ್ಚು ಹೆಚ್ಚಾಗಿ ದೊರೆತು, ಪಕ್ಷವು ಇನ್ನೂ ಶಕ್ತಿಶಾಲಿಯೂ ಶಕ್ತಿವಂತವೂ ಆಗುವಂತೆ ಮಾಡುವುದರಲ್ಲಿ ಆಸಕ್ತಿ ವಹಿಸಬೇಕು; ಹ್ರಾಸಗೊಳ್ಳುತ್ತಿರುವ ಜನಪ್ರಿಯತೆಯನ್ನು ಮರಳಿ ಗಳಿಸಬೇಕು ಎಂಬ ಅಭಿಲಾಷೆಯನ್ನು ದಾಮೋದರಂ ಸಂಜೀವಯ್ಯನವರು ಕಾರ್ಯರೂಪಕ್ಕೆ ತರುವರೆಂಬ ಆಶೆ ಎಲ್ಲ ಕಾಂಗ್ರೆಸಿಗರಲ್ಲಿಯೂ ಇದೆ. ಶ್ರೀ ಸಂಜೀವಯ್ಯನವರು ಕಾಂಗ್ರೆಸ್ ಅಧ್ಯಕ್ಷರಾಗುವುದಕ್ಕೆ ಮೊದಲು ಅಖಿಲ ಭಾರತ ವ್ಯಕ್ತಿಯೆನಿಸಿರಲಿಲ್ಲ. ಆಂಧ್ರ ಪ್ರದೇಶದಲ್ಲಿ ಶ್ರೀ ನೀಲಂ ಸಂಜೀವ ರೆಡ್ಡಿಯವರು ತನ್ನಸಂಪುಟದಲ್ಲಿ ಸೇರಿಕೊಳ್ಳುವಂತೆ ಕೇಳಿಕೊಂಡಾಗ ಅದಕ್ಕೆ ಒಪ್ಪದಿದ್ದುದರಿಂದಲೇ ಅವರು ಸಾಕಷ್ಟು ಪ್ರಸಿದ್ಧಿಗೆ ಬಂದರು. ಕಾಂಗ್ರೆಸ್ ಅಧ್ಯಕ್ಷ ಪೀಠವೇರಿದ ಹರಿಜನರಲ್ಲಿ ಇವರು ಪ್ರಪ್ರಥಮರು, ಮಹಾತ್ಮಾ ಗಾಂಧೀಜಿಯವರ ಬಯಕೆಯು ಇವರ ಅಧ್ಯಕ್ಷತನದಿಂದ ಅರ್ಧಾಂಶದಷ್ಟು ಪೂರೈಸಿತೆನ್ನಬಹುದು.

ಗೋವೆಯಲ್ಲಿ ಕಾಂಗ್ರೆಸ್

ಶ್ರೀ ಸಂಜೀವಯ್ಯನವರು ಗೋವೆಯನ್ನು ಸಂದರ್ಶಿಸಲು ತೆರಳುವ ದಾರಿಯಲ್ಲಿ ಮುಂಬಯಿಯಲ್ಲಿ ಮೂರು ದಿನ ತಂಗಿದರು. ಗೋವೆಯಲ್ಲಿ ಕಾಂಗ್ರೆಸ್‌ನ ಸ್ಥಾಪನೆಯು ಇತ್ತೀಚೆಗೆ ಆರಂಭವಾದುದರಿಂದ, ಮತ್ತು ಅಲ್ಲಿ ಸಂಘಟನೆಯು ಬಹಳಷ್ಟು ಕಠಿನವೆಂದು ಅಲ್ಲಿನ ಕಾರ್ಯಕರ್ತರು ಮನವರಿಕೆ ಮಾಡಿಕೊಂಡುದರಿಂದ, ಅಧ್ಯಕ್ಷರ ಭೇಟ್ಟಿಯಿಂದ ಅವರ ಕಾರ್ಯವು ತುಸು ಹಗುರವೆನಿಸಬಹುದು. ಉತ್ಸಾಹಿಗಳಾದ ಸಂಜೀವಯ್ಯ ತನ್ನ ಪಾಲಿನ ಪ್ರಯತ್ನವನ್ನು ಅಲ್ಲಿ ಮಾಡುವುದು ಖಂಡಿತ; ಮತ್ತು ಆದರಲ್ಲಿ ಅವರು ಯಶಸ್ವಿಯಾಗುವ ಸಂಭವವೇ ಅಧಿಕ.

ಯುವಕ ಕಾಂಗ್ರೆಸ್ ಸಂಘಟನೆ

ಕಾಂಗ್ರೆಸ್ ಪಕ್ಷದಲ್ಲಿ ಯುವಕರಿಗೆ ತಕ್ಕ ತರಬೇತಿಯನ್ನು ನೀಡಬೇಕು; ಮುಂದೆ ಅವರು ಅವಕಾಶ ಪ್ರಾಪ್ತವಾದಾಗ, ಪಕ್ಷದ ನೀತಿನಿಯಮಗಳಿಗೆ ಹೊಂದುವಂತೆ ಪಕ್ಷ ಮತ್ತು ರಾಜ್ಯಗಳ ಸೂತ್ರಧಾರಿತನವನ್ನು ಸ್ವೀಕರಿಸುವಂತಾಗಬೇಕು. ಇಂದು ವಿವಿಧ ಪಕ್ಷಗಳ ಜಂಜಾಟದಲ್ಲಿ ಬೆಚ್ಚಿನ ಯುವಕರು ಕಾಂಗ್ರೆಸಿನ ಬಗ್ಗೆ ಜುಗುಪ್ಸೆಯನ್ನು ತಳೆದಿರುವಂತೆ ಭಾಸವಾಗುತ್ತದೆ. ಅವರ ಜುಗುಪ್ಸಾ ಭಾವನೆಗೆ ಕಾಂಗ್ರೆಸ್‌ನ ನೀತಿ ನಡಾವಳಿಗಳ ಪರಿಜ್ಞಾನವಿಲ್ಲದಿರುವುದೇ ಕಾರಣವೆಂಬುದು ನಿರ್ವಿವಾದ ಕಾಂಗ್ರೆಸ್ ಸಂದೇಶವನ್ನು ಮನೆ ಮನೆಗೆ ನುಟ್ಟಿಸುವ ಮಾಧ್ಯಮ ವಿಂದು ಉಳಿದಿಲ್ಲ. ಇದಕ್ಕಾಗಿ ಯುವಕ ಕಾಂಗ್ರೆಸ್ಸನ್ನು ಮತ್ತಷ್ಟು ಬಲಪಡಿಸಿ ತನ್ಮೂಲಕ ಕಾಂಗ್ರೆಸ್ ತತ್ವಗಳು ಹೆಚ್ಚು ಹೆಚ್ಚಾಗಿ ಪ್ರಸಾರವಾಗುವಂತೆ ಮಾಡುವ ನಿರ್ಧಾರವನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಮಾಡಿದೆ. ಯುವಕ ತನದಲ್ಲಿಯೇ ಇರುವ ಸಂಜೀವಯ್ಯನವರು ಈ ಕಾರ್ಯವನ್ನು ಮಾಡುವಲ್ಲಿ ಹಿಂದುಳಿಯಲಾರರೆಂದು ನಂಬಬಹುದು. ಪಾಶ್ಚಾತ್ಯ ದೇಶಗಳಲ್ಲಿನ ಮತದಾರರಲ್ಲಿ ಹೆಚ್ಚಿನವರು ಯಾವುದಾದರೊಂದು ಪಕ್ಷದ ಸದಸ್ಯರಾಗಿಯೇ ಇರುತ್ತಾರೆ. ಹೀಗಾಗಿ, ತಮ್ಮ ತಮ್ಮ ಪಾಲಿಗೆ ಎಷ್ಟು ಮತಗಳು ಚುನಾವಣೆಯಲ್ಲಿ ದೊರೆಯಬಹುದು ಎಂದವರು ಲೆಕ್ಕ ನೋಡುತ್ತವೆ. ಅವುಗಳ ಗಣನೆ ತಪ್ಪಿ ಹೋಗುವ ಸಂದರ್ಭಗಳು ಅಲ್ಪ ಸ್ವಲ್ಪ ಜಲ್ಲಾ ಪಿಲ್ಲಿಯಾಗಿ ಹೋಗುವ ಸದಸ್ಯೇತರರ ಮತಗಳು ತೀರ ಅತ್ಯಲ್ಪ. ಆದರೆ, ನಮ್ಮ ದೇಶದ ಸ್ಥಿತಿ ಹಾಗಿರುವುದಿಲ್ಲ. ಭಾರತದ ೨೦ ಕೋಟಿಗೂ ಮಿತ್ತಿದ ಮತದಾರರಲ್ಲಿ ರಾಜಕೀಯ ಪಕ್ಷಗಳ ಸದಸ್ಯರಾದವರ ಸಂಖ್ಯೆ ಎಷ್ಟು? ಹೀಗೆ ಸದಸ್ಯರಾದವರಾದರೂ ಪಕ್ಷದ ನೀತಿಯನ್ನು, ಧೋರಣೆಯನ್ನು ಸರಿಯಾಗಿ ಅರ್ಥಮಾಡಿಕೊಂಡಿದ್ದಾರೆಯೆ? ಹಾಗಿರುವಾಗ, ನಮ್ಮ ನಾಗರಿಕರಲ್ಲಿ ರಾಜಕೀಯ ಪ್ರಜ್ಞೆ ಬೆಳೆಸಲು ಬೇಕಾದಷ್ಟು ಅವಕಾಶವಿದೆ. ಕಾಂಗ್ರೆಸ್ ಪಕ್ಷವಾದರೂ ಇಂತಹ ಸಮಾಜ ಕಾರ್ಯವನ್ನು ಮಾಡಿ, ತನ್ನ ಸದಸ್ಯ ಸಂಖ್ಯೆಯನ್ನು ಹೆಚ್ಚಿಸುವುದು ಅತ್ಯವಶ್ಯವಲ್ಲವೆ? ಯುವಜನ ಸಂಘಟನೆಯೂ ಇದಕ್ಕೆ ಸಹಾಯ ಸಲ್ಲಿಸಬಹುದೆನಿಸುತ್ತದೆ.

ಅಪಪ್ರಚಾರಕ್ಕೆ ತಡೆ

ವಿರೋಧಿಪಕ್ಷಗಳು ಅಡಳಿತೆಯ ಪಕ್ಷದ ವಿರುದ್ಧ ಯಾವ ಕಾಲಕ್ಕಾದರೂ ಎಂತಹ ಆರೋಪವನ್ನೂ ಹೊರಿಸಲು ಸ್ವತಂತ್ರವಾಗಿವೆ. ಅಂತಹ ಆರೋಪಗಳ ಸತ್ಯಾಸತ್ಯತೆಯನ್ನು ವಿಮರ್ಶಿಸುವಷ್ಟು ಪ್ರಜ್ಞೆಯು ನಮ್ಮಲ್ಲಿ ಹೆಚ್ಚಿನವರಿಗಿಲ್ಲ. ಇದ್ದವರಾದರೂ ತಮ್ಮ ನಿತ್ಯಿಕ ಕಾರ್ಯಕ್ರಮ ಪಟ್ಟಿಯನ್ನು ಬದಲಾಯಿಸಲು ಒಪ್ಪದೆ, ಆದರ ಗೊಡವೆಗೇನೇ ಹೋಗುವುದಿಲ್ಲ. ಇದೇ ನಮ್ಮ ರಾಜಕಾರಣದ ದಿವಾಳಿಕೋರತನವೆನ್ನಬೇಕು. ವಿರೋಧಿ ಪಕ್ಷಗಳು ಹೊರಿಸುವ ಆರೋಪಗಳಲ್ಲಿ ಸತ್ಯಾಂಶವಿರುವುದೂ ಇಲ್ಲ; ಇದ್ದರೂ ಅತ್ಯಲ್ಪ. ಆದರೆ, ಜನತೆಗದು ಜೀಗೆ ತಿಳಿಯಬೇಕು? ಯಾರು ತಿಳಿಸಬೇಕು? ಚುನಾವಣೆಯ ಕಾಲವೊಂದನ್ನು ಬಿಟ್ಟರೆ, ಕಾಂಗ್ರೆಸ್ ಪ್ರತಿನಿಧಿಗಳು ಮತದಾರರನ್ನು ಕಾಣುವುದಿದೆಯೆ? ಇದರಿಂದಾಗಿಯೇ ಅಪಪ್ರಚಾರವು ಸಾಕಷ್ಟು ನಡೆದು, ಕಾಂಗ್ರೆಸ್‌ನ ಶಕ್ತಿಕ್ಷೀಣಿಸುವುದಕ್ಕೆ ಕಾರಣವಾಗುತ್ತದೆ. ಅಧ್ಯಕ್ಷ ಸಂಜೀವಯ್ಯನವರೇ ಇಂತಹ ಅಪಪ್ರಚಾರದ ವಿಧಾನವೊಂದನ್ನು ಬಹಿರಂಗ ಗೊಳಿಸಿದ್ದು, ಅದು ಸ್ವಾರಸ್ಯವಾಗಿದೆ.

(ಐನೇ ಪುಟ ನೋಡಿರಿ)

To GROW WITH THE NATION

Advertise in the 'Navayuga'

Illustrated Kannada Weekly

Founded: **41** years ago

The vast reading public behind 'Navayuga' makes it worthwhile to insert your advertisements regularly in the Navayuga and its special supplements issued from time to time

One such issue of **15th August 1962** is the INDEPENDENCE DAY SUPPLEMENT supported by many reputed writers and columnists of Mysore.

For best advertisement value advertise in

NAVAYUGA

UDIPI, S. KANARA, MYSORE STATE.

'ಖೀರಾ' ಉಕ್ಕಿನ ಫರ್ನಿಚರುಗಳು, ಮಂಚ-ಸೋಫಾಗಳು, ವೈವಿಧ್ಯ ಪೂರ್ಣ ಕಪಾಟುಗಳು, ಸ್ಟೈನ್‌ಲೆಸ್ ಪಾತ್ರೆ ಪರಡಿಗಳು, ಗೃಹಾಲಂಕಾರ ಸಾಹಿತ್ಯಗಳು, ಗೃಹಿಣಿಯರ ಶೃಂಗಾರ ಸಾಧನಗಳು, ಉಡುಗೊರೆ ಸಾಮಗ್ರಿಗಳು ಇತ್ಯಾದಿ ಇತ್ಯಾದಿಗಳಿಗೆ ವಿಚಾರಿಸಿರಿ —

ಶಾಸ್ತ್ರಿ & ಕೊ

ಹಂಪನಕಟ್ಟೆ,
ಮಂಗಳೂರು—1

ಎಪ್ಪತ್ತರ ನೆನಹು

ಕರುಣಾಳು ಪರಮಾತ್ಮ

—ಸಾಗರ್

ಕಾಲದ ಕಾರ್ಖಾನೆಯಲ್ಲಿ ದುಡಿದು ಬಲಹೀನವಾದ ಕಣ್ಣರೆಪ್ಪೆಗಳನ್ನು ಪ್ರಯತ್ನಪೂರ್ವಕವಾಗಿ ಅಗಲಿಸಿ, ಕಾರ್ಮುಗಿಲು ಕವಿದ ಆಕಾಶದ ಕಡೆಗೆ ನೋಡುತ್ತಾ ತನ್ನ ಮನೆಯ ಜಗಲಿಯಲ್ಲಿ ಕುಳಿತಿದ್ದರು ಆನಂದ ರಾಯರು. ಮಿಂಚು ಮಿಂಚಿತು. ಗುಡುಗು ಗುಡುಗಿತು. ಮಳೆಗಾಲದ ಮೊದಲ ಆಟ ಪ್ರಾರಂಭವಾಗುವುದರಲ್ಲಿತ್ತು.—ಅದೇ ಮನೆಯ ಅದೇ ಜಗಲಿಯಲ್ಲಿ ಅದೇ ರೀತಿ ಅವರು ಕಂಡ ಮಳೆಗಾಲಗಳು—ಒಂದಲ್ಲ, ಎರಡಲ್ಲ.....

ಎಪ್ಪತ್ತು.....

.....ತನ್ನನ್ನು ತಂದೆಯ ಮಡಿಲಿಗೆ ಹಾಕಿ ಬಹು ಸಂಖ್ಯೆಯನ್ನು ಸೇರಿಕೊಂಡ ತಾಯಿ ಸಾವಿತ್ರಮ್ಮನವರ ನೆನಪಿಲ್ಲ ಆನಂದ ರಾಯರಿಗೆ. ತಂದೆ ಶ್ರೀನಿವಾಸ ರಾಯರು ವೈದಿಕರು. ಉಪನಯನವಾದಂದಿನಿಂದ ಮಗನೂ ವೈದಿಕರೆ. ಬೇರೆ ವಿದ್ಯೆ ತಂದೆ ಮಕ್ಕಳಿಬ್ಬರೂ ಕಲಿತವರಲ್ಲ. ಹಿರಿಯೂರ ಗ್ರಾಮದೇವರ ಪೂಜೆ ವಾರಂಪರ್ಯವಾಗಿ ಅವರ ಕುಟುಂಬಕ್ಕೆ ಬಂದಿತ್ತು. ಆದರ ಫಲವಾಗಿ ವರ್ಷಕ್ಕೆ ಇಪ್ಪತ್ತು ಮುಡಿ ಅಕ್ಕಿ ಮತ್ತು ಹಬ್ಬ ಹರಿದಿನಗಳಲ್ಲಿ ಅಲ್ಪ ಸ್ವಲ್ಪ ಕಾಣಿಕೆ ಆದಾಯವಾಗುತ್ತಿತ್ತು. ಇಷ್ಟರಿಂದಲೇ ಸಾಗಬೇಕಿತ್ತು ಬದುಕು.....

.....ಶ್ರೀನಿವಾಸ ರಾಯರು ಮೂಲವ್ಯಾಧಿಯ ಚಿತ್ರಹಿಂಸೆಯಲ್ಲಿ ಕೊನೆಯುಸಿರೆಳೆದಾಗ ಆನಂದ ರಾಯರಿಗೆ ಹತ್ತು ಹರೆಯ. ಅಂದಿನಿಂದ ಗೋಪಾಲಕೃಷ್ಣದೇವರ ಪೂಜೆ ಅವರ ಆದ್ಯ ಕರ್ತವ್ಯ....

.....ಆನಂದ ರಾಯರಿಗೆ ಹದಿನಾರು ಹಿಡಿಯುವ ವರೆಗೂ ಸುಬ್ಬಜ್ಜಿ ಉದ್ದವೆಳೆದರು. ವೈಶಾಖ ಬಂತು. ಅಜ್ಜಿಯ ದಿನ ತೀರಿತು ಮತ್ತೆರಡು ವರ್ಷ—ಆನಂದ ರಾಯರ ಏಕಾಂತ ಜೀವನ. ಹದಿನೆಂಟಕ್ಕೆ ಸೋದರ ಮೂವನ ಸಂಧಾನದ ಮೂಲಕ ಮತ್ತೆ ಅವರ ಮನೆಯನ್ನು ಮುತ್ತೈದೆ ತುಂಬಿದಳು.....

.....ಶಾರದಮ್ಮ ಬಹಳ ಚಂದ ತುಂಬ ಒಳ್ಳೆಯವರು. ಹದಿನಾಲ್ಕು ವರುಷಕ್ಕೇ ಆನಂದ ರಾಯರ ಮನೆಯೊಡತಿಯಾದರು. ಮೊದ ಮೊದಲು ಅವರಲ್ಲಿದ್ದ ಸಂಕೋಚ ಮಾಯವಾಗಲು ಹಲವು ದಿನ ಹಿಡಿಯಲಿಲ್ಲ. ಮನೆಯನ್ನು ವ್ಯವಸ್ಥಿತವಾಗಿಡುವುದರೊಂದಿಗೆ ಮನದನ್ನನ ಹೃದಯವನ್ನೂ ಬಹು ಬೇಗನೆ ಸ್ವಾಧೀನಪಡಿಸಿಕೊಂಡರವರು.....

.....ಶಾರದಮ್ಮ ತಾಯಿಯಾಗುವ ಸೂಚನೆ ಕಾಣಿಸಿಕೊಂಡಿತು. ತಾನು ತಂದೆಯಾಗಲಿರುವೆನೆಂಬ ಅರಿವಿನಿಂದ ಸ್ವಲ್ಪ ನಾಚಿದ ಆನಂದರಾಯರ ಮನಸ್ಸಿನ ಮುಗುಳು ಅಂತರ್ಯದ ಆನಂದದಿಂದ ಮತ್ತೆ ಅರಳಿತು. ಆದರೆ ಈ ಸಂಭ್ರಮ.....

.....ಕ್ಷಣಿಕ.....

.....ಶಾರದಮ್ಮ ಗಂಡು ಮಗುವನ್ನೇ ಹೆತ್ತರು. ಅದು ಕಣ್ಣುಬಿಡಲಿಲ್ಲ.—ಆನಂದ ರಾಯರ ಕೈಗಳಿಗಾಯ್ತು ಹೂಳಿಡುವ ಸೌಖ್ಯ.....

.....ಆ ದಂಪತಿಗಳಿಗೆ ಮತ್ತೊಮ್ಮೆ ದೂರದಲ್ಲಿ ಬೆಳಕೊಂದು ಕಂಡಿತು. ಜೊಚ್ಚಲ ಬಾಣಂತಿತನ ಕಳೆದು ವರ್ಷವಾಗಲಿಲ್ಲ ಶಾರದಮ್ಮ ಎರಡನೆಯ ಬಾರಿ ಬಸಿರನ್ನು ಹೊತ್ತು ಇಳಿಸಿದರು. ಮಗು ಹೆಣ್ಣು. ಹುಟ್ಟಿ ಎರಡು ದಿನ ಹೊರಳಾಡಿತು. ಮೂರನೆಯ ದಿನ ನೋಡಲಿಲ್ಲ ..

.....ಮಕ್ಕಳನ್ನು ದಾನ ಮಾಡುವ ಭಾಗ್ಯದೊಡನೆ ವರ್ಷ ವರ್ಷ ಹಡೆಯುವ ಸೌಭಾಗ್ಯವೂ ಶಾರದಮ್ಮನವರದು. ಈ ಬೇನೆ ಮೂರನೆಯ ಮಗು ಬದುಕಿಕೊಂಡಾಗ 'ಅನಿತಿನಿತು ಮಾಯವಾಯಿತು. ಮುದ್ದಾದ ಗಂಡು ಮಗು ಮೋಹನನೆಂದು ಕರೆದರು.....

.....ಮರು ವರುಷವೂ ಬಾಣಂತಿತನ ತಪ್ಪಲಿಲ್ಲ. ಈ ಬಾರಿ ಅವಳಿ ಒಂದು ಗಂಡು. ಒಂದು ಹೆಣ್ಣು. ಎರಡೂ ಮಣ್ಣೆ. .....

.....ಶಾರದಮ್ಮ ಹೆರುವ ಯಂತ್ರ. ಯಥಾಪ್ರಕಾರ ಗರ್ಭಿಣಿಯಾದರು ಪ್ರಸವಿಸಿದರು. ಹೆಣ್ಣು ಮಗು ಕಣ್ಣುಬಿಟ್ಟಿತು. ಚೆಲುವಿನ ಚಿಕ್ಕೆ. ಅಜ್ಜಿಯದೇ ಹೆಸರೀಕೆಗೆ. ಮೋಹನ ತೊದಲಿದ "ಚಾವಿತಿಯಿ" ಮಗನ ಗಲ್ಲಹಿಡಿದು ಅಲುಗಾದಿಸಿದ ತಾಯಿ ತಿದ್ದಿದರು-"ಚಾವಿತಿಯಿ ಅಲ್ಲ ಮುದ್ದು ಸಾವಿತ್ರಿ" ಮೋಹನ ತಂದೆಯ ಬಳಿ ಗೋಡಿ-ಮರು ಕಳಿಸಿ "ಚಾವಿತಿಯಿ" ಎಂದ. ಆ ವರುಷ ಈ ದಂಪತಿಗಳ ಸ್ವರ್ಣಯುಗ.....

.....ಆರನೆಯ ಬಾರಿ ಶಾರದಮ್ಮನವರಿಗೆ ಗಬ್ಬ ನಿಂತಿತು. ಪರಿಕ್ಷಾ ಕಾಲ ಬಂತು. ಮತ್ತೊಮ್ಮೆ ಅವಳಿ. ಆ ತಾಯಿ ಎದೆ ಬಿರಿಯುವಂತೆ ಚೀರಿದರು ನೆತ್ತರು ಹರಿಯಿತ. ಪ್ರಾಣ ಪ್ರಣೀತ ನಂದಿತು. ಹಸುಳೆಗಳೂ ಹೆತ್ತವಳ ಕತ್ತಲೆಯಲ್ಲಿ ಲೀನವಾದುವು. ಆರು ವರುಷದಲ್ಲಿ ಎಂಟು ಹಡೆದ ಎಳೆಯ ಮುತ್ತೈದೆಯ ಶೀರ್ಣದೇಹವನ್ನು ಜೀರ್ಣಿಸಲು ಹುತಾಶನನಿಗೆ ಸ್ವಲ್ಪ ಹೊತ್ತು ಸಾಕಾಯ್ತು.....

.....ಹದಿಮೂರನೆಯ ದಿನ ಶಾರದಮ್ಮನವರ ವೈಕುಂಠ ಸಮಾರಾಧನೆ. ಆನಂದ ರಾಯರು ಮಂತ್ರಾಕ್ಷತೆಯನ್ನು ಸ್ವೀಕರಿಸಿದರು. ಕಾಕಿದ್ದು ಮಕ್ಕಳಿಬ್ಬರಿಗೇ. ತಬ್ಬಲಿಗಳಿಗೆ ತಂದೆಯೇತಾಯಿ.?....

....ಮೋಹನನಿಗೆ ಐದು ಹಿಡಿಯಿತು. ಲೌಕಿಕವೂ ಇರಲೆಂದು ಶಾಲೆಗೆ ಕಳುಹಿಸಿದರು. ತುಂಟ ಹುಡುಗ. ಜಾಣಕೂಡಾ. ಆರನೆಯ ದರ್ಜೆಯಲ್ಲಿದ್ದಾಗ ಬ್ರಹ್ಮೋಪದೇಶವಾಯಿತು. ಅಣ್ಣನಿಗೆ ಸಿಕ್ಕಿದ ಅಲ್ಪ ಸ್ವಲ್ಪ ಉಡುಗರೆಯನ್ನು ಕಂಡು ತಂಗಿಗೂ ಆಸೆಯಾಗಿರ ಬೇಕು, "ನಂಗೆ ಯಾವಾಗಣ್ಣಾ ಉಪನಯನ?" ಮುಗ್ಧ ಪ್ರಶ್ನೆ. ಸಾವಿತ್ರಿ ಎಂಟು ವರ್ಷದ ಗಾಡಿಗಾತಿ. "ನಿನಗೆ ಉಪನಯನವಿಲ್ಲ ಕಣೇ, ಮದುವೆ.' ಮೋಹನನ ಉತ್ತರದಲ್ಲಿ ಸ್ವಲ್ಪ ಶಾಸ್ತ್ರಜ್ಞಾನ "ಹಾಗಾದರೆ ನಿನಗೆ ಮದುವೆಯಿಲ್ಲವೆ?,, ಮತ್ತದೇ ಶಿಶುಭಾವ. "ನನಗೆ?,, ಉಂಟುಯಾಂತ್ರಿಕವಾಗಿತ್ತು ಮರುಮಾತು "ನಂಗೆ ಉಪನಯನ ಏಕಿಲ್ಲ?., ಎಳಯ ಬುದ್ಧಿಗೂ ಶೋಧನೆಯ ಆತುರವಿದೆ. 'ನೀನು ಹೆಣ್ಣು" ತನಗೆ ಗೊತ್ತಿದ್ದುದನ್ನಾತ ಹೇಳಿದ "ನೀನು ಗಂಡು., ಅಷ್ಟು ಸಾವಿತ್ರಿಗೂ ಗೊತ್ತು. ಗಂಡಿಗೆ ಮಾತ್ರ ಉಪನಯನ ಹೆಂಣಿಗಿಲ್ಲ,, "ಏಕೆ,, ಅದು ನನಗೆ ಗೊತ್ತಿಲ್ಲ, ಅಪ್ಪನ ಹತ್ತಕೇಳು. ಮಕ್ಕಳಿಬ್ಬರ ಜಿಜ್ಞಾಸೆಯನ್ನು ಒಳಗೆ ಕುಳಿತು ಕೇಳುತ್ತಿದ್ದ ತಂದೆಯಲ್ಲಿಗೆ ದೂರು ಹೋಯಿತು. ಮಗಳಿಗೆ ಏನು ಹೇಳಬೇಕೋ ಆನಂದರಾಯರಿಗೆ ತಿಳಿಯಲಿಲ್ಲ, ನಾಳೆ ಹೇಳೋಣ ಮಗೂ ಅಷ್ಟೇ ಸಮಾಧಾನಹೇಳಿ ಶಾಲೆಗೆ ಕಳುಹಿಸಿದರು ನಾಲ್ಕನೆಯ ದರ್ಜೆಯಲ್ಲಿತ್ತು ಚೂಟು ಹುಡುಗಿ

....ಊರಿಗೆ ಬಾರದ ಮೂರಿ ಆನಂದರಾಯರ ಮನೆಯಲ್ಲಿ ಮುಖವೆತ್ತಿತ್ತು. ಮೋಹನನ ಮೈಮೇಲೆ ಸಿಡುಬಿನ ಹುಣ್ಣುಗಳು ಕಾಣಿಸಿಕೊಂಡುವು. ವಾರ ಉರಿದು ಮಸಿಯಾಯಿತು ಮಗು. ಮಗನ ಮೃತ ದೇಹ ತಂದೆಯ ಕೈ ಬೆಂಕಿಯಲ್ಲಿ ಕರಗಿತು.....

....S S. L Cಯ ತನಕವೂ ಸಾವಿತ್ರಿಯ ವಿದ್ಯಾಭ್ಯಾಸ ಮುಂದುವರಿಯಿತು. ಹರಯ ಹದಿನಾರು ಎರಡು ವರ್ಷಗಳ ಹಿಂದೆಯೇ ಆಕೆ ಹೆಂಗಸು. ಹಲವರು ಬಂದರು. ಅವಳನ್ನು ನೋಡಿದರು. ತಮ್ಮನ್ನೂ ನೋಡಿಕೊಂಡರು ನಾಚಿಕೆ ಪಟ್ಟು ಹಿಂದೆ ಹೋದರು....

....ಶ್ರೀಕಾಂತ ಶ್ರೀಮಂತರ ಮಗ. ಸ್ಪುರದ್ರೂಪಿ. ಪದವೀಧರ—ಬೇಂಕಿನ ಮೆನೇಜರ್. ಅದ್ದೂರಿಯಿಂದ ನಡೆಯಿತು ಮದುವೆ. ಸಾವಿತ್ರಿ ಕೊಟ್ಟ ಹೆಣ್ಣು. ಕುಲದಿಂದ ಹೊರಗೆ. ಆನಂದರಾಯರ ಕಣ್ವಾಕ್ಷಿಗಳಲ್ಲಿ ಕಂಬನಿ ತುಂಬಿತು. ಶಕುಂತಲೆ ಗಂಡನ ಮನೆಗೆ ನಡೆದಳು....

....ಹತ್ತಿರದ ಊರು. ಆನಂದರಾಯರು ಮಗಳ ಮನೆಗೆ ಹಲವು ಬಾರಿ ಹೋಗಿ ಬರುತ್ತಿದ್ದರು. ಸಾವಿತ್ರಿಯೂ ಬಂದು ಹೋಗುತ್ತಿದ್ದಳು. ಮದುವೆಯಾದ ವರ್ಷವೇ ಸಾವಿತ್ರಿ ಬಸುರಿಯಾದಳು. ಎಂಟು ತಿಂಗಳಾಯಿತು. ಮಗಳ ಬಯಕೆಯಂತೆ ಹಡೆಯಲು ಆನಂದರಾಯರು ತನ್ನ ಮನೆಗೆ ಕರೆದು ತಂದರು....

....ಪ್ರಸವ ಕಾಲ ಸಮೀಪಿಸುತ್ತಿತ್ತು.

....ಊರಲ್ಲಿ ಹರಡಿದ ಸುದ್ದಿ ಆನಂದರಾಯರ ಕಿವಿಗೂ ಮುಟ್ಟಿತು. "ಬೇಂಕ್ ಮೆನೇಜರ್ ಶ್ರೀಕಾಂತರಾಯರು ಆತ್ಮ

(೯ನೇ ಪುಟ ನೋಡಿರಿ)

ESTD. 1921 ಸ್ಥಾಪನೆ

NAVAYUGA
KANNADA WEEKLY,
UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಬ್ಯಾಂಕ್ ಖಾತೆಯನ್ನು ಯಾರು ತೆರೆಯಬಹುದು?

ಬ್ಯಾಂಕ್ ಖಾತೆ ತೆರೆಯಲು, ತಮಗೆ ಅಸಾಧ್ಯವೆನಿಸುವ ನಿರ್ಬಂಧಗಳಿವೆಯೆಂದು ಹಲವರು ಭಾವಿಸುತ್ತಾರೆ. ಇದೊಂದು ತಪ್ಪು ಭಾವನೆ. ದಿನಕೂಲಿ ಪಡೆವವನು ಕೂಡಾ ಬ್ಯಾಂಕಿನಲ್ಲಿ ಚಿಕ್ಕ ಉಳಿತಾಯ ಖಾತೆಯನ್ನು ತೆರೆಯಬಹುದು. ಇಂದಿನ ದಿನಗಳಲ್ಲಿ ಅದು ಅವಶ್ಯವೂ ಇದೆ. ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ಎಲ್ಲರಿಗೂ ಏಕಪ್ರಕಾರದ ಸೌಜನ್ಯ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ಅಮೃತಾಂಜನ
ಎಲ್ಲಾ ನೋವು
ಎಲ್ಲಾ ತರದ ಸಿಡಿತ ಪುತ್ತು ನೋವುಗಳಿಗೆ
30 ವರ್ಷ ಪ್ರಾಯದ
ಪಾರಲು ಬ್ಯಾಂಕ್ಸ್

ಆದಿವಾಸಿಗಳಲ್ಲಿ

ವಿವಾಹದ ರೋಚಕ ಪ್ರಣಾಳಿಗಳು

ಪುರುಷನು ಪತ್ನಿಯನ್ನು ಪ್ರಾಪ್ತಮಾಡುವ ಕ್ರಿಯೆಗೆ ಪಣಯವೆಂದು ಹೆಸರು. ಭಾರತೀಯರ ಆದಿವಾಸಿ ಜಾತಿಗಳಲ್ಲಿ ಪಣಯ ಮಾಡಿಕೊಳ್ಳುವ ಅನೇಕ ಪದ್ಧತಿಗಳಿವೆ. ಅವುಗಳಲ್ಲಿ ಮುಖ್ಯವಾದ ಕೆಲವನ್ನು ಇಲ್ಲಿ ವಿವರಿಸಲಾಗಿದೆ:

ಕ್ರಯ ವಿವಾಹ

ಹಿಂದೂ ಶಾಸ್ತ್ರಗಳಲ್ಲಿ ಕ್ರಯ ವಿವಾಹವನ್ನು ಆಸುರೀ ವಿವಾಹವೆಂದೂ ಹೆಸರಿಸಲಾಗಿದೆ. ಭೀಲ, ಗೊಂಡ, ಸಂತಾಲ, ನಾಗ ಮೊದಲಾದ ಜಾತಿಯು ವರಲ್ಲಿ ವರನ ತಂದೆಯು ಕನ್ಯೆಯ ಹೆತ್ತವರಿಗೆ ಕನ್ಯೆಯ ಮೂಲ್ಯವನ್ನು ಕೊಡುತ್ತಾನೆ. ಹೀಗೆ ಕನ್ಯೆಯನ್ನು ಕೊಂಡು ಕೊಂಡು ಮಾಡುವ ವಿವಾಹವು ಕ್ರಯ ವಿವಾಹವೆನಿಸುವುದು. ಪ್ರಸಿದ್ಧ ಮಾನವ ಶಾಸ್ತ್ರಜ್ಞನಾದ ರಾಬರ್ಟ್ ಲೋಯಿಯು ಈ ಸಂಬಂಧದಲ್ಲಿ ಕನ್ಯ ಅಭಿವ್ಯಾಯಗಳನ್ನು ವ್ಯಕ್ತಪಡಿಸುತ್ತ 'ಇದು ಕೇವಲ ಕನ್ಯೆಯನ್ನು ಮಾರುವುದು ಮಾತ್ರವಲ್ಲ; ಇದರಿಂದ ನಾರಿಯ ಉಪಯೋಗಿತೆಯೂ ಮಂದಟ್ಟಾಗುವುದು" ಎಂದಿದ್ದಾರೆ. ಭೀಲರಲ್ಲಿ ಕನ್ಯಾ ಮೌಲ್ಯವನ್ನು 'ದಾವಾ' ಎಂದು ಹೆಸರಿಸುತ್ತಾರೆ. ಇದು ರೂ. ೫೫ರಿಂದ ರೂ. ೧೫೦ರ ವರೆಗೆ ಇರುವುದು. ಹಿಂದೂ ಸಮಾಜದ ಹೆಣ್ಣು ಹೆತ್ತವನಿಗೆ ವರದಕ್ಷಿಣೆಯೊಂದು ಸಮಸ್ಯೆಯಾಗಿ ನಿಂತಂತೆಯೇ ಆದಿಜನಾಂಗಗಳಲ್ಲಿ ಗಂಡಿನ ತಂದೆಯು 'ದಾವಾ'ದ ಬಗ್ಗೆ ಯೋಚಿಸುತ್ತಾನೆ. ಸಿಂಧಜಲ್ಲೆಯ ಕೋಲ್ಹಾನ ಭೂಪ್ರದೇಶದಲ್ಲಿರುವ ಆದಿವಾಸಿಗಳ ಹೆಣ್ಣುಗಳ ಬೆಲೆಯು ಅತ್ಯಧಿಕವಾಗಿದೆ. ಅದುದರಿಂದ ಹೆಚ್ಚಿನ ವರ ಪಿತೃಗಳು ಈ ಸಾಲವನ್ನು ಸಂದಾಯಮಾಡಲು ಅಶಕ್ತರಾಗುತ್ತಾರೆ ಇದರಿಂದಾಗಿ ಅಧಿಕ ಸಂಖ್ಯಾಕ ಗಂಡು ಹುಡುಗರು ಅವಿವಾಹಿತರಾಗಿಯೇ ಉಳಿಯಬೇಕಾಗುತ್ತದೆ.

ರಾಕ್ಷಸ ವಿವಾಹ

ಬಲಾತ್ಕಾರದಿಂದ ಒಂದು ಹುಡುಗಿಯನ್ನು ಅಪಹರಿಸಿ ಕೊಂಡೊಯ್ಯುವುದು ಮತ್ತು ಆಕೆಯನ್ನು ತನ್ನ ಪತ್ನಿಯನ್ನಾಗಿ ಮಾಡಿಕೊಳ್ಳುವುದು ರಾಕ್ಷಸ ವಿವಾಹವೆನಿಸುತ್ತದೆ. ಹುಡುಗಿಯರ ಬೆಲೆಯು ಅತ್ಯಧಿಕವಿರುವಲ್ಲಿ ಇಂತಹ ವಿವಾಹಗಳೂ ಹೆಚ್ಚಾಗಿರುತ್ತವೆ ಹೋ ಜನಾಂಗದವರಲ್ಲಿ ರಾಕ್ಷಸ ವಿವಾಹವೆ ಸರ್ವಸಾಮಾನ್ಯವಾಗಿಬಿಟ್ಟಿದೆ. ತಮ್ಮ ಭಾಷೆಯಲ್ಲಿ ಇದನ್ನು ಆ ಜನರು 'ಓಪರಕ್ಕಿ' ಎನ್ನುತ್ತಾರೆ 'ದಿ ಆಫೇಯರ್ಸ್ ಆಫ್ ದಿ ದಿಟ್ರೈಬ್' ಎಂಬ ಗ್ರಂಥದಲ್ಲಿ ಶ್ರೀ ಡಿ. ಎನ್. ಮಜುಮದಾರರು ಈ ವಿಧದ ವಿವಾಹದ ಒಂದು ಮನೋರಂಜಕ ಉದಾಹರಣೆಯನ್ನಿತ್ತಿದ್ದಾರೆ.

ಸೂರ್ಯಪುರತಿಯೆಂಬೊಬ್ಬ ಹುಡುಗನಿದ್ದನು. ಈತನು ತೀವ್ರ ಅಲಸಿಗೂಗಿದ್ದುದರಿಂದ ಯಾವ ಹುಡುಗಿಯೂ ಅವನನ್ನು ಮದುವೆ ಮಾಡಿಕೊಳ್ಳಲು ಒಪ್ಪುತ್ತಿರಲಿಲ್ಲ. ಒಂದು ದಿನ ಅವನು ಜಯಮಾಸ ಎಂಬ ಪಟ್ಟಣಕ್ಕೆ ಹೋದಾಗ ಅಲ್ಲಿ ಒಂದು ಸ್ತ್ರೀಯರ ಗುಂಪನ್ನು ಕಂಡನು; ಅವರಲ್ಲಿ ಒಬ್ಬಾಕೆಯಿಂದ ಮೋಹಿತನಾದನು. ಇದರಿಂದಾಗಿ ಕನ್ನ ಸ್ನೇಹಿತರ ಸಹಾಯದಿಂದ ಆ ನಾರೀ ಸಮೂಹದ ಮೇಲೆ ಆಕ್ರಮಣ ಮಾಡಿಧನು. ಹೆಂಗಸರು ಕಲ್ಲು ಮಣ್ಣುಗಳನ್ನು ತೂರಿ ಇದನ್ನು ವಿರೋಧಿಸಿದರೂ ಸೂರ್ಯಪೂರತಿಯು ಸೋಲಲಿಲ್ಲ. ಮೋಹಕ ಹುಡುಗಿಯನ್ನು ಸೆಳೆದುಕೊಂಡೇ ತ್ವರ್ಗೃಹ ಸೇರಿದನು. ಮರುದಿನ ಹಳ್ಳಿಗರೆಲ್ಲರೂ ದೊಣ್ಣೆ ಕೋಲು ಹಿಡಿದುಕೊಂಡು [ತಮ್ಮ ಹುಡುಗಿಯನ್ನು ಬಿಟ್ಟುಕೊಡುವಂತೆ ಕೇಳಿಕೊಳ್ಳಲು ಅವನ ಮನೆಯ ಬಳಿ ಬಂದರು. ಆದರೆ, ಅಲ್ಲಿ ಹುಡುಗಿಯೇ ಇರಲಿಲ್ಲ. ಕೊನೆಗೆ ಕನ್ಯೆಗೆ ನಾಲ್ಕು ದನ ಮತ್ತು ಹತ್ತು ರೂಪಾಯಿ ಬೆಲೆಯನ್ನು ನಿಶ್ಚಯಿಸಿ, ಆತನೊಡನೆ ಆ ಹುಡುಗಿಯ ಮದುವೆ ಮಾಡಿದರು.

ಶ್ರೀ ಮಜುವದಾರರು ಈ ತೆರದ ಮದುವೆಯೊಗುವುದಕ್ಕೆ ಇನ್ನೊಂದು ಕಾರಣವನ್ನೂ ಉಲ್ಲೇಖಿಸಿದ್ದಾರೆ. ಮನೆಯಲ್ಲಿ ಅತ್ತಿಗೆಯವರು ಇದ್ದು ಬಿಟ್ಟರೆ, ಅವರೊಳಗಿನ ಕಜಾಟಿ ಹೇಳತೀರದು. ಆದುದರಿಂದ, ಆ ಮನೆಯ ಕನ್ಯೆಯರು ನೊಂದು ಓಡಿಹೋಗುವುದೇ ಉತ್ತಮ ಪಕ್ಷವೆಂದು ತಿಳಿಯುತ್ತಾರೆ ಒಂದು ಹುಡುಗಿ ಓಡಿಹೋಗಲಿರುವ ದಾರಿಯ, ಆಕೆಯ ಸಂಬಂಧಿಕರು ಅಪಹರಣ ಮಾಡುವವರ ಮೇಲೆ ಏರಿ ಹೋಗುತ್ತಾರೆ. ಆದರೆ, ಹೀಗೆ ತೋರಿಸುವ ಪ್ರತಿಭಟನೆಯು ಹುಡುಗಿ ಮರಳಿ ಬರಬೇಕೆಂಬುದಕ್ಕಲ್ಲ; ತಮ್ಮ ಅಧಿಕಾರ ಪ್ರದರ್ಶನಕ್ಕೆ ಮಾತ್ರ. ಸಾಮಾನ್ಯವಾಗಿ ಈ ಬಗೆಯ ಕಳ್ಳತನಗಳಲ್ಲಿ ನೂರಕ್ಕೆ ೯೦ ಶಾಶ್ವತರೂಪದ ಅಪಹರಣಗಳಾಗಿಯೇ ಉಳಿಯುತ್ತವೆ.

ಅಪಹರಣವು ಅಪಹತ್ಯೆಯು ಹೆಣೆಯುಲ್ಲಿ ಕುಂಕುಮದ ಬೊಟ್ಟು ಹಾಕುವ ಪದ್ಧತಿಗೊಂಡ, ಭಿಲ್ಲ, ಸಂತಾಲ ಮತ್ತು ಮುಂಡರಲ್ಲಿ ಇದೆ. ಬಿಹಾರದಲ್ಲಿರುವ ಖಡಿಯೂ ಮತ್ತು ಬೇರಜೋರ ಮೊದಲಾದ ಜಾತಿಯವರು ತಮ್ಮ ಅಪೇಕ್ಷಿತ ಹುಡುಗಿಯನ್ನು ತರುವಲ್ಲಿ ಅಸಮರ್ಥರಾದರೆ, ಜಾತ್ರೆ, ಸಂತೆಗಳ ನೆರವಿಯಲ್ಲಿ ಉಪಾಯಾಂತರದಿಂದ ಸಿಂಧೂರ ಹೆಚ್ಚುತ್ತಾರೆ; ಎನ್ನೆಸವರುತ್ತಾರೆ. ಅನಾಸ್ಪಮದ ನಾಗಾ ಜನಾಂಗದವರು ತಮ್ಮ ಹೆಪ್ಪುಕ್ಕಳನ್ನು ಅಪಹರಿಸುವರೆಂಬ ಭೀತಿಯಿಂದ ಕೊಂದುಹಾಕುತಿದ್ದ ಕಾಲವೊಂದಿತ್ತು. ಪರಿಣಾಮವಾಗಿ, ಇವರ ಜಾತಿಯಲ್ಲಿ ಹೆಣ್ಣುಕ್ಕಳ ಸಂತಾನವು ಕಡಿಮೆಯಾಯಿತು. ಮದುವೆ ನಡೆಯುವುದೇ ಕಷ್ಟಕ್ಕೆಟ್ಟು ಕೊಂಡಿತು. ಆ ಮೇಲೆ ಇತರಜಾತಿಯ ಹುಡುಗಿಯರನ್ನು ಕದ್ದುತರಲು ನಾಗಾಯುವಕರು ಮುಂದಾದರು ಈಗೀಗ, ಭಾರತೀಯ ಕಾಯದೆ ಕಟ್ಟಲೆಯ ಪ್ರಭಾವದಿಂದ ಕನ್ಯಾಪಹರಣದ ಸಂಪ್ರದಾಯವು ಎಲ್ಲ ಜಾತಿಗಳಲ್ಲೂ ಲುಪ್ತವಾಗುತ್ತಿದೆ.

ವಿನಿಮಯ ವಿವಾಹ

ಅದಲಾ ಬದಲಿಯೆನ್ನುವ ಈ ತರದ ಮದುವೆ ಇಂದಿಗೂ ಪ್ರಚಲಿತವಿದೆ. ವರದಕ್ಷಿಣೆ ಹಾಗೂ ಉಪಚಾರಗಳ ಆಘಾತದಿಂದ ವಧು ಹೆತ್ತವರನ್ನು ಬಡುಕಿಸುವ ಉದ್ದೇಶದಿಂದ ವಿನಿಮಯ ವಿವಾಹಗಳು ನಡೆಯುತ್ತವೆ. ಹುಡುಗನು ಒಂದು ಹುಡುಗಿಯನ್ನು ಮದುವೆ ಯಾಗುವುದಾದರೆ ಆ ಹುಡುಗಿಯ ಸೋದರನು ಆ ಹುಡುಗನ ಸೋದರಿಯನ್ನು ಮದುವೆನಿಲ್ಲುವುದೇ ಇದರ ಗುಟ್ಟು. ಇಡಿಯ ಭಾರತದಲ್ಲಿನೆ ಎಲ್ಲ ಜಾತಿಗಳಲ್ಲಿಯೂ ಇದು ನಡೆದ-ಬಂದ, ಬರುತ್ತಿರುವ ಮತ್ತು ಬರಬಹುದಾದ ಸಂಪ್ರದಾಯವಿದು.

ಸೇವಾ ವಿವಾಹ

ಗೊಂಡ ಮತ್ತು ಬೈಗಾವೆಂಬ ಜಾತಿಗಳವರಲ್ಲಿ ಹುಡುಗನು ಕನ್ಯಾ ಮೌಲ್ಯವನ್ನು ಕೊಡುವಲ್ಲಿ ಅಸಮರ್ಥನಾದರೆ, ಕನ್ಯಾಪಿತನ ಮನೆಯಲ್ಲಿ ನೌಕರಿಯನ್ನು ಮಾಡಬೇಕಾಗುವುದು. ಇಂತಹ ವ್ಯಕ್ತಿಯನ್ನು ಗೊಂಡರು ಲಮನ ಈ ಎಂದೂ ಬೈಗಾರು ಲಮಸೇನಾ ಎಂದೂ ಕರೆಯುತ್ತಾರೆ. ಈ ಬಗೆಯು ಸೇವೆಯು ಸಾಮಾನ್ಯವಾಗಿ ಮೂರು ವರ್ಷಗಳಿಂದ ಏಳು ವರ್ಷಗಳ ವರೆಗಿದೆ; ಸಕ್ರಮವಾಗಿದೆ. ಈ ಅವಧಿಯಲ್ಲಿ ತನ್ನ ಭಾವಿ ಮಾವನ ಮನಸ್ಸನ್ನು ವೆಚ್ಚಿಸುವ ಪ್ರಯತ್ನ ಮಾಡುತ್ತಾನೆ. ಅವನು ಜಯಶೀಲನಾದರೆ ನಾತ್ರ ಕೊನೆಯಲ್ಲಿ ಮದುವೆ ಸಾಗುತ್ತದೆ. ಇಲ್ಲವಾದರೆ, ಯುವಕನು ಹೆದರಿ ಓಡಬೇಕಾಗುತ್ತದೆ. ಯುವಕನು ಯುವತಿಯೊಡನೆ ಸೇರಿ ಕೊಂಡಿರಬಹುದಾದರೂ ಕೂಡುವುದು ಸಾಧ್ಯವಿಲ್ಲ ಹಿಮಾಚಲ ಪ್ರದೇಶದ ಗುರ್ಜರ ಜನಾಂಗದಲ್ಲಿ ಸಹ ಈ ವಿವಾಹವು ಸ್ವಲ್ಪಮಟ್ಟಿಗೆ ಪ್ರಚಲಿತವಿರುತ್ತದೆ. ಅಲ್ಲಿ ಅತ್ತೆಯು ನೆಯ ಸೇವಕನಾಗುವ ಯುವಕನನ್ನು ಕಮೂಲಸ್ ಎಂದು ಹೆಸರಿಸುತ್ತಾರೆ.

ಗಾಂಧರ್ವ ವಿವಾಹ

ಯುವಕ ಯುವತಿಯರ ನಡುವೆ ಪರಸ್ಪರ ಪ್ರೇಮದಿಂದ ಆಗುವ ವಿವಾಹವನ್ನು ಗಾಂಧರ್ವ ವಿವಾಹವೆಂದು ಕರೆಯುತ್ತಾರೆ. ಋಷಿ ಕಣ್ವರ ಪೋಷಿತ ಪುತ್ರಿ ಶಕುಂತಲೆಯು ಬೇಟೆಯ ನೆವನದಿಂದ ಕಾಡಿಗೆ ಬಂದ ಮಹಾರಾಜ ದುಷ್ಯಂತನೊಡನೆ ಗಾಂಧರ್ವ ವಿಧಿಯಿಂದ ಮದುವೆ ಮಾಡಿಕೊಂಡಿದ್ದಳು. ಈ ವಿಧಿಯು ವಿವಾಹೇಚ್ಛೆಗಳು ತಾಯ್ತಂದೆಯರ ವಿರೋಧವನ್ನು ಕಡೆಗಣಿಸುತ್ತಾರೆ. ಆವಶ್ಯಕತೆಯೊದಗಿದರೆ, ಊರು ಬಿಟ್ಟು ಓಡಿಯೂ ಹೋಗುತ್ತಾರೆ. ಹೆತ್ತವರು ವಿವಾಹಕ್ಕೆ ಒಪ್ಪುವ ನೀಡುವ ತನಕ ಈ ಯುವಕ–ಯುವತಿಯರು

(ಉಳಿದ ಪುಟ ನೋಡಿರಿ)



ಆತ್ಯಧಿಕ ಶಕ್ತಿಯುತ ರೇಡಾರ್ ಯಂತ್ರೋಪಯೋಗಿ ಆಂಪ್ಲಿಫೈಯರ್ ಅಮೆರಿಕೆಯಲ್ಲಿ ನಿರ್ಮಾಣವಾಗುತ್ತಿದೆ.

ದಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಡೊಂಗರಕೇರಿ, ಮಂಗಳೂರು-3

ಪರಿಷ್ಕರಿಸಿದ ಮತ್ತು ಹೆಚ್ಚಿಸಿದ ಠೇವಣಾತಿ ಬಡ್ಡಿ ದರಗಳು:

ಕಾಯಂ ಠೇವಣಾತಿಗಳು:			ರೂ. ನ.ಪೈಸೆ
ಒಂದರಿಂದ ಮೂರು ತಿಂಗಳು ವರೆಗೆ	ವಾರ್ಷಿಕ	ಸೇಕಡಾ	4-50
ಆರರಿಂದ ಹನ್ನೆರಡು ತಿಂಗಳು ವರೆಗೆ	,,	,,	4-75
ಹದಿಮೂರರಿಂದ ಇಪ್ಪತ್ತನಾಲ್ಕು ತಿಂಗಳು ವರೆಗೆ	,,	,,	5 00
ಇಪ್ಪತ್ತೈದರಿಂದ ಮೂವತ್ತಾರು ತಿಂಗಳು ವರೆಗೆ	,,	,,	5-25
ನಾಲ್ವತ್ತೆಂಟು ತಿಂಗಳು ಮತ್ತು ಹೆಚ್ಚಿಗೆ	,,	,,	5-50
ಸೇವಿಂಗ್ಸ್ ಬೇಂಕ್ ಠೇವಣಾತಿಗಳು	,,	,,	3-25

ನಿಮ್ಮ

ದಿನನಿತ್ಯದ ಉಳಿತಾಯವನ್ನು ಮಾಸಿಕ ಉಳಿತಾಯವನ್ನು

ಸನಿ ಡಿವೋಸಿಟುಗಳಲ್ಲಿ ಕ್ಯುಮುಲೇಟಿವ್ ಡಿಪೋಸಿಟುಗಳಲ್ಲಿ

ವಿನಿಯೋಗಿಸಿರಿ.

THE KARNATAKA BANK LIMITED

3–7–1962

ನವಯುಗ'ಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

ಕುತೂಹಲ ನಿರ್ಮಿಸಿದ

ಮಿಗ್ ವಿಮಾನಗಳ ವ್ಯವಹಾರ

ಚೀನೀಯ ಪಡೆಗಳು ಭಾರತೀಯ ಕಾವಲುನಾರ ಸೈನಿಕರ ಮೇಲೆ ಗುಂಡು ಹಾರಿಸಿದ ವಾರ್ತೆಯೊಡನೆಯೇ ಭಾರತ ಸರಕಾರವು ಸೋವಿಯತ್ ರಶ್ಯದಿಂದ ಮಿಗ್ ವಿಮಾನಗಳನ್ನು ಕೊಂಡುಕೊಳ್ಳುವ ಸಂಬಂಧದಲ್ಲಿ ನಡೆಸಿದ ಮಾತುಕತೆಯೂ ಪ್ರಕಟವಾಗಿದೆ. ಅಮೆರಿಕೆ ಮತ್ತು ಬ್ರಿಟನ್ನುಗಳು ಈ ವಾರ್ತೆಯಿಂದ ಬಹಳ ಚಿಂತೆಗೆ ಈಡಾಗಿವೆಯೆಂದರೆ ಅತ್ಯುಕ್ತಿಯಾಗಲಾರದು. ಭಾರತವು ಮಿಗ್ ವಿಮಾನಗಳನ್ನು ಖರೀದಿಸುವುದೇ ಇಲ್ಲವೇ ಎಂಬ ಬಹುದಿನದ ಪ್ರಶ್ನೆಗೆ ಈಗ ಪೂರ್ಣವಿರಾಮ ಬೀಳುವ ಲಕ್ಷಣಗಳಿವೆ. ಹಿಂದೆ, ಸುಪರ್ ಸೋನಿಕ್ ವಿಮಾನಗಳನ್ನು ಪರೀಕ್ಷಿಸಲು ಲಂಡನ್ನಿಗೆ ಭಾರತೀಯ ತಜ್ಞರ ನಿಯೋಗವೊಂದು ತೆರಳಿತ್ತು. ಹಾಗೆಯೇ ರಶ್ಯದ ಮಿಗ್‌ಗಳನ್ನೂ ಪರೀಕ್ಷಿಸಲಾಯಿತು. ರಶ್ಯದ ಮಿಗ್, ಅಮೆರಿಕೆಯ ಎಫ್ ೧೦೫, ಬ್ರಿಟನ್ನಿನ ಸುವರ್ ಸೋನಿಕ್ ಮತ್ತು ಫ್ರೆಂಚ್ ಮೈರೇಜ್ ವಿಮಾನಗಳು ಭಾರತಕ್ಕೆ ಆರು ತಿಂಗಳ ಹಿಂದೆಯೇ ಸಿಗುವಂತಿದ್ದುವು.

ಮಿಗ್ ವಿಮಾನಗಳ ಖರೀದಿಯ ಪ್ರಶ್ನೆಯು ಎದ್ದುಬಂದುದು ಸಾಮಾನ್ಯ ಮೇತಿಂಗಳ್ಳಿ. ಇದು ಏಳಲು ಬಲವತ್ತರವಾದ ಕಾರಣಗಳೂ ಇಲ್ಲ. ಭಾರತದಲ್ಲಿ, ಬೇಗಳೂರಿನಲ್ಲಿ ನಿರ್ಮಿಸುವ ಸುಖೋ ಸೋನಿಕ್‌ಗಳಿಗೆ ಜೋಡಿಸಲು ಅನುಕೂಲವಾದ ಯಂತ್ರವೊಂದರ ಪರೀಕ್ಷಣೆಗೆ ಭಾರತೀಯ ವಿಮಾನ ದಳದ ಪ್ರತಿನಿಧಿಗಳು ರಶ್ಯಕ್ಕೆ ತೆರಳಿದ ನಂತರ ಈ ವಾರ್ತೆ ದಟ್ಟವಾಯಿತು. ಆ ಪ್ರತಿನಿಧಿಗಳ ಅಭಿಪ್ರಾಯದಂತೆ ಮಿಗ್‌ಗಳು ಭಾರತೀಯ ವಿಮಾನಗಳಿಗೆ ಅತ್ಯುಪಯುಕ್ತವಾದುವುಗಳು. ಈಗ ಇವುಗಳಿಗೆ ಬ್ರಿಟಿಷ್ ಬ್ರಿಸ್ಟಲ್ ಆರ್ ಪ್ಯೂಸ್ ಯಂತ್ರಗಳನ್ನು ಉಪಯೋಗಿಸಲಾಗುತ್ತಿದೆ. ಇವು ಅಸಂಯೋಪ್ತವೆಂಬುದರಿಂದ ಇವುಗಳ ಬದಲು ರಶ್ಯನ್ ಸಹಕಾರದಿಂದ ಭಾರತದಲ್ಲಿಯೇ ಮಿಗ್ ಯಂತ್ರಗಳನ್ನು ತಯಾರಿಸುವ ಯೋಚನೆ ಆಗ ಇತ್ತು. ನಮ್ಮ ಸ್ಪರ್ಧಾಸಿಗಳು ಹೇಳುವಂತೆ ರಶ್ಯನ್ ಮಿಗ್ ಏಸ್ ಭಾರತೀಯ ವಾಯುಸಡೆಯ ಪ್ರತಿನಿಧಿಗಳನ್ನು ವಿಶೇಷವಾಗಿ ಆಕರ್ಷಿಸಿತು.

ರಶ್ಯವು ಮಿಗ್‌ಗಳನ್ನು ಕೊಡಮಾಡುವೆನೆಂದು ಹೇಳಿದ್ದಿಲ್ಲ; ಭಾರತವು ಅದನ್ನು ಕೇಳಿದ್ದೂ ಇಲ್ಲ. ಆದರೆ, ಇತ್ತೀಚಿನ ವರ್ತುಲದಲ್ಲಿ ಇದ್ದಕ್ಕಿದ್ದಂತೆ ಬಹಳಷ್ಟು ವಿವಾದಗಳಿಗೆ ಕಾರಣವಾಯಿತು. ಆಗ ಭಾರತೀಯ ನಾಯಕರು ಹೇಳಿದುದಿಷ್ಟೆ: 'ಭಾರತದಂತಹ ಸ್ವತಂತ್ರ ಸಾರ್ವಭೌಮ ರಾಷ್ಟ್ರವು ತಾನು ಬಯಸುವ ಯಾವುದೇ ದೇಶದಿಂದ ಶಸ್ತ್ರಾಸ್ತ್ರಗಳನ್ನು ಕರಿಸಿಕೊಳ್ಳಲು ಸ್ವತಂತ್ರವಿದೆ. ಕೊನೆಗೆ ಆಗುವುದಾದರೂ ಇದೇ. ಇದಕ್ಕೆ ಕಾರಣಗಳು ಎರಡು ಭಾರತದಲ್ಲಿ ನಿರ್ಮಿತವಾಗುತ್ತಿರುವ ಸುಪರ್‌ಸಾನಿಕ್ ವಿಮಾನಗಳಿಗೆ (ಎಚ್. ಎಫ್. ೨೪) ಇವು ಸರಿಯಾಗಿ ಹೊಂದಿಕೊಳ್ಳುತ್ತವೆ ಮತ್ತು ಇವುಗಳ ಮೌಲ್ಯವನ್ನು ರೂಪಾಯಿಗಳಲ್ಲಿಯೇ ತೆರುವುದು ಸಾಧ್ಯವಿದೆ. ವಿದೇಶ ವಿನಿಮಯದ ಸಂದಿಗ್ಧ ಪರಿಸ್ಥಿತಿಯಲ್ಲಿಯು ಇವಾಗ, ಮೊದಲನೆಯ ಕಾರಣಕ್ಕಿಂತಲೂ ಎರಡನೆಯದೇ ಬಹಳ ಪ್ರಭಾವಕಾರಿಯೂ ದುದೆಂದು ಊಹಿಸಿದರೆ ತಪ್ಪಲ್ಲ.

ಭಾರತದ ಮಿಗ್ ವ್ಯವಹಾರದಿಂದ ಅದರ ಖಾಶ್ವಾತ್ಯ ಮಿತ್ರರು ನೊಂದಿದ್ದಾರೆ. ನಿಜ. ಆದರೆ, ಭಾರತವಾದರೂ ತನ್ನ ಸ್ಥಿತಿಗತಿಗಳನ್ನು ಮೀರಿ ಮುಂದೆ ಹೋಗುವಂತಿಲ್ಲ. ಕಮ್ಯುನಿಸ್ಟ್ ರಶ್ಯವು ಈಗ ಪೂರಯ್ಸಬಹುದಾದ ಮಿಗ್ ವಿಮಾನಗಳ ಉಪಯೋಗವಾಗುವುದಾದರೂ ಎಲ್ಲಿ? ಮೊತ್ತಮೊದಲಿಗೆ ಕೆಂಪು ಚೀನಾದ ವಿರುದ್ಧ. ಇದನ್ನು ಪೂರ್ಣಕೆದಾರ ರಾಷ್ಟ್ರವೂ ತಿಳಿದುಕೊಂಡಿದೆ. ಕಾಶ್ಮೀರದ ಮೇಲೆ ಪಾಕಿಸ್ತಾನವು ಆಕ್ರಮಣ ಮಾಡಿದರೆ, ಆದರ ಮೇಲೆ ಮಿಗ್ ಕೆಲಸಮಾಡ ಬಹುದು. ಇದುವರೆಗೆ ಭಾರತವು ತನ್ನ ಬೇಕಾಶಸ್ತ್ರಾಗಳನ್ನು ಬ್ರಿಟನ್ನು. ಫ್ರಾನ್ಸ್‌ಗಳಿಂದಲೂ ಹೆಲಿಕಾಪ್ಟರ್ ಮತ್ತು ಜಾರಿಗೆ ವಿಮಾನಗಳನ್ನು ಅಮೆರಿಕೆ ಮತ್ತು ರಶ್ಯಗಳಿಂದಲೂ ಕೊಂಡುಕೊಳ್ಳುತಿತ್ತು. ಕಾಶ್ಮೀರದ ವಿಷಯದಲ್ಲಿ ರಶ್ಯವು ಭಾರತವನ್ನು ಸಂಪೂರ್ಣವಾಗಿ ಬೆಂಬಲಿಸಿದ್ದರೂ ಪಾಶ್ಚಾತ್ಯ ಬಣಗಳು ಪಾಕಿಸ್ತಾನದತ್ತ ಅನುಕೂಲ ಭಿನ್ನಾಭಿಪ್ರಾಯ ಹೊರಹೊರಡಿಸಿವೆ. ಚೀನದ ಆಕ್ರಮಣದ ವಿಷಯದಲ್ಲಿ ಮೂತ್ರ ರಶ್ಯವು ನನದೆಕಲಿಯನ್ನು ಪ್ರತ್ಯಕ್ಷವಾಗಿ ಬೆಂಬಲಿಸಿಲ್ಲವಾದರೂ ಪೇಕಿಂಗಿನತ್ತ ಒಲವಿಟ್ಟುಕೊಂಡಿಲ್ಲ.

ಕಾಶ್ಮೀರದ ಮೇಲೆ ಭಾರತಕ್ಕೆ ರಾಜಕೀಯವಾಗಿ ಅಧಿಕಾರವಿದೆಯೆಂಬುದು ನಿಜ. ಆದರೂ ಪಾಕ್ ಕುತಂತ್ರಿಗಳ ನಡುವೆ ಸುಮ್ಮನಿರುವುದೂ ಸಾಧ್ಯವಿಲ್ಲ. ಕಾಶ್ಮೀರದ ಶ್ರೀನಗರದಲ್ಲಿ ಮೂತ್ರ ನಮ್ಮ ದೃಷ್ಟಿಯನ್ನು ಕೇಂದ್ರೀಕರಿಸಿದರೆ, ಈಗ ಸಾಲದು; ಲಡಖ ಲ್ಹಾದ ಮೇಲೆಯೂ ಇಡಬೇಕು. ಇತ್ತೀಚೆಗಿನ ರಾಜಕೀಯ ಘಟನೆಗಳಿಂದ ಇದರ ಆವಶ್ಯಕತೆಯೂ ಹೆಚ್ಚಿದೆ. ಎಂತಲೇ ನಮಗೆ ಬೇಡವಾದರೂ ನಮ್ಮ ಸೈನಿಕ ಬಲವನ್ನು ಹೆಚ್ಚಿಸಬೇಕು. ಅದಕ್ಕಾಗಿ ಪಾಶ್ಚಾತ್ಯ ಮಿತ್ರರಿಗೆ ಕಳವಳ ವೆನಿಸಿದರೂ ರಶ್ಯದಿಂದ ಮಿಗ್ ವಿಮಾನಗಳ ವ್ಯವಹಾರ ಅತ್ಯನಶ್ಯವಾಯಿತು. ಸ್ವರಕ್ಷಣೆ ಮಾಡಿಕೊಳ್ಳುವುದು ಪರಮ ಕರ್ತವ್ಯವಲ್ಲವೆ?

ಕನ್ನಡ ಪ್ರದೇಶ

ಕಾಸರಗೋಡಿನ ಭವಿಷ್ಯ ಲೇಖನ

ರಾಜ್ಯ ಪುನರ್ಘಟನೆಯ ಕಾಲದಲ್ಲಿ ಕನ್ನಡ ನಾಡಿನಿಂದ ಪ್ರತ್ಯೇಕಿತವಾಗಿ ಕೇರಳದಲ್ಲಿ ಕೂಡಿಹೋದ ಕಾಸರಗೋಡಿನ ಸುದ್ದಿ ಬಹು ತಡವಾಗಿಯಾದರೂ ಈಗ ಎದ್ದುಬಂದಿದೆ. ಕರ್ನಾಟಕ ಸರಕಾರವು ಮಹಾರಾಷ್ಟ್ರದೊಡನೆ ಒನಗಿರುವ ಸೀಮಾ ವಿವಾದದ ಬಗ್ಗೆ ವಹಿಸುವ ಕಾಳಜಿಯಲ್ಲಿ ನೂರಕ್ಕೆ ಹತ್ತರಷ್ಟನ್ನಾದರೂ ಕಾಸರಗೋಡಿನ ಬಗ್ಗೆ ತೋರಿಸಲಿಲ್ಲ. ಆದರೂ ಕರ್ನಾಟಕದ ಮುಖ್ಯ ಮಂತ್ರಿಯೆಂದು ಮೂರನೆಯ ಬಾರಿಗೆ ಅಧಿಕಾರಕ್ಕೆ ಬಂದ ನಿಜಲಿಂಗಪ್ಪನವರು ಎಲ್ಲರೂ ಮರೆತುಬಿಟ್ಟಂತಿದ್ದ ಕಾಸರಗೋಡಿನ ಬಗ್ಗೆಯೂ ತುಸು ಗಮನ ನೀಡಿದ್ದಾರೆಂದು ತಿಳಿಯುತ್ತದೆ.

ಶ್ರೀ ನಿಜಲಿಂಗಪ್ಪನವರು ಕನ್ನಡದ ವಿಕೇರಣಕ್ಕಾಗಿ ದುಡಿದ ಮಹನೀಯರಲ್ಲಿ ಒಬ್ಬರಲ್ಲವೆ? ಆದುದರಿಂದಲೇ ಅವರು ಈ ಬಾರಿ ಅಧಿಕಾರ ಸ್ವೀಕರಿಸಿದ ಗಳಿಗೆಯಿಂದಲೇ ಸೀಮೆಯ ಕುರಿತಾಗಿ ಪದೇ ಪದೇ ಹೇಳಿಕೆ ಕೊಡುತಿದ್ದಾರೆ. ನಿಪ್ಪಾಣಿ-ಬೆಳಗಾವಿಗಳಲ್ಲಿ ಮಹಾ ರಾಷ್ಟ್ರೀಯರು ಮಾಡುತಿದ್ದ ಪುಂಡಾಟಿಕೆಗಳನ್ನು ಖಂಡಿಸಿ, ಗಡಿ ಪ್ರದೇಶದ ಜನತೆಯಲ್ಲಿ ಹೊಸ ರಕ್ತ ಸಂಚಾರವನ್ನು ಮಾಡಿದರು. ಮಹಾ ರಾಷ್ಟ್ರೀಯರ ನೊಂಡು ವಾದವನ್ನು ಬಹಿರಂಗಗೊಳಿಸಿ, ಕರ್ನಾಟಕದ ಸೀಮಾ ನೀತಿಯನ್ನು ವಿವರಿಸಿದರು. ಸರಕಾರವು ಈ ಸಂಬಂಧದಲ್ಲಿ ತುಂಬ ಆಸ್ಥೆ ವಹಿಸುತ್ತಿದೆಯೆಂದು ತೋರಿಸಿ ಕೊಟ್ಟರು.

ಶ್ರೀ ನಿಜಲಿಂಗಪ್ಪನವರು ಕೇರಳದ ಮುಖ್ಯ ಮಂತ್ರಿ ಶ್ರೀ ಪಟ್ಟಂಥಾನು ಪಿಳ್ಳೈಯವರೊಡನೆ ಕಾಸರಗೋಡಿನ ಭವಿಷ್ಯತ್ತಿನ ಬಗೆಗೆ ಮಾತುಕತೆ ನಡೆಸಿದರು. ಜುಲೈ ೨೫ರಂದು ನಡೆದ ಈ ಮಾತುಕತೆಯ ಸಂಪೂರ್ಣ ವಿವರಗಳು ಇನ್ನೂ ದೊರೆತಿಲ್ಲವಾದರೂ ಪಿಳ್ಳೈಯವರು ಆಗೋಸ್ತ್ ಎರಡನೆ ವಾರದಲ್ಲಿ ಮರಳಿ ಬೆಂಗಳೂರಿಗೆ ಬರುವರೆಂದೂ ಆಗ, ಈ ವಿಷಯಕ ಮಾತುಕತೆಗಳು ಮುಂದುವರಿಯುವವೆಂದೂ ಶ್ರೀ ನಿಜಲಿಂಗಪ್ಪನವರು ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದ್ದಾರೆ. ಇದು ನಿಜವಾಗಿಯೂ ಆಶಾದಾಯಕವೆನಿಸುತ್ತದೆ. ರಾಜ್ಯಗಳ ಗಡಿಯಲ್ಲಿ ತೀರ್ಮಾನಕ್ಕೆ ಬರಬೇಕಾದರೆ, ಎರಡು ರಾಜ್ಯಗಳೂ ಪರಸ್ಪರ ಒತಂಬಡಿಕೆ ಮಾಡಿಕೊಳ್ಳ ಬೇಕೆಂದು ಕೇಂದ್ರ ಸರಕಾರದ ನೀತಿಯಿರುವುದರಿಂದ ಈಗಾಗಲೇ ತೊಡಗಿದ ಈ ವಿಚಾರ ವಿನಿಮಯವು ಸಫಲವಾಗಲಿಯೆಂದೂ ಅನ್ಯಾಯವಾಗಿ ಕೇರಳವನ್ನು ಸೇರಿ ಹೋದ ಕನ್ನಡ ಬಂಧುಗಳು ಮರಳಿ ನಮ್ಮನ್ನು ಕೂಡಿಕೊಳ್ಳಲಿಯೆಂದೂ ಬಯಸುವುದು ತಪ್ಪಾಗಲಾರದು. ಎಲ್ಲ ಕನ್ನಡಿಗರೂ ಕಾಸರಗೋಡು ಮುಂದೇನು ಎಂದು ತಿಳಿಯುವ ಕುತೂಹಲದಿಂದಿದ್ದಾರೆ.

ಕರ್ನಾಟಕದಲ್ಲಿ ಹರಿಯುತ್ತಿರುವ ಬರೆ ಪೊರೆ ನದಿಯ ಜಲ ವಿದ್ಯುದ್ಯೋಜನೆಯ ಕುರಿತು ಉಭಯ ಮುಖ್ಯ ಮಂತ್ರಿಗಳು ವಿಚಾರವಿನಿಮಯ ಮಾಡಿಕೊಂಡರು. ಬರೆ ಪೊರೆಯ ಒಂದು ಬಾಲವು ಕೇರಳದಲ್ಲಿದ್ದು ಈ ಯೋಜನೆಯು ಕಾರ್ಯರೂಪಕ್ಕೆ ಬಂದರೆ ಅಲ್ಲಿನ ೩೧,೦೦೦ ಎಕ್ರೆ ಜಮೀನಿಗೆ ನೀರೊದಗಿಸುವುದು. ಆದರೆ, ಕರ್ನಾಟಕದ ಮೂರನೆಯ ಯೋಜನೆಯಲ್ಲಿ ಶರಾವತೀ ನದಿ ಮತ್ತು ಕಳಿ ನದಿಯ ಯೋಜನೆಗಳನ್ನು ಸೇರಿಸಿರುವುದರಿಂದ, ಇವುಗಳನ್ನು ಕಾರ್ಯರೂಪಕ್ಕೆ ತರುವುದಕ್ಕೆ ಅರ್ಥಿಕ ಅಭಾವವಿರುವಾಗ, ಈ ಎರಡೂ ಯೋಜನೆಗಳು ರಾಜ್ಯದ ವಿದ್ಯುತ್ ಉ

(೭ನೇ ಪುಟ ನೋಡಿರಿ)

ವರ್ಗ—ಊಳಿಗ
ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ಟ್ರಿಗಳು,
ಫಾರ್ಮುಗಳು,
ದೊರೆಯುತ್ತವೆ.

"ಸೇವೆಯೇ ಮೊದಲು; ಸೇವೆಯಲ್ಲಿ ಮೊದಲು"
ಈ ಉದಾತ್ತ ಧ್ಯೇಯ ಸಾಧನೆಗಾಗಿಯೇ
— ಕೊರ್ಪೊರೇಶನ್ ಬೇಂಕ್ —
ನಿಮ್ಮ ಹಣಕ್ಕೆ
ಅತ್ಯುತ್ತಮ ಭದ್ರತೆಯೊಂದಿಗೆ ಅತ್ಯಧಿಕ ಬಡ್ಡಿ ಕೊಡುತ್ತಿದೆ.
ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ರಿಜಿಸ್ಟರ್ಡ್ ಆಫೀಸು: ಉಡುಪಿ)
ಆಡಳಿತ ಆಫೀಸು: ಮಂಗಳೂರು.

ಅನ್ಯರ ಸಹಾಯವಿಲ್ಲದೆ ಸ್ವತಂತ್ರವಾಗಿ
ಇಂಗ್ಲಿಷ್ ಪತ್ರವ್ಯವಹಾರ ಮಾಡಲು
ಉಪಯುಕ್ತ ಪುಸ್ತಕ
Letter Writing Made Easy
ಸುಲಭದಲಿ ಪತ್ರಲೇಖನ
ವಿವಿಧ ಮಾದರಿಯ 75 ಇಂಗ್ಲಿಷ್ ಪತ್ರಗಳು.
ಬೆಲೆ: ರೂ. 1—25.
ಹೈಸ್ಕೂಲು ವಿದ್ಯಾರ್ಥಿಗಳಿಗೂ ಅಲ್ಪಸ್ವಲ್ಪ ಇಂಗ್ಲಿಷ್ ಮೂಡುತಿಯುಳ್ಳ ವಯಸ್ಕರಿಗೂ ಅತ್ಯನುಕೂಲ ಕೈಪಿಡಿ.
ರೂ1-50 ಕಳಿಸಿದರೆ ೧ ಪ್ರತಿ ಬುಕ್ ಪೋಸ್ಟು ಮಾಡಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.

ನವಯುಗ

ವರುಷ ೪೧	ಉಡುಪಿ ೨-೮-೬೨	ವಾರ ೪೮

ಹೆಚ್ಚಿನ ಕರಭಾರ

ದೇಶದ ಅಭಿವೃದ್ಧಿಯನ್ನು ಸಾಧಿಸುವ ಸಲುವಾಗಿ ನಮ್ಮ ದೇಶದ ನಾಯಕರು ಪಂಚ ವಾರ್ಷಿಕ ಯೋಜನೆಗಳನ್ನು ರೂಪಿಸುತ್ತ ಬಂದಿದ್ದಾರೆ. ಮೊದಲನೆಯ ಯೋಜನೆಯು ರೂಪುಗೊಳ್ಳುತ್ತಿರುವಾಗ ಜನತೆಯಲ್ಲಿ ತುಂಬಿ ತುಳುಕಾಡುತಿದ್ದ ಉತ್ಸಾಹವು ಮುಂದೆ ವರ್ಷವರ್ಷದಲ್ಲಿ ಹ್ರಾಸವಾಗುತ್ತ ಬಂತು. ಎರಡು ಯೋಜನೆಗಳು ಮುಗಿದು ಮೂರನೆಯದೂ ಭರದಿಂದ ಮುಂದುವರಿಯುತ್ತಿರುವ ಈ ಸಂದಿಗ್ಧ ಸನ್ನಿವೇಶದಲ್ಲಿ ಯೋಜನೆಯೆಂದರೆ ಮೂಗು ಮುರಿಯುವವರೇ ದೇಶದಲ್ಲಿ ತುಂಬಿ ಹೋಗಿದ್ದಾರೆ ಇದಕ್ಕೆ ವರ್ಷದಿಂದ ವರ್ಷಕ್ಕೆ ಏರುತ್ತ ಹೋಗುತ್ತಿರುವ ಕರಗಳ ಭಾರವೂ ಜೀವನ ವೆಚ್ಚವೂ ಕಾರಣವೆಂದು ಹೇಳಬೇಕಾಗುತ್ತದೆ. ಜನಜೀವನವು ನಾಯಕರು ನಿರೀಕ್ಷಿಸಿದಷ್ಟು ಸುಖಮಯವಾಗಿ ಪರಿಣಮಿಸಿಲ್ಲವೆಂಬುದನ್ನು ಅವರೇ ತಿಳಿದುಕೊಂಡಿದ್ದಾರೆ, ಕೇವಲ ಬಂಡವಳ ವಿನಿಯೋಗ ಮಾಡುವುದರಿಂದ ಆದಾಯ ಹೆಚ್ಚುವುದಿಲ್ಲ; ಆವಾಯ ಹೆಚ್ಚದೆ ಜನಜೀವನವು ಉನ್ನತವಾಗುವಂತಿಲ್ಲ.

ಆದೇನೇ ಇದ್ದರೂ ಜನತೆಯ ಜೀವನ ಮಟ್ಟವು ಉನ್ನತವಾಗಿಲ್ಲವೆಂಬುದನ್ನು ಒಪ್ಪುವುದು ಸಾಧ್ಯವಿಲ್ಲ. ಕಳೆದ ಹತ್ತು ವರ್ಷಗಳಲ್ಲಿ ನಾಗರಿಕರಿಗೆ ಹತ್ತು ಹಲವು ವಿಧದ ಸೌಕರ್ಯಗಳು ಲಭಿಸ ತೊಡಗಿವೆ. ಗ್ರಾಮ ಗ್ರಾಮದಲ್ಲಿ ಅಭಿವೃದ್ಧಿ ಯೋಜನೆಯ ಒಂದಲ್ಲ ಒಂದು ಅಂಗವು ತನ್ನ ಪ್ರಭಾವ ಬೀರಿದೆ ಪ್ರತಿಕ್ಷಣ, ಸಾರಿಗೆ, ಅಂಚೆ ಬಟವಾಡೆ, ಸಾಂಸ್ಕೃತಿಕ ಕಾರ್ಯಕ್ರಮ, ಮಹಿಳೋದ್ಧಾರ, ಸಹಕಾರಿ ಸಂಘ ಮೊದಲಾದ ಒಂದಲ್ಲ ಹಲವು ಯೋಜನೆಗಳು ಇಂದು ಎಲ್ಲೆಲ್ಲಿಯೂ ಮನೆ ಮಾತಾಗಿದೆ. ಆದರೆ, ಇವನ್ನು ಸೌಲಭ್ಯವೆಂದು ಕರೆಯ. ಬಹುದಲ್ಲದೆ, ಇವನ್ನೇ ನಂಬುತ್ತ ಕಳಿತರೆ ಉದ್ಧಾರವಾಗದು. ಕೃಷಿ ಪ್ರಧಾನವಾದ ನಮ್ಮ ದೇಶದಲ್ಲಿ ಅದರೊಡನೆ ಉದ್ಯೋಗ ದಂಧೆಗಳಿಗೂ ಸಮಾನ ಸ್ಥಾನವನ್ನು ಕಲ್ಪಿಸಿ ಪುನಾರಚಿಸುವ ನಮ್ಮ ಯೋಜನೆಗಳು ಮಾತ್ರ ನಿರೀಕ್ಷಿತ ಪರಿಣಾಮ ಕೊಟ್ಟಲ್ಲದಿರುವುದು ಶೋಚನೀಯ. ಇದರಿಂದಾಗಿಯೇ ನಾವಿನ್ನೂ ಇವುಗಳ ವಿಷಯದಲ್ಲಿ ಪರಾಧೀನರಾಗಿದ್ದೇವೆ. ಮೊದಲಿನೆರಡು ಯೋಜನೆಗಳಲ್ಲಿ ಕೃಷ್ಯುತ್ಪನ್ನಗಳ ಹೆಚ್ಚುವರಿಗೂ ಕೈಗಾರಿಕೆಗಳ ಸ್ಥಾಪನೆಗೂ ಮಹತ್ವದ ಸ್ಥಾನಗಳನ್ನು ನೀಡಿ ಕಾರ್ಯಕೃತಗೊಳಿಸಲಾಯಿತು; ಆದರೆ, ಅವುಗಳು ನಿರೀಕ್ಷಿತ ಪರಿಣಾಮ ನೀಡದೆ ಹೋದುದರಿಂದ, ಅವುಗಳಲ್ಲಿ ತೊಡಗಿಸಿದ ಬಂಡವಳವು ಆದಾಯವನ್ನು ತರಲು ಅಸಮರ್ಥವಾಯಿತು. ಕೆಲವೊಂದು ಲಾಭಕರವಾಗಿ ಕಂಡುಬಂದರೂ ಸಾಮೂಹಿಕವಾಗಿ ಜನಜೀವನದ ಮೇಲೆ ಅವು ದುಷ್ಪರಿಣಾಮವನ್ನೇ ಬೀರಿವೆ; ಎಂತಲೇ ಜನರ ಜೀವನ ವೆಚ್ಚವು ನೆರೆಯ ನೀರಿನಂತೆ ಹೆಚ್ಚುತ್ತಿದೆ; ಜೊತೆಗೆ ಯೋಜನೆಯ ಬಾಯಿ ಕೂಡಿಸಲು ಕರಗಳ ಹೊರೆಯೂ ಏರುತ್ತಿದೆ. ಇಂತಹ ಅಡಕತ್ತರಿಯ ನಡುವೆ ಭಾರತೀಯ ನಾಗರಿಕನು ಒದ್ದಾಡುತಿದ್ದಾನೆ; ಆತನ ಸಂಪಾದನೆಯು ಹೆಚ್ಚದೆ ನಿಜ. ಆದರೆ ಅವನು ಮಾಡಬೇಕಾದ ವೆಚ್ಚವೂ ಹೆಚ್ಚಿದೆ; ಇದರಿಂದ ತೂಗುವ ತ್ರಾಸಿನ ದಂಡ ಹಿಂದಿಗಿಂತ ಹೆಚ್ಚಿನ ಸಮತಲಕ್ಕೆ ಇಳಿದಿಲ್ಲ. ಇದನ್ನು ಮನವರಿಕೆ ಮಾಡಿಕೊಂಡ ಕೇಂದ್ರ ಸರಕಾರವು ಪ್ರಥಮ ಮತ್ತು ದ್ವಿತೀಯ ಯೋಜನೆಗಳಲ್ಲಿ ತೊಡಗಿಸಿದ ಸಂಪತ್ತಿನಲ್ಲಿ ಬಳಿದು ಹೋದುದೆಷ್ಟು, ಉಳಿದುಕೊಂಡುದೆಷ್ಟು ಎಂಬುದನ್ನು ಪರಿಶೀಲಿಸಲು ಸಮಿತಿಯೊಂದನ್ನು ನೇಮಿಸಿತ್ತು. ಅದು ಈಗ ಅಭ್ಯಾಸ ತತ್ಪರವಾಗಿದೆ

ಈ ನಡುವೆ ನಮ್ಮ ಪ್ರಧಾನಿಯವರು ಹೆಚ್ಚಿನ ಕರಗಳ ಭಾರದಿಂದ ನಾವು ತಪ್ಪಿಕೊಳ್ಳುವಂತಿಲ್ಲವೆಂದು ಹೇಳಿದ್ದಾರೆ. ದೇಶದ ಕೆಲವೊಂದು ರಾಜ್ಯಗಳಲ್ಲಿ, (ಉತ್ತರ ಪ್ರದೇಶ, ಮಧ್ಯ ಪ್ರದೇಶ) ಕರಗಳ ಏರಿಕೆಯನ್ನು ಪ್ರತಿಭಟಿಸಿ ಮತ ಪ್ರದರ್ಶನವೂ ನಡೆಯ ತೊಡಗಿದೆ. ಇಂತಹ ಕೃತ್ಯಗಳನ್ನು ವಿರೋಧಿ ಪಕ್ಷಗಳು ಬೆಂಬಲಿಸುತ್ತವೆ ನಿಜವಾದರೂ ಇದೇ ಪ್ರವೃತ್ತಿ ಮುಂದುವರಿಯುತ್ತ ಹೋದರೆ ಬಹಳ ಕಷ್ಟಕ್ಕೆಟ್ಟು ಕೊಳ್ಳುವುದು. ನೆಹರುರವರು ತನ್ನದಾದ ಉತ್ತರ ಪ್ರದೇಶದ ರಾಜಧಾನಿಯಲ್ಲಿ ಮಾತನಾಡುತ್ತ ದೇಶದ ಭವಿಷ್ಯವನ್ನು ಭದ್ರವಾಗಿರಿಸಲು ಇಂದು ಅದನ್ನು ಪುನಾರಚಿಸಬೇಕಾಗಿದೆ. ಇಂತಹ ಪುನಾರಚನೆಗಾಗಿ ನಾವು ಭಂಡವಳ ವಿನಿಯೋಗಿಸಬೇಕ; ವಿದೇಶಗಳಿಂದ ದೊಡ್ಡ ಪ್ರಮಾಣದಲ್ಲಿ ಸಾಲವನ್ನು ತಂದು ಇಲ್ಲಿ ಅಭಿವೃದ್ಧಿ ಸಾಧನೆ ಮಾಡುತ್ತ ಎಂದಿನ ವರೆಗೆ ಮುಂದುವರಿಯ ಬಹುದು? ಆದುದರಿಂದ, ದೇಶದ ಆಂತರಿಕ ಸಂಪತ್ತನ್ನು ಕೂಡಿ ಹಾಕುವ ಪ್ರಯತ್ನದಲ್ಲಿ ಜನತೆ ಸಹಕರಿಸಬೇಕು; ಎಂದು ಕಳಕಳಿಯಿಂದ ವಿನಂತಿಸಿದರು. ಪ್ರಧಾನಿಯವರ ಮಾತು ಯಥಾರ್ಥವಾದುದು ಈ ಮೊದಲಿನ ವರ್ಷಗಳಲ್ಲಿ ನಮಗೆ ಹೊರೆತಷ್ಟು ಸುಲಭವಾಗಿ ಈ ವರ್ಷ ಆರ್ಥಿಕ ಸಹಾಯ ಲಭಿಸುವ ಲಕ್ಷಣಗಳಿಲ್ಲ. ಇದ್ದರೂ ರಾಷ್ಟ್ರ ರಾಷ್ಟ್ರಗಳ ರಾಜಕೀಯ ನೀತಿ ಧೋರಣೆಗಳಿಂದ ಅವು ಯಾವ ಕಾಲಕ್ಕೂ ಮಾಯವಾಗ ಬಹುದು. ಭವಿಷ್ಯತ್ತಿನ ಆಶೆಯಿಟ್ಟುಕೊಂದು ವರ್ತಮಾನ ಸುಖವನ್ನು ತ್ಯಜಿಸುವುದು ಸಂಪೂರ್ಣ ಸರಿಯಲ್ಲವಾದರೂ ಬೇರೆ ದೇಶಗಳಲ್ಲಿರುವ ಹಣವನ್ನು ನಂಬಿಕೊಂಡು ನಮ್ಮ ದೇಶದ ಯೋಜನೆಗಳನ್ನು ರೂಪಿಸುವುದು ಯಾವಾಗಲೂ ಕ್ಷೇಮಕರವಲ್ಲವೆಂದು ಯಾರೂ ಹೇಳಬಹುದು. ಕನ್ನಡಿಯೊಳಗಿನ ಗಂಟು ನಮ್ಮ ಕೈಸೇರುವುದೆಂದು ಸಂಪೂರ್ಣ ಭರವಸೆ ಪಡುವುದೂ ಕೆಲವೊಮ್ಮೆ ಅವಿವೇಕವಾದೀತು. ಆದುದರಿಂದ ಸಾಧ್ಯವಾದಷ್ಟು ಆಂತರಿಕ ಆರ್ಥಿಕ ಸಂಪತ್ತನ್ನು ಕೂಡಿ ಹಾಕುವ ಪ್ರಯಾಸವನ್ನು ಕೇಂದ್ರವೂ ರಾಜ್ಯವೂ ಮಾಡುವುದು ಅಪರಾಧವಲ್ಲ. ಆದರೆ, ಹೀಗೆ ಗಳಿಸಿದ ಸಂಪತ್ತಿನ ವಿನಿಯೋಗವು ನಂದಾರಾಯನ ಬದುಕಿನಂತಾಗಬಾರದು; ತ್ವರಿತದಲ್ಲಿ ಫಲ ಕೊಡುವಂತಹ ಯೋಜನೆಗಳು ಮೊದಲು ಸ್ಥಾಪಿತವಾಗಿ ಅವುಗಳಿಂದ ಆದಾಯ ಹೆಚ್ಚಿದರೆ, ಮುಂದೆ ಬೃಹದ್ಯೋಜನೆಗಳನ್ನು ರೂಪಿಸಲು ಬಂಡವಳ ತಾನಾಗಿಯೇ ದೊರೆಯುವುದು. 'ಕರ ತೆರುವುದು ನಿಮ್ಮ ಕೆಲಸ; ವಿನಿಯೋಗ ಮಾಡುವುದು. ನಮ್ಮ ಕೆಲಸ' ಎಂಬ ನೀತಿಯನ್ನು ಸರಕಾರಗಳು ಅನುಸರಿಸಿದುದರಿಂದಲೇ ಆ ಸಂಬಂಧದ ವಿರೋಧಕ್ಕೆ ಕಾರಣ ಆದುದರಿಂದ ರಾಜ್ಯ ಮತ್ತು ಕೇಂದ್ರ ಸರಕಾರಗಳು ಕಷ್ಟದಿಂದ ಜನತೆ ತೆರುವ ಕರಗಳ ವ್ಯಯಕ್ಕೆ ಲಗಾಮು ಹಾಕಿಕೊಳ್ಳುವುದು ಅವಶ್ಯವೆಂದು ಸೂಚಿಸ ಬಯಸುತ್ತೇವೆ. ಇಲ್ಲವಾದರೆ, ಜನತೆಯ ಉದ್ರಿಕ್ತತೆ ಇನ್ನೂ ಹೆಚ್ಚಾದೀತು.

ಮಂಗಳೂರಿಗೆ ಕಾರಖಾನೆಗಳು

ಕರ್ನಾಟಕದ ವಿಧಾನ ಪರಿಷತ್ತಿಲ್ಲಿ ಕೇಳಲಾದ ಒಂದು ಪ್ರಶ್ನೆಯನ್ನು ಉತ್ತರಿಸುತ್ತ ರಾಜ್ಯದ ಉದ್ದಿಮೆ ಮಂತ್ರಿ ಕೆ. ಮಲ್ಲಪ್ಪ ಅವರು ಮಂಗಳೂರಿನಲ್ಲಿ ಎಣ್ಣೆ ಶುದ್ಧೀಕರಣದ ಕಾರಖಾನೆಯನ್ನು ತೆರೆಯಬೇಕೆಂಬ ಮನವಿಯನ್ನು ಕೇಂದ್ರಕ್ಕೆ ಅರ್ಪಿಸಿರುವುದಾಗಿಯೂ ಆ ಬಗ್ಗೆ ಹೆಚ್ಚಿನ ಕಳಕಳಿ ವಹಿಸುವುದಾಗಿಯೂ ತಿಳಿಸಿದ್ದಾರೆ. ಮದ್ರಾಸು, ಟಿಟಿಕೋರಿನ್, ಕೊಚ್ಚಿನ್ ಇಲ್ಲವೇ ಮಂಗಳೂರುಗಳ ಪೈಕಿ ಒಂದರಲ್ಲಿ ಇಂತಹ ಕಾರಖಾನೆ 'ಪ್ರಾರಂಭಿಸುವ ಯೋಚನೆ ಕೇಂದ್ರ ಸರಕಾರಕ್ಕಿರುವುದು. ಕೊಚ್ಚಿಯಲ್ಲಿ ಇದನ್ನು ಸ್ಥಾಪಿಸದೆ ಹೋದರೆ ತಾವು ಸತ್ಯಾಗ್ರಹ ಹೂಡುವುದಾಗಿ ಕೇರಳದ ಕಮ್ಯುನಿಸ್ಟರು ಬೆದರಿಕೆ ಹಾಕಿದ್ದಾರೆ. ಇಂತಹ ಬಹು ವೆಚ್ಚದ ಯೋಜನೆಗೆ ಮೂರ್ತ ಸ್ವರೂಪವನ್ನು ಕೊಡುವಾಗ, ಲಾಭಾಲಾಭಗಳ ಪ್ರಶ್ನೆಯನ್ನೂ ಅವಶ್ಯ ಗಮನಿಸಬೇಕಾಗಿದೆ. ಮಂಗಳೂರು ಇಲ್ಲವೇ ಅದರ ಆಸುಪಾಸಿನಲ್ಲಿಯೇ ಎಲ್ಯೂಮಿನಿಯಂ ಕಾರಖಾನೆ, ಗೊಬ್ಬರದ ಕಾರಖಾನೆಗಳು ಸ್ಥಾಪಿತವಾಗಲಿದ್ದು ತೈಲ್ಯ ಶುದ್ಧೀಕರಣದ ವೇಳೆ ದೊರೆಯುವ ಉಪ ವಸ್ತುಗಳಾದ ಸಾಫ್ಟಾ ಮತ್ತು ಪೆಟ್ರೋಲಿಯಂ ಕೋಕ್ಕುಗಳು ಇವಕೆ ಉಪಯುಕ್ತವಾಗಿವೆ. ಇಷ್ಟು ಮಾತ್ರವಲ್ಲದೆ ಮಂಗಳೂರು ದಕ್ಷಿಣ ಭಾರತದ ನಡುವೆಯಿದ್ದು ಸಾರಿಗೆ ಸಾಗಾಟಗಳ ಪರಿಪೂರ್ಣ ವ್ಯವಸ್ಥೆಗಳಿಂದ ಕೂಡಿದೆ. ಇನ್ನು ಮಂಗಳೂರು-ಹಾಸನ ರೈಲು ದಾರಿಯ ರಚನೆಯೂ ಸಂಪೂರ್ಣವಾಯಿತೆಂದರೆ, ನಗರದ ಮಂಗಳೂರು ಸಂಬಂಧವು ಮತ್ತಷ್ಟು ಹೆಚ್ಚುವುದು. ಕೇಂದ್ರ ಮಂತ್ರಿ ಕೆ. ಡಿ. ಮಾಳವೀಯರವರಿಗೆ ಇವೆಲ್ಲ ಉಪಯುಕ್ತತೆಗಳನ್ನು ಮನವರಿಕೆ ಮಾಡಿಕೊಡಲಾಗಿದೆಯೆಂದು ಶ್ರೀ ಮಲ್ಲಪ್ಪನವರು ಹೇಳಿದ್ದಾರೆ. ಆದರೆ, ಈ ದಿಸೆಯಲ್ಲಿ ಇನ್ನೂ ಬಹು ರೀತಿಯ ಪ್ರಯತ್ನ ಮತ್ತು ಪ್ರಚೋದನೆಗಳು ಬೇಕು ಎನಿಸುತ್ತದೆ. ಕರ್ನಾಟಕದ ಧುರೀಣತ್ವ ಇದೀಗ ತುಸು ಸ್ಥಿರವೆಂಬಂತಿರುವುದರಿಂದ ರಾಜ್ಯದ ಆವಶ್ಯಕತೆಗಳನ್ನು ಪದೇ ಪದೇ ಪ್ರತಿಬಿಂಬಿಸಿ, ಕೇಂದ್ರದಿಂದ ಬಹು ವಿಧದ ಸಹಾಯ ಪಡೆಯುವ ಕಾರ್ಯವು ಇನ್ನಾದರೂ ಭರದಿಂದ ಸಾಗಬೇಕು. ಇದಕ್ಕಾಗಿ ನಮ್ಮ ಮಂತ್ರಿ ಮಂಡಳವು ಕಟಿಬದ್ಧವಾಗಬೇಕು.

ಕಾರ್ಕಳ ಡಿ. ಮು. ಕೋರ್ಟ್‌ನಲ್ಲಿ.

O. S. No. 143/1962.

B. ಚಂದಪ್ಪ ಯಿಂದ್ರ —ವಾದಿ.

ಮತ್ತು

ಶಿವದೇವಿ ಸಹಾ —ಪ್ರತಿವಾದಿರು.

ಕೋರ್ಟ್ ಹ್ಯುಂ ಪ್ರಕಾರ ಸದ್ರಿ ದಾವೆಯು 3ನೇ ಪ್ರತಿವಾದಿ ಜಾಜೆ ಮರಿಯಣ್ಣ ಲೋಬೊ, (J. M. Lobo) ಜುವಾಂ ಬಾಪ್ತಿಸ್ ಲೋಬರ ಮಗ, ಕಾರ್ಕಳ ತಾಲ್ಲೂ, ತೆಲ್ಲಬೆಟ್ಟು ಗ್ರಾಮಸ್ತ. ಈಗ C/o. Sundahalli Estate, Belgode, Mysore State, 5ನೇ ಪ್ರತಿವಾದಿಳು ಮೆಸ್ಸಿ ಲೋಬೊ ಬ್ಯಾ, ಪ್ರಾನ್ಸಿಸ್ಕ ಸಾವೇರ್ ಲೋಬರ ಮಗಳು, ಮಂಗಳೂರು ಶಹರ್, Lower Bendoor. ಯವರಿಗೆ ಈ ಮೂಲ್ಕ ತಿಳಿಯಪಡಿಸುವುದೇನೆಂದ್ರೆ—

ಮುಂದಿಗೆ ಪ್ರತಿವಾದಿರಿಂದ ಕಳೆದ ಶಾರ್ವರಿ ಮತ್ತು ಪ್ಲವ ಸಂವತ್ಸರಗಳಿಗೆ ಬರತಕ್ಕ ಸಲುವಳಿಕೆ ಬಾಕಿ ರೂ. 273-25ಕ್ಕೆ ವಾದಿಯು ಪ್ರತಿವಾದಿರ ಮೇಲೆ ಮಾಡಿದ ಸದ್ರಿ ದಾವೆಯು 2-5ನೇ ಪ್ರತಿವಾದಿರ ಹಾಜರಾತಿ ಬಗ್ಗೆ ತಾ. 17-8-1962ಕ್ಕೆ ಇತ್ಯರ್ಥಾಗಿಯದೆ, ಆದ್ರಿಂದ ಸದ್ರಿ ದಾವೆಗೆ ಸದ್ರಿ 2—5ನೇ ಪ್ರತಿವಾದಿರು ಆಕ್ಷೇಪಯಿದ್ದರೆ ಸದ್ರಿ ತಾ. 17-8-1962ನೇ ದಿನ ಬೆಳಿಗ್ಗೆ 10ಗಂಟೆಗೆ ಸದ್ರಿ ಕೋರ್ಟು ಮುಂದೆ ಹಾಜರಾಗಿ ಹೇಳಿಕೊಳ್ಳತಕ್ಕದ್ದು.

(Sd.) H. K. Gopalkrishna Rao,
Vakil for Plaintiff.

Karkal, 23—7—1962.

ಚಂದಾದಾರರಲ್ಲಿ ವಿನಂತಿ

ಇದೇ ತಿಂಗಳಾಂತ್ಯಕ್ಕೆ 'ನವಯುಗ'ದ 41ನೆಯ ವರ್ಷವು ಮುಗಿದು ಸಪ್ಟಂಬರ ಆದಿಯಿಂದ 42ನೆಯ ಹೊಸ ವರ್ಷಾರಂಭವಾಗುತ್ತದೆ. ಈ ಅವಧಿಗೆ ಚಂದಾ ಅವಧಿ ಮುಗಿಯುವವರೂ, ಚಂದಾ ಹಣ ಬಾಕಿ ಇರುವವರೂ ತಮ್ಮ ತಮ್ಮ ಬಾಕಿಯನ್ನು ದಯಮಾಡಿ ಆದಷ್ಟು ಬೇಗನೆ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥಿಸುತ್ತೇವೆ

ಚಂದಾಹಣವನ್ನು ಸಿಂಡಿಕೇಟ್ ಬೇಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವದೊಂದು ತರದ ಖರ್ಚೂ ಇಲ್ಲದೆ ಪಾವತಿ ಮಾಡಬಹುದಾಗಿದೆ

ಅಲ್ಲಲ್ಲಿಯ ಸುದ್ದಿಸಾರ

ಮಹಾತ್ಮಾ ಪಿಕ್ಚರ್ಸ್‌ನವರ ಶ್ರೀ ಧರ್ಮಸ್ಥಳ ಮಹಾತ್ಮೆ

ಕನ್ನಡ ನಾಡಿನಲ್ಲಿ ಸರ್ವ ಧರ್ಮ ಸಮನ್ವಯತೆಗೆ ಹೆಸರಾದ ಪುಣ್ಯಕ್ಷೇತ್ರವೊಂದರ ಮಹಿಮೆಯನ್ನು ನಿರೂಪಿಸುವ ಮಹಾನ್ ಚಿತ್ರವೇ "ಶ್ರೀ ಧರ್ಮಸ್ಥಳ ಮಹಾತ್ಮೆ" ಇದು ಕನ್ನಡ ಚಿತ್ರ ಪ್ರೇಮಿಗಳಿಗೆ ಮಹಾತ್ಮಾ ಪಿಕ್ಚರ್ಸ್‌ರವರು ಅರ್ಪಿಸುವ ಹೆಮ್ಮೆಯ 26ನೇ ಕಾಣಿಕೆ.

ಭೂಲೋಕದಲ್ಲಿ ಧರ್ಮವು ನಶಿಸಿ ಅಧರ್ಮ, ಅನ್ಯಾಯಗಳು ತಾಂಡವವಾಡುತ್ತಿವೆ ಎಂದು ಧರ್ಮ ದೇವತೆಗಳು ಜಗತ್ತನ್ನೇ ನಾಶಮಾಡಲು ಯೋಚಿಸುತ್ತಿದ್ದಾಗ ಪವಿತ್ರಾತ್ಮಳಾದ ಅಮ್ಮು ದೇವಿಯ ಧರ್ಮನಿಷ್ಠೆಯನ್ನು ಕಂಡು ಮೆಚ್ಚಿ ಅಲ್ಲೇ ನೆಲೆಸಲು ನಿರ್ಧರಿಸಿದರು. ಪರಶಿವನೂ ಸಹಾ ಶ್ರೀ ಮಂಜುನಾಥ ಸ್ವಾಮಿಯಾಗಿ ಅಲ್ಲೇ ನೆಲೆಸಿದ. ಇಂತಹ ಪುಣ್ಯ ಕ್ಷೇತ್ರವೇ ಶ್ರೀ ಧರ್ಮಸ್ಥಳ.

ಪರಶಿವ ಮತ್ತು ಧರ್ಮದೇವತೆಗಳು ಅಮ್ಮು ದೇವಿಯ ಧರ್ಮನಿಷ್ಠೆಯನ್ನು ಪರೀಕ್ಷಿಸುವ ಹೃದಯಸ್ಪರ್ಶಿದೃಶ್ಯಗಳು ಈ ಚಿತ್ರದ ವಿಶೇಷ ಆಕರ್ಷಣೆಗಳಾಗಿವೆ. ಧರ್ಮಸ್ಥಳದ ಸ್ಥಳ ಪುರಾಣ ಮಹಿಮೆ, ಧರ್ಮಪೀಠ, ಕ್ಷೇತ್ರದರ್ಶನ ಇವೆಲ್ಲವನ್ನೂ ಈ ಚಿತ್ರದ ಮೂಲಕ ಪರಿಚಯಮಾಡಿಕೊಳ್ಳಬಹುದು.

ಕನ್ನಡದ ಚಿತ್ರೋದ್ಯಮದ ಮೂವರು ಪ್ರಮುಖ ಲೇಖಕರು—ಯಣಸೂರು ಕೃಷ್ಣಮೂರ್ತಿ, ಸಿ. ಗುಂಡೂರಾವ್ ಮತ್ತು ಎಚ್. ಎಲ್. ನಾರಾಯಣರಾವ್—ಈ ಚಿತ್ರದ ಕಥೆ ಸಂಭಾಷಣೆ, ಹಾಡುಗಳನ್ನು ರಚಿಸಿದ್ದಾರೆ. ಈ ಚಿತ್ರದ ತಾರಾಗಣದಲ್ಲಿ ಪ್ರತಿಮಾದೇವಿ, ಇಂದಿರಾ, ಕಲಾವತಿ, ಚಂದ್ರಾ, ಜಯಂತಿ, ಕಲ್ಯಾಣಿ, ಎಚ್. ಟಿ. ಅರಸ್, ಥಿಕ್ಕಿ ಮಾಧವರಾವ್, ಎಚ್. ಆರ್ ಶಾಸ್ತ್ರಿ, ಕೃಷ್ಣ ಶಾಸ್ತ್ರಿ, ಶ್ಯಾಮರಾವ್, ಸೊರಟ್ ಅಶ್ವತ್ಥ್, ಶಿವಪಂಕರ್, ಡಿ. ಎನ್. ಬಡೆಯರ್, ಶ್ರೀರಂಗ್, ಶ್ರೀಕಾಂತ, ಮಹದೇವಪ್ಪ, ಮಲ್ಲಿಕಾರ್ಜುನಪ್ಪ, ರಾಜೇಂದ್ರ ಪ್ರಸಾದ್ ಮುತ್ತಿತರರಿದ್ದಾರೆ.

ಶ್ರೀ ಎಂ ವೆಂಕಟರಾಜು ಅವರು ಸಂಗೀತ ನಿರ್ದೇಶಕರಾಗಿಯೂ, ಘಂಟಸಾಲ, ಎ. ಎಂ. ರಾಜ, ಪಿ. ಬಿ. ಶ್ರೀನಿವಾಸ್, ಜಾನಕಿ—ಹಿನ್ನಲೆ ಗಾಯಕರಾಗಿಯೂ, ಕಾರ್ಯ ನಿರ್ವಹಿಸಿದ್ದಾರೆ. ಶ್ರೀ ಡಿ. ಶಂಕರ್ ಸಿಂಗರು ನಿರ್ಮಾಪಕ—ನಿರ್ದೇಶಕರಾಗಿರುವ ಬೆಂಗಳೂರಿನ ಶ್ರೀ ಕೃಪಾಪಿಕ್ಚರ್ಸ್‌ನವರು ಹಂಚಿಕೆದಾರರಾಗಿರುವ ಈ ಚಿತ್ರವು ಜುಲೈ 27ರಿಂದ ಪ್ರಮುಖ ಕೇಂದ್ರಗಳಲ್ಲಿ ಪ್ರದರ್ಶಿತವಾಗುತ್ತಿದೆ.

ಮತದಾರರ ಯಾದಿಯ ಪ್ರಕಟಣೆ— ಕುಂದಾಪುರ, ಬೈಂದೂರು, ಬ್ರಹ್ಮಾವರ, ಉಡುಪಿ, ಮತ್ತು ಕಾಪು ವಿಧಾನ ಸಭಾ ಮತದಾರ ಕ್ಷೇತ್ರಗಳಿಗೆ ಸಂಬಂಧಿಸಿದ 1962ರ ಮತದಾರರ ಯಾದಿಯು ಸಿದ್ಧವಾಗಿದ್ದು ಅದನ್ನು ಸಾರ್ವಜನಿಕರ ಪರಿಶೀಲನೆಗಾಗಿ ಸಂಬಂಧಿಸಿದ ಕಚೇರಿಗಳಲ್ಲಿ ಪ್ರಕಟಿಸಲಾಗಿದೆಯೆಂದು ಕುಂದಾಪುರ ಅಸಿಸ್ಟಾಂಟ್ ಕಮಿಶನರರು ತಿಳಿಸುತ್ತಾರೆ. ಅಯಾಯ ಗ್ರಾಮಗಳಿಗೆ ಸಂಬಂಧಿಸಿದ ಪಟ್ಟಿಗಳು ಅಲ್ಲಿಯ ಗ್ರಾಮಪಂಚಾಯತ ಆಫೀಸುಗಳಲ್ಲಿಯೂ, ಉಡುಪಿ ನಗರ ಸಭಾಕ್ಷೇತ್ರದ ಯಾದಿಯು ನಗರ ಸಭೆಯ ಕಚೇರಿಯಲ್ಲಿಯೂ ಪರಿಶೀಲನೆಗಾಗಿ ಇರಿಸಲ್ಪಟ್ಟಿರುವುದು.

ಕುಂದಾಪುರ ಕ್ಷೇತ್ರಕ್ಕೆ ಸಂಬಂಧಿಸಿದ ಪಟ್ಟಿಯು ಕುಂದಾಪುರ ಅಸಿಸ್ಟಾಂಟ್ ಕಮಿಶನರ ಕಚೇರಿ ಮತ್ತು ತಾಲೂಕು ಆಫೀಸಿನಲ್ಲಿ ಬೈಂದೂರು ಕ್ಷೇತ್ರದ ಪಟ್ಟಿಯು ಬೈಂದೂರು ಸಬ್ ರಿಜಿಸ್ಟ್ರಾರರ ಕಚೇರಿಯಲ್ಲಿ, ಬ್ರಹ್ಮಾವರ ಕ್ಷೇತ್ರದ ಯಾದಿಯು ಬ್ರಹ್ಮಾವರ ಸಬ್ ರಿಜಿಸ್ಟ್ರಾರ ಆಫೀಸಿನಲ್ಲಿ ಉಡುಪಿ ಕ್ಷೇತ್ರದ ಯಾದಿಯು ಉಡುಪಿ ತಾಲೂಕು ಆಫೀಸಿನಲ್ಲಿ, ಕಾಪು ಕ್ಷೇತ್ರದ ಪಟ್ಟಿಯು ಕಾಪು ಬ್ಲಾಕ್ ಡೆವಲಪ್‌ಮೆಂಟ್ ಆಫೀಸರರ ಆಫೀಸಿನಲ್ಲಿ, ಸಾರ್ವಜನಿಕರ ಅವಗಾಹನೆಗಾಗಿ ಇರಿಸಲ್ಪಟ್ಟಿರುವುದು. ಈ ಪಟ್ಟಿಗಳ ಕುರಿತು ಏನಾದರೂ ಆಕ್ಷೇಪಣೆಗಳು ಇದ್ದಲ್ಲಿ ಇಲ್ಲವೇ ಹೆಸರು ಸೇರಿಸಬೇಕಾದಲ್ಲಿ ನಿರ್ದಿಷ್ಟ ಫಾರ್ಮುಗಳಲ್ಲಿ 31-8-62ರ ಒಳಗೆ ಹಾಜರುಪಡಿಸಬೇಕಾಗಿದೆ. ಇವುಗಳನ್ನು ಸಂಬಂಧಪಟ್ಟ ತಹಸಿಲ್ದಾರರಿಗೆ ಅಥವಾ ರೆವಿನ್ಯೂ ಇನ್ಸ್‌ಪೆಕ್ಟರರಿಗೆ ಇಲ್ಲವೇ ಅಸಿಸ್ಟಾಂಟ್ ಕಮಿಶನರ ಕಚೇರಿಯಲ್ಲಿ ಕೊಡಬಹುದು. ಯಾ ರಿಜಿಸ್ಟ್ರೇಶನ್ ಮೂಲಕ ಇಲೆಕ್ಟೋರಲ್ ರಿಜಿಸ್ಟ್ರೇಶನ್ ಆಫೀಸರ್ ಮತ್ತು ಅಸಿಸ್ಟಾಂಟ್ ಕಮಿಶನರ್ ಇವರಿಗೆ ಮೇಲೆ ಹೇಳಿದ ಅವಧಿಯೊಳಗೆ ಕಳುಹಿಸಿಕೊಡಬೇಕಾಗಿದೆ.

ಕಥೋಲಿಕ್ ವಿದ್ಯಾರ್ಥಿ ಸಂಘದ ಉದ್ಘಾಟನೆ — ಯುನಿವರ್ಸಿಟಿ ಕೆಥೋಲಿಕ್ ವಿದ್ಯಾರ್ಥಿ ಸಂಘದ ಉಡುಪಿ, ಮಣಿಪಾಲ ವಿಭಾಗದ ಉದ್ಘಾಟನಾ ಸಮಾರಂಭ ತಾರೀಕು 22ರಲ್ಲು ಸೈಂಟ್ ಎಲೋಸಿಯಸ್ ಕಾಲೇಜಿನ ಪ್ರಿನ್ಸಿಪಾಲ್ ರೆವೆರೆಂಡ್ ಫಾದರ್ ಅಲೆಕ್ಸ್ ಮಿನೆಜಸ್ ಇವರ ಅಧ್ಯಕ್ಷತೆಯಲ್ಲಿ ಉಡುಪಿ ಸೈಂಟ್ ಸಿಸಿಲೀಸ್ ಕಾನ್ವೆಂಟ್ ಹೈಸ್ಕೂಲಿನ ಭವನದಲ್ಲಿ ಜರಗಿತು. ಕಾರ್ಯದರ್ಶಿ ಶ್ರೀ ಪರ್ಸಿ ಮಿನೇಜಸರು ಸ್ವಾಗತ ಭಾಷಣ ಮಾಡಿದರು. ಅಧ್ಯಕ್ಷರು ಸಂಘದ ಉದ್ಘಾಟನೆಯನ್ನು ಮಾಡುತ್ತಾ ಕಾಲೇಜು ಯುವಕರ ಕರ್ತವ್ಯಗಳನ್ನು ವಿವರಿಸಿ ಭಾಷಣ ಮಾಡಿದರು

ಶ್ರೀ ವಿಲಿಯಂ ಪಿಂಟೊ ವಿರ್ಚಾಡಿಯವರು ಧನ್ಯವಾದಗಳನ್ನು ಸಮರ್ಪಿಸಿದರು

ಯಕ್ಷಗಾನ—ಪಾಂಗಾಳ ಶ್ರೀ ಜನಾರ್ಧನ ದೇವಸ್ಥಾನದಲ್ಲಿ ಹೊಸದಾಗಿ ನಿರ್ಮಿಸಿರುವ ಭವ್ಯವಾದ ಕಲ್ಯಾಣ ಮಂಟಪದಲ್ಲಿ ತಾ. 22-7-62ನೇ ರಾತ್ರಿ ಉಡುಪಿ ಯಕ್ಷಗಾನ ಕಲಾ ಮಂಡಲದ ವತಿಯಿಂದ ಶ್ರೀ ಕೃಷ್ಣ ಸಂಧಾನ ಮತ್ತು ಸುಧನ್ವಕಾಳಗವೆಂಬ ಯಕ್ಷಗಾನ ಕೂಟವು ಜರಗಿತು. ಈ ಕಾರ್ಯಕ್ರಮದಲ್ಲಿ ಶ್ರೀ ಕೆ. ನಾರಾಯಣ ಶೆಟ್ಟಿಯವರ ಹಾಡುಗಾರಿಕೆ, ಮಟ್ಟಿ ಗೋವರ್ಧನರಾವು ಮತ್ತು ಸಗ್ರಿ ಕಿಟ್ಟಾಚಾರಿಯವರ ಮೃದಂಗ ವಾದನ ಸರ್ವಶ್ರೀಗಳಾದ ಕೋಟೆ ಸುಬ್ಬರಾವು ಕೆ. ಕೃಷ್ಣರಾವು, ಸೀತಾನದಿ ಗಣಪಯ್ಯ ಶೆಟ್ಟಿ, ಪಿ. ಗೋವಿಂದ ಶೆಟ್ಟಿ, ಕರಂಬಳ್ಳಿ ಗೋಪಾಲ ಶೆಟ್ಟಿ ಇವರೇ ಮೊದಲಾದವರು ಭಾಗವಹಿಸಿದ್ದರು. ಪಾಂಗಾಳದ ಬೂದ ಶೆಟ್ಟಿಯವರಿಂದ ಧನ್ಯವಾದ ಸಮರ್ಪಣೆಯೊಂದಿಗೆ ಬಳಿಕ ಕಾರ್ಯಕ್ರಮ ಕೊನೆಗೊಂಡಿತು.

ಕುಂದಾಪುರದಲ್ಲಿ ಕಾಲೇಜು— ಕುಂದಾಪುರದಲ್ಲಿ ಬರುವ ವರ್ಷದಲ್ಲಿ ಮಣಿಪಾಲ ಎಕೇಡೆಮಿ ಆಫ್ ಜನರಲ್ ಎಜ್ಯುಕೇಶನಿನ ವತಿಯಿಂದ ಫಸ್ಟ್ ಗ್ರೇಡ್ ಕಾಲೇಜೊಂದು ತೆರೆಯಲ್ಪಡುವುದೆಂದೂ ಈ ಬಗ್ಗೆ ಎರಡು ಲಕ್ಷ ರೂಪಾಯಿಗಳನ್ನು ಬೆರಿನ್‌ನಲ್ಲಿರುವ ಕುಂದಾಪುರದವರೇ ಆದ ಡಾ. ಎ. ಎಸ್. ಭಂಡಾರ್ಕರರು ಉದಾರವಾಗಿ ಕೊಡಲು ಮುಂದೆ ಬಂದಿರುವರೆಂದೂ ಡಾ. ಟಿ. ಎಂ. ಎ. ಪೈಗಳು ಕಳೆದ ತಾ. 22ರಂದು ಕುಂದಾಪುರದಲ್ಲಿ ಅವರನ್ನು ಅಭಿನಂದಿಸಲು ಜರಗಿದ ರೋಟರಿ ಸಭೆಯಲ್ಲಿ ಡಾ. ಎಚ್. ವೆಂಕಟ್ರಮಣಯ್ಯನವರು ಸ್ವಾಗತಿಸಿ ಡಾ. ಮಾಧವ ಪೈಗಳು ಪಟ್ಟ ಶ್ರಮವನ್ನು ಕೊಂಡಾಡಿದರು. ಡಾ. ಪೈಗಳು ಡಾ. ಭಂಡಾರಕರರ ಉದಾರತೆಯನ್ನು ಶ್ಲಾಘಿಸಿದರು.

ಬಂಟರ ಯಾನೆ ನಾಡವರ ಸಂಘ

ಮುಂಬಯಿ—34ನೇ ವಾರ್ಷಿಕ ಮಹಾಸಭೆಯು ತಾ. 5-8-1962ರಲ್ಲು ಆಪರಾಹ್ನ ಗಂಟೆ 2.30ಕ್ಕೆ ಸಂಘದ ಅಧ್ಯಕ್ಷರಾದ ಶ್ರೀ ಕೆ. ವಿರಲ ಶೆಟ್ಟಿ ಅಧ್ಯಕ್ಷತೆಯಲ್ಲಿ ಕಿಚ್ಚಿ ಭಂಡಾರಿ ಹಾಲ್ ಗೋಕಲೆ ರೋಡ್ (ನೋರ್ತ್) (ಶಿವಾಜಿ ಪಾರ್ಕ್) ಇಲ್ಲಿ ಸಡೆಯಲಿರುವುದರಿಂದ ಸ್ವಜಾತಿ ಬಂಧುಗಳೆಲ್ಲ ತಕ್ಕ ಸಮಯಕ್ಕೆ ಚಿತ್ತೈಸಬೇಕಾಗಿ ಗೌ. ಪ್ರ. ಕಾರ್ಯದರ್ಶಿ ಶ್ರೀ ಮೂಲ್ಕಿ ಗಂಗಯ ಶೆಟ್ಟರು ವಿನಂತಿಸುತ್ತಾರೆ.

ಭಾರತ ಸರಕಾರ ಕೃತ ರಾಷ್ಟ್ರೀಯ ಉತ್ಪಾದನಾ ಸಂಸ್ಥೆಯು ಪಾಶ್ಚಿಮಾತ್ಯ ರಾಷ್ಟ್ರಗಳ ಔದ್ಯೋಗಿಕ ಕೇಂದ್ರಗಳನ್ನು ಸಂದರ್ಶಿಸುವಜುನಾಯಿತ ನಿಯೋಗದ ಮುಂದಾಳುಗಳನ್ನಾಗಿ ಮೆಟಲರ್ಜಿಕಲ್ ಕೋರ್ಪರೇಶನ್ ಪ್ರೈವೇಟ್ ಲಿಮಿಟೆಡ್ ಕಂಪೆನಿಯ ಡೈರೆಕ್ಟರಾದ ಶ್ರೀ ಯಚ್. ಟಿ. ಭಂಡಾರಿಯವರನ್ನು ಆರಿಸಿದ ಬಗ್ಗೆ ತಾರೀಕು 19—7—62ರಂದು ಬಜಾರ್‌ಗೇಟ್ ಹೈಸ್ಕೂಲಿನ ವಠಾರದಲ್ಲಿ ಸತ್ಕಾರಕೂಟವೊಂದನ್ನಿತ್ತು ಅವರನ್ನು ಸತ್ಕರಿಸಲಾಯಿತು.

ಪಾಣೆಮಂಗಳೂರು:— ಈ ಫಿರ್ಕಾದ ಸಜೀಪ ಕೇಂದ್ರದಲ್ಲಿ ರೂರಲ್ ಡಿಸ್ಪೆನ್ಸರಿಯೊಂದನ್ನು ಕಳೆದ ತಾ. 27ರಂದು ಶ್ರೀ ಎ. ಶಂಕರ ಅಳ್ವ ಎಂ. ಪಿ. ಅವರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಎ. ಪೈಗಳ ಅಧ್ಯಕ್ಷತೆಯಲ್ಲಿ ಉದ್ಘಾಟಿಸಿದರು. ಶ್ರೀ ಅಳ್ವರು ಗ್ರಾಮಾಂತರ ಪ್ರದೇಶಗಳ ವಿವಿಧ ಅಭಿವೃದ್ಧಿ ಕಾರ್ಯಗಳನ್ನು ವಿವರಿಸಿ ಈ ಡಿಸ್ಪೆನ್ಸರಿಯ ಪ್ರಯೋಜನವನ್ನು ಗ್ರಾಮಸ್ಥರು ಪಡೆಯುವಂತಾಗಲೆಂದರು. ಸಭಿಕರ ಭಾಷಣವಾದ ಮೇಲೆ ಅಧ್ಯಕ್ಷರು ಹಳ್ಳಿಗರು ಪೇಟೆ ಸೇರದೆ ತಮ್ಮ ಹಳ್ಳಿಗಳ ಅಭಿವೃದ್ಧಿಗಾಗಿ ದುಡಿಯಬೇಕೆಂದೂ ರೋಗಗಳ ನಿರ್ಮೂಲನಕ್ಕೆ ಸಾಮೂಹಿಕ ಪ್ರಯತ್ನ ನಡೆಸಬೇಕೆಂದೂ ಹೇಳಿದರು.

ಸವಣೂರು—ತಾ. 27-7-62ರಂದು ಶ್ರೀ ಯನ್. ವೆಂಕಪ್ಪ ರೈ, ಸವಣೂರು ಗುತ್ತು, ಸವಣೂರು ಪಂಚಾಯತದ ಚೆಯರ್‌ಮೆನ್, ಇವರ 59ನೆಯ ಜನ್ಮದಿನೋತ್ಸವವನ್ನು ಬಹಳ ವಿಜೃಂಭಣೆಯಿಂದ ನೆರವೇರಿಸಿದರು. ಯಥಾಪ್ರಕಾರ ಅವರ ಶ್ರೀ ವಿಷ್ಣುಮೂರ್ತಿ ದೇವಾಲಯದಲ್ಲಿ ವಿಶೇಷ ಪೂಜಾದಿಗಳನ್ನು ಜರಗಿಸಿದರು. ಸದ್ರಿಯವರ ಪಂಚಾಯತದ ಚಕ್‌ಬಂದಿಗೆ ಸೇರಿದ ಕುಟ್ಯಾರು, ಸವಣೂರು ಮೊಗರು, ಪುಣ್ಚಪ್ಪಾಡಿ ಹಾಗೂ ಕುಮರ ಮಂಗ್ಲ ಈ ಐದು ಶಾಲಾ ಮಕ್ಕಳಿಗೂ ಇನ್ನಿತರ ಊರ ಬಡ ಮಕ್ಕಳಿಗೂ ಸಿಹಿತಿಂಡಿ ವಿತರಣೆಗೊಳಿಸಿ ಮಧ್ಯಾಹ್ನ ಮಹಾಪೂಜೆ ತರುವಾಯ ಸದ್ರಿ ಮಕ್ಕಳಿಗೂ ನೆರೆದ ಸರ್ವರಿಗೂ ತನ್ನನಿವಾಸವಾದ ಲಕ್ಷ್ಮೀ ಪ್ರಸಾದದಲ್ಲಿ ಪರಮಾನ್ನ ಪೂರಿತ ಮೃಷ್ಟಾನ್ನ ಭೋಜನ ವಿತರಣೆಗೊಳಿಸಿದರು. ಸಂತುಷ್ಟಿಗೊಂಡ ಸಭೆಯು ಶ್ರೀಯವರೀಗೆ ಶ್ರೀ ಪರಮಾತ್ಮನು ಚಿರಾಯುರಾರೋಗ್ಯ ಭಾಗ್ಯ ಉತ್ತಮ ಸ್ಥಾನಮಾನಗಳಿಂದ ಕೂಡಿದ ಆದರ್ಶ ಜೀವನವನ್ನು ಕರುಣಿಸಲೆಂದು ಶುಭಾಶಯವನ್ನು ಕೋರಿದರು.

ಹಿರಿಯಡ್ಕ ನಾರಾಯಣ ರಾಯರ ನಿಧನ ದಕ್ಷಿಣ ಕನ್ನಡದ ಹಳೆಯ ಪ್ರಸಿದ್ಧ ಕಾಂಗ್ರೆಸಿಗರಲ್ಲೊಬ್ಬರಾದ ಶ್ರೀ ಹಿರಿಯಡ್ಕ ನಾರಾಯಣ ರಾಯರು ತಾ 30ನೇ ರಾತ್ರಿ 62ನೇ ವಯಸ್ಸಿನಲ್ಲಿ ಮೂಡಬಿದ್ರೆಯ ಗಾಂಧಿ ಸೇವಾ ಕೇಂದ್ರದಲ್ಲಿ ನಿಧನ ಹೊಂದಿದರು. ದಿವಂಗತರು ಮಹಾತ್ಮರ ಅಸಹಕಾರ ಚಳವಳಿದ ವೇಳೆ ಕಾಲೇಜು ಶಿಕ್ಷಣಕ್ಕೆ ತಿಲಾಂಜಲಿ ಇತ್ತು ಸ್ವಾತಂತ್ರ್ಯಯೋಧರಾಗಿ ಸುಪ್ರಸಿದ್ಧ ಗಾಂಧಿ ಭಕ್ತರಾಗಿ ಪ್ರಥಮ ಸತ್ಯಾಗ್ರಹದಲ್ಲಿ ಯೇ ತುರಂಗವಾಸವನ್ನು ಅನುಭವಿಸಿದವರು ಉಡುಪಿಯಲ್ಲಿ ಸತ್ಯಾಗ್ರಹಿ ವಾರ ಪತ್ರಿಕೆಯ ಸಂಪಾದಕರಲ್ಲೊಬ್ಬರಾಗಿ, ರಾಷ್ಟ್ರೀಯ ಶಾಲೆಯ ಸ್ಥಾಪನೆಗೆ ಮುಂದಾಳಾಗಿ, ಜಿಲ್ಲಾ ಕಾಂಗ್ರೆಸ್ಸಿನ ಕಾರ್ಯದರ್ಶಿಗಳಾಗಿ ಸೇವೆ ಸಲ್ಲಿಸಿದವರು. ಆಜ್ಜಂಪಾರ ಖಾದೀ ಕೇಂದ್ರದಲ್ಲಿ ಮೆನೇಜರರಾಗಿ ಅದರ ಪ್ರಗತಿಗಾಗಿ ದುಡಿದವರು. ಇತ್ತೀಚೆಗೆ ಅವರು ಮೂಡಬಿದ್ರೆಯಲ್ಲಿ ಗುಡಿಕೈಗಾರಿಕೆಗಳ ಕೇಂದ್ರವನ್ನು ಸ್ಥಾಪಿಸಿ, ಅದರ ಯಶಸ್ಸಿಗಾಗಿ ಶ್ರಮಿಸುತ್ತಿದ್ದರು.

ಡಾ. ಅಡ್ಯಂತಾಯರು— ಕಾರ್ಕಳದ ಜನಪ್ರಿಯ ಡಾಕ್ಟರರಾದ ಎನ್. ಶಂಕರ ಅಡ್ಯಂತಾಯರು ತಾ. 30ನೇ ರಾತ್ರಿ ನಿಧನ ಹೊಂದಿದರೆಂಬ ವಿಷಾದಕರ ವಾರ್ತೆ ಬಂದಿದೆ

ರಾಧಾಕೃಷ್ಣನ್

ಲೌಕಿಕದಲ್ಲಿಯೂ ಆಧ್ಯಾತ್ಮಿಕತೆಯನ್ನು ಬೆಳಗಿಸುವ ಮಹಾ ವ್ಯಕ್ತಿತ್ವ ರಾಷ್ಟ್ರಪತಿ ಡಾ. ರಾಧಾಕೃಷ್ಣನ್ನರದು. ಪ್ರಾಕೃತಿಕವಾಗಿಯಾಗಲೀ ಪಾರಮಾರ್ಥಿಕವಾಗಿ ಯಾಗಲೀ ನಾವು ಮಾಡುವ ಕೆಲಸವನ್ನು ನಿರ್ವಂಚನೆಯಿಂದ ಮಾಡಬೇಕೆನ್ನುತ್ತಾರೆ ಅವರು. ಸ್ಟೇಟ್ ಬೇಂಕ್ ಆಫ್ ಇಂಡಿಯಾದ ತರಬೇತಿದಾರ ನೌಕರರನ್ನು ಕುರಿತು ಅವರು ಮಾತನಾಡುತ್ತ, ಬೇಂಕ್ ನೌಕರರು ಸಮಾಜದ ನಿಷ್ಠ ಸೇವಕರಾಗಿರಬೇಕಾದ ಆವಶ್ಯಕತೆಯನ್ನು ಒತ್ತಿ ನುಡಿದರು. ಸರಕಾರಿ ನೌಕರರು ಜನತೆಯ ನೌಕರರು ಎಂಬುದು ಪ್ರಜಾಪ್ರಭುತ್ವದ ನೀತಿ ಹಾಗಿರುವಾಗ, ತಮ್ಮ ಕರ್ತವ್ಯವನ್ನು ನಿರ್ವಹಿಸುವಲ್ಲಿ ವ್ಯತ್ಯಯವನ್ನು ಯಾರೊಬ್ಬರೂ ಮಾಡಬಾರದು. ಹಾಗೆ ಕರ್ಮಯೋಗಿಗಳಾದಾಗಲೇ ರಾಮರಾಜ್ಯದ ಕನಸು ನನಸಾದೀತು. ರಾಧಾಕೃಷ್ಣನರಂತಹ ದಾರ್ಶನಿಕರು ರಾಮರಾಜ್ಯ ಸ್ಥಾಪನೆಗೆ ಆಡಿಗಲ್ಲು ಹಾಕುವ ಪ್ರಯತ್ನದಲ್ಲಿದ್ದಾರೆ

ಜವಾಹರಲಾಲ

ಭಾರತದ ಭಾಗ್ಯವಿಧಾತ ನೆಹರು ರಾಷ್ಟ್ರೀಯ ಐಕ್ಯದ ಬಗ್ಗೆ ಪದೇ ಪದೇ ಹೇಳುತಿದ್ದಾರೆ. ಚೀನಿಯರಿಂದ ಆಕ್ರಮಣದ ಭೀತಿಯು ನಿಮಿಷ ನಿಮಿಷಕ್ಕೂ ಹೆಚ್ಚುತ್ತ ಬರುತ್ತಿರುವುದರಿಂದ ಐಕ್ಯ ಭಾವನೆಯ ಆವಶ್ಯಕತೆ ಎಷ್ಟೆಂದು ಅನ್ನಬೇಕಾಗಿಲ್ಲ. ದುರ್ಗಮ ಹಿಮಾಲಯ ಲಡಕಪ್ರದೇಶದಲ್ಲಿ ಚೀನಿಯರ ಕೋಲಾಹಲವು ಮಿತಿ ಮೀರಿರುವಾಗ ಪಾಶ್ಚಾತ್ಯರಾಷ್ಟ್ರಗಳ ದೃಷ್ಟಿವಕ್ರವಾಗಿರುವಾಗ, ದೇಶೀಯರೆಲ್ಲರಬೆಂಬಲ ಆವಶ್ಯ ಅವರಿಗೆ ಇದ್ದೇ ಇದೆ. ಪಂಡಿತ ನೆಹರು ಮಕ್ಕಳಿಗೆ ಚಾಚಾ ಆದರೂ ಭಾರತೀಯರಿಗೆ ರಕ್ಷಕರಂತಿದ್ದಾರೆ.

ಪುತ್ತೂರು ಡಿ. ಮು. ಕೋರ್ಟ್‌ನಲ್ಲಿ

R. E. P. 174/62 O. S. 511/53

ಪದ್ಮನಾಭ ಯೆಡಪ್ಪಾಡಿತ್ತಾಯ
— ಅರ್ಜಿದಾರ

1. ಅಪ್ಪಾಜಿ—ಕೃಷ್ಣಯ್ಯನವರ ಮಗ
2. ಸೀತಮ್ಮ—ಅಪ್ಪಾಜಿಯ ಹೆಂಡತಿ
—ಎದ್ರಿರು

ಇಬ್ಬರೂ ಕಳಿಯಗ್ರಾಮದಲ್ಲಿರುತ್ತಾರೆ.

ಸದ್ರಿ ಎದ್ರಿರಿಗೆ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ:—

ನಿಮ್ಮ ಹಕ್ಕಿನ ಸ್ತಿರಾಸ್ತಿಗಳನ್ನು ಯೇಲಂಗೆ ಅಪೇಕ್ಷಿಸಿ ಮಾಡಿದ ಮೇಲಿನ ಅಮಲ್ಜಾರಿಯಲ್ಲಿ, ನೋಟೀಸಿನ ಬಗ್ಗೆ ತಾ. 13-8-62ಕ್ಕೆ ಇಟ್ಟಿರುತ್ತದೆ. ಆ ದಿವಸ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದಲ್ಲಿ ನಿಮ್ಮನ್ನು ಶಿಕ್ಷಾ ಮಾಡಿ ಯುಕ್ತಕಂಡಂತೆ ತಿರ್ಮಾನಿಸಲಾದೀತು.

Sd) M. Sadashiva Rao
Vakil for petitioner.

ಪುತ್ತೂರು, ತಾ. 26—7—62.

ಪುತ್ತೂರು ಡಿ. ಮು. ಕೋರ್ಟ್‌ನಲ್ಲಿ

S. C. 2/1962.

ಸೋಮಯ್ಯ ಗೌಡ —ವಾದಿ.
ಮುದ್ದ ನ್ಯಾಕ ಕೂಡಾ —ಪ್ರತಿವಾದಿರು.

1ನೇ ಪ್ರತಿವಾದಿ ಮುದ್ದ ನ್ಯಾಕ, ತಿಂಮ ನ್ಯಾಕರ ಮಗ, ಪುತ್ತೂರು ತಾಲ್ಲೂ, ಮುಂಡೆಕೋಲು ಗ್ರಾಮದ, ಮುಂಡೆಕೋಲು ಎಂಬಲ್ಲಿ-ಸದ್ರಿ ಪ್ರತಿವಾದಿಗೆ ಈ ಮೂಲ್ಕ ತಿಳಿಯಪಡಿಸುವುದೇನೆಂದ್ರೆ.—

ನೀವು ಕೂಡಾ 2 ಜನರ ಮೇಲೆ, ಗೇಣಿ ಬಾಕಿ ಬಗ್ಗೆ ವಾದಿರು ದಾಕ್ಲು ಮಾಡಿದ ಮೇಲ್ಕಂಡ ದಾವೆಯು ತಾ. 4—8—1962ಕ್ಕೆ ನಿಂಮ ಹಾಜರಾತಿ ಬಗ್ಗೆ ಇಟ್ಟಿರುವುದರಿಂದ ನೀವು ಸದ್ರಿ ದಿವಸ ಪೂರ್ವಾಹ್ನ ಘಂಟೆ 11 ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಹಾಜ್ರಾಗಿ ನಿಂಮ ಉದಾಹರಣೆಯನ್ನು ದಾಕ್ಲು ಮಾಡತಕ್ಕದ್ದು. ತಪ್ಪಿದ್ರೆ ನಿಂಮ ಗೈರು ಹಾಜರಿಯಿಂದ ಸದ್ರಿ ದಾವೆಯನ್ನು ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವುದು

(ಕೋರ್ಟ್ ಹುಕುಂ ಪ್ರಕಾರ)

Pundarik M. K.,
Advocate for Plaintiff.

ಪುತ್ತೂರು, 24—7—1962.

ಡಿ. ಎಂ. ಕೆ.ಯ

ಪ್ರತ್ಯೇಕತಾಭಾವವು ಗಂಡಾಂತರಕಾರಿ

ಸುಮಾರು ಎರಡು ವರ್ಷಗಳಿಗೆ ಮೊದಲು ಮದ್ರಾಸು ರಾಜ್ಯದಲ್ಲಿ ನಗರ ಸಭೆಗಳ ಚುನಾವಣೆಗಳು ನಡೆದುವು. ಒಟ್ಟು ಇದ್ದ ೪೨ ನಗರ ಸಭೆಗಳಲ್ಲಿ ೧೦ ಆಗಾಗಲೇ ಸ್ಥಾಪಿತವಾದುವುಗಳಾದುದರಿಂದ ಸ್ಥಳೀಯ ಹಿತಾಸಕ್ತಿಗಳಿಗೆ ತೊಂದರೆ ಮಾಡಬಾರದೆಂದು ಕಾಂಗ್ರೆಸ್ಸು ತನ್ನ ಹುರಿಯಾಳುಗಳನ್ನು ನಿಲ್ಲಿಸಲಿಲ್ಲ. ಉಳಿದ ೩೨ರಲ್ಲಿ ೨೫ ನಗರ ಸಭೆಗಳ ಆಡಳಿತ ದ್ರಾವಿಡ ಮುನ್ನೇತ್ರ ಕಳಗಂನ ಕೈಗಳಿಗೆ ಹೋಯಿತು. ರಾಜಧಾನಿ ಮದ್ರಾಸ ನಗರದ ಕಾರ್ಪರೇಶನ್ ಕೂಡ ಕಾಂಗ್ರೆಸ್ಸಿನ ಕೈಗಳಲ್ಲಿ ಉಳಿಯಲಿಲ್ಲ. ಇದರಿಂದ ಕಳಗಂ ತಮಿಳು ನಾಡಿನಲ್ಲಿ ತನ್ನ ಬೇರನ್ನು ಭದ್ರವಾಗಿ ಬಿಡಿಸುತ್ತಿದೆಯೆಂದು ತಿಳಿದು ಬರತೊಡಗಿತು. ಹಾಗಿದ್ದರೂ ಮದ್ರಾಸಿನ ನಾಯಕರಲ್ಲಿ ವಿವೇಕ ಉದಯಿಸಲಿಲ್ಲ; ಕಳಗಂ ನೀತಿಯನ್ನು ವಿರೋಧಿಸುವ ಗೊಡವೆಗೂ ಅವರು ಹೋಗಲಿಲ್ಲ ತತ್ಪರಿಣಾಮವಾಗಿ ಈ ವರ್ಷ ನಡೆದ ಸಾರ್ವತ್ರಿಕ ಚುನಾವಣೆಗಳಲ್ಲಿ ಕಾಂಗ್ರೆಸ್ ತನ್ನ ಬಲವನ್ನು ಕಳೆದುಕೊಳ್ಳುವ ಸ್ಥಿತಿಗೆ ಬಂದು ಸೇ. ೨೫ ಕ್ಕಿಂತಲೂ ಹೆಚ್ಚಿನ ಸ್ಥಾನಗಳನ್ನು ಡಿ.ಎಂ.ಕೆ.ಗಳಿಸಿರುವುದು. ಚುನಾವಣೆಗಳು ಜನಾಭಿಪ್ರಾಯವನ್ನು ಪ್ರತಿಬಿಂಬಿಸುತ್ತವೆ ಎಂಬ ಪ್ರಜಾ. ಸತ್ತೆಯ ನೀತಿಯನ್ನು ನಾವು ಒಪ್ಪುವುದಾದರೆ, ಮದ್ರಾಸದಲ್ಲಿ ಪ್ರತ್ಯೇಕತಾವಾದಿಕಳಂಗನ ಪ್ರಭಾವವು ದಿನದಿಂದ ದಿನಕ್ಕೆ ಹೆಚ್ಚುತ್ತ ಬರುತ್ತಿದೆಯೆಂದು ಹೇಳಬೇಕು.

ಚುನಾವಣೆಗಳ ಅಂತಿಮ ಫಲಿತಾಂಶವನ್ನು ಕೇಳಿದ ಮುಖ್ಯ ಮಂತ್ರಿ ನಾಡಾರರೂ ಒಮ್ಮೆಗೆ ವಿಸ್ಮಿತರಾದರೆಂದರೆ, ಉಳಿದವರ ಪಾಡೇನು? ಕಳಗಂ ಕಾರಭಾರು ಇನ್ನೂ ಒಂದೆರಡು ಚುನಾವಣೆಗಳ ವರೆಗೆ ಹೀಗೆಯೇ ಮುಂದುವರಿಯಬಹುದೆಂದರೆ, ಅಲ್ಲಿ ಅದು ಅಧಿಕಾರ ಗ್ರಹಣಮಾಡುವ ಸ್ಥಿತಿ ಬೆಳೆದು ನಿಲ್ಲುವುದು ಅಸಂಭವವಲ್ಲ. ಆದುದರಿಂದಲೇ ಇಂದು ಕಾಂಗ್ರೆಸ್ಸಿಗರಿಗೆ ಗಾಬರಿ ಮದ್ರಾಸದತ್ತ ಹೊರಳಿದೆ. ನಾಡಾರ ಮತ್ತು ಭಕ್ತವತ್ಸಲಂರವರೂ ಕೇಂದ್ರದ ಹೈಕಮಾಂಡಿ ಇದನ್ನು ಕುರ್ಚಿಸುವ ಯಂತ್ರವೂ ಆವುದೆಂದು ತಲೆಕೆರೆದು ಕೊಳ್ಳತೊಡಗಿದ್ದಾರೆ

ಹತ್ತು ವರ್ಷಗಳಿಗೆ ಮೊದಲು ಡಿ ಎಂ ಕೆಯ ರಚನೆಯಾಗಿತ್ತು ಆಗಿಲ್ಲವೆನ್ನುತ್ತಿರುವಾಗಲೇ ಮದ್ರಾಸದಲ್ಲಿ ಉತ್ತರ ವಿರೋಧೀ ಭಾವನೆಯು ಹುಟ್ಟಿಕೊಂಡಿತು. ಉತ್ತರ ಭಾರತ ದವರು-ಬ್ರಾಹ್ಮಣರು-ದಕ್ಷಿಣದವರ ಮೇಲೆ ಅಧಿಕಾರ ಚಲಾಯಿಸುತ್ತಿದ್ದಾರೆ ಎಂಬ ಭಾವನೆಯನ್ನು ಅದು ಜನತೆಯಲ್ಲಿ ಬೀರತೊಡಗಿತು. ಆಕಾಶವಾಣಿ-ಬಾನುಲಿಗಳ ಪ್ರಕಟಣದಿಂದ ಕಳಗಂ ಸಂಸ್ಕೃತ ಭಾಷೆಯನ್ನೂ ಪ್ರತಿಭಟಿಸುತ್ತಿದೆಯೆನ್ನಬಹುದು. ಅಂದು ಸಾಮಾನ್ಯ ರೀತಿಯ ಕುಚ್ಚು ನಿರೋಧವೆಂದು ತಿಳಿದಿದ್ದ ಕಾಂಗ್ರೆಸ್ ನಾಯಕರು; ಇಂದು ಅದು ಪ್ರತ್ಯೇಕತಾವಾದದ ಮೂಲಮಂತ್ರವೆಂದು ತಿಳಿಯುವಂತಾಗಿದೆ. ನಾನಾ ಪ್ರಕಾರದ ವ್ಯಕ್ತ ಪ್ರದರ್ಶನಗಳಲ್ಲಿ ತಳೆಯುವ ನೀತಿಯನ್ನು ವೀಕ್ಷಿಸುವಾಗ, ದ್ರವಿಡ ಸ್ಥಾನದ ಕಲ್ಪನೆಯನ್ನು ಮೂರ್ತರೂಪಕ್ಕೆ ತರುವಲ್ಲಿ ಇವರು ಸಮರ್ಥರಾದಾರು ಎಂಬುದಕ್ಕೆ ಅವಕಾಶವಿದೆ. ಆದುದರಿಂದಲೇ ರಾಷ್ಟ್ರೀಯ ಐಕ್ಯ ದೃಷ್ಟಿಯಿಂದ, ದೇಶವನ್ನು ವಿಭಜಿಸಗೊಳ್ಳದಂತೆ ನೋಡುವುದು ಅತ್ಯವಶ್ಯವಾದುದರಿಂದ, ಕಾಂಗ್ರೆಸ್ಸು ಕಳಗಂನ ನಾಮಾವಶೇಷಕ್ಕೆ ಕಟಿಬದ್ಧವಾಗಬೇಕಾಗಿದೆ.

ರಾಮಸ್ವಾಮಿ ನಾಯ್ಕರರು ಹೊತ್ತಿಸಿದ ಕಳಗಂ ಕಿಡಿಯು ಇಂತಹ ಬ್ರಹದ್ರೂಪ ತಾಳುವುದೆಂದು ಮುಖ್ಯ ಮಂತ್ರಿ ನಾಡಾರರು ಕನಸಿನಲ್ಲಿಯೂ ಊಹಿಸಿರಲಿಲ್ಲ. ಕಳಗಂ ಪ್ರ ಕಾರ್ಯಕ್ರಮಗಳಿಂದ ತಾವು ಅಸ್ಪೃಶ್ಯವಾಗಿ ಲಾಭಪಡೆಯಬಹುದು ಎಂದವರು ಆಗ ತಿಳಿದು ಸಮ್ಮನೆಯೇ ಇದ್ದರು. ಮದ್ರಾಸಿನಲ್ಲಿ ನಾಡಾರರು ಅನುಭಸಿಕ್ತ ಚಕ್ರವರ್ತಿಗಳಿಸಿದ್ದೂ ಅವರು ಕೈಕಟ್ಟಿ ಕುಳಿತಿರುವಾಗ, ಇತರರು ಮಾಡುವುದಾರೂ ಏನು? ಆದರೆ, ಈವುದು ತಮ್ಮ ಪ್ರಭಾವವನ್ನು ಹೆಚ್ಚಿಸಲು, ಸಹಕಾರಿಯಾಗುವುದೆಂದು ತಿಳಿದಿದ್ದರೋ ಅದುವೇ ಇಂದು ಮೂರಕವಾಗಿದೆಯೆನ್ನುವಾಗ, ಅವರುವರೂ ಸುಮ್ಮನಿಳಿಯುವಂತಿಲ್ಲ. ಆದುದರಿಂದಲೇ ಅವರೀಗ ಮಾತಾಡ ತೊಡಗಿದ್ದಾರೆ. ಇತ್ತೀಚೆಗೆ ಮದ್ರಾಸ ರಾಜ್ಯದ ಹಲವೆಡೆ ಕಳಂ ನಡೆಸಿದವುತ ಪ್ರದರ್ಶನವನ್ನು ಬಲವಾಗಿ ಖಂಡಿಸ ತೊಡಗಿದ್ದಾರೆ.

ಕಳಗಂ ಬಲಿಯುವಂತೆ ಮಾಡುವಲ್ಲಿ ಕಾಂಗ್ರೆಸ್ಸಿನ ಕೈವಾಡವೂ ಇದೆಯೆನ್ನಲಾಗುತ್ತಿದೆ. ಕಳಗಂನ ಸಮರ್ಥಕರಲ್ಲಿ ಕಾಮರಾಜರು ಒಬ್ಬರೆಂದೂ, ಆಡಳಿತೆಯ ಯಂತ್ರದಲ್ಲಿ ಕಳಗಂ ಮನೋಭಾವದವರಿಗೆ ಅವಕಾಶ ಕಲ್ಪಿಸಿಕೊಟ್ಟುದರಿಂದ,ಇಡಿಯ ಆಡಳಿತೆಯಲ್ಲಿ ಕಳಗಂ ವಿಷಗಾಳಿ ಹರಡಿದೆಯೆಂದೂ ಹೇಳುತ್ತಾರೆ. ಆದುದರಿಂದಲೇ ಕಳಗಂನ ಕಾರ್ಯನೀತಿಯು ಯಾವ ಆಡೆತಡೆಗಳನ್ನೂ ಗಮನಿಸದೆ ಯಥಾ ಸಾಂಗವಾಗಿ ಮುಂದುವರಿಯುತ್ತಿದೆಯೆಂದೂ ಅಭಿಪ್ರಾಯ ಪಡುತ್ತಾರೆ. ಇದು ಹೌದಾದರೆ, ಮದ್ರಾಸಿನ ಕಾಂಗ್ರೆಸಿಗರು ತಾವು ಆಟ್ಟಿದ್ದನ್ನೀಗ ಉಣ್ಣತೊಡಗಿದ್ದಾರೆ ಎಂದರೆ ಅತಿಶಯವಾಗದು.

ಆದೇನೇ ಇದ್ದರೂ ತಮಿಳು ನಾಡಿನಲ್ಲಿ ಕಳಗಂ ಮಾಡುತ್ತಿರುವ ಕಾರ್ಯಕಲಾಪಗಳು ನೆಹ್ರುವರ್ ಸ್ಪೈಟಿಗೆ ಗೌರವ ತರುವಂತಹುವಲ್ಲ. ಆದುದರಿಂದ ಉಗ್ರ ಕ್ರಮಗಳನ್ನು ಕೈಗೊಂಡು ಅವನ್ನು ಪ್ರತಿಬಂಧಿಸದೆ ಹೋದರೆ, ಜನತೆಯು ವಿತ್ತ ಜೀವಿತಗಳಿಗೂ ಸಂಚಕಾರ ಬರುವ ದಿನಗಳು ದೂರವಿಲ್ಲ ಪರ್ಯಾಯ ಶಕ್ತಿಗಳು ಕೂಡ ಅಂತಾಷ್ಟ್ರೀಯ ಪ್ರತ್ಯೇಕತಾವಾದದಿಂದ ಪ್ರಭಾವಿತವಾಗಿವೆಯೆನ್ನುವಾಗ, ಕೇರಳದಲ್ಲಿ ಕಮ್ಯೂನಿಸ್ಟರು ಅಧಿಕಾರದಲ್ಲದ್ದಾಗ ಎಸಗಿದ ಕಾರುಬಾರುಗಳು ನೆನಪಿಗೆ ಬರುತ್ತವೆ. ಇಲ್ಲಿಯಾದರೂ ಸರಕಾರದ ವಿವಿಧ ವಿಭಾಗಗಳಲ್ಲಿ ಕಳಗಂ ನೀತಿಯ ಪ್ರವೇಶವಾಗಿದ್ದಾರಂತೆ. ಅವರೆಲ್ಲರ ಮನಸ್ಸನ್ನು ಉಪಾಯೋಪಾಕರದಿಂದ ಪರವರ್ತಿಸುವ ಪ್ರಯತ್ನವನ್ನು ಈಗ ಮಾಡಬೇಕಾಗದೆ. ಒಂದು ಕಾಲದಲ್ಲಿ ಕೇಂದ್ರ ಸರಕಾರದ ರಾಜೆಗಳಲ್ಲಿ ಜನಸಂಘದ ನೀತಿಯ ಪ್ರಭಾವವಿದ್ದು ಆದನ್ನಿಂದು ಪ್ರಯತ್ನಗೊಳಿಸಲಾಗಿದೆ ಪೌಷ್ಯ ವಿಧಾನಗಳಿಂದ ಮದ್ರಾಸದಲ್ಲಿಯೂ ರಾಷ್ಟ್ರೀಯತೆಯ ಮನೋಭಾವವನ್ನು ಪುನರುಸ್ಥಾಪಿಸುವ ಸಾಧನೆ ಮಾಡುವುದು ಉಚಿತವೆಂದು ಹೇಳಲಾಗುತ್ತದೆ.

ಇನ್ನು ಒಂದು ವೇಳೆ ಉಗ್ರೋಪಾಯವನ್ನು ಕೈಗೊಳ್ಳುವುದು ಅನಿವಾರ್ಯವೆನಿಸಿದರೂ ಕ್ರಿಮಿನಲ್ ಪ್ರೊಸೀಜರಿಗೆ ಇತ್ತೀಚೆಗೆ ಮಾಡಲಾದತಿದ್ದುಪಡಿಗಳಿಂದ, ಅ ರಾಷ್ಟ್ರೀಯತೆಯತೆಯೂ ಒಂದು ಆಪಾಧನೆ ನಿಸುವುದು. ಆದುದರಿಂದ ಮದ್ರಾಸ ಸರಕಾರವು ದೃಢ ನೀತಿಯೊಂದನ್ನು ನಿಶ್ಚಿಸಿ ಕಳಗಂ ಕಾರುಭಾರನ್ನು ನಿಲ್ಲಿಸುವುದು ಇಂದು ಅತ್ಯವಶ್ಯವಿರುತ್ತದೆ.

ಕಳಗಂ ತನ್ನ ಪ್ರಭಾವವು ಆಂಧ್ರ, ಕರ್ನಾಟಕ ಕೇರಳಗಳಲ್ಲಿಯೂ ವಿಲಯ ಸಿಂಹಳಗಳಲ್ಲಿಯೂ ಇದೆಯೆನ್ನುತ್ತಿದೆ. ಮಲಯದಲ್ಲಿ ಆದೊಮ್ಮೆ ಮತಪ್ರದರ್ಶನವನ್ನೂ ವಿಸರ್ಜಿಸಿತ್ತು. ಸಿಂಹಳದಲ್ಲಿ ಡಿ ಎಂ ಕೆಗೆ ಮುಟ್ಟುಗೋಲು ಬಿದ್ದಿದೆ ಕೇರಳ ಮತ್ತು ಆಂಧ್ರಗಳಲ್ಲಿ ಕಳಗಂ ಕಳೆಗುಂದಿದೆ. ಕರ್ನಾಟಕ ಬೆಂದ ಗಳೂರಿನ ತಮಿಳು ಜನ ಹೆಚ್ಚಿರುವ ಪ್ರದೇಶದಲ್ಲಿ ಆದೊಂದು ಪ್ರದರ್ಶನವನ್ನು ನಡೆಸಿತ್ತು. ಆದರೆ, ಆದರೊಡನೆಯೇ ಕಳಗಂ ಕೂಡ ಕಂಬಿ ಕಿತ್ತಿದೆ. ಆದುದರಿಂದ ಪ್ರತ್ಯೇಕ ದ್ರವಿಡ ನಾಡಿನ ಬೇಡಿಕೆಯನ್ನು ಮಾಡುತ್ತಿರುವ ಕಪ್ಪು ಕಳಗಂ ಗುಂಪು ಕೆಂಪು ಕಮ್ಯೂನಿಸ್ಟರಿಗಿಂತಲೂ ಮುಂದುವರಿದಿದೆ. ಇವರ ಬೇಡವನ್ನು ಈಗಲೇ ಕೆತ್ತು ನಷ್ಟ ಮಾಡದೆ ಹೋದರೆ, ದೇಶದ ಐಕ್ಯಕ್ಕೆ ಅವಾಂತರ ತಟ್ಟುವುದು ಖಂಡಿತ. ರಾಜ್ಯ ಮತ್ತು ಕೇಂದ್ರ ಸರಕಾರಗಳು ಕಳಕಳಿ ವಹಿಸಿ ಹೀಗಾಗದಂತೆ ನೋಡಿಕೊಳ್ಳುವುದು ಆಗತ್ಯ.

ಕಾಸರಗೋಡಿನ ಭವಿಷ್ಯ ಲೇಖನ

(ಎನೇ ಮುಟದಿಂದ)

ತ್ಪಾದನಾ ಸಾಮರ್ಥ್ಯವನ್ನು ಹೆಚ್ಚಿಸಲು ಅನಿವಾರ್ಯವಾಗಿ ಬೇಕಾಗಿರುವುದರಿಂದ ಬರಿ ಪೊರೆಯೋಜನೆಯನ್ನು ಸದ್ಯ ಕೈಗೊಳ್ಳುವುದಿಲ್ಲವೆಂದು ಶ್ರೀ ನಿಜಲಿಂಗಪ್ಪನವರು ಶ್ರೀ ನಿಳೈಯವರಿಗೆ ಸ್ಪಷ್ಟಪಡಿಸಿದ್ದಾರೆ

ಆದೇನೇ ಇದ್ದರೂ ಇನ್ನೂ ಒಂದು ಪ್ರಶ್ನೆಯಿದೆ. ರಾಜ್ಯ ಸರಕಾರಕ್ಕೆ ಬೇಕಾಗುವ ಎಲ್ಲ ಪ್ರಮಾಣದ ಆರ್ಥಿಕ ನೆರವನ್ನು ಕೇಂದ್ರವು ಕೊಡುವುದಾದರೆ, ಈ ಯೋಜನೆಯನ್ನು ಕೈಗೊಳ್ಳಲು ಕರ್ನಾಟಕವು ಸಿದ್ಧವಿದೆ. ಆದರೆ, ಇದು ಎಷ್ಟರ ಮಟ್ಟಿಗೆ ಸಾರ್ಥಕವಾಗುವುದೆಂಬುದನ್ನು ಭವಿಷ್ಯವೇ ನಿರ್ಧರಿಸಬೇಕು. ಬರೆಪೊರೆಯೋಜನೆಯನ್ನು ಕೈಗೊಳ್ಳಬೇಕೆಂದು ಕೇಂದ್ರ ವಿಭಾಗದ ರಾಜ್ಯವಿದ್ದಾಗ ಕೊಡಗು ಸರಕಾರ ಯೋಚಿಸಿತ್ತು. ಮುಂದೆ ಆ ಸರಕಾರ ನಿರ್ಮೂಲವಾದುದರಿಂದ ಅದರ ಜವಾಬ್ದಾರಿಯೆಲ್ಲವನ್ನೂ ಕರ್ನಾಟಕ ಸರಕಾರವು ವಹಿಸಿಕೊಳ್ಳಬೇಕಾಗಿ ಬಂತು.

— —

ಹೊಸ ಪುಸ್ತಕ—

'ನಚಿಕೇತ'ರ

ನವೀನ ಕಾದಂಬರಿ—

ಹಸುರು ಹಂಸ

ಇದೀಗ ಪ್ರಕಟವಾಗಿದೆ.

ಬೆಲೆ: ರೂ. ಎರಡು.

ವಿಚಾರಿಸಿರಿ.

ನವಯುಗ ಸ್ಟೋರ್ಸ್, ಉಡುಪಿ.

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ರೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯತ್ತಮವೆಂದು ಪರಿಗಣಿಸಿರುವರು. ಪ್ರತಿಯೊಬ್ಬ ರೇವಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿಹೊಂದುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ವಿಜಯ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್:— ವಿಜಯ ಬೇಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡ್,
Estd. 1931. — ಮಂಗಳೂರು—3
Phone No. 240.

LIFE INSURANCE CORPORATION OF INDIA

Western Zone

Re:- Policy No. 243305.

Notice having been given of the loss of Policy numbered 243305 on the life of Kananjar Sadashiva Hegde issued by Unit, Empire of India Life Assurance Co., 214, D. Naoroji Road, Fort, Bombay.

Duplicate Policy will be issued unless objection is loged with us within one month from this date.

D. K. VOHRA
Asst. Divisional Manager.
Bombay, 28-7-1962

ವಿವಾಹದ ರೋಚಕ ಪ್ರಣಾಳಿಗಳು

(೩ನೇ ಪುಟದಿಂದ)

ಮರಳುವುದಿಲ್ಲ. ಈ ವಿವಾಹಕ್ಕೆ ನಿಶ್ಚಿತ ಕ್ರಮವಾಗಲಿ, ಕನ್ಯಾ-ವರ ಶುಲ್ಕವಾಗಲಿ ಇರುವುದಿಲ್ಲ. ಬಿಹಾರದ ಆದಿವಾಸಿಗಳಲ್ಲಿ ಯೂ ಇಂಜಸ್ತಾನದ ಭೀಲರಲ್ಲಿಯೂ ವೈವಾಹಿಕ ಕ್ರಮವು ಪ್ರಚಲಿತವಿದೆ ಈಗೀಗ ಗಾಂಧರ್ವ ವಿವಾಹವು ಇತರರಲ್ಲಿಯೂ ಹೆಚ್ಚುತ್ತ ಬಂದಿದೆ.

ಬಲಾತ್ಕಾರೇಣ ವಿವಾಹ

ವಧುವು ವರನ ನುನೆಯನ್ನು ತಾನೇ ಬಲಾತ್ಕಾರದಿಂದ ಹೋಗುವಂತೆ ಮಾಡುವ ವಿವಾಹವಿದು ಆಕೆಯನ್ನು ಪ್ರೇಮಿಯ ಮನೆಯವರು ನಾನಾ ರೀತಿಯಿಂದ ಆಪಮಾನಿಸುತ್ತಾರೆ; ನಿಂದಿಸುತ್ತಾರೆ. ಹಾಗಿದ್ದರೂ ಯುವತಿಯು ಪ್ರೇಮಿಯ ಮನೆ ಬಿಡುವುದಿಲ್ಲ. ಕೊನೆಗೆ ಅವರಿಬ್ಬರ ಮದುವೆಯಾಗುತ್ತದೆ. ಯುವತಿಯು ಯುವಕನ ಮೇಲೆ ಅನುರಕ್ತೆಯಾಗುತ್ತಾಳೆ; ಆದರೆ ಅವರ ಮದುವೆ ನಡೆಯುವ ಸಂಭವ ವಿಲ್ಲವೆಂದಾದಾಗ, ಆಕೆಯು ಹುಡುಗನ ಮನೆಯನ್ನು ಬಲತ್ಕಾರದಿಂದ ಪ್ರವೇಶಿಸುತ್ತಾಳೆ. ಗಾಂಧರ್ವವಿವಾಹದ ಮೊದಲ ಹಂತದಂತೆ ಸ್ತ್ರೀ ಪುರುಷರು ಪರಸ್ಪರ ಪ್ರೇತಿಸಿದರೂ ದೂರ ವೋಡಲು ಹೆದರುವುದಾದರೆ, ನಾರಿಯು ಬಲಾತ್ಕಾರವೇಶ ವಿವಾಹದ ಆಶ್ರಯ ಪಡೆಯುತ್ತಾಳೆ. ಈತೆರದ ವಿವಾಹವಾಗಬಯಸುವ ಯುವತಿಯು ಮೊದಲು ತನ್ನ ಹೆತ್ತವರಿಗೆ ಸಂಗತಿ ತಿಳಿಸುತ್ತಾಳೆ. ಅವರು ಯುವಕನ ತಂದೆ ತಾಯಿಗಳೊಡನೆ ಮಾತನಾಡಿ ಅದನ್ನು ಸಾಧಿಸುವ ಪ್ರಯತ್ನ ಮಾಡುತ್ತಾರೆ. ಆದರೆ, ಅವರ ಪ್ರಯತ್ನವು ನಿಷ್ಫಲವಾಯಿತೆಂದರೆ, ಮಗಳಿಗೆ ಆಕೆಯ ಇಚ್ಛೆಯಂತೆ ನಡೆಯುವ ಸ್ವಾತಂತ್ರ್ಯವನ್ನು ಕೊಟ್ಟು ಬಿಡುತ್ತಾರೆ. ಬಲಾತ್ಕಾರೇಣ ಗೆಯ್ಯವಾಗಿ ಯುವಕನ ತಾಯ್ತಂದೆಯವರು ಆಕೆಯನ್ನು ಹೊಡೆಯುವುದುಂಟು, ಬಯ್ಯುವುದುಂಟು, ಯುವತಿಯೂ ಸುಮ್ಮನಿರುವುದಿಲ್ಲ; ಅವಕ್ಕೆ ಪ್ರತೀಕಾರ ಮಾಡಿಯೇ ತೀರುತ್ತಾಳೆ. 'ನಿಮ್ಮ ಹುಡುಗ ನನ್ನನ್ನು ಕೆಡಿಸಿಬಿಟ್ಟಿದ್ದಾನೆ' ಎಂದು ದೂರುತ್ತಾಳೆ. ಹೀಗೆ ಭಾವೀ ಅತ್ತೆ-ಸೊಸೆಯರ ರಾಗವು ಪರಾಕಾಷ್ಠೆಯನ್ನು ತಲುಪಿದಾಗ, ನೆರೆಹೊರೆಯವರು ಮಧ್ಯ ಸ್ಥಿಕೆಗೆ ಬರುತ್ತಾರೆ ಸಂಬಂಧಿಕರೂ ಇಕ್ಕಡೆಯವರ ಕೋಪಾಗ್ನಿಯನ್ನು ತಣಿಸಲು ಮುಂದಾಗುತ್ತಾರೆ; ಅಂತೂ ಬಹು ಪ್ರಯತ್ನ ಮೂಡಿ ವಿವಾಹವನ್ನು ನಿಶ್ಚಯಿಸುತ್ತಾರೆ. ಏನಿದ್ದರೂ ಅತ್ತೆ ಸೊಸೆಯರಲ್ಲಿ ಸರಸವು ವಾಶ್ರ ಹುಟ್ಟುವುದಿಲ್ಲ.

ಪರೀಕ್ಷಾತ್ಮಕ ವಿವಾಹ

ಯುವಕನಿಗೆ ತನ್ನ ಪ್ರೇಮಿಯು ಮನೆಯಲ್ಲಿ ಕೆಲವೊಂದು ದಿನ ಉಳಿಯುವ ಅವಸರವೊಡಗಿದ ವಿವಾಹ ಪ್ರಣಾಳಿಯಿದು. ಈ ಅವಧಿಯಲ್ಲಿ ಇಬ್ಬರೂ ಪರಸ್ಪರರನ್ನು ಅರ್ಥಮಾಡಿಕೊಂಡರೆ, ಒಬ್ಬರಿಂದೊಬ್ಬರು ತೃಪ್ತರಾದರೆಂದರೆ, ಪರೀಕ್ಷಣಾವಧಿಯು ಮುಗಿದ ಬಳಿಕ ಅವರಿಬ್ಬರ ವಿವಾಹವು ನಡೆಯುವುದು. ಯುವಕ ಯುವತಿಯರಲ್ಲಿ ಒಮ್ಮತವಾಗದೆ ಹೋದರೆ, ಈ ಮದುವೆ ನಡೆಯುವುದಿಲ್ಲ. ಯುವಕನು ಯುವತಿಯ ತಂದೆಗೆ ತುಸು ದಂಡವನ್ನು ತೆರಬೇಕಾಗುವುದು. ಅನ್ಯಾನುದೇಶಗಳಲ್ಲಿ ಈಮೂದರಿಯು ವಿವಾಹಕ್ರಮವು ವಿಶೇಷವಾಗಿದೆ.

ಪರೀಕ್ಷಾ ವಿವಾಹ

ಪರೀಕ್ಷಾ ವಿವಾಹದಲ್ಲಿ ವಧುವಿನ ಕಡೆಯವರು ವರನಾಗುವವನ ಸಾಹಸ ಮತ್ತು ಶೌರ್ಯಗಳ ಪರೀಕ್ಷೆ ನಡೆಸುವರು. ಇದರಲ್ಲಿ ಸಫಲನಾದರೆ ಮಾತ್ರ ಆ ವಧುವಿನೊಡನೆ ವಿವಾಹವು ನಡೆಯುವುದು. ಜನಕನ ಮಗಳು ಸೀತೆ ಮತ್ತು ರಾಮರ ವಿವಾಹವು ಈ ಮೂದರಿಯದು. ಅರ್ಜುನ-ದ್ರೌಪದಿಯವರದೂ ಇಂತಹುದೇ. ಗುಜರಾತಿನ ಭೀಲರಲ್ಲಿ ಈ ವಿವಾಹ ಪ್ರಣಾಳಿಯಿದೆ. ಇವರ ಮದುವೆ ಕ್ರಮವು ವಿಲಕ್ಷಣವಾದುದು. ಹೋಳಿಯ ಸಮಯ ನಡೆಯುವ ಜನಪದ ನೃತ್ಯಗಳಲ್ಲಿ ಒಂದು ಬಿದಿರಿನಲ್ಲಿ ಇಳ್ಳುವೇ ಮರದಲ್ಲಿ ಬೆಲ್ಲ ಮತ್ತು ತೆಂಗಿನಕಾಯಿಗಳನ್ನು ಕಟ್ಟಿಡುತ್ತಾರೆ. ಅದನ್ನು ನಾಲ್ಕೂ ದಿಕ್ಕುಗಳಿಂದ ಯುವತಿಯರು ಆವರಿಸಿರುತ್ತಾರೆ. ಹೊರಸುತ್ತಿನಲ್ಲಿ ಪುರುಷರು ನರ್ತಿಸುತ್ತಾರೆ. ಒಳಸುತ್ತಿನಲ್ಲಿ ತೂಗು ಹಾಕಿದ ಬೆಲ್ಲ ತೆಂಗುಗಳನ್ನು ವಶಮಾಡಿಸಿಕೊಳ್ಳುವವನು ಅದೃಷ್ಟ ಯುವತಿಯ ರಲ್ಲಿ ಬೇಕಾದವಳೊಬ್ಬಳಿಕೆಯನ್ನು ವರಿಸಬಹುದಾಗಿದೆ.

ಮೇಲೆ ಹೇಳಿದ ವಿವಾಹ ಕ್ರಮಗಳಲ್ಲದೆ ಇನ್ನೆರಡು ಪ್ರಕಾರದಲ್ಲಿ ಮಡದಿಯನ್ನು ತಂದುಕೊಳ್ಳಬಹುದು. 'ನಿಯೋಗ' ವೆಂಬುದು ಇವುಗಳಲ್ಲಿ ಮೊದಲನೆಯದು ಹಿಂದೂ ಧಾರ್ಮಿಕ ಗ್ರಂಥಗಳಲ್ಲಿಯೂ ನಿಯೋಗದ ಉಲ್ಲೇಖವಿದೆ. ಒಬ್ಬಾಕೆಯ ಪತಿಯು ತೀರಿಹೋದನೆಂದರೆ, ಆಕೆಯು ತನ್ನ ವೈದುನನನ್ನು ಸಂತಾನ ಪ್ರಾಪ್ತಿಗಾಗಿ ಕೂಡಬಹುದಿತ್ತು. ಸಂತಾನ ಪ್ರಾಪ್ತಿಯಾದ ನಂತರ ಸಂಪರ್ಕವಿರಿಸಿಕೊಳ್ಳುವುದು ಅನುಚಿತ. ಆದರೆ, ಆದಿವಾಸಿಗಳಲ್ಲಿ ಅತ್ತಿಗೆಯನ್ನು ನ್ಹಾಥಿಯಂಗಿ ತನ್ನ ಪತ್ನಿಯನ್ನಾಗಿ ವರಿಸುವ ಸಂಪ್ರದಾಯವೂ ಇದೆ

ಸೋದರ ಸೊಸೆಯನ್ನು ವಿವಾಹ ವಾಗುವುದು ಇನ್ನೊಂದುಪ್ರಕಾರದ ಮದುವೆ. ಒಬ್ಬಾತನ ಮಡದಿ ಸತ್ತು ಹೋದರೆ, ಆತನು ಸೋದರ ಸೊಸೆಯನ್ನು ಮದುವೆಯಾಗಬಹುದು. ಗೊಂಡ ಜಾತಿಯವರು ಹಿಂದುಗಳಂತೆ, ಗಂಡಿನ ಕಡೆಯವರು ಹೆಣ್ಣಿನ್ನು ಹುಡುಕುವುದಿಲ್ಲ; ಹೆಣ್ಣಿನ ಕಡೆಯವರೇ ಗಂಡರಸಬೇಕಾಗುತ್ತದೆ. ಗಂಡೇ ಹೆಣ್ಣು ಕೇಳುತ್ತ ನಡೆಯುವುದು ಅಪಮಾನವೆಂದು ಅವರು ತಿಳಿಯುತ್ತಾರೆ.

ಸರಸತೆಯ ಪೊನಲು

ಸಮಾಜ ದರ್ಪಣ — ಸಾಹಿತ್ಯ

ಆನು: ಶ್ರೀ ಎನ್. ನಾರಾಯಣ ಬಲ್ಲಾಳ.

ಪರಮಾತ್ಮನ ಸೃಷ್ಟಿಯ ವಿಕಾಸನಾದ ಸಿದ್ಧಾಂತಗಳ ಮೇಲೆ ಆಧಾರಿತವಾಗಿವೆ. ಮೊದಲು ಚಿಕ್ಕದಾದ ಬೀಜ ಉಂಟಾಗುತ್ತದೆ. ಆದರೆ ಆದರಲ್ಲೇ ಒಂದು ದೊಡ್ಡ ವೃಕ್ಷವನ್ನು ಉತ್ಪನ್ನ ಮಾಡುವ ಶಕ್ತಿ ಅಡಗಿರುತ್ತದೆ. ಯಾವ ವೃಕ್ಷವು ಒಂದು ಬೀಜದಿಂದ ಉತ್ಪನ್ನವಾಗುವುದೋ, ಅದೇ ಆ ಬೀಜಗಳಂತಹ ಅನ್ಯ ನೂರಾರು ಬೀಜಗಳನ್ನು ಉತ್ಪತ್ತಿ ಮಾಡಬಲ್ಲುದಾಗಿದೆ. ಇದೇ ಸಿದ್ಧಾಂತ ವಿಕಾಸವಾದದ ವಿಷಯವಾಗಿದೆ. ನಿಜವಾಗಿ ಭೌತಿಕ ಸೃಷ್ಟಿಯಂತೆ ನಮ್ಮ ಸಾಮಾಜಿಕ ಜೀವನದಲ್ಲೂ ಈ ಕ್ರಮ ನಡೆಯುತ್ತಾ ಬರುತ್ತಿದೆ

ಮೊತ್ತಮೊದಲು ಮನುಷ್ಯ ಆರಂಭ್ಯತಹಾಗೂ ಕಾಡಿನಲ್ಲಿ ವಾಸಿಸುವವನಾಗಿದ್ದ, ಪ್ರಾಕೃತಿಕ ಪರಿಸ್ಥಿತಿಗಳನುಕೂಲವಾಗಿ ಅವನಲ್ಲಿ ಪರಿವರ್ತನೆ ಆಗುತ್ತಲೇ ಇತ್ತು. ಹೊಸ ಹೊಸ ಸ್ಥಿತಿಗಳಿಂದಾಗಿ ಬುದ್ಧಿಯ ಮೂಲಕ ನವೀನ ಆವಿಷ್ಕಾರಗಳೂ ಆಗುತ್ತಾ ಬಂದವು. ಯಾವ ರೀತಿ ಮನುಷ್ಯ ತನ್ನ ಸುಖ-ದುಃಖಿಯೊಡನೆ ಇತರರ ಅಧಿಕಾರದ ಕಡೆಗೂ ಧ್ಯಾನವೀಯತೊಡಗಿದನೋ, ಅಷ್ಟೇ ಹೆಚ್ಚು ಸಭ್ಯನೆಂದು ತಿಳಿಯತೊಡಗಿದ ಈ ನಾಗರಿಕತೆಯು ವಿಕಾಸದಲ್ಲಿ ಬ.ದ್ಧಿಯು ಹೆಚ್ಚಿನ ಕೆಲಸವೂಡಿತು ಕಾರಣ ಸಮಾಜದೊಡನೆ ಸಾಹಿತ್ಯದ 'ಅನ್ಯೋನ್ಯ ಸಂಬಂಧ'ವಾಯಿತು. ಯಾವ ರೀತಿ ಮನುಷ್ಯನ ಶಾರೀರಿಕ ಸ್ಥಿತಿಯು ಆಯಾ ದೇಶದ ಜಲವಾಯುವಿನ ಮೇಲೆ ನಿರ್ಭರವಾಗಿರುತ್ತದೋ ಅದೇ ರೀತಿ ಸಮಾಜದ ಬುದ್ಧಿಯು ಬೆಳೆಯುವುದು ಆಥವಾ ಬಿಗಡಾಯಿಸುವುದು ಕೂಡಾ ಸಾಹಿತ್ಯದ ಅನುಕೂಲತೆಯ ಮೇಲೆ ಆಧಾರಿತವಾಗಿರುತ್ತದೆ. ಸಮಾಜದ ಭಾವಗಳೇ ಕವಿಯ ಸಾಹಿತ್ಯದ ಅಭಿರಗಳಾಗುತ್ತವೆ. ಆದುದರಿಂದ ಸಾಹಿತ್ಯ ಸಮಾಜದ ಒಂದು ಪ್ರಧಾನ ಅಂಗವಾಗುತ್ತದೆ. ಯಾವ ರೀತಿ ಶರೀರಕ್ಕೆ ಉತ್ತಮ ರೀತಿಯ ಭೋಜನದ ಅವಶ್ಯಕತೆಯಿವೆಯೋ, ಅದೇ ಪ್ರಕಾರ ಸಮಾಜಕ್ಕೂ ಸುಂದರ ಸಾಹಿತ್ಯವು ಕೂಡಾ ಅನಿವಾರ್ಯವಾಗಿದೆ.

ಪ್ರಕೃತಿಯ ಪ್ರಭಾವವು ಮನುಷ್ಯನ ವಿಚಾರಗಳ ಮೇಲೆ ಅವಶ್ಯವಾಗಿ ಬೀಳುತ್ತದೆ. ಶೀತಲ ಪ್ರದೇಶಗಳಲ್ಲಿ ವಾಸಿಸುವ ಜನರು ಆಧಿಕ ಪರಿಶ್ರಮ ಹಾಗೂ ಆಧಿಕ ಸಂಘರ್ಷ ಮಾಡಬೇಕಾಗುತ್ತದೆ. ಆದುದರಿಂದ ಇಲ್ಲಿಯ ಜನರು ಒಂದೊ ಭೋಗ ವಿಲಾಸದಲ್ಲಿ ತಲ್ಲೀನರಾಗುತ್ತಾರೆ ಇಲ್ಲದಿದ್ದರೆ ಸಾಂಸಾರಿಕ ವಿಷಯಗಳ ಚಿಂತೆಗೊಳಗಾಗದೆ ಆಧ್ಯಾತ್ಮವಾದದ ಕಡೆಗೆ ಬಾಗುತ್ತಾರೆ. ಭಾರತದ ಪ್ರಾಚೀನ ಯುಗ ಇದರ ಜ್ವಲಂತ ಉದಾಹರಣೆಯೊಂಗಿ ಉಳಿದಿದೆ. ಇಲ್ಲಿಯ ಸಾಹಿತ್ಯ ಕೂಡಾ ಧರ್ಮ ಪ್ರಧಾನ ಯೂ ಶೃಂಗಾರ ಪ್ರಧಾನವಾಗಿಯೇ ಉಳಿದಿದೆ. ಈ ರೀತಿ ಸಮಾಜದಲ್ಲಿ ಯಾವ-ಯಾವ ಪರಿಸ್ಥಿತಿ ಉಂಟಾಯಿತೋ, ಅದೇ ಪ್ರಕಾರ ನಮ್ಮ ಸಾಹಿತ್ಯವೂ ಆಯಿತು ಎಂದು ಸಿದ್ಧವಾಗುತ್ತದೆ. ವಸ್ತುತಃ 'ಸಾಹಿತ್ಯ ಸಮಾಜದ ದರ್ಪಣ" ಆಗಿದೆ. ಈ ಉಕ್ತಿಯು ಅಕ್ಷರಶಃ ಸತ್ಯವಾಗಿದೆ.

ಧಾರ್ಮನಿಕತೆ ಮತ್ತು ಅದ್ವೈತವಾದ

ಸಮಯ-ಸಮಯದಲ್ಲಿ ಸಾವಿತ್ಯವು ಸಮಾಜದಲ್ಲಿ ಅನೇಕ ಪರಿವರ್ತನೆಯನ್ನುಂಟುಮಾಡಿದೆ ಎಂದು ಇತಿಹಾಸದಿಂದ ನಮಗೆ ತಿಳಿಯುಬರುತ್ತದೆ. ಯುರೋಪಿನಲ್ಲಿ ರಾಷ್ಟ್ರೀಯತೆಯ ರಾಗವನ್ನೂದಿದವರು ಸಾಹಿತ್ಯಕಾರರೇ ಆಗಿದ್ದರು. ಇಟಲಿಯು ಪುನರುತ್ಥಾನದಲ್ಲಿ ಮೆಜಿನಿಯ ಹಾಗೂ ಫ್ರಾನ್ಸಿನ ರಾಜ್ಯ ಕ್ರಾಂತಿಯಲ್ಲಿ

(೧೦ನೇ ಪುಟ ನೋಡಿರಿ)

ಉಡುಪಿ ಕರ್ನಾಟಕ ಸಂಘದ ಒಂದೊಂದು ರೂಪಾಯಿ ಬೆಲೆಯ ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಐತಾಳ, ಎಂ.ಬಿ.ಬಿ.ಎಸ್)
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳುಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ, ಉಡುಪಿ.

ಕುರುಡಿಯೊಬ್ಬಳ ರೋಮಾಂಚಕರ ಜೀವನ

ಅಂಧನಾರಿ ಹೆಲನ್ ಕೆಲರ್

ಅಮೆರಿಕೆಯ ಕುರುಡಿಯೊಬ್ಬಳು ತನ್ನ ಅದಮ್ಯ ಉತ್ಸಾಹ ಅಪರಿಮಿತ ಶ್ರದ್ಧೆಗಳಿಂದ ಆತ್ಮ ಚರಿತ್ರೆಯೊಂದನ್ನು ಬರೆದು ಪ್ರಪಂಚದ ಜನರನ್ನು ವಿಸ್ಮಯ ಸಾಗರದಲ್ಲಿ ಅದ್ದಿದಳು. ಮಿಸ್ ಹೆಲನ್ ಕೆಲರ್ ಎಂಬ ಈ ಅಂಧ ಮಹಿಳೆಯ ಹೆಸರು ಇಂದು ಜಗದ್ವಿಖ್ಯಾತವಾಗಿದೆ.

ಟಸ್ಕಂಬಿಯೂದ ಸಮೀಪದ ದಕ್ಷಿಣ ಫಾರ್ಮ್‌ನಲ್ಲಿ ಜನಿಸಿದ್ದ ಹೆಲನ್‌ಳಿಗೆ ಮೊನ್ನೆ ಜೂನ್ ೨೭೦ಂದು ೮೨ ವರ್ಷಗಳು ತುಂಬಿದುವು. ಆಕೆಯು ಅವಿವಾಹಿತಳಾಗಿಯೇ ಉಳಿದಿದ್ದಾಳೆ. ಆಕೆಯ ತಾಯ್ತಂದೆಯರ ಕುಟುಂಬದವರು ಅಮೆರಿಕೆಯ ಇತಿಹಾಸದ ಮೊದಲ ಕಾಲದಲ್ಲಿ ಬಹಳ ಹೆಸರು ಪಡೆದವರು ಹೆಲನಳ ತಂದೆ ಆರ್ಥರ್ ಎಚ್. ಕೆಲರರು ಕಾನ್‌ಫೆಡ್ರೆಟ್ ಸೇನೆಯಲ್ಲಿ ಕೇಪ್ಟನರಾಗಿದ್ದರು. ಇದರ ಮೇಲೆ ಸಮಾಚಾರ ಪತ್ರವೊಂದರ ಸಂಪಾದಕರಾಗಿಯೂ ಕರ್ತವ್ಯ ನಿರ್ವಹಿಸಿದ್ದರು.

ಹೆಲನ್ ೧೯ ತಿಂಗಳುಗಳ ಹಾಲುಗೂಸಾಗಿರುವ ಸಮಯ ಆಕೆಯನ್ನು ವಿಶೇಷ ರೀತಿಯ ಜ್ವರ ರೋಗವು ಕಾಡಿತು. ಈ ಬೇನೆಯನ್ನು 'ಸ್ಕಾರ್‌ಲೆಟ್ ಜ್ವರ ಎನ್ನುತ್ತಾರೆ ಇದರ ಪರಿಣಾಮವಾಗಿ, ಹೆಲನ್ ಕೆಲರಳು ದೃಷ್ಟಿ, ಶ್ರವಣ ಶಕ್ತಿ ಮತ್ತು ವಾಕ್ ಶಕ್ತಿಗಳಿಗೆ ಎರವಾಗ ಬೇಕಾಯಿತು. ಇಂತಹ ಅತ್ಯಪೂರ್ವವಾದ ದುರ್ಘಟನೆಯ ಪರಿವೆಯು ಆಕೆಗೇನೂ ಇದ್ದಿರಲಾರದು; ಆದರೆ, ಹೆತ್ತ ಪರಿವಾರವು ತನ್ನ ಹತಭಾಗ್ಯತನವನ್ನು ಹಳಿದು ಕೊಂಡಿತು; ಶೋಕ ಸಾಗರದಲ್ಲಿ ಮುಳುಗಿತು.

ಹೆಲನಳು ೭ ವರ್ಷದವಳಿರುವಾಗ ಆಕೆಯ ಭಾಗ್ಯವಶದಿಂದ ಏನ್‌ಸಲಿವಾನಳ ಪರಿಚಯವಾಯ್ತು. ಆಕೆಯು ಬೋಸ್ಟನ್ ನಗರದಲ್ಲಿನ 'ವರ್ಕಿನ್ಸ್ ಇನ್ಸ್ಟಿಟ್ಯೂಶನ್ ಫಾರ್ ದಿ ಬ್ಲಯಿಂಡ್' ಎಂಬ ಅಂಧರ ಶಿಕ್ಷಣಾಲಯದಲ್ಲಿ ಅಭ್ಯಾಸವನ್ನು ಮುಗಿಸಿ ಬಂದಿದ್ದಳು. ಏನ್‌ಸಲಿವಾನಳು ಅಂದಿನಿಂದ ಐವತ್ತು ವರ್ಷಗಳ ವರೆಗೆ ಹೆಲನಳ ಸಹಚರಿಯಾಗಿ ಮಾರ್ಗದರ್ಶಿಕೆಯಾಗಿ ಇದ್ದಳು.

ಏನ್‌ಸಲಿವಾನಳು ಹೆಲನಳ ಭಾರವನ್ನು ತಾನು ವಹಿಸಿಕೊಂಡಳು. ಸಂಪೂರ್ಣ ಆಸಕ್ತಿ ಮತ್ತು ಕಠಿನ ಪರಿಶ್ರಮದಿಂದ ಆಕೆಯು ಹೆಲನಳನ್ನು ಉನ್ನತಿಯ ಮಾರ್ಗದತ್ತ ಒಯ್ದಳು. ಜ್ಞಾನ ಸಂಪಾದನೆಯಲ್ಲಿ ಆಸಕ್ತಿ ತಾಳುತಿದ್ದ ಹೆಲನಳಾದರೂ ತನ್ನ ಗುರು ಹಾಕಿಕೊಟ್ಟ ದಾರಿಯಲ್ಲಿ ಮುನ್ನಡೆಯ ತೊಡಗಿದಳು; ಅಂಜಲಿಲ್ಲ, ಅಳುಕಲಿಲ್ಲ. ತನ್ನನ್ನು ಕಾಡುತಿದ್ದ ಕೊರತೆಗಳನ್ನು ಮೆಚ್ಚಿ ವಿಜಯ ಭೇರಿ ಬಾರಿಸುವ ತಹತಹದಿಂದ ನಿಷ್ಠೆಯಿಂದ ಹೋರಾಡಿದಳು. ವಿಶ್ವಾಸ ಮತ್ತು ಇಚ್ಛಾ ಶಕ್ತಿಯೊಡನೆ ಆಕೆಯು ಸಫಲತೆಯನ್ನೂ ಗಳಿಸಿದಳು.

ಅಲ್ಪಾವಧಿಯಲ್ಲಿಯೇ ಹೆಲನಳು ೮೦೦ ಶಬ್ದಗಳನ್ನು ಓದಲು ಕಲಿತುಕೊಂಡಳು. ಅಂಧರ ಉಪಯೋಗಾರ್ಥವಾಗಿ ಲೂಯಿ ಬ್ರೇಲನು ತಯಾರಿಸಿದ ಬ್ರೇಲ್ ಲಿಪಿಯಲ್ಲಿ ಓದುವುದನ್ನೂ ಟೈಪ್ ಮಾಡುವುದನ್ನೂ ಅರಿತುಕೊಂಡಳು. ಆಗ, ತಾನು ಮೂಕಿಯಲ್ಲವೆಂಬುದನ್ನು ಬೇರೆಯವರಿಗೆ ಹೇಳುವ ಆ ಯೋಗ್ಯತೆಯು ಆಕೆಯಲ್ಲಿ ಸಮಾವೇಶಗೊಂಡಿತು. ತನ್ನ ಕೈ ಮತ್ತು ತುಟಿಗಳನ್ನು ಮುಟ್ಟಿ, ಕಾರ್ಮನ್ ಹಾಗೂ ಫ್ರೆಂಚ್ ಮೊದಲಾದ ವಿದೇಶೀಯ ಭಾಷೆಗಳನ್ನೂ ತಿಳಿದುಕೊಳ್ಳುವುದಕ್ಕೆ ಆಕೆ ಶಕ್ತಳೆನಿಸಿದಳು. ೧೯೦೦ರಲ್ಲಿ ಆಕೆಯು ರೆಡ್‌ಕ್ಲಿಫ್ ಕಾಲೇಜಿನಲ್ಲಿ ಬರ್ತಿಹೊಂದಿದಳು. ಅಲ್ಲಿ ವಿಶೇಷ ಸಮ್ಮಾನದೊಡನೆ ಸ್ನಾತಕ ಉಪಾಧಿಯನ್ನೂ ಗಳಿಸಿದಳು.

ರೆಡ್ ಕ್ಲಿಫ್‌ನ ಎರಡನೆಯ ವರ್ಷಾಂತ್ಯದಲ್ಲಿ ಹೆಲನ ಕೆಲರ್ ತನ್ನ ಆತ್ಮ ಕಥೆಯನ್ನು ಬರೆದಳು. ಇದರಿಂದ ಆಕೆಯ ಹೆಸರು ದಶ ದಿಕ್ಕುಗಳಲ್ಲಿ ಹರಡಿತು. ೧೯೫೫ರಲ್ಲಿ 'ಟೀಚರ್' ಎಂಬ ಒಂದು ಪುಸ್ತಕವನ್ನು ಬರೆದು, ಅದನ್ನು ತನ್ನ ಮಿತ್ರೆಯೂ ಮಾರ್ಗದರ್ಶಿಕೆಯೂ ಆಗಿದ್ದ ಏನ್ ಸಲಿವಾನಳಿಗೆ ಶ್ರದ್ಧಾಸಹಿತವಾಗಿ ಅರ್ಪಿಸಿದಳು. ಇದರಲ್ಲಿ ಆಕೆಯು ತನ್ನ ಸಂಸ್ಮರಣೆಗಳನ್ನು ಉಲ್ಲೇಖಿಸಿದ್ದಾಳೆ ಮೊದಲನೆಯ ಹಸ್ತಪ್ರತಿಯನ್ನು ಸುಟ್ಟು ತೆಗೆದ ನಂತರ ಅದರ ದ್ರಿಪ್ರತಿಯನ್ನು ಆಕೆಯು ತೆಗೆದಿದ್ದಳು.

ತನ್ನ ಸಂಬಂಧದಲ್ಲಿ ಆಕೆಯು ಬರೆಯುತ್ತ, "ಒಂದು ಸಮಯದಲ್ಲಿ ನಾನು ಪಳಗಿಸದ ಅಜ್ಞಾತ ಪಶುವಾಗಿದ್ದ. ಏನ್ ಸಲಿವಾನಳು ಮತ್ತ ಮೊದಲಿಗೊಂದು ಚಮತ್ಕಾರವನ್ನು ತೋರಿಸಿದಳು. ೧೯೫೯ರಲ್ಲಿ ಸಲಿವಾನಳು ಮೃತ್ಯುವಶಳಾದ ನಂತರ, ಮಿಸ್. ಪೌಲಿ ಟಾಂಸನಳು ನನ್ನ ಸ್ನೇಹಿತೆಯೂ ಶಿಕ್ಷಿಕೆಯೂ ಆದಳು. ಆಕೆಯ ಕಲ್ಪನಾ ಶಕ್ತಿ ಮತ್ತು ನನ್ನ ಸತ್ಯಾಗ್ರಹೀ ಗುಣಗಳು ಆ ಚಮತ್ಕಾರವನ್ನು ಜೀವಂತ ವಿವರಿಸಿದುವು" ಎಂದಿದ್ದಾಳೆ.

ಪ್ರಸಿದ್ಧ ಆವಿಷ್ಕರ್ತನಾಗಿದ್ದ ಎಲೆಗ್ಸಾಂಡರ್ ಗ್ರಹಾಮಬೆಲ್ಲನು ಆಕೆಯಲ್ಲಿ ಎಲ್ಲರಿಗಿಂತ ಹೆಚ್ಚಾಗಿ ಆಸಕ್ತಿ ವಹಿಸಿದ್ದನು. ಆಕೆಗೆ ಸೂಕ್ತಮಾರ್ಗದರ್ಶನ ಮಾಡುವಲ್ಲಿ ಅವನು ಸದಾ ಸಿದ್ಧಹಸ್ತನಾಗಿದ್ದನು. ಮುಂದೆ ಆಕೆಯು ಅಯಿನ್ ಸ್ಟಾಯಿನನ ಮಿತ್ರೆಯೂದಳು. ಪ್ರಸಿದ್ಧ ಸಾಹಿತಿ ಬರ್ನಾರ್ಡ್ ಶಾ ಮತ್ತು ಮಾರ್ಕ್‌ಟೈನ್‌ರವರೊಡನೆಯೂ ಆಕೆಯ ಪರಿಚಯವಿತ್ತು. ಈಕೆಯ ಕುರಿತು ಟೈನ್ ಮಹಾಶಯನು ಹೀಗೆ ಬರೆದಿದ್ದಾನೆ. "ಆಕೆಯನ್ನು ಭೇಟಿಯೂದವರು ಮಾನವೀಯ ಆತ್ಮದಲ್ಲಿ ಒಂದು ಹೊಸ ಸೌಂದರ್ಯವನ್ನು ಕಾಣುವರು." ರವೀಂದ್ರನಾಥ ಟಾಕೂರರು ಅಮೆರಿಕೆಯನ್ನು ಸಂಚರಿಸಿದ ವೇಳೆ ಒಮ್ಮೆ ಈಕೆಯನ್ನೂ ಭೇಟ್ಟಿಯಾಗಿದ್ದರು. ವಿಶ್ವಕವಿಗಳು ಆಕೆಗೆ ತನ್ನ ಕವಿತೆಗಳನ್ನು ಓದಿ ಹೇಳಿದ್ದರು. ಸುವಿಖ್ಯಾತ ಸಂಗೀತಜ್ಞ ಕಾರೂಸೋ ತನ್ನ ಗಾಯನ ಕಚೇರಿಯನ್ನು ಈಕೆಯ ಮುಂದೆ ನಡೆಸಿದ್ದನು ಮಾರ್ಧ ಗ್ರಹಾಮನು ತನ್ನ ನೃತ್ಯ ಪ್ರದರ್ಶನವನ್ನೂ ಏರ್ಪಡಿಸಿದ್ದನು.

ಮಿಸ್ ಹೆಲನ್ ಕೆಲರ್ ವಿನಮ್ರಳು ಸಾಮಾನ್ಯ ಜನರೊಡನೆಯೂ ಈಕೆಯು ಸಂಪರ್ಕ ಬೆಳೆಸಿಕೊಳ್ಳಲು ಹಿಂಜರಿಯುತ್ತಿಲ್ಲ. ಅಮೆರಿಕೆಯಲ್ಲಿಯೂ ವಿದೇಶಗಳಲ್ಲಿಯೂ ಕುರುಡರ ಶಿಕ್ಷಣ ವ್ಯವಸ್ಥೆಯನ್ನು ಮಾಡುವಲ್ಲಿ ಆಕೆಗೆ ಹಚ್ಚಿನ ಅಭಿರುಚಿ; ತನ್ನ ಜೀವನದ ಉದ್ದೇಶವನ್ನೇ ಆಕೆಯು ಆ ರೀತಿ ಮಾರ್ಪಡಿಸಿ ಕೊಂಡಿದ್ದಳು. ಎ ಸೋಸಿಯೇಶನ್ ಫಾರ್ ದಿ ಓವರ್‌ಸೀಸ್ ಬ್ಲೈಂಡ್' ಎಂಬ ಅಂಧ ಕಲ್ಯಾಣ ಸಂಸ್ಥೆಯೊಡನೆ ಆಕೆಯು ಕಳೆದ ೪೦ ವರ್ಷಗಳಿಂದಲೂ ಸಹಕರಿಸುತ್ತ ಬಂದಿದ್ದಾಳೆ. ವಿದೇಶೀ ವ್ಯವಹಾರ ಸಂಬಂಧದ ಸಲಹೆಗಾರಳಾಗಿ, ಶಾರೀರಿಕ ಅಶಕ್ತಿಯಿಂದ ಬಳಲುವವರ ಒಳಿತಿಗಾಗಿ ಆಕೆಯು ಇಡಿಯ ವಿಶ್ವವನ್ನು ತಿರುಗಾಡಿದ್ದಾಳೆ.

ದ್ವಿತೀಯ ಲೋಕ ಸಮರದ ಸಂದರ್ಭದಲ್ಲಿ ಆಹತ ಸೈನಿಕರ ಬಳಿ ತೆರಳಿ ಅವರಲ್ಲಿ ವಿಶ್ವಾಸವನ್ನೂ ಹೊಸ ಆಶೆಯನ್ನೂ ಹುಟ್ಟಿಸಿದ್ದಾಳೆ. ತನ್ನ ಮಸ್ತಕಗಳಿಂದ ಮತ್ತು ಸಾರ್ವಜನಿಕ ಭಾಷಣಗಳಿಂದ ಗಳಿಸಿದ ಸಂಪತ್ತೆಲ್ಲವನ್ನೂ ಧನಹೀನರಿಗಾಗಿ ವ್ಯಯಿಸುತಿದ್ದಾಳೆ. ಅವರಿಗೆ ಸಹಾಯ ನೀಡುತ್ತಿದ್ದಾಳೆ.

ಇಂದು ಮಿಸ್ ಕೆಲರ್ ಮಾಡಿದ ಮತ್ತು ಮಾಡುತ್ತಿರುವ ಕಾರ್ಯಗಳನ್ನು ಇಡಿಯ ವಿಶ್ವವೇ ಹೊಗಳುತ್ತಿದೆ. ಹಲವಾರು ಪಾಠಿತೋಷಕಗಳನ್ನು ಆಕೆ ಗೆದ್ದಿದ್ದಾಳೆ ಎರಡು ವರ್ಷಗಳಿಗೆ ಮೊದಲು ಇವಳ ಹೆಸರಿನಲ್ಲಿಯೇ ಒಂದು ಬಹುಮಾನವನ್ನು ಸ್ಥಾಪಿಸಲಾಗಿದೆ. ೧೯೫೫ರಲ್ಲಿ ಬೆಹಲಿ ವಿಶ್ವವಿದ್ಯಾಲಯವು ಈಕೆಗೆ 'ಡಾಕ್ಟರ್ ಆಫ್ ಲೆಟರ್ಸ್' ಗೌರವ ಪದವಿಯನ್ನು ಕೊಟ್ಟಿದೆ. ಅದೇ ವರ್ಷ ಹಾರ್ವರ್ಡ್ ವಿಶ್ವವಿದ್ಯಾಲಯವೂ ಈಕೆಯನ್ನು ಡಾಕ್ಟರ್ ಆಫ್ ಲಾಸ್, ಎಂಬ ಪದವಿಯನ್ನಿತ್ತು ಗೌರವಿಸಿತ್ತು.

ಮಿಸ್. ಹೆಲನ್ ಕೆಲರ್ ಇಂದೊಬ್ಬ ವಿಶ್ವವಿಖ್ಯಾತೆಯೆನಿಸಿದ ಮಹಿಳೆ. ತನ್ನ ಕಾರ್ಯಸಾಧನೆಯ ಪ್ರತೀಕವೆಂಬಂತೆ ಅವಳು ಎಲ್ಲರಿಂದಲೂ ಸಮ್ಮಾನಿತಳಾಗುತಿದ್ದಾಳೆ. ವಯಸ್ಸು ಎಂಭತ್ತೆರಡಾದರೂ ಉತ್ಸಾಹದಿಂದ ಆಕೆಯು ತನ್ನ ಉದ್ದೇಶಸಾಧನೆಗಾಗಿ ಶ್ರಮಿಸುತಿದ್ದಾಳೆ ಹೆಲನ್ ನಿರುಪಯೋಗಿ ನಾರಿಯೂಗುವುದಕ್ಕೆ ಹೆಚ್ಚು ದಿನಗಳು ತಗಲಲಿಲ್ಲ; ಆದರೆ ಆ ನಿರುಪಯುಕ್ತತೆಯನ್ನು ದೂರ ಮಾಡುವುದಕ್ಕೆ ಮಾತ್ರ ಬಹುದೀರ್ಘ ಸಮಯ ಬೇಕಾಯಿತು. ಹೆಲನ್ ವಿಶ್ವವಿಖ್ಯಾತ ನಾರಿಯೆನಿಸುವಳೆಂದು ಬಾಲ್ಯದಲ್ಲಿ ಆಕೆಯನ್ನು ಕಂಡಿದ್ದವರಲ್ಲಿ ಯಾರು ನಂಬಿದ್ದರು?

ಕರುಣಾಳು ಪರಮಾತ್ಮ

(೨ನೇ ಪುಟದಿಂದ)

ಹತ್ಯೆ ಮಾಡಿಕೊಂಡರು...." ಸಾವಿತ್ರಿಗದು ಹೇಗೆ ತಿಳಿಯಬೇಕು?...

...ಸಾವಿತ್ರಿಗೆ ಬೇನೆ ಬಂತು. ಆನಂದರಾಯರು ಬಳಿಯಲ್ಲೇ ಇದ್ದರು. "ಅಪ್ಪಾ" ಕ್ಷೀಣ ಸ್ವರದಲ್ಲಿ ಮಗಳು ನರಳಿದಳು. ಸತ್ತ ಹಿಂಡ ಹೊರಗೆಬಿತ್ತು. "ಅಪ್ಪಾ" ಮತ್ತೊಮ್ಮೆ ಮಗಳು ಚೀರಿದಳು. ತಂದೆ ಎರೆದ ತೀರ್ಥ ಒಳಗೆ ಹೋಗಲಿಲ್ಲ. ಬಾಯಿ ಮುಚ್ಚಿತ್ತು....

....ಆನಂದರಾಯರ ಜೀವನದಿ ಅರಿತು ಸರೋವರ ಮಾತ್ರಾ ಮತ್ತೂ ಮೂವತ್ತು ವರ್ಷ ಬತ್ತಲಿಲ್ಲ. .....

....ಆನಂದರಾಯರ ಜೀವಮಾನದ ಎಪ್ಪತ್ತನೆಯ ಮಳಿಗಾಲದ ಮೊದಲ ಮಳೆಸುರಿದು ಆಗಷ್ಟೇ ನಿಂತಾಗ ಅವರ ಹೃದಯಕ್ಕೆ ಹತ್ತಿರದ ಹದಿಮೂರು ಹೆಣಗಳ ಮೆರವಣಿಗೆ ಸ್ಮೃತಿಪಟಲದಲ್ಲಿ ಮೂಡಿ ಮುಳುಗಿತು. ದೇಗುಲಧ ಗುಟ ಬಾರಿಸುತ್ತಿತ್ತು. ಅಂಧ ಕವಿಯೊಬ್ಬ ಗುಡಿಯ ಮುಂದೆ ಹಾಡುತ್ತಲಿದ್ದ ಕರುಣಾಳು ಪರಮಾತ್ಮ....."

ಬದಲಾವಣೆಗೆಂದು ಒಮ್ಮೆ
ಎಸ್. ಆರ್. ಬೀಡಿಯನ್ನು
ಬಳಸಿ ನೋಡಿರಿ,
ಅಂದರೆ ನೀವು ತಪ್ಪದೆ ಅದನ್ನೇ
ಎಂದೆಂದಿಗೂ ಕೊಂದು
ಕೊಳ್ಳುವಿರಿ.

S.R. BEEDI
WORKS,
UDIPI, S.K.

Quality Air Cushion
Rubber Stamps
Crown
RUBBER STAMP CO.
PHONE-203 ESTD 1926
BALMATTA ROAD, MANGALORE.

ಕನ್ನಡ ಪುಸ್ತಕಗಳಿಗೆ—
ಮತ್ತು
ಳಧೆಕಾವಂಬರಿ ಇತ್ಯಾದಿ ಪುಸ್ತಕಗಳಿಗೆ
ನವಭಾರತ ಪುಸ್ತಕ ಭಂಡಾರ, ಉದುಪಿ.

NAVAYUGA, UDIPI.
REGD. NO.BG. 176

2-8-1962

LICENSE NO. 31
Licensed to Post without Prepayment

ಕಾಂಗ್ರೆಸ್ ಪಕ್ಷದ ಬಲಸಂವರ್ಧನೆ

(೧ನೇ ಪುಟದಿಂದ)

ವಿರೋಧೀ ಪ್ರಚಾರ ವೈಖರಿ

ಮಧ್ಯ ಪ್ರದೇಶದ ಮುಖ್ಯ ಮಂತ್ರಿಯಾಗಿದ್ದ ಡಾ! ಕೈಲಾಸನಾಥ ಕಟಜು ರವರು ಸಾರ್ವತ್ರಿಕ ಚುನಾವಣೆಯಲ್ಲಿ ಸೋಲುಂಡರು. ಅವರ ಸೋಲಿಗೆ ಕಾರಣ ವೇನು? ಜನತೆ ಮತ ಹಾಕಲಿಲ್ಲವೆಂಬುದು. ಅವರು ಏಕೆ ಮತ ಕೊಡಲಿಲ್ಲ? ವಿರೋಧಿ ಪಕ್ಷದವರು ಒಂದು ವಿಚಿತ್ರ ವಿಷ ಬೀಜವನ್ನು ಅವರ ಮನಸ್ಸಿನಲ್ಲಿ ಬಿತ್ತಿದ್ದರು. ಡಾ! ಕಟಜು ಮತ್ತು ಪ್ರಧಾನಿ ನೆಹರು ಮಾಂಸಾಹಾರಿಗಳು; ಅವರು ಪ್ರತಿದಿನ ಪ್ರಾತಃಕಾಲದಲ್ಲಿ ಉಪಾಹಾರದ ವೇಳೆ "ಗೋಮೂತ್ರ"ಯ ಮಾಂಸವನ್ನು ತೆಗೆದುಕೊಳ್ಳುತ್ತಾರೆ! ಅಂತಹ ಗೋಮಾಂಸ ಭಕ್ಷಕನಿಗೆ ಮತದಾನ ಮಾಡುವುದೆಂದರೆ, ನರಕದಲ್ಲಿ ಟಿಕೇಟು ಕಾದಿರಿಸಿದಂತೆ! ಪ್ರಚಾರದ ವಿಲಕ್ಷಣ ವೈಖರಿ ರೋಮಾಂಚಕವಿಲ್ಲವೆ?

ಸತ್ಯತೆಯ ಅರಿವಾಗಬೇಕು

ಈ ರೀತಿಯ ನಿಂದಾಸ್ಪದ ಪ್ರಚಾರವು ವಿರೋಧಿಗಳಿಂದ ನಡೆಯುತ್ತಿರುವಾಗ, ಕಾಂಗ್ರೆಸಿಗರು ಏನುಮಾಡಿದರು? ಜನತೆಗೆ ಸತ್ಯ ಸಂಗತಿಯನ್ನು ತಿಳಿಸಲು ಯಾವ ಕ್ರಮಕೈಗೊಂಡರು? ಆದುದರಿಂದ ಕಾಂಗ್ರೆಸಿನ ಸೇವಕರು ಈ ವಿಧದ ಸುಳ್ಳು ಪ್ರಚಾರಗಳಿಗೆ ಜನ ಮರುಳಾಗದಂತೆ ನೋಡಿಕೊಳ್ಳ ಬೇಕು; ಸತ್ಯ ವಿಚಾರವನ್ನು ತಿಳಿಸಿ ಜನರಲ್ಲಿ ಹುದುಗಿರುವ ಅವ್ಯಕ್ತ ತಿರಸ್ಕಾರ ಭಾವವನ್ನು ದೂರಕಳಸಬೇಕು. ಮತದಾರರು ಒತ್ತಟ್ಟು ಪ್ರಚಾರ ಒತ್ತಟ್ಟು ಆಯಿತೆಂದರೆ, ವಿರೋಧಿಗಳು ಬಿತ್ತಿದ ವಿಷ ಬೀಜ ಮೊಳಕೆ ಬಂದಂತೆಯೇ ಸರಿ. ಇದಕ್ಕೆ ಎಂದಿಗೂ ಕಾಂಗ್ರೆಸು ಅವಕಾಶ ನೀಡಬಾರದು. ಮುಂದಕ್ಕಾದರೂ ಇಂತಹ ಅಪಪ್ರಚಾರಗಳಿಂದನಾಗರಿಕರು ಮರುಳಾಗದಂತೆ ನೋಡಿಕೊಳ್ಳುವಲ್ಲಿ ಕಾಂಗ್ರೆಸ್ಸು ಹೆಚ್ಚಿನ ಕಾಳಜಿ ವಹಿಸಬೇಕು.

ಸದಸ್ಯರ ದ್ವಿಮುಖ ಧೋರಣೆ

ಇಂದು ಕಾಂಗ್ರೆಸ್ ಸಮಾಜವಾದ ಮಾದರಿಯ ಸಮಾಜವನ್ನು ನಿರ್ಮಿಸಲು ಪಣ ತೊಟ್ಟಿದೆ. ಆದರೆ, ಪಕ್ಷದ ನೀತಿಯು ಅದರ ಎಲ್ಲ ಸದಸ್ಯರಿಗೂ ಸಮ್ಮತವಿರುವುದಿಲ್ಲ. ಏಕೆಂದರೆ, ನಿಷ್ಠಾವಂತ ಕಾಂಗ್ರೆಸಿಗರೇ ಇದನ್ನು ಹಿಂದುಗಡೆ ದೂಷಿಸುತ್ತಾರೆ; ಸಮಾಕ್ಷಮದಲ್ಲಿ ಅದನ್ನು ವಿರೋಧಿಸಲು ಧೈರ್ಯ ಸಾಲದು ಎಂಬುದರಿಂದಲೇ ಇಂತಹ ಮಾರ್ಗ ಹಿಡಿಯುತ್ತಾರೆ ಪ್ಲೇಟ್‌ಫಾರ್ಮಿನಲ್ಲಿ ಉದ್ದುದ್ದದ ಭಾಷಣ ಬಿಗಿಯುವವರೇ ಮನೆಯಲ್ಲಿ ತದ್ವಿರುದ್ಧ ವ್ಯವಹರಿಸುತ್ತಾರೆ. ಕಾಂಗ್ರೆಸ್ ಸಮಿತಿಯ ಸಭೆಗಳಲ್ಲಾಗಲೀ, ವಿಧಾನಸಭೆ, ಲೋಕಸಭೆಗಳಲ್ಲಾಗಲೀ ಸಮಾಜವಾದದ ಬಗ್ಗೆ ತುಟಿ ಪಿಟಕ್ಕೆನ್ನದ ಮಹಾಶಯರು ಹೊರಗೆ ಬಂದ ನಂತರ ತಮ್ಮ ನಾಲಿಗೆಯನ್ನು ಸಲೀಸಾಗಿ ಹೊರಳಾಡಿಸುತ್ತಾರೆ. ಇಂತಹ ದ್ವಿಮುಖ ಧೋರಣೆಯನ್ನು ಅನುಸರಿಸುವವರು ಪಕ್ಷ ಬಿಟ್ಟು ಹೊರ ನಡೆಯಲಿ ಎಂದು ಪ್ರಧಾನಿ ನೆಹರುಗಳೇ ಹಿಂದೊಮ್ಮೆ ಹೇಳಿದ್ದಾರೆ, ಈಗ ಅದೇ ಮಾತನ್ನು ಕಾಂಗ್ರೆಸ್ ಅಧ್ಯಕ್ಷರೂ ಸುನರುಚ್ಚರಿಸಿದ್ದಾರೆ. ನಿಷ್ಠಾವಂತ ಪಕ್ಷದ ಬೆಂಬಲಿಗರು ಕೋಟಿಗಟ್ಟಲೆ ಸೇರಾಗಿಲ್ಲ. ಒಳಗೊಂದು ಹೊರಗೊಂದು ಆಡುವ ಮತ್ತು ನಡೆಯುವ ಮಹನೀಯರ ಸಂಖ್ಯೆ ದಿನದಿಂದ ದಿನಕ್ಕೆ ಬೆಳೆಯುತ್ತಿದೆ ನಿಜ. ಇದಕ್ಕೆ ಶಾಶ್ವತವಾದ ತಡೆಯನ್ನುಂಟು ಮಾಡುವುದು ತೀರ ಅವಶ್ಯವಿದೆ. ಶ್ರೀ ಸಂಜೀವಯ್ಯವರು ಕಾಂಗ್ರೆಸ್ಸಿನ ಹೊರಗಣಿಂದ ಎದುರಿಸಬೇಕಾದ ವಿರೋಧಕ್ಕಿಂತ ಪಕ್ಷದೊಳಗಿನ ವಿರೋಧವನ್ನು ಸರಿಯಾಗಿ ಎದುರಿಸಬೇಕಾಗುತ್ತದೆ ಆದುದರಿಂದ ಇದಕ್ಕೆ ಸೂತ್ತಕ್ರಮ ಕೈಗೊಳ್ಳುವುದು ಅನಿವಾರ್ಯವೇ ಆಗುತ್ತದೆ. ಇದರಲ್ಲಿ ಅವರು ಹಿಂದೆ ಬೀಳಬಾರದು.

ಸಮಾಜದರ್ಶಣ—ಸಾಹಿತ್ಯ

(೧ನೇ ಪುಟದಿಂದ)

ರೂಸೋನ ಲೇಖನಗಳೇ ಕಾರಣವಾದುವು! ಭಾರತದಲ್ಲಿ ಜನರು ಸಾಂಸಾರಿಕ ಚಿಂತೆಗೊಳಗಾದರೆ ಸದಾ ಧರ್ಮದ ಕಡೆಗೇ ಅಗ್ರಸರರಾಗಿದ್ದರು. ಸಾಹಿತ್ಯವು ಕೂಡಾ ದಾರ್ಶನಿಕತೆ ಮತ್ತು ಅದ್ವೈತ ವಾದದ ಪ್ರಚಾರ ಮಾಡಿತು. ಅನೀತಿ ಹಾಗೂ ಅವ್ಯವಸ್ಥೆಯ ಪರಿಸ್ಥಿತಿಯಲ್ಲಿ ಸಾಹಿತ್ಯವು ಮುಂದರಿದು ಅದರ್ಶವನ್ನು ಸ್ಥಾಪಿಸಿತು. ಮಹಾತ್ಮಾ ಗಾಂಧಿ ಮತ್ತು ಮಹಾ ವೀರರು ಹಿಂಸೆಯ ಕಡೆಗೆ ಓಡುತ್ತಿದ್ದ ಜನತೆಗೆ ಅಹಿಂಸೆಯ ಉಪದೇಶ ಕೊಟ್ಟರು.

ಹಿಂದೂ—ಮುಸಲ್ಮಾನರ ಸಂಘರ್ಷದ ಕಾಲದಲ್ಲಿ ಕಬೀರ್, ನಾನಕ್—ಮೊದಲಾದವರ ಕವಿತೆಯು ನಿಜವಾದ ಧರ್ಮದ ಬೆಳಕನ್ನು ಬೀರಿತು. ಮತ್ತು ಆಧುನಿಕ ಕಾಲದಲ್ಲಿಯೂ ಸ್ವಾಮಿ ದಯಾನಂದ ರವೀಂದ್ರನಾಥ ಹಾಗೂ ಮಹಾತ್ಮಾ ಗಾಂಧೀಜೀ ಯವರ ಸಾಹಿತ್ಯದ ಪ್ರಭಾವ

ಪತ್ರಿಕಾ ಪರಿಷತ್ತಿನಲ್ಲಿ ಅಮೇರಿಕೆಯ ರಾಜ್ಯಾಂಗ ಕಾರ್ಯದರ್ಶಿ ಡೀನ್‌ರಸ್ಕ್

ಭಾರತದ ಸಾಮಾಜಿಕ ಜೀವನದಲ್ಲಿ ಸ್ಪಷ್ಟವಾಗಿ ಲಕ್ಷಿತವಾಗುತ್ತಿದೆ.

ಗದ್ಯ ಮತ್ತು ಪದ್ಯ

ಸಾಹಿತ್ಯದಲ್ಲಿ ಗದ್ಯ ಮತ್ತು ಪದ್ಯದ ಯಾವ ರೂಪ ಹೇಗೆ ಉಪಯೋಗ ಪ್ರಮಾಣವಾಗಬಲ್ಲುದು? ಇಂದು ಹಿಂದಿ ಸಾಹಿತ್ಯವು ಉನ್ನತಶೀಲವಾಗಿ ಕಂಡುಬರುತ್ತಿದೆ. ಆದರೆ ಪದ್ಯ ಮತ್ತು ಗದ್ಯದ ಗತಿಯವಿಷಯದಲ್ಲಿ ಸಾವಧಾನವಾದ ಬರ್ತನದಿಂದ ಅದರ ಮೂಲ್ಯ ಎಷ್ಟೋ ಹೆಚ್ಚಬಲ್ಲುದು. ಕೆಲವು ಅನಭಿಜ್ಞ ಜನರ ಪ್ರವೇಶದ ಕಾರಣದಿಂದಾಗಿ ಗದ್ಯದಲ್ಲಿ ಯಾವ ಕೊರತೆ ಉಂಟಾಗಿದೆಯೋ, ಅವನ್ನು ದೂರ ಮಾಡುವ ಉತ್ತರದಾಯಿತ್ವವನ್ನು ಒಂದು ವೇಳೆ ಆಲೋಚಕನೇನಾದರೂ ಎತ್ತಿ ಕೊಂಡರೆ ಸರ್ವೋತ್ಕೃಷ್ಟಲಾಭವಾಗಬಲ್ಲುದು. ಈ ವಿಷಯದಲ್ಲಿ ನಾವು ಇಷ್ಟು ಮಾತ್ರ ಅವಶ್ಯಗಮನವಿಡಬೇಕು ಏನೆಂದರೆ ಭಾವಗಳನ್ನು ಸ್ಪಷ್ಟ ಪಡಿಸುವುದಕ್ಕೆ ಇಂದು ದೇಶವ್ಯಾಪೀ ಹಿಂದೀ ಭಾಷೆಯಲ್ಲಿ ಅನೇಕ ಪ್ರಾಂತೀಯ ಶಬ್ದಗಳ ಪ್ರಯೋಗವಾಗತೊಡಗಿದೆ. ಇದನ್ನು ಅಸ್ವಭಾವಿಕವೆಂದು ಹೇಳಲಿಕ್ಕಾಗುವದಿಲ್ಲ. ಆದರೆ ಈ ಪ್ರಯೋಗ 'ಶಬ್ದ ಪ್ರಯೋಗ' ಕೃಷ್ಟೇ ಸೀಮಿತವಾಗಿರಬೇಕು. ಪ್ರತ್ಯಯ ಮುಂತಾದುವುಗಳನ್ನು ಗ್ರಹಣ ಮಾಡುವುದು ಅನುಚಿತವಾಗಬಲ್ಲುದು.

ಪದ್ಯಕ್ಕೆ ಸರಳ ಹಾಗೂ ಉದಾತ್ತವಾದ ಭಾವನೆಗಳ ಅವಶ್ಯಕತೆಯಿದೆ. ಇಂದು ಕುಣಿಯುತ್ತಿರುವ ಶಬ್ದಗಳ ಝಂಕಾರ ಹಾಗೂ ಉದ್ದುದ್ದವಾದ ಸಮಾಸದ ಪದಾವಳಿಯಾಗಿ ಆಕರ್ಷಕವೆಂದು ತಿಳಿದುಬರುವುದಿಲ್ಲ. ಒಂದು ವೇಳೆ ಸರಳ ಭಾಷೆಯಲ್ಲಿಯೂ ಕೂಡಾ ಉಚ್ಚ ಭಾವಗಳನ್ನು ಪ್ರದರ್ಶಿಸಿದರೆ, ಅದನ್ನು ನಾವು ನಿಜವಾದ ಸಾಹಿತ್ಯ" ಎಂದು ಹೇಳುವೆವು.

ಹಾರ್ಮೋನಿಯಮ್ ಕಲಿಯುವವರಿಗೆ ಅತ್ಯುತ್ತಮ ಸಂಗೀತ ಪುಸ್ತಕ—
ಶ್ರೀ ಎ. ರಾಮಪ್ಪ ಅವರ
ಹಾರ್ಮೋನಿಯಮ್
ಬೋಧನ ಕ್ರಮ
ಪರಿಷ್ಕರಿಸಲ್ಪಟ್ಟ ನಾಲ್ಕನೆಯ ಮುದ್ರಣ.
ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ: ರೂ. 2—0—0.
ಒಂದು ಪ್ರತಿ ಬೇಕಾದವರು ರೂ 2-50 ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.

5 ರೂ. ಮಾತ್ರ
ನೀವೆನ್ನೂ ಸಿಂಡಿಕೇಟ್ ಬೇಂಕಿನಲ್ಲಿ ಒಂದು
ಸೇವಿಂಗ್ಸ್ ಬೇಂಕ್ ಖಾತೆಯನ್ನು ತೆರದಿಲ್ಲವೆ?
ಹಾಗಾದರೆ ಇನ್ನು ತಡಮಾಡಬೇಡಿರಿ,
ಕೇವಲ ಐದು ರೂಪಾಯಿಗಳಿಂದ ನೀವು
ಸೇವಿಂಗ್ಸ್ ಬೇಂಕ್ ಲೆಕ್ಕವನ್ನು ಪ್ರಾರಂಭಿಸಬಹುದು.
ನಿಮಗೆ ಸಾಧ್ಯವಿದ್ದಷ್ಟನ್ನು 25 ನಯೆ
ಪೈಸೆಯಷ್ಟನ್ನು ಸದಾ ನೀವು ನಿಮ್ಮ ಲೆಕ್ಕಕ್ಕೆ
ಕೂಡಿಸುತ್ತಾ ಹೋಗಬಹುದು.
ಸಿಂಡಿಕೇಟ್ ಬೇಂಕಿನ ಚೆಕ್ ಮತ್ತು ಪಾಸ್
ಪುಸ್ತಕಗಳೆರಡು ನಿಮ್ಮ ಗೌರವದ ಸೊತ್ತು
ಗಳಾಗುವುವು.
ಮಾತ್ರವಲ್ಲ, ನಿಮ್ಮ ಹಣಕ್ಕೆ ಯೋಗ್ಯ ಬಡ್ಡಿಯೂ
ಸಿಗುವುದು.
ಇಂದೇ ನಿಮಗೆ ಸಮೀಪವಿರುವ ನಮ್ಮ
ಶಾಖೆಯೊಂದನ್ನು ದಯಮಾಡಿ ಸಂದರ್ಶಿಸಿರಿ.
ಆಗಾಗ ಉಳಿಸಲು
ಮಿತವಾಗಿ ವ್ಯಯಿಸಲು
ಬಡ್ಡಿಯನು ಗಳಿಸಲು
ಸೇವಿಂಗ್ಸ್ ಬೇಂಕ್
ಸಿಂಡಿಕೇಟ್ ಬೇಂಕ್
ದಿ ಕೆನರಾ ಇಂಡಸ್ಟ್ರಿಯಲ್ & ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಆಸ್ಥಮಾ ರೋಗಿಗಳ ತಿಳುವಳಿಕೆಗೆ
ರಿಜಿಸ್ಟ್ರೀಯಾದ ಚಿತ್ರಕೋಟ್ ಆಸ್ಥಮಾ ನಿವಾರಕಔಷಧಿಯನ್ನು ತಾ. 15-8-62ನೇ ಹುಣ್ಣಿಮೆ ರಾತ್ರಿ ಬೀರನೊಂದಿಗೆ ಸೇವಿಸುವುದರಿಂದ ಆಸ್ಥಮಾ, ನೇವಸ, ಕೆಮ್ಮು, ನೆಗಡಿ ನಿವಾರಣೆಯಾಗುತ್ತದೆ. ಕೂಡಲೇ ಹುಣ್ಣಿಮೆಯ ಮೊದಲೇ ಬರೆಯಿರಿ.
Manager, Shri Mahatma Naga Baba Ayurvedashram,
P. O. Chitrakot U. P.

Edited Printed & Published by K. H. Shetty, at the Navayuga Press, Udipi, S. India.

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ಸಂಪುಟ ೪೧ ಸಂಚಿಕೆ ೪೬ | ಉಡುಪಿ 9—8—1962 ಗುರುವಾರ | Vol. 41 No. 46

ನಿಮ್ಮ ಯಾವತ್ತೂ ಮುದ್ರಣ ಕೆಲಸಗಳಿಗೆ ದಯಮಾಡಿ ವಿಚಾರಿಸಿರಿ: ನವಯುಗ ಪ್ರೆಸ್, ಉಡುಪಿ

ವಿದ್ಯಾರ್ಥಿಗಳಿಗೆ ಮತ್ತು ವಯಸ್ಕರಿಗೆ ಅತ್ಯಪಯೋಗೀ ಪುಸ್ತಕ ಸುಲಭದಲ್ಲಿ ಇಂಗ್ಲಿಷ್ (ಆಂಗ್ಲ ಸ್ವಯಂಬೋಧಿನಿ) ನವಭಾರತ ಪುಸ್ತಕ ಭಂಡಾರ ಉಡುಪಿ

ಆಗ್ನೇಯ ಏಶ್ಯಾದಲ್ಲಿ

ವಸಾಹತುವಾದಕ್ಕೆ ಅಂತ್ಯಕಾಲ

ಜಿನೇವಾ ಸಮ್ಮೇಳನದಲ್ಲಿ ಲಾವೋಸಿನ ಪ್ರಶ್ನೆಯು ಬಗೆಹರಿಯುವ ವಾತಾವರಣ ನಿರ್ಮಾಣವಾಯಿತು; ಅಲ್ಜೀರಿಯಾದ ಅಂತರ್ಯುದ್ಧ ಕೊನೆಗೊಳ್ಳುವ ಗಳಿಗೆ ಬಂತು; ಇದೇ ಸದವಸರದಲ್ಲಿ ಬಹು ಕಾಲದಿಂದಲೂ ಇದ್ದ ಪಶ್ಚಿಮ ಈರಿಯನ್ನಿನ ಸಮಸ್ಯೆಯೂ ತೀರ್ಮಾನಗೊಂಡು ಸದ್ಯದಲ್ಲಿಯೇ ಕೊನೆಗೊಳ್ಳುವ ಲಕ್ಷಣಗಳು ತೋರತೊಡಗಿವೆ. ಹೊಲ್ಲೆಂಡಿನ ವಸಾಹತು ಎನಿಸಿದ ಪ. ಈರಿಯನ್ ತನ್ನ ದೆಂದು ಹೇಳಿ, ಆದರ ವಿಮೋಚನೆಗೆಂದು ತುದಿಗಾಲ್ಲಿ ನಿಂತಿದ್ದ ಇಂಡೋನೇಶ್ಯವು ಅಷ್ಟಿ ಕೆಲವೊಮ್ಮೆ ಹೋರಾಟ ನಡೆಸಿದ್ದೂ ಇದೆ. ಹಾಗಿರುವಾಗ, ಪ. ಈರಿಯನ್ನಿನ ಹಸ್ತಾಂತರಕ್ಕೆ ಹೊಲ್ಲೆಂಡ್ ಮತ್ತು ಇಂಡೋನೇಶ್ಯಗಳು ಎಲ್ಲ ಅವಶ್ಯಕ ವಿಷಯಗಳಲ್ಲಿಯೂ ಒಮ್ಮತದ ನಿರ್ಧಾರಕ್ಕೆ ಬಂದು, ಹೆಚ್ಚಿನ ಮಾತುಕತೆಗಳನ್ನು ಇದೇ ತಿಂಗಳ ಮಧ್ಯಾವಧಿಯಲ್ಲಿ ಪ್ರಾರಂಭಿಸಲು ನಿರ್ಧರಿಸಿವೆಯೆಂಬುದು ಆಶಾಜನಕ ಸುದ್ದಿಯೆನಿಸಿದೆ.

ಸಂಧಾನವು ಸಾಧ್ಯವಾಯಿತು.

ಹೊಲ್ಲೆಂಡ್-ಇಂಡೋನೇಶ್ಯಗಳ ನಡುವೆ ಆದ ಈ ಒಡಂಬಡಿಕೆಯನ್ನು ಸಾಧಿಸಿದ ಶ್ರೇಯಸ್ಸಿನ ಬಹು ಭಾಗ ಹೋಗಬೇಕಾದುದು ಸಂ. ರಾ. ಸಂಘದ ತಾತ್ಕಾಲಿಕ ಪ್ರಧಾನ ಕಾಯದರ್ಶಿ ಶ್ರೀ ಯು. ಥಾಂಟ್‌ಗೆ. ಮೊದಲೊಮ್ಮೆ ಈ ಸಂಬಂಧದ ಮಾತುಕತೆಗಳು ನಡುವಲ್ಲಿಯೇ ಬಿದ್ದುಹೋಗುವಂತಾದರೂ, ಶಾಂತಿಯುತಸಂಧಾನದ ಪರಿಷಾರ ಮಾರ್ಗದಲ್ಲಿ ಅವರು ವಿಶ್ವಾಸವನ್ನು ಕಳೆದುಕೊಳ್ಳಲಿಲ್ಲ. ಬಗೆಹರಿಯದ ಒಡಕನ್ನು ಉಭಯತರರಿಗೂ ಒಪ್ಪುವ ವಿಧಾನದಲ್ಲಿ ಪರಿಹರಿಸುವುದಕ್ಕೆ ಅನುಕೂಲವಾದ ಯೋಜನೆಯೊಂದನ್ನು ರೂಪಿಸಿದ ಭಾರತದಲ್ಲಿ ಅಮೆರಿಕೆಯ ವಾಜಿ ರಾಯಭಾರಿ ಶ್ರೀ ಎಲ್ಸ್‌ವರ್ತ್ ಬಂಕರ ಸೇವೆಯನ್ನೂ ನಾವು ಸ್ಮರಿಸಿಕೊಳ್ಳ ಬೇಕು. ಅಂತರಾಷ್ಟ್ರೀಯ ಅಭಿಪ್ರಾಯವನ್ನು ಮನ್ನಿಸಿ, ವಿಶ್ವದಲ್ಲಿನ ಬೇರೆ ಬೇರೆ ರಾಷ್ಟ್ರಗಳ ನಡುವಿನ ಬಹುದಾದ ವಿರಸವೆಲ್ಲವನ್ನೂ, ಸಮಸ್ಯೆಗಳೆಲ್ಲವನ್ನೂ ಶಾಂತಿ, ಸಮಾಧಾನ ಮಾತುಕತೆಗಳಿಂದಲೇ ಪರಿಹರಿಸುವುದು ಸಾಧ್ಯವೆಂಬುದಕ್ಕೆ ಲಾವೋಸ್ ಮತ್ತು ಪ. ಈರಿಯನ್ ಏಷ್ಯಾದಗಳೇ ಸಾಕ್ಷಿ. ಭಾರತ ಮೆತ್ತು ಪಾಕಿಸ್ತಾನ, ಭಾರತ ಮತ್ತು ಚೀನಾಗಳ ಸೀಮಾ ವಿವಾದವನ್ನಾದರೂ ಶಾಂತಿಯಿಂದಲೇ ಇತ್ಯರ್ಥಗೊಳಿಸುವುದು ಸಾಧ್ಯ ಮತ್ತು ಅಪೇಕ್ಷಣೀಯವೆಂಬ ನಮ್ಮ ಪ್ರಧಾನಿಯವರ ಮಾತು ನಿಜಕ್ಕೂ ಅರ್ಥವತ್ತಾಗಿದೆ.

ಬಂಕರರ ಯೋಜನೆ

ಬಂಕರರ ಯೋಜನೆಯಂತೆ ನೆದರ್‌ಲೇಂಡು ಪಶ್ಚಿಮ ಈರಿಯನ್ನಿನ ಮೇಲೆ ತನಗಿರುವ ಪ್ರಭುತ್ವವನ್ನು ಹಂತಹಂತಗಳಲ್ಲಿ ಇಂಡೋನೇಶ್ಯಕ್ಕೆ ಒಪ್ಪಿಸಲು ಸಿದ್ಧವಿರುವುದೆಂದು ಯು. ಥಾಂಟರು ಅಧ್ಯಕ್ಷ ಸುಕರ್ಣರಿಗೆ ಕಳೆದ ಜೂನ್ ತಿಂಗಳಲ್ಲಿಯೇ ತಿಳಿಸಿದ್ದರು. ಎರಡು ವರ್ಷಗಳ ಅವಧಿಯಲ್ಲಿ ಇಂಡೋನೇಶ್ಯಕ್ಕೆ ಪ್ರಭುತ್ವವನ್ನು ಹಸ್ತಾಂತರಿಸಲು ಈ ಯೋಜನೆಯು ಹೇಳುತ್ತದೆ. ಆನಂತರ, ಈರಿಯನ್ನಿನ ನಿವಾಸಿ ಪಪುವನರು ತಮ್ಮ ಭವಿಷ್ಯದ ಕುರಿತು ನಿರ್ಧಾರ ಮಾಡಬೇಕು. ಹೊಲ್ಲೆಂಡು ಇಷ್ಟೊಂದು ತ್ವರಿತದಲ್ಲಿಯೇ ಅಲ್ಲಿಂದ ಕಾಲ್ತೆಗೆಯಲು ಕಾರಣ ನೇನು ಎಂಬುದಕ್ಕೆ ಉತ್ತರನರಸಲು ದೂರ ಹೋಗಬೇಕಾಗಿಲ್ಲ. ಪೋರ್ಚುಗೀಸ ವಸಾಹತು ಗೋವೆಯನ್ನು ಭಾರತವು ಅ ನಿವಾರ್ಯ ಬಲಪ್ರಯೋಗದಿಂದ ವಿಮೋಚನೆಗೊಳಿಸಿದಂತೆಯೇ ಇಂಡೊನೇಶ್ಯವಾದರೂ ಪ. ಈರಿಯನ್ನ ವಿಮೋಚನೆಯ ಮಾತುಗಳನ್ನಾಡುತಿತ್ತು. ಆಲ್ಲದೆ ಇಂದಲ್ಲ ನಾಳೆಯಾದರೂ ತಾನು ಅಲ್ಲಿಂದ ಕಂಬಿ ಕೀಳುವುದು ಅನಿವಾರ್ಯವಿತ್ತು. ಹಾಗಾಗಿ ಅಲ್ಲಿನ ತನ್ನ ಪ್ರಭುತ್ವವನ್ನು ಕೊನೆಗೊಳಿಸಲೇ ಬೇಕಾಗಿರುವಾಗ, ವಿರಸವಿಲ್ಲದೆ ತೆರಳುವುದೇ ಸೂಕ್ತವೆಂದು ನೆದರ್‌ಲೇಂಡು ತಿಳಿದುಕೊಂಡಿದು ಅದರ ವಿವೇಕವನ್ನು ತೋರಿಸುತ್ತದೆ. ಸಂಯುಕ್ತ ರಾಷ್ಟ್ರ ಸಂಘದ ಮೂಧ್ಯವನ್ನು ಪ್ರಭುತ್ವ ಹಸ್ತಾಂತರೀಕರಣಕ್ಕೆ ಅವಲಂಬಿಸಿರುವುದು ಉಚಿತವೇ ಆಗಿದೆ.

ಲಾಭವಿಲ್ಲದ ವ್ಯವಹಾರ

ಹೊಲ್ಲೆಂಡು ತಾನು ಸಂಭಾವಿತ ರಾಷ್ಟ್ರವೆನಿಸಿಕೊಳ್ಳುವುದಕ್ಕಾಗಿಯೇ ಪ. ಈರಿಯನ್ನಿನ ಹಸ್ತಾಂತರಕ್ಕೆ ಒಪ್ಪಿತೆಂದರೆ ಅನ್ಯಾಯವಾಗುತ್ತದೆ. ಅದು ಮತ್ತು ವಾತಿಂಗಟನ್ನಿನ ವತ್ತಾಯಗಳು ಕೇವಲ ಪೂರಕ ಕಾರಣಗಳು ಮಾತ್ರ. ನಿಜವಾದ ಕಾರಣವೇರೆಯೇ ಇದೆ.ಪ ಈರಿಯನ್ನಿನ ಆರ್ಥಿಕ ಸ್ಥಿತಿಯು ಇಂದುನಷ್ಟಿಗಿರುವುದಿಲ್ಲ; ಆದುದರಿಂದ ಅಲ್ಲಿ ಹೊಲ್ಲೆಂಡು ಲಾಭ ಗಳಿಸುವುದು ಸಾಧ್ಯವಿಲ್ಲವಾಗಿದೆ. ಆಕ್ಟನ ತೈಲೋತ್ಪಾದನೆಯೂ ಈಗ ಕುಂಠಿತವಾಗಿರುವುದರಿಂದ ಹೊಲ್ಲೆಂಡು ಸುಮಾರು ೩೫೦ ಮಿಲಿಯ ಗಿಲ್ಡರ್‌ಗಳಷ್ಟು ನಷ್ಟವನ್ನು ಅನುಭವಿಸಿದೆಯೆಂದು ತಿಳಿಯಬುತ್ತದೆ. ಕೋಬಾಲ್ಟ್, ನಿಕ್ಕಲ್, ತಾಮ್ರ, ಚಿನ್ನ ಮೊದಲಾದ ಖನಿಜಗಳು ಇರುವುವಾದರೂ ಅವುಗಳ ಉದ್ಯಮ ಲಾಭಕರವಾಗಿ ನಡೆಯುವಂತಾಗಬೇಕಾದರೆ, ಇನ್ನೂ ಕೆಲವು ಕಾಲ ಬೇಕಾಗಬಹುದು. ಇದರ ಮೇಲೆ, ರಕ್ಷಣಾ ವ್ಯವಸ್ಥೆಯ ಮೇಲೆ ಹೊಲ್ಲೆಂಡು ಅಪಾರ ವೆಚ್ಚ ಮಾಡಬೇಕಾಗಿ ಬಂದಿದೆ; ಕಳೆದ ಕೆಲವೊಂದು ವರ್ಷಗಳಿಂದ ಪ. ಈರಿಯನ್ನಿನ ವ್ಯಾಪಾರದಲ್ಲಿ ಹೊಲ್ಲೆಂಡು ದೊಡ್ಡ ನಷ್ಟವನ್ನು ಎದುರಿಸಬೇಕಾಗಿತ್ತು.

ವಸಾಹತು ವಾದದ ಹ್ರಾಸೋತ್ಕ್ರಮಣ

ಪಶ್ಚಿಮ ಈರಿಯನ್ನಿನ ಹಸ್ತಾಂತರೀಕರಣದೊಡನೆ ಆಸ್ಯದಿಂದ ವಸಾಹತು ವಾದವೂ ಕಂಬಿ ಕೀಳುತ್ತಿರುವುದು ಗೋಚರಿಸುತ್ತದೆ. ಇದನ್ನು ಬಿಟ್ಟು ಉಳಿದಿರುವ ವಸಾಹತುಗಳೆಂದರೆ, ಬ್ರಿಟಿಷರ ಅಂಕಿತದಲ್ಲಿರುವ ಉತ್ತರ ಬೋರ್ನಿಯೊ, ಸರವಕ, ಬ್ರುನ್ನೀ ಮೊದಲಾದುವು. ಮಲಯಾದ ಪ್ರಧಾನಿ ಶ್ರೀ ತಂಕು ಅಬ್ದುಲ್ ರಹಿಮಾನ್ ಮತ್ತು ಬ್ರಿಟಿಷ ಪ್ರಧಾನಿ ಮಂತ್ರಿ ಶ್ರೀ ಹೆರಾಲ್ಡ್ ಮ್ಯಾಕ್ ಮಿಲನರು ಲಂಡನ್ನಿನಲ್ಲಿ ಸಭೆ ನೇರಿ 'ಮಲಯಾಸಿಯಾ' ರಚನೆಯ ಕುರಿತು ಮಾಡಿಕೊಂಡ ಒಡಂಬಡಿಕೆಯು ಆಗ್ನೇಯ ಏಶ್ಯಾದ ಚರಿತ್ರೆಯಲ್ಲಿಯೇ ಮಹತ್ವದ ಘಟನೆಯೂಗಿದೆ. ಸರವಕ ಮತ್ತು ಉತ್ತರ ಬೋರ್ನಿಯೊಗಳ ತನ್ನ ನಿರ್ವಾ ಭೌಮಾಧಿಕಾರವನ್ನು ಮಲಯಾಸಿಯಕ್ಕೆ ಒಪ್ಪಿಸಿಕೊಡುವ ಒಡಂಬಡಿಕೆಯೂ ಕೊನೆಯ ಹಂತವನ್ನು ತಲಪಿದೆ. ಮಲಯಾಸಿಯಾದ ರಚನೆಯಾದನಂತರ, ದೂರ ಪ್ರಾಚ್ಯದಲ್ಲಿರುವ ಬ್ರಿಟಿಷ ವಸಾಹತು ಹಾರ್ಂಗ್‌ಕಾಂಗ್ ಮಾತ್ರ. ಮಕಾವೊ ಮತ್ತು ಪೂರ್ವ ತಿಮೂರ್‌ಗಳು ಪೋರ್ಚುಗೀಸರ ಆಕಿತದಲ್ಲಿವೆ. ಹೀಗೆ ವಿಸ್ತಾರವಾದ ಬ್ರಿಟಿಷ ಸಾಮ್ರಾಜ್ಯವು ಒಡೆದು ಚಿಕ್ಕ ಚಿಕ್ಕ ಸ್ವತಂತ್ರ ರಾಷ್ಟ್ರಗಳಾಗಿ ರೂಪಗೊಳುತ್ತಿರುವುದು ಆಫ್ರೇಶ್ಯಾದ ಜನ ಜಾಗೃತಿಯ ದ್ಯೋತಕವಾಗಿದೆ.

ಆಗಣನೀಯ ವಿರೋಧ

ಮಲಯಾಸಿಯಾದಲ್ಲಿ ಸಿಂಗಾಪುರ ಮತ್ತು ಬ್ರುನ್ನಿಗಳು ಸೇರಿಕೊಳ್ಳಲು ಒಪ್ಪಿಗೆಯನ್ನಿತ್ತಿವೆ. ಬ್ರುನ್ನಿಯ ಸುಲ್ತಾನರು ಮಲಯಾಸಿಯದಲ್ಲಿ ಸೇರಿಕೊಳ್ಳಲು ಒಪ್ಪಿದ್ದಾರೆ; ಸಿಂಗಾಪುರದಲ್ಲಿ ಮಾತ್ರ ತುಸು ವಿರೋಧ ಭಾವನೆಯಿರುವಂತೆ ಭಾಸವಾಗುತ್ತದೆ; ಆದರೂ ಅದರ ಪ್ರಧಾನಿಯ ಮಾತುಗಳಲ್ಲಿ ವಿಶ್ವಾಸವಿಡುವುದಾದರೆ, ಆ ವಿರೋಧವು ಆಗಣ್ಯವಾಗುವುದು. ಸರವಕ ಮತ್ತು ಸಿಂಗಾಪುರಗಳ ಜನತೆಯು ತಾನು ಈಗ ಅನುಭವಿಸುತ್ತಿರುವ ಆಧಿಕಾರತನ, ಆರ್ಥಿಕ ಮತ್ತು ರಾಜಕೀಯ ಸ್ಥಾನವಾಪಗಳ ಬಗೆಗೆ ತುಸು ಅಸಮಾಧಾನ ತಳೆದಿದೆ. ಇಲ್ಲಿ ಬೆಳೆಯುತ್ತಿರುವ 'ಚೌವಿಶಂ' ಆಥವಾ 'ಕಮ್ಯುನಿಜಂ'ನ ಪ್ರಸಾರಕ್ಕೆ ಮತ್ತು ಮನೋವೃತ್ತಿಗೆ ಈ ಮಲಯಾಸಿಯಾ ಒಕ್ಕೂಟವು ಬಲವಾದ ತಡೆಯೊಗುವುದೇ ಇಂತಹ ವಿರೋಧಕ್ಕೆ ಕಾರಣವೆಂದು ತಿಳಿದಿದೆ.

ಮಲಯೊಸಿಯಾ

ಮಲಯಾದ ಮತ್ತು ಬ್ರಿಟಿಷ ಪ್ರಧಾನಿಗಳು ಕಳೆದ ಮೂರು ವಾರಗಳಿಂದ ಹೊಸ ರಾಷ್ಟ್ರ 'ಮಲಯಾ' ರಚನೆಯ ಕುರಿತು ಚರ್ಚೆಗಳನ್ನು ನಡೆಸಿ, ಈ ಸಂಬಂಧದ ಕರಡು ದಾಖಲೆಗಳನ್ನು ಇನ್ನಾರು ತಿಂಗಳುಗಳಲ್ಲಿ ಮುಗಿಸಲು ನಿರ್ಧರಿಸಿದ್ದಾರೆ. ಉತ್ತರ ಬೋರ್ನಿಯೊ, ಸರವಕ ಮತ್ತು

(ಐಂಬತ್ತೇ ಪುಟ ನೋಡಿರಿ)

ಭವ್ಯ ಕಟ್ಟಡಗಳಿಗೆ ಬೇಕಾಗುವ— ಕಿಟಕಿ-ಬಾಗಿಲು, ವೆಂಟಿಲೇಟರು ರೋಲಿಂಗ್ ಶಟರು, ಗೇಟುಗಳಿಗೆ

ಶಾಸ್ತಿ & ಕೊ
ಪಂಪನಕಟ್ಟೆ,
ಮಂಗಳೂರು—1

ಆಫೀಸು—ಮನೆಗಳಿಗೆ ಬೇಕಾಗುವ— ವಿವಿಧ ಕಪಾಟುಗಳು, ಮೇಜು ಕುರ್ಚಿಗಳು, ಮಂಚ, ಸೋಫಾಗಳಿಗೆ

ಶಿಕ್ಷಣ ಸಂಸ್ಥೆಗಳಲ್ಲಿ

ಸರಸ್ವತೀ ಸಂಹಾರವಾಗದಿರಲಿ

ಶ್ರೀ ರಾಶಿ.

ಸುಸಂಸ್ಕೃತ ನಾಗರಿಕರಾಗಿ ಬಾಳುವುದಕ್ಕೆ ಶಿಕ್ಷಣವು ಅತ್ಯವಶ್ಯವೆಂಬ ನಿತ್ಯ ಸತ್ಯವನ್ನಿಂದು ಎಲ್ಲರೂ ಒಪ್ಪಿದ್ದಾರೆ. ರಾಜನಿಗೆ ಶಿಕ್ಷ ಮತ್ತು ರಕ್ಷೆಯ ಅಧಿಕಾರವಿತ್ತು. ಇಂದು ರಾಜನಿಲ್ಲವಾದರೂ ರಾಜ್ಯಭಾರದ ಉತ್ತರದಾಯಿತ್ವವನ್ನು ಹೊತ್ತ ಸರಕಾರವಾದರೂ ದೇಶದ ಪ್ರಾಥಮಿಕ ಆವಶ್ಯಕತೆಗಳೆನಿಸಿದ ಇವುಗಳತ್ತ ತೀವ್ರ ಗಮನ ಹರಿಸುವುದು ಅಗತ್ಯವಾಗಿದೆ. ಇದನ್ನು ಮುನಗಂಡ ನಮ್ಮ ನಾಯಕ ಮಣಿಗಳು ಸಂವಿಧಾನ ರಚಿಸುವಾಗಲೇ ೬ರಿಂದ ೧೪ ವರ್ಷದ ವರೆಗಿನ ಮಕ್ಕಳಿಗೆ ಶಿಕ್ಷಣ ಕೊಡುವುದಕ್ಕೆ ಒಪ್ಪಿಕೊಂಡಿದ್ದರು. ಈ ದಿನೆಯಲ್ಲಿ ಮೊದಲ ವರ್ಷಗಳಲ್ಲಿ ಸಾಕಷ್ಟು ಉತ್ಸಾಹ ತೋರಿಸಲಿಲ್ಲ. ಕಾರಣ, ತೃತೀಯ ಪಂಚವಾರ್ಷಿಕ ಯೋಜನೆಯಲ್ಲಿ ೬ರಿಂದ ೧೧ ವರ್ಷ ಪ್ರಾಯದ ಮಕ್ಕಳನ್ನು ಖಡ್ಡಾಯ ಶಿಕ್ಷಣಕ್ಕೆ ಒಳಪಡಿಸುವ ಬಗ್ಗೆ ಹೆಚ್ಚಿನ ರಾಜ್ಯಗಳಲ್ಲಿ ಕಾಯದೆ ಕಾನೂನುಗಳು ಆಗಿವೆ. ಭಗವದನುಗ್ರಹವಿದ್ದರೆ, ೧೪ ವರ್ಷದ ವರೆಗಿನವರಿಗೂ ಮುಂದಿನ ಯೋಜನೆಯಲ್ಲಿ ಉಚಿತ ಶಿಕ್ಷಣ ನೀಡುವ ಸೌಕರ್ಯ ಒದಗುವುದೆಂದು ನಿರೀಕ್ಷೆಯಿದೆ.

ಶಿಕ್ಷಣ ತಜ್ಞರು ಶಿಕ್ಷಣವನ್ನು ಪ್ರಾಥಮಿಕ, ಮಾಧ್ಯಮಿಕ ಮತ್ತು ಉಚ್ಚವೆಂಬ ಮೂರು ಹಂತಗಳಲ್ಲಿ ವಿಂಗಡಿಸುತ್ತಾರೆ. ಉಚ್ಚ ಇಲ್ಲವೇ ವಿಶ್ವವಿದ್ಯಾಲಯ ಶಿಕ್ಷಣವು ಸರಕಾರದ ಕೈಯಲ್ಲಿಲ್ಲದಿರುವುದರಿಂದ ಅದರ ಬಗ್ಗೆ ಇಷ್ಟು ಹೆಚ್ಚು ಒರೆಯುವುದಿಲ್ಲ. ಜನತೆಯಿಂದ ಚುನಾಯಿತವಾದ ಜನಾಬ್ದಾರಿಯುತ ಸರಕಾರದ ಗಮನಕ್ಕೆ ಜನಾಭಿಪ್ರಾಯವನ್ನು ತಿಳಿಸುವುದು ನ್ಯಾಯೋಚಿತ. ಸರಕಾರವಾದರೂ ಆ ಅಭಿಪ್ರಾಯವನ್ನು ಒರೆಗೆ ಹಚ್ಚಿ ನೋಡುವುದು ಮತ್ತಷ್ಟು ಉಚಿತ.

ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳ ವಿಚಾರವನ್ನು ಪ್ರಸ್ತಾಪಿಸುವಾಗ ಕೆಲವೊಂದು ಸಮಸ್ಯೆಗಳು ಎರಡಕ್ಕೂ ಸಾಮಾನ್ಯವಾಗಿವೆ. ಮುಖ್ಯವಾಗಿ ಆಡಳಿತೆಯ ವೈಷಮ್ಯವು ಹಲವಾರು ತೊಂದರೆಗಳನ್ನು ಉಂಟುಮಾಡುತ್ತದೆ. ಖಾಸಗಿ ಒಡೆತನದಲ್ಲಿ, ಸ್ಥಳೀಯ ಸಂಸ್ಥೆಗಳ ಹೆಸರಿನಲ್ಲಿ, ಸರಕಾರಿ ಮಾಲಕತ್ವದಲ್ಲಿ ಇವು ಇರುತ್ತವೆ. ಇನ್ನೂ ಒಂದು ವಿಶೇಷವೆಂದರೆ, ಸರಕಾರದ ಶಿಕ್ಷಣ ಶಾಖೆಯು ಶಾಲೆಗಳನ್ನು ನಡೆಸಿಕೊಂಡು ಬರುವುದಲ್ಲದೆ ಇತರ ಸಚಿವಾಲಯಗಳೂ ಶಿಕ್ಷಣವನ್ನು ಹರಡುವಲ್ಲಿ ತಮ್ಮ ಕೈ ಹರಡಿಸುತ್ತವೆ. ಮತ್ತೊಂದು ವೈಚಿತ್ರ್ಯವೂ ಇಲ್ಲಿದೆ. ಇತ್ತೀಚಿನ ವರ್ಷಗಳಲ್ಲಿ ಮಿನುಗಾರಿಕೆ ವಿಭಾಗವು ತೆರೆದಿರುವ ಮಾಧ್ಯಮಿಕ ಶಾಲೆಗಳಿಗೂ ಶಿಕ್ಷಣ ವಿಭಾಗಕ್ಕೂ ಸಂಬಂಧವೇ ಇಲ್ಲವಂತೆ! ಶಿಕ್ಷಣ ಮಂತ್ರಾಲಯದ ರಿಜಿಸ್ಟರುಗಳಲ್ಲಿ ಅವುಗಳನ್ನೂ ಸೇರಿಸಲ್ಪಟ್ಟಿಲ್ಲವಂತೆ! ಅದರೂ ಸರಕಾರದ ಒಂದು ಸಚಿವ ಖಾತೆ ಅವುಗಳಿಗಾಗಿ ಹಣ ಸುರಿಯುತ್ತದೆ!

ಇದೇ ಮೊದರಿಯ ಭಿನ್ನತೆಗಳು:- ಸಮಸ್ಯೆಯನ್ನು ಉಂಟು ಮಾಡುತ್ತವೆ. ಶಿಕ್ಷಣ ಪ್ರಸಾರ ನೂಡುವುದು ಶಿಕ್ಷಣ ವಿಭಾಗದ ಕೆಲಸ, ಮಿನುಗಾರಿಕೆ ವಿಭಾಗದ್ದಲ್ಲ. ಮಿನುಗಾರಿಕೆಯ ಅಭಿವೃದ್ಧಿಗೆಂದು ತೆಗೆದಿರಿಸಿದ ಹಣವು ಶಿಕ್ಷಣ ಪ್ರಸಾರಕ್ಕಾಗಿ ವಿನಿಯೋಗವಾಗ ಬಾರದು. ಇನ್ನು ಇಂತಹ ಫಿಷರೀಸ್ ಶಾಲೆಗಳಲ್ಲಿ ಮಿನುಗಾರರು ಮಾತ್ರ ಪ್ರವೇಶ ಪಡೆಯುವುದಲ್ಲ; ಹಾಗೆ ಪಡೆಯ ಬೇಕೆಂದೂ ಸಾಧುವಲ್ಲ. ಮಿನುಗಾರಿಕೆಯನ್ನು ನಾವು ಮಾತ್ರಕ್ಕೊಂದೆರಡು ತಾಸು ಕಲಿಸಿದ ಮಾತ್ರಕ್ಕೆ ಪ್ರಯೋಜನವಿಲ್ಲ. ಅದುದರಿಂದ, ಈಗ ಇರುವ ಎಲ್ಲ ಫಿಷರೀಸ್ ಶಾಲೆಗಳನ್ನು ಶಿಕ್ಷಣ ವಿಭಾಗವು ತೆಗೆದುಕೊಳ್ಳಬೇಕು. ಮಿನುಗಾರಿಕೆಯಲ್ಲಿ ತರಬೇತಿಯನ್ನು, ಅದರಲ್ಲಿ ಪ್ರೌಢ ಶಿಕ್ಷಣವನ್ನು ಸ್ವತಂತ್ರವಾಗಿ ಪ್ರತ್ಯೇಕವಾಗಿ ಫಿಷರೀಸ್ ವಿಭಾಗವು ನೀಡಬೇಕು, ಮಿನುಗಾರಿಕೆಯ ಅಭಿವೃದ್ಧಿಗಾಗಿ ಹೆಚ್ಚು ಹೆಚ್ಚು ದುಡಿಯಬೇಕು. ಏಕೆಂದರೆ, ಮಿನು ಎಂಬುದು ಬಂಡವಳವಿಲ್ಲದ ಬೆಳೆ. ಅದು ಹಣದ ಬೆಳೆ. ರಾಜ್ಯದ ಸಂಪತ್ತನ್ನು ಹೆಚ್ಚಿಸಬಲ್ಲ ಉದ್ದಿಮೆಯದು. ಇಂತಹ ಉದ್ದಿಮೆಯ ಕಡೆಗೆ ಕೇಂದ್ರೀಕರಿಸಬೇಕಾದ ತನ್ನ ಲಕ್ಷ್ಯವನ್ನು ಅದು ಇತರತ್ರ ಹರಡುವುದು ನ್ಯಾಯವೇ?

ಇದೇ ಪ್ರಶ್ನೆಯನ್ನು ಹರಿಜನ ಶಾಲೆಗಳ ಬಗ್ಗೆಯೂ ಕೇಳಬಹುದು. 'ಲೇಬರ್ ಸ್ಕೂಲ್'ಗಳು ಒಂದು ಕಾಲದಲ್ಲಿ ಅಗತ್ಯವಿದ್ದಿರಬಹುದು. ಇಂದು ಕಾನೂನು ರೀತ್ಯಾ ಅಸ್ಪೃಶ್ಯತೆಯು ಅಪರಾಧವೆನಿಸುತ್ತದೆ; ನಮ್ಮ ಜನತೆಯಾದರೂ ಇಂದು ಸಾಕಷ್ಟು ಮುಂದೆ ಬಂದಿದೆ; ಅಸ್ಪೃಶ್ಯತೆಯ ಕಡೆಗೆ ಜಾಗ್ರತೆ ವಹಿಸುವ ಮಡಿವಂತಿಕೆಯು ಹ್ರಾಸವಾಗುತ್ತ ಬರುತ್ತಿದೆ. ಕಾಫಿ ಹೊಟೇಲುಗಳು, ಸಿನೆಮಾ ಮಂದಿರಗಳು, ಬಸ್ಸು ರೇಲುಗಳು ಭಗವಂತನಿಗೂ ಅಸಾಧ್ಯವೆನಿಸುವ ಅಸ್ಪೃಶ್ಯತಾ ನಿವಾರಣೆಯ ಕಾರ್ಯವನ್ನು ಭರದಿಂದ ಮುಂದುವರಿಸುತ್ತಿವೆ. ಶಿಕ್ಷಣಾಲಯಗಳೂ ಈ ಕಾರ್ಯದಲ್ಲಿ ಹಿಂದಿಲ್ಲ. ಸಾಮಾನ್ಯ ಶಾಲೆಗಳಲ್ಲಿಂದು ಎಲ್ಲರಿಗೂ ಪ್ರವೇಶ ದೊರೆಯುವುದಾದರೆ, ಲೇಬರ್ ಶಾಲೆಗಳಲ್ಲಿ ಕೇವಲ ಹರಿಜನ ಗಿರಿಜನರಿಗೆ ಮಾತ್ರ. ಇತರರಲ್ಲಿ ಹೋಗುವುದೂ ಇಲ್ಲ. ಸ್ವಾಭಾವಿಕವಾಗಿ ಹಿಂದುಳಿದ ಅವರು ಯೋಗ್ಯ ವಾತಾವರಣದ ಅಭಾವದಿಂದ ಮುಂದುವರಿಯಲು ಅತಂಕವಾಗುತ್ತದೆ. ಹಿಂದುಳಿದವರನ್ನು ಮುಂದೆ ತರುವುದು ಅಗತ್ಯ. ಅದುದರಿಂದ ಇತರ ಜಾತಿಯ ಮಕ್ಕಳೊಡನೆ ಇವರೂ ಬೆರೆತಿರುವುದಾದರೆ, ಆಗ ಸಂಸರ್ಗ, ಅನುಕರಣಗಳಿಂದಾಗಿ ಅವರು ತುಸು ಹೆಚ್ಚಿನ ಪ್ರಮಾಣದಲ್ಲಿ ಮುಂದುವರಿಯುವ ಅವಕಾಶವಿದೆ. ಅದುದರಿಂದ ಹರಿಜನ ಕಲ್ಯಾಣ ಶಾಖೆಯು ಈ ವಿಧದ ಶಾಲೆಗಳನ್ನು ಸರಕಾರಕ್ಕೆ ಬಿಟ್ಟುಕೊಡಬೇಕು; ಇತರ ವಿಧಾನಗಳಿಂದ ಆರ್ಥಿಕವಾಗಿ, ಸಾಂಸ್ಕೃತಿಕವಾಗಿ ಅವರು ಮುಂದುವರಿಯುವ ಬಗ್ಗೆ ಸಹಾಯ ಸಲ್ಲಿಸಬೇಕು, ಸರಕಾರವು ಈ ಬಗೆಯ ಪ್ರಾಥಮಿಕ ಶಾಲೆಗಳನ್ನು ಸಾಮಾನ್ಯ ಶಾಲೆಯನ್ನಾಗಿ ಮಾಡಿ, ಮುಂದುವರಿಸಿಕೊಂಡು ಹೋಗಬೇಕು.

ಬೇರೆ ಬೇರೆ ಆಡಳಿತೆಯಲ್ಲಿ ಶಾಲೆಗಳಿರುವುದರಿಂದ, ಅವುಗಳ ವ್ಯವಸ್ಥೆಯಲ್ಲಿ ಏಕರೂಪತೆಯಿರುವುದಿಲ್ಲ. ಅದುದರಿಂದ ಪವಿತ್ರವಾದ ಈ ಕ್ಷೇತ್ರದಲ್ಲಿ ಹೊಲಸು ಏಳಲು ಆರಂಭವಾಗುತ್ತದೆ. ವ್ಯವಸ್ಥಾಪಕರು ಅಧ್ಯಾಪಕರ ಸಂಘಟನೆ ಜಟಿಲವಾಗುತ್ತದೆ. ಒಂದೊಂದು ವಿಭಾಗದ ನೌಕರರ ಸೇವಾನಿಯಮಗಳು, ರಜೆಯ ಸವಲತ್ತುಗಳು ಬೇರೆ ಬೇರೆಯಾಗಿರುತ್ತವೆ. ಮೊನ್ನೆ ಮೊನ್ನೆಯ ವರೆಗೆ ವೇತನ ಪ್ರಮಾಣದಲ್ಲಿಯೂ ಭಿನ್ನತೆಯಿತ್ತು. ಒಂದು ಆಡಳಿತೆಯ ಶಾಲೆಯನ್ನು ಬಿಟ್ಟು ಉವಾಯಂತರವಿಲ್ಲದೆ ಮತ್ತೊಂದಕ್ಕೆ ಸೇರುವ ನೌಕರನು ಹಲವಾರು ವಿಧದ ಕಷ್ಟನಷ್ಟಗಳನ್ನು ಅನುಭವಿಸ ಬೇಕಾಗುತ್ತದೆ, ಅದುದರಿಂದ ೧ರಿಂದ ೭ನೆ ತರಗತಿಯ ವರೆಗೆ ಬೇರೆಬೇರೆಯಾಗಿದ್ದ ಪಾಠಕ್ರಮವನ್ನೀಗ ನಮ್ಮ ಸರಕಾರವು ಏಕ ಸಮಾನ ಮಾಡಿದಂತೆಯೇ ಪ್ರಾಥಮಿಕ ಶಿಕ್ಷಣ ಶಾಲೆಗಳ ವ್ಯವಸ್ಥಾಪಕತ್ವದಲ್ಲಿಯೂ ಏಕ ರೂಪಕತೆಯನ್ನು ತರಲೇ ಬೇಕು.

ಸಂವಿಧಾನದನ್ವಯ ಪ್ರಾಥಮಿಕ ಶಿಕ್ಷಣದ ಹೊಣೆಗಾರಿಕೆಯು ಸರಕಾರದ್ದು ಖಾಸಗಿ ಇಲ್ಲವೇ ಇನ್ನಿತರರು ಶಿಕ್ಷಣ ಸಂಸ್ಥೆಗಳನ್ನು ಮುಂದೆಯೂ ನಡೆಸಿಕೊಂಡು ಬರಬೇಕಾಗಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯ ಪ್ರಾಥಮಿಕ ಶಾಲಾ ಮೆನೇಜರರು ಸರಕಾರವು ಸಮಪರ್ಕ ರೀತಿಯಲ್ಲಿ ಸಹಾಯಧನವನ್ನು ಕೊಡದೆ ಹೋದರೆ, ತಮ್ಮ ತಮ್ಮ ಶಾಲೆಗಳನ್ನು ಮುಚ್ಚಬೇಕಾಗುವುದೆಂದು ಎಚ್ಚರಿಕೆಯನ್ನೂ ಹಿಂದೊಮ್ಮೆ ಇತ್ತಿದ್ದಾರಂತೆ. ಹೊಸ ಸಹಾಯ ಧನ ನಿಯಮಗಳು ಬಂದಾಗ, ಅದರಂತೆ ಸಹಾಯ ಧನವು ನೂರಕ್ಕೆ ನೂರರಷ್ಟು ಇಲ್ಲವೆಂದಾದಲ್ಲಿ, ಇವರಲ್ಲಿ ಕೊರತೆಯನ್ನು ತುಂಬಿಸುವ ಮೂಲಧನವೆಲ್ಲಿಂದ? ಆಗ ಮತ್ತೊಂದು ಸಮಸ್ಯೆ ಎದ್ದು ಬರುವುದು. ಅಧ್ಯಾಪಕರು ತಮ್ಮ ವೇತನದ ಒಂದಂಶವನ್ನು ಆನಧಿಕೃತವಾಗಿ ಬಿಟ್ಟುಕೊಡಬೇಕಾಗಿಯೂ ಬರಬಹುದು. ಹೀಗಾದಲ್ಲಿ ಪ್ರಗತಿಯೋ ವಿಗತಿಯೋ ಎಂದು ಊಹಿಸಯೇ ತಿಳಿದುಕೊಳ್ಳಬಹುದು.

ಅದುದರಿಂದ ಸರಕಾರವಿಂದು ತೀವ್ರವಾಗಿ ಯೋಚಿಸಬೇಕಾದ ವಿಚಾರಗಳಲ್ಲಿ ಪ್ರಾಥಮಿಕ ಶಾಲೆಗಳನ್ನು ಸಂಪೂರ್ಣವಾಗಿ ತಾನೇ ವಹಿಸಿಕೊಳ್ಳುವುದು ಮೊದಲನೆಯದು. ಭಾವಿ ನಾಗರಿಕರನ್ನು ರೂಪಿಸುವ ಅಧ್ಯಾಪಕರ ಭವಿಷ್ಯದ ಮೇಲೆ ತರಿಕಲ್ಲಾಡುವುದು ಸಲ್ಲದ ಕೆಲಸ. ಈಗ 'ಇದ್ದಂತೆಯೇ ಇರಲಿ' ಎಂದರೆ, ಮತ್ತೆ ಇಣುಕಿವಾಗ ಪ್ರಾಣವೇ ಉಳಿಯದು. ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರಿಗೆ ಪ್ರತ್ಯೇಕ ವೇತನ ಕೊಡುವಾಗ, ಅಧ್ಯಾಪಕರಲ್ಲಿ ಸಿಲೆ

(ಉನೇ ಪುಟ ನೋಡಿರಿ)

ಬ್ಯಾಂಕ್ ಖಾತೆಯನ್ನು ಯಾರು ತೆರೆಯಬಹುದು?

ಬ್ಯಾಂಕ್ ಖಾತೆ ತೆರೆಯಲು, ತಮಗೆ ಅಸಾಧ್ಯವೆನಿಸುವ ನಿರ್ಬಂಧಗಳಿವೆಯೆಂದು ಹಲವರು ಭಾವಿಸುತ್ತಾರೆ. ಇದೊಂದು ತಪ್ಪು ಭಾವನೆ. ದಿನಕೂಲಿ ಪಡೆವವನು ಕೂಡಾ ಬ್ಯಾಂಕಿನಲ್ಲಿ ಚಿಕ್ಕ ಉಳಿತಾಯ ಖಾತೆಯನ್ನು ತೆರೆಯಬಹುದು. ಇಂದಿನ ದಿನಗಳಲ್ಲಿ ಅದು ಅವಶ್ಯವೂ ಇದೆ. ಹೆಚ್ಚಿನ ಮಾಹಿತಿಗೆ ನಿಮಗೆ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ಎಲ್ಲರಿಗೂ ಏಕಪ್ರಕಾರದ ಸೌಜನ್ಯ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ESTD. 1921 ಸ್ಥಾಪನೆ

NAVAYUGA
KANNADA WEEKLY, UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಬ್ರಿಟಿಷ ಪ್ರಧಾನಿ

ಮೈಕಮಿಲನರಿಗೆ ಚಿಂತೆ ಕವಿದಿದೆ

ಬ್ರಿಟನ್ನಿನ ಪ್ರಧಾನ ಮಂತ್ರಿ ಹೆರಾಲ್ಡ್ ಮೈಕ್‌ಮಿಲನರು ಹಿಂದೊಮ್ಮೆ ನಿಯೋಜಿತ ಆರ್ಥ ವ್ಯವಸ್ಥೆಯನ್ನು ಕುರಿತು ಒಂದು ಪುಸ್ತಕವನ್ನು ಬರೆದಿದ್ದರು. ಆದರೆ, ಅವರಿಂದು ಆರ್ಥ ವ್ಯವಸ್ಥೆಯನ್ನು ರೂಪಿಸುವಲ್ಲಿ ಅಸಮರ್ಥರಾಗಿದ್ದಾರೆ. ರಾಜನೀತಿಕ ಅರ್ಥಶಾಸ್ತ್ರದ ಸಂಬಂಧದಲ್ಲಿ ಎಡಿನ್‌ಬರ್ಗ್ ಬರೆದಿರುವುದೇ ಸತ್ಯವೆಂಬುದೀಗ ಅವರಿಗೆ ಮನವರಿಕೆಯಾಗಿದೆ.

ಕೆಲವು ದಿನಗಳಿಗೆ ಹಿಂದೆ ಮೈಕಮಿಲನರು ತನ್ನ ಮಂತ್ರಿಮಂಡಲಿಯನ್ನು ಪುನರ್ಘಟಿಸಿದರು. ಇದು ಅನಿರೀಕ್ಷಿತವೆಂಬಂತೆಯೇ ನಡೆಯಿತು. ಯುರೋಪಿನ ಸಾಮಾನ್ಯ ಮಾರುಕಟ್ಟೆಯನ್ನು ಪ್ರವೇಶಿಸಲು ಬ್ರಿಟನ್ನು ಮಾಡುತ್ತಿರುವ ಪ್ರಯತ್ನಗಳಿಗೂ ಈ ಮಂತ್ರಿಮಂಡಲದ ಬದಲಾವಣೆಗಳಿಗೂ ನಿಕಟ ಸಂಬಂಧವಿದೆಯೆಂದು ಊಹಿಸಲು ಅವಕಾಶವಿದೆ.

ತನ್ನ ಪೂರ್ವಾಧಿಕಾರಿಯಾಗಿದ್ದ ಶ್ರೀ ಈಡನ್ನರಂತೆಯೇ ಈಗ ಮೈಕಮಿಲನರು ಎರಡು ನೀತಿಗಳ ಬಗ್ಗೆ ಜೋರಾಗಿ ಬೇಕಾಗಿದೆ. ಬ್ರಿಟನ್ನಿನ ಕೂಲಿಗಾರ ಪಕ್ಷವು ಶ್ರೀ ಮೈಕಮಿಲನರ ವಿರುದ್ಧ ನಿರಾತ್ಯಕ ಗೊತ್ತುವಳಿಯನ್ನು ಮುಂದೆ ತರುವ ಪ್ರಯತ್ನ ಮಾಡುತ್ತಿದೆ. ಅದರ ಜೊತೆಗೆ ಸೆಲ್ವಿನ್ ಲಾಯ್ಡರನ್ನು ಸಂಪುಟದಿಂದ ಹೊರಗಿರಿಸಿದುದರಿಂದ ಅವರ ಕಂಸರ್ವೇಟಿವ್ ಪಕ್ಷದ ಸದಸ್ಯರಲ್ಲಿಯೂ ಕೆಲವರು ಕುಪಿತರಾಗಿದ್ದಾರೆ.

ಸುಮಾರು ಮೂರು ವರ್ಷಗಳಿಗೆ ಮೊದಲು, ಎಂದರೆ, ೧೯೫೯ನೆ ಅಕ್ಟೋಬರ ತಿಂಗಳು ಹೆರಾಲ್ಡ್ ಮೈಕ್‌ಮಿಲನರ ಮಂತ್ರಿ ಮಂಡಲವು ಸ್ಥಾಪಿತವಾಗಿತ್ತು. ಸಾರ್ವತ್ರಿಕ ಚುನಾವಣೆಗಳಾದ ನಂತರ ರಚಿಸಲ್ಪಟ್ಟ ಈ ಮಂಡಲವು ಆಸಾಧಾರಣ ಪರಿಸ್ಥಿತಿಯು ತಲೆದೋರಿದಿದ್ದರೆ, ೧೯೬೪ರ ಆಕ್ಟೋಬರದ ವರೆಗೂ ಮುಂದುವರಿಯುವುದು.

ಅಂತೋನಿ ಈಡನ್ನರು ಪ್ರಧಾನ ಮಂತ್ರಿಯಾಗಿರುವಾಗಲೂ ಆರ್ಥ ನೀತಿಯ ಸಮಸ್ಯೆಯು ಎದ್ದಿತ್ತು. ಈಗಲಾದರೂ ಅದೇ ಸಮಸ್ಯೆಯು ಬೇರೊಂದು ರೂಪದಿಂದ ತಲೆದೋರಿದೆ. ಆಗ ಬ್ರಿಟನ್ನು ವಿನಿಮಯ ಮುದ್ರೆಗಳ ಸಂಕಟಮಯ ಕಾಲದಲ್ಲಿ ಉಂಟುತ್ತ ಸಾಗುತಿತ್ತು. ಇದರ ಮೇಲೆ ಸೈಪ್ರಸ್‌ನ ಸಮಸ್ಯೆ ಎದ್ದು ಬಂದಿತು. ಬಗ್ದಾದ ಒಡಂಬಡಿಕೆಯಲ್ಲಿ ಜೋರ್ಡಾನವನ್ನು ಕಸಿದುಕೊಳ್ಳುವ ಪ್ರತಿಕ್ರಿಯಾ ರೂಪವು ಪಶ್ಚಿಮ ಏಶ್ಯಯಾದಲ್ಲಿ ಬ್ರಿಟನ್ನಿನ ಪ್ರತಿಷ್ಠೆಯ ನೆಲೆಲೆ ಕಠಾರಸ್ಯಹಾರ ಮಾಡಿತು. ಇವೆಲ್ಲವುಗಳಿಂದಾಗಿ ಬ್ರಿಟನ್ನಿನ ರಾಜಕೀಯ ಸ್ಥಿತ್ಯಂತರಗಳು ನಡೆದುವು.

ಪ್ರಧಾನ ಮಂತ್ರಿಯಾಗುವುದಕ್ಕೆ ಮೊದಲು ಶ್ರೀ ಮೈಕಮಿಲನರು ಶ್ರೀಈಡನ್ನರ ಸಂಪುಟದಲ್ಲಿ ಆರ್ಥ ಮಂತ್ರಿಯಾಗಿದ್ದರು ಅವರು ಬ್ರಿಟನ್ನಿನ ವಿದೇಶ ಮಂತ್ರಿಗಳಾಗಿಯೂ ಸಂರಕ್ಷಣಾ ಮಂತ್ರಿಗಳಾಗಿಯೂ ಸೇವ ಸಲ್ಲಿಸಿದ್ದರು. ೧೯೫೫ರಲ್ಲಿ ಅವರಿಕೆ ಫ್ರಾನ್ಸ್, ಮತ್ತು ರಶ್ಯಗಳ ವಿದೇಶ ಮಂತ್ರಿ ಸಮ್ಮೇಳನಪೊಂದು ಜಿನೇವಾದಲ್ಲಿ ನಡೆದಿತ್ತು ಬ್ರಿಟನ್ನಿನ ವಿದೇಶ ಮಂತ್ರಿಯಾಗಿದ್ದ ಮೈಕಮಿಲನರು ಅದರಲ್ಲಿ ಭಾಗವಹಿಸಿದ್ದರು ೧೯೫೬ರಲ್ಲಿ ಕಾಮನ್‌ವೆಲ್ತ್ ಆರ್ಥಮಂತ್ರಿ ಸಮ್ಮೇಳನ ನಡೆದಾಗಲೂ ಬ್ರಿಟಿಷ ನಿತ್ತಮಂತ್ರಿಯೆಂದು ಇವರು ಅದರಲ್ಲಿ ಪಾತ್ರವಹಿಸಿದ್ದರು.

ಇಂದು ಅವರ ಮಂತ್ರಿ ಮಂಡಳವು ಸಂಕಷ್ಟವನ್ನು ಎದುರಿಸುತ್ತಿದೆ. ಆದರೂ ಶ್ರೀ ಮೈಕಮಿಲನರು ತನ್ನ ಪಕ್ಷದ ಕಡೆಗೆ ಸಂಪೂರ್ಣ ನಿಷ್ಠೆಯನ್ನು ಪ್ರದರ್ಶಿಸುತ್ತಾರೆಂಬುದು ಖಂಡಿತ ಕಳೆದ ಮಹಾಯುದ್ಧಾನಂತರ, ಚರ್ಚಿಲ್ಲರು ಮರಳಿ ಪ್ರಧಾನಿಪದವಿಗೆರಿದಾಗ, ಶ್ರೀ ಮೈಕಮಿಲನರು ಆವಾಸ ಶಾಖೆಯ ಮಂತ್ರಿಯಾಗಿ ನಿಯುಕ್ತರಾದರು. ಸಾಮಾನ್ಯವಾಗಿ ಈ ಮಂತ್ರಿ ಶಾಖೆಯು ಯಾವ ಗಣ್ಯ ಸ್ಥಾನವನ್ನು ಪಡೆದಿರುವುದಿಲ್ಲ. ಯುದ್ಧದ ದಸೆಯಿಂದಾಗಿ, ಬ್ರಿಟನ್ನಿನ ಮನೆಗಳೆಲ್ಲವೂ ಕೆಟ್ಟು ಹೋಗಿದ್ದುವು; ಮೊದಲಿನ ಆಟ್ಲಿ ಸರಕಾರವು ಇವುಗಳ ಪುನಾರಚನೆಯತ್ತ ಹೆಚ್ಚಿನ ಗಮನ ನೀಡಿರಲಿಲ್ಲ. ತಾನು ಆ ಶಾಖೆಯ ಹೊಣೆಗಾರಿಕೆಯನ್ನು ಹೊತ್ತ ನಂತರ, ಬ್ಲೈಕ್‌ಪೂಲಿನಲ್ಲಿ ಸೇರಿದ್ದ ಕನ್ಸರ್ವೇಟಿವ್ ಪಕ್ಷದ ಅಧಿವೇಶನದಲ್ಲಿ ಮೂರು ಲಕ್ಷ ಮನೆಗಳನ್ನು ಕಟ್ಟಿಸುವ ಯೋಜನೆಯೊಂದನ್ನು ಮಂಡಿಸಿ, ಅದನ್ನು ಮಂಡೂರು ಮಾಡಿಸಿದ ಶ್ರೇಯಸ್ಸು ಮೈಕಮಿಲನರದು. ಈ ಯೋಜನೆಗೆ ಮೂರ್ತ ಸ್ವರೂಪವನ್ನೂ ಅವರು ಕೊಡದಿರಲಿಲ್ಲ. ಮುಂದೆ ಮೂತ್ರ ಪ್ರಧಾನ ಮಂತ್ರಿ ಮೈಕಮಿಲನರು ಹೊಸ ಕಟ್ಟಡಗಳನ್ನು ಕಟ್ಟಿಸುವುದನ್ನು ಪ್ರತಿಬಂಧಿಸಿದರು; ಮೋಟಾರು ಮತ್ತಿತರ ವಿಲಾಸ ಯೋಗ್ಯ ಸಾಮಗ್ರಿಗಳನ್ನು ಕೊಂಡುಕೊಳ್ಳುವುದಕ್ಕೂ ತಡೆಯೊಡ್ಡಿದರು.

ಹಿಂದಿನ ಸಫಲತೆಯೇನೇ ಇರಲಿ, ಹೆರಾಲ್ಡ್ ಮೈಕಮಿಲನರು ಆರ್ಥಿಕ ಸಂಕಷ್ಟವನ್ನು ಎದುರಿಸುತಿದ್ದಾರೆ. ಈ ಸಮಸ್ಯೆಯನ್ನು ಪರಿಹರಿಸಲು ಅವರು ತ್ರಿಕರಣ ಪೂರ್ವಕವಾಗಿ ಆಸ್ಥೆ ವಹಿಸುತಿದ್ದಾರೆ. ಇದರಲ್ಲಿ ಅವರು ಸಫಲರಾಗುವರೇ ಇಲ್ಲವೇ ಕಾದು ನೋಡಬೇಕಾಗಿದೆ.

ದಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಡೊಂಗರಕೇರಿ, ಮಂಗಳೂರು-3

ಪರಿಷ್ಕರಿಸಿದ ಮತ್ತು ಹೆಚ್ಚಿಸಿದ ಠೇವಣಾತಿ ಬಡ್ಡಿ ದರಗಳು:

ಕಾಯಂ ಠೇವಣಾತಿಗಳು:		ರೂ. ನ.ಪೈ.ಸೆ
ಒಂದರಿಂದ ಮೂರು ತಿಂಗಳು ವರೆಗೆ	ವಾರ್ಷಿಕ ಸೇಕಡಾ	4-50
ಆರರಿಂದ ಹನ್ನೆರಡು ತಿಂಗಳು ವರೆಗೆ	,, ,,	4-75
ಹದಿಮೂರರಿಂದ ಇಪ್ಪತ್ತನಾಲ್ಕು ತಿಂಗಳು ವರೆಗೆ	,, ,,	5-00
ಇಪ್ಪತ್ತೈದರಿಂದ ಮೂವತ್ತಾರು ತಿಂಗಳು ವರೆಗೆ	,, ,,	5-25
ನಾಲ್ವತ್ತೆಂಟು ತಿಂಗಳು ಮತ್ತು ಹೆಚ್ಚಿಗೆ	,, ,,	5-50
ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು	,, ,,	3-25

ನಿಮ್ಮ

ದಿನಶಿಕ್ಕಿದ ಉಳಿತಾಯವನ್ನು / ಮಾಸಿಕ ಉಳಿತಾಯವನ್ನು
ಹನಿ ಡಿಪೋಸಿಟುಗಳಲ್ಲಿ / ಕ್ಯುಮುಲೇಟಿವ್ ಡಿಪೋಸಿಟುಗಳಲ್ಲಿ

ವಿನಿಯೋಗಿಸಿರಿ.

THE KARNATAKA BANK LIMITED

3—7—1962

ಮೆಂಡಲೇಯ ಜೇಲಿನೊಳಗಡೆ

ಅಂಧಕಾರದಲ್ಲಿ ಜ್ಞಾನ ಪ್ರಕಾಶ

೧೯೦೮ರ ಜುಲಾಯಿ ೩೩. ರಾತ್ರೆಯ ಹತ್ತು ಗಂಟೆ ಸರಿದಿದ್ದರೂ ಬೊಂಬಾಯಿಯ ಉಚ್ಚ ನ್ಯಾಯಾಲಯದಲ್ಲಿ ಇನ್ನೂ ಗಜಬಿಜಿ ಸದ್ದು ನಡೆದಿತ್ತು. ಹೊರಗಡೆ ಸಾವಿರಾರು ಜನರು ಗುಂಪು ಸೇರಿ ಏನೋ ಮಹತ್ವದ ಸೂಚನೆಯನ್ನು ಪ್ರತೀಕ್ಷಿಸುತ್ತಿದ್ದರು. ಒಳಗಡೆ ನ್ಯಾಯ ಮೂರ್ತಿ ಡಾಬರರು ತನ್ನ ಜೀವನದ ಸರ್ವಾಧಿಕ ಮಹತ್ವಪೂರ್ಣ ಮೊಕದ್ದಮೆಯ ತೀರ್ಮಾನವನ್ನು ಓದುತಿದ್ದರು. ಅಪರಾಧಿಯ ಕಟಪಂಜರದಲ್ಲಿ ಭಾರತೀಯ ಅಶಾಂತಿಯ ಜನಕರೆಂಬ ಹೆಸರಿಗೆ ಗುರಿಯಾದ ಲೋಕಮಾನ್ಯ ಬಾಲ ಗಂಗಾಧರ ತಿಲಕರಿದ್ದರು; ಮರಾಠಿ ಪತ್ರಿಕೆ 'ಕೇಸರಿಯಲ್ಲಿ 'ದೇಶದ ದುರ್ದೈವ' ಮತ್ತು ಈ ಉಪಾಯಗಳು ಯೋಗ್ಯವಲ್ಲ' ಎಂಬೆರಡು ಲೇಖಗಳು ಪ್ರಕಟವಾಗಿದ್ದು, ಇವುಗಳು ಸರಕಾರದ ದೃಷ್ಟಿಯಲ್ಲಿ ರಾಜದ್ರೋಹದ ಕೃತಿಗಳೆನಿಸಿದುದರಿಂದ ಅವರ ಮೇಲೆ ಅಪರಾಧವನ್ನು ಹೊರಿಸಲಾಗಿತ್ತು.

ರಾಜದ್ರೋಹದ ಅಪರಾಧವು ಸ್ಥಿರವಾಗಿ ಲೋಕಮಾನ್ಯ ತಿಲಕರಿಗೆ ಆರು ವರ್ಷಗಳ ಶಿಕ್ಷೆ ಮತ್ತು ಒಂದು ಸಾವಿರ ರೂಪಾಯಿಗಳ ಜುಲುಮಾನೆಯು ವಿಧಿಸಲ್ಪಟ್ಟವು. ಆ ರಾತ್ರೆ ತಿಲಕರಿಗೆ ೫೨ ವರ್ಷಗಳು ತುಂಬುತಿದ್ದುವು. ಅವರು ತಮ್ಮ ೫೩ನೆಯ ಜನ್ಮದಿನ ಉದಯಿಸಿದ ಸೂರ್ಯನ ಕಿರಣಗಳನ್ನು ಜೇಲಿನ ಸರಳುಗಳ ಮಧ್ಯೆ ವೀಕ್ಷಿಸಿದರು. ಸಬರಮತಿಯ ಆ ಜೇಲುಖಾನೆಗೆ ಅವರನ್ನು ಆ ರಾತ್ರಿ ಒಂದು ವಿಶೇಷ ರೇಲು ಗಾಡಿಯ ಮೂಲಕ ತಂದಿದ್ದರು. ಹೀಗೆ ದೇಶದ ಈ ಮಹಾ ಸುಪುತ್ರ ತನ್ನ ೫೩ನೆಯ ಜನ್ಮದಿನದಂದು ತನ್ನ ಜೀವನದಲ್ಲಿ ಸರ್ವ ದೀರ್ಘ ಮತ್ತು ಕಷ್ಟಪ್ರದವಾದ ಕಾರಾಗೃಹವಾಸದ ಮೂಲಕ ಜೀವನಾರಂಭಕ್ಕೆ ತೊಡಗಿದರು.

ಆದರೆ, ಎರಡು ತಿಂಗಳುಗಳ ನಂತರ, ೨೩—೯—೧೯೦೮ರಂದು ಅವರನ್ನು ಬರ್ಮಾದ ಮೆಂಡಲೇಯ ಕೇಂಬ್ರೀಯ ಜೇಲುಖಾನೆಗೆ ಒಯ್ದರು. ಅಲ್ಲಿ ಕಟ್ಟಿಗೆಯಿಂದ ತಯಾರಿಸಲಾದ ಒಂದು ಕೋಣೆಯಲ್ಲಿ ಇರಿಸಿದರು.

ಈ ಕೋಣೆಯೊಳಗೆ ಚಳಿ, ಸೆಖೆಗಳು ಬೇಕೆಂಬಾಗ ಪ್ರವೇಶ ಪಡೆಯುತಿದ್ದುವು. ಮೆಂಡಲೇಯ ಸೆವಾಮಾನವಾದರೂ ಉತ್ತಮವಾಗಿರಲಿಲ್ಲ. ಅದರ ಮೇಲೆ ಮರದ ಮನೆಯಿಂದ ಮೇಲೆ ಹೇಳಬೇಕೆ? ಸೆಪೆಯ ದಿನಗಳಲ್ಲಿ ಆ ಕೋಣೆಯು ಭಟ್ಟಿಯಂತೆ ಒಂದೇ ಸವನೆ ಬಿಸಿಯೇರುತ್ತಿತ್ತು; ಚಳಿಗಾಲದಲ್ಲಿ ರಕ್ತ ಹೆಪ್ಪು ಗಟ್ಟಿಸುವ ಚಳಿಗಾಳಿ ಅಡೆ ತಡೆಗಳಿಲ್ಲದೆ ಅದರೊಳಗೆ ನುಗುತ್ತಿತ್ತು.

ಸುಭಾಸಚಂದ್ರ ಭೋಸರೂ ೧೯೨೫ರಲ್ಲಿ ಇದೇ ಜೇಲಿನಲ್ಲಿರ ಬೇಕಾಗಿತ್ತು. ಮೆಂಡಲೇಯ ಸೆಪೆಯ ಕುರಿತು ಬರೆಯುತ್ತ, ಇಲ್ಲಿನ ಸೆಖೆಗಾಲ ಬಹಳ ದೀರ್ಘವಾಗಿದೆ. ಸೆಪೆಯಿಂದಾಗಿ ಮೈಯೆಲ್ಲವೂ ಉರಿಯುತ್ತಿರುವಂತೆ ಭಾಸವಾಗುತ್ತದೆ. ನಾನು ಇಂತಹ ಸೆಪೆಯನ್ನು ಜೀವಮಾನವಿಡಿ ಎಲ್ಲಿಯೂ ಕಂಡಿಲ್ಲ, ಶರೀರವಿಡಿ ಬೆವರು ಮೈ ಮೇಲಿನ ಬಟ್ಟೆಯು ಒದ್ದೆಯಾಗುವುದು; ಅರ್ಧ ರಾತ್ರಿಯ ವರೆಗೆ ಗಾಳಿಯೂ ಬಿಸಯಾಗಿಯೇ ಇರುವುದರಿಂದ ಮತ್ತು ಜೇಲಿನಕೋಣೆಯು ತೀರಇಕ್ಕಟ್ಟಾದುದರಿಂದ ಉಸಿರುಕಟ್ಟಿದಂತಾಗುವುದು; ನಿದ್ರೆ ಬರುವುದೂ ಅಸಂಭವವಾಗುವುದು." ಎಂದು ಹೇಳಿದ್ದಾರೆ. ಅಲ್ಲಿನ ವಾತಾವರಣವು ಬಹಳ ಅಸ್ವಾಸ್ಥ್ಯಕರವಾಗಿತ್ತು ಎಂದು ಬೋಸರ ಹೇಳಿಕೆಯಿಂದ ಮನವರಿಕೆಯಾಗುವುದು ಅವರು ಹೀಗೆ ಬರೆದಿದ್ದಾರೆ" ಗಂಟಲಿನಲ್ಲಿ ಕಫತುಂಬುವುದು ಅಲ್ಲಿ ಸಾಮಾನ್ಯವಾದುದು. ಇನ್‌ಫ್ಲುಯೆಂಜಾದ ಆಕ್ರಮಣ ದಿನನಿತ್ಯವೆಂಬಂತಿದೆ. ವಾತಾವರಣವು ನಿರುತ್ಸಾಹದಾಯಕವಾಗಿರುವುದರಿಂದ ಯಾವ ಕೆಲಸವನ್ನು ಮಾಡುವುದಕ್ಕೂ ಸಾಧ್ಯವೆನಿಸುತ್ತಿರತಲಿಲ್ಲ."

ಇಂತಹ ಪ್ರಾಣಿ ವಾಸಕ್ಕೆ ಅಯೋಗ್ಯವೆನಿಸಿದ ಮೆಂಡಲೇಯ ಜೇಲಿನಲ್ಲಿ ಲೋಕಮಾನ್ಯರು ತನ್ನ ಆರು ವರ್ಷದ ಶಿಕ್ಷೆಯನ್ನು ಅನುಭವಿಸಿದುದು ಮಾತ್ರವಲ್ಲ; ಈ ಅವಧಿಯಲ್ಲಿಯೇ ಲೋಕವಿಖ್ಯಾತವಾದ ತನ್ನ 'ಗೀತಾರಹಸ್ಯ"ವೆಂಬ ಬೃಹದ್ಗ್ರಂಥವನ್ನೂ ಬರೆದರು. ಈ ಭಯಂಕರ ಪರಿಸ್ಥಿತಿಯಲ್ಲಿಯೂ ಅವರು ನಿರುದ್ವೇಗರಾಗಿ ಶಾಂತಚಿತ್ತದಿಂದ ಗಂಭೀರವಾಗಿ ತನ್ನ ಅಧ್ಯಯನದಲ್ಲಿ ಸತ್ಪರರಾಗುತಿದ್ದರು. ಅಲ್ಲಿ ಅವರು ತನ್ನ ಹೆಚ್ಚಿನ ಸಮಯವನ್ನು ಧರ್ಮಚಿಂತನೆ ಮತ್ತು ಧರ್ಮಾಭ್ಯಾಸಗಳಲ್ಲಿ ಕಳೆಯುತ್ತಿದ್ದರು. ತನಗಿದ್ದ ಆ ಕಠಿನ ಪರಿಸ್ಥಿತಿಗಳ ನಡುವೆಯೂ ಅವರು ಸುಮಾರು ಏನೂರು ಗ್ರಂಥಗಳನ್ನು ಓದಿದ್ದರು. ಅನಾಸಕ್ತಿ ಮತ್ತು ನಿಸ್ಪೃಹತೆಯ ಮೂರ್ತಿಯಂತಿದ್ದ ತಿಲಕರು ಇಲ್ಲಿಯೇ ಕತ್ತಲೆಯ ಕೋಣೆಯಲ್ಲಿ ಕುಳಿತುಕೊಂಡು 'ಗೀತಾರಹಸ್ಯ'ವನ್ನು ಬರೆದು, ಅದರಲ್ಲಿ ಕರ್ಮಯೋಗದ ಮಹತ್ವವನ್ನೂ ಶ್ರೇಷ್ಠತೆಯನ್ನೂ ಪ್ರತಿಪಾದಿಸಿದರು. ಇದೇ ಸೆರೆಮನೆಯಲ್ಲಿ ಅವರು ಜರ್ಮನ್, ಪಾಳಿ ಮತ್ತು ಫ್ರೆಂಚ ಭಾಷೆಗಳನ್ನು ಕಲಿತುಕೊಂಡರು.

ಮೆಂಡಲೇಯಲ್ಲಿ ತಿಲಕರು ಯೋಗಿಯಂತೆ ಜೀವಿಸಿದರು. ಅವರು ಬಹು ಮುಂಜಾನೆಯೇ ಏಳುತಿದ್ದರು. ಪ್ರಾತರ್ವಿಧಿಗಳನ್ನು ಮುಗಿಸಿದ ನಂತರ ಸುಮಾರು ಒಂದೂವರೆ ಗಂಟೆಯ ಸಮಯ ಸಮಾಧಿಸ್ಥಿತಿಯಲ್ಲಿ ಇರುತಿದ್ದರು. ಅಮೇಲೆ ಬೆಳಗಿನ ಚಹವನ್ನು ಸೇವಿಸಿ, ಅಧ್ಯಯನಕ್ಕೆ ತೊಡಗುತಿದ್ದರು. ಜೇಲಿನ ಕೋಣೆಯಲ್ಲಿ ಅವರು ತನ್ನ ಅಡುಗೆಯವನೊಡನಿರುತಿದ್ದರು. ಒಂದು ತಿಂಗಳಲ್ಲಿ ಅವರು ಕೇವಲ ಒಂದು ಪತ್ರವನ್ನು ಬರೆಯುತಿದ್ದರು; ಅವರಿಗೆ ಬರುತಿದ್ದುದೂ ಒಂದೇ ಒಂದು ಪತ್ರ. ಮೂರು ತಿಂಗಳುಗಳಿಗೊಮ್ಮೆ ಬೇಕೆಂದಿದ್ದರೆ, ಒಬ್ಬನನ್ನು ಭೆಟ್ಟಿಯಾಗಬಹುದಿತ್ತು. ವರ್ತಮಾನ ಪತ್ರಿಕೆಗಳು, ರಾಜನೀತಿಕ ಇಲ್ಲವೇ ಸಾಮಾಜಿಕ ಪುಸ್ತಕಗಳು ಅವರಿಗೆ ಓದಲು ದೊರೆಯುತ್ತಿರಲಿಲ್ಲ. ಅವರ ಏಕಾಕಿ ಜೀವನವೆಂದರೆ, ಸಂಪೂರ್ಣವಾದ ಏಕಾಂಗೀ ಜೀವನವೆನ್ನುವಂತಿತ್ತು. ಇಷ್ಟೊಂದು ಪರಿಸ್ಥಿತಿಗಳು ಪ್ರತಿಕೂಲವಾಗಿದ್ದರೂ ಅವರು ಚಿಂತಿತರಾಗುತ್ತಿರಲಿಲ್ಲ; ಉದ್ವಿಗ್ನರಾಗುತ್ತಿರಲಿಲ್ಲ.

ತಿಲಕರಿಗೆ ಅಡುಗೆ ಇತ್ಯಾದಿಗಳನ್ನು ಮಾಡಿಕೊಡಲು ಕುಲಕರ್ಣಿ ಎಂಬವನನ್ನು ಅವರ ಬಳಿಯಲ್ಲಿಯೇ ಇಳಿಯಗೊಟ್ಟಿದ್ದರು. ಅವರಿಗೆ ಕೊಡುತಿದ್ದ ಆಹಾರವು ಶುದ್ಧವಾಗಿತ್ತು. ಇದರಿಂದಾಗಿ ಅವನ ಆರೋಗ್ಯವು ಕೆಡುತ್ತ ಬಂತು. ಇದನ್ನು ತಿಳಿದ ತಿಲಕರು ತನಗೆ ದೊರೆಯುತಿದ್ದ ಆಹಾರದಲ್ಲಿಯೇ ಆತನಿಗೂ ಒಂದಂಶವನ್ನು ಮಿಗಿಸಿ ಹಂಚಿಕೊಂಡು ತಿನ್ನುತಿದ್ದರು.

ಮಿಕ್ಕಲು ಪನ್ನವನ್ನೂ ಆಹಾರ ಸದಾರ್ಥಗಳನ್ನೂ ತಿಲಕರು ಪಕ್ಷಿಗಳಿಗೆ ಹಾಕುತಿದ್ದರು. ಆದುದರಿಂದಲೇ ಹಕ್ಕಿಗಳು ಗೂವಾಗಲೂ ಅವರ ಕೋಣೆಯಲ್ಲಿ ಮನಸ್ವಿಯಾಗಿ ಹಾರಾಡುತಿದ್ದುವು. ಊಟ ಮಾಡುತಿದ್ದಾಗ, ಅವು ಅವರ ಭುಜಗಳ ಮೇಲೂ ಕೊತುಕೊಳ್ಳುತಿದ್ದುವು. ಒಂದು ದಿನ ಜೇಲ ಸೂಪರಿಂಟೆಂಡೆಂಟನು ಈ ದೃಶ್ಯವನ್ನು ಕಂಡಾಗ, ಅವಕ್ಕಾದನು "ಅವುಗಳಿಗೆ ನಿಮ್ಮನ್ನು ಕಂಡರೆ ಹೆದರಿಕೆಯಾಗುವುದಿಲ್ಲವೆ?" ಎಂದಾತ ಚಕಿತ ಚಿತ್ತನಾಗಿ ಕೇಳಿದನು.

"ನಾನು ಅವನ್ನು ತಿನ್ನುವುದಿಲ್ಲ; ಅಥವಾ ಹೆದರಿಸಿ ಓಡಿಸುವುದಿಲ್ಲ. ಆದುದರಿಂದ ಪ್ರಾಯಃ ಅದಕ್ಕೆ ಹೆದರಿಕೆಯಾಗದು. ನನ್ನ ಹೃದಯದಲ್ಲಿ ಸರ್ವದಂತಹ ವಿಷಯುಕ್ತ ಜಂತುಗಳ ಬಗೆಗೂ ದುರ್ಭಾವನೆಯಿರುವುದಿಲ್ಲ; ಆದುದರಿಂದಲೇ ಅವು ನಿರ್ಭಯವಾಗಿರಬೇಕು. ಪರಮಾತ್ಮಸೃಷ್ಟಿಯಲ್ಲಿರುವ ಯಾವುದೇ ಪ್ರಾಣಿಯ ಬಗೆಗೆ ನನ್ನ ಹೃದಯಲ್ಲಿ ತಿರಸ್ಕಾರ ಇಲ್ಲವೇ ಭಯದ ಭಾವನೆಯಿರುವುದಿಲ್ಲ" ತಿಲಕರು ಉತ್ತರಿಸಿದ್ದರು.

ಒಂದು ದಿನ ಕುಲಕರ್ಣಿಯು ತರಕಾರಿಗೆ ಉಪ್ಪು ಹಾಕುವುದನ್ನು ಮರೆತುಬಿಟ್ಟ. ತಿಲಕರಿಗೆ ಅದನ್ನು ಬಡಿಸಿಯೂ ಆಯಿತು; ಅವರು ಯಾವುದನ್ನೂ ಗಮನಕ್ಕೆ ತಾರದೆ ಉಂಡು ತನ್ನ ಅಧ್ಯಯನದಲ್ಲಿ ತೊಡಗಿದರು. ಕುಲಕರ್ಣಿಯು ತಾನೇ ಊಟಕ್ಕೆ ಕುಳಿತಾಗ, ಉಪ್ಪು ಹಾಕದಿರುವುದು ಗಮನಕ್ಕೆ ಬಂತು. ಅವನು ಕ್ಷಮಾಯಾಚನೆಗೆ ತೊಡಗಿದನು. "ಸತ್ಯ ಹೇಳುವುದಾದರೆ, ಉಪ್ಪು ಹಾಕದಿರುವುದು ನನಗೆ ಗೊತ್ತಾಗಲೇ ಇಲ್ಲ. ನನಗೆ ತಿಳಿದಷ್ಟು ಮಟ್ಟಗೆ ನೀನು ಯಾವ ಅಪರಾಧವನ್ನೂ ಮಾಡಿಲ್ಲ. ಹೀಗಿರುವಾಗ ಕ್ಷಮಿಸುವ ವಿಷಯವಾದರೂ ಬಹುದೂರವಾದುದು." ಎಂದು ನಗುತ್ತ ಉತ್ತರಿಸಿದರು. ಅವರು ತಿನ್ನುವುದಕ್ಕಾಗಿ ಬದುಕುತಿದ್ದವರಲ್ಲ; ಬದುಕುವುದಕ್ಕಾಗಿ ತಿನ್ನುವವರಾಗಿದ್ದರು.

ಕುಲಕರ್ಣಿಯು ಆಗಾಗ ರೋಗಕ್ಕೀಡಾಗುತಿದ್ದನು. ಆಗ ತಿಲಕರು ತಾವೇ ಅತನ ಚಿಕಿತ್ಸೆಯಲ್ಲಿ ತೊಡಗುತಿದ್ದರು, ಜೇಲಿನಿಂದ ಆತನನ್ನು ಆಸ್ಪತ್ರೆಗೆ ಸಾಗಿಸಲು ಬಿಡುತ್ತಿರಲಿಲ್ಲ. ತಿಲಕರ ಕುರಿತು ಕುಲಕ

(೭ನೇ ಪುಟ ನೋಡಿರಿ)

ವಿದ್ಯಾರ್ಥಿಗಳಿಗೆ

ಉಪಯುಕ್ತವಾದ ಗೈಡುಗಳು

೧)	E.S.L.C. ಕನ್ನಡ ಟಿಪ್ಪಣಿ	1-20
೨)	,, ಸಾಮಾಜಿಕ ಅಧ್ಯಯನ ಗೈಡ್	1-15
೩)	III ಫೋರ್ಮ ಕನ್ನಡ ಟಿಪ್ಪಣಿ	1-08
೪)	ಹೊಸ VIIನೇ ತರಗತಿ ,,	1-00
೫)	,, VI ಸಮಾಜಜ್ಞಾನ ಪರೀಕ್ಷಾರ್ಥಕ	0-50
೬)	,, VII ,, ,, (ಅಚ್ಚಿನಲ್ಲಿದೆ)	
೭)	,, VIII ,, ,, ,,	
೮)	,, IX ,, ,,	0-80
೯)	,, X S.S.L.C. ,,	1-00
೧೦)	,, VI ಮತ್ತು VII ವಿಜ್ಞಾನ	1-10

ಪ್ರತಿಗಳಿಗಾಗಿ ಪತ್ರ ವ್ಯವಹಾರ ನಡೆಸುವುದು)

ಡಿ. ವಿ. ಹೊಳ್ಳ, ಕುಂದಾಪುರ, ದ. ಕನ್ನಡ.

ಸಾಲ ರೂಪದ ವಿದ್ಯಾರ್ಥಿ ವೇತನ

ಕೆನರಾ ಬ್ಯಾಂಕ್, 1962 ರಲ್ಲಿ ದೇಶದ ನಾನಾ ಭಾಗಗಳಲ್ಲಿ ವೈದ್ಯಕೀಯ, ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿ ಕಲಿಯುವ 52 ವಿದ್ಯಾರ್ಥಿಗಳಿಗೆ ಸಾಲ ರೂಪದ ವಿದ್ಯಾರ್ಥಿ ವೇತನಗಳನ್ನು ನೀಡಿದೆ.

ಇದುವರೆಗೆ ಈ ರೀತಿ ವಿದ್ಯಾರ್ಥಿ ವೇತನ ಪಡೆದ ವಿದ್ಯಾರ್ಥಿಗಳ ಸಂಖ್ಯೆ 237 ಮತ್ತು ಒಟ್ಟು ಮಂಜೂರಾದ ಹಣ 264400 ರೂಪಾಯಿಗಳು.

ಈ ವಿದ್ಯಾರ್ಥಿಗಳನ್ನು ಕೆನರಾ ಬ್ಯಾಂಕ್ ಜ್ಯೂಬಿಲಿ ಎಜುಕೇಶನ್ ಫಂಡ್‌ನವರು ಆರಿಸಿದುದಾಗಿದೆ.

ಕೆನರಾ ಬ್ಯಾಂಕ್ ಲಿ.

ಸ್ಥಾಪನೆ: 1906

— ಜನತೆಯ ಸೇವೆಯಲ್ಲಿ —

ನವಯುಗ

ವರುಷ ೪೧	ಉಡುಪಿ ೯-೮-೬೨	ವಾರ ೪೮

ಹಾವು ಸಾಯಲಿಲ್ಲ; ಕೋಲು.....

ನಮ್ಮ ರಾಜ್ಯದ ಹೆಸರನ್ನು 'ಮೈಸೂರು' ಎಂಬುದರಿಂದ 'ಕರ್ನಾಟಕ' ಎಂದು ಪರಿವರ್ತಿಸುವ ಪ್ರಶ್ನೆಯೊಗ ಆರು ವರ್ಷಗಳಲ್ಲಿ ನಾಲ್ಕನೆಯ ಬಾರಿಗೆ ವಿಧಾನ ಸಭೆಯ ಮುಂದೆ ಬಂದು ಅಪೂರ್ಣ ಚರ್ಚೆಯಲ್ಲಿಯೇ ಪರ್ಯವಸಾನಗೊಂಡಿತು. ಇದರಿಂದ ಹಲವರಿಗೆ ಅಸಮಾಧಾನವೂ ಕೆಲವರಿಗೆ ಸಮಾಧಾನವೂ ಆಯಿತೆಂದು ಊಹಿಸಬಹುದು. ರಾಜ್ಯದ ಹೆಸರನ್ನು ಬದಲಾಯಿಸುವುದೆಂದರೆ ತೀರ ಹುಡುಗಾಟಿಕೆಯ ಪ್ರಶ್ನೆಯಲ್ಲ; ಗಂಭೀರವಾದ ಪರ್ಯಾಲೋಚನೆ ಇದಕ್ಕೆ ಅತ್ಯವಶ್ಯವೆಂದು ನಾವೂ ಒಪ್ಪುತ್ತೇವೆ. ಆದರೆ, ೧೯೫೬ರಿಂದ ಇಂದಿನ ವರೆಗೂ ನನೆಗುದಿಗೆ ಬಿದ್ದಿರುವ ಈ ಪ್ರಶ್ನೆ ಯಾವುದಾದರೊಂದು ರೀತಿಯಲ್ಲಿ ಇಷ್ಟರಲ್ಲಿಯೇ ಇತ್ಯರ್ಥವಾಗಬೇಕಾದುದು ಅಗತ್ಯವಿತ್ತು. ಅಲ್ಲಿಗೆ ಮುಂದಾದರೂ ಹೆಗರಣ ತಪ್ಪುತಿತ್ತು. 'ಅವಸರದಿಂದ ದುಡುಕಬಾರದು' ಎಂಬ ಕೆಲವು ಸದಸ್ಯರ ಹೇಳಿಕೆಗಳೇನೇ ಇರಲಿ, ಹಳೆಯ ಮೈಸೂರಿನ ಮೈಸೂರು ವಾದಿಗಳು 'ಕರ್ನಾಟಕ' ವೆಂದೊಡನೆಯೇ ಮೂಗುಮುರಿಯುತಿದ್ದು, ಅಂತಹ ಬಲವನ್ನು ಕಳೆದುಕೊಳ್ಳಲು ಸದ್ಯ ಸರಕಾರವು ಸಿದ್ಧವಿಲ್ಲ; ಎಂಬುದರಿಂದಲೇ ಮುಖ್ಯ ಮಂತ್ರಿ ನಿಜಲಿಂಗಪ್ಪನವರು ಅನುಕೂಲ ವಾತಾವರಣವನ್ನು ನಿರ್ಮಿಸುವ ಸಲುವಾಗಿ ಚರ್ಚೆಯನ್ನು ಮುಂದಕ್ಕೆ ಹಾಕಲು ವಿನಂತಿಸಿದರು. ಸಭೆಯಾದರೂ ಇದಕ್ಕೆ ವಿರೋಧ ವ್ಯಕ್ತಪಡಿಸಲಿಲ್ಲ; ಸಭಾಧ್ಯಕ್ಷ ಬಾಳಿಗರು ಹಾಗೆಯೇ ಮಾಡಿದರು.

ಈ ಸಂದರ್ಭದಲ್ಲಿ ಕರ್ನಾಟಕ'ವೆಂಬ ಪುನರ್ನಾಮಕರಣದ ಬೇಡಿಕೆಯ ಹಿನ್ನೆಲೆಯನ್ನು ತುಸು ಸಿಂಹಾವಲೋಕನ ಮಾಡಿದರೆ ತಪ್ಪಾಗಲಾರದು. ಸರ್ವಸಾಮಾನ್ಯವಾಗಿ, ವಿಲೀನಗೊಂಡ ಪ್ರದೇಶ'ಗಳವರೂ ಹಳೆಯ ಮೈಸೂರಿನ ಕೆಲವರೂ ಈ ಬೇಡಿಕೆಯನ್ನು ಮನ್ನಿಸಲು ಸಿದ್ಧರಿದ್ದಾರೆ. ಆದರೆ, ಕೆಲವೊಂದು ಮೈಸೂರಿನ ಕಚ್ಚಾವಾದಿಗಳು ಮಾತ್ರ ಇದನ್ನು ಬಲವಾಗಿ ಪ್ರತಿಭಟಿಸುತ್ತಾರೆ. ಇವರ ವಿರೋಧವಾದರೂ ಹುರುಳಿಲ್ಲದ್ದು ಎಂಬುದು ಖಂಡಿತ. 'ಹಳೆಯ ಮೈಸೂರು' 'ಹೊಸ ಮೈಸೂರು'ಗ ಬೇಕಾದರೆ ಮೊದಲು 'ಮೈಸೂರು' ಎಂಬ ಹೆಸರನ್ನೇ ಮುಂದುವರಿಸುವ ಶರ್ತವೇ ಕಾರಣವೆಂದು ಇವರು ಅನ್ನುತ್ತಾರೆ. ಇನ್ನು ಕೆಲವರು ಏಕ ರಾಜ್ಯವಾಗಿರುವ ನಮ್ಮ ಕರ್ನಾಟಕವು ಎರಡು ರಾಜ್ಯಗಳಾಗಿ ವಿಭಜನಗೊಳ್ಳಲಿಯೆನ್ನುವಷ್ಟೂ ಮುಂದುವರಿದಿದ್ದಾರೆ. ಎಂದರೆ, ಇಂತಹವರಿಗೆ 'ಮೈಸೂರು" ಬೇಕಾಗಿದೆ. ಅದಕ್ಕೆ ಐತಿಹಾಸಿಕ ದಾಖಲೆಯಿರುವುದಂತೆ; ಕರ್ನಾಟಕವೆಂಬುದು ಇತಿಹಾಸ ಬಾಹಿರವಂತೆ! ಇವೆಲ್ಲವಾದಕ್ಕೆ ಪ್ರತಿವಾದಗಳೆನಿಸಬಹುದೇ ಹೊರತು ಪ್ರಯೋಜನಕ್ಕೆ ನಿರುಪಯುಕ್ತವೆಂಬುದು ಸ್ವಯಂವೇದ್ಯ. ಇಂದಿಗೂ ಮೈಸೂರಿನವರ 'ಅಳುವ ಮಹಾರಾಜರು" 'ಕರ್ನಾಟಕಾಧೀಶ್ವರ"ರಾಗಿದ್ದರಲ್ಲದೆ 'ಮೈಸೂರಾಧೀಶ್ವರ'ರಾಗಿರಲಿಲ್ಲ ತಾನೆ? ಹಿಂದಿನ ಐತಿಹಾಸಿಕತೆಗಳು ಏನೇ ಇರಲಿ, ಭಾಷಾವಾರು ರಾಜ್ಯ ಪುನರ್ಘಟನೆಯಾದುದರಿಂದ, ರಾಜ್ಯದ ಹೆಸರಾದರೂ ಭಾಷಾತಳಹದಿಯಲ್ಲಿಯೇ ಇರುವುದು ಉತ್ತಮ. ಸದ್ಯ ಭಾರತದಲ್ಲಿ ಹೆಚ್ಚಿನ ರಾಜ್ಯಗಳು ಇದೇ ರೀತಿಯ ಹೆಸರನ್ನು ತಳೆದಿವೆ. ಹಾಗಿರುವಾಗ, ಅಂದು ಹಾಗಿತ್ತು, ಆ ಮೊದಲು ಇನ್ನೊಂದಾಗಿತ್ತು ಎಂದು ವಾದಿಸದೆ, ಇಂದು ಬಹುಜನಾಭಿಪ್ರಾಯವೇನಿದೆಯೆಂಬುದನ್ನು ಅರಿತುಕೊಂಡು, ಆದರಿಂದ ಭವಿಷ್ಯತ್ತಿನ ಮೇಲೆ ಯಾವ ಪರಿಣಾಮವಾಗಬಹುದೆಂಬುದನ್ನು ದೂರಾಲೋಚನೆಯಿಂದ ಊಹಿಸಿ ಅರಿತುಕೊಂಡು ನಿರ್ಧಾರವನ್ನು ಮಾಡಬೇಕೇ ಹೊರತು ಗತಕಾಲದ ಇತಿಹಾಸವನ್ನು ಜಗಿಯುವುದಲ್ಲ. ಪ್ರಜಾಪ್ರಭುತ್ವದಲ್ಲಿ ಬಹುಮತಕ್ಕೆ ಮನ್ನಣೆ ದೊರೆಯುತ್ತದೆ, ದೊರೆಯಬೇಕು ಎಂಬುದು ನ್ಯಾಯವಾದರೂ, ಅಲ್ಪಮತವನ್ನು ಕಡೆಗಣಿಸಬಾರದು ಎಂಬ ಅಭಿಪ್ರಾಯ ಕೆಲವರದು. 'ಕರ್ನಾಟಕ'ದ ಮಟ್ಟಿಗೆ ಹೇಳುವುದಾದರೆ, ಮಂತ್ರಿ ಮಂಡಳಿಯಲ್ಲಿಯೇ 'ಮೈಸೂರಿ'ನ ಪಟ್ಟಭದ್ರ ಸಮರ್ಥಕರೂ ಇದ್ದರೆಂಬುದು ವ್ಯಕ್ತವಾಗುತ್ತದೆ; ಕಾಂಗ್ರೆಸ್ ಪಕ್ಷದ ಸಭೆಯಲ್ಲಿಯೂ ಇದರ ಮೇಲೆ ಬಹು ದೀರ್ಘ ಚರ್ಚೆ ನಡೆದು ಯಾವ ಒಮ್ಮತದ ನಿರ್ಧಾರಕ್ಕೂ ಬಾರದೆ, ಕೊನೆಗೆ ಸದ್ಯರಿಗೆ ಮತದಾನದ ವೇಳೆ ಮತ ಸ್ವಾತಂತ್ರ್ಯವೀಯುವ ನಿರ್ಧಾರವಾಯಿತೆನ್ನುವಾಗ, ಸರಕಾರದ ಮೂಲಕವೇ ಅಧಿಕೃತವಾಗಿ ಇಂತಹ ಗೊತ್ತುವಳಿ ವಿಧಾನ ಸಭೆಯ ಮುಂದೆ ಬರುವುದು ಇನ್ನೆಷ್ಟು ಶತಮಾನಗಳ ನಂತರವೋ ಏನೋ! ಒಮ್ಮತದಿಂದ ಸರಕಾರದ ಇತರ ಎಲ್ಲಾ ಕಾಯದೆ ಕಾನೂನುಗಳು ಸ್ವೀಕೃತವೆನಿಸುವುದುಂಟೇ? ಎಂದಿಲ್ಲಿ ಪ್ರಶ್ನಿಸಿದರೆ ಅನುಚಿತವೆನಿಸದು.

ಅದೇನೇ ಇರಲಿ, ವಿಧಾನಸಭಾ ಸದಸ್ಯರೊಬ್ಬರು ಇದಮಿತ್ಥಮ್ ಎನಿಸುವ ಹಂಬಲದಿಂದ ಗೊತ್ತುವಳಿತಂದರು. ಅದು ಹಾವು ಸಾಯಬಾರದು; ಕೋಲು ಮುರಿಯಬಾರದು ಎನ್ನುವ ಸ್ಥಿತಿಯಲ್ಲಿಯೇ ಕೊನೆಗೊಂಡಂತಾಯಿತು. ರಾಜ್ಯದ ಪುನಾರಚನೆಯ ಬಗ್ಗೆ ವಿಶೇಷ ಗಮನ ನೀಡಬೇಕಾಗಿರುವ ಮೂರನೆಯ ಯೋಜನಾವಧಿಯಲ್ಲಿ ನಿರ್ಧಾರಕ್ಕೆ ಬರಲಾರದ ಇಂತಹ ಗೊತ್ತುವಳಿಗಳನ್ನು ತಂದು ವ್ಯರ್ಥಕಾಲ ಹರಣ ಮಾಡುವ ಅಗತ್ಯವಾದರೂ ಏನಿತ್ತು ಎಂಬುದು ತಿಳಿಯುವುದಿಲ್ಲ. ಕೆಲವೊಂದು ಹಿತಾಸಕ್ತಿಗಳನ್ನು ಒಲಿಸಿಕೊಂಡು ಅವುಗಳಿಂದ ಲಾಭಗಳಿಸುವ ಇರಾದೆಯೇ ಇದಕ್ಕೆ ಕಾರಣವಾಗಿಲ್ಲವೆಂದು ಧೈರ್ಯದಿಂದ ನುಡಿಯುವಂತಿಲ್ಲ. ಮುಖ್ಯ ಮಂತ್ರಿ ನಿಜಲಿಂಗಪ್ಪನವರಾದರೂ ಈ ವಿಷಯದಲ್ಲಿ ಕಟ್ಟು ನಿಟ್ಟಿನ ಧೋರಣೆಯನ್ನು ತಳೆದಿಲ್ಲವೆಂದು ಊಹಿಸಿದರೆ ತಪ್ಪಲ್ಲ. ಅವರು ಸ್ವತಃ ಕರ್ನಾಟಕವಾದಿಗಳಾದರೂ ಮೈಸೂರಿಗರ ಸಂಪೂರ್ಣ ಸಹಕಾರ ಅವರಿಗೆ ಬೇಕಾಗಿದೆ; ಹಾಗಾಗಿ ಕಾವೇರಿದ ವಾತಾವರಣವನ್ನು ಸ್ತಿಮಿತಕ್ಕೆ ತರಲು ಅವರೊಂದು ಉಪಾಯ ಹೂಡಿದರು ಈ ತಂತ್ರವು ಮುತ್ಸದ್ಧಿತನದ್ದೆಂದು ಒಪ್ಪಿಕೊಳ್ಳ ಬೇಕು; ಆದರೆ, ಈ 'ಕರ್ನಾಟಕ'ವೆಂಬ ಹೆಸರು ಇನ್ನೂ ಅದೆಷ್ಟು ಮಳೆ ಚಳಿಗಾಳಿಗಳ ಪ್ರಹಾರವನ್ನು ತಾಳಬೇಕೋ ಅರಿಯದಾಗಿದೆ. 'ನೀ ನು ಕುಟ್ಟಿದಂತೆ ಮಾಡು: ನಾನು ಅತ್ತಂತೆ ಮಾಡುತ್ತೆ"ನೆ ಎನ್ನುವ ತಂತ್ರ ಹೆಚ್ಚುದಿನ ನಡೆಯದು. ಎಲ್ಲರೂ ತಿಳಿದಿರುವಂತೆ 'ಮೈಸೂರು"ಕೇವಲ ಅಂಶವಾಗಿ, ಕರ್ನಾಟಕವು ಅಂಶಿಯಾಗಿ ರೂಪಾಂತರ ಪಡೆಯುವ ದಿನ ಬಂದೇ ಬರುವುದು. ಅಂತಹ ಸುದಿನ ಬಹು ಬೇಗನೆ ಬರಲಿ.

ಉಚಿತ ಶಿಕ್ಷಣ

ಕರ್ನಾಟಕದಲ್ಲಿ 'ತಾತ್ಕಾಲಿಕ ಸರಕಾರ' ಸ್ಥಾಪಿಸಿದ್ದ ಶ್ರೀ ಕಂರಿಯವರು ತನ್ನ ಅಧಿಕಾರಾವಧಿಯಲ್ಲಿ ಘೋಷಿಸಿದ್ದ ಶಿಕ್ಷಣ ಸೌಲಭ್ಯವೀಗ ಅವರು ಶಿಕ್ಷಣ ಮಂತ್ರಿಯೆನಿಸಿದ ಒಂದು ತಿಂಗಳ ನಂತರವಾದರೂ ವ್ಯವಹಾರಕ್ಕೆ ಬಂದಿತು. ಇದರಂತೆ ವಾರ್ಷಿಕ ರೂ. ೨,೪೦೦ ಆದಾಯವಿರದಿರುವ ಹೆತ್ತವರ ಮಕ್ಕಳಿಗೆ ಮಾಧ್ಯಮಿಕ ಶಿಕ್ಷಣದ ವರೆಗೆ ಉಚಿತ ವಿದ್ಯಾಭ್ಯಾಸವು ದೊರೆಯುವುದು. ಈ ಮಿತಿಯು ಮೊದಲು ರೂ. ೧,೨೦೦ ಆಗಿತ್ತು. ಆಗ, ನಾವು ಇದೇ ಪುಟಗಳಲ್ಲಿ ಬರೆಯುತ್ತ ಈ ಮಿತಿಯು ತೀರ ಅಲ್ಪವಾಯಿತೆಂದೂ ಇದನ್ನು ರೂ. ೩,೬೦೦ಕ್ಕೆ ಏರಿಸಬೇಕೆಂದೂ ಸೂಚಿಸಿದ್ದೆವು. ರೂ ೧,೨೦೦ರ ಮಿತಿಯಿರುವಾಗ ನಿಯಮಿತ ವೇತನ ಪಡೆಯುವ ಕೆಲವು ನೌಕರರೂ ಕೆಲವು ಹಿರಿಯ ಉದ್ಯಮಿಗಳೂ ಇದನ್ನು ಮೀರಿದ ಆದಾಯವಿರುವವರಿದ್ದರು. ಏಕೆಂದರೆ, ಇವರು ಪಡೆಯುವ ವೇತನಕ್ಕೆ ಅಥವಾ ಮಾಡುವ ವ್ಯಾಪಾರಗಳಿಗೆ ದಾಖಲೆಯಿರುತಿತ್ತು. ಹಾಗಾಗಿ, ಸಾಮಾನ್ಯರಂತೆ ತಮ್ಮ ಆದಾಯವನ್ನು ಕಡಿಮೆ ತೋರಿಸುವುದು ಅವರಿಗೆ ಸಾಧ್ಯವಾಗುತಿದ್ದಿಲ್ಲ. ಇಂದು ಈ ಮಿತಿಯು ಏರಿದುದರಿಂದ ನಿಯತ ವೇತನಗಾರರಲ್ಲಿ ಕೆಲವರಿಗೆ ಮಾತ್ರ ಲಾಭ ದೊರೆಯತೆನ್ನಬಹುದು. ಮಾಸಿಕ ರೂ. ೧೦೦ ಗಳಿಸದೆಯಿರುವವರ ಸಂಖ್ಯೆ ತೀರ ಅತ್ಯಲ್ಪ; ಹಾಗಿದ್ದರೂ ಅವರೆಲ್ಲರೂ ಹಿಂದೆ ಉಚಿತ ಶಿಕ್ಷಣದ ಸೌಲಭ್ಯ ಪಡೆಯುತ್ತಿದ್ದರು ಆದಾಯದ ಲೆಕ್ಕಾಚಾರ ವಿಲ್ಲವಾದುದರಿಂದ. ಒಂದು ಮಗುವಿನ ಹೆತ್ತವರ ಇಲ್ಲವೇ ರಕ್ಷಕರ ಆದಾಯವೇನೇ ಇದ್ದರೂ ಅವರನ್ನು ಹೊಂದಿಕೊಂಡಿರುವ ಕುಟುಂಬದ ಸದಸ್ಯರ ಸಂಖ್ಯೆಯನ್ನು ಮರೆಯುವಂತಿಲ್ಲ. ಹಿಂದುಳಿಯುವಿಕೆಯನ್ನು ಆರ್ಥಿಕ ತಳಹದಿಯಲ್ಲಿ ರೂಪಿಸಬೇಕೆಂದು ಹೇಳುವಂತೆಯೇ ಉಚಿತ ಶಿಕ್ಷಣದ ಅವಕಾಶವು ಕುಟುಂಬದ ಆದಾಯ ಮತ್ತು ಅದರಲ್ಲಿರುವ ಸದಸ್ಯರ ಸಂಖ್ಯೆಯನ್ನೇ ಹೊಂದಿಕೊಂಡಿರಬೇಕೆಂದು ಸೂಚಿಸಿದರೆ ಅನುಚಿತವಾಗದು. ಹೀಗಾಗುವುದಕ್ಕೆ ಕೆಲ ಸಮಯ ಬೇಕೆಂಬುದನ್ನು ನಾವು ಒಪ್ಪುತ್ತೇವೆ; ಸದ್ಯಕ್ಕೆ ಸರಕಾರ ನೀಡಿದ ಈ ಸೌಲಭ್ಯವನ್ನು ಸ್ವಾಗತಿಸುವುದರೊಡನೆ, ಮುಂದೆ ಈ ಮಿತಿಯನ್ನು ರೂ. ೩,೬೦೦ಕ್ಕೆ ಏರಿಸುವ ಪ್ರಯತ್ನ ಮಾಡುವರೆಂದೂ ಕುಟುಂಬದ ಆದಾಯ ಮತ್ತು ಅದರ ಸದಸ್ಯರ ಸಂಖ್ಯೆಯನ್ನು ಗಣನೆಗೆ ತಂದುಕೊಳ್ಳುವರೆಂದೂ ಆಶಿಸುತ್ತೇವೆ.

ಮಂತ್ರಿ ರಾಚಯ್ಯನವರ ಪ್ರವಾಸ

—ಮೈಸೂರು ಸರಕಾರದ ಅರಣ್ಯ ಮತ್ತು ಮೀನುಗಾರಿಕೆ ಮಂತ್ರಿ ಶ್ರೀ ಬಿ. ರಾಚಯ್ಯನವರು ಇದೇ ತಾ. 12ನೇ ಸಂಜೆ 7 ಗಂಟೆಗೆ ಮಂಗಳೂರಿಗೆ ಬಂದು ಕದ್ರಿ ಪ್ರವಾಸಿ ಮಂದಿರದಲ್ಲಿ ತಂಗುವರು. ಮರುದಿನ ಬೆಳಿಗ್ಗೆ 8 ಗಂಟೆಗೆ ಮಂಗಳೂರಿನಿಂದ ಹೊರಟು 9 ಗಂಟೆಗೆ ಮೂಲ್ಕಿಗೆ ತೆರಳಿ ಅಲ್ಲಿಯ ಫಿಶರೀಸ್ ಹೈಸ್ಕೂಲ್ ಕಟ್ಟಡದ ಶಂಕುಸ್ಥಾಪನಾ ಕಾರ್ಯ ನೆರವೇರಿಸುವರು. 11 ಗಂಟೆಗೆ ಅಲ್ಲಿಂದ ಹೊರಟು ಉಡುಪಿಗೆ ಬಂದು ಭೋಜನ ತೀರಿಸಿ ಅಪರಾಹ್ನ 4 ಗಂಟೆಗೆ ಉಡುಪಿಯ ಸಮೀಪದ ಉದಿಯಾವರದಲ್ಲಿ ಫಿಶರೀಸ್ ಹೈಸ್ಕೂಲಿನ ಪ್ರಾರಂಭೋತ್ಸವವನ್ನು ನೆರವೇರಿಸುವರು. ಉದಿಯಾವರದಿಂದ 6 ಗಂಟೆಗೆ ಹೊರಟು ರಾತ್ರಿ ಮಂಗಳೂರಿಗೆ ತಲಪುವರು. ತಾ. 14ನೇ ಬೆಳಿಗ್ಗೆ 9 ಗಂಟೆಗೆ ಕಾಂಗ್ರೆಸ್ ಕೆಲಸಗಾರರನ್ನು ಭೇಟಿಯಾಗುವರು. 11 ಗಂಟೆಗೆ ಡಿಪ್ಯುಟಿ ಕಮಿಶನರರ ಆಫೀಸಿನಲ್ಲಿ ಅಧಿಕಾರಿಗಳ, ಪಾರ್ಲಿಮೆಂಟ್ ಸದಸ್ಯರ, ಮತ್ತು ವಿಧಾನ ಸಭೆ ಮತ್ತು ಪರಿಷತ್ತುಗಳ ಸದಸ್ಯರ ಸಭೆಯಲ್ಲಿ ಭಾಗವಹಿಸುವರು. ಬಳಿಕ ಭೋಜನ ಸ್ವೀಕರಿಸಿ ಮಡಿಕೇರಿಗಾಗಿ ಬೆಂಗಳೂರಿಗೆ ತೆರಳುವರು.

ತಿದ್ದುಪಡಿ—ಈ ಸಂಚಿಕೆಯ ಎಡುರು ಪುಟದಲ್ಲಿ ಸಂಚಿಕೆ ೪೬ (No. 46) ಎಂತ ತಪ್ಪಾಗಿ ಪ್ರಕಟವಾಗಿರುವುದನ್ನು ಸಂಚಿಕೆ ೪೮ (No. 48 ಅಂತ ತಿದ್ದಿ ಓದಿಕೊಳ್ಳಬೇಕಾಗಿದೆ.

—ಸಂ ನ.

ಚಂದಾದಾರರಲ್ಲಿ ವಿನಂತಿ



ಇದೇ ತಿಂಗಳಾಂತ್ಯಕ್ಕೆ 'ನವಯುಗ'ದ 41ನೆಯ ವರ್ಷವು ಮುಗಿದು ಸಪ್ಟಂಬರ ಆದಿಯಿಂದ 42ನೆಯ ಹೊಸ ವರ್ಷಾರಂಭವಾಗುತ್ತದೆ. ಈ ಅವಧಿಗೆ ಚಂದಾ ಅವಧಿ ಮುಗಿಯುವವರೂ, ಚಂದಾ ಹಣ ಬಾಕಿ ಇರುವವರೂ ತಮ್ಮ ತಮ್ಮ ಬಾಕಿಯನ್ನು ದಯಮಾಡಿ ಅದಷ್ಟು ಬೇಗನೆ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥಿಸುತ್ತೇವೆ

ಚಂದಾಹಣವನ್ನು ಸಿಂಡಿಕೇಟ್ ಬೇಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವದೊಂದು ಕಮಿಶನ್ ಇಲ್ಲದೆ ಪಾವತಿ ಮಾಡಬಹುದಾಗಿದೆ.

ಅಲ್ಲಲ್ಲಿಯ ಸುದ್ದಿಸಾರ

ಜಸ್ಟೀಸ್ ಕೆ. ಎಸ್. ಹೆಗ್ಡೆಯವರ ಭಾಷಣ— ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗದ ಆಶ್ರಯದಲ್ಲಿ ಜಸ್ಟೀಸ್ ಶ್ರೀ ಕೆ. ಎಸ್. ಹೆಗ್ಡೆಯವರು ಇತ್ತೀಚೆಗೆ ಭಾಷಣ ಮಾಡುತ್ತ ನಮ್ಮ ದೇಶದಲ್ಲಿ ಈಗೀಗ ಕಾನೂನುಗಳ ರಚನೆ ಬಹಳವಾಗಿ ಹೆಚ್ಚುತ್ತಿದೆ. ಕೇಂದ್ರ ಮತ್ತು ಪ್ರಾಂತ್ಯಗಳಲ್ಲಿ ಎಷ್ಟೆಷ್ಟು ಕಾನೂನುಗಳು ರಚಿತವಾಗುತ್ತವೆ ಎಂಬುದನ್ನು ನೆನಪಿನಲ್ಲಿಡುವುದೇ ಕಷ್ಟವಾಗಿದೆ. ಕಾನೂನುಗಳನ್ನು ಮಾಡುವುದು ಎಳ್ಳೇ ದೃಷ್ಟಿಯಿಂದಲೇ ಆದರೂ ಅದರಿಂದ ಸಮಾಜದ ಮೇಲಾಗುವ ಪರಿಣಾಮ ಮುಖ್ಯವಾದುದು. ಆದರೆ ಇಂದು ಅನೇಕ ಕಾನೂನುಗಳನ್ನು ಜ್ಯಾರಿಗೊಳಿಸುವುದೇ ಕಷ್ಟದಾಯಕವಾಗಿದೆ. ಉದಾಹರಣೆಗೆ ಪಾನ ನಿರೋಧ ಜ್ಯಾರಿ ಕಾನೂನು. ಇವೆಲ್ಲಾ ಅತಿ ಮುಖ್ಯ ಕಾನೂನುಗಳು ಆದರೆ ಇವನ್ನು ಜ್ಯಾರಿದೂಡಲು ಸಾಧ್ಯವೇ ಎಂಬುದಕ್ಕೆ ಉತ್ತರಿಸುವುದೇ ಕಷ್ಟ. ಕುಡಿತ ಎಲ್ಲೆಲ್ಲೂ ಅಧಿಕವಾಗಿದೆ ಎನ್ನಬಹುದು, ವರದಕ್ಷಿಣೆ ಹಿಂದಿಗಿಂತಲೂ ಇಂದು ಹೆಚ್ಚಾಗಿದೆ. ಹೀಗಿರುವಾಗ . ಇಂತಹ ಕಾನೂನುಗಳಿಂದ ಸಮಾಜಕ್ಕಾಗುವ ಪ್ರಯೋಜನವೇನು ಶಾಸಕರು ಕಾನೂನುಗಳನ್ನು ಮಾಡುವಾಗ ಸಾಕಷ್ಟು ಗಮನ ಕೊಡದಿರುವುದು ವಿಷಾದಕರ. ಪಾರ್ಟಿಯ ಆದೇಶದಂತೆ ನಡೆಯುವ ಮನೋಭಾವ ಹೆಚ್ಚಾಗಿರುವುದರಿಂದ ಹೆಚ್ಚಿನ ಮಟ್ಟಿಗೆ ಈ ಕಾನೂನುಗಳು ಶಾಸನ ಸಭೆಯ ಕಾನೂನುಗಳಾಗಿರದೆ ಯಾವಾತನು ಬರೆದಿರುತ್ತಾನೋ ಅತನದಾಗಿರುತ್ತದೆ ಎಂದರಲ್ಲದೆ ಕಾನೂನು ರಚಿಸಲು 10 ಜನರಿಗೆ ಮಿಕ್ಕದ ಉಪ ಸಮಿತಿಯೊಂದಿರಬೇಕೆಂದೂ ಶಾಸನ ಸಭೆಗಳು ಇಂತದೇ ಕಾನೂನಿರಬೇಕೆಂಬ ನಿರ್ಣಯ ಮಾಡಿ ಆ ಸಮಿತಿಗೆ ಶಾಸನ ಮಾಡುವ ಹೊಣೆಯನ್ನು ವಹಿಸಬೇಕೆಂದೂ, ಆ ಸಮಿತಿಯಲ್ಲಿ 12 ಮಂದಿ ಚುನಾಯಿತ ಶಾಸಕರು ಮತ್ತು 4 ಮಂದಿ ಸ್ವೀಕರರವರಿಂದ ನಾಮಕರಣ ಮಾಡಲ್ಪಟ್ಟವರು ಇರಬೇಕೆಂದರು. ಅಲ್ಲದೆ ದೇಶದಲ್ಲಿ ಮೇಲ್ಮನೆಗಳನ್ನು ರದ್ದುಗೊಳಿಸ ಬೇಕೆಂದೂ ಅಭಿಪ್ರಾಯಪಟ್ಟರು. ಸಭೆಯ ಅಧ್ಯಕ್ಷತೆಯನ್ನು ಶಾರದಾ ವಿಲಾಸ ಲಾ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಕೆ. ನರಹರಿರಾಯರು ವಹಿಸಿದ್ದರು. ವ್ಯಾಸ್ ಚಾನ್ಸಲರ್ ಪ್ರೊ. ನಿಕ್ಕಂರವರು ಧನ್ಯವಾದಗಳನ್ನರ್ಪಿಸಿದರು.

ನಿಧನ — ನಿವೃತ್ತ ಕೊ. ಓಪರೇಟಿವ್ ಸೊಸೈಟಿಗಳ ಇನ್ಸೆಕ್ಟರರಾಗಿದ್ದ ಶ್ರೀ ಯು ವಾಸುದೇವ ಮಲ್ಯರು ಇದೇ ತಾ. 3ರಂದು ಉಡುಪಿಯ ತಮ್ಮ ನಿವಾಸದಲ್ಲಿ 74ನೇ ವಯಸ್ಸಿನಲ್ಲಿ ನಿಧನರಾದರು ಇವರು ಸುಮಾರು 6 ತಿಂಗಳಿಂದ ಆಸ್ವಸ್ಥರಾಗಿದ್ದರೆಂದು ತಿಳಿದು ಬರುತ್ತದೆ.

ಮೊದ್ಲುತಾವು (ಕಂಸಾಡಿ) ಮೋನಪ್ಪ ಸೆಟ್ಟರು ತಾ. 2—8—62ರಂದು ಪೆರ್ಡೂರು ಹೆರ್ಡೆ ಹೊಸಮನೆಯಲ್ಲಿ ತಮ್ಮ 75ನೇ ವಯಸ್ಸಿನಲ್ಲಿ ದಿವಂಗತರಾದರು. ಇವರು ಪಂಚ್ಯಾತದಾರರಾಗಿಯೂ ಜನಪ್ರಿಯರಾಗಿಯೂ ಇದ್ದರು.

ಎಂ. ಜಿ. ಯಂ. ಕಾಲೇಜ್— ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಸ್ಟೂಡೆಂಟ್ಸ್ ಯೂನಿಯನ್ನಿನ ಅಧ್ಯಕ್ಷರಾಗಿ ಶ್ರೀ ಪಿ. ಗೋಪಾಲಕೃಷ್ಣ ಕುಡುವರೂ ಕಾರ್ಯದರ್ಶಿಗಳಾಗಿ ಶ್ರೀ ಚಂದ್ರಶೇಖರ ತುಂಗರೂ ಆರಿಸಲ್ಪಟ್ಟಿರುವರು.

ಪೂರ್ಣಪ್ರಜ್ಞ ಕಾಲೇಜ್ ಯೂನಿಯನ್ನಿನ ಚುನಾವಣೆಯಲ್ಲಿ ಪ್ರಧಾನ ಕಾರ್ಯದರ್ಶಿಗಳಾಗಿ ಶ್ರೀ ಕೆ. ನರಸಿಂಹ ಕೆದ್ಲಾಯರೂ ಸಹಾಕಾರ್ಯದರ್ಶಿಗಳಾಗಿ ಶ್ರೀ ಗೋಪಾಲ ಉಡುಪರೂ ಆಯಕೆಯಾಗಿರುವರು.

ಬಿಲ್ಲವ ಯುವಕ ಸಂಘ— ಎಂಬ ಸಂಘವೊಂದು ಮಂಗಳೂರಿನ ಉರ್ವದಲ್ಲಿ ಬಿಲ್ಲವ ಜನಾಂಗದ ಮುಂದಣ ಪ್ರಗತಿಯನ್ನು ದೃಷ್ಟಿಯಲ್ಲಿಟ್ಟುಕೊಂಡು ತಾ. 8—7—62ರಂದು ಸ್ಥಾಪಿಸಲ್ಪಟ್ಟಿದೆ. ಈ ಸಂಘದ ವತಿಯಿಂದ ಶ್ರೀ ನಾರಾಯಣಗುರು ಜನ್ಮದಿನೋತ್ಸವ ಸಂಚಿಕೆಯೊಂದು 13-9-62ಕ್ಕೆ ಪ್ರಕಟವಾಗುವುದೆಂದೂ ತಿಳಿದುಬರುತ್ತದೆ.

ಉಡುಪಿ ರೋಟರಿ ಸಭೆಯೊಂದು ಅಧ್ಯಕ್ಷ ಶ್ರೀ ಟಿ. ರಮೇಶ ಪೈಗಳ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ಸೇರಿದಾಗ ಯಕ್ಷಗಾನ ಕಲೆಯ ಕುರಿತು ಶ್ರೀ ಕೆ. ಶಿವರಾಮ ಕಾರಂತರು ಉಪನ್ಯಾಸವನ್ನಿತ್ತರು. ಶ್ರೀ ಎ. ಜೆ. ಅಲ್ಸೆಯವರು ಆರಂಭದಲ್ಲಿ ಅತಿದಿಗಳ ಪರಿಚಯ ಮಾಡಿದರು. ಅಂತ್ಯದಲ್ಲಿ ಡಾ। ಎ. ಕೃಷ್ಣರಾಯರು ವಂದನೆಗಳನ್ನರ್ಪಿಸಿದರು.

ಯಕ್ಷಗಾನ— ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದ ಅಧ್ಯಕ್ಷರಾದ ಶ್ರೀ ಕೀರಿಕ್ಕಾಡು ಮಾಸ್ಟರ್ ವಿಷ್ಣುಭಟ್ಟರವರ ನಿರ್ದೇಶನದಲ್ಲಿ 'ಬ್ರಹ್ಮಮಾನಸ ಪುತ್ರಿ' ಎಂಬ ಯಕ್ಷಗಾನ ತಾಳಮದ್ದಳೆಯು ದಿನಾಂಕ 28—7—62ರಂದು ಜರಗಿಸಲ್ಪಟ್ಟಿತು. ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾಮಂದಿರದಲ್ಲಿ ನಡೆಸಲ್ಪಟ್ಟ ಈ ಕಾರ್ಯಕ್ರಮದಲ್ಲಿ ಶ್ರೀಗಳಾದ ಕೀ. ವ. ಕೇಶವ, ಎಂ. ಕೃಷ್ಣ ಭಟ್ ಯಂ. ಶಂಕರ ಭಟ್, ಮಹಾಲಿಂಗ ಪಾಟಾಳಿ, ಬಾಬು ರೈ ಎಂ. ಎನ್. ರೈ ಮೊದಲಾದವರು ಭಾಗ ವಹಿಸಿದ್ದರು.

ವ್ಯವಸ್ಥಾಪಕರಾದ ಶ್ರೀ ಎಂ ಶೀನಪ್ಪ ಗೌಡರು ಕೊನೆಯಲ್ಲಿ ಧನ್ಯವಾದವಿತ್ತರು

ವಿಶೇಷ ಮಳೆ — ನಾಲ್ಕೈದು ದಿನಗಳಿಂದ ಜಿಲ್ಲೆಯಲ್ಲಿ ವಿಶೇಷ ಮಳೆ ಸುರಿಯುತ್ತಿದೆ ಅಲ್ಲಲ್ಲಿ ನೆರೆ ಬಂದಿರುವುದಲ್ಲದೆ ವಾಹನ ಚಲಾವಣೆಗೂ ತೊಂದರೆಗಳುಂಟಾಗಿವೆ.

ಭಾರತದಲ್ಲಿ ಬ್ಯಾಂಕುಗಳು— ಇದೇ ತಾ 2ರಂದು ಮಂಗಳೂರು ರೋಟರಿ ಕ್ಲಬ್ಬಿನ ಸಭೆಯು ಡಾ। ಎ ಎ. ಬೈಲೂರರ ಅಧ್ಯಕ್ಷತೆಯಲ್ಲಿ ಸಿ. ಪಿ. ಸಿ. ಸಭಾಭವನದಲ್ಲಿ ಜರಗಿದಾಗ ಕೊರ್ಪೊರೇಶನ್ ಬ್ಯಾಂಕಿನ ಜನರಲ್ ಮೆನೇಜರ್ ಶ್ರೀ ಕೆ. ಶಂಕರ ಶೆಣೈಯವರು ಭಾರತದಲ್ಲಿ ಬ್ಯಾಂಕುಗಳು ಎಂಬ ಕುರಿತು ಮಾತನಾಡುತ್ತಾ ದೇಶದ ಆರ್ಥಿಕ ಪ್ರಗತಿಯಲ್ಲಿ ಬ್ಯಾಂಕುಗಳ ಹಿರಿಯ ಪಾತ್ರವನ್ನು ವಿವರಿಸಿದರು. ಡಾ। ಕೆ. ಪಿ. ಗಣೇಶನ್‌ರು ವಂದನೆಗಳನ್ನರ್ಪಿಸಿದರು.

ಎ. ಬಿ. ಶೆಟ್ಟಿ ಸ್ಮಾರಕ ವಿದ್ಯಾರ್ಥಿ ನಿಲಯ— ಮೈಸೂರಿನ ಯಾದವಗಿರಿ ಬಡಾವಣೆಯಲ್ಲಿರುವ ನಿಲಯದ ಆವರಣದಲ್ಲಿ ಎ. ಬಿ. ಶೆಟ್ಟಿ ಮೆಮೋರಿಯಲ್ ಹೋಸ್ಟೆಲಿನ ವಿದ್ಯಾರ್ಥಿ ಸಂಘದ ಆರಂಭ ಭಾಷಣ ಮಾಡುತ್ತಾ ಮೈಸೂರಿನ ಮಾಜಿ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಭಾರತದಲ್ಲಿ ಪ್ರಜಾಪ್ರಭುತ್ವ ಇನ್ನೂ ಪ್ರಬುದ್ಧಾವಸ್ಥೆಗೆ ಬಂದಿಲ್ಲವೆಂದೂ ದಿವಂಗತ ಎ. ಬಿ. ಶೆಟ್ಟರು ಒಬ್ಬ ಹಿರಿಯ ವ್ಯಕ್ತಿಗಳೆಂದೂ ಹೇಳಿದರು. ಮೈಸೂರು ರಾಜ್ಯದ ವಸತಿ, ಕಾರ್ಮಿಕ ಮತ್ತು ಸಾರಿಗೆ ಮಂತ್ರಿ ಶ್ರೀ ಡಿ. ದೇವರಾಜ್ ಅರಸರು ಸಬಾಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಕಾರ್ಯದರ್ಶಿ ಶ್ರೀ ಎ. ರಾಮಣ್ಣನವರು ಸ್ವಾಗತಿಸಿ ನಿಲಯದ ಸ್ವಂತ ಕಟ್ಟಡ ನಿರ್ಮಿಸಲು ಸರ್ವರ ಸಹಕಾರ ಕೋರಿದರು. ಉಪಾಧ್ಯಕ್ಷ ಶ್ರೀ ಅಬ್ದುಲ್ ಹಮೀದರು ಧನ್ಯವಾದಗಳನ್ನರ್ಪಿಸಿದರು.

ಅಗ್ಗದರದ ಅಕ್ಕಿ ಅಂಗಡಿ ಹೆಚ್ಚಾಗಬೇಕು— ದ. ಕ. ಜಿಲ್ಲಾ ಕಾಂಗ್ರೆಸ್ ಸಮಿತಿಯ ಕಾರ್ಯನಿರ್ವಾಹಕ ಸಮಿತಿಯ ಸಭೆಯು ಇದೇ ತಾ 5ರಂದು ಅಧ್ಯಕ್ಷ ಶ್ರೀ ಟಿ. ಎ. ಪೈಯವರ ಅಧ್ಯಕ್ಷತೆಯಲ್ಲಿ ಜರಗಿ ಕೆಲವೊಂದು ರಾವುಗಳನ್ನು ಮಾಡಿದೆ. ಜಿಲ್ಲೆಯಲ್ಲಿ ಮಳೆಗಾಲದಲ್ಲಿ ಪ್ರತಿ ವರ್ಷ ಅಕ್ಕಿಯ ಕೊರತೆಯುಂಟಾಗುವುದರಿಂದ ಎಲ್ಲೆಲ್ಲಿಯೂ ಅಗ್ಗದರದ ಅಕ್ಕಿ ಡಿಪೋಗಳನ್ನು ಹೆಚ್ಚೆಚ್ಚಾಗಿ ತೆರೆಯ ಬೇಕೆಂದೂ ಜಿಲ್ಲೆಗೆ ಸಾಕಷ್ಟು ಅಕ್ಕಿಯನ್ನು ಒದಗಿಸಿ ವಿತರಣಾ ಕಾರ್ಯದ ಜವಾಬ್ದಾರಿಯನ್ನು ಸಹಕಾರಿ ಸ್ಟೋರ್ಸುಗಳಿಗೆ ಮಾತ್ರ ಮಿತಗೊಳಿಸದೆ ವ್ಯಾಪಾರಿಗಳಿಗೂ ಒಪ್ಪಿಸುವುದು ಹಿತಕರವೆಂದೂ ಅಭಿಪ್ರಾಯಪಟ್ಟಿದೆ. ಈ ಕುರಿತು ಬೆಂಗಳೂರಲ್ಲಿ ಸರಕಾರದೊಡನೆ ಮಾತುಕತೆ ನಡೆಸಿ ಕಾರ್ಯಕ್ರಮ ಕೈಗೊಳ್ಳಲು ಅಧ್ಯಕ್ಷರಿಗೆ ಅಧಿಕಾರ ಕೊಡಲಾಯಿತು.

ಸಿಂಡಿಕೇಟ್ ಬೇಂಕಿನ ಕಾಸರಗೋಡು ತಾಖೆಯ ಹೊಸ ಕಟ್ಟಡದ ಆರಂಭೋತ್ಸವವು ಇದೇ ತಾ. 12ನೇ ಸಂಜೆ 5—30ಕ್ಕೆ ಚೇರ್‌ಮೇನ್ ಡಾ। ಟಿ. ಎಂ. ಎ. ಪೈಯವರಿಂದ ನೆರವೇರಿಸಲ್ಪಡುವುದು.

ವಿಶೇಷ ಸಂಚಿಕೆ

ಬರುವ ವಾರದ 'ನವಯುಗ'ವು

ಸ್ವಾತಂತ್ರ್ಯದಿನೋತ್ಸವ ಸಂಚಿಕೆಯಾಗಿ

ವಿಶಿಷ್ಟ ರೀತಿಯಲ್ಲಿ ಪ್ರಕಟವಾಗುವುದು.

ನಿರೀಕ್ಷಿಸಿರಿ!

ಜಗತ್ಪರ್ಯಟನ

ಜವಾಹರಲಾಲ

ಪಂಡಿತ ಜವಾಹರಲಾಲರು ಇದೀಗ ದೊಡ್ಡ ಪ್ರಶ್ನೆಯೊಂದನ್ನು ಉತ್ತರಿಸುವ ಸಮಯ ನಿಕಟವಾಗುತ್ತಿದೆ. 'ಹಿಂದೀ ಚೀನೀ ಭಾಯಿ ಭಾಯಿ' ಅಂದುಕೊಂಡಿದ್ದ ಕಾಲದಲ್ಲಿ ತಾವು ನಿಂತಿದ್ದ ಎಡೆಯಲ್ಲಿಯೇ ಈಗಲೂ ಇದ್ದೇವೆ; ಆಗ ಭಾರತವು ಆಪತ್ತು ಎತ್ತಿದ್ದಿಲ್ಲವೆಂಬ ಲಾಯರ ಉತ್ತರವು ನಿರಾಶಾದಾಯಕವಾಗಿದೆ. ಆದುದರಿಂದ ತನ್ನ ನೀತಿಯಲ್ಲಿ ಯಾವ ಬದಲಾವಣೆಯನ್ನೂ ಮಾಡಲು ನಿರಾಕರಿಸುವ ಚೀನಾದೊಡನೆ ಎಂತು 'ವ್ಯವಹರಿಸಬೇಕು ಎಂಬುದೇ ಅವರ ಇಂದಿನ ರಾತ್ರಿ ಹಗಲಿನ ಚಿಂತೆ. 'ಭಾರತವೆಂದರೆ ನೆಹರು; ನೆಹರು ಎಂದರೆ ಭಾರತ." ಆದುದರಿಂದ ನೆಹರುಗಳ ಚಿಂತೆ ಭಾರತೀಯರ ಚಿಂತೆ. ಈ ದಿಸೆಯಲ್ಲಿ ಅವರುತಳೆಯುವ ನೀತಿಯನ್ನು ಸಮಸ್ತ ಭಾರತೀಯರೂ ಒಮ್ಮತದಿಂದ ಬೆಂಬಲಿಸಲು ಸಿದ್ಧವಿದ್ದಾರೆ, ಸಂಧಾನವಾದರೆ ಸಂಧಾನ; ಸಂಗ್ರಾಮವಾಗಲೇಬೇಕಾದರೆ ಸಂಗ್ರಾಮ. ಅಂತಹ ಗಂಭೀರ ಸ್ಥಿತಿ ಇಂದು ತಲೆದೋರಿದೆ.

ಮುರಾರ್ಜಿ ದೇಸಾಯಿ

ಯುರೋಪಿನ ರಾಷ್ಟ್ರಗಳ ಮುಂದೆ ವಿತ್ತಮಂತ್ರಿ ಮುರಾರ್ಜಿ ದೇಸಾಯಿಯವರು ಅತ್ತುಬಂದರು; ಐರೋಪ್ಯ ಸಾಮಾನ್ಯ ಮಾರುಕಟ್ಟೆಯು ಮಾಡಿಕೊಳ್ಳುವ ಏರ್ಪಾಡಿನಿಂದ ಭಾರತಕ್ಕೆ ತೊಂದರೆಯಾಗಬಾರದು ಎಂದು. ಆಗ, ಭಾರತಕ್ಕೆ ವಿಶೇಷ ಸೌಲಭ್ಯಗಳನ್ನು ನೀಡುವ ಆಶಯವನ್ನು ಸಂಬಂಧಿಸಿದ ರಾಷ್ಟ್ರಪ್ರಮುಖರು ನೀಡಿದ್ದರು. ಆದರೆ, ವಿದೇಶೀ ಸಹಾಯ ಗಳಿಸುವಲ್ಲಿ ದೇಸಾಯಿ ಯಶಸ್ವಿಯನಿಸಿದರೂ ಮಾರುಕಟ್ಟೆ ವಿಷಯದಲ್ಲಿ ಅಯಶಸ್ವಿಯಾದರೆಂದೇ ಹೇಳಬೇಕು. ಬ್ರಸೆಲ್ಸ್‌ನಲ್ಲಿ ಸೇರಿದ ರಾಷ್ಟ್ರಗಳು ಭಾರತಕ್ಕೆ ಅನುಕೂಲ ನೀತಿಯನ್ನು ತಾಳದಿರುವುದೇ ಇದಕ್ಕೆ ಕಾರಣ. ಇದೇ ನೀತಿಯು ಮುಂದುವರಿದರೆ, ಭಾರತದ ನಿರ್ಯಾತವು ತುಸು ಕುಂಠಿತವಾಗುವುದು. ಇದರಿಂದ ಭಾರತವು ಎದುರಿಸಬೇಕಾಗಿ ಬರುವ ಸಮಸ್ಯೆಗಳಿಗೆ ಇತರ ಪರಿಹಾರ ಮಾರ್ಗಗಳನ್ನು ಅರಸಬೇಕಾಗಿದೆ.

ಕೃಷ್ಣಮಾಚಾರಿ

ಶಾಖೆಯಿಲ್ಲದ ಮಂತ್ರಿಯೆನಿಸಿದ ಟಿ. ಟಿ. ಕೃಷ್ಣಮಾಚಾರಿಯವರು ಶಾಖೆಯೊಂದನ್ನು ಪಡೆಯುವ ಸಲ್ಲಕ್ಷಣಗಳೀಗ ತೋರತೊಡಗಿವೆ. ಸದ್ಯ ಕೇಂದ್ರದಲ್ಲಿರುವ ಕೆ. ಸಿ. ರೆಡ್ಡಿಯವರು ಪಂಜಾಬದ ರಾಜ್ಯಪಾಲರೆಂದು ನೇಮಕವಾಗುವುದೀಗ ಬಹುಮಟ್ಟಿಗೆ ನಿಜವೆಂದಾಗಿದೆ. ಹೀಗಾದಲ್ಲಿ ಅವರು ನಿರ್ವಹಿಸುತ್ತಿರುವ ವಾಣಿಜ್ಯೋದ್ಯಮ ಶಾಖೆಯ ಕಾರ್ಯಭಾರ ಟಿ ಟಿ ಕೆ. ಯವರ ಕೈಸೇರುವುದೂ ಅಷ್ಟೇ ನಿಜವೆನಿಸಿದೆ ತಮ್ಮ ಹೊಸ ಶಾಖೆಯನ್ನು ನೋಡಿಕೊಳ್ಳುವುದರೊಡನೆ ಸದ್ಯದ 'ಸಮನ್ವಯ"ದ ಕಾರ್ಯವನ್ನೂ ಅವರು ಮುಂದುವರಿಸಬೇಕಾಗುತ್ತಿದೆ. ಏಕೆಂದರೆ, ಮಂತ್ರಿಯೆನಿಸಲು ಎಂ. ಪಿ. ಗಳು ದೊರೆಯುತ್ತಾರೆ; ಸಮನ್ವಯ ನಡೆಸಲು ಟಿ. ಟಿ. ಕೆ. ಬೇರೆ ದೊರೆತಾರೆ?

ನೈಜ ಭಾರತೀಯ

ಮುಂಗಡ ಪತ್ರದಲ್ಲಿ ಕಾಣಿಸಲಾದ ಸಾರ್ವಜನಿಕ ಸಾಲಗಳನ್ನು ಎತ್ತುವ ಕಾಲವೀಗ ಸನ್ನಿಹಿತವಾಗಿದೆ. ಭಾರತದಲ್ಲಿರುವ ಹದಿನಾಲ್ಕು ರಾಜ್ಯರಸಕಾರಗಳು ಒಟ್ಟು ರೂ. ೯೩|ಕೋಟಿಗಳ ಸಾಲವನ್ನು ಆಗಸ್ತ ೨೦ರಿಂದ ಎತ್ತುವುವು. ಸಾಲಿಯಾನ ಸೇಕಡ ೪||ಸಲೆಯಲ್ಲಿ ಬದ್ಧಿ ದೊರೆಯುವ ಈ ಸಾಲಗಳು ೧೨ವರ್ಷ ಅವಧಿಯವು. ಕರ್ನಾಟಕ ಸರಕಾರವಾದರೂ ರೂ. ೬ ಕೋಟಿಗಳ ಸಾಲ ಕೂಡಿಸಲಿದ್ದು ಇದಕ್ಕೆ ರೂ ೧೦೦ಕ್ಕೆ ರೂ ೯೯·೭೫ರಂತೆ ಚಂದಾವನ್ನು ಸ್ವೀಕರಿಸುವುದು.

ದೇವರಾಜ ಅರಸು

ತಮಿಳುನಾಡು, ಮದ್ರಾಸು ಎಂಬ ಎರಡು ಹೆಸರುಗಳಿರುವ ರಾಜ್ಯದ ಸಾಲಿಗೆ ಕರ್ನಾಟಕವನ್ನೂ ದೂಡಬೇಕೆಂಬಪ್ರಯತ್ನ ಕೆಲವರು ನಡೆಸಿದರು, ಮಂತ್ರಿ ದೇವರಾಜ ಅರಸರೇ ಇದರ ಪುರಸ್ಕರ್ತರು. ಆದರೆ, ಅವರೆನ್ನುವಂತೆ 'ಕನ್ನಡನಾಡು ಮೈಸೂರು, ಎಂಬುದಕ್ಕೆ ಸಮರ್ಧಕ ಅಭಾವವು ಕಂಡುಬಂತು ಹಾಗಾಗಿ ಆದು ಬಿದ್ದು ಹೋಯಿತು

ಅಯೂಬಖಾನ

ಮಾರ್ಶಲ್ ಅಯೂಬಖಾನರು ಭಾರತದ ಕಡೆಗೆ ವಿಷಗಾಳಿಯನ್ನು ಆಗಾಗ ಬೀಸುತ್ತಿರುತ್ತಾರೆ. ಪಾಕ್ ನಾಯಕರ ರಕ್ತಗತವಾದ ಅಭ್ಯಾಸಗಳಲ್ಲಿ ಇದೂ ಒಂದು. 'ಭಾರತವು ಯಾವಾಗಲೂ ಪಾಕಿಸ್ತಾನ ವಿರೋಧಿ ನೀತಿಯನ್ನು ಅನುಸರಿಸುವುದು. ನಾವು ಅದರೊಡನೆ ಸ್ನೇಹದಿಂದಿರ ಬಯಸುತ್ತೇವಾದರೂ ಭಾರತವಿದನ್ನು ಅರಿತುಕೊಂಡಿಲ್ಲ" ಎಂದ ಅವರು ಕಾಶ್ಮೀರದ ಪ್ರಶ್ನೆಯನ್ನು ಸ್ನೇಹಯುತವಾಗಿ ಬಗೆಹರಿಸಿದರೆ ಭಾರತ-ಪಾಕ್‌ಗಳ ನಡುವೆ ಬಡಿದಾಟ ನಿಲ್ಲುವುದು ಎಂದಿದ್ದಾರೆ. ಇಷ್ಟರಿಂದಲೇ ಅಯೂಬರು ಬಯಸುವುದು ಸ್ನೇಹವನ್ನಲ್ಲ; ಕಾಶ್ಮೀರವನ್ನು ಎಂಬುದು ವ್ಯಕ್ತವಾಗುತ್ತದೆಯಲ್ಲವೆ?

ರಾಷ್ಟ್ರಪತಿ ಉವಾಚ

ಮಾನವನ ನೀತಿ — ಇರು, ಇರಗೊಡು

ಸ್ಪರ್ಧಾ ಮನೋವೃತ್ತಿಯಲ್ಲಿ ಅನ್ಯ ಪ್ರಯೋಗಗಳು ನಡೆಯುತ್ತ ಬರುವ ಇಂದಿನ ಜಗತ್ತು ಕುರುಕ್ಷೇತ್ರದಲ್ಲಿ ಮುಂದುವರಿದು, ಮಾನವರ ಮನಸ್ಸಿನಲ್ಲಿ ಯುದ್ಧದ ಭೀತಿಯನ್ನು ಹುಟ್ಟಿಸುತ್ತಿದೆ. ವಿಜ್ಞಾನ, ವೈದ್ಯಶಾಸ್ತ್ರ ಮತ್ತು ತಾಂತ್ರಿಕ ರಂಗಗಳಲ್ಲಿ ನಡೆಸಲಾದ ವಿವಿಧ ಸಂಶೋಧನೆಗಳು ಯೋಗ್ಯ ರೀತಿಯಿಂದ ಬಳಸಲ್ಪಟ್ಟರೆ, ಈ ಪ್ರಪಂಚವನ್ನು ವಾಸಮಾಡಲು ಯೋಗ್ಯ ಸ್ಥಾನವನ್ನಾಗಿ ರೂಪಿಸಬಹುದು. ಆದರೆ, ನಮ್ಮ ಕಂಬಲ ಮತ್ತು ಸಾಧನೆಗಳ ನಡುವೆ ಬೆಟ್ಟದಷ್ಟು ಅಂತರವಿದ್ದು ಇದನ್ನು ಅವಶ್ಯ ದೂರೀಕರಿಸಬೇಕಾಗಿದೆ.

ಭಾರತವು ಶಾಂತಿಯುತ ಸಹ ಜೀವನದ ತತ್ವವನ್ನು ಮುಂದಿಟ್ಟಿದೆ. ಇದು ಪ್ರಜಾಪ್ರಭುತ್ವದ ವಿಸ್ತರಣೆ ಮಾತ್ರ ಇರು, ಇರಗೊಡು ಎಂಬುದೇ ಇದರ ಮೂಲ ಮಂತ್ರ. ಎಲ್ಲ ಜನರೂ ಒಂದೇ ವಿಧವಾಗಿರಬೇಕೆಂದು ಒತ್ತಾಯಿಸುವುದು ಸಲ್ಲದು; ಮತ್ತು ಅದು ಅಸಾಧ್ಯವೂ ಹೌದು. ಆದುದರಿಂದ ಪ್ರಜಾಪ್ರಭುತ್ವದಲ್ಲಿ ಭಿನ್ನಾಭಿಪ್ರಾಯಗಳಿರುವುದು ಸ್ವಾಭಾವಿಕ; ಏಕಾಭಿಪ್ರಾಯತೆಯನ್ನು ಎಲ್ಲರಲ್ಲಿಯೂ ಅಚ್ಚು ಹೊಯ್ಯುವುದು ಅವೀವೇಕತನದ ಕೆಲಸ. ಮತಭೇದವಿದ್ದರೂ ಸಾಮರಸ್ಯವಿರಬೇಕಾದುದು ಅವಶ್ಯ; ಸ್ವಾತಂತ್ರ್ಯದ ಸಂಖದ ಕುರಿತಾಗಿ ನಾವು ಕಟ್ಟಿದ ಸುಂದರ ಸ್ವಪ್ನಗಳು ವಾಸ್ತವಿಕವಾಗಿ ಪರಿಣಮಿಸಬೇಕಾದರೆ, ಜನತೆಯಲ್ಲಿರುವ ನಿರಾಶೆಯು ದೂರವಾಗ ಬೇಕೆಂದಿದ್ದರೆ, ಸರಕಾರ ಮತ್ತು ಜನತೆಯು ನಡುವೆ ತುಂಬು ಸಹಕಾರವಿರ ಬೇಕು; ಅವೆರಡೂ ಒಂದಾಗಿ ದುಡಿಯ ಬೇಕು. ಉತ್ತಮ ಸರಕಾರ ಮತ್ತು ನಿಸ್ಕಲಂಕ ಆಡಳಿತೆಯು ಇದೆಯೆಂಬ ಭಾವನೆಯು ಜನತೆಯಲ್ಲಿ ಮೂಡಿದಾಗಲೇ ಅವರ ಮನದಲ್ಲಿ ಕವಿದಿದ್ದ ನಿರಾಶೆಯು ದೂರವಾಯಿತೆಂದು ತಿಳಿಯ ಬೇಕು.

ಮಾನವನು ರಾಜಕೀಯ ಪ್ರಾಣಿ. ಆದುದರಿಂದಲೇ ಅವನು ಗುಂಪು ಕಟ್ಟಿ ಇರುತ್ತಾನೆ. ತನ್ನ ಗುಂಪೊಂದೇ ಸನ್ಮಾರ್ಗದಲ್ಲಿದೆ; ಎಂದು ತಿಳಿದು ಉಳಿದುವನ್ನು ಅತ ದ್ವೇಷಿಸುತ್ತಾನೆ. ಹೀಗೆ ದ್ವೇಷವೆಂಬುದು ಜೀವನದ ಅವಿಭಾಜ್ಯ ತತ್ವವಾಗಿ ಪರಿಣಮಿಸುತ್ತದೆ. ಆದರೆ, ಪ್ರತಿಯೊಂದು ಗುಂಪಿಗೂ ತಲೆಯೆತ್ತಲು ಅವಕಾಶವಿದೆಯೆಂಬುದನ್ನು ಮರೆಯಬಾರದು. ಜನತೆಯು ಈ ದ್ವೇಷ ಭಾವನೆಯನ್ನು ಬಿಟ್ಟುಗೊಡಬೆ ತನ್ನ ಉದ್ದೇಶ ಸಾಧನೆಯಲ್ಲಿ ಸಫಲವಾಗದು.

ಕರ್ನಾಟಕದ ನಿವಾಸಿಗಳ ಮುಂದೆ ಚಾಮುಂಡೇಶ್ವರಿ ಇಲ್ಲವೇ ಮಹಿಷಾಸುರ ಮರ್ಧಿನಿಯ ಆದರ್ಶವಿದೆ. ಆನೆ ಕೆಡುಕನ್ನು ನೂರಮಾಡಿ ಒಳತನ್ನು ಸಂಸ್ಥಾಪಿಸಿದವಳು. ಮಾನವನಾದರೂ ತನ್ನಲ್ಲಿರುವ ದುಷ್ಪ್ರವೃತ್ತಿಗಳನ್ನು ಗೆದ್ದುಕೊಂಡು, ಸದ್ವೃತ್ತಿಗಳನ್ನು ರೂಪಿಸಿಕೊಳ್ಳದ ವರೆಗೆ ಯಶಸ್ವಿಯೆನಿಸಲಾರನು. ಈ ಆದರ್ಶವನ್ನು ಚಾಮುಂಡೇಶ್ವರಿಯು ನಮ್ಮ ಮುಂದೆ ಇಟ್ಟಿದ್ದಾಳೆ; ಅದನ್ನು ನಾವು ಸಾಧಿಸಬೇಕು.

ಶ್ರೀ ಮದ್ಭಗವದ್ಗೀತೆಯಲ್ಲಿ ಮಾನವನು ಸಫಲನೆನಿಸಲು ಮೂರು ಮಾರ್ಗಗಳು ಉಲ್ಲೇಖಿತವಾಗಿವೆ. ಇಂದಿನ ನರಳಾಟ, ಭಾಷಾವಿವಾದ, ಜಾತೀಯ ಹೋರಾಟ ಕೋಮುವಾರು ಭಾವನೆಗಳು ರಕ್ತಸುರಿಯುವುದಕ್ಕೆ ಕಾರಣವಾಗುತ್ತಿರುವುದನ್ನು ನಾವು ನೋಡುತ್ತೇವೆ. ಸಹಾನುಭೂತಿ ಮತ್ತು ತಿಳುವಳಿಕೆಗಳು ಕಡಿಮೆಯಾದುದೇ ಇದಕ್ಕೆ ಕಾರಣವೆಂಬುದನ್ನೂ ನಾವು ಊಹಿಸುತ್ತೇವೆ. ಉದಾರತೆಯ ಮನೋಭಾವವಿದ್ದರೆ ಮಾತ್ರ ಸುಮಧುರ ಸಂಬಂಧವು ಸ್ಥಾಪಿತವಾಗುವುದು; ಯೋಗ್ಯ ಭಾವನೆಯು ಬೆಳೆಯಲು ಅಸ್ಪದ ದೊರೆಯುವುದು.....

ಸರಕಾರ, ಪ್ರಜೆಗಳು ಮತ್ತು ವೈದ್ಯರುಗಳು ಪರಸ್ಪರ ಸಹಕರಿಸಿದರೆ, ಮೂತ್ರ ಕ್ಷಯದಂತಹ ಮಹಾಮಾರಿಯನ್ನೂ ನಾವು ದೂರಮಾಡಿಸಬಹುದು. ಪ್ರಪಂಚದ ಇತರೆಡೆ ಇಂತಹ ಸಹಕಾರ ಪ್ರವೃತ್ತಿಯಿಂದ ಮಹಾ ರೋಗಗಳ ವಿರುದ್ಧ ಹೋರಾಡಿ ಜಯಶ್ರೀಗಳಿಸಿದ್ದಾರೆ. ಗಳಿಸಿದ ಶಕ್ತಿಯನ್ನು ನೈತಿಕ ನಿಯಮಗಳಿಗನುವಾಗಿ ಉಪಯೋಗಿಸ ಬೇಕು.

ಈ ಉಪಯೋಗ ಚಕ್ರದಲ್ಲಿ ನೈತಿಕ ನಿಯಮ ಮತ್ತು ಧಾರ್ಮಿಕ ನಿಯಮಗಳು ಅಡಕವಾಗುತ್ತವೆ. ತಾವು ಗಳಿಸಿದ ಪ್ರತಿ ಶಕ್ತಿಯೂ ನೇರನಿಯಮ ಸಂವರ್ಧನೆಯೂ ಗಿರಬೇಕು; ಮಿಲಿಟರಿ ಶಕ್ತಿ ಅಥವಾ ಆರ್ಥಿಕ ಬಲ ಮತ್ತು ಉಚಿತತೆಗಳ ನಡುವೆ ಭಿನ್ನಾಭಿಪ್ರಾಯವಿದ್ದರೆ, ಮೊದಲಿನವುಗಳನ್ನು ಬಿಟ್ಟುಬಿಡಬೇಕು. ಧರ್ಮ ಮತ್ತು ಅರ್ಥಗಳ ನಡುವೆ ಹೋರಾಟವು ನಡೆಯುತೊಡಗಿದರೆ, ಆರ್ಥಿಕ ವಿಚಾರವನ್ನೇ ಕೈಬಿಡಬೇಕು. ಪ್ರತಿ ವ್ಯಕ್ತಿಯೂ ಸಾರ್ವಭೌಮನೂ ಪ್ರಜೆಯೂ ಆಗಿದ್ದಾನೆ. ತನ್ನ ಇಚ್ಛೆಯಂತೆ ಮುಂದುವರಿಯಲು ಆತನು ಸ್ವತಂತ್ರನಿದ್ದಾನೆ; ಹಾಗಿದ್ದರೂ ಸಾಮಾಜಿಕ ಶಿಸ್ತನ್ನು ಅವನು ಮನ್ನಿಸಬೇಕಾಗುತ್ತದೆ. ಸಿಂಹದಂತೆ ಶಕ್ತಿವಂತನಾಗಿದ್ದರೆ ಮಾತ್ರ ನಾಲದುಃ ಸಾಮಾಜಿಕ ಗೃಹಸ್ಥಾಳಕೆಯು ನಡಾವಳಿಗಳನ್ನೂ ಆತ ಅವಶ್ಯ ಅರಿತಿರ ಬೇಕಾಗುತ್ತದೆ.

ಅಂಧಕಾರದಲ್ಲಿ ಜ್ಞಾನ ಪ್ರಕಾಶ

(ಳನೇ ಪುಟದಿಂದ)

ರ್ಣಿಯಾದರೂ ಸದಾಶಯವನ್ನೇ ಹೊರ ಗೆಡಹಿದ್ದಾನೆ. "ನನಗಾಗಿ ಅವರು ಆಹಾರ ಉಳಿಸುತಿದ್ದರು. ಇದಕ್ಕಾಗಿ ಅವರೇ ಹಸಿದಿರ ಬೇಕಾಗುತಿತ್ತು. ಸತ್ಯ ಹೇಳುವುದಾದರೆ, ತಿಲಕರು ನನಗೆ ಪಿತೃ ಸಮಾನರೆಂಬುದು ಸರಿಯಾಗಲಾರದು; ಏಕೆಂದರೆ, ಅವರ ಸ್ಥಾನ ತಂದೆಯಿಂದಲೂ ಹೆಚ್ಚಿನದು"

ಲೋಕಮಾನ್ಯ ತಿಲಕರು ಮಹಾದಾರ್ಶನಿಕರು. ಹಾಗಿದ್ದರೂ ತನ್ನ ಪತ್ನಿ ಸತ್ಯ ಭಾಮೆಯು ಇಹಲೋಕವನ್ನಗಲಿದಾಗ ಅವರು ಚಿಂತಾ ಸಾಗರದಲ್ಲಿ ಮುಳುಗಿದರು. ಅವರ ಮರಣದ ಸುದ್ದಿ ತನಗೆ ದೊರೆತ ಬಳಿಕ ಜೇಲಿನಿಂದ ತಿಲಕರೊಂದು ಪತ್ರ ಬರೆದಿದ್ದರು. "ಪೌರ್ಭಾಗ್ಯವನ್ನು ಶಾಂತಿಪೂರ್ವಕ ಸಹಿಸುವ ಅಭ್ಯಾಸ ನನಗಿದೆ. ಆದರೆ, ಈ ದೌರ್ಭಾಗ್ಯ ಮಾತ್ರ ನನ್ನನ್ನು ಕೆಡಿಸಿ ಬಿಟ್ಟಿದೆ. ಇಂತಹ ಸಂಕಟದ ಸಮಯದಲ್ಲಿ ನಾನು ಆಕೆಯಿಂದ ದೂರವಿರಬೇಕಾಯಿತಲ್ಲ ಎಂಬ ಕಳವಳ ನನಗೆ. ನನ್ನ ಜೀವನದ ಒಂದು ಅಧ್ಯಾಯ ಕೊನೆಗೊಂಡಿತು. ಇನ್ನೊಂದನ್ನು ಶೀಘ್ರದಲ್ಲಿಯೇ ಕೊನೆಗಾಣುವುದೆಂಬ ಭಯ ನನಗಿದೆ." ಎಂದು ಅದರಲ್ಲಿ ಉಲ್ಲೇಖಿಸಿದ್ದರು.

ಮಂಡಲೇಯ ಆಸ್ಪತ್ರೆಯ ವಾತಾವರಣದಲ್ಲಿ ಆರು ವರ್ಷಗಳ ಏಕಾಂತ ಜೀವನವು ತಿಲಕರ ಆರೋಗ್ಯದ ಮೇಲೆ ಕುಪ್ರಭಾವ ಬೀರದುಳಿಯಲಿಲ್ಲ; ಅವರ ಧರ್ಮಪತ್ನಿಯ ದೇಹಾಂತವು ಕುರಿಯ ಮೇಲೆ ಬೊಕ್ಕೆಯೇಳಿಸಿತು. ೧೯೧೪ರ ಜೂನ್ ೧೬ರಂದು ರಾತ್ರಿ ಅವರನ್ನು ಸೂನಾಕ್ಕೆ ತಂದು ಬಿಟ್ಟಾಗ, ಅವ ರೊಬ್ಬ ರೋಗಿಯಾಗಿದ್ದರು. ಹಾಗಿದ್ದರೂ ಅವರ ಮುಗುಳ್ನಗು ಮತ್ತು ಇಚ್ಛಾ ಶಕ್ತಿಗಳು ಹಿಂದಿನಂತೆಯೇ ಹೊಳೆಯುತ್ತಿದ್ದವು. ಆ ಮೇಲೆ ತಮ್ಮ ಆರೋಗ್ಯವು ದಿನದಿಂದ ದಿನಕ್ಕೆ ಕೆಡುತ್ತ ಬರುತ್ತಿದ್ದರೂ ಆದರ ಬಗ್ಗೆ ಕಾಳಜಿ ವಹಿಸದೆ ದೇಶಮಾತೆಯ ಸೇವೆಯಲ್ಲಿಯೇ ದೇಹ ಸವೆಸಿ, ೧೯೨೦ ಜುಲೈ ೩೧ರಂದು ರಾತ್ರಿಯಿಂದ ಮುಚ್ಚಿದ ಕಣ್ಣು ತೆರೆಯಲಿಲ್ಲ.

ಇಡಿದು ಭಾರತದಲ್ಲಿ ಲೋಕಮಾನ್ಯ ತಿಲಕರ ಈ ಮೃತ್ಯುವಿನ ದಿನ ಗೌರವ ಸಹಿತ ಆಚರಿಸಲ್ಪಡುತ್ತದೆ. ಈ ವರ್ಷವಾದರೂ ಮುಂಬಯಿಯ ಚೌಪಾಟಿಯಲ್ಲಿ ಲೋಕಮಾನ್ಯರ ಮೂರ್ತಿಯ ಮುಂದೆ ಸಾವಿರಾರು ನಾಗರಿಕರು ಶ್ರದ್ಧಾವನತರಾಗಿ ಅವರ ದಿವ್ಯ ಜೀವನವನ್ನು ಭವ್ಯ ವ್ಯಕ್ತಿತ್ವವನ್ನು ಅಪಾರ ಸ್ವಾತಂತ್ರ್ಯ ಪ್ರೇಮವನ್ನು ಅದಮ್ಯ ಉತ್ಸಾಹವನ್ನು ಅದ್ವಿತೀಯ ಕಾರ್ಯ ಕೌಶಲ್ಯವನ್ನು ಸ್ಮರಿಸಿಕೊಂಡರು.

"ಸೇವೆಯೇ ಮೊದಲು; ಸೇವೆಯಲ್ಲಿ ಮೊದಲು"

ಈ ಉದಾತ್ತ ಧ್ಯೇಯ ಸಾಧನೆಗಾಗಿಯೇ

— ಕೊರ್ಪೊರೇಶನ್ ಬೇಂಕ್ —

ನಿಮ್ಮ ಹಣಕ್ಕೆ

ಅತ್ಯುತ್ತಮ ಭದ್ರತೆಯೊಂದಿಗೆ ಅತ್ಯಧಿಕ ಬಡ್ಡಿ ಕೊಡುತ್ತಿದೆ.

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಉಡುಪಿ)

ಆಡಳಿತ ಆಫೀಸು: ಮಂಗಳೂರು.

ಹೊಸ ಪುಸ್ತಕ

ಅಮೇರಿಕದ ಆರು ಮಂದಿ ಪ್ರಖ್ಯಾತ ಕಥೆಗಾರರ ಆರು ಉತ್ತಮ ಕಥೆಗಳ ಸುಂದರ ಕಥಾಸಂಕಲನ

ಅಮೆರಿಕದ ಆರು ಕತೆಗಳು

ಅಮೆರಿಕದ ಗ್ರಾಮಜೀವನದ ಸುಂದರ, ಸಜೀವ ಮತ್ತು ಮಾರ್ಮಿಕ ಚಿತ್ರಗಳನ್ನು ಒತ್ತಟ್ಟಿಗೆ ಪೋಣಿಸಿರುವುದು ಈ ಕಥಾಸಂಕಲನದ ವೈಶಿಷ್ಟ್ಯ

ಅನುವಾದಿಸಿದವರು:

ಕು. ಶಿ. ಹರಿದಾಸ ಭಟ್ಟ, ಎಂ.ಎ.

ಪ್ರಕಾಶಕರು:

ನವಯುಗ ಎಂಟರ್‌ಪ್ರೈಸ್ ಲಿ

ಬೆಲೆ: ರೂ. 1=75; ಬಿಳಿ ಕಾಗದ!

ರೂ.೩ನ್ನು M.O. ಮಾಡಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟಾಗಿ ಕಳಿಸಬಹುದು

ವ್ಯಾಪಾರಿಗಳಿಗೆ ಧಾರಾಳ ಕಮಿಷನ್

ಪ್ರತಿಗಳು ದೊರೆಯುವ ಸ್ಥಳಗಳು:

ನವಯುಗ ಪ್ರೆಸ್ ಉಡುಪಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸರಸ್ವತೀ ಸಂಹಾರವಾಗದಿರಲಿ

(೨ನೇ ಪುಟದಿಂದ)

ಕ್ಯನ್ ಗ್ರೇಡ್ ಮಾಡುವಾಗ, ಬೇರೆ ಬೇರೆ ಸಮಸ್ಯೆಗಳು ಏಳದಿರಬೇಕಾದರೆ, ಶಾಲೆಗಳ ವ್ಯವಸ್ಥಾಪಕತ್ವವನ್ನು ಸರಕಾರ ತಾನೇ ವಹಿಸಬೇಕು ಬೇರೆ ಬೇರೆ ಆಡಳಿತೆಯಲ್ಲಿರುವ ಎಲ್ಲ ಅಧ್ಯಾಪಕರ ಸೀನಿಯೂರಿಟಿ ಲಿಸ್ಟನ್ನು ಮಾಡಿ ಮುಖ್ಯೋಪಾಧ್ಯಾಯರನ್ನು ನೇಮಿಸಬೇಕು. ಅವರನ್ನು ತಾಲೂಕುವಾರಾಗಿ ಅಧ್ಯಾಪಕರನ್ನು ಪಂಚಾಯತ್‌ವಾರಾಗಿ ವರ್ಗಾವರ್ಗಿ ಮಾಡಬಹುದು ಮುಖ್ಯೋಪಾಧ್ಯಾಯರ ನೇಮಕದಲ್ಲಿ ಸರ್ವಿಸಿಗೆ ಮನ್ನಣೆ ದೊರೆಯದವರೆಗೆ ಅವರಿಗೆ ಪ್ರತ್ಯೇಕ ವೇತನ ಮಟ್ಟವನ್ನು ಅನ್ವಯಿಸುವುದು ಎಂದಿಗೂ ಸಾಧ್ಯವಿಲ್ಲ ಏಕೆಂದರೆ, ಇಂದಾದರೂ ಖಾಸಗಿ ಶಾಲೆಗಳಲ್ಲಿ ಮುಖ್ಯೋಪಾಧ್ಯಾಯರ ನಿಯುಕ್ತಿಗೆ ಅಧ್ಯಾಪಕರ ಸರ್ವಿಸನ್ನು ಗಣಿಸುವ ಪದ್ಧತಿ ಸಾಮಾನ್ಯವಾಗಿ ಇರುವುದಿಲ್ಲ.

ಮಾಧ್ಯಮಿಕ ಶಾಲೆಗಳ ಆಡಳಿತಿಯಲ್ಲಿಯೂ ಮೇಲಿನಂತಹ ಸಮಸ್ಯೆಗಳಿವೆ. ಜಿಲ್ಲಾ ಬೋರ್ಡುಗಳ ಅಧೀನ ವಿರುವ ಹೈಸ್ಕೂಲುಗಳನ್ನು ತಾಲೂಕು ಬೋರ್ಡುಗಳಿಗೆ ಒಪ್ಪಿಸಿಕೊಡುವುದು ಕಾರ್ಯರೂಪಕ್ಕೆ ಬರುತ್ತಿದೆ. ಇಲ್ಲಿಯೂ ಶಕ್ಯವಾದಷ್ಟು ಏಕರೂಪತೆಯನ್ನು ತರಬೇಕು. ಸರಕಾರಿ, ಫಿರರೀಸ್ ಪ್ರೌಢ ಶಾಲೆಗಳನ್ನೂ ಇವುಗಳಿಗೆ ಒಪ್ಪಿಸುವುದು ಅಪೇಕ್ಷಣೀಯ. ಸರಕಾರವೇ ಪ್ರತ್ಯಕ್ಷವಾಗಿ ಇವುಗಳನ್ನು ನಡೆಸಲು ಬಯಸುತ್ತಿಲ್ಲ ಇರಲಿ, ಒಂದು ಸ್ವಾಯತ್ತ ಸಂಸ್ಥೆಯನ್ನಾದರೂ ರಚಿಸ ಬಹುದಿತ್ತು; ಅದೂ ಆಗಲಿಲ್ಲ; ಇದ್ದುದರಲ್ಲಿಯೇ ಏಕರೂಪತೆ ತರುವುದೆಂದರೆ ಖಾಸಗಿಯಲ್ಲದ ಎಲ್ಲ ಹೈಸ್ಕೂಲುಗಳು. ಸರಕಾರಿ, ಸ್ಥಳೀಯ ಸಂಸ್ಥೆ ಮತ್ತು ಫಿಶರೀಸ್-ತಾಲೂಕು ಬೋರ್ಡಿನ ಆಡಳಿತೆಗೆ ಒಳಪಡುವಂತೆ ಮಾಡುವುದು ವ್ಯವಸ್ಥೆಗೆ ಬೇಕಾದ ಆರ್ಥಿಕ ಸಹಾಯವನ್ನು ಸರಕಾರವು ಶಿಕ್ಷಣ ವಿಭಾಗದಿಂದ ಒದಗಿಸುವುದು. ಆಗ, ನಾಲ್ಕು ಇದ್ದ ಆಡಳಿತ ವಿಭಾಗವು ಎರಡಕ್ಕೆ ಇಳಿಯುವುದು. ಕಾಲಕ್ರಮದಲ್ಲಿ ದೇಶವು ಸಮೃದ್ಧವಾಗುತ್ತ ಹೋದಂತೆ ಮಾಧ್ಯಮಿಕ ಶಿಕ್ಷಣವೂ ಸರಕಾರದ ಹೊಣೆಯೆನಿಸುವ ಕಾಲ ಅವಶ್ಯ ಬಂದೇ ಬರುತ್ತದೆ; ಆಗ ಈ ಖಾಸಗಿ ಶಾಲೆಗಳನ್ನೂ ವಶಪಡಿಸುವ ಮಾರ್ಗ ಸುಗಮವಾಗುತ್ತದೆ.

ಶಿಕ್ಷಣ ಕ್ಷೇತ್ರದಲ್ಲಿ ಪದೇ ಪದೇ ಸರಕಾರ ಕೃಹಾಕಬಾರದು. ಪವಿತ್ರವಾದ ಸರಸ್ವತೀ ಮಂದಿರದ ಪಾವಿತ್ರ್ಯಕ್ಕೆ ಧಕ್ಕೆ ತರಬಾರದು. ವಿಭಿನ್ನ ಆಡಳಿತೆಯಲ್ಲಿರುವ ಶಾಲೆಗಳ ವ್ಯವಸ್ಥೆಯ ಏರ್ಪಾಡು ಮಾಡುವುದಕ್ಕೆ ಇದೀಗ ಕಾಲ ಸನ್ನಿಹಿತವಾಗಿದೆ. ಶಿಕ್ಷಣ ಸಂಸ್ಥೆಗಳನ್ನು ಅವಸರ ಅವಸರವಾಗಿ ಯಾರು ಯಾರಿಗೂ ಕೊಟ್ಟು ಅವುಗಳಲ್ಲಿ ದುಡಿಯುತ್ತಿರುವ ಅಧ್ಯಾಪಕರಿಗೂ ಕಲಿಯುತ್ತಿರುವ ವಿದ್ಯಾರ್ಥಿಗಳಿಗೂ ಅನ್ಯಾಯ ಮಾಡಬಾರದು. ಎಲ್ಲರ ಹಿತಾ ಸಕ್ತಿಗಳನ್ನು ಗಣಿಸಿ ಶಿಕ್ಷಣದ ಸ್ಥಾನಮಾನಗಳಿಗೆ ಉಚಿತವಾದ ಕಾರ್ಯಪ್ರಣಾಳಿಯನ್ನು ರೂಪಿಸುವುದು ಅತ್ಯಂತ ಅಪೇಕ್ಷಣೀಯವಿದೆ. ಹಾಗೆಯೇ ತಾನು ವಹಿಸಿಕೊಂಡ ಅಥವಾ ಒಪ್ಪಿಸಿಕೊಡುವ ಶಿಕ್ಷಣಾಲಯಗಳು ಸಮರ್ಪಕವಾಗಿ ಕಾರ್ಯತತ್ಪರರಾಗುವಂತೆ ಮಾಡಬೇಕು. ಶಿಕ್ಷಣದ ಮಟ್ಟವು ಪಾಠ ಪುಸ್ತಕ ತಯಾರಿಯಿಂದಾಗಲೀ ಅಭ್ಯಾಸ ಪತ್ರಿಕೆಯಿಂದಾಗಲೀ ಉನ್ನತವಾಗುವುದಲ್ಲ, ಸಮರ್ಥ ಅಧ್ಯಾಪಕರಿಂದ ಉನ್ನತವಾಗುವುದು. ಇಂದು ಕಾಣಿಸುತ್ತಿರುವ ಅಂತಹ ಅಧ್ಯಾಪಕರ ಅಭಾವಕ್ಕೆ ಕಾರಣವನ್ನು ಕಂಡುಕೊಂಡು, ಅವನ್ನು ಪರಿಹರಿಸಲು ಯೋಜನೆ ರೂಪಿಸಬೇಕು. ಈ ಸಂಬಂಧದಲ್ಲಿ ಅಸಡ್ಡೆ ತೋರಿಸಿದರೆ, ಸರಕಾರ ಮಾಡುತ್ತಿರುವ ವೆಚ್ಚವು ನೆರೆಯಲ್ಲಿ ಬಳಿದುಕೊಂಡು ಹೋಗುವ ಮಣ್ಣಿನಂತೆ ಸಂಪೂರ್ಣ ನಿರರ್ಥಕವಾಗುವುದು ಎಂಬುದನ್ನು ನೆನಪಿಡಬೇಕು.

ಶಿಕ್ಷಣ ಕ್ಷೇತ್ರದ ಗೊಂದಲಗಳನ್ನು ಉಲ್ಲೇಖಿಸುತ್ತ ಹೋದರೆ, ಅದು ಮುಗಿಯದ ಕತೆಯಾದೀತು. ಅಧ್ಯಾಪಕರಿಲ್ಲದ ಶಾಲೆಗಳು, ಡಾಕ್ಟರರಿಲ್ಲದ ಆಸ್ಪತ್ರೆಗಳು ನಮ್ಮ ರಾಜ್ಯದಲ್ಲಿ ಬೇಕೆಂಬಷ್ಟು ದೊರೆಯುತ್ತಿವೆ ಇದನ್ನೇ ನಾವು ಕಲ್ಯಾಣ ರಾಷ್ಟ್ರವೆಂದು ಕರೆಯುತ್ತೇವೆ. ನಮ್ಮ ಶಿಕ್ಷಣ ಸಂಸ್ಥೆಗಳು ಇಂದಿನಂತೆಯೇ ಇನ್ನೂ ಹತ್ತು ವರ್ಷಗಳ ಕಾಲ ಮುಂದುವರಿದುವೆಂದರೆ, ಅಲ್ಲಿಗೆ ಶಿಕ್ಷಣದ ಭವಿಷ್ಯ ಮುಗಿಯಿತು; ಸರಸ್ವತೀ ಸಂಹಾರ ನಡೆಯಿತು ಎಂದರ್ಥ. ಆದುದರಿಂದ ರಾಜ್ಯಸರಕಾರವು ದೇಶದ ಪ್ರಧಮಾವಶ್ಯಕತೆಯಾದ ಶಿಕ್ಷಣದ ಕಡೆಗೆ ಹೆಚ್ಚಿನ ನಿಗಾಕೊಡುವ ಅಗತ್ಯವಿದೆಯೆನಿಸುತ್ತದೆ.

ಪುಸ್ತಕ ವಿಮರ್ಶೆ

[ವಿಮರ್ಶೆಗಾಗಿ ಪುಸ್ತಕಗಳನ್ನು ಕಳುಹಿಸುವವರು ಎರಡೆರಡು ಪ್ರತಿಗಳನ್ನು ಕಳುಹಿಸಬೇಕಾಗಿ ವಿನಂತಿ. —ಸಂ. ನ.]

ಮನುಕುಲದ ಹಾಡು—ಲೇಖಕರು: ಗಂಗಾಧರ ಚಿತ್ತಾಲ ಪ್ರಕಾಶಕರು ಕೆನೆರಾವೆಲ್‌ಫೇರ್ ಟ್ರಸ್ಟಿನ ಜನತಾ ಪ್ರಕಾಶನ, ಅಂಕೋಲಾ ಇವರ ಪರವಾಗಿ ಮನೋಹರ ಗ್ರಂಥಮಾಲಾ, ಧಾರವಾಡ ಪುಟಗಳು: ೭೬. ಬೆಲೆ: ರೂ. ೧-೭೫.

'ಮನುಕುಲದ ಹಾಡು, ಎಂಬುದು ಕವಿ ಗಂಗಾಧರ ಚಿತ್ತಾಲರ ೨೩ ಹೊಸ ಕವನಗಳ ಸಂಕಲನ ಉತ್ತರಕನ್ನಡದ ಕವಿ ದಿನಕರ ದೇಸಾಯಿಯವರ ಕೆನರಾವೆಲ್‌ಫೇರ್ ಟ್ರಸ್ಟ್ ಇದನ್ನು ಪ್ರಕಟಿಸಿದರೆ ಖ್ಯಾತ ಕವಿ ವಿ. ಕೃ. ಗೋಕಾಕರು ಮುನ್ನುಡಿಯ ಸೇಸೆಯನ್ನಿಟ್ಟಿದ್ದಾರೆ. ಭಾರತದ ರಾಜಧಾನಿಯಲ್ಲಿ ಅಖಿಲ ಭಾರತ ಸೇವೆಯಲ್ಲಿ ನೌಕರಿ ಮಾಡುತ್ತಿರುವ ಚಿತ್ತಾಲರು ತಮ್ಮ 'ಫೈಲುಗಳ ಜಂಜಾಟದ ಮಧ್ಯೆಯೂ ಸಾಹಿತ್ಯ ಸರಸ್ವತಿಯ ಆರಾಧನೆ ಮಾಡುತ್ತಿರುವುದು ನಿಜಕ್ಕೂ ಅಭಿಮಾನಾಸ್ಪದ. ನೈಜ ದರ್ಶನವಿದ್ದರೆ ಕವಿಯು ತನ್ನ ಕಾವ್ಯದಲ್ಲಿ ಫೈಲುಗಳನ್ನೂ ಅರಗಿಸಿಕೊಳ್ಳಬಲ್ಲ' ಎಂಬ ಗೋಕಾಕರ ಉಕ್ತಿಯು ಯಥೋಚಿತವಾದುದು.

ನಮ್ಮ ಮುಂದಿರುವ ಹಾಡುಗಳಲ್ಲಿ ಸ್ವಂಚ್ಛಂದತೆಯೂ ಇದೆ. ನವ್ಯ ಕಾವ್ಯ ದೃಷ್ಟಿಯೂ ಇದೆ. ಅಲ್ಲಲ್ಲಿ ಪ್ರಗತಿ ಶೀಲತೆಯೂ ಹೊರಗೆ ಹಣಕಿ ಇಣಿಕಿ ನೋಡುತ್ತದೆ. ಕವಿಗಳ ವಿಶಾಲ ಅನುಭವ ಕ್ಷೇತ್ರದ ಸೂಕ್ಷ್ಮ ಪರಿಚಿತಿಯೂ ಇಲ್ಲಿ ನಮಗಾಗುತ್ತದೆ ಮನುಕುಲದವರೆಂದು ಹೇಳಿಸಿಕೊಳ್ಳುತ್ತಿರುವ ಮಾನವರ ಪಾಡನ್ನು ಒಂದಲ್ಲ ಒಂದು ಬಗೆಯಿಂದ ಇಲ್ಲಿನ ಕವನಗಳು ವ್ಯಕ್ತಪಡಿಸುತ್ತವೆ. ಶ್ರೀ ಚಿತ್ತಾಲರು ತಮ್ಮ ಕಾವ್ಯ ಶೈಲಿಯ ಬಗ್ಗೆ ಆಡಿಕೊಳ್ಳುತ್ತ 'ಒಂದು ಶಬ್ದವನ್ನು ಹಾಕಿ ಇನ್ನೊಂದನ್ನು ಹೆಕ್ಕಲು ಹಾಕುತ್ತಿರುವ ತೂಕವನ್ನು ತೂಗಿದ' ಸಂಗತಿಯನ್ನು ತಿಳಿಸಿದ್ದಾರೆ. ಆದರೆ, ಕವಿತೆಗಳನ್ನು ಓದುವಾಗ, ಅನುಭವ ಮಾಡಿಕೊಳ್ಳುವಾಗ, ಅಂತಹ 'ಪ್ರಯತ್ನ ಪ್ರಯೋಗ'ಗಳು ಎದ್ದು ಕಾಣುವುದಿಲ್ಲ. ಪ್ರಾಯತಿ ಕತೆಯು ಸ್ವಾಭಾವಿಕತೆಯಲ್ಲಿಯೇ ಪರ್ಯವಸಾನಗೊಂಡಿದೆ. ಶ್ರೀ ಚಿತ್ತಾಲರು ಶ್ರೇಷ್ಠ ಕವಿಗಳೆನ್ನಲು ಇದೊಂದು ನಿದರ್ಶನ ಸಾಕು.

ಕೊಬ್ಬರಿಯನ್ನೋ ದ್ರಾಕ್ಷೆಯನ್ನೋ ಬಾಯಿಗಿಟ್ಟು ಉಗುಳುವ ಅಭ್ಯಾಸ ಚಿತ್ತಾಲರಿಗಿಲ್ಲ. ಅವರು ಅವುಗಳ ರಸವನ್ನು ಹೀರಿ, ಹಿಪ್ಪೆಮಾಡಿ, ಅದು ನಿರರ್ಥಕವೆಂದಾದ ನಂತರವೇ ವಿಸರ್ಜಿಸುವವರು. ಈ ಗುಣ ಕವನಗಳಲ್ಲಿ ಹಲವೆಡೆ ಎದ್ದುತೋರುತ್ತದೆ. 'ಉದಯನನ್ನು ಕುರಿತು,' 'ಖುಶಿ', 'ಸೂರ್ಯಗೀತ' ಮೊದಲಾದ ಕೆಲವೊಂದು ಇದಕ್ಕೆ ಉದಾಹರಣೆಗಳು. ಕವಿತೆಗಳ ಶೈಲಿಯೂದರೂ ನಿರರ್ಗಳವಾಗಿ ಸಮುದ್ರದ ತೆರೆಗಳಂತೆ ಅವ್ಯಾಹತವಾಗಿ ಗಂಭೀರವಾಗಿ, ಹೃದ್ಯವಾಗಿ ಓತಪ್ರೋತವಾಗಿ ಮುಂದುವರಿಯುತ್ತದೆ. ಯಾವ ಅಡೆ ತಡೆಗಳಾದರೂ ಅದರ ಓಟಕ್ಕೆ ಅಡ್ಡಿಯಾಗುವುದಿಲ್ಲ; ತಾನೇ ಕೆಲವೊಮ್ಮೆ ಸರ್ಪದರ್ಶನವಾದಂತೆ ಅಲ್ಲೇ ತಡೆದು, ವಿಚಾರಶೀಲವಾಗಿ ಮತ್ತೆ ಯಥಾರೀತಿ ಮುಂದುವರಿಯುತ್ತದೆ.

ನಿಡ್ಡೆ ಎಚ್ಚರಗೊಳಲು
ರೂಲು ಸ್ಕೇಲು ಕರಾರು
ಭತ್ತೆ ಭಡತಿ ಪಗಾರು
ಅರ್ಜಿ, ವರ್ಜಿಯ ಹುಕುಮು, ಮೆಹರಬಾನಿ

ಮರವತ್ತು ಮುತುವರ್ಜಿ ಹುಜರೆ ಮುಜರೆ ಸಲಾಮು—ಉದರ ಭರಣಕೆ ಏಸು ಸತ್ತ್ವಹಾನಿ!

ಮನದ ಕೊನೆಗೆಲ್ಲ ಹಬ್ಬಿದೆ ಹಾಳು ಕಳ್ಳಿಯೊಳು
ಕಾನೂನ ಬಳ್ಳಿ ಹರಿಬಿಟ್ಟು ಕಲಮು.

—ಈ ಭಾಗವನ್ನಿಲ್ಲಿ ಉದಾಹರಿಸ ಬಹುದು. ಬಳಕೆಯ ಪದ ಪುಂಜಗಳಲ್ಲಿಯೇ ತೇಜಸ್ಸು ತುಂಬಿ ಅವನ್ನೇ ಪ್ರೇಯಸ್ಸಿನಲ್ಲಿ ಮಾರ್ಪಡಿಸುವ ಅತುಲ ಕವಿ ಹೃದಯದ ಚಿತ್ತಾಲರು ಕನ್ನಡವಾಗ್ದೇವಿಗೆ ಭೂಷಣ ಪ್ರಾಯರಾಗಿದ್ದಾರೆ. ಅವರ ಕೃತಿ ಕನ್ನಡ ಜನತೆಗೊಂದು ಮುಕ್ತಾಫಲವೆನಿಸಿದೆ.

—ಗೋರಾ.

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್ ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ! ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ, ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0 =25 NP ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳು— ಮಂಗಳೂರಲ್ಲಿ ಶ್ರೀನಿವಾಸ್ ಬ್ರದರ್ಸ್, ಸ್ಕೂಲ್ ಬುಕ್ ಕೊ., ಕೆನರಾ ಕೊಲೆಜ್ ಬುಕ್ ಕೊ., ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಇವರಲ್ಲಿಯೂ, ಪುತ್ತೂರಲ್ಲಿ ಹೊಪ್ಯುಲರ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ.

ಮಕ್ಷಿಕ ನಿರ್ಮೂಲನ

ಅಯ್ಯೋ, ನೊಣಗಳ ಕಾಟವೆ!

ಸರ್ವ ಸಾಮಾನ್ಯವಾಗಿ ಎಲ್ಲರ ಮನೆಗಳಲ್ಲಿಯೂ ಕಂಡು ಬರುವ ನೊಣವು, ಸೊಳ್ಳೆಯನ್ನು ಬಿಟ್ಟರೆ, ರಾಷ್ಟ್ರದಲ್ಲಿ ಗಣನೀಯವಾದ ಪ್ರಮಾಣದಲ್ಲಿ ಸಾಂಕ್ರಾಮಿಕ ರೋಗಗಳನ್ನು ಹರಡುವ ಕೀಟವಾಗಿದೆ. ನೊಣವು ಒಬ್ಬ ವ್ಯಕ್ತಿಗೆ ಕನಿಷ್ಟಪಕ್ಷ ಏನಿಲ್ಲೆಂದರೂ ೩೦ ವಿವಿಧ ಅಪಾಯಕಾರಿ ರೋಗಗಳನ್ನುಂಟು ಮಾಡುವುದು.

ಎಲ್ಲರಿಗೂ ಸುಪರಿಚಿತವಾಗಿರುವ ಸಣ್ಣ ಸಣ್ಣ ರೆಕ್ಕೆಗಳುಳ್ಳ, ನಿರವಾಯಕಾರಿಯಾಗಿ ಕಂಡು ಬರುವ ನೊಣವು ಕೊಳೆಯಿಂದ ಮೊದಲುಗೊಂಡು ಆಹಾರದ ವರೆಗೆ ಎಲ್ಲಾ ವಸ್ತುಗಳನ್ನೂ ಆಕ್ರಮಿಸುವುದು.

ನೊಣವು ಎಲ್ಲಾ ಕಡೆಗಳಲ್ಲಿಯೂ ಕಂಡು ಬರುವ ಕೀಟ. ಅಡಿಗೆಯ ಮನೆಯೊಗಿರಲಿ, ಆಹಾರ ವಸ್ತುಗಳನ್ನು ಸಂಗ್ರಹಿಸಿಡುವ ಉಗ್ರಾಣವಾಗಿರಲಿ, ಕೋಣೆಯೊಗಲಿ ಅಥವಾ ಶೌಚಕೂಪವಾಗಿರಲಿ ನೊಣವಿದ್ದೇ ಇರುವುದು. ಸಂಕ್ಷಿಪ್ತವಾಗಿ ಹೇಳಬೇಕೆಂದರೆ, ನೊಣವು ಸರ್ವವ್ಯಾಪಿ ಅದು ಇಲ್ಲದ ಜಾಗವಿಲ್ಲ.

ಮನೆಯಲ್ಲಷ್ಟೇ ಅಲ್ಲದೆ ಮನೆಯ ಹೊರಗೂ ನೊಣವು ಭ್ರಾನೆ ಹಾರಿ ಸಪ್ಪಳವುಂಟು ಮಾಡುವುದರ ಮೂಲಕ ತನ್ನ ಅಸ್ತಿತ್ವವನ್ನು ಪ್ರಕಟಪಡಿಸುತ್ತದೆ. ಬೇಸಿಗೆಯಲ್ಲಿ ನೊಣಗಳ ಬೆಳವಣಿಗೆ ಹಾಗೂ ಚಟುವಟಿಕೆ ಹೆಚ್ಚಾಗಿರುವುದು ಕಂಡು ಬಂದಿದೆ. ಬೇಸಿಗೆಯಲ್ಲಿ ನೊಣವು, ತನ್ನ ಸಂತತಿಯನ್ನು ದ್ವಿಗುಣಗೊಳಿಸುತ್ತದೆ. ಈಗಾಗಲೇ ದಶಲಕ್ಷಕ್ಕೂ ಮೀರಿದ ಸಂತತಿಯುಳ್ಳ ಅದು ಇನ್ನೂ ವೃದ್ಧಿಪಡಿಸಲು ಸಮರ್ಥವಾಗಿದೆ.

ನೊಣವು ಯಾವುದೇ ಪದಾರ್ಥದ ಮೇಲೆಯೇ ಕೂಡಲಿ ಅದು ಬಹುಬೇಗ ತನ್ನ ಕಾರ್ಯಾರಂಭ ಮಾಡುತ್ತದೆ. ತನ್ನ ನಾಲಿಗೆಯ ಮೂಲಕ ವಿಶಿಷ್ಟದ್ರವವೊಂದನ್ನು ಆ ಪದಾರ್ಥಗಳ ಮೇಲೆ ಸುರಿಸುತ್ತದೆ. ಹಾಗೂ ಅನೇಕ ರೋಗಕ್ರಿಮಿಗಳನ್ನು ಅಲ್ಲಿ ಬಿಡುತ್ತದೆ. ಕ್ಷಯ ರೋಗಿಯ ಉಗುಳಿನಲ್ಲಿ, ವಿಷಮ ಜ್ವರದಿಂದ ನರಳುವ ರೋಗಿಯ ಅಥವಾ ಕಾಲರಾ ಬೇನೆಯುಳ್ಳ ರೋಗಿಯ ವಾಂತಿಯಲ್ಲಿ ಇರುವ ಕ್ರಿಮಿಗಳೇ ಆಗಿರಲಿ ಅದಕ್ಕೆ ಪರಿವೆಯೇ ಇಲ್ಲ.

ನೊಣಗಳ ಉತ್ಪತ್ತಿಯನ್ನು ಪ್ರತಿಬಂಧಿಸುವುದು ಹಾಗೂ ಉತ್ಪತ್ತಿಯಾದವುಗಳನ್ನು ಆದಷ್ಟು ಬೇಗ ಕೊಲ್ಲುವುದು ನೊಣ ನಿರ್ಮೂಲನಾ ಸಪ್ತಾಹದ ಮುಖ್ಯ ಉದ್ದೇಶ. ನೊಣಗಳಿಗೆ ಹೊಲಸು, ಆಹಾರ, ಸಗಣಿ, ಕಸದ ರಾಶಿ, ಮಲಿನವಾದ ಗೃಹಗಳು. ತೆರೆದ ಗಾಯಗಳು, ಕಿವಿ, ಮೂಗು ಸೋರುತ್ತಿರುವ ಹಾಗೂ ಕಣ್ಣು ಬೇನೆ ಇರುವ ಅಸ್ವಚ್ಛ ಹುಡುಗರು—ಇವುಗಳನ್ನು ಕಂಡರೆ ಬಹಳ ಪ್ರೀತಿ. ಇಂತಹ ಪರಿಸ್ಥಿತಿ ಇದ್ದಾಗ ಅವು ಸಾಕಷ್ಟು ಪ್ರಮಾಣದಲ್ಲಿ ಸಂತತಿಯನ್ನು ಬೆಳೆಸುತ್ತವೆ.

ಮನೆಯಲ್ಲಿ ಅಥವಾ ಕಕ್ಕಸುಗಳಲ್ಲಿ ಮಕ್ಕಳು ಹೊಲಸು ಮಾಡದಂತೆ, ಆರೋಗ್ಯಕರವಾಗಿಡಬೇಕು. ಅವುಗಳನ್ನು ಸ್ವಚ್ಛವಾಗಿಡಬೇಕು. ನಿಮ್ಮ ಮನೆ ಅಥವಾ ಸಮಾಜದಲ್ಲಿ ಕಕ್ಕಸುಗಳು ಇಲ್ಲದೇ ಇದ್ದ ಪಕ್ಷದಲ್ಲಿ ನೊಣಗಳು ಕೂಡದಂತೆ ಅಮೇಧ್ಯವನ್ನು ಸಾಕಷ್ಟು ಮಣ್ಣಿನಿಂದ ಮುಚ್ಚಲು ಮರೆಯ ಬಾರದು. ಇಲ್ಲವೆ ಗುಂಡಿಗಳನ್ನು ತೆಗೆದು ಮಲ ವಿಸರ್ಜನೆಯ ನಂತರ ಅದನ್ನು ಮುಚ್ಚಬೇಕು.

ನಿಮ್ಮ ಮನೆಯನ್ನು ಪ್ರತಿ ದಿನವೂ ಸ್ವಚ್ಛವಾಗಿಡಲು ಮರೆಯ ಬಾರದು. ಮನೆಯ ಮುಂದೆ ಅಥವಾ ಆವರಣದಲ್ಲಿ ಕಸಕಡ್ಡಿಗಳು ಬೀಳದಂತೆ ಎಚ್ಚರ ವಹಿಸಬೇಕು. ನೆಲವನ್ನು ಫೆನೈಲ್ ಮತ್ತು ಲೈಸೋಲ್‌ನಿಂದ ಸಿಂಪಡಿಸಬೇಕು. ಇದರಿಂದ ನೊಣಗಳನ್ನು ದೂರವಿಡಲು ಸಾಧ್ಯವಾಗುವುದು. ವೈಯಕ್ತಿಕ ಆರೋಗ್ಯದ ಮೂಲಭೂತ ನಿಯಮಗಳನ್ನು ಪಾಲಿಸಲು ತಪ್ಪಬಾರದು. ಯೋಗ್ಯವಾದ ಸ್ವಚ್ಛತಾಕ್ರಮಗಳಿಂದ ಮಕ್ಕಳನ್ನು ಹೆಚ್ಚು ಸ್ವಚ್ಛವಾಗಿಡಲು ಮರೆಯ ಬಾರದು. ಬಾಗಿಲುಗಳಿಗೆ, ಕಿಟಕಿಗಳಿಗೆ ಸರದೆಗಳನ್ನು ಹಾಕಬೇಕು.

ಎಲ್ಲಾ ಹೊಲಸು, ಅಡಿಗೆ ಮನೆಯಲ್ಲಿನ ಕಸ ಮತ್ತು ಇನ್ನಿತರ ನಿರುಪಯುಕ್ತ ವಸ್ತುಗಳನ್ನೂ ಆಚ್ಛಾದಿತವಾದ ಕಸದ ಡಬ್ಬಗಳಲ್ಲಿ ಹಾಕಬೇಕು. ಅದನ್ನು ಹಾಗೆಯೇ ತೆರೆದು ಇಡಬಾರದು. ಕಸವನ್ನು ಪ್ರತಿನಿತ್ಯವೂ ತೆಗೆದು ಹಾಕಬೇಕು. ಕಸವನ್ನು ಕೂಡಿ ಹಾಕಲು ಖಾಲಿ ಡಬ್ಬವೊಂದನ್ನು ಉಪಯೋಗಿಸಬಹುದು. ಬೇಯಿಸಿದ ಪದಾರ್ಥಗಳನ್ನು, ಹೆಚ್ಚಿದ ಹಣ್ಣುಗಳನ್ನು ಮತ್ತು ತರಕಾರಿಗಳನ್ನು ಸಂಗ್ರಹಿಸಿಡಲು ತಂತಿಯ ಜಾಳಿಗೆಗಳನ್ನೂ ಬಳಸ ಬೇಕು. ಅಡಿಗೆ ಮನೆಗೆ ಪರದೆಯನ್ನು ಹಾಕ ಬೇಕಲ್ಲದೆ, ಈ ಪರದೆಗಳನ್ನು ಮುಚ್ಚಿಡಬೇಕು.

ನಿಮ್ಮ ವಸತಿ ಗೃಹಗಳ ಮುಂದೆ, ಸಗಣಿಯು ಕೂಡಿ ಬೀಳದಂತೆ ನೋಡಿಕೊಳ್ಳಬೇಕು, ದನಕರುಗಳ ಸಗಣಿಯನ್ನು ಬೇಗ ತೆಗೆದು ಹಾಕುವುದರಿಂದ ಸಮಾಜದಲ್ಲಿ ನೊಣಗಳು ಬರದಂತೆ ಪ್ರತಿ ಬಂಧಿಸುವುದೂ ಸಾಧ್ಯ.

ಸಾರ್ವಜನಿಕ ಕಸದ ಡಬ್ಬಿಗಳನ್ನು ಉಪಯೋಗಿಸಿ, ನಿಮ್ಮ ನೆರೆಹೊರೆಯವರು ಹಾಗೂ ಸ್ನೇಹಿತರಿಗೆ ಹಾಗೆ ಮಾಡಲು ತಿಳಿಸಿ ಹೇಳಿರಿ. ಕಸವು ಕಸದ ಡಬ್ಬದಲ್ಲಿಯೇ ಸಂಗ್ರಹವಾಗಿರ ಬೇಕೇ ವಿನಃ ಅದು ಡಬ್ಬದ ಸುತ್ತಲೂ ಸಿಕ್ಕಿದ ಹಾಗೆ ಬಿದ್ದಿರ ಬಾರದು.

ನೊಣಗಳು ಕಡಿಮೆ ಇದ್ದ ಪಕ್ಷದಲ್ಲಿ ಅವುಗಳನ್ನು ಕೈಯಿಂದ ಹೊಡೆದು ಕೊಲ್ಲುವುದು ಪರಿಣಾಮ ಕಾರಿಯಾದ ಕ್ರಮವಾಗಿದೆ. ಕ್ರಿಮಿನಾಶಕ ಔಷಧಿಗಳಾದ ಡಿ. ಡಿ. ಟಿ. ಗೆಮಕ್ಸೇನ್, ಕ್ಲೋರೊಡೇನ, ಇತ್ಯಾದಿಗಳನ್ನು ಅಡಿಗೆ ಮನೆಗಳಿಗೆ ಸಿಂಪಡಿಸ ಬೇಕು. ಗೋಡೆ, ಛಾವಣಿ ಹಾಗೂ ನೊಣಗಳು ಉತ್ಪತ್ತಿಯಾಗುವ ಸ್ಥಳಗಳಿಗೆಲ್ಲಾ ಇಂತಹ ಕ್ರಿಮಿನಾಶಕ ಔಷಧಿಗಳ ಸಿಂಚನ ಅಗತ್ಯ. ಪೈರೆದ್ರಂ ಅಂಶವುಳ್ಳ ಔಷಧಿ ಮತ್ತು ಡಿ. ಡಿ. ಟಿ. ಕ್ರಿಮಿನಾಶಕಗಳನ್ನು ಬೆರಸಿ ಬಲಿಷ್ಠ ಕ್ರಿಮಿನಾಶಕ ಔಷಧಿಯನ್ನು ತಯಾರಿಸಬಹುದು.

ಈ ಸಂಯುಕ್ತ ಕ್ರಿಮಿನಾಶಕ ಔಷಧಿಯ ಬಳಕೆಯಿಂದ ನೊಣಗಳನ್ನು ತತ್ಕಾಲದಲ್ಲಿಯೇ ನಿವಾರಿಸ ಬಹುದು. ನೊಣಗಳನ್ನು ಸುಲಭವಾಗಿ ಹಿಡಿಯುವಂತಹ ಅಂಟು ಕಾಗದಗಳನ್ನು ಉಪಯೋಗಿಸಬೇಕು. ಇಂತಹ ಕಾಗದಗಳನ್ನು ನೀವು ಮನೆಯಲ್ಲಿಯೇ ತಯಾರಿಸಬಹುದು. ಅವುಗಳ ತಯಾರಿಕೆಯ ವಿಧಾನ ಬಹಳ ಸುಲಭವಾದುದು. ½ ಪೌಂಡು ರಾಳ, ¼ ಪಿಂಟ ಹರಳೆಣ್ಣೆ ಮಿಶ್ರಮಾಡಿ ಚೆನ್ನಾಗಿ ದ್ರಾವಕ ಸ್ಥಿತಿಗೆ ಬರುವ ವರೆಗೂ ಕಾಯಿಸಿರಿ. ಅದು ಬಿಸಿಯಿದ್ದಾಗ ಕಾಗದಕ್ಕೆ ಅದನ್ನು ದಿನಬಳಕೆಯ ಪೇಯಿಂಟ್ ಬ್ರಶ್‌ನಿಂದ ಹಚ್ಚಬೇಕು.

ಇಂತಹ ನೊಣ ನಿರ್ಮೂಲಕ ಕಾಗದವನ್ನು ನೊಣಗಳು ಹೆಚ್ಚಾಗಿರುವ ಅಡಿಗೆ ಮತ್ತು ಭೋಜನ ಶಾಲೆಗಳಲ್ಲಿ ತೂಗು ಹಾಕಬೇಕು. ಶೀಘ್ರ ನೊಣ ನಿರ್ಮೂಲನೆಗಾಗಿ ವಿಷ ಮಿಶ್ರಿತ ದ್ರಾವಕವನ್ನು ಅವಸರದ ಕ್ರಮವೆಂದು ಉಪಯೋಗಿಸಬಹುದು.

ಒಂದು ಮಧ್ಯಮ ಪ್ರಮಾಣದ ಚಮಚೆಯಷ್ಟು ಕಮರ್ಷಿಯಲ್ ಫಾರ್ಮಲಿನ್ ಸಕ್ಕರೆ ಅಥವಾ ಬೆಲ್ಲ, ಒಂದು ಟೀ, ಚಮಚದಷ್ಟು ವಾಷಿಂಗ್ ಸೋಡಾ, ಒಂದು ಪಿಂಟ್ ನೀರು ಅಥವಾ ಹಾಲು ಇವುಗಳ ಮಿಶ್ರಣವನ್ನು ತೀರ ಅಗ್ಗದಲ್ಲಿ ತಯಾರಿಸಬಹುದು. ಈ ಮಿಶ್ರಣವನ್ನು ಅಡಿಗೆ ಮನೆಗಳಲ್ಲಿ ಬಳಸಬಹುದು.

ಇದಲ್ಲದೆ, ಸೋಡಿಯಂ ಅರ್ಸೆನೈಟ್ ೧ ಪೌಂಡು, ಒಂದು ಪೌಂಡು ಬೆಲ್ಲ ಅಥವಾ ಸಕ್ಕರೆ, ಮತ್ತು ಒಂದು ಗ್ಯಾಲನ್ ನೀರು ಇವುಗಳ ಮಿಶ್ರಣದಿಂದ ಅಡಿಗೆ ಮನೆಯಿಂದ ಹೊರಗೆ ಬಳಸುವ ನೊಣ ನಿರ್ಮೂಲನ ಔಷಧಿಯನ್ನು ತಯಾರಿಸಬಹುದು. ಮೇಲಿನ ಎರಡು ಕ್ರಿಮಿನಾಶಕ ಔಷಧಗಳಲ್ಲಿ ಯಾವುದಾದರೊಂದನ್ನು ಗ್ಲಾಸುಗಳಲ್ಲಿ ತುಂಬಿಡಬೇಕು. ಇದರಿಂದ ನೊಣಗಳನ್ನು ತೀವ್ರವಾಗಿ ಆಕರ್ಷಿಸಲು ಹಾಗೂ ಕೊಲ್ಲಲು ಸುಲಭವಾಗುವುದು.

ಸೋಡಿಯಂ ಸಾಲಿಸಿಲೇಟ್, ಸಕ್ಕರೆ ಮತ್ತು ನೀರಿನ ಮಿಶ್ರಣದಿಂದಲೂ ನೊಣ ನಿರ್ಮೂಲನ ದ್ರಾವಕವನ್ನು ಸಿದ್ಧಪಡಿಸಲು ಸಾಧ್ಯವಾಗಿದ್ದು, ಅದು ಪ್ರಯೋಜನಕಾರಿಯಾಗಿದೆಯೆಂದು ಕಂಡುಬಂದಿದೆ. ವಿಷಮಯವಾದ ಔಷಧಿಗಳನ್ನು, ಮನೆಗಳಲ್ಲಿ ಅಕಸ್ಮಿಕವಾಗಿ ಮಕ್ಕಳು ಕುಡಿಯದಂತೆ ಹೆಚ್ಚು ಜಾಗರೂಕತೆಯಿಂದ ಉಪಯೋಗಿಸಬೇಕು.

(ಮೌಲಾನಾ ಆಜಾದ್ ಮೆಡಿಕಲ್ ಕಾಲೇಜ್ ನವದೆಹಲಿ, ಸೌಜನ್ಯದಿಂದ.)

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ, ಎಂ.ಎ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಐತಾಳ, ಎಂ.ಬಿ.ಬಿ.ಎಸ್)
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳುಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ರೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯುತ್ತಮವೆಂದು ಪರಿಗಣಿಸಿರುವರು ಪ್ರತಿಯೊಬ್ಬರೇವಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿಹೊಂದುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ವಿಜಯ ಬೇಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸ್:— ವಿಜಯ ಬೇಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡ್,
Estd. 1931.
Phone No. 240.
— ಮಂಗಳೂರು—3

NAVAYUGA, UDIPI.
REGD. NO.BG. 176

9-8-1962

LICENSE NO. 31
Licensed to Post without Prepayment

ಮುರಾರ್ಜಿ ರಾಯಭಾರದಿಂದ

ಯೋಜನೆಗೆ ಹಣದ ಪೂರೈಕೆ

ಭಾರತದ ಆರ್ಥ ಮಂತ್ರಿ ಮುರಾರ್ಜಿ ದೇಸಾಯಿಯವರು ತನ್ನ ಪಶ್ಚಿಮ ಯುರೋಪಿನ ಸಂಚಾರವನ್ನು ಮುಗಿಸಿ, ಇತ್ತೀಚೆಗೆ ಹಿಂದಿರುಗಿದ್ದಾರೆ. ದೇಸಾಯಿಯವರ ಸಂಚಾರದ ಮುಖ್ಯೋದ್ದೇಶವು ನಮ್ಮ ಮೂರನೆಯ ಯೋಜನೆಯ ಎರಡನೆಯ ವರ್ಷಕ್ಕೆ ಬೇಕಾಗುವ ವಿದೇಶ ವಿನಿಮಯವನ್ನೂ ಸಹಾಯವನ್ನೂ ಸಂಪಾದಿಸುವುದು ಎಂದು ಎಲ್ಲರೂ ತಿಳಿದಿದ್ದಾರೆ. ಅವರು ಹೇಳುವಂತೆ ವಿದೇಶೀ ಸಹಾಯವನ್ನು ಯಾಚಿಸದೆ ಇದ್ದರೂ ಭಾರತದ ಆವಶ್ಯಕತೆಗಳನ್ನು ಅವರು ಅಲ್ಲಿ ಪ್ರತಿಬಿಂಬಿಸಿದ್ದಾರೆ. ಇದು ಸಫಲವಾಗಿದೆ. ಎಂಬುದು ಸಂತೋಷ ಪ್ರದ.

ಯೋಜನೆಯ ಅಂದಾಜಿನಂತೆ ನಮಗೆ ೧೯೬೩-೬೪ರಲ್ಲಿ ೧೫೫೦ ಮಿಲಿಯ ಡಾಲರುಗಳಷ್ಟು ವಿದೇಶೀ ವಿನಿಮಯ ಬೇಕಾಗಿದೆ. ಮೊನ್ನೆ ಮೊನ್ನೆ ಭಾರತ ಎಯ್ಡ್ ಕ್ಲಬ್ ಸಭೆ ಸೇರಿ, ಇದರಲ್ಲಿ ೧,೦೭೦ ಮಿಲಿಯ ಡಾಲರುಗಳಷ್ಟು ನೀಡಲು ಒಪ್ಪಿಕೊಂಡಿದೆ ಇದು ಮೇ ತಿಂಗಳಲ್ಲಿ ನೇರಿದ ಸಭೆಯಲ್ಲಿ ಘೋಷಿಸಿದುದಕ್ಕಿಂತ ೧೪೦ ಮಿಲಿಯ ಡಾಲರುಗಳಷ್ಟು ಹೆಚ್ಚು; ಮತ್ತು ಇನ್ನು ನಮಗೆ ಬೇಕಾದುದು ಕೇವಲ ೮೦ ಮಿಲಿಯ ಡಾಲರು ಮಾತ್ರ. ವರ್ಷಾಂತ್ಯಕ್ಕೆಗೊಳ್ಳಲು ಇನ್ನೂ ಎಂಟು ತಿಂಗಳುಗಳಷ್ಟು ಕಾಲಾವಧಿ ಇರುವುದರಿಂದ ಅಷ್ಟರೊಳಗೆ ಈ ಕೊರತೆಗೆ ತಕ್ಕ ವ್ಯವಸ್ಥೆಯನ್ನು ಮಾಡಬಹುದು ಎಂಬ ಆಶೆಯನ್ನು ಇಟ್ಟುಕೊಂಡರೆ ತಪ್ಪಾಗಲಾರದು.

ಬ್ರಿಟನ್, ಫ್ರಾನ್ಸ್, ಜರ್ಮನಿ ಮತ್ತು ಕೆನೆಡಗಳು ತಾವು ನೀಡುವ ಸಹಾಯದ ಮೊತ್ತವನ್ನು ಈಗ ಹೆಚ್ಚಿಸಿದುವು. ಜೊತೆಗೆ ಕ್ಲಬ್ಬಿನ ಸದಸ್ಯರೆನಿಸಿದ ಆಸ್ಟ್ರಿಯಾ, ಬೆಲ್ಜಿಯಂ, ಇಟೆಲಿ ಮತ್ತು ಹೊಲ್ಲೆಂಡುಗಳು ಒಟ್ಟು ೭೯ ಮಿಲಿಯ ಡಾಲರುಗಳನ್ನು ಕೊಡಮಾಡಿದುವು. ಆದರೆ, ಪಶ್ಚಿಮ ಜರ್ಮನಿಯು ಮಾತ್ರ ತಾನು ಮೊದಲು ಏಗಾನ್ವನಮಾಡಿದ ೧೫೯ ಮಿಲಿಯ ಡಾಲರುಗಳನ್ನು ಹೆಚ್ಚಿಸಲು ಒಪ್ಪಲಿಲ್ಲ. ಅಮೆರಿಕೆಯು ತಾನು ನೀಡುವ ಸಹಾಯವನ್ನು ೫೦೦ ಮಿಲಿಯ ಡಾಲರುಗಳಿಗೆ ಏರಿಸಲು ಸಿದ್ಧವಿಸೆ, ಆದರೆ, ಕ್ಲಬ್ಬಿನ ಇತರ ಸದಸ್ಯರೂ ತನ್ನ ಎತ್ತರಿಕೆಯಷ್ಟನ್ನು ಹೆಚ್ಚಾಗಿ ನೀಡ ಬೇಕೆಂದು ಶರ್ತ ಹಾಕಿವೆ. ಇದು ಎಷ್ಟರ ಮಟ್ಟಿಗೆ ಯಶಸ್ವಿಯಾಗುವುದೋ ಹೇಳುವಂತಿಲ್ಲ. ಇಂದಿಯೂ ಡೆವಲಪ್‌ಮೆಂಟ್ ಎಸೋಸಿಯೇಶನ್ ಕೂಡ ೫೦ ಮಿಲಿಯ ಡಾಲರುಗಳಷ್ಟನ್ನು ಕೊಡಲು ಮುಂದೆ ಬಂದಿದೆ.

ಸಪ್ಟಂಬರ ತಿಂಗಳಲ್ಲಿ ಕಾಮನ್‌ವೆಲ್ತ್ ಪ್ರಧಾನಿ ಪರಿಷತ್ತಿನಲ್ಲಿ ಭಾಗವಹಿಸಲು ಪ್ರಧಾನಿ ನೆಹರು ಲಂಡನ್ನಿಗೆ ತೆರಳಿದಾಗ, ಬ್ರಿಟನ್ನಿಂದ ಇನ್ನೂ ಹೆಚ್ಚಿನ ನೆರವು ಪಡೆಯುವುದರ ಬಗ್ಗೆ ಮಾತುಕತೆ ನಡೆಸುವ ಸಂಭವವಿದೆ. ಇದು ಯಶಸ್ವಿಯಾಯಿತೆಂದರೆ, ಈ ವರ್ಷದ ಬಿಕ್ಕಟ್ಟಿನಪರಿಸ್ಥಿತಿಯು ದೂರಸರಿದಂತೆಯೆಂದು ಹೇಳ ಬಹುದು.

ಈಗ ಕೊಡ ಮಾಡಿದ ಸಹಾಯವನ್ನು ಯಾವ ರೀತಿಯಲ್ಲಿ ಉಪಯೋಗಿಸ ಬೇಕು ಎಂಬುದರ ರೂಪರೇಷೆ ಇನ್ನೂ ಪರಿಪಕ್ವಸ್ಥಿತಿಗೆ ಬಂದಿಲ್ಲ. ಪ್ರತಿ ರಾಷ್ಟ್ರದೊಡನೆಯೂ ಈ ಸಂಬಂಧದಲ್ಲಿ ಒಡಂಬಡಿಕೆ ಪದ್ಯದಲ್ಲಿಯೇ ಆಗಲಿದೆ. ಈ ಕಾರ್ಯವೇನೂ ಸರಳವೆನ್ನುವಂತಿಲ್ಲ. ಆದುದರಿಂದ, ವಿದೇಶ ವಿನಿಮಯಗಳ ವೆಚ್ಚದ ಮೇಲೆ ತೀವ್ರವಾದ ದೃಷ್ಟಿಯಿಡಬೇಕು; ನಮ್ಮ ನಿರ್ಯಾತಗಳನ್ನು ಆದಷ್ಟು ಹೆಚ್ಚಿಸಬೇಕು. ಆವಶ್ಯಕ ಆಯಾತಗಳಿಗೆ ಇಂತಹ ನೀತಿಬೇಕು. ವಿದೇಶ ಸಹಾಯ ರೂಪದಲ್ಲಿ ದೊರೆಯುವ ಸಾಲದ ಮೊತ್ತವನ್ನು ಉಚಿತ ವಿಧಾನದಲ್ಲಿಯೇ ವಿನಿಯೋಗಿಸಲು ಇರುವ ನಿಯಮಗಳಾದರೂ ಅವಶ್ಯ ಇಲ್ಲವಾದರೆ, ಆತಿ ಹೆಯೂ ಸದಿಂದ ದೊಕದ ಹಣವು ನೀರುಪಾಲಾಗಿ ಹೋಗುವುದು ಅಸಂಭವವಲ್ಲ.

ಕಳೆದ ಎರಡು ವರ್ಷಗಳ ಅನುಭವದಿಂದ ಹೇಳುವುದಾದರೆ, ಹೆಚ್ಚಿನ ಸಂಪನ್ನ ರಾಷ್ಟ್ರಗಳು ಭಾರತದ ಅಭಿವೃದ್ಧಿ ಯೋಜನೆಗಳಲ್ಲಿ ಆಸಕ್ತ ತಾಳವೆ. ಭಾರತದ ಆವಶ್ಯಕತೆಗಳೇನು ಎಂಬುದು ಅವಕ್ಕೆ ತಿಳಿದಿದೆ. ಆದುದರಿಂದಲೇ ಅಯಾಚಿತವಾಗಿಯೇ ಅವು ಭಾರತದ ಸಹಾಯಕ್ಕೆ ಧಾವಿಸುತ್ತಿವೆ. ಇಂತಹ ಸದ್ಭಾವನೆಯು ಅವುಗಳಲ್ಲಿ ಹುಟ್ಟುವಂತೆ ಮಾಡುವ ಕೆಲಸ ಮಾತ್ರ ನಡೆಯಬೇಕು. ಮುರಾರ್ಜಿ ದೇಸಾಯಿಯವರು ತನ್ನ ಯಾತ್ರಾವಧಿಯಲ್ಲಿ ಸಾಧಿಸಿದ ಮಹಾ ಕಾರ್ಯವಾದರೂ ಇದುವೇ ಎಂದೀಗ ನಿರ್ಭಯದಿಂದ ಹೇಳಬಹುದು. ಇಂತಹ ಸದ್ಭಾವನೆಯು ಶಾಶ್ವತಕವಾಗಿ ಮುಂದುವರಿದರೆ, ನಮ್ಮ ಮಹತ್ವಾಕಾಂಕ್ಷೆಯಿಂದ ಕೂಡಿದ ಮೂರನೆಯ ಯೋಜನೆಯು ಸಂಪೂರ್ಣ ಯಶಸ್ವಿಯಾಗಿ ಭಾರತದ ಸಾಂಪತ್ತಿಕ ಸ್ಥಿತಿಗತಿಗಳು ಉನ್ನತವಾಗುವುದೆಂದು ಆಶಿಸಬಹುದಾಗಿದೆ.

ಪ್ರಧಾನಿ ನೆಹರುರವರು ಅರ್ಥಮಂತ್ರಿ ಶಾಖೆಗೆ ಮುರಾರ್ಜಿಯವರನ್ನೇ ಆಯ್ದುಕೊಂಡುದರ ರಹಸ್ಯವಿದೇ ಇರಬೇಕು. ಮೂರನೆಯ ಯೋಜನೆಗೆ ಸಹಾಯ ಕೂಡಿಸುವಲ್ಲಿ ಮುರಾರ್ಜಿ ಹಸ್ತವು ಅದ್ಭುತ ಪವಾಡಗಳನ್ನೇ ನಿರ್ಮಿಸಿದೆಯೆಂದರೆ, ಅತಿಶಯೋಕ್ತಿಯೆನಿಸದು.

ವಸಾಹತುವಾದಕ್ಕೆ ಅಂತ್ಯಕಾಲ

(೧೪೯ ಪುಟದಿಂದ)

ಸಿಂಗಾಪುರಗಳ ಮೇಲಿನ ತನ್ನ ಪ್ರಭುತ್ವವನ್ನು ಮುಂದಿನ ಆಗಸ್ಟ್ ೩೧ರ ಒಳಗೆ ಒಪ್ಪಿಸಿಕೊಡಲು ಬ್ರಿಟನ್ನನ್ನು ಒಪ್ಪಿಕೊಂಡಿದೆ. ಸಿಂಗಾಪುರ ಮತ್ತು ಹೊಸ ಮಲಯಾಸಿಯಾಗಳ ನಡುವಣ ಸಂಬಂಧವು ಮಲಯ ಮತ್ತು ಸಿಂಗಾಪುರ ಸರಕಾರಗಳು ಒಪ್ಪಿಕೊಂಡಂತಿರುವುದು. ಮಲಯ ಮತ್ತು ಬ್ರಿಟನ್ ಸರಕಾರಗಳು ಕಳೆದ ವರ್ಷ ಒಪ್ಪಿಕೊಂಡ ಸಂರಕ್ಷಣಾ ವ್ಯವಸ್ಥೆಯು ಮುಂದಕ್ಕೂ ಮುಂದುವರಿಯುವುದು. ಉತ್ತರ ಬೋರ್ನಿಯೋ ಮತ್ತು ಸರವಕ ಗಳ ಹಿತ ಸಂರಕ್ಷಣೆಯೊಡಗೂಡಿದ ವಿನಿರವಾದ ಸಾಂವಿಧಾನಿಕ ವ್ಯವಸ್ಥೆಯನ್ನು ಆಯೋಡ. ಸರಕಾರಂಗಳ ಸಮಾಲೋಚನೆಯಿಂದ ಮುಂದೆ ರೂಪಿಸಲಾಗುವುದು. ಕಮ್ಯುನಿಸ್ಟ್ ವಿರೋಧಿ

ಮುಂದೆ ರೂಪುಗೊಳ್ಳಲಿರುವ ಮಲಯಾಸಿಯಾವು ಕಮ್ಯುನಿಸ್ಟ್ ವಿರೋಧಿ ರಾಷ್ಟ್ರವಾಗುವುದೆಂದು ಮಲಯನ್ ಪ್ರಧಾನಿ ತಂಕು ಅಬ್ದುಲ್ ರಹಮಾನರು ಹೇಳಿದ್ದಾರೆ. ಉತ್ತರ ಬೋರ್ನಿಯೋದ ಮೇಲೆ ಫಿಲಿಪ್ಪೈನ್ಸ್ ಕಣ್ಣು ಇಟ್ಟಿದ್ದು, ಅದು ತನ್ನದೆಂದು ಹೇಳುತ್ತಿದೆ. ಈ ವಿಚಾರವು ಫಿಲಿಪ್ಪೈನ್ಸ್ ಮತ್ತು ಬ್ರಿಟಿಷ ಸರಕಾರಗಳಿಗೆ ಸಂಬಂಧಿಸಿರುವುದಾದರೂ ಬೋರ್ನಿಯೋ ಮತ್ತು ಮಲಯಗಳ ಜನಾಂಗವು ಅವರ ನಡೆನುಡಿಗಳೂ ಒಂದೇ ಆಗಿರುವುದರಿಂದ ಮಲಯಾಸಿಯಾದಲ್ಲಿ ಅದು ಸೇರಿಕೊಳ್ಳುವುದು ಉಚಿತವೆನಿಸಿದೆ. ತಟಸ್ಥ ರಾಷ್ಟ್ರವಾಗಿ ಉಳಿಯುವ ನೀತಿಯನ್ನು ತಂಕು ರಹಮಾನರು ವ್ಯಕ್ತಪಡಿಸಿದ್ದಾರೆ. ಹೀಗೆ ವಸಾಹತುವಾದದಿಂದ ಸ್ವಾತಂತ್ರ್ಯದತ್ತ ಹರಿದು ವಿಶ್ವದಲ್ಲಿ ಗಣನೀಯ ಸ್ಥಾನ ಪದೆಯುವಲ್ಲಿ ಏಶ್ಯನ್ ರಾಷ್ಟ್ರಗಳು ಮುಂದಾಗುತ್ತಿರುವುದು ಸ್ವತಂತ್ರ ಜಗನ್ನಿರ್ಮಾಣದಲ್ಲಿ ಒಂದು ಶುಭ ಸೂಚನೆ.

ಸೂಚನೆ

"ನವಯುಗ"ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿನ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. –ಸಂ.ನೆ.

ಹೊಸ ಪುಸ್ತಕ—
'ನಚಿಕೇತ'ರ
ನವೀನ ಕಾದಂಬರಿ—

ಹಸುರು ಹಂಸ

ಇದೀಗ ಪ್ರಕಟವಾಗಿದೆ.
ಬೆಲೆ: ರೂ. ಎರಡು.
ನಿಚಾರಿಸಿರಿ.
ನವಯುಗ ಪ್ರೆಸ್, ಉಡುಪಿ.

ಮೊದಲ ಹೆಜ್ಜೆ

ಒಂದು ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆಯಲು ನೀವಿಡುವ ಮೊದಲ ಹೆಜ್ಜೆ— ನಿಮ್ಮ ಪ್ರಥಮ ಪ್ರಯತ್ನ ಅತ್ಯಂತ ಪ್ರಾಮುಖ್ಯವಾದುದು. ಯಾಕೆಂದರೆ ಅದು ನಿಮಗೆ ಆರ್ಥಿಕ ಸುಸ್ಥಿರತೆ, ಸಾಮಾಜಿಕ ಯಶಸ್ಸು ಗಳಿಗೆ ಹೊಸ ಅವಕಾಶವನ್ನು ಒದಗಿಸಿ ಕೊಟ್ಟು ಭವಿಷ್ಯತ್ತಿನ ಸುಖದತ್ತ ನಿಮ್ಮನ್ನು ಮುನ್ನಡೆಸುವುದು.

ಒಂದು ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆಯಿರಿ.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ ಹಿ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸ್: ಮುಕುಂದ ನಿವಾಸ, ಉಡುಪಿ (ಮೈಸೂರು ರಾಜ್ಯ)
ಸ್ಥಾಪನೆ: ೧೯೨೫.

Edited Printed & Published by K. H. Shetty, at the Navayuga Press, Udipi, S. India.

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೈಸೆ

ನವಯುಗ

KANNADA — NAVAYUGA — WEEKLY

ನಿಮ್ಮ ಯಾವತ್ತೂ
ಮುದ್ರಣ ಕೆಲಸಗಳಿಗೆ
ದಯಮಾಡಿ ವಿಚಾರಿಸಿರಿ;
ನವಯುಗ ಪ್ರೆಸ್,
ಉಡುಪಿ

ವಿದ್ಯಾರ್ಥಿಗಳಿಗೆ
ಮತ್ತು ವಯಸ್ಕರಿಗೆ
ಅತ್ಯುಪಯೋಗೀ ಪುಸ್ತಕ
ಸುಲಭದಲ್ಲಿ ಇಂಗ್ಲಿಷ್
(ಆಂಗ್ಲ ಸ್ವಯಂಬೋಧಿನಿ)
ನವಭಾರತ ಪುಸ್ತಕ ಭಂಡಾರ
ಉಡುಪಿ

ಸಂಪುಟ ೪೧ ಸಂಚಿಕೆ ೫೦ | ಉಡುಪಿ 23—8—1962 ಗುರುವಾರ | Vol. 41 No. 50

ಮನರಂಜನೆಗಾಗಿ

ಶ್ರೀಕೃಷ್ಣನ ಲೀಲಾಪ್ರದರ್ಶನ

ಚಿಕ್ಕದಾದರೂ ಚೊಕ್ಕದಾದ ಹೆಸರು ಉಡುಪಿ; ಹಸರಿಗೆ ತಕ್ಕಂತೆಯೇ ಚಿಕ್ಕದಾದ ಚೊಕ್ಕ ನಗರ ಉಡುಪಿ. ಮತ್ಸ್ಯಯ ಪ್ರಸ್ಥಾನಾಚಾರ್ಯರಲ್ಲಿ ಕೊನೆಯವರಾದ ಮಧ್ವಾಚಾರ್ಯರಿಂದ ಪ್ರತಿಷ್ಠಾಪಿತವಾದ ಶ್ರೀ ಕೃಷ್ಣನ ಉಡುಪಿ ಎಂದು ಆಧ್ಯಾತ್ಮಿಕವಾಗಿ ಪ್ರಸಿದ್ಧಿ ಪಡೆದ ತೀರ್ಥಕ್ಷೇತ್ರ ರಜತಪೀಠವೇಗ, ಲೌಕಿಕವಾಗಿಯೂ ಶೈಕ್ಷಣಿಕವಾಗಿಯೂ ಬೆಳೆದು ಬಂದಿದೆ, ಬರುತ್ತಿದೆ. ಹಾಗಿದ್ದರೂ ಇಲ್ಲಿ ಹಿಂದಿನ ಕಾಲದಿಂದಲೂ ನಡೆದು ಬಂದ ಧಾರ್ಮಿಕ ಸಂಪ್ರದಾಯಗಳು, ಆಚರಣೆಗಳು ಅನೂಚಾನವಾಗಿ ನಡೆಯುತ್ತ ಬರುತ್ತಿವೆ; ಇವಕ್ಕೆ ಲೌಕಿಕತೆಯ ಮೆರಗು ಬಿದ್ದು ಕುಂದಣದಲ್ಲಿ ಕಂಸು ಕೂಡಿದಂತೆ ಭಾಸವಾಗುತ್ತಿದೆ.

ಉಡುಪಿಯಲ್ಲಿ ಪುರಾತನವಾದ ಅನಂತೇಶ್ವರ ಮತ್ತು ಚಂದ್ರೇಶ್ವರ ದೇವಾಲಯಗಳಿದ್ದರೂ ಶ್ರೀ ಕೃಷ್ಣನೇ ಇಲ್ಲಿಯ ಕ್ಷೇತ್ರಪತಿ ಈತನಿಂದಾಗಿಯೇ ಇಲ್ಲಿನ ಹೆಸರು ವಿಖ್ಯಾತವಾಗಿದೆಯೆಂದರೆ ಅತಿಶಯೋಕ್ತಿಯಾಗದು. ಇಂತಹ ಪವಿತ್ರ ಕ್ಷೇತ್ರದಲ್ಲಿ ಸಾಂಪ್ರದಾಯಿಕವಾಗಿ ನಡೆದು ಬಂದ ಹಲವಾರು ಪರ್ವದಿನಗಳಿವೆ, ಮಕರ ಸಂಕ್ರಮಣ, ಸುವರ್ಣೋತ್ಸವ, ಮಧ್ವನವಮಿ ಪರ್ಯಾಯದೀಪಾವಳೀ ಲಕ್ಷದೀಪ ಮೊದಲಾದ ಹತ್ತು ಹಲವು ಮನಮೋಹಕ ಉತ್ಸವಗಳು ಇವೆ. ಇವುಗಳಲ್ಲಿ ಶ್ರೀಕೃಷ್ಣಾಷ್ಟಮಿಯ ಮರುದಿನ ನಡೆಯುವ ವಿಟ್ಲಪಿಂಡಿಯೂ ಒಂದು.

ಶ್ರಾವಣ ಮಾಸದ ಬಹುಳ ಅಷ್ಟಮಿ ರೋಹಿಣೀ ನಕ್ಷತ್ರದಲ್ಲಿ ಶ್ರೀ ಕೃಷ್ಣನ ಜನನವಾಯಿತೆಂದು ಪುರಾಣಗಳ ಉಲ್ಲೇಖವಿರುವುದಾದುದರಿಂದ, ಆ ದಿನವು ಶ್ರೀ ಕೃಷ್ಣನ ಉಡುಪಿಗೊಂದು ದೊಡ್ಡ ಹಬ್ಬದ ದಿನವಾಗದೆ ಉಳಿದೀತೆ? ಅಂದು ವಿವಿಧ ವೈಷ್ಣವರು ಉಪವಾಸ ವ್ರತಧಾರಿಗಳಾಗಿ, ರಾತ್ರೆ ಕೃಷ್ಣ ಜನ್ಮವಾದ ಚಂದ್ರೋದಯದ ವೇಳೆ ಮಂದು ಭಗವದ್ರೂಪಿ ಶ್ರೀ ಕೃಷ್ಣನನ್ನು ಅರ್ಘ್ಯಪಾದ್ಯಾದಿಗಳಿಂದ ಪೂಜಿಸಿ, ಆರಾಧಿಸಿ ಲೋಕ ಕ್ಷೇಮ ಸುಭಿಕ್ಷೆಯನ್ನುಂಟು ಮಾಡಲೆಂದು ಬೇಡಿ, ಆನಂತರ ಪಾರಣೆಯನ್ನು ಮಾಡುವುದು ಪರಂಪರೆಯಾಗಿ ಬಂದಿದೆ. ಉಡುಪಿಯ ಕೃಷ್ಣಮಠದಲ್ಲಿ ನೆರೆಯುವ ಭಕ್ತಾದಿಗಳಿಗೆ ಆರಾಧನೆಯ ಅವಕಾಶವನ್ನು ನೀಡುವ ಸದುದ್ದೇಶದಿಂದ ಅರ್ಘ್ಯವೆರೆಯುವ ವ್ಯವಸ್ಥೆಯನ್ನು ಮಾಡುತ್ತಾರೆ. ಆದುದರಿಂದಲೇ ಊರುಪರವೂರುಗಳ ಶ್ರೀ ಕೃಷ್ಣ ಭಕ್ತರು ತಮ್ಮ ಆರಾಧ್ಯ ದೇವತೆಗೆ ತಮ್ಮ ಭಕ್ತಿ ಸಮರ್ಪಿಸುವುದಕ್ಕಾಗಿ ಬಂದು ನೆರೆಯುತ್ತಾರೆ. ಶ್ರೀ ಕೃಷ್ಣನು ಗೋಪಾಲನೆಂದು ಪ್ರಖ್ಯಾತಿ ಪಡೆದುದರಿಂದ ಗೊಲ್ಲರಿಗೂ ಆತನಿಗೂ ನಿಕಟ ಸಂಬಂಧವಿದೆ, ಎಂತಲೇ ಆ ಪಂಗಡದ ಜನರು ತಮಗೂ ತಮ್ಮ ಗೋವುಗಳಿಗೂ ಶ್ರೇಯಸ್ಸನ್ನು ಕರುಣಿಸೆಂದು ಆತನಿಗೆ ಅರ್ಘ್ಯವೆರೆದು ತಮ್ಮ ಪ್ರಾರ್ಥನೆಯನ್ನು ಸಲ್ಲಿಸಲು ಧಾವಿಸುತ್ತಾರೆ.

ನಾವು ಪುರಾಣೇತಿಹಾಸಗಳಲ್ಲಿ ವಿಶ್ವಾಸವಿಡುವುದಾದರೆ, ಶ್ರೀ ಕೃಷ್ಣನು ಭಗವಂತ ವಿಷ್ಣುವಿನ ಅವತಾರ. ಗೀತೆಯಲ್ಲಿ ಹೇಳಿರುವಂತೆ ಧರ್ಮಗ್ಲಾನಿ ಸಂಭವಿಸಿದಾಗ, ಅಧರ್ಮವು ಅಭ್ಯುತ್ಥಾನಗೊಂಡಾಗ, ಸಾಧುಸಜ್ಜನರನ್ನು ರಕ್ಷಿಸುವುದಕ್ಕೂ ದುಷ್ಕೃತರ ವಿನಾಶಕ್ಕೂ ಧರ್ಮಸಂಸ್ಥಾಪನೆಯ ಉದ್ದೇಶವನ್ನು ಪೂರ್ತಿಗೊಳಿಸಲಿಕ್ಕೂ ಪರಮಾತ್ಮನು ಆಗಾಗ ಜನಿಸುತ್ತಾನೆ ಶ್ರೀ ಕೃಷ್ಣ ಜನ್ಮವಾದರೂ ಅದು ಇದಕ್ಕೆಂದೇ.

ಶ್ರೀ ಕೃಷ್ಣನು ಹುಟ್ಟಿದುದು ಮಧ್ಯರಾತ್ರೆಯ ಘೋರಾಂಧಕಾರದಲ್ಲಿ, ಸೆರೆಮನೆಯಲ್ಲಿ; ಆಗ, ಧಾರಾಕಾರವಾಗಿ ಮಳೆ ಸುರಿಯುತಿತ್ತು, ಚಂದ್ರೋದಯವಾದರೂ ಅದು ಗೋಚರಕ್ಕೆ ಬರುತ್ತಿರಲಿಲ್ಲ. ಮುಂದೆ, ವಸುದೇವನು ಆತನನ್ನು ಗೋಕುಲಕ್ಕೆ ಒಯ್ಯುವಾಗ, ಮಹಾಶೇಷನ ಹೆಡೆಯ ಮಣಿಯು ಬೆಳಕುನೀಡಿತು, ತುಂಬಿ ಹರಿಯುತಿದ್ದ ಯಮುನೆಯು ದಾರಿ ಬಿಟ್ಟಳು. ಅಂತೂ ಅನುಕೂಲ ಪರಿಸ್ಥಿತಿಯೊದಗಿದ ಕಾರಣದಿಂದ ಗೋಕುಲ ಸೇರಿದ ಶ್ರೀ ಕೃಷ್ಣ ಅಲ್ಲಿಯೇ ಬಳೆದು ಬಂದನು.

ಪರಮಾತ್ಮಾವಿರ್ಭಾವವು ಮಾನವ ಕಲ್ಯಾಣಮಾಡುವುದಕ್ಕಾಗಿ ನಡೆಯುವುದೆಂದರೆ, ಆತನ ಜನ್ಮ ಕಾಲದಲ್ಲಿ ಅಧರ್ಮದ ಅಂಧಕಾರವು ಪ್ರಪಂಚವ್ಯಾಪಿಯಾಗಿತ್ತು. ಅಧರ್ಮವ್ಯವಹಾರದಿಂದ ಜಗತ್ತಿನಲ್ಲಿ ದುರಾಚಾರಗಳ ಮಳೆಯೇ ಸುರಿಯುತಿತ್ತು. ಅಧರ್ಮರೂಪೀ ಕಂಸನಿಗೆ ಧರ್ಮರೂಪೀ ಕೃಷ್ಣನ ಉದಯವಾದುದೂ ಅನುಭವಕ್ಕೆ ಬರಲಿಲ್ಲ. ಹಾಗಿದ್ದರೂ ಜ್ಞಾನ ಪ್ರಕಾಶವನ್ನು ಅರಿಯಬಲ್ಲವರಿಗೆ ಶ್ರೀಕೃಷ್ಣ ಜನ್ಮ ವೃತ್ತಾಂತ ತಿಳಿದಿತ್ತು; ಇದರಿಂದ ಕರಿಯ ಕಾಳಿಂದಿಯೊದರೂ ಕೃಷ್ಣನನ್ನು ಕಂಠ ಹೆದರಿ ದಾರಿ ಬಿಟ್ಟಳು; ಅಜ್ಞಾನ ಕತ್ತಲೆ ಸರಿಯಲು ಆಗಾಗಲೇ ಪ್ರಾರಂಭ ಮಾಡಿತ್ತು. ಮುಂದೆ ಕೃಷ್ಣನು ಬಳೆದು ಬಂದಂತೆ ಲೋಕ ಕಂಟಕರೆಲ್ಲರನ್ನೂ ಸಂಹರಿಸಿ, ಧರ್ಮಸ್ವರೂಪಿ ಧರ್ಮರಾಯನ ಕೈಗಳಿಗೆ ದೇಶದ ರಕ್ಷಣೆಯ ಭಾರವನ್ನು ಹೊರಿಸಿ, ಶಾಂತಿರಾಜ್ಯ ರಚಕನೆಂಬ ಖ್ಯಾತಿಯನ್ನು ಪಡೆದನು.

ಇಂತಹ ಲೋಕ ಕಲ್ಯಾಣಕಾರಕ ಮತ್ತು ಪ್ರೇರಕನೆನಿಸಿದ ಶ್ರೀ ಕೃಷ್ಣ ಬಾಲ್ಯಾವಸ್ಥೆಯಿಂದಲೂ ಸುಪ್ರಸಿದ್ಧನು. ಹೆಸರಿಟ್ಟತನ ಮೊದಲಾಗಿ ಅವನು ಬಲು ರಕ್ಕಸರೊಡನೆ ಕಾದಾಡಿದುದು ಮಾತ್ರವಲ್ಲ, ತನ್ನ ಬಾಲಲೀಲೆಯಿಂದ ಸರ್ವರನ್ನೂ ಆಕರ್ಷಿಸಿದ್ದನು. ಈ ಬಾಲಲೀಲೆಗಳ ಉಲ್ಲೇಖವಾದರೂ ವಿವರವಾಗಿ ವಿಷ್ಣುಕಥೆ, ಕೃಷ್ಣಕಥೆಗಳಲ್ಲಿ ನಮಗೆ ದೊರೆಯುತ್ತವೆ. ಶ್ರೀ ಕೃಷ್ಣನ ಜನ್ಮ ದಿನವನ್ನು ಆಚರಿಸುವ ಸಂದರ್ಭದಲ್ಲಿ, ಆತನ ಮನಮೋಹಕ ಬಾಲಲೀಲೆಗಳ "ಪ್ರದರ್ಶನ"ವನ್ನು ಮನರಂಜನೆಗೊಸ್ಕರ ಏರ್ಪಡಿಸುವ ಸಂಪ್ರದಾಯ ಎಂದು ಹುಟ್ಟಿತೆಂದು ಹೇಳಬಹುದಿಷ್ಟೆ. ಅರ್ಘ್ಯವೆರೆಯಲು ಸಮಾಗಮಿಸಿದ ಭಕ್ತ ಜನರಿಗೆ ಮರುದಿನ ಮನರಂಜನೆಯನ್ನೂ ಮಾಡಿ ಆಧ್ಯಾತ್ಮಿಕ ಮತ್ತು ಲೌಕಿಕ ಪ್ರಸನ್ನತೆಯನ್ನುಂಟುಮಾಡುವ ಪರಿವಾರವು ಪ್ರಾರಂಭದ ದಿನಗಳಲ್ಲಿ ಜನರ ಮಚ್ಚುಗೆಗೆ ಪಾತ್ರವಾಯಿತೆಂದರೆ, ಆಶ್ಚರ್ಯವಿಲ್ಲ.

ಉಡುಪಿಯಲ್ಲಿ ಶ್ರೀ ಕೃಷ್ಣಾಷ್ಟಮಿಯ



ಉಡುಪಿ ಶ್ರೀ ಕೃಷ್ಣ

ಮರುದಿನ ನಡೆಯುವ ವಿಟ್ಲಪಿಂಡಿ ಹಬ್ಬವು ಈ ಮಾದರಿಯ ಮನರಂಜನೆಯ ಜನರಂಜನೆಯ ಕಾರ್ಯಕ್ರಮ ಅಂದು ಹತ್ತು ಹಲವು ವಿಧದ ವೇಶಗಳನ್ನು ಹಾಕಿ ಜನರು ಸಾರ್ವಜನಿಕರಿಂದ ಹಣ ಪಡೆಯುತ್ತಾರೆ; ಇಂದು ವೇಶ ಹಾಕುವವರ ಸಂಖ್ಯೆಯು ಹೆಚ್ಚಿ, ಆದು ಹಣ ಸಂಪಾದನೆ ಮಾಡುವ ಒಂದು ಸಾಧನವೇ ಆಗಿದೆಯೆಂದರೆ, ಅಸಂಗತವಾಗದು. ವೇಶಧಾರಿಗಳು ಜನತೆಯನ್ನು ಕಾಡುವ, ಕೆಲವೊಮ್ಮೆ ಬಲಾತ್ಕಾರಿಸುವ ಪ್ರಸಂಗಗಳನ್ನು ಕಂಡರೆ, ಇದು ವೇದ್ಯವಾಗುವುದು. ಅತಿ ಹಿರಿಯದೆನಿಸುವ ಶುಲಿವೇಶದಿಂದ ತೊಡಗಿ ತೀರ ಸಾಮಾನ್ಯವಾದ 'ಕೊರಗರ ಕರಿ ವೇಶ'ದ ವರೆಗೆ ವಿವಿಧ ರೀತಿಯ ಸೋಗು ಹಾಕಿಕೊಂಡು ಜನಮನಕ್ಕೆ ಪ್ರಸನ್ನತೆಯನ್ನಿತ್ತು ಅವರ ಕಿಸೆಗೆ ಕತ್ತರಿ ಪ್ರಯೋಗ ಮಾಡುವ ಪರಿವಾರವಿಂದು, ಬಂದಿದೆ. ಶ್ರೀ ಕೃಷ್ಣ ಮಠ ಹಾಗೂ ಉಳಿದ ಅಷ್ಟ ಮಠಗಳಲ್ಲಿ ವೇಶಧಾರಿಗಳಿಗೆ ಸಂಭಾವನೆ ನೀಡುತ್ತಾರೆ, ಸಾರ್ವಜನಿಕರೂ ಸಂಭಾವನೆಯನ್ನು ಕೊಡುತ್ತಾರೆ; ಜನರಿಂದ ವೇಶಧಾರಿಗಳು ಅದನ್ನು ಪಡೆಯು

(೧೨ನೇ ಪುಟ ನೋಡಿರಿ)

ಗೃಹಿಣಿಯರಿಗೆ ತಿಲಕವೆ ಭೂಷಣವಲ್ಲವೆ!
ಫರ್ನಿಚರುಗಳಲ್ಲೆಲ್ಲ 'ಖೀರಾ' ತಲಕಪ್ರಾಯವೆಂಬುದನ್ನು ನೀವು ತಿಳಿದಿಲ್ಲವೆ?
ಗೃಹಾಲಂಕಾರಕ್ಕಾಗಿ— ಆಫೀಸು, ಆಸ್ಪತ್ರೆಗಳ ಓರಣಕ್ಕಾಗಿ— ತಾಳಿಕೆ ಬಾಳಿಕೆಯಲ್ಲಿ, ರಚನೆ ವೈವಿಧ್ಯತೆಯಲ್ಲಿ ದೇಶ ವಿಖ್ಯಾತವಾದ 'ಖೀರಾ' ಉಕ್ಕಿನ ಫರ್ನಿಚರುಗಳನ್ನೇ ಉಪಯೋಗಿಸಿರಿ. ವಿಚಾರಿಸಿರಿ, ಯೂ, ಶೋ ರೂಮನ್ನು ಸಂದರ್ಶಿಸಿರಿ.

ಶಾಸ್ತ್ರಿ & ಕೊ
ಹಂಪನಕಟ್ಟೆ,
ಮಂಗಳೂರು—1

ಕಣು ನೋಡುವ ನೋಟ
ಣ

ಶ್ರೀ ಪಿ. ಎಸ್. ರಾವ್, ಮಂಗಳೂರು.

ಹುಡುಗಾಟದ ದಿನಗಳಲ್ಲೂ ನಾನು ಹುಡುಗಿಯರನ್ನು ನೋಡುತ್ತಿದ್ದ ದೃಷ್ಟಿಯೇ ಮತ್ಸರದಾಗಿತ್ತು! ಗಂಡು ಮಕ್ಕಳಿಗಿಂತಲೂ, ಅವರು ನೋಡಲಿಕ್ಕೆ ಸುಂದರಿಯರು. ಪ್ರಾಯ ಬಂದನಂತರ ಪರಮನೆಗೆ ಹೋಗುವವರು ಎಂದು ಮನೆಯವರೂ ಅವರನ್ನು ವಿಶೇಷ ಮುದ್ದಿನಿಂದ ಬೆಳೆಸುತ್ತಿದ್ದಾಗ, ಅವರನ್ನು ಸಮ್ಮ ಪ್ರತಿಸ್ಪರ್ಧಿಯು ವೈರಿಗಳಂತೆ ಕಂಡು, ಹಂಗಿಸಿ ನುಡಿಕಾರುವುದು ಸ್ವಾಭಾವಿಕವಲ್ಲವೆ?

ಆವರೆ, ಬುದ್ಧಿ ಬೆಳೆದು, ಪ್ರಾಯ ಏರಿದ ನಂತರದ ದೃಷ್ಟಿಯೇ ರೂಪಾಂತರ ಹೊಂದಿದೆ! ಮತ್ಸರ—ಸ್ವಾರ್ಥದೊಂದಿಗೆ, ಹೀನವಾಗಿ ಕಾಣುವಂತಹ ಕುಹಕ ನೋಟವೂ ಬೆರೆತು ಹೋಗಿದೆ. ನಾನು ನೋಡುವ ನೋಟವೇ ಅಂತಹದ್ದು; ಸೀರೆಯುಟ್ಟು ಮೂರ್ಗಳಂಚಾರಿಯಾದ ತರುಣಿಯತ್ತ ನೋಟ ಬೀರಿದೆ ಎಂದರೆ, ಅವಳ ಪಾಲಿಗೆ ಅದೊಂದು ಮೂಟ! ಮತ್ತೆ, ಎಂದಾದರೂ, ನನ್ನನ್ನು ಕಂಡಾಗಲೆಲ್ಲಾ, ನನ್ನ ನೋಟದ ನೆನಪು, ಮುಖದ ಪರಿಚಯ ನೆನಪಿಸಿ, ಮುಗುಳು ನಗೆಯನ್ನು ಮುಖದಲ್ಲಿ ಮೂಡಿಸಲೇಬೇಕು! ನಾನು ಬೆಳೆಸಿರುವ ಹಲವಾರು ಯುವತಿಯರ ಸ್ನೇಹ, ಬರೀ ನೋಟದ ವಿನೋದದಿಂದಲೇ ಎಂದರೆ ಸಲವರು ಆಶ್ಚರ್ಯಪಟ್ಟುವರು.

ನನ್ನ ಜೀವಮಾನದ ಹೆಚ್ಚಿನ ಸಮಯವನ್ನು, ಈ ಹೆಣ್ಣುಗಳನ್ನು ನೋಡಲಿಕ್ಕಾಗಿಯೇ ಕಳೆದಿರುವೆನೆಂದರೆ ಅತಿಶಯವಾಗಲಾರದು! ಆಫೀಸಿನ ನಿಯಮಿತ ವೇಳೆಯ ನಂತರ, ಯಾವುದೇ ಮಹತ್ತಾದ ಕಾರ್ಯವಿದ್ದರೂ ವರ್ಜಿಸಿ, ಈ ಹೆಣ್ಣುಗಳ ಮುಖ ದರ್ಶನಕ್ಕಾಗಿ ಓಡಿ ಬರುತ್ತಿರುವುದನ್ನು ತಿಳಿದಾಗ, ನನ್ನ ಜೀವಕ್ಕೆ ನೋಟ ಮಾತ್ರದಿಂದ ಎಷ್ಟು ತೃಪ್ತಿ ದೊರೆಯುತ್ತದೆ ಎಂಬುದನ್ನು ನೀವೇ ಊಹಿಸಿಕೊಳ್ಳಿರಿ! ಶಾಲಾ-ಕಾಲೇಜು ಪಕ್ಕದಲ್ಲಿ, ಮೂಕೇಟಿನಲ್ಲಿ, ಸಿಟಿಬಸ್ಸು ನಿಲ್ದಾಣದಲ್ಲಿ, ಎಲ್ಲೆಲ್ಲಿ ಸೀರೆಯ ಬಣ್ಣ ಕಂಡು ಬರುತ್ತದೋ, ಅಲ್ಲಿಯ ವರೆಗೆ, ಕೆಲವೊಮ್ಮೆ ಓಡಿಕೊಂಡು ಹೋಗಿಯೂದರೂ, ಮುಖದ ಗುರುತನ್ನು ಮನಸ್ಸಿನಲ್ಲಿನೇ ಗುರುತಿಸಿಕೊಂಡು, ಮನಸ್ಸಿನ ಬಯಕೆಯನ್ನು ತೀರಿಸಿಕೊಂಡಿರುವೆನು.

ಇವನಿಗೆ ನೋಡುವುದೊಂದೇ ಹುಚ್ಚು ಎಂದು ಭಾವಿಸಿರುವಿರಾ? ಛೆ! ಈ ಹೆಣ್ಣುಗಳ 'ಹಿಸ್ಟರಿ' ತಿಳಿಯಲಿಕ್ಕಾಗಿ, ಸೈಕಲ್ ಬಾಡಿಗೆ ಸಿಟಿಬಸ್ಸ್ ಜಾರ್ಜು, ಟೆಂಪೋರಿಕ್ಷಾ ಬಾಡಿಗೆಗಾಗಿಯೇ ನನ್ನ ಸಂಬಳದ ಹೆಚ್ಚಿನಂಶ ವ್ಯಯವಾಗುತ್ತಿದೆ ಎಂಬುದನ್ನು ಆರಿತ ನೀವು ಬೆರಗಾಗಲಾರಿರಾ? ಸಂಬಳದ ಹಣ ವ್ಯರ್ಥವಾಗಿ ಹಾಳಾಯಿತು ಎಂಬ ವ್ಯಥೆಯಿಂದ ಬರೆದೆನೆಂದು ಭಾವಿಸ ಬೇಡಿರಿ! ಕ್ಷಣಕಾಲದ ಆನಂದೋಲ್ಲಾಸಕ್ಕಾಗಿ; ಸಾಲವನ್ನೂ ಮಾಡಲು ಹಿಂಜಾರುವವ ನಾನಲ್ಲ!

ನನ್ನ ಕಣ್ಣಿಗೆ ಒಂದು ನೋಡಬಹುದಾದಂತಹ ಸುಂದರ ಹೆಣ್ಣು ಬಲಿಯಾಯಿತು ಎಂದಾದರೆ ಸರಿ- ಕುರೂಪಿಯರನ್ನು ಕಂಡು ಕಣ್ಣು ಮುಚ್ಚಿದ ಸಂದರ್ಭಗಳವೆ.—ಅವಳು ಯಾರು—ಯಾರ್ಯಾರಿಗೆ ಯಾವ್ಯಾವ ಸಂಬಂಧಗಳಿಗೊಳಗಾಗಿದ್ದಾಳೆ,—ಮಾರ್ಗಕ್ಕೆ ಯಾವ ಉದ್ದೇಶದಿಂದ ಬಂದಿಳಿದಿರುವಳು-ಎಲ್ಲಿಯ ವರೆಗೆ ಹೋಗುತ್ತಾಳೆ-ಏನು ಕೆಲಸ....ಇದೆಲ್ಲಾ ವಿವರಗಳನ್ನು ಕಂಡು ಹಿಡಿಯುವುದರಲ್ಲಿ ಇಂದಿನ ವರೆಗೆ ನನ್ನ ಪಾಲಿಗೆ ಸೋಲಿನ ಅನುಭವವಾಗಿಲ್ಲ. ಕೆಲವರು ಕಾರಿನ ಹಾರ್ನಿನ ಶಬ್ದ ಕೇಳಿದೊಡನೆ, ಯಾರ್ಕಾರು—ನೆಂಟ ಎಷ್ಟು ಎಂದು ಹೇಳಿ ಬಿಡುವಂತೆ, ನಾನು ನೀವು ತೋರಿಸಿದ 'ಮಂಗಳೂರಿನ ಸುಂದರ ತರುಣಿಯರ ವಿಚಾರ ಹೇಳಿ ಬಲ್ಲೆ. ವಿವಾಹವಾಗಲಿಕ್ಕಾಗಿ ತಾವು ಆರಿಸಿದ ಹುಡುಗಿಯರ ಗುಣ-ದೋಷ ಗಳು ಹೇಗೆಂದು ಯುವಕರು ನನ್ನಲ್ಲಿ ವಿಚಾರಿಸಿ ಮೂಹೂರ್ತ ಪಡೆದೇ ಮದುವೆಯಾಗುವರೆಂದರೆ, ನಾನು ಹೆಣ್ಣಿನ ನಡೆ-ನುಡಿಯನ್ನು ಎಷ್ಟು ಸ್ಥೂಲವಾಗಿ ಅರಿತುಕೊಳ್ಳುತ್ತೇನೆ ಎಂಬುದನ್ನು ನೀವೇ ವಿಮರ್ಶಿಸಿಕೊಳ್ಳಿರಿ! ನಾನು ಮಾಡುತ್ತಿರುವುದು ಸಮಾಜ ಸೇವೆಯಲ್ಲವೆ? ನಾನೂ ಸಂತೋಷಕನಲ್ಲವೆ? ನನಗೂ ಭಾರತ ಸರಕಾರ ಪಾಂತೋಷಕವಿತ್ತು ಗೌರವಿಸುವುದು ಆದ್ಯ ಕರ್ತವ್ಯವಲ್ಲವೇ?

ಆಡ್ಡ ಹಾದಿ ಹಿಡಿದ ತರುಣಿಯರನ್ನು ಗೇಲಿ ಮಾಡುವುದೆಂದರೆ ನನಗೆ ಬಹಳ ಪ್ರೀತಿ! ನನ್ನೊಡನೆ, ನನ್ನದೇ ಕಸಬು ಮಾಡುವ ಕೆಲವು ಪೇಂಟುವಾಲರು ಸೇರಿಕೊಂಡು, ಆವರು ಕಳೆದ ದಿನಗಳಲ್ಲಿ ಯಾರ್ಯಾರೊಂದಿಗೆ ಎಲ್ಲೆಲ್ಲಿ ಇದ್ದರು—ಸಂಪಾದನೆ ಎಷ್ಟಾಗಿರಬಹುದು—ಅದರಲ್ಲಿ ಸೀರೆಗೆಷ್ಟು, ಸಿನೇಮಾಕ್ಕೆಷ್ಟು, ಹೋಟೇಲಿಗೆಷ್ಟು ಮುದಿ ಪ್ರಾಯಕ್ಕೆ ಉಳಿಸಿದ್ದೆಷ್ಟು ಎಂಬುದನ್ನು ವಿವರ್ಶಿಸಿ, ನಾವೇ ಸಂತೃಪ್ತಿಪಡುತಿದ್ದೆವು.

ಕೆಲ ದಿನಗಳ ಹಿಂದೆ, ಸಿಟಿಬಸ್ಸಿನ ಸ್ಟಾಂಡ್‌ನಲ್ಲಿ, ನನ್ನ ಕಣ್ಣಾಕಸಬು ಮಾಡುತ್ತಾ ನಿಂತಿತ್ತು! ನಾಲ್ಕೈದು ಜನರ ಅತ್ತಿನಿಂದ ಒರ್ವ ಲಲನಾಮಣಿ ನಿಂತಿದ್ದಳು. ಅವಳು ಹಿಂದಿನ ದಿನ, ಒರ್ವ ಆಧುನಿಕ ನೊಡನೆ ಆಟೋರಿಕ್ಷದಲ್ಲಿ ಹೋದುದನ್ನು, ನನ್ನ ಕಣ್ಣು ಮನಸ್ಸಿನ ಡೈರಿಯಲ್ಲಿ ಗುರುತಿಸಿಕೊಂಡಿತ್ತು. ಅವಳಾದರೋ ಮಹಾ ಫಾಟ್! ನನ್ನತ್ತ ನಾಲ್ಕಾರು ಸಾರಿ ನೋಟೊ ಹಾರಿಸ್ಸಿ,ಸ್ಪೋಟೋ ತೆಗೆದು, ಕಣ್ಣೋಟದಿಂದಲೇ ಹತ್ತಿರ ಕರೆದಳು. ಹುಡುಗಿಯರನ್ನು ಮಾತಾಡಿಸುವ—ಮಾತಾಡುವ ಧೈರ್ಯ ನನ್ನಲ್ಲಿ ಇಲ್ಲದಿದ್ದ ಕಾರಣ, ನನಗೆ, ಇಂಥ ಅನುಭವ ಈ ಮೊದಲಾಗಿದ್ದ ಕಾರಣ, ಪೈಯಲ್ಲಿ ಬೆವರು ಮೂಡಿ, ಕಾಲಿನಲ್ಲಿ ನಡುಕವೂ ಜ್ವರ ಸುರುವಾದಂತಾಯಿತು. ಇಪ್ಪೆಲ್ಲಾ ಅನುಭವಿಕನಾಗಿರುವವನಿಗೆ, ಈ ಒಂದು ಅನುಭವವೂ ಆಗಿ ಹೋಗಲಿ ಎಂದು ಅತ್ತ ಹೋಗಿ,

"ಹೋಗುವನಾ?"—ಒಂದು ಕಣ್ಣು ಹೊಡೆದು ಕೇಳಿದಳು.

"ಎಲ್ಲಿಗೆ?"

"ಹೊಟೇಲಿಗೆ!"

'ಹೊಂ" ಅಂದೆ. ಯಾರಾದರೂ ನೋಡಿದರೆ ನನ್ನ ವ್ಯಕ್ತಿತ್ವದ ಅರಿವಾಗುವುದು ಎಂಬ ಭಯ ಬಾಧಿಸಿದರೂ, ಹೆಣ್ಣು ಕರೆಯುವಾಗ ಹೇಡಿಯಂತೆ ವರ್ತಿಸಬಾರದೆಂದು ಮುನ್ನಡೆದೆ.

ನಾವು ಹೊಟೇಲಿಗೆ ಹೋದ ಸಮಯದಲ್ಲಿ, ನಾವಿ ಹೊಕ್ಕ 'ಸಂಸಾರಿಕ' ಕೋಣೆಯಲ್ಲಿ ಬೇರಾರೂ ಇದ್ದಿರಲಿಲ್ಲವಾದುದರಿಂದ, ಆಕೆಯ ಪಕ್ಕದಲ್ಲಿ ಧೈರ್ಯದಿಂದ ಕುಳಿತುಕೊಂಡೆ.

ಅವಳೇ ತಿಂಡಿ ತರಿಸಿದಳು—ಬಹುಶಃ ನಾನೆಂದು ಅವಳಲ್ಲಿಗೆ ಅತಿಥಿಯಾಗಿ ಬರುವೆನೆಂದು ಭಾವಿಸಿ!

"ನೀನೇಕೆ ಈ ನೃತ್ತಿಗಿಳಿದೆ? ಬೇರಾವ ದಾರಿಯೂ ಇರಲಿಲ್ಲವೇ?

ಸಮಾಜ ಸುಧಾರಕನಂತೆ, ಪಾಪಕೂಪಕ್ಕಿಳಿದ ವಾಪಿಣಿಯನ್ನು ಉದ್ಧಾರಮಾಡುವ ಜಗದೋದ್ಧಾರಕನಂತೆ ಪ್ರಶ್ನಿಸಿದೆ.

ಮೂಟದ ನೋಟೆ ಬೀರಿ, ಬಾಯಿಯೊಳಗಲ್ಲಾಡುತ್ತಿದ್ದ ತಿಂಡಿಯನ್ನು ನುಂಗಿ, ಜಾರುವ ನೆರಗನ್ನು ಸರಿಪಡಿಸಿ:

'ಗಂಡುಗಳ ಸ್ವಾರ್ಥಕ್ಕಾಗಿ! ಅನಾದಿ ಕಾಲದಿಂದಲೂ. ಸಮಾಜದಲ್ಲಿ, ನಾನು ಮನೆಯೊಳಗೆ, ಗಂಡಿಗಡಿಯೂಳಾಗಿ, ಭಯ ಭಕ್ತಿಯಿಂದ, ತಂದಿತ್ತುದನ್ನು ಭಾಯಿ ಮುಚ್ಚಿಕೊಂಡು ತಿನ್ನುತ್ತಿರುವುದನ್ನು ನೋಡಲಾರದೆ, ನಿಮ್ಮ ಸ್ವಾರ್ಥ ಸಾಧನೆಗಾಗಿ, ಗಂಡಿಗಿರುವಂತಹ ಸ್ವಾತಂತ್ರ್ಯ ಹೆಣ್ಣಿಗೂ ದೊರೆಯಬೇಕೆಂಬ ಸೋಗಲಾಡಿ ಸೋಗಿನಿಂದ ಮನೆಯಿಂದ, ಉಪಾಯವಾಗಿ ಹೊರ ಹೊರಡಿಸಿದಿರಿ. ವಿದ್ಯೆಗಾಗಿ ಖರ್ಚು ಮಾಡಿದ ಹಣವನ್ನು ಮರಳಿ ಪಡೆಯಲು ದುಡಿಮೆಯು ಹಾದಿಗೆ ನೂಕಿದಿರಿ! ಕಾಲನ ಲೀಲೆಯಿಂದ ಕಲಿತ ಹೆಣ್ಣಿನಲ್ಲಿ ನಯ-ವಿನಯ ಮಾಯವಾಗಿ, ಮದ—ಮತ್ಸರ, ಒಡ್ಡೊಡ್ಡನೆ ಹೆಚ್ಚಾಗಿ, ಅಲಂಕಾರ—ವೈಭವ, ಹೆಚ್ಚಾಗಿ ಮೇರೆ ಮೀರುತ್ತಿದೆ. ಸಮಾಜದಲ್ಲಿ ಬಂಧುಬಳಗ ಆನಂದೋಲ್ಲಾಸದಲ್ಲಿ ಮೆರೆಯುತ್ತಿರುವಾಗ, ನಮ್ಮುಂಧಪ ಅವಿದ್ಯಾವಂತ ಬಡ ಪೆಣ್ಣುಗಳು, ರೂಪದಲ್ಲಿ ಅವರಂತೆಯೇ ಇದ್ದು, ಆನಂದ ಪಡೆಯುವಂತಹ ದಾರಿ ಕಾಣದಿರುವಾಗ....ಕಲಿತವರ ಕುತೂಹಲಿತ ಬಾಳು, ನಮ್ಮನ್ನು ಪ್ರೇರೇಪಿಸಿಯದೆ! ಇಂದ., ವಿದ್ಯಾವಂತ ಪೆಣ್ಣುಗಳನ್ನು ವಿ

(ಂಂನೇ ಪುಟ ನೋಡಿರಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ವ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚೆಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ವಿಶೇಷ ಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ESTD. 1921 ಸ್ಥಾಪನೆ

NAVAYUGA
KANNADA WEEKLY,
UDIPI.

Founder:

Late Sri A. B. Shetty

Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚುನಾವಣೆಗನ್ನಾಗಲೀ ಜಾಹೀರಾತಿನ ಮೂಲಬಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಐಗುಪ್ತ ಮತ್ತು ಭಾರತಗಳ

ಸಾಂಸ್ಕೃತಿಕ ಸಾಮರಸ್ಯ

ಈಜಿಪ್ಟಿನ ನ್ಯೂಬಿಯೂದ ಪ್ರಾಚೀನ ಮಂದಿರಗಳು ಮತ್ತು ಭಗ್ನಾವಶೇಷಗಳು ಆಸ್ವಾನ್ ಅಣೆಕಟ್ಟಿನ ನಿರ್ಮಾಣದಿಂದಾಗಿ ಮುಳುಗಡೆಯಾಗಲಿವೆ. ಮಂದಿರಗಳು ಮತ್ತು ಇತರ ಭಗ್ನಾವಶೇಷಗಳನ್ನು ಅಲ್ಲಿಂದ ಬೇರೆಡೆಗೆ ಸಾಗಿಸುವ ಕಾರ್ಯದಲ್ಲಿ ವಿದೇಶಿ ರಾಷ್ಟ್ರಗಳೂ ಸಹಕರಿಸುತ್ತಿವೆ. ಭಾರತದ ಪ್ರಾಚ್ಯವಸ್ತು ಸಂಶೋಧನಾ ಇಲಾಖೆಯ ನಿಯೋಗವೊಂದು ಈಜಿಪ್ಟಿನ ನ್ಯೂಬಿಯಾಕ್ಕೆ ಸಂದರ್ಶನವಿತ್ತಿತು. ಪ್ರಾಚ್ಯವಸ್ತು ಸಂಶೋಧನೆಯ ಸಂಬಂಧದಲ್ಲಿ ಅಗೆತ ನಡೆದಾಗ, ದಕ್ಷಿಣ ಭಾರತದಲ್ಲಿ ದೊರೆತ ಪ್ರಾಚೀನ ವಸ್ತುಗಳನ್ನು ಹೋಲುವ ವಸ್ತುಗಳು ಈಜಿಪ್ಟಿನ ನ್ಯೂಬಿಯಾದಲ್ಲಿ ಕಂಡು ಬಂದುವು. ಹಾಗಾದರೆ ದಕ್ಷಿಣ ಭಾರತ ಮತ್ತು ನ್ಯೂಬಿಯಾಗಳ ನಡುವೆ ಸಾಂಸ್ಕೃತಿಕ ಸಂಬಂಧವಿದ್ದಿತೆ?

ಇದೀಗ ಈ ಪ್ರಶ್ನೆ ಎಲ್ಲಾ ಇತಿಹಾಸಕಾರರು ಮತ್ತು ಪ್ರಾಚ್ಯವಸ್ತು ಸಂಶೋಧನಾ ತಜ್ಞರ ತೀವ್ರ ಗಮನ ಸೆಳೆದಿದೆ. ಈಜಿಪ್ಟಿನ ನ್ಯೂಬಿಯಾ ಮತ್ತು ದಕ್ಷಿಣ ಭಾರತದ ನಡುವೆ ೪೦೦೦ ಕಿಲೋಮೀಟರ್‌ಗಳ ಅಂತರವಿದೆ. ಅಗೆತದ ಕಾಲದಲ್ಲಿ ಅಲ್ಲಿ ದೊರೆತ ಸಾವಿರಾರು ವರ್ಷಗಳಷ್ಟು ಪ್ರಾಚೀನವಾದ ವಸ್ತುಗಳು ಉಭಯ ರಾಷ್ಟ್ರಗಳ ನಡುವಿನ ಸಾಂಸ್ಕೃತಿಕ ಸಂಬಂಧಗಳ ದ್ಯೋತಕವಾಗಿವೆಯೆ? ನಮ್ಮ ದೇಶದ ಅನೇಕ ಇತಿಹಾಸಕಾರರು, ಪ್ರಾಚ್ಯವಸ್ತು ಸಂಶೋಧನಾ ತಜ್ಞರು ಇದರ ಅಧ್ಯಯನದಲ್ಲಿ ತೊಡಗಿದ್ದಾರೆ.

ಭಾರತದ ಪ್ರಾಚ್ಯವಸ್ತು ಸಂಶೋಧನಾತಜ್ಞರ ನಿಯೋಗವೊಂದು ಈಜಿಪ್ಟಿನ ನ್ಯೂಬಿಯಾಕ್ಕೆ ಸಂದರ್ಶನವಿತ್ತಾಗ, ಅಲ್ಲಿ ನಿವೇಶನವನ್ನು ಅಗೆಯುವ ಕಾಲದಲ್ಲಿ ದೊರೆತ ವಸ್ತುಗಳು ದಕ್ಷಿಣ ಭಾರತ ಮತ್ತು ನ್ಯೂಬಿಯಾಗಳ ನಡುವಿನ ಸಾಂಸ್ಕೃತಿಕ ಸಾಮರಸ್ಯದ ಮೇಲೆ ಪ್ರಪ್ರಥಮವಾಗಿ ಬೆಳಕು ಚೆಲ್ಲಿವೆ. ಆ ಕಾಲಕ್ಕೆ ಕೆಂಪು ಮತ್ತು ಕಪ್ಪು ಮಣ್ಣಿನ ಪಾತ್ರೆಗಳೂ ದಕ್ಷಿಣ ಭಾರತದ ಶಿಲಾ ಯುಗದ ಅವಶೇಷಗಳನ್ನು ಹೋಲುವ ವಸ್ತುಗಳೂ ದೊರೆತಿವೆ. ಈ ಎರಡೂ ಭೂಭಾಗಗಳಲ್ಲಿ ಬಿಳಿಯ ಕಲ್ಲಿನ ಬಳೆಗಳ ಉಪಯೋಗವೂ ಸಾಮಾನ್ಯವಾಗಿ ರೂಢಿಯಲ್ಲಿತ್ತೆಂಬ ಸಂಗತಿಯೂ ತಿಳಿದಿದೆ.

ಈ ಸಂಗತಿಗಳನ್ನೇ ಆಧಾರವಾಗಿಟ್ಟುಕೊಂಡು ಎರಡೂ ದೇಶಗಳ ಸಾಂಸ್ಕೃತಿಕ ಸಾಮರಸ್ಯದ ಬಗೆಗೆ ಯಾವುದೇ ಖಚಿತವಾದ ನಿರ್ಣಯಕ್ಕೆ ಬರಲು ಸಾಧ್ಯವಾಗಿಲ್ಲವಾದರೂ ಅಗೆತದ ಪರಿಣಾಮವಾಗಿ ದೊರೆತ ಅವಶೇಷಗಳು ಇತಿಹಾಸಕಾರರು ಮತ್ತು ಪ್ರಾಚ್ಯವಸ್ತು ಸಂಶೋಧನಾ ತಜ್ಞರ ಆಸಕ್ತಿ ಕೆರಳಿಸಿವೆ. ಅರಬ್ ಗಣರಾಜ್ಯದ ಪರವಾಗಿ, ಯುನೆಸ್ಕೋ ಸಂಸ್ಥೆಯು, ನ್ಯೂಬಿಯಾದಲ್ಲಿನ ಅಬು-ಸಿಂಬೆಲ್ ಎಂಬಲ್ಲಿ ಶಿಲೆಗಳನ್ನು ಕೊರೆದು ನಿರ್ಮಿಸಿದ ಮಂದಿರಗಳು ಮತ್ತಿತರ ಭಗ್ನಾವಶೇಷಗಳನ್ನು ಸಂರಕ್ಷಿಸ ಬೇಕೆಂದು ಇತ್ತ ಕಡೆಗೆ ಓಗೊಟ್ಟು ಭಾರತ ಸರಕಾರದವರು ಪ್ರಾಚ್ಯಕಲಾ ಸಂಪತ್ತನ್ನು ರಕ್ಷಿಸಲು ಅಗತ್ಯವಾದ ನೆರವನ್ನೂ ನೀಡಿದರು. ಆಸ್ವಾನ್ ಉನ್ನತ ಮಟ್ಟದ ಅಣೆಕಟ್ಟಿನ ನಿರ್ಮಾಣದೊಂದಿಗೆ ಈಜಿಪ್ಟಿನ ಸಾಂಸ್ಕೃತಿಕ ಶ್ರೇಷ್ಠತೆಯ ಪ್ರತೀಕವಾದ ಈ ಸ್ಥಳವು ಮುಂಬರುವ ಜನಾಂಗಗಳಿಗೆ ತಿಳಿಯದೇ ಅದೃಶ್ಯವಾಗಲಿದೆ.

ಆಸ್ವಾನ್ ಅಣೆಕಟ್ಟಿನ ನಿರ್ಮಾಣ ಪೂರ್ತಿಯಾದಾಗ ಅದರ ನೀರಿನ ಮಟ್ಟವು ೧೭೧ ಮೀಟರ್‌ಗಳಿಂದ ೧೮೨ ಮೀಟರ್‌ಗಳ ವರೆಗೆ ಏರುವುದು. ಅಣೆಕಟ್ಟಿನ ರಚನೆಯಿಂದಾಗಿ, ೪೦೦ ಕಿಲೋಮೀಟರು ಉದ್ದವಾದ ೨೫ ಕಿಲೋಮೀಟರು ಅಗಲವಾದ ಸರೋವರವೊಂದು ನಿರ್ಮಾಣವಾಗಲಿದೆ. ಪ್ರಸಕ್ತ ವರ್ಷದ ಜನವರಿ ತಿಂಗಳಲ್ಲಿ ನವದೆಹಲಿಯ ಪ್ರಾಚ್ಯ ವಸ್ತುಸಂಶೋಧನಾ ಸಂಸ್ಥೆಯ ಡೈರೆಕ್ಟರ್ ಶ್ರೀ ಬಿ. ಬಿ. ಲಾಲ್ ಅವರ ನಾಯಕತ್ವದಲ್ಲಿ ಐವರು ಸದಸ್ಯರುಳ್ಳ ಭಾರತೀಯ ನಿಯೋಗವೊಂದು ನ್ಯೂಬಿಯಾಕ್ಕೆ ತೆರಳಿತು. ನ್ಯೂಬಿಯಾದಲ್ಲಿ ನಿಯೋಗವು ಐದು ತಿಂಗಳ ವರೆಗೆ ತಂಗಿದ್ದು, ಅಲ್ಲಿ ಮೂರು ಬೇರೆ ಬೇರೆ ಪ್ರದೇಶಗಳಲ್ಲಿ ನಿವೇಶನಗಳನ್ನು ಅಗೆಯುವ ಕಾರ್ಯಕ್ರಮ ಕೈಗೊಂಡಿತು.

ಭಾರತದ ಪ್ರಾಚ್ಯ ವಸ್ತು ಸಂಶೋಧಕರ ತಂಡವು ಪ್ರಥಮತಃ ಅಫಿಯಾ ಸಮೀಪದ ನೈಲ್ ನದಿ ತೀರ ಪ್ರದೇಶದಲ್ಲಿ ಅಗೆತ ಪ್ರಾರಂಭಿಸಿದಾಗ ಮಧ್ಯ ಶಿಲಾಯುಗದ ಅವಶೇಷಗಳು ದೊರೆತವು. ಈ ಸಂಶೋಧನೆಗೆ ಮೊದಲು ನ್ಯೂಬಿಯಾದ ಸಂಸ್ಕೃತಿಯ ಪೂರ್ವೇತಿಹಾಸದ ಬಗೆಗೆ ತಿಳಿದುದು ಅತ್ಯಲ್ಪ. ತಂಡವು ಅನಂತರ ಅಫಿಯಾ ಸಮೀಪದಲ್ಲಿರುವ ಎರಡನೆಯ ಸ್ಥಳದಲ್ಲಿ ಭೂಮಿಯನ್ನು ಅಗೆದಾಗ ಈಜಿಪ್ಟಿನಲ್ಲಿ 'ಎ' ವರ್ಗದ ಜನವಸತಿಯ ಜೀವನದ ರೀತಿ ನೀತಿಗಳ ಬಗೆಗೆ ಖಚಿತವಾದ ಆಧಾರಗಳು ದೊರೆತವು.

ಕ್ರಿ. ಪೂ. ೩೦೦೦ ವರ್ಷಗಳ ಹಿಂದೆ, ಈ ಪ್ರದೇಶದಲ್ಲಿನ ಜನರು ಕಲ್ಲು ಹರಳು ಹಾಗೂ ಮಣ್ಣಿನಿಂದ ಮನೆಗಳನ್ನೂ ನಿರ್ಮಿಸಿದ್ದರು. ಈ ವಸತಿ ಗೃಹಗಳಲ್ಲಿ ಕನಿಷ್ಠಪಕ್ಷ ಆರು ಕೋಣೆಗಳಿದ್ದವು. ಅಲ್ಲಿನ ಜನರು ಎಲುಬಿನ ಉಪಕರಣಗಳು, ಹೊಳಪುಕಲ್ಲಿನ ಕೊಡಲಿಗಳು, ಬೆಣಚು ಕಲ್ಲಿನ ಆಯುಧಗಳನ್ನೂ ಉಪಯೋಗಿಸುತ್ತಿದ್ದರು. ಕಣ್ಣಿಗೆ ಹೆಚ್ಚುವ ಅಂಜನದಂತಹ ಪದಾರ್ಥವನ್ನೂ ತಯಾರಿಸಲು ಬಳಸುತ್ತಿದ್ದ, ಮಣ್ಣು ಹಾಗೂ ಕಲ್ಲಿನ ಬೀಸುವ ಕಲ್ಲುಗಳೂ ಇದ್ದವಲ್ಲದೆ, ಮಣ್ಣಿನಿಂದ ತಯಾರಿಸಿದ ಪಶುವಿನ ಮೂರ್ತಿಗಳ ಅವಶೇಷಗಳೂ ದೊರೆತವು. ಧೃಣ ಧಾನ್ಯದ ಬಗೆಗೆ ಶೋಧನೆ ನಡೆದಾಗ, ಸೀದು ಹೋದ ಗೋದಿಯು ಹೆಚ್ಚು ಪ್ರಮಾಣದಲ್ಲಿ ಕಂಡುಬಂದಿತು.

ತಂಡವು ಅಗೆತ ನಡೆಸಿದ ಮೂರನೆಯ ಸ್ಥಳವು ಟ್ಯೂಮಾಸ್‌ನ ಸಮೀಪದಲ್ಲಿದ್ದು, ಅದು "ಸಿ" ವರ್ಗಕ್ಕೆ ಸೇರಿದವರೆಂದು ಹೇಳಲಾದ ಜನರ ಅವಶೇಷಗಳ ಸ್ಥಳವಾಗಿದೆ. ಸುಮಾರು ಕ್ರಿ.ಪೂ. ೨೦೦೦ ವರ್ಷಗಳಷ್ಟು ಹಿಂದಿನ ೧೧೯ ಸ್ಮಾರಕಗಳು ಅಗೆತದ ಕಾಲದಲ್ಲಿ ದೊರೆತವು. ಇಲ್ಲಿಯ ಜನರ ಅಂತ್ಯಸಂಸ್ಕಾರದ ವಿಧಾನವೂ ಅತ್ಯಂತ ವೈಶಿಷ್ಟ್ಯಪೂರ್ಣವಾಗಿದ್ದಿತೆಂದು ವ್ಯಕ್ತವಾಗಿದೆ. ನ್ಯೂಬಿಯಾದ "ಸಿ" ವರ್ಗದ ನಿವಾಸಿಗಳು ಶವಗಳನ್ನು ಹೊಳುವಾಗ ೨ ಮೂರು ೧॥ ಯಿಂದ ೨ ಮೀಟರುಗಳಷ್ಟು ಉದ್ದವಾದ ಒಂದು ಮೀಟರ್‌ನಷ್ಟು ಅಗಲವಾದ ಹಾಗೂ ೧॥ ಮೀಟರುಗಳಷ್ಟು ಆಳದ ಗುಂಡಿ ತೋಡಿದನಂತರ ಶವದ ಕೈಕಾಲುಗಳನ್ನು ಮಡಿಚಿ, ಗುಂಡಿಯಲ್ಲಿ ಇಡುತ್ತಿದ್ದರು. ಸಮಾಧಿ ಸ್ಥಳದ ಮೇಲೆ ಮಣ್ಣು ಮತ್ತು ಹರಳಿನಿಂದ ಗುಮ್ಮಟವೊಂದನ್ನು ರಚಿಸಲಾಗುತ್ತಿತ್ತು. ಹಲವಾರು ಸಲ ಸಮಾಧಿಯನ್ನು, ಕಲ್ಲು ಮಣ್ಣಿನಿಂದ ಮುಚ್ಚಿದ ನಂತರ ಮೇಲೆ ಶಿಲೆಯನ್ನು ಇಡಲಾಗುತ್ತಿತ್ತು. ಈ ವಿಧವಾದ ಸಮಾಧಿಗಳಲ್ಲಿ, ಅನೇಕ ರತ್ನಮಣಿಗಳು, ಶಂಖದ ಬಳೆಗಳು, ಪಾತ್ರೆಗಳು ಇವೇ ಮೊದಲಾದವು ದೊರೆತಿವೆ. ಮಣ್ಣಿನ ಪಾತ್ರೆಗಳಲ್ಲಿ ಕೆಂಪು ಮತ್ತು ಕಪ್ಪು ಮಣ್ಣಿನ ಪಾತ್ರೆಗಳು ಮುಖ್ಯವಾಗಿದ್ದು, ಇನ್ನಿತರ ಪಾತ್ರೆಗಳಲ್ಲಿ ನಾಟ್ಯ ಭಂಗಿಯಲ್ಲಿದ್ದ ಮನುಷ್ಯಾಕೃತಿಯ ಚಿತ್ರಗಳನ್ನೂ ಕೆತ್ತಲಾಗಿದೆ.

Quality Air Cushion
Rubber Stamps
Crown
RUBBER STAMP CO.
BALMATTA ROAD, MANGALORE.

ನಿಮ್ಮ ಗಮನದಲ್ಲಿರಲಿ

ಫಿಕ್ಸ್‌ಡ್ ಡಿಪಾಸಿಟ್ ಮೇಲೆ ವರ್ಷಕ್ಕೆ ಶೇಕಡಾ ಬಡ್ಡಿ **5 1/8**

ಕ್ಯಾಷ್ ಸರ್ಟಿಫಿಕೇಟ್ ಮೇಲೆ ವರ್ಷಕ್ಕೆ ಶೇಕಡಾ ಚಕ್ರಬಡ್ಡಿ **4 1/4**

ರೆಕರಿಂಗ್ ಡಿಪಾಸಿಟ್ ಮೇಲೆ ವರ್ಷಕ್ಕೆ ಶೇಕಡಾ ಚಕ್ರಬಡ್ಡಿ **4**

ಸೇವಿಂಗ್ಸ್ ಬ್ಯಾಂಕ್ ಡಿಪಾಸಿಟ್ ಮೇಲೆ ವರ್ಷಕ್ಕೆ ಶೇಕಡಾ ಚಕ್ರಬಡ್ಡಿ **3**

ಹೆಚ್ಚಿನ ವಿವರಗಳನ್ನು ನಿಮ್ಮ ಸಮೀಪದ ಶಾಖೆಯಲ್ಲಿ ಪಡೆಯಿರಿ.

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ: 1906)

ಸಮಗ್ರ ಸೇವೆ : : ಸಂಪೂರ್ಣ ಭದ್ರತೆ

ಉಡುಪಿ ಡಿ. ಮು. ಕೋರ್ಟ್‌ನಲ್ಲಿ

S. C. 172/1962

ಲೋಕಯ್ಯ ಶೆಟ್ಟಿ — ವಾದಿ

ಮತ್ತು

1. ಕೊರಗ ಶೆಟ್ಟಿ-ಕೂಕ್ರ ಶೆಟ್ರ ಅಳಿಯ
2. ಶ್ಯಾಮ ಶೆಟ್ಟಿ-ಮೋನಪ್ಪ ಶೆಟ್ರ ಅಳಿಯ — ಪ್ರತಿವಾದಿರು

1ನೇಯವರು ಉಪ್ಪಿ ತಾಲ್ಲೂಕು ಕೊರಂಗ್ರಪಾಡಿ ಗ್ರಾಮದಲ್ಲಿರುವುದು 2ನೇಯವರು ಉಪ್ಪಿ ತಾಲ್ಲೂಕು ಶಿರ್ವಗ್ರಾಮದ ಕದಿತ ಮನೆಯಲ್ಲಿರುವುದು.

ಇವರೊಳಗೆ

ಸದ್ರಿ ಪ್ರತಿವಾದಿಯವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ ವಾದಿಯವರಿಗೆ ತಾರೀಕು 7-6-1961ರಲ್ಲಿ ನೀವು ರೂ 150/-ಕ್ಕೆ ಬರೆಕೊಟ್ಟ ಡಿಮಾಂಡ್ ನೋಟಿನ ಅಸಲಿ ವಗೈರೆ ಕೇಳಿ ದಾಖ್ಲು ಮಾಡಿದ ಮೇಲ್ಕಂಡ ದಾವೆಯನ್ನು ತಾರೀಕು 1—9—1962ಕ್ಕೆ ಇಟ್ಟಿದೆ. ಆ ದಿನದಲ್ಲಿ ನಿಮ್ಮ ಬರಹ ಮೂಲಕ ಉದಾಪರಣೆ ಇದ್ದರೆ ಆ ದಿವಸ ಬೆಳಿಗ್ಗೆ 11 ಗಂಟೆಗೆ ಕೋರ್ಟ್ ಮುಂದೆ ಹಾಜರು ಪಡಿಸಕ್ಕದ್ದು ಇಲ್ಲದಿದ್ದರೆ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ಸಂಬ್ರವನ್ನು ವಿಚಾರಣೆ ಸಲ್ಲಿಸುವುದು.

(ಕೋರ್ಟ್ ಹುಕುಂ ಪ್ರಕಾರ)

ವಿಠ್ಠಲ ಶೆಟ್ಟಿ ನೆರೋಡಿ,
ಪಾರಿಗರ ಕೆಲಸ ನಿಷ್ಠಕೋರ್ಟ್.

ಉಡುಪಿ, ತಾರೀಕು 11—8—1962.

ಸೌಹಾರ್ದ ಸಂಬಂಧ ಕಾರಣ

ವಾರ್ತಾವಾಹಕ ಉಪಗ್ರಹ — ಟೆಲಿಸ್ಟಾರ್

ಅಂತಾರಾಷ್ಟ್ರೀಯ ವಾರ್ತಾ ಸಂಚಾರ ವ್ಯವಸ್ಥೆಯಲ್ಲಿ ಕಳೆದ ಜುಲೈ೧೧ರಂದು ನವಯುಗಾರಂಭವೊಂದಾಯಿತು. ಆ ದಿನ ಅಮೆರಿಕೆಯ ಹೊಚ್ಚ ಹೊಸತಾದ ಸಂಚಾರ ಉಪಗ್ರಹ 'ಟೆಲಿಸ್ಟಾರ್"ನ ಮಾಧ್ಯಮದಲ್ಲಿ ಎಂಡೊವರ್ ಮತ್ತು ರಾಜಧಾನಿ ವಾಶಿಂಗಟನ್ನಿನ ನಡುವೆ ಟೆಲಿಫೋನಿನ ಮೂಲಕ ಮಾತುಕತೆ ನಡೆಯಿತು.

ಟೆಲ್‌ಸ್ಟಾರನ್ನು ಅಂತರಿಕ್ಷಕ್ಕೆ ಹಾರಿಸಿದ ಹದಿನೈದು ತಾಸುಗಳ ನಂತರ ಅದು ಐದನೆಯ ಬಾರಿಗೆ ಭೂಮಿಯನ್ನು ಸುತ್ತುತ್ತಿರುವಾಗ, ಅಮೆರಿಕೆಯ ಟೆಲಿಫೋನ್ ಮತ್ತು ಟೆಲಿಗ್ರಾಫ್ ಕಂಪೆನಿಯ ಸ್ಪರ್ಧಾನಂದ ಪ್ರೆಡರಿಕ್ ಆರ್. ಕೆಪಲ್ ಅವರು ಉಪಾಧ್ಯಕ್ಷ ಲಿಂಡನ್ ಬಿ. ಜಾನ್ಸನರೊಡನೆ ಟೆಲಿಫೋನಿನಲ್ಲಿ ಮಾತಾಡಿದರು. ಈ ಸಂದೇಶವು 'ಟೆಲಿಸ್ಟಾರ್" ಮೂಲಕ ಕಳಿಸಲ್ಪಟ್ಟಿತ್ತು. ಆದರೂ ಭೂಮಿಯ ಮೇಲಿನ ಎರಡು ಸ್ಥಳಗಳ ನಡುವೆ ನಡೆಯುವ ಮಾತುಕತೆಯಂತೆ ಅದು ಬಹಳ ಸ್ಪಷ್ಟವಾಗಿತ್ತು. ಆ ನಂತರ ಕೆಲವೊಂದು ಚಿತ್ರಗಳನ್ನು ಕಳಿಸಿದರು. ಎಂಡೋವರದ ಟ್ರಾನ್ಸ್‌ಮಿಟರ್ ಕೇಂದ್ರದ ಮೇಲೆ ಹಾರಾಡುತ್ತಿದ್ದ ಅಮೆರಿಕನ್ ಧ್ವಜದ ಚಿತ್ರವನ್ನು ಟೆಲಿವಿಜನ್ ಮೂಲಕ ತೋರಿಸಿದರು. ಈ ಟೆಲಿವಿಜನ್ ಚಿತ್ರಗಳನ್ನು ಅಮೆರಿಕೆಯವರಿಗಾಗಿ ತೋರಿಸಲಾಗತ್ತು. ಆದರೆ, ಬ್ರಿಟನ್ ನುತ್ತು ಫ್ರಾನ್ಸುಗಳಲ್ಲಿಯೂ ಇವುಗಳು ಸರಿಯಾಗಿ ಕಂಡವು. ಆ ರಾತ್ರೆ ಈ ಎರಡೂ ರಾಷ್ಟ್ರಗಳು ಟೆಲಿಸ್ಟಾರಿನ ಮುಖಾಂತರ ಅಮೆರಿಕೆಯೊಡನೆ ಸಂಭಾಷಣೆ ನಡೆಸಿದುವು; ಇದರಿಂದಾಗಿ ಅತ್ಲಾಂತಿಕ ಮಹಾ ಸಾಗರದ ಆಚೀಚಿನ ಎರಡು ರಾಷ್ಟ್ರಗಳು ಕಾರ್ಯಕ್ರಮ ಪ್ರಸಾರದಲ್ಲಿ ಯಶಸ್ವಿಯಾದುವೆಂದು ಹೇಳಬಹುದು. ಅಮೆರಿಕೆಯಲ್ಲಾದರೂ ಬಹು ದೂರದ ಈ ಟೆಲಿವಿಜನ್ ಕಾರ್ಯಕ್ರಮವು ಅತಿ ನಿಕಟವರ್ತಿಯೆಂಬಂತೆ ಭಾಸವಾಯ್ತು.

ಈ ಪ್ರಾರಂಭಿಕ ಪರೀಕ್ಷಣೆಯು ಸಫಲವಾದ ನಂತರ ಅಂತರಿಕ್ಷ ವೈಜ್ಞಾನಿಕರು ಮತ್ತು ಇಂಜಿನಿಯರುಗಳು ಬಹಳ ಸಂತುಷ್ಟರಾಗಿದ್ದಾರೆ. ಈ ವಿಧದ ಸಂದೇಶಗಳನ್ನು ಮರುಗೊಳಿಸುವ ಉಪಗ್ರಹಗಳ ಪ್ರಯೋಗದಿಂದ ಪ್ರಪಂಚವಿಡಿ ತಾತ್ಕಾಲಿಕ ಸಂಚಾರ ವ್ಯವಸ್ಥೆಯನ್ನು ಮಾಡಬಹುದು ಎಂಬುದಕ್ಕೆ ಪುಷ್ಟಿ ದೊರೆತಿದೆ.

ಉಪಗ್ರಹಗಳ ಮೂಲಕ ಅಂತರ್ಮಹಾ ಖಂಡಗಳ ವಾರ್ತಾ ಸಂಚಾರ ವ್ಯವಸ್ಥೆಯನ್ನು ಶಾಶ್ವತಗೊಳಿಸುವುದರಿಂದ ಸದ್ಯ ಇರುವ ವಿಶ್ವವ್ಯಾಪಿ ಸಂಚಾರಿ ಸೇವೆಯ ರೂಪವು ಆ ಮೂಲಾಗ್ರ ಬದಲಾಗುವುದು. ಇದರಿಂದ ಅತ್ಯುತ್ತಮವಾಗಿ ವಿಶ್ವಸನೀಯವಾಗಿ ವಾರ್ತಾ ಪ್ರಸಾರ ಪ್ರಣಾಳಿಯು ಸ್ಥಿರವಾದ ಸಂಪರ್ಕ ಈ ಸೇವೆಯ ವೆಚ್ಚವಾದರೂ ಕಡಿಮೆಯಾಗುವುದು.

ಒಂದರಿಂದಿನ್ನೊಂದು ಬಹಳ ದೂರವಿರುವ ಅಮೆರಿಕೆ ಮತ್ತು ಆಸ್ಟ್ರೇಲ್ಯಾದಿ ಭೂಖಂಡಗಳ ನಡುವೆ ಈಗ ಸಾಗರದ ನಡುವೆ ಕೇಬಲ್‌ಗಳ ಮೂಲಕ ಇಲ್ಲವೇ ಸಣ್ಣ ಅಲೆಗಳ ಆಕಾಶವಾಣಿಯ ಮೂಲಕ ವ್ಯವಹಾರವು ನಡೆಯುವುದು. ಸಮುದ್ರದಲ್ಲಿ ಕೇಬಲ್ ಹರಡಿಸಲು ವೆಚ್ಚವು ಬಹು ಹೆಚ್ಚಿನದಾಗುವುದು; ಸಮಯವೂ ಹೆಚ್ಚಾಗಬೇಕಾಗುವುದು. ಆದರೆ, ಕೇಬಲ್ ಒಂದು ಬಾರಿ ಹಾಕಿಯಾಯಿತೆಂದರೆ, ಮತ್ತೆ ಅದರಿಂದ ಧಾರಾಳವಾಗಿ ಕೆಲಸ ಮಾಡಿಕೊಳ್ಳುವುದು ಸಾಧ್ಯ. ಸಣ್ಣ ಅಲೆಗಳನ್ನು ಎಲ್ಲ ಆಕಾಶವಾಣಿಗಳೂ ಗ್ರಹಿಸಲಾರವು. ಅಲೆಗಳ ಪ್ರವಾಹಕ್ಕೆ ಎನಾದರೂ ಆತಂಕವುಂಟಾಯಿತೆಂದರೆ, ಸಂಕೇತಗಳು ಮಂದವಾಗುವುವು, ಇಲ್ಲವೇ ನಷ್ಟವಾಗುವುವು. ಆದುದರಿಂದ ಇವುಗಳ ಮೇಲೆ ಸಂಪೂರ್ಣ ವಿಶ್ವಾಸವಿಟ್ಟು ವಾರ್ತೆ ಕಳಿಸುವುದು ಸಾಧ್ಯವಿಲ್ಲ. ಇನ್ನು ಕೆಲವೊಮ್ಮೆ ತಾಸುಗಟ್ಟಲೆ ಅದು ಕೆಟ್ಟು ಹೋಗುವುದೂ ಉಂಟು. ಇದನ್ನು ನಂಬುವುದು ಕಷ್ಟ. ಆದರೆ, 'ಟೆಲಿಸ್ಟಾರ್' ನಂತಹ ಉಪಗ್ರಹದಿಂದ ಈ ಯೆಲ್ಲ ಅನನುಕೂಲತೆಗಳು ದೂರವಾಗುತ್ತವೆ. ಇಂದು ಸಮುದ್ರದ ಕೇಬಲ್ಲಿನಲ್ಲಿ ೧೦೦ ವಾರ್ತೆಗಳನ್ನು ಮಾತ್ರ ಕಳಿಸಬಹುದು. ಆದರೆ, ಹೊಸ ವ್ಯವಸ್ಥೆಯಿಂದ ಈ ಪ್ರಮಾಣವನ್ನು ಹತ್ತುಪಟ್ಟು ಹೆಚ್ಚಿಸಬಹುದು.

ಅಮೆರಿಕೆಯ ವಾರ್ತಾ ಪ್ರಸಾರ ವಿಭಾಗವು ಇದಕ್ಕೆ ತಗಲುವ ವೆಚ್ಚವೆಷ್ಟೆಂಬುದನ್ನು ಅಂದಾಜು ಮಾಡಿತು. ಕೇಬಲ್ ಹಾಕುವುದಕ್ಕಿಂತ ವಿಶ್ವವ್ಯಾಪಿ ಸಂಪರ್ಕ ವ್ಯವಸ್ಥೆಗೆ ಉಪಗ್ರಹ ಪ್ರಣಾಲಿಯು ಲಾಭಕರವೆಂದು ಅದು ಹೇಳುತ್ತದೆ. ಉಪಗ್ರಹವು ತನ್ನ ಆಯುಸ್ಸಿನ ಕಕ್ಷೆಯಲ್ಲಿ ತಿರುಗುತ್ತಿರುವ ಅವಧಿಯೆಷ್ಟು ಎಂಬುದಿನ್ನೂ ಸ್ಪಷ್ಟವಾಗಿ ತಿಳಿದಿಲ್ಲ. ಅಮೆರಿಕನ್ ಟೆಲಿಫೋನ್ ಮತ್ತು ಟೆಲಿಗ್ರಾಫ್ ಕಂಪೆನಿಯು ಈ ಉಪಗ್ರಹಗಳು ಎರಡು ವರ್ಷಗಳ ಕಾಲಾವಧಿಯ ವರೆಗೆ ಉಳಿಯುವುವೆಂದು ಅಂದಾಜು ಮಾಡಿದೆ.

ಅಂತಾರಾಷ್ಟ್ರೀಯ ಸಹಯೋಗದ ಮಹತ್ವಪೂರ್ಣ ಕ್ಷೇತ್ರವಿಂದು ಟೆಲಿಸ್ಟಾರಿನಿಂದಾಗಿ ಮುಂದೆ ಬಂದಿದೆ. ಈ ಉಪಗ್ರಹದ ಹಾರಾಟಕ್ಕಾದರೂ ಅಮೆರಿಕೆಯ 'ರಾಷ್ಟ್ರೀಯ ಉಡ್ಡಯನ ಮತ್ತು ಅಂತರಿಕ್ಷ ಪ್ರಶಾಸನ' ಮತ್ತು ಸರಕಾರೇತರ ಅಮೆರಿಕನ್ ಟೆಲಿಫೋನ್ ಮತ್ತು ಟೆಲಿಗ್ರಾಫ್ ಕಂಪೆನಿಗಳ ಸಹಕಾರದಿಂದಲೇ ಸಾಧ್ಯವಾಯಿತು. ಕಂಪೆನಿಯು ೧೦ ಲಕ್ಷ ಡಾಲರುಗಳ ವೆಚ್ಚದಿಂದ ಉಪಗ್ರಹದ ಮೂದರಿಯನ್ನೂ ನಿರ್ಮಾಣಕಾರ್ಯವನ್ನೂ ಮುಗಿಸಿದರೆ, 'ಪ್ರಶಾಸನ'ವು ಅದನ್ನು ಅಂತರಿಕ್ಷಕ್ಕೆ ಹಾರಿಸಿತು. ಈ ಕಂಪೆನಿಯು ಕಳೆದ ೮ ವರ್ಷಗಳಿಂದಲೂ ಖಂಡಾಂತರ ಉಪಗ್ರಹಗಳಿಗೆ ಸಂಬಂಧಿಸಿದ ಸಂಶೋಧನೆಗಳಿಗೆ ಸಹಾಯ ಸಲ್ಲಿಸುತ್ತ ಬಂದಿದೆ. ಇಂದು, ಅದರ ಅಭಿಲಾಷೆಯು ಈಡೇರುವಂತಾಗಿದೆ. 'ಟೆಲಿಸ್ಟಾರ್'ನ ಪರೀಕ್ಷಣೆಯನ್ನು ಸಫಲಗೊಳಿಸುವುದಕ್ಕಾಗಿ ಹೆಚ್ಚಿನ ದೇಶಗಳು ನೆರವನ್ನಿತ್ತು ಅಂತಾರಾಷ್ಟ್ರೀಯ ಸಹಕಾರಕ್ಕೆ ಈಗಾಗಲೇ ನಾಂದಿ ಹಾಕಿವೆ.

ಗಗನಚಾರಿಯೇ ಉಪಗ್ರಹಗಳ ಮಾಧ್ಯಮದಿಂದ ಸರ್ವಸಂಚಾರ ಕಳಿಸುವುದು ಸಾಧ್ಯವೆಂದು ಹೇಳಿದ ಬೆಲ್ ಟೆಲಿಫೋನ್ ಪ್ರಯೋಗ ಶಾಲೆಯ ವೈಜ್ಞಾನಿಕ ಡಾ। ಜಾನ್ ಆರ್. ಪಿಯರ್ಸರು 'ಟೆಲಿಸ್ಟಾರ್' ಹಾರಿಸಿದುದರಿಂದ ಜನರಲ್ಲಿ ಪರಸ್ಪರ ತಿಳುವಳಿಕೆಯು ಹೆಚ್ಚಾಗಿ, ವಿಶ್ವದಲ್ಲಿ ಶಾಂತಿಯು ನೆಲೆಗೊಳ್ಳಲು ಸಹಾಯವಾಗುವುದು ಎಂಬ ಆಶಯ ವ್ಯಕ್ತಪಡಿಸಿದ್ದಾರೆ. ಪ್ರಪಂಚದ ಬೇರೆ ಬೇರೆ ರಾಷ್ಟ್ರಗಳನ್ನು ವಿಕಸನೋತ್ಸವದಲ್ಲಿ ನೇಯಲು ಇರುವ ಮಧ್ಯಮವೆಂದರೆ ಸಂಯುಕ್ತ ರಾಷ್ಟ್ರ ಸಂಘ. ಆದರೆ, ಸಂಚಾರ ವ್ಯವಸ್ಥೆಯು ಇದಕ್ಕಿಂತಲೂ ಉತ್ತಮ ಉಪಾಯ. ಈ ವಿಧಾನವು ರಾಜಕೀಯ ಜಗತ್ತಿಗೆ ಹೊರಗಾದುದು; ಇದರಿಂದ ಶಾಂತಿಯ ಮೂಲ ವ್ಯಕ್ತಿ ವ್ಯಕ್ತಿಯ ಕಿವಿ ಸೇರುವುದು ಸಾಧ್ಯವೆನ್ನುತ್ತಾರೆ ಡಾ। ಪಿಯರ್ಸ್. ಉಪಗ್ರಹದ ಮೂಲಕ ಸಂಚಾರ ವ್ಯವಸ್ಥೆಯಲ್ಲಿ ದೊರೆಯಬಹುದಾದ ಲಾಭಗಳನ್ನು ಕಳೆದುಕೊಳ್ಳಬಾರದು; ಪ್ರಪಂಚ ನಿವಾಸಿಗಳಲ್ಲಿ ಸದ್ಭಾವನೆಗಳನ್ನು ಹೆಚ್ಚಿಸಲು ಇದನ್ನು ಬುದ್ಧಿವಂತಿಕೆಯಿಂದ ಪ್ರಭಾವಶಾಲಿ ವಿಧಾನದಿಂದ ಇದನ್ನು ಬಳಸಿಕೊಳ್ಳಬೇಕು ಎಂದು ಆಧ್ಯಕ್ಷ ಕೆನ್ನೆಡಿಯವರು ಆಶಯ ವ್ಯಕ್ತಪಡಿಸಿದ್ದಾರೆ.

ಇದುವರೆಗೆ ಸಂಚಾರ ವ್ಯವಸ್ಥೆಯಲ್ಲಿ ಎರಡು ಉಪಗ್ರಹಗಳು ತೊಡಗಿವೆ. ಒಂದು ಕಡಿಮೆ ಎತ್ತರದಲ್ಲಿ ಅಂಡಾಕಾರ ಕಕ್ಷೆಯಲ್ಲಿ ತಿರುಗುವುದು; ಇನ್ನೊಂದು ಅತಿ ಎತ್ತರದಲ್ಲಿ ನಿಯತ ಅವಧಿಯಲ್ಲಿ ಪೃಥ್ವೀಭ್ರಮಣ ಮಾಡುತ್ತದೆ. 'ಟೆಲಿಸ್ಟಾರ್" ಮೊದಲನೆಯ ವರ್ಗಕ್ಕೆ ಸೇರಿದ ಉಪಗ್ರಹ. ಇದು ೩,೫೦೦ ಮೈಲುಗಳಿತ್ತರದಲ್ಲಿ ಸುತ್ತುವರಿಯುತ್ತಿದೆ. ಏಕೊ—೧ ಎಂಬ ವಾರ್ತಾ ಪ್ರಸಾರಕ ಉಪಗ್ರಹವು ಮೊತ್ತಮೊದಲಿಗೆ ಅಮೆರಿಕೆಯಿಂದ ಯೂರೋಪಿಗೆ ಸಂದೇಶವನ್ನು ಕಳಿಸಿತ್ತು; ಆದರೆ, 'ಟೆಲಿಸ್ಟಾರ್" ಸಂದೇಶವನ್ನು ಕಳಿಸಲೂ ಗ್ರಹಿಸಲೂ ಶಕ್ತವೆನಿಸಿದೆ. ಈ ಮೂದರಿಯ ಉಪಗ್ರಹವೇ ಪ್ರಸಾರ ವ್ಯವಸ್ಥೆಗೆ ಉಪಯುಕ್ತವಾಗಿದೆ. ಇಡಿಯ ಪ್ರಪಂಚದಲ್ಲಿ ಸಂದೇಶ ರವಾನೆಗಾಗಿ ಇಂತಹ ೪೦ ಉಪಗ್ರಹಗಳು ಬೇಕಾಗಬಹುದು.

ಮುಂದಿನ ವರ್ಷ ಅಮೆರಿಕೆಯು ಉನ್ನತ ಕಕ್ಷಗಾಮಿ 'ಸಿನ್‌ಕೋಮ್' ಉಪಗ್ರಹವನ್ನು ಹಾರಿಸಲಿದೆ. ಇದು ೩೬,೦೦೦ ಮೈಲಿತ್ತರದಲ್ಲಿ ತಿರುಗಾಡುವುದು. ೨೪ ತಾಸುಗಳಲ್ಲಿ ಇದು ಒಮ್ಮೆ ಭೂಪ್ರದಕ್ಷಿಣೆ ಬರುವುದರಿಂದ ಅದು ಭೂಮಿಯ ಮೇಲಿನವರಿಗೆ ಸ್ಥಿರವಾಗಿರುವಂತೆ ತೋರುವುದು ಇಂತಹ ಮೂರೇ ಮೂರು ಉಪಗ್ರಹಗಳು ಸಮಸ್ತ ಪೃಥ್ವೀಮಂಡಲದಲ್ಲಿ ವಾರ್ತಾವಾಹಕ ಕಾರ್ಯ ಮಾಡುವುವು.

'ಟೆಲಿಸ್ಟಾರ್' ಒಂದು ದೊಡ್ಡ ಚೆಂಡಿನಷ್ಟು ದೊಡ್ಡದಿದೆ; ೧೯೦ ರಾತಲು ತಾಗುತ್ತದೆ. ಭೂಮಿಯಿಂದ ದೊರೆತ ರೇಡಿಯೋ ಸಂಕೇತಗಳನ್ನದು ೧೦ ಆರಬಟ್ಟು ಹೆಚ್ಚಿಸಿ ಅದನ್ನು ತಿರುಗಿ ಕಳಿಸಿಕೊಡುತ್ತದೆ. ಇದು ಒಂದು ಕಡೆಯಿಂದ ಒಮ್ಮೆಗೆ ೬೦೦ ಟೆಲಿಫೋನ್ ಸಂದೇಶ, ಒಂದು ಟೆಲಿವಿಜನ್ ಕಾರ್ಯಕ್ರಮ ಮತ್ತು ೬೦ ಇಕ್ಕಡೆಯ ಟೆಲಿಫೋನ್ ವಾರ್ತೆಗಳನ್ನು ಪ್ರಸಾರ ಮಾಡಬಲ್ಲುದು. ಭೂಮಿಯಿಂದ ೬,೩೯೦ ಮೈಗಾಸಾಯಿಕಲ್ಸ

((ನೇ ಪುಟ ನೋಡಿರಿ)

ಹೊಸ ಪುಸ್ತಕ—
'ನಟಿಕೇತ'ರ
ನವೀನ ಕಾದಂಬರಿ—
ಹಸುರು ಹಂಸ
ಇದೀಗ ಪ್ರಕಟವಾಗಿದೆ.
ಬೆಲೆ: ರೂ. ಎರಡು.
ವಿಚಾರಿಸಿರಿ,
ನವಯುಗ ಪ್ರೆಸ್, ಉಡುಪಿ.

ದಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಬೊಂಗರಕೇರಿ, ಮಂಗಳೂರು-3

ಪರಿಷ್ಕರಿಸಿದ ಮತ್ತು ಹೆಚ್ಚಿಸಿದ ತೇವಣಾತಿ ಬಡ್ಡಿ ದರಗಳು:

ಕಾಯಂ ತೇವಣಾತಿಗಳು:		ರೂ. ನ.ಪೈ.ಸೆ
ಒಂದರಿಂದ ಮೂರು ತಿಂಗಳು ವರೆಗೆ	ವಾರ್ಷಿಕ ಸೇಕಡಾ	4-50
ಆರರಿಂದ ಹನ್ನೆರಡು ತಿಂಗಳು ವರೆಗೆ	,, ,,	4-75
ಹದಿಮೂರರಿಂದ ಇಪ್ಪತ್ತನಾಲ್ಕು ತಿಂಗಳು ವರೆಗೆ	,, ,,	5-00
ಇಪ್ಪತ್ತೈದರಿಂದ ಮೂವತ್ತಾರು ತಿಂಗಳು ವರೆಗೆ	,, ,,	5-25
ನಾಲ್ವತ್ತೆಂಟು ತಿಂಗಳು ಮತ್ತು ಹೆಚ್ಚಿಗೆ	,, ,,	5-50
ಸೇವಿಂಗ್ಸ್ ಬ್ಯಾಂಕ್ ತೇವಣಾತಿಗಳು	,, ,,	3-25

ನಿಮ್ಮ
ದಿನನಿತ್ಯದ ಉಳಿತಾಯವನ್ನು / ಮಾಸಿಕ ಉಳಿತಾಯವನ್ನು
ಪನಿ ಡಿಪೋಸಿಟುಗಳಲ್ಲಿ / ಕ್ಯುಮುಲೇಟಿವ್ ಡಿಪೋಸಿಟುಗಳಲ್ಲಿ
ವಿನಿಯೋಗಿಸಿರಿ.
THE KARNATAKA BANK LIMITED
3—7—1962

ಐಕ್ಯಭಾವನೆಗೊಂದು ಸವಾಲು

ಮದ್ರಾಸದ ದ್ರಾವಿಡ ಮುನ್ನೇತ್ರ ಕಳಗಂ

ಸ್ವಾತಂತ್ರ್ಯ ದಿನಾಚರಣೆಯಂದು ಪ್ರಧಾನಿ ನೆಹರು ಕೆಂಪುಕೋಟೆಯಲ್ಲಿ ರಾಷ್ಟ್ರಧ್ವಜವನ್ನು ಆರಳಿಸುವುದು ಸಂಪ್ರದಾಯವಾಗಿ ನಡೆದು ಬಂದಂತೆಯೇ ದೇಶದ ಜನತೆಯನ್ನು ಉದ್ದೇಶಿಸಿ ಮಾತನಾಡಿ ಸ್ವಾತಂತ್ರ್ಯೋತ್ತರ ಭಾರತದ ಕುರಿತು ಹೇಳುವುದೂ ಪರಿಪಾರವಾಗಿ ಬಂದಿದೆ. ಆದರೆ, ಈ ಬಾರಿ ಮಾತ್ರ ಪ್ರಧಾನಿಯವರು ದೇಶವು ಎದುರಿಸುತ್ತಿರುವ ಅತಿ ಮಹತ್ವಪೂರ್ಣವಾದ ಸೀಮಾ ಸಮಸ್ಯೆಯ ಬಗ್ಗೆ ಕಡಿಮೆ ಮಾತನಾಡಿ, ಭಾವೈಕ್ಯದ ಕುರಿತು ಪ್ರಸ್ತಾಪಿಸುವುದಕ್ಕೇನೆ ತಮ್ಮ ಭಾಷಣದಲ್ಲಿ ಹೆಚ್ಚಿನ ಸ್ಥಾನ ಕಲ್ಪಿಸಿಕೊಟ್ಟರು. ಉತ್ತರದಲ್ಲಿ ಹಿಮವತ್ಪರ್ವತದ ಕಣಿವೆಗಳಲ್ಲಿ ಚೀನೀಯರು ಗುಂಡೆಸೆಯುವ ಪೂರ್ವ ಸಿದ್ಧತೆಯಲ್ಲಿ, ಕಾಶ್ಮೀರದ ಬಗ್ಗೆ ಪಾಕಿಸ್ತಾನವು ತನ್ನ ಒರಟು ಅಗ್ರಹವನ್ನು ಮುಂದಿಟ್ಟು ಹೊಗೆಯೇಳಿಸುವುದರಲ್ಲಿ ವ್ಯಸ್ತವಿರುವಾಗ, ಪ್ರಧಾನಿಯವರು ಈ ಸಂಬಂಧದಲ್ಲಿ ಹೆಚ್ಚು ನುಡಿಯದೆ ಭಾವೈಕ್ಯದ ಕುರಿತು ಸುದೀರ್ಘವಾಗಿ ಆಡಿದುದು ಗಣನೀಯವಾಗಿದೆ.

ಭಾವೈಕ್ಯದ ಗಾಳಿ

ಭಾವೈಕ್ಯದ ಗಾಳಿ ಬೀಸ ತೊಡಗಿದುದು ಕೇವಲ ಎರಡು ವರ್ಷಗಳಿಗೆ ಮೊದಲು. ದೇಶದಲ್ಲಿನ ಒಳ ಜಗಳಗಳು ಹೆಚ್ಚುತ್ತ, ಭಿನ್ನಾಭಿಪ್ರಾಯಗಳು ಬೆಳೆಯುತ್ತ ಬಂದು ಮುಂದೆ ಅವು ರಾಜಕೀಯ ಸ್ವರೂಪ ಪಡೆಯುವಷ್ಟು ಮುಂದಾದುದನ್ನು ನಾವು ಮರೆಯಲಾರೆವು. ದೇಶದ ಸ್ವಾತಂತ್ರ್ಯಕ್ಕೆ ಸಾರ್ವ ಭೌಮತೆಗೆ ಪರಕೀಯರಿಂದ ಸಂಧಾಹ್ವಾನ ಬಂದಾಗ, ಅದನ್ನು ಧೃತಿಯುತವಾಗಿ ಎದುರಿಸಬೇಕಾದರೆ, ನಮ್ಮಲ್ಲಿರಬಹುದಾದ ವಿಘಾತುಕ ಶಕ್ತಿಗಳನ್ನು ಉಪಯುಕ್ತ ಪಥದಲ್ಲಿ ಹರಿಯುವಂತೆ ಮಾಡಬೇಕೆಂಬ ವಿಚಾರ ಮುಂದೆ ಬಂತು. ಭಾಷಾ ತಳಹದಿಯ ಮೇಲೆ ದೇಶವನ್ನು ಮನರ್ವಿಂಗಡಣೆ ಮಾಡುವುದರಿಂದ ಅನೇಕ ಸಮಸ್ಯೆಗಳು ಪರಿಹಾರಗೊಳ್ಳುವುವೆಂದು ಮೊದಲು ಊಹಿಸಲಾಗಿದ್ದರೂ ಅದರಿಂದ ನಿರೀಕ್ಷಿತ ಫಲಪ್ರಾಪ್ತಿಯಾಗದೆ ಕೆಲವೊಂದು ಹೊಚ್ಚ ಹೊಸ ಸಮಸ್ಯೆಗಳು ತಲೆದೋರಿದುವು; ಇವುಗಳು ಪಾರಸ್ಪರಿಕ ಸೌಹಾರ್ದತೆಯಲ್ಲಿ ಭಾದೆಯೊಡ್ಡಿದುವು. ಭಾಷೀಯತೆ, ಪ್ರಾಂತೀಯತೆ, ಜಾತೀಯತೆಗಳು ಪೆಡಂಭೂತಗಳೆಂದು ತಿಳಿಸಿ ಹೇಳುವುದರಲ್ಲಿಯೂ ಅವುಗಳನ್ನು ದೂರಮಾಡಿ ಭಾರತೀಯತೆಯನ್ನೂ ಮಾನವೀಯತೆಯನ್ನೂ ಹೆಚ್ಚಿಸಿಕೊಳ್ಳಬೇಕೆಂದು ಉಪಪೇಶಿಸುವುದರಲ್ಲಿಯೂ ನಮ್ಮ ನಾಯಕಮಣಿಗಳು ತನ್ಮಯರೇನೋ ಆದರು; ಆದರೆ, ಅದು ಗಾಳಿಯಲ್ಲಿಯೇ ತೂರಿ ಹೋದಂತೆ ಭಾಸವಾಗುವ ಕೆಲವೊಂದು ಅನಪೇಕ್ಷಿತ ದುರ್ಘಟನೆಗಳು ನಡೆದು ಹೋದುವು; ಇಂದಿಗೂ ನಡೆಯುತ್ತಿವೆ. ಇವೆಲ್ಲ ಅನಿಷ್ಟ ಪರಂಪರೆಗಳಿಗೆ ಭಾವೈಕ್ಯವೇ ತಾರಕೋಪಾಯವೆಂಬ ಹೊಳಕು ಮೂಡಿ, ಅದಿಸೆಯಲ್ಲಿ ದೇರದ ನಾಯಕರಿಂದು ಮುಂದುವರಿಯುತಿದ್ದಾರೆ; ಪ್ರಧಾನಿ ನೆಹರುರವರು ರಾಷ್ಟ್ರೀಯ ಭಾವೈಕ್ಯದ ಬಗ್ಗೆ ಒತ್ತಿ ಹೇಳಿದುದು ಉಚಿತವಾಗಿದೆ.

ಮುನ್ನೇತ್ರಕಳಗಂ

ಇಡಿಯ ಭಾರತವು ನಮ್ಮ ದೇಶವೆಂದು ನಾವು ಒಪ್ಪಿಕೊಂಡಿದ್ದೇವೆ; ನಮ್ಮ ಮಾತೃಭೂಮಿ ಭಾರತವೆಂದು ಹಾಡುತ್ತೇವೆ. ಆದರೆ, ನಾವಿಂದು ನಮ್ಮ ಭಾರತವನ್ನು ನಮ್ಮ ಮಾತೃಭೂಮಿಯೆಂದು, ಭಾರತೀಯರನ್ನು ನಮ್ಮ ಸಹೋದರರೆಂದು ಭಾವಿಸುತ್ತೇವೆಯೆ? ಹೆಚ್ಚಿನವರಿಂದ ಇದಕ್ಕೆ ಅನುಕೂಲೋತ್ತರ ಲಭಿಸದು ಎನಿಸುತ್ತದೆ. ನಮ್ಮ ಕಾರ್ಯಕ್ರಮಗಳಲ್ಲಿ ಕರ್ತವ್ಯ ದೃಷ್ಟಿಯಿಂದು ಮಾಯವಾಗಿದೆ. ಪವಿತ್ರವೆನಿಸಿದ ಕರ್ತವ್ಯದೃಷ್ಟಿಯ ಮೇಲೆ ಸ್ವಾರ್ಥ ತನ್ನ ಸೋಗು ಹಾಕಿಕೊಂಡಿದೆ. ಎಂತಲೇ ನಮ್ಮ ದೇಶವನ್ನು ಒಡೆಯುವಂತಹ ದುಷ್ಟ ಪ್ರಯತ್ನಗಳೂ ಇಂದು ಅಲ್ಲಲ್ಲಿ ನಡೆಯುತ್ತಿವೆ. ಮದ್ರಾಸದಲ್ಲಿ ತಲೆಯೆತ್ತಿದ 'ದ್ರಾವಿಡ ಮುನ್ನೇತ್ರಕಳಗಂ ಎಂಬ ರಾಜಕೀಯ ಪಕ್ಷವು ಇಂತಹ ದುಸ್ಸಾಧನೆಯಲ್ಲಿ ಮುಂದುವರಿಯುತ್ತಿದೆ ಮಾತ್ರವಲ್ಲ, ಅದು ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸುತ್ತ ಬಂದಂತೆ ಅದರ ಬೇರಾದರೂ ಆಳವಾಗಿ ಬಿಡುತ್ತಿದೆ; ಅದರ ಪ್ರಭಾವದಿಂದ ದಿನದಿಂದ ದಿನಕ್ಕೆ ಅಧಿಕಾಧಿಕ ಜನರು ಅದರ ಬೆಂಬಲಕ್ಕೆ ನಿಂತಿದ್ದಾರೆ ಎಂದು ತಿಳಿಯುತ್ತದೆ.

ಭಸ್ಮಾಸುರ ಪ್ರತಾಪ

ಕಳೆದ ಸಾರ್ವತ್ರಿಕ ಚುನಾವಣೆಯಲ್ಲಿಯೇ ಅನಿರೀಕ್ಷಿತವಾಗಿ ಅಧಿಕೃತ ಕಾಂಗ್ರೆಸ್ ಉಮೇದ್ವಾರಿಗಳನ್ನು ಸೋಲಿಸಿಗೆದ್ದು ಬಂದ 'ಕಳಗಂ' ಭದ್ರವಾಗಿದೆಯೆಂಬ ಸಂಗತಿ ಬಯಲಾಯಿತು. ಅದು ವರೆಗೆ ತನ್ನಷ್ಟಕ್ಕೇ ಚಿವುಟಿಕೊಳ್ಳಲಿ ಎಂದು ಭಾವಿಸುತಿದ್ದ ಕಾಂಗ್ರೆಸ್ಸು ಆ ಮೇಲೆ ಎಚ್ಚರವಾಯಿತು. ಕಳಗಂನ ನೀತಿಯಿಂದ ತನಗೆ ಲಾಭವಿದೆಯೆಂದು ಮೊದಲು ಭಾವಿಸಿದ್ದ ಕಾಂಗ್ರೆಸ್ಸು ಅವ್ಯಕ್ತವಾಗಿ ಪ್ರೋತ್ಸಾಹಿಸುತ್ತ ಬಂದಿತ್ತೆಂಬ ದೂರು ಕೇಳಿಬರುತ್ತಿತ್ತು. ಆದರೆ, ಶಿವನಿಂದ ವರ ಪಡೆದು, ಅದರ ಪರೀಕ್ಷೆಗೆಂದು ಆತನ ತಲೆಯ ಮೇಲೆಯೇ ಕೈಯಿಡ ಹೋದ ಭಸ್ಮಾಸುರನಂತಾಗಿದೆ 'ಕಳಗಂ' ಎಂದರೆ ಅತಿಶಯೋಕ್ತಿಯಲ್ಲ. ತಿರುಚೆಂಗೋಡಿನಲ್ಲಿ ನಡೆದ ಮರು ಚುನಾವಣೆಯಲ್ಲಿ ಈ ಭಸ್ಮಾಸುರ ಪ್ರತಾಪವು ಸರಿಯಾಗಿ ಪ್ರದರ್ಶಿತವಾಯಿತು. ಇಲ್ಲಿ ಕಳೆದ ಬಾರಿ ಚುನಾವಣೆಯಲ್ಲಿ ತನ್ನ ನಿಕಟ ಪ್ರತಿಪ್ಪರ್ಧಿ ಕಳಗಂನ ಪ್ರತಿನಿಧಿಯನ್ನು ಸುಮಾರು ೧೨,೦೦೦ ಮತಗಳಿಂದ ಸೋಲಿಸಿ ಲೋಕಸಭೆಗೆ ಡಾ। ಸುಬ್ಬರಾಯನ್ನರು ಆಯ್ಕೆಗೊಂಡಿದ್ದರು; ಅವರು ಮಹಾರಾಷ್ಟ್ರದ ರಾಜ್ಯಪಾಲರಾಗಿ ಹೋದನಂತರ ಅಲ್ಲಿ ಮೊನ್ನೆ ಮರು ಚುನಾವಣೆ ನಡೆಯಿತು. ಆದರೆ, ಇದರಲ್ಲಿ ನೇರ ಸ್ಪರ್ಧೆಯು ನಡೆದು ಕಾಂಗ್ರೆಸ್ ಅಭ್ಯರ್ಥಿಯು ಕೇವಲ ೭೨೦ ಮತಗಳಿಂದ ಕಳಗಂ ಅಭ್ಯರ್ಥಿಯ ಮೂಲಕ ಸೋಲುಣ್ಣ ಬೇಕಾಯಿತು.

ಅನಿರೀಕ್ಷಿತ ವಿಜಯ

ಈ ಸಂಬಂಧದ ಅಂಕೆ ಸಂಖ್ಯೆಗಳನ್ನೂ ಸಾರ್ವತ್ರಿಕ ಚುನಾವಣಾ ನಂತರದ ವಿದ್ಯಮಾನಗಳನ್ನೂ ಅವಲೋಕಿಸುವಾಗ, ಕಳಗಂನ ಈ ವಿಜಯ ದಿಗ್ಭ್ರಮೆಗೊಳಿಸುವಂತಹುದು ಎಂದು ಹೇಳಬೇಕು. ಕಳೆದ ಬಾರಿ ಒಟ್ಟು ಮತದಾರರಲ್ಲಿ ಸೇಕಡಾ ೬೨ರಷ್ಟು ಮತದಾನ ನಡೆದಿತ್ತು; ಈ ಸಲ ನೂರಕ್ಕೆ ೪೭ ಮಾತ್ರ. ಅಂದು ಸುಮಾರು ೪೦,೦೦೦ ಮತಗಳನ್ನು ಪಡೆದ ಪ್ರಸವಾವು ಇಂದು ಚುನಾವಣೆಯಲ್ಲಿ ಸ್ಪರ್ಧಿಸದೆ ಕಾಂಗ್ರೆಸ್ ಹುರಿಯಾಳುವನ್ನೇ ಬೆಂಬಲಿಸಿತ್ತು. ಹಾಗಿದ್ದರೂ ಕಾಂಗ್ರೆಸ್ಸು ಸೇಕಡಾ ೧೫॥ಯಷ್ಟು ಈ ಬಾರಿ ಕಡಿಮೆ ಮತಗಳನ್ನು ಪಡೆದುದು ಚೋದ್ಯವೆನಿಸಿದೆ. ಇತ್ತೀಚೆಗೆ ಮದ್ರಾಸದಲ್ಲಿ ಕಳಗಂನ ವಿಜಯದಿಂದ ಜಾಗ್ರತವಾದ ಕಾಂಗ್ರೆಸ್ ನಾಯಕರು ಅದರ ಮೇಲೆ ಟೀಕೆಯ ಸುರಿಮಳೆಯನ್ನೇ ಕರೆದಿದ್ದಾರೆ; ಅದು ದೇಶವನ್ನು ಒಡೆಯುವ ಆರಾಷ್ಟ್ರೀಯ ಮನೋವೃತ್ತಿಯ ಪಕ್ಷವೆಂಬ ಪ್ರಚಾರವನ್ನೂ ಮಾಡಿದ್ದಾರೆ. ರಾಜ್ಯ ವ್ಯಾಪಿಯಾಗಿ ಅದು ಹೂಡಿದ ಬೆಲೆ ಹೆಚ್ಚಳಾದಿಗಳ ಪ್ರದರ್ಶನಗಳನ್ನು ಖಂಡಿಸಿದ್ದಾರೆ; ಅದರ ನಾಯಕರೂ ಸದಸ್ಯರೂ ಬಂಧಿತರಾಗಿದ್ದಾರೆ; ಕೆಲವರ ಮೇಲೆ ಕಟ್ಟೆ ಹೊರಿಸಿ, ಅವರು ದಂಡನೆಗೂ ಗುರಿಯಾಗಿದ್ದಾರೆ. ಹಾಗಿದ್ದು ವಸ್ತುತಃ ತಿರುಚೆಂದೂರಿನ ಮರು ಚುನಾವಣೆಯಲ್ಲಿ ಕಳಗಂ ಅವಶ್ಯ ಸೋಲುಣ್ಣ ಬೇಕಾಗಿತ್ತು; ಉಣ್ಣುವುದೆಂಬ ಬಲವತ್ತರ ಆಶೆಯೂ ಇತ್ತು. ಆದರೆ, ಚುನಾವಣೆಯ ಪರಿಣಾಮವು ತಮಗೆ ಪ್ರತಿಕೂಲವಾದುದನ್ನು ಕಂಡು ಕಾಂಗ್ರೆಸ್ಸು ಮೂಗಿಗೆ ತರ್ಜನಿಯೇರಿಸ ಬೇಕಾಗಿಬಂತು.

ಮಂತ್ರಮುಗ್ಧ ಜನತೆ

ಪ್ರಧಾನಿಯವರು ಪತ್ರಿಕಾ ಪರಿಷತ್ತೊಂದರಲ್ಲಿ ಕೇಳಿದ ಪ್ರಶ್ನೆಯೊಂದನ್ನು ಉತ್ತರಿಸುತ್ತ ತಿರುಚೆಂದೂರಿನ ಮರು ಚುನಾವಣೆಯ ಪರಿಣಾಮವು ತುಸು ಮಹತ್ವವನ್ನು ಪಡೆದಿದೆಯೆಂದು ಅಂದಿದ್ದಾರೆ ಇದು ಅತಿಶಯೋಕ್ತಿಯಲ್ಲ. ನಿಜವಾಗಿಯೂ ಬಹು ಮಹತ್ವದ್ದೇ ಇದು ಎನ್ನಬೇಕು. ಮದ್ರಾಸ ರಾಜ್ಯದಲ್ಲಿ ಕಳಗಂ ತನ್ನ ಪ್ರಭಾವದಿಂದ ಜನತೆಯನ್ನು ಮಂತ್ರಮುಗ್ಧಗೊಳಿಸುತ್ತ ಹೇಗೆ ಮುಂದುವರಿಯುತ್ತಿದೆ; ಮತ್ತು ಜನತೆಯೊದರೂ ಅದಕ್ಕೆ ಹೇಗೆ ಬಲಿಯಾಗುತ್ತಿದೆಯೆಂಬುದಕ್ಕೆ ಈ ಮರು ಚುನಾವಣೆಯು ಇನ್ನೊಂದು ಜ್ವಲಂತ ನಿದರ್ಶನ.

ನಿರುತ್ಸಾಹದ ಚುನಾವಣೆಗಳು

ಚುನಾವಣೆಯಲ್ಲಿ ನಿಂತು ಸೋಲುಂಡ ಮಂತ್ರಿಗಳನ್ನೂ, ಇತರರನ್ನೂ ರಾಜ್ಯಪಾಲರೆಂದು ನೇಮಕ ಮಾಡುವ ಪರಿಪಾರ ಈ ಮೊದಲೊಮ್ಮೆ ಪ್ರಚಲಿತವಿತ್ತು. ಇದು ಅಸಾಧುವೆಂದು ಕಂಡುಕೊಂಡ ಕೇಂದ್ರ ಸರಕಾರವು ಈಗ, ಗೆದ್ದವರನ್ನೇ ಆ ಹುದ್ದೆಗೆ ನೇಮಿಸಲು ಮನಮಾಡುತ್ತಿದೆ. ಶ್ರೀಗಳಾದ ಸುಬ್ಬರಾಯನ್ ಮತ್ತು ಅನಂತಶಯನಂ ಅಯ್ಯಂಗಾರರ ನೇಮಕದ ನಂತರವೀಗ, ಶ್ರೀ ಕೆ. ಸಿ ರೆಡ್ಡಿಯವರ ನಿಯುಕ್ತಿಯಾಗಿದೆ. ಹೀಗೆ ಚುನಾಯಿತ ಸದಸ್ಯರು ಇತರ ಹುದ್ದೆಗಳಿಗೆ ಹೋದಾಗ, ಮರು ಚುನಾವಣೆಗಳು ನಡೆಯ ಬೇಕಾಗುತ್ತವೆ. ಆಗ, ಒಂದರ ಬದಲಿಗೆ

(೧೨ನೇ ಪುಟ ನೋಡಿರಿ)

"ಸೇವೆಯೇ ಮೊದಲು; ಸೇವೆಯಲ್ಲಿ ಮೊದಲು"

ಈ ಉದಾತ್ತ ಧ್ಯೇಯ ಸಾಧನೆಗಾಗಿಯೇ

— ಕೊರ್ಪೊರೇಶನ್ ಬೇಂಕ್ —

ನಿಮ್ಮ ಹಣಕ್ಕೆ

ಅತ್ಯುತ್ತಮ ಭದ್ರತೆಯೊಂದಿಗೆ ಅತ್ಯಧಿಕ ಬಡ್ಡಿ ಕೊಡುತ್ತಿದೆ.

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಉಡುಪಿ)

ಆಡಳಿತ ಆಫೀಸು: ಮಂಗಳೂರು.

ವಿದ್ಯಾರ್ಥಿಗಳಿಗೆ

ಉಪಯುಕ್ತವಾದ ಗೈಡುಗಳು

೧)	E S.L C. ಕನ್ನಡ ಟಿಪ್ಪಣಿ	1-20
೨)	,, ಸಾಮಾಜಿಕ ಅಧ್ಯಯನ ಗೈಡ್	1-15
೩)	III ಫೋರ್ಮ್ ಕನ್ನಡ ಟಿಪ್ಪಣಿ	1-08
೪)	ಹೊಸ VIIನೇ ತರಗತಿ ,,	1-00
೫)	,, VI ಸಮಾಜಜ್ಞಾನ ಪರೀಕ್ಷಾರ್ಥಕ	0-50
೬)	,, VII ,, ,, (ಅಚ್ಚಿನಲ್ಲಿದೆ)	
೭)	,, VIII ,, ,, ,,	
೮)	,, IX ,, ,,	0-80
೯)	,, X S S L C. ,,	1-00
೧೦)	,, VI ಮತ್ತು VII ವಿಜ್ಞಾನ	1-10

ಪ್ರತಿಗಳಿಗಾಗಿ ಪತ್ರ ವ್ಯವಹಾರ ನಡೆಸುವುದು)

ಡಿ ವಿ ಹೊಳ್ಳೆ, ಕುಂದಾಪುರ, ದ. ಕನ್ನಡ.

ನವಯುಗ

ವರುಷ	ಉಡುಪಿ	ವಾರ
೪೧	೨೩-೮-೧೬೨	೫೦

ಪಶ್ಚಿಮ ಈರಿಯನ್

ಗೋವೆಯನ್ನು ಪೋರ್ಚುಗೀಸ್ ವಸಾಹತು ಶಾಹಿಯಿಂದ ಮುಕ್ತಗೊಳಿಸಿದ ಬಾರತದ ನೀತಿಯ ಅನುಸರಣೆಯನ್ನು ಇಂಡೋನೇಶ್ಯವು ಮಾಡಿ ಪಶ್ಚಿಮ ಈರಿಯನ್ನನ್ನು ನೆದರ್‌ಲೇಂಡ್ಸಿನ ಕಪಿಮುಷ್ಟಿಯಿಂದ ಬಿಡುಗಡೆಗೊಳಿಸಬೇಕೆಂದು ಬಯಸಿತು. ಆಗಾಗ ಅಲ್ಲಿಂದ ಬರುತ್ತಿದ್ದ ವರದಿಗಳಂತೆ ಇಂಡೋನೇಶ್ಯಾದ ಪೆರಚ್ಯೂಟ್ ಸೈನಿಕರು ಹಾಲಂಡಿಯೂವೇ ಮೊದಲಾದೆಡೆಗಳಲ್ಲಿಗೊರಿಲ್ಲಾ ಯುದ್ಧವನ್ನೂ ಮಾಡಿದ್ದರು; ನೆದರ್‌ಲೇಂಡಿನ ಸೈನಿಕರಾದರೂ ಅವರನ್ನು ಪ್ರತಿಭಟಿಸಿದ್ದರು ಈ ನಡುವೆ ಹೊಲ್ಲೆಂಡು ಪ ಈರಿಯನಿನಮೇಲೆ ತನಗೆ ಅಧಿಕಾವಿಲ್ಲವೆಂಬುದನ್ನು ಒಪ್ಪಿಕೊಂಡು, ಅದನ್ನು ಇಂಡೋನೇಶ್ಯಕ್ಕೆ ಹಸ್ತಾಂತರಿಸುವ ವಿಧಾನಗಳ ಕುರಿತು ವಿಚಾರ ವಿನಿಮಯ ನಡೆಸತೊಡಗಿ, ಜಾಗತಿಕ ಪ್ರಾತಿನಿಧ್ಯವಿರುವ ಸಂಯುಕ್ತ ರಾಷ್ಟ್ರ ಸಂಘವನ್ನು ಈ ಬಗ್ಗೆ ಕೇಳಿಕೊಂಡಿತು. ಭಾರತದಲ್ಲಿ ಮೊದಲು ಅಮೆರಿಕನ್ ರಾಯಭಾರಿಯಾಗಿದ್ದ ಶ್ರೀ ಎಲ್ಸ್‌ವರ್ಥ್ ಬಂಕರರು ಈ ಸಂಬಂಧದಲ್ಲಿ ಒಂದು ವರದಿಯನ್ನು ಅರ್ಪಿಸಿದರು. ಅದರಲ್ಲಿನ ಸೂತ್ರಗಳಿಗೆ ಎರಡೂ ಕಡೆಯವರು ಒಪ್ಪಿದುದರಿಂದ, ಪ. ಈರಿಯನ್ ಆಡಳಿತ ಹಸ್ತಾಂತರದ ಕಾರ್ಯಕ್ರಮಕ್ಕೆ ನಾಂದಿ ಇಡಲ್ಪಟ್ಟಿತು.

ಭಾರತೀಯ ಸೈನಿಕರು ಗೋವೆಯನ್ನು ಅನಿವಾರ್ಯ ಪ್ರಸಂಗ ಬಂದಾಗ ನುಗ್ಗಿದ್ದರು; ಅವರನ್ನು ಸಮಸ್ತ ಗೋಮಾಂತಕರೂ ಹೃತ್ಪೂರ್ವಕವಾಗಿ ಸ್ವಾಗತಿಸಿದ್ದರೆಂಬುದನ್ನು ಮರೆಯಬಾರದು. ಆದರೆ, ಅಂತಹ ಭವ್ಯ ಸ್ವಾಗತವು ಪಶ್ಚಿಮ ಈರಿಯನ್ನಿನಲ್ಲಿ ಇಂಡೋನೇಶ್ಯನ್ ಸೇನೆಗೆ ದೊರೆಯಲಿಲ್ಲ. ಅಲ್ಲಲ್ಲಿ ಪ್ರತಿಭಟನೆಯೂ ವ್ಯಕ್ತವಾಗುತಿತ್ತು. ಹಾಗಿರುವಾಗ ಆಡಳಿತೆಯನ್ನು ನೇರವಾಗಿ ಇಂಡೋನೇಶ್ಯಕ್ಕೆ ಒಪ್ಪಿಸುವುದು ಸರಿಯಲ್ಲ, ಅದನ್ನು ಕೆಲ ಕಾಲ ಸಂಯುಕ್ತರಾಷ್ಟ್ರ ಸಂಘದ ಮೇಲ್ವಿಚಾರಣೆಗೆ ಒಪ್ಪಿಸಿ, ಮುಂದೆ ಅಲ್ಲಿಯ ನಾಗರಿಕರಿಗೆ ಸ್ವಯಂ ನಿರ್ಣಯಾಧಿಕಾರವನ್ನು ನೀಡಬೇಕು ಎಂಬುದೇ ಬಂಕರ್ ಸೂತ್ರದ ಪ್ರಧಾನಾಂಶ. ಈ ನಡುವೆ ಸಂಯುಕ್ತ ರಾಷ್ಟ್ರ ಸಂಘವು ವಿದೇಶೀಯ ಆಡಳಿತೆಗಾರರ ಸ್ಥಾನಗಳಲ್ಲಿ ದೇಶೀಯರನ್ನು ನೇಮಿಸುವುದು; ನಾಗರಿಕಾಭಿಪ್ರಾಯವನ್ನು ಕ್ರೋಢೀಕರಿಸುವುದು ಅಗತ್ಯವೆಂದಿದೆ. ಒಂದೇ ಬಾರಿಗೆ ಸಂಪೂರ್ಣ ಆಡಳಿತೆಯನ್ನು ಒಪ್ಪಿಸುವ ಬದಲು ಹಂತಹಂತವಾಗಿ ಇಂಡೋನೇಶ್ಯನರ ಕೈಗಳಿಗೆ ಅದು ದೊರೆಯಬೇಕೆಂದೂ ಬಂಕರ್ ವರದಿಯ ಉಲ್ಲೇಖವಿದೆ. ಈ ವರದಿಯನ್ನು ಇಕ್ಕಡೆಯವರೂ ಒಪ್ಪಿಕೊಂಡು, ಅದನ್ನು ಕಾರ್ಯರೂಪಕ್ಕೆ ತರಲು ಮನಮಾಡಿದುದು ಪ್ರಶಂಸನೀಯ ಮಾತ್ರವಲ್ಲ, ಇತರರಿಗೆ ಮಾರ್ಗದರ್ಶಕವೂ ಆಗಿದೆ,

ಬಂಕರ್ ವರದಿಯನ್ನು ಕಾರ್ಯರೂಪಕ್ಕೆ ತರಲು ಸಂಯುಕ್ತ ರಾಷ್ಟ್ರ ಸಂಘದ ಸಾಮಾನ್ಯ ಸಭೆಯು ಅದನ್ನು ಸ್ವೀಕರಿಸ ಬೇಕು. ಮುಂದಿನ ತಿಂಗಳ ಮಧ್ಯಾವಧಿಯಲ್ಲಿ ಈ ಸಭೆಯು ಸೇರುವ ನಿರೀಕ್ಷೆಯಿದೆ. ಇದರಲ್ಲಿ ಹೊಲ್ಲೆಂಡ್ ಮತ್ತು ಇಂಡೋನೇಶ್ಯಗಳು ಸಂಯುಕ್ತವಾಗಿ ಒಂದು ಗೊತ್ತುವಳಿಯನ್ನು ಮಂಡಿಸಿ, ತಮ್ಮ ಒಡಂಬಕೆಯಲ್ಲಿ ನಿರೂಪಿಸಿದ ಯೋಜನೆಗಳನ್ನು ಕಾರ್ಯಗತಗೊಳಿಸುವಂತೆ ಸಂ. ರಾ. ಸಂಘವನ್ನು ಕೇಳಿಕೊಳ್ಳ ಬೇಕು. ಆಗ, ಸಂಯುಕ್ತ ರಾಷ್ಟ್ರ ಸಂಘವು ಇದನ್ನು ಒಪ್ಪಿ ತನಗೆ ಕೊಡಮಾಡಿರುವ ಜವಾಬ್ದಾರಿಯನ್ನು ನಿರ್ವಹಿಸುವಂತೆ ಸಂಘದ ತಾತ್ಕಾಲಿಕ ಪ್ರಧಾನ ಕಾರ್ಯದರ್ಶಿಯವರನ್ನು ಕೇಳಿಕೊಳ್ಳಬೇಕಾಗುತ್ತದೆ. ೧೯೬೯ರಲ್ಲಿ ಇಂಡೋನೇಶ್ಯನ್ ನಾಗರಿಕರು ಸ್ವಯಂ ನಿರ್ಣಯಾಧಿಕಾರವನ್ನು ಪಡೆಯುವರು; ಆ ಸಂಬಂಧದ ಚುನಾವಣೆಗಳ ಪರಿಣಾಮವನ್ನು ಇಂಡೋನೇಶ್ಯ ಮತ್ತು ಸಂ. ರಾ. ಸಂಘದ ಪ್ರತಿನಿಧಿಗಳು ಸಂಘಕ್ಕೆ ವರದಿ ಮಾಡುವರು.

೧೯೬೩ರ ಮೇ ೧ನೆ ತಾರೀಕಿಗೆ ಮುಗಿಯುವ ಮೊದಲನೆಯ ಘಟ್ಟದಲ್ಲಿ ಸಂ. ರಾ. ಸಂಘವು ಪಶ್ಚಿಮ ಈರಿಯನ್ನಿನಲ್ಲಿ ಈಗಿರುವ ಡಚ್ಚ ಉನ್ನತ ಅಧಿಕಾರಿಗಳ ಸ್ಥಾನದಲ್ಲಿ ಇಂಡೋನೇಶ್ಯನ್ ಡಚ್ಚೇತರರನ್ನು ನಿಯುಕ್ತಿಗೊಳಿಸುವುದು. ಈ ಹಂತಾ ನಂತರ, ಸಂ. ರಾ. ಆಡಳಿತೆದಾರನು ಆಡಳಿತೆಯ ಎಲ್ಲ ಅಥವಾ ಕೆಲವೊಂದು ಅಧಿಕಾರವನ್ನು ಇಂಡೋನೇಶ್ಯಕ್ಕೆ ಹಸ್ತಾಂತರಗೊಳಿಸಬಹುದು; ಅಲ್ಲಿರುವ ಸಂ. ರಾ. ಸಂರಕ್ಷಣಾ ಪಡೆಯನ್ನು ಹಿಂದೆಗೆದುಕೊಳ್ಳಬಹುದು. ಸಂ. ರಾ. ಸಂಘದ ಪ್ರಧಾನ ಕಾರ್ಯದರ್ಶಿಯ ಪ್ರತಿನಿಧಿ ಮತ್ತು ತಜ್ಞ ನೌಕರರು ಇಂಡೋನೇಶ್ಯಕ್ಕೆ ಸಲಹೆ ನೀಡುವ, ಸಹಾಯ ಮಾಡುವ ಮತ್ತು ಕಾರ್ಯಕ್ರಮಗಳಲ್ಲಿ ಸಹಭಾಗಿಯಾಗುವ ಕರ್ತವ್ಯಗಳನ್ನು ಪೂರಯ್ಸುವರು.

ರಾಷ್ಟ್ರ ರಾಷ್ಟ್ರಗಳ ನಡುವಣ ವಿವಾದಗಳಿಂದ ಹರಡುವ ಅಶಾಂತಿಯನ್ನು ತಡೆಗಟ್ಟಿ, ಇಂತಹ ವಿವಾದಗಳನ್ನು ಶಾಂತವಾಗಿ ಕೊನೆಗೊಳಿಸುವುದು ಸಂ.ರಾಷ್ಟ್ರ ಸಂಘದ ಅಭಿಲಾಷೆ. ಹಾಗಿರುವಾಗ ಪಶ್ಚಿಮ ಈರಿಯನ್ನಿನ ಪ್ರಶ್ನೆಯನ್ನು ಸೌಹಾರ್ದಮಯವಾಗಿಯೇ ಮುಕ್ತಾಯಗೊಳಿಸಿದುದರಿಂದ ಅದರ ಕಿರೀಟಕ್ಕೆ ನವಿಲು ಗರಿಯೇರಿಸಿದಂತಾಗಿದೆ. ವಸಾಹತುವಾದದಲ್ಲಿ ನವೆಯುತ್ತಿರುವ ಆಫ್ರಿಕನ್ ಮತ್ತು ಒಂದೆರಡು ಆಸ್ಯನ್ ರಾಷ್ಟ್ರಗಳು ದಾಸ್ಯ ನೇಗಿಲಿನಿಂದ ಬಿಡುಗಡೆ ಹೊಂದಲು ಸಂ. ರಾ. ಸಂಘದ ಆಸರೆ ಪಡೆಯಬಹುದೆಂದು ಸೂಚಿಸಬಹುದು. ಸಂ. ರಾ. ಸಂಘವು ಇದನ್ನು ಸಾಧಿಸಿಕೊಂಡರೆ, ಅದರ ಸಂಯುಕ್ತತೆಗೆ ಮತ್ತು ರಾಮಣೀಯತೆಗೆ ಮತ್ತಷ್ಟು ಮೆರಗು ಬರುವುದು. ಸಂ. ರಾ. ಸಂಘದ ತಾತ್ಕಾಲಿಕ ಪ್ರಧಾನ ಕಾರ್ಯದರ್ಶಿ ಶ್ರೀಯು. ಧಾಂಟರು ಪ. ಈರಿಯನ್ ಪ್ರಶ್ನೆಗೆ ಉತ್ತರವರಸಿ ಅದನ್ನು ಕಾರ್ಯರೂಪಕ್ಕೆ ತರುವಲ್ಲಿ ವಹಿಸಿದ ನಿಷ್ಠೆ ಮತ್ತು ಬಂಕರರ ಪರಿಶ್ರಮಗಳು ನಿಜಕ್ಕೂ ಶ್ಲಾಘನೀಯವಿವೆ. ಸ್ವತಂತ್ರ ಜಗನ್ನಿರ್ಮಾಣ ಕಾರ್ಯದಲ್ಲಿ ಇವರ ಸಹಾಯ ಮುಂದೆಯೂ ಲಭಿಸಲಿ.

ಜಗತ್ಪರ್ಯಟನ

ಅಯೂಬಖಾನ್

ತನ್ನ ತಪ್ಪನ್ನು ಮುಚ್ಚಿಟ್ಟು ಇತರರಲ್ಲಿ ಅದನ್ನು ಅರಸುವುದು ಮಾನವನ ಹುಟ್ಟು ಧರ್ಮ ಹಾಗಿರುವಾಗ, ಅದು ಪಾಕ್ ಶಾಸಕರಿಂದ ದೂರವಾದೀತೆ? 'ಕಾಶ್ಮೀರದ ಬಂಧುಗಳಿಗೆ ನಾವಿತ್ತ ವಚನವನ್ನು ಪಾಲಿಸುತ್ತೇವೆ. ಆದರೆ, ಗೌರವಪೂರ್ಣ ಪರಿಹಾರಕ್ಕೆ ಅವಕಾಶ ದೊರೆಯುವ ವರೆಗೆ ನಾವು ಕಾಯ ಬೇಕು, ಎಂದು ಹೇಳುವ ಪಾಕ್ ಅಧ್ಯಕ್ಷ ಅಯೂಬಖಾನರು ಪಾಕಿಸ್ತಾನವನ್ನು ದುರ್ಬಲಗೊಳಿಸುವುದೇ ಭಾರತದ ಉದ್ದೇಶವೆಂದು ಪ್ರಲಾಪಿಸಿದ್ದಾರೆ ಕಾಶ್ಮೀರದ ತಂಟೆಯು ನ್ಯಾಯ

ಜುಗುಪ್ಸೆಗೆ ಕಾರಣ

ತೂಗಿ ನೋಡಿ ಕಾರ್ಯವಾರಂಭಿಸುವುದರಿಂದ ತಪ್ಪು ನಡೆಯದೆಂದು ನಂಬುಗೆಯಿದೆ. ಆದರೆ, ದೀರ್ಘಕಾಲದ ಪರಿಶೀಲನೆಯ ನಂತರ ಕರ್ನಾಟಕ ಸರಕಾರವು ತಾಂತ್ರಿಕ ಕಾಲೇಜುಗಳಲ್ಲಿ ಸ್ಥಾನಗಳ ಹೆಂಚುವಿಕೆಯ ಸಂಬಂಧದಲ್ಲಿ ಹೊರಡಿಸಿದ ಆಜ್ಞೆಯ ಮೇಲೂ 'ರಿಟ್' ಅರ್ಜಿ ದಾಖಲಾಗಿದೆಯೆಂಬಾಗ ಈ ನಂಬುಗೆಯೇ ತಪ್ಪು ಇದೆ ಎಂಬುದು ವೇದ್ಯವಾಗುತ್ತದೆ. ಜಾತೀಯತೆಯನ್ನು ಹಿಂದುಳಿದಿರುವಿಕೆಯನ್ನು ಅಳೆಯುವ ಮಾನವನ್ನಾಗಿ ಮಾಡಿಕೊಳ್ಳುವುದನ್ನು ಒಂದು ಕಾಲದಲ್ಲಿ (ಇಂದಿಗೂ) ಖಂಡಿಸಿದ ಶ್ರೀ ನಿಜಲಿಂಗಪ್ಪನವರು ಇಂದು ಅಧಿಕಾರ ಪೀಠಾರೂಢರಾಗಿದ್ದಾರೆ; ಅವರು ಹಿಂದೆ ಮುಂದೆ ನೋಡಿ, ಹಿಂದುಳಿದವರಿಗೆ ಮತ್ತು ಬಹಳ ಹಿಂದುಳಿದವರಿಗೆ ಸೇ. ೫೦ರಷ್ಟು ಸ್ಥಾನವನ್ನು ಮೀಸಲಿರಿಸುವ ಆಜ್ಞೆಯನ್ನು ಹೊರಡಿಸಿದ್ದಾರೆ. ಕಳೆದ ಕೆಲವೊಂದು ವರ್ಷಗಳಿಂದಲೂ ಶೈಕ್ಷಣಿಕ ವರ್ಷ ಪ್ರಾರಂಭವಾಗುತ್ತಲೆ ಸರಕಾರವು ಸ್ಥಾನ ಕಾದಿರಿಸುವ ಸಂಬಂಧದಲ್ಲಿ ಆಜ್ಞೆ ಹೊರಡಿಸುವುದು, ನಿರಾಶರಾದ ಪ್ರತಿಭಾ ಧನ ಸಂಪನ್ನ ವಿದ್ಯಾರ್ಥಿಗಳು ಅದನ್ನು ಆಹ್ವಾನಿಸಿ ರಿಟ್ ಪಿಟಿಷನ್ ಹಾಕುವುದು, ಮತ್ತು ಉಚ್ಚ ನ್ಯಾಯಾಲಯ ಸರಕಾರದ ಆಜ್ಞೆಯು ನ್ಯಾಯಬಾಹಿರವೆಂದು ತೀರ್ಪು ಕೊಡುವುದು ನಡೆದುಬಂದ ಸಂಪ್ರದಾಯವೆನಿಸಿದೆ. ಇಂತಹ ಅನ್ಯಾಯದ ಆಜ್ಞೆಗಳನ್ನು ಹೊರಡಿಸುವುದರಿಂದ ಪ್ರತಿಭಾ ಸಂಪನ್ನರಾದ ಧನಹೀನ ವಿದ್ಯಾರ್ಥಿಗಳಿಗೆ ಅಪಚಾರವಾಗುತ್ತದೆ; ಹೈಕೋರ್ಟಿಗಾದರೂ ಒಂದು ಅನಪೇಕ್ಷಿತ ಕೆಲಸವೆನಿಸುತ್ತದೆ. ಹಾಗಿರುವಾಗ, ಸರ್ವರಿಗೂ ನ್ಯಾಯವನ್ನು ನೀಡಬೇಕೆಂಬ ಸರಕಾರ ಈ ವಿಧದ ಆಜ್ಞೆಗಳನ್ನು ಮಾಡುವುದು ನಿಜಕ್ಕೂ ಶೋಭನೀಯವಲ್ಲ. ನಾವು ಈ ಮೊದಲೇ ಹಲವು ಬಾರಿ ಹೇಳಿರುವಂತೆ ಆರ್ಥಿಕ ಸ್ಥಿತಿಗತಿಗಳನ್ನೇ ಹಿಂದುಳಿದಿರುವಿಕೆಯ ಮಾನದಂಡವೆಂದು ಸ್ವೀಕರಿಸಿದರೆ, ಪದೇ ಪದೇ ಒದಗುವ ಇಂತಹ ಜಿಗುಪ್ಸಾಕಾರಕ ಆಜ್ಞೆಗಳು ಹೊರಡಲಾರವು.

ಸಮ್ಮತವಾಗಿ ಬಗೆಹರಿಯದಿದ್ದರೆ, ಭಾರತದೊಂದಿಗೆ ಪಾಕಿಸ್ತಾನದ ಸಂಬಂಧ ಸುಧಾರಿಸಲಾರದು ಎಂದ ಅವರಿಗೆ, ಅವರ ವಿದೇಶ ಮಂತ್ರಿಯೇ ಪಾಕ್ ಅಸರಾಧವನ್ನು ಹೊರಗೆಡಹಿದುದು ತಿಳಿದಂತಿಲ್ಲ. ೧೯೫೩ರಲ್ಲಿ ಭಾರತವು ಕಾಶ್ಮೀರದಲ್ಲಿ ಚುನಾವಣೆ ನಡೆಸಲು ಒಪ್ಪಿ ಮತಗಣ ಕಾಧಿಕಾರಿಯು ತಟಸ್ಥ ರಾಷ್ಟ್ರದವನಿರಬೇಕೆಂದಿತ್ತು. ಅದಕ್ಕೆ ಪಾಕಿಸ್ತಾನ ಒಪ್ಪಲಿಲ್ಲವೆನ್ನುವಾಗ, ಇಂದು ಭಾರತವನ್ನು ದೂರಿಯೇನು ಪ್ರಯೋಜನ?

ಗಗನಯಾತ್ರಿಕರು

ಅಂತರಿಕ್ಷ ಗಮನದಲ್ಲಿ ಆದ್ವಿತೀಯ ಯಶಸ್ಸನ್ನು ರಶ್ಯವಿಂದು ಗಳಿಸಿದೆ. ಅದು ಎಂಡ್ರಿಯನ್ ವಿಕೋಲಾಯೇನ್ ಮತ್ತು ಪೇವೆಲ್ ಪೊಪೋವಿಚ್ ಎಂಬಿಬ್ಬರು ಗಗನ ಯಾತ್ರಿಗಳನ್ನು ಬೇರೆ ಬೇರೆ ಉಪಗ್ರಹಗಳಲ್ಲಿ ಇರಿಸಿ, ಅಂತರಿಕ್ಷಕ್ಕೆ ಹಾರಿಸಿತ್ತು. ಇಡಿಯ ವಿಶ್ವದಲ್ಲಿಯೇ ಕುತೂಹಲವನ್ನು ಕೆರಳಿಸಿದ ಈ ಯಾತ್ರಿಕರು ಸುಕ್ಷೇಮವಾಗಿ ತಾವು ಯಾತ್ರೆ ಪ್ರಾರಂಭಿಸಿದ ಸ್ಥಳದ ಹತ್ತಿರದಲ್ಲಿಯೇ ಇಳಿದರೆಂಬುದೂ ಅವರು ಸುಖವಾಗಿಯೇ ಇದ್ದಾರೆಂಬುದೂ ಅಂತರಿಕ್ಷ ಯಾತ್ರೆಯ ಹಲವು ತೊಡಕುಗಳನ್ನು ದೂರ ಮಾಡಿದೆ. ಚಂದ್ರ ಹಾಗೂ ಮತ್ತಿತರ ಗ್ರಹಗಳಿಗೆ ಯಾತ್ರೆ ಬೆಲೆಸಲು ಈ ಜೋಡು ಗಗನ ಯಾತ್ರಿಗಳ ಅನುಭವವು ಸಹಾಯಕವಾಗುವುದೆಂದು ನಂಬಲಾಗಿದೆ. ಈ ಇರ್ವರನ್ನೂ ರಶ್ಯನ್ ವೈಜ್ಞಾನಿಕರನ್ನೂ ಜಗತ್ತಿಗೆ ಜಗತ್ತೇ ಅಭಿನಂದಿಸುತ್ತದೆ.

ಜವಾಹರಲಾಲ

ಭಾರತದ ಉಸಿರು ಜವಾಹರಲಾಲ ನೆಹರು ಎಂಬುದು ಜಗಜ್ಜನಿತಗೊಂಡುದು ಇಂದು ನಿನ್ನೆಯಲ್ಲ. ಇಂತಹ ಜನಾದರಣೀಯ ಪ್ರಧಾನಿಯವರು ಚೀನೀಯರು ಹೊರಿಸಿದ ವ್ಯರ್ಥಾರೋಪಗಳೆಲ್ಲವನ್ನೂ ಪ್ರತಿಭಟಿಸಿ, ಏನೇ ಬಂದರೂ ರಾಷ್ಟ್ರಕ್ಕೆ ಅಪಮಾನಕಾರಕವಾದ ಯಾವ ಕೃತಿಗೂ ಭಾರತವು ಮಣಿಯಲಾರದು ಎಂದು ಧೀರ ಗಂಭೀರ ಧ್ವನಿಯಲ್ಲಿ ಲೋಕ ಸಭೆಯಲ್ಲಿ ಉಚ್ಚರಿಸಿದುದು ಉಪಸ್ಥಿತರಿದ್ದ ಎಲ್ಲ ಸದಸ್ಯರು ಕಿವಿಯಲ್ಲೂ ಪ್ರತಿಧ್ವನಿಸುತ್ತಿದೆ, ಭಾರತೀಯರೆಲ್ಲರ ಹೃದಯವನ್ನೂ ಹೊಕ್ಕಿದೆ. ಹಿಂದೀ ಚೀನೀ ಭಾಯಿ ಭಾಯಿ ಮಾಡಿಕೊಂಡು ಹಸ್ತವನ್ನು ನುಂಗಲು ಬಾಯಿ ತೆರೆದ ಚೀನೀಯ ಬಾಲಿಶ ನೀತಿಯನ್ನು ಯಾವ ಗೌರವಯುತ ರಾಷ್ಟ್ರವೂ ಮೆಚ್ಚಲಾರದೆಂಬುದು ಹಗಲಿನಷ್ಟು ಸತ್ಯವಾದುದು. ಹಾಗಿರುವಾಗ, ಭಾರತದಲ್ಲಿ ಅದಕ್ಕೆ ವಿರೋಧವಿದ್ದೀತೆ? ಎಂತಲೇ ಲೋಕ ಸಭೆಯು ಸರಕಾರಿ ನೀತಿಗೆ ಸಂತೋಷದಿಂದ ಒಪ್ಪಿಗೆಯಿತ್ತಿತು.

ಚಾರ್ಲ್ಸ್ ಡಿಗಾಲೆ

ಚಾರ್ಲ್ಸ್ ಡಿಗಾಲೆಯವರು ಫ್ರೆಂಚ ಸರ್ವಾಧಿಕಾರಿಯಾಗಿ ಮತ್ತೆ ಅಧ್ಯಕ್ಷನಾಗಿ ಬಂದು ಕೆಲವೊಂದು ವಸಾಹತುಗಳಿಗೆ ಸ್ವಾತಂತ್ರ್ಯವನ್ನು ಕೊಟ್ಟುದು ಸ್ಮರಣೀಯವಿದೆ. ೧೯೫೬ರಲ್ಲಿಯೇ ಫ್ರೆಂಚರು ಭಾರತದಲ್ಲಿನ ತಮ್ಮ ವಸಾಹತು ಪಾಂಡಿಚೇರಿ, ಮಾಹೆ, ಕಾರೈಕಲ್ ಮತ್ತು ಯಾನಾನ್‌ಗಳಿಂದ ಕಂಬಿ ಕಿತ್ತಿದ್ದರೂ ಕಾಯದೆ ಬದ್ಧವಾಗಿ ಅವುಗಳ ಹಸ್ತಾಂತರವು ಡಿ

ಅಲ್ಲಲ್ಲಿಯ ಸುದ್ದಿಸಾರ

ಸ್ವಾತಂತ್ರ್ಯೋತ್ಸವಗಳು—

ಜಿಲ್ಲೆಯ ಎಲ್ಲೆಡೆಗಳಲ್ಲಿಯೂ ತಾರೀಕು 15ರಂದು ಸ್ವಾತಂತ್ರ್ಯೋತ್ಸವವು ಪ್ರಭಾತ ಪೇರಿ ಧ್ವಜಾರೋಹಣ, ಸಭೆ ಭಾಷಣ, ಸಿಹಿ ತಿಂಡಿ ವಿತರಣೆ ಮೊದಲಾದ ಕಾರ್ಯಕ್ರಮಗಳೊಂದಿಗೆ ವಿಜೃಂಭಣೆಯಿಂದ ನೆರವೇರಿತು.

ಉಡುಪಿಯಲ್ಲಿ— ನಗರ ಸಭೆಯ ನೇತೃತ್ವದಲ್ಲಿ ಬೆಳಗ್ಗೆ ಅಜ್ಜರಕಾಡು ಮೈದಾನಿನಲ್ಲಿ ಉಡುಪಿ ಸಬ್‌ಜಡ್ಜ್ ಶ್ರೀ ಜಿ. ಬಿ. ಕುಲಕರ್ಣಿಯವರಿಂದ ಧ್ವಜಾರೋಹಣವಾಗಿ ವಿದ್ಯಾರ್ಥಿಗಳಿಗೆ ಶ್ರೀ ಶೀರೂರು ಮಠದ ಶ್ರೀಪಾದಂಗಳವರಿಂದ ಕೊಡಲ್ಪಟ್ಟ ತಿಂಡಿ ಹಂಚಲಾಯ್ತು. ಸಂಜೆ ಬೋರ್ಡು ಹೈಸ್ಕೂಲಿನ ಜನತಾಭವನದಲ್ಲಿ ಶ್ರೀ ಅರೂರು ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಸಭೆ, ಮುನ್ಸಿಪಲ್ ಕಮಿಶನರ್ ಶ್ರೀ ಐ. ಜೋಶ್ವಾರಿಂದ ಸ್ವಾಗತ, ಶ್ರೀ ಕು. ಶಿ. ಹರಿದಾಸ ಭಟ್ಟರಿಂದ ಭಾಷಣ, ಬಹುಮಾನ ವಿತರಣೆ, ವಿವಿಧ ವಿನೋದಾವಳಿಗಳಾಗಿ ಶ್ರೀ ಪಿ. ಶೀನ ಶೆಟ್ರಿಂದ ಧನ್ಯವಾದಾರ್ಪಣೆ ನಡೆಯಿತು.

ಅಂಬಲಪಾಡಿ— ಕಿರಿಯ ಬುನಾದಿ ಶಾಲೆಯಲ್ಲಿ ಶ್ರೀ ಕೆ. ವೆಂಕಟರಾಯರ ಅಧ್ಯಕ್ಷತೆಯಲ್ಲಿ ಸಭೆ, ಶ್ರೀ ರಾಮಚಂದ್ರರಾಯರಿಂದ ಸ್ವಾಗತ, ಶ್ರೀ ಎ. ಪದ್ಮನಾಭ ಭಟ್ಟ, ಎ. ರಾಘವೇಂದ್ರ ಉಪಾಧ್ಯಾಯ ಮತ್ತು ವಿದ್ಯಾರ್ಥಿಗಳಿಂದ ಭಾಷಣ, ತರುಣ ವೃಂದದವರಿಂದ ತಿಂಡಿ ವಿತರಣೆಯಾಯ್ತು.

ಮಲ್ಪೆ— ಯು. ಬಿ. ಎಮ್. ಸಿ. ಕಿರಿಯ ಬುನಾದಿ ಶಾಲೆಯಲ್ಲಿ ಶ್ರೀ ಎ. ಅಮ್ಮನ್ನರಿಂದ ಧ್ವಜಾರೋಹಣ ರೆ| ಡಿ. ಐ. ಆನಂದರವರ ಅಧ್ಯಕ್ಷತೆಯಲ್ಲಿ ಸಭೆ, ಶ್ರೀ ಜಿ. ಎಸ್. ಕರ್ಕಡರಿಂದ ಸ್ವಾಗತ, ಮಕ್ಕಳ ಚಟುವಟಿಕೆ ಮಲ್ಪೆ ಟೌನ್ ಪಂಚಾಯ್ತ್ ವತಿಯಿಂದ ಸಿಹಿ ತಿಂಡಿ ವಿತರಣೆಯಾಯ್ತು.

ಬೈಲೂರು— ಯಮ್. ಯಮ್. ಕಿರಿಯ ಬುನಾದಿ ಶಾಲೆಯಲ್ಲಿ ಶ್ರೀ ದೇವಯ್ಯ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಭೆ, ಶ್ರೀಗಳಾದ ಗ್ಲೇಡಿಸನ್ ಜತನ್ನ, ಜನಾರ್ಧನ ಭಟ್, ಕುಮಾರಿ ಮನೋರಮ ಜತನ್ನ, ಜೋಬ್ ಡಿ ಅಮ್ಮಣ್ಣ ಇವರಿಂದ ಭಾಷಣ, ಹಳೆ ವಿದ್ಯಾರ್ಥಿ ಸಂಘದ ವತಿಯಿಂದ ಶಾಲಾ ಬಡ ಮಕ್ಕಳಿಗೆ ಸ್ಲೇಟು ಪುಸ್ತಕ ವಿತರಣೆಯಾಯಿತು.

ಸುರತ್ಕಲ್— ಮುಕ್ಕ ಮಿತ್ರಪಟ್ಟಣ ಮೊಗವೀರ ಧರ್ಮಾರ್ಥ ರಾತ್ರಿ ಶಾಲೆ ಮತ್ತು ಅಗ್ಗಿದಕರಿ ಹಾ. ಎ. ಶಾಲಾ ಒಡನಾಟದಿಂದ ಶ್ರೀ ಎಸ್. ವಿ. ಶಾನುಭಾಗರ ಅಧ್ಯಕ್ಷತೆಯಲ್ಲಿ ಧ್ವಜಾರೋಹಣ, ತಿಂಡಿ ವಿತರಣೆ ಮೊದಲಾದ ಕಾರ್ಯಕ್ರಮಗಳಾದುವು.

ಅಚ್ಲಾಡಿ— ಮೂಡುಕೆರೆ ಸರಕಾರೀ ಪ್ರೈಮರೀ ಶಾಲೆಯಲ್ಲಿ ಶ್ರೀ ವಿ. ಸದಾಶಿವ ಶೆಟ್ರಿಂದ ಧ್ವಜಾರೋಹಣ, ಪಟೇಲ್, ಎ. ತೇಜಪ್ಪ ಶೆಟ್ಟ, ಎ. ಮಹಾಬಲ ಶೆಟ್ಟ, ಎ. ಸುಬ್ಬಣ್ಣ ಶೆಟ್ಟ, ಸಂಜೀವ ಹೆಗ್ಡೆ ಎ. ಶಶಿಕರ ಶೆಟ್ಟ, ಇವರಿಂದ ಭಾಷಣ, ಬಿ. ಭೋಜ ಶೆಟ್ರಿಂದ ಧನ್ಯವಾದಗಳಾದುವು.

ಅಮೈ— ಸೆಂಟರಿನ ಬಾಲವಾಡಿ ಮತ್ತು ನೆರೆಯ ಬೋರ್ಡು ಶಾಲಾ ಮಕ್ಕಳು ಸೇರಿ ಶ್ರೀ ಬಾಡೂರೂ ತಿಮ್ಮಣ್ಣಾಳ್ವರ ಅಧ್ಯಕ್ಷತೆಯಲ್ಲಿ ಸ್ವಾತಂತ್ರ್ಯದಿನವನ್ನಾಚರಿಸಿದರು. ಶ್ರೀ ನಾಗಪ್ಪನವರು ಹರಿಜನ, ಗಿರಿಜನ ಮಕ್ಕಳಿಗೆ ಅಂಗಿಬಟ್ಟೆ ವಿತರಿಸಿದರು. ಶ್ರೀಮತಿ ಕೆ. ಚಂದ್ರಾವತಿಯವರು ಮಕ್ಕಳಿಂದ ವಿನೋದಾವಳಿಗಳನ್ನು ನೆರವೇರಿಸಿದರು. ಬಳಿಕ ಸಿಹಿತಿಂಡಿ ವಿತರಣೆಯಾಯ್ತು.

ಮಟ್ಟು — ಬೋರ್ಡು ಎಲಿಮೆಂಟರೀ ಶಾಲೆಯಲ್ಲಿ ಪಟೇಲ್ ಅಧಿಕಾರಿ ಪಾಸುದೇವರಾಯರ ಅಧ್ಯಕ್ಷತೆಯಲ್ಲಿ ಸಭೆ, ಮುಖ್ಯೋಪಧ್ಯಾಯ ಶ್ರೀ ಎ. ಗೋಪಾಲ ಶೆಟ್ಟರಿಂದ ಭಾಷಣ ಮಕ್ಕಳ ವಿನೋದಾವಳಿಯೊಂದಿಗೆ ಸ್ವಾತಂತ್ರ್ಯದಿನವನ್ನಾಚರಿಸಲ್ಪಾತು. ಬೆಳಿಗ್ಗೆ ಶ್ರೀ ಮಟ್ಟು ಕೃಷ್ಣರಾಯರು ಧ್ವಜಾವರೋಹಣ ನೆರವೇರಿಸಿದ್ದರು.

ಮೈಸೂರಿನ ಎ. ಬಿ. ಶೆಟ್ಟ, ಸ್ಮಾರಕ ವಿದ್ಯಾರ್ಥಿನಿಲಯದಲ್ಲಿ ಶ್ರೀ ಎಸ್. ಬೈರಪ್ಪನವರಿಂದ ಧ್ವಜಾರೋಹಣವಾಗಿ ಅನಂತರ ಅವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಶ್ರೀಗಳಾದ ಬಿ. ರವಿಚಂದ್ರ, ಜಗದೀಶ ಶೆಟ್ಟ, ಎ. ಸತೀಶ ಶೆಟ್ಟ, ವೈ. ಸಂಜೀವ ರೈಯವರ ಭಾಷಣಗಳಾದುವು.

ಈ ವಿದ್ಯಾರ್ಥಿ ನಿಲಯದ ಕಟ್ಟಡ ಸಮಿತಿಯ ಸಭೆಯು ತಾ. 13ರಂದು ಶ್ರೀ ಕೆ. ದೇಜು ಶೆಟ್ಟರ ಅಧ್ಯಕ್ಷತೆಯಲ್ಲಿ ಸೇರಿದಾಗ ಶ್ರೀ ಎ. ರಾಮಣ್ಣನವರು ಕಾರ್ಯ ಪ್ರಗತಿಯ ವಿವರವನ್ನಿತರು. ಅನಂತರ 150 ವಿದ್ಯಾರ್ಥಿಗಳಿಗೆ ತಕ್ಕ ಕಟ್ಟಡದ ಪ್ಲೇನ್ ತಯಾರಿಸಬೇಕೆಂದೂ ಕಟ್ಟಡ ನಿಧಿಗೆ ಹಣ ಸಂಗ್ರಹಿಸಬೇಕೆಂದೂ ನಿರ್ಣಯಿಸಲಾಯ್ತು.

ಲೋಕಸೇವಾ ವೃಂದ— ಇದೇ ತಾ. 12ರಂದ ಕೆಲದಿನ ಅಳಿಕ ಗ್ರಾಮದ ಓಟಿಕಿಮೂರು ಎಂಬಲ್ಲಿ ಲೋಕಸೇವಾ ಕೇಂದ್ರದ ಕಟ್ಟಡ ರಚನೆಯ ಬಗ್ಗೆ ಸದಸ್ಯರ ಮತ್ತು ಗ್ರಾಮಸ್ಥಗ ಶ್ರಮದಾನದಿಂದ ನವೀನವಾಗಿ ಸಮತಟ್ಟು ಮಾಡಿದ ಈ ಮೈದಾನದಲ್ಲಿ ಸ್ವಾತಂತ್ರ್ಯೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯ್ತು. ಶ್ರೀ ಗೋಪಾಲಕೃಷ್ಣ ಕಿಣಿಯವರು ಧ್ವಜಾರೋಹಣ ಗೈದರು. ಅವರ ಪತ್ನಿ ಶ್ರೀಮತಿ ಜನಾಬ್ಯಾ ಕಿಣಿಯವರೂ, ಸಂಸ್ಥೆಯ ಅಧ್ಯಕ್ಷರೂ ಮಾತನಾಡಿದರು.

ಹೈಸ್ಕೂಲು ಉದ್ಘಾಟನೆ— ಉದ್ಯಾವರದಲ್ಲಿ ನೂತನವಾಗಿ ಪ್ರಾರಂಭಿಸಲಾದ ಸರಕಾರಿ ಫಿಶರೀಸ್ ಹೈಸ್ಕೂಲಿನ ಉದ್ಘಾಟನೆಯನ್ನು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಎ. ಪೈಯವರು ತಾ 13ರಂದು ಶ್ರೀ ಎಂ. ಮಧ್ವರಾಜ, ಎಂ. ಎಲ್. ಎ. ಅವರ ಅಧ್ಯಕ್ಷತೆಯಲ್ಲಿ ನೆರವೇರಿಸುತ್ತಾ ಜಿಲ್ಲೆಯ 90 ಹೈಸ್ಕೂಲುಗಳಲ್ಲಿ ಉಡುಪಿ ತಾಲೂಕಿನಲ್ಲಿ 29 ಹೈಸ್ಕೂಲುಗಳಿವೆಯೆಂದೂ ಅವುಗಳಲ್ಲಿ 7 ಫಿಶರೀಸ್ ಹೈಸ್ಕೂಲುಗಳೆಂದೂ ಇವುಗಳನ್ನು ಸುಸೂತ್ರವಾಗಿ ನಡೆಸಿಕೊಂಡು ಮಕ್ಕಳ ಸಂಪೂರ್ಣ ಪ್ರಯೋಜನ ಪಡೆಯುವಂತಾಗಬೇಕೆಂದೂ ನೈಸರ್ಗಿಕ ಸಂಪತ್ತನ್ನು ಅಭಿವೃದ್ಧಿಗೊಳಿಸದೆ ಜನಾಂಗ ಪ್ರಗತಿ ಹೊಂದದೆಂದೂ ಫಿಶರೀಸ್ ಹೈಸ್ಕೂಲುಗಳಲ್ಲಿ ಮತ್ಸ್ಯ ವ್ಯವಸಾಯದ ಶಿಕ್ಷಣವೀಯುವುದು ಅವಶ್ಯಕ ಎಂದೂ ಹೇಳಿದರು. ಶ್ರೀ ಎ. ಜೆ. ಅಲ್ಸೆಯವರೂ ಶ್ರೀ ಡಿ. ಐ. ಕೋಟ್ಯಂಕರರೂ ಮಾತನಾಡಿದ ಬಳಿಕ ಅಧ್ಯಕ್ಷ ಶ್ರೀ ಮಧ್ವರಾಜರು ಈ ಹೈಸ್ಕೂಲಿನ ಪ್ರಯೋಜನವನ್ನು ಪ್ರತಿಯೊಂದು ಸಮಾಜದವರು ಪಡೆಯಬೇಕೆಂದರು. ಶ್ರೀ ಯು. ಕಾಂತಪ್ಪನವರು ಅತಿಥಿಗಳಿಗೆ ಹಾರಾರ್ಪಣೆ ಗೈದರು.

ಚೇತನಾ ಹೈಸ್ಕೂಲಿನ ಉದ್ಘಾಟನೆ— ಹಂಗಾರಕಟ್ಟೆಯಲ್ಲಿ ಅಲ್ಲಿಯ ಸಾಮಾಜಿಕ ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಸಂಸ್ಥೆಯವರಿಂದ ಪ್ರಾರಂಭಿಸಲಾದ ಚೇತನಾ ಹೈಸ್ಕೂಲಿನ ಉದ್ಘಾಟನೆಯನ್ನು ಇದೇ ತಾ 11ರಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಟಿ. ಎ. ಪೈಯವರು ನಿರ್ವಹಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಎಂ. ಮಧ್ವರಾಜ ಎಂ. ಎಲ್. ಎ. ರವರು ವಹಿಸಿದ್ದರು ಸಂಸ್ಥೆಯ ಉಪಾಧ್ಯಕ್ಷ ಶ್ರೀ ವಿ. ಜೆ. ಅಲ್ಸೆಯವರು ಸ್ವಾಗತಿಸಿ ಜನತೆಯ ಸಹಕಾರ ಕೋರಿದರು. ಶ್ರೀ ಪೈಯವರು ಸರಕಾರವು 3 ವರ್ಷ ಸಹಾಯ ಧನ ಕೊಡುವುದಿಲ್ಲ ಎಂದರೂ ಅದನ್ನು ಗಮನಿಸದೆ ವಿದ್ಯಾಭ್ಯಾಸದ ಸೌಲಭ್ಯಕ್ಕಾಗಿ ಸ್ಥಳೀಯರೇ ಈ ಹೈಸ್ಕೂಲನ್ನು ಪ್ರಾರಂಭಿಸಿದ್ದು ಸ್ತುತ್ಯವೆಂದರು ಶ್ರೀ ಎಸ್. ಧರ್ಮಸಾಮ್ರಾಜ್ಯ ಎಂ. ಎಲ್. ಎ. ಅವರೂ ಶ್ರೀ ಪಿ. ಆರ್. ಉಡುಪರೂ ಶುಭಕೋರಿ ಮಾತನಾಡಿದರು. ಅಧ್ಯಕ್ಷ ಶ್ರೀ ಮಧ್ವರಾಜರು ಶಾಲೆಯ ಬೆಳವಣಿಗೆಗೆ ತನ್ನಿಂದಾದ ಸಹಾಯ ನೀಡುವುದಾಗಿ ಹೇಳಿದರು.

ಯಕ್ಷಗಾನ ಪರಿಷತ್ತಿನ ಉದ್ಘಾಟನೆ— ತಾ 15ನೇ ಸಂಜೆ ಉಡುಪಿ ಅನಂತೇಶ್ವರ ದೇವಸ್ಥಾನದ ಹೊರ ಪೌಳಿಯಲ್ಲಿ ಡಾ. ಕೆ. ಎಲ್. ಐತಾಳರ ಅಧ್ಯಕ್ಷತೆಯಲ್ಲಿ, ಶ್ರೀ ಕೆ. ಶಿವರಾಮ ಕಾರಂತರು ಯಕ್ಷಗಾನ ಪರಿಷತ್ತನ್ನು ಉದ್ಘಾಟಿಸುತ್ತಾ ವೈಯಕ್ತಿಕವಾಗಿ ನಾವು ಎಷ್ಟು ದೊಡ್ಡ ಪಂಡಿತರೇ ಆಗಿದ್ದರೂ ಕಲೆಯು ದೊಡ್ಡದೆಂಬ ನಮ್ರ ಭಾವನೆ ಇರಬೇಕೆಂದೂ ಸಂಸ್ಕೃತಿಯನ್ನು ಉಳಿಸಿಕೊಂಡರೇನೆ ಸುಸಂಸ್ಕೃತ ದೇಶವೆನಿಸುತ್ತದೆ, ಎಂದೂ ಹೇಳಿ ಯಕ್ಷಗಾನ ಕಲೆಯ ಕುರಿತು ವಿಚಾರ ಪ್ರಚೋದಕ ಭಾಷಣ ಮಾಡಿ ಯಕ್ಷಗಾನ ಕಲಾಭಿಮಾನಿಗಳಿಗೆ ಕೆಲವೊಂದು ಸೂಚನೆಯನ್ನಿತ್ತರು. ಅಧ್ಯಕ್ಷ ಡಾ| ಐತಾಳರು ಶ್ರೀ ಕಾರಂತರ ಬಹುಮುಖ ಪ್ರತಿಭೆಯನ್ನು ಶ್ಲಾಘಿಸಿ ಅವರ ಸೇವೆಗಾಗಿ ಯೋಗ್ಯ ಗೌರವ ದೊರೆಯುವಂತಾಗಲೆಂದರು. ಸಭಾರಂಭದಲ್ಲಿ ಪರಿಷತ್ತಿನ ಅಧ್ಯಕ್ಷ ಶ್ರೀ ಎ. ಜೆ ಅಲ್ಸೆಯವರು ಸ್ವಾಗತಿಸಿದರು. ಪ್ರಧಾನ ಕಾರ್ಯದರ್ಶಿ, ಪಾ ಲ. ನಾ. ಉಪಾಧ್ಯಾಯರು ಈ ಸಂಸ್ಥೆಯ ಉದ್ದೇಶಾದಿಗಳನ್ನು ವಿವರಿಸಿದರು. ರಾತ್ರಿ ಸಮರ್ಥ ಅರ್ಥದಾರಿಗಳಿಂದ "ಶ್ರೀಕೃಷ್ಣ ಸಂಧಾನ" ಯಕ್ಷಗಾನ ತಾಳಮದ್ದಳೆ ನಡೆಯಿತು.

ಹೊಸ ಪದವೀಧರರಿಗೆ ಸತ್ಕಾರ— ಉಡುಪಿಯ ಎಂ. ಜಿ. ಯಂ ಕೊಲೇಜಿನ ಹೊಸಪದವೀಧರರನ್ನು ಸತ್ಕರಿಸುವ ಸಮಾರಂಭವು ತಾ. 10ರಂದು ಪ್ರೊ. ಕು. ಶಿ ಹರಿದಾಸ ಭಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿತು. ಈ ಸಂದರ್ಭದಲ್ಲಿ ಡಾ| ಟಿ. ಎಮ್ ಎ. ಪೈಯವರು ಮಾತನಾಡುತ್ತಾ ಜನಾಂಗ ಹಾಗೂ ರಾಷ್ಟ್ರದ ಅಭಿವೃದ್ಧಿಗಾಗಿ ನಿಷ್ಠೆಯಿಂದಲೂ ಪ್ರಾಮಾಣಿಕತೆಯಿಂದಲೂ ದುಡಿಯಬೇಕೆಂದೂ ಉದ್ಯಮ ಶೀಲತೆಯನ್ನು ಬೆಳೆಸಿಕೊಳ್ಳಬೇಕೆಂದೂ ಉಪದೇಶಿಸಿ ಈ ಕಾಲೇಜ್ ವಿದ್ಯಾರ್ಥಿಗಳ ಉನ್ನತ ನೈತಿಕ ಮತ್ತು ಭೌತಿಕ ಮಟ್ಟಕ್ಕೆ ಸಂತೋಷ ವ್ಯಕ್ತಗೊಳಿಸಿದರು. ಶ್ರೀ ಟಿ. ಆರ್. ಸತೀಶ ನಾಯ್ಕರು ಉತ್ತರಿಸಿದರು.

ಕಿದಿಯೂರು— ಕಿರಿಯ ಬುನಾದಿ ಮತ್ತು ಉನ್ನತ ಪ್ರಾಥಮಿಕ ಶಾಲೆಯಲ್ಲಿ ತಾ. 16ರಂದು ಶ್ರೀ ಎ. ಜೆ. ಅಲ್ಸೆಯವರ ಹಿರಿತನದಲ್ಲಿ ಶಾಲಾ ಬಾಲ ಬಾಲಿಕಾ ಮಂಡಳದ ಉದ್ಘಾಟನಾ ಸಮಾರಂಭವು ನೆರವೇರಿತು. ಶ್ರೀ ಕೆ. ಕೆ. ತಂತ್ರಿಗಳು ಸ್ವಾಗತಿಸಿದ ಬಳಿಕ ನಿಡಂಬೂರು ಪಂಚಾಯ್ತಿನಿಂದ ದೊರೆತ ಡ್ರೆಸ್ಸನ್ನು ಶ್ರೀ ಧರ್ಮಸಾಮ್ರಾಜ್ಯ ಎಮ್ ಎಲ್. ಎ. ಅವರು ಸ್ಪರ್ಧೆಗಳಲ್ಲಿ ಗೆದ್ದ ಮಕ್ಕಳಿಗೆ ಹಂಚಿದರು. ಶ್ರೀ ಜಲಂಧರರು ಅಬ್ರಹಾಂ ಲಿಂಕನ್‌ರ ಭಾವಚಿತ್ರ ಅನಾವರಣ ಮಾಡಿದರು

ಉದ್ಘಾಟನಾ ಸಮಾರಂಭ— ಉಡುಪಿ ಪೋಡರ್ನ್ ಹಾ. ಎ. ಶಾಲಾ ಮಕ್ಕಳ ಪಾರ್ಲಿಮೆಂಟಿನ ಉದ್ಘಾಟನಾ ಸಮಾರಂಭವು ತಾ. 18-8-62ರಂದು ಶ್ರೀ ಎ. ಜೆ. ಅಲ್ಸೆಯವರ ಅಧ್ಯಕ್ಷತೆಯಲ್ಲಿ ಅಸಿಸ್ಟೆಂಟ್ ಎಜ್ಯುಕೇಶನಲ್ ಆಫೀಸರ್ ಶ್ರೀ ಜಿ. ವಿ. ಸಿದ್ಧೇಶ್ವರರವರಿಂದ ನೆರವೇರಿಸಲ್ಪಟ್ಟಿತು ಮಕ್ಕಳ ಸರಕಾರದ ಅಧ್ಯಕ್ಷ ಹಾಗೂ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಎಚ್. ಎಲ್. ಭಟ್ಟರು ಸ್ವಾಗತಿಸಿದರು. ಉದ್ಘಾಟನೆಯ ಬಳಿಕ ಮಕ್ಕಳಿಂದ ಪಾರ್ಲಿಮೆಂಟ್ ಕಾರ್ಯಕಲಾಪಗಳು ಜರಗಿದುವು

ಮಿಲಾದಿನಾಬಿ— ಇದೇ ತಾ. 14ರಂದು ಉಡುಪಿಯ ಜುಮ್ಮಾಮಸೀದಿಯ ವತಿಯಿಂದ, ಅಂಜುಮಾನ್ ಕ್ಲಬ್ಬಿನಲ್ಲಿ ಮಿಲಾದಿನಾಬಿಯ ದಿನಾಚರಣೆಯನ್ನು ಸುರತ್ಕಲ್ ಕರ್ನಾಟಕ ರೀಜನಲ್ ಇಂಜಿನಿಯರಿಂಗ್ ಕಾಲೇಜಿನ ಲೆಕ್ಚರರಾದ ಶ್ರೀ ಜನಾಬ್ ಮೋಹಿಯುದ್ದೀನ್ ಆರ್. ರಾಜೇಂದ್ರಗಡ ಅವರ ಅಧ್ಯಕ್ಷತೆಯಲ್ಲಿ ಆಚರಿಸಲಾಯ್ತು. ಮೌಲವಿ ಜನಾಬ್ ಶೇಕ್ ಅಬ್ದುಲ್‌ಖಾದರ್ ಸಹೇಬ್, ಶ್ರೀ ಟಿ. ಎ. ಪೈ, ಜನಾಬ್ ಅಮೀರ್ ಯಂ ಅಹಮ್ಮದ್ ಮೊದಲಾದವರು ಸಂದರ್ಭೋಚಿತ ಭಾಷಣವಿತ್ತರು. ಅಧ್ಯಕ್ಷರ ವಿಚಾರಪರ ಭಾಷಣಾನಂತರ ಧನ್ಯವಾದಗಳೊಂದಿಗೆ ಸಭಾರಂತ್ಯವಾಯ್ತು.

ಗಾಲೆಯವರ ಕಾಲದಲ್ಲಾಯಿತ. ಈ ಸಂಬಂಧದ ಒಡಂಬಡಿಕೆಯೊಂದಕ್ಕೆ ಇತ್ತಿಚೆಗೆ ಸಹಿ ಹಾಕಲಾಯಿತು. ಅಲ್ಲಿಗೆ ಭಾರತದಲ್ಲಿ ವಸಾಹತು ವಾದವು ಸಂಪೂರ್ಣವಾಗಿ ಅಳಿದು ನಶಿಸಿ ಹೋಯಿತು. ಇನ್ನು ಉಳಿದಿರುವುದೆಂದರೆ, ಈ ಭಾಗಗಳನ್ನು ಸ್ವತಂತ್ರವಾಗಿ ಇರಗೊಡಿಸಬೇಕೇ ಅಥವಾ ಸಮೀಪದ ರಾಜ್ಯಗಳಲ್ಲಿ ವಿಲೀನಗೊಳಿಸಬೇಕೇ ಎಂಬುದು ಇದಕ್ಕೆ ಪರ-ವಿರೋಧ ಮತಗಳಿರುವುದರಿಂದ ದೀರ್ಘಾಲೋಚನೆ ಅಗತ್ಯವಾಗಿದೆ.

ಅಸ್ಥಮಾ ರೋಗಿಗಳ ತಿಳುವಳಿಕೆಗೆ

ರಿಜಿಸ್ತ್ರಿಯಾದ ಚಿತ್ರಕೋಟ್ ಅಸ್ತಮಾ ನಿವಾರಕಬೂತಿಯನ್ನು ತಾ. 14-9-62ನೇ ಹುಣ್ಣಿಮೆ ರಾತ್ರಿ ಖೀರಿನೊಂದಿಗೆ ಸೇವಿಸುವುದರಿಂದ ಅಸ್ತಮಾ, ನೇವಸ, ಕೆಮ್ಮು, ನೆಗಡಿ ನಿವಾರಣೆಯಾಗುತ್ತದೆ. ಕೂಡಲೇ ಹುಣ್ಣಿಮೆಯ ಮೊದಲೇ ಬರೆಯಿರಿ.

Manager, Shri Mahatma Naga
Baba Ayurvedashram,
P. O. Chitrakot U. P.

ವಿಶಾಲವಾಗಿ ಹಬ್ಬಿರುವ ಸಂಸ್ಥೆ

ಮುಂಬಯಿ ಅಥವಾ ಮದರಾಸು; ಬರೋಡ ಅಥವಾ ಬೆಂಗಳೂರು; ಕೊಚ್ಚಿ ಅಥವಾ ಕಡಪ್ಪಾ; ಹುಬ್ಬಳ್ಳಿ ಅಥವಾ ಹೈದರಾಬಾದು; ಕಲ್ಲಿ ಕೋಟೆ ಅಥವಾ ಕೊಯಮುತ್ತೂರು; — ನೀವು ಎಲ್ಲಿಗೆ ಹೋದರೂ (ವ್ಯಾಪಾರಕ್ಕಾಗಿ ಅಥವಾ ವಿಹಾರಕ್ಕಾಗಿ), ನಿಮ್ಮ ಆರ್ಥಿಕ ಸೌಕರ್ಯಗಳ ಕಡೆಗೆ ಗಮನ ಕೊಡಲು ಸಿಂಡಿಕೇಟ್ ಬೇಂಕ್ ಸಿದ್ಧವಿದೆ. ವಿಸ್ತಾರವಾಗಿ ಬೆಳೆಯುತ್ತಿರುವ ನಮ್ಮ ಶಾಖೆಗಳ ಪ್ರಯೋಜನವನ್ನು ಯಾವಾಗಲೂ ಪಡೆಯಬಹುದು. ನಿಮಗೇನಾದರೂ ವ್ಯವಹಾರವಿದ್ದರೆ ಸಿಂಡಿಕೇಟಿಗೆ ಬನ್ನಿರಿ ಅಥವಾ ಬರೆಯಿರಿ. ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್, ಲಿಮಿಟೆಡ್, ಪ್ರಧಾನ ಕಾರ್ಯಾಲಯ, ಮುಕುಂದ ನಿವಾಸ, ಉಡುಪಿ, ದಕ್ಷಿಣ ಕನ್ನಡ.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್
ಸಿಂಡಿಕೇಟ್, ಲಿಮಿಟೆಡ್.

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ
ಎಕೌಂಟ್ ಪುಸ್ತಕಗಳು
ಶಾಲಾ ರಿಜಿಸ್ತ್ರಿಗಳು,
ಫಾರ್ಮುಗಳು,
ದೊರೆಯುತ್ತವೆ.
ನವಯುಗ ಪ್ರೆಸ್, ಉಡುಪಿ.

ಗುಜರಾತ್ ಗ್ರಾಮದ ಮೇಲ್ಪಂಕ್ತಿ

ತೊಟ್ಟಿಲು ತೂಗುವ ಕೈಗೆ—ಅಧಿಕಾರ ದಂಡ

'ಎಲ್ಲಿ ನಾರಿಗೆ ಪೂಜ್ಯತೆಯಿದೆಯೋ ಅಲ್ಲಿ ದೇವರು ನೆಲೆಗೊಂಡಿರುತ್ತಾನೆ" ಎಂದು ಮನು ತನ್ನ ಧರ್ಮಶಾಸ್ತ್ರದಲ್ಲಿ ಸಾರಿದ್ದಾನೆ. ಆದರೆ ಗುಜರಾತಿನ ಪಿಂಪರ್ಲಾ ಗ್ರಾಮದಲ್ಲಿ ನಾರಿಗೆ ಪೂಜ್ಯತೆ ಮಾತ್ರವಲ್ಲ ಅಧಿಕಾರವನ್ನೂ ಕೊಡಲಾಗಿದೆ. ಇಡಿ ಗ್ರಾಮದ ಹಿತರಕ್ಷಣೆ ಮತ್ತು ಅಭಿವೃದ್ಧಿಯ ಹೊಣೆಗಾರಿಕೆ ಮಹಿಳೆಯರ ಕೈಯಲ್ಲೇ ಇದೆ.

ಭಾವ ನಗರಕ್ಕೆ ಸಮೀಪದಲ್ಲಿ ಶತ್ರುಂಜಯ ಪರ್ವತ ಪ್ರದೇಶಗಳಿಂದ ಆವೃತವಾದ ಈ ಸಣ್ಣ ಗ್ರಾಮದ ಜನಸಂಖ್ಯೆ ೨೬೮೮; ವಿಸ್ತೀರ್ಣ ೩,೩೦೦ ಎಕರೆಗಳು. ಆದರಲ್ಲಿ ಲಗಾಣ ಎಕರೆಗಳಲ್ಲಿ ಬೇಸಾಯ ನಡೆದಿದೆ. ಉಳಿದ ೨೬೮ ಎಕರೆ ಗೋಮಾಳ. ಈ ಗ್ರಾಮದಲ್ಲಿ ಸುಮಾರು ೪೫೦ ಗೋವುಗಳಿವೆ. ಬೇಸಾಯವನ್ನು ಬಿಟ್ಟರೆ ಪಶುಪಾಲನೆಯೇ ಈ ಗ್ರಾಮವಾಸಿಗಳ ಉಪವೃತ್ತಿ. ಗ್ರಾಮದ ಕೆಲವು ಮಹಿಳೆಯರು ಪರಂಪರೆಯಿಂದ ಬಂದ ಕಸೂತಿ ಕೆಲಸವನ್ನು ಮಾಡುತ್ತಾರೆ.

ಇಂದು ಪಿಂಪರ್ಲಾ ಗ್ರಾಮ ಪಂಚಾಯತಿಯ ಪದಾಧಿಕಾರಿಗಳೆಲ್ಲರೂ ಮಹಿಳೆಯರೇ. ೧೯೬೨ರ ಜೂನ್‌ನಲ್ಲಿ ಅವರು ಗ್ರಾಮ ಸಭೆಯಿಂದ ಸರ್ವಾನುಮತವಾಗಿ ಆರಿಸಿಬಂದರು.

ಪಿಂಪರ್ಲಾದಲ್ಲಿ ಗ್ರಾಮ ಪಂಚಾಯತಿ ಆರಂಭವಾಗಿ ೧೦ ವರ್ಷಗಳು ಸಂದಿವೆ. ಈ ಕಾಲಾವಧಿಯಲ್ಲಿ ಕೆಲವಾರು ವಿಶಿಷ್ಟ ಕಾರ್ಯಗಳನ್ನು ಈ ಗ್ರಾಮ ಪಂಚಾಯತಿ ಮಾಡಿತೋರಿಸಿದೆ. ಈ ಸಂಚಾಯತಿಗೆ ಇದುವರೆಗೆ ನಡೆದ ಚುನಾವಣೆಗಳಲ್ಲಿ ಯಾವುದರಲ್ಲೂ ಸ್ಪರ್ಧೆ ನಡೆಯಲಿಲ್ಲ. ಗ್ರಾಮ ಸಭೆಯೇ ಉತ್ತಮ ಕರ್ತೃತ್ವಶಾಲಿ ಸದಸ್ಯರನ್ನು ಸರ್ವಾನುಮತದಿಂದ ಆರಿಸುತ್ತಿದೆ.

ಇಂದು ಪಿಂಪರ್ಲಾ ಹಲವು ರೀತಿಯಿಂದ ಸುಧಾರಿಸಿದ ಗ್ರಾಮವಾಗಿದೆ. ಅಲ್ಲಿನ ರಸ್ತೆಗಳು ವಿಶಾಲವಾಗಿಯೂ ಅಂದವಾಗಿಯೂ ಇವೆ. ಗ್ರಾಮದಲ್ಲಿ ಪಾಠಶಾಲೆಯಿದೆ ಮತ್ತು ಪಶುಪಾಲಕರ ಸಹಕಾರ ಸಂಘವಿದೆ. ಇತ್ತೀಚೆಗೆ ಗ್ರಾಮ ಪಂಚಾಯತಿಗೆ ಚುನಾವಣೆ ನಡೆಯುವಾಗ ಗ್ರಾಮವನ್ನು ಸುತ್ತಲಿನ ಸುಧಾರಿಸುವ ಪ್ರಶ್ನೆಯ ಮಥನವಾಯಿತು; ಅದಕ್ಕಾಗಿ ಹೊಸ ಹೊಸ ಮಾರ್ಗವನ್ನು ಹಿಡಿದು ಪ್ರಯತ್ನಶೀಲರಾಗಬೇಕೆಂದು ಗ್ರಾಮವಾಸಿಗಳು ನಿರ್ಣಯಿಸಿದರು.

ಸೋಷಫರದಲ್ಲಿ ನಡೆದ 'ಮಹಿಳಾ ಶಿಬಿರ'ದಿಂದ ಹಿಂತಿರುಗಿ ಬಂದ ಗ್ರಾಮ ಪ್ರಮುಖರು ತಲೆಗೆ ಹೊಸ ಭಾವನೆ ಹೊಳೆಯಿತು; ಮೊಳೆಯಿತು. ಆ ಶಿಬಿರದ ಸಮಾಲೋಚನೆಯಲ್ಲಿ ಈ ಗ್ರಾಮದ ಮಹಿಳಾ ಪ್ರತಿನಿಧಿಗಳು ಕ್ರಿಯಾತ್ಮಕ ಪಾತ್ರ ನಿರ್ವಹಿಸಿದ್ದರು. ತಮ್ಮ ಗ್ರಾಮದ ಶ್ರೇಯೋಭಿವೃದ್ಧಿಯನ್ನು ಗ್ರಾಮದ ಮಹಿಳೆಯ ಕೈಗೇ ಇತ್ತರೆ ಹೇಗೆ?—ಎಂಬ ಹೊಸ ಭಾವನೆ ಗ್ರಾಮ ಸ್ವಯಮುಖರಿಗೆ ಹೊಳೆದಷ್ಟೇ ತಡ, ಅದನ್ನೇ ನಿರ್ಣಯಮಾಡಿದರು. ತಕ್ಷಣವಾಗಿ 'ತೊಟ್ಟಿಲು ತೊಗುವ ಕೈ' ಮುಂದಿನ ಮೂರು ನಾಲ್ಕು ವರ್ಷದ ಗ್ರಾಮದ ಅಧಿಕಾರ ದಂಡನ್ನು ಕೈಗೆ ತೆಗೆದುಕೊಂಡಿತು. ಈ ಗ್ರಾಮ ಪಂಚಾಯತಿಗೆ ೭ ಮಂದಿ ಮಹಿಳಾ ಸದಸ್ಯರಲ್ಲಿ ಎಲ್ಲರೂ ಸರ್ವಾನುಮತದಿಂದ ಆರಿಸಿಬಂದವರೇ. ಒಬ್ಬರು ಹರಿಜನ ಮಹಿಳೆ, ಇಬ್ಬರು ಬ್ರಾಹ್ಮಣರು, ಇನ್ನು ನಾಲ್ವರು ಹಿಂದುಳಿದ ವರ್ಗದವರು.

ಮಹಿಳೆಯರ ಕರ್ತವ್ಯ

ಆಶ್ಚರ್ಯಕರವಾದ ಸಂಗತಿಯೇನೆಂದರೆ ಪಿಂಪರ್ಲಾದ ಗ್ರಾಮ ಪಂಚಾಯತಿಯ ಮೊಜಿ ಸರಪಂಚನೊರ್ವನ ವಿವರಣೆ. ಪಂಚಾಯತಿ ಚಟುವಟಿಕೆಯು ಮೂಲತಃ ಮಹಿಳೆಯರ ಕರ್ತವ್ಯ. ಅವರಿಂದ ಉಗಮಿಸಿದ್ದು, ಅವರಿಗೇ ಸಂಬಂಧಿಸಿದ್ದು ಮನೆ ಮತ್ತು ಬೀದಿಗಳನ್ನು ಜೊಕ್ಕಟವಾಗಿಡುವುದು ಗ್ರಾಮದಲ್ಲಿ, ಬಾವಿ ಮತ್ತು ಕುಡಿಯುವ ನೀರಿನ ಪೂರೈಕೆ, ಮಕ್ಕಳ ಆರೋಗ್ಯ ಮತ್ತು ಸಂರಕ್ಷಣೆ, ಮೂಕ್ಕಲ್ಯಾಣ, ಪ್ರಾಥಮಿಕ ಶಿಕ್ಷಣ, ಇಂತಹ ಹತ್ತಾರು ರುಚಟುವಟಿಕೆಗಳುಮಹಿಳೆಯ ಕರ್ತವ್ಯವೇ ಹೊರತು ಪುರುಷನ ಕೆಲಸವಲ್ಲವೆನ್ನುವುದು ಆತನ ಸಿದ್ಧಾಂತ. ಈ ಸಿದ್ಧಾಂತವನ್ನು ಪಿಂಪರ್ಲಾದಲ್ಲಿ ಕಾರ್ಯಾನ್ವಯ ಮಾಡಲಾಗಿದೆ.

ಈ ಮಹಿಳೆಯರು ಗ್ರಾಮ ಪಂಚಾಯತಿಯ ಅಧಿಕಾರ ಸೂತ್ರಗಳನ್ನು ಹಿಡಿದು ಕೆಲವಾರಗಳಲ್ಲಾದ ಕಾರ್ಯಸಾಧನೆಯೇ ನೂತನವಾದರೆ, ಅವರ ಆಶಯಗಳು ಊಹೆಗೂ ಬಾರದಷ್ಟು ವೇಗ ಉಡೇರುವುವು. ಎಜಂಬೆಸಿ ಎಂಬ ವಿಧವೆಯ ನೇತೃತ್ವದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಈ ಗ್ರಾಮ ಪಂಚಾಯತಿಯು ಗ್ರಾಮಕ್ಕೆ ಈ ಮುಂದೆ ಕಂಡ ಸೌಲಭ್ಯಗಳನ್ನು ತಂದುಕೊಡಲು ನಿರ್ಣಯಿಸಿದೆ. ಕುಡಿಯುವುದಕ್ಕೆ ಶುದ್ಧವಾದ ನೀರು, ಶಾಲಾ ಬಾಲಕರಿಗಾಗಿ ಹಾಲಿನ ಕೇಂದ್ರ, ಮೊತ್ತ ಮತ್ತು ಶಿಶುಕೇಂದ್ರ, ಅಂಬರಚರಕ ಮತ್ತು ಹೊಲಿಗೆ ತರಬೇತಿ ಕೇಂದ್ರ, ಹೊಗೆಯಿಲ್ಲದ ಚಿಮಣಿಗಳು, ಶಾಲೆಯ ತೋಟ ಮಾಡಲು ಕೈಪಂಪು, ಗೊಬ್ಬರದ ಗುಂಡಿ ವ್ಯವಸ್ಥೆ ಇತ್ಯಾದಿ ಇತ್ಯಾದಿ.

ತ್ವರಿತ ಗತಿಯಲ್ಲಿ

ಇವು ಕೇವಲ ನಿರ್ಣಯಗಳಷ್ಟೇ ಅಲ್ಲ ಗೊಬ್ಬರ ಗುಂಡಿಗಳನ್ನು ಆಗಲೇ ತೋಡಲಾಗಿದೆ. ಯುನಿಸೆಫ್ ನೆರವಿನಿಂದ ಹಾಲಿನ ಕೇಂದ್ರ ತೆರೆಯಲಾಗಿದೆ. ಮಕ್ಕಳಿಗೆ ದಿನಕ್ಕೆ ಅರ್ಧ ಪೌಂಡು ಹಾಲು ದೊರೆಯುತ್ತದೆ ಮೊತ್ತ ಮತ್ತು ಶಿಶು ಕೇಂದ್ರವನ್ನು ನಡೆಸಲು ವ್ಯವಸ್ಥೆಯಾಗಿದೆ. ಬಾವಿಯು ಸುತ್ತ ಕಟ್ಟೆಕಟ್ಟಲಾಗಿದೆ ಒಂದೆರಡು ಮನೆಗಳಲ್ಲಿ ಹೊಗೆಯಿಲ್ಲದ ಚಿಮಣಿಯನ್ನೂ ಹಾಕಲಾಗಿದೆ ೫೮ ವರ್ಷದ ವಿಧವೆ ಎಜಂಬೆಸ್‌ರವರು ತಮ್ಮ ೧೨ ಹಸುಗಳ ಪಾಲನೆಯ ಜೊತೆಗೆ ಗ್ರಾಮದ ಈ ಅಭಿವೃದ್ಧಿಯಲ್ಲಿ ಅತುಲ ಉತ್ಸಾಹ ತೋರಿಸುತ್ತಿರುವುದು ಹೆಮ್ಮೆಯವಿಷಯ.

ಇದರಿಂತೆಯೇ, ಗ್ರಾಮ ಪಂಚಾಯತಿಯು ಇತರ ಮಹಿಳೆಯರೂ ತಮ್ಮ ಮಕ್ಕಳು ನುರಿಗಳ ಲಾಲನೆ ಪಾಲನೆ, ಮನೆಗೆ ಲಸಗಳನ್ನು ನೋಡಿಕೊಂಡ ನಂತರ ಗ್ರಾಮದ ಶ್ರೇಯೋಭಿವೃದ್ಧಿ ಕಾರ್ಯಗಳಿಗೆ ಗಮನವೀಯುತ್ತಿರುವರು.

ಪವಿತ್ರಮಯ ಸನ್ನಿವೇಶದಲ್ಲಿ ಸಭೆ

ಗ್ರಾಮ ಪಂಚಾಯತಿಯು ಸಭೆ ಆರಂಭವಾಗುವುದು ಒಂದು ವಿಶಿಷ್ಟ ರೀತಿಯಿಂದಲೇ. ಸರಪಂಚರು, ಪಂಚಾಯತಿ ಭವನದ ಎದುರಿನಲ್ಲಿರುವ ತುಲಸೀ ಗಿಡಕ್ಕೆ ನೀರೆರೆದು ಉಳಿದ ಮಹಿಳೆಯರು ತುಲಸಿಗೆ ಪ್ರದಕ್ಷಿಣೆ ನಮಸ್ಕಾರ ಮಾಡಿದ ಮೇಲೆ ಸಭೆಯನ್ನು ಆರಂಭಿಸಲಾಗುತ್ತದೆ.

ಇಡಿ ಗ್ರಾಮದಲ್ಲಿ ಸಹಕಾರ, ಸಹಶ್ರಮ ಮನೋಭಾವ ತುಂಬಿ ತುಳುಕುತ್ತಿದೆ. ಸರ್ಕಾರಿ ಇಲಾಖೆಗಳೂ, ಅಧಿಕಾರಿಗಳೂ, ಈ ಪಂಚಾಯತಿ ಕಾರ್ಯಕ್ರಮ ಪ್ರಯೋಗದ ಯಶಸ್ಸಿಗೆ, ನಿಜ್ಚಳ ಮನಸ್ಸಿನ ಬೆಂಬಲವನ್ನೂ ನೆರವನ್ನು ನೀಡುತ್ತಿರುವರು. ಅನೇಕ ಸಂದರ್ಭದಲ್ಲಿ ಆರಂಭದ ಉತ್ಸಾಹ, ಮಹತ್ವಾಕಾಂಕ್ಷೆ, ಕಾಲಕ್ರಮದಲ್ಲಿ ಮಸುಕಾಗುವುದು ಸಹಜ. ಆದರೆ, ಪಿಂಪರ್ಲಾದ ಗ್ರಾಮ ಪಂಚಾಯತಿ ಹಾಗಲ್ಲ. ಅಲ್ಲಿನ ಮಹಿಳಾ ಸದಸ್ಯರಿಗೆ ತಾವು ಎದುರಿಸಬೇಕಾದ ತೊಂದರೆಗಳ ಕಲ್ಪನೆಯಿದೆ, ಕಾರ್ಯವ್ಯಾಪ್ತಿಯ ಇತಿಮಿತಿಗಳನ್ನು ಅರಿತಿದ್ದಾರೆ ಅತಿಯಾದ ಬೇಡಿಕೆ ಮತ್ತು ಕಾರ್ಯೋದ್ದೇಶಕ್ಕೆ ಅವರು ಅತ್ಯಂತ ಜನವೀಯುವುದಿಲ್ಲ.

ಕುತೂಹಲಿಗಳಾದ ನೆರೆಹೊರೆ

ಪಿಂಪರ್ಲಾಮಹಾನ್ ಪ್ರಯತ್ನ, ಸಾಧನೆ ಮತ್ತು ಫಲಗಳನ್ನು, ನೆರೆಹೊರೆಯ ಗ್ರಾಮವಾಸಿಗಳು, ಅತಿ ಕುತೂಹಲದಿಂದ, ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತಿರುವರು. ನೆರೆಯ ಗ್ರಾಮದ ಮಹಿಳೆಯರು, ಒಂದು ಗ್ರಾಮ ಪಂಚಾಯತಿಯ ಹೊಣೆಯನ್ನು ಯಾವ ವಿಚಕ್ಷಣೆಯಿಂದ ನಿರ್ವಹಿಸುವರೆಂಬುದು ಅವರಿಗೆ ಆಸಕ್ತಿಯನ್ನು ಹುಟ್ಟಿಸಿದೆ. ಅವರಲ್ಲಿ ಕೆಲ ಯುವಕರು, ಪಿಂಪರ್ಲಾದ ಗ್ರಾಮವಾಸಿಗಳನ್ನು, "ನಿಮ್ಮದು ವಿಚಿತ್ರವವ್ಯಾ, ಹೆಂಗಸರ ತೋರು ಬೆರಳಿಗೆ ಸರಿಯಾಗಿ ನಡೆಯುವವರು" ಎಂದು ಪರಿಹಾಸ್ಯ ಮಾಡಿದರು. ಆದರೆ ಗ್ರಾಮದ ಹಿರಿಯರು ಇದಕ್ಕೆ ಹೇಳುತ್ತಾ "ನಿಮ್ಮ ಯುನೆಯ ಆಡಳಿತ ನಡೆಸುತ್ತಿರುವವರು ನಿಮ್ಮ ಅಪ್ಪನೋ, ಅಮ್ಮನೋ, ಇಲ್ಲವೊ ನಿನ್ನ ಹೆಂಡತಿಯೋ?" ಎಂದು ಮರುಪ್ರಶ್ನೆ ಹಾಕಿ ಸಮಾಧಾನ ಪಡಿಸಿದರು.

ಪಿಂಪರ್ಲಾ ಗ್ರಾಮ ಪಂಚಾಯತಿ ಒಂದು ನವೀನ ಪ್ರಯೋಗ ನಿಜ. ಇದರ ಆಸೆ ಆಕಾಂಕ್ಷೆ, ಎಷ್ಟರ ಮಟ್ಟಿಗೆ ಈಡೇರಿವೆ. ಈಡೇರುತ್ತಿವೆ ಎಂಬುದನ್ನು ಅವರ ನೆರೆಹೊರೆಯ ಗ್ರಾಮದವರಷ್ಟೇ ಅಲ್ಲ ಬಹುತೇಕ ಇಡಿ ದೇಶದ ಎಲ್ಲಾ ಗ್ರಾಮದವರೂ, ಕುತೂಹಲದಿಂದ ನಿರೀಕ್ಷಿಸುತ್ತಿರುವುದು ಸಹಜ. ಇನ್ನು ಒಂದು ಎರಡು ವರ್ಷದಲ್ಲಿ ಪಿಂಪರ್ಲಾ ಅಭೂತಪೂರ್ವ ಮೇಲ್ಪಂಕ್ತಿಯನ್ನು ಹಾಕುವುದರಲ್ಲಿ ಸಂದೇಹವಿಲ್ಲ.

ಯಕ್ಷಗಾನದಲ್ಲಿ ಹಿರಿಯ ಸ್ಥಾನ ಗಳಿಸಿ, 'ಯಕ್ಷಗಾನ ಭಾಸ್ಕರ'ನೆಂದು ಪ್ರಸಿದ್ಧಿಪಡೆದ ದಿ| ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟರ

ನವಕಾಲೋಚಿತವಾದ ಯಕ್ಷಗಾನ ಪ್ರಸಂಗಗಳು.

ಸಾಹಸ ಭೀಮ ವಿಜಯ (ಗದಾಯುದ್ಧ) ೦—೮—೦

ಯಕ್ಷಗಾನ ದಶಾವತಾರದ ಆಟದ ಕ್ರಮಕ್ಕನುಸರಿಸಿ ಪಾಂಡವರ ಒಡ್ಡೋಲಗದ ದೃಶ್ಯವನ್ನು ದಿಗ್ದರ್ಶನ ಮಾಡಿ, ಮುಂದೆ ಕಥಾಭಾಗವನ್ನು ಮೂಲ ಕಾವ್ಯಕ್ಕನುಸರಿಸಿಯೇ ಕೊನೆಗೊಳಿಸಿವೆ.

ಭಾರತದ ಗುರುಕುಲ ೦—೩—೦

ಪಾಂಡವ, ಕೌರವ ಬಾಲ್ಯ ಕೇಳಿಗಳು, ವಿದ್ಯಾಭ್ಯಾಸ, ಪರೀಕ್ಷಾರಂಗದ ಕಾರ್ಯಗಳು, ಗುರುದಕ್ಷಿಣೆ ಮೊದಲಾದ ವಿಷಯಗಳನ್ನೊಳಗೊಂಡಿದೆ.

ಲತ್ತಪಗಡೆ ೦—೩—೦

ಭಾರತದ ಸಭಾಪರ್ವದೊಳಗಣ ಚಾರಿತ್ರಿಗಳಿರುವ ನಾಲ್ಕು ದೃಶ್ಯಗಳೂ ಅರಣ್ಯಪರ್ವೋಕ್ತವಾದ ಕಿಮೀರ ವಧೆಯೆಂಬ ದೃಶ್ಯವೂ ಸೇರಿವೆ.

ಭರತೇಶ ದಿಗ್ವಿಜಯ ೦—೮—೦

ರಾಜಕವಿ ರತ್ನಾಕರವರ್ಣಿಯ ಶೃಂಗಾರ ರಸಪ್ರಧಾನವಾದ ಭರತೇಶ ವೈಭವ ದೊಳಗಣ ದಿಗ್ವಿಜಯ ವಿಭಾಗದ ನೂತನ ಕಥಾವಸ್ತುಗಳನ್ನೊಳಗೊಂಡಿವೆ ಯಕ್ಷಗಾನ ಕಲಾಭಿಮಾನಿಗಳಿಗೆ ವಿವರವಾದ ಸೂಕ್ತ ಅನುಭವ ಸೂಚಿಯಿದೆ.

ವಾಲಿ ಸುಗ್ರೀವ (ಬಹುಮಾನಿತ) ೦—೮—೦

ವೀರ, ಕರುಣಾ ರಸಪ್ರಧಾನವಾದ ನವೀನ ರೀತಿಯಲ್ಲಿ ಮನವೊಪ್ಪುವಂತೆ ರಚಿಸಲಾದ ರಾಮಾಯಣಾಂತರ್ಗತ ಪ್ರಸಂಗ.

ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರ ಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ ಸ.

ಮಹಾತ್ಮಾ ಗಾಂಧಿ—ಅಬ್ರಾಹಾಂ ಲಿಂಕನ್

ನಾನು ಸೇವಕನಾಗಲಾರೆನಾದುದರಿಂದ ನಾನು ಸ್ವಾಮಿಯೂ ಆಗಲಾರೆ ಎಂದ ಅಮೆರಿಕೆಯ ಖ್ಯಾತ ಅಧ್ಯಕ್ಷ ಲಿಂಕನ್ ಮತ್ತು ಜನಸೇವೆಯಲ್ಲಿಯೇ ಜೀವನ ಸವೆದು 'ಮಹಾತ್ಮಾ' ಎನಿಸಿದ ಗಾಂಧೀಜಿಯವರು ಮಾನವತಾವಾದದ ಪುರಸ್ಕರ್ತರು. ಇವರ ಜೀವನದ ಒಂದು ತುಲನಾತ್ಮಕ ವಿವೇಚನೆ ಇಲ್ಲಿದೆ.

ಶ್ರೀ ವಿ. ವಿ. ಶೆಟ್ಟಿ, ಎಂ. ಎ., ಪೂನ

ಭಾರತೀಯರಿಗೆ ಮಹಾತ್ಮಾ ಗಾಂಧಿಯವರು ಎಷ್ಟು ಪೂಜ್ಯರೊ ಅಷ್ಟೇ ಗೌರವವನ್ನು ಅಮೇರಿಕದ ಜನರು ಅಬ್ರಾಹಾಂ ಲಿಂಕನರಿಗೆ ಕೊಟ್ಟಿರುವರು. ಕಾರಣವೇನೆಂದರೆ ಅವರಿಬ್ಬರೂ ತಮ್ಮ ದೇಶಕ್ಕೆ ಸಲ್ಲಿಸಿದ ಸೇವೆ ಅಷ್ಟಿಷ್ಟಲ್ಲ ರಾಮ. ಕೃಷ್ಣ ಮೊದಲಾದ ಅವತಾರ ಪುರುಷರನ್ನು ಬಿಟ್ಟರೆ ಭಾರತೀಯರಿಗೆ ಮಹಾತ್ಮಾ ಗಾಂಧಿಗಿಂತ ಪವಿತ್ರವಾದ ಹೆಸರು ಬೇರೊಂದಿಲ್ಲವೆನ್ನಬಹುದು. ಅಂತೆಯೇ ಲಿಂಕನರು ಅಮೇರಿಕದ ಜನರ ಹೃದಯದಲ್ಲಿ ಸ್ಥಿರವಾದ ಸ್ಥಾನ ಗಳಿಸಿದ್ದಾರೆ. ಅಮೇರಿಕದ ಅಧ್ಯಕ್ಷರಾಗಿ ಜಾಗತಿಕ ಪ್ರಸಿದ್ಧಿ ಪಡೆದವರು ಬಹಳ ಮಂದಿ. ಜಾರ್ಜ್ ವಾಶಿಂಗ್‌ಟನ್, ಬೆನ್ಜಾಮಿನ್ ಫ್ರಾಂಕಲಿನ್, ಜಫರಸನ್ ಮೊದಲಾದವರೆಲ್ಲರಿಗಿಂತಲೂ ಹೆಚ್ಚಿನ ಖ್ಯಾತಿ ಮತ್ತು ಪ್ರೀತಿ ಗಳಿಸಿದ ಅಧ್ಯಕ್ಷರೆಂದರೆ ಅಬ್ರಾಹಾಂ ಲಿಂಕನ್. ಗಾಂಧಿಜಿಯವರು, ಪರಕೀಯರ ಕೈಯೊಳಗೆ ಸಿಕ್ಕಿ ಸಂಕಟಪಡುತ್ತಿದ್ದ ತನ್ನ ದೇಶದ ಜನರನ್ನು ಸ್ವತಂತ್ರರನ್ನಾಗಿ ಮಾಡಿ ಮೋಕ್ಷ ಗಳಿಸಿದರು. ಲಿಂಕನರು ತನ್ನ ಜನರೇ ತೋರುತ್ತಿದ್ದ ನಿರ್ಧಯದಿಂದ ನೊಂದು ಪ್ರಾಣಿಗಳಂತೆ ಜೀವಿಸುತ್ತಿದ್ದ ನೀಗ್ರೊ ಜನರ ದಾಸ್ಯ ಸಂಕಲೆಯನ್ನು ಹರಿದು ಹಾಕಿದರು. ಇವರಿಬ್ಬರನ್ನೂ ಯುಗಪುರುಷರೆಂದು ಕರೆದರೆ ತಪ್ಪಾಗದು.

ಗಾಂಧೀಜೀಯವರ ಮತ್ತು ಲಿಂಕನರ ಚಿಕ್ಕಂದಿನ ಜೀವನದಲ್ಲಿ ತುಂಬಾ ವ್ಯತ್ಯಾಸ ಕಂಡುಬರುತ್ತದೆ. ಗಾಂಧಿಜಿಯವರಿಗೆ ಬಾಲ್ಯದಲ್ಲಿ ಯಾವ ತರದ ತೊಂದರೆಯೂ ಇದ್ದಿಲ್ಲವೆನ್ನಬಹುದು. ತಂದೆಯ ಸಾಕಷ್ಟು ಶ್ರೀಮಂತರಿದ್ದುದರಿಂದ ಉತ್ತಮ ರೀತಿಯ ವಿದ್ಯಾಭ್ಯಾಸಕ್ಕೆ ಅವಕಾಶವಿತ್ತು. ಆದುದರಿಂದಲೇ ಉಚ್ಚ ಶಿಕ್ಷಣಕ್ಕೆಂದು ಇಂಗ್ಲೆಂಡಿಗೆ ತೆರಳಿದ್ದರು. ಆದರೆ ಈ ವಿಷಯದಲ್ಲಿ ಲಿಂಕನರ ಸ್ಥಿತಿ ತುಂಬಾ ಕರುಣಾಜನಕವಾದದ್ದು. ಏಸುಕ್ರಿಸ್ತನಂತೆ ಒಂದು ಚಿಕ್ಕ ಗುಡಿಸಲಲ್ಲಿ ಹುಟ್ಟಿ ಬೆಳೆಯಬೇಕಾಯಿತು. ಶಾಲೆಯಲ್ಲಿ ಅವರು ಪಡೆದ ವಿದ್ಯೆಯೆಂದರೆ ಬರೇ ಒಂದೂವರೆ ವರ್ಷದಷ್ಟು. ತಂದೆಯು ತೀರಾ ಬಡವರಾಗಿದ್ದುದರಿಂದ ಲಿಂಕನರು ಚಿಕ್ಕಂದಿನಿಂದಲೇ ಬೇಸಾಯದ ಕೆಲಸ ಮಾಡುತಿದ್ದರಲ್ಲದೆ ಮನೆಯ ಖರ್ಚಿಗೆ ಹಣ ಕಡಿಮೆಯಾಗುತ್ತಿದ್ದುದರಿಂದ ಆಗಾಗ ಬೇರೆಯವರ ಮನೆ ಕೂಲಿ ಕೆಲಸ ಮಾಡುತಿದ್ದುದನ್ನು ಕೇಳಿದರೆ ಅವರು ಜೀವನದಲ್ಲಿ ಮುಂದೆ ಗಳಿಸಿದ ಸ್ಥಾನವು ತುಂಬಾ ಆಶ್ಚರ್ಯವನ್ನುಂಟು ಮಾಡುತ್ತದೆ ಇಂತಹ ಕಠಿಣ ಜೀವನ ಸಾಗಿಸುತ್ತಿರುವಾಗಲೇ ನೆರೆಹೊರೆಯವರಿಂದ ಪುಸ್ತಕಗಳನ್ನು ಕಡವಾಗಿ ತಂದು ಓದುತ್ತಿದ್ದರು.

ಇನ್ನೊಂದು ರೀತಿಯಲ್ಲಿ ಕೂಡಾ ದೇವರು ಗಾಂಧಿಜೀಯವರಿಗೆ ತುಂಬಾ ಸಹಾಯ ಮಾಡಿದಂತೆ ಕಾಣುತ್ತದೆ. ಚಿಕ್ಕಂದಿನಲ್ಲೇ ಮದುವೆಯಾಗಿದ್ದರೂ ದೇವತಾತಾ ಸ್ವರೂಪಿಣಿಯೂದ ಮಡದಿಯು ಅವರಿಗೆ ಸಿಕ್ಕಿರುವುದು ತುಂಬಾ ಮುಖ್ಯವಾದ ವಿಚಾರ. ಅದೇಕೆಂದರೆ ಮೊದಲು ಬರೇ ಹೆಂಡತಿಯಾಗಿದ್ದರೂ ಕಸ್ತೂರಿಬಾರವರು ಕೆಲವೇ ವರ್ಷಗಳಲ್ಲಿ ಗಾಂಧಿಜಿಯವರ ಕಾರ್ಯಕಲಾಪಗಳಲ್ಲಿ ಸಹಭಾಗಿಯಾಗಿ ದುಡಿದು ಅವರ ಗೆಳತಿಯೆನ್ನಿಸಿಕೊಂಡರು ಅಷ್ಟೊಂದು ಸೌಜನ್ಯದ ಮೂರ್ತಿಯೂದ ಹೆಂಗಸು ಹುಟ್ಟುವುದು ಅತಿ ದುರ್ಲಭವೆಂದು ಗಾಂಧಿಜಿಯವರ ಒಡನಾಡಿಗಳ ಅಭಿಪ್ರಾಯ. ಕಸ್ತೂರಿಬಾರವರು ತಮಗೆ ಸಲ್ಲಿಸಿದ ಸೇವೆ ಮತ್ತು ಸಹಾಯವನ್ನು ಅದೆಷ್ಟೊಬಾರಿ ಮಹಾತ್ಮರೇ ಶ್ಲಾಘಿಸಿದ್ದರು. ಬದಲಾಗಿ ಈ ವಿಷಯದಲ್ಲಿ ಲಿಂಕನರಷ್ಟು ಅದೃಷ್ಟ ಹೀನರು ಬೇರೊಬ್ಬರಿಲ್ಲವೆನ್ನಬಹುದು. ಅವರು ಪ್ರಥಮದಲ್ಲಿ ಪ್ರೀತಿಸಿ ಮದುವೆಯಾಗಲೆಪ್ಪಿದ್ದ ತರುಣಿಯು ಆಕಸ್ಮಿಕ ತೀರಿಕೊಂಡಂದಿನಿಂದ ಅವರಿಗೆ ಜೀವನದಲ್ಲಿ ಜಿಗುಪ್ಸೆ ಹುಟ್ಟಿತ್ತು. ಕ್ರಮೇಣ ಅವರು ಮನಸ್ಸಿಲ್ಲದ ಮನಸ್ಸಿನಲ್ಲಿ ಮದುವೆಯೂದ ಹೆಂಗಸು ರಾಕ್ಷಸ ಸ್ವರೂಪದಳಂದರೂ ತಪ್ಪಾಗದು. ಗಾಂಧಿಜೀವರ ಹೆಂಡತಿ ಎಷ್ಟೊಂದು ಅದರ್ಶನಾರಿಯಾಗಿದ್ದರೋ ಅಷ್ಟೇ ಕ್ರೂರ ಸ್ವಭಾವದ ಹೆಂಗಸು ಲಿಂಕನರ ಪತ್ನಿ ಮಗ.ವಿನಸ್ಸು ಸೌಮ್ಯ ಸ್ವಭಾವದ ಗಂಡನಿಗೆ ಅರಿಗಳಿಗೆಯೂ ಸುಖ ಕೊಡದ ಅ ಹೆಂಗಸು ನೆರೆಹೊರೆಯವರೊಡನೆಯೂ ಸದಾ ದ್ವೇಷ ಕಟ್ಟಿಕೊಂಡು ಲಿಂಕನರಿಗೆ ಎಲ್ಲಿಲ್ಲದ ತಾಪತ್ರಯ ತಂದೊಡ್ಡುತಿದ್ದಳು ಹೀಗಾಗಿ ಅಮೇರಿಕದ ಅಧ್ಯಕ್ಷರಾಗಿ ಮೆರೆದರೂ ಸಂಸಾರ ಸುಖ ಅವರಿಗೆ ಎಳ್ಳಷ್ಟೂ ಸಿಗಲಿಲ್ಲ.

ಹಲವು ವಿಷಯಗಳಲ್ಲಿ ಗಾಂಧಿಜಿಯವರಿಗೂ ಲಿಂಕನರಿಗೂ ತುಂಬಾ ಹೋಲಿಕೆ ಕಂಡು ಬರುತ್ತದೆ. ಇಬ್ಬರೂ ಸರಳ ಮತ್ತು ಸೌಮ್ಯ ಸ್ವಭಾವದವರೆಂದು ಹೆಸರು ಪಡೆದಿದ್ದಿತು ತಮ್ಮ ಕೈಕೆಳಗೆ ಕೆಲಸ ಮಾಡುವವರ ಮೇಲೆ ಇಬ್ಬರೂ ತುಂಬಾ ದಯೆ ತೋರುತಿದ್ದರು; ಒಡನಾಡಿಗಳನ್ನೂ ಸಮಾನರಂತೆ ಕಾಣುತಿದ್ದರು. ಹೆಮ್ಮೆ, ಹಿರಿತನವೆನ್ನುವುದು ಅವರಿಬ್ಬರೂ ತಿಳಿಯದ ಸಂಗತಿ ಇಬ್ಬರಲ್ಲೂ ಆಡಕವಾಗಿದ್ದು ಇನ್ನೊಂದು ಮುಖ್ಯ ಗುಣವೆಂದರೆ ಹಾಸ್ಯದ ಮೇಲೆ ಅಭಿರುಚಿ. ಎಂತಹ ಕಠಿಣ ಸಂದರ್ಭದಲ್ಲೂ ಅಥವಾ ಮಹಾ ಸಂದಣಿಯಲ್ಲೂ ತಮ್ಮ ತಿಳಿ ಹಾಸ್ಯದಿಂದ ಎಲ್ಲರನ್ನೂ ನಗಿಸಿ ಅವರ ಹೃದಯವನ್ನೂ ಸೂರೆಗೊಳ್ಳುವ ಶಕ್ತಿ ಇಬ್ಬರಲ್ಲೂ ಇತ್ತು. ಗಾಂಧೀಜಿಯವರು ಇಂಗ್ಲೆಂಡಿನ ರಾಜರನ್ನು ಕಾಣಲು ಹೋದಾಗ ಬರೇ ಒಂದು ಶಾಲನ್ನು ಹೊದ್ದುಕೊಂಡು ಹೋದುದೇಕೆಂದು ಪತ್ರಿಕಾ ಪ್ರತಿನಿಧಿಯೊಬ್ಬನು ಕೇಳಿದಾಗ "ಅದರಿಂದೇನು, ನಿಮ್ಮ ರಾಜರ ಮೈಮೇಲೆ ನಮ್ಮಿಬ್ಬರಿಗೂ ಸಾಕಾಗುವಷ್ಟು ಬಟ್ಟೆ ಇರಲಿಲ್ಲವೇ? ಎಂದು ಕೊಟ್ಟ ಉತ್ತರ ಪ್ರಖ್ಯಾತಿ ಗೊಂಡಿತ್ತು. ಒಮ್ಮೆ ತಮ್ಮ ಪ್ರೀತಿಯ ಶಿಷ್ಯ ನೆಹರೂರವರ ವಿಷಯ ಮಾತಾಡುತ್ತಾ ನೆಹರೂಗೆ ಇಂಗ್ಲೀಷು ಭಾಷೆಯ ಮೇಲೆ ತುಂಬಾ ಅಭಿಮಾನವೆಂದು ತೋರಿಸುವ ಸಲುವಾಗಿ "ಅವನು ಕನಸಿನಲ್ಲಿ ಕೂಡಾ ಇಂಗ್ಲೀಷಿನಲ್ಲೇ ಮಾತಾಡುತ್ತಾನೆ" ಎಂದಿದ್ದರಂತೆ ಲಿಂಕನರು ತಮ್ಮ ಜೀವನದಲ್ಲಿ ಹಲವು ಕಠಿಣ ಸಮಸ್ಯೆಗಳನ್ನು ಎದುರಿಸಬೇಕಾಗಿತ್ತು. ಹಾಗಿದ್ದರೂ ಪದೇ ಪದೇ ತಮ್ಮ ಹಾಸ್ಯದಿಂದ ಎಲ್ಲರನ್ನು ಸಮಾಧಾನಗೊಳಿಸುತಿದ್ದರು. ಒಮ್ಮೆ ಅವರ ಹೆಂಡತಿಯ ವಿಷಯನೆರೆಮನೆಯವರು ದೂರು ಕೊಟ್ಟಾಗ ಅವರ ಉತ್ತರ ಹೀಗಿತ್ತು; "ದಯವಿಟ್ಟು ಕ್ಷಮಿಸಿರಿ. ನಾನು ನನ್ನ ಹೆಂಡತಿಯನ್ನು ವರ್ಷಗಟ್ಟಲೆ ಸಹಿಸಿಕೊಂಡು ಬಂದಿರುವಾಗ ನೀವು ಬರೇ ಕೆಲವು ನಿಮಿಷವಾದರೂ ಸಹಿಸಭಾರದೆ?" ಇನ್ನೊಂದು ಸಂದರ್ಭದಲ್ಲಿ ಅವರ ಇಲೆಕ್ಷನಿನ ಸಮಯ ಎದುರಾಳಿಯೊಬ್ಬನು ಲಿಂಕನರು ಎರಡು ಮುಖದವರೆಂದು ಆಪಾದನೆ ಹೊರಿಸಿದನಂತೆ ಕೂಡಲೇ ಲಿಂಕನರು ಉತ್ತರಿಸುತ್ತಾ ಸಭಿಕರನ್ನು ಈ ರೀತಿ ಕೇಳಿಕೊಂಡರು "ನೀವೇ ಯೋಚಿಸಿರಿ; ನನಗೆ ಬೇರೆ ಯಾವುದಾದರೊಂದು ಮುಖವಿದ್ದಿದ್ದರೆ ಈ ಕರೂಪಿ ಮುಖವನ್ನು ನಿಮ್ಮ ಮುಂದೆ ತೋರುತಿದ್ದೆನೇ"— (ಲಿಂಕನರು ನೋಡಲು ಏನೂ ಸುಂದರವಾಗಿರಲಿಲ್ಲ.

ಕೊನೆಯದಾಗಿ ಇಬ್ಬರ ಧ್ಯೇಯವೂ ಒಂದೇ ಆಗಿತ್ತು; ಸ್ವಾತಂತ್ರ್ಯವಿಲ್ಲದೆ ಬಳಲುತ್ತಿದ್ದ ಜನರನ್ನು ಬಿಡುಗಡೆ ಮಾಡುವುದು. ಅದಕ್ಕಾಗಿಯೇ ನಿರಂತರವೂ ಹೋರಾಡಿ ಪ್ರಾಣವನ್ನರ್ಪಿಸಿದರು. ಇಬ್ಬರ ಮರಣವೂ ಒಂದೇ ರೀತಿಯಲ್ಲಿ ಆಗಿರುವುದನ್ನು ನೋಡುವಾಗ ಒಂದೇ ಶಕ್ತಿಯ ಎರಡು ಅವತಾರಗಳಂತೆ ಕಾಣುತ್ತದೆ ಅವರು. ಇವರಲ್ಲಿ ಯಾರು ಹೆಚ್ಚು, ಯಾರು ಕಡಿಮೆ ಎನ್ನುವುದು ಕಷ್ಟ. ಅವರಿಗೆ ಸಿಕ್ಕಿದ ಸಂದರ್ಭಗಳು ಬೇರೆ ಬೇರೆ. ಹಾಗಾಗಿ ಅವರು ನಡೆದ ದಾರಿ ಬೇರೆ. ಲಿಂಕನರು ಅಧ್ಯಕ್ಷರಾಗಿ ಅಧಿಕಾರದ ಸಹಾಯದಿಂದ ತಮ್ಮ ಕಾರ್ಯ ಸಾಧಿಸಬೇಕಾಯಿತು; ಗಾಂಧಿಜೀಯವರು ಅಧಿಕಾರದಲ್ಲಿದ್ದ ಪರಕೀಯರನ್ನು ತೊಲಗಿಸುವ ಸಲುವಾಗಿ ಅಹಿಂಸಾ ತತ್ವವನ್ನು ಪ್ರಯೋಗಿಸಬೇಕಾಯಿತು. ಲಿಂಕನರು ರಾಜಕೀಯ ಮಾರ್ಗದಲ್ಲಿ ನೇರಾಗಿ ನಡೆದು ತುಟ್ಟ ತುದಿಯನ್ನು ಮುಟ್ಟಿ ತಮ್ಮ ಧ್ಯೇಯ ಮತ್ತು ಕರ್ತವ್ಯ ನಿಷ್ಠೆಯಿಂದ ಕೀರ್ತಿ ಗಳಿಸಿದರು. ಮಹಾತ್ಮಾ ಗಾಂಧಿಯವರಿಗೆ ರಾಜಕೀಯದಲ್ಲಿದ್ದಷ್ಟೇ ಆಸಕ್ತಿ ಸಮಾಜ ಸುಧಾರಣೆಯಲ್ಲೂ ಇತ್ತು. ಒಬ್ಬರು ತೆಂಗಿನ ಮರದಂತೆ ಎತ್ತರವಾಗಿ ಬೆಳೆದಿದ್ದರೆ ಇನ್ನೊಬ್ಬರು ಆಲದ ಮರದಂತೆ ವಿಸಾಲವಾಗಿ ಹರಡಿಕೊಂಡಿದ್ದರು.

(೪ನೇ ಪುಟದಿಂದ)

ಪ್ರಮಾಣದಲ್ಲಿ ಇದಕ್ಕೆ ಸಂಕೇತಗಳನ್ನು ಕಳಿಸುತ್ತಾರೆ; ಈ ಸಂಕೇತಗಳನ್ನೆದು ೪,೧೭೦ ಮೆಗಾಸಾಯಿಕಲ್‌ನ ಮೇಲೆ ಭೂಮಿಗೆ ಮರಳಿಸುತ್ತದೆ. ಸಂಕೇತ ಕಳಿಸುವ ಶಕ್ತಿಯು ೨॥ ವಾಟ್‌ನಷ್ಟು. ಆದರೆ, ಭೂಮಿಯನ್ನು ಮುಟ್ಟುವಾಗ ಅದರ ಶಕ್ತಿಯು ಒಂದು ವಾಟ್‌ನ ಅರಬದಲ್ಲಿ ಒಂದಂಶದಷ್ಟಾಗುವುದು ಆದುದರಿಂದ ಅತ್ಯಂತ ಮಂದ ಸಂಕೇತಗಳನ್ನು ಗ್ರಹಿಸಲು ಸಂವೇದನಶೀಲ ಸ್ವರ್ಶ ಸೂತ್ರವು ಅವಶ್ಯವಾಗಿದೆ. ಭೂಮಿಯ ಮೇಲಿರುವ ಕೇಂದ್ರಗಳಲ್ಲಿ ಈ ಸಂಕೇತಗಳನ್ನು ಹೆಚ್ಚಿಸಬಹುದು, ಆ ಮೇಲೆ ಸಾಮಾನ್ಯ ವಾರ್ತಾ ವಾಹಕಗಳ ಮಾಲಕ ರವಾನಿಸಲೂ ಬಹುದು.

ಅಂತರಿಕ್ಷ ಹಾರಾಟದಲ್ಲಿನ ದೊಡ್ಡ ಭಾದೆಯೆಂದರೆ, ಅಣ ವಿಕಿರಣ ಇದರ ತಿಳುವಳಿಕೆ ಮಾಡಿಕೊಳ್ಳಲು ಟೆಲಿಸ್ಕಾರ್ ಉಪಯುಕ್ತವಾಗಿದೆ. ಸಾಮಾನ್ಯವಾಗಿ ಸಂದೇಶ ರವಾನೆ, ಟೆಲಿವಿಜನ್ ಕಾರ್ಯಕ್ರಮ ಮೊದಲಾದುವುಗಳಿಗೆ ಉಪಗ್ರಹಗಳನ್ನು ಬಳಸಿಕೊಳ್ಳುವುದು ಸಾಧ್ಯ ಮತ್ತು ಲಾಭಕರವೆಂದು "ಟೆಲಿಸ್ಟಾರ್" ಸಾರಿ ಹೇಳುತ್ತದೆ; ಎಂತಲೇ ಇದು ವಾರ್ತಾವಾಹಕ ವ್ಯವಸ್ಥೆಯಲ್ಲಿ ಅದ್ವಿತೀಯ ದಾಖಲೆಯನ್ನು ನಿರ್ಮಿಸಿದೆಯೆಂದರೆ ಲೇಖಕೋತ್ತಮರಾಗಲಾರದು.

ಬದಲಾವಣೆಗೆಂದು ಒಮ್ಮೆ
ಎಸ್. ಆರ್. ಬೀಡಿಯನ್ನು
ಬಳಸಿ ನೋಡಿರಿ,
ಅಂದರೆ ನೀವು ತಪ್ಪದೆ ಅದನ್ನೇ
ಎಂದೆಂದಿಗೂ ಕೊಂಡು
ಕೊಳ್ಳುವಿರಿ.
S.R. BEEDI
WORKS,
UDIPI, S.K.



ಆಲ್ಜೀರಿಯಾದ

ಶಾಂತಿಕಾರಣ — ಬೆಲ್ ಕಾಸಿಮ್

"ಸ್ವತಂತ್ರ"ವೆಂಬ ಶಬ್ದಕ್ಕೆ ಇಂದಿನ ದಿನಗಳಲ್ಲಿ ಏನಾದರೂ ವಿಶೇಷ ಅರ್ಥವಿದೆಯೇ ಎಂಬ ವಿಚಾರದಿಂದ, ಆಫ್ರಿಕೆಯಲ್ಲಿ ಹೊಸತಾಗಿ ಸ್ವಾತಂತ್ರ್ಯವನ್ನು ಗಳಿಸಿದ ಆಲ್ಜೀರಿಯಾದ ಕುರಿತು ಯೋಚಿಸುವಾಗ ಸಂದೇಹವು ಉತ್ಪನ್ನವಾಗುತ್ತಿದೆ. ಹೊಸತಾಗಿ ಅದು ಗಳಿಸಿದ ಸ್ವಾತಂತ್ರ್ಯ ಮತ್ತು ಅನಂತರ ಅಲ್ಲಿ ಸಂಭವಿಸಿದ ರಾಜಕೀಯ ತೂಗುದೊಟ್ಟಲು ಇಂದೋಚೀನಾವು ನಡೆದ ದಾರಿಯಲ್ಲಿಯೇ ಆಲ್ಜೀರಿಯಾ ಮುಂದುವರಿಯುತ್ತಿದೆ ಎಂಬ ಊಹನೆಗೆ ಅವಕಾಶವೊದಗಿಸುತ್ತದೆ.

ಆಲ್ಜೀರಿಯಾ ಸ್ವಾತಂತ್ರ್ಯ ನಂತರ, ಅಲ್ಲಿನ ನಾಯಕ ಧ್ವಯರಾಗಿದ್ದ ಬೆನ್ ಬೆಲ್ಲಾ ಮತ್ತು ಬೆನ್‌ಖೆಡ್ದರ ನಡುವೆ ಭಿನ್ನಾಭಿಪ್ರಾಯವು ಮೂಡಿ ಅಂತರ್ಯುದ್ಧದ ಭೀತಿಯನ್ನು ಹುಟ್ಟಿಸಿತು. ಇವರಿಬ್ಬರ ನಡುವಣ ಸಂಘರ್ಷದ ಪರಿಣಾಮವಾಗಿ ಬೆಲ್‌ಕಾಸಿಮ ಎಂಬ ಮೂರನೆಯ ವ್ಯಕ್ತಿಯೊಂದು ಬೆಳಕಿಗೆ ಬಂದಿದೆ. ಸ್ವಾತಂತ್ರ್ಯ ನಂತರ ಇವರು ಅಲ್ಲಿನ ಉಪಪ್ರಧಾನಿಯಾಗಿದ್ದರು.

ರಾಷ್ಟ್ರದ ರಾಜಕೀಯ ನಾಯಕ ಮತ್ತು ಸೇನೆಯ ನಾಯಕರ ನಡುವೆ ರಾಷ್ಟ್ರದ ನಾಯಕತ್ವದ ಬಗ್ಗೆ ಹುಟ್ಟಿದ್ದ ಭಿನ್ನಾಭಿಪ್ರಾಯವು ಯಾವುದಾದರೊಂದು ಸೂಕ್ತ ತೀರ್ಮಾನಕ್ಕೆ ಬಂದು ಬಗೆಹರಿಯಲಿಲ್ಲವೆಂದಾದಲ್ಲಿ ತಾನು ತನ್ನ ಉಪಪ್ರಧಾನಿ ಪದವಿಗೆ ರಾಜಿನಾಮೆಯಿತ್ತು ತನ್ನ ಹಳ್ಳಿಗೆ ಮರಳುವುದಾಗಿ ಬೆಲ್ ಕಾಸೀಮರೊಂದು ಬೆದರಿಕೆ ಹಾಕಿದ್ದರು.

ಬೆನ್ ಬೆಲ್ಲರ ಸಮರ್ಥಕರು ಪೂರ್ವ ಆಲ್ಜೀರಿಯಾದಲ್ಲಿ ವಿಜಯವನ್ನು ಗಳಿಸಿಕೊಂಡು ಸರ್ವಾಧಿಕಾರವನ್ನು ಸ್ಥಾಪಿಸುವ ಪ್ರಯತ್ನದಲ್ಲೊಂದು ಹೆಜ್ಜೆ ಮುಂದಿಟ್ಟರು ಎಂದು ಹೇಳಿದ ಕಾಶೀಮರು ಈ ರೀತಿಯ ವಿದ್ರೋಹವನ್ನು ಲೋಕತಂತ್ರವಾದಿ ಶಕ್ತಿಗಳು ವಿರೋಧಿಸುವುವು ಎಂದೂ ಅಭಿಪ್ರಾಯ ಹೊರಗೆಡಹಿದ್ದಾರೆ. ಆಲ್ಜೀರಿಯಾ ಸ್ವಾತಂತ್ರ್ಯದ ಪರಿಸ್ಥಿತಿಯ ವಿಪನ್ನಗೊಂಡಿದೆಯೆಂದು ಬೇರೆ ಹೇಳಬೇಕಿಲ್ಲ.

ಇಲ್ಲಿನ ಎರಡು ರಾಜಕೀಯ ಪಂಗಡಗಳ ನಡುವೆ ಒಂದು ಬಗೆಯ ಸ್ನೇಹ ಸಂಬಂಧದ ಮೂಲಕ ಒಡಂಬಡಿಕೆಯನ್ನು ಸಾಧಿಸಲು ಕಾಸಿಮರು ಬಹಳವಾಗಿ ಪ್ರಯತ್ನ ನಡೆಸಿದರು. ಮೊದಮೊದಲು ಈ ಪ್ರಯತ್ನಗಳೆಲ್ಲವೂ ನೀರ ಮೇಲಿನ ಹೋಮವಾಗುವುವೆಂದು ಭಾಸವಾಗುತಿತ್ತು. ಆದರೆ, ಬೆಲ್‌ಕಾಸೀಮರ ದೂರದರ್ಶಿತನ ಮತ್ತು ಪ್ರಭಾವೀ ವ್ಯಕ್ತಿತ್ವದಿಂದ ಇಂತಹಒಪ್ಪಂದವು ರೂಪುಗೊಂಡಿತು. ಉಭಯತರರಿಗೂ ಒಪ್ಪಿತವಾದ ಒಡಂಬಡಿಕೆಯಂತೆ ಬೆನ್‌ಬೆಲ್ಲರು ಖೆಡ್ದರರ ಪ್ರತಿನಿಧಿಗಳನ್ನೂ ಸೇರಿಸಿಕೊಂಡು ಆಡಳಿತೆಯ ಸೂತ್ರವನ್ನು ವಿಸ್ತರಿಸಬೇಕಾಗಿ ಬಂದಿದೆ.

೪೧ ವರ್ಷ ಪ್ರಾಯದ ಕರೀಮರು ಯುವಕರಾಗಿದ್ದಾಗಲೇ ವಿದ್ರೋಹೀ ಪ್ರವೃತ್ತಿಯವರೆಂದು ಹೆಸರು ಪಡೆದಿದ್ದರು. ಮೊತ್ತಮೊದಲಿಗೆ ತನ್ನ ಜಿಪುಣಾಗ್ರೇಸರ ತಂದೆಗೆ ವಿರುದ್ಧವಾಗಿ ಐರೋಪ್ಯ ಪದ್ಧತಿಯ ಶಿಕ್ಷಣವನ್ನು ಪಡೆಯಲು ತಮ್ಮ ಹುಟ್ಟು ಹಳ್ಳಿಯನ್ನು ತ್ಯಜಿಸಿ, ನಗರವಾದ ಆಲ್ಜೀರಿಯಾದ ದಾರಿ ಹಿಡಿದರು. ಹೆಚ್ಚಿನ ಆಲ್ಜೀರಿಯನ್ ರಾಷ್ಟ್ರೀಯವಾದಿಗಳಂತೆಯೇ ಶ್ರೀ ಕರೀಮರೂ ಅರಬಿ ಭಾಷೆಯನ್ನು ಕಲಿತಿಲ್ಲ; ಇಸ್ಲಾಮಿ ಸಂಸ್ಕೃತಿಯೆಂದರೇನೆಂದು ತಿಳಿದುಕೊಂಡಿಲ್ಲ. ಫ್ರೆಂಚ ಭಾಷೆಯಲ್ಲಿ ಅವರ ಪಾಂಡಿತ್ಯ ಅಧಿಕ ಮತ್ತು ಐರೋಪ್ಯ ರೀತಿ ರಿವಾಜುಗಳೆಂದರೆ ಅವರಿಗೆ ಪ್ರಾಣ.

ತನ್ನ ಜನ್ಮಜಾತ ವಿದ್ರೋಹೀ ಮನೋಭಾವನೆಯಿಂದಾಗಿಯೇ ಶ್ರೀ ಕರೀಮರು ಫ್ರೆಂಚ ಸೇನೆಯಲ್ಲಿ ಸೇರಿಕೊಂಡರು. ಸೇನೆಯೊಳಗೂ ಲಂಚ ಮತ್ತು ಅನ್ಯಾಯಗಳು ತಾಂಡವವಾಡುತ್ತಿರುವುದನ್ನು ಕಂಡು ಅವರ ಮನಸ್ಸು ಸುಮ್ಮನುಳಿಯಲು ಒಪ್ಪಲಿಲ್ಲ. ಇದರಿಂದ, ಅವರು ೧೯೪೫ರಲ್ಲಿ ಸೇನೆಯ ನೌಕರಿಯನ್ನು ಬಿಟ್ಟುಕೊಟ್ಟು ತನ್ನ ಹಳ್ಳಿಗೆ ಹೊರಟು ಹೋದರು.

ತಮ್ಮೂರಿಗೆ ಮರಳಿದ ನಂತರ ಆಲ್ಜೀರಿಯಾ ಸ್ವಾತಂತ್ರ್ಯ ಹೋರಾಟದಲ್ಲಿ ಕರೀಮರು ನಿಮುಗ್ನರಾದರು. ೧೯೫೪ರ ವರೆಗೆ ಇವರ ಎಲ್ಲ ವಿಧದ ರಾಷ್ಟ್ರೀಯ ಹೋರಾಟದ ಗತಿವಿಧಿಗಳು ಬಹಳ ರಹಸ್ಯದಲ್ಲಿದ್ದುವು. ೧೯೫೪ರ ಸಪ್ತಂಬರ ತಿಂಗಳಲ್ಲಿ ಸ್ವಿಜರ್‌ಲೆಂಡಿನ ಬರ್ನ್‌ನಗರದಲ್ಲಿ ದೇಶಾಂತರ ವಾಸಿಯೆನಿಸಿದ್ದ ಆಲ್ಜೀರಿಯಾ ಯುವಕರು ದೇಶದಲ್ಲಿ ವ್ಯಾಪಕ ಸ್ವಾತಂತ್ರ್ಯಾಂದೋಲನವನ್ನು ಹೂಡುವ ಬಗ್ಗೆ ಯೋಜನೆಯನ್ನು ರೂಪಿಸಲು ಒಟ್ಟು ಸೇರಿದರು. ಆಗ ಸೇರಿದ್ದ ಪ್ರಮುಖರಲ್ಲಿ ಕಾಸೀಮರೂ ಒಬ್ಬರು. ಈ ಸಭಾನಂತರದಲ್ಲಿಯೇ ಕರೀಮರು ಫ್ರಾನ್ಸಿಗೆ ವಿರುದ್ಧವಾಗಿ ನಡೆದ ಹೋರಾಟದಲ್ಲಿ ಪ್ರತ್ಯಕ್ಷವಾಗಿ ಭಾಗವಹಿಸಿದರು; ಮತ್ತು ಆಗಾಗ ಹೇಳುತಿದ್ದರು. ನಾವೀಗ ನೂರು ವರ್ಷಗಳ ವರೆಗೂ ಹೋರಾಟವನ್ನು ನಡೆಸಲು ಶಕ್ತಿವಂತರಾಗಿದ್ದೇವೆ"

ಸ್ವಾತಂತ್ರ್ಯಾನಂತರ ಆಲ್ಜೀರಿಯಾದಲ್ಲಿ ತಲೆದೋರಿದ ಅಂತರ್ಯುದ್ಧವು ನೂರು ವರ್ಷಗಳ ಸಂಗ್ರಾಮಕ್ಕೆ ನಾಂದಿಯಾದೀತು ಎಂಬ ಹೆದರಿಕೆ ಎಲ್ಲರಿಗೂ ಇತ್ತು ಆದರೆ, ಸುದೈವದಿಂದ ಆಭಯವು ಬೆಟ್ಟದಂತೆ ಮುಂದೆ ಬಂದಿದ್ದರೂ ಗಾಳಿಯಂತೆ ಹಗುರವಾಗಿ ಹಾರಿ ಹೋಯಿತು. ಇದಕ್ಕೆ ಕಾರಣ ಪುರುಷರಾದ ಕೀರ್ತಿಯಲ್ಲಿ ಬಹುಪಾಲು ಶ್ರೀ ಕರೀಮರಿಗೆ ಸೇರಿದುದು ಎಂದರೆ ಅತಿಶಯವಲ್ಲ.

ಕುಂದಾಪುರ ಡಿ. ಮು. ಕೋರ್ಟನಲ್ಲಿ
O. P. 18/1962

ಅರ್ಜಿದಾರಳು —ಗೌರಮ್ಮ ಶೆಡ್ತಿ
ಮತ್ತು
ಎದ್ರಿರು —ಇಲ್ಲಿ
ಇವರೊಳಗೆ

ಸಮಸ್ತ ಜನರಿಗೆ ಈ ಮೂಲಕ ತಿಳಿಸುವುದೇನೆಂದ್ರೆ—

ಅರ್ಜಿದಾರಳ ಗಂಡ ಮೃತ ಹೇರೂರು ಶೀನಪ್ಪ ಶೆಟ್ರ ಬಾಬ್ತು ಅರ್ಜಿಯಲ್ಲಿ ಕಾಣಿಸಿದ ಇನ್ಸೂರೆನ್ಸ್ ಪಾಲಿಸಿಗಳ ಆಧಾರದ ಮೇರೆಗೆ L. I. C. of India ಇದರಿಂದ ಬರತಕ್ಕ ಹಣ ಪಗೈರೆಗಳನ್ನು ಪಡೆಯುವರೆ ಅಗತ್ಯವುಳ್ಳ ವಾರೀಸು ಸರ್ಟಿಪಿಕೇಟನ್ನು ಅಪೇಕ್ಷಿಸಿ ಅರ್ಜಿದಾರಳು ಹಾಕಿದ ಮೇಲಿನ ಅರ್ಜಿಯಲ್ಲಿ ಏನಾದರೂ ಆಕ್ಷೇಪ ಪಗೈರೆ ಇದ್ದಲ್ಲಿ ತಾರೀಕು 4-9-1962 ನೇ ಹಗಲು 11 ಗಂಟೆಗೆ ಮೇಲಿನ ಕೋರ್ಟು ಮುಂದೆ ಹಾಜ್ರಾಗತಕ್ಕದ್ದು ಎಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ಈ ಮೂಲಕ ತಿಳಿಸೋದಾಗಿರುತ್ತದೆ.

G. KUSHALA HEGDE
Advocate for the Petitioner.

ಕುಂದಾಪುರ, 13—8—1962.

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್ ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ/ ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ. ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್‌ಪತ್ರಗಳು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0 =25 NP ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳು— ಮಂಗಳೂರಲ್ಲಿ ಶ್ರೀನಿವಾಸ್ ಬ್ರದರ್ಸ್, ಸ್ಕೂಲ್ ಬುಕ್ ಕೊ., ಕೆನರಾ ಕೊಲಜ್ ಬುಕ್ ಕೊ., ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಇವರಲ್ಲಿಯೂ, ಪುತ್ತೂರಲ್ಲಿ ಮೊಮ್ಯುಲರ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ.

ಪುತ್ತೂರು ಡಿ. ಮು. ಕೋರ್ಟನಲ್ಲಿ
O. S. 364/1961 R. E. P. 214/62

ಬಾಬ್ಲಬೆಟ್ಟು ತಿಂಮಪ್ಪ ಗೌಡ
—ವಾದಿ ಅರ್ಜಿದಾರ.

ಸುಬ್ರಾಯ ಗೌಡ—ನೆಕ್ಲಾಜೆ ರಾಮಪ್ಪ ಗೌಡನ ಮಗ—ಗುತ್ತಿಗಾರು ಗ್ರಾಮ—ಈಗ ಲೋರಿ ಡ್ರೈವರನಾಗಿ ಮಂಗಳೂರು ಶಹರ ಕದ್ರಿಯಲ್ಲಿ —ಎದ್ರಿ.

ವಾದಿಯು ಡಿಕ್ರಿಗೆ ಮುಂಜಿ ದಾವೆಯಲ್ಲಿ ಜಫ್ತಾದ ಎದ್ರಿ ಬಾಬ್ತು ಲೋರಿಯನ್ನು ಯೇಲಂಪಡಿಸುವಂತೆ ಅಮ್ಲಜಾರಿ ಮಾಡಿ ಪ್ರಥಮತಾ ನೋಟೀಸು ಮಾಡಿಸಿದಂತೆ ಇದೇ ತಾ. 4-9-1962ಕ್ಕೆ ಅಮ್ಲಜಾರಿ ಕುರಿತು ನೋಟೀಸಿನ ವ್ಯಾದೆ ಆಗಿರುತ್ತದೆ—ಆ ವ್ಯಾದೆಗೆ ಎದ್ರಿಯು ಈ ಕೋರ್ಟು ಮುಂದೆ ಹಾಜ್ರಾಗಿ ತನ್ನ ಆಕ್ಷೇಪಗಳಿದ್ದರೆ ಬರಹ ಮೂಲಕ ಹೇಳಿಕೊಳ್ಳತಕ್ಕದ್ದು. ತಪ್ಪಿದರೆ ಆತನನ್ನು ಶಿವಾಯಿ ಎಂತ ಮಾಡಿ ಐವಜು ವಸೂಲಿಗೆ ಈ ವ್ಯವಹಾರಣೆಯನ್ನು ಮುಂದರಿಸಲಾದೀತು. ಎಂತ ಈ ಕೋರ್ಟು R E A. 445/62 ನೆ ಅರ್ಜಿ ಹುಕುಂ ಪ್ರಕಾರ ಈ ಪ್ರಕಟಣೆ ಮಾಡಿಸಿಯದೆ.

P. Ramachandra Rao, M.A.,B.L.
Pleader for Petitioner.

ಪುತ್ತೂರು, 9—8—62.

ಹಾರ್ಮೋನಿಯಮ್ ಕಲಿಯುವವರಿಗೆ ಅತ್ಯುತ್ತಮ ಸಂಗೀತ ಪುಸ್ತಕ—
ಶ್ರೀ ಎ. ರಾಮಪ್ಪ ಅವರ

ಹಾರ್ಮೋನಿಯಮ್ ಬೋಧನ ಕ್ರಮ

ಪರಿಷ್ಕರಿಸಲ್ಪಟ್ಟ ನಾಲ್ಕನೆಯ ಮುದ್ರಣ.
ಕೆಲವೇ ಪ್ರತಿಗಳು ಉಳಿದಿವೆ.

ಬೆಲೆ: ರೂ. 2—0—0.

ಒಂದು ಪ್ರತಿ ಬೇಕಾದವರು ರೂ 2-50 ನ್ನು ಮನಿಯಾರ್ಡರು ಮಾಡಿ ತರಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಸ್ವರಾಜ್ಯ ಶಿಲ್ಪಿ

ಲೋಕಮಾನ್ಯ ತಿಲಕರು

"ಸ್ವರಾಜ್ಯವು ನಮ್ಮ ಜನ್ಮಸಿದ್ಧ ಹಕ್ಕು" ಎಂಬ ತಿಳಕರ ಉಸಿರು ಭಾರತೀಯರ ಉಸಿರಾಗಿ ದೇಶದ ಒಸಗೆಯಾಯಿತು. ಆಗಸ್ಟ ತಿಂಗಳಿಗೆ ಅವರು ಮೃತಿಸಿ ೪೨ ವರ್ಷವಾಯಿತು.

ಪಾಶ್ಚಾತ್ಯರ ದಬ್ಬಾಳಿಕೆಯನ್ನು ತಿರಸ್ಕರಿಸಿ ಸ್ವಾತಂತ್ರ್ಯತೆಯ ಬಗ್ಗೆ ನಮ್ಮ ದೇಶದಲ್ಲಿ ಹೋರಾಡಿದ ಪ್ರಮುಖ ರಾಜಕಾರಣಿಗಳಲ್ಲಿ ಒಬ್ಬರೆನಿಸಿಕೊಂಡಿದ್ದರಲ್ಲದೆ ಸಾಮಾಜಿಕ ಹಾಗೂ ಶೈಕ್ಷಣಿಕ ರಂಗದಲ್ಲಿ ಅವರು ಭಾರತಕ್ಕೆ ನೀಡಿದ ಸಲಹೆಗೆ ನಾವು ಲೋಕಮಾನ್ಯ ತಿಲಕರಿಗೆ ಸದಾಋಣಿಯಾಗಿದ್ದೇವೆ.

೧೮೮೭ರಲ್ಲಿ ತಿಲಕರು ತಮ್ಮ ಪ್ರೊಫೆಸರ ಹುದ್ದೆಗೆ ರಾಜೀನಾಮೆಯನ್ನಿತ್ತು ಸಮಾಜ ಕಾರ್ಯಕರ್ತರೆಂದೂ ಪ್ರಸಿದ್ಧ ಲೇಖಕ-ರಾಜಕಾರಣಿಯೆಂದೂ ಹೆಸರಾಗ ತೊಡಗಿದರು. ದಾದಾಭಾಯಿ ನವರೋಜಿ, ರಾನಡೇ ವಗೈರೆ ಅಂದಿನ ದಿನಗಳಲ್ಲಿ ಹೆಸರಾಂತ ದೇಶದ ನಾಯಕರಿಂದ ರಚಿಸಲ್ಪಟ್ಟ ಕಾಂಗ್ರೆಸ್ಸನ್ನು ತಿಲಕರೂ ಸೇರಿದರು. ಮಹಾರಾಷ್ಟ್ರದ ಜನತೆಯು ತಿಲಕರ ರೂಪದಲ್ಲಿ ಸ್ವಾತಂತ್ರ್ಯತೆಗೆ ಹೋರಾಡಲು ನಿರ್ಧಾರ ಮಾಡಿತು

ಕಾಂಗ್ರೆಸ ಆಡಳಿತೆಗಾರರ ತರಬೇತಿಯಾಗಬೇಕು, ಭಾರತದ ಪ್ರತಿಯೊಬ್ಬನೂ ಸಾಮೂಹಿಕವಾಗಿ ಚಳವಳ ಪ್ರಾರಂಭಿಸಬೇಕು, ಜಾತೀಯತೆ ತೊಡೆದು ಹಾಕಿ ದೇಶವನ್ನು ದಾಸ್ಯತನದಿಂದ ಉಳಿಸಿಕೊಳ್ಳಬೇಕು, ಕೇವಲ ಶಹರದ ಜನತೆಯಲ್ಲದೆ ಹಳ್ಳಿಗಳಲ್ಲಿ ಕಾಂಗ್ರೆಸ್ ಪ್ರಚಾರಕರು ತಯಾರಾಗಬೇಕು. ಅಂದರೆ ಸ್ವಾತಂತ್ರ್ಯತೆ ಸಾಧ್ಯ ಎಂದವರು ಘೋಷಿಸುತ್ತಿದ್ದರು. ದೇಶದಲ್ಲಿ ಎಲ್ಲೆಡೆಯಲ್ಲಿಯೂ ಸರಕಾರಿ ನೌಕರಿಯನ್ನು ತ್ಯಾಗ ಮಾಡಿ-ಸ್ವಾತಂತ್ರ್ಯ ಸಮರದಲ್ಲಿ ಪೂರ್ಣ ಕಾರ್ಯಗೈಯುವ ನಾಯಕರು ಮುಂದೆ ಬರಬೇಕೆಂದವರು ಜನತೆಗೆ ತಿಳಿಸಿದರು.

ಮೆಹತ್ತಾ ಹಾಗೂ ಗೋಖಲೆಯವರು ಹಿಂಜರಿದರೂ ತಿಲಕರು ತಮ್ಮ ಧ್ಯೇಯವನ್ನು ಬಿಡದೆ ಕಾರ್ಯರೂಪಕ್ಕೆ ತರಲು ಸ್ವತಃ ಮುಂದಾದರು! ಮಹಾರಾಷ್ಟ್ರದ ಜನತೆ ಅವರಿಗೆ ಬೆಂಬಲವನ್ನು ನೀಡಿತು.

೧೮೯೭ರಲ್ಲಿ ರಾಜದ್ರೋಹದ ಆರೆದೀಪದ ಮೇಲೆ ೨ ವರ್ಷ ಅವರನ್ನು ಜೈಲಿಗೆ ಹಾಕಲಾಗಿತ್ತು. ಅನಂತರ ತಿರುಗಿ ಅವರಿಗೆ ಆರು ವರ್ಷ ಗಡೀಪಾರು ಹಾಕಲಾಯಿತು. ಮೊದಲ ಬಾರಿಯಲ್ಲಿ ಅವರು ಶಿಕ್ಷೆಯಲ್ಲಿರುವಾಗಲೇ ಭಾರತದ ಜನತೆ ತಿಲಕರ ಮಹತ್ವ ಹಾಗೂ ಧ್ಯೇಯವನ್ನರಿತುಕೊಂಡರು.

ಜೈಲುವಾಸದಲ್ಲಿ ತಿಳಕರು ಬಹು ಪ್ರಯಾಸ ಪಡಬೇಕಾಯಿತಲ್ಲದೆ ಅವರಿಗೆ ತನ್ನ ಕಾರ್ಯಭಂಗವಾಯಿತೆಂಬ ಕಳವಳದಿಂದಾಗಿ ಇನ್ನೂ ಬೇಸರವಾಯಿತು. ಆದರವರು ಧೃತಿಗುಂದಲಿಲ್ಲ. ಜೈಲಿನಲ್ಲಿ ಅವರು ಪೌರ್ವಾತ್ಯ ಸಂಸ್ಕೃತಿ-ವೇದಸಾರ-ಭಾರತೀಯ ಪೌರ್ವಾತ್ಯ ಆರ್ಯ ಸಮಾಜ ರಚನೆ ಮುಂತಾದ ವಿಷಯಗಳ ಮೇಲೆ ತಮ್ಮ ಜ್ಞಾನದ ಅಮೂಲ್ಯ ಮೆರುಗುಕೊಟ್ಟು ಬರೆದ ಕೃತಿಗಳನ್ನು ಪ್ರೊ. ಮೆಕ್ಸ ಮುಲರ್ ಅವರಿಗೆ ಕಳಿಸಿದರು. ಅವರಿಂದಾಗಿ ಇಂಗ್ಲೆಂಡದಲ್ಲಿ ತಿಳಕರನ್ನು ಅನುಯಾಯಿಸುವ ಹಲವಾರು ಜನರು ಬಣಕಟ್ಟಿದರಲ್ಲದೆ ದೇಶದಲ್ಲಿಯೂ ಇಂಗ್ಲಂಡದಲ್ಲಿಯೂ ತಿಲಕರನ್ನು ಶಿಕ್ಷೆಯಿಂದ ಮುಕ್ತಿಗೊಳಿಸಲು ತೀವ್ರ ಅಂದೋಲನ ಪ್ರಾರಂಭವಾಯಿತು. ನಿಯಮಿತ ಅವಧಿಗಿಂತ ಮೊದಲೇ ತಿಳಕರನ್ನು ಮುಕ್ತಿಗೊಳಿಸಲಾಯಿತು.

ಪೌರ್ವಾತ್ಯ ಹಾಗೂ ಪಾಶ್ಚಾತ್ಯ ಭಾಷೆಗಳನ್ನು ಕಲಿಯಲು ಎಲ್ಲೆಡೆಯಲ್ಲಿ ಭಾರತದ ಸ್ವಾತಂತ್ರ್ಯದ ಬಗ್ಗೆ ಹೋರಾಡಲು ಅವಶ್ಯಕವುಳ್ಳ ತರುಣರನ್ನು ತರಬೇತಿಗೊಳಿಸಲು ದಿ. ವಿಷ್ಣುಶಾಸ್ತ್ರಿ ಚಿಪ್ಲುಂಕಾರ ಹಾಗೂ ಆಗಾರ್ಕರ್ ಇವರೊಡನೆ ಸೇರಿ ಹೈಸ್ಕೂಲೊಂದನ್ನು ಸ್ಥಾಪಿಸಿದರು. ಅಲ್ಲದೆ ಜನತೆಯ ಧ್ಯೇಯವನ್ನು ದೃಢಗೊಳಿಸಲು 'ಕೇಸರಿ' ಎಂಬ ಪತ್ರಿಕೆಯನ್ನು ಮರಾರಿ ಭಾಷೆಯಲ್ಲಿಯೂ 'ಮರಾಠ' ಎಂಬ ಪತ್ರಿಕೆಯನ್ನು ಅಂಗ್ರೇಜಿ ಭಾಷೆಯಲ್ಲಿಯೂ ಪ್ರಾರಂಭಿಸಿದರು. ಮುಂದೆ ಈ ಶೈಕ್ಷಣಿಕ ಸಂಘಕ್ಕೂ ಅವರಿಗೂ ತರ್ಕವಾಗಿ ತಿಳಕರು ಕೇವಲ ಅವೆರಡು ಪತ್ರಿಕೆಯ ಸಂಪಾದಕರಾಗಿ ತಮ್ಮ ವಿಚಾರವನ್ನೆಲ್ಲಾ ಸ್ವಾತಂತ್ರ್ಯರಂಗದಲ್ಲಿಯೇ ಕಳೆಯ ತೊಡಗಿದರು ತಿಲಕರ ಹಲವಾರು ಅನುಯಾಯಿಗಳು ಕಾಂಗ್ರೆಸ್ ಹಾಗೂ ಜನ ಸ್ವಾತಂತ್ರ್ಯದ ತತ್ವವನ್ನು ದೇಶದಲ್ಲೆಲ್ಲ ಸಾರಲು ಟೊಂಕ ಕಟ್ಟಿದರು. ಜೈಲುವಾಸಕ್ಕೆ ಅವರು ಹೆದರಲಿಲ್ಲ!

ಬ್ರಿಟಿಷಸತ್ತೆಯಿಂದ ತಿಲಕರಿಗೆ ಹಿಂಸೆ, ಶಿಕ್ಷೆ—ಉಪದ್ರವ ಹೆಚ್ಚಿದಂತೆ ತಿಳಕರ ಮಹತ್ವದ ಪ್ರಚಾರ ದೇಶದಲ್ಲಿ ಎಲ್ಲೆಡೆಗೂ ಹರಡ ತೊಡಗಿತು. ೧೮೮೭ರಿಂದ ೧೮೯೭ರ ವರೆಗೆ ಅವರು ತಮ್ಮ ಮಹಾನ್ ಕೆಲಸದಿಂದ ಲೋಕಮಾನ್ಯರೆಂದೂ ಡೆಕ್ಕನದ ಅನಭಿಷಕ್ತ ರಾಜನೆಂದೂ ಕರೆಯಲ್ಪಟ್ಟರು.

'ಸ್ವರಾಜ್ಯವು ತನ್ನ ಜನ್ಮಸಿದ್ಧ ಹಕ್ಕು" ಎಂದು ಕೇಸರಿ ಪತ್ರಿಕೆಯು ಭಾರತದಲ್ಲೆಲ್ಲ ಘೋಷಿಸಿತು! "Swaraj is my birthright; ಎಂದು "MARATHA" ಪತ್ರಿಕೆಯು ಭಾರತದಲ್ಲಿಯೂ ವಿದೇಶಗಳಲ್ಲಿಯೂ, ಭಾರತೀಯರ ಹಕ್ಕು ರಕ್ಷಣೆಯನ್ನು ಕೇಳಿತು

೧೯೦೮ರಲ್ಲಿ ಮತ್ತೆ ಅವರಿಗೆ ಶಿಕ್ಷೆ ದೊರೆಯಿತು. ಮುದ್ರಣ ಸ್ವಾತಂತ್ರ್ಯತೆ ಹಾಗೂ ಲೇಖನ ಸ್ವಾತಂತ್ರ್ಯತೆಯನ್ನು ಬೇಡಿದುದರಿಂದ ರಾಜದ್ರೋಹದ ಮೇಲೆ ಅವರನ್ನು ಜೈಲಿಗೆ ಕಳಿಸಿದರು. ದೇಶದೊಳಿತಿಗಾಗಿ ಅವರು ಜೈಲು ಸೇರಿದರು. ಮಿ|| ಜಸ್ಟಿಸ್; ಡೆನ್ಹರ್ ಎಂಬ ನ್ಯಾಯಾಧೀಶರು ಅವರಿಗೆ ಕೇಳಿದ ಪ್ರಶ್ನೆಗಳನ್ನೂ ತಿಲಕರಿಂದ ದೊರೆತ ದೇಶ ಭಕ್ತಿಯ ಉಸಿರನ್ನೂ ಇಂದಿಗೂ ಮುಂಬಯಿಯ ಹಾಯ್ ಕೋರ್ಟಿನಲ್ಲಿ ಅದೇ ಕೋಣೆಯಲ್ಲಿ ಇಡಲಾಗಿದೆ" ಆರು ವರ್ಷ ಕರಿನೀರಿಗೆ ಕಳಿಸಿದರೂ ನ್ಯಾಯಾಧೀಶರಿಗೆ ತನ್ನ ನಿರ್ಣಯ ಸರಿಯಾಗಿಲ್ಲವೆಂದು ಮನವರಿಕೆಯಾಗಿ ಕೆಲಸಮಯಗಳ ನಂತರ ಅವರ ಮೊಕದ್ದಮೆಯನ್ನು ತಿರುಗಿ ದಾಖಲ ಮಾಡಿಸಿ ಟಿಳಕರ ಬೇಡಿಕೆಗಳನ್ನು ಕೊಡಿಸ ಬೇಕಾಯ್ತು. ಅಲ್ಲದೆ ಅವರ ಶಿಕ್ಷಾವಧಿಯ ಪೂರ್ವದಲ್ಲಿಯೇ ಬಿಡುಗಡೆಯಾಯಿತು

ಕಾಂಗ್ರೆಸ್ಸಿನಲ್ಲಿ ೧೯೦೯ರಿಂದ ೧೯೧೫ರ ವರೆಗೆ ಯಾವ ನಿರ್ದಿಷ್ಟತೆಯೂ ಇರಲಿಲ್ಲ! ಇಂಗ್ಲಂಡದಲ್ಲಿ ಭಾರತದ ಸ್ವಾತಂತ್ರ್ಯತೆಯ ಬಗ್ಗೆ ಸಹಾಯವನ್ನು ಪಡೆಯಲು ಜೈಲಿನಿಂದ ಹೊರಬಂದ ತಿಳಕರು ಇಂಗ್ಲಂಡ ದೇಶವನ್ನೆಲ್ಲಾ ಸುತ್ತಿದರು! ಇಂಗ್ಲಂಡಿನ ಲೇಬರ್ ಪಕ್ಷದೊಡನೆ ಮಾತನಾಡಿ —Home Rule League-in India"ದ ಪರಿಚಯವನ್ನು ಮಾಡಿಸಿ, ಆ ಬಗ್ಗೆ ಭಾರತವನ್ನೂ ಉಳಿದ ಕೊಮನವೆಲ್ಲದ ಯಾದಿಯಲ್ಲಿ ಸೇರಿಸಲು ಮನವಿ ಮಾಡಿದರು. "ಭಾರತದಲ್ಲಿ ಮೊಟ್ಟ ಮೊದಲು "Home Rule League" ಅವರೇ ಸ್ಥಾಪಿಸಿದ್ದು." ಇಂಗ್ಲಂಡಿನ ಲೇಬರ್ ಪಕ್ಷದ ಸಹಾಯವನ್ನು ಪಡೆದ ತಿಳಕರು ಭಾರತಕ್ಕೆ ಬಹು ದೊಡ್ಡ ಸಹಾಯ ನೀಡಿದರು. 'ಅಟ್ಲಿ'ಯ ಲೇಬರ್ ಗವರ್ನಮೆಂಟು ೧೯೪೭ರಲ್ಲಿ ಬ್ರಿಟಿಷರ ಕೈಯಿಂದ ಸತ್ತೆಯನ್ನು ಹಸ್ತಾಂತರಿಸಿತು. ಅಂತೂ ಭಾರತಕ್ಕೆ ಸ್ವಾತಂತ್ರ್ಯತೆಯನು ಕೊಡಿಸಲು ತನ್ನ ಜೀವನವಿಡೀ ದಣಿದು "ಲೋಕಮಾನ್ಯ"ನೆನಿಸಿದ ತಿಳಕರಿಗೆ ಭಾರತೀಯರಾದ ನಾವು ಚಿರಋಣಿಗಳು

(ಸಿರಿಪತಿ.) (ಸಂಗ್ರಹಿಸಿದ್ದು.)

ಮುಂಬೈಯಲ್ಲಿ ವಿವಾಹ

ನೂತನ ದಂಪತಿಗಳಿಗೆ ಶುಭಾಶಯಗಳು.

ಶ್ರೀ ಆರ್ ಎಸ್. ಮುಚ್ಚೂರ್ ಮತ್ತು ಶ್ರೀಮತಿ ಸುಶೀಲ.

ಕಣ್ಣು ನೋಡುವ ನೋಟ

(೨ನೇ ಪುಟದಿಂದ)

ವಾಹವಾದ ಒಂದು ಸಂಸಾರದಲ್ಲಿ ನೆಮ್ಮದಿಯಿದೆಯೇ? ಗಂಡಾ—ಹೆಂಡತಿಯಲ್ಲಿ ಅನ್ಯೋನ್ಯತೆಯಿದೆಯೇ? ಪತಿ ಭಯವಿದೆಯೇ? ಪತಿ ಭಕ್ತಿಯಿದೆಯೇ? ಇಂದಿನ ನವ ವಾತಾವರಣದಲ್ಲಿ ಬೆಳೆದು ಸಂಸಾರದ ಸಾಗರದಲ್ಲಿಳಿದ ಹೆಣ್ಣುಗಳು, ತಮ್ಮ ಬಯಕೆಯ ಬಲಿಗಾಗಿ ಗಂಡುಗಳನ್ನು ಪೀಡಿಸುತ್ತಿರುವರು. ಮನೆಯಲ್ಲಿ ದೊರೆಯದ ನೆಮ್ಮದಿಗಾಗಿ ಗಂಡುಗಳು ನಮ್ಮಂಧಹರ ಶರಣಾಗುತ್ತಿರುವರು! ನಾವು, ಅವರ, ನಮ್ಮನ್ನು ಜನ್ಮಾಂತರದಲ್ಲಿಯೂ ಮರೆಯದಂತೆ, ನಯ—ವಿನಯದಿಂದ ಆದರಿಸಿ, ಸತ್ಕರಿಸಿ, ಹೆಂಡ್ತಿ ಸುಖ ದೊರಕಿಸಿ ಕೊಡುತ್ತಿರುವೆವು. ನಿಮಗೆ ವಿವಾಹವಾಗಿದೆಯೇ!

"ಇಲ್ಲ"

"ಹಾಗಾದರೆ, ನೀವು ಕಾಫಿ ಕುಡಿದು ಇಲ್ಲಿಂದ ಹೋಗಬಹುದು. ನಾನು ವಿವಾಹಿತರನ್ನು ಮಾತ್ರ ಹತ್ತಿರ ಬರಲು ಬಿಡುವವಳು. ನಿಮಗೇಕೆ ಈಗಲೇ ಕಾತುರ! ಕಾಫಿ ಬಿಲ್ಲನ್ನು ನೀವೇ ಕೊಡಿರಿ."

ಅಷ್ಟರ ವರೆಗೆ ಕೈಯಲ್ಲಿ ಹಿಡಿದಿದ್ದ ಕಾಫಿಯ ಬಿಲ್ಲನ್ನು ನನ್ನತ್ತ ಎಸೆದಳು.

ಅವಳ ಮಾನವತೆಯ ಮಹತ್ವವನ್ನು ಮನಸ್ಸಿನಲ್ಲಿಯೇ ಕೊಂಡಾಡುತ್ತಾ, ನನ್ನ ನೋಟದಾಸೆ ತೀರಿಸಲು, ಪುನಃ ಅವಳನ್ನೊಮ್ಮೆ ನೋಡಿ, ನಾನು ಹೊರಟ ಸ್ಥಾನಕ್ಕೆ ಮರಳಿ ಬಂದು ನಿಂತುಕೊಂಡು—ನೋಡುವ ನೋಟವನ್ನು ಮುಂದುವರಿಸಿದೆ.

ಅಮೇರಿಕನ್ ಪಿಸ್ತೂಲ್ ಆಟೋಮೇಟಿಕ್ 6 ಗುಂಡು ಮತ್ತು 50 ಗುಂಡು ನಿಮಗೆ ಕೃಪ್ತಿಕರವಾಗದಿದ್ದಲ್ಲಿ ಹಣ ವಾಪಾಸು ಕೊಡಲಾಗುವುದು.

ತುಂಡಾಗದಂತಹ ಲೈಸೆನ್ಸ್ ಇಲ್ಲದೆ ಉಪಯೋಗಿಸಬಹುದು. ಇದನ್ನು ನಿಮ್ಮ ಸಂರಕ್ಷಣೆಗೂ ಕಳ್ಳಕಾಕರ ಭಯವನ್ನೂ ಕ್ರೂರ ಪ್ರಾಣಿಗಳ ಭಯವನ್ನೂ ನೀಗಿಸಲು ಉಪಯೋಗಿಸಬಹುದು. ಬೆಲೆ: ಬೆಲೆ: 6 ಗುಂಡಿನ ಪಿಸ್ತೂಲ್ ನಂ. 333 ರೂ. 8, ನಂ. 444 ರೂ. 10, ನಂ. 555 ರೂ. 15 ಮತ್ತು 50 ಗುಂಡಿನ ಪಿಸ್ತೂಲ್ ನಂ. 666 ರೂ. 10, ನಂ. 777 ರೂ. 15, ನಂ. 888 ರೂ. 20 ಅದರೊಂದಿಗೆ 100 ಗುಂಡು ಧರ್ಮಕ್ಕೆ. ಬೇರೆ 100 ಗುಂಡಿನ ಬೆಲೆ ರೂ. 5. ಚರ್ಮದ ಚೀಲದ ಬೆಲೆ: ರೂ. 6 ಪೋಸ್ಟ್ ಚಾರ್ಜು ರೂ. 2

REY ROGAS & CO., 23-A, Anand Nagar, BOMBAY-26.

ನವಯುಗ'ಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

NAVAYUGA, UDIPI.
REGD. NO.BG. 176

23-8-1962

LICENCE NO. 31
Licensed to Post with out Prepayment

ಶ್ರೀ ಕೃಷ್ಣನ ಲೀಲಾ ಪ್ರದರ್ಶನ

(೧ನೇ ಪುಟದಿಂದ)

ತ್ತಾರೆ. ಮೊದಲು ವಿಟ್ಠಲಪಿಂಡಿಯ ದಿನ ಮಾತ್ರ ಹೊರಡುತಿದ್ದ ಇಂತಹ ಹಗಲು ವೇಶಗಳು ಈಗೀಗ ಅಷ್ಟಮಿಯ ದಿನವೇ ಹೊರಬೀಳುವುದೂ ಇದೆ. ಹೀಗಾಗಿ ಈಯೆರಡು ದಿನಗಳಲ್ಲಿ ವೇಶಗಳ ಧಾಳಿಯೇ ಧಾಳಿ; ಆದುದರಿಂದ ಮಧ್ಯಮ ವರ್ಗದ ಜನತೆ ಅಂದು ಬೀದಿಗಿಳಿಯುವುದಕ್ಕೂ ಅಂಜುವಂತಹ ಸ್ಥಿತಿ ಬಂದಿದೆ.

ಶ್ರೀ ಕೃಷ್ಣಾಷ್ಟಮಿಯ ಹಬ್ಬ ನಡೆಯುವುದು ವರ್ಷಾಕಾಲ ಕಳೆದು ಶರತ್ಕಾಲವು ಪಾದಾರ್ಪಣ ಮಾಡುವ ಸಮಯದಲ್ಲಿ. ಎಂದರೆ, ಆಗ ಮಳೆಯು ಸುರಿಯುತ್ತದೆ-ಇಲ್ಲವೆನ್ನುವ ಪರಿಸ್ಥಿತಿ. ಹಾಗಾಗಿ ಲಕ್ಷ ದೀಪೋತ್ಸವ ಮೊದಲಾದ ಹಬ್ಬಗಳಿಗೆ ರಥವೆಳೆಯುವಂತೆ ರಥ ಶೃಂಗರಿಸಿ ಎಳೆಯುವುದು ಸಾಧ್ಯವಾಗುವುದಿಲ್ಲ. ಉಡುಪಿಯ ಪ್ರತಿಯೊಂದು ಉತ್ಸವಕ್ಕೂ ರಥವೆಳೆಯುವ ಸಂಪ್ರದಾಯವಿದ್ದರೂ ಕೃಷ್ಣನ ಹುಟ್ಟಿದ ದಿನದ ಸಂದರ್ಭದಲ್ಲಿ ಮಾತ್ರ ಅದು ಮುರಿದು ಹೋಗುತ್ತದೆ. ತೇರು ಬೀದಿಯ ಸುತ್ತು ಕಟ್ಟಿರುವ ಅಟ್ಟಳಿಗೆಗಳಲ್ಲಿ ಮಡಕೆಗಳಲ್ಲಿ ಲಡ್ಡು-ಉಂಡೆ ನೀರು ಇತ್ಯಾದಿ ತುಂಬಿಸಿಡುತ್ತಾರೆ; ಕುಡಿಕೆ ಒಡೆಯುವ ವೇಶಧಾರಿಗಳು ಮೈಕೈಗಳಿಗೆ ಕರಿಬಳೆದು ತೆಂಗಿನವೋಲೆಯನ್ನು ಸೊಂಟಕ್ಕೆ ಬಿಗಿದು ಕೈಯ ದೊಣ್ಣೆಗಳಿಂದ ಅವನ್ನು ಒಡೆಯುತ್ತ ಮುಂದೆ ಹೋಗುತ್ತಾರೆ; ಅವರು ಮುಂದುವರಿದಂತೆ, ಶ್ರೀ ಕೃಷ್ಣನ ಉತ್ಸವ ಮೂರ್ತಿ ಪಾಲಕಿಯಲ್ಲಿಯೋ ಪುಟ್ಟ ವಿಮಾನರೂಪಿ ರಥದಲ್ಲಿಯೋ ಮುಂದ ಸರಿಯುತ್ತದೆ.

ವಿಟ್ಠಲಪಿಂಡಿಯನ್ನು ಸಾಮಾನ್ಯ ಭಾಷೆಯಲ್ಲಿ ಮೊಸರು ಕುಡಿಕೆಯೆನ್ನುತ್ತಾರೆ. ವಿಟ್ಠಲ ಭಾಂಡವೆಂಬ ಸಂಸ್ಕೃತ ಪದ್ಯದಿಂದ 'ವಿಟ್ಲಪಿಂಡಿ'ಯು ಹುಟ್ಟಿರಬಹುದಾದರೂ ಅದಕ್ಕೂ ಮೊಸರು ಕುಡಿಕೆಗೂ ಯಾವ ಸಂಬಂಧವೂ ಇಲ್ಲ. ಶ್ರೀ ಕೃಷ್ಣನು ತನ್ನ ಬಾಲಲೀಲೆಯ ವೇಳೆ ಹಾಲು ಬೆಣ್ಣೆ ಮೊಸರುಗಳ ಕುಡಿಕೆಗಳನ್ನು ಒಡೆದು, ತನ್ಮೂಲಕ ಅವನ್ನು ಮೆಲ್ಲುತಿದ್ದನೆಂಬ ಉಲ್ಲೇಖವನ್ನು ಆಧರಿಸಿ ಇಂತಹ ಪರಿಪಾಠ ಬಂದಿದೆಯೆಂದು ಊಹಿಸಬಹುದು. ಬಾಲಲೀಲೆಯಲ್ಲಿ ಆತನು ಏನು ಮಾಡಿದ್ದಾನೆ; ಏನು ಮಾಡಿಲ್ಲವೆಂದು ಯಾರು ತಾನೇ ಹೇಳಲಾಪರು? ಎಂತಲೇ ಬಗೆ ಬಗೆಯ ವೇಶಗಳು ಇಲ್ಲಿ ನಮಗೆ ಕಾಣುತ್ತವೆ. ಭಗವದ್ಭಕ್ತರಿಗೆ ವಸಂತ ಕಾಲಾ ನಂತರ ಮೊತ್ತಮೊದಲಿಗೆ ಹೊರ ಬರುವ ಭಗವಂತನ ದರ್ಶನ ಸುಲಭದಲ್ಲಿ ಆಗುತ್ತದೆ, ಸಾಮಾನ್ಯ ಜನತೆಗೆ ವಿನೋದ ನೋಡುವ ಸದವಕಾಶವೊಂದು ದೊರೆಯುತ್ತದೆ.

ಉತ್ಸವದ ಕೊನೆಯಲ್ಲಿ ಒಂದು ವೈಶಿಷ್ಟ್ಯವಿದೆ. ಮರದ ಬಳಿಯಲ್ಲಿ ಒಂದು ಉದ್ದನೆಯ ಕಂಗಿನ ಮರವನ್ನು ಕಡಿದು ತಂದು ನೆಡುತ್ತಾರೆ. ಆದರ ತುದಿಯಲ್ಲಿ ಒಂದು ಬಟ್ಟೆಯಲ್ಲಿ ಒಂದಷ್ಟು ಹಣವನ್ನು

ಕಟ್ಟಿಡುತ್ತಾರೆ. ಉತ್ಸವದ ಕೊನೆಯ ಹಂತದಲ್ಲಿ ಈ ಮರವನ್ನು ಏರಿ ಆ ಗಂಟನ್ನು ಬಿಚ್ಚಿ ಹಣವನ್ನು ತರುವವನಿಗೆ ಅದು ಸೇರುತ್ತದೆ. ಆದರೆ, ಇದನ್ನು ಹತ್ತುವುದೆಂದರೆ, ಅದೊಂದು ಸಾಹಸವೇ; ಎಂದರೆ, ಅದು ಸಾಹಸದ ಕೃತ್ಯವೆನ್ನಬೇಕು ಧೈರ್ಯ ಸಾಹಸಗಳಿಗೆ ಮೆಚ್ಚನ್ನು ನೀಡುವ ಇಂತಹ ಪ್ರಸಂಗ ಪ್ರಾಯಃ ಇತರತ್ರ ಇರಲಾರದು.

ಇತ್ತೀಚೆಗೆ ಉಡುಪಿಯ ವಿಟ್ಠಲ ಪಿಂಡಿಯ ಅನುಕರಣೆ ಇತರೆಡೆಯೂ ಹರಡತೊಡಗಿದೆ. ಆದರ, ಅದು ಇಷ್ಟೊಂದು ವ್ಯಾಪಕವಾಗಿ ಮತ್ತು ಮನಮೋಹಕವಾಗಿರುವುದಿಲ್ಲ. ವೆರ್ಡೂರು ಮತ್ತು ಪಲಿಮಾರುಗಳಲ್ಲಿ ಮೊಸರು ಕುಡಿಕೆ ಇಂದು ನಡೆಯುತ್ತದೆ. ಶ್ರೀ ಕೃಷ್ಣನ ಉಡುಪಿಯ ಕೃಷ್ಣ ಲೀಲೋತ್ಸವ ತನ್ನದೇ ಆದ ವೈಶಿಷ್ಟ್ಯಯುಕ್ತವಾಗಿದೆ.

ಆದರೆ, ಒಂದು ಮಾತನ್ನು ಅವಶ್ಯ ಬರೆಯಲೇ ಬೇಕು. ಕೃಷ್ಣ ಲೀಲೆಯ ಹೆಸರಿನಲ್ಲಿ, ಧರ್ಮಕ್ಕೆ, ಸಮಾಜಕ್ಕೆ ಚ್ಯುತಿಯನ್ನು ಕಲಂಕವನ್ನು ತರುವಂತಹ ವೇಶಗಳು ಕೆಲಮೊಂದು ಸಿದ್ಧವಾಗುತ್ತವೆ ಹಿಂದೆ ಶ್ರೀಕೃಷ್ಣನ ಅನಂತಲೀಲೆಯಪ್ರದರ್ಶನದ ಉದ್ದೇಶವಿರಬಹುದಾದರೂ ಇಂದು ಜನ ಮನರಂಜನೆಯೊಡನೆ ಹಣಮಾಡುವ ಉದ್ದೇಶವೇ ಅಗ್ರಗಣ್ಯವಾಗಿದೆಯೆಂದರೆ ಅಪಚಾರವಾಗದು. 'ಅಷ್ಟಮಿ'ಯ ದಿನ ಅಮ್ಮನನ್ನು ಅಡವಿಟ್ಟು ಶಿವರಾತ್ರಿಯದಿನ ಬಿಡಿಸಿ ತಂದ' ಎಂಬ ಗಾದೆ ಮಾತು ಇದೆ ಎಂದರೆ, ಅಷ್ಟಮಿ ಬರುವುದು ಮಳೆಗಾಲದ ಮಧ್ಯಾವಧಿಯಲ್ಲಿ, ಆಗ ಜನತೆಯಕೈ ಮನೆ ಬರಿದಾಗಿರುತ್ತವೆ. ಅದಕ್ಕಾಗಿ ನಾಲ್ಕು ಕಾಸು ಸಂಪಾದಿಸುವ ಸುದಿನವೇ 'ಮೊಸರು ಕುಡಿಕೆ'ಯ ದಿನವೆಂಬಂತಾಗಿದೆ. ಎಂದರೆ, ಧನಾರ್ಜನೆ ಮತ್ತು ಅದಕ್ಕಾಗಿ ವೇಶಧಾರಣೆಯೆಂಬುದೇ ವಿಟ್ಠಲಪಿಂಡಿ ದಿನದ ವಿಶೇಷತೆಯಾಗಿ ಭಗವಂತನ ಲೀಲಾ ಪ್ರದರ್ಶನವೆಂಬ ಭಾವನೆಯೇ ಮಾಯವಾಗಿ ಹೋಗಿದೆ. ಇದರಿಂದಾಗಿಯೇ ಅಶ್ಲೀಲತೆಗೂ ಸ್ಥಾನದೊರೆಯುವಂತಿದೆ ಈ ತೆರದ ಅನೀತಿ ಮತ್ತು ಅಶ್ಲೀಲತಾ ಪ್ರದರ್ಶನದಿಂದ ಜನರಂಜನೆಯಾಗಬಹುದಾದರೂ ಸಂಸ್ಕೃತಿ ಸಂವರ್ಧನೆ, ಆಧ್ಯಾತ್ಮಿಕ ದರ್ಶನವೆಂದಿಗೂ ಆಗದು. ಆದುದರಿಂದ ವಿನೋದವಾದರೂ ಅದರಿಂದ ಸಮಾಜವು ಅಧಃಪತಿತವಾಗದಂತೆ ನೋಡಿಕೊಳ್ಳುವುದು ಅವಶ್ಯವೆಂದು ಹೇಳಿದರೆ, ತಪ್ಪಾಗಲಾರದು. 'ಅತಿಸರ್ವತ್ರ ವರ್ಜಯೇತ್' ಎಂಬುದು ಪ್ರಾಚೀನರ ಉಕ್ತಿಯಲ್ಲವೆ?

ಚಂದಾದಾರರಲ್ಲಿ ವಿನಂತಿ



ಇದೇ ತಿಂಗಳಾಂತ್ಯಕ್ಕೆ 'ನವಯುಗ'ದ 41ನೆಯ ವರ್ಷವು ಮುಗಿದು ಸಪ್ಟಂಬರ ಆದಿಯಿಂದ 42ನೆಯ ಹೊಸ ವರ್ಷಾರಂಭವಾಗುತ್ತದೆ. ಈ ಅವಧಿಗೆ ಚಂದಾ ಅವಧಿ ಮುಗಿಯುವವರೂ, ಚಂದಾ ಹಣ ಬಾಕಿ ಇರುವವರೂ ತಮ್ಮ ತಮ್ಮ ಬಾಕಿಯನ್ನು ದಯಮಾಡಿ ಆದಷ್ಟು ಬೇಗನೆ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥಿಸುತ್ತೇವೆ

ಚಂದಾಹಣವನ್ನು ಸಿಂಡಿಕೇಟ್ ಬೇಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವದೊಂದು ತರದ ಖರ್ಚೂ ಇಲ್ಲದೆ ಪಾವತಿ ಮಾಡಬಹುದಾಗಿದೆ. ಇಲ್ಲವೆ ಮನಿಯಾರ್ಡರು ಮಾಡಿ ಕಳುಹಿಸಬಹುದು.

—ಮೆನೇಜರ್, ನವಯುಗ.

ಮದ್ರಾಸದ ದ್ರಾವಿಡ ಮುನ್ನೇತ್ರ ಕಳಗಂ

(೫ನೇ ಪುಟದಿಂದ)

ವೆಚ್ಚವೂ ಎರಡಾಗುವುದು; ಜನತೆಯಲ್ಲಿನ ಉತ್ಸಾಹವೂ ಕುಂದುವುದು. ತಿರುಚೆಂದೂರು ಮತದಾರ ಕ್ಷೇತ್ರದಲ್ಲಿ ನಡೆದ ಮರು ಚುನಾವಣೆಯಲ್ಲಿ ಮತದಾನ ಮಾಡಿದವರ ಶೇಕಡಾ ಮಾನ ಕಡಿಮೆಯಾದುದೂ ಗಮನೀಯವಿದೆ. ಅಲ್ಲಿ ನಡೆದಂತೆಯೇ ಮುಂದೆ ನಡೆಯಬಹುದಾದ ಚಿತ್ತೂರು ಮತ್ತು ದೊಡ್ಡ ಬಳ್ಳಾಪುರಗಳ ಮರು ಚುನಾವಣೆಗಳಲ್ಲಿಯೂ ಜನತೆಯ ಉತ್ಸಾಹವು ಇಳಿಮುಖವಾಗುವುದೆಂದು ಊಹಿಸಿದರೆ ತಪ್ಪಲ್ಲ ಮಿತವ್ಯಯದ ಮಾತೇ ಎಲ್ಲೆಡೆಯೂ ಕೇಳಿ ಬರುತ್ತಿರುವ ಈ ಸಮಯದಲ್ಲಿ ಇಂತಹ ನಿರುತ್ಸಾಹದ ಮರು ಚುನಾವಣೆಗಳಿಗೆ ಆಸ್ಪದ ಮಾಡಿಕೊಡುವುದು ಅಪೇಕ್ಷಣೀಯವೆನ್ನುವಂತಿಲ್ಲ.

ಐಕ್ಯಗಾನ ಹಾಡಬೇಕು

ಜವಾಹರಲಾಲ ನೆಹರುರವರು ಇದೀಗ ರಾಷ್ಟ್ರೀಯ ಐಕ್ಯದ ಬಗ್ಗೆ ಮಾತನಾಡುತ್ತಿರುವುದು ಹೆಚ್ಚುತ್ತಿದೆ. ದೇಶದ ಐಕ್ಯವು ಹೆಚ್ಚಬೇಕು; ಅದರಿಂದಲೇ ಸ್ವರಕ್ಷಣೆ ಮಾಡಿಕೊಳ್ಳಲು ಅದು ಸಶಕ್ತವಾಗುವುದು ಎಂಬುದು ಖಂಡಿತ ಈ ವಿಷಯದಲ್ಲಿ ಹೆಚ್ಚಿನವರಲ್ಲಿ ಅಭಿಪ್ರಾಯ ಭೇದವಿಲ್ಲ. ಆದರೆ, ಮದ್ರಾಸದ ಕಳಗಂನ ವಿಘಟನಾ ನೀತಿಯನ್ನು ಜನ ಮೆಚ್ಚುತ್ತ ಬರುತ್ತಿರುವಾಗ, ಅದರಿಂದ ಜನತೆಯನ್ನು ವಿಮುಖಗೊಳಿಸುವ ಕಾರ್ಯವಿಂದು ಆಗಲೇ ಬೇಕಾಗಿದೆ ವಿಷದಗಿಡವಿರುವಾಗ, ಅದಕ್ಕೆ ನೀರು ಹೊಯ್ಯುತ್ತ ಬಂದ ಕೆಲವು ಕಾಂಗ್ರೆಸಿಗರು ಈಗ ಅದರ ವಿಷಫಲವನ್ನು ಎಲ್ಲರಿಗೂ ಉಣಿಸತೊಡಗಿದ್ದಾರೆ ಹೀಗಾಗದಂತೆ ತೀವ್ರ ಎಚ್ಚರ ವಹಿಸಿ ಅಂತಹ ಮರವನ್ನು ಕಡಿದು ಹಾಕುವುದು ಅತ್ಯಗತ್ಯವಿದೆ ಜನತೆಯ ಹೃನ್ಮನಗಳನ್ನು ತನ್ನತ್ತ ಆಕರ್ಷಿಸುವ, ಏಕ ರಾಷ್ಟ್ರತೆಯ ಪಾಠವನ್ನು ಕಲಿಸುವ ಕಾರ್ಯ ಪ್ರಣಾಲಿಯು ಇಂದು ರೂಪಿತಗೊಳ್ಳಬೇಕು; ಹೊರಗಿನ ಶತ್ರುಗಳಿಗಿಂತ ಒಳಗಿನ ಕಳಗಂ ದೇಶದ್ರೋಹಿಗಳ ಭಯವೇ ನಮಗೆ ಮಾರಕವಾಗಿರುವುದರಿಂದ ಇತ್ತ ಕಾಂಗ್ರೆಸ್ ಪಕ್ಷ ಮಾತ್ರವಲ್ಲದೆ, ರಾಷ್ಟ್ರೀಯ ಮನೋವೃತ್ತಿಯವರೆಲ್ಲರೂ ಗಂಭೀರಾಲೋಚನೆ ಮಾಡಿ ಉಪಾಯವರಸಬೇಕಾಗಿದೆ. ರಾಷ್ಟ್ರೀಯ ಭಾವೈಕ್ಯ ಮಂಡಳಿಯು ಈ ಪ್ರಶ್ನೆಯನ್ನು ಕೂಲಂಕಷವಾಗಿ ಅಭ್ಯಸಿಸಿ ಪರಿಹಾರ ಕಂಡು ಹಿಡಿಯುವದೆಂದು ರಾಷ್ಟ್ರೀಯ ವಾದಿಗಳ ಮಹದಾಶೆಯಿದೆ.

— ಗೋರಾ.

ಶಾಲೆಗಳಿಗೆ ಬೇಕಾಗುವ
ಯಾವತ್ತೂ ಫಾರ್ಮುಗಳೂ
ಹಾಜರಿ ರಿಜಿಸ್ಟ್ರಿಗಳೂ ಸಿಗುತ್ತವೆ.
ನವಯುಗ ಪ್ರೆಸ್ ಉಡುಪಿ.

Edited Printed & Published by K. H. Shetty, at the Navayuga Press, Udipi, S. India.

ರಾಷ್ಟ್ರೀಯ ವಾರಪತ್ರಿಕೆ. ಬೆಲೆ: 13 ನ.ಪೆಸೈ

ನವಯುಗ

KANNADA — NAVAYUGA — WEEKLY

ಸಂಪುಟ ೪೧ ಸಂಚಿಕೆ ೫೧ | ಉಡುಪಿ 30—8—1962 ಗುರುವಾರ | Vol. 41 No. 51

ನಿಮ್ಮ ಯಾವತ್ತೂ
ಮುದ್ರಣ ಕೆಲಸಗಳಿಗೆ
ದಯಮಾಡಿ ವಿಚಾರಿಸಿರಿ;
ನವಯುಗ ಪ್ರೆಸ್,
ಉಡುಪಿ

ವಿದ್ಯಾರ್ಥಿಗಳಿಗೆ
ಮತ್ತು ವಯಸ್ಕರಿಗೆ
ಅತ್ಯುಪಯೋಗೀ ಪುಸ್ತಕ
ಸುಲಭದಲ್ಲಿ ಇಂಗ್ಲಿಷ್
(ಆಂಗ್ಲ ಸ್ವಯಂಬೋಧಿನಿ)
ನವಭಾರತ ಪುಸ್ತಕ ಭಂಡಾರ
ಉಡುಪಿ

ವಿಚಿತ್ರ ರಾಜನೀತಿ

ಹಾವು ಸಾಯಬಾರದು; ಕೋಲು.....

ಭಾರತೀಯ ಕಮ್ಯುನಿಸ್ಟ್ ಪಕ್ಷವು ಭಾರತ-ಚೀನಾ ಸೀಮೂ ವಿವಾದವು ಎದ್ದಂದಿನಿಂದ ಇಕ್ಕಟ್ಟಿಗೆ ಬಿದ್ದಂತಾಗಿದೆ. ಕಮ್ಯುನಿಸ್ಟ್ ರಾಷ್ಟ್ರಗಳ ವಾದಗಳನ್ನೂ ಅಭಿಪ್ರಾಯಗಳನ್ನೂ ಸಮರ್ಥಿಸುತ್ತ ಬರುವುದನ್ನು ಹಿಂದಿನಿಂದಲೂ ಸಂಪ್ರದಾಯವಾಗಿಟ್ಟುಕೊಂಡು ಈ ಪಕ್ಷವು ಈ ಘಟನೆಯಿಂದ ತುಸು ತಬ್ಬಿಬ್ಬಾಗುವಂತಾಯಿತು. ರಾಷ್ಟ್ರೀಯತೆಯ ಪ್ರಶ್ನೆಯ ಕಡೆಗೆ ವಿಶೇಷ ಗಮನವನ್ನು ನೀಡದೆ ರಶ್ಯ-ಚೀನಾಗಳ ಬಗ್ಗೆ ಸದಭಿಪ್ರಾಯವನ್ನು ತಾಳುತಿದ್ದ ಕಮ್ಯುನಿಸ್ಟರು ಕಳೆದ ಚುನಾವಣೆಗಳಲ್ಲಿ ನಿರೀಕ್ಷಿತ ಯಶಸ್ಸು ಪಡೆಯುವುದರಲ್ಲಿ ಅಸಮರ್ಥರಾದರು. ದೇಶದಲ್ಲಿರುವ ಇತರ ಎಲ್ಲ ರಾಜಕೀಯ ಪಕ್ಷಗಳು ಭಾರತೀಯತೆಯನ್ನೂ ರಾಷ್ಟ್ರೀಯತೆಯನ್ನೂ ಎತ್ತಿ ಹಿಡಿದು, ದೇಶದ ಭದ್ರತೆಯನ್ನು ಉಳಿಸಿಕೊಳ್ಳಲು ಕಟಬದ್ಧರಾಗಬೇಕೆಂದು ಉದ್ಘೋಷಿಸುತ್ತಿರುವಾಗ, ಭಾರತೀಯ ಕಮ್ಯುನಿಸ್ಟರು ಚೀನಾದೊಡನೆ ಭಾರತದ ವಿವಾದವೇ ಇಲ್ಲವೆಂಬ ವರ್ತನೆಯನ್ನು ತೋರಿಸುತಿದ್ದರು. ಹಾಗಿದ್ದರೂ ಈ ಅಪ್ರಬೋಧ ಪರಿಸ್ಥಿತಿಯನ್ನು ಹೆಚ್ಚುಕಾಲವಿರಿಸಿಕೊಳ್ಳುವುದು ಅದರಿಂದ ಸಾಧ್ಯವಾಗಲಿಲ್ಲ.

ದೇಶನಿಷ್ಠೆ ಬೇಡವೆ?

ಮಹಾರಾಷ್ಟ್ರದ ಶ್ರೀ ಎಸ್. ಎ ಡಾಂಗೆಯವರು ಕಮ್ಯುನಿಸ್ಟ್ ಪಕ್ಷದ ಒಬ್ಬ ಅಗ್ರಗಣ್ಯ ವ್ಯಕ್ತಿ. ಅವರಲ್ಲಿ ಪಕ್ಷನಿಷ್ಠೆಯಿದ್ದರೂ ಅಷ್ಟೇ ದೇಶನಿಷ್ಠೆಯೂ ಇದೆ ಚೀನೀಯ ಆಕ್ರಮಣದ ಸುದ್ದಿಯು ಗಾಳಿಯೊಡನೆ ದೇಶವ್ಯಾಪಿಯೆನಿಸಿದಾಗ, ಭಾರತೀಯ ಕಮ್ಯುನಿಸ್ಟರು ಈ ಸಂಬಂಧದಲ್ಲಿ ಮೌನಧಾರಣೆ ಮಾಡಿದಾಗ, ದೇಶನಿಷ್ಠ ಡಾಂಗೆಯವರೇನು ಮಾಡುವರು ಎಂದು ಕುತೂಹಲದಿಂದ ಜನತೆ ಕಾದಿರುತಿತ್ತು. ತನ್ನ ವ್ಯಕ್ತಿಗತ ಅಭಿಪ್ರಾಯವೇನೇ ಇದ್ದರೂ ಅವರು ಪಕ್ಷದ ನಿಲುಮೆಯನ್ನು ಮೀರಿ ನಡೆದವರಲ್ಲ; ಅದುದರಿಂದ ಪಕ್ಷದಲ್ಲಿದ್ದುಕೊಂಡು ಅದಕ್ಕೆ ವಿರುದ್ಧವಾಗಿ ತಮ್ಮ ತುಟಿಯನ್ನವರು ತೆರೆಯಲಿಲ್ಲ. ಹಾಗಿದ್ದರೂ ಮುಂದೆ, ಸೀಮೂ ಸಂಬಂಧದ ವಿವಾದಯಿದೆಯೆಂದೂ ಅದನ್ನು ಶಾಂತ ವಿಧಾನದಲ್ಲಿಯೇ ಪರಿಹರಿಸಿಕೊಳ್ಳಬೇಕೆಂದೂ ಕಮ್ಯುನಿಸ್ಟ್ ಪಕ್ಷವು ಹೇಳುವಂತಾದುದಕ್ಕೆ ಶ್ರೀ ಡಾಂಗೆಯವರೂ ಅವರ ಹಿಂಬಾಲಕರೂ ಕಾರಣವೆಂದು ಹೇಳಬಹುದು.

ವಿಚಿತ್ರ ಗೊತ್ತುವಳಿ

ಹೈದರಾಬಾದಿನಲ್ಲಿ ಮೊನ್ನೆ ಮೊನ್ನೆ ಕ ಕಮ್ಯುನಿಸ್ಟ್ ಪಕ್ಷದ ರಾಷ್ಟ್ರೀಯ ಮಂಡಳದ ಅಧಿವೇಶನವು ಜರಗಿತು. ಇದರಲ್ಲಿ ಹಿಂದೀ—ಚೀನ ಸೀಮೆಯ ಕುರಿತಾದ ಒಂದು ಗೊತ್ತುವಳಿಯನ್ನು ಅದು ಸ್ವೀಕರಿಸಿತು. ಲಡಖ ಪ್ರದೇಶದಲ್ಲಿನ ಪರಿಸ್ಥಿತಿಯನ್ನು ಎದುರಿಸುವಲ್ಲಿ ಭಾರತ ಸರಕಾರಕ್ಕೆ ಇದು ಬೆಂಬಲ ವ್ಯಕ್ತಪಡಿಸುವುದಾದರೂ ಭಾರತೀಯ ಭೂಭಾಗದಲ್ಲಿ ಚೀನೀಯರು ಆಕ್ರಮಣ ಮಾಡಿದ್ದಾರೆ ಎಂಬುದನ್ನು ಒಪ್ಪಿಕೊಳ್ಳುವಷ್ಟು ಉದಾರತೆಯು ಅದರಲ್ಲಿರಲಿಲ್ಲವೆಂಬುದು ಪಕ್ಷದ ಅಶಯದ ಬಗ್ಗೆ ಸಂದೇಹ ಹುಟ್ಟಿಸುತ್ತದೆ. ನೇಫಾ ಪ್ರದೇಶದಲ್ಲಿ ಮೈಕಮಹೋನ ರೇಖೆಯೂ ಉತ್ತರದಲ್ಲಿ ಸಾಂಪ್ರದಾಯಿಕ ಗಡಿಯೂ ಸೀಮೆಯೆಂದು ಕಮ್ಯುನಿಸ್ಟ್ ಪಕ್ಷವು ಒಪ್ಪುವುದಾದರೂ ಉತ್ತರ ಸೀಮೆಯಲ್ಲಿ ಸ್ಥಾನಿಕ ಹೊಂದಿಕೆಗಳನ್ನು ಮಾಡಿಕೊಳ್ಳುವ ಅವಕಾಶವಿರಬೇಕೆಂದು ಅದು ಮೊದಲು ಹೇಳಿದೆ. ಚೀನೀಯರು ತಾವು ಆಕ್ರಮಣ ಮಾಡಿಲ್ಲ; ತಮ್ಮದಾದ ಭೂಮಿಯನ್ನು ಮರಳಿ ಪಡೆಯಲು ಪ್ರಯತ್ನ ನಡೆಸುತ್ತೇವೆಯೆಂದು ಹೇಳಬಹುದು; ಹಾಗೆ ತಿಳಿಯಲೂ ಬಹುದು. ಆದರೆ, ನಮ್ಮ ಪ್ರಧಾನಿ ನೆಹರು, ಗೃಹ ಮಂತ್ರಿ ಶಾಸ್ತ್ರಿ, ಇನ್ನು ಸಂರಕ್ಷಣಾ ಮಂತ್ರಿ ಕೃಷ್ಣ ಮೆನನ್ನರು ಪದೇ ಪದೇ ಚೀನೀಯ ಆಕ್ರಮಣವನ್ನು ಪ್ರಸ್ತಾಪಿಸುತ್ತಿರುವಾಗ, ದೇಶದ ಮೂಲೆ ಮೂಲೆಯಲ್ಲೂ ಈ ಸಂಬಂಧದಲ್ಲಿ ಅಸಕ್ತಿ ಮೂಡಿ ಕುತೂಹಲ ಕೆರಳಿಸಿರುವಾಗ, ಕಮ್ಯುನಿಸ್ಟರು ಮಾತ್ರ ಸಂಧಿಗ್ಧ ತಾತ್ಪರ್ಯದ ಗೊತ್ತುವಳಿ ಸ್ವೀಕರಿಸಿದುದು ವಿಚಿತ್ರವಲ್ಲವೆ?

ಅಮೆರಿಕೆಯ ಐದನೇ ಗಗನಯಾತ್ರಿ ವಾಲ್ಟರ್ ಎಮ್. ಸ್ಕೀರಾ.

ಇದು ಶುಭಚಿಹ್ನೆಯಲ್ಲ

ಲಡಖ ಪ್ರದೇಶದಲ್ಲಿ ಸುಮಾರು ೧೨ ಸಾವಿರ ಚದರ ಮೈಲುಗಳಷ್ಟು ಭೂಮಿಯನ್ನು ಚೀನೀಯರು ಆಕ್ರಮಿಸಿದ್ದರು. (ಇದರಲ್ಲಿ ೧,೨೦೦ ಚದರ ಮೈಲುಗಳನ್ನು ತೆರವು ಮಾಡಿದ್ದಾರೆಂದು ಇತ್ತೀಚೆಗೆ ಪಂ. ನೆಹರು ಹೇಳಿದ್ದಾರೆ.) ಈ ಸಂಬಂಧದ ಸಂಪೂರ್ಣ ವಿವರಗಳು ಭಾರತ ಸರಕಾರದ ವಿದೇಶ ವ್ಯವಹಾರ ಖಾತೆಯು ಪ್ರಕಟಿಸಿದ ಸಾಹಿತ್ಯ ಸಾಮಾಗ್ರಿಗಳಲ್ಲಿ ಲಭಿಸುತ್ತವೆ. ಭಾರತ ಮತ್ತು ಚೀನೀ ಸರಕಾರಗಳು ತಂತಮ್ಮ ವಾದಗಳನ್ನು ಮಂಡಿಸುತ್ತ ಇದ್ದರೂ, ಕಮ್ಯುನಿಸ್ಟ್ ಪಕ್ಷವು ತಳೆಯುವ ಮಧ್ಯ ಮಾರ್ಗವು ನಿಜಕ್ಕೂ ಖೇದಜನಕವೆನ್ನಲೇಬೇಕು. ಸೋವಿಯತ್ ರಶ್ಯವು ಭಾರತದ ಸ್ನೇಹಿತ ರಾಷ್ಟ್ರ, ಚೀನವು ಅದರ ಸಹೋದರ ರಾಷ್ಟ್ರ. ಹಾಗಿರುವಾಗ ಅದು ಯಾರ ಪಕ್ಷವನ್ನೂ ಹಿಡಿಯದೆ ತಟಸ್ಥವಾಗಿ ಉಳಿಯುವುದು ನ್ಯಾಯವಲ್ಲವಾದರೂ ಅಸಂಗತವಲ್ಲ. ಆದರೆ, ತಮ್ಮ ದೇಶದ ಮೇಲೆ ಬರುತ್ತಿರುವ ಗಂಡಾಂತರದ ವಿಷಯವನ್ನು ಹೆಚ್ಚಾಗಿ ಗಮನಿಸದೆ ರಶ್ಯದ ನೀತಿಯಂತೆಯೇ 'ಹಾವು ಸಾಯಬಾರದು; ಕೋಲು ಮುರಿಯಬಾರದು' ಎಂಬ ನೀತಿಯನ್ನು ಭಾರತೀಯ ಕಮ್ಯುನಿಸ್ಟರು ಅನುಸರಿಸುತ್ತ ಬರುತ್ತಿರುವುದು ಶುಭಚಿಹ್ನೆಯನ್ನುವಂತಿಲ್ಲ.

ಇದು ನಮ್ಮ ದುರ್ದೈವ

ಕಮ್ಯುನಿಸ್ಟ್ ಪಕ್ಷದ ಈ ಗೊತ್ತುವಳಿಯು ಭಾರತಕ್ಕಿಂತಲೂ ಚೀನಾದ ಕಡೆಗೆ ವಾಲಿಕೊಂಡಿದೆಯೆನ್ನಬೇಕಾಗಿದೆ. ಏಕೆಂದರೆ, ಚೀನೀಯರು ಸದ್ಯ ಸಂಧಾನ-ಮಾತುಕತೆಗಳ ಮೂಲಕವೇ ಎದ್ದಿರುವ ವಿವಾದವನ್ನು ಬಗೆಹರಿಸುವ ಇರಾದೆಯನ್ನು ತೋರ್ಪಡಿಸುತ್ತಿರುವುದನ್ನೂ ಈ ವಿವಾದವು ಯುದ್ಧಕ್ಕೆ ಹೇತುವಾಗುವುದಿಲ್ಲವೆಂದು ಮಾರ್ಶಲ್ ಚೆಅನ್ ಯೀ ನುಡಿದುದನ್ನೂ ಕಮ್ಯುನಿಸ್ಟ್ ಪಕ್ಷದ ಗೊತ್ತುವಳಿಯು ಸಮರ್ಥಿಸುತ್ತಿರುವಂತೆ ಭಾಸವಾ

(೧೨ನೇ ಪುಟ ನೋಡಿರಿ)

'ಖೀರಾ' ಉಕ್ಕಿನ ಫರ್ನಿಚರುಗಳು, ಮಂಚ-ಸೋಫಾಗಳು, ವೈವಿಧ್ಯ ಪೂರ್ಣ ಕಪಾಟುಗಳು, ಸ್ಟೈನ್‌ಲೆಸ್ ಪಾತ್ರೆ ಪರಡಿಗಳು, ಗೃಹಾಲಂಕಾರ ಸಾಹಿತ್ಯಗಳು, ಗೃಹಿಣಿಯರ ಶೃಂಗಾರ ಸಾಧನಗಳು, ಉಡುಗೊರೆ ಸಾಮಗ್ರಿಗಳು ಇತಾದಿ ಇತ್ಯಾದಿಗಳಿಗೆ ವಿಚಾರಿಸಿರಿ —

ಶಾಸ್ತ್ರಿ & ಕೊ
ಹಂಪನಕಟ್ಟೆ,
ಮಂಗಳೂರು—1

ನೋಡುವವರ ದೃಷ್ಟಿದೋಷ

—ಶ್ರೀಮತಿ ಯಶೋದಾ ಯನ್. ಜೆನ್ನಿ.

ಸಮುದ್ರ ತೀರದಲ್ಲಿ ಒಬ್ಬಂಟಿಗನಾಗಿ ನಿರುತ್ಸಾಹಿಯಾಗಿ ನಿರಾಸೆಯಿಂದ ಕಾಲು ಜಾಚಿ ಒರಗಿದ್ದನಾತ. ಮನೆಯಲ್ಲಿ ಕುಳಿತರೆ ಗೆಳೆಯರ ಬಳಗ ಬಂದು ಗೊಂದಲ ಎಬ್ಬಿಸಿ ಮನಸ್ಸಿನ ಅಶಾಂತಿಯನ್ನು ಇನ್ನಷ್ಟು ಹೆಚ್ಚಿಸಿ ಕಂಗೆಡಿಸುತ್ತದೆಂಬುದನ್ನರಿತಿದ್ದ ಆತ ಶಾಂತಿಯನ್ನರಸುತ್ತಾ ಪ್ರಶಾಂತವಾದ ಸಮುದ್ರ ತೀರಕ್ಕೆ ಬಂದಿದ್ದ. ಅಲ್ಲದೆ ಗದ್ದಲ ಗಲಾಟೆಗಳಿಲ್ಲದ ನಿರ್ಜನ ಪ್ರದೇಶವನ್ನರಸಿ ಕುಳಿತು ನಿರಾತಂಕವಾಗಿ ಯೋಚಿಸುತ್ತಿದ್ದ.

ಯೋಚನೆ....ಮುಗಿಯದ ಯೋಚನೆ...ಎಷ್ಟು ಯೋಚಿಸಿದರೂ ಬಗೆಹರಿಯದ ಅಂತ್ಯವಾಗದ ಯೋಚನೆ. ಒಂದೆರಡು ವರ್ಷಗಳಿಂದಲೂ ಯೋಚಿಸುತ್ತ ಇದ್ದರೂ ಅದಕ್ಕೇನೂ ಪರಿಹಾರ ತೋರಿರಲಿಲ್ಲವಾದರೂ ಯೋಚನೆ ಎಡೆಬಿಡದೆ ಸಾಗುತ್ತಲೇ ಇತ್ತು.

ಆತನ ವಿಧವೆ ತಾಯಿ ಮುದ್ದಿನ ಒಬ್ಬನೇ ಮಗನೆಂದು ಇಪ್ಪತ್ತಕ್ಕೆ ಮದುವೆ ಮುಗಿಸಿ ಸರಳ ನಡೆ, ನುಡಿಯ ಶಾರದೆಯನ್ನು ಸೊಸೆಯನ್ನಾಗಿ ಮಾಡಿಕೊಂಡಾಗ ಮಾಧವ ಬೇಡವೆನ್ನಲಿಲ್ಲ. ತನಗಾಗಿ ಸರ್ವ ಸಂಕಷ್ಟಗಳನ್ನೂ ಸಹಿಸಿಕೊಂಡು ಜೀವ ಹಿಡಿದಿದ್ದ ಸೋತ ತಾಯ ಆಸೆ, ಆಕಾಂಕ್ಷೆಗಳನ್ನು ತೀರಿಸುವುದಷ್ಟೇ ತನ್ನ ಅಂದಿನ ಜೀವಿತದ ಮುಖ್ಯ ಧ್ಯೇಯವೆನ್ನುತ್ತಿದ್ದ ಮಾಧವ ಮದುವೆ ವಿಚಾರದಲ್ಲೂ ತಾಯ ಮನಸ್ಸಿಗೆ ವಿರೋದ ಸೂಚಿಸುವ ಗೊಡವೆಗೆ ಹೋಗಲಿಲ್ಲ. ಅಲ್ಲದೆ ಶಾರದೆಯಲ್ಲಾವ ಕೊರತೆಯೂ ಆತನಿಗೆ ಕಂಡುಬಂದಿರಲಿಲ್ಲ. ಶಾರದೆ ರೂಪಸಿಯಲ್ಲದಿದ್ದರೂ ಕುರೂಪಿಯೂಗಿರಲಿಲ್ಲ. ತನ್ನಿಂದಾಗಿ ಮನೆಯಲ್ಲಿ ಯಾರ ತೊಂದರೆ, ಗೊಂದಲಗಳೂ ಉಂಟಾಗದಂತೆ ಜಾಗ್ರತೆಯಿಂದ ವರ್ತಿಸುತ್ತಿದ್ದ ಶಾಂತ ಸ್ವಭಾವದ ಶಾರದೆ ಅತ್ತೆಗೆ ಮೆಚ್ಚಿನ ಸೊಸೆಯಾಗಿದ್ದಳಲ್ಲದೆ ಮಾಧವನಿಗೂ ಬೇಕಾದವಳಾಗಿಯೇ ಇದ್ದಳು. ಆದರೆ....ಅದೆಲ್ಲ ಹಿಂದೆ ಹಳ್ಳಿಯ ಮನೆಯಲ್ಲಿ ಎರಡು ವರ್ಷಗಳ ಹಿಂದೆ ನೆಲಸಿದಾಗ....ಮಾಧವನ ಸಂಪ್ರದಾಯಸ್ಥ ತಾಯಿ ಬದುಕಿದ್ದಾಗಿನ ಮಾತು.

ಆದರೆ ಈಗ...ಮದುವೆಯಾಗಿ ಐದು ವರ್ಷಗಳ ವರೆಗೂ ಯಾವ ಕೊರತೆಯೂ ಕಾಣಿಸದೇ ಇದ್ದ ಶಾರದೆಯಾಗ ತುಂಬಿ ಬಾರದ ಕೊರಗನ್ನೊದಗಿಸಿದ್ದಾಳೆ, ಅದಕ್ಕೆ ಪರಿಹಾರವೇ ಕಾಣದಾಗಿದೆ.

ತಾಯಿ ಸತ್ತ ಮೇಲೆ ಮಡದಿಯೊಂದಿಗೆ ಪಟ್ಟಣ ಸೇರಿ ಗುಮಾಸ್ತನಾಗಿ ಬಾಳು ನಡೆಸಲಾರಂಭಿಸಿದ ಮಾಧವನಿಗೆ ಎರಡು ವರ್ಷಗಳಿಂದ ತನ್ನ ನಿಜ ಜೀವನದ ಅರಿವಾಗಿತ್ತು. ಆತನ ಕಣ್ಣುಗಳಿಗೆ ಪ್ರಪಂಚ ಬಲು ಚೆನ್ನಾಗಿ ಕಾಣಿಸಲಾರಂಭಿಸಿತ್ತು. ಆದರೆ ಅಲ್ಲಿ ತನ್ನ ಬಾಳೊಂದು ಅಂಧಕಾರದಿಂದ ಮುಚ್ಚಿ ಹೋದಂತೆ ಕಾಣಿಸಲಾರಂಭಿಸಿತ್ತು. ಅದಕ್ಕಿಂತ ಮೊದಲು ಒಮ್ಮೆಯೂ ಯೋಚಿಸದಿದ್ದ ತನ್ನ ಮದುವೆ ಮತ್ತು ಮಡದಿಯ ವಿಚಾರದಲ್ಲಿ ಹೇಳಲಾಗದ ಅತೃಪ್ತಿ ಕಳವಳ ಉಂಟಾಗಲಾರಂಭಿಸಿತ್ತು. ಹಿಂದೆಂದೂ ಗೋಚರಿಸಿದ ಹೊಸ ದೃಷ್ಟಿಯೊಂದು ಆತನ ಮುಂದರಿದ ಮಿದುಳಿನೊಡನೆ ತಿಕ್ಕಾಟ ನಡೆಸಲಾರಂಭಿಸಿತ್ತು. ಆ ನವೀನ ದೃಷ್ಟಿಯಲ್ಲಿ ಸುಳಿಯುವ ಪೇಟೆಯ ಬಣ್ಣ ಬಣ್ಣದ ಥಳಕು ಥಳಕಿನ ನೂರಾರು ಸುಂದರಿಯರಿದಿರಿನಲ್ಲಿ ಶಾರದೆ ಕುರೂಪಿ ಮಾತ್ರವಲ್ಲ, ತನ್ನ ಜೀವನವನ್ನೇ ಹಾಳುಗೆಡಹಿದ ಪಾತಕಿ ಎಂದೆನಿಸುತಿತ್ತು, ಮಾಧವ ಪಟ್ಟಣ ಸೇರಿದ ಮೇಲೆ ಅಲ್ಲಿಯ ನವನಾಗರಿಕತೆಗೆ ತಕ್ಕಂತೆ ವೇಷ ಭೂಷಣಗಳನ್ನು ಬದಲಾಯಿಸಿಕೊಂಡು ಆಡಂಬರಪ್ರಿಯನಾಗಿ ಮೆರೆದಾಡುತ್ತಿದ್ದಾನೆ. ಆದರೆ....ಶಾರದೆ....ಅವನ ಸಹೋದ್ಯೋಗೀ ತರುಣಿಯರಿದಿರು ಸೂರ್ಯನಿದಿರಿನ ಮಿಣುಕು ಹುಳದಂತೆ ಕಾಣ ತೊಡಗಿದ್ದಾಳೆ. ದಿನಕ್ಕೊಂದು ರೀತಿಯ ಚಿತ್ರ ವಿಚಿತ್ರದ ವೇಷ ಧರಿಸಿ ಮೆರೆದಾಡುವ ಸಹೋದ್ಯೋಗಿನಿಯರ ಅಲಂಕಾರಪ್ರಿಯತೆಯನ್ನು ಮೆಚ್ಚಿದ ಮಾಧವನಿಗೆ ಶಾರದೆ ಎಂತಹ ಅವಿವೇಕಿ ಎಂದೆನಿಸ ತೊಡಗಿದೆ. ಅಷ್ಟೇ ಅಲ್ಲ, ಅಂತಹ ಡಾಂಭಿಕ ಜೀವನವನ್ನು ತಿರಸ್ಕರಿಸಿ ಶೃಂಗಾರ ಪ್ರದರ್ಶನವೇ ಮುಖ್ಯವೆನಿಸುವ ಜೀವನ ವೇಶ್ಯೆಯರಿಗೇ ಭೂಷಣವೆಂದು ಧೃಢವಾಗಿ ನಂಬಿ ಸರಳ ಜೀವನವೇ ತನ್ನದೆಂದು ನಡೆನುಡಿಯಲ್ಲಿ ತೋರುವ ಶಾರದೆ ಮಾಧವನಿಗೀಗ ಮೂರ್ಖ ಹೆಣ್ಣಾಗಿ ಕಾಣಿಸುತ್ತಿದ್ದಳು. ಮೊದಮೊದಲು ಅವಳ ನಿರಾಡಂಬರ ಜೀವನ ನೋಡಿ ಮೆಚ್ಚಿದ ಮಾಧವನಿಗೀಗ ಅದೆಲ್ಲ ಬೆಪ್ಪುತನದ ಪ್ರತೀಕವೆನಿಸುತಿತ್ತು. ಆಕೆಯನ್ನು ನೋಡಿದರೇ ತಿರಸ್ಕಾರ ಉಕ್ಕಿ ಹರಿಯುತಿತ್ತು. ನಾಲ್ಕು ಜನರಿದಿರು 'ದೊಡ್ಡ ಮನುಷ್ಯ' ರಂತೆ ಮೆರೆದಾಡುವ ಚಪಲ ಮಾಧವನದು. ಅವನಾದರೋ ತನ್ನ ಅರ್ಧಾಂಶ ಸಂಬಳವನ್ನು ತನ್ನ 'ದೊಡ್ಡತನ'ಕ್ಕಾಗಿ ಉಪಯೋಗಿಸುತ್ತಿದ್ದ. ಆದರೆ ಶಾರದೆಯೋ ಅದನ್ನು ಅನಾವ್ರಯವೆಂದು ವ್ಯಥೆ ಪಡುವವಳು.

ಶಾರದೆಯ ನೆನಪಾದಾಗಲೆಲ್ಲ ಆತನ ಮನಸ್ಸು ಬೇಡವೆಂದರೂ ರೂಪ ರಾಣಿ ರಾಧಾಳತ್ತ ಓಡುತಿತ್ತು. ಅಬ್ಬ! ಯೋಚನೆಯಿಂದಲೇ ಮೈ ರೋಮಾಂಚನ ಗೊಳ್ಳುತಿತ್ತು. ಬಣ್ಣ ಬಣ್ಣದ ಸಿಲ್ಕಿನ ಲಂಗ ಕಾಣಿಸುವ ಅನೈಲಾನ್ ಸೀರೆಯೋ ಬಣ್ಣ ಬಳಿದು ರಂಗೇರಿದ ಆ ಕೆಂದುಟಿಗಳೋ...ನ್ನೋ ಪೌಡರುಗಳಿಂದ ಹೊಳಪೇರಿದ ಮುಖ ಕಮಲವೋ...ಹತ್ತಾರು ಹೇರ್ ಪಿನ್‌ಗಳಿಂದ ಅಲಂಕರಿಸಿದ ಗುಂಗುರು ಕೂದಲ ರಾಶಿಯೋ ಅವೆಲ್ಲವನ್ನೂ ನಾಚಿಸುವ ಅತ್ಯಾಕರ್ಷಕವಾದ ಓರೆ ಕಣ್ಣೋಟದ ಮೈಯ ಕುಲುಕಾಟವೋ....ಒಂದೇ ಎರಡೇ ... ಎಲ್ಲ ವಿಧಗಳಿಂದಲೂ ರಾಧೆ ತನ್ನನ್ನು ಸಂಪೂರ್ಣವಾಗಿ ಆಕರ್ಷಿಸಿಕೊಂಡಿದ್ದಳು. ಆದರೆ.... ಮದುವೆಯಾದ ತಾನು ತನ್ನನ್ನೇ ನಂಬಿದ ಮಡದಿಯನ್ನು ಮೋಸಗೊಳಿಸಿ ರಾಧೆಯನ್ನು ತನ್ನವಳನ್ನಾಗಿ ಮಾಡಿಕೊಂಡರೆ ಛೆ! ಹೇಗೆ ಸಾಧ್ಯ? ಎಂತಹ ಅನ್ಯಾಯ!

ಆದರೂ ಶಾರದೆ...ಆಕೆ ಇದಿರು ಬಂದು ನಿಂತಾಗ, ಕುಳಿತಾಗ ಆ ಮುಖವನ್ನು ನೋಡಿದಾಗ ತಿರಸ್ಕಾರ ಉಕ್ಕುತ್ತಿದೆ. ಅಸಹ್ಯವಾಗುತ್ತಿದೆ. ಬೇಸರವೆನಿಸುತ್ತದೆ ಆ ಯಾಸಗೊಂಡು ಮನೆ ಸೇರಿದಾಗ ಅವಳೀಯುವ ಆದರದ ಸ್ವಾಗತ ದಣಿವನ್ನು ಇಮ್ಮಡಿಗೊಳಿಸುತ್ತದೆ. ಕೊಡುವ ಕಾಫಿ ಬೇವಿನ ಸವಿಯನ್ನೀಯುತ್ತಿದೆ. ಬೇಡ ಬೇಡವೆಂದರೂ ಅತೃಪ್ತಿ ಹೊರೆ ಸೂಸಿ ಮನಸ್ಸನ್ನು ಘಾಸಿಗೊಳಿಸಿ ಅವಳನ್ನು ನೋಯಿಸುವಂತೆ ಮಾಡುತ್ತದೆ.

. ಆಕೆ ನಿರಪರಾಧಿನಿ! ನಿಜ. ಆದರೆ.... ಬೇಡವಾದ ಹೆಣ್ಣಿನೊಂದಿಗೆ ಬಾಳು ನಡೆಸಲು ತೊಳಲಾಡುವ ನಾನು ಯಾವ ಅಪರಾಧ ಮಾಡಿದ್ದೇನೆ? ಅವಳಿಗಾಗಿಯೇ ಜೀವನವನ್ನೇ ಕಹಿಯನ್ನಾಗಿ ಮಾಡಿಕೊಂಡು ಸದಾ ಕಾಲವೂ ಕೊಂಗುತ್ತಿರುವುದು ಯಾವ ನ್ಯಾಯ?

ನ್ಯಾಯವೋ....ಅನ್ಯಾಯವೋ.. ಸಾಧ್ಯಾ ಸಾಧ್ಯತೆಯ ಪ್ರಶ್ನೆಯೂ ಬದಿಗಿರಲಿ. ರಾಧಾಳ ಸ್ನೇಹ ಸೌಖ್ಯವನ್ನಂತೂ ಖಂಡಿತ ಕಳೆದುಕೊಳ್ಳಲಾರೆ. ಪಟ್ಟಣಕ್ಕೆ ಬಂದ ಮೇಲೆ ಅವಳಂತಹ ನೂರಾರು ಹೆಣ್ಣುಗಳ ಕಣ್ಣೋಟದಿಂದ ತಪ್ಪಿಸಿಕೊಂಡು ದೃಢ ಮನಸ್ಸು ಮಾಡಿ ಕಲ್ಲೆದೆಯನಾಗಿ ಬಾಳಲು ಯತ್ನಿಸಿದ್ದರೂ ದಿನ ದಿನವೂ ತನ್ನನ್ನ ನೋಡಿ ನಗುವ ರಾಧೆಯಿಂದ ತಪ್ಪಿಸಿಕೊಳ್ಳುವುದು ಸಾಧ್ಯವೇ ಇಲ್ಲ.

ಶಾರದೆ...ಅಳು ಮೋರೆಯ ಮಗುವಿನೊಂದಿಗೆ ಬಾಡಿ ಸೊರಗಿದ ಶಾರದೆ.... ಅವಳಲ್ಲೇನಿದೆ? ಯಾವ ಆಕರ್ಷಣೆಯಿದೆ? ಸಂಸಾರ ತಾಪತ್ರಯಗಳಲ್ಲಿ ಸಿಕ್ಕಿ ನೊಂದು ಬಳಲಿದ ಸೋತು ಕೃಶಳಾದ ಅವಳಿಗಾಗಿ ತನ್ನ ಜೀವನವಿಡೀ ಗೋಳಾಡಲು ಅಂತಹ ದೃಢ ಚಿತ್ತ, ಆತ್ಮ ವಿಶ್ವಾಸ ನನ್ನಲ್ಲಿಲ್ಲವಲ್ಲ? ಅಲ್ಲದೆ ಶಾರದೆಗೆ ನಾನೇನೂ ಹೊಡೆದು, ಬಡಿದು ಹಿಂಸೆಕೊಡುತ್ತಲಿಲ್ಲ ಮನ ಮೆಚ್ಚಿದವಳೊಡನೆ ಸ್ನೇಹ ಬೆಳೆಸಿದ ಮಾತ್ರಕ್ಕ ಅವಳಿಗ್ಯಾವ ತೊಂದರೆ?

ರಾಧಾ....ತನ್ನ ಸಹೋದ್ಯೋಗಿನಿ, ತನಗಿಂತ ಒಂದು ಗಜ ದೂರದಲ್ಲೇ ಕುಳಿತುಕೊಂಡು ಕೆಲಸದಲ್ಲಿ ಮಗ್ನಳಾದವಳಂತೆ ನಟಿಸಿದ್ದರೂ ಆ ಕಣ್ಣುಗಳು ಎಷ್ಟು ಸಲ ತನ್ನೊಡನೆ ಕೂಡಿರಲಿಲ್ಲ! ಆಕೆ ನಕ್ಕಾಗ ತಾನು ತನ್ನ ಇರವನ್ನೇ ಮರೆ ತಿರಲಿಲ್ಲವೇ? ಆಕೆಗೂ ತನ್ನ ಭಾವನೆಗಳು ಈ

(೧೧ನೇ ಪುಟ ನೋಡಿರಿ)

ESTD. 1921 ಸ್ಥಾಪನೆ

NAVAYUGA
KANNADA WEEKLY, UDIPI.

Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಬಿಡಿಪ್ರತಿ ರೂ. 0-13

ಚಂದಾಪಣವನ್ನಾಗಲೀ ಜಾಹೀರಾತಿನ ಮೊಬಲಗನ್ನಾಗಲೀ ಸಿಂಡಿಕೇಟ್ ಬೇಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ವ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ವಿಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ಅಮೃತಾಂಜನ
ಎಲ್ಲಾ ನೋವುಗಳಿಗೆ ನಿಶ್ಚಿತ ಪಧ
ಎಲ್ಲಾಕರದ ಸಿಡಿತ ಮತ್ತು ನೋವುಗಳಿಗೆ
50 ವರ್ಷ ಪ್ರಾಯದ
ಪಾಕಟ್ ಡಾರ್ ಲಿ
ಅಮೃತಾಂಜನ ಲಿ. ಬೊಂಬಾಯಿ, ಮದರಾಸು, ಕಲ್ಕತ್ತಾ

ಋಶ್ಯವಂತ ಸಿಂಹರು ಕೇಳುತ್ತಾರೆ

ಪರಮಾತ್ಮನ ಅಸ್ತಿತ್ವವಿದೆಯೆ?

ಸುಮಾರು ಇಪ್ಪತ್ತು ವರ್ಷಗಳ ಹಿಂದಿನ ಮಾತು. ಆಗ ನಾನು ಯುವಕನಾಗಿದ್ದೆ. ಆ ಸಮಯದಲ್ಲಿ ಜಗಚ್ಚಕ್ರದ ಬಗ್ಗೆ ಹಲವಾರು ಪ್ರಶ್ನೆಗಳು ನನ್ನ ತಲೆಯಲ್ಲಿ ಎದ್ದೇಳುತಿದ್ದುವು. ನನ್ನ ಜಿಜ್ಞಾಸೆಯು ವಾಸ್ತವಿಕವಿದ್ದುದರಿಂದ ಬಾಲಿಶ ವಿಚಾರಗಳಂತೆ ಮಿಂಚಿ ಮಾಯವಾಗುತ್ತಿರಲಿಲ್ಲ. ನಿಜ್ಞಾಸುವಿರಲಿ ಆಧ್ಯಾತ್ಮಿಕವಿರಲಿ, ನನಗೆ ಸಂತೃಪ್ತಿಯನ್ನು ನೀಡುತ್ತಿರಲಿಲ್ಲ. ವಿಶ್ವವನ್ನು ಯಾರು ಸೃಷ್ಟಿಸಿದರು ಎಂಬ ಪ್ರಶ್ನೆಗೆ ಸೂಕ್ತ ಉತ್ತರ ಕೊಡಲು ಅವು ಅಸಮರ್ಥವಾಗಿದ್ದುವು. ಸೃಷ್ಟಿಯನ್ನು ಭಗವಂತನೆಂಬ ಒಂದು ಶಕ್ತಿಯೇ ಉಂಟುಮಾಡಿತೆಂದು ಒಪ್ಪುವುದಾದರೂ ಭಗವಂತನನ್ನು ಯಾರು ಸೃಷ್ಟಿಮಾಡಿದರು ಎಂಬ ಪ್ರಶ್ನೆಗೆ ಅವು ಮೌನವಾಗುತ್ತಿದ್ದವು.

ಇಂತಹ ಪರಿಸ್ಥಿತಿಯಲ್ಲಿ ಒಂದು ವಿಸ್ಮಯದ ಘಟನೆ ನಡೆಯಿತು. ಸೆಕೆಗಾಲದ ದಿನಗಳಿದ್ದುವು. ಪ್ರಾತಃಕಾಲದಲ್ಲಿಯೇ ಸೊತ್ತ ಮೊದಲಿಗೆ ಮಳೆ ಸುರಿಯ ತೊಡಗಿತು. ನಾನು ನನ್ನ ಕುಟುಂಬದವರೊಡನೆ ಮತ್ತು ಒಬ್ಬ ಮುಸಲ್ಮಾನ ಮಿತ್ರನೊಡನೆ ಉದ್ಯಾನದಲ್ಲಿ ವಿಹರಿಸಲು ಹೊರಟೆ. ಉಪವನದಲ್ಲಿ ನಾವು ಚೆಂಡಾಡತೊಡಗಿದೆವು. ಚೆಂಡು ಹುಲ್ಲು, ಒಂದು ಮರದ ಕೊಂಬೆಯೆಡೆ ಸಿಕ್ಕಿಗೊಂಡಿತು. ನಾವು ಕಲ್ಲೆಸೆದು ಅದನ್ನು ಉರುಳಿಸುವ ಪ್ರಯತ್ನ ಮಾಡಿದೆವು. ಆದರೆ, ಆ ಪ್ರಯತ್ನ ವಿಫಲವಾಯಿತು. ಕೊನೆಯಲ್ಲಿ, ನಾವು ಚೆಂಡು ಮರಳಿ ಪಡೆಯುವ ಆಸೆಯನ್ನು ಬಿಟ್ಟುಕೊಟ್ಟು, ಮುಂದುವರಿದೆವು. ತುಸು ಹೊತ್ತಿನ ನಂತರ ತಿರುಗಾಡಿ ಮರಳುವಾಗಲೂ ಬೆಂಡು ಅಲ್ಲಿಯೇ ಕೊಂಬೆಯೆಡೆಯಲ್ಲಿ ಇಣುಕುತಿತ್ತು. ಈಗ, ನಾವದನ್ನು ಉರುಳಿಸುವ ಯೋಚನೆ ಮಾಡಲಿಲ್ಲ. ಅಕಸ್ಮಾತ್ತಾಗಿ ನನ್ನ ತಲೆಯೊಳಗೊಂದು ಭಾವ ಹೊಳೆಯಿತು. 'ಚೆಂಡು ಕೆಳಗೆ ಉರುಳಿದರೆ, ಪರಮಾತ್ಮನೆಂಬ ಹೆಸರಿನ ಒಂದು ಶಕ್ತಿಯಿದೆ ಎಂದು ನಾನು ನಂಬುವೆನೆಂದು' ನನ್ನ ಬಾಯಿಂದ ತಾನಾಗಿಯೇ ಹೊರಟಿತು.

ನಿಮಗೆ ಆಶ್ಚರ್ಯವಾಗಬಹುದು; ನಿಮಗೆಂದೇನು, ನನಗೆಲ್ಲರಿಗೂ ವಿಸ್ಮಯವೇ ವಿಸ್ಮಯ! ಎಲ್ಲಿಂದಲೋ ತುಸು ಜೋರಾದ ಗಾಳಿ ಬೀಸಿತು; ಚೆಂಡು ನೇರಾಗಿ ಉರುಳಿ ನನ್ನ ಕೈಗಳಲ್ಲೇ ಬಿದ್ದು ಬಿಟ್ಟಿತು. ನಾವು ಅರೆಕ್ಷಣ ಸ್ತಂಭೀಭೂತರಾಗಿ ನಿಂತು ಬಿಟ್ಟೆವು. ಮೋಹ ಜಾಲವು ಕಡಿದಾಗ ನನ್ನ ಬಾಯಿಯಿಂದ ಉದ್ಗಾರ ಹೊರಟಿತ.: "ಏನೇ ಆಗಲಿ, ನಾನು ಒಪ್ಪಲಾರೆ"

ಧಾರ್ಮಿಕ ಪ್ರವೃತ್ತಿಯ ಜನರು ಈ ಘಟನೆಗೆ ಯಾವ ಅರ್ಥಕಟ್ಟುತ್ತಾರೆಂದು ನಾನು ಹೇಳಲಾರೆ. ಸಂಶಯ ವಾದಿಯಾದ ನಾನು ಮಾತ್ರ ಇದೊಂದು ಸಂಯೋಗ; ಅಥವಾ ಕಾಕತಾಳೀಯವೆಂದು ಅಂದುಕೊಂಡೆ. ನಾನು ನನ್ನ ಪಂಚೇಂದ್ರಿಯಗಳು ಗೃಹಣ ಮಾಡುವುದನ್ನು; ತರ್ಕ ಸಂಗತವಿರುವುದನ್ನು ಮಾತ್ರ ನಂಬುವವನು. ದರ್ಶನ, ಸ್ಪರ್ಶ, ಶ್ರವಣಗಳಿಗೆ ನಿಲುಕದ ಗಂಧ, ಸ್ವಾದ ದೊರೆಯದ, ಸರಳ ಹಾಗೂ ಸಾಮಾನ್ಯ ಅರ್ಥಗಳಿಗೆ ಎಟಕದ ವಿಚಾರಗಳು ಅರ್ಥಹೀನವೆಂಬ ಭಾವನೆ ನನ್ನದು.

ಹಾಗಿದ್ದರೂ ಮೇಲಿನ ಘಟನೆಯು ನನ್ನ ಮನಸ್ಸಿನಲ್ಲಿ ತುಂಬಿತ್ತು; ಎಂತಲೇ ಅದು ಭಾರವಾಗಿತ್ತು. ನಾನು ಯಾವುದೋ ವಚನ ಭಂಗಕ್ಕೆ ಪಕ್ಕಾಗಿದ್ದೇನೆಂದು ನನ್ನ ಮನಸ್ಸು ಹೇಳತೊಡಗಿತು. ಪರಮಾತ್ಮನು ಕಾರ್ಯಕಾರಣ ಮತ್ತು ತರ್ಕವಿತರ್ಕಗಳಿಗೆ ಹೊರಗಾದವನು ಎಂಬ ಭಕ್ತರು ಹೇಳುತ್ತಾರಿಂದೊಬ್ಬನೆಂದನು. ಆತನನ್ನು ಪ್ರಾಪ್ತ ಮಾಡಬೇಕಾದರೆ ಅಧ್ಯಾತ್ಮಿಕ ಅನುಭವ ಬೇಕಂತೆ. ಆತನಲ್ಲಿ ದೃಢವಿಶ್ವಾಸ ವಿರುವವನಿಗೆ ಮಾತ್ರ ಇದರ ಅನುಭವವಾಗುವುದಂತೆ.

ಇಂತಹ ತರ್ಕಗಳನ್ನು ಕೇಳಿದರೆ, ನನಗೆ ಸಿಟ್ಟೇರುತ್ತದೆ. ನನಗೆ ಪರಮಾತ್ಮ ಸಾಕ್ಷಾತ್ಕಾರ ಮಾಡಿಕೊಳ್ಳಲು ಆಧ್ಯಾತ್ಮಿಕ ಸಮೃದ್ಧಿಯ ಸಾಧನೆ ಮಾಡಬೇಕಾದರೆ ನೀನು ನನಗದನ್ನು ಕಲಿಸಿಕೊಡು ಎಂದು ನಾನು ಯಾರೊಡನೆ ಕೇಳ ಬೇಕು? ನಿಜವಾಗಿಯೂ ವಿಸ್ಮಯದ ಸಂಗತಿ; ಆದರೆ, ಒಂದು ದಿನ ನನ್ನ ಜೀವನದಲ್ಲಿಯೇ ಅಂತಹ ಘಟನೆಯೊಂದು ಘಟಿಸಿತು.

ನಾನು ಪೆನಿಸಿನಿಂದ ಮಿಲಾನಿಗೆ ಮೋಟಾರುಗಾಡಿಯಲ್ಲಿ ಪ್ರಯಾಣಿಸುತ್ತಿದ್ದೆನು. ಸಂಧ್ಯಾಕಾಲವಾಗಿತ್ತು. ದಾರಿಯಲ್ಲಿ ಕತ್ತಲು ಹರಡುತಿತ್ತು. ರಾತ್ರಿ ತಂಗಲು ಗಾಡಿಯು ಸರೋವರದತ್ತ ಮುಂದುವರಿಯಿತು. ತುಸು ಮುಂದೆ ಹೋಗುತ್ತಲೇ ನಾನು ಸಾನ್ ಸಿರೆಪನ್ ಅನ್ನು ಮುಟ್ಟಿದೆ. ಅಲ್ಲಿ ವಿಮಾನುಗಾರರ ಮನೆಗಳಿದ್ದುವು. ಆಗ, ವಿಮಾನುಗಾರರು ತಮ್ಮ ದೋಣಿಗಳನ್ನು ದಡದತ್ತ ತರುತಿದ್ದರು. ಜಲಪಕ್ಷಿ ಮತ್ತು ಲಹರಿಗಳ ಕಲರವದೊಡನೆ ಅವರ ಗೀತಗಳ ಧ್ವನಿಯು ವಾತಾವರಣದಲ್ಲಿ ಹರಡಿತ್ತು. ಹೋಟಲಿನಲ್ಲಿ ಸಾಮಾನುಗಳನ್ನು ಇಳಿಸಿ ನಾನು ಸಮೀಪದ ಬೆಟ್ಟವೊಂದನ್ನು ಏರಿದೆನು. ಅಲ್ಲಿ ಶಾಂತಿಯು ಕವಿದಿರುವಂತೆ ನನಗೆ ಭಾಸವಾಯಿತು. ಒಂದು ಮರದ ಕೆಳಗೆ ನಾನು ಮಲಗಿದೆ; ಎಲೆ ಮತ್ತು ಕೊಂಬೆಗಳ ನಡುವೆ ಮಿನುಗುತಿದ್ದ ಆಕಾಶವನ್ನು ವೀಕ್ಷಿಸ ತೊಡಗಿದೆ.

ಆಲ್ಲಿಯೇ ಹತ್ತಿರದ ಕೊಂಜೆಯೊಂದರಲ್ಲಿ ಬುಲ್ ಬುಲ್ ಬೆಲಿಸಿಲಿಗುಟ್ಟ ತೊಡಗಿತು. ಎಲ್ಲ ಧ್ವನಿಗಳೂ ತಿರೋಹಿತವಾದಂತೆ ಭಾಸವಾಯಿತು. ಆ ಅಂಧಕಾರ ಹರಡಿದ್ದ ಆಕಾಶವು ರಕ್ತವರ್ಣವನ್ನು ಪಡೆಯಿತು; ಅದರಲ್ಲಿ ಎಲ್ಲ ನಕ್ಷತ್ರಗಳು ಲುಪ್ತವಾದುವು. ಕೇವಲ ಸಂಧ್ಯಾತಾರೆ (ಶುಕ್ರ ನಕ್ಷತ್ರ) ಹೊಳೆಯುತಿತ್ತು. ಬುಲ್ ಬುಲ್‌ನ ಸ್ವರ್ಗೀಯ ಸಂಗೀತ ಕವಿಗೆ ಜೀನು ಸುರಿಯುತಿತ್ತು. ಯಾರೋ ನನ್ನನ್ನು ಭಾರ ಮುಕ್ತ ಮಾಡಿದಂತೆ ನನಗನಿಸಿತು; ನಾನು ಆ ರಕ್ತ ಪ್ರಕಾಶದಲ್ಲಿ ಈಜುತ್ತಿರುವಂತೆ ಜನ್ಮಭವಕ್ಕೆ ಬಂದಿತು. ಇಂತಹ ತನ್ಮಯ ಸ್ಥಿತಿ ಎಂದಿನ ವರೆಗಿತ್ತೆಂದು ಹೇಳಲಾರೆ. ಆದರೆ, ನನ್ನ ತಂದ್ರಾವಸ್ಥೆಯು ಕೊನೆಗೊಂಡಾಗ, ಅಧಕಾರವು ಆವರಿಸಿತ್ತು; ಗಾಳಿಯಲ್ಲಿ ತಂಪು ಕಾಣಿಸಿತ್ತು. ಆಕಾಶದಲ್ಲಿ ಪೂರ್ಣ ಚಂದ್ರನು ಚಮಕಿಸುತಿದ್ದ.

ಇಂತಹ ಸ್ವರ್ಗೀಯ ಸಂಗೀತದ ಅನುಭವ ಕೇವಲ ನನಗೆ ಮಾತ್ರವಲ್ಲ; ಇನ್ನೂ ಹಲವಾರು ಜನರಿಗಾಗಿದೆ. ಪ್ರಸಿದ್ಧ ಇಂಗ್ಲಿಷ್ ಕವಿ ಮಹಾ ಸಮಾಲೋಚಕ ಮೇಥ್ಯೂ ಅರ್ನಾಲ್ಡ್ ಮತ್ತು ಕೀಟ್ಸ್‌ರಿಗೂ ಆಗಿದೆ ವಿಶ್ವ ಕವಿ ರವೀಂದ್ರನಾಥ ಟಾಗೋರರೂ ಇಂತಹ ಅನುಭವವನ್ನು ಪಡೆದಿದ್ದಾರೆ.

ಸಂಗೀತದ ಸ್ವರ್ಗೀಯ ಪ್ರಭಾವದ ಇನ್ನೊಂದು ಅನುಭವ ನನಗಾಗಿದೆ. ಬುಲ್ ಬುಲ್‌ನ ಕುಹೂರ ನನ್ನ ಮನಸ್ಸಿನಿಂದ ದೂರವಾಗಿಲ್ಲ. ಜೂನ್ ತಿಂಗಳು. ನನ್ನ ಕಾರ್ಯಾಲಯದಲ್ಲಿ ನನ್ನ ಕೇಬಿನ್‌ನಿಂದ ತುಸು ದೂರದಲ್ಲಿ ಒಬ್ಬ ಕರ್ಮಚಾರಿಯ ಕೇಬಿನ್ ಇತ್ತು. ಆತನೊಂದು ಪದ್ಯವನ್ನು ಗೊಣಗುಟ್ಟುವ ಧ್ವನಿ ಕೇಳಾಡತೊಡಗಿತು. ಅದೇ ಸ್ವರ್ಗೀಯ ಸಂಗೀತದ ಅಲೆಗಳು ಏಳುತ್ತಿರುವಂತೆ ನನಗೆ ಭಾಸವಾಯಿತು ಊರಿ ಬಿಸಿಲಿನ ವಾತಾವರಣದಲ್ಲಿಯೂ ತಂಪು ಹರಡಿದಂತೆ ಅನುಭವವಾಯಿತು. ಜೋರಾದ ಮಳೆ ಸುರಿದು, ತಂಪು ಹುಟ್ಟಿಕೊಂಡಂತೆ, ಶೀತಲವಾಯು ತನು ಮನಗಳನ್ನು ಸ್ಪರ್ಶಿಸುತ್ತಿರುವಂತೆ ಕಂಡಿತು.

ಈ ಅನುಭವಗಳಿಂದ ಪರಮಾತ್ಮನ ಅಸ್ತಿತ್ವವು ಇದ್ದರೂ ಇರಬಹುದು ಎಂಬ ವಿಶ್ವಾಸ ಹುಟ್ಟಿತು. ಆದರೆ, ಈ ತೆರದ ತನ್ಮಯತೆ ಮತ್ತು ಪರಮಾತ್ಮನ ಸಾಕ್ಷಾತ್ಕಾರದ ವಿಷಯದಲ್ಲಿ ಧಾರ್ಮಿಕರು ಹೇಳುವಂತೆ ನಾನನ್ನಲಾರೆ. ಏಕೆಂದರೆ ಅಂತಹ ಭಾವನೆಯು ನನ್ನಲ್ಲಿ ಹುಟ್ಟುವುದೂ ಇಲ್ಲ.

ಸ್ವರ ಶಕ್ತಿಯ ರಹಸ್ಯವರಿಯದ, ಸ್ವರ್ಗೀಯ ಸಂಗೀತದ ಗುಟ್ಟು ತಿಳಿಯದ ಕವಿಯನಂತೆ ನಾನಿದ್ದೆ. ದೀಪವನ್ನು ಕಂಡ ಕುರುಡನಂತೆ ಮಾತ್ರ ನಾನಾಗಾಗಿದ್ದೆ.

ಸತ್ಕ ನಂತರ ಏನಾಗುವುದು ಎಂಬುದರ ಬಗ್ಗೆ ಕೆಲವು ದಿನಗಳಿಂದ ನನ್ನ ಮನಸ್ಸು ಹೊಯ್ದಾಡಿಕೊಳ್ಳುತ್ತಿತ್ತು. ಎಲ್ಲವೂ ಕೊನೆಗೊಳ್ಳುವುದೆ? ಏನಾದರೂ ಬಾಕಿ ಉಳಿಯುವುದೆ? ಒಬ್ಬ ವ್ಯಕ್ತಿಯ ಇಲ್ಲವೇ ಇನ್ನಾವುದೇ ಮಾಧ್ಯಮದಿಂದ ಸತ್ಕವರೊಡನೆ ಸಂಬಂಧ ಕಲ್ಪಿಸುವನಲ್ಲ ನಾನು, ಹಾಗಿದ್ದರೂ ಮೃತ್ಯು ವೆಂದರೆ ಎಲ್ಲದರ ಕೊನೆಯಲ್ಲವೆಂಬ ಅಸ್ಪಷ್ಟ ಭಾವನೆಯು ನನ್ನ ಮನಸ್ಸಿನ ಮೂಲೆಯಲ್ಲಿ ಹುಟ್ಟುತಿತ್ತು.

ಈ ಸಂಬಂಧದಲ್ಲಿಯೂ ನನಗೊಂದು ವಿಚಿತ್ರ ಅನುಭವವಾಯಿತು. ನನ್ನ ಮುದಿ ಅಜ್ಜಿ ಧಾರ್ಮಿಕ ಪ್ರವೃತ್ತಿಯವಳು. ಆಕೆಯು ದಿನದ ಬಹುಭಾಗವನ್ನು ಧರ್ಮಚರ್ಚೆ, ಭಜನೆ, ದಾನಾದಿಗಳಲ್ಲಿ ಕಳೆಯುತಿದ್ದಳು. ಹೆಚ್ಚಾಗಿ ಆಕೆ ದೇವಾಲಯಗಳಿಗೆ ಹೋಗಿ ಬರುತಿದ್ದಳು. ಒಮ್ಮೆ ಆಕೆ ಖಾಯಿಲೆ ಬಿದ್ದಳು; ತಾನು ಬದುಕುವುದಿಲ್ಲವೆಂಬ ಭಾವನೆಯೂ ಆಕೆಯಲ್ಲಿ ಪುಟ್ಟಿಕೊಂಡಿತು. ಆಕೆ ತನ್ನ ಕೂಡಿಟ್ಟ ಸಂಪತ್ತನ್ನು ದಾನ ಧರ್ಮ ಮಾಡತೊಡಗಿದಳು. ಆಕೆ ಹೀಗೆಯೇ ಹೊರಟು ಹೋದಳು.

ಆಕೆಯ ಮರಣದ ಮೂರನೆಯ ದಿನ ಅಪರಾಹ್ನ ನಾನು ಕೋಡೆಯಲ್ಲಿ ಸುಮ್ಮನಾಗಿ ಕುಳಿತಿದ್ದೆ; ನನ್ನ ಕಣ್ಣುಗಳು ಹಾರತೊಡಗಿದವು. ನಾನು ಸ್ವಪ್ನದಲ್ಲಿರುವಂತೆ ಭಾಸವಾಯಿತು. ಆ ಸ್ವಪ್ನದಲ್ಲಿ ನನ್ನ ಮುಂದೆ ಅಜ್ಜಿ ನಿಂತಿರುವಂತೆಯೂ ಒಂದು ಕವಾಟದತ್ತ ಕೈಯ್ಯಿಂದ ಸಂಕೇತ ಮಾಡುತ್ತಿರುವಂತೆಯೂ ಕಂಡಿತು. ಆಕೆ ತನ್ನ ಕೈ ಎಳೆದು ಆ ಕವಾಟಿನ ವರೆಗೆ ಎಳೆಮುಕೊಂಡೂ ಹೋದಳು; ಅದರಲ್ಲಿ ಆಕೆ ತನ್ನ ಬಟ್ಟೆಬರೆಗಳನ್ನು ಇಡುತಿದ್ದಳು. ಒಬ್ಬಿಯ ಕೆಳಗೆ ವರ್ತಮಾನ ಪತ್ರಗಳ

(೧೦ನೇ ಪುಟ ನೋಡಿ)

ದಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಡೊಂಗರಕೇರಿ, ಮಂಗಳೂರು-3

ಪರಿಷ್ಕರಿಸಿದ ಮತ್ತು ಪೆಚ್ಚಿಸಿದ ಠೇವಣಾತಿ ಬಡ್ಡಿ ದರಗಳು:

ಕಾಯಂ ಠೇವಣಾತಿಗಳು:			ರೂ. ನ.ಪೈ.ಸೆ
ಒಂದರಿಂದ ಮೂರು ತಿಂಗಳು ವರೆಗೆ	ವಾರ್ಷಿಕ	ಸೇಕಡಾ	4-50
ಆರರಿಂದ ಹನ್ನೆರಡು ತಿಂಗಳು ವರೆಗೆ	,,	,,	4-75
ಹದಿಮೂರರಿಂದ ಇಪ್ಪತ್ತನಾಲ್ಕು ತಿಂಗಳು ವರೆಗೆ	,,	,,	5-00
ಇಪ್ಪತ್ತೈದರಿಂದ ಮೂವತ್ತಾರು ತಿಂಗಳು ವರೆಗೆ	,,	,,	5-25
ನಾಲ್ವತ್ತೆಂಟು ತಿಂಗಳು ಮತ್ತು ಹೆಚ್ಚಿಗೆ	,,	,,	5-50
ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು	,,	,,	3-25

ನಿಮ್ಮ
ದಿನನಿತ್ಯದ ಉಳಿತಾಯವನ್ನು ಮಾಸಿಕ ಉಳಿತಾಯವನ್ನು
ಹಣ ವಿಪ್ರೇಷಿಟುಗಳಲ್ಲಿ ಕ್ಯಮುಲೇಟಿವ್ ಡಿಪೋಸಿಟುಗಳಲ್ಲಿ
ವಿನಿಯೋಗಿಸಿರಿ.

THE KARNATAKA BANK LIMITED

3—7—1962

ವಿನೋಬಾ ಬಯಸುತ್ತಾರೆ

ಸೂರ್ಯನಾರಾಯಣನ ಆದರ್ಶ

ಸ್ವಾತಂತ್ರ್ಯಪ್ರಾಪ್ತಿಯಾದ ನಂತರ ನಾವು ಸಾಧಿಸಿದ್ದೇನು ಎಂಬುದನ್ನು ಸಿಂಹಾವಲೋಕನ ನಡೆಸುವುದಾದರೆ, ನಮ್ಮ ನಾಯಕರು ಹೇಳುವಂತೆ ರಾಷ್ಟ್ರದ ಪುನಾರಚನೆಯ ಕಾರ್ಯವೆನ್ನಬೇಕು. ಈ ಕಾರ್ಯವಿನ್ನೂ ಪ್ರಾಥಮಿಕ ಹಂತದಲ್ಲಿಯೇ ಇದೆಯೆಂದೂ ಹೇಳಬೇಕಾಗುವುದು. ಅದರೂ ಮಾನಸಿಕ ಪುನಾರಚನಾ ಕಾರ್ಯದಲ್ಲಿ ನಾವು ಪ್ರಾತ್ಯಕ್ಷಿಕಕ್ಕಿಂತ ಮುಂದುವರಿದ್ದೇವೆಯೆಂದರೆ ಅನುಚಿತವಲ್ಲ.

ಸ್ವಾತಂತ್ರ್ಯವನ್ನು ನಮ್ಮ ದೇಶ ಗಳಿಸಿಕೊಂಡಿತು. ಅದುದರಿಂದ ನಮ್ಮ ದೇಶದ ಸರಕಾರಿ ನೌಕರರು ಜನತೆಯ ಸೇವಕರಾದರು; ಏಕೆಂದರೆ, ಇಲ್ಲಿ ಪ್ರಜೆಗಳೇ ಪ್ರಭುಗಳು ತಾನೆ? ಹಾಗಿರುವಾಗ, ಸ್ವಾತಂತ್ರ್ಯಕ್ಕೆ ಮೊದಲು ಸರಕಾರಿ ನೌಕರರು ಜನತೆಯ ಸೇವೆಯನ್ನು ಮಾಡುತ್ತಿದ್ದಿರಲಿಲ್ಲವೇ ಎನ್ನಬಾರದು. ಸರಕಾರಿ ನೌಕರರು ತಂತಮ್ಮ ಪ್ರಭುಗಳ ಆಜ್ಞೆಯಂತೆ ನಡೆಯಬೇಕಾದವರು. ಆ ಕಾಲದಲ್ಲಿ ಆ ಕಾಲದ ಪ್ರಭುಗಳ ಕಿಂಕರರಾಗಿದ್ದವರು ಈ ಕಾಲದಲ್ಲಿ ಪ್ರಜೆಗಳ ದಾಸರೆನಿಸಿದ್ದಾರೆ; ಅವರವರ ಮೇಲಧಿಕಾರಿಗಳು ಹಾಕಿಕೊಟ್ಟ ಶ್ರೇಕಾರ ಬಳಿಯನ್ನು ಮುಂದುವರಿಸುತ್ತ ಹೋಗುವುದಷ್ಟೆ ಅವರ ಕರ್ತವ್ಯ. ಹಿಂದಿನ ಸರಕಾರವು ಯಾವ ಕಾರ್ಯಯೋಜನೆಯನ್ನು ಕೈಗೊಂಡಿದ್ದರೂ ಅದರ ಪರಿಣಾಮ ಒಂದೇ. ರಾಷ್ಟ್ರದ ವಿಘಟನೆ ಮತ್ತು ವಿದೇಶೀಯ ಹಿತಸಂಬಂಧಗಳ ರಕ್ಷಣೆ. ಆದುದರಿಂದ ವಿಘಟನಾ ತಂತ್ರಜಾಲದಿಂದ ರೂಪಿತವಾಗಿದ್ದ ಅಂದಿನ ಸರಕಾರವು ದೇಶದ ಒಳಿತನ್ನು ಸಾಧಿಸಲಿಲ್ಲ ಇಂದು ದೇಶದ ಹಳ್ಳಿಗಳಲ್ಲಿ 'ಸರ್ವೆ'ಯ ಕಾರ್ಯವು ನಡೆಯುತ್ತ ಇದೆ. ಬ್ರಿಟಿಷ ಅಧಿಸತ್ಯದಲ್ಲಿಯೂ ಹೀಗೆ ನಡೆಯುತಿತ್ತು. ಹಿಂದೆ ನಡೆಯುತಿದ್ದ ಸರ್ವೆ ಕಾರ್ಯವನ್ನು ವಿದೇಶೀ ವ್ಯಾಪಾರೋದ್ಯಮಗಳ ಉನ್ನತಿಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಮಾಡುತಿದ್ದರೆಲ್ಲದೇ ದೇಶವು ಉತ್ತಮವಾಗಬೇಕೆಂಬ ಹಂಬಲದಿಂದಲ್ಲ ಆದರೆ, ಇಂದು ದೇಶದ ಹಳ್ಳಿಗಳಲ್ಲಿ ನಡೆಯುತ್ತಿರುವ ಸರ್ವೆಯ ಕೆಲಸವು ಗ್ರಾಮಾಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು ಮುಂದುವರಿಯುತ್ತಿದೆಯೆಂಬುದನ್ನು ಮರೆಯಬಾರದು. ಇದೇ ಸ್ವಾತಂತ್ರ್ಯ ಮತ್ತು ಪಾರತಂತ್ರ್ಯಗಳ ನಡುವಣ ಅಂತರ. ದೇಶದ ಸಂಪತ್ತನ್ನು ಸದುಪಯೋಗ ಮಾಡಿಕೊಳ್ಳುವ ರೀತಿ ವಿಧಾನಗಳಾವುವೆಂಬುದನ್ನು ಅರಸುವುದಕ್ಕಾಗಿ, ರಾಷ್ಟ್ರದ ಜನತೆಯ ಅಪಾರ ಶಕ್ತಿಯನ್ನು ದೇಶದ ಹಿತಸಾಧನೆಗೆ ಹೇಗೆ ಬಳಸಬಹುದೆಂಬುದನ್ನು ನೋಡುವುದಕ್ಕಾಗಿ ಇಂದು ಸರ್ವೆ, ಪರ್ಯವೇಕ್ಷಣೆಗಳು ನಡೆಯುತ್ತವೆ.

ಸ್ವಾತಂತ್ರ್ಯ ಪೂರ್ವದಲ್ಲಿಯೂ ಆಗಿನ ಸರಕಾರದ ಆಡಳಿತೆದಾರರು ಮತ್ತು ನೌಕರರು ಗ್ರಾಮಾಂತರ ಸಂಚಾರ ಮಾಡುತಿದ್ದರೇನೋ ನಿಜ; ಆದರೆ, ಹಳ್ಳಿಗರು ಅವರನ್ನು ಕಂಡು ಹೆದರುತಿದ್ದರು. ಜನತೆಯ ಉಡುಗೆತೊಡುಗೆಗಳೊಡನೆ ಎಂದೂ ಸಂಪರ್ಕವಿಲ್ಲದ ಬಟ್ಟೆಬರಿಗಳು ಅಧಿಕಾರಿಗಳ ಮೈಮೇಲಿದ್ದುವು. ಇದರಿಂದಲೇ ಜನರು ಬೆದರುತಿದ್ದರು. ಅಂದಿನ ಅಧಿಕಾರಿಗಳು, ತಾವು ಜನತೆಯಿಂದ ಬೇರೆಯಾದವರೆಂದು ತೋರ್ಪಡಿಸಿ ಬಯಸುತಿದ್ದರು. ಉಷ್ಣದಲ್ಲಿ ಉಷ್ಣಕರವಾದ ಹವಾಮಾನವಿರುವಲ್ಲಿ ಸೆಖೆಯು ಬೇಗೆಯನ್ನು ತಾಳಲಾರದೆ ಹೋದರೂ ನೆಕ್‌ಟೈ ಇಲ್ಲದೆ ಅಲಂಕಾರ ಪೂರ್ಣವಾಗದೆಂಬ ಭಾವನೆ ಅವರದಾಗಿತ್ತು. ಇಂಗ್ಲಿಷಲ್ಲದ ಇತರ ಭಾಷೆಯನ್ನು ಆಡುವುದು ತಮಗೆ ಅಪಮಾನವೆಂಬುವವರ ಕಲ್ಪನೆ. ಜನತೆಯನ್ನು ಹೆದರಿಸುವಲ್ಲಿಯೇ ತಮ್ಮ ಘನತೆಯಡಗಿದೆ ಎಂದವರು ಭಾವಿಸುತಿದ್ದರು.

ಇಂದು, ಸ್ವಾತಂತ್ರ್ಯೋತ್ತರದ ಪರಿಸ್ಥಿತಿ ಹೀಗಿರುವುದಿಲ್ಲ. ಸಾಮಾನ್ಯವಾಗಿ, ರಾಜ್ಯ ಮಟ್ಟದ ವ್ಯವಹಾರವು ಪ್ರಾದೇಶಿಕ ಭಾಷೆಗಳ ಮಾಧ್ಯಮದಲ್ಲಿ ನಡೆಯುತ್ತಿದೆ. ರೈತನು ಮನೆಯಲ್ಲಿ ಮಾತಾಡುವ ಭಾಷೆಯನ್ನು ಆತನು ನ್ಯಾಯಾಲಯದಲ್ಲಿಯೂ ಆಡಬಹುದು. ಸ್ವಾತಂತ್ರ್ಯದ ಸೂರ್ಯೋತ್ತರದ ಸರಕಾರಿ ನೌಕರರಲ್ಲಿಯೂ ದರೂ ಮಾನಸಿಕ ಪರಿವರ್ತನೆ ನಡೆದಿದೆ. ಹೆಚ್ಚು ಹೆಚ್ಚಾಗಿ ಪ್ರೀತಿಸಿದವನು ತ್ಯಾಗ ಮಾಡಿದವನು ಆದರಣೀಯನೆನಿಸುವುದು ಭಾರತೀಯ ಸಂಸ್ಕೃತಿಯ ವೈಶಿಷ್ಟ್ಯ. ಸಾಮಾನ್ಯ ಜನರು ಅನುಭವಿಸುವ ಸುಖಭೋಗಗಳಿಗಿಂತ ಹೆಚ್ಚಿನದನ್ನು ತಾನು ಅನುಭೋಗಿಸುವುದು ನಮ್ಮಸಂಸ್ಕೃತಿಗೆ ಘೃಣಾಸ್ಪದ. ಜನತೆಯನ್ನು ಎತ್ತರಿಸುವುದು ಹೇಗೆ ಎಂಬುದು ಸರಕಾರಿ ನೌಕರನು ಹಗಲಿರುಳು ಚಿಂತಿಸಬೇಕಾದ ಪ್ರಶ್ನೆಯೆನಿಸಿದೆ. ತಾವು ಉಪವಾಸವಿದ್ದರೂ, ತಮ್ಮ ನೌಕರರು ಹಸಿದಿರಬಾರದೆಂದು ಜನರ ಅಭಿಲಾಷೆ. ಮುಳುಗುತ್ತಿರುವ ಮನುಷ್ಯನು ತನ್ನೊಡನೆ ಮತ್ತೊಬ್ಬನೂ ನೀರಿನಲ್ಲಿ ಸಮೃದ್ಧಿ ಕಾಣಬೇಕೆಂದು ಬಯಸುವುದಿಲ್ಲ. ತನ್ನನ್ನು ಬದುಕಿಸಬಂದವನು, ಕನ್ನೊಡನೆ ಈಜದಡ ಮುಟ್ಟಬೇಕು ಎಂಬುದೇ ಆತನ ಆಂತರ್ಯ.

ಸಾರ್ವಜನಿಕ ಸೇವಕನಾದವನಿಗೆ ಭಗವಾನ್ ಭಾಸ್ಕರನೇ ಆದರ್ಶ. ಹಳ್ಳಿಯ ಆರೋಗ್ಯ ವ್ಯವಸ್ಥೆಯಿಂದು ಎಸ್ಟೊಂದು ಕೆಟ್ಟುಹೋಗಿದೆ! ಹಾಗಿದ್ದರೂ ಸೂರ್ಯನಾರಾಯಣನು ತನ್ನ ಕಿರಣಗಳನ್ನು ಅಲ್ಲಿಗೂ ಪಸರಿಸುತ್ತಾನೆ; ಕಸಕಡ್ಡಿ, ಕ್ರಿಮಿಕೀಟಗಳನ್ನು ನಷ್ಟಮಾಡುತ್ತಾನೆ. ಹಳ್ಳಿಗರ ಕೋಟೆಯೆಂದರೆ, ಆತನೇ ಅಲ್ಲವೇ? ಪ್ರತಿನಿತ್ಯವೂ ಆತನುದಿಡಿಯುತ್ತ ಬಂದರೂ. ಬೇಸರಿಕೆಯನ್ನು ತೋರಿಸುವುದಿಲ್ಲ. ಜನತೆಯು ಅವನನ್ನು ತನ್ನ ಅತಿನಿಕಟವರ್ತಿ ಮಿತ್ರನೆಂದು ಭಾವಿಸುತ್ತದೆ. ಪತಿತರನ್ನು ರಕ್ಷಿಸುವವನು" ಎಂಬ ಘನವಂತವಾದ ಪಸರನ್ನು ಪರಮಾತ್ಮನಿಗೆ ಕೊಟ್ಟಿದೆ. ಭಾರತದ ಇತಿಹಾಸವು ಹಲವಾರು ರಾಜಮಹಾರಾಜರ ಪಸರನ್ನು ಉಲ್ಲೇಖಿಸುತ್ತದೆ; ಆದರೆ, ಭಾರತೀಯರು ಮೆಚ್ಚಿಕೊಂಡ ರಾಜನು ಒಬ್ಬನೇ ಒಬ್ಬ—ರಾಮ ಮಾತ್ರ. "ರಾಮರಾಜ್ಯ" ದ ಪಸರು ಆದರ್ಶ ರಾಜ್ಯದ ಕಲ್ಪನೆ ಬಂದಾಗ ಬಂದೇ ಬರುತ್ತಿರುವುದು ಇದಕ್ಕೆ ನಿದರ್ಶನ. "ಪತಿತಪಾವನ ಸೀತಾರಾಮ" ಎಂಬುದೇ ರಾಮನ ದೊಡ್ಡ ಗುಣಗಳಿಗೆ ಸಾಕ್ಷಿ ಆದುದರಿಂದಲೇ ಸರ್ವೋದಯ ಸಿದ್ಧಾಂತಗಳನ್ನು ಮನದಂದು, ಅವನ್ನು ಯಥಸ್ಥಿಯಾಗಿ ಕಾರ್ಯರೂಪಕ್ಕೆ ತಂದವರಲ್ಲಿ ಮೊತ್ತಮೊದಲಿಗನೇ ರಾಮನು ಎಂದರೆ, ಅತಿಶಯವೆನಿಸದು.

ಭಾರತದ ಬಡ ಒಕ್ಕಲುತನವು ಎಲ್ಲ ವಿಧಗಳಲ್ಲಿಯೂ ಬಡವಾಗಿದೆ. ಸಂಪತ್ತಿಲ್ಲದಿರುವುದೊಂದೇ ಬಡತನಕ್ಕೆ ಕಾರಣವಲ್ಲ. ರೈತರು ವಿದ್ಯೆಯಿಂದಲೂ ವಂಚಿತರಾಗಿ

(ಇನ್ನೇ ಪುಟ ನೋಡಿರಿ)



ಹೋಮ್ಯೋನಿಯಮ್ ಕಲಿಯುವವರಿಗೆ
ಅತ್ಯುತ್ತಮ ಸಂಗೀತ ಪುಸ್ತಕ—
ಶ್ರೀ ಎ. ರಾಮಪ್ಪ ಅವರ
ಹಾನೋಮ್ಯೋನಿಯಮ್
ಬೋಧನ ಕ್ರಮ
ಪರಿಷ್ಕರಿಸಲ್ಪಟ್ಟ ನಾಲ್ಕನೆಯ ಮುದ್ರಣ
ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ: ರೂ. 2—0—0.
ಒಂದು ಪ್ರತಿ ಬೇಕಾದವರು ರೂ 2-50 ನ್ನು ಮನಿಯೊರ್ಡರು ಮಾಡಿ ತರಿಸಿಕೊಳ್ಳಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಕನಸಲ್ಲ, ನನಸು

ಕನ್ನಡ ಸಂಸ್ಕೃತಿಯ ಭವ್ಯತೆ

ಶ್ರೀ ನಿ. ನಾರಾಯಣ ಬಲ್ಲಾಳ

ಭಾರತದ ಜನಜೀವನವು ವೈವಿಧ್ಯಮಯವಾಗಿರುವಂತೆ ವೈಶಿಷ್ಟ್ಯಪೂರ್ಣವೂ ಆಗಿರುತ್ತದೆ. ಅದಕ್ಕೊಂದು ತನ್ನತನವಿದೆ. ಭಾರತೀಯ ಜೀವನವು ಸನಾತನ ಸಂಪ್ರದಾಯದ ನೆಲೆಗಟ್ಟಿನಲ್ಲಿ ಪ್ರಭಾವಿತವಾಗಿದ್ದರೂ, ಉಜ್ವಲವಾದ ಆದರ್ಶ ಯೋಗ್ಯತೆಯು ಉದಾತ್ತವಾದ ನೆಲೆಯಲ್ಲಿ ಪ್ರಸ್ತಾಪಿತವಾಗಿರುವುದರಿಂದ ಲೋಕದಲ್ಲೇ ಗಣ್ಯ ಸ್ಥಾನವಡೆದಿದೆ.

ಇತ್ತೀಚೆಗಿನ ತಲೆಮಾರುಗಳಿಂದ ಭಾರತವು ಆರ್ಥಿಕ ಶೋಷಣೆಗೆ ತುತ್ತಾಗಿ, ದುರವಸ್ಥೆಗೀಡಾದುದು ನಿಜ. ಆರ್ಥಿಕ ವ್ಯವಹಾರವೇ ಇಂದಿನ ನಾಗರಿಕ ಲೋಕದಲ್ಲಿ ಗಣನೀಯ ಸ್ಥಾನಪಡೆದಿರುವಾಗ, ಭಾರತದ ಹಿಂದಿನ ಉನ್ನತಿಯು ಮೇಲ್ಮೆಯು ಕಡೆಗಣಿಸಲ್ಪಟ್ಟಿರಬಹುದು. ಆದರೆ ಒಂದು ದೇಶದ ನಿರ್ಧಾರಿತ ಜೀವನವು ಜನಾಂಗದ ಹಾಸು ಹೊಕ್ಕಾಗಿ ಬೆಳೆದು ಬಂದಿರುವಾಗ ಅದನ್ನು ಅನುಕರಿಸುವಲ್ಲಿ ಆರ್ಥಿಕ ಒತ್ತಡವೂ ಅಡ್ಡಾಗುವಂತಿಲ್ಲ.

ಭಾರತೀಯ ಜನಜೀವನವು ಎಲ್ಲ ಒಳ್ಳೆಯ ನೀತಿ ಸತ್ವಗಳನ್ನೊಳಗೊಂಡ ಪರಿಪಾಕ. ನಾವು ಒಳ್ಳೆಯದೆಂದು ಯಾವುದನ್ನು ಊಹಿಸುತ್ತೇವೋ, ಅವೆಲ್ಲವುಗಳನ್ನು ಬೇರಾವುದೇ ವ್ಯಾವಹಾರಿಕ ಕ್ರಮಗಳಿಂದ ನಿಯಮಿತ ಅಥವಾ ಕುಂಠಿತಗೊಳಿಸದೆ ಒಂದುಗೂಡಿಸಿ, ನಮ್ಮ ಜೀವನ ಧರ್ಮವನ್ನು ಸಿದ್ಧಗೊಳಿಸಲಾಯಿತು ಇದೇ ಭಾರತೀಯ ಸಂಸ್ಕೃತಿ

ಇತರ ದೇಶಗಳ ಜೀವನ ಕ್ರಮ, ಧರ್ಮ, ವ್ಯವಹಾರ ಎಲ್ಲವನ್ನೂ ಸೂಕ್ಷ್ಮವಾಗಿ ಪರಿಶೀಲಿಸಿರಿ. ಅದರೊಂದಿಗೆ ಭಾರತದ ಸಂಸ್ಕೃತಿಯನ್ನು ಹೋಲಿಸಿರಿ. ಬೇರೆ ದೇಶಗಳ ಸಂಸ್ಕೃತಿಯಲ್ಲಿ ವ್ಯವಹಾರದ ಮೇಲ್ಮೆಗೆ ಅಗ್ರಸ್ಥಾನವಿದ್ದರೆ, ನಮ್ಮ ದೇಶದಲ್ಲಿ ಕೇವಲ ನೀತಿ ಧರ್ಮಕ್ಕೆ ಸರ್ವೋಚ್ಚ ಸ್ಥಾನ ಕೊಡಲಾಗಿದೆ ಅದು ನಮ್ಮ ಜೀವನದ ಪರಂಪರೆಯೇ ಆಗಿದೆ. ಅದಕ್ಕೇ ನಮ್ಮ ಸಂಸ್ಕೃತಿಯ ಬಗ್ಗೆ ವಿಶ್ವದಲ್ಲೆಲ್ಲಾ ಗೌರವ ದೊರಕಿದೆ.

ಭಾರತೀಯ ಸಂಸ್ಕೃತಿಯ ಒಳಗೂ ಹಲವಾರು ಉಪಭೇದ ಪ್ರತ್ಯೇಕತೆಗಳನ್ನು ಗಮನಿಸಬಹುದು. ಅವೆಲ್ಲವುಗಳು ಪೂರಕವಾಗಿದ್ದರೂ ಸ್ವಯೋಗ್ಯತೆಯಿಂದ ಕೂಡಿವೆ ಅಂತೆಯೇ ಕನ್ನಡದ ಸಂಸ್ಕೃತಿಯು ತನ್ನದೇ ಆದ ನೆಲೆಯಲ್ಲಿ ವಿವೇಕಯುತವಾದ ಮನೋಧರ್ಮದಲ್ಲಿ ರೂಪುಗೊಂಡಿದೆ

ಕನ್ನಡ ನಾಡು ಶ್ರೇಷ್ಠ ಜನಾಂಗವಾಗಿ ಬಾಳಿದ ಕಾಲವಿದ್ದಿತು. ಇಡೀ ದೇಶದಲ್ಲೇ ಕನ್ನಡದ ಬಾವುಟದ ಕೀರ್ತಿ ಪ್ರಭೆ ಹರಡಿತ್ತು. ಆಗಲೇ ನಮ್ಮ ಸಂಸ್ಕೃತಿಯ ಪರಿಚಯವು ಎಲ್ಲಕಡೆ ಆಕರ್ಷಿಸಲ್ಪಟ್ಟಿತ್ತು.

ಕನ್ನಡದ ಹೆಸರೆತ್ತಿದೊಡನೆ ನಾವು ಕೇವಲ ವಿಜಯ ನಗರ, ಕೃಷ್ಣದೇವರಾಯ, ಸಲಿಕೇತಿ, ವಿಷ್ಣುವರ್ಧನರನ್ನು ನೆನಸುತ್ತೇವೆ. ಅವರು ನಮ್ಮ ಸಂಸ್ಕೃತಿಗೊಂದು ಸಾಕಾರ ರೂಪಕೊಟ್ಟವರೇನೋ ನಿಜ ಆದರೆ ನಮ್ಮ ನಡೆ-ನುಡಿ ಹಾಗೂ ವೈವಿಧ್ಯತೆಯು ಪುರಾಣ ಕಾಲದಿಂದಲೂ ಸತ್ವಪೂರ್ಣವಾಗಿದ್ದಿತು. ಅನ್ಯ ಜನರ ಪ್ರಭಾವದಿಂದ ನಮ್ಮ ಸಂಸ್ಕೃತಿಯ ನಿರ್ವೀರ್ಯಗೊಂಡ ಉದಾಹರಣೆ ಇಲ್ಲ ನಮ್ಮ ಸಂಸ್ಕೃತಿ ಕಾಲನ ಹೊಡತಕ್ಕೆ ಸಿಕ್ಕುಹರಿಹಂಚಿ ಹೋಗುವಂತಹುದಲ್ಲ ಎಂತಲೇ ಅದಕ್ಕೊಂದು ಸಾಕಾರ ರೂಪವನ್ನು ಹೊತ್ತೇ ಉಳಿದು ಬಂದಿತ್ತು.

ಈಗ ಕನ್ನಡದ ಸಂಸ್ಕೃತಿಯ ಬಗ್ಗೆ ನಾವು ಯೋಚಿಸೋಣ. ಆಹಾರದಲ್ಲಿ ಜೀವಸತ್ವವಿರುವಂತೆ, ದೇಹದಲ್ಲಿ ಹೃತ್ಯಮಲವಿರುವಂತೆ ಜನಜೀವನದಲ್ಲಿ ಸಂಸ್ಕೃತಿಯು ಹಾಸು ಹೊಕ್ಕಾಗಿದೆ. ಮನುಷ್ಯನ ನಡೆ-ನುಡಿ, ಜೀವನವೆಲ್ಲವೂ ಈ ಸಂಸ್ಕೃತಿಯ ಹೆಗ್ಗುರುತಾಗಿರುತ್ತದೆ. ಕನ್ನಡ ಜನದ ಸಂಸ್ಕೃತಿಯು ಒಂದು ವೈಶಿಷ್ಟ್ಯಪೂರ್ಣವಾಗಿರುವುದರಿಂದಲೇ ಅದು ಇಂದಿಗೂ ಪ್ರತ್ಯೇಕತೆಯೊಂದಿಗೆ ಗೌರವಪೂರ್ಣವಾಗಿಯೂ ಉಳಿದಿದೆ.

ನಮ್ಮ ಜನಾಂಗವು ಸೌಹಾರ್ದದಲ್ಲೂ ಬಾಳಿದವರು, ವೈರಿಗಳ ಸೆಣಸಾಟದಲ್ಲೂ ಕೀರ್ತಿ ಗಳಿಸಿದವರು. ಈ ಎರಡು ಸಂದರ್ಭದಲ್ಲೂ ಅವರು ತಮ್ಮತನ ಉಳಿಸಿಕೊಂಡರು ಕರ್ನಾಟಕ ಸಂಗೀತ, ಕರ್ನಾಟಕ ಶಿಲ್ಪ, ಕರ್ನಾಟಕ ಭಾಷೆ—ಎಲ್ಲವೂ ಪ್ರತ್ಯೇಕವಾಗಿಯೇ ಬಾಳಿದಂತಹುದು. ಯಾವುದಾದರೊಂದು ಸಂಸ್ಕೃತಿಯು ಉಳಿಯಬೇಕಾದರೆ ಅದುಎಷ್ಟಕ್ಕೂ ಪರಾವಲಂಬಿಯಾಗದೆ ಸ್ವತಂತ್ರವಾಗಿ ಬಾಳಬೇಕು. ಅನುಕರಣೆಗೆ ಅಪ್ಪದವಿರಬಾರದು. ಇಂದು ಸಂಸ್ಕೃತವು ಯಾರ ಪೋಷಣೆ ಇಲ್ಲದಿದ್ದರೂ ಉಳಿದಿಲ್ಲವೇ ಕಾರಣ—ಅದಕ್ಕೆ ತನ್ನದೇ ಆದ ವೈಯಕ್ತಿಕ ಪ್ರಾಬಲ್ಯವಿದೆ. ಜನ ಅದನ್ನು ತೃಜಸಿದರೂ, ಆ ದೇವಭಾಷೆ ಅಮರವಾಗಿಯೇ ಉಳಿದಿದೆ. ಆ ಭಾಷೆಯ ಮೂಲಕ ಹಲವಾರು ಭಾಷೆಗಳು ಹುಟ್ಟಿಕೊಂಡಿವೆಯೇ ಹೊರತು, ಆ ಭಾಷೆ ಹಲವು ಭಾಷೆಗಳ ಸಮ್ಮಿಶ್ರವಾಗಿಲ್ಲ ಇದೇ ರೀತಿ ಕನ್ನಡವು ಕೂಡಾ ತನ್ನದೇ ನೆಲೆಯಲ್ಲಿ ಬೆಳೆದು ಬಂದಿದೆ.

ಹಾಗೆಂದು ನಮ್ಮ ಸಂಸ್ಕೃತಿಯ ಬೆಳವಣಿಗೆಯ ಬಗ್ಗೆ ನಾವು ಯೋಚಿಸಬೇಕಾಗಿದೆ ನಾವು ಆ ಕುರಿತು ಆಶೆ ವಹಿಸದೆ ಹೋದರೆ ಸಂಸ್ಕೃತಿಗೆ ಅಪಚಾರವಾಗಲಾರದು ನಮ್ಮ ಜೀವನದ ಮೇಲೆಯೇ ಅದೊಂದು ಆಘಾತವಾಗಬಹುದು. ಏಕಂದರೆ ಜಗತ್ತು ನಗರೀಕರಣದಿಂದ ವೈಜ್ಞಾನಿಕ ಪ್ರಭಾವದಲ್ಲಿ ತನ್ನ ರೂಪವನ್ನು ಮಾರ್ಪಡಿಸಿಕೊಳ್ಳುತ್ತಿರುವಾಗ, ನಮ್ಮ ಭವ್ಯ ಸಂಸ್ಕೃತಿಯ ನೆಲೆಗಟ್ಟಿನಲ್ಲಿ ನಮ್ಮ ಜೀವನವನ್ನು ರೂಪಿಸಿಕೊಳ್ಳಲು ಸಾಧ್ಯವಿದೆ ಈ ಬಗ್ಗೆ ನಮ್ಮ ಕನ್ನಡದ ಸಾಂಸ್ಕೃತಿಕ ಯೋಧರು ಯತ್ನಿಸಿದ್ದುಂಟೇ?

ಸಂಸ್ಕೃತಿ ಎಂದೊಡನೆ ಸಾಹಿತಿಗಳ ಲೇಖನಿ, ಸಾಹಿತ್ಯಾರಾಧಕರ ಭಾಷಣವಷ್ಟೇ ಎದುರು ನಿಲ್ಲುತ್ತದೆ. ಕೇವಲ ಲೇಖನ, ಭಾಷಣಗಳನ್ನಷ್ಟೇ ಬಿಗಿಯುತ್ತ ಕನ್ನಡ ಸಂಸ್ಕೃತಿಯ ಉದ್ಧಾರದ ಕುರಿತು ಕಳಕಳಿ ವ್ಯಕ್ತಪಡಿಸುವ ಮಂದಿ ವೈಯಕ್ತಿಕವಾಗಿ ಪಾಶ್ಚಾತ್ಯ ಸಂಸ್ಕೃತಿಯ ಅನನ್ಯ ಭಕ್ತರೇ ಆಗಿದ್ದಾರೆ ಇಂದು ಕನ್ನಡದ ಹೆಸರಾಂತ ಲೇಖಕರು, ಸಾಹಿತಿಗಳು ಎಷ್ಟು ಇಂಗ್ಲಿಷಿನ ಭಕ್ತರೆಂದರೆ ಅವರಿಗ ನೈಜ ಜೀವನದಲ್ಲಿ ಇಂಗ್ಲಿಷ್ ಹೊರತು ಬೇರೆ ಮಾತನಾಡುವುದು ಅನಾಗರಿಕವೆನಿಸುತ್ತದೆ.

ಇದೇ ರೀತಿ ನಮ್ಮ ಸಂಸ್ಕೃತಿ ಇಂತಹವರ ಮಧ್ಯೆ ಭವ್ಯತೆ ಹೊಂದಬೇಕಾಗಿದೆ. ಸಂಸ್ಕೃತಿಯ ಪ್ರಸಾರವು ಮುತ್ತಿಕದ ಬದನೇಕಾಯಿ ಆಗಬಾರದು ಸಾಮಾನ್ಯ ಜೀವನದ ಹಾಸುಹೊಕ್ಕಾಗಬೇಕು. ಕನ್ನಡದ ವಿಶಿಷ್ಟ ಪದ್ಧತಿ, ಅದರ ಪ್ರಾಬೀಜಕೆ, ಇಂದಿನ ಆಧುನಿಕ ಪದ್ಧತಿಯಲ್ಲಿ ಅದಕ್ಕಿರುವ ಮೇಲ್ಮೆ—ಇವುಗಳ ಬಗ್ಗೆ ಯಥಾರ್ಥವಾದ ಜ್ಞಾನವನ್ನು ನಾವು ರೂಪಿಸಲು ಶಕ್ತರಾಗಬೇಕು ಹಾಗಾದಾಗ ಮಾತ್ರ ನಮ್ಮ ಸಂಸ್ಕೃತಿಗೊಂದು ಸಾಕಾರ ರೂಪ ಬರುತ್ತದೆ ಪಾಚೀನತೆಯ ವೈಭವತೆಯನ್ನು ಹೊಗಳುತ್ತ ಹೋಗುವುದರಿಂದ ಉದ್ಧಾರವಾದಂತಾಗಲಿಲ್ಲ ಇಂದು ಕನ್ನಡ ಸಂಸ್ಕೃತಿಯ ಬಗ್ಗೆ ಅನುಕಂಪ ತೋರುವ ಜನ ತಮ್ಮ ನಡೆ—ನುಡಿಯಲ್ಲಿ ಅದೆಷ್ಟು ಅನುಸರಿಸಲ ಸಿದ್ಧನಾಗಿದ್ದಾನೆಂಬುದನ್ನು ಆತ್ಮವಿಮರ್ಶೆ ಮಾಡಿಕೊಳ್ಳಬೇಕು

ನಮಗೆ ಪಾಶ್ಚಾತ್ಯ ಉಡುಪು ಬೇಕು ಪಂಜಾಬಿಯಾಗಬೇಕು. ಉತ್ತರಾದಿಯ ಆಲಾಪನೆ ಬೇಕು. ಮುಂಬೈಯ ಒಡನಾಟ ಬೇಕು ಕನ್ನಡದ ಆಸೆ ಬೇಕು. ಇದೇ ಇಂದಿನ ಕನ್ನಡಿಗರ ತಲೆಮಾರಿಗೆ ಅಂಟಿಕೊಂಡ ಜಾಡ್ಯ ಅದೇ ಮರಾಠಿಗರನ್ನು ನೋಡಿರಿ ತಮಿಳರನ್ನು ನೋಡಿರಿ. ತೆಲುಗರನ್ನು ಅವಲೋಕಿಸಿರಿ. ಅವರಿಗಿರುವ ಅವರ ಸಂಸ್ಕೃತಿಯ ಅಭಿಮಾನ ನಮ್ಮಲ್ಲಿ ಜಾಗೃತವಾಗಿದೆಯೇ? ಈ ರೀತಿ ಕನ್ನಡದ ಕೋಟ್ಯಾಂತರ ಹೃದಯಗಳಲ್ಲಿ ಸಂಸ್ಕೃತಿಯ ಬಗ್ಗೆ ಜಾಗೃತಾಭಿಮಾನ ಉಂಟಾದಾಗಲೇ ನಮ್ಮ ಸಂಸ್ಕೃತಿಯು ಭವ್ಯವಾದ ನೆಲೆಯಲ್ಲಿ ಮೆರೆದೀತು ಆ ಕಾಲ ಬರಬೇಕಾದರೆ ಕನ್ನಡಿಗರ ಆತ್ಮ ಜಾಗೃತಿಗೊಳ್ಳಬೇಕು ಸುಸಂಸ್ಕೃತ ಬೇಕನ ಜಾಗೃತವಾಗಬೇಕು.

ಸಿರಿಗನ್ನಡಂ ಗೆಲ್ಗೆ!

ಸುಭದ್ರ ಪ್ರಗತಿಯೆಡೆಗೆ ಜೊತೆಯಾಗಿ ಮುನ್ನಡೆ

ದಿ ಹಿಂದೂ ಬ್ಯಾಂಕ್ ಕರೂರು ಲಿಮಿಟೆಡ್

ಮತ್ತು

ದಿ ಸೇಲಂ ಅಮ್ಮಾಪೇಟ್ ಸೆಂಗುಂದರ್ ಬ್ಯಾಂಕ್ ಲಿಮಿಟೆಡ್

ಇವುಗಳ ಸಾಲ ಮೂಲಗಳನ್ನು 1962 ಆಗಸ್ಟ್ 27ರಂದ ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ವಹಿಸಿಕೊಂಡಿದೆ ಎಂದು ತಿಳಿಸಲು ಬ್ಯಾಂಕಿನ ಡೈರೆಕ್ಟರ್ ಮಂಡಳಿಯವರು ಸಂತೋಷಪಡುತ್ತಾರೆ ಈ ಎರಡು ಸಂಸ್ಥೆಗಳ ಸಂಯೋಜನೆಯಿಂದಾಗಿ, ಸಿಂಡಿಕೇಟ್ ಬ್ಯಾಂಕಿಗೆ ಮದರಾಸು ರಾಜ್ಯದಲ್ಲಿ ಇನ್ನೆಂಟು ಶಾಖೆಗಳು ಹೆಚ್ಚುಗುವವು:

ದೇವಕೋಟೈ, ಡಿಂಡಿಗಲ್, ಕರೂರ್, ನಾಗಲ್‌ನಗರ್, ತಿರುಚಿರಾಪಳ್ಳಿ, ತಿರುವತ್ತೂರು, ಉದಮಲ್‌ಪೇಟೆ, (ಹಿಂದೂ ಬ್ಯಾಂಕಿನ ಕಾರ್ಯಾಲಯಗಳು) ಮತ್ತು ಅಮ್ಮಾಪೇಟೆ ಸೇಲಂ (ಸೆಂಗುಂದರ್ ಬ್ಯಾಂಕಿನ ಕಾರ್ಯಾಲಯ).

ಡಾ| ಟಿ. ಎಂ ಎ ಪೈ
ಚೆಯರ್‌ಮನ್

ಟಿ ಎ ಪೈ
ಮೆನೆಜಿಂಗ್ ಡೈರೆಕ್ಟರ್

ಸಿಂಡಿಕೇಟ್ ಬ್ಯಾಂಕ್

167 ಶಾಖೆಗಳು ● ಸ್ಥಾಪನೆ 1925

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿ
ರಿಜಿಸ್ಟರ್ಡ್ ಆಫೀಸ್
ಮುಕುಂದ ನಿವಾಸ, ಉಡುಪಿ,
ಮೈಸೂರು ರಾಜ್ಯ

ನವಯುಗ

ವರುಷ	ಉಡುಪಿ	ವಾರ
೪೧	೩೦-೮-೬೨	೫೧

ಬೆಲೆಯೇರಿಕೆಯ ಪ್ರಶ್ನೆ

ಇತ್ತೀಚಿಗಿನ ಕೆಲವು ವರ್ಷಗಳಿಂದ ಜನತೆಯು ಗೋಳಿಡುವಂತಹ ಪ್ರಮೇಯವೊದಗಿರುವುದು ಬೆಲೆಯೇರಿಕೆಯ ವಿಷಯದಲ್ಲಿ. ದಿನದಿಂದ ದಿನಕ್ಕೆ ಎಲ್ಲ ಸದಾರ್ಥಗಳ ಬೆಲೆಯೂ ಮಿತಿಮೀರಿ ಏರುತ್ತ ಬಂದಿರುವುದು ಜನರ ತಲೆತಿನ್ನತೊಡಗಿದೆ; ಜನತೆಯು ಕೂಗಿನಿಂದಾಗಿ ಸರಕಾರವೂ ಕಳವಳಪಡುತ್ತಿದೆ. ಬೆಲೆಯೇರಿಕೆಯು ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಸ್ವಾಭಾವಿಕವೆಂದೂ ಜನತೆಯಲ್ಲಿ ಕೊಂಡುಕೊಳ್ಳುವ ಶಕ್ತಿಯು ಹೆಚ್ಚಿದುದರ ದ್ಯೋತಕವೆಂದೂ ಸಮರ್ಥಿಸುವ ಪ್ರಯತ್ನ ಒಂದೆಡೆ ನಡೆಯುತ್ತಿದ್ದರೂ ಇದು ಸಫಲವಾಗುವಂತಿಲ್ಲ. ಇದಕ್ಕೆ ಕಾರಣಗಳೂ ಇಲ್ಲದಿಲ್ಲ. ನಮ್ಮ ದೇಶದಲ್ಲಿ ರಾಷ್ಟ್ರೀಯ ಆದಾಯ ದೊಡನೆ ತಲಾ ಆದಾಯವು ಹೆಚ್ಚಿದೆಯೆಂದು ಅಂಕೆಸಂಖ್ಯೆಗಳೇನೋ ಘೋಷಿಸುತ್ತವೆ. ಆದರೆ, ವಸ್ತುಸ್ಥಿತಿಯನ್ನು ಪರ್ಯಾಲೋಚಿಸುವಾಗ, ಆದಾಯವು ಹೆಚ್ಚಿರುವುದು ನಿಜವಾದರೂ ಅದರೆ ವೇಗವನ್ನು ಮೀರಿ, ಜೀವನೋಪಯೋಗಿ ಸದಾರ್ಥಗಳ ಬೆಲೆಯು ಏರಿದೆಯೆಂಬುದು ಅನುಭವವೇದ್ಯವಾದುದು. ಹಿಂದೆ ಧಾನ್ಯ ವಸ್ತುಗಳು ವಿನಿಮಯದ ಸಾಧನವಾಗಿದ್ದರೆ, ಇಂದು ರೂಪಾಯಿಯೇ ಆ ಸ್ಥಾನವನ್ನು ಆಕ್ರಮಿಸಿಕೊಂಡಿರುವುದರಿಂದ; ಜನತೆಯ ಕಷ್ಟವು ಮತ್ತೂ ಹೆಚ್ಚಿದೆಯೆನ್ನಲೇ ಬೇಕು.

ದೇಶದ ಕೆಲವು ರಾಜ್ಯಗಳಲ್ಲಿ ಬೆಲೆಯೇರಿಕೆಯ ವಿರುದ್ಧ ಮತ ಪ್ರದರ್ಶನಗಳು ನಡೆದ ದನ್ನು ನಾವು ತೀರ ಅಲಕ್ಷ್ಯಿಸಿದಂದ ನೋಡುವಂತಿಲ್ಲ. ಹತ್ತು ವರ್ಷಗಳ ಹಿಂದೆ ಇದ್ದುದಕ್ಕಿಂತ ಇಂದು ಕಾರಣಿಕೆಯ ಪ್ರಮಾಣ ಹೆಚ್ಚಿದೆ; ಆಹಾರಾದಿ ಪದಾರ್ಥಗಳ ಬೆಲೆಯೇರಿದೆ, ಮಾನವನ ಸಂಖ್ಯೋಗ ಲಾಲಸೆಯಿಂದ ಆತನ ವೆಚ್ಚವೂ ಬೆಳೆದಿದೆ; ಆದರೆ ಈ ತ್ರಿವಿಧ ಹೆಚ್ಚಳವನ್ನು ತೂಗಿ ಕೊಳ್ಳುವಂತೆ ಆತನ ಆದಾಯದಲ್ಲಿ ಏರಿಕೆ ತೋರಿದೆಯೆ? ಹಿಂದೆ ಹೊಟ್ಟೆಗೆ ಚಡಪಡಿಸುತ್ತಿದ್ದವನು ಇಂದೂ ಅಂತೆಯೇ ಇದ್ದಾನೆ; ಕೆಲವೊಂದು ಸಂದರ್ಭದಲ್ಲಿ ಆತನ ಸ್ಥಿತಿಗಳು ತೀರಕೆಟ್ಟು ಹೋಗಿರುವುದೂ ಅಸಂಭವವಲ್ಲ. ಎಂದರೆ, ಅರ್ಥಿಕ ನೀತಿಯು ಎಲ್ಲೆಡೆಯೂ ಸಮಾನವಾಗಿ ಪರಿಣಾಮ ಬೀರಿರುವುದಿಲ್ಲ. ಸಂಪತ್ತು ಸಂಪತ್ತಿರುವಲ್ಲಿಯೆ ಕೂಡಿ ಹೋಗುತ್ತಿದಯಲ್ಲದೆ ಇಲ್ಲದಲ್ಲಿ ಹರಿಯದಾಗಿದೆ. ಇದರಿಂದಲೇ ಶ್ರೀಮಂತರಾದವರು ಮತ್ತೂ ಶ್ರೀಮಂತರಾಗುತ್ತಾರೆ; ಬಡವರಾದವರು ದಟ್ಟದರಿದ್ರರಾಗುತ್ತ ಬರುತಿದ್ದಾರೆ. ಇದರಿಂದ ಆರ್ಥಿಕ ನೀತಿಯ ಸುನಂ ಪರೀಕ್ಷಣೆ—ನಾವು ಯೋಜನೆಗಳಲ್ಲಿ ತೊಡಗಿಸುವ ಸಂಪತ್ತು ಎಲ್ಲರ ಮೇಲೂ ಸಮಪ್ರಭಾವ ಬೀರುವಂತೆ ಮಾಡುವುದು—ಅನಿವಾರ್ಯ. ಹಾಗಿಲ್ಲವೆಂದಾದಲ್ಲಿ, ಈಗಾಗಲೇ ಸಾಕಷ್ಟು ನೊಂದಿರುವ ಜನತೆ 'ಭುಭುಕ್ಷಿತಃ ಕಿಂನ ಕರೋತಿ ಪಾಪಂ' ಎಂಬಂತೆ ದುರಾಚಾರ, ಅನ್ಯಾಯ, ಅನೀತಿಗಳಿಗೆ ಅಸಹಾಯಕವಾಗಿ ಬಲಿಯಾಗಬೇಕಾಗುವುದು. ಇಂದು ದೇಶದಲ್ಲಿ ಎಲ್ಲೆ ಮೀರುತ್ತಿರುವ ಘಾತುಕ ಪ್ರವೃತ್ತಿಗಳಿಗೆ, ಅನೈತಿಕ ವ್ಯವಹಾರಗಳಿಗೆ ಇರುವ ಮಹಾ ಕಾರಣಗಳಲ್ಲಿ ಆರ್ಥಿಕ ನೀತಿಯ ದೋಷವೂ ಒಂದೆಂದು ಹೇಳಬಹುದು.

ಆಶನ, ವಸನ, ವಸತಿಗಳು ಮಾನವನ ಪ್ರಾಥಮಿಕ ಅವಶ್ಯಕತೆಗಳು. ಇವನ್ನು ಪೂರೈಸಿ ಕೊಡುವುದು ಜನತಾ ಸರಕಾರದ ಆದ್ಯಕರ್ತವ್ಯ. ಆದರೆ, ಇವುಗಳಿಂದ ವಂಚಿತವಾದ ಅದೆಷ್ಟು ಕುಟುಂಬಗಳು ನಮ್ಮಲ್ಲಿಲ್ಲ? ಅವರು ಮುಂದುವರಿದ ಜಾತಿಗಳಲ್ಲಿಯೂ ಇರಬಹುದು; ಹಿಂದುಳಿದ ವರಲ್ಲಿಯೂ ಇರಬಹುದು; ಹರಿಜನ ಗಿರಿಜನರಲ್ಲಿಯೂ ಇರಬಹುದು. ಸರ್ವರಿಗೂ ಅನಿವಾರ್ಯ ಶಿಕ್ಷಣವನ್ನು ನೀಡುವ ಪ್ರತಿಜ್ಞೆ ಮಾಡಿರುವ ನಾವು ಪ್ರಾರ್ಥಮಿಕ ಅವಶ್ಯಕತೆಗಳ ಪೂರೈಕೆ ಮಾಡಬೇಡವೆ? ನಮ್ಮ ಮೊದಲಿನೆರಡು ಪಂಚವಾರ್ಷಿಕ ಯೋಜನೆಗಳು ಇವನ್ನು ಸಾಧಿಸಿಯೂವು ಎಂಬ ಆಶೆ ನಮ್ಮಲ್ಲಿತ್ತು; ಆದರೆ ಕಾರಣಾಂತರಗಳಿಂದ ಅದು ಫಲಕಾರಿಯಾಗಿಸಿಲ್ಲ, ಈಗ ಮೂರನೆಯ ಯೋಜನಾಂತ್ಯದಲ್ಲಿಯೂ ಅವು ಸಫಲವಾಗುವ ಲಕ್ಷಣಗಳು ಬಹಳ ಕಡಿಮೆಯೆಂದೇ ಭಾಸವಾಗುತ್ತದೆ. ಹಾಗಾದರೆ, ಇದಕ್ಕೊಂದು ಶಾಶ್ವತ ಪರಿಹಾರವನ್ನು ತೀಕ್ಷ್ಣವಾಗಿ ಕಂಡುಹಿಡಿಯುವುದು ಅತ್ಯಗತ್ಯ ವೆನಿಸುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ವಸತಿಯ ಸೌಕರ್ಯವಿಲ್ಲ. ನಗರಗಳಲ್ಲಿ ವಸತಿಯ ಪ್ರಶ್ನೆ ಭೂತಾಕಾರವಾಗಿ ಕಾಣಿಸತೊಡಗಿದೆ; ಇರುವಲ್ಲಿಯೂದರೂ ಕ್ಷೇಮವಿದೆಯೆನ್ನೋಣವೆ? ದುಸ್ಪಟ್ಟು, ವಿಸ್ಪಟ್ಟು ಬಾಡಿಗೆ! ಯೋಜನೆಗಳಲ್ಲಿ ಎಲ್ಲೋ ಕೆಲವೆಡೆ ಕೆಲವೊಂದು ವಸತಿಗೃಹ ನಿರ್ಮಾಣಕ್ಕೆ ಅವಕಾಶ ಪೊದಗಿಸಿದರೆ ಸಾಕಾಗುವುದೆ? ಇಡಿಯ ನಗರದಲ್ಲಿ ಅಧವಾ ದೊಡ್ಡ ಗ್ರಾಮದಲ್ಲಿ ಒಂದು ನ್ಯಾಯ ಬೆಲೆಯ ದವಸಧಾನ್ಯಗಳ ಅಂಗಡಿ ತೆರೆದರೆ ಸಾಕೆ? ಆದರಿಂದ ಜನರೆಲ್ಲರ ಅವಶ್ಯಕತೆಗಳನ್ನು ಪೂರಯಿಸುವುದು ಎಂದಿಗಾದರೂ ಸಾಧ್ಯವಾದೀತೆ?

ಬೆಲೆಯೇರಿಕೆಯ ಪ್ರಶ್ನೆ ಮುಂದೆ ಬಂದಾಗ ವ್ಯಾಪಾರಿಗಳು, ಜಮೀನುದಾರರು, ಶ್ರೀಮಂತರು ವಂಚನೆ ಮಾಡುತ್ತಾರೆಯೆಂಬ ದುರಭಿಪ್ರಾಯ ಜನತೆಯಲ್ಲಿ ಮೂಡತೊಡಗಿದೆ; ಸರಕಾರವಾದರೂ ಇದನ್ನೇ ಅನುಮೋದಿಸುತ್ತ ಬರುವಂತೆ ತೋರುತ್ತದೆ ಆದರೆ, ಇದು ಸಂಪೂರ್ಣ ಸಾಧುವೆಂದು ಹೇಳುವಂತಿಲ್ಲ. ಇವರೂ ಅದಕ್ಕಿರುವ ಕಾರಣ ಪುರುಸರಲ್ಲಿ ಒಬ್ಬರಾಗಿರಬಹುದು. ಆಹಾರಾದಿ ಧಾನ್ಯಗಳ ಸಾಗಾಟದಲ್ಲಿರುವ ನಿಯಂತ್ರಣವನ್ನು ಸಡಿಲು ಬಿಟ್ಟು ನಿರಂತರ ವ್ಯಾಪಾರಕ್ಕೆ ಅವಿನಾಭಾವಿಕೊಟ್ಟರೆ ಬೆಲೆ ಯೇರಿಕೆಯು ತಡೆಯಲ್ಪಡುವುದು ಸಾಧ್ಯ. ಹಿಂದೆ ಮದ್ರಾಸ ರಾಜ್ಯದಲ್ಲಿ ಆಹಾರ ಧಾನ್ಯಗಳ ಹಸುಗೆ ಪದ್ಧತಿಯನ್ನು ಆಗ ಮುಖ್ಯಮಂತ್ರಿಯಾಗಿದ್ದ ರಾಜಾಜಿಯವರು ಕಿತ್ತು ಹಾಕಿ ದಿಟ್ಟ ಹೆಜ್ಜೆಯನ್ನಿಟ್ಟೊದನೆಯೇ ಧಾರಾಳ ಪ್ರಮಾಣದಲ್ಲಿ ಮುಕ್ತ ಪೂರು ಕಟ್ಟೆಯಲ್ಲಿ ಅವು ದೊರೆಯುವಂತಾದುದು ವೆಂಬುದನ್ನು ನಾವು ಮರೆಯ ಬಾರದು. ನಿಯಂತ್ರಣವೆಂದೊಡನೆಯೇ ಏನೋ ಒಂದು ವಿಧದ ಅವ್ಯಕ್ತ ಭಯವು ಜನತೆಯಲ್ಲಿ ಮೂಡುತ್ತದೆ, ಇದರದುರ್ಲಾಭವನ್ನು ವ್ಯಾಪಾರಿಗಳು ಪಡೆದುಕೊಳ್ಳುವುದೇನೂ ಅವಚಾರವಾಗಲಾರದು. ಆದುದರಿಂದ, ಸರಕಾರ ದೇಶದಲ್ಲಿ ಅವಶ್ಯಕ ವಸ್ತು ಒಡಪೆಗಳನ್ನು ದವಸ ಧಾನ್ಯಗಳನ್ನು ನಿಯಂತ್ರಣದಿಂದ ಮುಕ್ತ ಗೊಳಿಸಿದರೆ, ಬೆಲೆಯೇರಿಕೆಯು ಖಂಡಿತಕ್ಕೂ ತಡೆಯಲ್ಪಡುವುದೆಂದು ನಂಬಿದರೆ ತಪ್ಪಾಗಲಾರದು. ಸರಕುಗಳನ್ನು ಸಂಗ್ರಹಿಸುವ ವ್ಯಾಪಾರಿಗಳಾದರೂ ಸಂಗ್ರಹಣೆಗಾಗಿ ಬೇಕಾಗುಗಳಿಂದ ಆರ್ಥಿಕ ನೆರವು ಪಡೆಯಬೇಕಾಗುವುದು; ಅವರಾದರೂ ವಸ್ತುವು ದೊರೆಯದೆ ಹೋದೀತು, ಆಗ ಅಧಿಕ ಬೆಲೆಗೆ ಮಾರಿ ಲಾಭ ಗಳಿಸಬಹುದು ಎಂಬ ಹಂಬಲದಿಂದಲೇ ಶೇಖರಣೆಗೆ ಕೈ ಹಾಕುತ್ತಾರೆ ವಸ್ತುಗಳು ಬೇಕೆಂಬಷ್ಟು ಸದಾಕಾಲ ದೊರೆಯುತ್ತದೆಯೆಂದರೆ, ಆಗ ಕೂಡಿಡುವ ಪ್ರಶ್ನೆಯಾದರೂ ಏಳುವುದಿಲ್ಲ. ಯೋಜನಾ ಮಂತ್ರಿ ನಂದಾರವರು ಸರಕು ಸಂಗ್ರಹಿಸಿಡುವ ವ್ಯಾಪಾರಸ್ಥರನ್ನೂ ಲಾಭ ಬಡಕರನ್ನೂ ಸಮಾಜ ವಿರೋಧಿಗಳೆಂದು ಹೇಳಿ ಅವರ ಮೇಲೆ ಕ್ರಮ ಕೈಗೊಳ್ಳುವ ಸರಕಾರದ ಇಚ್ಛೆಯನ್ನು ಪೊರಗೆಡಹಿದರೇನೋ ನಿಜ; ಆದರೆ, ಇಂತಹ ಕೃತ್ರಿಮಗಳ ಮುಷ್ಟಿಗೆ ಸಿಲುಕದಂತೆ ತಪ್ಪಿಸಿಕೊಳ್ಳುವ ವಿಚಕ್ಷಣತೆ ವ್ಯಾಪಾರಿಗಳಲ್ಲಿಲ್ಲವೆ? ಗ್ರೋಸಿನ ಮೇಲೆ ನಾಲ್ಕಾಣ ರುಪ್ಪಿಪೈಸೆ ಹೆಚ್ಚಿನ ಕರ ಬಿದ್ದೊಡನೆ ಬೆಂಕಿ ಪೆಟ್ಟಿಗೆಯ ಬಲೆ ಯೇರುವುದಿಲ್ಲವೆಂದು ಪೂರ್ಣ ಮಂತ್ರಿವರ್ಯರೂ ಪತ್ರಿಕೆಗಳೂ ಸಾರಿ ಹೇಳಿದರೂ, ಒಲೆ ಮಾತ್ರ ಏರದೆ ಬಿಟ್ಟೀತೆ? ಆದುದರಿಂದ ಬೆಲೆಯೇರಿಕೆಯನ್ನು ತಡೆಗಟ್ಟಲು ಇರುವ ಉತ್ತಮ ಉಪಾಯವೆಂದರೆ, ಪೂರಣ್ಯೆಯನ್ನು ಹೆಚ್ಚಿಸುವುದು; ಮತ್ತು ನಿರಾತಂಕ ವ್ಯಾಪಾರಕ್ಕೆ ಪ್ರೋತ್ಸಾಹನೆ ನೀಡುವುದು ಎಂದು ಹೇಳಿದರೆ ತಪ್ಪಾಗಲಾರದು. ಅನಪೇಕ್ಷಿತ, ಮತ್ತು ಹಾನಿಕಾರಕವಾದ ನಿಯಂತ್ರಣಗಳನ್ನು ಚುನಾಯಿತ ಪ್ರದೇಶಗಳಲ್ಲಿ ವ್ಯಾಪಕೀಯವಾಗಿ ಕಿತ್ತುಹಾಕಿ, ಮುಂದೆ ಅದರ ಫಲಾಫಲಗಳನ್ನು ಕಂಡುಕೊಳ್ಳುವ ಕಾಲವೀಗ ಅತಿ ನಿಕಟವಾಗಿದೆ; ನಮ್ಮ ಸರಕಾರ ಈಗ ಇದರ ಪರೀಕ್ಷೆಗೆ ತೊಡಗುವುದು ಅನುಚಿತವೆನಿಸದು.

೪೧ ವರ್ಷಗಳು

ಈ ಸಂಚಿಕೆಯೊಡನೆ 'ನವಯುಗ'ವು ತನ್ನ ನಲ್ವತ್ತೊಂದು ವರ್ಷಗಳನ್ನು ಮುಗಿಸುತ್ತದೆ; ೪೨ನೆಯ ವರ್ಷವು ಮುಂದಿನ ಸಂಚಿಕೆಯೊಡನೆ ಪ್ರಾರಂಭವಾಗುತ್ತದೆ. ಸತ್ಪತ್ರಿಕಾ ಪ್ರಪಂಚದಲ್ಲಿ, ಭಾಷಾ ಪತ್ರಿಕೆಗಳು, ಅದರಲ್ಲೂ ಕನ್ನಡದಲ್ಲಿ, ಮುಂದುವರಿಯುವುದು, ಬೆಳೆದು ಬರುವುದು ಬಹಳ ಪ್ರಯಾಸವಾಗಿದೆ. ಗ್ರಹಿಗರಲ್ಲಿ ಸ್ವಾತಂತ್ರ್ಯ ಸಂಗ್ರಾಮದ ಕಾವು ಎಲ್ಲೆಲ್ಲೂ ಹರಡಿ, ಭೀಕರವಾಗಿ ಕೋಲಾಹಲವೆಬ್ಬಿಸುತಿದ್ದಾಗ, ಭಾರತೀಯರಲ್ಲಿ ಸ್ವಾತಂತ್ರ್ಯದ ಬಗ್ಗೆ ಸದ್ಭಾವನೆಯನ್ನು ಹುಟ್ಟಿಸುವ ರಾಷ್ಟ್ರೀಯ ಪತ್ರಿಕೆಯಾಗಿ ಹೊರಟ 'ನವಯುಗ'ವು ಭಾರತದಇತಿಹಾಸದಲ್ಲೇ ಒಂದು 'ನವಯುಗ' ಆರಂಭವಾದ ಮೇಲೆಯೂ ತನ್ನಉದ್ದೇಶವನ್ನು ಸಾಧಿಸುವಲ್ಲಿ ಯಥಾ ಸಾಧ್ಯ ಸೇವೆ ಸಲ್ಲಿಸುತ್ತ ಬರುತ್ತಿದೆಯೆಂಬುದು ವೇದ್ಯವಿದೆ. ಸ್ವಾತಂತ್ರ್ಯೋತ್ತರದಲ್ಲಿ ದೇಶೀಯ ಭಾಷೆಗಳಲ್ಲಿಯೂ ಹಲವಾರು ಪತ್ರಿಕೆಗಳು ಜನ್ಮಿಸಿದುವು; ಕೆಲವು ಬಾಲಗ್ರಹಕ್ಕೆ ತುತ್ತಾದುವು; ದೈನಿಕ ಪತ್ರಿಕೆಗಳ ಈ ಯುಗದಲ್ಲಿ 'ವಾರ ಪತ್ರಿಕೆ'ಯಾಗಿಯೇ 'ನವಯುಗ'ವು ನವ ಜೀವನಕ್ಕೆ ಪಾದಾರ್ಪಣ ಮಾಡುತ್ತಲಿದೆ; ಇದು ಅಭಿವೃದ್ಧಿಯನಾಸ್ಪದವಿದೆ. ಅನೇಕಾನೇಕ ವಿಘ್ನವಿಡ್ಡೂರಗಳನ್ನು ಎದುರಿಸುತ್ತ ಬಂದರೂ ಪತ್ರಿಕಾ ಧರ್ಮವನ್ನು ಮೀರದೆ, ಅದನ್ನು ನಿರ್ವಹಿಸುತ್ತ ವ್ಯಾಧವಾಗಿಯೇ ಉಳಿದು ಬಂದ ಸಾರ್ಥಕ್ಯಾಹಿತಕರಗಳಲ್ಲಿ 'ನವಯುಗ'ವೂ ಒಂದು.

ವಾರಪತ್ರಿಕೆಗಳು ಬೆಳೆದು ಬರಬೇಕಾದರೆ, ಅವನ್ನು ಕೊಂಡು ಓದುವವರ ಸಂಖ್ಯೆ ಅರ್ಧಾತ್ ಚಂದಾದಾರರ ಸಂಖ್ಯೆ ಹೆಚ್ಚಬೇಕು. ರಾಷ್ಟ್ರೀಯತೆಗೆ ಸಂಬಂಧಿಸಿದ ವಿಚಾರಗಳನ್ನು ನಿರ್ಭಯವಾಗಿ ಪ್ರಕಟಿಸಿ, ಜನತೆಯ ಆಶೋತ್ತರಗಳಿಗೆ ಪ್ರೋತ್ಸಾಹ ನೀಡಬೇಕಾದರೆ, ಇದು ಅಗತ್ಯ. ಕಳೆದ ೪೧ ವರ್ಷಗಳಲ್ಲಿ 'ನವಯುಗ'ವು ಜನತೆಯ ಸೇವೆ ಮಾಡಿಕೊಂಡು ಬಂದಿದೆ; ಈ ಸೇವೆಯಲ್ಲಿ ಚಂದಾದಾರರಾಗಿ, ಜಾಹಿರಾತುದಾರರಾಗಿ, ಓದುಗರಾಗಿ ಸಹಯೋಗ ನೀಡಿದ ಸಾವಿರಾರು ಮಹನೀಯರನ್ನು ನಾವು ಈ ಸಂದರ್ಭದಲ್ಲಿ ನೆನೆಸುತ್ತೇವೆ. ಪತ್ರಿಕೆಗಳಿಗೆ ಲೇಖನಾದಿಗಳನ್ನು ಇತ್ತು ಸಹಕರಿಸಿದ ಬಂಧುಗಳನ್ನು ವಿಶೇಷವಾಗಿ ಸ್ಮರಿಸುತ್ತೇವೆ. ನಿಮ್ಮೆಲ್ಲರ ಸಲಹೆ, ಸಹಕಾರಗಳು ಮುಂದಕ್ಕೂ ನೊರೆಯಲಿ, 'ನವಯುಗ'ವು ಮುಂದೆಯೂ ಇದಕ್ಕಿಂತ ಹೆಚ್ಚಾಗಿ ರಾಷ್ಟ್ರೀಯ ಸೇವೆಯಲ್ಲಿ ತೊಡಗುವಂತಾಗಲಿಯೆಂದು ಹಾರೈಸಿ, ನಿಮ್ಮೆಲ್ಲರಿಗೂ ಮತ್ತೊಮ್ಮೆ ಕೃತಜ್ಞತೆಗಳನ್ನು ಸಮರ್ಪಿಸುತ್ತೇವೆ

"ಸೇವೆಯೇ ಮೊದಲು; ಸೇವೆಯಲ್ಲಿ ಮೊದಲು"

ಈ ಉದಾತ್ತ ಧ್ಯೇಯ ಸಾಧನೆಗಾಗಿಯೇ

— ಕೊಪ್ಪೊರೇಶನ್ ಬೇಂಕ್ —

ನಿಮ್ಮ ಹಣಕ್ಕೆ

ಅತ್ಯುತ್ತಮ ಭದ್ರತೆಯೊಂದಿಗೆ ಅತ್ಯಧಿಕ ಬಡ್ಡಿ ಕೊಡುತ್ತಿದೆ

ದಿ ಕೆನರಾ ಬೇಂಕಿಂಗ್ ಕೊಪ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಉಡುಪಿ)

ಆಡಳಿತ ಆಫೀಸು: ಮಂಗಳೂರು.

ಅಲ್ಲಲ್ಲಿಯ ಸುದ್ದಿಸಾರ

ಶ್ರೀ ಗುಪ್ತಾರವರಿಗೆ ಸತ್ಕಾರ— ಅಖಿಲ ಭಾರತ ಉತ್ಪಾದಕ ಸಂಘದ ದ. ಕ. ಜಿಲ್ಲಾ ಶಾಖೆಯ ವತಿಯಿಂದ ತಾ. 21-8-62 ನೇ ಸಂಜೆ ಉಡುಪಿಯ ಉಪೇಂದ್ರ ಬಾಗಿನಲ್ಲಿ ಅ. ಭಾ. ಉತ್ಪಾದಕರ ಸಂಘದ ಉಪಾಧ್ಯಕ್ಷ ಶ್ರೀ ಬಿ. ಎನ್. ಗುಪ್ತರವರಿಗೆ ಸತ್ಕಾರ ಸಮಾರಂಭವೊಂದು ಡಾ! ಟಿ. ಎಮ್. ಎ. ಪೈಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಕಾರ್ಯದರ್ಶಿ ಶ್ರೀ ಟಿ. ರಮೇಶ ಪೈಗಳು ಶ್ರೀ ಗುಪ್ತಾರವರ ಪರಿಚಯವನ್ನು ಮಾಡಿಕೊಡುತ್ತಾ ಶ್ರೀಯುತರು ಸಫಲ ಪತ್ರಿಕೋದ್ಯಮಿಗಳೆಂದೂ ಕೈಗಾರಿಕಾ ಕ್ಷೇತ್ರದಲ್ಲಿ ವಿಶೇಷವಾಗಿ ಪರಿಶ್ರಮಿಸುತ್ತಿರುವರೆಂದೂ ದೇಶ ವಿದೇಶ ಪರ್ಯಟನ ಮಾಡಿ ತುಂಬ ಅನುಭವ ಗಳಿಸಿದವರೆಂದೂ ಬೆಂಗಳೂರಿನ ವಿಶ್ವೇಶ್ವರಯ್ಯ ಸ್ಮಾರಕ ವಸ್ತು ಸಂಗಹ್ರಾಲಯ ಸ್ಥಾಪಿಸಲು ಮುಂದಾಳಾಗಿ ಜಯಶೀಲರಾದವರೆಂದೂ ಮುಂತಾಗಿ ಹೇಳಿದರು.

ಅತಿಥಿ ಶ್ರೀ ಗುಪ್ತಾರವರು ಮಾತನಾಡುತ್ತಾ ಬೆಂಗಳೂರಿನಲ್ಲಿ ಪ್ರಧಾನಿ ನೆಹರೂರವರಿಂದ ಉದ್ಘಾಟಿಸಲ್ಪಟ್ಟ ವಿಶ್ವೇಶ್ವರಯ್ಯ ಸ್ಮಾರಕ ವಸ್ತು ಸಂಗ್ರಹಾಲಯವು ಕೈಗಾರಿಕೋದ್ಯಮಿಗಳಿಗೆ ಸಕಲ ಮಾಹಿತಿಯನ್ನು ಕೊಟ್ಟು ಹೊಸ ಹೊಸ ಕೈಗಾರಿಕೆಗಳನ್ನಾರಂಭಿಸಲು ಸ್ಫೂರ್ತಿ ಕೊಡುವುದೆಂದೂ ರಾಜ್ಯದಲ್ಲಿ ಕೈಗಾರಿಕೆಗಳು ಹೆಚ್ಚಾದರೇನೇ ಜನತೆಯ ದಾರಿದ್ರ್ಯ ಕಡಿಮೆಯಾಗುವುದೆಂದೂ ದ. ಕ. ದಲ್ಲಿರುವ ವಿಪುಲ ನೈಸರ್ಗಿಕ ಸಂಪತ್ತನ್ನು ಇಲ್ಲಿಯ ಬುದ್ಧಿ ಶಾಲಿ ಮುಖಂಡರು ಕೈಗಾರಿಕೋದ್ಯಮಕ್ಕೆ ಕ್ರೋಢೀಕರಿಸಿಕೊಂಡರೆ ಜಿಲ್ಲೆಯ ಭವಿಷ್ಯ ಉಜ್ವಲವಾಗುವುದೆಂದೂ ಹೇಳಿದರಲ್ಲದೆ ಡಾ. ಪೈಗಳ ಕಾಲೋಚಿತ ಜಾಣ್ಮೆಯಿಂದ ರೂಪುಗೊಂದ ಮಣಿಪಾಲದ ಸಂಸ್ಥೆಗಳ ಅಸಾಧಾರಣ ಬೆಳವಣಿಗೆಗಾಗಿ ಸಂತೋಷ ವ್ಯಕ್ತಪಡಿಸಿದರು.

ಅಧ್ಯಕ್ಷ ಡಾ. ಪೈಗಳು ಶ್ರೀ ಗುಪ್ತರ ಅನುಭವ ಪೂರ್ಣ ಸಲಹೆಗಳು ಯೋಗ್ಯವಾದರೂ ಹೊಸ ಕೈಗಾರಿಕೆಗಳನ್ನು ತೆರೆಯುವಾಗ ಸರಕಾರದಿಂದಾಗುವ ತೊಡಕು ತೊಂದರೆಗಳನ್ನು ವಿವರಿಸಿ ಸರಕಾರ ಈ ದಿಸೆಯಲ್ಲಿ ತನ್ನ ಧೋರಣೆಯನ್ನು ಬದಲಾಯಿಸಿ ಸಹಕಾರ ಪ್ರೋತ್ಸಾಹ ನೀಡುವ ಆವಶ್ಯಕತೆಯನ್ನು ಹೇಳಿ ಈಗಿನ ವಿದ್ಯುಚ್ಛಕ್ತಿ ಸರಬರಾಯಿಯಲ್ಲಿ ಗ್ರಾಮಾಂತರ ಪ್ರದೇಶಗಳಿಗೆ ಕಡಿತ ಉಂಟಾಗಿ ಇರುವ ಕೈಗಾರಿಕೆಗಳಿಗೇನೇ ಬಹಳ ಹಾನಿ ಒದಗಿದ ಎಂದರು. ಅಂತ್ಯದಲ್ಲಿ ಶ್ರೀ ಎ. ಜೆ. ಅಲ್ಸೆಯವರು ಧನ್ಯವಾದಗಳನ್ನರ್ಪಿಸಿದರು.

ಉಡುಪಿ ರೋಟರಿ ಸಭೆಯು— ಉಡುಪಿ ರೋಟರಿ ಅಧ್ಯಕ್ಷ ಶ್ರೀ ಟಿ. ರಮೇಶ ಪೈಗಳ ಅಧ್ಯಕ್ಷತೆಯಲ್ಲಿ ನೆರವೇರಿತು. ಅಧ್ಯಕ್ಷ ಪೈಗಳು ಭಾಷಣ ಕರ್ತರಾದ ಯೋಜನಾ ಪತ್ರಿಕೆಯ ಸಂಪಾದಕ ಶ್ರೀ ಶಾರದಾ ಪ್ರಸಾದ ಮತ್ತು ಬೆಂಗಳೂರು ರೋಟರೀ ಕ್ಲಬ್ಬಿನ ಡೈರೆಕ್ಟರ್, ಶ್ರೀ ಬಿ. ಎನ್. ಗುಪ್ತಾರ ಪರಿಚಯ ಮಾಡಿದರು. ಅನಂತರ ಅತಿಥಿಗಳಿಬ್ಬರೂ ಭಾಷಣವಿತ್ತ ಮೇಲೆ ರೊಟೇರಿಯನ್ ಶ್ರೀ ಎ. ಜೆ. ಅಲ್ಸೆಯವರು ಧನ್ಯವಾದವನ್ನಿತ್ತರು.

ಹೊಸ ಹಿಂದೀ ವರ್ಗಗಳು— ಉಡುಪಿ ಹಿಂದೀ ಪ್ರಚಾರ ಸಮಿತಿಯ ಆಶ್ರಯದಲ್ಲಿ ಇದೇ ತಾ. 3.9-1962ರಿಂದ ಹೊಸ ಪ್ರಾಥಮಿಕ, ಮಧ್ಯಮಾ, ರಾಷ್ಟ್ರಭಾಷಾ, ಪ್ರವೇಶಿಕಾ, ವಿಶಾರದ ಪೂರ್ವಾರ್ಧ, ವಿಶಾರದ ಉತ್ತರಾರ್ಧ ಮತ್ತು ರಾಷ್ಟ್ರಭಾಷಾ ಪ್ರವೀಣ ವರ್ಗಗಳು ಪ್ರಾರಂಭವಾಗಲಿರುವುವು. ವರ್ಗಗಳಿಗೆ ಸೇರಲಿಚ್ಛಿಸುವವರು ಕೋಳದ ಪೇಟೆಯಲ್ಲಿರುವ (ಹೆಡ್ ಪೋಸ್ಟ್ ಆಫೀಸ್ ರೋಡ್) ಸಮಿತಿಯ ಆಫೀಸಿನಲ್ಲಿ ಅರ್ಜಿ ಫೋರ್ಮು ಹಾಗೂ ಇನ್ನಿತರ ಮಾಹಿತಿಗಳನ್ನು ಪ್ರತಿ ದಿನ ಸಂಜೆ ಗಂಟೆ 5.30ರಿಂದ 6.30ರ ತನಕ ಪಡೆದುಕೊಳ್ಳಬಹುದು.

ಯಕ್ಷಗಾನ ಪರಿಷತ್ತು— ಶ್ರೀ ಕೃಷ್ಣಾಷ್ಟಮಿಯ ಅಂಗವಾಗಿ ಉಡುಪಿಯ ಯಕ್ಷಗಾನ ಪರಿಷತ್ತಿನ ಮಿತ್ರರು ಶ್ರೀ ಅನಂತೇಶ್ವರ ದೇವರ ಸನ್ನಿಧಿಯಲ್ಲಿ "ಶ್ರೀ ಕೃಷ್ಣಾವತಾರ" ಎನ್ನುವ ಕಥಾಭಾಗದಲ್ಲಿ ಯಕ್ಷಗಾನ ಕೂಟವನ್ನು ಕಲಾಪೂರ್ಣವಾಗಿ ಜರಗಿಸಿದರು.

ಆರಂಭದಲ್ಲಿ ಪ್ರಧಾನ ಕಾರ್ಯದರ್ಶಿ ಶ್ರೀ ಪಾ. ಲ. ನಾ. ಉಪಾಧ್ಯಾಯರು ಸ್ವಾಗತವನ್ನು ಕೋರುತ್ತಾ ಯಕ್ಷಗಾನ ಸಂಘ ಸಂಸ್ಥೆಗಳನ್ನೆಲ್ಲಾ ಪ್ರತಿನಿಧೀಕರಿಸುವ ಉದ್ದೇಶದಿಂದ ಸ್ಥಾಪಿಸಲ್ಪಟ್ಟಿರುವ ಈ ಪರಿಷತ್ತು ಪಂಚಪರ್ವ ದಿನಗಳಲ್ಲಿ ವಿವಿಧ ರೀತಿಯ ಕಲಾ ಪ್ರದರ್ಶನಗಳನ್ನು ಜರಗಿಸಿ ಕಲೆಯ ಶ್ರೇಯೋಭಿವೃದ್ಧಿಯನ್ನು ಸಾಧಿಸಬೇಕೆಂದಿರುವ ಉದ್ದೇಶದಲ್ಲಿ ಈ ದಿನದ ಪ್ರಯೋಗವು ಪ್ರಥಮ ಹೆಜ್ಜೆಯಾಗಿರುವುದೆಂದರು. ಸಮಾರಂಭದ ಕೊನೆಯಲ್ಲಿ ಕಲಾ ಕಾರ್ಯದರ್ಶಿ ಶ್ರೀ ಕೆ. ಯಾದವ ಸರಳಾಯರು ಧನ್ಯವಾದಾರ್ಪಣೆ ಮಾಡಿದರು.

ಷಷ್ಟ್ಯಬ್ದಿ ಪೂರ್ತಿ— ಶ್ರೀ ಮಾನಂಜೆ ಶೇಶಗಿರಿರಾಯರು ತಮ್ಮ ಷಷ್ಟ್ಯಬ್ದಿ ಪೂರ್ತಿಯ ಸಲುವಾಗಿ ತಾ. 26—8—62ರಂದು ತಮ್ಮ ಕಡಿಯಾಳಿ "ದುರ್ಗಾನಿವಾಸ"ದಲ್ಲಿ ಹೋಮಾದಿ ಸತ್ಕಾರ್ಯಗಳನ್ನೂ, ಉಡುಪಿ ಶ್ರೀ ಅನಂತೇಶ್ವರ ದೇವಸ್ಥಾನದಲ್ಲಿ ಸಂತರ್ಪಣೆ, ದೀಪೋತ್ಸವಾದಿ ಸೇವೆಗಳನ್ನೂ ನೆರವೇರಿಸಿದರು.

ಯಕ್ಷಗಾನ— ದೇಲಂಪಾಡಿ ಬನಾರಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಕಲಾ ಮಂದಿರದಲ್ಲಿ ತಾ. 22—8—62ರಂದು ಶ್ರೀಕೃಷ್ಣಾಷ್ಟಮಿ ನಿಮಿತ್ತ ಶ್ರೀಕೃಷ್ಣಜನನ ಕಥಾಭಾಗದ ಯಕ್ಷಗಾನ ತಾಳ ಮದ್ದಳೆಯು ಶ್ರೀ ಕೀರಿಕಾಡು ಮಾಸ್ಟರ್ ವಿಷ್ಣು ಭಟ್ಟರ ಅಧ್ಯಕ್ಷತೆಯಲ್ಲಿ ಹಲವು ಪ್ರಸಿದ್ಧ ಅರ್ಥಧಾರಿಗಳ ಕೂಡುವಿಕೆಯಿಂದ ನೆರವೇರಿತು.

ದಾಸಪ್ರಕಾಶದಲ್ಲಿ ಸತ್ಕಾರ— ಮದ್ರಾಸ್ ಹೋಟೆಲ್ ದಾಸಪ್ರಕಾಶದ ಮಾಲಿಕರಾದ ಶ್ರೀ ಕೆ. ಸೀತಾರಾಮರಾಯರು ತಾ. 6ರಂದು ಭಾರತದ, ಆಟರ್ನಿ ಜನರಲ್ ಶ್ರೀ ಎಮ್. ಸಿ. ಸೆಟಲ್‌ವಾಡರ ಗೌರವಾರ್ಥವಾಗಿ ದಾಸಪ್ರಕಾಶದಲ್ಲಿ ಸತ್ಕಾರ ಕೂಟವೊಂದನ್ನೇರ್ಪಡಿಸಿದ್ದರು. ಶ್ರೀ ಸೀತಾರಾಮರಾಯರು ಭೋಜನಾನಂತರ ಸ್ವಾಗತಿಸಿ ಶ್ರೀ ಸೆಟಲ್‌ವಾಡರ ಗುಣಗಾನಮಾಡಿದರು. ಶ್ರೀ ಸೆಟಲ್‌ವಾಡರು ಶ್ರೀ ಸೀತಾರಾಮರಾಯರ ಆದರ್ಶ, ವ್ಯವಹಾರ, ಧಾರ್ಮಿಕ ಮತ್ತು ವಿದ್ಯಾಸಂಸ್ಥೆಗಳಿಗೆ ಮಾಡುವ ಸಹಾಯಗಳನ್ನು ಶ್ಲಾಘಿಸಿ ಅಭಿವೃದ್ಧಿಯನ್ನು ಕೋರಿದರು. ಈ ಸಮಾರಂಭಕ್ಕೆ ಗಣ್ಯರನೇಕರು ಆಗಮಿಸಿದ್ದರು.

ದ. ಕ. ಜಿಲ್ಲಾ ಬಹಳ ಹಿಂದುಳಿದವರ ಲೀಗು— ಇದರ ಸಭೆಯೊಂದು ನಿವೃತ್ತ ಕಮ್ಮರ್ಶಿಯಲ್ ಟೇಕ್ಸ್ ಆಫೀಸರ್ ಶ್ರೀ ಎಚ್. ನಾಗಪ್ಪ ಇವರ ಅಧ್ಯಕ್ಷತೆಯಲ್ಲಿ ಮಂಗಳೂರಿನಲ್ಲಿ ಇತ್ತೀಚೆಗೆ ಜರಗಿ ತಾ. 23-9-62ಕ್ಕೆ ಮಹಾ ಸಭೆ ಕರೆಯಬೇಕೆಂದೂ ಮುಂಬರುವ ಮಂಗಳೂರು ನಗರ ಸಭೆ ಚುನಾವಣೆಯಲ್ಲಿ ಹಿಂದುಳಿದ ವರ್ಗಕ್ಕೆ ಸಾಕಷ್ಟು ಪ್ರಾತಿನಿಧ್ಯವೀಯುವಂತೆ ಜಿಲ್ಲಾ ಕಾಂಗ್ರೆಸ್ ಸಮಿತಿಯನ್ನು ಕೇಳಿಕೊಳ್ಳಬೇಕೆಂದೂ ಮಂಗ್ಳೂರು ನಗರ ಕ್ಷೇತ್ರದ ಪ್ರತಿ ವಾರ್ಡಿನಲ್ಲಿ ಆಗ್ಗ ದರದ ಅಕ್ಕಿಯಂಗಡಿ ತೆರೆಯುವಂತೆ ಡಿಪ್ಟೀಕಮಿಶನರನ್ನು ಕೇಳಿಕೊಳ್ಳಬೇಕೆಂದೂ ನಿರ್ಣಯಿಸಲಾಯಿತು.

ಬಂಟರ ಯಾನೆ ನಾಡವರ ಸಂಘ, ಮುಂಬಯಿ— ತಾ. 5-8-62ರಲ್ಲು ಜರಗಬೆ ಮುಂದರಿಸಿದ ಈ ಸಂಘದ 34ನೇ ವಾರ್ಷಿಕ ಮಹಾ ಸಭೆಯು, ಶೆಟ್ಟ ಭಂದಾರಿ ಹಾಲ್, ಗೋಕಲೆ ರೋಡ್ (ನೋರ್ತ್) ದಾದರ್-28 (ಶಿವಾಜಿ ಪಾರ್ಕ್) ಇಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಕೆ. ಪಿರಲ ಶೆಟ್ಟ ಅಧ್ಯಕ್ಷತನದಲ್ಲಿ ತಾ. 2ನೇ ಸಪ್ಟಂಬರ್ ರವಿವಾರ ಅಪರಾಹ್ನ ಗಂಟೆ 2-30ಕ್ಕೆ ಜರಗಲಿರುವುದರಿಂದ ಸ್ವಜಾತಿ ಬಂಧುಗಳೆಲ್ಲ ತಕ್ಕ ಸಮಯಕ್ಕೆ ದಯಮಾಡಿ ಚಿತ್ತೈಸಬೇಕಾಗಿ ಗೌ. ಪ್ರ. ಕಾರ್ಯದರ್ಶಿ ಶ್ರೀ ಮೂಲ್ಕಿ ಗಂಗಯ್ಯ ಶೆಟ್ಟರು ವಿನಂತಿಸುತ್ತಾರೆ.

ಜಗತ್ಪರ್ಯಟನ

ಜವಾಹರಲಾಲ ನೆಹರು

ದೇಹಕ್ಕೆ ಬೆನ್ನುಹುರಿಯಿದ್ದಂತೆ ದೇಶಕ್ಕೆ ಸಂರಕ್ಷಣ ಶಾಖೆಯಿದೆ. ಬೆನ್ನುಹುರಿ ಮುರಿಯಿತೆಂದರೆ, ದೇಹದ ಸೌಂದರ್ಯನಷ್ಟ; ಸಂರಕ್ಷಣಾಕಾರ್ಯ ಕೆಟ್ಟಿತೆಂದರೆ, ದೇಶನಷ್ಟ. ಪಾಕಿಸ್ತಾನ ಮತ್ತು ಚೀನೀಯ ಸೈನಿಕರು ಭಾರತದ ಸೀಮೆಗಳಲ್ಲಿ ಅಕ್ರಮಣ ಮನೋವೃತ್ತಿ ತೋರಿಸುತ್ತಿರುವ ಈ ಕಾಲದಲ್ಲಿ ಯಾವ ಗಳಿಗೆಯಲ್ಲಿ ಏನಾದೀತೆಂದು ಹೇಳುವುದು ಅಸಾಧ್ಯ; ಎಂತಲೇ ದೇಶ ಸಂರಕ್ಷಣಾ ವಿಷಯದಲ್ಲಿ ಜನತೆಯಿಂದು ಕಳಕಳಿಯಿಂದಿದೆ ಆದುದರಿಂದ ಸಂಸತ್ತಿನಲ್ಲಿ ಸಂರಕ್ಷಣಾ ವಿಷಯಗಳ ಕುರಿತು ಚರ್ಚೆನಡೆಯಲು ಯಾವ ನಿರ್ಬಂಧವೂ ಇರಕೂಡದು ಎಂಬ ನೀತಿಯನ್ನು ಪ್ರಧಾನಿ ನೆಹರು ಒಪ್ಪಿಕೊಂಡಿದ್ದಾರೆ; ಆದರೆ, ನಿರ್ದಿಷ್ಟ ಮಾಹಿತಿಯನ್ನು ನೀಡಬೇಕೆಂದು ಸದಸ್ಯರು ವತ್ತಾಯಪಡಿಸಿದಾಗ, ಯಾವ ಸಂಗತಿಯನ್ನು ತಿಳಿಸಬೇಕು, ಯಾವುದನ್ನು ಬಾರದು ಎಂಬುದನ್ನು ಸಂರಕ್ಷಣಾ ಮಂತ್ರಿಗಳೇ ನಿಶ್ಚಿಯಿಸುವುದು ಅಗತ್ಯವೆಂದವರ ಅಭಿಪ್ರಾಯವಿದೆ. ರಹಸ್ಯವಿಲ್ಲವೆಂದಿದ್ದರೂ ಸಾರ್ವಜನಿಕ ಹಿತ ದೃಷ್ಟಿಯಿಂದ ಕೆಲವೊಂದು ವಿಷಯಗಳನ್ನು ಗೋಪ್ಯವಾಗಿ ಇರಿಸಲೇ ಬೇಕಾಗುತ್ತದೆ, ಅದೂ ಸಂರಕ್ಷಣಾ ಸಂಗತಿಯಲ್ಲಿ.

ಸಂಜೀವಯ್ಯ

ಕಾಂಗ್ರೆಸ್‌ನ ಭದ್ರಕೋಟೆಯೆಂದು ಕಳೆದ ಸಾರ್ವತ್ರಿಕ ಚುನಾವಣೆಗಳಿಂದ ಸಿದ್ಧವಾದ ಮಹಾರಾಷ್ಟ್ರದ ಕಾಂಗ್ರೆಸ್ ಸಮಿತಿಯು ತಪ್ಪ ಹೆಜ್ಜೆಯನ್ನು ಇಟ್ಟು ವರಿಷ್ಠ ಮಂಡಳಿಯ ಆದೇಶವನ್ನು ಮೀರಿ ಅದ್ವಿತೀಯ ದಾಖಲೆ ಸ್ಥಾಪಿಸಿದೆ. ಮುಂಬಯಿ ಸಬರ್ಬನ್ ಜಿಲ್ಲಾ ಕಾಂಗ್ರೆಸ್ ಸಮಿತಿಯನ್ನು ಮೂರು ಪ್ರತ್ಯೇಕ ಜಿಲ್ಲಾ ಕಾಂಗ್ರೆಸ್ ಸಮಿತಿಗಳನ್ನಾಗಿ ವಿಭಜಿಸಿದ ಆದರ ಕೃತ್ಯವು ಹೈಕಮಾಂಡದ ಆದೇಶ ಉಲ್ಲಂಘನೆಯೆಂದು ಹೇಳಲಾಗಿದೆ. ಈ ವಿಭಜನೆಯ ವಿಚಾರವಿನ್ನೂ ಇತ್ಯರ್ಥಗೊಳ್ಳದಿರುವುದರಿಂದ, ಎ. ಐ. ಸಿ. ಸಿ. ಯು ಪಿ. ಸಿ. ಸಿ. ಯ ಈ ಕಾರ್ಯವನ್ನು ಉದ್ದಟತನದ್ದೆಂದು ಕರೆದರೆ ಮಾತ್ರ ಸಾಲದು; ಆವಶ್ಯಕ ಕ್ರಮಗಳನ್ನೂ ಕೈಗೊಳ್ಳಬೇಕಾಗುತ್ತದೆ. ಕಾಂಗ್ರೆಸ್ ಅಧ್ಯಕ್ಷ ದಾಮೋದರಂ ಸಂಜೀವಯ್ಯನವರು ಮೊತ್ತಮೊದಲಿಗೆನೇ ಇಂತಹ ವಿಲಕ್ಷಣ ಪರಿಸ್ಥಿತಿಯನ್ನು, ಆದರಲ್ಲೂ ಮುಂಬಯಿಯಲ್ಲಿ, ಎದುರಿಸಬೇಕಾಗಿ ಬಂದುದು ಅವರ ದುರ್ದೈವವಲ್ಲದೆ ಮತ್ತಿನ್ನೇನು?

ಪ್ರೊಫೆಸರ್ ರಂಗಾ

ಮಹಾರಾಷ್ಟ್ರದ ರಾಜ್ಯಪಾಲರಾಗಿ ಡಾ! ಸುಬ್ಬರಾಯನ್ ತೆರಳಿದ ನಂತರ ತಿರುಚೆಂದೂರಿನ ಉಪ ಚುನಾವಣೆಯಲ್ಲಿ ದ್ರವಿಡ ಕಳಗಂನ ಕೈ ಮೇಲಾಯಿತು. ಚಿತ್ತೂರಿನಿಂದ ಕಳೆದ ಮೂರು ಬಾರಿಯ ಚುನಾವಣೆಗಳನ್ನೂ ಕಾಂಗ್ರೆಸ್ಸುಜಯಿಸಿತ್ತಾದರೂ ಇಂದು ಉಪ ಚುನಾವಣೆಯಲ್ಲಿ ಸುಮೂರು ಒಂದೂವರೆ ಸಾವಿರ ಮತಗಳಿಗೆ ಸೋತಿದೆ. ಅನಂತಶಯನಂ ಅಯ್ಯಂಗಾರರು ಬಿಹಾರದ ರಾಜ್ಯಪಾಲರಾದುದರಿಂದ ಇಲ್ಲಿ ಉಪ ಚುನಾವಣೆ ನಡೆಯಿತು. ಸ್ವತಂತ್ರ ಪಕ್ಷದ ಅಧ್ಯಕ್ಷರಾದ ಪ್ರೋ. ಎನ್. ಜಿ. ರಂಗಾ ಅವರು ಇಲ್ಲಿ ಅತ್ಯಲ್ಪ ಬಹುಮತದಿಂದ ಗೆದ್ದು ಬಂದರು. ರಂಗಾರವರು ಸಂಸತ್ತು ಸೇರುವಂತಾಯಿತು ಎಂಬುದು ಸಂತೋಷದ ವಿಷಯವಾದರೂ, ಸ್ವತಂತ್ರ ಪಕ್ಷದ ನೀತಿಯನ್ನು ಜನ ಮೆಚ್ಚಿಕೊಂಡಿತು ಎಂದಾದರೆ, ಕಾಂಗ್ರೆಸ್ಸಿನ ಈ ಸೋಲು ಅದ್ವಿತೀಯವೆನ್ನಲೇ ಬೇಕು.

ಪುತ್ತೂರು ಡಿ ಮು. ಕೋರ್ಟನಲ್ಲಿ

ಕ್ರಮ ನಂಬ್ರ 76/1962.

ಕೆ. ರಾಮಕೃಷ್ಣ ಭಟ್ಟ—ಕೃಷ್ಣ ಭಟ್ರ ಮಗ, ಪುತ್ತೂರು ತಾಲೂಕು ಎನೆಕಲ್ಲು ಗ್ರಾಮದ ಮಲೆಯೂಳ ಎಂಬಲ್ಲಿರುವವರು

ಮತ್ತು

ಬಿ. ಯಸ್. ಪ್ರಸನ್ನಪ್ಪ—ಬಿ. ಯಸ್. ಶಣ್ಮುಕಪ್ಪನವರ ಮಗ. ಹಾಸನ ಜಿಲ್ಲಾ. ಬೊದ್ಮುಚವಳ್ಳಿ ಗ್ರಾಮದ ಕುಂದೂರು ಹೋಬಳಿ ಎಂಬಲ್ಲಿರುವವರು ಆಲೂರು ಪೋಸ್ಟು

—ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದ್ರೆ-

ನೀವು ಮೇಲಿನ ದಾವೆಯ ವಾದಿಗೆ 200 ಮುಡಿ ಭತ್ತ ಕೊಡುತ್ತೇನಾಗಿ ಒಪ್ಪಿ ಮುಂಗಡವಾಗಿ ರೂ. 500ನ್ನು ಪಡಕೊಂಡು ನಂತರ ಅದೇ ದಿವಸ ತಾರೀಕು 12—2—1959ರಲ್ಲು ವಾದಿಗೆ ಒಂದು ಕೈ ಕಾಗದ ಕೂಡಾ ಬರಕೊಟ್ಟು ಭತ್ತವನ್ನಾಗಲೀ, ಐವೇಜನ್ನಾಗಲೀ ನೀವು ಕೊಡದ ಪ್ರಯುಕ್ತ ಅಸ್ಲು ರೂಪ್ಯಾ 500ನ್ನು ಬಡ್ಡಿ ಸಮೇತ ವಸೂಲಿ ಕುರಿತು ವಾದಿಯು ಮೇಲ್ಕಂಡ ಕೋರ್ಟನಲ್ಲಿ ದಾವೆ ಮಾಡಿರುತ್ತಾರೆ. ಆದ್ರಿಂದ ಸದ್ರಿ ದಾವೆಯಲ್ಲಿ ನಿಮ್ಮ ಉದಾಹರಣೆ ಇದ್ದಲ್ಲಿ ತಾ. 24—9—1962ರಲ್ಲು ಹಗಲು ಗಂಟೆ 11ಕ್ಕೆ ಕೋರ್ಟು ಮುಂದೆ ದಾಕ್ಲು ಮಾಡಿಕೊಳ್ಳತಕ್ಕದ್ದು. ಇಲ್ಲವಾದರೆ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ದಾವೆಯು ಏಕಪಕ್ಷವಾಗಿ ತೀರ್ಮಾನಿಸಲಾಗುವುದು.

(ಕೋರ್ಟು ಹುಕುಂ ಪ್ರಕಾರ)

N. R. Bhat, B. A., B. L.,
Advocate for plaintiff

ಪುತ್ತೂರು ತಾ. 26—8—1962.

ಚಂದಾದಾರರಲ್ಲಿ ವಿನಂತಿ

ಇದೇ ತಿಂಗಳಾಂತ್ಯಕ್ಕೆ 'ನವಯುಗ'ದ 41ನೆಯ ವರ್ಷವು ಮುಗಿದು ಸಪ್ಟಂಬರ ಆದಿಯಿಂದ 42ನೆಯ ಹೊಸ ವರ್ಷಾರಂಭವಾಗುತ್ತದೆ. ಈ ಅವಧಿಗೆ ಚಂದಾ ಅವಧಿ ಮುಗಿಯುವವರೂ, ಚಂದಾ ಹಣ ಬಾಕಿ ಇರುವವರೂ ತಮ್ಮ ತಮ್ಮ ಬಾಕಿಯನ್ನು ದಯಮಾಡಿ ಅದಷ್ಟು ಬೇಗನೆ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥಿಸುತ್ತೇವೆ

ಚಂದಾಹಣವನ್ನು ಸಿಂಡಿಕೇಟ್ ಬೇಂಕಿನ ಯಾವದೇ ಶಾಖೆಯಲ್ಲಿ 'ನವಯುಗ'ದ ಖಾತೆಗೆ ಯಾವದೊಂದು ತರದ ಖರ್ಚೂ ಇಲ್ಲದೆ ಪಾವತಿ ಮಾಡಬಹುದಾಗಿದೆ. ಇಲ್ಲವೆ ಮನಿಯಾರ್ಡರು ಮಾಡಿ ಕಳುಹಿಸಬಹುದು. ವಿ. ಪಿ. ಮಾಡಿದರೆ 70 ನ. ಪೈ ಯಷ್ಟು ಹೆಚ್ಚಿಗೆ ಬೀಳುವುದರಿಂದ ಎಲ್ಲರೂ ಮುಂದಾಗಿ ಚಂದಾ ಕಳುಹಿಸುವಂತೆ ಬಿನ್ನಹ.

—ಮೆನೇಜರ್, ನವಯುಗ.

ಆರೋಗ್ಯವರ್ಧನೆಗೆ

ಸಂಚಮುಖದ ಕಾರ್ಯಕ್ರಮ

ಕಳೆದ ಒಂದು ದಶಕದಲ್ಲಿ ಜನರ ಆರೋಗ್ಯ ಮತ್ತು ಯೋಗಕ್ಷೇಮಕ್ಕಾಗಿ ಕಾರ್ಯಕ್ರಮವೊಂದನ್ನು ಕೈಗೊಳ್ಳಲಾಯಿತು ಐದು ಮುಖದ ಈ ಕಾರ್ಯಕ್ರಮದಲ್ಲಿ ಸೋಂಕು ರೋಗಗಳ ನಿಯಂತ್ರಣ ತರಬೇತಿ ಕಾರ್ಯಕ್ರಮಗಳ ವಿಸ್ತರಣೆ, ಸುತ್ತಮುತ್ತಲಿನ ನೈರ್ಮಲ್ಯದ ಸುಧಾರಣೆ, ಔಷಧೋಪಕರಣಗಳು ಮತ್ತಿತರ ಸೇವಾ ಸೌಲಭ್ಯಗಳ ನೀಡಿಕೆ ಮತ್ತು ಕುಟುಂಬ ಯೋಜನೆ ಇವುಗಳು ಸೇರಿವೆ.

ಮಲೇರಿಯೂ ರೋಗದ ಮೂಲೋತ್ಪಾಟನೆಗಾಗಿ ೧೯೫೩ರಲ್ಲಿ ನಿಯಂತ್ರಣ ಕಾರ್ಯಕ್ರಮವೊಂದನ್ನು ಕೈಗೊಳ್ಳಲಾಯಿತು. ವಿಶ್ವದ ಯಾವುದೊಂದು ಭಾಗದಲ್ಲಾಗಲಿ ಕೈಗೊಂಡಿರುವ ಸಾರ್ವಜನಿಕ ಆರೋಗ್ಯ ಕಾರ್ಯಕ್ರಮಗಳಲ್ಲಿಯೇ ಇದು ಅತ್ಯಂತ ದೊಡ್ಡದಾಗಿದೆ.

ಕ್ಷಯ ರೋಗ ನಿವಾರಣೆ

ಕ್ಷಯರೋಗ ನಿವಾರಣೆಗಾಗಿ ಮೂರು ವಿಧವಾದ ಕಾರ್ಯಕ್ರಮವೊಂದನ್ನು ಇಟ್ಟುಕೊಳ್ಳಲಾಗಿದೆ. ಬಿಸಿಜಿ ವ್ಯಾಕ್ಸಿನೇಷನ್ ಮೂಲಕ ಕ್ಷಯ ತಗಲುವ ಸಂಬಂಧವಿರುವವರೆಲ್ಲರಿಗೂ ರಕ್ಷಣೆ ನೀಡುವುದು ಮೊದಲನೆಯದು, ರೋಗ ತಗುಲಿದವರನ್ನು ಪ್ರತ್ಯೇಕಿಸಿಡುವ ಬಗ್ಗೆ ಹೆಚ್ಚು ಹೆಚ್ಚಾಗಿ ಸೌಲಭ್ಯಗಳನ್ನು ಒದಗಿಸುವುದು ಎರಡನೆಯದು ಮತ್ತು ದೇಶದ ಎಲ್ಲ ಭಾಗಗಳಲ್ಲಿಯೂ ಚಿಕಿತ್ಸಾಲಯಗಳನ್ನು ಸ್ಥಾಪಿಸುವುದರ ಮೂಲಕ ರೋಗವನ್ನು ಪತ್ತೆ ಹಚ್ಚುವುದು ಮತ್ತು ಚಿಕಿತ್ಸೆ ನಡೆಸುವುದು ಮೂರನೆಯದು. ಈಗಾಗಲೆ ದೇಶದ ಜನಸಂಖ್ಯೆಯಲ್ಲಿ ಸುಮಾರು ಅರ್ಧದಷ್ಟು ಜನರನ್ನು ಟ್ಯುಬರ್‌ಕುಲಿನ್ ಪರೀಕ್ಷೆಗೊಳಪಡಿಸಲಾಗಿದೆ ಮತ್ತು ಕಾಲು ಭಾಗದಷ್ಟು ಜನರಿಗೆ ಕ್ಷಯರೋಗ ವಿರುದ್ಧ ವ್ಯಾಕ್ಸಿನೇಷನ್ ಹಾಕಲಾಗಿದೆ ಕ್ಷಯರೋಗ ಬಹುಬೇಗನೆ ಮಕ್ಕಳಿಗೆ ತಗಲುವ ಸಂಭವವಿರುವ ಕಾರಣ ಮಕ್ಕಳಿಗೆ ಈ ರೋಗದಿಂದ ರಕ್ಷಣೆ ನೀಡುವ ವಿಚಾರದತ್ತ ಹೆಚ್ಚು ಲಕ್ಷ್ಯ ಹರಿಸಲಾಲಾಗಿದೆ.

ಸಿಡುಬು ಮತ್ತು ಕುಷ್ಠ ರೋಗ

ಸಿಡುಬು ಮತ್ತು ಕುಷ್ಠರೋಗವನ್ನು ತಡೆಗಟ್ಟುವುದಕ್ಕಾಗಿ ಕಳೆದ ಒಂದು ದಶಕದಲ್ಲಿ ದೃಢ ನಿರ್ಧಾರದ ಪ್ರಯತ್ನಗಳನ್ನು ನಡೆಸಲಾಗಿದೆ. ಸಿಡುಬುರೋಗ ನಿರ್ಮೂಲನ ಚಳವಳಿಯ ಪ್ರಕಾರ ದೇಶ ಇಡಿ ಜನರೆಲ್ಲರಿಗೂ ವ್ಯಾಕ್ಸಿನೇಷನ್ ಹಾಕುವ ಉದ್ದೇಶವಿದೆ. ತೃತೀಯ ಯೋಜನಾವಧಿಯಲ್ಲಿ ಈ ಚಳವಳಿಗಾಗಿ ಸುಮಾರು ಐದು ಕೋಟಿ ರೂಗಳ ಹಣವನ್ನು ಒದಗಿಸಲಾಗಿದೆ. ಅನೇಕಾಲು ರೋಗ, ವಾಂತಿಭೇದಿ, ಟ್ರಕೋಮ ಮುಂತಾದ ಸೋಂಕು ರೋಗಗಳನ್ನು ತಡೆಗಟ್ಟುವ ಬಗ್ಗೆ ಸ್ತೂಕ್ತವಾದ ಕ್ರಮ ಕೈಗೊಳ್ಳಲಾಗುತ್ತಿದೆ.

ತರಬೇತಿ ಕ್ರಮ

ತೃತೀಯ ಯೋಜನಾವಧಿಯಲ್ಲಿ ಸ್ನಾತಕೋತ್ತರ ವೈದ್ಯಕೀಯ ಶಿಕ್ಷಣವನ್ನು ಅಭಿವೃದ್ಧಿಪಡಿಸುವುದಕ್ಕಾಗಿ ೩೫ ಕೋಟಿ ರೂಗಳನ್ನು ತೆಗೆದಿರಿಸಲಾಗಿದೆ. ನರ್ಸ್‌ಗಳ ತರಬೇತಿಗಾಗಿ ಹಲವಾರು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಪ್ರಥಮ ಯೋಜನಾವಧಿಯ ಪ್ರಾರಂಭದಲ್ಲಿ ದೇಶದಲ್ಲಿ ಕೇವಲ ೯೦೦೦ ನರ್ಸ್‌ಗಳಿದ್ದರು. ಅದೇ ಈಗ ಸುಮಾರು ೧೫,೦೦೦ ಅರ್ಹ ನರ್ಸ್‌ಗಳಿದ್ದಾರೆ. ತೃತೀಯ ಯೋಜನಾವಧಿಯ ಅಂತ್ಯದ ವೇಳೆಗೆ ದೇಶದಲ್ಲಿ ಸುಮಾರು ೨೫,೦೦೦ ನುರಿತ ನರ್ಸ್‌ಗಳಿರುವ ಸಾಧ್ಯತೆಯಿದೆ. ನರ್ಸ್‌ಗಳು ಮತ್ತು ಸಹಾಯಕ ನರ್ಸ್ ಮಿಡ್‌ವೈಫ್‌ಗಳ ತರಬೇತಿಕ್ರಮವೊಂದನ್ನು ಪ್ರಾರಂಭಿಸಲಾಗಿದೆ. ಈಗಾಗಲೆ ಇಂತಹ ೨೦೦ ಕೇಂದ್ರಗಳು ಸ್ಥಾಪಿತವಾಗಿವೆ. ತೃತೀಯ ಯೋಜನಾವಧಿಯ ಅಂತ್ಯದ ವೇಳೆಗೆ ೨೦,೦೦೦ ಸಹಾಯಕ ನರ್ಸ್ ಮಿಡ್‌ವೈಫ್‌ಗಳು ತರಬೇತಿಪಡೆದು ಕೇಂದ್ರಗಳಿಂದ ಹೊರಬರುವ ನಿರೀಕ್ಷೆಯಿದೆ.

ಕುಡಿಯುವ ನೀರಿನ ಪೂರೈಕೆ

ಪ್ರತಿಯೊಂದು ಆರೋಗ್ಯ ಯೋಜನೆಯ ಮೊದಲನೆಯ ಹಾಗೂ ಅಗತ್ಯ ಅವಶ್ಯಕತೆ ಸುರಕ್ಷಿತವಾದ ಕುಡಿಯುವ ನೀರನ್ನು ಸಾಕಷ್ಟು ಪೂರೈಸುವುದೇ ಆಗಿದೆ. ಮೊದಲನೆಯ ಯೋಜನೆಯಲ್ಲಿ ನಗರ ಪ್ರದೇಶಗಳ ನೀರಿನ ಪೂರೈಕೆ ಕಾರ್ಯ ಯೋಜನೆಗಳಿಗಾಗಿ ೧೨ ಕೋಟಿ ರೂ.ಗಳನ್ನು ಗ್ರಾಮಾಂತರ ನೀರು ಪೂರೈಕೆ ಮತ್ತು ನೈರ್ಮಲ್ಯ ಕಾರ್ಯ ಯೋಜನೆಗಳಿಗಾಗಿ ೧೭ ಕೋಟಿ ರೂ. ಗಳನ್ನೂ ಒದಗಿಸಲಾಗಿತ್ತು. ಅದೇ ದ್ವಿತೀಯ ಯೋಜನೆಯಲ್ಲಿ ನಗರ ಕ್ಷೇತ್ರಗಳ ನೀರು ಪೂರೈಕೆ ಕಾರ್ಯ ಯೋಜನೆಗಳಿಗಾಗಿ ೫೦ ಕೋಟಿರೂ.ಗಳನ್ನೂ ಗ್ರಾಮಾಂತರ ನೀರುಪೂರೈಕೆ ಮತ್ತು ನೈರ್ಮಲ್ಯ ಕಾರ್ಯ ಯೋಜನೆಗಳಿಗಾಗಿ ೪೫ ಕೋಟಿ ರೂ.ಗಳನ್ನೂ ಒದಗಿಸಲಾಯಿತು. ತೃತೀಯ ಯೋಜನೆಯಲ್ಲಿ ನಗರಗಳಿಗಾಗಿ ೮೯ ಕೋಟಿ ರೂ.ಗಳನ್ನೂ ಗ್ರಾಮಾಂತರ ಪ್ರದೇಶಗಳ ನೀರು ಪೂರೈಕೆ ಮತ್ತು ನೈರ್ಮಲ್ಯ ಕಾರ್ಯ ಯೋಜನೆಗಳಿಗಾಗಿ ೬೭ ಕೋಟಿ ರೂ.ಗಳನ್ನೂ ಒದಗಿಸಲಾಗಿದೆ.

ಜನರಿಗೆ ಸಾಮಾನ್ಯ ಆರೋಗ್ಯ ಸೇವಾ ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ ಪ್ರಥಮ ಹಾಗೂ ದ್ವಿತೀಯ ಯೋಜನಾವಧಿಗಳಲ್ಲಿ ಸುಮಾರು ೨,೨೫೦ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಲಾಯಿತು. ತೃತೀಯ ಯೋಜನಾವಧಿಯ ಅಂತ್ಯದ ವೇಳೆಗೆ ಈ ಸಂಖ್ಯೆ ೫,೦೦೦ ಕ್ಕೆ ಏರುವ ನಿರೀಕ್ಷೆಯಿದೆ.

ಕುಟುಂಬ ಯೋಜನೆ

ಭಾರತದ ನಿಯೋಜಿತ ಅಭಿವೃದ್ಧಿಗೆ ಕುಟುಂಬ ಯೋಜನೆ ಮುಖ್ಯ ಕಾರ್ಯಾಂಶವಾಗಿದೆ. ಪ್ರಥಮ ಯೋಜನಾವಧಿಯಲ್ಲಿ ೬೫ ಲಕ್ಷ ರೂ.ಗಳನ್ನೂ ದ್ವಿತೀಯ ಯೋಜನೆಯಲ್ಲಿ ೪೮೭ ಕೋಟಿ ರೂ.ಗಳನ್ನೂ ಒದಗಿಸಲಾಗಿತ್ತು. ತೃತೀಯ ಯೋಜನೆಯಲ್ಲಿ ಈ ಬಗ್ಗೆ ಸುಮಾರು ೨೭ ಕೋಟಿ ರೂ.ಗಳನ್ನೂ ಒದಗಿಸಲಾಗಿದೆ.

೩೩.೮ ಕೋಟಿ ಜನರಿಗಾಗಿ ಉತ್ತಮ ಆರೋಗ್ಯ ಸೇವಾ ಸೌಲಭ್ಯಗಳ ಕಲ್ಪನೆಗಾಗಿ ಯೋಜನೆ ತಯಾರಿಸುವುದೊಂದು ಬೃಹತ್ ಪ್ರಮಾಣದ ಕಾರ್ಯವೇ ಸರಿ. ಇಲ್ಲಿಯ ವರೆಗೆ ಕೈಗೊಂಡಿರುವ ಪ್ರಯತ್ನಗಳ ಫಲವಾಗಿ ದೇಶದಲ್ಲಿ ಜನರ ಆರೋಗ್ಯ ಬಹು ಮಟ್ಟಿಗೆ ಸುಧಾರಿಸಿದೆ. ಚಿಕಿತ್ಸಾ ಸೌಲಭ್ಯ ಉತ್ತಮಗೊಂಡಿದೆ. ಮಕ್ಕಳ ಮರಣ ಪ್ರಮಾಣ ಇಳಿದಿದೆ. ಜನರ ಸರಾಸರಿ ಆಯಸ್ಸು ಪ್ರಮಾಣ ೨೭ ವರ್ಷಗಳಿಂದ ೪೨ ವರ್ಷಗಳಿಗೆ ಹೆಚ್ಚಿದೆ.

THE VIJAYA BANK LTD., UDIPI.
ದಿ ವಿಜಯಾ ಬ್ಯಾಂಕ್ ಲಿಮಿಟೆಡ್, ಉಡುಪಿ.

ಏಲಂ ನೋಟೀಸು

ಈ ಕೆಳಗೆ ಹೆಸರು ಕಾಣಿಸಿದವರು ಸದ್ರಿ ಬೇಂಕಿನಲ್ಲಿ ನಗದ ಈಡಿನ ಮೇಲೆ ಸಾಲ ಪಡಕೊಂಡು, ಕ್ಲಪ್ತವಾಯಿದೆಗೆ ಅಸಲು ಬಡ್ಡಿ ವಗೈರೆ ಕೊಡದೆ ಬಾಕಿ ಮಾಡಿರುವುದರಿಂದಲೂ ಸದ್ರಿ ಸಾಲವನ್ನು ಬರಮಾಡಿಕೊಳ್ಳುವರೆ ಅವರಿಗೆ ರಿಜಿಸ್ತ್ರಿ ನೋಟೀಸು ಬಿಟ್ಟಲ್ಲಿಯೂ ಸದ್ರಿಯವುಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ ಕಾರಣ ಸದ್ರಿಯವರು ಈಡಿಟ್ಟ ನಗಗಳನ್ನು ಇದೇ ಬರುವ ತಾರೀಕು 15—9—1962ನೇ ಶನಿವಾರ ಮಧ್ಯಾಹ್ನ ಘಂಟಿ 3ಕ್ಕೆ ಸರಿಯಾಗಿ, ಅಥವಾ ಬ್ಯಾಂಕಿಗೆ ಯುಕ್ತಕಂಡ ಇತರ ಯಾವುದೇ ದಿನಗಳಲ್ಲಿ ಪುನ ನೋಟೀಸು ಕೊಡದೇನೇ ಬ್ಯಾಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವುದು. ತಿಳಿದಿರಲಿ.

ಸಾಲದ ನಂಬ್ರ	ಹೆಸರು ಮತ್ತು ವಿಳಾಸ	ಮೊಬಲಗು ಬಡ್ಡಿ ಸಮೇತ 30-6-62ರ ವರೆಗೆ
33/60 29-1-60	ಲಿಯೋ ಫೆರ್ನಾಂಡೀಸ್ S/o ಸಬೆಸ್ತಿನ್ ಫೆರ್ನಾಂಡೀಸ್ ಉದ್ಯಾವರ ಪೋಸ್ಟು ಉದ್ಯಾವರ.	53=50
238/60 18-8-60	ನರಸಿಂಹ ಸೆಟ್ಟಿ N/o ಮುಪಲಿಂಗ ಸೆಟ್ಟಿ, ಹಾವಂಜೆ ಕೆಳಮನೆ ಪೋಸ್ಟು ಕೊಳಲ್‌ಗಿರಿ.	92=10
312/60 22-10-60	ಮುದ್ದು ಪೂಜಾರಿ N/o. ಕಾಳು ಪೂಜಾರಿ, ಮಟದಂಗಡಿ, ಪೋಸ್ಟು ಉದ್ಯಾವರ.	43=15
22/61 16-1-61	ಮುದ್ದು ಪೂಜಾರಿ N/o. ಕಾಳು ಪೂಜಾರಿ, ಮಟದಂಗಡಿ, ಪೋಸ್ಟು ಉದ್ಯಾವರ.	59=05
47/61 17-2-61	ಕೆ. ರಾಮಯ್ಯ ನಾಯ್ಕ S/o. ಶಂಕರ್ ನಾಯ್ಕ, ಡಿಪ್ಯುಟಿ ಇನ್ಸ್‌ಫೆಕ್ಟರವರ ಆಫೀಸು, ಉಡುಪಿ.	127=10
52/61 25-2-61	ಯನ್. ಎ. ಮಹಮ್ಮದ್ S/o ಅಬ್ದುಲ್ಲ, ಮರ್ಚಂಟ್, ಸಂತೆಕಟ್ಟೆ, ಉಡುಪಿ.	28=10
58/61 1-3-61	ಜಬ್ಬ ಪೂಜಾರಿ S/o. ಬಾಬ ಪೂಜಾರಿ, ಸ.ಖನಿವಾಸದ ಬಳಿ, ಉಡುಪಿ.	69=75
97/61 31-3-61	ಬಿ. ಸುಬ್ಬಣ್ಣ ಭಂಡಾರಿ N/o. ಗೋವಿಂದ ಭಂಡಾರಿ, 75ಬಡಗಬೆಟ್ಟು, ಬೈಲೂರು, ಪೋಸ್ಟ್ ಉಡುಪಿ.	259=85
155/61 24-5-61	ಬಿ. ರಾಮ C/o. ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್, ಉಡುಪಿ.	101=40
176/61 9-6-61	ಕೆ. ರಾಘವ ಹೆಗ್ಡೆ S/o ಬಡಗಬೆಟ್ಟು ಶೀನಪ್ಪ ಹೆಗ್ಡೆ, ಕಡೆಕಾರು ಗ್ರಾಮ, ಪೋಸ್ಟು ಕಡೆಕಾರು.	510=40
254/61 22-7-61	ಕಿದಿಯೂರು ಮಹಬಲ ಸೆಟ್ಟಿ N/o. ಅಣ್ಣಯ್ಯ ಸೆಟ್ಟಿ, ಲೇಂಡ್-ಲೋರ್ಡ್ ಕೊಕ್ಕರ್ಣೆ, P. O. ಕೊಕ್ಕರ್ಣೆ.	83=65
314/61 21-8-61	ಕಿದಿಯೂರು ಮಹಬಲ ಸೆಟ್ಟಿ N/o ಅಣ್ಣಯ ಸೆಟ್ಟಿ ಲೇಂಡ್‌ಲೋರ್ಡ್, ಹೆಳ್ಳಿ, ಪೋಸ್ಟು ಕೊಕ್ಕರ್ಣೆ,	132=25
451/61 20-11-61	ಜಿ. ಯಮ್. ಸುವರ್ಣ S/o ಮುತ್ತಪ್ಪ, ಉದ್ಯಾವರ, ಫಿಶ್ ಯಾರ್ಡ್ ಪೋಸ್ಟು ಉದ್ಯಾವರ	134=05
454/61 22-11-61	ಟಿ. ಕೆ ಸೆಟ್ಟಿ, N/o ಚಂದಯ್ಯ ಸೆಟ್ಟಿ ಒಳಕಾಡು ಉಡುಪಿ.	679=35
76/62 9-2-62	ವಿ. ಯಸ್. ನಾರಾಯಣಸ್ವಾಮಿ ಐಯ್ಯರ್, S/o ಸುಬ್ರಮಣ್ಯ ಶಾಸ್ತ್ರಿ C/o ಯೋಗೀಶ್ವರ ಹೊಳ್ಳ, ಎಡ್ವೋಕೇಟ್, ಉಡುಪಿ.	194=90

office of the
THE VIJAYA BANK LTD.,
UDIPI.
Dated: 25—8—1962.

(Sd) B. R. Adyanthaya
Agent.

ಪುತ್ತೂರು ಡಿ. ಮು. ಕೋರ್ಟನಲ್ಲಿ

S. C. No. 161/1962.

ಡಿ. ಕಿನ್ಯಂಣ ರೈ —ವಾದಿ.

1. ರಾಮಪ್ಪ ಸಪಲ್ಯ 2. ಪೂವಪ್ಪ ಸಪಲ್ಯ— ಅಂತಪ್ಪ ಸಪಲ್ಯರ ಆಳಿಯಂದಿರು, ಪುತ್ತೂರು ತಾಲೂಕು, ಅರ್ಯಾಪು ಗ್ರಾಮದ ಮರಿಕೆ —ಪ್ರತಿವಾದಿರು.

ಪ್ರತಿವಾದಿರಿಗೆ ತಿಳಿಸುವುದೇನೆಂದರೆ

ಡಿ. ಪ್ರೊ. ನೋಟಿನ ಹಣ ವಸೂಲಿ ಬಗ್ಗೆ ವಾದಿಯು ದಾಕಲು ಮಾಡಿದ ಈ ವ್ಯಾಜ್ಯವು ತಾ. 6-9-62ಕ್ಕೆ ಇರುವುದರಿಂದ ನಿಮಗೇನಾದರೂ ಆಕ್ಷೇಪಣೆ ಇದ್ದಲ್ಲಿ ಆ ದಿನಸ ಉದಹರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಬ್ರಿಯಲ್ಲಿ ತೀರ್ಮಾನಿಸಲಾದೀತು.

ಬಿ. ಚಿದಾನಂದ ರಾವ್,
ವಾದಿಯ ವಕೀಲ್.

ಪುತ್ತೂರು, 20—8—62.

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರ ಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಅಭಿಪ್ರಾಯ

ಮಾತು ಕೃತಿಗಿಳಿಯುವುದೆಂತು?

(ಶ್ರೀಮತಿ ದೇವಕಿ ಎಂ. ಶೆಟ್ಟಿ, ಬೀರೂರು)

ಆಗಸ್ಟ್ ೩೦ರಂದು 'ತೋಟಗಾರಿಕೆ' ಪ್ರದರ್ಶನದ ಅಂಗವಾಗಿ ಮಹಿಳಾ ದಿನಾಚರಣೆಯನ್ನು ಆಚರಿಸಲಾಯಿತು. ವಿಧಾನ ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀಮತಿ ಎಂ. ಆರ್. ಲಕ್ಷ್ಮಮ್ಮ, ಡಾ। ಅಂಬುಜಾಕ್ಷಮ್ಮನವರ ಭಾಷಣಗಳಾದವು.

ಮಹಿಳೆಯರು ತಮಗೆ ಬೇಕಾದ ಹಣ್ಣು, ತರಕಾರಿ, ಹೂಗಳನ್ನು ತಾವೇ ಬೆಳೆಸಬೇಕೆಂದು, ಹೇಳಿದರು ಡಾ। ಅಂಬುಜಾಕ್ಷಮ್ಮನವರು ಖಾಯಿಲೆಗಳು ಮತ್ತು ಆರೋಗ್ಯಕ್ಕೆ ಹಣ್ಣು, ತರಕಾರಿಗಳಿಂದಾಗುವ ಚ್ಚಿನ ಪ್ರಯೋಜನಗಳನ್ನು ವಿವರಿಸಿ ಹೇಳಿದರು.

ಮಹಿಳೆಯರು ತೋಟಗಾರಿಕೆಯಲ್ಲಿ ಆಸಕ್ತಿ ವಹಿಸಬೇಕಾದ್ದು ಅಗತ್ಯ. ಅದರಲ್ಲೂ ಈಗಿನ ಕಾಲದ ಮಹಿಳೆಯರು ಕಷ್ಟ, ಕಾರ್ಪಣ್ಯದ, ದಿನಗಳನ್ನೆ ಕಾಣುತ್ತಿದ್ದು, ಅನುಭವಿಸುತ್ತಲೂ ಇದ್ದು, ಮರ್ಯಾದೆಯಿಂದ ಸಂಪಾದಿಸುವ ಮಾರ್ಗ ಸಿಕ್ಕಿದರೆ ಸಾಕು ಎಂಬ ಭಾವನೆಯುಳ್ಳವರಾಗಿದ್ದಾರೆ. ಇಂತಹದರಲ್ಲಿ ಶ್ರೀಮತಿ ಎಂ. ಆರ್. ಲಕ್ಷ್ಮಮ್ಮ ಸೂಚಿಸಿರುವ ಈ "ತೋಟಗಾರಿಕೆ"ಯು ಶ್ರೀಮಂತ, ಮಧ್ಯಮ, ಬಡ ವರ್ಗದವರೆಲ್ಲರೂ ತಮ್ಮ ತಮ್ಮ ಮನೆಗಳ ಹಿತ್ತಿಲು, ಬಿಸಿಲು ಮೂಲೆಗೆಗಳಲ್ಲಿ ತಮ್ಮ ಮರ್ಯಾದೆಗೆ ಏನೇನೂ ಧಕ್ಕೆ ತಗಲದಂತೆ ಮಾಡಬಹುದಾದ ಅಮೂಲ್ಯ ಕೆಲಸ.

ಆದರೆ ಯೋಚಿಸಬೇಕಾದ ವಿಚಾರ ಬೇರೆಯೇ ಇದೆ. ಶ್ರೀಮಂತ ವರ್ಗದವರ ಮನೆಗಳಿಗೆ ಹಿತ್ತಲುಗಳಿವೆ; ಆಳುಗಳಿದ್ದಾರೆ. ಮನಸ್ಸೊಂದು ಇದ್ದರೆ ಕಾರ್ಯ ಕೈಗೂಡಿದಂತೆ. ಬಡ ಮಹಿಳೆಯರ ಯೋಚನೆ ಬಿಟ್ಟೇ ಬಿಡೋಣ. ಅವರಿಗೆ ಮಲಗಲು ತಾವಿದ್ದರೆ ಸಾಕಾಗಿದೆ. ಆದರೆ ಮಧ್ಯಮ ವರ್ಗದವರಿಗೆ ಸದ್ಯಕ್ಕೆ ಒಂದು ಚದರಡಿ ಜಾಗ ಸಿಕ್ಕಿದರೆ ಎರಡು ಬದನೆ ಗಿಡ ನೆಡುವಷ್ಟು ಉಲ್ಲಾಸಿತರಾಗಿರುತ್ತಾರೆ. ಬೆಳೆಯಬೇಕು. ಆದರೆ ಎಲ್ಲಿ? ಎಂಬ ಪ್ರಶ್ನೆಗೆ ಉತ್ತರಬೇಕಲ್ಲ? ಮಧ್ಯಮ ವರ್ಗದ ಮಹಿಳೆಯರ ಬವಣೆ ಅವರಿಗೇ ಗೊತ್ತು. ಇತ್ತ ಬಡವರಂತೆ ಬಾಳುವಂತಿಲ್ಲ; ಅತ್ತ ಶ್ರೀಮಂತರಂತೆ ಸೋಗು ಹಾಕುವುದು ಬಿಡುವಂತಿಲ್ಲ. ಒಂದು ಸಂಸಾರ ವಾಸಿಸಬಹುದಾದ ಒಂದು ಮನೆಯಲ್ಲಿ ಹದಿನೈದು ಸಂಸಾರಗಳು ವಾಸಿಸುತ್ತವೆ. ಮನೆಯಲ್ಲಿ ಇರುವ ಇಬ್ಬರು, ಯೂ ಒಬ್ಬ ಮುದಿ ಜೀವಕ್ಕೆ ಆರಾಮವಾಗಿ ಕುಳಿತುಕೊಳ್ಳಲು ಒಂದೇ ಒಂದು ತೂಗು, ಯೂ, ಕೈಕುರ್ಚಿಯನ್ನು ಇಟ್ಟು ಕೊಳ್ಳಲೂ ಜಾಗವಿಲ್ಲದ ಮನೆಗಳಲ್ಲಿ ತರಕಾರಿ ಬೆಳೆಸುವುದು ಹೇಗೆ? ಹಣ್ಣು, ಹೂವಿನ ವಿಚಾರ ದೂರವೇ. ಅದನ್ನು ಯೋಚಿಸುವಂತೆಯೇ ಇಲ್ಲ. ತರಕಾರಿ ನಿತ್ಯದ ಕರ್ಚಿಗೆ ಅಗತ್ಯ ಬೇಕಾದ್ದು. ಹೂ, ಹಣ್ಣುಗಳು ಇಲ್ಲದ ಯೂ ದಿನ ಹೋಗುತ್ತದೆ

ಭಾಷಣ ಕೇಳುವಾಗ ನಮಗೆಲ್ಲ ತುಂಬ ಉಲ್ಲಾಸವೆನಿಸುತ್ತದೆ. ಕಷ್ಟ ಪರಿಹಾರವಾದಂತೆ ಭಾಸವಾಗುತ್ತದೆ. ನಮ್ಮ ಕಷ್ಟಗಳನ್ನು ಹೋಗಲಾಡಿಸಲು ನಮ್ಮ ನಾಡಿನ ಹಿರಿಯರು ಎಂತೆಂತಹ ಉಪಾಯಗಳನ್ನು ಸೂಚಿಸುತ್ತಾರೆ. ನಮ್ಮ ತಲೆಗೇ ಯೂಕೆ ಇದು ಹೊಳೆಯುವುದಿಲ್ಲವೆಂದು ತಲೆಗೆ ಎರಡು ಸಲ ಕುಟ್ಟಿಕೊಳ್ಳುತ್ತೇವೆ ಕೂಡ. ಆದರೆ ದೊಡ್ಡ ದೊಡ್ಡ ವೈದಾನುಗಳಲ್ಲಿ ಭಾಷಣ ಕೇಳುವಾಗ ಮಾತ್ರ ಈ ಸ್ಪುರಿಟೆಲ್ಲ! ಅಲ್ಲಿಂದ ಬಂದು ನಮ್ಮ ನಮ್ಮ ಮನೆಗೆಗೆ, ಅಲ್ಲಲ್ಲ ಜೋಪಡಿ, ಉಹುಂ, ಜೋಪಡಿಯೂ ಅಲ್ಲ ಆಧುನಿಕ ರೀತಿಯಿಂದ ಕಟ್ಟಲ್ಪಟ್ಟಿರುವ ನಮ್ಮ ಮನೆಯೆಂಬ ಆ ಸಣ್ಣ ಸಣ್ಣ ಕೋಣೆಗಳಿಗೆ ಹೊಕ್ಕಾಗ, ಕೈಯ್ಯಲ್ಲಿ ಹಿಡಿದುಕೊಂಡು ಹೋದ ಖಾರಿ ಕೈಚೀಲವನ್ನೋ, ಪ್ಲಾಸ್ಟಿಕ್ ಬೇಗನ್ನೋ ಎಲ್ಲಿ ಒಗೆಯಲೂ ಜಾಗವೇ ಕಾಣಸಿಗುವುದಿಲ್ಲ. ಇನ್ನು ತರಕಾರಿ, ಹಣ್ಣು, ಹೂವು ಬೆಳೆಯುವುದಾದರೂ ಎಲ್ಲಿ? ಇದಕ್ಕೆ ಮೊದಲು ಪರಿಹಾರ ಸಿಗುವಂತೆ ಮಾಡಿದರೆ ಒಳ್ಳೇದು.

ಕಡೆಗೆ ಒಂದು ಹಿಡುವ ಮೇಜಿನ ಅಗಲದಷ್ಟು ಜಾಗ ಒಂದೊಂದು ಮನೆಯವರಿಗೆ ಸಿಕ್ಕಿದರೆ ತಮ್ಮ ಸ್ವಂತ ಉಪಯೋಗಕ್ಕೆ ಬೇಕಾಗುವ ತರಕಾರಿ ನಾವು ಬೆಳೆಸಿಕೊಳ್ಳುತ್ತೇವೆ. ಕಷ್ಟ, ಕಾರ್ಪಣ್ಯಗಳಲ್ಲಿ ಬೇಯುತ್ತಿರುವ ಮಧ್ಯಮ ವರ್ಗದವರಿಗೆ, ಹಣ್ಣು ಹೂಗಳ ಅಗತ್ಯವೂ ಕಾಣದು ಆರೋಗ್ಯ ಭಾಗ್ಯಕ್ಕಾಗಿ!



ಅಮೆರಿಕೆಯು ಹಾರಿಸಿದ್ದ ಟೆಲಿಸ್ಟಾರ್ ಸಂಪರ್ಕ ಉಪಗ್ರಹ.

ಸೂರ್ಯನಾರಾಯಣನ ಆದರ್ಶ

(ಳನೇ ಪುಟದಿಂದ)

ದ್ದಾರೆ. ರೈತನಿಗೆ ಜ್ಞಾನವಿಲ್ಲ; ಶಕ್ತಿಯೂ ಇಲ್ಲ. ಆದುದರಿಂದ ಯಾವನೊಬ್ಬ ರೈತನನ್ನಾದರೂ ಕಾಣುವಾಗ, ಸರಕಾರಿ ನೌಕರನು ಮಾನವತೆಯನ್ನು ಪ್ರದರ್ಶಿಸಬೇಕು. ಸರಳ ವೇಶಭೂಷಣ ಮತ್ತು ಮನಸ್ಸಿನಿಂದ ಎದುರ್ಗೊಳ್ಳುವ ಯಾವನನ್ನಾದರೂ ರೈತನು ಸ್ವಾಗತಿಸುವನು; ಆತನಲ್ಲಿ ವಿಶ್ವಾಸವಿಡುವನು.

ಮಹಾಭಾರತದಲ್ಲಿ ಒಂದು ಆಖ್ಯಾಯಿಕೆ ಈ ರೀತಿಯಿದೆ. ಕುಂತಿಯು ತಾನು ಬಯಸುವ ದೇವಾಧಿದೇವತೆಯ ರನ್ನು ಬೇಕಾದ ರೂಪದಲ್ಲಿ ಕಾಣಬಹುದೆಂದು ವರವಿತ್ತು. ಸೂರ್ಯದೇವನ ನೈಜರೂಪವನ್ನು ಕಾಣಬೇಕೆಂಬ ಆಶೆ ಅವಳಲ್ಲಿ ಉದಿಸಿತು. ಸೂರ್ಯನು ಪ್ರತ್ಯಕ್ಷನಾಗಿ ಮುಂದೆ ನಿಂತನು. ಆದರೆ, ಸೂರ್ಯಪ್ರಕಾಶವು ಕಣ್ಣನ್ನು ಕುಕ್ಕುತಿದ್ದುದರಿಂದ ಆಕೆಯು ಆತನನ್ನು ಕಾಣದಾದಳು. ಆದುದರಿಂದಲೇ ಆಕೆ ಪ್ರಾರ್ಥಿಸಿದಳು, ದೇವರೇ ಇಲ್ಲಿಂದ ಹೊರಟುಹೋಗು ಎಂದು. ಸೂರ್ಯನಾರಾಯಣನನ್ನು ಸ್ವಾಗತಿಸುವ ಶಕ್ತಿ ಆಕೆಯಲ್ಲಿ ಇರಲಿಲ್ಲ. ಆದರೆ, ತನ್ನಂತೆಯೇ ಇರಬಹುದಾದವರನ್ನು ಆಕೆಯು ಸಂತೋಷದಿಂದ ಎದುರ್ಗೊಳ್ಳಬಲ್ಲಳು.

ದರಿದ್ರನಾರಾಯಣನಾದರೂ ತನಗಿಂತ ಹೆಚ್ಚಿನವರನ್ನು ಕಾಣಲು ಬಯಸುವುದಿಲ್ಲ ರೈತಜನರು ತಮಗಿಂತ ಹೆಚ್ಚಿನವರನ್ನು ನಂಬುವುದಿಲ್ಲ. ಆದುದರಿಂದ ಹಳ್ಳಿಗಳಲ್ಲಿರುವ ಸರಕಾರಿ ನೌಕರರು ರೈತರಂತೆ ಸರಳ ಉಡುಗೆ ತೊಡುಗೆಗಳನ್ನು ಧರಿಸಿ, ನಿರ್ಮಲಾಂತಃಕರಣಿಗಳಾಗಿರಬೇಕು; ಹಾಗಾದರೆ, ಅವರು ತಮ್ಮ ಕುಟುಂಬದವರು ಎಂದು ರೈತ ಜನರು ಭಾವಿಸುತ್ತಾರೆ.

ನಮ್ಮ ದೇಶದಲ್ಲಿ ಬಡತನ ತಾಂಡವವಾಡುತ್ತಿದೆ; ನಿಜ; ನಮ್ಮ ಸ್ರತಿ ಪ್ರಯತ್ನವೂ ಈ ಬಡತನವನ್ನು ದೂರಮಾಡುವತ್ತ ಕೇಂದ್ರೀಕೃತವಾಗಬೇಕು ಹಿಮಾಲಯ ಪರ್ವತದಲ್ಲಿ, ಕೆಳಗಿನ ನಾನಾವಗಳಲ್ಲಿ ಕಾಲುವೆಗಳಲ್ಲಿ ಹರಿಯುವ ನೀರು ಸಮುದ್ರ ತಳಕ್ಕೆ ಇಳಿಯುವಂತೆ ನಮ್ಮಲ್ಲಿ ಯೋಜನೆಗಳು ದರಿದ್ರತಾ ನಿವಾರಣೆಯ ಕೇಂದ್ರ ಬಿಂದುವಲ್ಲಿ ಏಕೀಭವಿಸಬೇಕು; ಪರಿಶ್ರಮದ ಆಕರ್ಷಣೆಯಲ್ಲಿ ವ್ಯಪ್ತವಾಗಬೇಕು. ಇಂತಹ ಒಂದು ಸಾಧನೆಯಲ್ಲಿ ನಾವು ಯಶಸ್ವಿಗಳಿದಾಗಲೇ ನಮ್ಮ ದೇಶದಲ್ಲಿ ಸ್ವರಾಜ್ಯ ಸಂಸ್ಥಾಪನೆಯಾಗುವುದು.

ಯಕ್ಷಗಾನದಲ್ಲಿ ಹಿರಿಯ ಸ್ಥಾನ ಗಳಿಸಿ, 'ಯಕ್ಷಗಾನ ಭಾಸ್ಕರ'ನೆಂದು ಪ್ರಸಿದ್ಧಿಪಡೆದ ದಿ| ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟರ

ನವಕಾಲೋಚಿತವಾದ ಯಕ್ಷಗಾನ ಪ್ರಸಂಗಗಳು.

ಸಾಹಸ ಭೀಮ ವಿಜಯ (ಗದಾಯುದ್ಧ) ೦—೮—೦
ಯಕ್ಷಗಾನ ದಶಾವತಾರದ ಆಟದ ಕ್ರಮಕ್ಕನುಸರಿಸಿ ಪಾಂಡವರ ಒಡ್ಡೋಲಗದ ದೃಶ್ಯವನ್ನು ದಿಗ್ದರ್ಶನ ಮಾಡಿ, ಮುಂದೆ ಕಥಾಭಾಗವನ್ನು ಮೂಲ ಕಾವ್ಯಕ್ಕನುಸರಿಸಿಯೇ ಕೊನೆಗೊಳಿಸಿದೆ.

ಭಾರತದ ಗುರುಕುಲ ೦—೬—೦
ಪಾಂಡವ, ಕೌರವ ಬಾಲ್ಯ ಕೇಳಿಗಳು, ವಿದ್ಯಾಭ್ಯಾಸ, ಸರೀಕ್ಷಾರಂಗದ ಕಾರ್ಯಗಳು, ಗುರುದಕ್ಷಿಣೆ ಮೊದಲಾದ ವಿಷಯಗಳನ್ನೊಳಗೊಂದಿದೆ.

ಲತ್ತಪಗಡೆ ೦—೬—೦
ಭಾರತದ ಸಭಾಪರ್ವದೊಳಗಣ ಚಾರಿತ್ರೆಗಳಿರುವ ನಾಲ್ಕು ದೃಶ್ಯಗಳೂ ಅರಣ್ಯ ಪರ್ವೋಕ್ತವಾದ ಕಿಮೀರ ವಧೆಯೆಂಬ ದೃಶ್ಯವೂ ಸೇರಿವೆ.

ಭರತೇಶ ದಿಗ್ವಿಜಯ ೦—೮—೦
ರಾಜಕವಿ ರತ್ನಾಕರವರ್ಣಿಯ ಶೃಂಗಾರ ರಸಪ್ರಧಾನವಾದ ಭರತೇಶ ವೈಭವದೊಳಗಣ ದಿಗ್ವಿಜಯ ವಿಭಾಗದ ನೂತನ ಕಥಾವಸ್ತುಗಳನ್ನೊಳಗೊಂಡಿದೆ ಯಕ್ಷಗಾನ ಕಲಾಭಿಮಾನಿಗಳಿಗೆ ವಿವರವಾದ ಸೂಕ್ತ ಅನುಭವ ಸೂಚಿಯಿದೆ.

ವಾಲಿ ಸುಗ್ರೀವ (ಬಹುಮಾನಿತ) ೦—೮—೦
ವೀರ, ಕರುಣಾ ರಸಪ್ರಧಾನವಾದ ನವೀನ ರೀತಿಯಲ್ಲಿ ಮನಮೊಪ್ಪುವಂತೆ ರಚಿಸಲಾದ ರಾಮಾಯಣಾಂತರ್ಗತ ಪ್ರಸಂಗ.

ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ನವಭಾರತ ಪುಸ್ತಕ ಭಂಡಾರ, ಉಡುಪಿ.

PHONE 203
ESTD 1926
FOUNDATION STONE
Engraved
MARBLE TABLETS
(GOLD FILLED & LEAD FILLED)
Crown RUBBER STAMP
BALMATTA ROAD, MANGALORE

ಶರೀರದ ದೃಢತೆಗೆ

ಪೋಷಕಾಂಶವಿರುವ ಆಹಾರ

ಮನುಷ್ಯನು ಕೇವಲ ಕೆಲವು ಆಹಾರ ಧಾನ್ಯಗಳನ್ನು ಉಪಯೋಗಿಸಿಯಷ್ಟೇ ಜೀವಿಸಲಾರ ಎಂಬುದೇನೋ ದಿಟ. ಆದರೆ ನಮ್ಮಲ್ಲಿನ ಕೇವಲಗೋಧಿ, ಅಕ್ಕಿ ಮತ್ತಿತರ ಕೆಲವು ಧಾನ್ಯಗಳಷ್ಟನ್ನೇ ಆಹಾರವಾಗಿ ಉಪಯೋಗಿಸುತ್ತಿರುವುದನ್ನು ನೋಡಿದಲ್ಲಿ ಈ ಆನುಭವದ ಮಾತು ದಿಟವಲ್ಲವೇನೋ ಎಂಬ ಶಂಕೆ ಉಂಟಾಗುತ್ತದೆ.

ನಾವು ತಿನ್ನುವ ಆಹಾರವು ನಮ್ಮ ಆರೋಗ್ಯದ ಮೇಲೆ ಬೀರುವ ಪ್ರಭಾವ ಅಷ್ಟಿಷ್ಟಲ್ಲ ಎಂಬ ಅಂಶವನ್ನು ಆಧುನಿಕ ಆಹಾರ ವಿಜ್ಞಾನವು ಸ್ಥಿರ ಪಡಿಸಿದೆ. ನಮ್ಮ ಆಹಾರವು ಸತ್ವಪೂರ್ಣವಾಗಿರುವುದಿಲ್ಲ. ಆಹಾರದಲ್ಲಿ ಒಳ್ಳೆಯ ಪೌಷ್ಟಿಕಾಂಶ, ಅನ್ನಾಂಗ ಮತ್ತು ಲೋಹಗಳ ಕೊರತೆ ಇರುತ್ತದೆ. ಇದರಿಂದಾಗಿ ಹಾಲು, ಹಣ್ಣು, ಮೊಟ್ಟೆ, ಮೀನು, ಮಾಂಸ ಮತ್ತಿತರ ಪೌಷ್ಟಿಕಾಂಶಗಳನ್ನುಳ್ಳ ಆಹಾರ ವಸ್ತುಗಳನ್ನು ಒಳಸಿಕೊಂಡು ನಮ್ಮ ಆಹಾರದಲ್ಲಿನ ಸತ್ವಾಂಶಗಳನ್ನು ಪುಂಜಲು ಸಾಧ್ಯವಾಗುತ್ತಿದೆ, ಸಾಧ್ಯವಾಗಿದೆ. ತೃತೀಯ ಯೋಜನೆಯಲ್ಲಿ, ಆಹಾರ ಪದಾರ್ಥದ ಪೌಷ್ಟಿಕಾಂಶವನ್ನು ಹೆಚ್ಚಿಸುವ ಪ್ರಯತ್ನಕ್ಕೆ ವಿಶೇಷ ಪ್ರಾಶಸ್ತ್ಯವನ್ನು ನೀಡಲಾಗಿದೆ.

ಆಹಾರದಲ್ಲಿ ಅನ್ನಾಂಗಗಳ ಕೊರತೆ ಇರುವುದರಿಂದಾಗಿ, ರಕ್ತವ್ಯಾಧಿ, ಬೆಂಬೆರಿ ಖಾಯಿಲೆ ಮತ್ತು ಚರ್ಮದ ವ್ಯಾಧಿ ಇವೇ ಮೊದಲಾದ ಖಾಯಿಲೆಗಳು ಬರುತ್ತವೆ. ಹಲವಾರು ರಾಷ್ಟ್ರಗಳಲ್ಲಿನ ಪ್ರಯೋಗಗಳ ಅನುಭವದಿಂದ ಈ ಅಂಶ ವ್ಯಕ್ತಪಟ್ಟಿದೆ. ನಮ್ಮ ದೇಶವೂ ಈ ಅನುಭವದಿಂದ ಹೊರತಾಗಿಲ್ಲ. ಕಡುಮಿ ಸತ್ವದ ಆಹಾರ ಹಾಗೂ ಕೊಳಕು ಆಹಾರದಿಂದ ಹಲವಾರು ರೋಗರುಜಿನಗಳು ಸಂಭವಿಸಿರುವುದನ್ನು ಭಾರತದಲ್ಲಿ ಕಾಣಬಹುದಾಗಿದೆ. ಇಂತಹ ಖಾಯಿಲೆಗಳನ್ನು ಗುಣಪಡಿಸುವ ಶಕ್ತಿ, ಔಷಧಕ್ಕಿಲ್ಲ ಉತ್ತಮ ಆಹಾರಕ್ಕೆ ಇದೆ.

ಆಹಾರ ಧಾನ್ಯಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುವ ಹಾಗೂ ಸಾಧ್ಯವಾದ ಮಟ್ಟಿಗೆ ನಮ್ಮ ಜನರ ಆಹಾರವಿಧಾನವನ್ನು ಬದಲಾಯಿಸುವ ಸಲುವಾಗಿ, ಪೋಷಕ ಆಹಾರಗಳ ಅಭಿವೃದ್ಧಿಗಾಗಿ ಭಾರತ ಸರಕಾರವು ಹಲವಾರು ಕಾರ್ಯ ಯೋಜನೆಗಳನ್ನು ಕೈಗೊಂಡಿದೆ ಜನತೆಯ ಆರೋಗ್ಯಾಭಿವೃದ್ಧಿ ಹಾಗೂ ಆರ್ಥಿಕ ದೃಷ್ಟಿಯಿಂದ ಈ ಕಾರ್ಯ ಯೋಜನೆಗಳನ್ನು ರೂಪಿಸಲಾಗಿದೆ. ಹೊಸದಾಗಿ ತೆರೆಯಲಾಗಿರುವ ಕೇಂದ್ರ ಆಹಾರ ವಿಭಾಗದ ಪೋಷಕ ಆಹಾರ ವಿಭಾಗವು ವಿಶೇಷ ರೀತಿಯ ಹಾಗೂ ವಿವಿಧ ಆಹಾರ ಪದಾರ್ಥಗಳ ಅಭಿವೃದ್ಧಿಗೆ ಸಂಬಂಧಿಸಿದ ಕಾರ್ಯಕ್ರಮಗಳನ್ನು ಸಮನ್ವಯಗೊಳಿಸುತ್ತಿದೆ. ಮತ್ತು ಅವುಗಳನ್ನು ಕಾರ್ಯಾಚರಣೆಗೆ ತರುತ್ತಿದೆ. ಕೇವಲ ಪೌಷ್ಟಿಕಾಂಶ ಆಹಾರ ಪದಾರ್ಥಗಳ ಅಭಿವೃದ್ಧಿಯಷ್ಟೇ ಅಲ್ಲದೆ, ಈ ವರೆಗೆ ಸೂಕ್ತ ರೀತಿಯಲ್ಲಿ ಉಪಯೋಗಪಡಿಸಿಕೊಳ್ಳದಿರುವ, ಪೌಷ್ಟಿಕಾಂಶಗಳನ್ನುಳ್ಳ ಇತರ ಆಹಾರ ಪದಾರ್ಥಗಳ ಅಭಿವೃದ್ಧಿಯೂ ಈ ವಿಭಾಗದ ಉದ್ದೇಶವಾಗಿದೆ. ಜನರು ಪೌಷ್ಟಿಕಾಂಶವುಳ್ಳ ಆಹಾರ ಪದಾರ್ಥಗಳನ್ನು ಉಪಯೋಗಿಸುವಂತೆ ಹಾಳು ಮಾಡುವುದನ್ನು ತಡಗಟ್ಟಲು ಮತ್ತು ಸುಧಾರಿತ ಆಹಾರ ವಿಧಾನವನ್ನು ನಿತ್ಯ ಜೀವನದಲ್ಲಿ ಅನುಷ್ಠಾನಕ್ಕೆ ತರುವಂತೆ ಅಂದೋಲನ ನಡೆಸುವುದು. ಈ ವಿಭಾಗದ ಹಲವಾರು ಕಾರ್ಯಕ್ರಮಗಳಲ್ಲಿ ಸೇರಿವೆ.

ತರಕಾರಿಗಳಲ್ಲಿ ವಿಶೇಷ ರೀತಿಯ ಪೌಷ್ಟಿಕಾಂಶಗಳಿವೆ. ಮೊಂಸಾಹಾರಗಳಲ್ಲಿ ದೊರಕುವ ಅನ್ನಾಂಗ ಅಥವಾ ಪೌಷ್ಟಿಕಾಂಶಗಳಿಗೆ ಸರಿಸಮನಾದ ಪೌಷ್ಟಿಕಾಂಶಗಳು ತರಕಾರಿಯಲ್ಲಿ ಸಿಗುತ್ತವೆ. ದೇಶದಲ್ಲಿ ತರಕಾರಿ ಬೆಳೆಯು ವಿಶೇಷವಾಗಿದೆ. ಮೈಸೂರಿನಲ್ಲಿರುವ ಕೇಂದ್ರ ಆಹಾರ ವಿಜ್ಞಾನ ಸಂಶೋಧನಾ ಸಂಸ್ಥೆಯು ಕಡಲೆಕಾಯಿ ಮುಂತಾದ ಎಣ್ಣೆ ಬೀಜಗಳಿಂದ ಮನುಷ್ಯನಿಗೆ ಬೇಕಾದ ಪುಷ್ಟಿಕರವಾದ ಆಹಾರದ ಅಂಶಗಳನ್ನು ಪಡೆಯಬಹುದು ಎಂಬುದನ್ನು ತೋರಿಸಿಕೊಟ್ಟಿದೆ

ಈ ಸಂಸ್ಥೆಯು 'ವಿವಿಧೋದ್ದೇಶದ ಆಹಾರ (ಇಂಡಿಯನ್ ಮಲ್ಟಿಪರ್ಪಸ್ ಫುಡ್ ಎಂಬ ವಿಶೇಷ ರೀತಿಯ ಆಹಾರ ಪದಾರ್ಥಗಳನ್ನು ತಯಾರಿಸಿದೆ ಮನುಷ್ಯನ ದೇಹಾರೋಗ್ಯಕ್ಕೆ ಬೇಕಾದ ಉತ್ತಮ ಪೌಷ್ಟಿಕಾಂಶಗಳು ಇದರಲ್ಲಿರುವುವು. ಇದರಲ್ಲಿ ಲೋಹದ ಅಂಶ ಮತ್ತು ಅನ್ನಾಂಗವನ್ನು ಹೊಂದಿದ ಕಡಲೆಕಾಯಿ ಹಿಟ್ಟು ಮತ್ತು ಕಡಲೆಯ ಹಿಟ್ಟು ಕ್ರಮವಾಗಿ ೭೫ ಮತ್ತು ೨೫ ಭಾಗದಷ್ಟು ಇರುವುದು ಈ ಹಿಟ್ಟನ್ನು ಗೋಧಿಯ ಹಿಟ್ಟಿನೊಡನೆ ಶೇ ೧೦ರಷ್ಟು ಪ್ರಮಾಣದಲ್ಲಿ ಬೆರೆಸಲಾಗುವುದು. ಈ ಆಹಾರವು ಅತ್ಯುತ್ತಮ ಪೌಷ್ಟಿಕಾಂಶಗಳಿಂದ ತುಂಬಿದ ಆಹಾರವಾಗಿರುವುದು. ಗೋಧಿ ಹಿಟ್ಟಿನ ಕಣಕದಿಂದ ಮಾಡುವ ಕಾವಿಗೆ ಮತ್ತಿತರ ಆಹಾರ ಪದಾರ್ಥಗಳೊಡನೆ ಈ ಕಡಲೆ ಕಾಯಿ ಹಿಟ್ಟನ್ನು ಬೆರೆಸಬಹುದು.

ಕಡಲೇ ಕಾಯಿಯು ಹಿಟ್ಟನ್ನು ತಯಾರಿಸಲು ಭಾರತ ಸರಕಾರವು, ಯೂನಿಸೆಫ್ ಸಂಸ್ಥೆಯ ನೆರವಿನೊಡನೆ, ದೇಶದಲ್ಲಿ ಎರಡು ಕೇಂದ್ರಗಳನ್ನು ಪ್ರಾರಂಭಿಸಲಿದೆ. ಈ ಕೇಂದ್ರಗಳು ದಿನ ಪೊಂದಕ್ಕೆ ತಲಾ ೧೦ ಟನ್ನುಗಳಷ್ಟು ಕಡಲೇ ಬೀಜದ ಹಿಟ್ಟನ್ನು ತಯಾರಿಸುವ ಸಾಮರ್ಥ್ಯ ಪಡೆದಿರುವುವು. ಇವುಗಳಲ್ಲಿ ಒಂದನ್ನು ಮುಂಬಯಿಯಲ್ಲಿಯೂ ಮತ್ತು ಇನ್ನೊಂದನ್ನು ಕೊಯಮತ್ತೂರಿನಲ್ಲಿಯೂ ಸ್ಥಾಪಿಸುವ ಪ್ರಯತ್ನ ಈಗಾಗಲೇ ನಡೆದಿದೆ. ಕೊಯಮತ್ತೂರಿನ ಕೇಂದ್ರವನ್ನು ಖಾಸಗಿ ಉದ್ಯಮದ ಸಹಕಾರದೊಂದಿಗೆ ಸ್ಥಾಪಿಸಲಾಗುವುದು.

ಆಹಾರ ಪದಾರ್ಥಗಳನ್ನು ಬೇಕಾದ ಪ್ರಮಾಣದಲ್ಲಿ ಬೆಳೆಯುವುದಷ್ಟೇ ಹೆಚ್ಚಿನ ಕೆಲಸವಲ್ಲ ಅವನ್ನು ಅಂತಿಮವಾಗಿ ಬಳಸುವವರೆಗೂ, ಸೂಕ್ತವಾದ ರೀತಿಯಲ್ಲಿ ಸಂಗ್ರಹಿಸಿ, ಕೆಡದಂತೆ ಇಡುವುದರಲ್ಲಿ ಮಹತ್ವವಿದೆ. ಬೆಳೆಯುವುದಕ್ಕೆ ನೀಡುವಷ್ಟು ವಿಶೇಷ ಗಮನವನ್ನು ಇದಕ್ಕಾಗಿ ನೀಡಬೇಕಾಗಿದೆ. ನಾವು ಬೆಳೆಯುವ ಆಹಾರ ಗಳಲ್ಲಿ ಹೆಚ್ಚಿನವು ಬಹು ಬೇಗ ಕೆಡುವಂತಹವು. ಇದರಲ್ಲಿ ವರ್ಷದ ಕೆಲವು ಕಾಲದಲ್ಲಿ ಬೆಳೆಯಲಾಗುವ ಆಹಾರ ಪದಾರ್ಥಗಳೂ ಇರುವುವು. ಈ ಆಹಾರ ಪದಾರ್ಥಗಳ ಸಾಗಣೆ ಮತ್ತು ವಿತರಣೆಯು ಬಹು ಮಟ್ಟಿಗೆ ಸಮಸ್ಯೆಯಂತಾಗಿದೆ. ದೊರೆಯುವ ಆಹಾರ ಪದಾರ್ಥಗಳ ಸಂರಕ್ಷಣೆ ಹಾಗೂ ಪೂರ್ಣ ಬಳಕೆಗೆ ಸಹಾಯಕವಾಗುವಂತೆ ಆಧುನಿಕ ವಿಜ್ಞಾನ ಮತ್ತು ತಾಂತ್ರಿಕ ಜ್ಞಾನವನ್ನು ಉಪಯೋಗಿಸಿ ಆಹಾರ ಪದಾರ್ಥಗಳು ಹಾಳಾಗುವುದನ್ನು ತಡೆಯಬೇಕಾಗಿದೆ. ಪೋಷಕ ಆಹಾರ ವಿಭಾಗದವರು ಕೈಗೊಂಡಿರುವ ಕಾರ್ಯಕ್ರಮಗಳಲ್ಲಿ ತರಕಾರಿ ಮತ್ತು ಹಣ್ಣುಗಳ ಸಂರಕ್ಷಣೆಯ ತರಬೇತಿ ನೀಡುವುದು, ಆಹಾರ ಪದಾರ್ಥಗಳಲ್ಲಿನ ತೇವಾಂಶವನ್ನು ತೆಗೆಯುವ ವಿಧಾನಗಳು ಸೇರಿವೆ.

ಜನರ ಆಹಾರ ಸೇವನೆಯ ವಿಧಾನದ ಬದಲಾವಣೆಗೆ ಪ್ರಯತ್ನವನ್ನು ನಡೆಸಲಾಗುತ್ತಿದೆ. ಇದನ್ನು ಒಮ್ಮೆಲೆ ಮಾಡುವುದು ಅಸಾಧ್ಯ. ಈ ಪ್ರಯತ್ನವನ್ನು ನಿಧಾನವಾಗಿ ಎಚ್ಚರಿಕೆಯಿಂದ ಕೈಗೊಳ್ಳಬೇಕಾಗಿದೆ. ಪೌಷ್ಟಿಕ ಆಹಾರದ ಬಗ್ಗೆ ಈಗ ಹಲವಾರು ಶಿಕ್ಷಣ ಕಾರ್ಯಕ್ರಮಗಳನ್ನು ಜಾರಿಯಲ್ಲಿ ತಂದಿಲಾಗಿದೆ. ಈ ಬಗೆಗೆ ನೈಜ್ಞಾನಿಕ ವಿಷಯಗಳನ್ನು ಜನರಿಗೆ ತಿಳಿಸುವ ಸಲುವಾಗಿ ಸಂಚಾರಿ ವಿಸ್ತರಣಾ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ, ಮುಂಬಯಿಯಲ್ಲಿರುವ ಕೇಟರಿಂಗ್ ಎಂಡ್ ಮೆನೇಜ್‌ಮೆಂಟ್ ಕಾಲೇಜಿನನ್ನು ಪುನರ್ ವ್ಯವಸ್ಥೆಗೊಳಿಸಲಾಗುತ್ತಿದೆ. ಆಹಾರ ತಯಾರಿಸುವ ತಂತ್ರ ಮತ್ತು ಪೌಷ್ಟಿಕ ಆಹಾರದ ಬಗ್ಗೆ ಶಿಕ್ಷಣ ನೀಡುವ ಸಂಸ್ಥೆಯೊಂದನ್ನು ನವದೆಹಲಿಯಲ್ಲಿ ತೆರೆಯಲಾಗುವುದು. ಇದೇ ರೀತಿಯ ಮತ್ತೆರಡು ಸಂಸ್ಥೆಗಳನ್ನು ಮದರಾಸು ಮತ್ತು ಕಲ್ಕತ್ತಾಗಳಲ್ಲಿ ಸ್ಥಾಪಿಸಲಾಗುವುದು. ಈ ನಾಲ್ಕು ಸಂಸ್ಥೆಗಳು ಪೌಷ್ಟಿಕ ಆಹಾರ, ಸಮತೂಕದ ಆಹಾರ, ಆಹಾರ ಪದಾರ್ಥಗಳ ಸಂರಕ್ಷಣೆ-ಈ ಮುಂತಾದ ವಿಷಯಗಳಲ್ಲಿ ಪ್ರಚಾರ ನಡೆಸುವ ವಿಸ್ತರಣಾ ಕೇಂದ್ರಗಳಾಗಿ ಕಾರ್ಯನಿರ್ವಹಿಸುವುವು.

ಪರಮೋತ್ಮನ ಅಸ್ತಿತ್ವವಿದೆಯೆ?

(೩ನೇ ಪುಟದಿಂದ)

ಹೊರೆಯಿತ್ತು; ಆದರ ಕೆಳಗೆ ಇದ್ದ ಐದು ರೂಪಾಯಿಯ ನೋಟೊಂದನ್ನು ನನಗೆ ಆಕೆ ತೋರಿಸಿದಳು, 'ಬಂಗಲಾ ಸಾಹಬ್' ಎಂದೂ ಹೇಳಿದಳು. 'ಬಂಗಲಾ ಸಾಹಬ್' ಆಕೆಯ ಪತಿ ನೆಚ್ಚಿ ಗುರುಧ್ವಾರವಾಗಿತ್ತು.

ಒಮ್ಮಿಂದೊಮ್ಮೆಯೇ ಸ್ವಪ್ನ ಭಂಗವಾಯಿತು ಎಲ್ಲವೂ ತಿರುವು ಮುರುವು! ಮನಸ್ಸಿನಲ್ಲಿ ಮೂಡ್ರ ಸ್ವಪ್ನವು ಹೊಚ್ಚ ಹೊಸತಾಗಿತ್ತು. ನಾನು ಕೂಡಲೆ ಎದ್ದೆ; ಕಪಾಟಕ್ಕೆ ಕೈ ಹಾಕಿ ವರ್ತಮಾನ ಪತ್ರಗಳನ್ನು ದೂರ ಸರಿಸಿದೆ. ಆದರದಿಯಲ್ಲಿ ನಿಜಕ್ಕೂ ಐದು ರೂಪಾಯಿಗಳ ನೋಟೊಂದಿತ್ತು.

ಮೇಲೆ ಜೇಳಿದೆ ಮೂರೂ ಘಟನೆಗಳಂತೆಯೇ ಈ ಘಟನೆಯು ಕುರಿತೂ ತರ್ಕ ವಿತರ್ಕ ಮಾಡಬಲ್ಲೆ. ನನ್ನ ಅಜ್ಜಿಯು ಅಲ್ಲಿ ಇಲ್ಲಿ ಹಣವಿಡುತಿದ್ದುದು ನನಗೆ ಗೊತ್ತು. ಸನಾತನ ಪತ್ರಗಳಲ್ಲಿ ಈ ನೋಟನ್ನು ಆಕೆ ಇಟ್ಟಿರುವುದನ್ನು ನೋಡಿರಬೇಕು; ಮತ್ತು ಸುಪ್ತ ಭಾವನೆಗಳು ಪರಿಸ್ಥಿತಿವಶದಿಂದ ಈ ರೂಪವಾಂತುವೆಂದು ಹೇಳಬಹುದು.

ಇಪ್ಪೊಂದು ಘಟನೆಗಳು ನಡೆದ ನಂತರವೂ ನನ್ನ ವಿಶ್ವಾಸವು ಅಸ್ಥಿರವಾಗಿದೆ. ಇಂದಿಗೂ ನಾನು ನಿಶ್ಚಿಯವಾಗಿ ಏನೊಂದನ್ನೂ ಹೇಳಲಾರೆ. ಆ ಶಕ್ತಿಯು ವ್ಯಾಯುಃ ಇರಬಹುದು ಎನ್ನುತ್ತೇನೆ ನಾನು; ಆದರೆ, 'ಇದೆ' ಅಥವಾ 'ಇಲ್ಲ' ಎಂದು ನಿರ್ಧಾರವಾಗಿ ನುಡಿಯುವ ಸ್ಥಿತಿಗೆ ನಾನಿನ್ನೂ ಬಂದು ಮುಟ್ಟಿಲ್ಲ

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟ್‌ನಲ್ಲಿ

O. S. No. 171/62.

ಫ್ರಿದಾ ಆಳ್ವ ಬ್ಯಾ— ವಾದಿ.

ಮತ್ತು

ಪಸುದ್ ಸಾಹೇಬ್ ಕೊಡಾ— ಪ್ರತಿವಾದಿರು.

ಇವರಿಗೆ

ಉಡ್ಪಿ ತಾಲೂಕು ಉಚ್ಚಾಲ ಗ್ರಾಮದಲ್ಲಿರುವ ಬಾಡನ್ ಸಾಹೇಬರ ಜಗ ಶಾಬು ಬಾಡನ್ ಸಾಹೇಬ್— ಮತ್ತು ಇವರಿಗೆ ಸಾಹೇಬರ ಕೆಂಡ್ತಿ ದೊಲಾಂಬಿ 1 ಕೊಡಾ 2 ಜನರಿಗೆ ಶ್ರುತಪಡಿಸುವುದೇನೆಂದರೆ:—

ಮಾದಿಗೆ ನಿಮ್ಮಿಂದ ಬರಕ್ಕೆ ಮೂಲ ಗೇಜಿ ಬಾಕಿ ವಗ್ಗೈರೆ ಕೇಳಿ ದಾಖ್ಲು ಮಾಡಿದ ಮೇಲ್ಕಂಡ ಜಾನೆಯು ತಾರೀಕು 10-9-63 ಕ್ಕೆ ಇಟ್ಟಿನೆ. ಆ ದಿವ್ಸ ಬೆಳ್ಗೆ 11 ಗಂಟೆಗೆ ಸದ್ರಿ ಕೋರ್ಟು ನುಂದೆ ಹಾಜ್ರಾಗಿ ಉದಾಸೀನರುವರೆ ತಪ್ಪಿದ್ದಲ್ಲಿ ನಿಮ್ಮ ಗೈರ್ ಹಾಜರಿಯಲ್ಲಿ ಸದ್ರಿ ದಾವೆಯನ್ನು ತೀರ್ಮಾನಿಸಲಾಗುವುದು.

V. G Kedlaya, *M.A.,LL.B.,*
Advocate for Plaintiff.

ಉಡ್ಪಿ, ತಾ. 16—8—62.

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ರೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯುತ್ತಮವೆಂದು ಪರಿಗಣಿಸಿರುವರು ಪ್ರತಿಯೊಬ್ಬ ರೇವಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿಹೊಂದುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ವಿಜಯ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್:— ವಿಜಯ ಬೇಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡ್,
Estd. 1931. — ಮಂಗಳೂರು—3
Phone No. 240.

ನೋಡುವವರ ದೃಷ್ಟಿದೋಷ

(೨ನೇ ಪುಟದಿಂದ)

ಗಾಗಲೇ ಅರ್ಥವಾಗಿರಬೇಕು. ಆದ್ದರಿಂದಲೇ ಆಕೆಯ ಅದರದ ನಗುವಿನಲ್ಲಿ ಅರ್ಥಪೂರ್ಣ ಪ್ರಶ್ನೆ ಅಡಗಿದಂತಿದೆ. ಶಾರದೆಯಾದರೋ ತನ್ನ ಹೃದಯದ ಅಂದೋಲನದ ಕಾರಣ ತಿಳಿಯದೆ ಕಂಗಾಲಾಗಿದ್ದಾಳೆ. ಆಕೆಯ ಮುಖ ದಿನೇ ದಿನೇ ತೇಜೋಹೀನವಾಗುತ್ತಾ ಬರುತ್ತಲಿದೆ. ಹಿಂದೆ ಮುಖದಲ್ಲಿದ್ದ ನಗು, ಉಲ್ಲಾಸ ಪಟ್ಟಣ ಸೇರಿದ ಮೇಲೆ ಕಡಿಮೆಯಾಗುತ್ತಾ ಬಂದು ಇತ್ತೀಚೆಗಂತೂ ಹೇಳ ಹೆಸರಿಲ್ಲದಂತೆ ಮಾಯವಾಗಿ ಬಿಟ್ಟಿದೆ. ಒಮ್ಮೊಮ್ಮೆ ತಾನು ಯೋಚಿಸುತ್ತೇನೆ, ಆಕೆ ತನ್ನ ಧರ್ಮಪತ್ನಿ. ತಾನಾಕೆಗೆ ದ್ರೋಹವೆಸಗುತ್ತಿದ್ದೇನೆಯೇ?

ಆದರೆ....ಶಾರದೆ ನಗುವಂತೆ ಮಾಡುವುದು ತನ್ನ ಕೈಮೀರಿದ ಕೆಲಸ, ಊಹ್ಞಾ...ಅವಳ ನಗುವಿಗಾಗಿ ತಾನೇನೂ ಮಾಡಲಾರೆ. ತಾನು ಆ ವಿಷಯದಲ್ಲಿ ಸಂಪೂರ್ಣ ಅಸಹಾಯನಾಗಿದ್ದೇನೆ. ತನ್ನ ಸುಖ, ಸಂತೋಷವನ್ನು ಅಲಕ್ಷ್ಯಿಸಿ ತನ್ನ ಬಾಳನ್ನೇ ಹಾಳುಮಾಡಿಕೊಂಡು ಶಾರದೆಯನ್ನು ನಗುವಂತೆ ಮಾಡುವುದು ಸಾಧ್ಯವೇ ಇಲ್ಲ. ಅಲ್ಲದೆ ಆಕೆ ಸಾಧ್ವಿ, ತನ್ನ ಪತಿ ನಗು ನಗುತ್ತಿರುವುದನ್ನೇ ಬಯಸುವವಳಲ್ಲದೆ ಒಳಗಿಂದೊಳಗೇ ಕೊರಗುವುದನ್ನು ಖಂಡಿತ ಸಹಿಸಲಾರಳು. ಈಗಲೂ ಅಷ್ಟೆ, ತಾನು ವೃಥಾ ಕೊರಗುತಿರುವೆನೇಕೆಂಬುದೇ ಅವಳ ಕೊರಗು.

ಶಾರದೆಗೆ ಬೇಕಾದುದೆಲ್ಲವನ್ನೂ ತಂದುಕೊಡುತ್ತೇನೆ. ಆದರೆ ಪ್ರೀತಿ ಮತ್ತೂ ಹೃದಯ....ಊಹ್ಞೂ...ಇವು ರಾಧೆಗೆ. ಮೀಸಲು.

oo oo oo

"ರಾಧಾ...ರಾಧಾ....ಈ ದಿನಕ್ಕಾಗಿ ಇಂತಹ ದಿನಕ್ಕಾಗಿ ನಾನೆಷ್ಟು ದಿನಗಳಿಂದ ವರಿತಪಿಸುತ್ತಿದ್ದ ಬಲ್ಲೆಯಾ? ಇದಕ್ಕಾಗಿ ಇಂತಹ ಸುದಿನಕ್ಕಾಗಿ ನನ್ನ ಹೃದಯದ ತೊಳಲಾಟವೆಷ್ಟಿತ್ತು ಗೊತ್ತೇ?"

"ಎಲ್ಲ ಗೊತ್ತು ನನ್ನ ರಾಜಾ. ನಾನೂ ನೀವು ಆಫೀಸು ಸೇರಿದ ಆ ಮೊದಲ ದಿನವೇ ನಿಮ್ಮ ನೋಟವನ್ನು ಅರ್ಥಮಾಡಿಕೊಂಡಿದ್ದೆ. ಮಾತ್ರವಲ್ಲ ನಿಮಗೆ ಸಂಪೂರ್ಣ ವಶಳಾಗಿ ಬಿಟ್ಟಿದ್ದೆ. ಆದರೆ ನಿಮ್ಮನ್ನೊಲಿಸಲು ಮಾತ್ರ ಕರಿಣ ತಪಸ್ಸನ್ನೇ ಆಚರಿಸಿದಂತಾಯಿತು."

"ಹೌದು ರಾಧಾ....ಏನು ಮಾಡಲಿ? ವಿಧಿ ನನ್ನ ಕೊರಳಿಗೆ ಈ ಮೊದಲೇ ಬೇರೊಂದು ಹೆಣ್ಣನ್ನು ಕಟ್ಟಿಬಿಟ್ಟಿದೆ. ಆದರೆ...ಆದರೆ....ನಾನು ಮಾತ್ರ ಸಂಪೂರ್ಣ ನಿನ್ನವನು ರಾಧಾ. ನನ್ನ ಮನ ತುಂಬ ನೀನೇ ತುಂಬಿಕೊಂಡು ಬಿಟ್ಟಿದ್ದಿ. ನನ್ನ ಹೃದಯ ಪ್ರೀತಿ ಎಲ್ಲ ನಿನಗೇ ಮೀಸಲು."

"ಓಹ್! ನೀವೆಷ್ಟು ಒಳ್ಳೆಯವರು ದೊರೆ!" ಭಾವನಾವಶಳಾದ ರಾಧೆ ಸಂತೋಷಭರದಿಂದ ಉದ್ಗರಿಸಿದಳು.

"ರಾಧಾ...ಮಾಧವ....ಹೆಸರೂ ಚೆನ್ನಾಗಿ ಕೂಡುತ್ತೆ" ಎಂದು ನಕ್ಕ ಮಾಧವನಿಗೆ ಹಾಲಿನ ಬಟ್ಟಲನ್ನು ಕೈಗಿತ್ತಳು ರಾಧಾ.

ಕೆಲವೇ ದಿನಗಳಲ್ಲಿ ಮಾಧವ ರಾಧೆಗೆ ಸಂಪೂರ್ಣ ವಶನಾಗಿ ಬಿಟ್ಟ. ಮಾಧವ ಅವಳಿಗಾಗಿ ಏನನ್ನೂ ಮಾಡಲೂ ಸಿದ್ಧನಿದ್ದ. ಅವಳ ಸುಖಕ್ಕಾಗಿ, ಸಂತೋಷಕ್ಕಾಗಿ, ಅವಳನ್ನೊಲಿಸಿಕೊಳ್ಳುವ ಸಲುವಾಗಿ ಎಂತಹ ತ್ಯಾಗಕ್ಕೂ ತಯಾರಾಗಿದ್ದ. ಆ ರಾಧೆಗಾಗಿ ಆತ ಪತ್ನಿಯನ್ನೂ ಎಳೆಯ ಮಗುವನ್ನೂ ಮರೆತುಬಿಟ್ಟಿದ್ದ. ಮನೆಗೆ ಹೋಗುವುದೇ ಮನಸ್ಸಾದರೆ....ಆದರೆ ಆ ಮನಸ್ಸು ಮಾತ್ರ ಮನೆಯತ್ತ ಹೊರಳುತ್ತಲೇ ಇರಲಿಲ್ಲ. ಎಲ್ಲವೂ ಅಂದರೆ ಮಾಧವನ ಆಸೆಯೆಲ್ಲವೂ ಈಡೇರಿತ್ತು ನಿಜ. ಆದರೆ ಅವಿವಾಹಿತೆಯಾಗಿದ್ದ ರಾಧಾ ತನ್ನೊಡನಿದ್ದಂತೆಯೇ ಇತರ ಗೆಳೆಯರೊಡನೆಯೂ ಸರಸವಾಡುತ್ತಿದ್ದಾಳಲ್ಲ, ಅದೇಕೆ? ಅವಳಿಗೆ ಶೀಲದ ಬೆಲೆಯೇ ತಿಳಿಯದೇ? ಛೆ! ತನ್ನ ರಾಧಾ ಹಾಗಾಗ ಕೂಡದು. ಹಾಗಿರಲಾರಳು. ಆಕೆ ಸಂಪೂರ್ಣ ನನ್ನವಳು. ನನ್ನವಳಾಗಿಯೇ ಇರಬೇಕು

ಮಾಧವ ತನ್ನ ಮನದಿಚ್ಛೆ ಈಡೇರಿದ ಸಂಭ್ರಮದಲ್ಲಿ ಎಲ್ಲವನ್ನೂ ಎಲ್ಲರನ್ನೂ ಮರೆತಿದ್ದ. ಅವನ ಪ್ರಪಂಚದಲ್ಲಿ ರಾಧೆಯೊಬ್ಬಳೇ ಕುಣಿಯುತ್ತಾ ಕಂಗೊಳಿಸುತ್ತಿದ್ದಾಳೆ.

ಆಫೀಸಿನ ಕೆಲಸ ಮುಗಿದೊಡನೆ ಆತ ನೆಟ್ಟಗೆ ರಾಧೆಯ ಮನೆಯತ್ತ ಧಾವಿಸುತ್ತಿದ್ದ ಅಲ್ಲಿ ರಾಧಾ ಅವನಿಗಾಗಿ ತಿಂಡಿ ಹಾಲು ಸಿದ್ಧಪಡಿಸುತ್ತಿದ್ದಳು. ಒಮ್ಮೊಮ್ಮೆ ಅವನೊಡನೆ ಇತರ ಅತಿಥಿಗಳೂ ಸಮಾರಂಭದಲ್ಲಿ ಭಾಗವಹಿಸುತ್ತಿದ್ದರು ಆಗ ರಾಧೆ ಹೆಣ್ಣಾದರೂ ತುಸುವೂ ಸಂಕೋಚವಿಲ್ಲದೆ ಎಲ್ಲರೊಂದಿಗೆ ನಕ್ಕು ಬೆರೆತು ಮಾತನಾಡುತ್ತಿದ್ದಳು. ಆದರೆ ಮಾಧವ ಅವರೆಲ್ಲರೂ ಹೋದ ಮೇಲೆ ಅಲ್ಲೇ ಊಟ ಮುಗಿಸಿ ಮನೆಗೆ ಹಿಂತೆರಳುತ್ತಿದ್ದುದು ರಾತ್ರಿ ಹನ್ನೆರಡರ ಮೇಲೆಯೇ. ಆದರೆ ಆಗಲೂ ಆತನ ಅರ್ಧಾಂಗಿಯೆನಿಸಿದ ಪ್ರಾಣಿ ಉಪವಾಸ ಕುಳಿತು ಅರೆ ನಿದ್ದೆಯಲ್ಲಿ ಬಾಗಿಲಿಗೊರಗಿ ಕಾಯುತ್ತಿದ್ದುದೊಂದು ಮಾಧವನಿಗೆ ನುಂಗಲಾರದ ತುತ್ತಾಗಿತ್ತು.

ಅಂದು ಮಾಧವ ಪೇಟೆಯನ್ನೆಲ್ಲ ಸುತ್ತಾಡಿ ರಾಧಾಳಿಗಾಗಿ ಹೊಸ ನಮೂನೆಯ ಸಿಲ್ಕ್ ಸೀರೆ, ಹೂ, ಹಣ್ಣುಗಳನ್ನು ತೆಗೆದುಕೊಂಡು ಹೊರಡುವಾಗ ಗಂಟೆ ಒಂಭತಕ್ಕೆ ಸಮೀಪವಾಗಿತ್ತು. ಆತ ಅವಸರವಸರವಾಗಿ ನಡೆಯುತ್ತಿದ್ದ. ಯಾವಾಗ ರಾಧಾಳ ಸಂತಸದ ಮೊಗ ನೋಡಿಯೇನೋ ಎಂಬಆತುರದಿಂದ ವೇಗವಾಗಿ ನಡೆಯುತಿದ್ದ. ಸಂಬಳ ಅದೇದಿನ ಕೈ ಸೇರಿ ಅದರಲ್ಲಾಗಲೇ ಅರ್ಧಾಂಶ ರಾಧಾಳ ಮನವೊಲಿಸುವುದಕ್ಕಾಗಿ ಕೈ ಬಿಟ್ಟಿತ್ತು. ಆದರೆ ತನ್ನ ರಾಧೆಗಾಗಿ ಖರ್ಚು ಮಾಡುವುದಕ್ಕಾಗಿ ಆತನಿಗೆ ಸ್ವಲ್ಪವೂ ಪಶ್ಚಾತ್ತಾಪವಿರಲಿಲ್ಲ.

"ರಾಧಾ... ಓ ನನ್ನ ರಾಧಾ...ನೀನು ನನ್ನನ್ನು ಇಷ್ಟು ಬೇಗನೇ ಮರೆತು ಬಿಟ್ಟೆಯಾ? ರಾಧಾ"

ಮನೆಯ ಬಳಿಗೆ ಬಂದು ಒಂದೇ ಉಸುರಿನಲ್ಲಿ ಒಮ್ಮಲೇ ಮೆಟ್ಟಲೇರಿದ ಮಾಧವ ಒಮ್ಮೆಯೇ ಹಿಮ್ಮೆಟ್ಟಿ ತಟಸ್ಥನಾಗಿ ನಿಂತ. ಒಳಗಿನಿಂದ ಕೇಳಿಸಿದ ಗಂಡಸಿನ ಧ್ವನಿ ಕೇಳಿ ಆತ ನಡುಗಿದ.

"ಇಲ್ಲ ರಾಜಾ...ಮರೆಯುವುದು? ಅದು ಹೇಗೆ ಸಾಧ್ಯ? ಆದರೆ ಅವನು ನಿತ್ಯವೂ ಬರ್ತಾನೆ. ಅವನ ತಲೇಲಿನ್ನೂ ನನ್ನ ವಿಚಾರವಾಗಿ ಒಳ್ಳೇ ಅಭಿಪ್ರಾಯವೇ ಇವೆ. ತನ್ನನ್ನೇ ನಂಬಿದ ದೊಡ್ಡ ಪತಿವೃತೆ ಅಂತ ತಿಳಿದಿದ್ದಾನೆ. ಪಾಪ! ಅವನ ಒಳ್ಳೆಯ ನಂಬಿಕೆಯನ್ನೇಕೆ ಹಾಳು ಮಾಡಲಿ ಹೇಳು ಇರಲಿ. ಅವನೀಗ ಬರುವ ಹೊತ್ತಾಯ್ತು. ನೀನು ಇನ್ನೊಂದು ದಿನ ಅವನಿಲ್ಲದಾಗ ಬಂದು ಬಿಡು. ಇಂದಂತೂ ಸಂಬಳ ಕೈ ಸೇರುವ ದಿನ ಆದರಿಂದಾಗಿಯೇ ಇಷ್ಟೊತ್ತು. ಅಲ್ಲದೆ ಒಳ್ಳೊಳ್ಳೆಯ ಕಾಣಿಕೆ ತರ್ತಾನೆ."

"ಛೆ! ರಾಧಾ! ನಿನ್ನದೆಂತಹ ಅತಿಯಾಸೆಯೇ? ನಿನಗೆ ಉದ್ಯೋಗ ಬೇರೆ ಇದೆ. ನಾನೂ ಸಾಧ್ಯವಾದಷ್ಟು ಕೊಡ್ತಿದ್ದೇನೆ. ಅಲ್ಲದೆ ನನ್ನಂತಹ ಇತರ ಬಡಪಾಯಿಗಳೂ ಹಲವರಿದ್ದಾರೆ. ಆದರೂ ನಿನಗೆ ತೃಪ್ತಿಯೇ ಇಲ್ಲವೇ? ನಾನು ನಿನ್ನನ್ನು ಅತಿಯಾಗಿ ಪ್ರಿತಿಸಿದ್ದೇನೆ ರಾಧಾ. ನನ್ನ ಹೃದಯ ನಿನಗಾಗಿ ನಿನ್ನೊಲುಮೆಗಾಗಿ ಕಾತರಿಸುತ್ತಿದೆ."

ನಿಂತಿದ್ದ ಮಾಧವನಿಗೆ 'ಹೃದಯ' ಎಂಬ ಶಬ್ದ ತನ್ನದೆಯನ್ನೇ ಇರಿದಂತಾಯಿತು. ಆದರೂ ಆತ ನಿಶ್ಶಲನಾಗಿ ನಿಂತೇ ಇದ್ದ. ರಾಧಾ ಗಹ ಗಹಿಸಿ ನಗುತ್ತಿದ್ದಳು.

"ಅಯ್ಯಯ್ಯೋ...ಇಂತಹ ಪ್ರೀತಿ, ಹೃದಯಗಳು ನನಗಾಗಿ ಸಾವಿರಾರು ಇವೆ. ಇದನ್ನು ಕೇಳಿ ಕೇಳಿ ಬೇಸರ ಬಂದಿದೆ. ಕಿವಿ ಕಿವುಡಾಗಿದೆ. ಆದರೆ...ನನ್ನಲ್ಲಿ ಆ ಪ್ರೀತಿ ಹೃದಯವೆಂಬ ಶಬ್ದವೇ ಇಲ್ಲ ನೋಡು. ಅದನ್ನು ನೂರಾರು ಮಂದಿ ಸೂರೆಗೊಂಡಿದ್ದಾರೆ. ಆದ್ದರಿಂದ ನೀನೀಗ ಹೋಗು. ಆ ಹೊಸಬನನ್ನು ಸ್ವಾಗತಿಸಲು ಸಿದ್ಧಳಾಗ್ತೇನೆ. ನೀನೆಷ್ಟಾದರೂ ಹಳಬನಾಗಿದ್ದೀಯಾ" ಎಂದು ಕಿಲ ಕಿಲನೆ ನಗತೊಡಗಿದಳು ರಾಧೆ.

"ಏನೆಂದೆ ರಾಧಾ? ನಾನಿಷ್ಟು ಬೇಗನೇ ಹಳಬನಾಗಿ ಬಿಟ್ಟೆನಲ್ಲವೇ? ಇನ್ನು ಕೆಲವೇ ದಿನಗಳಲ್ಲಿ ಅವನೂ ಹಳಬನಾಗ್ತಾನೆ. ಆದರೆ ನೀನು ಮಾತ್ರ ದಿನ ದಿನಕ್ಕೆ ಹೊಸ ಹೊಸ ಫ್ಯಾಶನ್ನಿನಿಂದ ಹೊಸಬಳಾಗ್ತಿದ್ದಿ, ಅಲ್ವಾ?" ವ್ಯಂಗ್ಯವಾಗಿ ಕಟುವಾಗಿ ಆಡಿದ ಆತನ ಮಾತಿಗೆ ರಾಧೆ ಸಿಟ್ಟಾಗಲಿಲ್ಲ. ಆಕೆ ನಗುತ್ತಲೇ ಇದ್ದಳು.

"ನೋಡಿ, ಅದೆಲ್ಲಾ ನನ್ನಿಚ್ಛೆ. ಅದನ್ನು ಚರ್ಚಿಸಲು ನನಗೀಗ ಸಮಯವಿಲ್ಲ. ನಾನು ಹೇಗೇ ಇರಲಿ. ನಿಮ್ಮಂತಹ ನೂರಾರು ಜನರನ್ನು ಬಹಳ ಸುಲಭವಾಗಿ ಬಲೆಯೊಳಗೆ ಎಳೆದುಕೊಳ್ಳಬಲ್ಲೆ ಅವ

ಉಡ್ಪಿ ಡಿ. ಮು ಕೋರ್ಟನಲ್ಲಿ

O. S. 120/1962

ಫಿಲಿಫ್ ಲೂವ್ಸಿ ಬರ್ಬೋಜ ಇವರ ಬಗ್ಗೆ ಜನರಲ್ ಯೆಜಂಟ M. ಕೇಶವ ಭಟ್ಟ —ವಾದಿ

ಮತ್ತು

ವಿಲ್ಲಿಯಮ್ ಅಮ್ಮಣ್ಣ ಕೂಡಾ— ಪ್ರತಿವಾದಿರು

ಇವರೊಳಗೆ

ಉಡ್ಪಿ ತಾಲ್ಕು ಶಿರ್ವ ಗ್ರಾಮದಲ್ಲಿರುವ ಆದಾಮು ಅಮ್ಮಣ್ಣರ ಮಗ 1ನೇ ಪ್ರತಿವಾದಿ ವಿಲ್ಲಿಯಮ್ ಅಮ್ಮಣ್ಣ ಮತ್ತು ಇವರ ಮಗ 3ನೇ ಪ್ರತಿವಾದಿ ಗಿಲ್ಬರ್ಟ ಅಮಣ್ಣರಿಗೆ ಸಹಾ:—

ವಾದಿಯು ನಿಮ್ಮ ಕೂಡಾ 3 ಜನರ ಮೇಲೆ ಪ್ಲವ ಸಂ1ರದ ಬಾಬ್ತು ತನಗೆ ಬರತಕ್ಕ ಚಾಲಗೇಣಿಯ ಗೇಣಿ ಬಡ್ಡಿ ಕೂಡಾ ರೂಪ್ಯಾ 694=47ಕ್ಕೆ ಮಾಡಿದ ವ್ಯಾಜ್ಯದಲ್ಲಿ ನಿಮ್ಮ ಉದಾಹರಣೆ ಇದ್ದರೆ ತಾರೀಕು 5—9—62 ನೇ ದಿವಸ ಹಗಲು ಗಂಟೆ 11ಕ್ಕೆ ಈ ಕೋರ್ಟು ಮುಂದೆ ನೀವು ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜ್ರಿಯಲ್ಲಿ ಈ ವ್ಯಾಜ್ಯವು ತೀರ್ಮಾನಿಸಲ್ಪಡುವುದು.

B. Vasudeva Rao,
Counsel for Plff.

ಉಡ್ಪಿ, 22—8—1962.



ಅಮೇರಿಕನ್ ಪಿಸ್ತೂಲ್ ಆಟೋಮೇಟಿಕ್ 6 ಗುಂಡು ಮತ್ತು 50 ಗುಂಡು ನಿಮಗೆ ತೃಪ್ತಿಕರವಾಗದಿದ್ದಲ್ಲಿ ಹಣ ವಾಪಾಸು ಕೊಡಲಾಗುವುದು.

ತುಂಡಾಗದಂತಹ ಲೈಸೆನ್ಸ್ ಇಲ್ಲದೆ ಉಪಯೋಗಿಸಬಹುದು. ಇದನ್ನು ನಿಮ್ಮ ಸಂರಕ್ಷಣೆಗೂ ಕಳ್ಳಕಾಕರ ಭಯವನ್ನೂ ಕ್ರೂರ ಪ್ರಾಣಿಗಳ ಭಯವನ್ನೂ ನೀಗಿಸಲು ಉಪಯೋಗಿಸಬಹುದು. ಬೆಲೆ: ಬೆಲೆ: 6 ಗುಂಡಿನ ಪಿಸ್ತೂಲ್ ನಂ 333 ರೂ. 8, ನಂ. 444 ರೂ. 10, ನಂ. 555 ರೂ. 15 ಮತ್ತು 50 ಗುಂಡಿನ ಪಿಸ್ತೂಲ್ ನಂ. 666 ರೂ. 10, ನಂ. 777 ರೂ. 15, ನಂ. 888 ರೂ. 20 ಅದರೊಂದಿಗೆ 100 ಗುಂಡು ಧರ್ಮಕ್ಕೆ. ಬೇರೆ 100 ಗುಂಡಿನ ಬೆಲೆ: ರೂ. 5. ಚರ್ಮದ ಚೀಲದ ಬೆಲೆ: ರೂ. 6 ಪೋಸ್ಟ್ ಚಾರ್ಜು ರೂ. 2

REY ROGAS & CO., 23-A Anand Nagar, BOMBAY-26.

ಪುತ್ತೂರು ಡಿ. ಮು. ಕೋರ್ಟನಲ್ಲಿ

R.E.P. 178/62 R.E.A. 254/62
(O. S. 153/59)

ವಿಷ್ಣು ಭಟ್ಟ — ಅರ್ಜಿದಾರ.

ಶಾಂತಿರಾಜ ಅಜಲ ಸಹಾ — ಎದ್ರಿರು.

ಎದ್ರಿರು 5. ಪದ್ಮ ಲೋಚನಾ, ಅಮ್ಮು ಪದಿವಾಳರ ಮಗಳು.
6. ರಾಜರತ್ನ — ರುಕ್ಮಿಣಿ ಮತಿಯ ಮಗಳು.
ಇಬ್ಬರೂ ಕಡೇಶ್ವಾಲ್ಯ ಗ್ರಾಮದ ಅರಿಕಲ್ಲು.

ಸದ್ರಿ ಎದ್ರಿರಿಗೆ ಕೋರ್ಟು ಹ್ಕುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ:

ಪ್ರಿಲಿಮಿನರಿ ಡಿಕ್ರಿಗೆ ಜವಾಬ್ದಾರಿಯಿರುವ ಸ್ಥಿರಾಸ್ತಿ ಮೂರಾಟದ ಬಾಬ್ತು ದಾಜ್ರುಪಡ್ಸಿದ ಯೇಲಂ ಇಸ್ತಿಹಾರಿನ ರರ್ತಗಳನ್ನು ನಿರ್ಣಯಿಸುವ ಬಗ್ಗೆ ಮತ್ತು ಅರ್ಜಿದಾರನಿಗೆ ಸ್ಥಿರಾಸ್ತಿ ಯೇಲಂಗೆ ನಿಲ್ಲುವರೇ ಪರ್ಮಿಶನ್ ಕೇಳಿ ಸಹಾ ಮಾಡಿದ ಮೇಲಿನ ಅಮಲ್ಜಾರಿಯನ್ನು ತಾ. 14—9—62ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿರುತ್ತದೆ ಆ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉದಹರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿವ್ಯಾ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು

Sd/- M. Sadashiva Rao,
Vakil for Petitioner.

ಪುತ್ತೂರು, ತಾ. 22—8—62.

NAVAYUGA, UDIPI.
REGD. NO.BG. 176
30-8-1962
LICECE NO. 31
Licensed to Post without Prepayment

ನಿಗೆ ಸುಂದರಿಯೂ ಕೃಶಳಾದ ಮಡದಿಯಿದ್ದಾಳೆ. ಅವನಿಗಾಗಿಯೇ ಕೊರಗಿ ನೊರಗಿ, ಅವನೇ ತನ್ನ ಸರ್ವಸ್ವವೆಂದು ನಂಬಿ ಸ್ತ್ರೀಸುವ ಸಖಿ, ಆಕೆ ನಿಜಕ್ಕೂ ನನಗಿಂತ ಸುಂದರಿ. ಆದರೆ ಅತ ಆದೆಲ್ಲವನ್ನೂ ಮರೆತು ನನ್ನ ಥಳಕಿಗೆ ಮರುಳಾಗಿ ಹೃದಯವಿಲ್ಲದ ನನಗೆ ಹೃದಯವನ್ನರ್ಪಿಸಿ ಕೃತಾರ್ಥನಾದೆನೆಂದು ಭಾವಿಸಿದ್ದಾನೆ. ನಿಮ್ಮಂತೇ ಅನ್ನಿ ನಾನೇನೋ ತಪ್ಪುಮಾಡಿ ಆಪರಾಧಿನಿಯೂಗಿಯಾಗಿದೆ. ಇನ್ನು ಜೀವನದಲ್ಲೇ ಸುಖ, ಸಂತೋಷವನ್ನನುಭವಿಸದೆ ಬೇರೆ ದಾರಿಯೇ ಇಲ್ಲವಾಗಿದೆ. ನಾನು ನೀಯ್ದ ಬಲೆಗೆ ನೂರಾರು ಜನರು ಬಿದ್ದು ಮೇಲೆ ಬಾರದೆ ತೊಳಲಾಡುವುದನ್ನು ನೋಡಿಯೂ ನಗು ನಗುತಿರ್ತ್ತೇನೆ. ಸಾವಿರಾರು ಹೆಣ್ಣುಗಳ ಕಣ್ಣೀರಿನಿಂದಲೂ ನನ್ನ ಕಲ್ಲೆದೆ ಕರಗಲಾರದು. ಆದರೆ..... ..... ಆದೆಲ್ಲಾ ಈಗ ಯಾಕೆ? ಆತ ನನಗಿಂತ ಚೆಲುವೆಯೂದ, ಗುಣವತಿಯೂದ ಮಡದಿಯನ್ನು, ತನ್ನನ್ನು ನಂಬಿದ ಧರ್ಮಪತ್ನಿಯನ್ನು ಮರೆತು ಈ ನೈಲಾನ್ ಸೀರೆಗೆ ರಂಗಿನ ಮುಖಕ್ಕೆ, ಬಣ್ಣದ ಜೀವನಕ್ಕೆ ಮರುಳಾಗಿ ಅಪರಾಧಿ ಎನಿಸಲಾರನೇ? ಅವನಿಗಿಂತ ಪೆಚ್ಚಿನ ಪಾಪ ನಾನೇನು ಮಾಡಿದ್ದೇನೆ ಇರಲಿ. ಇಂದು ಹೋಗು. ನಾಳೆ ಹೇಗಾದರೂ ಉಪಾಯದಿಂದ ಆ ಸಾಧು ಪ್ರಾಣಿಯನ್ನು ತಪ್ಪಿಸಿ ನಿನ್ನನ್ನು ಆಹ್ವಾನಿಸುತ್ತೇನೆ."

ಮಾಧವನಿಗಿನ್ನು ಅಲ್ಲಿ ನಿಲ್ಲುವುದಾಗಲಿಲ್ಲ. ಆತ ಡಡ ಡಡನೆ ಮೆಟ್ಟಿಲಿಳಿದು ಓಡತೊಡಗಿದ. ದುನಿಯ ಮೆಟ್ಟಲೇರಿದಾಗಲೇ ಸಮಾಧಾನದ ಉಸಿರೆಳೆಯತೊಡಗಿದ ಶಾರದೆ ಗೋಡೆಗೊರಗಿ ಆರಿನಿಡ್ಡಿಯಲ್ಲಿ ಕಣ್ಣು ಮುಚ್ಚಿಕೊಂಡಿದ್ದಳು. ಊಟವಿಲ್ಲದೆ ಬಾಡಿದ ಮುಖ, ನೋವಿನಿಂದ ವ್ಯಥೆಯಿಂದ ನೊಂದ ದೇಹ....ಮಾಧವನ ಹೃದಯವನ್ನು ಅಲುಗಾಡಿಸಿತು.

"ಶಾರದಾ..." ಅಪರೂಪವಾಗಿ ಬಂದ ಪತಿಯ ಸ್ಪ್ರೀತಿಯ ಕರೆಯಿಂದ ಶಾರದೆ ಗಡಬಡಿಸಿ ಎದ್ದಳು. ಸಂಕೋಚ, ಸಂತೋಷಗಳ ಸಂಘರ್ಷದಲ್ಲಿ ಆಕೆ ಕಣ್ಣೊರಸಿಕೊಂಡಳು.

"ತೆಗೆದುಕೋ ಶಾರದಾ"

"ಹೊಸ ನಮೂನೆಯ ಸೀರೆ, ಜೊ, ಹೆಣ್ಣುಗಳು. ಶಾರದೆ ತನ್ನ ಕಣ್ಣುಗಳನ್ನೇ ನಂಬಲಿಲ್ಲ.

"ನನ್ನನ್ನು ಕ್ಷಮಿಸು ಶಾರದಾ. ಪತಿಯ ನೀರು ತುಂಬಿದ ಕಣ್ಣುಗಳನ್ನು ನೋಡಿ ಶಾರದೆಯ ಹೃದಯ ಬೆಂದು ಹೋಯಿತು.

"ಅಯ್ಯೋ...ನೀನೇಕೆ ಅಳೋದು"? ಕಾತರದಿಂದ ಶಾರದೆ ಕೇಳಿದಳು.

"ಇಲ್ಲ ಶಾರದಾ! ಈ ಕಣ್ಣೀರಿನಿಂದಲೇ ನನ್ನ ಮಂಜುಳವಿದ ದೃಷ್ಟಿ ಸರಿಯಾಗಬೇಕಾಗಿದೆ. ನನ್ನನ್ನು ಕ್ಷಮಿಸಿಬಿಡು"

ಶಾರದೆಗೆ ಆನಂದದಿಂದ ಹೃದಯ ತುಂಬಿಬಂದು ಮಾತು ಹೊರಗಲಿಲ್ಲ.

ಹಾವು ಸಾಯಬಾರದು; ಕೋಲು....

(೧ನೇ ಪುಟದಿಂದ)

ಗುತ್ತದೆ. ಚೀನದಂತೆಯೇ ಭಾರತವಾದರೂ ಇಂತಹ ಅಶಯವನ್ನೇ ಇಟ್ಟು ಕೊಂಡಿದೆ ಯೆಂಬುದನ್ನದು ನಮ್ಮ ನಾಯಕ ಮಣಿಗಳ ಪುನರುಚ್ಚಾರಣೆಯಿಂದಲಾದರೂ ತಿಳಿಯುಕೊಳ್ಳ ಬೇಕಿತ್ತು; ಆದರೆ, ಆಷ್ಟೊಂದು ವಿವೇಕೋದಯ ಅನರಲ್ಲಾಗಲಿಲ್ಲವೆಂಬುದು ನಮ್ಮ ದುರ್ದೈವ.

ನಿಕ ಪ್ರಶ್ನೀಯ ಉತ್ಸಾಹವೆ?

ಶಂಧಾನದಲ್ಲಿ ಉತ್ಸುಕರಾಗಿದ್ದರೂ ನೆಹರು ಏನೆನ್ನುತ್ತಾರೆ? ಚೀನೀಯ ಆಕ್ರಮಣವೀಗ ಸೂರ್ಯನಷ್ಟು ಬೆಳ್ಳಗಿದೆ. ಆದುದರಿಂದ ಮೂತುಕತೆಗೆ ತೊಡಗಬೇಕಾದರೆ, ಏನಾದರೂ ಕಾರಣ ಮತ್ತು ಪರಿಸ್ಥಿತಿಗಳೇಳ ಬೇಕು.

ಚೀನಾವು ತಾನು ಮಾಡಿದ ಆಕ್ರಮಣವನ್ನು ಸಂಪೂರ್ಣ ಹಿಂತೆಗೆದು ಕೊಳ್ಳದವರೆಗೆ ಮಾತೇ ಇಲ್ಲ. ಈಗ ಎರಡೂ ಕಡೆಗಳಿಂದ ಸೈನ್ಯ ಶಕ್ತಿಯು ಶೇಖರಣವಾಗುತ್ತಿರುವಾಗ, ಸಂಧಾನದ ಮಾತು ನಡೆಯಬೇಕಾದಲೆ, ಚೀನವು ಗಡಿಯಿಂದ ತನ್ನ ಆಕ್ರಮಣವನ್ನು ಮೊದಲಾಗಿ ಹಿಂತೆಯಬೇಕು. ಆಗ, ಭಾರತವಾದರೂ ಚೀನಾದ ಗಡಿಯಿಂದ ದೂರ ಸರಿಯುವುದು—ಎಂದು ಪ್ರಧಾನಿ ನೆಹೆರು ಹೇಳಿದ್ದಾರೆ. ಆದರೆ, ಕಮ್ಯುನಿಸ್ಟರು ಸ್ವೀಕರಿಸಿದ ಗೊತ್ತುವಳಿಯು ಇದನ್ನು ಪ್ರಸ್ತಾಪಿಸದೆ ಸಂಧಾನದ ಪ್ರಶ್ನೆಯನ್ನು ಮೂಕ್ಕ ಮುಟ್ಟಿ ಸುಮ್ಮನೆ ಕುಳಿತಿರುವುದು ಜೋಡ್ಯವೆನ್ನಲೇ ಬೇಕು.

ಶತ್ರುಗಳಿಗೆ ಆಹ್ವಾನ

ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀ ನಂಬೂದ್ರಿಪಾದರು ಒಪ್ಪಿಕೊಳ್ಳುವಂತೆ ಕಮ್ಯುನಿಸ್ಟ್ ಸದಸ್ಯರಲ್ಲಿ ಭಿನ್ನಾಭಿಪ್ರಾಯವಿದ್ದೇ ಇದೆ. ಈ ವಿಧದ ಭಿನ್ನ ಮತವು ಭಾರತ-ಚೀನ ಸೀಮಾ ವಿವಾದದ ಬಗ್ಗೆಯೂ ಇತ್ತು ಮತ್ತು ಇದೆ ಎಂದರೆ ಅತಿಶಯೋಕ್ತಿಯಲ್ಲ. ಸಮಾಧಾನದ ಪದಗಳಿಂದ ಕೂಡಿರುವ ಈ ಗೊತ್ತುವಳಿಯು ಕುರಿತಾದರೂ ಈ ಬಗೆಯ ಮತಭೇದ ಪ್ರಕಟವಾಗದಿರದು. ಅಧಿಕೃತ ವರದಿಗಳೆನ್ನುವಂತೆ ಶ್ರೀ ಡಾಂಗೆಯವರು ನಮ್ಮ ಭೂಭಾಗವು ನಮ್ಮದೇ; ಅದನ್ನು ನಾವೆಂದಿಗೂ ಬಿಟ್ಟುಕೊಡಲಾರೆವು' ಎಂಬ ಕರೋರ ಮಾತುಗಳನ್ನೂ ಆಡಿದ್ದಾರೆ ಆದರೆ, ನಂಬೂದ್ರಿಪಾದರು ಪತ್ರಕಾರರೊಡನೆ ಮಾತನಾಡುತ್ತ ಈ ತರದ ಗಂಭೀರ ವಿಚಾರವನ್ನು ಹೊರ ಪಡಿಸಲಿಲ್ಲ. ಮುಖ್ಯವಾಗಿ ಪಕ್ಷದ ಅಧ್ಯಕ್ಷ ಮತ್ತು ಕಾರ್ಯದರ್ಶಿಯವರಲ್ಲಿಯೇ ಮತ ಭೇದವಿದೆಯೆಂಬುದಿನ್ನೂ ಬಹಿರಂಗವಾಗಿಲ್ಲ. ನಂಬೂದ್ರಿಪಾದರ ಹೇಳಿಕೆಯಿಂದ ಅವರು ನೆಹರು ಮತ್ತು ನೆಹರು ಸರಕಾರಗಳ ನೀತಿಯ ನಡುವೆಯೇ ಅಂತರವಿದೆಯೆಂದು ವ್ಯಕ್ತವಾಗುವಂತಾದುದು ನಿಜಕ್ಕೂ ಜೋಡ್ಯ. ಇತರ ವಿಚಾರಗಳಲ್ಲಿ ಏನೇ ಇರಲಿ, ಚೀನ—ಭಾರತ ಸೀಮಾ ವಿವಾದದಲ್ಲಿ ನೆಹರು ನೀತಿ ಮತ್ತು ಅವರ ಸರಕಾರದ ಸಕಲ ಮಂತ್ರಿಗಳ ನೀತಿ ಒಂದೇ ಇವೆಯೆಂಬುದನ್ನು ನಂಬೂದ್ರಿಯವರು ಅರಿತುಕೊಂಡಂತೆ ಕಾಣುವುದಿಲ್ಲ. ನಿಜ ಹೇಳುವುದಾದರೆ, ದುರ್ಗಮ ಹಿಮಾಲಯವನ್ನು ಚೀನೀ ಸೇನೆಯು ಹಾದು ಭಾರತದಲ್ಲಿ ಪಾದಾರ್ಪಣ ಮಾಡುವುದನ್ನು ಕಾಣಬಯಸುವವರು ಆನರ ಪಕ್ಷದಲ್ಲಿಯೇ ಇದ್ದಾರೆ ಯೆಂದರೆ ಆತಿಶಯವಲ್ಲ. ಆದುದರಿಂದ ಕಮ್ಯುನಿಸ್ಟರ ಬಗ್ಗೆ ವಿಶೇಷ ಎಚ್ಚರ ವಹಿಸುವುದು ಅತ್ಯಂತಾವಶ್ಯಕವಾಗಿದೆ.

ಕಮ್ಯುನಿಸ್ಟ್ ಪಕ್ಷದ ವಿದೇಶ ವಿಚಾರ ಸಂಬಂಧಿ ಗೊತ್ತುವಳಿಯು ಒಂದು ರೀತಿಯಿದ್ದರೆ, ದೇಶದ ಆಂತರಿಕ ವಿಚಾರ ಸಂಬಂಧದಲ್ಲಿ ದೇರೊಂದು ತೆರವಾಗಿದೆ. ಅದು ದೇಶದ ಪಂಚವಾರ್ಷಿಕ ಯೋಜನೆಯನ್ನು ಬೆಂಬಲಿಸುತ್ತದೆ; ಅದನ್ನು ಕಾರ್ಯರೂಪಕ್ಕೆ ಪೂರ್ಣ ರೂಪದಲ್ಲಿ ತರಲು ಉತ್ಸುಕವಾಗಿದೆ. ಹಾಗಿದ್ದರೂ ದೇಶದ ಈ ಪ್ರಗಲಿಪರ ಯೋಜನೆಯನ್ನು ತಡೆಯಲು ಅಥವಾ ಅದಕ್ಕೆ ಆತಂಕಪ್ರೊಡ್ಡಲು ಕಾರಣವೆನಿಸುವ ಮುಷ್ಕರಾದಿ ವಿವಿಧ ಕಾರ್ಯಕ್ರಮಗಳಲ್ಲಿ ಪಕ್ಷವು ತತ್ಪರವಾಗಿದೆ. ಪಾಸಗಿ ಮತ್ತು ಸರಕಾರಿ ಕರ್ಮಶಾಲೆಗಳಲ್ಲಿ ಆದು ಇಂತಹ ಪ್ರಚಾರ ಸಾಧನಗಳನ್ನು ಎಂದಿಗೂ ಬಿಟ್ಟುಕೊಟ್ಟಿಲ್ಲ. ಯೋಜನೆಗಳ ಸಫಲತೆಗಾಗಿ ಅಧಿಕ ಕರನನ್ನು ಹೇರಿದಾಗ ಆದನ್ನು ನೊತ್ತಮೊದಲಿಗೆ ವಿರೋಧಿಸುವ ಪಕ್ಷವದು. ರೈತರ ಮೇಲೆ ಹೊರಿಸುವ ಭೂಕಂದಾಯವನ್ನು ವಿರೋಧಿಸುವುದು, ಕರಾಕರಣೆಯ ನೀತಿಯನ್ನು ಪ್ರತಿಭಟಿಸುವುದು, ಅಧಿಕ ವೇತನ ಕೇಳುವುದು ಆದರ ಕಾರ್ಯಜಿರಣೆಯ ನೀತಿಯೆನಿಸಿದೆ. ಇಂತಹ ಚಟುವಟಿಕೆಗಳನ್ನು ಆದು ಸಂಯೋಜಿಸುವುದಕ್ಕೆ, ಆವು ಅರ್ಥವತ್ತಾಗಿನೆಯೆಂಬುದಕ್ಕಿಂತ ತನ್ನ ಪ್ರಚಾರ ಸಾಧನಗಳಾಗಿವೆಯೆಂಬುದೇ ಹೆಚ್ಚಾಗಿ ಬಿಡಿಸುತ್ತದೆಯೆನ್ನಬಹುದೋ ಏನೋ! ಚೀನಾದಲ್ಲಿರುವ ಗೈರಿಂದು ಭಿಕ್ಷಾಟನೆಯ ದಾರಿ ಹಿಡಿದಿದ್ದಾರೆ; ಆಷ್ಟನ ಕಮ್ಯುನಿಸ್ಟ್ ಸರಕಾರದ ನೀತಿಯ ಉದಾರತೆಯಿಂದ.ನಮ್ಮ ಕಮ್ಯುನಿಸ್ಟ್ ಪಕ್ಷವಾದರೂ ನಮ್ಮ ರೈತರು ರೇಶನ್ ತರಲು ದಿನದ ಕಾರ್ಯಗಳನ್ನು ಬದಿಗಿಟ್ಟು ಸರಕಾರಿ ಸ್ಟೋರುಗಳ ಮುಂದೆ ದಿನವಿಡಿ ಸರತಿ ಕಾಯುತ್ತಿರಬೇಕು ಎಂದುಹಂಬಲಿಸುತ್ತದೆಯೆ? ದೇಶದಲ್ಲಿ ಆಗುತ್ತಿರುವ ಮತ್ತು ಆಗಬಹುದಾದುವುಗಳನ್ನು ಇತ್ಯ ಸಮಯದಿಂದ ನೋಡುತ್ತಿದ್ದರೂ ಜವರು ಅವುಗಳನ್ನು ಇನ್ನೂ ಅರ್ಥಮಾಡಿಕೊಂಡಂತೆ ಕಾಣುವುದಿಲ್ಲ. ದೇಶದ ಪುನರ್‌ನಿರ್ಮಾಣಕ್ಕಾಗಿ ರೂಪಿತವಾಗುವ ಪಂಚವಾರ್ಷಿಕ ಯೋಜನೆಗಳಿಗೆ ಬೆಂಬಲ ಮಾತ್ರ ವ್ಯಕ್ತಪಡಿಸಿದರೆ ಸಾಲದು; ಅದರ ಯಶಸ್ಸಿಗೆ ಪಂಪತ್ತು ಶೇಖರಿಸುವಲ್ಲಿಯೂ ಸಹಕಾರ ನೀಡುವುದು ಅಕ್ಯಗತ್ಯ.

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್

ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ನೂಡುವ ವಿಧಾನವು ವಿವರಿಸಲ್ಪಟ್ಟಿದೆ. ಹೊರಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ನೂತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ.
ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ
ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY
ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು
ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.—ಅರ್ಡಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0 =25 NP ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ರವಿಸಲಾಗುವುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳು— ಮಂಗಳೂರಲ್ಲಿ ಶ್ರೀನಿವಾಸ್ ಬುಕ್‌ಸ್ಟಾ, ಸ್ಕೂಲ್ ಬುಕ್ ಕೊ., ಕೆನರಾ ಕಾಲೆಜ್ ಬುಕ್ ಕೊ., ಇಂಡಿಯನ್ ಇಂಡಸ್ಟ್ರಿಯಲ್ಸ್ & ಪಬ್ಲಿಸಿಟಿ ಇನರಲ್ಲಿಯೂ, ಪುತ್ತೂರಲ್ಲಿ ಪೊಪ್ಯುಲರ್ ಸ್ಟೋಸ್ ಎಜನ್ಸಿಯಲ್ಲಿಯೂ ದೊರೆಯುತ್ತವೆ.

Edited Printed & Published by K. H. Shetty, at the Navayuga Press, Udipi, S. India.

ಅಖಿಲ ಕರ್ನಾಟಕದ
ಪ್ರಾತಿನಿಧಿಕ ಕಥಾಸಂಕಲನ
ಮಧುವನ
'ಕಿರಿಯರ ಪ್ರಪಂಚ'ದ
ಅಪೂರ್ವ ಪ್ರಕಟಣೆ
ಬೆಲೆ: ರೂ. ಮೂರು
ನವಭಾರತ ಪುಸ್ತಕ ಭಂಡಾರ
ಉಡುಪಿ

ನವಯುಗ

Estd. 1921 ಸ್ಥಾಪನೆ
Regd. No. B.G. 176
Vol. 42 No. 1

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 6—9—1962 ಗುರುವಾರ

13 ನ. ಪೈಸೆ
ವಾ. ಚಂದಾ ರೂ. 6—75
ಸಂಪುಟ ೪೨ ಸಂಚಿಕೆ ೧

ಮಿತ ದರದಲ್ಲಿ
ಕ್ಲಿಪ್ತ ಸಮಯದಲ್ಲಿ
ಉತ್ತಮ ತರದಲ್ಲಿ
ಮುದ್ರಣ
ಕೆಲಸಗಳಾಗಬೇಕೆ?
ಸಂದರ್ಶಿಸಿರಿ ಯೂ ವಿಚಾರಿಸಿರಿ
ನವಯುಗ ಪ್ರೆಸ್,
ಉಡುಪಿ

ನಾಗಾಜನರಿಗೆ ಪ್ರತ್ಯೇಕ ರಾಜ್ಯ

ಅಸಾಮದ ರಾಜ್ಯಪಾಲ ಮತ್ತು ಉಚ್ಚ ನ್ಯಾಯಾಲಯಗಳ ಅಧಿಕಾರ ಮಿತಿಯು ಮಾತ್ರ ಉಳಿಯುವುದು

ಭಾರತದ ಪಾರ್ಲಿಮೆಂಟಿನ ಲೋಕಸಭೆಯಲ್ಲಿ ದೇಶದ ಹದಿನಾರನೆಯ ರಾಜ್ಯವಾಗಿ 'ನಾಗಾಲೇಂಡನ್ನು' ನಿರ್ಮಿಸುವ ಸಂಬಂಧದ ವಿಧೇಯಕವು ಮಂಜೂರಾದುದರೊಡನೆ, ಭಾರತ ಸರಕಾರವು ನಾಗಾ ಜನರಿಗೆ ತಾನು ಇತ್ತ ಭರವಸೆಯನ್ನು ಪೂರೈಸುವಲ್ಲಿ ತಳೆದ ಆಸ್ಥೆಗೆ ಮೂರ್ತ ಸ್ವರೂಪವನ್ನಿತ್ತಂತಾಯಿತು. ೧೯೬೦ರಲ್ಲಿ ನಾಗಾ ಜನರ ಸಮ್ಮೇಳನದ ಪ್ರತಿನಿಧಿಗಳು ಪ್ರಧಾನ ಮಂತ್ರಿ ನೆಹರುರವರನ್ನು ಕಂಡು ತಮ್ಮ ಬೇಡಿಕೆಗಳನ್ನು ಮಂಡಿಸಿದ್ದರು. ಸ್ವಭಾವತಹ ನಾಗಾ ಜನರನ್ನು ಬಂಡುಗಾರ ಫಿಜೋ ತಪ್ಪುದಾರಿಗೆಳೆದು ಸ್ವತಂತ್ರ ನಾಗಾ ರಾಜ್ಯದ ಅಶಾಗೋಪುರವನ್ನು ಕಟ್ಟುತ್ತ ವಿಧ್ವಂಸಕ ಕೃತ್ಯಗಳಲ್ಲಿ ವ್ಯಸ್ತನಾಗಿದ್ದಾಗ, ಅಲ್ಲಿ ಶಾಂತಿ ಮತ್ತು ಸುವ್ಯವಸ್ಥೆಯ ರಕ್ಷಣೆಗಾಗಿ ಭಾರತವು ಸೈನ್ಯವನ್ನು ಕಳಿಸಬೇಕಾಗಿ ಬಂದಿತ್ತು. ಮುಂದೆ, ಪರಿಸ್ಥಿತಿಯು ಹದಕ್ಕೆ ಬಂದ ನಂತರ, ತಮ್ಮ ಕ್ರೌರ್ಯವನ್ನೂ ವಿಧ್ವಂಸಕ ಕೃತಿಯನ್ನೂ ನಿರುಪಾಯವಾಗಿ ನಿಲ್ಲಿಸ ಬೇಕಾದ ಫಿಜೋ ವಿದೇಶಕ್ಕೆ ಓಡಿ ಹೋದನು. ಆತನ ಆಲಾಯನದಿಂದ ನಾಗಾ ಜನರಾದರೂ ಸರಕಾರದ ಹಿಡಿತಕ್ಕೆ ಬರತೊಡಗಿದರು. ಹಾಗಿದ್ದರೂ ಪ್ರತ್ಯೇಕ ನಾಗಾ ರಾಜ್ಯವೊಂದು ತಮಗೆ ಬೇಕೆಂದೂ ತಾವು ಭಾರತದಿಂದ ಸಿಡಿದು ಹೋಗುವ ಯೋಜನೆಯನ್ನು ಬಿಟ್ಟು ಬಿಡುವೆವೆಂದೂ ಅವರಲ್ಲಿ ಒಂದು ಗುಂಪಿನ ಅಭಿಪ್ರಾಯವಾಗಿತ್ತು.

ಸಾಂವಿಧಾನಿಕ ಮನ್ನಣೆ

ಇದಕ್ಕಾಗಿ ಭಾರತ ಸರಕಾರವು ೧೯೬೦ರಲ್ಲಿಯೇ ನಾಗಾ ಜನಾಂಗದ ವೈಶಿಷ್ಟ ಮತ್ತು ಸಂಸ್ಕೃತಿಗಳನ್ನು ಸಂರಕ್ಷಿಸಿಕೊಡುವ ಭರವಸೆಯನ್ನು ಇತ್ತಿತು. ಅಸಾಮ ರಾಜ್ಯದಲ್ಲಿ ಸೇರಿದ್ದ ನಾಗಾ ಜರರು ವಾಸ ಮಾಡುತ್ತಿರುವ ಪ್ರದೇಶವನ್ನು ಪ್ರತ್ಯೇಕಿಸಿ ಅಲ್ಲಿ ನಾಗಾ ಜನಾಂಗದ ಪ್ರತಿನಿಧಿಗಳಿರುವ ಒಂದು ಸಲಹಾ ಸಮಿತಿಯನ್ನು ಏರ್ಪಡಿಸಿತು; ಅಸಾಮದ ರಾಜ್ಯಪಾಲರೇ ಇಲ್ಲಿ ರಾಷ್ಟ್ರಪತಿಗಳ ಪ್ರತಿನಿಧಿಗಳೆಂದು ಕಾರ್ಯ ನಿರ್ವಹಿಸುತಿದ್ದರು. ಆದುದರಿಂದ, ಅಂದುತಾತ್ಕಾಲಿಕವಾಗಿಮಾಡಿಕೊಂಡಿದ್ದ ವ್ಯವಸ್ಥೆಯನ್ನು ಇಂದುಸಾಂವಿಧಾನಿಕವಾಗಿ ಒಪ್ಪಿಕೊಂಡಂತಾಯ್ತು. ಈ ವಿಧೇಯಕವನ್ನು ಮೊದಲೇ ಲೋಕಸಭೆಯ ಮುಂದೆ ತರಬಹುದಿತ್ತು; ಆದರೆ, ನಾಗಾ ಜನರು ತಮ್ಮ ರಾಜ್ಯದಲ್ಲಿ ಸಂಪೂರ್ಣ ಶಾಂತಿಯ ವಾತಾವರಣವನ್ನು ನಿರ್ಮಿಸುವುದಕ್ಕೆ ಮೊದಲು ಹಾಗೆ ಮಾಡುವುದು ಸರಿಯಲ್ಲವೆಂಬುದರಿಂದ ತಡವಾಯಿತು. ಹಾಗಿದ್ದರೂ ಭಾರತ ಸರಕಾರವು ತನ್ನ ಆಶ್ವಾಸನೆಗಳನ್ನು ಕಾಯ್ದುಗತಗೊಳಿಸಿದುದರಿಂದ ನಾಗಾ ಜನರು ಸಂತೋಷಪಡಲೇ ಬೇಕು.

ಅಸಾಮ-ನಾಗಾಲೇಂಡ್

ತನ್ನ ಭಾಗವಾಗಿದ್ದು, ನಾಗಾ ಜನ ಪ್ರದೇಶವು ಇದೀಗ ಕಾಯದೆ ಬದ್ಧವಾಗಿ ಪ್ರತ್ಯೇಕಿತವಾಗುವುದರಿಂದ ಅಸಾಮ ರಾಜ್ಯವು ತುಸು ಚಿಂತೆಗೆ ಗುರಿಯಾಗಬಹುದು ಹಾಗಿದ್ದರೂ ನಾಗಾ ಲೇಂಡಿಗೆ ಪ್ರತ್ಯೇಕ ಉಚ್ಚನ್ಯಾಯಾಲಯ ಮತ್ತು ರಾಜ್ಯಪಾಲರ ನಿಯುಕ್ತಿಯು ಇಲ್ಲ; ಅಸಾಮದ ಉಚ್ಚ ನ್ಯಾಯಾಲಯ ಮತ್ತು ರಾಜ್ಯ ಪಾಲರ ಅಧಿಕಾರದ ಮಿತಿಯು ಅಲ್ಲಿಗೂ ಅನ್ವಯವಾಗುವುದರಿಂದ ಅವರು ಸಮಾಧಾನಪಟ್ಟುಕೊಳ್ಳ ಬಹುದು. ರಾಜ್ಯ ಪಾಲರಿಗೆ ವಿಶೇಷ ಅಧಿಕಾರವನ್ನು ಕೊಟ್ಟಿರುವುದು ಅಲ್ಲಿನ ವಿಷಮ ಪರಿಸ್ಥಿತಿಯು ಸಂಪೂರ್ಣ ತಿಳಿಯಾಗುವ ವರೆಗೆ ಮಾತ್ರವಾಗಿರುವುದರಿಂದ, ಅವರು ರಾಷ್ಟ್ರಪತಿಗಳಿಗೆ ಸಂಪೂರ್ಣ ವಾಸ್ತವಿಕತೆಯು ಅಲ್ಲಿ ಮೂಡಿದೆಯೆಂದು ವರದಿ ಮಾಡಿದೊಡನೆಯೇ ಅವರ ವಿಶೇಷಾಧಿಕಾರವೂ ರದ್ದಾಗುವುದು. ಫಿಜೋವಿನ ಅಸೀಮ ಅಭಿಲಾಷೆಯೊದ ನಾಗಾ ರಾಜ್ಯ ರಚನೆಯಿಂದ್ದು ಆದುದರಿಂದ ಆತನೂ ಆತನ ಹಿಂಬಾಲಕರು ಇನ್ನಾದರೂ ತಮ್ಮ ವಿಧ್ವಂಸಗ ಚಟುವಟಿಕೆಗಳನ್ನು ಬಿಟ್ಟು ತಮ್ಮ ರಾಜ್ಯದ ಅಭ್ಯುತ್ಥಾನಕ್ಕಾಗಿ ದುಡಿಯ ಬಹುದು ಎಂಬ ಆಶಯಯೆಲ್ಲರದು. ಆದರೆ, ಹೀಗೆ ಆಗದ ವರೆಗೆ ಅದೆಷ್ಟು ಶಾಂತ ವಾತಾವರಣವಿದ್ದರೂ ಒಂದಲ್ಲ ಒಂದು ದಿನ ಅದು ಕೆಡದೆ ಉಳಿಯದು ಎಂಬ ಭಯ ಆಡಳಿತೆದಾರರಲ್ಲಿದ್ದರೆ, ಅದು ಅತಿಶಯೋಕ್ತಿಯಲ್ಲ.

ಸಂಪೂರ್ಣ ಸಹಯೋಗ

ಫೀಜೋ ಮತ್ತಾತನ ಹಿಂಬಾಲಕರು ಎಬ್ಬಿಸಿದ ಕ್ರಾಂತಿಯ ಕಿಡಿಯು ನಾಗಾ ಪ್ರದೇಶದಲ್ಲಿ ಮಾಡಬಾರದ ಅನಾಹುತಗಳನ್ನು ಮಾಡಿತ್ತು; ಹಲವಾರು ನಾಗಾರ ಕೊಲೆಗೂ ಅದು ಕಾರಣವಾಗಿತ್ತು. ಆದುದರಿಂದ ಅಲ್ಲಿ ಸಂರಕ್ಷಣಾ ಪಡೆಯನ್ನು ಅನಿವಾರ್ಯವಾಗಿ ಕಳಿಸಲೇ ಬೇಕಾಯ್ತು. ನಾಗರಿಕಾಧಿಕಾರಿಗಳೂ ಪಡೆಗಳೂ ಅತೀವ ಸಹನೆಯಿಂದ ವರ್ತಿಸಿದರು; ದಂಗೆಗಾರ ನಾಗಾ ಜನರನ್ನು ಶಕ್ತಿ ಪ್ರದರ್ಶಿಸಿ ಗೆಲ್ಲುವುದಕ್ಕಿಂತ, ಅವರ ಮನಸ್ಸನ್ನು ಒಲಿಸಿಕೊಂಡು; ಪ್ರತ್ಯೇಕತೆಗಿಂತ ಐಕ್ಯದಲ್ಲಿಯೇ ಇಬ್ಬರ ಒಳಿತಿದೆಯೆಂಬುದನ್ನು ಮನಗಾಣಿಸಿ, ಅವರು ತಮ್ಮ ನಿಂದ್ಯಾರ್ಹ ದಂಗೆಗೋರತನದಿಂದ ದೂರ ಸರಿಯುವಂತೆ ಮಾಡುವ ಅವರ ಪ್ರಯತ್ನದಲ್ಲಿ ಅದ್ಭುತ ಸಫಲವನ್ನು ಗಳಿಸಿದರು. ಇದರ ಕಾರಣದಿಂದಲೇ ೨೦ ತಿಂಗಳುಗಳಿಗೆ ಮೊದಲು ಪ್ರತ್ಯೇಕ ನಾಗಾ ರಾಜ್ಯದ ಬೇಡಿಕೆಯನ್ನು ಮುಂದಿಟ್ಟ ಅಲ್ಲಿನವರ ಆಶಯವನ್ನು ಭಾರತ ಸರಕಾರವು ಮನ್ನಿಸಿತು. ಮದ್ಯಾವಧಿ ಆಡಳಿತಗಾರ ಸಮಿತಿಯ ಕಾರ್ಯಕಲಾಪ ಮತ್ತು ಮಾಡಿದ ಅಭಿವೃದ್ಧಿಯನ್ನು ಮನಗಂಡ ನಾಗಾ ಜನರು ಫಿಜೋವಿನ ಬೆನ್ನು ಹಿಡಿದು ದಂಗೆಯೇಳುತ್ತ ಅಸ್ಥಿರ ಜೀವನವನ್ನು ಬದುಕುವುದಕ್ಕಿಂತ ಶಾಂತ ವಾತಾವರಣವನ್ನು ನಿರ್ಮಿಸುವುದರಿಂದಲೇ ತಮ್ಮ ಶ್ರೇಯಸ್ಸುಯೆಂಬುದನ್ನು ಮನವರಿಕೆ ಮಾಡಿಕೊಂಡಿದ್ದರೆ. ಅದು ಅವಾಸ್ತವವೆನಿಸದು. ಉಳಿದ ನಾಗಾ ಬಂಡುಗಾರರಾದರೂ ಇವರ ಮಾದರಿಯನ್ನೇ ಹಿಡಿದು ಭಾರತದ ಉಳಿದ ರಾಜ್ಯಗಳ

ನಮ್ಮ ಹೊಸ ವರ್ಷದ ಆರಂಭದಲ್ಲಿಯೇ ಜನರಿಂದ ಪೂಜೆ ಪಡೆಯಲು ವಿಘ್ನೇಶ್ವರ ಇಳಿದು ಬಂದ; ವಿಘ್ನಕಾರಕನೂ ವಿಘ್ನವಿನಾಶಕನೂ ಅದ ಆತ ನಮ್ಮೆಲ್ಲರ ಪಾಲಿಗೆ ಸಿದ್ಧಿವಿನಾಯಕನಾಗಲಿ.

ಸಾಲಿನಲ್ಲಿ ಇದೂ ಸೇರಿ ಅಭಿವೃದ್ಧಿಯ ಪಥದಲ್ಲಿ ಮುಂದುವರಿಯುವಲ್ಲಿ ತಮ್ಮ ಸಹಯೋಗ ನೀಡುವರೆಂದು ಆಶಿಸಬಹುದು.

ಆರ್ಥಿಕ ವ್ಯವಸ್ಥೆ

ವಿಧೇಯಕದಲ್ಲಿರುವಂತೆ ಅಸಾಮದ ರಾಜ್ಯಪಾಲರು ನಾಗಾಲೇಂಡಿನ ಶಾಂತಿ ಮತ್ತು ಸುವ್ಯವಸ್ಥೆ ಹಾಗೂ ಆರ್ಥಿಕ ವ್ಯವಹಾರಗಳ ಮೇಲೆ ಅಧಿಕಾರ ಪಡೆಯುವರು. ಇಂದು ನಾಗಾಲೇಂಡಿನ ಆರ್ಥಿಕ ವ್ಯವಸ್ಥೆಯು ಕೇಂದ್ರ ಸರಕಾರದ ನೆರವನ್ನೇ ಸಂಪೂರ್ಣವಾಗಿ ಹೊಂದಿಕೊಂಡಿದೆ. ಇಂತಹ ನೆರವು ಮುಂದೆಯೂ ಬೇಕಾಗುವುದು. ನೂತ್ನ ನಾಗಾಲೇಂಡ್‌ನ ಸರಕಾರವು ತನ್ನ ಆಯ ಮತ್ತು ವ್ಯಯಗಳ ಬ್ರಹತ್ ಅಂತರವನ್ನು ಹೋಗಲಾಡಿಸುವಲ್ಲಿ ತೀವ್ರ ಆಸಕ್ತಿ ತಾಳುವುದು ನಿಜವಾದರೂ ಅದು ದೂರವಾಗುವುದು ಮಾತ್ರ ಸದ್ಯದ ಕೆಲವು ವರ್ಷಗಳ ವರೆಗೆ ಸಾಧ್ಯವಿಲ್ಲವಾಗಿದೆ. ನಾಗಾ ಗುಡ್ಡಕಾಡು ಮತ್ತು ಟ್ಯೂಯೆನ್‌ಸಾಂಗ್‌ಗಳ ಆಡಳಿತೆಯಿಂದು ೫೦೦ ಲಕ್ಷ ರೂ. ಗಳ ವಾರ್ಷಿಕ ವೆಚ್ಚ ನಡೆಯುತ್ತದೆ; ಅಲ್ಲಿನ ವಾರ್ಷಿಕ ಆದಾಯವು ಕೇ

(೧೨ನೇ ಪುಟ ನೋಡಿರಿ)

ತಕ್ಕ ಉಡುಗೆ ತೊಡುಗೆಗಳು ದೇಹ ಸೌಂದರ್ಯವನ್ನು ಹೆಚ್ಚಿಸುತ್ತವೆ.
ಚೊಕ್ಕ ಫರ್ನಿಚರುಗಳು ಗೃಹ ಸೌಂದರ್ಯವನ್ನು ಇಮ್ಮಡಿಸುತ್ತವೆ
ಮನೆ ಮಠಗಳಿಗಾಗಲಿ, ಆಫೀಸು ಆಸ್ಪತ್ರೆಗಳಿಗಾಗಲಿ, ಶಾಲೆ
ಕಾಲೇಜುಗಳಿಗಾಗಲಿ ಅತ್ಯಾವಶ್ಯಕವಾದ ಯಾವತ್ತೂ ತರದ
ಖೀರಾ ಉಕ್ಕಿನ ಫರ್ನಿಚರುಗಳಿಗೆ ವಿಚಾರಿಸಿರಿ.
ನಮ್ಮ ಶೋ ರೂಮಿನ ಸಂದರ್ಶನ! ನಿಮ್ಮ ಆಯ್ಕೆಗೆ ಯೋಗ್ಯ ನಿದರ್ಶನ!

ಶಾಸ್ತ್ರಿ & ಕೊ
ಹಂಪನಕಟ್ಟೆ.
ಮಂಗಳೂರು—1

ನವೀನ ರೀತಿಯ ಧಾರಾವಾಹಿ ಪೌರಾಣಿಕ ಕತೆ—

ನರಭಕ್ಷಕ ಬಕಾಸುರ

ಬರೆದವರು— ಶ್ರೀ ಕೊಡವಟಿಗಂಟ ಕುಟುಂಬ ರಾವ್

ಅನುವಾದ— ಶ್ರೀ ನೂದರಬೆಟ್ಟು ರಂಗ ರಾವ್

ಒಮ್ಮೆಗೇ ಊರೊಳಗೆಲ್ಲಾ ಕಗ್ಗೋಳಾಗಿಹೋಯಿತು. ಯಾರೋ ಒಬ್ಬ ದಾರೀಕಾದು, ನಗರಕ್ಕೆ ಬರುತಿದ್ದ ಒಂದು ಕುಟುಂಬದ ಮೇಲೆ ಬಿದ್ದು ಒಬ್ಬಳು ಹೆಂಗುಸನ್ನೂ, ಹುಡುಗನನ್ನೂ ಕೊಂದನಂತೆ. ಅವರೊಂದಿಗಿದ್ದ ಗಂಡುಸು ತಪ್ಪಿಸಿಕೊಂಡು ಓಡಿಹೋದನಂತೆ. ಆ ನರಹಂತಕನು ಹುಡುಗನನ್ನು ಅಲ್ಲಿಯೇ ಹರಿದು ಕಿತ್ತು ತಿಂದನಂತೆ!

ಈ ವಾರ್ತೆಯನ್ನು ಕುರಿತು ಊರ ಜನರಾರೂ ಸಂದೇಹಪಡಲಿಲ್ಲ. ಎಲ್ಲಿ ನೋಡಿದರೂ ಇದೇ ವಿಷಯ. ಇದೇ ಚರ್ಚೆ. ಅಬ್ಬ! ಅವನು ತಾಳೇಮರದಷ್ಟೆತ್ತರದ ಮನುಷ್ಯನಂತೆ. ಗೇಣುದ್ದದ ಕೋರೆಗಳಂತೆ!....ಅವನ ಕೈಯಲ್ಲಿ ಗದೆ ಉಂಟೆಂದು ಕೆಲವರೂ, ಗದೆಯಲ್ಲ ಬೇವಿನ ಮರದ ಬೊಡ್ಡೆಯೆಂದು ಕೆಲವರೂ ಹೇಳುತ್ತಿದ್ದರು.

"ಓಯ್ ಚಯನರೆ, ನಮ್ಮ ಮುತ್ತಾತನ ಕಾಲದಲ್ಲಿ ಹೀಗೆ ಒಬ್ಬ ತಾಳೇ ಮರದಂಥ ರಾಕ್ಷಸ ಬಂದು ಊರಿನ ಮೇಲೆ ಬಿದ್ದು ಜನರನ್ನು ಕಿತ್ತು ತಿಂದನೆಂದು ಹೇಳುತ್ತಾರೆ. ಅವನೇ ಇವನಾಗಿರಲಿಕ್ಕಿಲ್ಲವಷ್ಟೆ!"

"ಯಾರಿಗ್ಗೊತ್ತು! ಇದ್ದರೂ ಇರಬಹುದು. ನರಮಾಂಸ ತಿನ್ನುವವರಿಗೆ ಸಾವೇ ಬರುವುದಿಲ್ಲ. ಬ್ರಹ್ಮರಾಕ್ಷಸರ ವಿಷಯ ನೋಡಬಾರದೆ?"

"ಏನೋಪ್ಪ! ಈ ಊರಿಗೇನೋ ಉಪದ್ರ ಬಂತು. ಕಳೆದ ವರ್ಷ ಮಹಾಮಾರಿ ಬಂದು ಊರನ್ನೇ ಸುತ್ತಿಕೊಂಡು ಹೋಯಿತಷ್ಟೇ. ಈಗ ಇವನೊಬ್ಬ ಬಂದಿದ್ದಾನೆ!"

"ಈ ಹಾಳಾದ ಊರೇ ನಮಗೆ ಬೇಡಾ ಅಂತ ಎಷ್ಟೋ ಬಡಕೊಂಡೆ. ಹಾಳಾದವಳು ಕೇಳಿದರೆ ತಾನೆ?"

"ನಿಮ್ಮ ಹೆಂಡತಿ ತಾನೇ? ಹುಟ್ಟಿ ಬೆಳೆದ ಊರಲ್ಲವೇ ನ್ರೀ? ಅದರಲ್ಲೂ ತಂದೇ ತಾಯಿಗಳಿಗೆ ಒಬ್ಬಳೇ ಮಗಳು. ಅದೂ ಅಲ್ಲದೆ ಅಳಿಯಂದಿರನ್ನು ಮನೇಲಿಟ್ಟುಕೊಳ್ಳುವ ಆಚಾರ ಇದ್ದವರು. ನಿಮ್ಮ ಅತ್ತೆ ಕೂಡಾ ಈ ಊರಲ್ಲೇ ಹುಟ್ಟಿ ಬೆಳೆದು ಬಂದವರೇ ಗೊತ್ತೋ?"

"ಅದೇ ಬಂದ ಕರ್ಮ ನನ್ನ ಮಗಳಿಗೆ ಮದುವೇ ಮಾಡಿದ ಮೇಲೆ ಅಳಿಯನನ್ನು ಮನೇಲಿಟ್ಟುಕೊಂಡು ನಾನು ಕಾಲು ಮೇಲೆ ಕಾಲು ಹಾಕಿಕೊಂಡು ಸ್ವಸ್ಥಕೂತುಕೊಳ್ಳಬಹುದು ಅಂತ ಅವಳ ವಾದನೆ. ನಾನೇನೋ ಎಷ್ಟೋ ಪೇಚಾಡಿಕೊಂಡು ಅತ್ತೇಮಾವಂದಿರನ್ನು ಮೋಷಣೆ ಮಾಡಿದ್ದು ನಿಜವೇ ಅನ್ನಿ. ಯಾವುದಕ್ಕು ಪ್ರಯೋಜನವಿಲ್ಲದವನಾದ್ದರಿಂದಲೇ ಮನೇಯಳಿಯನಾಗಿರಬೇಕಾಗುತ್ತೇ ಎಂಬ ಸತ್ಯ ಮುಚ್ಚಿಡಲಾದೀತೆ? ಈಗ ಮತ್ತೆ ನನ್ನ ಮಗಳಿಗೆ ಇನ್ನೊಬ್ಬ ಅಪ್ರಯೋಜಕನನ್ನು ತಂದುಕೊಳ್ಳಲೆ? ಈ ಹಾಳಾಚಾರದಿಂದ ಹೊರಗೆ ಹೋಗಿ ಬಿಡೋಣಾ, ಮಗಳನ್ನು ಗಟ್ಟಿಗನಾದೊಬ್ಬ ಅಳಿಯನ ಕೈಗೆ ಒಪ್ಪಿಸಿ ಬಿಡೋಣಾ ಅಂದರೆ ಕೇಳಿದರೆ ತಾನೆ? ಇವಳ ಈ ಮಂಕುಹಟ ಇಲ್ಲದಿರುತ್ತಿದ್ದರೆ, ಆರು ತಿಂಗಳ ಕೆಳಗೇ ಆ ಬಲಭದ್ರಪುರದ ಹುಡಗನಿಗೆ ಕೊಟ್ಟು ಮದುವೆ ಆಗಿ ಹೋಗುತಿತ್ತು!"

"ಸುಮ್ಮನಿರಿ ಚಯನರೆ. ಈಗೇನು ಮುಳುಗಿಹೋಯ್ತು? ಎಲ್ಲಾ ಕ್ರಮವಾಗಿ ಜರುಗುತ್ತೆ ಬಿಡೀ"

"ಆ ರಕ್ಕಸ ಯಾವ ರಾತ್ರಿ ಮೇಲೆ ಬಿದ್ದು ತಿಂದು ತೇಗಿ ಬಿಡುತ್ತಾನೋ—ಹೆದರಿ ಸಾಯ್ತೂ ಇದ್ದೇವೆ!"

"ಅಯ್ಯೂ ಚಯನರೆ, ಆತ ರಾಕ್ಷಸನಿರಲಿ, ಪಿಶಾಚಿಯಾಗಿರಲಿ, ಬ್ರಾಹ್ಮಣರ ತಂಟೆಗೆ ಬಂದಾನೆ! ಅಷ್ಟು ಧೈರ್ಯವೇ ಅವನಿಗೆ! ಬ್ರಾಹ್ಮಣ ರಕ್ತ ಅವನ ಕಂಠ ಸೋಕಲಿ, ಅದು ಹಾಲಾಹಲವಾಗಿ ಭಗ್ಗನೆ ಉರಿದು ಬೂದಿಯಾಗಿ ಹೋದಾನು! ಏನೆಂದು ಕೊಂಡಿರೋ!"

ಈ ವಿಧವಾದ ಮಾತು ಊರೆಲ್ಲಾ ಕೇಳಿಸುತಿತ್ತು.

ರಾಜನ ಸಭೆಯಲ್ಲಿ ಕೂಡಾ ಈ ವಿಷಯದ ಚರ್ಚೆ ನಡೆಯಿತು. ಅಲ್ಲಿ ರಾಕ್ಷಸನ ಸಮಾಚಾರವನ್ನು ನಂಬಿದವರಾರೂ ಕಾಣಲಿಲ್ಲ.

"ಎಲ್ಲಾ ಸುಳ್ಳು! ರಾಕ್ಷಸನೂ ಇಲ್ಲ. ಗೀಕ್ಷಸನೂ ಇಲ್ಲ. ಆಗದವರಾರೋ ಎಬ್ಬಿಸಿ ಹಾಕಿದ ಪುಕಾರಿದು. ಅದರಲ್ಲೂ ಬ್ರಾಹ್ಮಣಿಕೆಯವರನ್ನು ಒಂದೇ ಬಾರಿ ನಂಬಬಾರದಪ್ಪ. ನಮ್ಮ ಪರಿಪಾಲನೆಯ ಮೇಲೆ ಎಷ್ಟೋ ಅಭಾಂಡಗಳನ್ನು ಒಡೆದಿದ್ದಾರೆ. ಇದು ಅಂಥದೇ ಇನ್ನೊಂದು" ಅಂದ ಏಕಚಕ್ರ ರಾಜ.

"ಅಲ್ಲದೆ ಮತ್ತೇನು ಈ ರಾಕ್ಷಸ ಯಾರನ್ನು ಕೊಂದ? ಯಾರನ್ನು ತಿಂದ? ಅದನ್ನು ನೋಡಿದವರು ಯಾರು? ಒಬ್ಬ ಗಂಡಸು ಓಡಿಹೋದನೆಂದು ಹೇಳುತ್ತಾರೆ? ಓಡಿ ಹೋದವನು ತನ್ನ ಮಗನನ್ನು ರಾಕ್ಷಸ ತಿನ್ನುವುದನ್ನು ಹೇಗೆ ನೋಡುತ್ತಾನೆ? ಬದ್ಧಿಯಿಲ್ಲದ ಮಾತು!"

"ಒಂದು ವೇಳೆ ಆ ರಾಕ್ಷಸ ತನ್ನ ಮಗನನ್ನು ಕೊಂದು ತಿಂದನೆಂದಿಟ್ಟುಕೊಂಡರೂ ದೀನರ ಪಾಲಿಗೆ ಕಲ್ಪವೃಕ್ಷದಂತೆ ಮಹಾರಾಜರು ತಾವಿರುವಾಗ, ಆ ಹತಭಾಗ್ಯನು ತಮ್ಮ ಬಳಿಗೆ ಬಂದು ಮೊರೆಯಿಟ್ಟುಕೊಳ್ಳೋದು ಬಿಟ್ಟು, ಬೀದಿ ಜನರ ಹತ್ತರವೋ ಹೇಳಿಕೊಳ್ಳುವುದು! ಅವರೋ ಇವನನ್ನು ರಕ್ಷಿಸುವವರು? ಎಲ್ಲಾ ಸುಳ್ಳೇ. ತಾವಂದ ಹಾಗೇ ಈ ಬ್ರಾಹ್ಮಣರೇ ಇಲ್ಲದ್ದೊಂದು ಸೃಷ್ಟಿಸಿದ್ದಾರೆ ಅವರಿಗೆ ತಕ್ಕ ದಕ್ಷಿಣೆ ಸಾಲದೂ ಅಂತ ಕಂಡಾಗ ಏನೂ ಹೇಳಿಯಾರು!"

ಈ ವಿಧವಾಗಿ ಏಲ್ಲವೂ ಸುಳ್ಳೇ ಅಂದುಕೊಳ್ಳುವುದರಿಂದ ರಾಜನಿಗೂ ರಾಜನ ಭೃತ್ಯರಿಗೂ ಬಹಳ ಅನುಕೂಲವೇ ಆಯಿತು. ರಾಕ್ಷಸನು ನಿಜವಾಗಿಯೂ ಇದ್ದಾನೆಂದು ಒಪ್ಪಿಕೊಂಡುದಾದರೆ ಅದಕ್ಕಾಗಿ ಏನೋ ಒಂದು ಮಾಡಬೇಕಾಗುತ್ತದಷ್ಟೆ? ಆದರೆ ಏನುತಾನೇ ಮಾಡುವುದು? ಪ್ರಜೆಗಳಿಗೆ ರಾಜನ ಮೇಲೇನೂ ಗೌರವವಿರಲಿಲ್ಲ. ರಾಜನ ಉಪ್ಪು ತಿನ್ನುವವರು ಕೂಡಾ ರಾಜನ ಮಾತು ಸರಿಯಾಗಿ ಕೇಳುವುದಿಲ್ಲ.

ಮುಂದೆ ಮೂರು ದಿನಗಳು ದಾಟುವಷ್ಟರಲ್ಲಿ ಇನ್ನೊಬ್ಬ ಮನುಷ್ಯ ಸತ್ತ. ಈ ಬಾರಿ ಸತ್ತವನು ಹೊರಗಿನಿಂದ ಬಂದವನಲ್ಲ; ಊರೊಳಗಿನವನೇ. ಅವನು ಯಾರೆಂದು ಹೋಲಿಸಿಕೊಳ್ಳುವ ಹಾಗೆ ಆ ನಿರ್ಭಾಗ್ಯನ ಅವಯವಗಳ ಗುರುತು ಕೆಲವು ಸಿಕ್ಕಿದುವು.

"ಗೌರವನು ಸತ್ತದ್ದೇನೋ ನಿಜವೇ. ಆದರೆ ಅವನನ್ನು ಕೊಂದದ್ದು ರಾಕ್ಷಸನೇ ಎಂದು ಏನು ಗೊತ್ತು? ಯಾರು ನೋಡಿದವರು? ಹುಲಿ ಕೊಂದಿರಬಾರದೇಕೆ?" ಎಂದ ರಾಜನ ಭಕ್ತನೊಬ್ಬ.

"ಅದು ನಿಜವಾದರೂ ಈ ಸಮೀಪದಲ್ಲೆಲ್ಲಿಯೂ ಹುಲಿ ಗಿಲಿ ಇಲ್ಲ ಸ್ವಾಮಿ" ಎಂದನೊಬ್ಬ ಅಜ್ಞಾನಿ.

"ಹಯ್ಯೋ ಹುಚ್ಚಪ್ಪ! ಹಾಗಿದ್ದರೆ ಈ ಸಮೀಪದಲ್ಲಿ ರಾಕ್ಷಸರು ಮಾತ್ರ ಇದ್ದಾರೇನೊ?" ಎಂದು ರಾಜನ ಇನ್ನೊಬ್ಬ ಅಭಿಮಾನಿ ಕೇಳಿದ.

ಎಲ್ಲರೂ ಗೊಳ್ಳೆಂದು ನಕ್ಕರು.

"ಕೇಡೆಣಿಸಿ ಮೇಲೆಣಿಸುವುದು ಒಳ್ಳೆಯದೆಂದು ಹೇಳುತ್ತಾರೆ ಮಹಾರಾಜರು ಕೆಲ ಮಂದಿ ಭಟರೊಂದಿಗೆ ಹೊರಟು ನಗರದ ಹೊರಗೊಮ್ಮೆ ಸುತ್ತಾಡಿ ಬಂದರೆ ಪ್ರಜೆಗಳಿಗೆ ಸ್ವಲ್ಪ ಧೈರ್ಯವಾಗಿದ್ದೀತು." ಎಂದ ಅಜ್ಞಾನಿ.

"ಸರಿಸರಿ ನೀನುಹೇಳಿದ ಹಾಗೆ ನಾನು ದೊಡ್ಡ ಸೈನ್ಯದೊಂದಿಗೆ ಹೋದಾಗ. ಯಾವುದಾದರೊಂದು ತೋಳವೋ ನರಿಯೋ ಎದುರಾದರೆ ಎಷ್ಟು ಅಪಕೀರ್ತಿ! ಎಂಥ ನಗೆಗೇಡು!" ಎಂದರಾಜ.

"ಆಹಾ! ಈ ಮಾತು ಬಹಳ ಚೆನ್ನಾಗಿದೆ. ಒಂದು ವೇಳೆ ಯಾವ ನರರಾಕ್ಷಸನೋ ದಾರಿ ತಪ್ಪಿ ಬಂದಿದ್ದರೆ ಬಂದಿದ್ದಾನು; ಅವನೇನು ಇಲ್ಲೇ ಕುಳಿತಿರುತ್ತಾನೆಯೆ? ನಮ್ಮ ರಾಜರೆಂದರೆ ಅವನಿಗೆ ಸಿಂಹ ಸ್ವಪ್ನವಲ್ಲವೆ?"

"ಇವನಿಗೆ ಯಾರೋ ಪುಕ್ಕಲು ಮದ್ದು ಕುಡಿಸಿರಬೇಕು.

ಮತ್ತೊಮ್ಮೆ ಎಲ್ಲರೂ ಮುಸಿ ಮುಸಿ ನಕ್ಕರು. ರಾಜ ಪ್ರಾಂಗಣದಲ್ಲಿ ನರಭಕ್ಷಕನನ್ನು ಯಾರೂ ನಂಬುವ ಪಾಪಕ್ಕೆ ಹೋಗಲಿಲ್ಲ. ಆದರೆ ಆತನ ಕೈಯಲ್ಲಿ ಸತ್ತವರ ಸಂಖ್ಯೆ ದಿನದಿನಕ್ಕೆ ಹೆಚ್ಚುತ್ತಾ ಬರುತಿತ್ತು. ಹಚ್ಚಹಗಲೇ ಜನರು ಹೆದರಿ ಬೀಳುತ್ತಿದ್ದರು—ಒಮ್ಮೆ ನಾಲ್ಕು ಬೀದಿ ಕೂಡುವಲ್ಲಿ ಅಕೋ" ಎಂದು ಯಾರೋ ಒಬ್ಬ ಹೇಳಿದ್ದೇ ತಡ, ನಾಲ್ಕು ಬೀದಿಗಳೂ ಕ್ಷಣದೊಳಗೆ ನಿರ್ಜನವಾಗಿ ಹೋದುವು.

ಈ ವಿಷಯವಾಗಿ ಕೆಲವರ ಮೈಮೇಲೆಯೂ ಬಂತು ಒಬ್ಬನ ಬಾಯಿಯಿಂದ ಗ್ರಾಮ ದೇವತೆ ಮಾತಾಡಿತು. ತನಗೆ ನರಬಲಿ ಕೊಟ್ಟರೆ ಈ ಭಯವನ್ನು ತಪ್ಪಿಸುತ್ತೇನೆ ಎಂದು ಅದು ಹೇಳಿತು. ತನಗೆ ಯಾವ ಮಾನವಾಧಮನು ಬೇಕೆಂಬುದನ್ನು ಕೂಡಾ ಆ ದೇವತೆಯೇ ಹೇಳಿತು. ಅದು ಆ ದೇಹದವನ ದಾಯಾದಿಯಾಗಿದ್ದ!

ಇನ್ನೊಬ್ಬನಿಗೆ ದೇವೇಂದ್ರನೇ ಮೈಮೇಲೆ ಬಂದ. ಮೂರನೆಯವನೊಬ್ಬನಿಗೆ ಅವನಜ್ಜಿ ಬಂದು ತನಗೆ ಸೀರೆಬೇಕೆಂದು ಕೇಳಿದಳು. ಇನ್ನೊಂದೆಡೆಯಲ್ಲಿ ಒಬ್ಬನು ಯಾಕೋ ತನ್ನ ಹೆಂಡತಿಯನ್ನು ಹೊಡೆಯುತ್ತಿದ್ದ. ಅವಳ ಬೊಬ್ಬೆ ಕೇಳಿ ನೆರೆಕರೆಯವರು ಓಡೋಡಿ ಬಂದು—"ಅಮ್ಮಾ! ತಾಯೇ ನಿನಗೇನು ಬೇಕೋ ಕೇಳಿಕೋ" ಎಂದು ಗಲ್ಲಗಲ್ಲ ಬಡೆದುಕೊಂಡರು.

o o o

ಈ ಅಲ್ಲಕಲ್ಲೋಲತೆಯನ್ನು ಕಂಡು ಮಹಾರಾಜನು ಸಭೆ ಕೂಡಿಸಿ ತನ್ನ ಭೃತ್ಯರನ್ನು ನೇರಾಗಿ ಪ್ರಶ್ನೆ ಮಾಡಿದ: "ಏನಿದೆಲ್ಲಾ? ಈ ರಾಕ್ಷಸನ ವಿಷಯವಾ

(೧೧ನೇ ಪುಟ ನೋಡಿರಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ವ್ಯಾಜೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ವ್ಯಾದೆ, ನಿರಖು ರೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚಕ್ಕುಗಳ ಮೂಲಕ ಮರುವಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ಜನಜೀವನದ ಮೇಲೆ ಸಾಹಿತ್ಯದ ಪ್ರಭಾವ

ಶ್ರೀ ಕೆ. ಜಿ. ಶೆಟ್ಟಿ, ಕಡಂದಲೆ,

ಮನುಷ್ಯನು ಆಶಾವಾದಿ. ಪ್ರತಿಯೋರ್ವನಿಗೂ ತನ್ನ ಬದುಕು ಸುಖಮಯವಾಗಿರಬೇಕೆಂಬ ಆಸೆ, ಇಚ್ಛೆ ಇದ್ದೇ ಇದೆ. ಬದುಕಿನಲ್ಲೇ ಏಕೆ? ಸತ್ತ ಮೇಲೂ ಸುಖ ಪ್ರಾಪ್ತಿಯಾದ ಸ್ವರ್ಗವನ್ನೇ ಪಡೆಯಬೇಕೆಂಬ ಆಸೆಕ್ಕೆ ಸರ್ವರಿಗೂ ಇರುವುದು ಸಹಜ. ತಾನು ಸುಖವನ್ನು ಪಡೆಯಬೇಕಿದ್ದಲ್ಲಿ ಸುಖದ ಫಲವನ್ನೇ ಕೊಡುವ ಕಾರ್ಯಗಳನ್ನು ನೋಡಬೇಕಾಗುವುದು. ಮೊದಲನ್ನು ಬಿತ್ತಿದಾತನೇ ಸವಿಯುಣ್ಣಲು ಸಾಧ್ಯವಲ್ಲದೆ ಬೇವನ್ನು ಬಿತ್ತಿ ಮಾವನ್ನು ಸವಿಯಬೇಕೆಂದರೇ ಹೇಗೆ? ಬೆಲ್ಲ ಹಾಕಿದವ್ನೇ ಸಿಹಿಯೂಗುವುದು ಎಂದಂತೆ ನನ್ನ ಸುಖಪ್ರಾಪ್ತಿಗೆ ಸಂಬಂಧಿಸಿರುವ ಯಾವತ್ತೂ ಕೆಲಸದಿಂದಾಗಿಯೇ ಜೀವನದಲ್ಲಿ ಸುಖಭೋಗವು ಲಭ್ಯವಾದೀತು!

ಹೀಗೆ ಒಳ್ಳೆಯ ಕಾರ್ಯದಿಂದ ಒಳ್ಳೆಯ ಫಲ ಸಿದ್ಧಿಯೂಗುವುದು ಎಂಬುದಕ್ಕೆ ಆಧಾರವೇನು? ಈ ಹಿಂದೆ ಯಾರೋ ಹಾಗೆ ಮಾಡಿ ಅನುಭವಿಸಿದ ಆದರ್ಶವನ್ನು ನಾವು ನೋಡಿಯೋ ಕೇಳಿಯೋ ಇಲ್ಲವೇ ಓದಿಯೋ ತಿಳಿದಿರಬೇಕು. ಆಗಲೇ ನಮಗೆ ಆ ನಿಟ್ಟಿನಲ್ಲಿ ಆರಿವಾಗುವುದು.

ಬದುಕಿಗೆ ಒಂದು ಆಧಾರ ಬೇಕು. ಪ್ರತಿಯೋರ್ವನೂ ಪರಂಪರಾಗತವಾಗಿ ಬಂದ ಆದರ್ಶಗಳ, ನೀತಿ ನಿಯತ್ತುಗಳ ಅನುಕರಣೆಯನ್ನೆ ಮಾಡಿ ಜೀವನದ ಮೇಲ್ಮೆಯನ್ನು ಸಾಧಿಸಲು ಯತ್ನಿಸುತ್ತಾನೆ. ಲೋಕೋ ಭಿನ್ನರುಚಿಃ ಎಂಬಂತೆ ಒಬ್ಬೊಬ್ಬರು ಒಂದೊಂದು ಆದರ್ಶವನ್ನು ಅನುಸರಿಸುತ್ತಾರೆ ನಿಜ, ಹಿರಿಯರು. ಆತಿ ಮಾನವರೆನ್ನಿಸಿದ ಮಹಾತ್ಮರು ಬಾಳಿನಲ್ಲಿ ಅನುಭವಿಸಿ 'ಸರಿ' ಎಂದು ಕಂಡು ಇಲ್ಲಿ ಬಿಟ್ಟುಹೋದ ಧರ್ಮನೀತಿಗಳನ್ನು, ಆಚಾರ ವಿಚಾರಗಳನ್ನು ನಾವು ಪಾರರೂಪವಾಗಿ ಕಲಿತುಕೊಳ್ಳಬೇಕಾಗಿದೆ. ಗತಿಸಿ ಹೋದ-ದರಲ್ಲಿ ಒಳ್ಳೆತು ಕೆಡುಕುಗಳಾವುದೆಂಬುದನ್ನು ವಿವೇಚಿಸಿಕೊಂಡೇ ಮುಂದೆ ಹೆಜ್ಜೆ ಇಡಬೇಕಾಗಿದೆ. ಹೊಂದಿ ಬಾಳುವ ಮಾನವನು ಸಮಾಜದ ಶಿಸ್ತು ಸಂಪ್ರದಾಯಗಳನ್ನನುಸರಿಸಿಯೇ ಬಾಳಬೇಕಾಗುವುದು. ಈ ಹೊಂದಾಣಿಕೆಯ ಬಾಳಿಗೆ ಒಂದು ಇತಿಮಿತಿಯನ್ನು ಗೊತ್ತುಗುರಿಯ ಮೇಲ್ಪಂಕ್ತಿಯನ್ನು ಅನೇಕ ಮಹನೀಯರು, ಜ್ಞಾನಿಗಳು ನಮಗೆ ಹಾಕಿಕೊಟ್ಟಿರುತ್ತಾರೆ. ಈ ತೆರನಾದ ಸುವಿಚಾರಗಳು, ಸುನೀತಿಗಳು, ಸದ್ಧರ್ಮ ಪ್ರಜ್ಞೋದಿತ ನಡವಳಿಕೆಗಳನ್ನೊಳಗೊಂಡ ವಿಷಯ ಸಂಗ್ರಹವೇ ಸಾಹಿತ್ಯ.

ನಮ್ಮ ಪೂರ್ವಿಕರು ನಡೆದು-ಕೊಂಡು ಬಂದು ಸರ್ವಮಾನ್ಯವೆನ್ನಿಸಿದ ಅನುಕರಣೀಯ ಸಂಪ್ರದಾಯಗಳ ಆಧಾರವೇ ನಮ್ಮ ಬದುಕಿನ ಮುನ್ನಡೆಗೆ ಊರುಗೋಲು. ಆ ಸಂಗ್ರಾಹ್ಯ ವಿಚಾರಗಳನ್ನು ಪಾರರೂಪವಾಗಿ ನಾವು ತಿಳಿದಿರಬೇಕಾಗುವುದು ಅತ್ಯಗತ್ಯ. ಬಾಳಿನ ಬೆಳಕಿಗೆ ಪೂರಕವಾದ ಈ ಸಂಗ್ರಾಹ್ಯ ವಿಚಾರವೆಲ್ಲ ಸಾಹಿತ್ಯದಲ್ಲಿ ಮಿಳಿತವಾಗಿದೆ! ಜನಜೀವನದ ಪೂರ್ಣ ಕ್ಷೇಮವನ್ನು ಹಾರೈಸಿಕೊಂಡಿರುವ ಯಾವುದೇ ಗ್ರಂಥವು ಸತ್ವಪೂರ್ಣ ಸಾಹಿತ್ಯವೆನ್ನಿಸುತ್ತದೆ! ಈ ಕಾರಣದಿಂದಲೇ ರಾಮಾಯಣ, ಭಾರತ, ವೇದ, ಭಾಗವತ ಮೊದಲಾದ ಕೃತಿಗಳು ದೇಶ ಕಾಲಾತೀತವಾಗಿ ಸರ್ವಮಾನ್ಯವೆನ್ನಿಸಿವೆ! ಆ ಅಮೂಲ್ಯ ಕೃತಿಗಳೇ ನಮ್ಮ ಬಾಳನ್ನು ರೂಪಿಸಿದ, ನಮ್ಮ ಜೀವನಕ್ಕೊಂದು ಮೂರಿಯನ್ನು ಹಾಕಿಕೊಟ್ಟ ಅದ್ವಿತೀಯ ಶಕ್ತಿಗಳು!

ಸಾಹಿತ್ಯವು ಮಾನವನ ಬುದ್ಧಿ, ಚಿತ್ತ, ಸಂಸ್ಕಾರಗಳನ್ನು ಉನ್ನತೀಕರಿಸುವಲ್ಲಿ ಬಹು ಪರಿಣಾಮಕಾರಿಯೂಗಿದೆ. ನಮ್ಮ ಆಧ್ಯಾತ್ಮಿಕ ಮಟ್ಟ, ಬೌದ್ಧಿಕ ಪರಿಮಿತಿ, ನೈತಿಕ ನೆಲೆ, ವಿನೋದನಾ ಶಕ್ತಿಯು ಸಂಸ್ಕಾರಹೊಂದಿ ಲೋಕಮಾನ್ಯವೆನಿಸುವಂತಿರಬೇಕಿದ್ದರೆ ಜೀವನದಲ್ಲಿ ಸಾಹಿತ್ಯದ ಅಧ್ಯಯನ ಅತ್ಯಗತ್ಯವೆನಿಸುತ್ತದೆ. ನಿತ್ಯ ಜೀವನದಲ್ಲಿ ನಮಗೆ ನೀತಿಯುತರಾಗಿ ಬಾಳಲು ಕಷ್ಟವೆನಿಸಿದರೂ ಸಾಹಿತ್ಯಾಭ್ಯಾಸದ ಪರಿವಾರದಿಂದ ಅನಿವಾರ್ಯವಾಗಿಯೇ ನಾವು ಸಮುಚಿತವಾದ ಸಭ್ಯತೆಯ ಸುವಿಚಾರವನ್ನೆಸರಿಸಿ ಬದುಕಲು ಯತ್ನಿಸುತ್ತೇವೆ.—ಯಾಕೆಂದರೆ ಸಾಹಿತ್ಯದಲ್ಲಿ ಕಾಂತಾ ಸಮ್ಮಿತ, ಪ್ರಭು ಸಮ್ಮಿತ, ಮಿತ್ರ ಸಮ್ಮಿತವೆಂಬೀ ತ್ರಿವಿಧವಾದ ನೀತಿ ಭಾವವು ಪರೋಕ್ಷವಾಗಿ ನಮಗೆ ಭೋದಿಸುತ್ತಾ ಜೀವನದ ಋಜುಮಾರ್ಗವನ್ನು ತೋರಿಕೊಡುತ್ತದೆ ಸಾಹಿತ್ಯ ಪ್ರಕಟಪಡಿಸುವ ನಗ್ನ ಸತ್ಯವಾದೀ ಸುವಿಚಾರಗಳನ್ನು ಬಿಟ್ಟು ಅನ್ಯಥಾ ವ್ಯವಹರಿಸಲು ನನಗೆ ಸಾಧ್ಯವೆನಿಸದು!

ನಮ್ಮ ಅಳವಿಗೂ ಮೀರಿದ ಅಮೂರ್ತ ಶಕ್ತಿಯು ಸಾಹಿತ್ಯದ ಅಂತರಾಳದಲ್ಲಿ ಹುದುಗಿ ಕೊಂಡಿದೆ. ಆ ಶಕ್ತಿಯ ಸೂಕ್ಷ್ಮವನ್ನು ತಿಳಿದಾಗ ಮಾತ್ರ ನಾವು ಲೌಕಿಕ ವ್ಯಾಮೋಹ ಹಾಗೂ ಬಾಳಿನ ಸ್ವಾರ್ಥಪರದುರ್ವ್ಯವಹಾರಗಳಿಂದ ದೂರ ನಿಂತು ಪಾರಮಾರ್ಥಿಕದೆಡೆಗೆ ಮುನ್ನಡೆಯಲು ಸಾಧ್ಯತೆಯನ್ನು ಹೊಂದುತ್ತಿತ್ತಾ ನಿಜ ಮಾನವರಾಗಿ ಬಾಳುತ್ತೇವೆ.

ಉತ್ತಮ ಸಾಹಿತ್ಯವಲ್ಲಿ ಬಾಳನ್ನು ಬೆಳಗಿಸುವ ಶಕ್ತಿ ಇದೆ. ಬಾಳನ್ನು ಉಜ್ವಲಗೊಳಿಸುವ ಜೈತನ್ಯವಿದೆ! ಆದ್ದರಿಂದಲೇ ಒಂದು ದೇಶದ ಜನಜೀವನದ ನಾಗರೀಕತೆಯ ಮಟ್ಟವನ್ನು ಇಲ್ಲವೇ ಜನತೆಯ ನೈತಿಕ ಆರೋಗ್ಯದ ನೆಲೆಯನ್ನು ಅಳೆಯುವಲ್ಲಿ ಆ ದೇಶದಲ್ಲಿ ಬೆಳಕಿಗೆ ಬಂದ ಸಾಹಿತ್ಯವೂ ಮಾಪಕವಾಗಿ ಪರಿಗಣಿಸುತ್ತದೆ. ಸಾಹಿತ್ಯವು ಜೀವನವನ್ನು ತುಂಬುವ—ಜೀವನವನ್ನು ಪುಟಕ್ಕಿಟ್ಟು ಒರೆದು ಸಭ್ಯವಾಗಿ ಯುಕ್ತವಾಗಿರಿಸಿ ಒಂದು ಹದಕ್ಕೆ ತಂದು ಸಿದ್ಧಗೊಳಿಸುವ ಒರೆಗಲ್ಲು.

ರಾಮಾಯಣ, ಮಹಾ ಭಾರತಗಳ ಆದರ್ಶ, ಗೀತೆಯ ನೀತಿವಾಕ್ಯ, ವೇದಪುರಾಣಗಳ ಧಾರ್ಮಿಕ ವಿಚಾರ, ಇವುಗಳ ಅಲ್ಪ ಸ್ವಲ್ಪ ಅರಿವು ನಮಗಿರುವುದರಿಂದಲೇ ನಾವು ಸರೂಜದ ಯಾವತ್ತೂ ನೀತಿ ನಿಯತ್ತುಗಳ ಸೀಮಾ ರೇಖೆಯೊಳಗಿಂದ ತಪ್ಪು ಹೆಜ್ಜೆ ಇಡ್ದಿಟ್ಟು, ಧರ್ಮದ ಗೆರೆದಾಟಿ ಅಂಜುತ್ತೇವೆ. ಹೀಗೆ ಸಾಹಿತ್ಯದಲ್ಲಿ ಅಂತಃ ಶಕ್ತಿಯಾಗಿ ಹುದುಗಿರುವ ಸದಭ್ಯವ ಪ್ರಜ್ಞೋದಕ ವಿಚಾರಗಳು, ನಾವು ಬಾಳದಾರಿಯಲ್ಲಿ ತಪ್ಪು ನಡೆಯದಂತೆ ದಾರಿ ತೋರುವ ಕೈಕಂಬಗಳೆನ್ನಬಹುದು.

ಓದುಗನ ಹೃದಯದಲ್ಲಿ ಹುದುಗಿರುವ ತಪ್ಪು ಭಾವನೆಗಳು— ತಪ್ಪು ಕಲ್ಪನೆಗಳ ಹೊರಿಯನ್ನು ಸಾಹಿತ್ಯ ಶಸ್ತ್ರವು ಕಿತ್ತಿಸೆದು ಆತನು ಆದರ್ಶ ಜೀವನದ ಋಜು ಮಾರ್ಗದಲ್ಲಿ ಮುನ್ನೆಡೆಯುವಂತೆ ಬ್ಲಾನ ದೃಷ್ಟಿಯನ್ನೀಯುವ ಸಾಮರ್ಥ್ಯ ಸಾಹಿತ್ಯಕ್ಕಿದೆ. ಸರ್ವ ಸಮರ್ಥವಾದ ಸಾಹಿತ್ಯದಲ್ಲಿರುವ ವಿಚಾರ ಧಾರೆಗಳು ಮೇಲುನೋಗವಾಗಿ ಚಿಮ್ಮುವ ಬುಗ್ಗೆಯಂತಿರುತ್ತದೆ. ಮೇಲುಮೊಗವಾಗಿ ಚಿಮ್ಮುವ ಕಾರಂಜಿಯ ಜೆಲುವಸ್ಸು ಕಾಣುವ ಪ್ರೇಕ್ಷಕರು ತಮ್ಮ ದೃಷ್ಟಿಯನ್ನು ಮೇಲೆ ಹರಿಸಿ ಹೇಗೆ ತನ್ಸ್ಯಯಂಭಾಗಿ ಅದನ್ನೇ ನೋಡುತ್ತಾ ನಿಂತಿರುವರೋ ಅಂತೆಯೇ ಸಾಹಿತ್ಯದಲ್ಲಿರುವ ಹೊಸ ಹೊಸ ವಿಚಾರಗಳು, ಸನ್ನಿವೇಶಗಳು—ಧರ್ಮ ಸೂಕ್ಷ್ಮಗಳನ್ನು ಓದಿತಿಳಿದು ಆತ್ಮಾನಂದದ ರಸಾನುಭವ ಉಂಟುಗುತ್ತದೆ. ಹೀಗಾದ ಅನುಭವದಿಂದಾಗಿ ಸಾಹಿತ್ಯವಲ್ಲಿ ಚಿತ್ರಿಸಲ್ಪಟ್ಟ ವಾತ್ರಗಳ ಆದರ್ಶವನ್ನು ನೈತಿಕ ನಡವಳಿಕೆಗಳನ್ನು, ಗುಣಶೀಲಗಳನ್ನು ಅನುಸರಿಸಬೇಕೆಂಬ ಸಹಜ ಪ್ರವೃತ್ತಿ ಓದುಗನಲ್ಲಿ ಉಂಟಾಗುತ್ತದೆ ಸಾಹಿತ್ಯದಲ್ಲಿ ಅಂತರ್ಗತವಾಗಿರುವ ಈ ಸದ್ಭಾವ ಪ್ರೇರಕ ಶಕ್ತಿಗಳ ಸೂಕ್ಷ್ಮ ವಿಚಾರವನ್ನು ಮನನ ಮಾಡಿದಾಗ ಓದುಗನ ಹೃದಯ ಸಹಜವಾಗಿ ಯಾವರೂಪ ಪರಿವರ್ತನೆ ಹೊಂದುವುದಿಲ್ಲವೇ?

ಸಾಹಿತ್ಯದ ಗರ್ಭದಲ್ಲಿ ಹುದುಗಿರುವ ತತ್ವ ನೀತಿಯು ಮಾನವನ ನಿತ್ಯ ಜೀವನಕ್ಕೆ ಹೊಂದಿಕೊಂಡಿರುತ್ತದೆ. ಸಾಹಿತ್ಯದ ಅಭ್ಯಾಸದಿಂದ ಆದಾವುದೋ ಅಪೂರ್ವವಾದ, ಅನ್ಯಕ್ತವಾದ, ಆನಂತವಾದ ಸುಖಾನುಭವವನ್ನು, ಸತ್ಯ ದರ್ಶನವನ್ನು, ಜೀವನದಲ್ಲಿ ಬರುವ ಎಡರು ತೊಡರುಗಳನ್ನು ತಿಳಿದುಕೊಂಡು ಅವನ್ನೆಲ್ಲಾ ಎದುರಿಸಿ ಸ್ಥಿರವಾದ ಹಾಗೂ ನೈಜವಾದ ಸುಖವನ್ನು ಅನುಭವಿಸಲು ಅನುಕೂಲವೆನಿಸುವ ಸತ್ ಕಾರ್ಯಗಳನ್ನು ಮಾಡಬೇಕೆಂಬ ಆಶಾವು ಓದುಗನಲ್ಲಿ ಉಂಟಾಗುತ್ತದೆ. ಈ ಅರಿವು ಉಂಟಾದಾಗ ಮನುಷ್ಯನಿಗೆ ತನ್ನ ಬಾಳ ದಾರಿಯಲ್ಲಿ ಸುಗಮವಾಗಿ ಮುಂದೆ ಸಾಗುವಂತೆ ಸಾಹಿತ್ಯ ಪುನೀತವಾದ ಶಕ್ತಿ ಸಾಮರ್ಥ್ಯವನ್ನೀಯತ್ತದೆ.

"ಬದುಕಿನ ಜೆಲುವನ್ನರಿತು ಮುಕ್ತನಾಗಬೇಕೆಂದಿರುವ ಮಾನವನಿಗೆ ಜೀವನದ ಬಗೆಗಿರುವ ನಿತ್ಯ ಸತ್ಯವಾದ ಧರ್ಮ ನಿಯಮವನ್ನು ಸ್ಪಷ್ಟವಾಗಿ ತಿಳಿಸಿ, ಅನಂತ ಜೀವನದ, ಅಮರ ಜೀವನದ, ಸಮರಸ ಜೀವನದ ದಿವ್ಯ ದೃಷ್ಟಿಯನ್ನು ದಯಪಾಲಿಸುವ ಸಾಮರ್ಥ್ಯ ಸಾಹಿತ್ಯಕ್ಕೆದೆ ಎಂಬುದು ನಿರ್ವಿವಾದ". ಆ. ನ. ಕೃ.

ಸಾಹಿತ್ಯವು ಈ ರೀತಿಯಲ್ಲಿ ಸತ್ವಪೂರ್ಣವಾಗಿದ್ದು ಮಾನವನನ್ನು ಆದರ್ಶ ಜೀವನದೆಡೆಗೆ ಕೈಹಿಡಿದು ಕೊಂಡು ಮುನ್ನಡೆಸುತ್ತದೆ! ಮಾನವ ಮಾನವರಲ್ಲಿರಬೇಕಾದ ಸವಿಸಂಬಂಧ, ಪುಧಾರಬಾಂಧವ್ಯಗಳನ್ನು ಕುರಿತು ಸಾಹಿತ್ಯದಲ್ಲಿ ಯಥೇಷ್ಟವಾದ ವಿಚಾರಗಳಿವೆ. ಮಾನವ ಜೀವನದ ವಿವಿಧ ಕ್ಷೇತ್ರಗಳಲ್ಲಿ, ಅನೇಕ ಸಂದರ್ಭಗಳಲ್ಲಿ ಆತನು ಜೇಗಿರಬೇಕೆಂಬ ರೀತಿನೀತಿಗಳನ್ನು ತಿಳಿಸುತ್ತಾ ಸಾಹಿತ್ಯವು ಮಾನವನಿಗೆ ಮಾರ್ಗದರ್ಶಕವಾಗಿದೆ. ಆತ್ಮಜ್ಞಾನದ ವರೆಗೂ ವಿವೇಚಿಸಿ ವಿವರಿಸುವ ಪರಿಪೂರ್ಣಶಕ್ತಿ ಸಾಹಿತ್ಯಕ್ಕಿದೆ ಎಂದು ಒಪ್ಪುವಾಗ, ಸಧಾರಿತ ಜೀವನ ಸಂಸ್ಕೃತಜೀವನ, ಸಹ ಜೀವನಕ್ಕೆ ಅವಿನ್ಯಾ ಸಹಕಾರಿಯಾಗಿದೆ ಎಂಬುದನ್ನು ತಿಳಿಯಬಹುದು. ಓದುಗನಿಗೆ ಸ್ವಾನುಭವವಿಂದಲೇ ಸಾಹಿತ್ಯದ ಕುರಿತು ನಂಬಿಕೆ ಬರಬೇಕಾಗುತ್ತದೆ. ಹೀಗಾಗಬೇಕಾದರೆ ಮೊತ್ತ

(ಬಂಡೇ ಪುಟ ನೋಡಿರಿ)

ದಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು: ಡೊಂಗರಕೇರಿ, ಮಂಗಳೂರು-3

ಪರಿಷ್ಕರಿಸಿದ ಮತ್ತು ಹೆಚ್ಚಿಸಿದ ಠೇವಣಾತಿ ಬಡ್ಡಿ ದರಗಳು:

ಕಾಯಂ ಠೇವಣಾತಿಗಳು:		ರೂ. ನ.ಪೈ.ಸೆ
ಒಂದರಿಂದ ಮೂರು ತಿಂಗಳು ವರೆಗೆ	ವಾರ್ಷಿಕ ಸೇಕಡಾ	4-50
ಆರರಿಂದ ಹನ್ನೆರಡು ತಿಂಗಳು ವರೆಗೆ	,, ,,	4-75
ಹದಿಮೂರರಿಂದ ಇಪ್ಪತ್ತನಾಲ್ಕು ತಿಂಗಳು ವರೆಗೆ	,, ,,	5-00
ಇಪ್ಪತ್ತ ಐದರಿಂದ ಮೂವತ್ತಾರು ತಿಂಗಳು ವರೆಗೆ	,, ,,	5-25
ನಾಲ್ವತ್ತೆಂಟು ತಿಂಗಳು ಮತ್ತು ಹೆಚ್ಚಿಗೆ	,, ,,	5-50
ಸೇವಿಂಗ್ಸ್ ಬ್ಯಾಂಕ್ ಠೇವಣಾತಿಗಳು	,, ,,	3-25

ನಿಮ್ಮ
ದಿನನಿತ್ಯದ ಉಳಿತಾಯವನ್ನು ಮಾಸಿಕ ಉಳಿತಾಯವನ್ನು
ಹೊಸ ಡಿವೋಸಿಟುಗಳಲ್ಲಿ ಕ್ಯುಮುಲೇಟಿವ್ ಡಿವೋಸಿಟುಗಳಲ್ಲಿ
ವಿನಿಯೋಗಿಸಿರಿ.

THE KARNATAKA BANK LIMITED

3—7—1962

ಒಂದು ಘಟನೆ–

ಗಾಂಧಿಯವರು ಮುಸುರೆ ಪಾತ್ರೆ ತಿಕ್ಕುತಿದಾಗ!

ಕ–೧೧

ಗಾಂಧಿಯವರು ಮಗನವಾಡಿ ಆಶ್ರಮದಲ್ಲಿ ಎಲ್ಲರೂ ಆಶ್ರಮ ಜೀವನವನ್ನು ಕಟ್ಟುನಿಟ್ಟಾಗಿ ನಡಿಸುವಂತೆ ಏರ್ಪಡಿಸಿದ್ದರು. ಅಡಿಗೆ ಮನೆಯ ಜವಾಬುದಾರಿ ತಾವೇ ವಹಿಸಿದ್ದರು ಶ್ರೀ ಬಲವಂತ ಸಿಂಹರನ್ನು ವ್ಯವಸ್ಥಾಪಕರನ್ನಾಗಿ ಮಾಡಿದ್ದರು. ಅಡಿಗೆ ಮನೆಯು ಎಲ್ಲ ಕೆಲಸ ಸ್ವಾವಲಂಬನದಿಂದ ನಡೆಯುತ್ತಿತ್ತು

ಪ್ರತಿಯೊಬ್ಬ ಆಶ್ರಮವಾಸಿಯೂ ಅಡಿಗೆ ಮನೆಯ ಪಾತ್ರೆಗಳನ್ನು ತಿಕ್ಕಲೇ ಬೇಕೆಂದು ನಿಯಮ ಮಾಡಲಾಯಿತು. 'ಇನ್ನೊಬ್ಬರ ಎಂಜಲ ಪಾತ್ರೆ ಹೇಗೆ ತಿಕ್ಕುವದು? ನಾವು ಮಾಡತಕ್ಕ ಹಲವಾರು ಸೇವಾಕಾರ್ಯಗಳಂತೂ ಇದ್ದೇ ಇವೆ.' ಎಂದು ಜನ ಗೊಣಗ ಹತ್ತಿದರು ಆದರೆ ತಮ್ಮ ಅಭಿಪ್ರಾಯ ಗಾಂಧಿಯವರಿಗೆ ತಿಳಿಸುವ ಸಾಹಸ ಮಾತ್ರ ಯಾರೂ ಮಾಡಲಿಲ್ಲ.

"ಹೀಗೆ ಮಾಡುವದರಿಂದ ಎಲ್ಲರಲ್ಲಿ ಪ್ರೇಮ ಹೆಚ್ಚುವದು. ಇನ್ನೊಬ್ಬರ ಎಂಜಲದ ಬಗ್ಗೆ ಇರುವ ತಿರಸ್ಕಾರವು ಹೋಗುವದು ಎಲ್ಲರ ವೇಳೆಯಲ್ಲೂ ಉಳಿತಾಯವಾಗ ವದು" ಎಂದು ಗಾಂಧಿಯವರು ತಿಳಿಸಿ ಹೇಳಿದರು.

"ಎಲ್ಲರೂ ಮನಃಪೂರ್ವಕ ಸಹಕರಿಸಿದರೆ ಮಾತ್ರ ಇದೆಲ್ಲ ಸಾಧ್ಯ ಇಲ್ಲವಾದರೆ ಎಲ್ಲಾ ಅವ್ಯವಸ್ಥೆಯೂದೀತು" ಎಂದು ಶ್ರೀ ಬಲವಂತಸಿಂಹರು ಆಕ್ಷೇಪಿಸಿದರು.

"ಹಾಗೇನೂ ಭಯವಿಲ್ಲ. ಮೊಟ್ಟಮೊದಲು ನಾನು ಮತ್ತು ಕಸ್ತೂರಬಾ ಸ್ವತಃ ಸುರುಮಾಡುತ್ತೇವೆ" ಎಂದು ಗಾಂಧಿಯವರು ಹೇಳಿದರು.

'ನನ್ಮೆಲ್ಲರ ಎಂಜಲ ಪಾತ್ರೆ ಗಾಂಧಿ ಮತ್ತು ಕಸ್ತೂರಬಾ ಇವರಿಂದ ತಿಕ್ಕಿಸ ಬಹುದೆ? ಇಂಥ ಸಣ್ಣ ಕೆಲಸಕ್ಕಾಗಿ ಗಾಂಧಿಯವರ ಅಮೂಲ್ಯ ವೇಳೆಯನ್ನು ಹಾಳುಮಾಡಬಹುದೇ? ಎಂಬುದಂಗಿ ಶ್ರೀ ಬಲವಂತಸಿಂಹರು ಚಡಪಡಿಸ ಹತ್ತಿದರು

ಆದರೆ ಗಾಂಧಿಯವರು ಮಾತ್ರ ಮಿಸು ಕಾಡಲೇ ಇಲ್ಲ. ಗಾಂಧಿಯವರು ಪತ್ನಿಯೊಡನೆ ಪಾತ್ರೆ ತಿಕ್ಕುವ ಸ್ಥಳದಲ್ಲಿ ಹೋಗಿ ಕುಳಿತು ಹೇಳಿದರು. 'ಎಲ್ಲರೂ ನಿಮ್ಮ ನಿಮ್ಮ ಎಂಜಲಪಾತ್ರೆಇಲ್ಲಿ ಹಂದು ಇಟ್ಟುಹೋಗಿರಿ. ಇಂದು ಪಾತ್ರೆ ತಿಕ್ಕುವ ಬಾರಿ ನಮ್ಮದು' ಎಂದು.

ಕೇಳಿ ಎಲ್ಲರಿಗೂ ಧರ್ಮಸಂಕಟವಾಯಿತು. ಕೊನೆಗೆ ಎಲ್ಲರ ಆಗ್ರಹದ ಮೇಲೆ ಗಾಂಧಿಯವರು ಬಲವಂತಸಿಂಹರ ಸಹಾಯವನ್ನು ತೆಗೆದುಕೊಳ್ಳಲು ಒಪ್ಪಿದರು.

ಕ್ಷಣಾರ್ಧದಲ್ಲಿ ಪಾತ್ರೆಗಳ ರಾಶಿಯೇ ಆಯಿತು. ತಾಟು, ಊಟದ ಗ್ಲಾಸು, ತಂಬಿಗೆ ಇತ್ಯಾದಿ ದೇಶದ ದೊಡ್ಡ ದೊಡ್ಡ ರಾಜಕೀಯ ಸಮಸ್ಯೆಗಳನ್ನು ಬಿಡಿಸುವಾಗ ಇರಬೇಕಾದಷ್ಟು ಏಕಾಗ್ರತೆಯಿಂದ ಗಾಂಧಿಯವರು ಪಾತ್ರೆಗಳನ್ನು ತಿಕ್ಕುತ್ತಿದ್ದರು ಅವರ ಪಾತ್ರೆಗಳು ಝಳ ಝಳ ಮಿಂಚುತ್ತಿದ್ದವು. ಗಾಂಧಿಯವರು ತಿಕ್ಕ ಪಾತ್ರೆ ತಿಕ್ಕುತ್ತ ಅಕ್ಕ ಕಸ್ತೂರ್‌ಬಾರೊಡನೆ ವಿನೋದ ಮಾಡುತ್ತಿದ್ದರು. 'ನನ್ನ ಪಾತ್ರೆಗಳು ಎಷ್ಟು ಮಿಂಚುತ್ತವೆ ನೋಡು' ಎಂದು.

ಮಿಂಚಲಿಕ್ಕೇನಾಗಿದೆ? ಈ ಜೀವನವೂ ನದಲ್ಲಿ ಈ ಮೊದಲು ಎಂಬಾದರೂ ನೀವು ಪಾತ್ರೆ ತಿಕ್ಕಿದ್ದುಂಟೆ?' ಎಂದು ಕಸ್ತೂರಬಾ ಆಣಕಿಸುತ್ತಿದ್ದರು.

ಅದಕ್ಕೆ ಗಾಂಧಿಯವರು ಉತ್ತರ ಕೊಡುತ್ತಿದ್ದರು. 'ಹಿಂದಿನ ಮಾತು ಇರಲಿ, ಈ ಹೊತ್ತು ಅಂತೂ ನಾನು ಮಿಂಚುವಂತೆ ಮಾಡುತ್ತಿರುವದು ಸುಳ್ಳೇ? ನನ್ನ ಬಟ್ಟಲು ನಿನ್ನ ಬಟ್ಟಲಿಗಿಂತ ಜೊಳ್ಳವಾಗಿದೆ. ಬೇಕಾದರೆ ಬಲವಂತಸಿಂಹರ ಅಭಿಪ್ರಾಯ ಕೇಳು' ಎಂದು.



ಅಮೆರಿಕೆಯ ಈ ಧ್ವಜದ ಚಿತ್ರವನ್ನು ಟೆಲಿಸ್ಟಾರ್ ಸ್ವೀಕರಿಸಿ ನುರಳಿ ಅಂಡೊವರಿಗೆ ರವಾನಿಸಿತು.

ಗಾಂಧಿಯವರ ಮುಖವೆಲ್ಲ ಬೆವತು ಕೊಳ್ಳುತ್ತಿರುವುದು ಕಂಡು ಕಸ್ತೂರಬಾರವರು ಹೇಳಿದರು, 'ನೀವು ಇಂತಹ ನಿರರ್ಥಕ ಕೆಲಸದಲ್ಲಿ ನಿಮ್ಮ ಶಕ್ತಿ ಏಕೆ ಹಾಳುಮಾಡುತ್ತೀರಿ? ಯಾರ ಕೆಲಸವೋ ಅವರೇ ಮಾಡಿದರೆ ಚಂದ. ಈ ಕೆಲಸ ನಮಗೆ ಹೆಂಗಸರಿಗೆ ಬಿಟ್ಟುಬಿಡಿರಿ. ನಿಮ್ಮ ಜರೂರಿ ಕೆಲಸವನ್ನು ನೀವು ನೋಡಿಕೊಳ್ಳಿರಿ' ಎಂದು.

ಗಾಂಧಿಯವರು ವಿವರವಾಗಿ ತಿಳಿಸಿ ಹೇಳಿದರು. 'ಜೀವನದಲ್ಲಿಯ ಪ್ರತಿಯೊಂದು ಕೆಲಸಕ್ಕೂ ಅಷ್ಟೇ ಮಹತ್ವವಿದೆ.ಯಾವದೂ ಕಡಿಮೆಯಲ್ಲ, ಯಾವದೂ ಹೆಚ್ಚಿನದಲ್ಲ. ಹರಿಜನ ಪತ್ರಿಕೆಯಲ್ಲಿ ಲೇಖನ ಬರೆಯುವದೂ, ಮತ್ತು ವಾಯಿಸರಾಯರ ಸಂಗಡ ರಾಜಕೀಯ ಮಾತುಕತೆ ನಡೆಸುವದೂ ಇವುಗಳಷ್ಟೇ ಮಹತ್ವ ಹಾಗೂ ಆವಶ್ಯಕತೆ ಪಾತ್ರೆ ತಿಕ್ಕುವದಕ್ಕೂ ಇದೆ ಎಂದು.

ಕಸ್ತೂರಬಾ ಹೇಳಿದರು....'ಇದ್ದರೆ, ಇರಲಿ, ನಾನೊಬ್ಬ ಅಶಿಕ್ಷಿತ ಹೆಂಗಸು. ನಾನು ಯುಕ್ತಿವಾದದಲ್ಲಿ ನಿಮ್ಮನ್ನು ಜಯಿಸುವದು ಹೇಗೆ ತಾನೇ ಸಾಧ್ಯ? ಆದರೆ ಇಷ್ಟು ಮಾತ್ರ ನಾನು ಹೇಳಬಲ್ಲೆ, 'ದೇಶಸೇವೆಯ ಮಹತ್ವದ ಕೆಲಸಗಳ ಬಗ್ಗೆ ನೀವು ನಿಮ್ಮ ಶಕ್ತಿಯನ್ನು ವಿಂಗಡಿಸಬೇಕು' ಎಂದು.

ಗಾಂಧಿಯವರು ಕೇಳಿದರು...'ಆದರೆ ಒಂದು ಮಾತು" ಬರಿಬಾಯಿಯಿಂದ ಪ್ರತಿಯೊಬ್ಬನು ಮುಸುರೆ ಪಾತ್ರೆ ತಿಕ್ಕಲೇಬೇಕೆಂದು ಹೇಳುತ್ತಾನೆ.ನಿಯಮ ನಾನೇ ಸ್ವತಃ ನಡಿಸದೇ ಬಿಟ್ಟರೆ ಎರಡನೇಯವರಿಂದ ಹೇಗೆ ನಡಿಸಲಿಕ್ಕೆ ಬಂದೀತು? ಎಂದು.

ಕಸ್ತೂರಬಾ ನಿರುತ್ತರಳಾಗಿ ಪಾತ್ರೆ ತಿಕ್ಕುತ್ತ ಉಳಿದರು. ಗಾಂಧಿಯವರು ತಮ್ಮ ಮಾತು ಬಿಡುವವರೇ ಅಲ್ಲ ಎಂದು ಅವರ ಮನಸ್ಸಿಗೆ ದೃಢವಾಯಿತು ಸ್ವಲ್ಪ ಹೊತ್ತು ತಡೆದು ಗಾಂಧಿಯವರು ಬಲವಂತಸಿಂಹರಿಗೆ ಹೇಳಿದರು..'ನಾನು ಆಶ್ರಮದಲ್ಲಿ ಇದು ದೊಡ್ಡ ಕೆಲಸ, ಅದು ಸಣ್ಣ ಕೆಲಸ, ಇದು ಹೆಂಗಸರ ಕೆಲಸ, ಅದು ಗಂಡಸರ ಕೆಲಸ ಎಂಬ ಭೇದವನ್ನೇ ತೆಗೆದೊಗೆಯಲು ಇಚ್ಛಿಸುತ್ತೇನೆ ಆದ್ದರಿಂದಲೇ ಅಡಿಗೆ ಮನೆಯ ವ್ಯವಸ್ಥೆ ನಿನಗೆ ವಹಿಸಿದ್ದೇನೆ ಯಾವಳೊಬ್ಬ ಹೆಣ್ಣು ಮಗಳಿಗೆ ವಹಿಸಿಲ್ಲ'

'ಆದರೆ ಅವರವರ ಕೆಲಸ ಅವರವರೇ ಮಾಡಿದರೆ ನೆಟ್ಟಗಲ್ಲವೇ?

'ಹಾಗೇನೂ ಇಲ್ಲ, ಪ್ರತಿಯೊಬ್ಬರಿಗೆ ಪ್ರತಿಯೊಂದು ಕೆಲಸವನ್ನು ಚೆನ್ನಾಗಿ ಮಾಡಲು ಬರುತ್ತಿರಲೇ ಬೇಕು. ಗಂಡಸರೂ ಉಣ್ಣುತ್ತಾರೆ ಆದ್ದರಿಂದ ಅಡಿಗೆ ಮಾಡುವದೂ ಅವರಿಗೆ ಗೊತ್ತಿರಬೇಕು. ಹೆಂಗಸರಂತೇ ಗಂಡಸರಿಗೂ ಅಡಿಗೆ ಮನೆ ನಡಿಸುವದು, ಮತ್ತು ಮುಸುರೆ ಪಾತ್ರೆ ತಿಕ್ಕುವದೂ ಎಲ್ಲವೂ ತಿಳಿದಿರಲೇ ಬೇಕು'

ಆಶ್ರಮದಲ್ಲಿ ನಾವು ಇದು ಹೆಂಗಸರ ಕೆಲಸ, ಇದು ಗಂಡಸರ ಕೆಲಸ, ಎಂಬ ಭೇದಭಾವ ತೆಗೆದುಹಾಕಲೇ ಬೇಕು. ಇದರಿಂದಲೇ ಉಭಯರ ಜೀವನದಲ್ಲೂ ಹೆಚ್ಚಿನ ಸಮಾನತೆ ಬರುವದು. ಉಭಯರಲ್ಲೂ ಪರಸ್ಪರರ ಬಗ್ಗೆ ಪ್ರೇಮ ಸದ್ಭಾವ ಹಾಗೂ ಸಹಾನುಭೂತಿ ಹೆಚ್ಚುವವು. ಮತ್ತು ಉಭಯರಲ್ಲಿ ನಡೆಯುತ್ತಿರುವ ಸಮಾನ ಅಧಿಕಾರದ ಜಗಳವೂ ದೂರಾಗುವದು."

ಬಲವಂತಸಿಂಹರು ಇತ್ತ ಕೈಯಲ್ಲಿಯ ಪಾತ್ರೆ ತಿಕ್ಕುತ್ತ ಆತ್ತ ಶ್ರದ್ಧಾಭಕ್ತಿಗಳಿಂದ ತತ್ಪರರಾಗಿ ಗಾಂಧಿಯವರ ಉಪದೇಶಾಮೃತ ಕೇಳುತ್ತಿದ್ದರು. ಕೇಳಕೇಳುತ್ತ ಮಹಾ ಭಾರತದಲ್ಲಿ ಧರ್ಮರಾಜನ ರಾಜಸೂಯಯಾಗದ ಪ್ರಸಂಗ ನೆನಪಾಯಿತು ದ್ವಾಪರ ಯುಗದ ಯುಗ ಪುರುಷನಾದ ಶ್ರೀ ಕೃಷ್ಣನು ರಾಜಸೂಯಯಾಗದಲ್ಲಿ ಬಂದ ಅತಿಥಿಗಳ ಎಂಜಲ ಎಲೆಗಳನ್ನು ಎತ್ತು ತಿದ್ದುದು ನೆನಪಿಗೆ ಬಂತು.

—ಸೋಮೇಶ್ವರ ಪುರೋಹಿತ (ಕೊಡಗು)

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ, ಸಂ.ವಿ.)

ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಐತಾಳ್, ಎಂ.ಡಿ ಬಿ.ಎಸ್)
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ

ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳುಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

"ಸೇವೆಯೇ ಮೊದಲು; ಸೇವೆಯಲ್ಲಿ ಮೊದಲು"
ಈ ಉದಾತ್ತ ಧ್ಯೇಯ ಸಾಧನೆಗಾಗಿಯೇ
— ಕೊಪ್ಪೊರೇಶನ್ ಬೇಂಕ್ —
ನಿಮ್ಮ ಹಣಕ್ಕೆ
ಅತ್ಯುತ್ತಮ ಭದ್ರತೆಯೊಂದಿಗೆ ಆತ್ಯಧಿಕ ಬಡ್ಡಿ ಕೊಡುತ್ತಿದೆ.
ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ರಿಜಿಸ್ಟರ್ಡ ಆಫೀಸು: ಉಡುಪಿ)
ಲಡಳಿತ ಆಫೀಸು: ಮಂಗಳೂರು.

ಪ್ರತಿನಿಧಿಗಳು ಕರ್ತವ್ಯಶೀಲರಾಗಬೇಕು

ಕಾನೂನು ರಚಿಸುವವರು ಅದನ್ನು ಮುರಿಯುವ ಕಾರ್ಯಕ್ಕೆ ಕೈಹಚ್ಚಕೂಡದು

ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳು. ಪ್ರಜಾ ಜನರು ಆರಿಸಿ ಕಳಿಸಿದ ಪ್ರತಿನಿಧಿಗಳು ಪ್ರಭುವು ಮಾಡುವ ಮತ್ತು ಮಾಡಬೇಕಾದ ಕರ್ತವ್ಯವನ್ನು ಪೂರಯ್ಸುವರು ಎಂದರೆ, ರಾಜ್ಯದ ವಿಧಾನ ಸಭೆ ಮತ್ತು ಕೇಂದ್ರದ ಸಂಸತ್ತು ತಂತಮ್ಮ ಮಿತಿಯೊಳಗೆ ಸರ್ವೋಚ್ಚ ಅಧಿಕಾರವಿರುವ ಸಭೆಗಳು. ಹಾಗಿರುವಾಗ ಪ್ರಭುತ್ವವನ್ನು ವ್ಯವಹೃತಗೊಳಿಸುವ ಗುರುತರ ಹೊಣೆಗಾರಿಕೆಯು ಇಂತಹ ಚುನಾಯಿತ ಪ್ರತಿನಿಧಿಗಳಿಗಿದೆಯೆಂಬುದು ನಿರ್ವಿವಾದ. ತಾವು ಪ್ರತಿನಿಧಿ ಸಭೆಗಳಲ್ಲಿ ಜನತೆಯ ಪರವಾಗಿ ಮಂಡಿಸಿ, ಜನತೆಯ ಕ್ಷೇಮಚಿಂತನೆಯನ್ನು ಮಾಡುತ್ತೇವೆಯೆಂಬುದನ್ನೂ ಅದಕ್ಕಾಗಿ ಕಾಯದೆಕಟ್ಟಳೆಗಳನ್ನು ರೂಪಿಸುತಿದ್ದೇವೆಂಬುದನ್ನೂ ನಿರ್ವಿಕಾರ ಮನೋವೃತ್ತಿಯಿಂದ ಅವರು ಯೋಚಿಸಬೇಕಾಗಿದೆ ಒಂದು ಪ್ರಜಾಪ್ರಭುತ್ವದಲ್ಲಿ ಪ್ರಜಾಪ್ರತಿನಿಧಿಗಳ ವರ್ತನೆಯು ಶ್ಲಾಘ್ಯವಾಗಿದ್ದರೆ ಮಾತ್ರ ಅದೇಶದ ಗೌರವ ಮತ್ತು ಪ್ರತಿಷ್ಠೆಗಳು ಬೆಳೆಯುವುವೆಂಬುದನ್ನು ನಾವು ಮರೆಯಬಾರದು.

ಪ್ರಜಾ ಪ್ರತಿನಿಧಿ ಸಭೆಗಳಲ್ಲಿ ಅಧ್ಯಕ್ಷರ ಸ್ಥಾನಮಾನಗಳು ಬಹು ಹಿರಿದಾದುವುಗಳು. ಪ್ರತಿಯೊಬ್ಬ ಪ್ರತಿನಿಧಿಯು ಅವನು ಯಾವ ಪಕ್ಷಕ್ಕೆ ಸೇರಿದವನಿರಲಿ ಅಧ್ಯಕ್ಷ ಸ್ಥಾನದ ಗೌರವಕ್ಕೆ ಸರಿಯಾಗಿ ವರ್ತಿಸಬೇಕಾಗುವುದು. ಅಧ್ಯಕ್ಷನನ್ನು ಕಡೆಗಣಿಸಿದರೆ, ಆತನ ಆಜ್ಞೆಗಳನ್ನು ಪಾಲಿಸದೆ ಇದ್ದರೆ. ಇಡಿಯ ಸಭೆಗೆ ಅಪಮಾನ ಮಾಡಿದಂತೆ; ಸಭೆಯು ಅಪಮಾನಿತವಾಯಿತೆಂದರೆ ಜನತೆಯ ಮುಖಕ್ಕೆ ಮಂಗಳಾರತಿಯೆತ್ತಿದಂತೆ. ಆದುದರಿಂದ ಕೆಲವೊಮ್ಮೆ ಅಧ್ಯಕ್ಷನು ನ್ಯಾಯ ಬಾಹಿರವೆನಿಸಬಹುದಾದ ನಿರ್ಧಾರ ಇಲ್ಲವೇ ಆಜ್ಞೆಗಳನ್ನು ಕೊಟ್ಟನೆಂದಾದರೂ ಅದನ್ನು ತುಟಿಬಿಚ್ಚದೆ ಪ್ರತಿಯೊಬ್ಬನೂ ಸಹಿಸಿಕೊಂಡಿರಬೇಕೇ ಹೊರತು ಆಹ್ವಾನಿಸುವುದು ಸಾಧ್ಯವಿಲ್ಲ. ಒಂದು ವೇಳೆ ಈ ಸತ್ಸಂಪ್ರದಾಯವನ್ನು ಮೀರಿ ಅಧ್ಯಕ್ಷರನ್ನು ವಾಗ್ವಾದರಂಗಕ್ಕೆ ಎಳೆದರೆ ಅದರಿಂದ ಶಾಂತಿ ಭಂಗವಾಗುವುದು; ಸಭೆಯ ಕಾರ್ಯಕಲಾಪಗಳಿಗೆ ತಡೆಯುಂಟಾಗುವುದು; ಸಭೆಯ ಗೌರವಕ್ಕೆ ಕುಂದು ತಟ್ಟುವುದು ಮತ್ತು ಪ್ರಜಾಪ್ರಭುತ್ವದ ಅವಹೇಳನವಾಗುವುದು.

ನಮ್ಮ ದೇಶದ ರಾಜ್ಯ ಮತ್ತು ಕೇಂದ್ರ ಪ್ರಜಾಪ್ರತಿನಿಧಿ ಸಭೆಗಳಲ್ಲಿ ಕೆಲವೊಂದು ಮೋಜಿನ ಪ್ರಸಂಗ ನಡೆಯುವುದುಂಟು. ಇಂತಹ ಪ್ರಸಂಗಗಳನ್ನು ತಂದೊಡ್ಡುವವರು ಸಾಮಾನ್ಯವಾಗಿ ವಿರೋಧೀ ಪಕ್ಷಗಳವರು. ಏಕೆಂದರೆ ಅಂತಹ ಅವಕಾಶವಿರುವುದಾದರೂ ಅವರಿಗೆ ಮಾತ್ರ. ಪ್ರತಿಭಟನೆ, ಸಭಾತ್ಯಾಗಗಳು ಇಂದು ನಮ್ಮ ಪ್ರತಿನಿಧಿ ಸಭೆಗಳಲ್ಲಿ ದಿನನಿತ್ಯವೆಂಬಂತೆ ನಡೆಯುತ್ತವೆ. ಕೆಲವೊಮ್ಮೆ ಈ ಘಟನೆಗಳು ಪ್ರಕೋಪಗೊಂಡು, ಮಹಾಕಾಂಡಕ್ಕೆ ನಾಂದಿಯಿಡುವುದೂ ಉಂಟು. ಹಿಂದೊಮ್ಮೆ ಪಾಕಿಸ್ತಾನದ ವಿಧಾನ ಸಭೆಯಲ್ಲಿ ವಿವಾದವೆದ್ದು ಸಭಾಧ್ಯಕ್ಷರ ಮೇಲೆ ಚಪ್ಪಲಿ ಎಸೆದುದನ್ನೂ ಮತ್ತೊಮ್ಮೆ ಕೊಂದು ಹಾಕುವುದಕ್ಕೆ ಹಿಂಜರಿಯದುದನ್ನೂ ನಾವು ಮರೆಯುವಂತಿಲ್ಲ. ನಮ್ಮ ದೇಶದಲ್ಲಾದರೂ ಉತ್ತರ ಪ್ರದೇಶದ ವಿಧಾನ ಸಭೆಯಲ್ಲಿ ಸದಸ್ಯರ ಕೀಟಲೆಯಿಂದಾಗಿ ಅಧಿವೇಶನವನ್ನು ಎರಡು ಬಾರಿ ಮುಂದುವರಿಸಬೇಕಾಗಿ ಬಂದುದನ್ನೂ, ಮತ್ತೊಮ್ಮೆ ಪೋಲೀಸು ರಕ್ಷಣೆಯು ಅವಶ್ಯವಾದುದನ್ನೂ ನೆನಪಿಸಿಕೊಳ್ಳಬೇಕು. ಸಭಾತ್ಯಾಗವೆಂಬುದು ಇಂದು ದೈನಂದಿನ ಮಾತು; ಎಂತಲೇ ಅದರ ಬೆಲೆಯೂ ಇಳಿದಿದೆ; ಅದು ಮಹತ್ವವನ್ನು ಕಳೆದುಕೊಂಡಿದೆ ಉತ್ತರ ಪ್ರದೇಶದಲ್ಲಿ ಅಧ್ಯಕ್ಷರು ಸಭೆಯನ್ನು ಮುಂದುವರಿಸಿದ ನಂತರ, ಅನಾಯವಾಗಿ ಸಭೆಯನ್ನು ಕೂಡಿಸುವ ಪಯತ್ನವೂ ನಡೆಯಿತೆನ್ನುವಾಗ, ನಮ್ಮ ಜನ ಪ್ರತಿನಿಧಿಗಳ ಪ್ರಜ್ಞೆಯ ಪರಿಮಿತಿಯ ನಮಗೆ ಪರಿಚಿತವಾಗುವುದು.

ಇಂತಹ ಅನಪೇಕ್ಷಣೀಯ ಮತ್ತು ಅಗೌರವದ ವರ್ತನೆಗಳಿಗೆ ಕಾರಣವೇನು? ಪ್ರತಿನಿಧಿಗಳಾದವರಲ್ಲಿರುವ ಅಶಿಸ್ತು ಮತ್ತು ಬೇಜವಾಬ್ದಾರಿತನಗಳು ಎಂದರೆ ಅದು ಅತಿಶಯೋಕ್ತಿಯೆನಿಸದು. ಸಭಾ ಕಾರ್ಯಕ್ಕೆ ವಿಘ್ನವೊಡ್ಡುವಂತಹ ಪ್ರವೃತ್ತಿಗೆ ಜವಾಬ್ದಾರಿರಹಿತ ವಾಚಾಳಿತನವೇ ಪ್ರೇರಕವೆನ್ನಬೇಕು. ಪ್ರಜಾ ಪ್ರಭುತ್ವದಲ್ಲಿ ಶಿಸ್ತಿಗೆ ಗಣನೀಯ ಸ್ಥಾನವಿದೆ. ಈ ಶಿಸ್ತನ್ನು ಮುಖ್ಯವಾಗಿ ಪ್ರತಿನಿಧಿಗಳಾಗುವವರು ಅರಿತುಕೊಳ್ಳದೆ ಸ್ವೈರವಾಗಿ ವರ್ತಿಸತೊಡಗಿದರೆ, ಅದು ಪ್ರಜಾಪ್ರಭುತ್ವವಾದೀತೆ? ಸ್ವಾತಂತ್ರ್ಯವೆಂದರೆ ಸ್ವೈರವಲ್ಲ; ತನ್ನ ಸ್ವಾತಂತ್ರ್ಯವನ್ನು ಅನುಭವಿಸುವುದರೊಡನೆ ಪರರ ಸ್ವಾತಂತ್ರ್ಯವನ್ನು ಮನ್ನಿಸುವ ವನೋವೃತ್ತಿಯು ಬೆಳೆಯಬೇಕಾಗಿದೆ. ಆದರೆ ನಮ್ಮ ಜನರಲ್ಲಿಯೂ ನಾವು ಆರಿಸಿ ಕಳಿಸುವ ಪ್ರತಿನಿಧಿಗಳಲ್ಲಿಯೂ ಇದೇ ಕೊರತೆಯೊಂದು ಎದ್ದುತೋರುತ್ತದೆ.

ನಾವಿಂದು ಪ್ರಜಾಪ್ರಭುತ್ವದ ಹೂಸತಿಲಲ್ಲಿ ಪಾದಾರ್ಪಣ ಮಾಡುತಿದ್ದೇವೆ. ಇಂದು ನಾವು ಹಾಕಿಕೊಡುವ ಪರಿಪಾರವು ನಮ್ಮ ಮುಂದಿನ ಪೀಳಿಗೆಯವರ ಶಾಸನ ಪ್ರಣಾಳಿಯ ಮೇಲೆ ಬಹು ಪ್ರಭಾವ ಬೀರುವುದು ಆದುದರಿಂದ ನಾವೂ ನಮ್ಮ ಪ್ರತಿನಿಧಿಗಳೂ ಸತ್‌ಸಂಪ್ರದಾಯವನ್ನು ಅನುಸರಿಸಿ, ಶಿಸ್ತು ಮತ್ತು ಜವಾಬ್ದಾರಿಯುತ ವರ್ತನೆಯನ್ನು ಅನುಷ್ಠಾನಕ್ಕೆ ತಂದುಕೊಂಡರೆ, ಅದರಿಂದ ನಮ್ಮ ಮುಂದಿನವರು ಲಾಭ ಪಡೆಯುವರು. ಅವರ ಭವಿಷ್ಯವನ್ನು ಬರೆಯುವ ಅಧಿಕಾರ ಪೂರ್ಣ ಸ್ಥಾನದಲ್ಲಿರುವ ನಾವು ಅಕ್ರಮವನ್ನು ಅನುಸರಿಸಿದರೆ, ನಮ್ಮ ಭವಿಷ್ಯದ ಕಾಲ ಮೇಲೆ ಕೊಡಲಿ ಹಾಕಿಕೊಂಡಂತೆಯೆಂದರೆ, ಸರಿಯಾಗುವುದು. ನಮ್ಮ ದೇಶವು ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ ವೇಳೆ ನಮ್ಮಲ್ಲಿ ಉತ್ತಮ ಪಾರ್ಲಿಮೆಂಟೇರಿಯನರಿದ್ದರು. ಪಂಡಿತ ಮೋತಿಲಾಲ ನೆಹರು ಇಂತಹ ಅನುಪಮರಲ್ಲಿ ಒಬ್ಬರು. ಗೋಪಾಲಕೃಷ್ಣ ಗೋಖಲೆಯವರು ಮಂತ್ರಾಲೋಚನಾ ಸಭಾ ಸದಸ್ಯರಾಗಿ ಸಲ್ಲಿಸಿದ ಸೇವೆಯೊಡನೆ ಅವರು ತನ್ನ ಹೊಣೆಗಾರಿಕೆಯನ್ನು ಹೊತ್ತು ನಿರ್ವಸಿದ ಗಂಭೀರತೆಯನ್ನು ನಾವು ಮರೆಯಲಾರೆವು ನಮ್ಮ ಪ್ರತಿನಿಧಿಗಳೂ ಅವರನ್ನು ನೆನೆದು, ಅವರು ಮೆಟ್ಟಿದ ಸತ್ಯ ಮಾರ್ಗವನ್ನು ಅನುಸರಿಸಿ ಮುನ್ನಡೆಯಬೇಕು.

ಪ್ರತಿನಿಧಿ ಸಭೆಯಲ್ಲಿ ಕೆಲವಾರು ತರದ ಜನರು ಕಲೆತಿರುತ್ತಾರೆ. ಇವರಲ್ಲಿ ಕಿರುಕುಳ ಕೊಡುವುದನ್ನೇ ತಮ್ಮ ಘನೋದ್ದೇಶವನ್ನಾಗಿಸಿ ಕೊಂಡವರೂ ಇರುತ್ತಾರೆ. ನಮ್ಮ ದೇಶದಲ್ಲಿ ಮಾತ್ರವಲ್ಲ ಪಾರ್ಲಿಮೆಂಟ್‌ಗಳ ಜನನಿಯೆಂದು ಹೆಸರಾದ ಬ್ರಿಟನ್‌ನಲ್ಲಿಯೂ ಇವರು ಇಲ್ಲದಿಲ್ಲ. ಆದರೆ, ಅವರ ಸಂಖ್ಯೆ ಕಡಿಮೆಯಿರಬಹುದು. ಅದೇನಿದ್ದರೂ ನಮ್ಮ ಪಾರ್ಲಿಮೆಂಟು ಅಥವಾ ಶಾಸನ ಸಭೆಗಳು ಗೌರವಯುತವಾಗಿ ಕಾರ್ಯನಿರ್ವಹಿಸಬೇಕೆಂಬುದರಲ್ಲಿ ಎಲ್ಲರೂ ಆಸಕ್ತಿ ತಾಳಬೇಕು. ಕಾನೂನುಗಳನ್ನು ನಿರ್ಮಿಸುವುದಕ್ಕಾಗಿಯೇ ಚುನಾಯಿತರಾದವರು ಕಾನೂನುಗಳನ್ನೆ ಮುರಿದು ದುಷ್ಟ ಮಾರ್ಗವನ್ನು ತೋರಿಸಿ ಕೊಡುವುದು ಲಾಂಭನಾಸ್ಪದವಲ್ಲದೆ ಮತ್ತೇನು?

ಪ್ರಜಾಪ್ರತಿನಿಧಿ ಸಭೆಯ ಅಧ್ಯಕ್ಷ ಸ್ಥಾನದ ಗೌರವ ಅಸಾಧಾರಣವಾದುದು ಎಂದು ಮೊದಲೇ ಹೇಳಲಾಗಿದೆ. ಆದುದರಿಂದ ಅದನ್ನು ಉಳಿಸುವುದು ಸಭಾಸದರೆಲ್ಲರ ಪರಮ ಕರ್ತವ್ಯವಲ್ಲವೆ? ಅಧ್ಯಕ್ಷರ ತೀರ್ಪು ಅನ್ಯಾಯ ಯುತವೆನಿಸಿದ್ದರೂ ಪ್ರತಿನಿಧಿಗಳು ಅದನ್ನು ತಾಳಿಕೊಳ್ಳಬೇಕು. ಹೀಗೆ ಒಂದು ವೇಳೆ ತಮಗೆ ಅಪಚಾರ ನಡೆಯಿತಾದರೂ ಅದನ್ನು ದೂರೀಕರಿಸುವ ಬೇರೆ ವಿಧಾನಗಳು ಇವೆ. ಇದನ್ನು ತಪ್ಪಿ ನಡೆದರೆ ಸೂಕ್ತಕ್ರಮವನ್ನು ಕೈಗೊಳ್ಳಬೇಕಾಗುವುದು. ಕರ್ನಾಟಕದ ವಿಧಾನ ಸಭೆಯಲ್ಲಿ ಸಮಾಜವಾದಿ ಸದಸ್ಯ ಗೋಪಾಲ ಗೌಡರ ಮೇಲೆ ಈ ವಿಧದ ಕ್ರಮ ಕೈಗೊಳ್ಳಲಾದುದನ್ನು ಯಾರೂ ಮರೆತಿರಲಾರರು. ಈ ಬಗೆಯು ಕಾರ್ಯಕ್ರಮ ಇಲ್ಲವೇ ಅಧ್ಯಕ್ಷರ ಮುಖದಿಂದ ಎಚ್ಚರಿಕೆಯ ಮಾತುಗಳು ತೀರ ಸಾಧಾರಣವೆನ್ನುವ ಗಟ್ಟಕ್ಕೆ ನಾವು ಬಂದಿರುವೆವಾದರೂ ಇದರಿಂದ ರಾಷ್ಟ್ರಕ್ಕೆ ಅಪಮಾನವಾಗುವುದೆಂಬುದನ್ನು ಅಲಕ್ಷ್ಯಿಸುವಂತಿಲ್ಲ

ಅಧ್ಯಕ್ಷರ ಮೇಲೆ ತಿರುಗಿ ಬೀಳುವ ಪ್ರವೃತ್ತಿ ನಮ್ಮ ದೇಶದಲ್ಲಿ ಹೆಚ್ಚಾಗುತ್ತಬರುತ್ತಿದೆ. ಇದಕ್ಕೆ ಕಾರಣವರಸುವುದು ಕಷ್ಟ. ಆದರೂ ನಮ್ಮಲ್ಲಿ ಸಭಾಧ್ಯಕ್ಷನಾಗಿರುವವನು ಯಾವುದಾದರೊಂದು, ಸರ್ವಸಾಮಾನ್ಯವಾಗಿ ಆಳುವ ಪಕ್ಷದ ಸದಸ್ಯನಾಗಿಯೇ ಇರುತ್ತಾನೆ. ಆದುದರಿಂದ ಆತನದೆಷ್ಟು ನಿಷ್ಪಕ್ಷಪಾತಿಯೆನಿಸಲು ಪ್ರಯತ್ನಿಸಿದರೂ ವಿರೋಧಿ ಪಕ್ಷದವರು ಆತನ ಮೇಲೆ ಅಪಾದನೆ ಹೊರಿಸಿ ಕೆಳಮೆ ಮಾಡುವುದರಲ್ಲಿಯೇ ತಮ್ಮ ಹಿರಿಮೆಯಡಗಿದೆಯೆಂದು ಭಾವಿಸಿ ಅನ್ಯಾಯಕ್ಕೆಳಸುವರು. ಇದೇ ಪ್ರತಿನಿಧಿ ಸಭೆಗಳ ಅಶಿಸ್ತಿಗೆ, ಅಶಾಂತಿಗೆ ಕಾರಣವೆಂಬುದು ನಿಜವಾದರೆ, ಅಧ್ಯಕ್ಷನಾಗಿ ಆಯ್ಕೆಗೊಂಡೊಡನೆಯೇ ಅಂತಹ ಸದಸ್ಯನು ತನ್ನ ಪಕ್ಷಕ್ಕೆ ರಾಜಿನಾಮೆ ಯಿಯಬಹುದು ಆದರೆ, ಕೇವಲ ನಾಮ ಮಾತ್ರಕ್ಕೆ ರಾಜಿನಾಮೆಯಿತ್ತರೆ ಪ್ರಯೋಜನವಿಲ್ಲ. ಆದುದರಿಂದ ಅಧ್ಯಕ್ಷನನ್ನಾಗಿ ಆಯ್ಕೆ ಮಾಡುವಾಗ ನಿಷ್ಪಕ್ಷಪಾತತೆಗೂ ಸಹನಾ ಶಕ್ತಿಗೂ ಅನುಭವಕ್ಕೂ ನಿಯಂತ್ರಣ ಶಕ್ತಿಗೂ ಪ್ರಾಧಾನ್ಯವಿರಬೇಕೇ ಹೊರತು ಪಕ್ಷಕ್ಕಲ್ಲ.

ಸದ್ಯಕ್ಕೆ ನಮ್ಮ ದೇಶದಲ್ಲಿ ಪ್ರತಿನಿಧಿ ಸಭೆಯ ತೊಂದರೆಗಳು ಉಲ್ಬಣಾವಸ್ಥೆಗೇರುತ್ತಿದೆ; ಇದೆಂದಿಗೂ ಶುಭ ಚಿಹ್ನೆಯೆನಿಸದು. ಜನತೆಯ ಸಲುವಾಗಿ ನ್ಯಾಯ ವಿಧಾನ ಮಾಡಲು ಸೇರುವ ಸದಸ್ಯರು ತಮ್ಮ ಅಮೂಲ್ಯ ಹೊತ್ತನ್ನು ಅನವಶ್ಯಕವಾಗಿ ಹಾಳುಗೆಡಹುವುದರಿಂದ ಇಡಿಯ ದೇಶದ ಮಾನನಷ್ಟ, ಧನನಷ್ಟ, ಆದುದರಿಂದ ರಾಷ್ಟ್ರಪತಿ ಡಾ! ರಾಧಾಕೃಷ್ಣನ್ ಹೇಳುವಂತೆ ನಮ್ಮ ಶಾಸಕರು ಗೌರವಯುತರಾಗಿ ನಡೆದುಕೊಂಡು ದೇಶದ ಗೌರವವನ್ನು ಹೆಚ್ಚಿಸಿ ಕೊಡುವುದೂ, ಪ್ರಜೆಗಳ ಹಿತಚಿಂತನೆಯು ಉತ್ತಮಾದರ್ಶವನ್ನು ಯಧೋಚಿತವಾಗಿ ಸಾಧಿಸುವುದೂ ಅತ್ಯವಶ್ಯವಿದೆ.

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ಠೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯುತ್ತಮವೆಂದು ಪರಿಗಣಿಸಿರುವರು ಪ್ರತಿಯೊಬ್ಬ ಠೇವಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿಹೊಂದುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ವಿಜಯ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್:— ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,

Estd. 1931.
Phone No. 240.

— ಮಂಗಳೂರು — 3

ಜೀವನದ ವಿವಿಧ ಘಟನೆಗಳನ್ನು ಹೃದಯ ಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.
ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು
ನವಭಾರತ ಪುಸ್ತಕ ಭಂಡಾರ, ಉಡುಪಿ.

NAVAYUGA
Kannada Weekly
UDIPJ
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ವರುಷ ೪	ಉಡುಪಿ ೬-೯-೧೯೬೨	ವಾರ ೧

ರಾಜಾಜಿ ಮತ್ತು ಕಳಗಂ

ಮದ್ರಾಸಿನಲ್ಲಿನ ತಿರುಚೆಂದೋಡು ಲೋಕ ಸಭಾ ಮತದಾರ ಕ್ಷೇತ್ರದಿಂದ ದ್ರವಿಡ ಮುನ್ನೇತ್ರ ಕಳಗಂ ಮತ್ತು ಚಿತ್ತೂರಿನಿಂದ ಸ್ವತಂತ್ರ ಪಕ್ಷಗಳ ಪ್ರತಿನಿಧಿಗಳು ಮರುಚುನಾವಣೆಯಲ್ಲಿ ಗೆದ್ದುದರಿಂದ ಕೇಂದ್ರದ ನಾಯಕರ ಕಣ್ಣು ತುಸು ತೆರೆದಂತಾಯಿತು. ಚುನಾವಣೆಗಳಲ್ಲಿ ಗೆದ್ದವರನ್ನು ರಾಜ್ಯಪಾಲರೆಂದು ನೇಮಕ ಮಾಡುವುದೊಂದು ಸತ್ ಸಂಪ್ರದಾಯವಾದರೂ ಅದರಿಂದ ಮರುಚುನಾವಣೆಯು ನಡೆಯಬೇಕಾಗುವುದರಿಂದ ವೆಚ್ಚವು ದ್ವಿಗುಣವಾಗುವುದು ಮಾತ್ರವಲ್ಲ, ಜನತೆಯಲ್ಲಿ ನಿರುತ್ಸಾಹದ ಭಾವವೂ ಬೆಳೆಯುವುದು ಎಂದು ನಾವು ಮೊದಲೊಮ್ಮೆ ಬರೆದಿದ್ದೇವೆ. ಪಂಜಾಬದ ರಾಜ್ಯಪಾಲರೆಂದು ಶ್ರೀ ಕೆ. ಸಿ. ರೆಡ್ಡಿಯವರು ನಿಯುಕ್ತರಾದರೂ ಚಿತ್ತೂರು ಚುನಾವಣಾ ಪರಿಣಾಮ ಹೊರಗೆಡಹಲ್ಪಟ್ಟ ಬಳಿಕ ಪ್ರಚಲಿತ ರಾಜ್ಯಪಾಲ ಶ್ರೀ ಗಾಡಗೀಳರೇ ಒಂದು ವರ್ಷದ ವರೆಗೆ ತನ್ನ ಹುದ್ದೆಯಲ್ಲಿ ಮುಂದುವರಿಯುವರೆಂದು ತಿಳಿದು ಬಂದಿದೆ. ತಿರುಚೆಂದೋಡು ಮರುಚುನಾವಣೆಯು ಮದ್ರಾಸದ ಇತಿಹಾಸದಲ್ಲೆ ಬಹು ಪ್ರಮುಖವಾದುದಾಗಿತ್ತೆಂಬುದು ಎಲ್ಲರಿಗೂ ಗೊತ್ತು.

ತಿರುಚೆಂದೋಡು ಮರು ಚುನಾವಣೆಯಲ್ಲಿ ಕಾಂಗ್ರೆಸ್ ಹುರಿಯಾಳುವನ್ನು ದ್ರವಿಡ ಕಳಗಂನ ಸ್ಪರ್ಧಿಯು ಸೋಲಿಸಿದನು. ಚುನಾವಣೆಗೆ ಕೆಲವು ದಿನ ಮೊದಲು ಕಳಗಂ ಸರಕಾರದ ಕರಾಕರಣೆಯ ನೀತಿಯನ್ನು ಪ್ರತಿಭಟಿಸಿ ರಾಜ್ಯವ್ಯಾಪೀ ಪ್ರದರ್ಶನವನ್ನು ಏರ್ಪಡಿಸಿತ್ತು. ಈ ಕಾರಣದಿಂದ ಅದರ ಹಲವಾರು ಕಾರ್ಯಕರ್ತರು ಸೆರೆಹಿಡಿಯಲ್ಪಟ್ಟಿದ್ದರು. ಸಾಮಾನ್ಯವಾಗಿ ನೋಡುವುದಾದರೆ, ಇದು ಕಳಗಂ ವಿರೋಧಿ ಭಾವನೆಯನ್ನು ಹುಟ್ಟಿಸಬೇಕಿತ್ತು. ಆದರೆ, ಅದೇಕೋ ಕಳಗಂ ಗೆ ಅದೇ ವರದಾನ ಸದೃಶವಾಯಿತು. ಇದಕ್ಕೆ ನಾವು ಕಾರಣವನ್ನು ಅರಸ ಬೇಕಾದರೆ, ಹೆಚ್ಚು ಪ್ರಯಾಸ ಪಡಬೇಕಾಗಿಲ್ಲ. ಪ್ರಾರಂಭದಲ್ಲಿ ಸ್ವತಂತ್ರ ಪಕ್ಷವೂ ಚುನಾವಣಾ ರಂಗಕ್ಕೆ ಇಳಿದಿದ್ದರೂ ಕೊನೆಯಲ್ಲಿ ಅದು ಕಳಗಂಗೆ ಅನುಕೂಲವಾಗುವಂತೆ ಹಿಮ್ಮೆಟ್ಟಿತು; ಆದನ್ನು ಬೆಂಬಲಿಸಿತು. ಈ ಬೆಂಬಲವಿತ್ತುದರಿಂದ ಸ್ವತಂತ್ರ ಪಕ್ಷದ ನೀತಿಯ ಮತ್ತು ನಿಲುಮೆಯ ಬಗ್ಗೆ ಸಂದೇಹ ಹುಟ್ಟಿದರೆ ಆಶ್ಚರ್ಯವಿಲ್ಲ. ಆದರೆ, ಶ್ರೀ ಕೆ. ಎಂ. ಮುನಷಿ ಮತ್ತು ಶ್ರೀ ರಾಜಾಜಿಯವರು ಇಂತಹ ಸಂದೇಹ ನಿರಾಧಾರವೆಂದು ಸ್ಪಷ್ಟಪಡಿಸಿದ್ದಾರೆ. ತಿರುಚೆಂದೂರಿನಲ್ಲಿ 'ತಮ್ಮ ಪಕ್ಷವು ಹಿಮ್ಮೆಟ್ಟಿದುದು ದ್ರವಿಡ ಕಳಗಂ ಪಕ್ಷದ ನೀತಿಗೆ ಬೆಂಬಲ ನೀಡುವುದಕ್ಕಲ್ಲ; ಕಾಂಗ್ರೆಸ್ ಹುರಿಯಾಳುವನ್ನು ಸೋಲಿಸುವುದಕ್ಕೆ ಎಂದು ಆ ಅಗ್ರಮಣಿಗಳು ಹೇಳಿದ್ದಾರೆ. ಇದುಇದ್ದರೂ ಇರಬಹುದು; ಸತ್ಯವೆಂದೂ ಒಪ್ಪಿಕೊಳ್ಳಬಹುದು; ಆದರೆ ಮಗಳು ವಿಧವೆಯೆನಿಸುವುದಾದರೂ ಅಳಿಯ ಸಾಯಬೇಕೆಂದು ಗೋರಿ ಮಹಮ್ಮದನನ್ನು ಆಹ್ವಾನಿಸಿದ ಜಯಚಂದ ನೀತಿಯನ್ನು ಏನೆಂದು ಹೇಳಬಹುದು? ಕಾಂಗ್ರೆಸ್ಸನ್ನು ಸೋಲಿಸುವುದಕ್ಕಾಗಿ ತನಗೆ ಸರಿಹೊಂದದಿರುವ ಪಕ್ಷದೊಡನೆ ಹೆಜ್ಜೆ ಬೆಳೆಸುವುದು ರಾಜತಂತ್ರದ ಒಂದು ಲಕ್ಷಣವಾದರೂ ಪ್ರಜಾತಂತ್ರದ ಸಲ್ಲಕ್ಷಣವಲ್ಲವೆಂಬುದನ್ನು ಅವಶ್ಯಗಮನಿಸಬೇಕು ದ್ರವಿಡ ಕಳಗಂ ನೀತಿಗೆ ಮದ್ರಾಸ ರಾಜ್ಯದಲ್ಲಿಯೂ ಎಲ್ಲೆಡೆ ಬೆಂಬಲವಿಲ್ಲವೆಂದಿರುವಾಗ,ಅದು ದಕ್ಷಿಣ ಭಾರತದ ಇತರ ರಾಜ್ಯಗಳ ಜನತೆಯ ಸಹಾನುಭೂತಿಯನ್ನೆಂತು ಗಳಿಸೀತು? ಹಾಗಿರುವಾಗ, ಅದರ ದ್ರವಿಡಸ್ತಾನದ ಕಲ್ಪನಾ ಲೋಕ ನೈಜರೂಪಕ್ಕೆ ಹೇಗೆ ಮೂರ್ತವಾದೀತು?

ಈ ಧೈರ್ಯದಿಂದಲೇ ಪ್ರತ್ಯೇಕವಾದ ದ ಕಳಗಂಗೆ ಸ್ವತಂತ್ರ ಪಕ್ಷದ ನೆರವು ಸಿಕ್ಕಿತ್ತು ಎನ್ನಬಹುದು. ಆದರೂ ರಾಜಾಜಿ ಹೇಳುವಂತೆ ವಿಧಾನ ಸಭೆಯಲ್ಲಿ ನಾಲ್ಕರಲ್ಲೊಂದು ಪಾಲು ಪ್ರಾತಿನಿಧ್ಯವನ್ನು ಅದು ಗಳಿಸಿರುವಾಗ, ಅಸ್ಪೃಂದು ಕಡೆ ಗಣಿಸುವುದು ಸಾಧ್ಯವಿಲ್ಲ. ತಿರುಚೆಂದೂರಿನ ಮರುಚುನಾವಣೆಗೂ ಸ್ವತಂತ್ರ ಪಕ್ಷದ ನೀತಿಗೂ ಯಾವ ಸಂಬಂಧವೂ ಇಲ್ಲವೆಂಬುದನ್ನು ಒಪ್ಪಿಕೊಳ್ಳಬಹುದು; ಆದರೆ ವಿಜಯದಲ್ಲಿ ಸ್ವತಂತ್ರ ಪಕ್ಷದ ಸಹಾಯ ಪಸ್ತವಿತ್ತುವೆಂಬುದನ್ನು ಯಾರೂ ಅಲ್ಲಗಳೆಯುವಂತಿಲ್ಲ. ರಾಜಾಜಿಯವರೇ ಹೇಳುವಂತೆ ಆ ರಾಗಲೀ ಸ್ವತಂತ್ರ ಪಕ್ಷವಾಗಲೀ ದ್ರವಿಡ ಕಳಗಂನ ಮೇಲೆ ಯಾವ ವಿಶೇಷ ಸ್ನೇಹವನ್ನು ಸಾಧಿಸಿಕೊಂಡಿಲ್ಲ; ಕಾಂಗ್ರೆಸ್ಸನ್ನು ಸೋಲಿಸುವ ವಿಕಲ್ಪಮಾತ್ರ ಉದ್ದೇಶಕ್ಕಾಗಿ ಅದು ತಿರುಚೆಂದೂರಿನ ಮಟ್ಟಿಗೆ ಕಳಗಂನ್ನು ಬೆಂಬಲಿಸಿತು. ರಾಜಾಜಿಇಷ್ಟು ಮಾತ್ರ ಹೇಳಿ ಸುಮ್ಮನಾಗಲಿಲ್ಲ; ದಕ್ಷಿಣದಲ್ಲಿ ಕಳಗಂ ನೀತಿ ಬೆಳೆಯುವುದಕ್ಕೆ ಉತ್ತರ ಭಾರತವೇ ಕಾರಣವೆಂದು ಅರೋಪಿಸಿದರು. ಉತ್ತರದವರ ಭಾಷೆಯನ್ನು ದಕ್ಷಿಣದವರ ಮೇಲೆ ಹೇರುವ ಪ್ರಯತ್ನ ನಡೆಯುತ್ತಿದೆ. ಉತ್ತರ ಭಾರತದ ಈ ಅಭಿಪ್ರಾಯವನ್ನು ಖಂಡಿಸುವುದಕ್ಕಾಗಿಯೇ ದ್ರವಿಡ ಕಳಗಂ ಇಚ್ಛೆಯೊದುದರಿಂದ ಹಿಂದೀ ವಿರೋಧಿ ಭಾವನೆಯು ದಕ್ಷಿಣದಲ್ಲಿ, ಮುಖ್ಯವಾಗಿ ಮದ್ರಾಸ ರಾಜ್ಯದಲ್ಲಿ ಹೆಚ್ಚುತ್ತಿರುವುದೇ ಕಳಗಂ ವಿಜಯಕ್ಕೆ ಕಾರಣವೆಂದು ಅವರು ಸಮರ್ಥಿಸುತ್ತಾರೆ. ಪ್ರಧಾನಿ ನೆಂತ್ರಿಯವರು ದಾಕ್ಷಿಣಾತ್ಯರಲ್ಲಿ ಹಿಂದಿಯ ಬಗ್ಗೆ ಎದ್ದಿರುವ ಭಯವನ್ನು ಹೋಗಲಾಡಿಸಲು ಉತ್ಸುಕರಾಗಿದ್ದರೂ ಅವರ ಕೆಲವು ಸಹಚರರು ಅಂಜಿಕೆಯನ್ನು ಹುಟ್ಟಿಸುತಿದ್ದಾರೆ ಎಂದವರು ದೂರುತ್ತಾರೆ.

ಮನನೀಯ ರಾಜಾಜಿಯವರ ಅಭಿಪ್ರಾಯದಲ್ಲಿ ತುರುಳಿರುವ ಅಂಶ ಬಹುಪಾಲು ಆಂಧ್ರ, ಕರ್ನಾಟಕ ಮತ್ತು ಕೇರಳಗಳಲ್ಲಿ ನಾವು ಮೂತ್ರಕ್ಯಾದರೂ ಕಳಗಂನೀತಿಗೆ ಪುರಸ್ಕಾರವಿರುವುದಿಲ್ಲ. ಹಿಂದೀ ವಿರೋಧೀ ಭಾವನೆಯೂ ಇಲ್ಲ; ಏಕ ರಾಜ್ಯದ ಪಕ್ಷವಾಗಿರುವ ಕಳಗಂ ದಕ್ಷಿಣ ಭಾರತೀಯರನ್ನು ಪ್ರತಿನಿಧಿಸುವುದೂ ಇಲ್ಲ. ಸ್ವತಂತ್ರ ಪಕ್ಷವು ಕಾಂಗ್ರೆಸ್ಸನ್ನು ಸೋಲಿಸುವುದಕ್ಕಾಗಿ ತಾನು ಗೆಲ್ಲುವ ಆಸೆಯಿದ್ದಿಲ್ಲವಾದುದರಿಂದ—ತ್ರಿಮುಖ ಸ್ಪರ್ಧೆಯನ್ನು ತಿರುಚೆಂದೂರಿನಲ್ಲಿ ತಪ್ಪಿಸಿತು ಎನ್ನುವುದು ಎಲ್ಲರಿಗೂ ಗೊತ್ತು. ರಾಜಕಾರಣದಲ್ಲಿ ತಂತ್ರ—ಕುತಂತ್ರಗಳಿರುವುದೂ ಸ್ವಾಭಾವಿಕವಾದರೂ ದೇಶದ ಸಮಗ್ರತೆಗೆ ಭಂಗವನ್ನೊಡ್ಡುವಂತಹ ಕಳಗಂನನ್ನು ಸ್ವತಂತ್ರ ಪಕ್ಷವು ಬೆಂಬಲಿಸಬಾರದಿತ್ತು. ಪ್ರತ್ಯೇಕತಾ ಭಾವನೆಯು ದೇಶಕ್ಕೆ ಮುಳಿನೆಂದು ನಮ್ಮ ಇತಿಹಾಸ ಸಾರುತ್ತಿರುವಾಗ, ಅದನ್ನು ನಿರ್ಲಕ್ಷ್ಯಿಸಿ ರಾಜಾಜಿಯಂತಹ ಉಚ್ಚನಾಯಕರು ಅವ್ಯಕ್ತವಾಗಿಯಾದರೂ ಅದನ್ನು ಬೆಂಬಲಿಸುವುದು ಸಾಧುವಲ್ಲ. ವಿಷದ ಹಾವಿನ ಗಾಳಿ ಹೆರಡಲು ಬಿಡುವುದು ಯಾರಿಗೂ ಕ್ಷೇಮವಲ್ಲ.

ನಗರಸಭಾ ಚುನಾವಣೆ

ಮಂಗಳೂರು ಮತ್ತು ಉಡುಪಿ ನಗರ ಸಭೆಗಳಿಗೆ ಚುನಾವಣೆಗಳು ಇದೇ ಒಕ್ಟೋಬರ ತಿಂಗಳಲ್ಲಿ ನಡೆಯುವುವೆಂದು ಪ್ರಕಟಣೆ ಹೊರಟಿದೆ. ಬಹು ದೀರ್ಘಾ ಲೋಚನೆ ನಡೆಸಿದ ನಂತರ ಕಾಂಗ್ರೆಸ್ ಪಕ್ಷವು ಚುನಾವಣೆಗಳಲ್ಲಿ ಸ್ಪರ್ಧಿಸಬೇಕೆಂದು ಒಪ್ಪಿ ಈ ವಿಷಯದಲ್ಲಿ ಮುಂದಿನ ಕ್ರಮ ಕೈಗೊಳ್ಳಲು ಸಮಿತಿಗಳನ್ನು ನೇಮಿಸಿಕೊಂಡಿದೆ ಹಿಂದಿನಿಂದಲೂ ಪುರುಸಿನ ಸ್ಪರ್ಧೆ ಪ್ರತಿಸ್ಪರ್ಧೆಗಳಿಗೆ ಹೆಸರಾದ ಈ ಚುನಾವಣೆಗಳಲ್ಲಿ ಎಲ್ಲ ರಾಜಕೀಯ ಪಕ್ಷಗಳೂ ತಂತಮ್ಮ ಪ್ರಭಾವೀ ಹುರಿಯಾಳುಗಳನ್ನು ನಿಲ್ಲಿಸಿ ಅದಷ್ಟು ಹೆಚ್ಚಿನ ಸ್ಥಾನಗಳನ್ನು ಪಡೆಯಬಯಸುವುದು ತಪ್ಪಲ್ಲ. ಜಿಲ್ಲೆಯ ರಾಜಕೀಯ ರಂಗವನ್ನು ನೋಡುವಾಗ, ಕಾಂಗ್ರೆಸ್ಸು ವಿಶ್ವತ್ರ ಎಂದಿನಂತೆ ಎಲ್ಲ ಸ್ಥಾನಗಳಿಗೂ ಹುರಿಯಾಳುವನ್ನು ನಿಲ್ಲಿಸುವ ಶಕ್ತಿಯಿರುವ ಏಕಮೇವ ಪಕ್ಷ; ಪ್ರಸವಾವ ಕಣ್ಣು ಕೊರುತ್ತ; ಕುಳಿತಿದೆ. ಸ್ವತಂತ್ರ ಪಕ್ಷವು ಇನ್ನೂ ಶೈಶವಾವಸ್ಥೆಯಲ್ಲಿದೆ. ಕಮ್ಯುನಿಸ್ಟರು ತಮ್ಮ ಮನಸ್ಸಿಪ್ಪೆಯೊಳಗಿನ ಕ್ಷೇತ್ರಗಳ ಮೇಲೆ ಕಣ್ಣಿಡದೆ ಇರುವುದಿಲ್ಲ. ಜನಸಂಘವು ಕಳೆದ ಬಾರಿ ಅದಷ್ಟು ಹೆಚ್ಚಿನ ಸಂಖ್ಯೆಯಲ್ಲಿ ಹುರಿಯಾಳುಗಳನ್ನು ನಿಲ್ಲಿಸಿದ್ದಾರೇನೋ ನಿಜ. ಗೆದ್ದವರೂ ಶೂನ್ಯ. ಆದರೆ, ಈ ಬಾರಿ ಕೇವಲ ಪ್ರಚಾರ ದೃಷ್ಟಿಯನ್ನು ಮಾತ್ರ ಉದ್ದೇಶವಾಗಿರಿಸಿಕೊಳ್ಳದೆ ನಿಜವಾಗಿ ತಮಗೆ ಹೆಚ್ಚಿನ ಬೆಂಬಲ ದೊರೆಯುವ ನಿರೀಕ್ಷೆಯಿರುವ ವಾರ್ಡುಗಳಲ್ಲಿ ಮಾತ್ರ ಸ್ಪರ್ಧೆಗಿಳಿದರೆ, ತಮ್ಮ ಶ್ರಮವನ್ನು ಕೇಂದ್ರೀಕರಿಸಿ, ಒಂದೆರಡು ಸ್ಥಾನಗಳನ್ನಾದರೂ ಗಳಿಸಬಹುದು. ಕಾಂಗ್ರೆಸ್ಸು ಉತ್ತಮವ್ಯಕ್ತಿಗಳು ವೈಯಕ್ತಿಕ ನೆಲೆಯಲ್ಲಿ ಸ್ಪರ್ಧಿಸುವುದಾದರೆ, ಅವರಿಗೆ ಎದುರಾಗಿ ನಿಲ್ಲದಿರಲು ನಿಶ್ಚಯಿಸಿದಂತೆ ತೋರುತ್ತದೆ. ಹಾಗಾದಲ್ಲಿ ಕೆಲವೊಂದು ಸ್ವತಂತ್ರರೂ ಗೆದ್ದು ಬರುವುದು ಖಂಡಿತ. ಸ್ಥಳೀಯ ಸಂಸ್ಥೆಗಳಲ್ಲಿ ರಾಜಕಾರಣವು ದುಸ್ಪ್ರಭಾವ ಬೀರುವುದರಿಂದ, ಅವು ಅದರಿಂದ ದೂರವಿರಬೇಕೆಂಬ ವಾದವು ಕೇಳಿ ಬರುತ್ತಿದೆಯಾದರೂ ಇದನ್ನು ಯಾವ ಪಕ್ಷದವರೂ ಹೆಚ್ಚಾಗಿ ಗಮನಿಸುವ, ಪರಿವಾರ ನಡೆದು ಬಂದಿಲ್ಲ. ಕಾಂಗ್ರೆಸ್ಸು ಪಕ್ಷವು ಪಕ್ಷವಾಗಿ ಸ್ಪರ್ಧಿಸುವಾಗ, ಉತ್ತಮ ಆದರ್ಶ ಆಭ್ಯರ್ಥಿಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಆಯ್ಕೆ ವಾರ್ಡಿನವನ್ನೇ— ಆಯ್ದುಕೊಳ್ಳಬೇಕು. ಈ ಮೊದಲು ಎರಡೂ ನಗರ ಸಭೆಗಳು ಸಾಮಾನ್ಯ ಮಟ್ಟಿಗೆ ಕಾಂಗ್ರೆಸ್ಸಿನ ಕೈಯಲ್ಲಿಯೇ ಇದ್ದುವು ಈ ಬಾರಿಯೂ ಹಾಗೆಯೇ ಆಗಬೇಕು; ನಗರ ಸಭೆಗಳ ಆಡಳಿತೆಯು ಜನನುನ ಮೆಚ್ಚುಗೆಯಾಗಬೇಕೆಂದು ಬಯಸಿದರೆತಪ್ಪಾಗದು.

ಉಡುಪಿ ನಗರಸಭಾ ಚುನಾವಣೆ

ಆಕ್ಟೋಬರ 24ರಂದು ನಡೆಯಲಿರುವ ಉಡುಪಿ ನಗರಸಭಾ ಚುನಾವಣೆಯ ವಿವಿಧ ಹಂತಗಳನ್ನು ಕಮಿಶನರ್ ಮತ್ತು ಚುನಾವಣಾಧಿಕಾರಿ ಶ್ರೀ ಐ. ಜೋಶ್ವಾರವರು ಈ ಕೆಳಗಿನಂತೆ ಪ್ರಕಟಿಸಿದ್ದಾರೆ.

1-9-62ಕ್ಕೆ ನೋಟೀಸುಗಳ ಪ್ರಕಟಣೆ.
10-9-62ರಿಂದ 12-9-62ರ ವರೆಗೆ ನಾಮಪತ್ರಗಳ ಸ್ವೀಕಾರ.

14-9-62ಕ್ಕೆ ನಾಮಪತ್ರಗಳಪರಿಶೀಲನೆ.
16-9-62ಕ್ಕೆ 3 ಗಂಟೆಯ ಒಳಗೆ ಕೇವಲ ನಾತಿ ಕಳಕೊಳ್ಳದೆ ನಾಮಪತ್ರಗಳನ್ನು ಹಿಂದೆಗೆದುಕೊಳ್ಳುವುದು.
18-9-62ಕ್ಕೆ ಆಪೀಲುಗಳು ಇಲ್ಲವಾದಲ್ಲಿ ಸಿಂಧುವಾದ ನಾಮಪತ್ರಗಳ ಪಟ್ಟಿಯ ಪ್ರಕಟಣೆ.
22-9-62ಕ್ಕೆ ಆಪೀಲುಗಳಿದ್ದರೆ ಸಿಂಧುವಾದ ನಾಮಪತ್ರಗಳ ಪಟ್ಟಿಯ ಪ್ರಕಟಣೆ.
24-9-62ಕ್ಕೆ ಕೇವಲಾತಿ ಕಳಕೊಂಡು ನಾಮಪತ್ರಗಳನ್ನು ಹಿಂತೆಗೆಯುವಿಕೆ.
24-10-62ರಂದು ಮತದಾನ.
25-10-62ರಂದು ಮತಗಳ ಎಣಿಕೆ.

ನಮ್ಮ ಚಂದಾದಾರರಲ್ಲಿ ನಮ್ರ ವಿನಂತಿ

ಆಗೋಸ್ತು ತಿಂಗಳಾಂತ್ಯಕ್ಕೆ 'ನವಯುಗ'ದ 41ನೆಯ ವರ್ಷವು ಮುಗಿದು ಇದೇ ಸಪ್ಟಂಬರದಿಂದ 42ನೆಯ ಹೊಸ ವರ್ಷಾರಂಭವಾಗಿದೆ. ಈ ಅವಧಿಗೆ ಚಂದಾ ಅವಧಿ ಮುಗಿಯುವವರೇ, ಚಂದಾ ಹಣ ಬಾಕಿ ಇರುವವರೂ ತಮ್ಮ ತಮ್ಮ ಬಾಕಿಯನ್ನು ದಯಮಾಡಿ ಇನ್ನಾದರೂ ಅದಷ್ಟು ಬೇಗನೆ ಕಳುಹಿಸಿಕೊಟ್ಟು ಪ್ರೋತ್ಸಾಹಿಸಬೇಕಾಗಿ ವಿನಂತಿಸುತ್ತೇವೆ

ವಿ. ಪಿ. ಮೂಡಿದರೆ 70 ನ. ಪೈ. ಯಷ್ಟು ಹೆಚ್ಚಿಗೆ ಬೀಳುವುದರಿಂದ ಎಲ್ಲರೂ ಮುಂದಾಗಿ ಚಂದಾ ಕಳುಹಿಸುವಂತೆ ವಿನ್ನಹ. ಅಂತೂ ತಾ. 10 ರೊಳಗಾದರೂ ಹಣ ಬಾರದಿದ್ದರೆ ಬಾಕಿಯಾಗಿ ಕ್ರಮಶಃ ಪತ್ರಿಕೆಯನ್ನು ವಿ. ಪಿ.ಯಾಗಿ ಕಳಿಸುವೆವು.

—ಮೆನೇಜರ್, ನವಯುಗ.

ಅಲ್ಲಲ್ಲಿಯ ಸುದ್ದಿಸಾರ

ವಿವಾಹ ಸಮಾರಂಭ—ಮೈಸೂರು ಹೈಕೋರ್ಟಿನ ಜಡ್ಜರ್ ಶ್ರೀ ಕೆ. ಸದಾನಂದ ಹೆಗ್ಡೆಯವರ ಪುತ್ರಿ ಸೌ. ನರ್ಮದಾ ಅವರ ವಿವಾಹವು ಎಷ್ಟೆನ್ಸಿಲ್ ಆಂತರ್ರಾಷ್ಟ್ರೀಯ ಲೇಬರ್ ಆಫೀಸ್ ತಜ್ಞರಾದ ಶ್ರೀ ಎನ್. ಕರುಣಾಕರ ಆಡ್ಯಂತಾಯರ ಪುತ್ರ ಶ್ರೀ ರಾಮಮೋಹನ ಆಡ್ಯಂತಾಯರೊಡನೆ ಶಾರೀಕಲ 2—9—62ನೇ ಪೂರ್ವಾಹ್ನ ಮಂಗಳೂರಿನಲ್ಲಿ ಜ್ಯೋತಿಷ್ ಟಾಕೀಸಿನಲ್ಲಿ ಅತಿ ವಿಜೃಂಭಣೆಯಿಂದ ಜರಗಿತು. ಜಿಲ್ಲೆಯ ಎಲ್ಲಾ ಕಡೆಗಳಿಂದಲ್ಲದೆ ಮೈಸೂರು, ಬೆಂಗಳೂರು, ಬೊಂಬಾಯಿ, ಮದ್ರಾಸು ಮೊದಲಾದ ಕಡೆಗೆಂದ ಪ್ರಮುಖರನೇಕರು ಈ ಸಮಾರಂಭಕ್ಕೆ ಆಗಮಿಸಿದ್ದರು. ಆರೋಗ್ಯಮಂತ್ರಿ ಡಾ. ನಾಗಪ್ಪ ಆಳ್ವ, ಜಸ್ಟೀಸ್ ಶ್ರೀ ಹೊಂಬೇ ಗೌಡ ಮೊದಲಾದವರೂ ಉಪಸ್ಥಿತರಿದ್ದರು.

ಗೃಹ ಪ್ರವೇಶ—ಎಡ್ವೋಕೇಟ್ ಶ್ರೀ ಕೆ. ನಾರಾಯಣ ರೈ, ಬಿ.ಎ.,ಬಿ.ಎಲ್., ಇವರು ಮಂಗಳೂರಲ್ಲಿ ಕರಂಗಲಪಾಡಿ ಹಿಂಟೋರ ಓಪೆಯಲ್ಲಿ ನೂತನವಾಗಿ ಕಟ್ಟಿಸಿದ ಗೃಹ ಸ್ವಪ್ನೇಶ ಸಮಾರಂಭವು ತಾ. 8—9—62 ನೇ ಬೆಳಿಗ್ಗೆ ವಿಧಿಪೂರ್ವಕ ನೆರವೇರಿತು. ಸಂಜೆ ಈ ಸಂಬಂಧ ಉಪಾಹಾರ ಸತ್ಕಾರ ಕೂಟ ಜರಗಿತು.

ಮಂಗಳೂರು ಸರಕಾರಿ ಕಾಲೇಜಿನ ಕನ್ನಡ ಮಹಾ ಸಭೆ—ಯನ್ನು ತಾ. 24—8—62ರಂದು ಉಡುಪಿ, ಎಮ್. ಜಿ ಎಮ್. ಕಾಲೇಜಿನ ಪ್ರೊ! ಕು. ಶಿ. ಹರಿದಾಸ ಭಟ್ಟರು ಉದ್ಘಾಟಿಸುತ್ತಾ ಕನ್ನಡ ಸಾಹಿತ್ಯದ ಅಭಿವೃದ್ಧಿ ಎಂತಾಗ ಬೇಕು ಎಂಬ ಕುರಿತು ಮೂತನಾಡುತ್ತಾ, ನಮಗೆ ಭಾಷಾ ಭಿಮಾನವಿದೆಯೆಂದು ಹೇಳಿಕೊಳ್ಳುವುದರಿಂದ ಫಲವಿಲ್ಲವೆಂದೂ ಆದರ ಬದಲು ಪ್ರಯೋಜನಕಾರಿಯೂಡ ಕೆಲಸವಾಗಬೇಕೆಂದೂ ಕನ್ನಡ ಸಾಹಿತ್ಯ ಎಲ್ಲರಿಗೂ ಉಪಯೋಗವಾಗುವಂತೆ ಮೂಡಲು ವಿಜ್ಞಾನ, ರಾಜನೀತಿ, ಅರ್ಥಶಾಸ್ತ್ರ ಇವೇ ಮೊದಲಾದ ವಿಭಾಗಗಳಲ್ಲಿ ಪುಸ್ತಕಗಳು ಅಧಿಕಾಧಿಕವಾಗಿ ರಚನೆಯಾಗಬೇಕೆಂದೂ ಕನ್ನಡ ಸಾಹಿತ್ಯಕ್ಕೆ ಅನುಕೂಲ ವಿದ್ದವರು ಪ್ರೋತ್ಸಾಹ ಕೊಡಬೇಕೆಂದೂ ಹೇಳಿದರು. ಪ್ರಿನ್ಸಿಪಾಲ್ ಶ್ರೀ ಆರ್. ಆರ್. ಉಮಾಜೀಯವರು ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಮಯಾ ಸಭೆಯ ಉಪಾಧ್ಯಕ್ಷ ಶ್ರೀ ಎಮ್. ಆರ್. ಶಾಸ್ತ್ರಿಯವರು ಶ್ರೀ ಹರಿದಾಸ ಭಟ್ಟರ ಪರಿಚಯ ಮಾಡಿಕೊಟ್ಟರು. ಅಂತ್ಯದಲ್ಲಿ ಕಾರ್ಯದರ್ಶಿ ಶ್ರೀ ತಿಮ್ಮಪ್ಪ ಪೂಂಜರು ವಂದನೆಗಳನ್ನು ಸಲ್ಲಿಸಿದರು.

ಸರ್ವಧರ್ಮ ಸಮ್ಮೇಳನ—ವೆಲ್ಲೂರಿನ ಅನಂತಪದ್ಮನಾಭ ದೇವಾಲಯದ ಅರ್ಚಕ ಶ್ರೀ ಪಿ. ಆನಂತ ಅಡಿಗರು ತಾ. ೧೯೦೯ ದೇವರ ಸನ್ನಿಧಿಯಲ್ಲಿ ಪೂಮಿನ ಪೂಜೆಯನ್ನು ನೆರವೇರಿಸಿದರು. ಆನಂತರ ಕಲ್ಯಾಣ ಮಂಟಪದಲ್ಲಿ ಸರ್ವ ಧರ್ಮ ಸಮ್ಮೇಳನವು ನಡೆಯಿತು. ಸಮ್ಮೇಳನದ ಅಧ್ಯಕ್ಷ ಸ್ಥಾನವನ್ನು ಶ್ರೀ ಕೆ. ಸುಬ್ರಾಯ ಪುರಾಣಿಕರು ವಹಿಸಿ, ಸರ್ವಧರ್ಮ ಸಮನ್ವಯದ ಕುರಿತು ಮಾತಾಡಿದರು. ಶ್ರೀ ಎ. ವರದರಾಜ ಬಲ್ಲಾಳರು ಹಿಂದೂ ಧರ್ಮದ ಕುರಿತೂ ಶ್ರೀ ಬಿ. ಎಂ. ಇದಿನಬ್ಬರವರು ಇಸ್ಲಾಂಧರ್ಮದ ಮೇಲೆಯೂ ಶ್ರೀ ಎಸ್. ಗೋವಿಚಂದ ರಾಯರು ಕ್ರೈಸ್ತ ಧರ್ಮದ ಬಗ್ಗೆಯೂ ಮಾತನಾಡಿ, ಆಯಾಧರ್ಮಗಳ ಮುಖ್ಯ ತತ್ವಗಳನ್ನು ವಿವೇಚಿಸಿದರು. ಶ್ರೀ ಬನ್ನಂಜೆ ರಾಮಾಚಾರ್ಯರು ವಿಶ್ವಧರ್ಮದ ಕುರಿತು ಭಾಷಣ ಮಾಡಿದರು. ಶ್ರೀ ಇದಿನಬ್ಬರವರು ರಾಜರತ್ನಂ ಕುವೆಂಪು ಮತ್ತು ಕಯ್ಯಾರ ಕಿಞ್ಞಣ್ಣ ರೈಯವರ ಕೆಲವೊಂದು ಕವನಗಳನ್ನು ವಾಚಿಸಿದರು.

ಡಾ! ಎಂ. ಆರ್. ಹೆಗ್ಡೆಯವರು ಸ್ವಾಗತ ಮತ್ತು ಅತಿಥಿಗಳ ಪರಿಚಯ ಮಾಡಿಕೊಟ್ಟರು. ಕೊನೆಯಲ್ಲಿ ಶ್ರೀ ಒ.ಅಂತ ಅಡಿಗರು ಧನ್ಯವಾದಗಳನ್ನು ಅರ್ಪಿಸಿದರು.

ವಿಮೂ ಪಂಚಾಯತ್ ಯೋಜನೆ—ಲ್ಯಾಂಡ್ ಇನ್‌ಪೂವರ್ಸ್ ಕಾರ್ಪೊರೇಷನ್‌ನ ಉಡುಪಿ ವಿಭಾಗದಲ್ಲಿ ಮೊತ್ತ ಮೊದಲನೇ ಪ್ರಯೋಗವಾಗಿ ಕಾರ್ಪೊರೇಷನ್‌ನ ಆರನೇ ವಾರ್ಷಿಕ ದಿನವಾದ ತಾ. 1—9—1962ರಂದು ಮಂಗಳೂರು ತಾಲೂಕಿನ ಕನ್ನಿಗೋಳಿಯಲ್ಲಿ ವಿಮೂ ಪಂಚಾಯತ್ ಯೋಜನೆಯನ್ನು ಪ್ರಾರಂಭಿಸಲಾಯಿತು. ಡೆವಲಪ್‌ಮೆಂಟ್ ಆಫೀಸರ್ ಶ್ರೀ ಬಿ. ಶ್ರೀನಾಥ ಹೆಗ್ಡೆಯವರು ಮುಖ್ಯ ಅತಿಥಿಗಳಿಗೆ ಮೂಲಾರ್ಪಣೆ ಗೈದ ಬಳಿಕ, ಉಡುಪಿ ವಿಭಾಗದ ಸೀನಿಯರ್ ಡಿವಿಜನಲ್ ಮೆನೇಜರ್ ಶ್ರೀ ಟಿ. ಆರ್. ಎ. ಪೈಯವರು ಸ್ವಾಗತ ಭಾಷಣ ಮಾಡುತ್ತಾ ಕನ್ನಿಗೋಳಿ ಪಂಚಾಯತ ಕ್ಷೇತ್ರದೊಳಗೆ ಇರುವ ಪ್ರತಿಯೋರ್ವ ವಿವಿಧಯೋಗ್ಯ ವ್ಯಕ್ತಿಯು ವಿಮೆ ಮಾಡುವುದೇ ಈ ಯೋಜನೆಯ ಉದ್ದೇಶವೆಂದೂ ಇದಕ್ಕಾಗಿ ವಿಮೂ ಕಾರ್ಯಕರ್ತರು ಮನೆಯಿಂದ ಮನೆಗೆ ವಿಮಾಸಂದೇಶವನ್ನೊಯ್ಯುವರೆಂದೂ ಹೇಳಿದರು. ಯೋಜನೆಯನ್ನು ಉದ್ಘಾಟಿಸಿದ ಡಾ! ಎಸ್. ಜಂ ಪಾ, ಎಂ. ಎಲ್. ಸಿ, ಇವರು ಈ ಉದ್ದೇಶವನ್ನು ಶ್ಲಾಘಿಸಿದರಲ್ಲದೆ ಜನರು ಅನಿವಾರ್ಯವಾದ ವೆಚ್ಚಗಳನ್ನು ಕಡಿಮೆ ಮಾಡಿ ತಮ್ಮ ಉಳಿತಾಯವನ್ನು ಜೀವ ವಿಮೆಯ ಪಾಲಿಸಿ ಕೊಂಡುಕೊಳ್ಳಲು ವಿನಿಯೋಗಿಸುವುದು ಕುಟುಂಬದ ಆರ್ಥಿಕ ಭದ್ರತೆಗೆ ಉತ್ತಮೋಪಾಯ ಎಂದರು.

ಗ್ರಾಮಸ್ಥರ ಪರವಾಗಿ ಡಾ. ಎಂ. ಎಸ್. ನಾಯಕ್, ಶ್ರೀ ಕೊಡಪ್ಪಾರು ಅನಂತ ಪದ್ಮನಾಭ ಉಡುಪ ಮತ್ತು ಶ್ರೀ ಬಿ ಗೋವಿಂದ ರಾಯರು ಮೂತನಾಡಿ ಜನರೆಲ್ಲರೂ ವಿಮೆಯು ಸಂಪೂರ್ಣ ಪ್ರಯೋಜನ ಪಡೆಯ ಬೇಕೆಂದು ಹೇಳಿದರು. ಅಧ್ಯಕ್ಷತೆ ವಹಿಸಿದ್ದ ಡಾ. ಸಂಜೀವನಾಥ ಎಂ. ಎಲ್. ಎ. ಇವರು ಕೋ ಪರೇಷನು ಕಳೆದ ಆರು ವರ್ಷಗಳಲ್ಲಿ ಸಾಧಿಸಿದ ಪ್ರಗತಿಯನ್ನು ಪ್ರಶಂಸಿದರಲ್ಲದೆ, ಗ್ರಾಮಸ್ಥರಿಗೆ ಜೀವವಿಮೆಯ ಸಂದೇಶವನ್ನು ಮುಟ್ಟಿಸುವುದಕ್ಕಾಗಿ ಕಾರ್ಪೊರೇಷನು ಪಡಬುತ್ತಿರುವ ಇಂಥ ಪ್ರಯತ್ನಗಳಿಂದ ಬೇಗನೆ ಅಧಿಕಾಭ್ಯುದಯ ಸಾಧಿಸಲ್ಪಡುವುದೆಂಬ ಆಶಿಸಿ, ಈ ಯೋಜನೆಗೆ ಶುಭವನ್ನು ಕೋರಿದರು. ವಿಜಂಟರಾದ ಶ್ರೀ ಕೆ. ಎನ್. ಮುಕ್ರುರಿ ಆಭಾರವನ್ನು ಸಿದರು.

ವಾರ್ತಾವೇದಿಕೆ

ಪಾಂಡಿಚೆರಿಯ ಭವಿಷ್ಯ

ಭಾರತದ ಸಂವಿಧಾನಸ್ಥೆ ಹದಿನಾಲ್ಕನೆಯ ತಿದ್ದುಪಡಿ ಮಸೂದೆಯೊಂದನ್ನು ಕೇಂದ್ರ ಗೃಹಮಂತ್ರಿ ಶ್ರೀ ಲಾಲ ಬಹಾದೂರ ಶಾಸ್ತ್ರಿಯವರು ಲೋಕ ಸಭೆಯಲ್ಲಿ ಮುಂದಿಟ್ಟಿದ್ದಾರೆ. ಕೇಂದ್ರಾಡಳಿತ ಪ್ರದೇಶಗಳಿಗೆ ಶಾಶ್ವತೀಯ ಸರಕಾರವನ್ನು ಸ್ಥಾಪಿಸಲು ಮತ್ತು ಲೋಕ ಸಭೆಯಲ್ಲಿ ಪಾಂಡಿಚೇರಿಗೆ ಪ್ರಾತಿನಿಧ್ಯವನ್ನು ಕೊಡಲು ಇದು ಉದ್ದೇಶಿಸಿದೆ. ವಿಧೇಯಕದಲ್ಲಿ ಪಾಂಡಿಚೇರಿಯನ್ನೂ ಸೇರಿಸಿರುವುದರಿಂದ ಕೇಂದ್ರವು ಅದನ್ನು ಮದ್ರಾಸ ರಾಜ್ಯದಲ್ಲಿ ವಿಲೀನಗೊಳಿಸಲು ಇಚ್ಛಿಸುತ್ತಿಲ್ಲವೆಂದು ಸ್ಪಷ್ಟವಾಗಿದೆ. ಈ ಪ್ರದೇಶದ ಭವಿಷ್ಯವನ್ನು ಮುಂದೆ ಅದೇ ನಿರ್ಣಯಿಸಿಕೊಳ್ಳುವುದು ಎಂಬುದಕ್ಕೆದೊಂದು ಪುಷ್ಟಿ, ಪಾಂಡಿಚೆರಿ ಕಾರೈಕಲ್, ಮಾಹೆ ಮತ್ತು ಯನಂ ಗಳೆಲ್ಲವನ್ನೂ ಒಂದಾಗಿಸಿ ಪಾಂಡಿಚೇರಿಯೆಂದು ಕರೆಯುವ ಬಗ್ಗೆಯೂ ವಿಧೇಯಕದಲ್ಲಿ ಉಲ್ಲೇಖವಿದೆ. ಫ್ರೆಂಚರು ತಮ್ಮ ವಸಾಹತುಗಳನ್ನು ಇತ್ತೀಚೆಗೆ ಕಾಯದೆ ಬದ್ಧವಾಗಿ ಭಾರತಕ್ಕೆ ಬಿಟ್ಟುಕೊಟ್ಟಿದ್ದರು.

ಜಗತ್ ಜನಸಂಖ್ಯೆ

ಸಂಯುಕ್ತರಾಷ್ಟ್ರ ಸಂಸ್ಥೆಯು ಕಲೆ ಹಾಕಿದ ಜನಸಂಖ್ಯೆಯ ಅಂಕೆ ಸಂಖ್ಯೆಗಳು ೧೯೬೦-೬೧ರಲ್ಲಿ ಪ್ರಪಂಚದ ಜನ ಸಂಖ್ಯೆಯು ಇದೀಗ ೩೦೦ ಕೋಟಿಯನ್ನು ಮುಟ್ಟಿದೆಯೆಂದು ಹೇಳುತ್ತವೆ. ಎಂದರೆ ಪ್ರತಿ ವರ್ಷ ಈ ಸಂಖ್ಯೆಯು ಸೇ. ೧.೭೮ ಪ್ಟು ಹೆಚ್ಚುತ್ತ ಬಂದಿದೆ. ಹತ್ತ ವರ್ಷಗಳ ಹಿಂದೆ ಒಂದು ಕಿಲೊ ಮೀಟರ ಪ್ರದೇಶದಲ್ಲಿ ೧೫೮ ಜನರು ವಾಸಿಸುತಿದ್ದರೆ, ಇಂದು ಅದು ೨೨೪ಕ್ಕೆ ಏರಿದೆ. ಕೇಂದ್ರ ಅಮೆರಿಕೆಯಲ್ಲಿ ಅತ್ಯಧಿಕ ಮತ್ತು ಉತ್ತರ ಹಾಗೂ ಪಶ್ಚಿಮ ಯುರೋಪಿನಲ್ಲಿ ಅತ್ಯಲ್ಪ ಪ್ರಮಾಣದಲ್ಲಿ ಈ ಏರಿಕೆಗಳು ಸಂದಿವೆ.

ಭಾಷಾವಾರು ರಾಜ್ಯಗಳು

ಒಂದು ಕಾಲದಲ್ಲಿ ಭಾಷಾವಾರು ರಾಜ್ಯಗಳ ಪ್ರಬಲ ಪುರಸ್ಕರ್ತರಾದ ಜಯಪ್ರಕಾಶ ನಾರಾಯಣರು ಈಗ ತನ್ನ ಅಭಿಪ್ರಾಯವನ್ನು ಬದಲಿಸಿದ್ದಾರೆ ರಾಜ್ಯ ಎಂಗಡಣೆ ನಡೆದುದು ತಪ್ಪು ಎಂದು ಅವರು ಹೇಳುತ್ತಾರೆ. ನಡೆದು ಹೋದ ಪ್ರಮೂದದ ಬಗ್ಗೆ ಹೆಚ್ಚು ಚಿಂತಿಸದೆ ಅದನ್ನು ಹೇಗಾದರೂ ಮೂಡಿ ಹೊಂದಿಸಿಕೊಂಡು ಹೋಗುವುದು ಆಗಬ್ಯವೆಂದೂ, ರಾಷ್ಟ್ರೀಯ ಏಕ್ಯಕ್ಕೆ ಇದೊಂದೇ ತಾರಕವೆಂದೂ ಅವರನ್ನುತ್ತಾರೆ ಭಾರತದಂತಹ ದೊಡ್ಡ ರಾಷ್ಟ್ರದಲ್ಲಿ ಭಿನ್ನಾಭಿಪ್ರಾಯವಿರುವುದೂ ಒಳ ಜಗಳಗಳು ನಡೆಯುತ್ತಿರುವುದೂ ಸ್ವಾಭಾವಿಕವಾಗಿದೆ. ಈ ವೈಪಮ್ಯಗಳನ್ನು ನಿವಾರಿಸುವುದರ ಹೆಸರಿನಲ್ಲಿ ಜನತೆಯು ಹಿಂಸಾಮಾರ್ಗಕ್ಕೆ ಇಳಿಯಬಾರದು; ಶಾಂತಿಯುತ ಮಾರ್ಗಾವರಣ ಮೂಡಿದರೆ ರಾಷ್ಟ್ರೀಯ ಏಕ್ಯ ಸಾಧಿಸಬಹುದು ಎಂದು ಅವರ ಅಭಿಪ್ರಾಯ.

ರಾಜ್ಯ ಸರಕಾರದ ಉತ್ಸಾಹ

ಯೋಜನೆಗಳ ಪ್ರಮಾಣವು ಬೆಳೆಯುತ್ತ ಬಂದಂತೆ ಕರಾಕಾರಣೆಯ ಪ್ರಮಾಣವೂ ಹೆಚ್ಚುತ್ತ ಬರುವುದು ಪರಿಪಾರ. ಮೂರನೆಯ ಪಾಂಚವಾರ್ಷಿಕ ಯೋಜನಾವಧಿಯಲ್ಲಿ ಹಣದ ಪೂರಯ್ಕೆ ಹೇಗೆ ಮಾಡಬೇಕೆಂಬ ಮುಂತಾದ ಬಗ್ಗೆ ಕರ್ನಾಟಕದ ಸರಕಾರಕ್ಕೆ ಎ. ಜಿ. ಆರ್. ಸಮಿತಿಯು ಹಲವಾರು ಸಲಹೆಗಳನ್ನು ಮಾಡಿತ್ತು. ಅವುಗಳಲ್ಲಿ ಒಂದನ್ನು ಸದಸ್ಯರಿರುವ ಮಂತ್ರಿ ಮಂಡಳಿಯು ಸಾಕು ಎಂಬುದೂ ಒಂದು. ನಮ್ಮ ಸರಕಾರ ಅದೊಂದನ್ನು ಬಿಟ್ಟು ಉಳಿದುವನ್ನೆಲ್ಲಾ ಕಾರ್ಯಾಚರಣೆಗೆ ತರುವ ಉತ್ಸಾಹ ತೋರುತ್ತಿದೆ.

ಶಿಕ್ಷಕರಲ್ಲ, ಭಿಕ್ಷುಕರು!

ರಾಷ್ಟ್ರಪತಿ ರಾಧಾಕೃಷ್ಣನ್ ಶಿಕ್ಷಕರಾಗಿ ಆ ಹುದ್ದೆಗೇರಿದವರು; ಅವರಲ್ಲಿ ಶಿಕ್ಷಕ ಕಲ್ಯಾಣದ ಬಗ್ಗೆ ತುಸುವಾದರೂ ಕಳಕಳಿಯಿರುವುದು ನ್ಯಾಯ. ಆದುದರಿಂದಲೇ ಅವರು ತಮ್ಮ ಜನ್ಮದಿನವನ್ನು ಶಿಕ್ಷಕರ ದಿನವೆಂದು ಆಚರಿಸುವ ಸಲಹೆಗೆ ಒಪ್ಪುಗೆ ನೀಡಿದರು. ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಶಿಕ್ಷಕರು ಗಣ್ಯಸ್ಥಾನೀಯ ಪಾತ್ರ ವಹಿಸ ಬೇಕಾಗುವುದರಿಂದ ಯೋಗ್ಯರನ್ನು ತರಬೇತಿಗೊಳಿಸುವುದಕ್ಕಾಗಿ ಮತ್ತು ಶಿಕ್ಷಣ ಸಮಸ್ಯೆಗಳ ಬಗ್ಗೆ ಸಂಶೋಧನೆ ನಡೆಸುವುದಕ್ಕಾಗಿ ಕೇಂದ್ರ ಸರಕಾರವು ರಾಷ್ಟ್ರೀಯ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸುತ್ತಿದೆ ದುರ್ದೈವದಿಂದ ಈ ಶಿಕ್ಷಕ ಕಲ್ಯಾಣ ಸಂಸ್ಥೆಗೆ ಶಿಕ್ಷಕರೇ ಇದ್ದವರೊಡನೆ ಇಲ್ಲದವರೊಡನೆ ಬೇಡಿ, ಕಾವೂ ವಂತಿಗೆಯೆತ್ತು ಮಕ್ಕಳಿಂದ ವರ್ಷಾಡವಸೂಲು ಮಾಡಿ ತಮ್ಮ ಕಲ್ಯಾಣವನ್ನು ತಾವೇ ಮಾಡಿಕೊಳ್ಳಬೇಕಾಗಿದೆ- ಸಮೂಹದಲ್ಲಿ ಮೊದಲೇ ಸತಿತರಾದ ಇವರು ನಿವೃತ್ತ ಸೈನಿಕರು, ಕ್ಷಯರೋಗಿಗಳು— ಮೊದಲಾದವರಿಗಾಗಿ ಈ ಮೊದಲೇ ಭಿಕ್ಷೆಯೆತ್ತಲು ಹೊರಟಿದ್ದಾರೆ; ಈಗ ತಮಗಾಗಿ ಬೇಡುವುದು ಅನಿವಾರ್ಯವೆನಿಸಿತೆ?

168

ಶಾಖೆಗಳು

ಪ್ರಗತಿಯ ಪಥದಲ್ಲಿ ಮುನ್ನಡೆಯುತ್ತಿರುವ ಸಿಂಡಿಕೇಟ್ ಬ್ಯಾಂಕಿಗೆ ಈಗ 168 ಶಾಖೆಗಳಿವೆ. ಹಿಂದೂ ಬ್ಯಾಂಕ್ ಕರೂರು ಮತ್ತು ಸೇಲಂ ಅಮ್ಮಾಪೇಟ್ ಸೆಂಗುಂದರ್ ಬ್ಯಾಂಕುಗಳು ಸಿಂಡಿಕೇಟ್ ಬ್ಯಾಂಕಿನೊಡನೆ ಸೇರ್ಪಡೆಗೊಂಡುದರಿಂದ ಮದ್ರಾಸು ರಾಜ್ಯದಲ್ಲಿ ಒಂಬತ್ತು ಶಾಖೆಗಳು ಹೊಸತಾಗಿ ಸೇರಿಕೊಂಡಿವೆ.

ಮದ್ರಾಸು ರಾಜ್ಯದಲ್ಲಿ ಶಾಖೆಗಳು:

1. ಮದ್ರಾಸು
2. ವೆಲ್ಲೂರು
3. ತಿರುಪತ್ತೂರು
4. ಸೇಲಂ
5. ಅಮ್ಮಾಪೇಟ್-ಸೇಲಂ
6. ಈರೋಡು
7. ಈರೋಡು-ಕೋರ್ಟು ಸ್ಟ್ರೀಟ್
8. ಕರೂರು
9. ತಿರುಚಿರಾಪಳ್ಳಿ
10. ಕೊಯಮುತ್ತೂರು
11. ಉದಮಲ್ಲಾ ಪೇಟೆ
12. ಡಿಂಡಿಗಲ್
13. ನಾಗಲ್ ನಗರ್ (ಡಿಂಡಿಗಲ್)
14. ದೇವಕೋಟ್ಟೈ

ವಿಶಾಲವಾಗಿ ಹಬ್ಬಿರುವ ಶಾಖೆಗಳ ಮೂಲಕ
ಅತ್ಯುತ್ತಮ ಬ್ಯಾಂಕಿಂಗ್ ಸೇವೆ

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಶರಾವತಿಯ ಜಲವಿದ್ಯುದ್ಯೋಜನೆ

ಭಾರತದ ಮೊತ್ತಮೊದಲ ಬೃಹತ್ ಜಲ ವಿದ್ಯುದಾಗಾರದ ಭೀಮಾಕಾರ

ಎತ್ತರೆತ್ತರವಾದ ಪರ್ವತಗಳನ್ನೂ ಬಂಡೆಗಲ್ಲುಗಳನ್ನೂ ಕೊರೆದು ನಮ್ಮ ಪೂರ್ವಜರು ಹಲವಾರು ಗುಹಾ ದೇವಾಲಯಗಳನ್ನು ನಿರ್ಮಿಸಿ ತಮ್ಮ ಕೌಶಲವನ್ನು ಈ ಹಿಂದೆ ವ್ಯಕ್ತಪಡಿಸಿದ್ದಾರೆ. ಒಂದೇ ಬಂಡೆಯಿಂದ ಮಹಾರಥವನ್ನು ನಿರ್ಮಿಸುವಂತಹ ಚಾತುರ್ಯತೆ ನಮ್ಮವರಲ್ಲಿ ಇತ್ತು. ಇದು ನಮ್ಮೆಲ್ಲರಿಗೊಂದು ಗೌರವದ ಸೊತ್ತು. ಇಂದು ಇದೇ ಮಾದರಿಯ ಪರ್ವತಗಳನ್ನು ಅಧುನಿಕ ಉಪಕರಣಗಳ ಮೂಲಕ ಕಡಿದು, ಕೊರೆದು ಆಧುನಿಕ ದೇವಮಂದಿರಗಳ ರಚನೆಯನ್ನು ನಾವು ಮಾಡುತಿದ್ದೇವೆ. ಬಾಕ್ರಾನಂಗಲ್, ಹಿರಾಕುಡ್, ಶರಾವತಿ ಮೊದಲಾದ ಅಧುನಿಕ ರಾಷ್ಟ್ರ ಪುನರ್‌ನಿರ್ಮಾಣ ಯೋಜನೆಗಳು ಮಂದಿರಗಳಿಗಿಂತ ಕಳಪೆಯಲ್ಲವೆಂದು ನಮ್ಮ ಪ್ರಧಾನ ಮಂತ್ರಿ ನೆಹೆರು ಹಿಂದೊಮ್ಮೆ ಉದ್ಗರಿಸಿದ್ದರು ಇದನ್ನು ನಾವು ಒಪ್ಪುವುದಾದರೆ ನಮ್ಮ ರಾಜ್ಯದ ಶರಾವತಿ ಕಣಿವೆಯಲ್ಲಿ ಇಂತಹ ಒಂದು ಬೃಹತ್ ದೇವಮಂದಿರ ರಚನೆಯಾಗುತ್ತಲಿದೆಯೆನ್ನಬಹುದು.

ಪಶ್ಚಿಮ ಘಟ್ಟಗಳೆಂದು ಕರೆಯಲ್ಪಡುವ ಸಹ್ಯಾದ್ರಿ ಪರ್ವತ ಮಾಲೆಯ ನಡು ಪ್ರದೇಶದಲ್ಲಿ ಶರಾವತಿಯು ಉಗಮಿಸುತ್ತಾಳೆ. ದಟ್ಟವಾದ ಅರಣ್ಯಪ್ರದೇಶದ ದುರ್ಗಮ ಕಣಿವೆಗಳ ನಡುವೆ ಭೋರೆಂದು ತುಂಬಿ ಹರಿಯುವ ಅಕೆ ಬೆಟ್ಟ ಬೆಟ್ಟುಗಳನ್ನು ನೆಗೆಯುವಾಗ, ಜೋಗದ ಬಳಿಯಲ್ಲಿ ೮೩೬ ಅಡಿ ಎತ್ತರದಿಂದ ಕೆಳಕ್ಕೆ ದುಮುಕುತ್ತಾಳೆ. ಇಷ್ಟೊಂದು ಉನ್ನತವಾದ ಜಲಪಾತವು ಪ್ರಪಂಚದಲ್ಲಿ ನಯಾಗರ ಮಾತ್ರವಿರುವುದು. ಶರಾವತಿಯು ಕೇವಲ ೦೪ ಮೈಲು ಉದ್ದಕ್ಕೆ ಹರಿದು ಕಾಸರಕೋಡು-ಹೊನ್ನಾವರದ ಬಳಿ ಅರಬ್ಬೀ ಸಮುದ್ರವನ್ನು ಕೂಡುತ್ತಾಳೆ ನದಿಯ ಉದ್ದಳತೆ ಕಿರಿಯದಾಗಿದ್ದರೂ ಅಕೆಯಲ್ಲಿ ಹರಿಯುವ ನೀರಿನ ಪ್ರಮಾಣ ಮಾತ್ರ ಹೆಚ್ಚಿದೆ. ವಿಪರೀತ ಮಳೆ ಸುರಿಯುವ ಮಲೆನಾಡಿನಲ್ಲಿ ಅಕೆ ಹುಟ್ಟುವುದೂ ಹರಿಯುವುದೂ ಅದಕ್ಕೆ ಕಾರಣವೆನ್ನಬಹುದು.

ವಿಜ್ಞಾನವು ಜಗತ್ತಿಗೆ ನೀಡಿದ ಮಾಜಾ ಕೊಡುಗೆಗಳಲ್ಲಿ ಅಧುನಿಕ ಬಲಭೀಮನೆನಿಸಿದ ವಿದ್ಯುಚ್ಛಕ್ತಿಯೊಂದು. ಇದು ಇಂಧನಗಳ ಮೂಲಕ ನಿರ್ಮಿಸಲ್ಪಡುವುದೆಂದು ಹಳೆಯ ಮಾತಾಯಿತು. ಜಲಶಕ್ತಿಯನ್ನು ಮಾನವ ಬುದ್ಧಿ ಮತ್ತೆಯಿಂದ ತನ್ನ ಲಾಭಕ್ಕೆ ಬಳಸಿಕೊಳ್ಳುವುದು ಇಂದು ಮನೆ ಮಾತಾಗಿದೆ. ಅಂತೆಯೇ ಶರಾವತಿಯು ಧುಮುಕುವ, ಹರಿಯುವ ಜಲಶಕ್ತಿಯ ಒಂದಂಶವನ್ನು ನಾವು ಈಗಾಗಲೇ ಬಳಸಿಕೊಳ್ಳುತಿದ್ದೇನೆ; ಆದರೆ, ಆ ಕೆಯಿಂದ ಇದಕ್ಕಿಂತಲೂ ಹೆಚ್ಚಿನ, ಅತಿ ಹೆಚ್ಚಿನ ಲಾಭಪಡೆಯುವುದು ಸಾಧ್ಯವೆಂಬುದರಿಂದ ಶರಾವತೀ ಯೋಜನೆಯು ರೂಪುಗೊಂಡಿದೆ. ಮೂರನೆಯ ಪಂಚವಾರ್ಷಿಕ ಯೋಜನಾಂತ್ಯದಲ್ಲಿ ಕೊನೆಗೊಳ್ಳಲಿರುವ ಈ ಉಪಕ್ರಮವು ವಿದ್ಯುದಭಾವದಿಂದ ನವೆಯುತ್ತಿರುವ ಕರ್ನಾಟಕಕ್ಕೆ ಬೇಕಷ್ಟು ವಿದ್ಯುತ್ತನ್ನು ಒದಗಿಸುವುದು ಎಂಬ ನಂಬುಗೆಯಿದೆ. ಈ ಯೋಜನೆಯು ಪೂರ್ತಿಗೊಂಡಾಗ ೧೨ ಲಕ್ಷ ಕಿಲೋವಾಟುಗಳಷ್ಟು ವಿದ್ಯುತ್ತು ಹೆಚ್ಚಿಗೆ ದೊರೆಯುವುದು. ಇದು ನಮ್ಮ ರಾಜ್ಯದಲ್ಲಿ ಈಗ ಉಪಲಭ್ಯವಿರುವ ವಿದ್ಯುತ್ತಿನ ಆರು ಪಾಲಾಗುವುದು.

ಶರಾವತಿ ಯೋಜನೆಯಲ್ಲಿ ತಯಾರಿಸಲಾಗುವ ವಿದ್ಯುತ್ತಿನ ಬೆಲ್ಚನ್ನು ಪ್ರತಿ ಕಿಲೋವಾಟಿಗೆ ರೂ. ೬೦೦ರಿಂದ ರೂ. ೭೦೦ರ ವರೆಗೆ ತಗಲುವುದು. ಆದುದರಿಂದ ಇಲ್ಲಿ ದೊರೆಯುವ ವಿದ್ಯುತ್ತು ಬಹಳ ಆಗ್ಗ ದರದಲ್ಲಿರುತ್ತದೆಯೆಂದು ಹೇಳಬಹುದು. ಅಮೆರಿಕೆಯ ಸಹಾಯದಿಂದ ನಿರ್ಮಿಸಲಾಗುತ್ತಿರುವ ಈ ಯೋಜನೆಗೆ ರೂ. ೪೪-೬ ಕೋಟಿಯ ಸಾಲವು ಈಗಾಗಲೇ ದೊರೆತಿದೆ. ಯೋಜನೆಯು ಎರಡು ಹಂತಗಳಲ್ಲಿ ಕೊನೆಗೊಳ್ಳಲಿದ್ದು ಮೊದಲನೆಯದಕ್ಕೆ ಆವಶ್ಯಕ ಸಾಮಗ್ರಿಗಳನ್ನು ಕೊಂಡುಕೊಳ್ಳಲು ಇದನ್ನು ಉಪಯೋಗಿಸಲಾಗುವುದು. ಎರಡನೆಯ ಹಂತದ ವೆಚ್ಚವನ್ನೂ ಅಮೆರಿಕೆಯು ಹೊರಲು ಸಿದ್ಧವಿದೆ. ಹೀಗೆ ಅಮೆರಿಕೆ-ಭಾರತಗಳ ಸ್ನೇಹ ಸಂಬಂಧವನ್ನು ಚಿರಂತನವಾಗಿರಿಸುವಲ್ಲಿ ಶರಾವತೀ ಜಲವಿದ್ಯುದ್ಯೋಜನೆಯು ಮಹತ್ವದ ಪಾತ್ರ ವಹಿಸುವುದು ಎಂದರೆ ಅತಿಶಯೋಕ್ತಿಯಲ್ಲ.

೧೯೫೨ರ ದಶಂಬರ ತಿಂಗಳಲ್ಲಿ ಶರಾವತಿ ಯೋಜನೆಯ ನಿರ್ಮಾಣ ಮತ್ತು ಅಗೆತಗಳ ಕಾರ್ಯವು ಪ್ರಾರಂಭವಾಯಿತು. ಲಿಂಗನೆ ಮಕ್ಕಿಯಂತಿ ಒಂದು ಆಣೆಕಟ್ಟನ್ನು ಹಾಕಿ ದೊಡ್ಡ ಜಲಾಶಯ-ವೊಂದು ನಿರ್ಮಾಣಗೊಳ್ಳುತ್ತಿದೆ. ಇಲ್ಲಿಂದ ನೀರು ಮಳಲಿ ಪರ್ವತದಲ್ಲಿ ಕೊರೆದ ಸುರಂಗದ ಮೂಲಕ ವತ್ತೊಂದು ಜಲಾಶಯವನ್ನು ಸೇರುವುದು. ತಲಕಳಲೆ ಆಣೆಕಟ್ಟಿರುವಲ್ಲಿಯೇ ಈ ಎರಡನೆಯ ಜಲಾಶಯವಿದೆ. ಇಲ್ಲಿಂದ ನೀರು ಸುರಂಗಗಳ ಮೂಲಕ ವೊಡೇನ ಬೈಲಿನ ಎರಡು ಸರೋವರಗಳನ್ನು ಸೇರುವುದು. ಅಲ್ಲಿ ೧೦ ಉಕ್ಕಿನ ಕೊಳವೆಗಳ ಮೂಲಕ ಆನೆಬೈಲ್ ಪ್ರದೇಶಕ್ಕೆ ಹೋಗುವುದು. ಅಲ್ಲಿ ೧೦ ಟರ್ಬಾಯಿನ್‌ಗಳನ್ನು ನಡೆಸಿದ ನಂತರ ಈ ನೀರು ಮರಳಿ ನದಿಯನ್ನು ಕೂಡುವುದು. ನೀರು ನದಿಯನ್ನು ಸೇರುವಲ್ಲಿ ಮತ್ತೊಂದು ಆಣೆಕಟ್ಟು ಕಟ್ಟುವ ವಿಚಾರವೂ ಇದೆ.

ಲಿಂಗನಮಕ್ಕಿ ಆಣೆಕಟ್ಟಿನ ಒಂದಂಶ ಮಣ್ಣಿನಿಂದ ಮತ್ತೊಂದು ಭಾಗ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿತವಾಗಿವೆ ಮುಂದಿನ ಜೂನ್ ತಿಂಗಳೊಳಗೆ ಈ ಕಟ್ಟಡ ಮತ್ತು ನೀರು ತಡೆಯುವ ಸರೋವರಗಳ ಕಾರ್ಯ ಪೂರ್ಣವಾಗುವುದು. ಕಟ್ಟಡವು ೧೫೫ ಮೈಲು ಉದ್ದ ಮತ್ತು ಬುಡದಿಂದ ೨೩೭ ಅಡಿ ಎತ್ತರವಿರುವುದು. ಈಗಾಗಲೇ ೧ ಮೈಲುದ್ದದಲ್ಲಿ ೨೦೦ ಅಡಿ ಎತ್ತರದ ಕಟ್ಟೆ ಎದ್ದು ನಿಂತಿದೆ. ನುಂದಿನ ಮೇ ತಿಂಗಳೊಳಗೆ ಯೋಜನೆಯ ಮೊದಲ ಘಟ್ಟದಲ್ಲಿ ನಿರ್ಧರಿತವಾದ ಎರಡು ಟರ್ಬಾಯಿನ್‌ಗಳನ್ನು ತಿರುಗಿಸಲು ಸಾಕಾಗುವಷ್ಟು ನೀರು ಇಲ್ಲಿ ಸಂಗ್ರವಾಗುವುದು.

ತಲಕಳಲೆಯ ಆಣೆಕಟ್ಟು ೧೫೪೦ ಅಡಿ ಉದ್ದ ಮತ್ತು ೨೮೫ ಅಡಿ ಎತ್ತರವಿರುವುದು. ಇವರ ಕೆಲಸ ಈಗಾಗಲೇ ಮುಕ್ಕಾಲಂಶ ಮುಗಿಯುತ್ತ ಬಂದಿದೆ. ಈ ವರ್ಷದ ಅಂತ್ಯದಲ್ಲಿ ಇದರ ಕೆಲಸವು ಸಂಪೂರ್ಣವಾಗುವುದು. ಆಸ್ಪರಲ್ಲಿ ಮಳಲಿ ಮತ್ತು ಒಡೇನ ಬೈಲ್ ಸುರಂಗ ಮಾರ್ಗಗಳ ಕೆಲಸವೂ ಪೂರ್ತಿಯಾಗುವುದು. ಒಟ್ಟು ಬೇಕಾಗುವ ೬,೦೦೦ ಟನ್ ಉಕ್ಕಿನಲ್ಲಿ ೨,೦೦೦ ಟನ್ನುಗಳ ಪೈಪುಗಳು ಈಗಾಗಲೇ ಸಿದ್ಧವಾಗಿವೆ. ಮಳೆಗಾಲ ಮುಗಿದ ಬಳಿಕ ನವಂಬರ ತಿಂಗಳಲ್ಲಿ ಇವುಗಳನ್ನು ಪ್ರಯೋಗಕ್ಕೆ ಗುರಿ ಮಾಡಲಾಗುವುದು. ಜನರೇಟರ್ ಬಂದಾಗಿದೆ; ವಿದ್ಯುದಾಗಾರದ ಕಾರ್ಯ ಕೊನೆ ಗೊಂಡೊಡನೆಯೇ ಅಲ್ಲಿದನ್ನು ಸ್ಥಾಪಿಸಲಾಗುವುದು. ವಿದ್ಯುತ್ತು ಉತ್ಪಾದನೆಗೆ ತೊಡಗಿದ ನಂತರ ಅದನ್ನು ಬೆಂಗಳೂರಿಗೆ ಒಯ್ಯಲು ೨೫೦ ಮೈಲುದ್ದದ ಲೈನನ್ನೂ ಹಾಕುವ ಕೆಲಸ ಇಷ್ಟರಲ್ಲಿಯೇ ಪ್ರಾರಂಭವಾಗಿದೆ.

ಯೋಜನೆಯ ಪ್ರಮಾಣವನ್ನು ಲೆಕ್ಕ ಹಾಕಿದರೆ ಇದರ ಬೃಹದಾಕಾರತೆಯ ಪರಿವೆಯೂಗುವುದು. ೩೩ ಪರ್ಗ ಮೈಲು ಪ್ರದೇಶದಲ್ಲಿ ೩೦,೦೦೦ಕ್ಕೂ ಮೇಲ್ಪಟ್ಟ ಕೆಲಸಗಾರರು ಕೂಡಿ ೧೧ ಕೋಟಿ ಘನ ಅಡಿ ಮಣ್ಣಿನ ಕೆಲಸವನ್ನು ಮಾಡುತಿದ್ದಾರೆ ಕುಶಲನಾದ ಕೆಲಸಗಾರನು ದಿನಂ ಪ್ರತಿ ಹೆತ್ತು ರೂಪಾಯಿಗಳನ್ನು ಸಂಪಾದಿಸಬಲ್ಲನು. ಮೇಸ್ತ್ರಿಗಳು ಉಳಿದೆಡೆಗಿಂತ ಮುಪ್ಪಟ್ಟು ಗಳಿಸಬಲ್ಲರು. ಲೋರಿ ತೊಳೆಯುತಿದ್ದವನೂ ಇಲ್ಲಿ ಬಂದ ನಂತರ ಲೋರಿಗಳ ಮೂಲಕನಾಗಿ ಹೋದ ಪ್ರಸಂಗಗಳು ಕೆಲವಿವೆ. ಕೂಲಿಗಾರರ ವಸತಿಯು ಭಾರತದ ಒಂದು ನಿಜ ರೂಪ. ಇಲ್ಲಿ ಪಂಜಾಬಿ, ತಮಿಳು, ತೆಲುಗು, ಮಲೆಯಾಳಿ, ಕನ್ನಡ, ಗುಜರಾತಿ, ಲಂಬಾಣಿ, ಬಂಗಾಳಿ ಮತ್ತು ಹಿಂದೀ ಭಾಷೆಗಳ ಧ್ವನಿ ಸದಾ ಕೇಳಿ ಬರುತ್ತದೆ. ಬೇರೆ ಬೇರೆ ಮತ ಸಂಪ್ರದಾಯದವರ ಮಂದಿರಗಳಿವೆ. ಜನತೆಗಾಗಿ ಆಸ್ಪತ್ರೆ, ಮಕ್ಕಳಿಗಾಗಿ ಪಾಠ ಶಾಲೆಗಳಿವೆ. ಶಾಲೆಗಳಲ್ಲಿ ಮಕ್ಕಳಿಗೆ ಧನೋರ್ಧ ಉಪಾಹಾರದ ವ್ಯವಸ್ಥೆಯಿದೆ.

ಶರಾವತೀ ಯೋಜನಾ ಪ್ರದೇಶದಲ್ಲಿ ವರ್ಷದ ಮೂರು ತಿಂಗಳು ಮಳೆಗಾಲ. ವರ್ಷಾವಧಿ ಸಾಮಾನ್ಯ ೩೦೦ ಅಂಗುಲಗಳಷ್ಟು ಮಳೆ ಸುರಿಯುತ್ತಿದೆ. ಆದುದರಿಂದ ಕೆಲಸ ಮಾಡಲು ವರ್ಷದಲ್ಲಿ ೨೦೦ ದಿನಗಳು ಮಾತ್ರ ಸಿಗುತ್ತವೆ. ಕಳೆದ ವರ್ಷ ೩೫ ತಿಂಗಳಲ್ಲಿ ೩೨೦ ಅಂಗುಲ ಮಳೆ ಸುರಿಯಿತು. ಹಾಗಾಗಿ ಯೋಜನಾ ಕ್ಷೇತ್ರದ ೪೦ ಮೈಲುದ್ದದ ರಸ್ತೆಯ ಮೇಲೆ ಕೆಲಸ ಸ್ಥಗಿತಗೊಂಡಿತು.

ಮಾನವ ನಿರ್ಮಿತ ವಿಶಾಲ ಜಲಾಶಯದಿಂದಾಗಿ ಸುಮಾರು ೬೬ ಸಾವಿರ ಎಕ್ರೆ ಭೂಮಿ ಜಲಮಗ್ನವಾಗುವುದು. ಇಲ್ಲಿರುವ ೧೫೫ ಹಳ್ಳಿಗಳ ೩,೪೪೬ ಕುಟುಂಬಗಳನ್ನು ಬೇರೆಡೆ ಪುನರ್ವಾಸಗೊಳಿಸಬೇಕಾಗಿ ಮಾಡಬೇಕು ಸರಕಾರವು ಅವರನ್ನು ಅನ್ಯತ್ರ ಒಯ್ಯುವ ವರೆಗೆ ಅವರು ಅಲ್ಲಿಯೇ ಕೆಲಸ ಮಾಡಿಕೊಂಡಿರುತ್ತಾರೆ. ಪ್ರತಿ ಮೈ ತರಿಗೂ ಎರಡೆರಡು ಎಕ್ರೆ ಜಮೀನನ್ನು ಪುಕ್ಕಟೆಯಾಗಿ ಬೇರೆಡೆ ಕೊಡಲಾಗುವುದು ಅಲ್ಲದೆ ಹೊಸ ಮನೆ ಕಟ್ಟಿಕೊಳ್ಳಲು ಸಾಲ ಮತ್ತು ಗ್ರಾಮೋದ್ಯೋಗ, ಕೃಷಿಗಳ ಬೆಳವಣಿಗೆಗೆ ಸಹಾಯವನ್ನೂ ನೀಡಲಾಗುವುದು.

ಭಾರತದಲ್ಲಿಯೇ ಮೊತ್ತಮೊದಲಿಗೆ ೧೯೦೨ರಲ್ಲಿ ಜಲವಿದ್ಯುತ್ತಿನ ಉತ್ಪಾದನೆ ನಮ್ಮ ರಾಜ್ಯದಲ್ಲಿ ಆಗಿತ್ತು. ೧೯೬೬ರ ಹೊತ್ತಿಗೆ ದೇಶದ ಅತಿ ದೊಡ್ಡ ಜಲವಿದ್ಯುದಾಗಾರವನ್ನು ಸಂಪೂರ್ಣಗೊಳಿಸುವ ಆಶೆ ನಮ್ಮ ರಾಜ್ಯಕ್ಕಿದೆ

'ನಚಿಕೇತ'ರು ಬರೆದ ಭಾವಪೂರ್ಣ ಕಾದಂಬರಿ

ಭಾವಾರ್ಚನೆ

ಸುಮಧುರ ಗಂಭೀರ ಪರಿಣಾಮವನ್ನುಂಟುಮಾಡುವ
ಸರಳ ಶೈಲಿಯ ಸೂತನ ಕಾದಂಬರಿ.

ಆಕರ್ಷಕ ಮುಖಪತ್ರ. ಬಿಳಿ ಕಾಗದ.
120 ಪುಟಗಳು. ಒಂದೂಕಾಲು ರೂಪಾಯಿ ಬೆಲೆ.

ಒಂದೂವರೆ ರೂಪಾಯಿ ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ಪ್ರಕಾಶಕರು: ನವಯುಗ ಎಂಟರ್‌ಪ್ರೈಸಸ್ ಲಿ., ಉಡುಪಿ.
ಮಾರಾಟಗಾರರು: ನವಭಾರತ ಬುಕ್ ಡಿಪೋ, ಉಡುಪಿ.

ನವಯುಗ
ರಾಷ್ಟ್ರೀಯ ವಾರಪತ್ರಿಕೆ
ಉಡುಪಿ

ಜಾಹೀರಾತು ದರಗಳು:
ನಿಯಮಿತ (ಕಂಟ್ರಾಕ್ಟ್)
ಕಲಂ ಇಂಚಿಗೆ ರೂ. 2-50
ಅನಿಯಮಿತ (ಕೆಜುವಲ್)
ಕಲಂ ಇಂಚಿಗೆ ರೂ. 3-50

ಚಂದಾ:
ವಾರ್ಷಿಕ ಚಂದಾ (ಅಂಚೆವೆಚ್ಚ ಸೇರಿ) ರೂ. 6-75
ಪ್ರತಿ ಪ್ರತಿ ರೂ. 0-13

ಚಂದಾಹಣವನ್ನಾಗಲೀ ಜಾಹೀರಾತಿನ ಬಾಬಲಿಗನ್ನಾಗಲೀ ಸಿಂಡಿಕೇಟ್ ಬ್ಯಾಂಕಿನ ಯಾವುದೇ ಶಾಖೆಯಲ್ಲಿ ಯಾವ ಖರ್ಚೂ ಇಲ್ಲದೆ 'ನವಯುಗ'ದ ಖಾತೆಗೆ ಜಮೆ ಮಾಡುವ ಸೌಕರ್ಯವಿರುವುದು.

ಕುದ್ದ ಹರಟೆ

'ಇನ್‌ಫ್ಲುಯೆನ್ಸ್'ಗೆ ಹೋದೆ, 'ಇನ್‌ಫ್ಲುಯೆಂಜಾ' ತಂದೆ

ಶ್ರೀಮತಿ ದೇವಕಿ ಎಂ. ಶೆಟ್ಟಿ, ಬೀರೂರು

ಪಿ. ಯು. ಸಿ.ಯಲ್ಲಿ ಮಗನೇನೋ ಫಸ್ಟ್ ಕ್ಲಾಸ್‌ನಲ್ಲಿಯೇ ಪಾಸಾದ. ಮುಂದೇನು? ಎಂಬ ಪ್ರಶ್ನೆ ಎದ್ದುನಿಂತಿದೆ. ದುಡ್ಡಿನ ಪ್ರಶ್ನೆಯಲ್ಲಿ. ಈಗಿನ ಕಾಲದಲ್ಲಿ ಬಿ. ಎ. ಅಥವಾ ಬಿ. ಎಸ್ಸ್. ಸಿ. ಗಳಿಗೆ ಬೆಲೆ ಕಾಣುವುದಿಲ್ಲ. ಮುಂದೆ ಓದಿಸುವ ಇಚ್ಛೆ ಇದ್ದವರು ಮೆಡಿಕಲ್, ಅಥವಾ ಇಂಜಿನಿಯರಿಂಗ್‌ಗೇ ಕಳಿಸಬೇಕು. ಏನಾದರೂ 'ಹೋಸ್ಸ್' ಇರುವುದಾದರೆ ಈ ಎರಡು ಕೋರ್ಸ್‌ಗಳಲ್ಲಿ.

ಆದರೆ ಕೆಲಸ ಸಿಕ್ಕುವುದಕ್ಕಿಂತಲೂ ಸೀಟು ಸಿಗುವುದೇ ಕಷ್ಟವಾಗಿದೆ. ಮೆರಿಟ್ ಮೇಲೆ ಸೀಟು ಎನ್ನುತ್ತಾರೆ. ಆದರೆ ಹೆಚ್ಚಿನವರು ಮೆಂಟ್ಯೂ ಇಲ್ಲ ಗಿರಿಟ್ಯೂ ಇಲ್ಲ, ಎಲ್ಲ 'ಇನ್‌ಫ್ಲುಯೆನ್ಸ್'ನ ಮೇರೆಯೇ ಸೀಟುಗಳು ಎಂದು ಹೆದರಿಸುತ್ತಾರೆ. ಹೌದು. ಒಂದೊಂದೇ ಫರ್ಟಿಸೆಗಳನ್ನು ಕೆಲವಾರು ವರುಷಗಳಂದ ಪರಿತೀಲಿಸುವಾಗ ನಿಜವಾದ ಯೋಗ್ಯತೆ ಇದ್ದವರಿಗೆ ಎಲ್ಲಿಯೂ ಸ್ಥಾನ ಮಾನ ಸಿಕ್ಕಿದ್ದು ಕಾಣುವುದಿಲ್ಲ. ಅಯೋಗ್ಯರನೇಕರು ಯೋಗ್ಯರನ್ನು ಮೆಟ್ಟಿ ನಿಂತಿರುವುದೇ ಕಾಣುತ್ತಿದೆ. ಆತಿ ದಡ್ಡ ವಿದ್ಯಾರ್ಥಿಯೂ ಇನ್‌ಫ್ಲುಯೆನ್ಸ್ ಇದ್ದರೆ I ನಲ್ಲಿ I ಆಗಿ ಪಾಸಾಗುತಿದ್ದಾನೆ.

ನನ್ನ ಮಗನಿಗೆ ಮೆರಿಟ್ಟೇನೋ ಇದೆ. ಆದರೆ ನನಗೇ ಇಲ್ಲವಲ್ಲ ಮೆರಿಟ್ಟೂ. ಇಲ ಕೆಲವರು ಮೆರಿಟ್ಟಿದ್ದವರೂ ಇನ್‌ಫ್ಲುಯೆನ್ಸ್‌ನ ಮೇಲೆಯೇ ರಾಜ್ಯ ಸೂತ್ರವನ್ನು ನಡೆಸುತ್ತಿರುವ ಕಾಲವಿದಾಗಿರುವಾಗ ಮೆರಿಟ್ಟಿರುವ ವಿದ್ಯಾರ್ಥಿಗಳ ಅವಶ್ಯಕತೆಯೂ ಕಾಣುವುದಿಲ್ಲವೆಂದು ಕಾಣುತ್ತದೆ ಅವರಿಗೆ. ಯಾವುದು ಏನಾದರಾಗಿರಲಿ, ನನಗೆ ಬೇಕಾಗಿರುವುದು ನನ್ನ ಮಗನಿಗೆ ಮೆಡಿಕಲ್‌ನಲ್ಲಿ ಒಂದೇ ಒಂದು ಸೀಟು ನನಗಿರುವ ಒಂದೇ ಉಪಾಯ ವೆಂದರೆ ಯಾರಾದರೂ ಪ್ರಭಾವೀ ವ್ಯಕ್ತಿ ಯೊಬ್ಬರನ್ನು ಹಿಡಿದು ಸೀಟು ಪಡೆಯುವುದು. ಅಂತಹವರೆಲ್ಲ ಯಾರು? ಇಲೆಕ್ಷನ್ನಿಗೆ ಮೊದಲು ನಿನಗೆ ಬೇಕಾದ ಸಹಾಯವೆಲ್ಲವನ್ನೂ ಮಾಡುತ್ತೇನೆಂದು ಕೈ ಮೇಲೆ ಕೈ ಇಟ್ಟು ಭಾಷೆ ಇತ್ತವರೊಬ್ಬರು ಈಗ ಸ್ವತಃ ಮಂತ್ರಿಗಳೇ ಆಗಿರುವರಲ್ಲ! ಅವರನ್ನು ಹಿಡಿಯುವುದು. ಅರುನೂರಾ ಇಪ್ಪತ್ತೈದು ಓಟುಗಳೂ ೫೦೦ ರೂ. ಗಳೂ ಅವರಿಗಾಗಿ ನನ್ನ ಶ್ರಮವಾಗಿತ್ತು. ತಿರುಪತಿ ತಿಮ್ಮಪ್ಪನನ್ನು ಧ್ಯಾನಿಸುತ್ತಿ ನನ್ನಂತಹ ಏಳೆಂಟು ಮಹಾನುಭಾವರನ್ನು ಬುಟ್ಟಿಗೆ ಹಾಕಿಕೊಂಡವರವರು. ಅಂತಹ ದೇವಭಕ್ತರಾದ ದೇವಭಕ್ತರು ಸಹಾಯಮಾಡದೆ ಇರಲಾರರೆಂದೇ ನನ್ನ ಮನಸ್ಸು ಒತ್ತಿ ಒತ್ತಿ ಹೇಳುತ್ತಿದೆ.

ಸರಿ ಮತ್ತೇನು ಯೋಚನೆ ಯೋಚಿಸಿ ತಲೆ ಕೆಡಿಸಿಕೊಳ್ಳುವ ಆಗತ್ಯವೇ ಕಾಣುವುದಿಲ್ಲ. ನಾನು ನಮ್ಮ ಹಳ್ಳಿಯ ಒಬ್ಬ ಪ್ರಭಾವೀ ವ್ಯಕ್ತಿ ಇನ್ನೊಮ್ಮೆ ನ್ಯೂ ಅವರನ್ನೇ ಮಂತ್ರಿಯಾಗಿ ಮಾಡುವ ಹಕ್ಕು ನನಗಿದೆ. ನನ್ನನ್ನು ಅವರು ಮಿತಿಮೀರಿ ಕೈ ಬಿಡಲಾರರು. ಇನ್ನೇನು ನನ್ನ ಮಗನಿಗೆ ಸೀಟು ಸಿಕ್ಕಂತೆಯೇ ಜೊತೆಗೆ ಬೆಂಗಳೂರು ನೋಡಿದಂತಾಗುತ್ತದೆ. ಆ ಮಹಾನು ಭಾವರಾದ ಮಾನ್ಯಮಂತ್ರಿಗಳು ನಾನು ಮಾಡಿರುವ ಉಪಕಾರಕ್ಕಾಗಿ ತಮ್ಮ ಮನೆಗೇ ಆಜ್ಞಾಪನವಿತ್ತಿರುವರು!

ಮಗನಿಗೂ; ನನಗೂ ಒಳ್ಳೆಯ ನಾಲ್ಕು ಜತೆ ಡ್ರೆಸ್ಸು ಹೊಲಿಸಿದೆ. ಮುನ್ನೂರು ರೂಪಾಯಿಗಳನ್ನು ಪಾಕೇಟಿನಲ್ಲಿಟ್ಟುಕೊಂಡೆ. ಬೆಂಗಳೂರಿಗೆ ಮಗನೊಡನೆ ವೆಟ್ಟಗೆ ಕಟ್ಟಿದೆ. ಏನೋ ಸಹಾಯ ಯಾಚಿಸಲಿಕ್ಕೆ ಹೋಗುವ ನಾನು ಅವರ ಮನೆಯಲ್ಲಿಯೇ ಒಕ್ಕರಿಸುವುದು ಸರಿ ಕಾಣಲಿಲ್ಲ. ಹೋಟೆಲ್ ಒಂದರಲ್ಲಿ ರೂಮು ಹಿಡಿದೆ. ಮಂತ್ರಿಗಳು ಬಹಳ ಒತ್ತಾಯ ಮಾಡಿದರೆ ಅವರ ಅಗ್ರಹದ ಮೇರೆಗೆ ಒಂದು ದಿನ ಅವರಲ್ಲಿ ನಿಲ್ಲುವುದು ಎಂದು ಯೋಚಿಸಿದೆ. ಮರುದಿನ ೫ ಗಂಟೆಗೇ ಎದ್ದೆವು. ಹೊಸ ಬಟ್ಟೆಗಳನ್ನು ತೊಟ್ಟುಕೊಂಡು ತಂದೆ-ಮಗ ನಾವಿಬ್ಬರೂ ಬಾಡಿಗೆ ಟ್ಯಾಕ್ಸಿಯೊಂದರಲ್ಲಿ ಮಾನ್ಯ ಮಂತ್ರಿಗಳ ಮನೆಗೆ ಹೋದೆವು—ಸರಿಯಾಗಿ ೯ ಗಂಟೆಗೆ.

ಆವರ ಮನೆಯು ಎದುರಿನ ಪಡಸಾಲೆಯಲ್ಲಿ ಜನ ತುಂಬಿದ್ದರು. ನಾನು ಸೀದಾ ಡ್ರೋಯಿಂಗ್ ರೂಮಿನಲ್ಲಿ ಹೋಗಿ ಕುಳಿತುಕೊಳ್ಳಬೇಕೆಂದಿದ್ದವನು ಅಲ್ಲಿ ನನಗಿಂತ ಲೂ ಹಿರಿಯರಾದವರು ಬೆಂಚುಗಳ ಮೇಲೆ ಕಣ್ಣು ಕಣ್ಣು ಕುರ್ಚಿಗಳ ಮೇಲೆ ಕುಳಿತು ಮೂತಾಡಿತ್ತಿರುವುದನ್ನು ನೋಡಿ ನಾನೂ ಒಳಗೆ ಹೋಗುವ ಧೈರ್ಯವಿಲ್ಲದೆ ಅಲ್ಲಿಯೇ ಕುಳಿತೆ ಕೆಲವರ ಕೈಗಳಲ್ಲಿ ಅವರವರ ಪರಿಚಯ ಪತ್ರಗಳು (ಆಚ್ಚು ಹಾಕಿಸಿದ್ದು) ಇದ್ದವು ನನ್ನಲ್ಲಿ ಅವೂ ಇರಲಿಲ್ಲ. ಎಲ್ಲರೂ ತಾವು ಮಂತ್ರಿಗಳಿಗೆ ಇಲೆಕ್ಷನ್‌ನಲ್ಲಿ ಮಾಡಿದ್ದ ಸಹಾಯವನ್ನು ಬಣ್ಣ ಕಟ್ಟಿ ಒಬ್ಬರೊಡನೊಬ್ಬರು ಹೇಳಿಕೊಳ್ಳುತ್ತಿದ್ದರು. ಲೆಕ್ಕ ಮಾಡಿದೆ. ಮೂವತ್ತೆಂಟು ತಂದೆಗಳೂ, ಮೂವತ್ತೆಂಟು ಪಿ. ಯು.ಸಿ ವಿಫಲ ಮಾಡಿದ್ದವರಂದಿರೂ ಇದ್ದರೆ. ನಾವು ಕಂದೆ-ಮಗ ಸೇರಿದರೆ ಮೂವತ್ತೊಂಭತ್ತು. ವಿಸಿಟಿಂಗ್ ಕಾರ್ಡುಗಳನ್ನು ಬಾಗಿಲು ಕಾಯುವವ ತೆಗೆದುಕೊಳ್ಳಲು ಒಪ್ಪುತ್ತಿರಲಿಲ್ಲ. ಬೇಗೆಯುವರು ಬರುತ್ತಾರೆ ಇದು ನನ್ನ ಕೆಲಸವಲ್ಲ ಎನ್ನುತ್ತಿದ್ದ ಗಂಟೆ ಹತ್ತಾಯಿತು. ಮಂತ್ರಿಗಳ ದರ್ಶನವೇ ಇಲ್ಲ' ಹನ್ನೊಂದಾಯಿತು. ಕೂಡಲಿಕೆ ಬರುತ್ತಾ ಇತ್ತು, ಸರಿಯಾಗಿ ಹನ್ನೆರಡು ಗಂಟೆಗೆ ಒಳಗಿಂದ ಒಬ್ಬ ಆದೂ ಜವಾನ ಬಂದು "ಇವತ್ತು ಮಂತ್ರಿಗಳಿಗೆ ಪುರುಸೊತ್ತಿಲ್ಲ ನಾಳೆ ಬನ್ನಿ" ಎಂದ. ಇಲೆಕ್ಷನ್‌ನಲ್ಲಿ ಸಹಾಯ ಮಾಡಿದವರಿಲ್ಲರ ಕವಾಳಕ್ಕೆ ಹೊಡೆದಂತಾಗಿತ್ತು ಅವನ ಮಾತು.

ಆದರೂ ಸಹನೆಯೊಂದಿದ್ದರೆ ಆ ಬರುವ ನಾಳೆಯಾದರೂ ಕೆಲಸ ಸಾಧಿಸಿ ಕೊಟ್ಟೇ ಕು ಎಂದು ಮತ್ತೆ ನಮ್ಮ ಬಾಡಿಗೆಯ ರೂಮುಗಳಿಗೆ ಹೊದೆವು. ಅಂದು ಬೇಸರ ಕಳೆಯಲು ಸಿನೆಮಾ, ಸರ್ಕಸ್ ಎಲ್ಲ ಆಯಿತು

ಆದರೆ 'ಇವತ್ತು ಮಂತ್ರಿಗಳಿಗೆ ಪುರುಸೊತ್ತಿಲ್ಲ ನಾಳೆ ಬನ್ನಿ" ಎನ್ನುವ ಆ ಒಬ್ಬನೇ ಜವಾನನ ಆ ಒಂದೇ ಒಂದು ನಾಕ್ಯ ಬಿಡದ ಆರು ದಿನಗಳ ತನಕ ಸಾಗಿತು. ಆರು ದಿನಗಳಲ್ಲಿ ಮಂತ್ರಿಗಳ ಮನೆಗೆ ಆ ಟೆಯುವವ ಸಂಖ್ಯೆ ಮೂವತ್ತೊಂಭತ್ತರಿಂದ ಹತ್ತೊಂಭತ್ತಕ್ಕೆ ಇಳಿದಿತ್ತು.

ಒನೇ ದಿನ ಈ ಒಂದು ವಾಕ್ಯವನ್ನು ಹೊತ್ತು. ನಾನು ಹೋಟೆಲಿಗೆ ಹಿಂತಿರುಗಿದಾಗ ಗಂಟಲು ಕಟ್ಟಿತ್ತು ಉಸುರು ಬಿಡಲೂ ತೆಗೆದುಕೊಳ್ಳಲೂ ಬಹು ಪ್ರಯಾಸ ವೆನಿಸಿತ್ತಿತ್ತು.

ಹಣವೂ ಕರಗಿತ್ತು. ಕೇವಲ ಮೂವತ್ತೊಂಭತ್ತು ರೂಪಾಯಿ ಉಳಿದಿತ್ತು. ಏಳಲೂ ಬಾರದಷ್ಟು ಸುಸ್ತಾಗಿದ್ದೆ ನಾನು. ನೆನ್ನ ನಿರಾತ್ಸಾಹಿ ಮಗ ನನ್ನನ್ನು ಒಬ್ಬ ಡಾಕ್ಟರ ಹತ್ತಿರ ಕರಕೊಂಡು ಹೋಗಿ ತೋರಿಸಿದ. ಆವರು ಪರೀಕ್ಷಿಸಿ—

"ಇದು ಇನ್‌ಫ್ಲುಯೆಂಜಾ' ಮತ್ತೇನಿಲ್ಲ. ಜಾಗ್ರತೆಯಿಂದಿರಿ' ಎಂದು ಒಂದು ಇಂಜಕ್ಷನ್ ಚುಚ್ಚಿ ಹದಿನೈದು ರೂಪಾಯಿ ಕಿತ್ತರು ಇನ್ನು ಬೆಂಗಳೂರಲ್ಲಿ ಉಳಿದರೆ ಮಯೂರೆದೆಗೂ ಕುಂದು ಬರುದೀತು ಎಂದು ನಿಂತ ಕಾಲಲ್ಲೇ ಬಸ್ಸು ಹತ್ತಿ ಊರು ಸೇರಿದೆವು.

ಹವಿಗತೆ

ಸಿರಿತನ—ಬಡತನ

ಹಿಂದೀ ಸಾಹಿತ್ಯ ಸಮ್ಮೇಲನವು ೧೯೩೬ರಲ್ಲಿ ಇಂದೂರಿನಲ್ಲಿ ನೆರವೇರಿತು. ಗಾಂಧೀಜಿಯವರು ಸಮ್ಮೇಲನದ ಅಧ್ಯಕ್ಷರಾಗಿದ್ದರು.

ಸಮ್ಮೇಲನದ ಎರಡನೆಯ ದಿನದ ಸ್ಥಳೀಕ ಶ್ರೀಮಂತ ವ್ಯಾಪಾರಸ್ಥರಾದ ಸೇರ್ ಹುಕುಮಚಂದ ಆವರು ಗಾಂಧೀಜೀ, ಬಾ ಮತ್ತು ಇತರ ಮಿತ್ರರನ್ನು ತಮ್ಮ ಮನೆಗೆ ಮೇಜವಾನಿಗಾಗಿ ಆಮಂತ್ರಿಸಿದ್ದರು. ಭೋಜನವನ್ನು ಆವರು ಭವ್ಯ ಆರಮನೆಯೂದ ಆನಂದಭವನದಲ್ಲಿ ಏರ್ಪಡಿಸಲಾಗಿತ್ತು.

ಹುಕುಮ್‌ಚಂದರಿಗೆ ಆತಿಶಯ ಆನಂದವಾಗಿದ್ದಿತು. ಆಮಂತ್ರಿತರೆಲ್ಲರಿಗೂ ಬೆಳ್ಳಿಯ ನಕ್ಷೆಗಳಿಂದ ಕೂಡಿದ ಮಣೆ ಹಾಕಲಾಗಿತ್ತು. ಬಡಿಸಲು ಬೆಳ್ಳಿಯ ಪಾತ್ರೆಗಳನ್ನೇ ಉಪಯೋಗಿಸಲಾಗಿತ್ತು. ಬಾಪು ಮತ್ತು ಬಾಪುರವರ ಮಣೆಗಳ ಮೇಲೆ ಚಿನ್ನದ ನಕ್ಷೆಗಳಿದ್ದವು. ಆವರಿಗಾಗಿ ಚಿನ್ನದ ಪಾತ್ರೆಗಳನ್ನಿಡಲಾಗಿತ್ತು.

ಭೋಜನಾಲಯವನ್ನು ಪ್ರವೇಶಿಸಿದ ಗಾಂಧೀಜಿ ಇಷ್ಟೆಲ್ಲ ಸಂಭ್ರಮವನ್ನು ನೋಡಿ ಮುಗುಳುನಗೆಗೆ ನಕ್ಕರು. ಬಾ ಮತ್ತು ಬಾಪು ತಮ್ಮ ತಮ್ಮ ಸ್ಥಳದಲ್ಲಿ ಕುಳಿತುಕೊಂಡರು, ಆಷ್ಟರಲ್ಲಿಯೇ ಬಾಪ್ಪು ಯಾವುದೋ ಒಂದು ಚೀಲವನ್ನು ಕೇಳಿದರು. ಗಾಂಧೀಜಿ ತಾವು ಸೆರೆಮನೆಯಲ್ಲಿ ಉಪಯೋಗಿಸಿದ ಆಲುಮಿನಿಯಂ ತಟ್ಟೆ ಮತ್ತು ಲೋಟಾಗಳನ್ನು ಆ ಚೀಲದಿಂದ ಹೊರತೆಗೆದರು. ಸೆರೆಮನೆಯಲ್ಲಿ ಈ ಪಾತ್ರೆ ಉಪಯುಕ್ತವಾಗಿದ್ದರೆ ಹೊರಗೂ ಇವೇಕೆ ಉಪಯುಕ್ತವಾಗಬಾರದೆಂಬ ಭಾವನೆಯಿಂದ ಗಾಂಧೀಜಿ ಸೆರೆಮನೆಯ ಹೊರಗೂ ಊಟಕ್ಕಾಗಿ ಇವನ್ನೇ ಉಪಯೋಗಿಸುತ್ತಿದ್ದರು.

ತಮ್ಮೆದುರಿಗಿಟ್ಟ ಬಾಗಾರದ ತಟ್ಟೆಗಳ ಜೊತೆಗೆ ಗಾಂಧೀಜಿ ಈ ಆಲ್ಯೂಮಿನಿಯಮ್ ವಸ್ತುಗಳನ್ನು ಇಟ್ಟರು. ಎಲ್ಲರಿಗೂ ಆಶ್ಚರ್ಯವಾಯಿತು. ಎಲ್ಲರೂ ಈ ಆಲ್ಯೂಮಿನಿಯಮ್ ಪಾತ್ರೆಗಳ ಕಡೆಗೇ ನೋಡುವವರು. ಸೇರ್ ಹುಕುಮ್‌ಚಂದರು ಗಾಂಧೀಜಿಯವರ ಹತ್ತಿರ ಬಂದು "ಬಾಪೂಜಿ, ನನ್ನ ಮನೆಯಲ್ಲಿರುವಾಗ ಈ ಬಂಗಾರದ ತಟ್ಟೆಗಳಲ್ಲಿಯೇ ಉಂಡು ಅವುಗಳನ್ನು ಸವಿತ್ರಗೊಳಿಸ ಬೇಕು" ಎಂದು ಕೇಳಿಕೊಂಡರು.

"ಹಾಗಿದ್ದಲ್ಲಿ ನನ್ನ ಊಟ ಮುಗಿದ ಮೇಲೆ ಈ ಬಂಗಾರದ ತಟ್ಟೆಗಳನ್ನು ನಾನು ನನ್ನೊಡನೆ ಒಯ್ಯಿ 'ಬಹುದೇ? ಎಂದರು ಗಾಂಧೀಜಿ. "ನಿಮ್ಮ ತೃಪ್ತಿಯಾದ ಹೊರತ ನನಗೆ ಸಮಾಧಾನ ಹೇಗೆ', ಎಂದರು ಸೇಠ್‌ಜಿ.

ಬಾಪು ಬಂಗಾರ ಮತ್ತು ಆಲ್ಯೂಮಿನಿಯಮ್ ಎರಡೂ ಪಾತ್ರೆಗಳನ್ನು ತಮ್ಮೆದುರಿಗಿಟ್ಟುಕೊಂಡು ಆದರೊಳಗಿನಿಂದ ಖರ್ಜೂರ ಮತ್ತು ಹಾಲನ್ನು ಮಾತ್ರ. ತಮ್ಮ ಸಿದ್ಧತಿ ಪ್ರಕಾರ ಸ್ವೀಕರಿಸಿದರು.

ಕ. ವಿ.



ಅಮೇರಿಕನ್ ಪಿಸ್ತೂಲ್ ಆಟೋ ಮೇಟಿಕ್ 6 ಗುಂಡು ಮತ್ತು 50 ಗುಂಡು ನಿಮಗೆ ಕೃಷ್ಣಿಕರವಾಗದ್ದಲ್ಲಿ ಹಣ ವಾಪಾಸು ಕೊಡಲಾಗುವುದು.

ಕುಂಡಾಗದಂತಹ ಲೈಸೆನ್ಸ್ ಇಲ್ಲದೆ ಉಪಯೋಗಿಸಬಹುದು. ಇದನ್ನು ನಿಮ್ಮ ಸಂರಕ್ಷಣೆಗೂ ಕಳ್ಳಕಾಕರ ಭಯವನ್ನೂ ಕ್ರೂರ ಪ್ರಾಣಿಗಳ ಭಯವನ್ನೂ ನೀಗಿಸಲು ಉಪಯೋಗಿಸಬಹುದು. ಬೆಲೆ: ಬೆಲೆ:6 ಗುಂಡಿನ ಪಿಸ್ತೂಲ್: ನಂ. 333 ರೂ. 8, ನಂ. 444 ರೂ. 10, ನಂ. 555 ರೂ. 15 ಮತ್ತು 50 ಗುಂಡಿನ ಪಿಸ್ತೂಲ್ ನಂ. 666 ರೂ. 10, ನಂ. 777 ರೂ. 15, ನಂ. 888 ರೂ. 20 ಆದಷ್ಟೊಂದಿನೆ 100 ಗುಂಡು ಫರ್ನುಶ್ಯೆ. ಬೇರೆ 100 ಗುಂಡಿನ ಬೆಲೆ. ರೂ. 5. ಚರ್ಮದ ಚೀಲದ ಬೆಲೆ: ರೂ. 6 ಪೋಸ್ಟ್ ಚಾರ್ಜು ರೂ. 2

REY ROGAS & CO., 23-A, Anand Nagar, BOMBAY-26.

ಹೊಸ ಪುಸ್ತಕ—

'ನಟಚೇತ'ರ

ನವೀನ ಕಾದಂಬರಿ—

ಹಸುರು ಹಂಸ

ಇಂದಿಗೆ ಪ್ರಕಟವಾಗಿದೆ.

ಬೆಲೆ: ರೂ. ಎರಡು.

ವಿಚಾರಿಸಿ.

ನವಯುಗ ಪ್ರೆಸ್, ಉಡುಪಿ.

ಜನಜೀವನದ ಮೇಲೆ ಸಾಹಿತ್ಯದ ಪ್ರಭಾವ

(೨ನೇ ಪುಟದಿಂದ)

ಆತ ಸಾಹಿತ್ಯದ ಆರಾಧಕನಾಗುತ್ತಾನೆ. ಅಸ್ಪಿಕರಾದ ಜನ ಕಾಣದ ದೇವರನ್ನು ನಂಬಿ ಅದಾವುದೋ ಮೂರ್ತಿಯನ್ನೋ, ಚಿತ್ರವನ್ನೋ ಇಟ್ಟು ಪೂಜಿಸುತ್ತಾ ನಂಬಿಕೊಂಡಿರುತ್ತಾರೆ ಹೇಗೋ ಹಾಗೆಯೇ ಸಾಹಿತ್ಯವು ಸಾರುವ ತತ್ವ ನೀತಿಗಳನ್ನು ಓದುಗನು ದೃಢ ವಿಶ್ವಾಸದಿಂದ ನಂಬಿಕೊಂಡು ಅದಕ್ಕೆ ಹೊಂದಿಕೊಂಡ ಬಾಳಲು ಕಲಿಯುತ್ತಾನೆ.

ಸತ್ಯ ಸಾಧನೆಯಿಂದ, ಸತ್ಕರ್ಮದಿಂದ ಸದ್ಗುಣ ಶೀಲಸಂಪನ್ನನಾಗಿ ಬಾಳಿಕೊಂಡಿರುವ ಆದರ್ಶ ವ್ಯಕ್ತಿಗಳು ಇಹದ ಸುಖವನ್ನು ತ್ಯಜಿಸಿ ಪರದಲ್ಲಿ ಮುಕ್ತಿಯನ್ನು ಹೇಗೆ ಪಡೆಯುತ್ತಾರೆ? ಎಂಬುದನ್ನು ಅರ್ಥ ಮಾಡಿಕೊಂಡಿರೆ, ಸಾಹಿತ್ಯ ಲೋಕದಲ್ಲಿ ರಾರಾಜಿಸುವ ಈ ತೆರನಾದ ಆದರ್ಶ ರಾಗೂ ಅಮರ ಪಾತ್ರಗಳ ಜೀವನದ ರೀತಿ ನೀತಿಗಳನ್ನು ಅನುಸರಿಸಿಕೊಳ್ಳಬೇಕೆಂಬ ಸದ್ಬುದ್ಧಿಯನ್ನೆ ಓದುಗನಲ್ಲಿ ಉಂಟಾಗುವಂತೆ ಮಾಡುವ ಆದೊಂದು ಸುಪ್ತವಾದ ಜೀವ ತನ ಶಕ್ತಿ ಸಾಹಿತ್ಯಕ್ಕಿದೆ! ಸಾಹಿತ್ಯವು ಸನ್ಮಾರ್ಗ ದರ್ಶಕವಾಗಿದ್ದು ಸದ್ಬುದ್ಧಿ ಪ್ರಜ್ಞೋದಕವಾಗಿರುವುದಲ್ಲದೆ; ಜೀವನಕ್ಕೆ ಮಾರಕವಾದ ದುರ್ವ್ಯವಹಾರಗಳಿಗೆ ಎಂದೂ ಪೋಷಕವಾಗಿರುವುದಿಲ್ಲ.

ಅನ್ಯಾಯ, ಅನೀತಿಗಳಿಂದ ತಾನು ದೂರ ಸರಿದು ನಿಲ್ಲಬೇಕು. ದುಷ್ಪಾಚಾರ ದುರ್ವ್ಯಸನಗಳಿಂದ ಬಾಳು ಎಂದಿಗೂ ಸುಖದ ಬೆಳಕನ್ನು ಕಾಣದು,—ಎಂಬೀ ದೃಢ ಸಂಕಲ್ಪ ಆತ್ಮವಿಶ್ವಾಸ ಓದುಗನ ಮನದಲ್ಲಿ ಸ್ಪಷ್ಟವಾಗಿ ನೆಲೆಸಿಲ್ಲ ಬೇಕು- ಈ ರೀತಿಯಲ್ಲಿ ಮಾನವ ಜೀವನವನ್ನು ಪ್ರತಿಬಿಂಬಿಸುವ ನೈಜತೆಯ ಕಲಾ ಕೌಶಲ್ಯ ಯುತವಾಗಿ ಸಾಹಿತಿಯ ಕುಂಚದಿಂದ ಸೃಷ್ಟಿಯಾದ ಸಾಹಿತ್ಯವು ಜನ ಜೀವನದ ಮೇಲೆ ಬಹು ತೀವ್ರನಾದ ಪರಿಣಾಮವನ್ನುಂಟು ಮಾಡುತ್ತದೆ. ಸತ್ಯ, ಸೌಂದರ್ಯ, ಶಾಂತಿಯ ಹಿರಿಮೆಯ ವಾಸ್ತವಿಕತೆಯನ್ನು ಪ್ರತ್ಯಕ್ಷವಾಗಿ ಯಲ್ಲವಾದರೂ ಪರೋಕ್ಷವಾಗಿ ಹಿಡಿದಿತ್ತಿ ತೋರಿಸುವ ನಿಪುಣತೆ, ಕಲಾಶಕ್ತಿ ಸಾಹಿತಿಗೆ ವರ ಪ್ರಸಾದವಾಗಿ ದೊರೆತಿರುತ್ತದೆ. ಆದ್ದರಿಂದಲೇ ಆತನು ಸೃಷ್ಟಿಸಿದ ಸಾಹಿತ್ಯವು ಸರ್ವ ಮಾನ್ಯವೆನಿಸಿ ಸಾರ್ವತ್ರಿಕ ಸುಖ ದುಃಖದಲ್ಲಿ ಸಮಭಾಗಿಯಾಗಿ ಇದೆ ಎಂಬ ಸತ್ಯವನ್ನೂ ಸಾರುತ್ತದೆ. ಇಂತಹ ಸಾಹಿತ್ಯ ಕೃತಿಯನ್ನು ಸರ್ವರೂ ಆದರಾಭಿಮಾನದಿಂದ ಸ್ವಾಗತಿಸುವುದರಲ್ಲಿ ಏನೂ ಅನುಮಾನವಿಲ್ಲ!

ಪರರನ್ನು ಕನ್ನವರೆ ಎಂದು ತಿಳಿದು ಅವರಿಗೆ ಸಹಾಯ, ಸೇಕಾರ ನೀಡುವಾಗ ಬಾಂಧವ್ಯವನ್ನೂ ಮಾನಸಿಕವಾಗಿ ಕಲ್ಪಿಸಿಕೊಳ್ಳುವಂತಹ ವಿಶಾಲ ಮನೋಭಾವ ಓದುಗನಲ್ಲಿ ಉಂಟಾಗುವಂತಿರ ಬೇಕು ತನ್ನ ಬದುಕು ತಪ್ಪ ಪರಿಸರದಲ್ಲಿರುವ ಜನತೆಯ ಸಮಾಜದ, ನಾಡಿನ, ಅಂತೆಯೇ ದೇಶದ ಉನ್ನತಿಗೆ ಅಭಿವೃದ್ಧಿಗೆ ಸೇವೆಸಲ್ಲಿಸುವಲ್ಲಿ ಸರ್ವ ತ್ಯಾಗಕ್ಕೂ ಸಿದ್ಧವಾಗಿರ ಬೇಕೆಂಬ ತತ್ವ ನೀತಿಯನ್ನು, ಅನುಸರಿಸ ಬೇಕಾದ ರೀತಿ ನೀತಿಯನ್ನೂ ಮೂಡಬೇಕಾದ ಕೆಲಸಕಾರ್ಯಗಳನ್ನೂ ಪರೋಕ್ಷವಾಗಿ ಭೋದಿಸುತ್ತಾ, ಓದುಗನ ಮನಸ್ಸನ್ನು, ಬುದ್ಧಿಯನ್ನು ಪೂರ್ಣಪರಿವರ್ತನೆಗೆ ಗೊಳಿಸುವ ಶಕ್ತಿ ಸಾಹಿತ್ಯಕ್ಕಿದೆ.

ರಾಮಾಯಣದ ಸೂತ್ರಧಾರಿಯಾದ ಶ್ರೀರಾಮನ ದಿವ್ಯ ಚರಿತೆಯನ್ನೋದುತ್ತಾ ಆತನ ತ್ಯಾಗ, ಪಿತೃಭಕ್ತಿ, ಶಿಷ್ಟಪಾಲನೆ ಮುಂತಾದ ಸೂಜ್ಯ ಗುಣಗಳನ್ನು ಓದುಗನು ತನ್ನ ಜೀವನದಲ್ಲೂ ಅಳವಡಿಸಿಕೊಳ್ಳಬೇಕೆಂದು ಬಯಸುತ್ತಾನೆ!

ಸಾಹಿತ್ಯವು ಜನತೆಯ ಪಾಪಗಳನ್ನು ತೊಳೆಯುವ ವಾರ್ ವಿಸರ್ಗ. ಬಾಳಿನ ಬೆಳಕಿಗೆ ಕಾರಣೀಭೂತವಾಗಿ ಜೀವನ ದೊಂದಿಗೆ ಸತತವಾಗಿ ಯಾವುದು ಇರುವುದೋ ಅದೇ ಸಾಹಿತ್ಯ. ನಿತ್ಯ ನಿರಂತರ ಜನತೆಯೊಡನಿದ್ದು ಸದಾ ಕಾಲ ಬಾಳಿಗೆ ಪೋಷಕವಾಗಿರುತ್ತಾ ಸರಸ್ವತಿಯ ಕೃಪೆಯಿಂದ ಜನತೆಯ ಪಾಪಗಳನ್ನು ತೊಳೆಯುವುದು ಯಾವುದೋ ಅದೇ ಸಾಹಿತ್ಯ!

"ಸಾಹಿತ್ಯವು ಜಗತ್ತನ್ನೇ ನಿರ್ಮಾಣ ಮಾಡುವ ಮೂರನೆ ಶಕ್ತಿ! ಭಗವಂತನ ಅನಂತ ಶಕ್ತಿಯೆಂಬುದೊಂದು ಇದೆಯೆಂದು ನಾವು ಒಪ್ಪುತ್ತೇವೆ. ಸಾಹಿತ್ಯದಲ್ಲಿ ಅವನದೊಂದು ಕಲೆಯು ಸ್ಪಷ್ಟವಾಗಿದೆ. ಕವಿ ಹಾಗೂ ಸಾಹಿತಿಗಳನ್ನು ಪ್ರೇರೇಪಿಸುವ ಪ್ರೇರಣೆಯೇ ಅದು. ಆ ಶಕ್ತಿಯನ್ನು ಕವಿ ಹಾಗೂ ಸಾಹಿತಿಗಳು ಮಾತ್ರ ಅರಿತಿದ್ದಾರೆ. ಇತರರಿಗೆ ಆದರ ದರ್ಶನ ಆಗಿಲ್ಲ." —ವಿನೋಬಾ.

ಆದ್ದರಿಂದಲೇ ಸಾಹಿತ್ಯವು ಪರಮಾತ್ಮ ಸೃಷ್ಟಿ ಎಂದು ಹೇಳಬೇಕಾಗುವುದು. ಜನತೆಯ ಅವಶ್ಯಕತೆಗಳನ್ವಿತು ಅವರ ಮಾನಸಿಕ ಆರೋಗ್ಯಕ್ಕೆ ಬೇಕಾದ ಸಾಹಿತ್ಯವನ್ನು ಸೃಷ್ಟಿಸಲು ಸಾಹಿತಿಗಳಲ್ಲಿ ಪ್ರಜ್ಞೋದಿಸುವವನೇ ಪರಮಾತ್ಮ. ವಾಲ್ಮೀಕಿ, ವ್ಯಾಸ, ರವೀಂದ್ರನಾಥ ಠಾಗೂರು, ಸರ್ವಜ್ಞ, ಪುರಂದರದಾಸ, ಬಸವಣ್ಣ ನವರಂಥ ಮಂದಿ ಹುಟ್ಟಿಕೊಂಡು ಪ್ರಪಂಚಕ್ಕೆ ಎಂದೆಂದಿಗೂ ಸಹಾಯಕವಾಗುವಂತಹ ವಸ್ತುವನ್ನು ನೀಡಿದರು. ಧರ್ಮವು ಗ್ಲಾನಿಯೊದಾಗ ಮಹಾಪುರುಷರು ಅವತರಿಸಿ ಧರ್ಮರಕ್ಷಣೆ ಮಾಡುವಂತೆ ಜನಜೀವನದ ಋಜು ಮಾರ್ಗಕ್ಕೆ ಬೇಕಾದ ತತ್ವನೀತಿಗಳನ್ನೂ ಪ್ರಕಟಪಡಿಸಿ ಅವರು ಬಾಳ ದಾರಿಯಲ್ಲಿ ಸುಗಮವಾಗಿ ಮುನ್ನಡೆಯುವಂತೆ ಸನ್ಮಾರ್ಗದರ್ಶಕರಾಗಿ ಅನೇಕ ಸಾಹಿತಿಗಳು ಹುಟ್ಟಿ ಸಾಹಿತ್ಯ ನಿರ್ಮಾಣ ಕೈಗೊಂಡು ಉಪಕರಿಸಿದರು. —ಹಾಗಾಗಿ ಮಾನವ ಜೀವನಕ್ಕೆ ಸಾಹಿತ್ಯದಿಂದ ಲಭ್ಯವಾದ ಮಹತ್ತರವಾದ ಪ್ರಯೋಜನ ಅಪ್ಪಿಸ್ಪಷ್ಟ!—ಆ ದೃಷ್ಟಿಯಿಂದಲಾದರೂ ನಾವು ಸಾಹಿತ್ಯಾಭ್ಯಾಸಿಗಳಾಗಿ ಜೀವನದ ಧ್ಯೇಯೋದರ್ಶಗಳನ್ನರಿತುಕೊಂಡು ನಿಜ ಮಾನವರಾಗಿ ಬಾಳಲು ಕಲಿಯಬೇಕು! ಸಾಹಿತ್ಯದ ಸ್ಫೂರ್ತಿ ಜನವನ್ನು ಪಡೆಯಲು ಶ್ರಮಿಸಬೇಕು!

ನಮ್ಮಲ್ಲಿ ಸಿಗುವ ಕೆಲವು ಪುಸ್ತಕಗಳು

ಕತೆಗಳು

ಕನಸಾಳ ಮೋಕ್ಷ	ಸಿರಿಪತಿ	2 00
ಮಹಾತ್ಮಾ	ಜಿ ಆರ್. ಹೆಗಡೆ	1 25
ಮಾರ್ಗದರ್ಶಕ	ಎಂ. ವಿ. ಸೀತಾರಾಮಯ್ಯ	1 50
ಬೃಂದಾವನ	ತ್ರಿವಿಕ್ರಮ	0 75
ಪಗಾರದಾಕೆ	ಭೀ. ಗ. ಮು. ದೇಸಾಯಿ	0 75
ವಿಜಯಶ್ರೀ	ಮಿರ್ಜಿ ಅಣ್ಣಾರಾಯ	1 00
ಆದರ್ಶ ಚಿತ್ರಗಳು	ಕಲಾಕಿಂಕರ	1 50
ನಾಲ್ಕು ಕತೆಗಳು	ಬಿ. ಈಶ್ವರ ಭಟ್ಟ	1 00
ನಾಟಕ ಕಥೆಗಳು	ಬಿ. ಎಸ್. ಶರ್ಮ	0 75
ಪ್ರವಾದಿ	ದೇಸಾಯಿದತ್ತ ಮೂರ್ತಿ	1 25
ಮಹಾರತಿ	ಪರಮಂಗಳ ರಾವ್	1 25
ಕಾಂಪ್ರಾಸನ ಚರಿತ್ರೆ	M. S. ಪುಟ್ಟಣ್ಣ	0 63
ಕಾಂಗ್ರೆಸ್ಸಿನ ಇತಿಹಾಸ	ಗುರುನಾಥ ಜೋಶಿ	0 75
ಮೈಸೂರು ನಿರ್ಮಾಪಕರು	ರಾಜಾರಾವ್	1 00
ಅವಿವಾಹಿತೆ	ಶ್ರೀನಿವಾಸ ಹಾವನೂರ	1 25
ಬುದ್ಧ ದೇವ	ಸ. ಶ್ರೀನಿವಾಸ ಆಚಾರ್	0 50
ಮಣಿ ಮೇಖಲೆ	ಬಿ. ಶಂಕರ ಭಟ್ಟ	0 75
ಮಾರ್ಟೇನನ ಸಾಹಸ	,,	0 75
ವಿಶಾಖಾ ವ್ಯಗಾರ ಮೊತೆ	ಬಿ.ಎಸ್.ಶರ್ಮ	0 63
ಮಂಗಳ ಗೌರಿ	ಎಸ್. ಗುರು ರಾವ್	0 38
ಹತೀಮ್ ತಾಯಿ ಭಾಗ ೧	ಅಯ್ಯಂಗಾರ್	0 31
,, ,, ೨	,,	0 31
ಕಲ್ಪನಾ ವಿಲಾಸ	ಪಿ. ವೇಣುಗೋಪಾಲ	0 75
ಗಾಯದ ನೋವು	ಪಿ ವೆಂಕೋಬಾಚಾರ್ಯ	1 25
ಮೋಪಾಸನ ಓಲೆಗಳು	,,	1 25
ಬದುಕಿನ ಚಿತ್ರಗಳು	ಎನ್. ವಿ. ರಾವ್	1 00
ಕೊನೆಯ ಹಾಡು	ಎಂ ಎಸ್. ಶೆಟ್ಟಿ	1 50
ಗಾರ್ಯ ಡಿ ಮೋಪಾಸನ ಕತೆಗಳು	ಚುಳಕಿ	1 00
ನಮ್ಮ ಬದುಕು	ಆನಂದ ಕಂದ	0 88
ವೃಷ್ಟಿ ಧಾರೆ	ಧನ್ವಂತ	0 75
ಸೈಮನನ ತಂದೆ	ಸಂಕಲನ	1 75
ಉರ್ದೂ ಕಥಾವಲಿ	ಗುರುನಾಥ ಜೋಶಿ	0 50
ಬೇಬ್ಬಿಮತ್ತು ಇತರ ಚಿತ್ರಗಳು	ಎನ್. ಸೂರಪ್ಪ	0 75
ನ್ಯಾಯ ಕ್ಷಮೆ	ಟಿ. ಆರ್. ಭಾಗವತ	0 50
ಮುದ್ದಿನ ಕಣಿ	ಗೊ. ವೆಂ. ಚುಳಕಿ	0 75
ರೂಪರಾಶಿಗಳ ನಂತೆ	ಎಂ. ಬಿ ಮಾರಕಿಣಿ	0 94
ತಾಪತ್ರಯ	ಸಂಕಲನ	0 38
ಬಾಳಿನ ಬೆಳೆ	ಯಶೋದಾ ಬಾಯಿ	0 75
ಆತಿ ದೂರದ ಜಗತ್ತಿನಲ್ಲಿ (ಹೆಗಡೆಬಂಧುಗಳು)		0 75
ಮುಂದೇನು	ದೇವುಡು	0 50
ದೆವ್ವದ ಕಥೆಗಳು	ಎಮ್ ಜಿ. ಅಡಿಗ	0 50
ವಾರದ ಹುಡುಗ	ನಿರಂಜನ	1 25
ಸಾಹಾತ್ಮಾ	ಮಹಾಬಲ ಭಟ್ಟ	0 38
ನೆರಳು	ಎಕ್ಕುಂಡಿ	1 00
ರಾಗವಿರಾಗ	ಭಂಡಾರಿನಾಥಾಚಾರ್ಯ	1 75
ಕಲ್ಪನೆಯ ಕನಸು	ಕೆ. ಜೆ. ಶೆಟ್ಟಿ	0 63

ಕಾದಂಬರಿಗಳು

ಕುವೂರಿ ಸುನೇತ್ರ	ತಲಚೇರಿಕರ	0 75
ಬಿಳಿ ಕೊಕ್ಕರೆ	ಗೌರೀಶ ಕಾಯ್ಕಿಣಿ	1 25
ರಾಕ್ಷಸನ ಸೋಲು	ಲಿಂಗಣ್ಣಯ್ಯ	1 50
ಹೊನ್ನಿನ ಹೆಂಬಲ	ಐಯ್ಯಂಗಾರ್	2 75
ಶಾಂತಿ ಸದನ	ನಾಗೇಶ ಶ್ಯಾನುಭಾಗ್	1 50
ಕಾಂತಾಪುರದ ವಜ್ರ	ಎಸ್.ಎನ್.ಕೋಡಕಣಿ	1 00
ಪ್ರತಾಪ ಮುದಲಿ	ಮು. ಕೃಷ್ಣಮೂರ್ತಿ	1 25
ಕೊಕ್ಕೊರೋ	ಇ. ವಿ. ರಾಘವೇಂದ್ರ	1 00
ಸಿದ್ಧಾರ್ಥ	ಬಿ.ಎಸ್.ಆರ್.ಐಯ್ಯಂಗಾರ್	2 00
ಅವಳ ಮಣಿ	ಮುರಲೀಧರ	1 50
ನೊಲತೀ ಮಂದಿರ	ಹೊ. ಗುಡ್ಡಪ್ಪ	2 00
ತರಲಾ	ಸ್ವಾಪಿ ಸತ್ಯ ಭಕ್ತರು	1 00
ಬಿದುಗಾಳಿ ಭಾಗ ೧	ನಾ. ಸೀ. ಫಡಕೆ	1 50
ವೈಕುಂಠನ ಮೃತ್ಯು ಪತ್ರ	ಶರ್ತ್	1 00
ಮನ್ನೂ ಮಮವೆ	ಎಂ ಜಿ.ವೆಂಕಟೇಶಯ್ಯ	2 00
ಹೃದಯ ವೀಣೆ	ಮೂ. ವಿ. ಸಾಯರ್	1 25
ಬೆಂದ ಜೀವಿ	ರುದ್ರ ಮುನಿಸ್ವಾಮಿ	1 75
ಗುಣ	ಪಿ. ವೆಂಕೋಬಾಚಾರ್ಯ	1 38
ಪುನರಾಗಮನ	ಧನ್ವಂತ	1 25
ಬಂಧನ ಬಾಂಧವ್ಯ	ಸೇವ ನಮಿರಾಜಮಲ್ಲ	1 00
ಜಿಜ್ಞಾನ ಪ್ರಭಾ	ಧನ್ವಂತ	1 00
ಇವೆತ್	ಪಿ ವೆಂಕೋಬಾಚಾರ್ಯ	1 75
ಮೂಢವ ಲೀಲೆ	ವೆಂಕಟೇಶಯ್ಯ	1 50
ಹೊಸ ಹೆಜ್ಜೆ	ಭಾರ್ಗವ	0 63
ಸ್ಮಶಾನ ವೈರಾಗ್ಯ	ಚು. ಗೋವಿಂದ್ರಾಯ	1 50
ಯಾತ್ರಿಕ	ಪ್ರ. ಕು. ಕನ್ಯಾಲ	1 50
ಅಮರನಾಥ	ವಿ. ಗುರುರಾಜನ್	1 00
ಚಿಗುರು ಹಾಸಿಗೆ	ಭಾರತೀಸುತ	2 50
ಪ್ರಿಯತಮೆಯ ಪಿತೂರಿ	ಎನ್.ಗಂಡ ಶಾಸ್ತ್ರಿ	1 50
ದ್ವೀಪ ರಹಸ್ಯ	ಚರಣ	1 00
ಜಯ ಗೋವಿಂತಕ	ಆನಂದವರ್ಟ	1 00
ಪರಿಹಾರ	ದತ್ತಾತ್ರೇಯ ಕುಲಕರ್ಣಿ	2 00
ಕೈವೊಂಸ	ಜನಾರ್ಧನ ಗುರ್ಕಾರ	1 50
ತಿರುಗಿದ ಕುರ್ಚಿ	ಬಾಲಚಂದ್ರ	2 00
ಕೊನೆಯ ಭೇಟಿ	ಸರೋಜಮ್ಮ	1 50
ಅಧ್ಯಕ್ಷರ ಮಗಳು	ಎನ್. ನರಸಿಂಹ	2 00
ಸೇತುವೆಯಲ್ಲಿ ಮರಣ ಕಾದಿತ್ತು	ಸೇ.ನ.ಮಲ್ಲ	1 25
ಅಂತಃಕರಣ	ಅಯ್ಯಂಗಾರ	1 00
ಕೈವಾನಿಧಿ	,,	1 00
ಜೀವನ ಜ್ಯೋಕಾಲಿ	ಎಂ. ದಸ್ತಗೀರ್	1 50
ಜ್ವಾಲಾಮುಖಿ	ಡಿ. ವಿ. ರಾಘವೇಂದ್ರ	0 63
ಭೀಮಕಾಯ	ಎಸ್. ಎಲ್. ಭೈರಪ್ಪ	2 50
ಕೊಲೆಯ ಹೆಣ್ಣು	,ಹ. ರಾ ಕಿದಿಯೂರು	0 75
ಗುರುಕುಲ	ಶ್ರೀಕೃಷ್ಣ ಪಾಟೀಲ	1 00
ಕಾಂಚನ ಮೃಗ	ವಿ. ಸ. ಖಾಂಡೇಕರ	3 00
ಕಾಂಚನಾ	ಜೆ. ಬಿ. ಪಾಟೀಲ	1 50
ಗೆದ್ದ ಹೆಣ್ಣು	ನವಗಿರಿಸಂದ	1 25
ಅಜ್ಞಾತವಾಸ	ಎಚ್. ಎಂ. ವೀರ ಭದ್ರಪ್ಪ	1 50

(ಮುಂದುವರಿಯುವುದು)

ನವಭಾರತ ಪುಸ್ತಕ ಭಂಡಾರ, ಉಡುಪಿ.

ನರಭಕ್ಷಕ ಬಕಾಸುರ

(೨ನೇ ಪುಟದಿಂದ)

ಗಿ ನಾವೀಗ ಏನು ಮಾಡಬೇಕು? ಆವನಿಗೆ ಒಂದು ಹೆಸರು ಕೂಡಾ ಇಟ್ಟಿದ್ದಾರೆ, ಬಕನಂತೆ-ಬಕ! ನನಗೇನೋ ನಂಬುಗೆಯಿಲ್ಲ. ಆದರೆ ರಾಜನಾದ ನಾನು ನನ್ನ ನಂಬುಗೆಯ ಮೇಲೆಯೇ ಕರ್ತವ್ಯವನ್ನು ನಿರ್ಣಯಿಸಲು ಸಾಧ್ಯವಿಲ್ಲ. ಪ್ರಜೆಗಳ ತೃಪ್ತಿಗಾಗಿಯಾದರೂ ಏನೋ ಒಂದು ಮಾಡಲೇ ಬೇಕು"

"ಏನು ಮಾತು ಮಹಾ ಪ್ರಭೋ! ನಿಮಗೆ ನಂಬುಗೆಯಿಲ್ಲದಿದ್ದರೆ ಏನೊಂದೂ ಮಾಡಬೇಕಾಗಿಲ್ಲ" ಎಂದ ಸಭಿಕನೊಬ್ಬ.

"ಹೋಗಲಿ, ನಿನಗಾದರೂ ನಂಬುಗೆಯಿದೆಯೆ?" ಎಂದು ಆತನೊಡನೆ ಇನ್ನೊಬ್ಬ ಕೇಳಿದ.

"ನನಗಿಲ್ಲ"

"ನನಗೂ ಇಲ್ಲ"

ಎಲ್ಲರೂ ತಮಗೆ ರಾಕ್ಷಸನ ಮೇಲೆ ನಂಬುಗೆ ಇಲ್ಲವೆಂಬುದನ್ನು ಒಪ್ಪಿಕೊಂಡರು. ಅಜ್ಞಾನಿ ಅವರೆಲ್ಲರನ್ನೂ ಆಶ್ಚರ್ಯದಿಂದ ನೋಡುತ್ತ ಹಾಗಿದ್ದರೆ ನಿಮ್ಮೊಳಗೆ ಯಾರಾದರೊಬ್ಬರು ಒಂಟಿಯಾಗಿ ನಗರವನ್ನು ದಾಟಿ ಹೋಗಿ ಬನ್ನಿ. ಜನರಿಗಿಷ್ಟು ಧೈರ್ಯವಾದರೂ ಬಂದೀತು,' ಎಂದ.

ಎಲ್ಲರೂ ಅಪ್ರತಿಭರಾದರು; ಮುಖಬಿಳುಪಿಟ್ಟಂತಾಯಿತು. ಪಿಳಿ ಪಿಳಿ ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು.

"ನಾನೇ ಹೋಗಬೇಕಂದರೆನನ್ನಿಂದಂತೂ ಆಗದು. ನನಗೆ ಗೊತ್ತು. ಊರ ಹೊರಗೆ ಸಾಹಸಿಯಾದ ನರಭಕ್ಷಕನ್ನೊಬ್ಬ ಕಾದು ಕೂತಿದ್ದಾನೆ.ಎಂದ ಅಜ್ಞಾನಿ.

"ನಾನೇನೋ ಹೋಗುತ್ತಿದ್ದೆ ಆದರೆ ಮನೆಯೊಳಗೆ ತೀರಿಕೆಯೇ ಇಲ್ಲ. ನಾಳೆ ಒಂದು ವಿಶೇಷಪೂಜೆಯಿದೆ..."

ಹೀಗೆ ಎಲ್ಲರೂ ಒಂದೊಂದು ಕಾರಣ ಹೇಳಿದರು ರಾಜನು ಪರಧ್ಯಾನವಾಗಿದ್ದನು. ಅಕಸ್ಮಾತ್ತಾಗಿ ಏನೋ ತಟ್ಟಿದಂತೆದ್ದು "ಇಂದಿಗೆ ಸಭೆ ಮುಗಿಯಿತು!" ಎಂದನು.

ಸಭಿಕರೆಲ್ಲಾ ಎದ್ದು ಅಪ್ಪಣೆ ಪಡೆದು ಹೊಂಟುಹೋದರು.

ರಾಜನು ತನ್ನೊಂದಿಗೆ ಬರುವಂತೆ ಮಂತ್ರಿಗೆ ಸನ್ನೆ ಮಾಡಿದನು.ಇಬ್ಬರೂ ರಹಸ್ಯಮಂದಿರಕ್ಕೆ ಹೋದರು.

ರಾಜನೆ ಮೊದಲು ಮಾತು ಪ್ರಾರಂಭಿಸುವ ವರೆಗೂ ಮಂತ್ರಿ ಮಾತೇ ಆಡಲಿಲ್ಲ. ಅಸಲು ಈ ವರೆಗೂ ಆ ಮಂತ್ರಿ ರಾಕ್ಷಸನನ್ನು ಕುರಿತು ಚಕಾರ ಎತ್ತಿರಲಿಲ್ಲ.

"ಈ ರಾಕ್ಷಸ ಒಂದು ವೇಳೆ ನಿಜಕ್ಕೂ ಇದ್ದಾನೆ ಎಂದು ಊಹಿಸುವ...." ಎಂದು ರಾಜನು ಪ್ರಾರಂಭಿಸಿದನು.

"ಊಹಿಸಬೇಕಾಗಿಲ್ಲ ಮಹಾರಾಜಾ. ನಿಜವೇ"

"ನನ್ನ ಹತ್ತಿರ ಈ ವರೆಗೂ ಹೇಳಲಿಲ್ಲವಲ್ಲ?"

"ಮಹಾರಾಜಾ, ನಾನು ವಾರ್ತಾವಾಹಕನಲ್ಲ; ಮಂತ್ರಿ. ಏನಾದರೂ ಒಂದು ಹೊಸ ಪರಿಸ್ಥಿತಿ ಏರ್ಪಟ್ಟಾಗ ಅದರಿಂದ ನಮಗಾಗುವ ಲಾಭ ನಷ್ಟಗಳನ್ನು ಗುಣಿಸಿ ಹೇಳುವುದೇ ನನ್ನ ವಿಧಿ"

"ಗುಣಿಸಿ ಗಣಿಸಿ ಆಯಿತೆ?"

"ಆಯಿತು"

"ನಾವೀಗ ಮಾಡಬೇಕಾದ ಕೆಲಸವೇನು?"

"ಏನೂ ಮಾಡದೆ ಸುಮ್ಮನಿರಬೇಕಾದ್ದೇ"

ರಾಜನ ಹುಬ್ಬುಗಳು ಹಣೆಯ ಮೇಲೇರಿದುವು.

"ಈಗಿರುವ ಪರಿಸ್ಥಿತಿ ನಮಗೆ ಕ್ಷೇಮಕರವಾಗಿದೆ. ಈ ರಾಕ್ಷಸನು ಇಲ್ಲಿ ಬಂದ ಮೇಲೆ ನಮ್ಮ ಮೇಲೆ ದಂಡೆತ್ತಲಿಕ್ಕಿದ್ದ ಇಬ್ಬರು ರಾಜರು ಆ ಪ್ರಯತ್ನವನ್ನು ಬಿಟ್ಟು ಕೊಟ್ಟಿದ್ದಾರೆ.ಈ ರಾಕ್ಷಸನು ನಮ್ಮ ನಗರಕ್ಕೊಂದು ಬಲವಾದ ರಕ್ಷೆಯಾಗಿದ್ದಾನೆ"

"ಪ್ರಜೆಗಳ ಆಂದೊಳನೆಗೇನು ಮಾಡೋಣ?"

"ಆಂದೋಳನೆ ಪಡುತ್ತಿರಲಿ ಬಿಡಿ. ಆ ಹೊತ್ತು ಮಹಾಮಾರಿ ಬಂದಾಗ ಆಂದೋಳನೆ ಪಡಲಿಲ್ಲವೆ? ಐದು ವರ್ಷಗಳ ಹಿಂದೆ ಬರಗಾಲ ಬಂದಾಗ ಎಷ್ಟು ಮಂದಿ ಸತ್ತಿಲ್ಲ? ಎಷ್ಟೊಂದು ಜನ ನಷ್ಟವಾಗಿಲ್ಲ? ಇದನ್ನು ಕುರಿತು ನಾವು ಚಿಂತಿಸಬೇಕಾದ ಅಗತ್ಯವಿಲ್ಲ."

"ಆಹಾ! ಬಹಳ ಚೆನ್ನಾಗಿ ಹೇಳಿದೆ ಮಂತ್ರೀ!"

o o o

ಆದರೆ ಪ್ರಜೆಗಳು ತಮ್ಮ ಪ್ರಾಣವನ್ನು ಕುರಿತು ಅಷ್ಟೊಂದು ಉದಾಸೀನರಾಗಲಾರದೆ ಹೋದರು. ಬಲಭದ್ರನೆಂಬ ಸೂತಕುಲದವನೊಬ್ಬ ಕೆಲ ಜನರನ್ನು ಕೂಡ ಹಾಕಿಕೊಂಡು ರಾಕ್ಷಸನ ಮೇಲೆ ಯುದ್ಧಕ್ಕೆ ಹೊರಡಲಿರುವನೆಂದು ಚಾರರು ಮಹಾರಾಜನಿಗೆ ತಿಳಿಸಿದರು.

ಈ ಬಲಭದ್ರನು ಒಂದು ಬಗೆಯ ಜ್ಞಾನಿಯೂ ಆಗಿದ್ದ. ರಾಕ್ಷಸರನ್ನು ಕೊಲ್ಲುವುದು ತಮ್ಮಿಂದ ಸಾಧ್ಯವೆಂಬುದು ಅವನ ವಾದ.

"ದೇವತೆಗಳಿಂದಲೂ ಸಾಯಿಸಲಾಗದ ರಾವಣನಂತಹ ಮಹಾಬಲಶಾಲಿಯನ್ನು ಇಬ್ಬರು ಮನುಷ್ಯರೂ ಅನೇಕ ಕೋತಿಗಳೂ ಕೂಡಿಕೊಲ್ಲಲಿಲ್ಲವೇ? ಈ ರಾಕ್ಷಸ ಒಬ್ಬಿಬ್ಬರ ಮೇಲೆ ಬಿದ್ದುಕೊಂದು ಹಾಕಿದನೇ ಹೊರತು, ಹತ್ತು ಮಂದಿ ಒಂದಾಗಿ ಹೋದರೆ, ಅವರ ನೆರಳಿಗೆ ಸಹಾಬರಲಿಕ್ಕಿಲ್ಲ ಇದನ್ನು ಸತ್ಯಮಾಡಿ ತೋರಿಸಲಿಕ್ಕೆ ನಾನೂ, ನನ್ನೊಂದಿಗೆ ನಂಬಿಕೆಯುಳ್ಳ ಕೆಲವರೂ ಕೂಡಿಕೊಂಡು, ಈ ದಿನ ಸಾಯಂಕಾಲ ಊರ ಹೊರಗೆ ಹೋಗಿ ಎರಡು ಗಂಟೆ ಹೊತ್ತು ತಿರುಗಾಡಿ ಬರುತ್ತೇವೆ" ಎಂದ ಆ ಬಲಭದ್ರ.

ಹೇಳಿದಂತೆಯೇ ಮಾಡಿಯೂ ಬಿಟ್ಟ ಬಲಭದ್ರನೂ ಅವನ ಶಿಷ್ಯರೂ ಕತ್ತಲಾಗುವ ಸಮಯಕ್ಕೆ ಕ್ಷೇಮವಾಗಿ ನಗರದೊಳಗೆ ತಿರುಗಿ ಬಂದರು. ನಗರದೊಳಗೆ ಕಾಲಿಟ್ಟ ಕೂಡಲೇ ರಾಜಭಟರು ಅವರನ್ನು ಹಿಡಿದು ರಾಜನ ಬಳಿಗೆ ಕರೆದುಕೊಂಡು ಹೋದರು.

"ಜನರನ್ನು ರಾಕ್ಷಸನ ಮೇಲೆ ಯುದ್ಧಕ್ಕೆ ಹೊರಡಿಸಿಕೊಂಡು ಹೋದವನು ನೀನೆಯೋ? ಎಂದು ರಾಜ ಕೇಳಿದ ಬಲಭದ್ರವನ್ನು ನೋಡಿ.

"ಹೌದು ಮಹಾ ಪ್ರಭು!"

"ನೀನು ಈ ನಗರಕ್ಕೆ ರಾಜನೋ"

"ಅಲ್ಲವಲ್ಲಾ! ಮಹಾ ಪ್ರಭುಗಳು ತಾವಿರುವಾಗ—'

ಹಾಗಾದರೆ ನಿನ್ನನ್ನು ನಾನು ನಗರ ರಕ್ಷಣೆಗೆ ನಿಯಮಿಸಿದ್ದೇನೆಯೇ"

"ಇಲ್ಲಮಹಾರಾಜಾ"

"ಹಾಗಾದರೆ ನಿನಗೆ ಜನರನ್ನು ಕೂಡಿಸುವ ಅಧಿಕಾರ ಯಾರು ಕೊಟ್ಟರು? ರಾಕ್ಷಸನೊಬ್ಬ ನಿಜಕ್ಕೂ ಇದ್ದರೂ ಆ ಸಂಗತಿ ನೋಡಬೇಕಾದವರು ನಾವು, ಹೌದೆ?,,

"ಈ ಅಲ್ಪ ಕಾರ್ಯಕ್ಕೆ ತಮಗೆ ಶ್ರಮವೇಕೆಂದು, ನಾವು ಹತ್ತು ಮಂದಿ ಕೂಡಿ ದೊಣ್ಣೆ ಹಿಡಿದುಕೊಂಡು ಹೋದೆವು. ಆತ ನಮ್ಮ ಕಣ್ಣಿಗೇ ಬೀಳದೆ ಅಡಗಿಕೊಂಡ,,

"ಏನು? ಅವನು ನಿಮಗೆ ಕಾಣಿಸಲೇ ಇಲ್ಲವೆ?,,

"ಇಲ್ಲ ಪ್ರಭೂ!,,

"ಇಲ್ಲದವನು ಹೇಗೆ ಕಂಡಾನು?,,

"ಇದ್ದಾನೆ ಮಹಾರಾಜಾ. ಅವನು ಈಗಾಗಲೇ ಮೂವತ್ತು ಮಂದಿಯನ್ನು ನುಂಗಿದ್ದಾನೆ. ಆ ಮೂವತ್ತು ಮಂದಿಯೂ ಕೂಡಿ ಒಂದೇ ಸಾರಿ ಅವನನ್ನು ಎದುರಿಸಿದ್ದರೆ ಪೀಡೆ ತೊಲಗಿಹೋಗುತಿತ್ತು.,,

ಮಹಾರಾಜನು ಕಣ್ಣುಗಳಿಂದ ಕಿಡಿಗಳನ್ನುದುರಿಸುತ್ತಾ "ಪಾಪಾತ್ಮ! ನಿನ್ನ ಕಳ್ಳವೇಷವನ್ನು ಸಾಕುಮಾಡು! ನೀನು ಜನರಕ್ಷಕನೆಂಬ ವೇಷ ಹಾಕಿಕೊಂಡು, ಜನರನ್ನು ಕೂಡಿಸಿ ರಾಜನಾಗಬೇಕೆಂದು ನೋಡುತ್ತೀಯೇ! ಒಂದೆಡೆ ಜನತೆಯನ್ನು ಬೆದರಿಸಲಿಕ್ಕೆ ರಾಕ್ಷಸನನ್ನು ಕಲ್ಪಿಸಿ ಬಿಟ್ಟಿದ್ದೀ; ಮತ್ತೊಂದು ಕಡೆ ಅವನು ಸುಲಭದಲ್ಲಿ ಸಾಯುತ್ತಾನೆನ್ನುತ್ತಾ ಜನರನ್ನು ನಿನ್ನ ಕಡೆಗೆ ಹೊರಸಿಳಿಕೊಳ್ಳುತ್ತಿದ್ದೀ ನಿನ್ನ ಉಪಾಯ ಅರ್ಧ ಜಯಿಸಿತಯ್ಯ ಜಯಿಸಿತು! ಹೀಗೊಂದು ನಾಲ್ಕು ಸಾರಿ ತಿರುಗಿ ಯೂವ ನಿರ್ಭಾಗ್ಯನನ್ನೋ ಕೊಂದು, ರಾಕ್ಷಸನನ್ನುಕೊಂದು, ಏಕಚಕ್ರ ಪುರವನ್ನು ರಾಕ್ಷಸನ ಬಾಧೆಯಿಂದ ಕಾಪಾಡಿದೆನೆಂದು ಮೂಢರಾದ ಪ್ರಜೆಗಳನ್ನು ಸುಲಭವಾಗಿ ನಂಬಿಸಿಬಿಡಬಲ್ಲೆ. ಮಂತ್ರೀ! ಈ ರಾಜದ್ರೊಹಿಯ ತಲೆ ಹಾರಿಸಿರಿ. ಈ ಉಳಿದವರನ್ನೂ ಕಾರಾಗೃಹದೊಳಗೆ ದೂಡಿಸಿರಿ,, ಎಂದು ಆಣತಿಯಿತ್ತನು.

o o o

(ಮುಂದುವರಿಯುವುದು)

Quality Air Cushion
Rubber Stamps
Crown
RUBBER STAMP CO.
PHONE 283 — ESTD 1926
BALMATTA ROAD, MANGALORE.

ದೂಮ್ರಪಾನದ ಸಹಜವಾದ ಆನಂದಕ್ಕಾಗಿ
ಸೇದಿರಿ
ಎಸ್.ಆರ್ ಬೀಡಿಗಳನ್ನು
ಎಲ್ಲಾಕಡೆಗಳಲ್ಲಿಯೂ ದೂರಲ್ಪಡುತ್ತವೆ
SR
REGD.
S.R. BEEDI WORKS
UDIPI, S. K.

ಉಡುಪಿ ಡಿ. ಮು. ಕೋರ್ಟಿನಲ್ಲಿ

ಕ್ರಮ ನಂಬ್ರ 193/1962

H. ನರಸಿಂಹ ಪೈ ಕೂಡಾ — ವಾದಿರು ಮತ್ತು

ಗೋಪಾಲ ಸೇರಿಗಾರ—ಸುಬ್ಬಣ್ಣ ಸೇರಿಗಾರ್ರ ಅಳಿಯ—ಉಡುಪಿ ತಾಲೂಕು ಚಾಂತಾರು ಗ್ರಾಮದ ಬ್ರಹ್ಮಾವರ— ಪ್ರತಿವಾದಿ.

ಸದರಿ ಪ್ರತಿವಾದಿಗೆ—

ಪ್ರತಿವಾದಿಯು ವಾದಿರ ವಳಗೆ ಮೂಲಗೇಣಿಗೆ ಅನುಭವಿಸಿ ಬರುವ ದಾವಾ ಅಸ್ತಿಯ ಬಾಬ್ತು ಪ್ರತಿವಾದಿಯಿಂದ ವಾದಿರಿಗೆ ಬಹಾಕಳೆದ ದುರ್ಮುಖಿ ಸಂ/ರದ ಲಾಗಾಯಿತು ಪ್ಲವ ಸಂ/ರದ ಅಂತ್ಯದ ವರೆಗಿನ ವರುಷಗಳ ಮೂಲಗೇಣಿ ವ ಬಡ್ಡಿ ಕೂಡಾ ರೂಪಾಯಿ 71_97ಕ್ಕೆ ವಾದಿಯು ಪ್ರತಿವಾದಿಯ ಮೇಲೆ ಮಾಡಿದ ಸದರಿ ವ್ಯಾಜ್ಯವು ತಾರೀಕು 15-9-1962ಕ್ಕೆ ತನಖೆ ಬಗ್ಗೆ ಇಟ್ಟಿದ— ಆ ದಿವ್ಯ ಸದರಿ ಪ್ರತಿವಾದಿಯು ಸ್ವತಹಾಯೂ ವಕೀಲರ ಮುಖಾಂತ್ರ ಕೋರ್ಟಿಗೆ ಹಾಜರಾಗಿ ಉದಹರಿಸಿದೆಯಿದ್ರೆ ಆತನ ಗೈರಾಹಾಜರಿಯಿಂದ ಸದರಿ ವ್ಯಾಜ್ಯವು ತೀರ್ಮಾನಿಸಲ್ಪಡುವುದೆಂದು ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸೋದಾಗಿಯದೆ.

M. Damoder Kamath,
Advocate for Plffs.

ಉಡುಪಿ, ತಾರೀಕು 28-3-1962

ನವಯುಗ'ಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ

REGD. No. B. G. 176
LICENCE No. 31
Licensed to Post without Prepayment

ಶುದ್ಧ ಹರಟೆ—

ಮಾನವನ ಪರಿಪೂರ್ಣ ಆಯುಷ್ಯ

ಒಬ್ಬ ಮನುಷ್ಯ ಎಷ್ಟು ವರ್ಷಗಳ ಕಾಲ ಬದುಕಬಹುದು ಎಂಬ ಪ್ರಶ್ನೆಯು ಇಂದು ನಿನ್ನೆಯದಲ್ಲ; ಹಿಂದಿನಿಂದಲೂ ಇದ್ದದ್ದೇ. ಆದರೆ, ಈ ಪ್ರಶ್ನೆಗೆ ಸಮರ್ಪಕವಾದ ಉತ್ತರವನ್ನು ಯಾವ ವೈಜ್ಞಾನಿಕನಿಗಾಗಲೀ ಪ್ರಕೃತಿ ಶಾಸ್ತ್ರಜ್ಞನಿಗಾಗಲೀ ಮಾನವ ಶಾಸ್ತ್ರಿಗಾಗಲೀ ಹೇಳಲು ವುದು ಇಂದಿಗೂ ಅಸಾಧ್ಯವೆನಿಸಿದ ಸಂಗತಿ. ದಶರಥ ಮಹಾರಾಜ ಹೆತ್ತು ಸಾವಿರ ವರ್ಷ ರಾಜ್ಯಭಾರ ಮಾಡಿದ, ಅಶ್ವತ್ಥಾಮ ಮೂಜಾರ್ಜ ಚಿರಂಜೀವಿಯಾಗಿಯೇ ಉಳಿದಿದ್ದಾನೆ, ಭೀಷ್ಮಾಚಾರ್ಯ ತನ್ನ ಮರಿ ಮಕ್ಕಳು ಮೃತ್ಯುಮುಖರಾದ ಬಳಿಕವೇ ತಾನು ಅವರನ್ನು ಹಿಂಬಾಲಿಸಿದ ಎಂದು ಮುಂತಾದುವು ಅಖ್ಯಾಯಿಕೆಗಳಾಗಿಯೇ ಉಳಿದಿವೆ. ಇವುಗಳ ಮೂಲ ಶೋಧನೆಗೆ ಹೊರಟ ಮೇಧಾವಿಗಳು ಕೊನೆಮೊಟ್ಟಲಾರದೆ, ಇವು ರುದ್ಧ ಸುಳ್ಳು ಎಂದೋ ಅಂದಿನ ವರ್ಷದ ಪರಿಮಾಣವು ಚಿಕ್ಕದಾಗಿರಬೇಕು ಎಂದೋ ಹೇಳಿ ತಮ್ಮ ಅಸಮರ್ಥತೆಯನ್ನು ಮುಚ್ಚಿಡುವ ವ್ಯರ್ಥ ಸಾಹಸ ಮಾಡುತ್ತಾರೆ. ಹಾಗಿದ್ದರೂ ಒಬ್ಬ ಮಾನವನ ಪರಿಪೂರ್ಣ ಆಯುಷ್ಯವೆಂದರೆ ೧೨೦ ವರ್ಷವೆಂದು ಇಂದಿನವರ ನಂಬಿಕೆ. ವಾದಿರಾಜ ಸ್ವಾಮಿಗಳು ಈ ಪರಿಮಿತಿಯ ವರೆಗೆ ಇಹಲೋಕ ವ್ಯಾಪಾರಾಸಕ್ತರಾಗಿ ಆ ನಂತರ ಜೀವಲೋಕದಿಂದ ಬಂದ ವಿಮಾನದಲ್ಲಿ ಮೇಲೇರಿದರು ಎಂದು ಹೇಳುತ್ತಾರೆ. ಎಂದರೆ, ೧೨೦ ವರ್ಷಗಳಿಗಿಂತ ಹೆಚ್ಚು ಬದುಕುವ ಅಧಿಕಾರ ಮಾನವನಿಗೆ ಇಂದು ಇಲ್ಲ; ಆತನೊಂದು ವೇಳೆ ಜೀವಹಿಡಿದಿದ್ದರೂ—ಈ ಸ್ಥಿತಿಯನ್ನು ಜೀರಾವ ಹೆಸರಿನಿಂದ ಕರೆಯುವುದು ಸಾಧ್ಯ?—ಆತ ಜೀವಚ್ಛವದಂತೆ ಅಲ್ಲದೆ ಮತ್ತೇನು? ಖಾಸಗಿ ಸಂಸ್ಥೆಗಳ ನೌಕರರು ತಮ್ಮ ಷಷ್ಟ್ಯಬ್ದಿ ಪೂರ್ತಿಯನ್ನೂ ಉಪಜೀವನ ಪೂರ್ತಿಯನ್ನೂ ಏಕ ಕಾಲದಲ್ಲಿಯೇ ಆಚರಿಸಬೇಕೆಂಬ ನಿಯಮವಿದೆ—ಸರಕಾರಿ ನೌಕರರಿಗಾದರೂ ಆ ದಿನ ಮಕ್ಕೂ ಬೇಗನೇ ಬರುತ್ತದೆ—ಪರಿಸ್ಥಿತಿ ಹೀಗಿರುವಾಗ ಈ ಪರಿಮಿತಿಯ ಎರಡರಷ್ಟು ಬದುಕುವುದೆಂದರೆ, ಬದುಕಿಯೂ ಸತ್ತಂತಲ್ಲವೆ? ಇದ್ದವರಿಗೆ ಹಂಗಾಗಿ ಬದುಕುವುದಕ್ಕಿಂತ ನಿಜವಾದ ಸಾವನ್ನಪ್ಪುವುದೇ ಮೇಲು ಎಂಬ ಭಾರತೀಯ ದರ್ಶನ ಶಾಸ್ತ್ರೋಕ್ತವೇ ಶದಂತೆ, ಉದ್ಯೋಗ ನಿವೃತ್ತರಾದ ಬಳಿಕ ತನ್ನ ಮಕ್ಕಳು ಮರಿಗಳ ಕೇಟಲೆಯನ್ನು ತಾಳಲಾರದೆ ಅಸಹನೀಯ ಯಾತನೆಯಿಂದ ಮುಕ್ತಿ ಬಯಸಿ ಉಪವಾಸವ್ರತ (ಸಲ್ಲೇಖನವಲ್ಲ) ಧಾರಿಗಳಾಗಿ ಸ್ವರ್ಗಕ್ಕೇರುವವರೂ ನಮ್ಮಲ್ಲಿದ್ದಾರೆ. ಇದನ್ನೆಲ್ಲ ಮನಗಂಡ ಬ್ರಹ್ಮನಾದರೂ ಭಾರತೀಯರಿಗೊಬ್ಬನೆ ಸಂತಸರಿ ಆಯುಷ್ಯವನ್ನು ಮೂವತ್ತರ ಗಡಿಯಲ್ಲೇ ಇರಿಸಿದ್ದು ತುಂಬ ಉಪಕಾರ ಮಾಡಿದ್ದನು.

ಆದರೆ, ಬ್ರಹ್ಮದೇವನೂ ಇದೀಗ ಅಸರ ವಯಸ್ಸಿನಲ್ಲಿ ಅನಿವಾರ್ಯವಾಗಿ ತಪ್ಪು ಮಾಡುವ ಅಭ್ಯಾಸದಿಂದ ದೂರವಾದಂತೆ ತೋರುವುದಿಲ್ಲ. ನಿವೃತ್ತರಾಗುವುದಕ್ಕೆ ಹತ್ತು ವರ್ಷವಿರುವಾಗಲೇ, ಕೆಲವರು ಇದಕ್ಕೆ ಮೊದಲೇ, ಇಂತಹ ಮರವು ರೋಗ ಪೀಡಿತರಾಗುವುದನ್ನು ನಾವು ನೋಡುತ್ತೇವೆ. ಬಿಳಿ ಗಡ್ಡದ ಅಜ್ಜಯ್ಯ, ನಮ್ಮ ಸೃಷ್ಟಿಕರ್ತ ತಪ್ಪು ಲೆಕ್ಕ ಹಾಕಿದರೆ ಆಶ್ಚರ್ಯವಿಲ್ಲ. ಎಂಟು ಎಂಟು ಹದಿನೆಂಟರ ಲೆಕ್ಕ ಚಾಣಾಕ್ಷ ವ್ಯಾಸಾರಿಯು ಜೀವಾಳ. ಇಂತಹ ತಪ್ಪು ಮಾಡಿದಾಗಲೇ ಗಿರಾಕಿಯ ಬಾಯಿಯಿಂದ 'ಚಾಣಾಕ್ಷನೆಂಬ ಬಿರುದು ತುಟಿಯ ಹೊರಗಲ್ಲವಾದರೂ ಒಳಗಿಂದೊಳಗೆ ಮೂಡಿ ಅಲ್ಲಿಯೇ ಅಂಕಿತವಾಗುವುದು. ಆದುದರಿಂದಲೇ ಇರಬೇಕು, ಭಾರತೀಯನ ಸರಾಸರಿ ಆಯುಷ್ಯವಿಂದು ಖರ ಗಡಿಯನ್ನು ಮುಟ್ಟಿಲೆಯೆಂದು ಅಂಕೆ ಸಂಖ್ಯೆಗಳ ತಜ್ಞರು ಅಭಿಪ್ರಾಯ ಪಡುತ್ತಾರೆ. ಹಾಗಿರುವುದರಿಂದಲೇ ನಮ್ಮವರ ಪರಿಪೂರ್ಣ ಆಯುಷ್ಯದ ಪರಮಾವಧಿ ಮಿತಿಯು ೧೨೦ರಿಂದ ೩೦ಕ್ಕೆ ಏರಿರಲೇ ಬೇಕು.

ಈ ಲೆಕ್ಕವನ್ನು ನೋಡುವಾಗ ಪ್ರಾಥಮಿಕ ಶಾಲೆಯಲ್ಲಿ ಗಣಿತಾಧ್ಯಾಪಕರು ಕಲಿಸಿದ್ದ ಪ್ರಮಾಣ ಮತ್ತು ದಾಮಾಶಯದ ಅಧ್ಯಾಯ(ಹೈಸ್ಕೂಲು, ಕಾಲೇಜುಗಳಲ್ಲಿ ಕಲಿಸಲಿಲ್ಲ;ಕಲಿಸಿದ್ದರೂ ಕಲಿತಿಲ್ಲ; ಕಲಿತಿದ್ದರೂ ನೆನಪಿಲ್ಲ) ಸ್ಮರಣೆಯಾಗುತ್ತದೆ. ಒಬ್ಬ ಮನುಷ್ಯನು ಎರಡು ಮಣ ನೆಲಗಡಲೆಯನ್ನು ಮೂರು ತಿಂಗಳುಗಳಲ್ಲಿ ತಿಂದರೆ, ನಾಲ್ಕು ಜನರು ಎಂಟು ಮಣ ನೆಲಗಡಲೆಯನ್ನು ಎಷ್ಟು ತಿಂಗಳಲ್ಲಿ ತಿಂದು ಮುಗಿಸುತ್ತಾರೆ? ಈ ಪ್ರಶ್ನೆಯನ್ನು ಓದಿದ ಕೂಡಲೇ ಜಾಣಾಕ್ಷ ವಿದ್ಯಾರ್ಥಿಯೂ ನಾನು ತಕ್ಷಣ ಉತ್ತರ ಕೊಟ್ಟೆ 'ಹನ್ನೆರಡು ತಿಂಗಳುಗಳಲ್ಲಿ' ಎಂದು ಆ ಮೇಲೆ ಅಧ್ಯಾಪಕರು ಕಿವಿಹಿಂಡಿ, ಕುಟ್ಟಿಯೇಟು ಬಾರಿಸಿ, ಸರಿಯಾದ ಉತ್ತರ ಹೇಳಿದಾಗ ಮಾತ್ರ ಆ ಉತ್ತರವೇ ಸರಿಯೆಂದು ಗೊತ್ತಾಯಿತು. ಆ ಕುಟ್ಟಿಯ ಪ್ರಭಾವವೇ ಇಂದು ಆ ಅಧ್ಯಾಯವನ್ನು ಮರೆಯದಂತೆ ಮೂಡಿದೆಯೆಂದು ಚಿತ್ರಗುಪ್ತರ ದಪ್ತರದಲ್ಲಿ ಅವಶ್ಯ ಉಲ್ಲೇಖವಿದ್ದೇ ಇರಬೇಕು.

ಕಲಕತ್ತೆಯ ವೈಜಸ್ಪ್ರೆಟರ ಕೋರ್ಟಿನಲ್ಲಿ ೧೫೮ ವರ್ಷದ ಒಬ್ಬ ವ್ಯಕ್ತಿ ಸಾಕ್ಷಿ ನುಡಿದ ಎಂಬ ವರದಿಯನ್ನು ಓದಿದೊಡನೆ ಈಯೆಲ್ಲ ಗತಕಾಲದ ಸಂಸ್ಮರಣೆಗಳೂ ಉಸಸ್ಮರಣೆಗಳೂ ಅರಿವಿಲ್ಲದೆಯೇ ಬಂದುವು. ಈ ಸಾಕ್ಷಿದಾರ ತಾನು ೧೭೦ನೆ ಇಸವಿಯಲ್ಲಿ ಜನಿಸಿದ್ದನೆಂದೂ ತನಗೆ ೧೫೮ ವರ್ಷಗಳೆಂದೂ ತನ್ನ ಹೆಸರು ಶೇಖನ ಜೀಬನೆಂದೂ ನ್ಯಾಯಾಲಯದಲ್ಲಿ ಪ್ರತಿಜ್ಞೆ ಮಾಡುವಾಗ ಹೇಳಿದನಂತೆ. ಸಾಕ್ಷಿ ನುಡಿಯಲು ತನಗೆ ಒಬ್ಬ ಸಹಾಯಕನ ಸಹಾಯ ಪಡೆದ ಆತನು ತನ್ನ ವ್ಯಾಯವೆಷ್ಟೆಂದು ಹೇಳಲು ಒಬ್ಬ ವಕೀಲನ ನೆರವು ಪಡೆದಿರಲೇ ಬೇಕು ಎಂಬುದು ಊಹೆನೆ ಮತ್ತೆ. ಆ ವಕೀಲನಾದರೂ ನಜೀಬನನ್ನು ಆಷ್ಟೊಂದು ಮುಪ್ಪುಕನನ್ನಾಗಿ ಮಾಡುವುದಕ್ಕೆ ಬೇರೆಯೇ ಒಂದು ಪ್ರಬಲಕಾರಣವಿರಬೇಕು. ಮದುವೆಯಾಗುವುದಕ್ಕೆ ಮೊದಲು ತಮ್ಮ ವ್ಯಾಯವನ್ನು ವರ್ಷಗಳೆದಂತೆ ಕಡಿಮೆ ಮಾಡುತ್ತ ಬರುವ ಯುವಕ-ಯುವತಿಯರು ಇದ್ದಾರೆ, ಹಾಗೆಯೇ ನಿವೃತ್ತರಾದ ನಂತರ ಒಂದು ವರ್ಷಕಳೆದರೆ ಏದು ವರ್ಷ ಕಳೆಯಿತು. ಎಂದು ಲೆಕ್ಕ ಹಾಕುವ ಮುದುಕರೂ ಇದ್ದಾರೆ. ಈ ಸಿದ್ಧಾಂತದ ಆಧಾರದಿಂದ ಆ ಮನುಷ್ಯನು ಇದೀಗ ಕೇವಲ ೭೮ ವರ್ಷದವನೆಂದು ಸಾಧಿಸುವುದು ಸಾಧ್ಯವಿದೆ. ಈ ಸಿದ್ಧಾಂತವನ್ನು ಕೇಳಿದೊಡನೆಯೇ ಆಶ್ಚರ್ಯಪಡಬಹುದು. ಆದರೆ, ಅದರ ಸಾಧನೆಯನ್ನು ಕಂಡಾಗ ಮತ್ತಷ್ಟು ವಿಸ್ಮಯ ಪಡಬೇಕಾಗುವುದರಿಂದ ಮೂದಲಲ್ಲಿಯೇ ಬ್ರೇಕ್ ಮೆತ್ತ ಮೆತ್ತಗೆ ಒತ್ತಿ ಕೊಂಡಿರಿ. ಈ ಸಿದ್ಧಾಂತದಿಂದ ಕೆಲವೊಂದು ಅನುಮಿತಗಳೂ ಸಿದ್ಧಿಸುತ್ತವೆ.

ಆ ಸಾಕ್ಷಿದಾರನು ನ್ಯಾಯವಾಗಿ ಹುಟ್ಟಿದ್ದು ೧೫೮ಳಲ್ಲಿ.ಕನ್ನಡಕವಿಡುವ ವಕೀಲರಮುದಿ ಗುಮಾಸ್ತ ಕನ್ನಡಕ ತೆಗೆದು ಆ ಇಸವಿಯನ್ನು ೧೭೦ ಎಂದು ಬರೆಯುವುದು ಅಸಂಭವವಲ್ಲ. ನ್ಯಾಯಾಲಯಕ್ಕೆ ಒಮ್ಮೆ ಸಾಕ್ಷಿದಾರರೆ ವಿವರ ಕಳಿಸಿದ ನಂತರ ಬದಲಾಯಿಸುವುದು ಸಾಧ್ಯವಿಲ್ಲವಾದುದರಿಂದ ಈ ಇಸವಿಯನ್ನು ಭದ್ರಗೊಳಿಸುವುದೂ ಆತನ ವ್ಯಾಯ ೧೫೮ ಎಂದು ಸಾಧಿಸುವುದೂ ಅಗತ್ಯವಾಯಿತು ೧೭೦ಳಲ್ಲಿ ಜನಿಸಿದ ಆತನು ಸರಕಾರಿ ನೌಕರಿಗೆ ಸೇರಿ ೫೫ನೆಯ ವರ್ಷಕ್ಕೆ ಅಂದರೆ ೧೮೨೫ರಲ್ಲಿ ನಿವೃತ್ತಿ ಹೊಂದುವವನಿರಬೇಕು. ಆದರೆ, ದ್ವಿತೀಯ ಮಹಾಯುದ್ಧದ ಭಗವಾಟೆಯ ಆ ಕಾಲದಲ್ಲಿ ನೌಕರಿಗೆ ಸಾಕಷ್ಟು ಜನರು ಸಿಗದೆ ಇದ್ದುದರಿಂದ ಆತನ ಸೇನೆಯನ್ನು ಒಂದು ಬಾರಿಗೆ ಒಂದು ವರ್ಷದಂತೆ ಮೂರು ಸಲ ಮುಂದುವರಿಸಿ ೧೮೪೨ರಲ್ಲಿ ನಿವೃತ್ತಿಗೊಳಿಸಿರಬೇಕು. ಆ ಮೇಲಿನ ಪ್ರತಿ ಇಸ್ವಿಯೊಂದಕ್ಕೆ ಐದೈದು ವರ್ಷವೆಂಬ ಅನುಭವ ಪ್ರಮಾಣದ ಆಧಾರದಿಂದ, ಆತನ ವಯಸ್ಸು ಇಂದು (೫೫+೩) + (೩೦×೫) = ೧೫೮ ಆಗಲೇ ಬೇಕು. ೧೯೬೨ಕ್ಕೆ ೧೫೮ ವರ್ಷ ವಯಸ್ಸಾಗಬೇಕಾದರೆ ನ್ಯಾಯವಾಗಿ ಆತ ೧೭೦ಳಲ್ಲಿ ಜನಿಸಲೇ ಬೇಕಾಗುತ್ತದೆ. ಆತನ ನೌಕರಿ, ಅನುಭವ ಇತ್ಯಾದಿಗಳ ವಿವರ ಇನ್ನೂ ಬಾರದಿರುವುದರಿಂದ, ಸದ್ಯಕ್ಕೆ ಈ ಸಿದ್ಧಾಂತವನ್ನೂ ಅನುಮಿತಗಳನ್ನೂ ಒಪ್ಪಿಕೊಂಡಿರಿ. ಪರಿಪೂರ್ಣ ಆಯುಷ್ಯ ೧೨೦ನ್ನು ಮೀರಿಲ್ಲವೆಂದು ಹಿಂದಿನವರ ಸಿದ್ಧಾಂತವನ್ನೂ ಪಂಚವಾರ್ಷಿಕ ಯೋಜನೆಗಳ ಮೂಲಕ ಮಾನವರ ಸರಾಸರಿ ಆಯುಷ್ಪರಮಾಣ ಏರಿದೆಯೆಂದೂ ಅದು ಇದೇ ಪ್ರಮಾಣದಲ್ಲಿ ಹೆಚ್ಚಿದರೆ, ಮರಳಿ ದಾಮಾಶಯ ಹಾಕಿ, ೨.೨೫:೨೦ : : ? : ೯೦ ಎಂದು ಬರೆದು, ಗುಣಿಸಿ, ಭಾಗಿಸಿ, ೧೦-೧೫ನೆ ಪಂಚವಾರ್ಷಿಕ ಯೋಜನೆಗಳು ಮುಗಿದಾಗ ಮಾನವನು ಪರಿಪೂರ್ಣ ಆಯುಷ್ಮಾನ್ ಆಗುವನು ಎಂದು ದೃಢವಾಗಿ ನಂಬಬಹುದು. ಆದರೆ, ನಮ್ಮ ಯೋಜನೆಗಳ ಪ್ರಮಾಣ, ರೂಪ, ಕಾರ್ಯ ಪ್ರಣಾಳಿಗಳು ಕ್ಷಣಕ್ಷಣಕ್ಕೆ ಒಂದೊಂದು ರೂಪವಾಗುವುದರಿಂದ ದಪ್ಪ ಕನ್ನಡಕದ ಅಂಕಗಾರನ ಗಣಿತ ತಲೆ ಕೆಳಗಾಗದು ಎಂದು ಸಂದೇಹ ಹುಟ್ಟಿದರೆ, ಅದನ್ನು ಯಾರಲ್ಲಿಯೂ ಹೇಳಬೇಡಿ; ಹೇಳಿದರೆ ಅದುವರೆಗಿನದೊ ಬಾಳುವುದು ಮುಳ್ಳಿನ ಹಾಸಿಗೆಯಲ್ಲಿ ಮಲಗುವಂತಾಗ ಬಹುದು.

—ಗೋರಾ.

ನಾಗಾಜನರಿಗೆ ಪ್ರತ್ಯೇಕ ರಾಜ್ಯ

(೧ನೇ ಪುಟದಿಂದ)

ವಲಯಂ ಲಕ್ಷ ರೂಪಾಯಿಗಳು. ಹೊಸ ರಾಜ್ಯ ಸ್ಥಾಪಿತವಾದ ಉತ್ಸಾಹದಲ್ಲಿ ರಾಜ್ಯದ ಅಭಿವೃದ್ಧಿಕಾರ್ಯಗಳನ್ನು ತೀವ್ರವಾಗಿ ಮುಂದುವರಿಸಿ, ರಾಜ್ಯವನ್ನು ಸ್ವಯಂಪೂರ್ಣ'ಗೊಳಿಸುವಲ್ಲಿ ನಾಗಾ ಜನರು ಹಿಂದುಳಿಯಲಾರರು. ಹಾಗಾಗುವ ವರೆಗೆ ಅಕ್ಷಿನ ಅರ್ಥ ವ್ಯವಸ್ಥೆಯು ಕೇಂದ್ರದ ಉದಾರ ಧನ ಸಹಾಯವನ್ನೇ ಎದುರು ನೋಡುತ್ತಿರ ಬೇಕಾಗುವುದು. ಬಂಡೆಬಿಟ್ಟಿರುವ ಧೈರ್ಯ ಸಾಹಸವಿರುವ ನಾಗಾ ಜನರು ಸ್ವಧರ್ವವಾಗಿ ತಮ್ಮ ಶಕ್ತಿಯನ್ನು ಹಾ್ರಸಗೊಳಿಸದೆ ರಾಜ್ಯದ ಪುನರಚನೆಯ ಕಾರ್ಯದಲ್ಲಿ ಆಸಕ್ತರಾಗಿ ಸಹಕಾರ ಭಾವನೆಯಿಂದ ನಡೆದು ಕೊಂಡರೆ ತಮ್ಮ ಉನ್ನತಿಯೇ ಬ ಸತ್ಯವನ್ನು ಮನಗಂಡು ಹಾಗೆ ಮಾಡುವರೆಂದು ಹಾರೈಸೋಣ ಬಹುದು.

ಉಪ ಸಂಹಾರ

ಹೊಸರಾಜ್ಯದ ಹೆಸರು ನಾಗಾಲೇಂಡ್ ಎಂದು. ಇದನ್ನು ನಾಗಾ ಪ್ರದೇಶ ಆಥವಾ ನಾಗಾರಾಜ್ಯವೆಂದು ಕರೆಯ ಬಹುದಿತ್ತು. ರಾಷ್ಟ್ರೀಯ ಮನೋಭಾವನೆಯು ಬೆಳೆಯುತ್ತಿರುವ ಇಂದಿನ ದಿನಗಳಲ್ಲಿ ಇಂತಹ ಹೆಸರು ಬಹು ಉಚಿತವೆನಿಸುತಿತ್ತು. ಆದರೆ, ಕೆಲವೊಂದು ವಿಶಿಷ್ಟ ಕಾರಣಗಳಿಂದ ಸ್ವದೇಶ ಇಲ್ಲವೇ ರಾಜ್ಯವು ಲೇಂಡಾಗಿಯೇ ಮುಂದುವರಿಯುವುದು. ಭಾರತದ ಗಡಿನೆಯದೆನಿಸುವ ಈ ರಾಜ್ಯವು ಭಾರತದ ಗೌರವ ಘನತೆಗಳಿಗೆ ಹೊಂದಿಕೊಂಡು ಮುಂದುವರಿಯುವರೆಂದೂ ನಾಗಾ ಜನರು ಶಾಂತರಾಗಿ ತಮ್ಮ ಉನ್ನತಿಯನ್ನು ಸಾಧಿಸುವರು ಎಂದೂ ಹೇಳಬಹುದು.

ಶಾಲೆಗಳಿಗೆ ಬೇಕಾಗುವ
ಯೂನಿಫಾರ್ಮುಗಳೂ
ಹಾಜರಿ ರಿಜಿಸ್ಟ್ರರುಗಳೂ ಸಿಗುತ್ತವೆ.
ನವಯುಗ ಪ್ರೆಸ್ ಉಡುಪಿ.

Edited Printed & Published by K. H. Shetty, at the Navayuga Press, Udipi, S, India.

ಅಖಿಲ ಕರ್ನಾಟಕದ
ಪ್ರಾತಿನಿಧಿಕ ಕಥಾಸಂಕಲನ
ಮಧುವನ
'ಕಿರಿಯರ ಪ್ರಪಂಚ'ದ
ಅಪೂರ್ವ ಪ್ರಕಟಣೆ
ಬೆಲೆ: ರೂ. ಮೂರು
ನವಭಾರತ ಪುಸ್ತಕ ಭಂಡಾರ
ಉಡುಪಿ

ನವಯುಗ

Estd. 1921 ಸ್ಥಾಪನೆ
Regd. No. B.G. 176
Vol. 42 No. 2

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 13—9—1962 ಗುರುವಾರ

13 ನ. ಪೈಸೆ
ವಾ. ಚಂದಾ ರೂ. 6—75
ಸಂಪುಟ ೪೨ ಸಂಚಿಕೆ ೨

ಮಿತ.ದರದಲ್ಲಿ
ಕ್ಲಪ್ತ ಸಮಯದಲ್ಲಿ
ಉತ್ತಮ ತರದಲ್ಲಿ
ಮುದ್ರಣ
ಕೆಲಸಗಳಾಗಬೇಕೆ?
ಸಂದರ್ಶಿಸಿರಿ ಯೂ ವಿಚಾರಿಸಿರಿ
ನವಯುಗ ಪ್ರೆಸ್,
ಉಡುಪಿ

ದೇಶದ ಸಮಗ್ರತೆಯ ಯಕ್ಷ ಪ್ರಶ್ನೆ

ಕಳಗಂ ಕಾರ್ಯ ನೀತಿಯನ್ನು ಹತ್ತಿಕ್ಕುವುದರೊಡನೆ ಇತರ ಪಕ್ಷಗಳೂ ರಾಷ್ಟ್ರದ ಸಮಗ್ರತೆಗೆ ಕುಂದು ತರಬಾರದು.

ದಕ್ಷಿಣದ ತಮಿಳು ನಾಡಿನ ದ್ರವಿಡ ಮುನ್ನೇತ್ರ ಕಳಗಂ ಹೂಡಿದ ಹಲವಾರು ಅಂದೋಲನ, ಮಾಡಿದ ಕೆಲವೊಂದು ಪ್ರದರ್ಶನಗಳಲ್ಲಿ ರೂಪಾಯಿ ನೋಟುಗಳ ಮೂಲಕ ತನ್ನ ಪ್ರಚಾರ ಸಾಧಿಸುವುದು ಅತೀವ ವಿಲಕ್ಷಣವೆನಿಸಿದೆ. ತನ್ನ ಪಕ್ಷದ ಘೋಷಣೆಗಳನ್ನೂ ವೆಲ್ಲೂರು ಜೇಲಿನಲ್ಲಿ ಬಂಧಿತರಾಗಿರುವ ಕಳಗಂ ನಾಯಕ ಅಣ್ಣಾದೊರೈ ಎಂ. ಎ. ಇವರನ್ನು ಬಿಡುಗಡೆಗೊಳಿಸಬೇಕೆಂಬ ಕೇಳಿಕೆಯನ್ನೂ ಮುದ್ರೆಯೊತ್ತುವಂತಹ ಹೊಸ ರೀತಿಯ ಚಳುವಳಿಗೆ ಇದು ಎಳಸಿದೆ. ಪ್ರಾಯ: ತಮ್ಮ ಘೋಷಣೆಗಳನ್ನೂ ಕೇಳಿಕೆಗಳನ್ನೂ ಪ್ರಚಾರ ಮಾಡಲು ನೋಟುಗಳ ಮಾಧ್ಯಮವನ್ನು ಬಳಸಿಕೊಂಡವರು ಇದುವರೆಗೆ ಯಾರೂ ಇಲ್ಲ. ಕಳಗಂ ಇಂತಹ ಬೆಲೆ ಬಾಳುವ ನೋಟುಗಳನ್ನು ವ್ಯರ್ಥಗೊಳಿಸಿ ಸಾಮಾಜಿಕರನ್ನು ನಷ್ಟಕ್ಕೆ ಗುರಿ ಮಾಡುವ ಸಾಹಸಕ್ಕೆ ಕೈಹಾಕಿದಂತಾಯಿತು.

ಸಾಮಾಜಿಕರಿಗೆ ಅನ್ಯಾಯ

ಕಾಗದದ ನೋಟುಗಳಲ್ಲಿ ರಾಜಕೀಯ ಸಂದೇಶವಿದ್ದರೆ, ಅವು ನ್ಯಾಯ ಬದ್ಧವಾಗುವುದಿಲ್ಲ; ಎಂದರೆ, ಚಲಾವಣೆಗೆ ಅವು ನಿಷಿದ್ಧವೆನಿಸುತ್ತವೆ. ಹಾಗಾಗಿ ಕಾಗದದ ರೂಪಾಯಿ ನೋಟುಗಳಲ್ಲಿ ಕಳಗಂ ಘೋಷಣೆಗಳು ಅಂಕಿತವಾಗಿದ್ದರೆ, ಆ ನೋಟುಗಳು ಕೇವಲ ಕಾಗದದ ತುಂಡುಗಳಿಗೆ ಸಮಾನವಾದುವು. ವಿದ್ಯಾವಂತರಾದವರು ಈ ಅವಾಂತರರದಿಂದ ಬದುಕಿಕೊಳ್ಳೆ ಬಹುದು ಆದರೆ, ಅವಿದ್ಯಾವಂತ ಜನತೆಯು ಇಂತಹ ಗುಟ್ಟನ್ನು ತಿಳಿದುಕೊಳ್ಳುವುದು ಹೇಗೆ? ಅದುದರಿಂದ ತಿಳುವಳಿಕೆಯುಳ್ಳವರು ಇಲ್ಲದವರಿಗೆ ಈ ಸಂಬಂಧದಲ್ಲಿ ತಿಳಿಸಿ ಹೇಳಬೇಕಾಗಿದೆ. ಸಾರ್ವಜನಿಕರಿಗೆ ವಿಘಾತುಕವೆನಿಸುವ ಕಳಗಂ ಧೋರಣೆ—ಪ್ರವರ್ತನೆಗಳು ಮಹಾಪರಾಧಕಾರಣವೆಂದು ಯೂರೊಬ್ಬನೂ ಹೇಳಬಹುದು.

ಸಂವಿಧಾನಕ್ಕೊಂದು ಆಹ್ವಾನ

ಇತ್ತೀಚೆಗೆ ರಾಷ್ಟ್ರದ ಐಕ್ಯಕ್ಕೆ ತಡೆ ತರುವ ಮತ್ತು ಜಾತೀಯ ಪಕ್ಷಗಳನ್ನು ಬಹಿಷ್ಕೃತಗೊಳಿಸುವ ಬಗ್ಗೆ ಮಾತುಕತೆಗಳು ಪದೇ ಪದೇ ಕೇಳಬರುತ್ತಿವೆ. ಕೇಂದ್ರ ಗೃಹಮಂತ್ರಿಗಳಾದರೂ ಈ ಸಂಬಂಧದಲ್ಲಿ ಸಾಕಷ್ಟು ಪರಿಶೀಲನೆ ನಡೆಸುತ್ತಿರುವರೆಂದು ಗೊತ್ತಾಗಿದೆ. ಪ್ರಶಾಸಕರು ಇಂದು ಉಳಿದೆಲ್ಲ ಪಕ್ಷಗಳಿಗೆ ಹೆದರುವುದಕ್ಕಿಂತ ಕಳಗಂಗೆ ಅತಿಯಾಗಿ ಅಂಜಬೇಕಾಗಿದೆ. ಏಕೆಂದರೆ, ಉಳಿದ ಎಲ್ಲ ರಾಜಕೀಯ ಪಕ್ಷಗಳು ಕಾಂಗ್ರೆಸ್ ವಿರೋಧಿಗಳು ಮಾತ್ರ; ಆದರೆ ದ್ರಾವಿಡ ಕಳಗಂ ಕಾಂಗ್ರೆಸ್ ವಿರೋಧಿಯೆಂಬುದಕ್ಕಿಂತಲೂ ಸಂವಿಧಾನ ವಿರೋಧಿಯೆಂದರೆ ಸರಿಯಾಗುವುದು. ಬಹು ಭಾಷೆ ಬಹು ಧರ್ಮ ಯುಕ್ತವಾದ ವಿಶಾಲ ವಿಸ್ತಾರ ಭಾರತದ ಒಕ್ಕೂಟವನ್ನುಎಲ್ಲ ಭಾರತೀಯರೂ ದೃಢವಾಗಿ ಒಪ್ಪಿರುವಾಗ, ಅದನ್ನು ಒಡೆಯುವುದು ರಾಷ್ಟ್ರದ್ರೋಹ, ಸಂವಿಧಾನ ವಿರೋಧೀ ಕೃತಿ. ಹಾಗಿರುವಾಗ, ದ್ರಾವಿಡ ಕಳಗಂನ ದ್ರವಿಡ ಸ್ಥಾನದ ಇಲ್ಲವೇ ತಮಿಳು ನಾಡಿನ ಹುಚ್ಚು ಕಲ್ಪನೆ ಮತ್ತು ಕಲ್ಪನಾ ಪ್ರಪಂಚದಲ್ಲಿ ಸಾಗುತ್ತಿರುವ ವಿಧ್ವಂಸಕ ವಿನಾಶಕ ಕೃತಿಗಳು, ಕೃತಕ ವ್ಯೋಮದಲ್ಲಿ ಪ್ರತಿಧ್ವನಿಸುವ ಅವರ ವಿಚಿತ್ರ ವಿಲಕ್ಷಣ ಘೋಷಣೆಗಳು ಅದು ಸಂಘಟಿಸುತ್ತಿರುವ ಅಪೂರ್ವ ಅಂದೋಲನ ಪ್ರದರ್ಶನಗಳು ಸಮಾಜದ ಅಶಾಂತಿಗೆ ಮಾತ್ರ ಪ್ರೇರಕವಾಗುವುದಲ್ಲ; ದೇಶದ ಸಮಗ್ರತೆಗೆ ಮಾತ್ರಭಂಗ ತರುವುದಲ್ಲ; ನಮ್ಮ ಪೂಜ್ಯ ಸಂವಿಧಾನಕ್ಕೆ ಮಾಡುತ್ತಿರುವ ಅಪಮಾನವೆನಿಸಿದೆ.

ಹುರುಳಿಲ್ಲದ ವಾದ

ದೇಶದ ಸಮಗ್ರತೆ ಮತ್ತು ಭಾವೈಕ್ಯಗಳ ಮೇಲೆ ಪ್ರತ್ಯೇಕತಾವಾದಿಯಾದ ದ್ರವಿಡ ಕಳಗಂ ಬೀರುವ ದುಷ್ಪ್ರಭಾವಗಳ ಕಡೆಗೆ ರಾಷ್ಟ್ರೀಯ ಭಾವೈಕ್ಯ ಸಮಿತಿಯು ತೀವ್ರ ವಿಚಾರ ಮಾಡುತ್ತಿದೆ. ಇತ್ತೀಚೆಗೆ ಮದ್ರಾಸದಲ್ಲಿ ಸೇರಿದ್ದ ಈ ಸಮಿತಿಯ ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲ ಸದಸ್ಯರೂ ಕಳಗಂ ನೀತಿಯು ಅರಾಷ್ಟ್ರೀಯವೆಂದು ಅಭಿಪ್ರಾಯ ಪಟ್ಟಿತು. ಆದರೆ ಇದರ ತೀವ್ರತೆ ಮತ್ತು ಅದನ್ನು ದೂರ ಮಾಡಲು ಅನುಸರಿಸಬೇಕಾದ ಮಾರ್ಗಗಳ ಬಗ್ಗೆ ಭಿನ್ನ ಮತವು ಪ್ರಕಟವಾಯಿತು. ಪಾರತಂತ್ರ್ಯದ ಸಂಕೋಲೆಗಳಿಂದ ದೇಶವನ್ನು ಬಂಧ ಮುಕ್ತಗೊಳಿಸಲು ಹೋರಾಡಿದ ರಾಷ್ಟ್ರೀಯ ವಾದಿಗಳೆಲ್ಲರೂ ಈ ಅರಾಷ್ಟ್ರೀಯತೆಯನ್ನು ಪ್ರತಿಭಟಿಸುವುದು ಸ್ವಾಭಾವಿಕ. ತಾವು ಮದ್ರಾಸ ರಾಜ್ಯದಲ್ಲಿ ನೂರಕ್ಕೆ ಇಪ್ಪತ್ತೈದರಷ್ಟು ಸ್ಥಾನಗಳನ್ನು ಗಳಿಸಿರುವುದರಿಂದ ತಮ್ಮ ನೀತಿಗೆ ಅಷ್ಟು ಜನರ ಬೆಂಬಲವಿದೆಯೆಂದು ಕಳಗಂ ಸದಸ್ಯರು ವಾದಿಸುತ್ತಿದ್ದಾರೆ. ಆದರೆ, ಇದರಲ್ಲಿ ಸಂಪೂರ್ಣ ಸತ್ಯವಿಲ್ಲ. ಏಕೆಂದರೆ, ಮತದಾರರು ಕಳಗಂನ ವಿಧ್ವಂಸಕ ಚಟುವಟಿಕೆಗಳನ್ನು ಅರಾಷ್ಟ್ರೀಯವಾದವನ್ನು ಮೆಚ್ಚಿ ಅದನ್ನು ಬೆಂಬಲಿಸಿದರೆಂದುನಂಬುವುದುಕಷ್ಟ. ಕಳಗಂ ಒಂದು ಕಾಂಗ್ರೆಸ್ ವಿರೋಧೀ ಪಕ್ಷ;—ಪ್ರಸವಾ. ಸಮಾಜವಾದಿ ಇತ್ಯಾದಿಗಳಂತೆ—ಎಂದು ನಂಬಿ, ಕಾಂಗ್ರೆಸ್ ವಿರೋಧಿಗಳೆಲ್ಲರೂ ಇದನ್ನು ಬೆಂಬಲಿಸಿರುವ ಸಂದರ್ಭವೇ ಹೆಚ್ಚು. ತಿರುಚೆಂದೋಡಿನ ಮರು ಚುನಾವಣೆಯ ಬಗ್ಗೆ ಸ್ವತಂತ್ರ ಪಕ್ಷದ ಅಧ್ವರ್ಯು ರಾಜಾಜಿಯವರು ಈ ವಾದವನ್ನೇ ಬೆಂಬಲಿಸಿದ್ದಾರೆ; ತಮ್ಮಪಕ್ಷವು ಚುನಾವಣಾರಂಗಕ್ಕೆ ದುಮುಕದಿರುವುದಕ್ಕೆ ಪ್ರತ್ಯೇಕತಾವಾದದ ನೀತಿಗೆ ಬೆಂಬಲವೀಯುವ ಪ್ರವೃತ್ತಿಯಲ್ಲ, ಕಾಂಗ್ರೆಸ್ ವಿರೋಧೀ ನೀತಿಯು ಪ್ರೇರಕವೆಂದವರು ಸ್ಪಷ್ಟಪಡಿಸಿದ್ದಾರೆ.

ಬಹಿಷ್ಕಾರದ ಪ್ರಶ್ನೆ

ಕಳಗಂ ಮತ್ತು ಇತರ ವಿರೋಧೀ ಪಕ್ಷಗಳ ನಡುವೆ ಇರುವ ಒಂದು ಮುಖ್ಯ ಅಂತರವೆಂದರೆ, ಇತರ ಪಕ್ಷಗಳು ಕಾಂಗ್ರೆಸ್ ಪ್ರಶಾಸನ ನೀತಿಯನ್ನು ವಿರೋಧಿಸುವವಾದರೆ, ಕಳಗಂ ಭಾರತದ ಸಮಗ್ರತೆಯನ್ನೇ ಪ್ರಶ್ನಿಸುತ್ತದೆ. ಹಾಗಿರುವಾಗ, ಭಾರತದ ಒಕ್ಕೂಟವನ್ನು ಮುರಿಯುವ ಧ್ಯೇಯವನ್ನು ಇಟ್ಟುಕೊಂಡಿರುವ ಈ ಪಕ್ಷದ ನೀತಿಯು ಸಂವಿಧಾನಕ್ಕೆ ವಿರೋಧಿಯಾಗಿರುವುದರಿಂದ, ಅದು ಪ್ರಜಾ ಪ್ರಭುತ್ವೋಚಿತ ಸೌಲಭ್ಯಗಳನ್ನು ಪಡೆಯಬಹುದೆ? ಎಂಬ ಒಂದು ಮಹಾ ಪ್ರಶ್ನೆ ಮುಂದೆ ಬರುತ್ತದೆ. ಇದನ್ನು ವಿಚಾರ ಮಾಡಿದಾಗ, ಕಳಗಂನ ಅಸ್ತಿತ್ವವು ಭಾರತದ ಸಂವಿಧಾನಕ್ಕೆ ಪ್ರತಿಕೂಲವಿರುವುದರಿಂದ, ಅದನ್ನು ಬಹಿಷ್ಕೃತಗೊಳಿಸುವುದು ಅತ್ಯವಶ್ಯವೆಂದು ಹೆಚ್ಚಿನವರ ಅಂಬೋಣ. ಇದಕ್ಕಾಗಿ ಸಂವಿಧಾನಕ್ಕೆ ತಿದ್ದುಪಡಿ ಮಾಡಬೇಕಾದ ಅಗತ್ಯವಿಲ್ಲ. ಒಂದು ರಾಜ್ಯದಲ್ಲಿ ಸಂವಿಧಾನಕ್ಕೆ ವಿರುದ್ಧವಾಗಿ ಅಂದೋಲನಾದಿಗಳನ್ನು ನಡೆಸುತ್ತಿರುವ ಒಂದು ಪಕ್ಷವು ಪ್ರಜಾಪ್ರಭುತ್ವದ ಆಧಾರಸ್ತಂಭವಾದ ಸಂವಿಧಾನವನ್ನೇ ಆಹ್ವಾನಿಸುವುದರಿಂದ, ಅದು ಅಪಾಯತಮವೆನ್ನಲು ಬೇರೆ ನಿದರ್ಶನಗಳು ಬೇಕಾಗಿಲ್ಲ. ತಮಿಳುನಾಡಿನ ಒಂದು ವರ್ಗದ ಜನತೆಯ ಅಸಂತೃಪ್ತಿಯೇ ಕಳಗಂನ ಪರ್ವತಾಕಾರದ ಬೆಳವಣಿಗೆಗೆ ಕಾರಣವೆಂಬುದನ್ನು ಮನಗಂಡಾಗ, ಆ ಅಸಂತೃಪ್ತಿಯನ್ನು ದೂರ ಮಾಡುವಲ್ಲಿ ಪ್ರಶಾಸನ ಪಕ್ಷವು ಆಸಕ್ತಿ ತಳೆಯುವುದು ಅಕರ್ಮಣ್ಯವೆನಿಸದು.

ಪ್ರಶಾಸಕರ ಮಾತೃಕೆ

ದೇಶದ ಸಮಗ್ರತೆ-ಐಕ್ಯವೆಂದು ಮುಂತಾದ ಉದ್ದುದ್ದ ಮಾತುಗಳನ್ನು ಆಡುತ್ತಿರುವವರಲ್ಲಿ ಹೆಚ್ಚಿನ ಕಾಂಗ್ರೆಸಿಗರೂ ಸೇರಿದ್ದಾರೆ; ಅವರು ಸೇರುವುದೂ ನ್ಯಾಯ. ಆದರೆ, ಇಂದು ಕೇಂದ್ರದಲ್ಲಿಯೂ ವಿವಿಧ ರಾಜ್ಯಗಳಲ್ಲಿಯೂ ಅಧಿಕಾರ ಸೂತ್ರವನ್ನು ಹಿಡಿದಿರುವ ಕಾಂಗ್ರೆಸಿಗರು ತಮ್ಮ ತಮ್ಮೊಳಗೆ ಹೋರಾಡುತ್ತಿರುವುದು ತುಸು ಅವಹೇಳನ ವೆನಿಸುತ್ತದೆ. ಭಾಷಾ ತಳಹದಿಯಲ್ಲಿ ರಾಜ್ಯಗಳ ಪುನರ್ವಿಂಗಡಣೆಯಾಗಿ ಇಷ್ಟು ವರ್ಷಗಳುಗತಿಸಿದರೂ ರಾಜ್ಯಗಳ ಗಡಿಯ ಪ್ರಶ್ನೆಯಲ್ಲಿ ನಡೆಯುತ್ತಿರುವ ಹಗರಣಗಳು ಭಾವೈಕ್ಯಕ್ಕೆ, ಸಮಗ್ರತೆಗೆ ಚ್ಯುತಿತರುವಂತಿಲ್ಲವೆ? ನದೀ ನೀರಿನ ಹಂಚಿಕೆಯ ವಿಷಯದಲ್ಲಿ ದಕ್ಷಿಣದ ರಾಜ್ಯಗಳು ನಡೆಸುವ ಹೊಯ್‌ಕೆಯ ಯಾರಿಗೆ ಭೂಷಣಪ್ರಾಯವಾಗಿವೆ? ಯಾವುದಾದರೊಂದು ಯೋಜನೆಯು ಅಖಿಲ ಭಾರತ ತಳಹದಿಯಲ್ಲಿ ರೂಪಿತಗೊಳ್ಳುತ್ತಿರುವಾಗ, ಬೇರೆ ಬೇರೆ ರಾಜ್ಯಗಳು ತಮಗೆ ತಮಗೆ ಎಂದು ಬಡೆದಾಡುವುದು ನ್ಯಾಯೋಚಿತವೆ? ಇಂತಹ ಹಲವಾರು ನಿದರ್ಶನಗಳು ಸ್ವಯಂ ಕಾಂಗ್ರೆಸಿಗರಲ್ಲಿಯೇ ರಾಷ್ಟ್ರೀ

(ಅನೇ ಪುಟ ನೋಡಿರಿ)

ಖೀರಾ
ನೀವು ತಾಳಿಕೆ—ಬಾಳಿಕೆಯನ್ನು ರಚನಾ ವೈವಿಧ್ಯತೆಯನ್ನು ಬಯಸುವಿರಾ?
ಹಾಗಿದ್ದರೆ ದೇಶ ವಿಖ್ಯಾತ ಖೀರಾ ಉಕ್ಕಿನ ಫರ್ನಿಚರುಗಳೇ ನಿಮ್ಮ ಆಯ್ಕೆ ಖಂಡಿತ.
ಸಣ್ಣ ದೊಡ್ಡ ಕಪಾಟುಗಳು, ಮೆಚ್ಚಿನ ಮೇಜು ಕುರ್ಚಿಗಳು, ದ್ವಿವಿಧ ಉಪಯೋಗದ ಮಂಚ+ಸೋಫಾಗಳು, ಸಂದರ್ಭೋಚಿತ ಉಡುಗೊರೆ ಸಾಹಿತ್ಯಗಳು ಇತ್ಯಾದಿಗಳಿಗೆ ಮನೆ ಮಾತಾಗಿರುವ ಸಂಸ್ಥೆ—ಶಾಸ್ತ್ರಿ & ಕೊ, ಹಂಪನಕಟ್ಟೆ ಮಂಗಳೂರು 1
KHIRA

ನವೀನ ರೀತಿಯ ಧಾರಾವಾಹಿ ಪೌರಾಣಿಕ ಕತೆ.

ನರಭಕ್ಷಕ ಬಕಾಸುರ

ಬರೆದವರು— ಶ್ರೀ ಕೊಡವಟಿಗಂಟಿ ಕುಟುಂಬ ರಾವ್
ಅನುವಾದ— ಶ್ರೀ ಮಾದರಚಿಟ್ಟು ರಂಗ ರಾವ್

(ಕಳೆದ ಸಂಚಿಕೆಯಿಂದ ಮುಂದುವರಿದುದು)

ನಗರದೊಳಗೆಲ್ಲಾ ರಾಜಾಜ್ಞೆಯಂತೆ ಡಂಗುರ ಸಾರಲಾಯಿತು. ಅದರ ತಾತ್ಪರ್ಯವೇನೆಂದರೆ,

"ನಗರ ವಾಸಿಗಳಿಗೆ ಎಚ್ಚರಿಕೆ! ಬಕಾಸುರನೆಂಬ ಮಹಾ ಬಲಿಷ್ಠನಾದ ರಾಕ್ಷಸನು ಏಕ ಚಕ್ರಪುರ ವಾಸಿಗಳಿಗೆ ಊಹಿಸಲಸಾಧ್ಯವಾದ ಪ್ರಮೋದಕಾರಿಯಾಗಿದ್ದಾನೆ. ಈ ಪ್ರಮೋದದಲ್ಲಿ ಸಾವಿರದೊಂದಂಶ ಕೂಡಾ ಪ್ರಜೆಗಳ ಅನುಭವಕ್ಕೆ ಇನ್ನೂ ಬರಲಿಲ್ಲ ಪ್ರಜೆಗಳಿಗೆ ಕಂದಿಯುಂತಹ ಮಹಾ ರಾಜರೂ, ಮಂತ್ರಿಯುವರೂ ಸಕಾಲದಲ್ಲೇ ತಕ್ಕ ಜಾಗ್ರತೆ ವಹಿಸಿಕೊಂಡದ್ದರಿಂದಲೇ ಅಪಾಯವು ಅಂಕೆಯೊಳಗೆ ಅಡಗಿಸಲಾಗಿದೆ. ಆದರೆ ಬಲಭದ್ರನಂತಹ ಮೂರ್ಖರು ಮಹಾರಾಜರು ಕೈಕೊಂಡ ಪ್ರಜಾಕ್ಷೇಮ ಕಾರ್ಯಕಲಾಪಗಳಿಗೆ ವಿಘ್ನ ಮಾಡುವುದೇ ಆಲ್ಲದೆ, ಆ ಮಹಾ ರಾಕ್ಷಸೇಶ್ವರನಿಗೂ ಕೂಡ ಸಿಟ್ಟು ಬರುವಂತಹ ಕೆಲಸ ಮಾಡುತಿದ್ದಾರೆ. ಹೀಗೆ ಮಾಡಿದವರು ಅದಕ್ಕೆ ತಕ್ಕ ಫಲವನ್ನೂ ಅನುಭವಿಸಿದರು. ಬಕಾಸುರೇಶ್ವರನು ಬಲಭದ್ರನನ್ನೂ, ಅತನ ಅನುಚರರನ್ನೂ ಒಂದೇ ಕ್ಷಣದೊಳಗೆ ಕೊಂದು ಬಿಟ್ಟದ್ದಾನೆ. ಆದುದರಿಂದ ಪ್ರಜೆಗಳು ಬಲಭದ್ರನಂತಹ ಮೂರ್ಖರ ಮಾತಿಗೆ ಮೋಸ ಹೋಗದೆ ದೇವರ ಮೇಲೂ ರಾಜರ ಮೇಲೂ ಭಾರ ಹಾಕಿ, ಕೆಲವು ಜಾಗ್ರತೆಗಳನ್ನೂ ತೆಗೆದುಕೊಳ್ಳಬೇಕು. ಯಾರೂ ಬಕಾಸುರೇಶ್ವರನ ಗೊಡವೆಗೆ ಹೋಗಬಾರದು. ಅವನ ವಿಷಯ ಹರಟೆಕೊಳ್ಳಬಾರದು. ನಗರ ದಾಟಿ ಹೋಗಬಾರದು. ದೇವರ ಧ್ಯಾನ ಮಾಡುತ್ತಾ ತಮ್ಮ ತಮ್ಮ ನಿತ್ಯ ಕೃತ್ಯಗಳಲ್ಲಿ ನಿಮಗ್ನರಾಗಿ ಇರತಕ್ಕದ್ದು. ಭಯವಿದ್ದವರು ಹನುಮದುಪಾಸನ ಮಾಡಿಕೊಂಡರೆ ಬಕಾಸುರನು ಸ್ವಪ್ನದಲ್ಲಿ ಬರುವುದಿಲ್ಲ ಅವನ ಭಯವು ಯಾರನ್ನೂ ಬಾಧಿಸುವುದಿಲ್ಲ."

ಈ ಡಂಗುರವನ್ನು ಕೇಳಿ ಜನತೆಗೆ ಬಹಳ ಮಟ್ಟಿಗೆ ಧೈರ್ಯ ಬಂದಿತು. ಇದಕ್ಕೆ ತಕ್ಕ ಹಾಗೆ ಕೆಲವರು ಮಂತ್ರಗಾರರು ತಾಯತ್ತು ಗಳನ್ನು ರಕ್ಷಣೆಗಳನ್ನೂ ತಯಾರು ಮಾಡಿ ಜನತೆಯೊಳಗೆ ಮಾರಾಟ ಮಾಡಲು ಪ್ರಾರಂಭಿಸಿದರು. ಇವುಗಳನ್ನು ಕೊಂಡುಕೊಂಡು ಕಟ್ಟಿಕೊಂಡವಂಗೆ ಹೊಸ ಜೀವ ಬಂದ ಹಾಗಾಯಿತು.

ಚಯನನೂ ಅವನ ಹೆಂಡತಿಯೂ ಹನ್ನೆರಡು ವರ್ಷ ವಯಸ್ಸಿನ ಮಗಳೂ ನಾಲ್ಕು ವಯಸ್ಸಿನ ಮಗನೂ ತಲಾ ಒಂದೊಂದು ತಾಯತ್ತು ಕಟ್ಟಿಕೊಂಡರು.

"ನೋಡಿದಿರಾ, ನೀವು ಸುಮ್ಮಸುಮ್ಮನೇ ಹೆದರಿ ಸತ್ತಿರಿ. ಮಹಾ ರಾಜರು ಎಷ್ಟು ಚಂದಾಗಿ ಪರಿಷ್ಕಾರ ಮಾಡಿದರೋ! ಒಳ್ಳೇ ವೇಳೆ! ಹೆದರಿಕೆಯಿಂದ ಊಟ ಬಿಟ್ಟು ಹೋಗಲಿಲ್ಲ ನಾವು" ಎಂದಳು ಚಯನನ ಪತ್ನಿ.

"ಈ ಊರು ಆಷ್ಟೇ, ಈ ರಾಜನೂ ಆಷ್ಟೇ. ನಿನಗೇನುಗೊತ್ತಿದೆ? ರಾಜನೇ ಬಲಭದ್ರನ ತಲೆ ತೆಗಿಸಿದ್ದು ಅಂತ ನಾನು ಕೇಳಿದ್ದೇನೆ. ಬಲಭದ್ರನೂ ಅವನ ಕಡೆಯವರೂ ನಗರದೊಳಗೆ ಬರುವುದನ್ನು ಕಂಡವನೇ ನನಗೆ ಹೇಳಿದ್ದಾನೆ. ಅವರೆಲ್ಲರನ್ನೂ ನುಂಗಿದನೆಂದು ಈ ರಾಜ ಡಂಗುರ ಸಾರಿಸುತ್ತಿದ್ದಾನೆ. ಅಸಲು ಈ ರಾಜನೇ ನೊನ್ನೆ ನೊನ್ನೆವರೆಗೂ ರಾಕ್ಷಸನ ಮಾತನ್ನೇ ನಂಬಲಿಲ್ಲವಂತೆ ಗೊತ್ತೇ ನಿನಗೆ" ಎಂದ ಚಯನ.

"ಅದೇನು ಕರ್ಮವೋ ಹೋಗಲಿ ರಕ್ಷಣೆ ಕಟ್ಟಿಕೊಂಡಿದ್ದೇವೆ. ಇನ್ನು ನಮಗೇನೂ ಭಯವಿಲ್ಲ,,,

"ಇಲ್ಲಯಿಲ್ಲ. ಇದರ ಮೇಲೆ ಅಂಜನೇಯ ಸ್ತವನವೂ ಬೇಕಂತೆ,,

ಚಯನನಿಂತು ತಿರಸ್ಕಾರದಿಂದ ಮಾತಾಡಿದರೂ, ಊರಿನೊಳಗೆ ನಿಜಕ್ಕೂ ರಕ್ಷಸನ ತಂಟೆ ತಪ್ಪಿದ ಹಾಗೆಯೇ ತೋರಿತು. ಎಲ್ಲಿಯೂ ಸತ್ತ ಸುದ್ದಿ ಬರಲಿಲ್ಲ. ಅಸಲು ಜನರು ನಗರ ಬಿಟ್ಟು ಹೊರಗೆ ಹೋದರೆ ತಾನೇ? ಜನರೆಲ್ಲಾ ಹೊರಗೆ ಹೊಗುವುದನ್ನೇ ಬಿಟ್ಟು ಬಿಟ್ಟರು. ಭಯ ನಿವಾರಣೆಗೆ ತಕ್ಕ ಕಾರಣ ಹುಡುಕುವ ಗೋಜಿಗೆ ಯಾರೂ ಹೋಗಲಿಲ್ಲ. ರಾಕ್ಷಸನ ಕೈಯಲ್ಲಿ ಯಾರೂ ಶಕ್ತಿಲ್ಲ ಎಂಬ ಮಾತೇ ಜನತೆಗೆ ಬೇಕಾಗಿತ್ತು. ಜನರು ರಾಕ್ಷಸನನ್ನು ಮರೆಯಲು ಆಷ್ಟಾದರೆ ಸಾಕು. ಮರೆತುಹೋದ ಪೀಡೆ ಇಲ್ಲದ ಪೀಡೆಗೆ ಸವಾಸ. ಇಂತಹ ಸುಖಮಯ ಪರಿಸ್ಥಿತಿಗೆ ಕಾರಣವಾದ ಕೀರ್ತಿ ರಾಜನಿಗೂ ಅವನ ಮಂತ್ರಿಗೂ ದಕ್ಕಿತು.

೦ ೦ ೦

ಆದರೆ ಪಾಲಕ ಪಾಲಿತರೊಳಗೆ ಇನ್ನೂ ಏನೋ ವಕ್ರಿಸಿಕೊಂಡಿದಿರಬೇಕು. ಪ್ರಜೆಗಳ ಭಯೂಂದೋಳನೆ ತಗ್ಗಿ ಹೋದಷ್ಟಾ ಮಂತ್ರಿಗಳ ಆಂದೋಳನೆ ಹೆಚ್ಚಾಯಿತು.

"ಮಂತ್ರೀ, ಹೀಗೆ ಎಷ್ಟು ಕಾಲ ದೂಡ ಬಹುದು? ಆ ರಾಕ್ಷಸನಿಗೆ ಒಂದು ತಿಂಗಳಿಂದಲೂ ಮನುಷ್ಯ ಪ್ರಾಣಿ ನಿಕ್ಕದ ಹಾಗೆ ಮಾಡಿದೆವು. ಆತ ಬಂದು ನಗರದ ಮೇಲೆಬಿದ್ದರೆ ಏನಪ್ಪಾದಾರು?ಎಂದ ರಾಜ

"ಅದನ್ನೇ ಆಲೋಚಿಸುತ್ತಿದ್ದೇನೆ ಮಹಾರಾಜಾ" ಎಂದ ಮಂತ್ರಿ.

ಯೋಚನೆ ಮಾಡಿ ಏನು ನಿರ್ಣಯ ಮಾಡಿದಿ ಎಂದು ರಾಜಕೇಳಲೂ ಇಲ್ಲ, ಮಂತ್ರಿ ಹೇಳಲೂ ಇಲ್ಲ. ಒಂದು ವೇಳೆ ಮಂತ್ರಿಯ ಆಲೋಚನೆ ತಕ್ಕಷಾಕಕ್ಕೆ ಬರಲಿಲ್ಲನೇನೋ! ಆದರೆ ಅದು ಪಾಕಕ್ಕೆ ಬಂದೇ ತೀರಬೇಕಾದ ಸಂದರ್ಭ ಬಂದೇ ಬಿಟ್ಟತು. ಒಂದು ದಿನ ಅರ್ಧ ರಾತ್ರಿ ಹೊತ್ತಿಗೆ ನಗರದ ದ್ವಾರವನ್ನು ಹೊರಗಿನಿಂದ ಯಾರೋ ಒಂದೇ ಸಮನೆ ತಟ್ಟುದರು. ದ್ವಾರ ರಕ್ಷಕನು ಬಾಗಿಲು ತೆಗೆದ. ಕೂಡಲೇ ಯಾರೋ ಅವನನ್ನು ಹೊರಕ್ಕೆ ಳೆದುಕೊಂಡರು. ಅವನನ್ನು ಮತ್ತೆ ಯಾರೂ ನೋಡಲೇ ಇಲ್ಲ.

ಉಳಿದ ಭಟ್ಟರು ರಾತ್ರಿಯಲ್ಲಿ ನಡೆದ ಆ ಸಂಘಟನೆಯನ್ನು ಬೆಳಗಾದಾಗ ಮಂತ್ರಿಯ ಮುಂದೆ ನಿವೇದಿಸಿಕೊಂಡರು.

"ಹಾಗಾದರೆ ಆತ ಅಲ್ಲೇ ಇದ್ದಾನೆ!" ತನ್ನೊಳಗೇ ಅಂದುಕೊಳ್ಳಬೇಕಾದ ಮಾತನ್ನು ಮಂತ್ರಿ ಬಾಯಿ ತೆರೆದೇ ಹೇಳಿಬಿಟ್ಟ.

ಬಕಾಸುರನನ್ನು ಕುರಿತು ಮಂತ್ರಿಗೆ ಇನ್ನೊಂದು ಹೊಸ ವಿಷಯ ತಿಳಿದಂತಾಯಿತು. ಆ ರಾಕ್ಷಸ ತಾನೇ ಮರದಷ್ಟು ಎತ್ತರದವನೆಂದೂ, ಅವನಿಗೆ ಗಂಗಾಳದಷ್ಟು ದೊಡ್ಡ ಬಾಯಿಯೆಂದೂ, ಆನೆಯ ದಂತಗಳಂತಹ ಕೋರೆಗಳುಂಟೆಂದೂ ಮಂತ್ರಿ ನಂಬಲಿಲ್ಲ. ಈಗಂತೂ ಆತನಿಗೆ ಒಬ್ಬ ಮನುಷ್ಯ ಸಿಕ್ಕಿದರೆ ಸಾಕು ಎಂಬ ಸೂಕ್ಷ್ಮ ತಿಳಿದುಬಂತು. ಅಲ್ಲದೆ ಇಬ್ಬರು ಮನುಷ್ಯರನ್ನು ತಿನ್ನಬಲ್ಲನನಾಗಿದ್ದರೆ, ಒಬ್ಬದ್ವಾರ ರಕ್ಷಕನನ್ನು ಮಾತ್ರ ಹಿಡಿದು ಸುಮ್ಮನಿರುತಿದ್ದನೆ? ತೆರೆದ ದ್ವಾರದಿಂದ ನಗರದೊಳಗೆ ಹೊಕ್ಕು ಇನ್ನೂ ಕೆಲವರನ್ನು ಹಿಡಿದು ಕೊಲ್ಲದಿರುತಿದ್ದನೆ?

"ಈ ಸುದ್ದಿಯನ್ನು ಇನ್ನೆಲ್ಲ ಹೇಳಬೇಡಿ. ಜನರು ನಿಷ್ಕಾರಣವಾಗಿ ಹೆದರಿ ಹೋದಾರು. ಮಾಪ, ಪ್ರಜೆಗಳು ಈಗ ತಾನೇ ನಿಶ್ಚಿಂತೆಯಿಂದ ಎದೆಯ ಮೇಲೆ ಕೈಯಿಟ್ಟುಕೊಂಡು ನಿದ್ದೆ ಮಾಡಲಾರಂಭಿಸಿದ್ದಾರೆ ಅಂದ ಹಾಗೆ ಆ ದ್ವಾರರಕ್ಷಕನಿಗೆ ಹೆಂಡ ತಿವಸಕ್ಕಳಿದ್ದಾರೋ?" ಎಂದು ಮಂತ್ರಿ ಭಟರನ್ನು ಕುರಿತು ಕೇಳಿದ.

"ಇಲ್ಲ ಬ್ರಹ್ಮಚಾರಿ!"

"ಒಳ್ಳೇದಾಯಿತು. ಯಾರಾದರೂ ಕೇಳಿದರೆ ಅವನನ್ನು ಅರಮನೆಗೆ ಬದಲಾಯಿಸಿದ್ದಾರೆಂದು ಹೇಳಿ ಬಿಡಿ. ಈ ಬಾರಿ ಯಾರಾದರೂ ಬಾಗಿಲು ತಟ್ಟಿದರೆ ತೆಗೆಯಬೇಡಿರಿ."

೦ ೦ ೦

ಇದೆಲ್ಲಾ ಮಂತ್ರಿಯ ಮುಖಾಂತರ ವಾಗಿ ಕೇಳಿದ ರಾಜನು" ಹೀಗಾ ಕತೆ? ಆ ರಾಕ್ಷಸನಿಗೆ ಬೇಕಾದ್ದು ಒಂದು ಬಾರಿಗೆ ಒಬ್ಬ ಮನುಷ್ಯನಾದರೆ ಬಹಳ ಒಳ್ಳೇದಾಯಿತು! ಆ ಒಬ್ಬ ಮನುಷ್ಯನನ್ನು ನಾವು ಹೇಗಾದರೂ ಅವನಿಗೆ ಒದಗಿಸಿಕೊಟ್ಟು, ಆತ ನಮ್ಮ ನಗರ ಬಿಟ್ಟು ಹೋಗದಂತೆ ನೋಡಿಕೊಳ್ಳಬೇಕು. ನಾವೀಗ ಏರ್ಪಡಿಸಿದ ಕಟ್ಟುಪಿಟ್ಟುಗಳಿಂದಾಗಿ, ಇಲ್ಲಿ ತಿಂಡಿ ಸಿಕ್ಕದೆ ಆತ ಇನ್ನೊಂದೂರಿಗೆ ಹೋಗಿಬಿಡುತ್ತಾನೋ ಎಂಬ ಭಯದಿಂದ ನನಗೆ ನಿದ್ರೆಯೇ ಬರುವುದಿಲ್ಲ ಮಂತ್ರೀ" ಎಂದನು.

ರಾಜನ ಹೃದಯವು ಮಂತ್ರಿಗೆ ತಿಳಿದು ಹೋಯಿತು. ಬಕಾಸುರನು ಏಕಚಕ್ರಪುರಕ್ಕೆ ಬಲವಾದ ಕೋಟೆಯಂತಿದ್ದಾನೆ ಆವನೊಬ್ಬ ಮೂರು ಅಕ್ಷೌಹಿಣೀ ಸೇನೆಗೆ ಸವಾನನು. ಚತುರಂಗ ಬಲವೇ ಅವನೊಬ್ಬ. ಅಂತೆಯೇ ಅವನು ಅರಾಜನಿಗೆ ದಿವ್ಯವಾದ ಅಂಗರಕ್ಷಕ. ಅವನನ್ನು ಇಲ್ಲಿಂದ ಹೋಗಲು ಬಿಡಬಾರದು. ಅವನ ಖರ್ಚು ವರುಷಕ್ಕೆ ಮುನ್ನೂರರುವತ್ತು ಮಂದಿ ಮಾನವ ಪ್ರಾಣಿಗಳು. ಬರೆ ಅಗ್ಗ. ಯುದ್ಧ ಬಂದರೆ ಇದರ ಐದು ಪಾಲಿನಷ್ಟು ಜನ ಸಾಯುತ್ತಾರೆ. ಕ್ಷಾಮ ಬಂದರೆ ಅದಕ್ಕಿಂತ ಹೆಚ್ಚೇ ಬಲಿಯಾಗುತ್ತಾರೆ ಕ್ಷಾಮದೊಂದಿಗೂ, ಮಹಾಮಾರಿಯೊಂದಿಗೂ ಶತ್ರುಗಳು ಬೇರೆ ಬಂದುಬಿದ್ದರೆ ಮಹಾ ನಷ್ಟವುಂಟಾಗುತ್ತದೆ. ಈ ರಾಕ್ಷಸ ಹಾಗಲ್ಲ; ಇವನನ್ನೊಂದು ಪೀಡೆ ಅಂದುಕೊಂಡರೂ ಇತರ ಪೀಡೆಗಳಿಗೆಲ್ಲಾ ದೊಡ್ಡ ಪ್ರತಿಬಂಧಕನಾಗಿದ್ದಾನೆ. ಅದೃಷ್ಟ ದೇವತೆಯೇ ಈ ರಾಕ್ಷಸನ ರೂಪದಲ್ಲಿ ಬಂದುದೆಂದರೂ ಅತಿಶಯೋಕ್ತಿಯಲ್ಲ.

"ಮಹಾ ಪ್ರಭುಗಳ ಅಭಿಪ್ರಾಯ ಗೊತ್ತಾಯಿತು. ಆ ರಾಕ್ಷಸ ಹೊರಟು ಹೋಗಲಾರ. ಆದಕ್ಕೆ ತಕ್ಕ ಏರ್ಪಾಡು ಮಾಡುತ್ತೇನೆ. ಅದೇನಷ್ಟು ಸುಲಭವಾದ ಏರ್ಪಾಡಲ್ಲ. ನಮಗೆ ಕೆಲ ಮಂದಿ ಹಿರಿಯರ ನೆರವು ಅಗತ್ಯ. ಸಾಧ್ಯವಾದಷ್ಟು ಬೇಗ ಎಲ್ಲಾ ಏರ್ಪಾಡುಗಳನ್ನೂ ಮಾಡಿ ತಮ್ಮಿಂದ ಭಲೇ ಅನ್ನಿಸಿಕೊಳ್ಳುತ್ತೇನೆ. ಎರಡು ದಿನ ಅವಕಾಶ ಕೊಟ್ಟರೆ ಸಾಕು" ಎಂದ ಮಂತ್ರಿ.

"ಬೇಕಾದರೆ ಇನ್ನೂ ಒಂದು ದಿನ ತೆಗೆದುಕೋ. ಕೆಲಸ ಕ್ರಮವಾಗಿ ನಡೆದರೆ ಸಾಕು. ಮುಖ್ಯ ಆ ರಾಕ್ಷಸ ಹೊರಟು ಹೋಗದಂತೆ ನೋಡಿಕೊ. ಅಷ್ಟಾದರೆ ಸರಿ" ಎಂದ ರಾಜ.

ಆ ದಿನ ಮಂತ್ರಿಯ ಮನೆಯಲ್ಲಿ ರಹಸ್ಯ ಸಭೆಯೊಂದು ನೆರೆತು. ಆದರಲ್ಲಿ ಭಾಗವಹಿಸಿದವರು ಕೇವಲ ಐದೇ ಮಂದಿ. ಆ ಐವರೂ ನಗರದ ಸ್ಥಿಮುಖರೇ. ಅವರೊಡನೆ ಮಂತ್ರಿ ಪೂರ್ಣ ಸುಳ್ಳು ಹೇಳಿ

(ಇನ್ನೇ ಮುಂ ನೋಡಿರಿ)

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ವ್ಯಾದಿಯ ಕೇಂದ್ರ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ವ್ಯಾದಿ, ನಿರಿಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ವಿಶೇಷ ಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ಲೇಖಾಂಕ ೧

ಕಥೆಗಾರ ರಾಜಾಜಿಯವರ ಕಲಾಸಿದ್ಧಿ

ಶ್ರೀ ಕೆ. ಎನ್. ಭಟ್, ಶಿರಾಡಿಘಾಲ್.

ಮೂಸ್ಯ ರಾಜಾಜಿಯವರು, ರಾಜತಂತ್ರ ಪ್ರವೀಣರಾಗಿರುವಂತೆ, ಕುಶಲ ಕಥೆಗಾರರೂ ಆಗಿರುವರು. ಅವರ ಕಥೆಗಳು ಸ್ವಾನುಭವ ಪೂರ್ಣವಾಗಿರುವಂತಿದ್ದು, ಮನೋರಂಜನೆಯೊಡನೆ — ಸಮಾಜಕ್ಕೆ ನೀತಿ ಪಾಠವನ್ನೂ ಬೋಧಿಸುತ್ತಿವೆ. ಶ್ರೀ ರಾಜಾಜಿಯವರು ತಮ್ಮ ಕಥೆಗಳಿಗೆ ಬಳಸುವ ಕಥಾವಸ್ತು ಹಾಗೂ ತಂತ್ರ, ಇವು ಒಂದಕ್ಕೊಂದು ಪೂರಕವಾಗಿರುವಂತಿದ್ದು ಅವರ ಮೃದು ಮಧುರ ಶೈಲಿಯಿಂದ ಕೂಡಿದ ಕಥನ ಕಲೆಯು ಹೃದಯ ಸ್ಪರ್ಶಿಯಾಗಿರುವುದು. ಈ ವಿಶೇಷತೆಗಳಿಂದಾಗಿ ಮೂಸ್ಯ ರಾಜಾಜಿಯವರು ಸಿದ್ಧ ಹಸ್ತ ಕಥೆಗಾರರಾಗಿದ್ದು, ಕಥನ ಕಲಾಸಿದ್ಧಿಯನ್ನು—ಪಡೆದಿರುವರು. ಅವರು, ನೂರಾರು ಕಥೆಗಳಲ್ಲಿ ಯಾವ ಕಥೆಯನ್ನೋದಿದರೂ ಸರಿಯೆ, ಆ ಕಥೆ ಸಹಜವಾಗಿಯೇ ಓದುಗರ ಮನಸ್ಸನ್ನು ಸೆರೆಹಿಡಿಯಬಲ್ಲುದು. ಉತ್ತಮವಾದ ದ್ರಾಕ್ಷೆಯ ಗೊಂಚಲನ್ನು ಎದುರಿಟ್ಟುಕೊಂಡು, ಅದರಿಂದ ಒಂದೊಂದೇ ಹಣ್ಣನ್ನು ತೆಗೆತೆಗೆದು ರುಚಿ ನೋಡುವಂತೆ, ಶ್ರೀ ರಾಜಾಜಿಯವರ ಕಥಾ ಗುಚ್ಛದಿಂದ ಒಂದೊಂದೇ ಕಥೆಯನ್ನು ಓದಿ ಅದರ ಸ್ವಾರಸ್ಯವನ್ನು ಮನಗಾಣಬೇಕು. ಇಗ ಶ್ರೀಯುತರ ಕಥೆಗಾರಿಕೆಯ ಹಿಂದೆ ಬಹಳ ಚೆನ್ನಾಗಿ ವ್ಯಕ್ತವಾಗಬಹುದು.

ಪ್ರಕೃತ, ಶ್ರೀ ರಾಜಾಜಿಯವರ ಹಿಂದೀ ಭಾಷೆಗೆ ಭಾಷಾಂತರವಾದ ಕಥಾ ಸಂಕಲನದ ಮೊದಲ ಕಥೆಯು, ಅವಲೋಕನ ಮಾತ್ರ ಈ ಲೇಖನದ ಮೂಲಕ ಮಾಡಲಾಗುವುದು.

'ಸ್ತ್ರೀಣಾಂ ದ್ವಿಗುಣ ಮಾಹಾರ ಬುದ್ಧಿಶ್ಚಾಪಿ ಚತುಷ್ಪಣಃ' ಎಂಬ ಪೂರ್ವೋಕ್ತಿಯಂತೆ, ಸ್ತ್ರೀಯರಿಗೆ ಆಹಾರವೂ ಎರಡು ಪಟ್ಟು ಹೆಚ್ಚು, ಅವರ ಬುದ್ಧಿಯೂ ಆದಕ್ಕೆ ತಕ್ಕ ಹಾಗೆ ನಾಲ್ಕು ಪಟ್ಟು ಚುರುಕು! ಎಂಬ ವಿಚಾರವನ್ನು ಶ್ರೀ ರಾಜಾಜಿಯವರು, ತಮ್ಮ 'ಕುಬ್ಜಾ ಸಂದರಂ' ಎಂಬ ಕಥೆಯ ಒಂದು ಘಟನೆಯ ಮೂಲಕ ಸಿದ್ಧಗೊಳಿಸಿ ತೋರಿಸಿರುವುದು ಬಹು ಸ್ವಾರಸ್ಯವಾಗಿದೆ.

ವಿಶೇಷಲಿಂಗ ಹಾಸ್ಟೆಲಿನ ಕಾರ್ಯಾಧ್ಯಕ್ಷೆ ಮತ್ತು ಕಮಲಾ ಎಂಬ ಹುಡುಗಿಯರೀರ್ವರು, ಬಿ. ಎ. ವರ್ಗದಲ್ಲಿ ಅಭ್ಯಾಸ ಮಾಡುತ್ತಿದ್ದರು. ಗೀತಾ ಪ್ರವಚನ ಶಿರೋಮಣಿ ನರಸಿಂಹ ಶಾಸ್ತ್ರಿ, ಎಂಬ ನಿವೃತ್ತ ಸಬ್ ಜಡ್ಜರು ತಮ್ಮ ಭಾಷಣಗಳ ಮೂಲಕ ಕೊಡುತ್ತಿದ್ದ ಉಪದೇಶಕ್ಕೂ ಆವರ ಸ್ವಂತ ಆಚರಣೆಗೂ, ಸಾಮ್ಯವಿಲ್ಲದಿದ್ದು, ಅವರು ವಿಶೇಷಲಿಂಗ ಹಾಸ್ಟೆಲಿನ ಹುಡುಗಿಯರ ಕಡೆಗೆ ವಿಶೇಷವಾದ ದೃಷ್ಟಿಯಿಂದ ನೋಡುತ್ತಿದ್ದರು! ಈ ಕಾರಣದಿಂದ, ಶಾಸ್ತ್ರಿಗಳಿಗೆ ಹೇಗಾದರೂ ಮಾಡಿ ಬುದ್ಧಿ ಕಲಿಸಬೇಕೆಂಬ ಉದ್ವೇಕದಿಂದ, ಕಮಲಾ— ಕಾರ್ಯಾಧ್ಯಕ್ಷೆ ಈ ಹುಡುಗಿಯರು ತಮ್ಮಿಗೆ ಒಂದು ನಿರ್ಧಾರವನ್ನು ಮಾಡಿಕೊಂಡು, ಶಾಸ್ತ್ರಿಗಳಿಗೆ ಒಂದು 'ಗುಪ್ತ ಪತ್ರ' ವನ್ನು ಬರೆದು ಕಳುಹಿಸುತ್ತಾರೆ! ಆ ಪತ್ರದ ಸಾರಾಂಶ ಹೀಗಿದೆ—

'ಗೀತಾ ಪ್ರವಚನ ಶಿರೋಮಣಿ ನರಸಿಂಹ ಶಾಸ್ತ್ರಿಯವರಿಗೆ — ವಿಶೇಷಲಿಂಗ ಹಾಸ್ಟೆಲಿನ ಹುಡುಗಿಯರು ಬರೆದ ಗುಪ್ತ ಪತ್ರ! ಮಹಾಶಯರೇ! ತಮ್ಮ ಪಾಂಡಿತ್ಯ —ಅಪ್ರತಿಮ ಭಾಷಣ ಹಾಗೂ ಉಪದೇಶವನ್ನು ನಾವು ಮೆಚ್ಚುತ್ತೇವೆ. ತಾವು ಭಕ್ತಿ ವೈರಾಗ್ಯ ಮತ್ತು ಆಧ್ಯಾತ್ಮ ವಿಚಾರಗಳನ್ನು ಒಹು ಸರಳವಾಗಿ—ಬೋಧಿಸುತ್ತೀರಿ! ಮೊನ್ನೆ ತಾವು—'ಸಂತಹಾಲ್' ನಲ್ಲಿ 'ಇಂದ್ರಿಯಗಳ ಮೇಲೆ ಬಿಗಿ ಇರಬೇಕು! ವಿಷಯ ಭೋಗಲಾಲಸೆಯಿಂದ ಪೂರ್ಣ ವಿಮುಖರಾಗಿ ಇರಬೇಕು" ಎಂದು —ಮುಂತಾಗಿ ಉಪದೇಶ ಮಾಡಲಿಲ್ಲವೇ? ಆದರೆ ತಾವು ಪರಂಗೆ ಕೊಡುವ ಉಪದೇಶದಂತೆ, ಸ್ವತಃ ಆಚರಣೆಯನ್ನೇಕೆ ಮಾಡುವುದಿಲ್ಲವೇ ತಮ್ಮ ಇಂದ್ರಿಯಗಳ ಮೇಲೆ, ಸ್ವತಃ ತಮಗೆ ಹಿಡಿತವಿಲ್ಲವೋ ಏನೋ! ಆದರಿಂದಲೇ ತಾವು ಕಾಲುಜಾರಿ ಪಾಪಕೂಪಕ್ಕೆ ಬೀಳುವವರಂತೆ, ವಿಷಯ ಭೋಗಲಾಲಸೆಯ ಕಡೆಗೆ ಹೊರಳುತ್ತಿರುವಿರಿ! ತಮಗೇನೂ ವಿಶೇಷ ವಯಸ್ಸಾಗಿಲ್ಲವೆಂದು ತೋರುವುದು! 40—45ರ ಪ್ರಾಯವೆಂದರೆ ಅದೇನೂ ವಿಶೇಷವಲ್ಲ! ತಾವು ಈ ಧರ್ಮೋಪದೇಶವನ್ನು ಬಿಟ್ಟು ಪುನರ್ವಿವಾಹ ಮಾಡಿಕೊಂಡು, ಇನ್ನಾದರೂ ಸುಖವಾಗಿ ಇರಬಹುದು. ತಮಗೆ ಮನಸ್ಸಿದ್ದರೆ, ಯೋಗ್ಯಳಾದ ಓರ್ವ ಹುಡುಗಿಯನ್ನು ನಾವೇ—ಸಂತೋಷದಿಂದ ಗೊತ್ತುಮಾಡಿ ಕೊಡುತ್ತೇವೆ. ತಾವು ಮಾತ್ರ ತಮ್ಮ ಮೂಳಿಗೆಯ ಮೇಲೆ ನಿಂತು, ಹಾಗೆ ನೆಟ್ಟ ದೃಷ್ಟಿಯಿಂದ ನಮ್ಮ ಕಡೆಗೆ ನೋಡುವುದನ್ನು ಬಿಟ್ಟುಬಿಡಬೇಕು! ಇಷ್ಟರ ವರೆಗೆ ತಾವು 'ಕಾವೀ ಬಟ್ಟೆ ಧರಿಸಿರುವ ಓರ್ವ ಸನ್ಯಾಸಿ!' ಎಂದೇ ಜನರು ತಿಳಿದಿದ್ದರು ಆದರೆ, ತಮ್ಮ 'ಹುಡುಗಿಯರನ್ನು ನೋಡುವ"ಆ ದೃಷ್ಟಿಯನ್ನು ಕಂಡರೆ ಯಾರೂ ತಮ್ಮ ದೃಷ್ಟಿಯನ್ನು ಗುರುತಿಸಬಹುದಾಗಿದೆ. ನಮ್ಮ ಕಾಲೇಜಿನ ಹುಡುಗಿಯರು ತಮ್ಮ ಈ ವರ್ತನೆಯನ್ನು ನಮ್ಮ ಪ್ರಿನ್ಸಿಪಾಲರಿಗೆ ಬರಹ ಮೂಲಕ ತಿಳಿಸಬೇಕೆಂದಿದ್ದರು. ಆದರೆ, ಉಪದೇಶ-ವಿದ್ವತ್ತುಗಳಲ್ಲಿ ಇಷ್ಟರ ವರೆಗೆ ಕೀರ್ತಿ ಪಡೆದಿರುವ ತಮಗೆ—ಪ್ರಿನ್ಸಿಪಾಲರಲ್ಲಿ ದೂರುಕೊಟ್ಟು ಕಲಂಕ ಹೆಚ್ಚುವುದು, ಸರಿಯಲ್ಲವೆಂದು ಯೋಚಿಸಿ, ನಾವು ತಮಗೆ ಈ ಪತ್ರವನ್ನು ಬರೆದು ಕಳುಹಿಸುತ್ತಿದ್ದೇವೆ. ತಾವು ಮದುವೆಮಾಡಿಕೊಂಡು, ಸುಖವಾಗಿರಬೇಕು' ನಮ್ಮನ್ನು ಹಾಗೆ ನೋಡಬಾರದು! ಎಂಬುದೇ ನಮ್ಮ ಇಚ್ಛೆಯಾಗಿದೆ!

ತಮಗೆ ಮದುವೆ ಮಾಡಿಕೊಳ್ಳುವ ಮನಸ್ಸಿದ್ದರೆ ನಾಳೆ ತಮ್ಮ ಮೂಳಿಗೆಯ ಮೇಲೆ, ತಮ್ಮ ಸೀತಾಂಬರವನ್ನು ಹರಡಿ ತಮ್ಮ ಕೊತೆಯನ್ನು ಬಿಡಿಸಿ ಇಟ್ಟುಬಿಡಿ! ಅದು ನಮ್ಮ ಹಾಸ್ಟೆಲಿನ ಮೂಳಿಗೆಯಿಂದ ನಮಗೆ ಕಾಣುತ್ತದೆ! ತಾವು ಮದುವೆಯಾಗುವ ಒಪ್ಪಿಗೆಗೆ ಇದೇ ಸಂಕೇತವೆಂದು ನಾವು ತಿಳಿದು, ಮುಂದಿನ ವಿವಾಹ ಮಾಡುತ್ತೇವೆ! ದಯವಿಟ್ಟು ತಮ್ಮ ಹೆರಿಗೆ ಕಲಂಕ ಹಚ್ಚಿಕೊಳ್ಳಬೇಡಿರಿ!

—'ವಿಶೇಷಲಿಂಗ"

ಹಾಸ್ಟೆಲಿನ ಹುಡುಗಿಯರು.

ನರಸಿಂಹ ಶಾಸ್ತ್ರಿಗಳು ಸಬ್‌ಜಡ್ಜ್ ಹುದ್ದೆಯಿಂದ ನಿವೃತ್ತರಾಗುವುದೂ, ಒಂದೇ ಒಂದು ಹೆಣ್ಣು ಮಗುವನ್ನು ಹೆತ್ತು ಆವರ ಹೆಂಡತಿ ತೀರಿ ಹೋಗುವುದೂ, ಏಕ ಕಾಲದಲ್ಲೆಂಬಂತೆ ಆಗಿಹೋಗಿತ್ತು. ತಾಯಿ ಇಲ್ಲದ ಆ ಹೆಣ್ಣು ಮಗುವನ್ನು ಶಾಸ್ತ್ರಿಗಳ ಖಾಸಾ ಅಕ್ಕ ನೋಡಿಕೊಳ್ಳುತ್ತಲಿದ್ದರು. ಆದರೆ ದುರ್ದೈವವೆಂಬಂತೆ, ಎರಡು ವರ್ಷಗಳಲ್ಲಿ ಆ ರಾಯರ ಅಕ್ಕ ಕೂಡ ತೀರಿ ಹೋದರು! ಈ ಘಟನೆಗಳಿಂದಾಗಿ, ವಿರಕ್ತಿ ಹೊಂದಿದ ಶಾಸ್ತ್ರಿಗಳು, ತಮ್ಮ ಮನಸ್ಸನ್ನು ಗೀತೆ, ಉಪನಿಷತ್ತುಗಳ ಕಡೆಗೆ ತಿರುಗಿಸಿ, ಅಲ್ಲಲ್ಲಿ ಆಗಾಗ ಉಪನ್ಯಾಸಗಳನ್ನು ಕೊಡುತ್ತ ಜನಪ್ರಿಯರಾಗಿದ್ದರು.

'ಈ ಮಗುವಿಗಾಗಿಯಾದರೂ ಮದುವೆ ಮಾಡಿಕೊಳ್ಳಿ' ಎಂದು, ಸಂಬಂಧಿಕರು ಹಾಗೂ, ಬೇರೆ ಬೇರೆ ಕನ್ಯಾ ಪಿತೃಗಳು ಶಾಸ್ತ್ರಿಗಳಿಗೆ ಒತ್ತಾಯ ಮಾಡಿದರು. ಆದರೆ, ತಿರುಗಿ ಮದುವೆಯೂ ಆಲಾರನೆಂಬ ಪ್ರತಿಜ್ಞೆ ಮಾಡಿದವರಂತೆ, ಶಾಸ್ತ್ರಿಗಳು, ಆ ಪ್ರಸ್ತಾಪವನ್ನೇ ನಿರಾಕರಿಸಿ ತಮ್ಮ ಸಮಯವನ್ನು ಧಾರ್ಮಿಕ ಉಪನ್ಯಾಸಗಳಲ್ಲಿ ತೊಡಗಿಸಿದರು, ಸಾಹಿತ್ಯದಲ್ಲಿ ಜೆನ್ನಾಗಿ ಪಾಂಡಿತ್ಯವಿದ್ದ ಆವರನ್ನು ಜನರು "ಗೀತಾ ಸ್ವಸಂಗ ಶಿರೋಮಣಿ ಎನ್ನುತ್ತಿದ್ದರು. ಆದರೆ, ಆವರ ಪೂರ್ವಕರ್ಮ ಆವರ ಬೆನ್ನು ಬಿಡಲಿಲ್ಲವೆಂಬ ಹಾಗೆ, ವಿಶೇಷಲಿಂಗ ಹಾಸ್ಟೆಲಿನ, ಹಿಂದುಗಡೆ, ಒಂದು ಮೂಳಿಗೆಯ ಮನೆಯಲ್ಲಿ ವಾಸಿಸುತ್ತಿದ್ದ ಶಾಸ್ತ್ರಿಯವರು—ಆ ಹುಡುಗಿಯರು ಮೂಳಿಗೆಗೆ ಬರುತ್ತಿದ್ದಾಗ- ಅದೇ ವೇಳೆ, ಆ ಹುಡುಗಿಯರನ್ನು ನೋಡುತ್ತಿದ್ದರು. ಹೀಗೆ, ಇದು, ಮೂರ್ನಾಲ್ಕು ದಿನಗಳಿಂದ ನಡೆದೇ ಇತ್ತು!

೦ ೦ ೦

ಅಂಚೆ ಜವಾನನು ತಂದುಕೊಟ್ಟ ಆ ಕಾಗದವನ್ನು ಓದಿ ನೋಡುತ್ತಲೇ ಶಾಸ್ತ್ರಿಯವರ ಮಾನಸಿಕ ಸ್ಥಿತಿ ಹೇಗಾಗಿತ್ತು? ಎಂಬ ವಿವರಣೆಯನ್ನು ಶ್ರೀ ರಾಜಾಜಿಯವರು ಬಹು ಕಲಾತ್ಮಕವಾಗಿ ವಿವರಿಸಿರುವುದು, ವರ್ಣಮಿಕವಾಗಿದೆ!

ಆ ಕಾಗದವನ್ನು ಸುಟ್ಟುಬಿಡಬೇಕೆಂದೇ ಅವರು ಯೋಚಿಸಿದರಂತೆ, ಆದರೆ ಮತ್ತೊಂದು ನಿಮಿಷದಲ್ಲಿ—ಅವರು ಆ ಲೋಚನೆಯನ್ನು ಬಿಟ್ಟು ಆ ಕಾಗದವನ್ನು ಸುರಕ್ಷಿತವಾಗಿ ಇರಿಸಿದರಂತೆ! ಆವರು, ಎಷ್ಟಾದರೂ, ನಿವೃತ್ತ ನ್ಯಾಯಾಧೀಶರಲ್ಲವೇ?

ತನಗೆ ಅಪಕೀರ್ತಿ ತರುವ ಆ ಕಾಗದದಿಂದಾಗಿ ಶಾಸ್ತ್ರಿಗಳಿಗೆ, ಆ ರಾತ್ರೆ ನಿದ್ರೆಯೇ ಬರಲಿಲ್ಲ. ಮನಸ್ಸನ್ನೇ ಬಿಟ್ಟು ಹೋಗೋಣವೆಂದರೆ ನಿಶ್ಚಿತವಾದ ಭಾಷಣಗಳ ಕಾರ್ಯಕ್ರಮ ಆವರ ಮುಂದಿತ್ತು! ಆದರೆ, ಭಾಷಣ ಕೊಡುವುದಾದರೂ ಹೇಗೆ? ಶಾಸ್ತ್ರಿಗಳ ಈ ಚಿಂತೆ! ನಿಜವಾಗಿಯೂ, ಶೋಚನೀಯವೇ ಆಗಿತ್ತು!

ಇತ್ತ, ಕಮಲಾ-ಕಾರ್ಯಾಧ್ಯಕ್ಷೆಯರು, ಶಾಸ್ತ್ರಿಗಳು ತಮ್ಮ ಉಪಾಯದ ಬಲೆಗೆ ಸಿಕ್ಕುವರೋ ಇಲ್ಲವೋ? ಎಂದು ಯೋಚಿಸುತ್ತಿರುವಾಗ-ಶಾಸ್ತ್ರಿಗಳು ಆ ಹುಡುಗಿಯರು ನೋಡದಿದ್ದರೂ ಕಣ್ಣಿಗೆ ಕಾಣಿಸುತ್ತಾರಲ್ಲ? ಪ್ರತಿಜ್ಞೆ ಮುರಿದು ಮದುವೆ ಮಾಡಿಕೊಂಡರೆ, ಈ ಪುಡುಗಿಯರಿಂದ ಉಂಟಾಗುವ ಅಪಮಾನ ತಪ್ಪುವುದೆ? ಇಲ್ಲವಾದರೆ..... ಮೂಸ್ಯ ರಾಜಾಜಿಯವರು, ಶಾಸ್ತ್ರಿಗಳಿಗೆ, ಅಪಮಾನವಾಗದಂತೆ, ತಮ್ಮ ಕಥೆಯನ್ನು ಮುಂದುವರಿಸುತ್ತಾರೆ! ಶಾಸ್ತ್ರಿಗಳು, ಉಪಾಯಗಾಣದೆ ಮದುವೆಯೊಗುವ ಒಪ್ಪಿಗೆಗೆ ಸಂಕೇತ

(ಇನ್ನೇ ಹುಡು ನೋಡಿರಿ)

ದಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್
ರಿಜಿಸ್ಟರ್ಡ್ ಆಫೀಸು· ಮಂಗಳೂರು-3

ಪರಿಷ್ಕರಿಸಿದ ಮತ್ತು ಹೆಚ್ಚಿಸಿದ ರೇವಣಾತಿ ಬಡ್ಡಿ ದರಗಳು:

ಕಾಯಂ ರೇವಣಾತಿಗಳು.			ರೂ. ನ ಪೈಸೆ
ಒಂದರಿಂದ ಮೂರು ತಿಂಗಳು ವರೆಗೆ	ವಾರ್ಷಿಕ	ಸೇಕಡಾ	4-50
ಆರರಿಂದ ಹನ್ನೆರಡು ತಿಂಗಳು ವರೆಗೆ	,,	,,	4-75
ಹದಿಮೂರರಿಂದ ಇಪ್ಪತ್ತನಾಲ್ಕು ತಿಂಗಳು ವರೆಗೆ	,,	,,	5-00
ಇಪ್ಪತ್ತೈದರಿಂದ ಮೂವತ್ತಾರು ತಿಂಗಳು ವರೆಗೆ	,,	,,	5-25
ನಾಲ್ವತ್ತೆಂಟು ತಿಂಗಳು ಮತ್ತು ಹೆಚ್ಚಿಗೆ	,,	,,	5-50
ಸೇವಿಂಗ್ಸ್ ಬ್ಯಾಂಕ್ ರೇವಣಾತಿಗಳು	,,	,,	3-25

ನಿಮ್ಮ
ದಿನನಿತ್ಯದ ಉಳಿತಾಯವನ್ನು ಮಾಸಿಕ ಉಳಿತಾಯವನ್ನು
ಹೊಸ ಡಿಪೋಸಿಟುಗಳಲ್ಲಿ ಕ್ಯುಮುಲೇಟಿವ್ ಡಿಪೋಸಿಟುಗಳಲ್ಲಿ
ವಿನಿಯೋಗಿಸಿರಿ.

THE KARNATAKA BANK LIMITED

3—7—1962

ಅಧಿಕ ಉತ್ಪಾದನೆಯ ಸಾಧನ

ಸಂಮಿಶ್ರ ಜಾತಿಯ ಬಿತ್ತನೆ

ಕೃಷಿಯನ್ನು ಲಾಭದಾಯಕವಾಗಿ ಮುನ್ನಡೆಸಲು ಈ ಮಾರ್ಗವು ಅತ್ಯುಪಯುಕ್ತವಾದುದು.

ಸುಧಾರಿಸಿದ ಉತ್ತಮ ಜಾತಿಯ ಬೆಳೆಯು ಬೇಸಾಯದಲ್ಲಿ ದೀರ್ಘಾವಧಿಯವರೆಗೆ ತೊಡಗಿಸಿದ ಬಂಡವಾಳದಂತೆ. ಒಂದು ಸಲ ಸುಧಾರಿಸಿದ ಉತ್ತಮ ಜಾತಿಯ ಬೆಳೆಗಳನ್ನು ಜಮೀನಿನಲ್ಲಿ ಬೆಳೆಯಲು ಆರಂಭ ಮಾಡಿದರೆ, ಪ್ರತಿ ವರ್ಷವೂ ಅದು ಲಾಭದಾಯಕವಾಗಿ ಪರಿಣಮಿಸುವುದಲ್ಲದೆ, ಬೇಸಾಯಗಾರರಿಗೆ ಹೆಚ್ಚಿನ ಉತ್ಪನ್ನವನ್ನೂ ಸರಮಾನವನ್ನೂ ಗ್ರಾಹಕರಿಗೆ ಒಳ್ಳೆಯ ಪೌಷ್ಟಿಕಾಂಶವುಳ್ಳ ಆಹಾರ ಧಾನ್ಯಗಳನ್ನೂ ಪೂರೈಸುವುದು. ಆದ್ದರಿಂದ ಬೇಸಾಯಾಭಿವೃದ್ಧಿಗಾಗಿ ವೈಜ್ಞಾನಿಕ ವಿಧಾನಗಳಲ್ಲಿಯೇ ಮಿಶ್ರ ಜಾತಿಯ ಬೆಳೆಗಳನ್ನು ಬೆಳೆಯುವುದರಿಂದ ಕಡಿಮೆ ವೆಚ್ಚ ತಗಲುವುದು, ಹೆಚ್ಚು ಲಾಭ ಬರುವುದು ಎಂದು ಕಂಡು ಬಂದಿದೆ.

ಪ್ರಸಕ್ತ ಶತಮಾನದ ಆದಿ ಭಾಗದವರೆಗೂ ಮಿಶ್ರ ಜಾತಿಯ ಸಸ್ಯಗಳನ್ನು ಬೆಳೆಯುವುದು ಒಂದು ಕಲೆಯೆಂಬಂತಿತ್ತು. ಆ ನೇಕ ಬಗೆಯ ಸಸ್ಯಗಳ ಗುಂಪಿನಲ್ಲಿಯೇ ಉತ್ತಮವಾದ ಸಸ್ಯದ ಜಾತಿಯನ್ನು ಕಂಡು ಹಿಡಿಯುವುದನ್ನೇ ವ್ಯಕ್ತಿಯ ದಕ್ಷತೆ ಮತ್ತು ಕಾರ್ಯದ ಯಶಸ್ಸು ಅವಲಂಬಿಸಿತ್ತು. ಮಿಶ್ರ ಜಾತಿಯ ಸಸ್ಯಗಳನ್ನು ಬೆಳೆಯುವುದರಿಂದ ಉತ್ಪನ್ನ ಪ್ರಮಾಣದಲ್ಲಿ ನೂರಕ್ಕೆ ೨೫ರಷ್ಟು ಹೆಚ್ಚಳವಾಗುವುದೆಂದು, ಸ್ವೀಡನ್ ನೊದಲಾದ ದೇಶಗಳಲ್ಲಿ ನಡೆಸಿದ ಪ್ರಯೋಗಗಳ ಪರಿಣಾಮವಾಗಿ ವ್ಯಕ್ತಪಟ್ಟಿದೆ. ಅನಂತರ ಜೀವೋತ್ಪತ್ತಿ ವಿಜ್ಞಾನವು ಪ್ರಚಾರದಲ್ಲಿ ಬಂದಿತು ಮನುಷ್ಯ, ಪ್ರಾಣಿ ಮತ್ತು ವನಸ್ಪತಿಗಳ ನ್ನೊಳಗೊಂಡು ಎಲ್ಲಾ ಜೈವಿಕ ಪ್ರಪಂಚದಲ್ಲಿಯೂ ಜೀವದಿಂದಲೇ ಜೀವೋತ್ಪತ್ತಿಯಾಗುವುದೆಂದು ಪ್ರತಿಪಾದಿಸಲಾಯಿತು. ಈ ಮೇರೆಗೆ, ವೈಜ್ಞಾನಿಕ ರೀತಿಯಲ್ಲಿ ಮಿಶ್ರ ಜಾತಿಯ ಸಸ್ಯಗಳ ಬೆಳವಣಿಗೆಯ ಯುಗ ಆರಂಭವಾಯಿತು. ಸಸ್ಯಗಳನ್ನು ಬೆಳೆಯುವ ವಿವಿಧ ವಿಧಾನಗಳು ಮತ್ತು ಅವುಗಳನ್ನು ಕಾರ್ಯಗತಗೊಳಿಸುವ ಬಗೆಗೆ ಬೇಸಾಯಗಾರರಿಗೂ ತಿಳುವಳಿಕೆಯಾಗುತ್ತ ಬಂದಿತು ಮತ್ತೊಂದು ವಿಧವಾಗಿ ಹೇಳಬೇಕಾದರೆ, ಸಸ್ಯಗಳ ವಿವಿಧ ಮೂದರಿಗಳನ್ನು ಕೂಡಿ ಹಾಕಿ ಅವುಗಳನ್ನು ನಮಗೆ ಸೂಕ್ತವೆನಿಸಿದ ಜಾತಿಯ ಸಸ್ಯದೊಂದಿಗೆ ಬೆರೆಸುವುದರ ಮೂಲಕ ಮಿಶ್ರ ಸಸ್ಯಗಳ ಬೆಳವಣಿಗೆಯ ನಿಸ್ತರಣೆ ಸಾಧ್ಯವಾಗುವುದು.

ಈ ಮೂಲಭೂತ ಜ್ಞಾನದಿಂದ ಪ್ರೇರಿತವಾದ ಧಾರವಾಡದ ಬೇಸಾಯ ಸಂಶೋಧನಾ ಸಂಸ್ಥೆಯು ಭತ್ತ, ಗೋಧಿ, ಹತ್ತಿ, ಸೆಣಬು ಮತ್ತು ಜೋಳ ಇವೇ ಮೊದಲಾದ ಮಹತ್ವಪೂರ್ಣವಾದ ಬೆಳೆಗಳ ಹೊಸ ಮತ್ತು ಉತ್ತಮ ಜಾತಿಯನ್ನು ಕಂಡು ಹಿಡಿಯುವ ಕಾರ್ಯವನ್ನು ಕೈಗೊಂಡಿತು. ವಿವಿಧ ಕೇಂದ್ರ ಮತ್ತು ರಾಜ್ಯ ಸಸ್ಯ ಉತ್ಪಾದನಾ ಕೇಂದ್ರಗಳಲ್ಲಿ ಹಲವಾರು ಉತ್ತಮ ಜಾತಿಯ ಸಸ್ಯಗಳನ್ನು ಬೆಳೆಯಲಾಗಿದ್ದು ಅವುಗಳನ್ನು ರಾಷ್ಟ್ರದಾದ್ಯಂತ ಬೇಸಾಯಗಾರರಿಗೆ ಹಂಚುತ್ತಿದೆ.

ಭತ್ತದ ವಿಷಯದಲ್ಲಿ, ಭಾರತೀಯ ಮತ್ತು ಜಪಾನಿ ಮೂದರಿಗಳು ಹಾಗೂ ಫಾರ್ಮೋಸಾ ಮತ್ತು ಜಪಾನಿ ಮೂದರಿಗಳಿಂದ ವಿಪುಲ ಬೆಳೆ ಬೆಳೆಯುವುದು ಸಾಧ್ಯವಾಗಿದೆ. ಇದಲ್ಲದೆ ಹೆಚ್ಚು ನೀರಿನಲ್ಲಿ ಬೆಳೆಯುವ ಭತ್ತದ ಹಲವು ನಮೂನೆಗಳೂ ಇವೆ. ಬತ್ತನೆ ಬೀಜದ ವೃದ್ಧಿ ಮತ್ತು ಅವುಗಳ ಹಂಚಿಕೆಯನ್ನು ಸುಗಮಗೊಳಿಸುವ ಉದ್ದೇಶದಿಂದ, ಸುಧಾರಿಸಿದ ಭತ್ತದ ಬೆಳೆ ಮೂದರಿಗಳ ಸಂಖ್ಯೆಯಲ್ಲಿ ಇಳುವರಿ ಮೂಡುವ ಪ್ರಯತ್ನ ನಡೆಯುತ್ತಿದೆ.

ಭಾರತೀಯ ಕೃಷಿ ಸಂಶೋಧನಾ ಪರಿಷತ್ತಿನ ಭತ್ತದ ಸಮಿತಿಯು: ಭತ್ತ ಬೆಳೆಯುವ ವಿಧಾನಗಳಲ್ಲಿ ಸಮನ್ವಯ ಸಾಧಿಸಲು ಪ್ರಾರಂಭಿಸಿದೆ. ಭತ್ತದ ಬೆಳೆಗಳ ೧೪ ಶೀಳ್ಕೆ, ೯ ಮಧ್ಯಂತರ ಅವಧಿಯ ಮತ್ತು ೧೪ ಶಡವಾಗಿ ಫಲದಾಯಕವಾಗುವ ನಮೂನೆಗಳನ್ನು ಅಧಿಕ ಪ್ರಮಾಣದಲ್ಲಿ ಭತ್ತ ಬೆಳೆಯುವ ರಾಜ್ಯಗಳಿಗೆಲ್ಲಾ ಪೂರೈಸಿತು. ಪ್ರಾಯೋಗಿಕ ಪ್ರಯತ್ನಗಳ ಫಲವಾಗಿ, ಹೆಚ್ಚು ಜಮೀನಿನಲ್ಲಿ ಬೆಳೆತೆಗೆಯಲು ಬರುವಂತಹ, ಸಂಮಿಶ್ರ ಜಾತಿಯ ಬೆಳೆಗಳ ಮೂದರಿಗಳನ್ನು ಆರಿಸುವುದೂ ಸುಲಭವಾಗುವುದು. ಹೆಚ್ಚು ಹೆಚ್ಚು ಗೊಬ್ಬರ ಹಾಳುವುದರಿಂದ ಜೀನ್ನಾಗಿ ಬೆಳೆ ನೀಡುವ ಹಾಗೂ ಇನ್ನೂ ಹೆಚ್ಚು ಪ್ರಯೋಜನಕರವಾದ ಭಾರತ-ಜಪಾನಿ ಸಂಮಿಶ್ರ ಜಾತಿಯ ಭತ್ತದ ಸಸಿಗಳನ್ನೂ, ಭತ್ತ ಬೆಳೆಯುವ ರಾಜ್ಯಗಳಲ್ಲಿ ಪ್ರಾಯೋಗಿಕ ರೀತಿಯಲ್ಲಿ ಬೆಳೆಯಲು ಪ್ರಯತ್ನಿಸಲಾಗುತ್ತಿದೆ. ಈ ಮಿಶ್ರ ಜಾತಿಯ ಭತ್ತವನ್ನು ಬೆಳೆಯುವಾಗ, ಪೌಷ್ಟಿಕಾಂಶಗಳ ಬಗೆಗೆ ಹೆಚ್ಚು ಲಕ್ಷ್ಯವಿಡಬೇಕಾಗುವುದು. ಪರಿಣಾಮವಾಗಿ, ಆರಿಸಲಾದ ಹಲವು ಭತ್ತದ ಮೂದರಿಗಳು, ಹೆಚ್ಚು ಉತ್ಪನ್ನ ನೀಡುವುವಲ್ಲದೆ, ಪೌಷ್ಟಿಕಾಂಶಗಳಿಂದ ಕೂಡಿದವಾಗುವುವು.

ರಾಷ್ಟ್ರದಲ್ಲಿ ಭತ್ತದ ಉತ್ಪಾದನೆ ಹೆಚ್ಚಿಸುವ ಯೋಜನೆಗಳ ಕಾರ್ಯಾಚರಣೆಯ ವಿಷಯದಲ್ಲಿ, ಕೇಂದ್ರ ಭತ್ತದ ಬೆಳೆ ಸಂಶೋಧನಾ ಸಂಸ್ಥೆಯು ಮಹತ್ವಪೂರ್ಣ ಪಾತ್ರ ನಿರ್ವಹಿಸುತ್ತಿದೆ. ೧೯೪೬ರಲ್ಲಿ ಸ್ಥಾಪಿತವಾದ ಈ ಸಂಸ್ಥೆಯು, ವಿಶ್ವ ಆಹಾರ ಸಂಸ್ಥೆಯು ಮಿಶ್ರ ಬೆಳೆಗಳ ಮೂದರಿಗಳ ಸಂಗ್ರಹಕ್ಕಾಗಿ ಮನ್ನಣೆ ನೀಡಿದ ಹಲವು ಸಂಸ್ಥೆಗಳಲ್ಲಿ ಒಂದಾಗಿದೆ.

ಗೋಧಿ ಬೆಳೆಯುವವರಿಗೆ, ಗೋಧಿ ಬೆಳೆಗೆ ತಗಲುವ ರೋಗವನ್ನು ಎದುರಿಸುವಂತಹ ಗೋಧಿ ಜಾತಿಯನ್ನು ಕಂಡುಹಿಡಿಯುವುದು ಒಂದು ಸಮಸ್ಯೆಯಾಗಿದೆ. ನವದೆಹಲಿಯ ಬೇಸಾಯ ಸಂಶೋಧನಾ ಸಂಸ್ಥೆಯ ಸಂಘಟಿತ ಪ್ರಯತ್ನದ ಫಲವಾಗಿ ರೋಗ ನಿರೋಧಕಶಕ್ತಿಯುಳ್ಳ, ಹೆಚ್ಚು ಉತ್ಪಾದನಾ ಶಕ್ತಿಯುಳ್ಳ, ಮಳೆ ಹಾಗೂ ನೀರಾವರಿಗೆ ಹೊಂದಾಣಿಕೆಯಾಗುವ ಉತ್ತಮವಾದ ಮಿಶ್ರ ಜಾತಿಯ ಗೋಧಿ ಬೆಳೆಯ ಮೂದರಿಯನ್ನು ಕಂಡು ಹಿಡಿಯಲಾಗಿದೆ. ಈ ಗೋಧಿಯನ್ನು ಬಯಲು ಮತ್ತು ಗುಡ್ಡಕಾಡು ಪ್ರದೇಶಗಳಲ್ಲಿಯೂ ಬೆಳೆಯಬಹುದು. ಈ ಎಲ್ಲಾ ಬೆಳೆಗಳ ಮೂದರಿಗಳಿಂದ ಹೆಚ್ಚು ಉತ್ಪನ್ನ ದೊರೆಯುವಂತೆ, ಅವುಗಳನ್ನು ದೊಡ್ಡ ಪ್ರಮಾಣದಲ್ಲಿ ವಿತರಣೆ ಮಾಡಲಾಗುತ್ತಿದೆ.

ನವದೆಹಲಿಯ 'ಪೂಸಾ ಇನ್‌ಸ್ಟಿಟ್ಯೂಟ್' ಎಂದು ಸುಪರಿಚಿತವಾಗಿರುವ ಬೇಸಾಯ ಸಂಶೋಧನಾ ಸಂಸ್ಥೆಯು ಅಣುಶಕ್ತಿ ಕ್ಷೇತ್ರದಲ್ಲಾದ ಅಭಿವೃದ್ಧಿಯಿಂದಾಗಿ ಆಸ್ತಿತ್ವದಲ್ಲಿ ಬಂದ 'ರೇಡಿಯೇಷನ್ ಜೆನೆಟಿಕ್ಸ್' ವಿಧಾನವನ್ನು ಬಳಸಿ, ಗೋಧಿಯುತ್ಪಿಯೇ ಹಲವಾರು ಮಿಶ್ರಜಾತಿಗಳನ್ನು ಕಂಡುಹಿಡಿದಿದೆ.

ಸಂಸ್ಥೆಯು 'ಗಾಮಾ ಗಾರ್ಡನ್'ನಲ್ಲಿ ರೇಡಿಯೋ ಆಕ್ಟೀವ್ ಕೋಬಾಲ್ಟ್ ವಿಧಾನವನ್ನು ಬಳಸಿ ಅಣುಶಕ್ತಿ ಪ್ರಸರಣ ವ್ಯವಸ್ಥೆ ಮಾಡಿದ್ದಾರೆ. ಈ ವ್ಯವಸ್ಥೆಯಂತೆ, ಬೆಳೆ ಮಿಶ್ರಣದ ಬಗೆಗೆ ಅನುಸರಿಸುತ್ತಾ ಬಂದ ಸಾಂಪ್ರದಾಯಿಕ ವಿಧಾನಗಳಿಂತಲೂ ಭಿನ್ನವಾದ ಅಧುನಿಕ ರೀತಿಯಲ್ಲಿ ಅನೇಕ ಬೆಳೆಗಳ ಮೂದರಿಗಳನ್ನು ಶೀಘ್ರವಾಗಿ ಹಾಗೂ ದಕ್ಷತೆಯಿಂದ ಕಂಡುಹಿಡಿಯಬಹುದು.

ಮುಸುಕಿನ ಜೋಳದ ಬೆಳೆ ವಿಷಯದಲ್ಲಿ, ಸ್ಥಳೀಯ ಉತ್ಪಾದನೆಗಿಂತ ಶೇಖಂರಿಂದ ೫೦ರಷ್ಟು ಹೆಚ್ಚು ಉತ್ಪಾದಿಸಲು ಸಾಧ್ಯವಾಗುವ ಮಿಶ್ರ ಜಾತಿಯ ಬೆಳೆಗಾಗಿ ಪ್ರಯತ್ನಗಳೂ ನಡೆದಿವೆ. ದೀರ್ಘಾವಧಿ ಪ್ರಯತ್ನದ ನಂತರ, ಬೆಳೆಯು ಳ ಮಿಶ್ರ ಜಾತಿಗಳನ್ನು ಕಂಡು ಹಿಡಿದು, ಆ ವುಗಳನ್ನು ಬೇಸಾಯಗಾರರಿಗೆ ಪೂರೈಸಲಾಯಿತು.

ಮುಂಗಾರು ಮತ್ತು ಹಿಂಗಾರು ಋತುಗಳಿಗೆ ಸೂಕ್ತವಾಗುವ ಜೋಳದ ಮಿಶ್ರ ಮೂದರಿಗಳನ್ನು ಕಂಡು ಹಿಡಿಯಲು ದೊಡ್ಡ ಪ್ರಮಾಣದ ಪ್ರಯತ್ನಗಳೂ ನಡೆದಿವೆ. ಭಾರತ ಮತ್ತು ಹೊರದೇಶಗಳ ಜೋಳದ ಬೆಳೆಗಳ ಮಿಶ್ರಣವು ಹೆಚ್ಚು ಲಾಭದಾಯಕವೆಂದು ಸಿದ್ಧವಾಗಿದೆ. ೧೯೬೨ರ ಮುಂಗಾರು ಅವಧಿಯಲ್ಲಿ ಜೋಳದ ಮಿಶ್ರ ಬೆಳೆಗಳನ್ನೂ ವಿತರಣೆ ಮಾಡಲಾಗುವುದೆಂದು ನಿರೀಕ್ಷಿಸಲಾಗಿದೆ.

ನಾವು ಅನುದಿನವೂ ಸೇವಿಸುತ್ತಿರುವ ಆಹಾರದ ಮುಖ್ಯಾಂಶವಾದ ದ್ವಿದಳ ಧಾನ್ಯಗಳ ಬೆಳೆಗಳ ಸುಧಾರಣೆಗೂ ಗಮನವೀಯುವುದು ಅಗತ್ಯವಾಗಿದೆ. ಆಹಾರದಲ್ಲಿ ಪ್ರೋಟೀನ್ ಪ್ರಮಾಣವು ಹೆಚ್ಚುವಂತೆ, ದ್ವಿದಳ ಧಾನ್ಯಗಳ-ಉತ್ಪಾದನೆ ಹೆಚ್ಚಿಸುವ, ಶೀಘ್ರ ಬೇಯುವ ತೊಗರಿ, ಹೆಸರು ಮತ್ತು ಉದ್ದು-ಈ ಬೆಳೆಗಳ ಹೆಚ್ಚು ಉತ್ಪನ್ನದ ಅವಶ್ಯಕತೆ ಪೂರೈಸಲು ಮಿಶ್ರಜಾತಿಯ ಬೆಳೆಗಳನ್ನು ಬೆಳೆಸುವ ಪ್ರಯತ್ನಗಳೂ ನಡೆದಿವೆ.

ಜನ್ಮನ — ಜೀವನ

ಭಾಸ್ಕರ ಜಿ. ಶೆಟ್ಟಿ, ಗ್ರ್ಯಾಂಟ್ ಮೆಡಿಕಲ್ ಕಾಲೇಜ್, ಮುಂಬೈ.

೧

ಅಂದು ಬೆಳಗಿನಲಿ ಮಂದ ಬೆಳಕಿನಲಿ
ಅರಳಿ ಹಾಡಿತ್ತು ಸುರುಳಿ ಕುಣಿದಿತ್ತು
ಚಂದದಲಿ ಕೂಡಿ ಅಂದದಲಿ ಓಡಿ
ಸೌರಭವ ಬೀರಿತ್ತು ಪೌರುಷದಿ ಹಾರಿತ್ತು

೨

ನಡು ಹಗಲಿನಲ್ಲೇ ಕಡು ಬಿಸಿಲಿನಲ್ಲೆ
ಗಂಧ ಹರಡಿತ್ತು ಮಂದ ಬೀಸಿತ್ತು
ಜನ್ಮನ ಮದವನು ಯವ್ವನ ಕದವನು
ತೆರೆದು ಬರಿಸಿತ್ತು ಮೆರೆದು ಬರುತಿತ್ತು

೩

ದುಂಬಿ ಹಲವಾರು ತುಂಬಿ ಕೆಲವಾರು
ಸಾಲಿನಲಿ ಹಾರಿ ಸಾಲಿನಲಿ ಹೀರಿ
ತೇಗಿದವು ಮೆರೆದು ಸಾಗಿದವು ತೊರೆದು
ಮೂಜಗನ ಮರೆತು-ಹೂಜಗದಿ ಮೆರೆದು
ಬಾಳ್ಗಗ್ಗವೆಂದು ಚಿರಬುಗ್ಗೆಯೆಂದು
ಲಾಸ್ಯವಾಡಿತ್ತು ನಾಳೆಯನು ಮರೆತು

೪

ಇಂದು ಸಂಜೆಯಲಿ ಕಂದು ಬೆಳಕಿನಲಿ
ಸುರುಳಿ ಬಾಡಿಹುದು ಹೊರಳಿ ಬಿದ್ದಿಹುದು
ದುಂಬಿ ಸುಳಿವಿಲ್ಲ ನಂಬಿದವರಾರಿಲ್ಲ
ಬಾಳ್ವೆಯರಿವಾಯ್ತು ಕೇಳ್ವರಿಲ್ಲಾಯ್ತು

ಅತ್ಯುತ್ತಮ ಟಾನಿಕ್

ನಿಮ್ಮ ದೇಹ — ಮನಸ್ಸುಗಳಿಗೆ ಆರೋಗ್ಯವನ್ನೂ ಬಲವನ್ನೂ, ನವಚೈತನ್ಯವನ್ನೂ ತಂದು ಕೊಡಬಲ್ಲ ಏಕಮಾತ್ರ ಟಾನಿಕ್

ಉಳಿತಾಯ

ಉಳಿತಾಯಕ್ಕಾಗಿ ಇಂದೇ ಒಂದು ಸೇವಿಂಗ್ಸ್ ಖಾತೆ ತೆರೆಯಿರಿ.

ದಿ ಕೆನರಾ ಬ್ಯಾಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್

(ರಿಜಿಸ್ಟರ್ಡ್ ಆಫೀಸು: ಉಡುಪಿ)
ಆಡಳಿತ ಆಫೀಸು: ಮಂಗಳೂರು.

ಹೊಸ ಪುಸ್ತಕ—

'ನಚಿಕೇತ'ರ

ನವೀನ ಕಾದಂಬರಿ—

ಹಸುರು ಹಂಸ

ಇದೀಗ ಪ್ರಕಟವಾಗಿದೆ.

ಬೆಲೆ: ರೂ. ಎರಡು.

ವಿವರಗಳಿಗೆ,

ನವಯುಗ ಪ್ರೆಸ್, ಉಡುಪಿ.

ಚಂದ್ರ ಪುತ್ರ — ಮೃತ್ಯು ಬುಧ

ಬುಧ ಗ್ರಹದ ಅತ್ಯದ್ಭುತ ಪರಿಚಯವನ್ನು ನೀವು ಅವಶ್ಯ ತಿಳಿದಿರಲೇಬೇಕು.

ಹಿಂದೂ ಸಂಪ್ರದಾಯದಂತೆ ಬುಧನು ಚಂದ್ರನ ಮಗ. ಗ್ರೀಕ ಪುರಾಣಗಳು ಆತನನ್ನು ದೇವತೆಗಳ ಸಂದೇಶಹರ ಹರ್ಮಿಸನೆಂದು ಕರೆಯುತ್ತವೆ. ಹರ್ಮಿಸನೇ ರೋಮನ್ ಪುರಾಣಗಳ ಮ್ಯರ್ಕುರಿ. ಅದೇನೇ ಇದ್ದರೂ ಬುಧ ಲೋಕವೆಂದರೆ ಮೃತ್ಯುಲೋಕಕ್ಕಿಂತ ಬೇರೆಯಲ್ಲ.

ಪಶ್ಚಿಮದ ಆಕಾಶದಲ್ಲಿ ಸೂರ್ಯಾಸ್ತಾನಂತರ ಅಪರೂಪಕ್ಕೆ ದೃಷ್ಟಿಗೋಚರವಾಗುವ ಆ ಉಜ್ವಲ ನಕ್ಷತ್ರದತ್ತ ಮಾನವನ ಮೊತ್ತಮೊದಲು ದೃಷ್ಟಿಯೆಂದು ಸರಿಯಿತೆಂದು ಖಂಡಿತವಾಗಿ ಹೇಳುವಂತಿಲ್ಲ. ಅದು ಸಾಮಾನ್ಯ ತಾರೆಯಾಗಿರಲಿಲ್ಲ. ಉಳಿದೆಲ್ಲ ನಕ್ಷತ್ರಗಳಿಗಿಂತಲೂ ಅದು ಬಹಳಷ್ಟು ಭಿನ್ನವಾಗಿತ್ತು. ಗ್ರೀಕ ಜನರು ದೇವ ದೂತ ಹರ್ಮಿಸನ ಹೆಸರಿನಲ್ಲಿ ಅದನ್ನು ಕರೆದರು.

ಬುಧನು ಸೂರ್ಯನಿಂದ ೩ ಕೋಟಿ ೬೦ ಲಕ್ಷ ಮೈಲು ದೂರವಿದ್ದಾನೆ. ಇತರ ಗ್ರಹಗಳೊಡನೆ ಹೋಲಿಸುವಾಗ ಸೂರ್ಯನಿಗೆ ನಿಕಟತಮವಾಗಿರುವ ಗ್ರಹನೆಂದರೆ ಬುಧನು ಮಾತ್ರ. ಕೆಲವು ಬಾಲವಿರುವ ನಕ್ಷತ್ರಗಳು ಮಾತ್ರ ಸೂರ್ಯನನ್ನು ಇನ್ನೂ ಸಮೀಪಿಸುವ ಸಾಹಸವನ್ನು ತೋರಿಸುತ್ತವೆ.

ಬುಧನನ್ನು ನೋಡುವುದು ಸರಳವಲ್ಲ. ಸೂರ್ಯನಿಗೆ ಬಹಳ ಹತ್ತಿರದಲ್ಲಿರುವುದು ಮತ್ತು ಆತನ ಆಕಾರ ಬಹು ಸಣ್ಣದಾಗಿರುವುದು ಹಾಗೂ ಭೂಮಿಯಿಂದ ಅತೀವ ದೂರದಲ್ಲಿರುವುದು ಇದಕ್ಕೆ ಕಾರಣ. ಆಕಾರದಲ್ಲಿ ಬುಧನು ಚಂದ್ರನಿಗಿಂತ ದೊಡ್ಡವನಲ್ಲ; (ಚಂದ್ರನ ವ್ಯಾಸ ೩೦೦೦ ಮೈಲುಗಳು). ಆದರೆ, ಆತನಿಗಿಂತ ಇನ್ನೂರು ಪಟ್ಟು ನಮಗೆ ದೂರವಿದ್ದಾನೆ. ಬುಧನು ಭೂಮಿಯ ನಿಕಟತಮಕ್ಕೆ ಬಂದಾಗ, ಆತನ ಅಪ್ರಕಾಶಿತ ಭಾಗವು ಮಾತ್ರ ನಮಗೆ ಕಾಣುವುದು. ಹಾಗಿರುವಾಗ ಬುಧನ ಬಗ್ಗೆ ನಮಗಿರುವ ಪರಿಜ್ಞಾನವು ಅತ್ಯಲ್ಪವೆಂಬುದರಲ್ಲಿ ಆಶ್ಚರ್ಯವೇನು ಬಂತು?

೧೮ನೆಯ ಶತಮಾನದ ಅಂತ್ಯದಲ್ಲಿ ದುರ್ಬೀನಿನ ಸಹಾಯದಿಂದ ಬುಧ ಗ್ರಹದ ಅಧ್ಯಯನವನ್ನು ನಡೆಸಲಾಗಿತ್ತು. ಯುರೆನಿಸ್ ಗ್ರಹದ ಸಂಶೋಧನೆಯನ್ನು ಮಾಡಿದ ಪ್ರಸಿದ್ಧ ಜೋತಿರ್ವಿದ ಸರ್ ವಿಲಿಯಂ ಹರ್ಷಲನು ತನ್ನ ಶಕ್ತಿಶಾಲಿ ದುರ್ಬೀನಿನ ಸಹಾಯದಿಂದ ಆತನ ಅಧ್ಯಯನ ಮಾಡಿದನು. ಆದರೆ, ಆತನಿಗೆ ಗ್ರಹದ ಭರಾತಳದಲ್ಲಿ ಯಾವ ಚಿಹ್ನೆಯೂ ತೋರಿಬರಲಿಲ್ಲ. ಅನಂತರ ಜರ್ಮನ್ ಜ್ಯೋತಿಷಿ ಯೋಹಾನ್ ಶ್ರಯೋಟರನು ಬುಧನ ಸರ್ವ ಪ್ರಥಮ ಮಾನಚಿತ್ರವನ್ನು ತಯಾರಿಸಿದನು. ಈ ಚಿತ್ರವು ಬಹು ಸಮಯದ ವರೆಗೆ ಪ್ರಾಮಾಣಿಕವೆಂದು ತಿಳಿಯಲ್ಪಡುತಿತ್ತು.

ಮಂಗಳ ಗ್ರಹದ ಬಗ್ಗೆ ಶೋಧನೆಯಲ್ಲಿ ವ್ಯಸ್ತನಾಗಿದ್ದ ಇಟೇಲಿಯನ್ ಜ್ಯೋತಿಶ್ಶಾಸ್ತ್ರಿ ಶಿಯಾಪರೆಲಿಯು ೧೮೮೧ ಮತ್ತು ೧೮೮೯ರ ನಡುವೆ ನಿರೀಕ್ಷಣೆ ಮಾಡಿದಾಗ, ಬುಧನ ಗುಲಾಬಿ ಪೃಷ್ಠ ಭೂಮಿಯ ಮೇಲೆ ಕರಿಯ ರೇಖೆಗಳಿರುವುದನ್ನು ಕಂಡುಹಿಡಿದನು. ಆತನು ಬುಧನ ಪರಿಭ್ರಮಣ ಕಾಲದ ಮೇಲೂ ವಿಚಾರ ಮಾಡಿದನು. ಆತನ ಅಭಿಪ್ರಾಯದಂತೆ ಭೂಮಿಯಂತೆಯೇ ಬುಧನೂ ೨೪ ತಾಸುಗಳಲ್ಲಿ ಒಂದು ಸುತ್ತು ಬರುತ್ತಾನೆ.

ಬುಧನ ಒಂದು ಗೋಲಾರ್ಧವು ಯಾವಾಗಲೂ ಸೂರ್ಯಾಭಿಮುಖವಾಗಿಯೇ ಇರುವುದೆಂದು ಶಿಯಾಪರೆಲಿಯು ತಿಳಿದುಕೊಂಡನು. ಎಂದರೆ, ಸೂರ್ಯನ ಸುತ್ತಲ್ಲೂ ಒಂದು ಬಾರಿ ಸುತ್ತುಲು ಬುಧನು ತೆಗೆದುಕೊಳ್ಳುವ ಸಮಯದಲ್ಲಿಯೇ ಆತನು ತನ್ನ ಅಕ್ಷದಲ್ಲಿಯೂ ಒಂದು ಸುತ್ತು ಉರುಳುತಾನೆ. ಆತನು ತನ್ನ ಅಕ್ಷದಲ್ಲಿ ಪರಿಭ್ರಮಿಸುವುದಿಲ್ಲವಾದರೆ, ಆತನ ಪ್ರತಿ ಗೋಲಾರ್ಧವೂ ಒಂದಲ್ಲ ಒಂದು ಸಮಯ ಸೂರ್ಯನಿಗೆದುರಾಗಿ ಅವಶ್ಯ ಬರಲೇಬೇಕು. ಈ ಸಂಗತಿಯು ಒಂದು ಸಾಮಾನ್ಯ ಪ್ರಯೋಗದಿಂದ ಸುಲಭವಾಗಿ ತಿಳಿಯುವುದು.

ಕೋಣೆಯ ಮಧ್ಯೆ ಒಂದು ಕುರ್ಚಿಯನ್ನು ಇಡಿರಿ. ಅದನ್ನು ಸೂರ್ಯನೆಂದು ತಿಳಿಯಿರಿ. ನೀವು ಬುಧರಾಗಿ ಕುರ್ಚಿಯ ಕಡೆಗೆ ಮುಖ ಮಾಡಿಕೊಳ್ಳುತ್ತ ನೀವು ಅದರ ಸುತ್ತು ತಿರುಗಿರಿ. ನಿಮ್ಮ ಮುಖವು ಕುರ್ಚಿಯತ್ತಲೇ ಇರಬೇಕಾದರೆ, ನೀವು ನಡೆಯುತ್ತ ಇರುವಾಗ ತುಸು ತುಸುವಾಗಿ ಮುಖವನ್ನು ಕುರ್ಚಿಯ ಕಡೆಗೆ ತಿರುಗಿಸುತ್ತ ಬರಬೇಕಾಗುತ್ತದೆ. ಇಲ್ಲವಾದರೆ, ಅರ್ಧಸುತ್ತು ಬಂದೊಡನೆಯೇ ನಿಮ್ಮ ಬೆನ್ನು ಕುರ್ಚಿಯ ಕಡೆಗೆ ತಿರುಗುತ್ತದೆ; ಒಂದು ಸಂಪೂರ್ಣ ಸುತ್ತು ಬಂದಾಗ ಮರಳಿ ಯಥಾ ಸ್ಥಿತಿಯು ಕಂಡು ಬರುತ್ತದೆ.

ಬುಧನು ತಿರುಗುವುದು ಇದೇ ರೀತಿಯಲ್ಲಿ ಎಂದು ಶಿಯಾಪರೆಲಿಯ ಅಭಿಪ್ರಾಯ. ಆಧುನಿಕ ಅಧ್ಯಯನಾನಂತರ ಇದು ಸಿದ್ಧವಾಯಿತು. ವಸ್ತುತಃ ಬುಧಗ್ರಹದಲ್ಲಿ ರಾತ್ರಿ ಹಗಲುಗಳಲ್ಲಿ ಯಾವ ಅಂತರವೂ ಇರುವುದಿಲ್ಲ. ಆತನ ಒಂದರ್ಧ ಭಾಗ ಯಾವಾಗಲೂ ಸೂರ್ಯಾತಪದಿಂದ ಸುಡುತ್ತಿರುತ್ತದೆ; ಮತ್ತೊಂದರ್ಧ ಭಾಗದಲ್ಲಿ ಕತ್ತಲೆಯೋ ಕತ್ತಲು, ಆದುದರಿಂದಲೇ ಅದು ವಿಲಕ್ಷಣ ಪ್ರಪಂಚ.

ಈ ವಿಲಕ್ಷಣತೆಗೆ ಕಾರಣವಿಲ್ಲದಿಲ್ಲ. ಸೂರ್ಯ ಪ್ರತ್ಯೇಕಿತನಾದ ನಂತರ ಬಹು ಸಮಯದ ವರೆಗೆ ಬುಧನು ಬಹು ಉಷ್ಣ ಮತ್ತು ಮೃದುವಾದ ಪಿಂಡವಾಗಿದ್ದಿರಬಹುದು. ಆತನ ಪರಿಭ್ರಮಣದ ವೇಗವೂ ಮಿತಿಮೀರಿದ್ದಿರಬಹುದು. ಚಂದ್ರನು ಭೂಮಿಯ ಮಹಾ ಸಾಗರಗಳಲ್ಲಿ ಭರತವನ್ನು ತರುವಂತೆ ಆ ಸಮಯದಲ್ಲಿ ಸೂರ್ಯನು ಬುಧನಲ್ಲಿ ಭರತಕ್ಕೆ ಕಾರಣನಾಗಿರಬಹುದು. ಬುಧನ ದ್ರವ ಪದಾರ್ಥವು ಸೂರ್ಯನ ಕಡೆಗೆ ಏಕತ್ರವಾಗುತ್ತಿರಬೇಕು. ಸೂರ್ಯನು ಸಾಧ್ಯವಾದಷ್ಟು ಈ ಏರಿಕೆಯನ್ನು ಒಂದೇ ಕಡೆಯಲ್ಲಿ ಸಾಧಿಸಿರಬೇಕು. ಪರಿಣಾಮ ಸ್ವರೂಪವಾಗಿ, ಬುಧನ ಪರಿಭ್ರಮಣೆಯ ಗತಿ ಮಂದವಾಯಿತು; ಆತನ ಒಂದು ದಿನ ಒಂದು ವರ್ಷದಂತಾಯಿತು; ಆ ಡುಬ್ಬ ಸೂರ್ಯನ ಕಡೆಗೇನೇ ಸ್ಥಿರವಾಯಿತು.

ಬುಧನಲ್ಲಿರುವ ವಾಯುಮಂಡಳವು ಬಹಳ ವಿರಳವೆಂದು ವೈಜ್ಞಾನಿಕರು ತಿಳಿದುಕೊಂಡಿದ್ದಾರೆ ಆತನ ತಳದಲ್ಲಿನ ವಾಯುಮಂಡಲದ ಸಾಂದ್ರತೆಯು ಭೂಮಿಯದರ 0·15ಕ್ಕಿಂತ ಹೆಚ್ಚಿರಲಾರದು. ಇದು ಪ್ರಯೋಗ ಶಾಲೆಯ ಶೂನ್ಯವಕಾಶ (ವೈಕ್ಯುವಂ)ದಷ್ಟಾಗುತ್ತದೆ. ಈ ವಾತಾವರಣವು ಯಾವ ಯಾವ ಮೂಲಗಳಿಂದ ನಿರ್ಮಿತವಾಗಿದೆ ಎಂಬುದನ್ನು ಗೊತ್ತು ಹೆಚ್ಚಿಲ್ಲ. ಆದರೆ, ಅಲ್ಲಿ ಕಾರ್ಬನ್ ಡೈ ಆಕ್ಸೈಡ್ ಇರುವುದು ಸಾಧ್ಯವೆಂದು ತಿಳಿದಿದೆ.

ಬುಧನ ಭೊಗೋಲದ ಬಗ್ಗೆ ನಮಗೇನೂ ಹೆಚ್ಚು ತಿಳಿದಿಲ್ಲ. ದುರ್ಬೀನಿನ ಸಹಾಯದಿಂದ ನೋಡುವಾಗ, ಆತನ ಗುಲಾಬಿ ಸಮತಳದಲ್ಲಿ ಕಂದು ಬಣ್ಣದ ಸಾಕಷ್ಟು ಸ್ಪಷ್ಟ ಹಾಗೂ ಸ್ಥಾಯಿ ಗುರುತುಗಳಿರುವುದು ತೋರುತ್ತದೆ. ಅದು ಯಾವ ಮತ್ತು ಎಂತಹ ವಸ್ತು ಎಂದು ಮಾತ್ರ ತಿಳಿದಿಲ್ಲ. ಅವು ಪರ್ವತಗಳಾಗಿರಬಹುದು. ಶ್ರಯೋಟರನು ಊಹಿಸಿಕೊಂಡಂತೆ ಅವು ೧೧—೧೨ ಮೈಲು ಎತ್ತರವಿರಲೂಬಹುದು.

ಅತಿ ಚಿಕ್ಕವನೂ ದೂರವಿರುವವನೂ ಆದ ಬುಧನ ಉಷ್ಣತೆಯೆಷ್ಟು ಎಂಬುದನ್ನು ತಿಳಿಯುವುದು ಕಷ್ಟ. ಆತನ ಸೂರ್ಯಪ್ರಕಾಶಿತ ಮಧ್ಯ ಭಾಗದ ಉಷ್ಣತೆ ಸುಮಾರು ೭೦೦ ಡಿಗ್ರಿ ಫೆರನ್ ಹೈಟ್ ಇರಬಹುದು ಎಂಬುದು ಊಹನೆ. ಈ ಉಷ್ಣತೆಯಲ್ಲಿ ಗಾಜು ಕರಗಿ ಹೋಗುತ್ತದೆ.

ಸದಾ ರಾತ್ರೆಯಿರುವ ಇನ್ನೊಂದು ಭಾಗದಲ್ಲಿ ಭಯಂಕರ ಶೀತವಿದೆ. ಸೌರ ಮಂಡಲದ ಸರ್ವ ಶೀತ ಪ್ರದೇಶವೆಂದರೆ ಇದೇ. ಅಲ್ಲಿಯ ಉಷ್ಣತೆ ಪೂರ್ಣ ಶೂನ್ಯಕ್ಕಿಂತ ಹೆಚ್ಚಿರುವುದು ಸಾಧ್ಯವಿಲ್ಲ. ಸೂರ್ಯನಿಂದ ಬಹುದೂರವಿರುವ ಪ್ಲೇಟೋ ಗ್ರಹದ ತಾಪಮಾನವಾದರೂ ಇದಕ್ಕಿಂತ ಹೆಚ್ಚಿದೆ ಪ್ಲೇಟೋವಿನ ಮೇಲೆ ಸದಾ ಸಂಜೆಯು ಕವಿದಿರುತ್ತದೆ; ಆದರೆ ಆತನ ಎಲ್ಲಾ ಭಾಗವು ಸೂರ್ಯನ ಮುಂದೆ ಬಂದೇ ಬರುತ್ತದೆ.

ಸೂರ್ಯನ ಸುತ್ತ ಬುಧನು ತಿರುಗುವ ಮಾರ್ಗವು ಭೂಮಿಯ ಮಾರ್ಗಕ್ಕಿಂತ ವೃತ್ತಾಕಾರವಾಗಿದೆ. ಸೂರ್ಯನಿಂದ ಬುಧನಿಗಿರುವ ದೂರವು ೨ ಕೋಟಿ ೮೦ಲಕ್ಷ ಮೈಲುನಿಂದ ಹಿಡಿದು ೪ ಕೋಟಿ ೫೫ಲಕ್ಷ ಮೈಲುಗಳು. ಸೂರ್ಯನಿಗೆ ಹತ್ತಿರ ಬಂದಾಗ, ಆತನ ವೇಗವು ಒಂದು ಸೆಕುಂಡಿಗೆ ೩೫ ಮೈಲು ಮತ್ತು ದೂರ ಸರಿ

(ಅನೇ ಪುಟ ನೋಡಿರಿ)

ಬ್ಯಾಂಕ್ ಎಕೌಂಟ್

ಏನು ಅದರ ತಿರುಳು

ವ್ಯವಹಾರ ಜೀವನದಲ್ಲಿ ಯಶಸ್ಸು ಪಡೆಯಬೇಕಾದರೆ, ಹಣಕಾಸಿನ ಮೇಲೆ ಪೂರ್ಣ ಹತೋಟಿ ಅವಶ್ಯ. ಒಂದು ಒಳ್ಳೆಯ ಬ್ಯಾಂಕಿನಲ್ಲಿ ಎಕೌಂಟ್ ತೆರೆಯುವುದರಿಂದ ಈ ಹತೋಟಿಯು ಸುಲಭವಾಗುತ್ತದೆ.

ಸಾರ್ವಜನಿಕರಲ್ಲಿ ಬ್ಯಾಂಕ್ ವ್ಯವಹಾರದ ಸಾಮಾನ್ಯ ಜ್ಞಾನವನ್ನು ಹರಡುವ ಉದ್ದೇಶದಿಂದ ನಾವು "ಬ್ಯಾಂಕ್ ಎಕೌಂಟ್: ಏನು ಅದರ ತಿರುಳು" ಎಂಬ ಅತ್ಯುಪಯುಕ್ತ ಕೈಪಿಡಿಯೊಂದನ್ನು ಪ್ರಕಟಿಸಿದ್ದೇವೆ.

ನಿಮ್ಮ ಪ್ರತಿಗಾಗಿ ಸಮೀಪದ ಶಾಖೆಗೆ ಅಥವಾ ಪ್ರಧಾನ ಕಾರ್ಯಾಲಯಕ್ಕೆ ಬರೆಯಿರಿ.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ &
ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ರಜಿಸ್ಟರ್ಡ್ ಆಫೀಸು: ಮುಕುಂದ ನಿವಾಸ,
ಉಡುಪಿ, ಮೈಸೂರು ರಾಜ್ಯ.

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ವರುಷ	ಉಡುಪಿ	ವಾರ
೪೨	೧೩-೯-೧೯೬೨	೨

ಕಾಶ್ಮೀರದ ಸೇರ್ಪಡೆ

''ಭಾರತದ ಅವಿಭಾಜ್ಯ ಅಂಗ ಕಾಶ್ಮೀರ; ಅಲ್ಲಿನ ಜನತೆ ಭಾರತದೊಡನೆ ತಮ್ಮ ರಾಜ್ಯವನ್ನು ಈಗಾಗಲೇ ಸೇರ್ಪಡೆಗೊಳಿಸಿ ತಮ್ಮ ಇಚ್ಛೆಯೇನೆಂಬುದನ್ನು ವ್ಯಕ್ತಪಡಿಸಿದ್ದಾರೆ. ಆದುದರಿಂದ ಆದರ ಒಂದಂಗುಲ ನೆಲದ ಮೇಲೆಯೂದರೂ ಬೇರೆಯವರಿಗೆ ಅಧಿಕಾರವಿರುವುದಿಲ್ಲ'' ಎಂದು ಮುಂತಾದ ಮಾತುಗಳನ್ನು ನಾವು ಆಡುತ್ತೇವೆ. ಕಾಶ್ಮೀರ ಸಂಬಂಧದಲ್ಲಿ ನಮ್ಮ ಸರಕಾರದ ಧೋರಣೆಯೂದರೂ ಇದಕ್ಕೆಂತ ಬೇರೆಯದಲ್ಲ. ನಮ್ಮ ಸಂವಿಧಾನದ ೩೭೦ನೆ ಕಲಮನ್ನು ಕಿತ್ತು ಹಾಕುವುದು ಸಾಧ್ಯವಿಲ್ಲವೆಂದು ಹೇಳಲಾಗುತ್ತಿದೆ. ಆದರೆ, ಇಡಿಯ ಜಮ್ಮು ಮತ್ತು ಕಾಶ್ಮೀರವು ಭಾರತದ ಆಂಗವೆಂದೂ ಪಾಕಿಸ್ತಾನವು ಅದನ್ನು ಆಕ್ರಮಿಸಿದ ರಾಷ್ಟ್ರವೆಂದೂ ನಾವು ಘೋಷಿಸುವಾಗ, ಈ ಉಪಕ್ರಮವು ವಿಘ್ನಕಾರಕವೆನ್ನಿಸುವಾಗ, ಈ ಆಕ್ರಮಣವು ಆಡ್ಡ ಬರುವುದಿಲ್ಲವಾದುದರಿಂದ ಸಾಂವಿಧಾನಿಕ ಮನ್ನಣೆಗೆ ಅದೇಕೆ ತಡೆಯೂಗಬೇಕು? ಎಂದು ಯಾರಾದರೂ ಕೇಳಬಹುದಾದ ಪ್ರಶ್ನೆ.

ಮೊನ್ನೆ ಮೊನ್ನೆ ಕೇಂದ್ರ ಗೃಹಮಂತ್ರಿ ಲಾಲಬಹದೂರ ಶಾಸ್ತ್ರಿಯವರು ಕಾಶ್ಮೀರದಲ್ಲಿಯೂ ನೇರ ಚುನಾವಣೆಗಳ ಮೂಲಕ ವೇ ಪಾರ್ಲಿಮೆಂಟಿಗೆ ಚುನಾವಣೆಗಳನ್ನು ನಡೆಸಿ ಪ್ರತಿನಿಧಿಗಳನ್ನು ಆರಿಸುವ ವಿಚಾರವು ಸರಕಾರಕ್ಕಿದೆಯೆಂದು ಹೇಳಿದ್ದಾರೆ. ಇದು ನಿಜವಾಗಿಯೂ ಸ್ವಾಗತಾರ್ಹ ಹೆಜ್ಜೆ. ಕಾಶ್ಮೀರದ ಸೇರ್ಪಡೆಯು ಭಾರತದೊಡನೆ ಸ್ಥಿರವಾಗಿ ಆಗಿರುವುದರಿಂದ, ಪ್ರತಿಯೊಬ್ಬ ಭಾರತೀಯನೂ ೩೭೦ನೆಯ ಕಲಂನ್ನು ಕಿತ್ತು ಹಾಕುವುದಕ್ಕೆ ಸರವಾಗಿದ್ದಾನೆ. ಕಾಶ್ಮೀರಕ್ಕಾದರೂ ತಾನು ಪ್ರತ್ಯೇಕವಾಗಿರುವುದಕ್ಕೆಂತ ಭಾರತದ ಇತರ ರಾಜ್ಯಗಳಂತೆಯೇ ಸವಲತ್ತು ಸೌಲಭ್ಯಗಳನ್ನು ಪಡೆಯುವುದರಿಂದಲೇ ಲಾಭವಿದೆ. ಆದಕ್ಕಾಗಿಯೇ ಕಾಶ್ಮೀರಿಗಳಾದರೂ ಈ ವಿಧದ ಕಾರ್ಯಕ್ರಮವನ್ನು ಉಚಿತವೆಂದು ಒಪ್ಪದೆ ಇರಲಾರರು. ಇಷ್ಟು ಮಾತ್ರವಲ್ಲದೆ ಇಂತಹ ಹೆಜ್ಜೆಯನ್ನು ಇಡುವುದರಿಂದ 'ಕಾಶ್ಮೀರದ ಪ್ರಶ್ನೆ'ಯನ್ನು ಸದಾ ಕಾಲಕ್ಕೆ ಅಂತಾರಾಷ್ಟ್ರೀಯ ವಾತಾವರಣದಿಂದಲೇ ದೂರ ಮಾಡುವುದಕ್ಕೆ ಅನುಕೂಲವಾಗುವುದು. ಅದುದರಿಂದ ಭಾರತ ಸರಕಾರವು ಈ ಹಿಂದಿನ ಮತ್ತು ಇಂದಿಗೆ ಅನುಗುಣವಲ್ಲದ ಸಂವಿಧಾನದ ೩೭೦ನೆಯ ಅನುಚ್ಛೇದವನ್ನು ಕಿತ್ತುಹಾಕಿ, ಕಾಶ್ಮೀರಕ್ಕೆ ಇತರ ರಾಜ್ಯಗಳ ಸ್ಥಾನಮಾನಗಳನ್ವಯಿಸುವುದಕ್ಕೆ ತೀವ್ರ ಕಾರ್ಯಕ್ರಮ ಕೈಕೊಳ್ಳಬೇಕಾದುದು ಅಗತ್ಯವೆನಿಸುತ್ತದೆ.

ನಮ್ಮ ಶಿಕ್ಷಕರು

ನಮ್ಮ ರಾಷ್ಟ್ರಪತಿಗಳ ಜನ್ಮದಿನ ಸಪ್ತೆಂಬರ ೫ನೆಯ ತಾರೀಕನ್ನು ಶಿಕ್ಷಕರ ದಿನವನ್ನಾಗಿ ಆಚರಿಸಲಾಯಿತು. ದೇಶದ ಎಲ್ಲೆಡೆಯಲ್ಲೂ ನಾನಾ ಪ್ರಕಾರವಾಗಿ ಶಿಕ್ಷಕರ ಗೌರವ—ಘನಸ್ತಿಕೆಗಳ ಕುರಿತು ಭಾಷಣಗಳು ನಡೆದುವು. ದೇಶದ ನಾಗರಿಕರನ್ನು ರೂಪಿಸುತ್ತಿರುವ ಶಿಕ್ಷಕರ ಸ್ಥಾನವೂ ನಗಳು ಹೆಚ್ಚಿನವು; ಆದರೆ, ಅವರ ನೇತನವು ಮಾತ್ರ ಕಡಿಮೆ. ನಮ್ಮ ದೇಶದಲ್ಲಿ ಸುಮಾರು ೧೦ ಲಕ್ಷ ಪ್ರಾಥಮಿಕ ಶಿಕ್ಷಕರೂ ೫ ಲಕ್ಷ ಮಾಧ್ಯಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರೂ ಇರುವರು. ನಮ್ಮ ಸಂವಿಧಾನವು ಅನಿವಾರ್ಯ ಪ್ರಾಥಮಿಕ ಶಿಕ್ಷಣದ ಸೌಲಭ್ಯವನ್ನು ಎಲ್ಲರಿಗೂ ಒದಗಿಸುವ ಪ್ರತಿಜ್ಞೆಯನ್ನು ಮಾಡುತ್ತದೆ. ಇದನ್ನು ಕಾರ್ಯರೂಪಕ್ಕೆ ತರುವಲ್ಲಿ ನಾವು ತೀವ್ರವಾಗಿ ಮುಂದುವರಿಯಬೇಕಾಗಿರುವುದರಿಂದ ನಮ್ಮ ಅಧ್ಯಾಪಕರಲ್ಲಿ ನೂರಕ್ಕೆ ೩೫ರಷ್ಟು ತರಬೇತಿ ಪಡೆಯದವರು ಸೇರಿಕೊಂಡಿದ್ದಾರೆ. ಆದೇನೇ ಇದ್ದರೂ ನಮ್ಮ ದೇಶದ ಹೆಚ್ಚಿನ ರಾಜ್ಯಗಳಲ್ಲಿ ಅಧ್ಯಾಪಕರ ವೇತನ ಮಟ್ಟವು ತೃಪ್ತಿಕರವಿಲ್ಲ. ಮದ್ರಾಸ ಸರಕಾರವು ಪ್ರೊವಿಡೆಂಟ್ ಫಂಡ್, ಪೆನ್‌ಶನ್ ಮತ್ತು ಇನ್‌ಶೂರೆನ್ಸ್‌ಗಳ ತ್ರಿವಿಧ ಲಾಭಗಳ ಯೋಜನೆಯನ್ನು ವ್ಯವಸ್ಥೆಗೊಳಿಸಿದೆ. ಇತರ ರಾಜ್ಯಗಳೂ ಮದ್ರಾಸಿನ ಮಾದರಿಯನ್ನು ಅನುಸರಿಸಲು ಮುಂದೆ ಬರಬೇಕು ದೊರೆಯುವ ಪೆನ್‌ಶನ್ ಆದರೂ ಅವರ ವೇತನದ ನಾಲ್ಕರಲ್ಲೊಂದು ಭಾಗದಷ್ಟು ಮಾತ್ರ. ಸರಕಾರದ ಇತರ ಉದ್ಯೋಗಿಯ ನೌಕರರು ನೂರಕ್ಕೆ ಐವತ್ತರಷ್ಟು ಪೆನ್‌ಶನ್ ಪಡೆಯುತ್ತಾರೆ. ಸುಧಾರಿಸಿದ ವೇತನದಲ್ಲಿಯಾದರೂ ಹಳ್ಳಿಗಳಲ್ಲಿ ತಂತಮ್ಮ ಮನೆಯ ಬಳಯಲ್ಲಿನ ಶಾಲೆಗಳಲ್ಲಿ ದುಡಿಯುವ ಅಧ್ಯಾಪಕರು ಮಾತ್ರ ಅದರಿಂದ ಸುಧಾರಿಸಿಕೊಳ್ಳಬಹುದು. ನಗರಗಳಲ್ಲಿ ಜೀವನ ಮಟ್ಟವು ಏರಿರುವುದರಿಂದ ಅಲ್ಲಿನ ನಗರ ಭತ್ತೆ; ಮನೆಯಿಲ್ಲದವರಿಗೆ ಮನೆ ಬಾಡಿಗೆ ಭತ್ತೆಗಳನ್ನೂ ಕೊಡಮಾಡುವುದೂ ಅಗತ್ಯವೆನಿಸುತ್ತದೆ. ಹಾಗೆಯೇ ಹೆಚ್ಚಿನ ಭಡ್ತಿಯ ಸೌಲಭ್ಯ ದೊರೆಯದ ಈ ಅಧ್ಯಾಪಕರು ತಮ್ಮ ಶೈಕ್ಷಣಿಕ ಅರ್ಹತೆಯನ್ನು ಹೆಚ್ಚಿಸಿಕೊಂಡಂತೆ ವೇತನದಲ್ಲಿ ಹೆಚ್ಚಳವನ್ನೂ ಪಡೆಯುವ ಅವಕಾಶ ದೊರೆಯಬೇಕು. ಇನೇ ಮಾದರಿಯ ಮಾನವೀಯ ಕೊಡುಗೆಗಳನ್ನು ಕೊಟ್ಟು ಅಧ್ಯಾಪಕ ವೃತ್ತಿಯು ಕೇವಲ ಪೂಜ್ಯವಾದುದು ಮಾತ್ರವಲ್ಲ ದಿನಯೂಪನೆಗೂ ಇತರ ವೃತ್ತಿಗಳಂತೆಯೇ ಸರಳವಾದುದು ಎನಿಸಬೇಕು. ನೌಕರಿಯಲ್ಲಿ ಭದ್ರತೆ, ಸೇವಾನಿಯಮಗಳಲ್ಲಿ ಮಾನವೀಯತೆ, ವೇತನಸ್ತರದಲ್ಲಿ ಆಗ್ರತೆಗಳನ್ನಿತ್ತರೆ, ನಮ್ಮ ಶಿಕ್ಷಕ ವೃಂದವು ಇನ್ನೂ ಸಚೇತನವಾಗಿ ತಮ್ಮ ಹೊಣೆಗಾರಿಕೆಯನ್ನು ಮತ್ತಷ್ಟು ಯೋಗ್ಯ ರೀತಿಯಲ್ಲಿ ನಿರ್ವಹಿಸಿವುದೆಂದು ನಂಬಬಹುದು.

ವಾರ್ತಾ ವೇದಿಕೆ

ಹೆಸು ಸಂತಾನ ನಿಯಂತ್ರಣ

ಕಳೆದ ವರ್ಷ ಜನಸಂಖ್ಯೆಯ ೪೮ ವನ್ನು ಕಂಡು ಹಿಡಿಯಲು ಜನಗಣನೆ ನಡೆದುದನ್ನು ಹೆಚ್ಚಿನವರು ಮರೆತಿರಲಾರರು. ಇದುವರೆಗೆ ತಿಳಿದಂತೆ ಸದ್ಯನಲ್ಲಿಯೇ ಜಾನುವಾರು ಗಣನೆಯೊಂದು ನಡೆಯುವ ಸಂಭವವಿದೆ. ಭಾರತದಂತಹ ಧಾರ್ಮಿಕ ಸಂಸ್ಕದಾಯ ಪ್ರಧಾನ ದೇಶದಲ್ಲಿ ಜಾನುವಾರುಗಳನ್ನು ಕೊಂದು ಅವುಗಳ ಮಾಂಸ ಭಕ್ಷಣ ಮಾಡುವುದು ನಿಷಿದ್ಧವಿರುವುದರಿಂದ, ಅವುಗಳ ಸಂಖ್ಯೆಯು ನಾಯಿಕೊಡೆಗಳಂತೆ ಏರುತ್ತ ಬರುತ್ತಿದೆ; ಕಳದ ಹತ್ತು ವರ್ಷಗಳಲ್ಲಿ ದನಕರುಗಳ ಸಂಖ್ಯೆಯು ನೂರಕ್ಕೆ ೧೫-೧೯ರಂತೆ ಹೆಚ್ಚಿರುವುದು ನಿಜವಾದರೂ ಅನಶ್ಯಕ ಆಹಾರದ ಹೂರಯ್ಕೆಯು ಕಡಿಮೆಯಾಗಿದೆ ಎಂದು ಹೋಜನಾ ಆಯೋಗದ ಅಭಿಪ್ರಾಯ. ದೇಶದಲ್ಲಿನ ದನಕರುಗಳು ಮತ್ತು ಆಹಾರ ಮೇವುಗಳಲ್ಲಿ ಸಮತೋಲವನ್ನು ಕಾಯ್ದುಕೊಳ್ಳುವುದು ಅವಶ್ಯವಾದುದರಿಂದ ಈ ಸಂಬಂಧದಲ್ಲಿಯೂ ಒಂದು ಯೋಜನೆಯನ್ನು ರೂಪಿಸಬೇಕೆಂದೂ ಆವುಗಳ ಸಂಖ್ಯೆಯನ್ನು ನಿಯಮಿತಗೊಳಿಸುವ ಬಗ್ಗೆ ನಿರ್ದಿಷ್ಟ ಕಾರ್ಯಕ್ರಮಗಳನ್ನು ಮುಂದಿನ ವರ್ಷದಿಂದ ಕೈಗೊಳ್ಳಬೇಕೆಂದೂ ಆಯೋಗವು ಸಲಹೆ ನೀಡಿದೆ. ಸಂತಾನ ಪ್ರತಿಬಂಧವನ್ನು ಜನರಿಗೆ ಮಾತ್ರವಲ್ಲ, ದನಗಳಿಗೂ ಅನ್ವಯಿಸುವುದಲ್ಲದೆ ಬೇರಾವ ಯೋಜನೆ ತಾನೇ ನಮ್ಮ ದೇಶದಲ್ಲಿ ಸಾಧ್ಯ?

ಕಾಲದ ಗತಿ ಕುಟಿಲ

ಚೀನಾವು ಭಾರತವನ್ನು ಆಕ್ರಮಿಸಿದ ರಹಸ್ಯ ಸ್ಫೋಟಗೊಂಡನಂತರ ಕಮ್ಯುನಿಸ್ಟರು ಧೃತಿಗೆಟ್ಟುದು ಮಾತ್ರವಲ್ಲ, ಅವರು ಹತಪ್ರಭರಾದರೆಂಬುದಕ್ಕೆ ಈ ವರ್ಷ ನಡೆದ ಚುನಾವಣೆಯೇ ಸಾಕ್ಷಿ. 'ಹಿಂದೀ ಚೀನೀ ಭಾಯಿ ಭಾಯಿ'ಯೆಂಬ ವೇದಿಕೆಯನ್ನು ಬಳಸಿಕೊಳ್ಳುತಿದ್ದ ಭಾರತ-ಚೀನಾ ಮೈತ್ರೀ ಸಂಸ್ಥೆಯು ಜೀವನ್ಮೃತಾವಸ್ಥೆಗೆ ಗುರಿಯಾಯಿತು. ಕೇಂದ್ರ ಸರಕಾರದಿಂದ ಸಹಾಯ ಧನವನ್ನೂ ಪಡೆದು ತನ್ನ ಉದ್ದೇಶವನ್ನು ಪೂರೈಸುತಿದ್ದ ಈ ಸಂಸ್ಥೆಯು ಇಂದು ಚಟುವಟಿಕೆಗಳಲ್ಲದೆ ನಿರ್ಜೀವ ಸ್ವರೂಪಿಯೆನ್ನಿಸಿದೆ. ಸರಕಾರವು ೧೯೬೦ರಿಂದ ಘೋಷಿಸುವ ಸಹಾಯಧನವನ್ನೂ ನಿಲ್ಲಿಸಿದೆ. ಆತ್ತೆ ಸೊಸೆಯಂತರ ಕಾಟದಲ್ಲಿ ಹಣ್ಣಾಗುವ ಮಗುವಿನಂತೆ ಪಡಬಾರದ ಬನ್ನಕ್ಕೆ ಈ ಸಂಸ್ಥೆಯ ಕಾರ್ಯಕರ್ತರು ಗುರಿಯಾಗಿದ್ದಾರೆಂದರೆ ಅತಿಶಯೋಕ್ತಿಯಲ್ಲ. ಕಾಲಸ್ಯ ಕುಟಿಲಾ ಗತಿಃ ಎಂದು ಇದನ್ನಲ್ಲದೆ ಮತ್ತಾವುದನ್ನು ಕರೆಯಬಹುದು?

ದೀರ್ಘಾಯುಷ್ಯದ ಗುಟ್ಟು

ಬ್ರಹ್ಮಚರ್ಯ ಪಾಲನೆಯಿಂದ ಹೆಚ್ಚು ಕಾಲ ಬದುಕ ಬಹುದು ಎಂದು ಹೆಚ್ಚಿನವರು ನಂಬಿದ್ದರೆ, ಹಳೆಯ ಜ್ಞಾನವೆಲ್ಲವೂ ತಲೆ ಕೆಳಗು ಆಗುತ್ತಿರುವ ಈ ಆತ್ಮಾಧುನಿಕ ಯುಗದಲ್ಲಿ ಈ ನಂಬಿಕೆಯೂ ಸುಳ್ಳಾಗುವ ಗಂಡಾಂತರಕ್ಕೆ ಬಂದಿದೆ. ಸಂಯುಕ್ತ ರಾಷ್ಟ್ರ ಸಂಘವು ಇದೀಗ ಹೊರಡಿಸಿರುವ ಅಂಕೆ ಅಂಶಗಳಿಂದ ಕೂಡಿದ ಪುಸ್ತಕವೊಂದನ್ನು ಅಧ್ಯಯನ ನಡೆಸಿದಾಗ, ಮದುವೆಯೂದರೆ ಮಾತ್ರ ದೀರ್ಘಾಯುಷಿಗಳಾಗುವುದು ಸಾಧ್ಯವೆಂದು ಗೊತ್ತಾಗುತ್ತಿದೆ. ಜಗತ್ತಿನಾದ್ಯಂತ ವಿವಾಹಿತ ಸ್ತ್ರೀ-ಪುರುಷರೇ ಅವಿವಾಹಿತರು, ವಿಧುರ-ವಿಧವೆಯರು ಮತ್ತು ವಿವಾಹ ವಿಚ್ಛೇದನವನ್ನಾಡಿಕೊಂಡವರಿಗಿಂತ ಹೆಚ್ಚು ಕಾಲ ಬದುಕುವರೆಂಬುದು ಇದರಿಂದ ವ್ಯಕ್ತವಾಗುತ್ತದೆ. ಇಷ್ಟು ಮಾತ್ರ

(ನೇ ಪುಟ ನೋಡಿರಿ)

ಅಲ್ಲಲ್ಲಿಯ ಸುದ್ದಿಸಾರ

ಯಕ್ಷಗಾನ ಶಿಬಿರದಲ್ಲಿ ಶ್ರೀ ಕಾರಂತರಿಗೆ ಸತ್ಕಾರ—ಉಡುಪಿಯಲ್ಲಿ ಎರಡು ತಿಂಗಳಿಂದ ಯಕ್ಷಗಾನದಲ್ಲಿ ನವ ಪ್ರಯೋಗದ ತರಬೇತಿ ಶಿಬಿರ ನಡೆಸುತ್ತಿರುವ ಹಿರಿಯ ಸಾಹಿತಿ ಶ್ರೀ ಶಿವರಾಮ ಕಾರಂತರಿಗೆ ಕೃತಜ್ಞತೆ ಸೂಚಿಸಲು ತರಬೇತಿ ಕಲಾವಿದರು ಇದೇ ತಾ ೨ರಂದು ಡಾ. ಕೆ. ಎಲ್. ಐತಾಳರ ಅಧ್ಯಕ್ಷತೆಯಲ್ಲಿ ಸತ್ಕಾರ ಸಮಾರಂಭವೆನ್ನೇರ್ಪಡಿಸಿ ಗೌರವಿಸಿದರು. ಶ್ರೀ ಬಿ. ರಾಮಚಂದ್ರ ನಾವಡರಿಂದ ಪ್ರಾರ್ಥನೆಯಾದ ಬಳಿಕ ಕಲಾವಿದರ ಪರವಾಗಿ ಶ್ರೀ ಬೈಕಾಡಿ ವೆಂಕಟಕೃಷ್ಣರಾಯರು ಸ್ವಾಗತ ಭಾಷಣಮಾಡುತ್ತಾ ಅವನತಿ ಹೊಂದುತ್ತಿರುವ ಯಕ್ಷಗಾನದ ಘನತೆ, ಕಲಾ ಪ್ರೌಢಿಮೆಗಳನ್ನು ಶ್ರೀ ಕಾರಂತರು ಲೋಕಕ್ಕೆ ಎತ್ತಿ ತೋರಿಸಿದ್ದಾರೆಂದೂ ಈ ಗಮನ ಕೈಗೊಂಡ ಈ ಹೊಸ ಪ್ರಯೋಗದಿಂದ ಕಲಾವಿದರು ಹೆಚ್ಚಿನ ಅನುಭವಗಳಿಸಿದ್ದಾರೆಂದೂ ಹೇಳಿದರು. ಶ್ರೀ ನಾರಾಯಣ ಉಪ್ಪೂರರು ಕಲಾವಿದರಾದ ನಾವು ಶ್ರೀ ಕಾರಂತರು ಹೇಳಿಕೊಟ್ಟಿರುವುದನ್ನು ಎಷ್ಟು ಸಾಧಿಸಿದ್ದೇವೋ ಎಂಬ ಅರಿವು ನಮಗಿಲ್ಲ. ಅವರು ತಾನೂ ಕುಣಿದು ನಮ್ಮೆಲ್ಲರನ್ನು ಕುಣಿಸಿ ತಿದ್ದಿ ಉತ್ತಮ ರೀತಿಯಲ್ಲಿ ತರಬೇತುಗೊಳಿಸಿ ಹೊಸ ಅನುಭವವನ್ನು ನಮ್ಮಲ್ಲಿ ತುಂಬಿದ್ದಾರೆ. ಈ ಬಗ್ಗೆ ನಾವು ಕೃತಜ್ಞರಾಗಿದ್ದೇವೆ ಎಂದರು. ಶ್ರೀ ಕಾರಂತರು ಮಾತನಾಡುತ್ತಾ ನಾನು ಮೂವತ್ತು ವರ್ಷಗಳಿಂದ ಕಂಡಿದ್ದ ಕನಸನ್ನು ಈಗ ಕಾರ್ಯಗತಗೊಳಿಸುತ್ತಿದ್ದೇನೆ, ಇಲ್ಲಿ ಸಂಪ್ರದಾಯಕ್ಕಿಂತಲೂ ಕಲ್ಪನೆಗೆ ಹೆಚ್ಚಿನ ಮಹತ್ವ ಕೊಟ್ಟಿದ್ದೇನೆ. ಅಂದಿನ ಕಲ್ಪನೆಯು ಇಂದು ನನಸಾಗುವಾಗ, ತರಬೇತಿ ಪಡೆದವರು ಅದನ್ನು ಮೂಡಿ ತೋರಿಸುವಾಗ ನಾನು ಆನಂದ ಸಮೂಧಾನ ಹೊಂದಿರುತ್ತೇನೆ. ಕಲ್ಪನೆಯು ಸಿದ್ಧಿಸುವಾಗ ದಣುವೆಂಬುದಿಲ್ಲವೆಂದರು. ಅಧ್ಯಕ್ಷ ಡಾ. ಐತಾಳರು ಈ ಹೊಸ ಪ್ರಯೋಗವು ಲೋಕಮನ್ನಣೆ ಪಡೆಯಲೆಂದೂ ಕಾರಂತರ ಕಲಾ ಸೇವೆ ಇತೋಪ್ಯತಿಶಯವಾಗಿ ನಡೆಯುವಂತಾಗಲೆಂದೂ ಹಾರೈಸಿದ ಬಳಿಕ ಶ್ರೀ ಎಚ್. ಸುಬ್ಬಣ್ಣ ಭಟ್ಟರು ವಂದನೆ ಸಲ್ಲಿಸಿದರು.

ಅದೇ ದಿನ ಮಧ್ಯಾಹ್ನ ಉಡುಪಿ ಕರ್ಣಾಟಕ ಸಂಘದವರು ಶ್ರೀ ಕಾರಂತರಿಗೂ ತರಬೇತಿ ಕಲಾವಿದರಿಗೂ ಭೋಜನ ಸತ್ಕಾರವಿತ್ತು ಗೌರವಿಸಿದರು.

ಉಡುಪಿ ನಗರ ಸಭೆ—ಯ ತಾ. 24-10-62ರಲ್ಲಿ ನಡೆಯಲಿರುವ ಚುನಾವಣೆಯ ಬಾಬಿನಲ್ಲಿ ಉಮೇದ್ವಾರಿಕೆಯನ್ನು ಹಿಂದೆಗೆಯಲು ಗೊತ್ತುಪಡಿಸಿರುವ ತಾರೀಕು 16-9-62ನೇ ಆದಿತ್ಯವಾರ ಉಡುಪಿ ಮುನ್ಸಿಪಲ್ ಆಫೀಸು ತೆರೆದಿಡಲ್ಪಡುವುದೆಂಬುದನ್ನು ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸೋಣವಾಗುತ್ತದೆ ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ಡಾ| ಎಸ್. ಬಿ. ಎಸ್. ಹೆಗ್ಡೆಯವರ ನಿಧನ—ಶೃಂಗೇರಿಯಲ್ಲಿ ಜನಪ್ರಿಯ ಡಾಕ್ಟರಾಗಿದ್ದು ಸಾರ್ವಜನಿಕ ಸೇವಾಕಾಂಕ್ಷಿಗಳಾಗಿದ್ದ ಡಾ. ಸೆಟ್ಟಿಬೆಟ್ಟು ಭವಾನಿ ಶಂಕರ ಹೆಗ್ಡೆಯವರು ಇದೇ ತಾ. 6-9-62ರಂದು ಸೆಟ್ಟಿಬೆಟ್ಟನಲ್ಲಿ 44ನೇ ವಯಸ್ಸಿನಲ್ಲಿ ಹೃದಯ ಸ್ತಂಭನದಿಂದ ಅಕಾಲ ನಿಧನ ಹೊಂದಿದರೆಂದು ತಿಳಿಸಲು ವಿಷಾದವಾಗುತ್ತದೆ. ದಿವಂಗತರು ಪ್ರಸಿದ್ಧ ಬಂಟರ ಯಾನೆ ನಾಡವರ ಮನೆತನದವರೂ ಉತ್ಸಾಹೀಕಾರ್ಯಕರ್ತರೂ, ನಯವಿನಯ ಸಂಪನ್ನರೂ, ಉದಾರಿಗಳೂ ಆಗಿ ಊರಲ್ಲೂ ಶೃಂಗೇರಿಯಲ್ಲೂ ವಿಶೇಷ ಜನಾನುರಾಗ ಗಳಿಸಿದ್ದರು.

ಬಂಟರ ಯಾನೆ ನಾಡವರ ಸಂಘ

ಮುಂಬಯಿ—ತಾ. 5—8—62ರಲ್ಲಿ ಜರಗದೆ ಮುಂದುವರಿಸಿದ ಇದರ 34ನೇ ವಾರ್ಷಿಕ ಮಹಾ ಸಭೆಯು ತಾ. 2—9—62ರಲ್ಲಿ ಗೋಕಲೆ ರೋಡ್ (ನೋರ್ತ್)ನಲ್ಲಿರುವ ಕಿಟ್ಟಿ ಭಂಡಾರಿ ಹೋಲಿನಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ಕೆ. ವಿಠಲ ಶೆಟ್ಟಿ ಅಧ್ಯಕ್ಷತೆಯಲ್ಲಿ ಜರಗಿತು. ಹೊಸ ವರ್ಷದ ಅಡಳಿತ ಸಮಿತಿಗೆ 26 ಮತ್ತು ಈ ಕೆಳಗಿನ ಮಹನೀಯರನ್ನು ಚುನಾಯಿಸಲಾಯಿತು.

ಶ್ರೀ ಕೆ. ವಿಠಲ ಶೆಟ್ಟಿ—ಅಧ್ಯಕ್ಷ, ಅತ್ತೂರು ಭೋಜ ಶೆಟ್ಟಿ—ಉಪಾಧ್ಯಕ್ಷ ಮೂಲ್ಕಿ ಗಂಗಯ ಶೆಟ್ಟಿ-ಗೌ. ಪ್ರ. ಕಾರ್ಯದರ್ಶಿ, ಆರ್. ಬಿ. ಶೆಟ್ಟಿ ಬಿ. ಎ. ಗೌ. ಉಪಕಾರ್ಯದರ್ಶಿ, ಕೆ. ಕೃಷ್ಣ ಶೆಟ್ಟಿ—ಗೌ. ಕೋಶಾಧಿಕಾರಿ, ಯನ್ ಗೋಪಾಲ ಶೆಟ್ಟಿ, ಬಿ. ಎ. ಎಲ್. ಎಲ್. ಬಿ. ಗೌ. ಉಪ ಕೋಶಾಧಿಕಾರಿ, ಕೆ. ಶಾಮರಾಯ ಶೆಟ್ಟಿ— ಶಾಲಾ ಚೆಯರ್‌ಮೆನ್ ಜಗನ್ನಾಥ ವಿ. ಶೆಟ್ಟಿ, ಬಿ. ಎ.(ಹೋನರ್ಸ್) ಗೌ. ಶಾಲಾ ಕಾರ್ಯದರ್ಶಿ, ಸುಂದರ ಬಿ. ಶೆಟ್ಟಿ—ಗೌ. ಶಾಲಾ ಕೋಶಾಧಿಕಾರಿ.

ಡಾ| ಯನ್ ವಿ. ಅಡ್ಯಂತಾಯರ ಅಣ್ಣ ಡಾ| ಶಂಕರ ಅಡ್ಯಂತಾಯ, ಸೈಯೂರು ಮುದ್ದು ಶೆಟ್ರ ತಂಗಿ ಪದ್ಮಾಕ್ಷಿ, ಕಲ್ಸಕೊಲೇಜಿನ ವಿದ್ಯಾರ್ಥಿಯಾಗಿದ್ದ ಮೂಲೂರು ಬಿಕ್ರಿ ಗುತ್ತು ಸಂಜೀವ ಶೆಟ್ಟಿ ಮೊದಲಾದವರ ಮತ್ತು ಸಮಿತಿಯ ಅವಗಾಹನೆಗೆ ಬಾರದ ಮೃತ ಪಟ್ಟ ಸ್ವಜಾತಿ ಬಂಧುಗಳ ಆತ್ಮಗಳಿಗೂ ಸರ್ವಾಂತರ್ಯಾಮಿಯಾದ ಭಗವಂತನು ಚಿರ ಶಾಂತಿಯನ್ನೀಯಲೆಂದು ಪ್ರಾರ್ಥಿಸಲಾಯಿತಲ್ಲದೆ, ಸಭಿಕರ, ಅಧ್ಯಕ್ಷರ ಭಾಷಣಗಳಾದ ನಂತರ ಲಘು ಉಪಹಾರ ಮತ್ತು ಉಪಕಾರ ಸ್ಮರಣೆಯೊಂದಿಗೆ ಸಭಾಂತ್ಯವಾಯಿತು.

ಶಿಕ್ಷಕರ ದಿನಾಚರಣೆಯು—ಇದೇ ತಾ. 5ರಂದು ಉಡುಪಿಯಲ್ಲಿ ಮಹಾತ್ಮಾ ಗಾಂಧಿ ಎಲಿಮೆಂಟರಿ ಶಾಲೆಯಲ್ಲಿ ಸರ್ ಜಡ್ಜ್ ಶ್ರೀ ಜೆ. ಬಿ. ಕುಲಕರ್ಣಿಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಎ. ಜೆ. ಅಲ್ಸೆಯವರು ಸ್ವಾಗತಿಸಿ ಉಪಾಧ್ಯಾಯರ ಪರಿಸ್ಥಿತಿ, ದಿನಾಚರಣೆಯ ಉದ್ದೇಶಗಳನ್ನು ವಿವರಿಸಿದರು. ಶ್ರೀ ಟಿ. ರಮೇಶ ಪೈಗಳು ವಿದೇಶಗಳ ಶಿಕ್ಷಣ ಮತ್ತು ಶಿಕ್ಷಕರ ಸ್ಥಾನಮಾನಗಳ ಕುರಿತಾಗಿಯೂ ಆಕಾ ಡಿ. ಇ. ಟಿ. ಶ್ರೀ ಸಿದ್ದೇಶ್ವರರು ರಾಜ್ಯದ ಶಿಕ್ಷಕರ ಪರಿಸ್ಥಿತಿಯ ಕುರಿತಾಗಿಯೂ ಭಾಷಣವಿತ್ತರು. ಅಧ್ಯಕ್ಷರು ಉಪಾಧ್ಯಾಯರ ವೃತ್ತಿಯು ಪವಿತ್ರವೆನ್ನುವುದರಿಂದ ಮಾತ್ರ ಅವರ ಸ್ಥಿತಿ ಸುಧಾರಿಸದೆಂದೂ ಮುಂದಿನ ಜನಾಂಗವನ್ನು ರೂಪಿಸುವ ಶಿಕ್ಷಕರಿಗೆ ಯೋಗ್ಯ ಸೌಲತ್ತುಗಳು ದೊರೆಯುವುದು ಅತ್ಯಾವಶಕವೆಂದೂ ಹೇಳಿದರು. ಶ್ರೀ ಶ್ರೀಧರ ಶೆಟ್ಟರು ವಂದನೆಗಳನ್ನು ಸಲ್ಲಿಸಿದರು. ನಂತರ ಮನರಂಜನಾ ಕಾರ್ಯಕ್ರಮಗಳಾದುವು.

ಪರ್ಕಳದಲ್ಲಿ ಶ್ರೀ ಕಾರಂತರಿಗೆ ಸನ್ಮಾನ—ಪರ್ಕಳದ ಶ್ರೀ ಶಾರದಾ ಕಲಾ ಮಂಡಳಿಯವರು ಶಿವರಾಮ ಕಾರಂತರನ್ನು ತಾ 6—9—62ರಂದು ಬಿ. ಇ. ಎಂ. ಹಾ. ಎ. ಶಾಲೆಯಲ್ಲಿ ಶ್ರೀ ಕು. ಶಿ. ಹರಿದಾಸ ಭಟ್ಟರ ಅಧ್ಯಕ್ಷತೆಯಲ್ಲಿ ಗೌರವಿಸಿ ಸನ್ಮಾನ ಪತ್ರವನ್ನರ್ಪಿಸಿದರು. ಶ್ರೀ ಎಸ್. ರಾಘವ ಸೆಟ್ಟಿಗಾರರು ಸ್ವಾಗತಿಸಿದ ಬಳಿಕ ಶ್ರೀ ಕೆ. ಆನಂದ ಶೆಟ್ಟರು ಸನ್ಮಾನ ಪತ್ರವನ್ನು ಶ್ರೀ ಕಾರಂತರಿಗೆ ಒಪ್ಪಿಸಿದರು. ಶ್ರೀ ಕಾರಂತರು ಮಾತನಾಡುತ್ತಾ ಕಲಾಗಾರನಿಗೆ ಸಾಧನೆ ಮುಖ್ಯವೆಂದೂ ಆಗ ಮಾತ್ರ ಅವನು ಅಳವಾದ ಜ್ಞಾನವನ್ನು ಪಡೆಯಲು ಸಮರ್ಥನಾಗುವನೆಂದೂ ಯಕ್ಷಗಾನ ಪಾತ್ರಧಾರಿಗಳು ತಮ್ಮ ಪಾತ್ರದ ಮಹತ್ವವನ್ನು ಚೆನ್ನಾಗಿ ಅರ್ಥಮಾಡಿಕೊಂಡು ಅದಕ್ಕೆ ಸರಿಯಾದ ಅರ್ಥವನ್ನು ಹೇಳಬೇಕೆಂದೂ ಪಾತ್ರದ ನಿಜವಾದ ಅರಿವನ್ನು ಪ್ರೇಕ್ಷಕರಿಗೆ ಮೂಡಿಕೊಡಬೇಕೆಂದೂ ಹೇಳಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಾಹಿತ್ಯವನ್ನೇ ತನ್ನ ಬದುಕನ್ನಾಗಿ ಮಾಡಿ ಶ್ರದ್ಧೆ ವಹಿಸಿ ದುಡಿಯುತ್ತಿರುವ ಶ್ರೀ ಕಾರಂತರು ಕರ್ನಾಟಕದಲ್ಲಿ ಹಿರಿಯ ಸ್ಥಾನವನ್ನು ಗಳಿಸಿರುವರೆಂದೂ, ತನ್ನ ಕೀರ್ತಿಯನ್ನು ಅಖಿಲ ಕರ್ನಾಟಕಕ್ಕೆ ಪಸರಿಸಿರುವ ಈ ವ್ಯಕ್ತಿಗೆ ಊರವರೆಲ್ಲರೂ ಗೌರವಿಸುವುದು ಅದ್ಯ ಕರ್ತವ್ಯವೆಂದೂ ಹೇಳಿದರು. ಧನ್ಯವಾದರ್ಪಣೆಯೊಂದಿಗೆ ಸಮಾರಂಭವು ಸಮಾಪ್ತಿಯಾಯ್ತು.

ನಿಡಂಬೂರು—ತಾ. 5—9—62ರಂದು ಸ್ಥಳೀಯ ಪಂಚಾಯತು ಆಫೀಸಿನಲ್ಲಿ ಅಧ್ಯಾಪಕರ ದಿನಾಚರಣೆ ಮತ್ತು ರಾಷ್ಟ್ರನಾಯಕರ ಭಾವ ಚಿತ್ರಗಳ ಅನಾವರಣ ಸಮಾರಂಭವನ್ನು ಶ್ರೀ ಎಂ ಮಧ್ವರಾಜ ಎಂ. ಎಲ್. ಎ. ಅವರು ಪಂಚಾಯತ್ ಅಧ್ಯಕ್ಷ ಶ್ರೀ ಕೆ ಶಾಮ ಸೆಟ್ರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಅಧ್ಯಾಪಕರ ದಿನಾಚರಣೆಯ ಮಹತ್ವದ ಕುರಿತು ಶ್ರೀಗಳಾದ ಅಣ್ಣಪ್ಪ ಭಂಡಾರಿ, ವೆಂಕಟ್ರಾವ್, ಭೋಜ ಪೂಜಾರಿಯವರು ಮಾತನಾಡಿದರು. ಪಂಚಾಯತಿನ ಪರವಾಗಿ ಅವಶ್ಯಕ ಕೆಲಸಗಳಿಗೆ ಆಗತ್ಯವುಳ್ಳ ಸಹಾಯವನ್ನಪೇಕ್ಷಿಸಿ ಅರ್ಜಿಸಲಾದ ಮನವಿಗೆ ಶ್ರೀ ಮಧ್ವರಾಜರು ತನ್ನಿಂದ ಸಾಧ್ಯವಿರುವ ಕೆಲಸಗಳನ್ನು ಮಾಡಿಸಿ ಕೊಡುವುದಾಗಿ ಸಹಾನುಭೂತಿಪೂರ್ವಕ ಉತ್ತರವಿತ್ತರು. ನಂತರ ಲಘು ಉಪಹಾರ, ಗ್ರೂಪ್‌ಫೊಟೋ ತೆಗೆಯುವಿಕೆ, ಧನ್ಯವಾದ ಸಮರ್ಪಣೆಯೊಂದಿಗೆ ಸಭಾಂತ್ಯವಾಯ್ತು.

ಗಣೇಶ ಚತುರ್ಥಿ ಯಕ್ಷಗಾನ—ಇದೇ ತಾ 4ರಂದು ಇಂದ್ರಾಳಿ ಪುಟ್ಟಣ್ಣ ಭಟ್ರ ಮನೆಯಲ್ಲಿ ಗಣೇಶ ಚತುರ್ಥಿ ಅಂಗವಾಗಿ ಉಡುಪಿ ಯಕ್ಷಗಾನ ಕಲಾಮಂಡಲಿಯವರು ಶ್ರೀ ಕೃಷ್ಣ ಸಂಧಾನ ಮತ್ತು ಅಂಗದ ಸಂಧಾನವೆಂಬ ಯಕ್ಷಗಾನ ಕೂಟವನ್ನು ಶ್ರೀಗಳಾದ ಕೆ. ನಾರಾಯಣ ಶೆಟ್ಟರರ ಹಾಡುಗಾರಿಕೆ, ಮಟ್ಟ ಗೋವರ್ಧನ ರಾವ್, ಸಗ್ರಿ ಕಿಟ್ಟಾಚಾರಿಯವರ ಮೃದಂಗವಾದನ, ಕೋಟೆ ಸುಬ್ಬರಾವ್, ಸೀತಾನದಿ ಗಣಪಯ್ಯ ಶೆಟ್ಟ, ಮಟ್ಟ ವೆಂಕಟಾಚಲ ಭಟ್ಟ, ಬಿ. ಸಾದು ಶೆಟ್ಟ, ಕೆ. ರಾಮ ಶೆಟ್ಟ, ವೆಂಕಪ್ಪ ಶೆಟ್ಟ, ಮೆಟ್ಟಲ್ಲು ಕೃಷ್ಣಯ್ಯ ಶೆಟ್ಟರೇ ಮೊದಲಾದ ಪ್ರಸಿದ್ಧ ಕಲಾವಿದರ ಕೂಡುವಿಕೆಯಿಂದ ಜರಗಿಸಿದರು. ಪುಟ್ಟಣ್ಣ ಭಟ್ಟರ ಧನ್ಯವಾದ ಸಮರ್ಪಣೆಯೊಂದಿಗೆ ಕಾರ್ಯಕ್ರಮ ಕೊನೆಗೊಂಡಿತು.

ಪೆರ್ಡೂರು—ಇದೇ ಕಳೆದ ಗೋಕುಲಾಷ್ಟಮಿಯಂದು, ಶ್ರೀ ಕೃಷ್ಣನ ಪ್ರೀತ್ಯರ್ಥವಾಗಿ, ಇಲ್ಲಿಯ ಅಧ್ಯ ಮಹನೀಯರೂ ವೆಸ್ಟ್ ಕೋಸ್ಟ್ ಬ್ಲಸ್ಸಿನ ಮ್ಯಾನೇಜಿಂಗ್ ಡೈರೆಕ್ಟರರೂ ಆದ ಶ್ರೀ ಆಲಂಗಾರು ನಾರಾಯಣ ಹೆಗ್ಡೆಯವರು ಸ್ವಗೃಹದಲ್ಲಿ ಬಡವರಿಗೆ ಮನೆ ಒಂದರ ಒಂದೂವರೆ ಸೇರು ಬೆಲ್ತಿಗೆ ಅಕ್ಕಿಯಂತೆ 20 ಮುಡಿ ಅಕ್ಕಿಯನ್ನು ಬೆಳಗ್ಗೆ 8 ಗಂಟೆಯಿಂದ ಮಧ್ಯಾಹ್ನ 2 ಗಂಟೆಯ ವರೆಗೂ ಧರ್ಮಾರ್ಥವಾಗಿ ಹಂಚಿದರು. ಇವರ ಈ ಸ್ತುತ್ಯ ಕಾರ್ಯವು ಪ್ರಶಂಸನೀಯವಾಗಿದ್ದು ಪರಮಾತ್ಮನು ಇವರಿಗೂ ಇವರ ಕುಟುಂಬಕ್ಕೂ ಶ್ರೇಯಸ್ಸನ್ನು ಈಯುವಂತೆ ಎಲ್ಲರೂ ಹಾರೈಸಿದರು.

ಬ್ರಹ್ಮಾವರ—ಸ್ಥಳೀಯ ಪಂಚಾಯತಿಯ ಮಹಾಸಭೆಯು ತಾ. 24-8-62ರಂದು ಸಾರ್ವಜನಿಕರ ಕೂಡುವಿಕೆಯಿಂದ ಶ್ರೀ ಬಿ. ವಿ. ಮಾಧವರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಪಂಚಾಯತ್ ಕಾರ್ಯದರ್ಶಿಯವರು ಸ್ವಾಗತಿಸಿ ವಾರ್ಷಿಕ ವರದಿಯನ್ನು ಓದಿದರು. ಪಂಚಾಯತಿನ ಲೆಕ್ಕ ಪತ್ರಗಳನ್ನೂ ಸಭೆಯ ಮುಂದೆ ಓದಲಾಯಿತು. ಈ ಸಭೆಯ ಅಂಗವಾಗಿ ಮಹಾತ್ಮಾ ಗಾಂಧಿ, ಪಂಡಿತ್ ಜವಾಹರಲಾಲ್ ನೆಹರು ಮತ್ತು ಡಾ. ರಾಧಾಕೃಷ್ಣನ್‌ರವರ ಭಾವಚಿತ್ರಗಳನ್ನು ಪಂಡಿತ ಸಿ. ವೈ. ರಾಮನ್‌ಗುರುಕಳ್‌ರವರು ಅನಾವರಣ ಮಾಡಿದರು.

ಮಹಾಸಭೆಯಲ್ಲಿ ಸಮಾಜಾಭಿವೃದ್ಧಿ ಯೋಜನೆಯ ಅನ್ವಯ, ಊರ ಜನರ ಹಿತದೃಷ್ಟಿಯಿಂದ ಅವಶ್ಯವಿರುವ ಹಲವಾರು ರಸ್ತೆಗಳನ್ನೂ ಕಾಲು ಸಂಕಗಳನ್ನೂ ನೀರಿನ ಸರಬರಾಯಿ ಮೊದಲುಗೊಂಡು ಇತರ ಎಲ್ಲಾ ಸೌಕರ್ಯಗಳನ್ನೂ ಏರ್ಪಡಿಸುವುದಾಗಿಯೂ ನಿರ್ಣಯಿಸಲಾಯಿತು. ಈ ಬಾಬಿನಲ್ಲಿ ತಗಲಬಹುದಾದ ಹೇರಳ ವೆಚ್ಚವನ್ನು ಭರ್ತಿಮಾಡಿಕೊಳ್ಳುವರೆ ಇತ್ತೀಚೆಗೆ ಸ್ಥಾಪಿಸಲ್ಪಟ್ಟ ಬ್ಲೋಕ್ ಡೆವೆಲಪ್‌ಮೆಂಟ್‌ನವರ ಸಹಾಯವನ್ನು ಯಾಚಿಸಿ ಕೂಡಲೇ ಕಾರ್ಯಕೈಕೊಳ್ಳುವುದಾಗಿಯೂ ನಿರ್ಣಯಿಸಲಾಯಿತು. ಡಾ ಕೆ. ನಾರಾಯಣ ಪೈ, ಎಮ್. ಎಲ್. ಕಲ್ಕೂರ, ಕೆ. ಸುರೇಂದ್ರನಾಥ ಕಂಡ್ರಿ ಮತ್ತು ಶ್ರೀನಿವಾಸ ವಾರಂಬಳ್ಳಿಯವರು ಸಭಿಕರ ಪರವಾಗಿ ಮಾತನಾಡಿದ ತರುವಾಯ ಅಧ್ಯಕ್ಷರು ಪಂಚಾಯತು ಮಾಡಲಿಕ್ಕಿರುವ ಕರ್ತವ್ಯಗಳ ಕುರಿತು ಸೂಕ್ತ ಸಲಹೆಗಳನ್ನು ಕೊಟ್ಟರು. ವಂದನಾರ್ಪಣದೊಂದಿಗೆ ಸಭೆಯು ಮುಕ್ತಾಯವಾಯಿತು.

(೬ನೇ ಪುಟದಿಂದ)

ವಲ್ಲದೆ ಅವಿವಾಹಿತರೇ ವಿವಾಹಿತರಿಗಿಂತ ಹೆಚ್ಚಾಗಿ ಸಾಯುತ್ತಾರೆಯೆಂಬುದು ಇನ್ನೊಂದು ಗಮನಾರ್ಹ ವಿಚಾರ. ಹಾಗಾಗಿ ಬ್ರಹ್ಮಚರ್ಯವೇ ಜೀವನವೆಂಬುದು ನಿಜವಾದರೂ ಅವಿವಾಹಿತರಾಗಿ ಉಳಿಯುವುದು ಬೇಗನೆ ಸಾಯುವುದಕ್ಕೆ ಕಾರಣವಾಗುವುದೆಂದು ತಿಳಿದ ಮೇಲೆ ದೀರ್ಘಕಾಲ ಬದುಕಬೇಕೆಂದಿರುವವರು ದಾಂಪತ್ಯಜೀವನಕ್ಕೆ ಕಾಲಿಡುವುದು ಅಸಂಭವವಲ್ಲ. ಆದರೆ, ಈ 'ದಾಂಪತ್ಯ ಜೀವನ'ಕ್ಕೆ ವ್ಯಾಖ್ಯಾನ ಮಾತ್ರ ಇನ್ನೂ ಹೊರಟೆರದಿರುವುದು ಖೇದಾಸ್ಪದ.

ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷ

ಕರ್ನಾಟಕದ ಪ್ರಾದೇಶಿಕ ಕಾಂಗ್ರೆಸ್‌ನ ಅಧ್ಯಕ್ಷರೆಂದು ಎರಡು ವರ್ಷಗಳ ಕಾಲ ದುಡಿದ ಶ್ರೀ ಸಿದ್ದವ್ವನ ಹಳ್ಳಿ ನಿಜಲಿಂಗಪ್ಪನವರು ರಾಜ್ಯದ ಮುಖ್ಯ ಮಂತ್ರಿಯಾಗಿ ನಿಯುಕ್ತರಾದುದರಿಂದ ತನ್ನ ಮೊದಲಿನ ಹುದ್ದೆಗೆ ರಾಜಿನಾಮೆಯಿತ್ತರು. ಚಿತ್ರದುರ್ಗದಲ್ಲಿ ಸೇರಿದ ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಇದನ್ನು ಸ್ವೀಕರಿಸಿ, ಆ ಸ್ಥಾನಕ್ಕೆ ಶ್ರೀ ಮಹಮ್ಮದಾಲಿಯವರನ್ನು ಆರಿಸಲಾಯಿತು. ಸಮಿತಿಯ ೨೬೬ ಜನ ಸದಸ್ಯರಲ್ಲಿ ಉಪಸ್ಥಿತರಿದ್ದವರು ಕೇವಲ ೧೨೬ ಜನರು ಮಾತ್ರ. ಸದ್ಯದಲ್ಲಿಯೇ ಇಡಿಯ ರಾಜ್ಯದಲ್ಲಿ ಕಾಂಗ್ರೆಸ್ ಸಮಿತಿಗಳಿಗೆ ಚುನಾವಣೆಗಳು ನಡೆಯಲಿದ್ದು, ಇದರ ಅಧಿಕಾರಿಯಾಗಿ ನಂಜನಗೂಡಿನ ಶ್ರೀ ಎಸ್. ನಾರಾಯಣ ರಾಯರನ್ನೂ ಎಂಪಿಸಿಸಿಯು ಆರಿಸಿತು. ಶ್ರೀ ಮಹಮ್ಮದಾಲಿಯವರು ತಾತ್ಪೂರ್ತಿಕವಾಗಿ ಅಧ್ಯಕ್ಷರಾಗಿದ್ದು, ಈ ಸ್ಥಾನವನ್ನು ಚುನಾವಣಾ ನಂತರದಲ್ಲಿ ಶಾಶ್ವತವಾಗಿ ತುಂಬಲಾಗುವುದು.

In the Court of the Subordinate Judge South Kanara

R. E. P. No. 145/1961
O. S. No. 174/1955

Between

Rathna ... Petitioner

and

Nagamma as Ejamanthy and others ... Respondents

To

7th respondent Viswanatha s/o Nagamma, now working at Soda Shop, Suratkal, (S. K.)

8th respondent B. K. Padmanabha Poojary, Kihinaling Pur Boy Building, Ghat Kopar, Bombay.

Please take notice that the petitioner above named has filed the execution petition for sale of the immovable properties belonging to you and for recovery of the decree amount as shown in the E. P., and now the above petition stands posted to 24—9—1962 for hearing. Should you fail to appear on that day either in person or through a lawyer, before this Court at 11 A. M., the petition will be heard and decided in your absence.

(By order of the Court)

U. Vishwanath,
Advocate for petitioner.

Mangalore, 7—9—1962.

ದೇಶದ ಸಮಗ್ರತೆಯ ಯಕ್ಷ ಪ್ರಶ್ನೆ

(೧ನೇ ಪುಟದಿಂದ)

ಯ ಭಾವನೆಯ ಅಭಾವವನ್ನು ಎತ್ತಿ ತೋರಿಸುವಂತಿವೆ. ಅವರ ಈ ರೀತಿಯ ವರ್ತನೆಗೆ ವಿಭಿನ್ನ ಕಾರಣಗಳನ್ನೂ ಸಮರ್ಥನೆಗಳನ್ನೂ ನೀಡಬಹುದು; ಆದರೆ, ಅವನ್ನು ಅರ್ಥಮಾಡಿಕೊಳ್ಳುವಷ್ಟು ಸಾಮರ್ಥ್ಯವಾಗಲೀ ಬಿಡುವಾಗಲೀ ತಾಳ್ಮೆಯಾಗಲೀ ಸಾಮಾಜಿಕನಿಗಿರುವುದಿಲ್ಲ; ಹಾಗಿರುವಾಗ ಶ್ರೇಷ್ಠರಾದವರನ್ನು ಸಾಮಾನ್ಯರಾದವರು ಅನುಕರಿಸುವುದು ಸುಲಭ ಸಾಧ್ಯವೆಂಬುದರಿಂದ ರಾಜ್ಯ ರಾಜ್ಯಗಳ ನಡುವಣ ಸಂಬಂಧವು ವಾಸ್ತವಿಕವಾಗಿ ಸರಿಯಾಗಿ ಬೆಸೆಯ ಬೇಕಾಗುತ್ತದೆ. ಹಿಂದೀ ಭಾಷೆಯ ಅಧ್ಯಯನ ಮತ್ತು ಸರಕಾರಿ ಭಾಷೆಯೆಂದು ಅದನ್ನು ಸ್ವೀಕರಿಸುವ ಕುರಿತು ಇಂಗ್ಲಿಷ್ ಭಾಷೆಯ ಭವಿಷ್ಯದ ಕುರಿತು ರಾಜ್ಯ ರಾಜ್ಯಗಳ ನಡುವೆ ಹೊಂದಾಣಿಕೆಯಿರುವುದಿಲ್ಲ. ಆದರೆ, ದ್ರಾವಿಡ ಕಳಗಂ ಪ್ರತ್ಯಕ್ಷವಾಗಿ ರಾಷ್ಟ್ರ ಘಾತುಕ ಕಾರ್ಯಸಕ್ತರಾಗಿದ್ದಾರೆ.

ಪ್ರತಿಜ್ಞಾ ಭಂಗ

ಇನ್ನೊಂದು ವಿಷಯವನ್ನು ನಾವು ಗಮನಿಸಬೇಕು. ಇತರ ಎಂ. ಪಿ., ಎಂ. ಎಲ್. ಎ. ಗಳಂತೆಯೇ ಕಳಗಂ ಪ್ರತಿನಿಧಿಗಳೂ ಸಂವಿಧಾನಕ್ಕೆ ವಿಧೇಯರಾಗಿ ವರ್ತಿಸುವ ಪ್ರತಿಜ್ಞೆಯನ್ನು ಮಾಡಿದ್ದಾರೆ. ಅವರೀಗ ಈ ಪ್ರತಿಜ್ಞಾಭಂಗ ಮಾಡುವುದರಲ್ಲಿ ಅಸಕ್ತರೆನಿಸಿದರೆ, ಅದಕ್ಕಿಂತ ದೊಡ್ಡ ಅಪರಾಧವೆಂಬುದು ಪ್ರಜಾಸತ್ತೆಯಲ್ಲಿದೆಯೆ? ಈ ವಿಚಾರವಾದ ವಿಮರ್ಶೆ ಈಗ ಅತ್ಯವಶ್ಯವೆನಿಸುತ್ತದೆ.

ಉಡ್ಪಿ ಡಿ. ಮು. ಕೋರ್ಟಿನಲ್ಲಿ

O. P. 40/1962.

1. ರಂಗು ಮೂಲ್ತಿ—ಅಂಗು ಮೂಲ್ಯನ ವಿಧವೆ.

2. ಕರಿಯ ಮೂಲ್ಯ 3. ಮುಟ್ಟಿ ಮೂಲ್ತಿ 4. ಕಮಲು ಮೂಲ್ತಿ

5. ಶೀನ ಮೂಲ್ಯ 6. ಗೋಪು ಮೂಲ್ಯ 7. ವಾಸು ಮೂಲ್ಯ—ಮೃನರರು. 1ನೇ ಅರ್ಜಿದಾರಳ ಮಕ್ಕಳು

ರಕ್ಷಕಳು— 1ನೇ ಅರ್ಜಿದಾರಳು-ಉಡ್ಪಿ ತಾಲ್ಕು, ಹಿರೇಬೆಟ್ಟು ಗ್ರಾಮ-ಅರ್ಜಿದಾರರು.

ಮೇಲಿನ ಅರ್ಜಿಯ ಬಾಬಿನಲ್ಲಿ ಯಾವತ್ತು ಜನರಿಗೆ-ಯಾ ಮೂಲಕ ತಿಳಿಸುವುದೇನಂದ್ರೆ

1ನೇ ಅರ್ಜಿದಾರಳ ಗಂಡ-ವ ಮಿಕ್ಕ ಅರ್ಜಿದಾರರ ತಂದೆ ತಾರೀಕು 17-7-62ರಲ್ಲು ಹೆರ್ಗ ಗ್ರಾಮದಲ್ಲಿ ಮೃತಪಟ್ಟ ಅಂಗು ಮೂಲ್ಯನ ಬಾಬ್ತು The Karnatak Bank Ltd., Udipi Branchನಲ್ಲಿ ಡಿಪೋಜಿಟು ಆಗಿ S. B. accountನಲ್ಲಿರುವ ರೂಪಾಯಿ 205 80ನ್ನು ವ್ಸಲು ಮಾಡುವರೆ ಅರ್ಜಿದಾರರ ಬಗ್ಗೆ 1ನೇ ಅರ್ಜಿದಾರಳ ಹೆಸರಲ್ಲಿ Succession Certificate ಕೊಡಿಸಬೇಕಾಗಿ ಅರ್ಜಿದಾರರು ಕೊಟ್ಟ ಮೇಲಿನ ಅರ್ಜಿಯು ತಾ 12.10.1962ರಲ್ಲು ಮೇಲ್ಕಂಡ ಕೋರ್ಟಿನಲ್ಲಿ ತನ್ನಿಗೆ ಯಿಟ್ಟಿರುವುದರಿಂದ ಆ ಕುರಿತು ಆಕ್ಷೇಪ ಹೇಳತಕ್ಕವರು ಯಿದ್ದಲ್ಲಿ ಸದ್ರಿ ದಿವ್ಸ ಮೇಲ್ಕಂಡ ಕೋರ್ಟು ಮುಂದೆ ಹಗಲು 10 ಗಂಟೆ ವಳಗೆ ಹಾಜ್ರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು ಎಂತ ಯಾ ಮೂಲಕ ಯಾವತ್ತೂ ಜನರಿಗೆ ತಿಳಿಸೋಣಾಗುತ್ತದೆ.

B. Jagannatha Hegde,
Advocate for Petitioner.

Udipi, 3—9—1962.

ಕಡಲೆ ಕಾಳು

೭೫ ಸಾವಿರ ಶಿಕ್ಷಕರು ಇರುವ ರಾಜ್ಯ ಕರ್ನಾಟಕದ ಸರಕಾರವು ರೂ. ೨೫ ಸಾವಿರವನ್ನು ಶಿಕ್ಷಕರ ರಾಷ್ಟ್ರೀಯ ನಿಧಿಗೆ ತನ್ನ ಪಾಲಿನ ವಂತಿಗೆಯೆಂದು ನೀಡಿತು —ವಾರ್ತೆ.

—ಅಧ್ಯಾಪಕನ ಬೆಲೆಯೆಷ್ಟು ಎಂದು ಸರಕಾರ ಈಗ ಸರಿಯಾದ ನಿರ್ಧಾರಕ್ಕೆ ಬಂದಂತಾಯಿತು.

o o o

ಚಿಂತಾಮಣಿ ಮತದಾರ ಕ್ಷೇತ್ರದ ಆನೆ ಕಾಂಗ್ರೆಸ್ಸಿನ ಪ್ರಕರಣ ಇನ್ನೂ ಮುಗಿದಿಲ್ಲ—ನಿಜಲಿಂಗಪ್ಪ.

—ಕರಿನಾಡಿನಲ್ಲಿ ಈ ಪ್ರಶ್ನೆ ಮುಗಿದೀತು; ಆದರೆ, ಮಹಿಷನೂರಿನಲ್ಲಿ ಮುಗಿಯಲಾರದು.

o o o

ಕಾಂಗ್ರೆಸ್ಸಿನಲ್ಲಿ ಇತ್ತೀಚೆಗೆ ಶಿಸ್ತು ಕಡಿಮೆಯಾಗುತ್ತಿದೆ; ಸ್ವಾರ್ಥಿಗಳು ಹೆಚ್ಚಿರುವರು—ಎಂ ಪಿ ಸಿಸಿಯಲ್ಲಿ ನಿಜಲಿಂಗಪ್ಪ.

—ಜತೆಗೆ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ, ಗವರ್ನರ ಹುದ್ದೆಗೆ ಹುರಿಯಾಳುಗಳೂ ಕಡಿಮೆಯಾಗುತ್ತಿದ್ದಾರೆ; ಮಂತಿತನಕ್ಕೇ ಬಯಸುವವರೇ ಹೆಚ್ಚುತ್ತಿರುವರು.

o o o

ಕಾಮನ್ ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲಿ ಭಾಗವಹಿಸಲು ಪ್ರಧಾನಿ ನೆಹರುರವರು ತೆರಳಿದರು. ಅವರೊಡನೆ ಮುರಾರ್ಜಿ ಭಾಯಿಯೂ ಇದ್ದರು—ವಾರ್ತೆ.

ನೆಹರು ನಂತರ ಯಾರೆಂಬುದಕ್ಕಲ್ಲವಾದರೂ ನೆಹರು ಹಿಂದೆ ಯಾರು ಎಂಬ ಪ್ರಶ್ನೆಗೆ ಉತ್ತರ ಸಿಕ್ಕಿತಲ್ಲ?

o o o

ಭಾರತ-ಚೀನಾ ವಿವಾದವನ್ನು ಸಂಧಾನದ ಮೂಲಕ ಬಗೆಹರಿಸಬೇಕೆಂಬ ಕಳಕಳಿ ಭಾರತಕ್ಕಿಲ್ಲ-ನವಚೀನಾ ಸುದ್ಧಿ ಸಂಸ್ಥೆಯ ಪ್ರಕಟನೆ.

—ಕುಲವ ನಾಲಗೆಯರುಹಿತು ಎಂಬುದು ಸತ್ಯವೆಂದದು ಸಿದ್ಧಮಾಡಿ ಕೊಟ್ಟಿತು.

o o o

ಅಂತರಿಕ್ಷ ಯಾತ್ರೆಯು ಮೇಲಿಂದ ಮೇಲೆ ನಡೆಯುವಾಗ, ರಶ್ಯವು ವಿದೇಶೀಯರಲ್ಲಿ ಭಾರತೀಯರಿಗೆ ಮೊತ್ತ ಮೊದಲ ಛಾನ್ಸ್ ಕೊಡುವುದು—ರಾಯಭಾರಿ ಬೆನೆಡಿಕ್ಟೋ.

ಭಾರತೀಯರು ಈಗಾಗಲೇ ಅಂತರಿಕ್ಷ ಯಾತ್ರಾರ್ಥಿಗಳ ಸಾಲಿನಲ್ಲಿ ಕ್ಯೂ ನಿಲ್ಲುವುದು ಖಂಡಿತ.

o o o

ಗೋವಾ ಮತ್ತು ಪಾಂಡಿಚೇರಿಗಳನ್ನು ಸಮೀಪದ ರಾಜ್ಯಗಳಲ್ಲಿ ವಿಲಯನಗೊಳಿಸುವ ಪ್ರಶ್ನೆ ಇಂದು ಇಲ್ಲ.

—ನೆಹರು.

—ಪ್ರಶ್ನೆಯನ್ನು ಈಗಲೇ ಇತ್ಯರ್ಥಗೊಳಿಸಿದರೆ, ಪ್ರಧಾನಿಗಳ ಆಶ್ವಾಸನ ಪೊಳ್ಳಾಗುವುದು. ಮುಖ್ಯವಾಗಿ ರಾಜ್ಯ ರಾಜ್ಯಗಳ ಬಡೆದಾಟವೂ ಕೊನೆಗೊಳ್ಳುವುದು.

o o o

ಕೇಂದ್ರ ಸರಕಾರದೊಡನೆ ಬೇಕಾದಷ್ಟು ಆಹಾರ ಧಾನ್ಯಗಳ ಸಂಗ್ರಹವಿದೆ. —ಎಸ್. ಕೆ. ಪಾಟೀಲ್.

—ನ್ಯಾಯ ಬೆಲೆಯ ಅಂಗಡಿಗಳನ್ನು ಹೆಚ್ಚಾಗಿ ತೆರೆಯುವುದು ಮಾತ್ರ ಸಾಧ್ಯವಿಲ್ಲ.

o o o

ತಾಂಬೂಲ ಸೇವಿಸುವುದರಿಂದ ಬಾಯಿಯ ವ್ರಣವೆದ್ದು ಕ್ಯಾನ್ಸರ್ ಕಾಣಿಸಿಕೊಳ್ಳುವುದು—ವಿಜ್ಞಾನಿಗಳ ಸಂಶೋಧನೆ.

—ಕರ ಹೇರಲು ಸರಕಾರಕ್ಕೆ ಹೊಸತೊಂದು ವಸ್ತು ಸುಲಭವಾಗಿ ಕಣ್ಣೆದುರು ಬಂತು.

o o o

ಭಾರತದ ೧೬ನೆ ರಾಜ್ಯವೆಂದು ನಾಗಾಲೇಂಡಿನ ಉದಯ ಸಂಬಂಧಿ ವಿಧೇಯಕವನ್ನು ಸಂಸತ್ತು ಸ್ವೀಕರಿಸಿತು—ವಾರ್ತೆ.

—ಪೊಟ್ಟಲು ರಾಮುಲು ಇದನ್ನು ಕೇಳಿದರೆ ಸ್ವರ್ಗದಲ್ಲಿದ್ದೂ ಕಣ್ಣೀರು ಸುರಿಸಬಹುದು.

o o o

ಜನಸಂಖ್ಯೆಯ ಪ್ರಮಾಣ ಹೆಚ್ಚುತ್ತ ಬಂದು ೧೯೫೦ರಿಂದ ೬೦ರ ವರೆಗಿನ ಅವಧಿಯಲ್ಲಿಸೇ. ೧೮ರಷ್ಟು ಬೆಳೆಯಿತು.

—ಎಂದರೆ ಭೂಮಿಯ ಭಾರವೂ ಅಷ್ಟೇ ಏರಿತು.

ಚಂದ್ರಪುತ್ರ-ಮೃತ್ಯು ಬುಧ

(೫ನೇ ಪುಟದಿಂದ)

ದಾಗ ೨೪ ಮೈಲುಗಳಿರುತ್ತವೆ. ಈ ಏರುಪೇರಿನಿಂದಾಗಿ ಆತನ ಆಕ್ಷ ಗತಿಯಲ್ಲೂ ಹೆಚ್ಚು ಕಡಿಮೆಯಾಗಲೇ ಬೇಕು. ಎಂದರೆ, ಬುಧನ ಮೇಲಿನಿಂದ ಸೂರ್ಯ ಬಗ್ಗಿದವನಂತೆ ಪ್ರಾಯಃ ಕ್ಷಿತಿಜದ ಕೆಳಗಿನಿಂದಲೇ ಸರಿಯುತ್ತಿರುವಂತೆ ತೋರುತ್ತಿರಬೇಕು. ಹೀಗಾಗಿ ಶಾಶ್ವತ ದಿನ ಮತ್ತು ಶಾಶ್ವತ ರಾತ್ರಿಯ ಸಂಧಿರೇಖೆಯ ಬಳಿ ಹೊಗೆಯಾಡುತ್ತಿರುವಂತಹ ಮಂದ ಪ್ರಕಾಶ ಹರಡಿರಬಹುದು.

ನಾವೊಂದು ವೇಳೆ ಬುಧಗ್ರಹವನ್ನು ಪ್ರವೇಶಿಸಿದೆವೆಂದರೆ, ಅಲ್ಲೇನನ್ನು ಕಾಣುವೆವು? ದೊಡ್ಡ ದೊಡ್ಡ ಕಣಿವೆ ಕೊರಕಲುಗಳಿಂದ ಕೂಡಿದ ಪರ್ವತ ಶಿಖರಗಳು ಬಿದ್ದಿರಬಹುದು. ದೊಡ್ಡದಾದ ಸೂರ್ಯ ಕ್ಷಿತಿಜದ ಸಮೀಪ ಸುಡುತ್ತಿರಬಹುದು. ಎಲ್ಲೆಲ್ಲೂ ಯಾವ ವನಸ್ಪತಿಯೂ ಬೆಳೆಯದ, ಜೀವಜಂತು ನೆಲಸದ ಮರು ಭೂಮಿಯಿರಬಹುದು. ರುದ್ರ ಮೌನವು ಅಲ್ಲಿ ಅನುಭವಕ್ಕೆ ಬರಬಹುದು; (ಏಕೆಂದರೆ, ತರಲ ವಾತಾವರಣ ಧ್ವನಿಯನ್ನು ರವಾನಿಸಲಾರದು) ಆಕಾಶದಲ್ಲಿ ಶುಕ್ರನು ಹೊಳೆಯುತ್ತಿರಬಹುದು; ನಕ್ಷತ್ರದಂತೆ ನಮ್ಮ ಭೂಮಿಯು ಅದರ ಚಂದ್ರನೊಡನೆ ಮುಂದುಗಡೆ ತಿರುಗುತ್ತಿರುವುದನ್ನು ನೋಡಬಹುದು. ಆದರೆ, ಅಲ್ಲಿ ನಾವು ಹೆಚ್ಚು ಸಮಯ ನಿಲ್ಲಲಾರೆವು.

ಬುಧ ಲೋಕವೆಂಬುದು ಮೃತ್ಯುವಿನ ಲೋಕ. ಮಾನವನು ಅವನನ್ನು ನಿದ್ರೆಯಿಂದ ಎಂದಿಗೂ ಎಚ್ಚರಿಸಲಾರನು.

(ಪೆಟ್ರಿಕ್ ಮೂರ್‌ರ ಲೇಖದ ಆಧಾರದಿಂದ)

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

O. S. 109/1959
R. E. P. No. 48/1962

ಕೆ. ರಾಮಕೃಷ್ಣ ಶ್ಯಾನುಭಾಗ— ವಾದಿ.

ಶೀನ ಮೇಣ್ಯ—ನಾಗಪ್ಪ ಮೇಣ್ಯನ ಮಗ ಕುಂದಾಪುರ ತಾಲ್ಕು-ಹೊಂಬಾಡಿ ಮುಂಡಾಡಿ ಗ್ರಾಮ— ಪ್ರತಿವಾದಿ— ಇವರಿಗೆ.

ವಾದಿಯು ಮೇಲ್ಕಂಡ ಡಿಕ್ರಿ ಪ್ರಕಾರ ಬರತಕ್ಕಹಣಗಳ ಬಗ್ಗೆ ಪ್ರತಿವಾದಿಯ ಹಕ್ಕಿನ ಬಾಬ್ತು ಸ್ತಿರಾಸ್ತಿಯನ್ನು ಏಲಂಮ್ಮಿಗೆ ಅಪೇಕ್ಷಿಸಿ ಏಲಂ ಇಸ್ತಿಹಾರು ದಾಕ್ಲು ಮಾಡಿರುವುದರಿಂದ ಸದ್ರಿ ಏಲಂ ಇಸ್ತಿಹಾರಿನ ಶರ್ತ ನಿರ್ಣಯಿಸುವರೇ ತಾರೀಕು 14—9—1962ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನ್ನಿಗೆ ಇರುವುದರಿಂದ ಆ ಕುರಿತು ನಿಮ್ಮದೇನಾದ್ರೂ ಆಕ್ಷೇಪವಿದ್ದಲ್ಲಿ ತಾರೀಕು 14—9—1962ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರು ಆಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ನಿಮ್ಮ ಉಜ್ರು ಶಿವ್ಯಾ ಏಕಪಕ್ಷವಾಗಿ ತೀರ್ಮಾನಿಸಲಾದೀತು ಎಂಬ ಸಂಗ್ತಿ ಕೋರ್ಟು ಹುಕುಂ ಪ್ರಕಾರ ನಿಮಗೆ ಈ ಮೂಲಕ ತಿಳಿಸೋಣಾಗುತ್ತದೆ.

K. Raghunatha Shenoy,
Pleader for Plaintiff.

Coondapoor, 4—9—1962.

ಸೂಚನೆ

"ನವಯುಗ"ದಲ್ಲಿ ಪ್ರಕಟನೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ಠೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯುತ್ತಮವೆಂದು ಪರಿಗಣಿಸಿರುವರು. ಪ್ರತಿಯೊಬ್ಬರೇವಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿಹೊಂದುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ವಿಜಯ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್:— ವಿಜಯ ಬೇಂಕ್ ಬಿಲ್ಡಿಂಗ್, ಲೈಟ್ ಹೌಸ್ ಹಿಲ್ ರೋಡ್,

Estd. 1931.
Phone No. 240.

— ಮಂಗಳೂರು—3

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ಶಾಲಾ ರಿಜಿಸ್ಟ್ರಿಗಳು,

ಫಾರ್ಮುಗಳು,

ದೊರೆಯುತ್ತವೆ.

ವಿಚಿತ್ರ ಹರಕೆ

—"ಸಿರಿಪತಿ", ಉಡುಪಿ.

ಪುಟ್ಟಯ್ಯನವರಿಗೆ ಗಂಡು ಮಕ್ಕಳಿಲ್ಲ ಬೆಂಬ ಚಿಂತೆ. ಒಂದರ ಮೇಲೊಂದರಂತೆ ಅವರ ಮಡದಿ ಮಕ್ಕಳನ್ನು ಹೆರುತ್ತಿದ್ದರೂ ಎಲ್ಲವೂ ಹೆಣ್ಣು ಮಕ್ಕಳೇ.

ಒಮ್ಮೆ ಪುಟ್ಟಯ್ಯನವರು ಬೇಲೂರಲ್ಲಿ ಅದಾವುದೋ ದೂರದ ಪರಿಚಿತರ ಆಹ್ವಾನಕ್ಕೊಪ್ಪಿ ಹೋದಾಗ ಚನ್ನ ಕೇಶವ ದೇವಾಲಯಕ್ಕೆ ಹೋದರು. ಬೆಳೆಯುತ್ತಿರುವ ಕುಟುಂಬದ ಮರ್ಚಿನಿಂದಾಗಿ ಮೊದಲೇ ಕಡು ಬಡವರಾದ ಅವರ ಆರ್ಥಿಕ ಸ್ಥಿತಿ ತುಂಬಾ ಕುಂದಿತ್ತು. ಅದರೂ ಅವರ ಮನ ವಿಶಾಲವಾಗಿತ್ತು.

ದೇವರಿಗೊಂದು ಹಣ್ಣುಕಾಯಿ ಮಾಡಲು ಸಹ ತನ್ನಲ್ಲಿ ಹಣವಿಲ್ಲವೆಂಬದನ್ನು ಯೋಚಿಸಿ ಮನದಲ್ಲಿಯೇ ಆಳುಕಗೊಂಡಿದ್ದರೂ, ಏಕಾಗ್ರಚಿತ್ತರಾಗಿ ಚನ್ನಕೇಶವನಿಗೆ ಅಡ್ಡಬಿದ್ದು "ಕೇಶವಾ, ದೀನಬಂಧೋ, ನಿನ್ನ ಕೃಪೆಯಿಂದಾಗಿ ನನಗೊಂದು ಗಂಡು ಮಗುವನ್ನು ದಯಪಾಲಿಸಿದರೆ, ಚಿಟಕಿಯ ಚಪ್ಪರವನ್ನೂ ಮುತ್ತಿನ ಸೇವೆಯನ್ನೂ ಮಾಡಿಸಿ ಕೊಡುವೆ" ಎಂಬುದಾಗಿ ಹರಕೆ ಹೊತ್ತು ಊರಿಗೆ ಮರಳಿದರು.

ದೀನ ಹಾಗೂ ದಲಿತರ ಕರೆಗಾಗಿಯೇ ಕಿವಿಯೊಡ್ಡಿ ಕೈನೀಡಿ ಕುಳಿತಿರುವ ಚನ್ನ ಕೇಶವನಿಗೆ ಪುಟ್ಟಯ್ಯನ ಹರಕೆ ಕೇಳಿಸಿರಲೇಬೇಕು! ಆಧವಾ ಕಾಸಿಲ್ಲದ ಕಡು ಬಡವ ಚಿಟಕಿ ಚಪ್ಪರ ಮುತ್ತಿನ ಸೇವೆಸಲ್ಲಿಸುವದರಲ್ಲಿ ಹೇಗೆ ಸಮರ್ಥನೆಂದರಿಯಲು ಕೌತೂಹಲಗೊಂಡೇನೊ ಎಂಬಂತೆ ಮರು ವರ್ಷವೇ ಪುಟ್ಟಯ್ಯನ ಮನೆ ತುಂಬ ಹಿಗ್ಗೇ ಹಿಗ್ಗು! ಮನೆಗೊಂದು ಮುತ್ತಾಗಿ ಜನ್ಮಗೊಂಡ ಗಂಡು ಮಗುವಿಗೆ ಸಂಕಲ್ಪಿತವಾಗಿ "ಚನ್ನ" ಎಂಬ ಹೆಸರನ್ನೇ ಇಟ್ಟರು!

ಪುಟ್ಟಯ್ಯ ತನ್ನ ಹರಕೆಯನ್ನು ಮರೆ ಮಾಜಿಲ್ಲ. ಅಂತೆಯೇ ಮಗುವಿಗೆ ಮೂರು ತಿಂಗಳಾದೊಡನೆಯೇ ಅವನಿಗೆ ಹರಕೆಯನ್ನೊಪ್ಪಿಸುವ ಕಾರ್ಯವನ್ನು ಪೂರೈಸಬೇಕಾಯಿತು. ಅವರವರೊಡನೆ ಕೇಳಿ ಅಂತೂ ದಾರಿಖರ್ಚಿಗೆ ಹಣವನ್ನು ಒದಗಿಸಿಕೊಂಡರು. ತೆಂಗಿನ ಕಾಯಿ ಬಾಳೆಹಣ್ಣುಗಳನ್ನು ಮನೆಯಿಂದಲೇ ಗಂಟು ಕಟ್ಟಿಕೊಂಡು ಪತ್ನೀಸಮೇತನಾಗಿ "ಚೆನ್ನ ಸನ್ನ ಎತ್ತಿಕೊಂಡು ಬೇಲೂರಿಗೆ ಹೊರಟರು.

ಅಂದಿನಗಳಲ್ಲಿ ಚನ್ನಕೇಶವ ದೇವಾಲಯದಲ್ಲಿ ಉತ್ಸವದ ಪೂರ್ವ ತಯಾರಿ ನಡೆಯುತ್ತಿತ್ತು! ವರಾಂಡಲ್ಲೆಲ್ಲ ಸುಣ್ಣವನ್ನು ಬಳಿಯುವದು ಚಪ್ಪರ ಕಟ್ಟುವದ್ಯವೈರಿ ಕೆಲಸಗಳು ನಡೆಯುತ್ತ ಇದ್ದವು. ದೂರ ದೂರದಿಂದ ಬರಲಿರುವ ಭಕ್ತವೃಂದಗಳ ವಸ್ತಿಯ ಬಗ್ಗೆ ವಿಶೇಷ ವ್ಯವಸ್ಥೆ ನಡೆಯುತ್ತಿತ್ತು.

ಚನ್ನಕೇಶವನಿಗೆ ಪುಟ್ಟಯ್ಯನು ಸಲ್ಲಿಸಲಿರುವ ಹರಕೆಯ ಬಗ್ಗೆ ಕುತೂಹಲ. ಪುಟ್ಟಯ್ಯನ ಪತ್ನಿ ಹರಕೆಯನ್ನೊಪ್ಪಿಸಲು ಬಂದಿಹೆನೆಂಬುದನ್ನು ಮಾತ್ರ ಅರಿತಿದ್ದಳೇ ವಿನಃ ಹರಕೆಯ ನಿಜಭಾವವನ್ನರಿಯದವಳಾಗಿದ್ದಳು.

ಪುಟ್ಟಯ್ಯ ಯೋಚನೆಯಲ್ಲಿ ಮಗ್ನನಾದಂತಿದ್ದು ಅದೊಂದು ತೆರನಾಗಿದ್ದಾದ, ಅವನ ಮಡದಿಗೆ ತಿಳಿಯದಿರಲಿಲ್ಲ, ಪತಿ-ಪತ್ನಿಯರು ಮಗುವನ್ನು ಚನ್ನಕೇಶವನ ಮುಂದೆ ಕೂಡ್ರಿಸಿ ಸಾಷ್ಟಾಂಗ ವಂದಿಸಿದರು. ಪುಟ್ಟಯ್ಯ ಅದೇನೋ ನಿರ್ಧಾರದಿಂದ ಮಗುವನ್ನೆತ್ತಿಕೊಂಡು ಕೈ ಬೆರಳುಗಳಿಂದ 'ಚಿಟಕಿ' ಬಾರಿಸುತ್ತಾ ಚಪ್ಪರ ಕಟ್ಟುವ ಕೆಲಸಗಾರರಿಗೆ ಒಳ್ಳೇ ಅನುಭವಿಕನಂತೆ —ಚಪ್ಪರವನ್ನು ಹಾಗೆ ನಿಲ್ಲಿಸುವದು— ಹೀಗೆ ಮೇಲ್ಕಟ್ಟುಗಳನ್ನು ಹಾಕಬೇಕು— ಈ ರೀತಿಯಿಂದ ಕಟ್ಟದರೆ ಗಾಳಿಗೆ ತಡೆಯಾದೀತು ಎಂದು ಮುಂತಾಗಿ ತಿಳಿಸುತ್ತಾದೇಗುಲದ ಸುತ್ತ ಮೂರು ಸುತ್ತು ತಿರುಗಿ ಬಂದು "ಚಿಟಕಿ" ಚಪ್ಪರದ ಹರಕೆಮುಗಿಸಿದ!

ಎರಡನೆಯದು ಮುತ್ತಿನ ಸೇವೆ! ಮುತ್ತುಗಳಿಗಾಗಿ ಅವನು ಚಿನಿವಾಲರಲ್ಲಿ ಹೋಗ ಬೇಕಾಗಿದ್ದಿಲ್ಲ ಮಗುವನ್ನೆತ್ತಿದ ಮಗುವಿನ ಗಲ್ಲಗಳ ಮೇಲೆ—ಮುದ್ದು ಮುತ್ತುಗಳ ಮಳೆಗರೆದ—ಮಗು ಕಿಲಕಿಲನೆ ನಗುತ್ತಿತ್ತು! ಅಲ್ಲ ಚೆನ್ನಕೇಶವನೇ ಬಡ ಭಕ್ತನ ವಿಶಾಲ ಹೃದಯದ ಚಾಣಾಕ್ಷ ಬುದ್ಧಿಗೆ ಮೆಚ್ಚಿ ನಕ್ಕಿರಬೇಕು!

ಪುಟ್ಟಯ್ಯನ ಮುಗ್ಧ ನಿರ್ಮಲ ಸೇವೆಯನ್ನು ಚನ್ನಕೇಶವ ಆನಂದದಿಂದ ಸ್ವೀಕರಿಸಿರಬೇಕು. ಪತಿಯ ಚರ್ಯೆಯಿಂದ ವಿಸ್ಮಿತಳಾದ ತನ್ನ ಮಡದಿಗೆ ವಸ್ತುಸ್ಥಿತಿಯನ್ನು ಮನೆಗೆ ಬಂದು ತಿಳಿಸಿದಾಗ ಅವಳಿಗೂ ಆಶ್ಚರ್ಯವಾಯಿತು!

— ಅಮೃತ ಬಿಂದು —

ಮಕ್ಕಳು ಒಳ್ಳೆಯವರಾಗ ಬೇಕಾದರೆ ತಂದೆ ತಾಯಿಯರು ಒಳ್ಳೆಯವರಿರ ಬೇಕು. ತಂದೆ ತಾಯಿಯರ ಸ್ವಭಾವವೇ ಮಕ್ಕಳಲ್ಲಿ ಪ್ರತಿಬಿಂಬಿಸುತ್ತದೆ.

o o o

ಯೋಗ್ಯತೆ ಇರುವ ಮನುಷ್ಯ ಗುಡಿಸಲಿನಲ್ಲಿರಲಿ, ಮರದಡಿಯಲ್ಲಿರಲೀ ಯಾ ಅರಮನೆಯಲ್ಲಿರಲೀ ಆತನ ಯೋಗ್ಯತೆಯಂತೆ ಆಯಾಯ ಸ್ಥಳಗಳು ಆನಂದದಾಯಕವೆನಿಸುವವು

o o o

ಹೃದಯದಲ್ಲಿ ನಿಜವಾದ ಪ್ರೇಮವಿರುವೆಡೆ ಸ್ವರ್ಗ ಮಾತ್ರವಲ್ಲ; ಪ್ರೇಮವಿರುವವನೇ ದೇವರು. ಏಕೆಂದರೆ ಪ್ರೇಮವೇ ದೇವರು.

ನಮ್ಮಲ್ಲಿ ಸಿಗುವ ಕೆಲವು ಪುಸ್ತಕಗಳು

ಬದುಕಿನ ಸುಳಿಯಲ್ಲಿ	ಸೇವನವಿ. ರಾಜಮಲ್ಲ	2 00
ಕರಿಚರ್ಮ	ಸೇವನವಿ ರಾಜಮಲ್ಲ	2 50
ಪತ್ತೇದಾರನ ಸರಾಜಯ	(ವಿಕ್ರಮರಾಯ)	1 75
ಅಪರಿಶುದ್ಧರು	ನವಗಿರಿನಂದ	1 50
ಅಳಿದ ಮೇಲೆ	ಕಾರಂತ	2 75
ಗೋಳಿನ ಬಾಳು	ಪಿ ಡಿ ನಾಯಕ್	0 50
ಮಂಗಳ ಗ್ರಹದ ಮಾಯಾಂಗನೆ	ಕಿದಿಯೂರು	0 75
ಶೋಭಾರಾಣಿ	ಆರ್. ಯು. ಪಾಟೀಲ	0 75
ನಗ್ನ ನೃತ್ಯ	ಸ. ಲೊ. ಬಂಕಾಪುರ	0 75
ಮಾಲಿನಿ	ಶೀಲಾ ರಾವ್ ಕಿದಿಯೂರು	0 50
ಹೆಣ್ಣು ಹೃದಯ	(ಪತ್ತೆದಾರಿ) ಎಚಾರ್ಕೆ	0 50
ಹೆಣ್ಣಿನ ಕಣ್ಣು	ಹ. ರಾ. ಕಿದಿಯೂರು	0 60
ವಿಲಾಸಿನಿ	ಹ ರಾ. ಕಿದಿಯೂರು	0 50
ಸನ್ಯಾಸಿ ಕಂಡ ಸುಂದರಿ	,,	0 50
ಹುಚ್ಚು ಪ್ರಣಯ	,,	0 60
ಆತ್ಮ ಗೆದ್ದಿತು	ಶೀಲಾ ರಾವ್ ಕಿದಿಯೂರು	0 50
ಮಿಲನ	ಪಿ ಬೆನ್ನಬಸವನ್	0 75
ಕೈಕೊಟ್ಟ ಕಾಮಿನಿ	ಎಚ್ಚಾರ್ಕೆ	0 50
ಹಸುರು ಹಂಸ	ನಚಿಕೇತ	2 00

ನಾಟಕಗಳು

ಗಜರಾ	ನಾರಾಯಣ	1 00
ನಳಪಾಕ	ಶ್ರೀವತ್ಸ	0 75
ಮನೋರಾಜ್ಯ	ರಂ ಶ್ರೀಮುಗುಳಿ	1 75
ಸರಸ್ವತಿ	ಮಾಧವಾಚಾರ್ಯ	0 75
ಜೀಕುವ ಜೀವ	ರಾವ. ಪಾಟೀಲ	0 38
ಅಮ್ಮೆಲೋ ಸಮೂಜ	ಎನ್. ಲಕ್ಷ್ಮಣ ಪ್ಪೆ	0 38
ನಾಗಾನಂದ	ಹ ರಾ. ಕಿದಿಯೂರು	1 25
ಡೈವೋರ್ಸ್	ಕೆ. ನರಸಯ್ಯ	0 63
ಬಾಲ ತಪಸ್ವಿನಿ	ಉಳವಿಶ	0 38
ನೌಕರಿಯ ಹುಚ್ಚು	ಬಿರಾವಾರ	0 38
ಅಳಬೇಕೋ ನಗಬೇಕೊ	ಬಾ. ಹೊಸಮನಿ	0 38

ಕಾವ್ಯಗಳು

ಆಲಾಪನೆ	ಧನ್ವಂತ	0 50
ವಿಜಯನಾದ	ಅವ ರವಾಣಿ	0 50
ಅಮರನಾದ್ಯೆ ತಂದೆ	ಪ ಸು. ಭಟ್ಟ	1 25
ನೂರು ಪುಟಾಣಿ	ಜಿ. ಸಿ. ರಾಜರತ್ನಂ	0 25
ವಿಜ್ಞಾನ ವಿಶ್ವಾಮಿತ್ರ	ಎನ್. ವೀರಪ್ಪ	0 50
ಹೂಗಂಚು	ಶ್ರೀಧರ ಖಾನೋಳಕರ	0 75
ಮೇಕೆದಾಟು	ಎನ್. ಎಸ್. ವೀರಪ್ಪ	0 75
ತಾನ ತರಂಗ	ಬಾಳೇಕುಂದ್ರಿ	0 50
ಅವರ ನೆನೆದೇವು	ಪರಮಶಿವಯ್ಯ	1 25
ಜನಪದ ಗೀತಗಳು	ಚಂ ಶೇ. ಸ್ವಾಮಿ	1 50
ಆದಿ ಚಿಂತನಗಿರಿ	ಕ. ರಾ ಕೃ.	5 00
ತಾರಾ ಸಭಾ	ಸಿ ಪಿ. ಕೆ.	1 25
ಬಲವಂತದ ಮದುವೆ	ಗೋರೂರು	0 50
ಹಕ್ಕಿ ಹಾಡು	ಸುರೇಶ	0 25

ವಿವಿಧ ಪುಸ್ತಕಗಳು

ನವರತ್ನ	ಬಿ. ಎಚ್. ಶ್ರೀಧರ	2 50
ಪ್ರಾಣ ವಿಜ್ಞಾನ	ಡಾ| ದೊಡ್ಡೇರಿ	2 00
ಕಾಮ ಶಿಕ್ಷಣ	,,	1 00
ಕುಟುಂಬ ಯೋಜನೆ		0 20
ಯೋಧರ ಚರಿತೆ	ಕೆ. ಸಿ. ವೆಂಕಪ್ಪ ಶೆಟ್ಟಿ	0 50
ಸಾಹಿತ್ಯ ಶಿಲ್ಪಿಗಳು	ಟಿ ಮಹಾಬಲೇಶ್ವರ ಭಟ್ಟ	1 50
ತತ್ವೋಪನ್ಯಾಸಗಳು	ಶ್ರೀವಿಜಯ ಇಂದ್ರ	2 00
ಗ್ರಾಮೋದ್ಧಾರ	ಮಹಾತ್ಮಾ ಗಾಂಧಿ	0 50
ಕನ್ನಡದಲ್ಲಿ ವಿಡಂಬನ ಸಾಹಿತ್ಯ	ಕೃಷ್ಣಸ್ವಾಮಿ	0 30
ಜ್ಞಾನಜ್ಯೋತಿ	ನಾರಾಯಣ ದಾಸರು	0 50
ಶ್ರೀ ಶಂಕರಾಚಾರ್ಯರ ಅಖ್ಯಾನ	ಹೊ. ಚಿ.	0 75
ಗುಣ ನಿರೂಪಣೆ	,,	0 75
ಗೃಹಿಣಿ	ಸಾವಿತ್ರಮ್ಮ	0 75
ವೇದಾಂತರಹಸ್ಯೋಪಾನ್ಯಾಸಗಳು	ಕುಲಕರ್ಣಿ	0 50
ನಾಲ್ವಡಿ ಕೃಷ್ಣನ ಮೈಸೂರು	ಶ್ರೀನಾಥ	0 38
ವಿಚಿತ್ರ ವಿಶ್ವ	ಹಾ. ರಾ ಕಿದಿಯೂರು	1 50
ಇನ್‌ಫ್ಲೂಸಿಯಸ್	ಶಿವರಾಮ ರಾವ್	0 40
ಶ್ರೀಗೀತಾ ಸಾರೋಕ್ತಿ	ಅನಂತ ಆಪ್ಟೆ	0 75
ವ್ಯಾಪಾರದಲ್ಲಿ ಹೆಚ್ಚು ಹಣ ಗಳಿಸುವ ಗುಟ್ಟು	ಬಾಪೂ ಶಿರಹಟ್ಟಿ	1 50
ಗಾಂಧೀ ತತ್ವದರ್ಶನ	ಹ. ರಾ ಕಿದಿಯೂರು	1 00
ಹಳ್ಳಿಯ ಚಿತ್ರಗಳು	ಗೊರೂರು	1 25
ನೆಮ್ಮೂರ ರಸಿಕರು	,, ,,	2 00
ಕವಿದರ್ಶನ	ಜವರೇಗೌಡ	1 75
ಗೀತಾಧ್ವನಿ	ಕ. ನಾರಾಯಣ ಸ್ವಾಮಿ	1 50
ಜಗದ್ಗುರುಶಂಕರಾಚಾರ್ಯ	ಗುಂಡುರಾಮಯ್ಯ	1 50
ಸಾವೇಕ್ಷವಾದ	ಎಚ್. ವಿ ಶ್ರೀ ರಂಗರಾಜ್	1 00
ಹಣದ ವಿನಿಮಯದ ಬೆಲೆ	ರಾಮಕೃಷ್ಣ ರೆಡ್ಡಿ	1 50
ಭಾರತೀಯ ಮಹಾವ್ಯಕ್ತಿಗಳು	ಕಿದಿಯೂರು	2 00
ವಿಖ್ಯಾತ ಜೀವಿಗಳು	,,	0 75
ಅಮೃತವಾಹಿನಿ	ಕೌಲಗಿ	0 75
ಜ್ಯೋತಿರ್ಗನ್ನಡಿ	ರಮಕಾಂತ	2 50
ಮಹಾತ್ಮಾಗಾಂಧಿ	ವಿ ಎಸ್ ನಾರಾಯಣರಾವ್	2 25
ಅಬ್ರಹಾಂಲಿಂಕನ್	S. ಅನಂತನಾರಾಯಣ	1 50
ಬ್ರಹ್ಮಚರ್ಯವೇ ಜೀವನ	ಸ್ವಾಮಿ ಶಿವಾನಂದ	3 00
ಸಂಸ್ಥಾನಿಕರು	ಗೋವಿಂದಮೂರ್ತಿದೇಸ್ಪಾ	1 50
ಸಂಯುಕ್ತರಾಷ್ಟ್ರಸಂಘ	ಸಂಕಲನ	1 50
ಹೊಲಿಗೆಯ ಶಿಕ್ಷಣ	J N. ಕುಲಕರ್ಣಿ	1 00
ಪರಮಾಣು ಇಂದು ನಾಳೆ	ಕಾರಂತ	3 00
ಆಧುನಿಕ ರೈತ ಭಾಗ 1, 2,	ಅಳಕವಾಡಿ	0 75
ಮಹಾತ್ಮಾ ಗಾಂಧೀಜಿ ಪಂಡಿತ.	ಚೆ.ಎ.ಕವಲಿ	0 75
ಮುದ್ರಾರಾಕ್ಷಸ	ಚೆ ಎ. ಕವಲಿ	0 45
ವಿದ್ಯಾರಣ್ಯರು	ಚೆದಂಬರಾನಂದ	0 40
ಶ್ರೀ ಶಿವಛತ್ರಪತಿ	ಚೆ. ಎ. ಕವಲಿ	0 40
ನೇತಾಜಿ ಸುಭಾಸ್‌ಚಂದ್ರ ಘೋಷ್	,,	0 40
ನೈಷಧೀಯ ಚರಿತ	,,	0 45
ಕಾದಂಬರಿ	,,	0 45
ಝಾನ್ಸಿಯ ಜಯಲಕ್ಷ್ಮಿ	,,	0 40
ಜೌತಿ ಗಣಪ	P S. ಗಣಪಯ್ಯ	0 50
ಹೂದೋಟ	ಗುರುಪಾದಸ್ವಾಮಿ ಹಿರೇಮಠ	0 50
ಬಾಲರ ಬಂಧು	ಕೆ ಚೆ ಶೆಟ್ಟಿ ಕಡಂದಲೆ	0 30

ನವಭಾರತ ಪುಸ್ತಕ ಭಂಡಾರ, ಉಡುಪಿ

ಕಥೆಗಾರ ರಾಜಾಜಿಯವರ ಕಲಾಸಿದ್ಧಿ

(೩ನೇ ಪುಟದಿಂದ)

ವನ್ನು ಅವರ ಮೂಳಿಗೆಯ ಮೇಲೆ, ನಿಲ್ಲಿಸುತ್ತಾರೆ! ಇನ್ನು ಈ ಕಥೆಯ ರೂಪ, ಇನ್ನೊಂದು ಸಮಸ್ಯೆಯನ್ನು ಬಗೆ ಹರಿಸುವಂತೆ, ರೂಪಿತವಾಗಿದೆ.

ಶಾಸ್ತ್ರಿಗಳ ಮದುವೆಯ ಒಪ್ಪಿಗೆಯ ಸಂಕೇತವನ್ನು ನೋಡಿದ ಆ ಹುಡುಗಿಯರ ಆನಂದಕ್ಕೆ ಮಿತಿಯೇ ಇರಲಿಲ್ಲ.

ಶಾಸ್ತ್ರಿಗಳನ್ನು ತನ್ನ ಬುದ್ಧಿಯ ಬಲೆಯಿಂದ ಬಿಗಿದ ನವ ತರುಣಿ ಕನುಲಾ ಬಂಕೇಸುರದ ಗೋವಿಂದಾರ್ಯರ ನೆರೆಮನೆಯ ಹುಡುಗಿ, ಗೋವಿಂದಾರ್ಯರ ಮಗಳು ಸುಂದರಿ, ಈಕೆಯ ಗೆಳತಿ, ಆ ಗೆಳತಿಯ ಮೇಲಣ ಪ್ರೇಮದಿಂದ, ಕಮಲೆ ಶಾಸ್ತ್ರಿಗಳ ಪುನರ್ವಿವಾಹದ ಪೌರೋಹಿತ್ಯವನ್ನು ವಹಿಸುತ್ತಾಳೆ.

ಗೋವಿಂದಾರ್ಯರ ಮಗಳು, ಹೆಸರಿನಿಂದ ಸುಂದರಿಯೂಗಿದ್ದರೂ, ಅವಳ ಹೆಸ್ಸರಿಡನೆಯವಯಸ್ಸಿನಲ್ಲಿ ಅವಳು ಒಂದು ಕಾಯಿಲೆಗೆ ತುತ್ತಾಗಿ, ರೂಪದಿಂದ ಕುಬ್ಜಾ ಸುಂದರಿಯೂಗಿ ಹೋಗಿದ್ದಳು! ಕುಬ್ಜಾ ಸುಂದರಿಯ ತಂದೆ ತಾಯಿಯಂದಿರು, ತಮ್ಮ ಮಗಳಿಗೆ, ಇನ್ನು ಮದುವೆ ಮಾಡುವುದೇ ಸಾಧ್ಯವಾಗದು, ಎಂದು ತಿಳಿದು ಅತ್ಯಂತ ಚಿಂತಾಕ್ರಾಂತರಾಗಿದ್ದರು! ಸುಂದರಿಯ ಬೆನ್ನು ಬಾಗಿತ್ತು, ರೂಪ ವಿಕಾರವಾಗಿತ್ತು. ನವ ತರುಣಿಯೂಗಿದ್ದ ಆಕೆ, ಕೈ ಕಾಲುಗಳೆರಡನ್ನೂ ಉಪಯೋಗಿಸಿಯೇ ನಡೆಯ ಬೇಕಾಗಿತ್ತು! ಇಂತಹ ವಿಕಾರ ರೂಪೀ ತರುಣಿಯು ಮದುವೆ, ಕನಸಿನಲ್ಲೂ ಕಲ್ಪಿಸಲು ಸಾಧ್ಯವಿಲ್ಲ! ಆದರೆ, ಶ್ರೀ ರಾಜಾಜಿಯವರು, ಕಮಲೆಯ ಮೂಲಕ, ಮಹಾಪಂಡಿತರಾದ ನಿವೃತ್ತಿ ನ್ಯಾಯಾಧೀಶರೊಬ್ಬರಿಂಡನೆ, ಇಂತಹ ಹುಡುಗಿಯ ಮದುವೆ ಮಾಡಿಸುತ್ತಾರೆಂದರೆ, ಇದೊಂದು ಪವಾಡವೇ ಸರಿ.

ಆದರೆ ಕಥೆಯಲ್ಲಿ ಯಾವುದೊಂದೂ ಪವಾಡ ಇಲ್ಲದೆ, ಎಲ್ಲವೂ ಸಹಜವಾಗಿಯೇ ನಡೆದಿರುವಂತೆ ಚಿತ್ರಿತವಾಗಿದೆ. ಈ ಮದುಯ ನೇತೃತ್ವವನ್ನು ವಹಿಸಿ ಗೋವಿಂದಾರ್ಯರ ಮನೆಗೆ ಬಂದ ಕಮಲೆಯ ಸಾಹಸಕ್ಕಾಗಿ ಗೋವಿಂದಾರ್ಯ ದಂಪತಿಗಳು ಆನಂದಭರಿತರಾದರು.

ಕೆಲವು ದಿನಗಳ ಬಳಿಕ ಮೂರುಕಥೆಯೆಲ್ಲವೂ ನಡೆದು--ಶಾಸ್ತ್ರಿಗಳು ಬಂಕೇಪುರಕ್ಕೆ ಮದುವಣಿಗರಾಗಿಯೇ ಹೋದರು. ಆದರೆ, ಅವರಿಗೆ ತಮ್ಮ ಭಾವೀ ಪತ್ನಿ "ಕುಬ್ಜಾ ಸುಂದರೀ ಎಂಬ ಕಲ್ಪನೆ ಕನಸಿನಲ್ಲೂ ಬಂದಿರಲಿಲ್ಲ! ಆಲ್ಲಿಗೆ ಹೋಗಿ ತಲುಪಿದ ಶಾಸ್ತ್ರಿಗಳನ್ನು ಗೋವಿಂದಾರ್ಯರು, ತಮ್ಮ ಭಾಗದ ದೇವರೆಂದೇ ಬಗೆದು, ಭಯ ಭಕ್ತಿಗಳಿಂದ ಸತ್ಕರಿಸಿ ಸನ್ಮಾನಿಸಿದರು! ಅಲ್ಲಿ ಅತ್ತಿತ್ತ ಓಡಾಡುತ್ತಿದ್ದ ಸುಂದರ ತರುಣಿ ಕಮಲಾ ಶಾಸ್ತ್ರಿಯವರ ಕಣ್ಣಿಗೆ ಹಬ್ಬವನ್ನುಂಟುಮಾಡುತ್ತಿದ್ದು--'ತನ್ನ ಭಾವೀ ಪತ್ನಿ ಇವಳೇ ಇರಬೇಕೆಂದು ತಿಳಿದು ನೋಸ ಹೋಗಿದ್ದರು'. ಆದರೆ ತಮ್ಮ ಭಾವೀ ಪತ್ನಿ ಎಂತಹ ರೂಪವತಿ! ಎಂದು ಅವರು ಸರಿಯಾಗಿ ಕಂಡುಕೊಂಡಾಗ ಅವರ ಹೃದಯದಿಂದ ನಿಟ್ಟುಸಿರೊಂದು ತಾನಾಗಿ ಹೊರಟಿತ್ತು. ಆದರೆ, ಮತ್ತೆ ಅವರು ಈ ವೈವಾಹಿಕ ಬಂಧನದಿಂದ ತಪ್ಪಿಸಿಕೊಳ್ಳುವಂತಿರಲಿಲ್ಲ.

ನರಸಿಂಹ ಶಾಸ್ತ್ರಿಗಳು ಎಷ್ಟಾದರೂ ಆತ್ಮಜ್ಞಾನಿಗಳು ಅವರ ಆತ್ಮಜ್ಞಾನವೇ ಗೆ ಜಾಗೃತವಾಯಿತು. ಕಟ್ಟ ಕಡೆಗೆ-ಅವರು-'ಇದು ನನ್ನ ಸತ್ಪರೀಕ್ಷೆಯೂಗಿರುವುದು! ನಾನು ಇದರಿಂದ ತಪ್ಪಿಸಿಕೊಳ್ಳದೆ ಉತ್ತೀರ್ಣನಾದರೆ, ಆಗ ಮತ್ರ ನಾನು ಅಭ್ಯಸಿಸಿದ ಉಪನಿಷತ್ತು ಶಾಸ್ತ್ರ, ಇವುಗಳ ಗೌರವ ಉಳಿದೀತು! ವಿಧಾತನೇ ಈ ಹುಡುಗಿಯ ಪಾಲಿಗೆ, ಕುರೂಪಿಯೂಗಿ ಪಂಗಳಾಗಿ ನರಳುತ್ತಿರುವ ದೌರ್ಭಾಗ್ಯವನ್ನು ಕೊಟ್ಟರುವಾಗ, ಅಂಥವಳ ಕೈ ಹಿಡಿದಾದರೂ ಉದ್ಧರಿಸುವ ಭಾಗ್ಯ ನನ್ನ ಪಾಲಿಗೆ ಬಂದುದಿದು ಮಹಾ ಭಾಗ್ಯವೆಂದೇ ನಾನು ತಿಳಿಯಬೇಕು!' ಎಂದು ಅವರು ನಿರ್ಧಾರಮಾಡಿಕೊಂಡರು.

ಸುಂದರಿ ರೂಪದಿಂದ ಕುರೂಪಿಯೂಗಿದ್ದರೂ, ಆಕೆಯ ಸಂಸ್ಕೃತಜ್ಞಾನ ವಿಶೇಷವಾಗಿತ್ತು. ಗೀತೆ, ಉಪನಿಷತ್ತುಗಳು ಆಕೆಗೆ ಕಂಠಪಾಠವಾಗಿದ್ದುವು. ನರಸಿಂಹ ಶಾಸ್ತ್ರಿಗಳು ಸುಂದರಿಯ ವಿದ್ಯೆಯನ್ನೂ ಆತ್ಮವನ್ನೂ ನೋಡಿ ಮೆಚ್ಚಿದ್ದರು! ಬಾಹ್ಯ ರೂಪ ನಶ್ವರವಾದುದೆಂದೇ ಅವರು ನಿರ್ಧಾರ ಮಾಡಿಕೊಂಡರು.

ಮುದುಕನು ಎಳೆಯ ಪ್ರಾಯದ ತರುಣಿಯನ್ನು ಮದುವೆಯೂಗುವ ಪ್ರಸ್ತಾಪದಿಂದ ಮದ್ರಾಸ್ ನಗರದ ತರುಣರಲ್ಲಿ ಅಸೂಯೆ ಹುಟ್ಟಿತಂತೆ! ಮಹಿಳಾ ಸಮಾಜದವರು ತುರ್ತಿನ ಮಿಟಿಂಗನ್ನು ಕರೆದು 45 ವರ್ಷಕ್ಕೆ ಮೇಲ್ಪಟ್ಟ ಗಂಡುಸರು ತರುಣಿಯರನ್ನು ಮದುವೆಯೂಗುವ ರೀತಿಯನ್ನು ನಿಷೇಧಿಸಬೇಕು! ಆದರೆ, ಹೆಚ್ಚು ವಯಸ್ಸಾದ ತರುಣಿಯೂದರೆ ಈ ನಿರ್ಬಂಧವಿಲ್ಲ!' ಎಂದು ಮುಂತಾದ ನಿರ್ಣಯಗಳನ್ನು ಮಾಡಿ ಜಾರಿಮಾಡಿದರಂತೆ! ಅಂತು ಯಾರೂ ಏನು ಮಾಡಿದರೂ, ಶಾಸ್ತ್ರಿ ಹುವರ ಮುದುವೆ ಕುಬ್ಜಾ ಸುಂದರಿಯೂಡನೆ ನಡೆದೇ ಹೋಯಿತು!

'ನರಸಿಂಹ ಶಾಸ್ತ್ರಿಯವರ ಈ ದಾಂಪತ್ಯ ಜೀವನ ಬಹು ಸುಖಮಯವಾಗಿ ಸಾಗಿತು' ಎಂದು ಹೇಳುತ್ತ ಶ್ರೀ ರಾಜಾಜಿಯವರು ಈ ಸತಿ ಪತಿಯರಲ್ಲಿ ನಡೆಯುತ್ತಿದ್ದ-ಅಧ್ಯಾತ್ಮಿಕ ಚರ್ಚೆಯನ್ನು ಹೃದಯಸ್ಪರ್ಶಿಯಾಗಿ ನಿರೂಪಿಸಿರುವರು. ಆ ಚರ್ಚೆಯಲ್ಲಿ ಒಂದೆರಡು ಸಾಲು—ಹೀಗಿದೆ —ಶಾಸ್ತ್ರಿಗಳು ಹೇಳುತ್ತಾರೆ--

'ಸುಂದರೀ! ನಾನು ನಿನ್ನನ್ನು ಪ್ರೇಮದಿಂದ ನೋಡುತ್ತಿರುವಾಗ ನನಗೆ ನಿನ್ನ ಆತ್ಮನೇ ಕಾಣಿಸುವುದು, ಹೊರತು ನೀನಲ್ಲ! ಆಗ ನಿನ್ನ ಆತ್ಮ ಸೌಂದರ್ಯವು ನನ್ನನ್ನು ಸಂತೋಷಗೊಳಿಸುವುದು?

ಸುಂದರಿಯ ಅಧ್ಯಾತ್ಮ ಜ್ಞಾನವೂ ಸಾಮಾನ್ಯವಾದುದಲ್ಲ. ಆಕೆ—'ನಾಥಾ! ತಾವು ಹೇಳುವ ಉಪನಿಷತ್ ವಾಕ್ಯಕ್ಕೆ ಬೇರೆ ಅರ್ಥವೂ ಇರುವುದಲ್ಲ? ಜ್ಞಾನಿಗಳು ಅಂತರ್ಮುಖರಾಗಿ ಏಕಾಗ್ರತೆಯಿಂದ ಧ್ಯಾನ ಮಾಡುತ್ತಿದ್ದಾಗ ತಮ್ಮ ಜ್ಞಾನದೃಷ್ಟಿಯಿಂದ ಆಂತರಾತ್ಮನನ್ನು ನೋಡಿ ಮುಗ್ಧರಾಗುತ್ತಾರೆ! ಆವರಿಗೆ ಬಾಹ್ಯರೂಪ ಕಾಣಿಸುವುದೇ ಇಲ್ಲ! ಜ್ಞಾನಿಗಳ ದೃಷ್ಟಿ ಅಮರವಾದ ಆತ್ಮದ ಕಡೆಗೆ ಹೊರತು--ನಶ್ವರವಾದ ದೇಹದ ಕಡೆಗೆ ಇರುವುದಿಲ್ಲ!' ಎನ್ನುತ್ತಾಳೆ.

ಕೊನೆಗೆ ಶ್ರೀ ರಾಜಾಜಿಯವರು, 'ಕುಬ್ಜಾ ಸುಂದರಿ'ಯು ಸಹ ಧರ್ಮಿಣಿಯೂಗಿದ್ದರೂ, ಶಾಸ್ತ್ರಿಯವರ ದಾಂಪತ್ಯ ಜೀವನ—ಆನಂದಕರವಾಗಿತ್ತು; ಎಂದು ಹೇಳುತ್ತ ಸಮಾಜಕ್ಕೆ ಒಂದೆರಡು ಹಿತ ವಾಕ್ಯಗಳನ್ನು ಹೇಳುತ್ತ ಕಥೆಯನ್ನು ಪೂರ್ಣಗೊಳಿಸುತ್ತಾರೆ:—

'ನಿಜ ಹೇಳುವುದಾದರೆ, ಶರೀರದ ಬಾಹ್ಯ ಸೌಂದರ್ಯ ನಾಶಪೂರ್ಣವಾದುದಾಗಿದೆ. ಆಂತರಿಕ ಪ್ರೇಮನುನೇ ಸುಂದರವೂ ಶಾಶ್ವತವೂ ಆಗಿರುವುದು. ಶರೀರದ ಸೌಂದರ್ಯ ಮದುವೆಯೂಗುವ ಮೊದಲು ನೋಡಲ್ಪಡುವುದು. ಆದರೆ—ಗುಣ-ನಡತೆ—ಚಾರಿತ್ರ್ಯ ಇವುಗಳೇ ಮುಖ್ಯ—ಹೊರತು ಚಾರಿತ್ರ್ಯ ರಹಿತವಾದ ರೂಪ. ಅದು ರೂಪವೇ ಅಲ್ಲ! ಮದುವೆಯಾದ ಮೇಲೆ, ಒಂದು ಆಕ್ಸಿಡೆಂಟು ಆಕ್ಸಿಡೊಡನೆ ಕೂಡಿದಾಗ ಆ ಪ್ರೇಮ ಸಂಗಮದಲ್ಲಿ ಬಾಹ್ಯ ಶರೀರದ ರೂಪವು ಅದೃಶ್ಯವಾದಂತೆ ಭಾಸವಾಗುವುದು! ಇದು ಸ್ತ್ರೀ ಪುರುಷರೀರ್ವರಿಗೂ ಸಮಾನವಾಗಿದೆ. ಪ್ರೇಮ ಪಾಶದಿಂದ ಬಂಧಿಸಲ್ಪಟ್ಟ ದಂಪತಿಗಳಲ್ಲಿ ಪರಸ್ಪರ, ಕಣ್ಣು, ಮೂಗು, ಕಿವಿ, ದೇಹ ಇವುಗಳ ಸೌಂದರ್ಯದ ಪ್ರಶ್ನೆಯೇ ಏಳುವುದಿಲ್ಲ! ಆದೆಲ್ಲವೂ ಹೊರಗಿನಿಂದ ನೋಡುವವರಿಗೆ ಮಾತ್ರ ಕಾಣಿಸುವುದಾಗಿದೆ!' ಈ ನೀತಿಬೋಧೆಯೊಡನೆ, ಕಥೆ ಪೂರ್ಣಗೊಳ್ಳುವುದು.

ಮಾನ್ಯ ರಾಜಾಜಿಯವರ ಕಥನ ಕಲಾನೈಪುಣ್ಯ, ಅವರ ಪ್ರತಿಯೊಂದು ಕಥೆಯಲ್ಲಿಯೂ ಎದ್ದು ಕಾಣುವುದು, ಅವರ ಕಥಾ ಪಾತ್ರಗಳು, ಜೀವ ಕಳೆಯಿಂದ ತುಂಬಿದಂತಿರುತ್ತವೆ. ಸಮಾಜದ ಜಟಿಲವಾದ ಸಮಸ್ಯೆಗಳನ್ನು ಪರಿತೀಲಿಸಿ, ರಾಜಾಜಿಯವರು ತಮ್ಮ ಕಥೆಗಳ ಮೂಲಕ ಪರಿಹಾರೋಪಾಯವನ್ನೂ ಸೂಚಿಸುತ್ತಾರೆ. ಭಾರತೀಯ ಸಂಸ್ಕೃತಿಯನ್ನು ಎತ್ತಿ ತೋರಿಸುತ್ತಿರುವ ಅವರ ಕಥಾಸಾಹಿತ್ಯ ಬಹು ಬೇಗನೆ ಕನ್ನಡದಲ್ಲೂ ಪ್ರಕಾಶಿತವಾಗಲಿ! ಎಂದು ಹಾರೈಸುತ್ತೇನೆ.

ಹಿಂದೀ ಕಂನಡ ಬಾಂಧವ್ಯ

ಮುಂಬಯಿ ಸಾಹಿತ್ಯ ಕೂಟದ ಉಪಕ್ರಮ

ಕಂನಡ ಹಿಂದೀ ಲೇಖಕರಲ್ಲಿ ವಿನಂತಿ

ಕಂನಡವು ನಮ್ಮ ಮಾತೃಭಾಷೆ. ಹಿಂದೀ ನಮ್ಮ ರಾಷ್ಟ್ರಭಾಷೆ. ಎರಡರಲ್ಲಿಯೂ ನಮ್ಮ ಬಾಂಧವ್ಯವು ಬೆಳೆದು ಬರಬೇಕಾದುದು ಆಗ ಕೃಷ್ಣ ಆಪುದು; ಅನಿವಾರ್ಯವೂ ಆಹುದು.

ಈ ಶತಮಾನದ ಆರಂಭ ಕಾಲದಿಂದ ಹಿಂದೀ ಸಾಹಿತ್ಯವು ಕಂನಡದಲ್ಲಿ ಬಂದಿದ್ದಿದೆ. ಈಚೆಗೆ ಕಂನಡವೂ ಹಿಂದೀ ಸಾಹಿತ್ಯದಲ್ಲಿ ಕಾಣಿಸಿಕೊಂಡಿದೆ. ಇದುವರೆಗೆ ಆದೆ ಈ ಉಭಯ ಭಾಷಾ ಸಾಹಿತ್ಯ ವಿನಿಮಯದ ಕಾರ್ಯವನ್ನು ವಿವರವಾಗಿ ಪರಿತೀಲಿಸಿ, ಎರಡೂ ಭಾಷೆಗಳಲ್ಲಿ ಇಷ್ಟರ ತನಕ ಕೃಷಿಯಾಗಿದೆ ಭಾಗವನ್ನು ಕೈಗೆತ್ತಿಕೊಳ್ಳುವ ದೃಷ್ಟಿಯಿಂದ, ಈ ವಿಷಯದಲ್ಲಿ ಆಸ್ಥೆಯುಳ್ಳವರ ಮತ್ತು ಪರಿಶ್ರಮಿಸಬ್ಬವರ ನೆರವನ್ನು ಕೋರುತ್ತಿದ್ದೇವೆ.

ಹಿಂದೀ ಕಂನಡ ಬಾಂಧವ್ಯದ ನಮ್ಮ ಯೋಜನೆ ಇಂತಿದೆ.

೧. ಇದುವರೆಗೆ ಹಿಂದೀಯಿಂದ ಕಂನಡಕ್ಕೂ, ಕಂನಡದಿಂದ ಹಿಂದೀಗೂ ಆನುವಾದ ಇಲ್ಲವೆ ಪರಿವರ್ತನೆಗೊಂಡ ಗ್ರಂಥಗಳು, ಲೇಖನಗಳು ಮತ್ತು ಅವುಗಳ ಮೂಲ ಲೇಖಕರು ಪಾಗೂ ಆನುವಾದಕರು;

೨. ಕಂನಡ ನಾಡು, ನುಡಿ, ವ್ಯಕ್ತಿಗಳ ಬಗ್ಗೆ ಹಿಂದೀಯಲ್ಲಿಯೂ ಅದರಂತೆ ಹಿಂದೀ ಸಾಹಿತ್ಯ, ಸಂಸ್ಕೃತಿ, ವ್ಯಕ್ತಿಗಳ ಬಗ್ಗೆ ಕಂನಡದಲ್ಲಿಯೂ ಬಂದ ಬರಹಣಿಗೆ;

೩. ಕಂನಡಿಗರಾದ ಲೇಖಕರು ಹಿಂದೀಯಲ್ಲಿ ಸ್ವತಂತ್ರವಾಗಿ ಬರೆದ ಗ್ರಂಥ ಯಾ ಲೇಖನಗಳು;

೪. ಈ ದಿಸೆಯಲ್ಲಿ ಕಾರ್ಯನಿರತರಾದ ವ್ಯಕ್ತಿ ಮತ್ತು ಸಂಸ್ಥೆಗಳು;

—ಈ ಅಂಶಗಳ ಮೇಲಿನ ವಿವರಗಳನ್ನು ಕಲೆಹಾಕಿ ಅವುಗಳ ಸಮನ್ವಯವನ್ನು ಮಾಡಿ, ಉಭಯ ಭಾಷೆಗಳಲ್ಲಿ ಇಷ್ಟರವರೆಗೆ ಬಾರದ ಉತ್ತಮಾಂಶಗಳನ್ನು ನಿರ್ದೇಶಿಸುವ ಗ್ರಂಥಿಯೊಂದನ್ನು ಹಿಂದೀ, ಕಂನಡ ಈ ಎರಡೂ ಭಾಷೆಗಳಲ್ಲಿ ಪ್ರಕಟಿಸುವ ವಿಚಾರವಿದೆ. ಈ ಬಗೆಯ ಉಪಕ್ರಮವು ನವೀನವಾದದ್ದು ಭಾರತದ ಯಾವುದೇ ಭಾಷೆಯಲ್ಲಿ ಇದುವರೆಗೆ ಬಂದಂತಿಲ್ಲ.

ಕಾರ್ಯ ಮೇಲ್ಕಂಡ ವಿವರಗಳನ್ನು ಶ್ರೀ ವಾಸು ಬಿ. ಪುತ್ರನ್, ಕಂನಡ ಸಾಹಿತ್ಯ ಕೂಟ, ಪೆಂಡಟೋಸ ನಿವಾಸ, ಭಾವುದಾಜಿ ರೋಡ್, ಮುಂಬೈ 19 ಈ ವಿಳಾಸಕ್ಕೆ ತಿಳಿಸಬೇಕೆಂದು ಗೌ! ಕಾರ್ಯದರ್ಶಿಗಳು ವಿನ್ನಯಿಸುತ್ತಾರೆ.



ನರಭಕ್ಷಕ ಬಕಾಸುರ

(ಎನೇ ಪುಟದಿಂದ)

ಲಿಲ್ಲ, ಪೂರ್ಣ ಸತ್ಯವನ್ನೂ ಹೇಳಲಿಲ್ಲ.

"ಈ ಬಕಾಸುರೋತ್ಪತ್ತಿಯನ್ನು ಕುರಿತು ನಾವು ಯಾವುದಾದರೊಂದು ನಿರ್ಣಯಕ್ಕೆ ಬರುವ ಸಮಯ ಸನ್ನಿಹಿತವಾಗಿದೆ. ಅತನ ಮನೆಗೆ ಪಕ್ಕೇ ಶೂಲವಾಗಿ ಕುಳಿತಿದ್ದಾನೆ. ನಮ್ಮ ರಾಜರ ವಿಷಯ ನಿಮಗೂ ಗೊತ್ತು. ರಾಕ್ಷಸೇಶ್ವರನಿಗೆ ಸಂಬಂಧಿಸಿದ ವಾರ್ತೆಗಳನ್ನು ನಮ್ಮ ಹಾಗೆಯೇ ರಾಜರೂ ಮೊದ ಮೊದಲು ನಂಬಲಿಲ್ಲಾಂತ ಇಟ್ಟುಕೊಳ್ಳಿ. ಆದರೆ ಆ ವಾರ್ತೆ ನಿಜವೆಂದು ಒಮ್ಮೆ ರೂಢಿಯಾದ ಮೇಲೆ, ಅವರಿಗೆ ಪ್ರಜಾಕ್ಷೇಮದ ಹೊರತು ಮತ್ತೇನೂ ಬೇಡವಾಗಿದೆ. ಮಹಾರಾಜರ ಪ್ರಜಾಹಿತ ಚಿಂತನೆಯನ್ನು ಕುರಿತು ನಾನು ಹೆಚ್ಚು ನಿಮಗೆ ಹೇಳಬೇಕಾದ ಅಗತ್ಯವಿಲ್ಲ"

ಎಲ್ಲರೂ ತಲೆಯಾಡಿದರು. ಮಂತ್ರಿ ಏನೋ ಉದ್ದೇಶವಿಟ್ಟುಕೊಂಡು ಮಾತಾಡುತಿದ್ದಾನೆ, ಆದೇನೆಂದು ತಿಳಿಯುವ ವರೆಗೂ ಸುಮ್ಮನಿರಬೇಕಾದ್ದೇ.

ಮಂತ್ರಿ ಒಂದು ನಿಟ್ಟುಸಿರು ಬಿಟ್ಟು ಮತ್ತೆ ಹೇಳಿದ: "ರಾಜರ ಪ್ರಜಾಹಿತ ಚಿಂತನೆ ಎಲ್ಲಿಯ ವರೆಗೆ ಹೋಯಿತೆಂದರೆ, ಒಮ್ಮಿಂದೊಮ್ಮೆ ಕವಚತಾನಂದು ಸೇನಕನಿಗೆ ಕೂಗಿದರು. ಏಕೆಂದು ಕೇಳಿದೆ. ರಾಕ್ಷಸನ ಮೇಲೆ ಯುದ್ಧಕ್ಕೇ ಅಂದರು. ಅವಸರ ಪಡಬೇಡಿ ಎಂದು ನಾನು ಸಮಾಧಾನ ಮಾಡಿದೆ. ರಾಜರ ಆತ್ಮೀಯರಾಂದ ನಮ್ಮೆಲ್ಲರ ಅಭಿವ್ಯಯವನ್ನೂ ತಿಳಿದುಕೊಂಡ ಹೊರತು ಯಾವ ನಿರ್ಣಯಕ್ಕೂ ಬರಬಾರದು ಎಂದು ಹೇಳಿದೆ. ನಿಮಗೆ ತಿಳಿಯದ್ದೇನಿದೆ? ನನಗಿಂತಲೂ ನಿಮ್ಮ ಹೆಸರುಗಳೇ ಅವರನ್ನು ಬೇಗನೇ ಮಂತ್ರಮುಗ್ಧ ಮಾಡಿಬಿಡುತ್ತವೆ. ನಿಮ್ಮ ಮೇಲೆ ಅವಂಗಿರುವ ವಿಶ್ವಾಸದಲ್ಲಿ ಶತಾಂಶವಾದರೂ ನನ್ನ ಮೇಲಿದ್ದರೆ ನನ್ನ ಭಾರ ಅಗ್ಗವಿದಂತೆ.

ಮತ್ತೆ ನಿಟ್ಟುಸಿರುಬಿಟ್ಟನು ಮಂತ್ರಿ ಹಿರಿಯರು ತಲೆಯಾಡಿಸಿದರು. ಈ ಬಗೆಯ ಸುಳ್ಳುಗಳನ್ನು ಈ ಮಂತ್ರೀಶ್ವರ ಏಕೆ ಹೇಳುತ್ತಾನೆಂಬುದು ಅವರಿಗೆ ಇನ್ನೂ ತಿಳಿಯಲಿಲ್ಲ.

"ಇರುವ ಘಾಸ್ತವ ವಿಷಯವನ್ನು ಬಚ್ಚಿಡದೆ ವಿನಂತಿಮಾಡಿಕೊಳ್ಳುತ್ತೇನೆ. ಆ ರಾಕ್ಷಸನು ಮನಸ್ಸು ಮಾಡಿದರೆ ಒಂದೇ ಗಂಟೆಯೊಳಗೆ ಈ ನಗರವನ್ನೆಲ್ಲಾ ಶ್ಮಶಾನವಾಗಿ ಮಾಡಬಲ್ಲ. ಡಾಗೆಂದು ಅತನನ್ನು ದೂರಲು ಯಾರಿಗಾದರೂ ಸಾಧ್ಯವುಂಟೆ? ಇಲ್ಲ. ಮಹಾ ರಾಜರಿಗೂ ಸಾಧ್ಯವಿಲ್ಲ ಈ ಮಾತು ಹೇಳಿದರೆ ನನ್ನ ತಲೆಯೇ ಹೋದೀತು ಈ ಮಾತನ್ನು ತಕ್ಕಡಿಯ ಒಂದು ಕಡೆಯಲ್ಲಿ ಹಾಕೋಣ. ಇನ್ನೊಂದು ಕಡೆಯಲ್ಲಿ ಹಾಕಬೇಕಾದ ವಿಷಯ ವಿಜ್ಞಾಪಿಸುತ್ತೇನೆ. ಆ ರಾಕ್ಷಸೇಶ್ವರನಿಗೆ ನಮ್ಮ ಮೇಲೆ ಪ್ರತ್ಯೇಕ ಹಗೆಯಂತೂ ಇಲ್ಲ ದೇವರು ಸೃಷ್ಟಿಮಾಡಿದ ಪ್ರತಿ ಪ್ರಾಣಿಯೂ ತನಗೆ ಸಹಜವಾದ ಆಹಾರವನ್ನು ತಿಂದು ತೀರಲೇಬೇಕಷ್ಟೆ 'ಶರೀರಮಾದ್ಯಂ ಖಲು ಧರ್ಮ ಸಾಧನಂ' ಶಕ್ತಿವಂತನಾದವನು ಇನ್ನಷ್ಟು ಧನಕನಕಿಯಿಂದಲೇ ಬದುಕಬೇಕು. ಹುಲಿಗಳು ಚಿಗರಿಗಳನ್ನು ಕೊಂದು ತಿನ್ನುತ್ತವೆಯೇ ಹೊರತು ಚಿಗರಿಗಳು ಹುಲಿಗಳನ್ನು ಕೊಂದು ತಿನ್ನುವುದಿಲ್ಲವಷ್ಟೆ? ಈ ಬಗೆಯ ಪ್ರಕೃತಿ ನಿಯಮವನ್ನನುಸರಿಸಿ ಆ ರಾಕ್ಷಸೇಶ್ವರನು ನಮ್ಮ ನಗರಕ್ಕೆ ಬಂದಿದ್ದಾನೆಯೇ ಹೊರತು ನಮ್ಮ ಮೇಲೆ ವೈರಶ್ವದಿಂದಲ್ಲ. ರಾಜ್ಯಾಕಾಂಕ್ಷೆಯಿಂದಲೂ ಬಂದಿಲ್ಲ. ನಮ್ಮ ರಾಜ್ಯದ ಮೇಲೆ ಕಣ್ಣು ಹಾಕಿರುವ ಪರಿಸರ ರಾಜ್ಯಗಳನ್ನು ನೋಡಿದರೆ ಈ ರಾಕ್ಷಸನನ್ನು ಮಿತ್ರನೆಂದೇ ಭಾವಿಸಬಹುದು. ಇವನನ್ನು ಸಾಕ್ಷಾತ್ ಮಿತ್ರನನ್ನಾಗಿ ಮಾಡಿಕೊಂಡುದಾದರೆ ನಮಗೆಷ್ಟು ಉಪಕಾರವೋ ಆಲೋಚಿಸಿ ಮಾಡಿರಿ. ಯುದ್ಧವು ಬಂದಾಗ ನಮಗಾಗುವ ನಷ್ಟವೆಷ್ಟೆಂದು ನೋಡಿರಿ. ಕಳೆದ ಹತ್ತು ವರ್ಷಗಳಲ್ಲಿ ನೀವೆಲ್ಲಾ ಎಷ್ಟು ದ್ರವ್ಯವನ್ನು ತ್ಯಾಗಮಾಡಿದ್ದೀರೋ!"

ಮಂತ್ರಿ ಎಲ್ಲರನ್ನೂ ಒಮ್ಮೆ ನೋಡಿದ. ಅವರೆಲ್ಲಾ ಜೊಂಪೆಗಳ ಹಾಗೆ ನಿಶ್ಚಲವಾಗಿದ್ದರು ಅಸಲು ವಿಷಯ ಬೇಗನೇ ಹೊರಬೀಳಲಿದೆ. ಇದು ಒಳತಿಗೋ ಕೆಡುಕಿಗೋ ಆ ಮಂತ್ರಿಗೇ ಗೊತ್ತು! ದೇವರಿಗೇ ಗೊತ್ತು!

"ಈಗ ನಾನು ನಿಮ್ಮೆಲ್ಲರ ಒಳತನ್ನೂ ಸಾಧಿಸುವಂತಹ ಮಂತ್ರಾಲೋಚನೆ ಮಾಡಿದ ಬಗೆಯೇನೆಂದರೆ, ಈ ರಾಕ್ಷಸೇಂದ್ರನನ್ನು ನಮ್ಮ ಮಿತ್ರನನ್ನಾಗಿ ಮಾಡಿಕೊಂಡು, ಆ ಮೂಲಕವಾಗಿ ನಿಮಗೆ ಲಾಭ ಪುಂಟಾಗುವ ಮಾರ್ಗವಿದ್ದರೆ, ಆ ಪದ್ಧತಿಯನ್ನು ಹಿಡಿಯುವುದು ಒಳ್ಳೆಯದೋ ಅಲ್ಲವೋ? ಅಲ್ಲ ಈ ರಾಕ್ಷಸೇಶ್ವರನನ್ನು ಶತ್ರುವಾಗಿ ಭಾವಿಸಿಕೊಂಡು ನಮ್ಮ ಸರ್ವನಾಶ ಮಾಡಿಕೊಳ್ಳುವುದು ಒಳ್ಳೆಯದೆನ್ನುವಿರಾ? ಈ ಒಂದು ಪ್ರಶ್ನೆಗೆ ನನಗೆ ಸಮಾಧಾನ ಕೊಡಿರಿ. ನಿಮ್ಮ ಸಮಾಧಾನವನ್ನು ಕೇಳಿಕೊಂಡು ಮುಂದಿನ ವಿಷಯ ಮಾತಾಡೋಣ"

ಏವರು ಹಿರಿಯರ ಮುಖಗಳೂ ಅರಳಿದುವು. ಮಂತ್ರಿ ಕೇಳಿದುದು ಹೆಚ್ಚು ಪ್ರಶ್ನೆಯಲ್ಲದೆ ಮತ್ತೇನು? ಅಷ್ಟು ಬಲಾಢ್ಯರಾದ ರಾಕ್ಷಸ ಮಹಾಶಯರ ಸ್ನೇಹ ಮಾಡುವಲ್ಲದೆ ತನಗೆ ಲಾಭ ಕೂಡಾ ಸಿಕ್ಕುವ ಮಾತಿದ್ದರೆ ಅವರೊಂದಿಗೆ—ಅಂದರೆ ಮಹಾ ಮಹಿಮ ರಾಕ್ಷಸ ಮಹಾ ರಾಜರೊಂದಿಗೆ ವಿರೋಧಮಾಡಿ ಕೊಳ್ಳಬೇಕೆಂದು ಯಾವ ಕತ್ತೆ ಹೇಳೀತು? ಈ ಮಾತಿಗೆ ಅಷ್ಟು ದೊಡ್ಡ ಉಪೋದ್ಘಾತವೇಕೆ ಬೇಕಿತ್ತೆಂದು ಅವರಿಗೆ ಗೊತ್ತಾಗಲಿಲ್ಲ. ಇದೇ ಈಗ ಈ ಮಂತ್ರಿಯೊಂದಿಗಿರುವ ಸಮಸ್ಯೆ. ಮಂತ್ರಿಗಳೆಂದರೆ ಒಮ್ಮೆಗೇ ಅಸಲು ವಿಷಯ ಹೇಳಿಬಿಡುತ್ತಾರೆಯೆ?

"ಆ ರಾಕ್ಷಸೇಂದ್ರರಿಗೆ ದಿನಾ ಒಂದೊಂದು ಮನೆಯ ಎರಡು ಎತ್ತುಗಳು, ಒಂದು ಬಂಡಿ ಅನ್ನ ಮೇಲೋಗರಗಳು, ಒಬ್ಬ ಮನುಷ್ಯ ಇವಿಷ್ಟು ಆಹಾರ ಈ ಆಹಾರವನ್ನು ನಾವು ಅವರಿಗೆ ಅನುಗೊಳಿಸುವ ಪದ್ಧತಿಯಲ್ಲಿ, ಅವರು ನಮ್ಮೊಂದಿಗೆ ಸ್ನೇಹವಾಗಿ, ನಮಗೆ ನೆರವಾಗಿ ಶತ್ರುಗಳಿಗೆ ಸಿಂಹಸ್ವಪ್ನವಾಗಿ ಇರುತ್ತಾರೆ. ಇದಕ್ಕೆ ನಿಮ್ಮ ಅಭಿಪ್ರಾಯವೇನು?" ಕೇಳಿದ ಮಂತ್ರಿ.

ಹಿರಿಯರೆಲ್ಲ ವಿಶಾಲವಾಗಿ ಬಾಯಿ ತೆರೆದು ನಕ್ಕರು.

"ನಮ್ಮ ನಗರಕ್ಕೆ ಇದೊಂದು ದೊಡ್ಡ ಹೊರೆಯ ಖರ್ಚೇ ಅಲ್ಲ. ಪ್ರತಿ ದಿನಾ ಎಷ್ಟು ಬಂಡಿ ಆಹಾರ ವ್ಯರ್ಥವಾಗಿ ಹೋಗುತ್ತದೋ! ಆಹಾರ ಪದಾರ್ಥಗಳನ್ನು ಹೊಂದಿಸಿ ಕೊಡಬೇಕಾದ್ದು ನಿಮ್ಮ ಕೆಲಸ ನಿಮಗೆ ತಕ್ಕ ಪ್ರತಿಫಲಕೂಡಿಸುವ ಭಾರ ನನ್ನದು. ಇಷ್ಟುಕಾಲ ಈ ನಗರದ ವ್ಯಾಪಾರವು ಮುಚ್ಚಿರುವುದರಿಂದ ನಿಮ್ಮ ವರ್ತಕ ವಾಣಿಜ್ಯಗಳು ಸಾಗದೆ ನಿಮಗೆ ಹೊಟ್ಟೆ ನಷ್ಟವಾಗಿದೆಯೆಂದು ನನಗೆ ಗೊತ್ತಿದೆ. ಆ ಬಾಗಿಲು ತೆರೆಯುವುದರಿಂದಲೇ ನಿಮಗೆಹೊಟ್ಟೆ ಲಾಭವಾಗುತ್ತದೆ. ಅದರೊಂದಿಗೆ ಇದೂ ನಿಮಗೊಂದು ಮಧುರವಾದ ವ್ಯಾಪಾರವಾಗುತ್ತದೆ. ಏನನ್ನುವಿರಿ?" ಎಂದು ಮತ್ತೆ ಕೇಳಿದ ಮಂತ್ರಿ.

"ಆ ರಾಕ್ಷಸ ಮಹಾರಾಯರಿಗೆ ಬೇಕಾದರೆ ಉತ್ತಮ ದರ್ಜೆಯ ಮದ್ಯ ಕೂಡಾ ನಮ್ಮ ಹತ್ತಿರ ಸಿಗುತ್ತದೆ" ಎಂದ ನೊಬ್ಬ ವೌರಶ್ರೀಮಂತ.

"ಇದೊಳ್ಳೆಯ ಆಲೋಚನೆಯೇ. ಅದಕ್ಕೆ ತಾನೇ ನಿಮ್ಮೊಡನೆ ಮಾತಾಡುತಿದ್ದೇನೆ!" ಎಂದ ಮಂತ್ರಿ.

"ಮತ್ತೆ ಎತ್ತುಗಳೋ?"

"ಬಂಡಿ ಮತ್ತು ಎತ್ತುಗಳನ್ನು ಮಹಾರಾಜರೇ ಭರಿಸಿಕೊಳ್ಳುತ್ತಾರೆ"

"ಮನುಷ್ಯರೀನು ಮಾಡೋಣ?"

"ಅದೇನೂ ಅಷ್ಟು ದೊಡ್ಡ ಸಮಸ್ಯೆಯಲ್ಲ ಸಮೂಹದ ಕ್ಷೇಮಕ್ಕಾಗಿ ಮಾಡಬೇಕಾದ ತ್ಯಾಗದಲ್ಲಿ ಸಾಮಾನ್ಯ ಪ್ರಜೆಗಳು ಸಂತೋಷವಾಗಿ ಭಾಗಹಂಚಿಕೆಕೊಳ್ಳುತ್ತಾರೆ ದಿನಾ ಒಂದೊಂದು ಮನೆಗೆ ಒಬ್ಬೊಬ್ಬ ಜನ ಬರುವ ಹಾಗೆ ಏರ್ಪಾಡು ಮಾಡುವ" ಎಂದ ಮಂತ್ರಿ

"ಪ್ರತಿ ಮನೆಗಾ?"

"ಹೌದು. ಈ ವಿಷಯದಲ್ಲಿ ನಾವು ಪಕ್ಷಪಾತ ಮಹಿಸಬಾರದು. ಶ್ರೀಮಂತರು ತಮ್ಮ ಮನೆಯ ಸರತಿ ಬಂದಾಗ ಜೇತದಾಳೊಬ್ಬನನ್ನು ಕಳುಹಿಸಬಹುದು. ಒಂದು ಮನೆಗೆ ಒಮ್ಮೆ ಸರತಿ ಬಂದರೆ ಮತ್ತೆ ಎರಡು ಮೂರು ವರುಷದ ಮೇಲೆ ತಾನೇ ಬರುತ್ತೆ? ಮೂರು ನಾಲ್ಕು ವರ್ಷಗಳಿಗೊಮ್ಮೆ ಪ್ರತಿ ಮನೆಯಲ್ಲಿಯೂ ನಾವು ಬಾರದಿರುತ್ತದೆಯೆ? ಬೇಕಾದರೆ ನನ್ನ ಮೊತು ನಂಬಿ. ಈ ಮಾತಿಗೆ ಯಾರೂ ಅಭ್ಯಂತರ ಹೇಳುವುದಿಲ್ಲ. ನಾವು ಮಾಡುವ ಈ ಏರ್ಪಾಡುಗಳೆಲ್ಲಾ ನಗರ ಕ್ಷೇಮ ಪ್ರಜಾಕ್ಷೇಮಕ್ಕೆ ಆಗಿರುವಾಗ ಪ್ರಜೆಗಳು ಮೂಕ ಹೇಗೆ ಅಭ್ಯಂತರ ಹೇಳುತ್ತಾರೆ? ರಾಕ್ಷಸೇಂದ್ರನೊಂದಿಗೆ ವಿರೋಧಮಾಡಿಕೊಳ್ಳುವುದೆಂದರೆ ಸರ್ವನಾಶವೆಂದು ನಾವವರಿಗೆ ತಿಳಿಸಿ ಹೇಳುತ್ತೇವಲ್ಲಾ?"

ಏವರು ಹಿರಿಯರ ಕಣ್ಣುಗಳಲ್ಲಿಯೂ ಆನಂದಬಾಷ್ಪ ಸುರಿಯಿತು.

೦ ೦ ೦

(ಮುಂದುವರಿಯುವುದು)

ಹಾರ್ಮೋನಿಯಮ್ ಕಲಿಯುವವರಿಗೆ
ಅತ್ಯುತ್ತಮ ಸಂಗೀತ ಪುಸ್ತಕ—
ಶ್ರೀ ಎ. ರಾಮಪ್ಪ ಅವರ
ಹಾರ್ಮೋನಿಯಮ್
ಬೋಧನ ಕ್ರಮ
ಸಂಸ್ಕರಿಸಲ್ಪಟ್ಟ ನಾಲ್ಕನೆಯ ಮುದ್ರಣ
ಕೆಲವೇ ಪ್ರತಿಗಳು ಉಳಿದಿವೆ.
ಬೆಲೆ: ರೂ. 2—0—0.
ಒಂದು ಪ್ರತಿ ಬೇಕಾದವರು ರೂ 2-50 ನ್ನು ಮನಿಯೊರ್ಡರು ಮಾಡಿ ತರಿಸಿಕೊಳ್ಳಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.
ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ, ಎಂ.ಎ.)
ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಪತಾಳ್, ಎಂ.ಬಿ.ಬಿ.ಎಸ್)
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರಣೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ
ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳುಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ,
ಉಡುಪಿ.



ಕೊಂಪಾಗವೆಂತಹ ಲೈಸೆನ್ಸ್ ಇಲ್ಲದೆ ಉಪಯೋಗಿಸಬಹುದು. ಇದನ್ನು ನಿಮ್ಮ ಸಂರಕ್ಷಣೆಗೂ ಕಳ್ಳಕಾಕರ ಭಯವನ್ನೂ ಕ್ರೂರ ಪ್ರಾಣಿಗಳ ಭಯವನ್ನೂ ನೀಗಿಸಲು ಉಪಯೋಗಿಸಬಹುದು. ಬೆಲೆ: ಬೆಲೆ: 6 ಗುಂಡಿನ ಪಿಸ್ತೂಲ್: ನಂ. 333 ರೂ. 8, ನಂ. 444 ರೂ. 10, ನಂ. 555 ರೂ. 15 ಮತ್ತು 50 ಗುಂಡಿನ ಪಿಸ್ತೂಲ್ ನಂ. 666 ರೂ. 10, ನಂ. 777 ರೂ. 15, ನಂ. 888 ರೂ. 20 ಆದರೊಂದಿಗೆ 100 ಗುಂಡು ಧರ್ಮಕ್ಕೆ. ಬೇರೆ 100 ಗುಂಡಿನ ಬೆಲೆ: ರೂ. 5. ಚರ್ಮದ ಚೀಲದ ಬೆಲೆ: ರೂ. 6 ಪೋಸ್ಟ್ ಚಾರ್ಜ್ ರೂ. 2
REY ROGAS & CO., 23-A, Anand Nagar, BOMBAY-26.

REGD. No. B. G. 176
LICENCE No. 31
Licensed to Post without Prepayment

ಶುದ್ಧ ಹರಟೆ

ಅಡಿಗಲ್ಲು ಕಾಯಲು ಸಿಬ್ಬಂಧಿ ಸೇವೆ

ಪ್ರಜಾಪ್ರಭುತ್ವ ಯುಗದಲ್ಲಿ ಚುನಾವಣೆಗಳಲ್ಲಿ ಮತದಾರರಿಗೆ ಸಂಪೂರ್ಣ ಸ್ವಾತಂತ್ರ್ಯವಿರುವಂತೆಯೇ, ತಮಗೆ ದೊರೆತಿರುವ ಅಮೂಲ್ಯವಾದ ಮತವನ್ನು ಯಾರಾದರೊಬ್ಬನಿಗೆ ಸುಮ್ಮಸುಮ್ಮನೆ ಹಾಕಿಒರುವುದಕ್ಕೆ ಆತನು ಅಧಿಕಾರ ಹೊಂದಿರುವಂತೆಯೇ, ಚುನಾವಣಾ ನಂತರ ಗೆದ್ದ ಹುರಿಯಾಳು ಸರ್ವತಂತ್ರ ಸ್ವತಂತ್ರನೆಂದು ಒಪ್ಪಿಕೊಳ್ಳಲೇ ಬೇಕು. ಚುನಾವಣೆಯೆಂಬುದು ಸಂಜರವೆಂದರೆ, ಅದರೊಳಗೆ ಇರುವ ಗಿಳಿಯೇ ಆತ. ಬ್ರಿಟಿಷರ ದಬ್ಬಾಳಿಕೆಯ ಅವಧಿಗಿಂತಲೂ ಆತ ತನ್ನ ಸ್ವಾತಂತ್ರ್ಯವನ್ನು ಅವಶ್ಯ ಕಳೆದುಕೊಳ್ಳಲೇ ಬೇಕು. ತನ್ನ ಮನಸ್ಸಿನಂತೆ ಆತ ಆಡಬಾರದು; ಮಾಡಬಾರದು; ಯಾವಾಗಲೂ ಬೇರೆಯವರು ಹೇಳುತ್ತಿರುವುದು ತನಗೆ ಲಾಭದಾಯಕವೆನಿಸಲಿ, ನಷ್ಟಕ್ಕೆ ಹೇತುವಾಗಲಿ ಅಥವಾ ತನ್ನ ಮನೀಷೆಗೆ ಸುತರಾಂ ಪ್ರತಿಕೂಲವೆನಿಸಲಿ ಮತಯೂಚಕನಾಗಿ ಹೊರಟ ನಂತರ, ಅವೆಲ್ಲವನ್ನೂ ಸಹಿಸಿಕೊಂಡಿರಲೇ ಬೇಕು. ಇದನ್ನು ಬಿಟ್ಟು, ಆತ ತನ್ನ ತುಟಿಯನ್ನು ತೆರೆದನೆಂದರೆ, ಮುಂದಿನದು ಗೊತ್ತೇ ಇದೆಯಲ್ಲ. ಚುನಾವಣೆಯಲ್ಲಿ ತಿರುಪತಿ ನಾಮವೇ ಸರಿ. ಹೀಗೆ ಪ್ರಾಣಿ ಮಾತ್ರಕ್ಕೆ ಅಸಾಧ್ಯವೂ ಅಶಕ್ಯವೂ ಆದ ಚುನಾವಣಾ ಸಮರದಲ್ಲಿ ಒಮ್ಮೆ ಜಯ ಭೇರಿ ಬಾರಿಸಿದನೆಂದರೆ, ಮತ್ತೆ ಆತ ರೆಕ್ಕೆ ಮೂಡಿದ ಹಕ್ಕಿಯೇ ಸರಿ; ಯಾರ ಅಂಕೆ ಆತಂಕವೂ ಆತನನ್ನು ತದೆಯದು, ಯಾರ ಬೇನೆ ಬೇಸರಿಕೆಗಳೂ ಆತನನ್ನು ಚಿಂತಿಸವು. ತಾನಾಯಿತು, ತನ್ನ ವೇತನ ಟಿ ಎ.ಡಿ.ಎ ಗಳಾದುವು, ತನ್ನ 'ಬಿಜಿನೆಸ್' ಆಯಿತು. 'ಉದ್ದರೇದಾತ್ಮನಾತ್ಮಾನಂ' ಎಂದು ಭಗವಾನ್ ಶ್ರೀ ಕೃಷ್ಣ ಆಜ್ಞಾಪಿಸಿದಂತೆ, ತಾನು ಒಳ್ಳಿಯಪನಾದರೆ ಲೋಕ ಒಳ್ಳೆಯದಾದಂತೆ ಎಂದು ಕೊಂಡು ತನ್ನ ಉದ್ಧಾರಕ್ಕಾಗಿ, ತನ್ನ ಆತ್ಮಜರ ಏಳಿಗೆಗಾಗಿ ಆ ಐದು ವರ್ಷವೂ ಆತ ನಿರಂತರ ಪರಿಶ್ರಮಪಡುತ್ತ ಆದರಲ್ಲಿಯೇ ವ್ಯಸ್ತನಾಗುತ್ತ ಇದ್ದರೆ, ಅದನ್ನು ತಪ್ಪೆಂದು ದಾಖಲೆಮಾಡಲು ಸಾಕ್ಷಾತ್ ಚಿತ್ರಗುಪ್ತರಿಗೂ ಅಸಾಧ್ಯವೆನಿಸಿದಾಗಪಾಪದ ಪ್ರಜೆಗಳಿಗೆ ಧೈರ್ಯವೆಲ್ಲಿಯದು?

ಆತ್ಮೋದ್ಧಾರ, ಆತ್ಮಜೋದ್ಧಾರವನ್ನೇ ಗುರಿಯಾಗಿಟ್ಟುಕೊಂಡು ಒಬ್ಬಾತ ಎಂ. ಎಲ್. ಎ.ಯೋ ಎಂ.ಪಿ.ಯೋ ಆದನೆನ್ನಿ. ಅನಂತರ ಅವೇ ಸಮುಚಿತ ಉದ್ದೇಶಗಳನ್ನು ಮುಂದಿಟ್ಟುಕೊಂಡು ಆತ ಕ್ಯೇಬಿನೆಟ್ ದರ್ಜೆಯ ಮಂತ್ರಿಯಾಗಲು ಪ್ರಯತ್ನಿಸುತ್ತಾನೆ; ಅದರಲ್ಲಿ ಅಸಫಲನಾದನೆಂದರೆ, ರಾಜ್ಯ ಮಟ್ಟದ ಮಂತ್ರಿಯೆನಿಸಲು ಉಪ ಮಂತ್ರಿಯೊಂದಾದರೂ ಕರೆಯಲ್ಪಡಲು ಆತ ಮಿತಿಮೀರಿ ಹೋರಾಡುತ್ತಾನೆ. ಅದರಲ್ಲಿಯೂ ಆತ ಅಸಫಲನೆನಿಸಿದರೆ, ಪಾರ್ಲಿಮೆಂಟರಿ ಕಾರ್ಯದರ್ಶಿಯಾಗಲು ಆತುರಪಡುತ್ತಾನೆ. ಪಂಜಾಬದಂತಹ ರಾಜ್ಯದಲ್ಲಿ ಆತನಿದ್ದನೆಂದರೆ, ಸರ್ವಸಾಮಾನ್ಯವಾಗಿ ಇಷ್ಟರಲ್ಲಿಯೇ ಆತನ ಹೆಂಬಲ ಈಡೇರುತ್ತದೆ. ಒಂದು ವೇಳೆ ಇಲ್ಲಿಯೂ ಪರಮಾತ್ಮನು 'ಆತ್ಮೋದ್ಧಾರದ ಮಾರ್ಗವನ್ನು ನಿರ್ವಿಘ್ನ'ಗೊಳಿಸದೆ ಹೋದರೆ ಕೊಟ್ಟಕೊನೆಗೆ ವಿವಿಧ ಸಮಿತಿ ಉಪ ಸಮಿತಿಗಳಲ್ಲಿಯಾದರೂ ಸ್ಥಾನ ಪಡೆಯುವುದರಲ್ಲಿ ಆತ ಖಂಡಿತಕ್ಕೂ ಯಶಸ್ವಿಯಾಗಿಯೇ ತೀರುತ್ತಾನೆ. 'ಲೋಕೋದ್ಧಾರಕ್ಕಾಗಿ ಆತ್ಮೋದ್ಧಾರ; ಆತ್ಮೋದ್ಧಾರಕ್ಕಾಗಿ ಈ ಯೆಲ್ಲ ಪ್ರಯಾಸವೆಂದು ಅಚಲವಾಗಿ ನಂಬಿರುವ ಆತ ನಿಜಕ್ಕೂ ಆತ್ಮ-ಆತ್ಮಜೋದ್ಧಾರವನ್ನು ಮಾಡಿಯೇಕೊಳ್ಳುತ್ತೇನೆ. ಮತವಿತ್ತ ಮತದಾರರು ಆತನ ಈ ಸುಗಂಭೀರ ವರ್ತನೆಯನ್ನು ಅರ್ಥಮಾಡಿಕೊಳ್ಳಲಾರರು; ತಪ್ಪು ಅರ್ಥಮಾಡಿಕೊಳ್ಳುವ ಸಂಭವವೇ ಹೆಚ್ಚು ಏಕೆಂದರೆ, ಈ ಎರಡೂ ಸ್ಥಿತಿಗಳನ್ನು ಅವರು ಮೀರಿ ನಡೆದಿದ್ದರೆಂದರೆ, ಅವರೂ ಪ್ರಜಾ ಪ್ರತಿನಿಧಿಗಳಾಗಿ ಸ್ಪರ್ಧಿಸಲು ಲಾಯಕ್ಕಾಗುತಿದ್ದರು! 'ಅರ್ಧ ಜ್ಞಾನಕ್ಕಿಂತ ಅಜ್ಞಾನವೇ ಮೇಲೆ'ಂಬುದರಿಂದ ಈತನ ಆಚರಣೆ ಧ್ಯೇಯ ಮತ್ತದರ ಸಾಧನೆಗಳನ್ನು ಅರ್ಥಂಬರ್ಧ ಅರ್ಥ ಮಾಡಿಕೊಂಡವರ ಉಪಟಳ ತಾಳಲಾರದೆ ಆತ ಅಭಿನವ ಶ್ರೀ ಕೃಷ್ಣನಾಗಲೇ ಬೇಕಾಗುತ್ತದೆ. 'ಕರ್ಮಣ್ಯೆ ವಾಧಿಕಾರಸ್ತೇ ಮಾ ಫಲೇಷು ಕದಾಚನ'; ಎಂದು ಇನ್ನೊಮ್ಮೆ ಭಗವದ್ಗೀತೆಯನ್ನೇ ಉಪದೇಶಿಸುವುದು ಅನಿವಾರ್ಯವಾಗುತ್ತದೆ. ಮತ ಕೊಡುವುದು ಮಾತ್ರ ನಿಮ್ಮ ಕರ್ತವ್ಯ; ಅದರ ಫಲದಲ್ಲಿ ಪಾಲು ಕೇಳುವ ಅಧಿಕಾರ ನಿಮಗಿಲ್ಲ; ಫಲವನ್ನು ಭೋಗಿಸುವವನು ನಾನೂ ನನ್ನವರೂ ಮಾತ್ರ" ಎಂದದಕ್ಕೆ ವ್ಯಾಖ್ಯಾನವನ್ನು ಆತನೇ ಮಾಡಲೇಬೇಕಾಗುತ್ತದೆ

o o o

ಅಭಿನವ ಭಗವದ್ಗೀತೆಯನ್ನು ಪಾರಕೇಳಿದ ನಾಗರಿಕರು ತೆಪ್ಪಗೆ ಕೂತುಕೊಳ್ಳದೆ ಮತ್ತೇನು ಮಾಡುವರು? ಮಂತ್ರಿಗಳಾದರೋ ತಮ್ಮ ಕರ್ತವ್ಯವನ್ನು ಮಾಡಿಯೇ ತೀರುತ್ತಾರೆ. ಇತ್ತೀಚೆಗಿನ ದಿನಗಳಲ್ಲಿ ಮಂತ್ರಿವರ್ಯರ ಕಾರ್ಯಕ್ರಮಗಳು ಹನುಮಂತನ ಬಾಲದಂತೆ ಬೆಳೆಯುವುದಕ್ಕೆ ಅವರ ಕರ್ತವ್ಯಗಳ ಹೊರೆಯು ವಿಕ್ರಾಂತದಲ್ಲೂ ಹಿಡಿಯದಷ್ಟಾದುದೇ ಕಾರಣ. ಕರೆದರೆ 'ಬರುವುದಿಲ್ಲ ಎಂದರೆ, ಮುಂದಿನ ಬಾರಿ ಓಟೂ ಕೊಡುವುದಿಲ್ಲ' ಎನ್ನುವಷ್ಟು ಜನ ಮುಂದುವರಿದ ಇಂದಿನ ಯುಗದಲ್ಲಿ, ಜನತೆಯ ದರ್ಶನವೇ ಜನಾರ್ಧನನ ದರ್ಶನವೆನಿಸಿದೆ. ಜನತೆಯ ಆಶೆ ಯಾಡೇರಿಸುವುದಕ್ಕಾಗಿ ತನ್ನವರೂ ವಿಶಾಲ ಜನಸಮುದಾಯದಲ್ಲಿ ಸೇರಿರುವುದರಿಂದ, ಅವರ ಬೇಡಿಕೆಯನ್ನು ಮನ್ನ ಮಾಡುವುದಕ್ಕಾಗಿ ವರ್ಷದ ಎಲ್ಲ ದಿನಗಳಲ್ಲೂ ಸಂಚಾರ ಕಾರ್ಯಕ್ರಮವಿಟ್ಟುಕೊಳ್ಳುವುದು ಅನಿವಾರ್ಯವಾಗುವುದು ಊರು ಊರುಗಳನ್ನು ಸಂದರ್ಶಿಸಿದ, ಜನತೆಯೊಡನೆ ಬೆಟ್ಟಮಾಡಿದ. ಅವರ ಹಾಲಹವಾಲೆಗಳನ್ನು ಪರಿಶೀಲಿಸಿ ತಿಳಿದುಕೊಂಡ ನಾಟಕವಾಡಿದ ಬಳಿಕ ಸಹಾನುಭೂತಿ ಪರವಾಗಿ ಪರ್ಯಾಲೋಚನೆ ಮಾಡುವ ಇಲ್ಲವೇ ಮಾಡಿಸುವ 'ನಿಜವಾದ ಆಶ್ವಾಸನೆಯನ್ನು ಇತ್ತು ತನ್ನ ಟಿ. ಎ. ಮೊತ್ತವನ್ನೇ ಕೂಡಿಸುತ್ತ ಇರುವವರ ಸಂಕಷ್ಟ ನಿಜಕ್ಕೂ ಶತ್ರುಗಳಿಗೂ ಬರಬಾರದು.

o o o

ಓದಿದ್ದನ್ನೇ ಓದಿದರೆ, ಹಾಡಿದ್ದನ್ನೇ ಹಾಡಿದರೆ ಸ್ವಾರಸ್ಯವಿಲ್ಲ; ಆದರೆ, ಉಂಡದ್ದನ್ನೇ ಉಂಡರೆ, ಅದರ ಸ್ವಾರಸ್ಯವೆಂದಿಗೂ ಹಳಸುವುದಿಲ್ಲ. ಕಟ್ಟಡಗಳಿಗೆ ಅಡಿಗಲ್ಲು ಹಾಕುವುದು; ಅವುಗಳ ಉದ್ಘಾಟನೆ ಮಾಡುವುದು, ಚಿತ್ರಗಳ ಅನಾವರ ಮಾಡುವುದು – ಇತ್ಯಾದಿ ಇತ್ಯಾದಿ ಕಾರ್ಯಕ್ರಮಗಳು ಹಳಸದ ರುಚಿಯ ಸಾಲಿಗೆ ಸೇರಿದ ಕಾರ್ಯಕ್ರಮಗಳು. ಹೆಂಡವನ್ನು ಹುಳಿಸಿದಷ್ಟು ರುಚಿಕರವೂ ಮಾದಕವೂ ಆಗುವುದೆಂದು ಹೇಳುತ್ತಾರೆ. ಹಾಗೆಯೇ ಮಂತ್ರಿಯಾದವನಿಗೆ ಭೂಷಣಪ್ರಾಯವಾದ, ಸಂಚಾರ ಕಾರ್ಯಕ್ರಮ ನಿರ್ಣಯಿಸಲು ಸುಲಭ ಕಾರಣ ನಿಮಿತ್ತವಾದ ಈ ಹಳಸಲು ನಿಜಕ್ಕೂ ಅಧಿಕ ಮಾದಕವೇ ಇರಬೇಕು. ಮೂರ್ಬಲ್ ಶಿಲೆಯಲ್ಲಿ ತನ್ನ ನಾಮಧೇಯ ಚಿರ! ಅಸ್ಥಾಯಿಯಾಗಿ ನಿಲ್ಲುವಾಗ ಯಾರು ತಾನೇ ಬೇಡವೆಂದಾರು? ಕನಸಿನಲ್ಲಿ ಬಯಸಿದ ಸುರಸುಂದರಿಯೊಬ್ಬಳು ನನಸಿನಲ್ಲಿ 'ಕರದೊಳು ಕುಸುಮ ಮಾಲೆ ಹಿಡಿದು" ತನ್ನ ಕೊರಳಿಗೆ ಹಾಕಲು ಮುಂದೆ ಬರುತ್ತಿರುವಾಗ. ಅಡ್ಡ ತಿಡ್ಡ ಓಣಿಯನ್ನು ಹಿಡಿದು ಓಡಿಹೋಗುವುದೆ? ಆದುದರಿಂದಲೇ ಮಂತ್ರಿಯಾದವನಿಗೆ ಈಯೆಲ್ಲ ಕಾರ್ಯಕ್ರಮಗಳಲ್ಲಿ ಎಲ್ಲಿಲ್ಲದ ಕಳಕಳಿ; ಆಸಕ್ತಿಯಿಲ್ಲವೆಂದರೆ?

o o o

ಮಧ್ಯ ಪ್ರದೇಶದಲ್ಲಿ ಪಂಡಿತ ರವಿಶಂಕರ ಶುಕ್ಲರು ಮುಖ್ಯ ಮಂತ್ರಿಯಾಗಿದ್ದಾಗ' ವರಸಿಯೋನಿಯಲ್ಲಿ ಜಿಲ್ಲಾ ಸಹಕಾರಿ ಬ್ಯೇಂಕಿನ ಕಟ್ಟಡವೊಂದಕ್ಕೆ ಅಡಿಗಲ್ಲು ಹಾಕಿದ್ದರು. ಶುಕ್ಲರ ಶುಭನಾಮವನ್ನು ಎತ್ತಿ ಮೆರೆಯುತ್ತಿದ್ದ ಆ ಕಲ್ಲು ಕಳೆದ ಎಂಟು ವರ್ಷ ಮಳೆ, ಚಳಿ ಬಿಸಿಲುಯೆನ್ನದೆ ಪ್ರಕೃತಿಯ ವಿಕೋಪಕ್ಕೆ ತುತ್ತಾಗಿನವೆಯಿತು. ಅದರ ದುಃಖವನ್ನು ತಾಳಲಾರದ ಯಾರೋ ಒಬ್ಬ 'ಸಮಾರಿಟನ'ನು ಅದರ ಕಷ್ಟನಿವಾರಣೆ ಮಾಡಿರ ಬೇಕು. ಇಲ್ಲಿ ಕಟ್ಟಡ ಕಟ್ಟುವುದಕ್ಕೆ ಆರಂಭ ಮಾಡಬೇಕಾದರೆ, ಅಡಿಗಲ್ಲು ಬೇಕೇಬೇಕಾದುದರಿಂದ, ಹೊಸತಾಗಿ ಮುಖ್ಯಮಂತ್ರಿಯಾದ ಮಂಡಲೋಯಿಯವರ ಚೀಟಿಯೇಳುವಂತಾಗುವುದು ವಿಧಿಲಿಖಿತವಲ್ಲದೆ ಮತ್ತೇನು? ಎಂಟು ವರ್ಷಗಳಿಗೆ ಮೊದಲು ಅಡಿಗಲ್ಲು ಇಟ್ಟ ಸಂಗತಿಯನ್ನು ಜನರೆಲ್ಲರೂ ಮರೆತಿರುವರು, ಎನ್ನುವಾಗ ಬೇಂಕಿನ ಲೆಕ್ಕಪತ್ರಗಳು ಒರಳೆಗೆ ಅಹಾರವಾಗದೆ ಉಳಿದಾವೆ? ಆದುದರಿಂದ ಇನ್ನೊಂದು ಕಲ್ಲನ್ನು ನಿರಾತಂಕವಾಗಿ ನೆಡುವುದಕ್ಕೆ ಯಾರ ಅಭ್ಯಂತರವೂ ಇಲ್ಲ. ಮುಖ್ಯ ಮಂತ್ರಿ ಶ್ರೀ ಬಿ. ಎ. ಮಂಡಲೋಯಿ ಅವರು 'ವರಸಿಯೋನಿ'ಯ ದ್ವಿತೀಯ ಕಾರ್ಯಕ್ರಮದಲ್ಲಿ ಹಿಂದೆ ಮುಂದೆ ನೋಡದೆ ಭಾಗವಹಿಸುವುದು ನೂರಕ್ಕೆ ನೂರರಷ್ಟು ಸಂಭವನೀಯವೇ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿ ಮಡಿದವರ ಸ್ಮಾರಕವೆಂದು ಕಟ್ಟಲು ನಿರ್ಧರಿಸಿದ್ದ ಒಂದು ಸ್ಮಾರಕಕ್ಕೆ ಶ್ರೀ ಮಂಡಲೋಯಿಯರೇ, ಆಗ ಅವರು ಮುಖ್ಯ ಮಂತ್ರಿಯಾಗಿರಲಿಲ್ಲ, ಖಾಲಿ ಮಂತ್ರಿಯಾಗಿದ್ದರು, ಇಟ್ಟದ್ದ ಅಡಿಗಲ್ಲೂ ಮಾಯವಾಗಿದೆಯೆಂದು ಸುದ್ದಿ ಬಂದುದರಿಂದ ಅವರು ತುಸು ಆಚೆ ಈಚೆ ನೋಡಿಕೊಳ್ಳಬೇಕಾಗುತ್ತದೆ. ತಾನು ಹಾಕಿದ ಅಡಿಗಲ್ಲು ತಾನು ಮಂತ್ರಿಯಾಗಿಯೆ ಮುಂದುವರಿಯುತ್ತಿರುವಾಗ ಕಳವಾಗುವುದು ಮೊದಲನೆಯ ಅಪರಾಧ; ಅದರ ಸ್ಥಾನದಲ್ಲಿ ತಾನೇ ಮೊದಲು ಕಲ್ಲಿಟ್ಟುದರಿಂದ ಮರಳಿ ಇಡುವುದು ಸರಿಯಲ್ಲವೆಂಬುದರಿಂದ ಮತ್ತೊಬ್ಬನಿಡುವುದು ಅಸಹನೀಯ. ಇದು ಅಪಮಾನವಲ್ಲದೆ ಬೇರೆಯಲ್ಲ. ಇಂತಹ ಅಪಮಾನವನ್ನು ಸಹಿಸಿ ಅವರು ಎರಡು ಆಜ್ಞೆಗಳನ್ನು ವಿಧಿಸುವ ಸಂದರ್ಭವಿದೆ. ಮೊದಲನೆಯದಾಗಿ ಯಾವ ಮಂತ್ರಿಯೂ ಅಡಿಗಲ್ಲನ್ನು ಇಡಬಾರದು. (ಇಟ್ಟರೆ, ಅದು ಕಳವಾಗುವುದರಿಂದ) ಎರಡನೆಯದಾಗಿ, ಇಟ್ಟರೆ, ಅದನ್ನು ಜೋವಾಸನೆ ಮಾಡುವುದಕ್ಕೆ ಪ್ರತ್ಯೇಕ ಸಿಬ್ಬಂಧಿಯನ್ನು ನೇಮಿಸಿ, ಅದರ ವೆಚ್ಚವನ್ನು ಸಹಕಾರಿ ಬೊಕ್ಕಸದಿಂದ ಮಂತ್ರಿಗಳ ಗೌರವ ರಕ್ಷಣೆಯ ವೆಚ್ಚದ ಬಾಬಿನಲ್ಲಿ, ಮಂಜೂರು ಮಾಡಬೇಕು

o o o

ಈ ಎರಡು ಆಜ್ಞೆಗಳಲ್ಲಿ ಎರಡನೆಯದನ್ನು ಕಾರ್ಯರೂಪಕ್ಕೆ ತರುವುದರಿಂದ ಮಂತ್ರಿವರ್ಯರ ಗೌರವ ಅವರ ಟಿ. ಎ., ಡಿ. ಎ. ಗಳೊಡನೆ ಹೆಚ್ಚುವುದು; ಜನರ ಕೇಳಿಕೆಯನ್ನು ಈಡೇರಿಸಿದಂತಾಗುವುದು ಹೆಚ್ಚೇನು, ನಿರುದ್ಯೋಗ ಸಮಸ್ಯೆಯ ತಾಂಡವ ನೃತ್ಯವೂ ಸಾಮಾಧಾನಗೊಳ್ಳುವುದು. ಪ್ರತಿ ಮನೆಯಲ್ಲೂ ಮಂತ್ರಿಗಳ ಅಮೃತಹಸ್ತದಿಂದ ಅಡಿಗಲ್ಲುಗಳನ್ನು ಇಡಿಸಿ, ಮನೆಯೊತರಿಗೆ ಅಜೀವ ಅಡಿಗಲ್ಲು ಕಾಯುವ ಸರಕಾರಿ ನೌಕರಿ ಒದಗಿಸಿಕೊಳ್ಳುವ ಸರಳ ಸುಲಭೋಪಾಯವು ಯಾರಿಗೆ ತಾನೇ ಪ್ರಿಯವಾಗದು? ಆದರೆ ಇದರಲ್ಲೂ ಜನಸಾಮಾನ್ಯರು ಒಂದಕ್ಕೆ ಹೆದರಬೇಕಾಗಿದೆ. ಮಂತ್ರಿ ಪಟ್ಟ ಅತಾಶ್ವತವಿರುವುದರಿಂದ, ಮಂತ್ರಿಯಾದವನು ತನ್ನ ಅಧಿಕಾರಾವಧಿಯಲ್ಲಿ ಈ ಸಿಬ್ಬಂಧಿಯ ವೇತನ ಮಟ್ಟವನ್ನು ತನಗೆ ಬೇಕಾದಂತೆ ಇರಿಸಿ, ಅಡಿಗಲ್ಲು ರಕ್ಷಣಾ ಸೇವೆಗೆ ತಾನೂ ಒಬ್ಬ ಅಭ್ಯರ್ಥಿಯಾಗಿ ಬಂದರೆ? ಪರಮಾತ್ಮ ವಿಷ್ಣು ಬಲಿಯ ದ್ವಾರ ಕಾಯುತ್ತಿರುವುದು ಆತನಿಗೆ ಅಪಮಾನವಾಗದೆ ಇರುವಾಗ, ತಾನು ಹಾಕಿದ ಅಡಿಗಲ್ಲು ಇಂಯುವುದು ಯಾರಿಗೇ ಆದರೂ ಹೇಗೆ ಹೀನಾಯವೆನಿಸೀತು?

—ಗೋರಾ

Edited Printed & Published by K. H. Shetty, at the Navayuga Press, Udipi, S. India.

ಅಖಿಲ ಕರ್ನಾಟಕದ
ಪ್ರಾತಿನಿಧಿಕ ಕಥಾಸಂಕಲನ
ಮಧುವನ
'ಕಿರಿಯರ ಪ್ರಪಂಚ'ದ
ಅಪೂರ್ವ ಪ್ರಕಟಣೆ
ಬೆಲೆ: ರೂ. ಮೂರು
ನವಭಾರತ ಪುಸ್ತಕ ಭಂಡಾರ
ಉಡುಪಿ

ನವಯುಗ

Estd. 1921 ಸ್ಥಾಪನೆ
Regd. No. B.G. 176
Vol. 42 No. 3

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 20—9—1962 ಗುರುವಾರ

13 ನ. ಪೈಸೆ
ವಾ. ಚಂದಾ ರೂ. ೬–75
ಸಂಪುಟ ೪೨ ಸಂಚಿಕೆ ೩

ಮಿತ ದರದಲ್ಲಿ
ಕ್ಷಿಪ್ರ ಸಮಯದಲ್ಲಿ
ಉತ್ತಮ ತರದಲ್ಲಿ
ಮುದ್ರಣ
ಕೆಲಸಗಳಾಗಬೇಕೆ?
ಸಂದರ್ಶಿಸಿರಿ ಯಾ ವಿಚಾರಿಸಿರಿ
ನವಯುಗ ಪ್ರೆಸ್,
ಉಡುಪಿ

ಯುರೋಪಿನ ಸಾಮಾನ್ಯ ಮಾರುಕಟ್ಟೆ

ಬ್ರಿಟನ್ನಿನ ನಿರ್ಧಾರ ಕಾಮನ್‌ವೆಲ್ತ್ ರಾಷ್ಟ್ರಗಳಿಗೆ ಕುಠಾರಪ್ರಾಯ— ಅವು ಅಂತಃ ಪ್ರೇರಣೆಗೆ ತೊಡಗಬೇಕು.

ಇಂಗ್ಲೆಂಡು ಸಾಮಾನ್ಯ ಮಾರುಕಟ್ಟೆಯನ್ನು ಸೇರುವ ನಿರ್ಣಯವನ್ನು ಮಾಡಿರುವುದರಿಂದ ಭಾರತ ಮತ್ತಿತರ ಕಾಮನ್‌ವೆಲ್ತ್ ರಾಷ್ಟ್ರಗಳ ಮುಂದೆ ಒಂದು ಮಹಾ ಗಂಭೀರ ಸಂಕಷ್ಟವು ಕಾಣಿಸಿಕೊಂಡಿದೆ. ನಮ್ಮ ದೇಶದ ಸುಪ್ರಸಿದ್ಧ ಅರ್ಥ ಶಾಸ್ತ್ರಜ್ಞರಲ್ಲಿ ಒಬ್ಬರಾದ ಶ್ರೀ ಅಶೋಕ ಮೆಹತಾ ಅವರು ಈ ಬಗ್ಗೆ ತಮ್ಮ ಅಭಿಪ್ರಾಯಗಳನ್ನು ಸ್ಪಷ್ಟರೂಪದಲ್ಲಿ ಹೊರಗೆಡಹಿದ್ದಾರೆ. ಈಗ ಒಂಡನ್ನಿನಲ್ಲಿ ಸೇರಿರುವ ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನದ ಪರ್ಯಾಲೋಚಕ ವಿಷಯಗಳಲ್ಲಿಯೂ ಇದು ಪ್ರಮುಖ ಸ್ಥಾನ ಪಡೆದಿದೆ. ಕಾಮನ್‌ವೆಲ್ತ್ ರಾಷ್ಟ್ರಗಳ ಅರ್ಥ ವ್ಯವಸ್ಥೆಯಸ್ಸೇ ತಲೆ ಕೆಳಗು ಮಾಡಬಹುದಾದ ಬ್ರಿಟಿಷ್ ಸರಕಾರದ ನಿರ್ಣಯದಿಂದ ನಾವು ಆತ್ಮರಕ್ಷಣೆಗೆ ಕೈ ಹಾಕುವ ಸಮಯವೀಗ ಸನ್ನಿಹಿತವಾಗಿದೆ ಯೆನ್ನಬಹುದು.

ಅಮೆರಿಕೆಯ ಯೋಜನೆ

ದ್ವಿತೀಯ ಲೋಕಯುದ್ಧಾನಂತರದಲ್ಲಿ ಯುರೋಪು ಬಹಳ ನೊಂದಿತು. ಆ ಸಮಯದಲ್ಲಿ ಅಲ್ಲಿನ ದೇಶಗಳ ಅರ್ಥ ವ್ಯವಸ್ಥೆಯು ತೀವ್ರವಾಗಿ ಕೆಟ್ಟುಹೋಯಿತು. ಆಗ, ಅಮೆರಿಕೆಯು ಯುರೋಪನ್ನು ಮರಳಿ ಸುರುಪಕ್ಕೆ ತರುವ ನಿಶ್ಚಯ ಮಾಡಿತು. ಮಾರ್ಶಲ್ ಯೋಜನೆಯನ್ನು ಯ ೪-೫ ವರ್ಷಗಳ ಮಧ್ಯಾವಧಿಯಲ್ಲಿ ಯುರೋಪ್ಯ ದೇಶಗಳಿಗೆ ೨೦೦ ಅರಬ ರೂಪಾಯಿಗಳ ಸಹಾಯವನ್ನಿತ್ತಿತು. ರಶ್ಯದ ಸ್ಟಾಲಿನ್ನರು ಈ ಬಗೆಯ ನೆರವನ್ನು ವಿರೋಧಿಸಿದರು. ಮೊತ್ತವಲ್ಲದೆ ಪೂರ್ವ ಯುರೋಪಿನ ರಾಷ್ಟ್ರಗಳು ಈ ಸಹಾಯ ಒಡಂಬಡಿಕೆಗೆ ಸೇರಿಕೊಳ್ಳುವುದನ್ನು ತಪ್ಪಿಸಿದರು. ಆದುದರಿಂದ ಪಶ್ಚಿಮದ ದೇಶಗಳು ಅಮೆರಿಕನ್ ಸಹಾಯದ ಪ್ರಯೋಜನವನ್ನು ಪಡೆದುಕೊಂಡುವು. ನೀಡಿದ ನೆರವಿನೊಂದಿಗೆ ಅಮೆರಿಕೆಯೊಂದು ಶರತ್ತನ್ನೂ ಹೇರಿತ್ತು. ಇದರಂತೆ ಯುರೋಪಿನ ರಾಷ್ಟ್ರಗಳೆಲ್ಲವೂ ಒಂದಾಗಿ ಬೇಕು; ಮತ್ತು ಪರಸ್ಪರ ಸಹಕಾರಿ ಪದ್ಧತಿಯಲ್ಲಿ ಸಹಾಯ ಧನದ ಉಪಯೋಗವಾಗ ಬೇಕು. ಇದಕ್ಕಾಗಿ ಐರೋಪ್ಯ ಆರ್ಥಿಕ ಸಹಕಾರಿ ಸಂಸ್ಥೆಯೊಂದು ರೂಪ ಪಡೆಯಿತು. ಇವರ ಪರಿಣಾಮವಾದರೂ ಅಶಾತೀತವೆನ್ನಿಸಿತು.

ಆ ಸಮಯ ಮಾರ್ಶಲ್ ಯೋಜನೆಯ ಕಾರ್ಯಭಾರವು ಶ್ರೀ ಪಾಲ್ ಹೃಫ್ಮನ್‌ರ ಕೈಗಳಲ್ಲಿತ್ತು. ಅವರು, ಯುರೋಪಿಗೆ ಸಮಯ ವತ್ತು ಧನದ ಅವಶ್ಯಕತೆಯ ವಿಷಯದಲ್ಲಿ ಪ್ರಮುಖ ಅರ್ಥ ಶಾಸ್ತ್ರಜ್ಞರ ಭವಿಷ್ಯ ವಾಣಿಯು ಹೇಗೆ ತಪ್ಪೆನ್ನಿಸಿತೆಂದು ತಿಳಿಸಿದ್ದಾರೆ. ಒಮ್ಮೆ ಸುನರುನ್ನಯನ ಪ್ರಕ್ರಿಯೆಯು ಆರಂಭವಾಹುದು. ಅದು ತೀವ್ರಗತಿಯಲ್ಲಿ ಮುಂದುವರಿಯಿತು? ರಾಷ್ಟ್ರೀಯ ಉತ್ಪಾದನೆಯು ೧೯೪೭ರಲ್ಲಿ ೭೬ ಇದ್ದುದು ೧೯೬೦ರಲ್ಲಿ ೧೩೭ ಆಯಿತು. (೧೯೫೫ರಲ್ಲಿ ಇದು ೧೦೦ ಇತ್ತು.) ಜರ್ಮನಿಯ ಉತ್ಪಾದನೆಯು ೧೯೫೦ರಲ್ಲಿ ೭೮ ಇದ್ದುದು ೬೦ರಲ್ಲಿ ೧೬೭ಕ್ಕೆ ನಿಂತು. ಔದ್ಯೋಗಿಕ ಉತ್ಪಾದನೆಗಳ ಪರಿಣಾಮವು ಮಹತ್ವ ಪೂರ್ಣವಾಗಿದೆ, ಈ ಸಂಸ್ಥೆಯೊಡನೆ ಸೇರಿಕೊಂಡ ದೇಶಗಳ ಔದ್ಯೋಗಿಕ ಉತ್ಪಾದನೆಯು ೧೯೫೫ರಲ್ಲಿ ೬೭ ಇತ್ತು, ೧೯೬೨ ರಲ್ಲಿ ಅದು ೬೮, ೧೯೫೫ ರಲ್ಲಿ ೧೦೦ ಮತ್ತು ೧೯೬೦ರಲ್ಲಿ ೧೫೫ನ್ನು ಮುಟ್ಟಿತು. ಜರ್ಮನಿಯಲ್ಲಿ ಔದ್ಯೋಗಿಕ ಉತ್ಪಾದನೆಯು ೧೯೫೦ರಲ್ಲಿ ೪೧ ಇದ್ದುದು ೧೯೬೦ರಲ್ಲಿ ೧೮೦ ಆಯ್ತು. ಇದೆಲಿಯಲ್ಲಿ ೬ರಿಂದ ೧೫೫ಕ್ಕೆ ನಿಂತು.

ಸಹಕಾರಿ ಭೋಗ್ಯ ಸಂಸ್ಥೆ

ಆರ್ಥಿಕ ಉನ್ನತಿಯ ಈ ಮಹತ್ವಾಕಾಂಕ್ಷೆಯ ಧ್ಯೇಯ ಸಾಧನೆಗಾಗಿ ವಿಭಿನ್ನ ಸಹಕಾರಿ ಯೋಜನೆಗಳು ತಯಾರಾದುವು. ಇವುಗಳಲ್ಲಿ ಮೊತ್ತಮೊದಲನೆಯದು ಐರೋಪ್ಯ ಭೋಗ್ಯಶಾಸ್ತ್ರೆ. ಸಂಸ್ಥೆಯು ಕೇವಲ ೨೭ ಕೋಟಿ ೧೬ ಲಕ್ಷ ರೂಪಾಯಿಗಳ ಬಂಡವಳದಿಂದ ಕಾರ್ಯಕ್ಕೆ ತೊಡಗಿತು. ೪೫ ವರ್ಷದ ಕಾಲಾವಧಿಯಲ್ಲಿ ಆದು ಸಾಕಷ್ಟು ಸಫಲವಾಯ್ತು. ಈ ಸಂಸ್ಥೆಯ ಸದಸ್ಯರಿಗೆ ಸುವರ್ಣ ಮತ್ತು ವಿನಿಮಯ ನಾಣ್ಯಗಳಲ್ಲಿ ಅನುಪಮಂಗಿಕ ಉಳಿತಾಯವಾಯ್ತು. ಸಂಸ್ಥೆಯು ಐರೋಪ್ಯ ಆರ್ಥ ವ್ಯವಸ್ಥೆಯ ಪುನರುದ್ಧಾರಕ್ಕಾಗಿ ಕೆಲವು ಹೊಸ ಹೆಜ್ಜೆಗಳನ್ನಿಟ್ಟಿತು. ಭೋಗದಲ್ಲಿ ಕರಿನತೆಯನ್ನು ಎದುರಿಸುವ ಭೋಗ ನೀಯ ದೇಶಗಳಿಗೆ ಸಹಾಯ ನೀಡುವುದು ಮತ್ತು ಬಂಡವಳದ ಕೊಡು ಕೊಳ್ಳುಟದಲ್ಲಿರುವ ನಿಯಂತ್ರಣ ಸಡಿಲು ಗೊಳಿಸುವುದು ಮುಖ್ಯವಾದುವು ಇದರಿಂದ ವ್ಯಾಪಾರಕ್ಕೂ ಸೌಲಭ್ಯಕರವೆನ್ನಿಸಿತು. ಕಾಲ ಕ್ರಮದಲ್ಲಿ ಕೋಟಾ ನಿಯಂತ್ರಣವು ೫೦ರಿಂದ ೬೦, ೭೫, ೯೦ ಮತ್ತು ಅಂತ್ಯದಲ್ಲಿ ೯೫ ಸೇರಿದಾದ ವರೆಗೆ ಬೆಳೆಯಿತು.

ಮತ್ತೆರಡು ಸಹಕಾರಿ ಸಂಸ್ಥೆಗಳು

ಪಶ್ಚಿಮ ಯುರೋಪಿನಲ್ಲಿ ಇತರೆ ಎರಡು ಸಂಸ್ಥೆಗಳು ಉದಯವಾದುವು. ಮೊದಲ ಸಂಸ್ಥೆಯಲ್ಲಿ ಫ್ರಾನ್ಸ್, ಪಶ್ಚಿಮ ಜರ್ಮನಿ, ಬೆಲ್ಜಿಯಂ, ನೆದರ್ಲಂಡ್, ಲಕ್ಸೆಂಬರ್ಗ್ ಮತ್ತು ಇಟೆಲಿಗಳಿದ್ದುವು. ಎರಡನೆಯದರಲ್ಲಿ ಇಂಗ್ಲೆಂಡ್, ಸ್ವಿಜರ್ಲೆಂಡ್, ಆಸ್ಟ್ರಿಯಾ, ಪೋರ್ಚುಗಲ್, ನಾರ್ವೆ, ಸ್ವೀಡನ್ ಮತ್ತು ಡೆನ್‌ಮಾರ್ಕ್‌ಗಳು ಸೇರಿದ್ದುವು ಕೊನೆಯ ಏಳು ರಾಷ್ಟ್ರಗಳು ಐರೋಪ್ಯ ನಿರ್ಬಂಧ ವ್ಯಾಪಾರ ಸಂಸ್ಥೆಯನ್ನು ನಿರ್ಮಿಸಿದುವು. ವ್ಯಾಪಾರ ಬಂಧನವನ್ನು ಕಡಿಮೆ ಮಾಡಿದುವು. ಸಂಸ್ಥೆಯ ಸದಸ್ಯ ರಾಷ್ಟ್ರಗಳ ನಡುವೆ ಮುಕ್ತವ್ಯಾಪಾರವಿದ್ದರೂ ಸಂಸ್ಥೆಯ ಹೊರಗಿನ ದೇಶಗಳೊಡನೆ ವ್ಯಾಪಾರ ಬೆಳೆಸುವಾಗ ತಮ್ಮುಸುಂಕ ಹೇರಲು ಸ್ವತಂತ್ರವಿದ್ದುವು.

ಆರ್ಥಿಕ ಏಕೀಕರಣ

ಮೊದಲ ಆರು ರಾಷ್ಟ್ರಗಳ ಸಂಸ್ಥೆಯು ಇನ್ನೂ ಹೊಸ ಪಥ್ಯೆಪ್ಪೆ ನಡೆಸಿತು. ಇವು ತಮ್ಮಾರಾಷ್ಟ್ರೀಯ ಅರ್ಥ ವ್ಯವಸ್ಥೆಗಳಲ್ಲಿ ಏಕರೂಪತೆಯನ್ನು ತೆಂಬಲಿಸಿದುವು. ಇವು ಮೊದಲಿಗೆ ಐರೋಪ್ಯ ಇದ್ದಲು ಮತ್ತು ಉಕ್ಕಿನ ಸಮುದಾಯವನ್ನು ನಿರ್ಮಿಸಿದುವು, ಇದರಂತೆ ಆರೂ ದೇಶಗಳ ಇದ್ದಲು ಮತ್ತು ಉಕ್ಕು ಉತ್ಪಾದನೆಯಲ್ಲಿ ಒಂದು ಸಂಮಿಲಿತ ನಿರ್ದೇಶನ ಮತ್ತು ನಿಯಂತ್ರಣಗಳು ಉಂಟಾದುವು. ಇದು ಉಲ್ಲೇಖನೀಯ ಸಾಫಲ್ಯವೆನ್ನಿಸಿತ್ತು. ಪಶ್ಚಿಮ ಯುರೋಪಿನ ಉಕ್ಕಿನ ಉತ್ಪಾದನೆಯು ೧೯೫೪ರಲ್ಲಿ ೪೦೮ ಲಕ್ಷ ಟನ್ ಇದ್ದರೆ ಆದು ೧೯೬೦ರಲ್ಲಿ ಎಂಟು ಲಕ್ಷ ಟನ್‌ಗಳಷ್ಟಾಯಿತು.

ಈ ಏಕೀಕೃತ ವ್ಯವಸ್ಥೆಯು ಮುಂದೆ ಅಣುಶಕ್ತಿಯಲ್ಲಿಯೂ ನಡೆಯಿತು. ರೋಮ್ ಒಡಂಬಡಿಕೆಯ ಮೂಲಕ ಆರೂದೇಶಗಳ ಆರ್ಥವ್ಯವಸ್ಥೆಯಲ್ಲಿ ೧೫ ವರ್ಷಗಳ ಅವಧಿಯಲ್ಲಿ ನಿಕಟ ಸಮನ್ವಯವು ಸ್ಥಾಪಿತವಾಯ್ತು. ಇದರಲ್ಲಿ ಸದಸ್ಯ ದೇಶಗಳಲ್ಲಿ ಕೇವಲ ಮುಕ್ತ ವ್ಯಾಪಾರದಲ್ಲಿ ಮಾತ್ರವಲ್ಲ ಸಮಾನ ಬಾಹ್ಯ ಸುಂಕ, ಬಂಡವಳ ಮತ್ತು ಶ್ರಮ ತರುವ ಕೊಡುವ ಸ್ವಾತಂತ್ರ್ಯ, ನಿರ್ಬಂಧ ಪ್ರತಿದ್ವಂದ್ವಿತೆ ವತ್ತು ಸಾಮಾಜಿಕ ಸ್ಥಿತಿಗಳಲ್ಲಿಯೂ ಏಕರೂಪತೆಯು ಬಂದಿತು. ಎಂದರೆ, ರಾಜಕೀಯ ಏಕೀಕರಣದ ಮೂಲಕ ಇದರಲ್ಲಿ ಆರ್ಥಿಕ ಏಕೀಕರಣದ ಕಾರ್ಯಕ್ರಮವೂ ರೂಪು ಪಡೆಯಿತು.

ಸಾಮಾನ್ಯ ಮಾರುಕಟ್ಟೆ

ಈ ಸಂಸ್ಥೆಯು ತನ್ನ ೪ ವರ್ಷಗಳ ಕಾರ್ಯಗಳಿಂದಲೇ ಉಲ್ಲೇಖನೀಯ ಪರಿಣಾಮಗಳಿಸಿತು. ಇಂಗ್ಲೆಂಡು ಇದರಿಂದ ದೂರವಿತ್ತು. ೧೯೫೦ರ ವರೆಗೆ ಇಂಗ್ಲೆಂಡಿನ ರಾಷ್ಟ್ರೀಯ ಉತ್ಪಾದನೆಯ ವೃದ್ಧಿಯು ಸ್ತರವು ಮೇಲಿನ ದೇಶಗಳೊಡನೆ ಹೋಲಿಸುವಾಗ, ಕೇವಲ ನೇಕಡಾ ೫೦ರಷ್ಟಿತ್ತು. ಆಲ್ಲದೆ ಇಂಗ್ಲೆಂಡನ್ನೊಡನೆ ತುಲನೆ ಮಾಡುವಾಗ, ಉದ್ಯೋಗದಲ್ಲಿ ಪ್ರತಿ

(೧೨ನೇ ಪುಟ ನೋಡಿರಿ)

ಕಾಮನ್‌ವೆಲ್ತ್ ಪರಿಷತ್ತಿನಲ್ಲಿ ಭಾಗವಹಿಸಿದ ಭಾರತದ ಪ್ರಧಾನ ನೆಹರು

ಖೀ ರಾ
ನೀವು ತಾಳಿಕೆ–ಬಾಳಿಕೆಯನ್ನು–ರಚನಾ ವೈವಿಧ್ಯತೆಯನ್ನು ಬಯಸುವಿರಾ?
ಹಾಗಿದ್ದರೆ ದೇಶವಿಖ್ಯಾತ ಖೀರಾ ಉಕ್ಕಿನ ಫರ್ನಿಚರುಗಳೇ ನಿಮ್ಮ ಆಯ್ಕೆ ಖಂಡಿತ.
ಸಣ್ಣ ದೊಡ್ಡ ಕಪಾಟುಗಳು, ಮೆಜ್ಜಿನ ನೇಜು ಕುರ್ಚಿಗಳು, ದ್ವಿವಿಧ ಉಪಯೋಗದ ಮಂಚ+ಸೋಫಾಗಳು, ಸಂದರ್ಭೋಚಿತ ಉಡುಗೊರೆ ಸಾಹಿತ್ಯಗಳು ಇತ್ಯಾದಿಗಳಿಗೆ ಮನ ಮೋಹಾಗಿರುವ ಸಂಸ್ಥೆ—ಖಾಸ್ತ್ರಿ & ಕೊ., ಹಂಪನಕಟ್ಟೆ ಮಂಗಳೂರು 1
KHIRA

ನವೀನ ರೀತಿಯ ಧಾರಾವಾಹಿ ಪೌರಾಣಿಕ ಕತೆ.

ನರಭಕ್ಷಕ ಬಕಾಸುರ

ಬರೆದವರು— ಶ್ರೀ ಕೊಡವಟಗಂಟಿ ಕುಟುಂಬ ರಾವ್
ಅನುವಾದ— ಶ್ರೀ ಮಾದರಬೆಟ್ಟು ರಂಗ ರಾವ್

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಏಕಚಕ್ರಪುರವು ಮದುವೆಯ ಮನೆಯ ಹಾಗೆ ಗದ್ದಲವಾಗಿದೆ. ರಾಕ್ಷಸ ಮಹಾರಾಜರಿಗಾಗಿ ಬಹು ದೊಡ್ಡ ಪಾಕಶಾಲೆ ಕಟ್ಟುತಿದ್ದಾರೆ. ಆ ಪಾಕಶಾಲೆಯಲ್ಲಿ ದಿನಾ ಒಂದು ಕೊಪ್ಪರಿಗೆ ಧಾನ್ಯವನ್ನು ಅಟ್ಟು ರಾಕ್ಷಸ ಮಹಾಶಯರಿಗೆ ಕಳುಹಿಸಬೇಕು. ಹೊಸದಾಗಿ ನಿಯಮಿಸಲ್ಪಟ್ಟ ಉದ್ಯೋಗಸ್ಥರು ಮನೆ ಮನೆ ತಿರುಗಿ ಧಾನ್ಯ ಶೇಖರಿಸಿ ತರಬೇಕು. ಅಡಿಗೇ ಅನ್ನಾ ಶಾಕಪಾಕಗಳೆಲ್ಲಾ ದಿವ್ಯತಮವಾಗಿರಬೇಕೆಂದೂ, ಅಲಕ್ಷ್ಯ ಮಾಡಿದರೆ ಕಠಿನ ಶಿಕ್ಷೆ ಸಿಗುತ್ತದೆಂದೂ ಅಡಿಗೆಯವರಿಗೆ ಎಚ್ಚರಿಕೆ ಕೊಡಲಾಗಿತ್ತು.

ಈ ಹೊಸ ಪರಿಸ್ಥಿತಿಯನ್ನು ತಮಗೆ ಅನುಕೂಲ ಪಡಿಸಿಕೊಳ್ಳಬೇಕೆಂದು ಬಹಳ ಮಂದಿ ಹೆಣಗಾಡಿದರು. ಅಡಿಗೆ ದಿವ್ಯವಾಗಿರಬೇಕೆಂಬುದರಲ್ಲಿ ಅರ್ಥವಿತ್ತು. ದೊಡ್ಡ ದೊಡ್ಡ ಉದ್ಯೋಗಸ್ಥರ ಮನೆಗಳಿಗೆಲ್ಲಾ ಅಲ್ಲಿಂದಲೇ ಊಟ ಹೋಗುತಿತ್ತು. ಧಾನ್ಯ ವಸೂಲು ಮಾಡುವ ಉದ್ಯೋಗಿಗಳ ಮನೆಯಲ್ಲಿ ಧಾನ್ಯದ ಕೊರತೆಯೆಂಬುದು ಹೇಳಹೆಸರಿಲ್ಲದೆ ಹೋಯಿತು. ಅಗ್ರ ಪಂಚಕ ಮಹಸೀಯರು ಪಡೆದ ಲಾಭಕ್ಕೊಂದು ಲೆಕ್ಕವೇ ಇರಲಿಲ್ಲ.

ಸಭೆಯಲ್ಲಿ ಮಹಾರಾಜನು ಇನ್ನೂ ರಾಕ್ಷಸನನ್ನು ಕುರಿತೇ ಮಾತಾಡುತಿದ್ದನು.

"ಇದೆಲ್ಲಾ ನಮಗೊಂದು ತಲೆ ತಗ್ಗಿಸಬೇಕಾದ ವಿಷಯವೇ ಸರಿ. ಏಳು ತಲಾಂತರಗಳಿಂದ ಈ ಬಗೆಯ ಅವಮಾನವನ್ನು ಈ ನಗರ ಅನುಭವಿಸಿದ್ದಿಲ್ಲ. ಆದರೆ ಉಪಾಯವಿಲ್ಲ. ನಗರವೆಲ್ಲಾ ಅರಾಜಕವಾಗಿ ಮಾನವರ ಎಲುವು ರಾಶಿಗಳಿಂದ ತುಂಬಿ ಹೋಗುವುದಕ್ಕಿಂತ ದಿನಾ ಒಬ್ಬೊಬ್ಬ ಮನುಷ್ಯ ಮಾತ್ರ ಬಲಿಯಾಗುವುದು ಎಷ್ಟೋ ಮೇಲು" ಎಂದ ರಾಜ.

"ಹಾಗನ್ನ ಬೇಡಿ ಪ್ರಭೋ ವಂಗದೇಶದಲ್ಲಿ ಒಂದು ನಗರಕ್ಕೆ ಮಹಾಕಾಳಿ ಗ್ರಾಮದೇವತೆ. ಅಲ್ಲಿ ಆ ದೇವಿಗೆ ದಿನಾ ನರಬಲಿಕೊಡುತ್ತಾರೆ. ಆ ಮಹಾತಾಯಿ ಆ ನಗರಕ್ಕೆ ಯಾವ ಆಪತ್ತು ಬಾರದಂತೆ ಕಾಪಾಡ ತಿದ್ದಾಳೆ. ರಾಕ್ಷಸರಾಯರು ದೊಡ್ಡ ಮನಸ್ಸು ಮಾಡಿ ನಮ್ಮನ್ನು ಕಾಪಾಡಬೇಕೇ ಹೊರತು, ದಿನಾ ಒಬ್ಬೊಬ್ಬ ಮನುಷ್ಯನನ್ನು ಬಲಿಕೊಡುವುದೇನು ದೊಡ್ಡ ತ್ಯಾಗವೆನಿಸುವುದಿಲ್ಲ" ಎಂದ ಸಭಿಕನೊಬ್ಬ.

"ಇದೆಲ್ಲಾ ನಮ್ಮ ಭ್ರಮೆ. ಕೊಲ್ಲುವುದಾರು? ಸಾಯುವುದಾರು! ಎಲ್ಲವೂ ಮಾಯೆ! ಮಾತ್ರವಲ್ಲಾ ಲೋಕಹಿತಾರ್ಥವಾಗಿ ಪ್ರಾಣ ತ್ಯಾಗಮಾಡಿದವರಿಗೆ ಉತ್ತಮ ಲೋಕಗಳು ಸಿಗುತ್ತವೆ. ಇದಕ್ಕೆ ಯಾವ ಸಂದೇಹವೂ ಬೇಡ" ಎಂದನೊಬ್ಬ ವೇದಾಂತಿ.

ಅಕಸ್ಮಾತ್ತಾಗಿ ಅಜ್ಞಾನಿಯ ಕಣ್ಣುಗಳು ಹೊಳೆದುವು. ಅವನು ಯಾರ ಮಾತನ್ನು ಕೇಳಿಸಿಕೊಳ್ಳದೆ ಏನೋ ಯೋಚಿಸುತಿದ್ದಂತಿತ್ತು.

"ಮಹ್ರಾಜಾ....." ಎಂದು ಒಮ್ಮೆಗೇ ಕೂಗಿದ ಅಜ್ಞಾನಿ.

ಎಲ್ಲರೂ ಅವನ ಕಡೆಗೆ ಆಶ್ಚರ್ಯದಿಂದ ನೋಡಿದರು.

"ವಿಷ! ವಿಷ! ನಾವು ಆ ರಾಕ್ಷಸಾಧಮನಿಗೆ ಕಳುಹಿಸುವ ಭಾಂಡದಲ್ಲಿ ವಿಷ ಬೆರೆಸಿಬಿಡುವ! ಪೀಡೆ ತೊಲಗಿ ಹೋಗುತ್ತೆ!" ಎಂದ ಅಜ್ಞಾನಿ ಸಭಿಕ.

ಆಗಲೇ ರಾಕ್ಷಸನು ವಿಷಬಾಧೆಯಿಂದ ವಿಲವಿಲ ಒದ್ದಾಡಿ ಸತ್ತಷ್ಟು ಸಂತೋಷ ಅವನ ಮುಖದಲ್ಲಿ ತಾಂಡವಿಸುತಿತ್ತು.

ಎಲ್ಲರ ಮುಖದಲ್ಲಿಯೂ ಆಶ್ಚರ್ಯ ತೇಲಿತು.

"ಒಮ್ಮೆಗೇ....ಹ—ಹ—ಹತ್ಯೇನಾ!" ಎಂದ ವೇದಾಂತಿ ಮೂಗಿನ ಮೇಲೆ ಬೆರಳಿಟ್ಟು!

"ಅಷ್ಟೊಂದು ಮಹಾ ಶಕ್ತಿಶಾಲಿಗಳಾದ ಆ ರಾಕ್ಷಸ ಮಹಾಮಹಿಮರನ್ನು ನಾವು ಹೇಗಾದರೂ ನಮಗೆ ಅನುಕೂಲ ಪಡಿಸಿಕೊಳ್ಳಬೇಕೇ ಹೊರತು, ಕೈಯಾರೆ ನಾಶಮಾಡಿ ಹಾಕುವುದೆ? ತಾಳೇಮರದಂಥ ರಾಕ್ಷಸ ಹೋದರೆ ಮತ್ತೆ ಬರುತ್ತಾನೆಯೆ? ಬಹು ದೊಡ್ಡ ನಷ್ಟವಲ್ಲವೆ ಇದು?" ಎಂದ ಇನ್ನೊಬ್ಬ.

ಅಜ್ಞಾನಿ ತನ್ನ ಅಭಿಪ್ರಾಯವನ್ನು ಬಿಡಲಿಲ್ಲ.

"ರಾಕ್ಷಸನಿಂದ ನಮಗೇನೂ ಉಪಯೋಗವಿಲ್ಲವೆಂದೂ ನಾನೇನೂ ಹೇಳುವುದಿಲ್ಲ. ಆತ ಸತ್ತ ಮೇಲೆ ಅವನನ್ನು ಸುಟ್ಟು ಬೂದಿ ಮಾಡಿ ಗೊಬ್ಬರದಲ್ಲಿ ಬೆರೆಸಿ ಎಲ್ಲರ ಮನೆಯ ತೋಟದಲ್ಲಿಯೂ ಚೆಲ್ಲಿಬಿಡುವ. ರಾಕ್ಷಸ ಕಾಯಿಗಳು ಬೆಳೆಯುತ್ತವೆ. ಅದನ್ನು ತಿನ್ನುತ್ತಾ ನಾವು ತೃಪ್ತಿ ಪಡಬಹುದಲ್ಲಾ?"

ಈ ಮಾತು ಕೇಳಿದ ಕೂಡಲೇ ಸಭೆಯೆಲ್ಲೆಲ್ಲಾ ಕಲಕಲರವವೆದ್ದಿತು. ಎಲ್ಲರೂ ಒಂದೇ ಬಾರಿಗೆ ಮಾತಾಡಿದರು. ಕೆಲವರು ನಕ್ಕರು. ಯಾರ ಮಾತು ಯಾರಿಗೂ ಅರ್ಥವಾಗಲಿಲ್ಲ.

ಮಂತ್ರಿ ಎಲ್ಲರನ್ನೂ ಸಮಜಾಯಿಸಿದಾರಿಗೆ ತಂದು ಹೇಳಿದ:

"ಆ ರಾಕ್ಷಸನನ್ನು ಮೋಸದಿಂದ ಕೊಲ್ಲಲು ಸಾಧ್ಯವೆಂಬೆಂದು ನನಗೆ ಮೊತ್ತಮೊದಲೇ ತೋರಿತ್ತು. ಆದರೆ ಅದರಿಂದ ಬರುವ ಆಪತ್ತು ಇನ್ನಷ್ಟು ತೀವ್ರವಾಗಿರುವುದೆಂಬ ಭಯದಿಂದಲೇ ನಾನು ಆ ಯೋಚನೆಯನ್ನು ಕಟ್ಟಿಟ್ಟೆ."

"ಆದೆಂತಹ ಆಪತ್ತು ಬಂದೀತು ಮಹಾ ಮಂತ್ರಿಯವರೆ?"— ಕೇಳಿದ ಅಜ್ಞಾನಿ— ಎಗತಾಳಿಯ ಲೇಸನವಿತ್ತು ಅವನ ದನಿಯಲ್ಲಿ.

"ಒಂದು—ಈ ರಾಕ್ಷಸರಾಯರು ಸ್ವಯಂಭೂಗಳಲ್ಲವಾದ್ದರಿಂದ ಇವರ ಬಂಧುಮಿತ್ರರು ಯಾರೋ ಇದ್ದಾರು. ಅವರು ದಂಡೆತ್ತಿ ಒಂದು ನಮ್ಮ ನಗರವನ್ನು ಭಸ್ಮೀಪಟಲಮಾಡುತ್ತಾರೆ." ಎಂದ ಮಂತ್ರಿ

"ಹಯ್ಯಯ್ಯೊ! ಮ-ಮ-ಮ-ತ್ತೇನುಂಟು!" ಎಂದ ವೇದಾಂತಿ ಭೀತಿಯಿಂದ.

"ಎರಡನೆಯದಾಗಿ, ರಾಕ್ಷಸರು ಕೂಡಾ ದೇವತೆಗಳ ಹಾಗೆಯೇ ಅಮಾನುಷ ಶರೀರಗಳಾದ್ದಾರೆ. ಅವರು ವಿಷವನ್ನು ಕೂಡಾ ಜೀರ್ಣಿಸಿಕೊಳ್ಳಬಲ್ಲರು."

"ಮ-ಮತ್ತೆ ಕೇಳುವುದೇನುಂಟೂ!" ಎಂದ ವೇದಾಂತಿ ಭೀತಿಯಿಂದ.

"ತನ್ನ ನಾಶನಕ್ಕಾಗಿ ನಾವು ವಿಷಪ್ರಯೋಗ ಮಾಡಿದ್ದೇವೆಂದು ಆ ರಾಕ್ಷಸೇಶ್ವರರಿಗೆ ತಿಳಿದು ಹೋಯಿತೆಂದರೆ, ಏನಾದೀತು ಏನಾಗಲಿಕ್ಕಿಲ್ಲ ಎಂಬುದನ್ನು ನೆನೆಸುವಾಗ ನನ್ನ ಕಾಲೇ ನಡುಗುತ್ತದೆ. ನಿಜಕ್ಕೂ ನಾನು ಮುಚ್ಚುಮರೆಯಿಲ್ಲದೆ ಹೇಳುತಿದ್ದೇನೆ"

"ನನ್ನ ಕಾಲು ಈ-ಈ-ಈಗಲೇ ನಡುಗುತ್ತೆ" ಎಂದ ವೇದಾಂತಿ.

"ಆ ರಾಕ್ಷಸನನ್ನು ಕೊಂದು ಹಾಕುವುದಕ್ಕೆ ನಾನು ಇನ್ನೂ ಅನೇಕ ಉಪಾಯಗಳನ್ನು ಹೇಳಬಲ್ಲೆ. ವಿಷದಿಂದ ಸಾಯದೆ ಆತ ಈ ನಗರದೊಳಗೆ ಬಂದಾಗ ನಗರದ ನಾಲ್ಕು ಮೂಲೆಗಳಿಗೂ ಬೆಂಕಿ ಹಾಕಿ ಬಿಡುವಾ" ಅಂದ ಮತ್ತೂ ಅಜ್ಞಾನಿ.

"ಅಯ್ಯೋ! ಹಾಗೆಲ್ಲಾ ಆತ ಸಾಯಲಿಕ್ಕಿಲ್ಲ ಸ್ವಾಮಿ ಹಾಗೆಲ್ಲಾ ಸುಲಭದಲ್ಲಿ ಸಾಯುವವನು ಸಾವಿರ ವರುಷ ಬದುಕುತ್ತಾನೆಯೇ? ಅಂದ ವೇದಾಂತಿ ಆ ಬಕಾಸುರನ ವಯಸ್ಸು ಸಾವಿರ ವರ್ಷವೆಂಬುದು ಖಂಡಿತವಾದಂತೆ ಊರೆಲ್ಲಾ ಪ್ರಚಾರವಾಗಿತ್ತು.

ಅಜ್ಞಾನಿ ಬಿಡಲಿಲ್ಲ.

"ಅವನೇನು ಬ್ರಹ್ಮ ಪದಾರ್ಥವೆ? ವಿಷಕ್ಕೂ ಸಾಯದೆ ಬೆಂಕಿಗೂ ಸುಡದೆ ಇರಲಿಕ್ಕೆ ಅವನೇನು ಮಾರ್ಕಂಡೇಯನಂತೆ ಚಿರಂಜೀವಿಯೆ?"

"ಆದರೂ ನೀವು ದೊಡ್ಡವರನ್ನು ಕುರಿತು ಏಕ ವಚನದಲ್ಲಿ ಸಂಬೋಧಿಸ ಕೂಡದು. ರಾಕ್ಷಸೇಶ್ವರರನ್ನು ಕುರಿತು ತಿರಸಾರಭಾವದಿಂದ ಮಾತಾಡಲಿಕ್ಕೆ ನಾವು ಯಾವುದರಲ್ಲಿ ಅವರಿಗಿಂತ ಅಧಿಕರಾಗಿದ್ದೇವೆ?" ಎಂದು ಒಬ್ಬ ಸಭಿಕನು ಮುಖವನ್ನು ಸುರುಟಿಸಿಕೊಂಡನು.

ಈ ಚರ್ಚೆಗೆ ಮಂತ್ರಿ ಮತ್ತೆ ಅಡ್ಡಬಂದ.

"ನನ್ನ ಮಾತು ಸ್ವಲ್ಪ ಕೇಳಿಕೊಳ್ಳಿ. ನಾನು ರಾಕ್ಷಸೇಶ್ವರರನ್ನು ಸವರ್ಥಿಸಿಕೊಳ್ಳಲು ಮಾತಾಡುವುದಿಲ್ಲ. ನಮ್ಮ ನಗರದಲ್ಲಿ ದಿನಕ್ಕೆ ನಾಲ್ವರು ಹುಟ್ಟುತ್ತಾರೆ. ಇಬ್ಬರೇ ಸಾಯುತ್ತಾರೆ. ಒಮ್ಮೆ ಕ್ಷಾಮವೂ ಮತ್ತೊಮ್ಮೆ ಮಹಾಮಾರಿಯೂ ಬಂದು ಎಷ್ಟೋ ಜನರನ್ನು ಕೊಚ್ಚಿಕೊಂಡು ಹೋದ ಮೇಲೆ ಕೂಡಾ ನಮ್ಮ ನಗರದಲ್ಲಿ ನನ್ನ ತಂದೆಯವರ ಕಾಲದಲ್ಲಿದ್ದಷ್ಟೇ ಮಂದಿ ಈಗಲೂ ಇದ್ದಾರೆ. ದಿನಕ್ಕೊಬ್ಬ ಮನುಷ್ಯ ಸತ್ತು ಹೋಗುವುದರಿಂದ ನಮ್ಮ ಜನಸಂಖ್ಯೆ ಸ್ವಲ್ಪ ಹದ್ದಿನೊಳಗೆ ಬರುತ್ತೆಯೇ ಹೊರತು ಜನ ನಷ್ಟವಾಗಿ ಹೋಗುವುದಿಲ್ಲ".

"ಹೊರಗಿನವರು ಬಂದು ಸೇರಿ ಕೊಂಡದ್ದರಿಂದಲೇ ಜನಸಂಖ್ಯೆ ಇಲ್ಲಿ ಹೆಚ್ಚಾಯಿತು ಸ್ವಾಮಿ. ಮತ್ತೂ ಈ ಊರಿನಲ್ಲಿ ಮನೇಯಳಿಯ ತನದ ಆಚಾರವುಳ್ಳ ಮನೆ ನೂರಕ್ಕೆ ಮೇಲೆಯೇ ಇದೆ. ಅದೂ ಅಲ್ಲದೆ ನಗರ ಹಚ್ಚ ಹಸಿರಾಗಿರುವುದನ್ನು ನೋಡಿ ಎಲ್ಲೆಲ್ಲಿದ್ದ ಜನರೆಲ್ಲಾ ಇಲ್ಲಿ ಬಂದು ಸ್ಥಿರಪಟ್ಟಿದ್ದಾರೆ" ಎಂದು ಅಜ್ಞಾನಿ ಮಂತ್ರಿಗಳಿಗೆ ಜ್ಞಾಪಕಪಡಿಸಿದನು.

(೧೧ನೇ ಪುಟ ನೋದಿರಿ)

ಅಮೃತಾಂಜನ
ಎಲ್ಲಾ ನೋವುಗಳಿಗೆ ಸಿದ್ಧವಿದೆ
ಎಲ್ಲಾತರದ ಸಿದಿತ ಮತ್ತು ನೋವುಗಳಿಗೆ
50 ವರ್ಷ ಪ್ರಾಯದ
ಪಾರಟ್ ದಾರ್ಸರ
ಅಮೃತಾಂಜನ ಲಿ. ಚೊಂಬಾಯಿ, ಪಿನಾಂಗ್ ಸಿಂಗಾಪ್ಯ

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ವ್ಯಾದೆ, ನಿರಖು ಠೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3 ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ಏಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.

ಹೊಸ ಪುಸ್ತಕ—
'ನಚಿಕೇತ'ರ
ನವೀನ ಕಾದಂಬರಿ—
ಹಸುರು ಹಂಸ
ಇದೀಗ ಪ್ರಕಟವಾಗಿದೆ.
ಬೆಲೆ: ರೂ. ಎರಡು.
ವಿಚಾರಿಸಿರಿ.
ನವಯುಗ ಪ್ರೆಸ್, ಉಡುಪಿ.

ಲೇಖಾಂಕ ೨

ಕಥೆಗಾರ ರಾಜಾಜಿಯವರ ಕಲಾಸಿದ್ಧಿ

ಶ್ರೀ ಕೆ. ಎನ್. ಭಟ್, ಶಿರಾಡಿಸಾಲ್.

ಕಥೆಗಾರ ರಾಜಾಜಿಯವರ ಕಥೆಗಳು ಸಂಘರ್ಷಮಯ ಜೀವನದ ವಿವಿಧ ಮುಖಗಳ ಪ್ರತಿಬಿಂಬದಂತಿದ್ದು ವಿಶೇಷತಃ ಘಟನಾಪ್ರಧಾನವಾಗಿರುತ್ತವೆ. ಈ ಕಾರಣದಿಂದಲೇ ವಾಚಕರ ಮೇಲೆ ಈ ಕಥೆಗಳು ತೀವ್ರ ಪರಿಣಾಮಕಾರಿಯಾಗಿರುವುವು.

ಶ್ರೀಯುತರ "ಅರ್ಧನಾರಿ" ಎಂಬ ಕಥೆಯಲ್ಲಿ ಹರಿಜನ—(ಹೊಲೆಯ) ಜಾತಿಯ ತರುಣನೊಬ್ಬನು ಉಚ್ಚ ಜಾತಿಯ ತರುಣಿಯೊಬ್ಬಳೊಡನೆ, ಮದುವೆಯಾಗುವ ಸಿದ್ಧತೆ ನಡೆದಿದೆ. ಆದರೆ, ಈ ಹರಿಜನ ತರುಣನು, ತನ್ನ ಜಾತಿಯವರ ಆಚರಣೆಗೆ ಹೇಸಿ—'ತಾನು, ಶಾಕಾಹಾರಿ ಮೊದಲಿಯಾರರ ಜಾತಿಗೆ ಸೇರಿದವನು' ಎಂದು ಸಹಜವಾಗಿಯೇ ಒಂದು ಸುಳ್ಳು ಮಾತು ಮೊದಲೇ ಹೇಳಿದ್ದನು. ಗೋವಿಂದ ರಾಯರು, ಮತ್ತು ಪಂಕಜಾ, ಈ ಮಾತನ್ನೇ ನಿಜವೆಂದು ನಂಬಿದ್ದರು.

'ಹುಡುಗ ಉಚ್ಚ ವರ್ಣೀಯನಲ್ಲದಿದ್ದರೂ, ಶಾಕಾಹಾರಿ, ಚೆನ್ನಾಗಿದ್ದಾನೆ, ಮೇಲಾಗಿ ವಿದ್ಯೆ—ನೌಕರಿ ಎಲ್ಲವೂ ಇದೆ. ಪಂಕಜೆಗೆ ಮನಸ್ಸಿದ್ದರೆ, ಏಕೆ ಈ ಸಂಬಂಧ ಬೆಳೆಳಬಾರದು?' ಎಂದುಗೋವಿಂದ ರಾಯರ ಮತವಾಗಿತ್ತು. ಹೀಗೆ ಮಾತುಕತೆ ಮುಂದುವರಿದು— ಮದುವೆಯಾಗುವುದೆಂದೂ ಆಯಿತು! ಆದರೆ ಅರ್ಧನಾರಿಯು ತನ್ನ ಜಾತಿ, ತನ್ನವರ ಆಚರಣೆ ಇದನ್ನೆಲ್ಲ ನೆನೆನೆನೆದು, ಬಹು ಚಿಂತಾಕ್ರಾಂತನಾದನು. 'ಮದುವೆಯಾದ ಮೇಲೆ, ತನ್ನ ಹಳ್ಳಿಯಲ್ಲಿರುವ ತನ್ನ ತಂದೆ ತಾಯಿಯನ್ನು ಬಂಧುಗಳನ್ನು ಇವರು ನೋಡಿದರೆ, ತನ್ನ ಜಾತಿಯ ಗುಟ್ಟು ಬಯಲಾಗುವುದು ಖಂಡಿತ! ಕುಡುಕರೂ, ಅಸಹ್ಯವಾದ ಆಚರಣೆಯುಳ್ಳವರೂ ಆದ, ತನ್ನ ಮಾತಾಪಿತೃಗಳ ಭೇಟಿ, ಪಂಕಜೆ, ಗೋವಿಂದ ರಾಯರಿಗೆ, ಆಗಲೇ ಕೂಡದು. ಆ ರೀತಿ, ಏನಾದರೂ ಒಂದು ಉಪಾಯ ಹೂಡಬೇಕು!" ಎಂದು ಅರ್ಧನಾರಿಯು ಆಲೋಚಿಸುತ್ತಿದ್ದನು.

ಅರ್ಧನಾರಿಯು ಸೇಲಂ ಜಿಲ್ಲೆಯ ಒಂದು ಹಳ್ಳಿಯ ಹೊಲಗೇರಿಯಲ್ಲಿ ಹುಟ್ಟಿ ಬಳೆದಿದ್ದನು. ಆತನಿಗೊಬ್ಬ ಅಣ್ಣನೂ ಇದ್ದನು ಹರಿಜನ ಸೇವಾಸಂಘದ ಮಂತ್ರಿ, ಮಲಕಾನಿಯವರು, ದಕ್ಷಿಣ ಬಾರತದ ಪ್ರವಾಸಕ್ಕೆ ಬಂದಿದ್ದಾಗ—ಈ ಅರ್ಧನಾರಿ, ಹುಡುಗನನ್ನು ನೋಡಿದ ಅವರಿಗೆ, ಏನೋ ಖುಶಿಯಾಗಿ ಹೋಯಿತು. ಬಳಿಕ, ಅವರು ಆತನನ್ನು ತನ್ನೊಡನೆ ದಿಲ್ಲೀಗೆ ಕರೆದುಕೊಂಡು ಹೋಗಿ, ಅಲ್ಲಿಯೇ ಶಾಲೆಗೆ ಸೇರಿಸಿದರು. ಆ ತರುವಾಯ, ವಿದ್ಯಾ ಬುದ್ಧಿಗಳಲ್ಲಿ ಚುರುಕಾಗಿದ್ದ ಆತನನ್ನು ಅವರೇ ಒಂದು ದೊಡ್ಡ ವ್ಯಾಪಾರೀ—ಸಂಸ್ಥೆಯಲ್ಲಿ ಕೆಲಸಕ್ಕೆ ಸೇರಿಸಿದರು. ಬುದ್ಧಿವಂತನಾದ ಅರ್ಧನಾರಿಯು ಕೆಲವು ತಿಂಗಳುಗಳೊಳಗೇ, ಅದೇ ಕೆಲಸದಲ್ಲಿ ಬಡ್ತಿ ಹೊಂದಿ ರೂ. 200 ಸಂಬಳದ ಮೇಲೆ, ಬೆಂಗಳೂರಿನ, ಆ ಸಂಸ್ಥೆಯ ಒಂದು ಶಾಖೆಗೆ ವರ್ಗಾಯಿಸಲ್ಪಟ್ಟನು.

ಅರ್ಧನಾರಿಯ ಸಮವಯಸ್ಕರಾದ, ಗೋವಿಂದ ರಾಯರೆಂಬವರು—ಈ ಶಾಖೆಯ ಮೆನೇಜರರಾಗಿ, ಅದೇ ತಾನೆ ಬಂದಿದ್ದರು. ಅರ್ಧನಾರಿಗೂ ಅವರಿಗೂ ವಿಶೇಷ ಸ್ನೇಹವುಂಟಾಗಿತ್ತು. ಗೋವಿಂದ ರಾಯರಲ್ಲಿ—ಅವರು, ಅವರ ತಂಗಿ ಪಂಕಜಾ ಈರ್ವರೇ ಇದ್ದರು. ಪಂಕಜಾ, ಈಗ ಇಪ್ಪತ್ತರ ತರುಣಿ, ತಾಯಿ ತೀರಿಕೊಂಡು ಆಗಲೇ ಹತ್ತು ವರ್ಷ ಕಳೆದಿತ್ತು. ಈಗ ಎಲ್ಲಾ ಜವಾಬ್ದಾರಿಯನ್ನೂ ಗೋವಿಂದ ರಾಯರೇ ಹೊರಬೇಕಾಗಿತ್ತು.

ಈ ಅಣ್ಣ ತಂಗಿಯರಲ್ಲಿ ಪಂಕಜೆಯ ಮದುವೆಯ ವಿಷಯದಲ್ಲಿ ನಡೆದ ಮಾತುಕತೆ, ಶ್ರೀ ರಾಜಾಜಿಯವರ, ಸಹಜವಾದ ಸುಂದರ ಶೈಲಿಯಿಂದ ಹೃದಯಂಗಮವಾಗಿದೆ—ಅದು—ಇಂತಿದೆ.

'ಪಂಕಜಾ ನೀನು ನಿನ್ನ ಮದುವೆಯ ವಿಷಯ ಏನಾದರೂ ಯೋಚಿಸಿರುವೆಯೂ?'

ಪಂಕಜಾ—'ಈ ವಿಷಯದಲ್ಲಿ ನನಗೆ ಸ್ವತಂತ್ರವಾಗಿ ಹೇಳುವುದಕ್ಕೆ ಏನೂ ಇಲ್ಲ ಗೋಪು!'

ಗೋವಿಂದ ರಾಯರು—'ಹಾಗಾದರೆ ನಿನ್ನ ವಿವಾಹವನ್ನು ನಮ್ಮ ಅರ್ಧನಾರಿಯೊಡನೆ,.... ....?'

ಪಂಕಜೆ, ತನ್ನಣ್ಣನ ಈ ಪ್ರಶ್ನೆಗೆ ಉತ್ತರವನ್ನೇ ಕೊಡದೆ—ಬೇರೆ ವಿಷಯವನ್ನು ಮಾತನಾಡತೊಡಗಿದಳಂತೆ. ಕೆಲವು ದಿನಗಳ ಬಳಿಕ ಮತ್ತೊಂದು ದಿನ ಸಹಜವಾಗಿಯೇ ಈ ಮದುವೆಯ ಪ್ರಸ್ತಾಪ ಬಂದಾಗ-ಪಂಕಜೆ- 'ಗೋಪು:....ಗೋಪು ಅದೇನು ನಾನು ನಿನಗೆ ಭಾರವಾಗಿರುವೆನೇ? ನನ್ನಿಂದಾಗಿ ನಿನಗಿಷ್ಟು ಕಷ್ಟವಾಯಿತೇ? ಗೋಪು!' ಎಂದು ಹೇಳುತ್ತ ಪಂಕಜೆ, ಒಂದು ಸಲ ನಗುಮೊಗವಾದರೂ, ಒಡನೆಯೇ ಮುಖ ಮುಚ್ಚಿಕೊಂಡು ಬಿಕ್ಕಿ ಬಿಕ್ಕಿ ಅಳತೊಡಗಿದಳಂತೆ! ಪಂಕಜೆ ಏಕೆ ಹಾಗೆ ಮಾಡಿದಳು? ಎಂಬುದಕ್ಕೆ ಶ್ರೀ ರಾಜಾಜಿಯವರು— 'ಪ್ರಾಯಕ್ಕೆ ಬಂದ ತಾಯಿ ಇಲ್ಲದ ಹುಡುಗಿಯರು, ಯಾವಾಗಲೂ ಹೀಗೆಯೇ ಭಾವುಕರಾಗಿರುತ್ತಾರೆ. ಅವರಿಗೆ ತಾಯಿಯ ನೆನಪುಂಟಾಗಿ ಅಳುಬಂದೇ ತೀರುತ್ತದೆ.' ಎನ್ನುತ್ತಾರೆ

'ಹುಚ್ಚಿ! ನನಗೆ ನೀನು ಹೊರೆಯಾಗುವುದಾದರೂ ಹೇಗೆ? ಹೇಳು ನೋಡೋಣ ನಿನಗೆ ಮದುವೆಯಾಗುವ ಇಚ್ಛೆ ಇದೆಯೋ? ಇಲ್ಲವೋ? ಇದಿಷ್ಟನ್ನು ನನಗೆ ಹೇಳಿಬಿಡು! ಪಂಕಜಾ. ನಿನಗೆ ಮದುವೆ ಇಷ್ಟವಿಲ್ಲದಿದ್ದರೂ, ನನಗೆ ಸಂತೋಷವೆ. ಏಕೆಂದರೆ, ಆಗ ನನಗಿರುವ ಒಬ್ಬಳೇ ತಂಗಿಯನ್ನು ಗಂಡನ ಜೊತೆಗೆ ಕಳುಹಿಸಿಕೊಟ್ಟು ಆಗಲಿಕೆಯ ದುಃಖ ಅನುಭವಿಸುವುದು ನನ್ನ ಪಾಲಿಗೆ ಇಲ್ಲದಂತಾಗುತ್ತದೆ' ಹೀಗೆ ಹೇಳುತ್ತ ಅಳುತ್ತಿದ್ದ ಪಂಕಜೆಯ ಕಣ್ಣೀರನ್ನೊರಸಿ ತೆಗೆದ ಗೋವಿಂದರಾಯರು—ಭಾವುಕರಾಗಿ—'ಪಂಕಜಾ! ಅಮ್ಮ ಈಗ ನಮ್ಮ ಬಳಿಯಲ್ಲಿಲ್ಲ! ಪಂಕಜಾ! ಅವಳಿದ್ದಿದ್ದರೆ, ಈ ಮದುವೆಯ ವಿಷಯ, ನಿನ್ನಲ್ಲಿ ಕೇಳಿ, ನಿನ್ನ ಮನಸ್ಸಿನ ಇಂಗಿತವನ್ನು ತಿಳಿಯುವ ಅಗತ್ಯ ನನಗೇಕೆ ಬರುತಿತ್ತು? ಪಂಕಜಾ! ಆದರೆ ಈಗ ಈ ಜವಾಬ್ದಾರಿ ನನ್ನ ಮೇಲೆಯೇ ಇದೆ. ನೀವೀರ್ವರೂ ಪರಸ್ಪರ ಪ್ರೀತಿಯಿಂದ ಇರುವಿರೆಂದು ನಾನು ಬಲ್ಲೆ! ಅರ್ಧನಾರಿ ಒಳ್ಳೆಯ ಹುಡುಗ' ಎಂದರು ಗೋವಿಂದ ರಾಯರು.

ಆಗ ಪಂಕಜೆ— 'ಮದುವೆಯಾಗುವ ಕಾಲ ಬಂದಾಗ ಹೇಳುತ್ತೇನೆ, ಗೋಪು! ಹೇಗೂ, ಜಾತಿ, ಮತಗಳ ವಿಚಾರವನ್ನು ನಾವು ಅಷ್ಟಾಗಿ ಗಮನಿಸುವುದಿಲ್ಲವೆಂದ ಮೇಲೆ....?

'ಜಾತಿಯಲ್ಲೇನಿದೆ? ಪಂಕಜಾ! ನಿನ್ನಂತಹ ಹೆಂಡತಿಯನ್ನು ಪಡೆದ ಅರ್ಧನಾರಿಯು, 'ತನಗೆ ಮಹಾ ಭಾಗ್ಯವೇ ದೊರೆಯಿತೆಂದು ಭಾವಿಸುವುದರಲ್ಲಿ ಸಂದೇಹವಿಲ್ಲ!' ಇಲ್ಲಿ ಶ್ರೀ ರಾಜಾಜಿಯವರು,— 'ತನ್ನ ತಂಗಿ ಪಂಕಜೆಯಂಥ ಸುಗುಣ, ಸ್ವರೂಪ ಸುಂದರ ತರುಣಿ, ಈ ಪ್ರಪಂಚದಲ್ಲೇ ಮತ್ತೊಬ್ಬಳಿಲ್ಲ' ಎಂಬ ವಿಶ್ವಾಸ ಗೋವಿಂದರಾಯರಲ್ಲಿತ್ತು! ಎನ್ನುತ್ತಾರೆ.

ಉತ್ತಮ ವರ್ಣೀಯರಾದ, ಪಂಕಜಾ ಮತ್ತು ಗೋವಿಂದ ರಾಯರು, ತಾವಾಗಿಯೇ ಅರ್ಧನಾರಿಯನ್ನು ಮೆಚ್ಚಿ ಈ ಮದುವೆಯ ಸಂಬಂಧಕ್ಕೆ ಉತ್ಸಾಹಗೊಂಡಿರುವುದನ್ನರಿತ ಅರ್ಧನಾರಿಯು, ಇದು ತನ್ನ ಪಾಲಿನ ಮಹಾ ಭಾಗ್ಯವೆಂದು ತಿಳಿದನು! ಆದರೆ, ಅರ್ಧನಾರಿಯ ಜ್ಞಾನ ಆತನನ್ನು ಎಚ್ಚರಗೊಳಿಸಿತು! 'ತಾನು ಹರಿಜನರ ಜಾತಿಯವನೆಂದು ಅವರಿಗೆ ತಿಳಿದೇ ಇಲ್ಲ! ಅದು ತಿಳಿದಿದ್ದರೆ, ಈ ಸಂಬಂಧವಾಗುತ್ತಿರಲೇ ಇಲ್ಲ! ಆದರೆ, ಮದುವೆಯಾದ ಮೇಲೆ ತಿಳಿಯುವುದಕ್ಕಿಂತ, ಈಗಲೇ ಹೇಳಿ ಬಿಡಲೇ? ಎಂದೂ ಅರ್ಧನಾರಿಯು, ಆಲೋಚಿಸಿದನು. ಆದರೆ, ಹಾಗೆ ಹೇಳಿಬಿಡುವುದು ಸದ್ಯ ಅಪಾಯಕರ ಎಂದು ಆತನ ವ್ಯಾವಹಾರಿಕ ಬುದ್ಧಿ ಅವನನ್ನೆಚ್ಚರಿಸಿತು! ಅಂತು, ಅರ್ಧನಾರಿಯು, ಶಾಕಾಹಾರಿ, ಮೊದಲಿಯಾರರ ಪಂಗಡಕ್ಕೆ ಸೇರಿದವನೆಂದೇ ತಿಳಿದಿದ್ದ ಪಂಕಜಾ, ಆನಂದಿತಳಾಗಿ, ಸುಖ ಸ್ವಪ್ನಗಳಲ್ಲಿ ಮುಳುಗಿದ್ದಳು! ಕೆಲವೇ ದಿನಗಳಲ್ಲಿ ಮದುವೆಯಾಗುವುದೆಂದೂ ನಿಶ್ಚಯವಾಯಿತು.

ಇಲ್ಲಿ ಶ್ರೀ ರಾಜಾಜಿಯವರು, ಕಥಾ ಸನ್ನಿವೇಶದ ಮೂಲಕ ತಮ್ಮ ಕಥನ ಕ

(೧೦ನೇ ಪುಟ ನೋಡಿರಿ)

Quality Air Cushion
Rubber Stamps
Crown
RUBBER STAMP CO.
PHONE-203 ESTD-1926
BALMATTA ROAD, MANGALORE.

ದಿ ಕರ್ನಾಟಕ ಬೇಂಕ್ ಲಿಮಿಟಿಡ್
ರಜಿಸ್ಟರ್ಡ್ ಆಫೀಸು: ಡೊಂಗರಕೇರಿ, ಮಂಗಳೂರು-3

ಪರಿಷ್ಕರಿಸಿದ ಮತ್ತು ಹೆಚ್ಚಿಸಿದ ಠೇವಣಾತಿ ಬಡ್ಡಿ ದರಗಳು:

ಕಾಯಂ ಠೇವಣಾತಿಗಳು:		ರೂ. ನ.ಪೈಸೆ
ಒಂದರಿಂದ ಮೂರು ತಿಂಗಳು ವರೆಗೆ	ವಾರ್ಷಿಕ ಸೇಕಡಾ	4-50
ಆರರಿಂದ ಹನ್ನೆರಡು ತಿಂಗಳು ವರೆಗೆ	,, ,,	4-75
ಹದಿಮೂರರಿಂದ ಇಪ್ಪತ್ತನಾಲ್ಕು ತಿಂಗಳು ವರೆಗೆ	,, ,,	5 00
ಇಪ್ಪತ್ತಐದರಿಂದ ಮೂವತ್ತಾರು ತಿಂಗಳು ವರೆಗೆ	,, ,,	5-25
ನಾಲ್ವತ್ತೆಂಟು ತಿಂಗಳು ಮತ್ತು ಹೆಚ್ಚಿಗೆ	,, ,,	5 50
ಸೇವಿಂಗ್ಸ್ ಬೇಂಕ್ ಠೇವಣಾತಿಗಳು	,, ,,	3-25

ನಿಮ್ಮ
ದಿನನಿತ್ಯದ ಉಳಿತಾಯವನ್ನು ಹನಿ ಡಿಪೋಸಿಟುಗಳಲ್ಲಿ
ಮಾಸಿಕ ಉಳಿತಾಯವನ್ನು ಕ್ಯುಮುಲೇಟಿವ್ ಡಿಪೋಸಿಟುಗಳಲ್ಲಿ
ವಿನಿಯೋಗಿಸಿರಿ.

THE KARNATAKA BANK LIMITED
3—7—1962

ಉಡುಪಿ ಕರ್ನಾಟಕ ಸಂಘದ
ಒಂದೊಂದು ರೂಪಾಯಿ ಬೆಲೆಯ
ಮೂರು ಪ್ರಕಟಣೆಗಳು.

ಚಂದ್ರಲೋಕಕ್ಕೆ ಪ್ರಯಾಣ
(ಯು.ರಾಘವೇಂದ್ರ ಆಚಾರ್ಯ, ಎಂ.ಎ.)
ಸಾಮಾನ್ಯ ರೋಗಗಳು
(ಡಾ. ಕೆ.ಎಲ್.ಐತಾಳ, ಎಂ.ಬಿ.ಬಿ.ಎಸ್)
ಜನರಿಗೆ ತಗಲುವ ಹಲವಾರು ಸಾಮಾನ್ಯ ರೋಗಗಳ ಹುಟ್ಟು, ಕಾರಣ ಮತ್ತು ನಿವಾರ ಹೋಪಾಯಗಳನ್ನು ಸೂಚಿಸುವ ಉಪಯುಕ್ತ ಪುಸ್ತಕ
ಭೌತಿಕ ದರ್ಶನ
ಬಡೆಕ್ಕಿಲ ಕೃಷ್ಣ ಭಟ್ಟ ಎಲ್. ಎಲ್. ಬಿ.
ಉಡುಪಿಯಲ್ಲಿ ಪ್ರತಿಗಳುಸಿಗುವ ಸ್ಥಳ—
ನವಭಾರತ ಪುಸ್ತಕ ಭಂಡಾರ,
ಉಡುಪಿ.

ಉಪಯೋಗಕ್ಕೆ ಬಾರದ ಮಾನ

'ಒಂದು ನಿಮಿಷ'ದ ಮಾನವೆಷ್ಟು ಎಂದು ನಿಗದಿ ಮಾಡಿದವರು ಯಾರು?

ಸೃಷ್ಟಿಕರ್ತ ಬ್ರಹ್ಮ ನಿದ್ರೆಯಿಂದೆಚ್ಚತ್ತು ಆತ್ತಿತ್ತ ನೋಡಿದ; ಕಣ್ಣಿಗೆ ಏನೂ ಗೋಚರಿಸದಿರಲು ಅವನ್ನು ತಿಕ್ಕಿಕೊಳ್ಳುತ್ತ ಎದ್ದುನಿಂತ. ಆಗ ಅವನ ಮುಂದೆ ಒಬ್ಬಾಕೆ ನಿಂತಿರುವುದು ಕಂಡಿತು. ಆಕೆಯನ್ನು ಕುರಿತು ವಿಚಾರಿಸುವುದಕ್ಕೆ ಮೊದಲು ಮುಖ ಮಾರ್ಜನಾದಿಗಳನ್ನು ಪೂರಯ್ಸಬೇಕೆಂದು ಕೊಂಡು, 'ಈಗ, ಒಂದು ನಿಮಿಷ" ಎಂದಾತ ತಂಬಿಗೆಗೆ ಕೈಕೊಟ್ಟ. ರಾಕ್ಷಸರಿಂದ ಅಹತವಾದ ದುಃಖದಿಂದ ಸೃಷ್ಟಿ ಕರ್ತನಲ್ಲಿಗೆ ದೂರಿಡಲು ಬಂದ ಆ ಸುಂದರಿ ಗಲ್ಲಕ್ಕೆ ಕೈಯಿಡುತ್ತ ಕುಳಿತಳು. ಹೊರಗೆ ಹೋದ ಬ್ರಹ್ಮ ಮರಳಿ ಬರುವಾಗ, ಪೀಡಾ ಕಾರಣರಾದ ರಾಕ್ಷಸರು ಮೂರು ಮರುಜನ್ಮವನ್ನು ತಾಳಿದ್ದರಂತೆ; ಎಂದರೆ, ಚತುರ್ಯುಗಗಳು ಮೂರು ಬಾರಿ ಬಂದು ಹೋಗಿದ್ದುವಂತೆ!

o o o

'ಈಗ, ಒಂದು ನಿಮಿಷ"ದ ಪಲ್ಲವಿಯನ್ನು ನಾವಿಂದು ದಿನ ನಿತ್ಯವೂ ಒಂದಲ್ಲ ಹಲವು ಬಾರಿ ಕೇಳುತ್ತೇವೆ. ಪ್ರಪಂಚದ ಸಕಲ ಚರಾಚರ, ಸ್ಥಿರಾಸ್ಥಿರಗಳೆಲ್ಲವನ್ನೂ ಸೃಷ್ಟಿಕರ್ತನೇ ನಿರ್ಮಿಸಿದನೆಂಬುವನ್ನು ಒಪ್ಪಿಕೊಳ್ಳುವುದಾದರೆ, ಈ ಅಮೂಲ್ಯ ಪಲ್ಲವಿಯನ್ನಾದರೂ ಮೊತ್ತ ಮೊದಲು ಉಚ್ಚರಿಸಿದವನು ಮತ್ತು ಅದಕ್ಕೆ ಅರ್ಥಕಟ್ಟಿದವನು ಅವನೇ ಎಂದು ಖಂಡಿತ ಹೇಳಬಹುದು. ಇತರ ಯಾವ ನಿಯಮಾಚರಣೆಯಲ್ಲಿಯೂ ವಿಧಾತನನ್ನು ಅನುಕರಿಸದ ಇಂದಿನ ಮಾನವಕೋಟಿಯು ಈ ಒಂದು ಪಲ್ಲವಿಯನ್ನೂ ಅದರ ಅರ್ಧವನ್ನೂ ಚಾಚೂ ತಪ್ಪದೆ ಅನುಸರಿಸಿಕೊಂಡು ಬರುತ್ತಿದೆಯೆಂಬುದು ಉಭಯತರರಲ್ಲಿ ಒಂದು ಪಕ್ಷದವರಿಗೆ ಖಂಡಿತಕ್ಕೂ ಅಭಿಮಾನಾಸ್ಪದ.

ನಿಮ್ಮ ನೆರೆಯವನೂ ನೀವೂ ಸಿನೆಮಾ ನೋಡಲು ಹೋಗುವ ನಿರ್ಧಾರ ಮಾಡಿ, 'ಇ ಘಂಟೆಗೆ ನಿನ್ನ ಮನೆಗೆ ಬರುತ್ತೇನೆ' ಎಂದು ಆತನಿಗೆ ವಚನವಿತ್ತಿರಿ ಎನ್ನಿ. ನೀವು ಮೊದಲೇ ನಿಮ್ಮ ಮನೆಯಾಕೆಗೆ ಹೇಳಿಡುತ್ತೀರಿ, ಇ ಗಂಟೆಗೆ ಹೊರಡಬೇಕು ಎಂದು ಸಮಯದ ಬೆಲೆಯನ್ನು ನೀವು ತಿಳಿದುಕೊಂಡಷ್ಟು ಸರಿಯಾಗಿ. ಸಮರ್ಪಕವಾಗಿ ನಿಮ್ಮವರು ಅರಿತಿರುವುದಿಲ್ಲವಾದುದರಿಂದ ನೀವು ಮಧ್ಯಾಹ್ನದ ನಿದ್ರೆಯಿಂದ ಎಚ್ಚತ್ತು ಕಣ್ಣು ಮುಖ ತೊಳೆಯಲು ಬಚ್ಚಲು ಮನೆಗೆ ಹೊರಟ ನಂತರವೇ ಅಕ್ಕೆ ಕಾಫಿ ಒಲೆಗೆಬೆಂಕಿಹಚ್ಚಲುತೊಡಗುತ್ತಾಳೆ. ನೀವುಬಟ್ಟೆಯುಡುವುದಕ್ಕೆ ಕೋಣೆಗೆ ತೆರಳುವ ಮೊದಲೊಮ್ಮೆ ಅಡಿಗೆ ಮನೆಗೆ ಇಣಿಕಿ, ಅಲ್ಲಿನ ಕೆಲಸ ಯಾವ ಹಂತದಲ್ಲಿದೆಯೆಂದು ತಿಳಿದು, 'ನಾನೀಗ ಹೊರಡುತ್ತೇನೆ, ಕಾಫಿ ಗೀಫಿ ಯೇನೂ ಬೇಡ" ಎನ್ನುತ್ತೀರಿ. ಆಗ ಆಕೆ ತನ್ನ ನಿಜ ಕಂಠ (ಅದು ಸಾಮಾನ್ಯವಾಗಿ ಮೃದುವಾಗಿದ್ದರೆ)ದಿಂದ, 'ಈಗ ಒಂದು ನಿಮಿಷ. ಸೆಟ್ಟಿ ಸಿಂಗಾರ ಆಗುವಷ್ಟರಲ್ಲಿ ಕಾಫಿ ರೆಡಿಯಾಗುತ್ತೆ" ಎಂದು ತಡಬಡಿಸತೊಡಗುತ್ತಾಳೆ ನಿಮ್ಮ ಬಟ್ಟೆ ಉಡುವ ಕಾರ್ಯ ಸೂರಯ್ಸಿ ಕ್ರಾಫ್‌ಗೆ ಬಾಚಣಿಗೆ ಹುಡುಕುವುದರಲ್ಲಿಯೇ ಗಡಿಯಾರದಲ್ಲಿ ಹತ್ತು ನಿಮಿಷ ಸರಿಯುತ್ತದೆ. ಹಾಗಿದ್ದರೂ ಆಕೆಯ ಒಂದು ನಿಮಿಷ ಮಾತ್ರ ಮುಗಿದಿರುವುದಿಲ್ಲ; ಅದು ಮುಗಿಯದ ವರೆಗೆ ನಿಮಗೆ ಬಾಚಣಿಗೆಯೂ ಸಿಗುವುದಿಲ್ಲ. ಅಂತೂ ನೀವು ಗೆಳೆಯನ ಮನೆಯಲ್ಲಿಯೇ 'ಒಂದು ನಿಮಿಷ ಉಳಿದು ತಲೆ ಬಾಚಿಕೊಳ್ಳುವುದೆಂದು ಯೋಚಿಸಿ ಕೈಬೆರಳುಗಳಲ್ಲಿಯೇ ಕೂದಲು ತೀಡಿಕೊಳ್ಳುತ್ತ 'ಏನೇ ಇನ್ನೂ ನಿನ್ನ ಒಂದು ನಿಮಿಷವಾಗಿಲ್ಲವೆ?" ಎಂದು ತುಸು ಏರಿದ ಸ್ವರದಲ್ಲಿಯೇ ನುಡಿದು ಚಪ್ಪಲಿ ಮೆಟ್ಟಿ ಮೆಟ್ಟಲಲ್ಲಿ ಎಡಗಾಲು ಬಡೆಯುವುದೇ ತಡ, 'ಅಯ್ಯೋ, ನಿಲ್ಲೀಂದ್ರೆ, ತಂದೇಬಿಟ್ಟೆ, ಎಂಬ ಕೋಕಿಲ ಕಂಠದ ಉಲಿ ನಿಮ್ಮನ್ನು ಮರಳಿಸಿಯೇ ಬಿಡುತ್ತದೆ. ನೀವು ಹಿಂತಿರುಗಿ ನೋಡಿದಾಗ, ಆಕೆ ಕೈಯಲ್ಲಿ ಎರಡು ಲೋಟ ಹಿಡಿದಿರುತ್ತಾಳೆ. ಅವುಗಳಿಂದ ಹೊಗೆ ಮೇಲೇರುತ್ತಿರುತ್ತದೆ. ಆಗ ನೀವು ಉಭಯ ಸಂಕಟಕ್ಕೆ ಗುರಿಯಾಗುತ್ತೀರಿ. ಕಾಫಿ ಕುಡಿಯದೆ ಹೋದರೆ, ಮನೆಯಾಕೆಯೊಡನೆ ಬೇಡಿ ವೈರ ಕಟ್ಟಿಕೊಂಡಂತೆ; ಕುಡಿಯಲು ಬಂದರೆ, ಆತ್ಮದ ದುರಹಂಕಾರ ನಷ್ಟವಾದಂತೆ ಮನೆಯಾಕೆಯು ಜಯಲಕ್ಷ್ಮಿಯ ಅಪರಾವತಾರವಾದುದರಿಂದ ನೀವೇ ಸೋತು ಬಿಡುತ್ತೀರಿ. ಮೇಜಿನ ಬಳಿಯ ಕುರ್ಚಿಯಲ್ಲಿ ಮಂಡಿಸಿ, 'ಇಲ್ಲಿ ಕೊಡು' ಎಂದು ಕಪ್ಪಿಗೆ ಕೈಯಿಡುವಾಗ ಅದು ಸುಟ್ಟು ಹೋಗುತ್ತದೆ; ಅಂತೂ ಕೋಪ ಜನ್ಯ ಶಕ್ತಿಯಿಂದ ಆ ನೋವನ್ನು ಸಹಿಸಿ, ಬಟ್ಟೆಯ ಆಧಾರದಿಂದ ತುಟಿಗೆ ತಾಗಿಸುವುದೇ ತಡ, ಅದು ಕರಟಲು ತೊಡಗುತ್ತದೆ; ನಾಲಗೆ ಉರಿದು ಹೋಗುತ್ತದೆ. ಆಗ ನಿಮ್ಮ ಮುಖ ಭಂಗಿಯ ಚಿತ್ರ ಯಾವ ಕಲಾವಿದನೂ ಬಿಡಿಸಲಾರ; ಊಹಿಸಲೂ ಅಶಕ್ತ; ಅನುಭವಿಸಿದರೆ ಮಾತ್ರ ತಿಳಿದೀತು. ಆಗ ನಿಮ್ಮಾಕೆ ನಿಮ್ಮ ಸಹಾಯಕ್ಕೆ ಬಂದೇ ಬರುತ್ತಾಳೆ. 'ನಿಲ್ಲಿ ಒಂದು ನಿಮಿಷ' ಎಂದು ಆಕೆ ಮನೆಯೊಳಕ್ಕೆ ಹೋಗಿ ದೊಡ್ಡ ತಪಲೆಯೊಂದನ್ನು ತಂದು ಕಪ್ಪಿನ ಕಪ್ಪು ಕಾಫಿಯನ್ನು ಅದಕ್ಕೆ ಸುರಿದು ಆಡಿಸುತ್ತ 'ಸಿನಿಮಾದ ಕತೆ'ಗೆ ಪೀಠಿಕೆ ಹಾಕುತ್ತಾಳೆ. ಅನ್ಯ ಗತಿಕಾಣದ ನೀವು ಅನಿವಾರ್ಯವಾಗಿ ಆಕೆಯ ಪ್ರಶ್ನೆಗಳಿಗೆ 'ಒಂದೇ ನಿಮಿಷದಲ್ಲಿ' ಉತ್ತರ ಹೇಳಲೇ ಬೇಕಾಗುತ್ತದೆ. ಅಷ್ಟರಲ್ಲಿ ನೀವು ಸಾವರಿಸಿ, ಹೊರಡಲು ಉತ್ಸುಕರಾಗಿರುವಾಗ, ನಿಮ್ಮಾಕೆ, ಇಗೊಳ್ಳಿ ಕಾಫಿ ಆರಿತು. ಒಂದು ನಿಮಿಷದಲ್ಲಿ ಅದೇನು ಊರು ಮುಳುಗುತ್ತೆಯೆ? ಎಂದು ಸವಾಲು ಹಾಕುತ್ತಿರುವಾಗಲೇ ಕಾಫಿ ಲೋಟ ನಿಮ್ಮ ಕೈಸೇರಿ, ನೀವು ಅದನ್ನು ಬಾಯಿಗಿಟ್ಟುಕೊಂಡು ಹೀರತೊಡಗಿರುತ್ತೀರಿ. ಆಗ ನಿಮಗೆ ಅನುಭವವಾಗುತ್ತದೆ. 'ಒಂದುನಿಮಿಷ,ದ ಬೆಲೆ ಯೆಷ್ಟು ಎಂದು. ಆಕೆಯ ಪ್ರಶ್ನೆಗೆ ಸಮರ್ಪಕ ಉತ್ತರ ಕೊಡುವ ಶಕ್ತಿಯಿದ್ದರೂ ಮನಸ್ಸು ಇದ್ದರೂ ತಂಪಾದ ಕಾಫಿ ಅವನ್ನು ತಡೆಯುತ್ತದೆ; ನೀವು "ಹೋಗಿ ಬರುತ್ತೇನೆನ್ನುತ್ತ ಮಡದಿಯ ಮುಖವನ್ನೂ ನೋಡದೆ ಹೊರಗೆ ಕಾಲಿಟ್ಟೇ ತೀರುತ್ತೀರಿ.

ಮನೆಯಿಂದ ನೀವು ನೆರೆಯವನ ಮನೆ ಮುಂದು ಬಂದು ನಿಲ್ಲುತ್ತೀರಿ 'ರಾಮೂ...., ಎಂದು ಕೂಗುತ್ತೀರಿ 'ಯಾರು ಗೋಸುವೆ? ಏನಯ್ಯಾ, ಐದು ಗಂಟೆಯಾಯಿತೆ? ಎಂದು ಆತ ಪ್ರಶ್ನಿಸಿ, 'ಬಾ, ಕುಳಿತುಕೋ. ಈಗ, ಒಂದು ನಿಮಿಷ, ಎಂದು ನಿಮ್ಮನ್ನು ಸ್ವಾಗತಿಸುತ್ತಾನೆ ಈ 'ಒಂದು ನಿಮಿಷ'ದ ವಿಷಯದಲ್ಲಿ ನೀವು ಈಗಾಗಲೇ ಸಾಕಷ್ಟು ತಂಬೇತಿ ಪಡೆದಿರುತ್ತೀರಿ, ಆದರೆ, ಆ ಅನುಭವನ್ನು ಹೊರಗೆಡಹಲು ನಾಚಿಗೆಯೆನ್ನುವುದಕ್ಕಿಂತ ಸಮಯವಿಲ್ಲವೆಂದು ಜಾರಿಸಿಕೊಳ್ಳುತ್ತೀರಿ. ಗಂಟೆ ಐದೂವರೆಯಾಯಿತು; ಬೇಗ ಒಂದುಬಿಡು, ಎಂದು ಅತನನ್ನು ಕಳಿಸಿ ನೀವು ಕುರ್ಚಿಯಲ್ಲಿ ಆಸೀನರಾಗುತ್ತೀರಿ. 'ಒಂದು ನಿಮಿಷದ ವೇಳೆಯನ್ನು ವ್ಯರ್ಥ ಹರಿಯಗೊಡಲು ಮನಸ್ಸಿಲ್ಲದೆ ಮೇಜಿನ ಮೇಲಿದ್ದ ಪತ್ರಿಕೆಯೊಂದನ್ನು ಎತ್ತಿಕೊಂಡು, ಅಕ್ಷರಗಳನ್ನು ಎಣಿಸತೊಡಗುತ್ತೀರಿ. ಮಾಮೂಲು 'ಒಂದು ನಿಮಿಷ, ಕಳೆದ ಮೇಲೆ, ನಿಮ್ಮ ಸ್ನೇಹಿತ ಬೆನ್ನಿಗೆ ಕೈಹಾಕಿ, 'ತಡವಾಯಿತು; ಹೊರಡುವ, ಎನ್ನುವಾಗ, ನೀವು ಸುಪ್ರಸಿದ್ಧ ಸಿನಿಮಾ ತಾರೆಯೊಬ್ಬಳ ಚಿತ್ರ ಅಚ್ಚಾಗಿದ್ದ ಪುಟ ತಿರುವಿದ್ದೀರಷ್ಟೆ. 'ನಿಲ್ಲು, ಈಗ ಒಂದು ನಿಮಿಷ, ಎಂದ ನೀವು ಚಿತ್ರವನ್ನು ಮಾತ್ರ ನೋಡಿ ಬಿಡುವುದುಂಟೆ? 'ಸಾಕೊ ಮತ್ತೆ ನೋಡುವಿಯಂತೆ, ಎಂದಾತ ನಾಲ್ಕು ಬಾರಿ ಎಚ್ಚರಿಸಿದರೂ ನಿಮ್ಮ ಪಲ್ಲವಿ ಒಂದೇ 'ಇರೋ, ಒಂದು ನಿಮಿಷ". ಅಂತೂ ತಾರೆಯ ವಿಷಯಕ ಬರವಣಿಗೆಯನ್ನು ನೋಡಿ, ಪತ್ರಿಕೆಯ ಎಲ್ಲಾ ಹಾಳೆಗಳನ್ನೂ ಮಗುಚಿ ಮೇಜಿನ ಮೇಲೆ ಮಡಗುವಷ್ಟರಲ್ಲಿ ಎರಡೇ ನಿಮಿಷಗಳು ಉರುಳಿದ್ದರೂ ನಿಮ್ಮ ಕೈಗಡಿಯಾರದ ಮುಳ್ಳುಗಳು ಸರಳ ರೇಖೆಯಲ್ಲಿ ನಿಂತಿರುತ್ತವೆ.

ಅಲ್ಲಿಂದ ಲಘು ಬಗೆಯಿಂದ ಎದ್ದು ಸಿನೆಮಾ ಮಂದಿರದ ಬಳಿಯ ರೆಸ್ಟೋರೆಂಟನ್ನು ಹೋಗುತ್ತೀರಿ. ನಿಮಗಂತೂ ಆ ಧಂಡಾ ಕಾಫಿ ಕುಡಿದು ಬಾಯಿಯಿಡಿ ಕಹಿಯಾಗಿರುತ್ತದೆ; ನಿಮ್ಮ ಸ್ನೇಹಿತ ಪಾಪ, ಬಿಸಿಬಿಸಿ ಕಾಫಿ ಕುಡಿದು ನಾಲಿಗೆ ಸುಟ್ಟುಕೊಂಡಿರುತ್ತಾನೆ. ಸಿನೆಮಾ ಪ್ರಾರಂಭ ೬॥ ತಾಸಿಗಲ್ಲವೆ? ರೆಸ್ಟೋರೆಂಟನವನು ನಿಮ್ಮಂತೆಯೇ ಹತ್ತಾರು ಕುಳುವಾರುಗಳ ತೃಪ್ತಿಪಡಿಸಬೇಕಾದುದರಿಂದ, 'ಬಂದೆ, ಈಗ, ಒಂದು ನಿಮಿಷ" ಎನ್ನುತ್ತಾನೆ. ನೀವು ಮನಸ್ಸಿನಲ್ಲಿಯೇ ಅತನನ್ನು ನಿಂದಿಸುತ್ತ ಅವನ ರೂಪಲಾವಣ್ಯಗಳ ಬಗೆಗೆ ಟೀಕಾ ವರ್ಷಗರೆಯುತ್ತಿರುವಾಗ ನಿಮ್ಮ ಬಳಿಗೆ ಬಂದು ವಿಚಾರಿಸುತ್ತಾನೆ. ನೀವಾದರೂ ಆತ ಬಂದು ಸವಾಲು ಕೇಳಿದಾಗಲೇ ಏನು ಬೇಕೆಂಬ ಕಡೆಗೆ ಗಮನ ಹರಿಸುತ್ತೀರಿ. ಅಂತೂ ಎರಡು ಮೂರು 'ಒಂದು ನಿಮಿಷ'ಗಳು ಸಂದು ಬಿಲ್ಲು ಕೊಡಲು ಕಿಸೆಗೆ ಕೈ ಹಾಕುವಾಗ ಅಕಸ್ಮತ್ತಾಗಿ ಗಡಿಯಾರದ ಮುಳ್ಳುಗಳು ಒಂದರ ಮೇಲೆನಿಂತಿರುವುದು ಗೋಚರವಾಗುತ್ತದೆ.

ಅಲ್ಲಿಂದ ಬೇಗ ಬೇಗನೆ ಹೊರಟ ನಿಮಗೆ ಬಾಗಿಲ ಹೊರಗೆ ಬರುವಾಗ ಕೊಡೆಬಿಟ್ಟು ಬಂದ ನೆನಪಾಗುತ್ತದೆ. 'ಈಗ, ಒಂದು ನಿಮಿಷ' ಎಂದ ನೀವು ಮರಳಿ ಕೊಡೆ ಹುಡುಕಿ ಹಿಡಿದುಕೊಂಡು ಬರುವಾಗ, ನಿಮ್ಮ ಮಿತ್ರ ಪಕ್ಕದ ಅಂಗಡಿಯಲ್ಲಿ ಸಿಗರೇಟು ವ್ಯವಹಾರ ಮಾಡುತ್ತಿರುತ್ತಾನೆ ನೀವು ತಡವಾಯಿತ: ಪಿಕ್ಚರ್ ಆಗಲೇ ಪ್ರಾರಂಭವಾಗಿರ ಬೇಕು, ಬೇಗ ಬಾ ಎಂದು ಕೂಗುವುದಕ್ಕೆ ಬಾಯಿ ತೆರೆಯುವುದರಲ್ಲಿದ್ದೀರಿ, 'ಗೋಪೂ, ಈಗ, ಒಂದು ನಿಮಿಷ, ಎಂದಾತನ ಕೂಗು ಕಿವಿದೆರೆಗೆ ಬಡೆಯುತ್ತದೆ. ಆ ಮೇಲೆ ಧಿಯೆಟರಿನ ಬುಕ್ಕಿಂಗ್ ಆಫೀಸಿನ ಕಿಂಡಿಯ ಬಳಿ ಟಿಕೇಟು ಕೊಳ್ಳುತ್ತಿರುವಾಗ ನೀವು ಕೇಳುತ್ತೀರಿ 'ಸಿನೆಮಾ ಬಿಗಿನ್ ಆಯಿತೆ,, ತತ್‌ಕ್ಷಣ ಅಲ್ಲಿನ ಬುಕ್ಕಿಂಗ್ ಕ್ಲಾರ್ಕ್ 'ಈಗ ಒಂದು ನಿಮಿಷ, ಎಂದು ಮುಗುಳುನಕ್ಕು ಹುಬ್ಬು ಕೊಂಕಿಸುತ್ತಿರುವುದನ್ನು ನಿಮಗೂ 'ಒಂದು ನಿಮಿಷ, ನೋಡುತ್ತಿರಬಹುದು ಎನ್ನಿಸುತ್ತದೆ ನಿಮ್ಮ ಅವಿವಾಹಿತ ದೋಸ್ತಿ, 'ಸಿನಿಮಾ ನೋಡುವುದಕ್ಕಿಂತಲೂ ಈ 'ಒಂದು ನಿಮಿಷದ, ಸ್ಟೈಲು ನೋಡುವುದೇ ಪುಣ್ಯವೆಂದುಕೊಂಡರೆ, ಆಶ್ಚರ್ಯವಿಲ್ಲ

o o o

ಶಾಲೆಗಳಲ್ಲಿ ಕಲಿಸಿದ್ದ ಕೋಷ್ಟಕ ನಿಮಗೆ ನೆನಪಿರಬಹುದು; ವ್ಯವಧಾನಕ್ಕೆ ಇದೆಯೆ: ಆದರೆ, ನನ್ನ ಜೀವಮಾನದಲ್ಲಿ ಎರಡೇ ಎರಡು ಬಾರಿ ಆಕೋಷ್ಟಕ ಸತ್ಯವೆನಿಸಿದ್ದುದು ನೆನಪಿದೆ. ಪ್ರಾಯ ಆ ಪೊಂ

(೯ನೇ ಪುಟ ನೋಡಿರಿ)

ಅತ್ಯುತ್ತಮ ಟಾನಿಕ್

ನಿಮ್ಮ ದೇಹ — ಮನಸ್ಸುಗಳಿಗೆ
ಆರೋಗ್ಯವನ್ನೂ ಬಲವನ್ನೂ, ನವಚೈತನ್ಯವನ್ನೂ
ತಂದು ಕೊಡಬಲ್ಲ ಏಕಮಾತ್ರ ಟಾನಿಕ್

ಉಳಿತಾಯ

ಉಳಿತಾಯಕ್ಕಾಗಿ ಇಂದೇ ಒಂದು ಸೇವಿಂಗ್ಸ್ ಖಾತೆ ತೆರೆಯಿರಿ.

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ರಿಜಿಸ್ಟರ್ಡ್ ಆಫೀಸು: ಉಡುಪಿ)
ಆಡಳಿತ ಆಫೀಸು: ಮಂಗಳೂರು.

ನಾಗಾಲೇಂಡಿನ ನಾಗಾಜನರು

ಭಾರತದ ಹೊಸ ರಾಜ್ಯದ ನಾಗರಿಕರು ಉಳಿದವರಿಗಿಂತ ತೀರ ಭಿನ್ನರು.

ಬುಡಕಟ್ಟಿನವರ ಅಭಿವೃದ್ಧಿಗಾಗಿ ಮಧ್ಯಪ್ರದೇಶದ ಕಾಡು ಪ್ರದೇಶದಲ್ಲಿ ಪರಿಶೀಲನೆಯು ನಡೆಯುತ್ತಿದೆ. ಒಂದು ವಸ್ತು ಸಂಗ್ರಹಾಲಯವಿದ್ದು ಅದು ಬುಡಕಟ್ಟಿನವರ ಕಲಾಕೃತಿಗಳನ್ನು ಕೂಡಿಸುತ್ತದೆ. ಮೇಲಿನ ಚಿತ್ರದಲ್ಲಿ ಆ ಜನಾಂಗದವರು ತಮ್ಮ ನೃತ್ಯಗಳಲ್ಲಿ ಬಳಸುತ್ತಿರುವ ವಿವಿಧ ರೀತಿಯ ಭೇರಿ ಡೋಲುಗಳನ್ನು ಕಾಣಬಹುದು

ನಾಗಾಗಳು ಕನಸು ಕಾಣುತ್ತಿದ್ದ ನಾಗಾಲೇಂಡು ಇಂದದರ ಪಾಲಿಗೆ ಕರಗತವಾಗಿಯದೆ. ಇದು ಅತ್ಯಂತ ಸುಟ್ಟ ಪ್ರಾಂತ್ಯ (ರಾಜ್ಯ) ವಾಗಿದ್ದು, ಪಚ್ಚೆ ಪರ್ವತಗಳಿಂದೊಡಗೂಡಿದೆ.

ನಾಗಾಗಳು ಭಿನ್ನ ಭಿನ್ನ ಜಾತಿಗೆ ಸೇರಿದವರಿದ್ದು, ಅವರಲ್ಲಿಂದು ಸಾಧಾರಣ ಇಪ್ಪತ್ತು ದೊಡ್ಡ ದೊಡ್ಡ ಗುಂಪುಗಳಿವೆ. ಪ್ರತೀಯೊಂದು ಗುಂಪಿಗೂ ಅವರವರ ಆಡು ಭಾಷೆಗಳಿವೆಯೂದರೂ ಅಸ್ಸಾಮಿ ಭಾಷೆಯನ್ನು ಇತರ ಗುಂಪುಗಳೊಡನೆ ವ್ಯವಹಾರಿಕ ಭಾಷೆಯನ್ನಾಗಿ ಬಳಸುತ್ತಾರೆ. ತಮಿಳನಿಗೂ ಬಂಗಾಲಿಗೂ ಭೇದ ಇರುವಂತೆ ತಂಗಕುಲ ನಾಗಾನಿಗೂ ಕೊನ್ಯಾಕ ನಾಗನಿಗೂ ವ್ಯತ್ಯಾಸವಿದೆ. ಶತಮಾನಗಳ ಹಿಂದಿನಿಂದಲೂ ಸಾಧಾರಣವಾಗಿ ಅವರ ಗುಂಪು—ಗುಂಪುಗಳೊಳಗೆ ವೈಷಮ್ಯದ ಜ್ವಾಲೆ ಧಗಧಗಿಸುತಿತ್ತು. ಹಳ್ಳಿ-ಹಳ್ಳಿಗೆ, ಪಂಗಡ-ಪಂಗಡಕ್ಕೆ ಹೊಡೆದಾಟ ನಡೆಯುವದು ಸರ್ವ ಸಾಮಾನ್ಯ ವಿಷಯವಾಗಿತ್ತು. ಆದರೆ ಇತ್ತೀಚೆಗೆ, ದ್ವಿತೀಯ ಮಹಾಯುದ್ಧದ ನಂತರ, ಅವರೆಲ್ಲರ ನಡುವೆ ಒಂದು ರೀತಿಯ ರಾಜಕೀಯ ಜಾಗೃತಿ ಉಂಟಾಗಿದೆ. ರಸ್ತೆ, ವ್ಯಾಪಾರ-ವಹಿವಾಟು, ಅಂತರ್ಜಾತಿ ವಿವಾಹ ಇವು ಹೆಚ್ಚುತ್ತಿದ್ದು ಸಾಮಾಜಿಕ ಏಕತೆಯ ಅಭಿಪ್ರಾಯ ಬೆಳೆಯಲಾರಂಭಿಸಿದೆ. ಹಾಗಿದ್ದರೂ ಪ್ರಪಂಚದ ಅತೀ ಜ್ವಾಲಾಮುಖಿ ರೀತಿಯಗಡಿ ಪ್ರದೇಶದಲ್ಲಿ ತಾವು ವಾಸಿಸುವುದಾಗಿ ಅವರ ಮನಸ್ಸಾಕ್ಷಿಯೇ ಅವರಿಗೆ ತಿಳಿಸುತ್ತದೆ.

ನಾಗಾಗಳು ಬಹಳ ಬುದ್ಧಿವಂತ ಗುಡ್ಡಗಾಡಿನ ನಿವಾಸಿಗಳಿದ್ದಾರೆ. ಅವರು ಸ್ವಾಭಿಮಾನಿಗಳು, ಸ್ವ—ನಂಬಿಕೆಯುಳ್ಳವರು ಹಾಗೂ ಸಾಂಪ್ರಾದಾಯಿಕ ಸಮರ ಪದ್ಧತಿಯಲ್ಲಿ ನುರಿತವರೂ ಇದ್ದಾರೆ. ಎಲ್ಲಾ ರೈತರ ಜಾತಿಗಳಂತೆ ಇವರೂ ಬಾಹ್ಯ ದೃಷ್ಟಿಗೆ ಪ್ರಗತಿ ವಿರೋಧಿಗಳಂತೆ ಇದ್ದಾರೆ ಪರಂಪರಾನುಗತವಾಗಿ ಬಂದಿರುವ ನರ-ಬೇಟೆಯ ಅಭ್ಯಾಸ ಅವರಲ್ಲಿಂದಿರುವದಿಲ್ಲವಾದರೂ ಅಪರಿಚಿತನ್ಯಾರಾದರೂ ಸಿಕ್ಕಿಬಿದ್ದಲ್ಲಿ ಅವನ ಕಥೆ ತೀರಿದಂತೆಯೇ ಸರಿ. ಅಶೆಬುರುಕ ವ್ಯಾಪಾರಿ ಅಥವಾ ಹಟಮಾರಿ ಅಧಿಕಾರಿಯು ಅವರ ಬೇಟೆಗೆ ಅಗಾಗ ಬಲಿಯೂಗುತ್ತಿರುತ್ತಾರೆ.

ನಾಗಾಗಳ ದೈನಂದಿನ ಜೀವನವು ಬಹಳ ಸರಳ ರೀತಿಯಲ್ಲಿದೆ ಅಲ್ಲದೆ ವಿನೋದಕರವಾಗಿಯೂ ಇದೆ. ಮನೆಯ ಮಹಿಳೆ ಮುಂಜಾನೆ ಬೇಗನೆ ಎದ್ದು ಹತ್ತಿರದ ಹೊಳೆಯಿಂದ ನೀರನ್ನು ತಂದು ಅಡುಗೆ ಅಣಿ ಮಾಡಿಡುತ್ತಾಳೆ. ಸ್ವಲ್ಪ ಸಮಯದ ನಂತರ ಗಂಡಸರೇಳುತ್ತಾರೆ ಅವರು ಅಣಿಯಾಗಿರುವ ಅಡುಗೆಯನ್ನುಂಡು ತಮ್ಮ ಕಾರ್ಯಕ್ಕೆ ತೆರಳುತ್ತಾರೆ. ಮನೆಯಲ್ಲಿರುವಾಗ ಹೆಚ್ಚಾಗಿ ಅವರು ಬೆಂಕಿಯ ಸುತ್ತ ಕುಳಿತುಕೊಳ್ಳುತ್ತಾರೆ ಆಗ ಗೃಹ ಜೀವನಕ್ಕೆ ಬೇಕಾಗುವ ಆವಶ್ಯಕ ಮಾತುಕತೆಗಳು ನಡೆಯುತ್ತವೆ. ಅತಿಥಿಗಳಿಗೂ ಅಲ್ಲೇ ಆಸನ ಅಣಿಯಾಗಿರುತ್ತದೆ. ಅತಿಥಿಗಾಗಿ ಅಣಿಗೊಳಿಸಿದ ಆಹಾರದಲ್ಲಿ ಅನೇಕ ರುಚಿಕರವಾದ ಖಾದ್ಯ ವಸ್ತುಗಳಿರುತ್ತವೆ ಅವರಿಗೆ ಹಂದಿಯ ಮಾಂಸದ ಪದಾರ್ಥ ಇಥವಾ ಹುರಿದ ಮೀನು ಮುಂತಾದುವನ್ನು ಬೆತ್ತದ ತಟ್ಟೆಯಲ್ಲಿ ಬಡಿಸುವರು. ಗದ್ದೆಯಲ್ಲಿ ಗಂಡಸರೂ ಹೆಂಗಸರೂ ಜೊತೆಗೂಡಿಯೇ ಕಾರ್ಯಮಗ್ನರಾಗಿರುತ್ತಾರೆ. ನಾಗಾ ರೈತರು ಯೂವಾಗಲೂ ಕಾರ್ಯಶೀಲರಿರುತ್ತಾರೆ. ಅವರು ಅಕ್ಕಿಯನ್ನು ಬೆಳೆಸುತ್ತಾರಲ್ಲದೆ ರಾಗಿ, ಶುಂಠಿ, ಸಾಸಿವೆ ಮತ್ತು ಬಟಾಟೆಯನ್ನು ಬೆಳೆಸುತ್ತಾರೆ ಸ್ತ್ರೀಯರಿಗೆ ಗದ್ದೆಯಲ್ಲಿ ಮಾತ್ರ ಕೆಲಸ ಇರುವದಲ್ಲ. ಅವರು ಪಕ್ಕದ ಅಡವಿಗೆ ಹೋಗಿ ಸೌದೆ ತರಬೇಕು ಅದನ್ನು ಕೂಡಿಸಿ ರಾಶಿಮಾಡುವ ಕೆಲಸ ಗಂಡಸರ ಪಾಲಿಗೆ ನಾಗಾಲೇಂಡಿನಲ್ಲಿ ಕಳ್ಳತನ್ನು ಅಪರೂಪವೇ ಸರಿ. ಹಾಗಿರುವದರಿಂದ, ದೂರ ದೂರದ ತಮ್ಮ ಗದ್ದೆಗಳಿಂದ ಧಾನ್ಯವನ್ನು ನೇರ ಮನೆಗೆ ತೆಗೆದುಕೊಂಡು ಬರುವ ಬದಲು ಅವರು ಅಲ್ಲಲ್ಲಿ ಕಣಜಗಳಲ್ಲಿ ಶೇಖರಿಸಿಡುತ್ತಾರೆ ಕತ್ತಲೆಯೂಗುವ ಸ್ವಲ್ಪ ಮುಂಚೆ ಅವರು ರಾತ್ರಿಯ ಊಟ ಸ್ವೀಕರಿಸುತ್ತಾರೆ ಅಲ್ಲಿಗೆ ಅಂದಿನ ಕೆಲಸ ಕಾರ್ಯಗಳು ಮುಗಿಯುತ್ತವೆ

ಹಳೆಯ ನಾಗಾ ತೇದಿ-ಸೂಚಿಯಲ್ಲಿ ಹಲವಾರು ರಜಾದಿನಗಳಿವೆ. ರಜಾದಿನಗಳನ್ನು ಅಲ್ಲಿ ಗೆನ್ನಾಗಳೆಂದು ಕರೆಯುವರು. ಶಬ್ದಾರ್ಥವಾಗಿ, ಗೆನ್ನಾ ಎಂದರೆ ನಿಷೇಧದಿನ ಅಥವಾ ಅಗಲುವಿಕೆಯ ದಿನ ಇರುತ್ತದೆ ಅದು ವೈಯಕ್ತಿಕ ಅಥವಾ ಬಣದ ಕೇಳಿಕೆಯ ಮೇಲೆ ಹೊಂದಿಕೊಂಡಿದೆ. ಗೆನ್ನಾಕ್ಕೆ ಹೊಂದಿಕೊಂಡು, ಹಿಂದೆ ಅಥವಾ ಮುಂದೆ, ಅವರ ಹಬ್ಬಗಳು ಬರುತ್ತವೆ. ಅವು ಕೃಷಿಯ ಮೇಲೆ ಅವಲಂಬಿಸಿಕೊಂಡಿವೆ ಕ್ರಿಸ್ತೀಯ ನಾಗಾಗಳು ಅವರದ್ದೇ ಆದ ಬೇರೆ ತೇದಿ-ಸೂಚಿಯನ್ನು ಉಪಯೋಗಿಸಿಕೊಳ್ಳುತ್ತಾರೆ. ಆದರಲ್ಲಿ ಕ್ರಿಸ್‌ಮಸಿಗೆ ವೈಶಿಷ್ಟ್ಯವನ್ನೀಯಲಾಗಿದೆ. ಹಿಂದೂ ವೈಷ್ಣವ ನಾಗಾಗಳೂ ಇದ್ದಾರೆ ಅವರು ನಾಗಾಲೇಂಡಿನ ಟ್ಯಯನ್‌ಸಾಂಗ್ ವಿಭಾಗದಲ್ಲಿದ್ದಾರೆ ಅವರು ಹೆಚ್ಚಾಗಿ ಹಿಂದೂ ಹಬ್ಬಗಳನ್ನೇ ಆಚರಿಸುವರು ವೈಷ್ಣವ ಮತ ಪ್ರಸಾರಕರು ಈ ನಾಗಾಗಳನ್ನು ತಮ್ಮ ಮತಕ್ಕೆ ಮಧ್ಯ ಕಾಲದಲ್ಲಿ ಸೇರಿಸಿಕೊಂಡಿರಬಹುದು

ಮಣಿಪುರದಲ್ಲೂ ನಾಗಾಗಳಿರುವರು. ಅವರು ಈ ನಾಗಾಲೇಂಡಿಗೆ ಸೇರಿರುವದಿಲ್ಲ ಅಲ್ಲಿ ಸಮ್ಡೋಲ್ ಎಂಬುದು ಒಂದು ಹಳ್ಳಿ ಅಲ್ಲಿ ಕೆಲವು 'ಸಾಮಾಜಿಕ ಮನೆ"ಗಳಿವೆ. ಅವುಗಳನ್ನು ಲೋಂಗ್‌ಗಳೆಂದು ಕರೆಯುವರು. ಅದು ಆ ಗ್ರಾಮದ ಅವಿವಾಹಿತ ಕನ್ಯೆಯರಿಗಾಗಿ ಇದೆ ಅಲ್ಲಿ ಅತಿಥಿಗಳಾಗಿ ಹೋದವರಿಗೆ ಕೈಕಾಲು ತೊಳೆಯಲಿಕ್ಕಾಗಿ ಮರದ ಪಾತ್ರೆಯಲ್ಲಿ ಬಿಸಿ ನೀರನ್ನು ಕೊಡುತ್ತಾರೆ. ಅನಂತರ ಕುಡಿಯಲು ಒಂದು ತಂಬಿಗೆಯಲ್ಲಿ ಬಿಸಿ ನೀರನ್ನು ಕೊಡುತ್ತಾರೆ. ಅಲ್ಲಿಯ ತರಣಿಯರಿಗೆ ನೂಲಲು ಕಲಿಸಲಾಗುತ್ತದೆ. ಲೋಂಗ್ ಎಂದರೆ ಸ್ತ್ರೀಯರಿಗೆ 'ಜಾತೀಯ ಶಿಕ್ಷಣಾ ಕೇಂದ್ರ'ವಿದೆ ಹಾಗೆಯೇ ಹುಡುಗರ ಶಿಕ್ಷಣಾ ಕೇಂದ್ರಕ್ಕೆ ಮೊರಂಗ್ ಎನ್ನುತ್ತಾರೆ. ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಕೆಲವು ಕಾಲ ಅಲ್ಲೇ ಕಳೆಯಬೇಕಾಗುತ್ತದೆ. ನಾಗಾ ನಾರಿಗೆ ತನ್ನ ಬಾಳ್ವೆಯ ಸಂಗಾತಿಯನ್ನಾರಿಸಿಕೊಳ್ಳಲು ಪೂರ್ಣ ಸ್ವಾತಂತ್ರ್ಯವಿದೆ. ಹಾಗೆಯೇ, ಆಕೆಗೆ ವಿಚ್ಛೇದನಕ್ಕೂ ಹಕ್ಕಿರುವದಾದರೂ ಅವಳು ಹಾಗೆ ಮಾಡುವದು ಬಹಳ ಕಮ್ಮಿ ವಿವಾಹವು ಒಂದು ಮಹತ್ವಪೂರ್ಣ ಹಬ್ಬವಿದೆ ಆಗ ಹಾಡು ಹಾಗೂ ಹಲವಾರು ವಿದದ ಆಟಗಳ ಕಾರ್ಯಕ್ರಮ ಇರುತ್ತದೆ ಒಹುಪತ್ನೀತ್ವವು ನಾಗಾಗಳಿಗರಿಯದ ವಿಷಯವಾಗಿ ಇರುವದಿಲ್ಲ ಒಬ್ಬನು ಅದೆಷ್ಟು ಸಲ ಮದುವೆಯೂದರೂ ಪ್ರಥಮ ಪತ್ನಿಯ ಹಕ್ಕು-ಅಧಿಕಾರ-ಒಂದಿನಿತೂ ಕಮ್ಮಿಯಾಗುವದಿಲ್ಲ ಅದು ಅವರ ಸಂಪ್ರದಾಯವಿದೆ.

ನಾಗಾಗಳ ದೈಹಿಕ ಆರೋಗ್ಯ ಬಹಳ ಉತ್ತಮವಾಗಿರುತ್ತವೆ ಅವನು ಉತ್ತಮ ಬೇಟೆಗಾರನಿದ್ದಾನೆ. ಹಾಗೂ ಬಾಣ ಬಿಡುವದರಲ್ಲಿ ಪಳಗಿದ ಕೈ ಇದ್ದಾನೆ. ಕಾಡು ಯುದ್ಧದಲ್ಲಿ ಅವರಿಗೆ ಚೆನ್ನಾಗಿ ಅಭ್ಯಾಸವಿರುತ್ತದೆ ಆ ಪಚ್ಚೆ ಪರ್ವತಗಳಲ್ಲಿ ಗಮನ ಸೆಳೆಯುವ ಒಂದು ಮುಖ್ಯ ವಿಷಯವೆಂದರೆ ಅಲ್ಲಿ ನೊಣಗಳೇ ಇರುವದಿಲ್ಲ.

—ಶ್ರೀ ಶಿವಶಂಕರ, ಮದ್ರಾಸು.

ಯಕ್ಷಗಾನದಲ್ಲಿ ಹಿರಿಯ ಸ್ಥಾನ ಗಳಿಸಿ, 'ಯಕ್ಷಗಾನ ಭಾಸ್ಕರ'ನೆಂದು ಪ್ರಸಿದ್ಧಿಪಡೆದ ದಿ| ಕವಿಭೂಷಣ ಕೆ. ಪಿ. ವೆಂಕಪ್ಪ ಶೆಟ್ಟರ

ನವಕಾಲೋಚಿತವಾದ ಯಕ್ಷಗಾನ ಪ್ರಸಂಗಗಳು.

ಸಾಹಸ ಭೀಮ ವಿಜಯ (ಗದಾಯುದ್ದ) ೦—೮—೦

ಯಕ್ಷಗಾನ ದರಾವತಾರದ ಆಟದ ಕ್ರಮಕ್ಕನುಸರಿಸಿ ಪಾಂಡವರ ಒಡ್ಡೋಲಗದ ದೃಶ್ಯವನ್ನು ದಿಗ್ದರ್ಶನ ಮಾಡಿ, ಮುಂದೆ ಕಥಾಭಾಗವನ್ನು ಮೂಲ ಕಾವ್ಯಕ್ಕನುಸರಿಸಿಯೇ ಕೊನೆಗೊಳಿಸಿದೆ

ಭಾರತದ ಗುರುಕುಲ ೦—೬—೦

ಪಾಂಡವ, ಕೌರವ ಬಾಲ್ಯ ಕೇಳಿಗಳು, ವಿದ್ಯಾಭ್ಯಾಸ, ಪರೀಕ್ಷಾರಂಗದ ಕಾರ್ಯಗಳು, ಗುರುದಕ್ಷಿಣೆ ಮೊದಲಾದ ವಿಷಯಗಳನ್ನೊಳಗೊಂಡಿದೆ.

ಲತ್ತಪಗಡೆ ೦—೬—೦

ಭಾರತದ ಸಭಾಪರ್ವದೊಳಗಣ ಚರಿತ್ರೆಗಳಿರುವ ನಾಲ್ಕು ದೃಶ್ಯಗಳೂ ಅರಣ್ಯ ಪರ್ವೋಕ್ತವಾದ ಕಿಮೀರ ವಧೆಯೆಂಬ ದೃಶ್ಯವೂ ಸೇರಿವೆ.

ಭರತೇಶ ದಿಗ್ವಿಜಯ ೦—೮—೦

ರಾಜಕವಿ ರತ್ನಾಕರವರ್ಣಿಯ ಶೃಂಗಾರ ರಸಪ್ರಧಾನವಾದ ಭರತೇಶ ವೈಭವದೊಳಗಣ ದಿಗ್ವಿಜಯ ವಿಭಾಗದ ನೂತನ ಕಥಾವಸ್ತುಗಳನ್ನೊಳಗೊಂಡಿದೆ ಯಕ್ಷಗಾನ ಕಲಾಭಿಮಾನಿಗಳಿಗೆ ವಿವರವಾದ ಸೂಕ್ತ ಅನುಭವ ಸೂಚಿಯಿದೆ.

ವಾಲಿ ಸುಗ್ರೀವ (ಬಹುಮಾನಿತ) ೦—೮—೦

ವೀರ, ಕರುಣಾ ರಸಪ್ರಧಾನವಾದ ನವೀನ ರೀತಿಯಲ್ಲಿ ಮನವೊಪ್ಪುವಂತೆ ರಚಿಸಲಾದ ರಾಮಾಯಣಾಂತರ್ಗತ ಪ್ರಸಂಗ.

ಪುಸ್ತಕ ವ್ಯಾಪಾರಿಗಳಿಗೆ ಧಾರಾಳ ಕಮಿಷನ್.

ಉಡುಪಿಯಲ್ಲಿ ಪಾವಂಜೆ ಗುರುರಾವ್ & ಸನ್ಸ್ ಇವರಲ್ಲಿ ಸಿಗುತ್ತವೆ

ನವಭಾರತ ಪುಸ್ತಕ ಭಂಡಾರ, ಉಡುಪಿ.

ಶಾಲೆಗಳಿಗೆ ಬೇಕಾಗುವ

ಯೂನಿಕ್ತೂ ಫಾಮ್ಯುಗಳೂ ಹಾಜರಿ ರಿಜಸ್ಟ್ರಿಗಳೂ ಸಿಗುತ್ತವೆ.

ನವಯುಗ ಪ್ರೆಸ್ ಉಡುಪಿ.

NAVAYUGA
Kannada Weekly
UDIPJ
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ವರುಷ	ಉಡುಪಿ	ವಾರ
೪೨	೨೦-೯-೧೯೬೨	೩

ಕಾಸರಗೋಡು

ಇದೇ ತಿಂಗಳ ಒಂಬತ್ತನೆಯ ತಾರೀಕಿನಂದು ಕಾಸರಗೋಡು ತಾಲೂಕಿನ ಪ್ರತಿನಿಧಿಗಳು ಕರ್ನಾಟಕದ ರಾಜಧಾನಿ ಬೆಂಗಳೂರಿನಲ್ಲಿ ವಿಧಾನ ಸೌಧದ ಮುಂದೆ 'ಕಾಸರಗೋಡು ಕನ್ನಡ ನಾಡು' ಎಂಬ ಘೋಷಣೆಯನ್ನು ಮಾಡುತ್ತ ಶಾಂತ ವಿಧಾನದಲ್ಲಿ ಮತಪ್ರದರ್ಶನ ಮಾಡಿದರು. ಈ ಬಗೆಯ ಮತ ಪ್ರದರ್ಶನ ರಾಜಧಾನಿಯಲ್ಲಿ ರಾಜಕಛೇರಿಯ ಮುಂದೆ ನಡೆಯುವುದು ಮೊತ್ತಮೊದಲನೆಯದು. ಆದರೂ ಈ ಮೊದಲೇ ಕಾಸರಗೋಡಿನ ಜನತೆಯು ತಮ್ಮ ಆಶೆಯೇನೆಂಬುದನ್ನು ಪದೇ ಪದೇ ತೋರಿಸಿದೆ. ಇಂದು ಕಾಸರಗೋಡಿನಲ್ಲಿ ಸುಮಾರು ಎರಡು ಲಕ್ಷ ಕನ್ನಡಿಗರಿದ್ದಾರೆ. ಇವರಲ್ಲಿ ಮೂವತ್ತು ಸಾವಿರದಷ್ಟು ಕನ್ನಡದ ವಿದ್ಯಾರ್ಥಿಗಳು. ಇಂದು ಅಲ್ಲಿರುವ ಕೇರಳೀಯ ಸರಕಾರವು ಕನ್ನಡದ ಕಂದಮ್ಮಗಳ ಮಾತೃಭಾಷೆಯನ್ನು ಮೆಟ್ಟಿ ಮಲೆಯಾಳಿ ಭಾಷೆಯನ್ನು ಅವರ ಮೇಲೆ ಹೂರಿಸುತ್ತಿದೆ. ಎಂತಲೇ 'ಬದುಕುವುದಾದರೂ ಕನ್ನಡದಲ್ಲೇ, ಸಾಯುವುದಾದರೂ ಕನ್ನಡದಲ್ಲೇ' ಎಂಬ ಪಲ್ಲವಿಯನ್ನು ಮತಪ್ರದರ್ಶಕರು ಹಾಡಿದುದು ಅವರ ಹೃದಯದಾಂತರ್ಯವನ್ನು ಪ್ರತಿಬಿಂಬಿಸುತ್ತದೆಯೆಂಬುದು ನಿರ್ವಿವಾದ.

ಪ್ರಜಾ ಪ್ರಭುತ್ವದಲ್ಲಿ ಯಾವುದೇ ಒಂದು ನಿರ್ಣಯವು ಅಚಲವಾಗಿಲ್ಲ; ಆದರಲ್ಲೂ ನಮ್ಮ ದೇಶದಲ್ಲಿ ಸಂವಿಧಾನವು ತಿದ್ದುಪಡಿಯಾಗುತ್ತಿದ್ದು ಈ ವಿಷಯದ ಮಟ್ಟಿಗೆ ಫ್ರಾನ್ಸಿಗೆ ಎರಡನೆಯದಾಗಿ ನಿಲ್ಲುತ್ತದೆಯೆಂದರೆ ಅತಿಶಯೋಕ್ತಿಯಾಗದು. ಜನತೆಗಾಗಿ ಸರಕಾರ ರಚನೆಯೆಂಬ ನೀತಿಯಂತಿರುವ ನಮ್ಮ ಜನತಾ ಸರಕಾರ ಈ ದಿಸೆಯಲ್ಲಿ ಬಹಳಷ್ಟು ಹಿಂದೆಯೆ ಉಳಿದಿದೆಯೆಂಬುದಕ್ಕೆ ಬೇರೆ ಸಾಕ್ಷಿಗಳು ಅನಗತ್ಯ. ಕಾಸರಗೋಡು ಮೊದಲು ಇದ್ದುದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ. ಆದರೆ, ರಾಜ್ಯ ಪುನರ್ವಿಂಗಡಣೆಯ ಸಮಯ ಕೆಲವೊಂದು ಕುತಂತ್ರಗಳಿಂದಾಗಿ ಅದು ತನ್ನ ಮಾತೃ ಜಿಲ್ಲೆಯಿಂದ ಸಿಡಿದು ಅನ್ಯಾಯವಾಗಿ ಕೇರಳದಲ್ಲಿ ವಿಲೀನಗೊಂಡಿತೆಂಬುದೂ ಫಜಲ್ ಅಲಿ ಸಮಿತಿಯ ವರದಿಯು ವ್ರಕಟವಾಗುತ್ತಲೇ ಅಲ್ಲಿನ ಜನತೆಯು ತಮ್ಮ ಕೇರಳೀಕರಣವನ್ನು ಪ್ರತಿಭಟಿಸುತ್ತ ಬಂದಿದ್ದಾರೆಂಬುದೂ ಸರ್ವಶ್ರುತ ವಿಚಾರ. ಮೇಲಾಗಿ ಕೇರಳದ ವಿಧಾನ ಸಭೆಗೆ ನಡೆದ ಮರು ಚುನಾವಣೆಗಳಲ್ಲಿ ಈ ಪ್ರದೇಶದ ಪ್ರತಿನಿಧಿಯಾಗಿ ಕುಂಬಳೆ ಮತ್ತು ಮಂಜೇಶ್ವರ ಫಿರ್ಕಗಳಿಂದ ಕರ್ನಾಟಕ ಸಮಿತಿಯ ಸದಸ್ಯರು ಪ್ರಚಂಡ ಬಹುಮತದಿಂದ ಆಯ್ಕೆಯಾದರೆಂಬುದನ್ನೂ ನಾವು ಮರೆಯಬಾರದು. ಚಂದ್ರಗಿರಿ ಹೊಳೆಯ ಉತ್ತರದ ಭೂಮಿಯು ಕನ್ನಡ ನಾಡು ಎಂಬುದನ್ನು ಕೇರಳ ಸರಕಾರವೂ ಒಂದೊಮ್ಮೆ ಒಪ್ಪಿತ್ತು. ಕರ್ನಾಟಕದ ಮುಖ್ಯ ಮಂತ್ರಿ ನಿಜಲಿಂಗಪ್ಪನವರ ಮಾತಿನಲ್ಲಿ ವಿಶ್ವಾಸವಿಡುವುದಾದರೆ, ನಮ್ಮ ರಾಜ್ಯ ಸರಕಾರವೂ ಈ ಕಳೆದುಕೊಂಡ ನಾಡನ್ನು ಮರಳಿ ಗಳಿಸಲು ಶಕ್ತಿ ಮೀರಿ ಪ್ರಯತ್ನಿಸುತ್ತಿದೆ; ಉಭಯ ಸರಕಾರಗಳ ನಡುವೆ ತತ್ಸಂಬಂಧ ಮಾತುಕತೆಗಳು, ಪತ್ರವ್ಯವಹಾರಗಳು ನಡೆಯುತ್ತಿವೆ. ಆದರೆ, ಈಗ ಐದಾರು ವರ್ಷಗಳು ಗತಿಸುತ್ತ ಬಂದರೂ ಧ್ಯೇಯಸಿದ್ಧಿಯಾಗುವುದು ಮಾತ್ರ ದೂರವುಳಿಯಿತು. ಹಾಗಿರುವಾಗ, ಜೆ. ಬಿ ಮಲ್ಲಾರಾಧ್ಯರಂತಹರು, ಇವರು ಮಾಡುತ್ತೇನೆಂದುದನ್ನು ಮಾಡಿದ್ದಿದೆಯೆ?, ಎಂದು ಸವಾಲು ಹಾಕಿದರೆ, ಅದನ್ನು ಟೀಕೆಯೆಂದು ಕರೆಯುವಂತಿಲ್ಲ! ಅದೇಕೋ ಈ ಪ್ರದೇಶಗಳ ವಿನಿಮಯಕ್ಕೆ ಸಮಯವು ಬಹಳ ವೇಗವಾಗಿ ಧಾವಿಸುತ್ತಿರುವಂತೆ ಭಾಸವಾಗುತ್ತಿದೆ. ಕಾಸರಗೋಡಿನ ಕನ್ನಡಿಗರು ಮರಾಠಿಗಳಂತೆ ಕಡಿಗೇಡಿತನವನ್ನೂ ಪುಂಡಾಟಿಕೆಯನ್ನೂ ನಡೆಸಲಿಲ್ಲ. ದ್ವಿಭಾಷಾ ಮುಂಬಯಿ ರಾಜ್ಯವನ್ನು ವಿಭಜಿಸಲು, ನಾಗಾಲೇಂಡನ್ನು ಪ್ರತ್ಯೇಕಿಸಲು ಅಲ್ಲಿನ ನಾಗರಿಕರು ತೀವ್ರ ಸ್ವರೂಪದ ಚಳುವಳಿಯನ್ನು ಮಾಡಿದ್ದರು. ಆದುದರಿಂದಲೇ ಅವರ ಆಶೆ ತೀವ್ರವಾಗಿಯೇ ಈಡೇರಿತು ಎಂದು ಕಾಸರಗೋಡಿನ ಕನ್ನಡಿಗರು ತಿಳಿದು ತಾವೂ ಅವರನ್ನು ಅನುಸರಿಸಬೇಕೇ ಎಂದು ಪ್ರಶ್ನಿಸುವ ಅವಕಾಶ ಪ್ರಾಪ್ತವಾಗುವಂತಿದೆ. ವಿವಾದಗ್ರಸ್ತ ಪ್ರದೇಶಗಳ ಬಗ್ಗೆ, ಅಂದರೆ ಕಾಸರಗೋಡು ಫಿರ್ಕದ ಬಗ್ಗೆ ನಾವು ಈಗಲೇ ಮುಂದುವರಿಯುವುದು ಬೇಡ; ನಿರ್ವಿವಾದ ಸ್ವರೂಪದ ಕುಂಬಳೆ ಮತ್ತು ಮಂಜೇಶ್ವರ ಫಿರ್ಕಗಳನ್ನು ಪಡೆಯಲು ರಚನಾತ್ಮಕ ರಾಜಕೀಯ ಹೆಜ್ಜೆಗಳನ್ನಿಡಲು ಇನ್ನೂ ಇನ್ನೂ ವಿಲಂಬವೆನಿಸುವುದು ಕನ್ನಡಿಗರ ಸ್ಥಿತಿಯು ವಿವಂಚನೆಗೀಡಾಗುವಂತೆ ಮಾಡುತ್ತದೆ. ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ ಸಾಹಿತ್ಯ ಪರಿಷತ್ತು ಕಳೆದ ಐದು ಸಮ್ಮೇಳನಗಳಲ್ಲಿಯೂ ಇದನ್ನು ಬೆಂಬಲಿಸಿದೆ, ರಾಜ್ಯ ಸರಕಾರದ ಮೇಲೆ ಒತ್ತಾಯ ತಂದಿದೆ. ಇವೆಲ್ಲವನ್ನೂ ನಾವು ಅನುಲಕ್ಷಿಸುವಾಗ, ಈ ದಿಸೆಯಲ್ಲಿ ಅನಪೇಕ್ಷಿತ ವಿಳಂಬವೇಕಾಗುತ್ತಿದೆ? ಎಂಬುದು ಯಕ್ಷಪ್ರಶ್ನೆಯಾಗಿಯೇ ಪರ್ಯವಸಾನ ಹೊಂದುತ್ತದೆ.

ಜನತೆಯು ತನ್ನ ಅಭೀಕ್ಷೆಯನ್ನು ಸಾಧಿಸಿಕೊಳ್ಳಲು ಪ್ರಜಾಪ್ರಭುತ್ವದಲ್ಲಿ ಸಮಾಚಿತ ಮಾರ್ಗಗಳಿವೆಯೆಂಬುದನ್ನು ನಾವು ಒಪ್ಪುತ್ತೇವೆ. ಅದಕ್ಕಾಗಿ ಸತ್ಯಾಗ್ರಹ, ಪ್ರದರ್ಶನ, ಪುಂಡಾಟಿಕೆಗಳ ದಾರಿ ಹಿಡಿಯಬಾರದು ಎಂಬುದನ್ನೂ ಶಾಂತ ಸ್ವರೂಪದ ಮಾತುಕತೆಯ ಪಥವೇ ಶ್ರೇಯಸ್ಕರವೆಂಬುದನ್ನೂ ನಾವು ಅನುಮೋದಿಸುತ್ತೇವೆ. ಆದರೆ, ಐದು ವರ್ಷಗಳ ಕಾಲ ಪರಭಾಷಾ ವಾದದಲಿತರಾದ ಕಾಸರಗೋಡಿನ ಜನತೆಯ ಭವಿಷ್ಯ ಬಿಡಾಲ ಶಿರಸ್ಥ ದೀಪದಂತೆ ಅನಿರ್ಧಿಷ್ಟವಿರುವಾಗ, ಅವರಾದರೂ ಸುಮ್ಮನುಳಿಯಬೇಕೆಂದು ಉಪದೇಶಿಸುತ್ತ ಕೂರುವುದು ವಿವೇಕವಲ್ಲವೆಂದು ಅನಿವಾರ್ಯವಾಗಿ ಹೇಳಲೇ ಬೇಕಾಗುತ್ತದೆ. ಒಂದು ಭಾಷೆಯನ್ನಾಡುವ ಜನ ಒಂದು ಸರಕಾರದಡಿಯಲ್ಲಿರಬೇಕೆಂಬ ತತ್ವವನ್ನು ಒಪ್ಪಿಕೊಂಡ ಬಳಿಕ ಎರಡು ಲಕ್ಷ ಕನ್ನಡಿಗರನ್ನು ದೂರವಿರಿಸುವುದು ಎಂದಿಗೂ ಸರಿಯಲ್ಲ. ಇವರ ಪ್ರತಿನಿಧಿಗಳು ಉದ್ರಿಕ್ತಾವಸ್ಥೆಗೇರಿಲ್ಲ; ಬೆಂಗಳೂರಿನ ಪ್ರದರ್ಶನದ ವೇಳೆ ಪೋಲೀಸು ಇಲಾಖೆಯ ಅಧಿಕಾರಿಗಳೇ ಅವರು ವಹಿಸಿದ ಶಾಂತ ವಿಧಾನವನ್ನು ಮೆಚ್ಚಿದರೆಂಬಾಗ ಮತ್ತೇನು ಹೇಳಬೇಕು? ನಾವು ಈ ಹಿಂದೆಯೇ ಒಂದಲ್ಲ ಹತ್ತು ಬಾರಿ ಕಾಸರಗೆನೇಡನ್ನು ಕರ್ನಾಟಕಕ್ಕೆ ಸೇರಿಸುವ ಅಗತ್ಯತೆಯನ್ನು ಪ್ರತಿಬಿಂಬಿಸಿದ್ದೇವೆ. ಇಂದಾದರೂ ಇದನ್ನೇ ಮನಃಪೂರ್ವಕವಾಗಿ ಬೆಂಬಲಿಸುತ್ತೇವೆ. ಕಾಸರಗೋಡಿನ ಕನ್ನಡಿಗರು ಮಲೆಯಾಳಿಗಾಗಿ ರೂಪಾಂತರಗೊಳ್ಳುತ್ತಿರುವ ಈ ಸಂಕ್ರಮಣ ಕಾಲದಲ್ಲಿ ಅವರನ್ನು ಕುತ್ತದಿಂದ ಬಿಡುಗಡೆಗೊಳಿಸಲು ಕರ್ನಾಟಕ ಸರಕಾರ ತೀವ್ರ ಕ್ರಮ ಕೈಗೊಳ್ಳಬೇಕು; ಕೇರಳ ಹಾಗೂ ಕೇಂದ್ರ ಸರಕಾರಗಳು ಕನ್ನಡಿಗರ ಎದೆಯಾಳದ ಈ ಕೂಗನ್ನು ತೆರೆದ ಕಿವಿಗಳಿಂದ ಕೇಳಿ, ಅವರ ಬಿಡುಗಡೆಯ ಮಾರ್ಗದ ಮುಚ್ಚಿದ ಬಾಗಿಲನ್ನು ತೆರೆಯಬೇಕು ಕನ್ನಡ ಜನ, ಕನ್ನಡ ಮನ, ಒಂದಾಗಬೇಕು; ಇದಕ್ಕಾಗಿ ಕನ್ನಡ ನೆಲ ಮೊತ್ತ ಮೊದಲಿಗೆ ಒಂದಾಗಬೇಕು. ಕನ್ನಡ ಬಲ, ಕನ್ನಡ ಜಲವೊಂದಾಗಬೇಕು. 'ನಾನೂ ನಿಮ್ಮವನೇ' ಎಂದು ಮಾತಿನಲ್ಲಿ ಒಂದಾದರೆ ಸಾಲದು; ಕೃತಿಯಲ್ಲಿ ಒಂದಾಗಿ, ಅದರಲ್ಲಿ ತಾನಾಗಿ ಮುಂದೆ ಹೋಗಬೇಕು. ಮುಂದಿನ ಕರ್ನಾಟಕ ರಾಜ್ಯೋದಯದ ದಿನ ಕಾಸರಗೋಡಿನ ಕನ್ನಡಿಗರೂ ನಮ್ಮೊಡನೆ ಕೂಡಿ ಸಂತಸಪಡುವಂತಾಗಬೇಕು.

ಹೆರಾಲ್ಡ್ ಮ್ಯೆಕ್ಮಿಲನ್

ಕಾಮನ್‌ವೆಲ್ತಿನ ರಾಣಿಯಾದ ಬ್ರಿಟನ್ನು ಐರೋಪ್ಯ ಸಾಮಾನ್ಯ ಮಾರುಕಟ್ಟೆಯನ್ನು ಪ್ರವೇಶಿಸುವ ಪ್ರಶ್ನೆಯಿಂದು ಎಲ್ಲೆಲ್ಲೂ ಪ್ರತಿಭಟನೆಗೆ ಗುರಿಯಾಗಿದೆ. ಆದರ ಈ ಕಾರ್ಯದಿಂದ ಕಾಮನ್‌ವೆಲ್ತಿನ ಸದಸ್ಯ ರಾಷ್ಟ್ರಗಳ ಅರ್ಥ ವ್ಯವಸ್ಥೆಯಲ್ಲಿ ತಲೆ ಕೆಳಗು ಆಗುವುದರಿಂದ ಅವು ಆ ನೀತಿಯನ್ನು ವಿರೋಧಿಸುವುದು ಸ್ವಾಭಾವಿಕವಾದರೂ ಸ್ವಯಂ ಬ್ರಿಟನ್ನಿನ ಜನತೆಯೇ ಈ ನೀತಿಯ ಭರ್ತ್ಸನೆಗೆ ತೊಡಗಿರುವುದು ಪ್ರಧಾನಿ ಮ್ಯೆಕ್ಮಿಲನರ ಕಳವಳಕ್ಕೆ ಕಾರಣವಾಗಿದೆ. 'ಈ ಪ್ರಶ್ನೆಯನ್ನು ಮುಂದಿಟ್ಟು ಸಾರ್ವತ್ರಿಕ ಚುನಾವಣೆಯನ್ನು ನಡೆಸಿರಿ, ಎಂಬ ಪಂಧಾಹ್ವಾನವನ್ನೂ ಎದುರಿಸುವಂತಹ ಗಂಭೀರ ಪರಿಸ್ಥಿತಿಯು ಬ್ರಿಟನ್ನಿನಲ್ಲಿ ತಲೆದೋರಿರುವಾಗ, ಇವರು ಮಾಡಬೇಕಾದುದೇನೆಂದು ತಲೆ ತುರಿಸಿಕೊಳ್ಳುವುದು ತಪ್ಪಲ್ಲ. ಹಿಂದೆ ಪ್ರಧಾನಿಯಾಗಿದ್ದ ಸರ್ ಅಂತೋನಿ ಈಡನ್ನರೂ ಇದೇ ರೀತಿಯ ಪ್ರಶ್ನೆಯೊಂದನ್ನು ಎದುರಿಸುವಲ್ಲಿ ಸೋಲ ಬೇಕಾಯಿತು. ಈಗ ಮ್ಯೆಕ್ಮಿಲನರೂ ಅಂತಹುದೇ ಪರಾಜಯವುಣ ಬೇಕಾಗಿ ಬರುವುದೂ ಸಾಧ್ಯವಿದೆ. ಒಂದು ವೇಳೆ ಎದುರು ಬಂದ ಪ್ರತಿಭಟನೆಯೆಲ್ಲವನ್ನೂ ಕಡೆಗಣಿಸಿ ಅವರು ಸಾಮಾನ್ಯ ಮಾರುಕಟ್ಟೆಯನ್ನು ಪ್ರವೇಶಿಸಿದರೆ, ಮತ್ತೆ ಕಾಮನ್‌ವೆಲ್ತಿನ ಬಲಸ್ವಯಂ ಕುಗ್ಗುವುದು ಖಂಡಿತ; ಕಾಮನ್‌ವೆಲ್ತ್ ಒಡೆದು ಚೂರಾಗುವುದೂ ನಿಶ್ಚಯ. ಆದುದರಿಂದ ಬ್ರಿಟನ್ನಿನ ಹಿತ ದೃಷ್ಟಿಯೊಡನೆ ಕಾಮನ್‌ವೆಲ್ತ್ ಸದಸ್ಯ ರಾಷ್ಟ್ರಗಳ ಹಿತವನ್ನೂ ಅವರು ಲಕ್ಷ್ಯಿಸಿಕೊಂಡು ಮುಂದೆ ಹೆಜ್ಜೆ ಇಡ ಬೇಕಾಗಿದೆ. ಆದರೆ, ಇದು ಸಾಧ್ಯವೇ ಎಂಬುದು ಕಲ್ಪನಾತೀತ ಪ್ರಶ್ನೆ ಮ್ಯೆಕ್ಮಿಲರು ಮಾರಕಟ್ಟೆಯ ಸದಸ್ಯ ರಾಷ್ಟ್ರಗಳೊಡನೆ ಕಾಮನ್‌ವೆಲ್ತ್ ರಾಷ್ಟ್ರಗಳಿಗೆ ವ್ಯಾಪಾರ ಸಂಬಂಧದಲ್ಲಿ ಕೆಲವೊಂದು ಸೌಲಭ್ಯಗಳನ್ನು ನೀಡುವಂತೆ ಕೇಳಿಕೊಳ್ಳುವರೆಂದು ವರದಿಗಳಿವೆ. ಆದರೆ ಅವರ ಈ ಕೇಳಿಕೆಯು ಮನ್ನಿಸಲ್ಪಡುವ ಸಾಧ್ಯತೆಯ ಲಕ್ಷಣಗಳು ಮಾತ್ರ ಗೋಚರವಾಗುತ್ತಿಲ್ಲ ಬ್ರಿಟನ್ನಿನ ಒಬ್ಬಾಕೆ ಗೃಹಿಣಿ ಮ್ಯೆಕ್ಮಿಲನ್ ನೀತಿಯನ್ನು ಪ್ರತಿಭಟಿಸಿ, ಅನ್ನ ಸತ್ಯಾಗ್ರಹಕ್ಕೂ ಮುಂದುವರಿದಿದ್ದಾಳೆನ್ನುವಾಗ, ಅವರು ಎದೆಗೊಡಬೇಕಾದ ಪ್ರಸಂಗ ತೀರ ಉಲ್ಪಣಾವಸ್ಥೆಗೇರಿದೆಯೆಂಬುದರ ಮನವರಿಕೆಯಾಗುವುದು. ಮುಖ್ಯವಾಗಿ, ಅನಭಿವೃದ್ಧ ಮತ್ತು ಅಭಿವೃದ್ಧಿಯ ಪಥದಲ್ಲಿರುವ ಕಾಮನ್‌ವೆಲ್ತ್ ಸದಸ್ಯ ದೇಶಗಳನ್ನು ರಸಾತಳಕ್ಕೆ ನೂಕಿ ಅವರಿಗೆ ಮುಂದೆ ಹೆಜ್ಜೆಯಿಡುವುದು ಸಾಧ್ಯವಾಗದು. ಆದುದರಿಂದ, ಮಧ್ಯವರ್ತಿಮಾರ್ಗವೊಂದನ್ನು ಕಡೆಯಲು ಅವರು ಶಕ್ತಿಮೀರಿ ಪ್ರಯತ್ನಿಸುತ್ತಿದ್ದಾರೆಂಬುದು ನಿಶ್ಚಯ. ಹೇಗಿದ್ದರೂ ಮ್ಯೆಕ್ಮಿಲನರು ತಮ್ಮ ಧೋರಣೆಯಿಂದ ಇಂದು ಅಪ್ರಿಯರಾಗುವಂತಹ ಸನ್ನಿವೇಶವೊದಗಿದೆ ಅವರು ಕರ್ತರೀಕ್ರಮುಖ ಪರಿಸ್ಥಿತಿಯಿಂದ ಎಂತು ಪಾರಾಗುವರು ಎಂದು ಜಗತ್ತಿಗೆ ಜಗತ್ತೇ ವೀಕ್ಷಿಸುತ್ತಿದೆ.

ವಾರ್ತಾ ವೇದಿಕೆ

ಆಧುನಿಕ ಭಗವದ್ಗೀತೆ

ಕರ್ನಾಟಕ ರಾಜ್ಯದ ಆಡಳಿತೆಯಲ್ಲಿ ಮಿತವ್ಯಯವನ್ನು ಸಾಧಿಸಿ, ಆದಾಯದ ಬಾಬುಗಳನ್ನು ಹೆಚ್ಚಿಸಿ ಯೋಜನೆಗೆ ಹಣ ಒದಗಿಸುವ ಸಂಬಂಧದಲ್ಲಿ ಎ.ಜಿ.ಆರ್. ಸಮಿತಿಯು ಇತ್ತ ವರದಿಯ ಬಹ್ವಂಶ ಸರಕಾರಕ್ಕೆ ಅನಪೇಕ್ಷಿತವಾದುದು; ಕೆಲವಂಶ ಮಾತ್ರ ಗ್ರಾಹ್ಯವಾದುದು. ರಾಜ್ಯಕ್ಕೆ ಚಿಕ್ಕದಾದ ಮಂತ್ರಿಮಂಡಳ ಸಾಕೆಂದು ಅದು ಹೇಳಿದ್ದರೆ, ನಮ್ಮಲ್ಲಿ ೨೭ ಜನ ಮಂತ್ರಿ ಉಪಮಂತ್ರಿ—ಪಾರ್ಲಿಮೆಂಟರಿ ಸೆಕ್ರಿಟರಿಗಳಿದ್ದಾರೆ. ಶಾಲೆಗಳಲ್ಲಿ ಅಧ್ಯಾಪಕರು, ಆಸ್ಪತ್ರೆಗಳಲ್ಲಿ ಡಾಕ್ಟರರು ನರ್ಸುಗಳು, ಕಛೇರಿಗಳಲ್ಲಿ ಗುಮಾಸ್ತರು ಕಡಿಮೆ ಸಾಕು ಎಂದು ಸರಕಾರದ ಅಭಿಪ್ರಾಯವಿರಬೇಕು. ಇಂತಹ ಕೆಲವೊಂದು ಮಿತವ್ಯಯದ ಯೋಜನೆಗಳು ಈಗಾಗಲೇ ಜ್ಯಾರಿಗೆ ಬರುತ್ತಿವೆ. ಮುಕ್ಕಣ್ಣಪ್ಪನವರ ಭಾಷೆಯಲ್ಲಿ ಹೇಳುವುದಾದರೆ, ಎ.ಜಿ. ಆರ್ ವರದಿ ಭಗವದ್ಗೀತೆ; ಆದರೆ, ಅದನ್ನು ಹೇಳಿದವನು ಭಗವಂತನೆಂದು ಒಪ್ಪಿಕೊಳ್ಳಲು ಯಾರೂ ಸಿದ್ಧರಿಲ್ಲ; ಇನ್ನು ಕೇ

(೭ನೇ ಪುಟಕ್ಕೆ)

ಅಲ್ಲಲ್ಲಿಯ ಸುದ್ದಿಸಾರ

ಉಡುಪಿ ನಗರ ಸಭೆಗೆ ಉಮೇದ್ವಾರರು—ಇದೇ ಅಕ್ಟೋಬರ ತಾ. 24 ರಂದು ಉಡುಪಿ ನಗರ ಸಭೆಯ ಚುನಾವಣೆ ಜರಗಲಿದೆಯಷ್ಟೇ. ನಗರ ಸಭೆಯ ಒಟ್ಟು ಹದಿನೇಳು ವಾರ್ಡುಗಳ ಇಪ್ಪತ್ತು ಸ್ಥಾನಗಳಿಗೆ ಚುನಾವಣೆ ನಡೆಯಲಿದ್ದು ಒಟ್ಟು ಎಪ್ಪತ್ತು ಜನ ಉಮೇದ್ವಾರರು ನಾಮಪತ್ರ ಸಲ್ಲಿಸಿದ್ದರು. ನಾಮಪತ್ರ ಹಿಂತೆಗೆಯುವ ಕೊನೆಯ ದಿನವಾದ ಇದೇ ಕಳದ ತಾ. 16ರಂದು ಇಪ್ಪತ್ತಾರು ಉಮೇದ್ವಾರರು ನಾಮಪತ್ರಗಳನ್ನು ಹಿಂತೆಗೆದು ಕೊಂಡಿರುವರು. ಪ್ರಕೃತ ಇಪ್ಪತ್ತು ಸ್ಥಾನಗಳಿಗೆ ನಲ್ವತ್ತನಾಲ್ಕು ಜನರ ಸ್ಪರ್ಧೆಯಿದೆ. ಕಾಂಗ್ರೆಸು ಪಕ್ಷವು ಎಲ್ಲಾ ಇಪ್ಪತ್ತು ಸ್ಥಾನಗಳಿಗೂ, ಜನಸಂಘವು ನಾಲ್ಕು ಸ್ಥಾನಗಳಿಗೂ ಉಮೇದ್ವಾರರನ್ನು ನಿಲ್ಲಿಸಿದೆ. ಸ್ವತಂತ್ರ ಕಮ್ಯುನಿಷ್ಟರು ನಾಲ್ಕು ಸ್ಥಾನಗಳಿಗೂ ಪಕ್ಷಾತೀತ ಸ್ವತಂತ್ರರು ಹತ್ತು ಸ್ಥಾನಗಳಿಗೂ ಉಮೇದ್ವಾರರಾಗಿದ್ದಾರೆ: ಅಂಬ್ಲಪಾಡಿ, ಬೈಲೂರು, ಕಾಡುಬೆಟ್ಟು (ಶೆಡ್ಡ್ಯೂಲ್ಡು) ಈ ಮೂರು ವಾರ್ಡುಗಳಲ್ಲಿ ಕಾಂಗ್ರೆಸ್. ಉಮೇದ್ವಾರಿಗಳಿಗೆ ಅವಿರೋಧ ಆಯ್ಕೆ ಆಗಿದೆ.

ಆಯಾಯ ವಾರ್ಡುಗಳ ಉಮೇದ್ವಾರರ ವಿವರ ಈ ಕೆಳಗಿನಂತಿದೆ—

ಗುಂಡಿಬೈಲು ವಾರ್ಡು—(2 ಸ್ಥಾನಗಳು) ಸಾಮಾನ್ಯ ಸ್ಥಾನಕ್ಕೆ ಶ್ರೀ ಯು. ಬಿ. ಪ್ರಭಾಕರ ರಾವ್, (ಕಾಂ) ಯು. ಕಾಳಪ್ಪ ಶೆಟ್ಟಿ, (ಕ. ಸ್ವ.)

ಕಾದಿಟ್ಟ ಸ್ಥಾನಕ್ಕೆ— ಶ್ರೀಮತಿ ರಾಧಾ(ಕಾಂ.) ಶ್ರೀಮತೀ ವಿ. ಅಂಬ್ಲರ್(ಸ್ವ.)

ಕಡಿಯಾಳಿ ವಾರ್ಡು— ಶ್ರೀ ಕೆ. ಅನಂತರಾಮ ಉಪಾಧ್ಯಾಯ, (ಕಾಂ) ಶ್ರೀ ಬಿ. ವಾಸುದೇವಯ್ಯ, ಶ್ರೀ ಎ. ದಯಾನಂದ ನಾಯಕ (ಸ್ವ) ಶ್ರೀ ಟಿ. ದೇವದಾಸ ಪೈ (ಜ. ಸಂ)

ಕುಂಜಿಬೆಟ್ಟು ವಾರ್ಡು— ಶ್ರೀ ಬಿ. ವಾಸುದೇವಯ್ಯ (ಕಾಂ.) ಶ್ರೀ ಕೆ. ಅನಂತರಾಮ ಉಪಾಧ್ಯಾಯ (ಕಾಂ.) ಶ್ರೀ ಇನಾಯತುಲ್ಲಾ ಸಾಹೇಬ್ (ಕ. ಸ್ವ.) ಶ್ರೀ ಎ. ದಯಾನಂದ ಪೈ (ಸ್ವ)

ಟೆಂಪ್ಲ್ ವಾರ್ಡು— ಶ್ರೀ ಎ. ಜೆ ಅಲ್ಸೆ, (ಕಾಂ) ಶ್ರೀ ಆರ್. ನರಸಿಂಹ ಪಾಂಗಣ್ಣಾಯ (ಸ್ವ.)

ಪಣಿಯಾಡಿ ವಾರ್ಡು—ಶ್ರೀ ಕೆ. ಮಂಜುನಾಥ ಮಧ್ಯಸ್ಥ (ಕಾಂ.) ಶ್ರೀ ಯು. ಅನಂತಕೃಷ್ಣ (ಜ. ಸಂ)

ತೆಂಕಪೇಟೆ ವಾರ್ಡು— ಶ್ರೀ ಪಿ ರಂಗನಾಥ ಶೆಣೈ (ಕಾಂ) ಶ್ರೀ ಎಂ ವಿರಲ ಕಿಣಿ (ಜ. ಸಂ)

ಸೆಂಟ್ರಲ್ ವಾರ್ಡು— ಶ್ರೀ ಕೇಶವ ಕಾಮತ್ (ಕಾಂ.) ಶ್ರೀ ಎ. ಪದ್ಮನಾಭ ನಾಯಕ್ (ಸ್ವ)

ಶಿರಿಬೀಡು ವಾರ್ಡು— ಶ್ರೀ ಬಾವುಜಾನ್ ಸಾಹೇಬ್ (ಕಾಂ.) ಶ್ರೀ ಎ. ಜೆ ಅಲ್ಸೆ, ಶ್ರೀ ಕೆ. ದಾಸ ಸೇರಿಗಾರ (ಕ. ಸ್ವ.)

ಮೂಡು ನಿಡಂಬೂರು ವಾರ್ಡು— ಶ್ರೀ ಯು. ರಾಮರಾವ್ (ಕಾಂ.) ಶ್ರೀ ಎಂ. ವಿರಲ ಶೆಟ್ಟಿ, ಶ್ರೀ ನಾರಾಯಣ ಶೆಟ್ಟಿಗಾರ (ಕ. ಸ್ವ.)

ಬನ್ನಂಜೆವಾರ್ಡು—ಶ್ರೀ ಎಂ. ವಿರಲ ಶೆಟ್ಟಿ (ಕಾಂ.) ಶ್ರೀ ಯು. ಮೋಹನ ದಾಸ (ಸ್ವ)

ಅಂಬ್ಲಪಾಡಿ ವಾರ್ಡ್—ಶ್ರೀ ಬಿ. ಅಪ್ಪಾಜಿ ರಾವ್ (ಕಾಂ.) ಅವಿರೋಧವಾಗಿ ಆರಿಸಿ ಬಂದಿರುವರು.

ಕನಪರ್ಡಿವಾರ್ಡು—ಶ್ರೀ ಎಲ್. ಕೆ ಸಲ್ದಾನಾ (ಕಾಂ.) ಶ್ರೀ ಗಂಗಯ ಶೆಟ್ಟಿಗಾರ (ಕ. ಸ್ವ.)

ಕಿನ್ನಿಮೂಲ್ಕಿ ವಾರ್ಡು—ಶ್ರೀ ಚಂದ್ರಶೇಖರ ಸೆಟ್ಟಿಗಾರ (ಕಾಂ.) ಶ್ರೀ ಎನ್. ಕೃಷ್ಣರಾಜ ಹೆಬ್ಬಾರ (ಸ್ವ.)

ಬೈಲೂರುವಾರ್ಡು—ಶ್ರೀ ಒ. ಮೈಕಾ (ಕಾಂ.) ಅವಿರೋಧ ಆಯ್ಕೆ ಹೊಂದಿರುವರು.

ಒಳಕಾಡುವಾರ್ಡು—ಶ್ರೀ ಎಂ. ರಾಧಾಕೃಷ್ಣ ಪೈ (ಕಾಂ.) ಶ್ರೀ ಎನ್. ರಾಮದಾಸ ನಾಯಕ್ (ಜ. ಸಂ.)

ಕಾಡಬೆಟ್ಟು ವಾರ್ಡು—(2ಸ್ಥಾನಗಳು) ಸಾಮಾನ್ಯಸ್ಥಾನಕ್ಕೆ ಶ್ರೀ ಇರ್ವಿನ್ ಅಂದ್ರಾದೆ (ಕಾಂ.) ಶ್ರೀ ಎ. ಜೆ ಅಲ್ಸೆ. (ಕಾಂ.) ಶ್ರೀ ಪಿ. ವಾಸುದೇವ ಪ್ರಭು (ಸ್ವ) (ಶೆಡ್ಡ್ಯೂಲ್ಡ್ ಸ್ಥಾನಕ್ಕೆ ಶ್ರೀ ಗೋಪಾಲಕೃಷ್ಣ (ಕಾಂ.) ಅವಿರೋಧವಾಗಿ ಆರಿಸಲ್ಪಟ್ಟಿರುವರು

ಅಜ್ಜರಕಾಡು ವಾರ್ಡು—2ಸ್ಥಾನಗಳು) (ಸಾಮಾನ್ಯ ಸ್ಥಾನಕ್ಕೆ) ಶ್ರೀ ಎಚ್. ವೆಂಕಟೇಶ ನಾಯಕ್ (ಕಾಂ.) ಶ್ರೀ ಎನ್. ಸೀತಾರಾಮ ಕಾಮತ್ (ಸ್ವ)

(ಕಾದಿಟ್ಟ ಸ್ಥಾನಕ್ಕೆ) ಶ್ರೀಮತಿ ಸೆಫಿನ್ ಸಿಕ್ವೇರಾ (ಕಾಂ.) ಶ್ರೀಮತಿ ವೈ. ಸುಮತೀ ರಾವ್ (ಸ್ವ.)

ಶ್ರೀ ಎ. ಬಿ. ಕೃಷ್ಣರಾಜರ ನಿಧನ—ಬಳ್ಳಾರಿಯಲ್ಲಿ ಲೈಫ್, ಇನ್ಶೂರೆನ್ಸ್ ಕಾರ್ಪೊರೇಶನಿನ ಅ॥ ಬ್ರಾಂಚ್ ಮೆನೇಜರರಾಗಿದ್ದ ಶ್ರೀ ಎ. ಬಿ. ಕೃಷ್ಣರಾಜರು ನಾಗಪುರದಲ್ಲಿ ಇದೇ ತಾ. 12ರಂದು ನಿಧನ ಹೊಂದಿದುದು ವಿಷಾದಕರವಿದೆ ಅವರು ನಾಗಪುರದಲ್ಲಿ ಎಲ್. ಐ. ಸಿ ಯ ಆಫೀಸರರ ಟ್ರೈನಿಂಗಿನಲ್ಲಿ ಭಾಗವಹಿಸುತ್ತಿದ್ದರು. ಡಿವಂಗತರು ಉಡುಪಿ ನಗರ ಸಭೆಯ ಸದಸ್ಯರಾಗಿಯೂ, ಉಪಾಧ್ಯಕ್ಷರಾಗಿಯೂ ಸಾರ್ವಜನಿಕ ಕಾರ್ಯಕರ್ತರಾಗಿಯೂ ಸೇವೆಸಲ್ಲಿಸಿದ್ದರು. ಇವರ ನಿಧನದ ಸಂತಾಪ ಸೂಚಕ ಸಭೆಯೊಂದು ತಾ. 14-9-62ರಂದು ಬಳ್ಳಾರಿ, ಎಲ್. ಐ. ಸಿ. ಆಫೀಸಿನಲ್ಲಿ ಶಿಬಂದಿ ಮತ್ತು ಡೆವಲಪ್‌ಮೆಂಟ್ ಆಫೀಸರರಿಂದ ನಡೆಯಲ್ಪಟ್ಟು ದುಃಖ್ಯೀ ಕುಟುಂಬಕ್ಕೆ ಸಂತಾಪ ಸೂಚನೆ ಕಳಿಸುವ ನಿರ್ಣಯ ಮಾಡಲಾಯ್ತು.

ದುರ್ಗಾ ಕ್ಲಿನಿಕ್—ಹಳೆಯಂಗಡಿಯಲ್ಲಿ ಡಾ। ವಿಶಾಲಾಕ್ಷಿಯವರ ದುರ್ಗಾ ಕ್ಲಿನಿಕ್ ಎಂಬ ದವಾಖಾನೆಯ ಪ್ರಾರಂಭೋತ್ಸವ ಸಮಾರಂಭವು ಮೂಲ್ಕಿಯ ಡಾ। ಶಾಮ ಸೆಟ್ಟರಿಂದ ಇತ್ತೀಚೆಗೆ ವಿಜೃಂಭಣೆಯಿಂದ ನೆರವೇರಿಲ್ಪಟ್ಟಿತು. ಡಾ। ಸೆಟ್ಟರು, ಡಾ। ವಿಶಾಲಾಕ್ಷಿಯವರ ನೂತನ ವೈದ್ಯ ವೃತ್ತಿಗೆ ಸಂಪೂರ್ಣ ವಿಜಯವಾಗಲೆಂದು ಹಾರೈಸಿದರು. ಈ ಸಮಾರಂಭಕ್ಕೆ ಹಲವಾರು ಜನರು ಆಮಂತ್ರಿತರಾಗಿದ್ದರು

ಶ್ರಮದಾನದಿಂದ ರಸ್ತೆ ರಚನೆ—ಅಳಿಕೆ: ಇದೇ ಸೆಪ್ಟಂಬರ್ ತಾ. 6ರಂದು ಲೋಕ ಸೇವಾ ವೃಂದದ ವತಿಯಲ್ಲಿ, ಕಾಸರಗೋಡು-ಪುತ್ತೂರು ರಸ್ತೆಯಿಂದ, ಲೋಕ ಸೇವಾವೃಂದ ಸ್ಥಾಪಿತವಾಗಲಿರುವ ಸ್ಥಳಕ್ಕೆ ಬರಲು ರಸ್ತೆ ನಿರ್ಮಾಣದ ಐದು ದಿನಗಳ ಶ್ರಮದಾನಕಾರ್ಯವನ್ನು, ಅಳಿಕೆ ಗ್ರಾಮ ನಿವಾಸಿಗಳು ಮತ್ತು ನೆರೆಗ್ರಾಮದ ಕೆಲಮಹನೀಯರು ಸೇರಿ ಪ್ರಾರಂಭಿಸಿದರು. ನಾಲ್ಕು ದಿನ ಸ್ತ್ರೀ ಪುರುಷರಾದಿಯಾಗಿ ಒಟ್ಟು 250 ಜನರು ಭಾಗವಹಿಸಿದ ಈ ಶ್ರಮದಾನಕಾರ್ಯದಲ್ಲಿ ಸುಮಾರು 5 ಫರ್ಲಾಂಗಿನಷ್ಟು ಉದ್ದದ ರಸ್ತೆಯ ರಚನೆಯಾಯಿತು ಶ್ರಮದಾನ ಮಾಡಿದ ಎಲ್ಲರಿಗೂ ಲೋಕಸೇವಾ ವೃಂದದಿಂದ ಗಂಜಿಯೂಟವನ್ನೊದಗಿಸಲಾಗಿತ್ತು. ಮತ್ತು ನಾಲ್ಕನೇ ದಿನದಂದು ಲಘುಉಪಹಾರವನ್ನೂ ಒದಗಿಸಲಾಯಿತು. ಊರ ಮಹನೀಯರೂ ಕೆಲವು ಆಹಾರ ವಸ್ತುಗಳನ್ನು ಒದಗಿಸಿದ್ದರು. ಕೊನೆಯದಿನದಂದು ಸಂಸ್ಥೆಯ ಅಧ್ಯಕ್ಷರಿಂದ ಧನ್ಯವಾದ ಸಮರ್ಪಣೆಯೊದ ನಂತರ ಭಗವತ್ಪ್ರಾರ್ಥನೆಯೊಂದಿಗೆ ಕಾರ್ಯಕ್ರಮವು ಕೊನೆಗೊಂಡಿತು.

ಬೆಂಗಳೂರು ಆಕಾಶವಾಣಿಯಿಂದ ಯಕ್ಷಗಾನ—ಬೆಂಗಳೂರು ಆಕಾಶವಾಣಿ ನಿಲಯದಿಂದ ದಿನಾಂಕ 15ರಂದು 'ಶ್ರೀಕೃಷ್ಣರಾಯಭಾರ' ಎಂಬ ಯಕ್ಷಗಾನ ಕಾರ್ಯಕ್ರಮ ದೇಲಂಪಾಡಿ ಶ್ರೀ ಗೋಪಾಲಕೃಷ್ಣ ಯಕ್ಷಗಾನ ಸಂಘದವರಿಂದ ನಡೆಸಲ್ಪಟ್ಟು ಪ್ರಸಾರವಾಯಿತು.

(೬ನೇ ಪುಟದಿಂದ)

ಳುವವರು ಅರ್ಜುನನಾದರೆ? ಕಾಲೇಜು ಪ್ರಾಧ್ಯಾಪಕ ಕೊಟ್ಟ ನೋಟ್ಸು ಅದು; ಅದನ್ನೆಲ್ಲಾ ಓದ ಬೇಕೆಂದಿಲ್ಲ. ತನಗೆ ಬೇಕಾದುದಕ್ಕೆ ಗುರುತು ಮಾಡಿ ಅವನ್ನು ಮಾತ್ರ ಅನುಷ್ಠಾನಕ್ಕೆ ತಂದರೆ, ಇನ್ನೈದು ವರ್ಷಗಳವರೆಗೆ ಸರಕಾರಕ್ಕೆ ಪೂರ್ವಗ್ರಹವನ್ನು ತಡೆಯಕೊಳ್ಳುವ ತಾಕತ್ತು ಬಂದೀತು.

ಕಡಿದಾಳರ ಕಾದಂಬರಿ

ಮಾಜಿ ಮೈಸೂರಿನ ಮೂರು ತಿಂಗಳ ಮುಖ್ಯ ಮಂತ್ರಿಯಾಗಿಹಿಂದಿನಮೈಸೂರು ಮತ್ತು ಇಂದಿನ ಕರ್ನಾಟಕದಲ್ಲಿ ಮೊನ್ನೆ ಮೊನ್ನೆಯ ವರೆಗೆ ಮಂತ್ರಿಗಳಾಗಿದ್ದು ಎಲ್ಲರಿಗೂ ಸುಪರಿಚಿತರಾದ ರಾಜಕಾರಣಿ ಶ್ರೀ ಕಡಿದಾಳ ಮಂಜಪ್ಪನವರಿಂದು ಲೇಖನಿಯವನ್ನು ಹಿಡಿದಿದ್ದಾರೆಂಬ ವರ್ತಮಾನ ಬಂದಿದೆ. ಸಾಹಿತಿಗಳೆಲ್ಲರೂ ರಾಜಕಾರಣದಲ್ಲಿ ದುಮುಖಿ, ಅಲ್ಲಿ ಬೇಳೆ ಬೇಯದಿರಲು ತಮ್ಮ ತಮ್ಮಲ್ಲಿಯೇ ಕೃತಕ ರಾಜಕಾರಣವನ್ನು ನಿರ್ಮಿಸಿ ಅದರ ಅನಭಿಷಿಕ್ತ ರಾಜರು, ವಂದಿ ಮಾಗಧರು ಆಗುತ್ತ ಬರುತ್ತಿರುವ ಈ ರಾಜಕಾರಣ ಸುಂಟರ ಗಾಳಿಯ ಯುಗದಲ್ಲಿ ರಾಜಕಾರಣಿಗಳೂ ಸಾಹಿತ್ಯರಂಗಕ್ಕೆ ಇಳಿಯುವ ಸಂಗತಿ ಮಹದಾಶ್ಚರ್ಯಕರವಾದುದು. ತಮ್ಮ ಕಾದಂಬರಿಯಲ್ಲಿ ರಾಜಕಾರಣ, ತತ್ವಜ್ಞಾನ ಮತ್ತು ಐತಿಹಾಸಿಕ ದರ್ಶನಗಳನ್ನು ಅಳವಡಿಸಿದ್ದಾರೆಂದೂ ತಿಳಿದುಬಂದಿದೆ. ಪ್ರಚಲಿತ ಪರಿಸ್ಥಿತಿಗಳ ಮೇಲೆ ಈ ಕಾದಂಬರಿಯು ವಿಶೇಷ ಬೆಳಕು ಬೀರುವುದೆಂದು ಗೊತ್ತಾಗಿರುವುದರಿಂದಲೇ ಇದು ಎಲ್ಲರ ಆಸಕ್ತಿಯನ್ನು ಕೆರಳಿಸಿದರೆ ಆಶ್ಚರ್ಯವಿಲ್ಲ. ರಾಜಕಾರಣಿ ಸಾಹಿತಿಯಾಗುವುದೂ ಬಿಡಾಲ ಮಾರ್ಜಾಲ ಋಷಿಯಾಗುವುದೂ ಒಂದಕ್ಕೊಂದು ಸರಿಯಾದ ಉಪಮೆಯೇ ಎಂದು ನೋಡಬೇಕಷ್ಟೆ.

ಪ್ರಾದೇಶಿಕ ಕಾಂಗ್ರೆಸ್‌ನ ಅಧ್ಯಕ್ಷ

ಕರ್ನಾಟಕದ ಪ್ರಾದೇಶಿಕ ಕಾಂಗ್ರೆಸ್‌ನ ಅಧ್ಯಕ್ಷರೆಂದು ಎರಡು ವರ್ಷಗಳ ಕಾಲ ದುಡಿದ ಶ್ರೀ ಸಿದ್ದವ್ವನ ಹಳ್ಳಿ ನಿಜಲಿಂಗಪ್ಪನವರು ರಾಜ್ಯದ ಮುಖ್ಯಮಂತ್ರಿಯಾಗಿ ನಿಯುಕ್ತರಾದುದರಿಂದ ತನ್ನಮೊದಲಿನ ಹುದ್ದೆಗೆ ರಾಜಿನಾಮೆಯಿತ್ತರು. ಚಿತ್ರದುರ್ಗದಲ್ಲಿ ಸೇರಿದ ಪ್ರಾದೇಶಿಕ ಕಾಂಗ್ರೆಸ್ ಸಮಿತಿಯ ಸಭೆಯಲ್ಲಿ ಇದನ್ನು ಸ್ವೀಕರಿಸಿ, ಆ ಸ್ಥಾನಕ್ಕೆ ಶ್ರೀ ಮಹಮ್ಮದಾಲಿಯವರನ್ನು ಆರಿಸಲಾಯಿತು. ಸಮಿತಿಯ ೨೬೬ ಜನ ಸದಸ್ಯರಲ್ಲಿ ಉಪಸ್ಥಿತರಿದ್ದವರು ಕೇವಲ ೧೨೬ ಜನರು ಮಾತ್ರ. ಸದ್ಯದಲ್ಲಿಯೇ ಇಡಿಯ ರಾಜ್ಯದಲ್ಲಿ ಕಾಂಗ್ರೆಸ್ ಸಮಿತಿಗಳಿಗೆ ಚುನಾವಣೆಗಳು ನಡೆಯಲಿದ್ದು, ಇದರ ಅಧಿಕಾರಿಯಾಗಿ ನಂಜನಗೂಡಿನ ಶ್ರೀ ಎಸ್. ನಾರಾಯಣರಾಯರನ್ನೂ ಎಂ.ಪಿ.ಸಿ.ಸಿ.ಯು ಆರಿಸಿತು. ಶ್ರೀ ಮಹಮ್ಮದಾಲಿಯವರು ತಾತ್ಪೂರ್ತಿಕವಾಗಿ ಅಧ್ಯಕ್ಷರಾಗಿದ್ದು, ಈ ಸ್ಥಾನವನ್ನು ಚುನಾವಣಾನಂತರದಲ್ಲಿ ಶಾಶ್ವತವಾಗಿ ತುಂಬಲಾಗುವುದು.

ನೀರಿರುವಲ್ಲಿ ಕೆಸರು

'ನೀರಿರುವಲ್ಲಿ ಕೆಸರು, ಕಾಸಿರುವಲ್ಲಿ ಮೋಸ'ವೆಂಬ ಗಾದೆಯನ್ನು ಬೆಂಗಳೂರಿನ ಎ ಐ ಸಿ ಸಮ್ಮೇಲನವು ಸತ್ಯಮಾಡಿ ಕೊಡುತ್ತಿರುವಂತೆ ಭಾಸವಾಗುತ್ತದೆ. ೧೯೬೦ರಲ್ಲಿ ಸದಾಶಿವ ನಗರದಲ್ಲಿ ನಡೆದಿದ್ದ ಈ ಸಮ್ಮೇಳನದ ಲೆಕ್ಟಪತ್ರಗಳು ಇನ್ನೂ ಸಿದ್ದವಾಗಿಲ್ಲವೆಂಬುದರಿಂದ ಇವನ್ನು ಮುಂದಿನ ಸಭೆಯಲ್ಲಿ ಪರಿಶೀಲಿಸಲು ಚಿತ್ರದುರ್ಗದಲ್ಲಿ ಸೇರಿದ್ದ ಎಂ. ಪಿ. ಸಿ. ಸಿ. ನಿರ್ಧರಿಸಿತು. ಆದರೆ, ಕಾಂಗ್ರೆಸ್ ಕಾರ್ಯಕರ್ತರು ಲೆಕ್ಟಪತ್ರಗಳನ್ನು ಹಾಜರುಪಡಿಸಲು ಮಾಡುತ್ತಿರುವ ಈ ದೀರ್ಘ ವಿಲಂಬಕ್ಕೆ ಕಾರಣವೇನು ಎನ್ನುವುದು ಇನ್ನೂ ರಹಸ್ಯವಾಗಿಯೇ ಇದೆ. ಅದೇನೇ ಇದ್ದರೂ ಇಂತಹ ವಿಲಂಬಧೋರಣೆಯು ಕಾಂಗ್ರೆಸಿನ ಘನತೆ ಗೌರವಗಳಿಗೆ ಭಾದೆ ತಂದೊದ್ದುವುದು ಖಂಡಿತ. ಹೊಸತಾಗಿ ಚುನಾಯಿತರಾದ ಅಧ್ಯಕ್ಷ ಮಹಮ್ಮದಾಲಿಯವರು ಈ ಕಲಂಕದಿಂದ ಕಾಂಗ್ರೆಸ್ಸನ್ನು ಉಳಿಸುವಲ್ಲಿ ಅತ್ಯಾಸಕ್ತಿ ತಳೆಯಬೇಕು.

ಈ ಕಾರ್ಯಕ್ರಮದಲ್ಲಿ ಶ್ರೀಗಳಾದ ಕೀ. ವ. ಕೇಶವ (ಹಾಡುಗಾರಿಕೆ), ಎಂ. ಕೃಷ್ಣ ಭಟ್ (ಮೃದಂಗ), ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ (ಕೌರವ), ಯು. ಬಿ. ಗೋವಿಂದಯ್ಯ (ಶ್ರೀಕೃಷ್ಣ), ರಮಾನಂದ ಬನಾರಿ (ವಿದುರ), ಕೆ. ಎ ಭಂಡಾರಿ (ಭಾನುಮತಿ) ಅವರುಗಳು ಭಾಗವಹಿಸಿದ್ದರು.

ಆಕಸ್ಮಿಕ ನಿಧನ— ಉಸ್ಪೂರು ಹೊಸಮನೆ ಕಾಳಪ್ಪ ಶೆಟ್ಟರು ತನ್ನ 51ನೇ ವರ್ಷದಲ್ಲಿ ಇದೇ ತಾ. 11ರಂದು ಸ್ವಗೃಹದಲ್ಲಿ ಹೃದಯಸ್ತಂಭನದಿಂದ ದೈವಾಧೀನರಾದರು. ಸದ್ರಿಯವರು ನಾಡವ ಸಮಾಜದ ಅಧ್ಯ ಮನೆತನದವರೂ, ಬಡವರ ಬಂಧುಗಳೂ, ಧರ್ಮಿಷ್ಟರೂ ಆಗಿದ್ದರು.

ಉಚಿತ ಮಣ್ಣಿನ ಪರೀಕ್ಷೆ—ಮೈಸೂರು ದಸರಾ ವಸ್ತು ಪ್ರದರ್ಶನದ ಅಂಗವಾಗಿ, ದಸರಾ ವಸ್ತು ಪ್ರದರ್ಶನದ ಆವರಣದಲ್ಲಿ 1-10-62ರಿಂದ 24-10-62ರ ವರೆಗೆ ವ್ಯವಸಾಯದ ಇಲಾಖೆಯವರು ಜಮೀನಿನ ಸಾರವನ್ನು ಕಂಡು ಹಿಡಿಯಲು ಜಮೀನಿನ ಮಣ್ಣನ್ನು ಮುಗತ್ತಾಗಿ ಪರೀಕ್ಷೆ ಮಾಡಲು ವರ್ಪಡಿಸಿರುತ್ತಾರೆ. ಈ ಸಂದರ್ಭವನ್ನು ಉಪಯೋಗಿಸಿಕೊಂಡು ರೈತಬಾಂಧವರು ಪ್ರಯೋಜನವನ್ನು ಹೊಂದಬೇಕೆಂದೂ ಪರೀಕ್ಷೆ ಮಾಡಲು ಮಣ್ಣನ್ನು ತರುವ ವಿಚಾರದಲ್ಲಿ ಸ್ಥಳೀಯ ಗ್ರಾಮ ಸೇವಕರ ಅಥವಾ ವ್ಯವಸಾಯ ವಿಸ್ತರಣಾಧಿಕಾರಿಗಳ ಸಲಹೆಯನ್ನು ಪಡೆಯಬೇಕೆಂದೂ ಮೈಸೂರು ಜಿಲ್ಲಾ ವ್ಯವಸಾಯಾಧಿಕಾರಿಗಳು ತಿಳಿಸುತ್ತಾರೆ.

ಮಣಿಪುರ—ತಾ. 9-9-62ರಲ್ಲು ವಕೀಲ್ ಪಿ ಶಿವಾಜಿ ಶೆಟ್ಟಿ ಉಡುಪಿ ತಾಲೂಕ್‌ಬೋರ್ಡು ಮೆಂಬರ್ ಇವರ ಅಧ್ಯಕ್ಷತೆಯಲ್ಲಿ ನೇತಾಜಿ ಯುವಕ ಮಂಡಲವನ್ನು ಉದ್ಘಿ ಬಿ. ಡಿ. ಒ.ಗಳಾದ ಶ್ರೀ ಕೊರಗಪ್ಪನವರು ಉದ್ಘಾಟಿಸಿದರು. ಶ್ರೀ ಯು. ಸುಬ್ಬ, ಬಿ. ಎ.ಯವರು ಸ್ವಾಗತ ಭಾಷಣಮಾಡಿದರು. ಸಭೆಯ ಪರವಾಗಿ ಸೀತಾರಾಮಾಚಾರ್ಯರೂ ಮುದ್ದಣ್ಣ ಸೆಟ್ಟಿ ಯುವಕ ಮಂಡಲದ ಅಧ್ಯಕ್ಷ ಗೋವಿಂದ ಚಟ್ಟ ಮೊದಲಾದವರೂ ಮಾತಾಡಿದರು ಅಧ್ಯಕ್ಷರು ಗ್ರಾಮಸ್ಥರು ಏಕ ಮನಸ್ಸಿನಿಂದ ಜಾತಿ ಮತ ಭೇದವಿಲ್ಲದೆ ಯುವ ಜನರಿಗೆ ತಮ್ಮ ಕೆಲಸವನ್ನು ಮುಂದುವರಿಸಿ ಹೋಗುವರೇ ಪ್ರೀತಿಯೊದರದಿಂದ ಸಹಕರಿಸ ಬೇಕೆಂದರು. ಅಲ್ಲದೆ ಈ ಯುವಕ ಮಂಡಲವು ಜಿಲ್ಲೆಯಲ್ಲಿ ಹೆಸರು ಪಡೆಯುವಂತಾಗಲೆಂದು ಹರಸಿದರು ವಿ. ಜಿ. ಕಿಣಿಯವರು ಧನ್ಯವಾದವನ್ನರ್ಪಿಸಿದರು.

ಚಂದಾಹಣ ಬಾಕಿ ಇರುವವರು ಆದಷ್ಟು ಬೇಗನೆ ಕಳುಹಿಸಿಕೊಟು ಸಹಕರಿಸಬೇಕಾಗಿ ವಿನಂತಿ.

—ಮೆನೇಜರ್.

ಪ್ರಾಥಮಿಕ ತರಗತಿಗಳಲ್ಲಿ

ಇಂಗ್ಲಿಷ್ ಭಾಷೆಯ ಅಧ್ಯಾಪನ

ಬ್ರಿಟಿಷರು ಭಾರತದಲ್ಲಿ ಕಾಲಿರಿಸಿದಂದಿನಿಂದ ಭಾರತೀಯರು ಇಂಗ್ಲಿಷನ್ನು ಕಲಿಯಲು ಆರಂಭಿಸಿದರು. ಭಾರತವು ಬ್ರಿಟಿಷರ ದಾಸ್ಯಕ್ಕೆ ಒಳಪಟ್ಟಾಗ ಭಾರತೀಯರು ರಾಜ ಭಾಷೆಯ ಸ್ಥಾನಕ್ಕೇರಿದ ಈ ಅನ್ಯ ಭಾಷೆಯನ್ನು ಕಲಿಯಲೇ ಬೇಕಾಗಿ ಬಂತು. ಈಗಲಾದರೊ ಇಂಗ್ಲಿಷರು ಭಾರತವನ್ನು ಬಿಟ್ಟು ತೊಲಗಿದರೂ ಅವರ ಭಾಷೆ ಮಾತ್ರ ನಮ್ಮನ್ನು ಬಿದಲಿಲ್ಲ. ನಾವು ನಮ್ಮ ಮಾತೃಭಾಷೆಯಲ್ಲಿ ಸಾಕಷ್ಟು ಪಳಗುವ ಮುನ್ನ ವಿದೇಶಿಯರ ಭಾಷೆಯನ್ನು ಕಲಿಯಲು ಆರಂಭಿಸುತ್ತೇವೆ. ನಮ್ಮ ಮನೆ, ಗ್ರಾಮ, ಊರು, ಕೇರಿಗಳ ಕುರಿತು ಕಲಿತುಕೊಳ್ಳುವ ಮೊದಲೇ ಇಡೀ ಜಗತ್ತಿನ ಕುರಿತು ಕಲಿಯುತ್ತೇವೆ. ಇಂಗ್ಲೆಂಡಿನಲ್ಲಿ ಯಾವ ಯಾವಬೆಳೆಗಳನ್ನು ಬೆಳೆಸುತ್ತಾರೆಂದು ನಾವು ಅರಿತಿರುವೆವೇ ವಿನಹ ನಮ್ಮ ಊರಿನ ಬೆಳೆಯ ವಿಚಾರ ನಾವು ತಿಳಿದಿರುವುದಿಲ್ಲ. ಅದು ಹೇಗೂ ಇರಲಿ. ಉಪಾಧ್ಯಾಯರಾದ ನಾವು ನಮ್ಮ ಸರಕಾರವು ಯಾವ ಪಾಠಗಳನ್ನು ಯಾವಾಗ ಕಲಿಸಬೇಕೆಂದು ವಿಧಿಸುವುದೋ ಆಗ ಅದನ್ನು ಚತ.ರೋಪಾಯಗಳಿಂದ ಮಕ್ಕಳ ಮಿದುಳಿಗೆ ತುರುಕಿಸುವ ಭಾರ ನಮ್ಮದಾಗಿರುತ್ತದೆ. ಇಲ್ಲವಾದರೆ ಬರೇ ಹತ್ತು ವರ್ಷ ಪ್ರಾಯದ ಮಾತೃಭಾಷೆಯನ್ನೂ ಸರಿಯಾಗಿ ಅರಿಯದ ಬಾಲಕರಿಗೆ ಅವರು ಎಂದೂ ಕೇಳದ ಇಂಗ್ಲಿಷನ್ನು ಕಲಿಸಲು ಏಕೆ ಪ್ರಯತ್ನಿಸುವೆವು? "ಗುಡಿ ಕೈಗಾರಿಕೆಯನ್ನು ಕೈಗೊಂಡು ಗ್ರಾಮವನ್ನು ಉದ್ಧರಿಸು" ಎಂದು ಸಾರುವ ಈ ಬುನಾದಿ ಶಿಕ್ಷಣ ಕ್ರಮದಲ್ಲಿ ಅನ್ಯ ದೇಶದ ಭಾಷೆಗೆ ಹೆಚ್ಚಿನ ಪ್ರಾಶಸ್ತ್ಯವಿಲ್ಲ ಎಂದರೆ ತಪ್ಪುಗಲಾರದು.

ಈಗ ನಾವು ಐದನೇ ಈಯತ್ತೆ ಅಥವಾ ವರ್ಗದಲ್ಲಿ ಇಂಗ್ಲಿಷನ್ನು ಕಲಿಸಲು ಆರಂಭಿಸುತ್ತೇವೆ. ಆಗ ನಾವು ಯಾವ ಉದ್ದೇಶವನ್ನು ಇಟ್ಟುಕೊಂಡಿದ್ದೇವೆ ಎಂಬುದನ್ನು ವಿವೇಚಿಸಬೇಕು. ಓದುವುದು, ಬರೆಯುವುದು, ಮಾತಾದುವುದು ಮತ್ತು ಆಡಿದುದನ್ನು ಅರ್ಥ ಮಾಡಿಕೊಳ್ಳಲು ಕಲಿಯಬೇಕಾಗಿರುವುದು. ಇಷ್ಟನ್ನು ನಾವು ಸಾಧಿಸಿದರೆ ಭಾರತ ಇಂಗ್ಲೆಂಡು ಆಗುವುದರಲ್ಲಿ ಸಂದೇಹವೇ ಇಲ್ಲ.

ಜಗತ್ತಿನಲ್ಲಿ ಇಂಗ್ಲಿಷ್ ಒಂದು ಜೀವಂತ ಭಾಷೆಯಾಗಿದೆ ನಿಜ. ಆದರೆ ನಮ್ಮ ಮಕ್ಕಳ ಮಟ್ಟಿಗೆ ಅದೊಂದು ಮೃತಭಾಷೆಯೇ ಸರಿ. ಇಂಗ್ಲಿಷ್ ಪಿರೇಡಿನಲ್ಲಿ ಮಾತ್ರ ಮಗು ಇಂಗ್ಲಿಷ್ ಮಾತನ್ನು ಕೇಳುವುದೇ ವಿನಹ ಮತ್ತಾವ ವೇಳೆಯಲ್ಲಿಯೂ ಅದು ಇಂಗ್ಲಿಷ್ ನುಡಿಗಳನ್ನು ಆಲಿಸಲಾರದು. ಅಂತಹ ಸುಯೋಗವು ಅದರ ಪಾಲಿಗೆ ಇರುವುದಿಲ್ಲ. ಪರಿಪೂರ್ಣವೂ ಸಮೃದ್ಧವೂ ಆದ ಮಾತೃ ಭಾಷೆಯೊಂದಿರುವಾಗ ಇಂಗ್ಲಿಷಿನಲ್ಲೇ ಮಾತಾಡ ಬೇಕೆಂದು ಬಲವಂತ ಮಾಡುವುದು ಮೂರ್ಖತನವಾದೀತು. ಆದುದರಿಂದ ಇಂಗ್ಲಿಷ್ ನಮ್ಮ ಮಕ್ಕಳಿಗೆ ಒಂದು ಹೊರೆಯಾಗಿರುವುದು.

ಹಾಗಾದರೆ ಇಂಗ್ಲಿಷ್‌ನ್ನು ಕಲಿಸುವುದು ಬೇಡವೆ ಎಂದು ನೀವು ಪ್ರಶ್ನಿಸ ಬಹುದು. ಸಾರ್ವತ್ರಿಕವಾಗಿ ಇಂಗ್ಲಿಷನ್ನು ಖಂಡಿತವಾಗಿಯೂ ಕಲಿಸ ಬೇಕಾಗಿಲ್ಲ. ಸದ್ಯ ಇಂಗ್ಲಿಷ್ ವ್ಯವಹಾರ ಭಾಷೆಯಾಗಿದೆ ಎಂಬುದು ಸತ್ಯ. ಆದಷ್ಟು ಬೇಗನೆ ಅದನ್ನು ದೂರಮಾಡಿ ಮಾತೃ ಭಾಷೆಯನ್ನು ವ್ಯವಹಾರಕ್ಕೆ ಉಪಯೋಗಿಸ ಬೇಕು. ನಮ್ಮಲ್ಲಿ ಎಂದು ಮಾತೃ ಭಾಷೆಯ ಮೇಲಿನ ಪ್ರೇಮವು ಜಾಗ್ರತವಾಗುವುದೋ ಅಂದು ಇಂಗ್ಲಿಷ್ ನಮ್ಮನ್ನು ಬಿಟ್ಟುತೊಲಗ ಬೇಕಾಗುವುದು. ಆದುದರಿಂದ ಇಂಗ್ಲಿಷನ್ನು ಕಲಿಸುವಾಗ ವ್ಯವಹಾರಕ್ಕೆ ಅನುಕೂಲವಾಗುವಂತೆ ಕಲಿಸ ಬೇಕು. ಪತ್ರ ಬರೆಯುವುದು ಅರ್ಜಿ ಬರೆಯುವುದು ಇತ್ಯಾದಿಗಳಲ್ಲಿ ಹೆಚ್ಚಿನ ತರಬೇತಿಯನ್ನು ಈಯ ಬೇಕು. ಹೊರತು ಸಾಹಿತ್ಯದ ದೃಷ್ಟಿಯಿಂದ ಇಂಗ್ಲಿಷನ್ನು ಕಲಿಸಲು ಪ್ರಯತ್ನಿಸುವುದು ಶುದ್ಧ ತಪ್ಪು.

ಅನ್ಯ ಭಾಷೆಯನ್ನು ಭಾಷಾಂತರ ಮಾಡಿ ಕಲಿಯ ಬಹುದು. ಅಥವಾ ಆ ಭಾಷೆಯನ್ನು ನಮ್ಮ ಮಾತುಕತೆಗಳಲ್ಲಿ ಬೆರಸಿಕೊಂಡೂ ಕಲಿಯ ಬಹುದು. ಇಂಗ್ಲಿಷ್ ಕಲಿಸಲು ಈ ಎರಡು ಕ್ರಮಗಳನ್ನು ಬೆರಸಿ ಕಂಪ್ಲೀಟ್ ಮೆತಡ್ ಅಥವಾ ಕಂಪ್ರೊಮ್ಯಾಜ್ ಮೆತಡ್ ಎಂಬಕ್ರಮವಿದೆ. ಇದರಲ್ಲಿ ಕನ್ನಡ ಮೊದಲಾದ ಮಾತೃ ಭಾಷೆ, ಅತೀ ಅಗತ್ಯವೆಂದು ಕಂಡುಬಂದಲ್ಲಿ ಉಪಯೋಗಿಸಲು ಯಾವ ಅಡ್ಡಿಯೂ ಇರುವುದಿಲ್ಲ. ಹಾಗಿದ್ದರೂ ನಾವು ಕೆಲವು ಸಮಸ್ಯೆಗಳನ್ನು ಎದುರಿಸಬೇಕಾಗುವುದು.

ಇಂಗ್ಲಿಷಿಗೂ ಭಾರತೀಯ ಭಾಷೆಗೂ ಅಜಗಜಾಂತರ. ಭಾರತೀಯ ಭಾಷೆಯನ್ನು ಕಲಿಯುವ ಮಗುವಿಗೆ ಇಂಗ್ಲಿಷ್ ಒಂದು ವಿಚಿತ್ರ ಭಾಷೆಯಾಗಿ ತೋರಿದರೆ ಆಶ್ಚರ್ಯವಲ್ಲ. ಹೇಳುವುದು ಒಂದು ರೀತಿ. ಬರೆಯುವುದು ಇನ್ನೊಂದು ತೀತಿ. ಕ್ಲಾಸಿನಲ್ಲಿ ಬರೆದುದನ್ನು ಮಗು ಮನೆಯಲ್ಲಿ ಓದಲಾರದು. ಚಿತ್ರಗಳ ಆಧಾರದ ಮೇಲೆ ವಾಕ್ಯಗಳನ್ನು ಅಂದಾಜುಮಾಡಿ ಮಗು ಓದುವುದು. ಪಾಠಗಳನ್ನು ಬಾಯಿಪಾಠ ಕಲಿಯುವುದು. ಮಗು ಪುಸ್ತಕವನ್ನು ನೋಡಿ ಬರೆಯುವಂತಿಯೂ ಇಲ್ಲ. ಪುಸ್ತಕದಲ್ಲಿ ಇದ್ದ ಹಾಗೆ ಮಗು ಬರೆಯುವುದಲ್ಲ. ಬರೆಯುವ ಕ್ರಮವೇ ಬೇರೆ. ಬರೆಯುವ ಅಕ್ಷರಗಳೇ ಪ್ರತ್ಯೇಕ. ಇವುಗಳ ಪರಿಚಯ ಮಾಡಿಕೊಡಲು ಉಪಾಧ್ಯಾಯನು ಭಗೀರಥ ಪ್ರಯತ್ನ ಮಾಡಲೇ ಬೇಕಾಗುವುದು.

ಸ್ಪೆಲ್ಲಿಂಗ್ ಕಲಿಸುವುದೆಂದರೆ ಅದೊಂದು ಸಾಹಸದ ಕೆಲಸವೇ ಸರಿ. ಅದಕ್ಕೆ ಯಾವ ನಿಯಮವೂ ಇರುವುದಿಲ್ಲ. ಆಗ ಉಪಾಧ್ಯಾಯನು ನಿರಂಕುಶ ಪ್ರಭುವಾಗಿ 'ಆದು ಹಾಗೆ' ಎಂದು ತನ್ನ ಅಧಿಕಾರ ಚಲಾಯಿಸಲೇ ಬೇಕಾಗುವುದು.

ಸಂಭಾಷಣೆಯ ಕಾಲದಲ್ಲಿಯೂ ಉಪಾಧ್ಯಾಯನು ಹಲವು ಸಮಸ್ಯೆಗಳನ್ನು ಎದುರಿಸಬೇಕಾಗುವುದು. ಮಕ್ಕಳಿಗೆ ಹೆಚ್ಚು ಪರಿಚಯವಿರುವ ಶಬ್ದಗಳು ಕಷ್ಟದ ಶಬ್ದಗಳಾಗಿದ್ದು ಅವುಗಳನ್ನು ಬಿಟ್ಟು ಬಿಡಬೇಕಾಗುವುದು. ಇಂಗ್ಲಿಷಿನ ವಾಕ್ಯರಚನೆಕನ್ನಡದ ವಾಕ್ಯರಚನೆಗೂ ವ್ಯತ್ಯಾಸವಿರುವುದರಿಂದ ಮಕ್ಕಳು ಸ್ವಂತ ವಾಕ್ಯಗಳನ್ನು ರಚಿಸುವಾಗ ತುಂಬಾ ತಪ್ಪುಗಳನ್ನು ಮಾಡುವರು. ಕ್ರಿಯಾಪದಗಳನ್ನುಕೊನೆಗೆ ಉಪಯೋಗಿಸುವುದು ಮೊದಲಾದ ತಪ್ಪುಗಳನ್ನು ದೂರಮಾಡಲು ಸಾಕು ಸಾಕಾಗುವುದು.

ಭಾಷೆಯ ಬೆಳವಣಿಗೆ ಆಗಬೇಕಾದರೆ ತುಂಬಾ ಓದಬೇಕು. ಇಂಗ್ಲಿಷಿನಲ್ಲಿ ಮಕ್ಕಳ ಕಥೆಪುಸ್ತಕಗಳಿಗೇನೂ ಕೊರತೆಯಿಲ್ಲ. ಆದರೆ ಮಕ್ಕಳಿಗೆ ಅದು ಕಬ್ಬಿಣದ ಕಡಲೆಯಾಗಿದೆ. ಅಕ್ಷರಗಳ ಗುರುತು ಹಿಡಿದು ಆ ಪುಸ್ತಕಗಳನ್ನು ಓದುವಂತಿಲ್ಲ. ಮೇಲಿಂದ ಮೇಲೆ ಓದಲು ಬಾರದ ಕಷ್ಟ ಶಬ್ದಗಳು ಬಂದಾಗ ಮಕ್ಕಳು ಬೇಸರದಿಂದ ಪುಸ್ತಕ ಮುಚ್ಚಿ ಬಿಡುವರು. ಚಿಕ್ಕ ಮಕ್ಕಳಿಗೆ ಭಾಷೆ ಬೆಳೆಯಬೇಕು ಅದಕ್ಕಾಗಿ ಓದಬೇಕು ಎಂಬ ಭಾವನೆಯಿರುವುದಿಲ್ಲ. ಅವರು ಸ್ಫೂರ್ತಿಗಾಗಿ ಅಥವಾ ಕಥೆಗಾಗಿ, ಮನೋರಂಜನೆಗಾಗಿ ಓದಲು ಇಚ್ಛಿಸುವರು. ಆದುದರಿಂದ ಮಾತೃ ಭಾಷೆಯಲ್ಲಿ ಓದುವರು. ಇಂಗ್ಲಿಷ್ ಅವರಿಗೆ ಬೇಡ. ಇದರಿಂದ ಭಾಷೆಯ ಬೆಳವಣಿಗೆ ಕುಂಠಿತವಾಗುವುದು.

ಇಂಗ್ಲಿಷನ್ನು ಕಲಿಸುವುದಕ್ಕೆ ಉಪಾಧ್ಯಾಯರು ಪಠ್ಯ ಪುಸ್ತಕಗಳನ್ನು ಆಧಾರವಾಗಿಟ್ಟುಕೊಳ್ಳುವುದು ಸಾಮಾನ್ಯವಾಗಿದೆ. ಪಠ್ಯ ಪುಸ್ತಕಗಳಲ್ಲಿ ಹಲವಾರು ದೋಷಗಳಿರುತ್ತವೆ. ಕಷ್ಟದ ವಾಕ್ಯಗಳು ಆರಂಭದಲ್ಲೂ, ಸುಲಭದ ವಾಕ್ಯ ಕೊನೆಗೂ ಬರುವುದುಂಟು. ಕೆಲವು ಶಬ್ದಗಳನ್ನು ಕಲಿವುದಕ್ಕಾಗಿ ಅಥವಾ ಕೆಲವು ಕೆಲವು ವಿಶಿಷ್ಟ ವಾಕ್ಯ ಶೈಲಿಯನ್ನು ಕಲಿಸುವುದಕ್ಕಾಗಿ ಕೆಲವು ನೀರಸ ಪಾಠಗಳನ್ನು ಒತ್ತಾಯ ಪೂರ್ವಕ ಕಲಿಸಬೇಕಾಗುವುದು. ಪಾಠ್ಯ ಪುಸ್ತಕಗಳು ಒಂದಷ್ಟು ಪಾಠಗಳಿಂದ ಕೂಡಿದ್ದು ಸಾಕಷ್ಟು ಬಾಯ್ದಿರೆ ಕೆಲಸಗಳನ್ನು ಮಾಡುತ್ತಾ ಮುಂದುವರಿದರೆ ಆ ಪಠ್ಯದ ಎಲ್ಲಾ ಪಾಠಗಳನ್ನು ಮುಗಿಸುವುದು ಅಸಾಧ್ಯವಾಗುತ್ತದೆ. ಹಾಗೆಂದು ಆ ಪಾಠಗಳನ್ನು ಬಿಟ್ಟು ಬಿಟ್ಟರೆ ಮುಂದಿನ ತರಗತಿಯಲ್ಲಿ ತುಂಬಾ ಕಷ್ಟವಾಗುವುದು.

ಈಗ ಇಂಗ್ಲಿಷನ್ನು ಐದನೇ ವರ್ಗದಿಂದ ಆರಂಭಿಸಿರುವರು. ಹಾಯರ್ ಎಲಿಮೆಂಟರಿ ಶಾಲೆಗಳಲ್ಲಿ ಆದರಿಂದ ಯಾವ ತೊಂದರೆಯೂ ಇಲ್ಲ. ಆದರೆ ಸೆಕೆಂಡರಿ ಉಪಾಧ್ಯಾಯರಿಲ್ಲದ ಎಲಿಮೆಂಟರಿ ಶಾಲೆಗಳಲ್ಲಿ ಇಂಗ್ಲಿಷನ್ನು ಕಲಿಸುವವರೇ ಇಲ್ಲ. ಆ ಶಾಲೆಯ ಮಕ್ಕಳು ಅದನೇ ದರ್ಜೆಗೆ ಸೇರಿದಾಗ ಅವರಿಗೆ ತ್ರಿಶಂಕು ಸ್ವರ್ಗವಾಗುವುದು. ಅವರಿಗಾಗಿ ಮೊದಲಿಂದ ಆರಂಭಿಸುವಂತಿಲ್ಲ ಅವರನ್ನು ಬಿಟ್ಟು ಮುಂದುವರಿಯುದಕ್ಕೂ ಇಲ್ಲ. ಇದರ ಕಡೆಗೆ ಸರಕಾರ ಗಮನವೀಯುವುದು ಅತೀ ಅಗತ್ಯ.

ಭಾಷಾ ಪಾಠವನ್ನು ಕಲಿಸುವ ಉಪಾಧ್ಯಾಯನು ಆ ಭಾಷೆಯಲ್ಲಿ ಪಳಗಿರಬೇಕು. ಅವನ ಉಚ್ಚಾರಣೆ ಬರವಣಿಕೆ ಎಲ್ಲವೂ ಮಾದರಿಯಾಗಿರಬೇಕು. ಆತನಿಗೆ ತಾನು ಕಲಿಸುವ ಭಾಷೆಯಲ್ಲಿ ಅಭಿರುಚಿಯಿರಬೇಕು. ಉತ್ಸಾಹಿ ಉಪಾಧ್ಯಾಯನಾಗಿರಬೇಕು. ಹಾಗಿದ್ದರೆ ಮಾತ್ರ ಆತನು ಯಶಸ್ವಿಯಾಗಿ ಪಾಠಗಳನ್ನು ಕಲಿಸಬಲ್ಲನು. ಅವನಿಗೆ ಇಂಗ್ಲಿಷ್ ಕಲಿಸುವಾಗ ಮೇಲಿನ ಸಾಮಾನ್ಯ ಸಮಸ್ಯೆಗಳಲ್ಲದೆ ಬೇರಾವ ಸಮಸ್ಯೆಗಳೂ ಇರದು. ಆದುದರಿಂದ ಅಂತವರನ್ನೆ ಇಂಗ್ಲಿಷಿನಂತಹ ಕಠಿಣ ಭಾಷೆಯನ್ನು ಕಲಿಸಲು ನಿಯಮಿಸುವುದು ವ್ಯವಸ್ಥಾಪಕರ ಆದ್ಯ ಕರ್ತವ್ಯವಾಗಿರುವುದು.

—ಶ್ರೀ ಬಿ. ಶ್ರೀನಿವಾಸ ರಾವ್.
(ಕಡಿಯೊಳಿ ಅಧ್ಯಾಪಕ ಕೇಂದ್ರದ ಹಸ್ತ ಪತ್ರಿಕೆಯಿಂದ)

ಅಸ್ಥಮಾ ಪೀಡಿತರ ಗಮನಕ್ಕೆ

ಹಿಮಾಲಯದ ಪ್ರಸಿದ್ಧ ಅಸ್ಥಮಾ ನಿವಾರಕ ಮೂಲಿಕೆಯನ್ನು ದಿ. 18—10—62 ಹುಣ್ಣಿಮೆಯ ರಾತ್ರಿ ಹಾಲು ಮತ್ತು ಅಕ್ಕಿಯಿಂದ ತಯಾರಿಸಿದ ಖೀರಿನಲ್ಲಿ ತೆಗೆದುಕೊಳ್ಳುವುದರಿಂದ ಅಸ್ಥಮಾ, ಗೂರಲು, ಕೆಮ್ಮು, ಉಬ್ಬಸ, ಮೇಲುಸಿರು ಮತ್ತು ಶ್ವಾಸ ಕಟ್ಟುವಿಕೆ ಇವುಗಳು ನಿವಾರಿಸಲ್ಪಡುತ್ತವೆ. ಕೂಡಲೇ ಇಂಗ್ಲಿಷಿನಲ್ಲಿ ಬರೆಯಿರಿ:

Shri Mahatma Sidh Baba Sewa Ashram
P. O. Chitrakot. (Uttar Pradesh)

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ಠೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯುತ್ತಮವೆಂದು ಪರಿಗಣಿಸಿರುವರು. ಪ್ರತಿಯೊಬ್ಬ ಠೇವಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿಹೊಂದುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ವಿಜಯ ಬೇಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸ್:— ವಿಜಯ ಬೇಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡ್,
Estd. 1931.
Phone No. 240. — ಮಂಗಳೂರು — 3

ಜೀವನದ ವಿವಿಧ ಘಟನೆಗಳನ್ನು ಹೃದಯ ಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.
ರೂ. 1—25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು
ನವಭಾರತ ಪುಸ್ತಕ ಭಂಡಾರ, ಉಡುಪಿ.

ಫೇಶನ್‌ಗಳ ಜನನಿ — ಫ್ರಾನ್ಸ್

ಮೂಡಿದ್ದೇ ಶೃಂಗಾರ, ಹಾಡಿದ್ದೇ ಸಂಗೀತ;
ಮೊದಲಾದ ವಿಲಕ್ಷಣತೆಗಳ ಮಾತೃಭೂಮಿಯಿದು.

ಅಬ್ರಾಹಂ ಲಿಂಕನ್ನರು ಇಪ್ಪತ್ತನೆಯ ಶತಮಾನದ ಶ್ರೇಷ್ಠ ಮಾನವರೆಂದು ಅಮೆರಿಕನ್ನರು ಅನ್ನುತ್ತಾರೆ. ಆದರೆ ಫ್ರೆಂಚರು ಇದನ್ನು ಒಪ್ಪುವುದಿಲ್ಲ. ಇಫೇಲ್ ಗೋಪುರ ಇವರಿಗೂ ಶ್ರೇಷ್ಠವೆಂದು ಫ್ರೆಂಚರ ವಾದ. ಫ್ರಾನ್ಸಿನ ಮೂಗೆಂದರೆ ಪ್ಯೇರಿಸ್. ಇಫೇಲ್ ಟವರ್ (ಗೋಪು)ರ ಇರುವುದೂ ಇಲ್ಲಿಯೇ. ಭಾನುವಾರದಂದು ಈ ಗೋಪುರದ ಮೇಲೆ ಎಣೆಯಿಲ್ಲದ ಜನ ಸಂದಣಿಯಿರುವುದು. ಇದಕ್ಕೆ ಕಾರಣವೂ ಇದೆ. ಈ ಗೋಪುರದ ತುತ್ತ ತುದಿಯಲ್ಲಿ ಒಬ್ಬ ಮನುಷ್ಯನಿದ್ದಾನೆ. 'ಒಂದೇ ಒಂದು ಫ್ರೇಂಕನ್ನು ಕೊಡಿ; ಈ ದುಬರ್ಗಿನ ಮೂಲಕ ಚಂದ್ರ, ಬುಧ, ಮಂಗಳ, ಧ್ರುವತಾರೆ ಮೊದಲಾದುವೆಲ್ಲವನ್ನೂ ಅಲ್ಲದೆ ಸುವಿಖ್ಯಾತ ನರ್ತಕಿ....ಇವಳ ಸ್ನಾನಾಗಾರದ ದೃಶ್ಯವನ್ನೂ ಸುಂದರವಾಗಿ ನೋಡಿರಿ" ಎಂದೀತ ಪ್ರಾರ್ಥಿಸಿಕೊಳ್ಳುತ್ತಾನೆ!

ಒಬ್ಬ ಫ್ರೆಂಚ ಮತ್ತು ಪ್ರಪಂಚದ ಇತರ ಯಾವುದೇ ದೇಶದ ನಾಗರಿಕನ ನಡುವೆ ಒರ್ವ ಫ್ರೆಂಚನಿಗೂ ಆತನ ನೆರೆಹೊರೆಯವನಿಗೂ ಇರುವಷ್ಟೇ ಅಂತರವಿರುವುದು. ಈ ಅಂತರವನ್ನು ದೂರಮಾಡಲು ಇವರು ಬಯಸುವುದಿಲ್ಲವೆಂದು ಹೇಳುವಂತಿಲ್ಲ. ಆದರೆ, ಪ್ರತಿಯೊಬ್ಬನೂ ಇತರರಿಂದ ಭಿನ್ನನು ಎಂಬ ಮೂಲಸಿದ್ಧಾಂತಕ್ಕೆ ಫ್ರೆಂಚರು ಸಿಕ್ಕಿಬಿದ್ದಿರುವುದೇ ಈ ಕಂದಕತುಂಬಲು ಅಡೆಯಾಗಿದೆ. ಆದುದರಿಂದ ಒಬ್ಬ ಹೆಂಗಸು ಮತ್ತೊಬ್ಬಾಕೆಯನ್ನು ಪುರುಷನು ಬೇರೊಬ್ಬ ಗಂಡಸನ್ನು ಕಣ್ಣು ತೆರೆದು ನೋಡುವಂತಹ ಸನ್ನಿವೇಶ ಇಡೀಯ ಫ್ರಾನ್ಸಿನಲ್ಲಿಯೇ ಇಲ್ಲವೆಂದರೂ ಸಲ್ಲುತ್ತದೆ. ಹಾಗಾದರೆ, ವ್ಯವಹಾರವಿಲ್ಲಿ ಹೇಗೆ ನಡೆಯುತ್ತದೆಯೆಂದು ಗಾಬರಿಯಾಗಬೇಡಿ. ಬುದ್ಧಿವಂತರಾದ ಫ್ರೆಂಚರು ಇದಕ್ಕೆ ಮಧ್ಯಮ ವರ್ಗದ ಉಪಾಯವೊಂದನ್ನು ಯೋಚಿಸಿಕೊಂಡಿದ್ದಾರೆ. ಅಲ್ಲಿ ಒಂದು ಮನೆಯ ಗಂಡಸು ಇನ್ನೊಂದು ಮನೆಯ ಹೆಂಗಸಿನೊಡನೆ, ಮಾತಾಡುತ್ತಾನೆ; ಸಲಿಗೆ ಬೆಳೆಸುತ್ತಾನೆ. ಹಾಗೆಯೇ ಹೆಂಗಸು ಬೇರೆ ಮನೆಯ ಗಂಡಸಿನೊಡನೆ ಬೆರೆಯುತ್ತಾಳೆ. ಇಂತಹ ಸಂಬಂಧ ಪ್ರಪಂಚದ ಬೇರಾವ ದೇಶದಲ್ಲಿಯೂ ಇರಲಾರದು.

ಫ್ರೆಂಚರು ಕಲಾ ಪ್ರೇಮಿಗಳು ಇಡೀಯ ಜಗತ್ತಿನಲ್ಲಿಯೇ ಅವರಿದಕ್ಕೆ ವಿಖ್ಯಾತರು ನಿರಾವರಣ ಕಲೆಯು ಆಧುನಿಕವಾದುದು. ಇದು ಫ್ರೆಂಚರ ಆಸಕ್ತಿಯನ್ನು ಬೇಕೆಂಬಷ್ಟು ಕೆರಳಿಸಿದೆ. ಚಿತ್ರದ ಸ್ಥಾನದಲ್ಲಿ ಬರಿಯ ಒಂದಷ್ಟು ಬಣ್ಣ ಲೇಪಿಸಿದರೂ ಆಕೃತಿಯ ಮಾದರಿಯ ಬದಲು ಗೀಟುಗಳನ್ನು ಎಳೆದರೂ ಅದು ಅತ್ಯಾಧುನಿಕ ಕಲೆಯ ಮಾದರಿಯಾಗುವುದು. ಇಂತಹ ಚಿತ್ರಕಾರರ ಸ್ಟುಡಿಯೋಗಳಲ್ಲಿ ಜನರು ಗುಂಪು ಸೇರುತ್ತಾರೆ ಚಿತ್ರಗಳಿಗಿಂತಲೂ ಅವುಗಳ ಮಾದರಿಯನ್ನು ನೋಡ ಬರುವವರ ಸಂಖ್ಯೆಯು ವಿಪರೀತ. ಕಲಾ ಪ್ರೇಮಿಗಳಾದರೂ ಬಹಳ ನಾದು ಸ್ವಭಾವದವರು; ಅವರು ಗುಲ್ಲುಗಲಬೆಗಳನ್ನು ಮೆಚ್ಚುವುದಿಲ್ಲ. ಪ್ಯೇರಿಸಿನಲ್ಲಿ ಎರಡು ಮೂರು ಸಂಗೀತ ಮಂಡಳಿಗಳಿವೆ. ಇವು ತಮ್ಮ ವಿಲಕ್ಷಣತೆಗೆ ಹೆಸರಾಗಿವೆ. ಧ್ವನಿ ಹೀನ ಸಂಗೀತ ಪ್ರಸಾರ ಮಾಡುವಲ್ಲಿ ಇವುಗಳದು ಎತ್ತಿದ ಕೈ ಶ್ರೋತೃಗಳು ಈ ಸಂಗೀತದಿಂದ ಮಂತ್ರ ಮುಗ್ಧರಾದಂತೆ ತಲೆಯಾಡಿಸುತ್ತಾರೆ. ಕೆಲವೊಮ್ಮೆ ಮೋಜಿನ ಸಂಗೀತ ನಡೆಯುವುದೂ ಉಂಟು. ವಿದೇಶೀಯರು ಈ ಸಂಗೀತವನ್ನು ಆಲಿಸಲು ಬಂದು ಕೂತುಕೊಳ್ಳುವುದುಂಟು. ಆಗ ತಮಗದರ ಗಂಧಗಾಳಿಯ ಪರಿಚಯವಿಲ್ಲವಾದರೂ ಎಲ್ಲರೊಡನೆ ತಾವೂ ತಲೆಯಾಡಿಸಲು ತೊಡಗುತ್ತಾರೆ. ಏಕೆಂದರೆ, ಎಲ್ಲರೂ ತಲೆದೂಗುವಾಗ ತಾವು ಸುಮ್ಮನುಳಿದರೆ, ಆಧುನಿಕ ಕಲೆಯ ಪರಿಜ್ಞಾನವೇ ಇಲ್ಲದ ಮೂರ್ಖರೆಂಬ ಹೆಸರಿಗೆ ಭಾಗಿಯಾಗಬೇಕಾದೀತೆಂದಿವರು ಹೆದರುತ್ತಾರೆ. ಇಂತಹ ಅಪಮಾನ ಸಹಿಸುವುದಕ್ಕಿಂತ ತಲೆದೂಗುವುದೇ ಲೇಸಲ್ಲವೆ?

'ಸ್ವಾತಂತ್ರ್ಯ'ವನ್ನು ಫ್ರೆಂಚರು ವಾಸ್ತವಿಕ ಅರ್ಥಗಳಲ್ಲಿ ಉಪಯೋಗಿಸುತ್ತಾರೆ. ಈ ವಿಷಯದಲ್ಲಿ ಅವರು ನಿಜವಾಗಿಯೂ ಕ್ರಾಂತಿಕಾರಿಗಳು. ಸ್ವಾತಂತ್ರ್ಯವಿರುವುದರಿಂದ ಮಾರ್ಗದ ನಟ್ಟನಡುವೆ ನಡೆಯುವುದಕ್ಕೂ ಅವರು ಹಿಂಜರಿಯುವುದಿಲ್ಲ. ಮೋಟಾರು ಅಥವಾ ಮತ್ತಿತರ ವಾಹನಗಳು ತಮಗೆ ಡಿಕ್ಕಿ ಹೊಡೆದಾವು ಎಂಬುದರ ಬಗ್ಗೆ ಅವರಿಗೆ ಎಳ್ಳಷ್ಟೂ ಚಿಂತೆಯಿರುವುದಿಲ್ಲ. ತಮಗೆ ಯಾರಾದರೂ, ಯಾವುದಾದರೂ ಏಕೆ ಡಿಕ್ಕಿ ಹೊಡೆಯುವುದಿಲ್ಲ. ಎಂಬುದರ ಕಡೆಗೇನೇ ಅವರ ಮನಸ್ಸು ಹರಿದಾಡುತ್ತದೆ.

ಫ್ರೆಂಚರ ಮಾತುಕತೆಯಲ್ಲಿಯೂ ವಿಲಕ್ಷಣತೆಯಿದೆ. ನೀವು ಯಾರಾದರೊಬ್ಬ ಫ್ರೆಂಚನೊಡನೆ ಮಾತಿಗೆ ತೊಡಗಿದಿರೆಂದರೆ, ಆ ಮಾತು ಪ್ರಾರಂಭವಾದ ಹಂತವನ್ನು ಬಿಟ್ಟು ಲಕ್ಷಾಂತರ ಮೈಲು ದೂರ ಓಡುವುದನ್ನು ಅಥವಾ ನಾವಿರುವ ವರ್ಷ ಹಿಂದೆ ಇಲ್ಲವೇ ಮುಂದೆ ಸರಿದು ಕೊನೆಗೊಳ್ಳುವುದನ್ನು ಕಂಡುಕೊಳ್ಳುವಿರಿ. ನೀವು ಅತನೊಡನೆ ಬೇಕಾದ ವಿಚಾರವನ್ನು ಸಂಭಾಷಿಸಲಾಗದುದಕ್ಕೆ ಬೇಸರಪಟ್ಟುಕೊಳ್ಳುವುದು ನ್ಯಾಯ; ಅವರೆ, ಆ ನಿಮ್ಮ ಫ್ರೆಂಚ ಗೆಳೆಯನು ಮಾತ್ರ ನಿಮ್ಮ ಯೋಜನೆಯನ್ನು ವ್ಯಾವಹಾರಿಕ ರೂಪಕ್ಕೆ ತರುವಲ್ಲಿ ಸಫಲನಾದೆನೆಂದು ತಿಳಿದುಕೊಳ್ಳುತ್ತಾನೆ. ಸಣ್ಣ ಸಣ್ಣ ಮಾತುಗಳು ಎಂದರೆ ಫ್ರೆಂಚರಿಗಾಗದು. ಹಾಗೆಯೇ ಚಿಕ್ಕ ಪುಟ್ಟ ಕಾರ್ಯಗಳನ್ನು ಮಾಡುವುದೂ ಅವರಿಗೆ ಇಷ್ಟವಿಲ್ಲ. ಅಂಗಿ, ಪೇಂಟುಗಳಲ್ಲಿ ಗುಂಡಿಗಳಿದ್ದರೂ ಅವನ್ನು ಹಾಕಿಕೊಳ್ಳುವಷ್ಟು ಬಿಡುವು ಅವರಿಗಿಲ್ಲ. ಅಣುಜೆಟ್, ಇಲೆಕ್ಟ್ರಾನ್ ಮೊದಲಾದುವುಗಳ ಈ ಯುಗದಲ್ಲಿ ಗುಂಡಿ ಹಾಕುವಂತಹ ಪುಟ್ಟ ಕೆಲಸ ಮಾಡುವುದೆಂದರೆ, ಅದು ಸಮಯದ ದುರುಪಯೋಗವಲ್ಲದೆ ಮತ್ತಿನ್ನೇನು?

ಪ್ರಸಂಚದಲ್ಲಿ ಸೌಂದರ್ಯದ ನೆಲೆವೀಡು ಎಂದರೆ ಪ್ಯೇರಿಸ್. ಅಲ್ಲಿ ಕಾಲಿರಿಸಿದ ಪ್ರತಿಯೊಂದು ಶೃಂಗಾರ ವೈಖರಿಯೂ 'ಫೇಶನ್' ಆಗುವುದು ಅಲ್ಲಿ ಸಲ್ಲದುದು ಔಟ್ ಆಫ್ ಡೇಟ್ ಆಗುವುದು. ಪ್ಯೇರಿಸಿನ ಜನತೆಯು ಹೊಸ ಫೇಶನನ್ನು ಸ್ವೀಕರಿಸುವುದಕ್ಕಿಂತ ಹಳೆಯದನ್ನು ಕಿತ್ತೆಸೆಯುವುದರಲ್ಲಿಯೇ ಹಿರಿಮೆಯನ್ನು ಕಾಣುತ್ತದೆ. ದೇಹದ ಹೆಚ್ಚಿನ ಅಂಗಾಗಗಳನ್ನು ನಿರಾವರಣಗೊಳಿಸುವುದೇ ಪ್ಯೇರೀಸಿನ ಇಂದಿನ ಫೇಶನ್.

ಜಗತ್ತಿನ ರಾಜಕಾರಣಿಗಳಲ್ಲಿ ಫ್ರಾನ್ಸಿನವರು ಹೆಚ್ಚಿನ ಪ್ರಗತಿಶೀಲರು ರಾಜಶಾಹಿಗೆ ಅವರು ಗೋರಿಕಾಣಿಸಿದ್ದಾರೆ. ಆದರೆ, ಪ್ಯೇರಿಸಿನ ಹೋಟೇಲುಗಳಲ್ಲಿ ರಾಜ ವೈಭವವೇ ದೃಗ್ಗೋಚರವಾಗುತ್ತದೆ. ಜನತಾ ಪ್ರಭುತ್ವವೂ ಅವರಿಗೆ ಮುದಿಯೆನಿಸಿದೆ. ಆದುದರಿಂದ ಅವರು ಇಂದು ಅಲ್ಪ ಮತವೇ ಜನತಂತ್ರದ ಆಧಾರ ಸ್ತಂಭವೆಂದು ಸಾಧಿಸ ಹೊರಟಿದ್ದಾರೆ. ವ್ಯಕ್ತಿಗತ ಜೀವನದಲ್ಲಿ ಫ್ರೆಂಚರು ಬಹು ಲಘುವಾದ ವಸ್ತುಗಳನ್ನೇ ಮೆಚ್ಚುತ್ತಾರೆ. ಲೈಟ್ ಡ್ರಿಂಕ್ಸ್, ಲೈಟ್ ಮ್ಯೂಸಿಕ್, ಲೈಟ್ ಡ್ರೆಸ್ ಮತ್ತು ಲೈಟ್ ಡೈಟ್‌ಗಳನ್ನೇ ಅವರು ಗ್ರಹಿಸುತ್ತಾರೆ. ಸ್ಫುತ್ನಿಕ್‌ಗಳ ಈ ಯುಗದಲ್ಲಿ ತಾವೂ ಅತೀವ ಹಗುರರಾಗಿ ನಕ್ಷತ್ರಗಳಂತೆ ಆಕಾಶದಲ್ಲಿ ತೇಲಾಡುತ್ತಿರಬೇಕೆಂಬುದೇ ಅವರ ಮನೀಷೆಯೆಂದರೆ ಅತಿಶಯೋಕ್ತಿಯಲ್ಲ.

ನಮ್ಮ ಜನರ ಜೀವನದಲ್ಲಿ ಪತ್ನಿಯ ಸ್ಥಾನವು ಅತ್ಯಂತ ಮಹತ್ವಪೂರ್ಣವಾಗಿರುವಂತೆಯೇ ಫ್ರೆಂಚರಲ್ಲಿ ವಿಸ್ಟ್ರೆಸ್‌ನ ಪಾತ್ರ. ಬಾಲ್‌ಜಾಕನೇ ಪ್ರಪಂಚದ ಅತಿ ದೊಡ್ಡ ದಾರ್ಶನಿಕನೆಂದು ಅವರು ಅನ್ನುತ್ತಾರೆ. ಫ್ರೆಂಚ ಮಹಿಳೆಯರ ಹಾವಭಾವಗಳಿಂದ ಅವರ ಅಭಿರುಚಿಯೇನೆಂಬುದು ತಿಳಿಯುವುದಿಲ್ಲ. ಏಕೆಂದರೆ, ಅಲ್ಲಿ ಹಾವಭಾವ ಪ್ರಕಟ ಮಾಡುವುದು ಹೇಗೆಂಬುದನ್ನೂ ಕಲಿಸಿಕೊಡುತ್ತಾರೆ. ಅಲ್ಲಿ ಪ್ರತಿಯೊಂದು ಕೆಲಸವನ್ನೂ ಕಲೆಯೆಂದು ತಿಳಿಯಲಾಗುತ್ತದೆ; ಈ ಎಲ್ಲ ಕಲೆಗಳ ಮೇಲೆಯೂ 'ಪ್ಯೇರಿಸ್ ಸ್ಕೂಲ್ ಆಫ್.....ಆರ್ಟ್' ಎಂಬ ಮುದ್ರೆಯಿರುತ್ತದೆ. ಎಲ್ಲ ಕಲೆಗಳನ್ನು ನಿರ್ಮಾತ ಮಾಡುವ ಕೇಂದ್ರವೇ ಪ್ಯೇರಿಸ್ ಎನ್ನಲಾಗುತ್ತಿದೆ.

ಫ್ರಾನ್ಸಿನ ರಾಜನೀತಿಯು ಬಹಳಷ್ಟು ಜಟಿಲವಾಗಿದೆ. ಕೆಲವೊಮ್ಮೆ ಈ ನೀತಿಯು ತಜ್ಞರ ತಿಳುವಳಿಕೆಗೂ ನಿಲುಕುವುದಿಲ್ಲ. ಪ್ರತಿ ಆರು ತಿಂಗಳಿಗೊಂದ ಬಾರಿ ಅಲ್ಲಿ ಸಂವಿಧಾನ ತಿದ್ದುಪಡಿಯಾಗುವುದು. ಒಮ್ಮೆ ರಾಜನೀತಿ ವಿಷಯ ಅಧ್ಯಯನ ಮಾಡುತ್ತಿರುವ ಒಬ್ಬಾತ ಫ್ರಾನ್ಸಿನ ಸಂವಿಧಾನದ ಒಂದು ಪ್ರತಿಯನ್ನು ಕೊಳ್ಳಲು ಬಯಸಿ ಒಂದು ದೊಡ್ಡ ಅಂಗಡಿಯಲ್ಲಿ ವಿಚಾರಿಸಿದನು. ಆಗ ಹಿರಿಯ ಅಂಗಡಿಯಾತ ತನ್ನ ಅಸಮರ್ಥತೆಯನ್ನು ಪ್ರಕಟಿಸುತ್ತ, ಆ ಮಾಸ ಪತ್ರಿಕೆಯ ಪ್ರತಿಗಳು ದೊರೆಯುತ್ತಿಲ್ಲ ಎಂದು ತನ್ನ ಅಸಮರ್ಥತೆಯನ್ನು ಪ್ರಕಟಿಸಿದನು. ಪಾಪ, ಗ್ರಾಹಕನು ಬೇರೆಲ್ಲಿಯಾದರೂ ಹೋಗಿ ತನ್ನ ಕೆಲಸ ಪೂರಯ್ಸಿ ಕೊಂಡಿರ ಬಹುದು.

ಒಂದು ಫ್ರೆಂಚ ವಿಮಾನ ಕಂಪೆನಿಯವರು ತಮ್ಮ ವ್ಯವಹಾರವನ್ನು ಹೆಚ್ಚಿಸಲು ಒಂದು ಉಪಾಯ ಹೂಡಿದರು. ಆಲ್ಪ್ಸ್ ಪರ್ವತಗಳಲ್ಲಿ ವಿರಾಮಗಳಿಸುವ, ತಮ್ಮ ಪತ್ನಿಯರಿಂದ ಕೂಡಿದವರಿಗಾಗಿ ರಿಯಾಯತಿ ನೀಡುವ ಘೋಷಣೆ ಮಾಡಿದರು. ಒಂದು ತಿಂಗಳ ನಂತರ ಕಂಪೆನಿಯವರು ಆ ಯಾತ್ರಿಗಳ ಹೆಂಡಂದಿರಿಗೆ ಪತ್ರ ಬರೆದರು; ನಿಮ್ಮ ಆಲ್ಪ್ಸ್‌ಯಾತ್ರೆ ಹೇಗಾಯಿತು' ಎಂದು ಎಲ್ಲ ಹೆಂಡಂದಿರೂ ಒಂದೇ ಉತ್ತರವಿತ್ತರು—"ಎಂತಹ ಆಕಾಶ ಯಾತ್ರೆ?"

ಉಪಯೋಗಕ್ಕೆ ಬಾರದಮಾನ

(೪ನೇ ಪುಟದಿಂದ)

ದು ಕಾಲದಲ್ಲಿ ನಾನು ಮೂರನೆಯ ತರಗತಿಯಲ್ಲಿದ್ದಿರ ಬೇಕು. ಶಾಲೆಯಲ್ಲಿ ಇನ್ಸ್‌ಪೆಕ್ಟರು ಬಂದು ತನ್ನ ಗಡಿಯಾರ ತೋರಿಸಿ ಒಂದು ನಿಮಿಷವಾದೊಡನೆಯೇ ಹೇಳು ಎಂದರು. ಆ ಕೈಗಡಿಯಾರದ ಸುತ್ತ ಸೆಕುಂಡು ತೋರಿಸುವಮುಳ್ಳು ಒಂದು ಸುತ್ತು ಬಂದ ಕೂಡಲೇ 'ಆಯಿತು, ಎಂದೆ. 'ರೈಟ್' ಎಂದು ಬೆನ್ನು ತಟ್ಟಿದ್ದರು ಇನ್ಸ್‌ಪೆಕ್ಟರರು.

ಇನ್ನೊಮ್ಮೆ ಮೊನ್ನೆ ಮೊನ್ನೆ ಸತ್ಯವೆನಿಸಿದ್ದು. ಟೆಲಿಫೋನ್ ಮೂಲಕ ಪರವೂರಿನವರೊಬ್ಬರೊಡನೆ ಮಾತಾಡ ಬೇಕಾಯಿತು. ಅಂತೂ ಕನೆಕ್ಷನ್ ದೊರಯಿತು. ಮಾತಾಡಲು ತೊಡಗಿದೆ. ಮೊದಲು ತುಸು ಹೊತ್ತು ಒಬ್ಬರ ಮಾತು ಇನ್ನೊಬ್ಬರಿಗೆ ಕೇಳಿಸುವ ಹವಕ್ಕೆ ತರಲು ದೋಯಿತು; ಮುಂದೆ ಕತ್ತೆಯಂತೆ ಕೆರುಚಿ ವಿಚಾರ ತಿಳಿಸುತ್ತ ಇದ್ದೆ. ಅಷ್ಟರಲ್ಲಿ ಆ ಸೊಟ್ಟ ಮೋರೆಯ ಕಾರಖಾನೆ ಬೇಳಿದ, ಸ್ವಾಮಿ, ಮೊದಲ ಮೂರು ನಿಮಿಷಗಳು ಮುಗಿದುವು! ನಾನೇನು ಮಾಡ ಬೇಕು? ಅವನಿಗೆ ಕಡಿಮೆಯವನೆಂದು ಕೊಳ್ಳುವುದು ನಾಚಿಗೆಯಲ್ಲವೆ? ಎಂತಲೇ ಅವನಿಗೂ ಮಿಗಿಲಾಗಿ ಮುಖ ಸೊಟ್ಟಿಸಿ, ಫೋನಿನ ರಿಸೀವರನ್ನು ಬಡಕ್ಕನೆ ಮಡಗಿ ಈಚೆ ಬಂದು ಬಿಟ್ಟೆ.

—ರಾಬಿ.

ಅಮೇರಿಕನ್ ಪಿಸ್ತೂಲ್ ಆಟೋಮೇಟಿಕ್ 6 ಗುಂಡು ಮತ್ತು 50 ಗುಂಡು ನಿಮಗೆ ತೃಪ್ತಿಕರವಾಗದಿದ್ದಲ್ಲಿ ಹಣ ವಾಪಾಸು ಕೊಡಲಾಗುವುದು.

ತುಂಡಾಗದಂತಹ ಲೈಸೆನ್ಸ್ ಇಲ್ಲದೆ ಉಪಯೋಗಿಸಬಹುದು. ಇದನ್ನು ನಿಮ್ಮ ಸಂರಕ್ಷಣೆಗೂ ಕಳ್ಳಕಾಕರ ಭಯವನ್ನೂ ಕ್ರೂರ ಪ್ರಾಣಿಗಳ ಭಯವನ್ನೂ ನೀಗಿಸಲು ಉಪಯೋಗಿಸಬಹುದು. ಬೆಲೆ: ಬೆಲೆ: 6 ಗುಂಡಿನ ಪಿಸ್ತೂಲ್: ನಂ. 333 ರೂ. 8, ನಂ. 444 ರೂ. 10, ನಂ. 555 ರೂ. 15 ಮತ್ತು 50 ಗುಂಡಿನ ಪಿಸ್ತೂಲ್ ನಂ. 666 ರೂ. 10, ನಂ. 777 ರೂ. 15, ನಂ. 888 ರೂ. 20 ಅದರೊಂದಿಗೆ 100 ಗುಂಡು ಧರ್ಮಕ್ಕೆ. ಬೇರೆ 100 ಗುಂಡಿನ ಬೆಲೆ: ರೂ. 5. ಚರ್ಮದ ಚೀಲದ ಬೆಲೆ: ರೂ. 6 ಪೋಸ್ಟ್ ಚಾರ್ಜ್ ರೂ. 2

REY ROGAS & CO., 23-A, Anand Nagar, BOMBAY-26

ಕಥೆಗಾರ ರಾಜಾಜಿಯವರ ಕಲಾಸಿದ್ಧಿ

(೩ನೇ ಪುಟದಿಂದ)

ಲಾಸಿದ್ಧಿಯನ್ನು ತೋರಿಸಿರುವರು. ಧರ್ಮ ಶಾಸ್ತ್ರ ವಿರುದ್ಧವಾದ ಈ ವಿವಾಹ ಇನ್ನೇನು ಆಗಿಯೇ ಹೋಯಿತು! ಎಂಬಲ್ಲಿಯ ತನಕ ನಡೆದ ಸಿದ್ಧತೆ ಕೊನೆಗೆ ಫಕ್ಕನೆ ಪರಿವರ್ತನೆಗೊಳ್ಳುತ್ತದೆ. ಈ ಕಥಾ ಮುಖವೇ ತಿರುಗಿದುದು ಸ್ವಾರಸ್ಯವಾಗಿದೆ.

ಮದುವೆಯ ಮಾತು ಮುಗಿದ ಬಳಿಕ ಅನಿರೀಕ್ಷಿತವಾಗಿ ಪಂಕಜಾ ಮತ್ತು ಗೋವಿಂದ ರಾಯರು ಕೆಲವು ದಿನ ರಜೆ ಪಡೆದು ಒಂದು ಪ್ರವಾಸ ಮಾಡಲು ಅಪೇಕ್ಷಿಸುತ್ತಾರೆ. ಈ ಪ್ರವಾಸದ ಕೊನೆಯಲ್ಲಿ ಅರ್ಧನಾರಿಯ ಹಳ್ಳಿಗೂ ಹೋಗಿ ಆತನ ತಂದೆ ತಾಯಂದಿರನ್ನು ಕಂಡು ಬರಬೇಕೆಂಬ ಇಚ್ಛೆಯೂ, ಪಂಕಜೆಗೆ ಬಲವಾಗಿತ್ತು! ಈ ವಿಷಯ ಅರ್ಧನಾರಿಗೂ ತಿಳಿಸಿ, ಪ್ರವಾಸಕ್ಕೆ ಹೊರಡೋಣವೆಂದು, ಪಂಕಜೆ ಹೇಳಿದಾಗ, ಪಾಪ! ಆತನ ಮೈಬೆವರಿದಂತಾಯಿತು! ಆತನ ಹಳ್ಳಿಯ ಹೊಲಗೇರಿಯಲ್ಲಿ ಕುಡಿತವೇ ಮೊದಲಾದ ದುಶ್ಚಟಗಳಿಂದ ಅಸಹ್ಯಕರ ಜೀವನ ನಡೆಸುತ್ತಿದ್ದ ಆತನ ತಂದೆ ತಾಯಂದಿರನ್ನು ಗೋವಿಂದ ರಾಯರು, ಮತ್ತು ಪಂಕಜೆ ದೂರದಿಂದಲೇ ನೋಡಿದರೂ, ಮತ್ತೆ 'ಪಂಕಜೆಯೊಡನೆ ತನ್ನ ವಿವಾಹವಾಗುವುದು, ಕನಸಿನಲ್ಲೂ ಕಲ್ಪಿಸಲಾರದ ವಿಷಯವಾಗಿ, ಮತ್ತೆ ಅರ್ಧನಾರಿಯ ಮುಖವನ್ನೂ ಕೂಡ ಪಂಕಜೆ ನೋಡಲಾರಳು!' ಎಂದು ಯೋಚಿಸಿದ ಅರ್ಧನಾರಿಯ ಚುರುಕು ಬುದ್ಧಿ ಜಾಗೃತವಾಗಿ, ಫಕ್ಕನೆ-ಈಗ, ನಮ್ಮ ಹಳ್ಳಿಯಲ್ಲಿ ಪ್ಲೇಗು ಕಾಯಿಲೆ ಪ್ರಾರಂಭವಾಗಿದೆ! ನಿನ್ನೆಯೇ ಕಾಗದ ಬಂದಿದೆ. ಆದುದರಿಂದ ಸದ್ಯ ಹೊರಡುವುದು ಬೇಡ.' ಎಂದು ಹೇಳಿಸಿಬಿಟ್ಟಿತು!

ಅರ್ಧನಾರಿಯ ಅಣ್ಣ ರಂಗ, ಆ ಹಳ್ಳಿ ಶಾಲೆಯ ಮಾಸ್ತರನಾಗಿದ್ದ. ಮರುದಿನ ಆತನಿಂದ ಬಂದ ಪತ್ರ ಓದಿ ನೋಡಿದಾಗ ಅರ್ಧನಾರಿಗೆ, ದೇಹದಲ್ಲಿ ವಿದ್ಯುತ್ ಸಂಚಾರವಾದಂತಾಯಿತು! ಆತನು, ಫಕ್ಕನೆ, ಆ ಹಳ್ಳಿಗೆ ಪಂಕಜೆ ಹೋಗದಂತಾಗಬೇಕೆಂದು, ಬುದ್ಧಿಗೆ ತೋಚಿದಂತೆ "ಪ್ಲೇಗು" ಎಂದಿದ್ದನು. ಆದರೆ, ಅರ್ಧನಾರಿ ಹೇಳಿದುದೇ ಈಗ ನಿಜವಾಗಿತ್ತು! ಅರ್ಧನಾರಿಯ ಹಳ್ಳಿಯಲ್ಲಿ ವಿಶೇಷವಾಗಿ ಕಾಯಿಲೆ ಹರಡಿತ್ತು. ಜನರು ಸಾಯುತ್ತಿದ್ದರು! 'ಅರ್ಧನಾರಿಯ, ತಂದೆ-ತಾಯಂದಿರೂ ಅಪಾಯಕರ ಪರಿಸ್ಥಿತಿಯಲ್ಲಿದ್ದಾರೆಂದೂ, ಖರ್ಚಿಗೆ ಕೂಡಲೇ ಹಣ ಕಳುಹಿಸಬೇಕೆಂದೂ, ಅರ್ಧನಾರಿಯು, ಪ್ರತಿ ತಿಂಗಳೂ ಕಳುಹಿಸುತ್ತಿದ್ದ ಹಣ ಆತನ ತಂದೆಗೆ, ಹೆಂಡ ಕುಡಿಯಲು ಹತ್ತು ದಿನಕ್ಕೂ ಸಾಕಾಗುತ್ತಿಲ್ಲ'ವೆಂದೂ, ರಂಗನು, ಜರೂರು ಪತ್ರ ಬರೆದಿದ್ದನು! ಈ ಪರಿಸ್ಥಿತಿಯನ್ನರಿತ ಅರ್ಧನಾರಿಯು, ಬಹು ವ್ಯಾಕುಲಗೊಂಡನು! ಆದರೆ ಮರುಗಳಿಗೆಯಲ್ಲೇ ಆತನ ಮನಸ್ಸು-"ಇಲ್ಲ! ಹಣ ಕಳುಹಿಸುವುದಿಲ್ಲ! ಈ ಪ್ಲೇಗಿನಿಂದ ತಂದೆ-ತಾಯಿ, ಇಬ್ಬರೂ ಸತ್ತುಹೋಗಿ ಬಿಟ್ಟರೆ, ಮತ್ತೆ ಸುಂದರಿ ಪಂಗಜೆಯೊಡನೆ ವಿವಾಹವಾಗಲು ಅಡ್ಡಿಯಿಲ್ಲ!" ಎಂದು ಯೋಚಿಸಿತು. ಆದರೆ, ಮರುಕ್ಷಣದಲ್ಲಿಯೇ 'ಏಯ್, ಚಾಂಡಾಲ! ಪಾಪಿ! ಪಂಕಜೆಗಾಗಿ ಹೆತ್ತ ತಂದೆ-ತಾಯಂದಿರನ್ನು ಕೊಲ್ಲುವಿಯೂ?" ಎಂದು, ಅಂತರಾತ್ಮ ಆತನನ್ನೆಚ್ಚರಿಸಿತು. ಅರ್ಧನಾರಿಯ ಈ ಮಾನಸಿಕ ದ್ವಂದ್ವ ಯುದ್ಧವನ್ನು ಶ್ರೀ ರಾಜಾಜಿಯವರು, ಬಹು ಮಾರ್ಮಿಕವಾಗಿ ಚಿತ್ರಿಸಿರುವರು!

ಕೊನೆಗೆ ಪಂಕಜೆಯ ಒತ್ತಾಯದಿಂದ ಒಂದು ದಿನ ಅರ್ಧನಾರಿ, ಆತನ ಹಳ್ಳಿಗೆ ಹೊರಡುತ್ತಾನೆ. ಆದರೆ ಅಷ್ಟರಲ್ಲಿ ಆತನ, ತಾಯಿ, ಅಣ್ಣ ಎಲ್ಲರೂ—ಪ್ಲೇಗಿನಿಂದ ತೀರಿಕೊಂಡಿರುತ್ತಾರೆ! ತಂದೆ ಕುಡುಕನಾದರೂ, ಹೇಗೋ ಪ್ಲೇಗಿನಿಂದ-ಪಾರಾಗಿ ಉಳಿದುಕೊಂಡಿದ್ದ, ಮಗನೊಡನೆ ಆ ತಂದೆ, ಚಿಕ್ಕ ಮಕ್ಕಳಂತೆ, ಅಳುತ್ತ-ನನ್ನನ್ನೂ ಬೆಂಗಳೂರಿಗೆ ಕರೆದುಕೊಂಡು ಹೊಗಪ್ಪ!' ಎಂದು ಆಂಗಲಾಚಿ ಬೇಡಿಕೊಂಡರೂ ಪಂಕಜೆಯೊಡನೆ ವಿವಾಹವಾಗಿ ಸುಖಪಡುವ ನಿರ್ಧಾರದಿಂದ ಅರ್ಧನಾರಿಯ ಮನಸ್ಸು ಕಲ್ಲಾಯಿತು! ಹೃದಯ ಕಠೋರವಾಯಿತು! ತಂದೆಯನ್ನು ತಿರಸ್ಕರಿಸಿ, ಆತ ಬೆಂಗಳೂರಿಗೆ ಬಂದೇಬಿಟ್ಟನು! ಅಷ್ಟರೊಳಗಾಗಿ ಆ ತಂದೆ, 'ತನಗಿನ್ನು ಈ ಜೀವನ ಸಾಕು!" ಎಂದು ಬಗೆದು ಬಾವಿಗೆ ಹಾರಿ ಪ್ರಾಣಬಿಟ್ಟನು! ಪೋಲೀಸು ಮಹಜರು ಕ್ರಮ ನಡೆದು ಆತನನ್ನು ಯಾರೆಂದು ಗುರುತಿಸಿದ ಸುದ್ಧಿಯೂ, ಅರ್ಧನಾರಿಗೆ ತಿಳಿದುಹೋಯಿತು! ಆಗ—ಅವನು ಈಗ ಎಲ್ಲವೂ ಶಾಂತವಾಯಿತು! ಪಂಕಜೆಯನ್ನು ಮದುವೆಯಾಗಲು ಇದ್ದ ಅಡೆ ತಡೆಯೆಲ್ಲ ಈಗ ಕಳಚಿಹೋಯಿತು!' ಎಂದು ಬಗೆದನು.

ಆದರೆ ಮತ್ತೆ ಸ್ವಲ್ಪ ಹೊತ್ತಿನಲ್ಲೇ ಅರ್ಧನಾರಿಯ ಮನಸ್ಸು ಪರಿವರ್ತನೆಯಾಗುತ್ತದೆ. 'ಅಣ್ಣ, ತಂದೆ, ತಾಯಿ! ಇವರಿಗೆ, ಸಕಾಲದಲ್ಲಿ ಸಹಾಯ ನೀಡದೆ—ಕೊಂದ ಪಾಪಿ ತಾನೇ ಆಗಿದ್ದೇನೆ! ಎಂದು ನಿಜಸ್ಥಿತಿಯನ್ನರಿತ ಅರ್ಧನಾರಿಯು, ಪಶ್ಚಾತ್ತಾಪದಿಂದ ಬೆಂದು ಬೆಂದು ಬಳಲಿ ಹೋಗುತ್ತಾನೆ! ಈ ಚಿಂತೆಯಿಂದಲೇ ಆತನ ದೈಹಿಕ-ಮಾನಸಿಕ ಸ್ಥಿತಿ-ಶೋಚನೀಯವಾಗುತ್ತದೆ.

ಮತ್ತೆ ತರುಣಿ ಪಂಕಜಾ ಅರ್ಧನಾರಿಯನ್ನು ಮಾತನಾಡಿಸಲು ಬಂದಾಗ—ಆತನು, ತನ್ನ ಜಾತಿಯನ್ನೂ ತಾನು—ತಂದೆ-ತಾಯಿ, ಅಣ್ಣ ಇವರೆಲ್ಲರನ್ನೂ ಸಹಾಯ ಮಾಡದೆ ಕೊಂದ ರೀತಿಯನ್ನೂ ಪಂಕಜೆಗೆ ಹೇಳಿ, 'ಪಂಕಜಾ! ಈ ಪಾಪಿಯನ್ನು ಇನ್ನು ಮರೆತುಬಿಡು!" ಎಂದು ಹೇಳುತ್ತ ಕಣ್ಣೀರು ಸುರಿಸುತ್ತಾನೆ.

ಮತ್ತೆ ಅರ್ಧನಾರಿಯಿಂದ ಅಲ್ಲಿ ನಿಲ್ಲಲಾಗಲಿಲ್ಲ. ಆತನು ಕೂಡಲೇ ತನ್ನ ಹಳ್ಳಿಗೆ ಮರಳಿದನು! ಎನ್ನುತ್ತ ಶ್ರೀ ರಾಜಾಜಿಯವರು ಈ ಕಥೆಯನ್ನು ಪೂರ್ಣಗೊಳಿಸುವ ಮೊದಲು—'ತನ್ನ ಹಳ್ಳಿಗೆ ಹೋದ ಅರ್ಧನಾರಿಯು, ಈಗ ಸನ್ಯಾಸಿಯಾಗಿ ಕೆಲವು ಹುಡುಗರಿಗೆ ವಿದ್ಯಾದಾನ ಮಾಡುತ್ತ ತನ್ನ ಆಚರಣೆಗೆ ತಕ್ಕ ಪ್ರಾಯಶ್ಚಿತ್ತವನ್ನು ಹೊಂದುತ್ತಿದ್ದಾನೆ.' ಎಂದು ಹೇಳಿ—ಈ ಕಥೆಯನ್ನು ಪೂರ್ಣಗೊಳಿಸುತ್ತಾರೆ.

ಈ ಕಥೆಯ ಕೊನೆಯಲ್ಲಿ ಶ್ರೀ ರಾಜಾಜಿಯವರು ಚಿತ್ರಿಸಿರುವ ಅರ್ಧನಾರಿಯ, ಮಾನಸಿಕ ಯಾತನೆಯ ಮಾರ್ಮಿಕವಾದ ಚಿತ್ರಣವು ಹೃದಯವನ್ನು ತಲ್ಲಣಗೊಳಿಸುವಂತಿರುವುದು!

'ಎಷ್ಟು ಸುಧಾರಣೆಯಾದರೇನು? ಪ್ರಗತಿಯಾದರೇನು? ಭಾವೈಕ್ಯವಾದೊಡೇನು? ಮಾನವನು ಸ್ವಧರ್ಮ ಮತ್ತು ಕರ್ತವ್ಯವನ್ನು ಧಿಕ್ಕರಿಸಿ ನಡೆದರೆ, ಕೊನೆಗೆ ತಾನೇ ಧಿಕ್ಕಾರಕ್ಕೆ ಗುರಿಯಾಗುತ್ತಾನೆ!" ಎಂಬ ಈ ನೀತಿ-ತತ್ವವು—ಈ ಕಥೆಯಲ್ಲಿ ಪ್ರತಿಬಿಂಬಿತವಾಗಿದ್ದು ಸಮಾಜದ ಮೇಲೆ ತುಂಬ ಪರಿಣಾಮಕಾರಿಯಾಗಿದೆ!

ನವ್ಯ ಸಾಹಿತ್ಯ

ವ್ಯಾಕರಣ ಸತ್ತು ಹೋಯ್ತು
ಛಂದಸಿಗೆ ಬೆಂಕಿ ಬಿತ್ತು
ಸಾಹಿತ್ಯ ನವಗೂ ಗೊತ್ತು
ಬರೆಯುವುದು ನಮ್ಮ ಸ್ವಂತ ಸೊತ್ತು.

ಅಜ್ಜನಾಲದ ವೇದ
ಬೇಡವದರ ಪ್ರಮಾದ
ನಮ್ದು ಗಾಂಧೀ ವಾದ
ದಾರಿಯದು ಬಹಳ "ಸೀದ".

ಉದ್ದವಾದರೆ ಗದ್ಯ
ಗಿಡ್ಡವಿದ್ದರೆ ಪದ್ಯ
ಅರ್ಥ? ಕರ್ತಗೆ ವೇದ್ಯ
ಅಷ್ಟರಿಯೆ ಸಾಕು ಸದ್ಯ.

—"ಸಾಗರ್".

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಐ.ಎಮ್ ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—ದಿ! ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ವಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ. ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು
ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.
ಬೆಲೆ ರೂ. 1-4-0 (1=25).

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0 =25 NP ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದ

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳು— ಮಂಗಳೂರಲ್ಲಿ ಶ್ರೀನಿವಾಸ್ ಬ್ರದರ್ಸ್, ಸ್ಕೂಲ್ ಬುಕ್ ಕೊ., ಕೆನರಾ ಕೊಲೆಜ್ ಬುಕ್ ಕೊ., ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಇವರಲ್ಲಿಯೂ, ಪುತ್ತೂರಲ್ಲಿ ಪೊಪ್ಯುಲರ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ.

ಆಸ್ಥಮಾ ರೋಗಿಗಳ ತಿಳುವಳಿಕೆಗೆ

ರಿಜಿಸ್ತ್ರಿಯಾದ ಚಿತ್ರಕೋಟ್ ಅಸ್ತಮಾ ನಿವಾರಕಬೂತಿಯನ್ನು ತಾ.13-10-62ನೇ ಹುಣ್ಣಿಮೆ ರಾತ್ರಿ ಖೀರಿನೊಂದಿಗೆ ಸೇವಿಸುವುದರಿಂದ ಅಸ್ತಮಾ, ನೇವಸ, ಕೆಮ್ಮು, ನೆಗಡಿ ನಿವಾರಣೆಯಾಗುತ್ತದೆ. ಕೂಡಲೇ ಹುಣ್ಣಿಮೆಯ ಮೊದಲೇ ಬರೆಯಿರಿ.

Manager, Shri Mahatma Naga Baba Ayurvedashram, P. O. Chitrakot U. P.

ವರ್ಗ—ಊಳಿಗ

ಮೊದಲಾದ ಯಾವತ್ತೂ ತರದ

ಎಕೌಂಟ್ ಪುಸ್ತಕಗಳು

ಶಾಲಾ ರಿಜಿಸ್ತ್ರಿಗಳು,
ಫಾರ್ಮುಗಳು
ದೊರೆಯುತ್ತವೆ.

ನವಯುಗ ಪ್ರೆಸ್, ಉಡುಪಿ.

ನರಭಕ್ಷಕ ಬಕಾಸುರ

(೩ನೇ ಪುಟದಿಂದ)

"ಓ ನಿಜ ನಿಜ! ಅದಕ್ಕೆ ಕೂಡಾ ಆ ರಾಕ್ಷಸೇಶ್ವರನು ಅಲ್ಲಿರುವುದು ನಗರಕ್ಕೆ ಒಳ್ಳೆಯದು. ಈ ಐದಾರು ತಿಂಗಳ ಕಾಲದಲ್ಲಿ ನಗರದೊಳಗೆ ಹೊರಗಿನವರೊಬ್ಬರೂ ಬಂದಿಲ್ಲ" ಎಂದ ಮುಖ್ತಿ ಗೆಲುವಿನಿಂದ.

ಹೀಗೆ ಸಭೆ ಮುಗಿದ ಮೇಲೆ ಸಭಿಕರೆಲ್ಲ ಹೊರಟುಹೋದರು. ರಾಜನೂ ಮಂತ್ರಿಯೂ ರಹಸ್ಯಾಲೋಚನೆಗಿಳಿದರು. ಅವರು ಚರ್ಚಿಸುವ ವಿಷಯವು ಬಹಳ ಮುಖ್ಯವಾದುದಾಗಿತ್ತು.

ರಾಕ್ಷಸನು ಆ ನಗರ ಬಿಟ್ಟು ಹೋಗದಂತೆ ಎಲ್ಲ ಏರ್ಪಾಡುಗಳನ್ನೂ ಮಾಡಿಯಾಗಿತ್ತು. ಆದರೆ ರಾಜನು ಆ ರಾಕ್ಷಸನೊಂದಿಗೆ ಒಂದು ಸಂಧಿ ನಿರ್ಣಯಕ್ಕೆ ಇನ್ನೂ ಬಂದಿಲ್ಲ. ಅದು ಸುಲಭವಾದ ಕಾರ್ಯವೂ ಆಲ್ಲ. ಏಕೆಂದರೆ ಯಾರೊಬ್ಬ ರಾಜಾಧಿಕಾರಿ ಕೂಡಾ, ಆ ರಾಕ್ಷಸನನ್ನು ಸವಿಾಪದಲ್ಲಿ ಬಿಟ್ಟು—ದೂರದಿಂದ ಕೂಡಾ ನೋಡಿದ ಖಾಪಸ್ಕೆ ಹೋಗಿರಲಿಲ್ಲ.

"ಅತನೊಡನೆ ಮಾತಾಡಬೇಕು. ನಮ್ಮ ನಗರ ಬಿಟ್ಟು ತಾನು ಹೋಗುವುದಿಲ್ಲವೆಂದೂ, ನಾವು ಕಳುಹಿಸುವ ಆಹಾರದಿಂದ ತೃಪ್ತಿಪಡುತ್ತೇನೆಂದೂ, ನಗರದ ಮೇಲೆ ಬಿದ್ದು ಯಾರನ್ನೂ ಕೊಲ್ಲುವುದಿಲ್ಲವೆಂದೂ, ಕೋಟೆ ಬಾಗಿಲು ತೆರೆದಿಟ್ಟರೂ ನಗರದೊಳಗೆ ನುಸುಳಲಾರೆನೆಂದೂ ಅವನಿಂದ ಪ್ರಮಾಣ ಮಾಡಿಸಿಕೊಳ್ಳಬೇಕು" ಎಂದ ರಾಜ.

'ಯಾರು ಹೋಗಿ ಅವನೊಡನೆ ಮಾತಾಡುವುದು? ಅಲ್ಲದೆ ರಾಕ್ಷಸನು ಮಾತಿಗೆ ಒಳಪಟ್ಟು ಇರುತ್ತಾನೆಂಬ ನಿಶ್ಚಯವೇನು? ಮಾತು ತಪ್ಪಿದರೆ ನಾವು ಅವನನ್ನು ಏನು ಮಾಡಬಲ್ಲೆವು?" ಎಂದು ಮಂತ್ರಿ ಪ್ರಶ್ನೆಗಳನ್ನೆತ್ತಿದ. ರಹಸ್ಯ ಸಂಭಾಷಣೆಯಾದುದರಿಂದ ರಾಕ್ಷಸನನ್ನು ಕುರಿತು ಅವರು ಗೌರವ ಸಂದೋಧನೆ ಮಾಡಿಕೊಳ್ಳಲಿಲ್ಲ.

"ಹಾಗಾದರೆ ನಮ್ಮ ಏರ್ಪಾಡುಗಳೆಲ್ಲಾ ವ್ಯರ್ಥವೆ? ಮತ್ತೆ ಏತಕ್ಕಾಗಿ ಇದನ್ನೆಲ್ಲಾ ಮಾಡಿಸಿದ್ದು?" ಎಂದು ಕೇಳಿದ ರಾಜ.

"ಆಲೋಚನೆ ಮಾಡದೆ ನಾನು ಯಾವುದನ್ನೂ ಮಾಡಿಲ್ಲ ಮಹಾಪ್ರಭು. ನನ್ನ ಆಲೋಚನೆಗೆ ಏನೆಂದರೆ, ನಾವು ಈ ರಾಕ್ಷಸನನ್ನು ಮೃಗವನ್ನು ಪಳಗಿಸಿಕೊಳ್ಳುವ ಹಾಗೆ ಪಳಗಿಸಬೇಕು. ನಾನು ಕಣ್ಣಾವನಾಗಿರುವಾಗ ನಮ್ಮಲ್ಲಿ ಒಂದು ಬೆಕ್ಕಿನ ಮರಿಯಿತ್ತು. ಅದಕ್ಕೆ ಮೊದಲು ಹಾಲೂ, ತರುವಾಯ ಕೆನೆಯನ್ನೂ ಬೆಣ್ಣೆಯನ್ನೂ, ಮೊಸರನ್ನೂ, ಚಿಕ್ಕ ಚಿಕ್ಕ ವಿಾನುಗಳನ್ನೂ ಹಾಕುತ್ತಾ ಹೋದೆವು. ಅದು ಬೆಳೆಯುತ್ತಾ ಬಂದಂತೆ ತಪ್ಪೆ ಆಹಾರಕ್ಕಾಗಿ ನಮ್ಮನ್ನೆ ಅವಲಂಬಿಸಿಕೊಂಡಿದ್ದು ಬಿಟ್ಟಿಕು. ಆದರೆ ಇದಿರೇ ಇಲಿ ಸುಳಿದಾಡಿದರೂ ಅದು ಕದಲನೆ ಸುಮ್ಮನಿರುವ ಸ್ಥಿತಿಗೆ ಬಂತು. ಈ ರಾಕ್ಷಸ ಮೃಗವನ್ನು ಕೂಡಾ ಹೀಗೇ ಪಳಗಿಸಬೇಕು. ನಾನು ಆಹಾರ ಕಳುಹಿಸದೇ ಇದ್ದ ದಿವಸ ಉಪವಾಸವೇ ಇಂಬೇಕಲ್ಲದೆ, ಮಾನವರ ಬೇಟೆಗೆ ಬಾರದ ಹಾಗೆ ಮಾಡಿಬಿಡಬೇಕು. ಅಂತಹ ಸ್ಥಿತಿಗೆ ಬಂದ ಮೇಲೆ ನಾವು ಹೇಳಿದ ಕಾಗೆ ಆತ ಮಾಡುತ್ತಾನೆ ಅದುದರಿಂದ ನಾವು ಸ್ವಲ್ಪ ಕಾಲದ ವರೆಗೆ ಅವನಿಗೆ ತಿಂಡಿಯ ಬಾಂಡ, ಮನುಷ್ಯ, ಎತ್ತುಗಳನ್ನು ಕಳುಹಿಸುವಾ. ಎಷ್ಟ ಧಪ್ಪದ ರಾಕ್ಷಸನೇ ಆಗಿದ್ದರೂ ಇದಕ್ಕಿಂತ ಬೆಜ್ಜಾದ ಆಹಾರಕ್ಕೆ ಹಾರಾಡುವರ"

ಮಂತ್ರಿಯ ಬುದ್ಧಿವಂತಿಕೆಗೆ ರಾಜ ಬಹಳ ಮೆಚ್ಚಿದ. ಆ ಸಮಯಕ್ಕೆ ತನ್ನ ಕೊರಳಲ್ಲಿದ್ದ ರುದ್ರಾಕ್ಷಿ ಮಾಲೆಯನ್ನೆತ್ತಿ ಮಂತ್ರಿಗೆ ಕಾಣಿಕೆಯಾಗಿ ಕೊಟ್ಟುಬಿಟ್ಟ. ರಾಜನ ಕೊರಳನಲ್ಲಿ ಬೆಲೆ ಬಾಳುವ ಮುತ್ತು ರತ್ನಗಳ ಮಾಲೆಗಳಿದ್ದರೂ, ಅವನ್ನೆಲ್ಲಾ ಚಿಕ್ಕ ಚಿಕ್ಕ ದಾರಗಳಿಂದ ಅಲ್ಲಲ್ಲೇ ಗಂಟು-ಹಾಕಿಕೊಂಡಿದ್ದುದರಿಂದ, ರುದ್ರಾಕ್ಷಿ ಮಾಲೆ ತೆಗೆಯುತ್ತಲೇ ಸುಲಭವಾಗಿ ಬರುವಂತಿತ್ತು. ಈ ರಹಸ್ಯ ಕೂಡಾ ಮಂತ್ರಿ ಹೇಳಿಕೊಟ್ಟ ಮಾತೇ. ಅಂತೆಯೇ ಮಂತ್ರಿ ರುದ್ರಾಕ್ಷಿ ಮಾಲೆಯನ್ನು ಕಣ್ಣಿಗೊತ್ತಿಕೊಂಡು ತನ್ನೊಳಗೇ ತಾನು ನಕ್ಕ

೦ ೦ ೦

ಮೊದಲನೆಯ ದಿನ ಬಕಾಸುರನಿಗೆ ಎರಡು ಎತ್ತುಗಳನ್ನು ಹೊಡಿ ಅದರ ಮೇಲೆ ಮಹಾ ಭೋಜನ ಭಾಂಡವನ್ನಿಟ್ಟು, ಅದರ ಮೇಲೆ ಅರಸನ ಜೀತದಾಳೊಬ್ಬನನ್ನು ಕೂಡಿಸಲಾಗಿತ್ತು. ಅದಕ್ಕೆ ಮೊದಲು ಆವನನ್ನು ಹೂವಿನಿಂದಲೂ ಗಂಧದಿಂದಲೂ ಅಲಂಕಾರ ಮಾಡಿ, ಬ್ರಾಹ್ಮಣರು ಮಂತ್ರೋಕ್ತವಾಗಿ ಅವನನ್ನು ಅವನ ಇಷ್ಟ ದೇವತೆಗೆ ನೈವೇದ್ಯ ಮಾಡಿ "ಹೋಗವ್ವಾ! ನಿನ್ನ ಜನ್ಮ ಸಾರ್ಥಕಾಯ್ತು! ಇನ್ನು ನಿನಗೆ ಜನ್ಮವೇ ಇಲ್ಲ. ನಿನ್ನ ದೀವಿ ನಿನ್ನನ್ನು ಸ್ವೀಕರಿಸಿದ್ದಾಳೆ. ರಾಕ್ಷಸೇಶ್ವರನು ತಿನ್ನುವುದು ನಿನ್ನ ಬರಿಯ ಒಂದೊಂದಿ ಮಾತ್ರ!" ಎಂದು ಧೈರ್ಯ ಹೇಳಿದ್ದರು. ದೇವೇಂದ್ರನೂ, ಮೂವತ್ತು ಮೂರುಕೋಟಿ ದೇವತೆಗಳೂ, ರಂಭಾ ಊರ್ವಶ್ಯಾದಿ ಅಪ್ಸರಸಿಯರೂ ಅವನ ದಾರಿ ನೋಡುತ್ತಿದ್ದಾರೆಂದೂ ಹೇಳಿ ಅವನಿಗೆ ಒಳ್ಳೇ ನಂಬಿಕೆಯುಂಟು ಮಾಡಿದ್ದರು. "ಅಲ್ಲಿ ನನ್ನ ಅಮ್ಮ ಕಾಣಿಸುತ್ತಾಳೆಯೇ?" ಎಂದು ಆತ ಅತ್ಯಾತುರದಿಂದ ಕೇಳಿದ್ದ "ಕಾಣಿಸುತ್ತಾಳೆ, ನಿನಗಾಗಿ ಕಾದಿದ್ದಾಳೆ" ಎಂದಿದ್ದರು.

ಸರಿಯಾಗಿ ನಡು ಮಧ್ಯಾಹ್ನದ ವೇಳೆಗೆ ಬಂಡಿ ನಗರದ ದ್ವಾರವನ್ನು ದಾಟಿ ಒಂದರ್ಧ ಕ್ರೋಶದೂರಕ್ಕೆ ಹೋಯಿತು. ಅಲ್ಲೊಂದು ಆಲದ ಮರದ ಕೆಳಗೆ ಗಾಡಿ ನಿಂತಿತು. ಗಾಡಿಯವನು ಗಟ್ಟಿಗನೆ ಆಲದ ಮರವನ್ನೇರಿದನು. ಹಿಂದೆ ರಾಕ್ಷಸನ ಕೈಯಲ್ಲಿ ಸತ್ತವರೆಲ್ಲಾ ಈ ವ್ಯಾಂತದಲ್ಲೇ ಅಂತರ್ಹಿತ ಸಮಯದಲ್ಲಿ ಸತ್ತಿದ್ದರು.' ದಾರಿಯಲ್ಲೇ ರಾಕ್ಷಸನು ಕಣ್ಣಿಗ ಬಿದ್ದರೆ ಪಾದ ಓಡಿ ಹೋಗಿ ತಪ್ಪಿಸಿಕೊಳ್ಳಿ. ಗಾಡಿಯು ಆಹಾರವನ್ನು ನೋಡಿದ ಮೇಲೆ ರಾಕ್ಷಸನು ನಿನ್ನ ಬೆನ್ನಟ್ಟುವುದಿಲ್ಲ. ಗಾಡಿ ಆಲದ ಮರದ ಬುಡವನ್ನು ಸೇರಿದರೆ ಕೂಡಲೇ ಮರದ ಮೇಲೆ ಹತ್ತಿ ಆಡಗಿ ಕೂತುಬಿಡಿ." ಎಂದು ಗಾಡಿಯವನಿಗೆ ಹೇಳಲಾಗಿತ್ತು.

೦ ೦ ೦

ಸಾಯಂಕಾಲ ಸೂರ್ಯಾಸ್ತಮಾನ ಇನ್ನೂ ಗಳಿಗೆ ಹೊತ್ತು ಇದುವಾಗಲೇ ಆ ಗಾಡಿ ನಗರದೊಳಗೆ ತಿರುಗಿ ಬಂದಿತು ಕೂಡಲೇ ರಾಜಭಟರು ಬಂಡಿಗಾರನನ್ನು ರಾಜನೂ ಮಂತ್ರಿಯೂ ಕುಳಿತಿರುವ ಕೋಣೆಯೊಳಗೆ ಕರೆದುಕೊಂಡು ಹೋದರು.

"ಏನು? ಏನು ನಡೆಯಿತು? ರಾಕ್ಷಸ ಬಂದನೆ? ಎಲ್ಲಾ ತಿಂದನೆ? ಹಾಂ! ಏನಾಯಿತು?" ಎಂದು ಮಂತ್ರಿ ಬಂಡಿಯವನನ್ನು ಆತುರದಿಂದ ಕೇಳಿದ. ಬಂಡಿಯವ ಬದುಕಿ ಬಂದಾನೆಂದು ಮಂತ್ರಿ ಊಹಿಸಿರಲಿಲ್ಲ.

ಮಂತ್ರಿಯ ಪ್ರಶ್ನೆಯನ್ನು ಕೇಳಿದಾಗ ಬಂಡಿಗಾರ ಏನೋ ನೆನೆದುಕೊಂಡು ಬಿದ್ದು ಬಿದ್ದು ನಕ್ಕನು

"ಏಕೋ ನಗುತ್ತಿ?"

"ಆ—ರಾಕ್ಷಸ—" ಮತ್ತೂ ಹೊಟ್ಟೆ ಹಿಡಿದುಕೊಂಡು ನಕ್ಕನು.

"ನೋಡಿದೆಯೊ ರಾಕ್ಷಸನನ್ನು?"

"ನೋಡಿದೇ! ಮುದುಕ, ಮುದಿ ಜಬ್ಬ! ನನಗಿಂತ ಎರಡು ಮುಷ್ಟಿ ಹೆಚ್ಚಿಗಿದ್ದಾನೋ ಏನೋ ಆಷ್ಟೇ! ಅವನ ನೋಡಿ ಯಾಕೆ ಹೆದರ ಬೇಕೋ! ನನ್ನ ಚಾಟೇ ತಿಕ್ಕೊಂಡು ಎರಡು ಬಾರಿಸಿ ಬಿಟ್ರೆ ಓಡಿ ಹೋಗ್ತಿದ್ದಾ ಹೋಗ್ಲೀಂತ, ತಮ್ಮಪ್ಪಣೆ ಇಲ್ಲಂತ ಸುಮ್ನಿದ್ದೇ. ಅವ ಮನುಷನ್ನ ಕೊಂದು ತಿಂದು ಹೋಗೋವರೆಗೂ ಸುಮ್ನಿದ್ದೇ. ಅವ ಹೋದ ಮೇಲೆ ಭಾಂಡಾನ ಅಲ್ಲೇ ಉರುಳಿಸಿ ಹಾಕಿ ಬಂಡಿ ಹೊಡ್ಕೊಂಡು ಬಂದುಬಿಟ್ಟೀ. ಅವ ಆ ಭಾಂಡಾನ ಮುಟ್ಟೇ ಇಲ್ಲಾ. ಅಸಲು ಮನುಷ್ಯನ ಕೊಬ್ಲಕ್ಕೇ ಅವನಿಗೆ ಹಾವು ಹೊತ್ತಾಯ್ತು. ಆದ್ದ ತಿಂದು ಉಳಿದ ಹೆಣಾನ ಭುಜದ ಮೇಲೆ ಹಾಕ್ಕೊಂಡು ಹೋಗಿಬಿಟ್ಟಾ. ಆಯ್ಯಯ್ಯೋ! ಅವ ಎಂದ್ದಾ ರಾಚ್ಚಸ ಸಾಮಿ!" ಎಂದು ಮತ್ತೆ ನಗಾಡಿದ.

"ನೀನು ಹೋಗಿ ಆಲ್ಲಿರು" ಎಂದ ಮಂತ್ರಿ ಪಕ್ಕದ ಕೋಣೆ ತೋರಿಸಿ.

ಬಂಡಿಗಾರ ಆಚೆಗೆ ಹೋದ ಮೇಲೆ ರಾಜನೂ ಮಂತ್ರಿಯೂ ಮುಖ ಮುಖ ನೋಡಿಕೊಂಡರು.

"ಯಾರಲ್ಲಿ?" ಕರೆದ ಮಂತ್ರಿ.

ಭಟನೊಬ್ಬ ಓಡಿಬಂದ

'ನಮ್ಮ ಕ್ಷೌರದವನನ್ನು ಕರೆದು ಆ ಬಂಡಿಯವನ ನಾಲಿಗೆಯನ್ನು ಗುಟ್ಟಾಗಿ ತೆಗೆದುಹಾಕವಂತೆ ಹೇಳು. ಇಲ್ಲದಿದ್ದರೆ ಪಾಪ ಇವನು ಬದುಕಲಾರ" ಎಂದು ಮಂತ್ರಿ ಅವನನ್ನು ಓಡಿಸಿದ.

೦ ೦ ೦

(ನುಂದುವರಿಯುವುದು)

ಪುತ್ತೂರು ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟ್‌ನಲ್ಲಿ

S. I. A. 141/62 in S. C. 122/62

ಕೆ. ಬಿ. ರಾಮ ನ್ಯಾಕ — ವಾದಿ

ಬಡುವ ಕುಂಞ ಬ್ಯಾರಿ — ಪ್ರತಿವಾದಿ.

ಬಂಟ್ವಾಳ ತಾಲೂಕು ವಿಟ್ಲ ಳಸಬಾಗ್ರಾಮದ ಬಾದರತ್ತಡ್ಕ ಎಂಬಲ್ಲಿರುವ ಮೂಸೆ ಬ್ಯಾರಿಗಳ ಮಗ ಬಡುವ ಕುಂಞ ಬ್ಯಾರಿಗಳವರಿಗೆ.

ನಿಮ್ಮ ಮೇಲೆ ವಾದಿಯು ಗೇದ ಬಾಕಿ ಬಗ್ಗೆ ಮಾಡಿದ ವ್ಯಾಜ್ಯವು ತಾರೀಕು 25-9-62 ಕ್ಕೆ ನಿಮ್ಮ ಹಾಜರಾತಿಗೆ ಇಟ್ಟಿಯದೆ. ಸದ್ರಿ ದಿನ ಹಗಲು ಗಂಟೆ 10ಕ್ಕೆ ನೀವು ಖುದ್ದಾಗಲೀ ಏನಾ ವಕೀಲರ ಮುಖಾಂತರವಾಗಲೀ ಹಾಜರಾಗತಕ್ಕದ್ದು. ತಪ್ಪಿದಲ್ಲಿ ನಿಮ್ಮ ಮೂಡಿ ತೀರ್ಮಾನ ಮಾಡಲ್ಪಡುವುದು.

(ಕೋರ್ಟು ಹುಕುಂ ಪ್ರಕಾರ)

Sd. ಕೆ. ರಾಮಕೃಷ್ಣ.

ವಾದಿಪಕ್ಷ ಎಡ್ವೋಕೇಟ್.

ಪುತ್ತೂರು, 31—8—1962.

ಹಾಮೋ ನಿಯಮ್ ಕಲಿಯುವವರಿಗೆ
ಅತ್ಯುತ್ತಮ ಸಂಗೀತ ಪುಸ್ತಕ—
ಶ್ರೀ ಎ. ರಾಮಪ್ಪ ಆವರ
ಹಾರ್ಮೋನಿಯಮ್
ಬೋಧನ ಕ್ರಮ
ಪರಿಷ್ಕರಿಸಲ್ಪಟ್ಟ ನಾಲ್ಕನೆಯ ಮುದ್ರಣ.
ಸಾವಿರ ಪ್ರತಿಗಳು ಉಳಿದಿವೆ.
ಬೆಲೆ: ರೂ. 2—0—0.
ಒಂದು ಪ್ರತಿ ಬೇಕಾದವರು ರೂ 2-50 ನ್ನು ಮನಿಆರ್ಡರು ಮಾಡಿ ತರಿಸಿಕೊಳ್ಳಬಹುದು.
ನವಭಾರತ ಪುಸ್ತಕ ಭಂಡಾರ, ಉಡುಪಿ.

REGD. No. B. G. 176
LICENCE No. 31
Licensed to Post without Prepayment

ಯುರೋಪಿನ ಸಾಮಾನ್ಯ ಮಾರುಕಟ್ಟೆ

(ಒನೇ ಪುಟದಿಂದ)

ವ್ಯಕ್ತಿಯು ಕಾರ್ಯದ ತಾಸುಗಳಲ್ಲಿ ಆ ದೇಶಗಳು ಎರಡು ಅಥವಾ ಮೂರು ಪಟ್ಟು ಮುಂದಿದ್ದುವು.

ಕಳೆದ ದಶಕದಲ್ಲಿ ಉತ್ಪಾದನೆ ಮತ್ತು ನಿರ್ಮಾಣದಲ್ಲಾದ ಹೆಚ್ಚಳದಿಂದ ಬೆಲೆಯೂ ಸ್ಥಿರವಾಗಿರಲಿಲ್ಲ. ಬ್ರಿಟಿಷ್ ಬೆಲೆಯಲ್ಲಿನ ವೃದ್ಧಿಯು ಉಳಿದ ದೇಶಗಳಿಗಿಂತ (ಫ್ರಾನ್ಸನ್ನು ಉಳಿದು) ಬಹಳ ಹೆಚ್ಚಿತ್ತು. ಬಾಹ್ಯ ಸಂತುಲನವದಲ್ಲಿ ಆ ದೇಶಗಳು ಇನ್ನೂ ಸಫಲವಾದುವು. ಈ ದಶಕದ ಪೂರ್ವಾರ್ಧದಲ್ಲಿ ಇಂಗ್ಲೆಂಡಿನ ನಿರ್ಯಾತವು ಪೆಚ್ಚಿ ೧೯೫೫-೬೦ರ ಅವಧಿಯಲ್ಲಿ ಅರ್ಧದಷ್ಟಾಯಿತು. ಉಪರ್ಯುಕ್ತ ದೇಶಗಳಲ್ಲಿ ೧೯೫೫-೬೦ರಲ್ಲಿ ಆಯಾತ ನಿರ್ಯಾತಗಳು ಸಮಸಮವಾಗಿದ್ದುವು. ಇಡಿಯ ದಶಕದಲ್ಲಿ ಇಂಗ್ಲೆಂಡಿನ ಬಂಗಾರ ಮತ್ತು ವಿದೇಶೀ ನಾಣ್ಯನಿಧಿ ೨॥ ಅರಬ ಡಾಲರ್‌ಗಳಷ್ಟು ಹೆಚ್ಚಿದರೆ, ಮೇಲಿನ ದೇಶಕಗಳಲ್ಲಿ ೧೯೧೦ ಅರಬ ಡಾಲರ್‌ಗಳ ವರೆಗೆ ಏರಿತು.

ಈ ತಥ್ಯಾಂಶಗಳನ್ನು ಅನುಸರಿಸಿ, ಇಂಗ್ಲೆಂಡ್ ಮತ್ತು ಅದರ ಸ್ನೇಹಿತರು ಸಾಮಾನ್ಯ ಮಾರುಕಟ್ಟೆಯ ಬಗೆಗಿದ್ದ ತಮ್ಮ ದೃಷ್ಟಿಕೋಣವನ್ನು ಪರಿವರ್ತಿಸಲು ಬಗೆದುವು. ತೀವ್ರ ಬೆಳವಣಿಗೆಗೆ ಸಾಮಾನ್ಯ ಮಾರುಕಟ್ಟೆಯು ಅನಿವಾರ್ಯ, ತಾವೂ ಇದರಲ್ಲಿ ಸೇರಿಕೊಳ್ಳಬೇಕು ಎಂದು ಅನುಭವ ಮಾಡಿದುವು.

ಭಾರತಕ್ಕೆ ಸಂಧಿಗ್ಧತೆ

ಇಂಗ್ಲೆಂಡು ಈ ಸಂಬಂಧದಲ್ಲಿ ಮಾಡಿದ ನಿರ್ಣಯದಿಂದ ಕಾಮನ್‌ವೆಲ್ತ್ ದೇಶಗಳ ಮುಂದೆ ಕಠಿನತೆಗಳು ಉತ್ಪನ್ನವಾಗಿವೆ. ಇದುವರೆಗೆ ಇವುಗಳಿಗೆ ಇಂಗ್ಲೆಂಡಿನೊಡನೆ ವ್ಯಾಪಾರ ಮಾಡುವುದರಿಂದ ಲಾಭಗಳಿದ್ದುವು. ಕಾಮನ್‌ವೆಲ್ತ್ ರಾಷ್ಟ್ರಗಳಲ್ಲಿ ವ್ಯಾಪಾರ ಮಾತ್ರವಲ್ಲ ಉತ್ಪಾದನೆಯ ಸ್ವರೂಪದಲ್ಲಿಯೂ ಇಂಗ್ಲೆಂಡಿನ ಮಾರುಕಟ್ಟೆಯ ಅವಶ್ಯಕತೆಗಳೊಡನೆ ಹೋಲಿಕೆಯಿತ್ತು. ಏಕೆಂದರೆ, ಅಲ್ಲಿ ಇವುಗಳಿಗೆ ಸಾಮಾನುಗಳ ಮಾರಾಟಕ್ಕೆ ನಿರ್ಬಂಧ ಕೋಟಾ, ಡ್ಯೂಟಿ ಮತ್ತು ಅಧಿಮಾನ್ಯತೆಗಳ ಸೌಲಭ್ಯಗಳಿದ್ದುವು.

ಇಂಗ್ಲೆಂಡು ಇದುವರೆಗೆ ಸಿದ್ಧ ವಸ್ತುಗಳನ್ನು ಆಯಾತ ಮಾಡಿಕೊಳ್ಳುತ್ತಿದ್ದೆ; ಆದರೆ, ಸಾಮಾನ್ಯ ಮಾರುಕಟ್ಟೆಯ ದೇಶಗಳ ನೀತಿಯು ಅನಿಸಿದ್ದ ವಸ್ತುಗಳ ಆಯಾತ ಮಾಡುವುದಾಗಿದೆ! ಈಗ ಕೆನೆಡಾ ಮತ್ತು ಭಾರತಗಳು ಇಂಗ್ಲೆಂಡಿಗೆ ಬಹಳವಾಗಿ ಸಿದ್ಧ ಮಾಲುಗಳನ್ನು ನಿರ್ಯಾತ ಮಾಡುತ್ತಿವೆ. ೧೯೫೦ರಲ್ಲಿ ಭಾರತವು ಇಂಗ್ಲೆಂಡಿಗೆ ೪೨೦ ಲಕ್ಷ ಡಾಲರ್‌ಗಳ ತಯಾರಿತ ಮಾಲನ್ನು ಕಳಿಸಿತ್ತು. ೧೯೬೦ರಲ್ಲಿ ಇದು ೬೨೦ ಲಕ್ಷ ಡಾಲರ್‌ಗಳಷ್ಟಾಗಿತ್ತು. ಇಂದು ಭಾರತದ ಪರಿಣಾಮದಲ್ಲಿ ನೇ. ೨೦ರಷ್ಟು ಬ್ರಿಟನ್ನಿನಲ್ಲಿ ನಡೆಯುತ್ತಿದೆ. ಸಾಮಾನ್ಯ ಮಾರುಕಟ್ಟೆಯ ದೇಶಗಳ ಮೂಲಕ ಆಯಾತ ಮಾಡಲಾಗುವ ಪೆಟ್ಟಿ ಬಟ್ಟೆಗಳಲ್ಲಿ ನೂರಕ್ಕೆ ಒಂದರಷ್ಟು ಮಾತ್ರ ಭಾರತದ್ದು. ೧೯೫೦ರೊಡನೆ ಹೋಲಿಸುವಾಗ, ಈ ದೇಶಗಳೊಡನೆ ಭಾರತದ ಆಯಾತವು ಮುಪ್ಪಟ್ಟಾಗಿದೆ; ಆದರೆ ನಿರ್ಯಾತವು ಇದ್ದಕ್ಕಿದಂತೆಯೇ ಉಳಿದಿದೆ. ಇದರಿಂದಾಗಿ, ೧೯೫೦ರಲ್ಲಿ ಈ ವ್ಯಾಪಾರದಿಂದ ಭಾರತಕ್ಕೆ ೧೦೦ ಲಕ್ಷ ಡಾಲರ್ ಉಳಿತಾಯವಾಗುತ್ತಿದ್ದರೆ, ಇಂದು ೨೮೧೦ ಲಕ್ಷಗಳ ಕೊರತೆ ತಲೆದೋರಿದೆ. ಸಾಮಾನ್ಯ ಪೇಟೆಯ ರಾಷ್ಟ್ರಗಳಲ್ಲಿ ಯಾವುದಕ್ಕಾದರೂ ಭಾರತಕ್ಕಾದಂತೆ ನಷ್ಟ ತಲೆದೋರಿಲ್ಲ; ಭಾರತಕ್ಕಾದರೂ ಇತರ ಯಾವ ದೇಶದ ವ್ಯಾಪಾರದಲ್ಲಾದರೂ ಇಷ್ಟೊಂದು ಕೊರತೆ ಕಾಣಿಸಿದುದಿಲ್ಲ.

ಸೌಲಭ್ಯ ದೊರೆಯದು

ಆದುದರಿಂದ ಇಂದು ಇಂಗ್ಲೆಂಡೂ ಸಾಮಾನ್ಯ ಮಾರುಕಟ್ಟೆಯನ್ನು ಪ್ರವೇಶಿಸುವುದಾದರೆ, ಇಂದಿನ ವ್ಯಾಪಾರದ ಸ್ವರೂಪವು ಆಘಾತಗೊಳ್ಳುವುದು. ಹೊಸ ಕರಾರಣೆಯ ಬಂಧನವು ಇಂಗ್ಲೆಂಡಿನಲ್ಲಿ ಭಾರತದ ಮಾಂಟದ ಸೇ ೯೦ರಷ್ಟರ ಮೇಲೆ ಪ್ರಭಾವ ಬೀರುವುದು. ಇನ್ನೊಂದು ಕಠಿನತೆಯೂ ಇದೆ. ಫ್ರಾನ್ಸ್, ಬೆಲ್ಜಿಯಂ ಮತ್ತು ಇಟೆಲಿಗಳ ವಸಾಹತುವಾದದಿಂದ ಮುಕ್ತವಾಗುತ್ತಿರುವ ದೇಶಗಳಿಗೆ ಸಾಮಾನ್ಯ ಮಾರುಕಟ್ಟೆಯಲ್ಲಿ ಉಪ ಸದಸ್ಯರ ಸ್ಥಾನವನ್ನು ಕೊಡಲಾಗುತ್ತಿದೆ. ಇವುಗಳ ಮಾಲುಗಳ ಮೇಲೆ ಪೇಟೆಯಲ್ಲಿ ಡ್ಯೂಟಿ ಹೇರದೆ ಮಾರುವ ಸೌಲಭ್ಯ ನೀಡಲಾಗುತ್ತಿದೆ. ಬ್ರಿಟನ್ನಿನಲ್ಲಿ ಭಾರತಕ್ಕಿಂದು ಇರುವ ಇಂತಹ ಸೌಕರ್ಯವೂ ದೊರಾಗುವುದು ಮಾತ್ರವಲ್ಲ ಅಲ್ಲಿ ಆಫ್ರಿಕನ್ ದೇಶಗಳಿಗೆ ಅದನ್ನೀಯಲೇ ಬೇಕಾಗುತ್ತದೆ

ಯಕ್ಷಪ್ರಶ್ನೆ—ಧರ್ಮಜೋತ್ತರ

ತೀವ್ರ ಗಂಭೀರ ರೂಪದ ಗಮನ ನೀಡಬೇಕಾದ ಮತ್ತು ಹಿಂದಿನ ಪರಿಸ್ಥಿತಿಯನ್ನೇ ನೆಮ್ಮಿ ಕೂತುಕೊಳ್ಳಲಾರದಂತಹ ಸಮಸ್ಯೆಗಳಿವು. ಬ್ರಿಟನ್ನು ತನ್ನ ವ್ಯಾಪಾರದಲ್ಲಿ ತೀವ್ರತೆ ತರಲು ಹೂಡಿದ ಹಂಚಿಕೆಯಿದು. ಈ ಆಹ್ವಾನವನ್ನು ನಾವು ಸ್ವೀಕರಿಸಲೇ ಬೇಕಾಗುತ್ತದೆ. ಉಪ ಸದಸ್ಯ ರಾಷ್ಟ್ರಗಳಲ್ಲಿ ನೂರಕ್ಕೆ ೨೫—೩೦ರಷ್ಟು ಅಧಿಕಮಾನ್ಯತೆಯನ್ನು ಗಳಿಸಬಲ್ಲುವು. ವ್ಯಾಪಾರದಲ್ಲಿ ಅವು ಏನಾದರೂ ಕಳೆದುಕೊಳ್ಳುವುದಿದರೆ, ಸಾಮಾನ್ಯ ಮಾರುಕಟ್ಟೆಯ ದೇಶಗಳು ಅದನ್ನು ತುಂಬಿಸಿಕೊಡಬೇಕಾಗುವುದು-

ಈ ಪ್ರಶ್ನೆಯನ್ನು ಹೇಗೆ ಉತ್ತರಿಸಬಹುದು? ಸಾಮಾನ್ಯ ಪೇಟೆಯ ದೇಶಗಳು ತಮ್ಮ ವ್ಯಾಪಾರ ನೀತಿಯನ್ನು ಉದಾರಗೊಳಿಸಬೇಕು; ವಿಶೇಷವಾಗಿ ಸಿದ್ಧ ವಸ್ತುಗಳ ಆಯಾತಕ್ಕೆ ಅವು ಪ್ರೋತ್ಸಾಹ ನೀಡಬೇಕು. ಚಹ ಮೊದಲಾದುವುಗಳ ಮೇಲೆ ಅವು ಕರಕಡಿಮೆ ಮಾಡಬೇಕು. ನಾವಾದರೂ ಕಾಮನ್‌ವೆಲ್ತ್ ಸೌಲಭ್ಯಗಳಲ್ಲದೆ ಇರಲು ಕಲಿತುಕೊಳ್ಳಬೇಕು ಈ ಮೊದಲು ನಾವು ಯುರೋಪಿನ ಮಾರುಕಟ್ಟೆಯನ್ನು ತಿರಸ್ಕರಿಸಿ ತಪ್ಪುಮಾಡಿದ್ದೇವೆ. ಸಮುಚಿತ ವ್ಯವಧಿಗಳಿಂದ ಇನ್ನು ಮುಂದಾದರೂ ನಾವು ವ್ಯಾಪಾರಕ್ಕೆ ಮುಂದಾಗಬೇಕು. ಪ್ರತಿ ಸ್ಪರ್ಧೆಗಳಲ್ಲಿ ನಾವು ಎಚ್ಚೆತ್ತಿರಬೇಕು; ಉತ್ಪಾದನಾ ಕ್ಷಮತೆಯನ್ನು ಸುಧಾರಿಸಬೇಕು. ಫ್ರಾನ್ಸು ಸಾಮಾನ್ಯ ಪೇಟೆಯನ್ನು ಪ್ರವೇಶಿಸಿದಾಗ, ಅದರ ಶಕ್ತಿ ಬಟ್ಟೆ ಉದ್ಯೋಗದಲ್ಲಿ ನೂರಕ್ಕೆ ೩೦ ಮತ್ತು ವಿದ್ಯುದುದ್ಯೋಗದಲ್ಲಿ ಸೇಕಡಾ ೨೦ರಷ್ಟು ಭಾಗದ ಮೇಲೆ ಪರಿಣಾಮವಾಯಿತು ಆದರೂ ಅದು ಹೊಸ ವ್ಯವಸ್ಥೆ ಮತ್ತು ಪ್ರತಿಸ್ಪರ್ಧಾಪೂರ್ಣ ಉತ್ಪಾದನೆಯನ್ನು ಎದುರಿಸಿತು. ಆದುದರಿಂದಲೇ ಬ್ರಿಟನ್ನು ಆರ್ಥವ್ಯವಸ್ಥೆಯಲ್ಲಿ ಸುಧಾರಣೆ ಕಾಣಿಸುತ್ತಿದೆ. ಸಾಮಾನ್ಯ ಮಾರುಕಟ್ಟೆಯ ನೀತಿ ಪರಿವರ್ತನೆಗೆ ಹೋರಾಡುತ್ತಿರುವುದೂ ಕೂಡ ನಮ್ಮ ಆರ್ಥವ್ಯವಸ್ಥೆಯಲ್ಲಿ ಸಾಹಸ ಮತ್ತು ಅಂತಃಸ್ಫೋರಣೆಯ ಭಾವನೆಗಳನ್ನು ಜಾಗ್ರತಗೊಳಿಸಬೇಕು. ಇಲ್ಲವಾದರೆ, ಭಾರತದ ಭಾಗ್ಯೋದಯವಾಗಲಾರದು.

ಲಂಡನ್ನಿನಲ್ಲಿ ಭಾರತದ ಹೈಕಮಿಷನರ್ ಎಮ್. ಸಿ. ಛಾಗ್ಲಾ

ತೆಂಗಿನ ಮರದಲ್ಲಿ ಫಲಗಳು ಬರಲು
ನರುಷಗಳು ಕಳೆಯಬಹುದು.

ಬ್ಯಾಂಕಿನಲ್ಲಿಟ್ಟ ಹಣವು ಆ ಕ್ಷಣದಿಂದಲೇ
ಬಡ್ಡಿ ಗಳಿಸಲಾರಂಭಿಸುವುದು.

ಒಂದು ಸೇವಿಂಗ್ಸ್ ಬ್ಯಾಂಕ್ ಖಾತೆಯನ್ನು ತೆರೆಯಿರಿ.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂದಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ನವಯುಗ'ಕ್ಕೆ
ಚಂದಾದಾರರಾಗಿ
ಪ್ರೋತ್ಸಾಹಿಸಿರಿ.

Edited Printed & Published by K. H. Shetty, at the Navayuga Press, Udipi, S. India.

ಅಖಿಲ ಕರ್ನಾಟಕದ
ಪ್ರಾತಿನಿಧಿಕ ಕಥಾಸಂಕಲನ
ಮಧುವನ
'ಕಿರಿಯರ ಪ್ರಪಂಚ'ದ
ಅಪೂರ್ವ ಪ್ರಕಟಣೆ
ಬೆಲೆ: ರೂ. ಮೂರು
ನವಭಾರತ ಪುಸ್ತಕ ಭಂಡಾರ
ಉಡುಪಿ

ನವಯುಗ

Estd. 1921 ಸ್ಥಾಪನೆ
Regd. No. B.G. 176
Vol. 42 No. 4

ಪ್ರಮುಖ ರಾಷ್ಟ್ರೀಯ ವಾರಪತ್ರಿಕೆ
NAVAYUGA— NATIONAL WEEKLY
ಉಡುಪಿ, 27—9—1962 ಗುರುವಾರ

13 ನೇ ಪೈಸೆ
ಪಾ. ಚಂದಾ ರೂ. 6—75
ಸಂಪುಟ ೪೨ ಸಂಚಿಕೆ ೪

ಮಿತ ದರದಲ್ಲಿ
ಕ್ಲಿಷ್ಟ ಸಮಯದಲ್ಲಿ
ಉತ್ತಮ ತರದಲ್ಲಿ
ಮುದ್ರಣ
ಕೆಲಸಗಳಾಗಬೇಕೆ?
ಸಂದರ್ಶಿಸಿರಿ ಯಾ ವಿಚಾರಿಸಿರಿ
ನವಯುಗ ಪ್ರೆಸ್,
ಉಡುಪಿ

ಕನ್ನಡಿಗರಿಗೊಂದು ಸವಾಲು

ಯಾರು ಹಿತವರು ನಿನಗೆ ಈಯಿಬ್ಬರೊಳಗೆ?

ಕರ್ನಾಟಕದ ವಿಧಾನ ಸಭೆಯು 'ರಾಜ್ಯದ ಹೆಸರು ಕರ್ನಾಟಕವೆಂದಾಗ ಬೇಕು'ವೆಂಬುವ ಗೊತ್ತುವಳಿಯ ಮೇಲೆ ಅಪೂರ್ಣ ಚರ್ಚೆಯನ್ನು ಕಳೆದ ಬಾರಿ ನಡೆಸಿದ್ದುದನ್ನೂ ಈ ಸಲದ ಅಧಿವೇಶನದಲ್ಲಿ ಅದನ್ನು ಮುರಳಿ ಮುಂದುವರಿಸುವುದೆಂಬುದನ್ನೂ ಯಾರೂ ಮರಿಯಲಾರರು ಅತ್ತ ಒಂದೆಡೆ ರಾಜ್ಯನಾಮ ಪರಿವರ್ತನೆಯನ್ನು ಬೆಂಬಲಿಸುವುದಕ್ಕಾಗಿ ಒಂದು ಪಂಗಡವು ಸಭೆ ಸೇರಿಸಿ ಅವಿರೋಧ ಗೊತ್ತುವಳಿಯನ್ನು ಮಂಜೂರು ಮಾಡಿಸಿಕೊಂಡರೆ, ಇತ್ತ ಅದನ್ನು ಪ್ರತಿ ಭಟಿಸುವುದಕ್ಕೆ ಅನುಕೂಲವಾದ ಸಾರ್ವಜನಿಕ ಸಭೆಯನ್ನು ಮತ್ತೊಂದು ಪಕ್ಷವು ಕರೆದು ತನಗೆ ಬೇಕಾದಂತೆ ನಿರ್ಣಯವನ್ನು ಮಾಡಿಕೊಳ್ಳುತ್ತಿದೆ. ಹೀಗೆ ಎರಡೂ ಕೈಗಳು ಪರಸ್ಪರ ಹೊಯ್‌ಕೆಯ್‌ಗೆ ತೊಡಗಿದುದರಿಂದ ಯಾವ ಹಂಗಿನಾಗಲೀ ಬಲವಂತಕ್ಕಾಗಲೀ ಸಿಕ್ಕಿ ಬೀಳದ ನಿಷ್ಪಕ್ಷಪಾತಿಗಳು ಕಂಗೆಡುವಂತಹ ದುಸ್ಥಿತಿಗೆ ಬಂದಿಳಿದಿದ್ದಾರೆಯೆಂದರೆ ಅತಿಶಯವಲ್ಲ.

ಹೃದಯಕ್ಕೆ ಬೆಂಕಿ

ಮಾಜಿ ಮೈಸೂರು (ಈಗಿನ ಮೈಸೂರು ಅಲ್ಲ) ಸಂಸ್ಥಾನದ ಮಾಜಿದಿವಾನ ಪ್ರಧಾನ ಶಿರೋಮಣಿ ಎನ್. ಮಾಧವ ರಾಯರ ಅಧ್ಯಕ್ಷತೆಯಲ್ಲಿ ರಾಜಧಾನಿ ಬೆಂಗಳೂರಿನಲ್ಲಿ ಒಂದು 'ಮೈಸೂರು ಪ್ರೇಮಿಗಳ' ಬೃಹತ್ ಸಭೆಯು ಸೇರಿ ರಾಜ್ಯದ ಹೆಸರನ್ನು ಬದಲಾಯಿಸುವುದರಿಂದ ಒದಗುವುದು ಗಂಡಾಂತರ, ಆಗುವುದು ಭಾವೈಕ್ಯ ಹಾನಿ ಹುಟ್ಟುವುದು ಜಿದ್ದು ಬೆಳೆಯುವುದು ಮತ್ಸರ ಎಂದು ಮುಂತಾದ ಉತ್ತಮೋತ್ತಮ ಶಬ್ದಗಳ ಗೊತ್ತುವಳಿಯನ್ನು ಪ್ರಚಂಡ ಕರತಾಡನ ವಿಪರೀತ ಹರ್ಷೋದ್ಗಾರಗಳಿಂದ ಸ್ವೀಕರಿಸಿತು ಎಂದು ವರದಿ ಬಂದಿದೆ. ಶ್ರೀ ಮಹಮ್ಮದ ಶರೀಫರು ಕನ್ನಡ ಭಾಷೆಮಾಡುವವರ ರಾಜ್ಯದ ಹೆಸರನ್ನು ಮೈಸೂರು ಎಂದೇ ಇರಿಸ ಬೇಕು ಎನ್ನುವ ಗೊತ್ತುವಳಿಯನ್ನು ಮಂಡಿಸುವ ಭಾಷಣವನ್ನು ಇಂಗ್ಲಿಷಿನಲ್ಲಿ ಮಾಡಿದರು; (ಇದು ಕನ್ನಡ ಭಾಷೆಯ ದ್ವೇಷದಿಂದಲ್ಲ; ಏಕೆಂದರೆ ಆ ಭಾಷೆ ಅವರಿಗೆ ಬರುವುದಿಲ್ಲವಂತೆ; ಆದುದ ಕರ್ನಾಟಕ ದ್ವೇಷ ಮಾತ್ರ ಇದರಿಂದ ವ್ಯಕ್ತವಾಗುತ್ತದೆ) ರಾಜ್ಯ ಪುನರ್ವಿಂಗಡಣೆಯ ಕಾಲದಲ್ಲಿ 'ಮೈಸೂರು' ಎಂಬ ಹೆಸರನ್ನು ಉಳಿಸಿಕೊಳ್ಳ ಬೇಕೆಂದು ಅಂತಿಮವಾಗಿ ತೀರ್ಮಾನವಾಗಿತ್ತು. ಆದುದರಿಂದ ಅದನ್ನೀಗ ಬದಲಿಸುವುದು ಸಂಪೂರ್ಣ ಅಧರ್ಮ; ಅನೀತಿ. ಸತ್ಯ ಎಂದಿದ್ದರೂ ಅಧರ್ಮವನ್ನು ಮೆಟ್ಟಿನಿಲ್ಲುವುದೆಂಬ ಉದಾತ್ತ ತತ್ವವನ್ನು ಪ್ರತಿ ನಿಧಿಸುವ ಮೈಸೂರು ಎಂಬ ಹೆಸರೇ ಮುಂದುವರಿಯ ಬೇಕ; ಅದನ್ನು ಬದಲಿಸುವ ಪ್ರಯತ್ನದಲ್ಲಿ ಹಳೆಯ ಮೈಸೂರಿಗರ ಹೃದಯಕ್ಕೆ ಬೆಂಕಿ ಹಚ್ಚುವುದು ತರವಲ್ಲ. ಎಂದು ಬಿಗಿದು ಭಾಷಣ ಮಾಡಿದರು.

ಗೊತ್ತುವಳಿಯ ಮೂಲ

'ರಾಜ್ಯದ ಹೆಸರನ್ನು ಬದಲಾಯಿಸಬೇಕೆಂಬ ಪ್ರಯತ್ನಕ್ಕೆ ಬೆಂಗಳೂರು ನಾಗರಿಕರ ಮಹಾ ಸಭೆಯು ತೀವ್ರ ಪ್ರತಿಭಟನೆ ಸೂಚಿಸುವುದು. ಮೊದಲೇ ತೀರ್ಮಾನವಾಗಿದ್ದಂತೆ ಮೈಸೂರು ಎಂಬ ಹೆಸರೇ ರಾಜ್ಯಕ್ಕೆ ಇರಬೇಕು; ಅದನ್ನು ಬದಲಾಯಿಸುವ ಅವಶ್ಯಕತೆಯಿಲ್ಲ ಮೈಸೂರು ಯೆಂಬ ಹೆಸರಿನ ಮೇಲೆ ಹಳೆಯ ಮೈಸೂರಿಗರಲ್ಲಿ ತುಂಬ ಗೌರವಾಭಿಮಾನಗಳೂ ಮಮತೆಯೂ ಇರುವುದರಿಂದ ಈ ಜನರ ಮನಸ್ಸೋಯುವಂತೆ ವರ್ತಿಸಿದರೆ, ಐಕ ಮತ್ಯಕ್ಕೆ ಧಕ್ಕೆಯುಂಟಾದೀತು ಎಂಬುದನ್ನು ಈ ಗೊತ್ತುವಳಿಯು ಸಾರಿ ಹೇಳಿದೆ. ಕರ್ನಾಟಕವೆಂಬ ಹೆಸರಿಗೆ ಮಾತ್ರವಲ್ಲ, ಕನ್ನಡದ ಭಾಷೆಗೇನೇ ಅವಹೇಳನವಾಗುವಂತೆ ಇಂಗ್ಲಿಷಿನಲ್ಲಿ ಮಾತನಾಡಿದ ಶೇರೀಫರು ಹಳೆಯ ಮೈಸೂರಿನ ಕಟ್ಟಾ ಪ್ರೇಮಿಗಳಲ್ಲಿ ಒಬ್ಬರು ಎಂದು ಧೈರ್ಯವಾಗಿ ಹೇಳಬಹುದು.

ಸಮರ್ಥನೆಯ ವೈಖರಿ

ಗೊತ್ತುವಳಿಯನ್ನು ಸಮರ್ಥಿಸುತ್ತ ಬಂದವರಲ್ಲಿ ಮಾಜಿ ಮಂತ್ರಿ ಟಿ. ಸುಬ್ರಹ್ಮಣ್ಯಂಸನವರಿಂದ ಉದ್ಧಾಮ ಸಾಹಿತಿ ಡಿ. ವಿ. ಗುಂಡಪ್ಪನವರ ವರೆಗೂ ಇದ್ದರು. ಕನ್ನಡ ಪ್ರದೇಶವೆಲ್ಲವನ್ನೂ ಒಂದುಗೂಡಿಸಿ 'ಕರ್ನಾಟಕ ರಾಜ್ಯ'ವಾಗಬೇಕೆಂಬಾಗ(ಹೆಳೆ)ಮೈಸೂರಿಗರಲ್ಲಿ ಬಹುಮಂದಿ ಜನರು ಅಸಮ್ಮತಿಸಿ 'ನಮ್ಮ ಆಡಳಿತದ ಮಧ್ಯೆ ಪ್ರವೇಶಿಸಬೇಡಿ ಎಂದು ಅಂಗಲಾಚಿದರು. ಅದರೆ, ಹನುಮಂತಯ್ಯನವರ ಮಂತ್ರಿಮಂಡಲ ಈ ವಿಷಯವನ್ನು ಒಂದಲ್ಲ ಎರಡು ಬಾರಿ ಪರಿಶೀಲಿಸಿ ಮುಂದೆ 'ಹೆಸರಿನ ತಂಟೆಗೆ ಬರಬಾರದೆಂಬ ಪರತ್ತಿನೊಂದಿಗೆ ಕರ್ನಾಟಕ ಪ್ರಾಂತ ಉದಯವಾಯಿತು. ಪರಿಸ್ಥಿತಿ ಹೀಗಿರುವಾಗ, ಸರಕಾರವಾಗಲೀ 'ಕರ್ನಾಟಕ' ಪ್ರೇಮಿಗಳಾಗಲೀ ಈ ವಿಷಯದಲ್ಲಿ ದುಡುಕಿ ಮೈಸೂರೆಂಬ ಹೆಸರಿಗೆ ಚ್ಯುತಿ ತರುವ ಪ್ರಯತ್ನ ಮಾಡಿದರೆ, 'ಹೆಜ್ಜೇನಿನ ಗೂಡಿನಲ್ಲಿ ಕೈ ತುಣುಕಿದಂತಾದೀತು' ಎಂದು ಎಚ್. ಸಿದ್ದಲಿಂಗಪ್ಪನವರು ಬೆದರಿಕೆ ಹಾಕಿದರು.

ಪಾಮಡಿ ಸುಬ್ಬರಾಯ ಶೆಟ್ಟರು ರಾಜ್ಯಕ್ಕಂಟಿದ ಸಂಚಿನ ವ್ಯಾಧಿಯೆಂದು ಪುನರ್ನಾಮಕರಣದ ಕ್ರಮವನ್ನು ಹೆಸರಿಸಿದರು. ಕೋಮುವಾರು ಭಾವನೆ, ಭಾಷಾವಾರು ರಾಜ್ಯರಚನೆ, ರಾಜಕೀಯ ಭೇದ ಮತ್ತು ಒಂದೇ ರಾಜಕೀಯ ಪಕ್ಷದಲ್ಲಿ ಗುಂಪುಗಾರಿಕೆಯ ಗಂಡಕತ್ತರಿಗಳು ಈಗಾಗಲೇ ರಾಜ್ಯದ ಶಕ್ತಿಯನ್ನು ಕಬಳಿಸಿದೆಯೆಂದೂ ಇನ್ನು ನಾಮವೂ ಬದಲಾಯಿತೆಂದರೆ, ಅದು ಐದನೆ ಮತ್ತು ಕೊನೆಯ ವ್ಯಾಧಿಯನಿಸುವುದೆಂದೂ ಎಚ್ಚರಿಕೆಯಿತ್ತು' ಈ ಪ್ರಶ್ನೆಯನ್ನು ಮುಂದೆ ಬೆಳೆಯಲು ಕೊಟ್ಟರೆ, ರಾಜ್ಯವೇ ಛಿದ್ರಛಿದ್ರವಾದೀತು ಎಂದು ಗದರಿಕೆ ಹಾಕಿದರು.

ದೇಶಕ್ಕೆ ಸ್ವಾತಂತ್ರ್ಯವೊದಗಿದ ಮೊದಲ ವರ್ಷಗಳಲ್ಲಿ ದಿವಂಗತ ವಲ್ಲಭ ಭಾಯಿ ಪಟೇಲರ ನಾಯಕತ್ವದಲ್ಲಿ ರಾಜ್ಯಗಳನ್ನು ಒಂದುಗೂಡಿಸಲಾಯಿತು. ಆ ಬಳಿಕ ರಾಜ್ಯ ಪುನರ್ವಿಂಗಡಣಾ ಸಮಿತಿಯು ತನ್ನ ಕಾರ್ಯಕ್ರಮವನ್ನು ತೊಡಗಿತು. ಆ ಸಂದರ್ಭದಲ್ಲಿದ್ದ ಅನೇಕ ಮುಖಂಡರು ಇಂದೂ ಇದ್ದಾರೆ. ಅವರು ಯಾರೂ ಇಂದು ತಮ್ಮ ಅತ್ಯಕ್ಕೆ ದ್ರೋಹ ಬಗೆಯ ಬಾರದು. 'ಹಸುವೇತನ್ನ ಮೊತನ್ನು ಉಳಿಸಿಕೊಂಡಿತ್ತು. ನೀನಾರಿಗಾದೆಯೋ ಎಲೆ ಮಾನವಾ? ಎಂದು ಮಾನವನನ್ನು ಪ್ರಶ್ನಿಸಿತ್ತು. ಮಾನವರಾದ ನಾಯಕರು ತಮ್ಮ ಮೊತನ್ನು ಅವಶ್ಯ ಉಳಿಸಿಕೊಳ್ಳಬೇಕು' ಮೈಸೂರಿಗೆಬಂದುಸೇರುವವರನ್ನು ಬರಮಾಡಿಕೊಳ್ಳುವುದು ಅಂದಿನಸಮಸ್ಯೆಯಾಗಿರಲಿಲ್ಲ. ಹಳೆ ಮೈಸೂರಿಗರನ್ನು ಒಪ್ಪಿಸುವುದೇ ಕಠಿನವಾಗಿತ್ತು. ಆಗ, ಮೈಸೂರಿನ ವೈಶಿಷ್ಟ್ಯಗಳನ್ನು ಉಳಿಸಿಕೊಳ್ಳುವುದಾಗಿ ಸೂಚು ಕೊಟ್ಟಿದ್ದ. ಮುಖಂಡರು ಇಂದು ಕೊಟ್ಟ ಮಾತಿನಂತೆಯೇ ನಡೆಯಬೇಕು. ಕರ್ನಾಟಕವೆಂಬ ಹೆಸರು ಬೇಕೋ, ಹಳೆಯ ಮೈಸೂರಿಗರರ ಹೃದಯಗಳು ಬೇಕೋ, ಎರಡರಲ್ಲಿ ಒಂದನ್ನು ಕರ್ನಾಟಕವಾದಿಗಳು ಆರಿಸಿಕೊಳ್ಳಲಿ. ಭಾಷಾವಾರು ರಾಜ್ಯನಿರ್ಮಾಣದಿಂದ ಭಾವೈಕ್ಯಕ್ಕೆ ಭಂಗ ಬರುತ್ತಿದೆ; ಈಗ ಹೆಸರಿನ ಸಮಸ್ಯೆಯನ್ನು ಬೃಹತ್ತಾಗಿಸಿ ಜನರನ್ನು ಇಬ್ಭಾಗ ಮಾಡುವ ದುಸ್ಸಾಹಸಕ್ಕೆ ಯಾರೂ ಕೈ ಹಾಕಬಾರದು ಎಂದ ಮಾಜಿ ಮಂತ್ರಿ ಟಿ. ಸುಬ್ರಹ್ಮಣ್ಯಂ ತಾನು ಆತ್ಮದ್ರೋಹ ಮಾಡಿಕೊಳ್ಳದೆ ಕೊನೆಯ ವರೆಗೂ ಮೈಸೂರು ಎಂಬ ಹೆಸರಿಗಾಗಿ ಹೊಡೆದಾಡುವುದಾಗಿ ಸಾರಿದರು.

ಅನಂತರ ಜಾರ್ಜ್ ಹೊವರ್ ಸರವಿ. ಅವರೆದ್ದು, ದೇಶ ವಿದೇಶಗಳಲ್ಲಿ ಪ್ರಖ್ಯಾತಿಗಳಿಸಿದ ಮೈಸೂರು. ಅದರ ಹೆಸರನ್ನು ಬದಲಾಯಿಸಬಾರದು. ವಿದೇಶಕ್ಕೆ ಹೋಗಿ ನಾನು ಕರ್ನಾಟಕದವನೆಂದರೆ, ಅದು ಯಾವ ಲೋಕವೆಂದವರು ವಿಸ್ಮಿತರಾಗುವರೆಂದು ಭವಿಷ್ಯ ನುಡಿದರು. ಆ ಮೇಲೆ ಎ. ಜಿ. ರಾಮಚಂದ್ರರಾವ್ ಮತ್ತು ಡಿ. ಎಚ್. ಚಂದ್ರಶೇಖರರವರು ತಮ್ಮ ಭಾಷಣಗಳಲ್ಲಿ ಹಿಂದೆ ನಿಶ್ಚಯವಾದ ವಿಷಯವನ್ನು ಮತ್ತೆ ಕೆದಕುವುದು ಸರಿಯಲ್ಲವೆಂದೂ ಗಂಡಹೆಂಡಿರ ಜಗಳದಲ್ಲಿ ಕೂಸು ಬಡವಾದಂತೆ ಮೈಸೂರು—ಕರ್ನಾಟಕಗಳ ವಿವಾದದಲ್ಲಿ ರಾಜ್ಯ ಪ್ರಗತಿಯು ಕುಂಠಿತವಾಗುವುದೆಂದೂ ಹೇಳಿ ಇದ್ದ ಹೆಸರನ್ನೇ ಮುಂದುವರಿಸುವುದು ಅತ್ಯಗ್ಯವೆಂದೂ ನುಡಿದರು.

ಉದ್ಧಾಮ ಸಾಹಿತಿ ಗುಂಡಪ್ಪನವರು ಉದ್ದ ಭಾಷಣ ಮಾಡಲಿಲ್ಲ. ನಿಮ್ಮ ಮುಂದಿರುವ ಗೊತ್ತುವಳಿಗೆ ಅನುಮೋದನೆ ನೀಡಿರಿ' ಎಂದು ಮಾತ್ರ ಕೇಳಿಕೊಂಡರು ಅಧ್ಯಕ್ಷ ಮಾಧವರಾಯರಾದರೂ ಹೆಚ್ಚು ಮಾತಾಡದೆ ಪಂಚವಾರ್ಷಿಕ ಯೋಜನೆಗಳನ್ನು ಕಾರ್ಯಗತಮಾಡುವ ಸಮ

(೧೨ನೇ ಪುಟ ನೋಡಿರಿ)

ಖೀರಾ
ನೀವು ತಾಳಿಕೆ—ಬಾಳಿಕೆಯನ್ನು—ರಚನಾ ವೈವಿಧ್ಯತೆಯನ್ನು ಬಯಸುವಿರಾ?
ಹಾಗಿದ್ದರೆ ದೇಶವಿಖ್ಯಾತ ಖೀರಾ ಉಕ್ಕಿನ ಫರ್ನಿಚರುಗಳೇ ನಿಮ್ಮ ಆಯ್ಕೆ ಖಂಡಿತ.
ಸಣ್ಣ ದೊಡ್ಡ ಕಪಾಟುಗಳು, ಮೆಚ್ಚಿನ ಮೇಜು ಕುರ್ಚಿಗಳು, ದ್ವಿವಿಧ ಉಪಯೋಗದ ಮಂಚ+ಸೋಫಾಗಳು, ಸಂದರ್ಭೋಚಿತ ಉಡುಗೊರೆ ಸಾಹಿತ್ಯಗಳು ಇತ್ಯಾದಿಗಳಿಗೆ ಮನೆ ಮಾತಾಗಿರುವ ಸಂಸ್ಥೆ—ಶಾಸ್ತ್ರಿ & ಕೊ, ಹಂಪನಕಟ್ಟೆ ಮಂಗಳೂರು 1
KHIRA

ನವೀನ ರೀತಿಯ ಧಾರಾವಾಹಿ ಪೌರಾಣಿಕ ಕತೆ.

ನರಭಕ್ಷಕ ಬಕಾಸುರ

ಬರೆದವರು— ಶ್ರೀ ಕೊಡವಟಿಗಂಟಿ ಕುಟುಂಬ ರಾವ್
ಅನುವಾದ— ಶ್ರೀ ಮಾದರಬೆಟ್ಟು ರಂಗ ರಾವ್

(ಕಳೆದ ಸಂಚಿಕೆಯಿಂದ ಮುಂದುವರಿದುದು)

ಏಕಚಕ್ರಪುರವಾಸಿಗಳಿಗೆ ಬಕಾಸುರನ ವಿಷಯ ಸರ್ವಸಾಧಾರಣವಾಗಿ ಹೋಯಿತು. ಅವರಿಗೆ ತಮ್ಮ ಬಾಳುವೆ ಸಹಜವಾಗಿ ಸಾಗುತ್ತಿರುವಂತೆ ತೋರಿತು. ಆ ಕಾಶದಲ್ಲಿ ಸೂರ್ಯನಿರುವುದು ಎಷ್ಟು ನಿಜವೋ ಬಕಾಸುರನೂ ಅಷ್ಟೇ ನಿಜ ಅವರಿಗೆ. ಆತ ನಗರದ ಹೊರಗೆ ಎಲ್ಲಿಯೋ ಇದ್ದಾನೆ. ದಿನಾ ಅವನಿಗಾಗಿ ಬಂಡಿಯಲ್ಲಿ ಭಾಂಡವೂ. ಭಾಂಡದೊಂದಿಗೆ ಒಂದು ಹೆಂಗುಸೋ, ಗಂಡುಸೋ, ಹುಡುಗಿಯೋ, ಹುಡುಗನೋ ಹೋಗುತ್ತಾರೆ. ಬೀದಿಯಲ್ಲಿ ಆ ಬಂಡಿ ಇದಿರಾದರೆ ಜನರು ಅದರ ಕಡೆಗೆ ನೋಡುವುದಿಲ್ಲ. ದೃಷ್ಟಿಯನ್ನು ಬೇರೆ ಕಡೆಗೆ ತಿರುಗಿಸಿಕೊಂಡು ತಂತಮ್ಮ ದಾರಿ ಹಿಡಿದು ಹೋಗುತ್ತಾರೆ.

ಬಕಾಸುರನ ಅಭ್ಯಾಸವೇನೆಂಬುದು ರಾಜಭಟರಿಗೆ ಗೊತ್ತಾಗಿತ್ತು. ಸೂರ್ಯನು ಅಸ್ತಮಿಸುವ ಹೊತ್ತಿಗೆ ಅವನು ಆ ಮರದ ಪಕ್ಕದಲ್ಲಿರುವುದಿಲ್ಲ. ಗಾಡಿಯೂ ಆಹಾರ ಭಾಂಡವೂ ಹಾಗೆಯೇ ಇರುತ್ತಿತ್ತು. ರಾಜಭಟರು ಆ ದಿವ್ಯ ಭೋಜನವನ್ನೆಲ್ಲ ತಿಂದು ಮುಗಿಸಿ ಬಿಡುತ್ತಾರೆ. ಮೂಕನಾದ ಬಂಡಿಗಾರನೇ ಮೊದಲು ಪ್ರಾರಂಭಿಸುತ್ತಾನೆ. ಅವನಿಗೀಗ ಬಕಾಸುರನ ಭಯುಗಿಯ ಏನೂ ಇರಲಿಲ್ಲ. ರಾಕ್ಷಸ ಬರುವ ವೇಳೆಗೆ ಅವನು ಮರ ಕೂಡ ಹತ್ತುವುದಿಲ್ಲ. ಸ್ವಲ್ಪ ದೂರ ಹೋಗಿ ಬಿಡುತ್ತಾನೆ. ಬಕಾಸುರನು ಅವನ ಕಡೆಗೆ ನೋಡುವುದೇ ಇಲ್ಲ. ಅವನಿಗೆ ಬಲಿ ಮನುಷ್ಯನ ಕೊರಳಿನಲ್ಲಿರುವ ಹೂವಿನ ಮಾಲೆಯೇ ಗುರ್ತು.

ಬಕಾಸುರನನ್ನು ಕಣ್ಣಾರೆ ಕಾಣದಿದ್ದವರು ಊಹಿಸಿಕೊಂಡುದಕ್ಕೂ, ಬಂಡಿಯವನು ನಿತ್ಯ ನೋಡುವ ರೂಪಕ್ಕೂ ಸಂಬಂಧವೇ ಇಲ್ಲ. ಒಂದೊಂದು ದಿನ ಆ ನರಭಕ್ಷಕನು ಸಾಯುವ ಹಾಗೆ ಪೆಟ್ಟು ತಿಂದು ಜೀವನ ಮೇಲೆಯೇ ಬೇಸತ್ತು ಹೋದ ನಾಯಿಯ ಹಾಗೆ ಕಾಣಿಸುತ್ತಾನೆ. ಒಮ್ಮೊಮ್ಮೆ ಅವನ ಕಣ್ಣುಗಳು ಕತ್ತಲೆ ಗೂಡಿದಂತೆ ಕಾಣುವುವು ಮುಖವು ಯಾವಾಗಲೂ ನೆರಿಗೆ ಬಿಟ್ಟುಕೊಂಡು ವಿಚಾರಗ್ರಸ್ತನಂತೆ ಕಾಣುತಿತ್ತು.

ಆ ಬಕಾಸುರ ತನಗೆ ಬಲಿಯೂಗಲು ಬಂದ ಮನುಷ್ಯನನ್ನು ತಿನ್ನದೆ ಬಿಟ್ಟೆ ದಿನಗಳು ಕೂಡಾ ಇದ್ದುವು.

"ಆಯುಷ್ಯ ತೀರದಿದ್ದಾಗ ಬಕಾಸುರರಿಂದ ಮಾತ್ರ ಕೊಲ್ಲಲು ಸಾಧ್ಯವೆ?" ಎನ್ನುತ್ತಿದ್ದ ವೇದಾಂತಿ. ಬಕಾಸುರರು ಎಂದರೆ ಆದೊಂದು ಗೌರವ ವಾಚಕವೆಂಬುದು ಅವನ ಭಾವ. ಮಂತ್ರಿಯನ್ನು ಮಂತ್ರಿಯವರು ತಂದೆಯನ್ನು ತಂದೆಯವರು. ಮಾವನನ್ನು ಮಾವಂದಿರು, ಎಂದು ಹೇಳುವಂತೆ ಗಂಡನನ್ನು ಗಂಡಂದಿರು ಎಂದು ಕೂಡಾ ಹೇಳುವುದು ಈ ವೇದಾಂತಿಯ ಅಭ್ಯಾಸ.

ಒಮ್ಮೆ ಏನಾಯಿತೆಂದರೆ, ಬಕಾಸುರನು ಅಂದು ಬಲಿಗೆ ಬಂದಿದ್ದ ಒಬ್ಬ ಜೀತದಾಳನ್ನು ಕೊಂದ ಮೇಲೆ, ಹಸಿವೆಯಿಲ್ಲದೆಯೋ ಹೊಟ್ಟೆ ಸರಿಯಿಲ್ಲದೆಯೋ, ಆ ಹೆಣವನ್ನು ಹಾಗೇ ಬದಿಗೆ ಎಸೆದುಬಿಟ್ಟ. ಆಗ ಮಾತ್ರ ಬಂಡಿಯವನಿಗೆ ತಾಳಲಾಗ ಕೋಪ ಬಂತು. ಅವನು ತನ್ನ ಕೈಯಲ್ಲಿದ್ದ ದೊಣ್ಣೆಯನ್ನು ಬಕಾಸುರನ ಗಂಟುಗಳುದುರುವ ಹಾಗೆ ಬಿಸುಟನು. ಬಕಾಸುರನುಬೆದರು ನೋಟದಿಂದಬಂಡಿಯವನನ್ನು ನೋಡುತ್ತಾ ಓಟ ಕಿತ್ತುಬಿಟ್ಟನು.

ಅದು ಅಲ್ಲಿಗೇ ಮುಗಿದಿಲ್ಲ. ಬಂಡಿಯವನು ಬಂಡಿ ಹೊದೆದುಕೊಂಡು ಹೋಗಲು ನಿರಾಕರಿಸಿ ಕೋಪದಿಂದ "ಬೇ—ಬೇ—ಬೋ—ಬೋ' ಎಂದು ಬಕಾಸುರನಿರುವ ದಿಕ್ಕಿಗೆ ಕೈಗಳಿಂದ ತಿವಿದುಕೊಂಡನು. ಅದರೂ ಮಂತ್ರಿ ಬಿಡಲಿಲ್ಲ. ಸೇವಕರಿಂದ ಅವನನ್ನು ಥಳಿಸಿ ಬಂಡಿಯಲ್ಲಿ ಕೂಡಿಸಿಬಿಟ್ಟರು. ಅವನ ಕಣ್ಣಿನಿಂದ ನೀರಿಳಿಯುತ್ತಿರಲು, ಪೆಟ್ಟು ತಿಂದ ಬಾಧೆಯಿಂದ ಅಳುತ್ತಿರುವನೆಂದೇ ಮಂತ್ರಿ ಭಾವಿಸಿದನು. ಆದರೆ ತನ್ನ ಕೈಯಿಂದ ಪೆಟ್ಟು ತಿಂದು ಓಡಿ ಹೋದ ಆ ರಾಕ್ಷಸ ಒಂದು ತುಂಬು ಜೀವವನ್ನು ಕೊಲ್ಲುವುದನ್ನು ನೆನೆಸಿ ನೆನೆಸಿ ಅವನು ಅಳುತ್ತಿರುವನೆಂದು ಯಾರಿಗೆ ಗೊತ್ತಿದೆ? ತಾನು ಆ ಬಕಾಸುರನನ್ನು ಭಯಪಡಿಸುವವನಾಗಿದ್ದು ಕೂಡಾ, ಬಕಾಸುರನಿಗೆ ಹೆದರಿ ಹೋದ ಮಂತ್ರಿ ಮುಂತಾದವರಿಗೆ ತಾನು ಬಗ್ಗಬೇಕಾಯಿತಲ್ಲ! ಇದೇನು ವಿಪರೀತ! ಇದೇ ಆ ಬಂಡಿಗಾರನ ಬಾಧೆ

ಪ್ರತಿದಿನವೂ ಬಕಾಸುರನಿಂದಾಗಿ ಯೂವುದೋ ಒಂದು ಮನೆಯಲ್ಲಿ ರೋಧನ ಕೇಳುತ್ತಿತ್ತು ಎಂಬ ಮಾತು ಪೂರ್ಣ ನಿಜವಲ್ಲ. ಧನಿಕರು ತಮ್ಮ ಮನೆಯ ಸರದಿ ಬಂದಾಗ ಹಣ ಕೊಟ್ಟು ಮನುಷ್ಯನನ್ನು ಕೊಂಡುಕೊಂಡು ಬಕಾಸುರನಿಗೆ ಆಹಾರವಾಗಿ ಕಳಿಸುತ್ತಿದ್ದರು. ಬಡವರು ಬಾಯಿಬಿಟ್ಟು ಗಟ್ಟಿಯಾಗಿ ಅಳುವಷ್ಟು ಪುಣ್ಯ ಕೂಡ ಮಾಡಿರಲಿಲ್ಲ. ಅಂತೆಯೇ ತಮ್ಮ ಮನೆಯ ಮೇಲೆ ಹದ್ದು ಎರಗಿದ ಕೂಡಲೇ ಒಳಗೊಳಗೇ ಬೆಂದುಕೊಂಡು ಅಳುವರು.

ಬ್ರಾಹ್ಮಣ ರಕ್ತವು ಗಂಟಲಲ್ಲಿಳಿದ ಕೂಡಲೇ ಬಕಾಸುರನು ಭಸ್ಮವಾಗಿಹೋಗುತ್ತಾನೆಂಬ ನಂಬುಗೆಯೂ ಸುಳ್ಳಾಯಿತು. ಬ್ರಾಹ್ಮಣರ ಮನೆಯ ಸರದಿ ಬಂದಾಗ ಆತ ಬ್ರಾಹ್ಮಣನನ್ನು ಕೂಡಾ ನಿಃಶಂಕೆಯಿಂದಲೇ ತಿಂದುಬಿಟ್ಟ. ಅವನ ಆರೋಗ್ಯಕ್ಕೆ ಕೂಡಾ ಏನೂ ಭಂಗ ಬಂದಂತೆ ಕಾಣಲಿಲ್ಲ.

ಎಲ್ಲದಕ್ಕಿಂತಲೂ ಆಶ್ಚರ್ಯವಾದುದೇನಂದರೆ, ನಗರದ್ವಾರವನ್ನು ತೆರೆದು ಬಹಳ ಕಾಲವಾದರೂ ನಗರ ಬಿಟ್ಟು ಹೋದವರು ಬಹಳ ಕಡಿಮೆ. ಎಲ್ಲೋ ಕೆಲವರಿಗೆ ಮಾತ್ರ, ಬೆಳಗು ಮುಂಜಾನೆಯ ನಸುಕಿನಲ್ಲಿ ಊರು ಬಿಟ್ಟುಹೋಗಿ ಬಿಟ್ಟರೆ ಬಕಾಸುರನ ಪೀಡೆ ತೊಲಗಿ ಹೋಗುವುದೆಂಬ ಯೋಚನೆಯುಂಟಾಗಿತ್ತು. ಅಂಥವರು ಮಾತ್ರ ಹೊರಟು ಹೋದರು.

ಕೆಲವರಿಗೆ ಆ ಉಪಾಯ ಗೊತ್ತಿದ್ದರೂ, "ಯಾಕೇ? ಬರುವ ಸಾವು ಎಲ್ಲಿದ್ದರೂ ಬಂದೇ ಬರುತ್ತೆ. ಈ ಬಕಾಸುರ ನಿಮಿತ್ತ ಮಾತ್ರ!" ಎಂಬ ಧೋರಣೆಯ ಮೇಲೆ ಸುಮ್ಮನಿದ್ದರು.

"ಮತ್ತೇನಿದು ಹಾಳಾದ ಪಾಪ ಕರ್ಮವಲ್ಲದೆ? ಯೂವುದೋ ಪೂರ್ವ ಜನ್ಮದಲ್ಲಿ ಈ ಬಕಾಸುರೇಂದ್ರರಿಗೆ ಈ ಊರಿನವರು ತುಂಬಾ ಪೀಡೆ ಕೊಟ್ಟಿರಬೇಕು. ಅ.'ನೀಗ ಸಲೀಸಾಗಿ ಹಗೆ ತೀರಿಸಿಕೊಳ್ಳುತ್ತಿದ್ದಾನೆ" ಎಂದ ವೇದಾಂತಿ.

ವೇದಾಂತಿಗೆ ನಿಜವಾಗಿಯೂ ರಾಕ್ಷಸನು ಬಹು ಚೆನ್ನಾಗಿ ಬೋಧೆ ಮಾಡುತಿದ್ದಾನೆ. ಅವನು ವೇದಾಂತಿಯಮನೋ ನೇತ್ರವನ್ನು ತೆರೆದು ಮನಸ್ಸನ್ನು ಶರವೇಗದಿಂದ ಓಡಿಸುತಿದ್ದಾನೆ. ಸೃಷ್ಟಿ ಸ್ಥಿತಿಲಯಗಳ ರಹಸ್ಯವೆಲ್ಲಾ ಅವನಿಗೀಗ ಕರತಲಾಮಲಕವಾದಂತೆ ಭಾವನೆಯಾಗಿತ್ತು. ತನ್ನ ಮಿದುಳಿನಲ್ಲಿ ಒಸರುವ ವಿಜ್ಞಾನದ ರಸವನ್ನು ಅವನು ಎಲ್ಲರಿಗೂ ಹಂಚಿಕೊಡುತಿದ್ದಾನೆ.....

o o o

ಒಂದು ದಿನ ಒಂದು ಕುಟುಂಬವು ಏಕಚಕ್ರಪುರದ ಕಡೆಗೆ ಬರುತ್ತಿತ್ತು. ಒಬ್ಬಳು ತಾಯಿ, ಉಳಿದವರು ಐವರು ಅವಳ ಗಂಡು ಮಕ್ಕಳು. ಬ್ರಾಹ್ಮಣರ ಹಾಗಿದ್ದರು. ದೊಡ್ಡ ಮಗ ವೇದ ಪಠನ ಮಾಡುತ್ತಾ ನಡೆಯುತ್ತಿದ್ದ. ಉಳಿದವರೂ ಅದನ್ನೇ ಪುನರುಚ್ಚರಿಸುತಿದ್ದರು. ಅವರ ಉತ್ಸಾಹವನ್ನು ನೋಡಿದರೆ, ಅವರಿಗೆ ಬಕಾಸುರನ ವಿಷಯವೊಂದೂ ತಿಳಿಯದ ಹಾಗಿತ್ತು.

ನಗರಕ್ಕೆ ಒಂದು ಕ್ರೋಶದಷ್ಟು ಸಮೀಪ ಒಂದಾಗ ಒಂದು ಕರ್ರಗಿನ ಆಕಾರವು ಮರಗಳೆಡೆಯಿಂದ ಹೊರಟು ಬಂದು ದಾರಿಯಲ್ಲಿ ಅಡ್ಡವಾಗಿ ನಿಂತಿತು. ಗಾತ್ರವು ಒಂದು ಭಾರೀ ಮಾನವಾಕಾರವಾಗಿಯೇ ಇತ್ತು ಆದರೆ ಬಹಳ ವಯಸ್ಸಾದವನಂತಿದ್ದ. ದೃಷ್ಟಿ ಮಂದವಾಗಿ ಗುಳಿಗಳೊಳಗೆ ಅಡಗಿದಂತಿತ್ತು. ಮುಖ, ನೊಸಲುಗಳಲ್ಲೆಲ್ಲಾ ಎಷ್ಟೋ ಮಡಿಕೆಗಳು. ಹರಕು ಬರಕಾದ ಸುರುಳಿ ಸುರುಳಿಯಾದ ಗಡ್ಡ ಬೇರೆ.

ಆ ಬ್ರಾಹ್ಮಣ ಕುಟುಂಬದಲ್ಲಿ ಬಲಿಷ್ಠನಾದ ಟೊಣಪ ಬ್ರಾಹ್ಮಣ ಕುಮಾರ, ಉಳಿದವರನ್ನು ದಾಟಿ ಮುಂದಕ್ಕೆ ಬಂದು "ಏಯ್! ಯಾರೋ ನೀನು? ತೊಲಗಾಚೆ!" ಅಂದ.

ಬಕಾಸುರ—ಹೌದು ಅವನೇ ಬಕಾಸುರ—ಒಮ್ಮೆ ಓಂಡ್ರಿಸಿ ತನ್ನೆರಡು ಕೈಗಳನ್ನು ಅಗಲಿಸ ತೊಡಗಿದನೇ ಹೊರತು ಕದಲಲಿಲ್ಲ ಆ ಬಲಿಷ್ಠ ಬ್ರಾಹ್ಮಣ ಕುಮಾರ ಇನ್ನೊಂದು ಹೆಜ್ಜೆ ಮುಂದಿಟ್ಟು ಮುಷ್ಟಿ ಬಿಗಿದು ಬಕನ ಎದೆಯ ಮೇಲೆ ಒಂದು ಗುದ್ದಿದ. ಆ ಏಟಿಗೆ ಬಕನು ಅಲ್ಲೇ ಕುಸಿದು ಬಿದ್ದು ಕೆಟ್ಟ ದನಿಯಿಂದ ನರಳಿದನು. ಹುಡುಗ ಅವನನ್ನು ತನ್ನ ಪಾದದಿಂದ ಬದಿಗೆ ತಳ್ಳಿ ಹೊರಳಿಸಿ, ತಲೆ ಜಾಡಿಸಿದನು. ಅವನ ತಾಯಿಯೂ ಅಣ್ಣ ತಮ್ಮಂದಿರೂ ಮುಂದೆ ನಡೆದರು.

ಬಕನು ತಲೆಯನ್ನು ಮೆಲ್ಲನೆ ಎತ್ತಿ, ತನ್ನನ್ನು ಹೊಡೆದವನ. ಮೃತ್ಯು ದೇವತೆಯಂತೆ ತನ್ನ ಪಕ್ಕದಲ್ಲೇ ಕೈಹೊಸೆಯುತ್ತಾ ನಿಂತಿರುವುದನ್ನು ನೋಡಿ ಬೆಕ್ಕಿನಂತೆ

(೧೧ನೇ ಪುಟ ನೋಡಿರಿ)

ಅಮೃತಾಂಜನ
ಎಲ್ಲಾ ಕರದ ಸಿಡಿತ ಮತ್ತು ನೋವುಗಳಿಗೆ
50 ವರ್ಷ ಪ್ರಾಯದ

ಆಕರ್ಷಣೀಯ ಬಡ್ಡಿ ದರಗಳು

1. 3 ವರ್ಷ ವ್ಯಾದೆಯ ಕೇಶ್ ಸರ್ಟಿಫಿಕೇಟುಗಳ ಮೇಲೆ ಸೇಕಡಾ 5
2. ಕರೆ, ಚಿಕ್ಕ ವ್ಯಾದೆ, ನಿರಖು ರೇವಣಾತಿಗಳ ಮೇಲೆ ಸೇಕಡಾ 5½ ವರೆಗೆ
3. ಸೇವಿಂಗ್ಸ್ ಬ್ಯಾಂಕ್ ಖಾತೆಗಳ ಮೇಲೆ ಸೇಕಡಾ 3

(ಯಾವತ್ತೂ ನಿರ್ಬಂಧಗಳಿಲ್ಲದೆ ಚಕ್ಕುಗಳ ಮೂಲಕ ಮರುಪಾವತಿ ಪಡೆಯುವ ಸೌಲಭ್ಯ)

ಎಲ್ಲರಿಗೂ ವಿಕಪ್ರಕಾರದ ಸೌಜನ್ಯದ ಸೇವೆ.

ದಿ. ಪಾಂಗಾಳ ನಾಯಕ್ ಬ್ಯಾಂಕ್ ಲಿ.

ಸ್ಥಾಪನೆ: 1920. ಪ್ರಧಾನ ಕಚೇರಿ: ಉಡುಪಿ, ದ. ಕನ್ನಡ.



ಆಸ್ಥಮಾ ರೋಗಿಗಳ ತಿಳುವಳಿಕೆಗೆ

ರಿಜಿಸ್ತ್ರಿಯಾದ ಚಿತ್ರಕೋಟ್ ಆಸ್ತಮಾ ನಿವಾರಕಬೂತಿಯನ್ನು ತಾ.13-10-62ನೇ ಹುಣ್ಣಿಮೆ ರಾತ್ರಿ ಖೀರಿನೊಂದಿಗೆ ಸೇವಿಸುವುದರಿಂದ ಆಸ್ತಮಾ, ನೇವಸ, ಕೆಮ್ಮು, ನೆಗಡಿ ನಿವಾರಣೆಯಾಗುತ್ತದೆ. ಕೂಡಲೇ ಹುಣ್ಣಿಮೆಯ ಮೊದಲೇ ಬರೆಯಿರಿ.

Manager, Shri Mahatma Naga Baba Ayurvedashram, P. O. Chitrakot U. P.

ಲೇಖಾಂಕ ೩

ಕಥೆಗಾರ ರಾಜಾಜಿಯವರ ಕಲಾಸಿದ್ಧಿ

ಶ್ರೀ ಕೆ. ಎನ್. ಭಟ್, ಶಿರಾಡಿಪಾಲ್.

ಶ್ರೀ ರಾಜಾಜಿಯವರ ಕೆಲವು ಕಥೆಗಳು ಒಂದು ಬೃಹತ್ ಕಾದಂಬರಿಗೆ ಬೇಕಾಗುವಷ್ಟು ಘಟನೆ ಹಾಗೂ ಪಾತ್ರಗಳಿಂದ ಕೂಡಿರುತ್ತವೆ ಇಂತಹ ಅವರ ನೀಳ್ಗತೆಗಳಲ್ಲಿ ಜೀವನದ ಸುಖ ಮತ್ತು ದುಃಖ ಪೂರ್ಣವಾದ ಹಲವಾರು ಸಮಸ್ಯೆಗಳು ಒಂದರ ಮೇಲೊಂದರಂತೆ, ಕಾಣುತ್ತಿದ್ದು ಪ್ರತಿಯೊಂದು ಸಮಸ್ಯೆಯ ಮೇಲೂ, ಸಾಕಷ್ಟು ವಿಚಾರ ವಿಮರ್ಶೆ ನಡೆದಿರುತ್ತದೆ ಒಂದು ಒಳ್ಳೆಯ ನಾಟಕವನ್ನು ನೋಡಿದ ಬಳಿಕ ನಮ್ಮ ಮನಸ್ಸಿನ ಮೇಲಾಗುವ ಪರಿಣಾಮದಂತೆ, ಶ್ರೀ ರಾಜಾಜಿಯವರ ಕಥೆಗಳನ್ನೋದುವಾಗ ಅದರಲ್ಲಿ ಬರುವ ಕಥಾಪಾತ್ರಗಳು ನಮ್ಮ ಅಂತಃಚಕ್ಷುಗಳೆದುರು ಕಾಣಿಸುತ್ತಿರುವಂತೆ ಭಾಸವಾಗುವುದು. 'ಕಟ್ಟ ಗಾಡಿ" ಎಂಬ ಶ್ರೀ ರಾಜಾಜಿಯವರ ನೀಳ್ಗತೆಯು ಅನೇಕ ಪೆಟ್ಟಾನಾವಳಿಗಳಿಂದ ಕೂಡಿದೆ. ಒಂದು ಹಳ್ಳಿಯ ರೈತ ಕುಟುಂಬದ ನೈಜ ಜೀವನವನ್ನು ಪ್ರತಿ ಬಿಂಬಿಸುವ ಈ ಕಥಾ ದೃಶ್ಯ ಅತ್ಯಂತ ಮೂರ್ಮಿಕವಾಗಿ ಮೂಡಿದೆ ಈ ಕಥಾ ವಸ್ತು ಹೀಗಿದೆ –

'ಬೆವರಿಳಿಸಿ ದುಡಿಯುವುದೇ ಜೀವನದ ಸರ್ವಸ್ವ'ವೆಂದು ತಿಳಿದಿದ್ದ, ಕರುಪ, ಮತ್ತು ಅವನ ಹೆಂಡತಿ ಪಾರ್ವತಿ, ಈ ರೈತ ದಂಪತಿಗಳು ಅವಿದ್ಯಾವಂತರಾದರೂ ಅವರ ಜೀವನ ಸಂಸ್ಕಾರ ಪೂರ್ಣವೂ ಸುಖಮಯವೂ ಆಗಿತ್ತು ದುಡಿಮೆಯೇ ಸೇವೆ!' ಸತ್ಯವೇ ದೇವರು, ಎಂಬ ತತ್ವದಂತೆ, ಆಚರಣೆ ಮಾಡಿ ಕೊಂಡಿರುತ್ತಿದ್ದ ಈ ದಂಪತಿಗಳು ತಮ್ಮ ಗಳಿಕೆಯ ಉಳಿಕೆಯ ಹಣಕ್ಕೆ ಸ್ವಲ್ಪ ಸಾಲಮಾಡಿ–ಕೂಡಿಸಿ, ಒಂದು ಎತ್ತಿನ ಬಂಡಿಯನ್ನು ಕೊಂಡುಕೊಳ್ಳುತ್ತಾರೆ. ಗದ್ದೆ ಸಾಗುವಳಿಯೊಡನ, ಗಾಡಿಯ ಬಾಡಿಗೆಯ ಲಾಭವೂ ಸೇರಿ, ತಮ್ಮ ಜೀವನ ಮತ್ತಷ್ಟು ಆನಂದಕರವಾಗಬಹುದೆಂದು ತಿಳಿದಿದ್ದ ಪಾರ್ವತಿಗೆ ಈಗ ಸುಖಕ್ಕಿಂತ ದುಃಖವೇ ಪ್ರಾಪ್ತವಾಗ ತೊದಗಿತು. ಅವರ ಸುಖಮಯವಾದ ಜೀವನದಲ್ಲಿ, ಈ ಗಾಡಿ ಬಂದುದೇ ದುಃಖದ ಗಾಡಿ ಒಂದಂತಾಯಿತೆಂದು ಪಾರ್ವತಿ ಭಾವಿಸಿದಳು

ಗಾಡಿ ಬಾಡಿಗೆಗೆ ಹೊಡೆಯುತ್ತಿದ್ದ ಕರೂಪನು ಶರಾಬು ಕುಡಿಯುವ ದುಶ್ಚಟಕ್ಕೆ ಬಲಿಯಾದನು ಆದ ಸಂಪಾದನೆಯೆಲ್ಲವೂ ಶರಾಬಿಗೆ ಖರ್ಚಾಗ ತೊಡಗಿ, ಗಾಡಿ ಕೊಳ್ಳಲು ಮಾಡಿದ ಸಾಲದ ಕಂತನ್ನೂ ಸಲ್ಲಿಸಲಾಗಲಿಲ್ಲ. ಮುಗ್ಧೆ ಪಾರ್ವತಿಯು, ಅತ್ತು ಕೂಗಿ, ಎರಡೆರಡು ಸಲ ತನ್ನ ಗಂಡನಿಂದ 'ಇನ್ನು ಕುಡಿಯುವುದಿಲ್ಲ' ಎಂಬ ಪ್ರತಿಜ್ಞೆ ಮಾಡಿಸಿಕೊಂಡಳಾದರೂ, ಎಲ್ಲವೂ ನಿಷ್ಫಲವಾಗಿ ಹೋಯಿತು. ಸಾಲಕೊಟ್ಟ ಜಮೀನ್‌ದಾರನು ಕರುಪನನ್ನು ಬೈದು ಹಂಗಿಸಿ, ಆತನ ಗಾಡಿಯ ಹೊಸ ಎತ್ತುಗಳನ್ನೇ ಸಂತೆಯಲ್ಲಿ ಮಾರಾಟಮಾಡಿ ತನ್ನ ಸಾಲಕೊಟ್ಟ ಹಣವನ್ನು ಪಡೆಯಲು ಮುಂದಾಗುತ್ತಾನೆ

ಆಗ ಕರುಪನು ನಿರುಪಾಯನಾಗಿ ಆ ಊರಿನ—ಶ್ರೀಮಂತ ಕಾದಿರಖಾನನಿಂದ ಕಂತಿನ ಮೇರೆಗೆ ಕೊಡುವ ಶರ್ತದ ಮೇಲೆ ಸಾಲ ಪಡೆದು, ಜಮೀನ್‌ದಾರನಿಗೆ ಸಲ್ಲಿಸಿ, ಒಂದು ಸಲದ ಈ ಸಾಲದ ವಿಪತ್ತಿನಿಂದ ಪಾರಾಗುತ್ತಾನೆ ಆದರೆ, ಮುಂದೆ, ಆತನಿಗೆ ವಿಶೇಷ ಕಷ್ಟ ಕಾದಿರುತ್ತದೆ.

ಮುಂದೆ, ಸಮಯಕ್ಕೆ ಸರಿಯಾಗಿ ಕಾದಿರಿ ಖಾನನ ಸಾಲದ ಕಂತನ್ನು ಕರೂಪನಿಂದ ಸಲ್ಲಿಸಲು ಸಾಧ್ಯವಾಗುವುದಿಲ್ಲ ಮತ್ತೊಂದು ದಿನ ಕಾದಿರಿ ಖಾನನು ಬಂದು, ಕರುಪನನ್ನು ನಾಯಿಯಂತೆ ಕಂಡು ಬೈಯ್ಯುತ್ತಿರುವಾಗ ಆ ಬೈಗಳನ್ನು ಕೇಳಿಕ್ಕಾಗದೆ ಪಾರ್ವತಿಯು, ತಾನು ಹಾಲು ಮೊಸರು ಮಾರಿ ಕೂಡಿಟ್ಟ ಪುಡಿಗಾಸುಗಳೆಲ್ಲವನ್ನೂ ತಂದು ಖಾನನ ಮುಂದೆ ಸುರಿಯುತ್ತಾಳೆ! ಖಾನನ ಹಣದ ಒಂದನೇ ಕಂತು ಆದರಿಂದ ತುಂಬುತ್ತದೆ ಪಾರ್ವತಿಯು ಗಂಡನ ಕಾಲು ಹಿಡಿದು, 'ಇನ್ನಾದರೂ ಕುಡಿಯುವುದನ್ನು ಬಿಡಿ' ಎಂದು ಪ್ರಾರ್ಥಿಸುತ್ತಾಳೆ ಆದರೆ, ಕರುಪನ ಕುಡಿತದ ಚಟ ದಿನೇ ದಿನೇ ಹೆಚ್ಚಾಗುತ್ತಲೇ ಹೋಗುತ್ತದೆ

ಒಂದು ಮಗುವಿನ ತಾಯಿ ಪಾರ್ವತಿ ಬೆಳಗಿನ ಜಾವದಲ್ಲೇ ಎದ್ದು ತನ್ನ ಮನಗೆಲಸಗಳೆಲ್ಲವನ್ನೂ ಪೂರೈಸಿ ಮಗುವಿಗೆ ಗಂಜಿ ಕುಡಿಸಿ ಆದಷ್ಟು ಸಂಪಾದನೆಯಾಗಲೆಂದು ಕಾದಿರಖಾನನು ಅಲ್ಲಿಯೇ ಕಟ್ಟಿಸುತ್ತಿದ್ದ ಒಂದು ಕಟ್ಟಿಡದ ಕೆಲಸಕ್ಕೆ ನಿತ್ಯವೂ ಹೋಗುತ್ತಾಳೆ. ಪಾರ್ವತಿ ಹಳ್ಳಿಯ ಹುಡುಗಿಯಾದರೂ ಪುಷ್ಟಿಯಾಗಿ, ಆರೋಗ್ಯದಿಂದ ಸುಂದರಿಯಾಗಿದ್ದಳು. ಅಲ್ಲಿ ಕೆಲಸ ಮಾಡಿಸುತ್ತಿದ್ದ ಕಾದಿರ ಖಾನನ ಮಗ ಇಸ್ಮಾಯಿಲನ ಕಣ್ಣು ಪಾರ್ವತಿಯ ಕಡೆಗೆ ಹೊರಳಿತು! ಇಸ್ಮಾಯಿಲನ ಆ ರೀತಿ ಆದರ! ಇತ್ಯಾದಿಗಳು ಈ ಹಳ್ಳಿಯ ಮುಗ್ಧೆಗೆ ಮೊದಮೊದಲು ಅರ್ಥವಾಗುತ್ತಿರಲಿಲ್ಲವಾದರೂ ಕೊನೆಗೆ ಆಕೆ, ಅದನ್ನು ಅರಿತುಕೊಳ್ಳುತ್ತಾಳೆ ಖಾನನ ಸಾಲದ ಎರಡನೇ ಕಂತಿನ ವೃದೆ ಬಂದರೂ ಇಸ್ಮಾಯಿಲನು ಅದನ್ನು ಕೇಳದೆ ಪಾರ್ವತಿಯನ್ನೇ ಬಯಸುತ್ತಾನೆ! ಈ ಸಮಯದಲ್ಲೇ ಪಾರ್ವತಿಯ ಮುದ್ದು ಮಗುವೂ ತೀರಿ ಹೋಗುತ್ತದೆ

ಮಗು ತೀರಿಹೋದ ಚಿಂತೆ ಒಂದು ಕಡೆ, ಗಂಡನು ಕುಡಿತದ ಕಾರಣ ಮನೆ ಸೇರದಿರುವ ಚಿಂತೆ ಮತ್ತೊಂದು ಕಡೆ ಹೀಗೆ ಚಿಂತೆಯಿಂದ ಬೆಂದ ಪಾರ್ವತಿಯ ಮನಸ್ಸು ಸ್ವಲ್ಪ ಸಡಿಲಗೊಳ್ಳುತ್ತಿರುವಾಗಲೇ, ಇಸ್ಮಾಯಿಲನ ಮೋಹದ ಪಾಶ ಬಲಗೊಳ್ಳುತ್ತದೆ. ಇಸ್ಮಾಯಿಲನೇ ಒಂದು ದಿನ ಕರೂಪನ ಗಾಡಿಗ ಸರಕನ್ನು ತುಂಬಿ ದೂರದ ಊರಿಗೆ ಬಾಡಿಗೆ ಕೂಟ್ಟು ಕಳುಹಿಸುತ್ತಾನೆ ಮತ್ತೆ ಮರು ರಾತ್ರೆಯೇ ಇಸ್ಮಾಯಿಲನು ತನ್ನ ಕಾರ್ಯ ಸಾಧನೆಗಾಗಿ ಪಾರ್ವತಿಯ ಮನೆಗೆ ಬರುತ್ತಾನೆ.

ಇತ್ತ ಕರುಪನಗಾಡಿ ಶರಾಬಿನ ಅಂಗಡಿಯ ಮುಂದಿನಿಂದ ಸಾಗುತ್ತಿರುವಾಗ ಬೇರೆ ಗಾಡಿಯವರು ಗಾಡಿ ನಿಲ್ಲಿಸಿ, ಕುಡಿಯಲು ಹೊರಟಾಗ ಕೊನೆಗೆ ಕುರೂಪನೂ ಹೋಗುತ್ತಾನೆ ಕುಡಿದು ಹೂಡೆ ದಾಟವಾಗುತ್ತದೆ ಕರುಪನು ಜಂಬ ಕೊಚ್ಚಿಕೊಳ್ಳುವಾಗ ಇತರರು ಆತನನ್ನು 'ತನ್ನ ಹೆಂಡತಿಯನ್ನೂ ಸರಿಯಾಗಿ ತೃಪ್ತಿ ಪಡಿಸಿದ ಹೇಡಿಯಾದ ನಿನಗೇಕೆ ಈ ಜಂಬ! ನಿನ್ನ ಹೆಂಡತಿಗೆ ನೀನು ಸಾಲದು! ಮೂರ್ಖ!' ಎಂದು ಹಂಗಿಸುತ್ತಾರೆ ಈ ಮಾತುಗಳನ್ನೇ ಮೆಲುಕು ಹಾಕುತ್ತ ಕೋಪಗೊಂಡ ಕರೂಪನು ಅದೇ ರಾತ್ರೆ ಮನೆ ಸೇರಿದಾಗ ಮನೆಯೊಳಗೆ "ಗುಸ ಗುಸು" ಮಾತನಾಡುವುದು ಆತನಿಗೆ ಕೇಳಿಸುತ್ತದೆ. ಆಗ ಆತನ ರಕ್ತ ಕುದಿದು ಒಳ ಸುಗ್ಗಿ ನೋಡುವಾಗ ಪಾರ್ವತಿ ಹೊರಗೆ ಬರುತ್ತಾಳೆ ಇಸ್ಮಾಯಿಲ ಒಳಗೇ ಬರುತ್ತಾನೆ ಆಗ ಹಿಂದೆ ಮುಂದೆ ನೋಡದೆ ಕರೂಪನು ಇಸ್ಮಾಯಿಲನಿಗೆ ಹೊಡೆಯುತ್ತಾನೆ ಪಾಪ! ಇಸ್ಮಾಯಿಲನ ತಲೆ ಯೊಡೆದು ಕಿವಿಯೊಂದು ಹರಿದು ರಕ್ತದ ಕೋಡಿ ಹರಿಯುತ್ತದೆ!

ಆ ಬಳಿಕ ಕರುಪ—ಪಾರ್ವತಿಯರು ಪೋಲೀಸ್ ಸ್ಟೇಶನ್ನಿನಲ್ಲಿ ಪ್ರಪ್ರತ್ಯೇಕವಾಗಿ ವಿಚಾರಣೆಗೂಳಗಾಗುತ್ತಾರೆ ಕರೂಪ ಬಂಧಿಸಲ್ಪಡುತ್ತಾನೆ. ಪಾರ್ವತಿ ಮರುದಿನ ಬಿಡುಗಡೆಯಾಗಿ, ತನ್ನಣ್ಣನ ಮನೆಗೆ ಹೋಗುತ್ತಾಳೆ ಅಲ್ಲಿ ಅವಳು ಅನೇಕ ಕಷ್ಟಗಳನ್ನು ಅನುಭವಿಸುತ್ತಾಳೆ, ಇಸ್ಮಾಯಿಲನ ತಂದೆ ಕಾದಿರ ಖಾನನು-'ತಾನ ಸಾಲದ ಕಂತು ಕೇಳಲು ಮಗ

(ನೇ ಸುಟ ನೋಡಿರಿ)



ಭಾರತದ ಶಿಲ್ಪಕಲೆ ಮತ್ತದರ ವೈವಿಧ್ಯ

ದೇವರ ದರ್ಶನ ಮಾಡಿದರೆ ಸಾಲದು, ದೇವಾಲಯದತ್ತವೂ ದೃಷ್ಟಿ ಹರಿಯಬೇಕು.

ಲಲಿತ ಕಲೆಗಳಲ್ಲಿ ಸಂಗೀತ, ಚಿತ್ರ, ಶಿಲ್ಪ ಕಲೆಗಳು ಮುಖ್ಯವಾದವುಗಳು. ಸಂಗೀತಗಾರನು ತನ್ನ ಭಾವನೆಗಳನ್ನು ಧ್ವನಿಸಿಗಳ ಮೂಲಕ ಚಿತ್ರಿಸುತ್ತಾನೆ. ಚಿತ್ರಗಾರನು ಕುಂಚ, ಬಣ್ಣಗಳಿಂದ ಭಾವನೆಗಳಿಗೆ ರೂಪು ಕೊಡುತ್ತಾನೆ. ಶಿಲ್ಪಿಯು ಕಲ್ಲನ್ನೇ ಜೀವಂತವಾಗಿ ನಲಿಯುವಂತೆ ಮಾಡುತ್ತಾನೆ. ನಮ್ಮ ದೇಶದ ಶಿಲ್ಪಕಲೆಯ ಅತ್ಯುತ್ತಮ ಉದಾಹರಣೆಗಳನ್ನು ದೇವಸ್ಥಾನಗಳಲ್ಲಿ ಕಾಣಬಹುದು. ಒಂದೊಂದು ಕಾಲದಲ್ಲಿ, ಒಂದೊಂದು ಕಡೆಗಳಲ್ಲಿ, ಒಂದೊಂದು ರೀತಿಯ ಶಿಲ್ಪಕಲೆಯು ಪ್ರಚಾರದಲ್ಲಿದೆ. ಸಾವಿರಾರು ಮಂದಿ ಯಾತ್ರಾರ್ಥಿಗಳಾಗಿ ಅನೇಕ ಪುಣ್ಯಕ್ಷೇತ್ರಗಳಿಗೆ ಹೋಗಿ ದೇವರ ದರ್ಶನ ಮಾಡಿ ಬರುತ್ತಾರೆ. ದೇವಸ್ಥಾನದಲ್ಲಿ ದೇವರಿಗೆ ಕೈಮುಗಿಯುವ ಜತೆಗೆ ಕಟ್ಟಡದ ರಚನೆ, ಅಥಗಳಲ್ಲಿನ ವೈವಿಧ್ಯಗಳ ಕಡೆಗೆ ದೃಷ್ಟಿ ಹರಿಸಿದರೆ ಯಾತ್ರೆಯ ಫಲ ಇಮ್ಮಡಿಯಾಗಲಾರದೇ?

ತಂಜಾವೂರಿನ ಬೃಹದೀಶ್ವರ ದೇವಾಲಯವು ದಕ್ಷಿಣ ಭಾರತದ ಅತ್ಯಂತ ಉತ್ತಮವಾದ ಒಂದು ಶಿಲ್ಪ ಕೃತಿಯಾಗಿದೆ. ಆತಿ ಹಿರಿದಾದ ಇದರ ಗೋಪುರಗಳಿಗೆ ಸಮಾನಗಳೆನ್ನುತ್ತಾರೆ. ದೇವಸ್ಥಾನಗಳನ್ನು ವಿಸ್ತಾರವಾಗಿ, ದೊಡ್ಡದಾಗಿ ಕಟ್ಟಲು ಆರಂಭಿಸಿದಾಗ ಆವುಗಳಲ್ಲಿನ ವಿವಿಧ ಗಳ ಸಂಖ್ಯೆ, ಗಾತ್ರಗಳು ಹೆಚ್ಚುತ್ತ ಬಂದವು. ಮಂಟಪಗಳೂ ಜಾಸ್ತಿಯಾಗಿ ಬಳಸಿ ವಿಸ್ತಾರವಾದವು. ಇಂಥ ವಿಸ್ತಾರವನ್ನು ನಾವು ಮಧುರೆಯ ಮೀನಾಕ್ಷಿ ದೇವಸ್ಥಾನದಲ್ಲಿ ಕಾಣಬಹುದು. ನಾಲ್ಕು ಸುತ್ತಲೂ ಕೋಟೆಯಂತಹ ಗೋಡೆಗಳಿಂದ ಕೂಡಿ ನಾಲ್ದೆಸೆಗಳಲ್ಲಿ ಮಹಾದ್ವಾರಗಳಿದ್ದು ಅವುಗಳ ಮೇಲೆ ಎತ್ತರವಾದ ಗೋಪುರಗಳಿವೆ.

ಸಾಧಾರಣವಾಗಿ ವಿಜಯನಗರ, ಹಂಪೆಯ ಗುಡಿಗಳೂ ಪಾಂಡ್ಯ, ಚೋಳ ಶೈಲಿಗಳಲ್ಲಿ ಮುಂದುವರಿದಿವೆ. ವಿಜಯನಗರ ಸಾಮ್ರಾಜ್ಯವು ಉನ್ನತ ಸ್ಥಿತಿಯಲ್ಲಿದ್ದಾಗ ಇಲ್ಲಿ ರಚಿಸಲ್ಪಟ್ಟ ಗುಡಿ ಗೋಪುರಗಳು ಮುಸಲ್ಮಾನರ ಪಾಲಾದಾಗ ನಾಶವಾದುದರಿಂದ ಈಗ ಭಗ್ನಾವಶೇಷಗಳನ್ನು ಮಾತ್ರ ಕಾಣಬಹುದು, ಹಂಪೆಯ ವಿರೂಪಾಕ್ಷ ದೇವಾಲಯವು ಆ ಸ್ಥೈಂಮೆ ದೊಡ್ಡದಾಗಿರದಿದ್ದರೂ ಬಹಳ ಅಂದವಾಗಿದೆ. ವಿಜಯ ವಿಠಲನ ಗುಡಿಯು ಒಡೆದು ಪುಡಿಯಾಗಿದ್ದರೂ ಮನಸೆಳೆಯುವ ಕೆತ್ತನೆ ಕೆಲಸಗಳನ್ನು ನಾವು ಈಗಲೂ ಗುರುತಿಸಬಹುದು. ಈ ಮುಂದಿರುವ ಕಂಬದ ಒಂದೊಂದು ಭಾಗದಲ್ಲಿ ಹೊಡೆದಾಗ ಒಂದೊಂದು ಧ್ವನಿತರಂಗವೆದ್ದು ವಾದ್ಯ ನುಡಿಸಿದಂತಾಗುವುದು. ವಿಜಯನಗರದಲ್ಲಿ ಇನ್ನಾವಿಧ ಶೈಲಿಯ ಛಾಯೆಯುಳ್ಳ ಶಿಲ್ಪವೂ ಕಾಣಬರುವುದು. ಅಲ್ಲಿನ ಗಜಶಾಲೆ, ನರಸಿಂಹ ಮಹಲುಗಳಲ್ಲಿ ಮಹೀದಿಗಳ ರಚನೆಗಳಲ್ಲಿ ಕಾಣುಬರುವಂತಹ ಗೋಲಾಕಾರದ ವಿಪರಗಳೂ, ಮೊನಚಾದ ಕಮಾನುಗಳೂ ಕಂಡು ಬರುವುವು. ಅಲ್ಲದೆ ಪಂಪಾಪತಿ, ಕಮಲ ಮಹಲು, ಸಾಸಿವೆಕಾಳು ಗಣಪ ಮೊದಲಾದ ಅನೇಕ ಕೆತ್ತನೆ ಕೆಲಸಗಳಿಂದ ಕೂಡಿದ ದೇಗುಲಗಳು ಹಾಳು ಬಿದ್ದಿವೆ.

ಬೇಲೂರಿನ ಚೆನ್ನಕೇಶವ ದೇವಾಲಯ ಮತ್ತು ದ್ವಾರ ಸಮುದ್ರದ ಹೊಯ್ಸಳೇಶ್ವರ ದೇವಾಲಯಗಳಲ್ಲಿ ಗುಡಿಗಳೆಲ್ಲವೂ ಕೆತ್ತನೆ ಕೆಲಸಗಳಿಂದಲೇ ತುಂಬಿವೆ. ನಾಲ್ಕು ಮೈಗಳ ಬದಲು ನಕ್ಷತ್ರಗಳಂತೆ ಹಲವು ಮೈಗಳು ಕಂಡು ಬರುವುವು. ದೇವಾಲಯಗಳ ಹೊರಮೈಯಲ್ಲಿ ಬುಡದಿಂದ ತುದಿಯ ವರೆಗೆ ರಾಮಾಯಣದ ಚಿತ್ರಗಳ ಕೆತ್ತನೆ ಇದೆ. ಹಲವಾರು ರೀತಿಯ ಬಳ್ಳಿಯ ಮಂಟಪಗಳೂ, ಅವಿಗಳ ನಡುವಿನ ಶಿಲಾಬಾಲಿಕೆಯರ ವಿಗ್ರಹಗಳೂ ನೋಡುವವರನ್ನು ದಿಗ್ಭ್ರಮೆಗೊಳಿಸುವುವು. ಶಿಲೆಯನ್ನು ದಿನ್ನೆಗಿಂತಲೂ ಮೃದುವಾಗಿ ಕೆತ್ತಿದಂತಹ ಈ ಕೆತ್ತನೆಗಳನ್ನು ನೋಡುವಾಗ ಮಾನವನ ಕೈಯಿಂದ ಇಂತಹ ರಚನೆಗಳು ಬಂದುವೇ ಎಂದು ಆಶ್ಚರ್ಯವಾಗುವುದು.

ಚಂಗಲ್ಪಟ್ಟು ಜಿಲ್ಲೆಯಲ್ಲಿರುವ ಮಹಾಬಲಿಪುರದ ಗುಡಿಗಳು ಪಲ್ಲವರ ಕಾಲದಲ್ಲಿ ಕಟ್ಟಲ್ಪಟ್ಟಿದ್ದುವು. ಒಂದೊಂದೇ ಬಂಡೆಯನ್ನು ಕೊರೆದು ಮಾಡಿದ ಅನೇಕ ಮಂದಿರಗಳು ಇಲ್ಲಿವೆ; ಹಾಗೆಯೇ ತುಂಡು ತುಂಡು ಶಿಲೆಗಳನ್ನು ಜೋಡಿಸಿ ಅಂದವಾಗಿ ರಚಿಸಿದ ಗುಡಿಗಳೂ ಇವೆ. ಈ ಗುಡಿಯ ಗರ್ಭ ಗೃಹದ ಮೇಲೂ ಮುಂಭಾಗದ ವಂಟಪದ ಮೇಲೂ ಕ್ರಮವಾಗಿ ಏರುತ್ತಾ ಹೋಗುವ ಶಿಖರಗಳೂ ಕೆತ್ತನೆ ಕೆಲಸಗಳಿಂದ ಕೂಡಿವೆ. ಸಮುದ್ರದ ದಡದಲ್ಲಿ ಕಟ್ಟಿದ ಒಂದು ಗುಡಿಯೊಳಗೆ ಭರತಕಾಲದಲ್ಲಿ ಸಮುದ್ರದ ನೀರು ಹೊಂದು ಒಳಹೊಕ್ಕು ವಿಗ್ರಹದ ಪಾದವನ್ನು ಸ್ಪರ್ಶಿಸುವ ನೋಟವೊಂದು ಇಲ್ಲಿ ಅತಿ ರಮಣೀಯವಾಗಿದೆ. ಕಲ್ಲಿನಿಂದಲೇ ಕೊರೆದು ನಿರ್ಮಿಸಿದ ರಥವೊಂದನ್ನು ಇಲ್ಲಿ ಕಾಣಬಹುದು.

ನಮ್ಮೂರ ಮೂಡಬಿದ್ರೆಯ ಸಾವಿರ ಕಂಬದ ಜಿನಮಂದಿರವೂ ದಕ್ಷಿಣದ ಶಿಲ್ಪದ ಒಂದು ಉದಾಹರಣೆಯೊಗಿದೆ. ಇಲ್ಲಿಯ ಕಂಬಗಳೂ ಆವುಗಳ ಕೆತ್ತನೆಯ ಕೆಲಸಗಳೂ ಅಂದವಾಗಿವೆ. ಆದರೆ ಶಿಖರಗಳಲ್ಲದೆ ಹಾಸುಗಲ್ಲಿನ ಮೂಡು ಮಂದಿರವನ್ನು ಮುಚ್ಚಿರುವುದರಿಂದ ಆದರ ಶೋಭೆಯು ಆಷ್ಟೊಂದು ಎದ್ದುಕಾಣುವುದಿಲ್ಲ. ಕಾರ್ಕಳದ ಹಾಗೂ ಶ್ರವಣ ಬೆಳಗೊಳದ ಗೊಮ್ಮಟನ ಮೂರ್ತಿಗಳು ಅಖಂಡ ಶಿಲೆಯಿಂದ ನಿರ್ಮಿಸಿವೆ.

ಉತ್ತರ ಭಾರತದ ಶಿಲ್ಪ ಶೈಲಿಯು ದಕ್ಷಿಣಕ್ಕಿಂತ ಭಿನ್ನವಾಗಿದೆ. ದೇವಸ್ಥಾನದ ಶಿಖರವು ನೆಟ್ಟಗೆ ಪರ್ವತದಂತೆ ಮೇಲೇರುತ್ತ ಸಾಗುವುದು. ಶಿಖರದ ತಲೆಯ ಮೇಲೆ ಒಂದು ಕಲಶವಿರುವುದು. ಹೀಗೆ ಕೆಲವು ಶಿಖರಗಳಿರುವ ಗುಡಿಗಳು ದೂರದಿಂದ ಕಾಣುವಾಗ ನೆಲದಿಂದ ಮೂಡಿ ಬಂದ ಕೋಡು ಕಲ್ಲುಗಳಂತೆ ಕಾಣುವುವು. ಈ ಶೈಲಿಗೆ "ನಾಗರ ಶೈಲಿ" ಎನ್ನುತ್ತಾರೆ. ಒರಿಸ್ಸಾದಲ್ಲಿ ಈ ರೀತಿಯ ದೇಗುಲಗಳನ್ನು ಕಾಣಬಹುದು. ಜಗನ್ನಾಥ ದೇವಾಲಯವು (ಪುರಿ) ಬಹಳ ಹಳೆಯ ಕಾಲದ ದೇಗುಲ ಮತ್ತು ಕೆತ್ತನೆಗೆ ಪ್ರಸಿದ್ಧವಾದ ದೇವಾಲಯವಾಗಿದೆ ಕಾಶಿಯ ವಿಶ್ವನಾಥ ದೇವಾಲಯದ ಶಿಖರಗಳು ಇದೇ ರೀತಿಯವುಗಳಾಗಿದ್ದರೂ ಅವುಗಳಲ್ಲಿ ಕೆತ್ತನೆಯ ಕೆಲಸಗಳಿರುವುದಿಲ್ಲ. ನಾಗರ ಶೈಲಿಯನ್ನು ನಾವು ರಾಜಸ್ಥಾನದಲ್ಲಿಯೂ ಕಾಣಬಹುದು. ಅಬು ಪರ್ವತಗಳ ಮೇಲಿನ ಜೈನರ ಗುಡಿಗಳು ಅಂತರಂಗ ಸೌಂದರ್ಯಕ್ಕೆ ಬಹಳ ಪ್ರಸಿದ್ಧವಾಗಿವೆ. ಬೌದ್ಧ ಸನ್ಯಾಸಿಗಳ ಅನಪೇಕ್ಷೆಗಳನ್ನು ಹುಡಿದು ಅವುಗಳ ಮೇಲೆ ಕಟ್ಟುವ ನ್ಯಾಯಕಗಳಿಗೆ "ಸ್ತೂಪ"ಗಳೆನ್ನುತ್ತಾರೆ. ಇಂಥಹ ಸ್ತೂಪಗಳು ಸಾಂಚಿ, ನಾಗಾರ್ಜುನ ಕೊಂಡ, ಕಪಿಲವಸ್ತು ಮೊದಲಾದ ಕಡೆಗಳಲ್ಲವೆ.

ಹನ್ನೊಂದನೆಯ ಶತಮಾನದ ನಂತರ ಭಾರತವು ಮುಸಲ್ಮಾನರ ಆಳ್ವಿಕೆಗೆ ಒಳಗಾದಾಗ ಇನ್ನೊಂದು ರೀತಿಯ ಶಿಲ್ಪ ಶೈಲಿಯು ಆರಂಭವಾಯ್ತು. ಅವರು ಹೆಚ್ಚಾಗಿ ಮಸೀದಿಗಳನ್ನೂ, ಗೋರಿಗಳನ್ನೂ, ಸ್ತಂಭಗಳನ್ನೂ ಕಟ್ಟಲು ಆರಂಭಿಸಿದರು. ಆಗ ರಚನೆಯಾದ ಸ್ತಂಭಗಳಲ್ಲಿ ದಿಲ್ಲಿಯ ಕುತುಬ್ ಮಿನಾರ್ ಅತ್ಯಂತ ಉನ್ನತವಾದ ಸ್ತಂಭವಾಗಿದೆ. ದಕ್ಷಿಣದಲ್ಲಿ ಬಹಮನೀ ಅರಸರ ಆಳ್ವಿಕೆಯ ಕಾಲದಲ್ಲಿ ಆದಿಲ್ ಶಹನ ಗೋರಿಯಾದ ಗೋಲ ಗುಂಬಜವು ಕಟ್ಟಲ್ಪಟ್ಟಿತು. ಇದರ ಗೋಲಾಕಾರದ ಗುಮ್ಮಟವು ಜಗತ್ತಿನಲ್ಲೇ ಅತಿ ದೊಡ್ಡ ಶಿಲ್ಪ ರಚನೆಯಾಗಿದೆ. ಮೊಗಲರ ಕಾಲದಲ್ಲಿ ಷಹಜಹಾನನು ತನ್ನ ಪ್ರೇಯಸಿಯ ಸ್ಮಾರಕಕ್ಕಾಗಿ ಆಗ್ರದ ಸಮೀಪ ತಾಜಮಹಾಲನ್ನು ಕಟ್ಟಿಸಿದನು. ಅಲ್ಲದೆ ಜುಮ್ಮಾ ಮಸೀದಿಯನ್ನೂ ದಿಲ್ಲಿಯಲ್ಲಿ ಕೆಂಪು ಕೋಟೆಯನ್ನೂ ಕಟ್ಟಿಸಿದನು.

ಎಲ್ಲೋರಾ ಮತ್ತು ಅಜಂತಾದ ಗುಹೆಗಳಲ್ಲಿ ನಾನಾ ರೀತಿಯ ಕೆತ್ತನೆ ಕೆಲಸಗಳು ಪ್ರೇಕ್ಷಕರನ್ನು ದಿಗ್ಭ್ರಮೆಗೊಳಿಸುತ್ತಿವೆ. ಅಜಂತಾದಲ್ಲಿರುವ ಗುಹೆಗಳ ಮೇಲ್ಛಾವಣಿಯಲ್ಲಿಯೂ ಬದಿಗಳ್ಲಿಯೂ ಬುದ್ಧನ ಜೀವನ ಚರಿತ್ರೆ ಮತ್ತು ಬೌದ್ಧ ಸಾಹಿತ್ಯದ ಕತೆಗಳ ಬಣ್ಣದ ಚಿತ್ರಗಳಿವೆ. ಎಲ್ಲೋರಾದಲ್ಲಿರುವ ಕೈಲಾಸ ದೇವಾಲಯವು ಕೆತ್ತನೆ ಕೆಲಸಗಳಿಗೆ ಪ್ರಸಿದ್ಧವಾದೆದಿವೆ. ಕಾಂಚಿಯಲ್ಲಿರುವ ಕೈಲಾಸನಾಥ ದೇವಾಲಯವೂ ಚಿದಂಬರದಲ್ಲಿರುವ ನಟರಾಜ ದೇವಾಲಯವೂ ಆ ಕಾಲದ ಜನರ ಕಲಾನೈಪುಣ್ಯವನ್ನು ತೋರಿಸುತ್ತವೆ. ಈ ಶಿಲ್ಪಿಗಳ ಸಾಹಸಕ್ಕೆ ನಾವು ಮಣಿಯಬೇಕು, ಹೆಮ್ಮೆಪಡಬೇಕು.

—ಕೆ ಇಂದಿರಾ, ಉಡುಪಿ.

ದಿ ಕರ್ನಾಟಿಕ ಬ್ಯಾಂಕ್ ಲಿಮಿಟೆಡ್

ರಿಜಿಸ್ಟರ್ಡ್ ಆಫೀಸು: ಮಂಗಳೂರು-3

ಪರಿಷ್ಕರಿಸಿದ ಮತ್ತು ಹೆಚ್ಚಿಸಿದ ಶೇವಣಾತಿ ಬಡ್ಡಿ ದರಗಳು:

ಕಾಯಂ ಶೇವಣಾತಿಗಳು:		ರೂ. ನ.ಪೈ.ಸೆ
ಒಂದೆರಿಂದ ಮೂರು ತಿಂಗಳು ವರೆಗೆ	ವಾರ್ಷಿಕ ಸೇಕಡಾ	4-50
ಆರರಿಂದ ಹನ್ನೆರಡು ತಿಂಗಳು ವರೆಗೆ	,, ,,	4-75
ಪದಿಮೂರರಿಂದ ಇಪ್ಪತ್ತನಾಲ್ಕು ತಿಂಗಳು ವರೆಗೆ	,, ,,	5-00
ಇಪ್ಪತ್ತ ಐದರಿಂದ ಮೂವತ್ತಾರು ತಿಂಗಳು ವರೆಗೆ	,, ,,	5-25
ನಾಲ್ವತ್ತೆಂಟು ತಿಂಗಳು ಮತ್ತು ಹೆಚ್ಚಿಗೆ	,, ,,	5-50
ಸೇವಿಂಗ್ಸ್ ಬ್ಯಾಂಕ್ ಶೇವಣಾತಿಗಳು	,, ,,	3-25

ನಿಮ್ಮ

ದಿನನಿತ್ಯದ ಉಳಿತಾಯವನ್ನು / ಮಾಸಿಕ ಉಳಿತಾಯವನ್ನು

ಹಣ ಡಿಪೋಸಿಟುಗಳಲ್ಲಿ / ಕ್ಯುಮುಲೇಟಿವ್ ಡಿಪೋಸಿಟುಗಳಲ್ಲಿ

ವಿನಿಯೋಗಿಸಿರಿ.

THE KARNATAKA BANK LIMITED

3—7—1962

ನಾನು ಬ್ರಾಹ್ಮಣನಲ್ಲ, ಭಾರತೇಯ

ಕಲ್ಲುದೇವರ ಮೇಲೆ
ಹೊನ್ನ ಹೂವಿನ ಮಾಲೆ
ಹೆಸರಿ "ತಂದೇ" ಎನುವ ಮುತ್ಸದ್ದಿ
ತೋರದಿರಲಿ ಎನಗೆನಂತ ಕೀರ್ತಿ.

ನೂರು ಜಾತಿಯ ಮೂಡಿ
ಭೇದ ನೀತಿಯ ಹೂಡಿ
ಭ್ರಾತೃ ದ್ರೋಹವನೈವ ವೇದ ಬುದ್ಧಿ
ತಾರದಿರಲಿ ಎನಗೆ ಅಮರ ಕೀರ್ತಿ.

ಸತ್ತ ಕೋಣಗೆ ವ್ಯಾಧಿ
ಕರಿವೆಮ್ಮೆಗೌಷಧಿ
ವೈದ್ಯಕೀಯವಿದೆಂಬ ರಾಜಕೀಯ
ಕಾಯದಿರಲಿ ಎನ್ನ ಎದೆಯಮನೆಯ.

ಮುಂದುವರಿದರು ಹಿಂದೆ
ಹಿಂದೆ ಉಳಿದರು ಮುಂದೆ
ನಾನು ಬ್ರಾಹ್ಮಣನಲ್ಲ ಭಾರತೇಯ
ಅನ್ಯ ಭಾವನೆಗಿರಲಿ ಇಲ್ಲೊ ವಿದಾಯ.

— "ಸಾನಂದ"

ಯುರೇಶಿಯೂದ ರಾಜಕಾರಣ

ಉತ್ತರಾಧಿಕಾರಿಯ ಮಹಾಸಮಸ್ಯೆ

ಜಗತ್ತಿನ ದೊಡ್ಡ ಹಾಗೂ ಖ್ಯಾತ ದೇಶಗಳನ್ನು ಇಂದು ಮುನ್ನಡೆಸುತ್ತಿರುವವರೆಲ್ಲ ಮುದುಕರು, ೭೦ರ ಗಡಿಯನ್ನು ಮುಟ್ಟಿದವರು, ದಾಟಿದವರು. ಆದರೆ, ಅಮೆರಿಕೆಯ ಅಧ್ಯಕ್ಷ ಜಾನ್ ಕೆನ್ನೆಡಿಯವರು ಮಾತ್ರ ಇದಕ್ಕೆ ಅಪವಾದ. ೪೬ರ ಮಿತಿಯಲ್ಲಿರುವ ಅವರು ಅಮೆರಿಕೆಯಂತಹ ಸತ್ವಶಾಲಿ ರಾಷ್ಟ್ರವನ್ನು ಮುಂದುವರಿಸಿಕೊಂಡು ಹೋಗುವಲ್ಲಿ ಉತ್ಸುಕರಾಗಿದ್ದಾರೆ.

ಪಶ್ಚಿಮ ಜರ್ಮನಿಯ ಛಾನ್ಸಲರ್ ಕೊನ್‌ರಾಡ್ ಅಡೆನ್ಯೂರರು ೮೬ ತುಂಬಿದವರು. ರಶ್ಯದ ಪ್ರಧಾನಿ ನಿಕೀಟ ಕ್ರುಶೇವರು ೬೮ ಇವರಿಬ್ಬರ ಸರಾಸರಿ ವ್ರಾಯ ೭೨, ವಿಖ್ಯಾತ ರಾಜಕಾರಣಿಗಳೆಲ್ಲರೂ ಈ ೭೨ರ ಗಡಿಯಲ್ಲಿ ನಿಲ್ಲುವವರು. ಹೆಚ್ಚಿನವರು ತಾವಿನ್ನೂ ಕೆಲವು ಕಾಲ ಬದುಕುವೆವೆಂದು ನಂಬಿರುವರಾದರೂ ಜತೆಗೆ ತಮ್ಮ ಉತ್ತರಾಧಿಕಾರಿ ಯೂರೆಂಬುದರ ಕಡೆಗೆ ತುಂಬ ಆಲೋಚನೆ ಮಾಡುತಿದ್ದಾರೆ; ಕೆಲವರು ಅಂತಹರ ಹೆಸರುಗಳನ್ನೂ ಹೊರಗೆಡಹಿದ್ದಾರೆ.

ಇನ್ನು ಕೆಲವರು ತಮ್ಮ ಉತ್ತರಾಧಿಕಾರಿಯ ಆಯ್ಕೆಯ ಕುರಿತುಯಾವ ಚಿಂತನೆಯನ್ನೂ ತೆಗೆದು ಕೊಂಡಿಲ್ಲ. ಇಂತಹರಲ್ಲಿ ನಮ್ಮ ಪ್ರಧಾನಿ ನೆಹರು. ಕೂಡ ಒಬ್ಬರು. ಅವರಿಗಿಂದು ೭೨ ವರ್ಷಗಳು ತುಂಬಿವೆ. ಲಂಡನ್ನಿನಲ್ಲಿ ಮೊನ್ನೆ ಮೊನ್ನೆ ಪರೀಕ್ಷೆ ನಡೆಸಿದ ವೈದ್ಯರ ಅಭಿಪ್ರಾಯದಂತೆ ಅವರ ಆರೋಗ್ಯ ನೆಟ್ಟಿಗಿದೆ. ಕಳೆದ ಎಪ್ರಿಲ್ ತಿಂಗಳಲ್ಲಿ ಅವರು ಮೂತ್ರಕೋಶದ ರೋಗದಿಂದ ಬಳಳಿದ್ದರು. ಚೀನಾದ ಚಿಯಾಂಗ್ ಕೈಶೇಕರಿಗೆ ೭೪. ಅವರಿಗೂ ಒಂದು ಅಪರೇಶನ್ ನಡೆದಿತ್ತು. ಹಾಗಿದ್ದರೂ ಇಂದವರು ತಮ್ಮ ನಿಯಮಿತ ಕಾರ್ಯಕ್ರಮಗಳಲ್ಲಿ ನಿರ್ವಿಘ್ನರಾಗಿ ಮುಂದುವರಿಯುತ್ತಾರೆ.

ಇಂದು ಜಗತ್ತು ಕೇಳುತ್ತಿರುವ ಪ್ರಶ್ನೆಯೊಂದೇ. ಉನ್ನತ ಮಟ್ಟದ ರಾಜಕಾರಣಿಗಳೆನಿಸಿದ ಇವರ ಉತ್ತರಾಧಿಕಾರಿಯೂಗುವವರು ಯಾರು? ಮಾಟೆಯ ಮೇಲಿನ ಮರವಿಂದಲ್ಲ ನಳೆ ಬೀಳಬಹುದು; ಕೆಲವು ಕಾಲ ನಿಲ್ಲಲೂ ಬಹುದು ಇಂತಹ ಅನಿರ್ಧಿಷ್ಟ ಅವಧಿಯಲ್ಲಿ ಜನತೆ ಇತ್ತ ಯೋಚಿಸುತ್ತಿರುವುದು ತಪ್ಪಲ್ಲ. ಆದರೆ, ರಾಜಕಾರಣಿಗಳಿಗೇನೇ ಅದು ಅಪ್ರಿಯವಾಗುತ್ತಿರುವಂತೆ ತೋರುತ್ತಿದೆ ಅಪ್ಪನೊಡನೆ ಮಗನು ಪಾಲು ಕೇಳಿದಾಗ ಅವನಿಗೆ ಏನೆನಿಸುವುದೋ ಅದೇ ರೀತಿಯ ಮನೋಭಾವವು ಇಂತಹ ಹಳೆಯ ರಾಜಕಾರಣಿಗಳಲ್ಲಿದೆಯೆಂದರೂ ಅತಿಶಯೋಕ್ತಿಯಲ್ಲ

ಪಶ್ಚಿಮ ಜರ್ಮನಿಯ ಛಾನ್ಸಲರ್ ಡಾ| ಕೊನ್‌ರಾಡ್ ಅಡೆನ್ಯೂರರ ವ್ರಾಯ ೮೬. ಆರೋಗ್ಯ ಅತ್ಯುತ್ತಮ. ವೈಸ್ ಛಾನ್ಸಲರ್ ಲುಡ್ವಿಂಗ್ ಎರ್‌ಹರ್ಡ್ (೬೫) ಮತ್ತು ವಿದೇಶ ಮಂತ್ರಿ ಎರ್‌ಹರ್ಡ್ ಸ್ಕ್ರೂಡರ್ (೫೧) ಸಂಭಾವ್ಯ ಉತ್ತರಾಧಿಕಾರಿಗಳು. ಎರ್ ಹರ್ಡರು ಅಡೆನ್ಯೂರರ ನಂತರ ತಾತ್ಕಾಲಿಕ ಉತ್ತರಾಧಿಕಾರಿಗಳಾಗಬಹುದು; ಆದರೆ ಬಹು ಕಾಲದ ವರೆಗೆ ಆ ಪದವಿಯಲ್ಲಿ ನಿಲ್ಲುವವರು ಸ್ಕ್ರೂಡರ್ ಎಂದು ಊಹೆ ಸಂರಕ್ಷಣಾ ಮಂತ್ರಿ ಫ್ರಾನ್ಜ್ ಜೋಸೆಫ್ ಸ್ಟ್ರವುಸ್‌ರವರನ್ನಿವರು ಒಲಿಸಿಕೊಳ್ಳಬೇಕಾಗಬಹುದು.

ಛಾನ್ಸಲರ್ ಅಡೆನ್ಯೂರರು ತಮ್ಮ ಉತ್ತರಾಧಿಕಾರಿ ಯೂರೆಂಬಕಡೆಗೆ ಕಾಳಜಿ ವಹಿಸ್ತುತಿಲ್ಲ. ೮೬ ದಾಟಿದ್ದರೂ ಅಧಿಕಾರ ಗದ್ದುಗೆಯಿಂದ ಇಳಿಯಲು ಬಯಸುತ್ತಿಲ್ಲ. 'ನಿಮ್ಮ ಸಂಭಾವ್ಯ ಉತ್ತರಾಧಿಕಾರಿಯೂರು?" ಎಂದು ಕೇಳಿದ ಪ್ರಶ್ನೆಗೆ ಅವರ ಉತ್ತರ ಸರಳವಾಗಿತ್ತು. "ಪ್ರಶ್ನೆಯನ್ನು ಸರಿಹೊಂದಿಸಿ ಕೇಳಿರಿ. ನಾನು ಸಂಭಾವ್ಯ ಉತ್ತರಾಧಿಕಾರಿಗಳೆಂದು ತಿಳಿಯುವ ಎಷ್ಟು ಮಂದಿಯನ್ನು ನೋಡುತ್ತೇನೆ?"

ಚೀನ ರಿಪಬ್ಲಿಕ್ಕಿನ ಅಧ್ಯಕ್ಷ ಚಿಯಾಂಗ್ ಕೈಶೇಕ್‌ರ ಪ್ರಾಯ ೭೪ ಇತ್ತೀಚೆಗೆ ನಡೆದ ಶಸ್ತ್ರಕ್ರಿಯೆಯಿಂದ ಗಣಮುಖರಾಗಿ ತೃಪ್ತಿಕರವಾಗಿ ತಮ್ಮ ಕಾರ್ಯ ನಡೆಸಬಲ್ಲವರಾಗಿದ್ದಾರೆ ಅವರು ಪಡೆದ ಮೊತ್ತ ಮೊದಲಿನ ವೈದ್ಯಕೀಯ ಸೇವೆಯದು ಎಂದು ಹೇಳಲಾಗುತ್ತಿದೆ. ಸಂಭಾವ್ಯ ಉತ್ತರಾಧಿಕಾರಿಗಳು ೭೪ ವರ್ಷದ ಉಪಾಧ್ಯಕ್ಷ ಮತ್ತು ಪ್ರಧಾನಿ ಚೆನ್ ಚೆಂಗ್.

ಚೆನ್ ಚೆಂಗರು ಹಿಂದಿನಿಂದಲೂ ಚಿಯಾಂಗರ ಕೈವಾರಿಗಳು. ಆದರೆ, ಇವರು ತಮ್ಮ ಅನಾರೋಗ್ಯದ ಕಾರಣದಿಂದ ರಾಜಕಾರಣವನ್ನು ಬಿಟ್ಟುಬಿಡುವ ಕುರಿತು ಹೇಳುತ್ತಿರುತ್ತಾರೆ. ಒಂದು ವೇಳೆ ಚೆಂಗರು ನಿವೃತ್ತರಾದರು ಎಂದರೆ, ಚಿಯಾಂಗರ ಪುತ್ರ ಚಿಯಾಂಗ್‌ಚಿಂಗ್ ಕೋರವರೇ ತಮ್ಮ ತಂದೆಯ ಉತ್ತರಾಧಿಕಾರಿಯೂಗುವ ಅವಕಾಶವಿದೆ.

ಡಾ| ಅಂತೋನಿಯೋ ಡಿ ಒಲಿವೀರಾ ಸಾಲಜಾರರ ಹೆಸರನ್ನು ಭಾರತೀಯರು ಆಜನ್ಮ ಮರೆಯಲಾರರು. ೭೩ ವರ್ಷದ ಈ ಮಹನೀಯರು ಪೋರ್ಚುಗಲ್ ಪ್ರಧಾನಿ. ಆರೋಗ್ಯ ಸಾಮಾನ್ಯವಾಗಿ ನೆಟ್ಟಗೆ. ಮೂರು ಚಳಿಗಾಲಗಳಿಗೆ ಮೊದಲು ನಿಮೋನಿಯೂ ಅವರನ್ನು ಹಿಡಿದಿತ್ತು; ಅದನ್ನೂ ಗೆದ್ದು ಬಂದ ಧೀರ ರಾಜಕಾರಣಿಯವರು. ತನ್ನ ಉತ್ತರಾಧಿಕಾರಿಯಾಗಿ ಸಾಲಜಾರ ದೊರೆಯೂರನ್ನೂ ಹೆಸರಿಸಿಲ್ಲ. ಆದರೂ ಮೂವರ ಹೆಸರುಗಳು ಕೇಳಿ ಬರುತ್ತಿವೆ. ೧೯೫೧—೧೯೮೮ರ ಅವಧಿಯಲ್ಲಿ ಪೋರ್ಚುಗಲ್ಲಿನ ಅಧ್ಯಕ್ಷರಾಗಿದ್ದ ೬೮ ವರ್ಷದ ಫೀಲ್ಡ್ ಮಾರ್ಶಲ್ ಫ್ರಾನ್ಸಿಸ್ಕೊ ಹಿಗಿನೊ ಕ್ರವಿರೋ ಲೋಪ್ಸ್; ಮಾಜಿ ಉಪಪ್ರಧಾನಿ ಪ್ರೊಫೆಸರ್ ಮಾರ್ಸೆಲ್ಲೊ ಕಯೇಟಾನೋ (೫೫) ಮತ್ತು ಉತ್ಸಾಹಿ ಸಾಗರೋತ್ತರ ಪ್ರದೇಶಗಳ ಮಂತ್ರಿ ೩೯ ವರ್ಷದ ಡಾ| ಅಡ್ರಿಯಾನೋ ಜೋಸ್ ಆಲ್ಟ್ಸ್ ಮೊರೀರಾ ಈ ಮೂವರೊಳಗೆ ಕೊನೆಯವರ ಚೀಟಿಯೇಳುವ ಸಂಭವವೇ ಹೆಚ್ಚು.

ಫ್ರಾನ್ಸಿನ ಅಧ್ಯಕ್ಷ ಜನರಲ್ ಚಾರ್ಲ್ಸ್ ಡಿಗಾಲೆಯವರಿಗೆ ೭೧ ತುಂಬಿತು. ಆರೋಗ್ಯ ಅತ್ಯುತ್ತಮ. ಆದರೆ, ಇವರ ಸಂಭಾವ್ಯ ಉತ್ತರಾಧಿಕಾರಿಯೆನಿಸಲು ಯೋಗ್ಯ ವ್ಯಕ್ತಿಯೇ ಇಂದು ರಾಜಕಾರಣ ಪ್ರಪಂಚದಲ್ಲಿ ತೋರಿಬರುತ್ತಿಲ್ಲ. ಮಾಜಿ ಪ್ರಧಾನಿ ಮೈಕೇಲ್ ಡೆಬ್ರೂ, ಪ್ರಧಾನಿ ಜಾರ್ಜಸ್ ಪಾಂಪಿಡೊ ಮತ್ತು ಆಲ್ಜೀರಿಯೂ ವ್ಯವಹಾರದಲ್ಲಿ ಚತುರತೆ ತೋರಿದ ಮಂತ್ರಿ ಲೂಯಿಸ್ ಜೋಕ್ಸ್‌ರವರೂ ಅವರ ಸ್ಥಾನಗಳನ್ನು ಗದೆಯಬಹುದು. ಎಂದು ಹೇಳಲಾಗುತ್ತದೆ. ಆದರೆ, ಡಿಗಾಲೆಯವರು ತಮ್ಮ ಅಭೀಷನ್ನು ಅಮೆರಿಕೆಯ ಅಧ್ಯಕ್ಷರದರಂತೆ ಪರಿವರ್ತಿಸಲು ನಿಶ್ಚಯಿಸಿರುವರೆಂದು ದಟ್ಟವದಂತಿಯಿದೆ. ಮತ್ತು ಒಬ್ಬ ಉಪಾಧ್ಯಕ್ಷ ಸ್ಥಾನವನ್ನು ನಿರ್ಮಿಸಿ ತಮ್ಮ ಉತ್ತರಾಧಿಕಾರಿಯ ಆಯ್ಕೆಯ ಪ್ರಶ್ನೆಯನ್ನು ತುಸು ಹಗುರಗೊಳಿಸುವ ಯೋಚನೆಯಲ್ಲಿರುವರಂತೆ.

ಭಾರತದ ಪ್ರಧಾನಿ ಜವಾಹರಲಾಲ ನೆಹರು ೭೨ ವರ್ಷ ಪ್ರಾಯದವರು. ಇವರೀಗ ತಮ್ಮ ಮುದಿ ಹರೆಯವನ್ನು ಪ್ರದರ್ಶಿಸಲು ತೊಡಗಿದ್ದರೆ. ಮೂತ್ರ ಕೋಶದ ರೋಗಾ ನಂತರ ಅವರ ಶಕ್ತಿ ಕುಂದಿದೆ. ತನ್ನ ನಂತರದ ನಾಯಕರೆಂದು ನೆಹರು ಯಾರನ್ನೂ ಹೆಸರಿಸುವುದಿಲ್ಲ. ಅರ್ಥಮಂತ್ರಿ ಮುರಾರ್ಜಿ ದೇಸಾಯಿ, ಸಂರಕ್ಷಣಾ ಸಚಿವ ವಿ. ಕೆ. ಕೃಷ್ಣಮೆನನ್ (೬೫) ಮತ್ತು ಗೃಹಮಂತ್ರಿ ೫೮ ವರ್ಷದ ಲಾಲ್‌ಬಹದೂರ ಶಾಸ್ತ್ರಿ—ಇವರ ಹೆಸರುಳು ಕೇಳಿ ಬರುತ್ತಿವೆ.

ಯುಗೊಸ್ಲಾವಿಯೂದ ಅಧ್ಯಕ್ಷ ೭೦ ವರ್ಷದ ಮಾರ್ಶಲ್ ಜೋಸಿಪ್ ಬ್ರೊಸ್ಟಿಟೊರವರ ಆರೋಗ್ಯ ಬಹಳ ಉತ್ತಮವಿದೆ. ತಮ್ಮ ಸಂಭಾವ್ಯೋತ್ತರಕಾರಿಯ ಬಗ್ಗೆ ಇವರು ಚಕಾರವೆತ್ತುವುದಿಲ್ಲ. ಒಂದು ವೇಳೆ ಟಿಟೊ ಮೃತ್ಯುವಶರಾದರೆ ನಾಲ್ವರು ರಾಜಕೀಯ ನಾಯಕ ಮಂಡಳಿಯು, ತಮ್ಮ ಸದಸ್ಯರಲ್ಲೊಬ್ಬನು ಉಳಿದವರನ್ನು ಒಲಿಸಿಕೊಳ್ಳುವ ವರೆಗೆ ಅಳಬಹುದು ಈ ನಾಲ್ವರಲ್ಲಿ ಉಪಾಧ್ಯಕ್ಷರುಗಳಾದ ಎಡ್ವರ್ಡ್ ಕಾರ್ಡಿಲ್ಜೆ ಮತ್ತು ಅಲೆಕ್ಸಾಂಡರ್ ರಾಂಕೋವಿಕ್ ಹಾಗೂ ಅಲ್ಪ ಪರಿಚಿತರಾದ ಮಿಜಾಲ್ಕೊ ಟೊಡೊರೋವಿಕ್ ಮತ್ತು ರೊಡೊಲ್‌ಜುಬ್ ಕೊಲಕೋವಿಕ್ ಸೇರಿದ್ದಾರೆ.

ಸ್ಪೈನಿನ ಪ್ರಧಾನಿ ಜನರಲ್ ಸೀಮೊ ಫ್ರಾನ್ಸಿಸ್ಕೊ ಫ್ರಾಂಕೋರವರು ೬೯ ವ

(೧೨ನೇ ಪುಟ ನೋಡಿರಿ)

ಮತ್ತೊಂದು ಆಕರ್ಷಣೀಯ

ಉಳಿತಾಯ ಯೋಜನೆ

ರೆಕರಿಂಗ್

ಡಿಪಾಸಿಟ್ ಸ್ಕೀಮ್

ವಿಶೇಷ ಸೌಲಭ್ಯಗಳು:

- ಮಾಹೆಯಾನ ರೂ. 5/- ರಿಂದ ರೂ. 500/- ವರೆಗಿನ ಕಂತು ಕಟ್ಟುವ ರೆಕರಿಂಗ್ ಡಿಪಾಸಿಟ್ ಖಾತೆಯನ್ನು ನೀವು ತೆರೆಯಬಹುದು.
- ರೆಕರಿಂಗ್ ಡಿಪಾಸಿಟ್ ಸ್ಕೀಮಿನ ಅವಧಿಗಳು— 12, 24, 36, 46 ಮತ್ತು 60 ತಿಂಗಳುಗಳು.
- ಸಾವಕಾಶವಾಗಿ ಕಟ್ಟಿದ ಕಂತುಗಳಿಗೆ ದಂಡವೇನೂ ಕೊಡಬೇಕಾಗಿಲ್ಲ.
- ಚಕ್ರಬಡ್ಡಿ — ಸಾಲಿಯಾನಾ 4%

ಹೆಚ್ಚಿನ ವಿವರಗಳನ್ನು ನಿಮ್ಮ ಸಮೀಪದ ಶಾಖೆಯಲ್ಲಿ ಪಡೆಯಿರಿ.

ಕೆನರಾ ಬ್ಯಾಂಕ್ ಲಿಮಿಟೆಡ್

(ಸ್ಥಾಪನೆ: 1906)

ಸಮಗ್ರ ಸೇವೆ : : ಸಂಪೂರ್ಣ ಭದ್ರತೆ

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. E. P. 261/62.

(O. S. 463/60.)

ಬೀಮ ಭಟ್ಟ —ಅರ್ಜಿದಾರ.

ಸದಾಶಿವ ನ್ಯಾಕ ಸದಾ —ಎದ್ರಿರು.

4ನೇ ಎದ್ರಿ— ಗಿರಿಯಮ್ಮ— ಈಶ್ವರ ನ್ಯಾಕರ ವಿಧವೆ— ಕೇಪು ಗ್ರಾಮದ ಕಟ್ಟೆ

ಇವರಿಗೆ ಕೋರ್ಟು ಹ್ಯುಂ ಪ್ರಕಾರ ಈ ಮೂಲಕ ತಿಳಿಯಪಡಿಸುವುದೇನೆಂದರೆ—

ಮೇಲಿನ ಅಮಲ್ಜಾರಿಯಲ್ಲಿ ಸ್ತಿರಾಸ್ತಿ ವಿಕ್ರಯದ ಬಗ್ಗೆ ದಾಕಲಾದ ಯೇಲಂ ಇಸ್ತಿಹಾರಿನ ಶರ್ತಗಳನ್ನು ನಿರ್ಣಯಿಸುವ ಬಗ್ಗೆ ತಾ. 1-10-62ಕ್ಕೆ ನಿಮ್ಮ ನೋಟೀಸಿನ ಬಗ್ಗೆ ಇಟ್ಟಿರುತ್ತದೆ. ಆ ದಿವಸ ಈ ಕೋರ್ಟು ಮುಂದೆ ಹಾಜರಾಗಿ ಉದಾಹರಿಸತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮನ್ನು ಶಿಷ್ಟಾಮಾಡಿ ಯುಕ್ತಕಂಡಂತೆ ತೀರ್ಮಾನಿಸಲಾದೀತು

Sd /— M. Sadashiva Rao,

Vakil for Petitioner.

ಪುತ್ತೂರು, 15—9—62

NAVAYUGA
Kannada Weekly
UDIPI
Founder:
Late Sri A. B. Shetty
Former Minister for Public Health, Govt. of Madras & Govt. of Mysore.

ನವಯುಗ

ವರುಷ	ಉಡುಪಿ	ವಾರ
೪೨	೨೭-೯-೧೯೬೨	೪

ಸೌಹಾರ್ದತಾ ಪ್ರತಿಜ್ಞೆ

ಸುವಿಶಾಲವೂ ಸುಸಂಪನ್ನವೂ ಆದ ಭಾರತದಲ್ಲಿ ವಿಭಿನ್ನ ಸಂಸ್ಕೃತಿಯ ಜನರು ಇದ್ದಾರೆ. ಹಾಗಿದ್ದರೂ ಅನಾದಿ ಕಾಲದಿಂದಲೂ ಅವರು ವಿಶಿಷ್ಟವಾದ ಭಾರತೀಯ ಸಂಸ್ಕೃತಿಯೊಂದನ್ನು ನಿರ್ಮಿಸಿ ನಾನಾ ಗಂಡಾಂತರಗಳ ನಡುವೆಯೂ ಅದನ್ನು ಉಳಿಸಿಕೊಂಡು ಬಂದಿದ್ದಾರೆ; ಬೆಳೆಸಿಕೊಂಡು ಮುಂದುವರಿದಿದ್ದಾರೆ. ಬೇರೆ ಬೇರೆ ಭಾಷೆಗಳ ಬೇರೆ ಬೇರೆ ಜಾತಿ-ಬುಡಗಟ್ಟಿಗೆ ಸೇರಿದ ಭಾರತೀಯರು ಏಕ ಸಂಸ್ಕೃತಿಯ ದಾರದಲ್ಲಿ ಕೋದು ಕೊಂಡೇ ಮುಂದೆ ಬಂದಿದ್ದಾರೆ; ತಾವೆಲ್ಲರೂ ಒಂದೇ, ಒಂದೇ ಸಂಸ್ಕೃತಿಯ ಪರಿಪೋಷಕರು ಎಂಬ ಭಾವನೆಯನ್ನು ತಾಳಿಯೇ ಅವರು ಜೀವಿಸಿಕೊಂಡಿದ್ದಾರೆ. ಇಲ್ಲವಾದರೆ, ಸುವಿಸ್ತೃತ ಭಾರತವು ವಿಭಿನ್ನ ಭಾಗಗಳಾಗಿ ಎಂದೋ ಒಡೆದು ಹೋಗಬಹುದಿತ್ತು; ವಿಭಿನ್ನ ವಿದೇಶೀಯರ ದಾಳಿ-ಆಕ್ರಮಣಗಳಿಂದ ತಮ್ಮ ಭಾರತೀಯತೆಯನ್ನೂ ಭಾರತೀಯ ಸಂಸ್ಕೃತಿಯನ್ನೂ ಕಳೆದುಕೊಳ್ಳತಿದ್ದರು. ಆದರೆ, ನಮ್ಮ ಪೂರ್ವಜರು ಅಖಂಡ ಭಾರತದ ಸ್ವಪ್ನವನ್ನೇ ಕಂಡಿದ್ದರು. ಆದುದರಿಂದಲೇ, ಕುಲಾಚಲಗಳ ಗಣನೆಯಲ್ಲಿ, ಪವಿತ್ರ ನದಿಗಳ ಪಟ್ಟಿಯಲ್ಲಿ, ಅರಣ್ಯಗಳ ಉಲ್ಲೇಖದಲ್ಲಿ ಎಲ್ಲೆಂದರಲ್ಲಿ, ಆಸೇತು-ಹಿಮಾಚಲವಾದ ಭರತ ಖಂಡವೊಂದೇ ಎಂಬ ಭಾವನೆಯನ್ನು ಅವರು ಹುಟ್ಟಿಸಿದ್ದರು ಮಾತ್ರವಲ್ಲ, ಅದನ್ನು ಪೋಷಿಸುತ್ತ ಬಂದಿದ್ದರು. ವೇದಾಂತಿಗಳು, ನೈಯ್ಯಾಯಿಕರು, ರಾಜ ಮಹಾ ರಾಜರು, ಕವಿಗಳು, ರಾಜಕಾರಣಿಗಳು—ಎಲ್ಲರೂ ಈ ಭಾವನೆಯ ವಿಶ್ವರೂಪವನ್ನೇ ಪ್ರತಿಬಿಂಬಿಸಿದ್ದಾರೆ. ಆದರೆ, ರಾಜಕೀಯ ಕಾರಣಗಳಿಂದ ಒಂದಾಗಿದ್ದ ಅಖಂಡ ಭರತ ಖಂಡ ಕೆಲ ಕಾಲದಿಂದ ಕುರುಕ್ಷೇತ್ರವಾಗತೊಡಗಿದ್ದುದರಿಂದಲೇ ಇಂದು ಭಾವೈಕ್ಯದ ಮಾತು ಎಲ್ಲ ಹೆಂತಗಳಲ್ಲಿಯೂ ಪ್ರತಿಧ್ವನಿತವಾಗುತ್ತಿದೆ. ಜಾತಿ, ಮತ, ಆಚಾರಗಳ ಹೆಸರಿನಲ್ಲಿ ಒಂದೆಡೆ ಕೋಳಿಕಾಳಗ ನಡೆಯುತ್ತಿದ್ದರೆ, ಮತ್ತೊಂದೆಡೆ ಭಾಷೆ — ಪ್ರಾಂತಗಳ ನೆವನಗಳಿಂದ ಭಿನ್ನಾಭಿಪ್ರಾಯವು ಬೆಳೆಯುತ್ತಿದೆ. ದೇಶದ ಪ್ರಗತಿ ಸಾಧನೆಯಲ್ಲಿ ಉಪಯೋಗವಾಗಬೇಕಾದ ನಮ್ಮ ಜನತೆಯ ಶಕ್ತಿಯು ಸಂಕುಚಿತ ಮನೋವೃತ್ತಿಯ ಕೃತಿಗಳಲ್ಲಿ ಅಪವ್ಯಯವಾಗುತ್ತಿರುವುದರಿಂದ ಅದನ್ನು ತಪ್ಪಿಸುವ ಪ್ರಯತ್ನಕ್ಕಾಗಿ ಭಾವೈಕ್ಯ ಸಮಿತಿಯು ಕೆಲವೊಂದು ಯೋಜನೆಗಳನ್ನು ರೂಪಿಸುತ್ತಿದೆ.

ಜಗತ್ತಿಗೆ ಶಾಂತಿ ಮತ್ತು ಅಹಿಂಸೆಯ ಬೆಲೆಯೇನೆಂಬುದನ್ನೂ ಅವುಗಳ ಶಕ್ತಿಯೆಷ್ಟೆಂಬುದನ್ನೂ ತೋರಿಸಿದ ಬಾಪೂಜಿ ಮಹಾತ್ಮಾ ಗಾಂಧಿಯವರ ಜನ್ಮದಿನ ಅಕ್ಟೋಬರ ಎರಡನೆಯ ತಾರೀಕನ್ನು ಸೌಹಾರ್ದತಾಲತೆಯನ್ನು ನಾಟುವಂತಹದಿನವನ್ನಾಗಿ ಆಚರಿಸಲು ಈ ಭಾವೈಕ್ಯ ಸಮಿತಿಯು ನಿರ್ಧರಿಸಿದೆ. ಭಾರತದ ಪ್ರತ್ಯೇಕ ಪ್ರಜೆಯೂ ತನ್ನ ನೆರೆ ಹೊರೆಯವರೊಡನೆ ಉದ್ಭವಿಸಬಹುದಾದ ಸಕಲ ವಿವಾದಗಳನ್ನು ಶಾಂತಿಯುತ ವಿಧಾನದಿಂದಲೇ ಪರಿಹರಿಸಿಕೊಳ್ಳುವಂತೆ ಸಂಕಲ್ಪವನ್ನು ಮಾಡಬೇಕೆಂದೂ ಅದು ಯೋಜಿಸಿದೆ. ಈ ಸಂಬಂಧದಲ್ಲಿ ಕೇಂದ್ರದ ಗೃಹಮಂತ್ರಿ ಲಾಲಬಹದೂರ ಶಾಸ್ತ್ರಿಯವರು ರಾಜ್ಯದ ಮುಖ್ಯ ಮಂತ್ರಿಗಳಿಗೆ ಪರಿಪತ್ರವೊಂದನ್ನು ಕಳಿಸಿ, ರಾಜ್ಯಪಾಲರೂ ಮಂತ್ರಿಗಳೂ ಇತರ ಗಣನೀಯ ವ್ಯಕ್ತಿಗಳೂ ಸ್ವಯಂ ಸಾರ್ವಜನಿಕ ಸಮಾರಂಭಗಳಲ್ಲಿ ಭಾಗ ವಹಿಸಿ ಪ್ರತಿಜ್ಞಾ ಸ್ವೀಕಾರದಲ್ಲಿ ಹೆಚ್ಚಿನ ಕಾಳಜಿ ವಹಿಸಬೇಕೆಂದು ತಿಳಿಸಿದ್ದಾರೆ. ಈ ಸಲಹೆಯನ್ನು ಸಂಬಂಧಿಸಿದವರು ಸ್ವೀಕರಿಸದೆ ಇರುವುದು ಅಸಂಭವ. ಆದುದರಿಂದ ಅಕ್ಟೋಬರ ಎರಡರಂದು ದೇಶದಾದ್ಯಂತವೂ ಇದೇ ಮಾದರಿಯ ಸಭೆ-ಸಮಾರಂಭಗಳು ನಡೆದು ಸಾರ್ವಜನಿಕರಿಂದ ಪ್ರತಿಜ್ಞಾ ಸ್ವೀಕಾರ ಮಾಡಿಸಲಾಗುವುದೆಂದು ನಂಬುವುದಕ್ಕೆ ಯಾವ ಸಂದೇಹವೂ ಇರುವುದಿಲ್ಲ. ದೇಶದಲ್ಲಿ ಹೆಚ್ಚುತ್ತಿರುವ ವಿಭಿನ್ನತೆಯ, ಪ್ರತ್ಯೇಕತೆಯ ಭಾವನೆಗಳು ದೇಶದ ಉನ್ನತಿಗೆ ಮಾತ್ರವಲ್ಲ ಭದ್ರತೆಗೂ ರಕ್ಷಣೆಗೂ ಅಪಾಯಕಾರಿಯೆಂಬುದರಿಂದ, ಇಂತಹ ಕಾರ್ಯಕ್ರಮವು ಪ್ರಾರಂಭವಾಗುವುದು ನಿಜಕ್ಕೂ ಸ್ವಾಗತಾರ್ಹ. ಆದರೆ, ಇದು ಯಶಸ್ವಿಯಾಗುವುದೆ? ಎಂಬ ಪ್ರಶ್ನೆಗೆ ಸಮಾಧಾನಕರ ಉತ್ತರ ದೊರೆಯುವುದಿಲ್ಲ. ಪ್ರತಿಜ್ಞೆ ಮಾಡಿದ ನಾಗರಿಕರು ತಮ್ಮ ಪ್ರತಿಜ್ಞೆಯನ್ನು ಉಳಿಸಿಕೊಳ್ಳುವುದು ಮತ್ತಷ್ಟು ಮಹತ್ವದ್ದಾಗಿದೆ ಎಂದು ಹೇಳಿದರೆ, ಅತಿಶಯೋಕ್ತಿಯಲ್ಲ.

ನಮ್ಮ ಜನತಾ ಪ್ರತಿನಿಧಿಗಳು ವಿಧಾನ ಸಭೆಗಳಲ್ಲಿ, ಸಂಸತ್ತುಗಳಲ್ಲಿ ಸಂವಿಧಾನಕ್ಕೂ, ಸಭಾ ನಿಯಮಗಳಿಗೂ ವಿಧೇಯರಾಗಿ ನಡೆಯುವ ಪ್ರತಿಜ್ಞೆ ಸ್ವೀಕರಿಸುತ್ತಾರೆ. ಒಂದು ಪಕ್ಷದ ಸದಸ್ಯರಾಗುವವರು ಅದರ ನೀತಿಯನ್ನು ಮನಸಾ ಒಪ್ಪಿರುವಂತೆ ಪ್ರತಿಜ್ಞೆ ಮಾಡುತ್ತಾರೆ. ಆದರೆ, ಹಾವು ಗೆಯ್ದು ಪ್ರಣವನ್ನವರು ಮರೆತುಬಿಡುವ ಸಂದರ್ಭಗಳು ಎಷ್ಟು? ತಮ್ಮ ತಮ್ಮ ಕುಟುಂಬಗಳಲ್ಲೇ ಎದ್ದ ಭಿನ್ನಾಭಿನ್ರಾಯಗಳನ್ನು ತೀರ್ಮಾನಿಸಿಕೊಳ್ಳಲು ಸಾಧ್ಯವೆನಿಸದೆ ನ್ಯಾಯಾಲಯಗಳ ಮೆಟ್ಟಲು ಹತ್ತುವಷ್ಟು ಮುಂದುವರಿದ ಜನತೆ ಕೇವಲ ಪ್ರತಿಜ್ಞೆ ಮಾಡಿದ ಮಾತ್ರಕ್ಕೆ ಭಾವೈಕ್ಯ ಹುಟ್ಟುವುದಿಲ್ಲ. ಜಗಲಿ ಹಾರದವನು ಗಗನ ಹಾರಿಯಾನೆ? ಎಂದು ಒಂದು ನಾಳ್ನುಡಿಯಿದೆ. ತನ್ನಲ್ಲಿಯೇ ಉದ್ಭವಿಸಿದ ಭಿನ್ನಾಭಿಪ್ರಾಯದ ಭಾವನೆಗಳನ್ನು ಒಂದು ದಡ ಸೇರಿಸಲಾರದ ಮಾನವ ರಾಷ್ಟ್ರೀಯತೆಯನ್ನು ಬೆಳೆಸುವ, ಶಾಂತಿ ಸ್ಥಾಪನೆಗಾಗಿ ದುಡಿಯುವ ಸೂಳು ನುಡಿದರೆ, ಅದು ಯಶಸ್ವಿಯಾಗದು. ಆದುದರಿಂದ, ಇಂದು ಪ್ರತಿಜ್ಞೆ ಮಾಡಿಸುವ ಕಾರ್ಯಕ್ಕಿಂತಲೂ ಅಂತಹ ಭಾವನೆಯನ್ನು ಹುಟ್ಟಿಸುವ ಪ್ರಯತ್ನ ಅವಶ್ಯವೆನಿಸುತ್ತದೆ. ಮಾತಿನಲ್ಲಿ ಒಂದಾಗುವುದಕ್ಕಿಂತಲೂ ಮನಸ್ಸಿನಲ್ಲಿ ಒಂದಾಗುವುದು ಅಗತ್ಯವೆನಿಸುತ್ತದೆ. ಇದಕ್ಕಾಗಿ ಭಿನ್ನತೆಗೆ ಇರಬಹುದಾದ ಬೀಜಗಳನ್ನೇ ನಿರ್ನಾಮಗೊಳಿಸುವುದು ಅತ್ಯಗತ್ಯವಾಗಿದೆ. ದೆಹಲಿಯಲ್ಲೋ ಬೆಂಗಳೂರಲ್ಲೋ "ಭಾವೈಕ್ಯ ಭಾವೈಕ್ಯ" ವೆಂದು ಬಂಬಡಿ ಬಾರಿಸಿದರೆ ಉಪಯೋಗವಿಲ್ಲ. ಐಕ್ಯಗಾನದ ತಾನವಿತಾನಗಳು ಜನಜನದ ಹೃನ್ಮನಗಳನ್ನು ಹೊಗಬೇಕು, ಅವನ್ನು ತನ್ನತ್ತ ಆಕರ್ಷಿಸಬೇಕು. ಇದಕ್ಕೆ ಉಪಯುಕ್ತವಾದ ಕಾರ್ಯ ಪ್ರಣಾಲಿಯನ್ನು ಬಳಸಿಕೊಳ್ಳಬೇಕು. ಇಲ್ಲವಾದರೆ, ನೀರು ಸುರಿಸದ ಮೋಡಗಳು ಒಂದನ್ನೊಂದು ಬಡಿದು ಗುಡುಗೆಬ್ಬಿಸಿದಂತೆ ಸೌಹಾರ್ದತೆಯ ಪ್ರತಿಜ್ಞೆ, ಪ್ರತಿಜ್ಞೆಯಾಗಿಯೇ ಉಳಿದೀತು. ಇತ್ತ ಎಲ್ಲರೂ ಧ್ಯಾನಹರಿಳುವುದು ಅಪೇಕ್ಷಣೀಯವಿದೆ.

ನಗರ ಸಭಾ ಚುನಾವಣೆ

ಉಡುಪಿ ಮತ್ತು ಮಂಗಳೂರು ನಗರ ಸಭೆಗಳ ಕೌನ್ಸಿಲುಗಳಿಗೆ ಚುನಾವಣೆಗಳು ಮುಂದಿನ ೨೪ನೆಯ ದಿನಾಂಕದಂದು ನೆರವೇರಲಿದ್ದು, ಆ ಸಂಬಂಧದ ಕಾರ್ಯಕ್ರಮಗಳು ಒಂದೊಂದಾಗಿ ಅನುಷ್ಠಾನಕ್ಕೆ ಬರುತ್ತಿವೆ. ನಾಮಪತ್ರಗಳನ್ನು ಹಿಂದೆ ತೆಗೆದುಕೊಳ್ಳುವ ದಿನವೂ ದಾಟಿರುವುದರಿಂದ ಮುಂದಿನ ನಾಲ್ಕು ವಾರಗಳು ಹುರಿಯಾಳುಗಳಿಗೆ ಬಿರುಸಿನ ಪ್ರಚಾರ ನಡೆಸಲು ದೊರೆತಿವೆ. ಎರಡೂ ನಗರ ಸಭೆಗಳ ಎಲ್ಲ ಸ್ಥಾನಗಳಿಗೂ ಕಾಂಗ್ರೆಸ್ಸು ಪಕ್ಷವಾಗಿ ಸ್ಪರ್ಧಿಸುತ್ತಿದೆ. ಉಡುಪಿ ನಗರ ಸಭೆಯ ೨೦ ಸ್ಥಾನಗಳಲ್ಲಿ ಕಾಂಗ್ರೆಸ್ಸು ಈಗಾಗಲೇ ೫ನ್ನು ಅವಿರೋಧವಾಗಿ ಗಳಿಸಿಕೊಂಡುದು ನಿಜಕ್ಕೂ ಅಭಿಮಾನಾಸ್ಪದವೆನ್ನಬೇಕು. ಆದರೆ, ಉಳಿದೆಲ್ಲಾ ಕಡೆಗಳಲ್ಲಿ ತೀವ್ರವಾದ ಪ್ರತಿಸ್ಪರ್ಧೆಯನ್ನು ಕಾಂಗ್ರೆಸ್ಸು ಎದುರಿಸಬೇಕಾಗುವುದು. ಈ ಹಿಂದೆ ಪಕ್ಷವಾಗಿ ಸ್ಪರ್ಧಿಸಿದ್ದ ಕಮ್ಯೂನಿಸ್ಟರು ಇಂದು ಸ್ವತಂತ್ರ ಹುರಿಯಾಳುಗಳಿಗೇನೇ ಬೆಂಬಲವನ್ನು ತೋರಿಸುತಿದ್ದಾರೆ; ಜನಸಂಘವೊಂದು ಮಾತ್ರ ಪಕ್ಷವಾಗಿ ಕೆಲವೊಂದು ವಾರ್ಡುಗಳಿಗೆ ತನ್ನ ಉಮೇದ್ವಾರಿಗಳನ್ನು ನಿಲ್ಲಿಸಿದೆ. ಹೀಗೆ ಕಾಂಗ್ರೆಸ್ಸು ಎದುರಿಸಬೇಕಾಗಿರುವ ಹುರಿಯಾಳುಗಳಲ್ಲಿ ಸಂಪೂರ್ಣ ಸ್ವತಂತ್ರರು, ಪ್ರಚೋದಿತ ಸ್ವತಂತ್ರರು ಮತ್ತು ಜನಸಂಘದವರು ಸೇರಿದ್ದಾರೆ ಇನ್ನು ಚುನಾವಣೆ ನಡೆಯಬೇಕಾಗಿರುವುದು ಕೇವಲ ೧೫ ಸ್ಥಾನಗಳಿಗೆ ಮಾತ್ರವಿದ್ದು ಇಲ್ಲಿ ಕಾಂಗ್ರೆಸ್ಸು ಜಯಭೇರಿ ಬಾರಿಸುವ ಲಕ್ಷಣಗಳೇ ಅತ್ಯಧಿಕವೆಂದು ಹೇಳಬಹುದು. ಹಾಗಿದ್ದರೂ ಒಂದೆರಡೆಡೆಗಳಲ್ಲಿ ತೀವ್ರವಾದ ಸ್ಪರ್ಧೆ ಇದ್ದೇ ಇದೆ; ಇದು ಅನಿವಾರ್ಯ. ಸಾರ್ವಜನಿಕ ಹಾಗೂ ನಿಷ್ಪಕ್ಷಪಾತ ದೃಷ್ಟಿಯಿಂದ ಹೇಳುವುದಾದರೆ, ಉಡುಪಿ ನಗರ ಸಭೆಯ ಚುನಾವಣೆಗಳಲ್ಲಿ ಈ ಸಲ ಪ್ರತಿಷ್ಠಿತರ ಸಂಖ್ಯೆ ತೀರ ವಿರಳ. ಆದುದರಿಂದಲೇ ನಾಗರಿಕರು ತುಸು ವಿವಂಚನೆಯನ್ನು ವ್ಯಕ್ತಪಡಿಸಿದರೆ ಆಶ್ಚರ್ಯವಿಲ್ಲ. ಸಭಾಸದರಾಗಲು ಅರ್ಹತೆಯಿದ್ದವರು, ನಗರಾಭಿವೃದ್ಧಿಗಾಗಿ ದುಡಿಯ ಬಲ್ಲವರು ಮತ್ತು ಸಮರ್ಥ ಅಧ್ಯರು ಚುನಾವಣಾ ರಂಗದಿಂದ ಹಿಂದೆ ನಿಂತಿದ್ದಾರೆ. ಹಾಗಿರುವಾಗ, ಜನತೆಗೆ ವಿರಾಸೆಯಾಗದೆಂದು ಹೇಗೆ ಹೇಳಬಹುದು? ಸ್ಥಾನೀಯ ಸಂಸ್ಥೆಗಳ ಪಾತ್ರವು ದಿನದಿಂದ ದಿನಕ್ಕೆ ಹೆಚ್ಚುತ್ತಿರುವಾಗ, ಜವಾಬ್ದಾರಿಯನ್ನು ಆರಿತುಕೊಂಡು ಅದನ್ನು ಕಾರ್ಯಗತವೂಡುವುದು ಅವಶ್ಯವಿರುವಾಗ. ತುಸು ಹೆಚ್ಚಿನ ಸದಸದ್ವಿವೇಕಿಗಳೂ ಬುದ್ಧಿಜೀವಿಗಳೂ ಮೌನವಾಗಿರುವುದು ಖೇದಾಸ್ಪದವಾದರೂ ಅವರು ತಮ್ಮ ಸಂಪೂರ್ಣ ಸಹಾಯವನ್ನು ಚುನಾಯಿತ ಪ್ರತಿನಿಧಿಗಳಿಗೆ ನೀಡುವರೆಂದು ಭರವಸೆಯಿಟ್ಟು, ಕಾಂಗ್ರೆಸ್ಸಿನ ಕೋಟೆಯೆನಿಸಿದ ಉಡುಪಿಯಲ್ಲಿ ನಾಗರಿಕರು ತಮ್ಮ ಮತವನ್ನು ಕಾಂಗ್ರೆಸ್ ಹುರಿಯಾಳುಗಳಿಗೇನೇ ನೀಡಬೇಕೆಂದು ಸೂಚಿಸುತ್ತೇವೆ. ಹೆಚ್ಚು ಕಡಿವೆ, ಇದೇ ಮಾತನ್ನು ಮಂಗಳೂರು ಪುರಸಭೆಗೂ ಅನ್ವಯಿಸಬಹುದು. ಅಲ್ಲಿಯವರೂ ಕಾಂಗ್ರೆಸ್ ಪಕ್ಷವನ್ನೇ ತ್ರಿಕರಣ ಪೂರ್ವಕವಾಗಿ ಬೆಂಬಲಿಸುವರೆಂದು ನಂಬುತ್ತೇವೆ.

ವಾರ್ತಾ ವಿಶೇಷ

ಶಿವರಾಮ ಕಾರಂತ

ಕಲೆಯ ಸಕಲ ವೃತ್ತಗಳಲ್ಲಿಯೂ ವಿಚಾರಿಸಿ, 'ಕನ್ನಡಕ್ಕೊಬ್ಬನೇ ಕಾರಂತ" ಎನ್ನಿಸಿಕೊಂಡ ಕೋಟ ಶಿವರಾಮ ಕಾರಂತರನ್ನು ಅವರ ಕೃತಿಗಳಿಂದ, ದರ್ಶನದಿಂದ ಅರಿಯದ ಕನ್ನಡಿಗರು ಅಪರೂಪ. ಇತ್ತೀಚೆಗೆ ದಕ್ಷಿಣ ಕನ್ನಡದ ಜಾನಪದ 'ಯಕ್ಷಗಾನ'ದ ಶ್ರೇಯೋಭಿವೃದ್ಧಿಗಾಗಿ ದುಡಿಯುತ್ತಿರುವ ಕಾರಂತರು ಈಗಾಗಲೇ ಜನಾನುರಾಗವನ್ನು ಪಡೆದಿದ್ದಾರೆ. ಅವರ ಷಷ್ಠ್ಯಬ್ಧಿ ಪೂರ್ತಿಯ ಸಮಾರಂಭಗಳು ಅಲ್ಲಿ ಇಲ್ಲಿ ಆಚರಿಸಲ್ಪಡುತ್ತಿವೆ. ಕಾರಂತರ ಹುಟ್ಟೂರೆಂಬಂತಿರುವ ಉಡುಪಿಯಲ್ಲೂ ಅವರ ಸನ್ಮಾನಾದಿ ಕಾರ್ಯಕ್ರಮಗಳು ನೆರವೇರಲಿರುವುವು. ತಮಗೆ ಕೇವಲ ಸಾಹಿತ್ಯ ಕೃತಿಗಳನ್ನಲ್ಲದೆ ವೈಜ್ಞಾನಿಕ ಮತ್ತು ಸಂಶೋಧಕ ಗ್ರಂಥಗಳನ್ನೂ ಒದಗಿಸಿಕೊಟ್ಟ ಕಾರಂತರನ್ನು ಕನ್ನಡಿಗರೆಲ್ಲರೂ ಅಭಿನಂದಿಸಬೇಕು; ಅವರ ಕರ್ತೃತ್ವ ಶಕ್ತಿಯ ಸಂಪೂರ್ಣ ಪ್ರಯೋಜನ ತಮಗಾಗುವಂತೆ ಪ್ರೋತ್ಸಾಹಿಸಬೇಕು.

ಜವಾಹರಲಾಲ್

ಪೌರ್ವಾತ್ಯರದು ಹಳೆಯ ನಡೆಯಾದರೆ, ಪಾಶ್ಚಾತ್ಯರದು ರಾಕೇಟ್ ನಡೆ ಈ ಎರಡನ್ನೂ ಜೋಡಿಸುವ ಸೇತವೆಯಂತಿದ್ದಾರೆ, ನಮ್ಮ ಪ್ರಧಾನಿ ಜವಾಹರಲಾಲರು. ಕಾಮನ್‌ವೆಲ್ತ್ ಪ್ರಧಾನಿಗಳ ಪರಿಷತ್ತನ್ನು ಮುಗಿಸಿ ಮರಳುತ್ತಿರುವ ನೆಹರು ಮೊತ್ತ ಮೊದಲಿನ ಬಾರಿಗೆ ನೈಜೀರಿಯವನ್ನು ಸಂದರ್ಶಿಸಿದರು. ಸ್ವತಂತ್ರ ಜಗತ್ತಿನ ಪ್ರಭಮ ಪ್ರಜೆಯೆನಿಸಲು ಅರ್ಹರಾದ ಅವರನ್ನು ನೈಜೀರಿಯನ್ ಜನತೆ ಹೃದಯ ಪೂರ್ವಕವಾಗಿ ಸ್ವಾಗತಿಸಿತು. ಕತ್ತಲೆಯ ಆಫ್ರಿಕೆಯಲ್ಲಿ ಸ್ವಾತಂತ್ರ್ಯ ಭಾಸ್ಕರನ ತೇಜ ಪ್ರಕಾಶ ಹರಡುತ್ತಿರುವುದನ್ನು ಕಂಡ ಪ್ರಧಾನಿ ನೆಹರು ಪ್ರಾಚೀನತೆ ಮತ್ತು ಅರ್ವಾಚೀನತೆಗಳ ಸಂಗಮದಿಂದ

(೭ನೇ ಪುಟ ನೋಡಿರಿ)

ಅಲ್ಲಲ್ಲಿಯ ಸುದ್ದಿಸಾರ

ಕಾರಂತ ಸನ್ಮಾನ ಸಮಿತಿ— ಕನ್ನಡದ ಪ್ರಖ್ಯಾತ ಸಾಹಿತಿ ಶ್ರೀ ಕೋಟ ಶಿವರಾಮ ಕಾರಂತರ ಪಷ್ಟ್ಯಬ್ದಿಪೂರ್ತಿ ಸಮಾರಂಭವನ್ನು ಉಡುಪಿಯಲ್ಲಿ ಆಕ್ಟೋಬರ ತಾ. ೦ನೇ ಸಂಜೆ ೬½ ಗಂಟೆಗೆ ಜರಗಿಸುವುದೆಂದು ಸನ್ಮಾನ ಸಮಿತಿಯವರು ನಿರ್ಧರಿಸಿದ್ದಾರೆ. ಈ ಸಮಾರಂಭದ ಸಂದರ್ಭದಲ್ಲಿ ಅವರಿಗೆ ಒಂದು ಥಿಯನ್ನು ಅರ್ಪಿಸುವ ವಿಚಾರವೂ ನಡೆಯುತ್ತಿದೆ ಈ ನಿಧಿಗೆ ಯಥಾಶಕ್ತಿ ಸಹಾಯ ಧನ ಕೊಡಲು ಅಪೇಕ್ಷಿಸುವ ಅಭಿಮಾನಿಗಳು ಸಮಿತಿಯ ಕೋಶಾಧಿಕಾರಿ ಶ್ರೀ ಟಿ. ವಿನೋಕ ಯು ಪೈ, ೧೩ಉಪೇಂದ್ರ ಬಾಗ್‌ಸುಡುಲು ಇವರಿಗೆ ಆಕ್ಟೋಬರ್ 10ರೊಳಗೆ ದುಟ್ಟುವಂತೆ ಕಳುಹಿಸಬೇಕೆಂದು ಸಮಿತಿಯವರು ವಿನಂತಿಸುತ್ತಾರೆ.

ಡಾ॰ ಮೋದಿಯವರ ದ. ಕ. ಜಿಲ್ಲಾ ಸಂಚಾರ ಕಾರ್ಯಕ್ರಮ—ಸುಪ್ರಸಿದ್ಧ ನೇತ್ರ ಚಿಕಿತ್ಸಕ ಪದ್ಮಶ್ರೀ ಡಾ. ಎಂ. ಎ. ಮೋದಿಯವರು ನಮ್ಮ ಜಿಲ್ಲೆಯಲ್ಲಿ ಇದೇ ತಾ. 27ರಿಂದ 30ರ ವರೆಗೆ ಸಂಚರಿಸಿ ಈ ಕೆಳಗಿನ ಕೇಂದ್ರಗಳಲ್ಲಿ ನೇತ್ರ ಪರೀಕ್ಷೆ ನಡೆಸಿಕೊಡುವರು. ಆನಂತರ ಮಂಗಳೂರಿನಲ್ಲಿ ಆಕ್ಟೋಬರ್ 1ರಿಂದ ಉಚಿತವಾದ ಕೆನರಾ ಹೈಸ್ಕೂಲ್ ಕಟ್ಟಡದಲ್ಲಿ ಉಚಿತ ನೇತ್ರ ಚಿಕಿತ್ಸಾ ಶಿಬಿರವನ್ನು ನಡೆಸಿಕೊಡುವರು ಈ ಶಿಬಿರದ ಕಾಲಾವಧಿಯಲ್ಲಿಯೂ ಪ್ರತಿ ಸೋಮವಾರ, ಮಂಗಳವಾರ, ಆದಿತ್ಯವಾರಗಳಂದು ಅವರು ಲಭ್ಯರಿರುವರು. ಆಸಕ್ತರು ಈ ಸೌಲಭ್ಯವನ್ನು ಉಪಯೋಗಿಸಿಕೊಳ್ಳಬಹುದು. ಈ ಕೆಳಗಿನ ಕೇಂದ್ರಗಳಲ್ಲಿ ನೇತ್ರ ಪರೀಕ್ಷೆ ನಡೆಸಿಕೊಡುವರು. ಆನಂತರ ಮಂಗಳೂರಿನ ಆಕ್ಟೋಬರ್ 1ರಿಂದ ಉಚಿತವಾದ ಕೆನರಾ ಹೈಸ್ಕೂಲ್ ಕಟ್ಟಡದಲ್ಲಿ ಉಚಿತ ನೇತ್ರ ಚಿಕಿತ್ಸಾ ಶಿಬಿರವನ್ನು ನಡೆಸಿಕೊಡುವರು ಈ ಶಿಬಿರದ ಕಾಲಾವಧಿಯಲ್ಲಿಯೂ ಪ್ರತಿ ಸೋಮ, ಮಂಗಳ, ಆದಿತ್ಯವಾರಗಳಂದು ಅವರು ಲಭ್ಯರಿರುವರು. ಆಸಕ್ತರು ಈ ಸೌಲಭ್ಯವನ್ನು ಉಪಯೋಗಿಸಿಕೊಳ್ಳಬಹುದು. ಈ ಕೆಳಗಿನ ಕೇಂದ್ರಗಳಲ್ಲಿ ನೇತ್ರ ಪರೀಕ್ಷೆ ನಡೆಸಿಕೊಡುವರು. ಆನಂತರ ಮಂಗಳೂರಿನಲ್ಲಿ ಆಕ್ಟೋಬರ್ 1ರಿಂದ ಉಚಿತವಾದ ಕೆನರಾ ಹೈಸ್ಕೂಲ್ ಕಟ್ಟಡದಲ್ಲಿ ಉಚಿತ ನೇತ್ರ ಚಿಕಿತ್ಸಾ ಶಿಬಿರವನ್ನು ನಡೆಸಿಕೊಡುವರು. ಈ ಶಿಬಿರದ ಕಾಲಾವಧಿಯಲ್ಲಿಯೂ ಪ್ರತಿ ಸೋಮ, ಮಂಗಳ, ಆದಿತ್ಯವಾರಗಳಂದು ಅವರು ಲಭ್ಯರಿರುವರು. ಆಸಕ್ತರು ಈ ಸೌಲಭ್ಯವನ್ನು ಉಪಯೋಗಿಸಿಕೊಳ್ಳಬಹುದು.

ತಾ. 27—9—62ನೇ ಬೆಳಿಗ್ಗೆ 9ಗಂಟೆಗೆ ಕುಂದಾಪ್ರ ಎಲ್. ಎಫ್. ಹಾಸ್ಪಿಟಲ್, 10 ಗಂಟೆಗೆ ಪಡುಬಿದ್ರೆಯ ಟ್ರಾವಲರ್ಸ್ ಬಂಗಲೆ, 12 ಗಂಟೆಗೆ ಉಡುಪಿಯ ಟ್ರಾವಲರ್ಸ್ ಬಂಗಲೊ, ಸಂಜೆ 5 ಗಂಟೆಗೆ ಕುದ್ರು ಸಮಾಜ ಮಂದಿರ, ತಾ 28—9—62ನೇ ಬೆಳಿಗ್ಗೆ 9 ಗಂಟೆಗೆ ಕುಂದಾಪುರ, 12 ಗಂಟೆಗೆ ಕಾರ್ಕಳ, ಆಸರಂಜೆ 3 ಗಂಟೆಗೆ ಮೂಡಬಿದ್ರಿ, 5 ಗಂಟೆಗೆ ಬೆಳ್ತಂಗಡಿ, ತಾ 29—9—62ನೇ ಬೆಳಿಗ್ಗೆ 9 ಗಂಟೆಗೆ ಬಂಟ್ವಾಳ, 12 ಗಂಟೆಗೆ ಪುತ್ತೂರು, ಆಸರಂಜೆ 3 ಗಂಟೆಗೆ ಸುಳ್ಯ, 5 ಗಂಟೆಗೆ ಪಿಟ್ಲು, ಟ್ರಾವಲರ್ಸ್ ಬಂಗಲೆಗಳಲ್ಲಿ, ತಾ 30ನೇ ಬೆಳಿಗ್ಗೆ 9 ಗಂಟೆಯಿಂದ 3 ಗಂಟೆಯ ತನಕ ಮಂಗಳೂರು ಗಣಪತಿ ಪೈ ಸ್ಕೂಲಿನಲ್ಲಿ ನೇತ್ರ ರೋಗಿಗಳನ್ನು ಪರೀಕ್ಷಿಸುವರು. ಒಪರೇಶನ್ನಿನ ಆವಶ್ಯಕತೆಯುಳ್ಳವರನ್ನು ಶಿಬಿರಕ್ಕೆ ಬರಲು ಕೇಳಿಕೊಳ್ಳುವರು ಈ ಸೇವಾಕಾರ್ಯಕ್ಕೆ ಸರ್ವರೂ ಸಹಕಾರ ನೀಡಬೇಕೆಂದು ನೇತ್ರ ಚಿಕಿತ್ಸಾ ಶಿಬಿರ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಕೆ. ಎಸ್ ಎನ್. ಆಡಿಗ ಮತ್ತು ಶ್ರೀ ಎಮ್. ಶ್ರೀನಿವಾಸ ನಾಯಕ್ ಇವರು ಕೇಳಿಕೊಳ್ಳುತ್ತಾರೆ.

ಶ್ರೀ ಗೋಕರ್ಣನಾಥೆ ಕ್ಷೇತ್ರ ಕುದ್ರೋಳಿ— ಇಲ್ಲಿ ನವರಾತ್ರಿ ಜರಗುವ ಮಹೋತ್ಸವದ ಉತ್ಸವವು ಇದೇ ತಾ. 29—9—62ರಿಂದ 9—10—62ರ ತನಕ ಆಚರಿಸಲ್ಪಡುವುದು. ಪ್ರತಿ ದಿವಸಗಳಲ್ಲಿ ರೂಪ್ಯಾ 5/- ಮತ್ತು ರೂಪ್ಯಾ 30/-ರ ಪುಷ್ಪಾಲಂಕಾರ ಸೂಜಿಗಳನ್ನು ಮಾಡಲಾಗುವುದು ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ನೌಕರಸ್ಥ ಡಾಕ್ಟರರ ಜಿಲ್ಲಾ ಸಮ್ಮೇಳನ— ಬೆಳಗಾಂ ಜಿಲ್ಲಾ ಎ. ಎಂ. ಎ. ವೈದ್ಯರ ಸಮ್ಮೇಳನವು ಇದೇ ತಾ. 30ನೇ ಆದಿತ್ಯವಾರ ಮಧ್ಯಾಹ್ನ 3 ಗಂಟೆಗೆ ಪಾಸ ಭಾಗದ ಕರ್ನಾಟಕ ಆಯುರ್ವೇದ ವಿದ್ಯಾಪೀಠದ ಸಭಾ ಸದನದಲ್ಲಿ ಪ್ರಿನ್ಸಿಪಾಲ್ ವೈದ್ಯ ಆ. ಪೀ. ಗೆಡಗೆ ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದೆಂದೂ ಸಂಬಂಧಪಟ್ಟವರೆಲ್ಲಾ ಆಗಮಿಸಿ ಸಹಕರಿಸಬೇಕೆಂದೂ ಕೌನ್ಸಿಲರು ಡಾ॰ ಎಂ. ಎಸ್. ಹೆಗ್ಡೆಯವರು ಅಪೇಕ್ಷಿಸುತ್ತಾರೆ.

ಉಡುಪಿ-ಶಿವಸಮುದ ವಾರ್ಷಿಕೋತ್ಸವ— ತಾ. 16—9—62ರಲ್ಲಿ ಶಿವ ಸಮುದ (ರಿಜಿಸ್ಟರ್ಡ್) ಸಂಘದ— ವಾರ್ಷಿಕೋತ್ಸವದ ಶರವಾಗಿ ಬನ್ನಂಜೆ ಶಾಲೆಯಲ್ಲಿ ಭಜನೆ ಮುಗಿದು, ಶ್ರೀ ಯು. ಗೋಪಾಲ ಕೃಷ್ಣನವರ ಅಧ್ಯಕ್ಷತೆಯಲ್ಲಿ ಸಭೆ ಜರಗಿ, ಸ್ವಾಗತವಾದ ಶ್ರೀ ಯು. ರಾಮಚಂದ್ರ ಮಾಸ್ತರು, ಶ್ರೀ ಪಾರ್ ರಾಮ್, ಶ್ರೀ ಯು. ನಾರಾಯಣನವರು ಶ್ರೀ ತನಿಯ ಮಾಸ್ತರು ಸಂಘದ ಗತಕಾಲದ ಕಾರ್ಯಕಲಾಪದ ಕುರಿತು ಸಿಂಹಾವಲೋಕನ ಮಾಡಿದರು. 867 ಗ್ರಾಮದ ಸ್ವಜಾತಿಯನ್ನು ಕಟ್ಟುನಿಟ್ಟಿನಲ್ಲಿ ಮೆರೆಸಿದ ಮೂಲ ಪುರುಷ ದಿ॰ ಸದೇಶಿ ಗ್ರಂಥಕಾರರು— ಬನ್ನಂಜೆಯಲ್ಲಿ 1909ರಲ್ಲಿ ಪ್ರಥಮ ಶಾಲೆಯೊಗಲು ಕಾರಣಕರ್ತರಾದ ದಿ॰ ಪಿ. ರಾಮಚಂದ್ರ ರಾಯರಿ ಗುಣಗಾನ ಹಾಗೂ ಜಗಜ್ಯೋತಿ ಶ್ರೀ ಬಸವೇಶ್ವರ ಸ್ವಾಮಿಯವರ ವಚನಕ್ಕನುಸಾರ ನಡೆದು ಮೆಂಬರರು ಆದರ್ಶಪ್ರಾಯರಾದರೆ ಮಾತ್ರ ಮೋಕ್ಷ, ಸುಲಿಗೆಗೆ ಎಡೆಯಾಗದೆ ತಮ್ಮನ್ನು ತಾವು ಉದ್ಧರಿಸಿಕೊಂಡಂತಾಗಿ ಸಂಘದಿಂದ ಜಿಲ್ಲೆಗೆ ಫಲಪ್ರದವಾಗುವುದೆಂದು ಕಾರಣ ಸಹಿತ ಅಧ್ಯಕ್ಷರು ಹಿತವಚನ ನುಡಿದ ನಂತರ— ಕಾರ್ಯಕಾರಿ ಮಂಡಲಿಯು ಅಯ್ಯೆ ಮುಂದಿನ ಸಭೆಗೆಂದು ನಿರ್ಣಯಿಸಿ ಧನ್ಯವಾದ ಉಪಚಾರದೊಡನೆ ಸಭಾಕಾರ್ಯವಾಯಿತು

ದ. ಕ. ಜಿಲ್ಲಾ ಖಾಸಗಿ ಪ್ರಾಥಮಿಕ ಶಾಲಾ ಮೆನೇಜರರ ಸಂಘದ ಸಭೆಯು— ತಾ. 20—9—62ರಂದು ಸಂಘದ ಅಧ್ಯಕ್ಷರ ಗೈರು ಹಾಜರಿಯಿಂದ ಶ್ರೀ ಎ ಜೆ. ಅಲ್ಮೆಯವರ ಅಧ್ಯಕ್ಷತೆಯಲ್ಲಿ ಜರಗಿ ಈ ಕೆಳಗಿನ ನಿರ್ಣಯಗಳನ್ನು ಮಾಡಲಾಯಿತು.

1. ಈ ಒಂದೆ ಜಿಲ್ಲಾ ಸಂಘದ ಪತಿಯಿಂದ ಹೋದ ನಿಯೋಗವು ಬೆಂಗಳೂರಿನಲ್ಲಿ ತಾ. 10—4—62ರಲ್ಲು ವಿದ್ಯಾ ಮಂತ್ರಿಗಳನ್ನು ಭೇಟಿಯಾಗಿ ನಿವೇದಿಸಿಕೊಂಡ ಮನವಿಗೆ ಮಂತ್ರಿಯವರಿಂದ ನಿಯೋಗದ ಕೇಳಿಕೆಗಳನ್ನು ಸಾನುಕೂಲ ಪರಿಶೀಲಿಸುವ ಆಶ್ವಾಸನೆ ದೊರೆತ್ತಿದ್ದರೂ ಈ ವರೆಗೆ ಆ ಕುರಿತು ಯಾವ ತರದ ಯತ್ನಾ ದೊರೆಯದ್ದರಿಂದ ಆ ಮನವಿಯ ವಿಷಯದಲ್ಲಿಯೂ ಈ ಕೆಳಗೆ ಕಾಣಿಸಿದ ಇತರ ಕೇಳಿಕೆಗಳ ವಿಷಯದಲ್ಲಿಯೂ, ಮುನ್ನ ವಿದ್ಯಾ ಮಂತ್ರಿಗಳ ಬಳಿಗೆ ಸಂಘದ ಪತಿನಿಧಿಯ ಡೆಪ್ಯುಟೇಷನ್ ಹೋಗಬೇಕಾಗಿ ನಿರ್ಣಯಿಸಲ್ಪಟ್ಟಿತು. 2 1961ನೇ ಇಸವಿಯ ಶಾಲಾ ಪುನರ್ ಮೆನೇಜುಮೆಂಟುಗಳಿಗೆ ಸಂಬಂಧಿಸಿದ ಮೆನೇಜುಮೆಂಟುಗಳಿಗೆ ಸಂಬಂಧಿಸಿದ ಬಗ್ಗೆ

ಶುದ್ಧ ಹರಟೆ

ಮಿತವ್ಯಯ ಭಾವೈಕ್ಯ ಕಾಳಗಂ

ಮಹತ್ವಾ ಕಾಂಕ್ಷೆಯಿಂದ ಕೂಡಿದ ನಮ್ಮ ಪಂಚವಾರ್ಷಿಕ ಯೋಜನೆಯನ್ನು ಕಾರ್ಯಗತಗೊಳಿಸಿಯೇ ತೀರುವುದರಿಂದ ನಮ್ಮ ಕಲ್ಯಾಣವಿದೆಯೆಂಬು ಡಿಲ್ಲಿಯಿಂದ ಹಳ್ಳಿಯ ವರೆಗೂ ಪ್ರತಿಧ್ವನಿ ಕೇಳುತ್ತಿದೆ. ನಮ್ಮ ನಾಯಕರುಗಳ ಮಂಡೆಯು ಶಿವನ ಕೆಂಜೆಡೆಯು, ತಾಂಡವ ನೃತ್ಯದ ವೇಳೆ ತಿರುಗಿದ್ದುದಕ್ಕಿಂತ, ಹೆಚ್ಚೇನು, ರಶ್ಯನ್ ಉಪಗ್ರಹ ಭೂವರಿಭ್ರಮಣೆ ಮಾಡಿದ ವೇಗಕ್ಕಿಂತಲೂ ತೀವ್ರವಾಗಿ ಎಲ್ಲೆಲ್ಲೋ ಹರಿದಾಡುತ್ತಿದೆ. ಯೋಜಕರು ಯೋಜನೆಯ ಯಶಸ್ಸಿಗೆ ಇಟ್ಟುಕೊಂಡ ಸಾಧನೆಗಳು ಎರಡು. ಮೊದಲನೆಯದಾಗಿ ದೇಶದ ಸಂಪತ್ಸಾಧನಗಳನ್ನು ಹೆಚ್ಚಿಸಿಕೊಳ್ಳುವುದು ಮತ್ತು ಎರಡನೆಯದಾಗಿ ಆಡಳಿತದಲ್ಲಿ ಮಿತವ್ಯಯವನ್ನು ಸಾಧಿಸುವುದು. ಇವುಗಳಿಗಿಂತ ಭಿನ್ನವಾದ ಮೂರನೆಯ ದಾರಿಯೊಂದು ಯೋಜನೆಯ ಪರಿಪೂರ್ಣತೆಗೆ ಬಹಳಷ್ಟು ಸಹಕಾರಿಯಾಗಿದೆ. ಅದೆಂದರೆ, ಕುಬೇರನ ಭಂಡಾರದ ಸುಲಿಗೆ. ಅಮೆರಿಕೆ ಮತ್ತು ರಶ್ಯಗಳ ಸಂಪತ್ತು ಎಂದರೆ, ಅನಭಿವೃದ್ಧ ದೇಶಗಳಿಗೆ ಕುಬೇರನ ಭಂಡಾರವಿದ್ದಂತಲ್ಲದೆ ಮತ್ತೇನು? ಆಡಳಿತೆಯ ವೆಚ್ಚವನ್ನು ಕಡಿಮೆ ಮಾಡುವಂತೆ ಎಲ್ಲ ಇಲಾಖೆಗಳಿಗೂ ಪರಿಪತ್ರಗಳನ್ನು ಕಳಿಸಲಾಗಿದೆಯಾದರೂ ಅದಕ್ಕಾಗಿಯೇ ಗುಮಾಸ್ತರ ನೇಮಕವಾಗಬೇಕಾಗಿ ಬಂದು ಅತಿ ವ್ಯಯದಲ್ಲಿಯೇ ಶ್ರೀಗಣೇಶವಾಯಿತು. ತತ್ಪರಿಣಾಮವಾಗಿ ಬೇಡಬೇಡವೆಂದು ಹೇಳಿದರೂ ಭಾವೈಕ್ಯದ ಪ್ರಶ್ನೆಯುದ್ಭವಿಸಿ ಮಂತ್ರಿಮಂಡಳ ವಿಸ್ತಾರವಾಗುವುದು ಅನಿವಾರ್ಯವೇ ಆಯಿತು. ಇದಕ್ಕಾಗಿಯೇ ಕೆಲವೆಡೆ ಚುನಾಯಿತ ಪ್ರತಿನಿಧಿಗಳು ರಾಜಿನಾಮೆಯಿತ್ತುದರಿಂದ ಮರು ಚುನಾವಣೆಗಳನ್ನು ನಡೆಸಬೇಕಾಯ್ತು. ಇದೆಲ್ಲಾ ಹೆಚ್ಚಿನ ವ್ಯಯವಲ್ಲವೆ? ಮತ್ತೆ ಮಿತ ವ್ಯಯವನ್ನು ಸಾಧಿಸುವುದು ಹೇಗೆ?

o o o

ಆಯವು ವ್ಯಯಕ್ಕಿಂತ ಕಡಿಮೆಯಿರುವಾಗ, ವೆಚ್ಚವನ್ನು ಕಡಿಮೆ ಮಾಡಬೇಕೆಂಬುದನ್ನು ಅನಭಿಜ್ಞ ಅರ್ಥಶಾಸ್ತ್ರಿಯೂ ಹೇಳುತ್ತಾನೆ. ಆದರೆ, ವ್ಯಯವನ್ನು ಕಡಿಮೆ ಮಾಡುವುದು ಮತ್ತು ಆದಾಯವನ್ನು ಏರಿಸುವುದು ಹೇಗೆ ಸಾಧ್ಯವೆಂದು ಅಭಿಜ್ಞ ಅರ್ಥಶಾಸ್ತ್ರಿಗಳಲ್ಲಿಯೇ ಭಾವೈಕ್ಯವಿಲ್ಲದಿರಬೇಕು. ನಮ್ಮೂರ ರಾಮಪ್ಪ ಸಾಹುಕಾರರು ಒಮ್ಮೆ ದೊಡ್ಡ ವ್ಯವಹಾರದಲ್ಲಿ ಮುಳುಗಿಹೋಗುವಂತಾದರು. ಅವರ ಕೈಕೆಳಗೆ ೪೦ ನೌಕರ ಚಾಕರರಿದ್ದರು ಪ್ರತಿ ತಿಂಗಳು ಅವರಿಗೆ ಸುಮಾರು ೪೦೦೦ ರೂಪಾಯಿಗಳನ್ನು ಗಣಿಸುತ್ತಿದ್ದರು. ತಾನು ಮುಳುಗಿಹೋಗುವಂತಾದಕ್ಕೆ ವ್ಯಯ ಹೆಚ್ಚಿದುದೇ ಕಾರಣವೆಂದು ತಿಳಿದ ಅವರು ಆ ಬಗ್ಗೆ ವಿಚಿಂತಿಸತೊಡಗಿದರು. ಆಯವನ್ನು ಹೆಚ್ಚಿಸುವ ತಾಕತ್ತು ಅವರಲ್ಲಿರಲಿಲ್ಲವಾದುದರಿಂದ ನೌಕರರಿಗೆ ನಾಲ್ಕು ತಿಂಗಳು ವೇತನ ಕೊಡುವುದನ್ನು ನಿಲ್ಲಿಸಿ, ತಮ್ಮ ಆಯ ವ್ಯಯ ಪಟ್ಟಿಯಲ್ಲಿ ೧೬ ಸಾವಿರ ರೂಪಾಯಿಗಳ ವ್ಯಯವನ್ನು ಕಡಿಮೆ ತೋರಿಸಿ, ತನ್ನ ಪಾಲುದಾರರ ವಿಶ್ವಾಸವನ್ನು ಉಳಿಸಿಕೊಂಡರು. ಡಿವಿಡೆಂಟ್ ಸಿಕ್ಕಿದುದರಿಂದ ಸಾಹುಕಾರ—ಪಾಲುದಾರರ ನಡುವೆ ಭಾವೈಕ್ಯವಾಯಿತು; ವೇತನ ದೊರೆಯದ್ದರಿಂದ ಸೇವಕ ಸ್ವಾಮಿಗಳ ನಡುವೆ ಭಾವೈಕ್ಯ ನಷ್ಟವಾಯಿತು.

o o o

ಇದನ್ನು ಕಂಡುಕೊಂಡೇ ನಮ್ಮ ರಾಜ್ಯ ಸರಕಾರ ಭಾವೈಕ್ಯವು ವ್ಯಯದ ಮೂಲವೆಂದು ಈಗಾಗಲೇ ತಿಳಿದುಕೊಂಡಿದೆ. ಆದುದರಿಂದ ಮಿತವ್ಯಯದ ಪಾಠ ಕಲಿಸುವ ಆಧುನಿಕ ಭಗವದ್ಗೀತೆ ಎ.ಜಿ.ಆರ್ ಸಮಿತಿಯ ವರದಿಯಲ್ಲಿ ವ್ಯಯವನ್ನು ಕಡಿಮೆಮಾಡುವ ಸಲಹೆಗಳಿಗಿಂತಲೂ ಆಯವನ್ನು ಹೆಚ್ಚಿಸುವ ಮಾರ್ಗಗಳನ್ನು ಒಂದಾಗುವುದಕ್ಕೆ ಮೊದಲೇ ಇನ್ನೊಂದನ್ನು ಹಿಡಿಯುತ್ತದೆ. ಹಾಗಾದರೆ, ಎ ಜಿ ಆರ್ ಮಿತವ್ಯಯದ ಪಾಠ ಪ್ರಯೋಜನವಿಲ್ಲವೆ? ಇಲ್ಲವೆಂದು ಸಂಪೂರ್ಣ ಹೇಳಲಾಗದು. ನೀವು ಯಜಮಾನರು, ನಿಮ್ಮ ಕೈಕೆಳಗೆ ನೂರು ಜನ ಇದ್ದಾರೆ ಎಂದಿಟ್ಟುಕೊಳ್ಳಿ. ಯಾರ ಹೊಟ್ಟ ಹಸಿಯುತ್ತಿದೆ ಎಂದು ಕೇಳಲಿಕ್ಕೆ ನೀವೇನು ಧರ್ಮರಾಯರೆ? ಯಾರಾದರೂ ಹಸಿಯುತ್ತೆ ಎಂದು ಕೂಗಿಕೊಂಡು ಬಂದರೆ, ಏನಾದರೂ ಇಕ್ಕ ಎಂದು ಹೇಳುತ್ತೀರಿ. ಅದು ಏನಾಗ ಬೇಕು ಎಷ್ಟು ಇರ ಬೇಕು ಎಂಬಿತ್ಯಾದಿ ಪ್ರಶ್ನೆಗಳನ್ನು ಉತ್ತರಿಸಲು ನಿಮಗೆಲ್ಲಿ ಬಿಡುವು? ಹಾಗೆಯೇ ನಮ್ಮ ಸರಕಾರ ಕೂಡ ೨೫ ಕೋಟಿ ಜನರ ಕ್ಷೇಮಚಿಂತನೆಯ ಭಾರ ಹೊರಲು ೨೭ ಮಂತ್ರಿಗಳು ಖಂಡಿತಕ್ಕೂ ಸಾಲದು. ೪೦ ವಿದ್ಯಾರ್ಥಿಗಳನ್ನು ನೋಡಿಕೊಳ್ಳುವುದು ಸಾಧ್ಯವಿಲ್ಲವೆಂದು ಪ್ರಾಥಮಿಕ ಶಾಲಾ ಶಿಕ್ಷಕ, ಅದರಲ್ಲೂ ಶಾಲಾಕೋಣೆಯ ಒಳಗೆ—ಗೋಗರೆಯುತ್ತಿರುವಾಗ, ಕುರುಬರು ಹತ್ತು ಲಕ್ಷ ಕುರಿಗಳನ್ನು ತೆರೆದ ಮೈದಾನಿನಲ್ಲಿ ಮೇಯಿಸುತ್ತಾರೆಂಬುದನ್ನು ಅವರು ಮರೆತಿರಬೇಕು. ನಿಜವಾಗಿ ಸುಧಾರಿಸಬೇಕಾದುದು ಕುರುಬರ ಪಾಡು, ಶಿಕ್ಷಕರದ್ದಲ್ಲ, ಸರಕಾರಿ ಆಸ್ಪತ್ರೆಯ ಡಾಕ್ಟರದ್ದಲ್ಲ. ಒಬ್ಬ ಕುರುಬನ ಪರಮಾವಧಿ ಶಕ್ತಿಯು ಕಾಲು ತೋಳನಷ್ಟಿದೆಯೆಂದು ಊಹಿಸಿದರೆ, ಒಂದು ತೋಳ ೨೦ ವರ್ಷಗಳ ವರೆಗೆ ಬದುಕುವುದೆಂದೂ ಪ್ರತಿ ದಿನ ೭೦ ದೊಂದು ಕುರಿಯನ್ನು ತಿನ್ನುವುದೆಂದೂ ಲೆಕ್ಕ ಹಾಕಿದರೆ, ಒಂದು ತೋಳ ೫ ವರ್ಷಗಳಲ್ಲಿ ತಿನ್ನುವ ೧೮೨೬ ಕುರಿಗಳಿಗೊಬ್ಬ ಕುರುಬನಿರಬೇಕು ಎಂದು ಸಿದ್ಧಾಂತ ಮಾಡಬಹುದು. ನರಕುರಿಗೂ ನರರಿಗೂ ಕುರುಬನಿಗೂ ಕುರುಡು ಸರಕಾರಕ್ಕೂ ಅಕ್ಷರಕ್ಷರ ಸಾಮ್ಯವಿದೆ. ಜನರಿಗಾಗಿ ಸರಕಾರವೆಂಬುದಕ್ಕಿಂತಲೂ ಸರಕಾರಕ್ಕಾಗಿ ಜನ, ಎಂಬುದು ಮಾನ್ಯವಾಗಿದೆ. ಸರಕಾರದ ವ್ಯಯ ಪಟ್ಟಿಗೆ ಸರಿಯಾಗಿ ಆಯವನ್ನು ಕೂಡಿಸಿಕೊಡುವುದು ಜನರ ಕರ್ತವ್ಯವೆನ್ನುವಾಗ, ಜನ ಕುರಿಗಳು, ಸರಕಾರ ಕುರುಬರೇ ಅಲ್ಲವೆ? ಕುರಿಯೊಡನೆ ಕೇಳಿ ಕುರುಬ ಮಸಾಲೆ ಅರೆಯುವುದುಂಟೆ? ಜನರೊಡನೆ ಪರ್ಯಾಲೋಚಿಸಿ ಮಂತ್ರಿ ಕಾನೂನು ಕಾಯದೆ ಮಾಡುವುದುಂಟೆ? ಕುರುಬರಲ್ಲಿಯೇ ಭಾವೈಕ್ಯ ಸಾಧನೆಗಾಗಿ ಹೆಚ್ಚು ಹೆಚ್ಚು ಕುರಿಗಳ ರೋಮ ಕತ್ತರಿಸಬೇಕಾಗುವುದು. ಆದುದರಿಂದಲೇ ಮಿತವ್ಯಯ ಬೇರೆ—ಭಾವೈಕ್ಯ ಬೇರೆ. ಕವಿಗಳ ಭಾಷೆಯಲ್ಲಿ ಹೇಳುವುದಾದರೆ, ಮಿತವ್ಯಯ ಕೆನ್ನೈದಲೆ, ಭಾವೈಕ್ಯ ಶಶಪತ್ರತಾವರೆ, ಎರಡೂ ಒಂದೆಡೆ ಉಳಿಯಲಾರವು.

o o o

ವ್ಯಯವನ್ನು ಕಡಿಮೆ ಮಾಡುವುದರಿಂದ ಇನ್ನೂ ಒಂದು ತೊಂದರೆಯಿದೆ. ನಮ್ಮ ಅಭಿವೃದ್ಧಿ ಯೋಜನೆಗಳ ಮೌಲ್ಯವು ಅವುಗಳಿಗಾಗಿ ಮಾಡಿದ ವೆಚ್ಚವನ್ನಷ್ಟೇ ಹೊಂದಿಕೊಂಡಿರುವುದರಿಂದ ತೀವ್ರ ಪ್ರಗತಿ ಪಡೆದಿದ್ದೇವೆಂದು ಪದರ್ಶನ ವೇರ್ವಡಿಸಬೇಕಾದರೆ, ವೆಚ್ಚದ ಪ್ರಮಾಣವನ್ನೂ ಅನಿವಾರ್ಯವಾಗಿ ಹೆಚ್ಚಿಸಲೇ ಬೇಕು. ಇವೆಲ್ಲ ಅನಾವ್ಯಯವೆನ್ನುವಂತಿಲ್ಲ. ನೀವು ದಿನಾ ನಾಲ್ಕು ಸೇರು ಹಾಲಿಗೆ ೧ ರೂಪಾಯಿ ಕೊಡುತ್ತೀರಿ. ಅದನ್ನು ಮೂರು ಸೇರಿಗೆ ಇಳಿಸಿದರೆ ೭೫ ನ. ಪೈಸೆಯಷ್ಟು ಹಾಲು ಕುಡಿಯಬಹುದು. ಆದರೆ, ಅದು ನಿಮ್ಮ ಅಭಾವ ಸ್ಥಿತಿಯನ್ನು ತೋರಿಸುತ್ತದೆ. ದಿನಾ ರೂಪಾಯಿ ಹಾಲು ಕುಡಿಯುತ್ತೇನೆ ಎಂದು ಜಂಭ ಕೊಚ್ಚಿಕೊಳ್ಳಲಿಕ್ಕಾದರೂ ನೀವು ರೂಪಾಯಿ ಹಾಲು ಕೊಳ್ಳಬೇಕು; ಇಲ್ಲ ಕೊಂಡೆನೆಂದಾದರೂ ಲೆಕ್ಕ ಬರೆಯಬೇಕು. ಆದುದರಿಂದ ಆದಾಯದ ಹೆಚ್ಚಳದ ಮೇಲೆ ದೃಷ್ಟಿ ಹರಿಯುವುದು ಸ್ವಾಭಾವಿಕ. ಆಯವನ್ನು ತುಂಬಿಕೊಡುವುದು ನರಕುರಿಗಳಾದುದರಿಂದ ಅವರು ತಮ್ಮ ಕರ್ತವ್ಯದಿಂದ ದೂರ ಸರಿಯುವಂತಿಲ್ಲ. ಯಾವ ರೀತಿಯಲ್ಲಿ ಕರ ಹೇರಬಹುದೆಂದು ಕುರುಬರೇ ದಾರಿ ತೋರಿಸುತ್ತಾರೆ.

o o o

ಅರ್ಥ ಮಂತ್ರಿ ಜತ್ತಿಯವರು ಮದ್ಯಪಾನ ಪ್ರತಿಬಂಧದ ವಿಷಯದಲ್ಲಿ ಆವಶ್ಯಕತೆಯೊದಗಿದರೆ ಪುನರ್ಪರಿಶೀಲನೆಯನ್ನು ಸರಕಾರ ಮಾಡುವುದು ಎಂದು ವಿಧಾನ ಸಭೆಯಲ್ಲಿ ನುಡಿದರಂತೆ. ಪಾನ ಪ್ರತಿಬಂಧವು ಯಶಸ್ವಿಯಾಗಿಲ್ಲ ಎಂಬ ದೂರು ಎಲ್ಲೆಲ್ಲಿಯೂ ಕೇಳಿಬರುತ್ತಿದೆ; ಹಾಗಿದ್ದರೂ ಸರಕಾರ ಮಾತ್ರ ಅದನ್ನು ಕಡೆಗಣಿಸುತ್ತಿದೆ ಎಂಬ ಆರೋಪದಲ್ಲಿ ಸತ್ಯಾಂಶವಿಲ್ಲದಿಲ್ಲ. ಪಾನ ಪ್ರತಿಬಂಧವು ಲಂಚಕ್ಕೆ ಮೂಲವೆನಿಸಿದೆಯೆಂಬುದನ್ನೂ ಅಲ್ಲಗಳೆಯುವಂತಿಲ್ಲ. ಹಾಗಾದರೆ ಇಂದು ಪಾನ ಪ್ರತಿಬಂಧವಿರುವುದು ಕೇವಲ ಆದರ್ಶವೆಂದು. ನೈತಿಕ ಉನ್ನತಿಯನ್ನು ಸಾಧಿಸುವುದಕ್ಕಾಗಿ ಸರಕಾರ ಆದಾಯದ ಬಾಬನ್ನು ಕಳೆದುಕೊಂಡು ಪಾಡು ಪಡುತ್ತಿದೆ. ಕೆಲವರೂ ಅವ ಪ್ರತಿನಿಧಿಗಳೂ ಹೇಳುತ್ತಾರೆ: 'ಪಾನ ಪ್ರತಿಬಂಧವನ್ನು ಕಿತ್ತೊಗೆಯಿರಿ; ಆಯ ಹೆಚ್ಚುತ್ತಿದೆ' 'ಆದರೆ, ಕಾಂಗ್ರೆಸ್ ಒಪ್ಪಿಕೊಂಡ ಈ ಆದರ್ಶವನ್ನು ಬಿಟ್ಟು ಕೊಡುವುದು ನ್ಯಾಯವೇ ಈ ಕಾಯದೆಯಿಂದ ಭಾವೈಕ್ಯಕ್ಕೆ ಕುಂದು, ಸರಕಾರಕ್ಕೆ ಆದಾಯ ಕಡಿಮೆ. ಪೋಲೀಸು ವಿಭಾಗವಿಂದು ಐಕ್ಯದಿಂದಿರುವುದಕ್ಕೆ ಕಾರಣವಾದ ಈ ಪ್ರತಿಬಂಧ ಹೋಯಿತು ಎಂದರೆ ಮಾತ್ರ ಅಲ್ಲಿ ಕುರುಕ್ಷೇತ್ರವಾದೀತು. ಭಾವೈಕ್ಯಕ್ಕೆ ಕುಂದುಂಟಾಗದಂತೆ ಕಾಯದೆಯನ್ನು ಇಸಿ, ಪೋಲೀಸು ವಿಭಾಗವು ವಸೂಲು ಮಾಡುತ್ತಿರುವ 'ಗುಪ್ತಗಡುಗಿನ್' ಲೈಸನ್ಸ್ ಫೀಯನ್ನು ಇಮ್ಮಡಿಗೊಳಿಸಿ ಸರಕಾರ ಅದರಲ್ಲಿಅರ್ಥದಷ್ಟನ್ನು ಪಡೆಯುವ ಯೋಜನೆ ರೂಪಿಸಿದರೆ, ಈಗ ಇದ್ದುದಕ್ಕಿಂತ ಪರಿಸ್ಥಿತಿಕಟ್ಟದಾಗದು. ಎಲ್ಲ ಪದಾರ್ಥಗಳ ಬೆಲೆಯೂ ಏರಿರುವಾಗ, ಕಳ್ಳ ಸೆರೆಯ ಮೂಲ್ಯ ಏರಿದರೆ, ಕುಡುಕನೇನು ಕುಡಿಯದೆ ಉಳಿಯುವನೆ?

—ಗೋರಾ

ಅತ್ಯುತ್ತಮ ಟಾನಿಕ್

ನಿಮ್ಮ ದೇಹ — ಮನಸ್ಸುಗಳಿಗೆ
ಆರೋಗ್ಯವನ್ನೂ ಬಲವನ್ನೂ, ನವಚೈತನ್ಯವನ್ನೂ
ತಂದು ಕೊಡಬಲ್ಲ ಏಕಮಾತ್ರ ಟಾನಿಕ್

ಉಳಿತಾಯ

ಉಳಿತಾಯಕ್ಕಾಗಿ ಇಂದೇ ಒಂದು ಸೇವಿಂಗ್ಸ್ ಖಾತೆ ತೆರೆಯಿರಿ.

ದಿ ಕೆನರಾ ಬೇಂಕಿಂಗ್ ಕೊರ್ಪೊರೇಶನ್ ಲಿಮಿಟೆಡ್
(ರಿಜಿಸ್ಟರ್ಡ್ ಆಫೀಸು: ಉಡುಪಿ)
ಆಡಳಿತ ಆಫೀಸು: ಮಂಗಳೂರು.

ಸುತ್ತೂರು ಡಿ ಮು. ಕೋರ್ಟಿನಲ್ಲಿ
R. E. P. 137/1962 in
O. S. 175/1957.

ಶಿವಪ್ಪ ಗೌಡ —ಅಮಲ್ಜಾರಿ ಅರ್ಜಿದಾರ, ಕೆ. ಯಂ. ಅಬುಬಕರ್, ಮಮ್ಮದೆ ಬ್ಯಾರಿಗಳ ಮಗ ಸುತ್ತೂರು ತಾಲ್ಕು ಕೇನ್ಯ ಗ್ರಾಮದಲ್ಲಿರುವವ —ಎದ್ರಿ.

ಸದ್ರಿ ಎದ್ರಿಗೆ ಈ ಮೂಲ್ಕ ತಿಳಿಯಪಡಿಸುವುದೇನೆಂದೆ:—

ಮೇಲ್ಕಂಡ ಅರ್ಜಿದಾರನು ಪಡದ O. S. 175/1957ನೇ ಡಿಕ್ರಿ ಅಮಲ್ಜಾರಿ ಬಗ್ಗೆ ಅರ್ಜಿಕೊಟ್ಟಿರುವುದರಿಂದ ಸದ್ರಿ ಅಮಲ್ಜಾರಿಯನ್ನು ಏಕೆ ಮುಂದರಿಸ ಕೂಡದೆಂಬುದಕ್ಕೆ ನ್ಯಾಯವಾದ ಸಬಬು ಕೊಡುವ ಬಗ್ಗೆ 1962 ನೇ ಇಸ್ವಿ ಒಕ್ಟೋಬರ್ ತಿಂಗಳ ತಾರೀಕು 20 ನೇ ದಿವಸ ಪೂರ್ವಾಹ್ನಗಂಟೆ 11 ಕ್ಕೆ ಮೇಲ್ಕಂಡ ಕೋರ್ಟಿನ ಮುಂದೆ ನೀವು ಹಾಬ್ರಾಗಿ ನಿಮ್ಮ ಉದಾಹರಣೆಯನ್ನು ದಾಕ್ಲು ಪೂಡತಕ್ಕದ್ದು. ತಪ್ಪಿದ್ರೆ ಕೋರ್ಟಿನವರಿಗೆ ಯುಕ್ತಕಂಡ ರೀತಿಯಲ್ಲಿ ತೀರ್ಮಾನಿಸಲ್ಪಡುವುದು.

ಕೋರ್ಟು ಹುಕುಂ ಪ್ರಕಾರ.

Pundarik M. K.
Advocate for petitioner.

ಸುತ್ತೂರು, 21-9-62.

ಯಂತ್ರದ ಕಾರುಭಾರ — ಶವದ ರಾಯಭಾರ

ಡಬ್‌S ... ಡಬ್‌S ... ಡಬ್‌SS ..SSS ಎಂಬ ಮೋಟಾರು ಸೈಕಲಿನ ಒಗ್ಗೊರಲ ದನಿಗೆ ಸಹಾಯ ಮಾಡುವಂತೆ ಹಿಂದಿನಿಂದ ಭಾರವಾದ ಜಿಂಕು ತಗಡುಗಳನ್ನು ಹೊತ್ತು ಏದುತ್ತಾ ಬರುತಿದ್ದ ಟ್ರಕ್ಕೊಂದು ತನ್ನ ಕೀರಲು ದನಿಯನ್ನು ಸೇರಿಸಿತ್ತು. ಟ್ರಕ್ಕಿನಿಂದ ಬುಸ್ಸೆಂದು ಹೊರ ಬೀಳುತಿದ್ದ ಕರ್ರಗಿನ ದೂಮರಾಶಿ ಆಮವಾಸ್ಯೆಯ ಕಗ್ಗತ್ತಿಲಿನೊಡನೆ ಅಣಕವಾಡುವಂತಿತ್ತು. ಮೇಲೆ ಕಡು ನೀಲ ನಭದಲ್ಲಿ ಸಹಸ್ರಾರು ತಾರೆಗಳು ಸೊಡರುಗಳಂತೆ ಬೆಳಗುತ್ತಿದ್ದುವು. ದಟ್ಟವಾದ ಅರಣ್ಯದ ಮಧ್ಯೆ, ಪ್ರಕೃತಿಯ ಮೇಲೆ ಮಾನವನು ನಡೆಸಿದ ಅಧಿಕಾರ ದಂಡದಂತೆ ನೇರವಾಗಿ ಕೊರೆದ ಮಾರ್ಗದಲ್ಲಿ ಮೋಟಾರು ಸೈಕಲು ಮತ್ತು ಟ್ರಕ್ಕುಗಳ ಸ್ಪರ್ಧೆ ಒಂದೇ ಸವನೆ ನಡೆದಿತ್ತು. ಮಾನವ ಜೀವಿಗಳ ಮಧ್ಯೆ ನಡೆಯುತಿದ್ದ ಈ ಭೀಕರ ಸ್ಪರ್ಧೆಯನ್ನು ಬೆರಗುಗಂಗಳಿಂದ ವೀಕ್ಷಿಸುವ ಸುಂನಿಕಾಯದಂತೆ, ಬಾನಿನಲ್ಲಿ ಹಂಡಿದ್ದ ನಕ್ಷತ್ರಗಳ ಮಂದ ಬೆಳಕನ್ನು ಮರೆಮಾಚಲು ತುಂಡು ಮೋಡವೊಂದು ಯತ್ನಿಸಿ ವಿಫಲವಾಗುತ್ತಿತ್ತು. ಕೆಳಗೆ ಸ್ಪರ್ಧೆ ನಡೆದೇ ಇತ್ತು ಒಮ್ಮೆ ಟ್ರಕ್ಕು ತನ್ನ ಎದುರಾಳಿಯನ್ನು ಜಯಿಸಿದ ವೀರನಂತೆ ಹರ್ಷನಾದ ಗೈಯುತ್ತಾ ಮುಂದೋಡುತ್ತಿದ್ದರೆ, ಮತ್ತೊಮ್ಮೆ ಮೋಟಾರು ಸೈಕಲು ಟುರುಗುಟ್ಟುತ್ತಾ ಸೋಲುತ್ತಿರುವ ವೀರನಂತೆ ತನ್ನ ಶಕ್ತಿ ಸಾಮರ್ಥ್ಯಳ ಅಂತಿಮ ಪ್ರದರ್ಶನ ಗೈಯುವಂತೆ ವೇಗವಾಗಿ ಮುಂದೋಡಿ ವಿಕಟಾಟ್ಟ ಹಾಸ ಗೈಯುತ್ತಿತ್ತು. ಮಾರ್ಗದ ಬದಿಯಲ್ಲಿದ್ದ ತರು ಸಮೂಹಗಳು ಕರ್ರಗಾಗಿ ನಿಂತು, ಪಂದ್ಯಾಟವನ್ನು ಉತ್ತೇಜಿಸುವ ಸಾವಜನಿಕರಂತೆ, ಆಗಾಗ ಬೀಸಿ ಬರುವ ಮಂದಾನಿಲಕ್ಕೆ ತಲೆಯೊಡ್ಡಿ, 'ಬರ ಬರ' ಸದ್ದು ಮಾಡುತ್ತಾ ತಮ್ಮ ಆನಂದವನ್ನು ಪ್ರಕಟಗೊಳಿಸುತಿದ್ದುವು.

ಮೂಡಲ ದೆಸೆ ತಿಳಿ ನೀಲವಾಗುತ್ತಾ ಬರುತ್ತಿತ್ತು. ದರ್ಬಲರನ್ನು ನಿಗ್ರಹಿಸುವ ಆಧುನಿಕ ಶಕ್ತಿಗಳಂತೆ ಮೂಡಿಬಹ ಸೂರ್ಯನ ಹೊಂಗಿರಣಗಳು ತುಂಡರಸರಂತಿದ್ದ ನಕ್ಷತ್ರಗಳ ಸ್ನಿಗ್ಧ ಕಾಂತಿಯನ್ನು ಕಬಳಿಸತಿದ್ದುವು. ತನ್ನ ತಿರುಮಂತ್ರವನ್ನೇ ಜಪಿಸುತ್ತಾ ವೇಗವಾಗಿ ಮುಂದೋಡುತ್ತಿದ್ದ ದ್ವಿಚಕ್ರಿಯನ್ನು ಕಂಡು ಹಿಂದಿನ ಚತುರ್‌ಚಕ್ರಿ ತನ್ನ ಕೆಂಗಣ್ಣುಗಳನ್ನು ಬಿಟ್ಟು ಬುಸುಗುಟ್ಟುತ್ತಿತ್ತು.

ಟ್ರಕ್ಕಿನ ಮುಂದೀಪಗಳ ಬೆಳಕಿನಲ್ಲಿ ಮೋಟಾರು ಸೈಕಲಿನಲ್ಲಿ ಕುಳಿತ ಸ್ಯಾಮುವೇಲ್‌ನ ಬಲಷ್ಠಕಾಯ ಪ್ರಸ್ಫುಟವಾಗುತ್ತಿತ್ತು. ತನ್ನ ವಾಹನ ಮುಂದೋಡುತ್ತಿದ್ದಂತೆ ಗಕ್ಕನೆ ಹಿಂತಿರುಗಿ ನೋಡಿದನಾತ. ತನ್ನ ಕೈಮೀರಿದ ವೇಗದಲ್ಲಿ ಟ್ರಕ್ಕನ್ನು ನಡೆಯಿಸಿಕೊಂಡು ಬರುತ್ತಿದ್ದ ವಾಲ್ಟರ್. ಮರದ ಡ್ರಮ್ಮುಗಳ ಮೇಲೆ ಇರಿಸಿ, ಬಲವಾದ ಹಗ್ಗದಿಂದ ಬಿಗಿಯಾಗಿ ಕಟ್ಟಿದ್ದ ಜಿಂಕು ತಗಡುಗಳು 'ಜಣ ಜಣ' ಸದ್ದು ಮಾಡುತಿದ್ದುವು. ಟ್ರಕ್ಕಿನ ಒಳಗೆ ಸ್ಟೇರಿಂಗ್ ವೀಲನ್ನು ಹಿಡಿದು ಕುಳಿತ ಆತನ ಸ್ನೇಹಿತ ವಾಲ್ಟರನ ಮುಖಭಾವ ಗಾಡಿಯ ಒಳಗಿನ ಮಿಣುಕು ದೀಪದ ಮಂದ ಪ್ರಕಾಶದಲ್ಲಿ ಅಸ್ಪಷ್ಟವಾಗಿ ಕಾಣಿಸುತ್ತಿತ್ತು. ಆತನ ಹುಬ್ಬುಗಳು ಗಂಟಿಕ್ಕಿದ್ದುವು; ಅವಡು ಗಚ್ಚಿತ್ತು; ಮುಖದಲ್ಲಿ ಕರಾಳಚ್ಛಾಯೆ ಒಡೆದು ಕಾಣುತ್ತಿತ್ತು. ವಾಸ್ತವ ಪ್ರಪಂಚದ ಸಮಸ್ತ ವಿಚಾರಗಳನ್ನು ಆತ ಮರೆತಂತಿತ್ತು.

ಸಾಮುವೇಲ್ ತನ್ನ ಹತ್ತು ವರುಷಗಳ ಮಿಲಿಟರಿ ಸರ್ವಿಸನ್ನು ಮುಗಿಸಿ, 'ಮಿಲಿಟರಿ ರಿಸರ್ವ್ ಸರ್ವೀಸ್'ನಲ್ಲಿ ಜಯಪುರದಲ್ಲಿನ ತನ್ನ ಮನೆಗೆ ಹಿಂತಿರುಗುತ್ತಿದ್ದ ಆತನ ಬಾಲ್ಯ ಗೆಳತಿ ಲೀಡಾಳ ಸ್ನೇಹ ಪತ್ರವೊಂದನ್ನು ಆತ ಹೊರಡುವ ಮೊದಲದಿನ ಓದಿ ಆನಂದಿಸಿದ್ದ—ಆತುರನಾಗಿದ್ದ. ತಂದೆ ಜಾನನ ಅಸೌಖ್ಯದ ವಾರ್ತೆ ಆತನನ್ನು ದಿಗಿಲುಗೊಳಿಸಿತ್ತು. ಮಧ್ಯೆ ಆತನ ಗೆಳಯ ವಾಲ್ಟರ ಜತೆಗೆ ಸಿಕ್ಕಿದ್ದ. ಇಬ್ಬರೂ ಜಯಪುರದ ಕಡೆ ಹೊರಟ್ಟಿದ್ದರು. ವಾಲ್ಟರ ಬೆಳಗ್ಗಿನ ಜಾವದಲ್ಲೆದ್ದು ಐವತ್ತಮೂರುಮೈಲು ದೂರದ 'ವಿಲ್ಟನ್ ವರ್ಕ್ ಶಾಪ್'ಗೆ ಕಬ್ಬಿಣದ ಸಾಮಾನುಗಳನ್ನು ಮತ್ತು ಜಿಂಕು ತಗಡುಗಳನ್ನು ಟ್ರಕ್ಕಿನಲ್ಲಿ ಸಾಗಿಸುತ್ತಿದ್ದ. ದಾರಿಯ ಮಧ್ಯೆ ಸ್ಯಾಮುವೇಲ್‌ನನ್ನು ಕಂಡಿದ್ದ. ಇನ್ನು ಜಯಪುರದಲ್ಲೇ ಆತನನ್ನು ಬೇಟಿಯಾದರಾಯಿತೆಂದು ವೇಗವಾಗಿ ಹೊರಟ್ಟಿದ್ದ—ವಾಲ್ಟರ್. ವೇಗದಲ್ಲಿ ಸ್ಪರ್ಧೆ ಬೆಳೆದು ವಿಕೋಪಕ್ಕೆ ತಿರುಗಿತ್ತು.

ಈಗ ಮಾರ್ಗ ವಿಶಾಲವಾದ ಬಯಲೊಂದನ್ನು ಪ್ರವೇಶಿಸಿ ಇಬ್ಬಾಗ ಮಾಡುವಂತಿತ್ತು. ಬಾಲರವಿಯ ಕಿರಣರಾಗ ಭೂಮಾತೆಯ ವಿಶಾಲ ಬೆನ್ನ ಮೇಲೆ ಬೆಚ್ಚಗೆ ಪವಡಿಸಿತ್ತು. ಆಕೆಯ ಪುತ್ರರೀರ್ವರ ಬುದ್ಧಿವಿಹೀನ ಸ್ಪರ್ಧೆ ಸತತವಾಗಿ ಸಾಗಿತ್ತು. ಸ್ಯಾಮುವೇಲ್ ತನ್ನ ವಾಹನದ ವೇಗವನ್ನು ಕುಂಠಿತಗೊಳಿಸಿ ಗೆಳೆಯ ವಾಲ್ಟರನಿಗೆ ದಾರಿ ಬಿಟ್ಟು ಕೊಟ್ಟಿದ್ದ. ಇದೇ ಸಂದರ್ಭವನ್ನು ಪಯೋಗಿಸಿ ವಾಲ್ಟರ್ ತನ್ನ ಯಂತ್ರದ ವೇಗವನ್ನು ಹೆಚ್ಚಿಸಿದ್ದ. ಟ್ರಕ್ಕು ಹತೋಟಿ ಮೀರಿ ಅತ್ತಿತ್ತ ಅಲುಗುತ್ತಿತ್ತು. ಬಯಲಿನಲ್ಲಿ ಜೋರಾಗಿ ಗಾಳಿ ಬೀಸ ತೊದಗಿತ್ತು. ಸ್ಯಾಮುವೇಲ್ ತನ್ನ ಯಂತ್ರದ ವೇಗವನ್ನು ತಾರಕಕ್ಕೇರಿಸಿದ. ಅಷ್ಟರಲ್ಲೇ 'ಕಟ್ ಕಟ್' ಎಂದು ಶಬ್ದವಾಯಿತು. ಮೋಟಾರು ಸೈಕಲಿನ ಶಬ್ದಕ್ಕೆ ಅದು ಸ್ಯಾಮುವೇಲ್‌ನಿಗೆ ಕೇಳಿಸಲಿಲ್ಲ. ಅವನ ಸ್ಥಿತಿಯಲ್ಲಿದ್ದ ಯಾರಿಗೂ ಕೇಳಿಸುವಂತಿರಲಿಲ್ಲ ಆ ಸದ್ದು. ಗಾಳಿ ಬಹು ವೇಗವಾಗಿ ಬೀಸುತ್ತಲೇ ಇತ್ತು. ಟ್ರಕ್ಕಿನಲ್ಲಿದ್ದ ಜಿಂಕು ತಗಡುಗಳು 'ಜಿರಂ ಜಿರಂ' ಎಂದು ಸದ್ದು ಮಾಡತೊಡಗಿದುವು. ಆದೂ ಆತನಿಗೆ ಕೇಳಿಸಲಿಲ್ಲ. ವಾಲ್ಟರ್ ಟ್ರಕ್ಕನ್ನು ಸ್ವಲ್ಪ ವಿಧಾನಗೊಳಿಸಿದ, ಗಾಳಿ ಮತ್ತಷ್ಟು ವೇಗವಾಗಿ ಬೀಸ ತೊಡಗಿತ್ತು. ವಾಲ್ಟರ್ ಈಗ ತನ್ನ ಮೊದಲಿನ ವೇಗವನ್ನು ಹಿಂಬಾಲಿಸಿದ್ದ. ಇದನ್ನು ಕಂಡ ಸ್ಯಾಮುವೇಲ್ 'ಫುಲ್ ಎಕ್ಸಲೇಟರ್' ಒತ್ತಿದ ಬಿಗಿದ ಹಗ್ಗ ತುಂಡಾಗಿ ಟ್ರಕ್ಕಿನಲ್ಲಿದ್ದ ಭಾರವಾದ ಜಿಂಕು ತಗಡೊಂದು ಶಬ್ದ ಮಾಡುತ್ತಾ ಮೇಲಕ್ಕೆ ಪುಟಿದು, ವೇಗವಾಗಿ ತೇಲುತ್ತಾ ಕೆಳಕ್ಕೆ ಬರುತ್ತಿತ್ತು! ಸ್ಯಾಮುವೇಲ್ ಬಿಗಿದು ಹಿಡಿದ ಆತನ ಕೈಗಳು ಮೋಟಾರು ಸೈಕಲಿನ ಹಿಡಿಕೆಯ ಮೇಲೆ ಹಾಗೆಯೆ ಇದ್ದುವು; ವೇಗವಾಗಿ ತೇಲಿ ಒಂದ ಜಿಂಕು ತಗಡಿನ ಹರಿತವಾದ ಅಲಗು ಆತನ ರುಂಡವನ್ನು ಕತ್ತರಿಸಿಕೊಂಡು ಹೋಯಿತು! ಈಗ ವಾಲ್ಟರ್ ಪುನಃ ತನ್ನ ವೇಗವನ್ನಿಳಿಸಿದ. ಆದರೆ ರುಂಡದಿಂದ ಬೇರ್ಪಟ್ಟು, ಮೋಟಾರು ಸೈಕಲಿನ ಮೇಲೆ ಭದ್ರವಾಗಿ ಮಂಡಿಸಿದ ಸ್ಯಾಮುವೇಲ್ ಮುಂಡ ಆತನನ್ನು ವೇಗವಾಗಿ ಹಾದುಹೋಯಿತು. ಆತನ ಮುಂಡದಿಂದ ರಕ್ತ ಕಾರಂಜಿಯಂತೆ ಚಿಮ್ಮುತ್ತಿತ್ತು. ವಾಲ್ಟರ್ ಹಾಗೇ ಸ್ಟೇರಿಂಗ್ ವೀಲಿನ ಮೇಲೆ ಒರಗಿದ!! ಆತನ ತೆರೆದ ಕಣ್ಣುಗಳು ಹಾಗೆಯೇ ಇದ್ದುವು ಅತಿಯಾದ ಉದ್ವೇಗದಿಂದ ಆತನ ಪ್ರಾಣಪಕ್ಷಿ ಸ್ನೇಹಿತ ಸ್ಯಾಮುವೇಲ್‌ನನ್ನು ಬೇಟಿಯಾಗಲು ಹಿಂಬಾಲಿಸಿತು ವ್ರಾಯರಃ ಅಲ್ಲೂ ಸ್ಪರ್ಧೆ ನಡೆಯುತಿದ್ದಿರಬಹುದು! ಸ್ಯಾಮುವೇಲ್ ಕೊನೆಗೂ ಮುಂದೆಯೇ ಬಿದ್ದ! ವಾಲ್ಟರ್ ಹಿಂದೆಯೇ ಉಳಿದಿದ್ದ!!

ಮಾರ್ಗ ಇಳುಕಲಾಗಿತ್ತು—ನೇರವಾಗಿಯೂ ಇತ್ತು. ಮಾನವ ಸ್ಪರ್ಧೆ ಕೊನೆಗೊಂಡು ಯಂತ್ರಗಳ ಸ್ಪರ್ಧೆ ಆರಂಭವಾಗಿತ್ತು. ಯಂತ್ರಗಳ ಕಾರುಭಾರದಲ್ಲಿ ಮಾನವನ ಯತ್ನ ನಿಷ್ಫಲವಾಗಿತ್ತು. ಮಾನವರಿಗೆ ಯಂತ್ರದ ಬಗ್ಗೆ ಕರುಣೆ ಇಲ್ಲ ಯಂತ್ರಗಳಿಗೆ ಮಾನವನ ಮೇಲೆ ಕರುಣೆ ಬರುವುದೇ?

ಸ್ಯಾಮುವೇಲ್—ವಾಲ್ಟರ್ ಜಯವುರಕ್ಕೆ ಹೋಗಲಿಲ್ಲ; ಬದಲು ಅವರ ಶವ ತನ್ನ ರಾಯಭಾರ ಮಾಡಹೋಯಿತು.

—ಕೆ ಬದ್ರಿನಾಥ್, ಉಡುಪಿ

ಜೀವನದ ಉಳಿತಾಯಕ್ಕೆ ಭದ್ರವಾದ ಮನೆ

ಸಾವಿರಾರು ರೇವಣಾತಿಗಾರರು ತಮ್ಮ ಜೀವನದ ಉಳಿತಾಯದ ಭದ್ರತೆ ಮತ್ತು ವೃದ್ಧಿಗಾಗಿ "ವಿಜಯ ಬೇಂಕ್" ಅತ್ಯುತ್ತಮವೆಂದು ಪರಿಗಣಿಸಿರುವರು ಪ್ರತಿಯೊಬ್ಬ ರೇವಣಾತಿಗಾರರಿಗೆ ಇಲ್ಲಿ ವೈಯಕ್ತಿಕ ಸೌಕರ್ಯಗಳು ದೊರಕುವುದಲ್ಲದೆ, ನಿಮ್ಮ ಹಣವು ಕೂಡಾ ತೀವ್ರವಾಗಿ ವೃದ್ಧಿಹೊಂದುವುದು.

ಹೆಚ್ಚಿನ ವಿವರಗಳಿಗೆ ನಿಮ್ಮ ಸಮೀಪವಿರುವ ನಮ್ಮ ಶಾಖೆಯಲ್ಲಿ ವಿಚಾರಿಸಿರಿ.

ವಿಜಯ ಬೇಂಕ್ ಲಿಮಿಟೆಡ್

ರಿಜಸ್ಟರ್ಡ್ ಆಫೀಸ್:— ವಿಜಯ ಬೇಂಕ್ ಬಿಲ್ಡಿಂಗ್,
ಲೈಟ್ ಹೌಸ್ ಹಿಲ್ ರೋಡ್,

Estd. 1931.
Phone No. 240. — ಮಂಗಳೂರು — 3

ನವ್ಯ ಸ್ವಾಗತ

ನಿಮಗೆ ನಮ್ಮಯ ಸ್ವಾಗತ,
ಖಾದಿ ಜುಬ್ಬಕು, ಲಂಡ ಪಂಜೆಗು,
ಧವಳ ಟೋಪಿಗು ಸ್ವಾಗತ,
ನಿಮ್ಮನಿಲ್ಲಿಗೆ ಹೊತ್ತು ತಂದಿಹ
ಪಾದತ್ರಾಣಕೂ ಸ್ವಾಗತ.
'ಕಾರ'ಕೂಟಕೆ ಸ್ವಾಗತ,
ಧೂಳಿನೋಟಕೆ ಸ್ವಾಗತ,
ನಿಮ್ಮ ನೋಡಲು ಉದ್ದ ನಿಂತಿಹ
ಸಿಳ್ಳು ಸಂದಣಿಗೆ ಸ್ವಾಗತ.
ಎತ್ತರಾಸನಕೆ ಸ್ವಾಗತ,
ಉದ್ದ ಲೇಖನಕೆ ಸ್ವಾಗತ.
ಪೊಳ್ಳು ಆಶ್ವಾಸನೆಯನೀವ
ನೀಳ ಭಾಷಣಕೆ ಸ್ವಾಗತ.
ಕುಳ್ಳ ದೇಹಕೆ ಸ್ವಾಗತ,
ಡೊಳ್ಳ ಹೊಟ್ಟೆಗೆ ಸ್ವಾಗತ,
ಹುಂಬರಿಗೆ ಹಿಂದೇಟನೀವ
ಊರುಗೋಲಿಗು ಸ್ವಾಗತ.
ಕೊರಳ ಹಾರಕೆ ಸ್ವಾಗತ,
ಕಾಫಿ ಪಾರ್ಟಿಗೆ ಸ್ವಾಗತ,
ನಿಮ್ಮ ಸಂಗಡ ತಿರುಗ ಬಂದಿಹ
ಹೆಂಡಿರ್ಮಕ್ಕಳಿಗು ಸ್ವಾಗತ,
ಊರನವ ಸಂಸ್ಥೆಯನು ಕಟ್ಟಲು
'ಕಲ್ಲ ಹಾಕಿದಿರಲ!' ಅದೇ ಹಿತ,
ಸರಬರಾಯಿಯ ಖರ್ಚು ಪೆಚ್ಚಕೆ
ನಮ್ಮೂರ ಜನ ಹತ ಹತ!

—"ಸಿರಿಪತಿ"

ಕಾರಂತ ಸನ್ಮಾನ ಸಮಿತಿ,
ಉಡುಪಿ.

ಪ್ರಬಂಧ ಸ್ಪರ್ಧೆ
(ಹೈಸ್ಕೂಲು ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ)

ಇದೇ ಅಕ್ಟೋಬರ ತಾ. ೧೦ರಂದು ಅರುವತ್ತು ತುಂಬುವ

ಕನ್ನಡದ ಹೆಸರಾಂತ ಸಾಹಿತಿ
ಶ್ರೀ ಶಿವರಾಮ ಕಾರಂತರನ್ನು

ಸನ್ಮಾನಿಸುವ ಸಲುವಾಗಿ ಉತ್ಸವವೊಂದನ್ನು ಏರ್ಪಡಿಸಲು ಉಡುಪಿಯ ನಾಗರಿಕರು ನಿರ್ಧರಿಸಿರುತ್ತಾರೆ

ಉತ್ಸವದ ಅಂಗವಾಗಿ ಈ ಕೆಳಗಿನ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ.

ಕರ್ನಾಟಕದ ಎಲ್ಲಾ ಹೈಸ್ಕೂಲು ಮತ್ತು ಕಾಲೇಜುಗಳ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸಬಹುದು. ಅಭ್ಯರ್ಥಿ ವಿದ್ಯಾರ್ಥಿಯು ಪ್ರಬಂಧವನ್ನು ತನ್ನ ಸಂಸ್ಥೆಯ ಮುಖ್ಯಾಧಿಕಾರಿಗಳ ಪ್ರಮಾಣ ಪತ್ರದೊಂದಿಗೆ ಅಕ್ಟೋಬರ ತಾ. ೩ರ ಮೊದಲು ಸಮಿತಿಯ ಕಾರ್ಯದರ್ಶಿಗಳಿಗೆ ತಲಪುವಂತೆ ಕಳುಹಿಸತಕ್ಕದ್ದು.

ಒಟ್ಟು ನೂರು ರೂಪಾಯಿಗಳ ಮೊತ್ತದ ನಾಲ್ಕು ಬಹುಮಾನಗಳನ್ನು ಕೊಡಲಾಗುವುದು.

ವಿಷಯ:

೧ ಹೈಸ್ಕೂಲು ವಿದ್ಯಾರ್ಥಿಗಳಿಗೆ:—
"ನಾನು ಮೆಚ್ಚಿದ ಕಾರಂತರ ಒಂದು ಕಾದಂಬರಿ"
(ಮಿತಿ: ೮೦೦ ಪದಗಳು)

೨ ಕಾಲೇಜು ವಿದ್ಯಾರ್ಥಿಗಳಿಗೆ:—
"ಕಾರಂತರ ಕಾದಂಬರಿಯಲ್ಲಿ ಪಾತ್ರನಿರೂಪಣೆ"
(ಮಿತಿ: ೧೨೦೦ ಪದಗಳು)

ಕಾರ್ಯದರ್ಶಿಗಳ ವಿಳಾಸ.

ಕು. ರಿ ಹರಿದಾಸ ಭಟ್ಟ,
ಪೋಸ್ಟ್: ಕುಂಬಿಬೆಟ್ಟು,
ಉಡುಪಿ, ದ. ಕ.

ಕಥೆಗಾರ ರಾಜಾಜಿಯವರ ಕಲಾಸಿದ್ಧಿ

(೩ನೇ ಪುಟದಿಂದ)

ನೊಡನೆ ಬಂದಿದ್ದಾಗ ಈ ಘಟಂಗ ತನ್ನಗೆ ಹೊಡೆಯಲು ಬಂದ, ಆದರೆ, ಮಗ ಇಸ್ಮಾಯಿಲ್ ಅಡ್ಡ ಬಂದುದರಿಂದ ಅವನಿಗೇ ಪೆಟ್ಟಾಯಿತು!' ಎಂಬ ಹೇಳಿಕೆ ಕೊಟ್ಟನು.

ಪಾರ್ವತಿಯು ಮಾನ ಮರ್ಯಾದೆ ಹೋಗುವುದೆಂದು ಹೆದರಿ ನಿಜ ಸ್ಥಿತಿಯನ್ನು ತನ್ನ ಹೇಳಿಕೆಯಲ್ಲಿ ಮರೆಪಡಿಸಿದ ಕಾರಣ ಕೇಸು, ಕಾದಿರಖಾನನಿಗೆ ಗುಣವಾಗುವ ಹಾಗೆ ಮುಂದುವರಿಯುತ್ತದೆ. ಒಂದು ವೇಳೆ ಪಾರ್ವತಿಯು 'ಇಸ್ಮಾಯಿಲನು ದುರ್ವ್ಯವಹಾರಕ್ಕಾಗಿ ತನ್ನ ಮನೆಯೊಳಗೆ ಬಂದಿರುವ ಸತ್ಯವಾದ ಹೇಳಿಕೆಯನ್ನು ಕೊಟ್ಟಿದ್ದರೆ, ಮುಂದೆ, ಸುಖವಾಗಬಹುದಿತ್ತು! ಆದರೆ, ಹಳ್ಳಿಯ ಹುಡುಗಿ ಪಾರ್ವತಿ ಅದನ್ನೆಂತು ಬಲ್ಲಳು?

ಕೊನೆಗೆ, ಕೇಸು ಪೂರ್ಣಗೊಂಡು ನ್ಯಾಯಾಧೀಶರು ಕರೂಪನಿಗೆ ಏಳು ವರ್ಷಗಳ ಕಠಿಣ ಸಜೆಯನ್ನು ವಿಧಿಸುತ್ತಾರೆ. ಇದಾದಬಳಿಕ ಪಾರ್ವತಿಗೆ 'ಈಕೆ ಗಂಡನನ್ನು ಕೊಂದು ತಿಂದ ಬಜಾರಿ!" ಎಂದು ಹೇಳಿಯಾರೂ ಆಶ್ರಯ ಕೊಡದೆ, ಹೊರಗೆ ನೂಕುತ್ತಾರೆ.

ಪಾರ್ವತಿಯು, ಹೊಟ್ಟೆ ಬಟ್ಟೆಗಿಲ್ಲದೆ, ಆಶ್ರಯದಾತರಿಲ್ಲದೆ, ಗಂಡನನ್ನು ಜೈಲಿಗೆ ಕಳುಹಿಸಿದ ಬಜಾರಿಯೆಂದು, ಹೇಳಿಸಿಕೊಂಡು, ಅನಾಥೆಯಾಗಿ ಸಂಕಟಪಡುತಾಳೆ! ಆಕೆಯ ದುಃಖಮಯವಾದ ಈ ಜೀವನದಿಂದ ಬಿಡುಗಡೆ ಹೊಂದುವ ಒಂದೇ ಒಂದು ಉಪಾಯವಿತ್ತು. ಆಕೆ ಕೊನೆಗೆ ಅದನ್ನೇ ಅನುಸರಿಸುತ್ತಾಳೆ.

ನಡೆಯಲಾರದೆ ನಡೆಯುತ್ತಿದ್ದ ಪಾರ್ವತಿಯು—ಎತ್ತರದ ಬೆಟ್ಟದ ಮೇಲಿರುವ ದೇವರ ಗುಡಿಗೆ ತಲುಪಿ ದೇವರಿಗೆ ಕೊನೆಯ ನಮಸ್ಕಾರ ಸಲ್ಲಿಸುತ್ತ—'ದೇವರೇ! ನಾನು ಅನಾಥೆ! ನಿರಪರಾಧಿನಿ! ಆ ಮುಸ್ಲಿಮನು ನನ್ನ ಮನೆಯೊಳಗೆ ಬಂದಿದ್ದನಾದರೂ ನಾನು ಅಪವಿತ್ರಳಾಗಿಲ್ಲ! ಆದರೂ ನಾನೀಗ ಜನರ ದೃಷ್ಟಿಯಲ್ಲಿ ಕಳಂಕಿನಿಯಾದೆ! ಓ! ದೇವರೇ ಹೊಟ್ಟೆಗಿಲ್ಲದೆ ಬದುಕಲಾರೆ! ಆದರೂ ಈ ಜೀವ ಹೋಗಲಾರದಲ್ಲ! ನೀನೇ ಅನಾಥ ರಕ್ಷಕ! ನನ್ನನ್ನು ನಿನ್ನ ಬಳಿಗೆ ಕೆರೆದುಕೊಂಡು ಕಾಪಾಡು! ಓ! ನನ್ನ ದೇವರೆ!" ಎಂದು ಅಶ್ರುಪ್ರವಾಹದೊಡನೆ, ಕೊನೆಯದಾಗಿ ಪ್ರಾರ್ಥಿಸಿದ ಆಕೆ ಆ ಎತ್ತರವಾದ ಗುಡ್ಡದಿಂದ ಕೆಳಗೆ ಧುಮುಕುತ್ತಾಳೆ! ಇಲ್ಲಿಗೆ ಈ ದುರಂತಮಯವಾದ ಕಥಾದೃಷ್ಯ ಸೂರ್ಣಗೊಳ್ಳುತ್ತದೆ.

ಮಾನ್ಯ ರಾಜಾಜಿಯವರು ಈ ಕಥೆಯನ್ನು ನಿರೂಪಿಸಿರುವ ರೀತಿ ಹೃದಯ ಕರಗಿಸುವಂತಿದೆ ಅವರ ಕಥನ ಕಲಾಸಿದ್ಧಿಗೆ ಇಂತಹ ಅನೇಕ ಉದಾಹರಣೆಗಳಿವೆ. ಇಲ್ಲಿ ಈ ಕಥೆಯಲ್ಲಿ ಬರುವ ಒಂದೆರಡು ಸನ್ನಿವೇಶಗಳನ್ನು ಮಾತ್ರ ಪರಿಶೀಲಿಸಿದರೆ ಸಾಕು. ಪೊಲೀಸ್ ಸ್ಟೇಶನ್ನಿನಲ್ಲಿ ಪಾರ್ವತಿಯ ವಿಚಾರಣೆಯಾಗುತ್ತದೆ. ಈ ದೀರ್ಘವಾದ ವಿಚಾರಣೆಯಲ್ಲಿ ಒಂದೆರಡು ಸಾಲು ಹೀಗಿದೆ—ಜಮಾದಾರ—'ಏಯ್ ಹುಡುಗಿ! ನೀನು ನಿರಪರಾಧಿನಿಯಂತೆ ತೋರುವೆ! ಸತ್ಯ ಹೇಳು—ಆ ದಿನ ಕಾದಿರಖಾನ ಅತನ ಮಗನೊಡನೆ ನಿನ್ನ ಮನೆಗೆ ಬಂದಿದ್ದನೇ? ಹೇಳು!

ಪಾರ್ವತಿ—'ತಂದೆ ಮತ್ತು ಮಗ ಇಬ್ಬರೂ ಬಂದಿಲ್ಲ ಸ್ವಾಮಿ"

ಜಮಾದಾರ—(ಬೇರೆ ಪೋಲೀಸರ ಕಡೆಗೆ ಕಣ್ಣುಸನ್ನೆ ಮಾಡಿ ನಗುತ್ತ)

ಓಹ್! ಹಾಗಾದರೆ, ಆ ತರುಣ ಇಸ್ಮಾಯಿಲ್ ಒಬ್ಬನೇ ಬಂದಿದ್ದ! ಅಲ್ಲವೇ?

ಪಾರ್ವತಿ— 'ನನ್ನೊಡನೆ, ಇಂತಹ ಮಾತು ಆಡಬೇಡಿರಿ. ಆ ಮುಸ್ಲಿಮನಿಗೆ ನನ್ನ ಮನೆಯಲ್ಲೇನು ಕೆಲಸ? ನನ್ನನ್ನು ಮನೆಗೆ ಕಳುಹಿಸಿಕೊಡಿ! ನನ್ನ ಹಿರಿಯರಿದ್ದಾರೆ! ಅವರಲ್ಲಿ—ಕೇಳಿ!'

ಜಮಾದಾರ— 'ಮನೆಗೆ ಹೋಗಲು ಏಕೆ ನಿನಗೆ ಅವಸರ?'

ಪಾರ್ವತಿ— 'ಅಯ್ಯೋ! ದೇವರೇ!' ಎಂದು ಕಣ್ಣೀರು ಸುರಿಸುವಳು.

ಜಮಾದಾರ— (ಜರ್ಬಿನಿಂದ) 'ಈ ಹೆಂಗಸು ಹೀಗೆ ಕೇಳಿದರೆ ಹೇಳಲಾರಳು! ಬೀದಿಯ ನಾಯಿಯಂತಿರುವ ಈ ಬಜಾರಿಯು ಎಷ್ಟು ಮಂದಿ ತರುಣರನ್ನು ತನ್ನ ಬಲೆಗೆ ಹಾಕಿಕೊಂಡು ಕೊಂದಿರುವಳೋ? ಹೇಳಲಾಗುವುದಿಲ್ಲ!'

ಪಾರ್ವತಿ— ಸ್ವಾಮಿ! ಇಂತಹ ಕೆಟ್ಟ ಮಾತುಗಳನ್ನೇಕೆ ಆಡುತ್ತೀರಿ? ನಿಮಗೂ ಅಕ್ಕ ತಂಗಿಯರಿಲ್ಲವೇ?, ಕರುಣೆಯಿಲ್ಲವೇ? ನಾನು ನಿರಪರಾಧಿನಿ! ನನ್ನನ್ನು ನಿಮ್ಮ ತಂಗಿಯೆಂದೇ ತಿಳಿದುಕೊಳ್ಳಿ ಸ್ವಾಮಿ!, ಎನ್ನುತ್ತ ಮುಗ್ಧೆ ಪಾರ್ವತಿ ಬಿಕ್ಕಿ ಬಿಕ್ಕಿ ಅಳುತ್ತಾಳೆ!

ಕರುಪನಿಗೆ ಸಾಲಕೊಟ್ಟ ಜಮೀನ್‌ದಾರನು ತಾನು ಸಾಲ ವಸೂಲು ಮಾಡುವ ಕ್ರಮ ನೋಡಬೇಕು.

ಜಮೀನ್‌ದಾರ— (ತನ್ನ ಸೇವಕನೊಡನೆ 'ಏಯ್' ಎಲ್ಲಿ ಆ ಕರುಪ? ಅವನನ್ನು ಹೊರಗೆಳೆದು ಹಾಕು! ನನ್ನ ಹಣ ಈ ನಿಮಿಷದಲ್ಲಿ ಇಟ್ಟುಬಿಡಬೇಕು! ಇಲ್ಲವಾದರೆ ಸಂತೆಯಲ್ಲಿ ಅವನ ಎತ್ತುಗಳನ್ನು ಮಾರಾಟಮಾಡಿಸುತ್ತೇನೆ!

ಕರುಪ— 'ಸ್ವಾಮಿ! ಕೋಪಿಸಬಾರದು! ಏನೋ ಕಷ್ಟದಲ್ಲಿದ್ದೇನೆ! ನಿಮ್ಮ ಗಂಟು ಮುಳುಗಿಸುವ ಪಾಪಿ ನಾನಲ್ಲ ಸ್ವಾಮಿ! ನನಗೆ ದಯವಿಟ್ಟು ಕೆಲವು ದಿನ ವ್ಯಾದೆ ಕೊಡಿ! ಬಡ್ಡಿಯನ್ನೂ ಬೇಕಾದರೆ ಸ್ವಲ್ಪ ಹೆಚ್ಚಿಗೆ ತಕ್ಕೊಳ್ಳಿ ಸ್ವಾಮಿ!

ಜಮೀನ್‌ದಾರ— (ಕೋಪದಿಂದ) ಥೂ... ನಾಯೀ... ನಾಯೀ! ಇವನನ್ನು ಮೆಟ್ಟಿನಿಂದ ಹೊಡೆಯಿರಿ! ಬೊಗಳುವ ನಾಯಿ! ನೀನು ಬಡ್ಡಿ ಕೊಡುವೆ! ಅಲ್ಲವೇ? ಬಾಯಿ ತೆರೆದರೆ ಹಲ್ಲು ಉದುರಿಸಿಯೇನು! ನಡೆ! ಆ, ಕಾದಿರನಿಂದಲಾದರೂ ನನ್ನ ಹಣ ತಂದು ಕೊಡು!

ಕಥೆಯಲ್ಲಿ ಈ ಸಾಲುಗಳನ್ನು ಓದುವಾಗ ವಾಚಕರಿಗೆ ಒಂದು ಬಗೆಯ ಸಂವೇದನೆಯಾಗದಿರದು!

ಈ ಕಥೆಯಲ್ಲಿ ಶ್ರೀ ರಾಜಾಜಿಯವರ ಕಥನ ಕಲಾಸಿದ್ಧಿಯು ಅತ್ಯುಚ್ಚ ಮಟ್ಟದಲ್ಲಿದ್ದು ವಾಚಕರನ್ನು ಮುಗ್ಧಗೊಳಿಸುವುದು. ಕೆಥೆಯ ಕೊನೆಯಲ್ಲಿ ಶ್ರೀ ರಾಜಾಜಿಯವರು—'ಪಾರ್ವತಿಯು ಆ ಎತ್ತರದ ಬೆಟ್ಟದಿಂದ ಕಾರಿ ನೆಲ ಮುಟ್ಟುವುದರೊಳಗೆ ಆಕೆಗೆ ಎಂತಹ ಅನುಭವವಾಯಿತು?' ಎಂಬ ಕುರಿತು 'ಆಹಾ! ಒಂದೇ ಒಂದು ಕ್ಷಣದೊಳಗಾಗಿ ನಿರ್ಭಾಗ್ಯೆ ಪಾರ್ವತಿಗೆ ಎಂತಹ ಆನಂದ ಲಭಿಸಿತು? ಹಾ! ಆ ಅನುಭವ ಎಷ್ಟು ಶೀತಲ! ಎಷ್ಟು ಶಾಂತಿಮಯ! ಆನಂದಮಯ! ಪಾರ್ವತಿಗೆ ತಾನು ಬೆಟ್ಟದಿಂದ ಹಾರಿದಾಗ ಆಕೆಯ ತಲೆಯೊಳಗಿನ ಭಾಗಕ್ಕೆ ಒಂದು ಬಲವಾದವೆಟ್ಟು ಬಿದ್ದಂತಾಯಿತು! ಅಂತಹ ಅನುಭವ ಆಕೆಗೆ ಹೊಸದಾಗಿ ಆಗಿತ್ತು! ಮತ್ತೆ ಅವಳಿಗೆ ಏನೂ ಅನುಭವವಾಗಲಿಲ್ಲ! ಆಕೆ ಅನಂತ ಶಾಂತಿಯೊಡನೆ ಐಕ್ಯಳಾದಳು! ಅವಳ ಆತ್ಮವು ಅವಳ ದುಃಖಮಯವಾದ ದೇಹರೂಪೀ ಗೂಡನ್ನು ಬಿಟ್ಟು ಹಾರಿ ಹೋಯಿತು!' ಎಂಬುದಾಗಿ ಹೇಳುತ್ತಾರೆ!

ಈ ಕಥೆಯಲ್ಲಿ ಬರುವ ಇಂತಹ ಅನೇಕ ದೃಶ್ಯ ಚಿತ್ರಗಳು ಹಾಗೂ ಸಂಭಾಷಣೆ ಇವು ಮನೋಜ್ಞವಾಗಿದ್ದು ಶ್ರೀ ರಾಜಾಜಿಯವರ ನಿರೂಪಣಾ ಚಾರ್ತುಕ್ಕೆ ಮಹತ್ವವನ್ನಿತ್ತಿವೆ!

ಉಡ್ಪಿ ಡಿ. ಮು. ಕೋರ್ಟಿನಲ್ಲಿ

R. C. O. P. No 13/1962.

ವಿ. ಭವಾನಿಶಂಕರ ರಾವ್— ಅರ್ಜಿದಾರ.

ಮತ್ತು

ಮಹಮ್ಮದ್ ಹುಸ್ಸೇನ್ ಸಹೇಬ ಕೂಡಾ —ಎದ್ರಿರು.

ಇವರೊಳಗೆ

2ನೇ ಎದ್ರಿ— ಮಹಮ್ಮದ್ ಹುಸ್ಸೇನ್ ಸಹೇಬ ಕಡಂದಲ ಬುಡಾನ್ ಸಾಹೇಬರ ಮಗ—ಉಡ್ಪಿ ಕ್ಸಬಾ ಮೂಡನಿಡಂಬೂರು ಗ್ರಾಮದ ಸಿರಿಬೀಡಿನಲ್ಲಿರುವವರು. ಇವರಿಗೆಯೊ ಮೂಲಕ ತಿಳುಹಿಸುವದೇನೆಂದರೆ.

ಅರ್ಜಿಯಲ್ಲಿ ವಿವರ್ಸಿದ ಮನೆಯ ಸ್ವಾದೀನತೆ ವಗೈರೆ ನಿವೃತ್ತಿಗಳನ್ನು ಕೇಳಿ ನಿಂಮ ಮೇಲೆ ಕೂಡಾ ದಾಕಲಾದ ಅರ್ಜಿಯನ್ನು ತಾ. 19—10—1962ಕ್ಕೆ ಇಟ್ಟದೆ. ನಿಂಮ ದೇನಾದರೂ ಅಕ್ಷೇಪಣೆ ಇದ್ದರೆ ಸದ್ರಿ ದಿನ ಪೂರ್ವಾಹ್ನ 10 ಗಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಅರ್ಜಿದಾರನ ಅಪೇಕ್ಷೆ ಮೇರೆಗೆ ಏಕಪಕ್ಷವಾಗಿ ತೀರ್ಮಾನಿಸಲಾದೀತು.

(ಕೋರ್ಟು ಹುಕುಂ ಮೇರೆಗೆ)

ಯು. ಬಿ. ಕೃಷ್ಣರಾವ್,
ಅರ್ಜಿದಾರನ ಎಡ್ವೋಕೇಟ್.

ಉಡ್ಪಿ, ತಾ. 18—9—1962.

ಮನೆಯೆಂದಾದಲ್ಲಿ ಇರಲೇಬೇಕಾದ ಗೃಹವೈದ್ಯ

ಮನೆ ಮದ್ದು

(HOME REMEDIES)

ಬರೆದವರು: ಡಾಕ್ಟರ್ ಕೊರಡ್ಕಲ್ ವೆಂಕಟ್ರಾವ್ ಎಲ್.ಎ.ಎಮ್ ಮಕ್ಕಳ, ಹೆಂಗಸರ, ಗರ್ಭಿಣಿಯರ, ಇತರ ಎಲ್ಲಾ ಸಾಮಾನ್ಯ ಕಾಹಿಲೆಗಳಿಗೂ ಮನೆಯಲ್ಲೇ ಮದ್ದು ಮಾಡುವ ವಿಧಾನವು ವಿವರಿಸಲ್ಪಟ್ಟಿದೆ. ಹೆರಿಗೆ ವಿಧಾನ ಸವಿಸ್ತಾರವಾಗಿ ಕೊಡಲ್ಪಟ್ಟಿದೆ. ಬೆಲೆ ರೂ. ಎರಡು

ನಿಮ್ಮಷ್ಟಕ್ಕೆ ನೀವೇ ಇಂಗ್ಲಿಷ್ ಕಲಿಯಬೇಕೆಂದಿದ್ದರೆ—
ವ್ಯಾಕರಣಬದ್ಧವಾಗಿ ಇಂಗ್ಲಿಷ್ ಮಾತಾಡಬೇಕೆಂದಿದ್ದರೆ—
ದಿ| ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರಿಂದ ನಿರಚಿತವಾದ—

ಸುಲಭದಲ್ಲಿ ಇಂಗ್ಲಿಷ್

(ENGLISH MADE EASY)

ಎಂಬ ಆಂಗ್ಲ ಸ್ವಯಂಬೋಧಿನಿಯನ್ನು ಇಂದೇ ತರಿಸಿಕೊಳ್ಳಿರಿ, ವಿದ್ಯಾರ್ಥಿಗಳಿಗೂ ವಯಸ್ಕರಿಗೂ ಅತ್ಯುಪಯುಕ್ತವಾದುದು

ಬೆಲೆ: ರೂ. ಎರಡು. ಉತ್ತಮ ಪ್ರತಿ: ರೂ. ಎರಡೂವರೆ

ಇಂಗ್ಲಿಷಿನಲ್ಲಿ ಪತ್ರವ್ಯವಹಾರ ನಡೆಸಲು ಅನುಕೂಲವಾದ ಪ್ರತಿಯೊಬ್ಬರಿಗೂ ಅತ್ಯುಪಯುಕ್ತವಾದ ಪುಸ್ತಕ

LETTER WRITING MADE EASY

ಸುಲಭದಲ್ಲಿ ಪತ್ರಲೇಖನ

ದಿನವಹಿ ಪತ್ರವ್ಯವಹಾರಕ್ಕೆ ಬೇಕಾಗಬಹುದಾದ 75 ಇಂಗ್ಲಿಷ್ ಪತ್ರಗಳು ಉಪಾಧ್ಯಾಯರಿಗೂ, ವಿದ್ಯಾರ್ಥಿಗಳಿಗೂ, ವಿಶೇಷ ಸಹಕಾರಿ.

ಬೆಲೆ ರೂ. 1-4-0 (1=25).

ವಿ. ಸೂ.—ಆಯಾಯ ಪುಸ್ತಕದ ಬೆಲೆಯೊಂದಿಗೆ ಟಪ್ಪಾಲು ಖರ್ಚಿಗಾಗಿ 0 =25 NP ಸೇರಿಸಿ ಮನಿಯಾರ್ಡರು ಮಾಡಿದರೆ ಪುಸ್ತಕ ಕಳಿಸಲಾಗುವುದ

ನವಭಾರತ ಪುಸ್ತಕ ಭಂಡಾರ, ಉಡುಪಿ.

ಪ್ರತಿಗಳು— ಮಂಗಳೂರಲ್ಲಿ ಶ್ರೀನಿವಾಸ್ ಬ್ರದರ್ಸ್, ಸ್ಕೂಲ್ ಬುಕ್ ಕೊ., ಕೆನರಾ ಕೊಲೆಜ್ ಬುಕ್ ಕೊ., ಇಂಡಿಯನ್ ಇಂಡಸ್ಟ್ರಿಯಲ್ಸ್ & ಏಜನ್ಸೀಸ್ ಇವರಲ್ಲಿಯೂ, ಪುತ್ತೂರಲ್ಲಿ ಪೊಪ್ಯುಲರ್ ನ್ಯೂಸ್ ಏಜನ್ಸಿಯಲ್ಲಿಯೂ ದೊರೆಯುತ್ತವೆ.

ಜೀವನದ ವಿವಿಧ ಘಟನೆಗಳನ್ನು ಹೃದಯ ಸ್ಪರ್ಶಿಯಾಗಿ ಚಿತ್ರಿಸುವ ಕಥಾಸಂಗ್ರಹ

ಮದುವೆ ಸೀರೆ

ಮದುವೆ ಕಾಲದಲ್ಲಿ ವಧೂವರರಿಗೆ ಉಡುಗೊರೆಯಾಗಿ ಕೊಡಲಿಕ್ಕೂ ಯೋಗ್ಯವಾದ ಪುಸ್ತಕ.

ಬೆಲೆ: ರೂಪಾಯಿ ಒಂದು.

ರೂ. 1-25 ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಬಹುದು

ನವಭಾರತ ಪುಸ್ತಕ ಭಂಡಾರ, ಉಡುಪಿ.

ನರಭಕ್ಷಕ ಬಕಾಸುರ

(೨ನೇ ಪುಟದಿಂದ)

ಒಂದೇ ಹಾರಿಗೆ ದೂರ ಬಿದ್ದು, ಮತ್ತೆ ಎದ್ದು ಮರಗಳಾಚೆಗೆ ಓಡಿ ಹೋದನು.

ಬಲಿಷ್ಠ ಹುಡುಗನು ಕೈಪೊರೆಸಿಕೊಳ್ಳುತ್ತಾ ತನ್ನವರೊಂದಿಗೆ ಸೇರಿಕೊಂಡ. ಮತ್ತೆ ಸ್ವಲ್ಪ ಹೊತ್ತಿಗೆ ಆ ಅರು ಮಂದಿಯೂ ಏಕಚಕ್ರಪುರವನ್ನು ಪ್ರವೇಶಿಸಿದರು.

o o o

ಅವರು ಬೀದಿಯಲ್ಲಿ ಹೋಗುತ್ತಿದ್ದಾಗ ಚಯನನು ಅವರಿಗಿದಿರಾದನು. ಅವನು ಅವರನ್ನು ಆಶ್ಚರ್ಯದಿಂದ ನೋಡಿ—"ಇವರಾರೋ ಬೇರೆ ಊರಿನವರ ಹಾಗಿದೆ. ಏಕೆ ಬಂದರೋ? ಒಳ್ಳೆಯದಕ್ಕೋ ಕೆಟ್ಟದಕೋ!" ಎಂದುಕೊಂಡ.

ಅವನು ಬ್ರಾಹ್ಮಣಿತಿಯನ್ನು ಸಮೀಪಿಸಿ "ನಿಮ್ಮದು ಯಾವೂರಮ್ಮ? ಈ ಊರಿನಲ್ಲಿ ನಿಮಗೆ ಯಾರಾದರೂ ಬಂಧುಗಳಿದ್ದಾರೆಯೆ? ನಾನು ಈ ಊರಿನಲ್ಲಿ ಅನೇಕ ವರ್ಷಗಳಿಂದ ಇದ್ದೇನೆ. ನಿಮ್ಮನ್ನು ಎಂದೂ ನೋಡಲಿಲ್ಲ. ಇಲ್ಲಿಗೇ ಬಂದಿರಾ? ಇನ್ನೆಲ್ಲಿಗಾದರೂ ಹೋಗುತ್ತೀರಾ?" ಎಂದು ಕೇಳಿದ.

"ನಮಗೆ ಸ್ವಂತ ಊರೂ ಅಂತ ಯಾವುದೂ ಇಲ್ಲವಯ್ಯಾ. ನಾನೂ ನನ್ನ ಮಕ್ಕಳೂ ಒಂದು ಕಾಲದಲ್ಲಿ ಚೆನ್ನಾಗಿಯೇ ಬಾಳಿದೆವು. ಕಾಲ ಕೂಡಿಬಾರದೆ ಹೀಗೆ ದೇಶ ದೇಶ ತಿರುಗುತಿದ್ದೇವೆ. ಯಾವ ಊರಾದರೂ ನಮಗೆ ಒಂದೇ. ತಲೆ ಬಾಚಿಕೊಳ್ಳಲಿಕ್ಕೆ ಒಂದು ನೆರಳು ಜಾಗೆ ಸಿಕ್ಕಿದರೆ ಸಾಕು!" ಎಂದಳು ಬ್ರಾಹ್ಮಣಿತಿ"

"ನೀವು ಯಾರು? ಇವರ ತಂದೆಯವರ ಹೆಸರೇನು?" ಎಂದು ಕೇಳಿದ ಚಯನ

ಬ್ರಾಹ್ಮಣಿತಿ ತಲೆವಾಗಿಕೊಂಡು "ಅದೇನೂ ನಮ್ಮನ್ನು ಕೇಳಬಾರದು. ನಾವು ಅಜ್ಞಾತವಾಗಿರಬೇಕೆಂತ ಇದ್ದೇವೆ. ಶತ್ರುಗಳು ನಮ್ಮನ್ನು ಕೊಲ್ಲಬೇಕೆಂತ ಬಹಳ ಪ್ರಯತ್ನ ಮಾಡುತ್ತಾ ಇದ್ದಾರೆ. ನನ್ನ ಈ ಎರಡನೇ ಮಗನನ್ನು ಕೊಲ್ಲಬೇಕಂತ ಅವರು ಮಾಡಿದ ಪ್ರಯತ್ನ ಒಂದೆರಡಲ್ಲ. ಇವನ ಆಯುಷ್ಯ ಗಟ್ಟಿಯಿದೆಯೆಂತಲೇ ಬದುಕಿದ್ದಾನೆ ಮರಣ ಭಯ ಎಂದೋ ನಮಗೆ ತೀರಿಹೋಗಿದೆ. ಇದು ಯಾವ ನಗರವೋ ನಮಗೆ ಗೊತ್ತಿಲ್ಲ. ಇಲ್ಲಿ ಇರಲು ನಮಗೊಂದು ಗೇಣು ಜಾಗೆ ಸಿಕ್ಕಿದರೆ ಇಲ್ಲೇ ಇರುತ್ತೇವೆ. ಒಬ್ಬರ ತಂಟೆಗೆ ಹೋಗುವವರು ನಾವಲ್ಲ ಸ್ವಾಮಿ" ಎಂದಳು.

"ಹಾಗಾದರೆ ಬೇರೆಲ್ಲಿಯಾದರೂ ಯಾಕೆ ಹೋಗಬೇಕು? ನಮ್ಮ ಮನೆಗೇ ಹೋಗೋಣ ನಡೆಯಿರಿ. ಈ ಊರಿನ ಹೆಸರು ಏಕಚಕ್ರ ನಗರ" ಎಂದ ಚಯನ.

"ಬಹಳ ಕೃತಜ್ಞರಾಗಿರುತ್ತೇವೆ ಅಣ್ಣಯ್ಯ"

ಚಯನನು ಆ ಕುಟುಂಬವನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ, ಮನೆಯ ಒಂದು ಭಾಗವನ್ನು ಅವರಿಗೆ ಬಿಟ್ಟುಕೊಟ್ಟನು.

ಈ ವಿಧಾವಾಗಿ ಲಾಕ್ಷಾಗೃಹದಲ್ಲಿ ಸುಟ್ಟು ಹೋಗದೆ ಬದುಕಿ ಹೊರಬಿದ್ದ ಕುಂತಿಯೂ ಪಾಂಡವರೂ ಏಕಚಕ್ರಪುರದಲ್ಲಿ ಬಂದು ಸೇರಿಕೊಂಡು ಆ ಬ್ರಾಹ್ಮಣನ ಮನೆಯಲ್ಲಿ ಅಡಗಿದ್ದರು. ಅವರಿಗೂ ಭಬಂಡಿಯವನಿಗಿರುವಂತೆ, ರಾಕ್ಷಸರ ಭಯಕ್ಕಿಂತಲೂ ಮಾನವರ ಭಯವೇ ಹೆಚ್ಚಾಗಿತ್ತು.

ಪಾಂಡವರು ದಿನವಿಡೀ ವೇದ ಪರನ ಮಾಡುತ್ತಾ ಇರುತ್ತಾರೆ. ನಾಲ್ವರು ನಾಲ್ಕುಬೀದಿಗಳಿಗೆ ಹೋಗಿ ಮಧುಕರ ವೃತ್ತಿಮಾಡಿ ಭೋಜನ ತೆಗೆದುಕೊಂಡು ಬರುತ್ತಾರೆ. ಕುಂತೀದೇವಿ ಅವರು ತಂದ ಆಹಾರವನ್ನು ಸರೀ ಎರಡು ಭಾಗಮಾಡುತ್ತಾಳೆ. ಒಂದು ಭಾಗವನ್ನೆಲ್ಲಾ ಭೀಮನೊಬ್ಬನೇ ತಿನ್ನುತ್ತಾನೆ. ಉಳಿದರ್ಧವನ್ನು ಕುಂತಿಯೂ ಉಳಿದ ನಾಲ್ವರೂ ತಿನ್ನುತ್ತಾರೆ. ಭೀಮನ ಭುಜಬಲವೇ ಅವರಿಗೆ ಅಂಗರಕ್ಷೆ. ಅವರು ಮತ್ತೆಲ್ಲಿಗೂ ಹೋಗುವುದಿಲ್ಲ. ಯಾರೊಂದಿಗೂ ಹರಟೆ ಹೊಡೆಯುವುದಿಲ್ಲ. ಬಕಾಸುರನ ವಿಷಯ ಅವರಿಗೆ ಗಂಧಸಹಾ ಗೊತ್ತಿಲ್ಲ

ಕೆಲವು ದಿನ ಕಳೆದುವು.

o o o

ಅಕಸ್ಮಾತ್ತಾಗಿ ಚಯನನ ಮನೆಯ ಮೇಲೆ ಹದ್ದೆರಗಿತು. ಬೆಳಗ್ಗೆಯೇ ನಗರ ರಕ್ಷಣಾಧಿಕಾರಿ ಬಂದು "ಈ ದಿನದ ನರಬಲಿ ನಿಮ್ಮನೆಯ ಸರದಿ" ಎಂದು ಶುಭವಾರ್ತೆ ಹೇಳಿ ಹೋದ

ಆ ಸಮಯದಲ್ಲಿ ಕುಂತಿಯೂ ಭೀಮನೂ ಮನೆಯಲ್ಲಿಯೇ ಇದ್ದರು. ಉಳಿದವರು ಮಧುಕರಕ್ಕಾಗಿ ಹೋಗಿದ್ದರು. ಚಯನನ ಐದು ವರ್ಷದ ಹುಡುಗ ಭೀಮನ ಹತ್ತಿರ ಕಥೆ ಹೇಳಿಸಿಕೊಂಡು ಕೇಳುತ್ತಿದ್ದ. ಎಲ್ಲವೂ ರಾಕ್ಷಸರ ಕಥೆಗಳೇ.

"ರಾಚ್ಚರನ್ನು ಕೊಲ್ಲಾಕಾಗೋಲ್ಲಲ್ಲಾ?" ಎಂದ ಹುಡುಗ.

"ಯಾರು ಹೇಳಿದ್ದು ಹಾಗೆ? ಒಂದು ಕೈಯಿಂದ ಅವನ ಕುತ್ತಿಗೆ ಹಿಡಿದು ಬಗ್ಗಿಸಿ, ಇನ್ನೊಂದು ಕೈಯಿಂದ ದೊಣ್ಣೆ ಹಿಡಿದುಕೊಂಡು ರಪಾರಪಾ ಹೊಡೆದರೆ ಸ್ವಲ್ಪ ಹೊತ್ತಿಗೆಲ್ಲಾ ಅವ ಸತ್ತೇ ಹೋಗ್ತಾನೆ."

"ಬಕಾಸುರ ಕೂಡಾ ಸಾಯ್ತಾನಾ?"

"ಬಕಾಸುರನಾ? ಯಾರಾದರೂ ಸಾಯ್ತಾರೆ. ನಿನಗೆ ಗೊತ್ತಿಲ್ಲಾಂತ ಕಾಣುತ್ತೆ. ರಾಕ್ಷಸರಿಗೆಲ್ಲ ಮೊಂದು ಧೈರ್ಯವೇ ಹೊರತು ಮೆದುಳು ಕಡಮೆ!" ಎಂದ ಭೀಮ.

ಕುಂತಿಗೆ ನಗೆ ಬಂತು ಇದೇ ಮಾತನ್ನು ಅನೇಕರು ಭೀಮನಿಗೇ ಹೇಳಿದ್ದರು.

ಅಕಸ್ಮಾತ್ತಾಗಿ ಪಕ್ಕದ ಭಾಗದಿಂದ ರೋಧನ ಧ್ವನಿ ಕೇಳಿಸಿತು. ಕುಂತಿಯೂ ಭೀಮನೂ ಸ್ತಂಭಿತರಾಗಿ ಕಿವಿ ನಿಗುರಿಸಿಕೊಂಡು ಕೇಳಿದರು.

"ಪಾಪ! ಏನೋ ಕಷ್ಟ ಬಂದಹಾಗಿದೆ. ನೋಡಿ ಬರುತ್ತೇನೆ ಇರು" ಕುಂತಿದೇವಿ ಎದ್ದು ಚಯನರ ಭಾಗಕ್ಕೆ ಹೋದಳು.

ಚಯನನ ಹೆಂಡತಿಯೂ ಮಗಳೂ ಒಂದೇ ಸವನೆ ಅಳುತ್ತಿದ್ದರು. ಚಯನನ ಮುಖವು ಕೇನೆ ಗಡ್ಡೆಯ ಹಾಗಾಗಿತ್ತು.

"ಅತ್ತರೆ ಏನಾದರೂ ಪ್ರಯೋಜನವಿದೆಯೇ? ತಪ್ಪುತ್ತೆಯೆ? ನಮ್ಮ ಮನೆಯಿಂದ ಯಾರಾದರೊಬ್ಬರು ಹೋಗಿ ತೀರಬೇಕು. ದಿನಾ ಯಾರೋ ಒಬ್ಬರಿಗೆ ಬರುವಂಧಾದ್ದೇ! ಈ ದಿನ ನಮ್ಮ ಸರದಿ! ಹುಂ, ನಾನೇ ಹೋಗಿ ಬಿಡುತ್ತೇನೆ. ನೀನು ಇನ್ನೊಂದು ನಾಲ್ಕು ವರ್ಷ ನೋಡಿಕೊಂಡಿರು. ಮಕ್ಕಳಿಗೆ ರೆಕ್ಕೆ ಹುಟ್ಟುತ್ತೆ" ಎಂದ ಚಯನ ವ ನಸ್ಸು ದೃಢಮಾಡಿ.

"ನೀವು ಹೋದರ ನಾವೆಲ್ಲರೂ ದಿಕ್ಕಿಲ್ಲದವರಾಗಿ ಬಿಡುತ್ತೇವೆ. ನಾನೇ ಹೋಗುತ್ತೇನೆ. ಬ್ರಾಹ್ಮಣ ಸ್ತ್ರೀ, ಮುತ್ತೈದೇ ಅಂದುಕೊಂಡು ಆತ ನನ್ನನ್ನು ಒಂದು ವೇಳೆ ಬಿಟ್ಟರೂ ಬಿಡಬಹುದು" ಎಂದಳು ಬ್ರಾಹ್ಮಣನ ಪತ್ನಿ.

"ಎಂದಾದರೂ ಒಂದು ದಿನ ಸಾಯಲೇ ಬೇಕಲ್ಲಾ, ನನ್ನನ್ನೇ ಕಳುಹಿಸಿಬಿಡೀ! ಅಮ್ಮಾ! ಅಪಾ" ಎಂದಳು ಮಗಳು ಅಳುತ್ತಲೇ.

ಇಷ್ಟರಲ್ಲಿ ಹುಡುಗ ಕೈಯಲ್ಲೊಂದು ಮುರುಕು ಕೋಲು ಹಿಡಿದುಕೊಂಡು ಬಂದು "ನಾನು ಆ ರಾಚ್ಚಸನ್ನ ಇದರಿಂದ ಕೊಂಧಾಕ್ತೇನೆ" ಅಂದ ಜೋರಾಗಿ.

ಎಲ್ಲರೂ ಗೋಳೆಂದರು.

ಅವರಿಗೆ ಬಂದ ಕಷ್ಟವೇನೆಂಬುದು ಕುಂತಿಗೆ ಬೋಧವಾಗಲಿಲ್ಲ.

"ಅಯ್ಯೊ, ನೀವೆಲ್ಲರೂ ಆರೋಗ್ಯವಾಗಿಯೇ ಕಾಣಿಸುತ್ತೀರಿ. ಏನಾದರೂ ಕೆಟ್ಟ ಸಮಾಚಾರ ಬಂತೋ ಅಂದರೆ, ಹೊರಗಿನಿಂದ ಬಂದವರಾರೂ ಇಲ್ಲಿ ಕಾಣುವುದಿಲ್ಲ. ನಿಮಗೆ ಬಂದ ಕಷ್ಟವೇನೋ ಸ್ವಲ್ಪ ಹೇಳಿ. ಸಾಧ್ಯವಾದರೆ ನನ್ನ ವಕ್ಕಳು ಸಹಾಯ ಮಾಡಿಯಾರು!" ಎಂದಳು ಕುಂತಿ.

ಅವಳು ತನ್ನ ಮಕ್ಕಳಲ್ಲಿ ಒಬ್ಬನನ್ನು ಬಲಿಗೆ ಕೊಡುತ್ತೇನೆಂದು ಹೇಳುವ ಹಾಗೆ ಚಯನನಿಗೆ ತೋರಿತು ಕೂಡಲೇ ಅವನು ಕೂಗು ದನಿಯಿಂದ ಅರಚಿಕೊಂಡು ಹೇಳಿದ "ಬೇಡಮ್ಮಾ ಬೇಡ! ಯಾವ ಜನ್ಮದಲ್ಲೋ ನಮ್ಮ ಪ್ರಾಣ ವುಳಿಸಲು ಬೇರೊಬ್ಬರ ಪ್ರಾಣ ತೆಗೆದದ್ದರಿಂದಲೇ ನಮಗೀ ಘೋರ ಪ್ರತೀಕಾರ ಬಂದಿದೆ. ನಾವು ನಾಲ್ವರಲ್ಲಿ ಯಾರೋ ಒಬ್ಬರು ರಾಕ್ಷಸನಿಗೆ ಆಹಾರವಾಗುತ್ತೇವೆ. ಯಾರೇನಿದೆ? ನಾನೇ—ನಾನೇ ಆಗುತ್ತೇನೆ. ನಾನಿನ್ನು ಸಾವಿರ ವರ್ಷ ಬದುಕುತ್ತೇನೆಯೇ? ರತ್ನದಂಧಾ ಹೆಂಡತಿಯೊಂದಿಗೆ ಇಷ್ಟು ದಿವಸ ಸಂಸಾರ ಮಾಡಿದೆ. ಮಗನನ್ನೂ ಮಗಳನ್ನೂ ಪಡೆದೆ ಅವರ ಮೂಲಕ ಪೌತ್ರರನ್ನು ದೌಹಿತ್ರರನ್ನೂ ಹೊಂದಿ ಉತ್ತಮ ಲೋಕಕ್ಕೆ ಹೋಗುತ್ತೇನೆ."

"ಯಾರು ಆ ರಾಕ್ಷಸ?" ಕೇಳಿದಳು ಕುಂತಿ

ಆ ಸದ್ಬ್ರಾಹ್ಮಣನು ಆಶ್ಚರ್ಯದಿಂದ ತನ್ನ ಕಷ್ಟವನ್ನು ಕೂಡಾ ಕ್ಷಣ ಹೊತ್ತು ಮರೆತನು ಅವನ ಮೂಲಕ ಕುಂತಿ ಬಕಾಸುರನ ವ್ಯವಹಾರವನ್ನೆಲ್ಲಾ ತಿಳಿದುಕೊಂಡಳು.

"ನೀವೆಲ್ಲರೂ ನಿಶ್ಚಿಂತೆಯಾಗಿರಿ. ಈ ದಿನ ನಮ್ಮ ಮನೆಯ ಸರದಿಯಾದ್ದರಿಂದ ನನ್ನ ಎರಡನೇ ಮಗನನ್ನು ಆ ರಾಕ್ಷಸನ ಬಳಿಗೆ ಹೋಗಲಿಕ್ಕೆ ಹೇಳುತ್ತೇನೆ" ಎಂದಳು ಕುಂತಿ.

ಹುಚ್ಚು ಬ್ರಾಹ್ಮಣನಿಗೆ ಈ ಮಾತು ಕೇಳುತ್ತಲೇ ಬ್ರಹ್ಮಹತ್ಯಮಾದಿದಷ್ಟು ಭಯವುಂಟಾಯಿತು

"ಬೇಡಮ್ಮಾ! ಬೇಡ ಬೇಡ! ಈ ಮಾತು ಇನ್ನೊಮ್ಮೆ ಹೇಳಬೇಡ! ನಿನ್ನಾಣೆ!" ಎಂದ.

ಕುಂತಿ ನಕ್ಕು "ನನ್ನ ಮಗನ ಮೇಲೆ ನನಗೆ ಪ್ರೀತಿಯಿಲ್ಲದೆ ಕಳುಹಿಸುತ್ತೇನೆಂದು ತಿಳಿಯ ಬೇಡಿ ಅಣ್ಣಯ್ಯ! ಅವನಿಗೇನೂ ಭಯವಿಲ್ಲ. ನನ್ನ ಮಾತು ನಂಬಿ

ಮನೆಯವರು ಈ ಏರ್ಪಾಡಿಗೆ ಒಪ್ಪಿಕೊಳ್ಳಲಿಲ್ಲ. ಆದರೆ, ಅಳು, ಬೊಬ್ಬೆ, ಆರ್ತನಾದಗಳೇ ಇಲ್ಲದೆ ನೆಮ್ಮದಿಯಾಗಿಯೇ ಕುಂತಿಯ ಸೂಚನೆಗೆ ತಮ್ಮ ವ್ಯತಿರೇಕತೆಯನ್ನು ತಿಳಿಸಿದರು. ಕುಂತಿ ಭೀಮನನ್ನು ಕರೆದು "ಕೇಳಿದಿಯೇನೋ.... ಬಕಾಸುರಾಂತ....ಅವನಿಗೆ ಆಹಾರವಾಗಿ ದಿನಾ ಒಂದೊಂದು ಮನೆಯಿಂದ ಒಬ್ಬೊಬ್ಬ ಹೋಗಬೇಕಂತೆ. ಈ ದಿನ ಈ ಮನೆಯ ಸರದಿ. ಏನು ಮಾಡೋಣಾಪ್ಪ?" ಎಂದು ಕೇಳಿದಳು

"ನಾನು ಹೋಗುತ್ತೇನಮ್ಮಾ!" ಎಂದ ಭೀಮ ಒತ್ತಾಯಪೂರ್ವಕ ಪ್ರಾರ್ಥಿಸಿಕೊಳ್ಳುವ ಚಂದದಿಂದ.

ಬಲಿಷ್ಠನಾಗಿ ಕಾಣುವ ಆ ಬ್ರಾಹ್ಮಣ ಹುಡುಗ ಆ ಮಾತು ಹೇಳಿದ ರೀತಿ ನೋಡಿ ಚಯನನೂ ಅವನ ಹೆಂಡತಿಯೂ ಅದುರಿಬಿದ್ದರು. ಈ ಹುಡುಗನೇ ಮಾರು ವೇಷದಲ್ಲಿರುವ ರಾಕ್ಷಸನೇನೋ ಎಂಬ ಸಂದೇಹ ಕೂಡಾ ಅವರಿಗಾಯಿತು.

"ನೀನು ಹೋಗುವುದೆಂದರೇನಪ್ಪಾ? ಸತ್ತು ಹೋಗುತ್ತಿಯಲ್ಲಾ!" ಎಂದು ಹೇಳಲಿಕ್ಕೆ ಕೂಡಾ ಅವನ ಬಾಯಿ ಕದಲಲಿಲ್ಲ. ನಾಲಗೆಯಾಡಲಿಲ್ಲ. ಆತ ಮೌನದಿಂದಲೇ ತನ್ನ ಅಂಗೀಕಾರ ಕೊಟ್ಟಂತಾಯಿತು. ಅವನ ಹೆಂಡತಿಗೆ ಕುಂತಿಯ ಮುಖ ನೋಡಲಾಗಲಿಲ್ಲ

o o o

(ಮುಂದುವರಿಯುವುದು)

ಸೂಚನೆ

"ನವಯುಗ"ದಲ್ಲಿ ಪ್ರಕಟಣೆಗಾಗಿ ಲೇಖನಗಳನ್ನು ಆಮಂತ್ರಿಸಲಾಗಿದೆ. ಇವು ಚಿಕ್ಕದಿರ ಬೇಕಲ್ಲದೆ ಕಾಗದದ ಒಂದೇ ಮಗ್ಗುಲಿನಲ್ಲಿರಬೇಕು. ಲೇಖಕಬಂಧುಗಳು ಸಹಕರಿಸಬೇಕಾಗಿ ವಿನಂತಿ. —ಸಂ.ನ.

ಅಸ್ಥಮಾ ಪೀಡಿತರ ಗಮನಕ್ಕೆ

ಹಿಮಾಲಯದ ಪ್ರಸಿದ್ಧ ಅಸ್ಥಮಾ ನಿವಾರಕ ಮೂಲಿಕೆಯನ್ನು ದಿ. 18—10—62 ಹುಣ್ಣಿಮೆಯ ರಾತ್ರಿ ಹಾಲು ಮತ್ತು ಅಕ್ಕಿಯಿಂದ ತಯಾರಿಸಿದ ಖೀರಿನಲ್ಲಿ ತೆಗೆದುಕೊಳ್ಳುವುದರಿಂದ ಅಸ್ಥಮಾ, ಗೂರಲು, ಕಮ್ಮು, ಉಬ್ಬಸ, ಮೇಲುಸಿರು ಮತ್ತು ಶ್ವಾಸ ಕಟ್ಟುವಿಕೆ ಇವುಗಳು ನಿವಾರಿಸಲ್ಪಡುತ್ತವೆ. ಕೂಡಲೇ ಇಂಗ್ಲಿಷಿನಲ್ಲಿ ಬರೆಯಿರಿ:

Shri Mahatma Sidh Baba Sewa Ashram
P. O. Chitrakot. (Uttar Pradesh)

PHONE 203
ESTD 1926
FOUNDATION STONE
Engraved
MARBLE TABLETS
(GOLD FILLED & LEAD FILLED)
DONE AT
Crown RUBBER STAMP CO.
BALMATTA ROAD, MANGALORE

REGD. No. B. G. 176
LICENCE No. 31
Licensed to Post without Prepayment

ಯಾರು ಹಿತವರು ನಿನಗೆ ಈಯಿಬ್ಬರೊಳಗೆ?

(೧ನೇ ಪುಟದಿಂದ)

ಸ್ಥೆಗಳನ್ನು ಎದುರಿಸುವ ಸರಕಾರ ಹೆಸರಿನ ಬಗ್ಗೆ ಗೊಂದಲಕ್ಕೆ ಅವಕಾಶ ಕೊಡುವುದು ಸರಿಯಲ್ಲವೆಂದು ಅಭಿಪ್ರಾಯ ಪಟ್ಟರು.

ಭದ್ರ ಕವಚ

ಬೆಂಗಳೂರು ಅಧಿವೇಶನದಲ್ಲಿ ಮೈಸೂರು ವಾದಿಗಳು ತಮ್ಮ ಭದ್ರ ಕವಚವೆಂದು ಅಧಿಕೃತ ಸಂಗತಿಗಳನ್ನು ಹೀಗೆ ಕ್ರೋಢೀಕರಿಸ ಬಹುದು.

೧. ಮೈಸೂರಿಗರಿಗೆ ಇತ್ತ ಭರವಸೆಯನ್ನು ಯಾಂದುವರಿಸಿಕೊಂಡು ಹೋಗಬೇಕು.

೨. ಒಮ್ಮೆ ನಿರ್ಣಯವಾದ ವಿಷಯವನ್ನು ಮತ್ತೆ ಕೆದಕುವುದು ಸರಿಯಲ್ಲ.

೩. ಮೈಸೂರಿಗರಿಗೆ 'ಮೈಸೂರಿ'ನ ಮೇಲೆ ವಿಶೇಷ ಮಮತೆಯಿದೆ. ಈಗ ಅವರ ಇಚ್ಛೆಗೆ ವಿರೋಧವಾಗಿ ನಡೆದರೆ ಭದ್ರಗಳೇ ಳುವುವು; ಐಕ್ಯನುಜ್ಜಾಗುವುದು.

೪. ರಾಜ್ಯದ ಪ್ರಗತಿಯತ್ತ ಲಕ್ಷ್ಯಹರಿಸದೆಹೆಸರನ್ನು ಬದಲಿಸಲು ಮನಹರಿಸುವುದು ತರವಲ್ಲ.

ಭೈಮು ನಿರಸನ

ಇವುಗಳಿಗೆ ಹೀಗಿ ಉತ್ತರಿಸಬಹುದು.

೧. ಮೈಸೂರಿಗರಿಗೆ ಭರವಸೆಯಿತ್ತಿರುವುದು ಆಚಂದ್ರಾರ್ಕವಲ್ಲ; ಸದ್ಯಕ್ಕೆ ಹರಿಹಂಚಾದ ನಾಡು ಅದಾವ ರೂಪದಲ್ಲೇ ಇರಲಿ, ಒಮ್ಮೆಗೆ ಒಂದಾಗಲಿ ಎಂಬ ಭಾವನೆಯಿಂದ; 'ಎಲ್ಲಾಡರು ಇರು ಎಂತಾದರು ಇರು; ಎಲ್ಲಿದ್ದರು ನೀ ಕನ್ನಡವಾಗಿರು' ಎಂಬ ಕವಿ ನಾಣಿಯ ಹೃದಯ ವೀಣಾ ನಾದವನ್ನು ಗ್ರಹಿಸಿಕೊಂಡ; ಪರಿಸ್ಥಿತಿ ತಿಳಿಯಾದ ನಂತರ ಪ್ರಜಾ ಪ್ರಭುತ್ವದಲ್ಲಿ ಹೆಸರು ಬದಲಿಸುವುದು ಸಾಧ್ಯವಾದೀತು ಎಂಬ ಭವಿಷ್ಯದ ಮೇಲೆ ಭರವಸೆಯಿಟ್ಟು.

೨. ಪ್ರಜಾಪ್ರಭುತ್ವದಲ್ಲಿ ಅಂತಿಮ ನಿರ್ಣಯವೆಂಬುದು ಯಾವುದೂ ಇಲ್ಲ. ಸೌಹಾರ್ದಮಯ ವಾತಾವರಣವನ್ನು ನಿರ್ಮಿಸಿ ಯಾವುದನ್ನಾದರೂ ಪರಿವರ್ತಿಸುವ ಅಧಿಕಾರ ಜನತೆಗಿದ್ದೇ ಇರುತ್ತದೆ.

೩. ಮೈಸೂರಿಗರಿಗೆಮೈಸೂರಿನ ಮೇಲೆ ಮಮತೆಯಿದ್ದರೆ, ಕನ್ನಡಿಗರಿಗೆ 'ಕರ್ನಾಟಕ'ದ ಮೇಲೆಯೂ ಪೂಜ್ಯ ಭಾವನೆಯಿದೆ. ಮೈಸೂರಿಗರು ಮೊದಲು ಕನ್ನಡಿಗರು; ಅನಂತರ ಮೈಸೂರಿನವರು. ಆದುದರಿಂದ ಉಳಿದ ಕನ್ನಡಿಗರನ್ನೂ ಅವರು ಸೇರಿ ಕನ್ನಡದ ಹೆಸರನ್ನು ಬೆರೆಸಲು ಕರ್ನಾಟಕದವರು ಎನ್ನಿಸಿದರೆ ಅದೇಂದ ಅವರು ಯಾವ ಅಪಚಾರವನ್ನೂ ಮಾಡಿದಂತಾಗುವುದಿಲ್ಲ.

೪. ರಾಜ್ಯದ ಪ್ರಗತಿಯು ಮುಗಿಯುವುದೆಂದಿಲ್ಲ. ಪ್ರಗತಿಯು ಇನ್ನೂ ತೀವ್ರವಾಗಿ ಬೇಕಾದರೆ, ಜನತೆಯಲ್ಲಿ ಒಬ್ಬಗ್ಗೆ ಆಸಕ್ತಿ ಬೆಳೆಯಬೇಕು. ಆದಕ್ಕಾಗಿ ರಾಜ್ಯದ ಹೆಸರು ಕರ್ನಾಟಕವೆಂದಾಗುವುದರಿಂದ ಎಲ್ಲರೂ ತಮ್ಮವರು ಎಂಬ ಭಾವನೆ ಬಲಿತು ಪ್ರಗತಿಗೆ ದುಡಿಗತಿಯೊದಗುವುದು ಸಾಧ್ಯ. ಮೈಸೂರು ಎಂಬ ಹೆಸರು ಮೈಸೂರಿಗರಿಗೆದೆಸ್ಪೀಪ್ರಿಯವಾಗಿರಲಿ, ಅದೆಷ್ಟೇ ಲೋಕವಿಖ್ಯಾತವಾಗಿರಲಿ, ಕರ್ನಾಟಕವನ್ನು ದ್ವೇಷಿಸುವ ಅಗತ್ಯವಿಲ್ಲ. ಕನ್ನಡನಾಡು ಒಂದು ಎಂಬ ಭಾವನೆಯನ್ನು ಕರ್ನಾಟಕವಾದಿಗಳು ತಾಳಲಾರುವಾಗ, ಮೈಸೂರಿಗರು ಛಿಛ್ರತೆಯ ರಾಕ್ಷಸನನ್ನು ನಿರ್ಮಿಸುವುದು ಅವಿವೇಕ.

ಕೊನೆಯ ಮಾತು

ರಾಜ್ಯದ ಹೆಸರು ಕರ್ನಾಟಕವೆಂದಾಗುವುದು ಅತ್ಯವಶ್ಯ. ಆದರೆ, ಮೈಸೂರಿಗರ ಹೃದಯವನ್ನು ಒಡೆದು, ಅವರ ರಕ್ತದಲ್ಲಿ ಕರ್ನಾಟಕವೆಂದು ಬರೆಯುವುದು ಸಲ್ಲದು. ಶಾಂತಿ-ಸೌಹಾರ್ದಮಯ ವಾತಾವರಣವನ್ನು ನಿರ್ಮಿಸಿ, 'ಹಳೆ ಮೈಸೂರಿಗ'ರ ಹಳೆಯ ಭಾವನೆಗಳನ್ನು ದೂರಗೊಳಿಸಿ ತಮ್ಮ ಇಷ್ಟಾರ್ಥವನ್ನು ಈಡೇರಿಸಿಕೊಳ್ಳುವುದು ಅನುಚಿತವಲ್ಲವೆನಿಸುವು. ತನು ಕನ್ನಡ, ಮನ ಕನ್ನಡ, ನುಡಿ ಕನ್ನಡವೆಂದು ಹೇಳುವ ಕನ್ನಡಿಗರು ನಾಡೂ ಕನ್ನಡವೆನ್ನಲು ಹಿಂಜರಿಯಬಾರದು. 'ನಾಲ್ವಡಿ ಕೃಷ್ಣನ ಮೈಸೂರು' ಗತಕಾಲದ್ದು; ಅದು

ಉತ್ತರಾಧಿಕಾರಿಯ ಮಹಾಸಮಸ್ಯೆ

(೫ನೇ ಪುಟದಿಂದ)

ವರ್ಷದ ಉತ್ತಮ ಆರೋಗ್ಯವಿರುವ ರಾಜಕಾರಣಿಗಳು. ಕಳೆದ ದಶಂಬರದಲ್ಲಿ ಗುಂಡೊಂದು ತಾಗಿ ಇವರ ಎಡಗೈಯಲ್ಲಿ ಬಹು ದೊಡ್ಡ ಗಾಯವೊಂದಾಗಿತ್ತು. ಅದೀಗ ಸಂಪೂರ್ಣ ವಾಸಿಯಾಗಿದೆ. ಫ್ರಾಂಕೋರವರು ಉಪ ಪ್ರಧಾನಿಯೊಬ್ಬನನ್ನು ನೇಮಿಸುವುದರಿಂದ ಅವರ ಉತ್ತರಾಧಿಕಾರಿಯ ಪ್ರಶ್ನೆ ಬಹುಮಟ್ಟಿಗೆ ಹಗುರವಾಗಿದೆ. ಹಾಗಾಗಿ ಕಾಪ್ಟನ್ ಜನರಲ್ ಆಗೊಸ್ಟಿನ್ ಮುನೋಜ್ ಗ್ರಾಂಡ್ಸ್ರವರೇ ಸಂಭಾವ್ಯ ಉತ್ತರಾಧಿಕಾರಿಯೆನ್ನಬಹುದು. ಮುನೋಜ್ ಗ್ರಾಂಡ್ಸ್ರವರು ಸರಕಾರದ ಮುಖ್ಯಸ್ಥನೆಂದು ಫ್ರಾಂಕೋರವರ ಉತ್ತರಾಧಿಕಾರಿಯೂಗುತ್ತಾರೆ ನಿಜ, ಆದರೆ ರಾಷ್ಟ್ರದ ನಾಯಕನಾಗುವುದು ಪರಮ ಕಷ್ಟ. ಸ್ಪಾನಿಷ್ ರಾಜ ಪ್ರಭುತ್ವವನ್ನು ಮರು ಸ್ಥಾಪಿಸಲು ಫ್ರಾಂಕೋ ಬಯಸಿದ್ದಾರೆಯೇ ಎಂಬ ವಿಷಯದಲ್ಲಿ ಅಲ್ಲಿನ ರಾಜಕಾರಣಿಗಳಲ್ಲಿ ಸಂದೇಹವಿದೆ. ರಾಜ ಪ್ರಭುತ್ವದತ್ತ ಫ್ರಾಂಕೋ ಮನಸಿರಿಸಿದ್ದರೂ ಅದನ್ನು ಎಲ್ಲಿಯೂ ವ್ಯಕ್ತಪಡಿಸಿಲ್ಲ. ಒಂದು ವೇಳೆ ರಾಜ ಪ್ರಭುತ್ವವೇ ಸ್ಥಾಪಿತವಾಗುವಂತಿದ್ದರೆ, ಸಿಂಹಾಸನದ ಉತ್ತರಾಧಿಕಾರಿಯೆಂದು ನಟಿಸುವ ಬರ್ಬೋನಿನ ಡಾನ್ ಜೂವನ್ ಅಥವಾ ಅವನ ಮಗಜುವಾನ್ ಕಾರ್ಲೊನ್ ಅಸಾನವನ್ನಡರಬಹುದು.

ಬ್ರಿಟನ್ನಿನ ಪ್ರಧಾನ ಮಂತ್ರಿ ಹೆರಾಲ್ಡ್ ಮೈಕಮಿಲನರು ೬೮ ತುಂಬಿದವರು. ಆರೋಗ್ಯ ನೆಟ್ಟಗಿದೆ. ತನ್ನ ಸಚಿವ ಸಂಪುಟ ಕಂಪಿಸತೊಡಗಿದಾಗ, ೫೬ ವರ್ಷದ ರಾಜ್ಯಾಂಗ ಸಚಿವ ರಿಚಾರ್ಡ್ ಬಟ್ಲರರನ್ನು ತನ್ನ ಮುಖ್ಯ ಸಹಾಯಕರೆಂದು ನೇಮಿಸಿಕೊಂಡಿದ್ದಾರೆ.

ರಶ್ಯದ ಮಂತ್ರಿಮಂಡಳದ ಅಧ್ಯಕ್ಷ ನಿಕೀಟಾ ಸೆರ್ಗೋವಿಚ್ ಕ್ರುಶ್ಚೇವರು ೬೮ ತುಂಬಿದವರು. ಆರೋಗ್ಯ ತೋರಿಕೆಯ ಮಟ್ಟಿಗೆ ತೃಪ್ತಿಕರವಿದೆ. ಆದರೆ ಕಳೆದ ವರ್ಷ ಇನ್‌ಫ್ಲುಯೆಂಜಾಗೆ ಪಕ್ಕಾದ ನಂತರ ರಕ್ತದ ಸಮುದ್ರದ ಪಡದಲ್ಲಿ ಅವರು ವಿಶ್ರಾಮವನ್ನೇ ಹೆಚ್ಚಾಗಿ ಪಡೆಯುತಿದ್ದಾರೆ. ಸೆಂಟ್ರಲ್ ಕಮಿಟಿಯು ಸೆಕ್ರೆಟರಿ ಪ್ರೊಲ್ ಕೊಜ್ಲೋವ್‌ರವರು ಮುಂದಿವರ ಸ್ಥಾನ ಪಡೆಯುವ ಸಂಭವವು ಹೆಚ್ಚಾಗಿದೆ. ಆದರೆ, ಕೆಲವರು ಇದನ್ನು ನಂಬುವುದಿಲ್ಲ. ಅಲೆಕ್ಸಿ ಕೆರಿಚೆಂಕೊರವರು ಕ್ರುಶ್ಚೇವರ ಉತ್ತರಾಧಿಕಾರಿಯೆಂದು ಹಿಂದೊಮ್ಮೆ ತಿಳಿಯಲಾಗಿತ್ತು. ಗರ್ಟಂರ ಕೊನೆಯಲ್ಲಿ ಅವರನ್ನು ಚಿಮೊನತು ಗೊಳಿಸಲಾಯಿತು. ಮುಂದೆ, ಮೋಸ್ಕೋವಿನಿಂದ ಹೊರಗೆ ಒಂದು ಚಿಕ್ಕ ಹುದ್ದೆಯನ್ನು ಅವರಿಗೆ ಕೊಡಲಾಯಿತು. ಇದು ಏಕೆಂದು ಯಾರೂ ತಿಳಿದಿಲ್ಲ. ಹಾಗಿರುವಾಗ, ರಶ್ಯದ ರಾಜಕಾರಣವನ್ನು ಯಾರೂ ನಂಬುವುದು ಸಾಧ್ಯವಿಲ್ಲ.

ಚೈನಾದ ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷ ೬೮ ವರ್ಷದ ಮಾವೊ ಟ್ಸೆ ತುಂಗರು ಉತ್ತಮ ಆರೋಗ್ಯವಂತರಿದ್ದಾರೆ. ಜನತಾ ಚೀನಾದ ಅಧ್ಯಕ್ಷ ೬೨ ವರ್ಷದ ಲೀ ಶಾವೊಚಿಯವರು ತನ್ನ ಉತ್ತರಾಧಿಕಾರಿಯೆಂದವರು ಉಲ್ಲೇಖಿಸಿದ್ದಾರೆ. ಆದರೆ, ಚೈನಾದ ಕಮ್ಯುನಿಸ್ಟ್ ಪಕ್ಷದ ಅಧ್ಯಕ್ಷನೂ ಆಗುವ ವರೆಗೆ ಅವರು ಕಮ್ಯುನಿಸ್ಟ್ ಚೀನಾದ ನಾಯಕರೂ ಆಗಲಾರರು.

ಹಣ್ಣನ್ನು ಉದುರಿಸಲು ಗುರಿ ಚೆನ್ನಾಗಿರಬೇಕು.
ಬಡ್ಡಿಯನ್ನು ಸಂಪಾದಿಸಲು ಹಣವನ್ನು
ಉತ್ತಮ ಬ್ಯಾಂಕಿನಲ್ಲಿಡಬೇಕು.

ಸಿಂಡಿಕೇಟ್ ಬ್ಯಾಂಕ್

ದಿ ಕೆನರಾ ಇಂಡಸ್ಟ್ರಿಯಲ್ & ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್

Edited Printed & Published by K. H. Shetty, at the Navayuga Press, Udipi, S. India.